ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೭

ದಾಖಲು ಸಾಹಿತ್ಯ : ಭಾಗ-೧



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೭ : ದಾಖಲು ಸಾಹಿತ್ಯ : ಭಾಗ-೧

ಪ್ರಧಾನ ಸಂಪಾದಕರು
ಡಾ. ವೀರಣ್ಣ ರಾಜೂರ
ಧಾರವಾಡ

ಸಂಪಾದಕರು
ಡಾ. ಶಂಭು ಬಳಿಗಾರ
ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ
ವಿಜಯಪುರ
೨೦೧೯

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೭ : ದಾಖಲು ಸಾಹಿತ್ಯ : ಭಾಗ-೧

❖

• ಕರ್ನಾಟಕದ ಕೈಫಿಯತ್ತುಗಳು

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಪಂಡಿತ ರಾಠೋಡ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI
VOLUME - 7 : DAKHALU SAHITY BHAGA : I
Edited by : Dr. Pandit Rathod, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

First Edition : 2019
Pages : xxxiv + 922=956

Copies: 1000
Price Rs: 480/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Saraswatidevi Bhagawati, Dharwad.
Printer : **The Print Point,** No. 9/8 6th Cross, 4th Main, Rajajinagar, Industrial Town, Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೭-ದಾಖಲು ಸಾಹಿತ್ಯ : ಭಾಗ-೧

ಸಂಪಾದಕರು : ಡಾ. ಪಂಡಿತ ರಾಠೋಡ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೧೯
ಪುಟಗಳು: xxxiv + ೯೨೨=೯೫೬

ಪ್ರತಿಗಳು: ೧೦೦೦
ಬೆಲೆ ರೂ: ೪೮೦/-

❖❖

ಮುಖಪುಟ ವಿನ್ಯಾಸ: ಕೆ.ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್,** ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ದೂ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ–ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ–ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ–ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ–೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ–ಸಂಶೋಧನೆ–ಸಮಾಜಸೇವೆ–ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ–ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ–ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ–ಸದಾಚಾರದ–ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ.ಎಂ.ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು

ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ

ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ–ಕರ್ನಾಟಕ ಸರ್ಕಾರದ ಧನ ಸಹಾಯದಿಂದ–ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪–೭–೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ–ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩–೯–೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ–ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ

೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪
೨. ವಚನ ಸಂಕಲನ–೬
೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ **–ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ **–ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ **–ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ

(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು--ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ,

ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

‘ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ’ ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ ‘ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ’ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ

'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ'(ಕನ್ನಡಾನುವಾದ)ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ-ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ-ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ–ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಪಂಡಿತ ರಾಠೋಡ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಪಂಡಿತ ರಾಠೋಡ

ಕೈಫಿಯತ್ತು ಪ್ರಕಾರವೊಂದನ್ನು ನಮ್ಮ ನಾಡಿನಲ್ಲಿ ಹುಟ್ಟು ಹಾಕಿದ ಮೊದಲಿಗ ಮೆಕೆಂಝಿ ಎಂಬ ವಿದೇಶಿ ವಿದ್ವಾಂಸ. ಸ್ಥಳೀಯ ಆಡಳಿತ ಮತ್ತು ಆಡಳಿತಾಧಿಕಾರಿಗಳನ್ನು ಕುರಿತು ಸ್ಥಳೀಯರಿಂದಲೇ ಬರೆಯಲ್ಪಟ್ಟ ಬರಹವಿದು. ಸ್ಥಳಪುರಾಣ, ಸ್ಥಳನಾಮೆ, ನಾಮೆ ಮುಂತಾದ ಹೆಸರುಗಳಿಂದ ಗುರುತಿಸಲ್ಪಡುವ ಪ್ರಸ್ತುತ ಪ್ರಕಾರವು ಸ್ಥಳೀಯ ಸಣ್ಣಪುಟ್ಟ ಸಂಸ್ಥಾನಗಳ ಚರಿತ್ರೆಯನ್ನು ರಂಜನೀಯವಾಗಿ ರಚಿಸಲು ಆಕರವಾಗಿದೆ.

'ಕೈಫಿಯತ್ತು' ಎಂಬ ಪದ ಹೇಳಿಕೆ ಅಥವಾ ವಿವರಣೆ, ವಿವರಣೆಗಳನ್ನೊಳಗೊಂಡ ದಾಖಲೆ, ಸ್ಪಷ್ಟವಾದ ಹೇಳಿಕೆ, ಆಜ್ಞಾಪತ್ರ, ತಿಳಿವಳಿಕೆ ಪತ್ರ ಎಂಬ ಅರ್ಥಗಳನ್ನು ಪಡೆದಿದೆ. ಇದಕ್ಕೆ ಕನ್ನಡದಲ್ಲಿ 'ಕೈಪಾತಿ' ಎಂದು ಕರೆಯಲಾಗಿದೆ.

ಕೈಫಿಯತ್ತಗಳು ಚಾರಿತ್ರಿಕವಾಗಿ ಸ್ಥಳಪುರಾಣ, ಐತಿಹ್ಯ, ಜನಪದ ನಂಬಿಕೆಗಳು, ಜನಜನಿತವಾಗಿ ರೂಢಿಯಲ್ಲಿ ಕಲ್ಪಿತವಾಗಿದ್ದ ವಿಷಯಗಳನ್ನು ಕೇಳಿದ ವ್ಯಕ್ತಿಯೊಬ್ಬನು ತನಗೆ ದೊರೆತ ಶಿಕ್ಷಣ ಮಟ್ಟದಲ್ಲಿ, ಹೆಚ್ಚಾಗಿ ಆಡುವ ಮಾತಿನಲ್ಲಿ ಸಾಮಾನ್ಯರಿಗಾಗಿ ನಿರೂಪಿಸುತ್ತ ಹೋಗಿರುವ ದಾಖಲೆಗಳಾಗಿವೆ.

ಕಾಲಕ್ರಮದಲ್ಲಿ ಇದು ಕೈಪೋತ್, ಕೈಪೇತ್ ಎಂದು ರೂಪಾಂತರ ಪಡೆದಿದೆ. 'ಕೈಪೇತ' ಎಂಬ ಪದ ಪ್ರಾದೇಶಿಕವಾಗಿ 'ದಾವೆ, ವ್ಯಾಜ್ಯ' ಎಂಬ ಅರ್ಥವನ್ನು ಪಡೆಯುತ್ತ ಬಂದಿದೆ. ಇದೇ ರೀತಿಯಾಗಿ 'ಬಖೈರು, ನಾಮೆ'ಗಳು 'ದಾಖಲೆ' ಅಥವಾ 'ಹೇಳಿಕೆ' ಎಂಬ ಅರ್ಥದಲ್ಲಿಯೇ ಬಳಕೆಯಾಗುತ್ತ ಬಂದಿರುವುದು ಗಮನಾರ್ಹವಾಗಿದೆ.

ಕೈಫಿಯತ್ತುಗಳ ಮಹತ್ವವನ್ನು ಮನಗಂಡ ಮೊದಲ ತಲೆಮಾರಿನ ಕನ್ನಡ ವಿದ್ವಾಂಸರು ಸ್ವ ಆಕ್ತಿಯಿಂದ ಇವುಗಳನ್ನು ಬಿಡಿ ಬಿಡಿಯಾಗಿ ಸಂಗ್ರಹಿಸಿ ಸಂಪಾದನೆ ಮಾಡಿ ಅವುಗಳಿಗೆ ವಿವರಣೆ ಬರೆದು ಪತ್ರಿಕೆ, ಪುಸ್ತಕಗಳಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. ಬೆನಗಲ್ ರಾಮರಾಯ ಅವರು ಮೊಟ್ಟಮೊದಲು ಕರ್ನಾಟಕ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ (ಕ.ಸಾ.ಪ ೯ನೆಯ ಸಂಪುಟ, ೨ನೆಯ ಮತ್ತು ೪ನೆಯ ಸಂಚಿಕೆ) ಬುಕ್ಕರಾಯನ ಚರಿತ್ರೆ, ಅರ್ಕಾಡು ಸಂಸ್ಥಾನದ ಕೈಫಿಯತ್ತು(ಕ.ಸಾ.ಪ ೯ನೆಯ ಸಂಪುಟ,

೯-ಸಂ-೨, ಪುಟ-೧೩೩-೧೪೬) ಬಳ್ಳಾರಿಯ ಕೈಫಿಯತ್ತು(ಕ.ಸಾ.ಪ ೯ನೆಯ ಸಂಪುಟ, ೧೧-ಸಂ-೪,ಪುಟ-೨೨೨-೨೪೫) ಪ್ರಕಟಿಸಿದ್ದಾರೆ. ಮೈಸೂರು ಸರ್ಕಾರದ ಪ್ರಾಕ್ತನ ವಿಚಕ್ಷಣ ಸಂಶೋಧಕ ಬಿ. ರಾಮರಾಯ ಅವರು ಶೃಂಗೇರಿಯ ಕೈಫಿಯತ್ತು(ಕಸಾ.ಪ ಸಂಪುಟ-೧೩-ಸಂಚಿಕೆ-೧,ಪುಟ-೧೨೮-೧೩೬ ಮತ್ತು ಸಂಪುಟ-೧೫, ಸಂಚಿಕೆ-೨,ಪುಟ-೧೧೦-೧೨೧) ಕಣಕುಪ್ಪೆ ಕೋಟೆ ಕಟ್ಟಿದ ಕೈಫಿಯತ್ತು(ಕ.ಸಾ.ಪ.ಸಂಪುಟ-೧೬, ಸಂಚಿಕೆ-೨,ಪುಟ-೧೨೮-೧೩೬) ಮೊದಲಾದವುಗಳನ್ನು ಬೆಳಕಿಗೆ ತಂದಿದ್ದಾರೆ.

ಚಿತ್ರದುರ್ಗದ ಹುಲ್ಲೂರು ಶ್ರೀನಿವಾಸ ಜೋಯಿಸ ಅವರು ಚಿತ್ರದುರ್ಗದ ಬಖೈರಗಳನ್ನು ತಾಯಿನಾಡು ಪತ್ರಿಕೆಯಲ್ಲಿ ಬಿಡಿಬಿಡಿಯಾಗಿ ಪ್ರಕಟಿಸಿದ್ದಾರೆ. ತಿ.ತಾ. ಶರ್ಮಾ ಅವರು ಹೈದರನಾಮ, ರಾಮರಾಯನ ಬಖೈರು ಮತ್ತು ವೀರರಾಜೇಂದ್ರನ ಪತ್ರ ಎಂಬ ಮೂರು ಬರಹಗಳನ್ನು ಒಂದೇ ಕಡೆ ಸೇರಿಸಿ 'ಚಾರಿತ್ರಿಕ ದಾಖಲೆಗಳು' ಎಂಬ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ (೧೯೭೧)ಪ್ರಕಟಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕರಾದ ಎಂ.ಹೆಚ್. ಕೃಷ್ಣ ಅವರು ಈ ಗ್ರಂಥಕ್ಕೆ ಸವಿವರವಾದ ವಿವರಣೆಯನ್ನು ನೀಡಿ ಪ್ರಕಟಿಸಿದ್ದಾರೆ. ಕರ್ನಲ್ ಮೆಕೆಂಝಿ ಸಂಗ್ರಹಿಸಿರುವ ಕನ್ನಡ ಕೈಫಿಯತ್ತುಗಳ ಅಕಾರಾದಿ ಪಟ್ಟಿಯನ್ನು ಮದ್ರಾಸು ಸರ್ಕಾರದ ಪ್ರಾಚ್ಯವಿದ್ಯಾ ಪುಸ್ತಕ ಭಾಂಡಾರದವರು ತುಂಬ ಹಿಂದೆಯೇ ಪ್ರಕಟಿಸಿದ್ದಾರೆ. ಆದರೆ ಅವುಗಳೆಲ್ಲ ಕೈಫಿಯತ್ತಿನ ಪಠ್ಯಗಳಲ್ಲ. ಕೈಫಿಯತ್ತುಗಳ ವಿವರಣೆಗಳಾಗಿವೆ ಎಂಬುದನ್ನು ಗಮನಿಸಬೇಕು.

ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮಂಡಲಿಯವರು ಇತ್ತೀಚೆಗೆ ಪ್ರಕಟಿಸಿರುವ 'ಚಂದ್ರವಳ್ಳಿ' ಎಂಬ ಲೇಖನ ಸಂಗ್ರಹದಲ್ಲಿ ಚಿತ್ರದುರ್ಗದ ದಪೇದಾರ ಬಸಪ್ಪನ ವಂಶಾವಳಿ, ನಾಯಕನ ಜಟ್ಟಿ ಬಖೈರು ಎಂಬುದನ್ನು ಲಕ್ಷ್ಮಣ್ ತೆಲಗಾವಿ ಅವರು 'ಜರಿಮಲೆ ಸಂಸ್ಥಾನದ ವಂಶಾವಳಿ' ಎಂಬುದನ್ನು ತಿಪ್ಪೆಸ್ವಾಮಿ ಅವರು ಪ್ರಕಟಿಸಿದ್ದಾರೆ. ಫ.ಗು ಹಳಕಟ್ಟಿಯವರ ಸಂಸ್ಮರಣ ಗ್ರಂಥದಲ್ಲಿ ಹಲವಾರು ಕೈಫಿಯತ್ತುಗಳ ಪಟ್ಟಿ ಪ್ರಕಟವಾಗಿದೆ.

ಡಾ. ವರದರಾಜರಾವ್ ಅವರು ಕರ್ನಲ್ ಮೆಕೆಂಝಿ ಅವರು ಸಂಗ್ರಹಿಸಿರುವ ಕನ್ನಡ ಕೈಫಿಯತ್ತುಗಳ ವರ್ಗೀಕರಣ ಮಾಡಿರುವ ಪಟ್ಟಿಯನ್ನು ಇಟ್ಟುಕೊಂಡು ಒಂದು ಲೇಖನವನ್ನು ಬರೆದಿದ್ದಾರೆ. ಈ ಲೇಖನದಲ್ಲಿ ಸ್ಥಳಗಳಿಗೆ ಸಂಬಂಧಪಟ್ಟ ೯೯ ಕೈಫಿಯತ್ತುಗಳ ಪಟ್ಟಿ, ವ್ಯಕ್ತಿ ಮತ್ತು ವಂಶಾವಳಿಗಳಿಗೆ ಸಂಬಂಧಪಟ್ಟ ೧೧ ಕೈಫಿಯತ್ತುಗಳ ಪಟ್ಟಿಯನ್ನು ಕೊಟ್ಟಿದ್ದಾರೆ.

ಜಾತಿ ಮತ್ತು ಬುಡುಕಟ್ಟುಗಳಿಗೆ ಸಂಬಂಧಿಸಿದ ೧೯ ಕೈಫಿಯತ್ತುಗಳ ಪಟ್ಟಿ, ದೇವಾಲಯ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಸಂಬಂಧಪಟ್ಟ ೧೨ ಕೈಫಿಯತ್ತುಗಳ ಪಟ್ಟಿ, ಇತರ ವಿಚಾರಗಳಿಗೆ ಸಂಬಂಧಿಸಿದ ೨ ಕೈಫಿಯತ್ತುಗಳ ಪಟ್ಟಿಯನ್ನು ಕೊಟ್ಟಿದ್ದಾರೆ. ಹೀಗೆ ವರದರಾಜರಾವ್ ಅವರು ಒಟ್ಟು ೧೪೩ ಕೈಫಿಯತ್ತುಗಳ ಪಟ್ಟಿ ಕೊಟ್ಟಿದ್ದು ಇದನ್ನು ಅವರು ಮದ್ರಾಸ ಮೆಕೆಂಝಿ ಸಂಗ್ರಹದಿಂದ ತೆಗೆದುಕೊಂಡಂತೆ ಕಾಣುತ್ತದೆ. ಇವುಗಳಲ್ಲಿ ಕೆಲವು ಕೈಫಿಯತ್ತುಗಳು ಪುನರಾವರ್ತನೆಯಾದರೆ ಮತ್ತೆ ಕೆಲವು ದೊರೆತಿಲ್ಲ.

***

ಎಂ.ಎಂ. ಕಲಬುರ್ಗಿಯವರು ವಿದ್ಯಾರ್ಥಿ ದಿಸೆಯಿಂದಲೇ ಕೈಫಿಯತ್ತುಗಳ ಬಗ್ಗೆ ಆಸಕ್ತರಾಗಿದ್ದವರು. ಅಧ್ಯಾಪಕರಾದ ಹೊಸತರಲ್ಲಿಯೇ ಇವುಗಳ ಮಹತ್ವವನ್ನು ಅರಿತ ಇವರು ಒಂದು ಯು.ಜಿ.ಸಿ.ಯೋಜನೆಯನ್ನು ಪಡೆದುಕೊಂಡು ಸಮಗ್ರ ಕೈಫಿಯತ್ತುಗಳ ಸಂಪಾದನೆಗೆ ತೊಡಗಿದರು. ಮದ್ರಾಸಕ್ಕೆ ಹೋಗಿ ಸಂಗ್ರಹಕಾರ್ಯ ಆರಂಭಿಸಿದರು. ಆಗ ಅಲ್ಲಿ ಕೆ. ಕುಶಾಲಪ್ಪಗೌಡರು ಮತ್ತು ಕೆ. ಚಿನ್ನಪ್ಪಗೌಡರು ಕಲಬುರ್ಗಿಯವರ ಈ ಕಾರ್ಯವನ್ನು ಗಮನಿಸಿ ಇಂಥದೊಂದು ಕೆಲಸ ಆಗಬೇಕಿತ್ತು ಎಂದು ಶ್ಲಾಘಿಸಿ, ವಸತಿ ಸೌಕರ್ಯ ಮಾಡಿಕೊಟ್ಟು ಸರಿಯಾಗಿ ನೋಡಿಕೊಂಡರು. ಆದರೆ ಸಂಗ್ರಹ ಕಾರ್ಯವನ್ನು ಮುಗಿಸಿಕೊಂಡು ಕಲಬುರ್ಗಿಯವರು ಧಾರವಾಡಕ್ಕೆ ಬರುವಷ್ಟರಲ್ಲಿ ಕುಶಾಲಪ್ಪ ಗೌಡರು ಮತ್ತು ಚಿನ್ನಪ್ಪಗೌಡರು ಸೇರಿ ಉತ್ತರಕನ್ನಡ ಮತ್ತು ದಕ್ಷಿಣಕನ್ನಡ ಜಿಲ್ಲೆಯ ೪೧ ಕೈಫಿಯತ್ತುಗಳನ್ನು ಸಂಗ್ರಹಿಸಿ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆಯಿಂದ ೧೯೭೩ರಲ್ಲಿ ಪ್ರಕಟಿಸಿ ಬಿಟ್ಟರು.

ಇಂಥದ್ದೇ ಇನ್ನೊಂದು ಅವಸರದ ಪ್ರಯತ್ನಕ್ಕೆ ಕೈಹಾಕಿದವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯ ಡಾ. ಬಿ.ಎಸ್. ಕುಲಕರ್ಣಿಯವರು. ಅವರಿಂದ 'ಕೈಫಿಯತ್ತು ಮತ್ತು ಮೈಸೂರು ರಾಜರ ಚರಿತ್ರೆ ವಚನ ಕಾವ್ಯ' ಎಂಬ ಹೆಸರಿನಲ್ಲಿ ೧೯೭೫ರಲ್ಲಿ ಒಂದು ಕೃತಿ ಪ್ರಕಟವಾಗಿ ಬಂದಿತು. ಈ ಘಟನೆಗಳು ಕಲಬುರ್ಗಿಯವರಿಗೆ ಬಹಳ ನೋವನ್ನುಂಟು ಮಾಡಿದವು.

ಡಾ. ಎಂ.ಎಂ. ಕಲಬುರ್ಗಿಯವರು ಮೊದಲು ಈಗಾಗಲೇ ಬೇರೆ ಬೇರೆ ವಿದ್ವಾಂಸರು ಪ್ರಕಟಿಸಿದ ಕೈಫಿಯತ್ತಗಳ ಸಂಖ್ಯೆಗಳ ಪಟ್ಟಿಯನ್ನು ಸಿದ್ಧಪಡಿಸಿ ಮದ್ರಾಸ್‌ನಲ್ಲಿರುವ ಮೆಕೆಂಝಿ ಸಂಗ್ರಹದಿಂದ ಮತ್ತು ಬೆಂಗಳೂರಿನ ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಮತ್ತು ಬೇರೆ ಆಕರಗಳಲ್ಲಿ ದೊರೆಯುವ ಎಲ್ಲ ಕೈಫಿಯತ್ತುಗಳನ್ನು ಸಂಗ್ರಹಿಸಿದರು. ಅನಂತರ ಅವುಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಓದಿ ಪರಿಷ್ಕರಿಸಿದರು. ಆಮೇಲೆ ಅವುಗಳ ವರ್ಗೀಕರಣ ಮಾಡಿದರು.

ಒಂದು ಕೈಫಿಯತ್ತು ಅನೇಕ ವಿಷಯಗಳ ಸಮ್ಮಿಶ್ರಣವಾಗಿರುವ ಕಾರಣ ಅದನ್ನು ರಾಜಕೀಯ, ಧಾರ್ಮಿಕ, ಸಾಮಾಜಿಕ ಇತ್ಯಾದಿಯಾಗಿ ವರ್ಗೀಕರಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ಮನಗಂಡ ಅವರು ಅವುಗಳನ್ನು ಶೀರ್ಷಿಕೆಗಳೇ ತಿಳಿಸುವಂತೆ ಪ್ರಧಾನವಾಗಿ ಸ್ಥಳ, ಗ್ರಾಮಗಳನ್ನು ಕುರಿತ ಕಾರಣ ಇವುಗಳನ್ನು ಭೌಗೋಲಿಕವಾಗಿಯೇ ವಿಂಗಡಿಸುವುದು ಸೂಕ್ತವೆಂದು ನಿರ್ಧರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಒಟ್ಟು ಕೈಫಿಯತ್ತುಗಳನ್ನು–

೧. ಮೈಸೂರು ಪ್ರದೇಶದ ಕೈಫಿಯತ್ತುಗಳು

೨. ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳ ಕೈಫಿಯತ್ತುಗಳು

೩. ಬಳ್ಳಾರಿ ಪ್ರದೇಶದ ಕೈಫಿಯತ್ತುಗಳು

೪. ಇತರ ಕೈಫಿಯತ್ತುಗಳು

ಎಂದು ವಿಭಜಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಡಾ.ಕಲಬುರ್ಗಿಯವರು ಸಂಗ್ರಹಿಸಿ ಪ್ರಕಟಿಸಿದ ಕರ್ನಾಟಕದ ಕೈಫಿಯತ್ತುಗಳ ಒಟ್ಟು ಸಂಖ್ಯೆ ೧೩೪. ಅವರು ಈ ಕೃತಿಗೆ ಬರೆದ ೫೩ ಪುಟದ

ಪ್ರಸ್ತಾವನೆ ತುಂಬ ಮೌಲಿಕವಾಗಿದ್ದು, ಅದರಲ್ಲಿ ಕರ್ನಲ್ ಮೆಕೆಂಝಿ ಮತ್ತು ಆತನ ಆಕರ ಸಂಗ್ರಹ, ಕನ್ನಡ ಕೈಫಿಯತ್ತುಗಳ ಲಭ್ಯವಿರುವ ಕೇಂದ್ರಗಳು, ಕೈಫಿಯತ್ತುಗಳ ಲೇಖಕರ ಕಾಲ, ಕೈಫಿಯತ್ತುಗಳ ಶಿಲ್ಪ, ಕೈಫಿಯತ್ತುಗಳ ಸಂಖ್ಯಾ ನಿರ್ಣಯ, ಅವುಗಳ ವರ್ಗೀಕರಣ. ಕೈಫಿಯತ್ತಗಳ ಆಕರಗಳು, ಅಲಭ್ಯ ಕೈಫಿಯತ್ತುಗಳು, ಕೈಫಿಯತ್ತುಗಳ ವಿಷಯ, ಅಸತ್ಯ ವಿಷಯ, ಪುರಾಣೀಕೃತ ಅಸತ್ಯ ವಿಷಯ, ಐತಿಹ್ಯೀಕೃತ ಅಸತ್ಯ ವಿಷಯ, ರಾಜಕೀಯ, ಆಡಳಿತ, ಸಾಮಾಜಿಕ ಆಚರಣೆ, ಜಾತಿ, ಧಾರ್ಮಿಕ, ವಾಸ್ತು ವಿಶೇಷತೆ, ಭೌಗೋಳಿಕ, ವಾಣಿಜ್ಯ, ಸಾಹಿತ್ಯ, ಬರೆವಣಿಗೆಯ ಭಾಷೆ, ಮಹತ್ವದ ಘಟನೆಗಳು ಎಂಬ ವಿಭಿನ್ನ ತಲೆಬರೆಹಗಳನ್ನು ಮಾಡಿಕೊಂಡು ಸಕ್ರಮವಾಗಿ ವಿವೇಚಿಸಿದ್ದಾರೆ. ಇದು ಕೈಫಿಯತ್ತುಗಳನ್ನು ಕುರಿತು ಮಾಡಿದ ಮೊದಲ ಸಾಂಸ್ಕೃತಿಕ ಅಧ್ಯಯನವೆನಿಸಿದೆ. ಈ ಕೃತಿ ಹಂಪಿ ವಿಶ್ವವಿದ್ಯಾಲಯದಿಂದ ೧೯೯೮ರಲ್ಲಿ ಮೊದಲಬಾರಿಗೆ ಪ್ರಕಟವಾಗಿದೆ(ಡಾ. ಎಂ.ಎಂ. ಕಲಬುರ್ಗಿಯವರು ಕರ್ನಾಟಕದ ಕೈಫಿಯತ್ತು ಪ್ರಕಟಿಸಿದ ೧೩ ವರ್ಷಗಳ ತರುವಾಯ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಮೂಲಕ ಡಾ. ವೈ.ಸಿ. ಭಾನುಮತಿಯವರು 'ಅರಸರ ಚರಿತ್ರೆಗಳು' ಪುಸ್ತಕ ಪ್ರಕಟಿಸಿದ್ದು, ಅದರಲ್ಲಿ ಪೂರ್ವರಾಯರ ವೃತ್ತಾಂತ, ಪಟ್ಟಣ ಅಷ್ಟಗ್ರಾಮಗಳ ವೃತ್ತಾಂತ; ಸೂಗಾನಿ ವೃತ್ತಾಂತ, ನಗರದ ವೃತ್ತಾಂತ, ಪೂರ್ವರಾಯರ ಸಾಗರದ ವೃತ್ತಾಂತ, ಚಿತ್ರಕಲ್ಲ ದುರ್ಗದ ವೃತ್ತಾಂತ, ಸಂತೆಬೆನ್ನೂರು ವೃತ್ತಾಂತ, ಹೊದಿಗೆರೆ ಸೀಮೆಯ ವೃತ್ತಾಂತ, ಸೂಳೆಕೆರೆ ಸೀಮೆ ವೃತ್ತಾಂತ, ಬೆಳಗುತ್ತಿ ಅರಸರ ವೃತ್ತಾಂತ, ತರೀಕೆರೆ ಕೈಫಿಯತ್ತು, ತರೀಕೆರೆ ರಂಗಪ್ಪನಾಯಕ, ವೇಣುಪುರದ ಕ್ಷತ್ರಿಯರ ವಂಶಾವಳಿ ಇತ್ಯಾದಿ ಕೈಫಿಯತ್ತುಗಳು ವೃತ್ತಾಂತ ರೂಪದಲ್ಲಿ ಪ್ರಕಟವಾಗಿ ಹೊರಬಂದವು. ಈ ವೃತ್ತಾಂತಗಳು ಡಾ. ಕಲಬುರ್ಗಿಯವರು ಸಂಪಾದಿಸಿದ ಕೈಫಿಯತ್ತುಗಳ ಪಠ್ಯಗಳನ್ನು ಕೆಲವೊಂದು ಕಡೆ ಹೋಲುತ್ತವೆ. ಮತ್ತೆ ಕೆಲವು ಕಡೆ ಹೋಲುವುದಿಲ್ಲ.)

ಪರಿಷ್ಕರಣೆ:

ಐತಿಹಾಸಿಕ ದಾಖಲೆಗಳ ಸಂಪಾದನೆ, ಮತ್ತು ಪರಿಷ್ಕರಣೆ ಮಾಡುವುದು ಕಾವ್ಯಕೃತಿಗಳ ಸಂಪಾದನೆಗಿಂತಲೂ ಕಠಿಣವಾದುದು. ಏಕೆಂದರೆ ಇದರ ರಚನಾಕಾರರಾಗಲಿ, ಲಿಪಿಕಾರರಾಗಲಿ ಹೆಚ್ಚು ಶಿಕ್ಷಣ ಪಡೆದವರಲ್ಲ. ಭಾಷೆಯ ಪ್ರಜ್ಞೆಯೂ ಅವರಿಗೆ ಆಳವಾಗಿರುವುದಿಲ್ಲ. ಹೀಗಾಗಿ ಹೇರಳವಾದ ಸ್ಖಾಲಿತ್ಯ ಹಾಗೂ ಪಾಠದೋಷಗಳಿಂದ ಕೂಡಿರುತ್ತವೆ. ಅದರಲ್ಲಿ ಬಹುಪ್ರತಿಗಳೂ ಸಿಗುವುದಿಲ್ಲ. ಇಂತಹ ಎಲ್ಲ ಕಷ್ಟಗಳ ಮಧ್ಯ ಡಾ. ಎಂ.ಎಂ. ಕಲಬುರ್ಗಿಯವರು ಪ್ರಕಟಿತ ಕೃತಿಯನ್ನೇ ಇಲ್ಲಿ ಮೂಲವಾಗಿಟ್ಟುಕೊಂಡು ಹೆಚ್ಚು ಶುದ್ಧವಾಗಿ ಪ್ರಕಟಿಸಲು ಪ್ರಯತ್ನಿಸಿ ಅದರಲ್ಲಿ ಯಶಸ್ವಿಯಾಗಿದ್ದಾರೆ.

ಅದರಲ್ಲಿ ಉಳಿದ ಮುದ್ರಣದೋಷ, ಸಂಖ್ಯಾ ವ್ಯತ್ಯಾಸ ಇತ್ಯಾದಿಗಳನ್ನು ಸರಿಪಡಿಸಿಕೊಳ್ಳಲಾಗಿದೆ. ಇದರಲ್ಲಿ ೧೨೭, ೧೨೮, ೧೨೯, ೧೩೦ ನಂಬರಿನ ಕೈಫಿಯತ್ತುಗಳು ಪ್ರಕಟವಾಗಬೇಕಿದ್ದ ಜಾಗದಲ್ಲಿ ೧೩೧, ೧೩೨, ೧೩೩, ೧೩೪ ನಂಬರಿನ ಕೈಫಿಯತ್ತುಗಳು ಪ್ರಕಟವಾಗಿವೆ. ಇದನ್ನು ಈ ಆವೃತ್ತಿಯಲ್ಲಿ ಸರಿಪಡಿಸಲಾಗಿದೆ.

ಈ ಕೃತಿಗೆ ೧೬೦ ಪುಟದ ಸುದೀರ್ಘವಾದ ಮತ್ತು ನಾಮಸೂಚಿಯನ್ನು ಅನುಬಂಧವಾಗಿ ಜೋಡಿಸಲಾಗಿದೆ. ಇದರಲ್ಲಿ ಕೃತಿಯ ಒಳಗಿರುವ ಸ್ವರಗಳು ಮತ್ತು ನಾಮಸೂಚಿಯಲ್ಲಿರುವ

ಆರಂಭದ ಸ್ವರಗಳಲ್ಲಿ ವ್ಯತ್ಯಾಸವಾಗಿದೆ. ಅವುಗಳನ್ನು ಶ್ರಮವಹಿಸಿ ಹುಡುಕಿ ಸರಿಪಡಿಸಲಾಗಿದೆ. ಕೈಫಿಯತ್ತುಗಳ ಮೂಲಪಠ್ಯವನ್ನು ಯಾವುದೇ ತಿದ್ದುಪಡಿ ಮಾಡದೆ ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ. ಇವುಗಳನ್ನು ಡಾ. ಕಲಬುರ್ಗಿಯವರು ಬಹುಸೂಕ್ಷ್ಮವಾಗಿ ಗಮನಿಸಿ ತುಂಬ ಪರಿಶ್ರಮವಹಿಸಿ ಪರಿಷ್ಕರಿಸಿರುವುದರಿಂದ ಬಹುಮಟ್ಟಿಗೆ ಶುದ್ಧರೂಪದಲ್ಲಿಯೇ ಪ್ರಕಟವಾಗಿದೆ ಎಂದು ಹೇಳಬಹುದಾಗಿದೆ.

ಕೃತಜ್ಞತೆಗಳು:

ಈ ಯೋಜನೆಯಲ್ಲಿ ನನಗೆ ಅವಕಾಶ ನೀಡಿ ಕರ್ನಾಟಕದ ಕೈಫಿಯತ್ತು ಸಂಪುಟವನ್ನು ಸಂಪಾದಿಸಲು ಅನುವು ಮಾಡಿಕೊಟ್ಟ ಈ ಯೋಜನೆಯ ಪ್ರಧಾನ ಸಂಪಾದಕರಾದ ಡಾ. ವೀರಣ್ಣ ರಾಜೂರ ಅವರಿಗೆ ಕೃತಜ್ಞತೆಗಳು. ಡಾ. ಕೃಷ್ಣ ಕೊಲ್ಲಾರಕುಲಕರ್ಣಿಯವರಿಗೆ, ಡಾ. ಮದಭಾವಿ ಅವರಿಗೂ ಅನಂತ ಕೃತಜ್ಞತೆಗಳು. ಹಾಗೆಯೇ ಸಕಾಲಕ್ಕೆ ಬೆರಳಚ್ಚು ಮಾಡಿಕೊಟ್ಟ ಸಹೋದರ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಅವರಿಗೂ ಕರಡು ತಿದ್ದುವಲ್ಲಿ ಸಹಾಯ ಮಾಡಿದ ವಿದ್ಯಾರ್ಥಿ ಮಿತ್ರರಾದ ಚಿದಾನಂದ ಮಾಸನಕಟ್ಟಿ, ರಂಗಪ್ಪ ದೋರಿ, ಭರಮಪ್ಪ ದ್ಯಾಮಣ್ಣವರ, ಶಿವಕುಮಾರ ಅಂಗಡಿ, ಭೀಮೇಶ ನಾಯಕ, ಕುಮಾರ ವಿದ್ಯಾರ್ಥಿನಿಯರಾದ ನಜಿಯಾ ಬೇಗಂ, ಆರತಿ ತಮದಡ್ಡಿ ಇವರೆಲ್ಲರಿಗೂ ಪ್ರೀತಿಯಿಂದ ನೆನೆಯುತ್ತೇನೆ.

❖❖

ಕರ್ನಾಟಕದ ಕೈಫಿಯತ್ತುಗಳು

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಆಕರ ಸಾಹಿತ್ಯಮಾಲೆ : ಒಂದು

ಕರ್ನಾಟಕದ ಕೈಫಿಯತ್ತುಗಳು

ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೯೯೪

*

ಚಿನ್ನದ ಗಣಿ

"ಕರ್ನಾಟಕದ ಕೈಫಿಯತ್ತುಗಳು" ಪ್ರಾಚೀನ ಕರ್ನಾಟಕದ ಆಕರ ಸಾಮಗ್ರಿಗೆ ಸಂಬಂಧಪಟ್ಟ ಒಂದು ಹೊಸ ಚಿನ್ನದ ಗಣಿ. ಗಣಿಯ ಅದಿರಿನಂತೆ ಇವು ಸತ್ಯ-ಅಸತ್ಯಗಳ ಮಿಶ್ರಣವಾಗಿದ್ದರೂ ಒಡೆದು ಕಾಣುವ ಅಸತ್ಯಗಳಿಂದ ಸತ್ಯಗಳನ್ನು ಸಹಜವಾಗಿಯೇ ಬೇರ್ಪಡಿಸಿಕೊಳ್ಳಬಹುದಾಗಿದೆ. ಇಂಥ ಒಂದು ಉಪಯುಕ್ತ ಸಾಮಗ್ರಿ, ಈ ಸಂಪುಟದ ಮೂಲಕ ಸಮಗ್ರರೂಪದಲ್ಲಿ ಪ್ರಥಮಸಲ ಹೊರಬರುತ್ತಿದೆ. ಇದರಿಂದಾಗಿ ಇನ್ನು ಮೇಲೆ ಕೈಫಿಯತ್ತುಗಳಿಗೆ "ಆಕರಸಾಮಗ್ರಿ" ಎಂಬ ಪ್ರಶಸ್ತಿ ಪ್ರಾಪ್ತವಾಗುವುದೆಂದೂ ತನ್ನ ದೇಶೀಧೋರಣೆಯಿಂದಾಗಿ ನಮ್ಮ ಚರಿತ್ರೆಯ ಗೆರೆಗಳನ್ನು ಇದು ಖಂಡಿತ ವಿಸ್ತರಿಸುವುದೆಂದೂ ನಂಬಿದ್ದೇನೆ.

ವಿಜಯನಗರ ಪೂರ್ವಕಾಲೀನ ಕನ್ನಡನಾಡಿನ ಅಧ್ಯಯನಕ್ಕೆ ಶಾಸನ-ಸಾಹಿತ್ಯಗಳು ನೆರವಾದರೆ, ಉತ್ತರಕಾಲೀನ ಅಧ್ಯಯನಕ್ಕೆ ಹೆಚ್ಚಿನದಾಗಿ ಮತ್ತು ಹೆಚ್ಚು ವ್ಯಾಪಕ ರೀತಿಯಲ್ಲಿ ಕೈಫಿಯತ್ತುಗಳು ನೆರವಾಗುತ್ತವೆ. ಇವುಗಳಲ್ಲಿ ಐತಿಹ್ಯ ಮತ್ತು ವದಂತಿಗಳನ್ನು ಮೇಳವಿಸಿಕೊಂಡ ಚರಿತ್ರೆಯ ನಿರೂಪಣೆಯಿದೆ. ಈ ಚರಿತ್ರೆಗೆ ಇಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಭೌಗೋಲಿಕ, ಜನಾಂಗಿಕ ಮುಖಗಳಿವೆ. ವಾಸ್ತುಶಿಲ್ಪ-ಮೂರ್ತಿಶಿಲ್ಪಗಳಿಗೆ ಸಂಬಂಧಪಟ್ಟ ವಿಷಯಕ್ಕೂ ಇಲ್ಲಿ ಕೊರತೆಯಿಲ್ಲ, ಸ್ಥಳೀಯ ವಿದ್ವಾಂಸರು ಅನೇಕ ಆಧಾರಗಳನ್ನು ಅವಲಂಬಿಸಿ ಬರೆದಿರುವ ಇವು "ಆಕರಸಾಮಗ್ರಿ"ಯ ಮಿತಿಯನ್ನು ದಾಟಿ "ಚರಿತ್ರೆ"ಯ ರೂಪ ಪಡೆದಿದೆ. ಹೀಗಾಗಿ ಪ್ರಾಚೀನ ಕರ್ನಾಟಕದ ಅಧ್ಯಯನಕ್ಕೆ "ಹೊಸಬಗೆಯ" ಆಕರಸಾಮಗ್ರಿಯೆಂಬಂತೆ ಈ ಸಂಪುಟ ಹೊರಬರುತ್ತಲಿದೆ.

ಈ ವರೆಗೆ ೩-೪ ಕೈಫಿಯತ್ತುಗಳು ಪ್ರಕಟವಾಗಿದ್ದರೂ ಶಾಸನಗಳ ಅಬ್ಬರದಲ್ಲಿ ಈ ಸಾಮಗ್ರಿ ಇತಿಹಾಸಕಾರರ ಉಪೇಕ್ಷೆಗೆ ಗುರಿಯಾಗಿದ್ದವು. ೧೯೮೦ರಲ್ಲಿ ನಾನು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮೂಲಕ "ಸಮಗ್ರ ಕೈಫಿಯತ್ತುಗಳ ಸಂಗ್ರಹ, ಸಂಸ್ಕರಣ ಯೋಜನೆ"ಯನ್ನು ಕೈಗೆತ್ತಿಕೊಂಡು, ಈ ಕ್ಷೇತ್ರದ ವ್ಯಾಪ್ತಿ-ಮಹತ್ವಗಳನ್ನು ಬಹಿರಂಗಪಡಿಸುತ್ತಲೇ, ಇದನ್ನು ಗಮನಿಸಿದ ಒಬ್ಬಿಬ್ಬ ವಿದ್ವಾಂಸರು ಅವಸರದಿಂದ ಒಂದೆರಡು ಬಿಡಿ ಸಂಗ್ರಹಗಳನ್ನು ಹೊರತಂದರು. ಈಗ ಈ ಬಿಡಿ ಪ್ರಯತ್ನಗಳನ್ನೂ ಮೀರಿ "ಕರ್ನಾಟಕದ ಕೈಫಿಯತ್ತುಗಳು" ಹೆಸರಿನ ಸಮಗ್ರ ಸಂಪುಟ ಹೊರಬರುತ್ತಲಿದೆ. ಆರಕಗಳ ಪ್ರಕಟನೆಯ ಇತಿಹಾಸದಲ್ಲಿ "ಮೈಲುಗಲ್ಲು" ಸ್ಥಾಪನೆಗೊಳ್ಳುತ್ತಲಿದೆ.

ಮದ್ರಾಸ್ ಓರಿಯಂಟಲ್ ಲೈಬ್ರರಿಯಲ್ಲಿ ಬಹು ಸಂಖ್ಯೆಯಲ್ಲಿ, ಮಿಕ್ಕ ಕೇಂದ್ರಗಳಲ್ಲಿ ಅಲ್ಪಸಂಖ್ಯೆಯಲ್ಲಿ ಸಿಗುವ ಕೈಫಿಯತ್ತುಗಳನ್ನು ನಾನು ೧೯೮೦ರಷ್ಟು ಪೂರ್ವದಲ್ಲಿಯೇ ಸಂಗ್ರಹಿಸಿ ಸಂಸ್ಕರಿಸಿದ್ದೆನು. ಹೀಗೆ ನಾನು ಸಂಸ್ಕರಿಸಿದ ೧೦ ವರ್ಷದ ಬಳಿಕ, ಮೆಕೆಂಝಿ ಸಂಗ್ರಹಿಸಿದ ೨೦೦ ವರ್ಷಗಳ ಬಳಿಕ ಇವು ಪ್ರಥಮ ಬಾರಿಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೂಲಕ ಬೆಳಕು ಕಾಣುತ್ತಲಿವೆ. "ಕರ್ನಾಟಕದ ಕೈಫಿಯತ್ತುಗಳ ಸಂಗ್ರಹ ಸಂಸ್ಕರಣ ಯೋಜನೆ"ಗೆ ಸಹಾಯಧನ ನೀಡಿದ ವಿಶ್ವವಿದ್ಯಾಲಯ ಧನಸಹಾಯ ಆಯೋಗ(ದಿಲ್ಲಿ)ದ ನೆರವನ್ನು ನೆನೆಯುವುದು ನನ್ನ ಪ್ರಥಮ ಕರ್ತವ್ಯವಾಗಿದೆ. ಈ ಆಕರ ಸಂಪತ್ತು ಬೆಳಕು ಕಾಣಲು ಕಾರಣರಾದ ಕುಲಪತಿ ಡಾ. ಚಂದ್ರಶೇಖರ ಕಂಬಾರ ಅವರಿಗೂ, ಈ ವಿಷಯದ ಬಗ್ಗೆ ವಿಶೇಷ ಆಸಕ್ತಿ ತೋರಿದ ಸಿಂಡಿಕೇಟ ಸದಸ್ಯರಾದ ಶ್ರೀ ಚೆನ್ನವೀರ ಕಣವಿ, ಹಸ್ತಪ್ರತಿಯನ್ನು ಪರಿಶೀಲಿಸಿ, ಉಪಯುಕ್ತ ಸೂಚನೆ ನೀಡಿದ ಡಾ. ಸೂರ್ಯನಾಥ ಕಾಮತ ಅವರಿಗೂ ಕೃತಜ್ಞನಾಗಿದ್ದೇನೆ. ಪ್ರಸಾರಾಂಗದ ಹಿಂದಿನ ನಿರ್ದೇಶಕರಾಗಿದ್ದ ಶ್ರೀ ಚಿ. ಶ್ರೀನಿವಾಸರಾಜು, ಇಂದಿನ ನಿರ್ದೇಶಕರಾಗಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರು ತೋರಿಸಿದ ಅನನ್ಯ ಆಸಕ್ತಿ, ಶ್ರೀ ಓ. ಎಲ್. ನಾಗಭೂಷಣಸ್ವಾಮಿ, ಡಾ. ಬಸವರಾಜ ಮಲಶೆಟ್ಟಿ ಮೊದಲಾದವರು ವಹಿಸಿದ ವಿಶೇಷ ಕಾಳಜಿಗಳಿಗಾಗಿ ಋಣಿಯಾಗಿದ್ದೇನೆ.

ಈ ಹಿಂದೆ "ಕೈಫಿಯತ್ತು ಸಂಗ್ರಹ-ಸಂಸ್ಕರಣ" ಯೋಜನೆಯಲ್ಲಿ ಶ್ರದ್ಧೆ, ಶ್ರಮವಹಿಸಿ ಪ್ರತಿಮಾಡಿದ ಶ್ರೀಮತಿ ಲಲಿತಾ ಗೌಳಿ, ಶ್ರೀ ಅಶೋಕ ಜೋಗೂರ, ಶ್ರೀ ಕೊಟ್ರಪ್ಪ ಅವರ ನೆರವನ್ನು ವಿಶ್ವಾಸದಿಂದ ಸ್ಮರಿಸುತ್ತೇನೆ. ಈ ಅನುಬಂಧವನ್ನು ಸಿದ್ಧಪಡಿಸುವಲ್ಲಿ ನೆರವಾದ ಡಾ. ಜೆ. ಎಂ. ನಾಗಯ್ಯ ಅವರ ಶ್ರಮವನ್ನು, ತುಂಬ ಶ್ರದ್ಧೆಯಿಂದ ಮುದ್ರಣಕಾರ್ಯವನ್ನು ಪೂರೈಸಿದ ಧಾರವಾಡದ ಅಖಿಲ ಗ್ರಾಫಿಕ್ಸ್ ಪರಿವಾರದ ವಿನಯ ಮತ್ತು ಜಯಶ್ರೀ ಅವರ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ.

–ಎಂ.ಎಂ.ಕಲಬುರ್ಗಿ

❖❖

*

ಪ್ರಸ್ತಾವನೆ

ಇತಿಹಾಸವೆನ್ನುವುದು ಕೇವಲ ಗತಕಾಲಕ್ಕೆ ಸೀಮಿತವಾದ ವಿದ್ಯಮಾನವಲ್ಲ. ಪರೋಕ್ಷವಾಗಿ ವರ್ತಮಾನವನ್ನೂ ನಿಯಂತ್ರಿಸುವ ಅದು, ಬಹಳಷ್ಟು ಸಲ ಇಂದಿನ ಬದುಕಿಗೆ ಬೆಲೆಯುಳ್ಳ ಪಾಠವಾಗಿ ಪರಿಣಮಿಸುತ್ತದೆ. ಹೀಗಾಗಿ ಪ್ರತಿಯೊಂದು ಜನಾಂಗ ತನ್ನ ಬದುಕಿನ ಬೇರುಗಳನ್ನು ಗತಕಾಲದಲ್ಲಿ ಶೋಧಿಸುತ್ತಲೇ ಇರುತ್ತದೆ. ಇತಿಹಾಸವನ್ನು ಹುಡುಕಿಕೊಳ್ಳದ ಜನಾಂಗವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಈ ಕ್ರಿಯೆ ಜಗತ್ತಿನಾದ್ಯಂತ ಜರುಗುತ್ತ ಬಂದಿದೆ. ಇತಿಹಾಸ ಇಷ್ಟು ಮಹತ್ವಪೂರ್ಣವಾಗಿರುವುದರಿಂದ ಅದನ್ನು ರೂಪಿಸಿಕೊಡಬೇಕೆನ್ನುವ ವಿದ್ವಾಂಸರು ಮೂರು ಹಂತಗಳಲ್ಲಿ ಮುನ್ನಡೆಯಬೇಕಾಗುತ್ತದೆ.

೧. ಆಕರವನ್ನು ಶೋಧಿಸಿಕೊಳ್ಳುವುದು ಮತ್ತು ಶುದ್ಧೀಕರಿಸಿಕೊಳ್ಳುವುದು.

೨. ಶುದ್ಧೀಕರಿಸಿಕೊಂಡ ಆಕರಸಾಮಗ್ರಿಯ ಸಹಾಯದಿಂದ ಗತಕಾಲದ ವಸ್ತುಸ್ಥಿತಿ (Fact)ಯನ್ನು ಸಂಯೋಜಿಸುವುದು.

೩. ಸಂಯೋಜಿತ ವಸ್ತುಸ್ಥಿತಿಯನ್ನು ಸರಿಯಾಗಿ ವ್ಯಾಖ್ಯಾನಿಸಿ, ವಸ್ತುಸತ್ಯ (Truth)ವನ್ನು ಶೋಧಿಸುವುದು.

ಹೀಗೆ ವಸ್ತುಸ್ಥಿತಿಯನ್ನೇ ಸಂಯೋಜಿಸಲಿ, ಅದರ ಹಿಂದಿರುವ ವಸ್ತುಸತ್ಯವನ್ನೇ ಶೋಧಿಸಲಿ, ಇದಕ್ಕೆಲ್ಲ ಅವಶ್ಯವಾದುದು ಆಕರಸಾಮಗ್ರಿಯೆಂಬುದನ್ನು ಮರೆಯುವಂತಿಲ್ಲ. ಆದರೆ ಪಾರಮಾರ್ಥಿಕ ಬದುಕಿನ ಬಗೆಗೆ ತೀವ್ರ ಆಸಕ್ತಿಯುಳ್ಳ ಪ್ರಾಚೀನ ಭಾರತೀಯರು ಪ್ರಾಪಂಚಿಕ ಬದುಕಿನ ವಿಷಯವಾಗಿ, ಆ ಬದುಕಿನ ಆಕರಸಾಮಗ್ರಿಯ ವಿಷಯವಾಗಿ ತೀರ ಉಪೇಕ್ಷಿತ ನಿಲುವು ತಾಳುತ್ತ ಬಂದರು ಮತ್ತು ಅದರ ಇತಿಹಾಸೀಕರಣ ಸಂದರ್ಭದಲ್ಲಿ ಸಾಮಾನ್ಯರು ಐತಿಹ್ಯೀಕರಿಸುವ (legend), ವಿದ್ವಾಂಸರು ಪುರಾಣೀಕರಿಸುವ (Myth) ದಾರಿ ಹಿಡಿದರು. ಹೀಗಾಗಿ ನಮಗೆ ಸಿಗುವ ಶುದ್ಧ ಆಕರಸಾಮಗ್ರಿ ತುಂಬ ಕಡಿಮೆ. ಕೈಫಿಯತ್ತು ಒಳಗೊಂಡಂತೆ ಈ ಬಗೆಯ ಆಕರಸಾಮಗ್ರಿಯನ್ನು ಬರೆಯಿಸಿದ, ಸಂಗ್ರಹಿಸಿದ ವಿದ್ವಾಂಸ ವ್ಯಕ್ತಿಗಳಲ್ಲಿ ಕರ್ನಲ್ ಮೆಕೆಂಝಿ ಕರ್ನಾಟಕದಲ್ಲಿ ಪ್ರಥಮನೆನಿಸಿದ್ದಾನೆ. ಪ್ರಮುಖನೆನಿಸಿದ್ದಾನೆ.

ಕರ್ನಲ್ ಮೆಕೆಂಝಿ ಮತ್ತು ಆತನ ಆಕರಸಂಗ್ರಹ:

ಕರ್ನಲ್ ಮೆಕೆಂಝಿ ವಿಷಯವಾಗಿ, ಆತನ ಸಂಗ್ರಹದ ವಿಷಯವಾಗಿ ನಮಗೆ ಮಾಹಿತಿ ಒದಗಿಸುವುದೆಂದರೆ, ಆ ಸಂಗ್ರಹಕ್ಕೆ ವಿಲ್ಸನ್ ಸಿದ್ಧಪಡಿಸಿದ ಸೂಚಿ, ಡಬ್ಲ್ಯೂ.ಸಿ.ಮೆಕೆಂಝಿ ಬರೆದ "Colonel Colin Mackenzie : First Surveyor general of India" ಹೆಸರಿನ ಗ್ರಂಥ ಮತ್ತು ಒಂದೆರಡು ಲೇಖನಗಳು. ಇವುಗಳಿಂದ ತಿಳಿದು ಬರುವ ವ್ಯಕ್ತಿಜೀವನ, ಆಕರಸಂಗ್ರಹ ವಿವರಗಳು ಹೀಗಿವೆ: ಮೆಕೆಂಝಿ ೧೭೫೪ರಲ್ಲಿ ಸ್ಕಾಟಲ್ಯಾಂಡಿನ ಲೂಯಿ ದ್ವೀಪದಲ್ಲಿ ಹುಟ್ಟಿದ. ತಂದೆ ಮಾರ್ಡೋಕ್ ಮೆಕೆಂಝಿ, ತಾಯಿ ಬರ್ಬರಾ ಮೆಕೆಂಝಿ. ಫ್ರಾನ್ಸಿಸ್ ಎಂಬವನ ಆಜ್ಞೆಯಂತೆ ಗಣಿತಕ್ಕೆ ಸಂಬಂಧಪಟ್ಟ ವಿಷಯವನ್ನು ಸಂಗ್ರಹಿಸಲು ಮೆಕೆಂಝಿ ತನ್ನ ೨೯ನೆಯ ವಯಸ್ಸಿನಲ್ಲಿ(೧೭೮೩) ಭಾರತಕ್ಕೆ ಬಂದ. ಇವನನ್ನು ಕಳುಹಿಸಿಕೊಟ್ಟ ಫ್ರಾನ್ಸಿಸ್ ಕೆಲವೇ ದಿನಗಳಲ್ಲಿ ತೀರಿಕೊಳ್ಳಲು, ಮೆಕೆಂಝಿ ಮದ್ರಾಸಿನಲ್ಲಿ ಈಸ್ಟ ಇಂಡಿಯಾ ಕಂಪನಿಯ ಸೈನ್ಯಕ್ಕೆ ಸಂಬಂಧಿಸಿದ ಸಾರ್ವಜನಿಕ ಕಾಮಗಾರಿ ಇಲಾಖೆಯಲ್ಲಿ 'ಕೆಡೆಟ್ ಆಫ್ ಎಂಜಿನೀಯರ್' ಎಂದು ಕೆಲಸ ಹಿಡಿದ. ೧೭೮೩ರಿಂದ ಮೆಕೆಂಝಿ ಫಸ್ಟಲೆಫ್ಟಿನೆಂಟ್, ಕ್ಯಾಪ್ಟನ್, ಮೇಜರ್, ಕರ್ನಲ್-ಹೀಗೆ ಅನೇಕ ಹುದ್ದೆಗಳನ್ನು ಅಲಂಕರಿಸಿ ೧೮೨೧ನೆಯ ಮೇ ೮ರಂದು ಕಲ್ಕತ್ತೆಯ ತನ್ನ ಮನೆಯಲ್ಲಿ ತೀರಿಕೊಂಡ. ಈ ಅವಧಿಯಲ್ಲಿ ಈತನು ಪೂರೈಸಿದ ಕೆಲಸಗಳು ಹೀಗಿವೆ;

೧೭೮೩-೯೦ ದಿಂಡಗಲ್ ಕೋಯಿಮತ್ತೂರಿನ ಪ್ರಾಂತ, ಗುಂಟೂರ್ ನೆಲ್ಲೂರ್ ಪ್ರಾಂತಗಳಲ್ಲಿ ಸೈನ್ಯಖಾತೆಯ ಕೆಲಸ.

೧೭೯೦-೯೨ ಮೈಸೂರು ಯುದ್ಧದಲ್ಲಿ ಭಾಗವಹಿಸಿದುದು.

೧೭೯೩-೯೬ ಹೈದ್ರಾಬಾದ ನಿಜಾಮನಿಂದ ಈಸ್ಟ ಇಂಡಿಯಾ ಕಂಪನಿಗೆ ಬಂದಿದ್ದ ಭೂಮಿಯನ್ನು ಅಳೆಯುವ ಕೆಲಸ. ಭೂವೀಕ್ಷಣೆಗಾಗಿ ಸಿಂಹಳಕ್ಕೆ ಪ್ರಯಾಣ.

೧೭೯೬-೯೮ ಸಿಂಹಳವಾಸ, ಭಾರತಕ್ಕೆ ಪ್ರಯಾಣ, ಸೈನ್ಯ ಖಾತೆಯ ಕೆಲಸ.

೧೭೯೯-೧೮೧೦ ಮೈಸೂರು ಪ್ರಾಂತದಲ್ಲಿ ಟೀಪುವಿನ ವಿರುದ್ಧ ಪ್ರಚಾರ. ಮೈಸೂರು ಪ್ರಾಂತದ ಭೂಪರಿವೀಕ್ಷಣೆ. ದಕ್ಷಿಣ ಭಾರತದ ಭೂಪಟ ರಚನೆ.

೧೮೧೧-೧೮೧೬	ಜಾವಾದ್ವೀಪಕ್ಕೆ ಪ್ರಯಾಣ. ಸೈನ್ಯದ ಕೆಲಸ.
೧೮೧೬	ಭಾರತಕ್ಕೆ ಪ್ರಯಾಣ.
೧೮೧೭	ಮದ್ರಾಸ ಬಿಟ್ಟು ಕಲ್ಕತ್ತೆಗೆ ಪ್ರಯಾಣ.
೧೮೨೧ ಮೇ ೮	ಕಲ್ಕತ್ತೆಯ ಸ್ವಗೃಹದಲ್ಲಿ ನಿಧನ.

ಹೀಗೆ ಭಾರತದಲ್ಲಿ ಮಾಡಿದ ೩೮ ವರ್ಷಗಳ ಸೇವೆಯ ಅವಧಿಯಲ್ಲಿ ಈತ ಸೈನ್ಯ ಕೆಲಸದ ಜೊತೆಗೆ ಇತಿಹಾಸಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯವನ್ನೂ ಪೂರೈಸಿದ. ಈ ಕೆಲಸದಲ್ಲಿ ಚಾವಲಿ ಬೋರಯ್ಯ, ಈತನ ತಮ್ಮ ಲಕ್ಷ್ಮಯ್ಯ ಮತ್ತು ಪುಲಿಗಡ್ಡ ಮಲ್ಲಯ್ಯ ಮೊದಲಾದ ಸ್ಥಳೀಯ ವಿದ್ವಾಂಸರು ಇವನಿಗೆ ನೆರವಾಗಿದ್ದರು. ಇದರ ಫಲವಾಗಿ ೧೫೬೮ ಹಸ್ತಪ್ರತಿ, ೨೦೭೦ ಕೈಫಿಯತ್ತು,

೮೦೭೦ ಶಾಸನ ನಕಲು, ೭೯ ನಕ್ಷೆ, ೨೬೩೦ ಚಿತ್ರ, ೬೭೧೮ ನಾಣ್ಯ, ೧೦೬ ಪ್ರಾಚೀನ ವಿಗ್ರಹಗಳನ್ನು ಸಂಗ್ರಹಿಸಿದ. ಇದು ಕನ್ನಡವು ಒಳಗೊಂಡಳತೆ ಬೇರೆ ಬೇರೆ ಭಾಷೆಗಳಿಗೆ ಸಂಬಂಧಿಸಿದ ಬಹುದೊಡ್ಡ ನಿಧಿಯಾಗಿದ್ದಿತು. ಈ ಸಂಗ್ರಹಕ್ಕಾಗಿ ಈತ ತನ್ನ ಕೈಯಿಂದ ಖರ್ಚು ಮಾಡಿರಬಹುದಾದ ಹಣ ೧೫ ಸಾವಿರ ಪೌಂಡು. ಆದರೆ ಮೆಕೆಂಝಿ ಮರಣಾನಂತರ ಈ ಸಂಗ್ರಹವನ್ನು ಆತನ ಹೆಂಡತಿಯಿಂದ ೧೦ ಸಾವಿರ ಪೌಂಡುಗಳಿಗೆ ಬ್ರಿಟಿಶ್ ಸರಕಾರ ಖರೀದಿಸಿ, ೧೮೨೩ ಮತ್ತು ೧೮೨೫ ರಲ್ಲಿ ಮುಖ್ಯ ದಾಖಲೆಗಳನ್ನು ಇಂಗ್ಲೆಂಡಿಗೆ ಸಾಗಿಸಿತು. ಅಲ್ಲಿಯ ವಿಕ್ಟೋರಿಯಾ ಅಲ್ಬರ್ಟ್ ವಸ್ತುಸಂಗ್ರಹಾಲಯ ಮತ್ತು ಇಂಡಿಯಾ ಆಫೀಸ್ ಲೈಬ್ರರಿಗಳಲ್ಲಿ ಈ ಸಂಗ್ರಹವನ್ನು ರಕ್ಷಿಸಲಾಗಿದೆ.


ಹೀಗೆ ಸಾಗಿಸಿಯೂ ಉಳಿದಿದ್ದ ಸಂಗ್ರಹವನ್ನು ಮದ್ರಾಸ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ರಕ್ಷಿಸಲಾಯಿತು. ೧೮೩೬ರ ವರೆಗೆ ಇದು ಉಪೇಕ್ಷೆಗೆ ಗುರಿಯಾಯಿತು. ೧೮೩೭-೩೮ರಲ್ಲಿ ವಿಲಿಯಂ ಟೇಲರ್ ಇದರ ವ್ಯವಸ್ಥೆ ನೋಡಿಕೊಂಡು ನಿವೃತ್ತನಾದ. ಆಮೇಲೆ ೧೮೪೭ರ ವರೆಗೆ ಮತ್ತೆ ಇದು ಅಲಕ್ಷ್ಯಕ್ಕೆ ಗುರಿಯಾಯಿತು. ೧೮೪೭ರಲ್ಲಿ ಸಿ.ಪಿ. ಬ್ರೌನ್ ಸಂರಕ್ಷಣೆಯ ಹೊಣೆಹೊತ್ತು ಅದನ್ನು ಸರಿಯಾಗಿ ನಿರ್ವಹಿಸಿದ. ಅವುಗಳ ನಕಲುಪ್ರತಿ ಮಾಡಿಸಿದ. ೧೮೫೮ರಲ್ಲಿ ಮದ್ರಾಸ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿ ಹೆಸರಿನಲ್ಲಿ ಈ ಸಂಗ್ರಹವನ್ನು ಪ್ರೆಸಿಡೆನ್ಸಿ ಕಾಲೇಜಿನ ಸಂಸ್ಕೃತ ವಿಭಾಗದ ವಶಕ್ಕೆ ಒಪ್ಪಿಸಲಾಯಿತು. ಅಂದಿನಿಂದ ಈ ಭಾಂಡಾರ ಒಂದು ವ್ಯವಸ್ಥಿತ ರೀತಿಯಲ್ಲಿ ಸಾಗಿಬಂದಿದೆ. ಇದರ ಒಂದು ಭಾಗ ಕೈಫಿಯತ್ತುಗಳು.

ಹೀಗೆ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿಯ ಒಂದು ಭಾಗವಾದ ಕನ್ನಡ ಹಸ್ತಪ್ರತಿಗಳಲ್ಲಿ ಮೆಕೆಂಝಿ ಸಂಗ್ರಹವನ್ನು ಹೊರತುಪಡಿಸಿ, ೧೯೬೭ರಲ್ಲಿ ಎಲ್ಲ ಕನ್ನಡ ಹಸ್ತಪ್ರತಿಗಳನ್ನು ಮೈಸೂರು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ರಾಜ್ಯ ಪುರಾತತ್ವ ಇಲಾಖೆ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಗಳಿಗೆ ಹಂಚಿಕೊಡಲಾಯಿತು. ಇವುಗಳಲ್ಲಿ ಕೊನೆಯ ಎರಡು ಸಂಸ್ಥೆಗಳಿಗೆ ಬಂದವುಗಳಲ್ಲಿ ಕೆಲವು ಕೈಫಿಯತ್ತುಗಳೂ ಸೇರಿಕೊಂಡಿವೆ.

ಕೈಫಿಯತ್ತುಗಳು

ಪ್ರಾಚೀನ ಕರ್ನಾಟಕದ ಇತಿಹಾಸವನ್ನು ರಚಿಸಲು ನಮಗೆ ನೆರವಾಗುವ ಆಕರ ಸಾಮಗ್ರಿಗಳು ನಾಲ್ಕು ಬಗೆಯಾಗಿವೆ. ವಸ್ತುಸಾಮಗ್ರಿ, ಜ್ಞಾನಸಾಮಗ್ರಿ, ಕ್ರಿಯಾಸಾಮಗ್ರಿ ಮತ್ತು ಭಾಷಾಸಾಮಗ್ರಿ. ಇವುಗಳಲ್ಲಿ ವಸ್ತುವೇ ಇರಲಿ, ಜ್ಞಾನವೇ ಇರಲಿ, ಕ್ರಿಯೆಯೇ ಇರಲಿ ಈ ಮೂರನ್ನೂ ಪ್ರತಿನಿಧಿಸುವ ಭಾಷೆಯ ಪಾತ್ರ ಮುಖ್ಯವಾದುದು. ಇಲ್ಲಿ 'ಭಾಷೆ'ಯೇ ಒಂದು ಸಾಮಗ್ರಿಯಾಗುವುದು, ಭಾಷಾಮಾಧ್ಯಮದ 'ರಚನೆ'ಗಳು ಸಾಮಗ್ರಿಯಾಗುವುದು ಎಂಬ ಎರಡು ಬಗೆಗಳನ್ನು ಗುರುತಿಸಬಹುದು. ಇವುಗಳಲ್ಲಿ ಎರಡನೆಯದಾದ 'ರಚನೆ'ಯೆನ್ನುವುದು ಮೌಖಿಕ ಮತ್ತು ಲಿಖಿತವೆಂದು ಎರಡು ತೆರನಾಗಿದೆ. ಮತ್ತೆ ಇವುಗಳಲ್ಲಿ ಸಾಹಿತ್ಯಿಕ ಸಾಮಗ್ರಿ ಮತ್ತು ದಾಖಲಾತ್ಮಕ ಸಾಮಗ್ರಿಯೆಂಬ

ಎರಡು ಬಗೆಗಳು ಕಂಡುಬರುತ್ತಿದ್ದು, ಕನ್ನಡದ ಮಟ್ಟಿಗೆ ಸಾಹಿತ್ಯಿಕವೆನ್ನುವುದು ಪಂಪ–ರನ್ನರಿಂದ ಪುರಾಣದ ಚರಿತ್ರೀಕರಣ, ಹರಿಹರ ರಾಘವಾಂಕರಿಂದ ಚರಿತ್ರೆಯ ಪುರಾಣೀಕರಣ, ಆಮೇಲಿನವರಿಂದ ಚರಿತ್ರೆಯ ಉತ್ಪ್ರೇಕ್ಷೀಕರಣ – ಈ ತಿರುವುಗಳನ್ನು ಪಡೆಯುತ್ತ ಬಂದಿದೆ. ದಾಖಲಾತ್ಮಕ ಸಾಮಗ್ರಿಯಲ್ಲಿ ಶಾಸನ ಪ್ರಮುಖ ಬಗೆಯಾದರೆ, ಗೌಣ ಬಗೆಯ ಅನೇಕ ಪ್ರಕಾರಗಳಲ್ಲಿ ಕೈಫಿಯತ್ತುಗಳು ಪರಿಗಣಿತವಾಗುತ್ತವೆ. ಈವರೆಗಿನ ವಿವರದ ನಕ್ಷೆ ಹೀಗಿದೆ:



ಪ್ರಾಚೀನ ಕರ್ನಾಟಕದ ಪ್ರಮುಖ ದಾಖಲೆಗಳಾದ ಶಾಸನಗಳು ಶಿಲೆ ಮತ್ತು ಲೋಹಗಳ ಮೇಲೆ ಬರೆದವುಗಳಾಗಿದ್ದು, ಸುಮಾರು ೨೫೦೦ದಷ್ಟು ಸಿಗುತ್ತವೆ. ಇವು ನಮ್ಮ ನಾಡಿನಲ್ಲಿ ಕ್ರಿ.ಶ.ಪೂ ೩೦೦ರಿಂದಲೂ ಬೆಳೆದು ಬರುತ್ತಿದ್ದಂತೆ ೧೫ನೆಯ ಶತಮಾನದ ಹೊತ್ತಿಗೆ ಕನ್ನಡಿಗರು ಕೋರಿ ಕಾಗದವನ್ನು, ೧೮ನೆಯ ಶತಮಾನದ ಹೊತ್ತಿಗೆ ಯುರೋಪಿಯನ್ ಕಾಗದವನ್ನು ಬಳಸಹತ್ತಿದರು. ಈಗ ಕ್ರಮೇಣ ಶಾಸನ ಸೃಷ್ಟಿ ಕಡಿಮೆಯಾಗುತ್ತ, ಅದೇ ಪ್ರಮಾಣದಲ್ಲಿ ಬರವಣಿಗೆಗೆ ಸುಲಭವೆನಿಸುವ ಕಾಗದ ರೂಪದ ಆಕರಸಾಮಗ್ರಿಯ ಸೃಷ್ಟಿ ವಿಪುಲವಾಗುತ್ತ ನಡೆಯಿತು. ಕರ್ನಲ್ ಮೆಕೆಂಝಿ, ಯುರೋಪಿಯನ್ ಕಾಗದದ ಮೇಲೆ ಬರೆಯಿಸಿದವುಗಳಾಗಿವೆ, ಕೈಫಿಯತ್ತುಗಳು.

ಬಹಮನಿ ಅರಸರೊಂದಿಗೆ ನಮ್ಮ ನಾಡನ್ನು ಪ್ರವೇಶಿಸಿದ 'ಕೈಫಿಯತ್' ಎಂಬುದು ಮೂಲತಃ ಅರೇಬಿಯನ್ ಭಾಷೆಯ ಪದವಾಗಿದ್ದು, ಅಲ್ಲಿ ಅದಕ್ಕೆ ಸ್ಪಷ್ಟವಾದ ಹೇಳಿಕೆ, ವಿವರಣೆ ಎಂಬ ಅರ್ಥವಿದೆ. ಐತಿಹಾಸಿಕ ದಾಖಲೆಯೆಂಬ ಅರ್ಥ ಪಡೆದುಕೊಂಡ ಹೊಸದರಲ್ಲಿ ಇದು "ಸ್ಥಳಪುರಾಣ" ಎಂಬ ಅರ್ಥಕ್ಕೆ ಮಾತ್ರ ಸೀಮಿತವಾಗಿರಬೇಕು. ಮೆಕೆಂಝಿ ದೇವಚಂದ್ರನಿಗೆ "ಸ್ಥಳ ಪುರಾಣವುಂಟೆ?" ಎಂದು ಕೇಳಿದುದನ್ನು ಇಲ್ಲಿ ನೆನೆಯಬಹುದು. ಮೂಲತಃ ಸ್ಥಳವಿವರ ಮತ್ತು ಆ ಸ್ಥಳದ ಘಟನೆಗಳನ್ನು ವಸ್ತುವಾಗಿಟ್ಟುಕೊಂಡು ಪ್ರಾರಂಭವಾದ ಈ ಪ್ರಕಾರ ಬರುಬರುತ್ತ ವೃತ್ತಿ, ಜಾತಿಗಳನ್ನೂ ಗುರಿಯಿಟ್ಟು ಅನೇಕ ವಿಷಯಗಳನ್ನು ಗರ್ಭಿಸಿಕೊಂಡು ಬೆಳೆಯಿತೆಂದು ತೋರುತ್ತದೆ. ಕರ್ನಾಟಕದಲ್ಲಿ ಕರ್ನಲ್

* ಇವುಗಳ ನಕಲುಗಳು ತಿರುಪತಿ ವೆಂಕಟೇಶ್ವರ ವಿಶ್ವವಿದ್ಯಾಲಯದ ಪುಸ್ತಕ ಭಾಂಡಾರ ಮತ್ತು ಹೈದ್ರಾಬಾದಿನ ಸಾಹಿತ್ಯ ಅಕೆಡಮಿಗಳಲ್ಲಿಯೂ ಇವೆ.

ಮೆಕೆಂಝಿ ತಾನು ಅಧಿಕಾರಿಗಳಿಂದ, ಸ್ಥಳೀಯರಿಂದ ಬರೆಯಿಸಿಕೊಂಡ ಇಂಥ ವಿವರಣಾತ್ಮಕ ದಾಖಲೆಗಳಿಗೆ "ಕೈಫಿಯತ್ತು" ಪದವನ್ನು ಬಳಸಿ, ಪ್ರಚಾರಕ್ಕೆ ತಂದ. ಆಮೇಲೆ ಇದು ಇತಿಹಾಸಕ್ಷೇತ್ರದ ಒಂದು ಪದವಾಗಿ ಅಂದರೆ ಇತಿಹಾಸದ ಆಕರ ಸಾಮಗ್ರಿಯ ಒಂದು ಪ್ರಕಾರದ ಹೆಸರಾಗಿ ಬಳಕೆಗೊಂಡಿತು. ಕನ್ನಡವಲ್ಲದೆ ಭಾರತದ ಇತರ ಭಾಷೆಗಳಾದ ಮಲೆಯಾಳಂ, ತೆಲಗು, ತಮಿಳು ಭಾಷೆಗಳಲ್ಲಿಯೂ ಕೈಫಿಯತ್ತುಗಳು ಬೆಳೆದು ಬಂದವು.*

ಕೈಫಿಯತ್ತಿನ ಮಾದರಿಯಲ್ಲಿ ಬಖೈರು (ರಾಮರಾಯನ ಬಖೈರು), ನಾಮೆ (ರಾಜೇಂದ್ರನಾಮೆ)ಗಳು ಹುಟ್ಟಿದ್ದರೂ ಕೈಫಿಯತ್ತುಗಳ ಮುಂದೆ ಇವುಗಳ ಸಂಖ್ಯೆ ಕಡಿಮೆ. ಅವು ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಇಲ್ಲವೆ ಒಂದು ರಾಜವಂಶಕ್ಕೆ ಸಂಬಂಧಪಟ್ಟ ರಾಜಕೀಯ ದಾಖಲೆಯಾಗಿದ್ದರೆ ಕೈಫಿಯತ್ತು ರಾಜಕೀಯ, ಧಾರ್ಮಿಕ, ಕೃಷಿ, ವಾಣಿಜ್ಯ, ಕೈಗಾರಿಗೆ ಇತ್ಯಾದಿಗಳನ್ನೊಳಗೊಂಡಿರುತ್ತದೆ. ಇವುಗಳಲ್ಲಿ ಸ್ಥಳಗಳನ್ನು ಕುರಿತ ಕೈಫಿಯತ್ತುಗಳು ಚರಿತ್ರೆ (History), ಐತಿಹ್ಯ (legend), ಪುರಾಣ (mythology)ಗಳ ಮಿಶ್ರಣವಾಗಿರುತ್ತದೆ. ಇವುಗಳನ್ನು ಬರೆದು ಕೊಟ್ಟವರು ಸಾಮಾನ್ಯವಾಗಿ ಶಾನುಭೋಗರೇ ಆಗಿರುವುದರಿಂದ, ವಿಷಯವನ್ನು ಪೂರೈಸಿದವರು ಗ್ರಾಮೀಣರೇ ಆಗಿರುವುದರಿಂದ, ಇಲ್ಲಿ ಇತಿಹಾಸದೊಡನೆ ಶಾನುಭೋಗರ ಪುರಾಣಗಳು, ಗ್ರಾಮೀಣರ ವದಂತಿಗಳನ್ನು ಸೇರಿ ಹೋಗಿರುತ್ತವೆ.

ಕನ್ನಡ ಕೈಫಿಯತ್ತುಗಳು ಲಭ್ಯವಿರುವ ಕೇಂದ್ರಗಳು :

ಕೈಫಿಯತ್ತನ್ನು ಹೋಲುವ ಹಿಂದೂ ಪರಂಪರೆಯ ಆಕರಸಾಮಗ್ರಿಗಳೆಂದರೆ ಸ್ಥಳಪುರಾಣ, ರಾಯರೇಖೆ, ವಂಶಾವಳಿ, ಭಟಾಂಗಿನಿ, ಪಟ್ಟಾವಳಿ, ಪಟ್ಟವಲ್ಲರಿ ಇತ್ಯಾದಿ. ಮುಸಲ್ಮಾನರು ಬಂದ ಬಳಿಕ ಬಖೈರು (ರಾಮರಾಯನ ಬಖೈರು), ನಾಮೆ (ಹೈದರನಾಮೆ, ರಾಜೇಂದ್ರನಾಮೆ), ಕೈಫಿಯತ್ತು ಹೆಸರಿನ ಆಕರ ಸಾಮಗ್ರಿಗಳು ಹುಟ್ಟಿಕೊಂಡವು. "ಹೊಳೆಹೊನ್ನೂರು ಕೈಫಿಯತ್ತು – ೨"ದಲ್ಲಿ ಅದನ್ನು "ಸ್ಥಳಮಹಾತ್ಮೆ" ಎಂಬ ಶಬ್ದದಿಂದಲೂ ಕರೆಯಲಾಗಿದೆ. "ಕೈಫಿಯತು ನಾಮೆ" (ಕಾಪಿನ ದೇವಸ್ಥಾನ ಕೈಫಿಯತ್ತು, ಪೆರಡುರ ಮಾಗಣಿ ದೇವಾಲಯ ಕೈಫಿಯತ್ತು) ಎಂಬ ಪ್ರಯೋಗಗಳನ್ನೂ ಬಳಸಲಾಗಿದೆ. ಇದರಿಂದ ಸ್ಥಳಪುರಾಣ, ನಾಮೆ ಮತ್ತು ಕೈಫಿಯತ್ತುಗಳು ಒಂದೇ ಬಗೆಯ ದಾಖಲೆಗಳೆಂದು ಹೇಳಬಹುದಾದರೂ ಮೇಲೆ ಸೂಚಿಸಿದಂತೆ ಕೃಷಿ, ವಾಣಿಜ್ಯ, ಇತ್ಯಾದಿಗಳನ್ನೊಳಗೊಂಡ ಕೈಫಿಯತ್ತು ಒಂದಿಷ್ಟು ವಿಶಿಷ್ಟವಾಗಿವೆಯೆಂದೇ ಹೇಳಬೇಕು. ಈ ಕೈಫಿಯತ್ ಹೆಸರಿನ ಆಕರ ಪ್ರಕಾರಕ್ಕೆ ನಮ್ಮ ನಾಡಿನಲ್ಲಿ ಹುಟ್ಟುಹಾಕಿದ ಮೊದಲಿಗ ಮೆಕೆಂಝಿಯೆಂದು ತೋರುತ್ತದೆ. ವಿಪುಲ ಪ್ರಮಾಣದಲ್ಲಿ ಅವುಗಳನ್ನು ಬರೆಯಿಸಿದವನೂ ಅವನೇಯೆಂದು ತಿಳಿದುಬರುತ್ತದೆ. ಹೀಗಾಗಿ ಈಗ ಸಿಗುವ ಕನ್ನಡ ಕೈಫಿಯತ್ತುಗಳೆಲ್ಲ ಸರಿಸುಮಾರು ಅವನೇ ಬರೆಯಿಸಿದುವಾಗಿವೆ. ಅವನ ಸಂಗ್ರಹವನ್ನೊಳಗೊಂಡ ಕೇಂದ್ರ ಸಂಸ್ಥೆಯಾದ 'ಮದ್ರಾಸ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ'ಯಲ್ಲಿಯೇ ಇವು ಸಿಗುತ್ತವೆ. ೧೯೬೭ರಲ್ಲಿ ಈ ಸಂಸ್ಥೆಯವರು ಮೈಸೂರಿನ ರಾಜ್ಯ ಪುರಾತತ್ವ ಇಲಾಖೆ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಗೆ ವರ್ಗಾಯಿಸಿದ ಹಸ್ತಪ್ರತಿಗಳ ಜೊತೆ ಕೆಲವು ಕೈಫಿಯತ್ತುಗಳು ಸಾಗಿ ಬಂದಿವೆ. ಒಂದು ಕೈಮೇಲೆ ಎಣಿಸುವಷ್ಟು ಕೈಫಿಯತ್ತುಗಳು ಮೈಸೂರು

ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿವೆ. ಕೆಲವು ಕೈಫಿಯತ್ತುಗಳು ಕಲ್ಕತ್ತೆಯ ಏಸಿಯಾಟಿಕ್ ಸೊಸೈಟಿಯಲ್ಲಿವೆ. ಒಂದು ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ, ಇನ್ನೊಂದು ಬೆಂಗಳೂರಿನ ಶ್ರೀ.ಕೆ.ಅಭಿಶಂಕರ ಅವರಲ್ಲಿವೆ. ಇದನ್ನು ನೋಡಿದರೆ ಮೆಕೆಂಝಿ ಬರೆಯಿಸಿದ ಕೈಫಿಯತ್ತುಗಳೋ, ಅವುಗಳ ನಕಲುಗಳೋ ಅಲ್ಲಲ್ಲಿ ಚದರಿವೆ. ಒಂದೆರಡು ಬಹುಶಃ ಅವನ ಕೈಫಿಯತ್ತುಗಳ ಮಾದರಿಯಲ್ಲಿ ಹುಟ್ಟಿಕೊಂಡಿವೆಯೆನಿಸುತ್ತದೆ.

ಕೈಫಿಯತ್ತುಗಳ ಲೇಖಕರು-ಕಾಲ :

ತನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಮೆಕೆಂಝಿ ಹಸ್ತಪ್ರತಿ, ಶಾಸನ, ವಿಗ್ರಹ, ನಾಣ್ಯಗಳನ್ನು ಸಂಗ್ರಹಿಸುವ ಕೆಲಸದೊಂದಿಗೆ ಅಲ್ಲಲ್ಲಿಯ ಗ್ರಾಮ, ಸ್ಥಳಗಳಿಗೆ ಸಂಬಂಧಿಸಿದ ಚರಿತ್ರೆಯನ್ನು ಸ್ಥಳೀಯ ಕರಣಿಕರು, ವಿದ್ವಾಂಸರು, ತನ್ನ ಅಧಿಕಾರಿಗಳು ಮೊದಲಾದವರಿಂದ ಬರೆಯಿಸಿಕೊಳ್ಳುತ್ತಿದ್ದನು. ಹೀಗೆ ಬರೆಯಿಸಿಕೊಂಡವುಗಳೇ ಕೈಫಿಯತ್ತುಗಳು. ದೇವಚಂದ್ರನ ರಾಜಾವಳಿ ಕಥೆ (೧೭೭೦-೧೮೪೧) ಮೆಕೆಂಝಿಯ ಈ ಕ್ಷೇತ್ರಕಾರ್ಯದ ಬಗ್ಗೆ ಕೆಲವು ವಿವರಗಳನ್ನು ಒದಗಿಸುತ್ತಿದ್ದು, ಅಲ್ಲಿಯ ಮುಖ್ಯಭಾಗ ಹೀಗಿದೆ:

"ರಕ್ತಾಕ್ಷಿಸಂವತ್ಸರಾಶ್ವಯುಜದೊಳು ಸೀಮೆ ಪೈಮಾಸಿಯಂ ಮಾಡಲ್ ಮಕಂಜಿಸರದಾರಂ ಲಕ್ಷ್ಮಣರಾಯಂವೆರಸು ಬಂದಲ್ಲಿ, ಕನಕಗಿರಿಗೆ ಬಂದೆನ್ನಂ ಸ್ಥಳಪುರಾಣಮುಂಟೆ? ಎಂದು ಕೇಳ್ವುದುಂ, ನಾನು ಮಾಡಿದ ಪೂಜ್ಯಪಾದಚರಿತ್ರೆಯನ್ನೋದಿ ಪೇಳ್ವುದು, ಎನ್ನಂ ಬಿಡದೆ ಕಮರಹಳ್ಳಿ ಬಳಿಯ ಒಡ್ಡಿರ್ದ ಗುಡಾರದ ಬಳಿಗೆ ಕರೆದುಕೊಂಡು ಹೋಗಿ, ಪೂರ್ವದ ಕೆಲವು ಪ್ರಪಂಚುಗಳಂ ಮೂರು ರಾತ್ರಿ ಚೆನ್ನಾಗಿ ಲಾಲಿಸಿ, ಕಳಿಲೆ ಮಹಿಸೂರು ಪಟ್ಟಣ ಇಲವಾಲ ನಾಗವಾಲದ ವರಿಗು ಎರಡು ತಿಂಗಳ ಪರ್ಯಂತರಂ ಬಿಡದೆ ದಿನ ಒಂದಕ್ಕೆ ಗ್ರಾಸಕ್ಕೆ ಒಂದು ಹಣಮಂ ಕೊಡುತ್ತ ರಾತ್ರಿಕಾಲದೊಳು ಪೂರ್ವದ ಪ್ರಪಂಚುಗಳಂ ಜಾತಿಭೇದಂಗಳು ಮೊದಲಾದ ವಿವರಗಳನೆಲ್ಲವಂ ಕೇಳುತ್ತ, ರಾಜ್ಯಸೀಮೆಗಳ ಚಕ್ರದಿಂದಳೆದು ವಿಂಗಡಿಸುತ್ತ, ಗ್ರಾಮಾಧಿಗ್ರಾಮಂಗಳಿಗೆ ನಕ್ಷೆಯಂ ಬರೆಯಿಸಿ, ಜಾತಿ ಕೋಮುವಾರು ಕುಳ ಮನೆ ಜನಜೀವನ ಮೊದಲಾದವಂ ಜಮಾಬಂದಿ ಮುಂತಾದವಂ ಬರೆಯಿಸಿಕೊಂಡು, ನನ್ನನ್ನು ಬಿಡದೆ ಬಂಗಾಳಿಗೊಯ್ಯಲೆಂದು ಇಪ್ಪಿನ ನಾನಾ ಪ್ರಕಾರದಿಂದ ಹೇಳಿಕೊಂಡದ್ದರಿಂದಲೂ ನಮ್ಮ ಧರ್ಮೋಪಾಧ್ಯಾಯರು ಬಂದದ್ದರಿಂದಲೂ ಪೂಜ್ಯಪಾದಚರಿತ್ರೆಯನ್ನು ತೆಗೆದುಕೊಂಡು, ನಾನು ಪೂರ್ವದ ವೃತ್ತಾಂತಗಳನ್ನು ಪೇಳಿದುದಂ ಕಾಗದದ ವೈಯೊಳು ಬರೆಯಿಸಿಕೊಂಡು ಈ ಕರ್ನಾಟ ದೇಶದೊಳು ನಡೆದ ಪ್ರಪಂಚುಗಳನೆಲ್ಲಾ ಕ್ರೋಡೀಕರಿಸಿ ಬರೆದು ನಾವು ಇದ್ದಲ್ಲಿಗೆ ತೆಗೆದುಕೊಂಡು ತಿಂಗಳು ಒಳಗೆ ಬಂದರೆ ಭಾರಿ ಸಂಬಳವನ್ನು ಮಾಡಿಸಿಕೊಡುತ್ತೇವೆ" ಎಂದು ಹೇಳಿ ಲಕ್ಷ್ಮಣರಾಯನ ಮಾರಿಫತ್ತು ಇಪ್ಪತ್ತೈದು ಕುಂಪಣಿ ರೂಪಾಯಿಯನ್ನು ಕೊಡಿಸಿ, ಅಪ್ಪಣೆಕೊಟ್ಟು ಕಳುಹಿಸಿಕೊಟ್ಟನೆಂದು ಮೊದಲಾಗಿ ಈ ಕಥಾಸಂಗ್ರಹಮಂ ಮಾಡುತ್ತಿಪ್ಪಿನ ಸರದಾರಂ ಬಹುದೂರಂ ಪೋದುದರಿಂ ಒಪ್ಪಿಸುವುದಕ್ಕಿಲ್ಲವಾಯಿತು."*

---

* ರಾಜಾವಳಿ ಕಥಾಸಾಗರ (ಪು. ೩೨೧-೧೫).

ಈ ಉದ್ಧರಣೆ ಚಾವಲಿ ಲಕ್ಷ್ಮಣರಾವ್ ಮೊದಲಾದ ತನ್ನ ಸಂಶೋಧನ ಸಹಾಯಕರೊಂದಿಗೆ ಮೆಕೆಂಝಿ ಮಾಡುತ್ತಲಿದ್ದ ಕ್ಷೇತ್ರಕಾರ್ಯದ ಕಡೆಗೆ ಬೆರಳು ನೀಡುತ್ತದೆ. ಈ ಸಂದರ್ಭದ ಭೇಟ್ಟಿ, ಪ್ರೋತ್ಸಾಹಗಳೇ ದೇವಚಂದ್ರನಿಗೆ ರಾಜಾವಳಿ ಕಥೆ ಬರೆಯಲು ಪ್ರೇರಣೆ ನೀಡಿದವು. ಹೀಗೆ ಹೋದಲ್ಲೆಲ್ಲ ದೇಶೀಯ ವಿದ್ವಾಂಸರಿಂದ ಮೆಕೆಂಝಿ ಕೈಫಿಯತ್ತುಗಳನ್ನು ಬರೆಯಿಸಿಕೊಳ್ಳುತ್ತಿದ್ದನೆಂದು ಆಯಾ ಕೈಫಿಯತ್ತುಗಳ ಆದಿ–ಅಂತ್ಯ ಪ್ರಶಸ್ತಿಗಳು ತಿಳಿಸಿಕೊಡುತ್ತವೆ. ಕೆಲವೊಮ್ಮೆ ಈತನ ಅಧಿಕಾರಿಗಳೇ ಬರೆದುಕೊಂಡು, ಬರೆಯಿಸಿಕೊಂಡು ಆಕರ ಸಾಮಗ್ರಿಯನ್ನು ತರುತ್ತಿದ್ದರೆಂದು ತೋರುತ್ತದೆ. ಮದ್ರಾಸ ವಿವರಣಾತ್ಮಕ ಹಸ್ತಪ್ರತಿ ಸೂಚಿ IVರ ೧೧೨೩ನೆಯ ನಂಬರಿನ ಪ್ರತಿಯಲ್ಲಿ ಕೆಳದಿ ನೃಪವಿಜಯವನ್ನು ಕುರಿತು "ಶಕವರ್ಷ ೧೭೨೭ನೆಯ ಕ್ರೋಧನ ಸಂ॥ದ॥ ಬ॥ ೧೨ಲು ಈ ವಂಶಾವಳಿ ಪ್ರತಿಯನ್ನು ಫರಂಜಿ ಮೇಜರ ಮಕ್ಕಂಜಿ ಸಾಹೇಬರ ಕಡೆ ನಾರಾಯಣರಾಯರು ಕಡತದ ಮೇಲೆ ಬರೆಯಿಸಿಕೊಂಡು ಹೋದರು" ಎಂಬ ಸೂಚನೆ ಸಿಗುತ್ತಿದ್ದು, ಅವನ ಸಹಾಯಕ ಸಿಬ್ಬಂದಿಗಳೂ ಆಕರ ಸೃಷ್ಟಿಕಾರ್ಯದಲ್ಲಿ ಅವನಿಗೆ ನೆರವಾಗುತ್ತಿದ್ದರೆಂದು ಸ್ಪಷ್ಟಪಡಿಸುತ್ತದೆ.

ಪ್ರಸ್ತುತ ಸಂಪುಟದಲ್ಲಿ ೧೩೪ ಕೈಫಿಯತ್ತುಗಳನ್ನು ಸಂಗ್ರಹಿಸಲಾಗಿದ್ದು, ಇವುಗಳಲ್ಲಿ ಕೆಲವು ಮಾತ್ರ ಅವುಗಳನ್ನು ಬರೆದು ಕೊಟ್ಟವರ ಸೂಚನೆ ನೀಡುತ್ತವೆ. ಸಾಮಾನ್ಯವಾಗಿ ಈ ಸೂಚನೆಗಳು ಕೈಫಿಯತ್ತಿನ ಆದಿ ಇಲ್ಲವೆ ಅಂತ್ಯ. ಇಲ್ಲವೆ ಎರಡೂ ಕಡೆಗಳಲ್ಲಿ ಹೀಗೆ ಕಂಡುಬರುತ್ತವೆ:

"ಕೈಫಿಯತ್ತು ತಾಲ್ಲೂಕೆ ಅಜಂಪುರದಲು ನಾಡಿದ[>ಗ]ರ ಸೋಮೈಯ್ಯ ಬರಶಿದು, ಕ್ರೋಧನ ಸಂ. ಕಾರ್ತೀಕ ಶುದ್ಧ ೧ಲ್ಲು ಸಂ. ೧೮೦೫ ಯಿಸವಿಯಲ್ಲಿ ಅಕಟೊಬರ ತಾ. ೨೨ಲ್ಲು"

(ಕೈಫಿಯತು ತಾಲ್ಲೂಕೆ ಆಜಂಪುರ)

"ಉಲ್ಲುಕ್ಸ ಸಾಹೇಬರವರ ಕಡೆಯಿಂದಾ ತಂದ್ದಿದ್ದರ ನಕಲು. ತಾ ೩೦ನೇ ಮಾಹೆ ಡಿಶಂಬರ ಸಂ ೧೮೦೬ . . ಮೊಕ್ಕಾಮ ಮೈಸೂರು"

(ತಳಕಾಡು ಕೈಫಿಯತ್ತು)

"೧೮೦೭ ಯಿಸವಿ ಮಾಹೆ ಜನೆವರಿ ತಾರೀಖು ೧೫ ಯಿಸವಿ . . ಸಾಲಿವಾಹನ ಶಖ ೧೭೨೮ನೇ ಅಕ್ಷಯನಾಮ ಸಂವತ್ಸರ ನಾಗಮಂಗಲ ಸ್ಥಿತಾಶೇಷ ವಿದ್ವಾನ್ ಮಹಾಜನ . . . ಮುಂತಾದವರ್ರು ಬರಸಿದ ವಿವರಾ"

(ನಾಗಮಂಗಲ ಕೈಫಿಯತ್ತು)

"ಯೀ ಪ್ರಕಾರ ಕೈಫಿಯತು ಬರಸಿದವರ ಭಟ್ಟರ ಹೆಸರು ಕಾಟಪ್ಪ ವೊಬ್ಬ, ಹೊಸಪುರಪ್ಪ ವೊಬ್ಬ, ನರಸಪ್ಪ೧, ರಾಮಯ್ಯ೧, ಬರೆದ ತಾರೀಖು ಅಗಟೋಬರು ೧೮೦೯ ಸಂವತ್ಸರ ಬ. ದಸ್ತೂರ ನಾರಾಯಣರಾವು ಮುತ್ಸದ್ದಿ, ಮುತ್ತೈನು ಮೇಸ್ತರ್ ವಾರ್ಡು ಸಾಹೇಬ್, ಸರವಿಯರ ಆಶಿಫಾ[>ಷ್ಟಂ]ಟು ಯಿಲಾಖೆ ಮೇಜರ್ ಕಾಲನ್ ಮೆಕೆಂಜಿ ಸಾಹೇಬ"

(ಕೈಫಿಯತು ಭಟ್ಟರಹಳ್ಳಿ, ತಾಲೂಕೆ ಬಳ್ಳಾರಿ)

"ಯೀ ಪ್ರಕಾರ ಕೈಫಿಯತು ಬರಶಿದವರು : ದೇಶಾಯಿ ತಿಮ್ಮಪ್ಪ – ವರುಷ ೭೦, ದೇಶಾಯಿ ಸೀನಪ್ಪ – ವರುಷ ೪೦, ದೇಶಾಯಿ ವಿರುಪಾಕ್ಷಪ್ಪ – ವರುಷ ೩೫, ನಾಡಕುಲಕರಣಿ ರಾಮಪ್ಪ –

೩೫ ವರುಷ, ಸುಬ್ಬರಾಯ ಮಾತಾಮಹಂಗಳು, ಇವರ ತಂದೆ ಹಂಡೇ ಅವರ ಕಡೆ ಕಾರಕೂನ – ವರುಷ ೩೨.

ಬ. ದಸ್ತೂರ ನಾರಾಯಣರಾವ ಮುತ್ಸದ್ದಿ ಯಿಲಾಖೆ ಮೇಜರ್ ಕಾಲನ್ ಮೆಕೆಂಜಿ ಸಾಹೇಬ. ತಾರೀಖು ೧೨ ಮಾಹೆ ಅಗಟೋಬರ್ ಸನ್ ೧೮೦೯ ಇಸವಿ. ದರ ಜಾಗಾ ಕುರುಗೋಡು"

(ಕೈಫಿಯತ್ತು ಕುರುಗೋಡು, ತಾಲೂಕೆ ಬಳ್ಳಾರಿ)

"ಸನ್ ೧೮೧೩ನೆಯ ಇಸವಿ (ಶ್ರೀಮುಖ ಸಂವತ್ಸರದ) ಡಿಶೆಂಬರು ಮಾಹೆ ತಾರೀಖು ೮ನೆಯ ಶ್ರೀಮುಖ ಸಂವತ್ಸರದ ಮಾರ್ಗಶಿರ ಬಹುಳ ೧೪ ಸೋಮವಾರದಲ್ಲು ಬನವಶಿ ಸ್ಥಳದ ಮಹಾಜನಂಗಳು, ತ್ರಿಕಾಲ ಅರ್ಚಕರು, ಆಚಾರ್ಯರು, ಪುರೋಹಿತ ಲಿಂಗಾಭಟ್ಟರು, ಜೋಯಿಸ ರಾಮಭಟ್ಟರು ಮಹಾಜನಂಗಳು ಸಹಾ ಬರೆಸಿಕೊಟ್ಟ ಕೈಫಿಯತ್ತು ವಿವರ"

(ಬನವಾಶಿ ಸ್ಥಳದ ಕೈಫಿಮತ್ತು–II)

"ಕೈಫಿಯತ್ತು ಸೋದೆ ರಾಜವಂಶಾವಳೀ ಸಹಾ। ಸೋದೆ ಸಂಸ್ಥಾನದ ಕೈಫಿಯತ್ತು. ಗುಮಾಸ್ತೆ ಕೃಷ್ಣರಾವ್, ಇಲಾಖೆ ಕರ್ನಲ್ ಕಾಲ ಮೆಕೆಂಜಿ ಸರವಿಯವರ ಜಿರ್ನಲಿ, ಸೂರಸನ್ ೧೮೧೫ (ಕ್ರಿ.ಶ) ಜನವರಿಯಲ್ಲು ಬರೆದು ತಾಲೂಕ್ ದರಿಯಾಫ್ತಿ ದಾಖಲ ಪ್ರಕಾರ

(ಸೋದೆ ಸಂಸ್ಥಾನದ ಕೈಫಿಯತ್ತು)

"ಭಾವ ಸಂವತ್ಸರದ ನಿಜ ಭಾದ್ರಪದ ಶು॥೮ಲ್ಲು ಸೋದೆ ಸೀಮೆ ವಳಗಣ ಕುಂಚಿವಕ್ಕಲ ಮಕ್ಕಳು ಗೊಡಲಿ ಕಟ್ಟೆಮನೆ ತಿರುಕಪ್ಪ, ಬುದ್ಧಿವಂತ ರಂಗಪ್ಪ, ಹನುಮಣ್ಣ ಮುಂತಾದ ಜಾತಿಯವರಿಗೆ ಗುರುವಾದ ತಾತಾಚಾರ್ಯರು ಬರಶಿಕೊಟ್ಟ ಕುಂಚಿ ವಕ್ಕಲಿಗರ ಕೈಫಿಯತ್ತು"

(ಕುಂಚಿ ವಕ್ಕಲಿಗರ ಕೈಫಿಯತ್ತು)

ಹೀಗೆ ಕೈಫಿಯತ್ತುಗಳ ಆದಿ ಇಲ್ಲವೆ ಅಂತ್ಯದಲ್ಲಿ ವಿವರಗಳು ಬರುತ್ತಿದ್ದು, ಇವು ಕೈಫಿಯತ್ತುಗಳ ರಚನೆಯ ಕಾಲ, ರಚನ ಮಾಡಿದವರ ಬಗ್ಗೆ ಸೂಚನೆ ನೀಡುತ್ತವೆ.

ಟಿಪ್ಪುವಿನ ಮರಣಾನಂತರ (೧೭೯೯) ಮೆಕೆಂಝಿ ಕರ್ನಾಟಕ ಭೂಪರಿವೀಕ್ಷಣ ಕಾರ್ಯ ಕೈಕೊಂಡನು. ೧೮೧೧ರಲ್ಲಿ ಜಾವಾಕ್ಕೆ ಹೋಗುವ ವರೆಗೆ ಆತ ನಮ್ಮ ನಾಡಿನಲ್ಲಿ ಈ ಕೆಲಸಕ್ಕಾಗಿ ಸುಮಾರು ४೨೦೦೦ ಮೈಲು ಸುತ್ತಾಡಿದ. ಈ ಅವಧಿಯಲ್ಲಿ ಅಂದರೆ ೧೭೯೯ರಿಂದ ೧೮೧೧ರ ಅವಧಿಯಲ್ಲಿ ಬಹುಪಾಲು ಕೈಫಿಯತ್ತುಗಳನ್ನು, ಆಮೇಲೆಯೂ ಕೆಲವನ್ನು ಆತ ಮೇಲೆ ಸೂಚಿಸಿದವರಿಂದಲೂ ಇತರರಿಂದಲೂ ಬರೆಯಿಸಿಕೊಂಡನು. ಕೆಲವೆಡೆ "ಕುಂಪಣಿ ಸರಕಾರಕ್ಕೆ ಬರಸಿಕೊಟ್ಟ ಕೈಫಿಯತು ನಾಮೆ" ಎಂಬಂಥ ವಾಕ್ಯಗಳು (ಕುಂಬಕಾಸಿ ಸ್ಥಳದ ಕುಂಭೇಶ್ವರನ ಕೈಫಿಯುತ್ತು) ಬರುವುದರಿಂದ ಇವು ಸರಕಾರಿ ದಾಖಲೆಗಳೆಂಬ ಭಾವನೆಯಿಂದ ರೂಪಗೊಂಡಿವೆಯೆಂದು ಸ್ಪಷ್ಟವಾಗುತ್ತದೆ. "ಮಾಳಿಗೆ ಹೆಬ್ಬಾರ ಅನಂತಯ್ಯನ ರುಜು, ನೆಲ್ಲು ಸುಬ್ಬಯ್ಯನ ರುಜು (ಪೆರಡೂರು ಮಾಗಣಿ ದೇವಾಲಯದ ಕೈಫಿಯತ್ತು) ಎಂಬಂಥ ಹೇಳಿಕೆಗಳು ಇವುಗಳ ಅಧಿಕೃತತೆಗೆ ಸಾಕ್ಷಿಯಾಗಿವೆ.

"ಈ ಕೈಫಿಯತು ಬರ್ಸಿದವ ಶ್ರೀ ಕೃಷ್ಣಪ್ಪಯ್ಯಗೌಡ ಶಾ॥ ವೆಂಕಟಪತಯ್ಯ ಗುಮಾಸ್ತೆ . . . ಕವ್ಯ ಅರುವತ್ತು ವರುಷದವ" (ತಾಲೂಕು ಕಂಪಲಿ ಕೈಫಿಯತ್ತು) ಎಂಬಂಥ ವಯಸ್ಸನ್ನೂ ಹೇಳುವ ಹೇಳಿಕೆಗಳು ಇವುಗಳ ಅಧಿಕೃತತೆಯನ್ನು ಇನ್ನೂ ದೃಢಪಡಿಸುತ್ತವೆ.

ಕೈಫಿಯತ್ತುಗಳ ಶಿಲ್ಪ :

ವಿಷಯ ಸಮೂಹನಿಷ್ಠವೆನಿಸಿದಾಗ (ಉದಾ: ಶಾಸನ) ಮತ್ತು ವ್ಯಕ್ತಿನಿಷ್ಠವೆನಿಸಿದಾಗ (ಉದಾ: ಪತ್ರ) ಅಂಥ ಬರವಣಿಗೆಗಳಿಗೆ ಒಂದು ನಿರ್ದಿಷ್ಟ ಶಿಲ್ಪ ಏರ್ಪಡುತ್ತದೆ. ಕೈಫಿಯತ್ತುಗಳು ಸಮೂಹನಿಷ್ಠ ಲೇಖನಗಳಾಗಿರುವುದರಿಂದ ಇವುಗಳ ಅಂಗರಚನೆಯಲ್ಲಿ ಸ್ಥೂಲವಾಗಿಯಾದರೂ ಒಂದು ನಿರ್ದಿಷ್ಟ ವಿನ್ಯಾಸ ಕಂಡುಬರುತ್ತದೆ. ಈ ವಿನ್ಯಾಸದ ಸ್ಪಷ್ಟ ಕಲ್ಪನೆಯಿರುವವನು ಮಾತ್ರ ಅವುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲನೆಂದು ಬೇರೆ ಹೇಳಬೇಕಿಲ್ಲ. ಕೈಫಿಯತ್ತುಗಳನ್ನು ಹುಟ್ಟುಹಾಕಿದ, ಬಹುಸಂಖ್ಯೆ ಕೈಫಿಯತ್ತುಗಳನ್ನು ಬರೆಯಿಸಿದ ಕರ್ನಲ್ ಮೆಕೆಂಝಿ ಇವುಗಳ ಅಂಗರಚನೆಯಲ್ಲಿ ಒಂದು ನಿರ್ದಿಷ್ಟ ವಿನ್ಯಾಸವನ್ನು ಅಳವಡಿಸಿದ್ದಾನೆ. ಅಪವಾದಾತ್ಮಕವಾದವುಗಳನ್ನು ಬಿಟ್ಟರೂ ಪ್ರಾರಂಭದಲ್ಲಿ ಇಲ್ಲವೆ ಅಂತ್ಯದಲ್ಲಿ ಬರೆದವನ, ಬರೆಯಿಸಿದವನ ಹೆಸರು ಗೋಚರಿಸುತ್ತದೆ. ಕೆಲವೊಮ್ಮೆ ಅವನ ಹುದ್ದೆ, ಬರೆದ ದಿನಾಂಕಗಳ ದಾಖಲಾಗಿರುತ್ತವೆ. ದಾಖಲೆಗೆ ಅಧಿಕೃತತೆ ಅಥವಾ ಜವಾಬ್ದಾರಿ ಒದಗಿಸುವ ದೃಷ್ಟಿಯಿಂದ ಈ ಕ್ರಮವನ್ನು ಅನುಸರಿಸಲಾಗಿದೆ. ಜಾತಿಗಳನ್ನು ಕುರಿತ ಕೈಫಿಯತ್ತುಗಳಂತೂ, ಆಯಾ ಜಾತಿಯ ಗುರುಗಳಂಥ ಜವಾಬ್ದಾರಿ ವ್ಯಕ್ತಿಗಳಿಂದ ಬರೆಯಿಸಿಕೊಂಡುದು ಗಮನಿಸಬೇಕಾದ ವಿಷಯವಾಗಿದೆ. ಹೀಗಿದ್ದೂ ಈ ಉಪಕ್ರಮ ಕೆಲವೇ ಕೈಫಿಯತ್ತುಗಳಲ್ಲಿ ಕಂಡುಬುರುವುದು ವಿಷಾದದ ಸಂಗತಿಯಾಗಿದೆ.

ಕೈಫಿಯತ್ತುಗಳು ಸ್ಥೂಲ ಅರ್ಥದಲ್ಲಿ 'ಇತಿಹಾಸ'ಗಳಾಗಿರುವುದರಿಂದ ಅಲ್ಲಿ ಘಟನೆಗಳನ್ನು ಕಾಲಾನುಕ್ರಮವಾಗಿ ನಿರೂಪಿಸಬೇಕಾಗುತ್ತದೆ. ಈ ಪ್ರಶ್ನೆ ಬಂದಾಗ ದೈವತ್ವ ಮತ್ತು ಪ್ರಾಚೀನತ್ವದ ಆರೋಪಗಳ ಕಡೆಗೆ ಭಾರತೀಯ ಮನಸ್ಸು ಹೆಚ್ಚು ಒತ್ತು ಕೊಡುವುದು ಸಹಜ. ಹೀಗಾಗಿ ಕೆಲವು ಕೈಫಿಯತ್ತುಗಳು, ಕೃತ, ತ್ರೇತಾ, ದ್ವಾಪರ, ಕಲಿಯುಗಗಳಲ್ಲಿ ಜರುಗಿದ ರಾಜಕೀಯ ಘಟನೆಗಳ ನಿರೂಪರಣೆಯಿಂದ ಪ್ರಾರಂಭವಾಗುತ್ತಿದ್ದು, ಬಳಿಕ ನಂದ, ಮೌರ್ಯ, ಗುಪ್ತ, ಶಾತವಾಹನರನ್ನು ಉಲ್ಲೇಖಿಸಿ, ಕದಂಬ, ಚೋಳರನ್ನು ಹೆಸರಿಸಿ, ಕಲ್ಯಾಣ ಚಾಲುಕ್ಯ, ಯಾದವ, ಹೊಯ್ಸಳರನ್ನು ಸೂಚಿಸುತ್ತವೆಯಾದರೂ, ಸಾಮಾನ್ಯವಾಗಿ ವಿಜಯನಗರ ಮತ್ತು ವಿಜಯನಗರೋತ್ತರ ಘಟನೆಗಳೇ ಇವುಗಳ ಒಡಲಲ್ಲಿ ತುಂಬಿಕೊಂಡಿದೆ. ಈ ಅರಸರ ಕಾಲದಲ್ಲಿ ಜರುಗಿದ ಯುದ್ಧ ಚಟುವಟಿಕೆ, ಸಾಮಾಜಿಕ – ಧಾರ್ಮಿಕ ಕಾರ್ಯಕಲಾಪಗಳನ್ನು ಇವು ಒದಗಿಸುತ್ತವೆ. ಕೆಲವೊಮ್ಮೆ ಸ್ಥಳಮಹತ್ವವನ್ನು ದೇವತೆಯ ಅವತಾರ, ಋಷಿಗಳ ನೆಲೆಸುವಿಕೆಗಳಿಂದ ಎತ್ತಿಹೇಳುವುದರೊಂದಿಗೆ ಕೈಫಿಯತ್ತುಗಳು ಪ್ರಾರಂಭಗೊಳ್ಳುತ್ತವೆ. ಕೊನೆಯ ಭಾಗದಲ್ಲಿ ಆಯಾ ಸ್ಥಳದಲ್ಲಿರುವ ಕೆರೆ, ದೇವಾಲಯ, ಕೋಟೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಮಹತ್ವದ ಅಂಶಗಳು ಕಂಡುಬರುತ್ತವೆ. ಸಾಲದುದಕ್ಕೆ ತೀರ ಕೊನೆಯ ಭಾಗದಲ್ಲಿ ಆಯಾ ಪ್ರದೇಶದಲ್ಲಿ ಬೆಳೆಯುವ ಧಾನ್ಯ, ಕೈಗಾರಿಕಾ ಉತ್ಪಾದನೆ, ನೆಲ–ಜಲ ಸ್ವರೂಪ

ಇತ್ಯಾದಿಗಳು ದಾಖಲಾಗಿರುತ್ತವೆ. ಜಾತಿ ಕೈಫಿಯತ್ತುಗಳಾಗಿದ್ದರೆ ಆಯಾ ಜಾತಿಗಳಲ್ಲಿಯ ಉಪಭೇದಗಳು, ಅವು ಆಚರಿಸುವ ವಿಧಿ-ಕರ್ಮ, ಅವುಗಳ ಸಾಮಾಜಿಕ ಸ್ಥಿತಿಗತಿ ಇತ್ಯಾದಿಗಳು ಅಲ್ಲಿ ಹೇಳಲ್ಪಟ್ಟಿರುತ್ತವೆ. ಒಂದೊಂದು ವಿಷಯದ ಮುಕ್ತಾಯ ಸೂಚನೆಯಾಗಿ 'ಕಲಂ' ಎಂಬ ಪದವನ್ನು ಬಳಸುವುದು ಸಾಮಾನ್ಯ ಅಂಶವಾಗಿವೆ.

ಈ ಕೈಫಿಯತ್ತುಗಳಲ್ಲಿ ತೇದಿ, ಘಟನೆ ಇತ್ಯಾದಿಗಳು ಅಂಕಿಸಂಖ್ಯೆಯಿಂದ ಕೂಡಿದ್ದು ಇವುಗಳ ಬಳಕೆಯಲ್ಲಿ ಕೆಲವೊಮ್ಮೆ ಒಂದು ಕ್ರಮ ಕಂಡುಬರುತ್ತದೆ. ಅಂದರೆ ಅಂಕಿಗಳನ್ನು ಘಟನೆಗಳ ಮೊದಲು ಇಲ್ಲವೆ ಕೊನೆಗೆ, ಕೆಲವೊಮ್ಮೆ ಎರಡೂ ಕಡೆ ನಮೂದಿಸಲಾಗಿರುತ್ತದೆ. ಕ್ವಚಿತ್ತಾಗಿ ಸಂಖ್ಯೆಗಳಾಗಿ ಅಂಕಿ, ಅಕ್ಷರ ಎರಡನ್ನೂ ಬಳಸಲಾಗಿರುತ್ತದೆ. ಅಂಕಿಗಳ ಪ್ರತ್ಯೇಕ ಬೇರೀಜು ಕಟ್ಟಿ, ಅದನ್ನು ಮುಖ್ಯ ಅಂಕಿಗಳೊಂದಿಗೆ ಬೇರೀಜು ಮಾಡಿದ ಕ್ರಮ ಇಲ್ಲಿಯ ವಿಧಾನವಾಗಿದೆ. ನಾಣ್ಯ, ತೂಕ, ಅಳತೆಗಳಿಗಾಗಿ ಆ ಕಾಲದ ರೀತಿಯನ್ನು ಸೂಚಿಸಿದುದು ಇಲ್ಲಿಯ ವಿಶೇಷ ಕ್ರಮವಾಗಿದೆ. ಉದಾ: ವರಹ, ಹೇರು, ಗಿದ್ದನ, ಕೆಲವೊಮ್ಮೆ ಇಲ್ಲಿ ಸಂಕ್ಷೇಪಗಳನ್ನು ಬಳಸಿರುತ್ತಾರೆ. ಉದಾ: ಸಂವತ್ಸರ-ಸಂ, ಶುದ್ಧ=ಶು, ಬಹುಳ=ಬ, ತಾಲೂಕು=ತಾ. ಭಾಷೆಯ ದೃಷ್ಟಿಯಿಂದಲೂ ವಿಶೇಷತೆ ಕಂಡುಬರುತ್ತಿದ್ದು ಆ ವಿಷಯವನ್ನು ಮುಂದೆ ನೋಡಬಹುದು.

ಕೈಫಿಯತ್ತುಗಳ ಸಂಖ್ಯಾನಿರ್ಣಯ :

ಪ್ರಧಾನವಾಗಿ ಸಂಚಾರಿ ವ್ಯಕ್ತಿಯಾಗಿದ್ದರೂ ಮೆಕೆಂಝಿ ವಾಸಿಸುತ್ತಿದ್ದ ಸ್ಥಳ ಮದ್ರಾಸ. ಇಲ್ಲಿ ನಿಂತ ಈತ ಕರ್ನಾಟಕದ ಉತ್ತರಭಾಗವನ್ನು ಹೊರತುಪಡಿಸಿ, ಮಿಕ್ಕಭಾಗಗಳಲ್ಲಿ ಸಂಚರಿಸಿ ಆಯಾ ಸ್ಥಳದ ಕೈಫಿಯತ್ತುಗಳನ್ನು ಬರೆಯಿಸಿಕೊಂಡಿದ್ದಾನೆ. ಕೆಲವೊಮ್ಮೆ ಅಧಿಕಾರಿಗಳ ಮುಖಾಂತರ ಬರೆಯಿಸಿ ತರಿಸಿಕೊಂಡಿದ್ದಾನೆ. ಉತ್ತರ ಕರ್ನಾಟಕದ ಯಾವುದೇ ವಿಷಯವನ್ನು ಕುರಿತ ಸ್ವತಂತ್ರ ಕೈಫಿಯತ್ತು ಒಂದೂ ಹುಟ್ಟಿಲ್ಲ. ಮಿಕ್ಕ ಪೂರ್ವ, ಪಶ್ಚಿಮ, ದಕ್ಷಿಣ ಕರ್ನಾಟಕಗಳನ್ನು ಕುರಿತ ಕೈಫಿಯತ್ತುಗಳು ಮಾತ್ರ ಅನೇಕ ಸಂಖ್ಯೆಯಲ್ಲಿ ಹುಟ್ಟಿಕೊಂಡಿದ್ದು, ಇವುಗಳತ್ತ ನಮ್ಮ ದೃಷ್ಟಿ ಸೆಳೆಯುವ ಅಂಜನ ಬಿಂದುವೆಂದರೆ "An alphabetical Index of kanarese manuscript in the Government oriental manuscripts library Madras" ಹೆಸರಿನ ಹಸ್ತಪ್ರತಿ ಸೂಚಿಗ್ರಂಥ. ಈ ಸೂಚಿಯಲ್ಲಿ ದಾಖಲಾದ ಕೈಫಿಯತ್ತುಗಳು ಸ್ವಲ್ಪ ಗೊಂದಲವನ್ನುಂಟು ಮಾಡುತ್ತವೆ: (೧) ಇಲ್ಲಿ ಉಲ್ಲಿಖಿತವಾದ ಕಾಗದ ಮೇಲಿನ ಕೈಫಿಯತ್ತುಗಳಲ್ಲಿ ಕೆಲವು ಈಗ ಸಂಪೂರ್ಣ ನಾಶವಾಗಿವೆ, (೨) ಕಡತದ ಮೇಲೆ ಬಳಪದಿಂದ ಬರೆದವುಗಳಲ್ಲಿ ಕೆಲವು ಅಳಸಿಹೋಗಿವೆ, (೩) ಕೆಲವು ಕೈಫಿಯತ್ತುಗಳು ತೆಲಗು ಭಾಷೆಯಲ್ಲಿದ್ದು ಸೂಚಿಯಲ್ಲಿ ಕನ್ನಡವೆಂದು ನಮೂದಿತವಾಗಿವೆ, (೪) ಕನ್ನಡ ಕೈಫಿಯತ್ತುಗಳಾಗಿದ್ದರೂ ಕೆಲವು ತೆಲಗು ಲಿಪಿ ಮತ್ತು ಮೋಡಿ ಲಿಪಿಯಲ್ಲಿರುವುದರಿಂದ ಓದುವುದು ಕಷ್ಟ. ಉದಾ: ಚಂದ್ರದ್ರೋಣ ಪರ್ವತದ ಕೈಫಿಯತ್ತು (ಮೋಡಿ), ದೇವಾಂಗದ ಕೈಫಿಯತ್ತು (ಮೋಡಿ), ದತ್ತಾತ್ರೇಯ ಕೈಫಿಯತ್ತು (ತೆಲಗು), ನಂದವರಂ ಕೈಫಿಯತ್ತು (ತೆಲುಗು) ಇತ್ಯಾದಿ, (೫) ಕೆಲವು ದ್ವಿ, ತ್ರಿ ಪ್ರತಿಗಳಲ್ಲಿದ್ದು ಅವುಗಳನ್ನು ಒಂದೆಡೆ ಕೈಫಿಯತ್ತು ಎಂದೋ,

ಬೇರೊಂದೆಡೆ ವಂಶಾವಳಿಯೆಂದೋ, ಮಹಾತ್ಮೆಯೆಂದೋ ಕರೆಯಲಾಗಿದೆ. (೬) ಒಂದು ಕೈಫಿಯತ್ತನ್ನು ಒಮ್ಮೆ ಒಂದು ಹೆಸರಿನಿಂದ, ಇನ್ನೊಮ್ಮೆ ಬೇರೊಂದು ಹೆಸರಿನಿಂದ ಕರೆಯಲಾಗಿದೆ. ಉದಾ: ಉಪ್ಪಲಿಗರ ಕೈಫಿಯತ್ತು=ಕೋಮಟಿಗರ ಕೈಫಿಯತ್ತು, ಕುಂಚಿ ಒಕ್ಕಲಿಗರ ಕೈಫಿಯತ್ತು=ಕುಂಚಿ ಒಕ್ಕಲು ಜಾತಿ ರಿವಾಜು ಕೈಫಿಯತ್ತು, ಚೆನ್ನಯ್ಯನ ಕುಲದ ಕೈಫಿಯತ್ತು=ಸೊಂಡೂರಿನ ಕೈಫಿಯತ್ತು, ಬಸವಲಿಂಗಯ್ಯ ಜಂಗಮ ಕೈಫಿಯತ್ತು=ಬೆಂಗಳೂರು ಕಾಳೆನಹಳ್ಳಿ ಕೈಫಿಯತ್ತು, ಗೆರಸೊಪ್ಪೆ ಕೈಫಿಯತ್ತು–ಗೆರೆಸೊಪ್ಪೆ ಹಳೆಯ ಬಸ್ತಿ ಕೈಫಿಯತ್ತು, ನಗರದ ಸೀಮೆ ಜಾತಿ ವಿವರ=ನಗರಪುರ ಅಥವಾ ಎಡತಲೆಯ ಕೈಫಿಯತ್ತು, ಬೈರೂರು ಮಾಗಣಿ ಕೈಫಿಯತ್ತು=ಬೈಂದೂರು ಮಾಗಣಿ ಕೈಫಿಯತ್ತು, ಬಳ್ಳಾರಿ ಕಸಬಾ ಕೈಫಿಯತ್ತು=ಬಳ್ಳಾರಿ ಕೈಫಿಯತ್ತು ಇತ್ಯಾದಿ, (೭) ಕೆಲವು ಕೈಫಿಯತ್ತುಗಳು ಒಂದಕ್ಕಿಂತ ಹೆಚ್ಚು ಪ್ರತಿಗಳಲ್ಲಿ ಸಿಗುತ್ತವೆ ಮತ್ತು ಪಾಠಭಿನ್ನತೆಯಿಂದ ಕೂಡಿವೆ. (೮) ಕೆಲವು ಕೈಫಿಯತ್ತು ಎಂದು ಕರೆಯಲ್ಪಟ್ಟಿದ್ದರೂ ಅಲ್ಲಿ ಕೇವಲ ಶಾಸನಗಳೇ ಇವೆ, ಉದಾ: ತಿರುಮಲ ಸಾಗರದ ಕೈಫಿಯತ್ತು.

ಈ ಎಲ್ಲ ಗೊಂದಲಗಳನ್ನು ನಿವಾರಣೆ ಮಾಡಿಕೊಂಡು, ಅಲ್ಲಿಯ ಎಲ್ಲ ಕನ್ನಡ ಕೈಫಿಯತ್ತುಗಳ ಸಂಖ್ಯೆಯನ್ನು ನಿಖರವಾಗಿ ಗೊತ್ತುಹಚ್ಚಬೇಕಾಗುತ್ತದೆ. ಈ ಸಮಸ್ಯೆಯನ್ನು ತಕ್ಕ ಮಟ್ಟಿಗೆ ಬಿಡಿಸಿಕೊಂಡು, ಮದ್ರಾಸದಲ್ಲಿ ಲಭಿಸುವ ಬಹುಸಂಖ್ಯೆ ಕೈಫಿಯತ್ತುಗಳನ್ನು, ಮದ್ರಾಸಿನ ಆ ಸಂಸ್ಥೆಯಿಂದಲೇ ಮೈಸೂರಿನ ರಾಜ್ಯ ಪುರಾತತ್ವ ಇಲಾಖೆಗೆ ಬಂದ ಮತ್ತು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಗಳಲ್ಲಿರುವ, ಶ್ರೀ ಬಿ.ರಾಮರಾವ್ ಅವರು ಪ್ರಕಟಿಸಿದ ಕೈಫಿಯತ್ತುಗಳನ್ನು ಇಲ್ಲಿ ಸಂಗ್ರಹಿಸಿದ್ದೇವೆ. ಇಂಗ್ಲಂಡಿನ ಇಂಡಿಯಾ ಆಫೀಸ್ ಲೈಬ್ರರಿಯಲ್ಲಿಯ ಒಂದು, ಕೆ. ಅಭಿಶಂಕರ ಅವರ ಹತ್ತಿರದ ಒಂದು, ಕಲ್ಕತ್ತೆಯ ಏಷಿಯಾಟಿಕ್ ಸೊಸೈಟಿಯಲ್ಲಿಯ ಹಲವು ಕೈಫಿಯತ್ತುಗಳನ್ನು ಇಲ್ಲಿ ಸೇರಿಸಿಲ್ಲ.

ವರ್ಗೀಕರಣ :

ಈ ಕೈಫಿಯತ್ತುಗಳನ್ನು ಅಭ್ಯಾಸದ ಮತ್ತು ಪ್ರಕಟನೆಯ ಅನುಕೂಲಕ್ಕಾಗಿ ವರ್ಗೀಕರಿಸಬೇಕಾಗುತ್ತದೆ. ಒಂದು ಕೈಫಿಯತ್ತು ಅನೇಕ ವಿಷಯಗಳ ಸಮ್ಮಿಶ್ರಣವಾಗಿರುವ ಕಾರಣ ಈ ಮೊತ್ತವನ್ನು ರಾಜಕೀಯ, ಧಾರ್ಮಿಕ, ಸಾಮಾಜಿಕ ಇತ್ಯಾದಿಯಾಗಿ ವರ್ಗೀಕರಿಸಲು ಸಾಧ್ಯವಾಗುವುದಿಲ್ಲ. ಶೀರ್ಷಿಕೆಗಳೇ ತಿಳಿಸುವಂತೆ ಪ್ರಧಾನವಾಗಿ ಸ್ಥಳ, ಗ್ರಾಮಗಳನ್ನು ಕುರಿತ ಕಾರಣ ಇವುಗಳನ್ನು ಭೌಗೋಲಿಕವಾಗಿಯೇ ವಿಂಗಡಿಸುವುದು ಸೂಕ್ತವೆನಿಸುತ್ತದೆ. ಆದುದರಿಂದ ಇಲ್ಲಿ ೧೩೪೪ ಕೈಫಿಯತ್ತುಗಳನ್ನು (೧) ಮೈಸೂರು ಪ್ರದೇಶದ ಕೈಫಿಯತ್ತುಗಳು (೨) ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳ ಕೈಫಿಯತ್ತುಗಳು (೩) ಬಳ್ಳಾರಿ ಪ್ರದೇಶದ ಕೈಫಿಯತ್ತುಗಳು (೪) ಇತರ ಕೈಫಿಯತ್ತುಗಳು – ಎಂದು ವಿಂಗಡಿಸಿಕೊಂಡು ಹೀಗೆ ಅಳವಡಿಸಲಾಗಿದೆ.

ಮೈಸೂರು ಪ್ರದೇಶದ ಕೈಫಿಯತ್ತುಗಳು :

೧. ಅಂಕನಾಥಪುರದ ಅರ್ಕೇಶ್ವರಸ್ವಾಮಿ ಕೈಫಿಯತ್ತು

೨. ಅನಂತಪುರದ ಕೈಫಿಯತ್ತು

೩. ಅನಂತಪುರದ ಸೀಮೆಯಲ್ಲಿರುವಂಥ ಮಹಾಸ್ಥಳ ತೀರ್ಥದೇವಾಲಯಗಳ ಕೈಫಿಯತ್ತು
೪. ಅರಿಕುಟಾರದ ಕೈಫಿಯತ್ತು
೫. ಅಷ್ಟಗ್ರಾಮಗಳ ಕೈಫಿಯತ್ತು
೬. ಅಕಿಯೆಬ್ಯಾಳು (ನರಶೀಪುರ ತಾಲೂಕು) ಕೈಫಿಯತ್ತು
೭. ಆನೆ ಕನ್ನಂಬಾಡಿ ಕೈಫಿಯತ್ತು
೮. ಉಡುಗುಣಿ ಕೈಫಿಯತ್ತು
೯. ಕಣಕುಪ್ಪೆ ಕೋಟೆ ಕಟ್ಟಿದ ಕೈಫಿಯತ್ತು
೧೦. ಕೈಫಿಯತು ಅತ್ತಿಕುಪ್ಪೆಗ್ರಾಮ
೧೧. ಕೈಫಿಯತು ತಾಲ್ಲೂಕೆ ಆಜಂಪುರ
೧೨. ಕೊಕ್ಕ ಸಮುದ್ರದ ಕೈಫಿಯತು, ತಾಲೂಕೆ ಯಗಟಿ
೧೩. ಚರಂತಿಮಠದ ಕೈಫಿಯತು
೧೪. ಚಿಕ್ಕಮಗಳೂರು ಕೈಫಿಯತು
೧೫. ಭಾವಣಿ ಬೆಳಗುತ್ತಿ ಅರಸುಗಳ ವಂಶಾವಳಿ ಕೈಫಿಯತು
೧೬. ಡೆಂಕಣಕೋಟೆಯ ಬೆಟ್ಟರಾಯಸ್ವಾಮಿ ಮೊದಲಾದ ಕೈಫಿಯತ್ತು
೧೭. ತಳಕಾಡು ಕೈಫಿಯತ್ತು – ೧
೧೮. ತಳಕಾಡು ಕೈಫಿಯತ್ತು – ೨
೧೯. ತಿರುಮಕೂಡಲು ಕೈಫಿಯತ್ತು
೨೦. ತೊಣ್ಣೂರ ರಾಕ್ಷಶಿ ಕೈಫಿಯತ್ತು
೨೧. (ದೇವಣಪುರ) ಕೈಫಿಯತ್ತು
೨೨. ದೇವನಕಲ್ಲು ಕೈಫಿಯತ್ತು
೨೩. ದೇವೇಗೌಡನಹಳ್ಳಿ ಕೈಫಿಯತ್ತು
೨೪. ನಗರ ಸೀಮೆ ಕೈಫಿಯತ್ತು
೨೫. ನಾಗಮಂಗಲದ ಕೈಫಿಯತ್ತು
೨೬. ಬಸವಲಿಂಗಯ್ಯ ಜಂಗಮ ಕೈಫಿಯತ್ತು
೨೭. ಬಾಗಡೆ ಕೈಫಿಯತ್ತು
೨೮. ಬೆಟ್ಟದಕೋಟೆ ಕೈಫಿಯತ್ತು
೨೯. ಬೆಳಗುತ್ತಿ ಅರಸುಗಳ ವಂಶಾವಳಿ ವಿವರಾ ಕೈಫಿಯತ್ತು
೩೦. ಮಂಡಗದ್ದೆ ಕೈಫಿಯತ್ತು

ದಕ್ಷಿಣ-ಉತ್ತರ ಕನ್ನಡ ಜಿಲ್ಲೆಗಳ ಕೈಫಿಯತ್ತುಗಳು :

೫೮. ಕಾಣೂರು ಮಠದ ಗುರುಗಳ ವಂಶಾವಳಿ
೫೯. ಕಾಪಿನ ದೇವಸ್ಥಾನ ಕೈಫಿಯತ್ತು
೬೦. ಕಾರ್ಕಳದ ಅರಸರ ಕೈಫಿಯತ್ತು
೬೧. ಕಾಳತೋಡು ಮಾಗಣಿ ಕೈಫಿಯತ್ತು
೬೨. ಕ್ರಿಷ್ಣಾಪುರಮಠದ ಕೈಫಿಯತ್ತು
೬೩. ಕುಂಜಾರು ಕೈಫಿಯತ್ತು
೬೪. ಕುಂದಾಪುರ ಕೈಫಿಯತ್ತು
೬೫. ಕುಂಭಕಾಸಿ ಸ್ಥಳದ ಕುಂಭೇಶ್ವರ ಕೈಫಿಯತ್ತು
೬೬. ಕೊಡಕರೊ ಮಾಗಣಿ ಕೈಫಿಯತ್ತು
೬೭. ಕೊಲ್ಲೂರು ಉತ್ತರ ಮಾಗಣಿ ಕೈಫಿಯತ್ತು
೬೮. ಗೆರುಸೊಪ್ಪೆ ಕೈಫಿಯತ್ತು
೬೯. ಗೋಕರ್ನದ ಕೈಫಿಯತ್ತು
೭೦. ಚವುಟ ಅರಸುಗಳ ಕೈಫಿಯತ್ತು
೭೧. ಜಮಾಲಾಬಾದು ಕೈಫಿಯತ್ತು
೭೨. ತುಳುವದೇಶ ಕಡಬಾ ಸಂಸ್ಥಾನದ ಕೈಫಿಯತ್ತು
೭೩. ಧರ್ಮಸ್ಥಳ ಕೈಫಿಯತ್ತು
೭೪. ಪುತ್ತಿಗೆ ಮಠದ ಕೈಫಿಯತ್ತು
೭೫. ಪೆರಡೂರು ಮಾಗಣಿ ದೇವಾಲಯ ಕೈಫಿಯತ್ತು
೭೬. ಪೇಜಾವರ ಮಠದ ಕೈಫಿಯತ್ತು
೭೭. ಫಲಿಮಾರು ಮಠದ ಕೈಫಿಯತ್ತು
೭೮. ಬನವಶಿ ಸ್ಥಳದ ಕೈಫಿಯತ್ತು-೧
೭೯. ಬವವಾಶಿ ಸ್ಥಳದ ಕೈಫಿಯತ್ತು-೨
೮೦. ಬನವಾಶಿ ಸ್ಥಳದ ಕೈಫಿಯತ್ತು-೩
೮೧. ಬಸರೂರು ಜಪ್ತಿ ಮಾಗಣಿ ಕೈಫಿಯತ್ತು
೮೨. [ಬಸರೂರು ಮಾಗಣಿ ಕೈಫಿಯತ್ತು]
೮೩. ಬಳಿಸಾಗರದ ಎಣೆಗುಡ್ಡೆ ದೇವಾಲಯ ಕೈಫಿಯತ್ತು
೮೪. ಬಾರಕೂರು ಸಂಸ್ಥಾನ ಕೈಫಿಯತ್ತು
೮೫. ಭಟ್ಟಕಳದ ಕೈಫಿಯತ್ತು

೮೬. ಬೈರೂರು ಮಾಗಣಿ ಕೈಫಿಯತ್ತು
೮೭. ಮರದಾಳ ಕೈಫಿಯತ್ತು
೮೮. ಮುಗುವಿನ ಮಾಗಣಿ ಕೈಫಿಯತ್ತು
೮೯. ಮೂಡನಾಡ ಮಾಗಣಿ ಕೈಫಿಯತ್ತು
೯೦. ಯಲ್ಲೂರು ದೇವಸ್ಥಾನದ ಕೈಫಿಯತ್ತು
೯೧. ಯಿಡೂರು ಕನಡಿ ಗ್ರಾಮದ ಕೈಫಿಯತ್ತು
೯೨. ಯೆಳರೆ ಮಾಗಣಿ ಕೈಫಿಯತ್ತು
೯೩. ಶಿರಸಿ ಕೈಫಿಯತ್ತು
೯೪. ಶಿರೂರು ಮಠದ ಕೈಫಿಯತ್ತು
೯೫. ಶೊದೆ ಮಠದ ಕೈಫಿಯತ್ತು
೯೬. ಸೋದೆ ಸಂಸ್ಥಾನದ ಕೈಫಿಯತ್ತು
೯೭. ಹಲಸನಾಡ ಮಾಗಣಿ ಕೈಫಿಯತ್ತು
೯೮. ಹಾರನಾಡ ಮಾಗಣಿ ಕೈಫಿಯತ್ತು
೯೯. ಹೆಮ್ಮಾಡಿ ಮಾಗಣಿ ಕೈಫಿಯತ್ತು
೧೦೦. ಹೊಸಂಗಡಿ ಮಾಗಣಿ ಕೈಫಿಯತ್ತು

ಬಳ್ಳಾರಿ ಪ್ರದೇಶದ ಕೈಫಿಯತ್ತುಗಳು :

೧೦೧. ಅಂತಾಪುರ ಕೈಫಿಯತ್ತು
೧೦೨. ಅರ್ಕಾಡ ಸಂಸ್ಥಾನದ ಕೈಫಿಯತ್ತು
೧೦೩. ಉತ್ಸಂಗಿ ವೇಂಟೆಕೆ ಸಲ್ಲುವ ಸಂತೆಬೆನ್ನೂರ ಶೀಮೆ ಕೈಫಿಯತ್ತು
೧೦೪. ಕಮಲಾಪುರದ ಕೈಫಿಯತ್ತು
೧೦೫. ಕೈಫಿಯತ್ತು ಕುರುಗೋಡು, ತಾಲೂಕೆ ಬಳ್ಳಾರಿ
೧೦೬. ಕೈಫಿಯತ್ತು ಭಟ್ಟರಹಳ್ಳಿ, ತಾಲೂಕೆ ಬಳ್ಳಾರಿ
೧೦೭. ತಾಲೂಕು ಕಂಪಲಿ ಕೈಫಿಯತ್ತು
೧೦೮. ದರೋಜಿ ಗ್ರಾಮದ ಕೈಫಿಯತ್ತು
೧೦೯. ದೇವಲಾಪುರ ಪ್ರತಿನಾಮಾ ಮಲ್ಲಿಕಾರ್ಜುನಪುರದ ಕೈಫಿಯತ್ತು
೧೧೦. ಬಳ್ಳಾರಿಯ ಕೈಫಿಯತ್ತು
೧೧೧. ಶ್ರೀ ಕೊಮಾರದೇವರ ಕ್ಷೇತ್ರದ ಕೈಫಿಯತ್ತು

೧೧೨. ಸಂತೆಬೆನ್ನೂರು ಕೈಫಿಯತ್ತು

೧೧೩. ಹತ್ತಿಬೆಳಗಲ್ಲು ಕೈಫಿಯತ್ತು

೧೧೪. ಹಿರೇಹಾಳು ಕೈಫಿಯತ್ತು

ಇತರ ಕೈಫಿಯತ್ತುಗಳು :

೧೧೫. ಉಪ್ಪಲೆಗರ ಕೈಫಿಯತ್ತು

೧೧೬. ಉಪ್ಪಲಿ ಬಣಜಿಗರ ಕೈಫಿಯತ್ತು

೧೧೭. ಕುಂಚಿವಕ್ಕಲಿಗರ ಕೈಫಿಯತ್ತು

೧೧೮. ಕುಡಿ ಕುಂಬಾರ ಜಾತಿ ಕೈಫಿಯತ್ತು

೧೧೯. ಕೆಂ[>ತೆಂ]ಗಲಿ ವೈಷ್ಣವರ ಅಥವಾ ವೆಂಕಟಪುರದ ವೈಷ್ಣವರ ಕೈಫಿಯತ್ತು

೧೨೦. ಕೊರಮರು ವಾಂಡ್ಲೆ ಕೈಫಿಯತ್ತು

೧೨೧. ಚೆನ್ನಯ್ಯಾಕುಲದ ಜಾತಿರಿವಾಜ ಕೈಫಿಯತ್ತು

೧೨೨. ತೆಲುಗು ಬಣಜಿಗರ ಜಾತಿ ರಿವಾಲು ಕೈಫಿಯತ್ತು

೧೨೩. ಪದ್ಮಸಾಲೇರ ಕೈಫಿಯತ್ತು

೧೨೪. ಬಂಜಾರಿ ಕೈಫಿಯತ್ತು

೧೨೫. ಬನವಳ್ಳಿ ಬಣಜಿಗರ ಕೈಫಿಯತ್ತು

೧೨೬. ಮಣ್ಣುವಡ್ಡಿ ಜಾತಿ ಕೈಫಿಯತ್ತು

೧೨೭. ಮರಾಠೆ ವಾಂಡ್ಲ ಕೈಫಿಯತ್ತು

೧೨೮. ಮೇದಾರ ಕೈಫಿಯತ್ತು

೧೨೯. ಮೇಲು ಸಾಖರ ಜಾತಿ ರಿವಾಜು ಕೈಫಿಯತ್ತು

೧೩೦. ರಾಜವಂಶಾವಳಿ ಕೈಫಿಯತ್ತು

೧೩೧. ರಾಜವಂಶಾವಳಿ ಕೈಫಿಯತ್ತು

೧೩೨. ವುಂಡೆ ಗಂಗಡಿಕಾರ ವಕ್ಕಲಿಗರ ಕೈಫಿಯತ್ತು

೧೩೩. ಹಳೆಪೈಕ ಜಾತಿ ರಿವಾಜು ಕೈಫಿಯತ್ತು

೧೩೪. ಮಣಿಪುರದ ಕೈಫಿಯತ್ತು

ಕೈಫಿಯತ್ತುಗಳ ಆಕರಗಳು :

ಈ ಕೈಫಿಯತ್ತುಗಳನ್ನು ಮದ್ರಾಸ್ ಗವ್ಹರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ ಲೈಬ್ರರಿ (ಮೆಕೆಂಝಿ ಸಂಪುಟಗಳು), ಮೈಸೂರುರಾಜ್ಯ ಪುರಾತತ್ವ ಇಲಾಖೆ (ಮದ್ರಾಸ್ ಗವ್ಹರ್ನಮೆಂಟ

ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿಯಿಂದ ಬಂದ ಡಿ. ನಂಬರ ಪ್ರತಿಗಳು), ಮೈಸೂರು ಕನ್ನಡ ಅಧ್ಯಯನ ಸಂಸ್ಥೆ (ಕೆ.ಎ. ಸಂಕೇತದ ಪ್ರತಿಗಳು), ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ – ಇಷ್ಟು ಮೂಲಗಳಿಂದ ಹೀಗೆ ಸಂಗ್ರಹಿಸಿದ್ದೇವೆ:

ಮೆಕೆಂಝಿ ಸಂಪುಟ – ೧೪೬:

ಕಮಲಾಪುರದ ಕೈಫಿಯತ್ತು, ತಾಲೂಕು ಕಂಪಲಿ ಕೈಫಿಯತ್ತು=೨

ಮೆಕೆಂಝಿ ಸಂಪುಟ – ೧೬೦:

ಚರಂತಿಮಠದ ಕೈಫಿಯತ್ತು, ಭಾವಣಿ ಬೆಳಗುತ್ತಿ ಅರಸುಗಳ ವಂಶಾವಳಿ ಕೈಫಿಯತ್ತು, ಬಸವಲಿಂಗಯ್ಯ ಜಂಗಮ ಕೈಫಿಯತ್ತು, ಬೆಳಗುತ್ತಿ ಅರಸುಗಳ ವಂಶಾವಳಿ ವಿವರ: ಕೈಫಿಯತ್ತು, ಸಾಗರದ ಕೈಫಿಯತ್ತು, ಸೂಳೆಕೆರೆ ಸೀಮೆ ಕೈಫಿಯತ್ತು, ಹೊದಿಗೆರೆ ಶೀಮೆ ಕೈಫಿಯತ್ತು, ಸಂತೆಬೆನ್ನೂರು ಶೀಮೆಯಿಂದ ಕೈಫಿಯತ್ತು ಪಟ್ಟಿ, ಉತ್ಸಂಗಿ ವೆಂಟಿಕೆ ಸಲ್ಲುವ ಸಂತೆಬೆನ್ನೂರ ಶೀಮೆ ಕೈಫಿಯತ್ತು=೯

ಮೆಕೆಂಝಿ ಸಂಪುಟ – ೧೬೧:

ಕೈಫಿಯತ್ತು ಅತ್ತಿಕುಪ್ಪೆಗ್ರಾಮ, ಕೈಫಿಯತ್ತು ತಾಲ್ಲೂಕೆ ಆಜಂಪುರ, ಕೊಕ್ಕಸಮುದ್ರದ ಕೈಫಿಯತ್ತು ತಾಲ್ಲೂಕೆ ಯಗಟಿ, ಚಿಕ್ಕಮಗಳೂರು ಕೈಫಿಯತ್ತು, ಬಂಜಾರಿ ಕೈಫಿಯತ್ತು, ಮಂಡಗದ್ದೆ ಕೈಫಿಯತ್ತು, ತೊಣ್ಣೂರು ರಾಕ್ಷಸಿ ಕೈಫಿಯತ್ತು, ಯಗಟಿ ಕೈಫಿಯತ್ತು, ಹಿರೇಮಗಳೂರು ಕೈಫಿಯತ್ತು, ಹೊಳೆಹೊನ್ನೂರು ಕೈಫಿಯತ್ತು=೧೦

ಮೆಕೆಂಝಿ ಸಂಪುಟ – ೧೬೨:

ಅಂಕನಾಥಪುರದ ಅರ್ಕೇಶ್ವರಸ್ವಾಮಿ ಕೈಫಿಯತ್ತು, ಆಕಿಯೆಬ್ಯಾಳು (ನರಶೀಪುರ ತಾಲೂಕು) ಕೈಫಿಯತ್ತು, ಆನೆ ಕನ್ನಂಬಾಡಿ ಕೈಫಿಯತ್ತು, ತಳಕಾಡು ಕೈಫಿಯತ್ತು, ತಿರುಮಕೊಡಲು ಕೈಫಿಯತ್ತು, ನಾಗಮಂಗಲದ ಕೈಫಿಯತ್ತು, ಮಿರರ್ಲೆ ಕೈಫಿಯತ್ತು, ಶ್ರೀ ಎಡತೊರೆಮಠ ಕೈಫಿಯತ್ತು, ಸಾಲಿಗ್ರಾಮದ ಜೈನಬಸ್ತಿಯ ಕೈಫಿಯತ್ತು, ಸೋಷಲೆ ಅಗ್ರಹಾರದ ಕೈಫಿಯತ್ತು = ೧೦

ಮೆಕೆಂಝಿ ಸಂಪುಟ – ೧೬೪:

ಅನಂತಪುರದ ಕೈಫಿಯತ್ತು, ಉಡುಗುಣಿ ಕೈಫಿಯತ್ತು = ೨

ಮೆಕೆಂಝಿ ಸಂಪುಟ – ೧೭೪:

ಕುಡಿ ಕುಂಬಾರ ಜಾತಿ ಕೈಫಿಯತ್ತು, ಕೊರಮರು ವಾಂಡ್ಲೆ ಕೈಫಿಯತ್ತು, ತೆಲುಗು ಬಣಜಿಗರ ಜಾತಿ ರಿವಾಜು ಕೈಫಿಯತ್ತು, ಮಣ್ಣುವಡ್ಡಿ ಜಾತಿ ಕೈಫಿಯತ್ತು, ಮರಾಠೆ ವಾಂಡ್ಲೆ ಕೈಫಿಯತ್ತು, ರಾಜವಂಶಾವಳಿ ಕೈಫಿಯತ್ತು–೧, ರಾಜವಂಶಾವಳಿ ಕೈಫಿಯತ್ತು–೨, ವುಂಡೆ ಗಂಗಡಿಕಾರ ವಕ್ಕಲಿಗರ ಕೈಫಿಯತ್ತು=೮

ಮೆಕೆಂಝಿ ಸಂಪುಟ – ೧೭೫:

ಚನ್ನಯ್ಯ ಕುಲದ ಜಾತಿ ರಿವಾಜು ಕೈಫಿಯತ್ತು = ೧

ಮೆಕೆಂಝಿ ಸಂಪುಟ – ೧೭೮:

ಧರ್ಮಸ್ಥಳದ ಕೈಫಿಯತ್ತು=೧

ಮೆಕೆಂಝಿ ಸಂಪುಟ – ೨೮೩:

ಅರಿಕುಟಾರದ ಕೈಫಿಯತ್ತು=೧

ಮೆಕೆಂಝಿ ಸಂಪುಟ – ೨೮೪:

ಉಪ್ಪಲಿ ಬಣಜಿಗರ ಕೈಫಿಯತ್ತು=೧

ಮೆಕೆಂಝಿ ಸಂಪುಟ – ೨೮೭:

ದೇವೇಗೌಡನಹಳ್ಳಿ ಕೈಫಿಯತ್ತು=೧

ಮೆಕೆಂಝಿ ಸಂಪುಟ – ೨೮೮:

ಬೆಟ್ಟದ ಕೋಟೆ ಕೈಫಿಯತ್ತು=೧

ಮೆಕೆಂಝಿ ಸಂಪುಟ – ೨೯೦:

ನಗರಸೀಮೆ ಕೈಫಿಯತ್ತು=೧

ಮೆಕೆಂಝಿ ಸಂಪುಟ – ೨೯೧:

ಬಾಗಡೆ ಕೈಫಿಯತ್ತು, ಹಾರನಹಳ್ಳಿ ಕೈಫಿಯತ್ತು=೨

ಮೆಕೆಂಝಿ ಸಂಪುಟ – ೩೦೪:

ಕೆಂ[>ತೆ]ಗಲೆ ವೈಷ್ಣವರ ಅಥವಾ ವೆಂಕಟಪುರದ ವೈಷ್ಣವರ ಕೈಫಿಯತ್ತು=೧

ಮೆಕೆಂಝಿ ಸಂಪುಟ – ೩೩೨:

ಬನವಳ್ಳಿ ಬಣಜಿಗರು ಬರಶಿಕೊಟ್ಟ ಕೈಫಿಯತ್ತು, ಬನವಾಶಿ ಸ್ತಳದ ಕೈಫಿಯತ್ತು–೧, ವಸುಧಾರೆ ಗ್ರಾಮದ ಕೈಫಿಯತ್ತು, ಹೈದರ ಕೈಫಿಯತ್ತು–೧, ಹೈದರನ ಕೈಫಿಯತ್ತು–೨=೫

ಮೆಕೆಂಝಿ ಸಂಪುಟ – ೩೫೧:

ಅಂತಾಪುರ ಕೈಫಿಯತ್ತು, ಅಜಿಲರ ಕೈಫಿಯತ್ತು, ಅದಮಾರು ಮಠದ ಕೈಫಿಯತ್ತು. ಕಾಣೂರು ಮಠದ ಕೈಫಿಯತ್ತು, ಕಾರ್ಕಳದ ಅರಸರ ಕೈಫಿಯತ್ತು, ಕ್ರಿಷ್ಣಾಪೂರ ಮಠದ ಕೈಫಿಯತ್ತು, ಚಉಟ ಅರಸುಗಳ ಕೈಫಿಯತ್ತು, ಜಮಲಾಬಾದು ಕೈಫಿಯತ್ತು, ದರೋಜಿಗ್ರಾಮದ ಕೈಫಿಯತ್ತು, ದೇವನಕಲ್ಲು ಕೈಫಿಯತ್ತು, ಪುತಿಗೆಮಠ ಕೈಫಿಯತ್ತು, ಪೇಜಾವರ ಮಠದ ಕೈಫಿಯತ್ತು, ಫಲಿಮಾರ ಮಠದ ಕೈಫಿಯತ್ತು, ಶಿರೂರ ಮಠದ ಕೈಫಿಯತ್ತು, ಶೊದೆ ಮಠದ ಕೈಫಿಯತ್ತು, ಹತ್ತಿಬೆಳಗಲ್ಲಿ ಕೈಫಿಯತ್ತು.=೧೬

ಮೆಕೆಂಝಿ ಸಂಪುಟ – ೩೫೩:

ಕದರಿ ಮಾಗಣೆಯ ಕೈಫಿಯತ್ತು, ಕಬ್ಬುನಾಡ ಮಾಗಣೆ ಕೈಫಿಯತ್ತು, ಕಾಪಿನ ದೇವಸ್ಥಾನದ ಕೈಫಿಯತ್ತು, ಕಾಳತೋಡು ಮಾಗಣೆ ಕೈಫಿಯತ್ತು, ಕುಂಜಾರು ಕೈಫಿಯತ್ತು, ಕುಂದಾಪುರದ ಕೈಫಿಯತ್ತು, ಕುಂಬಕಾಶಿಸ್ಥಳದ ಕುಂಬೇಶ್ವರ ಕೈಫಿಯತ್ತು, ಕೊಡಕರೊ ಮಾಗಣೆ ಕೈಫಿಯತ್ತು, ಕೊಲ್ಲುರು ಉತ್ತರ

ಮಾಗಣಿ ಕೈಫಿಯತ್ತು, ಗೆರೆಸೊಪ್ಪೆ ಕೈಫಿಯತ್ತು ಗೋಕರ್ನದ ಕೈಫಿಯತ್ತು, ತುಳುವ ದೇಶದ ಕಡಬಾ ಸಂಸ್ಥಾನದ ಕೈಫಿಯತ್ತು, ಬಸರೂರು ಜಪ್ತಿ ಮಾಗಣಿ ಕೈಫಿಯತ್ತು, ಬಳಿಸಾಗರದ ಎಣೆಗುಡ್ಡೆ ದೇವಾಲಯ ಕೈಫಿಯತ್ತು, ಭಟ್ಟಕಳದ ಕೈಫಿಯತ್ತು, ಬಾರಕೂರ ಸಂಸ್ಥಾನದ ಕೈಫಿಯತ್ತು, ಭೈರೂರು ಮಾಗಣಿ ಕೈಫಿಯತ್ತು, ಮರದಾಳ ಕೈಫಿಯತ್ತು, ಮುಗುವಿನ ಮಾಗಣೀ ಕೈಫಿಯತ್ತು, ಮೂಡನಾಡ ಮಾಗಣಿ ಕೈಫಿಯತ್ತು, ಪೆರಡುರ ಮಾಗಣಿ ದೇವಾಲಯದ ಕೈಫಿಯತ್ತು, ಯಲ್ಲೂರ ದೇವಸ್ಥಾನದ ಕೈಫಿಯತ್ತು. ಯಳರೆ ಮಾಗಣಿ ಕೈಫಿಯತ್ತು, ಯಿಡೂರು ಕನಡಿ ಗ್ರಾಮದ ಕೈಫಿಯತ್ತು, ಹಲಸನಾಡ ಮಾಗಣಿ ಕೈಫಿಯತ್ತು, ಹಾರನಾಡ ಮಾಗಣಿ ಕೈಫಿಯತ್ತು, ಹೆಮ್ಮಾಡಿ ಮಾಗಣಿ ಕೈಫಿಯತ್ತು, ಹೊಸಂಗಡಿ ಮಾಗಣಿ ಕೈಫಿಯತ್ತು=೨೮

ಮೆಕೆಂಝಿ ಸಂಪುಟ – ೩೫೭:

ಮಲ್ಲೂರು ಸಾಸಿವೆಹಳ್ಳಿ ಶೀಮೆ ಕೈಫಿಯತ್ತು = ೧

ಮೆಕೆಂಝಿ ಸಂಪುಟ – ೩೬೪:

ಶಿರಸಿ ಕೈಫಿಯತ್ತು = ೧

ಮೆಕೆಂಝಿ ಸಂಪುಟ – ೩೬೯:

ಕುಂಚಿ ವಕ್ಕಲೀಗರ ಕೈಫಿಯತ್ತು, ಭಟ್ಟರಹಳ್ಳಿ ತಾಲೂಕೆ ಬಳ್ಳಾರಿ ಕೈಫಿಯತ್ತು, ಕೈಫಿಯತು ಕುರುಗೋಡು ತಾಲೂಕೆ ಬಳ್ಳಾರಿ, ದೇವಲಾಪುರ ಪ್ರತಿನಾಮಾ ಮಲ್ಲಿಕಾರ್ಜುನಪುರ ಕೈಫಿಯತು, ಪದ್ಮಸಾಲೇರ ಕೈಫಿಯತು, ಮೇಲುಸಾಖರೆಜಾತಿ ರಿವಾಜು ಕೈಫಿಯತು, ಮೇದಾರ ಕೈಫಿಯತ್ತು, ಶ್ರೀ ಕೊಮಾರದೇವರ ಕ್ಷೇತ್ರದ ಕೈಫಿಯತ್ತು, ಹಳೆ ಪೈಕದ ಜಾತಿ ರಿವಾಜ ಕೈಫಿಯತ್ತು, ಹಿರೆಹಾಳು ಕೈಫಿಯತು=೧೦

ಡಿ. ನಂಬರ ಸಂಪುಟ – ೧೮೨೮:

ಆನಂತಪುರದ ಸೀಮೆಯಲ್ಲಿರುವಂತ ಮಹಾಸ್ಥಳ ತೀರ್ಥ ದೇವಾಲಯಗಳ ಕೈಫಿಯತ್ತು=೧

ಡಿ. ನಂಬರ ಸಂಪುಟ – ೧೮೩೩:

ಸೋಸಲೆಯ ಕೈಫಿಯತ್ತು–೧, ಸೋಮನಾಥಪುರದ ಅಗ್ರಹಾರ ಕೈಫಿಯತ್ತು.

ತಳಕಾಡು ಕೈಫಿಯತ್ತು–೨ = ೩

ಡಿ. ನಂಬರ ಸಂಪುಟ – ೧೮೩೮:

[ಬಸರೂರು ಮಾಗಣಿ ಕೈಫಿಯತ್ತು]=೧

ಡಿ. ನಂಬರ ಸಂಪುಟ – ೧೮೩೯:

ಸೋದೆ ಸಂಸ್ಥಾನದ ಕೈಫಿಯತ್ತು, ಬನವಾಸಿಸ್ಥಳ ಕೈಫಿಯತ್ತು–೨ = ೨

ಡಿ. ನಂಬರ ಸಂಪುಟ – ೧೮೫೦:

ಸೋಗಾನಿ ಅಗ್ರಹಾರದ ಕೈಫಿಯತ್ತು–೨ = ೧

ಡಿ. ನಂಬರ ಸಂಪುಟ – ೨೦೦೪:

ಉಪ್ಪಲಿಗರ ಕೈಫಿಯತ್ತು = ೧

ಡಿ. ನಂಬರ ಸಂಪುಟ – ೨೦೪೮:

[ದೇವಣಪುರ] ಕೈಫಿಯತ್ತು = ೧

ಡಿ. ನಂಬರ ಸಂಪುಟ – ೨೪೮೫:

ಹೊಳೆ ಹೊನ್ನೂರು ಕೈಫಿಯತ್ತು, ಹರಿಹರದ ಕೈಫಿಯತ್ತು = ೨

ಕೆ.ಎ ೩೬೯/೧ :

ಅಷ್ಟಗ್ರಾಮಗಳ ಕೈಫಿಯತ್ತು = ೧

ಕೆ.ಎ ೩೬೯/೨ :

ಸೋಗಾನಿ ಅಗ್ರಹಾರದ ಕೈಫಿಯತ್ತು ೧ = ೧

ಕೆ.ಎ ೪೦೦/೫ :

ಹಳೇಬೀಡು ಕೈಫಿಯತ್ತು = ೧

ಕರ್ನಾಟಕದ ಸಾಹಿತ್ಯ ಪರಿಷತ್ಪತ್ರಿಕೆ ೯–೨:

ಆರ್ಕಾಡ ಸಂಸ್ಥಾನದ ಕೈಫಿಯತ್ತು = ೧

ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ೧೧–೪:

ಬಳ್ಳಾರಿಯ ಕೈಫಿಯತ್ತು = ೧

ಕರ್ನಾಟಕ ಸಾಹಿತ್ಯ ಪರಿಷತ್‌ಪತ್ರಿಕೆ ೧೫–೧:

ಶೃಂಗೇರಿಯ ಕೈಫಿಯತ್ತು = ೧

ಕರ್ನಾಟಕ ಸಾಹಿತ್ಯ ಪರಿಷತ್‌ಪತ್ರಿಕೆ ೧೬–೨:

ಕಣಕುಪ್ಪೆಕೋಟೆ ಕಟ್ಟಿದ ಕೈಫಿಯತ್ತು = ೧

ಆಕರ ಸೂಚನೆಯಿಲ್ಲದ ಕೈಫಿಯತ್ತುಗಳು:

ಡೆಂಕಣಿ ಕೋಟೆಯ ಬೆಟ್ಟರಾಯಸ್ವಾಮಿಯ ಮೊದಲಾದ ಕೈಫಿಯತ್ತು, ಬನವಾಸಿ ಸ್ಥಳದ ಕೈಫಿಯತ್ತು–೩ = ೨

ಹೀಗೆ ಹಲವು ಆಕರಗಳಿಂದ ಈ ಕೈಫಿಯತ್ತುಗಳನ್ನು ಸಂಗ್ರಹಿಸಿದ್ದೇವೆ. ಒಂದು ಕೈಫಿಯತ್ತಿನ ಅನೇಕ ಪ್ರತಿಗಳು ಕಂಡು ಬಂದಲ್ಲಿ ಸಾಧ್ಯವಿದ್ದಷ್ಟು ಶುದ್ಧಪ್ರತಿಯನ್ನು ಆಯ್ಕೆ ಆಯ್ದುಕೊಂಡಿದ್ದೇವೆ.

ಅಲಭ್ಯ ಕೈಫಿಯತ್ತುಗಳು:

ಮೆಕೆಂಝಿ ಬರೆಯಿಸಿಕೊಂಡ ಕೈಫಿಯತ್ತುಗಳು ಕಾಲಕಾಲಕ್ಕೆ ನಾಶವಾಗುತ್ತ ಬಂದಿವೆ. ಮೇಲೆ ಹೇಳಿದ ಮದ್ರಾಸ ಗವ್ಹರ್ನಮೆಂಟ ಮ್ಯಾನ್ಯುಸ್ಕ್ರಿಪ್ಟ ಲೈಬ್ರರಿ ಸೂಚಿ ಸಿದ್ಧವಾದ ಬಳಿಕವೂ ಕೆಲವು ನಾಶವಾಗಿವೆ. ಈಗ ನಮಗೆ ಲಭ್ಯವಾಗಿರುವ ಕೈಫಿಯತ್ತುಗಳನ್ನು ಬಿಟ್ಟು, ಸೂಚಿಯಲ್ಲಿ ಮಾತ್ರ

ಕಂಡುಬರುವ ಹೆಚ್ಚಿನ ಕೈಫಿಯತ್ತುಗಳನ್ನು ಅಲಭ್ಯವೆಂದು ಭಾವಿಸಿ ಹೀಗೆ ಯಾದಿ ಗೊಳಿಸಬಹುದು.

೧. ಅರಕೇರಿ ಕೈಫಿಯತ್ತು ಸೂಚೀ. ನಂ.೭೮

೨. ಅಮೃತಾಪುರ ದೇವಸ್ಥಾನದ ಕೈಫಿಯತ್ತು ೭೩

೩. ಅದವಾನಿ ಕಾಮಿಲು ಪರಗಣಿ ಕೈಫಿಯತ್ತು ೧೦೭

೪. ಅದವಾನಿ ಕೋಸಗಿ ಕೈಫಿಯತ್ತು ೧೦೮

೫. ಅದವಾನಿ ಜೈನರ ಕೈಫಿಯತ್ತು ೧೧೯

೬. ಕುಣ್ಯಾಡಿ ಗ್ರಾಮದ ಕೈಫಿಯತ್ತು ೪೦೫ (ನಂ. ೧೬೪, ೧೬೫ ಒಂದೇ?)

೭. ಕೆರೆ ಬೆಳಗಲ್ಲು ಕೈಫಿಯತ್ತು ೪೭೬

೮. ಚಿಕ್ಕ ಹೋತೂರು ಕೈಫಿಯತ್ತು ೬೪೮

೯. ತೆಕ್ಕಲಕೋಟೆ ಕೈಫಿಯತ್ತು ೭೩೫

೧೦. ನಾಗಲದಿನ್ನೆ ಕೈಫಿಯತ್ತು ೮೩೫

೧೧. ನವಾಯತರ ಕೈಫಿಯತ್ತು೮೨೭

೧೨. ಬೇಡರ ಬೆಳಗಲ್ಲು ಕೈಫಿಯತ್ತು ೧೧೪೧

೧೩. ಮಂಚಾಲೆ ಕೈಫಿಯತ್ತು ೧೨೧೯

೧೪. ರಾಜವೇಡು ಕೈಫಿಯತ್ತು ೧೩೪೪

೧೫. ವಿಜಯನಗರದ ಕೈಫಿಯತ್ತು ೧೪೧೬

೧೬. ಸ್ವರ್ಗಾವತಿ ಪಟ್ಟಣದ ಕೈಫಿಯತ್ತು ೧೫೪೧

೧೭. ಹಿರೇಹೋತುರ ಕೈಫಿಯತ್ತು ೧೭೬೧

೧೮. ಹೊಸೂರು ಮುರವಣಿ ಕೈಫಿಯತ್ತು ೧೮೨೩

೧೯. ಹೊನ್ನಾಳಿ ಸೀಮೆ ಕೈಫಿಯತ್ತು ೧೮೦೫

ಈ ಕೈಫಿಯತ್ತುಗಳು ನಮಗೆ ಲಭ್ಯವಾಗಲಿಲ್ಲ. ಇವುಗಳಲ್ಲಿ ಕೆಲವು ಅನ್ಯಭಾಷೆಯವಾಗಿರಬಹುದು. ಕೆಲವು ನಾಶವಾಗಿರಬಹುದು. ನಮಗೆ ಲಭ್ಯವಾಗಿರುವ ಕೈಫಿಯತ್ತುಗಳೇ ಅನ್ಯಶೀರ್ಷಿಕೆಯಿಂದ ಇಲ್ಲಿ ಸೇರಿಕೊಂಡಿರಬಹುದು. ಬೇರೆ ಕೆಲವು ಮದ್ರಾಸ ಪ್ರಾಚ್ಯ ಸಂಶೋಧನಾಲಯದಲ್ಲಿಯೇ ನಮ್ಮ ಕಣ್ಣು ತಪ್ಪಿಸಿ ಉಳಿದುಕೊಂಡಿರಬಹುದು. ಹೀಗಾಗಿ ನಮ್ಮ ಕೆಲಸದ ಮುಂದುವರಿಕೆಯೆಂಬಂತೆ ಬೇರೊಬ್ಬರು ಯೋಜನೆಯನ್ನು ಕೈಗೆತ್ತಿಕೊಂಡು, ಮೇಲೆ ಸೂಚಿಸಿದ ಎಲ್ಲ ದಾರಿಗಳಲ್ಲಿ ನಡೆದು, ಕೈಫಿಯತ್ತುಗಳ ಸಂಶೋಧನೆಯನ್ನು ಇನ್ನೂ ಸಮಗ್ರಗೊಳಿಸಬೇಕಾಗಿದೆ.

ಕೈಫಿಯತ್ತುಗಳ ವಿಷಯ :

ಇತಿಹಾಸ ಬರೆವಣಿಗೆಯ ಸಂದರ್ಭದಲ್ಲಿ ದಾಖಲೆಗಳಾದ ಶಾಸನಗಳಿಗೆ ಪ್ರಥಮಸ್ಥಾನ, ಮಿಕ್ಕವುಗಳಿಗೆ ದ್ವಿತೀಯ ಸ್ಥಾನ ಸಲ್ಲುತ್ತದೆ. ಈ ದ್ವಿತೀಯ ಸ್ಥಾನದ ಆಧಾರ ಸಾಮಗ್ರಿಯಲ್ಲಿ

ಕೈಫಿಯತ್ತುಗಳು ಪರಿಗಣಿತವಾಗುತ್ತವೆ. ಹೀಗಿದ್ದೂ ಇವು ಕೆಳಗಿನ ಕಾರಣಗಳಿಂದಾಗಿ ಕೆಲವೊಮ್ಮೆ ಶಾಸನಗಳಿಗಿಂತ ಮಹತ್ವದವೆನಿಸುತ್ತವೆ.

೧. ಶಾಸನಗಳು ಜೀವನದ ದಾಖಲೆಗಳಾಗಿದ್ದರೂ ಅಲ್ಲಿ ಚಕ್ರವರ್ತಿ, ಮಾಂಡಲಿಕ ಮೊದಲಾದ ಪ್ರತಿಷ್ಠಿತರ ವಿಷಯಕ್ಕೆ ಪ್ರಾಧಾನ್ಯ. ಕೈಫಿಯತ್ತುಗಳು ಮಧ್ಯಮ ಮತ್ತು ಸಾಮಾನ್ಯ ವರ್ಗದವರ ಚಟುವಟಿಕೆಗಳಿಗೂ ಪ್ರಧಾನಸ್ಥಾನ ನೀಡಿವೆ. ಹೀಗಾಗಿ ವಿಜಯನಗರ ಸಾಮ್ರಾಜ್ಯ ತರುವಾಯದಲ್ಲಿ ಕರ್ನಾಟಕದ ತುಂಬ ತಲೆಯೆತ್ತಿದ ಪಾಳೆಯ ಪಟ್ಟುಗಳ ಚರಿತ್ರೆ ಈ ದಾಖಲೆಗಳಲ್ಲಿ ತುಂಬಿ ನಿಂತಿದೆ. ೨. ಪರಿಮಿತ ಗಾತ್ರ ಕಾರಣವಾಗಿ ಶಾಸನಗಳು ಪ್ರಧಾನ ಘಟನೆಗಳನ್ನು, ಅದರಲ್ಲಿಯೂ ಆ ಘಟನೆಯ ಮುಖ್ಯ ಅಂಶಗಳನ್ನು ಮಾತ್ರ ದಾಖಲಿಸುತ್ತಿದ್ದರೆ, ಅನೇಕ ಪುಟಗಳ ವರೆಗೆ ವ್ಯಾಪಿಸಬಹುದಾದ ಕೈಫಿಯತ್ತುಗಳು ಎಲ್ಲ ಮುಖ್ಯ ಅಂಶಗಳನ್ನು ವಿವರಿಸುತ್ತವೆ. ೩. ಶಾಸನಗಳು ಹೇಳುವುದು ಜೀವನದ ಆದರ್ಶ ಘಟನೆಗಳನ್ನು ಮಾತ್ರ. ಆದುದರಿಂದ ಅಲ್ಲಿ ಜೀವನದ ಮೋಸ, ನೋವು, ವ್ಯಕ್ತಿಯ ದೌರ್ಬಲ್ಯಗಳು ಸಿಗುವುದು ಸಾಧ್ಯವಿಲ್ಲ. ಇದಕ್ಕೆ ವಿರುದ್ಧವೆಂಬಂತೆ ಕೈಫಿಯತ್ತುಗಳು ವಾಸ್ತವ ಜೀವನದ ವಿವರಗಳನ್ನು ಒದಗಿಸಿ ಬದುಕಿನ ಮುಚ್ಚಿಹೋದ ಮುಖಗಳನ್ನು ಬಿಚ್ಚಿತೋರಿಸುತ್ತವೆ. ೪. ಶಾಸನಗಳಂತೆ ಕೇವಲ ದಾನ–ವೀರ ಘಟನೆಗಳನ್ನು ಹೇಳದೆ ಗ್ರಾಮ, ಕೋಟೆ, ಕೊತ್ತಲ, ಕೆರೆ, ದೇವಾಲಯಗಳ ನಿರ್ಮಾಣ ವಿವರಣೆಗಳನ್ನಲ್ಲದೆ ಸಾಮಾಜಿಕ ಸಂಘರ್ಷ–ಸ್ನೇಹ, ಧಾರ್ಮಿಕ ಆಚರಣೆ–ಮೂಢನಂಬಿಕೆ, ಜಾತಿವ್ಯವಸ್ಥೆ ಇತ್ಯಾದಿಗಳನ್ನು ಪೂರೈಸುತ್ತವೆ. ಸಾಲದುದಕ್ಕೆ ಕೃಷಿ, ವ್ಯಾಪಾರ ಮೊದಲಾದ ಚಟುವಟಿಕೆಗಳನ್ನು ತಿಳಿಸಿಕೊಡುತ್ತವೆ. ಆದುದರಿಂದ ಕಾಲದೃಷ್ಟಿಯಿಂದ ಶಾಸನಗಳು ನಿಂತಲ್ಲಿಂದ ಮುಂದುವರಿಯುವ ಇವು, ವಸ್ತುದೃಷ್ಟಿಯಿಂದಲೂ ಅವು ನಿಂತಲ್ಲಿಂದ ಮುಂದುವರಿಯುತ್ತವೆ.

ಶಾಸನಗಳನ್ನು ಬರೆದವರು ಪಂಡಿತರು, ಶಿಷ್ಟರು, ಕೈಫಿಯತ್ತುಗಳನ್ನು ಬರೆದವರು ಸ್ಥಳೀಯ ಸಾಮಾನ್ಯರು, ಇಲ್ಲವೆ ಸಾಮಾನ್ಯರಿಂದ ಕೇಳಿ ಬರೆದ ಶಿಷ್ಟರು, ಹೀಗಾಗಿ ಆಯಾ ಸ್ಥಳದ ಐತಿಹ್ಯ (legend), ಪುರಾಣ (myth), ಇತಿಹಾಸ (history)ಗಳು ಇಲ್ಲಿ ಸೇರಿಕೊಂಡಿವೆ. ಜನರಿಂದ ಕೇಳಿ ಬರೆದುದೇ ಇಲ್ಲಿ ಅಧಿಕ ಪ್ರಮಾಣದಲ್ಲಿರುವುದರಿಂದ ಇದು "ಮೌಖಿಕ ಇತಿಹಾಸ" (oral history) ವರ್ಗಕ್ಕೆ ಸೇರುತ್ತದೆ. ಇತಿಹಾಸ ರಚನೆಗೆ ಮೌಖಿಕ ಸಾಮಗ್ರಿಯನ್ನು ಬಳಸಿಕೊಳ್ಳಲು ಇಂದು ಇತಿಹಾಸಶಾಸ್ತ್ರ ಹೆಚ್ಚು ಒಲವು ತೋರಿಸುತ್ತಲಿದೆ. ಈ ದೃಷ್ಟಿಯಿಂದ ಕೈಫಿಯತ್ತುಗಳು ಖಂಡಿತವಾಗಿಯೂ ಕರ್ನಾಟಕದ ಇತಿಹಾಸದ ರಚನೆಗೆ ಹೊಸ ಬಗೆಯ ಆಕರ ಸಂಪತ್ತು ಎನಿಸುತ್ತದೆ.

ಕೈಫಿಯತ್ತುಗಳ ಮೇಲೆ ಕಣ್ಣಾಡಿಸಿದರೆ ಅಲ್ಲಿ ಅಸತ್ಯವಿಷಯ, ಪುರಾಣೀಕೃತ ಅಸತ್ಯವಿಷಯ, ಐತಿಹ್ಯೀಕೃತ ಅಸತ್ಯವಿಷಯ ಮತ್ತು ಸತ್ಯವಿಷಯ ಹೀಗೆ – ನಾಲ್ಕು ಬಗೆಯ ವಿವರಗಳಿರುವುದು ತಿಳಿದು ಬರುತ್ತದೆ.

ಅಸತ್ಯ ವಿಷಯ :

ಕೈಫಿಯತ್ತುಗಳನ್ನು ಬರೆದವರು ೧೮೧೯ನೆಯ ಶತಮಾನದಷ್ಟು ಈಚೆಯವರು. ಪ್ರಾಚೀನ ಇತಿಹಾಸವನ್ನು ಬರೆಯುವಲ್ಲಿ ಇವರು, ತಮ್ಮ ಕಾಲದಲ್ಲಿ ಕೇಳಿಬರುತ್ತಿದ್ದ ವ್ಯತ್ಯಸ್ತ ಇತಿಹಾಸವನ್ನು

ದಾಖಲಿಸಿರುವ ಸಾಧ್ಯತೆಯಿದೆ. ಇಂಥ ವ್ಯತ್ಯಸ್ತ ಇತಿಹಾಸವೆನ್ನುವುದು ಉದ್ದೇಶಪೂರ್ವಕ ಇಲ್ಲವೆ ಉದ್ದೇಶರಹಿತ ರೂಪದ್ದಾಗಿರಬಹುದು. ಸೋಸಿ ಸ್ವೀಕರಿಸಬೇಕಾದ ಸತ್ಯ ಇಲ್ಲಿ ಅಡಗಿರುತ್ತದೆ. ಇಂಥ ಅನೇಕ ಸಂಗತಿಗಳು ಕೈಫಿಯತ್ತುಗಳಲ್ಲಿ ತಲೆಹಾಕಿವೆ. ಉದಾ: ಶಿರಸಿಯಲ್ಲಿಯ ವೀರಭದ್ರದೇವಾಲಯವನ್ನು ಸೋದೆಯ ರಾಮಚಂದ್ರನಾಯಕರು ಕಟ್ಟಿಸಿದರೆಂದು ಶಿರಸಿ ಕೈಫಿಯತ್ತು ಹೇಳುತ್ತದೆ. ಆದರೆ ದೇವಸ್ಥಾನದ ಕಾಗದಪತ್ರಗಳ ಪ್ರಕಾರ ಎಸಳೆ, ಬಚಗಾವಿ, ಗೋಲಗೇರಿ ಭಕ್ತರು ಕಟ್ಟಿಸಿದರೆಂದು(೧೬೨೦-೩೦) ತಿಳಿದು ಬರುತ್ತದೆ.*

ಕಾರ್ಕಳದ ಅರಸರ ಕೈಫಿಯತ್ತಿನಲ್ಲಿ ಸಾಣೂರು ಕಣಿವೆ ಬಳಿಯಲ್ಲಿ ಕಾರ್ಕಳ ಅರಸರಿಂದ ಅಬ್ಬಕ್ಕದೇವಿಯ ರುಂಡ ಹಾರಿಸಲ್ಪಟ್ಟಿತೆಂದು ಹೇಳಲಾಗಿದೆ. ಆದರೆ ಇವಳನ್ನು ೧೫೬೭ರಲ್ಲಿ ಪೋರ್ಚುಗೀಸರು ಕೊಂದರೆಂದು ತಿಳಿದು ಬರುತ್ತದೆ. ಬಹುಶಃ ಕಾರ್ಕಳ ಅರಸರು ಕೊಂದುದು ತಿರುಮಲದೇವಿಯನ್ನೆಂದು ಕಾಣುತ್ತದೆ. ಈ ಕೈಫಿಯತ್ತು ತಿರುಮಲದೇವಿಗೆ ಬದಲು ಅಬ್ಬಕ್ಕದೇವಿಯೆಂದು ತಪ್ಪು ವರದಿ ನೀಡುತ್ತದೆ.

ಪುರಾಣೀಕೃತ ಅಸತ್ಯ ವಿಷಯ :

ಸಾಮಾನ್ಯವಾಗಿ ಯಾವುದೇ ಸ್ಥಳ ಇಲ್ಲವೆ ವಿಷಯಗಳಿಗೆ ಪೌರಾಣಿಕ ಸ್ಪರ್ಶಕೊಟ್ಟು, ಅವುಗಳ ನಿಜಸ್ವರೂಪವನ್ನು ವ್ಯತ್ಯಾಸಗೊಳಿಸುವುದು ಭಾರತದಲ್ಲಿ ಬೆಳೆದು ಬಂದ ರೂಢಿಯಾಗಿದೆ. ಈ ವ್ಯತ್ಯಾಸಗೊಳಿಸುವಿಕೆಯ ಹಿಂದೆ ಸ್ಥಳಕ್ಕೆ ಮಹತ್ವವನ್ನು ಒದಗಿಸುವುದು, ಅದರಲ್ಲಿಯೂ ಆರ್ಯೀಕರಣ ರೀತಿಯಲ್ಲಿ ಮಹತ್ವಗೊಳಿಸುವುದು ಇಲ್ಲಿಯ ಉದ್ದೇಶವಾಗಿರುತ್ತದೆ. ಯಾವುದೇ ಸ್ಥಳದಲ್ಲಿ ಅಕ್ಷರಸ್ಥರಿಗೆ, ಅವರ ಮಾತಿಗೆ ಬೆಲೆಯಿರುತ್ತದೆ. ಸಾಮಾನ್ಯವಾಗಿ ಪ್ರಾಚೀನ ಕರ್ನಾಟಕದಲ್ಲಿ ಬ್ರಾಹ್ಮಣರೇ ಅಕ್ಷರಸ್ಥರಾಗಿದ್ದ ಕಾರಣ, ಅವರು ಆರ್ಯೀಕರಣವೆಂಬಂತೆ ಪುರಾಣದ ರೀತಿಯಲ್ಲಿ ಯಾವುದೇ ಸ್ಥಳದ ಚರಿತ್ರೆಯನ್ನು ಪರಿವರ್ತಿಸಿದರು. ಇದು ಆರ್ಯಸಂಸ್ಕೃತಿಯ ಪ್ರಚಾರವೇ ಆಗಿದೆ. ಇಲ್ಲಿ ಬ್ರಾಹ್ಮಣ ವರ್ಗದ ಶಾನುಭೋಗರು, ಧರ್ಮಾಧಿಕಾರಿಗಳು ಈ ಕೈಫಿಯತ್ತುಗಳನ್ನು ಬರೆದು, ಇಲ್ಲವೆ ಬರೆಯಿಸಿಕೊಟ್ಟಿದ್ದು, ತಮ್ಮ ತಮ್ಮ ಸ್ಥಳಗಳಲ್ಲಿ ಪ್ರಚಲಿತವಿದ್ದ ಪೌರಾಣಿಕ ಹೇಳಿಕೆಗಳನ್ನು ದಾಖಲಿಸಿದರು. ಇರದಿದ್ದಲ್ಲಿ ತಾವೇ ಪುರಾಣವನ್ನು ಸೃಷ್ಟಿಸಿ ನಮೂದಿಸಿದರೆಂದು ತೋರುತ್ತದೆ. ಇದು ಸತ್ಯದ ಮೇಲೆ ಬೆಳೆದ ಅಸತ್ಯರೂಪದ ಪುರಾಣೀಕೃತ ಸಂಸ್ಕೃತಿಯಾಗಿದೆ. ಕೈಫಿಯತ್ತುಗಳಲ್ಲಿ ಇಂಥ ಪುರಾಣೀಕೃತ ಅಂಶಗಳು ಅನೇಕ ಸಂಖ್ಯೆಯಲ್ಲಿ ಸಿಗುತ್ತವೆ. ಉದಾ:

"ಪೂರ್ವ ತ್ರೇತಾಯುಗದಲ್ಲಿ ತುಂಗಭದ್ರಾತೀರದಲ್ಲಿ ಕಪಿಲಋಷಿಗಳು ತಪಸ್ಸು ಮಾಡಿಕೊಂಡುಯಿದ್ದರು. ಕಪಿಲಕ್ಷೇತ್ರವೆಂದು ನಾಮಧೇಯವಾಯಿತ್ತು" (ತಾಲೂಕು ಕಂಪಲಿ ಕೈಫಿಯತ್ತು)

"ಪೂರ್ವಕ್ಕೆ ತ್ರೇತಾಯುಗದಲ್ಲಿ ಶ್ರೀರಾಮದೇವರ ಕಾಲಕ್ಕೆ ಲಂಕಾಪಟ್ಟಣದಲ್ಲಿ ರಾವಣನ್ನ ಜೈಸಿ, ಪುನಃ ಶೀತಾ ಅಮ್ಮನವರ ಕರಕೊಂಡು ಅಯೋಧ್ಯಾನಗರಕ್ಕೆ ಹೋಗುವಾಗಲು ಯಿ ಬೆಟ್ಟದ ಮೇಲೆ ರಮ್ಯವಾದ ಸ್ಥಳ ನೋಡಿ ಸ್ನಾನಮಾಡಿ, ಯೀಶ್ವರನ ಪೂಜೆ ಮಾಡಿಕೊಂಡು ಹೋಗಬೇಕೆಂದು

* ಶಿರಸಿ ತಾಲೂಕಿನ ಇತಿಹಾಸ - ಡಾ.ಎ.ಕೆ.ಶಾಸ್ತ್ರಿ, ಪು.೩೯.

ನೀರಿನ ನಿಮಿತ್ಯವಾಗಿ ಧನುರ್ಬಾಣ ಹಾಕಿ, ನೀರಿನ ದೋಣೆಮಾಡಿ, ಸ್ನಾನಮಾಡಿಕೊಂಡು, ಮಳಲ ಲಿಂಗಯಿಟ್ಟು ಪೂಜೆಮಾಡಿದ್ದರಿಂದ ರಾಮಲಿಂಗದೇವರು ಅನಿಶಿಕೊಳ್ಳುತ್ತಯಿದೆ. ಯಿದಕ್ಕೆ ಗುರುತು ಯೇನು ಅಂದರೆ ಅಮ್ಮಾನವರು ಯೆರಕೊಂಡ ಕಾರಣ ಯೀ ಬೆಟ್ಟಕ್ಕೆ ಎ[>ಉ]ತ್ತರ ಯಣ್ಣೆಗೊಂಡ, ಅರಷಣಗೊಂಡಯಂದು ಯರಡು ಹೊಂಡಗಳು ಯಿದ್ದಾವೆ" (ದರೋಜಿಗ್ರಾಮದ ಕೈಫಿಯತ್ತು)

ಐತಿಹ್ಯೀಕೃತ ಅಸತ್ಯವಿಷಯ :

ಪುರಾಣ ಶಿಷ್ಟಪದರ ಐತಿಹ್ಯವಾದರೆ, ಐತಿಹ್ಯ ಜನಪದರ ಪುರಾಣವಾಗಿದೆ. ಹೀಗಾಗಿ ಒಂದು ವಿಷಯವನ್ನು ಪ್ರತಿಷ್ಠಿತರು ಆರ್ಯೀಕರಣಗೊಳಿಸಿದರೆ, ಜನಸಾಮಾನ್ಯರು ಐತಿಹ್ಯೀಕರಣಗೊಳಿಸಿದುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಇವುಗಳನ್ನು ಸಾಮಾನ್ಯೀಕೃತ ಐತಿಹ್ಯಗಳು ಮತ್ತು ವಿಶೇಷ ಐತಿಹ್ಯಗಳು ಎಂದು ವರ್ಗೀಕರಿಸಬಹುದು.

ರಾಜಧಾನಿ ಸ್ಥಳದ ಸೂಚನೆಯೆಂಬಂತೆ ಬೇಟೆ ಸಂದರ್ಭದಲ್ಲಿ ಮೊಲವು ನಾಯಿಯನ್ನು ಬೆನ್ನಟ್ಟುವುದು, ವ್ಯಕ್ತಿಯೊಬ್ಬ ರಾಜನಾಗುವುದರ ಸೂಚನೆಯೆಂಬಂತೆ ಮಲಗಿದ್ದ ಅವನನ್ನು ಬಿಸಿಲಿನಿಂದ ರಕ್ಷಿಸಲು ಸರ್ಪ ಹೆಡೆಯೆತ್ತಿ ನೆರಳು ಮಾಡುವುದು, ಭೂಗತ ಶಿವಲಿಂಗದ ಸೂಚನೆಯೆಂಬಂತೆ ಆಕಳು ಆ ಸ್ಥಳದಲ್ಲಿ ಹಾಲು ಕರೆಯುವುದು, ಪವಿತ್ರ ಸ್ಥಾನವೆಂಬುದನ್ನು ಸೂಚಿಸಲು ಗೋವು-ಹುಲಿ ಒಂದೇ ಸ್ಥಳದಲ್ಲಿ ವಾಸಮಾಡುವುದು-ಇತ್ಯಾದಿಗಳು ಸಾಮಾನ್ಯೀಕೃತ ಇಲ್ಲವೆ ಸಿದ್ಧ ಐತಿಹ್ಯಗಳು. ಇಲ್ಲಿಯ ಅನೇಕ ಕೈಫಿಯತ್ತುಗಳಲ್ಲಿ ಇಂಥ ಪ್ರಸಂಗಗಳು ಚಿತ್ರಿತವಾಗಿವೆ.

ವಿಶಿಷ್ಟ ಐತಿಹ್ಯಗಳು ಆ ಸ್ಥಳದ ಹೆಸರು, ಭೌಗೋಲಿಕ ಪರಿಸರಗಳಿಗನುಗುಣವಾಗಿ ಹುಟ್ಟಿರುತ್ತವೆ. ಉದಾ: ". . . ಯೀಚೆಗೆ ಬಂದವರು ಶ್ರೀ ಕೇತ್ತಾರೇಶ್ವರಸ್ವಾಮಿ ದೇವಸ್ಥಾನವನ್ನು ಜಕಣಾಚಾರಿ ಕೈಯಿಂದ ಕಟ್ಟಿಸುವದಕ್ಕೆ ರಾತ್ರಿಕಾಲದಲ್ಲು ಶುರ್‍ರು ಮಾಡಿ, ಮರುದಿವ್ಸ ಬೆಳಗಾಗುವದರ ವಳಗೆ ದೇವಸ್ಥಾನವ ಮುಗಿದುದರಿಂದ ಬೆಳಗಾಂವಿಯಂತ ಹೆಸರಾಯಿತು" (ಉಡುಗಣಿ ಕೈಫಿಯತ್ತು)

"ಈ ಪ್ರಕಾರಕ್ಕೆ ಕೆರೆಯು ಪೂರ್‍ನ ತಟಾಕವಾಗಿ ಯಿರುತ್ತಾ ಯಿದ್ದಲ್ಲಿ, ಯಿತ್ತಲಾಗಿ ಸೂಳೆಕೆರೆಯಲ್ಲು ಯಿದ್ದ ಕಪ್ಪೆಗಳು ಯಾವತ್ತು ಕೂಡಿ ಆಲೋಚನೆ ಮಾಡಿ, ನಮ್ಮ ಅರಸುಗಳು ಗಂಗಸಮುದ್ರಾಯಂಬ ಮಹಾತಟಾಕವನ್ನು ಕಟ್ಟಿಶಿಯಿದ್ದಾರೆ. ಆ ತಟಾಕವು ಬಹಳ ವುಲ್ಲಾಸವಾಗಿಯಿದೆಯೆಂದೂ ಆ ಸ್ಥಳವನ್ನು ನೋಡಬೇಕೆಂದು, ಆ ನಿಮಿತ್ಯವಾಗಿ ಕಪ್ಪೆಗಳು ಯಾವತ್ತು ದಂಡು ಕಟ್ಟಿ ಯೀ ಗಂಗಸಮುದ್ರಕ್ಕೆ ಬಂದು, ಯಿಲ್ಲಿ ಕೆಲವು ದಿವಸ ವಾಸವಾಗಿಯಿದ್ದು, ಪುನಃ ತಮ್ಮ ಸ್ಥಳ ಸೂಳೆಕೆರೆಗೆ ಹೋಗಬೇಕೆಂದು ಹೋಗುವಂಥಾ ಮಧ್ಯಮಾರ್ಗದಲ್ಲು ಮಹತ್ತಾದಂತಾ ಬಿಸಲು ಹತ್ತಿದ್ದರಿಂದಲೂ ಮುಂದೆ ಹೋಗುವುದಕ್ಕೆ ಚೈತನ್ಯ ತಪ್ಪಿ ಮಧ್ಯ ಗುಡದಲ್ಲಿಯೇ ಯಾವತ್ತು ಕಪ್ಪೆಗಳು ನಿಂತದ್ದರಿಂದ ಈಗಲು ಆ ಕಲ್ಲಿನ ಮೇಲೆ ಕಪ್ಪಿ ಆಕಾರವಾಗಿ ಕಾಣುತ್ತಾಯಿದೆ. ಆ ಕಲ್ಲಿನ ಯಾವತ್ತು ಜನರು "ಕಪ್ಪಿಕಲ್ಲು"ಯೆಂದು ಕರೆಯುತ್ತಾರೆ. ಆ ಆರಭ್ಯದಾಗಿ ಸೂಳೆಕೆರೆಯಲ್ಲಿ ವಂದೂ ಕಪ್ಪೆಯಿಲ್ಲ" (ಮಲ್ಲೂರು ಸಾಸಿವೆಹಳ್ಳಿ ಶೀಮೆ ಕೈಫಿಯತ್ತು)

ಸತ್ಯ ವಿಷಯ :

ಮೇಲೆ ಹೇಳಿದ ಘಟನೆಗಳು ಅಸತ್ಯ, ಪುರಾಣ ಮತ್ತು ಐತಿಹ್ಯಗಳ "ಸೃಷ್ಟಿ"ಯಾಗಿರುವುದರಿಂದ ಇವುಗಳನ್ನು ಇತಿಹಾಸ ರಚನೆಯ ಸಂದರ್ಭದಲ್ಲಿ ಕೈಬಿಡಬೇಕಾಗುತ್ತದೆ. ಹೀಗೆ ಬಿಟ್ಟರೆ ಕೈಫಿಯತ್ತುಗಳಲ್ಲಿ ಉಳಿದುಕೊಳ್ಳುವುದು ಸತ್ಯ. ಈ ಸತ್ಯವು ಅನ್ಯಮೂಲಗಳಿಂದ ಸಮರ್ಥನೆಗೊಳ್ಳುವಂಥದ್ದಿರಬಹುದು, ಇಲ್ಲವೆ ಹೊಚ್ಚ ಹೊಸ ವಿಷಯವಾಗಿರಬಹುದು. ಇವುಗಳನ್ನು ಒದಗಿಸುವಲ್ಲಿಯೇ ಕೈಫಿಯತ್ತುಗಳ ಕೃತಾರ್ಥತೆಯಿದೆ. ಅನೇಕ ಸಲ ಕೈಫಿಯತ್ತುಗಳು ಶಾಸನಗಳನ್ನು ಆಧಾರವಾಗಿ ಬಳಸಿಕೊಂಡು ಬರೆದವುಗಳಾಗಿವೆ. "ಯೀ ವೂರಿಗೆ ಪಶ್ಚಿಮ ೦।೦ ಹರದಾರಿ ಮ್ಯಾಲೆ ಅಗ್ರಹಾರ ಕಟ್ಟಿಸಿ ಬ್ರಾಹ್ಮರಿಗೆ ಸರ್ವಮಾನ್ಯವಾಗಿ ಬಿಟ್ಟರು. ಅವರ ಕಾಲದಲ್ಲು ಶಿಲಾಶಾಸನ ಹಾಕಿದ್ದು, ಮೂರು ಶಾಸನಯಿದೆ. ಅದರಲ್ಲಿ ಶಾಲಿವಾಹನ ಶ ೧೪೩೨ನೆಯ ಪ್ರಜೋತ್ಪತ್ತಿ ಸಂವತ್ಸರಯಂದು ಶಾಸನದಲ್ಲಿಯಿದೆ. ಯರಡನೆಯ ಶಾಸನದಲ್ಲು ಶಾಲಿವಾಹನ ಶಕ ೧೪೮೧ನೆಯ ಶಿದ್ಧಾರ್ತಿ ಸಂವತ್ಸರಯಂದುಯಿದೆ. ಈ ಯರಡು ಶಾಸನದಲ್ಲು ಶಕ ಸಂವತ್ಸರ ವರಿಗೆ ಅಕ್ಷರಗಳು ತಿಳಿಯುತಾಯಿಧೆ. ಕಡಿಮಿ ಅಕ್ಷರಗಳು ವೋದಲಿಕ್ಕೆ ಅಕ್ಷರಗಳು ಬರೋದಿಲ್ಲಾ. ಅಕ್ಷರಗಳು ಶಿಥಿಲವಾಗಿ ಹೋಗಿಯಿಧೆ. ಆದ್ದರಿಂದ ದಾಖಲಾ ಯಿರೋ ಬಗ್ಯೆ ಬರದು ಯಿದ್ದೇನೆ" ಇಂಥ ಪ್ರಾಮಾಣಿಕತೆಗಳಿಗೂ ಇಲ್ಲಿ ಕೊರತೆಯಿಲ್ಲ. ಕೆಲವೊಮ್ಮೆ ಶಾಸನಗಳನ್ನೇ ಬಳಸಿಕೊಂಡು ಕೈಫಿಯತ್ತು ರಚಿಸಿದ ಉದಾಹರಣೆಗಳೂ ಇವೆ. ಹೀಗೆ ಇವು ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಸತ್ಯಸಂಗತಿಗಳನ್ನೇ ಒದಗಿಸುವುದರಿಂದ, ಇವುಗಳನ್ನು ಇತಿಹಾಸ ರಚನೆಯಲ್ಲಿ ಬಳಸಿಕೊಳ್ಳುವುದು ಸೂಕ್ತವೆನಿಸುತ್ತದೆ.

ರಾಜಕೀಯ :

ಇತಿಹಾಸವೆನ್ನುವುದು ರಾಜಕೀಯವೇ ಇರಲಿ, ಸಾಮಾಜಿಕವೇ ಇರಲಿ, ಅದು ಕಾಣಿಸಿಕೊಳ್ಳುವುದೇ ರಾಜಕೀಯ ಚೌಕಟ್ಟಿನಲ್ಲಿ. ರಾಜಕೀಯವಾಗಿದ್ದರಂತೂ ಅದು ಹಂತಹಂತವಾಗಿ ಬಿಚ್ಚಿಕೊಳ್ಳುತ್ತದೆ. ಸಾಮಾನ್ಯವಾಗಿ ಎಲ್ಲ ಕೈಫಿಯತ್ತುಗಳಿಗೂ ಈ ಮಾತು ಅನ್ವಯಿಸುತ್ತದೆ.

ದೇವತೆಗಳು, ಋಷಿ-ಮುನಿಗಳು, ರಾಮಾಯಣ-ಮಹಾಭಾರತ ಕಥೆಗಳು ಇತ್ಯಾದಿ ಪೌರಾಣಿಕ ಅಂಶಗಳನ್ನು ಬಿಟ್ಟರೂ ಕೈಫಿಯತ್ತುಗಳಲ್ಲಿ ಭಾರತದ ಇತಿಹಾಸ, ಕರ್ನಾಟಕದ ಇತಿಹಾಸಗಳಿಗೆ ಸಂಬಂಧಿಸಿದ ಅನೇಕ ವಿಷಯಗಳು ತೋರಿಬರುತ್ತವೆ. ಕೆಲವೊಮ್ಮೆ ನಂದ, ಮೌರ್ಯ, ಗುಪ್ತ, ಮೊದಲಾದ ತೀರ ಪ್ರಾಚೀನ ಔತ್ತರೇಯ, ಶಾತವಾಹನ ಮೊದಲಾದ ದಾಕ್ಷಿಣಾತ್ಯ ಮನೆತನಗಳ ಉಲ್ಲೇಖ ಕೈಫಿಯತ್ತುಗಳಲ್ಲಿದ್ದರೂ ಅದು ತೀರ ಅಲ್ಲ, ಸಂದಿಗ್ಧ, ಕರ್ನಾಟಕದ ಚರಿತ್ರೆಗೆ ಸಂಬಂಧಪಟ್ಟಂತೆ ಇದು ಹೊಸ ಕೊಡುಗೆಯೆನಿಸುವುದಿಲ್ಲ. "ವಿಕ್ರಮಾದಿತ್ಯರಾಯನಿಗೂ ಶಾಲಿವಾಹನರಿಗೂ ಉಭಯುತರಿಗೂ ಯುದ್ಧವಾಗಿ ನರ್ಮದಾತೀರ ಪರಿಯಂತ್ರಕ್ಕೂ ಉಭಯುತರು ಕೂಡಿಮಾ[>ಯಾ]ಡುತ್ತ ಹೋಗಿ, ಶಾಲಿವಾಹನ ನದಿ ದಾಟದೆ ಯೀಚೆಗೆ ನಿಂತದರಿಂದ ಶಾಲಿವಾಹನ ಶಕವಾಯಿತು. ವಿಕ್ರಮನು ಆಚೆಗೆ ದಾಟಿದ್ದರಿಂದ ವಿಕ್ರಮ ಶಕವಾಯಿತು" ಎಂಬಂಥ ಒಂದೆರಡು ಅಂಶಗಳು ನಮ್ಮ ಗಮನ ಸೆಳೆಯುತ್ತವೆ.

ಚೋಳ, ಕಲ್ಯಾಣ ಚಾಲುಕ್ಯ, ಕಲಚುರಿ, ಯಾದವ, ಕಾಕತೀಯರ ಬಗ್ಗೆ ಒಂದಿಷ್ಟು ವಿವರಗಳನ್ನು ಶಾಸನಾಧಾರದಿಂದ ಕೊಡುತ್ತಿದ್ದರೂ ಅದನ್ನು ಪರೀಕ್ಷಿಸಿಯೇ ಸ್ವೀಕರಿಸಬೇಕಾಗುತ್ತದೆ. ಇದೆಲ್ಲ ನಮ್ಮ ಇತಿಹಾಸಕಾರರು ಈಗಾಗಲೆ ಶೋಧಿಸಿದುದೇ ಆಗಿದೆ. ಹೀಗಾಗಿ ಕೈಫಿಯತ್ತುಗಳು ನಮಗೆ ಕೊಡುವ ಮಹತ್ವದ ಸಾಮಗ್ರಿ ವಿಜಯನಗರ, ಆ ತರುವಾಯದ ಪಾಳೆಯಗಾರರ ಚರಿತ್ರೆಯಾಗಿದೆ. ಇದಕ್ಕೆ ಕಾರಣಗಳು ಎರಡು: ೧. ಕೈಫಿಯತ್ತುಗಳು ೧೮-೧೯ನೆಯ ಶತಮಾನಗಳ ರಚನೆಗಳಾಗಿವೆ. ಈ ಸಮಯಕ್ಕೆ ಜನರ ಮನಸ್ಸಿನಿಂದ ದೂರ ಸರಿದಿದ್ದ ಪ್ರಾಚೀನ ಅರಸರ ಚರಿತ್ರೆಗಿಂತ ಹೊಯ್ಸಳ, ಕಂಪಿಲ, ವಿಜಯನಗರ ಮನೆತನಗಳ ವೈಭವ ಮತ್ತು ಪತನ ಸಂಗತಿಗಳು, ತರುವಾಯದ ಪಾಳೆಯಗಾರರ ಘಟನೆಗಳು, ಆಂಗ್ಲರ ಆಕ್ರಮಣಗಳು ಇನ್ನೂ ಹಸಿಹಸಿಯಾಗಿದ್ದ ಕಾರಣ ಕೈಫಿಯತ್ತುಗಳಿಗೆ ಅವುಗಳನ್ನು ಅಪ್ರಯತ್ನಪೂರ್ವಕ ದಾಖಲಿಸಲು ಅನುಕೂಲವಾಯಿತು. ೨. ವಿಜಯನಗರ ಪತನದ ವರೆಗೆ ಬೆಳೆದು ಬಂದಿದ್ದ ನಮ್ಮ ಶಾಸನ ಬರವಣಿಗೆ ಆಮೇಲೆ ನಿಂತೇ ಬಿಟ್ಟಿತೆನ್ನುವಷ್ಟು ವಿರಳವಾಯಿತು. ಹೀಗಾಗಿ ವಿಜಯನಗರೋತ್ತರ ಕಾಲೀನ ಕರ್ನಾಟಕದ ರಾಜಕೀಯ ಚರಿತ್ರೆ ಕೈಫಿಯತ್ತುಗಳಲ್ಲಿ ನೆಲೆಪಡೆಯುವುದು ಅನಿವಾರ್ಯವಾಯಿತು.

ಹೊಯ್ಸಳರ ವಿಷಯವಾಗಿ ಇಲ್ಲಿ ವಿಪುಲ ಸಂಗತಿಗಳಿದ್ದರೂ ಅಷ್ಟೇನೂ ಹೊಸ ಅಂಶಗಳು ಕಂಡುಬರುವುದಿಲ್ಲ. ಮೂಲತಃ ಹೌಸಳಪುರದಲ್ಲಿ ಆಳುತ್ತಿದ್ದ ಕಾರಣ ಇವರಿಗೆ ಹೊಯ್ಸಳರೆಂಬ ಹೆಸರು ಪ್ರಾಪ್ತವಾಯಿತೆಂಬ ಸೂಚನೆ ಇಲ್ಲಿದೆ (ಸೋನಾನಿ ಅಗ್ರಹಾರದ ಕೈಫಿಯತ್ತು-೧). ಮಿಕ್ಕಂತೆ ಬಾದಶಹನ ಮಗಳ ಮದುವೆ, ದಾಳಿ, ಸೋದರಿ ಬಲ್ಲಾಳದೇವಿಯ ಶಾಪ - ಇತ್ಯಾದಿಗಳೆಲ್ಲ ಈಗಾಗಲೇ ತಿಳಿದಿರುವ ಸಂಗತಿಗಳಾಗಿವೆ.

ಕಂಪಿಲ ಅರಸು ಮನೆತನದ ಬಗೆಗೆ ಅನೇಕ ಹೊಸ ವಿಷಯಗಳು ಪ್ರಥಮಬಾರಿ ತಿಳಿದುಬರುತ್ತವೆ. ಇವರ ಅಡ್ಡ ಹೆಸರು ಮರುಳೆನವರು. ಕಂಪಲಿಯ ಸೋಮನಾಥದೇವರ ವರದಿಂದ ಹುಟ್ಟಿದ ಕಾರಣ ಕಂಪಿಲರಾಯ ಎಂಬ ಹೆಸರು ಇಡಲ್ಪಟ್ಟಿತು. ಇವನ ಮಗ ಕುಮಾರರಾಮನ ಭಟ್ಟಂಗಿಗಳ ಹೆಸರು ಭಟ್ಟರ ಗೋವಿಂದ. ಗೋಪಾಲಯ್ಯ, ರೂಪದೇವಯ್ಯ, ಮರಣಾನಂತರ ತಂದೆ ಕಂಪಿಲರಾಯ ಮಾಡಿಕೊಟ್ಟ ಕುಮಾರರಾಮನ ಬಂಗಾರದ ಮುಖವನ್ನು ಈ ಭಟ್ಟಂಗಿಗಳು ತಮ್ಮ ಗ್ರಾಮವಾದ ಭಟ್ಟರಹಳ್ಳಿಯಲ್ಲಿ ಪೂಜಿಸುತ್ತಿದ್ದರು. (ದರೋಜಿಗ್ರಾಮದ ಕೈಫಿಯತ್ತು). ಕುಮಾರರಾಮನ ಚಂಡಿನಾಟದ ಸ್ಮರಣೆಯೆಂಬಂತೆ ದರೋಜಿ ಸಮೀಪದ ರಾಮಪುರದಲ್ಲಿ ಇಂದಿಗೂ ಚಂಡಿನಾಟದ ಉತ್ಸವವನ್ನು ಆಚರಿಸುತ್ತಾರೆ. ಇವನ ರುಂಡವನ್ನು ಸೊಂಡೂರಿನ ಬಳಿಯ ಬೆಟ್ಟದಲ್ಲಿ ಮುಸಲ್ಮಾನರು ಹೂಳಿದರು. ಈ ಮನೆತನದ ಬೊಮ್ಮಂತರಾಜ ಎಂಬವನು ಕೃಷ್ಣದೇವರಾಯನ ಕೃಪೆಯಿಂದ ಹಿರಿಯರ ಪಾಳೆಯವನ್ನು ಮತ್ತೆ ಪಡೆದ. ಇತ್ಯಾದಿ ವಿವರಗಳೊಂದಿಗೆ ಈತನ ಉತ್ತರಾಧಿಕಾರಿಗಳ ಚಟುವಟಿಕೆಗಳು ಕೈಫಿಯತ್ತುಗಳಲ್ಲಿ ದಾಖಲಾಗಿವೆ.

ವಿಜಯನಗರ ಅರಸರ ಬಗೆಗೆ, ಅವರ ಸಮಕಾಲೀನ ಅರಸರ ಬಗೆಗೆ, ಅನೇಕಾನೇಕ ಹೊಸಸಂಗತಿಗಳು ಇಲ್ಲಿ ಅಡಕವಾಗಿವೆ. ವಿದ್ಯಾರಣ್ಯರು ಹೊನ್ನಾವರದವರೆಂದೂ ಶ್ರೀಶೈಲದಲ್ಲಿ ತಪಸ್ಸು ಮಾಡಿದರೆಂದೂ, ಹಂಪೆಯಲ್ಲಿ ಪಟ್ಟದೆಲ್ಲಮ್ಮ (ಪಟಾಲಮ್ಮ) ದೇವಾಲಯ ಕಟ್ಟಿಸಿದರೆಂದೂ,

ಯಂತ್ರದ ಕಲ್ಲು ಸ್ಥಾಪಿತರೆಂದೂ ತಿಳಿದುಬರುತ್ತದೆ. ಹುಕ್ಕ-ಬುಕ್ಕರು ಕುರುಬರು. ಇವರು ಮೊದಲು ಮಾಡಿ ಈ ವಂಶದ ಎಲ್ಲ ಅರಸರನ್ನು ಹೆಸರಿಸಿ, ಕೆಲವೊಮ್ಮೆ ಅವರ ಸಾಧನೆಗಳನ್ನು ಸೂಚಿಸಲಾಗಿದೆ. ತಂಗಡಗಿ ಕಾಳಗದ ತರುವಾಯ ಕಾಲೀನ ಅರಸರ ವಿಷಯವಾಗಿ ನಮಗೆ ಗೊತ್ತಿಲ್ಲದ ಅನೇಕ ವಿವರಗಳನ್ನು ಇವು ಒದಗಿಸುತ್ತವೆ. ಸಾಳುವ ಅರಸರು ಸಾಣೂರು (ಸಾಳೂರು>ಸಾಳುವ>ಸಾಳ್ವ) ಗ್ರಾಮದವರೆಂದು (ಬೆಟ್ಟದಕೋಟೆ ಕೈಫಿಯತ್ತು) ತಿಳಿದುಬರುತ್ತದೆ.

ವಿಜಯನಗರದ ಕಾಲಾವಧಿಯಲ್ಲಿ ಮತ್ತು ಬಳಿಕ ಆಳಿದ ಕೆಳದಿ ಅರಸರ ಬಗ್ಗೆ, ಮೈಸೂರು ಅರಸರ ಬಗ್ಗೆ, ಹೈದರ್-ಟೀಪುಗಳ ಬಗ್ಗೆ ತುಂಬ ವಿವರವಾದ ಮಾಹಿತಿ ಇಲ್ಲಿ ಸಿಗುತ್ತದೆ.

ಅನಂತಪುರ-ಬಳ್ಳಾರಿ-ಕುರುಗೋಡುಗಳಲ್ಲಿ ಆಳುತ್ತಲಿದ್ದ ಹಂಡೆ ಅರಸರು (ಕೈಫಿಯತ್ತು ಕುರುಗೋಡು ತಾಲೂಕ ಬಳ್ಳಾರಿ). ಬಾಣಾವರ ಬಸವಾಪಟ್ಟಣಗಳನ್ನಾಳುತ್ತಲಿದ್ದ ಕೆಂಗೆ ಅರಸರು. ಕುಮಾರರಾಮ ಮನೆತನದ ಅಳಿಯ ಚಿತ್ರದುರ್ಗದ ಮೆದಕೆರೆ (ಮದಕರಿ ಅಲ್ಲ) ಪಾಳೆಯಗಾರರು (ಅಂತಾಪುರದ ಕೈಫಿಯತ್ತು), ಉಮ್ಮತ್ತೂರು ಅರಸರು (ಅರಿಕುಠಾರದ ಕೈಫಿಯತ್ತು), ಚೆನ್ನಪಟ್ಟಣದ ಜಗದೇವರಾಯ (ನಾಗಮಂಗಲ ಕೈಫಿಯತ್ತು), ಬೆಳಗುತ್ತಿ ಪಾಳೆಯಗಾರರು (ಬೆಳಗುತ್ತಿ ಅರಸುಗಳ ವಂಶಾವಳಿ ವಿವರಾ: ಕೈಫಿಯತ್ತು), ದಕ್ಷಿಣ ಕನ್ನಡ ಜಿಲ್ಲೆಯ ಅಜಿಲರು, ಬಂಗರು, ಭೈರಸರು, ಚೌಟರು, ಭೂತಾಳಪಾಂಡ್ಯರು, ಉತ್ತರ ಕನ್ನಡ ಜಿಲ್ಲೆಯ ಸ್ವಾದಿ, ಬಿಳಗಿ, ಗೆರಸೊಪ್ಪೆ, ಕರೂರು ಅರಸರ ವಿಷಯವಾಗಿ ವಿಪುಲ ಮಾಹಿತಿ ಇಲ್ಲಿದೆ.

ಚೇತಪಟ್ಟಿ ಚೆಂಗಲಪಟ್ಟಿ ಪಾಳೆಯಗಾರರು (ಆರ್ಕಾಡು ಸಂಸ್ಥಾನ ಕೈಫಿಯತ್ತು), ಸೊಂಡೂರು ಸಂಸ್ಥಾನಿಕರು ಮೊದಲಾದವರ ವಿವರಗಳು ಇಲ್ಲಿವೆ. ಮರಾಠಾ, ಮುಸಲ್ಮಾನ ಸರದಾರರ ಆಳಿಕೆಯನ್ನು ಕುರಿತ ವಿವರಗಳಿಗೆ ಲೆಕ್ಕವೇ ಇಲ್ಲ. ಹೀಗೆ ರಾಜಕೀಯ ಚರಿತ್ರೆಗೆ ಸಂಬಂಧಪಟ್ಟ ಬಹಳಷ್ಟು ಮಾಹಿತಿ ಇಲ್ಲಿದ್ದು, ಅದು ಯಾವುದೇ ಮನೆತನದ ಬಗ್ಗೆ ಅಲ್ಲಿಷ್ಟು ಇಲ್ಲಿಷ್ಟು ಸಿಗುತ್ತಿದ್ದು, ವಿದ್ವಾಂಸರು ಕಣ್ಣಲ್ಲಿ ಕಣ್ಣಿಟ್ಟು ಸಂಗ್ರಹಿಸಬೇಕಾಗುತ್ತದೆ.

ಪುರುಷರಲ್ಲದೆ ಸ್ತ್ರೀಯರೂ ರಾಜಕೀಯದಲ್ಲಿ ಪಾತ್ರ ವಹಿಸಿದ್ದುದನ್ನು ಕೈಫಿಯತ್ತುಗಳು ತಿಳಿಸುತ್ತವೆ. ವಿಜಯನಗರಕ್ಕೆ ಹೋದ ಅಜಿಲರ ಇಬ್ಬರು ರಾಜಕುಮಾರಿಯರಲ್ಲಿ ಒಬ್ಬಳು ವಿಜಯನಗರ ರಾಜನನ್ನು ಮದುವೆಯಾಗಿ ಮರಳಿ ಬಂದು, ರಾಜ್ಯನಡೆಸಿದ್ದು (ಅಜಿಲರ ಕೈ), ಸೋಮನಾಗತ್ತಿ (ಹಾರನಹಳ್ಳಿ ಕೈ), ಶಂಕರದೇವಿ ಬಲ್ಲಾಳತಿ (ಮರದಾಳ ಕೈ), ಬೀರಾದೇವಿ (ಕಾಳತೋಡು ಕೈ), ಚೌಟ ಅಬ್ಬಕ್ಕದೇವಿ (ಚವುಟ ಅರಸುಗಳ ಕೈ), ಬೈರಾದೇವಿ (ಗೆರೆಸೊಪ್ಪೆ ಕೈ, ಭೈರೂರುಮಾಗಣಿ ಕೈ, ಹಲಸನಾಡ ಮಾಗಣಿ ಕೈ), ಚೌಟ ಪದ್ಮಲದೇವಿ (ಚವುಟ ಅರಸುಗಳ ಕೈ), ಚೆನ್ನಮ್ಮದೇವಿ, ತಿರುಮಲದೇವಿ, ಅಬ್ಬಕ್ಕದೇವಿ, ಚನ್ನಮ್ಮ, ಪದುಮಲ, ಅಬ್ಬಕ್ಕ (ಚವುಟ ಅರಸುಗಳ ಕೈ), ಉಲ್ಲೇಖಗೊಂಡುದು ಗಮನಾರ್ಹವಾಗಿದೆ. ಚೌಟರಾಣಿಯು ಅಜಿಲ, ಭೈರಸ, ಪಾಂಡ್ಯ, ಮೂಲರೊಂದಿಗೆ ಮುಷ್ಠಿಯಲ್ಲಿ ನೊಣ ಹಿಡಿದು ಒಪ್ಪಂದಮಾಡಿಕೊಂಡು ಅವರನ್ನು ಮೋಸಗೊಳಿಸಿದುದು (ಕಾರ್ಕಳದ ಕೈ), ೭ ಜನ ಭೈರಾದೇವಿಯರು (ಭಟಕಳ ಕೈ), ಕೊಳಹಾರತಿ (ಯಳರೆ ಮಾಗಣಿ ಕೈ), ದೊಡ್ಡ ಭೋಗಸಾನಿ, ಚಿಕ್ಕಭೋಗಸಾನಿ (ಆರ್ಕಾಡು ಸಂಸ್ಥಾನ ಕೈ)ಗಳ

ಉಲ್ಲೇಖ, ಹಂಡೆ ಮನೆತನದ ನೀಲಮ್ಮ, ಸಿದ್ಧಮ್ಮ, ಪದ್ಮಮ್ಮಗಳ ರಾಜಕಾರ್ಯ(ಕುರುಗೋಡು ಕೈ. ಬಳ್ಳಾರಿ ಕೈ), ಸಂಗನಾಗರಿ ರಾಣಿಯ ಯುದ್ಧ (ಬಳ್ಳಾರಿ ಕೈ) ಇತ್ಯಾದಿ ಮಹಿಳಾ ರಾಜಕಾರ್ಯಗಳು ದಾಖಲಾಗಿದೆ. ಇದೆಲ್ಲಕ್ಕೂ ಮಿಗಿಲಾಗಿ ಕೆಳದಿ ರಾಣಿಯರ ಇತಿಹಾಸ ಪ್ರಸಿದ್ಧ ರಾಜ್ಯಭಾರ, ಹೋರಾಟಗಳು ಇಲ್ಲಿ ದಾಖಲಾಗಿವೆ. ಚೆನ್ನಮ್ಮಾ ಜಿ, ವೀರಮ್ಮಾಜಿ ಮೊದಲಾದವರ ಬಗೆಗೆ ಅನೇಕ ವಿವರಗಳು ಸಿಗುತ್ತವೆ. ಅನ್ಯದಾಖಲೆಗಳನ್ನು ಬಳಸಿಕೊಂಡು ಇವರೆಲ್ಲರ ಚರಿತ್ರೆಯನ್ನು ಬರೆದಲ್ಲಿ ಮಹಿಳೆಯರನ್ನು ಕುರಿತ ಒಂದು ಹೊಸ ಅಧ್ಯಾಯ ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಖಂಡಿತ ತೆರೆದುಕೊಳ್ಳುತ್ತದೆ.

ಆಡಳಿತ :

ರಾಜಕೀಯ ಚಟುವಟಿಕೆಗಳ ನಿರೂಪಣ ಸಂದರ್ಭದಲ್ಲಿ ಆಡಳಿತ ಪದ್ಧತಿಯ ವಿವರಗಳು ಕಾಣಿಸಿಕೊಳ್ಳುವುದು ಸಹಜ. ಇಲ್ಲಿ ಕರ್ನಾಟಕ, ಮುಸಲ್ಮಾನ, ಮರಾಠಾ, ಇಂಗ್ಲಿಷ್ – ಹೀಗೆ ನಾಲ್ಕು ಬಗೆಯ ಆಡಳಿತ ಪದ್ಧತಿಗಳನ್ನು, ಪರಿಭಾಷೆಗಳನ್ನು ಗುರುತಿಸಬಹುದಾಗಿದೆ. ಕಲ್ಯಾಣ ಚಾಲುಕ್ಯ, ಕಲಚುರಿ, ಹೊಯ್ಸಳರಂಥ ಚ್ರವರ್ತಿಗಳ ಶಾಸನಗಳನ್ನು ಅಲ್ಲಲ್ಲಿ ಉದ್ಧರಿಸಲಾಗಿದ್ದು, ಅಲ್ಲಿ ಆಡಳಿತದ ವಿವರಗಳು ಗೋಚರಿಸುತ್ತವೆ. ಇದಕ್ಕಿಂತ ಮುಸಲ್ಮಾನ ಆಡಳಿತಕ್ಕೆ ಸಂಬಂಧಪಟ್ಟ ಪದ್ಧತಿಗಳು ಹೆಚ್ಚು ಕಾಣುತ್ತವೆ. ಬಾದಶಹಾರು ಕೇಂದ್ರರಾಜಧಾನಿಯಲ್ಲಿ ಆಳುವುದು, ಅವರ ಸರದಾರರು ಬೇರೆ ಬೇರೆ ಶಾಖಾಕೇಂದ್ರಗಳಲ್ಲಿ ಆಳುವುದು, ರಣದುಲ್ಲಾಖಾನನಂಥವರು ಸೈನ್ಯದೊಂದಿಗೆ ಸುಲಿಯಲು ಸಂಚರಿಸುವುದು – ಇತ್ಯಾದಿಗಳು ಮುಸಲ್ಮಾನರ ಆಳಿಕೆಯಲ್ಲಿ ಕಂಡು ಬರುತ್ತವೆ. ಮರಾಠರ ಕಾಲದಲ್ಲಿದ್ದ ಇದಕ್ಕಿಂತ ಭಿನ್ನವಾದ ಆಡಳಿತ ಪದ್ಧತಿಗಳು ಮತ್ತು ಪರಿಭಾಷೆಗಳು ಅಲ್ಲಲ್ಲಿ ತೋರಿಬರುತ್ತವೆ.

"ನಾಡಗೌಡ, ಸರನಾಡಗೌಡ, ದೇಶಾಯಿ, ಸರದೇಶಾಯಿ, ನಾಡಕುಲಕರ್ಣಿಕಿ ಐದು ಸ್ವಾಸ್ತಿ ಹುಟ್ಟಲಿಕ್ಕೆ ಕಾರಣವೇನು? ಅಂದರೆ" ಎಂಬ ಪೀಠಿಕೆಯಿಂದ ಪ್ರಾರಂಭವಾಗುವ ದರೋಜಿ ಗ್ರಾಮದ ಕೈಫಿಯತ್ತಿನ ಒಳ ವಿವರಣೆ, ಈ ಬಗೆಯ ಅಂದು ಆಡಳಿತ ಬಿಚ್ಚಿಕೊಂಡುದನ್ನು ತಿಳಿಸುತ್ತದೆ. ಸೀಮೆ, ಮಾಗಣಿ, ತಾಲೂಕು, ಜಹಗೀರು, ಸುಭೆ, ಸುಬೇದಾರ, ಕಸಬೆ, ಮುನಾಸಬ, ಠಾಣ್ಯ, ನವಾಬ, ಖಂಡಣೆ, ಕಿಲ್ಲೆದಾರ, ಫೌಜು, ನಾಯಕವಾಡಿ, ಗೌಡಿಕೆ, ಜಮಾದಾರ, ಅಮಲದಾರ, ನಜರಾನೆ, ಬಿರಾದರಿ, ಪರಗಣೆ, ಹೋಬಳಿ, ಕುಂಪಣಿ ಸರಕಾರ, ಕಾರಕೂನ, ವಕೀಲ, ಶಿರಸ್ತೆದಾರ ಇತ್ಯಾದಿ ಮುಸಲ್ಮಾನ, ಮರಾಠಾ, ಇಂಗ್ಲಿಷ್ ಆಳಿಕೆಯ ಪಾರಿಭಾಷಿಕ ಪದಗಳು ಅಂದಿನ ಆಡಳಿತ ಪದ್ಧತಿಯನ್ನು ಸೂಚಿಸುತ್ತವೆ.

ಸಾಮಾಜಿಕ ಆಚರಣೆ :

ಸಾಮಾಜಿಕ ಜೀವನದ ಬಗೆಗಿನ ವಿವರಣೆಗೆ ಇಲ್ಲಿ ಕೊರತೆಯಿಲ್ಲ, ಜಾತಿಗಳಿಗೆ ಸಂಬಂಧಪಟ್ಟ ಕೈಫಿಯತ್ತುಗಳಲ್ಲಿ ಜನನ, ಮದುವೆ ವೇಶ್ಯಾವೃತ್ತಿ, ಮರಣ, ಶಿಕ್ಷೆ, ದೇವರು, ದೇವತಾಚರಣೆ ವಿವರಗಳು ಸಿಗುತ್ತವೆ. ಕಣುಕುಪ್ಪೆಕೋಟೆ ಕಟ್ಟಿದ ಕೈಫಿಯತ್ತು ಮತ್ತು ಬಾರಕೂರು ಕೈಫಿಯತ್ತುಗಳು ಸಿಡಿ

ಆಟವನ್ನು ಪ್ರಸ್ತಾಪಿಸುತ್ತವೆ. ಮೈಸೂರು ಅರಸರಿಗೆ ನೀಡಲಾದ ಶಾಪ (ತಳಕಾಡು ಕೈಫಿಯತ್ತು), ಹುಂಜ ಟಗರ ಕಾಳಗಗಳ ಮೂಲಕ ತಿಳಿದುಕೊಳ್ಳುವ ಭವಿಷ್ಯ (ಭಟ್ಟರಹಳ್ಳಿ ಕೈಫಿಯತ್ತು), ಹಾವು ಕಡಿದರೆ ವಿಷವೇರದ ವಿಷಯ (ಚಿಕ್ಕಮಗಳೂರು ಕೈಫಿಯತ್ತು), ಕೆರೆಗೆ ಹಾರವಾದ ವಿಷಯ (ನಾಗಮಂಗಲ ಕೈಫಿಯತ್ತು), ಕಿವುಡರಿಗೆ ರಾಜ್ಯಪಟ್ಟವಿಲ್ಲದ ಪದ್ಧತಿ (ಕಣಕುಪ್ಪೆಕೋಟೆ ಕಟ್ಟಿದ ಕೈಫಿಯತ್ತು), ಖಡ್ಗಕ್ಕೆ ಮದುವೆ ಮಾಡಿಕೊಟ್ಟುದು (ಚಿಕ್ಕಮಗಳೂರು ಕೈಫಿಯತ್ತು), ದೇವರ ಒಕ್ಕಲು ಬದಲಾವಣೆ (ದೇವನಕಲ್ಲು ಕೈಫಿಯತ್ತು), ನವರಾತ್ರಿ ಆಚರಣೆ (ಚವುಟ ಅರಸರ ಕೈಫಿಯತ್ತು), ಭೂಮಿ ಸುಟ್ಟು ಬೆಳೆಯುವುದು (ತುಳುವದೇಶದ ಕಡಬಾ ಸಂಸ್ಥಾನದ ಕೈಫಿಯತ್ತು), ವಿಜಯನಗರ ವೆಂಕಟಪತಿರಾಯನ ಸೂಳೆ ದೊಡ್ಡಭೋಗಸಾನಿಯ ಮೊಲೆ ಕತ್ತರಿಸಿ ಶಿಕ್ಷೆ ನೀಡಿದುದು (ಆರ್ಕಾಡು ಕೈಫಿಯತ್ತು), ವೈರಿಗಳಿಗೆ ಅಂಜಿ ೩೦೦ ಜನ ಹೊಂಡದಲ್ಲಿ ಬಿದ್ದು ಸತ್ತುದು (ಆರ್ಕಾಡು ಕೈಫಿಯತ್ತು), ಕಂಬಳಿಯಲ್ಲಿ ಮೂಟೆಕಟ್ಟಿ ತುಳಸಿ ಶಿಕ್ಷೆವಿಧಿಸಿದುದು (ಕುರುಗೋಡು ಸಂಸ್ಥಾನದ ಕೈಫಿಯತ್ತು), ಯುದ್ಧಾಂತ್ಯದಲ್ಲಿ ಹೆಣ್ಣುಮಕ್ಕಳನ್ನು ಕೊಂದು ಅರಮನೆಗೆ ಬೆಂಕಿಹಚ್ಚಿದುದು, ಸ್ತ್ರೀಯರು ಸತಿಹೋಗುವುದು (ಭಟ್ಟರಹಳ್ಳಿ ಕೈಫಿಯತ್ತು, ಹತ್ತಿಬೆಳಗಲ್ಲು ಕೈಫಿಯತ್ತು), ಬ್ರಹ್ಮಹತ್ಯೆಯ ಭೂತದ ಕಾಟ (ಬಳ್ಳಾರಿ ಕೈಫಿಯತ್ತು) – ಇವೆಲ್ಲ ಆಯಾ ಕಾಲದ ನಂಬಿಕೆ, ಆಚರಣೆ ಮೊದಲಾದ ಸಾಮಾಜಿಕ ಪದ್ಧತಿಗಳನ್ನು ತಿಳಿಸುತ್ತವೆ.

ಜಾತಿ :

ಕೈಫಿಯತ್ತುಗಳು ಸ್ಥಳೀಯ ಚರಿತ್ರೆಗಳಾದುದರಿಂದ ಅಲ್ಲಿಯ ಕುಲಗುಂಪುಗಳ ಅಧ್ಯಯನವೂ ಮುಖ್ಯವಾಗುತ್ತದೆ. ಈ ದೃಷ್ಟಿಯಿಂದ ಇಲ್ಲಿ ಸುಮಾರು ಹದಿನೇಳು ಜಾತಿಗಳ ಪರಿಚಯವಿದೆ. ಸಾಮಾನ್ಯವಾಗಿ ಇವು ಉತ್ತರಕನ್ನಡ ಜಿಲ್ಲೆಗೆ ಸಂಬಂಧಪಟ್ಟುವಾಗಿದ್ದು, ಸಮಾಜದ ಗಣ್ಯವ್ಯಕ್ತಿಗಳಾದ ಅಧಿಕಾರಿಗಳು, ಧರ್ಮಾಧಿಕಾರಿಗಳು ಸೇರಿ ಒಮ್ಮತದಿಂದ ಬರೆಯಿಸಿಕೊಟ್ಟ ಕಾರಣ ಇವು ಅಧಿಕೃತ ಸಾಮಗ್ರಿಯೆನಿಸಿವೆ. ಕುಂಚಿ ಒಕ್ಕಲಿಗ, ಕುಡಿಕುಂಬಾರ, ಚೆನ್ನಯ್ಯನ ಕುಲದ ಜಾತಿ, ತೆಲುಗು ಬಣಜಿಗರ ಜಾತಿ, ಪದ್ಮಸಾಲೇರು, ಮಣ್ಣು ವಡ್ಡಿಜಾತಿ, ವುಂಡೆ ಗಂಗಡಿಕಾರ ಜಾತಿ – ಇವುಗಳಿಗೆ ಗುರುವಾದ ತಾತಚಾರ್ಯ* ಸಮಾಜದ ಮುಖ್ಯರ ಸಮ್ಮುಖದಲ್ಲಿ ಅವರವರ ಕೈಫಿಯತ್ತುಗಳನ್ನು ಬರೆಯಿಸಿಕೊಟ್ಟಿದ್ದಾನೆ. ಕೊರಮರು ವಾಂಡ್ಲೆ ಕೈಫಿಯತ್ತು, ಬಂಜಾರಿ ಕೈಫಿಯತ್ತು, ಮೇದಾರ ಕೈಫಿಯತ್ತು, ಮೇಲುಸಾಖರೆ ಜಾತಿ ರಿವಾಜು ಕೈಫಿಯತ್ತು, ಹಳೆ ಪೈಕದ ಜಾತಿ ರಿವಾಜು ಕೈಫಿಯತ್ತುಗಳನ್ನು ಆಯಾ ಸಮಾಜದ ಮುಖಂಡರು ಸೇರಿ ಬರೆಯಿಸಿಕೊಟ್ಟಿದ್ದಾರೆ. ಸಾಮಾನ್ಯವಾಗಿ ಇವೆಲ್ಲ ಪರಿಶಿಷ್ಟವರ್ಗಕ್ಕೆ ಸಂಬಂಧಿಸಿದವುಗಳಾಗಿದ್ದು, ಜನನ, ಮದುವೆ, ಮರಣ ಇತ್ಯಾದಿ ಸಂದರ್ಭಗಳ ಆಚರಣೆಗಳನ್ನೂ, ಒಳಜಾತಿಗಳ ವಿವರವನ್ನೂ, ನ್ಯಾಯ ಶಿಕ್ಷೆಗಳ ವೈಶಿಷ್ಟ್ಯವನ್ನೂ ಒದಗಿಸುತ್ತವೆ. "ನಮ್ಮ ಕುಲಕ್ಕೆ ಯಾವ ಕುಲದವರು ಕೂಡಿದರೂ ಅವರನ ತಲೆ ಬೋಳಿಸಿ, ವುಗುರು ತೆಗೆದು, ಗುಡಿಕಟ್ಟಿ ಸುಟ್ಟು,

---

* ಈತನು ಸೊಂಡೂರಿನವನೆಂದು ಪದ್ಮಸಾಲೆರ ಕೈಫಿಯತ್ತಿನಲ್ಲಿ ಹೇಳಲಾಗಿದೆ.

ಆಮೇಲೆ ವೂಟಾಮಾಡಿ, ಗುರು ಕಾಣಿಕೆ ತೆಕ್ಕೊಂಡು ಕುಲದಲ್ಲಿ ಹಾಕಿಕೊಳ್ಳಬೇಕು" (ಕೊರವರು ವಾಂಡ್ಲೆ ಕೈಫಿಯತ್ತು). "ಸೂಳೆತನಾ ಬಿಡುವ ಮರ್ಯಾದಿಯೇನೆಂದರೆ: ಗುತ್ತಿಗೆ ಹೋಗಿ, ಭಂಡಾರ ಹಾಕಿಶಿ, ದರಶಿನಾ ಕಟ್ಟಿಸಿಕೊಂಡು, ಕಾಣಿಕೆ ಸಾಮರ್ಥ್ಯಯಿದ್ದಷ್ಟು ಕೊಟ್ಟು ಬಂದರೆ ಸರಿ. ಆಮೇಲೆ ಹೆಣ್ಣು ಮಾಡಬೇಕಾದರೆ ಶೀರೆ ವಂದು ೧, ಕುಪ್ಪಸ ೧, ಕಾಯಿ ಯರಡು ೨, ಭತ್ತ ಗಿದ್ದನ ಆಯಿದು, ಅವರ ಕುಲದಲ್ಲಿ ತುಂಬಿದು ಕುಡದು [>ತರುವುದು ಕುಡುವುದು] ಸಹಾ ಮರ್ಯಾದಿ ಪ್ರಕಾರ ತಂದು, ಗೌಡ ಬುದ್ಧಿವಂತರ ಬೀಗತ್ತಿ ಸಹಾ ಕೂಡಿ ಗುರ್ತು ಮಾಡಿಕೊಡಬೇಕು" (ಚೆನ್ನಯ್ಯ ಕುಲದ ಜಾತಿ ರಿವಾಜು ಕೈಫಿಯತ್ತು), ಇಂಥ ಆಚರಣೆಗಳನ್ನು ನಿಸ್ಸಂಕೋಚದಿಂದ ದಾಖಲಿಸಲಾಗಿದೆ.

ಧಾರ್ಮಿಕ :

ರಾಜಕೀಯದಂತೆ ಎಲ್ಲ ಕೈಫಿಯತ್ತುಗಳಲ್ಲಿ ಧಾರ್ಮಿಕ ಅಂಶವೂ ತುಂಬಿಕೊಂಡಿದೆ. ಜೈನ, ವೀರಶೈವ, ಬ್ರಾಹ್ಮಣ, ಮುಸಲ್ಮಾನ ಧರ್ಮಗಳಿಗೆ ಸಂಬಂಧಿಸಿದ ವಿವರಗಳು ಇಲ್ಲಿವೆ. ಕಾಪಿನ ದೇವಸ್ಥಾನ ಕೈಫಿಯತ್ತು ಮತ್ತು ಪೆರಡೂರು ಮಾಗಣಿ ದೇವಾಲಯ ಕೈಫಿಯತ್ತುಗಳು ಬೌದ್ಧಧರ್ಮ ಅಸ್ತಿತ್ವದಲ್ಲಿದ್ದ ಸೂಚನೆ ನೀಡುತ್ತದೆ. ಭಟಕಳ, ಗೆರುಸೊಪ್ಪೆ, ಕಾರ್ಕಳ, ಮೂಡಬಿದುರೆ ಮೊದಲಾದ ಜೈನ ಕ್ಷೇತ್ರಗಳ, ಧಾರ್ಮಿಕ ವ್ಯಕ್ತಿಗಳ ಮಾಹಿತಿಯನ್ನು ಕೆಲವು ಕೈಫಿಯತ್ತುಗಳು ಒದಗಿಸುತ್ತವೆ. ಗೆರುಸೊಪ್ಪೆಯಿಂದ ಮೆಕೆಂಝಿ ಜಿನವಿಗ್ರಹ ಒಯ್ದುದನ್ನು ಗೆರಸೊಪ್ಪೆ ಕೈಫಿಯತ್ತು ತಿಳಿಸುತ್ತದೆ. ಸ್ವಾದಿ, ಕೆಳದಿ, ಬಾಳೆಹಳ್ಳಿ, ಸಾಗರಗಳಲ್ಲಿಯ ವೀರಶೈವ ದೇವಾಲಯ–ಮಠಗಳ ಅನೇಕ ವಿವರಗಳು ತಿಳಿದುಬರುತ್ತದೆ. ಕುಡತನಿಯ ಎಮ್ಮೆಬಸವನ ಗುಡಿ (ಕೊಮಾರ ದೇವರ ಕೈಫಿಯತ್ತು). ಕುರುಗೋಡಿನ ಆಚಾರದ ಭೀಮಯ್ಯನ ಗುಡಿ (ಕುರುಗೋಡು ಕೈಫಿಯತ್ತು ತಾಲೂಕೆ ಬಳ್ಳಾರಿ) ಇಲ್ಲಿ ದಾಖಲುಗೊಂಡಿವೆ. ಮಿಕ್ಕಂತೆ ಗೋಕರ್ಣ, ಸ್ವಾದಿ, ಶೃಂಗೇರಿ ಮೊದಲು ಮಾಡಿಕೊಂಡು ಬ್ರಾಹ್ಮಣ ಕ್ಷೇತ್ರಗಳ ವಿವರ ವಿಪುಲ ಪ್ರಮಾಣದಲ್ಲಿ ಕಂಡುಬರುತ್ತದೆ. ಉಡುಪಿಯ ಎಂಟೂ ಮಠಗಳ ಬಗ್ಗೆ, ಸ್ವಾದಿ ವಾದಿರಾಜರ ಬಗ್ಗೆ ಅನೇಕ ವಿವರಗಳು ಕಂಡುಬರುತ್ತದೆ. ಶೃಂಗೇರಿ ಕೈಫಿಯತ್ತು ಆ ಪೂರ್ವೋತ್ತರಗಳನ್ನು, ಕೆಳದಿ ಅರಸರಿಂದ ಅದು ಪೋಷಿತವಾದ ಬಗೆಯನ್ನು ತಿಳಿಸುತ್ತದೆ. ಮುಸಲ್ಮಾನ ಧರ್ಮದ ಹಲವಾರು ಮಹಾಪುರುಷರ, ಕ್ಷೇತ್ರಗಳ ಮಾಹಿತಿಯೂ ಅಲ್ಲಲ್ಲಿ ಸಿಗುತ್ತದೆ. ಈ ಸಂಪುಟದ ಕೊನೆಗೆ ಬಂದ ಹತ್ತಾರು ಜಾತಿಗಳ ಕೈಫಿಯತ್ತುಗಳು ಅನೇಕ ಆಚಾರ–ವಿಚಾರಗಳನ್ನು ಒದಗಿಸುತ್ತವೆ.

ವಾಸ್ತುವಿಶೇಷತೆ :

ಕೆರೆ, ದೇವಾಲಯ, ಕೋಟೆ, ಅರಮನೆ ವಿವರಗಳಿಗೆ ಕೈಫಿಯತ್ತುಗಳಲ್ಲಿ ಲೆಕ್ಕವೇ ಇಲ್ಲ. ಇದೇ ಒಂದು ಸ್ವತಂತ್ರ ಅಭ್ಯಾಸವಾಗುವಷ್ಟಿದೆ. ಗೊಲ್ಲರು ಕೊಕ್ಕಸಮುದ್ರ ಹೆಸರಿನ ಕೆರೆ ಕಟ್ಟಿಸಿ ನಾಯಿ ಪ್ರತಿಮೆ ನಿಲ್ಲಿಸಿದುದು (ಕೊಕ್ಕ ಸಮುದ್ರ ಕೈಫಿಯತ್ತು), ಸೂಳೆ ಶೃಂಗಾರಿ ಕೆರೆ ಜೀರ್ಣೋದ್ಧಾರ ಮಾಡಿಸಿದುದು (ನಗರಸೀಮೆ ಕೈಫಿಯತ್ತು), ಸೂಳೆ ಕೆರೆಗೆ ಹಾರವಾದುದು (ನಾಗಮಂಗಲ

ಕೈಫಿಯತ್ತು), ದಾಸಿ ಕೆರೆ ಕಟ್ಟಿಸಿದ್ದು (ಸೂಳೆಕೆರೆ ಕೈಫಿಯತ್ತು), ನರ್ತಕಿ ಯಗಟಿ ಕೆರೆ ನಿರ್ಮಿಸಿದ್ದು (ಯಗಟಿ ಕೈಫಿಯತ್ತು) – ಇತ್ಯಾದಿ ಉಲ್ಲೇಖಗಳು ಕೆರೆ ಕಟ್ಟಿದ ಹಿನ್ನೆಲೆಯನ್ನು ತಿಳಿಸುತ್ತವೆ.

ದೇವಾಲಯಗಳನ್ನು ಒಂದು ವ್ಯವಸ್ಥಿತ ಪರಿವೀಕ್ಷಣೆಯಂತೆ ಇಲ್ಲಿ ದಾಖಲಿಸಲಾಗಿದೆ. ಸಾಮಾನ್ಯವಾಗಿ ಎಲ್ಲ ಕೈಫಿಯತ್ತುಗಳಲ್ಲಿ ಆಯಾ ಊರಿನ ದೇವಾಲಯಗಳ ದೊಡ್ಡ ಯಾದಿಯೇ ಬರುತ್ತದೆ. ದೇವಾಲಯಗಳ ಸ್ಥಾಪನೆ, ಜೀರ್ಣೋದ್ಧಾರ ವಿವರಗಳಿಗೂ ಕೊರತೆಯಿಲ್ಲ. ಬಸವಿ ರಾಮಿಯೆಂಬವಳು ರಾಮೇಶ್ವರಲಿಂಗ ಸ್ಥಾಪಿಸಿದ ವಿಷಯ ಹತ್ತಿಬೆಳಗಲ್ಲು ಕೈಫಿಯತ್ತಿನಲ್ಲಿದೆ. ಗೆರಸೊಪ್ಪೆ ಕೈಫಿಯತ್ತು, ಗೋಕರ್ಣ ಕೈಫಿಯತ್ತುಗಳು ಅಲ್ಲಿಯ ದೇವಾಲಯ, ವಿಗ್ರಹಗಳ ಸಂಪೂರ್ಣ ವಿವರ ಒದಗಿಸುತ್ತವೆ "ಕೀರ್ತಿವರ್ಮನೆಂಬವನು ಶ್ಯಾಲಿವಾಹನ ಶಕ ೯೯೦ನೆ ಕೀಲಕ ಸಂ॥ದಲ್ಲಿ ದ್ವಾರಪಾಲಕರ್‍ರ ಯಿದ[>ದ್ದ] ಬಾಗಲ ಹೊರಗೆ ಸಿಂಹಾಸನದ ಲಂ[>ಅಂ]ಕಣದಾರಭ್ಯ ನಂದಿಕೇಶ್ವರ ದೇವರ ಮುಂದಿನ ಅಂಕಣ ಪರಿಯಂತ್ರಾ ಮಾಡಿ ಕಟ್ಟಿಶಿದ. ಮಹಾದ್ವಾರದ ಗೋಪುರದ ಉತ್ತರ ದಿಕ್ಕಿನ ಬಾಗಲ, ಗೋಪುರದ ಸುತ್ತಲ್ಲು ಯಿಟ್ಟಿಗೆ ಪ್ರಾಕಾರ್‍ರ ಗೋಡೆ ಸಹಾ ಯೀತ್ತನೆ ಕಟ್ಟಿಶಿ", "[ಸೊದೆ]ವಂಶದ ರಾಮಚಂದ್ರನಾಯಕರ್‍ರು ನಂದಿಕೇಶ್ವರ ದೇವರ್‍ರ ಪ್ರತಿಷ್ಟೆಮಾಡಿ, ಯೀ ಜಾಗಾದಲ್ಲಿ ವಂದೂವರೆ ಅಂಕಣ ಗುಡಿ ಕಟ್ಟಿಶಿ, ಧ್ವಜಸ್ತಂಭವನ್ನು ಪ್ರತಿಷ್ಟೆಮಾಡಿ, ದೊಡ ಕಥವಂನ್ನು ಕಟಿಶಿದರ್‍ರು, ರಘುನಾಥರಾಯರ್‍ರು ಕಾಲ್ಲಿನ ಚಕ್ರಮಂಚವಂನ್ನು ಮಾಡಿಸಿಕೊಟರ್‍ರು, ಸದಾಶಿವರಾಯರ್‍ರು ಅಮ್ಮನವರ ದೇವಾಲಯವನ್ನು ಕಟ್ಟಿಶಿದರ್‍ರು, ಬಸವಲಿಂಗರಾಜರ ಕಾಲಕ್ಕೆ ಮಂತ್ರಿ ಲಕ್ಷ್ಮಯ್ಯನವರು ಅಷ್ಟದಿಕ್ಪಾಲಕರ್‍ರ ಪ್ರತಿಷ್ಟೆಮಾಡಿ....." (ಬನವಾಶಿ ಸ್ಥಳದ ಕೈಫಿಯತ್ತು–೩) "ಆ ಕೆರಿಯ ಯೇರಿಯ ಮೇಲೆ ಶಿಲ್ಲಾ ಪ್ರಥಮೆಗಳನ್ನು ಮಾಡಿಸಿ, ಸ್ತಾಪನೆ ಮಾಡ್ಸಿ ಯಿರುವ ವಿವರ: ೨ ಕಿರಾತರ ಪ್ರತಿಮೆ, ೧ ನಾಯಿ ಪ್ರತಿಮೆ, ೧ ಸೆಟ್ಟಿ ಪ್ರತಿಮೆ, ೧ ಯಿತನ ಹೆಂಡತಿ ಪ್ರತಿಮೆ" (ಯಗಟಿ ಕೈಫಿಯತ್ತು), "ಯೀ ಸಾಬಿನಾಯಕನು ಆದವಾನಿಯಲ್ಲಿ ಯಿರುವಾಗ್ಯೆ ಅಲ್ಲಿ ವಬ್ಬಾ ಹೆಂಗಸರ ಮ್ಯಾಲ ದ್ರಷ್ಟಿಯಿಡಲಾಗಿ ಯೀತನ ಶಿರಶ್ಚೇದನಾ ಮಾಡಿಸಿದ್ದರು. ಯಿತನ ಕಡೆ ಜನರು ಹೆಣಹೊತ್ತು ಬೆಳಗಲ್ಲಿಗೆ ತಂದು ದಹನ ಮಾಡುವಾಗ್ಯೆ ಆತನ ಯಿಬ್ಬರು ಹೆಂಡರು ಕುಂಡದಲ್ಲಿ ಬಿದ್ದರು. ಯೀ ವೂರಿಗೆ ವುತ್ತರ ಭಾಗದಲ್ಲು ಸಾಮಿಪ್ಯವಾಗಿ ವೊಂದು ಗುಡಿ ಕಟ್ಟಿ ವೊಂದು ಕಲ್ಲಿನ ಮ್ಯಾಲೆ ಕುದುರೆ ಮ್ಯಾಲೆ ಸಾಬಿನಾಯಕನ ರೂಪ, ಆತನ ಹೆಂಡರು, ಆತನ ಕಡೆ ಜನರು ಆಪತ್ತಾಗಿರಿ ಹಿಡಿಯೋರು ಸಹ ಕಲ್ಲಮ್ಯಾಲೆ ರೂಪ ಕೆತ್ತಿಧಾರೆ" (ಹತ್ತಿಬೆಳಗಲ್ಲು ಕೈಫಿಯತು), ಇಂಥ ನೂರಾರು ಅಂಶಗಳು ಕೈಫಿಯತ್ತುಗಳಲ್ಲಿ ದಾಖಲಾಗಿದ್ದು, ಪರಿವೀಕ್ಷಣೆಮಾಡಿ ಅನ್ಯ ಆಕರಗಳಿಂದ ಇವುಗಳನ್ನು ದೃಢಪಡಿಸಿಕೊಳ್ಳಬೇಕಾಗಿದೆ. ಹಳೆಬೀಡಿನ ಹೊಯ್ಸಳೇಶ್ವರ ದೇವಸ್ಥಾನದ ನಿರ್ಮಾಣದ ರೀತಿ, ದೇವಾಲಯಕ್ಕೆ ಬಣ್ಣ ಹಚ್ಚಿದ್ದು, ಬಣ್ಣ ಹೋಗದಂತೆ ಮೇಲುಮುಸುಕು ವ್ಯವಸ್ಥೆಯಾದದ್ದು (ಹಳೆಬೀಡು ಕೈಫಿಯತ್ತು), ಯಜ್ಞಸ್ತಂಭ ಸ್ಥಾಪನೆ (ಚಿಕ್ಕಮಗಳೂರು ಕೈಫಿಯತ್ತು, ಹಿರೇಮಗಳೂರು ಕೈಫಿಯತ್ತು), ವೇಣೂರ ಗೊಮ್ಮಟನ ಸ್ಥಾಪನೆ, ಇದಕ್ಕಾಗಿ ಅಜಿಲರಿಗೂ ಭೈರಸರಿಗೂ ಯುದ್ಧ ಜರುಗಿದುದು (ಅಜಿಲರ ಕೈಫಿಯತ್ತು, ಕಾರ್ಕಳ ಕೈಫಿಯತ್ತು), ಧರ್ಮಸ್ಥಳದ ಮಂಜುನಾಥ ದೇವಾಲಯ ಸ್ಥಾಪನೆ (ಧರ್ಮಸ್ಥಳದ ಕೈಫಿಯತ್ತು), ಚೋಳರಾಜ ದಿನಕ್ಕೊಂದು ಗುಡಿ ಕಟ್ಟಿಸಿದ್ದು (ಶ್ರೀ ಕೊಮಾರದೇವರ

ಕೈಫಿಯತ್ತು)ಗೊಲ್ಲನೊಬ್ಬ ೪೦೦ ಗುಡಿ ಕಟ್ಟಿಸಿದ್ದು, ಮಾಧವನ ವಿಗ್ರಹ ಸ್ಥಾಪಿಸಿದ್ದು(ಹತ್ತಿಬೆಳಗಲ್ಲು ಕೈಫಿಯತ್ತು) – ಹೀಗೆ ದೇವಾಲಯ ನಿರ್ಮಾಣದ ಸಾವಿರ ಸಾವಿರ ಉಲ್ಲೇಖಗಳು ಬರುತ್ತವೆ. ದೇವಾಲಯ, ಮಠಗಳ ನಾಶದ ವಿಷಯ ಸಂತೆಬೆನ್ನೂರು, ಸಾಗರ ಕೈಫಿಯತ್ತುಗಳಲ್ಲಿದೆ.

ಸಂತೆಬೆನ್ನೂರಲ್ಲಿಯ ರಾಮಚಂದ್ರದೇವಸ್ಥಾನವನ್ನು ಮುರಿದು ಮಸೀದೆ ಕಟ್ಟಿಸಲು ಪ್ರಾರಂಭಿಸಿ, ಹೆಚ್ಚಿನದಾಗಿ ಹಿರೇಕೂಗಲ್ಲೂರಿನ ಸುಖನೇಶ್ವರ ದೇವಸ್ಥಾನ, ಕಲ್ಲೇಶ್ವರ ದೇವಸ್ಥಾನ, ಮಲ್ಲೇಶ್ವರ ದೇವಸ್ಥಾನಗಳನ್ನೂ, ಸಂತೆಬೆನ್ನೂರಿನ ಕಲ್ಲೇಶ್ವರದೇವಸ್ಥಾನಗಳನ್ನೂ ಕೆಡವಿ ಕಲ್ಲುಗಳನ್ನು ಬಳಸಿಕೊಳ್ಳಲಾಯಿತು. ಈ ಕೆಲಸವನ್ನು ಹಿಂದುಗಳು ಅರ್ಧಕ್ಕೆ ನಿಲ್ಲಿಸುದುದು (ಉತ್ಸಂಗಿವೇಂಟೆಕೆ ಸಲ್ಲುವ ಸಂತೆಬೆನ್ನೂರು ಸೀಮೆ ಕೈಫಿಯತ್ತು), ಕೆಳದಿಯವರು ಕಟ್ಟಿಸಿದ ವೀರಶೈವ ಮಠವನ್ನು ಶೃಂಗೇರಿ ಸ್ವಾಮಿಗಳು ಕಿತ್ತಿಹಾಕಿಸಿದ್ದು (ಸಾಗರ ಕೈಫಿಯತ್ತು) ಇಲ್ಲಿ ದಾಖಲಾಗಿವೆ.

ಕೋಟೆ ಕಟ್ಟಿಸಿದ ವಿವರಗಳಿಗೆ ಕಣಕುಪ್ಪೆಕೋಟೆ ಕೈಫಿಯತ್ತು ಉಜ್ವಲ ಉದಾಹರಣೆಯಾಗಿದೆ. ಅತ್ತಿಕುಪ್ಪೆ ಅಗ್ರಹಾರದ ಕೈಫಿಯತ್ತಿನಲ್ಲಿಯೂ ಇಂಥ ವಿಷಯವಿದೆ. ಬಾಲಸಂಗಮನಾಥನ ಕೋಟೆ, ದ್ವಾರಾವತಿ ಕೋಟೆ ಕಟ್ಟಿಸಿದ ವಿಷಯವನ್ನು ದರೋಜಿಗ್ರಾಮದ ಕೈಫಿಯತ್ತು ತಿಳಿಸುತ್ತದೆ. ೧೬ ಜನ ಹೆಣ್ಣುಮಕ್ಕಳು – ಅಳಿಯಂದಿರನ್ನು ಏಕಕಾಲಕ್ಕೆ ನೋಡಲು ಅನುಕೂಲವಾಗುವಂತೆ ಚಾವಡಿ ಕಟ್ಟಿಸಿದ ಉಲ್ಲೇಖ ನಗರಸೀಮೆ ಕೈಫಿಯತ್ತಿನಲ್ಲಿದೆ.

ಭೌಗೋಲಿಕ :

ಕರ್ನಲ್ ಮೆಕೆಂಝಿ ಸೈನ್ಯದ ಚಲನೆಗಾಗಿ ಭೂಸ್ವರೂಪವನ್ನು ಶೋಧಿಸುವ ಅಧಿಕಾರಿಯಾಗಿದ್ದನು. ಈ ದೇಶದ ಬಯಲುಭೂಮಿ, ಗುಡ್ಡಗಾಡು, ಅರಣ್ಯ, ನದಿ–ಹಳ್ಳ, ಬೆಳೆ–ಕೈಗಾರಿಕಾ ಉತ್ಪಾದನೆ–ವಾಣಿಜ್ಯ ಸ್ವರೂಪ ಇತ್ಯಾದಿಗಳ ವಿವರ ಸಂಗ್ರಹಿಸುವುದು ಅವನ ಮುಖ್ಯ ಉದ್ದೇಶವಾಗಿದ್ದಿತು. ಈ ಕಾರಣದಿಂದಾಗಿ ಸಾಮಾನ್ಯವಾಗಿ ಆಯಾ ಕೈಫಿಯತ್ತುಗಳಲ್ಲಿ ಅಲ್ಲಿಯ ಭೂಸ್ವರೂಪ, ಗುಡ್ಡ–ಬೆಟ್ಟ, ಹಳ್ಳ–ನದಿಗಳ ಹೆಸರುಗಳನ್ನು, ಅವುಗಳ ವಿಷಯವಾಗಿ ಜನತೆಗಿದ್ದ ನಂಬಿಕೆಗಳನ್ನು, ಹೇಳಿಕೆಗಳನ್ನು ಅವನು ತುಂಬ ವಿವರವಾಗಿಯೇ ಸಂಗ್ರಹಿಸಿದ್ದಾನೆ. "ಅನಂತರದಲ್ಲಿ ಆಖೈರು ವೀರಮ್ಮಾಜಿ ಕಾಲಕ್ಕೆ ಸಮುದ್ರದ ಬಳಿಯ ಆಳಿವೆ ಜಾಗದಲ್ಲಿ ಸಮೀಪ ಕೋಟೆಯನ್ನು ಕಟ್ಟಿಸಿ, ಯಿಲ್ಲ[>ಲ್ಲಿ] ಪ್ರಾಕು ಕಟಮಾಳಿಯಂಬ ದೈವಯಿತ್ತು. ಅನಂತರದಲ್ಲಿ ಕಟಮೀಶೆಯೆಂಬ ಹೆಸರು ಆಯಿತ್ತು. ಅಲ್ಲಿಗೆ ವರುಣ ದಿಕ್ಕಿನಲ್ಲಿ ಸಮುದ್ರ ಮಧ್ಯದಲ್ಲಿ ಆರು ಕೋಸು ವಳಗೆ ನೇತ್ರಾಣಿ ಬೆಟ್ಟವೊಂದು ಯಿದೆ. ಯಿದು ಯರಡು ಕೋಸು ವಿಸ್ತಾರವದೆ. ಯಿದರ ಮಧ್ಯದಲ್ಲಿ ನೇತ್ರಾಣಿ ಬೆಟ್ಟುಗಯಂಬ ಯ[>ಹೆ]ಸರುಯಿಂದಾ ದೈವವನ್ನು ಇದೆ. ಯಿದಕ್ಕೆ ಹರಿಕೆ ಮಾಡಿಕೊಂಡವರು ಯೇನು ಹಾಕಿದರು ಅಲ್ಲಿ ಯಿರುತ್ತಾಯಿದೆ. ಯಿದು ಯಾರಾದರು ಮುಟ್ಟಿ ತೆಗೆದುಕೊಂಡು ಬಂದರೆ ಅವರಿಗೆ ಉಪದ್ರವಾಗಿ ಬದುಕಲಿಕ್ಕೆ ಯಿಲ್ಲಾ. ಯೀ ಬೆಟ್ಟದಲ್ಲಿ ಶಿಯ್ಯ ನೀರು ಯಿರುತ್ತಾಯಿದೆ. ಯಿದು ದ[>ಹ]ಹಡಗಿನವರು ತುಂಬಿಕೊಂಡು ಹೋಗುತ್ತಾ ಯಿದ್ದಾರೆ. ಯಿವರಿಗೆ ಫಾಳಿ ಉಪದ್ರಕ್ಕೆ ಹಡಗು ಬಂದು ನಿಲ್ಲುತ್ತಾಯಿದೆ" (ಭಟಕಳದ ಕೈ). ಇಂಥ ಅನೇಕ ಭೂವಿವರಗಳು ಕೈಫಿಯತ್ತುಗಳಲ್ಲಿ ಲಭ್ಯಯಿವೆ.

ವಾಣಿಜ್ಯ :

ಕೈಫಿಯತ್ತು ಒದಗಿಸುವ ಇನ್ನೊಂದು ವಿಷಯವೆಂದರೆ ಕೃಷಿ, ಕೈಗಾರಿಕೆಗೆ ಮತ್ತು ವಾಣಿಜ್ಯಗಳಿಗೆ ಸಂಬಂಧಿಸಿದುದು. ಇಲ್ಲಿ ಅಳತೆ, ತೂಕ, ನಾಣ್ಯಗಳ ಸೂಚನೆಯು ಪದೇ ಪದೇ ಕಾಣಿಸಿಕೊಂಡಿದೆ, ಸಾಗರ ಕೈಫಿಯತ್ತು, ಕುಂದಾಪುರ ಕೈಫಿಯತ್ತು, ಕಮಲಾಪುರ ಕೈಫಿಯತ್ತು, ತಾಲೂಕು ಕಂಪಲಿ ಕೈಫಿಯತ್ತುಗಳಲ್ಲಿ ಸ್ಥಳೀಯ ವ್ಯಾಪಾರದ ದಟ್ಟ ವಿವರಣೆಯಿದೆ. ಬಂಜಾರಿ ಕೈಫಿಯತ್ತು, ಬನವಳ್ಳಿ ಬಣಜಿಗರು ಬರಶಿಕೊಟ್ಟ ಕೈಫಿಯತ್ತುಗಳಂತೂ ನೇರವಾಗಿ ಅವರ ವಾಣಿಜ್ಯ ವಿವರಗಳನ್ನೇ ನೀಡುತ್ತವೆ. ಆಯಾ ಸ್ಥಳದಲ್ಲಿ ಹುಟ್ಟುವ ಧಾನ್ಯ, ಕೈಗಾರಿಕಾ ಉತ್ಪತ್ತಿ, ಆಯಾತ-ನಿರ್ಯಾತ ವಸ್ತುಗಳನ್ನು ಇಲ್ಲೆಲ್ಲ ಸೂಚಿಸಲಾಗಿದೆ.

"ಈ ವೂರಲ್ಲಿ ತೂಕಾ ಮಾಡುವದು, ಅಳತೆ ಮಾಡುವ ವಿವರ: ನ[>ಸ]ವರನ ದುಡು ೨೪ಕ್ಕೆ ವಂದು ಕಚ್ಚಾ ಶೇರು, ಆರು ಕಚ್ಚಾ ಸೇರಿಗೆ ವಂದು ಪಂಚೇರು, ಪಂಚೇರು ೨ಕ್ಕೆ ಧಡಿಯಾ, ಧಡಿಯಾ ನಾಲ್ಕಕ್ಕೆ ವಂದು ಮಣ. ಮಣಕ್ಕೆ ೪೮ ಕಚ್ಚಾ ನಾಲ್ವತ್ತೆಂಟು ಶೇರು ಆದರೆ ವಂದು ಮಣಾ, ಮಣ ಯಂಟಕ್ಕೆ ವಂದು ಯತ್ತಿನ ಹೇರು, ನಿಜ ೧ಕ್ಕೆ ೨೨ ಮಣ, ಯಿದು ಕಿರೇಮಣ, ಅಂಗಡಿಯಲ್ಲಿ ನಡಿಯೋ ಅಂಥಾದು. ಗ್ರಾಮದಲ್ಲಿ ನಡಿಯೋದು ಅಡಿಕೆ ಪೋಕಳಿ" (ಬನವಳ್ಳಿ ಬಣಜಿಗರು ಬರಶಿಕೊಟ್ಟ ಕೈಫಿಯತ್ತು), ಈ ಸ್ಥಳದಲ್ಲಿ ಹುಟ್ಟುವ ಜೀನಸು, ಆ ಸೀಮೆಯಿಂದ ಹೊರಗಿನ ಸೀಮೆಗೆ ಹೋಗುವ ಜೀನಸು, ಹೊರಗಿನ ಸೀಮೆಯಿಂದ ಈ ಸೀಮೆಗೆ ಬರುವ ಜೀನಸು – ಎಂದು ಶೀರ್ಷಿಕೆಯಡಿಯಲ್ಲಿ ವಸ್ತುಗಳ ಹೆಸರನ್ನು ಇಲ್ಲಿ ವಿವರವಾಗಿ ಬರೆಯಲಾಗಿದೆ. ಹತ್ತಿ ಬೆಳಗಲ್ಲು ಕೈಫಿಯತ್ತು, ದರೋಜಿಗ್ರಾಮದ ಕೈಫಿಯತ್ತು, ಅಂತಾಪುರ ಕೈಫಿಯತ್ತುಗಳು ಅಲ್ಲಿ ಹುಟ್ಟುವ ಧಾನ್ಯಗಳ ಯಾದಿಯನ್ನೇ ಕೊಡುತ್ತವೆ. ಶ್ರೀ ಕೊಮಾರದೇವರ ಕೈಫಿಯತ್ತು ಸಹ ಇಂಥ ಯಾದಿಯನ್ನು ಪೂರೈಸುತ್ತದೆ. ತಾಲೂಕು ಕಂಪಲಿ ಕೈಫಿಯತ್ತು ಗಂಡಸರ–ಹೆಂಗಸರ ಬಟ್ಟೆ, ಬಟ್ಟೆಯ ಪ್ರಕಾರ, ಬಣ್ಣ, ಅಳತೆ, ತೂಕಗಳ ಒಂದು ಪಟ್ಟಿಯನ್ನೇ ಕೊಡುತ್ತದೆ. "ಪೇಟೆ ಕಟ್ಟಿಸಬೇಕುಯೆಂದು ಸಂಸ್ಥಾನಿಕರ ಸಂಗಡ ಯೋಚನೆ ಮಾಡಿ, ೩ ತಿಂಗಳಲ್ಲಿ ಕಟ್ಟಿಸಿದ ಪೇಟೆಗೆ 'ಸದಾಶಿವ ಸಾಗರ' ಎಂದು ಹೆಸರಿಟ್ಟದ್ದನ್ನೂ, ಅದರ ಪೂರ್ವ–ಪಶ್ಚಿಮ, ದಕ್ಷಿಣ–ಉತ್ತರ ವಿಸ್ತರಣೆಗಳ ವಿವರವನ್ನೂ ಸಾಗರದ ಕೈಫಿಯತ್ತು ಕೊಡುತ್ತದೆ. 'ಹೋಳಿನ ಹಂಪಯ್ಯ' ಹೆಸರಿನ ಪ್ರಸಿದ್ಧ ವ್ಯಾಪಾರಿಯ ಉಲ್ಲೇಖ ಇದೇ ಕೈಫಿಯತ್ತಿನಲ್ಲಿದೆ. ತಾಲೂಕು ಕಂಪಲಿ ಕೈಫಿಯತ್ತು ಅಲ್ಲಿಯ ಅನೇಕ ಪೇಟೆಗಳ ಯಾದಿಯನ್ನೇ ಕೊಡುತ್ತದೆ.

ಸಾಹಿತ್ಯ :

ಸಾಹಿತ್ಯಿಕ ಅಂಶ ತುಂಬಿಕೊಂಡ ಕೆಲವು ಕೈಫಿಯತ್ತುಗಳೂ ಇಲ್ಲಿವೆ. ಉಡುಪಿಯ ಎಂಟೂ ಮಠಗಳಲ್ಲಿರುವ ಹಸ್ತಪ್ರತಿಗಳ ಸಮಗ್ರ ಯಾದಿಯನ್ನು ಆಯಾ ಕೈಫಿಯತ್ತುಗಳು ಕೊಡುತ್ತವೆ. ರಾಕ್ಷಸ ಹೆಸರಿನ ಕವಿಯ ಉಲ್ಲೇಖ ಅಷ್ಟಗ್ರಾಮದ ಕೈಫಿಯತ್ತು ನೀಡುತ್ತದೆ. ಈತನು ಸಂಸ್ಕೃತ ಗ್ರಂಥ ಬರೆದಿರುವುದಾಗಿ ತಿಳಿದು ಬರುತ್ತದೆ. ಗದುಗಿನ ಭಾರತದ ಉತ್ತರಾರ್ಧ ಬರೆದ(?) ತಿಮ್ಮಪ್ಪ

ಕವಿಗೆ ಅಪಲಾಪುರ ಗ್ರಾಮವನ್ನು ದತ್ತಿಯಾಗಿ ನೀಡಿದ ವಿಷಯ ಅಲ್ಲಿಯ ಶಾಸನದಲ್ಲಿದೆಯೆಂದು ಅಂತಾಪುರ ಕೈಫಿಯತ್ತು ತಿಳಿಸುತ್ತದೆ.

ಕೆಲವು ಕೈಫಿಯತ್ತುಗಳು ರಾಜನ ಬಿರುದನ್ನು ಯಥಾವತ್ತಾಗಿ ಉದ್ಧರಿಸಿವೆ. ಹಂಡೆವಂಶದ ಬಾಲದ ಹನುಮಪ್ಪನ ೫ ಜನ ಮಕ್ಕಳ ಬಿರುದು ಸೊಗಸಾದ ಗದ್ಯಪದ್ಯಗಳಲ್ಲಿದೆ. ಇವರ ಪತ್ರದ ಒಕ್ಕಣಿಯೂ ಇಲ್ಲಿದೆ (ಕುರುಗೋಡ ಕೈ), ಕುಮಾರರಾಮನ ಗದ್ಯರೂಪದ ಸುದೀರ್ಘ ಬಿರುದನ್ನು ಇಡಿಯಾಗಿ ಎತ್ತಿಕೊಡಲಾಗಿದೆ (ಭಟ್ಟರಹಳ್ಳಿ ಕೈ), ಚೌಟರ ಸುಂದರವಾದ ಬಿರುದನ್ನು ಚವುಟ ಅರಸರುಗಳ ಕೈಫಿಯತ್ತು ಪೂರೈಸುತ್ತದೆ. ಅಬ್ಬಕ್ಕದೇವಿಯನ್ನು ವರ್ಣಿಸುವ ಪದ್ಯಗಳು ಇದೇ ಕೈಫಿಯತ್ತಿನಲ್ಲಿವೆ. ಅಜಿಲರ ಸುದೀರ್ಘ ಬಿರುದಾವಳಿಯನ್ನು ಅಜಿಲರ ಕೈಫಿಯತ್ತು ಒದಗಿಸುತ್ತದೆ. ವಾದಿರಾಜಸ್ವಾಮಿಗಳ ಒಂದೆರಡು ಪದ್ಯಗಳೂ ಇಲ್ಲಿವೆ. (ಸೊದೆ ಮಠದ ಕೈಫಿಯತ್ತು), ಇದಲ್ಲದೆ ಉಡುಪಿ ಅಷ್ಟಮಠದ ಗುರುಪರಂಪರೆಯ ಸ್ವಾಮಿಗಳಲ್ಲಿ ಅವರವರ ಸಾಹಿತ್ಯಕೃಷಿಯ ಸೂಚನೆಯೂ ಇದೆ. ವಿಷಯದ ಸಮರ್ಥನೆಗೆ ಸ್ಥಳೀಯ ಶಾಸನಗಳನ್ನೂ ಎತ್ತಿಕೊಡಲಾಗಿದೆ. (ಕುರುಗೋಡು ಕೈಫಿಯತ್ತು ಸೋಮನಾಥಪುರ ಕೈಫಿಯತ್ತು ಇತ್ಯಾದಿ), ಇಲ್ಲಿಯ ಶಾಸನ-ಗ್ರಂಥಗಳ ಉಲ್ಲೇಖಗಳನ್ನು ಬಿಟ್ಟರೂ ಉದ್ಧೃತವಾಗಿರುವ ಪದ್ಯ, ಭಟಾಂಗನಿ, ಪತ್ರದ ಒಕ್ಕಣಿಕೆ ಮೊದಲಾದವಗುಳನ್ನು ಸಂಗ್ರಹಿಸಿ ಪರಿಷ್ಕರಿಸಿ ಪ್ರಕಟಿಸುವುದು ಅವಶ್ಯವಿದೆ.

ಬರವಣಿಗೆ – ಭಾಷೆ :

ಸಾಹಿತ್ಯದ ಭಾಗವಾಗಿರುವ ಕಾವ್ಯಕೃತಿಗಳಿಗೆ ಮತ್ತು ದಾಖಲೆಯ ಭಾಗವಾಗಿರುವ ಶಾಸನಗಳಿಗೆ ಪ್ರಾಚೀನ ಕಾಲದಲ್ಲಿ ಗ್ರಂಥಸ್ಥ ಭಾಷೆಯನ್ನು ಬಳಸಲಾಗಿದೆ. ಇದರಿಂದಾಗಿ ಪ್ರಾಚೀನ ಆಡು ಭಾಷೆಯ ಸ್ವರೂಪವನ್ನು ಅರಿಯಲು ತಕ್ಕ ಸಾಮಗ್ರಿ ನಮಗೆ ಸಿಗುವದಿಲ್ಲವೆಂದೇ ಹೇಳಬೇಕು. ಇಂಥ ಸಂದರ್ಭದಲ್ಲಿ ಸ್ಥೂಲವಾಗಿಯಾದರೂ ಸಮಕಾಲೀನ ಆಡುಭಾಷೆಯನ್ನೊಳಗೊಂಡ ಕೈಫಿಯತ್ತುಗಳಿಗೆ ವಿಶಿಷ್ಟಸ್ಥಾನ ಸಲ್ಲುತ್ತದೆ.

ಕೈಫಿಯತ್ತುಗಳು ಹುಟ್ಟಿದುದು ೧೮-೧೯ನೆಯ ಶತಮಾನಗಳ ಮಧ್ಯಕಾಲದಲ್ಲಿ, ಈ ಸಂದರ್ಭದಲ್ಲಿ ಸ್ಥಳೀಯ ಪಾಳೆಯಗಾರರ ಕನ್ನಡ, ಮುಸಲ್ಮಾನರ ಉರ್ದು, ಮರಾಠರ ಮರಾಠಿ, ಆಂಗ್ಲರ ಇಂಗ್ಲಿಷ್ ಭಾಷೆಗಳು ತಮ್ಮ ದಟ್ಟವಾದ ಪ್ರಭಾವ ಬೀರಿ, ಕನ್ನಡದಲ್ಲಿ ಶುದ್ಧವಾದ ಶೈಲಿ ಪರಂಪರೆ ನಾಶವಾಗಿ, ಆಡಿದಂತೆ ಬರೆಯುವ ರೀತಿ ಮುನ್ನಡೆದಿದ್ದಿತು. ಇಂಥ ಭಾಷೆಯನ್ನು ಬಳಸಿಕೊಂಡು ಕೈಫಿಯತ್ತುಗಳು ಹುಟ್ಟಿಕೊಂಡಿವೆ.

ಕೈಫಿಯತ್ತುಗಳನ್ನು ಬರೆದವರು ಸಾಮಾನ್ಯರ ನಡುವೆ ಬಾಳಿದ ಕರಣಿಕರು ಇಲ್ಲವೆ ಅಕ್ಷರಜ್ಞರು. ಕೆಲವೊಮ್ಮೆ ಸಾಮಾನ್ಯರ ಜೊತೆ ವ್ಯವಹರಿಸುತ್ತಲಿದ್ದ ಅಧಿಕಾರಿಗಳು, ಇವರು ಸಹಜವಾಗಿಯೇ ಆ ಕಾಲದ 'ಆಡುಭಾಷೆ'ಯನ್ನು, 'ಆಡಳಿತಭಾಷೆ'ಯನ್ನು ಬಳಸಿದ್ದಾರೆ. ಒಂದು ಕಡೆ ಆಡುಭಾಷೆಗೆ ಹತ್ತಿರವಾದ ಧ್ವನಿ ಉಳಿದುಕೊಂಡುದು, ಇನ್ನೊಂದು ಕಡೆ ಆಡಳಿತದಲ್ಲಿ ಸೇರಿಕೊಂಡಿದ್ದ ಅನ್ಯಭಾಷೆಯ ಪದಗಳನ್ನು ವಿಶೇಷವಾಗಿ ಬಳಸಿರುವುದು ಇಲ್ಲಿಯ ಮುಖ್ಯ ಲಕ್ಷಣವಾಗಿದೆ. ಒಟ್ಟು ಇಲ್ಲಿಯ ಭಾಷಾಸ್ವರೂಪವನ್ನು ಹೀಗೆ ಸಂಗ್ರಹಿಸಬಹುದು.

೧. ಆಡುಭಾಷೆಯನ್ನಾಗಲೀ, ಗ್ರಂಥಸ್ಥಭಾಷೆಯನ್ನಾಗಲೀ ಲಿಪಿಬದ್ಧಗೊಳಿಸುವಾಗ ಅಂದಿನ ಬರವಣಿಗೆಯ ಕ್ರಮದಲ್ಲಿ ಕೆಲವು ದೋಷಗಳು ಬಳಕೆಯಲ್ಲಿದ್ದವು. ಅವುಗಳಲ್ಲಿ ಮುಖ್ಯವಾದುದು ಅಕ್ಷರದ ಅಂಗವಾಗಿ ಬರುವ ಮಹಾಪ್ರಾಣಗಳನ್ನು – ದೀರ್ಘಗಳನ್ನು ಸರಿಯಾಗಿ ಬರೆಯುತ್ತಿದ್ದುದು. ಹೀಗೆ ಬರದೆ ಪ್ರತ್ಯೇಕವಾಗಿ ಬರುತ್ತಿದುದನ್ನು ತಪ್ಪಾಗಿ ಬರೆಯುತ್ತಿದುದು. ಉದಾ: ಕೋಟೆ–ಕೊಟೆ, ದೇವಸ್ಥಾನ–ದೆವಸ್ಥಾನ, ಕೈಫಿಯತ್ತು–ಕೈಪಿಯತ್ತು, ಭೈರವ–ಬೈರವ ಇತ್ಯಾದಿ. ಕೆಲವು ಸಂದರ್ಭಗಳಲ್ಲಿ ಇವುಗಳಿಗೆ ವ್ಯತಿರಿಕ್ತವಾದ ಉದಾಹರಣೆಗಳೂ ಸಿಗುತ್ತವೆ. ಉಳಿಗದವರು<ಊಳಿಗದವರು, ಗಟ್ಟದ<ಘಟ್ಟದ.

೨. ಕನ್ನಡಭಾಷೆಯಲ್ಲಿ ಯಕಾರಾಗಮ, ವಕಾರಾಗಮಗಳ ಪಾತ್ರ ಮುಖ್ಯವಾದುದು. ಸ್ವರಗಳು ಕರಗುವಲ್ಲಿ ಅರ್ಥವನ್ನು ಎತ್ತಿಹಿಡಿಯುವುದಕ್ಕಾಗಿ, ಬರುವ ಇವು, ನಮ್ಮ ಭಾಷೆಯನ್ನು ನಿಗ್ರಹಿಸುತ್ತ ಬಂದಿವೆ. ಪದಗಳಲ್ಲಿಯೂ ಇವು ಕರಗಿ ಕನ್ನಡದ ರೂಪ ಪರಿವರ್ತನೆಗೆ ಕಾರಣವಾಗಿವೆ. ಕೈಫಿಯತ್ತುಗಳಲ್ಲಿ ಇದಕ್ಕೆ ಉದ್ದಕ್ಕೂ ಉದಾಹರಣೆಗಳು ಸಿಗುತ್ತವೆ. ಉದಾ: ಯೀ ವೂರಿಗೆ ಪೂರ್ವದಲ್ಲಿ ಮಿಥಿಲಾಪುರಿಯೆಂನ್ಬೊ ನಾಮ. ಯೀ ವೂರ್‍ರಿಗೆ ವಳಗೆ ಯಿರುವ – ಇತ್ಯಾದಿ.

೩. ಕನ್ನಡದಲ್ಲಿ ಮೂಲತಃ ಇದ್ದುದು ಸಕಾರ. ಸಂಸ್ಕೃತದ ಶ, ಷಗಳು ಕನ್ನಡಕ್ಕೆ ಬರುವಾಗ ಸಕಾರಕ್ಕೆ ತಿರುಗಿವೆ. ಕೆಲವೊಮ್ಮೆ ಸಕಾರ ಶ, ಷ ಗಳಿಗೆ ತಿರುಗಿದೆ. ಮತ್ತೆ ಕೆಲವೊಮ್ಮೆ ಇವು ಪರಸ್ಪರ ಸ್ಥಾನಪಲ್ಲಟಗೊಳಿಸಿಕೊಂಡಿವೆ. ಶಿವ>ಸಿವ, ಪರಶುರಾಮ>ಪರಸರಾಮ, ಭಾಷೆ>ಭಾಶೆ, ಸೀಮೆ>ಶೀಮೆ, ಸೋದೆ>ಶೊದೆ.

೪. ಸಂಯುಕ್ತಾಕ್ಷರ ವಿರಳಾಕ್ಷರವಾಗುವುದು ಕನ್ನಡ ಭಾಷೆಯಲ್ಲಿ ಸಹಜ, ಉದಾ: ದರ್ಶನ>ದರುಶನ, ವೈರಾಗ್ಯ>ವಯಿರಾಗ್ಯ, ಕೆಲವೊಮ್ಮೆ ಇದಕ್ಕೆ ವಿರುದ್ಧ ಪ್ರಕ್ರಿಯೆಗಳೂ ಜರುಗಿವೆ. ಉದಾ: ಹುಟ್ಟುವಳಿ>ಹುಟುವಳಿ, ಕಳುಹಿಸಿಕೊಟ್ಟು>ಕಳುಹ್ಸಿಕೊಟ್ಟು.

೫. ವಿಭಕ್ತಿಪಲ್ಲಟ ಕನ್ನಡಭಾಷೆಯ ವಿಶಿಷ್ಟ ಲಕ್ಷಣ. ಕೇಶಿರಾಜ ಇದನ್ನು ಗುರುತಿಸಿ ವಿವರವಾಗಿಯೇ ಚರ್ಚಿಸಿದ್ದಾನೆ. ಇದು ಅರ್ಥಕ್ಕೆ ಬಾಧೆ ಬರದಂತೆ ಜರುಗುತ್ತಿದ್ದು, ಭಾಷೆಯನ್ನು ಸಂಕೀರ್ಣವಾಗಿ ಬಳಸಲು ಒದಗಿದ ಒಂದು ಅನುಕೂಲವೆಂದೇ ಹೇಳಬೇಕು. ಕೈಫಿಯತ್ತುಗಳಲ್ಲಿ ಈ ಕ್ರಿಯೆ ತಕ್ಕ ಪ್ರಮಾಣದಲ್ಲಿ ಕಂಡುಬರುತ್ತದೆ. ಕೆಲವೊಮ್ಮೆ ಅರ್ಥಕ್ಕೆ ಬಾಧೆ ಬರುವಂತೆಯೂ ಬಳಸಿದ ಉದಾಹರಣೆಗಳು ಸಿಗುತ್ತವೆ. ಉದಾ: ಅರಮನೇಯು ಕಟ್ಟಿಸಿ, ಕುದುರೆಗಳ ತೆಗೆದುಕ್ಕೊಂಡು ಹೋಗಿ ಇತ್ಯಾದಿ.

೬. ಋಕಾರ, ರಕಾರದ ಒತ್ತುಗಳು ಬರೆಹದಲ್ಲಿ ಕೆಲವೊಮ್ಮೆ ಸ್ಥಾನಪಲ್ಲಟ ಪಡೆಯುವುದುಂಟು. ಕೈಫಿಯತ್ತು ಇದಕ್ಕೆ ಹಲವು ಉದಾಹರಣೆಗಳನ್ನು ಒದಗಿಸುತ್ತವೆ. ಉದಾ: ಮೃತ>ಮ್ರುತ, ಗೃಹ>ಗ್ರುಹ, ವೃಂದಾವನ>ಉ್ರಂದಾವನ, ವೃತ್ತಾಂತ>ಉ್ರತ್ತಾಂತ, ವೃಷಭಧ್ವಜ>ಉ್ರಷಭಧ್ವಜ.

೭. ಎಡಬಲದ ಸ್ವರಗಳ ಪ್ರಭಾವಕ್ಕೆ ಅನುಗುಣವಾಗಿಸ್ವರಸಮೀಕರಣ ಇಲ್ಲಿ ಜರುಗಿದುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಉದಾ: ಕಡಿದು>ಕಡದು, ಕುಳಿತುಕೊಂಡು>ಕುಳುತುಕೊಂಡು.

೮. ಈ ರೂಪವ್ಯತ್ಯಾಸಗಳಲ್ಲದೆ ವಿದೇಶಿ ಪದಗಳ ಬಳಕೆಯೂ ಮಡಿಮೈಲಿಗೆಯ ಕೃತಕತೆಯನ್ನು ಮೀರಿ ಸಹಜವೆಂಬಂತೆ ಕಂಡುಬರುತ್ತದೆ. ಲಡಾಯ, ಪರವಾನೆ, ಖಾವಂದ, ಸನ್ನದು, ನವಾಬ, ಕುಂಪಣಿ ಸರಕಾರ ಇತ್ಯಾದಿ ಪದಗಳನ್ನು ಇಲ್ಲಿ ಲಕ್ಷಿಸಬೇಕು.

ಹೀಗೆ ಭಾಷೆಯ ವೈಶಿಷ್ಟ್ಯಗಳಲ್ಲದೆ ಗೊತ್ತುಮಾಡಿಸಿ>ಗುತ್ತುಮಾಡಿಸಿ, ತೆಗೆದುಕೊಳ್ಳಬೇಕು> ತೆಗೆದುಕೊಲ್ಲಬೇಕು ಎಂಬಂಥ ರೂಪಗಳನ್ನೂ ಇಲ್ಲಿ ಕಾಣುತ್ತೇವೆ.

ಮಹತ್ವದ ಘಟನೆಗಳು :

ಮರೆ ಮೋಸಗಳಿಗೂ ಅನ್ಯಾಯಗಳಿಗೂ ರೋಚಕ ಘಟನೆಗಳಿಗೂ ಇಲ್ಲಿ ಎಡೆ ಲಭಿಸಿದೆ. ಕುಮಾರರಾಮನನ್ನು ಮಲತಾಯಿ ಮೋಹಿಸಿದ್ದು (ಭಟ್ಟರಹಳ್ಳಿ ಕೈಫಿಯತ್ತು ಇತ್ಯಾದಿ), ಹೊಯ್ಸಳರಾಣಿ ಲಕ್ಕಣ್ಣ-ವೀರಣ್ಣರನ್ನು ಮೋಹಿಸಿದ್ದು (ಚಿಕ್ಕಮಗಳೂರು ಕೈಫಿಯತ್ತು), ವಿಜಯನಗರದ ವೆಂಕಟಪತಿರಾಯರ ಸೂಳೆ ದೊಡ್ಡ ಭೋಗಸಾನಿ ಚೇತಪಟ್ಟಿ-ಚೆಂಗಲ್ಪಟ್ಟಿ ಪಾಳೆಯಗಾರ ರಂಗಪತಿರಾಜನನ್ನು ಮೋಹಿಸಿ ಮೊಲೆ ಕೊಯ್ಸಿಕೊಂಡುದು (ಆರ್ಕಾಡು ಕೈಫಿಯತ್ತು), ಚಕೋರಮಲ್ಲಿಭಟ್ಟನು ಮಗಳನ್ನು ಕೇಳಿದ ರಾಜಭಯಕ್ಕೆ ಅಂಜಿ ಕುಟುಂಬ ಸಹಿತ ಜಲಪ್ರವೇಶ ಮಾಡಿದುದು (ಸೂಳೆಕೆರೆ ಕೈಫಿಯತ್ತು) ಹೆಣ್ಣು-ಗಂಡುಗಳ ಕಾಮವ್ಯಸನಕ್ಕೆ ಉದಾಹರಣೆಯಾಗಿವೆ. ಯಜ್ಞಪುರುಷನಿರುವ ಕಾರಣ ಬಲಗೈಯಲ್ಲಿ ನೀಡಿದ ದಾನ ದಗ್ಧವಾಗುವುದೆಂದು ಚಿಕ್ಕದೀಕ್ಷಿತರು ಎಡಗೈ ಒಡ್ಡಿ ಪ್ರೌಢದೇವರಾಯನಿಂದ ದಾನ ಪಡೆಯುವುದು (ಅಂಕನಾಥಪುರದ ಅರ್ಕೇಶ್ವರ ಸ್ವಾಮಿ ಕೈಫಿಯತ್ತು), ಉಮ್ಮತ್ತೂರು ಪಾಳೆಯಗಾರನು ೭೦೦ ಎತ್ತುಗಳ ಕೋಡುಗಳಿಗೆ ದೀವಟಿಗೆ ಕಟ್ಟಿ ರಾತ್ರಿ ಯುದ್ಧ ಮಾಡಿದುದು, ಕೊನೆಗೆ ಕುದುರೆ ಸಹಿತ ಕೋಟೆಯ ಮೇಲಿಂದ ಕೆಳಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡುದು (ನಗರಸೀಮೆ ಕೈಫಿಯತ್ತು), ಕಾಬೇಟಿನ ಹೆಗಡೆ ಮಲಗಿ ಕಾಣಿಕೆ ಸ್ವೀಕರಿಸಿದರೆ ಪ್ರಜೆಗಳು ಕುಳಿತು ಅದನ್ನು ಕೊಡುವಲ್ಲಿ ಮನಸ್ತಾಪ ಉದ್ಭವಿಸಿದುದು (ಕಾರ್ಕಳದ ಕೈಫಿಯತ್ತು), ಚೌಟ ಪದ್ಮಲದೇವಿಯ ಗಂಡ ಮುದ್ರೆ ಉಂಗುರು ಕಸಿದುಕೊಂಡು ರಾಜ್ಯಾಪಹರಣದ ದುಷ್ಪ್ರಯತ್ನ ಮಾಡಿದುದು (ಚವುಟ ಅರಸುಗಳ ಕೈಫಿಯತ್ತು), ಕಾರ್ಕಳದ ಗೊಮ್ಮಟಶಿಲ್ಪ ನಿರ್ಮಿಸಿದ ಶಿಲ್ಪಿಯ ಕೈ ಕತ್ತರಿಸಿದುದು (ಕಾರ್ಕಳ ಕೈಫಿಯತ್ತು), ಅಜಿಲರು, ಚೌಟರು, ಭೈರಸರು, ಮೂಲಿಗರು, ಪಾಂಡ್ಯರ ಒಪ್ಪಂದ ಪ್ರಸಂಗದಲ್ಲಿ ಚೌಟರಾಣಿ ಮುಷ್ಠಿಯಲ್ಲಿ ನೊಣ ಹಿಡಿದು ಪ್ರತಿಜ್ಞೆ ಮಾಡಿದುದು (ಕಾರ್ಕಳ ಕೈಫಿಯತ್ತು), ರಾಣಿಯನ್ನು ಕೊಂದು ಅವಳ ಸಂಬಂಧಿಕರಿಗೆ ಅವಳ ಮಾಂಸದ ಅಡಿಗೆ ಉಣಿಸಿದುದು (ತುಳುದೇಶದ ಕಡಬಾ ಸಂಸ್ಥಾನದ ಕೈಫಿಯತ್ತು), ಸ್ವಾದಿ ಅರಸು ವಿಜಪುರದ ಆದಿಲಶಹಾನ ಮುಂದೆ ದಶಾವತಾರದ ಆಟ ಆಡಿ ರಾಜನನ್ನು ಸಂತೋಷಗೊಳಿಸಿದ್ದು ಮತ್ತು ಊಟದ ತಟ್ಟೆಯಲ್ಲಿಯ ಅಡಿಗೆ ಹೂವಾದುದು (ಸಿರಸಿ ಕೈಫಿಯತ್ತು), ಬಾಳೆಹಳ್ಳಿಮಠದ ಚೆನ್ನಯ್ಯ ಸೋತು ಮಾಧ್ವ ಗುರುಗಳನ್ನು ಕುರಿತು ಪದ್ಯ ಬರೆದುದು (ಶೊದೆ ಮಠದ ಕೈಫಿಯತ್ತು), ಖಡ್ಗಹೂಳಿ ಮೇಲೆ ಬಿದ್ದು ಚೆನ್ನಮರಾಜ ಆತ್ಮಾರ್ಪಣೆ ಮಾಡಿಕೊಂಡುದು (ಆರ್ಕಾಡು ಸಂಸ್ಥಾನದ ಕೈಫಿಯತ್ತು), ನಾಯಿಯನ್ನು ಅಡವು ಇಟ್ಟು ಸಾಲ ಪಡೆದದು(ಕೊಕ್ಕಸಮುದ್ರದ ಕೈಫಿಯತ್ತು),

ವೆಂಕಪ್ಪನನ್ನು ಕಂಬಳಿ ಮೂಟೆಯಲ್ಲಿ ಕಟ್ಟಿ ಆನೆಯಿಂದ ತುಳಿಸಲು ಪ್ರಯತ್ನಿಸಿದ್ದು, ಬಾಲದ ಹನುಮಪ್ಪನಾಯಕ "ನಿನ್ನ ರಾಣಿಯನ್ನು ಕೊಟ್ಟರೆ ಇಂಥ ಮಕ್ಕಳನ್ನು ಹುಟ್ಟಿಸಿಕೊಡುತ್ತೇನೆ" ಎಂದು ಆದಿಲಶಹಾನಿಗೆ ದಿಟ್ಟ ಉತ್ತರ ಕೊಟ್ಟುದು, ಈ ವಂಶದ ನೀಲಮ್ಮನ ರುಂಡ ಹಾರಿಸಿದ್ದು (ಕುರುಗೋಡ ಕೈಫಿಯತ್ತು), ಹಂಡೆ ರಾಮಪ್ಪನನ್ನು ಹಜಾಮತಿ ಮಾಡಿಸಿಕೊಳ್ಳುವಾಗ ಇರಿದು ಕೊಂದುದು (ಬಳ್ಳಾರಿಯ ಕೈಫಿಯತ್ತು), ದೊಡ್ಡಪ್ಪ ನಾಯಕನನ್ನು ಕೊಲ್ಲಲು ಹೋಗಿ ದಿಂಬವನ್ನು ಕತ್ತರಿಸಿ ಮೋಸ ಹೋದುದು (ಬಳ್ಳಾರಿ ಕೈಫಿಯತ್ತು), ಕೃಷ್ಣದೇವರಾಯನು ದಾಸಿಪುತ್ರನೆಂಬ ಸೂಚನೆ (ಕೊಮಾರದೇವರ ಕೈಫಿಯತ್ತು), ಅಬ್ಬಕ್ಕರಾಣಿಯ ಕತ್ತರಿಸಿದ ರುಂಡ ವೈರಿಯ ಮುಖ ನೋಡಲು ನಿರಾಕರಿಸಿ ಹಿಂದಕ್ಕೆ ತಿರುಗಿದುದು (ಚವುಟ ಅರಸುಗಳ ಕೈಫಿಯತ್ತು), ಸಂತೆಬೆನ್ನೂರಿನಲ್ಲಿ ರಾಮಚಂದ್ರ ದೇವಾಲಯವನ್ನು ಮುರಿದು ಮಸೀದೆಯನ್ನಾಗಿಸಿದ್ದುದು (ಉತ್ಸಂಗಿ ವೇಂಟಿಕೆ ಸಲ್ಲುವ ಸಂತೆಬೆನ್ನೂರ ಶೀಮೆಯ ಕೈಫಿಯತ್ತು), ಗೆರಸೊಪ್ಪೆಯಲ್ಲಿದ್ದ ಪಾರ್ಶ್ವನಾಥ ತೀರ್ಥಂಕರನ ೪ ವಿಗ್ರಹಗಳಲ್ಲಿ "ವೊಂದು ಮೂರ್ತಿಯನ್ನು ಸರದಾರ್‍ರು ಮೇಜರ್ ಮಕ್ಕಂಜಿ ಸಾಹೇಬರು ತೆಗೆದುಕೊಂಡು ಬಂದ್ರು" – ಇಂಥ ನೂರಾರು ಘಟನೆಗಳು ಇಲ್ಲಿ ಸಿಗುತ್ತವೆ.

ಪಾಠಪರಿಷ್ಕರಣ :

ಯಾವುದೇ ಭಾಷೆಯಲ್ಲಿ 'ಶಿಷ್ಟಪದ', 'ಜನಪದ'ವೆಂಬ ಎರಡು ಸ್ತರಗಳು ಕಂಡುಬರುತ್ತವೆ. ಇವುಗಳ ಮಧ್ಯೆ 'ಜನಪ್ರಿಯ'ವೆಂಬ ಇನ್ನೊಂದು ಸ್ತರವಿದ್ದು, ಕೈಫಿಯತ್ತುಗಳ ಭಾಷೆ ಈ 'ಜನಪ್ರಿಯ'ವರ್ಗಕ್ಕೆ ಸೇರುತ್ತದೆ. ಈ ಶಿಷ್ಟಪದ, ಜನಪ್ರಿಯ ಮತ್ತು ಜನಪದ ಭಾಷೆಗಳಲ್ಲಿ ಹುಟ್ಟಿದ ಕೃತಿಗಳ ಸಂಪಾದನೆಗಾಗಿ ಒಂದೇ ಬಗೆಯ ತತ್ವಗಳಿಗೆ ಬದಲು, ಅವುಗಳಿಗೆ ವಿಶಿಷ್ಟವಾದ ತತ್ವಗಳನ್ನು ಅನ್ವಯಿಸಬೇಕಾಗುತ್ತದೆ. ಕೈಫಿಯತ್ತುಗಳ ಸಂಪಾದನೆಗೆ ಈ ತಿಳುವಳಿಕೆ ಮುಖ್ಯವಾಗಿದೆ.

ಸ್ಥಳೀಯ ಕರಣಿಕರಿಂದ ಮೆಕೆಂಝಿ ಬರೆಯಿಸಿದ ಕೈಫಿಯತ್ತುಗಳು ತುಂಬ ಜೀರ್ಣವಾಗಲು ಕಾಲಕ್ರಮದಲ್ಲಿ ಸಿ.ಪಿ. ಬ್ರೌನ್ ಅವುಗಳನ್ನು ನಕಲು ಮಾಡಿಸಿದನೆಂದು ತಿಳಿದುಬರುತ್ತದೆ. ಹೀಗಾಗಿ ಕೆಲವು ಮೂಲ ಕೈಫಿಯತ್ತುಗಳು, ಕೆಲವು ನಕಲು ಕೈಫಿಯತ್ತು ಸಿಗುತ್ತವೆ. ಈ ನಕಲು ಪ್ರತಿಯನ್ನು ಸಿದ್ಧಪಡಿಸುವಾಗ ಕೈಫಿಯತ್ತುಗಳು ಒಂದರೊಳಗೊಂದು ಸೇರಿಹೋದುದೂ ಉಂಟು. ಉದಾ: ಸೋಸಲೆ ಕೈಫಿಯತ್ತು–೧ರಲ್ಲಿ ಸೋಮನಾಥಪುರ ಕೈಫಿಯತ್ತು, ತಳಕಾಡು ಕೈಫಿಯತ್ತು–೨ ಸೇರಿಹೋಗಿದ್ದವು. ಹೊಳೆಹೊನ್ನೂರು ಕೈಫಿಯತ್ತಿನಲ್ಲಿ ಉಡುಫಣಿ ಕೈಫಿಯತ್ತು, ತೊಣ್ಣೂರು ರಾಕ್ಷಸಿ ಕೈಫಿಯತ್ತು ಸೇರಿಹೋಗಿದ್ದವು, ಇಂಥವುಗಳನ್ನು ಬಿಡಿಸಿಕೊಂಡಿದ್ದೇವೆ.

ಕೆಲವೊಮ್ಮೆ ಒಂದು ಕೈಫಿಯತ್ತಿನಲ್ಲಿ ಅನೇಕ ಸ್ಥಳಗಳನ್ನು ಕುರಿತು ವಿವರಗಳನ್ನು ಬರೆಯುತ್ತ, ಅವುಗಳನ್ನು "ಕೈಫಿಯತ್ತು" ಎಂಬ ಉಪಶೀರ್ಷಿಕೆಯಿಂದ ಕರೆಯಲಾಗಿದೆ. ಉದಾ: "ಮಿರಲೆ ಕೈಫಿಯತ್ತು" ಕೃತಿಯ ಉಪಭಾಗವಾಗಿ "ಯೋಗನರಸಿಂಹ ದೇವಸ್ಥಾನದ ಕೈಫಿಯತ್ತು" ಹೆಸರಿನಲ್ಲಿ ವಿವರಗಳನ್ನು ಬರೆಯಲಾಗಿದೆ. "ಶಿರಸಿ ಕೈಫಿಯತ್ತು" ಕೃತಿಯಲ್ಲಿ "ಶಿರಸಿ ಮಾರಮ್ಮದೇವರ ಕೈಫಿಯತ್ತು" ಮೊದಲಾದ ಉಪಶೀರ್ಷಿಕೆಗಳಿವೆ. ಮೂಲಪಾಠಕ್ಕೆ ಧಕ್ಕೆ ಬರಬಾರದೆಂದು ಅವುಗಳನ್ನು ಬಿಡಿಸಿಕೊಳ್ಳದೆ, ಹಾಗೆಯೇ ಇಟ್ಟುಕೊಂಡಿದ್ದೇವೆ.

ಕೆಲವು ಕೈಫಿಯತ್ತಿನ ಒಂದೆರಡು ಪ್ಯಾರಾಗಳು ಇನ್ನೊಂದು ಕೈಫಿಯತ್ತಿನಲ್ಲಿ ಕಂಡುಬರುತ್ತವೆ. ಮೂಲಪಾಠವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಅವುಗಳನ್ನೂ ಹಾಗೆಯೇ ಇಟ್ಟುಕೊಂಡಿದ್ದೇವೆ.

ಮೆಕೆಂಝಿ ಬರೆಯಿಸಿದ ಮೂಲ ಮತ್ತು ಬ್ರೌನ್ ಪ್ರತಿಮಾಡಿಸಿದ ನಕಲು ಕೈಫಿಯತ್ತುಗಳನ್ನು ಅಭ್ಯಾಸಿಯೊಬ್ಬ ಅಲ್ಲಲ್ಲಿ ಮಸಿಯಿಂದ ತಿದ್ದಿದ, ಹೊಸ ಪಾಠವನ್ನು ಸೇರಿಸಿದ ಪ್ರಸಂಗಗಳೂ ಉಂಟು. ಇದರಿಂದಾಗಿ ಕೈಫಿಯತ್ತುಗಳಲ್ಲಿ ಮೂಲಪಾಠ ಗುರುತಿಸುವುದು ಕೆಲವೊಮ್ಮೆ ಅಸಾಧ್ಯವೆನಿಸಿದೆ.

ಒಂದಕ್ಕಿಂತ ಹೆಚ್ಚು ನಕಲು ಪ್ರತಿಗಳಲ್ಲಿ ದೊರೆಯುವ ಕೈಫಿಯತ್ತುಗಳಲ್ಲಿ ಅಕ್ಷರ, ಶಬ್ದ, ವಾಕ್ಯ, ಪ್ಯಾರಾ, ಪುಟವ್ಯಾಪ್ತಿಯ ವ್ಯತ್ಯಾಸ ತೋರಿಬರುತ್ತದೆ. ಈಗ ಇವುಗಳಲ್ಲಿ ಯಾವುದು ಮೂಲಪಾಠ? ಎಂದು ನಿರ್ಣಯಿಸುವುದೂ ಕಠಿಣವಾಗುತ್ತದೆ. ವಸ್ತುಸ್ಥಿತಿ ಹೀಗಿರುವುದರಿಂದ ಇದ್ದವುಗಳಲ್ಲಿಯೇ ಸಮಗ್ರವಾಗಿರುವ, ಶುದ್ಧವಾಗಿರುವ, ಸ್ಫುಟವಾಗಿರುವ ಒಂದು ಪ್ರತಿಯನ್ನು ನಾವು ಸ್ವೀಕರಿಸಿದ್ದೇವೆ ಮತ್ತು ಶಾಸನ ಪರಿಷ್ಕರಣ ಅಥವಾ ಏಕೈಕ ಹಸ್ತಪ್ರತಿ ಪರಿಷ್ಕರಣ ಮದರಿಯಲ್ಲಿ ಅಲ್ಲಿ ಇರಬಹುದಾದ ಭಾಷಾ ದೋಷಗಳನ್ನು ತಿದ್ದದೆ ಯಥಾವತ್ ಪ್ರಕಟಿಸಿದ್ದೇವೆ. ಸಾಧ್ಯವಿದ್ದಲ್ಲೆಲ್ಲ ತೀರ ವಿಕಾರಗೊಂಡ ಶಬ್ದಗಳ ಶುದ್ಧರೂಪವನ್ನು ಮಗ್ಗುಲಲ್ಲಿಯೇ ಚೌಕಕಂಸಿನಲ್ಲಿ ಬಾಣದ ಗುರುತಿನೊಂದಿಗೆ ಕೊಟ್ಟಿದ್ದೇವೆ. ಬಿಟ್ಟುಹೋದ ಅಕ್ಷರವನ್ನು ಅಧಿಕ ಚಿಹ್ನೆಯೊಂದಿಗೆ ಚೌಕ ಕಂಸಿನಲ್ಲಿ ಸೇರಿಸಿದ್ದೇವೆ. ಹೆಚ್ಚಿನ ಪಾಠವನ್ನು ಕೆಲವೊಮ್ಮೆ ಅಡಿಯಲ್ಲಿ ನಮೂದಿಸಿದ್ದೇನೆ.

ಪರಿಷತ್ ಪತ್ರಿಕೆಯಲ್ಲಿ ಆರ್ಕಾಡ ಸಂಸ್ಥಾನದ ಕೈಫಿಯತ್ತು, ಬಳ್ಳಾರಿಯ ಕೈಫಿಯತ್ತು, ಶೃಂಗೇರಿಯ ಕೈಫಿಯತ್ತು, ಕಣಕುಪ್ಪೆಕೋಟೆ ಕಟ್ಟಿದ ಕೈಫಿಯತ್ತುಗಳನ್ನು ಪ್ರಕಟಿಸುತ್ತ, ಸಂಪಾದಕರು ಅಲ್ಲಲ್ಲಿ ತಿದ್ದುಪಡಿ ಮಾಡಿದ್ದಾರೆ. ಇವುಗಳನ್ನೇ ನಾನು ಎತ್ತಿಕೊಂಡಿದ್ದೇನೆ.

ಮೂಲ ಕೈಫಿಯತ್ತುಗಳನ್ನು ಅನೇಕ ಗ್ರಾಮಗಳವರು ಬರೆದುಕೊಟ್ಟಿರುವುದರಿಂದಲೂ, ಸಿ.ಪಿ.ಬ್ರೌನ್ ಕಾಲಕ್ಕೆ ಹಲವು ಜನ ಲಿಪಿಕಾರರು ನಕಲು ಮಾಡಿರುವುದರಿಂದಲೂ ಅಕ್ಷರಗಳ ವಿನ್ಯಾಸದಲ್ಲಿ ಅನೇಕ ಬಗೆಗಳು ತೋರಿಬರುವುದರಿಂದ ಅವುಗಳ ವಾಚನ ಕ್ಲೇಶಕರವೆನಿಸುತ್ತವೆ. ಹೀಗಾಗಿ ಒಂದು ಅಕ್ಷರವನ್ನು ಇನ್ನೊಂದು ಅಕ್ಷರವಾಗಿ ನಾವು ಓದಿರುವ ಸಾಧ್ಯತೆಯಿದೆ. ಈ ಪ್ರಸಂಗದಲ್ಲಿ ಇವುಗಳ ಮಾತೃಕಾಪ್ರತಿ, ಸೋದರಪ್ರತಿಗಳ ನೆರವು ಪಡೆಯಬಹುದಾದರೂ ಅವೆರಡರಲ್ಲಿ ಯಾವುದು ಮೂಲಪಾಠವೆಂಬುದೇ ಕೆಲವೊಮ್ಮೆ ಸಂದೇಹ ಹುಟ್ಟಿಸುವುದರಿಂದ, ತಾಳೆ ನೋಡುವ ಕೆಲಸವನ್ನು ಕೈಬಿಟ್ಟು, ನಾವು ಆಯ್ಕೆ ಮಾಡಿಕೊಂಡ ಪ್ರತಿಯ ಪಾಠವನ್ನು ಮೇಲೆ ಸೂಚಿಸಿದ ಸಂಸ್ಕರಣ ರೀತಿಯಲ್ಲಿ ಯಥಾವತ್ ಇಲ್ಲಿ ಪ್ರಕಟಿಸಿದ್ದೇವೆ. ಹೀಗಿದ್ದೂ ಅಕ್ಷರಗಳನ್ನು ತಪ್ಪಾಗಿ ಓದಿರುವ ಸಂಭವವಿದೆ. ಹೀಗೆ ಕೇವಲ ಭಾಷೆ–ಅಕ್ಷರಗಳ ಪರಿಜ್ಞಾನವೊಂದೇ ಸಾಲದು, ಕೈಫಿಯತ್ತುಗಳು ಸ್ಥಳೀಯ ಚರಿತ್ರೆಗಳಾದುದರಿಂದ ಇವುಗಳ ಸಂಪಾದಕನಿಗೆ ಆಯಾ ಸ್ಥಳದ ಭೌಗೋಲಿಕ ಮತ್ತು ಐತಿಹಾಸಿಕ ತಿಳಿವಳಿಕೆ ಅಗತ್ಯವೆನಿಸುತ್ತದೆ. ಅನೇಕ ಸಲ ಇವುಗಳನ್ನು ಆಯಾ ಸ್ಥಳದಲ್ಲಿಯೇ ನಿಂತು ಪರಿಷ್ಕರಿಸುವುದು ಉತ್ತಮವೆಂದು ನಮಗೆ ಮನವರಿಕೆಯಾಗಿದೆ. ಇದು ಕಷ್ಟಸಾಧ್ಯವೆಂದು ಬೇರೆ ಹೇಳಬೇಕಿಲ್ಲ. ಈ ಎಲ್ಲ ಮಿತಿಗಳ ಮಧ್ಯದಲ್ಲಿ ನಿಂತು ಈ ಪರಿಷ್ಕರಣ ಕಾರ್ಯವನ್ನು ಪೂರೈಸಲಾಗಿದ್ದು, ಅಲ್ಲಲ್ಲಿ ಉಳಿದಿರಬಹುದಾದ ದೋಷಗಳನ್ನು ವಿದ್ವಾಂಸರು ಮನ್ನಿಸುವರೆಂದು ನಂಬಿದ್ದೇವೆ.

ಕೈಫಿಯತ್ತುಗಳ ಪ್ರಕಟನೆ – ಅಧ್ಯಯನ :

೧೮ನೆಯ ಶತಮಾನದ ಕೊನೆ ೧೯ನೆಯ ಶತಮಾನದ ಮೊದಲ ಭಾಗದಲ್ಲಿ ಹುಟ್ಟಿದ ಕೈಫಿಯತ್ತುಗಳ ಮಹತ್ವವನ್ನು ಬಹಳ ದಿನಗಳ ಹಿಂದೆಯೇ ವಿದ್ವಾಂಸರು ಗುರುತಿಸಿದ್ದಾರೆ. ಬಿ.ರಾಮರಾವ್ ಮೊದಲಾದವರು ೧೯೨೪ರಷ್ಟು ಪೂರ್ವದಲ್ಲಿಯೇ ೪–೫ ಕೈಫಿಯತ್ತುಗಳನ್ನು ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಮೊದಲಾದವುಗಳಲ್ಲಿ ಪ್ರಕಟಿಸಿದ್ದಾರೆ. ಟಿ.ಚಂದ್ರಶೇಖರ ಅವರ "An alphabetical index of kannada manuscripts in the Government Oriental manuscripts library, Madras (Mackenzie's collection)" ಹೆಸರಿನ ಕೆಟಲಾಗ್ ಪ್ರಕಟಿಸುವ ಮೂಲಕ ಕೈಫಿಯತ್ತುಗಳ ದೊಡ್ಡಗಣಿ ವಿದ್ವಾಂಸರ ಗಮನಕ್ಕೆ ಬಂದಿತು. ಆಮೇಲೆ ಕೈಫಿಯತ್‌ನ್ನು ಅಧ್ಯಯನಕ್ಕೆ ಎತ್ತಿಕೊಂಡವರು ಡಾ. ಜಿ. ವರದರಾಜ್‌ರಾವ. ಅವರು ತಮ್ಮ ಪಿಎಚ್.ಡಿ. ಪ್ರಬಂಧದಲ್ಲಿ ಕೆಲವನ್ನು ಸೂಕ್ತರೀತಿಯಲ್ಲಿ ಬಳಸಿಕೊಂಡಿದ್ದಾರೆ.

ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾದ ಕೈಫಿಯತ್‌ಗಳನ್ನು ವಿದ್ಯಾರ್ಥಿಯಾಗಿರುವಾಗಲೇ ನಾನು ಗಮನಿಸಿದ್ದೇನು. ಅಧ್ಯಾಪಕನಾದ ಹೊಸದರಲ್ಲಿ ಡಾ. ವರದರಾಜರಾವ್ ಅವರ ಗ್ರಂಥದ ಮೂಲಕ ಅವುಗಳ ಮಹತ್ವವನ್ನು ಅರ್ಥಮಾಡಿಕೊಂಡಿದ್ದೆನು. ಆಮೇಲೆ ಮದ್ರಾಸ ಪ್ರಾಚ್ಯವಿದ್ಯಾಸಂಸ್ಥೆ ಶ್ರೀ ಚಂದ್ರಶೇಖರ ಅವರ ಸಂಪಾದಕತ್ವದಲ್ಲಿ ಪ್ರಕಟಿಸಿದ ಕೆಟಲಾಗ ಪರಿಶೀಲಿಸುವಲ್ಲಿ ಇವುಗಳ ಸಂಖ್ಯಾಬಾಹುಳ್ಯ ನನ್ನ ತೀವ್ರ ಗಮನವನ್ನು ಸೆಳೆಯಿತು. ಇವುಗಳ ಸ್ವರೂಪ, ವಿವರಗಳನ್ನು ಕುರಿತು, ಸಮಗ್ರ ಅಧ್ಯಯನಮಾಡಲು–ಪ್ರಕಟಿಸಲು ಬಯಸಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗಕ್ಕೆ ಸಲ್ಲಿಸಿದ್ದ ಯೋಜನೆ ೧೯೮೦ರಲ್ಲಿ ಮಂಜೂರಾಯಿತು. ನನ್ನ ಸಹಾಯಕ ಸಂಶೋಧಕರೊಂದಿಗೆ ಮದ್ರಾಸಕ್ಕೂ ಹೋಗಿ (೧೯೮೧), ಕೆಲವು ದಿನ ನಿಂತು ಅಲ್ಲಿಯ ಮೆಕೆಂಝಿ ಸಂಗ್ರಹ ಅಭ್ಯಸಿಸಿದೆ. ಈ ಪ್ರಸಂಗದಲ್ಲಿ ಅಲ್ಲಿಯ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಕೆ. ಕುಶಾಲಪ್ಪಗೌಡರು ನನ್ನ ಯೋಜನೆಯ ಮಹತ್ವವನ್ನು ಗಮನಿಸಿದರು, ಶ್ಲಾಘಿಸಿದರು. ಪ್ರೀತಿಯಿಂದ ವಸತಿ ವ್ಯವಸ್ಥೆ ಇತ್ಯಾದಿಗಳನ್ನು ಪೂರೈಸಿದರು. ವಿಷಾದದ ಸಂಗತಿಯೆಂದರೆ ನಾನು ಅಧ್ಯಯನ ಮುಗಿಸಿಕೊಂಡು ಧಾರವಾಡಕ್ಕೆ ಮರಳುತ್ತಲೇ ಇವುಗಳ ಸಂಗ್ರಹಕಾರ್ಯವನ್ನು ತಾವೂ ಕೈಗೆತ್ತಿಕೊಂಡರು. ಇದರ ಫಲವಾಗಿ "ದಕ್ಷಿಣಕನ್ನಡ ಜಿಲ್ಲೆಯ ಕೈಫಿಯತ್ತುಗಳು" (ಡಾ. ಕೆ. ಕುಶಾಲಪ್ಪಗೌಡ, ಶ್ರೀ ಕೆ. ಚಿನ್ನಪ್ಪಗೌಡ–೧೯೮೩) ಕೃತಿ ಪ್ರಕಟವಾಯಿತು. ಇಂಥದೇ ಇನ್ನೊಂದು ಅವಸರದ ಪ್ರಯತ್ನ ನಡೆದು, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಮುಖಾಂತರ "ಕೈಫಿಯತ್ತು ಮತ್ತು ಮೈಸೂರು ರಾಜರ ಚರಿತ್ರೆ ವಚನಕಾವ್ಯವು" ಹೆಸರಿನ ಕೃತಿ (ಡಾ. ಬಿ.ಎಸ್.ಕುಲಕರ್ಣಿ–೧೯೮೫) ಪ್ರಕಟವಾಯಿತು. ಕೈಫಿಯತ್ತುಗಳ ಕಡೆಗೆ ವಿದ್ವಾಂಸರ ತೀವ್ರ ಗಮನ ಸೆಳೆದ ನಾನು, ಯೋಜನೆಯನ್ನು ರಭಸದಿಂದ ಮುಂದುವರಿಸುತ್ತಿದ್ದಂತೆಯೇ ನನಗರಿಯದಂತೆ ಈ ಕೃತಿಗಳು ಅವಸರದಿಂದ ಹೊರಬಂದವು. ಈ ವ್ಯಥೆಯಲ್ಲಿ ಹತ್ತು ವರ್ಷ ಗತಿಸಿದವು. ನಿಂತುಬಿಟ್ಟಿದ್ದ ಪರಿಷ್ಕರಣಕಾರ್ಯವನ್ನು ೧೯೯೨ರಲ್ಲಿ ಮತ್ತೆ ಮುಂದುವರಿಸಿದೆ. ೧೯೯೩ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ ಪ್ರಕಟಣೆಗೆ ಮುಂದು ಬಂದ ಕಾರಣ, ಈ ಮೊದಲಿನ ಎಲ್ಲ ವಿದ್ವಾಂಸರ ಪ್ರಯತ್ನಗಳನ್ನು ಮೀರಿಸುವ ರೀತಿಯಲ್ಲಿ ಕೈಫಿಯತ್ತುಗಳ ಸಮಗ್ರ ಸಂಪುಟ ಇಂದು ಬೆಳಕು ಕಾಣುತ್ತಲಿದೆ.

ಈ ಸಂಪುಟವನ್ನು ಸಿದ್ಧಪಡಿಸುವಲ್ಲಿ, ಪ್ರಸ್ತಾವನೆ ಬರೆಯುವಲ್ಲಿ, ಮೇಲೆ ಹೇಳಿದ ಗ್ರಂಥಗಳಲ್ಲದೆ ಪಿ.ಸುಂದರಶಾಸ್ತ್ರಿ ಅವರು "ಮದರಾಸು ಸರಕಾರದ ಪ್ರಾಚ್ಯಗ್ರಂಥಮಾಲೆ" ಹೆಸರಿನಿಂದ ಪರಿಷತ್ ಪತ್ರಿಕೆ (೧೧-೩)ಯಲ್ಲಿ ಪ್ರಕಟಿಸಿದ ಲೇಖನ, ಡಾ. ಪುರುಷೋತ್ತಮ ಬಿಳಿಮಲೆ ಅವರು ಪ್ರಕಟಿಸಿದ "ಮೆಕೆಂಜಿ಼ ಕೈಫಿಯತ್ತುಗಳು" ಹೆಸರಿನ ಕೃತಿಗಳ ನೆರವನ್ನು ಪಡೆದಿದ್ದು, ಇವರೆಲ್ಲರಿಗೆ ಕೃತಜ್ಞನಾಗಿದ್ದೇನೆ.

೧೯೯೪ ಮಾರ್ಚ್ ೧೫ — ಎಂ.ಎಂ.ಕಲಬುರ್ಗಿ

❖❖

*

ಪರಿವಿಡಿ

❖❖

ಮೈಸೂರು ಪ್ರದೇಶದ ಕೈಫಿಯತ್ತುಗಳು

೧
ಅಂಕನಾಥಪುರದ ಅರ್ಕೇಶ್ವರಸ್ವಾಮಿ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೨

ಯೀ ಕನ್ನಂಬಾಡಿಗೆ ದಕ್ಷಿಣದಿಕ್ಕಿನಲ್ಲಿ ಅರ್ಕೇಶ್ವರಸ್ವಾಮಿಯವರ ದೇವಸ್ಥಾನ, ಚೋಳ ಪ್ರತಿಷ್ಟೆ, ಗರ್ಭಗೃಹಾ ಅಂಕಣ ೧, ಶುಕನಾಶಿ ಅಂಕಣ ೧, ನವರಂಗ ಚಿತ್ರಮಂಟಪಾ ಅಂಕಣ ೯ – ಅಂತೂ ಅಂಕಣ ೧೧, ಯಿಚಿಗೆ ದಣಾಯಕ ದೇವಪ್ಪನವರ ವಂಶಸ್ತರೂ ಆಣಯ್ಯನವರು ಕಟಿಸ್ತ ಆಸ್ತಾನಮಂಟಪ ಅಂಕಣ ೯ – ಅಂತೂ ಅಂಕಣ ೨೦. ಯಿ ಜೋಡಿ ಕಲ್ಲು ಯೀ ದೇವರಿಗೆ ಪಡಿತರದ ಬಗ್ಗೆ ಅಂಕನಾಥಪುರ ಗ್ರಾಮ ೧ ಬಹುಕಾಲ ನಡೆದುಯಿತ್ತು. ಶೋಭಕೃತ ಸಂವತ್ಸರದಲ್ಲು ಜಪ್ತಿಯಾಗಿ ಯೀಗಲೂ ತಸ್ತೀಕುಯಿಲ್ಲದೆ ಪೂಜೆ ಉತ್ತರವು, ಭಕ್ತಿಯಿಂದಾ ಪೂಜೆ ನಡೆಸುತ್ತಯಿದ್ದಾರೆ. ಯಿದರ ಪೂಜೆ ಮಾಡುವನು ತಮ್ಮಡಿ ಲಿಂಗವಂತರ್ರು ಲಿಂಗಯ್ಯ. ಯೀ ಕೈಫಿಯತು ಯೀ ಆನೆಕನ್ನಂಬಾಡಿಗೆ ಸೇರಿದ ಅಗ್ರಹಾರ ಕೊಟ್ಟನಹಳ್ಳಿ ಗ್ರಾಮ ೧ ನರಸಿಂಹಪುರದ ಜನಾರ್ಧನ ಬೊಪ್ಪರಿಗೆ ನಡೆದು ಬರುತ್ತಾಯಿತ್ತು.

ಶೋಭಕೃತ ಸಂವತ್ಸರ ಜಪ್ತಿ . . . . . ಕನ್ನಂಬಾಡಿ ಸಮ್ಮತದಲ್ಲಿ ನಡದು ಬರುವದು. ಪೂರ್ವರಬ್ಬಕ್ಕು ಜನ ೬ಕ್ಕೆ ಕರೀ ಗ೧೩॥೦ ನಡೆದು ಬರುತ್ತಾಯಿತ್ತು. ಶೋಭಕೃತ ಸಂವತ್ಸರದಲ್ಲು ಜಪ್ತಿಯಾಗಿದ್ದು ರವ್ರೂದ್ರಿ ಸಂವತ್ಸರದಲ್ಲು ಮಹಾರಾಜಶ್ರಿಯವರ ಅಪ್ಪಣೆಯಿಂದ ಜನ ೬ಕ್ಕೆ ೧೩॥೦ ನಡೆದು ಬರುತ್ತಾಯಿದೆ. ಯಿದು ಬರಶಿದವರು ಯೀ ಆನೆಕನ್ನಂಬಾಡಿ ಶಾನಭೋಗರು ಬೆಲ್ಲೂರ ಅಯ್ಯನವರು, ಶಂಕರಯ್ಯನವರು.

ಕೈಫಿಯತ್ತು ಗಳಿಗೆಕರೆ[>ಕೆರೆ] ಶಿಲಾಶಾಸನವು ನಕಲು :

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಶಂಗಳು ೧೩೮೨ ಸಂವತ್ಸರದಲ್ಲಿ ಪ್ರತಾಪದೇವರಾಯರು ಸಂಗಮಕ್ಷೇತ್ರಕ್ಕೆ ಬಂದು ನಿತ್ಯದಾನಾದಿಗಳ ಕೊಡುವ ಸಮಯದಲ್ಲಿ ಚಿಕ್ಕದೀಕ್ಷಿತರುಯೆಂಬವರು ನಿತ್ಯದಾನಕ್ಕೆ ಎಡಗೈಯ ವೊಡ್ಡಲಾಗಿ, ಆ ದೊರೆಯೀ ಪ್ರಕಾರ ಬ್ರಾಹ್ಮರು

ಎಡಗೈಯ್ಯ ವೊಡ್ಡಬಹುದೆ ಸ್ತ್ರೀಯರಿಗೆ ವಿಹಿತವೆ"ಯೆಂದು ಕೇಳಲಾಗಿ, ಯೀ ಚಿಕ್ಕದೀಕ್ಷಿತರು ಹೇಳಿದ ಮಾತು "ನಮ್ಮ ದಕ್ಷಿಣಹಸ್ತದಲ್ಲಿ ಯಜ್ಞಪುರುಷ ಯಿದ್ದಾನೆ. ಆ ಹಸ್ತದಲ್ಲಿ ಯೇನು ಯಿಟ್ಟರೂ ದಗ್ದವಾಗಿ ಭಸ್ಮವಾದೀತು; ನಮಗೆ ಕೊಟ್ಟದ್ದು ಹಾಗೆ ಆಗಬಾರದು; ಆದ್ದರಿಂದಾ ನಿನಗೆ ಕ್ಷೇಮವಾಗುವ ನಿಮಿತ್ಯ, ನೀ ಕೊಟ್ಟದ್ದು ಆಘಾತಹತವಾಗಿ ಅನಂತವಾಗಬೇಕು. ಆದ್ದರಿಂದ ದಕ್ಷಿಣಹಸ್ತ ಬಿಟ್ಟು ವಾಮಹಸ್ತ ದಾನಕ್ಕೆ ವೊಡ್ಡಿದೆವು'ಯೆಂದು ಹೇಳಿದ್ದರಿಂದ ಆ ದೊರೆ ಆಶ್ಚರ್ಯಪಟ್ಟು, "ಯಿದನ್ನು ತಮಗೆ ಪ್ರತ್ಯಕ್ಷವಾಗೊ ರೀತಿ ತೋರಿಸಬೇಕು; ಕೇವಲ ಶಾಸ್ತ್ರಸಿದ್ಧವಾದಂತಹದ್ದು ಪ್ರತ್ಯಕ್ಷವಾದೀತೇ? ಯಿದರ ಆವಸ್ಯಕವಾಗಿ ನನ್ನ ಮೇಲೆ ದಯವಿಟ್ಟು ತೋರಿಸಬೇಕು"ಯೆಂದು ಆ ದೊರೆ ಕೇಳಲಾಗಿ, ಯೀ ಚಿಕ್ಕದೀಕ್ಷಿತರು "ಪರೀಕ್ಷಿಸು, ಯಜ್ಞಪುರುಷಾ ಪ್ರತ್ಯಕ್ಷವಾದಾನು"ಯಂದು [>ದ] ಪ್ರತ್ಯುತ್ತರವನ್ನು ಕೇಳಿ. ಯಿವರ ದಕ್ಷಿಣಹಸ್ತದಲ್ಲಿಟ್ಟು ದಿಸಸ್ತ ಅತ್ತಿ [>ದೂದಿ ಹತ್ತಿ] ಸಹಾ ಯಿಟ್ಟು ವುರುವಲಾಗಿ, ಅವರ ಕೈಯಲ್ಲಿ ಯಿಟ ದೂದಿ ಆಸ್ತಿ [>ಹತ್ತಿ] ಸಹಾ ಅದೇ ಕ್ಷಣಕೆ ಜಾಜ್ವಲ್ಯಮಾನವಾಗಿ ಪ್ರಜ್ವಲ್ಯಮಾನವಾಗಿರುವದನ್ನು ಆ ದೊರೆ ನೋಡಿ, ಆಶ್ಚರ್ಯಪಟ್ಟು, ಅತಿ ಸಂತೋಷದಿಂದ ಅವರಿಗೆ "ಅಂಪಾ[>ಹಂಪಾ]ಪುರ ಗ್ರಾಮವನ್ನು ಧಾರೆಯೆರೆದು ಕೊಡುತ್ತೇನೆ; ಪರಿಗ್ರಹಿಸಿ ನನ್ನ ಉದ್ದರಿಸಬೇಕೆ"ಂಬುದಾಗಿ ಪ್ರಣಾಮಪುರಸ್ಕರವಾಗಿ ಪ್ರಾರ್ಥಿಸಿದಲ್ಲಿ ಯೀ ಚಿಕ್ಕದೀಕ್ಷಿತರು ಯಿಂತು ಹೇಳಿದರು.

"ಅಂಪಾ[>ಹಂಪಾ]ಪುರ ಕಸಬೆ ದೊಡ್ಡ ಗ್ರಾಮಾः ಯೀ ಗಳಿಗೆಕರೆ[>ಕೆರೆ]ಗ್ರಾಮ ಚಿಕ್ಕದಾಗಿ ಅಗ್ರಿ[>ಗ್ನಿ]ಹೋತ್ರಕ್ಕೆ ಅನುಕೂಲವಾಗಿ ನಿನ್ನ ದಯದಿಂದಾ ಯಿದೇ ಅನಂತವಾದೀತು. ನಮಗೆ ಯಿದೆ ಪರಮಸಂತೋಷ" ಯೆಂದು ಚಿಕ್ಕದೀಕ್ಷಿತರು ಹೇಳಲಾಗಿ ಅದೇ ಕ್ಷಣದಲ್ಲಿ ಪ್ರತಾಪದೇವರಾಯರು ತಾಂಬಿರದ ಶಾಸನ ಬರಶಿ, ಗಳಿಗೆಕರೆ[>ಕೆರೆ]ಗ್ರಾಮ, ಯಿದರ ವುಪಗ್ರಾಮ ೧ ಸಹಾ ಧಾರಾಪೂರ್ವಕವಾಗಿ, ಕ್ರಿಷ್ಣಾರ್ಪಣವಾಗಿ ಬಿಟ್ಟಿಕೊಟ್ಟರು. ಆ ತಾಂಬ್ರದ ಶಾಸನವು ಭೂಗತವಾಗಿರ್ದು ಗೋಚರವಾಗಲಿಲ್ಲಾ. ಕೆಲವು ಕಾಲದ ಮೇಲೆ ಅರಮನೆ ಅಡ್ಡಿಯಿಂದಾ ಜಪ್ತಿಯಾಗಿಯಿದ್ದಲ್ಲಿ, ಚಲ್ಲದ ದೊರೆಗಳು ನರಸಿಂಹಪುರದ ಶೀಮೆಯನ್ನು ಕಟ್ಟಿಕೊಂಡು ಆಳುತ್ತಿದ್ದ ಕಾಲದಲ್ಲಿ, ಯೀ ಗಳಿಗೆಕರೆ[>ಕೆರೆ]ಯಂಬ ಗ್ರಾಮವನ್ನು ಶ್ರೋತ್ರಿಯ್ಯ ಬ್ರಾಹ್ಮರಿಗೆ ಪೂರ್ವದಲ್ಲಿ ವೃತ್ತಾಂತವನು ಕೇಳಿ, ರಾಮಪುರಯೆಂಬ ಹೆಸರು ಯಿಟ್ಟು, ಶಿಲಾಶಾಸನವು ತಮ್ಮ ಹೆಸರಿನಲ್ಲಿ ಬರಶಿ, ವೂರಮುಂದೆ ಶಿಲಾಶಾಸನವು ಬರಶಿ ಬಿಟ್ಟು ಕೊಟ್ಟರು.

ಗಳಿಗೆಕರೆ[>ಕೆರೆ] ಶಾಸನಪ್ರತಿ:[೧]

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷಂಗಳು ೧೪೪೪[>೮]ನೆ ಸಂದ ವರ್ತಮಾನವಾರ [>ದ]. ಧಾತು ಸಂವತ್ಸರದಲ್ಲಿ ಪುಷ್ಯ ಶುದ್ಧ ೧೪[>೧೩] ಸೋಮವಾರದಲ್ಲು ಶ್ರೀಮುನಿ [>ಮನ್] ಮಹಾಮಂಡಲೇಶ್ವರ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ವೀರಪ್ರತಾಪ

---

೧. ಈ ಶಾಸನದ ಮೂಲಪಾಠಕ್ಕಾಗಿ ನೋಡಿರಿ: ಎಪಿ.ಕ(ಹೊಸ ಆವೃತ್ತಿ) V. ಕೃಷ್ಣರಾಜ ನಗರ ೧೦೪, ಗಳಿಗೇಕರೆ: ೧೫)

ಶ್ರೀರಂಗದೇವರು ಮಹಾರಾಯರ್‍ರು ಪೆನುಗೊಂಡೆ ಕೋಟೆಯಲ್ಲಿ ರತ್ನಸಿಂಹಾಸನಾರೂಢರಾಗಿ ಪೃಥ್ವಿಲಿ ಸಾಂಮ್ರಾಜ್ಯಗೈಯ್ಯುತ್ತಿರಲು ಶ್ರೀಮಹಾಸಿದ್ಧ[>ಶ್ರೀಮತು ಸಿಂಧು] ಗೋವಿಂದ ಶಿತ[+ಗ]ರಗಂಡ ದ ಕ[>ವ]ಳಂಕಭೀಮಾ, ಮಣಿಕಾ[>ನಾ]ಗಪುರಾಧೀಶ್ವರ, ಬಲ್ಲಿದ[>ಬಿರಿದ] ಸತ್ಯಂ[>ಪ್ರಾಂ]ಗಹರಣ ತುರಗಳವಿಭಾದಿ [>ತುರಕದಳ ವಿಭಾಡ], ಶ್ರೀ ಜೈ[>ಬೈ] ಯಪ್ಪನಾಯಕರ ಮಗ ಕೃಷ್ಣಪ್ಪನಾಯಕರ ಕುಮಾರ ವೆಂಕಪ್ಪನಾಯಕೈಯ್ಯನವರ್‍ರು ಕಾಶ್ಯಪಗೋತ್ರದ ಅಪಸ್ತಂಭಸೂತ್ತರದ ಯಜುಶಾಕಾದ್ಯಾಯಗಳಾದ ರಾಮಾಜಿಭಟ್ಟರ ಮಕ್ಕಳು ವಿಠ್ಠಲಭಟ್ಟರಿಗೆ ಕೋಟ[>ಕೊಟ್ಟ] ಅಗ್ರಹಾರದ ಭೂದಾನ ಧರ್ಮಶಾಸನದ ಕ್ರಮವೆಂತೆಂದರೆ: ಹೊಯಿಷಳದ ರಾಜ್ಯಾದಿ ಯೆಣ್ಣೆ ಕಾವೇರಿ ಮಧ್ಯಾದ ನರುಷಂ[>ಸಿಂ]ಹಪುರದ ಸೀಮೆಗೆ ಸಲ್ಲುವ ಗಳಿಗೆಕರೆ[>ಕೆರೆ]ಗೆ ಪ್ರತಿನಾಮಧೇಯವಾದ ರಾಮಪುರಾಯಂಬಾ ಅಗ್ರಹಾರಕ್ಕೆ ಸಲ್ಲುವ ಉಪಗ್ರಾಮ ಸಹಾ ನಾವೇ ಜಿರ್ನೋದ್ಧಾರವನ್ನು ಮಾಡಿ, ನಮ್ಮ ತಾಯಿ ರಾಮಮ್ಮನವರಿಗೆ ಪುಣ್ಯ ಬರಬೇಕೆಂಬುದಾಗಿ, ಅಗ್ರಹಾರ ಯಿದಕ್ಕೆ ಸಲ್ಲುವ ಉಪಗ್ರಾಮ ಅ[+ಡ]ಗುರ್‍ರು ಸಹಾ ಜೋ[>ಬಾ]ಡಿ ಬೇಡಿಗೆ ಕಾಣಿಕೆ ಕೊ[<ಕ]ಡಾಯ ಕೊಟ್ಟು[>ಕೂಟ] ಬಿಟ್ಟಾ[>ಬೇಟೆ] ಬಿಟ್ಟ ಬೇಗಾರಿ ಸುಂಕ್ಕ ತರದಾಟ[>ತಳವಾರಿಕೆ] ಯಾವ[>ಯಿವು] ಮೊದಲಾದ ಯೀತ ಬಾಧಿಗಳು ಯೇನೂಯಿಲ್ಲಾಯೆಂದು ಸರ್ವಮಾನ್ಯವಾಗಿ ಬೈಯಪ್ಪನಾಯಕರ ಮಗ ಕ್ರಿಷ್ಣಪ್ಪನಾಯಕ ಮಗ ವೆಂಕಟಪ್ಪನಾಯಕ್ಕೆಯ್ಯಜನರು [>ನಾಯಕಯ್ಯನವರು] ಕಾಶ್ಯಪಗೋತ್ರದ ಆಪಸ್ತಂಭಸೂತ್ತರದ ಯಜುಸ್ಯಾಕಾದ್ಯಾಯುಗಳಾದ ರಾಮಚಂದ್ರಭಟ್ಟರ ಮಕ್ಕಳು ವಿಠ್ಠಲಭಟ್ಟರಿಗೆ ಹೇಮಾವತಿ ತೀರದಲ್ಲಿ ನರಸಿಂಹದೇವರ ಸನ್ನಿಧಿಯಲ್ಲಿ ಮಕರಸಂಕ್ರಮಣದ ಪುಣ್ಯಕಾಲದಲ್ಲಿ ತಮ್ಮ ತಾಯಿ ಕಾಮಮ್ಮನವರಿಗೆ ಪುಣ್ಯಬರಬೇಕುಯೆಂಬುದಾಗಿ, ನಾವು ನಿಮಗೆ ಯೀ ರಾಮಪುರವೆಂಬ ಅಗ್ರಹಾರವು, ಯಿದಕ್ಕೆ ಸಲ್ಲುವ ಯೀ ಉಪಗ್ರಾಮ ಅಡಗೂರು ಸಹಾ ಸಹಿರಣ್ಯೋದಕದಾನಾವೂ [>ದಾನಧಾರಾ] ಪೂರ್ವಕವಾಗಿ ಧಾರೆಯನ್ನು ಯರೆದು ಕೊಟ್ಟಿದ್ದು ಆಗಿ ಕೊಟ್ಟದ್ದು, ನಾವು ಯೀ ಗ್ರಾಮದೊಳಗೆ ಸಲ್ಲುವ ಚತುಸೀಮೆಯಲ್ಲಿ ಯಿರುವ ನಿದಿ ನಿಕ್ಷೇಪ ಆಯಿತರುಶಾಸನ[>ಜಲಪಾಷಾಣ] ಆಕ್ಷಿಣೆಗಳಾಗಲಿ[>ಆಕ್ಷೀಣಿ ಆಗಾಮಿ], ಸಿದ್ಧಸಾಧ್ಯಂಗಳೂ ಯಂಬಾ ಅಷ್ಟಭೋಗ ಸಾಮ್ಯ[>ಸ್ವಾಮ್ಯ] ಸಹಿತವಾಗಿ ನಿಮಗೆ ಅದೀತ್ರಯ [>ಅಧಿಕ್ರಯ] ಧಾನ ಪೂರ್ವಕ ಪರ್ರಿವರ್ತನಕ್ಕೆ ಯೋಗ್ಯವಾಗಿ ನೀವು ಪುತ್ರ ಪೌವುತ್ರ ಪಾರಂಪರ್ಯವಾಗಿ ಆಚಂದ್ರತಾರಾರ್ಕ ಸ್ಥಾಯಗಳಾಗಿ, ನೀವು ಯೀ ರಾಮಪುರದ ಅಗ್ರಹಾರ ಯಿದಕ್ಕೆ ಸಲ್ಲುವ ಉಪಗ್ರಾಮ ಅಡುಗುರು ಸಹಾ ಅನುಭವಿಸಿಕೊಂಡು ಬಹಿರಿಯೆಂದು ಬಯಪ್ಪನಾಯಕರ ಮಗ ಕ್ರಿಷ್ಣಪ್ಪನಾಯಕರ ಮಗ ವೆಂಕಟಪ್ಪಯ್ಯನ . . . . . ಕಾಸ್ಯಪಗೋತ್ರದ ಅಪಸ್ತಂಭಸೂತ್ರದ ಯಜುಶ್ಯಾಕಾದ್ಯಾಯಗಳಾದ ರಾಮಚಂದ್ರಭಟ್ಟರ ಮಕ್ಕಳು ವಿಠ್ಠಲಭಟ್ಟರಿಗೆ ಕೊಟ್ಟಂತ ಅಗ್ರಹಾರ ಜೀರ್ಣೋದ್ಧಾರ ಧಾರಾಪೂರ್ವಕವಾಗಿ ಧರ್ಮಶಾಸನವು.

ಶ್ರೀವೆಂಕಟಾದ್ರಿ, ಸ್ವಂತಾದಿ . . . ಗುಣ . . . [>ಸ್ವದತ್ತಾ ದ್ವಿಗುಣಂ ಪುಣ್ಯಂ] ಪರದತ್ತಾನುಪಾಲನಂ ಪರದತ್ತಾಪರಿರೆ [>ತ್ತಾಪಹಾರೇಣ]. . . ಸ್ವದತ್ತಂ ನಿಷ್ಫಲಂ ಭವೇತು.

❖❖

೨

ಅನಂತಪುರದ ಕೈಫಿಯತ್ತು

ಮೆಕೆಂರಿಝಿ ಸಂಪುಟ : ೧೬೪

ಪೂರ್ವ ಕಲಿಯುಗದ ಆದಿಯಲ್ಲಿ ಜನಮೇಜಯರಾಯರು ದಕ್ಷಿಣದೇಶದ ವಿಜಯಮಾಡೊ ಬಗ್ಗೆ ಯುಧಿಷ್ಠರ ಶಖೆ ೧೧೧ನೆ ಸಂವತ್ಸರದಲ್ಲಿ ದೇಶವನ್ನು ಸಾಧಿಸುತಾ ಹರಿಹರದ ಸಮೀಪಕೆ ಬಂದು, ಅಲ್ಲಿ ಸಕಲಮಾಹೇಶ್ವರಸಮೇತವಾಗಿ ಯಿರಲು, 'ತನಗೆ ಶತೃ ವಬ್ಬರು ಯಿಲ್ಲಾ' ಯಂಬುದಾಗಿ ಯೋಚಿಸುತ್ತಿರಲು, ತನ್ನ ತಂದಿ ಆದ ಪರಿಕ್ಷಿತರಾಯರ್ರಿಗೆ ತಕ್ಷಕನಿಂದ ತನ್ನ ತಂದೆಗೆ ವುಪದ್ರವಾಗಿ ಹೋದರಿಂದಾ ಪ್ರತ್ಯಾಸಾಧಿಸಬೇಕು ಯಂಬುದಾಗಿ ಹರಹರದಲ್ಲು ಹರಿದ್ರಾನದಿ ತುಂಗಭದ್ರಾ ಸಂಗಮಸ್ತಳದಲು ಸರ್ಪಯಾಗವನ್ನು ಮಾಡುವ ಸಮಯದಲ್ಲು, ಸಮಸ್ತಬ್ರಾಹ್ಮರು ಮುಂತಾದವರ್ರಿಗೆ ಯಾಗಪೂರ್ಣಸಮಯದಲು, ಅವರ ಅವರ್ರಿಗೆ ಗ್ರಾಮ ಭೂಮಿ ಕೊಟ್ಟ ಸಮಯದಲ್ಲು, ಬಡಗದೇಶದಿಂದಾ ಬ್ರಾಹ್ಮರು ಗೌತಮಗೋತ್ರದ ಗೋವಿಂದಪಟವರ್ಧನರು, ಭಾರದ್ವಾಜಗೋತ್ರದ ಕೇಶವದೀಕ್ಷಿತರು, ಶ್ರೀವತ್ಸಗೋತ್ರದ ನಾರಾಯಣದೀಕ್ಷಿತರು, ತುರುಮುಖ ನಾನಾ ಗೋತ್ರದ ಬ್ರಾಹ್ಮರು, ಗೌತಮ ಆಶ್ರಮವಾದ ಗೌತಮ ಆಶ್ರಮವನ್ನು ಧಾರಾಪೂರ್ವಕ ಧಾರೆಯೆರದ ವಿವರ, ತಾಮ್ರಶಾಸನವನ್ನು ಬರದು ಕೊಟ್ಟನು. ನಾವು ಅನುಭವಿಸಿ ಯಿದ್ದಲ್ಲಿ ಸರ್ವಮಾನ್ಯವು ನಡಯುತಾ ಬಂದ ತರುವಾಯ ಬಳ್ಳಾಳರಾಯರ ಕಾಲದಲ್ಲಿ, ಆನೆಗೊಂದಿರಾಯರ ಕಾಲದಲ್ಲಿ ಸರ್ವಮಾನ್ಯವು ಬ್ರಾಹ್ಮರಿಗೆ ನಡಿಯುತಾ ಬಂದಂತಾಯಿತು.

ಯಿತ್ತಲಾಗಿ ಯಿಕ್ಕೇರಿ ಸವಸ್ತಾನ ಶಿವಭಕ್ತರಿಗೆ ಆದಂತಾ ಶಿವಪ್ಪನಾಯಕರ ಕಾಲದಲಿ ಯೀ ಗ್ರಾಮಕೆ ಕೂಡಿದ ೧೨ ಕಾ[>ಕೌ]ಲು ಗ್ರಾಮವನ್ನು ಬಿಡಶಿ, ಯೀ ಗೌತಮಗ್ರಾಮಕ್ಕೆ ಶಿಸ್ತು ಕಟ್ಟಿ, ಅರವಾಶಿ ಹಣವನ್ನು ತೆಗೆದುಕೊಳ್ಳುತ್ತಾ ಬಂದರು. ತರುವಾಯ ಮೊಗಲರ ಅವಾಂತರದಲ್ಲು ಅಗ್ರಹಾರವು ಸುಟ್ಟು ಹಾಳು ಆಯಿತು. ಯೀ ವೂರು ಕಡೆ . . ಜೆ . ಗೆ . . . ಜಿಕಾ . . . ರ ಅವಾಂತರದಲ್ಲು ಪುಃನ ಹಾಳು ಆಯಿತು. ತರುವಾಯ ನಾನಾರಾಯರು ಯರಡು ವ್ಯಾಳೆದಂದು ಹೋದ . . . ಚಿತ್ರಭಾನು ಸಂವತ್ಸರದಲ್ಲು ಬಾಹದರ ಅವಾಂತರವಾಗಿ, ನಗರದ ರಾಜ್ಯ ಸ್ವಾಧೀನಮಾಡಿಕೊಂಡು ಸ್ವಭಾನು ಸಂವತ್ಸರದಲು ಗ್ರಾಮ ಅರವಾ ೨೫ನೆ ಪ್ರಕಾರ . . ? . . ವರಹಾಗಿಸಿ . . . . ಸರಕಾರ ಯಿ ದತ್ತಿ ಗ ೧೯೨೫ ಮಗದಿನ . . . . ನಾಶಿ ನಡಸುತಾ ಯಿವರು ತಾರಣ ಸಂ। ಲ್ಲು ಮಾಧವರಾಯರ ಅವಾಂತ್ರದಲ್ಲಿ ಸುಟ್ಟು ಹಾಳುಮಾಡಿದರು. ಸು। ದಾಯು ಬಾಹದರರ ಠಾಣೆಯಾಗಿ ಅವರ ಕಾಲದಲ್ಲಿ ಶೋಭಕೃತ ಸಂವತ್ಸರ ಪರಿಯಂತರ ಅರವಾಶಿ ಪ್ರಕಾರ ನಡಸುತಾ ಬಂದನು. ತರುವಾಯ ಯೀ ಸುಲತಾನನು ಶೋಭಕೃತ ಸಂ।ಲ್ಲು ಯೀ

ಗ್ರಾಮವನ್ನು ಅನಂತಪುರದ ತಾಲೂಕಿಗೆ ಶೇರಿಸಿ, ಜಪ್ತಿಮಾಡಿ, ಯಾವತ್ತು ರೊಸುವನ್ನು ತೆಗೆದುಕೊಳ್ಳುತ್ತಾ ಬಂದರು. ಯೀಚೆಗೆ ಶಿದ್ಧಾರ್ತಿ ಸಂವತ್ಸರದಲ್ಲು ಯಿಂಗರೇಜಿ ಅವರು ಶ್ರೀರಂಗಪಟ್ಟಣ ಠಾಣ್ಯಾಹಾಕಿ ಸವಸ್ತಾನಿಕ ಮಹಿಸೂರ ಅರಸುಗಳಿಗೆ ಕೊಟ್ಟಮ್ಯಾಲೆ ಸ್ವಭಾನುಸಂವತ್ಸರದಲ್ಲಿ ನಡದ ಪ್ರಕಾರ ಅರವಾಸಿ ನಡಿಸುತಾ ಯಿದ್ದಾರೆ. ಯೀಗ ನಡಿಯು ಬ್ರಾಹ್ಮರು ಅಗ್ರಹಾರದಲ್ಲು ಯಿರುವಂಥಾದು ೧೮ ವಕಲುತನ, ದೇವರ ವೃತ್ತಿ ೬, ವುಭಯಂ ೨೪, ವಿರ್ತಿ. ಯಿದಕೆ ವಿವರ:

ದೇವರ [>ಬ್ರಾಹ್ಮರ] ವಿರ್ತಿ :

೧. ಮರಿಭಟ್ಟರು ಜೋಯಿಸರು, ಕಾಶ್ಯಪಗೋತ್ರದವರು

೧. ಅಗಸ್ತ್ಯಗೋತ್ರದ ಸೂರ್ಯಭಟ್ಟರು ಸೋಮನಭಟ್ಟರು

ಶ್ರೀವತ್ಸಗೋತ್ರದ ನರಸಿಂಹಭಟ್ಟರು

ಗೌತಮಗೋತ್ರದ ಸೂರ್ಯನಾರಾಯಣಭಟ್ಟರು

ವಶಿಷ್ಠಗೋತ್ರದ ರ್‍ರಾಮಭಟ್ಟರು

ಕೌಂಡಿನ್ಯಗೋತ್ರದ ವೆಂಕಟೇಶಭಟ್ಟರು

ವಶಿಷ್ಟಗೋತ್ರದ ಲಿಂಗಾಭಟ್ಟರು

ಭಾರದ್ವಾಜಗೋತ್ರದ ಕ್ರಿಷ್ಣಭಟ್ಟರು

ಹರಿತನಿಗೋತ್ರದ ನರಸಿಂಹ್ಮಭಟ್ಟರು

ಕಾಸಿಪ್ಯಗೋತ್ರದ ರಾಮಭಟ್ಟರು

[>ವಿ+]ಶ್ವಾಮಿತ್ರಗೋತ್ರದ ಮುಡಸಂಭಟ್ಟರು

ಜಮದಗ್ನಿಗೋವತ್ಸನಿಗೋತ್ರದ ನರಸಿಂಹ್ಮಭಟ್ಟರು

ಹರಿತ್ಸಗೋತ್ರದ ಮಲಭಟ್ಟರು

ಭಾರದ್ವಾಜಗೋತ್ರದ ಸುಬ್ಬಾಭಟ್ಟರು

ಶ್ರೀವತ್ಸಗೋತ್ರದ ಮಾಧವಭಟ್ಟರು, ನರಸಿಂಹ್ಮಭಟ್ಟರು

ಭಾರದ್ವಾಜಗೋತ್ರದ ಶಂಕರಭಟ್ಟರು

. . .ಸದರಿ ಬರದು ಯಿರುವ ದೇವರವೃತ್ತಿಗೆ ವಿವರ:

೧ ಸೋಮೇಶ್ವರದೇವರು

೧ ಸೂರ್ಯನಾರಾಯಣದೇವರು

೧ ವಿನಾಯಕದೇವರು
೧ ಹನುಮಂತದೇವರು
೩

೧ ದುರ್ಗಾಪರಮೇಶ್ವರಿ
೧ ವೀರಭದ್ರದೇವರು
೩

ಯಿಂತು ದೇವರ ಅ[>ಆ]ರಕೆ ವೃತ್ತಿ ಆರು.

ಯೀ ಪ್ರಕಾರ ಬ್ರಾಹ್ಮರು ಬಡಗಲದೇಶ ಕೊಲ್ಲಾಪುರದ ಶೀಮೆಯಿಂದ ಬಂದು, ಪೂರ್ವಯುಗ ಕಾಲದಲ್ಲು ಯಿದ್ದವರಿಗೆ ಸರ್ವಮಾನ್ಯವಾಗಿ ಹನ್ನೆರಡು ಗ್ರಾಮಗಳನ್ನು ಧಾರಾದತ್ತವಾಗಿ ಕೊಟ್ಟದರಿಂದಾ, ಆಗ ಕರಿಶಿಕೊಂಡು ಬರುತಾ ಯಿದಾರೆ. ಯಿವರಿಗೆ ಬಡಗನಾಡ ಕನ್ನಡಿಗರ್ರುಯಂದು ಹೇಳಿಕೊಳ್ಳುತ್ತ ಯಿದ್ದಾರೆ.

❖❖

೩

ಅನಂತಪುರದ ಸೀಮೆಯಲ್ಲಿರುವಂಥ ಮಹಾಸ್ಥಳ ತೀರ್ಥದೇವಾಲಯಗಳ ಕೈಫಿಯತ್ತು

ಡಿ. ನಂಬರ್ ಸಂಪುಟ : ೧೮೨೮

೧. ತೀರ್ಥಗಳು ಇರುವ ವಿವರ: ಅನಂತಪುರದ ಆಗ್ನೇಯ ಮೂಲೆಯಲ್ಲಿ ಅಚ್ಯುತರಾಯರ ತೀರ್ಥ ೧. ಅಚ್ಯುತೇಶ್ವರ ದೇವರು, ಅಚ್ಯುತರಾಯರ ಪ್ರತಿಷ್ಠೆ. ಇಲ್ಲಿ ಶಿಲಾಶಾಸನವಿದೆ ೧. ಈಶ್ಯಾನ್ಯ ಮೂಲೆಯಲ್ಲಿ ಗವುಜರ ಅಗ್ರಹಾರದಲ್ಲಿ ಗೌತಮತೀರ್ಥ ೧, ಗೌತಮೇಶ್ವರ ದೇವರು. ಈ ದೇವರು ಗೌತಮರಿಂದ ಪ್ರತಿಷ್ಠೆಯಾದದ್ದು, ನವನೀತಲಿಂಗ, ಇಲ್ಲಿ ಶಿಲಾಶಾಸನವಿದೆ ೧. ಉತ್ತರದಿಕ್ಕಿನಲ್ಲಿರುವ ಬಿಲ್ಲಗುಂಚಿಕ ಬ್ರಹ್ಮಕಮಂಡಲತೀರ್ಥ, ಕಮಲೇಶ್ವರದೇವರು ಅದೃಶ್ಯ, ಪುರಾಣಪ್ರಸಿದ್ಧಿ ಸ್ಥಳ. ಆಗ್ನೇಯ ದಿಕ್ಕಿನಲ್ಲಿ ಮಸರೂರು ಸೀಮೆ ಪೈಕಿ . . . ಹಳೆ ಗ್ರಾಮದ ಬಳಿ . . . ತೀರ್ಥ, ಸಿಂಹೇಶ್ವರದೇವರು ಇದಾರೆ. ಈ ಸ್ಥಳವು ಪಂಚ . . . . . ಸ್ಥಳವೇಂದು ಹೇಳುತ್ತಾರೆ. ಜುಮ್ಲ ೪.

ದೇವಾಲಯಗಳು . . . ಸ್ಥಳದ ವಿವರ: ಅನಂತಪುರ ಕಸಬೆಯಲ್ಲಿ ರಂಗನಾಥ ದೇವರು. ಇದು ಇಕ್ಕೇರಿ ವೆಂಕಟಪ್ಪನಾಯಕರಿಂದ ಪ್ರತಿಷ್ಠೆಯಾದುದು. ಹೊಸಗುಂದದ ಸೀಮೆಯಲ್ಲಿ ಕುಂತಳನಗರವೆಂಬ ಚಂದ್ರಹಾಸನ ಪಟ್ಟಣದಲ್ಲಿ ಕಲ್ಲಿನಾಥ ದೇವರು ಇದೆ, ಈ ದೇವರ ಪ್ರತಿಷ್ಠೆಯು ಪಾಂಡವರ ಕಾಲದಲ್ಲಿ ಮಾಡಿದುದು. ಮತ್ತು ಇಲ್ಲಿ ಕಾಗರತಿ ಅಗ್ರಹಾರದಲ್ಲಿ ಕಳೇಶ್ವರ ದೇವರು, ಈ

ದೇವರ ಪ್ರತಿಷ್ಠೆಯನ್ನು ಶ್ರೀ[ತ್ರಿ]ಗರ್ತಮಹಾರಾಯರು ಮಾಡಿದಾರೆ, ಈ ದೇವಸ್ಥಾನದಲ್ಲಿ ಶಿಲಾಶಾಸನವಿದೆ. ಜುಮ್ಲ ೩, ೧ ಕಣ್ಣುಪುರ ಅಗ್ರಹಾರದಲ್ಲಿ ಕಣ್ಣೇಶ್ವರದೇವರು, ಅಚ್ಯುತರಾಯರ ಕಾಲದಲ್ಲಿ ಪ್ರತಿಷ್ಠೆಯಾಗಿದೆ, ಜುಮ್ಲ ೪ ದೇವರುಗಳು ಇವೆ.

❖❖

೪

ಅರಿಕುಟಾರದ ಕೈಫಿಯತ್ತು

ಮೆಕೆಂಜಿ ಸಂಪುಟ : ೨೮೩

ವಿಜಯನಗರದಿಂದಾ ದೊಡ್ಡವೀರಭದ್ರನಾಯಕ[೧] ವೀರಭದ್ರನಾಯಕ, ಚಂದ್ರಸೇಕರವಡೆರ್‍ರು, ಐವತ್ತು ಜನದ ಗುಂಪು ಕಟ್ಟಿಕೊಂಡು ಹೈಕೋಟಿಗೆ ಬಂದು ಶೇರಿ, ಅಲ್ಲಿಂದ ಬಂದು, ಹಳದ ತೆರೆ . . . ಗಿಡತ್ತಂದು ಗುಡಿಸಲು ಹಾಕಿಕೊಂಡು ಯಿದ್ದು, ಯಿದರ ಆಗ್ನೇಯದಲ್ಲಿ ತರಿ ಉತ್ತರಿದ ಕೌಲು ಮಾಡಿ, ರಾಗಿ ಬಿತ್ತಿಕೊಂಡು, ಅಲ್ಲಿ ಹಾಕಿ ಯಿದಲ್ಲಿ, ಹೊಲ ನೋಡುವ ಬಗ್ಗೆ ಯೀ ವೀರಬದ್ರನಾಯಕನು ಬೇಟೆ ಮಾರ್ಗವಾಗಿ ನಾಯಿ ಕಟ್ಟಿಕೊಂಡು ಬಂದು, ರಾಗಿ ಅರಿವಳಿಗೆ ಬಿದ್ದುಯಿದ್ದಾ ಮೊಲವು ಯೀ ನಾಯಿಯನ್ನು ತ್ತಗಳಿಕೊಂಡು ಬಂದದರಿಂದಾ ಯಿದು ಗಂಡುಭೂಮಿಯಂದು, ಕಲ್ಲಿನಲಿ ಮುಹೂರ್ತ ಕಂಬವನ್ನು ಹಾಕಿಶಿ, ಊರ್‍ರು ಕಟ್ಟಿಶಿ, ಯಿ ಗ್ರಾಮಕೆ ಅರಿಕುತಾರವೆಂಬ ನಾಮಾಂಕಿತ ಯಿಟು, ಯಿಲ್ಲಿಗೆ ಬಂದು ಮನೆ ಕಟ್ಟಿಕೊಂಡು ವೈರಿಗಳಿಗೆ ಸಂಹಾರ ಮಾಡುವಂಥ ಯೀ ಗ್ರಾಮಕೆ ಕವಲು ಕರಾರ್‍ರು ಕೊಟ್ಟು . . . . ಸೇರಿಶಿಕೊಂಡು, ಯಿದಕ್ಕೆ ಮೂರುಸಾವಿರ ಶೀಮೆ ಸೇರಿಸಿಕೊಂಡು ಹಳ್ಳಿಗಳ ವಿವರ:

ಕಸಬಾ ಅರಿಕುಟಾರ ಗ್ರಾಮ

೧ ಉತ್ತವಳಿ ಗ್ರಾಮ
೧ ಮೂಡಲೂರ ಗ್ರಾಮ
೧ ಮಟ್ಟಿನಪುರ ಗ್ರಾಮ
೧ ಯಡಪುರ ಗ್ರಾಮ
೧ ಸಣ್ಣಹಳ್ಳಿ ಗ್ರಾಮ
೧ ಮಣಗನಹಳ್ಳಿ ಗ್ರಾಮ
೧ ಕಟ್ಟಿಪುರ ಗ್ರಾಮ
೧ ಸೋಮಸಮುದ್ರ ಗ್ರಾಮ
೧ ಬೇಡರಪುರ ಗ್ರಾಮ
೧ ಹಂಚಿಪುರ ಗ್ರಾಮ
೧ ಪುರಿಯಲ ಗ್ರಾಮ
೧ ಕರಿಯನಪುರ ಗ್ರಾಮ

---

೧. ೧+ಚ(ಮೂ)

೧ ಸತ್ತಿಗಾಲ ಗ್ರಾಮ
೧ ಮುದನಹಳ್ಳಿ ಗ್ರಾಮ
೧ ಶಿವಪುರ ಗ್ರಾಮ
೧ ಮಸಗಾರ(ಬುಸಗಾರ) ಗ್ರಾಮ ?
೧ ಹೊಸೂರು ಗ್ರಾಮ
೧ ಕಿರುಗನೂರು ಗ್ರಾಮ
೧ ಮೂಕಹಳ್ಳಿ ಗ್ರಾಮ
೧ ಕಾಡಹಳ್ಳಿ ಗ್ರಾಮ
೧ ಲಿಂಗಸ[>ನ]ಪುರ ಗ್ರಾಮ
೧ ಮುಣುಬಹಳ್ಳಿ
೧ ಮಂಜಪುರ ಗ್ರಾಮ
೧ ಭೋಗಾಪುರ ಗ್ರಾಮ

= ೨೪ ಗ್ರಾಮಗಳು ಅಂತು ಗ್ರಾಮ

ಯೀ ಪ್ರಕಾರ ಗ್ರಾಮಗಳ ಅರಿಕುಟಾರದ ವಳಿತಕೆ ಶೇರಿಸಿಕೊಂಡು, ಅರಿಕುಠಾರಕೆ ಕೋಟೆಯನ್ನು ಹಾಕಿಕೊಂಡು, ಉಮ್ಮತ್ತೂರು ಕೃಷ್ಣರಾಯರಿಗೆ ಚುದಾಯ[ವುತಾಯ]ವನ್ನು ಕೊಟುಕೊಂಡು, ಸುಖದಿಂದಾ ರಾಜ್ಯ ಆಳಿದ್ದು ೪೫ ವರ್ಷ. ಅವನು ಪುಣ್ಯಲೋಕಪ್ರಾಪ್ತಿ ಯೈದಿದನು. ಯಿವನ ಆಳಿಕೆಯಲ್ಲಿ ಯಿವನು ದಂಡು ತೆಗೆದುಕೊಂಡು ಜಗಳಕೆ ಯಾರ ಮೇಲೂ ಹೋಗಲಿಲ್ಲ. ಯಿವನ್ನು ದೈವಗತಿ ಹೊಂದಿದ ಮೇಲೆ ಯಿವನ ಮಗ ವೀರಬದ್ರನಾಯಕನು ತಂದೆ ಅಧಿಕಾರಕ್ಕೆ ನಿಂತು, ಧರ್ಮದಿಂದಾ ರಾಜ್ಯವಾಳುತ್ತಾ ಯಿದ್ದನು. ಕೆಲಉ ಕರ್ನಾಟಕ ಮಂದಿ ಕಟ್ಟಿಕೊಂಡು ಸುತ್ತಮುತ್ತ ಯಿರುವ ಪಾಳ್ಯ ಪಾಟಿನ ಗ್ರಾಮಗಳ ಲೂಟಿ ಮಾಡಿಕೊಂಡು ಯಿದ್ದಲ್ಲಿ, ಅಮ್ಮಚವಾಡಿ ಅರಸು ನಂಜರಾಜೈಯರು ಮಂದಿ ಕಟ್ಟಿಕೊಂಡು, ತಲಿಮೇಲೆ ಹುಲ್ಲಿನ ಮೋಟೆ ಕಟ್ಟಿಕೊಂಡು, ಆಳಿನ ಅಪ್ಪಿಂದ[>ರೂಪಿಂದ] ಕೋಟೆವಳಕ್ಕೆ ಬಂದು, ಕಚೇರಿ ಬಳಿಯಲು ಶಾಂ[>ಶಂ]ಕ ವಾ[>ಊ]ದಿದಲ್ಲಿ, ಯೀ ವೀರಬದ್ರನಾಯಕನು ತನ್ನ ಮನಸಿನಲ್ಲಿ ಆಲೋಚನೆ ಮಾಡಿಕೊಂಡು, ತಾಜ್ಯಕೆ ಚಿತ್ತು ಯದ್ದು, ಯಿದರಿಗೆ ಬಂದು "ಖಾವಜಿ ಬಂದರೆ?" ಯಂದು ಕೇಳಿ, ಸ್ನೇಹವನ್ನು ಮಾಡಿಕೊಂಡು ಹೋಗಿ ಪಂತಿವಳಿಗೆ ಭೋಜನವನ್ನು ಮಾಡಿದಲ್ಲಿ "ಹೀಗೆ ಕಳ್ಳತನದಲ್ಲಿ ಗ್ರಾಮಗಳ ರ್‍ಯಾಲಿ ಮಾಡಿದಿರಿ?" ಯಂಬುದಾಗಿ ಕೇಳಿದಲ್ಲಿ, "ಶಿಖಂಡಿಗ್ನಯಿವಿಗೆ ಸಾಲದ್ದರಿಂದ ಹೀಗೆ ಮಾಡಿದೆ" ಯಂಬುದಾಗಿ ಹೇಳಿದಲ್ಲಿ, "ಯಿನ್ನು ಮೇಲೆ ಯಿಂತಾ ಕೆಲಸ ಮಾಡಬೇಡಿರಿ" ಯಂದು ಹೇಳಿಬಿಟ್ಟು, ಸ್ನೇಹಮಾಡಿಕೊಂಡು ಪುನಃಹ ಅಮ್ಮಚವಾಡಿಗೆ ಹೋದನು. ಯೀ ವೀರಬದ್ರನಾಯಕನು ಅರಿಕುಟಾರದಲ್ಲಿ ಯಿದ್ದುಕೊಂಡು, ಅರಿಕುಟಾರಕ್ಕೆ ಸೇರಿದ ಹಳ್ಳಿಗಳನ್ನು ಆಳಿಕೊಂಡು ೫೦ ವರುಷ ಯಿದ್ದನು.

ಯಿವನು ದೈವಾದೀನ ಹೊಂದಿದ ಮೇಲೆ, ಯಿವನ ಮಗ ಹುಚ್ಚವೀರಬದ್ರನಾಯಕನು ಯಿವನ ತಂದೆ ಅಧಿಕಾರಕ್ಕೆ ನಿಂತುಕೊಂಡು, ಅರಿಕುಟಾರಕ್ಕೆ ಕೂಡಿದ ಹಳ್ಳಿಗಳು ಆಳಿಕೊಂಡು, ಮಂದಿ ಕಟಕೊಂಡು, ಉಂಬಳಿ ಗ್ರಾಮಗಳ ಪಾಳ್ಯಗಾರನು ತಮ್ಮ ವಶವನ್ನು ತೆಗೆದುಕೊಂಡು, ಸುಕದಿಂದ ೯೫ ವರುಷ ರಾಜ್ಯಾ ಆಳಿಕೊಂಡು ಯಿದ್ದನು. ಯಿವನು ದೈವಗತಿ ಹೊಂದಿದ ಮೇಲೆ ಯಿವನ ಜಿನಾಗರ[>ವಿಜಯನಗರ]ದಿಂದ ಬರುವಾಗ ಚಂದ್ರಶೇಖರವಡೆಯರು ಯಂಬ ಹೆಸರು ಯಿದ್ದದರಿಂದ ಯಿವನ ಮಾವ ಚನ್ನರಾಜವಡೆರ್‍ರು ಯಂಬ ಹೆಸರಿನಿಂದ ಯಪ್ಪತ್ತೆರಡು ವರುಷ

ಯೀ ರಾಜ್ಯವನ್ನು ಸುಕದಿಂದ ಅಳುತ್ತಾಯಿದ್ದನು. ಯಿವನು ವಬ್ಬರ ಮೇಲೆ ದಂಡುಯತ್ತಿ ಹೋಗಲಿಲ್ಲ, ಯಿವನ ಮೇಲ ವಬ್ಬರೊಬ್ಬರೂ ಬರಲಿಲ್ಲ. ಯಿವನು ದೈವಗತಿ ಹೊಂದಿದ ಮೇಲೆ, ಯಿವನ ಮಗನು ಚಂದ್ರಶೇಖರವಡೆರ್‍ರು ಯೀ ರಾಜ್ಯವನ್ನು ೫೬ ವರುಷ ಸುಕದಿಂದ ಆಳಿಕೊಂಡು ಯಿದ್ದನು. ಯಿವನ ಮೇಲೆ ವಬ್ಬರ ದಂಡೂ ಯತ್ತಿ ಬರಲಿಲ್ಲ. ಯಿವನೂ ವಬ್ಬರ ಮೇಲೂ ದಂಡೆತ್ತಿ ಹೋಗಲಿಲ್ಲ.

ಯಿವನು ದೈವಗತಿ ಹೊಂದಿದ ಮೇಲೆ, ಯಿವನ ಮಗನು ದೊಡ್ಡೆ ಅರಸನು ೬೬ ವರುಷ ಯೀ ರಾಜ್ಯವನ್ನು ಸುಕದಿಂದ ಆಳಿಕೊಂಡು ಯಿದ್ದನು. ಅಪ್ಪನಂತೆ ಮಗ ಪಟ್ಟಣದಲ್ಲಿಯ ದಂಡುಯೆತ್ತಿ ಪಿರಿಯ(ಪಿರಿಮ್ಮೆ) ಪಟ್ಟಣಕ್ಕೆ ಹೋಗುವಾಗ ಯಿವನು ಸಂಗರ ಹೋಗಿ ಪಿರಿಯಾಪಟ್ಟಣ ತೆಗೆದುಕೊಳು . . . . ಲ್ಲಿ ಹೊಟ್ಟೆಯಲ್ಲಿ ವಂದು ಪಚ್ಚೆ ಕಡಶಿದಿದರಿಂದ . . . . ತಂದು ಆ ಬಿಲ್ಲು . . . (ಠಾಣ)ವನ್ನು ತೆಗೆಶಿ ಧರ್ಮವನ್ನು ಸಂಪಾದಿಸಿಕೊಂಡು, ಯೀ ಶೀಮೆಯನ್ನು ಆಳಿಕೊಂಡು, ಮೈಹಿಸೂರ ಅರಸುಗಳಿಗೆ ಚಲುತ್ತಾಯಿ ತೆತ್ತುಕೊಂಡು, ಸುಕದಿಂದ ಯಿರ್‍ರುತ ಯಿದ್ದಾನು. ಯಿವನು ದೈಗವತಿ ಹೊಂದಿದ ಮೇಲೆ ಯಿವನ ಮಗನು ಚನ್ನರಾಜರಸಗೆ ಮೈಹಿಸೂರುಗಳು ಯೀ ಮೂರುಸಾವಿರ ಶೀಮೆಯನ್ನು ಕಟ್ಟಿಕೊಂಡು, ಗಂಗವಾರಿ ಗ್ರಾಮ ಕಾ ೩೯೯೦ ಅರಿಕುಠಾರದಲ್ಲಿ ೧೪೫ ವರಹಕ್ಕೆ ಬೊವಿಹಳಿಯ ೪೪೫೦ ವರಹ ಪ್ರಕಾರ . . . . ಕೊಟ್ಟದ್ದರಿಂದ, ಉಂಬಳಿಯನ್ನು ಅನುಭವಮಾಡಿಕೊಂಡು ೭ ವರುಷ ಯಿದ್ದನು, ಯಿವನು ದೈವಗತಿ ಮಾಡಿದ ಮೇಲೆ ಯಿವನ ಮಗ ಚಿಕ್ಕರಿರಾಯ? ಯಂಬವನು ಅನುಭವಿಸಿಕೊಂಡು ೬೨ ವರುಷಾ ಸುಕದಿಂದ ಯಿರುತಾ ಯಿದ್ದನು. ಯಿವನ ಮಗಾ ಚೆನ್ನೆ . . . ಯಂಬವನ್ನು ಅನುಭವಮಾಡಿ . . . ಬರುತಾ ಯಿದ್ದನು. ನವಾಬು ಪ್ರಬಲವಾಗಿ ಪಟ್ಟಣವನ್ನು ತನ್ನ ದೊರೆತನ ಮಾಡಿಕೊಂಡು ಯಿರ್‍ರುವಲ್ಲಿ, ಯಿ ಗಾಳಶಾಲಿ ಗ್ರಾಮವನ್ನು ಜಪ್ತಿಮಾಡಿಕೊಂಡು ಅರಿಕುಠಾರದಲ್ಲಿ ಹದಿನೈದು ವರಹ ಉಂಬಳಿ ಕೊಟ್ಟು ಯಿದ್ದನು. ಯಿವನು ಉಂಬಳಿ ಅನುಭವ ಯಂಬತ್ತು ವರುಷಾ ಯಿದ್ದನು.

ಯಿವನು ದೈವಗತಿ ಹೊಂದಿದ ಮೇಲೆ ಯಿವನ ಮಗ ವಿರಾಜಪ್ಪವಡೆನ ದಿವಸಕೆ ಯೀ ಹದಿನೈದು ವರಹಾ ಯಂಬ ನಾಲ್ಕು ಜಪ್ತ ಮಾಡಿಕೊಂಡುದರಿಂದ, ಮನೆಯಲ್ಲಿ ಯಿದ್ದದ ಮಾರಿಕೊಂಡು ೬೦ ವರುಷ ಯಿದ್ದನು, ಯಿವನು ದೈವಗತಿ ಹೊಂದಿದ ಮೇಲೆ ಯಿವನ ಸಂತತಿಯಿಲ್ಲ.

ಅರಿಕುಠಾರದ ಗ್ರಾಮಕ್ಕೆ (ಅಸಿಲೈ೧, ಕಾನೆಸುಮಾರಿ ದಾವಿವೈ ೨ಕೆ ವಿವರಾ:

ಚನ್ನಿಪುರ ಗ್ರಾಮ – ೧	ಕೆರ್‍ರೆ ೨	ಅಸುಲೆ ೧
ಜಲಹಳ್ಳಿ ಗ್ರಾಮ – ೧	ಕ್ವಾ[>ತ್ವಾ]ಟ ೧	
ದುರಸ್ಥಾ ಕೊಳಾ – ೫		

ಕರ್ರೆ[>ಕೆರೆ] = ೫ಕೆ ವಿವರಾ:

ದುರಸ್ತಾ–೨

ಗೈರು ದುರಸ್ತಾ–೩

ಭಾವಿ ೧೦೫ ವಿವರ: ಬಾವಿ?–೧

೯೫ ಮರಣ [>ಗಾ]

೧೦ ಗೈರುಮರಣ [>ಗಾ]

ತೆಂಗಿನ ತೋಟ ೧ಕೆ ಮಾವಿನ ಮರ ೨೨

೮; ೧೦೦

ಕಲ್ಲು (ಕುಲ) ಕುಲಗಳು:

೯ ಬ್ರಾಹ್ಮಣ ಮಕ್ಕಳು

೨ ಕನ್ನಡಿಗ

೧ ತೆಲಗ

೧ ರಾಮಾನುಜ

೫ ಹಳೆಕನ್ನಡಿಗ

———

೯

೧ ಅಗಸ

೧ ಚಾತಳ

೧೮ ಜೈನ

೧೦ ಲಿಂಗವಂತ ವಕ್ಕಲಿಗರು

೧೨ ದಾಸ ಬಣಜಿಗರು

೭೭ ಜುಲಾಯಿ

೧ ಬದಾಯಿ

೧ ಕಣಕು

೧ ವಸಳೊಳು

೧ ಅಸಗರು

೫ ಕೋಮಟಿಗ

		ವಿವರ:
೭ ಬಣಜಿಗ ಲಿಂಗವಂತ	೨ ಕುಂಬಾರು	೧೦ [+೦]ಆರಂಬದ ಕಾಲ[>ಕುಲ]
೫ ಗಾಣಿಗ	೫೧ ಯಿಲಗ	೧೦೦ ಬಿಡುಕುಲ
೨ ಬೋಗಾರ	೨೬ ಬಲಗೈ	೯೬ ಪವಕರ
೧ ಅಕ್ಕಸಾಲೆ	೯ ಮುಸಲಮಾನ	ಅಟಿವಣಿ ೮
೫ ಜೋವಿನ	೫ ಕುರುಬ	ಕೈಂದಾಜಾ ೮೮
೩ ಜಟಿಗಳು	೩ ಸೂಳೇರ್‍ರು	೯೬
೨ ಕೊಂಗರು	೪೩ ಕೊರೂರ್‍ರು	೧೬ ಖುಪಚಾಪ
೬ ಯಿಡಿಗರು	೨ ಯಡಗೈ	೩ ಬ್ರಾಹ್ಮಣ
೩ ಹಜಾಮ	೧೪೧	೧ ಜಾವಿಳ
೧೭೦	೩೧೨	೩ ಜೈನ
		೯ ಮ್ಮಾವಲ್ಲ
		೧೬
		೩೧೨

ಚಾವಡಿ ೧೨ :

೧ ಸರಕಾರದ ಚಾವಡಿ

೧೧ ಚಿಲ್ಲರೆ ಚಾಕರಿ [>ಚಾವಡಿ]

೧೨

ಕಲ್ಲುಮಂಟಪ ೧,

ಗುಡಿ ೯:

೧ ಲಕ್ಷ್ಮಿರಮಣನ ಗುಡ್ರಿ

೧ ವೀರಬದ್ರನ ಗುಡಿ

೧ ಬುಜಂಗೇಶ್ವರಿ ಗುಡಿ

೧ ಬಸ್ತಿ ಗುಡಿ

೧ ಮೆಳದ ಬಸವನ ಗುಡಿ

೧ ಮೂರೇಶ್ವರನ ಗುಡಿ

೧ ವಳಗರಿ ಬಸವನ ಗುಡಿ ೧ ಕೊಟಗ ಅತಿ ಗುಡಿ

೧ ಬೆಟ್ಟದ ದೇವರ ಗುಡಿ

೪ + ೫ = ೯

❖❖

೫

ಅಷ್ಟಗ್ರಾಮಗಳ ಕೈಫಿಯತ್ತು

ಕೆ.ಎ. ೩೫೯/೧

ಸ್ವಾಮಿಯವರ ಪಾದಕ್ಕೆ ಕಿರಂಗೂರು ತಿಮ್ಮರಸ ಹೆಬ್ಬಾರರ ಮಗ ತಿಮ್ಮಪ್ಪಯ್ಯನು ಮಾಡುವ ಬಿನ್ನಹ: ಸ್ವಾಮೀ, ಪೂರ್ವದಲ್ಲಿ ರಾಮಾನುಜಾಚಾರ್ಯರು ಮೇಲೆನಾಡಿಗೆ [?] ಚಿತ್ತೈಸುವಾಗ್ಗೆ ನಡೆದ ಶಾಲೀವಾಹನ ಶಕವರುಷ ೮೪೫, ಈಚೆಗೆ ವಿಷ್ಣುವರ್ಧನರಾಯರು ೯೧೨, ರಾಯರು ಅಪ್ಪಣೆವಿಡಿದು ಕಾವೇರಿ ಉಭಯಪಾರ್ಶ್ವದಲ್ಲೂ ಅಷ್ಟಗ್ರಾಮ ಕಟ್ಟಿ, ಕಾಲುವೆಗಳು ಸಹ ಕಟ್ಟಿ, ಬ್ರಾಹ್ಮಣ ಪ್ರಭುವಳತ್ತವಾಗಿ(?) ನಡೆದು ಬಂದಂಥ ವರುಷ ೫೩೨. ತಿಮ್ಮಣ್ಣಡಣಾಯಕರವರಿಗೆ ಶಿಥಿಮುಲ್ಲಕಾ ಪ್ರಯೋಗಾ. ಶಿಥಿಲದ(?) ತರುವಾಯದಲ್ಲಿ, ಪೂರ್ವದಲ್ಲಿ ಗೌತಮಋಷೀಶ್ವರರಿಗೆ ಪಶ್ಚಿಮಶ್ರೀರಂಗನಾಥಸ್ವಾಮಿಯುವರು ಪುನಃ ಉದ್ಭವಕಾಲದಲ್ಲೂ ಈ ಪಟ್ಟಣವನ್ನು ತಿಮ್ಮಣ್ಣಡಣಾಯಕರು ಕಟ್ಟಿಸಿ ಸ್ವಾಮಿಯವರ ಹವಾಲಿನಲ್ಲಿ ದೊರೆತನ ಆಳಿದ್ದು ವರುಷ ೧೫೩. ಇಲ್ಲಿಂದ ಮುಂದೆ ರಾಯರ ಅಪ್ಪಣೆವಿಡಿದು ರಾಜಶ್ರೀ ರಾಜಒಡೆರೈಯ್ಯನವರು [>ರಾಜ ಒಡೆಯರು] ಆದಿಯಾದಿಯಾಗಿ ಇಂದಿನ ವರೆಗೆ ನಡೆದ ವರುಷ ೧೨೦. ಅಂತು ಇಂದಿನ ವರೆಗೆ ನಡದ್ದು ಶಾಲೀವಾಹನ ಶಕವರುಷ ಕೀಲಕ ಸಂ॥ ವರೆಗೆ ನಡದ್ದು ೧೬೫೦. ಇದೇ ಈ ಪೂರ್ವೋತ್ತರಗಳ ವಿವರ:

ಪೂರ್ವದಲ್ಲಿ ಗೌತಮಋಷೀಶ್ವರರಿಗೆ ಪ್ರಸನ್ನ . . ಯಾದ ಪಶ್ಚಿಮಶ್ರೀರಂಗನಾಥಸ್ವಾಮಿ ಕೆಲವು ದಿವಸದ ಮೇಲೆ ಮಹದವಾಂತರಗಳಿಂದ ಸ್ವಾಮಿಯವರು ಬಿಜಮಾಡಿ[ಸಿ] [ಯಿ]ದ್ದ ಬಳಿಕ್ಕ ಯಿಲ್ಲಿ ಗಿಡಾ ತ್ತರಿಕಾಡಾಗಿಯಿದ್ದದ್ದರಿಂದ ಆ ಭೂಮಿಯಲ್ಲಿ ಒಂದು ವಲಮ್ಮ . . . ಲ್ಲಿ ಬಿಜಮಾಡಿಯಿದ್ದರು. ಮತಾಧಾರಕರಾದಂಥ ರಾಮಾನುಜಾಚಾರ್ಯ[ರವ]ರು ಮೆಲ್ಲುನಾಡಿಗೆ (ಮೇಲ್ನಾಡು) ಚಿತ್ತೈಸುವ ವರೆಗೆ ನಡೆದ ಶಾಲೀವಾಹನ ಶಕವರುಷ ೮೪೫ ಸಂದ ತರುವಾಯದಲ್ಲಿ ಕ್ರಮಿಕಂಟಚೋಳರಾಯನು ರಾಮಾನುಜಾಚಾರ್ಯರನ್ನು 'ಶಿವಾಕ್ಷರ ಪರಂ ನಾಸ್ತಿ' ಎಂದು ಒಪ್ಪುವನಿಕ್ಕಿಸಿ

ಹೇಳಲಾಗಿ, ತಮ್ಮ ಪ್ರಿಯಶಿಷ್ಯನಾದ ಕುರತ್ತಾಳ್ವಾರರವರೆ [>ರಿ]ಗೆ ನೇಮಿಸತ್ತಲು ಪ್ರಚ್ಛನ್ನವೇಷದಲ್ಲಿ ಮೇಲೆನಾಡಿಗೆ ಚಿತ್ತೈಸಿದರು. ತರುವಾಯ ಈ ಕುರತ್ತಾಳ್ವಾರವರು ಕ್ರಮಿಕಂಟಚೋಳರಾಯರವರ ಬಳಿಗೆ ಹೋದಲ್ಲಿ, ಇವರೇ ರಾಮಾನುಜಾಚಾರ್ಯರೆಂದು ವಪ್ಪವನಿಕ್ಕೇಯೆಂದು ಹೇಳಲಾಗಿ, ಯಿವರು "ದ್ರೋಣಮಸ್ತಿ ತತಃ ಪರಂ" ಎಂದು ವಪ್ಪವನಿಕ್ಕಲಾಗಿ, ಈ ಚೋಳರಾಯನು ಕೋಪವ ಮಾಡಿಕೊಂಡು "ಕಣ್ಣು ಕಿತ್ತುಹಾಕಿಸಬೇಕು" ಎನ್ನಲಾಗಿ, ತಾವು "ನಿನ್ನ ನೋಡಿದ ಚರ್ಮ ಚಕ್ಷುಸ್ಸು ಯಿರಬಾರದು" ಎಂದು, ತಮ್ಮ ನೇತ್ರವನ್ನು ತಮ್ಮ ನಖದಿಂದ ತಾವೇ ಕಿತ್ತು, ಈ ಚೋಳರಾಯನ ಮುಂದೆ ಇರಿಸಿಬಿಟ್ಟು, ಅಲ್ಲಿಂದ ರಾಮಾನುಜಾಚಾರ್ಯರ ಬಳಿಗೆ ಬಂದು, ಈ ಪೂರ್ವೋತ್ತರಗಳನ್ನು ಬಿನ್ನಹ ಮಾಡಲಾಗಿ, ನಿಮಗೆ ಯಥಾಪ್ರಕಾರಕ್ಕೆ ನೇತ್ರಗಳು ಬರುವ ಹಾಗೆ ಮಾಡೇವು [>ಮಾಡುವೆವು] ಎಂದು ಬುದ್ಧಿಗಲಿಸಲಾಗಿ, "ಅಂಥಾ ಪಾಪಿಯಾದ ಚೋಳರಾಯನನ್ನು ನೋಡಿದ ಚರ್ಮಚಕ್ಷುಸ್ಸಿನಿಂದ ಪ್ರಯೋಜನವೇನು? ಜ್ಞಾನಚಕ್ಷಸ್ಸು ಅಪ್ಪಣೆ ಪಾಲಿಸಬೇಕು"ಯೆಂದು ಹೇಳಿದ್ದರಿಂದ ಅದೇ ಪ್ರಕಾರಕ್ಕೆ ದಯೆಮಾಡಿ ಮೇಲ್ನಾಡಿಗೆ ಚಿತ್ತೈಸಿ, ತೆರಕಣಾಂಬಿಗೆ ಬಂದು, ಆಳ್ವಾರು ಪ್ರತಿಷ್ಠೆಯನ್ನು ಮಾಡಿಸಿ, ಅಲ್ಲಿಂದ ಸಾಲಿಗ್ರಾಮಕ್ಕೆ ಬಂದು, ವಡದನಂಬಿ ಮುಂತಾದವರಿಗೆಲ್ಲ ಜ್ಞಾನಬೋಧೆಯಲ್ಲಿ ತಿಳುಹಿ, ಅಲ್ಲಿ ತೀರ್ಥವನ್ನು ಉಂಟುಮಾಡಿ, ಅಲ್ಲಿಂದ ಯಾದವಪುರಿಯಾದ ತೊಣ್ಣೂರಿಗೆ ಚಿತ್ತೈಸಿ, ಅಲ್ಲಿ ಬಿಟ್ಟಿದೇವರಾಯರಿಗೆ ಮಂತ್ರೋಪದೇಶವನ್ನು ಮಾಡಿಸಿ, ಇವರಿಗೆ ವಿಷ್ಣುವರ್ಧನರಾಯರು ಎಂದು ನಾಮಾಂಕಿತವ ಕೊಟ್ಟು, ಅರ್ತನಾರ್ತಮ್ಮ (?) (ಅನಂತರ) ಪ್ರಿಯಶಿಷ್ಯನ ಮಾಡಿಕೊಂಡು, ಅವರ ಕೈಯ್ಯಾರ ತಮ್ಮ ಸಂಗಡ ಬಂದ ಶ್ರೀವೈಷ್ಣವ ಬ್ರಾಹ್ಮಣರಿಗೆಲ್ಲ ಈ ಕಾವೇರಿಯುಭಯ ಪಾರ್ಶ್ವದಲ್ಲಿ ಯಿರುವ ಗಿಡಮರಗಳನ್ನು ತರಿದು, ಕಟ್ಟೆ ಕಾಲುವೆಯನ್ನು ತೆಗೆಯಿಸಿ, ಯಿಲ್ಲಿ ಗ್ರಾಮಗಳನ್ನು ಕಟ್ಟಿಕೊಂಡು ಸುಖದಲ್ಲಿ ಯಿರುವ [ರಿತ್ತಿಹೇ (?)] [ಹಾಗೆ] ವಿಷ್ಣುವರ್ಧನರಾಯರ ಕೈಯಿಂದ ಅಪ್ಪಣೆ ಕೊಡಿಸಿಯಿದಾರೆ. ಚೆಪ್ಪೋಡು ಸಾಧ[>ಶಾಸ]ನ ಸಹ ಮಾಡಿಸಿ ನೀವು ಕಟ್ಟಿದಂಥ ಗ್ರಾಮ ಕಟ್ಟೆ ಕಾಲುವೆ ಮುಂತಾದ್ದಕ್ಕೆಲ್ಲ ನೀವೇ ಬ್ರಾಹ್ಮಣಪ್ರಭುಗಳಾಗಿಯಿರುವ ಹಾಗೆ ನೇಮಕ ಮಾಡಿದರಾದರಾದ ಕಾರಣ, ಈ ಅಷ್ಟ ಗ್ರಾಮಗಳು ಆದ ವಿವರ:

ಕನ್ನಂಬಾಡಿ ಸ್ಥಳ ೧, ಕಿರವಂಗೂರು ಸ್ಥಳ ೧, ಮಾಧವನಹಳ್ಳಿ ಸ್ಥಳ ೧, ಬ್ರಹ್ಮಪುರದ ಸ್ಥಳ ೧, ಹರವನ ಸ್ಥಳ ೧, ಅರಕೆರೆ ಸ್ಥಳ ೧, ರಂಗಸಮುದ್ರದ ಸ್ಥಳ ೧, ಮೇಳಾಪುರದ ಸ್ಥಳ ೧, ಬಳಗುಳದ ಸ್ಥಳ ೧, ಅಂತು ಕಾವೇರಿ ಉಭಯಪಾರ್ಶ್ವದಲ್ಲು ಸ್ಥಳ ೧೦(?). ರಾಮಾನುಜಾಚಾರ್ಯರು ತೊಂಡನೂರು ಸ್ಥಳದಲ್ಲಿ ಯಿರುವ ತರುವಾಯದಲ್ಲಿ ಯಾದವಗಿರಿಯಲ್ಲಿರುವ ತಿರುನಾರಾಯಣ ದೇವರು ಸ್ವಪ್ನದಲ್ಲಿ ಬಂದು, ಯಾದವಗಿರಿಯನ್ನು ಜೀರ್ಣೋದ್ಧಾರ ಮಾಡ ಹೇಳಿ, ಸ್ವಪ್ನ ಪಾಲಿಸಿದರಾದ ಕಾರಣ, ಸ್ವಾಮಿಯವರು ಬಿಜಯಮಾಡಿ ಯಿರುವ ಬಳಿ ನೆಪ್ಪು ತಿಳಿಯದಲ್ಲಿಯೆಂದು ಬಿನ್ನಹ ಮಾಡಲಾಗಿ "ಯಾದವಗಿರಿಯಲ್ಲಿ ಸ್ವಾಮಿಯವರು ಬಿಜಯ ಮಾಡಿಯಿರುವ ಬಳಿಗೂ ಯಾದವಪುರಿಯಾದ ತೊಂಡನೂರಿಗೂ ಶ್ರೀತುಳಸಿದಳವನ್ನು ಸಾಲಾಗಿ ಯಿರಿಸಿಯಿದ್ದೇನೆ. ಆ ಗುರುತಿನ ಮೇಲೆ ಒಂದು ಕೈಂಕರ್ಯವನ್ನು ಮಾ[ಡ"ಹೇಳಿ] [ಮಾಡುವಂತೆ] ನಿರೂಪಿಸಿದವರಾದ ಕಾರಣ ರಾಮಾನುಜಾಚಾರ್ಯರು ಯಾದವಗಿರಿಗೆ ಚಿತ್ತೈಸಿದರು.

ಸ್ವಾಮಿ, ಯಿತ್ತಲಾಗಿ ಶ್ರೀರಂಗಪಟ್ಟಣವನ್ನು ಕಟ್ಟುವಂದಿಗೆ ಮೊದಲೆ ಅಷ್ಟಗ್ರಾಮಗಳು ಕಟ್ಟಿ ೫೩೨ ವರುಷವಾಯಿತು. ಸ್ವಾಮೀ, ಪೂರ್ವದಲ್ಲಿ ಗೌತಮಋಷೀಶ್ವರರಿಗೆ ಪ್ರಸನ್ನತೆಯಾದಂಥ

ಪಶ್ಚಿಮರಂಗನಾಥಸ್ವಾಮಿಯವರು ಪುನಃ ಉದ್ಭವಕಾಲದಲ್ಲಿ ಈ ಕಾವೇರಿ ಮಧ್ಯದಲ್ಲಿ ಯಿರುವ ಎಡಕುರವದಲ್ಲು ಇರುವ ವೇಶ್ಯಾಸ್ತ್ರೀಯ ಮನೆಯಲ್ಲಿ ಇರು[ವುದೊಂದು] (ದ) ಕಾಮಧೇನುವಿಗೆ ಸರಿಯಾದಂಥ ಒಂದು ಹಸುವು ಹುತ್ತದ ಮೇಲೆ ಹಾಲನ್ನು ಕರೆದು ಹೋಗುತ್ತಿರಲಾಗಿ, ಆ ಹಸುವನ್ನು ಕಾಯುವ ಹುಡುಗನು ಕಂಡು, ಆ ವಿವರವನ್ನು ತನ್ನವರಿಗೆ ಹೇಳಲಾಗಿ, ಆ ವೇಶ್ಯಾಸ್ತ್ರೀಯು ಅಲ್ಲಿ ಯಿದ್ದಂಥವರನ್ನು ಕರೆದುಕೊಂಡು ಬಂದು ನಿಧಾನಿಸಿದಲ್ಲಿ, ಆ ಮಾತು ನಿಜವೆಂದು ತಿಳಿದು, ಅಲ್ಲಿ ಯಿದ್ದಂಥ ಗಿಡಮರಗಳನ್ನು ತರಿದು ಶೋಧಿಸಲಾಗಿ, ಅಲ್ಲಿ ಶ್ರೀರಂಗನಾಥಸ್ವಾಮಿಯವರ ದಿವ್ಯಮಂಗಳಮೂರ್ತಿಯನ್ನು ಕಂಡು ಸಂತೋಷಪಟ್ಟು, ಅಲ್ಲಿ ಯಿದ್ದ ಹಂಗರ ಮರ ಮುಂತಾದ್ದರಲ್ಲಿ ಒಂದು ಅಂಬ(ಕ)ಣ ಮಾಳಿಗೆ ಮಾಡಿಸಿ, ಸ್ವಾಮಿಯವರಿಗೆ ಪೂಜೆನೈವೇದ್ಯಗಳು ನಡೆದ ತರುವಾಯದಲ್ಲಿ ನಾಗಮಂಗಲ ಸ್ಥಳದ ಹೆಬ್ಬಾರವರು, ದಂಡೆ ಹೆಬ್ಬಾರವರ ಪಾಲು ೧, ಚೊಕ್ಕೇ ಹೆಬ್ಬಾರರ ಪಾಲು ೧, ಶಿಗ್ಗಿ ಹೆಬ್ಬಾರರ ಪಾಲು ೧, ಕಡೆಮನೆ ತಿಮ್ಮಯ್ಯ ಹೆಬ್ಬಾರವನ ಪಾಲು ೧, ಅಂತು ಪಾಲು ೪ ರಲ್ಲಿ, ದಂಡೆ ಹೆಬ್ಬಾರರು ಚೊಕ್ಕೆ ಹೆಬ್ಬಾರರು ಸಹ ಇವರಿಬ್ಬರ ಪಾಲು ೨ಕ್ಕೆ ಸಂತತಿ ನಿಂತುಹೋಯಿತು.

ಸ್ವಾಮೀ, ಶ್ರೀಗೆ[>ಶಿಗ್ಗಿ] ಹೆಬ್ಬಾರರವರಿಗೆ ಭಾರದ್ವಾಜಗೋತ್ರ ಈ ಬಗ್ಗೆ ಪ . . ತನದಲ್ಲಿ ಈಗಲು ನಾಲು ಐದು ಒಕ್ಕಲು ಇವೆ. ಕಡೇಮನೆ ತಿಮ್ಮಣ್ಣಹೆಬ್ಬಾರರವರಿಗೆ ಲೋಹಿತ(?)ಗೋತ್ರ, ಈ ಬಗ್ಗೆ ಸಂತತಿಯಲ್ಲಿ ನಾ(?) (ಈ)ಗಲು ಹತ್ತು ಒಕ್ಕಲು ಇವೆ. ಈ ತಿಮ್ಮಣ್ಣಹೆಬ್ಬಾರರ ಬಳಿಯಲ್ಲಿ ಇರುವ ಜೀತದ ಆಳು ಚಿಕ್ಕೇಗೌಡ ಸಹ ಇಬ್ಬರೂ ತೋಟದಲ್ಲಿ ವ್ಯವಸಾಯ ಮಾಡಿಕೊಂಡು ಇರುವಲ್ಲಿ, ತೋಟದಲ್ಲಿ ಒಂದು ನೆಲ್ಲಿಮರದಡಿಯಲ್ಲಿ ಮೈಮರೆತು ಮಲಗೀರಲಾಗಿ, ಬಿಸಿಲು ಬಂದು ಮುಖದ ಮೇಲೆ ತಾಕುತ್ತ ಇರಲಾಗಿ, ಒಂದು ಕೃಷ್ಣಸರ್ಪವು ಬಂದು ಆ ಬಿಸಿಲಿಗೆ ಮರೆಯಾಗಿ ತನ್ನ ಹೆಡೆಯನ್ನು ಬಿಚ್ಚಿ ಮರೆಮಾಡಿ ಯಿರುವುದನ್ನು ಈ ಜೀತಗಾರ ಚಿಕ್ಕೇಗೌಡನು ಕಂಡು ಆಶ್ಚರ್ಯಪ್ಟಟು, ದೂರದಲ್ಲಿ ನಿಂತಿರಲಾಗಿ, ಆ ಕೃಷ್ಣಸರ್ಪವು ಬಿಸಿಲು ತಂಪಿದ ಮೇಲೆ ತನ್ನ ಇಚ್ಛೆಯಲ್ಲಿ ಹರಿದುಹೋದ ಕಾರಣ. ಈ ಚಿಕ್ಕೇಗೌಡನು ತನ್ನ ಒಡೆಯನನ್ನು ಎಚ್ಚರವನ್ನು ಮಾಡಿ "ಸ್ವಾಮಿ! ಇಷ್ಟು ಹೊತ್ತು ಮರೆತು ಮಲಗುವರೆ?" ಎಂದು ಈ ಪೂರ್ವೋತ್ತರಗಳು ಯಾವತ್ತು ಅವರಿಗೆ ಹೇಳದೆ ತನ್ನಲ್ಲಿಯೇ ಇರಿಸಿಕೊಂಡು, ಒಂದಾನೊಂದು ದಿವಸದಲ್ಲಿ ಈ ಚಿಕ್ಕೇಗೌಡನು ತನ್ನ ಒಡೆಯನಾದ ತಿಮ್ಮಣ್ಣ ಹೆಬ್ಬಾರವರನ್ನು "ನಿಮಗೆ ಮಹದೈಶ್ವರ್ಯವು ಬಂದರೆ ನನಗೆ ಏನು ಕೊಟ್ಟೀರಿ?" ಎಂದ ಕೇಳಲಾಗಿ, "ನಾವು ಈ ಬಗ್ಗೆ ಕಷ್ಟ ಅನುಭವಿಸುವಲ್ಲಿ ನಮಗೆ ದೊರೆತನ ಬರುವ ಬಗೆ ಹೇಗೆ?" ಎಂದು ಕೇಳಲಾಗಿ, "ಸ್ವಾಮಿ! ಮುಂದೆ ಕಾರಣವು ಉಂಟು" ಎಂದು ಈ ಪೂರ್ವೋತ್ತರಗಳ ಹೇಳಿದ ಕಾರಣ, "ಆ ದೊರೆತನ ನಮಗೆ ಬಂದರೆ ನಿನಗೆ ದಳವಾಯಿತನ"ವೆಂದು ಹೇಳಲಾಗಿ, ಆ ಬಗ್ಯೆಲ್ಲ ನಂಬಿಕೆ ತೆಗೆದುಕೊಂಡು ಇರುವಲ್ಲಿ, ಆಮೇಲೆ ಕೆಲವು ದಿವಸವಾದ ಬಳಿಕ ಒಬ್ಬ ಪರಮಹಂಸನು ಗ್ರಾಸಕ್ಕೆ ಕೇಳಲಾಗಿ, ತಮ್ಮ ಮನೆಯವರಿಗೆಲ್ಲ ಮಾಡಿದ ಅಡಿಗೆಯನ್ನು ದೇವತಾರ್ಚನೆ ಆಗುವುದಕ್ಕೆ ಮೊದಲೆ ಆ ಪರಮಹಂಸನ ಮೇಲಿನ ಭಕ್ತಿಯಿಂದ ಆದ ಅಡಿಗೆ ಪದಾರ್ಥಗಳನ್ನು ಬಡಿಸಲಾಗಿ, ಆತನು ತೃಪ್ತಿಪಟ್ಟು "ನಿಮಗೆ ಇಷ್ಟು ಕಾರ್ಪಣ್ಯವೇನು?" ಎಂದು ದಯೆಯಿಂದ ರಹಸ್ಯದಲ್ಲಿ ಬಂದು, ನಿಮಗೆ ಒಂದು ಸಿದ್ಧಮೂಲಿಕೆ ಕೊಡುತ್ತೇನೆಂದು ಕೊಟ್ಟು, ಅಲ್ಲಿ ಒಂದು ಬಾವಿಯನ್ನು ಇಳಿದು ಯಾರಿಗೂ ಕಾಣಿಸಿಕೊಳ್ಳದೆ ಅದೃಶ್ಯನಾಗಿ ಹೋದನು.

ಆಮೇಲೆ ಸಿದ್ಧಮೂಲಿಕಾ ಪ್ರಯೋಗದಿಂದ ಕಬ್ಬಿಣಗಳು ಸುವರ್ಣವಾಗುವುದನ್ನು ಕಂಡು, ಈ ಕಡೇಮನೆ ತಿಮ್ಮಣ್ಣನವರು ಚಿಕ್ಕೇಗೌಡ ಸಹ ವಿಜಯನಗರಕ್ಕೆ ಹೋಗಿ, ಈ ಪೂರ್ವೋತ್ತರಗಳನ್ನು ವಿಸ್ತಾರವಾಗಿ ಬಿನ್ನಹ ಮಾಡಲಾಗಿ, ಸಂತೋಷಪಟ್ಟು ತಿಮ್ಮಣ್ಣನವರಿಗೆ ತಿಮ್ಮಣ್ಣಡಣಾಯಕರು ಎಂಬ ನಾಮಾಂಕಿತವ ಕೊಟ್ಟು, ಅಭಯಹಸ್ತ ಆಭರಣ ಉಡುಗೊರೆ ಸಹ ಕೊಟ್ಟು, ಇವರಿಗೆ ಕಾವೇರಿ ಉಭಯಪಾರ್ಶ್ವದಲ್ಲಿ ಇರುವ ಅಷ್ಟಗ್ರಾಮ ಪ್ರಭುಗಳು ಮುಂತಾದವರಿಗೆಲ್ಲ ದಣಿಯಾಗಿ ಡಣಾಯಕತ್ವ ಮಾಡಿಕೊಂಡು, ಕಾವೇರೀ ಉಭಯಪಾರ್ಶ್ವದಲ್ಲಿ ಇರುವ ಸೀಮೆಗಳನ್ನು ಇವರ ವಳಿತ ಮಾಡಿ, ಈ ಬಗ್ಗೆ ಸಿದ್ಧಮೂಲಿಕಾಪ್ರಯೋಗದಿಂದ ಆಗುವಂಥ ದ್ರವ್ಯಗಳು(ಳಿಂದ) ಮಂದಿ ಕುದುರೆಗಳು ಸಹ ಕಟ್ಟಿಕೊಂಡು, ಸೀಮೆ ಸಾಧಿಸಿಕೊಂಡು ಇರುವ ಹಾಗೆ ನೇಮಕ ಮಾಡಿದರಾದ ಕಾರಣ, ಈ ತಿಮ್ಮಣ್ಣಡಣಾಯಕರು ಅದೇ ಪ್ರಕಾರ ಆಳುಮಂದಿ ಕುದುರೆ ಸಹ ಹರಿಹಿನ ಸ್ಥಳಕ್ಕೆ ಬಂದು, ಅಪ್ಪಣ್ಣಹೆಬ್ಬಾರವರು ರಂಗನಾಡುಸ್ಥಳಕೆಲ್ಲ ಪ್ರಭುವಾಗಿರುವುದರಿಂದ ಅವರ ಸಂಗಡ ಆಲೋಚನೆಯಂ ಮಾಡಿ, ಈ ಕಾವೇರಿಮಧ್ಯದಲ್ಲಿ ಪೂರ್ವದಲ್ಲೂ ಗೌತಮಋಷೀಶ್ವರರಿಗೆ ಪ್ರಸನ್ನರಾದ ಶ್ರೀರಂಗನಾಥಸ್ವಾಮಿಯವರ ಅಭ್ಯುದಯದ ಕಾಲವನ್ನು ಕೇಳಿ, ಸ್ವಾಮಿ ಸೇವೆಯನ್ನು ಮಾಡಿ, "ಈ ಮಧ್ಯದಲ್ಲಿ ಪಟ್ಟಣವನ್ನು ನಿರ್ಮಿಸಬೇಕು" ಎಂದು ಉಭಯಪಾರ್ಶ್ವದಲ್ಲಿರುವ ಪ್ರಭುಗಳನ್ನೆಲ್ಲ ಕರೆಯಿಸಿ, ಅಪ್ಪಣ್ಣಹೆಬ್ಬಾರವರ ಸಂಗಡ ಆಲೋಚನೆ ಮಾಡಿ, ಈ ಪಟ್ಟಣ ಕಟ್ಟಿದ್ದಕ್ಕೆ ಸುಮೂಹರ್ತವನ್ನು ನಿಶ್ಚಯಿಸಿಹುದಲ್ಲಿ(ಸುವಲ್ಲಿ) ಪೂಜೆಯನ್ನು ಮಾಡಿಸಿ, ಈ ಪಟ್ಟಣ ಕಟ್ಟಿಸುವುದಕ್ಕೆ ಕರುವಗಲ್ಲು, ನೆಡುವಲ್ಲಿ, ಅಷ್ಟಗ್ರಾಮಗಳು ನಷ್ಟವೆಂದು(?) ಕರುವಗಲ್ಲು ನೆಡೆಸಿದರು. ಸ್ವಾಮೀ, ಆ ಮೇಲೆ ಈ ಪಟ್ಟಣಕ್ಕೆ ಶ್ರೀರಂಗಪಟ್ಟಣವೆಂದು ನಾಮಾಂಕಿತವ ಮಾಡಿ, ತಿರುಮಲದೇವರನ್ನು ಪ್ರತಿಷ್ಠೆಯನ್ನು ಮಾಡಿ, ಆ ಬೀದಿಯಲ್ಲಿ ಅಗ್ರಹಾರವನ್ನು ಮಾಡಿಸಿದರು. ಸ್ವಾಮೀ, ಪೂರ್ವದಲ್ಲಿ ತಿಮ್ಮಣ್ಣಡಣಾಯಕರ ಸ್ಥಳ ಚತುರ್ವೇದಿಮಂಗಳವನ್ನು ಕೋಟೆ ಹಾಕಿಸಿ ನಾಗಮಂಗಲವೆಂದು ನಾಮಾಂಕಿತವ ಮಾಡಿಸಿದರು. ಈ ಹರಹಿನ ಸ್ಥಳದ ಅಪ್ಪಣ್ಣಹೆಬ್ಬಾರವರು ತಿಮ್ಮಣ್ಣಡಣಾಯಕರು ಯೀ ಕರ್ತರೂ(ಇಬ್ಬರೂ) ಏಕವಾಗಿ ಕಾವೇರಿಕಟ್ಟೆಯನ್ನು ಕಟ್ಟಿಸಿ ಕಾಲುವೆಯನ್ನು ತಂದರು. ಈ ಪಟ್ಟಣವನ್ನು ತಿಮ್ಮಣ್ಣಡಣಾಯಕರ(ರು) ವಶವಾಗಿ (ಮಾಡಿಕೊಂಡು) ದೊರೆತನವನ್ನು ಆಳಿ (ಮಾಡಿ)ಕೊಂಡು ಇದ್ದರು.

ಸ್ವಾಮೀ, ಅದರ ದಿವಸದ ಮೇಲೆ ಅಪ್ಪಣ್ಣಹೆಬ್ಬಾರರವರು ಆಳಿದರು. ಆಮೇಲೆ ರಾಯರ ಬಳಿಯಿಂದ ಕಾಮಪ್ಪ ಒಡೆಯರು ಮದನಪ್ಪ ಒಡೆಯರು ಜಲ್ಲಿಮಲ್ಲಿನಾಯಕರು ಸಹ ಪಟ್ಟಣಕ್ಕೆ ಬಂದು, ಪಟ್ಟಣವನ್ನು ತಮ್ಮ ವಳತ ಮಾಡಿಕೊಂಡು, ರಾಯರ ಅಪ್ಪಣೆ ವಿಡಿದು, ಶ್ರೀರಂಗನಾಥಸ್ವಾಮಿಯವರಿಗೆ ಕಳಗಮಾಡಿ(?)ಯೊಳಗೆ ಇದ್ದಂಥ ನೂರುವೊಂದು(ರೊಂದು) ೧೦೧ ಬಸ್ತಿಯನ್ನು ಕಿತ್ತು ಗುಡಿಗೋಪುರಗಳನ್ನು ಕಟ್ಟಿಸಿದರು. ಕಡಿಮೆಕಲ್ಲುಗಳನ್ನು ಹೆಗ್ಗಡ ಡಣಾಯಕರು, ಆಮೇಲ ಡಣಾಯಕರು ಸಹ ಪಶ್ಚಿಮ ವಾಹಿನಿ ಹೊಳೆಯಲ್ಲಿ ಹುಚ್ಚು ಕಟ್ಟೆ ಕಟ್ಟಿಸಿ, ಮೇಳಾಪುರದ ಕಾಲುವೆಯನ್ನು ತೆಗೆಯಿಸಿದರು. ಆ ತರುವಾಯದಲ್ಲಿ ರಾಯರು ಪಟ್ಟಣವನ್ನು ತಿರುಮಲರಾಜಯ್ಯನವರ ವಳತವ ಮಾಡಿ ಕಳುಹಿಸಿದರು. ಆಮೇಲೆ ತಿರುಮಲರಾಜಯ್ಯನವರು ಕೆಲವು ದಿವಸ ದೊರೆತನ ಆಳಿಕೊಂಡು ಇದ್ದಲ್ಲಿ, ಅಂದಿನ ವರೆಗೆ ರಾಯರ ಹವಾಲಿನಲ್ಲಿ ದೊರೆತನವಾಳಿದ ವರುಷ ೧೫೩. ರಾಜವಡೆಯರವರು ಪೂರ್ವದಲ್ಲಿ ಅಷ್ಟಗ್ರಾಮದ ಪ್ರಭುತ್ವವ

ಮಾಡಿಕೊಂಡು ಇದ್ದಂಥವರಿಗೆಲ್ಲ ನಂಬಿಗೆ ಲೇಖನಗಳ ಬರೆಯಿಸಿ ಕಳುಹಿಸಿ, ಆ ಹೆಬ್ಬಾರಪ್ರಭುಗಳನ್ನೆಲ್ಲರನ್ನು ತಮ್ಮ ವಶವರ್ತಿ ಮಾಡಿಕೊಂಡು, ಸಾಮಭೇದದಾನಂದಂಡ(ಗಳೆಂಬ) ಚತುರುಪಾಯಗಳಿಂದ ಬನ್ನೂರಾದಿಯಾಗಿ ಶ್ರೀರಂಗಪಟ್ಟಣವನ್ನು ರಾಯರ ಅಪ್ಪಣೆವಿಡಿದು ಸಾಧಿಸಿದರು, ಆಮೇಲೆ ಅಷ್ಟಗ್ರಾಮದ ಪ್ರಭು ಮುಂತಾದವರಿಗೆಲ್ಲ ಅವರವರ ತ . . . ಲರಿತು ನಡೆಸತಕ್ಕ ಉಂಬಳಿ ಪ್ರಭುಮಾನ್ಯ ತೋಟಗದ್ದೆ ಲಯ ಸಾಮ್ಯ ಮುಂತಾದವನ್ನು ನಡೆಸಿಕೊಂಡು, ಇವರುಗಳನ್ನೆಲ್ಲ ತಮ್ಮ ದೊರೆತನಕ್ಕೆ ತಗಲು ಮಾಡಿಕೊಂಡು, ಇದ್ದಂಥ ರಾಜೊಡೆಯನವರ ದೊರೆತನವಾದ ಮೇಲೆ ಚಾಮರಸ ಒಡೆಯರವರು, ಆ ಮೇಲೆ ಇಮ್ಮಡಿ ಒಡೇರಯ್ಯನವರು, ಆ ಮೇಲೆ ನರಸರಾಜ ಒಡೇರಯ್ಯನವರು, ಆ ಮೇಲೆ ದೇವರಾಜ ಒಡೆಯರವರು, ಆ ಮೇಲೆ ಚಿಕ್ಕದೇವರಾಜ ಒಡೆಯರವರು, ಆ ಮೇಲೆ ಕಂಠೀರವ ನರಸರಾಜ ಒಡೆಯವರು.

ಈ ಪೂರ್ವೋತ್ತರಗಳನ್ನೂ ಅಷ್ಟಗ್ರಾಮದ ಪೂರ್ವತ್ತರಗಳನ್ನೂ ಸಹ ಹಿಂದಕ್ಕೆ ನಮ್ಮ ಯಜಮಾನರಾದ ಹಿರಿಯರು ಹೇಳಿದ ಪೂರ್ವೋತ್ತರ ಸಂಗತಿಯಿಂದಲೂ ಕೆಲವು ಲಿಖಿತ [ಬರಹ]ದಲ್ಲಿ ಇದ್ದದ್ದು ನಾನು ಕಂಡಷ್ಟೆ ಬಿನ್ನಹ ಮಾಡೇನು. ಇದೂ ಅಲ್ಲದೆ ಅಷ್ಟಗ್ರಾಮದಲ್ಲಿ ಈ ಪ್ರಭುತನ ಮಾಡುತ್ತಿದ್ದವರು ತೆಗೆಸಿದ ಕಾಲುವೆಗಳಲ್ಲಿ ಅದ(ರ) ಅಚ್ಚುಕಟ್ಟು, ಗದ್ದೆ ವಿವರಗಳು ಮುಂತಾದ ಮಾನ್ಯ ವಿವರಗಳು ಮುಂತಾದುವು ಸಹ, ದೇವಾದಾಯ ಬ್ರಹ್ಮಾದಾಯ ಅಗ್ರಹಾರ ಪುರವರ್ಗ ವೂಳಿಗಮಾನ್ಯ ಇವು ಮುಂತಾಗಿ ನಡೆದು ಬರುವ ವಿವರ:

ಹಿಂದಕ್ಕೆ ಪ್ರಭುಗಳು ಕೊಟ್ಟ ಮಾನ್ಯ, ರಾಯರು ಕೊಟ್ಟ ಮಾನ್ಯ, ತಿರುಮಲರಾಜಯ್ಯನವರು ಕೊಟ್ಟ ಮಾನ್ಯ, ರಂಗಮ್ಮನವರು ಕೊಟ್ಟ ಮಾನ್ಯ, ದೊಡ್ಡದೇವರಾಜ ಒಡೆಯರು ಕೊಟ್ಟ ಮಾನ್ಯ, ಚಿಕ್ಕದೇವರಾಜ ಒಡೆಯರು ಕೊಟ್ಟ ಮಾನ್ಯ ಸಹ ದೇವಾದಾಯ ಬ್ರಹ್ಮಾದಾಯ ಪುರವರ್ಗ ಅಗ್ರಹಾರ ವೂಳಿಗಮಾನ್ಯ ತ್ಯಾಜಿಮಾನ್ಯ-ಮುಂತಾದ ಲೆಕ್ಕಗಳನ್ನು ನಾನು ಕಂಡಷ್ಟು ಬಿನ್ನಹ ಮಾಡೇ(ಡುವೆ)ನು.

ಸ್ವಾಮೀ, ಆ ಮೇಲೆ ಚಿಕ್ಕದೇವರಾಜ ಒಡೆಯರು ಭಾಗೀರಥೀ[>ಭಗೀರಥ] ಗಂಗೆ ತಂದಹಾಗೆ ಬಹುಮುಖವಾಗಿ ಕಾವೇರೀ ಕಾಲುವೆಗಳನ್ನು ಭಾವಸಂವತ್ಸರಗಳಾರಭ್ಯ ಕಾಲುವೆ ವೀರರಾಘವಯ್ಯನವರ ಮುಖಾಂತರ ಪ್ರತಿಷ್ಠೆಮಾಡಿ ಉದ್ಧಾರಮಾಡಿ[ಸಿ]ದ ಕಾಲುವೆಗಳ ವಿವರ:

ಹರಹಿನ ಸ್ಥಳದಲ್ಲೂ ತಿಮ್ಮಣ್ಣಡಣಾಯಕರು ತೆಗೆಯಿಸಿದ ಕಾಲುವೆ(೧). ಕೇತನಹಳ್ಳಿಯಾದಿಯಾಗಿ ಇನ್ನೂರು ಎಲ್ಲೆಕಟ್ಟಿನ ಪರಿಯಂತ್ರಕ್ಕೆ ಹೋಬಳಿ ೨ [>೭]ಕ್ಕೆ ವಿವರ ಕೇತನಹಳ್ಳಿ ಹೋಬಳಿ ೧, ಕಿರುವಂಗೂರು ಹೋಬಳಿ ೧, ನೆಲಮನೆ ಅಮೃತಸಾಗರ ಹೋಬಳಿ ೧, ಸಬ್ಬನಕುಪ್ಪೆ ಹೋಬಳಿ ೧, ಅಲ್ಲಾಪಟ್ಟದ ಹೋಬಳಿ ೧, ಅರಕೆರೆ ಹೋಬಳಿ ೧, ಬನ್ನೂರು ಹೋಬಳಿ ೧, ಅ(೦)ತು, ಚಿಕ್ಕದೇವರಾಯಸಾಗರದ ಕಾಲುವೆ ಸೂತ್ರಸಾಗಿದ ಪರಿ(ರ‍್ಯಂತ) [ಯಂತ್ರ]ಕ್ಕೆ ಹೋಬಳಿ ಸ್ಥಳ ಏಳು ೭, ಕಾವೇರಿಗೆ ತೆಂಕದಿಕ್ಕಿನಲ್ಲು ಬ್ರಹ್ಮಸಮುದ್ರದ ಕಾಲುವೆ ಆದಿತ್ಯವಾರದ ಪೇಟೆಯಾದಿಯಾಗಿ ಹದಿನಾರು ಎಲ್ಲೆಕಟ್ಟಿನ ಪರಿ(ರ‍್ಯಂತ) ತ್ರಕ್ಕೆ ಹೋಬಳಿ ೬ಕ್ಕೆ ವಿವರ: ಚಂದುಗಾಲ ಹೋಬಳಿ ೧, ತರಿಬೂರು ಹೋಬಳಿ ೧, ಹಾರೋಹಳ್ಳಿ ಹೋಬಳಿ ೧, ರಂಗಸಮುದ್ರದ ಹೋಬಳಿ ೧, ಹದಿನಾರು ಹೋಬಳಿ ೧, ನರುವನಹಳ್ಳಿ ಹೋಬಳಿ ೧, ಅಂತು ವಿರಜಾನದಿ ಕಾಲುವೆ ಸುತ್ರೆ ಸಾಗಿದ ಪರ್ಯಂತಕ್ಕೆ ಹೋಬಳಿ ೬.

ಉಭಯಂ ಕಾವೇರಿಯುಭಯ ಪಾರ್ಶ್ವದಲ್ಲಿ ಇರುವ ಚಿಕ್ಕದೇವಸಾಗರದ ಕಾಲುವೆ ೧, ವಿರಜಾನದಿ ಕಾಲುವೆ ೧, ಉಭಯಂ ಕಾಲುವೆ ೨ಕ್ಕೆ ಹೋಬಳಿ ೧೩ಕ್ಕೆ ಅಚ್ಚುಕಟ್ಟು ಮಾಡಿಪ್ಪರು. ಯೇರಿ ವ ಬಗ್ಯೆ(?) ಹೋಬಳಿಗಳಿಗೆ ಹೊಂದಿಸಿ ತೋಟ, ಗ್ರಾಮ, ದೇವಾಲಯ, ಬಹ್ಮಾದಾಯ, ಅಗ್ರಹಾರ ಪುರವರ್ಗ ತ್ಯಾಜಿಲುಂಬಳಿ ಉಾಳಿಗಮಾನ್ಯ ಅರಮನೆ ಗ್ರಾಮಗಳು ಸಹ, ಆ ಗ್ರಾಮಗಳು ಸಹ ಅಗ್ರಹಾರಗಳ ವಿವರ :

ಆ ಹುಟ್ಟುವಳಿ ಲೆಕ್ಕ ಹದಿಮೂರು ಹೋಬಳಿಗೂ ಪ್ರತ್ಯೇಕವಾಗಿ ಲೆಕ್ಕಗಳು ಬರೆದಾ ಲಾಭನಷ್ಟಗಳನ್ನು ನಾನು ಕಂಡು ಇರುವುದನ್ನೆಲ್ಲ ಲೆಕ್ಕಚಾರದಲ್ಲಿ ಬರೆದು ಯಿದೇನೆ. ಇದನ್ನು ನಾನು ಕಂಡಷ್ಟು ಬಿನ್ನಹ ಮಾಡೇನು, ಸಕಲವಾದವರೆಲ್ಲ ಬಂದು ಪಟ್ಟಣ ಸೇರಿ ಸ್ವಾಮಿಯವರ ದಯ ಸಂಪಾದಿಸಿಕೊಂಡು ಸಕಲಕ್ಕೂ ತಗಲಾಗಿ ಇದಾರೆ, ಸ್ವಾಮೀ ಕಾಲದಲ್ಲಿ ರಾಜ ಒಡೆಯರವರು ಸ್ಥಳದ ಹೆಬ್ಬಾರರವರಿಗೆ ನಂಬಿಗೆಯನ್ನು ಕೊಟ್ಟು, ನಡಸಿ ಬರುತ್ತ ಇದ್ದ ಅಂದಳ ಉಂಬಳಿ ಪ್ರಭುಮಾನ್ಯ ಆಯಸಾಮ್ಯ ಕುಳು ಮುಂತಾಗಿ ಈಚೆಗೆ ತಾವು ತಮ್ಮ ಬುದ್ಧಿವಂತಿಕೆಯಿಂದ ಸಂಪಾದಿಸಿದಂತಹ ಭಟಮಾನ್ಯಗಳು, ವ್ಯವಹಾರ ಚತುಷ್ಪಯಕ್ಕೆ ಸಲ್ಲುವ ದಾನ ಆಧಿಕ್ರಯ ಪರಿವರ್ತನಾ ಪತವಾಗಿ ಸಂಪಾದಿಸಿದಂಥ ಸ್ವಾಸ್ಥ್ಯಗಳು ಸಹ ಹಾಕಿಕೊಂಡರು. ಈ ಸ್ಥಳದವರಿಗೆ ಉಾಳಿಗ ಉದ್ಯೋಗಗಳ ಕೊಡದೆ ಇರುವುದರಿಂದಲೂ ಸ್ಥಳದವರೆಲ್ಲ ಪಕ್ಷಹೀನರಾದರು.

ಉತ್ತುಂಗ ಶೈಲಶಿಖರಸ್ಥಿತ ಚೂತವೃಕ್ಷೇ
ಪಕ್ವಂ ಫಲಂ ಕಿಲ ಶುಕೋ ಲಭತೇ [ಬುಭಂಗತಾ] (ಸಪಕ್ಷಃ) ।
ಸಿಂಹೋಪಿ ಮತ್ತಗಜಕುಂಭವಿದಾರದಕ್ಷ
ಉಚ್ಚಿಷ್ಟಮೇವ ಲಭತೇ ಖಲು ಪಕ್ಷ ಹೀನಃ ॥

ಎಂಬ ಮರ್ಯಾದೆಯಲ್ಲಿ ಉಾಳಿಗ ಉದ್ಯೋಗವಿಲ್ಲದೆ ನಿರಾವಕಾಶದಲ್ಲಿ ಕಾದುಕೊಂಡು ಇದಾರೆ. ಪೂರ್ವದಲ್ಲಿ ರಾಜ ಒಡೆಯರವರಾದಿಯಾಗಿ ಸ್ಥಳದ ಹೆಬ್ಬಾರರುಗಳನ್ನೆಲ್ಲ ದಯೆಯಿಟ್ಟು ಕಾಪಾಡಿ ರಕ್ಷಣೆ ಮಾಡಿದೋಪಾದಿಯಲ್ಲಿ ಆಳರಿತು ಉದ್ಯೋಗಗಳಾವನೂ(ಳಾವುದಾದರೂ) ಕೊಡಿಸಿ, [ಕಾಪಾಡಿ] ರಕ್ಷಣೆ ಮಾಡಿಸುವ ಹಾಗೆ ಕಟಾಕ್ಷಿಸಬೇಕು, ಸಾಮಿಯವರ ಪಾದಕ್ಕೆ ಇಂತೀ ಬಿನ್ನಹ.

ವಿಷ್ಣುವರ್ಧನರಾಯರ ಅಪ್ಪಣೆವಿಡಿದು ಕಾವೇರಿಯುಭಯ ಪಾರ್ಶ್ವದಲ್ಲಿ ಕಟ್ಟಿದ ಅಷ್ಟಗ್ರಾಮಗಳ ಬ್ರಾಹ್ಮಣಪ್ರಭುಗಳಾಗಿ ಆಳಿದಂಥ ವಿವರ: ತಿಮ್ಮಣ್ಣಡಣಾಯಕರು ಪಟ್ಟಣ ನಿರ್ಮಿಸುವುದಕ್ಕೆ ಮೊದಲೆ ಕನ್ನಂಬಾಡಿ ಗೋವಿಂದ ಹೆಬ್ಬಾರರವರು ಕುರುವಂಕನಾಡಿನಲ್ಲಿ ಪ್ರಭುವೆನಿಸಿಕೊಂಡರು. ಹರಿಹಿನ ಅಪ್ಪಣ್ಣ ಹೆಬ್ಬಾರರವರು, ಬಳಗುಳದ ನಂಜ ಹೆಬ್ಬಾರರವರು ಬ್ರಹ್ಮಪುರದ ಕೃಷ್ಣ ಹೆಬ್ಬಾರರವರು, ಕಿರವಂಗೂರು ಪೆರಿ ಹೆಬ್ಬಾರರವರು, ಚೆರಣಯ (?) ಹೆಬ್ಬಾರರವರು, ಮೇಳಾಪುರದ ಆದಿ ಹೆಬ್ಬಾರರವರು, ಮಾಧವನಹಳ್ಳಿ ದೊಡ್ಡನಾರಣ ಹೆಬ್ಬಾರರವರು, ಬನ್ನೂರು ಕಾವೇರಿ ಹೆಬ್ಬಾರರವರು, ಅರಕೆರೆ ಶ್ರೀರಂಗಸಮುದ್ರ ಸಹ ಹಿಂದಕ್ಕೆ ೫೩೨ ವ(ರು)ರ್ಷ ಪರ್ಯಂತದಲ್ಲಿ ಪ್ರತ್ಯೇಕ ಪ್ರತ್ಯೇಕ ತಮ್ಮ ತಮ್ಮ ಗ್ರಾಮಗಳ ಆಳಿಕೊಂಡು ಇದ್ದರು. ಆಮೇಲೆ ಪಟ್ಟಕಟ್ಟಿ ತಿಮ್ಮಣ್ಣಡಣಾಯಕರು ಆಳಿಕೊಂಡು

ಇದ್ದರು. ಮಠಾಧಾರಕರಾದಂಥ ರಾಮಾನುಜಾಚಾರ್ಯರು ಯಾದವಗಿರಿ ಜೀರ್ಣೋದ್ಧಾರ ಮಾಡುವ ನಿಮಿತ್ತ ಮೇಲುಕೋಟೆಗೆ ಚಿತ್ತೈಸಿದ ತರುವಾಯದಲ್ಲಿ, ಕಾವೇರಿಯುಭಯಪಾರ್ಶ್ವದಲ್ಲಿ ಇವರ ಸಂಗಡ ಬಂದ ಶ್ರೀವೈಷ್ಣವ ಬ್ರಾಹ್ಮಣರುಗಳು ತೆಗೆಸಿದ ಕಟ್ಟೆಕಾಲುವೆಗಳು ಗ್ರಾಮಗಳ ವಿವರ: ಕನ್ನಂಬಾಡಿ ೧, ಹರಲು ೨, ಬಳಗೊಳ ೩, ಬ್ರಹ್ಮಪುರ ೪, ಕಿರುವಂಗೂರು ೫, ಮೇಳಾಪುರ ೬, ಮಾಧವನಹಳ್ಳಿ ೭, ಅರಕೆರೆ ೮, ರಂಗಸ್ಮುದ್ರ ೯, ಬನ್ನೂರು ೧೦. ಈ ಹತ್ತು ಸ್ಥಳವು ಬ್ರಾಹ್ಮಣ ಪ್ರಭುವಳಿಗಳಾಗಿ ಈ ಕಾವೇರಿ ಮಧ್ಯದಲ್ಲಿ ಕಟ್ಟಕಟ್ಟುವಂದಿಗೆ ಮೊದಲ ೫೩೨ ವರ್ಷ ಪರ್ಯಂತ ಪ್ರತ್ಯೇಕವಾಗಿ ಗ್ರಾಮಗಳನ್ನು ತಾವೇ ಪ್ರಭುಗಳಾಗಿ ಆಳಿಕೊಂಡು ಇದ್ದರು. ಅಪ್ಪರ ಮೇಲೆ ಶ್ರೀರಂಗಪಟ್ಟಣವು ಶಾಲಿವಾಹನ ಶಕವರ್ಷ ೧೪೪೪ನೆಯ ಸಂದ ವರ್ತಮಾನವಾದ ಯುವನಾಮ ಸಂ। ದಲ್ಲೂ ಪಟ್ಟಣ ಕಟ್ಟಿದರು (?) ಆ ಆರಭ್ಯ ಈ ಪಟ್ಟಣ ಕಟ್ಟಿ ರಂಗಸ್ವಾಮಿ ಪುನಃ ಉದ್ಭವವಾಗಿದ್ದದ್ದು ಸಹ ಕೀಲಕ ಸಂ। ವರೆಗೆ ವರ್ಷ ೨೭೩ಕ್ಕೆ ವಿವರ :

ರಾಯರ ಹವಾಲಿಯಲ್ಲಿ ತಿರುಮಲರಾಜಯ್ಯನವರ ದಿನದ ವರೆಗೆ ಆಳಿದ ವರ್ಷ ೧೫೩, ರಾಜವೊಡೆಯರಾದಿಯಾಗಿ ಪಟ ಲೆಕ್ಕ ವರ್ಷ ೧೨೦, ಉಭಯಂ ವರ್ಷ ೨೭೩, ಅಂತು ಶಾಲೀವಾಹನ ಶಕವರ್ಷ ಇಂದಿನ ವರೆಗೆ ನಡೆದು ಬರುವುದು ವರ್ಷ ೧೬೫೦. ಮೈಸೂರು ನಗರದ ಸಿಂಹಾಸನಕ್ಕೆ ಪಟ್ಟವನಾಳಿದ ದೊರೆಗಳು: ಅಂದಿನ ವರೆಗೆ ನಡೆದ ಶಾಲೀವಾಹನ ಶಕವರ್ಷ ೧೪೪೪ ಸಂದ ವರ್ತಮಾನ ತಾರಣ ಸಂ। ದಲ್ಲು ಲಕ್ಕಣ್ಣವೊಡೆಯರವರು ಕೃಷ್ಣವೊಡೆಯರವರು ಪಟ್ಟದ ತಿಮ್ಮರಾಜವೊಡೆಯರವರಿಗೆ ಪಟ್ಟ ವ್ಯಯ ಸಂ। ಆರಭ್ಯ ಶುಕ್ಲ ಸಂ। ವರೆಗೆ ವರ್ಷ ೪೪, ಹಿರಿಚಾಮರಾಜವೊಡೆಯರವರಿಗೆ ೩, ಉಭಯಂ ಅಂಗೀರಸ ಸಂ। ವರೆಗೆ ವರ್ಷ ೪೭, ತಿಮ್ಮರಾಜವೊಡೆಯರವರ ಕುಮಾರರು ಬೋಳಚಾಮರಾಜವೊಡೆಯವರಿಗೆ ಪಟ್ಟ ಶ್ರೀಮುಖ ಸಂ। ಆರಭ್ಯ ಯುವ ಸಂ। ವರೆಗೆ ವರ್ಷ ೩, ಇವರ ಕುಮಾರರು ಬೆಟ್ಟಚಾಮರಾಜವೊಡೆಯರವರು, ಇಮ್ಮಡಿ ರಾಜಒಡೆಯರವರು, ದೇವರಾಜವಡೆಯರವರು, ರಾಜವೊಡೆಯರವರು, ಚೆನ್ನರಾಜವೊಡೆಯರವರು, ಅಂತು ಜನ ೫ಕ್ಕೆ ಪಟ್ಟ ಧಾತು ಸಂ। ರಾಜವೊಡೆಯರವರಿಗೆ ಪಿಂಗಳ ಸಂ। ಜ್ಯೇಷ್ಠ ಶು ೧೨ ವರೆಗೆ ವರ್ಷ ೪೧, ಇವರ ಕುಮಾರರು ನರಸರಾಜವೊಡೆಯರವರು ೧, ಇವರ ಕುಮಾರರು ಬೆಟ್ಟದಯ್ಯನವರು ೧, ನಂಜಯ್ಯನವರು, ಬಿಳಿಕೆರೆ ಚಾಮುಂಯ್ಯನವರ ಜ(?)೧, ನರಸರಾಜಒಡೆಯರವರ ಕುಮಾರರು ಚಾಮರಾಜಒಡೆಯರವರಿಗೆ ಪಟ್ಟ ಪಿಂಗಳ ಸಂ। ಆಷಾಢ ಶು ೫ ಆರಭ್ಯ ಧಾತು ಸಂ।ವರೆಗೆ ವರ್ಷ ೨೦, ಇಮ್ಮಡಿ ರಾಜವೊಡೆಯರವರಿಗೆ ಈಶ್ವರ ಸಂ। ಆಷಾಡ ಶು ೬ ಆರಭ್ಯ ವರ್ಷ ೧, ತಿಂಗಳು ೪, ದಿನ ೮, ಬೆಟ್ಟದ ಚಾಮರಾಜವೊಡೆಯರವರ ಕುಮಾರರು ತಿಮ್ಮರಾಜ ಒಡೆಯರವರು, ಕಂಠೀರವ ನರಸರಾಜವೊಡೆಯರವರಿಗೆ ಪಟ್ಟ ಬಹುಧಾನ್ಯ ಸಂ। ಆಶ್ವಯುಜ ಶು ೧೨ ಆರಭ್ಯ ವಿಕಾರಿ ಸಂ। ಶ್ರಾವಣ ಬ ೮ರ ವರೆಗೆ ವರ್ಷ ೨೧ ತಿಂ ೯ ದಿ ೨೧, ಬೋಳಚಾಮರಸವೊಡೆಯರ ಕುಮಾರರು ಹಿರಿದೇವರಾಜವೊಡೆಯರವರು, ಇವರ ಕುಮಾರರು ಎಲಿಯೂರು ದೇವಪ್ಪನ ಜ ೧, ದೇವಯ್ಯನವರ ಜ ೧, ಚಿಕ್ಕದೇವಪ್ಪನ ಜ ೧, ದೇವರಾಜವೊಡೆಯರಿಗೆ ಪಟ್ಟ ವಿಕಾರಿ ಸಂ। ಭಾದ್ರಪದ ಶು ೨ ಆರಭ್ಯ ಪರೀಧಾವಿ ಸಂ। ಫಾಲ್ಗುಣ ಬ ।೭ ಗುರುವಾರದ ವರೆಗೆ ವರ್ಷ ೧೩, ಚಿಕ್ಕದೇವರಾಜವೊಡೆಯರವರು ಪಟ್ಟಾಭಿಷೇಕಕ್ಕೆ ಚಿತ್ತೈಸಿದ್ದು ಪರಿಭಾವಿ ಸಂ। ಫಾಲ್ಗುಣ ಬ ೮

ಶುಕ್ರುವಾರದ ಆರಭ್ಯ ತಾರಣ ಸಂ। ಕಾರ್ತಿಕ ಬ। ೩೦ ವರೆಗೆ ವರ್ಷ ೩೧, ತಿಂ ೮, ದಿ ೨೨. ಇವರ ಕುಮಾರರು ಕಂಠೀರವ ನರಸರಾಜವೊಡೆಯರಿಗೆ ಪಟ್ಟ ತಾರಣ ಸಂ। ಮಾರ್ಗಶಿರ ಶು । ೧ ರ ವರೆಗೆ ಪಟ್ಟ(?), ಇವರ ಕುಮಾರರು ಚಿಕ್ಕಕೃಷ್ಣರಾಜವೊಡೆಯರಿಗೆ ಪಟ್ಟ ಉಭಯ ೨ಕ್ಕೆ ವಿರೋಧಿಕೃತು ಸಂ। ವರೆಗೆ ವರ್ಷ ೨೭, ದಿನ ೨೦, ಅಂತು ಪಟ್ಟವನಾಳಿದ ದೊರೆಗಳು ಪಟ್ಟ ೧೧ಕ್ಕೆ ವರ್ಷ ೨೧೦, ತಿ ೩, ದಿನ ೧೭, ಹೆಮ್ಮನಹಳ್ಳಿ ತಿಮ್ಮರಾಜವೊಡೆಯರ ಕುಮಾರರು ಬೆಟ್ಟದ ವೊಡೆಯರು, ಇವರ ಕುಮಾರರು ಅಂಕನಹಳ್ಳಿ ರಾಚಯ್ಯನ ಜ ೧ (?), ಇವರ ಕುಮಾರರು ದಾಸಯ್ಯನ ಜ ೧, ಇವರ ಕುಮಾರರು ದೇವರಾಜಯ್ಯನ ಜ ೧, ಬೆಟ್ಟದಯ್ಯನ ಜ ೧, ತಿಮ್ಮರಾಜಯ್ಯನ ಜ ೧, ಅಂತು ಜ ೩ಕ್ಕೆ ವಿವರ: ದೇವರಾಜಯ್ಯನ ಕುಮಾರರು ರಾಜವೊಡೇರಯ್ಯನ ಜ ೧, ಬೆಟ್ಟದಯ್ಯನ ಕುಮಾರರು ವೆಂಕಟಯ್ಯನ ಜ ೧, ತಿಮ್ಮರಾಜಯ್ಯನ ಕುಮಾರರು ಚಿಕ್ಕರಾಜಯ್ಯನ ಜ ೧, ಕೃಷ್ಣಯ್ಯನ ಜ ೧, ಅಂತು ಜ ೭ಕ್ಕೆ ಪಟ್ಟ. ದೇವರಾಜಯ್ಯನ ಕುಮಾರರು ಚಾಮರಾಜಯ್ಯನವರ ಕುಮಾರರು, ಚಾಮರಾಜಯ್ಯನವರಿಗೆ ಪಟ್ಟ ವಿರೋಧಿ ಕೃತು ಸಂ। ಫಾಲ್ಗುಣ ಬ। ೫ ದಿವಸ ಮೈಸೂರಿಂದ ಚಿತ್ತೈಸಿದರು. ಈ ಬ ೬ ಶುಕ್ರುವಾರ ಪಟ್ಟಾಭಿಷೇಕ ಆನಂದ ಸಂ। ಜ್ಯೇಷ್ಠ ಬ। ೯ ರವರೆಗೆ ವರ್ಷ ೨, ತಿಂ ೩, ದಿನ ೩, ಕೆಂಚನಗುಡ ಚಿಕ್ಕನಹಳ್ಳಿ ಚಾಮಯ್ಯನವರ ಕುಮಾರರು ಕೃಷ್ಣರಾಜವೊಡೇರಯ್ಯನವರಿಗೆ ಪಟ್ಟ ಆನಂದ ಸಂ। ಜ್ಯೇಷ್ಠ ಬ ೧೦ ಸ್ಥಿರವಾರ ಆರಭ್ಯ . . . . .

ಅಷ್ಟಗ್ರಾಮಗಳ ಕಾಲುವೆಯಲ್ಲಿ ಆದ ಅಚ್ಯುತಗಬ[>ಕಟ್ಟು] ಕಂಬಗಟ್ಟೆ ಬೀಜವು ಸಹ ಅದ ಗದ್ದೆಗಳಲ್ಲಿ ಮಾನ್ಯ ಉತ್ತಾರ ದೇವಾದಾಯ ಬ್ರಹ್ಮಾದಾಯ ಪುರವರ್ಗ ತ್ಯಾಜಿ ಉಂಬಳಿ ಊಳಿಗಮಾನ್ಯ ಇವು ಮುಂತಾದ ಮಾನ್ಯದ ವಿವರ:

ಕಿರುವಂಗೂರು ಸ್ಥಳಕ್ಕೆ ರಾಮಾನುಜಾಚಾರ್ಯರ ಪ್ರಿಯಶಿಷ್ಯರಾದ ಆನಂದಾಳ್ವರವರ ಅಭಿಮಾನಸ್ಥಳವಾದ ವೃತ್ತಿ ನಾಮಧೇಯವಾದ ಸಿರಿಪಯತ್ತೂರು ಕಾಲುವೆ. ಈ ಬಗೆ ಬುದ್ಧಿಸ್ವಾಮಿಗಳು ತೆಗೆಸಿದ ಕಾಲುವೆ ೧ಕ್ಕೆ ಅಚ್ಯುತನ ಕಟ್ಟು, ಕಂಬಗಟ್ಲೆ ಗದ್ದೆ ಖ (೦) ೨೨೪।೨ಕ್ಕೆ ಮಾನ್ಯ ಉತ್ತಾರಕ್ಕೆ ದೇವಾದಾಯ ಪೂರ್ವಮಾನ್ಯ ಖ ೧೩೧ ೮೦೨, ಈಚೆಗೆ ದೊರೆಗಳ ಕೊಟ್ಟಿದ್ದು ಖ ೨೮, ಬ್ರಹ್ಮಾದಾಯದಿಂದ ದೇವಾದಾಯಕ್ಕೆ ಸೇರಿದು ೯ ಖ ೧೧೦ ॥ ೪, ಮಂಡಲಿ ಗುರುವನಾಯಕನ ಸೇವೆ. ಚಾಮರಾಜ ವೊಡೆಯರು ಕೊಟ್ಟಿದ್ದು ಖ ೫, ಪ್ರಭುಮಾನ್ಯದಿಂದ ಸೇರಿದ್ದು ಖ ೧ ॥, ಸ್ಥಾನಿಕರ ಗದ್ದೆ ಖ ॥। ಅಂತು ದೇವಾದಾಯಕ್ಕೆ ಸೇರಿದ್ದು ಗದ್ದೆ ಖ ೨೭೭।೧॥।. ಅಗ್ರಹಾರದ . . . . ಕೈ ಸೇರಿದ್ದು ಗದ್ದೆ: ರಾಮಸ್ವಾಮಿಯವರ ಗದ್ದೆ ಖ ೩, ಕರಿಘಟ್ಟದ ದೇವರ ಗದ್ದೆ ಖ ।, ವಿಶ್ವನಾಥದೇವರ ಗದ್ದೆ ಖ ೨೦।೧॥, ಮಣಿಕರ್ಣಿಕೆ ನರಸಿಂಹದೇವರಿಗೆ ೫, ಮೊರಡಿ ತಿರುಮಲದೇವರ ಗದ್ದೆ ಖ ॥, ಬಸ್ತಿಗದ್ದೆ ೨॥, ಅಂತು ಅಗ್ರಹಾರದ ನಿವೇಶನಕ್ಕೆ ಸೇರಿದ ಗದ್ದೆ ಖ ೩೩॥।೧॥ಕ್ಕೆ ಬದಲಗಿ ಕೊಟ್ಟದ್ದು ಅರಮನೆ ಗದ್ದೆಯಲ್ಲಿ ಸಾಧಾರಣ ಸಂ।ದಲ್ಲು ರಾಮಸ್ವಾಮಿಯವರಿಗೆ ಗದ್ದೆ ಖ ೩, ಬಸ್ತಿಗೆ ಖ ೨॥, ಉಭಯಂ ಖ ೫॥, ಶುದ್ಧ ಅಗ್ರಹಾರ ನಿವೇಶನಕ್ಕೆ ಸೇರಿದ್ದು ಗದ್ದೆ ಖ ೨೮ ।೧॥. ಶುದ್ಧ ನಿಂತ ದೇವಾದಾಯ ಗದ್ದೆ ಖ ೨೪೯ನೆ ವಿವರ:

ಕಿರುವಂಗೂರು ರಾಮಸ್ವಾಮಿಯವರಿಗೆ ರುಧಿರೋದ್ಗಾರಿ ಸಂ। ವರೆಗೆ ನಿಂತ ಗದ್ದೆ ಖ ೬೩॥।.॥, ಈಚೆಗೆ ಉಂಯಾಲ್ಗೆ ತಿರುನಾಳದ ಗೋಪನ ಸೇವೆ, ಬ್ರಾಹ್ಮಾದಾಯ ಗದ್ದೆ ಕೊಂಥು

ಬಿಟ್ಟಿದ್ದು. ಹೊಮ್ಮಾಳಯ್ಯನ ಪೂರ್ವಮಾನ್ಯದ ಗದ್ದೆ ಖ ೨, ಉಭಯಂ ಗದ್ದೆ ಖಂಡುಗ ೬೫ ।।।೦।।ಕ್ಕೆ ವಿವರ: ಪ್ರಭುಗಳು ಕೊಟ್ಟ ಪೂರ್ವಮಾನ್ಯ ಖ ೧೮।।, ಕುಮಾರ ರಾಮರಾಜಯ್ಯನವರು ಕೊಟ್ಟಿದ್ದು ಖ ೨, ತಿರುವಲರಾಜಯ್ಯನವರು ಕೊಟ್ಟಿದ್ದು ಖ ೯೦, ರಾಜವೊಡೇರಯ್ಯನವರು ಕೊಟ್ಟಿದ್ದು ಖ ೬।।, ಅಂಖ ೧೮। ಸೇವಾರ್ಥವಾಗಿ ಬಂದದ್ದು, ತಿರುಮಲರಾಜಯ್ಯನವರ ಬಳಿ ಮವೂರಿ . . . ಸಿ ಪಡೆದ ಬಗ್ಯೆ ಮವೂರಿ ಮಲ್ಲಿನ ಸೇವೆ ಖ ೮, ಹನುಮನಹಳ್ಳಿ ಗ್ರಾಮ ೧ ಪುದುವಟ್ಟಿನ ಸೇವೆಯಾಗಿ ಬಂದದ್ದು. ಬ್ರಾಹ್ಮಾದಾಯದಿಂದ ಭಕ್ತಾದಿಗಳ ಕೈಂಕರ್ಯಕ್ಕೆ ಕೊಂಡುಬಿಟ್ಟದ್ದು, ತಿಮ್ಮಮ್ಮಿ ಭೈರಸೆಟ್ಟಿ ಸೇವೆ ಗದ್ದೆ ತುಲಾಮಾಸದ ಮಂಟಪಕ್ಕೆ ಶ್ರೀರಂಗರಾಜರ ಪೂರ್ವಮಾನ್ಯ ಕೊಂಡುಬಿಟ್ಟದ್ದು ಖ ೨।।।, ಗೋವಿಂದ ಸೆಟ್ಟಿ ಸೇವೆ ಆಳ್ವಾರ ತಿರುನಕ್ಷತ್ರಕ್ಕೆ ಶ್ರೀರಂಗರಾಜರಾಜರ ಪೂರ್ವಮಾನ್ಯದ ಗದ್ದೆ ಖ ।।, ನರಹರಿನ ಸೇವೆ ಕೊಡ ತಿರುನಾಳ ಸೇವೆಗೆ ಹರಿಯಪ್ಪಯ್ಯನ ಪೂರ್ವಮಾನ್ಯದ ಗದ್ದೆ ಖ ೧ ।।। ೧. ವಿಜಯದಳ [>ಶ]ಮಿಗೆ ಕತ್ತಿನಾಗನ ಸೇವೆ ಬೊಕ್ಕಸದ ಹರಿಪ್ಪಯ್ಯನ ಪೂರ್ವಮಾನ್ಯದ ಗದ್ದೆ ಖ ೧, ಯಂಟೆರುಮಾನಾರ (ಅಥವಾ ರಾಮಾನುಜಾಚಾರ್ಯರ) ತಿರುನಕ್ಷತ್ರಕ್ಕೆ ಬೊಮ್ಮಸೆಟ್ಟಿ ಸೇವೆ ಕವಿ ರಾಕ್ಷಸಪ್ಪಯ್ಯನ ಪೂರ್ವಮಾನ್ಯದ ಗದ್ದೆ ಖ ।।, ತೀರ್ಥಮಂಟಪದ ಸೇವೆಗೆ ಪಂಚಾಂಗದ ಅನಂತಯ್ಯನ ಸೇವಾರ್ಥ, ಗಿರಿಭಟ್ಟನ ಅಹೋಬಳಯ್ಯನ ಸೇವೆ, ಇವರ ಪೂರ್ವಮಾನ್ಯದ ಗದ್ದೆ ಖ ೧, ಗೋಪನ ಸೇವೆ ಪ್ರಭವ ಸಂ। ಲ್ಲೂ ಪೊಮ್ಮಾಳಯ್ಯನ ಪೂರ್ವಮಾನ್ಯದ ಗದ್ದೆ ಕೊಂಡುಬಿಟ್ಟದ್ದು ಖ ೨, ಗುರಿಮವುಲ್ಯರ (?) ಬಗೆಯಲ್ಲೀ ಕ್ರಯಕ್ಕೆ ಸೇರಿದ ಗದ್ದೆ ಖ ೫ ।೦।।, ಅಂತು ಗದ್ದೆ ಖ ೬೫ ।।।೦।।, ಕೆಹುತದ (ಚೌತರ್ಪು) ವಿವರ: ನೀರು ಹೊಳೆಹಂತ ಖ ೨೨೮। (?) ೨, ಮೇಲಣ ಬೈಲು ಖ ೨, ಹೊಸತೋಟದ ಹಂತ ಖ ೩।।೩।।, ದೊಡ್ಡ ಆಲದ ಹಂತ ಖ ೨।।, ಮೊಸರೋಗರದ ಹಂತ ಖ ೧೪।।, ಎರೆಮೆಡು ಖ ೮।, ಕೆರೆಹಂತ ಖ ೧೨ ।।।, ಅಂತುಗದ್ದೆ ಖ ೬೫।।।.।।, ಗ್ರಾಮ ೪ ಬಿಡಬೆದ್ದಲು ೩೩।।, ಪಟ್ಟಣ ರಂಗನಾಥಸ್ವಾಮಿಯವರ ಪ್ರಾಕು ರುಧಿರೋದ್ಗಾರಿ ಸಂವತ್ಸರದ ವರೆಗೆ ನಿಂತ ಗದ್ದೆ ಖ ೦೭೦ ಲ ೧ಕ್ಕೆ ವಿಭವ ಸಂವತ್ಸರದಲ್ಲೂ ಭೋಗ್ಯದ ಗದ್ದೆ ಬಿಡಿಸಿಕೊಂಡದ್ದು ಕೇಶವಭಾರತಿಗಳು ಖ ೨, ರಾಮಾನುಜಯ್ಯನವರು ಖ ೧, ಉಭಯಂ ಖ ೩. ಶುದ್ಧ ನಿಂತ ಗದ್ದೆ, ಖ ೦ ೬ ೧೮೧, ಈಚೆಗೆ ಸೇರಿದ್ದು–ವಿಭವ ಸಂವತ್ಸರದಲ್ಲು ಕಿವುಡರಾಮಯ್ಯನವರ ರಂಗಯ್ಯನವರಿಂದ ಕ್ರಯವಾಗಿ ಬಂದ ಗದ್ದೆ ಖ ೧, ಪ್ರಜೋತ್ಪತ್ತಿ ಸಂವತ್ಸರದಲ್ಲು ಗಣಪತಯ್ಯನವರ ಸೇವೆ ಮುಳ್ಳೂರ ಪುರಾಣಿಕರಿಂದ ಕ್ರಯವಾಗಿ ಬಂದದ್ದು ಖ ೨ ।।, ಉಪಾದ್ಯರ ಅಪ್ಪಾಜಯ್ಯನವರಿಂದ ಪ್ರಾಕು ಕ್ರೋಧಿ ಸಂವತ್ಸರದಲ್ಲು ದೃಶ್ಯಾದಿ ಬಗೆ ಗದ್ದೆ ಬೊಕ್ಕಸಕ್ಕೆ ಸೇರಿದ್ದು ಕ ೪।।, ಅಂತು ಸೇರಿ ಬಂದ ಗದ್ದೆ ಖ ೭ ।।।, ಉಭಯಂ ಖ ೭೪ ।। ೪, ವಿವರ:

ಪೂರ್ವಮಾನ್ಯ ಪ್ರಭುಗಳ ದಿನಕ್ಕೆ ಭಂಡಾರದ ಗದ್ದೆ ಖ ೬೧, ಪುದುವಟ್ಟು ಖ ೪೦, ಸೇವಾರ್ಥವಾಗಿ ಬಂದ ಗದ್ದೆ ಭಟಮಾನ್ಯಗಳಿಂದೂರಿಂದಣ(?) ಕೊಂಡು ಬಿಟ್ಟಿದ್ದು ಖ ೮, ಗುಡಿ ವೀರಣ್ಣಯ್ಯನ ಸೇವೆ ಖ ।।।, ತಳವಾರ ಮರಿಯನ ಸೇವೆ ಖ ೩, ಸೂಳೆ ಬೊಬಿ ಕೊಂಡು ಬಿಟ್ಟದ್ದು ಖ ೩।।, ಇವಳ ಮಗಳು ಚಿಕ್ಕ ಸೇವೆ ಖ ೪, ಮಂಡು ಗುರುನಾಥನ ಸೇವೆ ಜಾನುರುಜ ವೊಡೆಯರವರು ಕೊಟದ್ದು ಅರಮನೆ ಗದ್ದೆ ಖ ೫, ಬೋರನ ಸೇವೆ ಖ ೨, ಬಾಣಗಾರನ ಸೇವೆ ಖ ೨, ಕಂಠೀರವ ಅರಸಿನವರು ಸೇವೆ ಕೊಂಡು ಬಿಟ್ಟದ್ದು ಬ್ರಹ್ಮಾದಾಯಾದಿ ಖ ೩,

ತಿಮ್ಮಪ್ಪರಾಜಯ್ಯನವರು ಸೇವೆ ಚಂ ಪಿಳ್ಳಯ್ಯನ ಮಾನ್ಯದ ಗದ್ದೆ ಖ ೫, ಸೂಳೆ ವೆಡೆದ ಲಿಂಗಿ ಸೇವೆ ಕೊಂಡು ಬಿಟ್ಟದ್ದು ।, ಇವಳ ಮಗಳು ಚಲುವಾಂಬೆ ಸೇವೆ ಖ ೨, ಕಿವುಡ ರಾಮಯ್ಯನ ಸೇವೆ ಖ ೧, ಗಣಪತಯ್ಯನ ಸೇವೆ ಮುಳ್ಳೂರು ಪೌರಾಣಿಕರಿಂದ ಖ ೨ ॥, ಅಂತು ಸೇವಾರ್ಥವಾಗಿ ಬಂದದ್ದು ಖ ೫೪ ॥।. ಬಡ್ಡಿ (?) ಮೂಲ್ಯದ ಬಗೆಯಲ್ಲಿ ಕ್ರಯ ಭೋಗ್ಯವಾಗಿ ಬಂದದ್ದು ಖ ೭೪ ॥। ೧ಕ್ಕೆ ಹಂತದ ವಿವರ:

ಮೇಲಣ ಬೈಲು ಖ ೫೩ ।, ನೀರು ಹೊಳೆಹಂತ ಖ ೧ ॥, ದೊಡ್ಡ ಅರಹಂತ ಖ ೮ ।, ಪ್ರಭುಮಾನ್ಯದ ಹಂತ ಖ ೬, ಮೊಸರೋಗರ ಹಂತ ಖ ೩ ।, ಅಂತು । ಗದ್ದೆ ಖ ೭೪ ॥। ೧.

ಈ ನಾರಸಿಂಹಸ್ವಾಮಿಯವರಿಗೆ ಕಂಠೀರವ ನರಸರಾಜವೊಡೆಯರು ಕೊಟ್ಟದ್ದು: ಉಯ್ಯಾಲೆ ತಿರವಾಳು ಸೇವೆಗೆ ಮೊಸರೋಗರದ ಹಂತ ಖ ೪, ಎರೆಮೆಡಿನ ಹಂತ ಅರಳೆಕುಡಿಯಲ್ಲಿ ಖ ೪, ಉಭಯಂ ಖ ೮, ಧನೋಜಿ ಅಯ್ಯನವರ ಸೇವೆ ಚಾಮರರಾಜವೊಡೆಯರು ನೀರು ಹೊಳೆ ಹಂತ ಖ ೦೨, ಕೈಶಿಕ ಪುರಾಣದ ಸೇವೆಗೆ ತಿಮ್ಮರಸಯ್ಯ ಕೊಟ್ಟದ್ದು ಅಜಾನ್ಯೆಯ್ಯನ ಪೂರ್ವಮಾನ್ಯದಲ್ಲು ಖ ೨, ಗುರಿಮೌಲ್ಯರ ಬಗೆಲ್ಲು ಉಪಾಧ್ಯ ಅಪ್ಪಾಜಯ್ಯನವರು ಹೊಸ್ತಟದ ಹಂತದಲ್ಲು ಕೊಟ್ಟದ್ದು ಖ ॥।೧॥, ಅಂತು ಗದ್ದೆ ಖ ೧೨ ॥।೧॥ಗೆ ವಿವರ:

ಹೊಸ್ತಟದ ಹಂತ ತೋಟ ಗದ್ದೆ ಖ೦೨ ॥।೧॥, ನೀರು ಹೊಳೆ ಹಂತ ೨, ಮೊಸರೋಗರದ ಹಂತ ಖ ೪, ಅರಳೆ ತೂರಿ ಹಂತ ಖ ೪, ಅಂತು ಖ೧೨॥। ೧॥.

ಕರಿಘಟ್ಟದ ವೈಕುಂಠಯ್ಯನವರ ಸ್ವಾಮಿಗೆ: ಪೊಂಕಲು ಗದ್ದೆ ಖ೧, ಪೂರ್ವಮಾನ್ಯ ಅರಳೆಕುರಿ [>ಡಿ] ಹಂತದ ಉಭಯ ಖ೨॥, ನೀರುಹೊಳೆ ಹಂತ ತೋಟಗದ್ದೆ ಖ೧, ಮೇಲಣ ಬಯಲು ಖ ೩।೧, ಉಭಯ ಖ೭॥, ಪುದುವಟ್ಟಿನ ಸೇವೆ ಗರುಡ ಜಯ . . ಗೆ ಕಂಬಳದ ಕಂಪುಟದ ಸೇವೆ ಈ ಗುರಿ ಸ್ಥಾನಿಕರಿಂದ ದೊಡ್ಡಾಲಯದ ಗದ್ದೆ ಕ್ರಯ ಖ॥।, ಬೂಕನಕೆರೆ ಸಿಂಗಾಳ್ವಾರನ ಸೇವೆ ಇವರ ಪೂರ್ವಮಾನ್ಯ ಖ॥, ಪುಷ್ಪಭಾಗರ ಮಂಟಪದ ಸೇವೆ, ಗೋಪನ ಸೇವೆ, ದೊಡ್ಡ ವರದಯ್ಯಂಗಾರ‍್ಯರು ಮೊಸರೋಗರದ ಹಂತದಿಂದ ಖ೧॥, ತಿರುಮಂಟಪದ ಸೇವೆ ಅರಿಗೆ ದೊಡ್ಡ ವರದಯ್ಯಂಗಾರ‍್ಯರಿಂದ ಕ್ರಯ ಮೊಸರೋಗರದ ಹಂತ ಖ ೩, ಕೈಶಿಕ ಪುರಾಣದ ಸೇವೆಗೆ ರಾಮಕೃಷ್ಣಯ್ಯನ ಸೇವೆ ಖ೦।೦, ವಿಷುಸಂವತ್ಸರದಲ್ಲು ರಾಮಾಂಜಮ್ಮನವರು ಕೊಟ್ಟದ್ದು ಕೈಶಿಕ ಪುರಾಣ ಸೇವೆಗೆ ಭಾರತಿ ನಾರಪ್ಪನ ಗದ್ದೆ ಪ್ರಾಕು ದೃಶ್ಯವಾಗಿದ್ದ ಬಗ್ಯೆ ಭೋಗಕ್ಕೆ ಸೇರಿದ್ದು: ನೀರು ಹೊಳೆ ಹಂತ ಖ ೧।೩, ಉಭಯ । ಗದ್ದೆ ಖ ೧।೩, ವೈಮಾಳಿಗೆ ಸೇವೆ ತಿಮ್ಮಪ್ಪಾಜಯ್ಯನವರ ಸೇವೆ, ನಂಜಣ್ಣನ ಸೇವೆ, ಶೀಗೆ ತಾಲು ಖ ೨।೨ ಮೌಲ್ಯದ ಬಗ್ಗೆ ಕಬ್ಬಿನ ತಿಮ್ಮಪ್ಪ ಭೋಗ್ಯದ ಉತ್ತಮೇಡು ಖ೧ ॥೩, ಪ್ರಭವ ಸಂವತ್ಸರದಲ್ಲು ಉಯ್ಯಾಲ ತಿರುನಾಳುಗೆ ಪೊಮ್ಮಿನ ಅಪ್ಪಾಜಯ್ಯನ ಪೂರ್ವಮಾನ್ಯದ ಗದ್ದೆ ಖ೨, ರಾಯಸದ ಸೂರಪ್ಪನ ಸೇವೆ ಮಳವೂ [>ಮುಳ್ಳೂ]ರ ಜೋಯಿಸರಿಂದ ಕ್ರಯಕ್ಕೆ ಕೊಂಡು ಬಿಟ್ಟುದು ಖ೧, ಚಿತ್ರಭಾನು ಸಂವತ್ಸರದಲ್ಲು ಹಸ್ತಾಂಕದ ಗುರುಸೆಟ್ಟಿ ಮಂಟಪದ ಸೇವೆ ನಂರ್ಜ, ನೀರುಹೊಳೆ ಹಂತದಲ್ಲು ಕ್ರಯಕ್ಕೆ ಕೊಂಡು ಬಿಟ್ಟುದು ಖ೧, ಚಿತ್ರಭಾನು ಸಂವತ್ಸರದಲ್ಲು ತಮ್ಮಯ್ಯನ ಸೇವೆ ಪ್ರಾಕು ಪ್ರಮಾದಿ ಸಂವತ್ಸರದಲ್ಲು

ಕವಿ ರಾಕ್ಷಸಪ್ಪಯ್ಯನವರ ಕ್ರಯದ ಬಗ್ಗೆ ಖ೩॥, ಉಭಯಂ ಗದ್ದೆ ಖ೨೧॥೩ಕ್ಕೆ ಹಂತದದ್ದು ಮೇಲಣ ಬಯಲು ಖ೩॥, ನೀರುಹೊಳೆ ಹಂತ ಖ೦।೦, ಹಸತೋಟದ ಹಂತ ಖ೧।೩, ಸೊರೆಕಲ್ಲು ಕುರಿಹಂತ ಖ೨।, ಅಂತು ಖ೨೧॥೩.

ಮೇಲುಕೋಟೆ ಚೆಲುವರಾಯಸ್ವಾಯಿಯವರ ಪೂರ್ವಮಾನ್ಯ ನಂದಾವನ ಎರೆಮೆಡು ಖ೬, ಮಣಿಕಣಿಕೆ ನರಸಿಂಹಸ್ವಾಮಿಗೆ: ಈ ಗುರಿವತ್ತಿ ಮಂಟಪದ ಮೆಡು ಖ೨॥, ಮೊಸರೋಗರವ ಹಂತದಲ್ಲು ಖ೨॥, ಆನೆಗಳ ಹಳ್ಳ ದೊಡ್ಡಾಲದ ಖ೩, ಹೊಸತೋಟ ಹಂತದ ಉತಮೆಡು ಖ೧, ನೀರುಹೊಳೆ ಹಂತ ಖ॥, ಅಂತುಖ೯॥.

ವಿಶ್ವನಾಥಸ್ವಾಮಿಯವರಿಗೆ ಸರ್ವಮಾನ್ಯ ನೀರುಹೊಳೆ ಹಂತ ಖ೩, ದೋಣಿಗದ್ದೆ ಖ॥, ಮೊಸರೋಗರದ ಹಂತ ಖ೩, ಶಿವರಾತ್ರಿ ಗದ್ದೆ ಖ೨, ಮೇಲಣ ಬಯಲು ಖ೧॥, ಹೊಸಕೋಟೆ[>ತೋಟ] ಹಂತ ೧।, ಅಂತು ಪೂರ್ವಮಾನ್ಯ ಖ೧೧॥.

ಗಂಗಾಧರಸ್ವಾಮಿಯವರಿಗೆ ಆರುಸಾವಿರ ಗದ್ದೆ ಪ್ರಭುಗಳ ದಿವಸಕ್ಕೆ ಖ೧೫, ಹುರಿಯಕ್ಕೆ ಮೇಡು ಖ॥, ತೋಟ ಗದ್ದೆ ಅಲಾ ಖ೧, ಉಭಯಂ ಗದ್ದೆ ಖ೧೬॥. ಚಾಮರಾಜವೊಡೇರಯ್ಯನವರು ಕೊಟ್ಟ ಗದ್ದೆ ಸಹಸ್ರನಾಮ ತುಂಬೆಹೂವಿನ ಪೂಜೆಗೆ ಹೂವಿನ ವೆಂಕಟಾದ್ರಿಭಟ್ಟರಿಗೆ ಸ್ವಯಂಭಾಗದಲ್ಲು ಖ೨, ಪುದಿವಟ್ಟದ ಬಾಳಯ್ಯನವರ ನಂಜರಾಜಯ್ಯರಸಿನ ಸೇವೆ ಸಂಚರಿಂ, ಗಳ ಗುರಿಗೆ ಪೂರ್ವಮಾನ್ಯ ಪೊಮ್ಮಾಳಯ್ಯನ ಸೇವೆ ದುರ್ಮುಖಿ ಸಂವತ್ಸರದಲ್ಲು ಮವುಲ್ಯ ಖ೬೦ಕ್ಕೆ ಸೇರಿದ ಗದ್ದೆ ಖ೧೨, ಸೂಳೆಯರ ಕೆಂಪುನಂಜಿ ಸೇವೆ ಕವಿ ರಾಕ್ಷಸಪ್ಪಯ್ಯ ನಿ೦।, ದೊಡ್ಡಾಲದ ಹಂತದ ಗದ್ದೆ ಖ೩, ಅಂತು ಗಂಗಾಧರಸ್ವಾಮಿಯವರಿಗೆ ಬಿಟ್ಟ ಗದ್ದೆ ಖ೨೨॥೨.

ಅಗ್ರಹಾರದಲ್ಲು ತಿರುಮಲಯ್ಯಂಗಾರ್ಯರು ಪ್ರತಿಷ್ಠೆಮಾಡಿದ ಗೋಪಾಲಕೃಷ್ಣಸ್ವಾಮಿಯವರಿಗೆ ಬ್ರಹ್ಮಾದಾಯದಿಂದ ಸೇರಿದ್ದು: ಕ್ಷಯ ಸಂವತ್ಸರದಲ್ಲು ದೊಡ್ಡ ತಿಮ್ಮಯ್ಯ ನಿ೦।, ಸ್ವಯಂಭೋಗರ ಗದ್ದೆ ಖ॥, ಪ್ರಭವ ಸಂವತ್ಸರದಲ್ಲು ಭಾನೋಜಿಪಂಡಿತರಿಂದ ನೀರುಹೊಳೆ ಹಂತ ಖ೩, ರಾಯಸದ ಸೂರಪ್ಪನವರಿಂದ ಮೊಸರೋಗರದ ಹಂತ ಖ೨, ಅಂತು ಸೇವಾರ್ಥವಾಗಿ ಬಂದದ್ದು ಖ೦೫॥. ವಿಭವ ಸಂವತ್ಸರದಲ್ಲು ಕೇಶವಭಾರತಿಗಳಿಂದ ಕ್ರಯ ದೊಡ್ಡಾಲದ ಖ೨, ರಾಮಾನುಜಯ್ಯನವರ ಹೊಸಕೋಟೆ[>ತೋಟ] ಹಂತ ಖ೧, ಪ್ರಜೋತ್ಪತ್ತಿ ಸಂವತ್ಸರದಲ್ಲು ಭಾನೋಜಿಪಂಡಿತರ ಯೋಗ್ಯ ನಾರಣಯ್ಯ ನೀಳ, ನೀರುಹೊಳೆ ಹಂತ ಖ೨, ರಾಮಾನುಜಯ್ಯನ ತಿರುವಂಗಡಮ್ಮನಂಕಂದಾಳ್ಯೆ ನಿಳ, ಹೊಸಕೋಟೆ ಹಂತ ಖ॥, ಪ್ರಜೋತ್ಪತ್ತಿ ಸಂವತ್ಸರದಲ್ಲು ಅಪ್ಪವೊಡೆಯರ ಸಂಗರಯ್ಯನಿಂದ ಹೊಸಕೋಟೆ[>ತೋಟ] ಹಂತ ಖ।, . . . ಎರಬನ ಗುಂಡಿ ಹೊ, ತಿಮ್ಮರಸ ಹೆಬ್ಬಾರುವರ ವೆಂಕಟಪತಯ್ಯನಿಂದ ಮುಳ್ಳೂರು ಪೌರಾಣಿಕರಿಂದ ಭೋಗ್ಯದ ಬಗ್ಯೆ ಗದ್ದೆ ೧॥, ಪ್ರಮಾದಿ ಸಂವತ್ಸರದಲ್ಲು ಕೊಲ್ಲೂರು ಸಿಂಗರಯ್ಯನಿಂದ ನೀರುಹೊಳೆ ಹಂತದಲ್ಲು ಖ।, ಅಂತು ಗೋಪಾಲಕೃಷ್ಣಸ್ವಾಮಿಗೆ ಖ೧೨।.

ಬೆದಲ್ಲು ಗ೧॥, ಬಿದಿರೆ ವಸ್ತಾದಿಗಳು ಮೂಡಲು ಬಾಗಿಲು ಹನುಮಂತರಾಯರಿಗೆ ಮಾನ್ಯ ಖ೧॥, ವಡಿವಾಣ ತಿರುಮಲದೇವರ ಪೂರ್ವಮಾನ್ಯ ಖ೧॥, ಪಂಜೇಶ್ವರ ಖ೧,

ಭೈರಿ(?)ದೇವರು ಸರ್ವಮಾನ್ಯ ಖ॥, ಈ ಹನುಮಂತರಾಯರ ಬೆದಲ್ಲು ಗ೬, ಅಂತು ಕಿರುವಂಗೂರು ಬಿಡು ದೇವಾಸ್ಥಾನ ೬ಕ್ಕೆ ಗದ್ದೆ ಖ, ೨೭॥೨. ಬೆದಲ್ಲು ಗ೬.

ಲಕ್ಕಣಪುರದ ರಾಮಚಂದ್ರದೇವರ ಖ೧, ಹನುಮಂತರಾಯ ಖ೧, ಬಸವ ಖ॥, ಉಭಯ ಖ೨॥.

ಪಟ್ಟಣದಲ್ಲು ಕೇರಿ ನರಸಿಂಹದೇವರ ಖ೨, ಮೊರಡಿ ತಿರುಮಲದೇವರು ಖ೨॥, ತಿಗಳಗೇರಿ ಜಟೇರಾಯ ಸೂಳೆಯರ ಜೆಟ್ಟಿ(?) ಸೇವೆ, ಶ್ರೀನಿವಾಸಯ್ಯನಿಂದ ಕ್ರಯ ಖ೪, ಬಸ್ತಿಗುಡಿ ಖ೨॥, ಕಾಳಮ್ಮನ ಗುಡಿಗೆ ಬ್ರಹ್ಮಾದಾಯಾದಿಂ ಕ್ರಯವಾಗಿ ಬಂದುದು ಖ೯೮೩, ಅಂತು ಪಟ್ಟಣದ ದೇವರು ಆರಕ್ಕೆ ಖ೨೦೮೩.

ಪಟ್ಟಣದ ಸೋಮನಹಳ್ಳಿ ತಿರುಮಲದೇವರಿಗೆ ಅರಮನೆ ಅವ್ವೆಯರ ಸೇವೆ: ಮೊಸರೋಗರದ ಹಂತದ ಗದ್ದೆ ೧॥, ಅಂತು ದೇವಾಸ್ಥಾನ ೨೩, ಮಾನ್ಯ ಖ೨೭೧॥೩. ವಿವರ ಪೂರ್ವಮಾನ್ಯ ಪ್ರಭುಗಳ ಮಾನ್ಯದಿನ. ಖ೧೦೦॥೧, ರಾಯರು ರಾಮರಾಜಯ್ಯನವರು ಕೊಟ್ಟದ್ದು ಖ೨, ತಿರುಮಲರಾಜಯ್ಯನವರು ಕೊಟ್ಟದ್ದು ಖ॥, ಕೋಡಿಹಳ್ಳಿಗ್ರಾಮ ೧॥.

ರಂಗಮ್ಮನವರು ಕೊಟ್ಟದ್ದು ಖ೯। ರಾಜವೊಡೇರಯ್ಯ ಕೊಟ್ಟಿದ್ದು ಖ೦೬।, ಕಂಠೀರ್ ನರಸರಾಜವೊಡೆಯರವರು ಕೊಟ್ಟದ್ದು ಖ೦೮।, ಚಾಮರಾಜವೊಡೇರಯ್ಯನವರು ಕೊಟ್ಟದ್ದು ಖ೦೨೪।, ಅಂ . . ವಾರ್ತ(?) ಖ೧೨೯SI, ಬ್ರಹ್ಮಾದಾಯದಿಂದ ಕ್ರಯದ ಬಗ್ಯೆ ಬಂದದ್ದು ಖ ೩೮। ೩, ಪುದುವಟ್ಟು(ಟ್ಟಿ)ನ ಸೇವ ಅ. ಬಂದದ್ದು ಖ೯೭.S.೪. ಭಕ್ತಾದಿಗಳ ಸೇವಾರ್ಥವಾಗಿ ಬಂದದ್ದು ಖ೧೯, ದೇವಾದಾಯ. . . ವ ಗದ್ದೆ ಖ೨೭೩॥೩, ಹಂತದ ವಿವರ:

ವೇಲಣ ಬಂಸುಲು ಖ೬೭॥೧೭, ನೀರುಹೊಳೆ ಹಂತ ಖ೬೩॥, ಹೊಸಕೋಟೆ[>ತೋಟ]ಯ ಹಂತ ೨೯, ದೊಡ್ಡ ಆಲದ ಹಂತ ಖ೨೨॥, ಪ್ರಭುಮಾನ್ಯದ ಗದ್ದೆ ಖ೭೮೨, ಮೊಸರೋಗರದ ಹಂತ ಖ೪೧॥. ಎರೆಮೇಡು ಖ೨೩॥, ಕೆರೆಹಂತ ೧೩॥, ಮಂಟಪದ ಮೇಡು ಖ೨॥, ಹಂತ ೯ ನಡೆವ ದೇವಾದಾಯ ಖ೨೭೩, ಬ್ರಹ್ಮಾದಾಯ ಪ್ರಾಕು ಪೂರ್ವಮಾನ್ಯಪ್ರಭುಗಳು ಕೊಟ್ಟದ್ದು ಖ೨೦೦. ಬಾಳಿಗೆ ದೊರೆಗಳು ಕೊಟ್ಟದ್ದು, ಮಲ್ಲರಾಜಯ್ಯನವರು ಮುಳ್ಳೂರು ಪೌರಾಣಿಕರಿಗೆ ಕೊಟ್ಟದ್ದು ಗದ್ದೆ ಖ೧೦, ಪುತ್ತುಂಭಟ್ಟರಿಗೆ [ಕೊಟ್ಟದ್ದು] ಖ೨, ಉಭಯಂ ಖ೧೨, ಕುಮಾರ ಮಲ್ಲರಾಜಯ್ಯನವರು ಕೊಟ್ಟದ್ದು. ದೊಡ್ಡ ವರದಯ್ಯಂಗಾರ್ಯರಿಗೆ ಖ೧೨. ರಾಜವೊಡೆಯರು ಕೊಟ್ಟದ್ದು ಸಂಗರಯ್ಯಂಗಾರ್ಯರಿಗೆ ಖ೩, ಲಕ್ಕಪ್ಪಯ್ಯನವರಿಗೆ ಖ೧, ಬಾರರೋ(?) ನರಸಯ್ಯನವರಿಗೆ ಕೊಟ್ಟದ್ದು ಖ೫. ಅಂತು ಖ೯. ಚಾಮರಾಜಯ್ಯನವರು ಕೊಟ್ಟದ್ದು ಧನ್ನೋಜಯ್ಯನಿಗೆ ಖ೨೬೮॥. ದೊಡ್ಡದೇವರಾಯವೊಡೆಯರವರು ಕೊಟ್ಟದ್ದು ಭಾನೋಜಿ ಪಂಡೆಕುರಗೆ(ಡಿತರಿಗೆ) ಕೊಟ್ಟದ್ದು ಖ೫, ಆಂ. ಖ೬೪॥(?), ಉಭಯಂ ಬ್ರಹ್ಮಾದಾಯ ಖ೨೬೫॥. (ಮೊ)ದಲು ಸೌಮ್ಯಸಂವತ್ಸರದಲ್ಲು ಕಂಠೀರವಯ್ಯ ಅರಸಿನವರು ಮಾಡಿದ ಅಗ್ರಹಾರಕ್ಕೆ ನಿವೇಶನ ಸೇರಿದ ಗದ್ದೆ ಖ೨೧, ಅತವಣಿಗೆ ಸೇರಿದ್ದು ಧನ್ನೋಜಯ್ಯನ[ವರ] ಗದ್ದೆ ಖ೨೪೮॥. ದುಂದುಭಿ ಸಂವತ್ಸರದಲ್ಲು ಹೆಬ್ಬಾರವ ಬಟ್ಟಮಾನ್ಯ ಗದ್ದೆ ಖ೧೩॥, ಉಭಯಂ ಅತವಣಿಕರಿಗೆ ಸೇರಿದ್ದು + ೩೮ ॥, ದೇವಾದಾಯಕ್ಕೆ

ಸೇರಿದ್ದು. ರುಧಿರೋದ್ಗಾರಿ ಸಂವತ್ಸರಕ್ಕೆ ಕಿರುವಂಗೂರು ರಾಮಸ್ವಾಮಿಯವರಿಗೆ ಖ೯೯೮೩, ಕರೀಘಟ್ಟದ ದೇವರಿಗೆ ಖ೮॥, ಪಟ್ಟಣದ ರಂಗಸ್ವಾಮಿಯವರಿಗೆ ಖ೫೭॥೩, ನಾರಸೆ(ಸಿಂಹ) ದೇವರಿಗೆ ಖ೪॥೧॥, ತಿಗಳಗೇರಿ ಭಟ್ಟರಾಯನಿಗೆ ಬಿಟ್ಟ ಚನ್ನಿಸೇವೆ ೪, ಗಂಗಾಧರಸ್ವಾಮಿಯವರಿಗೆ ಖ೪೬, ಕಾಳಮ್ಮನಿಗೆ ೯೮೩, ಪಟ್ಟಸೋಮನಹಳ್ಳಿ ತಿರುಮಲದೇವರು ಖ೧॥, ಭೈರ(ವ)ದೇವರು ಖ೨, ಅಂತು ಖ ೧೧೯। ೨ ಈಚೆಗೆ ಸೇರಿದ್ದು, ವಿಭವ ಸಂವತ್ಸರದಲ್ಲು ಪಟ್ಟಣದ ರಂಗಸ್ವಾಮಿಯವರಿಗೆ ಕಿವುಡ ರಾಮಯ್ಯನ ಸೇವೆ ಖ೧. ಪ್ರಜೋತ್ಪತ್ತಿ ಸಂವತ್ಸರದಲ್ಲು [ಉಪಾದ್ಯರ ಅಪ್ಪಾಜಯ್ಯನವರಿಂದ] ಗಣಪತಿ ಅನಂತಯ್ಯನಿಂದ ಖ೨॥, ಪ್ರಮಾದಿ ಸಂವತ್ಸರದಲ್ಲು ಉಪಾದ್ಯರ ಅಪ್ಪಾಜಯ್ಯನವರಿಂದ ಖ೪।, ಅಂತು ಖ೬॥. ಕಿರುವಂಗೂರು ರಾಮಸ್ವಾಮಿಯವರಿಗೆ ಪ್ರಭವ ಸಂವತ್ಸರದಲ್ಲು, ಸೇರಿದ್ದು ಖ೨, ಕರಿಘಟ್ಟದ ವೈಕುಂಠಸ್ವಾಮಿಯವರಿಗೆ: ಪ್ರಭವ ಸಂವತ್ಸರದಲ್ಲು ಖ೩, ಧಾತು ಸಂವತ್ಸರದಲ್ಲು ಖ೧, ಯಿಷು ಸಂವತ್ಸರದಲ್ಲು ಖ೧।೩, ಚಿತ್ರಭಾನು ಸಂವತ್ಸರದಲ್ಲು ಖ೧।, ಅಂತು ಖ೦೬೩, ಅಗ್ರಹಾರದ ಕೃಷ್ಣಸ್ವಾಮಿಯವರಿಗೆ: ಕ್ಷಯ ಸಂವತ್ಸರದಲ್ಲು ॥, ಪ್ರಭವ ಸಂವತ್ಸರದಲ್ಲು ಖ೫, ವಿಭವ ಸಂವತ್ಸರದಲ್ಲು ಖ೩, ಪ್ರಜೋತ್ಪತ್ತಿ ಸಂವತ್ಸರದಲ್ಲು ಖ೨॥, ಅಂಗೀರಸ ಸಂವತ್ಸರದಲ್ಲು ೦೧೪, ಶ್ರೀಮುಖ ಸಂವತ್ಸರದಲ್ಲು ಖ೧॥, ಬೆದ್ದಲು ಗ೧ ಪ್ರಮಾದಿ ಸಂವತ್ಸರದಲ್ಲು ೦।೦, ಬೆದ್ದಲು ಗ, ೧೮೭, ಪಾರ್ಥಿವ ಸಂವತ್ಸರದಲ್ಲು ಚೊಕ್ಕಮ್ಮನಿಂದ ಧಾರೆ do, ಉಭಯಂ ಗದ್ದೆ ಖ೧೪೮೨, ಇಂತು ದೇವಾದಾಯಕ್ಕೆ ಸೇರಿದ್ದು ಗದ್ದೆ ಖ೩೨, ಬೆದ್ದಲು ಗ ೧೮೭, ಧರ್ಮಾ . . . . ಕ್ಕೆ ಸೇರಿದ್ದು ಈಶ್ವರ ಸಂವತ್ಸರದಲ್ಲು ಕಿರುಂಗೂರ ನಾರಣಭಟ್ಟ ಖ೪।೩, ರಾಮಾಂಜಯ್ಯನಹಾಳಿ ಚಿಕ್ಕನಹಾಳಿ ಚಾಮಯ್ಯನಿಗೆ ೦।೨, ಉಭಯಂ ಖ೫, ಪ್ರಮಾದಿ ಸಂವತ್ಸರದಲ್ಲು ವಿದ್ಯಾಧೀಶ್ವರಸ್ವಾಮಿಯವರ ಗದ್ದೆ ಖ೨॥೩, ಅಂತು ಧರ್ಮಾನಕ್ಕೆ (?) ಸೇರಿದ್ದು ಖ೭॥ ೩, ಈಚೆಗೆ ಅಟ್ಟವಣೆ ಸೇರಿದ್ದು ಪ್ರಭವ ಸಂವತ್ಸರದಲ್ಲು ಅಪ್ಪಾಜಿ ಪಂಡಿಕು(ತ?)ರ ಗದ್ದೆ ಖ೫।೪।. ಕೃಷ್ಣಭಾಗವತರ ಗದ್ದೆ ಖ೧೨॥೩, ಅಪ್ರಮಯ್ಯನ ತಿಮ್ಮರಾಯನಿಗೆ ಧಾರೆ ಖ೧೧॥ ಉಭಯಂ ಖ೨೯೪॥. ಕೆಶುರ ಮೃತನ ನಷ್ಟ ಬಿ ಇ (?) ಭಾಗವತರ ಗದ್ದೆ ಖ ೨॥, ಉಭಯಂ ಗದ್ದೆ ಖ೫೪೫ ।೦॥೦ (?). ಈಶ್ವರ ಸಂವತ್ಸರದಲ್ಲು ಬೊಕ್ಕಸ ತಿಮ್ಮಪ್ಪಯ್ಯನ ಗದ್ದೆ ಖ೧॥. ಅಂತು ಬ್ರಹ್ಮಾದಾಯದಿಂದ ವಿಂಗಡಕ್ಕೆ ಸೇರಿದ್ದು, ಅಗ್ರಹಾರ ನಿವೇಶನಕ್ಕೆ ಸೇರಿದ್ದು ಖ೨೧೮೦, ಅಟ್ಟವಣಿಕರಿಕೆ (ಗೆ) ಸೇರಿದ್ದು ೪೬॥೪॥, ಧರ್ಮಾಸನಕ್ಕೆ ಸೇರಿದ್ದು ಖ೭॥, ದೇವಾದಾಯಕ್ಕೆ ಸೇರಿದ್ದು ಖ೧೩೯।೪, ಅಂತು ವಿಂಗಡಕ್ಕೆ ಸೇರಿದ್ದು ಖ೨೧೫।೧॥ಕ್ಕೆ ಮದ್ದನವಮಾನ್ಯ ಖ೭೧೮೩ಕ್ಕೆ, ಅಂತು ಗದ್ದೆ ಖ೨೮೬॥ ೦ ।೦ಕ್ಕೆ. ಅರಮನೆ ಗದ್ದೆ ೪೩೭॥ಕ್ಕೆ ಪಯಿರು ವಿವರ:

ಅರಹೆನ ಸ್ಥಳದಲ್ಲು ಹೊಳೆಕಾಲ್ವೆ ೧ಕ್ಕೆ, ಚಿಕ್ಕದೇವರಾಯಸಾಗರದ ಕಾಲ್ವೆ ೧ ಕೆರೆ ೧ ಸಹ ಅಚ್ಚುಕಟ್ಟು ಗದ್ದೆ ಖ೧೯೯೪೮೪ಕ್ಕೆ ಮಾನ್ಯ ಉತ್ತಾರದ ದೇವಾದಾಯ ಖ೩೭೯೮೮॥೦, ಬ್ರಹ್ಮಾದಾಯ ಖ೧೪೦।೨॥೦ ಸತ್ರದ ಗದ್ದೆ ಖ೬೪॥, ಕ್ಯಾತನಹರಿ[>ಳ] ರಾಮಾಂಜಕೂಟದ ಗದ್ದೆ ಖ೪॥, ದಾನಮಾನ್ಯ ಖ೪॥, ಬೀಡು ಸ್ವಾಸ್ಥ್ಯ ಖ೧, ಅಂತು ಊಳಿಗಮಾನ್ಯ ಖನೆನೆ ಖ೪।. ಅಂತು ಮಾನ್ಯ ಉತ್ತಾರ ಖ೬೩ವ ನಿಂತ ಅರಮನೆ ಗದ್ದೆ ಖ೪೭೫।೨, ಕ್ಯಾತನಹಳ್ಳಿ ಸ್ಥಳಕ್ಕೆ . . . ಹೊ . . . ಸ್ಥಳದೆಂ . . . ಸಿರೆ ಬಂದದ್ದು ಹಾ . . . ಯಲ್ಲು ತಾರಣ ಸಂವತ್ಸರದ ಆರಭ್ಯ ಆದ ಗದ್ದೆ ಖ೬೨೪॥, ಮಾನ್ಯ ಉತ್ತಾರ ದೇವಾದಾಯ ಖ೨೬೦॥, ಬ್ರಹ್ಮಾದಾಯ ಖ೨೩॥, ಬೀಡುಸ್ವಾಸ್ಥ್ಯ

ಖ೩೫, ಊಳಿಗಮಾನ್ಯ ಬೀ ೫೮೦ ಖಂ ಗದ್ದೆ ಖ ೫೩೦॥ಕ್ಕೆ ಶುದ್ಧ ನಿಂತ ಗದ್ದೆ ಖ೯೮ . . . ಅಮೃತಸಾಗರ ಸ್ಥಳ ೧ಕ್ಕೆ ಕೆರೆ ಅಚ್ಚುಕಟ್ಟು ಗದ್ದೆ ಖ ೧೩ಟ॥೩॥, ಮಾನ್ಯ ಉತ್ತಾರ ಈ ಊರ ರಾಮಸ್ವಾಮಿಯವರಿಗೆ ಖ೪೮, ತೋಟಕ್ಕೆ ಸೇರಿದ್ದು . . ವ ಪಾಳುಕಲ್ಲು ಖ ೭೧, ಅಂತು ವಿಂಗಡಕ್ಕೆ ಸೇರಿದ ಗದ್ದೆ ಖ೧೯। ನಿಂತ ಗದ್ದೆ ಖ೧೧೭॥೩॥।, ನೀರಮಣ್ಣಿಗೆ ಸೇರಿದ ಭೂಮಿ ಕಂದಾಯ ೨೧।೩॥।೭, ಅರಕೆರೆ ಸ್ಥಳ ೧ಕ್ಕೆ ಹಳೆಕಾಲುವೆ ೧ಕ್ಕೆ ಅಚ್ಚುಕಟ್ಟು ಗದ್ದೆ ಖ೫೪೩॥।೧॥, ಕೆರೆಗದ್ದೆ ಖ೩೫೮, ಉಭಯಂ ಗದ್ದೆ ಖ೮೯೩॥೧॥. ಕೆರೆಮಾನ್ಯ ಉತ್ತಾರ ದೇವಾದಾಯ ಖ೧೦।೪, ಬ್ರಹ್ಮಾದಾಯ ಖ೫೭।೩, ಊಳಿಗಮಾನ್ಯ ಖ೧೨, ಹೆಬ್ಬಾರರವರ ಸ್ವಾಸ್ಥ್ಯ ಖ೧೪, ಕೊಡಗೆ ಖ೮, ಉಂಬಳಿ ಖ೧೦೭೮೨, ತೋಟಕ್ಕೆ ಸೇರಿದ್ದು ಖ೩೧೫೮೨, ನೀರು ಹಂತದ ಮೆಡು ಖಟ॥, ನೊದೆಕಟ್ಟು ಖ೩, ನೀರು ಕೊರದ್ದು ಖ೭॥।, ಮೆಳಲು ಬಿದ್ದದ್ದು ಖ೭೩॥೦॥, ಸಾಗರದ ಕಾಲುವೆ ಅಣೆಗೆ ಹೆಪ್ಪು ಕಂದುಮಣ್ಣು ಬಿದ್ದದ್ದು ಸಹ ಖ೧೦, ಉಭಯಂ ಮಾನ್ಯ ಖಿಲುವಾಹಾರ ಗದ್ದೆ ಖ೪೭೪॥೦, ಅರಮನೆಗದ್ದೆ . . . ॥೨॥ಕ್ಕೆ ತಾರಣ ಸಂವತ್ಸರದಲ್ಲು ಹುಟ್ಟಿದ್ದು ದೇವಾದಾಯ ಖ೧೦೩೨।೩, ಬೆದ್ದಲು ಬೆದೆಗೆ ಹುರುಳಿ ಖ೨೧೮೪, ತೊಗರಿ ಖ೩೮೩, ಹರಳು ಖ೨೮೨।, ಎಳ್ಳು ಖ೩೮೩, . . . ಣಿ ೮೩, ಜನ್ನೂರು ಸ್ಥಳ ೧ರ ರಾಮಸ್ವಾಮಿ ಕಾಲುವೆ ೧, ಅಚ್ಚುಕಟ್ಟು ಗದ್ದೆ ಖ೪೩೪॥೨॥, ಹೆಗರೆ ಅಚ್ಚುಕಟ್ಟು ಖ೪೭॥, ವಿಜಯರಾಮನ ಕೆರೆ ೧ರ ಅಚ್ಚುಕಟ್ಟು ಖ೫೨॥।, ಬಾಗೂರುಕೆರೆ ೧ರ ಖ೫೧, ಅಂತು ಕಾಲುವೆ ೧, ಕೆರೆ ೩ ಸಹ ಅಚ್ಚುಕಟ್ಟು ಗದ್ದೆ ಖ೫೮೪॥. ಇದಕ್ಕೆ ಮಾನ್ಯ ಉತ್ತಾರೆ ದೇವಾದಾಯ ಖ೧೯।, ಬ್ರಹ್ಮಾದಾಯ ಖ೧೫೮೧, ಪಟ್ಟಣಸ್ವಾಮಿ ಖ ॥, ಗೌಡಗಳ ಕೊರಗೆ ಖ೧, ನೀರುಗಂಟಿ ಖ೧೦।, ಚಕ್ರಕೂರಿಗೆ ಖ ೧೮೨।೦, ಉಭಯಂ ಮಾನ್ಯ ಉತ್ತಾರ ೧೨।೩, ಹೊ.ಸಾ.ಗ. ಜನ್ನೂರು ನಂದನ ಸಂ। ವರೆಗೆ ನೀರು ಮಣ್ಣಿನ ಕಂದಾಯ, ೩೩೧೬೩॥।ಕ್ಕೆ ಆದ ಗದ್ದೆ ಖ೭೫॥।೧॥, ವಾಗ ಮೇಸಿರಿ ಬದರು ಖ೩, ಉಭಯಂ ಖ೯೫೧॥೪।ಕ್ಕೆ ವಿವರ:

ಸರ್ವಜಿತು ಸಂವತ್ಸರದ ವರೆಗೆ ನೀರು ಮಣ್ಣಿನ ಕಂದಾಯ ಗ ೨೫೫॥।೧, ಇ . . . ಕ್ಕೆ ಗದೆ ಖ೪೦೨।೧, ಬಾಗೂರು ಬಳಗೆರೆ ಖ೩೧॥।೧, ಹಳೆ ಅಚ್ಚುಕಟ್ಟಿನಲ್ಲಿ ಸೇರಿದ್ದು ಖ೭೫॥೨॥, ಸರ್ವದಾರಿ ಸಂವತ್ಸರದಲ್ಲು ಕಂದಾಯ ಗ೨೬೧, ಆದ ಗದ್ದೆ ಖ೧೨॥।, ವಿರೋಧಿ ಸಂವತ್ಸರದಲ್ಲು ಕಂದಾಯ ೧೭೬ . . . . ಆದ ಗದ್ದೆ ಹಳ್ಳಭೂಮಿ ಸಹ ಖ೮ಟ.॥, ಉಭಯಂ ಖಟ೦೮॥೨॥।, ವಿಕೃತು ಸಂವತ್ಸರದ ವರೆಗೆ ಸೇರಿದ ಕಂದಾಯ ಗ ೩೩೧೬॥।, ಆದ ಗದ್ದೆ ಖ೨೪೧॥।೧॥, ಉಭಯಂ ಗದ್ದೆ ಖ೮೫೦।೪।. ಖರ ಸಂವತ್ಸರದಲ್ಲು ಖ೩೫॥ಕ್ಕೆ ಆದ ಗದ್ದೆ ಖ೫೩॥।, ಉಭಯಂ ಗದ್ದೆ ಖ೯೦೪೮೪।, ನಂದನ ಸಂವತ್ಸರದಲ್ಲು ಅಗ್ರಹಾರ ಪಾಳುಭೂಮಿಯಲ್ಲಿ ಆದ ಗದ್ದೆ ಖ೪೭॥, ಅಂತು ಆದ ಗದ್ದೆ ಖ೯೫೧॥೪, ನೀರುಮಣ್ಣಿಗೆ ಸೇರಿದ ಭೂಮಿ ಕಂದಾಯ ಗ ೧೩೭೯೪, ಕಾಲುವೆ ಕೆಲಸಕ್ಕೆ ಮುಟ್ಟಿದ್ದು, ಸರ್ವಜಿತು ಸಂವತ್ಸರಾರಭ್ಯ ವರ್ಷ ೯ಕ್ಕೆ ಮುಟ್ಟಿದ್ದು ಖ೧೦೦ಟ೯೩॥।, ಪಾರುಪತ್ಯದ ಹೋಬಳಿ ಸ್ಥಳ, ಕಂದಾಚಾರ ಗ ೧೦೮೦. ಹಳೆ ಆದಮೆ (?) ಹುಟ್ಟುವಳಿ ಗಟ೫೦॥೨. ಅಂತು ವರ್ಷಕ್ಕೆ ಉತ್ತಾರ ಗ೮೦೮೯೪॥।=ಗೆ ಹುಟ್ಟಿದ್ದು. ಗ೩ಟ೩ಟ೮ ೩ ಶುದ್ಧ ಲಾಭ ಕಂಡು ಬಂದದ್ದು.

❖❖

೬

ಆಕಿಯೆಬ್ಯಾಳು (ನರಶೀಪುರ ತಾಲೂಕು) ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೨

ಮಂದಾಕರೆ ಪೈಕಿ ಅಗ್ರಹಾರದ ಶಕವರುಷ ಸನ್ನದು, ತರು ನಮತುಂಗ್ಗ ಹರೆವಿಲಾ. ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಹನ ಶಕವರುಷ ೧೫೮೧ನೆ ವರ್ತಮಾನ ಸೌಮ್ಯ ಸಂವತ್ಸರದ ಕಾರ್ತೀಕ ಶುದ್ಧ ೧೨ ಅಂಗಾರಕವಾರ ಪುಣ್ಯಕಾಲದಲ್ಲಿ ಕಾವೇರಿ ಮಧ್ಯ ಶ್ರೀರಂಗಪಟ್ಟಣವೆಂಬಾ ಗೌತಮಕ್ಷೇತ್ರದಲ್ಲಿ ಶ್ರೀರಂಗನಾಥಸ್ವಾಮಿಯವರ ಚರಣಾರವಿಂದ ಸನ್ನಿಧಿಯಲ್ಲಿ, ಶ್ರೀಮದ್ರಾಜೇರಾಜ ರಾಜಪರಮೇಶ್ವರ ವೀರಪ್ರತಾಪ ಬಿರದಂತೆಂಬರಗಂಡ ಧರಣೀವರಹಾ ಬಿರ್ರುದಾ ನಾನಾ ವರ್ನಮುಕುಟಮಣಿಮಂಡಲೀಕರ ಗಂಡ ಮಹಿಸುರ ದೇವರಾಜದೇವಯ್ಯನೈಯ್ಯವರು ಕುಮಾರ ದೇವರಾಜ ಮಹಿಪಾಲಕರು ಶ್ರೀರಂಗಪಟ್ಟಣದಲ್ಲಿ ರತ್ನಸಿಂಹಾಸನರೂಢಾಧೀಶ್ವರರಾಗಿ ಸುಕದಿಂದ ಪೃಥ್ವಿಲಿ ಸಾವಮ್ರಾಜ್ಯಂ ಗೈಯುತ್ತ, ತಾವು ಮಾಡಿದಂತಾ ಚಂಡಗವುಡನಹಳ್ಳಿ ಗ್ರಾಮಕ್ಕೆ ಪ್ರತಿನಾಮಧೇಯವಾದ ದೇವರಾಜಪುರವೆಂಬ ಅಗ್ರಹಾರದ ಶಿಲಾಶಾಸನದ ಕ್ರಮವೆಂತೆಂದರೆ:

ಯೀ ದಿನದಲ್ಲಿ ಆತ್ರೆಂಯ ಗೋತ್ರರಾದ, ಅಶ್ವಲಾಂಯನ ಸೂತ್ರರಾದ ಯಜುಶಾಖಾದ್ಯಾಯಗಳಾದ ಚಾಮರಾಜವಡೆಯ್ಯನವರ ಪೌತ್ರರಾದ ದೇವರಾಜವಡೆಯನವರು ಪುತ್ರರಾದ ಚಿಕ್ಕದೇವರಾಜ ಮಹಿಪಾಲಕರು ತಾವು ತಮಗೆ ವಿಕ್ರಮಾವಾರ್ಚ[>ರ್ಜಿ]ತವಾಗಿ ಬಂದ ಹೇಮಾವತಿ ಕಾವೇರಿ ಮಧ್ಯವರ್ತಿಯಾದ ನರಸಿಂಹಪುರಕ್ಕೆ ಸಲ್ಲುವ ಮಂದಗಿರಿ ಹೊಬಳಿ ಚಂಡಗೌಡನಹಳ್ಳಿ ಗ್ರಾಮ ೧, ಮಚ್ಚಿಬೀಡುಗ್ರಾಮ೧, ಮೂಡನಹಳ್ಳಿಗ್ರಾಮ೧, ಆವೆನಹಳ್ಳಿಗ್ರಾಮ೧, ಹೊನ್ನೆನಹಳ್ಳಿಗ್ರಾಮ೧, ಚಿಕನಹಳ್ಳಿ ಗ್ರಾಮ ೧ – ಯೀ ಗ್ರಾಮಗಳಿಗೆ ಸಲ್ಲುವ ಗದ್ದೆ ಬೆದಲು ಆಣೆ ಅಳಸಿ ಕಟ್ಟಿ ಮಗ್ಗ ಮನುವಣಾ ದಿಂಡುಗಾಣಿಕೆ . . . ಪ . . . ಗೆವಣಾ ಪರಿವಿಡಾ ಜಾತಿ ಕೂಟ ಶಾನಭೋಗನ ವರ್ತನೆ ಯಿವೇ ಮುಂತಾದ ಸಕಲ ಸಾಮ್ಯಗಳು ಸಹಾ ಗ್ರಾಮಗಳು ಆರ್ರೂ ೬, ಯೀ ಗ್ರಾಮಗಳ ವೊಳಗೆ ಸೇರಿದ ಮಾಳಗನ ಕಾಲುವೆವೊಂದಿ ಶಿರಗದ್ದೆಲಿ ಪರಿಗೆ ಮಾಮೂಲೆ ಆರಭ್ಯವಾಗಿ ಕಾಲನಹಳ್ಳಿಯಲ್ಲಿ ಕಟ್ಟಿದ ಪರಿಯಂತರವೂ ಯಿರುವ ಗದ್ದೆ ಖ ೩೭೯॥೨, ಕೊಳಗ ಮಾನ್ಯಗಾರರು ಚಂಜೀರ ಗದ್ದೆ ಖ೩೦, ಬಲ್ಲಿನಹಳ್ಳಿ ಗದ್ದೆ ಖ೩॥, ಅರಮಾನೆ ಆರಾಲು ರಾಚಿನಹಳ್ಳಿ ಗದ್ದೆ ಖ೫೮ೂ, ಆರಳಿಗದ್ದೆ ಖ೩॥೨॥.ಯೀ ಬೈಯಲಿಹಳ್ಳಿ ಕೂಡಿ ಯಿರುವ ಗದ್ದೆ ಹೊನ್ನೆನಹಳ್ಳಿ ಖ೧, ಅಲ್ಲಿನಹಳ್ಳಿ ಖ॥೦, ಕೂಡನಹಳ್ಳಿ ಖ॥೦. ಮಂಚ್ಚಿಬೀಡು ಖ॥೦, ಯೀ ಗದ್ದೆ ಯೀ ಗ್ರಾಮಗಳು ಸಹಾ ಸೂದ್ರಮಂಗಳಿಗೆ ೫೦೦೮೦ ಅಕ್ಷರದಲ್ಲಿ ಆಯಿದು ನೂರು ವರಹಾ ಸ್ತಳಗಳನ್ನು ನಾಲ್ವತ್ತು ಮುಪಾನ[>ಗ] ವೃತ್ತಿಗಳ ಪರಿಭೇದ . . . ಮಾಡಿ ದೇವರಾಜಾಪುರವೆಂಬಾ ಅಭಿದಾನವಂ ಮಾಡಿ, ನಾನಾ ಗೋತ್ರದಲ್ಲಿ ನಾನಾ ಸೂತ್ರದ ನಾನಾ ಶಾಖೆಗಳಾವ ಬ್ರಾಹ್ಮರಿಗೆ ಯೀ ದಿನದಲ್ಲಿ ಸಹಿರಣ್ಯಾದಕಧಾರ ಧಾರಾಪೂರ್ವಕವಾಗಿ ಕುಷನರ್ಪದಾ ನಿಧಿಯಿಂದಾ ಸರ್ವಮಾನ್ಯವಾಗಿ, ಯಿಲ್ಲಿಂದಾ ಮುಂದೆ ಯೀ

ಗ್ರಾಮಗಳು ಯೀ ಕಾಲುವೆ ಕೆಳಗಣ ಹಳ್ಳಿ ಕೂಡಿದ ಗದ್ದೆ, ಯಿನ್ನು ನೀ ಪುತ್ರ ಪೌತ್ರ ಪಾರಂಪರ್ಯವಾಗಿ ಆಚಂದ್ರಾರ್ಕಸ್ತಾಯಗಳಾಗಿ ಸರ್ವಮಾನ್ಯವಾಗಿ ಸುಕದಿಂ ಅನುಭವಿಸಿಕೊಂಡು ಬಂದಿರಿ. ಯೀ ಗ್ರಾಮಗಳೂ ಗದ್ದೆವಳಗೆವೂಗಳ್ಲಾ ನಿಧಿ ನಿಕ್ಷೇಪ ಅಷ್ಟಭೋಗ ಬಿ, ಸ್ವಾಮ್ಯಗಳೂ ನಿಮಗೆ ಸಲ್ಲುವದು. ಯೀ ಗ್ರಾಮಗಳು ಯೀ ಗದ್ದೆ ನೀವು ಮಾಡುವ ವ್ಯವಹಾರ ಚತುಷ್ಟಯಕ್ಕು ಸಲ್ಲುವದು ಯೆಂದು ಕೋಟಿ ಚೆನ್ನಗವುಡನಹಳ್ಳಿಗೆ ಪ್ರತಿನಾಮಧೇಯವಾದ ದೇವರಾಜಪುರವೆಂಬ ಅಗ್ರಹಾರದ ಶಿಲಾಶಾಸನವು . . .

ದಾನಪಾಲಯೋರ್ವ ಮಧ್ಯೆ ಧಾನ . . . ಶ್ರೆಯೆನು ಪಾಲನಂ ಧಾನಂ ಶೃಂಗ್ಗ್ರಮಾ ವಾಪ್ನೋತಿಪಾಲನಾದಚ್ಚುತಂ ಪದಂ ಯಿಂದ್ರಹಾಃ ಪ್ರರುಕ್ಷತಿ ಚಂಡಾಲಿ: ತಮದಂ ಪಶ್ಚತೆ ತದಯಾಶ್ವವ ಮಾಂಶ್ಚಂ ಸುರಯಾಶಿಕ್ತಂ ಕಪಾವೆನಚಿತಗ್ನಿನಾ ದೇವ ಬ್ರಾಹ್ಮಣ ವಿತ್ತಣಿ ಬಲಾದ ಪಹರಂತ್ತಿಯೊ ತೆಣಾಂ ಪಾದರಜೋಚಿತ್ವಾ ಚರರ್ಮಾಯಿಚಿ ಯಿತಂ ಮಾಯಾಃ। ಸಾಮಾನ್ಯೋಯಂ ಧರಣ ಶೆತುಮಾಃ ನೃಪಣಾಂ ಕಾಲಕಾಲೆ ಪಾಲನೆ ನೀಯೋಭವದ್ಭಿಹಿ. ಸರ್ವನೇತಾಂ ಭಾಡಿನ ಹಃ ಪಾರ್ತಿವೆಂದ್ರಾನ್ನು ಭೂಯೋ ಭೂಯೋ ಯಾಚತೆ ರಾಮಚಂದಾಃ। ಯಿದು ನರಸೀಪುರಕೆ ಮಂದಗಿರೆ ಹೋಬಳಿ ಹೊನ್ನೆನಹಳ್ಳಿ ಅಗ್ರಹಾರದ ೬ ಆರ್ರು ಗ್ರಾಮಗದ್ದೆಗಳಾ ಶಿಲಾಶಾಸನದ ಯಥಾ ಪ್ರತೀ.

❖❖

೭
ಆನೆ ಕನ್ನಂಬಾಡಿ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೨

ಪೂರ್ವದಲ್ಲಿ ಮಲಪತ್ತುಯಾಗಿ ಯಿದ್ದಲ್ಲಿ, ದೇವಪ್ಪದಣ್ಣಾಯಕರು ಯೀ ಊರಿಂದಾ ಬಾಲ್ಯದಲ್ಲಿ ವಿಜಯನಗರಕ್ಕೆ ಹೋಗಿ, ಅಲ್ಲಿ ಕರಣಿಕರಾ ಮನೆಯಲ್ಲಿ ಶೇರಿದರು. ಅವರ ಮನೆಯಲ್ಲಿ ಕೆಲವು ಕಾಲವು ಯಿದ್ದರು. ವಿಜಯನಗರದ ದೊರೆ ರಾಯರ್ರು ಅರಮನೆಯಲ್ಲಿ ಅರ್ಧರಾತ್ರಿಯಲ್ಲಿ ಬೊಕ್ಕಸದ ಗೊಲ್ಲರು ಕೆಲವು ಜನರು ಬೊಕ್ಕಸದ ಹಣವನ್ನು ಕದ್ದು ತೆಗೆದುಕೊಂಡು ಹೋಗುತ್ತಾ ಯಿದ್ದರು. ಅರಮನೆ ಬಾಗಿಲಲ್ಲಿ ಯೀ ದೇವಪ್ಪದಣ್ಣಾಯಕರು ಅಲ್ಲಿ ಕರಣಿಕರ ಸಂಗಡ ಅರಮನೆಗೆ ಹೋಗಿ ಹೊರಬಾಗಲಲ್ಲಿ ಯಿದ್ದರು. ಯೀ ಕರಣಿಕರು ಮನೆಗೆ ಬರುವಾಗೆ, ನಿದ್ರೈಯುತ್ತಾ ಯಿವರ ಸಂಗಡ ಬರಲಿಲ್ಲ. ಆ ವೇಳೆಯಲ್ಲಿ ಯೀ ಹಣ ತೆಗೆದುಕೊಂಡು ಹೋದ ಕಳ್ಳರು ಮನಗಿದ್ದ ದಣ್ಣಾಯಕರ ಕಂಡು ಭಯದಿಂದಾ ಯೀ ಹಣವನ್ನು ಅರಮನೆಯ ಭೂಮಿ[>ಭಾವಿ]ಯ ವೊಳಕ್ಕೆ ದಡಮ್ಮನೆ ಯೆತ್ತಿ ಹಾಕಿ ವೋಡಿಹೋದ ಶಬ್ದವನ್ನು ಕೇಳಿ, ದಣ್ಣಾಯಕರು ಆ ತಿಥಿ, ವಾರ ಹೊತ್ತಗೆ ಬರದು ಯಿಟ್ಟುಕೊಂಡು ಯಿದ್ದರು.

ಕೆಲವು ದಿವಸದ ಮೇಲೆ ರಾಯರ್ರು ಬೊಕ್ಕಸದ ಆದಾಯ ವೆಚ್ಚ ವಿಚಾರಿಸುವಾಗ್ಯೆ, ಬಹಳ ಹಣಾ ಕಡಿಮೆ ಆಗಿದ್ದರಿಂದ ಆ ಕರಣಿಕರ ಮೇಲೆ ಕೋಪಾಮಾಡಿ[>ಡೆ], ಅವರ್ರು ಮನಿಗೆ ಬಂದು ವೆಸ[+ನ]ಪಟ್ಟುಕೊಂಡು ಯಿದ್ದ ಸಮಯದಲ್ಲಿ, ಅವರ ಸೇವಕ ದೇವಪ್ಪದಣ್ಣಾಯಕರು, ಸ್ನಾನಾದಿಗಳಿಗೂ ಯೇಳದೇ ಯಿದ್ದಲ್ಲಿ ಅವರಿಗೆ ಮನಸ್ಸು ಸಮಾಧಾನವಾಗುವ ರೀತಿ ಕೇಳಿದಲ್ಲಿ, ಆ ಕರಣಿಕರು "ಈ ದ್ರವ್ಯ ಹೋದ ಪೂರ್ವೋತ್ತರಕ್ಕೆ ರಾಯರು ಬಹಳಾ ಸಿಟ್ಟು ಆಗಿಯಿದ್ದಾರೆ"ಯೆಂಬುದನ್ನು ದಣ್ಣಾಯಕರು ಕೇಳಿ, "ಯೆನ ಮಾತು, ಯೇನು ಇದ್ದಾಗ್ಯೂ ವಿಚಾರಿಸಿ ಗೊತ್ತು ಮಾಡುತ್ತೇನೆ" ಯೆಂಬುದಾಗಿ ಬರವಸೆ ಕೊಟ್ಟು, ಯೆಬ್ಬಿಸಿಕೊಂಡು ಭೋಜನಾನಂತರ ಕರಣಿಕರೂ ದಣ್ಣಾಯಕರೂ ಸಹಾ ಅರಮನಿಗೆ ಹೋಗಿ, ಆ ದಿವಸ ಬರದುಯಿದ್ದ ತಿಥಿ ವಾರದಲ್ಲು ದೃಢವಾಗಿಸಿ, ಭಾವಿಯಲ್ಲಿ ಆಗಿ ಯಿದೆ ಎಂಬಾ ಗುರುತಂ ಬರದುದನ್ನು ಶೃತ ಮಾಡಲಾಗಿ, ಆ ಭಾವಿಯನ್ನು ಶೋಧಿಸಲಗಿ ಆ ದ್ರವ್ಯ ಶಿಕ್ಕಿ ಪೂರ್ವ ವ್ಯತ್ಯಾಸವಾಗಿಯಿದ್ದ ಹಣದ ಲೆಕ್ಕಕ್ಕೆ ಯಿಲ್ಲಿ ತಗದ ಹಣದ ಲೆಕ್ಕಕ್ಕೆ ಸರಿಯಾಗಿದ್ದದರಿಂದ ಆ ದೊರ್ರೆಗಳಿಗೆ ದಯೆ ಬಂದು, ಡಣಾಯಕರನ್ನು "ಯೇನು ಬೇಕು?" ಯಂದು ಕೇಳಿದಲ್ಲಿ, ಯಿವರು ರಾಯರನ್ನು ಕೇಳಿಕೊಂಡದ್ದು "ಹೇಮಾವತಿಗೆ ಕಟ್ಟೆ ಕಟ್ಟಿಶಿ, ಆ ಕಾಲುವೆ ಕೆಳಗೆ ಅನೇಕ ಪೈರುಮಾಡಿಶಿ, ಅಲ್ಲಿ ವಂದು ಪ್ರತಿಮೆ ಕಟ್ಟಿಸು ಹಾಗೆ ಅಪ್ಪಣೆ ಕೊಡಬೇಕು" ಯೆಂಬುದಾಗಿ ಅರಿಕೆ ಮಾಡಿದ್ದರಿಂದ, ರಾಯರು ಅದಕ್ಕೆ ತಕ್ಕ ದ್ರವ್ಯ ಬಹುಮಾನ ಸಹಾ ಕೊಟ್ಟು, ಯೀ ದೇಶಕ್ಕೆ ಕಳುಹಿಸಿ ಕೊಟ್ಟಲ್ಲಿ, ಯಿ ದಣ್ಣಾಯಕರು ಅಲ್ಲಿಂದಾ ಯೀ ದೇಶಕ್ಕೆ ಬಂದು, ಬೀಳುಗುಳಿಗ್ರಾಮ ಸಮೀಪದಲ್ಲಿ ಹೇಮಾವತಿಗೆ ಕಟ್ಟೆ ಕಟ್ಟಿಶಿ, ಯೀ ನದಿ ದಕ್ಷಿಣತೀರದಲ್ಲಿ ಕಾಲುವೆ ತೆಗೆದುಕೊಂಡು ಬಂದು, ಯಿಲ್ಲಿ ಪೂರ್ವಯಿದ್ದ ಕೆರಿಗೆ ನೀರು ತಂದು, ಪಟ್ಟಣವ ಹೊಸ ಸ್ತಳದಲ್ಲಿ ಕಟ್ಟಬೇಕುಯಂಬುದಾಗಿ ಯೋಚಿಸಿ, "ರಾಯರು ಕೊಟ್ಟುಯಿದ್ದಾ ಆನೆಗೆ ಶೃಂಗರಿಸಿ ಕೊರಳು ಮಾಲಿಕೆ ಹಾಕಿ, ಮಾವಟಿಗ ವಿನಾ ಸಭೆಯಲ್ಲಿ ಬಿಟ್ಟರೆ ಯಾವ ಬಳಿಯಲ್ಲಿ ಮೂರು ಮುಕ್ಕಾಲು ಗಳಿಗೆ ನಿಲ್ಲುತ್ತೊ, ಯಾವ ದಿಕ್ಕಿಗೆ ಅಭಿಮುಖವಾಗಿ ನಿಲ್ಲುತ್ತೊ, ಆ ಮುಖದ ಭಾಗವು ಅದು ನಿಂತ ಬಳಿಯ ಅರಮನೆ ಪಟ್ಟಣ ಸಹಾ ಕಟ್ಟಿಸಬೇಕು" ಯಂಬುದಾಗಿ ನಿಶ್ಚಯ ಮಾಡಿ, ದೇವತಾಪ್ರಾರ್ಥನಾ ಪುರಾಃಸರವಾಗಿ ಆನೆಯನ್ನು ಶೃಂಗರಿಸಿ, ಶುಭಮೂಹೂರ್ತದಲ್ಲಿ ಅಂಕಾ[>ಕು]ಶ ವಿನಃ ಬಿಟ್ಟಲ್ಲಿ. ಆ ಆನೆ ಯೀ ಸ್ಥಳದಲ್ಲಿ ಬಂದು ನಿಂತು ಪೂರ್ವಾಭಿಮುಖವಾಗಿ ಆರ[>ಅ]ರ್ದ ಯಾಮ ತನಕಲು ಸ್ಥಿರವಾಗಿ ಯಿದ್ದುದರಿಂದ ದೇವಪ್ಪದಣ್ಣಾಯಕರ್ರು ಸಂತೋಷಪಟ್ಟು ಇಲ್ಲಿ ಪಟ್ಟಣ ಕಟ್ಟಿಸಿ, ಆನೆಕನ್ನಂಬಾಡಿಯೆಂಬ ನಾಮಧೇಯವಿಟ್ಟು, ಮೂಡುಬಾಗಲು ಮಾಡಿ ಅರಮನೆ ಮುಂತಾದ್ದು ಕಟ್ಟಿಶಿ, ಶಾಲಿವಾಹನ ಶಕ ೧೨೨೮ನೆ ನಳಸಂವತ್ಸರದಲ್ಲಿ ಸಂನ್ಮಮುಹೂರ್ತದಲ್ಲಿ ಯೀ ಗ್ರಾಮ ಗೃಹಾಪ್ರವೇಶಮಾಡಿ, ಬಹು ದಿವಸ ಸುಕಸಂತೋಷದಲ್ಲಿ ಇರುವಾಗ್ಯೆ, ಈ ಪಟ್ಟಣದಲ್ಲಿ ಆನೆಕನ್ನಂಬಾಡಿಯಲ್ಲಿ ಜಕ್ಕಣಾಚಾರಿಯನ್ನು ಕರೆ ಕಳುಹಿಸಿಕೊಂಡು, ಯೀ ನರಸಿಂಹದೇವಸ್ಥಾನ ಕಟ್ಟಿಸಿದರು.

ಅದಕ್ಕೆ ಅಂಕಣಾ ೧೬. ಅವಕ್ಕೆ ವಿವರ: ನಾರಾಯಣಸ್ವಾಮಿಯವರ ಗರ್ಭಗೃಹಾ ಅಂಕಣ ೧, ಸುಕನಾಶಿ ಅಂಕಣ ೧, ಆಲಿ[>ಅಲ್ಲಿ] ಆಳವಾರ ಪ್ರತಿಮೆ ೨, ಶಿಲಾಚತ್ರ ನವರಂಗ ಅಂಕಣ ೯ರಲ್ಲಿ ದಕ್ಷಿಣಭಾಗದಲ್ಲಿ ವಿನಾಯಕಸ್ವಾಮಿ, ಉತ್ತರಭಾಗದಲ್ಲಿ ಮಹಿಷಾಸುರಮರ್ದಿನಿ ಅಮ್ಮನವರು, ಯಿದಕ್ಕೆ ದಕ್ಷಿಣದ್ವಾರವಾಗಿ ಯಿರುವ ೧ ಅಂಕಣದಲ್ಲಿ ಉತ್ತರಾಭಿಮುಖವಾಗಿ ಕೊಳಲು

ಗೋಪಾಲಸ್ವಾಮಿಯವರು ಯಿದಾರೆ. ನವರಂಗ ಮಧ್ಯ ೧ ಅಂಕಣ, ಉತ್ತರಭಾಗದಲ್ಲಿ ದಕ್ಷಿಣಾಭಿಮುಖವಾಗಿ ಶ್ರೀಲಕ್ಷ್ಮಿನರಸಿಂಹಸ್ವಾಮಿಯವರು ಯಿದ್ದಾರೆ, ಮಧ್ಯೆ ನವರಂಗ ಚಿತ್ರಮಂಟಪ ತ್ರಿಕುಟಾಚಲ ೯ ಅಂಕಣ, ಯಿದರ ಹೊರಗೆ ಗಾಳಿಮಂಟಪ ೩ ಅಂಕಣ, ಯಿದಕ್ಕೆ ಸುತ್ತ ಪವುಳಿ ಪೂರ್ವಾಭಿಮುಖ ಬಾಗಲು, ಯಿಟಗೆಯಿಂದಾ ವಿಮಾನ ಕಟ್ಟಿಸಿ, ಯೀ ದೇವರುಗಳಾ ಪಡಿತರ ದೀಪಾರಾಧನೆ ವಾರ್ತಾದ ಬಗ್ಯೆ ನಿಡೋಣಿ ಗ್ರಾಮ ೧, ಮೊಳ್ಳಿಗನಹಳ್ಳಿ ಗ್ರಾಮ ೧, ಶಂಕರಶೆಟ್ಟಿಹಳ್ಳಿಗ್ರಾಮ ೧, ಅಂತೂ ಗ್ರಾಮ ೩.

ಯೀ ಕನ್ನಂಬಾಡಿ ಕ[>ಕೆ]ರೆ ಕೆಳಗೆ ಗದ್ದೆ ಖ|||೦ ಕೊಳಗ ಹೊಲಾ, ಕರಿ ಗ೬ ವರಹಾ ಸಹಾ ಪೂರ್ವದಲ್ಲಿ ಬಿಟ್ಟುಕೊಟ್ಟು ಯಿತ್ತು. ಸೇವಾರ್ತಗಳು ಬಹುಕಾಲಯಾದ ಮೇರ್‍ರಿಗೆ ನಡದು ಬರುತ್ತ ಯಿತ್ತು. ಕೆಲವು ಕಾಲದ ಮೇಲೆ ನರಸಿಂಹಪುರದ ನಾಯಕರ ಹವಾಲಗೆ ಯೀ ಆನೆಕನ್ನಂಬಾಡಿ ಸೇರಲಾಗಿ, ಅವರು ಯೀ ಪೂರ್ವಪ್ರಕಾರವೆ ಸ್ವಾಮಿಶೇವೆ ನಡಿಸುತ್ತಾ ಯಿದ್ದರು. ಮೈಸೂರು ಅರಸಗಳು ಯೀ ದೇವರ ಸೇವೆ ಪೂರ್ವಪ್ರಕಾರವೆ ನಡಿಯುವ ರೀತಿಯು ಆಲಿ[>ಅಲ್ಲಿ] ಭಕ್ತಿಯಿಂದ ವಿಚಾರಿಶಿ ನಡಸುತ್ತಲೆ ಯಿದ್ದರು. ಹೋದ ಶೋಭಕೃತ ಸಂವತ್ಸರದಲ್ಲಿ ಯೀ ಗ್ರಾಮ ಭೂಮಿಗಳು ಜಪ್ತಿಯಾಗಿ ಯಿದ್ದು, ರವೂದ್ರಿ ಸಂವತ್ಸರದಲ್ಲು ಮಹಾರಾಜಶ್ರಿಯವರ ಅಪ್ಪಣೆಯಿಂದಾ ಕರೀ ಗರ್ಶಿ೨॥ ಭೂಮಿ ಪಡಿತರದ ಬಗ್ಯೆ ನಡದು ಬರುತ್ತಯಿದೆ. ಯೀ ದೇವರ ಆಳಿಕೆ ವೈಖಾನಸ ತಿಮ್ಮಪ್ಪಯ್ಯ.

"ರಾಮೇಶ್ವರಸ್ವಾಮಿ ಕೈಫಿಯತ್ತು : ಆನೆಕನ್ನಂಬಾಡಿಗೆ ಪೂರ್ವಭಾಗ ಕರೆ ಬಡಪಟ್ಟಿ ಮೇಲಾ ಪ್ರತಿಷ್ಟೆ ರಾಮೇಶ್ವರಸ್ವಾಮಿಯವರ ದೇವಸ್ಥಾನ, ಗರ್ಭಗೃಹ ೧ ಅಂಕಣಾ, ಶುಕನಾಶಿ ಅಂಕಣ ೧, ನವರಂಗ ಅಂಕಣ ೯, ಅಂತೂ ಅಂಕಣ ೧೧. ರಾಯರ ದಿವಸದಾರಭ್ಯಾ ದೇವಸ್ಥಾನದ ಬಗ್ಗೆ ಕುಟೇನಹಳ್ಳಿ ಗ್ರಾಮ ೧, ಕನ್ನಂಬಾಡಿಯಲ್ಲಿ ಹೊಲಾ ಗ॥೧ ಆಣಾ, ಗದ್ದೆ ೪ ಸಹಾ ನಡಿಯುತ್ತ ಯಿತ್ತು. ಶೋಭಕೃತ ಸಂವತ್ಸರದಲ್ಲು ಜಪ್ತ ಆಗಿ, ತಸ್ತೀಕ ಯಿಲ್ಲದೆ ಪೂಜೆ ನಿಂತು ಹೋಗಿಯಿದೆ.

❖❖

೮

ಉಡುಗುಣಿ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೪

ಚಂದ್ರಗುತ್ತಿ ವೆಂಠಕೆ ಸಲ್ಲುವ ಪನ್ನಿಚ್ಛಾಶಿರದ ವಳಿತವಾದ ಉಡಗುಣಿ ಶೀಮೆ, ಯೀ ಉಡುಗಣಿಗೆ ನಾಮಹ ಬಂದುದು ಪೂರ್ವಕ ರಾಜಧಾನಿ . . . . ವೆಂಠೆ ಸರಿ, ಯಿದಕೆ ಪೂರ್ವಕೆ

ಬಲಿಪುರವೆಂಬ ನಾಮ, ಯೀಚೆಗೆ ಬಂದವರು ಶ್ರೀ ಕೆತ್ತಾರೇಶ್ವರಸ್ವಾಮಿದೇವಸ್ಥಾನವನ್ನು ಜಕಣಾಚಾರಿ ಕೈಯಿಂದ ಕಟಿಸುವದಕ್ಕೆ ರಾತ್ರಿ ಕಾಲದಲ್ಲು ಶುರು್ರ ಮಾಡಿ, ಮರುದಿವ್ಸ ಬೆಳಗಾಗುವದರ ವಳಗೆ ದೇವಸ್ಥಾನವ ಮುಗಿದುದರಿಂದ ಬೆಳಗಾಂವಿಯಂತ ಹೆಸರಾಯಿತು . . . ಲಿಂದಾ ಬಿಂ . . . . . ಯೀ ಉಡಲು . . . .ಯಿ . . . ಸು ಆ . . . ಸುವದರಲ್ಲಿ ಉಡಚಲಾ ಮುಖ್ಯ ಪ್ರಾಣದೇವರು ಸಹಾ . . . ಸಿಕ್ಕಿದ್ದರಿಂದ ಯಿದು ಗಂಡು ಭೂಮಿ. ಯಿಲ್ಲಿ ಕಿಲ್ಲೆ ನಿರ್ಮಾಣಮಾಡಬೇಕೆಂದು ಕಿಲ್ಲೆ ನಿರ್ಮಾಣಮಾಡಿ ಮುಖ್ಯಪ್ರಾಣನ್ನು ಜೆಬಿ[>ಜಿಡ್ಡಿ] ಬಾಗಿಲಲ್ಲಿ ಪ್ರತಿಷ್ಠೆ ಮಾಡಿದರು. ಉಡುಚಲಾದೇವಿ . . . ಬಿ . . . ರೀ ಪ್ರ . . . ಬುಡಕೆ ಪ್ರತಿಷ್ಠೆಯಾಯಿತು. ಉಡವು ಯೆದ್ದು ನಾಯಿ ಮೇಲೆ ಬಿದ್ದದರಿಂದಲು, ಉಡುಚಲಾದೇವಿ ಯಿದ್ದದರಿಂದ ಉಡುಗಣಿಯಂತಾ ನಾಮದೇಹ[>ಧೇಯ]ವಾಯಿತು. ಕಿಲ್ಲೆದಲ್ಲಿಂದಕ್ಕೆ ಮಲಾಪಹಾರದ ಗಡಿನೆ ಮಿಕ್ಕಿ ಯಿಚೆಗೆ ಕೋಟಿ ಬಾಗಲಾರಭ್ಯ . . . ಪರದೆ ಶಿಕ್ಷೆ ಕ[>ತ]ಡಗಣಿ ಗಡಿ ಪರಿಯೆಂತ್ರ ನಡುವೆ ಯಿದ್ದು ಗಿಡಗಳನ್ನು ಸವರಿಸಿ ಪೇಟೆ ಕಟ್ಟಿಸಿದರು್ರ. ಯಿಲ್ಲಿಗೆ ಉಡುಗಣಿ ನಿರ್ಮಾಣವಾಯಿತು. ಮೆಲ್ಲ . . . ಸರಶಿನಲ್ಲು . . . ಯಂತು ದಿವಸಕ್ಕೆ ಯೀ ಶೀಮೆಯಲ್ಲಿಯೂ . . . ಸರಿಕಿಗೆ ಗಿರಾಕಿ ಆಗುತ್ತಾ ಯಿದೆಯೊ ಅಂತದನ್ನು ವರ್ತಕರು ತಂದುಕೊಂಡು ಯಿದ್ದಾರೆ. ಸಂತೆಯಿದ್ದು ಸಂವಸ್ತಾನ ೧ಕ್ಕೆ ಹೇರಳವಾಗಿ ಜವಳಿಯನ್ನು ವಿಶಿಷ್ಟವಾಗಿ ಯಿದರ ಹೊರ್ತು, ಆ ಶೀಮೆಯುಪಾಧ್ಯಾಯನ್ನ ಸರಕು ೨೦ ದ್ದಾ ಹ್ಯಾದರ್ರೂ ಯಿಲ್ಲಿ ಮಾರಿದು ಹೋಗಲಾಗಿ, ನಗದ[>ರ] ವಗೈರೆದ ಕಡಿಗೆ ತೆಗೆದುಕೊಂಡು ಹೋಗುತ್ತಾಯಿದ್ದಾರೆ. ಸಂವತ್ಸರ ೧ಕ್ಕೆ ೧೦೦೦ ಸಾವಿರ ಮೆಟಡೆ ಜವಳಿ ನಗಗಳು ಹಾಕೊ ಮುಚಳಿ . . . . ಅಗ್ರಹಾರ ಮುಚಡಿ ಮಾರ್ಗವಾಗಿ ಯೀ ಶಿರಾಳ ಕೊಪ್ಪದ ಪೇಟೆಗೆ ಬರುತ್ತಾ ಅದೆ. ಯೀ ನಡಿಗಳಿಗೆ ಸುಂಕದವರು ನಡೆ ೧೦ಕ್ಕೆ ಬೀಡಗಡೆ ೨ ಹೋ . . . ಸರಿಯಾಗಿ ಬಟ್ಟೆ ೮ ನಡಿಗೆ ಸುಂಕ ವಂಬತ್ತ ತೆಗೆದುಕೊಳ್ಳುತ್ತಾ ಯಿದಾರೆ. ಚಿಲ್ಲರ ವರ್ತಕರಿಗೆ ನಡೆ ೧೪೯.ಲ್ಲು ಸುಂಕ ತೆಗೆದುಕೊಂಡು ಬಿಡುತ್ತಾರೆ. ಸಾಲ್ಲಾಬಾದು ಬರುವ . . . ಬರ . . . ತ್ತರಿಗೆ ಬೀಡಗಡೆ ಬಿಟ್ಟು ನಗ ೧೯೫೦ ತೆಗೆದುಕೊಳ್ಳತ್ತಾ ಯಿದ್ದಾರೆ. ಯೀವ ಬಗ್ಗೆಯಂದರೆ ಸಾಲಬಸಾಲ್ಲು ವರ್ತಕತನವನ್ನು ಅಭಿವೃದ್ಧಿಗಾಗಿ ನಡಿಯಬೇಕೆಂದು ಸದರಿ ಬರದ ಮರಿಯಾದಿಯಿಂದಾ ನಡಿಸುತ್ತಾರೆ.

ಯೀ ವರ್ತಕರು ಯಿ ತಾಲ್ಲೂಕದಲ್ಲಿ ಸರಕು ಮಾರದೇ ಪರಉ ತಾಲ್ಲೂಕಿಗೆ ತೆಗೆದುಕೊಂಡು ಹೋಗುವದಾದಲ್ಲಿ ನಡೆ ೧ಕ್ಕೆ . . . ೧॥ ಮೇರಿಗೆ ಯಾವತ್ತು ವರ್ತಕರಿಗೂ ತೆಗೆದುಕೊಳ್ಳುತ್ತಾಯಿದಾರೆ. ಫಲ ಸರಿಪ[>ಸರಕು] . . . ಸವಣೂರ ಶೀಮೆಯಲ್ಲಿ ಅರ್ಧ ರೂಪಾಯಿ ಮೇರಿಗೆ ತೆಗೆದುಕೊಳ್ಳುತ್ತಾರೆ. ಯೀ ಶೀಮೆಯಲ್ಲಿ ಸುಂಕವನ್ನು ತೆಗೆದುಕೊಂಬುವದು ಯಿಲ್ಲಾ. ಯೀ ಫಲ ಸ . . . ಯಿ ತಾಲ್ಲೂಕದಲ್ಲಿ ಮಾರಿದರೆ ಬೈಸಣಿತಿಯೆಂದು ನಡೆ ೧ಕೆ ದು೧ ಮ೧॥ ಮೇರಿಗೆ ತೆಗೆದುಕೊಳ್ಳುತ್ತಾರೆ. ಯಿಲ್ಲಿ ಪರದೇಶಿಯವರು ತೆಗೆದುಕೊಂಡು ಹೋಗುವದಾದರ್ರೆ೧ ॥೦ ಮೇರಿಗೆ ಸುಂಕವನ್ನು ತೆಗೆದುಕೊಳ್ಳುತ್ಥಾರೆ. ಯಿದಕ್ಕೆ ಗಡಿಸುಂಕಾಯಂಬ ಹೆಸರು. ಯೀ ಶೀಮೆಯಲ್ಲಿ ವಿಸ್ತಾರವಾಗಿ ಫಲ ಸರಕು ತರುವದು ಯಿಲ್ಲ. ಅಥವಾ ಯಾರಾರೂ ಹ . . . ಪತ್ತು ಸರಕು ತಂದರೆ ಅವರಿಗೆ ನ ೧೦ಕೆ . . . ನಡೆ ಮೇರಿಗೆ ಬೀಡಗದೆ ಬಿಟ್ಟು . . . ವರಿಗೆ ಸುಂಕವನ್ನು ತೆಗೆದುಕೊಳ್ಳುತ್ತಾರೆ.

ಧಾನ್ಯದ ಜಿನಶಿಗೆ ಭತ್ತ ಹೊವರ್ತು ಮೇಲ್ಲಾದ ಗದ್ಯಾನಕೆ ಪೇಟಿಗೆ ಮಾರ್‍ರುವ ಬಗ್ಯೆ ತಂದರೆ ತಕ್ಕೊಂಡವರ ಕಡೆಯಿಂದ ನಡೆ . . . ಕೆ ದು . . ೧೦ ಮೇರಿಗೆ ತೆಗೆದು ಕೊಳ್ಳುತ್ತಾರೆ.

ತಾಲ್ಲೂಕದಲ್ಲಿ ಮಾರದೇ ದೂರ . . . ಹೋಗುವದಾದರೆ ತಾಲ್ಲೂಕನ್ನು ನಡ ೧ಕೆ ದು ೧೦ ಮೇರಿಗೆ ಕೂ . . . ಗುತ್ತ ಯಿದ್ದಾವೆ. ಯಿವನಿಗೆ ೧೦ಕೆ ೨ ಬೀಡಗಡೆ ಉಂಟು.

ಯೀ ಶೀಮೆಯನ್ನು ಆಳಿದ ವರುಷ ಯುದೀಷ್ಟಿರ ಶಕೆಯಲ್ಲಿ ಯುದೀಷ್ಟರ ವಂಶಸ್ತರು ಆಳಿದ ವರುಷ ೩೦೪೪.

ಆ ತರುವಾಯ ವಿಕ್ರಮಶಕೆಯಲ್ಲಿ ವಿಕ್ರಮರಾಯರು ಮುಂತಾದವರು ಆಳಿದ ವರುಷ ೧೩೫. ಆ ತರುವಾಯ ವಿಕ್ರಮಾದಿತ್ಯರಾಯನಿಗೂ ಶಾಲಿವಾಹನರಿಗೂ ಉಭಯತರಿಗೂ ಯುದ್ಧವಾಗಿ ನರ್ಮದಾ ತೀರ ಪರಿಯಂತ್ರಕ್ಕೂ ಉಭಯತರು ಕೂಡಿ ಮಾಡುತ್ತ ಹೋಗಿ, ಶಾಲಿವಾಹನ ನದಿ ದಾಟದೆ ಯೀಚೆಗೆ ನಿಂತದರಿಂದ, ಯೀಚೆಗೆ ಶಾಲಿವಾಹನದ ಶಕವಾಯಿತು; ವಿಕ್ರಮನು ಆಚೆಗೆ ದಾಟಿದ್ದರಿಂದ ವಿಕ್ರಮ ಶಕವಾಯಿತು. ಶಾಲಿವಾಹನಶಕ ಪ್ರಮಾದೀಚ ಸಂವತ್ಸರದ ಆರಭ್ಯ ಕ್ರೋಧನ ಸಂವತ್ಸರದ ವರೆಗೆ ಸಂದ ವರುಷ ೧೭೨೭.

ಆಳಿದ ದೊರಿಗಳ ವಿವರ:

೧೨೦೫ ಗುತ್ತಿಮಠ[>ವೇಂಠೆ] ವನವಸಿ ...ಟ್ಯಾ ಶಿರವೆ ಮುಖ್ಯವಾದ ಬಿಳಿಗಾರೆ . . . .ರಾಜ್ಯದಾ ..... ಯಾನಿಕದ ರಾಯರ ವಂಶಸ್ತರು ಆಳಿದ್ದು, ಪ್ರಮಾದೀಚ ಆರಭ್ಯ ಸ್ವಭಾನು ಸಂ: ವರಿಗೆ ಚಿದಂಬರ ಬಲ್ಲಾಳರು ಸಹ. ಯೀಚೆಗೆ ರಾಯರ ವಂಶ ನಿಂತು ಅರಾಜಕವಾಯಿತು.

೧೦ ಯಡುಪುಂಡ ಕೊರಗರು ಬಿಸಲಹಳ್ಳಿ ಕೊರಟಗೇರಿ ನಡುವೆ ಯಿರುವ ಗುಡ್ಡದಲ್ಲು ಕಿಲ್ಲೆ ಕಟ್ಟಿಕೊಂಡು ತಾರಣ ಆರಭ್ಯ ವಿಭವ ವರಿಗೆ ಆಳಿದರು.

೧೦೦ ಯೀಚೆಗೆ ವಿದ್ಯಾನಗರದಲ್ಲು ನೂತನ ಪಟ್ಟಣ ನಿರ್ಮಾಣಮಾಡಿ, ಆಳಿದ ದೊರಗಳು ಹರಿಹರರಾಯ ಮೊದಲಾದ ಶಕ ೧೨೧೬ನೇ ಜಯ ಸಂ। ಆರಭ್ಯ ಪ್ರಮಾದೀಚ ಸಂವತ್ಸರದ ವರಿಗೆ ಸಂದ ವರುಷ ೧೪೧೫.

ಬುಕ್ಕರಾಯರು ಅಗ್ರಹಾರಗಳ ಬಿಟ್ಟ ವಿವರ. ೧೨೯೧ನೇ ಕೀಲಕ ಸಂ। ಶು ಸನ್ ೧ಕ್ಕೆ ಗ್ರಾಮ ೨ ವಿವರ:

೧ ಮುಚಲಿ ಗ್ರಾಮ

೧ ಮುತ್ತಹಳ್ಳಿ ಗ್ರಾಮ

೨

ಸದರಿ ಯಿವರ ಆಳಿಕೆ ವರುಷಾ ೧೦೦ಕ್ಕೆ[>೨೦೦ಕ್ಕೆ] ವಿವರ:

೧೧೫ ಬಳೆಗಾವೆಯ . . . . ವಾಸಿ ಜಯ ಸಂವತ್ಸರದಾರಭ್ಯಾ ಸವ . . .

೮೫ ಉಡುಗುಣಿಯೆ . . . . ಬ್ಯಾವಾಗಿ ವಿರೋಧಿ ಆರಭ್ಯಾ ಪ್ರಮಾಣ ವಿಜಯ.

೨೦೦

೫೧ ಯೀಚೆಗೆ ವಿಜಾಪುರದ ಬಾದಶಹರು್ರ ಹೆಚ್ಚಿ ವಜೀರ ತ್ರಲು . . . ಬೇಗರು ಯೀ ದೇಶಕ್ಕೆ ಫಉಜಸ್ಯೆನ್ಯ ಸಹಾ ಬಂದು ೧೫೧೬ನೇ ಆನಂದ ಸಂ. ಲ್ಲು ಕಿಲ್ಲೆ ತಗೆದುಕೊಂಡನ್ನು. ಸಂಗಡ ತೊರಗಲ್ಲು ಬಾದರ . . . ಹಿ ದೇಶದಿಂದ ವೀರಣ್ಣವಡೆನೆಂಬವನು ಬಂದು ಯಿದ್ದ. ಅವಗೆ ದೇಶ ದತ್ತಿಕೊಟ್ಟರು. ಸದರಿ ಆನಂ . . . ಉಡಗಣಿ ಆಳಿಕೆ ವಿವರ:

೩೫ ಯೀಚೆಗೆ ಶ್ರೀರಂಗಪಟ್ಟಣದಿಂದ ದೊಡ್ಡ ನವಾಬರು ಚಿತ್ರಭಾನು ಸಂವತ್ಸರದ ಪುಷ್ಯಮಾಸದಲ್ಲು ನಗರವನ್ನು ತೆಗೆದುಕೊಂಡು, ಯಿವರ ಸರದಾರ ರಾಣೋಜಿಕ್ಕರಸಾಗರನ್ನು ಬಂದು ಕಿಲ್ಲೆ ತೆಗೆದುಕೊಂಡು ಮ್ಯಾಲೆ . . . . ಮಾಚಿ ಕಡೆ ಮಲ್ಲಪ್ಪರಾಯ ಮಾಮಲೆ ಸಹಾ ಯಿತ್ತದು ದಿನ ಚಿತ್ರಭಾನು ಸಂವತ್ಸರದ ಆರಭ್ಯ ಸಿದ್ದಾರ್ತಿ ಸಂ ರದ ಚೈತ್ರ ಬ॥೩೦ರ ವರೆಗೆ ವರುಷ ೩೬, ತಿಂ ೩ಕ್ಕೆ.

ಮಹಾರಾಷ್ಟ್ರರ ಠಾಣೆ ವಿರೋಧಿ ಕೃತ ನ ೧ . . . ಶುಧ ನಿಂತ ವರುಷ ೩೫, ತಿಂ ೩.

ಮರಾಟೇರ ವಿವರ:

ವ.		ತಿ.	
೦	–	೨	ಚಿತ್ರಭಾನು ಸಂ। ಲಾಗಾಯಿತು ಫಾಲ್ಗುಣ ಬ.೩೦ ಪುಟ್ಟನರಸಿಂಹವರು
೧	–	೦	ಕಡವಗೆರಿ ವೆಂಕಪ್ಪಯ್ಯ, ಸ್ವಭಾನು
೭	–	೦	ನಟ್ಟರ.. ತಾರಣ ಲಾಗಾಯತಿ
೧	–	೦	ಬೆಂಗಳೂರ ಸು . . . . ಬರು ಸಂ॥
೨	–	೦	ಬೀಳಗಿ ದೇವಪ್ಪ ನಂದನ . . . .
೨	–	೦	ಹೊಸಹಳ್ಳಿ ಕೊಟ್ಟ ಪುಟ್ಟನಂಜಯ್ಯ, ಮನ್ಮಥ ಸು॥
೩	–	೦	ವಸ್ತಾರೆ ವೆಂಕಪ್ಪಯ್ಯ, ದುರ್ಮುಖಿ ಲಾಗಾಯಿತು ವಿಳಂಬಿ ವರೆಗೆ
೧	–	೦	ಕೂದವಳಿ ಸುಬ್ಬ, ವಿಕಾರಿ
೪	–	೦	ಶ್ರೀಪತಿರಾಯಾ, ಶಾರ್ವರಿ ಲಾಗಾಯಿತು ಶೋಭಕೃತ
೨	–	೦	ಚಿದಂಬರ ಪಿಳ್ಳೆ, ವಿಶ್ವಾವಸು. ಇವರ ದಿನದಲ್ಲಿ ಬೆಳಗಾಂವಿ ಸ್ತಳದ ಶ್ಯಾನುಭೋಗ ಭೀಮಯ್ಯಗೆ ಗಜಪತಿ ವರಹ . . .
೬	–	೧	ಅಬ್ದುಲ್ ರಹೀಮಖಾನನ ಮಗಾ।, ಪರಿಭಾವಿ ಸಂ। ಲಾಗಾಯತು ವರುಷ ೬ಕ್ಕೆ ತಿಂ. ೧ . . .
೬	–	೧	ರಹೀಮಖಾನ, ಪ್ರಮಾದೀಚ ಸಂ। ಲಾಗಾಯತು ಶಿದ್ಧಾರ್ಥಿ ಚಯಿತ್ರ ಬಹುಳ ೩ ವರಿಗೆ.

ಯೀ ವೀರಣ್ಣನ ಕೈಸೆರೆ ಹಿಡಿದು ತೆಗೆದುಕೊಂಡು ಹೋದುದು ೬ನೇ ಪ್ಲವಂಗ ।ಸಂ। ಶಕ ೧೬೮೪ನೇ ಚಿತ್ರಭಾನು ಸಂವತ್ಸರದ ಪುಷ್ಯ ಬ ವರ್‍ರಿಗೆ ೨೧೫ ತಿಂ. ೧ಕ್ಕೆ.

ಮೊಗಲರ ಕಡೆ ರಣದುಲ್ಲಾಖಾನರ್ಗೆ, ಪ್ರಮಾದಿ ವರುಷ, ಬಾಕಿ ವರುಷ ೨೧೪ ತಿಂ. ೧೪

೧ ರಣದುಲ್ಲಾಖಾನನನ್ನು ಫೌವುಜು ಬಂದು ಕಿಲ್ಲೆ ತೆಗೆದುಕೊಂಡು, ಪ್ರಮಾದಿ ಸಂವತ್ಸರದಂದು ರುಶಿ ವಿಕ್ರಮ ಸಂ।ಲ್ಲು ಕೆಳದಿ ವೆಂಕಟಪ್ಪನಾಯಕರು ತ್ತೀರಿಸಿ ತೆಗೆದುಕೊಂಡು ೧೬೮೪ನೆ ಚಿತ್ರಭಾನು ವರ್‍ರಿಗೆ ನಡಿತು . . . ಸಂವತ್ಸರದಾರಭ್ಯ ೧೪೬ . . . . ಕ್ರೋಧಿ ಸಂ। ವರಿಗೆ ನಡಿತು. ಯೀ ಸಂ।ಲ್ಲು ಕದೀಮಬೇಗರು ಮೃತ.

೨ ಯೀಚಿಗೆ ಅರಾಜಕವಾಗಿ ಯಡ ಮಂಡದೇಸಾಯಿ ವೀರಣ್ಣನು ಯೀ ಕಿಲ್ಲೆ ಠಾಣೆ ಹಾಕಿಕೊಂಡು, ವಿಶ್ವಾವಸು ಆರಭ್ಯಾ ಪರಾಭವದ ವರಿಗೆ ವರುಷ ೨.

೨೧೪ ತಿಂ ೧೦ ಕೆಳದಿ ದೊಡ್ಡ ಸಂಕಣ್ಣನಾಯಕರ್‍ರು ಬಂದ ವಿವರ:

ಸದರಿ ಯಡ ಮಂಡದೇಸಾಯಿ ವೀರಣ್ಣನ್ನು ಅನಂತಪುರ ಪರಿಯಂತ್ರ ಮಂಡತನವ ಮಾಡಿದಲ್ಲಿ, ಯೀ ವರ್ತಮಾನ ಸಂಕಣ್ಣನಾಯಕರಿಗೆ ತಿಳಿದು ದಂಡುಯೆತ್ತಿ ಬಂದು . . .

(ಅಪೂರ್ಣವಾಗಿದೆ)

❖❖

೯

ಕಣಕುಪ್ಪೆ ಕೋಟೆ ಕಟ್ಟಿದ ಕೈಫಿಯತ್ತು

ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ೧೬-೨

ಶಾಲಿವಾಹನ ಶಕವರ್ಷಂಗಳು ೧೫೩೬ನೆ ಪ್ರಮಾದೀಚ ಸಂವತ್ಸರದಲ್ಲು ಗಡದ ಮೆದಕೇರಿ ನಾಯಕನ ದೊರೆತನ. ಈತನ ಸಾಕುಮಗ ಓಬಣ್ಣನಾಯಕ. ಈ ಮೆದಕೆರಿನಾಯಕನ ತಮ್ಮ ಹಿರೇಕೊಮಾರಪ್ಪ, ಈತನ ಮಗ ಚಿಕ್ಕಣ್ಣನಾಯಕ ಸಹ ಈ ಪ್ರಕಾರ ದೊರೆತನ ಮಾಡಿಕೊಂಡು ಇದ್ದಲ್ಲಿ, ಮೆದಕೇರಿನಾಯಕರು ಮೃತವಾದ ಕಾರಣ ಈತನ ಸಾಕುಮಗ ಓಬಣ್ಣನಾಯಕಗೆ ಪಟ್ಟವಾಯಿತು. ಆ ಓಬಣ್ಣನಾಯಕಗೆ ದೊರೆತನ ಆದಾಗ ಗುರಿಕಾರರಿಗೆ, ಓಲೇಕಾರರಿಗೆ ಸಹ ಉಡುಗೆರೆ ಬಹುಮಾನ ಮಾಡದ ಕಾರಣ ಓಬಣ್ಣನಾಯಕನ್ನ ತಲೆ ಹೊಡೆದರು. ಈ ಸಮಾಚಾರವನ್ನು ಈ ಕೊಮಾರಪ್ಪ, ಚಿಕ್ಕಣ್ಣನಾಯಕ ಸಹ ಕೇಳಿ ತಮಗೆ ಏನು ಬಂದಿತೋ ಎಂದು ರಾತ್ರೆ ವೇಳೆಯಲ್ಲಿ ಸ್ಥಳ ಬಿಟ್ಟು

ಹೋದರು. "ಹೀಗೆ ಆದರೆ ಅವಿವೇಕವಾಯಿತು, ಮುಂದೆ ದೊರೆತನಕ್ಕೆ ಯಾರು?" ಎಂಬುದಾಗಿ ಪಾರುಪತ್ತೆಗಾರು ಲಕ್ಷ್ಮಣ್ಣನಾಯಕವಾಡಿಗಳು ಗುರಿಕಾರರೂ ಹಿರೇರು ಸಹ ಕರೆಸಿ ಚಾವಡಿಯಲ್ಲಿ ಕುಳಿತುಕೊಂಡು, "ಮುಂದೆ [>ಹಿಂದೆ] ಹೀಗೆ ಆದರೆ ಆಯಿತು. ಇನ್ನು ಮುಂದೆ ದುರ್ಗಕ್ಕೆ ದೊರೆತನಕ್ಕೆ ಯಾರು?" ಎಂದು ಕೇಳಿದಲ್ಲಿ, "ಒಬ್ಬರ(ನ್ನು) ಗೊತ್ತು ಮಾಡಿ" ಎಂದು ಯಾವತ್ತೂ ಜನ ಹೇಳಿದ್ದರಿಂದ, "ಮುಂದೆ ಪಟ್ಟವಾದ ದೊರೆಗೂ ಇದೇ ಪ್ರಕಾರ ಆದೀತು" ಎಂದು ಹೇಳಿದ್ದರಿಂದ "ಇನ್ನು ಮೇಲೆ ನಮ್ಮಿಂದ ಇಂತಾ ಕೆಲಸ ಆಗುವುದಿಲ್ಲ"ವೆಂದು ನಾಯಕವಾಡಿಗಳು ಗುರಿಕಾರರು ಸಹಾ ಹೇಳಿದ್ದರಿಂದ ಸರ್ವರೂ ಆಲೋಚನೆ ಮಾಡಿ, "ಹಿರೇ ಕೊಮಾರಪ್ಪನ ಮಗ ಚಿಕ್ಕಣ್ಣ ಇದ್ದಾನೆ. ಈತಗೆ ಪಟ್ಟಾ ಕಟ್ಟಿಸುವ; ನಿಮಗೆ ಸಮ್ಮತವೋ ಹೇಗೆ?" ಎಂದು ಕೇಳಿದಲ್ಲಿ, ಸರ್ವರೂ "ನಮಗೆ ಸಮ್ಮತ"ವೆಂದು ಒಪ್ಪಿದರು.

ಅಷ್ಟರಲ್ಲೇ "ಕೊಮಾರಪ್ಪ, ಈತನ ಮಗ ಚಿಕ್ಕಣ್ಣ ಸಹಕುಟುಂಬ ಸಹಿತ ಬಿಟ್ಟುಕೊಟ್ಟು ಹೋದರು" ಎಂದು ಸಮಾಚಾರ ಕೇಳಿದಲ್ಲಿ, "ಇನ್ನು ಹೇಗೆ ಮಾಡಬೇಕು? ನಮಗೆ ಏನು ಬಂದೀತೋ?" ಎಂದು ಹೋದರು. ಮುಂದೆ ಅವರಿಗೆ ನಂಬಿಗೆ ಭರವಸ ಕೊಟ್ಟು ಕರೆಸಬೇಕು, ಅವರು ಹೊರತು ಪಟ್ಟಕ್ಕೆ ಇನ್ನು ಯಾರೂ ಇಲ್ಲ. ಬುದ್ಧಿವಂತರು ಹೋಗಿ" ಎಂದು ಲಕ್ಷ್ಮಣನವರು ಹೇಳಿದಲ್ಲಿ, "ನೀನು ಯಾರಿಗೆ ಅಪ್ಪಣೆ ಕೊಡುತ್ತೀರೋ ಅವರು ಹೋಗುತ್ತೇವೆ" ಎಂದು ಹೇಳಿದರು. ನಾಲ್ಕು ಕಡೆಗೂ ನಾಯಕವಾಡಿಗಳೂ ಗುರಿಕಾರರು ಸಹ ತಳವಾರರು ಸಹ ಬುದ್ಧಿವಂತರ ಕಳಿಹಿಸಿಕೊಟ್ಟರು. ಹರಪನಹಳ್ಳಿ ಸೀಮೆ ಚಗಟದಲ್ಲಿ ಇದ್ದರು. ಅಲ್ಲಿಗೆ ಹೋಗಿ ಭರವಸ ಕೊಟ್ಟು ಕರೆದುಕೊಂಡು ಬಂದರು. ಕೊಮಾರಪ್ಪನು "ನಮಗೆ ನಂಬಿಗೆ ಸಾಲದು" ಎಂದು ಮಗನ ಸಂಗಡ ಹೇಳಿದ ಕಾರಣ, "ನಾನು ಹೋಗುತ್ತೇನೆ. ನೀವು ಇಲ್ಲೇ ನಿಲ್ಲಿ"ಯೆಂದು ಹೇಳಿದ ಕಾರಣ, ಕೊಮಾರಪ್ಪನವರು ಗಡೀ ಪ್ರಾಂತ್ಯದಲ್ಲಿ ನಿಂತು ಚಿಕ್ಕಣ್ಣನಾಯಕನು ದುರ್ಗಕ್ಕೆ ಹೋದ(ನು).

ರಾಕ್ಷಸ ಸಂವತ್ಸರದ ಜ್ಯೇಷ್ಠಮಾಸದಲ್ಲು ಚಿಕ್ಕಣ್ಣನಾಯಕಗೆ ಪಟ್ಟವಾಯಿತು. ಪಟ್ಟವಾದ ಸುದ್ದಿ ಕೊಮಾರಪ್ಪನ ಬಳಿ ಕಾಗದ ಬರಕೊಂಡ ಕಾರಣ ಆ ಕ್ಷಣವೇ ಕೊಮಾರಪ್ಪ ದುರ್ಗಕ್ಕೆ ಬಂದ(ನು). ಬಂದು ಹೀಗೆ ಇರುತ್ತಾ ಇದ್ದಲ್ಲಿ, ಈ ಗುಡ್ಡದಲ್ಲಿ ಗಿಡ ಮರಗಳು ಬಹಳ, ಖ[>ಜ]ರಿಮಲೆ ಬೇಡರು ಈ ಗುಡ್ಡದಲ್ಲಿ ಕಳ್ಳರು ಇಪ್ಪತ್ತು ಮೂವತ್ತು ಜನ ಸೇರಿಕೊಂಡು ಬಹು ಉಪದ್ರವ ಮಾಡುತ್ತ ಇದ್ದಲ್ಲಿ, ಕುಮಾರಪ್ಪನವರು ಮುನ್ನೂರು ನಾನ್ನೂರು ಜನ ತೆಗೆದುಕೊಂಡು ಈ ಗುಡ್ಡದಲ್ಲಿ ಇದ್ದಂತಾ ಕಳ್ಳರು ಕೆಲವರು ಸಿಕ್ಕಿದಂತಾವರನ್ನ ಹೊಡೆದು ಹಾಕಿದರು. ಕೆಲವರು ಓಡಿಹೋದರು. ಆಗ ಈ ಗುಡ್ಡ ಹತ್ತಿ ನೋಡಿ ಗುಡ್ಡದಲ್ಲಿ ಹೊಂಡಗಳು ಗವಿಗಳೂ ಕಂಡು ವಿಸ್ತಾರವಾಗಿದ್ದಲ್ಲಿ, "ಈ ಗುಡ್ಡಕ್ಕೆ ಕೋಟೆ ಕಟ್ಟಬೇಕು ಬಲಿಯಾ (?) ಮಾಡಬೇಕು" ಎಂದು ಯೋಚನೆ ಮಾಡಿದರು. ಆಗ ಮಗನ ಬಳಿಗೆ ಹೇಳಿ ಕಳುಹಿಸಿಕೊಟ್ಟಲ್ಲಿ, "ಕೋಟೆ ಕಟ್ಟುವದಕ್ಕೆ ನಿಮಗೆ ಒಪ್ಪಿಕೆ ಆದರೆ ಹೇಗೆ ಮಾಡಿಸಬೇಕು?" ಕಾಮಾಟಿಗರವರನ್ನು ಕಳುಹಿಸಿ ಕೊಡುವಂತೆ ಹೇಳಿ ಕಳುಹಿಸಿಕೊಟ್ಟರು. ಪುನಃ ಕೊಮಾರಪ್ಪನವರು ದುರ್ಗಕ್ಕೆ ಹೋದರು. ಮಾರ್ಗಶಿರ ಶು ೬ ದಿವಸ ಕಾಮಾಟಿ ವೊಬ್ಬಂನ್ನ(ಓಬನ್ನ?) ಕರಕೊಂಡು ಬಂದರು. ಬರುತ್ತಾಲೆ ಗುಡ್ಡದ ಮೇಲೆ ಗಿಡಗಳ ಕಡಿಯುವುದಕ್ಕೆ ಹಚ್ಚಿದರು. ಕೊಮಾರಪ್ಪನವರು ಕೆಂಚೇನಹಳ್ಳಿಯಲ್ಲಿ ನಿಂತರು. ಫಾಲ್ಗುನ ಶು ೩ ಗುರುವಾರ ಕೋಟೆ ತರ(?) ಹಾಕಿದರು. ಈ ತಿಂಗಳಲ್ಲಿ ಚೌಕದ ಬುರುಜು ಆಯಿತು. ಕೆಳಗಣ ಕೋಟೆಯೂ ಕೆಲವು ಆಯಿತು.

ನಳ ಸಂವತ್ಸರ ಮಾರ್ಗಶಿರ ಶು ೧೦ ಶುಕ್ರವಾರ ಮೇಲು ದುರ್ಗದ ಮೂರು ಸುತ್ತೂ ಹೊಂಡ ಸಹ ಆಯಿತು. ಕೊಮಾರಪ್ಪನವರು ಇರಲಿಕ್ಕೆ ಮನೆಯನ್ನೂ ಈ ದಿವಸ ಪ್ರಾರಂಭಮಾಡಿದರು. ಮಾಘ ಶುದ್ಧ ೩ ದಿವಸ ಮನೆಗೆ ಸಮಾರಾಧನೆ ಮಾಡಿ, ಕಾಮಾಟಿಗರಿಗೆ ಉಡುಗರೆ ಮಾಡಿಸಿ, ಇವರಿಗೆ ಊಟ ಮಾಡಿಸಿ, ಹತ್ತು ಕುರಿಗಳು ತರಿಸಿ ಕೋಟೆಗೆ ಸರಗಾ (?) ಚೆಲ್ಲಿದರು. ಕೊಮಾರಪ್ಪನವರು ಮನೆಗೆ ಪ್ರವೇಶವಾದರು.

ಕಾಳಯುಕ್ತಿ ಸಂವತ್ಸರದ ಜ್ಯೇಷ್ಠ ಮಾಸದಲ್ಲು ಕೆಳಗಣ ಕೋಟೆ ಕಟ್ಟುವುದಕ್ಕೆ ಗಿಡಗಳ (ನ್ನು) ಕಡಿಯುವದಕ್ಕೆ ಈ ಶು ೨ ಶುಕ್ರವಾರ ಆರಂಭಮಾಡಿ ಮುಖ್ಯಪ್ರಾಣದೇವರ ಗುಡಿ ಕಟ್ಟುವುದಕ್ಕೆ ತರ(?) ಹಾಕಿದರು. ಈ ಬ ೬ ಭಾನುವಾರ ಪ್ರತಿಷ್ಠೆ ಮಾಡಿದರು. ಗುಡ್ಡದ ಕಾವಲಿಗೆ ಐವತ್ತು ಮಂದಿ ಹಿರೇ ಬೊಮ್ಮಯ್ಯ ಎಂಬವನ್ನ ಗುರಿಕಾರನ್ನ ಮಾಡಿ ಸಂಬಳವನ್ನು ಮಾಡಿಯಿಟ್ಟರು. ಆಶ್ವೀಜ ಮಾಸದಲ್ಲು ಈ ಶು ೧೩ ಭಾನುವಾರ ಕೆಳಗಣ ಸುತ್ತಿಗೆ ಕೋಟೆ ತರ(?) ಹಾಕಿದರು. ಕಾಳಯುಕ್ತಿ ಸಂವತ್ಸರದ ಫಾಲ್ಗುಣದ ವರೆಗೆ ಆದಂತಾ ಕೆಲಸ ಕೆಳಗಣ ಸುತ್ತೂ ಕೊತ್ತಲಗಳೂ ಗಟ್ಟಿನ ಅರ್ಧ ಕೋಟೆ ಸಹ ಆಯಿತು.

ಸಿದ್ಧಾರ್ಥಿ ಸಂವತ್ಸರದ ವೈಶಾಖ ೫ ವರೆಗೆ ಬಾಗಲು ಸಹ ಆಯಿತು. ಈ ಕೋಟೆ ಪೂರ್ವದಿಕ್ಕಿನಲ್ಲು ಸುತ್ತೂ ಬೇಲಿ ಕಟ್ಟಿಕೊಂಡು ಮನೆಗಳು ಕಟ್ಟಿಕೊಂಡು ಇದ್ದರು. ಬೇಲಿಗೆ ಕಳ್ಳರು ಬಂದು ಬೆಂಕಿ ಹಚ್ಚಿ ಹೋಗುತ್ತಾ ಇದ್ದಲ್ಲಿ, ಬೇಲಿ ತೆಗೆಸಿ ಕೋಟೆ ಕಟ್ಟುವದಕ್ಕೆ ಈ ಕಾರ್ತೀಕ ಶು ೧೩ ಭಾನುವಾರ ಪ್ರಾರಂಭ ಮಾಡಿದರು. ಈ ಮಾಘ ಬ.೩ ಗುರುವಾರ ಪಶ್ಚಿಮದಿಕ್ಕಿನ ಗುಡ್ಡಕ್ಕೆ ಕೋಟೆ ಕಟ್ಟುವುದಕ್ಕೆ ಚೌಕದ ಬರುಜು ಪ್ರಾರಂಭ ಮಾಡಿದರು. ರೌದ್ರಿ ಸಂವತ್ಸರದ ಚೈತ್ರ ಬ ೧೩ ವರೆಗೆ ಮುಗಿಯಿತು. ಈ ಗುಡ್ಡದ ಸುತ್ತೂ ಕೋಟೆ ಕಟ್ಟುವುದಕ್ಕೆ ತರ(?) ಹಾಕಿದರು. ಈ ಗುಡ್ಡದಲ್ಲಿ ಹೊಂಡ ತೆಗೆಯುವುದಕ್ಕೆ ಈ ಜ್ಯೇಷ್ಠ ಶು ೧೨ಲ್ಲು ಆರಂಭವಾಯಿತು. ಈ ಬ೭ ಗುರುವಾರ ಈ ಹೊಂಡದ ಅಗಲದಲ್ಲಿ ಮಣ್ಣು ತೆಗೆಯುವಾಗ್ಗೆ ದೊಡ್ಡ ಶಂಖ ಸಿಕ್ಕಿತು. ಆ ಕ್ಷಣ ಹಿರೇ ಕೊಮಾರಪ್ಪನವರ ಬಳಿಗೆ ಕಾಮಾಟಿಗರವನು ಶಂಖ ತೆಗೆದುಕೊಂಡು ಬಂದು ಕೊಟ್ಟ(ನು). ಶಂಖಾ ನೋಡಿ ಚೋದ್ಯಪಟ್ಟು ತಂದವನಿಗೆ ಉಡುಗರೆ ಇನಾಮು ಒಂದು ವರಹಾ ಕೊಟ್ಟು ಸಂಬಳ ಹೆಚ್ಚಿಗೆ ಮಾಡಿ ಕಾಮಾಟದ ಶೆರೋಗಾರನ್ನ ಮಾಡಿಯಿಟ್ಟರು. ಆ ಶಂಖಾ ಪೂಜೆ ಮಾಡಿಸಿ ದುರ್ಗದ [+ಲ್ಲಿ] ಯಿದ್ದಾ ಜೋಯಿಸ ತಿಮ್ಮಪ್ಪ ಮುಂತಾದವರನ್ನು ಕರೆಸಿ, ಈ ಶಂಖಾ ತೋರಿಸಿದರು. ಈ ಶಂಖ ಇದ್ದ ಸ್ಥಳ, ಈ ಗುಡ್ಡದಲ್ಲಿ ಇದ್ದ ಗವಿಗಳು ಸಹ ನೋಡಿ "ಇದು ಕಣ್ವಋಷಿಗಳ ಆಶ್ರಮ"ವೆಂದು ಹೇಳಿದರು. "ಈ ಶಂಖಾ ಅವರದೇ" ಎಂದು ಹೇಳಿದ ಕಾರಣ ಇವರ ಸಂಗಡಲೆ ದುರ್ಗಕ್ಕೆ ಕಳುಹಿಸಿಕೊಟ್ಟರು. ಆ ಹೊತ್ತಿಗೆ ಈ ಗುಡ್ಡಕ್ಕೆ ಕುಣುಕುಪ್ಪ ಎಂಬ ಹೆಸರು ಇಟ್ಟರು.

ಈ ಮೂರು ಗುಡ್ಡಕ್ಕೂ ಮೇಲುದುರ್ಗ, ಮನ್ನುಲಗಟ್ಟು, ಕೊತ್ತುಲಗಟ್ಟು ಎಂಬ ಹೆಸರು ಇಟ್ಟರು. ಈ ಶ್ರಾವ ಣ ಶು ೧೦ ವರೆಗೆ ಈ ಗುಡ್ಡದ ಸುತ್ತೂ ಹೊಂಡ ಸಹ ಮುಗಿಯಿತು. ಈ ಭಾದ್ರಪದ ಮಾಸದಲ್ಲು ಈ ಮೂರು ಗುಡ್ಡಾನೂ ಒಳಗು ಮಾಡಿಕೊಂಡು ಕೋಟೆ ಕಟ್ಟಬೇಕು – ಎಂದು ಯೋಜನೆ ಮಡಿದರು. ಗಿಡಬರಗಳೂ ಕೆಡವು(ವು)ದಕ್ಕೆ, ಕೋಟೆಗೆ ಕಲ್ಲು ಕೂಡಿ ಹಾಕುವುದಕ್ಕೆ ಸಹ ಹೇಳಿ, ಆಶ್ವೀಜ ಶು ೨ ದಿವಸ ದುರ್ಗಕ್ಕೆ ಹೋದರು. ಹೋಗಿ ಇಲ್ಲಿ ಆದಂತಾ ಕೆಲಸ

ಯಾವತ್ತು ಹೇಳಿದ. ಈ ಬ ೫ ಮಂಗಳವಾರ ಕುಣುಕುಪ್ಪೆಗೆ ಬಂದರು. ಬರುವಾಗ್ಗೆ "ಕೋಟೆ ಕಾವಲಿಗೆ ನಾಲ್ಕುನೂರು ಜನಾ ಮಂದಿ ಆಗಬೇಕು" ಎಂದು ಹೇಳಿದಲ್ಲಿ, "ಮಂದಿ ಅಲ್ಲೇ ಕಟ್ಟಿಕೊಳ್ಳಿ" ಎಂದು ಹೇಳಿದರು. ಇಲ್ಲಿ ಹಿರೇ ಬೊಮ್ಮಯ್ಯ ಎಂಬ ಗುರಿಕಾರನ್ನ ಕರೆಸಿ "ಮಂದಿ ಆಗಬೇಕು, ಮಂದಿ ತರಿಸು" ಎಂಬುದಾಗಿ ಹೇಳಿದರು. "ನಾಲ್ಕು ಕಡೆಗೂ ಹೇಳಿಕಳಿಸುತ್ತೇನೆಂ"ದುನ್ನೂ "ಮಂದಿ ತರಿಸುತ್ತೇನೆ"ಯೆಂದುನ್ನೂ ಹೇಳಿ, ಆಗ ಎಂಟೂ ಜನ ಕಳಿಸಿಕೊಟ್ಟನು. ಬೊಮ್ಮಯ್ಯಗೆ ಉಡುಗರೆ ಕೊಟ್ಟು ಸಂಬಳ ಹೆಚ್ಚೂ ಮಾಡಿದರು. ಗುರಿಕಾರ ಹುಚ್ಚಯ್ಯನೂ ಇಪ್ಪತ್ತುಮಂದಿ ತಕ್ಕೊಂಡು ಬಂದನು. ಮಾರ್ಗಶಿರ ಶು ೧ ಬುಧವಾರ ಕೆಳಗಣ ಸುತ್ತಿಗೆ ಕೋಟೆ ತರ ಹಾಕಿದರು. ಮಾಘ ಶು ೮ ಶನಿವಾರದ ವರೆಗೇ ಬಾಗಲು ಸಹ ಆಯಿತು. ಕುರಿ, ಕೋಣ, ಅಕ್ಕಿ, ತುಪ್ಪ ಸಹ ತರಿಸಿ ರಾಶಿಗಳು [>ರಾಸಿಗೂಳು] ಹೊಯಿಸಿ, ಸರಗಾ(?) ಚಲ್ಲಿಸಿದರು.

ಶುಕ್ಲ ಸಂವತ್ಸರದಲ್ಲು ಬರಮಪ್ಪನಾಯಕರ ಪಟ್ಟವಾದಾಗ ಮಾರ್ಗಶಿರ ಮಾಸದಲ್ಲು ಕುಮಾರಪ್ಪನು ದುರ್ಗಕ್ಕೆ ಹೋದನು. ಕಾಟನಾಯಕಗೆ ನಾಯಕತನ ಮಾಡಿ ದುರ್ಗದಿಂದ ಕಳುಹಿಸಿ ಕೊಟ್ಟರು. ಮಾಘ ಶು ೭ ಸೋಮವಾರ ಕಣುಕುಪ್ಪೆಗೆ ಪ್ರವೇಶವಾದರು.

ಧಾತು ಸಂವತ್ಸರದ ಜ್ಯೇಷ್ಠಮಾಸದಲ್ಲು ಕಾಟಮದೇವರು ಇಡಲಿಕ್ಕೆ ಒಂದು ಮನೆ, ದೊರೆಗಳು ಇರಲಿಕ್ಕೆ ಒಂದು ಮನೆ ಈ ಪ್ರಕಾರ ಎರಡು ಅರಮನೆ ಕಟ್ಟುವುದಕ್ಕೆ ಆರಂಭಮಾಡಿದರು. ಈ ಸಂವತ್ಸರದಲ್ಲು ಕಟ್ಟಿಸಿದರು. ಈ ಅರಮನೆ ಮುಂದಣ ಬಾಗಿಲು ಮರದ ಬಾಗಿಲು ಇದ್ದಕಾರಣ, "ಈ ಬಾಗಲ ಮುಂದೆ ಹೊಂಡ ಮಾಡಿಸಬೇಕು" ಎಂದು ಆ ಸ್ಥಳ ಬಿಡಿಸಿ ಈಚೆಗೆ ಮೂಡ ಗಡಿಗೆ ಕಲ್ಲುಬಾಗಿಲು ಮಾಡಿಸಿದ(ನು). ಅರಮನೇ ಮುಂದೆ ಸದರ ಚಾವಡಿಯನ್ನು ಕಟ್ಟಿದರು. ಕಲ್ಲು ಬಾಗಲಿಗೆ ಗಾರೇ ಹಾಕಿಸಿ ಗಾರೇ ಬಾಗಿಲು ಮಾಡಿಸಿದ. ಈ ಸಂವತ್ಸರದ ಮಾಘ ಮಾಸದಲ್ಲು ದುರ್ಗದಿಂದ ರಾಜಶ್ರೀಗಳು ಕೊಮಾರರೂ ಕುಟುಂಬ ಸಹ ಸಂಗಡ ಫವುಜು ಸಹಿತವಾಗಿ ಕಾಟಮದೇವರು ಉಚ್ಚಂಗಿದೇವರು ಸಹ ಮಾಡುವುದಕ್ಕೆ ಬಂದರು. ಈ ಶು. ೧೨ ದಿವಸ ಕಣುಕುಪ್ಪಿಗೆ ಪ್ರವೇಶ ಮಾಡಿದರು. ಉಚ್ಚಂಗಿದೇವರು ಉಚ್ಚಂಗಿದುರ್ಗದಲ್ಲಿ ಇದ್ದ ಕಾರಣ, ಇಲ್ಲಿಂದಾಲೆ ಊರು ಹೊರಗೆ ಬಿಳಜೇ(ಚೋ?)ಡು ಮಾರ್ಗದಲ್ಲಿ ಆಲದ ಮರದ ಬಳಿಯ ಹೋಗಿ ಎದುರುಗೊಂಡು, ಪೌರ್ನಮಿ ದಿವಸ ಕಾಳು ಹೊಯಿಸಿ, ಪಾಡ್ಯದ ದಿವಸ ರಾತ್ರಿಗೆ ಬೇವು ಉಟ್ಟು, ಬಿದಿಗೆ ದಿವಸ ಹೊಂಡದ ಗಂಗಾದೇವಿ ಮಾಡಿಸಿ, ತದಿಗೆ ದಿವಸ ಜೋಗುಲಾಡಿ, ರಾತ್ರಿಗೆ ಸಿಡಿ ಸಹಿತವಾಗಿ ಮಾಡಿದರು. ಸಿಡೀಕಂಬಾ ದುರ್ಗದಿಂದ ತರಿಸಿದರು. ಕಾಟನಾಯಕನು ರಾಜಶ್ರೀ ಬರಮಪ್ಪನಾಯಕನ್ನ ಕರಕೊಂಡು "ಗುಡ್ಡಗಳು ಕೊರಸಿ ಗಾರೆ ಬಾಗಿಲ ಮುಂದೆ ಒಂದು ಹೊಂಡ ಹುಟ್ಟಿಸ(ಹೊಡಸ?)ಬೇಕು. ಇದರ ಕೆಳಗೆ ಪೇಟೆ ಕಟ್ಟಿಸಬೇಕು" ಎಂದು ಕಾಟನಾಯಕನು ಹೇಳಿದಲ್ಲಿ ಬರಮಪ್ಪನಾಯಕರು ಅಪ್ಪಣೆ ಕೊಟ್ಟರು. ಈ ಮಾಘ ಬ ೭ ದಿವಸ ದುರ್ಗಕ್ಕೆ ಹೋದರು. ಈ ಫಾಲ್ಗುಣ ಶು ೫ ದಿವಸ ಶುಕ್ರವಾರ ಹೊಂಡಾ ತೆಗೆಸುವುದಕ್ಕೆ ಆರಂಭ ಮಾಡಿದರು. ಒಡ್ಡರಿಗೆ ವೀಳ್ಯವನ್ನೂ ಕೊಟ್ಟರು.

ಈಶ್ವರ ಸಂವತ್ಸರದಲ್ಲು ಪೇಟೆ ಮನೆಗಳು ಕಟ್ಟಿದರು. ಸೆಟ್ಟಿ ಗುರಪ್ಪನ್ನ ಕಾಟನಾಯಕನು ದುರ್ಗಕ್ಕೆ ಕಳುಹಿಸಿ, "ಸೆಟ್ಟಿತನಕ್ಕೆ ಈತ ಯೋಗ್ಯ, ಸೆಟ್ಟಿತನ ಕೊಡಸಬೇಕು" ಎಂದು ಬಿನ್ನವತ್ತಳೆ

ಬರೆದುಕೊಂಡ ಕಾರಣ, ಗುರಪ್ಪಗೆ ಸೆಟ್ಟಿತನಕ್ಕೆ ಉಡುಗರೆ ಕೊಟು ಕಳುಹಿಸಿ ಕೊಟ್ಟರು, ಈ ಶ್ರಾವಣ ಮಾಸದಲ್ಲು ಗುರಪ್ಪನು ಬಂದನು.

ಬಹುಧಾನ್ಯ ಸಂವತ್ಸರದಲ್ಲು ಕಾಟನಾಯಕನ ಕೆರೆ ಕಟ್ಟಿದರು. ಪ್ರಮಾದೀಚ ಸಂವತ್ಸರದಲ್ಲು ಕಾಟನಾಯಕನ ತಂದೆ ಜಂಪಣ್ಣನ ಹೆಸರಿನಲ್ಲು ಜಂಪಣ್ಣನ ಕೆರೆ ಕಟ್ಟಿಸಿದನು. ಈ ಕಾಟನಾಯಕನು ಮೃತನಾದ ಕಾರಣ ಈತನ ಮಗ ಜಂಪಣ್ಣಗೆ ನಾಯಕತನ ಆಯಿತು. ಈತ ಮಾಡಿಸಿದಂತಾ ಕೆಲಸ ವಿಷು ಸಂವತ್ಸರದಲ್ಲು ಓಬನ ಕೆರೆ ಕಟ್ಟಿಸಿ ತೋಪು ಹಾಕಿಸಿದನು.

ಶಾಲಿವಾಹನ ಶಕ ವರ್ಷಂಗಳು ೧೬೧೩ನೇ ಅಂಗೀರಸ ಸಂವತ್ಸರದಲ್ಲು ಚಿಕ್ಕಬರಮಪ್ಪನಾಯಕಗೆ ಕಣುಕುಪ್ಪೆ ದೊರೆತನಕ್ಕೆ ಪಟ್ಟಾಕಟ್ಟಿ ದುರ್ಗದಿಂದಾ ಕಳುಹಿಸಿಕೊಟ್ಟರು. ಪಾಲಕಿ ಕೊಟ್ಟು ಕಾಲುಮಂದಿ ಮೂರು ಸಾವಿರ, ಕುದುರೆ ನೂರು, ಆನೆ, ನಿಶಾನಿ, ನಗಾರಿ ಸಹ ಕೊಟ್ಟು ಬರಮಪ್ಪನಾಯಕರವರು ಕಳುಹಿಸಿಕೊಟ್ಟರು.

ಯುವ ಸಂವತ್ಸರದ ಭಾದ್ರಪದ ಮಾಸದಲ್ಲು ಈ ಬರಮಪ್ಪನಾಕನಿಗೆ ಕಿವಿ ಕಿವುಡು ಬಿದ್ದ ಕಾರಣ ದೊರೆತನಕ್ಕೆ ಸಲ್ಲದು ಎಂದು ಹೊಸದುರ್ಗಕ್ಕೆ ನಾಯಕತನಕ್ಕೆ ಹಾಕಿದರು. ಕಾಟನಾಯಕರ ಮಗ ಕಿರೇ ಜಂಪಣ್ಣನಾಯಕರನ್ನ ನಾಯಕತನಕ್ಕೆ ಇಟ್ಟರು. ಕೀಲಕ ಸಂವತ್ಸರದಲ್ಲು ಅರಮನೆ ಬಳಿಯಣ ಪಿರಂಗಿ ಮಾಡಿಸಿದರು. ಈ ಪಿರಂಗಿ ಮಾಡಿದವನು ತೆಲುಗ ಕಮ್ಮಾರ ಗುರುವಯ್ಯ ಎಂಬುವನು ಮಾಡಿದ. ಕಾಟಮಲಿಂಗಾ ಎಂಬೋ ಹೆಸರು ಇಟ್ಟರು. ಪ್ರಜೋತ್ಪತ್ತಿ ಸಂವತ್ಸರದಲ್ಲು ಕಮ್ಮಾರ ದೇವಗಾ ಹಾವುಗ ಸಹ ತೋಪು ಒಂದು ಮಾಡಿದರು. ಉಚ್ಚಂಗಿ ಎಂಬೋ ಹೆಸರು ಇಟ್ಟರು. ಶ್ರೀಮುಖ ಸಂವತ್ಸರ ಜ್ಯೇಷ್ಠ ಶು ೫ ಗುರುವಾರ ನಿರ್ವಾಣಪ್ಪನ ಬಾವಿ ಮಾಡಿಸಿದರು, ವ್ಯಯ ಸಂವತ್ಸರ ನಿಜ ಚೈತ್ರ ಶು ೫ ಲ್ಲು ಮೆದಕೇರಪ್ಪನ ಭಾವಿ ಪ್ರಾರಂಭ ಮಾಡಿದರು. ಕ್ರೋಧಿ ಸಂವತ್ಸರದಲ್ಲು ಕಾಟನಾಯಕರ ತಮ್ಮ ನಿಂಗಪ್ಪ, ಸಾಬರಿ ಕಿರೇ ಜಂಪಣ್ಣ ಸಹ ಕೋಟೇ ಒಳಗಣ ಮುಖ್ಯಪ್ರಾಣದೇವರ ಗುಡಿ ಹಿಂದಣ ಅರಮನೆ ಕಟ್ಟಿಸಿದರು, ಬಹುಧಾನ್ಯ ಸಂವತ್ಸರದಲ್ಲು ಈ ಅರಮನೆಗೆ ಚನ್ನಮಲ್ಲೇಶ್ವರದೇವರ ತೆಕ್ಕೊಂಡು ಚನ್ನಮಲ್ಲಪ್ಪನವರು ಬಂದಲ್ಲಿ, ಈ ಅರಮನೆಯನ್ನೂ ಅವರಿಗೆ ಕೊಟ್ಟರು. ಹೇವಿಳಂಬಿ ಸಂವತ್ಸರದಲ್ಲು ದುರ್ಗಕ್ಕೆ ನವಾಬರ ದಂಡು ಬಂದು ಮುತ್ತಿಗೆ ಹಾಕಿತು. ಮುತ್ತಿಗೆ ಬಿಟ್ಟು ಶ್ರವನೂರು (ಸವಣೂರು?) ಸೀಮೆ ಕಡೆಗೆ ದಂಡು ಹೋಯಿತು. ವಿಳಂಬಿ ಸಂವತ್ಸರದ ಭಾದ್ರಪದ ಶುದ್ಧ ೧೦ಲ್ಲು ನವಾಬರ ದಂಡು ಬಂದು ಬಸವನ ಬುರುಜು ತಕ್ಕೊಂಡು, ಕಣುಕುಪ್ಪಿಗೆ ಬಂದು ಇಳಿದು ಹನ್ನೊಂದು ದಿವಸ ಮುತ್ತಿಗೆ ಹಾಕಿ, ಹನ್ನೊಂದು ದಿವಸದಲ್ಲಿ ಕೌಲು ಆಯಿತು. ನವಾಬ ಠಾಣ್ಯ ಆಯಿತು. ಇಲ್ಲಿ ಮುಷ್ಠಿಗರಹಳ್ಳಿ ಬರಮನಹಳ್ಳಿ ಬಳಿಯಲ್ಲಿ ತಿಂಗಳು ದಿವಸ ಇಳಿದು ಇದ್ದು, ಮುಂದೆ ಗುಡ್ಡೆಕೋಟೆ ಮೊಳಕಾಲ್ಮುರುವಿಗೆ ಎದ್ದು ಹೋಯಿತು. ಮೊಳಕಾಲ್ಮುರು ಗುಡ್ಡೆಕೋಟೆ ಸಹ ತಕ್ಕೊಂಡು ದುರ್ಗಕ್ಕೆ ಹೋಯಿತು. ಹೋಗಿ ಲಡಾಯಿ ಮಾಡಿ ನಾಲ್ಕು ತಿಂಗಳಿಗೆ ದುರ್ಗ ತಕ್ಕೊಂಡು ಪಟ್ಣಕ್ಕೆ ಹೋಯಿತು. ಅಲ್ಲಿಂದ ಕಣಿಮೆ ಕೆಳಗೆ ಹೋಗಿ ಆರುಕಾಟು ತಕ್ಕೊಂಡು ಸತ್ತುಹೋದನು. ಈತನ ಮಗ ಟಿಪೂಸುಲ್ತಾನಗೆ ಅಧಿಕಾರವಾಯಿತು. ಆತನು ಈ ಕೋಟೆಯಲ್ಲಿ ಮುನ್ನೂರು ಜನ ಠಾಣಾ ಇಟ್ಟಿದ್ದನು.

ವಿರೋಧಿಕೃತ ಸಂವತ್ಸರದಲ್ಲು ಇಂಗ್ರೀಜಿಯವರ ದಂಡು ಬಂದು, ಕಣಿವೆ ಈಚೆಗೆ ಬಂದು, ಬೆಂಗಳೂರು ತಕ್ಕೊಂಡು ಠಾಣ್ಯೆ ಹಾಕವುದರೊಳಗೆ, ಮರಾಟೆಯವರ ದಂಡು ಇಂಗ್ರೀಜಿಯವರಿಗೆ ಕುಮ್ಮಕ್ಕೂ ಬಂತು, ಈ ಸಂವತ್ಸರದ ಶ್ರಾವಣ ಬ ೧೪ಲ್ಲು ಬೆಂಗಳೂರು ಕೆರೆಗೆ ಮರಾಟೆಯವರ ಕಡೆ ಪರಶುರಾಮಬಾವಾ[>ವು] ಸರದಾರನ ದಂಡೂ ಬಂದು ಇಳಿಯಿತು. ಭಾದ್ರಪದ ಶು ೩ ದಿವಸ ಬೆಂಗಳೂರಿಂದ ಫವುಜು ತೋಪು ಸಹ ತಕ್ಕೊಂಡು ಕಣುಕುಪ್ಪಿಗೆ ಬಂತು. ಬರುತ್ತಾಲೇ ಕೌಲು ಆಗಿ ಕ್ರಿಷ್ಣಾಜಿ ಪಂತನ(ನ್ನು) ಇಲ್ಲಿ ಇಟ್ಟು, ಇವರ ಬಗ್ಗೆ ಠಾಣೆ ಆಯಿತು. ಪರೀಧಾವಿ ಸಂವತ್ಸರದಲ್ಲು ಪುನಃ ಸುಲ್ತಾನ(ನ) ಠಾಣೆ ಆಯಿತು. ಈಚೆಗೆ ಸಿದ್ಧಾರ್ಥಿ ಸಂವತ್ಸರದಲ್ಲು ಶ್ರೀರಂಗಪಟ್ಟಣ ಇಂಗ್ರೀಜಿಯವರು ತಕ್ಕೊಂಡ ಕಾರಣ, ಈ ಸೀಮೆ ಯಾವತ್ತೂ ಇಂಗ್ರೀಜಿಯವರು ಮಹಿಸೂರವರಿಗೆ ಕೊಟ್ಟರು.*

ವಿಕ್ರಮ ಸಂವತ್ಸರದಲ್ಲು ಮೆದಕೇರಿನಾಯಕರು ಹರಪನಹಳ್ಳಿ ಸೀಮೆ, ತೂಯಲಹಳ್ಳಿ ತಕೊಂಬೋ ಉದ್ಧಿಶ್ಯ ದುರ್ಗದಿಂದ ಹೊರಟು, ಒಡೇರಹಳ್ಳಿ ಹಳ್ಳಕ್ಕೆ ಇಳಿದು, ಅಲ್ಲಿಂದ ಹೊಸಕೆರೆ ಬಳಿಗೆ ಬಂದು ಇಳಿದು, ಆ ರಾತ್ರೆ ಮೂರು ಜಾವಕ್ಕೆ ಕೂಚು ಮಾಡಬೇಕೆಂದು ಆಲೋಚನೆ ಮಾಡಿ, ತೂಯಲಹಳ್ಳಿ ಬಳಿಯ[+ಲ್ಲಿ] ಹರಪನಹಳ್ಳಿಯವರ ದಂಡು ಇಳಿದು ಇರುವ ಸಮಾಚಾರವನ್ನು ತರಿಸಿಕೊಂಡು, ಈ ದಿವಸದ ಬೆಳಿಗ್ಗೆ ಉದಯವಾದ ಮೂರು ನಾಲ್ಕು ಘಳಿಗ್ಗೆ ಹರಪನಹಳ್ಳಿಯವರ ದಂಡು ಮೇಲೆ ಹೊಡೆದು ಮುರೆಗಡದನು(?). ದಂಡಿನಲ್ಲಿ ಲೂಟಿ ಮಾಫು ಎಂದು ಸಾರಿಸಿದ ಕಾರಣ, ಯಾವತ್ತು ಫವುಜು ಲೂಟಿ ಮಾಡಿ ಗಂಟುಗಳು ಕಟ್ಟಿಕೊಂಡು ಬರುವಂತಾ ವ್ಯಾಳ್ಯಾದಲ್ಲಿ ಪುನಃ, ಹರಪನಹಳ್ಳಿಯವರ ಫವುಝು ಜಮೆ ಆಗಿ ಬಂದು ಹೊಡೆದ ಕಾರಣ, ಯಾವತ್ತು ದಂಡು ಮುರಿದು ಹೋಯಿತು. ಮೆದಕೇರಿನಾಯಕನು ಕಣುಕುಪ್ಪಿಗೆ ಬಂದನು. ಬಂದು ಒಂದು ದಿವಸ ರಾತ್ರೆ ಇದ್ದು ಬೆಳಿಗ್ಗೆ ದೇವರ ದರ್ಶನ ಮಾಡಿಕೊಂಡು ಚಿತ್ರದುರ್ಗಕ್ಕೆ ಹೋದನು. ಅರಮನೆಯಲ್ಲು ಮೆದಕೇರಿನಾಯಕನ ಮನೆದೇವರು ಉಚ್ಚಂಗೆಮ್ಮನವರ ಹಡಲಿಗೆ, ಕಾಯಿಕೋಲು ದೀವಟಿಗೆ, ಕಾಟಮದೇವರ ಭಂಗಾರದ ಲಿಂಗ, ಬೆಳ್ಳಿಲಿಂಗ ಮುಂತಾದ್ದು ಸಹ ಇದ್ದಲ್ಲಿ, ವಿಳಂಬಿ ಸಂವತ್ಸರದಲ್ಲು ನವಾಬ ಕಣುಕುಪ್ಪೆ ತಕ್ಕೊಂಡು ಹೋಗಿ ದುರ್ಗದ ಮುತ್ತಿಗೆ ಹಾಕಿದಾಗ, ದಂಡಿನಿಂದ ಈ ಕೋಟೆ ಕಿಲ್ಲೇದಾರ ಅಚ್ಚೇಸಕಾನನೆಂಬವನಿಗೆ ಪರವಾನೆ ಸಹ ತಕ್ಕೊಂಡು ಕಚ್ಚೇರಿ ಊಳಿಗ ಹರಕಾರು ಸಹ ಬಂದು ಪರವಾನೆ ಕೊಟ್ಟು, ಯಾವತ್ತೂ ಸಾಮಾನು ತಕ್ಕೊಂಡು ಹೋದರು. ಕಾಟಮದೇವರ ದೊಣ್ಣೆ ಇತ್ತು. ಅದಕ್ಕೆ ಭಂಗಾರದ ಕವಚ ಹಾಕಿ ಇತ್ತು. "ಅದು ಮಾತ್ರ ಇರಲಿ" ಎಂದು ಒಂದು ವರೆ ಗುರಿಕಾರ, ನಾಯಕರೂ ಸಹ ಅಚ್ಚೇಸಬಾನ ಕಿಲ್ಲೇದಾರನನ್ನ ಕೇಳಿಕೊಂಡಲ್ಲಿ ಹಾಗೇ ಆಯಿತು. "ಅದು ಒಂದು ಮಾತ್ರ ಇಟ್ಟು ಕಡಿಮೇದು ತಕ್ಕೊಂಡು ಹೋಗಲಿ" ಎಂದು ಹೇಳಿ ಕಳುಹಿಸಿಕೊಟ್ಟನು. ಕಾಟಮಲಿಂಗನ ದೊಣ್ಣೆ ಯಥಾಪ್ರಕಾರ ಅದೇ ಮನೆಯಲ್ಲಿ ಇಡಿಸಿ "ನಿಮ್ಮ ದೇವರು ನೀವು ಪೂಜೆ ಮಾಡಿಕೊಳ್ಳೀ" ಎಂದು ಕಿಲ್ಲೇದಾರನೂ ಹೇಳಿದ್ದರಿಂದ, ಅದೇ ಪ್ರಕಾರ ಪೂಜೆ ಮಾಡಿಕೊಂಡು ಇಟ್ಟುಕೊಂಡು ಇದ್ದರು.

---

* ಇಲ್ಲಿ ಸ್ವಲ್ಪ ಗ್ರಂಥಪಾತವಾಗಿದೆ.

ಈಚೆಗೆ ಶಾರ್ವರಿ ಸಂವತ್ಸರದಲ್ಲು ದುರ್ಗದಲ್ಲು ದೌಲತ್‌ಖಾನ್ ಜಮಾದಾರ ಇದ್ದಾಗ, ಇಲ್ಲೇ ಕಿಲ್ಲೇದಾರ ಅಚ್ಚೀಸಖಾನ್ ಕಿಲ್ಲೇದಾರಿ ಮಾಡುತ್ತಾ ಇದ್ದಾಗ, ಈತಗೆ ದೌಲತ್‌ಖಾನ್ ಜಮಾದಾರನ ಹೆಸರಿಂದ "ನಿಮ್ಮ ಕಿಲ್ಲೇದಲ್ಲಿ ಮೆದಕೇರಿನಾಯಕರ ದೇವರು ಕಾಟಮಲಿಂಗನ ದೊಣ್ಣೆ ಇದ್ದೀತಂತೆ, ಅದಕ್ಕೆ ಭಂಗಾರದ ಕವಚ ತೊಡಿಸಿ ಇದ್ದೀತಂತೆ, ಅದರ ಕವಚ ಕಡೆಗೆ ತೆಗಿಸಿ ಆ ಭಂಗಾರ ಎಷ್ಟು ಇದೆಯೋ ತೂಕ ಮಾಡಿಸಿ, ಆ ವಿವರಕ್ಕೆ ಪಟ್ಟಿ ಸಹ ಬರೆಸಿ ಕಳುಹಿಸಿ ಕೊಡಿ" ಎಂದ ತಾಕ[>ಕಿ]ತೀ ದಖಮು ಬಂದ ಕಾರಣ, ತೆಗೆಸಿ ತೂಕ ನೋಡಿದರು. ಎಂಭತ್ತು ವರಹಾದ ತೂಕ ಇತ್ತು. ಕಡೆಗೆ ತೆಗೆದು ತೂಕ ಮಾಡಿದ ಮೇಲೆ "ಇಲ್ಲಿ ನಾವು ಏನು ಕಾರಣ ಇಟ್ಟುಕೊಂಬೇವು" ಎಂದು ಬಂದಿದ್ದ ಊಳಿಗದವರ ಸಂಗಡ ವಾಲೇಕಾರರ ಕೊಟ್ಟ ದುರ್ಗಕ್ಕೆ ದೌಲತ್‌ಖಾನನ ಬಳಿಗೆ ಕಳುಹಿಸಿಕೊಟ್ಟರು.

ತೋಪುಗಳು ಒಡೆ ಹೆಟ್ಟಿದ್ದು[>ಹಚ್ಚಿದ್ದು]: ವಿಳಂಬಿ ಸಂವತ್ಸರದಲ್ಲು ಮೇಲುದುರ್ಗದ ದಕ್ಷಿಣ ದಿಕ್ಕಿನ ಕಡೆ ಬತೇರಿ ಮ್ಯಾಲೆ ಇದ್ದ ಫಿರಂಗಿಯನ್ನೂ, ನವಾಬ(ನು) ದುರ್ಗದ ಮೇಲೆ ಲಡಾಯಿ ಮಾಡುವಾಗ "ನಿಮ್ಮ ಕಿಲ್ಲೆದಲ್ಲಿ ಬಂಗಡಿ ತೋಪುಗಳು ಇದಾವಲ್ಲಾ! ಅದರಲ್ಲಿ ಒಂದು ತೋಪನ್ನು ಗುಡ್ಡದಿಂದ ಕೆಳಕ್ಕೆ ಹಾಕಿದರೆ ಒಡೆದುಹೋಗುತ್ತದೆ. ಒಡೆದ ತುಂಡುಗಳು ಈಗ ಗಾಡಿ ಕಳಿಸಿ ಇದ್ದೀತು. ಈ ಗಾಡಿ ಮೇಲೆ ಹಾಕಿ ಕಳುಹಿಸಿ ಕೊಡುವುದು" ಎಂಬುದಾಗಿ ಅಚ್ಚೀಸಖಾನಗೆ ಫರವಾನೆ ಬಂದದ್ದರಿಂದ, ಅದೇ ಪ್ರಕಾರ ಗುಡ್ಡದಿಂದ ಕೆಳಕ್ಕೆ ಹಾಕಿದರು. ಮೂತು ತುಂಡು ಆಯಿತು. ಮೂರು ತುಂಡನ್ನೂ ದುರ್ಗದ ಬಳಿಯಣ ದಂಡಿಗೆ ಕಳುಹಿಸಿಕೊಟ್ಟರು.

ಪರೀಧಾವಿ ಸಂವತ್ಸರದಲ್ಲು ಸುಲ್ತಾನ ಠಾಣಾ ಇದ್ದಾಗ, ಈ ತುಕಡಿ ಸುಬೇದಾರ ಷೇಕುಇಸುಮಾಲುಗೆ ಇಲ್ಲಿ ಅಮಲು ಇತ್ತು. ಈತಗೆ "ಕಣುಕುಪ್ಪೆಯಲ್ಲಿ ಇರುವ ತೋಪುಗಳು ಯಾವತ್ತನ್ನೂ ಒಡೆ ಹೊಡಿಸಿ ಪಟ್ಟಣಕ್ಕೆ ಕಳುಹಿಸಿಕೊಡುವುದು" ಎಂಬದಾಗಿ ಫರವಾನೆ ಬಂತು. ಫರವಾನೆ ಬಂದದ್ದರಿಂದ ಮೇಲುದುರ್ಗದ ಮೇಲೆಯಿದ್ದ ಉಚ್ಚಂಗಿ, ಕಾಟಮಲಿಂಗ ಎಂಬ ಎರಡೂ ತೋಪುಗಳನ್ನೂ ಗುಡ್ಡದಿಂದ ಕೆಳಕ್ಕೆ ಹಾಕಿಸಿ, ಕಮ್ಮಾರವನ್ನ ಕರೆಸಿ ಒಡೆ ಹಾಕಿಸಿದ. ಒಡೆದ ಕಬ್ಬಿಣ ಪಟ್ಟಣಕ್ಕೆ ಕಳಿಸಲಿಲ್ಲ. ಅರಮನೆಯಲ್ಲಿ ಒಂದು ಕೊಟಡಿಯಲ್ಲು ಹಾಕಸಿದ.

ಕಾಳಯುಕ್ತಿ ಸಂವತ್ಸರದಲ್ಲು ಈ ತುಕಡಿ, ಅಸಫ್ ಮಹಮ್ಮದಹಾಷಂ "ಕೆಲವು ಕೆಲವು ಕಬ್ಬಿಣ ಪಟ್ಟಣಕ್ಕೆ ಕಳಿಸಬೇಕು" ಎಂದು ಹೊಳಲಕೆರೆಗೆ ತರಿಸಿಕೊಂಡು ಅಲ್ಲಿಂದ ಪಟ್ಣಕ್ಕೆ ಕಳಿಸಿಕೊಟ್ಟ. ಉಳುವರಿ ಕಬ್ಬಿಣ ಅರಮನೆಯಲ್ಲೇ ಹಾಕಿ ಯಿದ್ದಿತು. ಈ ಕಾಳಯುಕ್ತಿ ಸಂವತ್ಸರದಲ್ಲು ಅಸಫ್ ಮಹಮ್ಮದ್‌ಹಾಷಂ ಗುಲಾಂ ಮೊಹದೀನ ಸಹ ಲೆಕ್ಕಾಪೊಕ್ಕಾ ವಿಚಾರಣೆ ಮಾಡುವ ಉದ್ದಿಶ್ಯ ಬಂದು ಇದ್ದಲ್ಲಿ, ಈ ಕಿಲ್ಲೆಗೆ ಕಿಲ್ಲೇದಾರ ಸೈದಹುಸೇನಿ ಎಂಬ ಕಿಲ್ಲೆದಾರನ್ನ ಇಟ್ಟು ಯಿತ್ತು. ಈ ಕಿಲ್ಲೇದಾರನು ಅಸಫರ ಬಳಿಗೆ ಹೋಗಿ "ಕಿಲ್ಲೇದಲ್ಲಿ ಇದ್ದ ತೋಪುಗಳು ಎರಡೂ ಒಡೆದು ಹಾಕಿದರು. ಮುಂದೆ ತೋಪುಗಳು ಇಲ್ಲದ ಹಾಗೆ ಆಯಿತು. ಬಸವನ ಕೋಟೆ ತೋಪು ೧, ಆಲೂರ ತೋಪು ೧ ಸಹ ತರಸಿ ಕೊಡಬೇಕು." ಎಂದು ಕೇಳಿದ್ದರಿಂದ, ತೋಪುಗಳು ಕೊಡುವ ಹಾಗೂ ತೋಪುಗಳು ತರುವುದಕ್ಕೆ ಬಂಡಿಗಳು ಎತ್ತುಗಳು ಸಹ ಕೊಡುವ ಹಾಗೂ ತಾಕೀತಿಯನ್ನು ಬರೆಸಿಕೊಟ್ಟರು. ಆಗ ಕಿಲ್ಲೇದಾರನು ಬಸವನ ಕೋಟೆ ಫಿರಂಗಿಯನ್ನೂ ತರಿಸಿ ಮೇಲುದುರ್ಗದ

ಮೇಲೆ ಅರಮನೆ ಬಳಿಯಣ ಕಾಟಮಲಿಂಗ ಎಂಬ ಪೂರ್ವದ ಫಿರಂಗಿ ಇದ್ದ ಬಳಿಗೆ ಹಾಕಿದರು. ಆಲೂರು ಫಿರಂಗಿ ತರಿಸಿ ಮೇಲುದುರ್ಗದ ಮೇಲೆ ಪೂರ್ವದ ಫಿರಂಗಿ ಉಚ್ಚಂಗಿಯಿದ್ದ ಬಳಿಗೆ ಹಾಕಿ ಬತ್ತೇರಿಗೆ ಇಟ್ಟರು. ಆ ಎರಡು ತೋಪುಗಳೂ ಒಳ್ಳೆ ದೊಡ್ಡ ಹೇರಳೇ ಹಣ್ಣಿನ ಪ್ರಮಾಣ ಗುಂಡುಗಳು.

ಈ ಕೋಟೆಗೆ ಬಾಗಲಗಳು: ಮೇಲುದುರ್ಗದ ಬಾಗಿಲು ಉತ್ತರದಿಕ್ಕಿನ ಅಸರಂಭ(?)ವಾಗಿ ಮೊದಲು ಬಾಗಲು ಒಂದು, ಎರಡನೇ ಬಾಗಲು ಕುಂಟಚೀ ಬಾಗಲು, ಮೂರನೇ ಬಾಗಲು ಹೊಂಡದ ಬಾಗಲು, ನಾಲ್ಕನೇ ಬಾಗಲು ಕಲ್ಲುಬಾಗಲು, ಐದನೇ ಬಾಗಲು, ಉಚ್ಚಂಗೀ ಬುರುಜಿನ ಬಾಗಲು. ದಕ್ಷಿಣ ದಿಕ್ಕಿನಲ್ಲಿ ಸಿಡಿ೧, ಪಶ್ಚಿಮ ದಿಕ್ಕಿನಲ್ಲಿ ಸಿಡಿ೧, ಕೆಳಗಣ ಸಿಡಿ೧, ಈ ಸುತ್ತಿನ ದೊಡ್ಡ ಬಾಗಲು೧, ಕೊತ್ತುಗಟ್ಟಿನ ದಕ್ಷಿಣ ಬಾಗಲು೨, ಮುನ್ನುಲಗಟ್ಟಿನ ಪೂರ್ವದಿಕ್ಕಿನ ಬಾಗಲು೧, ಪಶ್ಚಿಮದಿಕ್ಕಿಗೆ ಸಣ್ಣಬಾಗಲು೧, ಕೆಳಗಣ ಸುತ್ತಿನ ಕೋಟೆಗೆ ಗಾರೆ ಬಾಗಲು೧, ನಡಲೂರು ಬಾಗಲು೧, ಈ ಬಾಗಲು(ಲ?) ಪೂರ್ವದಿಕ್ಕಿಗೆ ದಾಸಮ್ಮನ ಬಾಗಲು೧, ಈ ಬಾಗಲು ಪೂರ್ವದಿಕ್ಕಿಗೆ ಜಗಳೂರು ಬಾಗಲು೧, ಗಾರೇ ಬಾಗಲು (ಲ?) ಉತ್ತರದಿಕ್ಕಿಗೆ ಭೈರವನ ಬಾಗಲು – ಅಂತೂ ಬಾಗಲು ೧೮, ಪೇಟೆ ಉಕ್ಕಡ೧, ಪೂರ್ವದಿಕ್ಕಿನ ಜಗಳೂರು ಬಾಗಲ ಕಡೆ ಉಕ್ಕಡ೧.

ಗುಡಿಗಳು: ಮೇಲುದುರ್ಗದ ಮೇಲೆ ಬಸವೇಶ್ವರನ ಗುಡಿ, ಹೊಂಡದ ಬಂಡೇ ಮೇಲೆ ೧, ನಡು ಊರಲ್ಲು ಮುಖ್ಯಪ್ರಾಣದೇವರ ಗುಡಿ೧, ಚೆನ್ನಮಲ್ಲೇಶ್ವರನ ಗುಡಿ೧, ಪೇಟೆಯಲ್ಲು ಈಶ್ವರನ ಗುಡಿ ಕಾಟನಾಯಕ ಕಟ್ಟಿಸಿದ್ದು೧, ಚೌಡೇಶ್ವರಿ ಗುಡಿ೧, ಜಗಳೂರು ಬಾಗಲು ಹನುಮಂತದೇವರ ಗುಡಿ೧, ನಡುವೂರಲ್ಲು ಭೈರವನ ಗುಡಿ೧, ಪೇಟೆಯಲ್ಲಿ ಉಕ್ಕಡದ ಬಳಿಯಣ ಮುಖ್ಯಪ್ರಾಣದೇವರ ಗುಡಿ೧, ಪಾ. ಕ್ರಿಷ್ಟಪ್ಪ ಕಟ್ಟಿಸಿದ; ದಕ್ಷಿಣದಿಕ್ಕಿನಲ್ಲಿ ಹೊಲದಲ್ಲಿ ಇರುವ ಮುಖ್ಯಪ್ರಾಣದೇವರ ಗುಡಿ೧, ಪೂರ್ವಕ್ಕೆ ಈ ಗುಡಿ ಬಳಿಯಲ್ಲಿ ಓಬಳೇನಹಳ್ಳಿ ಎಂಬ ಗ್ರಾಮವಿತ್ತು. ಈಚೆಗೆ ಈ ಕೋಟೆ ಹುಟ್ಟಿದಾಗ ಈ ಹಳ್ಳಿ ತೆಗೆದು ಈ ಹಳ್ಳಿ ಹೊಲಬನ್ನೇ ಕಣುಕುಪ್ಪಿಗೆ ಮಾಡಿದರು.

❖❖

೧೦

ಕೈಫಿಯತ್ತು ಅತ್ತಿಕುಪ್ಪೆಗ್ರಾಮ

ಮೆಕೆಂಝಿ ಸಂಪುಟ : ೧೬೧

ಕಲಿಯುಗದ ಆದಿಯಲ್ಲಿ ಯದಿಟರ[>ಯುಧಿಷ್ಠಿರ] ಶಕಾ ೩೦೪೪ ವರುಷಾದಲು ನಂದರಾಯರುಗಳು: ಬಾಹುಬಲರಾಯ, ಯೀತನ ಮಗ ಬೃಹದ್ರೃಣರಾಯ, ಆತನ ಮಗ

ಅಕ್ಷಯರಾಜ, ಆತನ ಮಗ ಪಚ್ಚಪ್ರತಿರಾಯ, ಆತನ ಮಗ ಪ್ರತಿಯ್ಯೊಮರಾಯ, ಆತನ ಮಗ ಭಾನುರಾಯ, ಆತನ ಮಗ ದಿವಾಕರರಾಯ, ಅಂತು ಅರಸುಗಳು ೭ ಮಂದಿ ನಂದರು.

ಅನಂತರಾ ವಿಕ್ರಮಶಕ ೧೩೫ ವರುಷ, ಶಾಲಿವಾಹನಶಕ ೧೮೦೦೦ ವರುಷ, ಮುಂದೆ ನಂದರಾಯರುಗಳನ ಚಾವುಂಡನಾಯಕನೆಂಬ ದೊರಿಯ ವರಹಕ್ಷೇತ್ರಕೆ ದಕ್ಷಿಣದಲು, ಕಾವೇರಿ ಹೇಮಾವತಿ ಶ್ರೋಣಿತಿಯಂಬ ತ್ರಿವೇಣಿ ಸಂಗಮಕ್ಷೇತ್ರಕು ಕೋಟಿತೀರ್ಥಕ್ಷೇತ್ರಕ್ಕು ಪೂರ್ವದಿಕ್ಕಿನಲ್ಲು, ಕಾವೇರಿನದಿ ಸಮೀಪದಲು ಯಿರುವ ಢಣನಾಯಕನಕೋಟೆಯಲಿ ಸಾಂಮ್ರಾಟದಿಂದಾ ರಾಜ್ಯಂಗೈಯುತ್ತ ವಂದು ದಿನ ರಾಜಸಂಚಾರಾರ್ಥವಾಗಿ ರಾಯನಂ[>ನುಂ] ಶೇವೆ[>ನೆ] ಸಹಿತವಾಗಿ ಬಂದು, ರಾಜಗಳನ್ನು ನೋಡಿಕೊಂಡು, ಹೇಮಾವತಿ ತೀರದಲ್ಲಿ ಯಿರುವ ಹೇಮಗಿರಿಯಂಬ ಬೈಲಕೆ ಆಗ್ನೇಯ ಬಾಗದಲಿ ಯಿರುವ ಹೊಲ್ಲಾರಿಯಂಬ ಹಳ್ಳಿಗೆ ಬಂದು, ಗ್ರಾಮವನ್ನು ನಾಲಕು ಕಡೆಯಲು ನೋಡಿ, ಯೀ ಗ್ರಾಮವನ್ನು ದೊಡ್ಡದಾಗಿ ಪಟ್ಟಣವ ಮಾಡಬೇಕೆಂದು ತನ್ನ ಮಂತ್ರಿ ಕಂಟೀರವನ ಕರದು, "ಯೀ ಸ್ಥಳದಲಿ ಕೋಟೆಯನ್ನು ಯೇಳು ಸುತ್ತು ಕಟ್ಟಿ, ಯಿದರ ಮುಂದೆ ಬೆಟ್ಟಗಳಿಂದಾ ಬರುವ ಹಳವನ್ನು ಕಟದು ದೂರದಲಿ ಕೆರೆಯನ್ನೂ ಕಟಿಶಿ, ಯಿದಿರಲಿ ವಂದು ದೇವಸ್ಥಾನವ ಕಟ್ಟಿಶಿ, ನಮ್ಮ ಠಾಣ್ಯಮಂ ಯಿಡಬೇಕೆಂದು ಅಪ್ಪಣೆಯಂ ಕೊಡಲು, ಮಂತ್ರಿಯು ಕೋಟೆಯನ್ನೂ ಕಟ್ಟಿಸುತ್ತಾ, ಯೀ ಕೋಟೆಗೆ ಆಗ್ನೆ ಪೂರ್ವೋತ್ತರವಾಗಿ ಒಂದು ಸಣ್ಣ ಕೆರೆಯನ್ನು ಕಟಿಸುತ್ತ ಇರಲೊಂದು ದಿನ, ಮಂದಿರದೊಳು ರಾಯನ ಪ್ರೇಮದ ಪುತ್ರಿಯಾದ ಸಾಂತಿವಂದ್ರಿ ಕಳಾವತಿಯಂಬ ಮಗಳು ರಾಯನಂ ಕುರಿತು "ಯಲೆ ತಂದೆಯೇ, ನೀನು ಕಟ್ಟಿಸುವ ಕೋಟೆಯನ್ನು ನಾನು ನೋಡಬೇಕೆಂ"ದು ಸೂಚಿಸಲ್ಲು ರಾಯನು ರಿಂ[>ಅಂ]ದಳ ರೋಹಣ ಆಗ್ನೆಯಶಿ [>ಆಜ್ಞೆಯಿಸಿ], ತಾನು ಅಶ್ವಾರೂಢನಾಗಿ ಕೋಟೆಯ ಮೇಲೆ ನೋಡುತ, ಮಗಳನು ಕುರುತು "ಯಲೆ ಕಳಾವತಿಯೆ, ಯೀ ಕೋಟೆ ಕಡಿಗು ಕಟ್ಟಿಶಿ ಯಿದರಲಿ ನಂದ [>ನಂನ] ಮಂದಿ ಮಕ್ಕಳನ ಯಿಟ್ಟು ಶತೃಗಳು ಬಂದಲಿ ಗೆಲಬಹುದು"ಯೆಂದು ಕೇಳಲು, ಆ ಕಳಾವತಿಯು "ಯಿಂತಾ ಕೋಟೆ ಕೊತ್ತಳಂಗಳು ಅಳ್ಳುವರ್‍ರಿ ಮುಂತಾದು ಯಿರಲಾಗಿ, ಶತೃಗಳು ಬಂದು ಠಾಣ್ಯಂಗೊಟ್ಟಲಿ ನಮ್ಮ ದೊರ್‍ರೆಯಾದವರ್‍ರು ಯಿದು ಕಾದಲೇಕೆ? ನನ್ನಂತ ಮುಗ್ಧಿಯು ಅಂತಃಪುರದೊಳೆ ಯಿದು[ಯಿದ್ದು] ಶತೃಗಳು ನಿರ್ವತಿಯಂ ಪಡೆದು ಪಡೆಯಬಹುದೆ"ನಲಾ ರಾಯನು ಕೇಳ್ದು ಖಿನ್ನನಾಗಿ ಬಂದು, ತನ್ನ ಮಂತ್ರಿಯಂ ಕರೆಸಿ "ಯಲೆ ಕಂಠೀರವನೆ ವಿಶಾಲಮತಿಯೊಳವನು [>ಯುಳ್ಳವನೇ], ಯೀಗಾ ಯೀ ಕಳಾವತಿಯು ನಾನು ಕೋಟೆ ಮೇಲೆ ಹೋಗಿ ಯಿದಾಗ [ಯಿದ್ದಾಗ] ವಂದು ಮಾತು ಪೇಳ್ಸುದ[>ಪೇಳಿದ] ಕಾರಣ, ಯನಗೆ ಸಂಶಯಗೊಂಡು ನಿನ್ನಂ ಕರೆಶಿದೆನು"ಯಂದು ಕೇಳಲ್, ಕಲಿಮಂತ್ರಿಯು "ಯಿದು ನಮಗೆ ತರವಲ್ಲ, ಮುಂದೆ ಯಾರಾದರ್‍ರೂ ಕಟ್ಟಿಕೊಳ್ಳಲಿ"ಯಂದು ಕೋಟೆಯ ಕೆಲಸವನ್ನೂ ನಿಲಶಿ, ಪುನಹಾ ತಮ್ಮ ಪಟ್ಟಣಕ್ಕೆ ಹೋಗಿ, ಕೆಲವು ದಿವಸದ ಮೇಲೆ ಬ್ರಮ್ಹಲೋಕವನ್ನೈದಲು, ಅವನ ಮಗ ಹರಿರಾಯನೆಂಬ ದೊರೆಯು ಕೆಲವು ದಿನ ರಾಜ್ಯಮಂ ಆಳುತ ಯಿರಲಾಗಿ, ವಂದು ದಿನ ಮಂತ್ರಿಯಿಂದಾ ತಮ್ಮ ತಂದೆ ಕಟ್ಟಿದ ಕೋಟೆಯ ಪೂರ್ವತ್ರಮಂ ಕೇಳ್ದು, "ಯಿದು ನಮ್ಮ [>ಕೋಟೆ], ನಾಲು ಕಡೆಗೂ ಕಟ್ಟಿಸಬೇಕೆಂ"ದು ಕೋಟೆ ಬಳಿಗೆ ಬಂದು ಕೋಟೆಯಂ ನೋಡಿ, ಯಿದರಲಿ ತನ್ನ ಮನೆದೇವರಾದ ಹರಿಹರನೆಂಬ ಯೀಶ್ವರ ದೇವಸ್ಥಾನಮಂ

ಕಟ್ಟಿಸಿ, ಪ್ರದೇವರ ಪ್ರತಿಷ್ಟೆಯಂ ಮಾಡಿಸಿ, ಯೀ ಗುಡಿಗೆ ಪೂರ್ವದಿಕ್ಕಿನಲಿ ವೊಂದು ಕೊಳಮಂ ಕಟ್ಟಿಸಿ, ಯೀ ಊರಿಗೆ ಪೂರ್ವದಿಕ್ಕಿನಲ್ಲಿ ಕೈವಲೇಶ್ವರಗಿರಿಯಿಂದಾ ಬರುವವರ ತೋಟದಾಗಿನ ನೀರ್ರು ಹಳವಂ ನೋಡಿ "ಯಿದಕೆ ಯೆರ್ರಿ[>ಏರಿ]ಯನು ಕಟ್ಟಿಶಿದರೆ ನೀರು ಬಹಳವಾಗಿ ನಿಂತೀತು" ಯಂಬುದಾಗಿ ಹಳ್ಳಕೆ ಯೆರ್ರಿಯಂ [>ಏರಿಯಂ] ಕಟ್ಟಿಸಿ, ಯೀ ಕೆರೆಗೆ ತೂಬವ ಕಟ್ಟಿಸಿ, ಕೆರೆಯ ಕೆಳಗೆ ಸರಕಾರಕೆ ಪೈರು ಆಗುವಂತೆ ಮಾಡಿ, ಯೀ ಕೋಟೆಗೆ ಉತ್ರ ಭಾಗದಲ್ಲು ವಂದು ಸಣ್ಣ ಕೂಪವು ಯಿರಲು, ಆ ಗ್ರಾಮವನ್ನು ಮಂತ್ರಿಗೆ ಉಮ್ಮಳಿ ಕೊಟ್ಟು, ತನ್ನ ಪಟ್ಟಣಕೆ ಬಿಬಿಗ್ನರು[>ಬಿಜಯಂಗೈದು] ರಾಜಮಂ ಸಾಮ್ರಾಜ್ಯಗೈದು ಯಿರ್ರುತಿರ್ದರು.

ಯೀಚೆಗೆ ಯೀ ಸ್ವಂಸ್ಥಾನವ ಮೈಸೂರ್ರು ದೊರೆಗಳು ರಾಜವಡೆರ್ರು, ಅವರ ಮಗ ಚಾಮರಾಜವಡೇರ್ರು, ಅವರ ಮಗ ಕಂಠೀರವರಸರು ರಾಜ ಪಡೆದ್ರು. ಅವರ ವಂಶದಲಿ ಚಿಕ್ಕದೇವರಾಜವಡೆರ್ರು ತಮ್ಮ ಬಾಹುಬಲದಿಂದ ರಾಜಂಗಳಂ ಕಟ್ಟಿ ಸಂಸ್ಥಾನವಂ ಸೇರಿಸಿಕೊಂಡು ರಾಜ್ಯವನ್ನಾಳುತಿರ್ದರು, ಯಿವರ ಪಉತ್ರನಾದ ಕಂಠೀರವ[+ನ]ರಸರಾಜವಡೆರರು ಪುತ್ರನಾದ ಕೈಟಣರಾಜವಡೆಯರನ್ನುವರ್ರು ರಾಜ್ಯವನ್ನಾಳುತಯಿರುವ ಕಾಲದಲು, ಯಿವರ ತಾಯಿ ಚಲುವಾಜಂಮ್ಮನವರು, ಯಿವರ ಅಜ[>ಅಜ್ಜ]ನಾದ ಚಿಕ್ಕದೇವರಾಜವಡೆರೈಯ್ಯನವರು, ಪಟ್ಟದ ಶ್ರೀ ದೇವರಪ್ಪನವರ್ರು ಯೀ ಸರಕಾರ್ರು ವರುಷದಿ ಪ್ರತಿವರುಷದಲು ತಮಗೆ ವೆಚ್ಚದ ಬಗೆಗೆ ಕೊಟ್ಟುಯಿದ ಹಣದಲಿ ಆಚರ್ನೆ ಮಾಡಿಕೊಂಡು ಯಿರುಶಿಕೊಂಡು, ಯಿನ ಯೀ ದ್ರವ್ಯಕ್ಕೆ ಸಾಮಕಲು ಪರಮತಿಯಂಬ ಸಮೀಪದ ಅರಬಾರ ದುರ್ಗವನ್ನೂ ಮುಂತಾದ ಗ್ರಾಮಗಳಲಿ ಸ್ವಾಸ್ತಿ ಗ್ರಾಮಗಳು ಸಹಾ ಕ್ರುಯಕೆ ಕೊಂಡು, ದೊರೆಗೆ ಅರಿಕೆ ಮಾಡಿಕೊಂಡು, ಯೀ ಶೀಮೆ ಅರಮನೆಗಳ ವೊಪ್ಪಿಸಿಕೊಂಡು, ನಮಗೆ ಪಟ್ಟಣಕೆ ಸಮೀಪವಾಗಿ ಬ್ರಾಮಣರು ಯಿರುವದಕೆ ವಸತಿಯೋಗ್ಯವಾಗಿ ಯಿರ್ರುವಂತಾ ಗ್ರಾಮಗಳನ್ನು ಕ್ರುಯಕ್ಕೆ ಕೊಡಿಶಿಕೊಡಬೇಕೆಂದು ಅರಿಕೆಮಾಡಿಕೊಂಡಲ್ಲಿ ರಾಯನು ಯಿವರ ಮಾತನು ಕೇಳಿ, ಬಹಳ ಸಂತೋಷ ಪಟ್ಟು "ಯಿದು ಧರ್ಮ ಕೆಲಸ"ವೆಂದು ತಿಳುದು, "ನೀವು ಕೇಳಿದ ಗ್ರಾಮವನ್ನು ಕೊಡಿಸಿ ಕೊಟ್ಟೆವೆಂ"ದು ಹೇಳಲಾಗಾ, ಯೀ ಅರಶಿತೆರು ಯಾದವಗಿರಿ ವೈರಮುದ[>ಡಿ] ಉತ್ಸವಹಕೆ ಬಿಜಾಪುರವ ಪುನಹಾ ಪಟಣಯಾಗುವ ಯಿ ಕೊಂಡನು ಆ ದೊಡ್ಡಕೆರ್ರೆಯನ್ನೂ ನೋಡದೆ ವತನಂದ ದರಬಾರ ಅಗೊಂದು ಯಿದು, ಬ್ರಾಹ್ಮಣರಿಗೆ ವಸತಿಯೋಗ್ಯವೆಂದು ಅರಿತು, ಯೀ ಗ್ರಾಮವನ್ನೂ ನಾಲು ಅಗ್ರಹಾರವಂ ಮಾಡಿಶಿ ಕೊಡಬೇಕೆಂದು ಪಟ್ಟಣಕೆ ಬಂದು, ರಾಯನಂ ಕುರಿತು ಮೊದಲು ನಮಗೆ ಕೊಟಂಪಿರು ಮೇರಿಗೆ ನಮಗೆ ಅಗ್ರಹಾರಕೆ ವಸತಿಯ ಸಯಿತ ಯಿರಿ[>ಇರು]ವಂತ ಕೊಂಡಮರು ಗ್ರಾಮಗ, ಯಿದರ ಸುತ್ತಲು ಯಿರುವ ಗ್ರಾಮಗಳು ಸಹಾ ನಮಗೆ ಕ್ರಯಕೆ ಕೊಡಸಬೇಕೆಂದು ಅರಸಿನವರ ಅನುಮತಿಯಿಂದಾ ಮೊದಲು ತಮಗೆ ಯಿರುವಾ ಗ್ರಾಮವನ್ನು ಅರಮನೆಗೆ ವೊಪಿಸಿ, ಯೀ ಗ್ರಾಮಗಳು ಯಿನ್ನು ಕ್ರಯಕೆ ಕೊಸರುಕೊಂಡು ಸಹಪ್ರಾರವನ್ನು ಮಾಡಿ, ನೂರಯಿಪತು ರೀತಿ ಸರಿಯಾಗಿ ಉತ್ತಮ ಮದ್ಯಮ ಕನಿಷ್ಟಯೆಂದು ಮೂರು ಕಡೆಯ ಭೂಮಿಯನ್ನು ಸರಿಯಾಗಿ ಆಳುಗಳಿಗೆ ಹಂಚಿಕೊಟ್ಟು, ರಾಯರ ಕೈಯಿಂದಾ ಬ್ರಾಮಣರಿಗೆ ಧಾರೆಯಂ ಯೆರಶಿ, ಶಿಲಾಪ್ರತಿಷ್ಟೆಯಂ ಮಾಡಿಸಿದ ವಿವರ:

೧ ಕೊಣ್ಣೂರ ಗ್ರಾಮ

೧ ಅತ್ತಿಕುಪ್ಪೆ ಗ್ರಾಮ

೨

ಯಿವಕೆ ಸೇರಿದ ಉಪಗ್ರಾಮಗಳು:

ಹಾಸಹಾಳು ಯಿ ಗ್ರಾಮ, ದಯಿಮಂಚನಹಳಿ, ಹಿರಳಹಳಿ, ಅಮಮನಕಟ, ಮಾರಿಕನಹಳ್ಳಿ, ಬೋಯರಸನ ಕೊಪಲು–

೧ ಬೊಮ್ಮನಹಳ್ಳಿ ಗ್ರಾಮ | ೧ ಸಾದಸಯಿದನಹಳಿ ಗ್ರಾಮ

೧ ನಾರಬೋಗನಹಳ್ಳಿ | ೧ ಚಿಕೊಗಹಳ್ಳಿ ಗ್ರಾಮ

೧ ಮರಹಳಿ ಗ್ರಾಮ | ೧ ಪುರದ ಗ್ರಾಮ

೧ ಹೊಯನಹಳಿ | ೧ ತೆಗನಹಳ್ಳಿ

೧ ಚಿಕಹೊಸಹಳ್ಳಿ ಗ್ರಾಮ | ೧ ಸಂಗನಹಳಿ ಗ್ರಾಮ

೧ ಯಿರ್‍ರೆ ಕಳಲೆ ಕಂಬಿನ ಕೆರೆ ಗ್ರಾಮ

ಅಂತು ಗ್ರಾಮ ೧೮ಕ್ಕೆ ಕೆರ್‍ರಿ ಸ್ಥಳದ ವಿವರಾ :

ಲಿಂಗಾಪುರ ಗ್ರಾಮ ೧ – ಯಿಂತು ಗ್ರಾಮ ೨೧, ಬ್ರಾಮಣ ನೂರುಹನ್ನೆರಡು ಮಂದಿಗೆ ಕ್ರ[>ಸ]ಮಸ್ತರಿಗೂ ಧಾತ್ರಿಯರಡು ಯಿಬ್ಬಾಗ ಮಾಡಿಕೊಟ್ಟದ್ದು.

ಶಾಲಿವಾಹನ ಶಕ ೧೬೪೪ಕೆ ಸಂದ ವರ್ತಮಾನವಾದ ಬು[>ಶು]ಭಕೃತನಾಮ ಸಂವತ್ಸರದ ಮಾರ್ಗಶಿರ ಮ೧೫ ಭಾನುವಾರ ಸೋಮೊಪರಾಗ ಪುಣ್ಯಕಾಲದಲಿ ದಾರಿಯರದಾರಿ ರಾಜ್ಯ ಸರಿಸಾಧಿತವಾಗಿ ಬ್ರಾಮಣರು ಅನುಭವಿಸಿಕೊಂಡು ಬರುತ್ತಾ ಯಿದಾರ್‍ರಿ. ಯೀಚೆಗೆ ಆ ಕಾಲದ ಯೀ ಕೊಣ್ಣೂರು ಗ್ರಾಮಕೆ ಒಂದು ಸಣ್ಣ ಸಂತೆಯಿತ್ತು. ಯಿದರಿಂದಾ ನಮಗೆ ಪ್ರಯೋಜನವಿಲ್ಲಯಂದು ಒಂದಾಗಿ ದೊರಿಗೆ ಅರಿಕೆ ಮಾಡಿಕೊಂಡುದುದರಿಂ, ಧಾರೆವೆರೆಯವವರ್‍ರು ಬಂದು ಗ್ರಾಮವನ್ನು ನೋಡಿ ಯಿದಕೆ ಅಗ್ರಹಾರ ಕೊಡುವಾಗೆ ಬೆರಿದ ಕೆರೆತೆ ಯಿರಿ. ಮುಂದಿನ ಚಿಕ್ಕ ಕೆರೆ ಸಹಾ ಯಿದದನು ನೋಡಿ, ಯೀ ಚಿಕ್ಕಕೆರಿಯನ್ನೂ ಬ್ರಾಮಣರಿಗೆ ಯೀ ಪ್ರಕಾರವಾಗಿ ಶೋಭಕೃತ ಸಂವತ್ಸರದಲ್ಲಿ ಆರು ಸಾವಿರ ವರಹ ಮುಟಿಸಿದ್ದು ಕೋಟೆ ಕಟ್ಟಿಸಿ ಬ್ರಾಹ್ಮರಿಗೆ ಕೊಟ್ಟರು. ಯೀ ರೀತಿ ಅತಿಕುಪ್ಪೆ ಗ್ರಾಮದಲಿ ಕೈಯಿಂದಾ ಸಾವಿರದಲ್ಲು ಮೂರ್‍ರು ವರಹಾ ಮುಟಿಸಿ, ಪ್ಯಾಟಿಯನ್ನು ಕಟಿಶಿ. ಯಿದರಲಿ ವರುಷಕೆ ಸಾವಿರದಲ್ಲು ಮೂರು ವರಹಾ ಹುಟ್ಟುವಳಿ ಮಾಡಿಯಿದದರಿಂದಾ ಕೆಲವು ದಿವಸ ಅನುಭವಿಶಿ ಬ್ರಾಮರುಗಳು ಯಿದರಲಿ ಹುಟ್ಟುವಳಿ ಹೆಚ್ಚಾಗಿ ಹುಟುತಾ[>ದಾ]ಯಿತು,

ಯಿದ ಕಾರಣ ಯಿದು ನಮಗೆ ದಕ್ಕುವದಿಲ್ಲವೆಂದು ಅರಿಕೆ ಮಾಡಿ ಕೊಂಡರು. ಯೀ ಪ್ಯಾಟಿಯನು ಕೊಂಬುರ್ರು ದೇವಸ್ತಾನಕೆ ಧಾರೆಯನ್ನು ಯೆರದು ಕೊಟರು. ಮನವರು ದೊರೆಗಳ ಕೈಯಿಂದಾ ಹಾರನಹಳಿ ಸ್ಥಳದಲಿ ಬೈರ ಮಂಗಲಾದಲಿ ಬಳಿ ಪಐಕಿಲ್ಲುರು ಗ್ರಾಮವನ್ನು ದೇವಸ್ಥಾನಕೆ ಕೊಟ್ಟರು. ರಾಯರು ಪೇಟಿನ ಕ್ರಿಷ್ಣರಾಜಪ್ಯಾಟಿಯಂದು ಪೆಸರು ಯಿಟ್ಟು, ಸರಕಾರಕೆ ಸೇರಿಸಿಕೊಂಡು ಮತಾದಾರಭ್ಯ ಸರಕಾರಕೆ ನಡಿಯುತ್ತ ಯಿದೆ. ಯೀಚೆಗೆ ಸುಲತಾನು ಸಾಹೇಬರ ದಿವಸದಲಿ ಸರಕಾರಕೆ ನಡದು ಬರುತಾ ಯಿದೆ ಯಂಬವರು ಅತಿಗುಪಿ ವತನ್.

❖❖

೧೧
ಕೈಫಿಯತು ತಾಲ್ಲೂಕ ಆಜಂಪುರ

ಮೆಕೆಂಝಿ ಸಂಪುಟ : ೧೬೧

ಕೈಫಿಯತು ತಾಲ್ಲೂಕೆ ಆಜಂಪುರದಲು ನಾಡಿದ[>ಗ]ರ ಸೊಮ್ಮೆಯ್ಯ ಬರಶಿದು, ಕ್ರೋಧನ ಸಂ. ಕಾರ್ತಿಕ ಶುದ್ಧ ೧ಲ್ಲು ಸಂ||೧೮೦೫ ಯಿಸವಿಯಲ್ಲಿ ಅಕಟೊಬರ ತಾ||೨೨ಲ್ಲು.

ಪೂರ್ವದಲಿ ವಿಷ್ಣುವರ್ಧನ ಬಲ್ಲಾಳರಾಯನು ದೇಶಸಂಚಾರಾರ್ಥವಾಗಿ ಸ್ವಾರಿ ಬಂದು, ಭಾರ್ಗವರುಷಿಗಳ ಆಶ್ರಮವಾದ ಬಗ್ಗವಳೀ ಯಂಬ ಗ್ರಾಮಕ್ಕೆ ಬಂದು ಯಿಳದು ಕೊಂಡು ಯಿದ್ದ ಸ್ಥಳವು ಮಹಾ ಅರಣ್ಯವಾಗಿ ಗಿಡ ಬೆಳೆದು ಯಿದ್ದಲ್ಲಿ, ಆ ಸ್ಥಳಗಳಲಿ ವ್ಯಾಘ್ರ ಬೇಟೆಯನ್ನು ಹೋಗಿ ಯಿರುವಲ್ಲಿ, ಯೀ ಅಡವಿಯಲ್ಲಿ ನರಸಿಂಹದೇವರು ಯಿದ್ದುದು ಕಂಡು ಸಮೀಪಕೆ ಬಂದು ನೋಡಿದಲಿ, ಯೋಗಾನರಸಿಂಹ್ಮನವರ ವಿಗ್ರಹವು ಯಿದ್ದದರಿಂದಾ "ಯಿಲ್ಲಿ ಯೀ ದೇವರು ಯಿರುವದಕ್ಕೆ ಕಾರಣವೇನು?" ಯಂಬುದಾಗಿ ಸ್ತಳದವರ ವಿಚಾರಿಸಲಾಗಿ ಅವರು ಹೇಳಿದ ವಿವರ: ಯೀ ಸ್ಥಳವು ಪ್ರಾಕು ಭಾರ್ಗವಋಷಿಗಳ ಆಶ್ರಮಾ. ಆ ರುಷಿಗಳ ದೇವತಾರ್ಚನೆ ಮೂರ್ತಿ"ಯೆಂದು ಹೇಳಲ್ಲಾಗಿ, ಯೀ ಬಲ್ಲಾಳರಾಯರು ಬಹಾಳ ಸಂತೋಷಪಟ್ಟು ಯಿದ್ದು, ದೊಡ್ಡ ಸ್ಥಳಯೆಂದು ಅಲ್ಲಿ ದೇವಸ್ಥಾನವನ್ನು ಕಟ್ಟಿಶಿ, ಪಟ್ಟಣವನ್ನು ನಿರ್ಮಾಣ ಮಾಡಿಶಿ, ಆ ಪಟ್ಟಣಕ್ಕೆ ಭಾರ್ಗವಪುರಿಯೆಂಬುದಾಗಿ ಹೆಸರು ಯಿಟ್ಟು ಯೀ ಯೋಗಾನರಸಿಂಹ್ಮಸ್ವಾಮಿಯವರಿಗೆ ನಿತ್ಯೋತ್ಸವ ಪಕ್ಷೋತ್ಸವ ಮಾಸೋತ್ಸವ ಸಂವತ್ಸರೋತ್ಸವ ಮುಂತಾದ ಬಗ್ಗೆ ಆಶ್ರಮದ ಸುತ್ತಮುತ್ತ ಯಿದ್ದ ಗ್ರಾಮಗಳು ಬಿಟ್ಟು ಕೊಟ್ಟುದರ ವಿವರ: ೧. ಚೆನ್ನಾ . . . . ಗ್ರಾಮ ೧ ಚೆಟ್ಟನಹಳ್ಳಿ ೧, ನರಶಿಪುರ.

ಯೀ ಮೂರು ಗ್ರಾಮವನ್ನು ಬಿಟ್ಟುಕೊಟ್ಟು, ಯಿ ಭಾರ್ಗವಪುರದಲ್ಲು ಭಾರ್ಗವೇಶ್ವರನೆಂಬ ಲಿಂಗವನ್ನು ಪ್ರತಿಷ್ಠೆಮಾಡಿಸಿ, ದೇವಸ್ಥಾನವನು ಕಟ್ಟಿಸಿ, ಯೀ ಗ್ರಾಮ ಪಶ್ಚಿಮದಿಕ್ಕಿನಲ್ಲು ವಂದು ಕೆರ್‍ರೆಯನ್ನು ಕಟ್ಟಿಶಿ, ಯಿ ಯರನಾಡು ಸೀಮೆಯನ್ನು ಯೀ ಪಟ್ಟಣಕೆ ಸೇರಿಸಿ ರಾಜ್ಯಪಾಲನೆ ಮಾಡಿದರು.

ಆ ಮೇಲೆ ಯಿವರ ಕಡೆ ನಾರಸಿಂಹರಾಯನು ಕೆಲವು ದಿವಸ ರಾಜ್ಯಭಾರ ಮಾಡಿದನು. ಆಮೇಲೆ ಕೆಲವು ದಿವಸದ ಬಳಿಕಾ ಯೀ ಬಗ್ಗುವಳಿ ಪಟ್ಟಣವು ಕ್ಷಾಮಡಾಮರದಿಂದಾ ಹಾಳಾಯಿತು.

ಆ ಮೇಲೆ ಆಸಂದಿಯೆಂಬ ಪಟ್ಟಣವು ಹುಟ್ಟಿ . . . . ಪ್ರಾಕು ತಿಮ್ಮಗೊಂಡನಹಳ್ಳಿಯೆಂಬ ಗ್ರಾಮದಲ್ಲು ಯಿದ್ದ ವಕ್ಕಲಮಗ ಕೋಣಬಗೊಂಡಾಯೆಂಬುವನು ವೀರಬಲ್ಲಾಳರಾಯರ ಸಮೀಪಕ್ಕೆ ಹೋಗಿ, ಅವರ ಸೇವಾವೃತ್ತಿ ಮಾಡಿಕೊಂಡು ಯಿರೋದರಿಂದಾ ರಾಯರ‍್ರು ಬಾಹಾಳಾ ಸಂತೋಷವಾಗಿ, ಯೀ ತಿಮ್ಮಗೊಂಡನಹಳ್ಳಿ ಗ್ರಾಮದಲ್ಲು ಯಿವನಿಗೆ ಕೆಲವು ಜಮೀನವನ್ನು ಉಂಬಳಿ ಹಾಕಿ ಕೊಟ್ಟುದರಿಂದಾ ಯೀ ಕೋಣಬಗೊಂಡಾನು ತನಗೆ ಕೊಟ್ಟಂತ ಭೂಮಿಯಲಿ ವಂದು ಮನೆ ಕಟಿಕೊಂಡು ಯಿರುತ್ತಾ ಯಿರಲಾಗಿ, ವಂದಾನೊಂದು ದಿವಸಾ ಯೀ ಕೋಣಬಗೊಂಡನ ಮನಿಗೆ ವಬ್ಬ ಪರಮಹಂಸಾ ಫಕೀರನು ಬಂದು ಯಿದಲ್ಲಿ, ಅವನಿಗೆ ಭೋಜನ ಮುಂತಾದ ವುಪಚಾರವನ್ನು ಮಾಡಲಾಗಿ, ಯೀ ಪರಮಹಂಸನು ಬಹಳ ಸಂತೋಷಬಟ್ಟು ಯೀ ಕೋಣಬಗೊಂಡನ ಮನೆಯಲ್ಲಿ ಕೆಲವು ದಿವಸ ಯಿದ್ದು, ಅಲ್ಲಿ ಯೀ ಪರಮಹಂಸನು "ಕಾಶೀಯಾತ್ರೆಗೆ ಹೋಗಿ ಬರುತ್ತೇನೆ" ಯೆಂಬುದಾಗಿ ತನ್ನ ಬಳಿಯಿದ್ದ ಶಿದ್ಧರಸದ ಭರಣಿಯನ್ನು ಜೋಳಿಗೆಯಲ್ಲಿ ಹಾಕಿ, ಆ ಜೋಳಿಗೆಯನ್ನು ಬಹು ಜೋಕೆಯಿಂದಾ ಯಿಟ್ಟು ಯಿರುವ ಹಾಗೆ ಹೇಳಿ, ತನ್ನ ಯಾತ್ರೆ ಮಾಡಿಕೊಂಡು ಬಂದು ತೆಗೆದುಕೊಂಡು ಹೋಗುತ್ತೇನೆಂಬುದಾಗಿ ಹೇಳಿ, ಯೀ ಕೋಣಬಗೊಂಡನ ಕೈಯಕೊಟ್ಟು ಹೋದನು.

ಯೀ ಜೋಳಿಗೆಯನ್ನು ಗೌಡನ ಮಗಳು ನೆಲುವಿನ ಮೇಲೆ ಯಿಟ್ಟು ಯಿರುವಲ್ಲಿ, ವಂದಾನೊಂದು ದಿವಸಾ ದೋಸಿ ಮಾಡುವ ಬಗ್ಯೆ ವಲ್ಲೆ [>ಒಲೆ] ಮೇಲೆ ಖಬ್ಬಿಣದ ಕಾವಲ್ಲಿಯನ್ನು ಯಿಟ್ಟು ಹೊರಗೆ ಹೋಗಿ ಯಿದ್ದಲ್ಲಿ, ಯೀ ಬೆಂಕಿ ಶೆಖೆಯಿಂದ ಜೋಳಿಗೆಯಲ್ಲಿಯ (ನೆಲುವಿನಲ್ಲಿಯ) ಸಿದ್ಧರಸವು ಕರಗಿ, ಯೀ ಕಾವಲ್ಲಿಯಲ್ಲಿ ವಂದು ಬಿಂದು ಬಿದ್ದುದರಿಂದಾ, ಆ ಕಾವಲ್ಲಿಯ ಯೀ ಗೌಡನ ಮಗಳು ಬಂದು ನೋಡುವಲ್ಲಿಗೆ ಚಿನ್ನದ ಕಾವಲಿ ಆಗಿ ಯಿದ್ದದರಿಂಧಾ, ಯಿದುವನ್ನು ಆಶ್ಚರ್ಯವೆಂದು ತಿಳಿದು ಯೀ ಜೋಳಿಗೆಯನ್ನು ತೆಗೆದು ನೋಡಿದಲ್ಲಿ, ಆ ಜೋಳಿಗೆ ವಳಗೆ ಸಿದ್ಧರಸದ ಭರಣಿಯು ಯಿದದ್ದು ಕಂಡು, ಆ ಭರಣಿಯನ್ನು ತೆಗೆದುಕೊಂಡು ಆ ಸಿದ್ಧರಸದಿಂದಾ ಅನೇಕ ಸುವರ್ಣ ಮಾಡಿಕೊಂಡು ಬಹು ಧನಿಕನಾಗಿ ಯಿರುತ್ತ ಯಿದ್ದನ್ನು. ಯಿದರ ಹೊರ‍್ತು ಭೂಮಿವಳಗೆ ವೀರಬಲ್ಲಾಳರಾಯರು ಕೊಟ್ಟಂತಾ ಭೂಮಿಯ ಸಾಲ್ಲಾಬಾದ ಮೇರಿಗೆ ಸಾಗುವಳಿ ಮಾಡಿಕೊಂಬುವಲ್ಲಿ ಆ ಭೂಮಿಯಲ್ಲಿ ಅನೇಕ ದ್ರವ್ಯ ಶಿಕ್ಕಿತು, ಯೀ ಯರಡು ಬಗೆ ಧನವು ಕೂಡಿಬಿದ್ದುದರಿಂದಾ ಆವಾತ ಧನಿಕನಾಗಿ ತಾ ಯಿದ್ದನು.

ಯೀ ಮೇರಿಗೆ ಯಿರುತ್ತ ಯಿದ್ದಲ್ಲಿ, "ಯೀ ವರ್ತಮಾನವನ್ನು ರಾಜ್ಯಭಾರಂ ಮಾಡುವಂಥಾವರು ಕೇಳದಲೇ, ತನ್ನ ಮನೆಯಲ್ಲಿಟ್ಟು[>ಟ್ಟ] ಐಶ್ವರ್ಯ ಯೀ ದ್ರವ್ಯದ [>ವು]

ತನಗೆ ದಕ್ಕುವದಕ್ಕೆಯಿಲ್ಲಾ"ಯೆಂಬದಾಗಿ ತಾನೇ ಹೋಗಿ, ರಾಜ್ಯಭಾರ ಮಾಡುವಂತಾ ವೀರಬಲ್ಲಾಳರಾಯರವರಿಗೆ ಅರಿಕೆ ಮಾಡಿಕೊಂಡದು:

"ತನಗೆ ಉಂಬಳಿ ಆಗಿ ಕೊಟ್ಟಂಥಾ ಭೂಮಿಯನ್ನು ಸಾಗುವಳಿ ಮಾಡಿಕೊಂಬುವಲ್ಲಿ ನಿಕ್ಷೇಪವನ್ನು ಸಿಕ್ಕು ಅದೆ. ಯೀ ಬಗೆ ಯೇನು ಅಪ್ಪಣೆ?" ಯೆಂಬುದಾಗಿ ಅರಿಕೆ ಮಾಡಿದರಿಂದ ಬಲ್ಲಾಳರಾಯರು ಅಪ್ಪಣೆ ಕೊಟ್ಟುದು: "ನಿನಗೆ ವುಂಬಳಿಯಾಗಿ ಕೊಟಂತಾ ಭೂಮಿಯಲ್ಲಿ ನಿನ್ನಾ ಅದುರುಷ್ಟದಿಂದಾ ಸಿಕ್ಕಿದ್ದು ನಿನ್ನದೆ ಸರಿ"ಯಂಬುದಾಗಿ ಅಪ್ಪಣೆ ಕೊಟ್ಟುದರಿಂದ, "ಯೀ ಧನವನ್ನು ಯಿಟ್ಟುಕೊಂಡು ನಾನು ಯೇನು ಮಾಡಲಿ"ಯಂಬುದಾಗಿ ಪುನಹಾ ಅರಿಕೆ ಮಾಡಿದಲ್ಲಿ, ರಾಯರು "ನಿನ್ನ ಹೆಸರಿನಿಂದಾ ವಂದು ಪಟ್ಟಣಾ ಕಟ್ಟಿಸು"ಯಂಬುದಾಗಿ ಅಪ್ಪಣೆ ಕೊಟ್ಟದ್ದರಿಂದ, ಅದೇ ಪ್ರಕಾರಕೆ ಯಿವನು ಬಂದು ತಿಮ್ಮನಗೊಂಡನಹಳ್ಳಿಯಂಬ ಗ್ರಾಮಕೆ ಕೋಟೆ ಹಾಕಿಸಿ, ಪಟ್ಟಣವನ್ನು ಕಟ್ಟಿಸಿ, ಯೀ ಪಟ್ಟಣಕ್ಕೆ ರಾಜನೀತಿಪಟ್ಟಣವೆಂಬ ಹೆಸರು ಯಿಟ್ಟು, ತಾನು ಹೊಲದಲ್ಲಿ ಕೆಲಸ ಮಾಡಿಕೊಂಡು ಯಿರುವ ಸ್ಥಳದಲ್ಲಿ ಪಟ್ಟಣ ಕಟ್ಟಿ, ಯೀ ಪಟ್ಟಣಕೆ [>ಕೊಣಬ+]ಗೊಂಡನಪಟ್ನವೆಂಬುದಾಗಿ ಹೆಸರು ಯಿಟ್ಟ ಮೇರಿಗೆ ಸುಖದಲಿ ಯಿರುತಾ ಯಿದ್ದನು. ಕೆಲವು ದಿವಸದ ಮೇಲೆ ವೀರಬಲ್ಲಾಳರಾಯರು ಯಿವನ ಪಟ್ನವನು ಪರಾಂಬರಿಸಕೆ ಬಗೆ ಬಂದು ಯಿದ್ದಲ್ಲಿ, ರಾಜನೀತಿಪಟ್ನಕೆ ಉತ್ತರದಿಕ್ಕಿನಲ್ಲು ವಂದು ಕೆರೆ ಕಟ್ಟಿಸಿ, ಆ ಕೆರಿಮೇಲೆ ದೇವಸ್ಥಾನಗಳ ಕಟ್ಟಿಸಿ, ಪ್ರತಿಷ್ಠೆ ಮಾಡಿ ಯಿರುವ ದೇವರುಗಳ ವಿವರ: ೧ ಶಿದೇಶ್ವರ ದೇವರು, ೧ ರಾಮೇಶ್ವರ ದೇವರು, ೧ ಕಲ್ಮೇಶ್ವರ ದೇವರು.

ಯೀ ಮೇರೆಗೆ ಪ್ರತಿಷ್ಟೆಗಳು ಮಾಡಿಶಿ, ಗ್ರಾಮದಲ್ಲಿ ಪ್ರತಿಷ್ಟೆ ಮಾಡಿಸಿ ಯಿರುವ ದೇವರುಗಳ ವಿವರ: ೧. ರಂಗನಾಥದೇವರು ೧. ಆಂಜನೇಯದೇವರು.

ಯೀ ಮೇರಿಗೆ ಐದು ದೇವರುಗಳಿಗೂ ಪ್ರತಿಷ್ಟೆ ಮಾಡಿ, ಪೂಜೆ ಪುನಸ್ಕಾರದ ಬಗೆ ಶಿದಾಪುರಯೆಂಬ ಗ್ರಾಮವನ್ನು ಸರ್ವಮಾನ್ಯವಾಗಿ ಬಿಟ್ಟು, ಆ ತರುವಾಯ ಕೊಣಬಗೌಡನ ಪಟ್ಟಣಕೆ ಬಂದು, ಅವನ ಮನಿಗೆ ಬಂದು ಭೋಜನಾ ಮುಂತಾದು ಮಾಡಿಕೊಂಡು ಪುನಹಾ ವೀರಬಲ್ಲಾಳರಾಯರು ದೋರಸಮುದ್ರಕೆ ಪ್ರತಿನಾಮಧೇಯವಾದ ಹಳೆಬೀಡು ಪಟ್ಟಣಕೆ ಸಾಗಿ ಹೋದರು. ಯೀ ಕೊಣಬಗೊಂಡನು ಯೀಗೆ ಸವುಭಾಗ್ಯದಲ್ಲಿ ಯಿರುತ್ತಾ ಯಿದ್ದಲ್ಲಿ, ಪ್ರಾಕು ಸಿದ್ಧರಸದ ಜೋಳಿಗೆ ಕೊಟ್ಟು ಹೋಗಿದ್ದ ಪರಮಹಂಸನು ಬಂದು, "ತನ್ನ ಜೋಳಿಗೆಯನ್ನು ಕೊಡು"ಯಂಬುದಾಗಿ ಕೇಳಿದಲ್ಲಿ ಆ ಪರಮಹಂಸನ್ನಾ ದಭಾಯಿಶಿ ಊರ ಹೊರಗೆ ಹಾಕಿಶಿದರಿಂದ ಆ ಪರಮಹಂಸನು "ಆ ಕೊಣಬಗೊಂಡನು ಮನಿಗೆ ಮಾರಿಹೊಕ್ಕು ನಾಶವಾಗಲಿ"ಯಂದು ಶ್ರಾಪಾ ಕೊಟ್ಟು ಹೋದದ್ದರಿಂದಾ, ಯೀ ಗೌಡನ ಮಗಳು ದಿನಚೆರಿಯಲ್ಲು "ಮಾರಿ ನೋಡಬೇಕು"ಯೆಂಬುದಾಗಿ ತನ್ನ ತಂದೆಗೆ ವುಪದ್ರಾ ಮಾಡುತ್ತಿ ಯಿದ್ದಲ್ಲಿ, ವಂದಾನೊಂದು ದಿನಾ ಗೌಡನು ತನ್ನ ಬಗೆ ತಳವಾರನಾ ಮಾರಿ ಕರತರುವ ಬಗೆ ಕಳುಹಿಸಿದರಿಂದಾ, ಆ ತಳವಾರನು ಮಾರಿ ಕರತರುವ ಬಗ್ಗೆ ಹುತರಿಗುಡ್ಡಯೆಂಬ ಗುಡ್ಡದ ಬಳಿಗೆ ಹೋಗುವಲ್ಲಿ, ಮಧ್ಯ ಕಣಿವೆಯಲ್ಲಿ ಅಮ್ಮನವರು ಉದ್ರುಸ್ತ್ರೀ ರೂಪವಾಗಿ ಮಾಸಲ್ಲು ಶಿರ್ರೆಯ ವುಟುಕೊಂಡು, ಬೆರಣಿಯನ್ನು

ಧಾ[>ಆ]ರಿಶಿಕೊಂಡು ಕುಕ್ಕೆಯಲ್ಲು ಹಾಸಿ[>ಕಿ]ಕೊಂಡು, ಮಾರ್ಗದಿಂದಾ ಬರುತ್ತ ತಳವಾರನಾ ನೋಡಿ, "ಯೀ ಅಡವಿಯಲ್ಲಿ ನೀನು ಯೆಲ್ಲಿಗೆ ಹೋಗುತ್ತಿ?"ಯಂದು ತಳವಾರನಾ ಆ ಹೆಣ್ಣು ಮಗಳು ಕೇಳಿದಲ್ಲಿ, ಯಿವನು ಹೇಳಿದದು:

"ಕೊಣಬಗೊಂಡನ ಮಗಳು ಮಾಡಿ ನೋಡಬೇಕು, ಕರೆದು ಕೊಂಡು ಬಾಯೆಂದು ಹೇಳಿದಲ್ಲಿ ಮಾರಿ ಕರತರುವ ಬಗ್ಗೆ ಹೋಗುತ್ತೇನೆಂ"ದು ಹೇಳಿದಲ್ಲಿ ಆ ಉದ್ರ್ಧ ಸ್ತ್ರೀಯು ಹೇಳಿದ್ದು: "ನೀನು ಯೆಲ್ಲಿ, ಮಾರಿ ಯೆಲ್ಲಿ? ನಿನಗೆ ಮಾರಿ ಹ್ಯಾಗೆ ಶಿಕ್ಕಾಳ? ಬುದ್ಧಿಯಿಲ್ಲದೆ ಅಡವಿ ತಿರುಗಬೇಡಾ"ಯಂದು ಹೇಳಿದಲ್ಲಿ, ಯಿವನ್ನು "ಮಾರಿ ಕಂಡು ಹೊರತಾ ಹಿಂದಕೆ ಹೋಗುವದು ಯಿಲ್ಲಾ"ಯೆಂದು ಹೇಳಲಾಗಿ, "ವಳ್ಳೇದು ಮಾರಿ ಬರುತ್ತಾಳೆಂದು ನಿಮ್ಮ ಕೊಣಬಗೊಂಡಗೆ ಹೇಳು, ನಿನ್ನು[>ನೀನು] ಮಾತ್ರ ಹಿಂದಕೆ ತಿರುಗಿ ನೋಡಬೇಡ"ಯೆಂದು ಹೇಳಿ ಅಪ್ಪಣೆ ಕೊಟ್ಟು ಕಳಿಸಿದರಿಂದಾ, ಯೀ ತಳವಾರನು ಹಿಂದಕೆ ತಿರುಗಿ ಬರುವಾಗ, ಶ್ರೀ ಅಮ್ಮನವರ[>ರು] ಅಘೋರರೂಪವಾಗಿ ಧರಿಶಿಕೊಂಡು, ಭೂಮಿ ಆಕಾಶಕೆ ಏಕವಾಗಿ ಮಹಾಶಬ್ದ ಮಾಡುತಾ ಬರುವ ಕಾಲದಲ್ಲಿ, ಯೀ ತಳವಾರನು ಭಯಸ್ತನಾಗಿ ಹಿಂತಿರುಗಿ ನೋಡಿದನ್ನು. ಅದರಿಂದಾ ಆ ಕ್ಷಣವೇ ರಕ್ತಾಕಾರಿ ಮೃತನಾದನು. ಆ ತರುವಾಯ ಅಮ್ಮನವರು ಕೊಣಬಗೊಂಡನ ಪಟ್ನವನ್ನು ಹೊಕ್ಕು, ಆ ಕ್ಷಣದಲ್ಲಿಯೇ ಯೀ ರಾಜನೀತಿಪಟ್ಟಣಾಲು ಕೊಣಬಗೊಂಡಪಟ್ಟಣ ಸಹಾ ಅಗ್ನಿಪ್ರವೇಶವಾಗಿ ಹೋಯಿತು.

ಆ ಕಾಲದಲ್ಲಿ ಯೀ ಪಟ್ಟಣದ ಪಶ್ಚಿಮದಿಕ್ಕಿನ ಬೀದಿಯಲ್ಲಿ ರಂಗನಾಥದೇವರು ಯಿದ್ದಲ್ಲಿ, ಯೀ ಸಂದಿ ವಂದು ಮಾತ್ರ ಬಿಟ್ಟು, ವುಳಿಕೆ ಪಟ್ಟಣವು ಕೊಣ[>ಬ]ಗೊಂಡನ ಪಟ್ಟಣ ಮನೆ ಜನಾ ಮುಂತಾದ ಪ್ರಜೆಗಳು ಸಹಾ ನಾಶಹೊಂದಿದರು. ಯೀ ರಂಗನಾಥನ ಗುಡಿ ಸಂದು ವಂದು ವುಳದರಿಂದ ಆ ಭಾಗಾ ಆಸಂದಿಯೆಂಬ ಹೆಸರು ಆಯಿತು. ಶಕವರುಷ ಶಾಲಿವಾಹನ ಶಕ ೧೧೧೧ನೆ ಸವುಮ್ಯ ಸಂವತ್ಸರ ವರಿಗೆ ಕರಿಯ[>ಯೆ]ತ್ತು ಯಿರಲಾಗಿ, ಯೀ ವೀರಬಲ್ಲಾಳರಾಯರ ಬಗೆ ಗಂಗೆಕುಲದ ಬೊಮ್ಮರಸನ ಮಗ ನರಸಿಂಹರಾಯನ್ನ ಆಸಂಧಿ ಗೆದ್ದು ನಿಂತುದು. ಶಾಲಿವಾಹನ ಶಕ ವರುಷಾ ೧೧೧೩ರ ವಿಜಿಕ್ರುತ ಸಂವತ್ಸರದ ವೈಶಾಖ ಬಹುಳ ೧೦ ಗುರುವಾರದಲ್ಲು ೧, ಬ್ರಾಂಹೇಶ್ವರ ದೇವರಲಿಂಗಾ, ೧. ಗಂಗೇಶ್ವರ [>ಗುಹೇಶ್ವರ?] ದೇವರು.

೨

ಯೀ ಮೇರಿಗೆ ಯರಡು ದೇವಸ್ಥಾನ ಪ್ರತಿಷ್ಟೆಮಾಡಿಸಿ, ದೇವಸ್ತಾನವನ್ನು ಕಟ್ಟಿಸಿ, ಯೀ ದೇವರಿಗೆ ಕೆಲವು ಭೂಮಿಯನ್ನು ಉತ್ತರಾ ಬಿಟ್ಟುದೂ, ಯೀ ಪ್ರಕಾರ ಆ ದೇವಸ್ತಾನದಲ್ಲಿ ಶಿಲಾಶಾಸನದಲ್ಲಿ ಬರದು ಅದೆ.

ಯೀ ವೀರಬಲ್ಲಾಳರಾಯರ ಕಾಲದಲ್ಲು ಹೊಸಪಟ್ಟಣವೆಂಬ ನೀಲಗುಂದದ ವೈಂಟಿಕೆ ಸಲ್ಲುವ ಯೆರೆನಾಡು ಗ್ರಾಮಗಳು, ಆಸಂಧಿ ಗ್ರಾಮಕ್ಕೆ ಸೇರಿಸಿ ಆಸಂಧಿನಾಡು ಯಂಬುದಾಗಿ ಹೆಸರು ಮಾಡಿದ್ದು, ಶಾಲಿವಾಹನ ಶಕ ೧೧೧೨ನೆ ಸಾಧಾರಣ ಸಂವತ್ಸರಕುಲು ಸೇರಿದ ನಾಡು ೧೨ರ ವಿವರಾ:

೧	ಕಸಬಾ ಆಸಂದಿನಾಡು	೧	ಶಿವನೆ ನಾಡು
೧	ಕರಹಾಲ್ಲು ನಾಡು	೧	ವಿರ್‍ರೆನಲ್ಲೂರ ನಾಡು
೧	ನಂದಿಪುರದ ನಾಡು	೧	ಹಣ್ಣಿನಾಡು
೧	ಬಗ್ಗುವಳೀ ನಾಡು	೧	ಅರಗಟದ ನಾಡು
೧	ಮೇಕೆನಾಡು	೧	ಗಡಿಹಳಿನಾಡು
೧	ಜಾಯ್ಲಿವನಾಡು	೧	ಭಾಸುರ ನಾಡು

೧೨

ಯೀ ಪ್ರಕಾರ ಹನ್ನೆರಡು ನಾಡು ಸೇರಿಶಿ, ಆಸಂಧಿಯೆರ್‍ರಿನಾಡು ಶೀಮೇಯನ್ನು ಆಳಿದ ದೊರಿಗಳು:

ಸದರಿ ಮೇರಿಗೆ ಸೆಕ ವರುಷಾ ಶಾಲಿವಾಹನಾ ೧೧೧೨ನೇ ಸಾಧಾರಣಸಂವತ್ಸರ ಲಾಗಾಯಿತು, ಶಕ ವರುಷ

೧೪೯ ಬಲ್ಲಾಳರಾಯರ ಕಡೆ ಬೊಮ್ಮರಸನ ಮಗ ನಾರಶಿಂಹರಾಯ ಸಹಾ ಆಳಿಕೆ

೨೨೦ ವಿಜಯನಗರದ ರಾಯರು ಆಳಿಕೆ ವಿವರ

೫೧ ಆಮೇಲೆ ರಾಣೋಜಿ[>ರಾಣಾ ಜ]ಗದೇವರಾಯರು

೪೭ ಮೊಗಲರ ಕಡೆ ರಣದುಲ್ಲಾಖಾನನು ಶಕ ವರಿಗೆ ಸೀಮೆ ಠಾಣ್ಯ ಹಾಕಿಕೊಂಡು ಆಳಿದು

೩೨ ಆಮೇಲೆ ತಾರಿಕೆರಿ [>ತರಿಕೆರಿ] ಅರಸುಗಳು, ಬೇಡರು ಆಳಿದು ಶಕವರುಷ

೩೨ ಪುನಹಾ ಮೊಗಲರ ಕಡೆ

೩ ಪುನಹಾ ತರಿಕೆರಿ ಬೇಡರು ಆಳಿದು

೧ ಚಿಕ್ಕ[>ತ್ರ]ದುರ್ಗ ಭರಮನಾಯ್ಕ ಆಳಿಕೆ

೩೮ ಯಿಕ್ಕೇರಿ ಸಂವಸ್ಥಾನದವರು ಆಳಿದು

೩೬ ನವಾಬ ಹೈದರ ಬಾದಶಹ ಯಿವನ ಮಗ ಟೀಪುಸುಲತಾನ ಸಹಾ ಆಳಿದ್ದು

೭ ಆಮೇಲೆ ಕುಂಪಣಿ ಸರಕಾರದಾ ಮೈಸೂರ ಶ್ರೀಕೃಷ್ಣರಾಜವಡೆಯರು

೬೧೬ ಕೆ ಆಳಿಕೆ ಕೈಫಿಯತು ವಿವರ:

೧೪೯. ಬಲ್ಲಾಳರಾಯರು ಪ್ರಾಕು ಬಗುವಳ. ಕೊಣ[+ಬ]ಗೊಂಡಪಟ್ಟಣ ಸಹಾ ಹಾಳಾಗಿ, ಆಸಂಧಿನಾಡಿನಲ್ಲಿ ಯಿವರ ಬಗ್ಗೆ ಗಂಗೆಕುಲದ ಬೊಮ್ಮರಸ, ಯಿವನ ಮಗ ನರಸಿಂಹ್ಮರಾಯ

ಸಹಾ ಆಸಂಧಿಯಲ್ಲಿ ನಿಂತು, ಶಾಲಿವಾಹನ ಶಕ ೧೧೧೨ನೆ ಸಾಧಾರಣ ಸಂವತ್ಸರಾರಾಭ್ಯಾ ಶಕ ವರುಷ ೧೨೬೦ನೆ . . . ಬಹುದಾನ್ಯೆ ಸಂ। ವರಿಗೆ ಯಿವರು ಆಳಿದ ವರುಷಾ, ಯೀ ಆಸಂದಿ ನಾಡಿನಲ್ಲು ನರಸಿಂಹ್ಮರಾಯನು ಶಕ ವರುಷ ೧೧೧೩ನೆ ವಿರೋಧಿಕೃತ ಸಂ। ವೈಶಾಖ ಬ। ೧೦ಯಲ್ಲು ಬ್ರಮ್ಹೇಶ್ವರ ಗುಹೇಶ್ವರ ಯೆರಡು ದೇವಸ್ಥಾನವನ್ನು ಕಟ್ಟಿಸಿ, ಯೀ ದೇವರಿಗೆ ಆ ಗ್ರಾಮದ ಕೆರಿ ಹಿಂದೆ ಕೆಲವು ಭೂಮಿಯು ಉತ್ತರಾ ಬಿಟ್ಟು ಯಿದಾರೆ. ಯೀ ಮೇರಿಗೆ ಶಿಲಾಶಾಸನ ಬರೆದು ಯಿದಾರೆ.

೨೨೦. ವಿಜಯನಗರದ ಸಂವಸ್ತಾನ ರಾಯರು್ರ ಶಕವರುಷ ೧೨೬೧ನೇ ಪ್ರಮೋದಿ ಸಂವತ್ಸರ ಆರಭ್ಯ ಶಕವರುಷ ೧೪೪೦ನೇ ಕಾಳಯುಕ್ತಿ ಸಂ।ವರಿಗೆ ಆಳಿದವರು.

ಯೀ ರಾಯರ ಆಳಿಕೆಯಲ್ಲಿ ಸಂಗಮಭೂಪಾಲ, ಹರಿಹರರಾಯರ ತರುವಾಯ ಬುಕ್ಕರಾಯರವರು ರಾಜ್ಯವನ್ನು ಆಳುವಾಗ್ಯೆ ದೇಶಸಂಚಾರಾರ್ಥವಾಗಿ ಬಂದು, ಯೀ ಶೀಮೆಯಲ್ಲಿ ಬುಕ್ಕಾಂಬುದಿಗ್ರಾಮ ಯಿರುವ ಬಳಿಯ ಅರಗಟವೆಂಬ ಗ್ರಾಮದ ಸಮೀಪದಲ್ಲಿ ನೀರು ಆಸರೆಯಲ್ಲಿ ಯಿಳದು ಕೊಂಡು, ಯೀ ಗ್ರಮಉ ಸಣ್ಣದಾಗಿ ಇದ್ದದರಿಂದ ಯಿಲ್ಲಿ ದೊಡ್ಡದಾಗಿ ಗ್ರಾಮವನ್ನು ಕಟ್ಟಿಸಬೇಕೆಂಬದಾಗಿ ಯೋಚನೆ ಮಾಡಿ, ಗ್ರಾಮವನ್ನು ಕಟ್ಟಿಸುವಾಗ್ಯೆ, ಯೀ ಬುಕ್ಕರಾಯನು ಶ್ರೀವಿರೂಪಾಕ್ಷಸ್ವಾಮಿಯವರ ತೀರ್ಥಪ್ರಸಾದವಿಲ್ಲದೇ ಭೋಜನವಿಲ್ಲದೆ ದಿನಚೆರಿಯಲ್ಲಿ ದೇವರ ತೀರ್ಥಪ್ರಸಾದಉ ವಿಜಯನಗರದಿಂದ ಕಟ್ಟೆ ಮಾಡಿಶಿ ಯಿರುವ ಮೇರಿಗೆ ಬರುತ್ತಾ ಯಿತ್ತು. ಮಧ್ಯೆ ವಂದು ದಿನಾ ಬಾರದೇ ಹೋದ ಕಾರಣ ರಾಯರು ಮಹಾಚಿಂತಿತರಾಗಿ ಯಿದ್ದಿರುವಲ್ಲಿ, ಶ್ರೀ ವಿರೂಪಾಕ್ಷಸ್ವಾಮಿಯವರು ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ, "ನೀನು ಯೇನು ಕಾರಣ ಚಿಂತಾಕ್ರಾಂತನಾಗಿ ಯಿದ್ದಿಯೇ? ನೀನು ಯಿದ್ದ ಸ್ಥಳದಲ್ಲಿ ನಾವು ಪ್ರತ್ಯಕ್ಷವಾಗುತ್ತೇವೆ"ಯೆಂದು ಅಪ್ಪಣೆ ಕೊಡಲ್ಲಾಗಿ, ಬುಕ್ಕರಾಯರು ಮರುದಿವಸಾ ಪ್ರಾತಃಕಾಲಕೆ ಸ್ನಾನ ಮಾಡಿಕೊಂಡು "ಸ್ವಾಮಿಯು ಹ್ಯಾಗೆ ಪ್ರತ್ಯಕ್ಷವಾಗುತ್ತಾನೋ"ಯಂದು ಯೋಚ್ಸು ವೇಳೆದಲ್ಲಿ, ಯೀ ಬುಕ್ಕರಾಯರು್ರ ಕೂತು ಯಿದ್ದ ಮುಂಭಾಗದಲ್ಲಿ ಶ್ರೀ ಸ್ವಾಮಿಯವರು ತಮ್ಮ ಜಟಾಮುಕುಟದಲ್ಲಿ ಗಂಗಾಸಮೇತವಾಗಿ ಪ್ರಸನ್ನರಾದರಿಂದಾ ಆ ಕ್ಷಣಕೆ ಯೀ ಸ್ವಾಮಿಯವರಿಗೆ ಶಿಲಾಮಯ ದೇವಸ್ಥಾನವನ್ನು ಕಟ್ಟಿಸಿ, ಪಸನ್ನವಿರುಪಾಕ್ಷನೆಂಬ ಹೆಸರು ಯಿಟ್ಟು, ದೇವರಿಗೆ ವಿರೂಪಾಕ್ಷಪುರಾಯೆಂಬ ಗ್ರಾಮ ವುತ್ತರಾ ಬಿಟ್ಟು, ಆರಗಟದ ಗ್ರಾಮವು ದೊಡ್ಡದಾಗಿ ಕಟ್ಟಿಸಿ ಆಗುವುದೂ, ಯೀ ಗ್ರಾಮಕ್ಕೆ ಬುಕಾಬ್ದೆ[>ಬುಕ್ಕಾಂಬುಧಿ]ಯಂಬ ಹೆಸರು ನಿಟ್ಟು, ಯೀ ಗ್ರಾಮದಲ್ಲಿ ಕೆಲವು ಭೂಮಿ ಉತ್ತರಾ ಬಿಟ್ಟು, ಹಳೇ ಅರಗಟದಲ್ಲಿ ಯಿದ್ದು ಚೆನ್ನಕೇಶವದೇವರಿಗೆ ದೇವಸ್ತಾನವನ್ನು ಕಟ್ಟಿಸಿ, ಪಡಿತರ ದೀಪಾರಾಧನೆ ಬಗೆ ಶಿರಗಲ್ಲಪುರದ ಗ್ರಾಮವನ್ನು ಬಿಟ್ಟುಕೊಟ್ಟರು. ಆಮೇಲೆ ಯೀ ಗ್ರಾಮದಲ್ಲಿ ದೊಡ್ಡದಾಗಿ ನಮ್ಮ ಹೆಸರಿಂದಾ ವಂದು ಕೆರೆಯನ್ನು ಕಟ್ಟಿಸುವೆವೆಂದು ತಮ್ಮ ಕಡೆ ಬಸವದಣ್ಣಾಯಕನೆಂಬವನ ಯಿಟ್ಟು, ತಾವು ವಿಜಯನಗರಕ್ಕೆ ತೆರಳಿಹೋದರು. ಅನಂತರದಲ್ಲಿ ಯೀ ಬಸವದಣ್ಣಾಯಕರು ಮಾಡಿದ ವಿವರ:

೧ ಯೀ ಬುಕ್ಕಟ್ಟಿ [>ಬುಕ್ಕಾಂಬುಧಿ] ಗೆ ಉತ್ತರದಿಕ್ಕಿನಲ್ಲು ಕೆರಿ ೧ ಕಟ್ಟಿಶಿ ಯಿದ್ದಾರೆ. ಆ ಕೆರಿಗೆ ಡಣ್ಣಾಯಕಕೆರಿಯಂದು ಹೇಳುತ್ತಾರೆ.

೧ ತಮ್ಮ ಹೆಸರಿನಲ್ಲಿ ವಂದು ಗ್ರಾಮ ದಣ್ಣಾಯಕಪುರಾಯಂಬದಾ ಕಟ್ಟಿಸಿಯಿದ್ದಾರೆ.

---
೧ [>೨]

ಯೀ ಯರಡು ಆದಮೇಲೆ ವಿಜಯನಗರಕೆ ಹೋದರು. ತದನಂತರದಲ್ಲಿ ದೇವರಾಯರು ರಾಜ್ಯಭಾರಾ ಮಾಡುವಾಗ್ಯೆ ತಮ್ಮ ರಾಜ್ಯವನ್ನು ಪರಾಂಬರಿಸೋ ಬಗ್ಗೆ ಈ ದೇಶಕೆ ಬಂದ ಪ್ರಾಕು ಬಲ್ಲಾಳರಾಯನವರ ಕಾಲದಲ್ಲಿ ಪಟ್ಟಣವಾದ ಆಸಂಧಿಯನ್ನು ಪರಾಂಬರಿಸಿ, ಹಿಂದಕೆ ಆದ ವೃತ್ತಾಂತವನ್ನು ಕೇಳಿ ಪುನಹಾ ಆಸಂದಿಯನ್ನು ಜೀರ್ಣೋದ್ಧಾರ ಮಾಡಿಶಿದರು.

ಪೂರ್ವದಲ್ಲಿ ಕೊಣಬಗೊಂಡನಾ ಸಂಹಾರಮಾಡಿದ ಶ್ರೀ ಅಮ್ಮನವರ್ರು ಅಂತರಿಸಿ ಬಂದು ಯೀಗಾ ಅವತಾರಕಟ[>ಕಟ್ಟೆ] ಯಿರುವ ಬಳಿ ನಿಂತು. ಕೆಲವು ಕಾಲಾನಂತರದ ಮೇಲೆ ಯೀ ಅಮ್ಮನವರ ರೂಪಾ ನಿಲ್ಲಿಶಿ ಯಿರುವ ಸ್ಥಳದಲ್ಲಿ ಹುತ್ತು ಬೆಳೆದು ಯಿತ್ತು. ಯೀ ದೇವರಾಯರವರು ಸೈಯಿ[>ಶಯ]ನಸ್ತರಾಗಿ ಯಿರುವ ಕಾಲದಲ್ಲಿ ಶ್ರೀ ಅಮ್ಮಾನವರು ಸ್ವಪ್ನದಲ್ಲಿ ಪ್ರತ್ಯಕ್ಷವಾಗಿ, "ತಾವು ಬಂದು ಹಿಂದೆ ನಡೆದ ಚರ್ಯೆ ಯಾವತ್ತು ಹೇಳು[>ಳಿ]ತ್ತಾನು ಯಿರುವ ಸ್ತಳದಲ್ಲಿ ಹುತ್ತ ಬೆಳೆದು, ಆ ಹುತ್ತದಲ್ಲಿ ಮೂರ್ತಿವತ್ತಾಗಿ ಯಿದ್ದೇವೆ. ಯಿದನ್ನು ಮೂರ್ತಿಯನ್ನು ತಗಿಶಿ ಪ್ರತಿಷ್ಠೆ ಮಾಡ್ಸಿರದು"ಯಂದು ಅಪ್ಪಣೆ ಕೊಟ್ಟದರಿಂದಾ, ಆ ಮೇರಿಗೆ ದೇವರಾಯರ್ರು ಯೀ ಹುತ್ತದಲ್ಲಿ ಯಿದ್ದು ಅಮ್ಮನವರ ಮೂರ್ತಿಯನ್ನು ತೆಗಶಿ ಪ್ರತಿಷ್ಠೆಮಾಡಿಶಿ, ದೇವಸ್ಥಾನವನ್ನು ಕಟ್ಟಿಶಿ ಅಮ್ಮನವರಿಗೆ ಅಂತಾರುಗಟಿ ಅಮ್ಮನವರು ಯಂಬುದಾಗಿ ಹೆಸರನಿಟ್ಟು, ಯೀ ದೇವರ ಹೆಸರಲ್ಲು ಅಂತಾರಗಟೆಯಂಬುದಾಗಿ ವಂದು ಗ್ರಾಮವ ಕಟ್ಟಿಸಿ, ಯೀ ದೇವರಿಗೆ ದೀಪರಥನೆ ಬಗೆ ಒಂದು ಹುಲ್ಲಿ ಗ್ರಾಮ, ಸಂಕ್ಲಾಪುರ ಗ್ರಾಮ ಈ ಮೇರಿಗೆ ಯರಡು ಗ್ರಾಮವನ್ನು ಬಿಟ್ಟುಕೊಟ್ಟರು. ಯಿದು ಅಲ್ಲದೇ ಬ್ರಾಹ್ಮಣರಿಗೆ ಅಗ್ರಹಾರಗಳನು ಕೊಟ್ಟು ಯಿರುವ ವಿವರ:

ಶಾಲಿವಾಹನ ಶಕವರುಷ ೧೦೩೦ನೆ ಸರ್ವಧಾರಿ ಸಂ।ಲ್ಲು ದೇವರಾಯರು ಆಸಂಧಿ ವಳಿತವಾದ ಬಾಸುರು, ಚಿಕ್ಕಬಾಸುರು ಗ್ರಾಮವನ್ನು ಶ್ರೀ[>ತ್ರಿ]ವೇದಿ ವಾಮನಭಟ್ಟರಿಗೆ ಕೊಟ್ಟು ಯಿದ್ದಾರೆ.

೧ ಬುಕ್ಕಾಬ್ಧಿಗ್ರಾಮದಲ್ಲು ಬ್ರಾಹ್ಮರಿಗೆ ಗ, ೧೭೦೯೦ ವರಾಹದ ಸ್ವಾಸ್ತಿಯನ್ನು ಬಿಟ್ಟುಕೊಟ್ಟುದು; ಯಿದು ವರಿಗು ನಡದು ಬರುತಾ ಯಿದೆ.

೧ ಮುದಿಗೆರಿ ಗ್ರಾಮವನ್ನು ಬ್ರಾಹ್ಮರಿಗೆ ಅಗ್ರಹಾರವಾಗಿ ಕೊಟ್ಟು ಯಿದ್ದಾರೆ.

೧ ಕರುಹಾಲ್ಲು ಗ್ರಾಮವನ್ನು ಶಾಲಿವಾಹನ ಶಕ ವರುಷಾ ೧೩೭೦ನೇ ವಿಭವ ಸಂವತ್ಸರ, ರಂಗಾಭಟ್ಟರಿಗೆ ತ್ರಿಯಂಬಕಮಣಿಪತಿಯವರು

ತಾಂಬ್ರದ ಶಾಸನವನ್ನು ಬರಶಿಕೊಟ್ಟರು. ಯಿದುವರೆಗೂ ನಡದು ಬರುತಾ ಯಿದೆ.

ಯಿತ್ತಲಾಗಿ ಸಾಳ್ವ ನರಸಿಂಗರಾಯರ ಆಳಿಕೆಯಲಿ ಶಾಲಿವಾಹನ ಶಕ ವರುಷ ೧೪೨೬ನೆ ರಕ್ತಾಕ್ಷಿ ಸಂ।ರದಲ್ಲಿ ಬಂಕನಗಟಗ್ರಾಮನು ಚಿಕ್ಕಣಾದ್ಯರಿಗೆ ಸವಿನಾಣ್ಯೆ[>ಸವಿನಯ] ದತಿ ದಾನಧಾರಾ ಪೂರ್ವಕವಾಗಿ ಕೊಟ್ಟರು. ಯೀ ವರಿಗೂ ನಡದು ಬರುತ್ತಾ ಯಿದೆ. ಯೀ ನರಸಿಂಗರಾಯರ ಕಾಲದಲ್ಲು ಭೂಪತಿ ರಾಮರಾಯರು ಶಿವನೇರಿಗ್ರಾಮವು ಪ್ರಾಕು ಸಣ್ಣದಾಗಿ ಯಿದ್ದದರಿಂದ ದೊಡ್ಡದಾಗಿ ಗ್ರಾಮವನ್ನು ಕಟ್ಟಿ ಕೋಟೆ ಕೊತ್ತಲು ಮುಂತಾಗಿ ಮಾಡಿದನ್ನು, ರಾಯರು ಯೀಗಾ ರಾಯರಪಾದ ಕಣಿವೆಯಿರುವ ಬಳಿಗೆ ಬಂದು ನಿಂತು ನೋಡಿದಲ್ಲಿ, ಯೀ ಶಿವನೇರಿಯಂಬ ಗ್ರಾಮಲು ಮುಂದಕ್ಕೆ

ಮೂರು ಹೆಜ್ಜೆ ಹೋದದ್ದರಿಂದಾ ಆಗಾ 'ನಡೆ ಶಿವನೆ'ಯಂಬದಾಗಿ ಹೆಸರನಿಟ್ಟು ರಾಯರು ಅಲ್ಲಿ ತಮ್ಮ ಯರಡು ಪಾದವನ್ನು ಶಿಲೆಯಲ್ಲಿ ಕಡಶಿಯಿಟ್ಟು ತಿರುಗಿ ಹಿಂದಕೆ ತಮ್ಮ ಪಟ್ಟಣಕೆ ಹೋದರು. ಆದಾರಭ್ಯಾ ಯೀ ಕಣಿವೆಯು ರಾಯರಪಾದ ಕಣಿವೆಯನ್ನೆನ್ನಿಸಿಕೊಳ್ಳುತ್ತಾಯಿದೆ.

೫೧. ಆಮೇಲೆ ರಾಮರಾಯರ ಕಾಲದಲ್ಲಿ ಶಕವರುಷ ೧೪೪೦ ರಕ್ತಾಕ್ಷಿ ಸಂ|ಲ್ಲು ರಾಣಾ[ಜ+]ಗದೇವಯರಿಗೆ ದಯಪಾಲಿಸಿದ್ದರಿಂದ ಯಿವರು ಮೊದಲು ಚೆನ್ನಪಟ್ಟದಲ್ಲಿದ್ದುಕೊಂಡು ಗಡಿ ೪೬ ಗಡಿ ಶೀಮೆಯನ್ನು ಆಳಿದು, ಶಕವರುಷ ಸಿದ್ಧಾರ್ಥಿ ಸಂ| ಆರಭ್ಯಾ ಶಕವರುಷ ೧೫೩೧ನೆ ಸವುಮ್ಯ ಸಂ|ವರಿಗೆ ಆಳಿದ ವರುಷಾ ೫೧.

೪೭. ಯಿವರು ಆಳುವಾಗೆ ಮೊಗಲ ಕಡೆ ಯಿ ಶಿರ್‍ರೆದ ಸುಭೆ ಮಾಡಿಕೊಂಡು ಬಂದ ರಣದುಲ್ಲಾಖಾನರು ಯೀ ಶೀಮೆಯನ್ನು ಠಾಣೆ ಹಾಕಿಕೊಂಡುದು, ಶಕವರುಷ ೧೫೩೨ನೆ ಸಾಧಾರಣ ಸಂ|ದಲ್ಲು ತೆಗದುಕೊಂಡುದು, ಶಕವರುಷ ೧೫೭೮ ದುರ್ಮುಖಿ ಸಂ| ವರಿಗೆ ಆಳಿದ ವರುಷಾ ೪೭ಕೆ ರಣದುಲ್ಲಾಖಾನ ಮುಂತಾದವರು ಬಸವಾಪಟ್ಟಣದಲ್ಲಿ ನಿಂತು ರಾಜ್ಯವಾಳಿದ ವಿವರ:

೧. ರಣದುಲ್ಲಾಖಾನ, ೧ ಆಗ್ರಾಖಾನ, ೧. ಮಿರ್ಜಾನಬಿ

೩

ಯೀ ಮೂರು ಮಂದಿಯು ರಾಜ್ಯವಾಳುವಾಗ್ಯೆ ಕೋಟೆ . . . . ರಣದುಲ್ಲಾಖಾನರ ದಿವಸದಲ್ಲು ಶಿವನೇರಿ ಸ್ಥಳದ ಮೂರು ಗ್ರಾಮವನ್ನು ಶ್ರೀಂಗೇರಿ, ಶ್ರೀಕೂಡಲ್ಲಿ . . . . ಸೇವ್ಯ ಬಗ್ಗೆ . . . . ಆದವಾನಿ ಸನ್ನದು . . . .

೧. ತದನಂತರದಲ್ಲಿ ಮೀರ್ಜಾನವಾಬ ಯಿವರ ನಾ . . . . ನು ಯಿವರ ಕಡೆ ಆಚಿರಾಬ್ರಾನಲ್ಲಾಳೊ[>ಅಜಿಮಖಾನುಲ್ಲಾಳು] ಮೊಬವರಿ ಶಿರ್ಯದಿಂದಾ ಬಸವಾಪಟ್ಟಣಕೆ ಹೋಗುವ ಬಗ್ಗೆ ಬರುತ್ತ ಮಧ್ಯಮಾರ್ಗದಲ್ಲಿ ಕರುಹಾಲ್ಲು ಗ್ರಾಮದ ಬಳಿಯು ಬಂದು ಉಳಿದುಕೊಂಡಲ್ಲಿ, ಯಿವರ ಸವಾರಿ ಸಂಗಡಾ ಬಂದು ನಾಯಿ ೨ ಗಿಡದಲ್ಲಿ ಸಂಚರಿಸುವಾಗ ಗಿಡದಿಂದಾ ಯರಡು ಮೊಲಾವು ಹೊರಟು ಬಂದು, ಯೀ ನಾಯಿಗಳನ್ನು ಅಟ್ಟಿಕೊಂಡು ಬಂದದರಿಂದಾ ಯೀ ಆಶ್ಚರ್ಯವನ್ನು ಯೀ ಅಜಿಮಖಾನಲ್ಲಾಳುಯವರು ಕಂಡು, ಯೀ ಸ್ಥಳವು ಗಂಡುಭೂಮಿ, ಯಿಲ್ಲಿ ಕೋಟೆಯನ್ನು ಕಟ್ಟಿಸಬೇಕೆಂಬುದಾಗಿ ಮನಶಿನಲ್ಲಿ ಯೋಚಿಸಿಕೊಂಡು, ಯಿಲ್ಲಿಂದಾ ಬಸವಾಪಟ್ಟಣಕೆ ಹೋಗಿ, ತಮ್ಮ ಧಣಿಯ ಮಿರ್ಜಾನಬಿಯವರಿಗೆ ಯೀ ಪೂರ್ವವೃತ್ತಾಂತವನ್ನು ವಿಸ್ತಾರವಾಗಿ ಶೃತಮಾಡಲಾಗಿ, ಅವರು ಆಶ್ಚರ್ಯಪಟ್ಟು ಕೋಟೆಯನ್ನು ಕಟ್ಟುವುದರಿಂದ, ಯೀ ಅಚಿ[>ಅಜಿ]ಮಖಾನಲ್ಲಾಳು ಯಿವರು ಬಂದು ಯೀ ಕಿ[>ಕ]ರುಹಾಲ್ಲು ಗ್ರಾಮವನ್ನು ಶಾಲಿವಾಹನ ಶಕ ೧೫೬೦ನೆಯ ಬಹುಧಾನ್ಯ ಸಂ|ದಲ್ಲಿ ಕೋಟೆ ಕಟ್ಟುವ ಬಗ್ಗೆ ಪ್ರಾರಂಭ ಮಾಡಿಶಿ ಕೋಟೆ ಕಟ್ಟಿಸಿ, ಆ ಕೋಟೆ ಅಜಂಪುರಾಯಂಬ ಹೆಸರು ಯಿಟ್ಟು ಪೇಟೆ ಸಹಾ ಕಟ್ಟಿಶಿ, ಯೀ ಗ್ರಾಮದ ಪಶ್ಚಿಮಕೆ ಯಿದ್ದಾ ಸಣ್ಣಕೆರೆಯನ್ನು ದೊಡ್ಡದಾಗಿ ಕಟ್ಟಿಶಿದರು. ಆಮೇಲೆ ಹಣ್ಣೆ ಯಿರುವ ಬಳಿ ಮಗುಳೀಕಲ್ಲು ಬಾವಾಬುಡನಗಿರಿಯಿಂದಾ ಬಂದುದಂನ್ನು ಹಾಸಕರನ್ನು ವಂದು ತುರಿ[>ತಾಕಿ]ಯಾ ಕಟ್ಟಿಕೊಂಡು ಯಿರುತಾ ಯಿದ್ದ, ಅಜಂಪುರದ ಕಿಲ್ಲೆ ಕಟ್ಟುವುದು [ಮ+] ಗುಳೀಕಲ್ಲುಯಿಂದಾ

ಬಂದು, ಯಿಲ್ಲಿ ವಂದು ತಾಕಿಯೂ ಕಟ್ಟಿಕೊಂಡು ಯಿರುತ್ತ ಯಿದ್ದು, ಕೆಲವು ದಿನದ ಮೇಲೆ ಮೃತನಾದನು. ಯೀ ತಾಕಿಯಾದಲ್ಲಿಯೇ ಗೋರಿ ಮಾಡಿ ಯಿದ್ದಾರೆ.

೩

೩೨. ಆ ಕೋಟೆ ತರಿಕೆರಿ ಸ್ತಳದ ಅರಸು ಸರ್ಜಾ ಹಣಮಪ್ಪನಾಯಕನು ಶಕವರುಷ . . . . ಹೇವಿಳಂಬಿ ಸಂವತ್ಸರದಲ್ಲು ಯೀ ಅಜಂಪುರದ ಕಿಲ್ಲೆಯನ್ನು ಟಾಣೆ ಹಾಕಿಕೊಂಡು ಶಕವರುಷ ೧೬೧೦ನೇ ವಿಭವ ಸಂ।ವರಿಗೆ ಆಳಿದ ವರುಷಾ ೩೨.

೧ ಸರ್ಜಾ ಹಣಮಪ್ಪನಾಯಕ

೧ ನಿತ್ಯಮದುವಣಿಗ ರಾಮಪ್ಪನಾಯಕ

೧ ಪಟ್ಟಾಭಿರಾಮಪ್ಪನಾಯಕ

೩

ಯಿವರ ಆಳಿಕೆಲಿ ಮಾಡಿದ ಧರ್ಮಗಳು: ೨ ಬ್ರಾಹ್ಮರಿಗೆ ಕೊಟ್ಟ ಅಗ್ರಹಾರಗಳು:

೧ ಶಾಲಿವಾಹನ ಶಕ ೧೫ಲಲನೆ ಶೋಭಕೃತ ಸಂ।ದಲ್ಲು ಸರ್ಜಾ ಹಣುಮಪ್ಪನಾಯಕರು [ಮ+]ಗಳೀ ಗ್ರಾಮವನ್ನು ಧಾರಾಪೂರ್ವಕವಾಗಿ ಕೊಟ್ಟರು. ಯಿದಕ ತಾಂಬ್ರಶಾಸನಯಿದೆ.

೧ ಶಾಲಿವಾಹನ ಶಕವರುಷ ೧೬ . . . . ರ ದುಂದುಭಿ ಸಂ।ಲ್ಲು ವೈಶಾಖ ಶು ಶಿಲಾ[>ಸರ್ಜಾ] ರಾಮಪ್ಪನಾಯಕರು . . . ಪುರದ ಗ್ರಾಮವನ್ನು ಕೊಟ್ಟರು. ತಾಂಬ್ರ ಶಾಸನದ ದಾಖಲು ಅದೆ. ಯೀ ವರಿಗೆ ನಡದು ಬರುತ್ತಾ ಯಿದೆ.

೨

೧ ಮೊಗಲರ ಕಾಲದಲ್ಲು ಶ್ರಿಂಗೇರಿ ಶ್ರೀಕೂಡಲಿ ಮಟಕೆ ಶಿವನೆ ಸ್ಥಳದ . . . . ದು ಗ್ರಾಮವನ್ನು ಬರಶಿಕೊಟ್ಟು ಯಿದ್ದುದಕೆ ಹಾಲಿ ಪಟ್ಟಾಭಿರಾಮಪ್ಪನಾಯಕರು ನಿರೂಪವನ್ನು ಬರಶಿಕೊಟ್ಟರು. ಯೀ ಗ್ರಾಮ ಕುಂಪಣಿ ಸರಕಾರ ಆದಮಲ್ಲು [>ಮೇಲು] ವಂದು ವರುಷಾ ನಡೆದು ಬಂತು.

೧ ಪ್ರಾಕು ಬಲ್ಲಾಳ ವಿಷ್ಣುವರ್ಧನರಾಯರು ಭಾರ್ಗವಪುರದಲ್ಲು ಕಟ್ಟಿಸಿ ಯಿರುವ ಶ್ರೀ ನರಸಿಂಹದೇವರ ದೇವಸ್ಥಾನದ ಗಾರ್ರೆ ಯಾವತ್ತು ವಡದು ಹೋಗಿ ಯಿದ್ದದರಿಂದಾ, ಸರ್ಜಾ ಹಣುಮಪ್ಪನಾಯಕರು ದೇವಸ್ಥಾನಕೆ ಗಾರ್ರಿಯನ್ನು ಹಾಕಿಸಿ ಮುಂದಗಡೆಯಲ್ಲು ಸೂಳಿ ಮಂಟಪ ವೊಂಬತ್ತು ಅಂಕಣ ಶಿಲಾಮಯವಾಗಿ ಕಟ್ಟಿಶಿ ಯಿದ್ದಾರೆ.

೪

೩೨. ಪುನಹಾ ಶಿರ್ಯೆದ ಶುಭ ಮಾಡಿಕೊಂದು[>ಡು] ಬಂದ ಕಾಶೀಮಖಾನರು ಬಂದು ಯೀ ಕೋಟೆಯನ್ನು ಟಾಣೆ ಮಾಡಿಕೊಂಡು, ಶಾಲಿವಾಹನ ಶಕವರುಷ ೧೬೧೧ನೆಯ ಶುಕ್ಲ ಸಂ|ಲ್ಲು ತೆಗೆದುಕೊಂಡು ಲಾಗಾಯಿತು ಶಕವರುಷ ೧೬೨೪ನೆ ಶಾರ್ವರಿ ಸಂ|ವರಿಗೆ ಆಳಿದ ವರುಷಾ ೩೨ಕೆ ಜನಾ ೭ಕೆ.

ಯಿವರು ಕೊಟ್ಟ ಅಗ್ರಹಾರಗಳು: ೨ ದರಗಾಹಾ ಕುಲ್ಲಿಖಾನರು

೧ ಯೆಕೆಗೊಂಧಿ ಗ್ರಾಮ

೧ ಹಳೆ ಬಾಕ್ಕಿಕೆರಿ

---

೨ ಯೆರಡು ಗ್ರಾಮವನ್ನು ನರಸಿಂಹ್ಮರಾಯರು ಕಾಶೀಮಟಾ . . . . ಬರಿಯವರಿಗೆ ಕೊಟ್ಟರು.

೧ ನಭಿಖಾನರು ಟಕ್ಷೆಮ ಸಾಗರದಗ್ರಾಮ ೧ನ್ನು ತ್ರಿವಿಕ್ರಮಾಚಾರ್ಯರು ಕಲ್ಲುಯಿರಣೆ ನಾರಾಣಚಾರ್ಯರಿಗೆ ಸಹಾ ಕೊಟ್ಟರು.

೩ ಯೀ ಗ್ರಾಮಗಳು ಯಿ ವರಿಗು ನಡಿದು ಬರುತ್ತಯಿದೆ.

೩ ಪುನಹಾ ತರಿಕೆರಿ ಅರಸು ಹಣಮಪ್ಪನಾಯಕರು ಶಕವರುಷ ೧೬೪೨ನೇ ಪ್ಲವಂಗ ಸಂ|ದಲ್ಲು ಯೀ ಶೀಮೆಯನ್ನು ಠಾಣೆ ಹಾಕಿಕೊಂಡು ಶಕವರುಷ ೧೬೪೫ ಶುಭಕೃತು ಸಂ|ವರಿಗೆ ಆಳಿದ ವರುಷಾ ೩.

೧. ಆಮೇಲೆ ಚಿತ್ರದುರ್ಗದ ಅರಸು ಮಧಕೆರಿನಾಯಕನು ಬಂದು ಶಕವರುಷ ೧೬೪೬ನೇ ಕ್ರೋಧಿ ಸಂ|ದಲ್ಲಿ ಶೀಮೆಯನ್ನು ಕಟ್ಟಿಕೊಂಡು ರಾಯರಪಾದದ ಕಣಿವೆ ಆಚೆಗೆ ಯಿರುವ ಗ್ರಾಮಗಳನ್ನು ತನ್ನ ತಾಲ್ಲೂಕು ಹೊಳಲಕೆರಿಯ ಶೀಮೆಗೆ ಸೇರಿಸಿಕೊಂಡುದು ವಿವರ:

೧ ತುಪ್ಪದಹಳ್ಳಿ ಗ್ರಾಮ	೧ ತಾಳಿಕಟಗ್ರಾಮ
೧ ಶಿಂಗೆನಹಳ್ಳಿ ಗ್ರಾಮ	೧ ಕಣಿಮೆಹಳಿ ಗ್ರಾಮ
೧ ಹೊಸಹಳಿ ಗ್ರಾಮ	೦ ಧಪ

೫

ಯೀ ಮೇರಿಗೆ ಯಿವನ್ನು ಸಂವಸ್ಥಾನಕೆ ಶೇರಿಸಿಕೊಂಡನು.* ಆಜಂಪುರದಲ್ಲು ಠಾಣೆಯಿಂದಾ ಹೊಬಳಿದಾರ ಶಿದ್ದಪ್ಪನಾಯಕ ಯಿವನ ವಳಗೆ

೧ ಸೋಮೇಶ್ವರ ದೇವರು

೧ ವೀರಬದ್ರದೇವರು

---

* ಇಲ್ಲಿ ಇಕ್ಕೇರಿ ಸಂಸ್ಥಾನದವರು ೩೮ ವರ್ಷ ಆಳಿದ ವಿವರ ಕೈಬಿಟ್ಟು ಹೋದಂತಿದೆ(ಸಂ.)

೨ ಯೀ ಯರಡು ದೇವಸ್ಥಾನಗಳನ್ನು ಕಟ್ಟಿಶಿ ಯಿದ್ದಾರೆ ಕಲಮು॥

೧ ಹಳದಬಳ ಚಿನವಾರ ದೇವರಸೈಯನು ರಾಮೇಶ್ವರಲಿಂಗವನ್ನು ಪ್ರತಿಷ್ಟೆ ಮಾಡಿದನು.

---

೪ [>೩]

ಯಿವರು ಆಳಿದ ವರುಷ ವಳಗೆ

೧ ಅಂಗೀರಸ ಸಂ।ದಲ್ಲು ಶ್ರೀಮಂತ ನಾರಾಯಣ ಫೌಜು ಸಮೇತವಾಗಿ ಯೀ ರಾಜ್ಯಕೆ ಬಂದು ಯಿದ್ದರು.

೧ ಬಹುಧಾನ್ಯ ಸಂ।ಲ್ಲು ಗೋಪಾಲರಾಯರು ತಮ್ಮ ಫೌಜು ಸಮೇತವಾಗಿ ಯೀ ರಾಜ್ಯಕೆ ಬಂದು ಯಿದ್ದರು.

೨

೩೬ ಯೀಚೆಗೆ ಶಾಲಿವಾಹನ ಶಕ ವರುಷ ೧೬೮೫ನೆ ಸಭಾನು ಸಂ । . . . . ಶಕವರುಷ ೧೭೨೦ ಕಾಳಯುಕ್ತಿ ಸಂ।ವರಿಗೆ ವರುಷಾ ೩೮[>೩೬] ಮೈಸೂರು ಸಂವಸ್ಥಾನದ ಅರಸುಗಳ ಕಡೆ ನವಾಬ ಹೈದರಲಿಖಾನ ಬಾಹದರವರು ಚಿತ್ರಭಾನು ಸಂ।ದಲ್ಲು ಬಂದು ಆಜಂಪುರ ಯೀ ಶೀಮೆ ಯಾವತ್ತು ಠಾಣೆ ಹಾಕಿಕೊಂಡು ರಾಜ್ಯಭಾರಮಾಡಿ, ಆ ತರುವಾಯ ಯಿವರ ಮಗ ಟೀಪುಸುಲತಾನ ಸಹಾ ಬಹಾದೂರ ವರುಷಾ ೩೬ಕೆ ಯಿದ್ದ ನಾಡುಗಳು–೧೨.

ಪ್ರಾಕಾರಭ್ಯ ಯಿದ್ದನಾಡು ಸದರಿ ಬರದ ಮೇರಿಗೆ ಯಿತ್ತಲಾಗಿ ತಾರಣ ಸಂ।ಲ್ಲು ದೊಡ್ಡನವಾಬರು ಯೀ ಶೀಮೆಯು ಯಡಬಲದ ಗಿಡಗಳು ಯಾವತ್ತು ಕಟ್ಟಿಕೊಂಡು ಯೀ ಆಜಂಪುರಕೆ ಸೇರಿಸಿಕೊಂಡು ನಾಡು ತರಿಕೆರಿ ಶೀಮೆ ವಳಿತವಾದ ವುಬ್ರಾಣಿ ನಾಡು – ೧೩

ಯೀ ಮೇರಿಗೆ ಯಿವರು ರಾಜ್ಯಪಾಲನೆ ಮಾಡುವಲ್ಲಿ ವಿಕೃತಿ ಸಂ।ಲ್ಲು ತ್ರಿಂಬಕ . . . . ಣ ನವರ ದಂಡು ಬಂದು, ವಂದು ವರುಷಾ ಶೀಮೆ ಆವಾಂತ್ರವಾಗಿ ಯಿತ್ತು. ಆಮೇಲೆ ಪುನಹಾ ದೊಡ್ಡನವಾಬರ ಕಟಿಕೊಂಡು ಆಳಿದರು, ನವಾಬರು ವರುಷ ೨೦, ಟೀಪುಸುಲ್ತಾನ ಪಾದಶಹಾ ೧೬ = ೩೬ ವರುಷ.

೬[>೭] ಯೀಚೆಗೆ ಶಾಲಿವಾಹನ ಶಕವರುಷ ೧೭೨೧ನೆ ಶಿದ್ದಾರ್ಥಿ ಸಂ। ಚಯಿತ್ರ ಮಾಸದಲ್ಲಿ ಸರಕರ ಕುಂಪಣಿ ಠಾಣೆಯಾಗಿ ಮೈಸೂರ ಸಂವಸ್ಥಾನದ ಅರಸಂಗಳು ಕೃಷ್ಣರಾಜವಡೇರು ಆಳುತ್ತಾರೆ. ಶಕ ವರುಷ ೧೭೨೭ ಕ್ರೋಧನ ಸಂ।ಲ್ಲು ವರುಷ.

೬೧೬

ಯೀ ಮೇರಿಗೆ ನಡದ ಕೈಫಿಯತುಯಂಬದಾಗಿ ಜಾ. ಮಜಕುರು ಅಮಲ್ದಾರು ರಾಗವೇಂದ್ರರಾಯರು . . . . ನದ ನಾಡಿದ ಸಂಕ್ರಮಣ, ರಾಮ್ಮೈಯ್ಯಗೆ ಸಹಾ ತಾಕೀದಿ ಮಾಡ್ಸಿ ಬರಸಿಕೊಟ್ಟರು.

❖❖

೧೨
ಕೊಕ್ಕಸಮುದ್ರದ ಕೈಫಿಯತ್ತು, ತಾಲೂಕ ಯಗಟಿ

ಮೆಕೆಂಝಿ ಸಂಪುಟ : ೧೬೧

ಹೊ[>ಫ]ನಗಿರಿಯಂಬ ರಂಗಸ್ವಾಮಿಗಿರಯಲ್ಲಿ ಪೂರ್ವದಲ್ಲಿ ರಾಮಯೋಗೀಶ್ವರ ಯಂಬವರು ತಪಸ್ಸು ಮಾಡಿಕೊಂಡು ಯಿರುತ್ತಾ ಯಿದ್ದಲ್ಲಿ, ಯೀ ರಂಗನಾಥಸ್ವಾಮಿ ಲಕ್ಷ್ಮಿದೇವಿ ಸಹ ಲಿಂಗಾಕಾರದಲ್ಲಿ ಪ್ರಸನ್ನರಾಗಿದ್ದರಿಂದ, ಯೀ ಯೋಗೀಶ್ವರದೇವಸ್ಥಾನವನ್ನು ಕಟ್ಟಿಸಿದ್ದರು. ಕೆಲವು ಕಾಲದ ಮೇಲೆ ಯಿವರು ಮುಕ್ತರಾದರು. ಮೇಲೆ ಯಿವರ ಶಿಷ್ಯರು ಯೀ ಗಿರಿಯಲ್ಲಿ ದೇವರ ಸನ್ನಿಧಾನದಲ್ಲಿ ತಪಸ್ಸು ಮಾಡಿಕೊಂಡು ಯಿರಲಾಗಿ, ಯೀ ಗುಡ್ಡಕೆ ಕಿರಾತಕರು ಬಂದು ಸೇರಿಕೊಂಡು ಹಾದಿಮಾರ್ಗಗಳಲ್ಲಿ ತಿರುಗುವ ಜನರಿಗೆ ಉಪದ್ರವ ಕೊಡುತ್ತ ಯಿದ್ದದರಿಂದ, ಯೀ ತಪಸ್ವಿಗಳು "ನಮಗೆ ಯಿದು ಮಹಾ ಪುಣ್ಯಸ್ಥಳ, ನೀವು ಯೀ ಮೇರಿಗೆ ಹಾದಿ ಮಾರ್ಗದಲ್ಲಿ ತಿರುಗುವ ಜನರಿಗೆ ಉಪದ್ರವಗಳ ಮಾಡುತ ಆದ್ಯಾನಯದಲ್ಲಿ ನಡೆಯುವಂತಾದು ಯುಕ್ತವಲ್ಲ"ಯೆಂಬದಾಗಿ ಹೇಳಿದರಿಂದ ಯೀ ಕಿರಾತಕರು ತಪಸ್ವಿಗಳು ಹೇಳಿದಂತೆ ಮಾತು ಕೇಳಿ, "ತಾವು ಅಲ್ಲಿ ಯೀ ಮೇರಿಗೆ ಜನರಿಗೆ ವುಪದ್ರವ ಆಗುವ ಕೆಲಸ ಮಾಡುವದಿಲ್ಲ. ಯೀ ವರಿಗೆ ನಾವು ಮಾಡಿದ ಪಾಪ ಪರಿಹಾರವೇನು?"– ಯಂಬುದಾಗಿ ಕೇಳಿಕೊಂಡಲ್ಲಿ ಯಿವರು ಅಪ್ಪಣೆ ಕೊಟ್ಟದ್ದು "ಯೀ ಗುಡ್ಡದ ಕೆರಿಗೆ ವಂದು ಕಟ್ಟೆ ಕಟ್ಟಿಸಿ, ನೀರು ನಿಂತು ಜನರಿಗೆ ದನಕರುಗಳಿಗೆ ಸಹಾ ಉಪಯೋಗಕೆ ಬಂದರೆ ನಿಮ್ಮ ಪಾಪ ಪರಿಹಾರವಾಗುತ್ತಯಿದೆ"ಯಂದು ಅಪ್ಪಣೆ ಕೊಟ್ಟು, "ನಾವು ಯೀ ಕಟ್ಟೆ ಕಟ್ಟುವ ಕೆಲಸವನ್ನು ಮಾಡುತ್ತೇವೆ. . . . . . ಮಳಲನ್ನು ಅಭಿಮಂತ್ರಿಸಿ ಕೊಡುತ್ತೇವೆ. ಯೀ ಮಳಲನ್ನು ಕಟ್ಟೆ ಯೇರಿ ನಿಲ್ಲುವ ಬಳಿಗೆ ಮಳಲು ಸುರಿದು, ಆ ನಿಮ್ಮ ಕೈಯಲ್ಲಿ ಆದಂತೆ ಕಟ್ಟೆ ಕಟ್ಟಸದರೆ, ಮುಂದೆ ಯಿ ಕಟ್ಟೆಯು ವೃದ್ಧಿಯಾಗುತ್ತ ಯಿದೆ"ಯೆಂದು ಮಳಲು ಅಭಿಮಂತ್ರಿಸಿ ಕೊಟ್ಟದ್ದರಿಂದ ಯೀ ಕಿರಾತಕರು ಕಟ್ಟೆ ಕಟ್ಟುವದಕೆ ಪ್ರಾರಂಭ ಮಾಡುವದಕ್ಕೆ ಯೀ ಕಿರಾತಕರ ಕೈಯಲ್ಲಿ ದ್ರವ್ಯಾನುಕೂಲವಿಲ್ಲದ್ದರಿಂದ, ಕೆಲಸ ಸಾಂಗವಾಗಿ ಆಗಬೇಕೆಂದು ತಮ್ಮಲ್ಲಿ ಯಿದ್ದ ಹಣವನ್ನೂ ತೆಗೆದುಕೊಂಡು ನರಗುಂದದ [>ನಿಲವತಿ] ಪಟ್ಟಣಕ್ಕೆ ಹೋಗಿ, ಅಲ್ಲಿ ವಬ್ಬ ಸಾಹುಕಾರನಲ್ಲಿ "ನಾವು ವಂದು ಧರ್ಮದ ಕೆಲಸಕೆ ವಂದು ಕಟ್ಟೆ ಕಟ್ಟಿಸುತ್ತೇವೆ. ತಾವು ಹಣಾ

ಕೊಟ್ಟಲ್ಲಿ ನಿಮ್ಮ ಹಣಾ, ಬಡ್ಡಿ ಸಹ ಕೂಡಲೇ ತಂದು ಕೊಡುತ್ತೇವೆ, ಆ ಪರಿಯಂತ್ರ ನಮ್ಮ ನಾಯಿಯನ್ನು ಅಡವು ಮಾಡುತ್ತೇವೆ"ಯೆಂಬುದಾಗಿ ಯೀ ಕಿರಾತರು ಹೇಳಿಕೊಂಡುದರಿಂದಾ, ಅದೇ ಮೇರಿಗೆ ಯಿವರ ಮಾತಿನ ಮೇಲೆ ಯಿವರು ಕೊಟ್ಟಂಥಾ ನಾಯಿಯನ್ನು ಯಿಟ್ಟುಕೊಂಡು, ನಿಮಗೆ ಬೇಕಾದ ಹಣ ಕೊಟ್ಟವರ್ರು ಕೂಲಿಯೆಂದು ಹಾಶ್ಯಾ ಮಾಡಿದಲ್ಲಿ, "ಯೀ ನಾಯಿ ಗುಣಗಳು ನಿಮಗೆ ತಿಳದು ಯಿಲ್ಲಾ. ಪರೀಕ್ಷೆಮಾಡಿದಲ್ಲಿ ಯಿದರ ಗುಣಾತಿಶಯುಗಳು ನಿಮಗೆ ತಿಳಿಯುತ್ತಿತ್ತು"ಯಂಬದಾಗಿ ಹೇಳಿದರಿಂದ ಸಾವಕಾರರು ನಾಯಿಯನ್ನು ಯಿಟ್ಟುಕೊಂಡು, ಬೇಕಾದಷ್ಟು ದ್ರವ್ಯವನ್ನು ಕೊಟ್ಟಂತಾದು ಯೀ ಕಿರಾತಕರು ತೆಗೆದುಕೊಂಡು ಬಂದು, ಕಟ್ಟೆ ಕೆಲಸಾ ಆಗುಮಾಡಿಸಿದರು.

ಆ ವರ್ತಕನು ಪಟ್ನದ ವ್ಯಾಪಾರಕ ಹೋಗುವಾಗ ಮನೆಯಲ್ಲಿ ತನ್ನ ಹೆಂಡತಿಗೆ ಹೇಳಿ "ನಾಯಿಗೆ ಅನ್ನ ಹಾಕಿ ಅರಿಕೆ[>ಆರೈಕೆ] ಮಾಡಿಕೊಂಡು ಯಿರ್ರು"ಯಂಬುದಾಗಿ ಹೇಳಿ ಹೋದದ್ದರಿಂದಾ, ಯೀ ವರ್ತಕನ ಹೆಂಡತಿಯು ಪರಪುರುಷನ ಸ್ನೇಹಮಾಡಿಕೊಂಡು ಯಿದ್ದಲ್ಲಿ, ಯೀ ನಾಯಿಯು ರಾತ್ರಿ ಕಾಲದಲ್ಲಿ ಪರಜನಾ ಮನಿಗೆ ಬರಗೊಡದೆ ಕಾದುಕೊಂಡು ಯಿರುತ್ತಾ ಯಿದ್ದಲ್ಲಿ, ಯೀ ನಾಯಿಗೆ ಅನ್ನ ಹಾಕದೇ ಬಡದು ಅಟ್ಟಿಸಿದರಿಂದ, ನಾಯಿಯು ಹಗಲು ವೂರಲ್ಲಿ ಮನಿ ಮನಿಯ ಯೆಂಜಲ ತಿಂದುಕೊಂಡು ರಾತ್ರಿಕಾಲಕ ಯೀ ವರ್ತಕನ ಮನೆ ಬಾಗಿಲಿಗೆ ಬಿದ್ದುಕೊಂಡು ಯಿರುತ್ತಾ ಯಿದ್ದಲ್ಲಿ, ವಂದು ದಿವಸಾ ರಾತ್ರಿ ಕಾಲದಲು ವಬ್ಬ ಸಾವಕರನ ಮಗನು ಯೀ ಸಾವುಕಾರನ ಮನಿಗೆ ಬರುತಾ ಯಿದ್ದಲ್ಲಿ , ಯೀ ನಾಯಿಯ[>ಯು] ಕಂಡು ಆ ಸಾವಕಾರನಾ ಕಡದುಕೊಂಡದ್ದರಿಂದಾ, ಸಾವಕಾರನ ಹೆಂಡತಿಯು ಆ ಸತ್ತಂಥಾ ಶಮ ನೋಡಿ, ನ್ಯಾರೆಯಲ್ಲಿ ಯಿರುವ ಹಗೆದಲ್ಲಿ ಹಾಕಿ ಮುಚ್ಚಿ ಬಿಟ್ಟಳು. ಯೀ ವರ್ತಮಾನ ವೂರವರಿಗೆ ತಿಳಿಯದೆಯಿತ್ತು.

ಆಮೇಲೆ ಪಟ್ನದ ವ್ಯಾಪಾರಕೆ ಹೋಗಿ ಯಿದ್ದ ಸಾವಕಾರನು ತನ್ನ ಮನಿಗೆ ಬಂದಲ್ಲಿ, ಯೀ ನಾಯಿಯು ಬಂದು ಸಾವಕಾರನಾ ಕಾಲಮೇಲೆ ಬಿದ್ದದ್ದರಿಂದಾ, ಸಾವಕಾರನು ನಾಯಿ ಮೈಮೇಲೆ ಕೈ ಆಡಿಸಿ ತನ್ನ ಹೆಂಡತಿಗೆ ಕೇಳಿದು, "ನಾನು ಪಟ್ನದ ವ್ಯಾಪಾರಕೆ ಹೋದ ಮೇಲೆ ಯೀ ನಾಯಿಗೆ ಅನ್ನಾ ಹಾಕಿ ಸಂರಕ್ಷಣೆ ಮಾಡಿದಿಯೋ ಯಿಲ್ಲವೊ?" ಯಂಬುದಾಗಿ ಕೇಳಿದಲ್ಲಿ ಆಕೆಯು ಹೇಳಿದು "ನಿತ್ಯದಲ್ಲು ಅನ್ನಾ ಹಾಕುತ್ತಲೆ ಯಿತ್ತು. ಆ ನಾಯಿಯು ಮನೆಹೊಂದಿ ಯ[>ಯಿ]ರಲ್ಲಿ ಯಿಲ್ಲಾ"ಯೆಂಬುದಾಗಿ ಹೇಳಿದಳು. ಯೀ ನಾಯಿಯು ಪುನಃ ಯೀ ವರ್ತಕನ ಕಾಲಮೇಲೆ ಬಿದ್ದು, ಶವಾ ಹೂಳಯಿದ್ದಾ ಸ್ಥಳಕೆ ಹೋಗುತಾ ಬಂದು ಬಂದು, ಯಿವರ ಕಾಲ ಮೇಲೆ ಬೀಳುತ್ತಾ ಯಿರಲಾಗಿ, ಯೀ ಸಾವಕಾರನು ನಾಯಿ ಯಿ ಪ್ರಕಾರ ಮಾಡುತದೆಯೆಂದು ಯೋಚನೆಮಾಡಿ, ಸಾವಕಾರನು ನಾಯಿ ಬೆನ್ನ ಹತ್ತಿ ಹೋದದ್ದರಿಂದಾ, ಯೀ ನಾಯಿಯ[>ಯು] ಹಗೆಯನ್ನು ಕಾಲಿಮದಾ ತಿವಿತು. ಆ ಹಗೆಯಲ್ಲಿ ಯೇನೋ ಯಿದ್ದಿತು ಯೆಂಬುದಾಗಿ ಸಾವಕಾರನು ಆ ಮುಚ್ಚಿದಂತಾ ಹಗೆಯನ್ನು ತೆಗಸಿ, ಅದರಲ್ಲಿ ಶವಾ ಯಿದ್ದದನ್ನು ನೊಡಿ, ಯಿದು ಯಿಲ್ಲಿ ಯಿರುವ ಬಗೆಯನ್ನು ಹೆಂಡತಿ ಕೇಳಿದಲ್ಲಿ, ಆಕೆಯು ಹೊ[>ಗೊ]ತ್ತು ಹೇಳದೇ ಹೋದಳು. ಯೀ ಸಮಾಚಾರ ಜನರು ಕೇಳಿ ಪುಕಾರ ಆದ್ದರಿಂದಾ, ಗೊತ್ತು ಹತ್ತಿದರಿಂದಾ ಯೀ ಸಾವಕರನು ತನ್ನ ಹೆಂಡತಿ ಪ್ರಾಣ ಕೊಂಡು ಬಿಟ್ಟ.

ಕಿರಾತಕರ ಹೆಸರಿನಿಂದಾ ಬರದ ಕಾಗದಾವಿರಶೀ "ನೀವು ನಮ್ಮಲ್ಲಿ ಅಡವು ಯಿಟ್ಟ ನಾಯಿಯ ಕಡೆಯಿಂದಾ ನಮ್ಮ ಹಣ, ಯಿದರ ಬರಸಹಾಕಿ [> ಬಡ್ಡಿ ಸಹಾ] ಪಡೆದರಿಂದಾ ನಿಮ್ಮ ನಾಯಿ ಹಿಂದಕೆ ಕಳ್ಸಿಯಿದೆ"ಯೆಂಬದಾಗಿ ಬರದು, ನಾಯಿಯ ಕೊರಳಲ್ಲಿ ಕಟ್ಟಿ ಕಾಲುಬಿದ್ದಲ್ಲಿ[>ಕಟ್ಟು ಬಿಟ್ಟಲ್ಲಿ] ಆ ನಾಯಿ ಮಾರ್ಗದಲ್ಲಿ ಬರುವಾಗ್ಯೆ, ಕಿರಾತಕರು ಸಾವಕಾರಗಳ ಹಣವು ಯಿದರ ಬಡ್ಡಿ ಸಹ ತೆಗೆದುಕೊಂಡು ಬರುವಾಗ್ಯೆ, ಮಾರ್ಗದಲ್ಲಿ ಯೀ ಬರುವಂತ ನಾಯಿಯನ್ನು ಕಂಡು, "ಸಾವುಕಾರನ ಮನೆಯಿಂದಾ ಓಡಿ ಬರುತಾ ಯಿದೆ"ಯಂಬುದಾಗಿ, ಯಿದರ ಕೊರಳಲ್ಲಿ ಯಿದ್ದ ಚೀಟಿ ನೋಡದೆ ಆ ನಾಯಿ ತಲೆ ಹೊಡದು ಬಿಟ್ಟು, ನಿಲ್ಲವತಿಪಟ್ಟಣಕ ಸಾವಕಾರನ ಬಳಿಗೆ ಹೋಗಿ ಹಣ ಬಡ್ಡಿ ಸಹ ಯಿಟ್ಟಲ್ಲಿ, ಸಾವಕಾರನು "ಹಣ ತೆಗೆದುಕೊಳ್ಳುವದು ಯಿಲ್ಲಾ"ಯಂಬುದಾಗಿ ಸದರಿ ಬರದ ಮೇರಿಗೆ ಹೇಳಿದ್ದರಿಂದ, "ನಾಯಿಯ ಕೊರಳಲ್ಲಿ ಯಿರುವ ಚೀಟಿ ನೋಡದೆ ಜೀವಾ ಕೊಂದು ಬಿಟ್ಟೆವೆಂ"ದು ಹೇಳಿದ್ದರಿಂದ, ಸಾವಕಾರನು ಯೀ ಹಣವನು ತಾ ವಾಪಸ ಕೇಳದೆ ಹಿಂದಕೆ ಕೊಟ್ಟದರಿಂದಾ, ಯೀ ಕಿರಾತರು ಯೀ ನಾಯಿಯ ಕೊಂದ ಸ್ಥಳಕೆ ಬಂದು, ಅದರ ಕೊರಳಲ್ಲಿ ಯಿದ್ದ ಚೀಟಿ ನೋಡಿ, ಹಳಹಳಿ ಬಹಾಳ ಮಾಡಿ, ದುಃಖಿಸಿ ನಾಯಿ ಮಾಡಿದಂಥಾ ದ್ರವ್ಯವನ್ನು ನಾಯಿ ಹೆಸರಿನಿಂದ ದಾನಧರ್ಮಗಳ ಮಾಡಿ ಯಿರುವಂತಾ ಸಕುನವನ್ನು ಆಗ ಮಾಡಿಸಿದು . . . . . ಣಿಗಲ್ಲು ದಳವಾಯಿ ವೀರರಾಜು ಮಹಾ ಅವ . . . . ನು ದೊಡ್ಡದಾಗಿ ಕೆರಿ ಕಟ್ಟಿಸಿ, ಶಿಲಾಪ್ರತಿಮೆಯನ್ನು ಮಾಡಿ ಯೀ ಕೆರಿ ಮೇಲೆ ಸ್ಥಾಪನೆ ಮಾಡಿಸಿ ಯಿದಾರೆ.*

❖❖

೧೩
ಚರಂತಿಮಠದ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೦

ಕಸಬೆ ಸೊಂಡೆಕೊಪ್ಪದಲ್ಲು ಶಿವಾಚಾರ್ಯ ಚರಂತಿ ವಡೆಯರ ಮಠ . . . ದುರವಾಗಿ ನಡದು ಬರುವ ವಿವರವು: ಪೂರ್ವಕ್ಕೆ ಯೀ ಸೊಂಡೆಕೊಪ್ಪ ಮೊಗಲರ ಹವಾಲಾಗಿ ಅವರ ಕಡಿಗೆ ನಡೆಯುತ್ತಾ ಯಿದ್ದಲ್ಲಿ, ಯೀ ಸ್ಥಳಕ್ಕೆ ಸರಾಕಾರದ ಕೆಲಸದ ನಿಮಿತ್ಯ ತಾಲೂಕದಲ್ಲಿ . . . . ರ್ತಕರು ಯಿದು ಹೊರ್ತು ಮಾರ್ಗಸ್ಥರಾಗಿ ಬರ್ರುವಂತ ಶಿವಾಚಾರ[+ದ]ವರ್ರು ಸಹಾ ಬಂದಲಿ, ಅವರಿಗೆ ಅನ್ನೋದಕಂಗಳಿಗೆ ಶಿವಾಚಾರದ ಮಠ ಯಿಲ್ಲಾದ ಕಾರಣ, ಹತ್ತು ಮಂದಿ ಶಿವಾಚಾರದವರು ಯೀ ಸ್ತಳದಲ್ಲಿ ಬದುಕು ಮಾಡುವಂಥಾವರಿಗೆ ಹೇಳಿಕೊಂಡು, "ಯೀ ಸ್ಥಳದಲ್ಲಿ ವಂದು ಮಠ

* 'ಯಗಟಿ ಕೈಫಿಯತ್ತು' ನೋಡಿರಿ. (ಸಂ)

ಮನೆ ನೇಮಕಾ ಮಾಡಿಸಲಿ ಸರಕಾರಕೆ ಕೆಲಸ ಮುಂತಾದಕ್ಕೆ . . . ವರಿಗೂ ಯಿತ್ತರ ಜನ ಮಾರ್ಗವಾಗಿ ಬಂದಂಥಾ ಶಿವಾಚಾರದವರಿಗೂ ಅನ್ನೋದ[+ಕ]ಕ್ಕೆ ಅನುಕೂಲವಾಗಿ ಯಿರುತ್ತೆ" ಯಂಬುದಾಗಿ ಹೇಳಿಕೊಂಡು "ಯೀ ಅರ್ದ ಅಮ್ರನೆ ಬದುಕುಮಾಡುವಂಥ ನವಾಬ ಸಾಕುಲ್ಲಾಖಾನ ಸಾಹೇಬರವರಿಗೆ ಅರಿಕೆ ಮಾಡಿಸು" ಎಂಬುದಾಗಿ ಹೇಳಿ, ಸರಕಾರದ ಕೆಲಸ ನಿಮಿತ್ಯ ಯೀ ಸ್ತಳದ ಬದುಕು ಪಾಡುವರ್‍ರು ದೇಶಮುಖಿ, ಪಾಂಡೆ, ಕುಲಕರಣಿಯವರ್‍ರು ಸಹಾ ಅರಕಾಡಿಗೆ ಹೋಗುವಲ್ಲಿ, ಯೀ ಸ್ಥಳದ ಶಿವಾಚಾರು ಸಹಸ್ರಾರು ಗವುಡಗಳು ಮುಂತಾದವರ ಕರದುಕೊಂಡು ಅರಕಾಡಿಗೆ ಹೋಗಿ, ತಮ್ಮ . . . .ದ ಕೆಲಸ ಆಗುಮಾಡಿಕೊಂಡು ಬರುವಲಿ, ಯೀ ವಿದ್ಯಮಾನವನ್ನು ನವಾಬ ಸಂತಖಾನರಿಗೆ ಅರಿಕೆ ಮಾಡಿಕೊಂಡಲ್ಲಿ, ಅವರ್‍ರು ಮನಸ್ಕರಿಶಿ ಯೀ ಸ್ಥಳಕೆ ಬದುಕುಮಾಡುವಂಥವರಿಗೆ ಅಪ್ಪಣೆ ಕೊಟ್ಟು, ಮಠಮಾನ್ಯ ಮಾಡ್ಸಿ, ಅದಕ್ಕೆ ಅನ್ನೋದಕಂಗಳು ನಡೆಯುವ ಬಗ್ಗೆ ಹೊಲಗದ್ದೆ ಮಾನ್ಯ ಹಾಕಿಕೊಟ್ಟು, ಒಬ್ಬ ಚರಂತಿಗಳ ನೇಮಕಾ ಮಾಡಿ, ನಡಶಿಕೊಂಡು ಬರುವಂತೆ ಸರ್‍ವಮಾನ್ಯ ಸನ್ನದಕ್ಕೆ ಅಪ್ಪಣೆ ಕೊಟ್ಟು, ಶಿಲಾಪ್ರತಿಷ್ಠೆ ಮಾಡಿ ಕಳುಹಿಸಿಕೊಟ್ಟರು. ತದಾ ಪ್ರಭೃತಿ ಬಂದಂಥಾ ಜನರಿಗೆ ಅನ್ನೋದಕಂಗಳ ಯಿಟ್ಟುಕೊಂಡು ಮಾಡಿ ಕೊಟ್ಟಂಥಾವರಿಗೆ ಧರ್ಮ ಸೇರಿಶಿಕೊಂಡು ಬರುತ್ತಾ ಯಿದೆ. . . . . . ಯೀ ಚರಂತಿ ಅಯ್ಯನೊರ ರುಜು.

❖❖

೧೪
ಚಿಕ್ಕಮಗಳೂರು ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೧

ಯಾದಾಸ್ತು ಕೈಫಿಯತ್ತು ಯಗಟಿ, ತಾಲೂಕು ಚಿಕ್ಕಮಗಳ್ಳೂರು. ಯೀ ಕಲಿಯುಗ ಹುಟ್ಟಿದಾರಭ್ಯ ರಾಜ್ಯಭಾರ ಮಾಡಿದ ಅರಸಗಳ ವಿವರಾ:

ಯುಧಿಷ್ಠರನೆ ಬಹುಧಾನ್ಯ ಸಂವತ್ಸರ ಆರಭ್ಯ ಪರಿಧಾವಿ ಸಂವತ್ಸರದ ವರಿಗೆ

೧೧೪೯ ಜನಮೇಜಯರಾಯರ ಸಂತತಿ ಅವರು ರಾಜ್ಯವಾಳಿದ್ದು.

೪೦ ಗೋವಿಂದಭಗವಾನ ಹಾರಿ ಆಳಿಕೆ.

೧೮೫೫ ವಿಕ್ರಮಾದಿತ್ಯರಾಯರು.

೩೦೩೪

೧೪೫ ವಿಕ್ರಮಾದಿತ್ಯರಾಯನ ಆಳಿಕೆ.

೧೭೨೬ ಶಾಲಿವಾಹನ ಶಖವರುಷಂಗಳಲ್ಲು

೪೯೦೫

ಯಿದಕೆ ತಪಶೀಲು:

೩೦೩೪ ಯುಧೀಷ್ಠಿರ ಶೆಕೆ

೧೪೫ ವಿಕ್ರಮ ಶೆಖೆ

ಯಿದಕೆ ಆಳಿದ ಅರಸುಗಳ ವಿವರಾ:

೧೧೩೯ ಜನಮೇಜಯರಾಯನ ವಂಶಸ್ತರ ಆಳಿದ ಅರಸುಗಳು ಜನ ೧೧:

೧೦೩ ಮೇಧಾವಿಯಂಬಾ ಅಸರು

೧೦೧ ಸನಯತ್ರಾ

೧೦೦ ರ್ನಪಂಜಯಾ

೧೦೫ ಧರ್ಮಾಯಂಬಾ ಅರಸು

೧೦೭ ಚಿಗ್ಮಾಯಂಬಾ ಅರಸು

೧೦೫ ಬ್ರಹರ್ದತಾ

೧೦೪ ಕತಾದಿಕಾ

೧೧೦ ದುಧರ್ಮಾಯಂಬಾ ಅರಸು

೧೦೧ ದೊಡ್ಡಿ ಪಾಡೆ

೧೧೨ ತ್ರಮತಾ

೯೦ ಸಾರಂಗಧರರಾಯಾ

೧೧೩೯

೪೦ ಗೋವಿಂದ ಭಗವಾನ ಉ ಯಂಬಾ ಬ್ರಹಾ[>ಹ್ಮ] ಕ್ಷೆತ್ರಿ [+ವೈಶ್ಯ] ಶೂರ್ಧ ನಾಲು[>ಲ್ಕೂ] ಜಾತಿಯಲು ವಿವಾಹ ಮಾಡಿತ್ರೊಂಡಪರಿಂದ್ದ [>ಕ್ಕೊಂಡದ್ದರಿಂದ] ೩. ಶುಭಜಾತಿಯಲ್ಲಿ ಉತ್ಪತ್ತಿಯಾದ ಭರತುರಹಾರಿ [>ಭರ್ತೃಹರಿ]ಯಂಬಾ ಮಹಾರಾಯನು ಆಳಿದು.

೨೦೦೦ ವಿಕ್ರಮಾದಿತ್ಯರಾಯನು:

೧೮೫೫ ಯುಧಿಷ್ಟರ ಶೆಖೆ ವಳಗ ಆಳಿದು

೧೪೫ ವಿಕ್ರಮಶಖ ವಳಗ ಆಳಿದು

೨೦೦೦

ಯಿದಕೆ ವಿವರಾ: ವುಜನಿಪಟ್ಟಣದಲ್ಲಿ ಬನ್ನಿಮಹಾಂಕಾಳಿಯಂಬಾ ಪ್ರಸಾದಿಂದ ಬೇತಾಳನಾ ವಶಾಮಾಡಿಕೊಂಡು ಕುಬೇರತ್ವಾ ಅಮರತ್ವಾ ಮುಂತಾದ ವಿದ್ಯಾಗಳನ್ನು ಸಂಪಾದಿಸಿ, ಅಮರತ್ವದಲ್ಲಿ ದೇವೇಂದ್ರನ ಸಂ[>ರಿ]ಗೆ ಹೋಗಿ, ವೂರ್ವಶಿ ರಂಭೆ ಸಂವಾದಾ ತಿರಿಶಿದ್ದರಿಂದಾ ದೇವೇಂದ್ರನು ಹುಟ್ಟಿ ಪೂರ್ವದಲ್ಲಿ ತನಗೆ ಯೀಶ್ವರನಿಂದಾ ಬಂದಾ ಬತ್ತಿಸಪುತ್ಥಳಿಸಿಂಹಾಸನವನ್ನು ತಕೊಂಡು, 'ಯೀ ಶಿಂಹಾಸನದ ಮ್ಯಾಲೆ ಸಾಹಾಸ್ರು ವರುಷ ಆಳು'ಯಂಬುದಾಗಿ ಕೊಟ್ಟದ್ದರಿಂದ, ಆ ಶಿಂಹಾಸನಾ ತೆಗೆದುಕೊಂಡು ಭೂಲೋಕಕೆ ಬಂದು, ತನ್ನ ತಮ್ಮನಾದ ವೈಶ್ಯಜ್ಯಾತಿಯಲ್ಲಿ ಉತ್ಪತ್ತಿಯಾದ ಬಟ್ಟಿ[>ಭಟ್ಟಿ]ಯಂಬಾ ಪ್ರಧಾನಿಕೆ ಯೀ ವರ್ತಮಾನವನ್ನು ತಿಳಿಸಲಾಗಿ; ಅವನು ನಮ್ಮಿಂದಾ ಸಾವಿರ ವರುಶ ರಾಜ್ಯಪರಿಪಾಲನೆ ಮಾಡುವಂಥಾದು ಕೊಡುತೆವೆಯಂಬದಾಗಿ ವಿಕ್ರಮಾದಿತ್ಯರಾಯನು ಕೇಳಿದ್ದರಿಂದಾ, ಯಿ ಸಿಂಹಾಸನದಲ್ಲಿ ಆರು ತಿಂಗಳು, ಆರು ತಿಂಗಳು ವನದಲ್ಲಿ ಯಂಬದಾಗಿ ಹೇಳಿದ್ದರಿಂದ ಅದೇ ಪ್ರಕಾರವಾಗಿ ಯದ್ದರು, ಸಾವಿರ ವರುಶಾ ಆಳಿಕೆ.

೩೧೯೯ [>೩೧೭೯]

೧೭೬ ಅನಂತರದಲ್ಲಿ ಶಾಲಿವಾಹನ ಶಖ ಸಾವಿರದ ೧೭೬ ನೆಯ ರುಧರೊದ್ಗಾರಿ ಸಂವತ್ಸರ ವರಿಗೆ.

ಯಿದಕೆ ವಿವರ:

೬೦ ದಾರಾಪಟ್ಟಣದಲ್ಲಿ ಭೊಜೆರಾಜನು ಕವಿಶ್ರೇಷ್ಟನಾದ ಕಾಳಿದಾಸನು ಸಮೀಪ ರಾಜ್ಯ ಪರಿಪಾಲನೆ ಮಾಡಿದು.

೪೨೦ ಬೊಲ್ಲರಾಯರ ಆಳಿಕೆ.

೮೩೫ ಬಲ್ಲಾಳರಾಯರ ಆಳಿಕೆ, ಯಿದಕೆ ವಿವರಾ:

೬*

---

* ಇಲ್ಲಿ ೧೭೬ಕ್ಕೂ, ಇದರ ವಿವರಗಳಿಗೂ, ಬೇರೀಜಕ್ಕೂ ಸಂಬಂಧ ತಪ್ಪಿಹೋಗಿದೆ. (ಸಂ).

ಬಲ್ಲಾಳರಾಯನ ವಂಶಸ್ತನಾದ ನ[>ಸ]ಳನೆಂಬವನು ಶಶಕಪುರದಲ್ಲಿ ಯಿದು, ಜೆಯಿನ ಸನ್ನೆಶಿ ಸಮೀಪದಲ್ಲಿ ಯಿದು, ಅವನ ಮಾತದಿಂದಾ ವ್ಯಾಗ್ರವನು ಸಂಹಾರಮಾಡಿ, ಹೊಯಿಸಳಾ ಯಂಬಾ ಹೆರಸನ್ನು ಪಡೆದು, ದ್ವಾರಸಮುದ್ರಯೆಂಬಾ ಪಟ್ಟಣವನ್ನು ಕಟ್ಟಿ, ಸ್ವಸ್ತಿಶ್ರೀ ಮಹಾಮಂಡಲೇಶ್ವರ ತರಿ- ಭುವ[+ನ]ಮಲ್ಲ ವೀರಗಂಗಾಪ್ರತಾಪ ತಳಕಾಡು ಗಂಗವಾಡಿ ನೆ[>ನೊ]ಳಬಪಾಡಿ ಬವವಾಶಿ[>ಬನವಾಶಿ] ಹಗಲವಾಡಿ ಹಾಸಂ[>ನಂ]ಗಲು ಹಾಲಿಶಿಗೆ ಬೆಳಲಂಗಾಡು ಮೊದಲಾದ ದೇಶಂಗಳನು ಭುಜಬಲದಿಂದಾ ಜೆಯಿಶಿ, ಹೊಯಿಸಳಾ ದೀ[>ದೇ]ಶ ಮಧ್ಯದಲ್ಲಿ ಯಿರುವ ದ್ವಾರಸಮುದ್ರ ಬೀಡಿನಲ್ಲಿ ಸುಖ ಸಂಕುಳದಿಂದಾ ರಾಜ್ಯವಾಳೊವಾಗ್ಯೆ, ಯೀ ಸ್ಥಳಕೆ ಬ್ಯಾಟಿಗೆ ಬಂದು, 'ಯಿ ನದಿಪುರು . . . . ಡಿ ಯಲ್ಲಿ ಪಟ್ಟಣವ ಕಟ್ಟಿಸಬೇಕು' ಯಂಬುದಾಗಿ ನಿಶ್ಚಯಮಾಡಿ, 'ಹರದಾರಿ ಅಗಲಕೆ ಪಟ್ಟಣದ ಕಟ್ಟಿಸಬೇಕು ಯಂಬುದಾಗಿ ವೊದಾನದಿ[>ವರದಾನದಿ] ಯಿ ಪಟ್ಟಣಕೆ ಘಾತಾ ಮಾಡೀತು' ಯಂಬುದಾಗಿ ಯಿ ವೂರಿಗೆ ಪಶ್ಚಿಮದಿಕ್ಕಿಗೆ ಮೂರು ಗುಡ್ಡಗಳು ಯಿದ್ದದರಿಂದ ಯೀ ಗುಡ್ಡಗಳಿಗೆ ಕಾವಲು ಕಟ್ಟಿ . . . . .ಕಟ್ಟಿ ಯೆರಿ ಮ್ಯಾಲೆ ದೇವಸ್ಥಾನ ಕಟ್ಟಿ, ಗನಪತಿ, ತ್ರಿಲೋಚನೇಶ್ವರ, ಕೇಶವ, ಭೈರವ, ಸೂರ್ಯನಾರಾಯಣ ಮಹಾಸಾಸಿರ[>ಮಹಿಷಾಸುರ] ಮರ್ಧನಿ ಮೊದಲಾದ ದೇವತೆಗಳನ್ನು, ಪಟ್ಟಣದಲ್ಲಿ ಬಸ್ತಿಯನ್ನು ಕಟ್ಟಿಶಿ ಜಿನದೇವರನ್ನು ಪ್ರತಿಷ್ಠೆ ಮಾಡಿ, ಬ್ರಾಹ್ಮರ ಭೋಜನವನ್ನು ಮಾಡಿಸಿ, ದೇವರಿಗೆ ವುಂಬಳಿಯನ್ನು ಬಿಟ್ಟು, ಸುಖದಲ್ಲಿ ರಾಜ್ಯ ಪ್ರತಿಪಾಲನೆ ಮಾಡಿದರು.

೯೦ ವಿನಯಾದಿತ್ಯರಾಯ, ಪರಿಧಾವಿ ಸಂವತ್ಸರದ ಆರಬ್ಯಾ ವಿಕ್ರಾತಿ ಸಂವತ್ಸರ ವರಿಗೆ.

೯೨ ಯಿವನ ಮಗಾ ಉದಯಾದಿತ್ಯರಾಯನು.

೮೭ ಯಿತನ ಮಗಾ . . . . . ತಾ ಮಹಾ ನಾಯಕ ಆಳಿಕೆ.

೯೦ ಯೀತನ ಮಗಾ ಯಳೆಗೆಡೆ[>ರೆ]ಯಂಗಾ.

೭೮ ಯಿತನ ಮಗಾ ಆಜಿಗೆಡೆ[>ರೆ]ಯಂಗಾ.

೮೯ ಯಿವನ ಮಗಾ ವಿಷ್ಣುಭೂಪಾಲ

೯೧ ಯಿವನ ಮಗಾ ನರಶಿಂಹಾ ಬಲ್ಲಾಳ ನಾರಾಯಣಪುರದಲ್ಲಿ ದೇವರ ಪ್ರತಿಷ್ಟೆ ಮಾಡಿದನು. ಯೀ ನರಶಿಂಹ ಮಹಾಭೂಪಾಲನು ಅನೇಕ ಬ್ರಾಹ್ಮರಿಗೆ ಅಗ್ರಹಾರಗಳು ಮುಂತಾದ್ದು ಕೊಟ್ಟನು. ಆತನು ಯಿಶ್ವರ ದೇವಸ್ಥಾನಕೆ ನಡವ ದೀಪಾರಾಧನೆ ಬಗ್ಗೆ ಗ್ರಾಮವನ್ನು ಕೊಟ್ಟನು.

ಯೀತನ ಮಗಾ ವೀರಬಲ್ಲಾಳನು ರಾಜ್ಯ ಆಳುವಾಗ್ಯೆ ಇಂದ್ರದ್ರೋಣಪರ್ವತಕೆ ಬಂದು, ಪ್ರಸನ್ನವಿರುಪಾಕ್ಷೇಶ್ವರ ದೇವರ ಪ್ರತಿಷ್ಟೆಮಾಡಿ, ಯೀಶ್ವರಗೆ ಗ್ರಾಮ ಭೂಮಿಗಳನ್ನು ಕೊಟ್ಟು ರಾಜ್ಯ ಆಳುವಲ್ಲಿ, ಯಿವನ ರೂಪ, ವುದಾರಗುಣ ಲೊಕದಲ್ಲು ಪ್ರಖ್ಯಾತ ಆಗುತಾಯಿರ್ದಿತಾತವ[>ನ] ದಿಲ್ಲಿ ಪಾದಶಹಾನ ಮಗನ[>ಳು] ಕೇಳಿದಲ್ಲಿ, "ವೀರಬಲ್ಲಾಳ[+ನ]ನು ಅದೆ[>ಅದೇನೆ]ನುತ, ವಬ್ಬನಿಗೆ ಮದಿವೆ ಮಾಡಿ ಕೊಂಬಾದಿಲ್ಲಾ"ಯೆಂಬದಾಗಿ ತಂದೆ ಕುಡಾ ಹೇಳಿದರಿಂದ, ಆ ಪಾದಶಹಾನು ಬುದ್ದಿವಂತ ಪ್ರಧಾನಿಯನ್ನು ಯೀತನ ಸಮಿಪಕೆ ಕಳಸಲಾಗಿ, ಆ ಪ್ರಧಾನಿಯನು[>ಯು] ಬಂದು

ವೀಬಲ್ಲಾಳರಾಯನ ವಿವಾಹ ಬಗ್ಗೆ ಕರದರಿಂದಾ "ನಾನು ಬರೊದಿಲ್ಲಾ"ಯಂಬುದಾಗಿ ತನ್ನ ಆಯುಧವನ್ನು ಕಳಸಲಾಗಿ, ಆ ಆಯುಧಕೆ ವಿವಾಹಮಾಡಿ, ಮಗಳ ಕಳಸೊವಾಗ್ಗೆ ಮಗಳಿಗೆ ಹೇಳಿದ ವಿವರಾ: "ನಿನಗೆ ಕಷ್ಟ ಮಾಡಿದರ ಹೊಳಿ[>ಳಿ] ಕಳಿಹ್ಯಾನು" ಎಂದು ಹೇಳಿದರಿಂದ "ಆಹಾಗೆ ಆಗಲಿ"ಯಂಬದಾಗಿ ಬಂದು ಯೀ ವೀರಬಲ್ಲಾಳ ಸಂಗಡಾ ಕೆಲವು ದಿವಸಾ ಸಂತೋಷದಲ್ಲಿ ಯಿರುತಾ ಯಿರಲಾಗಿ, "ತಾನು (ನಾನು) ಕ್ಷತ್ರಿಯ ಜಾತಿಯಲ್ಲಿ ಉತ್ಪತ್ತಿ ಆದವನು, ವಿಶಿಷ್ಟಜಾತಿಯಲ್ಲಿ ಸಂಭೊಗಳಾ[>ವಾ]ಯಿತ್ತೆಯಿಲ್ಲಾ" ಯಂಬದಾಗಿ ಹೊಖ್ಸಿ[>ಯ್ಸಿ]ಬಿಟ್ಟದರಿಂದಾ ಯೀ ವೃತ್ತಾಂತವನು ದಿಲ್ಲಿ ಪಾದಶಹಾಕೆ ಹೇಳಿ ಕಳಿಹಿದರಿಂದಾ, ದಿಲ್ಲಿ ಪಾದಶಹಾವನು ಚೆತುರಂಗಬಲ ಸಮೇತನಾಗಿ ದಂಡು ಕಟ್ಟಿ ಬಂದು, ಯೀ ಪಟ್ಟಣವನ್ನು ಮುತ್ತಿಗೆ ಹಾಕಿ, ಜಯಿಸಿಲಾರದೆ ಹಿಂದಕೆ ಹೋಗಿ, ಯೆರಿಗ್ರಾಮದ ಮ್ಯಾಲೆ ಯಿಳದು, ಅನಂತರದಲ್ಲಿ ಯೀ ಬಲ್ಲಾಳನ ತಂಗಿಗೆ ಮಕ್ಕಳು ಲಕನ[>ಲಕ್ಕಣ್ಣ] ವಿರನ್ನಾ[>ವೀರಣ್ಣ]ಯಂಬ ಯಿಬರು ಯಿದ್ದರು. ಯಿವರಿಗೆ ಬಲ್ಲಾಳನಾ ಪನ್ತಿ[>ತ್ನಿ]ಯು ಲಕಣಾ ವಿರನ[ಣ್ಣ] ಸಂಗಡ ಸಂಬೋಗಮಾಡಬೇಕು ಯಂಬದಾಗಿ ಕರಿಯಲಾಗಿ, ಅವರು ವಲ್ಲದೆ ಹೋದುದರಿಂದಾ, ಯಿವರ ಮೇಲ ಅಪವಾದವನ್ನು ಪತಿಯಾದ ಬಲ್ಲಾಳನ ಸಂಗಡಾ ಹೇಳಿ ಯಿವರನು ಶೂಲಕೆ ಹಾಕಿಸಲಾಗಿ, ಆ ಬಲ್ಲಾಳತಿದೇವಿಯ[<ಯು] "ಪಟ್ಟಣಾ ನಾಕಾ[>ಶ]ಹೊಂದಿ ಕುಂಬಾರ ಕೇರಿಗೆ ಮಾತ್ರಾ ಆಗಲಿ"ಯಂಬದಾಗಿ ಶಾಪಾಕೊಟ್ಟು, ತಾನು ಶೂಲಕೆ ಬಿದ್ದಳು. ಯೀ ವಿಷಯವನ್ನು ಪಾದಶಾಹಾ ಕೇಳಿ ಯುದ್ಧಕೆ ಬರಲಾಗಿ, ಬಲ್ಲಾಳನು ಯುದ್ದಕೆ ಅಶಕ್ತನಾಗಿ ಯುದ್ದಾ ಮಾಡಲಾರದೆ ಬಂದರೂ ಬಬ[>ಲ] ಸಮೇತನಾದಿ[>ಗಿ] ಇಂದ್ರದ್ರೋಣಪರ್ವತಕೆ ಹೋಗಿ, ಕೋಟೆ ಕಟ್ಟಿಕೊಂಡು ಯುದ್ದವನು ಮಾಡಿ, ಬಲ ಕ್ಷಯವಾದ ಮ್ಯಾಲೆ ಹೋಗೋದಕ್ಕೆ ಸ್ಥಳವಿಲ್ಲದೆ ಗುಹಾಪ್ರವೇಶವನು ಮಾಡಿದನು . . . . ಬಿದ್ದು ಮೃುತವಾದಳು. ಪಾದಶಹಾನು ಕೆಲವು ದಿವಸ ಯಿದು ಅಲ್ಲಿಗೆ[>ಯೆ] ಮೃತವಾದನು.

೧೯೨ ಅನಂತರದಲ್ಲಿ ಯೀ ಪಟ್ಟಣವಾಳುತ ಯಿದ್ದ ವಿವರ:

೯೦ ಅಚ್ಚುತರಾಯರು

೬೭ ಕ್ರಿಷ್ಣರಾಯರು, ಅಳಿಯಾ

೩೫ ರಾಮಚಂದ್ರರಾಯರು. ಯೀತನ ದಿವಸದಲ್ಲಿ ಅಗ್ರಹಾರ ಸವಸ್ತಾನ ಮೊದಲಾದ ಧರ್ಮ ಅನೇಕ ಮಾಡಿದನು. ಇಂದ್ರದ್ರೋಣ ಪರ್ವತಕ್ಕೆ ಬಂದು ಬಲ್ಲಾಳಗೆ ಪ್ರತಿಷವ ಮಸ್ತು ಮಾಡಿದನು. ವಿರೂಪಾಕ್ಷಯೀಶ್ವರದೇವಸ್ತಾನ ಜೀರ್ಣೋದ್ಧಾರಮಾಡಿ, ಆ ದೇವತಿಗೆ ಪಡಿತರ ದೀಪಾರಾಧನೆಗೆ ಗ್ರಾಮಗಳನ್ನು ಬಿಟ್ಟು ಸುಖದಲ್ಲಿ ಯಿರುತಾ ಯಿದ್ದನು.

೮೯ ಕ್ರಿಷ್ಣರಾಯರ ಸಮೀಪದಲಿ ಯಿದ್ದ ಬಾಯಿಣನ ಮಗಾ ಯರಿ ಕ್ರಿಷ್ಣಪ್ಪನಾಯಕನು ರಾಯರಿಗೆ ಅನೇಕ ದಿಗ್ವಿಜಯಾ ಮಾಡಿಕೊಂಡು, ಕ್ರಿಷ್ಣರಾಯರು ಬೇಲೂರನ್ನು ಜಹಾಗೀರು ಹಾಕಿಕೊಟ್ಟರು. ಕ್ರಿಷ್ಣಪ್ಪನಾಯಕನ ಮಗಾ ವೆಂಕಟಾದ್ರಿನಾಯಕನು ರಾಜ್ಯ ಪ್ರರಿಪಾಲನೆ ಮಾಡೊವ್ಯಾಗೆ ಕ್ರಿಷ್ಣರಾಯರ ಸಮೀಪದಲಿ ಯಿರುವ ಪಣಿಕೊನಯ್ಯನವರಿಗೆ ಸಣ್ಣತಿ, ಬಾಗೂರು ಮೊದಲು ಮಾಡಿಕೊಂಡು [ತರಿ+]ಕೆರಿ ಪರಿಯಂತ್ರಕು ಜಹಾಗೀರು ಅನುಭವಿಸಿಕೊಂಡು, ತರಿಕೆರೆಯಲ್ಲಿ

ಮೃತನಾದನು. ಅವರಿಗೆ ಪುತ್ರಸಂತಾನಯಿಲ್ಲದೆಯಿದ್ದದರಿಂದಾ ಆತನ ಮಗಳು ವೆಂಕಟಾದ್ರಿನಾಯಕರಿಗೆ ಕ್ರಯಕೆ ಕೊಟ್ಟದರಿಂದಾ ತನ ಶೀಮೆ ವಿಚಾರಣೆಮಾಡುವ ಬಗ್ಗೆ ಯೀ ಸ್ಥಳಕೆ ಸ್ವಾರಿ ಮುಖಾಂತರ ಬಂದು ನೋಡಿದಲಿ, ಯಿಲ್ಲಿ ಮೊದಲು ಬಸ್ತಿಹಾಳಿ ಯೆಂಬುದಾಗಿ ವಂದು ಗ್ರಾಮ ಯಿದ್ದದರಿಂದಾ ಯೀ ೧೨ ಸಾವಿರ ಸೀಮೆ ವುತ್ತರ ಮಾಡಿ ಕೊಟ್ಟು, ಕಿಲ್ಲೆ ಆಯಕಟ್ಟು ಮುಂದೆ ಜಮೋಕರು ಮಾಡಿಕೊಟ್ಟು, ಯೀ ಶೀಮೆ ವಿಚಾರಣೆ ಬಾಕಳೆಟ್ಟಕೆ ನಾಯಿಕಾಕೆ ಹಚ್ಚಿ ವಸಾಯಿತಾ ಯಿರಶಿ, ಚಿಕ್ಕನಹಳ್ಳಿಯಂಬಾ ಹೆಸರು ತೆಗದು ಚಿಕ್ಕಮಗಳೂರು ಯಂಬದಾಗಿ ಹೆಸರು ಯಿಟ್ಟು, ಯಾವತು ಮೊಕರರು ಮಾಡಿಶಿದರು.

೨೬. ದೊಡ್ಡ ಕೃಷ್ಣರಾಜವಡಿಯರು

೨೫ ಚಾಮರಾಜವಡಿಯರು

೨೭ ಚಿಕ್ಕ ಕೃಷ್ಣರಾಜವಡಿಯರು

---

೨೩ ನವಾಬ ಹೈದರಲಿಖಾನ

೧೬ ಯೀತನ ಮಗ ಟೀಪುಸುಲತಾನ

೫ ಅನಂತರ ಯಿಂಗ್ರೇಜ ಬಾಹದರು

ಯೀ ಊರಲ್ಲಿ ಯಿರುವ ದೇವಸ್ತಾನ:

೧ ಹರಿಹರೇಶ್ವರ ದೇವಸ್ತಾನ ಹಂಪಿ

೧ ವೀರಭದ್ರೇಶ್ವರ ದೇವಸ್ತಾನ, ಕಲ್ಲಿನದು

೧ ಜಯಿನ ಬಸ್ತಿ ವಂದು.

❖❖

೧೫

ಭಾವಣಿ ಬೆಳಗುತ್ತಿ ಅರಸುಗಳ ವಂಶಾವಳಿ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೦

---

*ಕುದುರೆ ಮಂದಿ ಸಹಾ ಯಿಟ್ಟುಕೊಂಡು ಮನ್ಮಥ ಸಂ। ಪರಿಯಂತ ವರುಷ ೪ ಕಿಲ್ಲೆಲು ನಡೆಯಿತು. ಕುದುರೆ ಸರದಾರಿಕೆಯ[>ಯು] ವ್ಯಯ ಸಂವತ್ಸರದ ಆರಭ್ಯ ದುರ್ಮುಖಿ ಸಂ।ವರಿಗೆ

---

* ಪ್ರಾರಂಭದ ಭಾಗ ಕಳೆದುಹೋಗಿದೆ (ಸಂ)

ವರುಷ ೧೦ ನಡದು, ಕುದ್ರೆಗಳು ಸೊಕ್ಕಿ ಪರಾರಿ ಆದುದರಿಂದ ಕುದರಿಕೆ ಸರದಾರಿ ಸ್ವಂತು [>ನಿಂತು] ಯೀ ಮಂದಿಯನ್ನು ಯಿಟ್ಟುಕೊಂಡು, ಹೊನ್ನಾಳು ಕನಾತ್ತಿಯಲ್ಲು ವಿಳಂಬಿ ಸಂವತ್ಸರ ವರಿಗೆ ಉಂತ್ರ[>ಮಾತ್ರ]ಯಿದ್ದು, ಯೀ ವರುಷದ ಯೀ ಚಿತ್ರಕಲ್ಲುದುರ್ಗದ ಮುತ್ತಿಗೆ ಆದದರಿಂದಾ ಅಪ್ಪಣೆ ಪ್ರಕಾರ ನಗರದಾ ಗಡಿ ಬಾಹಾ ಮಂದಿ ಯಾವತ್ತನ್ನು ತೆಗೆದುಕೊಂಡು ದುರ್ಗಕೆ ನಗರದ ಕಂದಾಚಾರದ ಮುನ್ನಾಕಪ್ಪನವರ ಸಂಗಡ ಮುತ್ತಿಗೆ ಹೋಗಿದಲ್ಲಿ, ದುರ್ಗ ತೆಗೆದುಕೊಂಡು ತರುವಾಯ ಯೀ ವೆಂಕಟಪ್ಪನಾಯಕರು ಅಪ್ಪಣೆ ಬಗ್ಗೆ ಹೋಗಿದಲ್ಲಿ ವಿಚಾರಿಸಿ ಮತ್ತು ನಾಲ್ಕುನೂರು ಮಂದಿ ಕಟ್ಟುವ ಬಗ್ಗೆ ಅಪ್ಪಣೆ ಕೊಟ್ಟು, ಯಿವರ ತಮ್ಮ ಬಲರಾಮರಾಯರಿಗೆ ಯಾವತ್ತು ಅವರ ವರಹ ಧರ್ಮವನ್ನು ಮೊಕರರು ಮಾಡಿ, ದಂಡಿನ ಹೋಬಳಿ ಕಾಲ್ಕು[>ಕೌಲು]ತನ ಮಾಡ್ಸಿ, ನಗರದಾ ರಾಜರಾಮರ ಬಳಿಗೆ ಕಳುಹಿಸಿದರಿಂದಾ ನಗರದಲು ಮಂದಿ ಜಮೆ ಮಾಡುತ್ತ ಯಿದ್ದಲ್ಲಿ, ಅಷ್ಟರಲ್ಲೆ ರಾಜರಾಮರು ತೀರಿಹೋಗಿ ಶಕ ಹ . . . ಆಯಿತು. . . ನ್ನು ಬಂದದರಿಂದ ರಾಜಾರಾಮರ ಬಳಿಗೆ ಕಳುಹಿಸಿದರಿಂದ ಯೀತನು ಮಡಕೆರೆ ಪೈಕಿ ವೈರಿಗೆ ಬಲರಾಮಯ್ಯಗೆ ಮಂದಿ ಜನ ೨೦೦ ಯಿನ್ನೂರನ್ನು ಕೊಟ್ಟು ಕಳುಹಿಸಿದರಿಂದ ಅಲ್ಲಿ ವಂದು ವರುಷ ಯಿದ್ದು, ಆ ತರುವಾಯ ಕೊಡಗಿನವರ ಸಂಗಡ ಲಡಾಯ ಮಡಿ, ಮಡಕೆರೆ ಲಢಾಯದಲ್ಲಿ ಯಿವರ ಬಿರಾದರಿ ಮಂದಿ ಹೊನ್ನ . . . . ಕಿಲ್ಲೆ ರಾವಾ ಮಹಮ್ಮದಖಾನ ಜಮಂದೀ ಸಹ ಮುಣುಗಿ ಹೋಗಿದರಿಂದ, ಬಲರಾಮಯನ್ನು ಜೀವ ಮಾತ್ರ ನಗರಕ್ಕೆ ಬಂದು ವೆಂಕ[>ಟ]ಪ್ಪನಾಯ್ಕರ ಬಳಿಗೆಯೆ ಯಿದ್ದಲ್ಲಿ, ಯೀ ಸಂವತ್ಸರದಲು ಯಿಂಗ್ರೇಜಿರತ್ತವಾಯಿ ಆಗಿ ಯಿದ್ದಲ್ಲಿ, ಟೀಪುಸುಲ್ತಾನ ಪಾದುಶಾಹಾರವರು ಬಂದು ನಗರವನ್ನು ತೆಗೆದುಕೊಂಬುವ ಬಗ್ಯೆ ಹೋಗಿಯಿದ್ದಲ್ಲಿ, ಅಲ್ಲಿ ಬಲರಾಮರಾಯರಿಗೆ ಗಲ್ಲುಹಾಕಿದರಿಂದ, ವೆಂಕಟಪ್ಪನಾಯ್ಕನು ತನ್ನ ಬಿರಾದಾರಿ ಮಂದಿ ಸಹಾ ಪರಿಭಾವಿ ಸಂವತ್ಸರ ಪರಿಯಂತ್ರ ನಗರದ ಕೃನಾತ್ತಿಯಲ್ಲು ಯಿದ್ದದರಿಂ. ಯೀ ಸಂವತ್ಸರದಲು ನಜರವಾವೆ ಮೊಕರೂರು ಆದ್ಧರಿಂದ. ಯೀ ವೆಂಕಟಪ್ಪನಾಯ್ಕನು ತಂದೆ ಅರಸು ತಿಮ್ಮಪ್ಪನಾಯಕರು ತೀರಿಹೋದದರಿಂದ ಸಹ ನಗರದಿಂದ ಚಾಕರಿಯನ್ನು ಬಿಟ್ಟು ನಜರಾನೆ ಹಣವನ್ನು ಕೊಟ್ಟು, ಬೆಳಗುತ್ತಿಯಲ್ಲು ಯಿದ್ದುಕೊಂಡು ಯಿರುತ್ತ ಯಿದ್ದಲ್ಲಿ, ಕ್ರೋಧನ[ಸಂ]ರದು ವೈಶಾಖ ಬ ೨ಉ ವೆಂಕಟಪ್ಪನಾಯ್ಕನು ತೀರಿಹೋದನು.

ಯೀಗ ಯಿರುವವರು ವೆಂಕಟಪ್ಪನಾಯ್ಕರ ಮಗಾ ಪಟ್ಟದ ಅರಸು ತಿಮ್ಮಪ್ಪನಾಯ್ಕ. ಯೀತನ ಅಣ್ಣ ರಂಗಪ್ಪನಾಯ್ಕ, ವೆಂಕಟಪ್ಪನಾಯ್ಕರ ತಮ್ಮ ರಘುನಾಥರಾಯರು, ಯಿವರ ಮಕ್ಕಳು ಸಹಾ ಯೀ ಸ್ಥಳದಲ್ಲು ಹಾಜರು ಯಿದ್ದಾರೆ. ಯಿವರು ತಮ್ಮ ಬ[>ಒ]ಡತನ ಮಾಡಿಕೊಂಡು ಗ್ರಾಮದಲ್ಲು ಯಿದ್ದಾರೆ.

❖❖

೧೬

ಡೆಂಕಣಿಕೋಟೆಯ ಬೆಟ್ಟರಾಯಸ್ವಾಮಿಯ ಮೊದಲಾದ ಕೈಫಿಯತ್ತು

*

ದಂಡಕಾರಣ್ಯದಲ್ಲು ಸನತ್ಕುಕುಮಾರ ನದೀತೀರದಲ್ಲು ಅತ್ರಿಯ ಮಹಾಋಷೀಶ್ವರರು ಆಶ್ರಮ ಕಟ್ಟಿಕೊಂಡು, ತಪಸ್ಸು ಮಾಡಿಕೊಂಡು ಇದ್ದಲ್ಲಿ, ಈ ವರ್ತಮಾನ(ವನ್ನು) ಕಣ್ವಋಷೀಶ್ವರರು ತಿಳಿದು, ಅತ್ರಿಯ ಮಹಾಋಷೀಶ್ವರರ ಆಶ್ರಮಕ್ಕೆ ಬಂದು, ಇವರ ಆಶ್ರಮದಲ್ಲಿ ತ್ರಿರಾತ್ರಿ ವಾಸಮಾಡಿ, "ಈ ಸ್ಥಳ ತಪಶ್ಚರ್ಯೆಗೆ ರಮ್ಯವಾಗಿದೆ. ನಮಗೆ ತಪಸ್ಸು ಮಾಡುವ ಬಗ್ಗೆ ಒಂದು ಆಶ್ರಮ(ವನ್ನು) ಅನುಕೂಲ ಮಾಡಿಕೊಡಿ" ಎಂಬುದಾಗಿ ಕೇಳಿದ ಕಾರಣ "ಬದರಿಕಾಶ್ರಮ" ಎಂಬುದಾಗಿ (ಬದರಿಕಾಶ್ರಮವೆಂದು) ಸಮೀಪದಲ್ಲಿ ಒಂದು ಆಶ್ರಮ ಇದೆ (ಆಶ್ರಮವಿದೆ). ಆ ಬಳಿಯು ನಿಮಗೆ ತಪಸ್ಸಿಗೆ ಯೋಗ್ಯವಾಗಿದೆ. ಆ ಬಳಿಯ ನೀವು ತಪಸ್ಸುಮಾಡಿ ಎಂಬುದಾಗಿ ಹೇಳಿದುದರಿಂದ ಅದೇ ಪ್ರಕಾರಕ್ಕೆ ಆ ಮಹರ್ಷಿಗಳ ಆಶ್ರಮ ಸಮೀಪದಲ್ಲಿ ಬದರಿಕಾಶ್ರಮದಲ್ಲಿ ಈ ಕಣ್ವಮಹರ್ಷೀಶ್ವರರು ತಪಸ್ಸುಮಾಡಿಕೊಂಡು (ಇರುತ್ತಿದ್ದರು) ಇರುತ್ತಾ ಇದ್ದರು. ಇವರು ಮಾಡುವ ತಪಸ್ಸಿಗೆ ವಿಘ್ನವಾಗಿ "ದೇವಕಂಟಕ"ನೆಂಬ ರಾಕ್ಷಸನು "ವ್ಯಾಘ್ರರೂಪ"ದಿಂದ ಬಂದು ತಪೋವಿಘ್ನಗಳು(ಳನ್ನು) ಮಾಡಿದ್ದರಿಂದ (ದುದರಿಂದ) "ಈ ಯುಪದ್ರವ ಪರಿಹರಿಸಿ ಮುಂದೆ ಸಂರಕ್ಷಣೆ ಮಾಡತಕ್ಕವರು ಯಾರು" ಎಂಬುದಾಗಿ ಸ್ವಾಮಿಯವರನ್ನು ಪ್ರಾರ್ಥನೆಮಾಡಿದುದರಿಂದ, ಸ್ವಾಮಿಯವರು ಕೃಪಾಪೂರ್ಣರಾಗಿ ಪ್ರತ್ಯಕ್ಷವಾಗಿ "ಧನುಃಪರವತ"ವೆಂಬ ಬಿಲ್ಲು ಬಾಬಿ(ಮಾಡಿ) ಬೆಟ್ಟಕ್ಕೆ ಬಂದು, ಈ ಕಣ್ವಮಹರ್ಷೀಶ್ವರರಿಗೆ ದರ್ಶನವನ್ನು ಕೊಟ್ಟು, ತಪಸ್ಸಿಗೆ ವಿಘ್ನನಾದ (ವಿಘ್ನಕಾರಿಯಾದ) "ದೇವಕಂಟಕ"ನೆಂಬ ರಾಕ್ಷಸನ "ಡೆಂಕಣಿ"ಯೆಂಬ ಗದೆಯಿಂದ ಸಂಹರಿಸಿ, ಈ ಕಣ್ವಮಹಾಋಷೀಶ್ವರರು(ರರ) ಆಶ್ರಮಕ್ಕೆ ನಾಲ್ಕು ಯುಗಕ್ಕೂ ನಾಲ್ಕು ಹೆಸರಿಟ್ಟರು. ಇಷ್ಟಕ್ಕೆ ವಿವರ:

ಕೃತಯುಗದಲ್ಲಿ ಅತ್ರಿಪುರವೆಂಬ ಹೆಸರು. ತ್ರೇತಾಯುಗದಲ್ಲಿ ರಾಮಪುರವೆಂಬ ಹೆಸರು. ದ್ವಾಪರಯುಗದಲ್ಲಿ ಅರ್ಜುನಪುರವೆಂಬ ಹೆಸರು. ಕಲಿಯುಗದಲ್ಲಿ ಡೆಂಕಣಿಪುರವೆಂಬ ಹೆಸರು. ಈ ಪ್ರಕಾರ ನಾಲ್ಕು ಯುಗಕ್ಕೂ ನಾಲ್ಕು ಹೆಸರಿಟ್ಟರು. ಆ ಬಳಿಕ ಸ್ವಾಮಿಯವರನ್ನು ಕಣ್ವಋಷೀಶ್ವರರು "ನಿರಂತರದಲ್ಲಿಯೂ ತಮ್ಮ ಪಾದಪೂಜೆ ಮಾಡಿಕೊಂಡಿರಬೇಕು. ಪಾದ ಸಂದರ್ಶನವಿಲ್ಲದೆ ಇರತಕ್ಕದ್ದು ಇಲ್ಲ" ಎಂಬುದಾಗಿ ಬಹುತರದಲ್ಲಿ ಪ್ರಾರ್ಥನೆಮಾಡಿಕೊಂಡುದರಿಂದ ಅದೇ ಪ್ರಕಾರಕ್ಕೆ ಅಂಗೀಕರಿಸಿ,

* ಆಕರ ಬರೆದುಕೊಳ್ಳುವುದನ್ನು ಮರೆತಿದ್ದೇವೆ (ಸಂ)

ಈ ಕಣ್ವಋಷೀಶ್ವರರ ಬದರಿಕಾಶ್ರಮದಲ್ಲಿ ಶ್ರೀ ಬೇಟೆ(ಬೆಟ್ಟ)ರಾಯಸ್ವಾಮಿಯೆಂಬ ನಾಮಧೇಯದಿಂದ ನೆಲಸಿದರು. ಕಣ್ವಮಹಾಋಷೀಶ್ವರರು ಆರಾಧನೆಮಾಡಿಕೊಂಡು ಇದ್ದರು. ಆ ತರುವಾಯ ದಂಡಕಾರಣ್ಯಕ್ಕೆ "ರಾಮಸ್ವಾಮಿ"ಯುವರು ವನವಾಸಾರ್ಥವಾಗಿ ಬಂದು ಇದ್ದಲ್ಲಿ, ಈ ಕಣ್ವಮಹಾಋಷೀಶ್ವರರು ಬದರಿಕಾಶ್ರಮಕ್ಕೆ ಬಂದು ಶ್ರೀಬೆಟ್ಟರಾಯಸ್ವಾಮಿಯವರ ಆರಾಧನೆಯ ಮಾಡಿ ಋಷೀಶ್ವರರ ಸಂದರ್ಶನ ಮಾಡಿಕೊಂಡು ಚತ್ತೈಸುವಲ್ಲಿ ಈ "ರಾಮಪುರ"ವೆಂಬ ಅಗ್ರಹಾರವನ್ನು ಬ್ರಾಹ್ಮರಿಗೆ (ಬ್ರಾಹ್ಮಣರಿಗೆ) ಧಾರಾ ಗ್ರ . . . . ಕವಾಗಿ (ಧಾರಾಪೂರ್ವಕವಾಗಿ) ಕೊಟ್ಟರು. ಆ ತರುವಾಯ ಅರ್ಜುನರು ತೀರ್ಥಯಾತ್ರೆಯಾಗಿ ಬಂದಲ್ಲಿ ಈ ಬದರಿಕಾಶ್ರಕ್ಕೆ ರಾಮಪುರಕ್ಕೆ ಬಂದು, ದೇವರ ದರ್ಶನವ ಮಾಡಿದುದರಿಂದ ಈ ದೇವಸ್ಥಾನ ಜೀರ್ಣೋದ್ಧಾರಮಾಡಿ ದೇವಸ್ಥಾನ ಕರ್ತಿಸಿ ದೇವರಿಗೆ ಪಡಿತರ ದೀಪಾರಾಧನೆ ನಿತ್ಯೋತ್ಸವ ಪಕ್ಷೋತ್ಸವ ಮಾಸೋತ್ಸವಗಳು ಸಹ ನಡೆಯುವ ಹಾಗೆ ನಿಷ್ಕರ್ಷೆ ಮಾಡಿ, "ಅರ್ಜುನಪುರ"ವೆಂಬ ಹೆಸರಿಟ್ಟು ಮುಂದಕ್ಕೆ ಹೊರಟರು.

❖❖

೧೭

ತಳಕಾಡು ಕೈಫಿಯತ್ತು – ೧

ಮೆಕೆಂಝಿ ಸಂಪುಟ : ೧೬೨

ಉಲ್ಲುಕ್ಸ ಸಾಹೇಬರವರ ಕಡೆಯಿಂದಾ ತಂದದ್ದರ ನಕಲು. ತಾ. ೩೦ನೇ ಮಾಹೆ ಡಿಶಂಬರ ಸ ೧೮೦೬ . . . .ಮೊಕ್ಕಾಮ ಮೈಸೂರು.

ತಳಕಾಡು ತಾಲೂಕ ಅಗ್ರಹಾರ ಕೈಫಿಯತು.

ಹಂಮಿಗೆ ಅಗ್ರಹಾರ ಶಾಲಿವಾಹನ ಶಕ ವರುಷ ೧೪೪೮ನೆ ವ್ಯಯನಾಮ ಸಂವತ್ಸರ ಶ್ರಾವಣ ಶು ೫ಲ್ಲು ಚತುಸಮುದ್ರಪರಿಯಿಂದಾ ಶ್ರೀ ಕೃಷ್ಣದೇವರಾಯ ಮಹಾರಾಯರ್ರು ಆಷಾಢ ಶು.೧೫ ಚಂದ್ರಾಪರಾಗ ಪುಣ್ಯಕಾಲದಲ್ಲು ತಿಮ್ಮಣ್ಣ ಉಪಾಧ್ಯೆಯರ ಮಕ್ಕಳು ಲಕ್ಷ್ಮಣ ಉಪಾಧ್ಯರಿಗೆ ಉಮ್ಮತಉರ್ರು ಗವಡಿಕೆ ಸಲ್ಲುವ ಕೊಯಾರ್ರು [>ಕಲ್ಲಯ್ಯನೂರು] ಸ್ಥಳದ ಪಶ್ಚಿಮವಾಹಿನಿ ತೀರದ ಹಂಮಿಗೆ ಗ್ರಾಮವನ್ನು . . . . . ಧಾರಾಪೂರ್ವಕವಾಗಿ ಕೊಟ್ಟುಯಿದ್ದ ಬಗ್ಗೆ ಗ್ರಾಮಾ ಯೀಚೆಗೆ ವಿದ[>ಮಾಡಿದ]ವೃತ್ತಿ ೩೫ಕೆ ೧೭೫೯೦.

---

* – * ಇಷ್ಟು ಭಾಗ ಮುಂದಿನ ಪುಟದಲ್ಲಿ ಮತ್ತೆ ಬಂದಿದೆ. (ಸಂ)

ಕಲ್ಲಯೂರ್ರು ಅಗ್ರಹಾರ ಶಾಲಿವಾಹನ ಶಕವರುಷ ೧೪೪೫ನೇ ವಿಕ್ರಮನಾಮಸಂವತ್ಸರದಲ್ಲು ಕೃಷ್ಣದೇವರಾಯ ಮಹಾರಾಯರು ಪೃಥ್ವಿಸಾಮ್ರಜ್ಯಂಗೈಯುತ್ತಿರಲಾಗಿ . . . . ಪ್ರದಾನದಾಳ್ನೂರು ಗೋವಿಂದರಾಯರ್ರು ಕೃಷ್ಣರಾಯರಿಗೆ ಧರ್ಮವಾಗಬೇಕೆಂದು ಹೊಯ್ಸಳನ . . . . ದೇಶದ ಕಾವೇರಿ ತೀರದ . . . .ದ? ಚಿರಾಣ್ಯ[>ಚಿದಾರಣ್ಯ]ಕ್ಷೇತ್ರದ ದಕ್ಷಿಣವಲದ ತೀರ್ಥಕ್ಷೇತ್ರದಿಂದ ಮೂಗೂರ್ರು ಸ್ತಳನ . . ? . . ಕಲಿಯೂರು ಅಗ್ರಹಾರಕ್ಕೆ ೧ . . . . ನಾ ವೃತ್ತಿ ತಾಂಬ್ರಶಾಸನ ಬರಶಿಕೊಟ್ಟದ್ದು, ನಾಶವಾದರಿಂದ ಯೀ ಅಗ್ರಹಾರ ವಂದಂನಲ್ಲಿ [>ಶಿಥಿಲವಾದಲ್ಲಿ] ಕೃಷ್ಣರಾಯರು ಜೀರ್ನೋದ್ಧಾರಾಮಾಡಿ, ರಾಜಪುರಿವೆಂದು ಪ್ರತಿನಾಮದೇಹ[>ಧೇಯ]ವಲ್ಲಿ ಯೀ ಗ್ರಾಮಕೆ ವಿಕ್ರಮ ಸಂವತ್ಸರ ಮಾಘ ಶು. ೭ ಪುಣ್ಯಕಾಲದಲ್ಲು ಪಂಪಾಕ್ಷೇತ್ರದ ವಿರೂಪಾಕ್ಷದೇವರ ನಂ . . . . ನ ಉರೋ[>ಹಿರ]ಣ್ಯೋದಕ ದಾನ ಧಾರಾಪೂರ್ವಕವಾಗಿಯು ವೃತ್ತಿಯನ್ನು ಬ್ರಾಹ್ಮರಿಗೆ ಧಾರೆಯೆರೆದುದು, ೧೭೫೮೦.

೨

ಯಿನಾಮತಿ ಗ್ರಾಮ

೧. ಕೋಪಳಿಗ್ರಾಮ, ಭಾಗವತ ಸಂಪ್ರದಾಯದ ಬಾಲಕ್ರಿಷ್ಣಾನಂದಸ್ವಾಮಿಗಳವರ ಮಠಕ್ಕೆ ಶಾಲಿವಾಹನ ಶಕ ೧೯೩ನೆ ಪಿಂಗಳ ಸಂವತ್ಸರ ಮಾಘ ಶು. ೭ಲ್ಲೂ ಯಾದವಪುರಿಯಂಬ ಅಗ್ರಹಾರ ಹೊ ಸ್ವಾಮಿಗಳವರ ಮಠಕೆ ರಥಸಪ್ತಮಿ ಪುಣ್ಯಕಾಲದಲ್ಲಿ ಗಜಾರಣ್ಯಕ್ಷೇತ್ರ ಉತ್ತಿವಾವಿನಿತ್ತಿ ಆರ್ಕೇಶ್ವರಸ್ವಾಮಿ ಸನ್ನಿಧಿಯಲ್ಲು ಧಾರಾಧರವಾಗಿ ಪಾಳು ಗ್ರಾಮವನ್ನು ಕೊಟ್ಟರು.

ಯೀದಾಸ್ತು[>ಯಾದಾಸ್ತು] ತಳಕಾಡು ಕೈಫಿಯತು . . . . ಸುವಲ್ಲಿ ಬ. ೧೩ಲ್ಲು . . . . ಗೊಂದಿ ಸಂವತ್ಸಾನಕ್ಕೆ ವಳಿತವಾದ ತಳಕಾಡು ಕೈಫಿಯತು.

ಪೂರ್ವದಲ್ಲಿ ತ್ರೇತಾಯುಗದಲ್ಲಿ ಕಾಶಿಯಿಂದ ವಿಶ್ವೇಶ್ವರಸ್ವಾಮಿಯ ಆದಿ ೧[ಸೋ+]ಮದತ್ತ ರುಶೀಶ್ವರರು ಮುಂತಾದ ಶಿಷ್ಯರಿಗೆ ಮಾಡಿ ತಪಸಿಗೆ ಮೆಜ[>ಚ್ಚಿ] "ಸಾಯುಜ್ಯವನ್ನು ಕೊಡುತಾ ಯಿದ್ದೇವೆ. ಶಿಧಾ[>ಚಿದಾ]ರಣ್ಯಕ್ಷೇತ್ರಕ್ಕೆ ನೀಉ ಹೋದಲ್ಲಿ ಪ್ರತ್ಯಕ್ಷವಾಗಿ ಸಾಯುಜ್ಯವನ್ನು ಕೊಡುತ್ತಾ ಯಿದ್ದೇವೆ" ಯಂಬುದಾಗಿ ಹೇಳಿದ ಪ್ರಕಾರಕ್ಕೆ ಯೀ ಮಹೇಶ್ವರರು ಶಿಧಾ[>ಚಿದಾ]ರಣ್ಯಕ್ಕೆ ಬರುವಲ್ಲಿ, ಮಧ್ಯಮಾರ್ಗದಲ್ಲಿ ಗಜಗಳು ಸಂಹಾರಮಾಡಲಾಗಿ ಗಜರೂಪದಿಂದಾ ಬಂದು ಶಿಧಾ[>ಚಿದಾ]ರಣ್ಯದಲ್ಲಿ ಶಾಲ್ಮಲೀವೃಕ್ಷದಲ್ಲಿ ಯಿರ್ರುವಂಥಾ ಯೀಶ್ವರಗೆ ಪೂಜೆಯನ್ನು ಮಾಡಿಕೊಂಡು ಯಿರಲಾಗಿ, ತಲ ಕಾಡಯಂಬ ಯಿಬ್ಬರು ಕಿರಾತರು ಬಂದಂತವರಾಗಿ ಯೀ ಗಜಗಳು ಉಕ್ಷೆಪೂಜೆಯನ್ನು ಮಾಡುತ್ತಾ ಯಿದ್ದದನ್ನು ನೋಡಿ ಆಶ್ಚರ್ಯಪಟ್ಟು, ಆ ಗಜಗಳು ಹೊರಟುಹೋದ ಬಳಿಕಾ ಕೊಡಲಿಯಿಂದಾ ಮರವನ್ನು ಭೇದಿಸಿದಲ್ಲಿ, ಸ್ವಾಮಿ ಶಿರಸ್ಸಿನ ಮೇಲೆ ಪೆಟ್ಟು ಬೀಳಲಾಗಿ, ರಕ್ತಾಪ್ರವಾಹವಾಗಲು ಆ ಕಿರಾತರು ಮೂರ್ಚಿತರಾಗಲು, ಆಕಾಶವಾಣಿಯು ಹೇಳಿದಂಥಾ ವಾಕ್ಯ "ಉಕ್ಷ ಸಹ ಮೂಲವಾಗಿ ಚೂರ್ನಮಾಡಿ ಹಚ್ಚಲು ರಕ್ತಾ ಕ್ಷೀರವಾದಂತಾದು ಆಯಿತು." . . . . ತಲ ಕಾಡೆಯಂಬ . . . . . . ಯಿಬ್ಬರು ಬೇಡರಿಗೆ ಸಾಯುಜ್ಯಪದವಿಯನ್ನು ಕೊಟ್ಟರು. ಯೀ ಸ್ಥಳವನ್ನು ಅವರ ಹೆಸರಿನಿಂದಾ ತಳಕಾಡುಯೆಂಬ ಹೆಸರು ಉಂಟಾದಲ್ಲಿ ಯಿರಲಾಗಿ "ಗಜರೂಪಾದಂಥಾ ರುಷಿಗಳು ಸಾಯುಜ್ಯವನ್ನು

ಕೊಟ್ಟಂಥವರಾದ ಕಾರಣ ಗಜಪುರವೆಂಬ ನಾಮ ಪ್ರಶಿದ್ಧಿವಾಗಲಿ"ಯಂದು ಅಪ್ಪಣೆ ಕೊಟ್ಟದ್ದರಿಂದ ಗಜಾರಣ್ಯಕ್ಷೇತ್ರ ತ್ತಲಕಾಡುಯಂಬುದಾಗಿ ನಾಮಧೇಯ.

ಹೀಗೆ ಯಿರುತ್ತಾ ಯಿರುವಲ್ಲಿ ರಾಮಸ್ವಾಮಿಯವರು . . . ನಿಮಿತ್ಯ ಯಿಲ್ಲಿಗೆ ಬರುವಂಥಾ ಸಮಯದಲ್ಲಿ ಯೀ ಕ್ಷೇತ್ರಕ್ಕೆ . . . . ವೈದ್ಯನಾಥಸ್ವಾಮಿಯವರ ದರುಶನ ಮಾಡಿ ಕೆಲವು ದಿವಸ ಯಿದ್ದು, ಯೀ ಸ್ವಾಮೀದೇವಸ್ಥಾನ ಜೀರ್ನೋದ್ಧಾರಮಾಡಿ, ದೇವರಿಗೆ ಆಯಕಟ್ಟನ್ನು ಮಾಡಿಸಿ, ಊರನ್ನು ಪ್ರಶಸ್ತವಾಗಿ ಕಟ್ಟಿಸಿ, ಅಗ್ರಹಾರವನ್ನು ಮಾಡಿ, ಬ್ರಾಹ್ಮಣರಿಗೆ ಧಾರೆಯೆರೆದು ಕೊಟ್ಟರು. ಮುಂದಕೆ ದಂಡಕಾರಣ್ಯ ಕುರಿತು ತೆರಳಿದಂಥಾವರಾದರು.

ತರುವಾಯ ಕಲಿಯುಗದಲ್ಲಿ ಶಾಲಿವಾಹನ ಶಕ ವರುಷ ೭೮೪ . . . . . ಸು ತ್ತಳಕಾಡು ಸಣ್ಣಗ್ರಾಮಯನಿಸಿಕೊಂಡು ಯಿರಲಾಗಿ, ಆನೆಗೊಂದಿ ಸವಸ್ತಾನದ ದೇವರಾಯರ ಯಂಬ ರಾಯರ ಕಡೆಯಿಂದಾ ಸೋಮರಾಜವಡೆಯರೆಂಬ ವಡೆರಿಗೆ ಹನ್ನೆರಡು ಸಾವಿರ ಶೀಮೆ ಉಂಬಳಿಗೆ ಅಪ್ಪಣೆ ಆದ್ದರಿಂದ ಯೀ . . . . ದಕ್ಷಿಣ[ದೇ+]ಶಕೆ ಸ್ಥಳಾ ನಿರೀಕ್ಷಿಸುತ್ತ ಬಂದಲ್ಲಿ . . . . ಯಿಗಳು . . . . . ಕಾವೇರಿ ಚತುರವಾಹಿನಿತೀರ ಕ್ಷೇತ್ರಮಹಾತ್ಮೆಯನ್ನು ಕೇಳಿದಂತಾವರಾಗಿ ಯೀ ಸ್ತಳ ಬಹಳ ಪ್ರಶಸ್ತವಾದುದ ಕಂಡು, ತಮ್ಮ ಧಣಿಯಾದ . . . . ವಂಥಾವರಿಗೆ ಬರದು ಕೊಟ್ಟದಕೆ ಅವರ ಕಡೆಯಿಂದಾ ತಳಕಾಡು ಸಾವಿರ ಸೀಮೆಯನ್ನು ಸೇರಿಸಿಕೊಳ್ಳುವಂಥಾದು . . . . ಪನೆಯನ್ನು ತರಿಸಿಕೊಂಡು, ಯೀ ಸ್ಥಳವನ್ನು ಕಟ್ಟಿ . . . ನ್ನು ಮಾಡಿಕೊಂಡು, ಕೋಟೆಯನ್ನು ಕಟ್ಟಿಶಿ, ದೇವಸ್ಥಾನ ಜೀರ್ನೋದ್ಧಾರಮಾಡಿದಂಥಾದು ಶಾಲಿವಾಹನ ಶಕವರುಷ . . . . ೭೮೫ನೆ ಚಿತ್ರಭಾನು ಸಂವತ್ಸರ ಆದಿಯಾಗಿ ದೇವಸ್ಥಾನ ಮುಂತಾದ್ದಕ್ಕೆ ಪಡಿತರ ದೀಪಾರಾಧನೆ ಮುಂತಾದ್ದನು ಮಾಡ್ಸಿ ಆಳಿದಂಥಾ ಅರಸುಗಳ ವಿವರ : ೫೨ ಸೋಮರಾಜ ವಡೇರ್ರು ಶಾಲಿವಾಹನ ಶಕವರುಷ ೭೮೫ ಸಂದ ಚಿತ್ರಭಾನು ಸಂ ಲಾಗಾಯ್ತು ೭೮೩ನೇ ಭಾವಸಂವತ್ಸರದ ವರಿಗೆ ತಿ[>ಆ]ಳಿದಂತಾ ವರುಷ ೫೨.

ದೇವಸ್ತಾನವ ಜೀರ್ನೋದ್ಧಾರವ ಮಾಡಿ, ದೇವಸ್ಥಾನದ ಮುಂದಗಡೆಯಲ್ಲಿ ನೀಲಕಂಠೇಶ್ವರಯಂಬ ಲ್ಲೀಗ[>ಲಿಂಗ] ಪ್ರತಿಷ್ಟೆಯನ್ನು ಮಾಡಿ ರಾಜ್ಯವನ್ನು ಆಳುತ್ತಾ ಯಿದ್ದಲ್ಲಿ, ಆನೆಗೊಂದಿ ಸಂಸ್ಥಾನದಿ . . . ಮದ ರಾಮರಾಯಯೆಂಬವ . . . . ದೇಶದಿಂದ ಬರತಕ್ಕ ಪಗ . . . . ಣ ಕಳಕೊಂಡು ದಕ್ಷಿಣದೇಶಕೆ ಬರುವಲ್ಲಿ ಯೀ ಕ್ಷೇತ್ರದ ತಲಕಾವೇರಿ ಹತ್ತಿರ ವಾಹಿನಿಯಲ್ಲಿ . . . . ಯೀ ದೇವರ ದರುಶನವನ್ನು . . . . ರಾತ್ರೆ ವಾಸವನ್ನು ಮಾಡಿಕೊಂಡು ಯಿದ್ದ . . . ವಂದು ದಿವಸ ರಾತ್ರಿ ಯೀ ಮಾದವ ಮ . . . ಲ್ಲಿ ಕಾವೇರಿ ಅಮ್ಮನವರು "ಯೀ ಸ್ತಳದ ಪಶ್ಚಿಮದಿಕ್ಕಿನಲ್ಲಿ ಕಟ್ಟೆಯನ್ನು ಕಟ್ಟಿಸಿ ಯೀ ಕಟ್ಟೆ ಕಾಲುವೆ ತೆ . . . ದೆ . . . ಭೂಮಿ ದೇವರು ಬ್ರಾಹ್ಮರಿಗೆ ಧಾರೆ ಯರಕ್ಕೊಂಡು[>ಎರದುಕೊಡು]" ಯಂಬುದಾಗಿ ಅಪ್ಪಣೆ ಕೊಟ್ಟ ಪ್ರಕಾರಕೆ ತೆ . . . . ಯದ್ದು ತಂದ ಕಪ್ಪದ ಹಣದಲ್ಲಿ ತಮ್ಮ ದೊರಿಗೆ ಧರ್ಮ ಬರಲಿ ಯಂಬುದಾಗಿ ಕಟ್ಟೆಯನ್ನು ಕಟ್ಟಿಸಿ.

ಶ್ಲೋಕಾ

ಶಾಖೆ ಶೋಡಷಾಮಿ ಶೃತಾ ಸ್ರೆವತ್ಕರೆ ಆ . . . . ದ ವತ್ಸರುಗ್ರಮ ಶಾಖೆ ಸಿತ ಸಪ್ತಮಿ ಭೂಗದಿ ।೪। ಲಗ್ನೆ ಚತ್ರಿಂ ೩೦ನೇ ಷ್ಲ . . . . ವೆನಿತು . . . . ಮಾದವಮಂತ್ರಿ ರಾಮಕರ್ರಿವನ ಬ . .

ಕ್ಮಚಃ ಪ್ರತ್ಯಧಾಮುಂದದಿಂದಾ ಶ್ಯಾಸ್ಯಾ ಆಪೂರ್ವ . . . . ತದಿನಿತಾನಂತ್ರುತ್ರೆ "ಯಂಬ ಶೋ[>ಸ್ಲೋ]ಕಪ್ರಕಾರಕ್ಕೆ ಮ . . . . ನ್ನೂ ಕಾಲ್ಲುವೆ ಕೆಳಗೆ ಆಚಂದ್ರಾರ್ಕವಾಗಿ . . . . . ರಾಜಿ ವಡೆಯ . . . . . ಸಂವತ್ಸರದ ಆರಭ್ಯ . . . . ಶಕ . . . . ಆಳಿದ ವರುಷಾ . . . . ಸದರೀ . . . . ನ್ನೂ ಆಳುತ್ತಾ ಯಿರುವ . . . . ಆಗ್ಯೆ ಬಂದು ಕ್ರಿಷ್ಣದೇವರಾಯರು . . . . ೦ದು ಯಿದ್ದಾಗ್ಯೆ ಬಿಟ್ಟಂತ ಅಗ್ರಹಾರ . . . . ೧* ಹಮ್ಮಿಗೆ ಅಗ್ರಹಾರ ಲಕ್ಷ್ಮೀನಾಥ . . . . ಶಾಲಿವಾಹನ ಶಕ ವರುಷಾ ೧೪೪೮ನೇ ಕ್ರೋಧನ ಸಂವತ್ಸರ . . . . ೨೫ರಲ್ಲು ಚತುಸ್ಸಮುದ್ರ ಪ್ರಪತ್ತಿಯಾದ ಕ್ರಿಷ್ಣರಾಯ ಮಹಾರಾಯ್ರರು ಯಜುಶಾಖಾಧ್ಯಾಯಗಳಾದ ಆಪಸ್ತಂಭ ಸ್ತೋ[>ಸೂ]ತ್ರದ . . . . ಧವಪುರ ತ್ತಿಮಂಣ್ಣ ಉಪಾಧ್ಯೆಯರ ಮಕ್ಕಳು ಲಕ್ಷ್ಮಣ ಉಪಾಧ್ಯರಿಗೆ ಸದಾ . . . . ನು ಸಂವತ್ಸರ ಆಷಾಢ ಶು ೧೫ ಚಂದ್ರಪರಗ ಪುಣ್ಯಕಾಲದಲಿ ಉಮ್ಮತ್ತೂರು ಚಾವಡಿಗೆ ಸಲ್ಲುವ . . . . ಕಲ್ಲಯ್ಯನೂರು ಸ್ಥಳದ ಪಶ್ಚಿಮವಾಹಿನಿ ತೀರ ಹೆಂಮಿಗೆ . . . . ಯಕ ಭೋಗ್ಯಯ್ಯ ಯಿವರು ಮಾಡಿದ ಉತ್ತಿ ೩ಕೆ . . . ೦ಲ್ಲು ೧೭೫೯೦.*

ಕಲ್ಲಯ್ಯನೂರ್ರು ಅಗ್ರಹಾರ ಶಾಲಿವಾಹನ ಶಕ . . . . ತ್ರ . . . . ರಾಯರ್ರು ಪೃಥ್ವಿಲಿ . . . . ಆ ಕೃಷ್ಣರಾಯರ . . . . ರಾಯರು . . . . ವಾಗಬೇಕೆಂದು . . . . ವಾರ್ರುಣಾಶಿಯ . . . . ಕ್ಷಣಕುಲದ ಅನಂತಕ್ಷೇತ್ರ . . . . ಸ್ತಳದಲ್ಲಿ ಕಲ್ಲಿಯೂರ್ರು ಅಗ್ರಹಾರ . . . . ಭ್ರು ಸಾಧನ ಬರಶಿಕೊಟ್ಟದು, ನಷ್ಟವಾದ . . . . ಅಗ್ರಹಾರ ಶಿಥಿಲವಾದನ್ನೂ ಕ್ರಿ . . . . ಜೀರ್ನೋದ್ಧಾರವಾಗಿ ಕ್ರಿಷ್ಣಪುರ . . . . ಹವಾದ ಕಲ್ಲಿಯೂರ್ರು ಗ್ರಾ . . . . ೭ರಥ . . . . ದಲ್ಲು ಪಂಪಾಕ್ಷೇತ್ರದ . . . . ದಿಯಲ್ಲು ಸಹಿರಣ್ಯೋದಕ ದಾನಧಾರಾಪೂರ್ವಕವಾಗಿ ಸದ್ಯಾ ಪರಿಚೆ . . . . ಗಿ ೭೭ ಉತ್ತಿ ಮುಂತಾದ ಬ್ರಾಹ್ಮರಿಗೆ ಕೊಟ್ಟ . . . . ಅಗ್ರಹಾರ

೨

೮೬ ಸಿದ್ಧರಾಜ ಪಡೆಯರುರ್ರುಯೆಂಬವರು ಶಖ . . . . ಯಿವರ ವಂಶಸ್ತರು ಮಂಗರ . . . . ವಡೆ ವರುಷ ೧೦೭೨ನೆ ಶಕ ಸಂವತ್ಸರ ಆರಭ್ಯ . . . . ವಿಜಯ ಸಂವತ್ಸರದ ವರಿಗೆ ವೃಹೇ[>ವೈದೇ]ಶ್ವರಸ್ವಾಮಿ . . . . ನದ ಮುಂದುಗಡೆ ಗಂಗಾಧರೇಶ್ವ . . . . ಪ್ರತಿಷ್ಠೆಮಾಡಿ ಆಳಿದ ವರುಷ . . . .

೮೪

---

* ಇಷ್ಟು ಭಾಗ ಮೊದಲ ಪುಟದ ಆರಂಭದಲ್ಲಿ ಬಂದಿದೆ. (ಸಂ)

ಯಿವರ ವಂಶಸ್ತ ಮರಿಲ್ಲಿಂಗ . . . . ಶಕ ೧೧೫ . . . . . ಆನಂದ ಸಂವತ್ಸರದಾರಭ್ಯ ಶ್ಯಾಲಿವಾಹನ ಶಕ . . . . ಕಾಳಾಯುಕ್ತಿ ಸಂವತ್ಸರ ವರಿಗೆ ಆಳಿದ ವರುಷ.

೭೬ ಮೈಸೂರು ರಾಜವಡೆಯರು ಶಕ ೧೨೪೨ನೇ ಸಿದ್ಧಾರ್ಥಿ ಸಂವತ್ಸರದಾರಭ್ಯ ಶಖ ೧೩೧೭ . . . . ಭಾವ ಸಂವತ್ಸರದ ವರಿಗೆ.

೬೭ ನಂಜರಾಜವಡೆಯರೆಂಬವರು ಶಖ . . . . ಯೀಶ್ವರ ಸಂವತ್ಸರ ಆರಭ್ಯ ಶಖ ೧೩೮ . . . . ಆಳಿದ ವರುಷಾ . . . . ದೇವರ ಗುಡಿ ಮುಂತಾದ್ದ . . . . ಸಹವರ್ಣಿಕಾಮನ್ನೂ . . . . ಪುಣ್ಯಕಾಲ ವೈದೇಶ್ವರಸ್ವಾಮಿ ಸನ್ನಿಧಿಯಲ್ಲಿ ಪ್ರದವಹು . . . . ನಂದಸ್ವಾಮಿಗಳವರಿಗೆ ಮಾಡುವ ಮನ . . . . ಧಾರೆಯನೆರದು ಕೊಟ್ಟ . . . . ನಗರವನ್ನೂ ಕುರಿತು . . . . ವಡೆರ್ರು ಯಂಬವನು ಶಾಲಿವಾಹನ ಶಕ ವರುಷಾ ೮೩೮೩ನೇ [>೮೩೭ನೇ] ಸಂವತ್ಸರಲಾಗಾಯಿತು ಶಖ ೯೧೫ನೆ ನಂದನ ಸಂವತ್ಸರದ ವರಿಗೆ ವರುಷಾ ೭೮.

೬೫ ಯಿವರ ಮಕ್ಕಳು ನಂಜರಾಜವಡೆರ್ರು ಶಕ ೯೧೬ನೆ ಜಯ ಸಂ॥ಲ್ಲು ಶಕ ೯೮೦ನೇ ಹೇವಿಳಂಬಿ ಸಂವತ್ಸರದ ವರಿಗೆ . . . . ವೈದೇಶ್ವರ ಸ್ವಾಮಿಯವರ ಗುಡಿ ಮುಂದೆ ತಮ್ಮ ಪ್ರತಿಷ್ಟೆಯನ್ನು . . . . ಆಳಿದ ವರುಷಾ ೬೫.

. . . . ಜಿ ವ . . . . ನಂದ ಸಂವತ್ಸರದಾರಭ್ಯ ಶಕ ೧೫೫೫ನೆ ಆಂಗೀರಸ ಸಂವತ್ಸರದ ವರಿಗೆ ಆಳಿದ ವರುಷಾ.

ಅವರ ದಿವಸದಲ್ಲಿ ಶ್ರೀರಂಗಪಟ್ಟಣವನ್ನು ಶ್ರೀರಂಗನಾಯಕರ್ರು ಆಳುತ್ತ ಯಿರುವಲ್ಲಿ ಅವರಿಗೆ . . . . ನಾಲ್ಕು ಳ ಯಂಬ ರೋಗವಾಗಲಾಗಿ ಯೇನು ಉಪಚಾರ ಮಾಡಿದರೂ ವಾಸಿಯಾಗಲಿಲ್ಲವಾದ ಕಾರಣ ಗಜಾರಣ್ಯಕ್ಷೇತ್ರ ಮಹಾತ್ಮೆ, ವೈದೇಶ್ವರ ಮಹಾತ್ಮೆಯನ್ನು ಕೇಳಿ, ಅಲ್ಲಿಗು ಯೀ ಅರಸುಗಳಿಗೆ ಮತ್ರ ಭಾವವಾಗಿಯಿದ್ದ ಕಾರಣ ಆ ಶ್ರಿರಂಗರಾಯನು ಯೀ ಕ್ಷೇತ್ರವನ್ನು ಕುರ್ರಿತು ಬಂದಂಥವನಾಗಿ, ಯೀ ಕ್ಷೇತ್ರದಲ್ಲಿ ವೈದ್ಧೇಶ್ವರಸ್ವಾಮಿಯವರ ಸೇವೆಯನ್ನು ಮಾಡಿಕೊಂಡು ಯಿರಲಾಗಿ, ಕೆಲಉ ದಿವಸ ವಾಸವನ್ನು ಮಾಡಿದ ತರುವಾಯ ಆ ರೋಗ ವಾಸಿಯಾದಂತಾದ್ದು ಆಯಿತು. ಆ ತುರವಾಯ ಅವರಿಗೆ ಪುತ್ರಸಂತಾನ ಯಿಲ್ಲದರಿಂದ ವೈರಾಗ್ಯಭಾವವಾಗಿ ಯೀ ಕ್ಷೇತ್ರವನ್ನು ಬಿಟ್ಟು ಹೋಗಲಾರದೆ ಯಿರುತ್ತಾ ಯಿರಲಾಗಿ, ಅವಸಾನಕಾಲ ಪ್ರಾಪ್ತವಾಗಲಾಗಿ ಅಲ್ಲಿ ಮೈಸೂರು ಅರಸುಗಳಿಗೂ ಯೀ ರಾಯರಿಗೂ ಮಿತ್ರಭಾವವಾಗಿಯಿದ್ದ ಕಾರಣ ಪತ್ನಿಯರಾದಂಥಾ ಶ್ರೀರಂಗಮ್ಮನ ಬಳಿಗೆ ಬುದ್ದಿ . . . . ನಿರೂಪವ . . . . ಬರಶಿ ಕಳಿಸಿದುದು. ಮೈಸೂರು ಚಾಮರಾಜ ವಡೆಯರಿಗೆ ಕರೆಕಳುಹಿಸಿ, ಆ ಸಂಸ್ಥಾನವನ್ನು ಅವರ ವಶಕ್ಕೆ ಕೊಟ್ಟು 'ನೀನು ಶೀಘ್ರ . . . . ಬರುವನು'ಯಂಬುದಾಗಿ ಬರಶಿ ಕಳುಹಿಸಿ ಸಂಸ್ಥಾನವನ್ನು ಚಾಮರಾಜ ವಡೇರಿಗೆ ವಹಿಸಿ ಪಟ್ಟಣದ ಸಂಸ್ಥಾನವನ್ನು ಕೊಟ್ಟಂಥಾ . . . . ದಾನ ದತ್ತಿಯನ್ನು ಕುರಿತು ಹೊರತು ಹೋರಕು . . . . ಲ್ಲಿ ಆ ರಂಗಮ್ಮನವರ[>ರು] ಅಮೋಘವಾದಂಥಾ ಮೂಗುತಿಯನ್ನು ಯಿಟ್ಟುಕೊಂಡು ಯಿದ್ದಲ್ಲಿ, ಯೀ ಮೈಸೂರು ಅರಸು ಆದಂಥಾವನು 'ಮೂಗುತಿಯನ್ನು ನಮಗೆ ಕೊಡು' ಯಂಬುದಾಗಿ ಪೀಡಿಸಿದ ಕಾರಣ, ಕೊಡದೆ ಬಹು ಕೋಪಯುಕ್ತಳಾಗಿ ಹೊರಟು ಬಂದಂಥವಳಾಗಿ, ಯಿಲ್ಲಿ ಶ್ರೀರಂಗರಾಯರ್ರು ಸ್ವರ್ಗಸ್ಥರಾದರು. ಪತ್ನಿಯಾದ ರಂಗಮ್ಮನವರು ಕೆಲಉ ದಿವಸ ಯೀ ಕ್ಷೇತ್ರದಲ್ಲಿ ವಾಸವನ್ನು ಮಾಡಿಕೊಂಡು

ಯಿದ್ದಲ್ಲಿ, ಯೀ ಮೂಗುತ್ತಿ ನಿಮಿತ್ಯವಾಗಿ ತಳಕಾಡು ಅರಸುಗಳ ಬಳಿಗೆ ಮೈಸೂರು ಅರಸು ಚಾಮರಾಜವಡೆಯರ್ರು "ಶ್ರೀರಂಗಮ್ಮನವರನು ತಮ್ಮ ಸಂಸ್ಥಾನಕೆ ಕಳುಹಿಸಿ ಕೊಡಿ"ಯಂಬುದಾಗಿ ಬರದು ಕಳುಹಿಸಿ ಯಿದ್ದಲ್ಲಿ, ಯಿವರು ಕಳುಹಿಸದೆ ಧಿಕ್ಕಾರವನ್ನು ಮಾಡಿದಂತಾವರಾದರು. ಆದುದರಿಂದ ಆ ಸಂಸ್ಥಾನದ . . . . ತ್ತಿ ಬಂದು ಯೀ ಸಂಸ್ಥಾನವನ್ನು ಸಾಧಿಸಿದರು. ತಳಕಾಡು ಅರಸುಗಳು[>ಳ] ಪರಿಚಿತರ[>ಪರಾಜಿತರ] ಮಾಡಿದರು. ಯಿಷ್ಟರಲ್ಲಿ ಶ್ರೀರಂಗಮ್ಮನವರು 'ನಮ್ಮ ಮೂಗುತ್ತಿ ನಿಮಿತ್ಯ ಮಾನಭಂಗ ಮಾಡುತ್ತಾರೆ' ರೆಂಬದಾಗಿ ತಿಳಿದು, ಬಹುಕೋಪ ಬಂದಂಥವಳಾಗಿ 'ನಮ್ಮ ನಿಮಿತ್ಯ ತಳಕಾಡು ಅರಸುಗಳು ಸಂಸ್ಥಾನ ಬಿಟ್ಟು ಪರಾಜಿತರಾದ ಕಲ್ಲಾಯಿ ಸಂವಸ್ಥಾನ ಅವರ ವರ[>ವಶ]ಕೆ ಆಯಿತು' ಯಂಬುದಾಗಿ ಕೋಪಯುಕ್ತಳಾಗಿ ರಾತ್ರೆಕಾಲದಲ್ಲು ನದೀ ತೀರಕ್ಕೆ ಹೋಗಿ, "ನಾನು ಮಹಾಪತಿವೃತೆಯಾಗಿದ್ದರೆ ತಳಕಾಡು ಸವಸ್ಥಾನ ಮರಳು ಬೆಳೆದು ಹೋಗಲಿ, ಮೈಸೂರು ಸಂಸ್ಥಾನದವರಿಗೆ ಮಕ್ಕಳು ಆಗಬೇಡಾ, ನಾನು ಯಲ್ಲಿ ಪ್ರವೇಶವ ಮಾಡುತ್ತಾ ಯಿದ್ದೇನೋ ಆ ಸ್ಥಳದಲ್ಲಿ ಮಡವು ಆಗಿ ಈ ಮೂಗುತಿಯು ಸಿಕ್ಕಬೇಡ"ಯಂಬುದಾಗಿ ಶಾಪವನ್ನು ಕೊಟ್ಟಂಥವಳಾಗಿ ಕಾವೇರಿ ಪ್ರವೇಶವನ್ನು ಮಾಡಿದಂಥವಳಾದಳು. ತರುವಾಯ ಮೈಸೂರು ಅರಸರು ಈ ಸವಸ್ಥಾನ ಸೇರಿಶಿಕೊಂಡು ಶಾಲಿವಾಹನ ಶಕ ವರ್ಷಂಗಳು ೧೫೫೬ನೆ ಸಂದ ವರ್ತಮನವಾದ ಶ್ರೀಮುಖ ಸಂವತ್ಸರದಾರಭ್ಯ ಶಕ ೧೭೨೬ನೇ ರುಧಿರೋದ್ಗಾರು ಸಂವತ್ಸರ ವರಿಗೆ ಆಳಿದಂಥಾ ವರುಷಂಗಳು ೧೭೦ಕ್ಕೆ ವಿವರವಿರುವದು.

ವರುಷ	ತಿಂಗಳು	
೦ –	೬	ಚಾಮರಾಜ ವಡೆಯರ ಆಳಿಕೆ
೨೫ –	೦	ಕಂಠೀರವ ನರಸರಾಜ ವಡೆಯರವರ ಆಳಿಕೆ ವರುಷಾ
೫ –	೦	ದೊಡ್ಡ ದೇವರಾಜ ವಡೆಯರ್ರು ವರುಷ
೩೨ –	೦	ಚಿಕ್ಕದೇವರಾಜ ವಡೆಯರ್ರು ವರುಷ
೩ –	೦	ಮುಹು ಅರಸು ವರುಷ – ೩
೧೦ –	೦	ಚಾಮರಾಜ ವಡೆಯರ್ರು
೩೫ –	೦	ಕೃಷ್ಣರಾಜ ವಡೆಯರು
೧೧ –	೦	ಚಿಕ್ಕ ಕೃಷ್ಣರಾಜ ವಡೆಯರು
೨೬ –	೦	ದೊಡ್ಡ ನವಾಬ ಹೈದರಲಿಖಾನ ಬಾಹದರವರು
೧೬ –	೦	ಟೀಪುಸುಲತಾನ ಪಾದಷಹಾ
೬ –	೦	ಯಿಂಗ್ರೇಜಿ ಬಾಹದರ ಕಡೆ ಚಿಕ್ಕ ಶ್ರೀ ಕೃಷ್ಣರಾಜ ವಡೆಯರು
೧೭೦ –	೦	
೭೬		

❖❖

೧೮
ತಳಕಾಡು ಕೈಫಿಯತ್ತು–೨*

ಡಿ. ನಂಬರ್ ಸಂಪುಟ : ೧೬೨

ಶ್ರೀಮದ್ಗಜಾರಣ್ಯದ ಪಂಚಲಿಂಗ ಉದ್ಯಾ[>ದ್ಭ]ವವಾದ ಸ್ಥಳದ ಮಹತ್ತು . . . . ಶ್ರೀ ವೈದ್ಯನಾಥಸ್ವಾಮಿಯವರ ಉತ್ಪತ್ತಿಯಾದದ್ದು, ಪೂರ್ವದಲ್ಲಿ ತ್ರೈತಯುಗದಲ್ಲಿ ಸೋಮದತ್ತ ಋಷೀಶ್ವರರು ಶಿಷ್ಯರ ಸಮೇತರಾಗಿ ಕಾಶೀಕ್ಷೇತ್ರದಲ್ಲಿ ತಪಸ್ಸನ್ನು ಮಾಡುತ್ತಿರಲು, ಕೆಲವು ಕಾಲದ ಮೇಲೆ ವಿಶ್ವೇಶ್ವರಸ್ವಾಮಿಯವರು ಪಾರ್ವತಿಯ ಸಮೇತರಾಗಿ ವೃಷಭಾರೂಢರಾಗಿ ಪ್ರತ್ಯಕ್ಷರಾಗಿ "ಎಳಯ್ಯಾ ಋಷೀಶ್ವರನೆ. ಬಹುದಿನ ತಪಸ್ಸ ಮಾಡಿದ ನಿನ್ನ ತಪಸ್ಸಿಗೆ ಸಂತುಷ್ಟರಾದೆವು. ನಿನ್ನ ಮನಸಾಭೀಷ್ಟವೇನೆಂ"ದು ಕೇಳಲು ಅದಕ್ಕೆ ಆ ಋಷೀಶ್ವರನು "ಮೋಕ್ಷವೊಂದೇ ಬೇಕಾದದ್ದು" ಎಂದು ಕೇಳಿಕೊಳ್ಳಲು, ಅದಕ್ಕೆ ಸ್ವಾಮಿಯವರು "ದಕ್ಷಿಣದೇಶದಲ್ಲಿ ತಿರುಮಗೊಡಲು ಎಂಬ ಕ್ಷೇತ್ರಕ್ಕೆ ಪೂರ್ವಭಾಗದ ಅರ್ಧಯೋಜನ ದೂರದಲ್ಲಿ ಸಿದ್ಧಾರಣ್ಯ[>ಚಿದಾರಣ್ಯ]ವೆಂಬ ಕ್ಷೇತ್ರವಿದೆ. ಆ ಕ್ಷೇತ್ರದಲ್ಲಿ ನಾವು ಪಂಚಮುಖದಿಂದ ಉದ್ಭವವಾಗಿರುತ್ತೇವೆ. ಆ ಕ್ಷೇತ್ರಕ್ಕೆ ನೀನು ಶಿಷ್ಯರ ಸಮೇತವಾಗಿ ಹೋಗಿ, ಅಲ್ಲಿಯೇ ವಾಸವನ್ನು ಮಾಡಿ, ನಮ್ಮ ಆರಾಧನೆಯನ್ನು ಮಾಡಿದರೆ ನೀವು ಕೇಳಿದ ವರವನ್ನು ಕೊಡುತ್ತೇವೆ." ಎಂದು ಅಪ್ಪಣೆಯನ್ನು ಕೊಟ್ಟ ವಾಕ್ಯವನ್ನು ಕೇಳಿ, ಆಶ್ಚರ್ಯಯುಕ್ತರಾಗಿ "ಸ್ವಾಮಿಯೇ ಸರ್ವಕ್ಷೇತ್ರಗಳಲ್ಲಿಯೂ ಕಾಶೀಕ್ಷೇತ್ರವು ಉತ್ತಮವಾದ ನಿಮಿತ್ತ ಇಲ್ಲಿ ತಪಸ್ಸನ್ನು ಮಾಡಿ ಮೋಕ್ಷವನ್ನು ಕೇಳಿಕೊಂಡರೆ, ದಕ್ಷಿಣದಿಕ್ಕಿನಲ್ಲಿರುವ ಸಿದ್ಧಾರಣ್ಯ[>ಚಿದಾರಣ್ಯ] ಕ್ಷೇತ್ರಕ್ಕೆ ಹೋಗು ಎಂದು ಕಟ್ಟು ಮಾಡಿದಿರಿ. ಸಿದ್ಧಾರಣ್ಯದ[>ಚಿದಾರಣ್ಯದ] ಮಹಾತ್ಮೆಯನ್ನು ಅಪ್ಪಣೆ ಮಾಡಬೇಕು" ಎಂದು ಕೇಳಿಕೊಳ್ಳಲು, ಅದಕ್ಕೆ ಸ್ವಾಮಿಯು "ನೀವು ಸಾಯುಜ್ಯವನ್ನೇ ಕೇಳಿಕೊಂಡದ್ದರಿಂದ ಅದಕ್ಕೆ ಸರಿಯಾದದ್ದು ಆ ಕ್ಷೇತ್ರವೇ ಸರಿ" ಎಂದು ಅಪ್ಪಣೆಯಂ ಕೊಡಲು ಅದೇ ರೀತಿಯಲ್ಲಿ ಆ ಋಷಿಯು ಶಿಷ್ಯರ ಸಮೇತನಾಗಿ ಸಿದ್ಧಾರಣ್ಯವನ್ನು [>ಚಿದಾರಣ್ಯವನ್ನು] ಕುರಿತು ಬರುತ್ತಿರಲಾಗಿ ಮಧ್ಯೆ ಗೊಂಡಾರಣ್ಯದಲ್ಲಿ ಕಾಡು ಆನೆಗಳು ಶಿಷ್ಯರ ಸಮೇತನಾದ ಈ ಋಷಿಯನ್ನು ಸಂಹಾರ ಮಾಡಬೇಕೆಂದು ಬರುತ್ತಿರಲು, ಅದನ್ನು ನೋಡಿ ಬಹಳ ಭಯಪಟ್ಟವರಾಗಿ ತದೇಕ ಧ್ಯಾನದಿಂದಿರಲು ಆ ಗಜಗಳು ಬಂದು ಸಂಹರಿಸಿದ್ದರಿಂದಲು, "ಅಂತ್ಯಕಾಲದಲ್ಲಿ ಯಾವ ಸ್ಮರಣೆಯು ಬರುತ್ತದೆಯೋ ಪುನಃ ಅದೇ ಜನ್ಮವು ಬರುವುದು" ಎಂಬ ವಚನದಿಂದ

ಯಂ ಯಂ ವಾಪಿಸ್ಮರನ್ ಭಾವಂ ತ್ಯಜಂತ್ಯಂತೇ ಕಲೇವರಂ।

ತಂ ತಮೇವೈತಿ ಕೌಂತೇಯ ಸದ ತದ್ಭಾವ ಭಾವಿತಃ॥

---

* ಸೋಸಲೆ ಕೈಫಿಯತ್ತು–೧ರಲ್ಲಿ ಸೇರಿಕೊಂಡಿದ್ದ ಇದನ್ನು ಪ್ರತ್ಯೇಕಿಡಿಕೊಳ್ಳಲಾಗಿದೆ (ಸಂ)

ಶಿಷ್ಯರ ಸಮೇತ ಗಜಜನ್ಮವು ಬಂದು, ಹಿಂದಿನ ಜನ್ಮದಲ್ಲಿ ಮಾಡಿದ ತಪಃಪ್ರಭಾವದಿಂದ ಪೂರ್ವಜನ್ಮಸ್ಮರಣೆಯುಂಟಾಗಿ ಸಿದ್ಧಾರಣ್ಯ[>ಚಿದಾರಣ್ಯ] ಸ್ಥಳಕ್ಕೆ ಬಂದವರಾದರು. ಅನಂತರ ವಿಶ್ವೇಶ್ವರಸ್ವಾಮಿಯವರು ಮಣಿಕರ್ಣಿಕೆಯ ಸಮೇತರಾಗಿ ಶುನಕ ಶಾಲ್ಮಲೀ ವೃಕ್ಷದಲ್ಲಿ ವೈಶಾಖ ಶುದ್ಧ ೧೫ ಉದ್ಭವಿಸಿದವರಾದರು. ಮಣಿಕರ್ಣಿಕೆಯು ಗೋಕರ್ಣ ಎಂಬ ನಾಮದಿಂದ ನೆಲಸಿದವಳಾದಳು. ತರುವಾಯ ಸೋಮದತ್ತಋಷೀಶ್ವರನು ಶಿಷ್ಯರ ಸಮೇತನಾಗಿ ಗಜರೂಪದಿಂದ ಬಂದು ಗೋಕರ್ಣ ತೀರ್ಥದಲ್ಲಿ ಸ್ನಾನವನ್ನು ಮಾಡಿ, ಅದರಲ್ಲಿರುವ ಕಮಲವನ್ನು ತೆಗೆದುಕೊಂಡು ಶುನಕ ಶಾಲ್ಮಲೀ ವೃಕ್ಷದ ಸಮೀಪಕ್ಕೆ ಬಂದು, ಪ್ರತಿದಿನವೂ ಪೂಜೆಯಂ ಮಾಡುತ್ತಿರಲು, ಇದನ್ನು ಆ ಅರಣ್ಯದಲ್ಲಿ ಬೇಟೆಗೋಸ್ಕರ ಸಂಚರಿಸುತ್ತಾ ತಲೆಕಾಡು ಎಂಬ ಇಬ್ಬರು ಬೇಡರು ಬಂದು . . . . ಯೋಚಿಸಿ ಈಚಿಗೆ ತೆಗೆದು ಪೂಜೆಯನ್ನು ಮಾಡಿ ಸಂಚಾರಕ್ಕೆ ಹೋದರು. ತರುವಾಯ . . . . ಕೊಡಲಿಯನ್ನು ತೆಗೆದುಕೊಂಡು ಬಂದು ಶಾಲ್ಮಲೀ ವೃಕ್ಷವನ್ನು ಛೇದಿಸಿದರು. . . . . ಬಿದ್ದು ಮಾಯವಾದ್ದರಿಂದ ರಕ್ತಪ್ರವಾಹವನ್ನು ಕಂಡು ಭಯದಿಂದ ಮೂರ್ಛಾಕ್ರಾಂತರಾದರು. ಆಗ ಆಕಾಶವಾಣಿಯು "ನೀವು ಭಯ ಪಡಬೇಡಿರಿ, ಈ ವೃಕ್ಷದ . . . . ಚೂರ್ಣವನ್ನು ಮಾಡಿ ಸ್ವಾಮಿಯ ಶಿರಸ್ಸಿಗೆ ಲೇಪವನ್ನು ಮಾಡಿ" ಎಂದು ಆಕಾಶವಾಣಿಯು ಹೇಳಿದಂಥ ವಾಕ್ಯವನ್ನು ಕೇಳಿ, ಮೂರ್ಛೆ ತಿಳಿದೆದ್ದು . . . . ಮಾ[>ಮೂ]ಲಿಕೆಯ ಚೂರ್ಣವನ್ನು ಮಾಡಿ ಲೇಪವನ್ನು ಮಾಡಿದಲ್ಲಿ ರಕ್ತಪ್ರವಾಹವು ನಿಂತಿತು. ಪ್ರವಹಿಸಿದಂಥ ರಕ್ತವು ಕ್ಷೀರವಾದ ಕಾರಣದಿಂದ ಸ್ವಾಮಿಯು ಬೇಡಿದ [>ಬೇಡರ]ವರಿಗೆ ಪ್ರತ್ಯಕ್ಷನಾಗಿ, "ಈ ಕ್ಷೀರವನ್ನು ಪಾನಮಾಡಿಸುವ[>ವೆ]ನು. ನಮ್ಮ ಸಮೀಪದಲ್ಲಿ ಪ್ರಮಥಗಣಗಳೆಲ್ಲವೂ ಶಿಲಾರೂಪದಿಂದ ಈ ಕ್ಷೇತ್ರದಲ್ಲಿ ವಾಸವಂ ಮಾಡಿ, ಈ ಕ್ಷೇತ್ರವು ನಿಮ್ಮ ಹೆಸರಿನಿಂದ ತಲೆಕಾಡು ಎಂಬ ನಾಮಧೇಯವುಳ್ಳದ್ದಾಗಲಿ" ಎಂದು ಅಪ್ಪಣೆಯನ್ನು ಕೊಟ್ಟರು.

ತರುವಾಯ ಆನೆಗಳೆಲ್ಲಾ ಬಂದು ಗೋಕರ್ಣಕ್ಕೂ ಸ್ವಾಮಿಯ ಸನ್ನಿಧಿಗೂ ಏಕವಾಗಿರುವಂಥ ಕ್ಷೀರವನ್ನು ನೋಡಿ ಪಾನವನ್ನು ಮಾಡಿರಲು, ಆಗ ಶಿವನು "ಕೈಲಾಸಕ್ಕೆ ಸಶರೀರರಾಗಿ ಹೋಗಿ' ಎಂದು ಅಪ್ಪಣೆ ಕೊಡಿಸಿದನು. ತಮ್ಮ ದೇಹಕ್ಕೆ ತಾವೇ ಆಯುಷ್ಯವನ್ನುಂಟು ಮಾಡಿಕೊಂಡಿದ್ದರಿಂದ . . . .ಎಂಬ ನಾಮಧೇಯಕ್ಕೆ ಪ್ರತಿನಾಮಧೇಯ . . . . ಉಳ್ಳಂಥವರಾದರು. ತದಾರಭ್ಯವಾಗಿ ಈ ಆಶ್ರಮವು . . . . ಮಣಿಕರ್ಣಿಕೆಯ . . . . ಪ್ರದೇಶದಿಂದ ಉದಕವನ್ನು ಬಿಟ್ಟದ್ದರಿಂದ . . . . ಗೋಕರ್ಣ ಎಂಬ ಹೆಸರುಳ್ಳಂಥದು ಆಯಿತು. "ಇದರಲ್ಲಿ ಸ್ನಾನತರ್ಪಣಗಳನ್ನು ಮಾಡಿದಂಥವರು ಅನುಬಂಧಿಗಳ ಸಮೇತರಾಗಿ ಸಾಯುಜ್ಯವನ್ನು ಪಡೆಯಲಿ" ಎಂದು ವರವನ್ನು ಕೊಟ್ಟವರಾದರು.

ಸೂರ್ಯನಾರಾಯಣದೇವರು ಈ ಕ್ಷೇತ್ರದ ಮಹಾತ್ಮೆಯನ್ನು ಕೇಳಿ, ತಾನು ತ್ರಿಸಂಧ್ಯಾಕಾಲದಲ್ಲಿಯೂ ಬಂದು, ತನ್ನ ಉಪದ್ರವ ಶಾಂತ್ಯರ್ಥವಾಗಿ ಈ ಆಶ್ರಮಕ್ಕೆ ಪೂರ್ವದಿಕ್ಕಿನಲ್ಲಿ ಉತ್ತರವಾಹಿನಿಯಲ್ಲಿ ಈಶ್ವರನನ್ನು ಕುರಿತು ತಪಸ್ಸನ್ನು ಮಾಡುತ್ತಾ ಇರಲು, ಸ್ವಾಮಿಯು ಮಾಘಶುದ್ಧ ೭ ದಿವಸ ಪ್ರತ್ಯಕ್ಷನಾಗಿ ಆ ಉಪದ್ರವವನ್ನು ಪರಿಹಾರ ಮಾಡಿ, ಲೀಲೆಯಿಂದ ಅರ್ಕೇಶ್ವರ ಎಂಬ ನಾಮಧೇಯದಿಂದ ಉದ್ಭವಿಸಿ ವಾಸಮಾಡುವವರಾದರು. "ಉತ್ತರವಾಹಿನಿಯಲ್ಲಿ ಸ್ನಾನವನ್ನು ಮಾಡಿದವರು ಸೂರ್ಯಲೋಕಕ್ಕೆ ಹೋಗಿ, ಸಕಲಭೋಗವನ್ನು ಅನುಭವಿಸಿ, ಅಂತ್ಯದಲ್ಲಿ ಶಿವಸಾಯುಜ್ಯವನ್ನು ಪಡೆಯಲಿ"ಎಂದು ವರವನ್ನು ಕೊಟ್ಟರು. ಈ ಕ್ಷೇತ್ರ ಮಹಾತ್ಮೆ.

ಇದನ್ನು ವಾಸುಕಿಯು ಕೇಳಿ, ತಪಸ್ಸನ್ನು ಮಾಡಿ ಮನಸಾಭೀಷ್ಟವನ್ನು ಪಡೆಯಬೇಕೆಂದು ಕಾವೇರಿಯ ಪೂರ್ವವಾಹಿನಿಯ ತೀರದಲ್ಲಿ ತಪಸ್ಸನ್ನು ಮಾಡುತ್ತಿರಲು. . . . . ದಿವಸ ಪ್ರಸನ್ನರಾಗಿ "ಎಲೆ, ವಾಸುಕಿಯೆ, ನೀನು ಮಾಡಿದ ತಪಸ್ಸಿಗೆ ಸಂತುಷ್ಟರಾದೆವು. ನಾಗಲೋಕದ ಆಧಿಪತ್ಯವಾಗಲಿ" ಎಂದು ವರವನ್ನು ಕೊಟ್ಟು ವಾಸುಕೇಶ್ವರ ಎಂಬ ನಾಮಧೇಯದಿಂದ ದಕ್ಷಿಣದಿಗ್ಭಾಗದಲ್ಲಿ ವಾಸವನ್ನು ಮಾಡುತ್ತಿದ್ದಾರೆ. "ಈ ಪೂರ್ವವಾಹಿನಿಯಲ್ಲಿ ಸ್ನಾನವನ್ನು ಮಾಡಿ ವಾಸುಕೇಶ್ವರನ ದರ್ಶನವನ್ನು ಮಾಡಿದವರು ನಾಗಲೋಕಕ್ಕೆ ಹೋಗಿ ಸಕಲಭೋಗವನ್ನು ಅನುಭವಿಸಿ ಅಂತ್ಯದಲ್ಲಿ ಶಿವಸಾಯುಜ್ಯವನ್ನು ಪಡೆಯುವರು" ಎಂದು ವರವನ್ನು ಕೊಟ್ಟರು.

ಈ ಗಜಾರಣ್ಯಕ್ಷೇತ್ರದ ಮಹಾತ್ಮೆಯನ್ನು ಬ್ರಹ್ಮದೇವರು ಕೇಳಿ ಸರಸ್ವತಿಯನ್ನು ವಿವಾಹ ಮಾಡಿಕೊಳ್ಳಬೇಕೆಂದು ಯೋಚಿಸಿ, ಕಾವೇರಿಯ ದಕ್ಷಿಣತೀರದಲ್ಲಿ ಬಹುಕಾಲ ತಪಸ್ಸನ್ನು ಮಾಡಲಾಗಿ ಪರಮೇಶ್ವರಸ್ವಾಮಿಯವರು ಮಾಘ ಬಹುಳ ೧೪ ದಿವಸ ಪ್ರಸನ್ನರಾಗಿ "ಎಲೆ ಬ್ರಹ್ಮನೆ! ನೀನು ಮಾಡಿದಂಥ ತಪಸ್ಸಿಗೆ ಸಂತುಷ್ಟರಾದೆವು. ನಿನ್ನ ಮನೋಭೀಷ್ಟವೇನೆಂ"ದು ಕೇಳಲಾಗಿ ಅದಕ್ಕೆ ಬ್ರಹ್ಮದೇವರು "ನನ್ನ ಮೇಲೆ ಕೃಪಾಕಟಾಕ್ಷವಿಟ್ಟು ಸರಸ್ವತಿಯನ್ನು ವಿವಾಹಮಾಡಿಸಿ ಕೊಡಬೇಕು" ಎಂದು ಅರಿಕೆ ಮಾಡಿಕೊಳ್ಳಲು, "ಅದೇ ಪ್ರಕಾರವಾಗಲಿ" ಎಂದು ವರವನ್ನು ಕೊಟ್ಟು, ಸೈಕತೇಶ್ವರ ಎಂಬ ನಾಮಧೇಯದಿಂದ ವಾಸವನ್ನು ಮಾಡುತ್ತಾರೆ. ದಕ್ಷಿಣವಾಹಿನಿಯಲ್ಲಿ ಸ್ನಾನವನ್ನು ಮಾಡಿ ಸೈಕತೇಶ್ವರನ ದರ್ಶನವನ್ನು ಮಾಡಿದವರು ಸತ್ಯಲೋಕಕ್ಕೆ ಹೋಗಿ ಸಕಲಭೋಗವನ್ನು ಅನುಭವಿಸಿ ಅಂತ್ಯದಲ್ಲಿ ಶಿವಸಾಯುಜ್ಯವನ್ನು ಪಡೆಯುವರು.

ಈ ಕ್ಷೇತ್ರಕ್ಕೆ ಉತ್ತರಭಾಗದಲ್ಲಿ ಸೋಮಗಿರಿ ಎಂಬ ಪರ್ವತವಿದೆ. ಅಲ್ಲಿಗೆ ಕಾಮಧೇನುವು ಬಂದು ತಪಸ್ಸನ್ನು ಮಾಡಲಾಗಿ, ಪರಮೇಶ್ವರಸ್ವಾಮಿಯವರು ಕಾರ್ತಿಕ ಬಹುಳ ೮ ದಿನ ಪ್ರಸನ್ನರಾಗಿ "ಮನೋಭೀಷ್ಟವೇನೆಂ"ದು ಕೇಳಲು, ಕಾಮಧೇನು ಎಂಬುದಾಗಿ "ಯಾರು ನನ್ನನ್ನು ಕಾಪಾಡುತ್ತಾರೆಯೊ, ಅವರಿಗೆ ಸಕಲ ಇಷ್ಟಾರ್ಥಗಳುಂಟಾಗಲಿ" ಎಂದು ಕೇಳಿಕೊಳ್ಳಲು "ಹಾಗೆಯೇ ಆಗಲೆಂ"ದು ವರವನ್ನು ಕೊಟ್ಟು, ಮಲ್ಲಿಕಾರ್ಜುನದೇವರು ಎಂಬ ನಾಮಧೇಯದಿಂದ ಪಶ್ಚಿಮವಾಹಿನೀ ತೀರದಲ್ಲಿ ವಾಸವನ್ನು ಮಾಡುತ್ತಾರೆ.

ಆ ತರುವಾಯ ಅಯೋಧ್ಯಾ ಪಟ್ಟಣದ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ದಿಲೀಪ ಚಕ್ರವರ್ತಿ ಎಂಬ ದೊರೆಗೆ ಇಬ್ಬರು ಪತ್ನಿಯರು. ಅವರಿಗೆ ಪುತ್ರರಾಗದೆ ಬಹುಕಾಲದ ಮೇಲೆ ಚಿಕ್ಕಹೆಂಡತಿಯು ಗರ್ಭವತಿಯಾದದ್ದನ್ನು ಹಿರೀ ಹೆಂಡತಿಯು ಕಂಡು, ರೋಷದಿಂದ ವಿಷವನ್ನು ಕೊಡಲಾಗಿ, ಆ ಗರ್ಭವು ವಿಷದ ಸಂಗಡವೇ ಬೆಳೆಯುತ್ತಿತ್ತು. ಹೀಗಿರಲು ಪರರಾಯರು ಬಂದ[>ದು] ಪಟ್ಟಣವನ್ನು ಕಟ್ಟಿಕೊಂಡದ್ದರಿಂದ ಚಕ್ರವರ್ತಿಯು ಗರ್ಭಿಣಿಯಾದ ಚಿಕ್ಕಹೆಂಡತಿಯ ಸಮೇತ ರಾಜ್ಯಭ್ರಷ್ಟನಾಗಿ ಪಾದಚಾರಿಯಾಗಿ ಪೂರ್ವಪುಣ್ಯಫಲದಿಂದ ಈ ಪುಣ್ಯಕ್ಷೇತ್ರದ ಪಶ್ಚಿಮವಾಹಿನೀ ತೀರಕ್ಕೆ ಬಂದು ಪಂಚರಾತ್ರಿ ವಾಸವನ್ನು ಮಾಡಿ, ಮರಣವನ್ನು ಪಡೆದನು. ಆಗ ಹೆಂಡತಿಯು "ನಾನು ಸಹಗಮನವನ್ನು ಮಾಡುತ್ತೇನೆ." ಎಂದು ಪ್ರಯತ್ನಿಸುತ್ತಿರುವ ಸಮಯದಲ್ಲಿ, ನಿನ್ನ ಉದರದಲ್ಲಿ ಸಪ್ತದ್ವೀಪವನ್ನಾಳುವ ಪುತ್ರನುದಯಿಸುತ್ತಾನೆ. ನೀನು ಸಹಗಮನವನ್ನು ಮಾಡಬೇಡ" ಎಂಬ ವಾಕ್ಯವನ್ನು ಕೇಳಿ, ತನ್ನ ಪತಿಯ ದೇಹವನ್ನು ದಹನ ಮಾಡಿದಳು. ಅನಂತರ ನವಮಾಸವು ತುಂಬಿ ಪುತ್ರೋದಯವಾಗಿರುವಲ್ಲಿ

ಇವಳ ಸವತಿಯು ಕೊಟ್ಟ ವಿಷದ ಸಂಗಡ ಬೇಳೆದವನಾದ ಕಾರಣ ಸಗರ ಎಂಬ ನಾಮವುಳ್ಳವನಾದನು. ಐದು ವರ್ಷದ ಮೇಲೆ ಸ್ವಾಮಿಯನ್ನು ಕುರಿತು ತಪಸ್ಸನ್ನು ಮಾಡಲಾಗಿ ಪರಮೇಶ್ವರನು ಪ್ರಸನ್ನನಾಗಿ "ನಿನಗೇನು ಬೇಕು" ಎಂದು ಕೇಳಲು ಅದಕ್ಕೆ ಈ ಬಾಲಕನು "ರಾಜ್ಯಾಧಿಪತ್ಯವು ಅರವತ್ತು ಸಾವಿರ ಮಂದಿ ಪುತ್ರರೂ ಬೇಕು" ಎಂದು ಕೇಳಿಕೊಳ್ಳಲು, ಸರಸ್ವತಿಯು . . . . ಸಿಂಹಾನಸದಲ್ಲಿ ನಿಂತು "ಅರವತ್ತು ಸಾವಿರ ಪುತ್ರರು ಬೇಕೆಂದು ಕೇಳಿಕೊಂಡ ಪ್ರಕಾರ ರಾಜ್ಯಧಿಪತ್ಯವೂ ಅರವತ್ತು ಸಾವಿರ ಮಂದಿ ಪುತ್ರರೂ ಆಗಲಿ" ಎಂದು ವರವನ್ನು ಕೊಟ್ಟು, ಅಂತರ್ಧಾನನಾಗಲಾಗಿ, ಸಗರಚಕ್ರರ್ತಿಯು ದಿಗ್ವಿಜಯವನ್ನು ಮಾಡಿಕೊಂಡು ಅಯೋಧ್ಯೆಗೆ ಹೋಗಿ, ತನ್ನ ರಾಜ್ಯವನ್ನು ಸುಖದಿಂದ ಆಳುತ್ತಿದ್ದನು. ಆದುದರಿಂದ "ಈ ಪಶ್ಚಿಮವಾಹಿನೀ ತೀರದಲ್ಲಿ ಸ್ನಾನವನ್ನು ಮಾಡಿ ಮಲ್ಲಿಕಾರ್ಜುನಸ್ವಾಮಿಯ ದರ್ಶನವನ್ನು ಯಾರು ಮಾಡುತ್ತಾರೆಯೋ ಅವರಿಗೆ ಶಿವಸಾಯುಜ್ಯವುಂಟಾಗಲಿ" ಎಂದು ವರವನ್ನು ಕೊಟ್ಟು ಅಂತರ್ಧಾನರಾದರು.

ಈ ಕ್ಷೇತ್ರಕ್ಕೆ ಕಾಶಿಯಿಂದ ವಿಶ್ವನಾಥದೇವರು ಬಂದು ಇರುವರೆಂದು ತಿಳಿದು ಕಾಶೀವಿಶಾಲಾಕ್ಷಿ ಅಮ್ಮನವರು ದೇವರನ್ನು ಕುರಿತು ಬರುತ್ತಾ, ಮಧ್ಯಮಾರ್ಗದಲ್ಲಿ ಚಂಡ ಎಂಬ ರಾಕ್ಷಸನನ್ನು ಸಂಹರಿಸಿ, ಆ ಕ್ಷೇತ್ರಕ್ಕೆ ಬಂದು ನಿಂತರಾದ ಕಾರಣ, ಚಂಡನನ್ನು ಸಂಹರಿಸಿದ ಕಾರಣದಿಂದ ಚಾಮುಂಡಿ ಅಮ್ಮನವರೆಂಬದಾಗಿ ಹೆಸರು ಬಂತು. ಅದೇ ಹೆಸರಿನಿಂದ ಇಲ್ಲಿ ವಾಸವನ್ನು ಮಾಡುತ್ತಿದ್ದಾರೆ.

ಈ ಗಜಾರಣ್ಯಕ್ಷೇತ್ರದಲ್ಲಿ ಕಲಿಯುಗದ ಶಾಲಿವಾಹನ ಶಕ ೧೦೦೫ನೇ ಸಂವತ್ಸರವಾದ ರಕ್ತಾಕ್ಷಿ ಸಂವತ್ಸರದಲ್ಲಿ . . . . ಪ್ರತಿಷ್ಠೆಮಾಡಬೇಕೆಂದು . . . . ಸ್ಥಾನವನ್ನು ಕಟ್ಟಿಸುತ್ತಾ ಇರಲು, ಆತನಿಗೆ . . . . "ರಾಮಾನುಜಾಚಾರ್ಯರು ಇದಾರೆ. ಅವರ ಕಡೆಯಿಂದ ತೀರ್ಥಪ್ರಸಾದವನ್ನು ತೆಗೆದುಕೊಂಡರೆ ಈ ರೋಗವು ವಾಸಿಯಾಗುತ್ತದೆ" ಎಂದು ಹೇಳಲು ಕೆಲವು ದಿನ ಕಳೆಯಲಾಗಿ, ಕಾಣಬರದೇ ಇದ್ದುದರಿಮದ ಈ ಉಪದ್ರವು ಬಹಳವಾದ ಕಾರಣ ಅನಂತರ ಸಮ್ಮತಿ ಪಟ್ಟವರಾಗಿ ರಾಮಾನುಜಾಚಾರ್ಯರ ಸಮೀಪಕ್ಕೆ ಹೋಗಿ, ದಿನಚರಿಯಲ್ಲಿಯೂ ತೀರ್ಥಪ್ರಸಾದವನ್ನು ತೆಗೆದುಕೊಂಡು ಬರುತ್ತಿರಲು ಆ ರೋಗವು ವಾಸಿಯಾಯಿತು . . . . ಆ ಆಚಾರ್ಯರಲ್ಲಿ ಬಹಳ ಭಕ್ತಿಯುಳ್ಳವನಾಗಿ ವಿಷ್ಣುಭಕ್ತನಾಗಿ ಬಸ್ತಿಗುಡಿಗೆ . . . . ಕೀರ್ತಿನಾರಾಯಣ ಪ್ರತಿಮೆಯನ್ನು ಪ್ರತಿಷ್ಟೆ ಮಾಡಿ . . . . ದತ್ತು . . . . ವನ್ನು . . . .

❖❖

೧೯

ತಿರುಮಕೊಡಲು ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೨

. . . . ತಾಂಡದ ಉತ್ಸವದ ಕಾಲದಲ್ಲಿ ಪರಮೇಶ್ವರಸ್ವಾಮಿಯವರ್ರು ಬ್ರಹ್ಮ ಶಿರಸ್ಸನ್ನು ಚಕ್ರದಿಂದ ಭೇದಿಸುತ್ತ ಯಿರಲಾಗಿ, ಸಾಕ್ಷಾತ್ ಶ್ರೀಬ್ರಹ್ಮದೇವರು ಸ್ವಾಮಿ ಕೈಯ ಹಿಡಿದಂತಾ . . . . ಯಾಗುತ್ತ ಯಿರಲಾಗಿ, ಆ ಬ್ರಹ್ಮಕಪಾಲ ಬಿಡುವದಕೋಸ್ಕರ ಮೂರ್ರು ಯುಗದಲ್ಲಿ ಯಿರುವಂತ ತೀರ್ಥಗಳ ಸೇವೆಯನ್ನು ಮಾಡಿಕೊಂಡು ಬರುತ್ತ ಯಿರಲಾಗಿ, . . . ಂಕ ಸರೋವರವನ್ನು ಕುರಿತು ಬಂದಂಥವರಾಗಿ, ಅಲ್ಲಿ ತಪಸ್ಸನ್ನು ಮಾಡುತ್ತ ಯಿರಲಾಗಿ, "ಆ ಬ್ರಹ್ಮಕಪಾಲಉ ಬಿಡಲು, ಯೀ ಸ್ವಾಮಿ ತಪಸ್ಸನ್ನು ಪರಿಪೂರ್ಣಮಾಡಲು, ಯೀ ತೀರ್ಥವಿದು ಮಹಾಪುಣ್ಯ ತಮ್ಮ ಬ್ರಹ್ಮಹತ್ಯಾದಿ ವಿಮೋಚನೆಯಂ ಧರಿಸಿ ತೀರ್ಥಗುಣವನ್ನು ಮಹಾ? ಉಲ್ಲೇಖನವನ್ನು ಮಾಡಬೇಕು" ಯಂಬದಾಗಿ ನಿತ್ಯಸೇವೆಮಾಡಿದ ಕಾರಣ ತ್ರಿನೇತ್ರವಿದೆಯಂಬುದಾಗಿ ತಾಳಿದ, ಆ ಬಿದ್ದಂಥಾ ಕಪಾಲವನ್ನು ಸೊ . . . . ಂತು ಮ ತಲೆಯನ್ನು ತೆಗೆದುಕೊಂಡು, ಕಾಶೀಕ್ಷೇತ್ರವನ್ನು ಕುರಿತು ತೆರಳುವಲ್ಲಿ, ಆ ಸ್ಥಳಕೆ ರುದ್ರತೀರ್ಥವೆಂಬ ನಾಮದೇಹ[>ಧೇಯ]ವನ್ನು ಮಾಡಿ, ತಮ್ಮ ಪಾದಗುರುತನ್ನು ಆ ಸ್ಥಳದಲ್ಲಿ ಮೂಡಿಶಿ, ಕಾಶಿಗೆ ಹೋದರು. ಅನಂತರದಲ್ಲಿ ಆ ಕಾಶೀಕ್ಷೇತ್ರದಲ್ಲಿ ಸಕಲದೇವತಾ . . . . ಯುಕ್ತವಾಗಿ ಯಿರುತ್ತಾ ಯಿರಲಾಗಿ, ಆ ಉತ್ರ ಬಾಗಿಲು ತ್ತಗಿ[>ತಗ್ಗಿ]ದಂತಾದು ಆಗಿ, ದಕ್ಷಿಣ ಬಾಗಿಲು ವುನ್ನತವಾದಂತದು ಆಗುತ್ತ ಯಿರಲಾಗಿ, ವಿಂಧ್ಯ ನಿಗ್ರಹಾರ್ಥವಾಗಿ ಯೀ ದಕ್ಷಿಣ ದಿಗ್‌ಭಾಗದಲ್ಲಿ ಯಿರುವ ಮೇರುಪರ್ವತವನ್ನು ಕುರಿತು ಅಂಗುಷ್ಠ ಮಾತ್ರ ಪ್ರಮಾಣರಾದ ಅಗಸ್ತ್ಯಮುನೀಶ್ವರನು . . . . ದು ಹೋಗಿಯಲಿ . . . . ಗಿ . . . . ಟು ಮಡ ಉಗಿ . . . . ಸೂನು ಬೆಟ ಹೋಗಿ . . . . ಯಂಬುದಾಗಿ ಕೇಳಿಕೊಂಡಲ್ಲಿ, "ಆ ಕ್ಷೇತ್ರದಲ್ಲಿ ನಾಉ ವಾಸವ ಮಾಡಿಕೊಂಡು ಯಿರುತ್ತೇವೆ" ಯೆಂಬದಾಗಿ ನಿಶ್ಚಯಮಾಡಿ ಯಿದ್ದೇವೆ. ಅದೇ ಪ್ರಕಾರಕೆ ಗಉ . . . . ಯೀ ಕ್ಷೇತ್ರ . . . . ಕುರಿತು ಹೋಗಿ ಅಲ್ಲಿ ಕಾವೇರಿ ಕಪಿಲಾ ಮೊದಲಾದಂಥಾದ್ದು ಅಗಸ್ತ ಯಿದೆ. ಆ ಕ್ಷೇತ್ರದಲ್ಲಿ ನಂದಾಸ್ಮರ ಬೇಡು . . . . ಲಿ ಸಕಲತೀರ್ಥ ಸಕಲಪಾ[>ವಾ]ದದೇವತಿನಿಂದಲು ಸಹಿತವಾಗಿ ನಾನು ನಿನಗೆ ಕ್ಷೇತ್ರದಲ್ಲಿ ಬಂದು ಪ್ರಸನ್ನವಾಗಿ ವಾಸವನ್ನು ಮಾಡುತ್ತೇವೆ"ಯಂಬದಾಗಿ ಹೇಳಿ, ಅಗಸ್ತ್ಯರುಷಿಗೆ ಕೊಡಲಾಗಿ, ಮಧ್ಯಮಾರ್ಗದಲ್ಲಿ ವಿಂಧ್ಯ ನಿಗ್ರಹವನ್ನು ಮಾಡಿ, ಯೀ ದಕ್ಷಿಣದೇಶಕ್ಕೆ ಬರ್ರುವಲ್ಲಿ, ಚತುರ್ಥಾದ್ರಿಯು ಯಂಬ ಪರ್ವ[>ತ]ಕೆ ಬರುವಲ್ಲಿ, ಬ್ರಹ್ಮದೇವರ ಕುರ್ರುತು ಕಾವೇರಿಯನ್ನು . . . . ಷತ್ತರ್ಥರು ತಪಸ್ಸುಮಾಡುತ್ತ ಯಿರಲಾಗಿ, ಬ್ರಹ್ಮದೇವರು ಪ್ರಸನ್ನವಾಗಿ "ನಿಮಗೆ ಪುತ್ರವಾಗುವುದಿಲ್ಲ, ತ[>ಮ್ಮ] ಮಾನಸವರ್ತಿ[>ಪುತ್ರಿ]ಯಾದಂಥಾ ಲೋಪಾಮುದ್ರೆಯನ್ನು ಪುತ್ರಾರ್ಥ ಕಾ . . . ಥವೆ ತೆಗೆದುಕೊ. ನಿನಗೆ ಪರಲೋಕ ಉಂಟಾಗುತ್ತ

ಯಿರುವದಾ"ಗಿ ಬ್ರಹ್ಮದೇವರು ಕಾವೇರಿರಾಯರಿಗೆ ಹೇಳಲು, ಅದೇ ಪ್ರಕಾರಕೆ ಬ್ರಹ್ಮದೇವರು[>ರ] ವಾಕ್ಯವನು ಕೇಳಿ ಬ್ರಹ್ಮದೇವರ ಪುತ್ರಿಯಾದಂಥ ಲೋಪಾಮುದ್ರೆಯನ್ನು ಕರಕೊಂಡು "ಯಿವರನ್ನು ಅಗಸ್ತ್ಯರಿಗೆ ಕೊಡು"ಯಂಬದಾಗಿ ಹೇಳಿದ ಮಾತನು ಕೇಳಿ, ಲೋಪಾಮುದ್ರೆಯನ್ನು ಅಗಸ್ತ್ಯರಿಗೆ ವಂದು . . . . ಅಗಸ್ತ್ಯರನು ಕೇಳಿಕೊಂಡದು, ನದಿರುಷಿ . . . . ದಾಗಿ . . . . ಅಪ್ಪಣೆ ತೆಗೆದುಕೊಂಡು . . . . ಸುಕರದಲ್ಲಿ ವಿ . . . . ಮಾಡಿಕೊಂಡು ಅಜ್ಞಾತವಾಸದಲ್ಲಿ . . . . ಕ್ರ . . . . ಮ . . . . ಉ ಯಂಬದಾಗಿ ಯಿರ್‍ರು ಉಟಕಮಂಡಲಿದೆ . . . . ದ ಸರಿ . . . . ಪ್ರಹರಸೊ ಸಮಯದಲ್ಲಿ ಬ್ರಹ್ಮದೇವರು ದ . . . . ತ್ರಿ . . . ದ ಪ್ರಕ್ಷಾಲವನ್ನು ಮಾಡುತ್ತ ಯಿರಲಾಗಿ, ಅಮ್ಮನವರು ಸುಖದಿಂದಲು ಕೂಡಿ ಭಂಗಂಡ ಕ್ಷೇತ್ರವನು ಕುರಿತು ಪ್ರವೇಶಮಾಡಿ, ಆ ಕನಕಾನದಿ ಸಂಗಮವನ್ನು ಪಡದು ಪುಷ್ಕರನು ಅಕ್ರಮಿಶಿಕೊಂಡು, ರಾಮನಾಥಪುರ ಯಡಕರೆ ಬಿಲಮೂರಿ ಪಕ್ಷಿ ಪುರಾಭಿ ಅರ್ಕಪುಷ್ಕರಣಿ . . . . ಸ ಕ್ಷೇತ್ರ . . . . ಕು ತ್ರಿಲೋಕಪಾನ ಸಂಗಮವನ್ನು ಪಡೆದು, ತ್ರಿಮ[>ತಿರುಮ]ಕುಟಾಕ್ಷೇತ್ರದ ತೀರ್ಥವನ್ನು ಅವಗ್ರಹಿಸಿಕೊಂಡು, ಅಮ್ಮನವರು ಬಂದು ಅಗಸ್ತ್ಯ ರಾಮೇಶ್ವರರ್‍ರು ಸಂಗಡಲೇ ಬಂದಂಥಾಲು ದಿ ಯೀ ತೀವುಲಕೂಟ[>ತಿರುಮಲಕೂಟ] ಕ್ಷೇತ್ರವನ್ನು ನೋಡಿ, ಕಾಶೀಕ್ಷೇತ್ರದಲ್ಲಿ ಕನಕಸ್ವಾಮಿ ಯೀ ಕ್ಷೇತ್ರದಲ್ಲಿ ವಾಸಮಾಡುತ್ತ ಯಿದ್ದೇವೆ" ಯಂಬುದಾಗಿ ಹೇಳಿದಂತಾ . . . ಕ್ಷವನ್ನು ಸ್ಮರಿಸಿಕೊಳ್ಳುತ್ತ ಯಿರಲಾಗಿ, ಕಾಶಿಯಿಂದಾ . . . . ಬಂದಾರ್‍ರು ಯಂಬುದಾಗಿ ಆಜ್ಞೆಯನ್ನು ಸ್ಮರಿಸಿ . . . . ಗಾ . . . . ಲಿ ಬಂದ ನಿಂತುಕೊಳ್ಳಲಾಗಿ ಕಾಶಿ ಯೀ ರಾಮಲಿಂಗದೇವರು . . . . ಂನತಾ ಶಿರ . . . ಗೆ ಯಿಂದ ಲಿಂಗವನ್ನು ತೆಗೆದುಕೊಂಡು, ಮೂಹೂರ್ತ ದೆ . . . . ಬಾಯಂಬುದಾಗಿ ಹೇಳಿದರಿಂದ . . . . ಆಂಜನೆಯ ? ಕಾಶಿಗೆ ಹೋಗಿ ಗಂಗೆಯಲಿ ಲಿಂಗವನ್ನು ತಡಕ . . . . ಲಾಗಿ . . . . ಕಣ ತಾಮಸವಾಯಿತು. ಅಗಸ್ತ್ಯರುಷೀಶ್ವರರು . . . . ಕುೆ ಹೋಗ . . . . ಯಿದೆಯಂಬದಾಗಿ ಸ್ವಾಮಿ ಪ್ರಸನ್ನವಾಗ . . . . ಂದು ಸೃಕತ್ತಲಿಯ . . . . ತಿದೆ . . . . ಯನ್ನು ಮಾಡಲು ಆ ಕ್ಷಣ . . . . ಶಿಯಿಂದ ಸಕಲತೀರ್ಥಗಳು ಸಕಲದೇವತೆಗಳು ಆ . . . . ಪರಿವಾರ್‍ರು? ಸಮೇತವಾಗಿ ಪುಷ್ಯಮಾಸ ಉತ್ತರಾ ನಕ್ಷತ್ರದಲ್ಲಿ ಬಿ ಶಿಂರ್ನ ಮೂಹೂರ್ತದಲ್ಲಿ ಸೃ . . . ಕ ಲಿಂಗದಲ್ಲಿ ಪರಮೇಶ್ವರಸ್ವಾಮಿಯ . . . . ವಿತ್ತರು, ಅಮ್ಮನವರು ಚಾಮುಂಡಿರೂಪದಿಂದ ಯೀ ಸ್ವಾಮಿಯವರ ಉತ್ತರಭಾಗದಲ್ಲಿ ನಿಂತರು. ಗಂಗೆ ಕಾವೇರಿಯಲ್ಲಿ ವಾಸವನ್ನು ಮಾಡಿದರು. ಯಮುನೆ ಕಪಿಲಾನದಿಯಲಿ ವಾಸ ಮಾಡಿದರು. ಸರಸ್ವತಿಯಾದಂಥಾ ನದಿಗಳು ಉಭಯರೀ ಮ . . . . ದಲ್ಲಿ ವಾಸವನ್ನು ಮಾಡಿದರು. ಪ್ರಯಾಗಕ್ಷೇತ್ರ ಅಶ್ವ . . . . ದೂರದಲಿ ನಿಂತು ಗಯಾಕ್ಷೇತ್ರಉ ರುದ್ರಪಾದನಲ್ಲಿ ನಿಂತಿತು. . . . ಯ . . . ಕಾಶಿಯಿಂದ ಲಿಂಗವನ್ನು ಮಾಡಿ ಪ್ರತಿಷ್ಟೆಯನ್ನು . . . . ಕೋಪ ಬಂದು ಬಾಯಲ್ಲಿ . . . . ಮಳಲಿ ಲಿಂಗವನ್ನು . . . . ಸು . . . . ದಲ್ಲಿ ಪು . . . . ರೊ . . . ಗವನ್ನು ಕಿತ್ತುಕೊ . . . . ಪ್ರತಿಷ್ಟೆಮಾಡುತೆನೆ ಯಂಬದಾಗಿ ಯೋ . . . . ದಿಂ . . . . ಆ ಲಿಂಗ . . . . ವಜ್ರಮುಷ್ಠಿ . . . . ನ್ನಲ್ಲಿ ಪ್ರ . . . . ಯಿದರಲ್ಲಿ ಚೂರ್ಣವನ್ನು ಮಾಡುತೆನ . . . . ತಂದಲಿ . . . . ವಂದು ಪ್ರ . . . . ನೆ ಯಂಬುದಾಗಿ ಯೀ ಮಳಲಿಲಿಂಗದ ಪ್ರಹರಸ . . . . ಲಿಂಗ ವಡೆಯದೆ ಯಿರುತ್ತಾ ಯಿರಲಾಗಿ . . . . ಮಳಲು ಲಿಂಗ . . . . . ಕಮಂಡಲದ ಉದಕವನು ಪ್ರೋಕ್ಷದಲ್ಲಿ . . . . ಆಗ ಆಂಜನ . . . . ಜಾತಿಪ್ರಭಾವ ಜಾಜ್ವಲ್ಯದಿಂದ . . . . ರಾಥವನ್ನು ಮಾ . . . . ದ ಕ್ಷಮಿಶಿಕೊಳಿ

ಯಂಬದಾಗಿ ಹೇಳಲು, ಅಗಸ್ತ್ಯರುಷೀಶ್ವರರು "ಸತ್ಯದಿಂದ ನಿನ್ನ ಲಿಂಗದರ್ಶನವನ್ನು ಮಾಡಿ ಸ್ವಾಮಿದರ್ಶನವನ್ನು ಮಾಡಿದರೆ ಕ್ಷೇತ್ರಫಲಸಾಧ್ಯ . . . . ದಲ್ಲಿ" ಯಂಬುದಾಗಿ ವರವನ್ನು ಕೊಟ್ಟು "ಉತ್ತರೋತ್ತರ ಮಾಡ . . . . ಅಶ್ವಸ . . . . ಸು . . . . ತ ದಂಥಾದ್ದು ಆಗುತ್ತಾಯಿದೆ"ಯಂಬುದಾಗಿ ಹೇಳಿ ವರವನ್ನು ಕೊಟ್ಟು, ಮೇಲೆ ಪರ್ವತವನ್ನು ಕುರಿತು ಅಗಸ್ತ್ಯರು ತೆರಳಿದವರಾದರು. ಅಗಸ್ತ್ಯಋಷಿಯ . . . . ಅಪ್ಪಣೆಯಿಂದ ಆಂಜನೆಋಷಿ ಪ್ರದಂತ ಪರ್ವತಕೆ ತಪಸ್ಸಿಗೆ ತೆರಳಿದರು. ಯಂಬ . . . . ರುಣ . . . . ಸ್ವಾಮೇಶ್ವರ ವಲು . . . . "

೧ ಪೂರ್ವದಲ್ಲಿ ದಾ . . . . . ರಾಜೇಶ್ವರನಿಗೆ ಯಿಪತು . . . . ಸುಕುಮಾರಿಯರು ಅನುಜ್ಞರು . . . . ಸರು ಮದುವೆಮಾಡಿಕೊಟ್ಟಲ್ಲಿ, ಆ ಚಂದ್ರನು ರೋಹಿಣಿಯಲ್ಲಿ ಅನುರಕ್ತನಾಗಿ ಕಡಮೆಯವರು ಯಿಪತ್ತು ಆರುಮಂದಿಯನ್ನು ಅವಮಾನವನ್ನು ಮಾಡಿದ್ದರಿಂದ, ಆ ಸ್ತ್ರೀಯರು ತಮ್ಮ ತಂದೆಯಾದ ದಕ್ಷಬ್ರಹ್ಮನ ಸಮೀಪಕೆ ಹೋಗಿ, "ನಮ್ಮ ಪತಿಯು ರೋಹಿಣಿದೇವಿಯಲ್ಲಿ ಅನುರಕ್ತನಾಗಿ ನಮ್ಮ ಉಪೇಕ್ಷೆಮಾಡಿ ಯಿದ್ದಾನೆ, ನಮಗೆ ಗತಿಯೇನು?" ಯಂಬದಾಗಿ ಕೇಳಲು, ಆ ತಂದೆಯು ಪುತ್ರಿಯ . . . . ವತಿ . . . . ದು ಅವನ ಸಮೀಪದಲೆ ಯಿರಬೇಕೇ ಹೊರತು ನಮ್ಮ ಮ . . . . ಯೀ ಪರೆ ಯುಕೆ ಬಂದಿರಿ"ಯಂಬದಾಗಿ ಕೇಳಲು, ಆ ಮಾತು ಕೇಳಿ ಕುಮಾರತಿಯರು "ನಮ್ಮಯ ಪತಿಯ ಅಸಡ್ಡೆ ಮಾಡಲು ನಮಗೆ ಯೇನು ಮಾಡಬೇಕು?" ಯಂಬುದಾಗಿ ಕೇಳಲು, ಚಂದ್ರನ ಮೇಲೆ ಕೋಪಿಸಿಕೊಂಡು "ಕಳಾಹೀನನಾಗು"ಯಂಬುದಾಗಿ ಶಾಪವನ್ನು ಕೊಟಲ್ಲು, ಚಂದ್ರ ಅತ್ಯಂತ ಖಿನ್ನನಾಗಿ ಯಿರಲಾಗಿ "ಯೀ ಬ್ರಹ್ಮಶಾಪ ಹೇಗೆ ಪರಿಹಾರ ಆದೀತು?"ಯಂದು ತ್ತಿರುಮಲಕೂಟಕ್ಷೇತ್ರದಲ್ಲಿ ಲಕ್ಷವರ್ಷ ತಪಸ್ಸು ಮಾಡಿ, ಲಿಂಗರೂಪದಿಂದ ಪ್ರತ್ಯಕ್ಷವಾದಲ್ಲಿ, ಅವನ ಕಳೆಗಳನು ಕೊಟು ಸೋಮೇಶ್ವರ ನಾಮದಿಂದ ಅಗಸ್ತ್ಯೇಶ್ವರನಿಗೆ ಉತ್ತರದಿಗ್ಭಾದಲ್ಲಿ ವಾಸವನ್ನು ಮಾಡುತ್ತಾನೆ.

೧. ಮಾರ್ಖಂಡೆಯ ಉತ್ಪತ್ತಿ: ತಿರುಮಲಕೂಟಕ್ಷೇತ್ರದಲ್ಲಿ ದೀ . . . . ಪ್ಯವನ್ನು ಬೇಕು ಯಂಬುದಾಗಿ ತಪಸನ್ನು ಮಾಡಲಾಗಿ, ಆ ತಪಸ್ಸಿನಿಂದಾ ಸಂತುಷ್ಟನಾಗಿ ಮಾರ್ಕಂಡೇಯನ ಕುರಿತು . . . ಅಸತ್ಯ ಕಲ್ಪಾಂತರ . . . ಎಂತ್ತ ದೀರ್ಘಾಯುಷ್ಯವನ್ನು ಕೊಟ್ಟು, 'ಮಾರ್ಕಂಡೇಶ್ವರಾ'ಯಂಬ ನಾಮಧೇಯದಿಂದ ॥೧॥ ಉದ್ರದ್ದಮಂತ್ರ.

೧. ಗಂಗೇಶ್ವರಸ್ವಾಮಿಯವರ ಉತ್ಪತ್ತಿ: ಮಹೇಶ್ವರರು ಸಹಸುವ . . . . ದಲ್ಲಿ ಅವರಿಗೆ ಪರಮೇಶ್ವರಸ್ವಾಮಿಯವರು ಮಾಘ ಬಹುಳ ೧೪ ಶಿವರಾತ್ರೆಯ ದಿವಸ ಅರ್ಧಾರಾತ್ರೆಯಲ್ಲಿ ಪ್ರಸನ್ನವಾಗಿ ಗಾರ್ಗೆಯರುಷೀಶ್ವರಗೆ "ಸಕಲ ಯಿಷ್ಟಾರ್ಥವನ್ನು ತಮ್ಮ ಪೂರ್ವ . . . ರುಣವಿಮೋಚನ ಪಾಪವಿಮೋಚನ ಪಿಶಾಚವಿಮೋಚನ . . . . ತೀರ್ಥತ್ರಯದಲ್ಲಿ ಸ್ನಾನಮಾಡಿ ತಮ್ಮ ದರ್ಶನವನ್ನು ಮಾಡಿದಂಥಾ ಜನರುಗಳಿಗೆ ಸಾಕ್ಷಾತ್ಕಾರವಾಗಿ ಯಿರಲಿ' ಯಂಬುದಾಗಿ . . . . ರ್ರಿ ಯಲ್ಲಿ ಆವಿರ್ಭವಿಸಿಕೊಂಡು ಯಿದ್ದಾರೆ.

೧. ಪ್ರಯಾಗಕ್ಷೇತ್ರದಲ್ಲಿ ಯಿರುವಂತಾ ವಟವೃಕ್ಷಕೆ ಪ್ರತಿಯಾಗಿ ಬ್ರಹ್ಮದೇವರ್ರಿಂದ ಹಾಕಲ್‌ಪಟ್ಟಂತಾ ಅಶ್ವತನಾರಾಯಣಸ್ವಾಮಿ . . . . ವರು ಕಾಶಿಯಲಿ ಯಿರುವಂತಾ ದಕ್ಷಿಣಮೂರ್ತಿಸ್ವಾಮಿಗೆ . . . . ಲ ಸ್ಥಾನೇಶ್ವರಾ ಯಂಬದಾಗಿ ವಾಸವನ್ನು ಮಾಡುತ್ತಾರೆ. ಆ

ಸ್ವಾಮಿ ಮುಂದುಗಡೆಯಲ್ಲಿ ಗ್ಞಾನವಾಪಿ ತೀರ್ಥವಿದೆ. ಕಾಶಿಯಲ್ಲಿ ಯಿರ್‍ರುವಂತಾ ಉ್ರದ್ಧಕಾಳೇಶ್ವರ ಅರ್ಯಮೇಶ್ವರಯಂಬ ನಾಮಧೇಯವನ್ನು ಪಡದು ಯಿದ್ದಾರೆ. ಅಷ್ಟದಳದ ವಿವರ . . . .

೧. ಪೂರ್ವದಿಕ್ಕಿನಲ್ಲಿ ಮೂಡಕಾದರೆ ಪರ್ವ[+ತ]ದಲ್ಲಿ

೧. ಮೂಡಲೇಶ್ವರ . . . . ಸ್ವಾಮಿ ಯಿದ್ದರೆ ॥೧॥

೧. ಆಗ್ನೇಯದಿಕ್ಕಿನಲ್ಲಿ ಆರ್ಕಪರ್ವತದಲ್ಲಿ ಮಲ್ಲಿಕಾರ್ಜುನಸ್ವಾಮಿ ಯಿದ್ದಾರೆ.

೧. ದಕ್ಷಿಣದಿಕ್ಕಿನಲ್ಲಿ ದೇಶಯೀಶಪರ್ವತದಲ್ಲಿ ದೇಶೇಶ್ವರಸ್ವಾಮಿ ಯಿದ್ದಾರೆ.

೧. ನೈರುತ್ಯದಿಕ್ಕಿನಲ್ಲಿ ಕನಕಾಚಲಪರ್ವತದಲ್ಲಿ ಭುಜಗೇಶ್ವರಸ್ವಾಮಿ ಯಿದ್ದಾರೆ.

೧. ಪಶ್ಚಿಮದಿಕ್ಕಿನಲ್ಲಿ ಮಹಾಜನೇಶ್ವರಸ್ವಾಮಿಯವರು ಚಾಮುಂಡಿ ಅಮ್ಮನವರು ಸಹಾ ಯಿದ್ದಾರೆ.

೧. ವಾಯವ್ಯದಿಕ್ಕಿನಲ್ಲಿ ಕಿಂದುಕಪರ್ವತಯಂಬುದಾ . . . . ಸೆ ಪರ್ವತ ವೆ ಲಿಂಗಪ್ವ[>ಸ್ವ]ರೂಪವಾಗಿ ಯಿದ್ದಾರೆ.

೧. ಉತ್ತರದಿಕ್ಕಿನಲ್ಲಿ ಪರ್ವತದಲ್ಲಿ ಹರಿಹರಕ್ಷೇತ್ರದಲ್ಲಿ ಮಲ್ಲಿಕಾರ್ಜುನಸ್ವಾಮಿ ಉತ್ತರದಲಿ ವಾಸವನ್ನು ಮಾಡುತ್ತ ಯಿದ್ದಾರೆ.

೧. ಯೀಶಾನ್ಯದಿಕ್ಕಿನಲ್ಲಿ ಕುಂದಾಚಲಪರ್ವತದಲ್ಲಿ ಮಲ್ಲಿಕಾರ್ಜುನಸ್ವಾಮಿಯಿದ್ದಾರೆ. ಯೀ ಅರ್ಧಬೆಟ್ಟದಲಿ . . . . ಯಿ ಅಡಿ ಯಂಬ ನಾಮದಿಂದ ವಾಸವನ್ನು ಮಾಡುತ್ತಯಿದ್ದಾರೆ.

ಕಾಶಿಯಲ್ಲಿ ಯಿರುವಂತ ಷಣ್ಮುಖಸ್ವಾಮಿ . . . . ಶ ಯಿದ್ದಕ . . . . ಅಶ್ವವನು ಪಡದು ಯಿದ್ದಾರೆ. ಕಾವೇರಿ ಕಪಿಲಾ ಸಂಗಮಕ ಪಶ್ಚಿಮತೀರದಲ್ಲಿ ಪ್ರಯಾಗದಲ್ಲಿ ಯಿರುವಂತಾ ಲಕ್ಷ್ಮೀ . . . . ತಿ ಆದಿಕೇಶ್ವರ ಚಂಡುಮಾರ್ಧ . . . . ಜನಾರ . . . ನಾ ಯಂಬದಾಗಿ ನಾಲ್ಕು ರೂಪದಿಂದ . . . . ವಂ . . . . ಸ್ವಾಮಿಯು ಯೀ ತಿರಮಲಕೂಟಕ್ಷೇತ್ರದಲ್ಲಿ . . . . ಅಧಿಕಾ ಯಂಬದಾಗಿ ಸಕಲರ್‍ರಿಗೂ ತಾರ್‍ರು . . . . ವಾಗಿ . . . . ಸ್ವಯಂ ವ್ಯತ್ತ[>ವ್ಯಕ್ತ] ಗುಂಜಾಕರವಾಗಿ ವಿಷ್ಣು ನರಶಿಂಹರೂಪದಿಂದ ಯಿದ್ದಾರೆ. ಕಾಶಿಯಲಿ ಯರ್‍ರುವಂತ ದು . . . . ಪ[>ವಿ]ನಾಯಕಸ್ವಾಮಿಯವರು ಅಶ್ವಥ ಮೂಲದಲ್ಲಿ ಗಣಪತಿನಾಮದಿಂದ ವಾಸವನ್ನು ಮಾಡುತ್ತಾರೆ. ವ್ಯಾಸರು ಅಗಸ್ತೇಶ್ವರಸ್ವಾಮಿಯವರಿಗೆ ನವಮೋತ್ಸವ ಧ್ವಜಾರೋಹಣಪೂರ್ವಕವಾಗಿ ಯೀ ಉತ್ಸವವನ್ನು ಮಾಡಿಶಿ, ತೀರ್ಥಸ್ಥಾನವನ್ನು ಮಾಡಿಶಿ, ಸಂಗಮಕೆ ಪೂರ್ವತೀರದಲ್ಲಿ ವ್ಯಾಸೇಶ್ವರಾಯಂಬ ನಾಮದೇಹ[>ಧೇಯ]ದಿಂದ ಲಿಂಗವನ್ನು ಪ್ರತಿಷ್ಠೆಮಾಡಿಕೊಂಡು ಯಿದ್ದಾರೆ. ಕಾಶಿಯಲ್ಲಿ ಪ್ರಯಾಗದಲ್ಲಿ ಗಯಾದಲ್ಲಿ ಯಿರ್‍ರುವಂತಾ ಸರ್ವ ತ್ರಿಕೋಟಿ ತೀರ್ಥಂಗಳು ಸ್ಪಟಿಕ ಸರೋವರದಲಿ . . . . ವಿಹಂತರಲು ಸನ್ನಿಹಿತರಾಗಿ ಯಿದ್ದಾರೆ. ಕಾಶಿಯಲ್ಲಿ ಯಿರುವಂತಾ . . . . ಮದಿರಾ . . . . ವಾಸವನ್ನು ಮಾಡುತ್ತಾ ಯಿದ್ದಾರೆ.

❖❖

೨೦

ತೋಣ್ಣೂರು ರಾಕ್ಷಶಿ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೧

ಕೈಲಾಸವಾಸಿಗಳಾದಂಥಾ ಶ್ರೀಪರಮೇಶ್ವರನು ಪಾರ್ವತಿ ಸಮೇತವಾಗಿ ಸಕಲ ಸಲುಖ್ಯವಾಗಿ ಯಿರ್‍ರುವ ಕಾಲದಲ್ಲಿ, ಯಿವರ್‍ರು ವಂದಾನೊಂದು ದಿವಸ ಪಾರ್ವತಾದೇವಿಯರೊಡನೆ ಯೇಕಾಂತದಲ್ಲಿ ಯಿರ್‍ರುವಂತ ಕಾಲದಲ್ಲು ವಂದು ಯಿತಿಹಾಸವ ಹೇಳುತಿರುವ ಸಮಯದಲ್ಲಿ, ನಿತ್ಯದಲು ದೇವರ ಪೂಜೆಗೆ ಪುಷ್ಪವನ್ನು ತರುವಂತವನು ವಬ್ಬನ್ನು ಅಂತಃಪುರದ ಬಾಗಿಲಂ ಸಾರ್ದು ಸಂಚು ಕೇಳುತ್ತಿರ್ದ್ದು, ವಳಗೆ ಪಾರ್ವತಿ ಪರಮೇಶ್ವರ ಆಟ ಆಡುತ್ತಾ ಯಿದ್ದುದನಂ ಕೇಳಿಕೊಂಡು, ತಾನೂ ತನ್ನ ಮಂದಿರಕೆ ಬಂದು ವಂದಾನೊಂದು ದಿನ ತನ್ನ ಹೆಂಡತಿಯಾದಂಥವಳ ಕೂಡೆ ಯೀ ಉತ್ತಾಂತವನ್ನು ಹೇಳಲು, ಅವಳು ಯೀ ವೃತ್ತಾಂತವನ್ನು ಕೇಳುತ ಯಿರುವಲ್ಲಿ, ವಂದು ದಿನ ಪಾರ್ವತಿ ಅಮ್ಮನವರು ವೋಲಗದಲ್ಲಿ ಯಿರುತಾ ಯಿದರು. ಯೀ ಪುಷ್ಪಕನ ಹೆಂಡತಿಯಂ . . . . ದಲು ಯಿವಳ . . . . ಯಿವಳು ಅರಿತ[>ಅರಿತು] ಗೋಪ್ಯವಾದಂಥಾ ಉತ್ತಾಂತವನ್ನು ಹೇಳುತಿರಲು, ಆ ಸಮಯದಲ್ಲಿ ಕೆಲವು . . . . ಳಲು ಯಿವಳು ಅದಂ ಸರಿಮಾಡಿ ತಪ್ಪು ಆಡಿ . . . . ಅಮ್ಮನವರಿಗೆ ಕೋಪ ಬಂದು, ಶ್ರೀಪರಮೇಶ್ವರಸ್ವಾಮಿಯವರ ಬಳಿಗೆ ಬಂದು, "ನೀವು ನನಗೆ ವಂಚನೆ ಮಾಡಿ ಬಹು ಗೌಪ್ಯವೆಂದು ಹೇಳಿದ ಉತ್ತಾಂತಮಂ ಯೀಗ ಯೀ ಪುಷ್ಪವನ್ನು ತರುವನ ಹೆಂಡತಿಯು ತಿಳಿದು ಯಿದ್ದಾಳೆಂ"ದು ಹೇಳಿದ್ದು ಕೇಳ್ದು ಸಂಶಯಂಗೊಂಡು, ಅಂತರಂಗದ ವರ್ತಮಾನ ಬಹಿರಂಗಕೆ ಬಂದಲ್ಲಿ ಮಹಾದಾಶ್ಚರ್ಯವೆಂದು ಮೃಡನು ತನ್ನ ಜ್ಞಾನದಿವ್ಯದೃಷ್ಟಿಯಿಂದ ನೋಡಿ, "ಯಿದು ಯೀ ಹೂವ್ವ ತರುವವನಿಂದಾ ಬಂದಂತಾದು" ಯಂದು ತಿಳಿದು, ಯಿವನಿಗೆ ಶ್ಯಾಪಮಂ "ನರಜಲ್ಮದಲಿ ಹುಟ್ಟೆಂ"ದು ಕೊಡಲು, ಯೀ ಪುಷ್ಪವನ್ನು ತರುವಂತವನು ಶಿರಸಾವಹ್ಸಿ ಸ್ವಾಮಿಯವರಿಗೆ ಸಾಷ್ಟಾಂಗ ಪ್ರಣಾಮಮಂಗೈದು ವಿಮೋಚನಕೇ ನೆಂದು ವಿಜ್ಞಾಪನಂಗೈಯಲು, ಕರುಣದಿಂದಾ "ತೊಂಡನೂರಲ್ಲಿ ವಬ್ಬಳು ರಾಕ್ಷಸಿ ಯಿದ್ದಿಹಳು. ಅವಳ ಮಗಳು ಒಬ್ಬಳು ಹುಟ್ಟುವಳು. ಅವಳನ್ನು ಮದುವೆಯಂ ಮಾಡಿಕೊಳ್ಳುವದಕ್ಕೆ ನಿನ್ನ[>ನೀನು] ಬಂದು ಯೀ ಹೆಂಗಸಿನಲ್ಲಿ ಅನುಭವಿಸಲು, ಆ ರಾಕ್ಷಸಿಯು ತಿರುಗಿ ನಿನ್ನ ಕೊರಳಂ ಕೊಯಿದು ರಕ್ತಾಪಾನಮಂ ಮಾಡಲು ನಿನಗೆ ಶ್ಯಾಪ ವಿಮೋಚನೆ"ಯಂದು ಅಪ್ಪಣೆಯ ಕೊಡಲು.

ಭೋಲೋಕದಲ್ಲು ಧಾರಾಪುರವೆಂಬ ಪಟ್ಟಣವುಂಟು. ಯೀ ಪಟ್ಟಣದ ದೊರಿ ಮಾರಭೂಪನೃಪತಿ, ಪಟ್ಟದ ರಾಣಿ ಬುಗ[>ಬನ]ವಂತೆ ಸಹಾ ರಾಜ್ಯವನಾಳುತ್ತಿರುವಲ್ಲಿ ಯಿವರ ಗರ್ಭದಲು ಕರಿಬಂಟನೆಂಬ ನೃಪತಿ ಹುಟ್ಟಿದನು.

ಗಿರಿಜಾ ಅಮ್ಮನವರಿಗೆ ಕೋಪಬಂದು, ಯೀ ಪುಷ್ಪಕನ ಹೆಂಡತಿ ತಪ್ಪು ಆಡಿದ ಕಾರಣ "ನೀನು ರಾಕ್ಷಸಿಯಾಗಿ ಹುಟ್ಟು"ಯಂದು ಶ್ಯಾಪಮಂ ಕೊಟ್ಟದು ಶಿರಸಾವಹಿಸಿದಂತವಳಾಗಿ, ಬಹಳ ಚಿಂತೆಯಿಂದಾ ಲೋಕಪಾವನಿಯಾದಂತಾ ಜಗನ್ಮಾತೆಯನ್ನು "ನಾನ್ನು ತಮ್ಮ ಸೇವೆಯಂ ಬಿಟ್ಟು ನೀಚಮಾರ್ಗದಲ್ಲಿ ದುಶ್ಕೃತ್ಯಮಂ ಮಾಡಿಕೊಂಡು ಯೆಷ್ಟು ಯುಗ ಪರಿಯಂತ್ರವು ಯಿರಬೇಕೆಂ"ದು ವಿಜ್ಞಾಪನಂ ಮಾಡಲು, ತ್ರೈಲೋಕ್ಯಮಾತೆಯಾದಂತಾ ಅಮ್ಮನವರ ಕೃಪಾಕಟಾಕ್ಷದಿಂದಾ "ನೀನ್ನು ಕೊಂ[>ತೊಂ]ಡನೂರು ಬಳಿಯ ವಾಸವ ಮಾಡಿಕೊಂಡು ಬಹುಕಾಲ ಯಿರುತಾ ಯಿರುವಲ್ಲಿ, ನಿನ್ನ ಮಗಳಾದಂತವಳ ಮದುವೆ ಮಾಡಿಕೊಳುವ ಬಗ್ಗೆ ಕರಿಬಂಟನೆಂಬವನು ಬರುತ್ತಾನೆ. ಅವನ್ನಾ ಕೊರಳ ಕಡಿದು ರಕ್ತಪಾನವಂ ಮಾಡಲು ನಿನಗೆ ಶ್ಯಾಪವಿಮೋಚನೆ"ಯಂದು ಆಶ್ವಾಸನೆಯನ್ನು ಕೊಡಲು.

ಯಿವಳು ಭೂಲೋಕದಲ್ಲಿ ಉಜ್ಜನಿ ಮಹಂಕಾಳಿಯಂಬ ಪಟ್ಟಣದ ಬಳಿಯಲ್ಲು ಪ್ರೇತವನಾಂತರದಲ್ಲು ಯಿದ್ದ ಬೇತಾಳನ ವಂಶಸ್ತವೊಬ್ಬ ರಾಕ್ಷಸನು ಯಿದ್ದನು; ದಂಪತಿ ಸಹಿತವಾಗಿ ತನ್ನ ದುರ್ಬುಧ್ಧಿಯಂ ಬಿಟ್ಟ[>ಟ್ಟು] ವಿರಕ್ತಿಯಿಂದಾ ಸ್ಥಾನಭ್ರಷ್ಟನಾಗಿ, ಬಕುಳಾರಣ್ಯ ಕ್ಷೇತ್ರಕ್ಕೆ ಬಂದು ತಪಸಂ ಮಾಡಿಕೊಂಡು ಯಿರ್ರುವಲ್ಲು, ಯಿವಳೀ ಗರ್ಭದಲು ಶ್ಯಾಪಗ್ರಹಸ್ತಳಾದವಳು ಜನಿಸಿದಳು. ಯೀ ವೃಧ್ಧ ರಾಕ್ಷಸನಿಗು ವಂದು ಹೆಣ್ಣು, ವಂದು ಗಂಡು ಸಹಾ ಯರಡು ಮಕ್ಕಳು ಕೊಂಡಿ[>ತೊಂಡಿ]ಯಂತಾ ಹೆಣ್ಣು, ಬೊಂಮ್ಮಯಂಬದಾಗಿ ಹೆಸರಿಟ್ಟು ಕಾಪಾಡಿಕೊಂಡು, ಕೆಲವು ಕಾಲಾಂತರದ ಮೇಲೆ ತಾಯಿತಂದೆಗಳು ಯಿಬ್ಬರು ಸ್ವರ್ಗಸ್ತರಾದರು. ಯೀ ಅನಂತರದಲ್ಲು ಯಿವರ ಮಕ್ಕಳು ರಾಕ್ಷಶಿಯು ತಮ್ಮ ಬೊಮ್ಮನೆಂಬವನನ್ನು ಸಹಾ ಕೊಂಡಿ[>ತೊಂಡಿ]ನ್ನೂರು ಬೆಟ್ಟದ ಬಳಿಯಿಟ್ಟು, ವಂದು ಗುಹೆಯಂ ಮಾಡಿಕೊಂಡು ಯಿರುತ್ತಿದ್ದು, ವಂದಾನೊಂದು ದಿನ ಸಂಚಾರಕೆ ದೇಶಗಳ ಮೇಲೆ ಹೋಗಿ ಸಂಚಾರಮಂ ಮಾಡಿಕೊಂಡು ಬರು್ರತಾ ಯಿದ್ದನ್ನು.

ಉಜ್ಜನಿ ಸಮೀಪದಲ್ಲಿ ವಂದು ರತ್ನಾಪುರ ಎಂಬ ಪಟ್ಟಣವುಂಟು, ಮಣಿಕರ್ನಿಕರಾಯನೆಂಬ ಕ್ಷತ್ರಿಯ ಸೂರ್ಯವಂಶೋತ್ತಮನಾದವನು ಮಹಾಕ್ಷಾತ್ರನು ಯೀ ರಾಕ್ಷಸರಿಬ್ಬರನ್ನು ಕೊಲ್ಲುವದಕೆ ಸೇನೆಯನ್ನು ಕರದುಕ್ಕೊಂಡು ಯಿವರಿಬ್ಬರನ್ನು ತಡೆದು ಯುದ್ಧವನ್ನು ಮಾಡಲು, ಯೀ ರಾಕ್ಷಸರಿಬ್ಬರಿಂದ ಯೀ ರಾಯನ ಸೇವೆ ಯಾವತ್ತು ಹತವಾಗಲು, ಯೇಕಾಂಗಿಯಾಗಿ ಪಟ್ಟಣ ಪ್ರವೇಶಮಂ ಮಾಡಲು, ಯೀ ರಾಕ್ಷಶಿಯು ಬೆಂಬತ್ತಿ ಪಟ್ಟಣದೊಳು ಯಿರ್ರುವಂತಾ ಜನಗಳನ್ನೆಲ್ಲರನಂ ಮುರಿದು, ಈ ರಾಯನ ಮನೆಯ ಜನಗಳೆಲ್ಲರನಂ ಬಡಿದು, ರಾಯನಂ ಕೊಂಡು [>ದು] ಪಟ್ಟಣವಂ ಪಾಳು ಬೀಳುವಂತೆ ಮಾಡಿ, ಯೀ ರಾಯನ ಕುವರಿಯಾದಂತ ನಾಲ್ಕು ತಿಂಗಳ ಶಿಶುವಂದು ಯಿರಲು, ಅದನಂ ತಂದು ತನ್ನಾ ತಮ್ಮನಿಗೆ ಮದುವೆಯಂ ಮಾಡಬೇಕೆಂದು ಯೀ ಶಿಶುವನಂ ಕೊಂಡು, ತನ್ನ ಆಶ್ರಮವಾದ ಗುಹೆಗಂ ಬಂದು, ಹದಿನೆಂಟು ವರುಷ ಪರಿಯಂತ್ರ ಶಿಶುವನ್ನು ಪೋಷಿಸುತ್ತಾ ಯಿದ್ದಳು.

ಯೀ ದೇಶಕೆ ಪಶ್ಚಿಮಭಾಗದಲಿ ಹಳೆಬೀಡೆಂಬ ಪಟ್ನದ ದೊರ್ರೆ ಬಳ್ಳಾಳರಾಯನು ತನಗೆ ಅತಿ ಪ್ರೇಮವದಂತಾ ಬಹುಸೌಂದರ್ಯಉಳ್ಳಂತ ಯಿಬ್ಬರು ಕುಮಾರಿಯರು ಉಂಟು. ಯಿವರಿಗೆ ಹದಿನಾರು ವರುಷ ಯೌವ್ವನ ಪ್ರಾಪ್ತಿಯಾಗಲು ವಿವಾಹವನ್ನು ಮಾಡಬೇಕೆಂದು ಉದ್ಯುಕ್ತನಾಗಿ,

ರಾಜ್ಯದಲಿ ಯಿರ್‍ರುವಂತ ದೊರ್‍ರಿಗಳನ್ನು ಕರಿಶಿ ನೋಡು[>ಡಿ], ಯೀ ಹೆಣ್ಣುಗಳಿಗೆ ವರಸಾಮ್ಯವಿಲ್ಲದಿರೆ ಮಹಾಚಿಂತಾಕ್ರಾಂತನಾಗಿ, ಮಳೆಯಾಳ ದೇಶಾಧಿಪತಿಯಾದಂತಾ ಧಾರಾಪುರದ ದೊರೆ ಮಾರಭೂಪನೆಂಬ ನೃಪತಿಯ ಕುಮಾರ ಕರಿಬಂಟನೆಂಬ ಮಹಾನೃಪತಿಯು ಮಹಾಕ್ಷಾತ್ರನು ಮಹಾಸೌಂದರ್ಯವುಳ್ಳನು, ಬಾಲವೈಸಾದಂತವನು ಬಹಳ ಧರ್ಮಭಟನು, ಸಕಲದೇಶವನ್ನು ಜೈಯಿಶಿ ಬಹುಕ್ಷಾತ್ರದಿಂದ ಧರ್ಮಯುಕ್ತನಾಗಿ ನಾಡವಂ ಆಳುತ್ತಾ ಯಿರಲು, ಯೀ ವರ್ತಮಾನವಂ ಕೇಳಿ ತನ್ನ ಉಭಯ ಮಂತ್ರಿಗಳನು ಕರದು, ಯೀ ರಾಜಕುಮಾರನಂ ಕರದುಕೊಂಡು ಬರುವದಕಂ, ಕಳುಹಲು, ಯಿವರು ಬಂದು ರಾಯನಂ ಕಂಡು ಯೀ ವೃತ್ತಾಂಮಂ ಹೇಳಿ, ತಮ್ಮ ರಾಯನಿತ್ತ ಉಡುಗರೆಗಳನಂ ಕೊಟ್ಟು ಕರೆಯಲು, ರಾಯನು ಹರುಷತ್ರನಾಗಿ ತನ್ನ ಮಂತ್ರಿಗಳಾ ಕುರುತು ಪ್ರಸ್ತಾಪಮಾಡಲು, ಮಂತ್ರಿಗಳು "ಮಾರನೃಪಕುಮಾರನೆ ಕ್ಷತ್ರಿಯವಂಶೋದ್ಭವನಾಗಿ ಹೆಣ್ಣಿನ ನಿಮಿತ್ಯವಾಗಿ ಪರರಾಯನು . . .

ಕೊಣವದು ರಾಜವ್ರತ ಧರ್ಮವಲ್ಲ. ಅರಿಗಳು ಬಹು ಕಿರಿ ಮಗಳಂ ಕೊಟ್ಟು, ಪಂಕ್ತಿಯೊಳು ಭೋಜನಂಗೈದಾದಂಡಂ[>ದಡಂ] ಚಕ್ಕೂವರಂ[>ತಕ್ಕವರಂ] ಜಯಿಸುವರ್‍ರು"ಯಂಬ ಹುಶಾರಾಜಶಾತ್ರ[>ಶಾಸ್ತ್ರ]ಮಂ ಅರಸಿಗೆ ವಿಜ್ಞಾಪನಂಗೈಯಲು, ರಾಯನು ಮುಗುಳುನಗೆಯಿದ "ಯಲೆ ಮಂತ್ರಿಗಳಿರಾ ನಾನು ರಾಜಕುಮಾರನಲ್ಲವೆ? ರಾಜಶಾಸ್ತ್ರವನರಿತವನಲ್ಲವೇ? ಅಸಮರ್ಥನೆ? ಯನ್ನಂ ಜೈಸುವಡಾರಿಗೆ ಅರಿದು, ಬಂದ ಶತೃಗಳ ಶಿರವನರಿದು ರಾಜಗಳಂ ಸ್ವಾಧೀನವಂ ಮಾಡಿ, ನಿಮ್ಮ ಕಂಗಳಿಗೆ ಹುಜ ಹತ್ತಿರದಿದರೆ ಮಾರಕುಮಾರನಲ್ಲ"ವೆಂದು ಮಂತ್ರಿಗಳಂ ಸಂತೈಸಿ, ಮಾತೆಯರೆಡೆಗೆಂ[>ಗಂ] ಪೋಗಿ ಪೊರ[>ಡ]ಮೊಟ್ಟು ವಿದ್ಯಾಪನೆಯಂಗೈಯಲು, ಆ ಬನವಂತೆಯು ಮಗನಂ ನೋಡಿ ಚಿಂತಾಕ್ರಾಂತಳಾಗಿ, "ಯಲೆ ಮಗನೆ, ಮೂಢನೆ, ನೀನು ಹೆಣ್ಣಿಗೋಸ್ಕರ ನೀನು ಬಹು[>ಲ್ಲಾ]ಳರಾಯನ ಪಟ್ಲವಳಗೆ ನೂರ್‍ರುಯೋಜನ ಉಂಟು, ವಬ್ಬನೇ ಹೋಗುವದು ಉಚಿತವಲ್ಲ"ವೆಂದು ಬಹಳ ಬಗೆಯಿಂದಾ ಹೇಳಲು ಕೇಳದೇ ಯಿರಲು, ಮತ್ತು ಮಗನಂ ನೋಡಿ "ನಿನ್ನೆ ಯಿರುಳಿನೊಳು ನಾಂ ಕನಸಂ ಕಂಡದಂ ಪೇಳುವೆನತಿ ಕಾಟಂಣ್ಯಮಂ ಕೇಳವರಿಯನನೆ ಚಿತ್ತಸುದ್ದಿಯು ಯಿಲ್ಲವು. ಭಯಗೊಂಡುದು ನೀಯಂತೊಗದಿರೆಂ"ದು ಕಣ್ಣೊಳ ಬ[>ಜ]ಲವ ತುಂಬಿದ ಮಾತೆಯಂ ನೋಡಿ, ಮಾತೆಯರಿಗೆ ಸಾಷ್ಟಾಂಗ ಪ್ರಣಾಮಮಾಡಿ, ಅಂಜಲಿಬದ್ಧನಾಗಿ "ಯಲಾ ಮಾತೆಯೇ, ಲೋಕದೊಳೊ ಯನಗೆ ಮಲತು ನಿಲವ ರಾಯರ್‍ರು ಉಂಟೆ? ಆದಡಂ ಅರಿಗಳಂ ಗೆಲ್ದು. ರಾಯನ ಬಳಿಗೆ ಪೋಗಿ ವಿವಾಹಮಂ ಗೈದು, ಮಾರ್ಗದೊಳು ತಡದ ರಾಯರ ರಾಜಮಂ ಬಳದು ಬಾರದಿರ್ದಡೆ ಮಾರಭೂಪನ ಕುವರನಲ್ಲೆಂ"ದು ಶಪತಮಂ ಪೇಳಲಿಕೆ, ಮಗನ ಮಾತೆಯುಂ[>ಯುಂ] ಅಭಿಮಜನಂಗೈಶಿ, ರತ್ನಪೀಠದೊಳ ಕುಳ್ಳಿರಿಸಿ, ಭೂಸುರಪತ್ನಿಯಗಳಿಂದಾ ಸಂಶಯ[>ಸೇಸೆಯ] ತಳದು, ಭೋಜನಂಗೈಶಿ, ನಿರೂಪಮಂ ಕೊಡಲು, ಮಾತೆಗಂ ಪೊಡಮಟ್ಟು, ಪಾ[>ವಾ]ಲಗಕಂ ಬಂದು, ರಾಯನ ಮಂತ್ರಿಗಳಳಿ[>ಳಿಗಿ]ನ್ನುಂ ಬರ್‍ರುವೆನೆಂದು ನಿರ್‍ರೂಪಮಂ ಕೊಟ್ಟು ಕಳಿಹಿ. ಯೇಕಾಶ್ವರೂಢನಾಗಿ ತನ್ನ ಭೂಭುಜಪ್ರತಾಪದಿಂ ಖಡ್ಗಮಂ ಕೊಂಡು, ಮಾರ್ಗಮನ್ನೈದು ಬರುತ್ತಿರಲು, ಕಣಮೆಯಂ ಕಟ್ಟಿದ ಪುಳಿಂದರೊಳು ಯುದ್ಧಮಂ ಮಾಡಿ ಜಯಿಸಲು, ಉಮ್ರಶಿಂಗನೆಂಬ[>ಉರಿಶಿಂಗನೆಂಬ] ಪುಳಿಂದನಾಯಕನು

ಕತ್ತುರಿ ಪುಮನುಜ[>ಪುನುಗು] ವನದ ಮೃಗ ಮೊದಲಾದವಂ ಕಪಿಪುತ್ತು[>ಕಪ್ಪನಿತ್ತು] ಚರಣಕಂ ಪೊರ[>ಡ]ಮಟ್ಟು ಕಾವದೆಂದು ಬೇಡಿಕೊಳ್ಳಲಿಕೆ. ರಾಯನು "ನಾಲು ಪರರಾಯರ ವಳಗೆ ಕಾರ್ಯನಿಮಿತ್ಯ ಪೋಗುವೆವು. ನಿನ್ನ ಸೇನೆ ಸಹಿತವಾಗಿ ಬೆಂಬಟ್ಟಿ ಬಾ"ಯೆಂದು ಕರೆಯಲು ಪುಳಿಂದನಾಯಕನಾದ ಉರಿಶಿಂಗನು ತಮ್ಮ ಚತುರಂಗಶೇನೆಸಹಿತವಾಗಿ ರಾಯನ ಕೊಡೆ ಉಭಯತವೆ ಅತ್ತಿರಕೆ ಬರಲು, ರಾಯನಂ[>ನು] ಮಹಾನದಿಯಂ ಕಂಡು ಹರುಷಿತನಾಗಿ, ಮಜ್ಜನಂಗೈದು ಯಿರುತ್ತಿರಲು.

ಯಿತ್ತಲಾ ಕೊಂ[>ತೊಂ]ಡನುರ್ರ ರಾಕ್ಷಸಿಯಂಬವಳು[>ಳ] ಕುವರ್ರಿಯ ರಾಯನಂ ಬಯಚಿಟ್ಟು ಯೆಂದಿನಂತಿರುತ್ತಿರೆ, ಮಗಳನಂ ಕಂಡು "ಪೊಸ ಮನುಜನ ನಮುಲು ಯಿದೇನೆಂದು" ಬೆಸಗೊಳಲಿಕೆ, "ಸಿಂಹವಿರ್ರುವ ಪ್ರದೇಶದೊಳ್ ಗಜಸಂಚಾರವಾಗುವಂ[>ಗದಂ]ತೆ, ನಿನ್ನ ಯೀ ಪ್ರದೇಶದೊಳ ಸಂಚಾರಮಂ ಗೈದು ಬದುಕುವ ಮನುಜನುಂಟೆ?" ಯಂದು ಪೇಳಲಿಕೆ, ಮಗಳ ಮಾತಂ ಕೇಳ್ದು ಮುಖಮಂ ನೋಡಿ "ನಿನ್ನ ತನು ಮದನಬಾಣದಿಂ ಗಾಯಪಡದಿರ್ಪುದದಾವ ಪುರುಷದಿಂ[>ನಿಂ]ದಾದುದೆ? ಭರವಸವಂಗೊಟ್ಟು ತ್ತೋರೆ"ನಲಿಕೆ, ತಾಯ ಭರವಸಕ್ಕೆ ಮನಗೊಟ್ಟು ಗಂಡನಾಗಿಯಿದ್ದ ರಾಯನಂ ಕರದು ತೋರಲಿಕೆ, ರಾಕ್ಷಶಿಯು ರಾಯನಂ ಕಂಡು ಮನದೊಳು ಘುಡಿ ಘುಡಿ ಘುಡಿಸುತ್ತಾ ರೋಷದಿಂ, ನೋಡುವರಿಗೆ ಸಹಜವೆಂದರಿವಂತೆ ಮುಗುಳುನಗೆಯಿಂದಾ "ಮಗುವೆ ನಿನಗೆ ತಕ್ಕ ವರ ಯಿವನು. ಸಲುಖ್ಯಮಂ ಪಡೆ"ಯಂದು, "ನನಗೆ ಸಂತೋಷವಾದುದೆಂ"ದು ಸಂತೈಸಿ ಯಿರ್ರುತ್ತಿರೆ. ಸೂರ್ಯ ಅಸ್ತವಾದ ಬಳಿಕ ಮಗಳಂ ಕರದು "ನಿನ್ನ ಪತಿಯು ರಾಜಕುಮಾರನು. ರಾತ್ರಿಯೊಳು ಸಂಚರಿಸುವಲಿ ನಮ್ಮ ತಾಯನು ಆತನಿವೆತ್ತಕ ಬರನು. ಯಿದಕೆ ವಂದು ಗುರುತಿಸಿ ಕಾಲಿಗೆ ಕರಿಯ ಧಾರಮಂ ಕಟ್ಟಿರು" ಎಂದು ಕೇಳಲಿಕೆ ಪುಂಡರೀಕಾಕ್ಷಿಯು ಕೇಳದು ಮನದೊಳು ಸಂಶಯಂಗೊಂಡು, ನಡುವಿರುಳಿನೊಳು ಬೊಮ್ಮನ ಕಾಲಿಗೆ ದಾರವಂ ಕಟ್ಟಲಿಕೆ, ರಾಕ್ಷಶಿಯು ಕಾಣದೆ ಯಿವನೇ ಅಳಿಯನೆಂದು ಅರಿತು ವಡಲಂ ಸೀಳಿ ರಕ್ತಪಾನವಂ ಮಾಡಿ, ನಿದ್ರೆಯಂ ಗೈಯುತ್ತ ಯಿರಲು, ಯಿತ್ತ ಮಾರಿಯು ತನ್ನ ಪತಿಯಾದ ರಾಯನಂ ಯಚ್ಚರಗೊಳಿಸಿ ಹದಗೆಟ್ಟಿತೆಂದು "ನೀವು ನಿಮ್ಮ ಮನಸ್ಸು ಇದ್ದಂತೆ ಬದುಕಿಕೊಳ್ಳಿ"ಯಂದು ಕಳುಹಲು, ರಾಯನು ಮಾರ್ಗಸ್ತನಾಗಿ ಹೋಗುತ್ತಾ ಯಿದ್ದನು. ಅನಿತರೊಳು ಸೂರ್ಯ ಉದಯಿಶಿ ರಾಕ್ಷಶಿಯ ತಮ್ಮನಾದ ಬೊಮ್ಮನು ಬ್ರಹ್ಮಲೋಕಮಂ ಪೊಕ್ಕುದಂ ಕಂಡು, ಕಡುರೋಷದಿಂದ ಮಗಳಂ ಬಿಟ್ಟು ರಾಯನ ರಕ್ತಪಾನಮಂ ಮಾಡುವೆನೆಂಬ ಕಡು ತವಕದಿಂದ ಬರುತ್ತಿರೆ, ಮುಂದೆ ಪೋಗುವ ರಾಯನಂ ಕರವತ್ರ ಕಳದು ರಾಯನು ನೆಲಕೆ ಬೀಳಲು, ರಾಕ್ಷಶಿಯು ಕಂಡುಕೊಂಡು ಹೊರೆಯನು ತೊಟ್ಟಲು ಮಾಡಿಕೊಂಡು, ಕತ್ತಿಯನು ಶಿಶುವು ಮಾಡಿಕೊಂಡು, ಬಾಣತ್ತಿವೇಷದಿಂದ ಮಾಯರೂಪಮಂ ತಳೆದು, ನೋಳ್ಪರಿಗೆ ರಾಯನ ಪತ್ನಿಯಂತೆ ಬರುತ್ತಿರೆ, ಮಾರ್ಗಶ್ರಮದಿಂದಾ ರಾಜಕುಮಾರನು ಮರಿಗನುರ್ರುಯಂಬ ಗ್ರಾಮಮಂ ಸಾರ್ದು ಅಲ್ಲಿ ಯಿರುತಿರೆ, ಅನಿತ್ತರೊಳ ಪದಗಿ ಗ್ರಾಮವೆಂದರಿದು ಪುರಜನಗಳಂ ಕೂಡಿಸಿ, "ಯನ್ನ ಪತಿಯು ರಾಜಶೇವೆ ಶಾಸಕ್ತನಾಗಿ ಪೋಗುವದು ನಿಮಗೆ ಉಚಿತವೇ?"ಯೆಂದು. ಊರೊಳಗೆ ಯಿರುವಂಥ ಪ್ರಜೆಗಳಿಗೆ ಸಹಾ ಮೊರೆಯಿಡಲು. ಯೀ ಮಾತು ನಿಜವೆಂದರಿತು. ಯೀ ರಾಯನಂ ಕರದು. "ಬಾಣತ್ತಿ ಶಿಶುಲು ಯೀದೊ ಯಂತ ಸಲುಸಾರವನ್ನು ಬಿಟ್ಟು

ಅನಾಸಕ್ತನಾಗುವದು ಉಚಿತವಲ್ಲೆಂ"ದು ಪುರಜನರು ಹೇಳಲು, ಯೀ ಕರಿಬಂಟರಾಯನು ಕೇಳಿ . . ಮಾರ್ಗದೊಳು ನಡದ ವ[>ವೃ]ತ್ತಾಂತಮಂ ಹೇಳಲಾಗಿ, ಪುರಜನರು ಹುಶಿಯೆಂದು ಅರಿತು, ರಾಕ್ಷಶಿಯ ಮಾತು ನಿಜವೆಂದು ತಿಳಿದು ಸಂತೈಸುತ್ತಿರೆ, ಅನಿತರೊಳ್ ಸೂರ್ಯ ಪಶ್ಚಿಮಾದ್ರಿಯ ಸಾರ್ರಿ ತಮಮಂ ಬೀಡಾಗೆ, ತಾರೆಗಳು ಪ್ರಜ್ವಲಿಸೆ, ಪುರಜನರುಗಳೆಲ್ಲರುಂ ಯಿವರ ಯೀರ್ವರನ ಕರದು "ನಾವು ನಿಮ್ಮ ನ್ಯಾಯವನ್ನು ತೀರಿಸಿಕೊಟ್ಟೇವು. ರಾತ್ರಿ ಯೀ ಗುಡಿಯಲಿ ಉಭಯತರು ಯಿರಿ"ಯಂಬುದಾಗಿ ಆ ಊರ ಗವುಡಗಳು ಏಳು ಮಂದಿಯೂ ಹೇಳಿದರಿಂದ ಯೀ ರಾಯನು ಕೇಳಿ, "ಯಲೆ ಗವುಡಗಳಿರ್ಯಾ, ನಾನು ನರಮನುಷ್ಯನು, ಅವಳು ರಾಕ್ಷಶಿ. ಯನ್ನ ತಿನ್ನುವುದಕ್ಕೆ ಯೀ ಪ್ರಕಾರದ ಮಾಯಮಂ ಕಲ್ಪಿಸಿಕೊಂಡು ಯಿಲ್ಲಿ ಯಾವತ್ತು ನಿಮ್ಮ ಕೂಡ ಹೇಳಿದ ಕಾರಣ, ನೀವು ಮಾತಿಗೆ ಬೆರಗುಗೊಂಡು, ಅವಳ ಮಾತ ನಿಜವೆಂದರಿತು, ನಮ್ಮ ಯಿಬ್ಬರನು ಗುಡಿಯ ಕು[>ಕೂ]ಡುವದು ವಿಯುಕ್ತವಲ್ಲಾ. ಆದರೆ ನಿಮ್ಮ ಮಾತು ಮೀರಬಾರದು. ವಬ್ಬರ ಮಾತಿನ ಮೇಲೆ ದೇಹ ಹೋದಾಗು ಸಾರ್ಥಕವಾದಿತ್ತು. ಯೀಶ್ವರ ಮೆಚ್ಚನು. ವಂದು ಆಯುಧ ಮಾತ್ರ ನನ್ನ ಕೈಯ್ಯ ಕೊಡಿ"ಯಂಬದಾಗಿ ಕೇಳಿದ ಕಾರಣ, ಯೀ ಗವುಡಗಳು ಆ ರಾಕ್ಷಸಸ್ತ್ರೀ ಆಡಿದ ಮಾತಿಗೆ ಮರುಳಾದ ಕಾರಣ ಆಯುಧ ಕೊಡಬಾರದೆಂದು, "ನಿನ್ನಾ ಜೀವಕೆ ನಾವು ಯೇಳು ಮಂದಿ ಹೊಣೆಕರ್ತರು" ಯಂದು ಯಿಶ್ವರನ ಗುಡಿಯ ಮುಂದೆ ಭರವಸೆವಂ ಕೊಟ್ಟು, ಉಭಯತ್ರರನ್ನು ಗುಡಿಯ ವಳಿಗೆ ಯಿರಿಸಿ, ಬಾಗಿಲು ಹಾಕಿಕೊಂಡು, ತಮ್ಮ ತಮ್ಮ ಮನೆಗೆ ಹೊದ ಬಳಿಕ, ನಡುವಿರ್‍ರುಳಿನೊಳು ರಾಕ್ಷಶಿಯು ಯದ್ದು, ಮೈಮರೆತು ನಿದ್ರೆೃವ ರಾಯನಂ ಕಂಡು ಹರುಷಿತಳಾಗಿ, ಸಿಂಹನಾದವಂ ಮಾಡಿ, ವಡಲಂ ಸೀಳಿ ರಕ್ತಪಾನ ಮಾಡಿ, ಗುಡಿ ಮೇಲಿನ ಕಲ್ಲನಂ ಕಿತ್ತುಕೊಂಡು ಪೋಗಿನಿತರೊಳು ಶಾಪದೇಹ ಹೋಗಿ ಉತ್ತಮ ದೇಹ ಬರಲು, ಕೈಲಾಸಕೆ ಹೋಗಿ ಅಯ್ಯ[ಮ್ಮ]ನವರ ಶೇವೆಯ ಅಪೂರ್ವದ ಮೇರಿಗೆ ಯಿದ್ದುಕೊಂಡು ಹೋದಳು.

ಯಿತ್ತಲೂ ಗವುಡಗಳು ಸೂರ್ಯ ಉದಯಕೆ ಬಂದು, ನ್ಯಾಯಮಂ ತೀರಿಸಬೇಕೆಂದು ಉಭಯತ್ರರ್‍ರು ಕರ್ರೆಸಲು ರಾಕ್ಷಸಿ ಯಿಲ್ಲದೇ ನಿರ್ಜೀವನಾಗಿ ಬಿದ್ದ ರಾಯನಂ ಕಂಡು ಖಿನ್ನರಾಗಿ, ತಾವು ಆಡಿದ ಭಾಷೆಗಾಗಿ ಪ್ರಾಣವಂ ಬಿಟ್ಟು, ರಾಯನ ಮನ್ನೆರಾ ನಾಲು ಅಗ್ನಿಪ್ರವೇಶಮಂ ಮಾಡಬೇಕೆಂದು ನಿಶ್ಚಯಿಸಿ, ಅಗ್ನಿಯಂ ಪ್ರಜ್ವಲಿಸಿ, ಕೈಲವೃತ್ತ[>ತೈಲಾವರ್ತ] ವಟಗಳಿಂದಾ ಪೂಜೆಯಂ ಗೈದು, ಯೇಳು ಮಂದಿ ಗವುಡಗಳು ಅಗ್ನಿಯಂ ಪ್ರವೇಶಿಸಲನಿತ್ತರೊಳ ಶ್ರೀಪರಮೇಶ್ವರನು ಭಕ್ತವತ್ಸಲನಾದ ಕಾರಣ, ಯೇಳು ಮಂದಿ ಗವುಡಗಳನಂ "ನಿಮ್ಮ ಭಕ್ತಿಗೆ ಮೆಚ್ಚಿದೆನು. ಕೇಳಿದ ಇಷ್ಟಾರ್ಥನೀವೆ"ನೆಂದು ಪರಮೇಶ್ವರಂ ನಿರೂಪಿಸಲಿಕೆ, ಯೀ ಯೇಳುಮಂದಿ ಗವುಡರು ಪರಮೇಶ್ವರ ದಿಟನೆಂದು ಅರಿತು, ನಡೆದ ವೃತ್ತಾಂತಮಂ ತಿಳಿಸಲಿಕೆ, ಕರಿಬಂಟರಾಯನಂ ಜೀವಂತಮಂ ಮಾಡಿ, ಯೇಳುಮಂದಿ ಗಲುಡಗಳಿಗೆ ಯಿಷ್ಟಾರ್ಥಮಂ ಕೊಟ್ಟ[>ಕೊಟ್ಟು], ಈ ರಾಯನಂ ಕುರಿತು "ಯೋಚನೆಗೊಳದಿರು"ಯಂದು ಪೂರ್ವದ ಶಾಪಬಂಧಮಂ ತಿಳಿಸಿ, ಮನಮಂ ನಿಚ್ಚಯಗೊಳಿಸಿ, ಕೈಲಾಸಕಂ ಯಿತ್ತ ಗಣಂಗಳು ಹರುಷಿಸಲಿಕೆ . . . . .

❖❖

೨೧

[ದೇವಣಪುರ] ಕೈಫಿಯತ್ತು

ಡಿ. ನಂಬರ್ ಸಂಪುಟ : ೨೧೪ಲ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷಂಗಳು ಪೃಥ್ವಿಸಾಮ್ರಾಜ್ಯಗೈಯ್ಯುತ್ತಿರಲು ಮೀರಸ ಕಾ। ಶಾಲಿವಾಹನ ಶಕ ವರುಷಂಗಳು ೧೨೧೪ ಸಂದ ನಂದನ ಸಂವತ್ಸರದ ಜ್ಯೇಷ್ಠ ಬ. ೭ ಆದ ಎಡತಲೆಯ ಅಮ್ಮನು ಮಹಾಪ್ರಧಾನ ರಾವುತರಾಯ ಭೀಮೆದಣಾಯ[+ಕರು] ಮಚೆದಣಾಯ [+ಕ]ರು ಪೆರುಮಾಳುದಣಾಯ[+ಕ]ರು ಸಕಲೆದಣಾಯ[+ಕ]ರು ಕರೊಡ[>ನಾಲ್ವರೊಳ]ಗಾದವರು. ನಮ್ಮ ಎಡತಲೆಯ ಶ್ರೀಲಕ್ಷ್ಮೀನಾರಾಯಣದೇವರು ಆ ನರಸಿಂಹದೇವರು ಆ ಗೋಪಾಲದೇವರು ದೇವಾಲಯದ ಆವ ಎಡದಿಕ್ಕಿನಲ್ಲು ನಾಲ್ಕು ಭಾಗೆ ವಳಗೆ ವಂದೇ ಪುರದ ಆ ಕೊಡಪಿ ಲಕ್ಷುಮಯ್ಯನ ಮಗ ವಾಮಂಣಗೆ ಆ ಭಾಂಡಕ ಸ್ಥಾಯಿ ಆಗಿ ಸಲುವಂಥದಾಗಿ ಧಾರಾಪೂರ್ವಕವಾಗಿ ಕೊಟ್ಟ ಶಿಲಾಶಾಸನದ ಕ್ರಮ: ಈ ದೇವರ ಕಡೆಗೆ ಎಡತಲೆಯಲ್ಲು ಉಳ್ಳಂಥಾದು ಗದೆ(ದ್ದೆ) ಬೆದಲು ತೋಟ ಮೆನ ಆಸ್ಥಾನ, ಭೋಗಂ ಸಾಮ್ಯಯೊಳಗಾದ ಈ ದೇವರು ಇದೇ ಗದ್ದೆ ಬೆದಲು ಉಳಂ ಇಷ್ಟಾದಿ ಕ್ರಯ ನಾಲ್ಕು ಭಾಗೆಯೊಳಗೆ ಆ ವಾಮಣ್ಣಗೆ ಕೊಟ್ಟ ಭಾಗವನ್ನು ಆಚಂದ್ರಾರ್ಕಸ್ಥಾಯಿ ಆಗಿ ಧಾರಾಪೂರ್ವಕವಾಗಿ ಮಾಡಿಕೊಟ್ಟಿರುವಂಥಾದ್ದು ಮಂಗಳ ಮಹಾಶ್ರೀಶ್ರೀ.

ಸ್ವದತ್ತಂ ಪರದತ್ತಂ ವಾ ಯೋ ಹಂತೀ[>ಹರೇತಿ]ವಸುಂಧರಾ.

ಪರದತ್ತಾಪಹಾರೇಣ ಲಕ್ಷ . . . ಜಾಯತೇ ಕ್ರಿಮಿಃ ॥

ಶುಭಮಸ್ತು॥ ಸ್ವಸ್ತಿ ಶ್ರೀ ಶಾಲಿವಾಹನ ಶಕ ವರುಷಂಗಳು ೧೨೧೨ ಸಂದ ವರ್ತಮಾನದ ಖರನಾಮ ಸಂವತ್ಸರ ಪಾಲ್ಗುಣ ಶು. ೧ ಲ್ಲು ಮಹಾಪ್ರತಾಪ ಭಕ್ತವರಿಯ[>ಚಕ್ರವರ್ತಿ] ಶ್ರೃಈ ವೀರಬಲ್ಲಾಳ . . . ಸ್ವರೂಪ ಪೃಥ್ವಿರಾಜ್ಯಂಗೈಯುತ್ತಿರಲು ಎಡತಲೆಯ ಮೊದಲೆಯ ಮನುಮಹಾಪ್ರಧಾನ ದೊಟದಣಾಯ[+ಕರ] ಮಗ ಭೀಮದಣಾಯ[+ಕ]ರು, ಲಲಾ[>ಅಲ್ಲಾ] ಳದಣಾಯ[+ಕ]ರ ಮಗ ಮಂಚದಣಾಯ [+ಕ]ರು, ಶ್ರೀಮನುಹ ಭೀಮದಣಾಯ[+ಕ]ರ ಮಗ ಪೆರುಮಾಳುದಣಾಯ[+ಕ]ರು, ಭೀಮದಣಾಯ[+ಕ]ರ ಮಗ ಸಕಲೇದಣಾಯ[+ಕ]ರು

ನಾಲ್ವರೊಳಗಾದ ಸಮಸ್ತದಣಾಯರು ತಮ್ಮೊಡಂಬಟ್ಟು, ತಮ್ಮ ಪಟ್ಟಣವಾದ ಹೆಮ್ಮರಗಾಲದ ಹರಿಗಂಗ ಮಾದರಸೆಟ್ಟಿಯ ಮಗ ಮಸನಾಳಸೆಟ್ಟಿಗೆ ಪಡುವಲಸಮುದ್ರದ ಮೂಡಲ ಕೋಡಿಯ ಕಾಲುಮೆಯ ಪರಿಯಂತ್ರ ಪಡುಲಾಲು[>ಪಡುವಲು] ಕಾಲುವೆಯ ಬಡಗಲು ಹಿರಿಯರಣೆಯ ಮೂಡಲು ಯೆಡತಲೆಯ ತೆಂಕಲೊಳಗಾದ ಈ ದಿನಂ ಅಮಾವಾಸ್ಯೆ ಶುಕ್ರವಾರದಿನಂ ಮೊದಲಾಗಿ ದರಿಹ ಬಟೆ ಮಾನ್ಯಂ ಆಮೇಲೆ ಮಾಡಿಕೋಟೆ ಕೋಟಿಹಯ . . ನವಕೊಟ ಚಾರಳದಂಡಂ

ಕೊಟ್ಟದ್ದಾಗಿ ಯದುಳ್ಳು ದೇವಾಲಯ ಹ . . . . ಬೂ ಜಂನ್ನಂ ಕೊಟ್ಟದ್ದು ವರುಷಕ್ಕೆ ಸಲುವಂಥ ಸಿಥಾಯ ತನ್ನ ಕ್ರಯವಾಗಿ ಮರಿಯಾದಿಯಲ್ಲು ಮಸಿನಾಳಸೆಟ್ಟಿಯ ಸಿಥಾಯ ತನ್ನ ಕ್ರಯವಾಗಿ ಮರಿಯಾದಿಯಲ್ಲು ಮಸಿನಾಳಸೆಟ್ಟಿಯ ಮಕ್ಕಳು ವರದಸೆಟ್ಟಿಯು ಆ ಚಂದ್ರಾರ್ಕಸ್ಥಾಯಿ ಆಗಿ, ಬರೆಸಿ ಉಳ್ಳಂಥಾದಾಗಿ, ಶಿಲಾಶಾಸನ ಕ್ರಯವಾಗಿ ಮಾರಿದ್ದು.

❖❖

೨೨

ದೇವನಕಲ್ಲು ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಬಿಜಪುರದ ಕಡೆಲಿಂದ ಲಿಂಗ ಬಣಜಿಗರು ಗಾಲಪ್ಪ, ಗಾಮಂಣ, ಬಸಪ್ಪಾ, ಲಿಂಗಪ್ಪನಂಬೋ ಅಪ್ಪರೂ ಅಣ್ಣತಂಮ್ಮೊಂದರು ನಾಲ್ಕು ಜನ ದೇಶದ ವಳಗೆ ಅವಾಂತ್ರವಾದ ಮೂಲಕದಿಂದ, ದೇಶಾಂತ್ರದಲ್ಲಿ ಜೀವನ ವುಪಾಯ ಮಾಡಬೇಕೆಂದು ಕರ್ನಾಟಕದ ದೇಶಕ್ಕೆ ಬಂದು, ತುಂಗಭದ್ರಾನದಿಗೆ ದಕ್ಷಿಣಭಾಗದಲ್ಲು ಯರಡು ಹರದಾರೀ ಮ್ಯಾಲೆ ಕುಂತಳಾನಗರದ ಪಟ್ಟಣಕೆ ಪಶ್ಚಿಮಭಾಗದಲ್ಲಿ ಗುಡ್ಡದ ಬಳಿಯ ಅರಣ್ಯವಾಗಿ. ಅಲ್ಲಿ ತೃಣಕಾಷ್ಟಜಲಪರ್ನಸಮೃದ್ಧಿಯಾಗಿ ಯಿದ್ದ ಕಾರಣದಿಂದ, ಸದರಿ ನಾಲ್ಕು ಜನದ ಬಣಜಿಗರು ಯೀ ಸ್ಥಳಕ್ಕೆ ಬಂದು, ಬಚ್ಚೆ ಖಚ್ಚೆ ದನಕರವು ಆಕಳುಗಳು ಸಹಿತವಾಗಿ, ಯೀ ಸ್ಥಳದಲ್ಲಿ ಹಟ್ಟಿ ಹಾಕಿಕೊಂಡು ಕೆಲಉ ದಿವಸ ಯಿರಲಾಗಿ, ಯಿದರಲ್ಲು ಆಕಳುಗಳ ವಳಗೆ ವಂದಾಕಳು ತನ್ನ ಮನೋಭೀಷ್ಟದಿಂದ ಮೇಯಲಿಕ್ಕೆ ಹೋದಲ್ಲಿ, ಗಾಡದಲ್ಲಿ ಒಂದು ಹುತ್ತು ಯಿರಲಾಗಿ, ಆ ಹುತ್ತಿನ ಮ್ಯಾಲೆ ದಿನ ವಂದಕ್ಕು ಆಕಳು ಹೋಗಿ, ಹಾಲು ಕರುವುತ್ತ ಯಿತ್ತು. ಯೀ ವಿಚಾರಕ್ಕೆ ಮನಿಗೆ ಬಂದ ತರುವಾಯ ಹಾಲು ಕರಕೋಬೇಕೆಂದು ಕರವು ಬಿಡಲಾಗಿ ಕರವಿನ ವುಣಿಸದೆ ಹಾಲು ಕೊಡದ ಕಾರಣ, ದಿನ ವಂದಕ್ಕು ಹೀಗೆ ಮಾಡುತ್ತಾಯಿದ್ದಿತೆಂದು ಆಕಳ ಕಾವೊ ಅವರನ ದಂಡಿಸಲಾಗಿ, ಆಕಳು ಕಾವೋರು ಹೇಳಿದ್ದು "ನಾನು ಯೀ ಆಕಳ ಮೋರೆ ಕಂಡಿಲ್ಲ. ಯಿದರ ಪೂರ್ವೋತ್ರ ನಾನು ಗುರುತು ಅರಿಯನು"ಯೆಂದು ಹೇಳಿದನು. "ಆದರೆ ಚಿಂತಿಯಿಲ್ಲ, ಯೀ ಹೊತ್ತು ಚನ್ನಾಗಿ ಕಾದುಕೊಂಡು ಯಿದ್ದು, ಯೀ ಆಕಳ ಪೂವೋತ್ರ ಸಾಯಂಕಾಲಕ್ಕೆ ನಮ್ಮ ಮುಂದೆ ಹೇಳೋದೆಂ"ದು ಶೀಕ್ಷೆ ಮಾಡಲಾಗಿ, ಅದೇ ಪ್ರಕಾರಕ್ಕೆ ದನ ಕಾವೊ ಅವನು ಆ ಹೊತ್ತಿನ ದಿವಸದಲ್ಲಿ ಆ ಆಕಳ ಮ್ಯಾಲೆ ಪರಾಮರಿಕೆ ಸಂಗಡ ಯಿದ್ದು ಪರೀಕ್ಷೆ ಮಾಡಲಾಗಿ ವಳ್ಳೇ ಅಭಿಜಿನ್ಮುಹೂರ್ತದಲ್ಲಿ ಆಕಳು ಹೋಗಿ ವಂದು ಹುತ್ತಿನ ಮ್ಯಾಲೆ ಹಾಲು ಕರವೋದು ಕಣ್ಣುಗಂಡು ಬಂದು, ತಮ್ಮಾ ಧಣಿಗಳ ಮುಂದ ಯಿ ಪ್ರಕಾರಕ್ಕೆ ಯೀ ಆಕಳು ಮಾಡುತ್ತಾ ಯಿದತ್ತೆಂದು,

“ಯೀಗ ಆಕಳನ್ನು ನೀವು ನೋಡಿ ಬನ್ನಿರಿ” ಯಂದು ನಾಲ್ವರ ಅಣ್ಣತಮ್ಮಂದಿರನ ಕರಕೊಂಡು ಬಂದು ಯೀ ಆಕಳು ಮಾಡೋ ಪೂರ್ವೋತ್ರ ಯಾವತ್ತು ಚನ್ನಾಗಿ ತೋರಿಸಿದನು.

ಯಿದು ನಾಲ್ವರು ಅಣ್ಣತಮ್ಮಂದಿರು ಕಣ್ಣಗಂಡು “ಯಿದು ಯೇನು ಆಶ್ಚರ್ಯ? ಯಲ್ಲಿ ಯೇನು ಯಿದ್ದೀತು?”ಯೆಂದು ಸಲಕಿ ಗುದ್ದಲಿ ತರಿಸಿ ಹುತ್ತನ್ನ ಚೆನ್ನಾಗಿ ಆಗಕೆ[>ತೆ] ಮಾಡೊದರ ವಳಗೆ, ವಂದ ಲಿಂಗಾಕಾರದ ಪ್ರಕಾರಕ್ಕೆ ಯಿತ್ತು. ಅದರನ ಕಣ್ಣಗಂಡು ಆ ಲಿಂಗವನ್ನು ಕಂಡು ಪೂಜೆ ಮಾಡುತ್ತ ಯಿದ್ದರು. ದಿನದಿನಕ್ಕೆ ನಾಲ್ವರ ಅಣ್ಣತಮ್ಮಗಳ ಮನೆವಳಗೆ ದನಕರುವುಗಳಿಂದ ಮನ್ಯಪಾರದಿಂದ ಬಹು ಪ್ರಬಲರಾಗಿ ಯಿದ್ದತ್ತು. ಯಿದು ಕಂಡು ಯೀ ನಾಲ್ಕು ಮಂದಿ ಅಣ್ಣತಮ್ಮಂದಿರು ಮಾತನಾಡಿಕೊಂಡರು. “ನಮ್ಮಗೆ ಯೀ ಸ್ಥಳನಿದು ಮೇಲು. ಚನ್ನಾಗಿ ಯಿದೆ. ಯಿಲ್ಲೆ ನಾಲು ಠಿಕಾಣಿ ಮಾಡಬೇಕೆಂ”ದು ಆಲೋಚನೆ ಮಾಡಿ, ಕುಂತಳಾನಗರದಲ್ಲಿ ಯಿದ್ದ ಪ್ರಭುತ್ವದವರನ್ನು ಕೇಳಿದ್ದು “ನಾವಾದರೇ ವಿಜಾಪುರದ ದೇಶದಲ್ಲಿ ಬಹಳ ಅವಾಂತ್ರ ಮೂಲಕದಿಂದ ಬಚ್ಚೆ-ಕಚ್ಚೆ ಸುದಾ ಬಂದು ಯಿದ್ದೇವೆ. ಮುಂದಕ್ಕೆ ಯಲ್ಲಿಗಾದರು ಬದುಕಲಿಕ್ಕೆ ಹೋಗಬೇಕೆಂದು ಬಂದೆವು. ಯಿಂನು ಮುಂದಕ್ಕೆ ಹೋಗಬೇಕದರೆ ಯಲ್ಲಿಯೂ ಠಿಕಾಣಿಯಿಲ್ಲ. ನಿಮ್ಮ ಗ್ರಾಮಕ್ಕೆ ಪಶ್ಚಿಮಭಾಗಕ್ಕೆ ಹರದಾರೀ ಮ್ಯಾಲೆ ಗುಡ್ಡದ ಬಳಿಯಲ್ಲಿ ಅರಣ್ಯ ಬಿ[>ವಿ]ದ್ದು, ಕಾನನ ಬಿ[>ವಿ] ಯಿರಲಾಗಿ ಅಲ್ಲಿ ಯಿರುಯಂದು ಅಪ್ಪಣೆ ಆದದ್ದಾಯಿತು. ಅಲ್ಲಿ ನಾಲ್ಕು ಗುಡುಸಲು ಹಾಕಿಕೊಂಡು ಯಿದ್ದೇವೆಂ”ದು ಕೇಳಲಾಗಿ, ಅವರು ಅದೇ ಪ್ರಕರಕ್ಕೆ ಅಪ್ಪಣೆ ಕೊಡಲೀ ಅಷ್ಟಕ್ಕೆ ತಾವು ಯಿಳದಂತಾ ಸ್ಥಳದಲ್ಲಿ ಗುಡಸಲಗಳು ಕಟ್ಟಿಕೊಂಡು, ಕೆಲವು ದಿವಸ ಆ ದೇವರನ ಪೂಜಿ ಮಾಡಿಕೊಂಡು ಯಿರುತ್ತಾ ಯಿರಲಾಗಿ, ಅದೇ ಮಾರ್ಗದಿಂದ ಪೆನುಗೊಂಡೆ ಗಾಣಿಗರು ಭಾರಾಮಾರ್ಗಕ್ಕೆ ಸಾವಿರ ಯತ್ತು ಮಾರ್ಗಸ್ತರಾಗಿ ಕೆಲಉ ದಿವಸ ಹೋಗುತ್ತಾ ಯಿದ್ದರು. ಯೀ ದೇವರು ಉದ್ಭವ ಆದ ಬಳಿಕ ಯಿದೆ ಮಾರ್ಗದಿಂದ ಹೋಗುತ್ತಾ ಯಿದ್ದರು. ನಾಲು ಯೀ ಜಾಗದಲ್ಲಿ ಠಿಕಾಣಿ ಮಾಡಿದ್ದು ಕಣುಗಂಡು, ಯೀ ಸ್ಥಳ ನೀರು ಮೂ[>ವೂ]ರಿಗೆ ದನಗಳಿಗೆ ಚನ್ನಾಗಿ ಯಿದ್ದೀತೆಂದು ಅಲ್ಲಿ ವಸತಿ ಮಾಡುತ್ತಾ ಯಿದ್ದರು.

ಹಾಗೆ ಕೆಲವು ದಿವಸಗಳು ಆಗಿ ಬರುತ್ತಾ ಯಿರಲಾಗಿ, ವಂದಾನೊಂದು ದಿವಸ ಸಾವಿರ ಯತ್ತು ಕಿರಾಣಿ ವಗ್ಯೆರೆ ದಿನ್ನು ಭರ್ತಿ ಮ್ಯಾಲೆ ಬಂದು ಯಿಳದು ಯಿರಲಾಗಿ, ನಮ್ಮಲ್ಲಿ ಉದ್ಭವವಾದ ದೇವರು ಆ ಬಣಜಿಗರ ಸ್ವಪ್ನದಲ್ಲಿ ಬಂದು “ನಾವು ಯಿಲ್ಲಿ ಉದ್ಭವವಾಗಿ ಯಿದ್ದೇವೆ. ನಿಮಗೆ ನಿಮ್ಮ ಪ್ಯೆರು ಮಾರಾಟ ಮಾಡಿ, ಚನ್ನಾಗಿ ಲಾಭವು ಆಗಿ, ವಿಶೇಷವಾಗಿ ದ್ರವ್ಯ ಫಲವಾಗುತ್ತಾ ಯಿದ್ದು, ನಮ್ಮಗೆ ನೀಉ ಯಿದ್ದ ಸ್ತಳದಲ್ಲಿ ದೇವಾಲಯವು ಚನ್ನಾಗಿ ಕಟ್ಟಿಸಿರಿ”ಯಂಬುದಾಗಿ ಅಪ್ಪಣೆ ಕೊಟ್ಟರು. ಆ ತರ್ವಾಯ ಯೀ ಗೃಹಸ್ತರು ಬಹಳ ಸಂತೋಷಬಟ್ಟು, ಯಚ್ಚರಿಕೆ ಆದ ತರುವಾಯ ತಾವು ನಾಲ್ಕು ಮಂದಿ ಕೂಡಿ ಆಲೋಚನೆ ಮಾಡಿಕೊಂಡು, “ಸದರಿ ಆ ದೇವರು ನಮಗಾದರೆ ಸ್ವಪ್ನದಲ್ಲಿ ಯೀ ಪ್ರಕಾರಕ್ಕೆ ಅಪ್ಪಣೆ ಕೊಟ್ಟು ಯಿದ್ದಾರೆ. ನಾವು ಯೀಗ ಹೋಗಿ ನಮ್ಮ ಪ್ಯೆರು ವೆಚ್ಚಾ ಮಾಡಿಕೊಂಡು ಬಂದ ತರುವಾಯ ದಾವಾಗ್ಯೂ ನಮ್ಮಾಣೆ ಲಾಭ ಬರಹೋಗುತೆಂ[>ಕೊಂ]ತ ಯೀಗ್ಯೆ ವಿಶೇಷವಾದ ಲಾಭ ಬಂದರಾಯಿತೆ. ಯೀ ಸ್ತಳದಲ್ಲಿ ಯೀ ದೇವರಿಗೆ ಚನ್ನಾಗಿ ಗುಡಿ ಕಟ್ಟಿಸಬೇಕೆಂ”ದು ನಾಲ್ವರು ತಮ್ಮೊಳಗೆ ತಾವು ಮಾತನಾಡಿಕೊಂಡು ಹೋದರು. ಆ ತರ್ವಾಯ ಖರ್ಚು ಮಾಡಲಾಗಿ ವಿಶೇಷವಾಗಿ ಲಾಭ ಫಲವಾಯಿತು.

ಪುನಹಃ ಯೀ ದೇವರು ಯಿದ್ದ ಸ್ತಳಕ್ಕೆ ಬಂದು "ಗುಡಿ ನಿರ್ಮ್ಮಾಣ ಮಾಡಬೇಕೆಂ"ತ ಯಜಮಾನನು ಯಿಲ್ಲಿ ಕೆಲವು ದಿವಸವು ನಿಂತು, ಗುಡಿ ಚನ್ನಾಗಿ ಕಲ್ಲು ಕಟ್ಟಿದಲ್ಲಿ ದೇವರ ಗುಡಿ ಮಧ್ಯ ರಂಗ ಪವಳಿಗೆನು ಗರುಡಸ್ತಂಭಗಳನು ಮಹಾದ್ವಾರ ಸಹಜವಾಗಿ ಕಟ್ಟಿಸಿ, ಗಚ್ಚು ಮಾಡಿಸಿ, ಅಲ್ಲಿ ಗುಡಿಯಲ್ಲಿ ವೊಂದು ದೊಡ್ಡ ಬಸವೇಶ್ವರನ ನಿರ್ಮಾಣಮಾಡಿ, ಮಧ್ಯರಂಗಕ್ಕೆ ದಕ್ಷಿಣಭಾಗದಲ್ಲಿ ಸ್ತಾಪನ ಮಾಡ್ಸಿ, ಪುನಹ ತಮ್ಮ ಸ್ತಳಕ್ಕೆ ಹೋದ್ರು. ಯಿವರು ನಾಲ್ವರು ದೇವರ ಪೂಜಾರಿಕೆ ಮಾಡಿಕೊಂಡು, ಅಲ್ಲಿ ವಂದು ಗ್ರಾಮ ದೇವನಕಲ್ಲುಯಂಬುವ ಹೆಸರು ನಿರ್ಮಿತ ಮಾಡಿಕೊಂಡು. ಕೆಲವು ದಿವಸ ಯಿದ್ದರು. ತದನಂತರ ಬರೆ ರಾಮರಾಜನ ಅವಾಂತ್ರದಿಂದ ಗ್ರಾಮ ಆರೂಪಕವಾಗಿ ಹೋದ ಕಾರಣ, ಆ ಸ್ತಳದಲ್ಲಿ ಬಿಟ್ಟು ತಂಕಲುಕೋಟೆ ಕಸಬೆದ ವಳಗೆ ದೇವನಕಲ್ಲುಪೇಟೆಯಂಬುದಾಗಿ ಬ[>ವ]ಸ್ತಿ ಮಾಡಿಸಿಕೊಂಡು ಯಿರಲಾಗಿ, ತದನಂತರ ತಂಕಲುಕೋಟೇಲಿ ಚಿಕ್ಕಮಲ್ಲರಸೈಯ್ಯ ಯಂಬೊ ಆತನು ಯಿದರ ಮೂಲಪುರುಷರ ಮನ್ಮಂತ್ರಕ್ಕೆ ವೆಂಕಟರಮಣನ ವಕ್ಕಲು ಆಗಿ ಯಿರಲಾಗಿ, ಯೀ ಮಲ್ಲರಸೈಯ್ಯನ ತವೆಲ್ಯ ಯಿ ಹರವಿನ ಮಲ್ಲಪ್ಪನು ಪ್ರತ್ಯಕ್ಷವಾಗಿ ವುದ್ಧಾರ ಮಾಡಿದ್ದರಿಂದ ವೆಂಕಟರಮಣನ ಬಿಟ್ಟು ಯೀ ದೇವರ ಮನೆ ವಕ್ಕಲು ಆಗಿ ನಡಕೊಳ್ಳುತ್ತಾ, ವೈಶಾಖ ಶುದ್ಧ ॥ ೧೫ ದಿವಸ ಯೀ ದೇವರಿಗೆ ರಥೋತ್ಸಹವ ನಿರ್ಮಾಣಮಾಡಿ, ದೇವರ ಗುಡಿಯ ದಂಡೆ ಕೆಳಗೆ ವಂದು ಹೊಂಡಾ ಕಟ್ಟಿಸಿ, ಮಹಾದ್ವಾರದಲ್ಲಿ ವಂದು ದೊಡ್ಡ ಕಲ್ಲುಕಂಭ ನಿಂದ್ರಿಸಿ, ಯೀ ಪ್ರಕಾರಕ್ಕೆ ಮಾಡಿದ ಅಚ್ಚುತ ಕೃಷ್ಣರಾಯ ಮಹಾರಾಯನವರು ರಾಜ್ಯ ಆಳುತ್ತಾ ಯಿರಲಿಕ್ಕೆ, ವಸಂತ ಕಾಲದಲ್ಲಿ ವಂದ[>ದು] ಸಮಯದಲ್ಲಿ ಕುಂತಳಾನಗರ ಪ್ರಾಂತ್ಯಕ್ಕೆ ಸ್ವಾರೀ ಬರಲಾಗಿ, ಆ ಸಮಯದಲ್ಲಿ ದೇವರ ಗುಡಿಗೆ ಬಂದು ಪ್ರಸಾದ ತೆಗೆದುಕೊಂಡು ಹೋಗೊ ವ್ಯಾಳೆದಲ್ಲಿ ಪೂಜಾರೇರು ಬಿನ್ನಹ ಮಾಡಲಾಗಿ, ಚಿತ್ತಕ್ಕೆ ತಂದು, ದೇವರ ನಂದಾದೀವಿಗೆ ನೈವೇದ್ಯ ಅಮೃತಪಡಿಗೆ ನಡಸೊ ಬಗ್ಗೆ ಹತ್ತು ತುಳ[ದ?] ಭೂಮಿ ತಕ್ಕಲು ಕೆರೆ ಅಡವೀ ವಳಗೆ ಮಾನ್ಯಕೊಟ್ಟು, ಶಾಲಿವಾಹನ ಶಖ ೧೪೬೦ನೇಯ ವಿಳಂಬಿ ಸಂವತ್ಸರದ ಪುಷ್ಯ ಶು॥೩ ಯಲ್ಲು ಶಾಸನ ನಿರ್ಮಿತ ಮಾಡಿಕೊಟ್ಟು ಹೋದರು. ಯೀಗ ಆ ಶಾಸನ ತೇರು ಬಾಜಾರದ ವಳಗೆ ಬಿಳಿಕಲ್ಲು ಶಾಸನಕಲ್ಲು ಯಿದ[ತೆ]. ತದಾರಭ್ಯಾ ತೆಂಕಲುಕೋಟೆ ಕೆಳಗೆ ನಡದು ಬಂದು ಯಿದಿತು. ಯಿದಕ್ಕೆ ಪೂರ್ವದಿಂದ ದೇವರೀಗೆ ನಿತ್ಯವುತ್ಸವಾದಿ ಸಮಸ್ತ ಮಹಾಸತ್ವಗಳಿಗೆ ನಡಸುತಾ ಯಿದ್ದ ವರ್ತನಿಗಳೂ:

ತೆಂಕಲುಕೋಟೆಗೆ ಸಲುವ ಗ್ರಾಮಾನುಗ್ರಾಮಗಳಲ್ಲಿ ಗ್ರಾಮದ ಮುನಾಸಬು ಅರಿತು ವರ್ತಿಸಿ ತೆಗೆದುಕೊಳ್ಳುತ್ತ ಯಿತ್ತು. ಯೀ ಪ್ರಕಾರಕ್ಕೆ ತದಾರಭ್ಯವಾಗಿ ಕುಂಪಣಿ ಅಮಲು ಆಗೋ ಪರೀಮಂತ್ರ[>ಪರಿಯಂತ್ರ] ನಡದು ಬಂದು ಯಿದೆ. ಕುಂಪಣಿ ಅಮಲು ಆದ ಮ್ಯಾಲೆ ಮಾನ್ಯವು ವರ್ತನೆ ಸಹಾ ಮೋಖಾಪ ಆಗಿ ಯಿದೆ. ಯಿದರ ಶಿವಾಯಿ ದೇವರ ಶೇವೆ ಮಾಡೊ ಜನಗಳಿಗೆ ಅವರವರ ಮುನಾಸಬು ಅರಿತು ಕೆಲವು ಜಮೀನು ಯಿನಾಮತಿ ಜಗಾ ಯಿದೆ.

❖❖

೨೩
ದೇವೇಗೌಡನಹಳ್ಳಿ ಕೈಫಿಯತ್ತು

ಮೆಕೆಂಝಿ ಸಂಪುಟ : ೨೮೭

ತ್ರೈತಾ[>ಕೃತ]ಯುಗ ಪ್ರವಾಣಂ ೧೭ಲಕ್ಷ ೨೦೦೦...................ಯೀ ಕೃತ[>ತ್ರೇತಾ]ಯುಗದಲ್ಲಿ ಷಟ್ಚಕ್ರರ್ತಿಗಳಿಂದಾ ಅನುಹಾಲಾಯಮಾನವಾದಂಥಾ ಅರಸಿಗಳ ಹರಿಶ್ಚಂದ್ರಾಬ್ದಾ: ೨ಕೋ ೩ಲಕ್ಷ..................೯೦೯೦ ವರ್ಷ, ನಳಗತಾಬ್ದಾ: ೨ಕೋಟಿ ೧೬ಲಕ್ಷ ೨೫ಸಾ ೪೪೦ವರ್ಷ, ಪುರುಕುತ್ಸಗತಾಬ್ದಾ: ೨ಕೋಟಿ ೯ಲಕ್ಷ ೪೩ಸಾ ೪೭೦ವರ್ಷ, ಪುರೂರವಗತಾಬ್ದಾ: ೨ಕೊ ೨ಲ. ೧೨ಸಾ ೮೦೧೭ವರ್ಷ, ಸಗರಗತಾಬ್ದಾ: ೧ಕೊ ೯೦ಲ ೪೩ಸಾ, ೪೦೧೦ವರ್ಷ, ಕಾರ್ತಿವೀರ್ಯಾಬ್ದಾ: ೧ಕೊ ೨೯ಲ ೩೪ಸಾ ೯೦೯ವರ್ಷ, ಕೃತಪ್ರಮಾಣದಲ್ಲಿ ೧೭ಲ ೨ಸಾವಿರ ವರ್ಷಕ್ಕೆ ಕಲಿಪ್ರಮಾಣಂ ೧೨ಲ ೯೬ಸಾವಿರ ವರ್ಷಕ್ಕೆ ೧೬ ಅರಸುಗಳು ಭೂಮಿ ಆಳಿದ, ವಿವರ: ರಾಮರಾವಣರ ಯುದ್ಧದಾರಾಬ್ದಾ: ೧ಕೊ ೨೫ಲ ೨೫ಸಾ ೮೬೭ವರ್ಷ. ರಾಮ ಲಕ್ಷಣಾಬ್ದಾ: ೧ಕೊ ೨೫ಲಕ್ಷ ೧೪ಸಾ ೮೬೪ವರ್ಷ, ದ್ವಾಪರಯುಗ ಪ್ರಮಾಣಂ ೮೮೬೪ ಸಾವಿರ ವರ್ಷ. ದ್ವಾಪರಯುಗಾಂತರದಲ್ಲಿ ಯಾದವ ಪಾಂಡವರು ಭೂಮಿ ಆಳಿದರು.

ಕಲಿಯುಗ ಪ್ರಮಾಣಂ ೪ಲ, ೩೨ ಸಾವಿರವರ್ಷ, ಕಲಿಯುಗ ಗತಾಬ್ದಾ: ೪೯೦೨ ಯು ನಾಲ್ಕು ಸಾವಿರ ವಂಬೈನೂರ ಯರಡು ವರ್ಷದಲ್ಲಿ ಭೂಮಿ ಧರ್ಮದಿಂದಾ ಆಳಿದ ನೃಪಂಗಳ ವಿವರ:

ಕಲಿಯುಗದಾ ಪಾಂಡುಗತಾಬ್ದಾ|೪೮೬೫ಕ್ಕೆ ಕಲಿಯುಗ ಆದಿಯಲ್ಲಿ ಪಾಂಡವರು ಭೂಮಿ ಆಳಿದ್ದು ೩೬ ವರ್ಷ, ಆ ತಲುವಾಯ ಪರೀಕ್ಷಿತರಾಯ ಭೂಮಿ ಆಳಿದು ೮೧ವರ್ಷ, ಜನಮೇಜಯರಾಯರು ಭೂಮಿಯನಾಳಿದ್ದು ೧೨೬ ವರ್ಷ, ಆ ತರುವಾಯ ಶೂದ್ರಿಕರಾಯ ಗತಾಬ್ದಾ: ೨೫೨೩ ವರ್ಷ, ಆ ತರ್ವಾಯ ವಿಕ್ರಮರಾಯರು ಗತಾಬ್ದಾ: ೧೭೨೩ ವರ್ಷ . . . . . . ರಾಯಾಬ್ದಾ: ೧೨೦೮ ವರ್ಷ, ಪ್ರತಾಪರಾಯಾಬ್ದಾ: ೯೦೪೦ . . . . .

ವಿದ್ಯಾದೇವರಾಯ ಗತಾಬ್ದಾ: ೮೦೯೦ ವರ್ಷ, ರಾಜಪರಮೇಶ್ವರರಾಯ ಗತಾಬ್ದಾ: ೮೭೫ ವರ್ಷ, ವೀರ ಭೀಮರಾಯ ಗತಾಬ್ದಾ: ೮೮೨, ರಾಮದೇವರಾಯ ಗತಾಬ್ದಾ: ೮೨೮ ವರ್ಷ, ರಘುರಾಮದೇವರಾಯ ‘ಗತಾಬ್ದಾ: ೭೮೪, ವೀರಮಲ್ಲಿಕಾರ್ಜುನರಾಯ ಗತಾಬ್ದಾ: ೬೦೯ ವರ್ಷ, ಲಕ್ಷಣರಾಯ ಗತಾಬ್ದಾ: ೧೧೫ ವರ್ಷ, ಯಿನ್ನಿಲ್ಲಿ ಕಿರಾತರು? ಆಳಿದ್ದು:

ವೀರ ಪ್ರತಾಪರಾಯ ಗತಾಬ್ದಾ: ೬೯೯, ಪಂಪರಾಯ ಗತಾಬ್ದಾ: ೬೪೦.ವ, ಯಿಮ್ಮಡಿ ರಾಮದೇವರಾಯ ಗತಾಬ್ದಾ: ೬೦೮ ವರ್ಷ, ಕಂಪಿಲಿರಾಯ ಗತಾಬ್ದಾ ...... ೭೪ ವರ್ಷ, ಸಾಲ್ವ ಕಂಪಿಲಿರಾಯ ಗತಾಬ್ದಾ ೫೦ .... ವೀರ ಕಂಪಿಲಿರಾಯ ಗತಾಬ್ದಾ: ೪೨೪ ವರ್ಷ, ಕುರುಬರು ಆಳಿದ್ದು: ಹರಿಹರರಾಯ ಗತಾಬ್ದಾ: ೪೧೧.

ಪೂರ್ವದೇಶದಿಂದಾ ಯೇಳು ಬಂಡಿಯವರು ಬೀಗರು ಸಹ ಬಂದು, ಪಂಚನಂದಿ ಕ್ಷೇತ್ರ ಪಂಚಕ್ರೋಶ ಮಧ್ಯದಲ್ಲಿ ದಂಡಕಾರಣ್ಯದಲ್ಲಿ ವಂದು ಹುತ್ತಿದ ಮರೆಯಲ್ಲಿ ವಾಸಮಾಡಿಕೊಂಡು ಯಿರುತಾ ಯಿದ್ದಾ ಸಮಯದಲ್ಲಿ, ಗ್ರಾಮಗಳ ಪುರೋಹಿತ ನಿಮಿತ್ಯವಾಗಿ ಹೋಗಿ ನಾಗಾಜೋಯಿಸರು ಯಿಮ್ಮಡಿ ಬೈರೆಗೌಡ ಮುಂತಾದ ಯೇಳು ಬಂಡಿಯವರನು ಕಂಡು, ಅವರ ಬಳಿಗೆ ಹೋಗಿ, ಆಶೀರ್ವಾದ ಮಾಡಿದ್ದರಿಂದಾ ಆ ಗೌಡರು ನಾಗಾಜೋಯಿಸರನ (ಪ್ರತ್ಯಾಗ) "ತಾವು ನಮ್ಮ ಬಳಿಗೆ ಬಂದು ನಮಗೆ ದಿವಸ ವಾರಗಳು ಹೇಳಿ, ಯಂಬುದಾಗಿ ಕೇಳಿದ್ದರಿಂದಾ, ವಂದಾನುವಂದು ದಿವಸ ಅತ್ತಿ ಮರಕ್ಕೆ ತೊಟ್ಲ ಕಟ್ಟಿ ಕೊಂಡು ಯಿದ್ದ ಸಮಯದಲ್ಲಿ, ವಂದು ದೃಢ ಸರ್ಪ ತೊಟ್ಲ ಮೇಲೆ ಹತ್ತಿ ಆ ಶಿಶುವಿಗೆ ಸೂರ್ಯಕಿರಣ ಉಪದ್ರ ಯಿಲ್ಲದ ಹಾಗೆ ಸಂರಕ್ಷಣೆ ಮಾಡಿಕೊಂಡು ಯಿರುತಾ ಯಿದ್ದದ್ದರಿಂದಾ ಬಹಳ ದ್ರವ್ಯ ಲಭ್ಯವಾದ್ದರಿಂದ ಗ್ರಾಮವನ್ನೂ ಕಟ್ಟಿ, ಪರಿದತ್ತಿಯಂಬ ನಾಮಧೇಯ ವಿಟ್ಟು, ಅಲ್ಲಿಂದಾ ಬೇಟೆ ಮಾರ್ಗವಾಗಿ ಬಂದದ್ದರಿಂದ ಯೀ ಅಡವಿಯಲ್ಲಿ ದೇವೇಗೌಡ ಯಂಬವನು ವಂದು ಹುಡ್ಯ ಕಟ್ಟಿಕೊಂಡು ಯಿರ್ರುತಾ ಯಿದ್ದದ್ದರಿಂದಾ, ಅಲ್ಲಿ ಬೇಟೆ ನಿಮಿತ್ಯ ನಾಯಿ ಬಿಡಲಾಗಿ, ಕುಂದಂ ನಾಯಿನ ತರ[+ಬ]ಲಾಗಿ 'ಯೀ ಭೂಮಿ ಗಂಡುಭೂಮಿ'ಯಂದು ನಿಶ್ಚಯ ಮಾಡಿ, ಅವನಿಗೆ ಅದೇ ಅವಂದುಗ್ರಾಮ ಕಟ್ಟಿಸಿಕೊಟ್ಟು ಅವನ ಅಲ್ಲಿರಿಸಿ, ಮುಂದೆ ಕೋಟೆಗೆ ಪ್ರಯತ್ನಮಾಡೋದಕ್ಕೆ ಉದ್ಯುಕ್ತರಾಗಿ ಯಿದ್ದರು.

ಯೀ ಕೋಟೆ ಕಟ್ಟುವಾಗ್ಯೆ ರಣ ಬೈರೆಗವುಡರು ಮುಹೂರ್ತ ನಿಶ್ಚಯಮಾಡಿದ ಸಂವತ್ಸರಕೆ ಶಾಲಿವಾಹನ ಶಕವರ್ಷಂಗಳು ೧೪೨೩ನೇ ಪ್ರವರ್ತಮಾನ .... ನಾಮ ಸಂವತ್ಸರ ಚೈತ್ರ ಶುದ ೧೫ ಗುರುವಾರ ಚಿತ್ತಾ ನಕ್ಷತ್ರದ ಉದಯದ ೫ ಘಳಿಗ್ಗೆ ವೃಷಭಲಗ್ನದಲ್ಲಿ ಲಗ್ನ ಹೋರೆದ್ರೆ ಕಾಣನವಾಶ ದ್ವಾದಶಾಂಶ ತ್ರಿಂಶಾಂಶಿ ಯೀ ಶುಭ ಷಡ್ವರ್ಗ ಶೊರ್‍ವಿಯಾಗಿ ಗಜಾಯದಿಂದಾ ವಾಸ್ತು ಪ್ರಕಾರ ಶಂಕು ಸ್ಥಾಪನೆಮಾಡಿ, ಚಂದ್ರಮೌಳೇಶ್ವರಸ್ವಾಮಿಯವರ ಸನ್ನಿಧಾನಕ್ಕೆ ಬಂದು, ಫಲಪುಷ್ಪಸಮರ್ಪಣೆ ಮಾಡಿ, ದೇವಬ್ರಾಹ್ಮರ ಸಂತರ್ಪಣ ಮಾಡಿಶಿ, ಯೀ ಸಭೆಯವರ ಕೈಲಿ ಆಶೀರ್ವಾದವನ್ನು ತೆಗೆದುಕೊಂಡು, ಪುರೋಗಮವಾಗಿ ವಿನಾಯಕ ಪ್ರಾರ್ಥನೆಯನ್ನು ಮಾಡಿಶಿ, ಯಿಶಾನ್ಯಭಾಗದಲ್ಲಿ ಶಂಕುಸ್ಥಾಪನೆ ಮಾಡಿಶಿ, ಕೋಟೆಯನ್ನು ಹಾಕಿಶಿ, ಪೇಟೆ ಕಟ್ಟಿಶಿ, ಶೆಟ್ಟಿ ವರ್ತಕನ ಕವುಲ ಕೊಟ್ಟು, ಕರಶಿ, ಪೇಟೆ ವಸತಿ ಮಾಡಿ, ದೇವಣೀಪುರವೆಂಬ ನಾಮಧೇಯವ ಬೈರೇಗೌಡ ಅಯ್ಯನವರು ತನ್ನ ಮೂರು ಮಂದಿ ಕುಮಾರ್‍ರ ವಳಗೆ ಜೇಷ್ಠಪುತ್ರನಾದ ಸಣ್ಣ ಬೈರೆಗೌಡರಿಗೆ ಪಟ್ಟಾಕಟ್ಟಿ ಪಟ್ಟಾಭಿಷೇಕವನ್ನು ಮಾಡಿಶಿ, ಬುಕ್ಕರಾಯರ ಬಳಿಯಿಂದಾ ವುಡುಗರೆ ಉಚಿತಾಭರಣಗಳು ತರಿಶಿಕೊಂಡು, ಯೀ ದೇವಣಾಪುರದ ಸಂಸ್ಥಾನಕ್ಕೆ ಅಧಿಪತಿಗಳಾಗಿ, ಶೀಮೆ ಭೂಮಿ ವಿಂಗಡಿಸಿ ವಡಿಗೆನಹಳ್ಳಿ, ನಲ್ಲೂರು, ಬೂದಿಗೇರೆ, ಬಾಗಲೂರು, ಜಾಲಜುಟ್ಟನಹಳ್ಳಿ, ಕುಂದಣ, ಕೊಡಗುರಿಗಿ, ಕಸಬೆ ಮುಂತಾದ ಯಂಟು ಹೋಬಳಿಯನ್ನು ವಿಂಗಡಿಸಿ ಕೊಂಡು, ಯೀ ಸಂಸ್ಥಾನಾ ಸಣ್ಣ ಬೈರೆಗೌಡರೈಯ್ಯನವರು ಆಳುತಾ ಯಿದ್ದರು. ಸಣ್ಣ ಬೈರೆಗೌಡರ್‍ರುಯ್ಯನವರು ಪಟ್ಟವಾಳಿದ್ದು . . . . . ವರ್ಷ, ತಿಂಗಳು ೩, ದಿನ ೫. ಆ ತರುವಾಯ ದೈಯ್ಯಲ ಬೈಚೇಗೌಡರ ಆಳಿಕೆ ೨೫ ವರ್ಷ, ಆ ತರುವಾಯ ಮುದ್ದು ಬೈರೇಗೌಡರ ಆಳಿಕೆ ೩೫ ।೮।. ಆ ತರುವಾಯ ಯಿಮ್ಮಡಿ ಸಣ್ಣ ಬೈರೇಗೌಡರ ಆಳಿಕೆ ೪೨ ತಿಂ ೪.

ಗೋಪಾಲಗೌಡರ ಆಳಿಕೆ ೩೦ ತಿಂ ೧೦. ಆ ತರುವಾಯ ದೊಡ್ಡ ಬೈರೇಗೌಡರ ಆಳಿಕೆ ೪೦।೪. ಆ ತರುವಾಯ ರಂಗಪ್ಪಯ್ಯನವರ್ರ ಆಳಿಕೆ ತಿಂಗಳು ೧೦ ದಿ ೮. ಆ ತರುವಾಯ ಮಹೀಶೂರ ಕಲ[>ರಾ]ಚೂರಿ ನಂದರಾಜೈಯ್ಯನವರ ಸ್ವಾದೀನವಾಗಿ ನಡಿಯುತ್ತಾ ಬಂತು.

ರಣ ಬೈರೇಗೌಡ

ಸಣ್ಣ ಬೈರೇಗೌಡ ೪೦-೫-೧೬

ಬೈರೇಗೌಡ ೩ . . . . . ತಂ ೩. ದಿ ೫

ಅರವೇದ್ಯೆಯ್ಯಲ ಬೈಚಿಗೌಡ ೨೫ ತಿಂ

ಮುದ್ದುಬೈರೆ ಗಉಡ ೩೫।೮

ಯಿಮ್ಮಡಿ ಸಣ್ಣಬೈರೆ ೪೨।೪

ಗೋಪಾಲಗೌಡ ೩೦।೧೦

ದೊಡ್ಡ ಬಯಿರ್ರೇಗಉಡ ೪೦।೪

ರಂಗೇಗಉಡ ೧।೬

ಕಲ[>ರಾ]ಚೂರಿ ನಂದರಾಜೈಯ್ಯನವರು-

ದೊಡ್ಡ ನವಾಬರ್ರು

ಸುಲತಾನು

ಯಿಂಗರೇಜರ್ರು

ಯಿವರಿಗೆ ಶಾಲೀವಾಹನ ಶಕೆ ೧೭೨೩

ಕಲ್ಯಾಬ್ದಾಂ - ೪೯೦೨

೨೪೬

❖❖

೨೪

ನಗರ ಸೀಮೆ ಕೈಫಿಯತ್ತು*

ಮೆಕೆಂಝಿ ಸಂಪುಟ : ೨೯೦

ಯೀ ಕೈಫಿಯತು ಬರಶಿದವರು ಯಡತಲೆ ಸ್ತಳವಾಶಿಯಾಗಿ ಯಿರ್‍ರ ಜೋಯಿಸ್ಯರು ಕೃಷ್ಣಪ್ಪ ಜೋಯಿಸ್ಯರು, ಗೋವರ್ಧನ ಜೋಯಿಸ್ಯರು, ಶಲ್ಲಾರ್‍ರ ಚೆಣ್ಣೈಯ್ಯನವರು, ಅಪಲಾಚಾರ್‍ಯರ ಮಗ ವರದಾಚಾರ್ಯರು, ದಾಸಜ್ಯೋಸ್ಯರೂ ಮುಂತಾದವರು ಬರಶಿಕೊಟ್ಟು ಕೈಫಿಯತ್ತು.

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಗಳು ೭೦೬೬ ಸಂದ ವರ್ತಮಾನ . . . . ಶಾರ್ವರಿ ಸಂ . . . . . ಆ ಪುರದಲ್ಲಿ ನಗರಶೇಕರರಾಯನು ಉತ್ತರದೇಶದಲ್ಲಿ ರಾಜ್ಯಭಾರವನ್ನು ಮಾಡುತ್ತಾ ಯಿದ್ದಲ್ಲಿ, ಆತನಿಗೆ ಮಕ್ಕಳು ಯಿಲ್ಲದೇ ಇದ್ದದರಿಂದ ಆತನಿಗೆ ಮೂರು ದಿಕ್ಕಿಗೆ . . ನಕ . . ಹೋಗೆ ಯಿರುವಲ್ಲಿ, ಮಹಾವಿಷ್ಣುವು ಸ್ವಪ್ನದಲ್ಲಿ ಒಂದು ದಿವಸ ರಾತ್ರಿಯಲ್ಲಿ ಬಂದು ಹೇಳಿದ ವಿವರಾ: "ನಾಲು ದಕ್ಷಿಣದೇಶದಲ್ಲಿ ಗೋವರ್ಧನಗಿರಿಯಲ್ಲಿ ನಾನು ವೇಣುಗೋಪಾಲದೇವರು ಅಂಥಾ ಉದಿಶಿ ಯಿದ್ದೇವೆ. ಅಲ್ಲಿ ನೀನು ಬಂದು ನಮ್ಮ ದರುಶನವನ್ನು ಮಾಡಿಕೊಂಡು, ಕೆಲಉ ಕಾಲ ನೀನು ಅಲ್ಲಿ ತಪಸ್ಸು ಮಾಡಿದಲ್ಲಿ ನ[>ನಿ]ಮಗೆ ಇಷ್ಟಾರ್ಥವನ್ನು ಕೊಡುತ್ತೇವೆ"ಯಂಬದಾಗಿ ಹೇಳಿದರಿಂದ, ಯೀ ನಗರಶೇಕುರಾಯನ[>ನು] ಸಹ ದಂಪತಿಯುತವಾಗಿ ಕೆಲವು ಸೇನೆಯನ್ನು ತೆಗೆದುಕೊಂಡು, ಅಲ್ಲಿ ತನ್ನ ಮಾತೆಯನ್ನು ಯಿಟ್ಟು, ಯೀತನು ದಕ್ಷಿಣ ಗೋವರ್ಧನಗಿರಿಗೆ ಬಂದಂಥವನಾದನು. ಬಂದ ತರುವಾಯ ವೇಣುಗೋಪಾಲಸ್ವಾಮಿಯ ಸಂದುರಶನವನ್ನು ಮಾಡಿಕೊಂಡು, ಕೆಲಉಕಾಲ ಆ ಗೋವರ್ಧನಗಿರಿಯಲ್ಲಿ ತಪಸ್ಸು ಮಾಡಿಕೊಂಡು ಯಿರುವಂಥಾವನಾದನು. ಹೀಗೆ ಇರುವ ಕಾಲದಲ್ಲಿ ಆ ಗೋಪಾಲಸ್ವಾಮಿಯವರು ಆತನಿಗೆ ಪ್ರಸನ್ನವಾಗಿ "ಯಿಷ್ಟಾರ್ಥಪ್ರದವನ್ನು ಕೊಡುತ್ತೇವೆ. ನೀನು ನಿನಗೆ ಯೇನು ಯಿಷ್ಟಾರ್ಥಪ್ರದಾ ಹೇಳು, ಕೊಡುವೆವು"ಯಂಬುದಾಗಿ ದೇವರು ಹೇಳಿದರಿಂದ, ಯೀತನು "ಸ್ವಾಮಿ ನಾನು ಧನ್ಯನಾದೆನು, ಕೃತಾರ್ಥನಾದೆನು. ದೇವರ ಸಂದರುಶನವಾಗಾಗಲೇ ನನಗೆ ಸಕಲಭೋಗಭಾಗ್ಯಸಂಪದ, ಪುತ್ರಸಂತತಿ ಆಯಿತು . . . . . ಸ್ವಾಮಿ" ಯಂದು ವಂದನೆಯನ್ನು ಮಾಡಿದನು. ಆ ಮಾತು ಕೇಳಿ "ನಿನಗೆ ಪುತ್ರಸಂಪತ್ತು ಕೊಟ್ಟೆಉ" ಯಂಬದಾಗಿ ಹೇಳಿ ಬಿಟ್ಟು ಅದೃಶ್ಯವಾದರು.

ಆ ತರುವಾಯ ಆತನು ದೇವರಿಗೆ ಗುಡಿ, ಗೋಪುರ ಕೋಟೆ ಮುಂತಾದ ಕಟ್ಟಿಸಿ . . . . . ಯನ್ನು ದುರಸ್ತಿಮಾಡಿ, ದೇವರಿಗೆ ಪಡಿತರ ದೀಪಾರಾಧನೆ ಮುಂತಾದು ಸಹವಾಗಿ ನಿತ್ಯಗಟ್ಟಲೆ ನಡೆಯುವ ಬಗ್ಗೆ ಬಂದೋಬಸ್ತು ಮಾಡಿ, ಬ್ರಾಹ್ಮಣರಿಗೆ ಅಗ್ರಹಾರ ಮುಂತಾದು

ಈ ಕೈಫಿಯತ್ತು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಿಂದ "ನಗರಪುರದ ಅಥವಾ ಎಡತ್ತಲೆ ಕೈಫಿಯತ್ತು" ಹೆಸರಿನಿಂದ ಪ್ರಕಟವಾಗಿದೆ. (ಸಂ).

ಮಾಡಿದ ತರುವಾಯಲ್ಲಿ, ತನ್ನ ಹೆಂಡತಿಯು ಗರ್ಭವತಿ ಆಗಿ ನವಮಾಸವು ತುಂಬಿ, ಜಾತಕರ್ಮನಾಮಕರಣ ಮುಂತಾದನ್ನು ಮಾಡಿದಂಥಾವನಾದನು. ಆ ಕೂಸಿಗೆ ವೇಣುಕೋಪಾಲಯಂಬ ನಾಮಕರಣವನ್ನು ಮಾಡಿದಂಥಾವನಾದನು.

ಆ ತರುವಾಯ ದೇವರ ಕೃಪೆಯಲ್ಲಿ ಅಪ್ಪಣೆಯನ್ನು ತೆಗೆದುಕೊಂಡು ತಮ್ಮ ಉತ್ತರದೇಶಕ್ಕೆ ಪ್ರಯಾಣವನ್ನು ತೆರಳಿಬಂದಂಥಾವನಾದ ಸಮಯದಲ್ಲಿ ವಂದು ಸರೋವರವನ್ನು ಕಂಡಂಥಾವನಾದನು. ಆ ದೇವರಿಗೆ ಪೂರ್ವಭಾಗದಲ್ಲಿ ಸರೋವರಕ್ಕೆ ಹೋಗಿ ವಂದನಾ ಸ್ನಾನಾದಿಗಳನ್ನು ಮಾಡಿದರಿಂದ ಆ ತೀರ್ಥಪ್ರಭಾವದಿಂದ ಆವಾಗೆಯು ಹಂಸಪಕ್ಷಿಕೆಯನು ಆ ತರುವಾಯ ಆ ತೀರ್ಥಕ್ಕೆ ಹಂಸತೀರ್ಥಯಂಬ ನಾಮಧೇಯವಾಯಿತು. ಆ ತೀರ್ಥವು ಕೇಳಯಕ್ಕೆ ಪರ್ವತದ ಉತ್ತರಭಾಗಕ್ಕೆ ಬಂದದರಿಂದ ಕಲುಡಣ್ಯನದಿಯಂಬ ನಾಮಧೇಯವಾಯಿತು. ಆ ನದಿ ಪ್ರಭಾವದಿಂದ ಯೀ ನದೀತೀರದಲ್ಲಿ ಉಭಯ ಪಾರ್ಶ್ವದಲ್ಲಿ ದ್ವಾರೇಶ ಗೋಪಾಲದೇವರ ಪ್ರತಿಷ್ಟೆಯನ್ನು ಮಾಡಿಕೊಂಡು ಕಪಿಲಾಸಂಗಮಕ್ಕೆ ಬಂದಂಥವನಾದನು. ಆ ತರುವಾಯ ರಾತ್ರೆ ಕಾಲದಲ್ಲಿ ಯೀಶ್ವರನು ವೃದ್ಧಬ್ರಾಹ್ಮಣ ಸ್ವರೂಪದವನಾಗಿ ಬಂದು, "ನೀನು ಯಿಲ್ಲಿ ವಾಸಮಾಡಿಕೊಂಡು ಯೀಶ್ವರ ಪ್ರತಿಷ್ಟೆಯನ್ನು ಮಾಡು" ಯಂಬುದಾಗಿ ದೇವರು ಅಭಯ ಕೊಟ್ಟದ್ದರಿಂದ, ಅದೆ ಪ್ರಕಾರಕೆ ದೇವರ ಕಟ್ಟಾಕ್ಷದಿಂದ ತಂಗಿಯಿದ್ದ ಬಳಿಯಲ್ಲಿ ಗಿಡಗಂಟೆಯನ್ನು ಕಡಿದು, ನಗರಾಪುರಿಯಂಬ ಪಟ್ಟಣವನ್ನು ಕಟ್ಟಿ ನಗರೇಶ್ವರಯಂಬ ಪ್ರತಿಷ್ಟೆಯನ್ನು ಮಾಡಿದನು. ಆ ಹೆಸರಿನಿಂದ ನಗರಾಪುರಿಯಂಬ ಪಟ್ಟಣವನ್ನು ಮೂರು ಸುತ್ತ ಕೋಟೆಯನ್ನು ಕಟ್ಟಿ, ಪಟ್ಟಣವನ್ನು ವಿಸ್ತಾರವಾಗಿ ಕಟ್ಟಿದಂಥವನಾದನು. ಯಿದಕ್ಕೆ ದಕ್ಷಿಣಭಾಗದಲ್ಲಿ ವಂದು ಗಳೆ[>ಳ] ಮಾರ್ಗದಲ್ಲಿ ಶರ್ವಾಪುರಿಯಂಬ ಪೇಟೆಯನ್ನು . . . . . ಮಾಡಿದಂಥವನಾನದು. ಆ ತರುವಾಯ ಯಿದಕ್ಕೆ ಕೆಲಉ ಹಳ್ಳಿಯನ್ನು ಶೇರಿಸಿಕೊಂಡುಂಥವನಾದ. ಸದರಿ ಹಳ್ಳಿ ವಿವರಾ:

ರತ್ನಾಪುರಿ ಪೇಟೆ, ಕುಂಬಾರಹಳ್ಳಿ, ವೀರತಾಪುರವನ್ನು ಯೀ ಪುರಕಲು ಕೂಡುದ[>ಗ]ಡಿಗಳು, ಗಂಗವಾಡಿ, ಯತ್ತಿನಕೊಟಗೆ, ಶಂಭುಪುರ, ಕೊಕ್ಕರಹಟ್ಟಿ, ಯತ್ತಿನಹಟ್ಟಿ, ಸಿಂಧುವಳಿಯಿಪುರ, ಶ್ರಿಂಗಾರಿಪುರ, ಹಯಃಪುರ, ಕಕರಹಡಿ, ಬೆಂಗನಹಳ್ಳಿ, ಬೆಂಡುಗಳಿ, ಆಳುಗಂಚಿ, ಯೀಪುರ, ದ್ರೋಣಪುರ, ಸಾತುಗಳಿ, ಕಲುಕುಣಿ, ಕುಡಲಾಪುವಲ್ಲಿಹಳ್ಳಿ, ತರದಲೆ, ಗೋಣನಹಳ್ಳಿ, ಮೂಣೂರು, ಹೌಳವಾಡಿ, ಸವಗುರು, ಗೊಣತಗಾಲ್, ಕೆಚೆಪುರ, ದೇವರಾಯಪುರ, ನರಶೀಪುರ ಮುಂತಾದ ಗ್ರಾಮವನ್ನು ಜಾ[>ಶಾ]ಸ್ತಿಯನ್ನು ಮಾಡಿ, ಯೀ ಪಟ್ಟಣಕ್ಕೆ ಗ್ರಾಮ . . . . ಬಾದು ಮಾಡಿ, ಪಟ್ಟಣವನ್ನು ಕೆಲವು ಕಾಲ ಆಳಿದಂಥವನಾದನು. ಆಳಿದ ವರುಷ ೯೪. ಆ ತರುವಾಯ ತನ್ನ ಭಾವಮೈದುನನಾದಂಥ ಗಂಗಾಧರರಾಯನು[>ನಿಗೆ] ಯೀ ಪಟ್ಟಣದ ರಾಜ್ಯಭಾರವನ್ನು ಕೊಟ್ಟು, ತಾನು ಮುಂದಕ್ಕೆ ತನ್ನ ಸ್ಥಳಕ್ಕೆ ಉತ್ತಾರ ದೇಶಕ್ಕೆ ನಡೆದಂಥಾವನಾದನು. . . . . ವಸರೆಯಲ್ಲಿ ಯೀ ಪಟ್ಟಣದಲ್ಲಿ ಯಿರುವಂಥಾ ನಗರದ ವರ್ತಕರು ತಮ್ಮ ಕುಲದೇವರು ಯಂಬದಾಗಿ ಬಳಕೆಯನ್ನು ಮಾಡಿಕೊಂಡು, ಯೀ ನಗರೇಶ್ವರಸ್ವಾಮಿಗೆ ಗುಡಿಗೋಪುರ ಮುಂತಾಗಿ ನವರಂಗ ಮಂಟಪಗಳನ್ನು ಸಹವಾಗಿ ಮಾಡಿಕೊಂಡು, ದೇವರ ಸೇವೆಯನ್ನು ಮಾಡಿದಂಥಾವರಾದರು.

ಆ ತರುವಾಯ ಚೋಳರಾಯನು ಚೋಳದೇಶದಿಂದ ಪ್ರತಾಪಚೋಳಯಂಬವನು "ಶ್ರೀ ನಗರಪುರಕ್ಷೇತ್ರಕ್ಕೆ ದೇವರ ದರುಶನವನ್ನು ಮಾಡಬೇಕು" ಯಂಬದಾಗಿ ಬಂದು,

ಕಪಿಲಾಸ್ನಾನವನ್ನು ಮಾಡಿ, ದೇವರಿಗೆ ಉತ್ಸವಾದಿಗಳನ್ನು ಮಾಡಿ, ದೇವರಿಗೆ ಭೂದಾನವನ್ನು ಮಾಡಿ, ಬ್ರಹ್ಮ ಸಂತರ್ಪಣೆಯನ್ನು ಮಾಡಿ, ದೇವರ ಕೈಯ್ಯ ಅಪ್ಪಣೆ ತೆಗೆದುಕೊಂಡು, ತನ್ನ ಸ್ಥಳಕ್ಕೆ ಅಲ್ಲಿಯಿಂದ ತೆಗೆದುಕೊಂಡು ಬಂದು ಯಿದಂಥಾ ಮಂದಿ ಜನಾನು ಕರದುಕೊಂಡು ಬರುವ ಮಾರ್ಗದಲ್ಲಿ, ಯೀ ಗಂಗಾಧರರಾಯನ[>ನು] ಚಉಕಿಪಾರ[>ರೆ]ದಿಂದ ಬಿಡದೆ ಆಟಕಾಯಿಶಿದ ತರುವಾಯ ಯೀ ಪ್ರತಾಪಚೋಳನಿಗೆ ಮಹತಾದ ಕೋಪಗಳು ಬಂದು, ಯೀ ಗಂಗಾಧರರಾಯನ ಮೇಲೆ ದಂಡು ಯತ್ತಿಕೊಂಡು ಬಂದು, ನಗರಾಪುರಿ ಪಟ್ಟಣವನ್ನು ಲೆಗ್ಗೆ ಮಾಡಿ ಪಟ್ಟಣವನ್ನು ತೆಗೆದುಕೊಂಡು, ಗಂಗಾಧರರಾಯನನ್ನು ಕೈಶರೆ(ಆಳಿದ ವರುಷ ೪೦) ಹಿಡಿದುಕೊಂಡು, ಯೀ ಪಟ್ಟಣದಲ್ಲಿ ತಂದ[>ಮ] ಆದಿಚೋಳನ ಯಿಟ್ಟು ಹೋದಂಥವನಾದನು. ಆ ತರುವಾಯ ಯೀತ ಆಳಿದ ವರುಷ ೮೪. ಯೀ ಆದಿಚೋಳರಾಯನು ಕೆಲವು ಕಾಲ ಯೀ ಮೂವತ್ತುಯರಡು ಹಳ್ಳಿ ಸಮೇತವಾಗಿ ಯೀ ನಗರಾಪುರಿ ಪಟ್ಟಣವನ್ನು ಕೆಲಉ ಕಾಲ ರಾಜ್ಯಭಾರವನ್ನು ಮಾಡಿಕೊಂಡು, ಕೆಲವು ಫವುಜು ಸಿಬ್ಬಂದಿ ಸಮೇತವಾಗಿ ಯಿಟ್ಟುಕೊಂಡು, ರಾಜ್ಯಪರಿಪಾಲನೆಯನ್ನು ಮಾಡಿಕೊಂಡು ಯಿದ್ದಂಥವನಾದನು.

ಆ ತರುವಾಯ ಗಡ[>ಟ್ಟ]ದ ಕೆಳಗೆ ಮೂಡಬಿದರೆಯಲ್ಲಿ ವೀರಬಲ್ಲಾಳಯಂಬವನಿಗೆ ಹೊಟ್ಟೆಶೂಲೆಯಾಗಿ ಮಹತಾದ ಶ್ರಮ ಪಡುತಿರುವ ಸಮಯದಲ್ಲಿ ಸಾಕ್ಷಾತ ಶ್ರೀಕಂಟೇಶ್ವರಸ್ವಾಮಿಯವರು ಆತನಿಗೆ ಸ್ವಪ್ನವನ್ನು ಸಾಧಿಸಿ "ನೀನು ಗರಳಪುರಕ್ಷೇತ್ರಕ್ಕೆ ಬಂದು ಕೆಲಉ ಕಾಲ ಅಲ್ಲಿ ವಾಸಮಾಡು. ಆಗ ನಿನ್ನ ಹೊಟ್ಟೆಶೂಲೆ ಹೊರಟುಹೋಗುತ್ತದೆಂ"ಬುದಾಗಿ ಹೇಳಿದರಿಂದ, ಅದೇ ಪ್ರಕಾರಕ್ಕೆ ತನ್ನ ಸ್ಥಳದಿಂದ ಕೆಲವು ಫವುಜು ಶಿಬ್ಬಂದಿ ಸಮೇತವಾಗಿ ಗರಳಪುರಕ್ಷೇತ್ರಕ್ಕೆ ಬಂದು, ಸ್ವಾಮಿ ಸಂದರುಶನವನ್ನು ಮಾಡಿ, ಸ್ವಾಮಿಗೆ ಉತ್ಸವಾದಿಗಳು ಮಾಡಿ, ಗೋದಾನ ಭೂದಾನ ಧನದಾನಗಳು ಮಾಡಿ, ಸ್ವಾಮಿ ಬಳಿಯಲ್ಲಿ ಕೆಲಉ ದಿವಸ ಯಿದಂಥವನಾದನು. ಆ ತರುವಾಯ ಸ್ವಾಮಿ ಕೈಲೆ "ತನ್ನ ಸ್ಥಳಕ್ಕೆ ಹೋಗಬೇಕು"ಯಂದು ಅಪ್ಪಣೆಯನ್ನು ತೆಗೆದುಕೊಂಡು ಬರುವ ಸಮಯದಲ್ಲಿ ಮಾರ್ಗದಲ್ಲಿ ಆದಿಚೋಳರಾಯ ಯಂಬವನು ಪಾಹರೆ ಚಉಕಿಯಿಂದ ಆಟಗಾಯಿಶಿಕೆ ಹಾಕಿದರಿಂದ ವೀರಬಲ್ಲಾಳನು ಯಿ[>ಯು]ದ್ದಕೆ ನಿಂತಂಥವನಾದನು. ಆ ತರುವಾಯ ಯಿಬ್ಬರಿಗೂ ಮಹತ್ತಾದ ಯುದ್ಧವು ಆಗಿ, ಆ ಯುದ್ಧದಲ್ಲಿ ಆದಿ ಚೋಳರಾಯನು ಹತವಾದನು. ಆಳಿದ ವರ್ಷ ೯೦.

ಆ ತರುವಾಯ ನಗರಾಪುರ ಪಟ್ಟಣವನ್ನು ಲಗ್ಗೆ ಹತ್ತಿ ತಮ್ಮ ಪಹರೆ ಚಉಕಿ ಹಾಕಿಕೊಂಡು, ಪಟ್ಟಣವನ್ನು ಕಟ್ಟಿಕೊಂಡಂಥವನಾದನು. ಆ ತರುವಾಯ ಈ ನಗರಾಪುರಿ ಪಟ್ಟಣದಲ್ಲಿ ವೀರಬಲ್ಲಾಳನು ಮೂಡಬಿದ್ರೆ ಪರಿಯಂತರಕ್ಕೂ ಯೇಕ ರಾಜ್ಯವಾಗಿ ಆಳಿಕೊಂಡು ಯಿದ್ದಂಥವನಾದನು. ಆ ತರುವಾಯ ಹೀಗೆ ಇರುವ ಸಮಯದಲ್ಲಿ ದಕ್ಷಿಣ ಗೋವರ್ಧನಗಿತಿ ಪರ್ವತದಲ್ಲಿ ಯೇಳು ಸುತ್ತು ಕೋಟೆ ದುರ್ಗ ಬಾಗಿಲು ಅರಮನೆ ತೋಪ್‌ಖಾನೆ ಸಮೇತವಾಗಿ ನವದಣಾಯ[+ಕ]ರುರು ಆಳಿಕೊಂಡು ಕೆಲಉ ರಾಜ್ಯವನ್ನು ಕಟ್ಟಿಕೊಂಡು ಯಿರು ಸಮಯದಲ್ಲಿ, ನವದಣಾಯಕರ ಪಟ್ಟಣಕೆ ಭೀಮವದಣಾಯಕರು, ನವದಣಾಯಕರು, ಪೆರದೂರ್ರಿನ ದಣಾಯಕರು, ಸಕಳೆದಣಾಯಕರು ತಮ್ಮ ಅಣ್ಣತಮ್ಮಂದಿರ ವಂದಿಗೆ ಯುದ್ಧವನ್ನು ಮಾಡಿಕೊಂಡು ಕೆಲವು ಪವುಜು, ಕೆಲಉ ಕುದುರೆ, ಕರ್ನಾಟಕ ಆನೆ ವಂಟೆ ಸಾಮಾನು ತೋಪ್‌ಖಾನೆ ಮುಂತಾದನ್ನು ತೆಗೆದುಕೊಂಡು ಉತ್ತರದೇಶಕ್ಕೆ

ಬರುವ ಮಾರ್ಗದಲ್ಲಿ, ನಗರಾಪುರಿ ಪಟ್ಟಣವನ್ನು ಕಂಡಂಥಾವರಾದರು. ಆ ತರುವಾಯ ಯೀ ನಾಲ್ವರು ದಣ್ಣಾಯ್ಯರು ತಮ್ಮ ವಳಗೆ ತಾಲು ಬಡಂಬಟ್ಟು "ಯೀ ನಗರಾಪುರಿ ಪಟ್ಟಣಉ ನಮಗೆ (ಯಿದರಾಗಿ?) ವಾಸಯೋಗ್ಯವಾಗಿ ಯಿದೆ. ಯೀ ಪಟ್ಟಣವನ್ನು ಸಾಧ್ಯ ಮಾಡಬೇಕು"ಯಂಬುದಾಗಿ ಯೋಚಿಸಿಕೊಂಡು, ನಾಲ್ಕು ಸಾವಿರ ಕುದುರೆ, ೮ ಸಾವಿರ ಕರ್ನಾಟಕ, ೧೫೦ ಮದ್ದು ತೋಪುಖಾನೆ, ನಾಲ್ಕು ಸಾವಿರ ಎತ್ತು, ಮುಂತಾದ ಪಾಯದಳ ಸಮೇತವಾಗಿ ವೀರಬಲ್ಲಾಳರಾಯನ ಮೇಲೆ ನಗರಾಪುರಿ ಪಟ್ಟಣಕ್ಕೆ ಯುದ್ಧಕ್ಕೆ ಬಂದಂಥವರಾದರು. ಯೀ ಪಟ್ಟಣವನ್ನು ಮುತ್ತಿಗೆ ಹಾಕಿಕೊಂಡು ಯುದ್ಧವನ್ನು ಮಾಡಿ ಮಹತಾದ ಜನಉ ಜಗಳದಲ್ಲಿ ಹತವಾಗಿ, ರಣಾಗ್ರದಲ್ಲಿ ಅನೇಕ ಸರದಾರರು ಹತವಾಗಿ, ಆರ್ರೈದು ತಿಂಗಳಿಗೆ ವೀರಬಲ್ಲಾಳನು ಹತವಾಗಿ, ನಗರಾಪುರಿಪಟ್ಟಣವನ್ನು ದಕ್ಷಿಣಭಾಗದಲ್ಲಿ ಕೋಟೆಯನ್ನು ಭೀಮಡಣಾಯಕನು ಲೆಗ್ಗೆ ಹತ್ತಿ, ತನ್ನ ಪಹರೆ ಚಉಕಿ ಬಂದೋಬಸ್ತು ಮಾಡಿಕೊಂಡು, ತೋಫುಖಾನೆ ಮುಂತಾಗಿ ಸಕಲವನ್ನು ಬಂದೋಬಸ್ತು ಮಾಡಿಕೊಂಡಂಥವನಾದನು.

ಆ ತರುವಾಯ ನಮಗೆ ಕುಲದೇವರು ಆಗಿಯಿರುವ ಶ್ರೀಗೋಪಾಲಸ್ವಾಮಿಗೆ ಪ್ರತಿನಾಮಧೇಯವಾಗಿ ಯಿರುವ ದ್ವಾರಿ . . . . ಶ ಗೋಪಾಲದೇವರಲ್ಲಿ ಯಿದ್ದ ಕಡೆ ಗೋಪಾಲಸ್ವಾಮಿಯಂಬದಾಗಿ ಗುಡಿ ಕಟ್ಟಿಸಿ, ತಮಗೆ ಯಿಷ್ಟವಾಗಿ ಯಿರುವಂಥಾ ಲಕ್ಷ್ಮೀನರಸಿಂಹ ಲಕ್ಷ್ಮೀಕಾಂತಸ್ವಾಮಿ ಸಮೇತನಾಗಿ ಪ್ರತಿಷ್ಟೆಮಾಡಿ, ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ ನಡಸಿಕೊಂಡು ಯಿದ್ದನು. ಯೀ ಮೂರು ದೇವರಿಗೆ ಕೊಟ್ಟಂತಾದ್ದು ಗದ್ದೆ ಬೆದ್ದಲು ತೋಟ ಮನೆ ಆಸ್ಥಾಯಿ ಭೋಗಂ, ಸಾವ್ಯಾವಳಗಾದ ಯೀ ದೇವರಿಗೆ ಗದ್ದೆ ಬೆದ್ದಲು ಉಳಯುಪಾದಿಕ್ರಿಯ ನಾಲ್ಕು ಭಾಗೆ ವಳಗೆ ವಂದು ಭಾಗವನ್ನು ಆಚಂದ್ರಾರ್ಕಸ್ಥಾಯಿಯಾಗಿ ನಡೆಯು ಹಾಗೆ ಮಾಡಿಶಿಕೊಟ್ಟು, ಆಮೇಲೆ ರಾಜ್ಯಭಾರವನ್ನು ಮಾಡಿಕೊಂಡು ಯಿದ್ದರು. ಆ ತರುವಾಯ ಯೀ ದಣಾಯಕನಿಗೆ ಹದಿನಾರು ಮಂದಿ ಹೆಣ್ಣುಮಕ್ಕಳು, ಹದಿನಾರು ಮಂದಿ ಅಳಿಯಂದಿರು ಯಿದ್ದ ಕಾರಣ, ದಂಪತಿಯುಕ್ತವಾಗಿ ಅಳಿಯಂದರು ಹೆಣ್ಣುಮಕ್ಕಳ ಸಹಾ ವಂದೇ ಸಾರಿ ನೋಡಬೇಕು ಯಂಬುದಾಗಿ ಹದಿನಾರು ಮೊಕದ ಚಾವಡಿಯನ್ನು ತಮ್ಮ ಯಿಷ್ಟದೇವರ ಗುಡಿ ಸಮೀಪದಲ್ಲಿ ಹದಿನಾರು ಪರಗು ಬಟು ಹಾಕಿಶಿ ಕಟ್ಟಿಶಿದನು. . . . . ಯಿಂಥಾ ಐಶ್ವರ್ಯದಲ್ಲಿ ಆಳುತ್ತಿದ್ದ ವರುಷ ೬೦. ಯಿವನ ತಮ್ಮನಾದಂಥ ಮಂಚೆದಣ್ಣಾಯರು ಯಂಬವನು ಆಳಿದಂತಾದ್ದು, ಭೀಮೆದಣಾಯರಿಗೆ ಶರೀರಕ್ಕೆ ಲಗುವಿಲ್ಲದೆ ಯಿದ್ದ ಕಾರಣ ಮಂಚೆದಣಾಯರು ಆಳಿದ ವರುಷ ೭೦.

ಯಿವನ ತಮ್ಮನಾದಅಂಥಾ ಪೆರಮಾಳಡಣಾಯಕರು ಯಂಬವನು ಆಳಿದ ವರುಷ ೩೫. ಯೀ ಪ್ರಕಾರ ಆಳಿಕೊಂಡು ಯಿದ್ದರು. ಆ ತರುವಾಯ ತಮ್ಮ ಫವುಜಿಗೆ ರಾಜ್ಯ ಸಾಲದು ಯಂದು ತಮ್ಮ ತಮ್ಮ ವಳಗೆ ಆಲೋಚನೆ ಮಾಡಿಕೊಂಡು, ಬೆಟ್ಟದಕೋಟೆಗೆ ಲಡಾಯ ಹೋದ ವಿವರಾ: . . . . ೪೦೦ ನೂರು ಕುದುರೆ, ೩೦೦ ವಂಟೆ, ನಾಲ್ವತ್ತು ಸಾವಿರ ಯತ್ತು ಮುಂತಾದ ಪಾಯದಳಾ ತೆಗೆದುಕೊಂಡು, ಬೆಟ್ಟದಕೋಟೆ ಮೇಲೆ ದಳವಾಯಿ ಲಗ್ಗೆ ಹೋಗಿ, ಆ ದುರ್ಗವನ್ನು ಮುತ್ಗೆ ಹಾಕಿ, ಮೂರು ವರುಷ ಪರಿಯಂತ್ರ ಈ ಲಡಾಯ ಮಾಡಿದರು. ಕಡೆಗೆ ಯಿವರಿಗೆ ನಿವಾ[+೯]ಹವಿಲ್ಲದೆ ಯೀ ಫೌಜು ಸಾಲದೆ ಯಿದ್ದದ್ದರಿಂದಾ, ಯಿವರು ವಂದು ದಿವಸ ರಾತ್ರಿ ತಮ್ಮ

ಯೇಳು ಸಾವಿರ ಯತ್ತುಗಳು ಕ[>ತ]ರಸಿ ಅದರ ಕೊಂಬಿಗೆ ಪ[>ಕ]ಡೆಯಲಿ ದೀವಟಿಗೆ ಕಟ್ಟಿಶಿ, ಯೀ ಯೆತ್ತುಗಳನೆಲ್ಲ ಆ ಗಾ[>ಗ]ಡಿವಳಗೆ ಯೀ ಯತ್ತುಗಳ ಹಿಂದುಗಡೆ ತಮ್ಮ ದಂಡುಗಳೆಲ್ಲ ತಮ್ಮವರು ಮಾಡಿಶಿ, ಯೇಕಾಯೇಕ ದುರ್ಗದ ಮೇಲೆ ಹಲ್ಲೆ ಮಾಡಿದರು. ಆವಾಗೆ ದುರ್ಗದ ಮೇಲೆ ಯಿದ್ದಾ ಮಂಚೆದಣ್ಣಾಯಕ ಯೀ ದಂಡನು ನೋಡಿ ಬಹಳ ದಿಗಲು ಪಟ್ಟು, "ಯಿದೆ ಯಿಷ್ಟು ಯಿದೆಯಲ್ಲಾ, ಯಿನ್ನು ಎಷ್ಟು ದಂಡು ಬರುತ್ತ ಯಿದೆಯೋ ಹ್ಯಾಗೆ ಯೀ'ದುರ್ಗ ತೆಗೆದುಕೊಳ್ಳುತ್ತಯಿದ್ದರೆ ಯಿವರ ಕೈಶೆರೆ ಸಿಗಬಾರದು" ಯಂದು ತನ್ನ ಕುದುರೆ ಮೇಲೆ ಕುಳಿತುಕೊಂಡು ಕಮರಿ ವಳಿಗೆ ಬೀಳಬೇಕು ಯಂಬುದಾಗಿ ಕುದುರೆಯನ್ನು ಹೊಡದಲ್ಲಿ, ಆ ಕುದುರೆ ಕಮರಿಗೆ ಬೀಳದೇ ಹಿಂದಕ್ಕೆ ಹೋಯಿತು. ಆದ್ದರಿಂದ ತನ್ನ ವ್ರಾಸನ್ನು ಕಮರಿಗೆ ಹಾಕಿದ. ಆ ಮೇಲೆ ಕುದುರ್‍ರೆ ತಾನ್ನು ಸಹಾ ಕಮರಿಗೆ ಬೀಳುವಾಗ ಯಿವನ ಸಂಗರ ವಂದು ನಾಯ, ವಂದು ಟಗರು ಸಹಾ ಯಿತ್ತು. ಆದು ಸಹಿತವಾಗಿ ಕಮರಿಗೆ ಬಿತ್ತು. ಯೀ ಕುದುರೆ ಹೆಜ್ಜೆ, ಟಗರಿನ ಹೆಜ್ಜೆ, ನಾಯಿಯ ಹೆಜ್ಜೆ ಈಗಲೂ ಸಹ ಕಮರೀ ಕಲ್ಲಿನ ಮೇಲೆ ಯಿದೆ. ಯೀ ಸಮಾಚಾರ ಅವನ ಹೆಂಡತಿಯಾದಂತಹ ಸುಗ್ಗಲೆಯಂಬವಳು ಕೇಳಿ "ತಾನು ಹೆಂಗಸು, ತಾನ್ನು ಕೈಸೆರೆ ಸಿಕ್ಕಬಾರದು. ಸಿಕ್ಕಿದರೆ ಅಭಿಮಾನ ಹೋಗಬಾರದುಯಂದು ಅಗ್ನಿಪ್ರವೇಶವಾದಳು.

ಆ ತರುವಾಯ ಯೀ ನಾಲ್ಕು ಡಣಾಯಕರು ದುರ್ಗದ ಖಿಲ್ಲಾ ಬಂದೋಬಸ್ತು ಮಾಡಿಕೊಂಡು ದುರ್ಗದ ಮೇಲೆ ಠಾಣ್ಯ ಹಾಕಿಕೊಂಡು, ದುರ್ಗದ ಗು[>ಗ]ಡಿಯನ್ನೇ ಗೊತ್ತು ಮಾಡಿ, ಹಿರಿಯನಾದ ಭೀಮಢಣಾಯಕನು ರಾಜಾ[>ಜ್ಯಾ] ಬಂದೋಬಸ್ತು ಮಾಡಿಕೊಂಡು, ನಗರಾಪುರಿಪಟ್ಟಣವನ್ನು ಬೆಟ್ಟದಕೋಟೆ ಸೇರಿದ ಗಡಿ ಹಾಗೆ ಮಾಡಿಸಿ, ತನ್ನ ಪುತ್ರನಾದ ಅಚ್ಚಡಣಾಯಕನಿಗೆ ಈ ಗಡಿ ಆಳುವ ಹಾಗೆ ನೇಮಕಮಾಡಿ, ತಾಯಿಂದರೂ ಸಹ ಯಿಲ್ಲಿರು ಹಾಗೆ ಮಾಡಿ, ಆತನು ಬೆಟ್ಟದಕೋಟೆಯಲ್ಲಿ ರಾಜ್ಯಭಾರ ಮಾಡುತ್ತ ಯಿದ್ದನು. ಆ ತರುವಾಯ ನಾಲ್ಕು ಮಂದಿ ಢಣಾಯಕರು ತಮ್ಮ ತಮ್ಮ ವಳಗೆ "ತಮ್ಮ ಪಉಜಿಗೆ ರಾಜ್ಯ ಸಾಲದು"ಯಂದು ಆಲೋಚನೆ ಮಾಡಿ ತಮ್ಮ ಫವುಜು ತಯ್ಯಾರಿ ಮಾಡಿಕೊಂಡು ಪರರಾಷ್ಟ್ರಕ್ಕೆ ಹೋಗಿ ಯುದ್ಧಾಮಾಡಿ, ರಾಜ್ಯಾ ಸಾಧ್ಯಮಾಡಿ ಕಟ್ಟಿಕೊಂಡ ವಿವರಾ:

ಉತ್ತರಭಾಗಕ್ಕೆ ಗೋವೆ ಪರಿಯಂತ್ರ, ದಕ್ಷಿಣಭಾಗಕ್ಕೆ ದೆರೆಶಿ ಬೆಟ್ಟದ ಪರಿಯಂತ್ರ, ಪಶ್ಚಿಮಭಾಗಕ್ಕೆ ಬಿಸಿಲುಗಟ್ಟದ ಪರಿಯಂತ್ರ, ಪೂರ್ವಕ್ಕೆ ಸತ್ಯಮಂಗಲದ ಖಣಿ ಪರಿಯಂತ್ರಕ್ಕು ಕಟ್ಟಿಕೊಂಡು, ಬೆಟ್ಟದಕೋಟೆಗೆ ಸೇರಿದ ಗಡಿ ನಗರಾಪುರಿಪಟ್ಟಣದ ವಳಗೆ ಸೇರಿಕೊಂಡು, ಆಚೆ ಢಣಾಯಕನು ಯೀ ನಗರಾಪುರಿಪಟ್ನ ರತ್ನಪುರಿಪೇಟೆ ಸಹ ರಾಜ್ಯಭಾರ ಮಾಡುತ್ತಯಿದ್ದರು. ಆ ತರುವಾಯ "ನಾಲು ಐಶ್ವರ್ಯವಂತರಾಗಿ ಯಿರುವಲ್ಲಿ ವಂದು ಧರ್ಮಗೆಲಸಾ ಮಾಡಬೇಕು" ಯಂದು ಯೋಚಿಸಿಕೊಂಡು, ಯೀ ಪಟ್ಟಣಕ್ಕೆ ದಕ್ಷಿಣಭಾಗದಲ್ಲಿ ವಿಸ್ತೀರ್ಣವಾಗಿ ಕೆರ್‍ರೆಯನ್ನು ಕಟ್ಟಿಸಿದರು. ಆ ಕೆರೆಗೆ ಆಚೆಗೆ ಭೀಮಗೆರೆಯಂಬ ಹೆಸರು ಕೊಟ್ಟರು. ಅರ್ಧದಲೇ ಆ ಕೆರೆ ವಡದು ಹೋಯಿತು. ಯೀ ಢಣಾಯಕನು ಯಿಟ್ಟು ಯಿದ್ದಂಥಾ ಸೂಳೆ ಶ್ರೀಂಗಾರಿಯಂಬವಳು ಯಿ ವಡಗೆರೆಯನ್ನು ಕಟ್ಟಿಶಿ ಜೀರ್ನೋದ್ಧಾರ ಮಾಡಿದಳು. ಯಿವರು ರಾಜ್ಯಭಾರ ಮಾಡುವಲ್ಲಿ ವೈರಿಗಳು ಯಾರ್‍ರೂ ಯಿಲ್ಲಾ, ಯೀ ಪ್ರಕಾರ ರಾಜ್ಯಭಾರ ಮಾಡುತ್ತಿದ್ದ ವರುಷ ೪೫.

ಯಿವನ ಕಾಲದಲ್ಲಿ ಯೀ ಪಟ್ಟಣದಲ್ಲಿ ಜೈನರು ಬಹು ಪ್ರಾಬಲ್ಯವಾಗಿ ಯಿದ್ದಕೊಂಡು ಯಿದ್ದರು. ಆ ತರುವಾಯ . . . . ಸಂತೋಷದಲ್ಲಿ ಯಿರುವಲ್ಲಿ "ನಮ್ಮ ಯಿಷ್ಟದೇವರ ಪ್ರತಿಷ್ಟೆಯನ್ನು ಮಾಡಬೇಕೆಂ"ದು ಯೋಚಿಸಿಕೊಂಡು ಬಸ್ತಿದೇವರನ್ನು ಪ್ರತಿಷ್ಟೆ ಮಾಡಿ, ಗುಡಿಗೋಪುರ ಮುಂತಾದ್ದು ಕಟ್ಟಿಶಿಕೊಂಡು, ತಮಗೆ ಯಿಲ್ಲಿ ದೇವರಾಗಿ ಯಿರ್‍ರುವ ಬಸ್ತಿದೇವರನ್ನು ಪೂಜೆ ಪುನಸ್ಕಾರ ಮಾಡಿಕೊಂಡು ಸಂತೋಷದಲ್ಲಿ ಯಿದ್ದರು.

ಯಿವನ ಕಾಲದಲ್ಲಿ ಉಮ್ಮತ್ತೂರ ಸಂಸ್ಥಾನದ ಭುಜ[+ಂ]ಗರಾಯರು ಪ್ರಬಲವಾಗಿ ಆಲೋಚನೆ ಮಾಡಿದರಿಂದ ತನ್ನಯ ಸಂಸ್ಥಾನಕ್ಕೆ ಯೀ ನಗರಪುರಿಪಟ್ಟಣ ಸಮೀಪವಾಗಿ ಯಿದೆಯಂಬುದಾಗಿ ಯೋಚಿಸಿಕೊಂಡು, ತನ್ನ ಫಉಜುಗಳನ್ನೆಲ್ಲ ತಯ್ಯಾರು ಮಾಡಿಕೊಂಡು, ಯೀ ಪಟ್ಟಣದ ಮೇಲೆ ಜಗಳಕ್ಕೆ ಬಂದು ಯುದ್ಧವನ್ನು ಮಾಡಿದನು. ಯೀ ಯುದ್ಧದಲ್ಲಿ ಸಕಳೆದಣ್ಣಾಯಕನು ಮೃತವಾದನು. ಯೀ ಮೇಲೆ ಭುಜಂಗರಾಯರು ಪಟ್ಟಣವನ್ನು ಕೈವಶ ಮಾಡಿಕೊಂಡು, ಬಂದೋಬಸ್ತು ಮಾಡಿಕೊಂಡು ರಾಜ್ಯ ಆಳಿದ ವರುಷ ೫೪.

ಯಿವರ ಕಾಲದಲ್ಲಿ ದ್ವಾರಕಿಯನ್ನು ಪರಸಂಸ್ಥಾನದ ದೊರೆಗಳು . . . . ಮಾಡಿ, ದ್ವಾರಕಿ ತೆಗೆದುಕೊಂಡದ್ದರಿಂದ, ಆ ದ್ವಾರಕಿ ಅರಸುಗಳು ಹೈರಾಣು ಬಿದ್ದು ಯಿಲ್ಲಿಗೆ ಬಂದವರು. ಪಾಚಿ[>ರಾಜೆ]ಅರಸಿನವರು ತಮ್ಮ ವೈರಿ ಕೈಗೆ ಸೆರೆ ಸಿಕ್ಕಬಾರದು ಯಂದು, ತಾನು ತನ್ನ ಪ್ರಧಾನಿ ಮುಂತಾದವರು ೩೨ ಜನರನ್ನು ಕರದುಕೊಂಡು ದಕ್ಷಿಣಪ್ರಾಂತ್ಯಕ್ಕೆ ಓಡಿ ಬಂದರು. ಆವಾಗ್ಗೆ ದಕ್ಷಿಣಪ್ರಾಂತ್ಯದಲ್ಲಿ ವಂದು ಗಡಿಗೆ ೩೩ ಹಳ್ಳಿಯಾಗಿ ಯಿತ್ತು. ಯೀ ಅರಸುಗಳು ದಕ್ಷಿಣಪ್ರಾಂತ್ಯಕ್ಕೆ ಬಂದ ಮೇಲೆ ಸಿಂಧುವಳಿಯಂಬ ಗ್ರಾಮಕ್ಕೆ ಬಂದು ಸೇರಿದರ್‍ರು. ಅವರು ಬಹಳ ಶ್ರಮದಿಂದಾ ಬಂದರು. ಯೀ ಹೊತ್ತು ವಂದು ರಾತ್ರಿ ಯಿದ್ದು. ಯಿವರ ಮೇಲೆ ಯಿಲ್ಲಿಯೂ ತಮ್ಮ ಕಾಲಕ್ಷೇಪವ ನಡೆಯುವದಿಲ್ಲಾ ಯಂದು ಅಲ್ಲಿಂದಾ ಹೊರಟು ಮುಂದಕೆ ಉಪ್ಪನಹಳ್ಳಿಗೆ ಹೋದರು. ಯಿಲ್ಲಿ ವಂದು ರಾತ್ರಿ ಯಿದ್ದು, ಯಿವರ ಮೇಲೆ ಯಿಲ್ಲಿಯೂ ತಮ್ಮ ಕಾಲಕ್ಷೇಪವಾಗುವದಿಲ್ಲಯಂಬುದಾಗಿ ಅಲ್ಲಿಗೆ ಕಳುಲೆಗೆ ಹೋದರು. ಅಲ್ಲಿ ಯಿರ್‍ರುವ ವೇಳೆಯಲ್ಲಿ ವಂದು ದಿವಸ ಬೇಟೆ ಮಾರ್ಗವಾಗಿ ಮಹಿಸೂರು ಸಮೀಪದಲ್ಲಿ ಚಾಮುಂಡೇಶ್ವರಿ ಬೆಟ್ಟದ ಬಳಿಯಲ್ಲಿ ಹಾಲುಕೊಳಾ ಯಂಬುದರಲ್ಲಿ ವೃಕ್ಷದ ಕೆಳಗೆ ಬಳಲಿಕೆಯಿಂದಾ ಮಲಗಿಕೊಂಡು ಯಿರುವ ವೇಳೆಯಲ್ಲಿ, ಮಹಿಸೂರು ೩೩ ಹಳ್ಳಿ ಗಡಿಯನ್ನು ಆಳುತ್ತಿದ್ದ ಲಿಂಗವಂತ ವಡ್ರೇರು ಹೆಂಡತಿ ಮಕ್ಕಳು ಯೀ ಕೊಳಕ್ಕೆ ನೀರಿಗೆ ಬಂದಲ್ಲಿ, ವೀರನಗೆರ್‍ರೆನಾಯಕಾ ಯಂಬವನು ಯೀ ವಡೆಯರ ಹೆಣ್ಣು ಬಹು ರಮಣೀಯವಾಗಿ ಯಿದ್ದ ಕಾರಣ, ತನ್ನ ವಶ ತಕ್ಕೋ . . . . ಯಂಬುದಾಗಿ ಯತ್ನ ಮಾಡಿಕೊಂಡು ಯಿದ್ದಲ್ಲಿ, ಯೀ ವಡೇರ ಮನೆ ಹೆಂಗಸೂರು ಕೊಳದ ಸಮೀಪದಲ್ಲಿ ಬಹಳವಾಗಿ ದುಃಖ ಪಡುತ್ತಿದ್ದಲ್ಲಿ, ಭೇಟೆಯಾಗಿದ್ದ ಅರಸುಗಳ ಕಂಡು "ಯಿದು ಯಾಕೆ ಹೀಗೆ ದುಃಖ ಪಡುತ್ತಿ"ಯಂಬದಾಗಿ ಕೇಳಿದಲ್ಲಿ,[೧] "ವೀರಗೆರ್‍ರೆನಾಯಕಯಂಬವನು ನಮ್ಮ ಮನೆಯ ಹೆಣ್ಣು ಮದುವೆ ಮಾಡಿಕೊಳ್ಳಬೇಕುಯಂಬುದಾಗಿ

---

೧. +ವೀರನಗೆರ್‍ರೆನಾಯಕಾ ಯಂಬುದಾಗಿ ಕೇಳಿದಲ್ಲಿ (ಮೂ).

ಹೇಳುತ್ತಾ ಯಿದಾನೆ. ಆದ್ದರಿಂದ ನಾಲು ದುಃಖ ಪಡುತ್ತಾ ಯಿದ್ದೇವೆ"ಯಂಬುದಾಗಿ ಹೇಳಿದರು. "ನೀಉ ಅಧೈರ್ಯ ಪಡುವ ಕೆಲಸವಿಲ್ಲ. ನಾವು ಬಂದು ಯೀ ಕಾರ್ಯವನ್ನು ಸಾಧ್ಯ ಮಾಡಿಕೊಳ್ಳುತ್ತ ಯಿದ್ದೇವೆ" ಯಂಬುದಾಗಿ ಹೆಂಗಸರ ಸಂಗಡ ಹೇಳಿದರು.

ಆ ಮೇಲೆ ಅಂತಃಪುರಕ್ಕೆ ಕರೆದುಕೊಂಡು ಹೋಗಿ ರಹಸ್ಯವಾಗಿ ಆಲೋಚನೆಮಾಡಿ, ಅಂತಃಪುರದಲ್ಲಿ ಬಂದೋಬಸ್ತು ಮಾಡಿಕೊಂಡು, "ವೀರನಗೆರ್‍ರಿನಾಯಕನಿಗೆ ಹೆಣ್ಣು ಕೊಡುತ್ತೇವೆ" ಯಂದು ಅದೇ ಲಗ್ನದಲ್ಲೆ ನಿಶ್ಚಯಮಾಡಿ, ವೀರನಗೆರ್‍ರಿನಾಯಕನಿಗೆ "ನಿನ್ನ ಬಂಧುಬಳಗ ಸಹಾ ಕರದುಕೊಂಡು ಬನ್ನಿ"ಯಂಬುದಾಗಿ ಹೇಳಿ ಕರತರಿಸಿ, ಅಂತಃಪುರದಲ್ಲಿ ಯರಡನೆ ಕೋಟಿ ಕಂದಕವನ್ನು ಮಾಡಿ "ಸರ್ವವ[<ರ]ನ್ನು ಬನ್ನಿ"ಯಂಬುದಾಗಿ ಹೇಳಿ ಕರತರಿಸಿ, ಮುಖ್ಯವಾದವನನ್ನು ಛೇದನವನ್ನು ಮಾಡಿ, ನಾಯಕರ ವಂಶವನ್ನು ಪರಿಚ್ಛೇದವನ್ನು ಮಾಡಿ, ಅದೇ ಹೆಣ್ಣನ್ನು ರಾಜ ಅರಸಿನವರಿಗೆ ಅದೇ ಮೂಹೂರ್ತದಲ್ಲಿ ಧಾರಾಪ್ರಸ್ತವನ್ನು ಆಗುಮಾಡಿಸ್ತರು. ಆ ವೇಳೆಯಲ್ಲಿ ಆ ವಡೇರು ಅರಸಿನವರ ಕೇಳಿಕೊಂಡರು: "ನಮ್ಮ ಹೆಸರು ವಡೇರು ನಡಿಶಿಕೊಡಬೇಕೆಂ"ಬುದಾಗಿ ಕೇಳಿಕೊಂಡಿದ್ದರಿಂದ, ಅರಸುಗಳು ಹೇಳಿದ್ದು "ಸಂಸ್ಥಾನವೂ ನಿಮ್ಮದು, ದೊರೆತನವೂ ನಿಮ್ಮದು. ನೀಉ ಹೇಳಿದ ಹಾಗೆ ಕೇಳಿತ್ತೇವೆ"ಯಂಬುದಾಗಿ ಅರಸುಗಳು ಹೇಳಿದರು. ಆ ವಡ್ರೇರು ಹೇಳಿದ್ದು "ನಿಮ್ಮ ವಂಶದಲ್ಲಿ ಗಂಡು ಹುಟ್ಟಿದರೆ ಅದಕ್ಕೆ ಹೆಸರು ವಡೇರ್‍ರು ಯಂಬುದಾಗಿ ವಡೇರ್‍ರ ಹೆಸರು ನಡಶಿ ಕೊಡಬೇಕು"ಯಂಬುದಾಗಿ ಕೇಳಿಕೊಂಡರು. ಆ ಮೇಲೆ ರಾಜೆ ಅರಸಿನವರಿಗೆ ವಡೇರ್‍ರು ಯಂಬ ಹೆಸರು ಉಂಟಾಯಿತು. ಯಿದೆ ರಾಜವಡೆರಿಗೆ ಅಲ್ಲಿ ಮಹಿಸೂರ್‍ರು ರಾಜ್ಯಭಾರಕ್ಕೆ ಪಟ್ಟಾಭಿಷೇಕ ಮಾಡಿ, ಶಾಲಿವಾಹನ ಶಕ ೧೫೩೧ ಸೌಮ್ಯ ಸಂವತ್ಸರ ಕಾರ್ತಿಕ ಶುೞ ಮಂಗಳವಾರ ರಾಜವಡೆರು ಅತಿ ಪ್ರಾಬಲ್ಯಕ್ಕೆ ಬಂದು, ಫವುಜುಗಳ ತಯ್ಯಾರು ಮಾಡಿಕೊಂಡು ದಕ್ಷಿಣಭಾಗ ಶೀಮೆ ಯಾಹೊತ್ತು ಸಾಧ್ಯ ಮಾಡಿಕೊಂಡು, ಯೀ ನಗರಾಪುರಿ ಪಟ್ಟಣಕ್ಕೆ ಬಂದು, ಮುತ್ತಿಗೆ ಹಾಕಿಕೊಂಡು, ಭುಜಂಗರಾಯರು ಯಂಬವನ್ನ ಸಂಹಾರ ಮಾಡಿಬಿಟ್ಟು, ಯೀ ಪಟ್ಟಣವನ್ನು ಠಾಣ್ಯಹಾಕಿಕೊಂಡು, ಯೀ ನಗರಾಪುರಿಪಟ್ಟಣವನ್ನು ಪ್ರಾಕು ಯಿದ್ದ ೩೩ ಹಳ್ಳಿಗೆ ಸೇರಿಸಿಕೊಂಡು, ವಂದು ತಾಲೂಕಿನ ಹಾಗೆ ಮಾಡಿ ಮಹಿಸೂರಿಗೆ ಶೇರಿಸಿಕೊಂಡು, ಆಳಿದ ವರುಷ ೭ ತಿಂಗಳು ೧ ದಿನ ೫.

ಯಿವರ ಮಕ್ಕಳು ನರಸರಾಜ ಅರಶಿನವರು ತಂದೆಯಿದ್ದ ಕಾರಣ ಪಯಲ್ಲೆ ಅಷ್ಟರಲ್ಲೇ ಮೃತಾ . . . . ಯಿವರ ಕುಮಾರರು ಚಾಮರಾಜವಡೆರ್‍ಯಯನವರು ಆಳಿದ ವರುಷ ೧೭.

ಯಿವರ ಮಕ್ಕಳು ಯಿಮ್ಮಡಿ ರಾಜವಡೆಯರ್‍ರು, ಆಳಿದ ವರುಷ ೬, ತಿಂಗಳು ೬ಕ್ಕೆ ದಿನ ೩.

ಯಿವರ ಕೊಮಾರ ನರಸರಾಜವಡೆಯರ್‍ರು, ಆಳಿದ ವರುಷ ೨೪, ತಿಂಗಳು ೭, ದಿನ ೧೨.

ಯಿವರ ಕೊಮಾರರು ದೊಡ್ಡದೇವರಾಜವಡೆಯರು ಆಳಿದ ವರುಷ ೩, ತಿಂಗಳು ೧, ದಿನ ೧೪.

ಯಿವರ ಆಳಿಕೆಯಲ್ಲಿ ನಗರಾಪುರಿಪಟ್ಟಣದ ಬಾಗಿಲಲ್ಲಿ ಯಿದ್ದಂಥ ತಳವಾರರಿಗ್ಯೂ ಕೋ[>ತೋ]ಟಿಗೂ ಜಗಳ ಬಂದಲ್ಲಿ, ಆ ಕೋ[>ತೋ]ಟಿಯು ತಳವಾರನ ಹೀನಸ್ವರವಾಗಿ ಬೈದ ಕಾರಣ, ಆ ತಳವಾರನು ದಾಸನಾಗಿದ್ದ ಕಾರಣ ತನ್ನ ಯಿಬ್ಬರ ತಾಯಂದಿರನ್ನು ತಲೆ ಹೊಡೆದು ಪಾವಾಡ ಮಾಡಿದಂತವನಾದನು. ಆಮೇಲೆ ಅರಸುಗಳು ತಳವಾರರ ಸಂಗಡ "ಪಾವಾಡವನ್ನು ಯತ್ತಿ"ಯಂಬುದಾಗಿ ಹೇಳಿದರು. ತಳವಾರರು ತಮ್ಮ ಗುರುಗಳ ಕರತರಿಸಿ ಪಾವಾಡ ಯೆತ್ತು ಸಮಯದಲ್ಲಿ ಎಡದವನ[>ಳ]ತಲೆ ಬಲದವನಿ[>ಳ]ಗೆ ಆಯಿತು. ಬಲದವನ[>ಳ] ತಲೆ ಯಡದವನಿ[>ಳ]ಗೆ ಆಯಿತು. ಪಾವಾಡ ಯೆತ್ತಿದರು. ಆದ್ದರಿಂದ ಯೀ ಪಟ್ಟಣಕ್ಕೆ ವಾಮಶಿರೋನಗರಾಯಂಬ ಹೆಸರು ಆಯಿತು. ಯಿದಕ್ಕೆ ಪ್ರತಿನಾಮದೇಹ[>ಧೇಯ] ಯಡತಲೆಯಂಬ ಹೆಸರು ಆಯಿತು.

ಯಿವರ ಕುಮಾರರು ಚಿಕ್ಕದೇವರಾಜವಡೆಯರನವರು, ಆಳಿದ ವರುಷ ೩೧, ತಿಂಗಳು . . . ., ದಿನ ೨೩.

ಯಿವರು ಕೊಮಾರರಾದ ಕಂಠೀರವನರಸರಾಜವಡೇರು, ಆಳಿದ ವರುಷ ೫, ತಿಂಗಳು ೧, ದಿನ ೧೪.

ಯಿವರ ಕೊಮಾರ ಕೃಷ್ಣದೇವರಾಜವಡೆಯರ್ರೈಯನವರು, ಆಳಿದ ವರುಷ ೧೨, ತಿಂಗಳು ೧, ದಿನ ೧೬.

ಯಿವರ ದಿವಸದಲ್ಲಿ ಯೀ ಯಡತಲೆಗೆ ಶೇರಿದ ಗ್ರಾಮ ೩೩ಕ್ಕೆ ಕಳಿರು ಹಾಕಿ ಬಿಟ್ಟರು ೨೯. ಹೊರವಾಗಿ ನಿಂತ ಗ್ರಾಮಗಳು ೪ ನಾಲ್ಕನ್ನು ಅರಸುಗೆ ಉಂಬಳಿಗೆ ಸೇರಿಸಿಕೊಂಡರ್‍ರು. ಅರಸಿನವರಿಗೆ ಹೆಣ್ಣು ಕೊಟ್ಟು ಯಿವರ ಕೊಮಾರ್‍ರು ಚಾಮರಾಜವಡೇರು ದಿವಸಲ್ಲು ಹೊಸ ಉಂಬಳಿ ಯಿಲ್ಲ . . . ಲ್ಲೆ ಬುದ್ಧಿಬ್ರಮಣವಾಯಿತು. ಆಳಿದ ವರುಷ . . . ೨, ತಿಂಗಳು ೭.

ಯಿವರ ಕೊಮಾರ್‍ರು ಕೃಷ್ಣರಾಜ ವಡೇರ್‍ರು ದಿವಸದಲ್ಲಿಯು ಉಂಬಳಿಗೆ ಸೇರಿಯಿತ್ತು. ಆಳಿದ ವರುಷ ೬.

ಯಿವರ ದಿವಸ ಆದ ಮೇಲೆ ಹೈದರ ಬಾದಶಹಾಖಾನನ ದಿವಸದಲ್ಲಿ ಉಂಬಳಿ ಬರುತ್ತಿದವು. ಈ ಗ್ರಾಮ ಗುಂಡಲುಪೇಟೆಗೆ ಶೇರಿ ಆಯಿತು. ತೆರಕಣಾಂಬಿ ನಾಯ್ಕರಿಗೆ ಆದ ವರುಷ ೨೧, ಯೀಚಿಗೆ ಟೀಪುಸುಲತಾನರ ದಿವಸದಲ್ಲಿ ನಂಜನಗೂಡು ಅಟಾವಣೆಗೆ ಸೇರಿಯಿತ್ತು. ವರುಷ ೧೯. ಯಿವರ ದಿವಸ ಆದ ಮೇಲೆ ಶಿದ್ಧಾರ್ಥಿ ಸಂವತ್ಸರದಲ್ಲಿ ಮಹಿಸೂರು ಕೃಷ್ಣರಾಜ್ಯೆಯ ವಡೆಯ್ಯನವರ ದಿವಸದಲ್ಲಿ ಮಹಿಸೂರು ಅಟವಣಿಗೆ ಸೇರಿತು. ಆಮೇಲೆ ಕಳು(ಲೆ?) ತಾಲೂಕಿಗೆ ಸೇರಿ ಯಿದೆ, ವರುಷ ೬, ಯೀ ಯಡತಲೆ ಗ್ರಾಮದಲ್ಲಿ ಯಿರು್ರವ ಕೆರೆಗಳ ವಿವರ:

ಗ್ರಾಮಕ್ಕೆ ದಕ್ಷಿಣ ಆಚೆಗೆರೆ, ಬೀಳುಗೆರೆ ಅಂತಾ ಯಿರುವ ವಡಗೆರೆ ೨, ಗ್ರಾಮಕ್ಕೆ ಪಶ್ಚಿಮಕ್ಕೆ ಚಿಕ್ಕೆರೆ ೧, ಕುಂಬಾರಹಳ್ಳಿ ಕೆರೆ, ಚಿತ್ತೂರು ಕೆರೆ, ಗ್ರಾಮಕೆ ದಕ್ಷಿಣ ದಿಕ್ಕಿಗೆ ಕನಕಾಂಬುಧಿ ವಡಗೆರೆ ೧.

ಗ್ರಾಮದಲ್ಲಿ ಯಿರುವ ಸೇದುಭಾವಿ ೧೫, ಹಾಳುಭಾವಿ ೫, ಕಾಲುಭಾವಿ ೪, ಹಾಳು ಭಾವಿ ೨.

ದೇವಸ್ಥಾನಗಳ ವಿವರ:

೧ ನಗರೇಶ್ವರಸ್ವಾಮಿ ದೇವಸ್ಥಾನ

೧ ಲಕ್ಷ್ಮಿಕಾಂತ ವಿಷ್ಣುದೇವಸ್ಥಾನ

೧ ವಿಘ್ನೇಶ್ವರನ ಗುಡಿ . . . .

೧ ಬ್ರಹ್ಮದೇವರ ಗುಡಿ, ಚಿಕ್ಕದು

೧ ಗ್ರಾಮದೇವತೆ ಮಾರಮ್ಮನ ಗುಡಿ

೧ ಬಾಣಂತಿಪುರಿ ಗುಡಿ, ಸಣ್ಣದು

೧ ಕಾಳಮ್ಮನವರ ಗುಡಿ, ಸಣ್ಣದು

೧ ಪಶ್ಚಿಮಭಾಗದಲ್ಲಿ ಪಟ್ಟಣದಮ್ಮನ ಗುಡಿ ಸಣ್ಣದು.

೮

ಪಾಳು ಬಿದ್ದು ಯಿರುವ ಗುಡಿ ಗ್ರಾಮಕ್ಕೆ ಉತ್ತರಭಾಗದಲ್ಲಿ

೧ ಮೂಲೆಸ್ಥಾನೇಶ್ವರನ ಗುಡಿ

೧ ಗ್ರಾಮದಲ್ಲಿ ಯಿರುವ . . . . ಬಸ್ತಿ ಗುಡಿ

ತೋಟಗಳು ಯಿರ್ರು ವಿವರಾ:

೪ ತೆಂಗಿನ ತೋಟ, ೧ ಅಡಕೆ ತೋಟ.

೩ ಯಲೆ ತೋಟ, ಪಾಳು ಯಲೆ ತೋಟ ೨.

೧ ಹುಣಸೇ ಮರ ಮಾವಿನ ಮರ ತೋಪು.

ಮೃಗಗಳ ಜಾತಿ ವಿವರ:

ಕರಡಿ ತೋಳ ಕುನ್ನಿ ಯಿಲ್ಲಿ ಗತಿ ಬಂದು ತ್ತಿರುಗಾಡುತ್ತವೆ.

ದವಸ ಧಾನ್ಯದ ವಿವರ:

ಜೋಳಾ, ರಾಗಿ, ಹುರುಳಿ, ಹಾರಕ, ಅವರೆ, ಹೆಸರು, ಹತ್ತಿ, ಭತ್ತ, ಅಕ್ಕಿ, ಸ್ವಲ್ಪ ಅಡಕೆ ವರುಷ ಆಗುತ್ತ ಯಿದೆ. ಯಿಲ್ಲಿ ಯಿದ್ದಾ ವರುಷ ಯಿಲ್ಲಾ.

❖❖

೨೫

ನಾಗಮಂಗಲದ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೨

. . . . ಯೀ ನಾಗಮಂಗಲ ತಾಲೂಕು ನಾಗಮಂಗಲ . . . . ೧೮೦೭ ಯಿಸವಿ ಮಾಹೆ ಜನೆವರಿ ತಾರೀಖು ೧೫ ಯಿಸವಿ . . . . ಸಾಲಿವಾಹನ ಶಖ ೧೭೨೮ನೇ ಅಕ್ಷಯನಾಮ ಸಂವತ್ಸರ ನಾಗಮಂಗಲದ ಸ್ಥಳದ ಸ್ಥತಾಶೇಷ ವಿದ್ವಾನ್ ಮಹಾಜನಗ . . . . ತಿಂಮ್ಮಯ್ಯರಾಯರ್‍ರು, ಶೀನಪ್ಪ ಶಿರಸ್ತೇದಾರೂ, ಬಾಳರಾಯ, ಸಾನಿರಸೈಯಾ, ಭೀಮ ಸೇನಬೋಗರು, ವೆಂಕಟರಮಣೈಯ್ಯನವರು, ತಮೈಯ್ಯ, ಯೀ ತಿಮ್ಮಪ್ಪಯ್ಯ, ವೆಂಕಟರಮಣಯ್ಯ ಯೀ ಮುಂತಾದವರ್‍ರು ಬರಸಿದ ವಿವರಾ:

ಯೀ ಸ್ಥಳಲು ಅರಣ್ಯವಾಗಿ ಯಿರುವಲ್ಲಿ ಚತ್ರಗೆರಿಯ ತಪಶ್ಚಿ ಬ್ರಾಹ್ಮಣನು ಯೀ ಅರಣ್ಯದಲ್ಲು ಸಂಸಾರಮಾಡುತ್ತ ಯಿರಲಿಕ್ಕೆ, ಆತನು ಯಿಲ್ಲಿ ದೇವರ ಪ್ರತಿಷ್ಠೆಮಾಡಿಕೊಂಡು ಪರಿಯಂತ್ರದಲ್ಲು ದೇವಸ್ತಾನಂ ಕಟ್ಟಿಸಿ ಚಿತ್ತವೆರ[>ಚತ್ರಗೆರಿ]ಮಂಗಳ ತಿಂಮ್ಮದೇವರು . . . . ರಕ್ಷಾಣ್ಯಾರ್ಥವಿರಶಿ, ಪೂರ್‍ವದಲ್ಲಿ ಯೀ ನಾಗಮಂಗಲ ಸ್ಥಳವು . . . . ತಾಳವಾಗಿ ಕೋಟೆ ಕೊತ್ತಳವನು ದೇವಾಲಯವನು ಯಲ್ಲ ಮುಂತಾದವಾಗಿ, . . . ಯೀ ಊರಿಗೆ ಉತ್ತರದಿಗ್ಭಾದಲ್ಲಿ ಮೊದಲು ಹಳೆಯ . . . . ಸ್ಥಳದಲ್ಲಿ ವಂದು ಮನೆಯನ್ನು ಕಟ್ಟಿಕೊಂಡು, ... ವನ್ನು ಸಹಾ ಮಾರಿ[>ಡಿ]ಕೊಂಡು ವಿಜಯನಗರದ........ ಲಕ್ಕಮ್ಮಯಂಬಳವಳ ಮಕ್ಕಳು ತಿಮ್ಮಣ್ಣ ಯಂಬಾತನು ಪಂಚಯಂಬುವ ೧, ನರಸೈಯಯಂಬಾತ ೧, ಅಂತು ಜನ ೩ ಅಂಣತಮ್ಮಂದಿರು ಇದ್ರು.

ಹೀಂಗೆ ಕೆಲವು ಕಾಲವಿರುತ್ತಿರಲಾಗಿ, ವಂದಾನೊಂದು ದಿನ . . . . ಜತೆಗಾರನ ಕೂಡಿಕೊಂಡು ತೋಟದ ಕಪ್ಪದ ಬಗ್ಗೆ ತಾನ ಆ . . . . ಯಂಬಾತನು ಬಹಾಳ ರಿಕ್ತವಿಷಯವಾದರಿಂದ ತಾನೆ ಹೋಗಿ, ಆರಾಗಾರನ ಸಹಾ ಕೂಡಿಕೊಂಡು, ಆ ಬಾಳೆ ತೋಟದ ಕಟ್ಟವನ್ನು ಮುರದು . . . .ಗುದ್ದಲಿಯನ್ನು ತಲೆದಶೆ ಯಿರಿಸಿಕೊಂಡು ಕೆಳಗೆ ಯೀ ತಿಂಮಣ್ಣಯಂಬಿಬ್ಬರು ಮಲಗಿರುವಾಗ್ಯೆ, ಊಳಿತದಾರನೂ ಯಿತನ ಬಾಯಲ್ಲಿ . . . . ಉತ್ತಾಗೆ ನಿದ್ರೆ ಬಂದ ಸಮಯದಲ್ಲಿ ಯಿತನ . . . . ವಂದು ಮಹಾಸರ್ಪವು ಬಂದು . . . . ಯಿತನ ಮೇಲೆ ಬಿಸಲಿಗೆ ನೆಳಲು ಮಾಡಿಕೊಂಡು ಹೆಡೆ ತೆಗೆದು ಆಡುತ್ತಾ ಯಿದ್ದಲ್ಲಿ, ಬಿಸಿಲು ಸ್ವಲ್ಪ ಯೇಳುತ್ತಾ ಯಿರುತ . . . . ದೆಯಲ್ಲೆ ಹೋಯಿತು. ಯಿದನೆಲ್ಲವನ್ನು "ಯೀ ಜೊತೆಗಾರ ತಿಮ್ಮಣ್ಣಯೆಂಬವನಿಗೆ ದೊರೆತನ ಬರುತದೆ. ಬರುವಾಗ್ಯೆ ನನ್ನ ಮರಿಯಬೇಡಾ" . . . . ಯೀ ತಿಮ್ಮಣ್ಣನಿಗೆ ಹೇಳಿ, ಯೀ ಉಭಯತರು ತೋಟದ ಕೆಲಸವನ್ನು ತೀರಿಸಿಕೊಂಡು ಮನೆಗೆ ಬಂದ ತರುವಾಯ . . . . ಕೆಲವು ಕಾಲದ ಮೇಲೆ ಯಿತನ ಮನೆಯಲ್ಲಿರ್‍ರುವಂಥ ವಂದು ಹಸು ಮೇಯುದಕ್ಕೆ ಹೋಗಿರುತ್ತ ಯಿರುವಲ್ಲಿ ವಂದು ಯೀ ಸ್ತಳದ

ಅರಣ್ಯದಲ್ಲಿರುವ ಹುತ್ತದ ವಳಗೆ ಹಾಲು ಕರದು ಹೋಗುವಲ್ಲಿ, ಯೀ ತಿಮ್ಮಣ್ಣನ ಮನೆಯಲ್ಲಿ "ಯೀ ಹಸುವಿನ ಬೆನ್ನು ಹಿಡಿದು ಬಂದು, ಗುಪ್ತದಿಂದಾ ಪರೀಕ್ಷೆ ಮಾಡುವಲ್ಲಿ, ಯಥಾ ಪ್ರಕಾರಾ ಯಿದು ಹುತ್ತದ ಮೇಲೆ ಹಾಲು ಕರೆದುದು ನೋಡಿ "ಯೀ ಹುತ್ತದಲ್ಲಿ ಯೇನು ಯಿದೆ"ಯಂದು ಆ ಹುತ್ತನ್ನು ಕೆದರಿ ನೋಡಿದಲ್ಲಿ, ಅದರಲ್ಲಿ ನರಸಿಂಹಸ್ವಾಮಿದೇವರ ವಿಗ್ರಹ ಯಿರುವಂಥಾದನ್ನು ನೋಡಿ ಯಿದಕ್ಕೆ ವಂದು ಅಂಕಣದ ಮರದಿಂದಾ ಗುಡಿಯನ್ನು ಕಟ್ಟಿಸಿ ಬರಲು, ಆ ಹುತ್ತದ ಬಳಿಯಿರುವ ಹಂಗಾರ ಮರವನ್ನು ಕಡದುಯಲ್ಲಿ . . . . ಅದರ ಸಮೀಪದಲ್ಲಿ ಒಂದು ಭಾವಿಯನ್ನು ತಗದು, ಅಲ್ಲಿ ತಾಉ ಯಿರ್ರುವದಕ್ಕೆ ಮನೆಯನ್ನು ಕಟ್ಟಿಸಿಕೊಂಡು, ಯಿಲ್ಲಿ ವಾಸ್ತವ್ಯ ಮಾಡಿಕೊಂಡು, ಆ ಬಾಳೆ ತೋಟವನ್ನು ಕಷ್ಟ ಮಾಡಿಕೊಂಡು ಯಿರುತ್ತಾ ಯಿರುವಲ್ಲಿ, ವಂದಾನೊಂದು ದಿನ ಯೀ ನರಸಿಂಹದೇವರ ಬಳಿಯಲ್ಲಿ ಯೀತ ದಾ . . . . ಗ ಭಾವಿಯಿಂದಾ ಯೇಳು ಮಂದಿ ಸಿದ್ಧರು ಮೇಲಕ್ಕೆ ಬಂದು, ಯೀ ತಿಮ್ಮಣ್ಣನ ತಾಯಿ ಲಕ್ಷ್ಮಮ್ಮನ ಬಳಿಯಲ್ಲಿ "ಹಸ್ತು ಬಂದು ಯಿದ್ದೇವೆ, ಊಟಕ್ಕೆ ಹಾಕು" ಯಂಬುದಾಗಿ ಕೇಳಿದಲ್ಲಿ, "ನಮಗೆ ಬಹಳ ವಿತ್ತಾ ದಿ . . . . ಯವಾಗಿದೆ" ಯನ್ನಲಾಗಿ, ಯೀ ಸಿದ್ಧರು "ನಿಮ್ಮಲ್ಲಿ ಏನಾದರೂ ಇದ್ದರೂ ಬಡಸು"ಯೆನ್ನಲಾಗಿ, "ರಾಗಿ ಗಂಜಿಯಿದೆ, ಬೇಕಾದರೆ ಬಡಿಸಿಕೊ"ಯನ್ನಲಾಗಿ, "ಅದೇ ಪ್ರಕಾರಕ್ಕೆ ಆಗಲಿ"ಯಂದು ಆಕೆಯು ಆ ಯೇಳು ಮಂದಿಗೂ ರಾಗಿ ಗಂಜಿಯನ್ನು ಬಡಿಸಿದಲ್ಲಿ, ಅವರು ಗಡದು ಆಗಿ ಉಂಡು, ಈ ಲಕ್ಷ್ಮಮ್ಮನನ್ನು ಕರದು "ನಿಮ್ಮ ರಿಕ್ತವಿಷಯವನ್ನು ಕಂಡು ಬಹಳ ವ್ಯಸನವಾಯಿತು"ಯಂದು, "ತಾಉ ವಂದು ಸಿದ್ಧರಸವನ್ನು ಕೊಡುತ್ತೇವೆ"ಯಂದು ನೀ ವಂದು ವಾಟಿಗೆ ವಳಿಗೆ ತುಂಬಿ, ಯಿಕೆ ಕೈಯಲ್ಲಿ ಕೊಟ್ಟು, "ಯೀ ತಂಬಿಗೆಯನ್ನು ನೆಲದಲ್ಲಿ ಯಿಡಸಬೇಡಾ. ಅಂತರದಲ್ಲಿ ಯಿಡ್ಸು"ಯಂದು ಹೇಳಿ, ಆ ಸಿದ್ಧರು ಆ ಭಾವಿಯಲ್ಲಿ ಯಿಳಿದು ಅದೃಶ್ಯವಾಗಿ ಹೋದರು.

ಆ ತರುವಾಯ ಯೀ ಲಕ್ಷ್ಮಮ್ಮನು ಯೀ ರಸಾ ತುಂಬಿದ ತೆಂಬಿಗೆಯನ್ನು ಅಡಿಗೆಮನೆ ವಳಿಗೆ ವಲೆಯ ಮೇಲುಕಡೆಯಲ್ಲಿ ಶಿಕ್ಕದ ಮೇಲಿರಿಸಿ, ತಾನು ತನ್ನ ಮಕ್ಕಳಿಗೆ ಉಣುವ ಬಗ್ಗೆ ರೊಟ್ಟಿ ಮಾಡುವದಕ್ಕೆ ಕಬ್ಬಿಣದ ಕಾವಲ್ಲಿಯನ್ನು ವಲೆ ಮೇಲೆ ಮಡಗಿ, ರೊಟ್ಟಿ ಮಾಡುವದಕ್ಕೆ ಆರಂಭಿಸಲಾಗಿ, ಯೀ ಬೆಂಕಿ ತಾಪದಿಂದಾ ಆ ರಸದ ಚಟಗೆಯಿಂದಾ ವಂದು ಬಿಂದು ದೃವಿಶಿ ಯೀ ಕಬ್ಬಿಣ ಹಂಚಿನ ಮೇಲೆ ಬೀಳಲಾಗಿ, ಯೀ ರೊಟ್ಟಿ ಕಾವಲಿಯು ಸುವರ್ಣವಾಯಿತು. ಯೀ ಆಶ್ಚರ್ಯ ನೋಡಿ ತನ್ನ ಮಗ ತಿಮ್ಮಣ್ಣ ಕಡೆ ಹೇಳಿದಲ್ಲಿ, ಯಿದನ್ನು ನೋಡಿ ಯೀತನು ಆಶ್ಚರ್ಯಂಬಟ್ಟು, "ಯಿದಕ್ಕೆ ಯೇನು ಕಾರಣ?"ಯಂದು ಆಲೋಚಿಸಿ, "ಯೀ ರಸವನ್ನು ನಮ್ಮಲ್ಲೆ ಯಿರಿಸಿಕೊಳ್ಳಬಾರದು"ಯಂದು, ಆಗ್ಯೆ ರಾಜ್ಯಕ್ಕೆ ಪ್ರಭುಗಳಾಗಿರುವ ನರಪತಿ ಸಂಸ್ಥಾನ ವಿಜಯನಗರದ ಅರ್ರುಸಗಳು ಸಾಳುವ ಕ್ರಿಷ್ಣರಾಯರ ಬಳಿಗೆ ವೈದು ಕೊಡಬೇಕೆಂದು ನಿಶ್ಚೈಸಿ, ಆ ರಸದ ಚರಿಗೆಯನ್ನು ತೆಗೆದುಕೊಂಡು ವಿಜಯನಗರಿಗೆ ಅರಸಾದ ಸಾಳ್ವ ಕೃಷ್ಣರಾಯರ ಬಳಿಗೆ ವೈದು ಕೊಡಲಾಗಿ, ಆ ರಾಯರು್ರ ಯಿದರ ಪರೀಕ್ಷೆ ಮಾಡಿಶಿ, ಯೀತನು ಪ್ರಾಮಾಣಿಕನೆಂದು ಯೀತಗೆ . . . . ಉಡುಗೊರೆ ಉಚಿತವನ್ನು ಕೊಟ್ಟು, ಢಣಾಯಕನೆಂಬ ಹೆಸರು ಕೊಟ್ಟು, "ಯೀ ದಕ್ಷಿಣದೇಶದಲ್ಲಿ ನೀನು ಪ್ರಭುನಾಗಿ ಫೌಜು ಬಂದಿಯನ್ನು ಮಾಡಿಕೊಂಡು, ಅಲ್ಲಿ ಕೋಟೆ ಕೊತ್ತಳೆ ಮಾಡಿಕೊಂಡು ಯಿರುವದೆಂ"ದು "ಕಕ್ಕೇರಿ ಉಭಯ . . . . ಅಷ್ಟಗ್ರಾಮಕ್ಕೆಲ್ಲಾ ಲಾವಣಿ ನಿರ್ಣಯ ಮಾಡಿಕೊ"ಯಂದು ಹೇಳಿ, ಆ

ಸಿದ್ಧರಸವನ್ನು ತಿರುಗಿ ಕೊಟ್ಟು, ಕುದುರೆ ಕುರಲೆ ಅಪ್ತಾಗಿರಿ ಮೊದಲಾದ ಬಹುಮಾನವನ್ನು ಕೊಟ್ಟು ಕಳುಹಿಸಲಾಗಿ, ಆ ಮಹಾರಾಯರ ಅಪ್ಪಣೆ ತೆಗೆದುಕೊಂಡು ಬಂದು, ಆತನ ಸ್ಥಳಕ್ಕೆ ಬಂದು ಕೆಲವು ಮಂದಿ ಕುದ್ರೆಯನ್ನು ಜಮೆ ಮಾಡಿಶಿಕೊಂಡು, ಯೀ ನರಸಿಂಹದೇವರ ಗುಡಿಯನ್ನು ಶಿಲಾಮಯವಾಗಿ ಗರ್ಭಾಗಾರ ಮೊದಲು ಮಾಡಿಕೊಂಡು ಬಹು ಪ್ರಾಕಾರ ವಿಮಾನ ಸುಧಾ ಕಟ್ಟಿಶಿರಿ . . . . ವಿಸ್ತಾರವಾಗಿ ಕಟ್ಟಿಸಿ, ಯಿಕ್ಕೇರಿಗೆ ವಳ ಕೋಟೆಯನ್ನು ಕಟ್ಟಿಸಿ, ನಾಗಮಂಗಲವೆಂದು ಹೆಸರಿಟ್ಟು, ಯೀ ಊರಿಗೆ ಉತ್ತರಭಾಗದಲ್ಲಿ ವಿರ್ರುವ ಕೆರೆಯು ಬಹಳ ಹಾಳಾಗಿದುದನ್ನು ಮಣ್ಣುಗಳ ತೆಗಸಿ ಉದ್ಧಾರವನ್ನು ಮಾಡ್ಸಿ, ಯೀ ಕೆರಿಗೆ ಪ್ರಾಕು ಮಾಡಿ, ಬಳಿಯಲ್ಲು ಪ್ರಾಕಿಗೆ ಬೋರಯ್ಯುವರು ಪ್ರತಿಷ್ಠೆ ಮಾಡಿದ ಶಿವಾಲಯವಿತ್ತು . . . . ಅದು ಯಿಶ್ವರ ಯಿದ್ದದಕ್ಕೆ ದೇವಾಗಾರವನ್ನು ಕಟ್ಟಿಸಿ, ಕೂಡಿ ಭುವನೇಶ್ವರನೆಂದು ಪ್ರಸಿದ್ಧಿಯನ್ನು ಮಾಡಿ, ದೇಣಿಗೆ ಕೆಲವು ದಿವ್ಸವಿರುತ್ತ ಯಿರಲಾಗಿ, ಯೀ ಊರಿಗೆ ನೈರುತ್ಯದಿಗ್ಭಾಗದಲ್ಲಿ ವಂದು ದೊಡ್ಡ ಕೆರೆಯನ್ನು ಕಟ್ಟಿಸಿದಲ್ಲಿ ಆ ಕೆರೆಯು ನಿಲ್ಲದ್ದರಿಂದ ಯೀ ತಿಮ್ಮಣ್ಣ ಢಣಾಯಕನು ಯಿಟಕೊಂಡ ಸೂಳೆಯು ಈತನ ವ್ಯಸನವನ್ನು ನೋಡಿ, "ಯಾವ ಬಗ್ಗೆ ವ್ಯಸನ ಬಡುವಿರಿ?" ಯಂದು ಕೇಳಿದಲ್ಲಿ "ಈ ಕೆರೆಯು ಯೇನು ಮಾಡಿದಾಗ್ಯೂ ನಿಲ್ಲದರಿಂದಾ ಯೋಚಿಸುವಲುದಾಗಿ"ಯನಲು, ಯೀ ಮಾತಿಗೆ ಆಕಿಯು ಆಲೋಚಿಸುತ್ತಿರುವಲ್ಲಿ, ರಾತ್ರೆ ಸ್ವಪ್ನದಲ್ಲಿ ವಬ್ಬ ಮುತ್ತೈದೆ ರೂಪಿನಿಂದ ಯೀ ಗಂಗೆಯು ಬಂದು, ಯೀ ತಿಮ್ಮ ಢಣಾಯ್ಕಗೆ ಹೇಳಿದ್ದು "ನೀನು ಯಿಟ್ಟುಕೊಂಡ ಸೂಳೆಯನ್ನು ಬಲಿಕೊಟ್ಟಲ್ಲಿ ವಡ್ಡು ನಿಲ್ಲುತ್ತದೆ"ಯಂದು ಹೇಳಲಾಗಿ, ಯೀತನು ಜಾಗ್ರತನಾಗಿ ಯೆದ್ದು, ಯೀ ಸೂಳೆಯ ಮುಂದೆ ಯೀ ಪೂರ್ವೋತ್ರವನ್ನು ಹೇಳಲಾಗಿ, ಆಕೆ ಸಂತೋಷಂಬಟ್ಟು "ನಾನು ಯಿದಕ್ಕೆ ವಡಂಬಡಿಕೆ"ಯೆಂದು, ತಿಮ್ಮಣ್ಣ ಆ ಕೆರೆಯ ಯೇರಿಗೆ ಬಂದು, ತನ್ನಾ ಆಭರಣಂಗಳನ್ನೂ ಬ್ರಾಹ್ಮಣರಿಗೆ ಧರ್ಮವ ಮಾಡಿ, ತಾನು ಕೊರಳಲ್ಲಿ ಯಿಟ್ಟು ಯಿರುವ ಅಷ್ಟದಳದ ಗುಂಡನ್ನು ಹೊಗೆಯಲ್ಲು ಹಾಕಿ, "ಯೀ ತಿಮ್ಮಣ್ಣ ದಣ್ಣಾಯಕ ಮೊದಲಾದ ಸಮಸ್ತ ಮಂದಿ ಬಳಗ ಯಿರುವ ಮುಂದೆ ಗುಡ್ಡಕ್ಕೆ ಅಪಾರ ಶಿಲೆಯಾಗಿ ಬೆಳಿಯುತ್ತ ಬರಲಿ"ಯಂದು ತಾನು ಆ ಕೆರೆ ಮಡುವಿನಲ್ಲು ಹಾರಿಕೊಂಡಳು. ಅನಂತರ ಆ ಕೆರೆಯ ಕಟ್ಟೆ ನಿಂತುದರಿಂದಾ ಢಣಾಯಕ ಸಮುದ್ರಕ್ಕೆ 'ಸೂಳೆಕೆರೆ'ಯಂದು ಹೆಸ್ರು ಯಿಟ್ಟು, ಅನಂತರಾ ಯೀ ನಾಗಮಂಗಲದ ಊರ ಬಾಗಿಲಲ್ಲಿ ಒಂದಾನೊಂದು ದಿನ ಆ ತಿಮ್ಮಣ್ಣನಾಯಕನ ತಾಯಿ ಲಕ್ಷ್ಮಮ್ಮನು "ಯಾವತ್ತು ಧರ್ಮಾ ನಿನ್ನ ಹೆಸರಿನಲ್ಲಿ ಮಾಡಿದಿ, ನನ್ನ ಹೆಸರಿನಲ್ಲಿ ಯಾವ ಧರ್ಮ ಮಾಡಲು ಯಿಲ್ಲವೇ?" ಯಂದು ಮಗನ ಕುರಿತು ಕೇಳಿದಲ್ಲಿ, ವಂದು ಚಿಕ್ಕ ಕೆರ್ರಿಯನ್ನು ಯೀ ಊರಿಗೆ ಪೂರ್ವಭಾಗದಲ್ಲಿ ಮಾಡಿಶಿ 'ಅಮ್ಮನ ಕೆರ್ರಿ'ಯಂದು ಹೆಸರು ಯಿಟ್ಟನು.

ಆ ತರುವಾಯ ಯೀ ಢಣಾಯಕನು ಶ್ರೀರಂಗಪಟ್ಟಣ ರಂಗಸ್ವಾಮಿಯ ದೇವಾಲಯ ಕೋಟೆ ಮೊದಲಾಗಿ ಕಟ್ಟಿಸಿ, ಅಲ್ಲಿ ಮೂರು ಅಗ್ರಹಾರವನ್ನು ಮಾಡಿಶಿ, ತಿರುಮಲಪ್ರತಿಷ್ಟೆಯನ್ನು ಮಾಡಿಶಿ, ಯಿದೆ ರಾಜಧಾನಿ ಜಾಗ ಮಾಡಿಕೊಂಡು, ತಾನು ತನ್ನ ವಳಿತವಾದ ಸೀಮೆಗಳನ್ನು ಪ್ರತಿಪಾಲನ ಮಾಡಿಕೊಳ್ಳುತ್ತ ಯಿದ್ದು ಸಮೀಪದಲ್ಲಿ ಯಿರುತ್ತ, ಪುಂಡ ಪ್ರಭುಗಳಿಗೆ ತುಂಟರಿಗೆ ಶಿಕ್ಷಿಸಿಕೊಳ್ಳುತ್ತ ನಿಷ್ಕಂಟಕವಾಗಿ ಪ್ರಭುತ್ವಾಮಾಡಿಕೊಂಡು . . . . ಧರ್ಮಸಂಮತಿಯಾಗಿ . . . . ಆತನು ಕಾಲವಾದ ಬಳಿಕ ಪುನಹಾ ವಿಜಯನಗರದ ರಾಯರು, ಸಾಳ್ವ ನರಸಿಂಹರಾಯರು

ತಮ್ಮ ಕಡೆಯಿಂದಾ ಯೀ ರಾಜ್ಯಕ್ಕೆ ಪ್ರತಿಪಾಲುಸುವಂತವರ್‍ರು ಯಾರೂ ಯಿಲ್ಲಾವಂಬದಾಗಿ ತಿಳಿದು, ಹಂಪಿ ಅರಸು, ಚೆನ್ನರಸುಯಂಬ ಯಿಬ್ಬರು ಅಣ್ಣತಮ್ಮಂದಿರನ್ನು ಆ ರಾಜ್ಯದ ಸಂರಕ್ಷಣಾರ್ಥವಾಗಿ ಕಳುಹಿಸಿಕೊಟ್ಟದ್ದರಿಂದ, ಅವರ್‍ರು ಬಂದು ಯೀ ಢಣಾಯಕ ಆಳುತ್ತಾ ಯಿದ್ದ ಶೀಮೆಗಳಾವತ್ತನ್ನು ತಮ್ಮ ಸ್ವಾಧೀನಮಾಡಿಕೊಂಡು, ಅಧಿಕಾರಿಗಳಾಗಿ ಕೆಲವು ದಿವಸಾ ಯಿರುತ್ತಿರಲಾಗಿ, ಯೀ ನಾಗಮಂಗಲದ ಮೊದಲ ಪ್ರಾಕಾರಕೆ ಯಿಶಾನ್ಯಭಾಗದ ಯರಡು ಕೊಳವನ್ನು ಕಟ್ಟಿಶಿ, ತಮ್ಮ ಯಿಬ್ಬರ ಹೆಸರನ್ನು ಆ ಕೊಳಗಳಿಗೆ ಯಿಟ್ಟು, ಕಾಲು[>ತಾವು]ಸ್ವಾಮಿಕಾರ್ಯವೇ ಮುಖ್ಯವಾಗಿ ಯೀ ಶೀಮೆಗಳ ಅಧಿಕಾರ ಮಾಡಿಕೊಳ್ಳುತ್ತ ಯಿರುವಲ್ಲಿ, ವಿಜಯನಗರ ಸಾಳ್ವ ನರಸಿಂಹರಾಯರು ತಮ್ಮ ಬಳಿಯ ದಳವಾಯಿತನ ಮಾಡಿಕೊಂಡು ಯಿದ್ದ . . . . ಜಗದೇವರಾಯ ಯಂಬವನಿಗೆ ಆತನು ಬಹಳ ಪರಾಕ್ರಮಿಯಾಗಿ ತಮ್ಮ ಕಾರ್ಯದಲ್ಲಿ ಮುಖ್ಯಯಂದು ತಿಳಿದು, ಆತನಲ್ಲಿ ಬಹಳ ದಯದಿಂದಾ ಜಗದೇವಗ ಮೊದಲು ಮಾಡಿಕೊಂಡು ಬೇಲೂರ್‍ರು ಪರಿಯಂತ್ರ ನಾಲ್ಕು ಲಕ್ಷ ಶೀಮೆಯನ್ನು ಅಮರ ಬರಕೊಟ್ಟದ್ದರಿಂದಾ, ಆ ಜಗದೇವರಾಯನ್ನು ಆ ರಾಯರ ನಿರೂಪಕ್ಕೆ ಬಂದುಕೊಂಡು ಯಿಲ್ಲಿ ಅಧಿಕಾರ ಮಾಡಿಕೊಂಡು ಯಿರುವ ಹಂಪೀಅರಸು ಚನ್ನೆಅರಸುಗಳಿಗೆ ಕೊಟ್ಟ, ತನ್ನ ಅಮರದ ಶೀಮೆಗಳನ್ನು ತನ್ನ ಸ್ವಾಧೀನಮಾಡಿಕೊಂಡು, ತರುವಾಯ ಆ ಹಂಪೀಅರಸು ಚನ್ನೆಅರಸು ಉಭಯತ್ರರು ಶ್ರೀರಂಗಪಟ್ಟಣದಲ್ಲಿ ಅಧಿಕಾರ ಸದಿಕಾರ ಮಾಡಿಕೊಂಡು ಯಿದ್ದರು. ಯೀ ಜಗದೇವರಾಯನ್ನು ತನ್ನ ವಳಿತುವಾದ ಶೀಮೆಗಳ ಮಾಡಿಕೊಂಡು ಯಿರುವಾಗ್ಯೆ ಮಾಡಿದ ಧರ್ಮಾದಿಗಳ ವಿವರಾ:

೧. ಯೀ ನಾಗಮಂಗಲದ ವಳಕೋಟೆಯಲ್ಲು ನರಸಿಂಹದೇವಾಲಯದ ಮುಂದಗಡೆ ದೇವಾಲಯವನ್ನು ದೊಡ್ಡದು ಕಟ್ಟಿಶಿ, ವಿಮಾನ ಗೋಪುರ ಪ್ರಾಕಾರ ಸಹಾ ಮಾಡಿ, ಶಿಲಾಗುಡಿಯಲ್ಲು ಕೇಶವಸ್ವಾಮಿಯನ್ನು ಪ್ರತಿಷ್ಟೆಮಾಡಿ, ಗೋಪುರದ ಬಾಗಿಲು ಮುಂದೆ ಶಿಲಾಮಯವಾದ ಧ್ವಜಸ್ತಂಭವನ್ನು ಸ್ಥಾಪಿಸಿ, ರಥೋತ್ಸವ ಮೊದಲಾದ ಕಾರ್ಯಕೆ ರಥಾ ಕಟ್ಟಿಸಿ, ಯೀ ದೇವತಾ ವಿನಿಯೋಗಗಳು ರಥೋತ್ಸವ . . . . ಬಗ್ಗೆ ನರಸಿಂಹದೇವರ, ಭುವನೇಶ್ವರದೇವರ ಕಟ್ಲೆ ಕಂದಾಚಾರದ ಬಗ್ಯೆ ಸಹಾ ಬಿಟ್ಟ ಶೀಮೆ ಬಗ್ಗೆ ಶಿಲಾಶಾಸನ ಬರಶಿ ಯಿದೆ.

ಯಿದರ ಶಿವಾಯ ಅಗ್ರಹಾರ ಉತ್ತರಗಳ ಬಿಟ್ಟಿರುವದಕ್ಕೆ ಸಹಾ ಹಾಜರಿರುವ ಸನ್ನದಿ ನಕಲು ಅಗ್ರಹಾರಗಳು ಉತ್ರ್ತಿ ವಿವರಾ, ಗ್ರಾಮಗಳ ವಿವರಾ ಸಹಾ . . . . ದ ಪಟ್ಟಿ ಬರಶಿಯಿದೆ. ಯೀ ಪ್ರಕಾರ:

ಯೀ ಜಗದೇವರಾಯನ ಸಂತತಿಯವರು ಆಳಿದ್ದು ರಾಣಾ ದೊಡ್ಡ ಜಗದೇವರಾಯ, ಆತನ ಮಗ ಅಂಕುಶದೇವರಾಯ . . . . ಜಗದೇವರಾಯ, ಯೀತನ ಮಗ ಅಂಕುಶದೇವರಾಯ, ಯೀತನ ಮಗ ಜಗದೇವರಾಯ, ಶಾಲಿವಾಹನ ಶಕ ೧೫೪೭ನೆ ವರ್ಷವಾಂತು ಪರಿಯಂತ್ರ ಅಂತು ಜನ ೫ ರಾಜ್ಯಭಾರ ಮಾಡುತ್ತ ಯಿದ್ದರು. ಆ ತರುವಾಯ ಯೀ ಐದು ಮಂದಿ ಅರಸುತನದ ಆದ ತರುವಾಯ ಯಿವರ ತಾಲೂಕ್ಕಲ್ಲಿ ಯಿದ್ದ ಶೀಮೆಗಳು ಹಟಿಗೋಟವಾದರಿಂದಾ ಆಗ್ಯೆ ಶ್ರೀರಂಗಪಟ್ನ ಆಳುತ್ತ ಯಿದ್ದ ಶ್ರೀರಂಗರಾಯರು ಶೀಮೆಗಳನ್ನೆಲ್ಲ ತಮ್ಮ ಸ್ವಾಧೀನ ಮಾಡಿಕೊಂಡು, ಕೆಲವು ದಿವ್ಸ ಶ್ರೀರಂಗಪಟ್ಟಣ ಯೀ ನಾಗಮಂಗಲ ಮುಂತಾದ ಶೀಮೆಗಳ ರಾಜ್ಯಭಾರ ಮಾಡಿದರು.

ಆ ನಂತರ ತಾನು ಆಳುತ್ತ ಯಿರುವ ಶೀಮೆಗಳನ್ನೆಲ್ಲ ಮೈಸೂರವರ ತಾಬೆಗೆ ಕೊಟ್ಟ ಮೇಲೆ, ಅವರು ಮೈಸೂರು, ಶ್ರೀರಂಗಪಟ್ಟಣ, ಯೀ ನಾಗಮಂಗಲ ಮುಂತಾದ ಶೀಮೆಗಳ ರಾಜ್ಯಭಾರ ಮಾಡಿದರ್ರು. ಆ ನಂತರ ಕೌಲು ಆಳುತ್ತ ಯಿರ್ರುವ ಶೀಮೆಗಳೆಲ್ಲ ಮೈಸೂರವರ ತಾಬೆಗೆ ಕೊಟ್ಟ ಮೇಲೆ, ಅವರು ಮೈಸೂರು, ಶ್ರೀರಂಗಪಟ್ಟಣ, ಯೀ ನಾಗಮಂಗಲ ಮುಂತಾದ ಶೀಮೆಗಳ ಆಳಿಕೊಂಡಯ ಯಿರುವಾಗ್ಯೆ ಬೆಟ್ಟದ ಶ್ಯಾಮರಾಜವಡೆರ್ರೂ ಶ್ರೀರಂಗಪಟ್ನ ಆಳುತ್ತಾ ಯಿರುವಾಗ್ಯೆ, ಅವರ ಕಡೆ ದಳವಾಯಿ ದೊಡ್ಡೈಯ್ಯನವರ ಕಡೆ ಸುಬೇದಾರ ಶಿವಣ್ಣ ಯಂಬವನು ಯೀ ನಾಗಮಂಗಲ ಪಟ್ಟಣದ ಕೋಟೆಯಲ್ಲಿ ಕೊಪ್ಪಭದ್ರದೇವರು ದೇವಾಲಯವಿಲ್ಲದೆ ಗರ್ಭಗೃಹಾ ಮಾತ್ರ ಯಿದ್ದದರಿಂದಾ, ಆ ದೇವರಿಗೆ ದೊಡ್ಡೈಯ್ಯನವರು ಮನೆ ದೇವರು ಯಂದು ವಿಶೇಷವಾಗಿ ನಡದುಕೊಡು ಬರುತ್ತಿರಲಾಗಿ, ತಮಗೆ ವಿಶೇಷ ಅಧಿಕಾರವು ಆದರಿಂದಾ ಈ ದೇವರಿಗೆ ದೇವಾಲಯ ಉತ್ಸವ ಸಹಾ ಮಾಡಬೇಕೆಂದು ಮನಸ್ಸಿರಿಸಿ ಸುಭೆದಾರ ವೀರಣ್ಣಗೆ ಅಪ್ಪಣೆ ಕೊಟ್ಟ ಪ್ರಕಾರ, ಯೀ ವೀರಣ್ಣ ದೇವಾಲಯ ಸಂಪೂರ್ಣವಾಗಿ ರಥವನ್ನು ಸಹಾ ಕಟ್ಟಿ ದೇವಸ್ಥಾನ ಕಟ್ಟಿ, ಕಂದಾಚಾರದ ಬಗ್ಗೆ ವಿನಿಯೋಗಾದಿಗಳಿಗೆ ಮಾಡಿದ ಶೀಮೆಗಳ ವಿವರಾ: ಲಲಾಹಿಪಟ್ಟಿ ಪ್ರಕಾರ ದಾಖಲೆ ೪ ತಕ್ಕದು. ಯೀ ವಿವರ ಸುಬೇದಲ್ಲು ಮತ್ತು ಯೇನು ಕೆಲ್ಸ ಕಾಣದ್ದರಿಂದ ಯಿ ಮೈಸೂರವರ ದಿವ್ಸದಲ್ಲು ಮಾಡಿದ ಅಗ್ರಹಾರಗಳು ದೇವತಾ ಸೇವೆ ಬಗ್ಗೆ ಸಹಾ ಬಿಟ್ಟ ಸೀಮೆಗಳ ವಿವರು ಸಹಾ, ಲಲಾಹಿ ದರಾಖಲು[>ದಾಖಲು] ಬರಶಿದೆ. ಯಿದೆ ಪ್ರಕಾರ ಮೈಸೂರವರು ಆಳಿದು.

ಆದ ತರುವಾಯ ನವಾಬ ಹೈದರ ದಿವ್ಸದಲ್ಲು ಯೀ ಯಿನಾಮ ಅಗ್ರಹಾರಗಳು ಸಹಾ ಯೀ ಶೀಮೆಯಲ್ಲಿ ಪೂರ್ವ ಪ್ರಕಾರವೆ ನಡದು ಯಿತ್ತು. ಅನಂತರ ಅವರು ಕಾಲವಾದ ಬಳಿಕಾ ಟೀಪು ಸುಲತಾನವರಿಗೆ ರಾಜ್ಯ ಹೋದಮೇಲೆ ಸಮಗ್ರ ಯಿನಾಮು ಅಗ್ರಹಾರ ಜಪ್ತಿ ಬರಸಿ . . . . ಸುದಾ ಆಗಿ ಯಿತ್ತು. ಯಿಚಿಗೆ ಶಿದ್ಧಾರ್ಥಿಯಲ್ಲು ಕುಂಪಣಿ ಆದ ಬಳಿಕಾ ಮೈಸೂರ ದೊರೆ . . . . ವ್ಯಾರಾಯ ವಡೇರು ಕರ್ತುಗಳು ಆದ ಮೇಲೆ . . . . ಊರಗಳಿಗೆಲ್ಲ ಸುಮಾರು ಉತ್ತ ತಾಸ್ತಿಕು ಆಗಿ ಭಟಮಾನ್ಯ ಮತ್ತು ಪೂರ್ವದಾರಭ್ಯ ಸ್ಥಳಗಳಲ್ಲಿ ಯಿದ್ದ ಜನರಿಗೆ ಜನ ೧ಕ್ಕೆ . . . . ಮುಕರು ಹಣವಿನ ಮೇರೆಗೆ ಯೀ ಬಗ್ಯೆ ಭೂಮಿನ ಬಿಟ್ಟುಕೊಟ್ಟು ಯಿದ್ದಾರೆ. ಗ್ರಾಮಾನುಗ್ರಾಮಗಳನ್ನು ಯಿದ ದೇವಾಲಯ ಗುಡಿಗೆ ಅಲ್ಪಸ್ವಲ್ಪ ತಸ್ತೀಕು ಆಗಿ ಅದೆ.

ಯೀ ನಾಗಮಂಗಳದ ಶೀಮೆಗೆ ಹೊಬಳಿ ೨೦ ವಿವರಗಳು ಖಾನೆಘೋರಾರಿ[>ಸುಮಾರಿ] ಸಹಾ ಸಾಬಕ್ಕು ಬರಶಿಕೊಟ್ಟದರಿಂದಾ ಯೀಗ ಬರಶಿ ಕೊಡಲಿಲ್ಲ. ಶಿಲಾಶಾಸನಗಳು ಸಾಹಾ ಸಾಬಕ್ಕೆ ಬರಶಿಕೊಟ್ಟದ್ದರಿಂದ ಬರಶಿಕೊಡಲಿಲ್ಲ.

ಯಿಲ್ಲಿ ಯಿರುವ ಅಗ್ರಹಾರಲ್ಲಿ ವತ್ತರು ಯಿಂದವರ ಕಾಲದಲ್ಲಿ ಬಿಟ್ರಯಿಷ್ಟು ಯಿಲ್ಲಿ ಉತ್ತಿ ಧರಣಿಗಳು ಯಂಬ ವಿವರ ಸಹಾ ಬಿಟ್ಟಿದೆ. ಯಿದೇ ಪ್ರಕಾರ ದೇವತಾ ಉತ್ತರ ಸಹಾ . . . . ಬರಶಿದಲ್ಲಿ ಪಾಯತರು ಬಕೆ ಯಿನು ವಗ್ಯೆರೆ ಬರಸಿದ್ದು ಸದರಿ ಪ್ರಕಾರಾ . . .

❖❖

೨೬
ಬಸವಲಿಂಗಯ್ಯ ಜಂಗಮ ಕೈಫಿಯತ್ತು[೧]

ಮೆಕೆಂಝಿ ಸಂಪುಟ : ೧೬೦

ಯದಾಸ್ತು ಪ್ರಭವ ಸಂವತ್ಸರದ ಚೈತ್ರ ಶು ೮ಲ್ಲು ಶಿರಹಟ್ಟಿ ಬಸವಲಿಂಗೈಯ್ಯ ಜಂಗಮನು ಬೆಂಗಳೂರಿನಲ್ಲಿ ಯಿರುವಾತ ಹೇಳಿದ ಕೈಫಿಯತು.

ಪೂರ್ವದಲ್ಲಿ ಶಿರಹಟ್ಟಿ ಸ್ಥಳದಲ್ಲಿ ಗುರುಸ್ಥಳದ ಪುರಾಣದ ಪ್ರಭುವೈಯ ಯಂಬರ[>ರು], ತಂದೆ ಚಿಕ್ಕಪ್ಪ ಚನ್ನವೀರೈಯ್ಯ ಯಂಬಂ[>ಬಾ]ತಾ. ಯೀ ಪ್ರಾಕಾರ ಯಿರುವಾಗ್ಯೆ ಸಂ ೯೦ಕೆ ತಂದೆ ತಾಯಿ ಚಿಕ್ಕಪ್ಪ ಮೊದಲಾದವರು ತೀರಿಹೋದ ಬಳಿಕಾ, ಯೀ ಶಿರಹಟ್ಟಿಯಲ್ಲಿರುವ ಫಕ್ಕೀರಸ್ವಾಮಿ ಮಠದವರಲ್ಲಿ ಸೇರಿಕೊಂಡು ಯಿರುವಲ್ಲಿ, ಆ ಮಠಕ್ಕೆ ಯಿನ್ನು ದೀಕ್ಷೆ ಮೋಕ್ಷಾವನ್ನು ಮಾಡಿ ಯಿಟ್ಟುಕೊಂಡು ಯಿರುವಲ್ಲಿ, ಅಲ್ಲಿ ಗುರುಸ್ಥಳದ ಮಠದವರಿಗೂ ಯೀ ಮಠದವರಿಗೂ ಕಚ್ಚಾಟ ಬಂದು, ಯಿಬ್ಬರಿಗೂ ವಾಗ್ವಾದ ಬಂದಲ್ಲಿ, ಯೀ ಗುರುಸ್ಥಳದ ಮಠಾ ಸೇರಿಕೊಂಡು ಯಿದ್ದಲ್ಲಿ, ಅಲ್ಲಿಂದಾ ಡಂಬಳ ಕೋಟಿ[>ತೋಟ]ಸ್ವಾಮಿಗಳವರಲ್ಲಿ ಸೇರಿಕೊಂಡು ಕೆಲವು ದಿವ್ಸ ಯಿರುತ್ತ ಯಿರುವಾಗ್ಯೆ, ಅಲ್ಲಿಂದಾ ಸೊದೆ ಸಾವಿರ ಸನ್ಯಾಸಿಮಠದಲ್ಲಿ ಯಿದ್ದು, ಅಲ್ಲಿ ಪವಾಡದ ನಿಂಬಣನಲ್ಲಿ ಕೆಲವು ದಿವ್ಸ ಯಿದ್ದುಕೊಂಡು ಯಿರ್‍ರುವಾಗೆ, ಆತನು ತೀರಿದ ಬಳಿಕ ಅಲ್ಲಿಂದಾ ಹೊರಟು ಹಾಂಗೆ ತ್ತಿರಗಾಡುತ್ತಾ ಯಿರುವಲ್ಲಿ, ಕೂಡಲ್ಲಿ ಶ್ರೀ . . . . . ಶಂಕರಭಾರತಿಗಳವರ ಸಂಗಡಾ ತ್ತಿರಗಾಡಿಕೊಂಡು ಯಿರುತಿದ್ದಲ್ಲಿ, ಅವರು ಕೊರಳಲ್ಲಿ ಹಾಕು ಬೆಳ್ಳಿಚೌಕವನ್ನು ಹಾಂಗೆ ಕರಕೊಂಡು ಬಂದು, ಯೀ ಬೆಂಗಳೂರಲ್ಲಿ ಯಿರುತ ಯಿದ್ದೇವೆ. ಯಿಲ್ಲಿ ಯಿರುತೊಡಗಿ ವರ್ಷ ೯೬ ಲಾಗಾಯಿತು.

❖❖

೧. ಇದರ ಇನ್ನೊಂದು ಹೆಸರು 'ಬೆಂಗಳೂರು ಕಾಳೆನಹಳ್ಳಿ ಕೈಫಿಯತ್ತು' (ಸಂ).

೨೭
ಬಾಗಡೆ ಕೈಫಿಯತ್ತು

ಮೆಕೆಂಝಿ ಸಂಪುಟ : ೨೯೧

ಹ[>ಹೊ]ಳೆನರಶೀಪುರದಿಂದ ತಿಮ್ಮೆಗವುಡ ಯಂಬವನು ಬಂದು, ಯೀ ಸ್ಥಳವನ್ನು ನೋಡಿ, ಯಾರ್ರೂ ಯಿಲ್ಲದೇ ಮೈದಾನವಾಗಿ ಯಿದ್ದಕಾರಣ, ಯೀ ಸ್ಥಳದಲ್ಲಿ ವಂದು ಗ್ರಾಮವನ್ನು ಕಟ್ಟಿ, ತನ್ನ ಹೆಸರನಿರಿಸಬೇಕೆಂದು ಚಿಕ್ಕದಾಗಿ ಬಂದು ಊರು ಕಟ್ಟಿ ಬಾಗಡೆಯಂಬ ಹೆಸರು ಯಿಟ್ಟು, ಊರಿಗೆ ಪಶ್ಚಿಮದಿಕ್ಕಿನಲ್ಲಿ ತೆಂಗಟಿಯಂಬ ವಂದು ಸಣ್ಣ ಕೆರೆಯನ್ನು ಕಟ್ಟಿಸಿ ಯಿರುತ್ತಾ ಯಿದ್ದನು. "ಯೀ ಗಲುಡ ವಂಶಸ್ತನಾದ ನರಸೇಗವುಡ ಯಂಬವನು ಯಿದ್ದಾನೆ" ಯಂಬುದಾಗಿ ಹೇಳಿದ್ದರಿಂದ "ಯೀ ಕೋಟೆಯನ್ನು ದುರಸ್ತಾಗಿ ಕಟ್ಟಿಸಿದರೆ ನಮ್ಮ ಸಂಸ್ತಾನಕ್ಕೆ ಹೆಸರಾಯಿತು" ಯಂಬುದಾಗಿ ಆಲೋಚಿಸಿ, ಉಪಾಯವನ್ನು ತೆಗೆದು, ಕಂದಕ ಮುಂತಾಗಿ ಹೇರಳವಾಗಿ ತೋಡಿಶಿ, ಅದರಲ್ಲಿ ಮೀನು ಮೊಸಳೆ ಮುಂತಾಗಿ ನಿಲ್ಲುವಂತೆ ನೀರ್ರು ಬಂದ ಕಾರಣಾ, ಯೀ ಕೋಟೆ ಕಟ್ಟಿ ಊರ್ರು ಮುಂದಿನ ಕೆರ್ರೆಯನ್ನು ಕಟ್ಟಿಸಿದರು.

❖❖

೨೮
ಬೆಟ್ಟದಕೋಟೆ ಕೈಫಿಯತ್ತು

ಮೆಕೆಂಝಿ ಸಂಪುಟ : ೨೮೮

ಶುಭಮಸ್ತು ಶ್ರೀರಾಮ.

ದಕ್ಷಿಣ ಗೋವರ್ಧನಗಿರ್ರಿ ಪರ್ವತಕೆ ಪ್ರತಿನಾಮಧೇಯವಾದ ಕಮಲಾಚಲವೆಂಬ ಹೆಸ್ರು, ಯಿದಕೆ ಪ್ರತಿನಾಮ ಬೆಟ್ಟದಕೋಟೆ ಕೈಫಿಯತ್ತು.[೧] ಯೀ ಕೈಫಿಯತ್ತು ಬರಶಿದವರ ಹೆಸ್ರು ತಿರುಮಲ್ಯೆಯನವರ್ರು ಸ್ಥಾನಿಕರು. ವಿಜಯಾಪುರದ ತ್ರಿಯಂಬಕ ಜೋಯಿಸರ್ರು, ಅಠವಣೆ ಶಿರಸ್ತೇದಾರ ದ್ಯಾವೈಯ, ಕಂದಾಚಾರದ ಶಿರಸ್ತೆ ಚೆನ್ನಪೈಯ, ಸ್ಥಳದ ಪೂರ್ವದ ಅಠವಣೆ ಶ್ಯಾನಭಾಗ ಸೂರ್ಯನಾರಣೈಯ ಸಹಾ ಬರಶಿದು. ರಕ್ತಾಕ್ಷಿ ಸಂವತ್ಸರದ ಭಾದ್ರಪದ ೧೦ ಶುಕ್ರವಾರ . . . .

---

೧. 'ಗೋವರ್ಧನಗಿರಿ ಪ್ರತಿನಾಮಾ ಕಮಲಾಚಲಮಾಹಾತ್ಮೆ ಪ್ರತಿನಾಮ ಬೆಟ್ಟದಕೋಟೆ ಕೈಫಿಯತ್ತು' ಎಂಬ ಮೂಲದಲ್ಲಿದೆ. (ಸಂ.)

ದ್ವಾಪಾರಯುಗದಲ್ಲಿ ಹಿಮವಂತಪರ್ವತನ ಕುಮಾರತ್ತಿಯಾದ ಗಿರಿಜಾಕಲ್ಯಾಣ ಮಹೋತ್ಸವದಲ್ಲಿ ಉತ್ತರದೇಶದಲ್ಲಿ ಕಾಶಿಪಟ್ಟಣ ಮೂವತ್ತುಮೂರ‍್ರು ಕೋಟಿ ದೇವತೆಗಳು, ಬ್ರಹ್ಮರುದ್ರಾದಿಗಳು, ವ್ಯಾಸಪರಾಶರಾದಿ ಮುಖ್ಯವಾದ ಮಹಾಋುಷಿಗಳು ಕೂಡಿ ವಿವಾಹೋತ್ಸವ ನಡೆಯುವ ಕಾಲದಲ್ಲಿ ಸಕಲವಾದರು. ಯೇಕವಾದ ನಿಮತ್ಯ ಯೀ ಭೂದೇವಿಯೂ ಯೀ ಭಾರವನ್ನು ಸಹಿಸಲಾರದೆ ವೊರಂಡಲವಾಗಿ ಭೂಮಿಯು ಪಾತಾಳಕ್ಕೆ ಯಿಳಿದ್ದಂನ್ನು ಬ್ರಹ್ಮರುದ್ರಾದಿ ಸಕಲವಾದ ದೇವತ್ತಿಗಳು ಕಂಡಂತಾವರಾಗಿ ಆಲೋಚನೆಯಂ ಮಾಡಿ, ಯೀ ಭಾರಕೆ ಸಮಾನವಾದಂತಾ ಮಹಾಪುರುಷರಂನ್ನು ದಕ್ಷಿಣದೇಶಕ್ಕೆ ಕಳುಹಿಸಿ ಭೂಮಿಯನ್ನು ಸಮತೂಕಕ್ಕೆ ನಿಲ್ಲಿಸಬೇಕೆಂದು ಆಲೋಚನೆಯಂ ಮಾಡಿ, ಅಗಸ್ತ್ಯಮಹಾಋುಷಿಶ್ವರಂನ್ನು ಪ್ರಾರ್ಥನೆಯಂ ಮಾಡಿ, "ನೀವು ದಕ್ಷಿಣದೇಶಕ್ಕೆ ಹೋಗಿ ಅಲ್ಲಿ ವಾಸವಂ ಮಾಡಬೇಕು" ಯಂದು ಪ್ರಾರ್ಥಿಸಲಾಗಿ, ಅದೇ ಪ್ರಕಾರಕ್ಕೆ ಅವರ ಅನುಮತಿಯಿಂದಾ ಹೊರಟು, ಗಂಗಾದಿ ಸರ್ವತೀರ್ಥವನ್ನು ಕಮಂಡಲದಲ್ಲಿ ಸಂಗ್ರಹಿಸಿಕೊಂಡು ಹೊರಡಲಾಗಿ, ಆ ಸಮಯದಲ್ಲಿ ದೇವತೆಗಳು ಅಗಸ್ತ್ಯರಂ ಕುರಿತು ಪ್ರಾರ್ಥಿಸಿದ ವಿವರಾ:

"ವಿಂದ್ಯನಿಗೂ ಮಹಾಮೇರುವಿಗೂ ವಿವಾದದಿಂದಾ, ನಾನಧಿಕ ತಾನಧಿಕವೆಂಬ ವ್ಯವಹಾರದಿಂದಾ, ವಿಂದ್ಯನು ಆಕಾಶಕ್ಕೆ ಬೆಳೆದು ಸೂರ್ಯಗತಿ ಚಂದ್ರಗತಿ ಸಹಾ ತಡದು ಯಿದ್ದನಾದ ಕಾರಣ, ಉದಯಾಸ್ತಮಯಗಳು ಕಾಣದೆ ಅಂಧಕಾರವಾಗಿಯಿದೆ. ಯೀ ನಿಮ್ಮ ಶಿಷ್ಯನಾದ ವಿಂದ್ಯನ ದೆಶೆಯಿಂದಾ ಬಂದಿರುವ ಉಪದ್ರವಂನ್ನು ಪರಿಹರಿಸಿ ನಮ್ಮನ್ನು ರಕ್ಷಿಸಬೇಕು"ಯಂಬುದಾಗಿ ಕೇಳಿಕೊಂಡರಾದ ಕಾರಣ, ಅಗಸ್ತ್ಯರು ಕಾಶೀಪಟ್ಟಣದಿಂದಾ ಹೊರಟು ದಕ್ಷಿಣದೇಶವನ್ನು ಕುರಿತು ಬರುವ ಮಾರ್ಗದಲ್ಲಿ ವಿಂದ್ಯನೂ ತಂನ್ನ ಗುರುಗಳಾದ ಅಗಸ್ತ್ಯಮಹಾಋುಷಿಗಳು ಬರುವದನ್ನು ಕಂಡು, ಅಭಿನಂದನವಂ ಮಾಡಲಾಗಿ, "ನಾವು ದಕ್ಷಿಣದೇಶಕ್ಕೆ ಹೋಗಿ ಪುನಹಾ ಮರಳಿ ಬರುವ ಪರಿಯಂತರಕ್ಕೂ ಯಿದೆ ಪ್ರಕಾರಕ್ಕೆ ಯಿರು" ಯಂಬದಾಗಿ ಆಣೆಯಂ ಕೊಟ್ಟು, ಉತ್ತರ ಗೋವರ್ಧನ ಪರ್ವತಕ್ಕೆ ಬಂದು, ಅಲ್ಲಿ ಯಿದ್ದಂಥಾ ಶ್ರೀ ಕೃಷ್ಣದೇವರನ್ನು ಪ್ರಾರ್ಥಿಸಿ ಪ್ರತ್ಯಕ್ಷಂಗೈದು, "ನಾನಿನ್ನು ದಕ್ಷಿಣದೇಶಕ್ಕೆ ದೇವಕಾರ್ಯಾರ್ಥವಾಗಿ ಹೋಗುತ್ತಾ ಯಿದ್ದೇನೆ. ನೀವು ಲಕ್ಷ್ಮಿಸಮೇತರಾಗಿ ಬಿಜಯಂಗೈಯ್ಯಬೇಕೆಂ"ದು ಪ್ರಾರ್ಥಿಸಿ[>ಸೆ], ಅಗಸ್ತ್ಯರಂ ಕುರಿತು "ಅದೆ ಮೇರೆಗೆ ನಾವು ಸನ್ನದ್ಧರಾಗಿ ಸಾಗಿ ಬಂದು ದಕ್ಷಿಣದೇಶವಂ ಪಾವನವ ಮಾಡುತ್ತಾ ಯಿಥವೆ. ನೀವು ಮುಂದೆ ಹೋಗಿ" ಯಂಬುದಾಗಿ ಕಟ್ಟು ಮಾಡಿಸಲಾಗಿ, ಸ್ವಾಮಿಯಿಂದಾ ಅಪ್ಪಣೆಯಂ ತೆಗೆದುಕೊಂಡು ಸಹ್ಯಾದ್ರಿಪರ್ವತಕ್ಕೆ ಬಂದು, ಶ್ರೀಕೃಷ್ಣಾಗಮನವನ್ನು ಕುರಿತು ತಪಸ್ಸಂ ಮಾಡುತ್ತ ಯಿರುವಲ್ಲಿ, ಉತ್ತರ ಗೋವರ್ಧನ ಪರ್ವತದಿಂದ ಸಕಲವಾದ ಋುಷಿಗಣದೇವತಾಸಮೂಹ ಸಕಲತೀರ್ಥ ಸಮೇತರಾಗಿ ಬಂದು, ಅಗಸ್ತ್ಯಮಹಾಋುಷೀಶ್ವರರ‍್ರಿಗೆ ಪ್ರತ್ಯಕ್ಷವಾಗಿ "ನಿನ್ನ ತಪಸ್ಸು ಸಿದ್ಧಿಸಿತು. ನಿನ್ನ ಮನೋಭಿಷ್ಟವನ್ನು ಪ್ರಾರ್ಥಿಸು"ಯಂಬುದಾಗಿ ಹೇಳಿದರಿಂದ, "ಯೀ ಸಹ್ಯಾದ್ರಿಗೆ ಆಗ್ನೇ ಭಾಗದಲ್ಲಿ ಯಿರ‍್ರುವ ಕಮಲಾಚಲಪರ್ವತಕೆ ಪ್ರತಿನಾಮಧೇಯವಾದ ದಕ್ಷಿಣ ಗೋವರ್ಧನಗಿರಿಯಲ್ಲಿ ವಾಸವ ಮಾಡಿ, ಕಲಿಯುಗದಲ್ಲಿ ಸಕಲಜನರನ್ನು ರಕ್ಷಣವ ಮಾಡಬೇಕೆಂ"ದು ಪ್ರಾರ್ಥಿಸಿ ಕಮಲಾದ್ರಿಗೆ ಸ್ವಾಮಿಯವರಂನ್ನು ಬಿಜ ಮಾಡಿಸಿಕೊಂಡು ಬಂದು, ಅಲ್ಲಿ ಸಕಲವಾದ ತೀರ್ಥ ಸಕಲವಾದ ಋುಷಿಗಳು ಸಹಾ ವಾಸವಂ ಮಾಡಿಕೊಂಡು, ಅಗಸ್ತ್ಯಮಹಾಮುನಿಶ್ವರರಂ ಸ್ವಾಮಿಯ ಆರಾಧನೆಯಂ ಮಾಡಿಕೊಂಡು

ಯಿರುವ ಕಾಲದಲ್ಲಿ, "ಯೀ ಪರ್ವತಕೆ ಕಮಲಾಚಲವೆಂಬ ಹೆಸ್ರು ಬಂದ ನಿಮಿತ್ಯವನ್ನು[>ವೇನು?]" ಯಂದು ಪ್ರಶ್ನೆಯಂ ಮಾಡಲಾಗಿ, "ಯೀ ಪರ್ವತಕೆ ಕಮಲಾಕಾರವಾದ ಅಷ್ಟದಳ ಉಂಟಾದ ಕಾರಣ ಕಮಲಾಚಲವೆಂಬ ಹೆಸ್ರು ಪ್ರಶಿದ್ಧವಾಯಿತ್ತು. ಯೀ ಅಷ್ಟದಳಕ್ಕೆ ವಿವರ ಯೇನು? ಅಂದರೆ ಪೂರ್ವದಿಗ್ಭಾಗದಲ್ಲಿ ತ್ರಿಯಂಬಕಾದ್ರಿಯಂಬ ದಳ, ಸೇವಕರ್‍ರಿಂಗೆ ಸಿದ್ಧಿ ಪ್ರಸಾದವಾಂತದ್ದು. ಯೀ ದಳವು ಶೇಷಾಕಾರವಾಗಿ ಯಿಹುದು. ಯೀ ಶೇಷನ ಶಿರಸ್ಸಿನಲ್ಲಿ ವೆಂಕಟರಮಣಸ್ವಾಮಿಯವರು ಪಾಂಡವರಿಗೆ ಪ್ರತ್ಯಕ್ಷ. ಯೀ ಶೇಷನ ನಾಭಿಯ್ಯ ಸ್ವಯಂ ವ್ಯಕ್ತ ವಿಘ್ನೇಶ್ವರ. ಯಿ ಶೇಷನ ಪ್ರಥಭಾಗದಲ್ಲಿ ವರಪ್ರಸಂನ್ನರಾದ ಪಾರ್ವತಿಯೊಂದಿಗೆ ಸೋಮೇಶ್ವರ. ಯಿ ಆಗ್ನೆಯ ಭಾಗದಲ್ಲಿ ಕುಮುದಾದ್ರಿಯಂಬ ದಳವಿಹುದು. ಯೀ ದಕ್ಷಿಣಭಾಗದಲ್ಲಿ ಶಂಬರಾದ್ರಿಯಂಬ ದಳವಿಹುದು. ನೈರುತ್ಯಭಾಗದಲ್ಲಿ ಗರುಡಾದ್ರಿಯೆಂಬ ದಳವಿರುವುದು. ವರುಣಭಾಗದಲ್ಲಿ ನೀಲಾದ್ರಿಯಂಬ ದಳವಿಹುದು. ಯೀ ವಾಯವ್ಯಭಾಗದಲ್ಲಿ ಪಲ್ಲವಾದ್ರಿಯಂಬ ದಳವಿಹುದು. ಕುಬೇರದಿಗ್ಭಾಗದಲ್ಲಿ ಮಂಗಳಾದ್ರಿಯಂಬ ದಳವಿಹುದು. ಯಿಶಾನ್ಯದಿಗ್ಭಾಗದಲ್ಲಿ ತುಂಗಾದ್ರಿಯಂಬ ದಳವಿಹುದು. ಯಿ ಅಷ್ಟ ದಿಕ್ಕುಗಳಲ್ಲಿಯು ಯೀ ಅಷ್ಟದಳಉ ಪ್ರಸಿದ್ಧವಾಗಿ ಯಿರುವದರಿಂದ ಕಮಲಾಚಲವೆಂಬ ಹೆಸ್ರು ಪ್ರಸಿದ್ಧವಾಯಿತು. ಯಿಂಥಾ ಕಮಲಾಚಲಪರ್ವತದಲ್ಲು ಅಗಸ್ತ್ಯಮಹಾಋಷೀಶ್ವರರು ಬಹುಕಾಲ ಸ್ವಾಮಿಯನ್ನು ಆರಾಧನೆಮಾಡಿಕೊಂಡು ಯಿದ್ದರು.

ಮುಂದೆ ಕಲಿಯುಗಉ ಹುಟ್ಟಲಾಗಿ ಕಲಿಯುಗದ ಆದಿಯಲ್ಲಿ ಪರೀಕ್ಷಿತರಾಯರು ಆರಾಧಿಸ್ತರು. ಯಿದು ಕೆಲವು ಕಾಲ ಸಂದ ಮೇಲೆ ಯಿರುವ ಮಗ ಜನಮೇಜಯರಾಯರು ಭೂಪ್ರದಕ್ಷಿಣವಂನ್ನು ಮಾಡಿಕೊಂಡು ಶತುಸ್ನಾನವನ್ನು ಮಾಡಿಕೊಂಡು ಬರುವಲ್ಲಿ, ಯೀ ಕಮಲಾಚಲಪರ್ವತ ಪ್ರಭಾವವಂನ್ನು ಕೇಳಿದಂತಾವರಾಗಿ ಪರ್ವತಾರೋಹಣವಂ ಮಾಡಿ, ಶ್ರೀಗೋಪಾಲಮೂರ್ತಿಯಂ ಸೇರಿ[>ವಿ]ಸಿ, ಯೀ ಗಿರಿಗೆ ಪೂರ್ವದಿಗ್ಭಾಗದಲ್ಲಿ ಯಿರುವ ಕೊಡಗಊರ ಸಂಸ್ಥಾನಕ್ಕೆ ಬಂದು, ಯೀ ರಮಣೀಯವಾದ ಸ್ತಳ ಯೀ ಕಾವೇರಿಗೆ ದಕ್ಷಿಣಭಾಗವಾಗಿದ್ದ ಕೇರಳ ದ್ರಾವಿಡ ಕರ್ನಾಟಗಳು ಸಮ್ಮಿಶ್ರವಾಗಿ ಯಿರುವಂತಾ ಸ್ಥಳವಾದ್ದರಿಂದಾ ಯೀ ಸ್ಥಳಕ್ಕೆ ತ್ರಿಕದಂಬಕಪುರವೆಂಬ ನಾಮವಂ ಮಾಡಿ, ಆಳಾಳನಾಥ ಪ್ರತಿನಾಮಧೇಯುವಾದ ವರದರಾಜಸ್ವಾಮಿಯವರ ದೇವಸ್ಥಾನವಂನ್ನು ಜೀರ್ನೋದ್ಧಾರವಂ ಮಾಡಿ, ತನ್ನ ಮಗನಾದ ಮಕುಟವರ್ಧನರಾಯರಂ ರಾಜ್ಯಪಾಲನವಂ ಮಾಡಿಕೊಂಡು ಯಿರುವಂತೆ ಮಾಡಿ, ಅವರು ದಿಳ್ಳಿನಗರಕ್ಕೆ ಹೋಗಲಾಗಿ, ಯೀ ಮಕುಟವರ್ಧನರಾಯರು ಕೆಲವು ಕಾಲ ಆಳಿದರು.

ಮುಂದೆ ಯಿವರ ಮಗ ರಾಘವೇಂದ್ರರಾಯರು, ಯಿವರ ಮಗ ಸಾರಂಗರಾಯರು ಮುಂತಾದವರು ಕಲಿಯುಗ ಆದಿಯಾಗಿ ವಿಕ್ರಮಶಕ ವರ್‍ರಿಗು ರಾಜ್ಯವಂ ಧರ್ಮದಲ್ಲಿ ಪರಿಪಾಲನವಂ ಮಾಡಿದರು. ಮುಂದೆ ವಿಕ್ರಮಾದಿತ್ಯರಾಯರು ತಮ್ಮ ಶಕ ವರ್‍ರಿಗು ಧರ್ಮದಲ್ಲಿ ರಾಜ್ಯಪಾಲನವಂ ಮಾಡಿದರು. ಆ ತದನಂತರ ಶಾಲಿವಾಹನ ಶಕದಲ್ಲು ಗೊಂಡೆ ಚೋಳರಾಯನ ಆಳಿಕೆಯಲ್ಲು ವರದರಾಜಸ್ವಾಮಿಯವರ ಗೋಪುರ ಮಂಟಪಂಗಳ ಜೀರ್ನೋದ್ಧಾರವಂ ಮಾಡಿ, ರಾಜ್ಯವಂ ಪರಿಪಾಲನವಂ ಮಾಡಿದನು. ಯೀ ತದನಂತರ ಭೋಜರಾಜ ಮುಂತಾದ ರಾಯರುಗಳು

ರಾಜ್ಯವನ್ನಾಳುವಲ್ಲಿ ಚತುರ್ದಿಕ್ಕುಗಳಿಗು ನಾಲ್ಕು ಮಂದಿ ಸಿಂಹಾಸನಾಧಿಪತಿಗಳ ಮಾಡಿ, ದಕ್ಷಿಣದೇಶದ ಸಿಂಹಾಸನಾಧಿಪತ್ಯವನ್ನು ವಿಜಯನಗರದ ರಾಯರಿಗೆ ನರಪತಿಯೆಂಬ ನಾಮವಂ ಕೊಟ್ಟು ದಕ್ಷಿಣದೇಶಕಧಿಪತಿಯಾಗಿ ಮಾಡಿದರು.

ಯೀ ರಾಯಪಟ್ಟ ಅರುವತ್ತೈದು ಪಟ್ಟದಲ್ಲಿ ಕೃಷ್ಣರಾಯ ತಂದೆ ನರಸಿಂಗರಾಯರ ದಿವಸ್ತಿದಲ್ಲಿ ನಿಂತ ರಾಜ್ಯ ೩೧೦೦೦೦೦೦೦ ಮೂವತ್ತೊಂದು ಕೋಟಿ. ಇವರ ಮಗ ಕೃಷ್ಣರಾಯರು ಸಾಣೂರ ತಿಮ್ಮಮಂತ್ರಿ ಸಹ ಸಾಧಿಸ್ತರಾಜ್ಯ ೫೦,೦೦೦೦೦೦ ಐವತ್ತು ಕೋಟಿ, ಉಭಯಂ ಯಂಬತ್ತೊಂದು ಕೋಟಿ ರಾಜ್ಯವಂನ್ನು ಧರ್ಮದಿಂದ ಪರಿಪಾಲನವಂ ಮಾಡಿಕೊಂಡು ಯಿರುವ ಕಾಲದಲ್ಲಿ, ಸಾಣೂರ ತಿಂಮ್ಮಮಂತ್ರಿ ಆಲೋಚನೆಯಿಂದ ಕೃಷ್ಣರಾಯರು ರಾಜ್ಯಕ್ಕೆ ನವಢಣಾಯಕರ ಮಾಡಿ, ಯೀ ಢಣಾಯಕರಿಗೆ ಜನ ೧ಕ್ಕೆ ವಂಬತ್ತು ವಂಬತ್ತು ಕೋಟಿ ರಾಜ್ಯವಂ ಹಂಚಿಕೊಡುವಲ್ಲಿ, ಯೀ ದಕ್ಷಿಣ ದೇಶದಲು ಸೋಮಂಣಢಣಾಯಕರಿಗೆ ಸೇರಿದ ಕಾರಣ ಯೀ ಢಣಾಯಕನು ಯೀ ದಕ್ಷಿಣದೇಶಕೆ ಸೇರಿದ ಉಂಮತ್ತೂರ್‍ರಿಗೆ ಬಂದು, ಅದನ್ನು ಸಂಸ್ಥಾನವಂ ಮಾಡಿ, ಅಲ್ಲಿ ನಂಜರಾಜವಡೆಯರನ್ನು ಯಿಟ್ಟು, ಯೀ ಢಣಾಯಕವಡೆರು ಯೀ ದಕ್ಷಿಣದೇಶಕೆ ಬಂದು ಗೋವರ್ಧನಕ್ಕೆ ಪ್ರತಿನಾಮಧೇಯವಾದ ಕಮಲಾಚಲಪರ್ವತಕ್ಕೆ ಬಂದು, ಸ್ವಾಮಿಯ ಸೇವೆಯಂ ಮಾಡಿ ತ್ರಿರಾತ್ರಿ ಅಲ್ಲಿ ವಾಸವಂ ಮಾಡುವ ಕಾಲದಲ್ಲಿ ಯಿವನಿಗೆ ಸ್ವಪ್ನವಾದ ಕಾರಣ ಸ್ವಪ್ನಾಭಿಪ್ರಾಯವನ್ನು ಮಂತ್ರಿಗಳ ಕೂಡ ಆಲೋಚಿಸಿ, ಯೀ ಸ್ವಪ್ನ ಪ್ರಕಾರಕ್ಕೆ ಆ ಕಮಲಾಚಲಕ್ಕೆ ಯರಡು ಸುತ್ತಿನ ಕೋಟೆಗೆ ಯೆಂಟು ಯೇಳು ಬಾಗಿಲು ಐದು ೫ ಯೀ ಗಿರಿಯಲ್ಲಿ ಅಷ್ಟ ತೀರ್ಥವಿಹುದು. ಯಿ ಹಂಸತೀರ್ಥದಲ್ಲಿ ಕಾಗೆ ಮುಳುಗಿ ಹಂಸಪಕ್ಷಿಯಾಯಿತು. ಯಿ ಮೇರೆಗೆ ರಾಜ್ಯವನ್ನು ಆಳಿಕೊಂಡು ಯಿರುವಲ್ಲಿ, ಶಖೆ ೫೨೦ ವರುಷ ಸಂದ ಮೇಲೆ ಯಿವರ ಭಾವಮೈದ ಚಂದಪ್ಪಢಣಾಯಕನು ಹಿಂಡಿ ಸಂಡಿಗೆ ನಿಮಿತ್ಯವಾಗಿ ಯಿಬ್ಬರಿಗೂ ಕಲಹ ಬಂದು, ಯೀ ಕೋಟೆಯಂನ್ನು ಹಲ್ಲಾಮಾಡಿದ್ದರಿಂದ, ಶತ್ರುವಶವಾಗಬಾರದೆಂಬದಾಗಿ ಯೀ ಢಣಾಯಕನು ಕಮರ್‍ರಿಗೆ ಬಿದ್ದು ಮೃತನಾಗಿ ಹೋದನು. ತದನಂತರದಲ್ಲು ಯಿ ಚಂದಪ್ಪಢಣಾಯಕನು ಕುಡಲೂರ ಸಂಸ್ಥಾನದ ತ್ರಿಕದಂಬಪುರದಲ್ಲಿ ಶಾಲಿವಾಹನ ಶಕ ವರುಷ ೬೪೯ ವರ್‍ರಿಗ್ಯೂ ಯಿವರ ವಂಶಸ್ತರು ಆಳಿದರು.

ಯಿಲ್ಲಿಂದ ಮುಂದೆ ಯಿವರ ವಂಶವು ನಷ್ಟವಾದ್ದರಿಂದ ಮುಂದೆ ಶಖೆ ೬೭೦ ವರುಷ ಆರಭ್ಯವಾಗಿ ದ್ರಾವಿಡದೇಶದಿಂದ ಗೊಂಡೆ ಚೋಳರಾಯನು ಬಂದು, ಸಂಸ್ಥಾನವನ್ನು ಕಟ್ಟಿಕೊಂಡು, ಶ್ರೀವರ[+ದ]ರಾಜಸ್ವಾಮಿಯವರ ನವರಂಗ ಕತ್ತಲು ಮಂಟಪ ಮುಂತಾದ್ದನ್ನು ಜೀರ್ನೋದ್ಧಾರವಂ ಮಾಡಿ, ಶಖೆ ವರುಷ ೭೧೦ ವರ್‍ರಿಗು ಆಳಿದನು. ಯಿಲ್ಲಿಂದ ಮುಂದೆ ಪರ್ವತರಾಯನು ೭೨೦ನೆ ವರುಷವರ್‍ರಿಗು ಆಳಿದನು. ಅಲ್ಲಿಂದ ಮುಂದೆ ಗೋವಿಂದರಾಯ ಅಹೊಬಳರಾಯ ಅಚ್ಚುತರಾಯ ವಿದ್ಯಾಧರಪಾತ್ರೆಯವರು ಸಹಾ ೮೮೦ ವರ್‍ರಿಗು ಆಳಿದರು. ಮುಂದೆ ಶಖೆ ೯೦೦ನೆ ವರ್‍ರಿಗು ಜಕ್ಕರಾಯರು ಆಳಿದರು. ಮುಂದೆ ಶಿವನಸಮುದ್ರದ ಮಾಧವರಾಯರು ಶಖೆ ೯೭೦ ವರ್‍ರಿಗು ಆಳಿದರು. ಮುಂದೆ ಶಖೆ ೧೦೦೧ ವರ್‍ರಿಗು ವೆಂಕಟಪತಿರಾಯರು ಆಳಿದರು. ಮುಂದೆ ಶಖೆ ೧೦೩೦ ವರ್‍ರಿಗೆ ವಸಂತರಾಯರು, ಯಿವರ ದಿವಸ್ತಲ್ಲಿ ತ್ರಿಯಂಬಕಪುರದಲ್ಲಿ ಗುರುಮೂರ್ತಿ ಕ್ರಿಯಾಶಕ್ತಿವಡೇರಿಂದ ತ್ರಿಯಂಬಕ ಪ್ರತಿಷ್ಠೆ. ಈ ರಾಯನಿಂದ ತೆರಕಣಾಂಬಿ ಗೋಪಾಲಸ್ವಾಮಿ

ಪ್ರತಿಷ್ಠೆ. ಯಿವನ ಆಳಿಕೆ ಶಕೆ ೧೦೫೦ ವರ್‍ರಿಗೆ ಆಳಿದನು. ಯಿಲ್ಲಿಂದ ಮುಂದೆ ಶಖೆ ೧೦೮೦ನೆ ವರ್‍ರಿಗು ಸೋಮಶೇಖರರಾಯರು ಆಳಿದರು. ಯಿದಕ್ಕೆ ತತ್ಪೂರ್ವ ಬಹುಕಾಲದಲ್ಲಿ ಕಮಲಾದ್ರಿಗೆ ಪೂರ್ವದಳವಾದ ಹುಲಗನಮುರಡಿ ವೆಂಕಟರಮಣಸ್ವಾಮಿಯುವರ ದೇವಸ್ಥಾನವನ್ನು ಜೀರ್ನೋದ್ಧಾರಗೊಂಡು ರಾಮದೇವರು ಸಹಾ ಜೀರ್ನೋದ್ಧಾರ ಮಾಡಿದರು. ೧೦೮೦ರ್‍ರಿಂದ ಮುಂದೆ ಶಖೆ ೧೦೮೧ ವರುಷದಲ್ಲಿ ಆನೆಗೊಂದಿರಾಯರ ವಂಶಸ್ತರು ಸೋಮಶೇಖರರಾಯರ ಮಗ ಕೃಷ್ಣರಾಯರ ದಿವಸದಲ್ಲಿ ಯಿವರ ಅಪ್ಪಣೆ ಮೇರೆಗೆ ಅಂತಪ್ಪರಸರು ಕಂದಾಚಾರದ ಪ್ರತಿಗೆ ನಿರೂಪ ತೆಗೆದುಕೊಂಡು ಯೀ ಸ್ಥಳಕೆ ಬಂದರು. ತದನಂತರ ತೆರಕಣಾಂಬಿ ಅಠವಣಿ ಪ್ರತಿಗೆ ಸೂರ್ಯನಾರಾಯಣದೇಉಗಳು ಬಂದರು. ತದನಂತರ ಅಪ್ಪಾಜಿ ನಂಜೈಯ್ಯನವರು ನಿರೂಪ ತೆಗೆದುಕೊಂಡು ಬಂದರು. ತದನಂತರ ರಾಯಸ್ತ ವೆಂಕಟೈಯನವರು ಬಂದರು.

ಯೀ ಶಖೆ ೧೦೮೧ರಿಂದ ಮುಂದೆ ವಿಷ್ಣುವರ್ಧನರಾಯರ ಆಳಿಕೆಯಲ್ಲು ಪಂಚನಾರಾಯಣ ಪ್ರತಿಷ್ಠೆಗೆ ವಳಿತವಾದ ವಿಜಯಾಪುರದ ವಿಜೆನಾರಾಯಣಸ್ವಾಮಿ ಪ್ರತಿಷ್ಠೆ, ಯೀ ಆಳಿಕೆ ಶಖೆ ೧೧೧೦ ವರ್‍ರಿಗೂ ಆಳಿದರು. ಯಿಲ್ಲಿಂದ ಮುಂದೆ ಶಖೆ ೧೨೮೦ ವರಿಗು ರಾಜ್ಯ ಅತಂತ್ರವಾಗಿ ಹಟಿ ಕೊಟ್ಟವಾಗಿ, ಚಂದಪ್ಪಬೇಡನು ಕಟಿಕೊಂಡು ತನ್ನ ಸ್ವಾಧೀನವಾದ ಶೀಮೆ ಅಗ್ರಹಾರ ದೇವಸ್ತಾನವನ್ನು ಕಟ್ಟಿಕೊಂಡನು. ಯಿಲ್ಲಿಂದ ಮುಂದೆ ಉಂಮ್ಮತ್ತೂರರಾಯರ ವಂಶಸ್ತನಾದ ದೇವರಾಯನು ರಾಜ್ಯವಂನ್ನು ಹೊಡದು ಕಟಿಕೊಂಡು ಶಖೆ ೧೩೪೦ ವರ್‍ರಿಗು ಆಳಿದರು. ತೆರಕಣಾಂಬಿ ಮೂಲಸ್ಥಾನದ ದೇವಸ್ಥಾನವನ್ನು ಜೀರ್ನೋದ್ಧಾರವಂ ಮಾಡಿದರು. ಯಿಲ್ಲಿಂದ ಮುಂದೆ ಯೀ ವಂಶಸ್ತರಾದ ನಂಜರಾಜರಾಯರು ಶಖೆ ೧೩೮೪ರ ವರ್‍ರಿಗು ಆಳಿದರು. ಯಿಲ್ಲಿಂದ ಮುಂದೆ ಯಿವರ ವಂಶಸ್ತ ಗೋವರ್ಧನರಾಯರ ಆಳಿಕೆ ಶಖೆ ೧೪೧೭ರ ವರ್‍ರಿಗು ಆಳಿದರು. ಮುಂದೆ ಆನಂದ ಸಂವತ್ಸರದ ಫಾಲ್ಗುಣ ಶು ೫ ಶುಕ್ರವಾರ ಕೃಷ್ಣರಾಯರು ರಾಜ್ಯವಂನ್ನು ಕಟ್ಟಿಕೊಂಡು ಯಿವರ ಅಳಿಯ ಜಗದೇವರಾಯರಿಗೆ ಮುಖಾಶಿಯಾಗಿ ಕೊಟ್ಟದ್ದರಿಂದ, ಯೀ ಜಗದೇವರಾಯರು ಯೀ ಆರಭ್ಯ ಶಕೆ ೧೪೨೮ರ ವರ್‍ರಿಗು ರಾಜ್ಯವಾಳಿ ಯೀ ಮಧ್ಯದಲ್ಲಿ ೧೪೩೨ನೆ ವರುಷದಲ್ಲಿ ತ್ರಿಯಂಬಕಪುರದ ತ್ರಿಯಂಬಕೇಶ್ವರ ದೇವರಿಗೆ ಪಡಿತರ ದೀಪಾರಾಧನೆ ಬಗ್ಯೆ ಗ್ರಾಮ ಭೂಮಿಗಳ ಸಹಾ ಬಿಟ್ಟು, ಧರ್ಮದಿಂದ ೧೪೯೨ರ ವರ್‍ರಿಗೆ ಆಳಿದನು. ಯಿಲ್ಲಿಂದ ಮುಂದೆ ಪ್ರಮೋದೂತ ಸಂವತ್ಸರದ ಆರಭ್ಯ ಶಕೆ ೧೫೧೫ರ ವರ್‍ರಿಗೆ ಯಿಂಮ್ಮಡಿ ಜಗದೇವರಾಯ ಆಳಿದನು. ಯಿಲ್ಲಿಂದ ಮುಂದೆ ಅವರ ವಂಶಕ್ಕೆ ಮಕ್ಕಳು ಯಿಲ್ಲದೆ ಯಿದ್ದು. ಯಿವರ್‍ರಿಗು ಬೆಂನ್ನು ಫಣಿಯಾಗಿ ವೇದನೆಯನ್ನು ಸಹಿಸಲಾರದೆ ಬದುಕೂದು ಯಿಲ್ಲವೆಂದು ತಿಳಿದು ತಾನು ಗಜಾರಂಣ್ಯಕ್ಷೇತ್ರಕೆ ಹೋಗಬೇಕೆಂದು ಯೋಚಿಸಿ, ಉಭಯ ಕಾವೇರಿ ಮಧ್ಯದ ಶ್ರೀರಂಗಪಟ್ಟಣದ ಸಂಸ್ಥಾನದ ಬೀಗಮುದ್ರೆ ಬೊಕ್ಕಸ ಮುಂತಾದ್ದನ್ನು ಮೈಹಿಶೂರ ಸಂಸ್ಥಾನದ ದೊರೆತನ ಮಾಡುವ ರಾಜವಡೆರೈಯನವರ್‍ರಿಗೆ ಯೀ ಸಉಮ್ಯ ಸಂವತ್ಸರದ ಕಾರ್ತಿಕ ಬಹುಳ ೧೦ ಮಂಗಳವಾರ ದಿವಸ ಕೊಟ್ಟುಬಿಟ್ಟು ಹೊರಟುಹೋದರು. ಯೀ ಆರಭ್ಯ ವರುಷ ೯ ಧೋರಿತನಾ ಮಾಡಿದರು.

ಯಿಲ್ಲಿಂದಾ ಮುಂದೆ ಯಿವರ ಮಗ ಯಿಮ್ಮಡಿ ರಾಜವಡೆಯರ ಆಳಿಕೆ ಶಖೆ ೧೫೭೫ ಯೀ ವರ್‍ರಿಗ್ಯೆ ಯಿವರ ಧೊರೆತನ ೨೩ ವರುಷ ಆಳಿದರು. ಯಿವರ ಕೊಮಾರ್‍ರು ಯಿಮ್ಮಡಿ ರಾಜವಡ್ರೇರ್‍ರು ೨ ವರುಷಕ್ಕೆ ಶಖೆ ವರುಷ ೧೫೭೭ರ ವರೆಗೆ ಆಳಿದರ್‍ರು. ಯಿಲ್ಲಿಂದಾ ಮುಂದೆ

ನಳೂರಲ್ಲಿ ಯಿದ್ದ ಕಂಠೀರವ ನರಸರಾಜ ವಡೆಯರವರ್‍ರು ಯಿಪ್ಪತ್ತುಮೂರ್‍ರು ವರುಷಕ್ಕೆ ಶುದ್ಧ ಶಖೆ ೧೬೦೦ ಆಳಿದರ್‍ರು. ಯಿಲ್ಲಿಂದ ಮುಂದೆ ದೊಡ್ಡ ದೇವರಾವಜ ವಡೆರ್‍ರ ಆಳಿಕೆ ೧೪ ವರುಷ. ತದನಂತರದಲ್ಲಿ ಯಿವರ ಕೊಮ್ಮಾರ್‍ರು ಚಿಕ್ಕದೇವರಾಯರ ಆಳಿಕೆ ವರುಷ ೩೩ಲ್ಲಿ, ಯೀ ತೆರಕಣಾಂಬಿ ಶೀಮೆಯಲ್ಲಿ ಮಾಡಿದ ಅಗ್ರಹಾರ ದೇವಸ್ಥಾನಗಳು ಅಪ್ರತಿಪರವಾಲು ದೇವರ ಪ್ರತಿಷ್ಠೆ ಪರಾಭವ ಸಂವತ್ಸರದಲ್ಲು ಮಾಡಿ, ಯೀ ದೇವಸ್ಥಾನಕ್ಕೆ ಬಿಟ್ಟ ಗ್ರಾಮ ೩೪ಕ್ಕೆ, ಹೆಚ್ಚು ಗ್ರಾಮ ೨ ಮೂರ[>ಎರಡು] ಗ್ರಾಮ ೩೬ಕ್ಕೆ ರೇಖೆ ಲಾಗ ೪೨೧೩॥೩॥೦ಕ್ಕೆ, ಹುಟ್ಟುವಳಿ ಲಾಗ ೩೯೨॥೧॥ ೦ ಅಗ್ರಹಾರ ಪರಿಧಾವಿ ಸಂವತ್ಸರದಲ್ಲು ಯಾವತ್ತು ದೇವನಗರದ ಅಗ್ರಹಾರ ಯಿದಕ್ಕೆ ಬಿಟ್ಟ ಗ್ರಾಮ ೩೩, ಯಿಂನ್ನು ಬ್ರಾಹ್ಮಣರಿಗೆ ದೇವರಿಗೆ ಸಹಾ ಗ್ರಾಮ ಭೂಮಿ ಮುಂತಾದ್ದು ಬಿಟ್ಟು ಯೀ ದೇವಸ್ಥಾನ ಅಗ್ರಹಾರ ಮುಂತಾದ ಸಂರಕ್ಷಣಾರ್ಥವಾಗಿ ವಿಜಯಾಪುರದ ಕೋಟೆಯಂನ್ನು ಹಾರಿಸಿ, ದೇವಬ್ರಾಹ್ಮಣ ಪರಿಪಾಲನವನ್ನು ಮಾಡಿಕ್ಕೊಂಡು, ರಾಜ್ಯವನಾಳಿದ ವರುಷ ೩೩. ಯಿಲ್ಲಿಂದಾ ಮುಂದೆ ಯಿವರ ಕೊಮಾರ್‍ರು ಕಂಠೀರವ ನರಸರಾಜವಡೆರವರು ಆಳಿದ ವರುಷ ೪, ಇವರ ಕೊಮಾರ್‍ರು ಕೃಷ್ಣರಾಜವಡೇರವರು ಆಳಿದ ವರುಷ ೩೦. ಯೀ ತರುವಾಯ ಚಾಮರಾಜವಡೇರವರು ಆಳಿದ ವರುಷ ೨.

ಯೀ ತರುವಾಯ ಕೃಷ್ಣರಾಜವಡೆರು ಆಳಿದ ವರುಷ ೩೦ ಸಂ।ದ ಶಾಲಿವಾಹನ ಶಕ ವರುಷ ೧೬೮೦ ಸರ್ವಬಹುಧಾನ್ಯ ಸಂವತ್ಸರದಲ್ಲಿ ಯೀ ಕೃಷ್ಣರಾಜವಡೇರ್‍ರ ಆಳಿಕೆಯಲ್ಲು ಹೈದರು ನಾಯಕರ್‍ರು ದಳವಾಯಿ ಕರ್‍ರುಚೂರಿ ನಂಜರಾಜೈಯ್ಯನವರ ಹವಾಲಿನಲ್ಲಿ ಶೀಮೆ ಯಾವತ್ತನ್ನು ಕಟ್ಟಿಕೊಂಡು, ನಂಜರಾಜೈಯ್ಯನವರಿಂದ ಹೈದರಲಿಖಾನಯಂಬ ಹೆಸರ್‍ರು ಮಾಡಿಕೊಂಡು, ಶ್ರೀರಂಗಪಟ್ಟಣಕ್ಕೆ ಠಾಣ್ಯ ಹಾಕಿಕೊಂಡು, ಸಕಲ ವಿಚಾರಣೆಯಂನ್ನು ತಾನೆ ಮಾಡುತ್ತ ಯಿರ್‍ರುವ ಕಾಲದಲ್ಲಿ, ಯೀ ದೊರೆತನಾ ಮಾಡುತ್ತ ಯಿದ್ದ ಕೃಷ್ಣರಾಜವಡೆರೈಯ್ಯನವರ್‍ರು ಸ್ವರ್ಗಸ್ಥರಾಗಲಾಗಿ, ಯೀ ತದನಂತರದ ಯಿವರ ಮಗ ನಂಜರಾಜ ವಡೆಯರ್‍ರಿಗೆ ಪಟ್ಟವಂ ಕಟ್ಟಿ, ರಾಜ್ಯದ ಮೇಲು ವಿಚಾರವನ್ನು ಮಾಡುತ್ತ ಯಿರಲಾಗಾ, ಯೀ ನಂಜರಾಜವಡೇರ್‍ರು ೨ ಯರಡು ವರುಷಕ್ಕೆ ಸ್ವರ್ಗಸ್ಥನಾಗಲಾಗಿ, ಯಿರುವ ತಮ್ಮನಿಗೆ ಪಟ್ಟವಂ ಕಟ್ಟಲಾಗಿ, ಅವರ್‍ರು ಯರಡು ವರುಷದ ಪಟ್ಟದಲ್ಲು, ಹೈದರಲ್ಲಿಖಾನ ಬಹದರವರ್‍ರು ಆರ್‍ರುಕಾಡು ದಂಡಿಗೆ ಹೋಗಿ, ಶೋಭಕೃತ್ತ ಸಂವತ್ಸರದಲ್ಲು ಆರಕಾಡುದಂಡಿನಲ್ಲಿ ಹೈದರಲಿಖಾನರವರ್‍ರು ದೈವಾಧೀನರಾಗಿ ಹೋದ ಕಾರಣ, ಯಿವರ ಮಗ ಟೀಪುಸುಲತಾನರವರು ಬಂದು ಶ್ರೀರಂಗಪಟ್ಟಣದ ಸಂಸ್ಥಾನದ ಪಟ್ಟಕ್ಕೆ ಚಾಮರಾಜವಡೇರಂನ್ನು ಯಿರ್‍ರಿಶಿಕೊಂಡು, ತಾನು ರಾಜ್ಯ ವಿಚಾರಣೆ ಮಾಡುತ್ತ ಯಿದ್ದಲ್ಲಿ ಆನಂದ ಸಂವತ್ಸರದಲ್ಲು ಚಾಮರಾಜವಡೇರವರು ಸ್ವರ್ಗಸ್ಥರಾದರ್‍ರು.

ಆ ತರುವಾಯ ಯಿವರ ಮಗನಿಗೆ ಪಟ್ಟವನ್ನು ಕಟ್ಟದೆ ಸುಲತಾನರ್‍ರು ತಾವೇ ರಾಜ್ಯದ ವಿಚಾರಣೆ ಮಾಡಿಕೊಂಡು ಯಿರುವಲ್ಲಿ, ಸಿದ್ಧಾರ್ಥಿಸಂವತ್ಸರ ಚೈತ್ರ ಶು ೩೦ ಸ್ಥಾರವಾರ್‍ರು ಚಾತ್ತುಗ್ಗ್ರಹಾಯೋಗದಲ್ಲು ಕುಂಪಣಿ ಸರಕಾರದಿಂದ ಠಾರಾಗಿ ಹೋಗಿ ಕಾರಣ ಸಂಸ್ಥಾನ ಯಾ ಕುಂಪಣಿ ಸರಕಾರದ ಹವಾಲಾದ್ದರಿಂದ, ಯಿಮ್ಮಡಿ ಚಾಮರಾಜ ವಡೆಯರ ಕೊಮಾರ್‍ರು ಮಹಾರಾಜ

ಶ್ರೀಕೃಷ್ಣರಾಜವಡೆಯರ್ರೈಯ್ಯನವರಿಗೆ ಕುಂಪಣಿ ಹವಲ್ಲಿನಲ್ಲಿ ಪಟ್ಟವಂನ್ನು ಕಟ್ಟಿಕೊಂಡು ರಾಜ್ಯವನ್ನು ಆಳುತ್ತಾ ಯಿಧಾರ್‍ರ್ರ. ಯೀ ತೆರಕಣಾಂಬಿ ಶೀಮೆಯು ಮೈಹಿಶೂರ್‍ರು ಸಂಸ್ಥಾನದತ್ತಾಯ್ಕಿ ಆಗಿಯಿದೆ. ಆ ಬಳಿಕಾ ಶಾಲಿವಾಹನ ಶಖೆ ೧೭೨೩ ವರುಷ ಸಂದ್ದ . . . .

❖❖

೨೯
ಬೆಳಗುತ್ತಿ ಅರಸುಗಳ ವಂಶಾವಳಿ ವಿವರಾ : ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೦

ಶಾಲಿವಾಹನ ಶಕ ವರುಷ ೧೨೫೮, ಧಾತುಸಂವತ್ಸರದಾ ವೈಶಾಖ ಶು ೭ ಆದಿತ್ಯವಾರ ವಿಜಯನಗರದಲ್ಲು ರಾಯಸಿಂಹಾಸನಕ್ಕೆ ಹರಿಹರ ಮಹಾರಾಯರವರಿಗೆ ಪಟ್ಟವಾಯಿತು. ಯಿವರ ಮಗ ದೇವರಾಯರು.

ಯೀ ದೇವರಾಯರ ಮಗಳ ಮಗ ಚಲುವರಂಗಪ್ಪನಾಯ್ಕರು. ಯಿವರು ಆನೆಗೊಂದಿಯಿಂದ ಅಮರಮಾಗಣಿಯಾಗಿ ಅಪ್ಪಣೆ ತೆಗೆದುಕೊಂಡು ಫವುಜು ಮಂದಿ ಮುಂತಾಗಿ ಸಹ ಸಿರಿಗೆರೆ ಬಿಳ್ಳಿನಾಡ[>ಬೆಳೆನಾಡು]ವಳಗಣ ತುಂಗಭದ್ರಾತೀರ ದಿಡುಗೂರು ಕಿಲ್ಲೆದಲ್ಲು ಶಕ ಶಾಲಿವಾಹನ ೧೨೮೦ ವಿಳಂಬಿ ಸಂವತ್ಸರದಲ್ಲು ಬಂದು ಠಾಣ್ಯ ಹಾಕಿದರ್‍ರು.

ಚಲುವರಂಗಪ್ಪನಾಯ್ಕರು ಶಕ ೧೨೮೩ ಪ್ಲವಂಗ ಸಂ।ದಲ್ಲಿ ದಿಡುಗೂರು ಪಟ್ಟಣದಿಂದ ಹೊನ್ನಳ್ಳಿ ಬಳಿಯ ಕಾಸಿ ಬೇಟೆ ನಿಮಿತ್ಯ ಸ್ವಾರಿ ಬಂದು ಯಿದ್ದಲ್ಲಿ, ಯರಳೆಯು ಹೊನ್ನಕಾಲನ್ನು[>ನು] ಯರಡು ಲಥಾಯಿ ಮಾಡಿ, ಯರಳೆಯು ಹೊನ್ನೆಹಾಲನ್ನು[>ನ] ಕೊಂದದರಿಂದ ಮಹಾಸಂತೋಷಂಬಟ್ಟು "ಯೀ ಸ್ಥಳ ಗಂಡುಭೂಮಿ, ಯಿಲ್ಲಿ ಕೋಟೆ ಕಟ್ಟಿಸಬೇಕು"ಯಂಬದಾಗಿ ಮಾಡಿ, ಪ್ರಾಕು ಯೀ ಸ್ಥಳ ಸಣ್ಣ ಹಳ್ಳಿ ಆಗಿತ್ತು. ಪುನಹಾ ಹೊನ್ನಳಿಯಂಬುದಾಗಿ ದೊಡ್ಡದಾಗಿ ಕೋಟೆ ಕಟ್ಟಿದನು. ಯೀ ಸಂವತ್ಸರದ ವೈಶಾಖ ಶುದ್ಧ ಸೋಮವಾರ ಆರಂಭ ಮಾಡಿದರು; ಕೋಟೆ ಮುಗದ್ದು ಶಕ ಶಾಲಿವಾಹನ ೧೨೮೭ನೇ ವಿಶ್ವಾವಸು ಸಂ। ವರಿಗೆ, ವರುಷಾ ೫ಕ್ಕೆ ಕೋಟೆ ಕೆಲ್ಸವಾಯಿತ್ತು. ಯೀ ಚಲುವರಂಗಪ್ಪರಾಯರು ಹೊನ್ನಾಳಿ ಕಿಲ್ಲೆದ ಅಧಿಕಾರಮಾಡಿದ್ದು ಶಕ ೧೨೮೩ ಪ್ಲವ ಆರಭ್ಯ ಶಕ ಶಾಲಿವಾಹನ ೧೩೦೩ನೇ ದುರ್ಮುಖಿ ವರಿಗೆ ವರುಶ ೨೦ ಆಳಿದರ್‍ರು.

ಚಲುವರಂಗಪ್ಪನಾಯ್ಕನ ಮಗಾ ಮಾರಭೂಪರಾಯರ್‍ರು ಆಳಿದ ವರುಷ ಶಕ ೧೩೦೪ ದುಂದುಭಿ ಸಂ। ಲಾಗಾಯಿತು. ಆಳಿದ ವರುಷ ೩೪. ಯಿಲ್ಲಿಗೆ ಶ ೧೩೩೭ನೆಯ ಮನ್ಮಥ ಸಂವತ್ಸರ.

ಚಲುವರಂಗಪ್ಪನಾಯ್ಕರ ಮೊಮ್ಮಗ ಶೂ[>ಮಾ]ರಭೂಪರಾಯರ ಮಗ ದೇವರಾಯರ್‍ರು, ಯಿವರು ಆಳಿದ ವರುಷ ಶಕ ೧೩೩೮ನೇ ದುರ್ಮುಖಿ ಸಂವತ್ಸರದಾರಭ್ಯ ಶಕ ೧೩೫೨ನೆ ಸಾಧಾರಣ ಸಂ.ವರಿಗೆ, ವರುಷ ೧೫.

ಯೀ ದೇವರಾಯರ ಮಗ ಅರಿಮಾಧವರಾಯರು ಆಳಿದ ವರುಷ ಶಕ ೧೩೫೩ನೆ ವಿರೋಧಿ ಕೃತ ಲಾಗಾಯಿತು ಶಕ ೧೩೮೧ ಪ್ರಮಾಧೀ ಸಂವತ್ಸರ ವರಿಗೆ, ವರುಷಾ ೨೯.

ಅರಿಮಾಧವರಾಯರ ಮಗ ವೆಂಕಟಾದ್ರಿರಾಯರು ಶಕ ೧೩೮೨ ಆನಂದ ಸಂ। ಆರಭ್ಯ ಶಕ ೧೪೮೯ ಪ್ಲವಂಗ ಸಂ। ವರಿಗೆ, ವರುಷ ೨೮ ಆಳಿದರು. ಯೀ ವೆಂಕಟಾದ್ರಿನಾಯ್ಕರು ಕಲುಬೆಗುಡ್ಡದ ಬಳಿಯ ಬೆಟ್ಟನಗುಡ್ಡದ ಕೆಲವ್ಲೇ[>ದಲೆ] ಯಿದ್ದ ಬೇಡದ [>ರ] ಚನ್ನಾಯ್ಕಿನ ಕೊಂದುದರಿಂದಾ ಬಲ್ಲಾಳೆಯಂಬ ಬಿರುದು ಪಡದು ಹಳದಿ ನಿಶಾನಿಯನ್ನು ಸಂಪಾದಿಸಿದರು.

ಯೀ ವೆಂಕಟಾದ್ರಿರಾಯನ ಮಗರೋಮಕೋಟಿರಾಯ ಶಕ ೧೪೧೦ನೆಯ ಕೀಲಕ ಸಂವತ್ಸರ ಆರಭ್ಯ ಶಕ ೧೪೧೨ನೆಯ ಸಂ।ವರಿಗೆ, ವರುಷ ೩ ಆಳಿದರು.

ಶಕ ಶಾಲಿವಾಹನ ೧೪೧೩ ವಿರೋಧಿಕೃತು ಸಂ।ರಲ್ಲು ವಿಜಯನಗರ ಸಿಂಹಾಸನಕ್ಕೆ ತುಳುವಾನ್ಯೆಯದ ಅರಸುಗಳು ಬಂದದರಿಂದ . . . . ಪ್ರಹುಡರಾಯರು ಶಿರೆಗೆರೆ . . . . ಬೆಳೆನಾಡು ವಳಗಣ ಹೊನ್ನಾಳು ಸೀಮೆ ಕಿಲ್ಲೆ ಮುಂತಾಗಿ ತಮ್ಮ ಸ್ವಾಧೀನವ ಮಾಡಿಕೊಂಡು . . . . ಸದ್ರಿ ರೋಮಕೋಟಿರಾಯರ [>ರ]ವರಿಗೆ ಬೆಳಗುತ್ತಿಗ್ರಾಮವನ್ನು ಅಮರವನ್ನು ಕೊಟ್ಟರು. ಹೊನ್ನಾಳಿಯ ತಾಲೂಕಲ್ಲು ಯಿದ್ದರು.

ಶಕ ೧೨೮೩[>೧೪೦೦]ನೆಯ ಪ್ಲವ ಸಂ।ರದ ಆರಭ್ಯ ಶಕ ೧೪೧೨ ಸಾಧಾರಣ ಸಂ।ವರಿಗೆ ಆಳಿದ ವರುಷ ೧೨[>೨೯].

ಯಿದರ ಮೇಲೆ ಬೆಳಗುತ್ತಿಯಲ್ಲು ಯಿದ್ದ ರೋಮಕೋಟಿರಾಯರ್‍ರು ಶಕ ೧೪೧೩ನೇ ವಿರೋಧಿಕೃತು ಲಾಗಾಯಿತು ಶಕ ೧೪೩೭ ಯಿವ [>ಯುವ] ಸಂ. ವರಿಗೆ ಯಿದ್ದರು. ಆಳಿದ ವರುಷ ೨೫.

ಯಿವರ ಮಗ ಯಲಣ್ಣನಾಯ್ಕನು ಯಿದ್ದ ವರುಷಾ ಶಕ ೧೪೩೮ ಧಾತು ಸಂ। ಆರಭ್ಯಾ ೧೪೭೨ ಸಾಧಾರಣ ವರಿಗೆ, ವರುಷ ೩೫.

ರೋಮಕೋಟಿರಾಯರ ಮಗ ಯಲಣ್ಣನಾಯ್ಕರ ಮಗಾ ದಾಸಪ್ಪನಾಯ್ಕರು ಆಳಿದ ವರುಷಾ ಶಕ ೧೪೭೩ನೆಯ ವಿರೋಧಿಕೃತ ಲಾಗಾಯಿತು ಶಕ ೧೪೮೬ ರಕ್ತಾಕ್ಷಿ ಸಂ। ವರಿಗೆ, ಅಂತೂ ಜನ ೩ಕ್ಕೆ ವರುಷ ೭೪. ಯೀ ಸಂವತ್ಸರದಲ್ಲು ವಿಜಯನಗರದಲ್ಲು ಅಳಿಯ ರಾಮರಾಯರ್‍ರು ಮೃತವಾದ್ದರಿಂದ ರಾಯರ ಸಂಸ್ಥಾನ ನಿಂತಿತು.

ಪುನಹ ಬೆಳಗುತ್ತಿ ಘಾಸ[>ದಾಸ]ನಾಯ್ಕರು ಶಕ ೧೪೮೭ ಕ್ರೋಧನ ಸಂ। ಆರಭ್ಯಾ ಶಕ ೧೪೯೩ನೇ ಪ್ರಭಾ[>ವಿರೋಧಿ]ಕೃತ ವರಿಗೆ ವರುಷ ೭ ಯೇಳು ವರುಷವನು ಹೊನ್ನಳ್ಳಿಯನ್ನು ಠಾಣ್ಯ ಹಾಕಿಕೊಂಡು ಆಳಿದ್ರು. ಶಕ ೧೪೯೪ ಅಂಗೀರಸ ಸಂ। ರದಲ್ಲು ತರಿಕೆರೆ ಹನುಮಪ್ಪ ನಾಯ್ಕರಿಗೂ ಯಿವರಿಗೂ ನ್ಯಾಯ ಬಂದುದರಿಂದಾ ಬಂಕಾಪುರದ ರಂಗಪ್ಪರಾಜಗೆ ಹೊನ್ನಾಳಿ

ಕಿಲ್ಲೆವನ್ನು ಕೊಟ್ಟು, ಯಥಾ ಪ್ರಕಾರ ದಾಸಪ್ಪನಾಯ್ಕರು ಬೆಳಗುತ್ತಿಗೆ ಹೋದರು. ಮನಹಾ ಬೆಳಗುತ್ತಿಯಲ್ಲು ಯಿದ್ದರು.

ದಾಸಪ್ಪನಾಯಕರ ಮಗ ವೆಂಕಟಪ್ಪನಾಯಕರು ಶಕ ೧೪೯೪ನೇ ಅಂಗೀರಸ ಸಂ। ಆರಭ್ಯಾ ಶಕ ೧೫೧೯ನೇ ಹೇವಳಂಬಿ ಸಂ. ವರಿಗೆ ವರುಷ ೨೫.

ಶಕ ೧೫೨೦ ವಿಳಂಬಿ ಆರಭ್ಯಾ ಶಕ ೧೫೩೨ನೇ ಸಾಧಾರಣ ಸಂ. ವರುಷ ೧೨. ಯೀತನ ಮಗ ತಿಮ್ಮಪ್ಪನಾಯಕ, ಯಿತನ ತಮ್ಮ ವಿರೋಧಿಕೃತ ಸಂ ಶಕ ೧೫೩೩ನೆ ಆರಭ್ಯಾ ದುಂದುಭಿ ಸಂ. ಶಕ, ೧೫೪೪ರ ವರೆಗೆ, ಆಳಿದ ವರುಷ ೧೨.

ಯೀತನ ತಮ್ಮ ದೊಡ್ಡಪ್ಪನಾಯ್ಕರ್ರೂ ಶಕ ೧೫೬[>೪]೪ನೆ ರುದಿರೋದ್ಗಾರಿ ಸಂ ಆರಭ್ಯ ಶಕ ೧೫೬೪ ಚಿತ್ರಭಾನು ಸಂ।ವರಿಗೆ. ವರುಷ ೨೦.

ಸದ್ರಿ ವೆಂಕಟಪ್ಪನಾಯಕರ ಮಗ ವ ಸೋಮಪ್ಪನಾಯಕರ ಮಗ ನರಸಪ್ಪನಾಯ್ಕರು ಶಕ ೧೫೬೫ ಸ್ವಭಾನು ಸಂ। ಆರಭ್ಯ ಶಕ ೧೫೮೯ ಪ್ಲವಂಗದ ವರಿಗೆ, ವರುಷ ೨೫.

ಸದರಿ ತಿಮ್ಮಪ್ಪನಾಯ್ಕರ ಮಗ ವೆಂಕಟಪ್ಪನಾಯ್ಕ ಶಕ ೧೫೯೦ನೇ ಕೀಲಕ ಸಂ। ಆರಭ್ಯ ಶಕ ೧೬೨೯ ಸರ್ವಧಾರಿ ಸಂ। ವರಿಗೆ ವರುಷ, ೪೦.

ಶಕ ೧೬೩೦ನೇ ವಿರೋಧಿ ಲಾಗಾಯಿತು ಯೀತನ ಮಗ ತಿಮ್ಮಪ್ಪನಾಯ್ಕ ಪಟ್ಟ ಮಾಡಿಕೊಂಡು ಯಿರೊ ವರುಷ ೫೬. ಶಕ ವರುಷ ೧೬೮೪ ಚಿತ್ರಭಾನು ಸಂವತ್ಸರ.

ಯೀ ಪ್ರಕಾರ ಗ್ರಾಮ ಯಿನಾಮು ಉಂಡುಕೊಂಡು, ನಗರದ ಅರಸುಗಳು ಮೊಗಲರು ಮುಂತಾಗಿ ಕರಿಶಿದರೆ ತೆಗೆದುಕೊಂಡರು. ಲಢಾಯದ ರೊಕದಲ್ಲಿಯನಲು ಕೋಟೆ ಜನ ೧೦೦ ಹೋಗುವದು. ಯೀ ಜನಕ್ಕೆ ಜನರ ಸರದಾರಗೆ ಅಲ್ಲಿಯ ಚಂದಿವ್ಸ ಯಿರುತ್ತಾರೆ. ಸಂಬಳವನ್ನು ಕೊಡುವರ್ರು. ಯೀ ಪ್ರಕಾರ ಯಿದ್ದ ಜನ ೬ ರಾ. ಬೆಳಗುತ್ತಿಯಲ್ಲು ಯಿದ್ದ ವರುಷಾ ೧೯೦.

❖❖

೩೦

ಮಂಡಗದ್ದೆ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೧

ಪ್ರತಿಷ್ಠಾನಪುರದಲ್ಲಿ ಚಂದ್ರಶೇಖರರಾಯ ಯಂಬ ಅರಸನವರ ಪಟ್ಟಣದಲ್ಲಿ ಸೋಮಪ್ಪಾಯಂಬ ಬ್ರಾಹ್ಮಣನು ಜಾರತ್ವದಲು ಇದ್ದಲ್ಲಿ, ಯೀ ಬ್ರಾಹ್ಮಣನ ಶರೀರಕ್ಕೆ ಉಪದ್ರವವಾಗಿ

ಈ ಬ್ರಾಹ್ಮಣನ ಕಾಲು ಹೋದರಿಂಧಾ, "ತನ್ನ ಮನೆಯಲಿ ಯಿದ್ದ ವಸ್ತು ವಡವೆ ಮುಂತಾಗಿ ಯಾವತ್ತನ್ನು ಸೂಳಿಗೆ ಕೊಟ್ಟು ಆಯಿತು. ಯಿನ್ನು ಬದಲು ಯಿಲ್ಲಾ, ನಿನ್ನ ಮೇಲೆ ಯಿದ್ದ ವಸ್ತು ವಡವೆಗಳನ್ನು ಮುಂತಾಗಿ ಕೊಡು. ನನ್ನನ್ನು ನಿನ್ನ ಹೆಗಲ ಮ್ಯಾಲೆ ಹತ್ತಿಶಿಕೊಂಡು ಅವಳ ಮನಿಗೆ ವೈದು ಕಳುಹಿಸು"ಯಂತ ತನ್ನ ಹೆಂಡತಿ ಸೋಮಾ ಯಂಬ ಹೆಂಡತಿಗೆ ಹೇಳಿದ್ದರಿಂದ, ಯೀ ಹೆಂಗಸು ಪತಿವಾಕ್ಯ ಉಲ್ಲಂಘನೆ ಮಾಡದೆ, ಪತಿವ್ರತಾಧರ್ಮದಿಂದಲು ನಡದಂಥವಳಾದ ಕಾರಣ, ತನ್ನ ವಸ್ತು ವಡವೆ ತೆಗೆದು ತನ್ನ ಗಂಡನ ಕೈಯಲ್ಲಿ ಕೊಟ್ಟು, ಗಂಡನ ಹೆಗಲ ಮ್ಯಾಲೆ ಕುಂದ್ರಿಶಿಕೊಂಡು, ಸೂಳೆಮನಿಗೆ ರಾತ್ರೆ ಕಾಲದಲ್ಲಿ ಹೋಗುವಾಗ್ಯೆ, ಯಿದಕ್ಕೆ ತತ್ಪೂರ್ವದಲ್ಲು ಮಾಂಡವಋಷಿಗಳು ಜಪಾಮಾಡುತ್ತ ಪ್ರತಿಷ್ಠಾನಪುರದ ವನದಲ್ಲು ಕುಳಿತು ಯಿದ್ರು.

ಆಮೇಲೆ ಯೀ ಊರ ಅರಸನ ಮನೆಯಲ್ಲಿ ಕಳ್ಳರು ಬಂದು ಹಣಕಾಸು, ವಸ್ತು-ವಡವೆ ಮುಂತಾದ್ದನ್ನು ಕದ್ದು ಒಯ್ಯುತ್ತಿದ್ದಲ್ಲಿ, ಯಿದ ಜನರು ಜಾಗ್ರತರಾಗಿ ಕಳ್ಳರು[>ರ] ಬೆನ್ನಟ್ಟಿದ್ದರಿಂದ ಯೀ ಕಳ್ಳರು ತಾಉ ತೆಗೆದುಕೊಂಡು ಹೋಗುತ್ತ ಯಿದ್ದಂಥಾದ್ದವನ್ನು ಯೀ ಮಾಂಡವ್ಯಋಷಿಗಳ ಮುಂದೆ ಹಾಕಿ, ಆ ಕಳ್ಳರು ಶಿಕ್ಕದೇ ಹೋದದರಿಂದ ಕಳ್ಳರ ಹಿಡಿವ ಬಗ್ಗೆ ಬಂದವರು ಯೀ ಪದಾರ್ಥಗಳು ಋಷಿಗಳ ಮುಂದೆ ಯಿದ್ದದು ನೋಡಿ, "ಆ ಪದಾರ್ಥವ ಕದ್ದುಕೊಂಡು ಬಂದು ಯಿಟಕೊಂಡು ತಪಸ್ಸು ಮಾಡುತ್ತಾನೆ. ಯೀವನೇ ಕಳ್ಳತನಾ ಮಾಡಿದವ"ಯಂತ ಯೀ ಪದಾರ್ಥ, ಯೀ ಬ್ರಾಹ್ಮಣನ ಸಹಾ ಅರಸನ ಬಳಿಗೆ ಕರಕೊಂಡು ಬಂದು ವಪ್ಪಿಸಿದ್ದರಿಂದ "ನಮ್ಮಲ್ಲಿ ಹೆಸರಾದ ಪದಾರ್ಥ ಯೀ ಬ್ರಾಹ್ಮಣನ ಬಳಿಯಲ್ಲಿ ಯಿದ್ದಮೇಲೆ ಯೀತನೆ ಕಳ್ಳ, ಯೀತಗೆ ಆಗ್ನೆ ಮಾಡಿಸಬೇಕು"ಯಂದು ಅರಸು ತನ್ನ ಕಡೆಯವರಿಗೆ "ಯಿಶ್ರಿದ ತೆಗೆದುಕೊಂಡು ಹೋಗಿ ರಾಜಮಾರ್ಗದಲ್ಲು ಶೂಲಾ ಹಾಕಿ" ಯಂಬುದಾಗಿ ಹೇಳಿದ್ದರಿಂದ, ಅರಸನ ಅಪ್ಪಣೆ ಪ್ರಕಾರ ಚರಿಕಾರ ಯೀ ಬ್ರಾಹ್ಮಣನ ರಾಜಮಾರ್ಗದಲ್ಲಿ ಶೂಲಕ್ಕೆ ಹಾಕಿದಲ್ಲಿ, ಯೀ ಸೋಮಪ್ಪಾಯಂಬ ಬ್ರಾಹ್ಮಣನು ಸೋಮಾಯಂಬ ಹೆಂಗಸು ಹೆಗಲ ಮೇಲೆ ಹತ್ತಿಶಿಕೊಂಡು ಸೂಳೆಯ ಮನೆಗೆ ಕರಕೊಂಡು ಹೋಗುವಾಗ್ಯೆ, ರಾತ್ರೆ ಕಾಲದಲ್ಲು ಕಾಣದೆ ಸೋಮಾಯಂಬ ಬ್ರಾಹ್ಮಣನ ತಲಿಯು ಶೂಲಕ್ಕೆ ಹಾಕಿದ ಬ್ರಾಹ್ಮಣನ ಕಾಲಿಗೆ ತಗಲಿ, ಬ್ರಾಹ್ಮಣಗೆ ಬಹಳ ಉಪದ್ರ ಆದ್ದರಿಂದ "ಬೆಳಗಾಗುವದರಲ್ಲಿ ನನಗೆ ರೋಧನೆ ಮಾಡಿದವನು ಮೃತವಾಗಲಿ"ಯಂತ ಹೇಳಿದ್ದರಿಂದ, ಯೀ ಸೋಮಾಯಂಬ ಹೆಂಗಸು "ಯಿದು ಋಷಿವಾಕ್ಯವು ಧಾವತ್ತು ಆಧೀತು"ಯಂತ ತಿಳಿದು, "ತನ್ನ ಪತಿವಿಯೋಗ ಆಗುವಂತ ಬೆಳಗು ಬ್ಯಾಡಾ" ಯಂತ ಹೇಳಿದ್ದರಿಂದ, ಪತಿವ್ರತಾ ಶಾಪದಿಂದ ಸೂರ್ಯ ಉದಯ ಆಗದೆ ಯಿದ್ದದರಿಂದಾ, ದೇವತಿನ ವ್ಯಾಪಾರಕ್ಕೆ ವಿಘ್ನವಾದ್ದರಿಂದ "ಯಿದು ಯೇನು ಕವುತುಕ?" ಯಂತ ತಿಳಿದು, ಬ್ರಹ್ಮದೇವರ ಬಳಿಗೆ ಸತ್ಯಲೋಕಕ್ಕೆ ಹೋಗಿ, "ಸೂರ್ಯ ಉದಯವಾಗದೇ ಯಿರ್ರುವದಕೆ ನಿಮಿತ್ತವೇನು?"ಯಂತ ಕೇಳಿಕೊಂಡದ್ದರಿಂದ, ಬ್ರಹ್ಮದೇವನು ದೇವತೆಗಳಿಗೆ[>ಗಳು] ಹೇಳಿದ ಕೇಳಿ "ಪರಮಾಶ್ಚರ್ಯವಾಗಿ ಕಾಣುತ್ತದೆ. ವಿಚಾರಿಸುವಾ" ಯಂಬುದಾಗಿ ದೇವತೆಗಳು ಸಹಾ ಕರಕೊಂಡು ಪ್ರತಿಷ್ಠಾನಪುರದಲು ಯಿದ್ದಾ ಸೋಮಾಯಂಬ ಹೆಂಗಸಿನ ಬಳಿಗೆ ಬಂದು, "ಸೂರ್ಯ ಉದಯ ಆಗಬ್ಯಾಡಾ ಯಂಬುದಾಗಿ ಶಾಪಾ ಮಾಡಲಿಕ್ಕೆ ನಿಮಿತ್ತವೇನು?"ಯಂತ ಕೇಳಿದಲ್ಲಿ, "ಸೂರ್ಯ ಉದಯವಾಗುವ[>ವಂ]ದು ಪತಿವಿಯೋಗ ಆಗಲಿಯಂತಾ ಶೂಲಕೆ

ಹಾಕಿದ ಬ್ರಾಹ್ಮಣನು ಶಾಪಾ ಮಾಡಿದ್ದರಿಂದ, ನಾನು ಯಿಂತಾ ಸೂರ್ಯ ಉದಯ ಆಗಬ್ಯಾಡಾಯಂತ ಹೇಳಿದ್ದು ಸರಿ" ಯಂದು ಹೇಳಿದ್ದರಿಂದ, ಯೀ ಆಶ್ಚರ್ಯವ ಕೇಳಿ "ನೀನು ಪತಿವ್ರತೆ, ನಿನ್ನ ಮಾತಿನಿಂದ ಸೂರ್ಯ ಉದಯವಾಗದೆ ದೇವತೆಗಳ ವ್ಯಾಪಾರ ನಿಂತಿತು. ಸೂರ್ಯ ಉದಯ ಆಗುವ ಹಾಗೆ ನೀನು ಹೇಳು. ನಿನ್ನ ಗಂಡಗೆ ಬದುಕುವಂತೆ ಆ ಋಷಿಗಳಿಂದ ಬ್ರಾಹ್ಮಣನಿಂದ ಅಪ್ಪಣೆ ಮಾಡಿಸುತ್ತೇವೆಂ"ದು ಹೇಳಿ ಬ್ರಹ್ಮದೇವರು ದೇವತೆಗಳು ಸಹಾ ಶೂಲಕ್ಕೆ ಹಾಕಿದ ಬ್ರಾಹ್ಮಣ ಬಳಿಗೆ ಬಂದು, ಶೂಲದಲು ಯಿದ್ದಾ ಬ್ರಾಹ್ಮಣನ ಯಿಳಿಸಿ, ಯೀ ಸೋಮಾಯಂಬ ಹೆಂಗಸಿನ ಗಂಡಗೆ ಬದುಕುವಪ್ಪಂದ ಯೀ ಬ್ರಾಹ್ಮಣನಿಂದಾ ಹೇಳಿಶಿ ಬಿಟ್ಟು, "ಸೂರ್ಯ ಉದಯವಾಗುವಂತೆ ಹೇಳು"ಯಂತ ಯೀ ಸೋಮಾಯಂಬ ಸ್ತ್ರೀಗೆ ಹೆಳಿದರಿಂದ, ಆ ಸ್ತ್ರೀಯು ಇವರು ದೇವತೆಗಳು ಯಂತ ತಿಳಿದು, "ತನ್ನ ಮನೋಭಾಷೆ ಆಯಿತು, ಸೂರ್ಯ ಉದಯವಾಗಲಿ" ಯಂತ ಹೇಳಿದರಿಂದ, ಬ್ರಹ್ಮದೇವರು ಆ ದೇವತೆಗಳಿಗೆ "ಯಿನ್ನು ಮೇಲೆ ತಮ್ಮ ವಿಹಿತ ವ್ಯಪಾರಗಳ ಮಾಡಿಕೊಳ್ಳಲಿ" ಯಂತ ಅಪ್ಪಣೆ ಕೊಟ್ಟು, ದೇವತೆಗಳು[>ಳ] ತಮ್ಮ ತಮ್ಮ ಸ್ಥಾನಕೆ ಕಳುಹಿಸಿ ಕೊಟ್ಟ ಬಳಿಕ, ಯೀ ಮಾಂಡವ ಋಷಿಯಂಬ ಬ್ರಾಹ್ಮಣನು ಸತ್ಯಲೋಕದಿಂದ ಅನುಗ್ರಹಮಾಡಿ ಯಿದ್ದಲ್ಲಿ, "ನನಗೆ ಚಾಂಡಾಲ ಸ್ಪರಷವಾಯಿತು, ಯೀ ದೋಷ ಹ್ಯಾಗೆ ಹೋದೀತು?" ಯಂತ ವಿಜ್ಞಾಪನೆ ಮಾಡಿಕೊಂಡದರಿಂದ, "ನೀನು ಋಷಿ ಪೂರ್ವಕರ್ಮವಶಾತು ನೀನು ಬ್ರಾಹ್ಮಣನಾಗಿ ನಿತ್ಯಕರ್ಮಗಳ ಮಾಡುವ್ಯಾಳೆದಲ್ಲು ಚಾಂಡಾಲಸ್ಪತಿ[>ಸ್ಮೃತಿ] ಮನಸ್ಸಿನಲ್ಲಿ ಹುಟ್ಟಿದ್ದರಿಂದ ತಪೋಮಹಿಮೆಯಿಂದ ಯೀ ಜಲ್ಮದಲ್ಲಿ ಋಷಿಯಾಗಿ, ತಪಸ್ಸು ಮಾಡಿಕೊಂಡು ಯಿದ್ದಾಗ್ಯೂ ಆ ವಾಸನ ಫಲ ತಪ್ಪಿ[>ಪ್ಪ]ದ್ದರಿಂದ ಯೀ ಜಲ್ಮದಲ್ಲಿ ಚಾಂಡಾಲ ಸ್ಪರ್ಶವಾಯಿತು. ಯಿದಕ್ಕೆ ಪರಿಹಾರ, ತುಂಗಾಮಧ್ಯದಲ್ಲಿ ತಪಶ್ಶಿಗೆ ಕಲಿಯುಗ ಅಂತ್ಯ ಪರ್ಯಂತರ ಸ್ಥಳವಿದೆ. ಆ ಸ್ಥಳದಲ್ಲಿ ಹೋಗಿ ತಪಸ್ಸು ಮಾಡು" ಯಂತ ಬ್ರಹ್ಮದೇವ ಆಗ್ನೆ ಆದರಿಂದ ಆ ಬ್ರಾಹ್ಮಣನು ತುಂಗಾತೀರ ಹಿಡದು ಬರುವಲ್ಲಿ, ಯೀ ತುಂಗಾಮಧ್ಯದಲು ವಾಸಕ್ಕೆ ಯೋಗ್ಯವಾದಂಥಾ ಗದ್ದೆಯನ್ನು ಕಂಡದರಿಂದ, ಯೀ ಮಂಡಗದ್ದೆಯಲು ಹುತ್ತದಲು ಯಿದಾರ್‍ರೆ, ಸೂತ್ತಲೂ ಗದ್ದೆವಳಗೆ ಗಿಡಗಳು ಅದೆ. ತಪಸ್ಸು ಮಾಡುತಾ ಕುಳಿತು ಯಿರುವದರಿಂದ ಯೀ ಸ್ಥಳಕೆ ಮಾಂಡವ್ಯ ಆಶ್ರಮಾ ಅಂತ ಲೋಕದಲಿ ಖ್ಯಾತಿಯಾಗಿ ಮಾಂಡವ್ಯ ಆಶ್ರಮಯಂತ ಹೆಸರು ಬಂತು. ಯಿ ಸ್ಥಳ ತುಂಗಾಮಹಾತ್ಮೆಯು ಪುರಾಣೋಕ್ತವಾಗಿ ಅದೆ.

ಆ ಬಳಿಕ ಹರಿಹರರಾಯ ಯಂಬಾತನು ಗಜದೇಶದಿಂದ ಬಂದು ದೊಡ್ಡ ಕ್ಷೇತ್ರದಲ್ಲು ಅಗ್ರಹಾರ ದೇವಾಲಯ ಮಾಡಬೇಕೆಂದು ಯೋಚಿಸಿ ಹುಡುಕಿದಲ್ಲಿ, ತುಂಬಾ ಮಧ್ಯಗಡೆಯಲ್ಲಿ ಋಷಿ ಆಶ್ರಮ ಯಿರುವದು ಕಂಡು, "ಯೀ ಸ್ಥಳದಲು ಅಗ್ರಹಾರ ಮಾಡಬೇಕೆಂ"ದು ನದಿ ಉಪದ್ರವ ಆಗದಂತೆ ಕಲ್ಲು ಕಟ್ಟ ಕಟ್ಟಿಸಬೇಕೆಂದು ಪ್ರಯತ್ನಮಾಡಿ ಕಟ್ಟಿಸುತ್ತ ಯಿದ್ದಲ್ಲಿ, ಆ ರಾಮ[>ಯ]ಗೆ "ಈ ಸ್ಥಳದಲಿ ಆಶ್ರಮಕೆ ಯೋಗ್ಯದೆ ಹೊರತು, ನರಮನುಷ್ಯರಿಗೆ ಯೋಗ್ಯವಲ್ಲಾ. ಕಲಿಯುಗ ಅಂತ್ಯ ಪರಿಯಂತ್ರ ತಾವು ತಪಸ್ಸು ಮಾಡುತ್ತ ಯಿರುತ್ತೆವೆ. ಯಿಲ್ಲಿ ನೀವು ಯಿ ಯೋಚನೆ ಮಾಡಬ್ಯಾಡಾ. ತೀರದ ದಡದಲ್ಲು, ನಮಗೆ ಸಮೀಪವಾದ ಸ್ಥಳದಲ್ಲು, ಅಗ್ರಹಾರ ದೇವಾಲಯ ಮಾಡು"ಯಂತ ಋಷಿಗಳು ಸ್ವಪ್ನದಲ್ಲು ಆಜ್ಞಾಪಿಸಿದ್ದರಿಂದ ಋಷಿಗಳ ವಾಕ್ಯವನ್ನು ಜ್ಞಾಪ್ತಿಗೆ ತಂದುಕೊಂಡು, ಯಿ ಆಶ್ರಮದಲು ಪಟ್ಟನವ ಕಟ್ಟಿಸುವದ ಬಿಟ್ಟುಬಂದು, ಯೀ ಆಶ್ರಮಕ್ಕೆ ಸಮೀಪವಾದ ದಕ್ಷಿಣಭಾಗದ ತೀರದಲ್ಲು ಲಿಂಗಾಪುರದ ಗ್ರಾಮದಲು 'ಮಾಂಡವ್ಯ ಅಗ್ರಹಾರ' ಯಂತ ಹೆಸರು

ಯಿಟ್ಟು, ಹರಿಹರದೇವರ ದೇವಸ್ಥಾನವ ಕಟ್ಟಿಸಿದ. ಯಿ ಅಗ್ರಹಾರಕ್ಕೆ ದೇವರ ಪೂಜೆ ಬ್ರಾಹ್ಮಣರಿಗೆ ಸಹಾ ಉತ್ತರವಾಗಬೇಕೆಂದು ಅರಸುಗಳಿಗೆ ವಿಳಂಬಿ ಸಂವತ್ಸರದ ಆಷಾಢ ಶು ೧೫ರಲು ನಿರುಪಾ ಹೇಳಿಕೊಂಡು ಉತ್ತರವ ಬಿಡಿಶಿದ.

ಆ ತರುವಾಯ ಮಂಡರ ಉಪದ್ರವ ಬಾಹಳವಾದರಿಂದ ರೈತರು ಬಾಹಳ ಪ್ರಕಾರ ದಣಕೊಂಡು "ಕಳ್ಳರ ಬಾಧೆಯಿಂದ ಬಾಹಳ ಶ್ರಮಿಸುತ್ತೇವೆ. ಹೆಗಡೆರ ಹೊಬಳಿ ಗದ್ದೆವಾಡದಲು ಕಿಲ್ಲೆ ಕಟ್ಟಿಸುವ ಹಾಗೆ ಅಪ್ಪಣೆ ಕೊಡಸಬೇಕೆಂ"ದು ಪ್ರಜೆಗಳು ಕೆಳದಿ ಸಂಸ್ಥಾನಿಕರಾದ ಸೋಮಶೇಖರ ನಾಯಕರಿಗೆ ಹೇಳಿಕೊಂಡದ್ದರ್ರಿಂದ, ಹೆಗಡೆರ ಹೊಬಳಿ ಗದ್ದಿವಾಡ ಸರಹದು ಯೀ ಮಾಂಡವ್ಯಋಷಿ ಆಶ್ರಮ, ಯೀ ಶೀಮೆಗೆ ತುದಿಗದ್ದಿ, ಯಿಲ್ಲಿ ಕಿಲ್ಲೆ ಕಟ್ಟಬೇಕೆಂದು ಗೊತ್ತು ಮಾಡಿ, ಯೀ ಅಗ್ರಹಾರದ ದಕ್ಷಿಣಭಾಗದಲ್ಲು ಪ್ರತಿಮಾಪುರದ ಗ್ರಾಮದ ತುಂಗಾನದಿ ದಡದಲು ಕೋಟೆ ಕಟ್ಟಿಸಿದರು. "ಯೀ ಕೋಟೆಗೆ ಹೆಸರು ಏನು ಯಿಡಬೇಕೆಂ"ದು ವಿಚಾರಿಸಿ, ಮಾಂಡವ್ಯಋಷಿ ಆಶ್ರಮ ಸಮೀಪವಾಗಿ ಹರಿಹರರಾಯಗೆ ಅಗ್ರಹಾರ ಮಾಡುವಂತೆ ಆಗ್ನೆ ಆದ ಬಳಿಕ, ಆ ಸಮೀಪದಲು ಕೋಟೆ ಕಟ್ಟಿದ ಮ್ಯಾಲೆ, ಆ ಋಷಿಗಳ ಹೆಸರು ಯಿಡಬೇಕೆಂ"ದು "ಮಾಂಡವ್ಯ ಕಿಲ್ಲಾ"ಯಂತ ಹೆಸರು ಯಿಟ್ಟರು. ಜನರುಗಳು ಯೀ ಹೆಸರು ಉಚ್ಚಾರಣೆ ಆಗದ್ದರ್ರಿಂದ ಮಂಡಗದೆಯಂತ ಕರೆಯುತ್ತಾರೆ. ಯಿ ಕೋಟೆಗೆ ಕಳ್ಳರ ಬಂದೋಬಸ್ತಿನ ಬಗ್ಯೆ ಸರಕಾರದಿಂದ ಕಂದಾಚಾರದ ಜನ ಯಿಟ್ಟುಕೊಟ್ಟು, "ಯೀ ಕಿಲ್ಲೆ ವುಸ್ತುವಾರಿ ಮಂಡಗದೆ ಮುನ್ನೂರು ಮುಂಡಾಕಾರು ಮೂರು ಮಾಗಣೆಯವರ್ರು ನೋಡಿಕೊಂಡು ಬಂನಿ. ಕಳ್ಳರ ಬಂದೋಬಸ್ತು ಸರಕಾರದಿಂದ ಮಾಡಿಶಿ ಕೊಡುತ್ತೇವೆಂ"ದು ಅಪ್ಪಣೆಯಾಗಿ ಕಿಲ್ಲೆ ನಡದ ಬಂತು. ಯೀ ಮಾಗಣಿ ಮುಹೆಗದ್ದಿಗಟಿನ ವಳಗೆ ಕೂಡಿದರ್ರಿಂದ ಯಿದ್ದ ಗ್ರಾಮಗಳ ವಿವರಕುಲು ವಿವರ:

೧. ಹಲಿಸವಾಳಗ್ರಾಮ	೧ ಮೇಲಿನ ಅರಸ
೧. ಕುದ್ರೆವಾನಿಗ್ರಾಮ	೧ ಸೆಡಗಾರು
೧. ತೊಳಕಲು ಭಾವಿ	೧ ಬೈಚವಾನಿ
೧. ಮುವಳ್ಳಿಗ್ರಾಮ	೧ ಸಗದ ವಳ್ಳಿ
೧. ಕಾಗವಳ್ಳಿಗ್ರಾಮ	೧ ಪ್ರತಿಮಾ
೧. ಕೆಳಗಿನ ಪಡುಗವಳಿಗ್ರಾಮ	೧ ಹೆಗಲಿತ್ತಿ
೧. ಮೇಲಿನ ಪಡುಗವಳಿಗ್ರಾಮ	೧ ಕಿಗದ್ದಿ
೧. ಕಲ್ಲುಮಾನಿಗ್ರಾಮ	
೧. ಸಿಂಗನ ಬಿದ್ರಗ್ರಾಮ	ವಿವರ:
೧. ಯಿರುವತ್ತಿಗ್ರಾಮ	೧ ಲಿಂಗಾಪುರ

೧. ಹಳಗದಗ್ರಾಮ

೧. ಹರಳಗದ್ದೆಗ್ರಾಮ

೧. ವರತ್ತೆಗರೆ

೧. ಕಳವಿಗ್ರಾಮ

೧. ಬೊಮ್ಮನಹಳ್ಳಿ

೧. ಕೊಳುಂಡೆ

೧. ಗೊದಗಟು

೧. ಕಕೆ ಗಿಡಗಳಲಿಗ್ರಾಮ

೧. ಅಸಗೊಡು

೧. ಗಡುವಿನ ಸಾಗಳವಿ

೧. ಬಾಳೆಕೊಪ್ಪ

೧. ಹೆಮ್ಮತ್ತಿ ಗ್ರಾಮ

೧. ಸಂಣಮಾನಿ

೧. ಕೆಳಗಿನ ಅರಸ

೧ ಶಿಂದುವಾಡಿ

೧ ಕಳೂರು

೧ + + + + +

೩೬

ಯೀ ಸಂಸ್ಥಾನವನ್ನು ಚಿತ್ರಬಾನು ಸಂವತ್ಸರದ ಪುಷ್ಯದಲು ನವಾಬ ಹೈದರಲ್ಲಿಖಾನ ಬಾದಶಹರವರು ನಗರದ ಸಂಸ್ಥಾನವ ತೆಗೆದುಕೊಂಡರು. ಅವರು ಸಾಧಾರಣ ಸಂವತ್ಸರದ ವರಿಗೆ ಯಿದೆ ಮೇರ್‍ರಿಗೆ ನಡಶಿದರು. ವಿರೋಧಿಕೃತ ಸಂವತ್ಸರದಲು ಪರಶುರಾಮ ಭಾವುನ ಕಡೆಯವರು ಕೋಟೆಯನ್ನು ತೆಗೆದುಕೊಂಡು ಸೂರೆ ಸುಲಿಗೆ ಮಾಡಿ, ಕಿಲ್ಲೆ ಮದ್ದಿನ ಮನಿಗೆ ಸಹಾ ಅಗ್ನಿಪ್ರವೇಶ ಮಾಡಿದರಿಂದ ಯೀ ಕಿಲ್ಲೆ ಸುಟ್ಟು ಹೋಯಿತು. ಯಿತ್ತಲಾಗಿ ಸರಕಾರದ ಅಪ್ಪಣೆ ಯಿಲ್ಲದರಿಂದ ಕೋಟೆ ಯಾವತ್ತು ಬಿದ್ದು ಹೋಯಿತ್ತು.

ಯಿಗ ಹಾಜರ್‍ರು

ಮಂಡಗದ್ದೆ ಅಗ್ರಹಾರ ದೇವಸ್ತಾನ ೧.

ಗ್ರಾಮ ೩೬. ಮಾಗಣೆ ೧.

❖❖

೩೧

ಮಲ್ಲೂರು ಸಾಸಿವೆಹಳ್ಳಿ ಶೀಮೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೭

ಹುಚ್ಚಂಗಿ ವೆಂಕ್ಯಕ್ಕೆ ಸಲುವ ಸ್ವರ್ಗಾವತಿಪಟ್ಟಣದ ವಳಿತವಾದ ಕೇಸನಕೆರೆ ನಾಡು ಉತ್ಪತ್ತಿ ಸಂಗತಿ ವಿವರ:

ಸ್ವರ್ಗಾವತಿಪಟ್ಟಣದ ಅರಸು ಬಲ್ಲಾಳವಂಶ ಸಂಮಂಧರಣವಿಕ್ರಮರಾಜನು ಶುಭದಿಂದ ಪ್ರಭುತ್ವವನ್ನು ಮಾಡಿಕೊಂಡು ಯಿರಲಾಗಿ, ಯಿವರ ತಮ್ಮ ವೀರಪ್ರತಾಪರಾಯನು ಯೀ ಸ್ವರ್ಗಾವತಿ ಪಟ್ಟಣಕ್ಕೆ ಪಶ್ಚಿಮಭಾಗ ತುಂಗಭದ್ರಾತೀರ ಅಘಹರಕ್ಷೇತ್ರ ಪಂಚಕ್ರೋಶ ಮೊದಲಾಗಿ ದುರ್‍ವಾಸರುಷಿ ಆಶ್ರಮ ಮಹಾಪುಣ್ಯಕ್ಷೇತ್ರವಾದಂಥಾ ಸ್ತಳದಲ್ಲಿ ಆ ಅಘಹರಕ್ಷೇತ್ರಕ್ಕೆ ಕೃಷ್ಣ ಅಂಗಾರಕ ಚತುರ್ದಶಿಯಲ್ಲಿ, ಪಶ್ಚಿಮವಾಹಿನಿ ಆದಂಥಾ ತುಂಗಭದ್ರಾತೀರದಲ್ಲಿ ಯೀ ದಿವಸ ಯೀ ಕ್ಷೇತ್ರದಲ್ಲಿ ಸ್ತಾ[>ಸ್ನಾ]ನದಾನವನ್ನು ಮಾಡಿ, ಯೀ ತುಂಗಭದ್ರಾ ನದಿಯಲ್ಲು ಸ್ವಯಂವ್ಯಕ್ತವಾಗಿರುವಂಥಾ ಪಂಚಲಿಂಗೇಶ್ವರದೇವರ ದರುಶನವನ್ನು ಮಾಡಿಕೊಂಡು, ಸಕಲ ಮಹಾಪಾತಕವು ನಿವಾರಣವಾಗಿ, ಸಕಲ ಯಿಷ್ಟಾರ್ಥ ಪ್ರಾಪ್ತಿ ಉಂಟಾಗುವದಾದ್ದರಿಂದ, ಅದೆ ಪ್ರಕಾರದಲ್ಲು ಯೀ ಸ್ವರ್ಗಾವತಿಪಟ್ಟಣದ ಅರಸು ಮಹಾಕ್ಷೇತ್ರಕ್ಕೆ ಹೋಗಿ ಬರುತ್ತಾ ಯಿದ್ದಲ್ಲಿ, ವಂದಾನೊಂದು ಕಾಲದಲ್ಲಿಯೂ ಯೀ ಪುಣ್ಯಕರವಾದ ಕ್ಷೇತ್ರಕ್ಕೆ ಬರುತ್ತಾ ಯಿರುವಂಥಾ ಮದ್ಯಮಾರ್ಗ್ಗದಲ್ಲಿ ವಸಂತಕಾಲದಲ್ಲಿ ದಿವಸವಾದ್ದರಿಂದ, ಸಂಗಡ ಯಿದ್ದ ಪರಿವಾರ ಜನದಲ್ಲಿ ತೃಷ್ಣೆಯಿಂದ ಬಹಳ ಶ್ರಮಪಟ್ಟು ಯಿರುವಂಥಾವರನ್ನ ಸ್ವರ್ಗಾವತಿಪಟ್ಟಣದಸೇಷ ಜನರನ್ನು ಹೆಂಗಸರನ್ನು ದೇಮ[>ವ]ರಸೈಯ್ಯನು ಅರಸುಗಳಲ್ಲಿ ಬಂದು ನಿಂದು, ಯೀ ಉ್ರತ್ತಾಂತವನ್ನು ಅರಿಕೆ ಮಾಡಿಕೊಳ್ಳಲಾಗಿ, ಆ ಕ್ಷಣದಲ್ಲಿ ವಡ್ಡರನ್ನು ಕಾಮಾಟಿಯವರನ್ನು ಸಹ ಕರತರಶಿ, ಸುಮುಹೂರ್ತದಲ್ಲು ಕೆರೆಯನ್ನು ಪ್ರಾರಂಭ ಮಾಡಿಶಿದ್ದು, ಶಾಲಿವಾಹನ ಶಕ ೧೧೨೮ನೆಯ ಕ್ಷಯ ಸಂವತ್ಸರದಾರಭ್ಯವಾಗಿ ಶಕ ೧೧೩೦ನೆಯ ವಿಭವ ಸಂವತ್ಸರದ ವರಿಗೆ ಕೆರೆಯನ್ನು ತೆಗಿಶಿ, ಯೀ ವಡ್ಡರಿಗೆ ಕೊಡುವಂಥಾ ಬಹುಮಾನಗಳನೆಲ್ಲಾ ಕೊಟ್ಟು, ಆಮೇಲೆ ಯೀ ಕೆರೆಯು ಪೂರ್ಣ ತಟಾಕವಾದರೆ ಆ ದಿನದಲ್ಲು ಗಂಗಾಪೂಜೆಯನ್ನು ಮಾಡಿಶಿ ತ[>ಇ]ರುತ್ತಾ, ಯೀ ಗಂಗಾಸಾಗರದ ಹೆಸರಲ್ಲಿ ಈ ಕೆರೆಯನ್ನು ತೆಗೆಸಿದ್ದರಿಂದ ಆ ಗಂಗಾಸಮುದ್ರವೆಂಬ ಹೆಸರನ್ನು ಯಿಟ್ಟರು.

ಯೀ ಪ್ರಕಾರಕ್ಕೆ ಕೆರೆಯು ಪೂರ್‍ನ ತಟಾಕವಾಗಿ ಯಿರುತ್ತಾ ಯಿದ್ದಲ್ಲಿ, ಯಿತ್ತಲಾಗಿ ಸೂಳೆಕೆರೆಯಲ್ಲಿ ಯಿದ್ದ ಕಪ್ಪೆಗಳು ಯಾವತ್ತು ಕೂಡಿ ಆಲೋಚನೆ ಮಾಡಿ, "ನಮ್ಮ ಅರಸುಗಳು ಗಂಗಸಮುದ್ರಾಯಂಬ ಮಹಾತಟಾಕವನ್ನು ಕಟ್ಟಿಶಿಯಿದ್ದಾರೆ. ಆ ತಟಾಕವು ಬಹಳ ವುಲ್ಲಾಸವಾಗಿ ಯಿಥೆಯಂದೂ ಆ ಸ್ಥಳವನ್ನು ನೋಡಬೇಕೆಂದು ಆ ನಿಮಿತ್ಯವಾಗಿ ಕಪ್ಪೆಗಳು ಯಾವತ್ತು ದಂಡು ಕಟ್ಟಿ ಯೀ ಗಂಗಸಮುದ್ರಕ್ಕೆ ಬಂದು, ಯಿಲ್ಲಿ ಕೆಲಉ ದಿವಸ ವಾಸವಾಗಿ ಯಿದ್ದು, ಪುನಹ ತಮ್ಮ

ಸ್ಥಳ ಸೂಳೆಕೆರೆಗೆ ಹೋಗಬೇಕೆಂದು ಹೋಗುವಂಥಾ ಮಧ್ಯಮಾರ್ಗದಲ್ಲು, ಮಹತ್ತಾದಂತಾ ಬಿಸಲು ಹತ್ತಿದ್ದರಿಂದಲು ಮುಂದೆ ಹೋಗುವದಕ್ಕೆ ಚೈತನ್ಯ ತಪ್ಪಿ, ಮಧ್ಯ ಗುಡದಲ್ಲಿಯೇ ಯಾವತ್ತು ಕಪ್ಪೆಗಳು ನಿಂತಿದ್ದರಿಂದ, ಯೀಗಲು ಆ ಕಲ್ಲಿನ ಮೇಲೆ ಕಪ್ಪಿ ಆಕಾರವಾಗಿ ಕಾಣುತ್ತಾ ಯಿಧೆ. ಆ ಕಲ್ಲಿನ ಯಾವತ್ತು ಜನರು "ಕಪ್ಪಿ ಕಲ್ಲು:ಯಂಬುದಾಗಿ ಕರೆಯುತ್ತಾರೆ. ಆ ಆರಭ್ಯವಾಗಿ ಸೂಳೆಕೆರೆಯಲ್ಲಿ ವಂದು ಕಪ್ಪೆಯೂ ಯಿಲ್ಲ.

ಪುನಹ ಸ್ವರ್ಗಾವತಿ ಪಟ್ಟಣದ ಅರಸುಗಳು ಅಘಹರಕ್ಷೇತ್ರಕ್ಕೆ ಹೋಗಿ ಬರುವ ಮಾರ್ಗದಲ್ಲಿ, ತಾವು ತಂ[>ಬಂ]ದಂಥಾ ಯೀ ಭೋಗಾ[>ಸ್ವರ್ಗಾ]ವತಿ ಹೆಸರಿನಲ್ಲಿ ಕಟ್ಟಿಶಿದಂಥಾ ಗಂಗಸಮುದ್ರಉ ಪೂರ್ನ ತಟಾಕವಾಗಿರುವಂಥಾದನ್ನು ಕಂಡು, ಪರಮಸಂತೋಷವಾಗಿ ಮಧ್ಯಮಾರ್ಗದಲ್ಲಿ ತಮ್ಮಾ ಹೆಸರಿನಿಂದ ತಾಉ ಕಟ್ಟಿಶಿರುವ ಮಹಾ ತಟಾಕದ ಸಮೀಪದಲ್ಲಿ ವಂದು ಗ್ರಾಮವನ್ನು ಕಟ್ಟಿಸಬೇಕೆಂಬದಾಗಿ ಆಲೋಚನೆ ಮಾಡಿ, ಸಂಸ್ಥಾನಕ್ಕೆ ಆಪ್ತನಾದ ಸ್ತಳದ ಶಾನುಭೋಗನಾದ ಬಿ[>ಬ]ಡಗನಾಡ ಕನಡಿಗನಾದ ದೇವರಸೈಯ್ಯನವರ ಕರಶಿ, "ಯೀ ಸ್ಥಳದಲ್ಲಿ ಅತಿ ಮನೋಹರವಾದಂಥಾ ಹೊಸತಾಗಿ ಯಿಲ್ಲಿ ಗ್ರಾಮವನ್ನು ಕಟ್ಟಿಸಬೇಕೆಂ"ಬುದಾಗಿ ಅಪ್ಪಣೆ ಕೊಟ್ಟಿದ್ದರಿಂದ, ಯೀ ದೇವರಸೈಯ್ಯನು ಅರಿಕೆ ಮಾಡಿಕೊಂಡ ವಿವರ:

"ಯೀ ಸ್ತಳದಲ್ಲಿ ಬಹಳ ದೃಢವಾಗಿ ಮೃಗಬಾಧೆ ಉಪದ್ರಉ ಬಹಳವಾಗಿ ಯಿಧೆ. ಯೀಗೆ ಯಿರುವಂಥಾ ಉ್ರಂದದಲ್ಲಿ ವಂದು ಗ್ರಾಮವನ್ನು ಕಟ್ಟಿದರೆ ನಿಲ್ಲದು. ಯೀ ಸ್ಥಳದಲ್ಲಿ ಯಿರುವ ಮೃಗ ಯಾವತನ್ನು ನಿವಾರಣಾ ಮಾಡಿಶಿ, ಯೀ ತಟಾಕದ ಆಸರೆಯಿದ್ದಾ ಕೆಲಉ ಗ್ರಾಮವನ್ನು ಕಟ್ಟಿಸಬೇಕೆಂ"ದು ಹೇಳಿಕೊಳ್ಳಲಾಗಿ, ಚಿತ್ತಕ್ಕೆ ವಂ[>ತಂ]ದು ಸ್ವಾರಿ ಸಂಗಡ ಬಂದ ಪ್ರಮುಖರಾದ ನಾಯಕವಾಡಿಗಳು ಬೈರೆನಾಯಕನ ಜನ ೧, ಚೆನ್ನೆನಾಯಕನ ಜನ ೧, ಹನುಮನಾಯಕನ ಜನ ೧, ಮುಂತಾದ ಪ್ರಮುಖರಾದ ನಾಯಕರು ಠಾಣೆ ಗುರಿಕಾರ ಸಹವಾಗಿ ಯಿದು, "ಸಂ[>ಗಂ]ಗಸಮುದ್ರದ ಬಳಿಯ ಗ್ರಾಮವನ್ನು ಕಟ್ಟಿಸಬೇಕೆಂಬುದಾಗಿ ಯೋಚನೆ ಮಾಡಿ ಯಿದ್ದೇವೆ. ಯೀ ತಟಾಕದ ಸಮೀಪದಲ್ಲಿ ಯಿರುವ ಉ್ರಂದವನ್ನು ನಿವಾರಣೆ ಮಾಡಿ ಮೃಗಬಾಧೆಗಳ ತಪ್ಪಿಶಿ ಯಾವ ಸ್ತಳದಲ್ಲಿ ಉ್ರಂದವನ್ನು ಕಡದು ಮಾಡುತ್ತಿದೀರೊ ಆ ಸ್ತಳವನ್ನೆ ನಿಮಗೆ ಅಮರವಾಗಿ ಹಾಕಿ ಕೊಡುತ್ತೇವೆಯಂ"ಬುದಾಗಿ ಅಪ್ಪಣೆ ಕೊಟ್ಟಿದ್ದರಿಂದಲೂ ಅದೇ ಪ್ರಕಾರ ಯೀ ಪ್ರಮುಖ ಮುಂತಾದ ನಾಯಕರು ಯೀ ಮಹಾ ಉ್ರಂದದಲ್ಲಿ ಯಿರುವ ವ್ಯಾಘ್ರ ಮುಂತಾದ ಕ್ಷುದ್ರಮೃಗಗಳಿಗೆ ಆಶ್ರಯವಾಗಿ, ಮಹಾ ಘೋರಾರಣ್ಯವಾಗಿ ಯಿರುವದನ್ನು ಯೀ ಬಾಧೆಗಳನ್ನು ಪರಿಹರಿಸಿ, ತಾಉ ಯಾವ ಯಾವ ಸ್ಥಳದಲ್ಲಿ ಮೃಗಬಾಧೆ ನಿಮಿತ್ಯ ಗಿಡಗಳನ್ನು ಕಡದು ಯಿದ್ದರೊ ಆ ಸ್ಥಳಗಳಲ್ಲಿಯೇ ಗ್ರಾಮವನ್ನು ಆಕಾರ ಮಾಡಿದ ವಿವರ:

ಯೀ ಗಂಗಾಸಮುದ್ರದ ದಕ್ಷಿಣ ದಿಗ್ಭಾಗದ ಹುಲಿಗಟ್ಟದ ಬಳಿಯ ಮೃಗಬಾಧೆ ತಪ್ಪಿಸಿ ಸ್ತಳಾ ಮಾಡಿದ್ದರಿಂದ, ಆ ಸ್ಥಳದಲ್ಲಿ ಹುಲಿಗನಘಟ್ಟಾಯಂದು ಗ್ರಾಮ ೧ ಯೀಗ ಹುಣಸಘಟ್ಟಾಯಂದು ಕರಕೊಳ್ಳುತ್ತಾರೆ. ಭೈರನಾಯಕನು ಗಿಡಗಳ ಕಡದು ಸ್ತಳಾ ಮಾಡಿದ್ದರಿಂದ ಯೀ ಬೈರನಹಳ್ಳಿ ಗ್ರಾಮ ೧. ಚನ್ನನಾಯಕನು ಗಿಡವನ್ನು ಕಡದು ವೃಂದವನ್ನು ಕಡದು ಮೃಗಬಾಧೆ ತಪ್ಪಿಸಿದ ಸ್ತಳದಲ್ಲಿ ಚನ್ನನಹಳ್ಳಿಯಂಬೊ ಗ್ರಾಮ ೧. ಹನುಮನಾಯಕನು ಗಿಡಕಡದು ಮಾಡಿದಲಿ

ಹನುಮನಹಳ್ಳಿಯಂಬದಾಗಿ ಗ್ರಾಮ ೧. ಯೀ ಪ್ರಕಾರ ಗಿಡಗಳನ್ನು ಕಡದು ಆಕಾರ ಮಾಡಿದಂಥಾ ಸ್ತಳಗಳನ್ನು ಅವರವರಿಗೆ ಅಮರ ಮಾಗಣಿಯಾಗಿ ಕೊಟ್ಟದ್ದು, ಶಕ ೧೧೩೪ನೆಯ ಅಂಗೀರಸ ಸಂವತ್ಸರದ ವೈಶಾಖ ಬ. ೩ಲ್ಲು ಯೀ ಗಂಗಸಮುದ್ರದ ಬಳಿಯ ಗ್ರಾಮವನ್ನು ಕಟ್ಟಿಸುವಲ್ಲಿ ಸಂಸ್ಥಾನಕ್ಕೆ ಸಲುವ ಅಳಿಯಕೊಪ್ಪವನ್ನು ಕೇಸನಕೆರೆ ಸ್ತಳದ ಶ್ಯಾನುಭೋಗ ತಿಮ್ಮರಸೈಯ್ಯ ವಂದು ಗ್ರಾಮವನ್ನು ಕಟ್ಟಿಶಿದ್ದರಿಂದಲೂ, ಯೀ ಗ್ರಾಮವನ್ನು ಯೀ ಕೇಸಣ್ಣನಿಗೆ ಅಮರವಾಗಿ ಕೊಟ್ಟು, ಅಲ್ಲಿ ಗಂಗಾಧರದೇವಸ್ಥಾನವನ್ನು ಕಟ್ಟಿಶಿ, ದೇವರಪ್ರತಿಷ್ಟೆಯನ್ನು ಮಾಡಿಶಿ, ಅಮೃತಪಡೆ ನಂದಾದೀವಿಗೆ ಮುಂತಾದಕ್ಕೆ ವಿನಿಯೋಗವನ್ನು ಮಾಡಿಶಿ, ಅನ್ನಛತ್ರ ಅರವಟಿಗೆ ಹಾಕಿಸಿ, ಧರ್ಮವನ್ನು ನಡಸುತ್ತಾ ಯೀ ಸ್ವರ್ಗಾವತಿಪಟ್ಟಣಕ್ಕೆ ಪಶ್ಚಿಮಭಾಗದ ತುಂಗಭದ್ರಾತೀರದ ಗ್ರಾಮಗಳು ಸಹವಾಗಿ ನದೀ ಪ್ರಾರಂಭಿಶಿ, ಯೀ ಅಘಹರಕ್ಷೇತ್ರಕ್ಕೆ ಯಾವತ್ತು, ಗ್ರಾಮವನ್ನು ತಾವು ಕಟ್ಟಿಶಿದಂಥಾ ಗಂಗಸಮುದ್ರದ ಬಳಿಯಣ ಗ್ರಾಮ ಱೈದನ್ನು ಕೇಸಣ್ಣಗೆ ಅಮರವಾಗಿ ಕೊಟ್ಟದ್ದರಿಂದ, ಅವನ ಹೆಸರಿನಲ್ಲಿ ಕೇಸಗ[>ನ]ಕೆರೆಯಂಬ ಹೆಸರು ಯಿಟ್ಟುದಕೆ ಪ್ರತಿನಾಮವಾಗಿ ಜನರೆಲ್ಲಾ ಹೇಳುವದು ಕೇಸನಕೆರೆಯಂದು ಹೇಳುತ್ತಾರೆ. ಯೀ ಗ್ರಾಮವನ್ನು ಕಸಬೆ ಸ್ಥಳವನ್ನು ಮಾಡಿ, ಯೀ ಯಾವತ್ತು ಗ್ರಾಮಗಳನ್ನು ಯೀ ಕೇಸನಕೆರೆ ನಾಡಿಗೆ ಸೇರಿಶಿ, ಯೀ ಯಾವತ್ತು ನಾಡಿನ ಶ್ಯಾನುಭೋಗತನವನ್ನು ಸ್ವರ್ಗಾವತಿ ಪಟ್ಟಣದ ಸ್ತಳದ ಶ್ಯಾನುಭೋಗ ರಾಮರಸೈಯ್ಯನಿಗೆ ನೇಮಕಾವುಮಾಡಿಕೊಟ್ಟು, ಯೀ ಗ್ರಾಮದ ವಳಗಣ ಕುಲಕರಣಿ ಕಟ್ಟಿಗ್ರಾಮದ ಅಗ್ರಹಾರವನ್ನು ಯಜಮಾನ ಕಾಂತದೇವಜ್ಞ ಮುಂತಾದ ಹೆಬವ[>ಹೆಬ್ಬಾರ] ಮುಂತಾದ ಮಹಾಜನಂಗಳಿಗೆ ಸರ್ವಸಾಮಾನ್ಯವಾಗಿ ನಡಶಿಕೊಂಡು ಸುಖದಿಂದಾ ರಾಜ್ಯಾ ಆಳಿದರು. ವಿವರ್ರ:

ಶಕ ೧೧೩೪ನೆಯ ಅಂಗೀರಸ ಸಂವತ್ಸರದಾರಭ್ಯ ೧೧೫೭ನೆಯ ಯುವ ಸಂವತ್ಸರದ ವರಿಗೆ ವರುಷ ೨೩.

೧೬ ವರುಷ ವೀರಮರಯರಾಯ

೪೩ ಯಿವರ ಮಗ ರಾಣಿರಾಯರು ವರುಷ

೪೪ ಯಿವನ ಮಗ ವಿಕ್ರಮರಾಯನ ವರುಷ

ಯೀ ಮೇರಿಗೆ ನೂರುಯಿಪ್ಪತ್ತುಮೂರು ವರುಷ ಆಳಿದರು. ಯೀ ಮೇರಿಗೆ ಆಳುತ್ತಾ ಯಿದ್ದಲ್ಲಿ, ಸ್ವರ್ಗಾವತಿ ಪಟ್ಟಣದ ಅರಸುಗಳಿಗು ಆಸ್ತಾನದ ಹನ್ನೆರಡು ಕೈವಾಡದವರಿಗೂ ಸಹ ಚಕೋರ ಮಲ್ಲಿಭಟ್ಟನು ತಟಾಕ ಪ್ರವೇಶವಾಗುವಾಗ ಕೊಟ್ಟ ಶಾಪದ ಮೂಲದಿಂದಾಲು ಅರಸುತನ ಖಿಲವಾಯಿತು.

ಅಪ್ಪರಲ್ಲೆ ವಿದ್ಯಾರಣ್ಯರು ಶ್ರೀಪಾದದ ಅನುಗ್ರಹದಿಂದ ಹರಿಹರರಾಯ ಮಹಾರಾಯರು ರಾಜ್ಯಾಸಾಧಿಸಿದ್ದು ಶಕ ೧೨೫೮ನೆಯ ಧಾತು ಸಂವತ್ಸರದಲ್ಲು. ಯಾವತ್ತು ರಾಜ್ಯವನ್ನು ಸಾಧಿಸಿ ಅಗ್ರಹಾರ ಉತ್ತಿಕ್ಷೇತ್ರ ಮುಂತಾದನ್ನು ಸರ್ವಸಾಮಾನ್ಯವನ್ನು ಕೊಟ್ಟು ರಾಜ್ಯವನ್ನು ಆಳುತ್ತಾ, ಶ್ರೀಮನ್ಮಹಾ ಯಿವರ[>ರಾಜರ] ಕಡೆ ಪ್ರಧಾನಿ ಬಸವಪ್ಪದಣ್ಣಾಯಕರು ರಾಜ್ಯವನ್ನು ವಿಚಾರಿಸುತ್ತಾ, ಯೀ ಸೂಳೆಕೆರೆ ಬಳಿಗೆ ಬಂದು ಪೂರ್ವತ್ತಾರೋಹಣವನ್ನು ಮಾಡಿ, ಶಿದ್ದೇಶ್ವರದೇವರನ್ನು ದರುಶನ

ತೆಗೆದುಕೊಂಡು, ಯೀ ಮಹಾತಟಾಕವೂ ಆದಂಥಾ ಕೆರಿಯು ಶಿಥಿಲವಾಗಿ ಯಿದ್ದು, ಕೆರೆಯಲ್ಲಿ ನೀರು ಯಿಲ್ಲದ್ದರಿಂದ, "ಯಿಂಥಾ ಮಹಾಘನ ಕೆರೆ ಯೇನು ಕಾರಣ ಶಿಥಿಲವಾಯಿತೆಂಬ"ದಾಗಿ ಸ್ತಳದ ಶ್ಯಾನುಭೋಗ ಬಡಗಣದ ಕನಡಿಗ ಅಶ್ವಲಾಯಿನ ಸೂತ್ರದ ವಶಿಷ್ಟಗೋತ್ರದ ರುಗುಶಾಖೆಯ ಹೊನ್ನರಸೈಯ್ಯನವರ ರಾಮರಸೈಯ್ಯನವರ ಪವುತ್ರರಾದ ಬೊಮ್ಮರಸೈಯ್ಯನವರ ಕರದು, ಯೀ ಪೂರ್ವೊತ್ರವನ್ನು ವಿಚಾರಿಸಲಾಗಿ, ಯೀ ಬೊಮ್ಮರಸೈಯ್ಯನು ಪೂರ್ವಪರ ಕೆರೆ ಹುಟ್ಟಿದ ಆರಭ್ಯವಾಗಿ ಯಲ್ಲಾ ಉತ್ತಾಂತವನ್ನು ಶೃತ ಮಾಡಿ, "ಯೀ ಹರಿದ್ರಾ ನದಿಯು ಪ್ರವಾಹಉ ಕೋಡಿಕಡಿಗೆ ಬಿದ್ದದ್ದರಿಂದ, ಕೋಡಿಯಲ್ಲು ಹಳ್ಳ ಹರದು ಯೇರಿಗೆ ನೀರು ಹತ್ತದೆ ಯಿದ್ದದ್ದರಿಂದಯ ಯೀ ಕೋಡಿಯನ್ನು ಭದ್ರವಾಗಿ ಕಟ್ಟಿಶಿ, ಯೀ ಕಡೆ ಬರುವ ಪ್ರವಾಹವನ್ನು ಹತ್ತುವ ಹಾಗೆ ಮಾಡಿಶಿದಲ್ಲಿ, ಯೀ ಯೇರಿಗೆ ನೀರಿನ ಹುಯಿಲು ಕಟ್ಟುವದಿಲ್ಲವಾಗಿ, ಆಮೇಲೆ ಕೆರೆಯು ಪೂರ್ನವಾಗುತ್ತಾ ಯಿದ್ದಿತೆಂ" ಬುದಾಗಿ ಅರಿಕೆ ಮಾಡಿಕೊಳ್ಳಲಾಗಿ, ಯೀ ಪೂರ್ವೋತ್ರವನ್ನು ಚಿತ್ತಕ್ಕೆ ತಂದು, ಅದೇ ಮೇರಿಗೆ ಯೀ ಹಳೆ ವಡವಿನ ಬಳಿಯ ಅಡ್ಡಗಟ್ಟಿಯನ್ನು ಹಾಕಿಶಿ, ಹೊಸ್ತಾಗಿ ತಮ್ಮ ಹೆಸರಿನಲ್ಲು ತೂಬನ್ನು ಕಟ್ಟಿಶಿ, "ಬನ[>ಸ]ವನ ತೂಬು"ಯಂಬುದಾಗಿ ಹೆಸರಿಟ್ಟುದು ಶಾಲಿವಾಹನ ಶಕ ೧೩೬೭ನೆಯ ವಿಶ್ವಾವಸು ಸಂವತ್ಸರದಲ್ಲು. ಆಮೇಲೆ ಯೀ ಕೆರೆಯು ಪು[>ಪೂ]ರ್ವ ತಟಾಕವಾಯಿತು. ಆದ್ದರಿಂದ ಸ್ತಳದ ಶ್ಯಾನುಭೋಗ ಬೊಮ್ಮರಸೈಯ್ಯನು ಪೂರ್ವಿಕನಾದ್ದರಿಂದ ಯೀತಗೆ ಯಿನಾಮು ಹಾಕಿಕೊಟ್ಟ ಗ್ರಾಮಗಳು ಯಿಕ್ಕೇರಿ ಮಾಗಣಿ ವಳಗಣ ಕಾಶಿಪುರದ ಗ್ರಾಮ ೧, ಕದುರನಹಳ್ಳಿ ಗ್ರಾಮ ೧, ಉಭಯಂ ಗ್ರಾಮ ಯರಡು, ಹೊನ್ನಮರಡಿ ಗ್ರಾಮ ೧, ಉಭಯಂ ಗ್ರಾಮ ೩ನ್ನೂ ಯಿನಾಮು ಕೊಟ್ಟು, ಯೀ ಯರಡು ಶೀಮೆಸ್ಥಳದ ಶ್ಯಾನುಭಾವಿಕೆಯನ್ನು, ಗ್ರಾಮದಲ್ಲಿ ಯಿರುವ ಗದ್ದೆ ಬೆದ್ದಲು ಮುಂತಾದನ್ನು ಪ್ರಾಕು ಮೇರಿಗೆ ಅನುಭವಿಸಿಕೊಂಡು ಬರುವಂತೆ ದಯಪಾಲಿಸಿದರು.

ಕೇಸನಕೆರೆ ನಾಡಿನಲ್ಲಿ ಯಿರುವದು ಸದಾಶಿವರಾಯರ ಕಾಲದಲ್ಲು ಶಕ ವರುಷ ೧೩೧೨ನೆಯ ಪ್ರಮಾದಿ ಸಂವತ್ಸರದಲ್ಲು ಕುರುಪದ ರಾಮೇಶ್ವರದೇವರಿಗೆ ಅಮೃತಪಡಿ ನಂದಾದೀವಿಗೆ ಮುಂತಾದ ಉಪಾದೀ ಬಗ್ಯೆ, ಯೀ ನದೀತೀರದಲ್ಲಿ ಯಿರುವ ಕನ್ನೈಣಂದಿ ಯಂಬ ಗ್ರಾಮವನ್ನು ರಾಮೇಶ್ವರದೇವರಿಗೆ ಸರ್ವಮಾನ್ಯವಾಗಿ ಕೊಟ್ಟು, ಯೀ ಗ್ರಾಮಕ್ಕೆ ರಾಮಪುರವೆಂಬ ಹೆಸರು ಯಿಟ್ಟು, ಧರ್ಮಾರ್ತ ಧರ್ಮವಾಗಿ ಕೊಟ್ಟ ಬಗ್ಯೆ ಯೀ ಗುಡಿ ಮುಂದೆ ನೆಟ್ಟು ಯಿರುವ ಕಲ್ಲು ಶಾಸನ-೧.

ಅಗ್ರಹಾರ ಬಿಟ್ಟದ್ದು: ಕುಲಕರಣಿ ಕಟ್ಟೆಗ್ರಾಮವನ್ನು ಅಗ್ರಹಾರವಾಗಿ ಪ್ರಾಕು ಮೇರಿಗೆ ಜೀರ್ನೋದ್ಧಾರ ಮಾಡಿ ಸರ್ವಮಾನ್ಯವಾಗಿ ಕೊಟ್ಟ ಗ್ರಾಮ ೧. ಯೀ ಮೇರಿಗೆ ಅಗ್ರಹಾರ ಭಟಮಾನ್ಯ ದೇವತಾ ಉತ್ತರವನ್ನು ಸರ್ವಮಾನ್ಯವಾಗಿ ಸತ್ಸಧರ್ಮದಿಂದ ರಾಜ್ಯವನ್ನು ಆಳಿಕೊಂಡು ಬಂಧರು. ಯಿವರ ಕಾರ್ಯಕರ್ತರಾದ ಮೂಲ ವಂಶೋದ್ಧಾರಕ ಕರೆ[>ಕೆಂಗೆ]ಹನುಮಂತಪ್ಪನಾಯಕರು ಶಕ ೧೪೮೮ನೆಯ ದುಂದುಭಿ ಸಂವತ್ಸರದಲ್ಲು ಬಸವಾಪಟ್ಟ[+ಣ]ದ ಕೋಟೆಯನ್ನು ಕಟ್ಟಿಶಿ, ಯಾವತ್ತು ರಾಜ್ಯವನ್ನು ಸಾಧಿಸಿ ಆಳಿದ್ದು ೧೪೯೬ನೆಯ ಪ್ರಭವ ಸಂವತ್ಸರದ ವರಿಗೆ ವರುಷ ೫, ಯಿವರ ಕಾಲದಲು ನಡುವಂಥಾ ಧರ್ಮದ ಕ್ರಮಗಳ ವಿವರ, ಶಕ ೧೪೮೭ನೆಯ ಕ್ರೋಧನ ಸಂವತ್ಸರದ ಚೈತ್ರ ಶುದ್ಧ ೯ಉ ಆದ ದಾನ ಪಟ್ಟಿ:

೧ ಕಣಿಗಲಗಟ್ಟ ಅಗ್ರಹಾರದ ಬಗ್ಗೆ ಯಜಮಾನ ಹರಿಭಟ್ಟ ದ್ಯಾಮರಸೈಯ್ಯ ಶ್ಯಾನುಭೋಗನ ಉತ್ತಿ ಸಹ ಮುಂತಾದ ಬ್ರಾಹ್ಮರಗಳಿಗೆ ಪ್ರಾಕು ಮೇರಿಗೆ ಉತ್ತಿ ೨೦ ಶ್ಯಾನುಭೋಗನ ಉತ್ತಿ ಸಹ ವೊಬನಾಯಕನ ಅಮರವನ್ನು ತೆಗೆದು ಜೀರ್ನ್ನೋದ್ಧಾರವನ್ನು ಮಾಡ್ಸಿಕೊಟ್ಟು ಯಿದ್ದೇವೆಂಬದಾಗಿ ಬರಶಿಕೊಟ್ಟ ದಾನಪಟ್ಟಿ.

೧ ಕಮಲಾಪುರವೆಂಬ ಗ್ರಾಮವನ್ನು ಯೀ ಕುಣಿಕಲಗಟ್ಟಿನ ಭೂಮಿಯಲ್ಲಿ ಏಂಗಡಿಶಿ, ಯೀ ಗ್ರಾಮವನ್ನು ಹೊಸ್ತಾಗಿ ಕಟ್ಟಿ ಯೇಕಭೋಗ್ಯವಾಗಿ ನಡವಂತೆ ಬರಶಿಕೊಟ್ಟ ದಾನಪಟ್ಟಿ.

೨

ಅಂತರವಾಗಿ ನಡೆಯುತ್ತಾ ಯಿರುವ ಗ್ರಾಮಗಳು ಕೂಡಲ್ಲಿ[>ಲಿ] ಅಕ್ಷೋಭತೀರ್ಥಸ್ವಾಮಿಗಳವರ ಮಠಕ್ಕೆ ಶ್ರೀರಾಮಚಂದ್ರದೇವರ ದೀಪಾರಾಧನೆ ಅನ್ನಛತ್ರದ ಬಗ್ಗೆ ಸಹ ನಡಶಿ ಕೊಟ್ಟು ಗ್ರಾಮಗಳು: ಬಳ್ಳಾಪುರದ ಗ್ರಾಮ ೧, ಹುರಳಿಹಳ್ಳಿ ಗ್ರಾಮ ೧, ಯೀ ಯರಡು ಗ್ರಾಮವನ್ನು ಧರ್ಮಾರ್ಥವಾಗಿ ಯೇಕಭೋಗ್ಯವಾಗಿ ನಡಶಿ ಬಂದರು.

೩ ಪುರವರ್ಗ ಉತ್ತಾರ ಬಿಟ್ಟರು, ದಾಸೋಹದ ಬಗೆ ಹಾಕಿ ಕೊಟ್ಟರು:

೧ ಅನ್ನದಾನವಡೇರ ಮಠಕ್ಕೆ ತರಗನಹಳ್ಳಿ ಗ್ರಾಮ.

೧ ಹಲಶಿ ತಕ್ಕವಡೇರಿಗೆ ಹೊಟ್ಟಾಪುರದ ಗ್ರಾಮ.

೧ ಅಲ್ಲದೀಮಠಕ್ಕೆ ಜ್ಯೆನೂರು ಗ್ರಾಮ.

ಅಂತೂ ಮೂರು ಗ್ರಾಮವನ್ನು ಧರ್ಮಾರ್ಥವಾಗಿ ನಡಶಿ ಬಂದರು. ಕುಂದಪ್ಪಿ ಶ್ರಿಂಗೇರಿಮಠಕ್ಕೆ ಕೂಡ್ಲಗಿಮಠಂಗಳಲ್ಲಿ ಯಿರುವ ಶ್ರೀ ವಿದ್ಯಾಶಂಕರ ಚಂದ್ರಮೌಳೇಶ್ವರ ದೇವರ ದೀಪಾರಾದನೆ ಶಿವರಾತ್ರೊ ಮಹೋತ್ಸವದ ಬಗ್ಗೆ, ಅನ್ನಸಂತರ್ಪಣೆ ಬಗ್ಗೆ ಸಹ ಯೀ ಮಲ್ಲೂರ ಶೀಮೆಯನ್ನು ಅಗ್ರಹಾರ, ಭಟಮಾನ್ಯ, ಯಿನಾಮು ಮುಂತಾದ ಗ್ರಾಮಗಳು ಹೊರತಾಗಿ ಮೊದಲದ ಗ್ರಾಮಗಳು ಯಾವತ್ತು ಸಹಿತವಾಗಿ ದಾನಶಾಸನವನ್ನು ಬರಕೊಟ್ಟು, ಮಲ್ಲೂರ ಶೀಮೆ ಗ್ರಾಮ ಯೀ ಶಾಸನ ಕೂಡಲಿ ಮಠದಲ್ಲಿ ಯಿದೆ.

ನಾಡಿಗತನದ ಬಗ್ಗೆ ಹಾಕಿಕೊಟ್ಟದ್ದು: ಸ್ತಳದ ನಾಡಿಗ ಮಟ್ಟ[>ಪುಟ್ಟ]ರಸೈಯಯನು ಹ[>ಹು]ಜೂರಿಗೆ ಹೋಗಿ ಧೊರೆಗಳ ಕಂಡಲ್ಲಿ, ಯೀತನು ಬಹಳ ಮೆಹನತು ಮಾಡಿದಲ್ಲಿ ಪುರಾತನಸ್ತನಾಗಿ ಯೀ ಸ್ತಳಕ್ಕೆ ಬಹಳ ಕಷ್ಟಬಟ್ಟದ್ದರಿಂದ, ಯೀತನ ಸ್ತಳ ಮನೆ ಯಾವತ್ತೂ ಬಹುಕಾಲದಿಂದ ಯೀ ಸ್ತಳದಲ್ಲಿ ಸ್ತಾಯಿ ಆಗಿ ಮುಖ್ಯವಾಗಿ ಕಾದುಕೊಂಡು ಯಿರತಕ್ಕವನಾಗಿ ಹೇಳಿಕೊಂಡದ್ದರಿಂದ, ಯೀ ಪೂರ್ವತ್ರವನ್ನು ಚಿತ್ತಕ್ಕೆ ತಂದು, 'ಪೂರ್ವದ ಸ್ತಳವಂದಿಗನಹುದು' ಯಂದು ತಿಳದ್ದರಿಂದ, ಪ್ರಾಕು ಪ್ರಕಾರ ಯರಡು ಸ್ತಳದ ಶ್ಯಾನುಭಾಗರ ಯಿನಾಮು ಗ್ರಾಮಗಳ ಬಗ್ಗೆ ಸಹ ಅಪ್ಪಣೆ ಕೊಟ್ಟು, ಆಮೇಲೆ ಯೀತನಿಗೆ ಆ ಮನೆ[>ಅರಮನೆ] ಬೊಕ್ಕಸದಿಂದ ಉಡುಗೊರೆ ತರಶಿಕೊಟ್ಟರು. ಪಾಲ್ಕಿ ೧, ಆಪ್ತಾಗಿರಿ ೧, ಚೌರಿ ೧, ಯೀ ಪ್ರಕಾರ ಬಹುಮಾನವನ್ನು ಕೊಟ್ಟು

ಯಿದ್ದವರಿಗೆ ಉಮ್ಮಳಿ ಬಗ್ಗೆ ಲಿಂಗಾಪುರದ ಗ್ರಾಮವನ್ನು ಹಾಕಿಕೊಟ್ಟು, ಪ್ರಾಕು ಪ್ರಕಾರ ಗ್ರಾಮಾನುಗ್ರಾಮಗಳಲ್ಲಿರುವ ಹೊಲಗಳು ದರಿಬೆದ್ದಲು ಸಹವಾಗಿ ನಡಿಯುವಂತೆ ಅಪ್ಪಣೆಕೊಟ್ಟು ನಡಶಿದರು.

ಸೂಳೆಕೆರೆ ಶೀಮೆ ವಳಿತವಾದ ನವಲಿಹಾಳು ಗ್ರಾಮದಲ್ಲಿ ಯಜಮಾನ ಗಿಣಿವಾಲದ ತಿಮ್ಮೈಯ್ಯನು ಗ್ರಾಮಕ್ಕೆ ರಾಯತಭೋಗ್ಯವನ್ನು ಅನುಭವಿಸಿ ಬಂದವನ್ನ ಪ್ರಾಕು ಪ್ರಕಾರ ಜೀರ್ನ್ನೊದ್ಧಾರವನ್ನು ಮಾಡಿ ಕೊಟ್ಟದ್ದೇವ[>ವೆ]. ಶಖ ೧೧೮೪ನೆ ದುಂದುಭಿ ಸಂವತ್ಸರದ ದಾನಪಟ್ಟಿ. ಯಿದು ಹೊರತು ಕುಂಚಗಾರನಹಳ್ಳಿ ಗ್ರಾಮದಲ್ಲಿ ಹಣುಮಪ್ಪನಾಯಕರ ಹೆಂಡತಿ ಗಿರಿಯುವ್ವನಾಗತಿಯುವರು ವಂದು ಕೆರೆಯುನ್ನು ಕಟ್ಟಿಶಿಯಿದ್ದಾರೆ. ಯೀಗಲೂ "ಗಿರಿನಾಗಕ್ಕ[>ತ್ತಿ]ಕೆರೆ"ಯಂಬದಾಗಿ ಹೆಸರು ಆಗಿಯಿದೆ. ಯಿವರ ಮಕ್ಕಳು ಯಿಮ್ಮಡಿ ಕೆಂಗೆಹನುಮಪ್ಪನಾಯಕ ಶಕೆ ೧೪೧೨ನೆಯ ಪ್ರಮೋದೂತ ಸಂವತ್ಸರದ ವರಿಗೆ ವರುಷ ೩ ಆಳಿದರು. ಯಿವರು ಕಟ್ಟಿಸಿದ ಕೆರೆಗಳ ವಿವರ:

ಸಾಸಿವೆಹಳ್ಳಿ ಗ್ರಾಮದ ಉತ್ತರಭಾಗದಲ್ಲು ವಂದು ಕೆರೆ ಕಟ್ಟಿಶಿ, ಯೀ ಕೆರೆಯನ್ನು ಕಟ್ಟಿಸತಕ್ಕದಕ್ಕೆ ಹವಾಲೆ ವೀರನಾಯಕನ ಯಿಟ್ಟು, ಕೆರೆಯನ್ನು ಕಟ್ಟಿಶಿದ್ದರಿಂದ "ಯೀರನಾಯಕನ ಕೆರೆ"ಯಂಬದಾಗಿ ಜನರು ಹೇಳುತ್ತಾ ಯಿದ್ದಾರೆ.

ಹೊಸಹಳ್ಳಿ ಗ್ರಾಮದಲ್ಲಿ ವಂದು ಕೆರೆಯನ್ನು ಕಟ್ಟಿಶಿ, ಯೀ ಕೆರೆ ಹವಾಲೆ ಬಾಲನಾಯಕಯಂಬನ ಯಿಟ್ಟದ್ದರಿಂದ, ಕೆರೆ ಕಟ್ಟಿಶಿದ್ದರಿಂದ "ಬಾಲನಾಯಕನ ಕೆರೆ" ಯಂಬಥಾ ಕರಶಿಕೊಳ್ಳುತ್ತಾರೆ.

ಯೀ ಪ್ರಕಾರ ಕೆರೆಯನ್ನು ಕಟ್ಟಿಶಿ ರಾಜ್ಯವನ್ನು ಆಳುತ್ತಾ ಯಿದ್ದರು. ಯಿವನ ಮಗ ನಿತ್ಯಮದವಣಿಗ ಹನುಮಪ್ಪನಾಯಕನ[>ನು] ಶಕ ೧೫೦೨ನೆ ವಿಕ್ರಮ ಸಂವಸ್ತರದ ವರಿಗೆ ವರುಷ ೧೦ ಆಳಿದರು.

ಯಿವರ ಮಕ್ಕಳು ಚಿಕ್ಕ ಕೆಂಗಪ್ಪನಾಯಕರು ಹಿರೆ ಕೆಂಗೆ ಹನುಮಪ್ಪನಾಯಕರು ಸಹ ಶಕ ೧೫೦೩ನೆ ವಿಷುಸಂವತ್ಸರದಾರಭ್ಯ ಚಿತ್ರಭಾನು ಸಂವತ್ಸರದ ವರಿಗೆ ವರುಷ ಉಭಯತ್ರರು ರಾಜ್ಯವನ್ನು ಆಳಿಕೊಂಡು ಬರುತ್ತಾಯಿದ್ದರು. ಉಭಯತ್ರರಿಗೂ ⌒ಕಟ್ಟಿನಾಯಕ ಹೊಸೆಯ⌒ ಚಿಕ್ಕ ಕೆಂಗೆಹನುಮಪ್ಪನಾಯಕರು ಬಾಣಾವಾರಕ್ಕೆ ಹೋದರು.

ಯೀ ಹಿರೆ ಕೆಂಗೆ ಹನುಮಪ್ಪನಾಯಕರು ಬಸವಾಪಟ್ಟಣದಲ್ಲು ನಿಂತು, ಶಕ ೧೫೬೦ನೆಯ ಬಹುಧಾನ್ಯ ಸಂವತ್ಸರದ ವರಿಗೆ ವರುಷ ೫೬ ಆಳಿದರು. ಯೀ ಪ್ರಕಾರ ತರೀಕೆರೆಯವರು ಆಳುತ್ತಾ ಯಿರುವಾಗ್ಗೆ, ಬಂ[>ಭಾ]ಗಾನಗರದಿಂದ ವಜೀರ ರಣದುಲ್ಲಾಖಾನರು ಫಲುಜ ಸಹಿತವಾಗಿ ಬಂದು, ಯಾವತು ಪಾಶೆ[>ಳೆ]ಕಾರರನೆಲ್ಲ ಮುರಿದರು. ಬಸರಾ[>ವಾ]ಪಟ್ನದ ಕೋಟೆಯನ್ನು

---

* ಇಲ್ಲಿ 'ಮನಸ್ತಾಪಹುಟ್ಟಿ' ಅರ್ಥದ ಶಬ್ದ ಬೇಕು (ಸಂ)

ಹಲ್ಲಾ ಮಾಡಿ ತೆಗೆದುಕೊಂಡು, ಯಿ ಬಸರಾ[ವಾ]ಪಟ್ನಕ್ಕೆ ತನ್ನ ಬಗೆ ಮೃತ್ಯುಜಾನಗ[>ಮುರ್ತುಜಾಬೇಗ]ರವನ್ನು ಟಾಣ್ಯ ಯಿಟ್ಟು, ಯೀ ಹಿರೆ ಕೆಂಗಪ್ಪನಾಯಕನು ತನ್ನಕ[>ವ]ರ ಸಂಗಡ ಕರಕೊಂಡು ಭಾಗಾನಗರಕ್ಕೆ ಹೋದರು. ಶಕ ೧೫೬೧ನೆಯ ದುರ್ಮುಖಿ ಸಂವತ್ಸರದ ವರಿವಿಗೆ ೮ ವರುಷ ಆಳಿದರು. ವಿವರ:

ಭುಜಬಲರಾಮ [೧]	೫ ವರುಷ
ಪತ್ತೆಖಾನರು	೨ ವರುಷ.

೧೬

ಸದರಿ ರಣದುಲ್ಲಾಖಾನರಿಗೆ ಅಗ್ರಹಾರದ ಯಜಮಾನರು ಪ್ರಾಕು ತರಿಕೆರೆ ಅರಸುಗಳ ಕಾಲದಲ್ಲಿ ನಡದು ಬಂದ ಪ್ರಕಾರದಲ್ಲಿ ನಡಶಿಕೊಂಡು ಬರಬೇಕೆಂಬದಾಗಿ ಕೇಳಿಕೊಂಡದ್ದರಿಂದ, ಕುಣಿಗಲಗಟ್ಟಿ, ಆರೂರರ ಯಜಮಾನ ಶೇ[>ಕೋ]ರಿಶೆಟ್ಟಿ, ಬಲಿಮಲ್ಲೂರ ಯಜಮಾನ ಕೊಂಡಿ[>ಕೋರಿ]ಶೆಟ್ಟಿ ಸಹ ಹುಜೂರ ಬರಶಿ ಹೇಳಿಕೊಂಡ ಸಮಂದ್ದ ಧಣೇರ ಚಿತ್ತಕ್ಕೆ ತಂದು, ಹನುಮನಾಯಕರು ಕಾಲವಾದ್ದರಿಂದಾ ನೋಡಿ, ಅದೇ ಪ್ರಾಕಾರವೇ ನಡಸುವಂತೆ ಶಕ ಸಂ ೧೦೪೧[>೧೫೬೦]ನೇ ಯಲ್ಲು ಯೀ ಯರಡು ಗ್ರಾಮದ ಅಗ್ರಹಾರದ ಬಗ್ಗೆ ಬರಶಿಕೊಟ್ಟ ಫರವಾನೆ.

ಯೀ ಪ್ರಕಾರ ಹದಿನೇಳು ವರುಷ ರಾಜ್ಯವನ್ನು ಆಳಿಕೊಂಡು ಯಿರುವಲ್ಲಿ ಬಾಣಾವಾರದಲ್ಲು ಯಿದ್ದ ಸಣ್ಣ ಕೆಂಗೆಹನುಮಪ್ಪನಾಯಕರು 'ತಮ್ಮ ಅಣ್ಣ ಹಿರೆ ಕೆಂಗೆಹನುಮಪ್ಪನಾಯಕರ ಬಾಹಾ[>ಗಾ] ನಗರಕ್ಕೆ ಕರಕೊಂಡು ಹೋದರು ಯಂಬದಾಗಿಯೂ, ಯಿವರು ಭಾಗಾನಗರಕ್ಕೆ ಹೋಗಿ, ಅಲ್ಲಿ ಪಾದಷಾರ ಕಂಡು, ಮರ್ಜಿಕಾದುಕೊಂಡು ಯಿರುತ್ತಾ ಯಿದ್ದಲ್ಲಿ, ವಂದಾನೊಂದು ದಿವಸ ಪಾದಷಹಾರು ಹುಲಿಕಾಳಗವನ್ನು ಬಿ[>ನ]ಡಿಶಿ ಯಿದ್ದಲ್ಲಿ, ಯೀ ಚಿಕ್ಕ ಕೆಂಗೆಹನುಮಪ್ಪನಾಯಕರು ಹುಲಿ ಮೇಲೆ ಬಿದ್ದು ಹೊಡದ್ದರಿಂದ ಪಾದಷಾಹಾರು ಮೆಚ್ಚಿ, 'ಸರ್ಜಾ' ಯಂಬದಾಗಿ ಕಿತಾಬು ಕೊಟ್ಟು, ಹಸುರು ಪಾಲಕಿ, ಹಸುರು ಕೊಡೆ, ಹಸುರು ಢಾಲು ಮುಂತಾಗಿಯು ಕೊಟ್ಟು, ಸನ್ನದು ಕೊಟ್ಟು, "ಪೂರ್ವದ ಪ್ರಕಾರ ನೀಲು ಆಳುತ್ತಾಯಿದ್ದ ರಾಜ್ಯವನ್ನು ಆಳಿಕೊಂಡು ಬರುವದು"ಯಂಬಧಗಿ ಪರವಾನೆಯನ್ನು ಬರಶಿಕೊಟ್ಟದ್ದರಿಂದ, ಪುನಹ ಯಿವರು ಬಂದು ಠಾಣ್ಯ ಹಾಕಿದು, ಶಕ ೧೫೭೮ ದುರ್ಮುಖ ಸಂವತ್ಸರದ ಆರಭ್ಯ ಶಕ ೧೫೭೯ನೆಯ ವಿಳಂಬಿ ಸಂವತ್ಸರದ ವರಿಗೆ ವರುಷ ೧ ಆಳಿದಾಗ್ಯೆ, ಯೀ ಮಲ್ಲೂರ ಸಹಿತವಾಗಿ ಬಸವಾಪಟ್ಟಣದಲ್ಲಿ ನಡದು ಬಂತು.

ಯೀ ಸರ್ಜಾ ಕೆಂಗೆಹನುಮಪ್ಪನಾಯಕರು ಬರಶಿಕೊಟ್ಟು ದಾನಪಟ್ಟಿ: ಯೀ ಸ್ಥಳದ ಪುರಾಣಿಕ ಅಹೋಬಳಶಾಸ್ತ್ರಿಗಳಿಗೆ ಶ್ರೋತ್ರಿಯಮಾನ್ಯವಾಗಿ ಅಗ್ನಿಹೋತ್ರವನ್ನು ಯಿಟ್ಟುನಡಸುವ ಬಗ್ಯೆ ಬರಶಿಕೊಟ್ಟ ಮಕಾಸಾ ಪಟ್ಟೆ, ಪ್ರತಿದಾನಶಾಸನವಾಗಿರುವದಾಗಿ ಬರದ ದಾನಪಟ್ಟಿ.

ಯೀ ಪ್ರಕಾರ ಚಿಕ್ಕ ಕೆಂಗೆಹನುಮಪ್ಪನಾಯಕರು ಆಳುತ್ತಾ ಯಿದ್ದಲ್ಲಿ, ಯಿಕ್ಕೇರಿಸಂಸ್ತಾನದ ಅರಸುಗಳು ಶಿವಪ್ಪಾ ನಾಯಕರು ತಮ್ಮ ದಂಡು ಸಹಿತವಾಗಿ ಬಂದು, ಯೀ ಮಲ್ಲೂರ ಶೀಮೆಯನ್ನು

ಠಾಣ್ಯ ಹಾಕಿಕೊಂಡಲ್ಲಿ, ಶಕ ೧೫೭೭ನೆಯ ಹೇವಳಂಬಿ ಲಾಗಾಯತು ೧೫೮೪ ನೆಯ ಶುಭಕೃತು ಸಂವತ್ಸರದ ವರಿಗೆ ವರಷ ೫ ಪರಿಯಂತ್ರ ಬಿದರೂರ ಸಂಸ್ಥಾನಕ್ಕೆ ಯೀ ಮಲ್ಲೂರ ಶೀಮೆಗೆ ಸೇರಿ ನಡದು ಬಂತು. ಯೀ ಶೀಮೆ ಅಧಿಕಾರವ ಕರೆಭದ್ರಿಯಯಂಬವಗೆ ಪಾರುಪತ್ಯವನ್ನು ಕೊಟ್ಟು ರಾಜ್ಯವನ್ನು ಆಳಿದರು. ಯಿವರ ಕಾಲದಲ್ಲಿ ಹುಟ್ಟಿದ ನಿರೂಪಗಳು"

ಕುಣಿಗಲಗಟ್ಟೆ ಅಗ್ರಹಾರದ ಬಗ್ಯೆ ಯೀ ಅಗ್ರಹಾರದ ಯಜಮಾನ ಮಹಾಜನಂಗಳು ಸಹಾ ಹುಜೂರು ಬಂದು ಹೇಳಿಕೊಂಡಲ್ಲಿ, ಪೂರ್ವಾಪರವನ್ನು ವಿಚಾರಿಸಿ ಪ್ರಾಕಾರಭ್ಯವಾಗಿ ನಡದು ಬಂದ ಮೇರಿಗೆ ಮುಂದೂ ಯಿದೇ ಪ್ರಕಾರ ಸಾಧಾರಣ ನಡಸುವಂತೆ ನಿರೂಪ ಶಕ ೧೫೮೦ನೆ ವಿಳಂಬಿ ಸಂವತ್ಸರದ . . . . . . ಯಲ್ಲು ತಮ್ಮ ಕಡೆ ಹವಾಲೆದಾರ ಕರೆಭದ್ರನಿಗೆ ಬರಕೊಟ್ಟ ತಾಕೀತಿ ನಿರೂಪ–೧.

ಬೆಲಿ[>ಬೇಲಿ]ಮಲ್ಲೂರು ಅಗ್ರಹಾರದ ಬಗ್ಗೆ ಬರಶಿಕೊಟ್ಟ ನಿರೂಪ ಯರಡು. ಅಗ್ರಹಾರದ ಬ್ರಾಂಹರು ಹುಜೂರು ಬಂದು ಹೇಳಿಕೊಂಡದ್ದರಿಂದ ಪ್ರಾಕು ಪ್ರಕಾರ ಉತ್ತರವ ಕೊಟ್ಟು ನಡಶಿ ಬಾಹಂತೆ ಕರೆಬದ್ರನ ಹೆಸರಿನ ನಿರೂಪ–೧.

ಶಕ ೧೫೮೨ನೆಯ ಶಾರ್ವರಿ ಸಂವತ್ಸರದ ಮಾರ್ಗಶಿರ ಶುದ್ದ ೨ಲು ಯಿಕ್ಕೇರಿ ಸಂಸ್ಥಾನದ ಪಟ್ಟವನಾಳುತ್ತಾ ಯಿದ್ದಾ ಶಿವಪ್ಪನಾಯಕರು, ಶಿವಪ್ಪನಾಯಕರ ಹೆಸರಿನಲ್ಲಿ ಬರಶಿಕೊಟ್ಟ ನಿರೂಪ–೧.

ಕುಣಿಗಲಕಟ್ಟೆ ಅಗ್ರಹಾರದ ಯಜಮಾನ ಮಹಾಜನಂಗಳು ಸಹವಾಗಿ ಹುಜೂರು ಬಂದು ತಮ್ಮ ಅಗ್ರಹಾರದ ವಿಚಾರವನ್ನು ಹೇಳಿಕೊಂಡು, "ತಮ್ಮ ಗ್ರಾಮಕ್ಕೆ ಮೇಲುವಾಶಿ ಹಣಾ ಹೆಚ್ಚಾಗಿ ಕಟ್ಟಿಯಿದ್ದೆ[>ದೆ]"ಯಂದು ಹೇಳಿಕೊಂಡಲ್ಲಿ, ಆ ಬಗ್ಯೆ ಹೆಚ್ಚು ಕಟ್ಟಿದ ಮೇಲುವಾಶಿ ಯಿಪ್ಪತ್ತು ವರಹಾವು ವುತ್ತರವ ಕೊಟ್ಟು, ಯೀ ಹಣ ಹೊರ್ತಾಗಿ ನಡಶಿಬರುವಂತೆ ಯೀ ಹವಾಲಿದಾರ ಕರೆಬದ್ರನಿಗೆ ಬರಶಿಕೊಟ್ಟು ನಿರೂಪ–೧.

ಬೇಲಿ ಮಲ್ಲೂರು ಅಗ್ರಹಾರದ ಬಗ್ಗೆ ಬರಶಿಕೊಟ್ಟ ನಿರೂಪ: ಅಗ್ರಹಾರದ ಮಹಾಜನಂಗಳು ಹುಜೂರು ಬಂದು, "ತಮ್ಮಾ ಅಗ್ರಹಾರಕೆ ಮೇಲುವಾಶಿ ಹಣ ಹೆಚ್ಚು ಕಟ್ಟಿಧಾರೆ, ಯೀ ಬಗೆ ಹಣವನ್ನು ಉತ್ತರವ ಕೊಡಬೇಕೆಂ"ದು ಹೇಳಿಕೊಂಡದ್ದರಿಂದ, "ಸದರಿ ಯೀ ಗ್ರಾಮಕ್ಕೆ ಕಟ್ಟಿಯಿದ್ದು ಮೇಲುವಾಶಿ ಹಣ ಗ–೨೫೦ ವರಹವನ್ನು ಉತ್ತರವ ಕೊಟ್ಟು ಯಿದ್ದೇವೆಂಬದಾಗಿ, ಮುಂದೆ ಸರಾಗದಲ್ಲಿ ಯೀ ಹಣ ಹೊರ್ತಾಗಿ ನಡಶಿ ಬರುವಂಥೆ" ಬರಶಿ ಕೊಟ್ಟ ನಿರೂಪ–೧.

ಯೀ ಪ್ರಕಾರ ಅಗ್ರಹಾರ, ಭಟಮಾನ್ಯ, ದೇವತಾ ಉತ್ತಾರ ಸಹಿತವಾಗಿ ನಡಶಿಕೊಟ್ಟು ಸುಖದಿಂದ ಆಳುತ್ತಾ ಯಿರುವದರೊಳಗೆ, ಮೊಗಲರ ಕಡೆ ಶೌರ್ಯದಿಂದ ಸರ್ಜಿಖಾನರು ದಂಡು ಸಹಿತವಾಗಿ ತೆಗೆದುಕೊಂಡು ಬಂದು, ಬಸವಾಪಟ್ನದಲ್ಲಿ ಚಿಕ್ಕ ಕೆಂಗೆಸರ್ಜೆಹನುಪ್ಪನಾಯಕರಿಗೆ ಬಲ ತಪ್ಪಿದ್ದರಿಂದ ಸಹಾ ಯಿ ಸರ್ಜಿಖಾನನು ಬಸವಾಪಟ್ನಕ್ಕೆ ಠಾಣ್ಯ ಹಾಕಿಕೊಂಡದ್ದು, ಶಕ ೧೫೮೫ನೆಯ ಶೋಭಕೃತು ಸಂವತ್ಸರದಲ್ಲು, ಕೋಟೆಯನ್ನು ತೆಗೆದುಕೊಂಡು ಆಳಿದ್ದು, ಸದರಿ ಶೋಭಕೃತು ಸಂವತ್ಸರದ ಲಾಗಾಯಿತು ೧೬೦೩ನೆ ದುರ್ಮುಖಿ ಸಂವತ್ಸರದ ಪರಿಯಂತ್ರ ವರುಷ ೧೯ ಆಳಿದ ವಿವರಾ:

ಸರಜಾಖಾನರು ಆಳಿದ ವರುಷ ೧೫, ಯೀತನ ಕಡೆ ಮಹಮ್ಮದುಸೊರಕ ಬೇಗರು ೫, ಯೀತನ ಬಗೆ ಖಾಶಿಂಖಾನರು. ಅಂತು ವರುಷ ೧೯. ಯಿವರು ಧರ್ಮಾರ್ಥವಾಗಿ ಬರಶಿಕೊಟ್ಟ ಪರವಾನೆ ವಿವರ:

ಬೇಲಿಮಲ್ಲೂರ ಗ್ರಾಮಕ್ಕೆ ಯಜಮಾನ ಲಕ್ಷಣಭಟ್ಟನು ಹುಜೂರ ಬಂದು "ಕೋಟೆ ಮಲ್ಲುರು ಅಗ್ರಹಾರದಲ್ಲು ಪ್ರಾಕು ಕೆಂಗೆ ಹನುಮಪ್ಪನಾಯಕರ ಕಾಲದಾರಭ್ಯ ಯಿದು ವರಿಗು ಶಿಲಶಿಲೆ ಅಗ್ರಹಾರಉ ನಡದು ಬಂತು. ಅದೆ ಮೇರಿಗೆ ಪರವಾನೆ ಅಪ್ಪಣೆ ಆಗಬೇಕೆಂ"ಬದಾಗಿ ಸ್ತಳದ ಭೋಗಪಟ್ಟೆ ಹನುಮಪ್ಪನಾಯಕರಸನ ಮಗ ಕೋರಿ ಸೇರನ್ನು ನೋಡಿ, ಪೂರ್ವ ಪ್ರಕಾರ ನಡುವಂತೆ ಅಗ್ರಹಾರದ ಬಗ್ಗೆ ಬರಶಿಕೊಟ್ಟ ಪರವಾನೆ.

ಖಾಶಿಂಖಾನರ ಪರವಾನೆ ಬಗ್ಗೆ ೧೧೭೦ಲು ತನ ತಾಕೀತಿ ಅಗ್ರಹಾರ ಭಟಮಾನ್ಯಗಳಿಗೆ ಬರಶಿಕೊಟ್ಟ ತಾಕಿತಿ ಉತ್ರ-೧.

ಯೀ ಸ್ತಳದ ಪುರಾಣೀಕರ ಅಹೋಬಳಶಾಸ್ತ್ರಿಗಳಿಗೆ ಬರಶಿಕೊಟ್ಟ ಸನ್ನದು ೪ಕೆ ವಿವರ:

ಸನ್ನದು ಸಹ ಸನ್ ೧೧೭೫ ಯಲ್ಲು ಸದರಹು ಅಹೋಬಳಶಾಸ್ತ್ರಿಗಳು ಯೀ ಸ್ತಳದ ನಾಡಿಗ ಸಹ ಹುಜೂರು ಬಂದು ಹೇಳಿಕೊಂಡದ್ದರಿಂದ ಪ್ರಾಕು ನಡದ ಮೇರಿಗೆ ಸ್ತಳದ ಭೊಗಪಟ್ಟೆಪ್ರಕಾರ ಭಟವೃತ್ತಿ ಬಗ್ಯೆ ಹಿರೆಬಾಗೂರವರಿಗೆ ಸಗಳಿ ಹೊಸಹಳ್ಳಿ ಹುಣಸೆಹಳ್ಳಿ ಸಾಸಿವೆಹಳ್ಳಿ ಮುಂತಾದ ಗ್ರಾಮಗಳಲ್ಲಿ ಯಿರುವ ಭಟಮಾನ್ಯವನ್ನು ಸರಾಗದಲ್ಲಿ ನಡದು ಬರುವಂತೆ ಬರಶಿಕೊಟ್ಟ [ಪ+]ರವಾನೆ.

೨. ಸನ್ನದು. ಸನ್ ೧೧೭೯ನೆ ಯಲ್ಲು ಲಿಂಗಾಪುರ ಮುಂತಾದ ಗ್ರಾಮಗಳಲ್ಲಿ ಯಿರುವ ಭಟಮಾನ್ಯವನ್ನು ಸರಾಗದಲ್ಲಿ ನಡದು ಬರುವಂತೆ ಬರಶಿ ಕೊಟ್ಟ ಪರವಾನೆ.

ಸದರಿ ಮೇರಿಗೆ ಮೊಗಲರು ಆಳುತ್ತಾ ಯಿದ್ದಲ್ಲಿ, ಬಿದರೂರು ಸಂಸ್ತಾನದಿಂದ ಚನ್ನಮ್ಮಾಜಿಯವರು ಕೋಟೆಮಲ್ಲೂರು ಪೇಟೆಯನ್ನು ಠಾಣಾ ಹಾಕಿದ್ದು, ಶಕ ೧೬೦೩ನೆಯ ದುರ್ಮತಿ ಸಂವತ್ಸರದ ಲಾಗಾಯಿತು ಶಕ ೧೬೮೪ನೆಯ ಚಿತ್ರಭಾನು ಸಂವತ್ಸದ ವರಿಗೆ ವರುಷ ೮೧ ಆಳಿದರು.

ಚನ್ನಮ್ಮಾಜಿಯವರು ವರುಷ ೧೫, ತಿಂಗಳು ೪, ದಿನ ೨೦.

ಹಿರೆ ಬಸವಪ್ಪನಾಯಕರು ವರುಷ ೧೭, ತಿಂಗಳು ೫, ದಿನ ೧೧.

ಸೋಮಶೇಖರನಾಯಕರು ವರುಷ ೨೪, ತಿಂಗಳು ೪, ದಿನ ೨೩.

ಯೀತನ ಮಗ ಬಸವಪ್ಪನಾಯಕರು ವರುಷ ೧೫, ತಿಂಗಳು ೦೦, ದಿನ ೦.

ಚನ್ನಬಸವಪ್ಪನಾಯಕರು ವರುಷ ೨, ತಿಂಗಳು ೮, ದಿನ ೨೭.

ವೀರಮ್ಮಾಜಿಯವರ ಸಾಕು ಮಗ ವರುಷ ೫, ತಿಂಗಳು ೬, ದಿನ ೩.

ಸೋಮಶೇಖರನಾಯಕರು ಸಹ ವರುಷ ೦. ತಿಂಗಳು ೦. ದಿನ ೦.

ಯಿವರ ಕಾಲದಲ್ಲಿ ಅಗ್ರಹಾರ ಭಟಮಾನ್ಯ ದೇವತಾ ವುತ್ತಾರ ಸಹ ಬರಶಿಕೊಟ್ಟ ಧರ್ಮನಿರೂಪದ ವಿವರ:

೧ ಕುಣಿಗಟ್ಟೆ ಅಗ್ರಹಾರದ ನಿರೂಪ, ಕಾಮಲಾಪುರ ಸಹ ಚನ್ನಮ್ಮಾಜಿಯವರದು:

ವಾಸಿ ೧೬೦೪ನೆಯ ದುಂದುಭಿ ಸಂವತ್ಸರದ ಆಷಾಢ ಶುದ್ಧ ೧೧ಯಲ್ಲು ಯೀ ಅಗ್ರಹಾರದ ಬ್ರಾಂಹರು ಹುಜೂರು ಬಂದು ಹೇಳಿಕೊಂಡ ಸಂಬಂಧ, ಪ್ರಾಕು ಹಿರೆ ತರ್ಕರು[>ಕರ್ತರು] ಬರಶಿಕೊಟ್ಟ ನಿರೂಪ ಪ್ರಮಾಣ ಅಂದಲು ಪೂರ್ವ ಮೇರಿಗೆ ನಡಶಿಕೊಡುವಂತೆ ಸ್ತಳದ ಶ್ಯಾನುಭೋಗ ಮೊದಲಾದ ಮಹಜನಂಗಳಿಗೆ ನಸಡುವಂತೆ ಬರದು ಕೊಟ್ಟದ್ದು–೧. ಕಮಲಾಪುರದ ಗ್ರಾಮದಲ್ಲು ಯೇಕಭೋಗ್ಯವಾಗಿ ನಡಸುವಂಥೆ ಶಕ ೧೬೪೮ನೆ ಪಾರಭವ ಸಂವತ್ಸರದಲ್ಲು ಪ್ರಾಕು ಹಿರೆ ಕರ್ತರ ಕಾಲದ ಆರಭ್ಯ ನಡದು ಬಂದ ಮೇರಿಗೆ, ಸರ್ವಾಧಿಕಾರಿ ನಿರ್ದ್ವಾ[>ರ್ವಾ]ಣೈಯ್ಯನವರ ಹೆಸರಿನಲ್ಲಿ ಬರಸಿಕೊಟ್ಟ ವಾಲೆ–೧.

ಸ್ತಳದ ಶ್ಯಾನುಭಾವಿಕೆ ಬಗ್ಗೆ ಬರಶಿಕೊಟ್ಟ ನಿರೂಪಗಳು:

೧. ನಿರೂಪ ೧ಕ್ಕೆ ೧೬೫೯ನೆಂಬ ಪಿಂಗಳ ಸಂವತ್ಸರದಲ್ಲು ಸೋಮಶೇಖರನಾಯಕರ್ರೈಯ್ಯನವರು ಯೀ ಸ್ತಳದ ಶ್ಯಾನುಭಾವಿಕೆಗೆ ಬರಶಿಕೊಟ್ಟ ನಿರೂಪು.

ನಿರೂಪು ೧ಕೆ ಶಕ ೧೬೬೪ನೆ ದುಂದುಭಿ ಸಂವತ್ಸರದಲು ಸೋಮಶೇಖರನಾಯಕರ ತಮ್ಮ ಬಸವಪ್ಪನಾಯಕರ ಹೆಸರಲ್ಲು ಸ್ತಳದ ಶ್ಯಾನುಭಾಗ ಶಿದ್ದಪ್ಪನಿಗೆ ಅರಿಕೆ ಆಗಿ, ಬರಶಿ ಕೊಟ್ಟದ್ದು. ಸುಂಕದ ಶ್ಯಾನುಭಾವಿಕೆ ಬಗ್ಗೆ ಶ್ರಿಂಗೇರಿಮಠಕ್ಕೆ ಕೂಡಲಿ ಶ್ರಿ ಶಂಕರಭಾರತಿ ಶ್ರಿ ಸ್ವಾಮಿಗಳವರಿಗೆ ಯೀ ಕೂಡಲ ಸಂಗಮದಲ್ಲಿ ಯಿರುವ ಶ್ರಿವೀರಶಂಕರ ಚಂದ್ರಮೌಳೇಶ್ವರದೇವರ ದೀಪಾರಾಧನೆ ನವರಾತ್ರೆಯ ಉತ್ಸವ ಅನ್ನಸಂತರ್ಪಣೆ ಬಗ್ಗೆ ಸಹ ಪ್ರಾಕು ತರಿಕೆರೆ ಹನುಮಪ್ಪನಾಯಕರು ಬರಶಿಕೊಟ್ಟ ದಾನಪಟ್ಟೆಯನ್ನು ಮಠದ ಪಾರುಪತ್ಯೆಗಾರ ನರಸಿಂಹಭಟ್ಟರು ವಿರೂಪಾಕ್ಷಶಾಸ್ತ್ರಿಗಳು ಸಹ ಹುಜೂರು ಬಂದು ತೋರಿಸಿ, ಪ್ರಾಕು ಹಿರೆಕರ್ತರು ಕಾಲದಾರಭ್ಯವಾಗಿ ನಡದು ಬಂದ ಬಗ್ಯೆ ಸಹವಾಗಿ ಕೋಳಿವಾಡದ ಬೊಮ್ಮರಸೈಯ್ಯ, ಕರಣೀಕ ಕೋನೈಯ್ಯ ಸಹ ಹೇಳಿಕೊಂಡದ್ದರಿಂದ ಈ ಶಕ ೧೬೦೪ನೆ ದುಂದುಭಿ ಸಂವತ್ಸರದ ಮಾಘ ಬಹುಳ ೧೪ ಶಿವಯೋಗದಲ್ಲು ಶಿವಾರ್ಪಿತವಾಗಿ ಯೀ ಶೀಮೆಯನ್ನು ವುತ್ತಾರದ ಅಗ್ರಹಾರದ ಭಟಮಾನ್ಯ ದೇವತಾ ಉತ್ತಾರ ನಾಡಿಗನ ಉಂಬಳಿ ಸಹ ಕಳದುನಿಂತ ಶಿಸ್ತಿನ ಭೂಮಿಯನ್ನು ಶಿವಾರ್ಪಿತವಾಗಿ ಕೊಟ್ಟು ಯಿದ್ದೇವೆ. ಯೀ ಭೂಮಿಯಲ್ಲು ಯೇನು ಹುಟ್ಟದಾಗ್ಯೂ ಮಠಕ್ಕೆ ಸರಾಗದಲ್ಲಿ ನಡಸುವಂತೆ ಬರಶಿಕೊಟ್ಟ ನಿರೂಪ.

ಸಾಸಿವೆಹಳ್ಳಿ ಕೋಟೆ ಕಟ್ಟಿದು:

ಯೀ ಪ್ರಕಾರ ಧರ್ಮವನ್ನು ನಡಸುತ್ತಾ ಮಲ್ಲೂರು ಯೀ ಶೀಮೆಯನ್ನು ಠಾಣ್ಯವನ್ನು ಬಲಕಾಯಿಶಿಕೊಂಡು ಯಿರುತ್ತಾ ಯಿರುವಲ್ಲಿ, ಸಾಸಿವೆಹಳ್ಳಿ ಕಂಚುಗಾವ[>ರ]ನಹಳ್ಳಿ ಸಹ ನಡುಗುಡ್ಡದಲ್ಲಿ ಯಿರುತ್ತಾ ಯಿದ್ದಲ್ಲಿ, ಹುಲಿ ವುಪದ್ರದಿಂದ ಮಾರ್ಗಸ್ತರು ತಿರುಗುವದೂ ಯಿಲ್ಲದಿದ್ದಲ್ಲಿ, ತಿರಿಗೆ ಮೊಗಲಾಯಿ ಠಾಣ್ಯವನ್ನು ಆಯಿತು. ಯೀ ವಿವರವನ್ನು ನಾಡಿಗದ ದೊಡ್ಡಶಿವಪ್ಪನು ಅರಿಕೆ ಮಾಡಿಕೊಂಡು, "ಯೀ ಸ್ತಳದಲ್ಲಿ ಕಿಲ್ಲೆಗಳನ್ನು ಕಟ್ಟಿಸಿದಲ್ಲಿ ಗಡಿ ಸರಹದ್ದಿನಲ್ಲು ಗಡಿಶೀಮೆ ಬಚಾವ ಆಗುತ್ತಾ ಯಿದೆ" ಯಂಬದಾಗಿ ಹೇಳಿಕೊಂಡ ಪ್ರಾಕಾರ ಯೀ ಪುರ್ವೋತ್ರವನ್ನು ಮನಸ್ಸಿಗೆ ತಂದು, ನಗರದ ಅರಸು ಸೋಮಶೇಖರನಾಯಕರು ತಮ್ಮ ಸಂಸ್ಥಾನದಲ್ಲಿ ಯಿದ್ದ ಗಾಜನೂರು ತಿಮ್ಮಪ್ಪಯ್ಯಗೂ ಯೀ ನಾಡಿಗ ಶಿದ್ದಪ್ಪಗೆ ಸಹ ಅಪ್ಪಣೆಕೊಟ್ಟು, ಸರಕಾರದ ಬೊಕ್ಕಸದಿಂದ ಹಣಾ ಕೊಟ್ಟು, ಕೋಟೆಯನ್ನು

ಕಟ್ಟುವ ಬಗ್ಯೆ ಅಪ್ಪಣೆಯು ಆಗಿ ಬಂದು, ಯೀ ಸಾಸಿವೆಹಳ್ಳಿಯಂಬ ಗ್ರಾಮದ ಬಳಿಗೆ ಬಂದು, ಯೀ ಸ್ಥಳದಲ್ಲಿ ಕಿಲ್ಲೆ ಕಟ್ಟೊ ಬಗ್ಗೆ ಆಯಿಕಟ್ಟು ಆದ ಸ್ಥಳಗಳ ನೋಡಿದರೆ ವಂದು[>ದೂ] ಪಸಂದು ಆಗದ್ದರಿಂದ, ಯೀ ತುಂಗಭದ್ರಾದಡದಲ್ಲಿ ಯಿರ್‍ರುವ ಸ್ತಳದಲ್ಲು ಕಿಲ್ಲೆ ಕಟ್ಟುವ ಬಗ್ಯೆ ಆಯಿಕಟ್ಟು ಸ್ಥಳಾಯಂಬದಾಗಿಯೂ ಯೋಚಿಸಿದಲ್ಲಿ, ಆ ಸ್ಥಳದಲ್ಲಿ ಮಹತವಾದಂಥಾ ಬಿದಿರುಮೆಳೆ ಅತ್ತಿಮರ ಆಲದಮರ ಸಹ ಕಾನನವಾಗಿ, ಯೀ ಬಿದಿರು ಮೆಳೆಯಲ್ಲಿ ವಂದು ಚೌಡಿಯು ಯಿದ್ದಲ್ಲಿ, ಯಿಂತಿವರ ಸೈನ್ಯವನ್ನು[>ಸೈನ್ಯವು] ಮೆಳೆಯನ್ನು ಕಡು[>ಡಿ]ವ ಬಗ್ಗೆ ಕಾಮಾಟದವರ ಹಚ್ಚಿದ್ದರಿಂದ, ಸಂಗಡ ಯಿದ್ದ ನಾಡಿಗ ದೊಡ್ಡ ಸಿದ್ದಪ್ಪನು "ಯೀ ಸ್ತಳದಲ್ಲಿ ಬಹುಕಾಲದಾರಭ್ಯ ವಂದು ಚೌಡಿ ಯಿರುತ್ತಾ ಯಿದೆ. ಯೀ ಮೆಳೆಯನ್ನು ಕಡಿಸಬೇಡಿ" ಯಂಬದಾಗಿ ಯಷ್ಟೆ ಹೇಳಿದಾಗ್ಯೂ ಕೆಳದೆ ತಾನೆ ನಿಂತು ಆ ಮೆಳೆಯನ್ನು ಕಡಿಸಿ, ಕೋಟೆ ಹಾಕುವ ಬಗ್ಗೆ ಪ್ರಾರಂಭ ಮಾಡುವದೊರಳಗೆ ಆ ಚೌಡಿ ಉಪದ್ರದಿಂದಲು ಯೀ ತಿಮ್ಮರಸೈಯ್ಯಗೆ ಬಹಳ ಜಡವಾಗಿ, ಅಲ್ಲಿ ನಿಲ್ಲಲಾರದೆ ತುರುವದ ಗಡಿಗೆ ಬಂದು ಅಲ್ಲಿ ಮೃತನಾದನು.

ಯಿಷ್ಟರ ಮೇಲೆ ಯೀ ವರ್ತಮಾನವನ್ನು ಅರಸುಗಳು ಪರಾಂಬರಿಸಿ ಪುನಹ ಗೋವನಕೊಪ ಬಸವಪ್ಪನಿಗೆ ಕೋಟೆಯನ್ನು ಕಟ್ಟಿಸುವ ಬಗ್ಗೆ ಅಪ್ಪಣೆಕೊಟ್ಟದ್ದರಿಂದ, ಯೀತನು ಪ್ರಾಕು ಹಳೆ ಆ ಲಿಂಗದ ಗೋಡೆಯನ್ನು ಮುರಿಶಿ, ಯೀ ಕೋಟೇನು ಕಟ್ಟಿದು ಶಕ ೧೬೪೮ನೆಯ ಭಾವಸಂವತ್ಸರದಲ್ಲು, ಕೋಟೆ ಕಟ್ಟಿ ಯೀ ಕೋಟೆಯಲ್ಲು ಚೌಡಿಕೊಪ್ಪವು ಯಂಬದಾಗಿ ಹೆಸರು ಯಿಟ್ಟು, ಯೀ ಕೋಟೆಕಾವಲಿಗೆ ಜನ ೩೦೦ ಠಾಣೆದಾರನ್ನ ಯಿಟ್ಟು, ಯೀ ಮೇರಿಗೆ ಕೋಟೆಯನ್ನು ಬಲಗೈಶಿದರು.

ಆ ತರುವಾಯ ಶಖ ೧೬೪೯ನೆಯ ಪ್ಲವಂಗ ಸಂವತ್ಸರದಲ್ಲು ಕಂಚುಗಾರನಹಳ್ಳಿಗ್ರಾಮಲು ಬಸವಾಪಟ್ನದ ಶೀಮೆಗೆ ಗಡಿಸರಹದ್ದು ಕಣಿವೆಯಲ್ಲು ಹುದ್ಗಿ, ಹುಲಿ ಉಪದ್ರದಿಂದ ಸಹ ಕೋಟೆ ಕಟ್ಟುವದಕ್ಕೆ ಅಪ್ಪಣೆ ಆದ ಮೇರಿಗೆ, ನಾಡಿಗರ ಬಗ್ಗೆ ತಿಮ್ಮರಸೈಯ್ಯನು ಕಂಚಗಾರನಹಳ್ಳಿಕೋಟೆಯನ್ನು ಕಟ್ಟಿಶಿ, ಯೀ ಕೋಟಿಗೆ ಜನ ೨೦೦ ಠಾಣೆದಾರನ್ನು ಹಾಕಿಶಿ ಕೋಟ್ಟು, ಯೀ ಮೇರಿಗೆ ಗಡಿಕಿಲ್ಲೆಯನ್ನು ಬಲಕಾಯಿಶಿ ಯಿರುವದರೊಳಗೆ, ಯೀ ತಿಮ್ಮರಸೈಯ್ಯನು ಬರುತ್ತಾ ಮಧ್ಯಮಾರ್ಗದಲ್ಲಿ ಕಣಿವೆ ತಕ್ಕಲ ಹೊಬಳಿಯಲ್ಲಿ ಯೀತನ್ನ ವ್ಯಾಘ್ರ ಭಕ್ಷಿಸಿತು.

ಯೀ ಕೋಟೆಗಳಲ್ಲಿ ಯಿದ್ದ ಜನ ೬೦೦ಕ್ಕೆ ಯಿದ್ದ ಠಾಣೆದಾರ ವಿವರ : ಶಕ ೧೬೪೮ನೆಯ ಭಾವ ಸಂವತ್ಸರದ ಲಾಗಾಯಿತು ೧೬೮೪ನೆಯ ಚಿತ್ರಭಾನು ಸಂವತ್ಸರದ ವರಿಗೆ ವರುಷ ೩೬ ಠಾಣೆದಾರ ವಿವರ:

೧ ಬೆದಗುತ್ತಿ ವೆಂಕಟಪ್ಪನಾಯಕರು – ೫
೧ ಚನ್ನಪ್ಪನಾಯಕರು – ೪
೧ ಹಾವೇರಿ ಚನ್ನಪ್ಪನವರು – ೬
೧ ಹಾವೇರಿ ಬಸಪ್ಪನಾಯಕರು – ೪
೧ ಮಾಸಣೂರು ಬದ್ರಣನವರು – ೫

೫

೧ ಆನೆ ಮಹಲು ಸಾಂತವೀರಪ್ಪ

೧ ಚನ್ನಗಿರಿಯ ಬೋಳುಬಸವಪ್ಪನವರು

೧ ಸಾಂತವೀರಪ್ಪನವರು ವರುಷ – ೨

೫ + ೩ ಯೇಕೂನ ಜನ ೮.

ಪಾರುಪತ್ಯ ಮಾಡಿದವರ ವಿವರ: ೧೬೦೪ನೆಯ ದುಂದುಭಿ ಲಾಗಾಯಿತು ೧೬೮೪ನೆಯ ಚಿತ್ರಭಾನು ಸಂವತ್ಸರದ ವರಿವಿಗೆ ವರುಷ ೮೧ಕ್ಕೆ ವಿವರ.

ಹೊನ್ನಾಳಿ ವಳ[>ಳಿ]ಗೆ ಕೂಡಿ ನಡದು, ಕೆಲಉ ದಿವ್ಸ ಪ್ರತ್ಯೇಕವಾಗಿ ಸಹ ಯೀ ಮೇರಿಗೆ ನಡದು ಬಂದು ಅದೆ.

ಮುದ್ದು ಬಸವಪ್ಪನವರು ವರುಷ	– ೪
ಮೋಹರೊಪಂತರು ವರುಷ	– ೬
ಮದವಂಕನಾಡ ಚನ್ನಪ್ಪ	– ೪
ಕೊನವಲ್ಲೆಹಲ್ಲ ನೀಲಪ್ಪ	– ವರುಷ ೩
ತಮ್ಮಣ್ಣನ ಗುರುಶಿದ್ದೈಯ್ಯ	– ೪
ಅಜಂಪುರದ ಕ್ರಷ್ಣಪ್ಪನವರು	– ೬
ರಾಮೈಯ್ಯ	– ೫
ಹೊನ್ನಾಳಿ ಚನ್ನಪ್ಪದೇವರು	– ೪
ಅಣ್ಣ ಶಶಿ ಬಶೆಟ್ಟಿ	– ೫
ಅನಂತಪುರದ ಗಿರಿಯಪ್ಪ	– ೫
ಕೊಡಲಿ ಗೋಪಾಲೈಯ್ಯನವರು	– ೬
ಚನ್ನಗಿರಿ ಅಂತಪ್ಪನವರು	– ೩
ಪದಕಿ ವೆಂಕಪ್ಪನವರು	– ೩
ಬಿಲ್ಲಿ ವಡೇರ ಕುರುಮ ವೀರಪ್ಪ	– ೪
ವೀರನರಸೈಯ್ಯ	– ೪

ಕಂಡಾವಣಿ ಸ್ವಭಾನು ಸಂವತ್ಸರದ ವರಿಗೆ ವರುಷ ೮.

[೧]ಯೀ ಮೇಲೆ ಚಿತ್ರಭಾನು ಸಂವತ್ಸರದಲ್ಲು ದುರ್ಗದ ರಾಜ್ಯದ ಮದಕೆರೆ ನಾಯಕರ ಸಹ ಕರಕೊಂಡು, ಫೌಜು ಸಹ ತೆಗೆದುಕೊಂಡು ಬಂದು, ಬಿದರೂರಿಗೆ ಠಾಣ್ಯವನ್ನು ಹಾಕಿ ನಗರಾ ಯಂಬದಾಗಿ ಹೆಸರು ಯಿಟ್ಟು, ಶೀಮೆಯನ್ನು ಸಾಧಿಶಿ ರಾಜ್ಯವನ್ನು ಆಳಿದನು. ಆರಭ್ಯ ಸ್ವಭಾನು

* ಈ ಭಾಗ ಪು.೨೦೫–೨೦೬ ರಲ್ಲಿದೆ.

ಸಂವತ್ಸರದ ಲಾಗಾಯಿತು ದೊಡ್ಡನವಾಬರು ಟಿಪ್ಪುಸುಲತಾನ ಪಾದಶಹಾರ್‍ರು ಸಹ ಆಳಿದು ವಿರೋಧಿಕೃತು ಸಂವತ್ಸರದ ವರಿಗೆ ವರುಷ ೩೦ ಆಳಿದರು. ಯಿವರ ಕಾಲದಲ್ಲಿ ಮಾಮಲೆ ಮಾಡಿದವರ ವಿವರ:

ಕು[ತು?]ಂಶಿ ನಾರಣಯ್ಯನವರು ವರುಷ ೨, ಹೈದರ ಗಂ[>ಗಾ]ಜೀಖಾನ ಜಹಗೀರೆ ಮುದದು[>ಮಾಡಿದು] ವರುಷ ೧೬, ಯಿವರ ಜಹಗೀರಿಯನ್ನು ಸೇಖ ಅಯಾಜ ಜಪ್ತಿಮಾಡಿ ತೇಜೋಪಂತರಿಗೆ ಮಾಮಲೆ ಕೊಟ್ಟರು. ಯಿವರು ಮಾಡಿದ ವರುಷ ೩. ಕಂಚಿ ನರಹರಿರಾಯರಿಗೆ ಹೊನ್ನಾಳಿ ಮಲ್ಲೂರು ಶೀಮೆ ಸಹ ಮಾಮಲೆ ವರುಷ ೨. ವಿಶ್ವಾವಸು ಸಂವತ್ಸರದ ವರಿವಿಗೆ.

ಮಹಮ್ಮದು ಷರೀಫ ಹೊನ್ನಾಳಿ ಮಲ್ಲೂರು ಸಹ ದೈವೀಕದವರಿಗೆ ೩ ಸೌಮ್ಯಸಂವತ್ಸರದಲ್ಲು ಸಾಸಿವೆಹಳ್ಳಿ ಪ್ರತ್ಯೇಕಮಾಡಿ ತುಕುಡಿಯನ್ನು ಮಾಡಿ ದುಯಂಬಿರೆ ಯಂಬದಾಗಿ.

ಸೈದತಮಾಲ ಸಾಹೇಬರು ವರುಷ ೨ ಸಾಧಾರಣ ಸಂವತ್ಸರದ ಕಾರ್ತಿಕದ ವರಿಗೆ. ಯೀ ಪ್ರಕಾರ ಟೀಪುಸುಲ್ತಾನರಿಂದ ಷೆಹರು ಠಾಣ್ಯ ಯಿರುತಾ ಯಿದ್ದಲ್ಲಿ ಮಹಾರಾಷ್ಟ್ರದವರ ಕಡೆ, ಪರಶುರಾಂಭಾವುನ ಕಡೆ, ಭರ್ಚಿ[>ಮಿರ್ಜಿ] ಅಪ್ಪಾಜಿಗೋವಿಂದನ ಕಡೆ ವೆಂಕಟರಾಯನು ಬಂದು ಠಾಣ್ಯಹಾಕಿಕೊಂಡು ಯೀ ಆರಭ್ಯ ಪರಿಧಾವಿ ಸಂವತ್ಸರದ ಜೇಷ್ಟ ಪರಿಯಂತ್ರಕ್ಕೂ ಆರೇರ ಠಾಣ್ಯ ವರುಷ ೧, ತಿಂಗಳು ೬, ದಿನ ೮ ದಿನ, ಯೀ ಮೇಲೆ ಟಿಪ್ಪೂನ ಕಡೆಯಿಂದ ಗುಲಾಂ ಮಹಮ್ಮದನು ಬಂದು ಈ ಹೊನ್ನಾಳಿ ಮಲ್ಲ[>ಲ್ಲೂ]ರೂ ಸಹ ಆಮಿಲ[>ಅಮಲು] ಮಾಡಿದ್ದು, ಯೀ ಲಾಗಾಯಿತು ಆನಂದ ಸಂವತ್ಸರದ ವರಿಗೆ ವರುಷ ೩.

ಯೀ ತರುವಾಯ ರಾಕ್ಷಸ ಸಂವತ್ಸರದಲ್ಲು ಮಹಮ್ಮದ ಆಸಫನು ಬಂದು "ಅಮಲ್ಲು ಬ[>ಬಿ]ರ್‍ರೆ ಹೊನ್ನಾಳಿ, ದುಯಂಬಿರ್‍ರೆ ನ್ಯಾಮತಿ, ಶಿ[>ತಿ]ಯಂಬಿರ್‍ರೆ ಸಾಸುವೆಹಳ್ಳಿ"ಯಂಬುದಾಗಿ ಶೀಮೆಯನ್ನು ಗುಲಾಂಮಹಮ್ಮದಗೆ ಕೊಟ್ಟದ್ದರಿಂದ, ಈ ಪಿಂಗಳ ಸಂವತ್ಸರದ ವರೆಗೆ ವರುಷ ೩ ಮಾಡಿದರು.

ಕಾಳಯುಕ್ತಿ ಸಂವತ್ಸರದಲ್ಲು ಮಹಮ್ಮದ ಸಾಹೇಬ ಯಂಬವಗೆ ಆಮೀಲಾಗಿ ಯೀತನು ಶಿದ್ಧಾರ್ತಿ ಸಂವತ್ಸರದ ಚೈತ್ರ ಬ ೩೦ ವರಿಗೆ ಯಿಂಗ್ರಿಜಿ ಬಹದರವರು ಶ್ರೀರಂಗಪಟ್ನದ ಠಾಣ್ಯವನ್ನು ಹಾಕೊ ಪರಿಯಂತ್ರ ಯಿದ್ದು, ಆಮೇಲೆ ಪರಾರಿ ಆಗಿ ಹೋದನು. ಆ ತರುವಾಯ ದೊಂಡಜಿಯು ಹೊನ್ನಾಳಿಕೋಟೆಯನ್ನು ಠಾಣ, ಹಾಕಿಕೊಂಡು ಅವಲು ದುಯ್ಯಾಂ ಶಿ[>ತಿ]ಯಂ ಸಹ ಮೂರು ತುಕುಡಿಯನ್ನು ಕೊಡಿಶಿ, ಆ ತರುವಾಯ ಬೈ[>ಹೈ]ದರಗಾಜೀಖಾನನ ಮಗ ಕಿದರಖಾನಗೆ ಸಾಸುವೆಹಳ್ಳಿ ಶೀಮೆಯನ್ನು ಜಹಗೀರು ಕೊಟ್ಟಲ್ಲಿ ಆಳಿದ ತಿಂಗಳು ೨, ಯೀ ಮೇಲೆ ಶ್ರಾವಣದಲ್ಲು ಯಿಂಗ್ರೇಜಿ ಬಹದರ ಕಡೆ ಸರದಾರ ದಾಲಿಲಂಪಟು ಸಾಹೇಬ, ಬಸವಾಪಟ್ನದ ರಾಮರಾಯರು ಸಹ ಫೌಜು ತೆಗೆದುಕೊಂಡು ಹೊಲೇರಹಳ್ಳಿ ಬಳಿಗೆ ಬಂದು ಉಳಿದು, ಯೀ ಹೊನ್ನಾಳಿಕೋಟೆಯನ್ನು ಶ್ರಾವಣ ಶುದ್ಧ ಸಪ್ತಮೀಲು ಹಲ್ಲಾಮಾಡಿ ತೆಗೆದುಕೊಂಡು ಠಾಣ್ಯಹಾಕಿದರು.

ಆಮೇಲೆ ಶ್ರೀಮಂತರು ಪೂರ್ಣಯ್ಯನವರು ಯೀ ಹೇರೊಹಳ್ಳಿ ಮಲ್ಲೂರ ಶೀಮೆಯನ್ನು ಸರ್ವೋತ್ತರಾಯರಿಗೆ ನೇಮಕಮಾಡಿ ಕೊಟ್ಟದ್ದರಿಂದ, ಯೀತನು ಮಾಡಿದ್ದು ರಉದ್ರಿ ಸಂವತ್ಸರದ

ವರಿಗೆ ವರುಷ ೧. ಆಮೇಲೆ ಗುಂಡೊಪಂತನು ಹೊನ್ನಾಳಿ ಮೂರು ಶೀಮೆ ಆಮೀಲಿ ಮಾಡಿದ ವರುಷ ೧.

ಯೀ ಆರಭ್ಯವಾಗಿ ಕ್ರೋಧನ ಸಂವತ್ಸರದ ಮಾರ್ಗಶಿರ ಬಹುಳ ೧ಳ ವರಿಗೆ ಯೀ ಮಲ್ಲೂರ ಶೀಮೆಯು ಹೊನ್ನಾಳಿ ಶೀಮೆಗೆ ಏ[>ವ]ಳಿತವಾಗಿ ನಡದು ಬರುತ್ತಾಯಿದೆ.

❖❖

೩೨

ಮಿರಲೆ‍ೇ ಕೈಫಿಯತ್ತು[೧]

ಮೆಕೆಂಝಿ ಸಂಪುಟ : ೧೬೨

ಯೀ ವೂರಿಗೆ ಪೂರ್ವದಲ್ಲಿ ಮಿಥಿಲಾಪುರಿಯೆಂನ್ನೊ ನಾಮ. ಯೀ ವೂರಿಗೆ ಮೂರು ಸುತ್ತು ಮಣ್ಣು ಕೋಟೆ ಬಹುಕಾಲದಲ್ಲಿ ಯಿತ್ತು. ಯೀಗ ಮುನ್ನೂರು ವರುಷದ ಹಿಂದೆ ಯೀ ಕೋಟೆ ಯಾವತ್ತು ಪಾಳುಬಿದ್ದು, ನೆಲಸಮನಾಲಿ ಹೋಗಿ ಯಿದೆ. ಕಂದಕವೂ ಹೂಳಿ ಹೋಗಿ ಯಿದೆ. ಯೀ ವೂರಿಗೆ ದಕ್ಷಿಣ ದಿಕ್ಕಿಗೆ ನೈರುತ್ಯ ಮೂಲೆಯಲ್ಲು ಯಿರುವ ನಡುಕೆರಿ ಶ್ರೀಯೋಗಾನರಸಿಂಹ ಸ್ವಾಮಿಯವರ ದೇವಸ್ಥಾನವು ಪೂರ್ವಯುಗದಲ್ಲಿ ತೃಣಾಬಿಂದು ಆಶ್ರಮವಾಗಿ ಯಿದ್ದು, ಅವರು ಯಜ್ಞನ ಮಾಡೊ ಸಮಯದಲ್ಲಿ ಪ್ರಸನ್ನನಾಗಿ ಹುತ್ತದಲ್ಲಿ ಯಿದ್ದು, ಅವರ ಯಿಂದಾ ಪ್ರತಿಷ್ಟಿತರಾಗಿ ಯಿದ್ದ ಶ್ರೀಯೋಗಾನರಸಿಂಹಸ್ವಾಮಿಯವರನ್ನು ಕೆಲವು ಕಾಲದ ಮೇಲೆ ಗವುತಮ ಮಹಾಮುನಿಯು ಯಿಲ್ಲಿಗೆ ಬಂದು, ಬಹುಕಾಲ ಯೀ ಸ್ವಾಮಿ ಆರಾಧನೆ ಮಾಡಿಕೊಂಡು ಯಿದ್ದರು.

ಯೀ ಸ್ವಾಮಿಗೆ ವಿಕ್ರಮ ಶಕೆಯಲ್ಲು ಯೀ ಗ್ರಾಮ ಯಕ್ಷಪುರ್ರಿಯಂಬೊ ನಾಮಧೇಯದಿಂದಾ ಯಿರುವಾಗ್ಯೆ ರಾಜಾ ನರೇಂದ್ರಾಯಯಂಬೊನಿಂದಾ ದೃಢೀಕೃತಾ ದೇವಾಲಯವನ್ನು, ಶಾಲಿವಾಹನ ಶಕೆ ೧೦೧೨ನೆ ವಿಕ್ರಮ ಸಂವತ್ಸರದಲ್ಲಿ ವಿಷ್ಣುವರ್ಧನರಾಯರು ಯೀ ಬಳಿಗೆ ಬಂದು, ಯೀ ಕೋಟೆಯನ್ನು ನಿರ್ಮಾಣ ಮಾಡಿ, ಯೀ ದೇವಸ್ಥಾನವನ್ನು ಅನಾದಿ ಸ್ಥಳವೆಂದು ತಿಳಿದು, ಸುಖನಾಸಿ ನವರಂಗ ದ್ವಾರಪಾಲಕರು ಅಮ್ಮನವರ ದೇವಸ್ಥಾನ ಅಮ್ಮನವರ ಪ್ರತಿಷ್ಟೆ ಸಹಾ ಮಾಡಿ, ಯೀ ದ್ವಾರಪಾಲಕರು ದಕ್ಷಿಣೋತ್ತರ ಸ್ತಂಬ ಯೆರಡರಲ್ಲು ಶಾಸನ ಬರದು, ಅನೇಕ ಶೇವೆ ಸತ್ಕಾರಗಳನ್ನು ಮಾಡಿದರ್ರು, ಯೀಚೆಗೆ ಯಿಮ್ಮಡಿ ಪ್ರವುಡದೇವರಾಯರ್ರು ಶಾಲಿವಾಹನ ಶಕೆ ೧೦೭೦ನೇ ವಿಭವ

---

೧ ಇದರ ಇನ್ನೊಂದು ಹೆಸರು "ಯೋಗನರಸಿಂಹ ದೇವಸ್ಥಾನದ ಕೈಫಿಯತ್ತು" ಎಂದೂ ಇದೆ. (ಸಂ.)

ಸಂವತ್ಸರದಲ್ಲು ಕಟ್ಟಿದ್ದು ಪಾತಾಳ ಮಂಟಪಾ ಅಂಕಣ ೨೫. ಆಸ್ಥಾನ ಮೊಗಮಂಟಪ ಅಂಕಣ ೨೫ ಮತನ[>ವಾಹನ]ಮಂಟಪ ಅಂಕಣ ೧೨, ಸುತ್ತ ಪ್ರಾಕಾರ ಪವುಳಿ ಸಹಾ ಕಟ್ಟಿಯಿದ್ದಲ್ಲಿ, ನರಶಿಪುರದ ನರಸಿಂಹ್ಮನಾಯಕರ್ರು ಯೀ ದೇವಸ್ಥಾನವು ಚೆನ್ನವಾಗಿ ಯಿದ್ದದ್ದನ್ನು ನೋಡಿ, ಶಾಲಿವಾಹನ ಶಕ ೧೫೫೫ನೇ ಅಂಗೀರಸ ಸಂವತ್ಸರದಲ್ಲು ಆಸ್ಥಾನಮಂಟಪ, ಅಮ್ಮನವರ ದೇವಸ್ಥಾನ, ವಾಹನಮಂಟಪ, ಅಮ್ಮನವುರು ಸುತ್ತೂ ಪ್ರಾಕಾರದ ಕಲ್ಲು ಸಹಾ ಕಿತ್ತುಕೊಂಡು ಹೋಗಿ, ನರಸೀಪುರದ ಶ್ರೀ ನರಸಿಂಹಸ್ವಾಮಿಯವರ ದೇವಸ್ಥಾನವನ್ನು ವಿಸ್ತಾರಮಾಡಿ ಕಟ್ಟಿದರು. ಯಿಲ್ಲಿ ಅಮ್ಮನವರು ಅಲ್ಲಿಯೇ ಪ್ರತಿಷ್ಠೆ ಮಾಡಿಕೊಂಡರು.

ಯೀ ದೇವರಿಗೆ ರಾಯರ ದಿವಸದ ಆರಭ್ಯ ನಡಿಯುತ್ತ ಯಿದ್ದ ಗ್ರಾಮಗಳು ನರಸನಹಳ್ಳಿ ಗ್ರಾಮ ೧, ಮುದಹಳ್ಳಿ ಗ್ರಾಮ ೧, ಹೊಳೆನರಸಿಪುರ ಗ್ರಾಮ ೧ – ಯೀ ಮೂರು ಗ್ರಾಮ ಕಾಲ[>ಲು]ವೆ ಕೆಳಗಣ ಗದ್ದೆ ಖ ೪॥।೦ ಕೊಳ ಸಹಾ ನಡದು ಬರುತ್ತಾ ಯಿದಲ್ಲಿ, ಯೀ ಗ್ರಾಮಗಳಲ್ಲಿ ಯೆರಡು ಗ್ರಾಮ ಯಿದ್ದಕ್ಕೆ ಜಪ್ತಿಯಾಗಿ, ವಂದು ಗ್ರಾಮ ಪಾಳು ಆಗಿ ಯೀ ಗದ್ದೆ ಮಾತ್ರ ನಡಿಯುತ್ತಾ ಯಿದ್ದು, ಶೋಭಕೃತ ಸಂವತ್ಸರದಲ್ಲಿ ಯೀ ಗದ್ದೆ ಸಹಾ ಜಪ್ತಿ ಆಗಿ ಪೂಜೆಯು ನಿಂತು ಯಿದ್ದಲ್ಲಿ, ಯೀಚಿಗೆ ದುರುಮುಖಿ ಸಂವತ್ಸರದಾರಭ್ಯ ಮಹಾರಾಜಶ್ರೀಯವರ ಅಪ್ಪಣೆಯ ಮೇರೆಗೆ ಪಡಿತರ ದೀಪಾರಾಧನೆ ಬಗ್ಗೆ ಯೀಗ ನಡಿಯುವದು ವರುಷ ೧ಕ್ಕೆ ಕರ್ರಿ ಗ ೬ ವರಹಾ ನಡಿಯುತ್ತಾಯಿದೆ. ಯೀ ಸ್ವಾಮಿ ಆರ್ಚಕ ವೈಖಾನುಣಾ[>ವೈಖಾನಸಾ] ಕೃಷ್ಣಯ್ಯ ಯಿದ್ದು, ಶ್ರೀ ಯೋಗನರಸಿಂಹ ದೇವಸ್ಥಾನದ ಕೈಫಿಯತು:

ಈ ದೇವಸ್ಥಾನಕ್ಕೆ ಪಶ್ಚಿಮದಲ್ಲಿ ಚನ್ನಿಗರಾಯಸ್ವಾಮಿ ದೇವಸ್ಥಾನವನ್ನು ವಿಷ್ಣುವರ್ಧನರಾಯರು ಶಾಲಿವಾಹನ ಶಕ ೧೦೧೫ನೇ ಚಿತ್ರಭಾನು ಸಂವತ್ಸರದಲ್ಲಿ ತಾವು ಸ್ವಥಾ ಯೀ ಚನ್ನಿಗರಾಯ ಸ್ವಾಮಿಯನ್ನು ಪ್ರತಿಷ್ಟೆಮಾಡಿ. ೧೧ ಅಂಕಣ ದೇವಸ್ಥಾನ ಕಟ್ಟಿಸಿ, ಪಡಿತರದ ಬಗ್ಗೆ ಕಾಲುವೆ ಕೆಳಗೆ ಖ ೧॥೦ ಗದ್ದೆ ಭೂಮಿಯನ್ನು ಶಿಲಾಪ್ರತಿಷ್ಟೆ ಮಾಡಿಕೊಟ್ಟು ಯಿದ್ದುದು. ಶೋಭಕೃತ ಸಂವತ್ಸರದ ಪುಷ್ಯ ಮಾಸವೂ ಜಪ್ತಿಯಾಗಿ ಪೂಜೆ ನಿಂತು, ಯೀಚಿಗೆ ದುರ್ಮುಖಿ ಸಂ ಆರಭ್ಯ ವರುಷ ೧ಕ್ಕರ ಕರ್ರಿ ಗ ೨೯೦ ಯಿವೊತ್ತಿನ ವರಿಗೂ ನಡಿಯುತ್ತಾಯಿದೆ. ೨ ವೂರ್ರು ವಳಗೆ ಕೋದಂಡಸ್ವಾಮಿ ಸುಗ್ರೀವನಿಂದ ಪ್ರತಿಷ್ಟೆ ಆಗಿಯಿದೆ. ಮಾಹಾವೀರ ರಾಜವಡೆಯರವರ್ರು ಶಾಲಿವಾಹನ ಶಖೆ ೧೪೪೨ನೆ ವಿಕ್ರಮಸಂವತ್ಸರದಲ್ಲಿ ಸುಖನಾಶೀ ಗರ್ಭಗೃಹಾ ಮಾತ್ರ ನಿರ್ಮಾಣವಾಗಿ ಯಿದಲ್ಲಿ, ಯೀಚಿಗೆ ನರಶಿಪುರದ ನಾರಸಿನಾಯಕರ ಮನವಾರ್ತಿ ಚಿಕ್ಕಣ್ಮೆ[>ಣ್ಯೆ] ಯೆಂಬಾವರಿಂದಾ ನವರಂಗ ಮಂಟಪದ ಅಂಕಣ ೯, ಗಾಳಿ ಮಂಟಪ ಅಂಕಣ ೩ ಸಹಾ ಕಟ್ಟಿದ್ದು, ಯೀ ದೇವರಿಗೆ ಪಡಿತರ ದೀಪಾರಾಧನೆಗೆ ರಾಯರ ದಿವಸದಾರಭ್ಯಾ ನಡಿಯುತ್ತಾ ಯಿದದ್ದು ಕೊಡಿಯಾಲದ ಗ್ರಾಮ ೧, ಕಾಲುವೆ ಕೆಳಗಿನ ಗದ್ದೆ ಖ....॥॥ ನಾಲ್ಕು ಮುಕ್ಕಾಲು ರೊಜವರ್ರಿ ಬ ೧।೦ ಸಹಾ ನಡಿಯುತ್ತಾ ಯಿದ್ದು, ಗ್ರಾಮವು ಪೂರ್ವಕ್ಕೆ ಜಪ್ತಿಯಾಗಿ, ತೋಟಗದ್ದೆ ಮಾತ್ರ ನಡಿಯುತ್ತಾ ಯಿದ್ದು, ಶೋಭಕೃತ ಸಂವತ್ಸರದಲ್ಲಿ ಜಪ್ತಿಯಾಗಿ ಯೀಚಿಗೆ ದುರ್ಮುಖಿ ಆರಭ್ಯ ಮಹಾರಾಜರ ಅಪ್ಪಣೆ ಮೇರ್ರಿಗೆ ವರುಷ ೧ಕ್ಕೆ ಗುಡಿಗೆ ಕರೀ ಗ ೨೯೦ ಆ ಮೂರು ವರಹಾ ನಡಿಯುತ್ತಾ ಯಿದೆ. ಯೀ ದೇವಸ್ಥಾನದಲ್ಲಿ ಯಿರುವ ಕಲ್ಲು ಶಾಸನವು ದೇವಸ್ಥಾನದ ಮುಡಲ ಕಲ್ಲಿನಲ್ಲು ಬರದು ಯಿದೆ. ಹಳೆಗನ್ನಡಾ, ವೋದೊದಕ್ಕೆ ತಿಳಿಯೋದು ಯಿಲ್ಲಾ. ಯೀ ದೇವಸ್ಥಾನದ ಆಳಿಕೆ ವೈಖಾನಸಾ.

ಯೀ ವೂರ್‍ರಿಗೆ ವಳಗೆ ಯಿರುವ ಶ್ರೀ ವಿರುಪಾಕ್ಷೇಶ್ವರಸ್ವಾಮಿದೇವಸ್ಥಾನ ಬಹು ಅನಾದಿಯಾಗಿ ಯಿದ್ದು, ಶಿಥಿಲವಾಗಿ ಯಿದದ್ದನ್ನು ಯೀಚೆಗೆ ಶಾಲಿವಾಹನ ಶಕ ವರುಷ ೧೨೦೦ನೆ ಬಹುಧಾನ್ಯ ಸಂವತ್ಸರದಲ್ಲು ಸಂಗಮರಾಯರು ಜೀರ್ನೋದ್ಧಾರ ಮಾಡಿ ಗರ್ಭಗೃಹಾ ಅಂಕಣ ೧, ಸುಕನಾಶಿ ಅಂಕಣ ೨, ನವರಂಗ ಅಂಕಣ ೯. ಯೀ ದೇವರಿಗೆ ಪೂರ್ವ್ವರಾಯರ ದಿವಸದಿಂದಾ ನಡಿಯುತ್ತಾ ಯಿದ್ದದ್ದು ಬೀಚನಹಳ್ಳಿ ಗ್ರಾಮ ೧ ವೊಲಗದ್ದೆ ಖ ೨೭ ತದಾರಭ್ಯದಿಂದಾ ನಡಿಯುತ್ತಾ ಯಿದ್ದು, ಶೋಭಕೃತು ಸಂವತ್ಸರದಲ್ಲಿ ಜಪ್ತಿಯಾಗಿ, ಪೂಜೆ ಯೀಚೆಗೆ ನಿಂತು ಬಂತು, ದುರ್ಮುಖಿ ಸಂ ಆರಭ್ಯ ಮಹಾರಾಜಶ್ರೀಯವರು ಅಪ್ಪಣೆ ಪ್ರಕಾರ ಕರೀ ಗ ೨೯೦[+ವರಹ] ಮೂವತ್ತಾರು ಹಣ ನಡದು ಬರುತ್ತಾ ಯಿದೆ.

ಯೀ ಊರಿಗೆ ದಕ್ಷಿಣ ದಿಕ್ಕಿನಲ್ಲು ಯೀ ಕಾಲುವೆ ಕೆಳಗೆ ಶಾಲಿವಾಹನ ಶಕ ವರುಷ ೧೨೬೧ನೇ ವಿಷು ಸಂವತ್ಸರದಲ್ಲಿ, ಶ್ರೀ ಅಮೃತೇಶ್ವರಸ್ವಾಮಿ ಯೀ ದೇವಸ್ಥಾನವನ್ನು ಚೋಳರಾಯರು ಪ್ರತಿಷ್ಟೆ ಮಾಡಿದ್ದು, ಗರ್ಭಗೃಹಾ ಅಂಕಣ ೧, ನವರಂಗ ಅಂಕಣ ೨, ನವರಂಗ ಅಂಕಣ ೯. ಯೀ ದೇವಸ್ಥಾನಕ್ಕೆ ಪಶ್ಚಿಮದಲ್ಲು ಕಲ್ಲು ಗಾಣ ೧. ಯೀ ದೇವಸ್ಥಾನಕ್ಕೆ ಪೂರ್ವದಾರಭ್ಯ ನಡೆಯುವ ಹೊಲಗದ್ದೆ ಖ ೧॥೩ ನಡಿಯುತ್ತಾ ಯಿದ್ದು, ಶೋಭಕೃತ ಸಂವತ್ಸರದಲ್ಲು ಜಪ್ತಿಯಾಗಿ ಪೂಜೆ ನಿಂತು, ಯೀಚೆಗೆ ದುರ್ಮುಖಿ ಸಂವತ್ಸರ ಆರಭ್ಯ ಮಹಾರಾಜಶ್ರೀಯವರ ಅಪ್ಪಣೆ ಮೇರಿಗೆ ಕರೀ ಗ ೨ ಯಿಪ್ಪತ್ತು ಅಣೆ ನಡಿಯುತ್ತಾ ಯಿದೆ.

ಯೀ ಊರಿಗೆ ದಕ್ಷಿಣ ದಿಕ್ಕಿನಲ್ಲು ಕಾವೇರಿ ನದಿ ಬಳಿಯಲ್ಲು ಯಿರುವ ಶ್ರೀ ಕಲ್ಮೇಶ್ವರಸ್ವಾಮಿ ದೇವಸ್ಥಾನವು ಶಾಲಿವಾಹನ ಶಕ ೧೨೬೧ನೇ ವಿಷು ಸಂವತ್ಸರದಲ್ಲು ಚೋಳರಾಯರ್‍ರು ಪ್ರತಿಷ್ಟೆ ಮಾಡ್ಸಿದ್ದು, ಗರ್ಭಗೃಹಾ ಅಂಕಣ ೧. ಮಳೆ[>ಗಾಳಿ]ಮಂಟಪ ಅಂಕಣ ೩, ಕಲ್ಲುಗಾಣ ೧, ಯೀ ದೇವಸ್ಥಾನಕ್ಕೆ ಪೂರ್ವದಾರಭ್ಯದಿಂದಾ ನಡದು ಬಂದದ್ದು ಕಾಲುವೆ ಕೆಳಗಿನ ಗದ್ದೆ ಖ೨. ತದಾರಭ್ಯವೂ ನಡಿಯುತ್ತಾ ಯಿತ್ತು. ಶೋಭಕೃತ ಸಂವತ್ಸರದಲ್ಲು ಜಪ್ತಿಯಾಗಿ ಪೂಜೆ ನಿಂತುಹೋತು. ಯೀಚೆಗೆ ದುರ್ಮುಖಿ ಸಂವತ್ಸರದಲ್ಲು ಮಹಾರಾಜಶ್ರೀಯವರ್‍ರ ಅಪ್ಪಣೆ ಪ್ರಕಾರಕ್ಕೆ ಕರೀ ಗ ೩, ವರಹಾ ಮೂವತ್ತು ಹಣವು ನಡಿಯುತ್ತಾ ಯಿದೆ.

ಯೀ ಊರಿಗೆ ಪಶ್ಚಿಮ ದಿಕ್ಕು ಸ್ವಯವ್ಯಕ್ತ ಶಿವಭಕ್ತ[>ಕ್ತೆ] ಹುಣಿಶಮ್ಮನವರ ದೇವಸ್ಥಾನ. ಬಹು ಅನಾದೀ. ಅಂಕಣ ೧೦. ಯೀ ದೇವಸ್ಥಾನಕ್ಕೆ ನಡಿಯುತ್ತಾ ಯಿದದ್ದು ರಾಯರ ದಿವಸದಾರಭ್ಯ ಗದ್ದೆ ಹೊಲ ಖ ೧॥೦ ತದಾರಭ್ಯವೂ ನಡಿಯುತ್ತಾ ಯಿತ್ತು. ಶೋಭಕೃತ ಸಂವತ್ಸರದಲ್ಲು ಮಹಾರಾಜಶ್ರೀಯವರ ಅಪ್ಪಣೆ ಮೇರ್‍ರಿಗೆ ಕರೀ ಗ ೩, ಮೂವತ್ತು ಅಣವು ನಡಿಯುತ್ತಾ ಯಿದೆ.

ಬಸವಣ್ಣನವರ ದೇವಸ್ಥಾನ ೧ ಕ್ಕೆ ಹೆಚ್ಚು ಅಂಕಣ ೬. ಯೀ ದೇವರಿಗೆ ಪೂರ್ವದಾರಭ್ಯ ನಡಿಯುತ್ತ ಯಿದ್ದ ಹೊಲಗದ್ದೆ ಖ ॥೧ ತದಾರಭ್ಯ ನಡಿಯುತ್ತಾ ಯಿತ್ತು. ಶೋಭಕೃತು ಸಂವತ್ಸರದಲ್ಲು ಜಪ್ತಿಯಾಗಿ ಯಿದೆ. ಯೀಗೂ ತಸ್ತಿಕೂ ಯಿಲ್ಲ.

ಹನುಮಂತರಾಯ ದೇವಸ್ಥಾನ ೧. ಹೆಚ್ಚು ಅಂಕಣ ೩. ಯೀ ದೇವರಿಗೆ ಪೂರ್ವ್ವದಾರಭ್ಯವೂ ನಡಿಯುತ್ತಾ ಯಿದ್ದ ಕಾಲುವೆ ಗದ್ದೆ ಖ ೧ ತದಾರಭ್ಯ ನಡಿಯುತ್ತಾ ಯಿತ್ತು. ಶೋಭಕೃತ ಸಂವತ್ಸರದಲ್ಲು

ಜಪ್ತಿಯಾಗಿ ಹೋಯಿತು. ಪೂಜೆ ನಿಂತು ಯಿತ್ತು. ಯೀಚಿಗೆ ದುರ್ಮುಖಿ ಸಂವತ್ಸರದಲ್ಲಿ ಮಹಾರಾಜಶ್ರೀಯರವರ ಅಪ್ಪಣೆ ಮೇರಿಗೆ ಕರೀ ಗ ೧೦ ಹತ್ತು ಹಣ ನಡಿಯುತ್ತಾ ಯಿದೆ.

ಚಾವಡಿ ವಳಗಣ ವಿನಾಯಕ ದೇವರು ತದಾರಭ್ಯವೀ ನಡಿಯುತ್ತಾ ಯಿತ್ತು. ಯೀ ಕಾಲುವೆ ಕೆಳಗೆ ಗದ್ದೆ ಖ೨॥ ತದಾರಭ್ಯವೂ ನಡಿದು ಬಂತು. ಶೋಭಕೃತ ಸಂವತ್ಸರವು ಜಪ್ತಿಯಾಯಿತು. ಪೂಜೆ ನಿಂತು ಯಿತ್ತು. ಯೀಚಿಗೆ ದುರ್ಮುಖಿ ಸಂವತ್ಸರದಲ್ಲಿ ಮಹಾರಾಜಶ್ರೀಯವರ ಅಪ್ಪಣೆ ಮೇರ್ರಿಗೆ ಕರೀ ಗ ೧೦ ಹತ್ತು ಹಣ ನಡಿಯುತ್ತಾ ಯಿದೆ.

ಬೀಗಲ್ಲು ಭೈರವದೇವಸ್ಥಾನ ೧ಕ್ಕೆ ಪೂರ್ವ್ವರಾಯರ ದಿವಸದಾರಭ್ಯ ನಡಿಯುತ್ತಾ ಯಿದ್ದ ಕಾಲುವೆ ಕೆಳಗಣ ಗದ್ದೆ ಖ೨॥ ತದಾರಭ್ಯವೂ ನಡದು ಬಂತು. ಶೋಭಕೃತು ಸಂವತ್ಸರದಲ್ಲಿ ಜಪ್ತಿಯಾಗಿ ಯಿತ್ತು. ಯೀಗ ಯೀ ತಸ್ತೀಕೂ ಯಿಲ್ಲಾ, ಪೂಜೆಯೂ ಯಿಲ್ಲಾ.

ಮಿರವೇ[>ಲೇ] ದೇವಸ್ಥಾನ ೧೦ಕ್ಕೆ ತಸ್ತೀಕು ಕರೀ ಗ ೨೪ ।೦ ಯೀ ಪ್ರಕಾರ ನಡಿಯುತ್ತಾ ಯಿದೆ.

ಯಿದಕ್ಕೆ ಕಾವೇರಿ ಕಟ್ಟೆ, ನೈರುತ್ಯ ಮೂಲೆಯಲ್ಲಿ ಸಾಲಿಗ್ರಾಮದ ಆಳೂಲು ಕಟ್ಟೆ ಕೆಳಗೆ ಮಂಟನ ಕಟ್ಟೆಗೆ ರಾಮ ಸೇತುವುಗೆ ಮಧ್ಯೆ ಯಿರುವ ನೈರುತ್ಯ ಮೂಲೆ ಕಡ ೧ಕ್ಕೆ ಯಿದಕ್ಕೆ ಪೂರ್ವ ರಾಜ್ಯಯಿರುವ ಹಳೆ ಕಾಲುವೆ ೨. ಯಿದು ಕಟ್ಟಿಸಿದವರು . . . . ಗೊತ್ತುಯಿಲ್ಲಾ, ಅನಾದಿ. ಯೀಚಿಗೆ ಕಲಚೂರ್ರಿ[>ಕರಾಚೂರಿ] ವೀರರಾಘವೈಯ್ಯನವರು ೪೦೦ ವರುಷದ ಕೆಳಗೆ ಯೀ ಕಟ್ಟೆಯಲ್ಲು ಒಂದು ಹೊಸ ಕಾಲುವೆಯನ್ನು ತೆಗೆದು, ಯೀ ಕಾಲುವೆ ಕೆಳಗೆ ಸ್ವಲ್ಪ ದಿವಸ ಆರೂ ಆಗಿ ಪುನಹಾ ೩೦೦೫೦ ವರುಷದಿಂದಾ ಪಾಳು ಬಿದ್ದು ಯಿದ್ದು, ಹೊಸ ಕಾಲುವೆ ಯಿನ್ನು ಯೀಚಿಗೆ ರವುದ್ರಿ ಸಂವತ್ಸರದಲ್ಲಿ ಮಹಾರಾಜಶ್ರೀಯವರ ಅಪ್ಪಣೆ ಮೇರಿಗೆ ಸಾಲಿಗ್ರಾಮದ ಪಿಲ್ಲನಾಯಕ ತೆಗಿಸಿ ಯಿದ್ದಾನೆ. ಯೀ ವೂರಿಗೆ ಪೂರ್ವದಿಕ್ಕು ಬಿಳನಹಳ್ಳಿಯೆಂಬ ಬೇಚರಾಕು ಗ್ರಾಮದಲ್ಲು ಶಿಲಾಶಾಸನವು ಹಳೆ ಕನ್ನಡ ಬರಹಾ. ತಿಳಿಯೂದು ಯಿಲ್ಲಾ . . . . ಮಿರರ್ಲೆ ಕೈಫಿಯತ್ತು ಮುಗಿಯಿತು.

ರಾಮಯ್ಯ ಸುಬ್ಬರಾಯರ್ರು ಸಹಾ ಬರಸಿ ಯಿದ್ದಾರೆ.

❖❖

೩೩

ಯಗಟಿ ಕೈಫಿಯತ್ತು*

ಮೆಕೆಂಝಿ ಸಂಪುಟ : ೧೬೧

ಕೈಫಿಯತು ತಾಲೂಕೆ ಯಗಟಿ, ನಾಡಿಗರ ಖಂಡೆರಾಯರು ಬರಶಿಕೊಟ್ಟ ಪ್ರಕಾರ ಕ್ರೋಧನ ಸಂವತ್ಸರ, ಆಶ್ವಿಜ ಬ ೭ಲ್ಲು, ಆಜಂಪುರಾ.

ಪೂರ್ವದಲ್ಲಿ ಶಾಲಿವಾಹನ ಶಕ ವರುಷ ೧೪೭೨ನೆ ಸಂದ ವರ್ತಮಾನಕೆ ಸಲ್ಲುವ ಸಾಧಾರಣ ಸಂವತ್ಸರದಲ್ಲಿ ಘನಗಿರಿರಾಜ್ಯಕ್ಕೆ ಸಲ್ಲುವ ಹೊಸಪಟ್ಟಣದ ವೇಂಟಿಕೆ ವಳಗಣ ಯೆಗಟಿ ಸ್ತಳ ಹುಟ್ಟಿದ ವಿವರ:

ಪ್ರಾಕು ನೀಲಾವತಿ ಪಟ್ಟಣವನ್ನು ಆಳಿಕೊಂಡು ಯಿದ್ದಾ ನರಪತಿರಾಯ ಸಂವಸ್ತಾನದ ಬಾಗಿಲ ದಳವಾಯಿ ವೀರರಾಜು ಮಹಾಅರಸುಗಳು ನೀಲಗುಂದದ ಪಟ್ಟಣದಿಂದ ಈ ಮಾರ್ಗವಾಗಿ ಸ್ವಾರಿ ಬಂದು, ಪೂರ್ವದಲ್ಲಿ ಕಿರಾತರು ಕಟ್ಟಿದ ಕೊಕ್ಕಸಮುದ್ರಯಂಬೋ ಕೆರೆಯು ಯಿರುವ ವೃತ್ತಾಂತವನ್ನು ಕೇಳಿ. ಯೀ ಕೆರಿ ಸ್ವಲ್ಪವಾಗಿ ಯಿದ್ದುದರಿಂದಾ ದೊಡ್ಡದಾಗಿ ಕಟ್ಟಿಶಿ, ಆ ಕೆರಿಯ ಯೇರಿಯ ಮೇಲೆ ಶಿಲ್ಲಾ ಪ್ರಥಮೆಗಳನ್ನು ಮಾಡಿಸಿ, ಸ್ತಾಪನೆ ಮಾಡ್ಸಿ ಯಿರುವ ವಿವರ:

೨ ಕಿರಾತರ ಪ್ರತಿಮೆ

೧ ನಾಯಿ ಪ್ರತಿಮೆ

೧ ಸೆಟ್ಟಿ ಪ್ರತಿಮೆ

೧ ಯಿತನ ಹೆಂಡತಿ,ಪ್ರತಿಮೆ

೫

ಯೀ ಮೇರಿಗೆ ಐದು ಪ್ರತಿಮೆಯನ್ನು ಯಿರಿಸಿ ನಿಲಿಸಿ, ಯಿ ಕುಕ್ಕುಗೆ ಆ ಕೆರಿ ಕೆಳಗೆ ಮಾನ್ಯವಾಗಿ, . . . ಯನ್ನು ಬಿಟ್ಟು ಯಿರ್‍ರುವದರಿಂದ ಯಿದಕ್ಕೆ ಕುಕ್ಕನಗದ್ದೆ ಯಂಬದಾಗಿ ಹೇಳುತ್ತಾರೆ.

ಯೀ ಘನಗಿರಿದುರ್ಗದ ರಾಜ್ಯಕೆ ಸಲ್ಲುವಾ ನೀಲಗುಂದದ ಹೊಸಪಟ್ಟಣಾದ ವೇಂಟಿಕೆ ಸಲ್ಲುವಾ ನಾಡಿನ ವಿವರಾ:

---

೧. ಇದಕ್ಕೆ 'ಖಂಡೇರಾಯ ಕೈಫಿಯತ್ತು' ಎಂಬ ಹೆಸರೂ ಇದೆ. (ಸಂ).

೧ ವಾ . . . . ಗಳಿ ಕಟಿನಾಡು

೧ ಬಿದರೆ ನಾಡು

೧ ಹಲತೂರ್‍ರು ನಾಡು

೧ ಕಿತ್ತಕೆರಿ ನಾಡು

೧ ಯರಡು ಕೆರ್‍ರಿ

೧ ಯೊಂಬಳಸಿ

೧ ಯಗಟಿ ನಾಡು

೧ ಆಣಿವಗೆರೆ ನಾಡಾ

೧ ಶಿಂಗಟ್ರಗೆರಿ ನಾಡು

೧ ಕಾಮಸಮುದ್ರ ನಾಡು

೧ ಹೊಳಲಕೆರ್‍ರಿ ನಾಡು

೧ ದರಜಿ ನಾಡು

೧ ಪುರಂದರ ನಾಡು

ಜುಮ್ಲಾ ೧೩

ಯಿತ್ತಲಾಗಿ ಶೆಕೆ ೧೫೭೫ ವಿಜಯ ಸಂವತ್ಸರದಲ್ಲು ಚಿತ್ರದುರ್ಗದ ಭರಮಣ್ಣನಾಯಕನು ತನ್ನ ಮಗಳನ್ನು ಯೀ ತರಿಕೆರಿ ಸಂವಸ್ತಾನಿಕರ ಮನಿಗೆ ಕೊಟ್ಟು ಮದುವೆ ಮಡಿದಾಗ್ಯೆ, ಹೆಣ್ಣಿಗೆ ಬಳವಳಿಯಾಗಿ ಕೊಟ್ಟದು:

೧ ಹಿರಿಯೂರ್‍ರು ನಾಡು

೧ ವಕಲಗೇರಿ ನಾಡು

೧ ಕುಂಕನಡುವಿನ ನಾಡು

---

[೧]೩[+]೩

೧೬ ಕೆ ಯಗಟಿ ನಾಡು ಹುಟ್ಟಿದ ವಿವರ:

ಆದಿಯಲ್ಲಿ ಪುರದ ನಾಡಿನ ವಳಗಣ ಅರಿಯನತೊ[>ಪೊ]ಳಲ ಗ್ರಾಮದಲ್ಲಿ, ಯೀ ಗ್ರಾಮಕೆ ವಂದು ಗುಂಡಿನ ಯೆಶಿಕೆಯಲ್ಲು ವೇದಾವತಿ ಯಂಬ ನದಿಯು ಪ್ರವಾಹವಾಗಿ ಯಿರುವದರಿಂದ, ಯೀ ನದಿ ಹುಟ್ಟಿದ ವಿವರಾ: ಚಂದ್ರದ್ರೋಣ ಪರ್ವತಕೆ ಪ್ರತಿನಾಮವಾದ ಗಾಳಿಪುಜಿ ಹಬ್ಬಿಗೆಯಲ್ಲು ವುದ್ಭವಿಶಿ ಪೂರ್ವಾಭಿಮುಖವಾಗಿ ಸಕರ್‍ರೆ . . . . ದ ಶಿತನಿರಾಯನು ಮದಗಜಕೆರೆ ಹೊಕ್ಕು ಮುಂದ ಕಡುರ್‍ರೂ ಬಳಿ ಯೆಣತಂಗಲಿಯಂಬ ಗ್ರಾಮದ ಬಳಿಯ ಹಾದು, ಯೆಗಟಿ ವಳತಾ . . . . ದ ಮಲ್ಲದೇವಿಯಂಬ ಬಳಿಯಲ್ಲಿ ಬರುವದರಿಂದಾ ಸಿಹಿತೀರ್ಥಯಂಬುದಾಗಿ . . . . ಆಗಿ, ಮುಂದೆ ಯಗಟಿ ಕೋಟೆಗೆ ವುತ್ತರವಾಗಿ ಈಶ್ವರ ದೇವಸ್ತಾನದ ದಕ್ಷಿಣಕೆ ಪೂರ್ವವಾಹಿನಿಯಾಗಿ ಹರಿಯುವ ನದಿ ೧.

ಯೀ ನದಿ ವುತ್ತರ ದಿಕ್ಕಿನಲ್ಲು ಮರಗಳು ಬೆಳೆದು ಅಡವಿ ಅತಿಯಾಗಿ ಯಿದ್ದಲ್ಲಿ ಯೀ ಸ್ತಳದಲ್ಲು ಅರ್‍ರೆ . . . . ವಂದು ಹುತ್ತಾವೆಂಬ ವಾಲಮಿಕ ಯಿತ್ತು. ಆ ಹುತ್ತದ . . . . ಅರಿಯನ

ತೊ[>ಮೊ]ಳಲಗ್ರಾಮಗದ ಗವುಡಾ ದಾವಣೆಗರ ವೀರಸೆಟ್ಟಿಯಂಬವನ ಮನೆಯಲ್ಲಿ ಒಂದು ಕಪಿಲೆ ಗೋವು ಯಿತ್ತು. ಆ ಗೋವು ಮೇವುದಕೆ ಬಂದು, ದಿನಚರಿಯಲ್ಲು ಆ ವಾಲಮ್ಮಿಕದ ಮೆಲೆ ಸುರಭಿ ಕರದು ಹೋಗುತಾ ಯಿತ್ತು. ವಂದಾನೊಂದು ದಿವಸ ಆ ಸೆಟ್ಟಿಗಾರನ ಮನೆಯವರು ಅವನಾಜ್ಞೆ ಪಡಕೊಂಡು ಹೋಗಿ ನೋಡುವಲ್ಲಿ, ಯೀ ಗೋವು ಮಥಾ ಪ್ರಕಾರಕೆ ಬಂದು ವಾಲ್ಲಮಿಕದ ಮೇಲೆ ಸುರಭಿ ಕರದುದು ನೋಡಿ, ಯಿದು ವೀರಶೆಟ್ಟಿಗೆ ಹೇಳಿದರಿಂದಾ, ಆ ಗವುಡನು ಹಾರಿ ಗುದ್ದಲಿ ಮುಂತಾದನ್ನು ತೆಗೆದುಕೊಂಡು ಹೋಗಿ, ಆ ಹುತ್ತವನ್ನು ಅಗಸಲಾಗಿ, ಆ ಹುತ್ತದಲ್ಲಿ ೭ ಹೆಡೆ ಸರ್ಪವು ಶಿಂಬಿ ಸುತ್ತಿಕೊಂಡು ಯಿರುವುದನ್ನು ಯೀ ಜನರು ನೋಡಿ, ಭಯವಾಗಿ ವೋಡಿ ಹೋಗುತಲಿ, ಯೀ ವೀರಣ್ಣ ಗವುಡನು ಕೇಳಿ, ಯೀ ಹುತ್ತದ ಸಮೀಪಕೆ ಬಂದು ಆ ಸರ್ಪಕೆ ಧೂಪಾದಿ ನೈವೇದ್ಯ ಮುಂತಾಗಿ ಮಾಡುವಲ್ಲಿ, ಆ ಸರ್ಪವು ಆ ಸ್ಥಳ ಬಿಟ್ಟು ಹೋಯಿತು. ಆಮೇಲ್ಯೆ ನೋಡಲಾಗಿ ಆ ಹುತ್ತದ ವಳಗೆ ಅರೆ ಬಂಡೆ ಮೇಲೆ ಜಟಾಮುಗುಟ ಸನ್ನಿತವಾಗಿ ಲಿಂಗಾ ವುದ್ಭವಿಸಿ ಯಿದ್ದುದನ್ನು ಕಂಡು, ಯೀ ವೀರಣ್ಣಶೆಟ್ಟಿಯು ಪ್ರಾರ್ಥನೆ ಮಾಡಿ, "ತನಗೆ ರಾತ್ರೆಯಲ್ಲು ಸ್ವಪ್ನದಲ್ಲು ಯಿಂತಾ ದೇವರು ಹೆಂ[ಎಂ]ಬದಾಗಿ ಹೇಳಿದರೆ ಗುಡಿ ಕಟ್ಟಿ ದೇವರ ಪೂಜೆ ಸಾಂಗವಾಗಿ ಮಾಡಿಸುತ್ತೇನೆ", ಹೇಳಿದ ಕಾರಣ ಅದೇ ಮೇರಿಗೆ ದೇವರು ಸ್ವಪ್ನದಲ್ಲಿ ಬಂದು ಅಪ್ಪಣೆ ಕೊಟ್ಟದು. "ನಾವು ಮಲ್ಲಾಸುರಾ ಯಂಬ ರಾಕ್ಷಸನನ್ನು ಸಂಹಾರಮಾಡಿ ಯಿಲ್ಲಿ ಅವತರಿಸಿ ಯಿಧೇವೆ. ಯೀಗಳೆ ನಮಗೆ ಯರಡು ಅಂಕಣಾ ಗುಡಿ ಕಟ್ಟಿದರೆ ನಿನಗೆ ದಿನೇ ದಿನೇ ಸಂತಾನ ವುತ್ಪತ್ತಿಯಾಗಿ ಸಂತೋಷದಲ್ಲಿ ಯಿರುತ್ತಿ"ಯೆಂಬದಾಗಿ ಸ್ವಪ್ನವಾದುದರಿಂದ, ಅದೇ ಮೇರಿಗೆ ಯೀ ವೀರಣ್ಣಶೆಟ್ಟಿಯಂಬ ಗವುಡನು ದೇವಸ್ಥಾನವನ್ನು ಕಟ್ಟಿಸಿ, ಮಲ್ಲೇಶ್ವರಸ್ವಾಮಿಯಂದು ಹೆಸರು ಮಾಡಿದನು. ಶಖ ವರುಷ ೧೩೩೨ನೆಯ ವಿಕೃತ ಸಂವತ್ಸರದಲ್ಲು.

ಆ ತರುವಾಯ ನರಪತಿ ಹರಿಹರರಾಯರು ಆ ಕ್ಷಣ ದಿಗ್ವಿಜಯಾರ್ಥವಾಗಿ ರಾಜ್ಯ ನೋಡುವಂಥ ಕಾಲದಲ್ಲು ಯೀ ನದಿತೀರಕೆ ಬಂದಲ್ಲಿ, ಯೀ ಸ್ಥಳಾ ಬಹು ಮನೋಹರವಾಗಿ ಯಿದ್ದ ಕಾರಣ, 'ಯೀ ದೇವಾಲಯ ಯಾವದು?'ಯೆಂದು ವಿಚಾರಿಸಿದಲ್ಲಿ 'ಯಿದು ಮಲ್ಲೇಶ್ವರಸ್ವಾಮಿ'ಯೆಂದು ಹೇಳಿ, ಧಾವಣೆಗರ ವೀರಣ್ಣ ಗವುಡನು "ತನಗೆ ಸಂತಾನಾ ಯಿಲ್ಲದೇ ಯಿರುತ್ತಾ ಯಿತ್ತು. ಯೀ ದೇವರ ಕೃಪೆ ವುಂಟಾಗಿ ಸಂತಾನವು ಆಯಿತು" ಯೆಂಬುದಾಗಿ ರಾಯರ ಸನ್ನಿಧಾನದಲ್ಲಿ ಅರಿಕೆ ಮಾಡಿಕೊಂಡದರಿಂದ, ಯೀ ರಾಯರಿಗೆ ಸಂತಾನ ಯಿಲ್ಲದೇ ಯಿತ್ತು. "ಗಂಡು ಸಂತಾನವಾಗಲಿ"ಯೆಂದು ಪ್ರಾರ್ಥನಾ . . . . ಮಾಡಿದಲ್ಲಿ, ಕೆಲವು ದಿವಸದ ಮೇಲೆ ರಾಯರಿಗೆ ಮಲ್ಲೇಶ್ವರಸ್ವಾಮಿ (ಕೃಪಾ) ಕಟಾಕ್ಷವುಂಟಾಗಿ, ಗಂಡು ಸಂತಾನವಾದರಿಂದಾ ರಾಯರು ಯೀ ಸ್ವಾಮಿಯ ದೇವಸ್ಥಾನವನ್ನು ವಿಸ್ತಾರವಾಗಿ ಕಟ್ಟಿಶಿ, ರಂಗಮಂಟಪ ಮುಂತಾಗಿ ಕಟ್ಟಿಸಿ, ಅರಿಯನತೊ[>ಮೊ]ಳಲುಯಂಬ ಗ್ರಾಮವನ್ನು ಸರ್ವಮಾನ್ಯವಾಗಿ ಕೊಟ್ಟರು.

ಯೀ ಗ್ರಾಮದಲ್ಲು ದೇವರ ಸೇವೆಯನು ಮಾಡಿಕೊಂಡು ಯೆಗ್ಗಟಿ ಯೆಂಬ ಸು[>ಸೂ]ಳೆಯು ಸಂಗೀತಾ, ಸಾಹಿತ್ಯ, ನಾಟ್ಯ ಮುಂತಾದ ಸಮಗ್ರ ಭಾ[>ಭ]ರತಶಾಸ್ತ್ರವನ್ನು ಕಲತು, ತಾನು ಯೀ ರಾಯರ ಮುಂದೆ ನಾಟ್ಯವಾಡಿ ರಾಯರನ್ನು ನಾವು ಮೆಚ್ಚಿಸಿದ್ದರಿಂದಾ, ರಾಯರು ಸಂತೋಷಪಟ್ಟು ವುಡುಗರೆ ಮುಂತಾಗಿ ಕೊಟ್ಟರು. "ಇದೊಂದು ತನಗೆ ಬೇಡಾ, ತನ್ನ

ಹೆಸರು ಸಾರೋಧಾರವಾಗಿ ನಿಲ್ಲುವಂತೆ ಮಾಡಿಶಿ, ತನ್ನ ಹೆಸರಿನಿಂದ ಒಂದು ಸ್ತಳಾ ನಿರ್ಮಾಣ ಮಾಡಿಸಿ ಕೊಡುವ ಹಾಗೆ ಅಪ್ಪಣೆ ಪಾಲಿಸಬೇಕೆಂ"ದು ಅರಿಕೆ ಮಾಡಿಕೊಂಡುದರಿಂದಾ, ಅದೇ ಮೇರಿಗೆ ಆಗಲಿಯೆಂದು ಅಪ್ಪಣೆಯನ್ನು ಕೊಟ್ಟು, ಈ ವೇದಾವತಿ ನದಿ ತೀರದ ದಕ್ಷಿಣ ದಿಕ್ಕಿಗೆ ಕೋಟೆಯನ್ನು ಕಟ್ಟಿಸಿ, ಆ ಕೋಟೆಗೆ ವೆಂಗಟಿ ಯಂಬುದಾಗಿ ಹೆಸರುಯಿಟ್ಟ . . . . ದಿವಸಲ್ಲು ವಂದು ಕೆರೆಯನ್ನು ಕಟ್ಟಿಶಿ, ಆ ಊರಿಗೆ ಆರಿಯನತ[>ಮೊ]ಳಲು ಯಂಬ ಗ್ರಾಮದ ಪರಗಣೆ ಸೀಮೆಯಲ್ಲಿ ಸೇರಿದ್ದರಿಂದಾ ಪುರಾಯಂಬುದಾಗಿ ಹೆಸರಾಯಿತು. ಯೀ ರಾಜ್ಯ ಆಳಿದ ಅರಸುಗಳ ವಿವರ್ರ:

ಶಾಲಿವಾಹನ ಶಖ ವರುಷ ೧೩೩೨ನೆ ವಿಕ್ರುತಿನಾಮ ಸಂವತ್ಸರ ಲಾಗಾಯಿತು ಶಕ ೧೪೮೬ನೆ ರಕ್ತಾಕ್ಷಿ ಸಂವತ್ಸರದ ವರಿಗೆ

[೧೫೪ ವರ್ಷಗಳು ಅಳಿಯ ರಾಮರಾಯರ] ಆರಭ್ಯಾ ಸದಾಶಿವರಾಯರ ವರಿಗೆ ಆಳಿದ ವರುಷ.

೪೫ ಮೈಸೂರವರ ಅರಸಿಕೆ ಕಡೆಗೆ ಸುಗ್ಗನಾಯಕಾ ಯಂಬವನು ರಾಯ ಸಂವಸ್ತಾನವು ಆತಂತ್ರವಾಗಿ ಯಿದ್ದದರಿಂದ ಗಂಗಾನಾಯಕಾ ಯಂಬವನಾ ಕಳುಹಿಸಿ, ಅವನ ಠಾಣೆಯನ್ನು ಹಾಕಿಕೊಂಡು ವೆಂಕಟಿ ಮುಂತಾದ ಶೀಮೆ ಆಳಿದುದು ಶಕ ೧೪೮೭ನೆ ಕ್ರೋಧನ ಸಂವತ್ಸರ ಆರಭ್ಯಾ ಶಕ ೧೫೩೧ನೆ ಸವುಮ್ಯ ಸಂ . . . . ವರಿಗೆ.

೧೦ ಆ ತರುವಾಯ ಮೊ . . . . ಖಾನ, ಶಿಥ . . . . ಜೆ ಮುಂತಾ . . . . ಬಂದು ರಾಜ್ಯವನ್ನು ಸಾಗಿಸಿಕೊಂಡು ಆಳಿದ್ದು, ಶಕ ವರುಷ ೧೫೩೨ ಸಾಧಾರಣ ಸಂ॥ ೧೫೪೧ ಸಿದ್ಧಾರ್ಥಿ ಸಂ॥ ವರಿಗೆ ವರುಷ

೨೦೯

೧೬೧ ಆ ತರುವಾಯ ತರಿಕೆರಿ ಬೇಡರ ಅರಸುಗಳು ಬಲವಾಗಿ ಯೀ ಶೀಮೆಯನ್ನು ಸಾಧಿಶಿಕೊಂಡು, ವಾಸವ ಮಾಡಿಕೊಂಡು ಯಿರುವ ಆಳಿಕೆ ಅರಸುಗಳ ವಿವರ:

೨೨ ಸೆಕ ೧೫೪೨ನೆ ರವುದ್ರಿ ಸಂ। ಶಕ ೧೫೬೩ನೆ ವಿಶ್ವಾವಸು ಸಂ।ವರಿಗೆ ಸರ್ಜಾ ಹಣುಮಪ್ಪರಾಯನು ಆಳಿಕೊಂಡು ೧೩.*

೪೭ ಯೀತನ ಮಗ ಶೀತ[>ತಾ]ರಾಮಪ್ಪನಾಯಕಾ, ಶಕ ವರುಷಾ ೧೫೬೪ ಚಿತ್ರಭಾನು ಸಂ। ಆರಭ್ಯಾ ಶಕ ೧೬೧೦ ವಿಭವ ಸಂ। ವರಿಗೆ ಆಳಿಕೆ ವರುಷಾ ೧೬,** ಇದಕೆ ವಿವರ ಸಿದ್ಧರಾಮೇಶ್ವರ [>ಶೀತಾರಾಮಪ್ಪನ] ಕಾಲದಲ್ಲಿ ವಿವರಾ ಬರದು ಇದೆ.

---

* ಇಲ್ಲಿ ಅಂಕಿ ತಪ್ಪಿದೆ (ಸಂ)

** ಈ ವಾಕ್ಯದ ಪ್ರಾರಂಭದಲ್ಲಿ ೪೭ ಇದೆ, ಇಲ್ಲಿ ೧೬ ಇದೆ. (ಸಂ).

೪೦ ಯೀ ತರುವಾಯ ಯೀತನ ಮಗ ಪಟ್ಟಾಭಿರಾಮಪ್ಪನಾಯಕ. ಶಕ ೧೬೧೧ ಶುಕ್ಲ ಸಂ। ಆರಭಾ ಶಕ ೧೬೫೦ ತಾರಣ ಸಂ।ವರಿಗೆ ವರುಷ ೪೦.

೧೩ ಪ್ರಾಕು ಆರಭ್ಯಾ ಯಿದ್ದ ನಾಡು.

೩ ಯೀ ರಾಮಪ್ಪ ನಾಯಕನಿಗೆ . . . . ರಿ ದುರ್ಗದ ಭರಮಣ್ಣನಾಯಕನ ಮಗಳನ್ನು ಮದುವೆ ನಡ್ಸುವಾಗೆ, ಆ ಭರಮಣ್ಣನಾಯಕನ ಹೆಣ್ಣಿಗೆ ಬಳುವಳಿಯಾಗಿ ಕೊಟ್ಟ ನಾಡು, ಸದರಿ ತಾಪಶಿ ಪ್ರಕಾರು ಶಕ ವರುಷ ೧೬

೩ ಯೀ ಮೇರಿಗೆ ಆಳಿಕೊಂಡು ಯಿದ್ದಂಥವರಲ್ಲಿ ಯೀ ಶೀತ[>ತಾ]ರಾಮಪ್ಪ ನಾಯಕನ . . . . ಮದುವಿಯ ಮದುವಣಿಗ ಹಣಮಪ್ಪನಾಯಕಾ ೧೬೫೧ನೆ ಸವುಮ್ಯಾ ಲಾಗಾಯಿತು ಸ। ೧೬೫೩ನೆ ವಿರೋಧಿಕೃತ ಸಂ। ವರಿಗೆ.

೩೩ ಯೀತನ ತಮ್ಮ ಸರ್ಜಾ ಹಣುಮಪ್ಪನಾಯಕ ಸೆ।೧೬೫೪ನೇ ಪರಿಧಾವಿ, ಸಂ। ಸೆ ೧೬೮೬. ತಾರಣ ಸಂ। ವರಿಗೆ ಆಳಿದನು.

೭ ಯೀತನ ತಮ್ಮ ಲಕ್ಷಣಪ್ಪನಾಯಕನ ಮಗ ಯಿಮ್ಮಡಿ ಹಣಮಪ್ಪನಾಯಕ ಸೆ।೧೬೮೭ ಪಾರ್ಥಿವ ಸಂ। ಆರಭ್ಯಾ ಸೆಕ। ೧೬೯೩ ಖರ ಸಂ. . . . . ದ ವರಿಗೆ ಆಳಿದ ವರುಷ ೬.

೬ ಯೀತನ ತಮ್ಮ ಶೀತಾರಾಮಪ್ಪನಾಯಕ ಶಕ . . . . ಸಿದ್ಧಾರ್ಥಿ ಸಂ। ಆರಭ್ಯಾ ಶಕ ೧೬೯೬ ಹೇವಿಳಂಬಿ ಸಂ। ವರಿಗೆ ಆಳಿದ ವರುಷ ೩.

ಯೀತನ ಮಗ ಸರ್ಜಾ ಹಣುಮಪ್ಪನಾಯಕ ಶಕ ವರುಷ ೧೬೯೭ನೇ ವಿಳಂಬಿ ಸಂ। ಶಕ ೧೭೦೨ ಶಾರ್ವರಿ ಸಂ। ವರಿಗೆ.

ಯೀ ಅರಸುಗಳು ಬಿಟ್ಟ ಅಗ್ರಹಾರಗಳು:

೧ ಮೆಲಂಬೆಳಸಿ ನಾಡಿನಲ್ಲು ಬ್ರಾಹ್ಮರಿಗೆ ಸುರಪುರದ ಗ್ರಾಮ ಸರ್ವಮಾನ್ಯ ಅಗ್ರಹಾರ.

೧ ಮುಗಳಿಕಟ್ಟೆ ನಾಡಿನಲ್ಲು ಮಲ್ಲಿದೇವಿಹಳ್ಳೀ ಗ್ರಾಮವು ಬ್ರಾಹ್ಮರಿಗೆ ಸರ್ವಮಾನ್ಯ.

೧ ಕೂಡಲ್ಲಿ ಶ್ರಿಂಗೇರಿ ಮಟಕೆ ಮೆಲಂಬಳಸ ನಾಡಿನಲ್ಲೂ ಮಾಡಹಾಳಗ್ರಾಮ ಬ್ರಾಹ್ಮರಿಗೆ ಸರ್ವಮಾನ್ಯ.

---

೩ ಸದರಿ ಗ್ರಾಮಗಳು ಟೀಪುಸುಲತಾನರ ದಿವಸದಲ್ಲಿ ಜಪ್ತಿಯಾಗಿ ಸರಕಾರ ದಾಕಲ್ಲು ಆಗಿಯಿದೆ. ಯಿದರ ಶಿವಾ ಯೀ ಮಟಮಾನ್ಯಗಳನ್ನು ಬಿಟ್ಟು ಯಿದ್ದಾರ್ರೆ.

ಯಿತ್ತಲಾಗಿ ದೊಡ್ಡನವಾಬ ಹೈದರ ಅಲಿ ಬಾದಶಹಾ ಶಕ ವರುಷಾ ೧೭೦೩ ಪ್ಲವ ಸಂ।ದಲ್ಲು ಅಲ್ಲಾಹಿದ್ ಸರಕಾರ ದಾಕಲು ಮಾಡಿಕೊಂಡು ಅಳಿದು ಶಕ ವರುಷ ೧೭೦೪ ಶುಭಕೃತು ಸಂವತ್ಸರದ ವರಿಗೆ.

೧೬ ಇವರ ಮಕ್ಕಳು ಟೀಪುಸುಲತಾನನು ಶಕ ವರುಷ ೧೭೦೫ ಶೋಭಕೃತು ಸಂ|ಲಾಗಾಯಿತು ಸೆಕ ೧೭೨೦ ಕಾಳಯುಕ್ತಿ ಸಂ| ವರಿಗೆ ಆಳಿದ ವರುಷ ೧೬.

ಪ್ರಾಕು ಯಿದ್ದ ನಾಡು ೧೬ಕ್ಕೆ ವಜಾ, ಗರಡನಗಿರಿ ತಾಲ್ಲೂಕಿಗೆ ದಾಕಲಾ ಮಾಡಿಶಿದು, ಶಕ ವರುಷ ೧೭೧೮ನೆ ನಳ ಸಂ|ಲ್ಲು ಸೇರಿಸಿದರು.

೧ ಶಿಂಗಟಗೆರ್ರೆ ನಾಡು, ೧ ಬಿದರ್ರೂರು ನಾಡು ಹೋಗಲಾಗಿ ಬಾಕಿ ನಾಡು ೧೪, ಯೀ ಸಂವತ್ಸರದಲ್ಲು ಗರಡನಗಿರಿ ಶೀಮೆಯಿಂದ ದಾಖಲು ಬಂದದು ೧ ಸಪಿನಹಬಳಿ ಗ್ರಾಮ, ೧ ಮ್ಯೆಳೆನಹಳ್ಳಿಗ್ರಾಮ, ಯೀ ಪ್ರಕಾರ ನಡಿಯುತ್ತಾ ಯಿತ್ತು.

ತುರುಕರ ಆಳಿಕೆ ವರುಷಾ ೧೮.

೭ ತರುವಾಯ ಸೆಕ ೧೭೨೧ನೆ ಶಿದ್ಧಾರ್ಥಿ ಸಂ|ಲ್ಲು ಯಿಂಗ್ರೇಜು ಬಾಹದರವರ್‍ರು ಶ್ರೀರಂಗಪಟ್ಟಣವನ್ನು ಟಾಣೆ ಹಾಕಿಕೊಂಡು, ಮೈಸೂರು ಸುಂ| ಕ್ರಿಷ್ಣರಾಜ ವಡೆಯರ ಕಡೆಗೆ ನಡಿಯುತ್ತದೆ. ವರುಷ ಶಕ ೧೭೨೭ ಕ್ರೋಧನ ಸಂವತ್ಸರದಲ್ಲಿ ಪ್ರಾಕ್ ಸನ್ ೧೮೦೫ನೇ ಅಕ್ಟೋಬರ್ ತಾರೀಖ ೧೬ರರಲ್ಲಿ. . . . ಆಜಂಪುರ*

❖❖

೩೪

ವಸುಧಾರೆ ಗ್ರಾಮದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೩೨

ಕರಜಿಂಮೇ ಮೆರಿಗೆ–

ಪೂರ್ವದಲ್ಲಿ ಕೃತಯುಗದಲ್ಲಿ ಚಂದ್ರದ್ರೋಣಪರ್ವತಕೆ ದಕ್ಷಿಣದಲ್ಲಿ ಯಿರುವ ಕೊಸು[>ಕ್ರೋಶ] ||೦ ಯಿರುವ ಗವುತಮಕ್ಷೇತ್ರಯಿಥೆ. ಅಲ್ಲಿ ಪದ್ಮವನಾಯಂಬುವದು ಮಹಾ ಪ್ರಶಿಧವಾದಂತ್ತಾ ಅರಂಣ್ಯಾ ಅಥೆ. ಆ ಅರಣ್ಯದಲ್ಲಿ ಬನಶಂಕ್ಕರಿಯಂಬ ದೇವತ್ತಿಯು ತಂಮ್ಮ ದೇವತೆಗಳ ಕೂಡಿಕೊಂಡು ಬಹಳ ಕಾಲದಾರಭ್ಯ ವಾಸವಂನ್ನು ಮಾಡಿಕೊಂಡು ಯಿರುವಲ್ಲಿ, ಆ ಸಮಯದಲ್ಲಿ ಸಪ್ತಮಾತೃಕೆಗಳು

---

* ಮೈಸೂರಿನ ಪುರಾತತ್ವ ಇಲಾಖೆಯಿಂದ ತಂದ ಡಿ.೧೮೨೮ನೆಯ ಹಸ್ತಪ್ರತಿಯ ಸಹಾಯದಿಂದ ಈ ಕೈಫಿಯತ್ತನ್ನು ಅಲ್ಲಲ್ಲಿ ಪರಿಷ್ಕರಿಸಲಾಗಿದೆ. (ಸಂ).

ತಮ್ಮ ಮುಖ್ಯದೇವತೆಯಾದ ವುದಿ[>ಮಹಿ]ಶ್ಯಾಸುರಮರ್ದ್ದನಿ ಅಪ್ಪಣೆ ಮೇಲೆ ಘೋಣಾಸುರ ಮಲ್ಲಾಸುರರೆಂಬ ರಾಕ್ಷಸರ ಬೆನ್ನು ಅಟ್ಟಿ ಬಂದ್ದು. ಆ ರಾಕ್ಷಸರ ಸಂಘಡ ಅಘೋರಯುದ್ಧಾ ಮಾಡಿ, ಆ ಸಂಗರದಲ್ಲಿ ರಾಕ್ಷಸರ ಕೊಂದ್ದುರು. ಆವಾಗ್ಯೆ ಬನಶಂಕರಿ ಮೊದಲಾದ ಸಪ್ತಮಾತೃಕೆಗಳು ಯೀ ಪದ್ಮವನಕೆ ಬಂದ ವರ್ತಮಾನವಂನ್ನು ಯೀ ಬನಶಂಕರಿಯು ತನ್ನ ದುತ್ತರ[>ದೂತರ] ಕಡೆಯಿಂದಾ ಕೇಳಿ, ಯೀ ಸಪ್ತಮಾತೃಕೆಗಳುಗೆ ತನ್ನ ಬಳಿಗೆ ಕರಶಿಕೊಂಡ್ಡು. "ಕೆಲವು ದಿವಸ ಅಲ್ಲಿ ಯಿದ್ದು, ಶ್ರಮ ಪರಿಹಾರ ಮಾಡಿಕೊಳ್ಳಿ"ಯಂಬುದಾಗಿ ಅಪ್ಪಣೆ ಕೊಟ್ಟುದರಿಂದಾ, ಯೀ ಸಪ್ತಮಾತೃಕೆಗಳು ಯೀ ಬನಶಂಕರಿ ಅಮ್ಮನವರ ತಮ್ಮ ಮುಖ್ಯ ದೇವತೆ ಮಹಿಶಾಸುರಮರ್ದನೀ ಅವರಾತವೆಂದ್ದು ತಿಳದು, ಸಕಲಮರಿಯಾದಿ ಮನ್ನಣೆಗಳು ಮಾಡಿ, ಆಕೆ ಅನುಜ್ಞೆ ಮೇರಿಗೆ ನಡಕೊಂಡ್ಡು ಸಕಲ ಸುಖಸಂತ್ತೋಷದಿಂದ್ದಾ ಪದ್ಮವನದಲ್ಲಿ, ಪದ್ವಸರೋವರದಲ್ಲಿ ಜಲಕ್ರೀಡೆ ಮೊದಲಾಗಿ ಮಾಡಿಕೊಂಡ್ಡು ಯಿರುತ್ತಾ ಯಿದ್ದರು. ಈ ಸಪ್ತಮಾತೃಕೆಗಳು ದೇವತೆಗಳಿಗೆ ಶತ್ರಗಳಾದ ರಾಕ್ಷಸರಿಗೆ ಸಂಹ್ಯಾರವಂನ್ನೂ ಮಾಡಿ ಜಯಿಶಿದರು. ಆವಾಗ ಸಮಸ್ತದೇವತೆಗಳು ಸಂತೋಷಬಟ್ಟ್ಯು ಸುವರ್ನವೃಷ್ಟಿ ೩॥೦ ಘಳಿಗೆ ಪರಿಯಂತ್ರಾ ಆಕೆ ಮೇಲೆ ಆಯಿತು. ಆದ ಯಡಬಲದಲ್ಲಿ ಅದನ್ನಕ್ಕಿಯಿದಂಥಾ ರುಷಿಗಳು ಯಿ ಅಡವಿ ಅರಂಣ್ಯಕೆ ವಸುಧಾರ್‍ರೆಯಂಬುದಾಗಿ ಹೆಸರು ಯಿಟ್ಟರು. ವಸು ಯೆಂದರೆ ಸಂಸ್ಕೃತದಲ್ಲಿ ಚಿನ್ನಕ್ಕೆ ಹೆಸರು. ಧಾರಾಯೆಂದರೆ ಧಾರೆಯಾಗಿ ಬೀಳುವಂಥಾ ನೀರಿಗೆ ಹೆಸರು. ಯೀ ಮೆರಿಗೆ ದೆವತೆಗಳು ಚಿನ್ನದ ಮಳೆ ತರಶಿದ್ದರಿಂದ್ದಾ ಯೀ ಕಾಡಿಗೆ ವಸುಧಾರೆಯಂಬದಾಗಿ ಹೆಸರು ಬಂತ್ತು.

ಆಮೇಲೆ ಯೀ ಸಪ್ತಮಾತೃಕೆಗಳು ಯೀ ಪದ್ಮವನದಿಂದ್ದಾ ಹಿಮವತ್ಪರ್ವತಕೆ ತಮ್ಮ ಮುಖ್ಯದೇವತೆಯಾದ ಮಹಿಶಾಸುರಮರ್ದಿನೀ ಬಳಿಗೆ ಹೋಗುವಾಗ್ಯೆ ಯೀ ಬನಶಂಕರೀ ಅಮ್ಮನವರು ಅವರವರ ಅಂಶಗಳು ವಂದ್ದು ವಂದ್ದು ವಿಗ್ರಹಗಳಲ್ಲಿಟ್ಟು ಹೋಗುವಾಗ್ಯೆ ಅಪ್ಪಣೆ ಕೊಟ್ಟದರಿಂದ್ದಾ ಯೀ ಸಪ್ತಮಾತೃಕೆಗಳು ಅದೆ ಮೆರೆಗೆ ಯಿಟ್ಟುಕೊಂಡು ಹಿಮವತ್ಪರ್ವತಕೆ ಹೋದರು. ಬನಶಂಕರೀದೇವಿಯು ಯೀ ರುಷಿಗಳಿಂದ್ದಾ ಪೂಜೆ ಮಾಡಿಶಿಕೊಳ್ಳುತ್ತಾ ಭಕ್ತರನ ಸುಭಿಷ್ಟೆ ಮಾಡಿ, ಅನೇಕ ದಿವಸ ವಾಸಮಾಡಿಕೊಂಡು ಯಿದ್ದರು.

ಯೀ ಮಾ[>ಮೂ]ರನೆ ಯುಗ ದ್ವಾಪರದಲ್ಲಿ ಚಂದ್ರವಂಶದಲ್ಲಿ ಪಾಂಡುವ ಮಹಾರಾಯಗೆ ಅಜ್ಜನಾದ ಶಂತ್ತನ ಮಹಾರಾಜಯಂಬ ಮಹಾರ್‍ರಾಯ ತನ್ನ ಮಂದಿ ಮಾರ್ಬಲ ಸಮೇತನಾಗಿ ಯೀ ಅರಂಣ್ಯಕೆ ದೆ[>ದೇ]ಶಾ ನೋಡುವ ಬಗ್ಯೆ ಬೆಂ[>ಕುದು]ರಿಗೆ ಸವಾರಿ ಆಗಿ ಬಂದ್ದು ಯಿದ್ದಲ್ಲಿ, ಯೀ ಬನಶಂಕರಿ ಅಮ್ಮನವರು ಯೀ ರಾಯನ ಸ್ವಪ್ನದಲ್ಲಿ ಹೋಗಿ "ನಾನು ಬಹಳ ದಿವಸದಿಂದಾ ಯೀ ಅರಂಣ್ಯದಲ್ಲಿ ನನ್ನ ಗಣಗಳ ಸಮೇತಳಾಗಿ ವಾಸವಂನ್ನು ಮಾಡಿಕೊಂಡು ಯಿಧೆನೆ. ಯೀಗ ಪ್ರಪಂಚದಲ್ಲಿ ದೇವತ್ತಾ ಮಹಾತ್ಮೆಗಳು ಯಾವತ್ತು ಕಡಿಮೆ ಆಗಿ ಹೊದ್ದರಿಂದಾ, ನಾನು ವಂದ್ದು ವಿಗ್ರಹರೂಪವಾಗಿ ಯೀ ಹುತ್ತದಲ್ಲಿ ಯಿಧೆನೆ. ನೀನು ಧರ್ಮಿಷ್ಟನಾದ ಕರಣ ನಿನಗೆ ಕಾಣಿಸಿಕೊಳ್ಳುತ್ತೆವೆ. ಯೀ ಬಗ್ಯೆ ನೀನು ವಂದು ದೇವಸ್ತಾನವಂನ್ನು ಕಟ್ಟಿಶಿ ಬ್ರಾಂಹ್ಮಣ ವಿಧಾನವಾಗಿ ನಮಗೆ ಪ್ರತಿಷ್ಟೆ ಮಾಡಿಸೂ" ಯೆಂಬುದಾಗಿ ಅಪ್ಪಣೆ ಕೊಟ್ಟದ್ದರಿಂದಾ, ಯೀ ಅಮ್ಮನವರ ಅಪ್ಪಣೆ ಮೆರಿಗೆ ಯೀ ಅರಸು ತಮ್ಮ ಕಡೆಯವರಿಂದಾ ಅಡವಿಯನ್ನು ಕಡಿಶಿ, ಮರ ಮುಚ್ಚಿನಿಂದ್ದಾ

ದೇವಸ್ಥಾನವನ್ನೂ ಕಟ್ಟಿರೆ, ಆ ದೇವಸ್ಥಾನದಲ್ಲಿ ಬನಶಂಕರಿ ಅಮ್ಮನವರ ವಿಗ್ರಹ ಸಪ್ತಮಾತೃಕೆಗಳು ಸಹಾ ಪ್ರತಿಷ್ಟೆ ಮಾಡಿ. ಅಲ್ಲಿ ವೊಂದು ಗ್ರಾಮವನ್ನು ಕಟ್ಟಿರೆ, ಸಂಸ್ಕೃತದಲ್ಲಿ ವಸುಧಾರಾಯಂಬ ನಾಮವನ್ನು ಯಿಟ್ಟು ಯೀ ಅಮ್ಮನವರ ವರುತ್ರೊಚ[>ಷೋತ್ಸ]ವದ ಬಗ್ಯೆ ವಂದ್ದು ತೆರು ಕಟಿರೆ, ನಿತ್ಯೊತ್ಸವ ಪಕ್ಷೊತ್ಸವ ಮಾಸೊತ್ಸವ ಸಂವತ್ಸರೊತ್ಸವ ಮೊದಲಾದ ವುತ್ಸವಗಳು ನಿರ್ಮಿಶಿ, ಸಾರೊಧಾರವಾಗಿ ನಡಿಯುವ ಬಗ್ಯೆ ಕೆಲವು ವುತ್ತರವನ್ನು ಕೊಟ್ಟು, ಆ ಕೆಲ್ಸ ಯಾವತ್ತು ಆದ ಮೇಲೆ ಯೀ ಅರಸು ತನ್ನ ದೆಶಕೆ ಬಂದನು. ಯೀ ವಸುಧಾರೆಯಂಬದು ಸಂಸ್ಕೃತ ಶಬ್ದ. ಜನರು ಬಾಯಿಂದ್ದಾ ಸ್ವಷ್ಟವಾಗಿ ಬಾರದ್ದರಿಂದಾ ವಸ್ತಾರೆಯಂಬುದಾಗಿ ಹೇಳುತ್ತಾರೆ. ಯೀ ದೆವತಿಗೆ ಆಗಿನಾರಭ್ಯ ಮನುಷ್ಯರ ಪೂಜೆ ನಡಿಯುತ್ತಾ ಯಿದೆ.

ಕಲಿಯುಗ ಆದಿಯಲ್ಲಿ ಕೆಲವು ಅರಸಗಳ ಆವಾಂತ್ರದಿಂದ್ದಾ ಮೊದಲು ಯಿದ್ದ ವಸುಧಾರೆ ಗ್ರಾಮವನ್ನು ಪಾಳು ಆಗಿ ಹೋಗಿ, ಅರಂಣ್ಯವಾಯಿತ್ತು. ಬಲ್ಲಾಳರಾಯರ ಕಾಲದಲ್ಲಿ ಶಾಲಿವಾಹನ ಶಕ ೧೧೯೪ನೆಯ ಅಂಗೀರಸ ಸಂವತ್ಸರದ ವರಿಗೆ ಆಮೇಲೆ ಪ[>ನ]ರಶಿಂಹ್ಮ ಬಲ್ಲಾಳರ ಕಾಲದಲ್ಲಿ ವಸುಧಾರೆ ಅಡವಿಗೆ ಪಶ್ಚಿಮಭಾಗದಲ್ಲಿ ಹರದಾರಿಂ ॥೦ ಮೇಲೆ ಲಕ್ಷ್ಮಿಕಾಂತ್ತನಹಳ್ಳಯಂಬ ಗ್ರಾಮದಲ್ಲಿ ವೀರಂಗಣಗವುಡಾಯಂಬವನು ಯಿದ್ದುಕೊಂಡು, ಆ ಗ್ರಾಮದ ಪಾರುಪತ್ತೆಗಾರ ಶ್ಯಾನುಭಾಗರ ಸಂಗಡ ವಿರುಧವಂನ್ನು ಮಾಡಿಕೊಂಡು, ಆ ಗ್ರಾಮದ ಜೋಯಿಸ ಲಕ್ಷ್ಮಿಕಾಂತನ ಸಂಗಡ ಆಲೋಚನೆ ಮಾಡಿ, "ತಾನೂ ತನ್ನ ನೆಂಟರು ಸಹಿತವಾಗಿ ಯಿರುವದಕೆ ಪ್ರತ್ಯೇಕವಾಗಿ ವಂದ್ದು ಗ್ರಾಮವಂದ್ದು ಗ್ರಾಮವಂನ್ನು ಕಟಿಸಬೇಕು"ಯಂಬದಾಗಿಯೂ "ಯೀ ಗ್ರಾಮದವರ ಸಹವಾಸಾ ಬಿಟ್ಟು, ಯೀ ಗ್ರಾಮದ ಯಡಬಲದಲ್ಲಿ ವಂದ್ದು ಸ್ತಲವಂನ್ನು ನೀವು ಜೋಯಿಸತನದಲ್ಲಿ ಬುಧಿವಂತ್ತರಾದ ಕಾರಣ ನೀವು ನಮಗೆ ಕೇವಳ ಆಪ್ತರಾದ್ದರಿಂದಾ ಕೆಳುತ್ತೆನೆ"ಯನ್ನಲಾಗಿ ಯೀ ಜೋಯಿಶ್ಯನು ಗವುಡಗೆ ಹೇಳಿದ್ದು "ಯೀ ವಸುಧಾರೆಯೆಂಬ ಸ್ತಳದಲ್ಲಿ ದ್ವಾಪರಯುಗದಲ್ಲಿ ಶಂತ್ತಲರಾಜರು ವೂರಂನ್ನು ಕಟಿಶಿ ಯಿದಂಥಾ ಸ್ತಳಾ. ಅಲ್ಲಿ ಬನಶಂಕರಿ ಅಮ್ಮನವರು ವಾಸವನ್ನು ಮಾಡಿಕೊಂಡು ಯಿದ್ದಾರೆ.

ಯೀಗ ಯೀ ಯುಗದಲ್ಲಿ ಅನೇಕ ಅರಸಗಳ ವುಪದ್ರದಿಂದಾ ಪಾಳುಡಿಗಿ ಹೋಯಿತು. ನೀನು ನಿನ್ನ ಬಂಧುಗಳ ಸಮೇತನಾಗಿ ಆ ಸ್ತಳದಲ್ಲಿ ಗ್ರಾಮವನ್ನು ಕಟ್ಟಿಕೊಂಡು ಯಿದ್ದರೆ ನಿನಗೆ ಶ್ರಯಸ್ಸು ಆಗಿ. ಬಂಧುಗಳ ಸಮೇತನಾಗಿ ಸುಖಾ ಅನುಭವಿಸಿಕೊಂಡು ಯಿರುತ್ತಿ"ಯೆಂಬದಾಗಿ ಹೆಳಿದ್ದರಿಂದಾ ಯೀ ಗವುಡನು ಅರಸನ್ನ ಅಪ್ಪಣೆಯನ್ನು ತೆಗೆದುಕೊಂಡು, ಯೀ ವಸುಧಾರೆ ಸ್ಥಳ ಅಡವಿಗೆ ಬಂದು, ತಾನು ನಿರೀಕ್ಷಿಶಿದ ಮೆರಿಗೆ ಗ್ರಾಮವನ್ನು ಕಟ್ಟಿ, ಆ ಗ್ರಾಮಕೆ ಜೋಯಿಸರು ಹೆಳಿದ ಮೆರಿಗೆ ಪೂರ್ವದ ಹೆಸರು ಯಿಟ್ಟು, ಅಲ್ಲಿ ಯಿರುವ ಬನಶಂಕರೀ ಅಮ್ಮನವರಿಗೆ ವಂದ್ದು ದೇವಸ್ಥಾನವಂನ್ನು ಚಾವಡ ಆಕಾರವಾಗಿ ಕಟ್ಟಿಶಿ, ಸಪ್ತಮಾತೃಕೆಗಳ ಸಹಿತವಾಗಿ ಪ್ರತಿಷ್ಟೆಮಾಡಿ, ತಮ್ಮ ಬಂಧುಗಳಲ್ಲಿವ ಬಗೆ ಪೂಜೆಗೆ ನೇಮಕಾ ಮಾಡಿ, ಕಾಲಕಾಲಕೆ ಜಾತ್ರೆ ಬಗ್ಯೆ ತನ್ನ ಕುಲದೈವತಿಯಂಬದಾಗಿ ತಿಳುಕೊಂಡು ತನ್ನ ಬಂಧುಗಳಿಗೆ ಜಾತ್ರೆ ಬಗ್ಯೆ ವಿಶೆಷ ವುತ್ಸವಗಳಿಗೆ ಸಹಾ ನೆಮಕಾ ಮಾಡಿಶಿ, ಯಾವತ್ತು ಬಂದೊಬಸ್ತು ಆದ ಮೇಲೆ ತಾನು ತನ್ನ ಬಂಧುಗಳ ಸಮೇತವಾಗಿ ಯಿಲ್ಲಿ ವಾಸವ ಮಡಿಕೊಂಡು ಯಿದದ್ದರಿಂದ್ದಾ, ಅನೇಕ ದಿವಸ ಅಮ್ಮನವರ

ಅನುಗ್ರಹದಿಂದ್ದಾ ಯಿವನ ಕುಟುಂಬವೆಲ್ಲಾ ಅಭಿವೃಧಿಯಾಗಿ ಸಮಸ್ತಸುಖವು ಅನುಭವಿಸಿದನೂ. ಶಕ ೧೧೯೪ನೆಯ ಅಂಗೀರಸ ಸಂ॥ರದಾರಭ್ಯ ಬಲ್ಲಾಳರಾಯರ ಕಾಲ ಆಖೈರು ವರಿಗೆ ಶಕ ೧೨೫೭ನೆಯ ಯುವ ಸಂವತ್ಸರದ ವರಿಗೆ ಯೀ ವಸುಧಾರೆ, ಯೀ ಬೇಲೂರು ನಾಡಿಗನಿಗೆ ಸಂಸ್ಥಾನಕೆ ಶೆರಿ[>ಸೇರಿ] ದೊರಸಮುದ್ರಕೆ ನಡಿಯುತ್ತಾ ಯಿತ್ತೂ.

ತರುವಾಯ ಶಕ ೧೨೫೮ನೆಯ ಧಾತು ಸಂವತ್ಸರದಲ್ಲಿ ವಿದ್ಯಾರಣ್ಯಸ್ವಾಮಿ ಅನುಗ್ರಹದಿಂದ್ದಾ ವಿಜಯನಗರದ ಸಂಸ್ಥಾನದ ಕೆಳಗೆ ಹರಿಹರರಾಯರು ಮೊದಲು ಮಾಡಿಕೊಂಡು ೧೩ ಮಂದಿ ಕುರುಬರು ವಿಜಯನಗರದಲ್ಲಿ ವಿದ್ಯಾರಂಣ್ಯರ ಅನುಗ್ರಹದಿಂದಾ ಶಿಂಹ್ವಾಸನ ಮಾಡಿಕೊಂಡು ಅನೆಕ ದಿವಸ ಆಳಿದರು. ಆವಾಗ್ಯೆ ಯೀ ಗ್ರಾಮ ಬೆಲೂರು ನಡ ಕೆಳಗೆ ಯಿತ್ತು. ಹರಿಹರರಾಯರ ಕಾಲದಲ್ಲಿ ಅನೇಕ ಅಗ್ರಹಾರಗಳು ಯೀ ಬೇಲೂರ ಶೀಮೆ ವಳಗೆ ಮಾಡಿ ಬ್ರಾಹ್ಮರಿಗೆ ಕೊಟ್ಟ ಶಕ ಸದರು ಗವುತಮಕ್ಷೇತ್ರ ಬೆಲೂರು ಮೊದಲಾಗಿ ಕೊಟ್ಟರು. ಕುರುಬ ಸಂಸ್ಥಾನ ಹಾಳು ಆದ ಮೇಲೆ ಚಂದ್ರವಾ[>ವಂ]ಶಿಕರು ನರಪತಿ ಅರಸುಗಳು ಜನ ೮ ಆಳಿದರು. ಆವಾಗ್ಗೆ ಈ ಗ್ರಾಮವನ್ನು ಬೇಲೂರು ನಾಡಿನಲ್ಲಿ ಸೇರಿ ಆನೆಗುಂದಿಗೆ ನಡಿಯಿತ್ತು. ಶಾಲಿವಾಹನ ಶಕ ೧೪೧೨ನೆಯ ಸಧಾರಣ ಆರಭ್ಯಾ ೧೪೮೬ಕ್ಕೆ ರಕ್ತಾಕ್ಷಿ ಸಂ॥ರದ ವರಿಗೆ ಪ್ರವುಡದೇವರಾಯ ಮೊದಲಾಗಿ ರಾಮರಾಯರ ವರಿಗೇ.

ಆಮೇಲೆ ಅಚ್ಯುತರಾಯರ ಕಾಲದಲ್ಲಿ ಪುಟನಾಯಕಯಂಬವನು ನರಪತಿ ಅರಸಗಳ ಬಳಿಯ ಹಡಪದ ಕೆಲಸದಲ್ಲಿ ಯಿದ್ದುಕೊಂಡು ಯಿದ್ದನು. ಅವನ ಜ್ಯಾತಿ ತೆಲುಗ ಬಣಜಿಗನು. ಯಿವನ ಮಗ ಕೃಷ್ಣಪ್ಪನಾಯಕ. ಯಿವನ ಮಗ ವೆಂಕಟಾದ್ರಿನಾಯಕ, ಯೀ ಮೂರು ಮಂದಿಯು ಆನೇಗೊಂದೀ ರಾಯರ ಬಳಿಯ ಬೇರೆ ಬೇರೆ ಚಾಕುಯ್ಯ್ಲು[>ಚಾಕ್ರಿಯಲು] ಆನೆಗೊಂದೀ ಅಚ್ಚುತರಾಯುರ ಪ್ರಭುತ್ವದಲ್ಲಿ ಯಿದ್ದರು. ಆವಾಗ್ಯೆ ಅಚ್ಚುತರಾಯುರು ಚಿತ[>ಕ] ವೆಂಕಟಪ್ಪನಾಯಕಯಂಬನಿಗೆ ಅಮರ ತು[>ಮಾ]ಗಣಿಯಾಗಿ ಬೇಲೂರು ಹೊಳಿ ೩ ಲಕ್ಷ ಶೀಮೆ ಕೊಟ್ಟರು. ಯೀ ಯಿಬರು ಅರಸುಗಳು ೮೦ ವರುಷ ಪರಿಯಂತ್ರಾ ಪ್ರಭುತ್ವ ಮಾಡಿದರು. ಯೀ ತಿರೆಯರಂ[>ಕಿರಿಯವಂ] ವೆಂಕಟಾದ್ರಿನಾಯಕಾ ಯಂಬವನ ಮದುವೆ ಹೆಂಡತಿಗೆ ಪುತ್ರಸಂತಾನವಿಲ್ಲಾ. ಯಿವನು ಯಿಟ್ಟು ಯಿದಂತ್ತಾ ಶ್ರೀಗೆ[>ಸ್ತ್ರೀಗೆ] ಮಾತ್ರಾ ವಬ ಕುಮಾರಯಿದ್ದನು. 'ವೆಂಕಟಾದ್ರಿನಾಯಕನಿಗೆ ಮದುವೆ ಹೆಂಡ್ತುಗೆ ಸಂತಾನವಿಲ್ಲಾ' ಯಂಬದಾಗಿ ಸಮಚಾರ ತಂಮ್ಮ ಕಡೆಯವರಿಂದ್ಯಾ ಕೇಳಿ, ಯೀ ಶೀಮೆ ಜಪ್ತಿ ಮಾಡಿದರು. ಯೀ ಚಿತ[>ಕ]ವೆಂಕಟಪ್ಪನಾಯಕ ಯಿವನು ಶೀಮೆ ಯಾವತ್ತೂ ಜಪ್ತ ಆದಮೇಲೆ ತನ್ನ ತಾಯೀನ ಕರದುಕೊಂಡು, ರಹಸ್ಯವಾಗಿ ಪರಾಯಿ ಶೀಮೆಗೆ ಹೋದನು.

ಆಮೇಲೆ ರಾಮರಾಯರ ಪ್ರಭುತ್ವದಲ್ಲಿ ಯೀ ಬೇಲೂರು ಶೀಮೆಯು ಅಮರ ಮಾಗಣಿಯಾಗಿ ವಬ್ಬ ಕ್ಷತ್ರಿಯದ ವಿಕ್ರಮರಾಯನು ಆನೆಗೊಂದೀ ಸಂಸ್ಥಾನದಲ್ಲಿ ಬಹಳ ದಿವಸಾ ಕಾದುಕೊಂಡು ಯಿದದ್ದರಿಂದಾ ಯೀತಗೆ ತುಂಟರು ಯೀ ವಿಕ್ರಮರಾಯನು ರಾಮರಾಯರ ಕೆಳಗೆ ಕೆಲವು ವರುಷ ಪ್ರಭುತ್ವಮಾಡಿ ಆಮೇಲೆ ಸ್ವರ್ಗಸ್ತನಾದನು. ಯಿವನಿಗೆ ಸಂತಾನವಿಲ್ಲವಾದ್ದರಿಂದ್ದಾ ಶೀಮೆ ಯಾವತ್ತು ಆನೆಗೊಂದೀಯವರು ಜಪ್ತಿ ಮಾಡಿಕೊಂಡರು. ಆಮೇಲೆ ಆನೆಗೊಂದಿ ಸಂಸ್ಥಾನದಲ್ಲಿ ಸಂಗೀತಗಾರ ಭಿಕ್ಕಾರಿ ರಾಮಪ್ಪಯಂಬವನು ವಿದ್ಯದಲ್ಲಿ ಅರಸಗಳಿಗೆ ಮೆಚಿಶಿದ್ದರಿಂದ್ದಾ ಅರಸಗಳು

ಯಿವನಿಗೆ ಬೆಲೂರು ಪಯ್ಕಿ ಕಸಬಾ ಬೇಲೂರು ೪೦ ಸಾವಿರದು ಅಮರ ಮಾಗಣಿಯಾಗಿ ಕೊಟ್ಟರು. ಅವನು ವರುಷ ಪ್ರಭುತ್ವವನ್ನು ಮಾಡಿದನು. ಯಿವನಿಗೆ ಯಿಬರು ಹೆಂಡತೆರು. ಯಿದರಲ್ಲಿ ವಬಳು ನಗರದ ಸಂಸ್ಥಾನದ ಪ್ರಧಾನಿ ಮಗಳು ೧, ಯರಡನೆಯವಳು ವೈಗುರು[>ಐಗೂರು] ಗೊಪಾಲನಾಯಕಾ ಯಂಬವನು ಅರಸು ಪ್ರಧಾನಿ ಮಗಳು ೨. ಯೀ ಮೆರಿಗೆ ಯಿರುವಾಗ್ಯೆ ಭಿಕಾರಿ ರಾಮಪ್ಪಯ್ಯನು ಮೃತವಾದ ಮೇಲೆ ವೈಗೂರು[>ಐಗೂರು] ಗೊಪಾಲನಾಯಕಯಂಬವನು ಶೀಮೆ ಯಾವತ್ತು ತನ್ನ ಸ್ವಾಧೀನವ ಮಾಡಿಕೊಂಡು ೧ ವಂದ್ದು ವರುಷ ಪ್ರಭುತ್ವಾ ಮಾಡಿದನು.

ಆಮೇಲೆ ಬಿದನೂರು ಶೀಮೆಯಲ್ಲಿ ವಬ್ಬ ಪಾಳೆಗಾರನು ಹೊನ್ನೆಕಂಬಳೀ ಯಂಬವನು ಯಿಲ್ಲಿಗೆ ಬಂದು, ಶೀಮೆ ತನ್ನ ಸ್ವಾಧೀನವ ಮಾಡಿಕೊಂಡ್ಡು, ಸ್ವಲ್ಪ ದಿವಸ ಆಳಿದನು. ಯಿವನಿಗೆ ಸಂತಾನವಿಲ್ಲದ್ದರಿಂದಾ ತನ್ನ ಪುರೋಹಿತನಾದ ಶಂಕರನಾರಾಯಣಭಟ್ಟಗೆ ವಸ್ತಾರೆ ಬೆಲ್ಲೂರು ಸಹಾ ಕೂಡಿಯಿರುವ ನಗರದ ಶೀಮೆಯನ್ನು ಕೊಟ್ಟನು. ಆ ಶಂಕರನಾರಾಯಣಭಟ್ಟನು ೪೦ ವರುಷ ಪರಿಯಂತ್ರಾ ಆಳಿದನು. ಯೀತಗೆ ಯಿಬರು ಮಕಳು. ಅವರಿಗೆ ಯೀ ಶೀಮೆ ಪೂರ್ವೋತ್ತರಾಯೇನು ತಿಳಿಯದ್ದರಿಂದ್ದಾ ಯೀ ಮಕ್ಕಳ ಅದೃಷ್ಟವನ್ನು ಶೋಧಿಶಿ ನೋಡಬೇಕೆಂದ್ದು ಪರಮಾನ್ನವನ್ನೂ ಮಾಡಿಶಿ, ಅದರಲ್ಲಿ ತಮ್ಮ ಮುದ್ರೆವುಂಗರವನ್ನು ಹಾಕಿ, ತನ್ನ ಬಂಧುಗಳ ಮಕಳಿಗೆ ಸಹಾ ಹಂಚಿಕೊಡಬೇಕು ಯಂದು ತನ್ನ ಮಕ್ಕಳು ರಾಜ್ಯಕೆ ಅರಹತರು ಆದರಿಂದ್ದಾ, ಯೀ ಮೆರೆ ಮಾಡಿದಲ್ಲಿ ಯೀವುಂಗರ ಶಂಕರನಾರಾಯಣಭಟ್ಟಗೆ ಬಂತ್ತೂ. ಆವಾಗ ಯೀ ರಾಜ್ಯವನ್ನು ಆಳುವುದಕ್ಕೆ ತನ್ನ ಮಕ್ಕಳಿಗೆ ಅದೃಷ್ಟವಿಲ್ಲವೆಂದು ತಿಳಿದುಕೊಂಡು ಯೀ ಶೀಮೆಯನ್ನು ಯಿಕ್ಕೆರಿಯವರಿಗೆ ಕೊಟ್ಟರೆ ತನ್ನ ಮಕ್ಕಳಿಗೆ ಯಿವರು ಜೀವಂತ್ತರಾಗಿ ಯಿರುವ ಪರಿಯಂತ್ರಾ ಸಂರಕ್ಷಣೆ ಮಾಡುತ್ತಾರೆ ಯಂದ್ದು ತಿಳಕೊಂಡ್ಡು, ಈತನ ಮಕ್ಕಳಿಗೆ ನಗರದ ಶೀಮೆ ಪವುರೋಹಿತನ ಕೊಟ್ಟನು. ಆ ಮೇಲೆ ಈ ಶಂಕರನಾರಾಯಣ ಭಟ್ಟನು ಪವುರೋಹಿತನವನ್ನು ಮಕ್ಕಳಿಗೆ ವಹಿಸಿಕೊಟ್ಟು ಮೃತನಾದನು. ಸಂಕಂಣನಾಯಕನು ಬಿದನೂರು ಸಂಸ್ಥಾನ ಸಹಿತವಾಗಿ ಕೆಲವು ದಿವಸ ಪ್ರಭುತ್ವ ಮಾಡುವ ಕಾಲದಲ್ಲಿ ವೈಗುರು[>ಐಗೂರು] ವೆಂಕಟಾದ್ರಿನಾಯಕನು ಯೀ ಶೀಮೆಯನ್ನು ತನ್ನ ಸ್ವಾಧೀನ ಮಾಡಿಕೊಂಡು, ಬೇಲೂರು ಶೀಮೆ ಹೊಳ್ಳ ಪ್ರಭುತ್ವಾ ಮಾಡಿದೂ:

೧. ಬೆಲೂರು ೨. ಸಕ್ಕರೆಪಟಣ ೩. ಕೊಂಡೂರು ೪. ಚನ್ನರಾಯಪಟಣ ೫. ಹಾಸನಾ ೬ ಮಹಾರಾಜಿದುರ್ಗ ೭. ಅರಕಲಗೂಡು ೮. ಕಿಕ್ಕೆರಿ ೯. ಗ್ರಾಮ.

ಯೀ ಮೂರು ೩ ಲಕ್ಷ ಸೀಮೆಯಂನ್ನು ಪ್ರಭುತ್ವಾ ಮಾಡಿದನು. ಆವಾಗ್ಯೆ ಯೀ ವಸ್ತಾರೆ ಯೀ ಬೆಲೂರು ಹಳ್ಳಿಗೆ ಶೆರಿಯಿತ್ತು. ಶಿವಪ್ಪನಾಯಕನ ಕಾಲಕೆ ಬಹಳ ದಂಡು ಕೊಡಿಶಿ ವಸ್ತಾರಕೆ ಹೊಗಿ ವೆಂಕಟಾದ್ರಿನಾಯಕನ ಸಂಗಡ ಲಡಾಯಿ ಮಾಡಿ, ಅವನ ದಂಡು ಮುಳುಗಿಸಿ ಕೊಟೆಯನ್ನು ಕಟಿಕೊಂಡದರಿಂದ್ದಾ ಕೆಲವು ಮಂದಿ ಸಹಿತವಾಗಿ ವೆಂಕಟಾದ್ರಿನಾಯಕನು ಬೆಲೂರಿಗೆ ವೊಡಿ ಹೊದನು. ಆಮೇಲೆ ಶಿವಪ್ಪನಾಯಕನು ವಸ್ತಾರೆ ಕಿಲ್ಲೆಯಲ್ಲಿ ಕೆಲವು ಮಂದಿ ಯಿಟ್ಟು ಬಂದೊಬಸ್ತು ಮಾಡಿ, ಬಿದನೂರು ಶಿಮೆಗೆ ಶೆರಿಕೊಂಡು ೧೦ ವರುಷ ಪರಿಯಂತ್ರಾ ಪ್ರಭುತ್ವ ಮಾಡಿದನು.

ಆಮೇಲೆ ಶಿವಪ್ಪನಾಯಕನು ದಂಡು ತೆಗೆದುಕೊಂಡು ಬಂದ್ದು ಬೆಲೂರಿಗೆ ಮುತ್ತಿಗೆ ಹಾಕಿ, ವೆಂಕಟಾದ್ರಿನಾಯಕನ ಸಂಗಡ ಯುಧಾಮಾಡಿ, ಆ ಕೋಟೆಯಲ್ಲಿ ಬಹಳ ಜನ ಸಂಹಾರ ಮಾಡಿ, ಪ್ರಯಾಸವಾಯಿತ್ತು.

ಆಮೇಲೆ ವೆಂಕಟಾದ್ರಿನಾಯಕನು ತನ್ನ ಕುಟುಂಬ ಸಮೇತವಾಗಿ ಕೆಲವು ಮಂದಿಯ ಸಂಗಡ ತೆಗೆದುಕೊಂಡು ಸಕ್ಕರೆಪಟ್ಟಣದ ಶೀಮೆಗೆ ವೊಡಿಹೋದನು. ತರುವಾಯ ಶಿವಪ್ಪನಾಯಕನು ಬೆಲೂರು ತನ್ನ ವಶಮಾಡಿಕೊಂಡು, ವರುಷ ೧ ಆಳಿದನು. ಆಮೇಲೆ ಆನೆಗೊಂದೀ ಶ್ರೀರಂಗರಾಯರು ಯೀ ಶೀಮೆಗೆ ಬಂದ್ದು ಯಿದಲ್ಲಿ, ಶಿವಪ್ಪನಾಯಕನು ಯೀ ಬೆಲೂರು ಶೀಮೆಯು ಅವರಿಗೆ ವಪ್ಪಿಶಿ, ವಸ್ತಾರೆಯನ್ನು ತನಗೆ ಯಿಟ್ಟುಕೊಂಡು, ಶ್ರೀರಂಗರಾಯರು ಶ್ರೀರಂಗಪಟ್ಟಣದ ಬಾಗಲು ಪರಿಯಂತ್ರಾ ಸಾದಿಸುವ ಬಗ್ಯೆ ಬಂದದ್ದರಿಂದ್ಯಾ ಅವರಿಗೆ ತಂನ್ನ ಕುಮಕು ಮಾಡಿ, ಯಿವರ ನಿಮಿತ್ಯವಾಗಿ ಶ್ರೀರಂಗಪಟ್ಟಣದ ಬಾಗಲು ಪರಿಯಂತ್ರ ಶೀಮೆ ಜಯಿಸಿ ಶ್ರೀರಂಗ ರಾಯರಿಗೆ ಕೊಟ್ಟು ಶ್ರೀರಂಗ ಪಟ್ಟಣದ ಕೋಟೆಯನ್ನು ದಿ ೧೫ ಪರಿಯಂತ್ರ ತನ್ನ ಆಧೀನ ಮಾಡಿಕೊಂಡು ಯಿದ್ದು, ಅಲ್ಲಿಂದಾ ಶರೀರಕೆ ಚನ್ನಾಗಿ ಯಿಲ್ಲದೆ ಬಿದನೂರಿಗೆ ಬಂದದರಿಂದಾ ಸ್ವಸ್ತವಾಯಿತ್ತು. ಕೆಲವು ದಿವಸದ ಮೇಲೆ ಮೈಸೂರು ಅರಸುಗಳು ದಂಡು ತೆಗದುಕೊಂಡು ಬಂದು, ವಸ್ತಾರೆ ಹೊರ್ತು ಕಡಮೆ ಶೀಮೆ ಯಾವತ್ತು ಜಯಿಶಿದರು.

ತರುವಾಯ ಕೆಲವು ದಿವಸದ ಮೇಲೆ ಮೈಸೂರು ದೆವರಾಜವಡೆರು ದಂಡು ಕಟಿಕೊಂಡು ಬಂದ್ದು, ವಸ್ತಾರೆ ಕಿಲ್ಲೆಯನ್ನು ತಮ್ಮ ಆದೀನಾದಿ ಪರಿಯಂತ್ರಾ ಮಾಡಿಕೊಂಡು ಯಿದ್ದು, ಬಿದನೂರುವರ ಮೆಲೆ ಬಹಳ ಲಡಾಯಿ ಮಾಡಿದನು. ಯಿದು ಶಿವಪ್ಪನಾಯಕನು ಕೇಳಿ, ಪುನಹಾ ದಂಡು ತೆಗದುಕೊಂಡು ಬಂದು, ಯಿವರನ ಜಯಿಶಿ, ಪುನಹಾ ಶ್ರೀರಂಗಪಟ್ಟಣದ ಬಾಗಲು ಪರಿಯಂತ್ರಾ ಸಾದಿಸಿದ್ದರಿಂದ್ದಾ, ಯಿವರ ಶತ್ರುತ್ರ್ವವನ್ನು ಮನಸ್ಸಿನಲ್ಲಿ ಯಿಟ್ಟು ಯಾವ ಮೆರೆ ಆದರು ಶಿವಪ್ಪನಾಯಕನ್ನ ಸಂಹಾರ ಮಾಡಬೇಕೆಂದ್ದು ಯೋಚಿಶಿ, 'ಯುಧದಿಂದ್ದಾ ಜಯಿಸಲಾರೆವು' ಯಂದ್ದು ತಿಳದು, ಕೆಲವು ಭೂತವೈದ್ಯರಿಂದ್ದಾ ಮಾರಣಹೋಮಾ ಮಡಿಶಿದ್ದರಿಂದ್ದಾ ಶಿವಪ್ಪನಾಯಕನಿಗೆ ಬಹಳ ಉಪದ್ರವವಾಗಿ, ಬಿದನೂರಿಗೆ ಹೊಗಿ ಅಲ್ಲಿ ಮೃತನಾದನು.

ಯೀ ಶಿವಪ್ಪನಾಯಕನಿಗೆ ಯಿಬರು ಮಕ್ಕಳು, ಬದ್ರಪನಾಯಕ ೧, ಸೊಮಶೆಖರನಾಯಕ ೧, ಹಿರೆಮಗ ಬದ್ರಪ್ಪನಾಯಕನೂ ಪಟಾದಿಕಾರಿಯಾಗಿ ಬೆಲೂರು ವಸ್ತಾರೆ ಸ್ವಾಧೀನ ಮಾಡಿಕೊಂಡು, ಬಿದನೂರಿಗೆ ಶೆರಿಶಿಕೊಂಡು ಯೀತನು ಕಾಲವಾಗುವ ತನಕಾ ಆಳುತ್ತಾ ಯಿದಲ್ಲಿ, ಮೈಸೂರವರು ಯರಡು ಮೂರಾವರ್ತೆ ದಂಡು ತೆಗೆದುಕೊಂಡು ಬಂದಲ್ಲಿ ಅವರನ ಹೊಡದು ವೊಡಿಶಿ, ವಸ್ತಾರೆ ಕಿಲ್ಲೆಯಲ್ಲಿ ೩ ಸಾವಿರ ಮಂದೀಯಿಟ್ಟು, ಕಿಲ್ಲೆಯಂನ್ನು ಮರಹಂಮ್ಮತು ಮಾಡಿಶಿದನು. ಯೀತನು ಪರಂಧಾಮಕೆ ಹೊದ ಮೇಲೆ ಯೀತನ ತಮ್ಮ ಸೊಮಶೇಖರನಾಯಕನೂ ತನ್ನ ಅಣ್ಣನ ಪ್ರಭುತ್ವಕೆ ಬಂದ್ದು, ಯೀತನು ವಿಸೆಷವಾಗಿ ಗಾಂಜೀ ಅಫೀಮು ಸಾಮಾಧೀಕರು ಮಸಾಲೆಯಲ್ಲಿ ಕೂಡಿಸಿ ಹಾಕಿಶಿ, ಯೀತನಗೆ ಹುಚು ಬರುವ ಹಾಗೆ ಮಾಡಿಶಿದರು. ಆದ್ದರಿಂದ್ದಾ ಯೀತಗೆ ಹುಚು ಸೊಮಶೆಖರನಾಯಕಾ ಯಂಬದಾಗಿ ಹೆಸರು ಆಯಿತ್ತು. ಆ ಕಾಲದಲ್ಲಿ ಮೈಸೂರು ದೆವರಾಜವಡೆರು ಪುನಹಾ ದಂಡು ತೆಗೆದುಕೊಂಡು ಬಂದ್ದು, ಯಿವರ ಶೀಮೆಯಲ್ಲಿ ಗಡೀ ಕಿಲ್ಲೆಗಳು ಠಾಣೆ

ಹಾಕಿಕೊಂಡು, ತಮ್ಮ ಸ್ವಜನರ ವಸ್ತಾರೆಯಲ್ಲಿ ಯಿಟ್ಟು, ಮದ್ದು ಗುಂಡು ವಗೈರಾ ಕಾರಬಾಕೀ[>ರೀ] ಸಹಾಯಿಟ್ಟು ಬಂದೋಬಸ್ತು ಮಾಡಿಯಿದಲ್ಲಿ, ನಗರದಲ್ಲಿ ಸೊಮಶೆಖರನಾಯಕನ ಕೃತ್ತಿಮದಿಂದಾ ಮಾಡಿ ಕೊಂದುಹಾಕಿಶಿದರು.

ಆಮೇಲೆ ಯಿವನ ಹೆಂಡ್ತಿ ಚನ್ನಮ್ಮಾಜಿಯು ಪ್ರಭುತ್ವಕೆ ಬಂದು, ಪುತ್ರ ಸಂತಾನ ವಿಲದ್ದರಿಂದಾ ಮರಿಯಪ್ಪಶೆಟ್ಟಿ ಮಗನನ್ನು ಸಾಕು ತೆಗೆದುಕೊಂಡು, ಹಳಬರು ಸಾಮಾದಿಕರನ್ನು ತೆಗೆದು ಹಾಕಿಶಿ, ಹೊಸ ಸಾಮಾದಿಕರನ್ನ ನೆಮಕಾ ಮಾಡಿಶಿ, ಆಯಂಮ ಕೆಲಸಕ್ಕೆ ಯಿಟ್ಟು, ೨೫ ಸಾವಿರ ಕುಂವೀಯವರ ಹಳೆ ಪಯಿಕೀ ಕೊಟ್ಟು, ತಾ[>ಕಾ]ಸರಕೊಂಡು ತಿಮ್ಮಣ್ಣನಾಯಕ, ತೊಳಪಾಡು ಬೊಮ್ಮರಸಯ್ಯನ ಸಹಾ ಕಳುಹಿಶಿ, ಯೀವುತಕ ನೀರು ವಸ್ತಾರೆ ಪರಿಯಂತ್ರಕ್ಕೂ ಬರುವ ಬಾರು ವಸ್ತಾರಿಗೆ ದಕ್ಷಿಣ ದಿಕ್ಕಿನಲ್ಲಿ ಬೈಲು ಹೊಲದಲ್ಲಿ ಆಡಿತಿನ ತೆವರೆಂಬ ಸ್ಥಳದಲ್ಲಿ ವಂದು ಹರದಾರೀ ಮೇಲೆ ಯಿಳುಕೊಂಡರು. ಮೈಸೂರವರ ಕಡೆಯಿಂದಾ ವಸ್ತಾರೆ ಕೊಟೆಯಲ್ಲಿ ಯಿದ ತಿಮ್ಮಣ್ಣ ದಳವಾಯಿಯು ಮೂರು ದಿವಸ ಪರಿಯಂತ್ರಾ ಬಹಳ ಯುದ್ಧವನ್ನು ಮೆಯಿಸೂರವರ ಮಂದೀ ಸಂಗಡ ಮಾಡಿ ಯಡೆಹಳ್ಳ ಬದಿಯಲ್ಲಿ ಅರ್ಧ ಹರದಾರಿ ಮೆಲೆ ದೆಹ ಬಿಟ್ಟನು. ಮೈಸೂರವರ ಮಂದಿಕಿಂತಾ ಯೀ ಬಿದರೂರವರ ಮಂದಿ ಹೆರಾಳವಾದ ಕಾರಣ ಯೀ ಮೈಸೂರವರ ಸಯಿನ್ಯವು ಪೆಟ್ಟು ಬಿದ್ದು ಪರಾಜಿತವಾಗಿ ವೊಡಿಹೊದರು. ಆಮೇಲೆ ಯೀ ಬಿದರೂರವರು ಯೀ ವಸ್ತಾರೆ ತೆಗೆದುಕೊಂಡು, ಯೀ ಕೋಟೆಯಲ್ಲಿ ತಮ್ಮ ಕಡೆ ಮಂದೀ ಕೆಲವು ಯಿಟ್ಟು ಬಂದೊಬಸ್ತು ಮಾಡಿ ಹೋದರು.

ಆ ಮೇಲೆ ಕೆಲವು ದಿವಸವಾಗುವದು ದೊಡದೆವರಾಜವಡೆಯರ ಮಗ ಕೃಷ್ಣರಾಜವಡೆಯ ಮಂದಿ ತೆಗೆದುಕೊಂಡು, ಯೀ ಕೊಟಿಗೆ ಮುತ್ತಿಗೆ ಹಾಕಿ ಯುಧ ಮಾಡಿದರು. ಯೀ ವಸ್ತಾರೆ ಕಿಲ್ಲೆದಲ್ಲಿ ಯಿದವರಿಗೆ ಬಿದರೂರೂರವರ ಕಡೆಯವರು ಕುಮಕು ಬಾರದೆ ಹೊದ ಕಾರಣ, ಆ ಕಿಲ್ಲೆದಲ್ಲಿ ಯಿದವರು ಮೈಸೂರವರ ಕಡೆಯಿಂದ್ದಾ ಬಹಳ ಘೂ[>ಘಾ]ಶಿ ಆಗಿ, ಹತಸೆಷವಾದರು. ಕಿಲ್ಲೆ ಬಿಟ್ಟು ವೊಡಿಹೊದರು. ಆಗ ಕೃಷ್ಣರಾಜವಡೆರು ಯೀ ವಸ್ತಾರೆ ಕಿಲ್ಲೆ ಸ್ವಾಧೀನ ಮಾಡಿಕೊಂಡು, ತಮ್ಮ ಕಡೆ ಕೆಲವು ಮಂದಿ ಯೀ ಗಡಿಯಲ್ಲಿ ಯಿಟ್ಟು, ಬಂದೊಬಸ್ತು ಮಾಡಿ, ಕೃಷ್ಣರಾಜವಡೆರು ಯೀ ವಸ್ತಾರೆಯನ್ನೂ ಮೈಸೂರು ಸಂಸ್ಥಾನಕೆ ಶೆರಿಶಿ ಕೆಲವು ದಿವಸ ಆಳಿದ್ದು, ಆ ಸಮಯದಲ್ಲಿ ಚನ್ನಮ್ಮಾಜಿ ದೆಹ ಬಿಟ್ಟಳು.

ಆಕೆ ಆದ ತರುವಾಯ ಸಾಕ ಮಗ ಬಸಪ್ಪನಾಯಕ ಸ್ವತಂತ್ರ ಪ್ರಭುತ್ವಾ ಮಾಡುತ್ತಾ ಬಂದು, ಆತನ ಕಾಲದಲ್ಲಿ ಮತ್ತು ಬಹಳವಾಗಿ ದಂಡು ತೆಗೆದುಕೊಂಡು ಬಂದು, ಮೈಸೂರವರ ಕಡೆಯವರ ಸಂಗಡ ಯುಧಮಾಡಿ, ವಸ್ತಾರೆ ಕಿಲ್ಲೆದಿಂದಾ ಅವರನ ಪರಾಜಿತವಾಗುವ ಹಾಗೆ ಮಾಡಿಶಿ, ಕಿಲ್ಲೆ ಸ್ವಾಧೀನ ಮಾಡಿಕೊಂಡು, ಮುಂದ್ದೆ ಶ್ರೀರಂಗಪಟ್ಟಣದ ತನಕಾ ಹೋಗಿ, ರಾಜ್ಯ ಸಾಧಿಸಬೇಕುಯಂಬ ಅಭಿಲಾಷೆಯಿಂದ್ದಾ ದಂಡು ಸಹಿತವಾಗಿ ಯಿಳುಕೊಂಡು ಯಿದ್ದು, ಯೀ ಸಮಾಚಾರ ತಿಳಿದು ಮೈಸೂರು ಕೃಷ್ಣರಾಜವಡೆರು ತಮ್ಮ ದಂಡು ಶಿಧಾ ಮಾಡಿಕೊಂಡು, ಬೆಲೂರು ಗಡಿಯಲ್ಲಿ ಯಿ ಬಿದರೂರವರ ಸಂಗಡ ಸಲ್ಲಾ ಮಾಡಿಕೊಳುವ ಸಂವಿದಾನದಲ್ಲಿ ಯಿದ್ದು, ತಮ್ಮ ಕಡೆಯಿಂದ್ದಾ ಪ್ರಹ್ಲಾದಪಂಡಿತನ ಹೆಜಬಗೆ ಬಿದರೂರು ಅರಶಿನುಳಿಗೆ ವಸ್ತಾರಿಗೆ ಕಳುಹಿಸುವಾಗ್ಯೆ ಯೆನೆಂತ್ತಯಾದರೆ ಮೈಸೂರವರು ಬಿದರೂರವರು ದಂಡೆತ್ತಿ ಸ್ವಾರಮಾಡುವದ್ದರಿಂದ್ದಾ ಯೀ

ಭಾಗದಲ್ಲಿ ಯಿರೊ ಶೀಮೆಗಳು ಅನೇಕ ಕಾಲದ ಯಿಂದ್ದಾ ನಿರ್ಮೂಲವಾಗುವದಾಗಿ ಆಯಿತ್ತು. ಯಿದರಿಂದ್ದಾ ರೈತರೆಲ್ಲವರು ಅನೇಕ ಲುಕಸಾಲು[>ನು] ಪಡದರು, ಅದುಕೊಸ್ತರವಾಗಿ ಉಭಯತ್ತರೂ ಸಲ್ಲಾ ಮಾಡಿಕೊಳಬೆಕೆಂದ್ದೂ, ಅವರು ನಿರೀಕ್ಷಿಸುತ್ತಾರೆ. ಯಿದು ಹೊರ್ತು ಸಾಮಾನೀಕರಿಗೆ ಅರ್ಥವ್ರಯ ಮಾಡಿದರು. ಆಗ ಅವರು ತಮ್ಮ ಧಣೇರಿಗೆ ಹೆಳಿ ಆಲೋಚನೆ ಮಾಡಿ ಯೀ ಕರ್ತರಿಗೆ, ವಂದ್ದು ತಹಾ ಮಾಡಿಶಿ, ವಸ್ತಾರೆ ಬಿದರೂರವರಿಗೆ ಕೊಡಿಶಿ, ಬೆಲೂರು ಮೈಸೂರವರಿಗೆ ಕೊಡಿಶಿ, ಕಂಚಿನ ಕಲ್ಲುದುರ್ಗ ಗಡಿ ಗೊತ್ತುಮಾಡಿ, ಯಿದು ವಸ್ತಾರೆ ಬೆಲೂರಿಗೆ ಮಧ್ಯಸ್ತಳವಾದ ಕಾರಣ ಗೊತ್ತುಮಾಡಿ, ಯೀ ಭಾಷಾಪತ್ರಗಳು ವುಭಯತ್ರರಿಗೂ ಹುಟಿಶಿಕೊಟರು.

ಯಿನ್ನು ವುಪದ್ರವ ಬಾರದ ಹಾಂಗೆ ಗೊತ್ತಾದ ಗಡಿ ಮಿಂಚಿ ಯಿವರವರ ದಂಡುಗಳು ಮುಂದು ಹೋಗದ ಹಾಂಗ್ಗೆ ಹೊತ್ತು ಆದ್ದು, ವ್ಯಯಸಂವತ್ಸರದಲ್ಲಿ ಅವರಿಗೆ ಯೀ ವುಭಯತ ಆಗುತ್ತಿದರು. ವರುಷ ೪೯ ಯೀ ಕರ್ತರಿಗೂ ತಹಾ ಆಗುವ ವರಿಗೆ ಯಿ ವಸ್ತಾರೆ ಶೀಮೆ ಬಹಳ ಫಾಶಿ ಆಗಿ ಹಲಾತೀಯಿಂದ್ದಾ ಯಿತ್ತು. ಯಿಂತೆ ಯೀ ಶೀಮೆಗೆ ವುಭಯತ್ತರ ಕಡೆ ಸ್ವಾರೀಯು ಅನೆಕಾವರ್ತಿ ಬರುತ್ತಾಯಿದ ಕಾರಣ, ಮೆಲೆ ಬರದ ಮಿತ ಪರಿಯಂತ್ರ ಯೀ ಪ್ರಕಾರಯಿತ್ತು. ಅದರಲ್ಲಿ ಹೆವಳಂಬಿ ಮೊದಲುಗೊಂಡೇ ಪರಿಧಾವಿ ಸಂವತ್ಸರದ ವರಿಗೆ ಅತಿಶಯವಾಗಿ ೧೬ ವರುಷ ಯೀ ಶೀಮೆ ನಿರ್ಮೂಲವಾಯಿತ್ತು.

ಆಮೇಲೆ ವ್ಯಯ ಸಂವತ್ಸರ ಆರಭ್ಯ ಚಿತ್ರಭಾನು ಸಂವತ್ಸರ ಮಾಘ ಶು ೨ ಪರಿಯಂತ್ರಾ ವಸ್ತಾರೆ ಬಿದರೂರು ಸಂಸ್ಥಾನದ ಧೊರಿಗಳ ಅಧಿಕಾರದ ವಳಗೆ, ಬಸಪ್ಪನಾಯಕ ಮೊದಲು ಮಾಡಿ ಸೊಮಶೆಖರನಾಯಕನು ಬಿದರೂರು ಸಂಸ್ಥಾನಕೆ ಲಭೆ ಆದ ರಾಣಿ ವೀರಮ್ಮಾಜಿ ಸಾಕು ತೆಗೆದುಕೊಂಡು ಮಗ ಯಿವನ ಪರಿಯಂತ್ರಕ್ಕೂ ಯೆನು ತೊಂದರೆ ಡಾಂಬರವಿಲ್ಲದೆ ಯೀ ವುಭಯ ಪಕ್ಷದವರು ತಮಹಾಲು ನಿರ್ಮಲವಾಗಿ ಯಿರುವ ಸಮಯದಲ್ಲಿ, ಯೀ ಬಿದರೂರು ಸಂಸ್ಥಾನದವರು ತಂಮ್ಮಾ ಕಡೆಯಿಂದ್ದಾ ಈ ವಸ್ತಾರೆ ಕೋಟೆಯಲ್ಲಿ ಮದ್ದುಗುಂಡು ಸಾಮಾನು ಸರಂಜಾಮೆ ಸುದಾ ಇಟ್ಟು, ಈ ಕೋಟೆಯಲ್ಲಿ ಯೀ ಬಿದರೂರವರಿಗೆ ಕಡೆಗಡಿಯಾದ ಕಾರಣ ದುರಸ್ತುಮಾಡ್ಸಿ, ಸರ್ವದಾ ಮತ್ತೆನು ಅವಿವೇಕಗಳು ಬಾರದ ಹಾಗೆ ದ್ರಿಷ್ಟಿಯಲ್ಲಿಯಿಟ್ಟು ಯಿರುತ್ತಿದ್ದರು. ಯಿ ವಸ್ತಾರೆ ಯೀ ಬಿದರೂರವರ ವಳಗೆ ದಾಖಲು ಆದಮೇಲೆ, ಸಂಸ್ಥಾನದ ರಾಜ್ಯಭಾರಾ ಮಾಡಿದವರು ವಿವರಾ ಕೆಳಗೆ ಬರದ ಪ್ರಕಾರಕೆ ವ್ಯಯ ಸಂವತ್ಸರದಾರಭ್ಯ ಚಿತ್ರಭಾನು ಸಂವರದ ವರಿಗೆ:

೧. ಬಸಪ್ಪನಾಯಕ ೧೦ ವರುಷ, ೧. ಸೋಮಶೆಖರನಾಯಕ ೨೪.

೧. ಬೂದಿ ಬಸಪ್ಪನಾಯಕ ೧೫, ೧. ಚನ್ನಬಸಪ್ಪನಾಯಕ ೨,

೧. ಸೊಮಶೆಖರ ವೀರಮ್ಮಾಜಿ ಸಾಕುಮಗ ವರುಷ ೫. ಯೀ ಮೆರಿಗೆ ಅಂತ್ತೂ ಜನ ೫ಕೆ ಆಳಿದ ವರುಸ ೫೬.

ಚಿತ್ರಭಾನು ಸಂವತ್ಸರದ ಮಾಘ ಬ ೨ಲ್ಲೂ ಹೈದರಲ್ಲಿಖಾನಗೆ ಬರಾಜನದ ವೇಷಧಾರಿ ಸಂಘಡ ಹತರು ತೆಗದುಕೊಂಡು ಬಂದು, ಯೀಗ್ಯೆ ಬರಾಜ ಮೇಲೆ ಬರದ ೩ನದಲ್ಲಿ ನಾಲ್ಕನೆಯವನು

ಯೀತನು ವೀರಂಮ್ಮಾಜಿಯು ತನ್ನ ಪ್ರಾಣಕೆ ತಂದದರಿಂದಾ, ಚಿತ್ರಗಲ್ಲು ಪಾಳೆಗಾರ ಹತ್ರೆ ಕೆ[>ಹೈ]ದರನ ಸಹಾ ಸೆರಿಕೊಂಡವನು, ಯಿವನ ಹೆಸರಲ್ಲಿ ಬಿದರೂರಿಗೆ ಬರುವ ಮಾರ್ಗದಲ್ಲಿ ಸುಲಭವಾಗಿ ಗಡಿಗಳೆಲ್ಲಾ ಠಾಣೆ ಹಾಕಿಕೊಳ್ಳುತ್ತಾ ಬಂದರು. ವೀರಮ್ಮಾಜಿಯು ದುಷ್ಟಚರಿತ್ರೆಯಿಂದಾ ಬಹದರು ಮೆದಕೆರೆನಾಯಕನ ಸಂಗಡ ಫವುಜು ತೆಗೆದುಕೊಂಡು ಬರುವದಕೆ ಮೊದಲೆ ಯೀ ಸಂಸ್ಥಾನದಲ್ಲಿ ಬಹಳ ತೊಂದರೆ ಆಗಿ, ಅಸ್ವಾರಸ್ಯವಾಗಿ ಯಿತ್ತು. ಹೀಂಗ್ಗೆ ಯಿರುವಲ್ಲಿ ಬಹದರವರ ಫವುಜು ಬಂದ ವರ್ತಮಾನ ತಿಳದು, ಅರಮನಿಗೆ ಬೆಂಕೀ ಹಾಕಿ ಕೆಲವು ಖಜಾನೆ ತೆಗೆದುಕೊಂಡು ಬಲಾಳರಾಯದುರ್ಗ ವೊಡಿಹೊದಳು. ಆಮೆಲೆ ಯೀ ಬಹದರನು ಬಿದರೂರೂ ಠಾಣೆ ಹಾಕಿದ ದಾಳೀ ಲೂಟಿಮಾಡಿಶಿದ. ಆಮೆಲೆ ಬಿದರೂರು ಸ್ವಾಧೀನ ಮಾಡಿಕೊಂಡ ಬಳಿಕ ಕಾರಶಹಾಯಂಬ ತನ್ನ ಗುರುವನ್ನು ವೀರಮ್ಮಾಜೀ ಬಳಿಗೆ ಕಳುಹಿಸಿ, ವಡಂಬಡಿಕೆಯಿಂದಾ ಕರಕೊಂಡು ಬರಬೇಕೆಂದು ಕಳುಹಿಶಿದಲ್ಲಿ, ಆತ ಹೊಗಿ ಯೀ ವೀರಮ್ಮಾಜಿಯನ್ನು ಬಹದರನ ದರ್ಶನಕೆ ಕೊಡಿಯಾಲಕೆ ಕರಕೊಂಡು ಬಂದ್ದರು.

ಆಕೆ ಬಂದು ದರ್ಶನಾ ತೆಗೆದುಕೊಂಡು ಬಳಿಕಾ, ಯರಡನೆ ಸಾಕು ಮಗ ಸಂಗಡ ಯೀತೆ[>ಕೆ]ನ ಸಹಾ ಮಧುಗಿರೀ ದುರ್ಗಕೆ ಪಹರಾ ಹಾಕಿ ಕಳುಹಿಸಿ, ಬಹಳ ಬಂದೋಬಸ್ತು ಆಗಿ ಯಿಡುವ ಹಾಗೆ ತಾಕತ ಮಾಡಿಶಿದು, ಕೆಲವು ಕಾಲದ ಮೇಲೆ ಮರಾಟೆಯವರ [>ರು] ಮಧುಗಿರಿ ಠಾಣೆಹಾಕಿದ ಮೇಲೆ, ಯೀ ವೀರಮಾಜೀ ಯೀ ಸಾಕು ಮಗನ್ನ ಸಹಾ ಪಾರಾದಿಂದ್ದಾ ಬಿಡಳಿ ತಮ್ಮ ಸಂಗಡಲೆ ಕರಕೊಂಡು ಹೊಗುವಾಗ್ಯೆ, ಮಧ್ಯೆ ಮಾರ್ಗದಲ್ಲಿ ಯೀಕೆಯು ಸತ್ತು ಹೋದಳು. ಆ ಸಾಕು ಹುಡುಗ ಮಾತ್ರಾ ಮರಾಟೆಯವರ ಶೀಮೆಯಲ್ಲಿ ಯಿದ್ದುಕೊಂಡು ಹೋದನು. ಯೀಚಿಗೆ ಆತನು ಆ ಶಿಮೆಯಲ್ಲಿ ಸತ್ತು ಹೋದನು ಯಂಬುದಾಗಿ ವರ್ತಮಾನಾ. ಚಿತ್ರಭಾನು ಸಂ॥ರದ ಆರಭ್ಯಾ ಶುಭಕೃತು ಸಂವತ್ಸರದ ವರಿಗೆ ವರುಷ ೧೬ ಆಳಿದನು. ಯಿತನು ತನ್ನ ದಿನದಲ್ಲಿ ದೆವಾದಾಯ ಬ್ರಹ್ಮಾದಾಯಕೆ ಅರ್ಧಮಾನ್ಯ ಮಾಡಿದನು. ಯಿವರ ದಿವ್ಸದಲ್ಲಿ ನಗರದ ಸುಭೇದಾರನ ಕೆಳಗೆ ಅನೇಕ ಅಮಲುದಾರು ಅಮಲು ಮಾಡಿದರು. ಸುಭೇದತನಕೆ ಸೆಕ ಅಯಾಜನು ಮಾಡುತ್ತಾ ಯಿದನು. ಯೀ ಸೆಕ ಅಯಾಜೀ ಕಾಲಕೆ ಹೈದರನವಾಬನು ಆರಕಾಡ ಮೇಲೆ ಮೃತವಾದ ಸಮಾಚಾರವನ್ನು ಕೇಳಿ, ಯಿಂಗ್ರೀಜೀವರಿಗೆ ಕರೆ ಕಳುಹಿಸಿ, ಠಾಂಣ್ಯವನ್ನು ಹಾಕಿಶಿಕೊಟನು.

ತರುವಾಯ ಯಂಗ್ರೀಜಿಯವರು ಪುನಹಾ ಶೇಖ ಅಯಾಜೀಗೆ ಕೊಡದರಿಂದ್ದಾ, ಯೀತನು ಮೂರ್ರುಂಗಳು ಮಾಡಿದನು. ಯೀ ಸಮಾಚಾರವನ್ನು ಟಿಪುಸುಲತಾನನೂ ಕೆಳಿ ಅತಿ ಶೀಗ್ರದಲ್ಲಿ ಫವುಜು ತೆಗೆದುಕೊಂಡು ಬಂದು, ನಗರವನ್ನು ಠಾಣೆ ಹಾಕಿಕೊಂಡನು, ಯೀ ಟಿಪುಸುಲತಾನನು ನಗರ ಬರುವದಕೆ ಮುಂಚಿತವಾಗಲೆ ಶೇಖಅಯಾಜನು ಜಹ . . . . ಬೊಂಬಯಿಗೆ ಹೋದನು. ಟಿಪುಸುಲತಾನನು ಶಿಧಾರ್ತಿ ಸಂ ॥ರದ ವರಿಗೆ ರಾಜ್ಯಭಾರವನ್ನು ಮಾಡಿದನು. ಆವಾಗ್ಯೆ ವಸ್ತಾರೆಯಲ್ಲಿ ಅಮಲತನಕೆ ಯಿದವನು ಪ್ರಾತಿ[>ಕಿ]ನ ಮೆರಿಗೆ ನಗರದ ಸುಭೇದ ಕೆಳಗೆ ನಡದುಕೊಳ್ಳುತ್ತಾಯಿದನು. ತರ್ವಾಯ ಶಿಧಾರ್ತಿ ಸಂವತ್ಸರದಲ್ಲೇ ಕುಂಪಣಿಯವರು ಶ್ರೀರಂಗಪಟ್ಟಣವನ್ನು ಠಾಣೆ ಹಾಕಿಕೊಂಡರು. ಆವಾಗ್ಯೆ ವಸ್ತಾರೆ ಅಮೀಲಿಗೆ ಬೆಲೂರು ಚೆನ್ನಬಸಪ್ಪಯ್ಯಾಯಂಬವನು ಮಾಡಿಕೊಂಡು ಯಿದಲ್ಲಿ, ಟೀಪುಸುಲತಾನನ ದಿವಸದಲ್ಲಿ ನಗರದ

ಸಂಸ್ಥಾನದವರ ರಾಯರೆಯೆನ್ನಿಶಿ ಯಿರುತ್ತಾಯಿದ ಅವನು “ಕುಂಪಣೀ ತಾಲ್ಲುಕ ಸರದಾರು ನಗರ ಸಂಸ್ಥಾನ ನಮಗೆ ಕೊಟ್ಟು ಯಿದಾರೆ ಯಂದ್ದು, ಕಾಗದವು ನಮ್ಮ ಬಳಿಯಲ್ಲಿ ಅದೆ”ಯಂದ್ದು ಸಹಾ ವಾಸ್ತರೆ ಬಳಿಗೆ ಬಂದ್ದು, ಯೀ ವೂರಿಗೆ ಅಮಲುದಾರ ಬಸಪಯ್ಯಯಂಬವನು ಯಿರುವವನಂ ಯೀ ವಸ್ತಾರೆ ಕಿಲ್ಲೆದಲ್ಲಿ ಹಾಜರು ಯಿಲ್ಲದೆ ಆತನ ತಂಮ್ಮ ತಿಮ್ಮಪೈಯ್ಯಾ ಯಂಬವನು ಕಿಲ್ಲೆದಲ್ಲಿ ಯಿರುವ ಅಂತ್ತಾರನಿಗೆ ತನ್ನಲ್ಲಿಯ ಯಿರುವ ಅಪಥ ಕಾಗದವನ್ನು ತೊರಿಶಿಯಿಟ್ಟಂದ್ದಾ, ಯೀ ಕಿಲ್ಲೆ ತಯಿನಾತಿ ಜನರು ವಾಲೆಕಾರು ಶೀಮೆ ರೈತರುನ ಸಹಾ ಕರಕೊಂಡು ಯಡೆಹಳ ಶೀಮೆಗೆ ಹೋದನು. ಆಮೇಲೆ “ಯೀ ಶೀಮೆ ಮೆಲೆ ಬಂದ ಪಾಳೆಗಾರಗೆ ಅಮಲದಾರಿಕೆ ಕೊಡುಲ್ಲಾ”ಯಂಬದಾಗಿ ಪೂರ್ನಯ್ಯನ ಪರವಾನೆ ಬಂದದರಿಂದಾ ಆಮೆಲೆ ಆಮೀನನು ರಯಿತವನ್ನೆರೆರನ ಕರೆಕಳುಹಿಸಿದಲ್ಲಿ, ರೈತರು ಬಾರದೆ ಯಿದ ಸಂಮ್ಮಥಾ ಪಪಂಥ ಪಿತೂರಿ ಮಾಡಿ, ಸದರಹಂ ಪಾಳೆಗಾರಗೆ ಜಮೆಯ ಸಹಾಯಾ ಕಿಲ್ಲೆಕೆ ಮುತ್ತಿಗೆ ಹಾಕಿಶಿ, ಕಿಲ್ಲೆದ ವಳಗೆ ಬಂದ್ದು, ಕಿಲ್ಲೆದ ಬಾಗಲ್ಲೀ ಯಿದ ಪಾರದ ಜನಕೆ ಶಿಕ್ಷೆ ಮಾಡಿಶಿ, ಸದರೀ ಅಮೀಲಗೆ ಠಾರ ಮಾಡಿದರು.

ಯೀ ವರ್ತಮಾನ ಪೂರ್ನಯ್ಯನವರಿಗೆ ತಿಳದು ತಂ[>ಕಂ]ದಾಚಾರದ ಯಿಲಾಕೆ ಮುತ್ಸದಿ ತಮ್ಮಾಜೀಪಂತನ ಹಮರಹಾ ಕೆಲವು ಫವುಜನ್ನು ಕೊಟ್ಟು ಕಳುಹಿದರಿಂದಾ ಕೆಂಚನಹಳ ವುಕ್ಕಡಕೆ ಯೀ ಫವುಜು ಬಂದು ದಾಖಲು ಆದ ವರ್ತಮಾನ ಕೇಳಿ, ಸದರಹೂ ಪಾಳೆಗಾರನು ರಾತೊರಾತ್ತು ವೊಡಿಹೊದ. ಆಮೆಲೆ ತಮ್ಮಾಜಿಪಂತ್ತ ಫವುಜು ಸಹಿತವಾಗಿ ಬಂದು, ಕಿಲ್ಲೆದ ಠಾಣೆ ತೆಗೆದುಕೊಂಡು ರಹತಮೀನಾ ಯಂಬ ಕಿಲ್ಲೆದಾರನ್ನ ಮೊಕರರು ಮಾಡಿಯಿಟ್ಟರು. ಆಮೆಲೆ ಪತ್ತೆಹೈದರಾಯಂಬ ಹೆಸರು ಹೇಳಿಶಿಕೊಂಡು, ಸಂಗಡ ಕೆಲವು ಫೈವುಜು ತೆಗೆದುಕೊಂಡು ಸಂಗಡ ಸುರಳೀ ಸುಬರಾಯಂಬ ಮುತ್ಸದಿಗೆ ಫವುಜದಾರೀ ಮೊಕರರು ಮಾಡಿದ. ತರುವಾಯ ಅವನು ಯೀ ಕಿಲ್ಲೆ ಕಿಲ್ಲೆದಾರಿ ಸುದಾ ತಮ್ಮ ಸ್ವಾದೀನಕೆ ಕೊಡಬೇಕು”ಯಂದು ಕಿಲ್ಲೆದಾರನ ಸಂಗಡ ಜವಾಬು ಸ್ವಾಲು ಮಾಡಿದಲ್ಲಿ, ಆಗ ಕಿಲ್ಲೆದಾರನೂ ಫಿತೂರ್ರಿತನದಲ್ಲಿ ಸದರಹೂ ಫತ್ತೆಹೈದರಗೆ ಆ ಸರಳೆ[>ಸುರಳಿ] ಸುಬರಾಯಗೆ ಸಹಾಯಿಕರ್ತರನೂ ಕರೆಕಳುಹಿದಲ್ಲಿ ಫತ್ತೆಹೈದರಾ ಬಾರದೆ ಸುರಳೀ ಸುಬರಾಯ ಸರದಾರ ಮಾತ್ರಾವ್ವನೆ ಸಂಗಡ ಯಿದ್ದಾ ೫೦ ಜನ ಸುದಾ ಬಂದ್ದು, ಕಿಲ್ಲೆದ ಪಶ್ಚಿಮದ ಬಾಗಿಲಲ್ಲೂ ಯಿರುವ ಅಂಚೆ ಚಾವಡಿಯಲ್ಲು ಬಂದು ಕುಳಿತನು.

ಅನಂತ್ತರ ಹತ್ತರನ ಕಿಲ್ಲೆದಾರನು ಕಿಲ್ಲೆದಲ್ಲಿ ಯಿರುವ ಮಂದಿಯನ್ನು ಯಾವತ್ತು ಬರುಜು ಬಾಕಿಗೆ ಯಿಟ್ಟು, ತೋಪುಗಳು ತಯಾರು ಮಾಡಿ, ತಾನು ಯಳು ಯಂಟು ಜನ ಸಂಗಡ ಕರಕೊಂಡು ಹೊರಗೆ ಹೋದನು. ಆಮೇಲೆ ಅವನ ಯಿವನ ಜವಾಬು ಸ್ವಾಲು ಆಗುವಲ್ಲಿ ಸುಬರಾಯನು “ಕೀವ[>ಲಿ] ಕಯಿ ನಮ್ಮ ಸ್ವಾಧೀನಕೆ ಕೊಡುತ್ತೆವೆಂತ್ತಾ ದ್ರಿಷ್ಟಿಯನ್ನು ಆಲಸ್ಯವೇಕೆ ಕೊಡುವಾ}ಯಂದ್ದು ಕೆಳಿದಲ್ಲಿ, “ವಳೆದು ಕೊಡುತ್ತೆವೆಂ”ತ್ತಾ ಕಾಲಹರಣ ಮಾಡುತ್ತಾ ಬಂದನು. ಯಿಷಾರ ತಿಳಕೊಂಡು ಸುರಳೀ ಸುಬರಾಯನು ಕಿಲ್ಲೆದಾರನ ಬೆನ್ನು ಮೆಲೆತ್ತು ಘೂಯಾ[>ಘಾಯಾ] ಮಾಡಿದನು. ಅದು ನೋಡಿಕೊಂಡು ಕಿಲ್ಲೆದಾರನು ತಿರಿಗೀ ಸುಬರಾಯನಂನ್ನುತ್ತುಯಿಂದ್ದಾ ಹೊಡದು ಠಾರು ಮಾಡಿದನು. ಆ ಸುಬರಾಯನ ಸಂಗಡ ಯಿದವರಿಗೆ ಕಿಲ್ಲೆದಾರನ ಸಂಗಡ ಯಿದವರು

ಹೊಡದು ಹಾಕಿದರು. ಕಿಲ್ಲೆದ ಮೆಲನಿಮದ್ದಾ ಗುಂಡುಗಳು ಹಾರಿದು. ಯೀ ವರ್ತಮಾನ ತಮ್ಮಜೀಪತ್ತಂನು ಕೇಳಿ, ಕಿಲ್ಲೆಕೆ ಬೆರೂರು ದಾಖಲು ಆದನು. ಆ ಸುರಳೀ ಸುಬರಾಯನ ಸಂಗಡ ಬಂದ ಜಮೀಯತ್ತು ಹೊಂದಕೆ ವೊಡಿಹೊದರು. ಆಮೆಲೆ ಗೈಬರಾಜುಯಂ ಫತ್ತೆಹೈದರನ ಸಂಗಡ ಯಿದ ದಳವಾಯಿ, ವೀರಭದ್ರಯ್ಯ ಬಸವಪ್ಪಾಯಂಬವರು, ಕೆಳನೂರು ವೀರಪ್ಪಗವುಡ, ಚಂಜಿ ಅರಸು, ಯಿವರ ತಮ್ಮ ದೇವೆಗವುಡ ಮೊದಲಾದವರು ಯೀ ಪ್ರಕಾರ ತುಂಟತನಾ ಮಾಡಿದ ವರ್ತಮಾನ ಪೂರ್ಣಯ್ಯ ತಿಳದು, ಗೈ[>ಬ]ರಾಜನ ಮೊದಲು ಮಾಡಿಕೊಂಡು, ಯೀ ಹತ್ತು ಜನಾನೂ ಯೀ ವಸ್ತಾರೆ ಕೊಟೆ ಪಶ್ಚಿಮ ದಿಕ್ಕಿನಲ್ಲಿ ಬಾಗಿಲ ಸಮೀಪದಲ್ಲಿ ಪೂರ್ಣಯ್ಯನವರ ಅಪ್ಪಣೆ ಪ್ರಕಾರ ವೂರವರಿಗೆ ಕಾಣುವ ಹಾಗೆ ಗಲ್ಲು ಹಾಕಿದರು. ಆಮೇಲೆ ತಾಲ್ಕೋ ಬಂದೊಬಸ್ತು ಮಾಡಿದರು. ಆ ದಿನ ಮೊದಲು ಮಾಡಿಕೊಂಡೂ ಆಮೀಲದಾರರು ಮೈಸೂರು ಕೃಷ್ಣರಾಜವಡೆರ ಕಡೆ ದಿವಾನನ ಕೈಕೆಳಗಿನಿಂದ್ದಾ ಅಧಿಕಾರ ಮಾಡುತ್ತಾ ಬಂದರು.

❖❖

೩೫
ಶ್ರೀ ಎಡತೊರೆ ಮಠ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೨

ದಶವಿಧಸಂಪ್ರದಾಯ ಮಧ್ಯದಲ್ಲಿ ಸರಸ್ವತಿಸಂಪ್ರದಾಯ. ಯಿದಕ್ಕೆ ಮೂಲಗುರುಗಳು ಪೂರ್ನಾನಂದ ಸರಸ್ವತಿಗಳು. ಅವರು ಯಿದ್ದ ಸ್ಥಳಾ ಚೋಳದೇಶದ ಕಂಜನೂರು. ಅವರ ಶಿಷ್ಯರಲ್ಲಿ ಶಾಶ್ವತಾನಂದ ಸರಸ್ವತಿಗಳಿಗೆ ಯಿಬ್ಬರು ಶಿಷ್ಯರು: ಯೋಗಾನಂದ ಸರಸ್ವತಿಗಳು, ಜಗನ್ನಾಥ ಸರಸ್ವತಿಗಳು. ಯೋಗನಂದ ಸರಸ್ವತಿಗಳು ಪ್ರಾದಕ್ಷಿಣ್ಯೇನ ತೀರ್ಥಯಾತ್ರೆ ನಿಮಿತ್ಯವಾಗಿ ದೇಶಸಂಚಾರ ಮಾಡುವ ಆಗ್ಯೆ, ಯಡತೊರೆ ಅರ್ಕಪುಷ್ಕರಣಿ ಮಹಾಕ್ಷೇತ್ರಕ್ಕೆ ಬಂದಲ್ಲಿ, ಅರ್ಕೇಶ್ವರಸ್ವಾಮಿಗಳು ಸ್ವಪ್ನದಲ್ಲಿ ಬಂದು, ಯಿಲ್ಲಿಯೇ ಯಿರ್‍ರುವ ಹಾಗೆ ಅಪ್ಪಣೆ ಕೊಟ್ಟದರಿಂದ ೧೫೫೪ನೆ ಪರಿಧಾವಿನಾಮ ಸಂವತ್ಸರದಲ್ಲಿ ಯಿಲ್ಲಿಯೇ ನಿಂತರು.

ಅವರಿಗೆ ಶಿಷ್ಯರು ಯಿಬ್ಬರು: ಗೋಪಾಲಾನಂದ ಸರಸ್ವತಿಗಳು, ಕ್ರಿಷ್ಣಾನಂದ ಸರಸ್ವತಿಗಳು. ಮೂಲಯೋಗಾನಂದರ ಕನಿಷ್ಟರು ಜಗನ್ನಾಥಸರಸ್ವತಿಗಳು[>ಳ] ಶಿಷ್ಯರು ರಾಮಬ್ರಾಹ್ಮಾನಂದರು – ಯೀ ಮೂರು ಜನರು ಮೂಲಯೋಗಾನಂದರಲ್ಲಿ ಶಾಸ್ತ್ರ ಅಭ್ಯಾಸ ಮಾಡಿದರು. ರಾಮಬ್ರಾಹ್ಮಾನಂದ ಸರಸ್ವತಿಗಳು ಚುಂಚನಕಟ್ಟೆ ರಾಮಕ್ಷೇತ್ರದಲ್ಲಿ ಬಹುಕಾಲ ತಪಸ್ಸುಮಾಡಿ, ರಾಮಪ್ರಸಾದಸಂಪಾದಿಸಿ, ಹೊಳೆನರಸೀಪುರದಲ್ಲಿ ಮಟಾ ದೇವಸ್ಥಾನವೂ ಕಟ್ಟಿಶಿಕೊಂಡು ಅಲ್ಲಿಯೇ ನಿಂತು. ಗೋಪಾಲಾನಂದ ಸರಸ್ವತಿಗಳು ಆರ್ಕಲಗೂಡಲ್ಲಿ ಮಟಾ ಕಟ್ಟಿಶಿ ತಮ್ಮ ಶಿಷ್ಯರು ಆದ ಪೂರ್ನಬೋಧಾನಂದವರಲ್ಲಿ

ಯಿಟ್ಟು, ತಾವು ಶ್ರೀರಂಗಪಟ್ಟಣದ ಗೌತಮಕ್ಷೇತ್ರದಲ್ಲಿ ನಿಂತರು. ಕ್ರಿಷ್ಣಾನಂದರು ಯೀ ಆರಕಕ್ಷೇತ್ರದಲ್ಲಿ ಯಿದ್ದು ಮಾಧವಾನಂದರಿಗೆ ಯೋಗಾನಂದರಿಗೆ ಯಿಬ್ಬರಿಗೂ ಆಶ್ರಯ ಕೊಟ್ಟರು.

ಯಿಬ್ಬರಲ್ಲಿ ಯೋಗಾನಂದರು ಹಾಸನದಲ್ಲಿ ಮಟಾ ಕಟ್ಟಿಸಿ ನಿಂತರು. ಮಾಧವಾನಂದರು ಯೀ ಕ್ಷೇತ್ರದಲ್ಲಿ ನಿಂತು + + + + ಲಿಂಗಪ್ರತಿಷ್ಠೆಮಾಡಿ, ಮಠವನ್ನು ವಿಸ್ತಾರಮಾಡಿ + + + + [>ಗೋ]ಪಾಲ ಸರಸ್ವತಿಗಳಿಗೆ ಆಶ್ರಮ ಕೊಟ್ಟು + + + + ಕ್ಕೆ ಖ ೩ ಗದ್ದೆ ಆಯಿನೂಕಾರ ಗದ್ದೆ + + + + ಹಾ ಖ ೫ ಖಂಡಗ ಭೂಮಿಯನ್ನು + + + + ಸುಗಳು ಕ್ರಿಷ್ಣರಾಜ ವಡೆಯರಿಂದಾ + + + + ಆಮೇಲೆ ಬಾಲಗೋಪಾಲಸ್ವಾಮಿ ಸರಸ್ವತಿ + + + + ನೆ ೧೯ ಧಾರಮಾಡಿ ಳಾಳದೇವನ + + + + ಯೇ ಬಾಳಲಲ್ಲಿ ನಿವೃತ್ತಿಇ ಮಾರಚನಹಳ್ಳಿಯೆಂಬಲ್ಲಿ ಭೂಮಿ ॥೨ ವೃತ್ತಿ, ಮದವನಹಳ್ಳಿಯೆಲ್ಲಿ ೧ ವೃತ್ತಿ ಮುಂತಾದ ಸ್ಥಿತಿ ಸಂಪಾದಿಸಿ, ಅನ್ನಸತ್ರಾ ಹಾಕಿ, ಯೋಗಾನಂದರಿಗೆ ಮಾಧವಾನಂದರಿಗೆ ಯಿಬ್ಬರಿಗೂ ಸಂಸ್ಥಾನ ಕೊಟ್ಟು, ಕಾಶೀಯಾತ್ರೆ ಹೋಗುವಾಗ್ಯೆ ಚೋಳ ಮಹೇಶ್ವರದ ದೊರೆ ಯಿವರಿಗೆ ಪಾಲಕ್ಕಿ ಮುಂತಾದ ಸಕಲ ಬಿರುದಾವಳಿಗಳ ಕೊಟ್ಟು ಮಟಾ ಕಟ್ಟಿಸಿ, ಅನೇಕ ದ್ರವ್ಯ ನಗನಾಣ್ಯಗಳ ಮುಂತಾಗಿ ಕೊಟ್ಟು, ಕಾಶಿಕೆ ಕಳುಹಿಸಿದಲ್ಲಿ ಅಲ್ಲಿಯೂ ಯಿದ್ದು ಪ್ರಾಯಾ + + + + ಮಕರಸ್ಥಾನಕ್ಕೆ ಹೋದಲ್ಲಿ, ತ್ರಿವೇಣಿ ಅಮ್ಮನವರ ಅಪ್ಪಣೆ ಆಗಿ, ತ್ರಿವೇಣಿಪ್ರವೇಶದಿಂದಾ ಮುಕ್ತ + + + + ಈಗ ಯೋಗಾನಂದರು ತಂಜಾವೂರ + + + + ಹೋಗಿ ಅಲ್ಲಿ ದೊರೆಯಿಂದ ಪಾಲಕ್ಕಿ ಮುಂತಾದ ಅನೇಕ ಸನ್ಮಾನಗಳನ್ನು ಪಡದು, ದೊರೆ ಕಟ್ಟಿಸಿಕೊಟ್ಟ . . . . ಸ್ಥಳದಲ್ಲಿ ಅದ್ಯಾಪಿ ಯಿದ್ದಾರೆ. ಮಾಧವಾನಂದ + + + + ಗಳೂ ಉತ್ತರವಾಹಿನಿ ಬಾಣೇಶ್ವರಕ್ಷೇತ್ರ + + + + ಂಚನಳ್ಳಿಯಲ್ಲಿ ಶಿಷ್ಯರಿಗೆ ಶಾಸ್ತ್ರಗಳ ಪಾಠಮಾಡುತ್ತಾ ನಿಸ್ಪ್ರಹಾರಾಗಿ ಅದ್ಯಾಪಿಯಾಗಿ ಯಿದ್ದಾರೆ.

ಯೀ ಮಟಾ ಯಿರುವದು ತೊಟ್ಟಿ ೧ಕ್ಕೆ ಅಂಕಣ ೧೦ತ್ತು. ಆಚಾರ ೧ಕ್ಕೆ ಅಂಕಣ ೧೦ತ್ತು. ಮೆಯಿಮಚ್ಚುಗಕ್ಕೆ ಅಂಕಣ . . . . ಪಾಕಶಾಲೆ ಛತ್ರ ೧೦ ಅಂಕಣ ಪ್ರಮಾದಿ ಲಿಂಗಾ ೩ಕ್ಕೆ ಕಲ್ಲುದೇವಸ್ಥಾನ ಮೂ೩ಕ್ಕೆ ಬಾಗಲು ಸಹಾ ಅಂಕಣ ೨೨ ಸುತ್ತ ಪೊವಳಿ ಸಹಾ ಯೀ ಪ್ರಕಾರ ಯಿದೆ. ಯಿದರಲ್ಲಿ ಬಾವಿ ಯರಡು ಭಾಗ ೨. ಕಾವೇರಿ ನದಿ ತೀರದಲ್ಲಿ ಮಟಾ ಯಿರುವದು. ಯೀ ಪ್ರಕಾರ ಯಿದು ಯೆಡತೊರೆ ಮಠದ ಕೈಫಿಯತು.

❖❖

೩೬
ಶೃಂಗೇರಿಯ ಕೈಫಿಯತ್ತು*

ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ೧೫-೧

ಬ್ರಹ್ಮಾಂಡದೊಳಗೆ ಐವತ್ತು ಕೋಟಿ ವಿಸ್ತಾರವಾಗಿ ಕೆಳಗಿನಿಂದ ಮೇಲಣ ವರೆಗಿರುವ ಬ್ರಹ್ಮಾಂಡ ವಿವರದ ಆದಿಯಲ್ಲಿ ಇಪ್ಪತ್ತುನಾಲ್ಕು ಕೋಟಿ ಯೋಜನಪರ್ಯಂತ ನೀರು ತುಂಬಿದೆ. ಆ ನೀರಿನಲ್ಲಿ ಆದಿಕೂರ್ಮನಾಗಿರುವವನು ಕಾಲೂರಿಕೊಂಡು ತನ್ನ ಬೆನ್ನು ನೀರಿಗೆ ಸಮವಾಗಿರುವಂತೆ ನಿಂತುಕೊಂಡಿದ್ದಾನೆ. ಅಂತಹ ಕೂರ್ಮನ ಮೇಲೆ ಎಂಟು ದಿಕ್ಕಿಗೂ ಅಷ್ಟದಿಗ್ಗಜಗಳು, ಮಧ್ಯೇ ಸಹಸ್ರಫಣಾಯುಕ್ತನಾಗಿರುವ ಮಹಾಶೇಷನು, ಅದರ ಮೇಲೆ (ಅಳತೆ) ಕೂರ್ಮಪೃಷ್ಠದಾರಭ್ಯ ಬ್ರಹ್ಮಾಂಡಘಟದ ಮಧ್ಯದಲ್ಲಿ ಒಂದು ಕೋಟಿ ಯೋಜನದಳ[>ದಗಲ] ಐವತ್ತುಕೋಟಿ ವಿಸ್ತೀರ್ಣವಾಗುರವಂತಹ ಭೂಮಿ. ಈ ಭೂಮಿಯೊಳಗೆ ಅತಳ, ವಿತಳ, ಸುತಳ, ತಳಾತಳ, ಮಹಾತಳ, ರಸಾತಳ, ಪಾತಾಳಗಳೆಂಬ ಸಪ್ತಲೋಕಗಳೂ ಈ ಭೂಮಿಯ ಮೇಲೆ ಅಂತರ್ಭೂತವಾಗಿರುತ್ತವೆ. ಅದರ ಮೇಲೆ ಈ ಭೂಮಿಯಲ್ಲಿ ಭೂಲೋಕವು ಐವತ್ತು ಕೋಟಿಯೋಜನ ವಿಸ್ತಾರವಾಗಿರುವಂತಹುದಾಗಿದೆ. ಇದರ ಮೇಲೆ ಅಂತರಿಕ್ಷಲೋಕಗಳು – ಭುವರ್ಲೋಕ, ಸುವರ್ಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ; ಈ ವಿಧವಾಗಿ ಈ ಬ್ರಹ್ಮಾಂಡದಲ್ಲಿ ಹದಿನಾಲ್ಕು ಲೋಕಗಳು ತರತರದಲ್ಲೊಪ್ಪುತ್ತಿವೆ.

ಈ ಲೋಕಗಳು – ಸ್ವರ್ಗ, ಮರ್ತ್ಯ, ಪಾತಾಳಗಳೊಂದು(ಗೂಡಿ) ತ್ರೈಲೋಕ್ಯವೆನಿಸಿಕೊಂಡಿವೆ. ಈ ಮಧ್ಯದಲ್ಲಿ ಮರ್ತ್ಯಲೋಕವಾದ ಭೂಲೋಕದಲ್ಲಿ ಮಧ್ಯದಲ್ಲಿ (೧) ಜಂಬೂದ್ವೀಪವು ಒಂದು ಲಕ್ಷ ಯೋಜನ. ಇದರ ಸುತ್ತಲೂ ಲವಣಸಮುದ್ರವು ಒಂದು ಲಕ್ಷಯೋಜನ. ಆ ಬಳಿಕ (೨) ಪ್ಲಕ್ಷದ್ವೀಪವೆರಡು ಲಕ್ಷ ಯೋಜನ ವಿಸ್ತಾರವಾಗಿ ಅವತರಿಸಿಕೊಂಡಿದೆ. ಆ ಬಳಿಕ ಇಕ್ಷುಸಮುದ್ರವೆರಡು ಲಕ್ಷಯೋಜನ ವಿಸ್ತಾರವಾಗಿ ಆವರಿಸಿದೆ. ಆ ಬಳಿಕ (೩) ಕುಶದ್ವೀಪವು ನಾಲ್ಕು ಲಕ್ಷಯೋಜನ ವಿಸ್ತಾರವಾಗಿ ಆವರಿಸಿದೆ. ಆ ಬಳಿಕ (೪) ಕ್ರೌಂಚದ್ವೀಪವೆಂಟು ಲಕ್ಷಯೋಜನ ವಿಸ್ತಾರವಾಗಿ ಆವರಿಸಿದೆ. ಆ ಬಳಿಕ ಸುರಾಸಮುದ್ರವು ನಾಲ್ಕು ಲಕ್ಷಯೋಜನ ವಿಸ್ತಾರವಾಗಿ ಆವರಿಸಿದೆ. ಆ ಬಳಿಕ ಇದರ ಸುತ್ತಲೂ ಘೃತಸಮುದ್ರವಿದೆ. ಆ ಬಳಿಕ (೫) ಶಾಕದ್ವೀಪವು ಹದಿನಾರು ಲಕ್ಷಯೋಜನ ಪರಿಮಿತವಾಗಿ ವಿಸ್ತರಿಸಿದೆ. ಇದರ ಸುತ್ತಲೂ ದಧಿಸಮುದ್ರವು ಹದಿನಾರು ಲಕ್ಷಯೋಜನ ವಿಸ್ತಾರವಾಗಿದೆ. ಆ ಬಳಿಕ (೬) ಶಾಲ್ಮಲದ್ವೀಪವು ಮೂವತ್ತೆರಡು ಲಕ್ಷಯೋಜನ ವಿಸ್ತಾರವಾಗಿ ಸುತ್ತುವರಿದಿದೆ. ಇದರ ಸುತ್ತಲೂ ಸಿಯ್ನೀರ ಸಮುದ್ರವು ಮೂವತ್ತೆರಡು ಲಕ್ಷಯೋಜನ ವಿಸ್ತಾರವಾಗಿದೆ. ಆ ಬಳಿಕ (೭) ಪುಷ್ಕರದ್ವೀಪವು ಅರುವತ್ತುನಾಲ್ಕು ಯೋಜನ

* Revised and Edited - ಎಂದು ಸಂಪಾದಕರಾದ ಶ್ರೀ ಬಿ.ರಾಮರಾವ್ ಪ್ರಾರಂಭದಲ್ಲಿ ಬರೆದಿದ್ದಾರೆ(ಸಂ).

ವಿಸ್ತೀರ್ಣದಿಂದಾವರಿಸಿದೆ. ಇದರ ಸುತ್ತಲೂ ಸ್ವಾದೂದಕಸಮುದ್ರವು ಅರುವತ್ತು ನಾಲ್ಕು ಯೋಜನ ವಿಸ್ತಾರವಾಗಿದೆ. ಇದರ ಸುತ್ತಲೂ ಲೋಕಾಲೋಕಪರ್ವತವು ಆವರಿಸಿಕೊಂಡಿದೆ. ಜಂಬೂದ್ವೀಪಮಧ್ಯದಲ್ಲಿ ಲಕ್ಷಯೋಜನದ ಎತ್ತರವಾಗಿ ಮೂವತ್ತೆರಡು ಸಹಸ್ರಯೋಜನ ಅಗಲವಾಗಿರುವ ಮಹಾಮೇರುಪರ್ವತವಿದೆ. ಇದರ ಸುತ್ತಲು ನವಖಂಡವೃಥ್ವಿ ಇದೆ.

ಆ ಮಹಾಮೇರು ಪರ್ವತದ ದಕ್ಷಿಣದಿಕ್ಕಿನಲ್ಲಿ ಸಹ್ಯಾದ್ರಿಯಲ್ಲಿ ವರಾಹದಂಷ್ಟ್ರದಲ್ಲಿ ಉದ್ಭವವಾಗಿ ಪ್ರವಹಿಸುತ್ತಿರುವ ತುಂಗಭದ್ರಾನದೀ ತೀರದಲ್ಲಿ ವಿಭಾಂಡಋಷೀಶ್ವರರು ತಪಸ್ಸು ಮಾಡಿಕೊಂಡು ತ್ರಿಕಾಲದಲ್ಲಿಯೂ ಸೂರ್ಯಾಭಿಮುಖವಾಗಿ ಸ್ನಾನವನ್ನು ಮಾಡಿಕೊಳ್ಳುತ್ತ, ತತ್ಸಮೀಪದಲ್ಲಿ ಶ್ರೀಮಲ್ಲಿಕಾರ್ಜುನಸ್ವಾಮಿಯನ್ನು ಪ್ರತಿದಿನವೂ ಪೂಜಿಸುತ್ತಿದ್ದರು. ಒಂದು ದಿನ ನದಿಯಲ್ಲಿ ಸ್ನಾನ ಮಾಡುವಾಗ ಇವರ ಸಮ್ಮುಖದಲ್ಲಿ ಊರ್ವಶಿಯೆಂಬ ಅಪ್ಸರಸ್ತ್ರೀಯು ಸಂಸರಿಸಿದುದರಿಂದ ಇವರ ಮನಸ್ಸು ಚಂಚಲವಾಗಿ ನೀರಿನಲ್ಲಿ ರೇತಸ್ಸು ಸ್ಖಲನವಾದುದರಿಂದ, ಒಂದಾನೊಂದು ಕೃಷ್ಣಮೃಗವು ತೃಷೆಯಿಂದ ತುಂಗಭದ್ರಾನದಿಗೆ ಬಂದು ನೀರು ಕುಡಿಯುವ ವೇಳೆಯಲ್ಲಿ ಋಷಿವೀರ್ಯಸಹಿತವಾಗಿ ಉದಕಪಾನ ಮಾಡಿದುದರಿಂದ, ಅದರ ಗರ್ಭದಲ್ಲಿ ಋಷಿವೀರ್ಯವು ಬೆಳೆದು ಸದಾಕೃತಿಯಾಗಿ ಶಿರಸ್ಸಿನಲ್ಲಿ ಶೃಂಗಸಹಿತವಾಗಿ ಜನಿಸಿತು. ಅಷ್ಟರಲ್ಲಿ ವಿಭಾಮಡಋಷೀಶ್ವರರ ಆಶ್ರಮಕ್ಕೆ ಪಾರ್ವತೀಪರಮೇಶ್ವರರು ಸಂಚರಿಸುತ್ತ ಬಂದಲ್ಲಿ, ಈ ಶಿಶುವನ್ನು ಕಂಡು ಮುಂದೆ ಕಾರಣಾಂತರವುಂಟೆಂದು ಮನಸ್ಸಿನಲ್ಲಿ ತಿಳಿದು, ಈತನಿರುವ ಸ್ಥಳದಲ್ಲಿ ಕ್ಷಾಮಡಾಮರಾದಿಗಳ ಉಪದ್ರವವಾಗದೆ ಸುರಕ್ಷಿತವಾಗಿರಲೆಂದು ವರವನ್ನು ಕೊಟ್ಟು ಮುಂದೆ ಕೈಲಾಸಕ್ಕೆ ತೆರಳಲಾಗಿ ವಿಭಾಂಡಋಷೀಶ್ವರರು ತಿಳಿದು ಆ ಶಿಶುವನ್ನು ಆಶ್ರಮಕ್ಕೆ ಕರೆತಂದು ಜಾತಕರ್ಮಾದಿ ಸಂಸ್ಕಾರಮಂ ಮಾಡಿ ಋಷ್ಯಶೃಂಗನೆಂದು ಹೆಸರಿಟ್ಟು ಉಪನಯನಾದಿಗಳಂ ಮಾಡಿ ವೇದಾಭ್ಯಾಸಮಾಡಿಸಲು ಅವರು ಸಕಲವಿದ್ಯಾಪ್ರೌಢರಾಗಿ ಪಿತೃಸೇವೆಯನ್ನು ಮಾಡಿಕೊಂಡಿರುತ್ತಿದ್ದರು.

ಇತ್ತ ಅಂಗದೇಶದಲ್ಲಿ ರೋಮಪಾದನೆಂಬ ರಾಜನು ಶತಕ್ರತುವನ್ನು ಮಾಡಬೇಕೆಂದು ಆಲೋಚಿಸಿ ಅಶೀತಿ ಯಜ್ಞಪರ್ಯಂತ ನಡೆಯಿಸಲಾಗಿ, ದೇವೇಂದ್ರನು ಅಸೂಯೆದಿಂದ ಈ ರೋಮಪಾದರಾಜನ ದೇಶಕ್ಕೆ ಮಳೆ ಬಾರದಂತೆ ಮಾಡಿ ಯಜ್ಞಕ್ಕೆ ವಿಘ್ನಮಾಡುತ್ತಿರಲಾಗಿ, ದೇಶದಲ್ಲಿ ಮಳೆ ಬೆಳೆ ಇಲ್ಲದೆ ಸಮಸ್ತ ಪ್ರಜೆಗಳೂ ಬಂದು ದುರ್ಭಿಕ್ಷದ ಸಂಕಟವನ್ನು ರೋಮಪಾದರಾಜನಿಗೆ ಹೇಳಿಕೊಳ್ಳಲಾಗಿ ತನ್ನರಮನೆಯಲ್ಲಿ ಸಂಗ್ರಹಿದ್ದಂತಹ ಧನಧಾನ್ಯಾದಿಗಳನ್ನು ಕೊಟ್ಟು ಸಂತೈಸಿ ತಾನು ಮಹಾಚಿಂತಾಕ್ರಾಂತನಾಗಿರಲಾಗಿ, ನಾರದರು ಬರಲು ಅವರಿಗೆ ಸತ್ಕಾರಮಂ ಮಾಡಲು, ಅವರು ಈತನ ಚಿಂತೆಯಂ ತಿಳಿದು – "ರೋಮಪಾದ ರಾಜನೇ ಕೇಳು, ನೀನು ಮಾಡುವಂತಹ ಯಜ್ಞಕ್ಕೆ ದೇವೇಂದ್ರನು ವಿಘ್ನಾಚರಣೆ ಮಾಡಿದ್ದಾನೆ. ತುಂಗಭದ್ರಾ ತೀರದಲ್ಲಿ ವಿಭಾಂಡಕುಮಾರರಾದ ಋಷ್ಯಶೃಂಗರಿದ್ದಾರೆ. ಅವರಿರುವಂತಹ ದೇಶದಲ್ಲಿ ದುರ್ಭಿಕ್ಷ ಭಯವಿಲ್ಲದೆ ಸುರಕ್ಷಿತವಾಗಿರಲೆಂದು ಈಶ್ವರನ ವರವುಂಟು. ಆತನಂ ಕರೆತಂದು ನಿನ್ನರಮನೆಯಲ್ಲಿಟ್ಟುಕೊಂಡರೆ ನಿನ್ನ ದೇಶಕ್ಕೆ ಸುರಕ್ಷಿತವಾಗಿ ದುಭಿಕ್ಷಪರಿಹಾರವಾಗಿ ನಿನ್ನ ಮನೋರಥವು ಪೂರ್ಣವಾಗುತ್ತದೆ" – ಎಂದು ಹೇಳಲಾಗಿ, ರಾಜನು ಸಂತೋಷಪಟ್ಟು ತನ್ನ ದೇಶದಿಂದ ಅನೇಕವಾಗಿ ಸ್ತ್ರೀಯರಂ ಕಳುಹಿಸಿ ಕೊಟ್ಟಲ್ಲಿ ಆ ಸ್ತ್ರೀಯರೆಲ್ಲರೂ ಸೇರಿ ವಿಭಾಂಡಕ ಋಷೀಶ್ವರರ ಆಶ್ರಯಕ್ಕೆ ಸಮೀಪವಾದ ನಾರವೇ ಅಗ್ರಹಾರಕ್ಕೆ ಬಂದು ಅಲ್ಲಿ

ಬಹಳ ದಿವಸ ಇರುತ್ತಲೇ ಋಷ್ಯಶೃಂಗನು ಸಮಿತ್ಕುಶಪುಷ್ಪಾರ್ಥವಾಗಿ ವನದಲ್ಲಿ ಸಂಚರಿಸುವ ವೇಳೆಯನ್ನು ಸಾಧಿಸಿ ಕಾಣಿಸಿಕೊಂಡು ಸಂಭಾಷಣಾದಿಗಳಂ ಮಾಡಿ, ದಿನಚರ್ಯೆಯಲ್ಲಿ ಸ್ನೇಹವಂ ಬೆಳೆಯಿಸಿ, ಅವರಿಗೆ ಬೇಕಾದಂತಹ ರುಚಿಕರವಾದ ಹಣ್ಣುಹಂಪಲನ್ನೂ ನಾನಾ ವಿಧವಾದ ಭಕ್ಷ್ಯಭೋಜ್ಯಾದಿಗಳನ್ನೂ ತಿನ್ನುವುದಕ್ಕೆ ಕೊಟ್ಟು ತಮ್ಮ ಸ್ವಾಧೀನ ಮಾಡಿಕೊಂಡು, ಉಪಾಯದಿಂದ ಆ ರೋಮಪಾದರಾಜನ ಊರಿಗೆ ಕರೆತರಲಾಗಿ, ಆತನು ಮಹಾಸಂಭ್ರಮದಿಂದ ಇದಿರುಗೊಂಡು ಕರೆದುಕೊಂಡು ಹೋಗಿ ತನ್ನ ಮನೆಯಲ್ಲಿ ಬಹಳ ಉಪಚಾರಾದಿಗಳಂ ಮಾಡಿ ಇಟ್ಟುಕೊಂಡಿರಲಾಗಿ, ಈತನ ದೇಶದಲ್ಲಿ ಯಥೇಚ್ಛವಾಗಿ ಮಳೆ ಬೆಳೆಯಾಗಿ ಸುಭಿಕ್ಷವಾಗಲಾಗಿ ಉಜ್ಞ ಸಂಪೂರ್ಣಮಂ ಮಾಡಿ ತನ್ನ ಮಗಳಾದ ಶಾಂತಾದೇವಿಯನ್ನು ಋಷ್ಯಶೃಂಗರಿಗೆ ವಿವಾಹ ಮಾಡಿಕೊಟ್ಟು ಸುಖದಿಂದಿರಿಸಿಕೊಂಡಿರುತ್ತಿದ್ದನು.

ಇತ್ತ ಕೋಸಲ ದೇಶದಲ್ಲಿ ದಶರಥರಾಜನೆಂಬ ಚಕ್ರವರ್ತಿಯು ಮಕ್ಕಳಿಲ್ಲದೆ ಚಿಂತಾಕ್ರಾಂತನಾಗಿರಲಾಗಿ ವಶಿಷ್ಠಮುನೀಶ್ವರನು ಬಂದು "ಪುತ್ರಕಾಮೇಷ್ಟಿಯಜ್ಞವನ್ನು ಮಾಡು; ನಿನ್ನಲ್ಲಿ ದೇವರು ದಯಮಾಡುವನು" ಎಂದು ಹೇಳಲಾಗಿ, ಆಗ ಸುಮಂತ್ರನೆಂಬ ಮಂತ್ರಿಯು ಈ ಋಷ್ಯಶೃಂಗಕಥಾವೃತ್ತಾಂತವನ್ನು ವಿಸ್ತಾರವಾಗಿ ಹೇಳಿ, ಆ ಋಷ್ಯಶೃಂಗನನ್ನು ಕರೆತಂದು 'ಪುತ್ರ ಕಾಮೇಷ್ಠಿಯಾಗ ಮಾಡಿದರೆ ಮನೋರಥ ಸಿದ್ಧಿಯಾಗುತ್ತದೆ' ಎಂದು ಹೇಳಲಾಗಿ, ಆ ಮಾತನ್ನು ದಶರಥರಾಜನು ಕೇಳಿ ರೋಮಪಾದರಾಜನಲ್ಲಿಗೆ ಬಂದು, ಋಷ್ಯಶೃಂಗನಂ ಕರೆದುಕೊಂಡು ಅಯೋಧ್ಯಾಪಟ್ಟಣಕ್ಕೆ ಬಂದು, ವಶಿಷ್ಟ ಮೊದಲಾದ ಸಮಸ್ತಋಷಿಗಳನ್ನೂ ಕರೆಯಿಸಿಕೊಂಡು ಪುತ್ರಕಾಮೇಷ್ಟಿಯಂ ಮಾಡಲಾಗಿ, ನಾರಾಯಣನು ಸಂತುಷ್ಟನಾಗಿ ಯಜ್ಞಕುಂಡದಲ್ಲಿ ಯಜ್ಞನಾರಾಯಣನ ರೂಪಿನಲ್ಲಿ ಬಂದು ಸುವರ್ಣಪಾತ್ರೆಯಲ್ಲಿ ಪರಮಾನ್ನವಂ ಕೊಡಲಾಗಿ, ದಶರಥನು ಪತ್ನಿಯರಾದ ಕೌಸಲ್ಯೆ, ಕೈಕೆ, ಸುಮಿತ್ರೆಯರೆಂಬ ಮೂರು ಮಂದಿ ಹೆಂಡರಿಗೂ ವಿಭಾಗಿಸಿ ಕೊಡಲು ಆ ಪರಮಾನ್ನವಂ ಧರಿಸಿ ಅವರು ಗರ್ಭಮಂ ಧರಿಸಲು, ಅವರಲ್ಲಿ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ನಾಲ್ಕು ಜನ ಸುತರು ಜನಿಸಿದರು.

ಈ ಋಷ್ಯಶೃಂಗನು ಅನಂತರದಲ್ಲಿ ತನ್ನ ಪತ್ನಿ ಶಾಂತಾದೇವಿ ಸಮೇತನಾಗಿ ತಮ್ಮ ಆಶ್ರಮಕ್ಕೆ ಬರಲಾಗಿ, ವಿಭಾಂಡಕಋಷಿಯು ಸಾಯುಜ್ಯಮೋಕ್ಷವನ್ನು ಪಡೆದಿದ್ದನು. ಋಷ್ಯಶೃಂಗನು ತುಂಗಭದ್ರಾನದಿ ತೀರವಾದ ರುದ್ರಪಾದಕ್ಷೇತ್ರದಲ್ಲಿ ಕುಳಿತು ಉಗ್ರ ತಪಸ್ಸಂ ಮಾಡಲು, ಈಶ್ವರನು ಪ್ರತ್ಯಕ್ಷವಾಗಲಾಗಿ, ಋಷ್ಯಶೃಂಗನು 'ತನ್ನ ತಂದೆ ಏನಾದ'ನೆಂದು ಕೇಳಿದನು. 'ನಮ್ಮಲ್ಲಿ ಸಾಯುಜ್ಯಮಂ ಪಡೆದ'ನೆಂದು ಈಶ್ವರನು ಹೇಳಲಾಗಿ, ತನಗೂ ಅದೇ ಪ್ರಕಾರ ಮೋಕ್ಷವನ್ನು ದಯವಿಡಬೇಕು, ನರಸಿಂಹಪರ್ವತದ ಸಮೀಪದಲ್ಲಿ ಲಿಂಗರೂಪದಲ್ಲಿ ಉದ್ಭವಿಸಬೇಕೆಂದು ವರಮಂ ಕೇಳಲು, ಈಶ್ವರನು ಕಟಾಕ್ಷವಿಟ್ಟು ವರವನ್ನು ಕೊಟ್ಟನು. ಅದೇ ಪ್ರಕಾರ ಈಶ್ವರನು ಲಿಂಗರೂಪಿನಲ್ಲಿ ಉದ್ಭವಿಸಲಾಗಿ, ಆ ಲಿಂಗದಲ್ಲಿ ಋಷ್ಯಶೃಂಗನು ಪತ್ನಿಸಮೇತನಗಿ ಸಾಯುಜ್ಯಮಂ ಪಡೆದು, ತೋರುತ್ತಿದ್ದಾನೆ. ಋಷ್ಯಶೃಂಗನು ಆಶ್ರಮವನ್ನು ಮಾಡಿಕೊಂಡು ತಪಸ್ಸು ಮಾಡುತ್ತಿದ್ದ ಆ ಸ್ಥಳಕ್ಕೆ ಋಷ್ಯಶೃಂಗಪುರಿ ಎಂದು ನಾಮಧೇಯವಾಯಿತು. ಇತ್ತ ಕರ್ನಾಟಕ ಭಾಷೆಯಲ್ಲಿ ಈಗ ಶೃಂಗೇರಿಯೆಂಬ ನಾಮದಿಂದ ಕರೆಯುತ್ತಿದ್ದಾರೆ. ಹೀಗೆ ಕೆಲವು ಕಾಲ ಕಳೆಯುತ್ತಿರಲಾಗಿ ಈ ವರ್ತಮಾನವಾದ ಕಲಿಯುಗವು

ಪ್ರಾಪ್ತವಾದ ಕೆಲವು ಕಾಲಾನಂತರದಲ್ಲಿ ಬಹು ಮತಗಳು ಹುಟ್ಟಿ, ವರ್ಣಾಶ್ರಮ ಧರ್ಮಗಳೆಲ್ಲ ಕೆಟ್ಟು, ಜನರು ಮನಸ್ಸು ಬಂದ ಹಾಗೆ ನಡೆಯುತ್ತಿರಲು, ನಾರದರು ಕೈಲಾಸಕ್ಕೆ ಹೋಗಿ ಈ ವೃತ್ತಾಂತವನ್ನು ಈಶ್ವರನಿಗೆ ಹೇಳಲಾಗಿ, ಈಶ್ವರನು ನಾವು ಭೂಲೋಕದಲ್ಲಿ ಶಿವಗುರುದೀಕ್ಷಿತರಲ್ಲಿ ಅವತರಿಸಿ, ದುರ್ಮತಗಳನ್ನು ಖಂಡಿಸಿ ವರ್ಣಾಶ್ರಮಧರ್ಮಗಳು ನಿರ್ವಿಘ್ನವಾಗಿ ನಡೆದು ಬರುವ ಹಾಗೆ ಮಾಡುತ್ತೇವೆಂದು ಅಪ್ಪಣೆ ಕೊಟ್ಟನು.

ಇತ್ತಲಾಗಿ ಭೂಲೋಕದಲ್ಲಿ ಕೇರಳದೇಶದ ಕಾಲಟಿಗ್ರಾಮದಲ್ಲಿ ಶಿವಗುರುದೀಕ್ಷಿತನೆಂಬ ಬ್ರಾಹ್ಮಣನು ತನಗೆ ಮಕ್ಕಳಾಗಬೇಕೆಂದು ಈಶ್ವರನಂ ಕುರಿತು ತಪಸ್ಸು ಮಾಡುತ್ತಿದ್ದನು. ಶಿವನು ಒಂದಾನೊಂದು ದಿನ ಸ್ವಪ್ನದಲ್ಲಿ ಬಂದು "ನಿನಗೆ ದೀರ್ಘಾಯುಷ್ಯನಾಗಿ ಮಂದಬುದ್ಧಿಯಾದ ಮಗನು ಬೇಕೊ? ಅಲ್ಪಾಯುಷ್ಯನಾಗಿ ಖ್ಯಾತಿವಂತನಾದ ಮಗನು ಬೇಕೋ?" ಎಂದು ಕೇಳಲಾಗಿ, "ಮಂದಬುದ್ಧಿಯಾದ ಮಗನು ಹುಟ್ಟುವದಕ್ಕಿಂತ ಮಕ್ಕಳು ಹುಟ್ಟದಿರುವುದೇ ಉತ್ತಮವಾದುದರಿಂದ ಅಲ್ಪಾಯುಷ್ಯವಂತನಾದರೂ ಖ್ಯಾತಿವಂತನಾಗಿ ವಂಶೋದ್ಧಾರಕನಾದಂತಹ ಸತ್ಪುತ್ರನೇ ಆಗಬೇಕೆಂ"ದು ಕೇಳಿಕೊಂಡನು. ಅದೇ ಪ್ರಕಾರ ವರವನ್ನು ಕೊಟ್ಟು ಈಶ್ವರನು ಅದೃಶ್ಯನಾದನು. ತದಾರಭ್ಯ ಶಿವಗುರುದೀಕ್ಷಿತರು ತಪಸ್ಸಂಪೂರ್ಣಾರ್ಥ ಬ್ರಾಹ್ಮಣಸಂತರ್ಪಣೆಯನ್ನು ಮಾಡುತ್ತಿರಲಾಗಿ, ಇವರ ಪತ್ನಿಯಾಗಿರುವ ಅಂಬಾದೇವಿಯು ಗರ್ಭವನ್ನು ಧರಿಸಿ ಸುತನಂ ಪಡೆದಳು. ಜನನ ಕಾಲದಲ್ಲಿ ತ್ರಿಶೂಲ ಡಮರುಗಾದಿ ಚಿಹ್ನೆಯು ಜನರಿಗೆ ಕಾಣ ಬಂದಿತು. ತದನಂತರದಲ್ಲಿ ತಂದೆಯಾದ ಶಿವಗುರುದೀಕ್ಷಿತರು ಶಂಕರನೆಂದು ನಾಮಕರಣಮಾಡಿ ಪಂಚಮವರ್ಷದಲ್ಲಿ ಚೌಲ, ಅಕ್ಷರಾರಂಬ, ಸಪ್ತಮವರ್ಷದಲ್ಲಿ ಉಪನಯನ ಇವುಗಳನ್ನು ಮಾಡಿ ಸಕಲವೇದಶಾಸ್ತ್ರಾದಿ ವಿದ್ಯಾಭ್ಯಾಸವನ್ನು ಮಾಡಿಸಿದರು.

ಒಂದಾನೊಂದು ದಿನ ಶಂಕರನು ನದಿಗೆ ಸ್ನಾನಕ್ಕೆ ಹೋಗಿ ಸ್ನಾನ ಮಾಡುತ್ತಿರಲಾಗಿ ನಕ್ರವು ಬಂದು ಪಾದಗ್ರಹಣವನ್ನು ಮಾಡಿ ಗ್ರಹಿಸುತ್ತಿರಲಾಗಿ, "ಈ ಶರೀರವು ದುರ್ಮರಣದಿಂದ ವ್ಯರ್ಥವಾಗಿ ಹೋಗುತ್ತದೆ", ಎಂದು ಮನದಲ್ಲಿ ಪಶ್ಚಾತ್ತಾಪದಿಂದ ಭಗವತ್ಸ್ಮರಣೆಯಂ ಮಾಡಿ ಪ್ರೇಷೋಚ್ಚಾರಣೆಯನ್ನು ಮಾಡಿದುದರಿಂದ, ಆ ನಕ್ರವು ಪಾದವನ್ನು ಬಿಟ್ಟು ಹೋಯಿತು. ಅನಂತರದಲ್ಲಿ ಗೃಹಸಮೀಪಕ್ಕೆ ಬಂದು, ತಮ್ಮ ತಾಯನ್ನು ಕರೆದು 'ತನಗೆ ಜಲದಲ್ಲಿ ಈ ಪ್ರಕಾರ ನಕ್ರಮುಖದಿಂದ ಜಲಕಂಟಕ ಪ್ರಾಪ್ತವಾದುದರಿಂದ ಸಂನ್ಯಾಸವನ್ನು ಅನುವರ್ತಿಸಿದುದಾಯಿತು. ಆದುದರಿಂದ ಜನ್ಮಭೂಮಿಯನ್ನು ತ್ಯಜಿಸಿ ದೇಶಾಂತರಕ್ಕೆ ಹೋಗಿ ಕರ್ಮಸಂನ್ಯಾಸವಂ ಮಾಡಬೇಕು' ಎಂದು ಹೇಳಲಾಗಿ, ತಾಯಿಯು ಮಹಾದುಃಖಪಟ್ಟು 'ತನಗೆ ಮುಪ್ಪು ಬಂದಿತು. ನಡೆಯಲಾರೆನು. ಸ್ನಾನಕ್ಕೆ ನದಿ ದೂರವಾಗಿದೆಯೆಂದು ಹೇಳಲಾಗಿ ನದಿಯನ್ನು ಆಕರ್ಷಣೆ ಮಾಡಿ ಗೃಹ ಸಮೀಪಕ್ಕೆ ತಂದು ನಿಲ್ಲಿಸಿ ಅಂಬಾತೀರ್ಥವೆಂದು ನಾಮವಿಟ್ಟು, 'ನೀವು ಸ್ಮರಿಸಿದಾಗ ಬರುತ್ತೇನೆಂ'ದು ತಾಯಿಯ ಕೂಡೆ ಹೇಳಿ ದೇಶಾಟನಕ್ಕೆ ಹೋಗಿ ಗೋವಿಂದಭಗವತ್ಪಾದಾಚಾರ್ಯರ ದರ್ಶನವನ್ನು ಮಾಡಿ ಕರ್ಮಸಂನ್ಯಾಸವನ್ನು ಮಾಡಿಕೊಂಡು, ದೇಶವನ್ನು ಸಂಚರಿಸುತ್ತ ತೋಟಕಾಚಾರ್ಯರು, ಹಸ್ತಮಲಕಾಚಾರ್ಯರು, ಪದ್ಮಪಾದಾಚಾರರು ಮೊದಲಾಗಿ ಮೂವರು ಶಿಷ್ಯರಂ ಮಾಡಿಕೊಂಡು, ವ್ಯಾಸರ ದರ್ಶನ ನಿಮಿತ್ತ ಕಾಶಿಗೆ ಹೋಗುತ್ತಿರಲಾಗಿ, ಮಧ್ಯಮಾರ್ಗದಲ್ಲಿ ಒಬ್ಬ ಬ್ರಹ್ಮರಾಕ್ಷಸನು

"ಆಕಾಮಾ ವೈಕೋನ ಸ್ನಾತಃ" ಎಂದು ಕೇಳಲಾಗಿ, ಈ ಶಬ್ದವನ್ನು ಕೇಳಿ ಮರದ ಮೇಲೆ ನೋಡುವಾಗ್ಗೆ ಬ್ರಹ್ಮರಾಕ್ಷಸನಂ ಕಂಡು "ತ್ವ ನಸ್ನಾತಸ್ತೇನ ಪಿಶಾಚಿ" ಎಂದು ಪ್ರತ್ಯುತ್ತರಮಂ ಕುಡಲಾಗಿ ಆಗ ಬ್ರಹ್ಮರಾಕ್ಷಸತ್ವನ್ನು ಬಿಟ್ಟು ಬ್ರಾಹ್ಮಣದೇಹವನ್ನು ಧರಿಸಿ ನಮಸ್ಕಾರವಂ ಮಾಡಿ ತನ್ನ ಪೂರ್ವಜನ್ಮ ವೃತ್ತಾಂತವಂ ಹೇಳಿ 'ತನಗೆ ಮುಕ್ತಿಯಾಯಿತು' ಎಂದು ಸಂತೋಷ ಪಡುತ್ತಿರಲಾಗಿ, ಆಗ ಶಂಕರಾಚಾರ್ಯರು 'ನಾವಾದರೆ ವ್ಯಾಸದರ್ಶನಕ್ಕೆ ಬಂದವರಾಗಿದ್ದೇವೆ. ನಿನ್ನಿಂದ ಅಗತಕ್ಕ ಉಪಕಾರವೇನೆಂ"ದು ಕೇಳಲಾಗಿ, ಆತನು 'ಏನಾಗಬೇಕೆ'ನಲು 'ನೀನು ವ್ಯಾಸರಿರುವಂತಹ ಸ್ಥಳವನ್ನೂ, ಅವರ ಸ್ವರೂಪವನ್ನೂ ತಿಳಿಸಿ, ಅವರ ದರ್ಶನವಾಗುವಂತೆ ಮಾಡಿಕೊಡಬೇಕೆಂ'ದು ಹೇಳಿದರು. 'ಅವರಾದರೆ ಈ ಕಲಿಯುಗದಲ್ಲಿ ವೇಷಾಂತರದಿಂದ ಸಂಚರಿಸುತ್ತಿದ್ದಾರೆ. ಅವರಿರುವಂತಹ ಸ್ಥಿತಿಯನ್ನು ಹೇಳಿಕೊಟ್ಟರೆ ಶಾಪವನ್ನು ಕೊಟ್ಟಾರು. ತನಗೆ ಗತಿಯಿಲ್ಲದೆ ಹೋದೀತು' – ಎಂದು ಹೇಳುವಾಗ್ಯೆ 'ಅಂತಹುದು ಬಂದ ಕಾಲಕ್ಕೆ ನಾವು ನಿನ್ನನ್ನು ಬಿಡುವುದಿಲ್ಲ. ನಮ್ಮ ಮಠದಲ್ಲಿಟ್ಟುಕೊಳ್ಳುತ್ತೇವೆ' – ಎಂದು ಧೈರ್ಯವನ್ನು ಹೇಳಿ ಭರವಸವನ್ನು ಕೊಟ್ಟಲ್ಲಿ, ಆಗ ಬ್ರಹ್ಮರಾಕ್ಷಸತ್ವವನ್ನು ಬಿಟ್ಟಂತಹ ಸಿಂಗಿರಿಭಟ್ಟನು ಹೇಳಿದ ವಿವರ:

"ವ್ಯಾಸರು ಕಾಶಿಯಲ್ಲಿ ಮಧ್ಯಾಹ್ನ ಕಾಲದಲ್ಲಿ ಮಣಿಕರ್ಣಿಕಾ ಸ್ನಾನಕ್ಕೆ ಬರುವಾಗ್ಗೆ ಜನರಿಗೆ ವೈಕಲ್ಪವಾಗುವಂತೆ ನಾಲ್ಕು ವೇದಗಳನ್ನು ನಾಲ್ಕು ಶ್ವಾನಗಳನ್ನಾಗಿ ಮಾಡಿಕೊಂಡು ಕಾಣಿಸಿಕೊಳ್ಳುತ್ತಿದ್ದಾರೆ. ಇವರು ವ್ಯಾಸರೆಂದು ತಿಳಿಯಬೇಕಾದರೆ ಮಾರ್ಗದಲ್ಲಿ ಬತ್ತದ ಹೊಟ್ಟು ಬಿದ್ದಿದ್ದರೆ ಅದನ್ನು ತುಳಿಯದೆ ಹೆಜ್ಜೆಯನ್ನು ಬೇರೆ ಸ್ಥಳದಲ್ಲಿಡುತ್ತ ಸಂಚರಿಸುತ್ತಾರೆ. ಈ ಗುರುತಿನಿಂದ ವ್ಯಾಸರೆಂದು ತಿಳಿಯಬೇಕು" ಎಂದು ಹೇಳಲಾಗಿ, ಶಂಕರಾಚಾರ್ಯರು ತಮ್ಮ ಮೂರುಮಂದಿ ಶಿಷ್ಯರನ್ನು ಕರೆದುಕೊಂಡು ಕಾಶಿಗೆ ಹೋಗಿ ಮಣಿಕರ್ಣಿಕಾ ಸ್ನಾನಘಟ್ಟದಲ್ಲಿ ವೇಳೆಯನ್ನು ಸಾಧಿಸಿಕೊಂಡು ಕಾದಿರಲಾಗಿ, ವ್ಯಾಸರು ಪೂರ್ವೋಕ್ತವಾದ ರೂಪಿನಿಂದ ಬರುತ್ತಿರಲು, ಶಂಕರಾಚಾರ್ಯರು ಹೋಗಿ ಅವರಿಗೆ ನಮಸ್ಕಾರವಂ ಮಾಡಿದರು. ವ್ಯಾಸರು "ನೀವು ಸಂನ್ಯಾಸಿಗಳು. ನಾವು ದೂರಸ್ಥರಾಗಿರುವವರು. ನಮ್ಮನ್ನು ಮುಟ್ಟಬಾರದು. ನಮಗೆ ನಮಸ್ಕಾರ ಮಾಡಬಾರದು." ಎಂದು ದೂರ ದೂರ ಹೋಗಲಾಗಿ, ಇವರು ಬಿಡದೆ "ನೀವು ವ್ಯಾಸರೇ ಸರಿ! ಎಂದು ನಾನು ಬಲ್ಲೆನು" ಎಂದು ಗಟ್ಟಿಯಾಗಿ ಕಾಲನ್ನು ಹಿಡಿದುಕೊಳ್ಳಲಾಗಿ, ವ್ಯಾಸರು ತಮ್ಮ ನಿಜರೂಪವನ್ನು ತೋರಿಸಿ, "ನನ್ನ ಇರುವಿಕೆಯನ್ನು ನಿಮಗೆ ಹೇಳಿದವರಾರೆಂ"ದು ಕೇಳಲಾಗಿ, ಇವರು ಹೇಳದಿರಲು, "ನೀವು ಹೇಳದಿದ್ದರೆ ನಮಗೂ ನಿಮಗೂ ಯಾವ ಮಾತಿಗೂ ಕಾರಣವಿಲ್ಲ"ವೆಂದು ಹೇಳಿದರು. ಆಗ ನಿಜವೃತ್ತಾಂತವನ್ನು ಹೇಳಬೇಕಾಗಿ ಬಂದ ಕಾರಣ ಸಿಂಗಿರಿಭಟ್ಟನು ಹೇಳಿದನೆಂದು ಹೇಳಲಾಗಿ "ಅವನಿಗೆ ಬ್ರಹ್ಮರಾಕ್ಷಸತ್ವವು ಎಂದೆಂದಿಗೂ ಬಿಡಬೇಡ"ವೆಂದು ಶಾಪವನ್ನು ಕೊಟ್ಟರು. ಇವರು ಆ ಕೋಪವನ್ನು ಸಮಾಧಾನ ಪಡಿಸಿ, ಅನಂತರದಲ್ಲಿ ತಾವು ಮಾಡಿದ ಕೆಲವು ವೇದಾಂತಭಾಷ್ಯಗಳಂ ತೋರಿಸಲಾಗಿ, ನೋಡಿ ಸಂತೋಷಪಟ್ಟು ಇವರ ವಿದ್ವತ್ತೆಯನ್ನು ಪರೀಕ್ಷಿಸಿ ನೋಡಬೇಕೆಂದು ಪೂರ್ವಪಕ್ಷಸಿದ್ಧಾಂತಗಳಂ ಮಾಡುತ್ತ ಬರಲು ಅವರವರಿಗೆ ವಾಗ್ವಾದಗಳು ಬಹಳವಾಗಿ ನಡೆಯಿತು. ಆಗ್ಗೆ ಶಂಕರಾಚಾರ್ಯರ ಶಿಷ್ಯನು "ಶಂಕರಃ ಶಂಕರಃ ಸಾಕ್ಷಾತ್ ವ್ಯಾಸೋ ನಾರಾಯಣೋ ವ್ಯಯಃ। ತಯೋರ್ವಿವಾರ್ದೇ ಸಂಪ್ರಾಪ್ತೇ ಕಿಂಕರಃ ಕಿಂಕರೋಮ್ಯಹಂ" ಎಂಬ ಗ್ರಂಥವಂ ಹೇಳಲಾಗಿ, ವ್ಯಾಸರೂ ಶಂಕರಾಚಾರ್ಯರೂ ವಾಗ್ವಾದವನ್ನು ಬಿಟ್ಟು ಸಮಾಧಾನವನ್ನು ಹೊಂದಿದರು. ಶಂಕರರು "ಲೋಕದಲ್ಲಿ ಯಥಾರ್ಥವಾದ ಅಭಿಪ್ರಾಯವುಳ್ಳ

ಮತ ಯಾವುದು? ಯಾವುದನ್ನು ಸ್ಥಾಪನೆ ಮಾಡಬೇಕು?" ಎಂಬ ವಿವರಗಳೆಲ್ಲವನ್ನೂ ಕೇಳಲಾಗಿ ವ್ಯಾಸರು 'ನೀವು ಮಾಡಿದ ಭಾಷ್ಯಗಳೆಲ್ಲಿ? ನೋಡುವ' ಎಂದು ಯಾವತ್ತನ್ನು ನೋಡುತ್ತಿರಲು ಶುನಕರೂಪವಾದ ವೇದಂಗಳು ಆ ಪುಸ್ತಕವನ್ನೆಲ್ಲ ನೆಕ್ಕಲಾಗಿ, ನಿಶ್ಚಯವಾದ ಅಭಿಪ್ರಾಯವು ಆ ಪುಸ್ತಕದಲ್ಲಿ ನಿಂತಿತು. 'ಅದರಲ್ಲಿದ್ದ ಪ್ರಕಾರ ದುರ್ಮತಗಳಂ ಖಂಡಿಸಿ ವೇದಮೂಲವಾಗಿ ಶ್ರುತಿಮಾರ್ಗ ಸಮ್ಮತವಾದ ಮತಗಳಂ ಸ್ಥಾಪಿಸಿರಿ" ಎಂದು ಹೇಳಿ, "ಇದಕ್ಕೆ ಮಂಡನಮಿಶ್ರನು ಕಲಿಯುಗದಲ್ಲಿ ಸಂನ್ಯಾಸಾಶ್ರಮವಿಲ್ಲವೆಂದು ಸ್ಥಾಪಿಸಿ ಕುಳಿತಿದ್ದಾನೆ. ಅವನು [>ನನ್ನು] ಮೊದಲು ಜಯಿಸಿದರೆ ನೀವು ಮಾಡಿದ ಮತಗಳು ನಡೆದಾವು. ಇಲ್ಲಿದಿದ್ದರೆ ನಡೆಯವು. ಅವನು ಬ್ರಹ್ಮನ ಅವತಾರ ಭೂತನೆಂ"ದು ಹೇಳಲಾಗಿ, ಅವನಿರುವ ಲಕ್ಷಣ ಯಾವತ್ತನ್ನೂ ಕೇಳಿಕೊಂಡು ಆತನ ಪಟ್ಟಣಕ್ಕೆ ಹೋದರು.

ಅದು ಅತಿ ರಮಣೀಯವಾಗಿ ಕಾಣುತ್ತಿರಲಾಗಿ ಮುಂದೆ ಬೀದಿಯಲ್ಲಿ ಹೋಗುವಂತಹ ವೇಳೆಯಲ್ಲಿ, ಮಂಡನಮಿಶ್ರನ ಮನೆಗೆ ನೀರು ತರುವ ಹೆಂಗಸರು ಬರುತ್ತಿರಲಾಗಿ, 'ಮಂಡನಮಿಶ್ರನ ಮನೆ ಯಾವುದೆಂ"ದು ಕೇಳಲಾಗಿ, ಅವರೆಲ್ಲರೂ ಸಂಸ್ಕೃತ ಗ್ರಂಥರೂಪದಿಂದ ಮನೆಯಿರುವ ಲಕ್ಷಣವನ್ನು ಹೇಳಿದರು. ಆ ಮನೆಗೆ ಆಚಾರ್ಯ ಸ್ವಾಮಿಯವರು ಹೋಗುವಾಗ್ಗೆ, ಆತನ ಮನೆಯಲ್ಲಿ ಪಿತೃ ಪ್ರತಿಸಾಂವತ್ಸರಿಕ ಶ್ರಾದ್ಧವಾಗುತ್ತಿರಲಾಗಿ, ಆ ಮಂಡಮಿಶ್ರನು ಬ್ರಾಹ್ಮಣಾರ್ಥಕ್ಕೆ ವ್ಯಾಸರೊಬ್ಬರನ್ನು ಮಾತ್ರ ಹೇಳಿಕೊಂಡು ಬೇರೆಯ ಜನರು ಬಾರದಂತೆ ಕವಾಟ ಬಂಧನವಂ ಮಾಡಿಸಿ, ವ್ಯಾಸರಿಗೆ ಪಾದಪ್ರಕ್ಷಾಳನವನ್ನು ಮಾಡುತ್ತಿರಲಾಗಿ, ಶಂಕರಾಚಾರ್ಯರು ಘುಟಿಕಾಸಿದ್ಧಿ, ಪಾದುಕಾಸಿದ್ಧಿಯಿಂದ ಪ್ರಾಕಾರೋಲ್ಲಂಘನೆಯಂ ಮಾಡಿ ಪಾದ್ಯ ಮಂಡಲಸ್ಥಾನದಲ್ಲಿ ನಿಂತರು. ಮಂಡನಮಿಶ್ರರು 'ಇದು ಯಾರ ಪಾದ'ವೆಂದು ಇವರ ಮುಖವನ್ನು ನೋಡಲಾಗಿ, ಸಂನ್ಯಾಸಿಗಳದಾಗಿ ಕಾಣಲು ಮಹಾಕ್ರೋಧದಿಂದ 'ನೀನು ಯಾರು, ಈ ವೇಳೆಯಲ್ಲಿ ಬರಲು ಕಾರಣವೇನು?' ಎಂದು ಕೇಳಿದರು. 'ನಾವು ಸಂನ್ಯಾಸವನ್ನು ಮಾಡಿದ್ದೇವೆ. ನಿನ್ನಲ್ಲಿ ಪಾದಭಿಕ್ಷಕ್ಕೆ ಬಂದೆವೆಂದು ಹೇಳಲು, ಮಂಡನಮಿಶ್ರರು ವ್ಯಾಸರ ಮುಖವಂ ನೋಡಲಾಗಿ, "ಈಗ ಪಾದಪ್ರಕ್ಷಾಳನವಂ ಮಾಡಿ ಪೂರ್ವಪಜ್ತಿಯಲ್ಲಿ ಕೂಡಿಸಿ ವಿಧವತ್ತಾಗಿ ಶ್ರಾದ್ಧವನ್ನು ಮಾಡಿ, ಆ ತರುವಾಯ ವಿದ್ಯಾವಾದ ಮಾಡಬಹುದೆಂ"ದು ಹೇಳಿ, ಆ ಮಾತಿಗೆ ಒಪ್ಪಿಸಿ, ಶ್ರಾದ್ಧಕರ್ಮ ತೀರಿ ಭೋಜನವಾದ ಬಳಿಕ, ನೀವು ನೀವು ಮಾತಾಡಿಕೊಳ್ಳಿರೆಂದು ಹೇಳಿ ವ್ಯಾಸರು ತಮ್ಮಾಶ್ರಮಕ್ಕೆ ಹೋದರು.

ಇತ್ತಲಾಗಿ ಮಂಡನಮಿಶ್ರರಿಗೂ ಶಂಕರಾಚಾರ್ಯರಿಗೂ ವಾದವಾಗುತ್ತಿರಲು ಮಂಡನಮಿಶ್ರರು ಕಲಿಯುಗದಲ್ಲಿ ಸಂನ್ಯಾಸವಿಲ್ಲವೆಂದು ಸ್ಥಾಪಿಸುತ್ತಿರಲಾಗಿ, ಶಂಕರಾಚಾರ್ಯರು ಆತನ ಮೇಲೆ ಪೂರ್ವಪಕ್ಷ ಮಾಡಿ 'ಸಂನ್ಯಾಸ ಮಾಡಬಹುದೆಂ"ದು ಸ್ಥಾಪಿಸುತ್ತ ಇದರಲ್ಲಿ ಸೋಲು ಗೆಲುವಾದರೆ ಈ ಮಾತಿಗೆ ಪ್ರತಿಜ್ಞೆಯೇನೆನ್ನಲಾಗಿ "ಶಂಕರಾಚಾರ್ಯರು ಸೋತರೆ ಗೃಹಸ್ಥಾಶ್ರಮವನ್ನು ಅನುಸರಿಸಬೇಕು, ಮಂಡನಮಿಶ್ರರು ಸೋತರೆ ಸಂನ್ಯಾಸವನ್ನನುಸರಿಸಬೇಕೆಂ"ದು ಉಭಯರೂ ಪ್ರತಿಜ್ಞಾಪುರಸ್ಸರವಾಗಿ ಕುಳಿತರು. ಸೋಲು ಗೆಲುವಿಗೆ ಸಾಕ್ಷಿಗಳು ಯಾರು? ಎನ್ನುವಾಗ್ಗೆ ಮಂಡನಮಿಶ್ರರ ಪತ್ನಿಯೇ ಸರಿಯೆಂದು ಹೇಳಲಾಗಿ, "ಎಲ್ಲಾದರೂ ಸ್ತ್ರೀ ಸಾಕ್ಷಿಯುಂಟೆ?" ಎಂದು ಮಂಡನಮಿಶ್ರರು ಹೇಳಿ ಸಾಕ್ಷಾತ್ಸರಸ್ವತೀದೇವಿಯರನ್ನು ಸಾಕ್ಷಿಗೆ ಗೊತ್ತುಮಾಡಿದರು. ವಾದಾರಂಭವಾಗಿ ನಿತ್ಯದಲ್ಲಿಯೂ

ವಾಗ್ವಾದಗಳಾಗುವಾಗ್ಗೆ ಮಧ್ಯಾಹ್ನ ಕಾಲವಾಗುತ್ತಲೆ ಮಂಡನಮಿಶ್ರರಿಗೆ ವೈಶ್ವದೇವಕ್ಕೆ ಏಳಬೇಕೆಂದೂ ಶಂಕರಾಚಾರ್ಯರಂ ಭಿಕ್ಷಕ್ಕೆ ಏಳಿ ಎಂದೂ ಹೇಳುತ್ತಿರಲಾಗಿ, ಒಂದು ದಿನ ವಾದದಲ್ಲಿ "ಮಂಡನಮಿಶ್ರರು ಹೇಳಿದಂತಹ ಗ್ರಂಥದಲ್ಲಿ ಯತಿಭಂಗವಾದಲ್ಲಿ ಶಂಕರಾಚಾರ್ಯರು 'ಅಸ್ಮನ್ವದ್ಯೇಯತಿ ಭಂಗಃ' ಎಂದು ನೀವು ಹೇಳಿದ ಕಕ್ಷಿಯಲ್ಲಿ ತಪ್ಪಿತು" ಎಂದು ಹೇಳಲಾಗಿ 'ನಾವು ಯತಿಭಂಗವಾಗಬೇಕೆಂತಲೇ ಹೇಳಿ ಸ್ಥಾಪಿಸುವಂತಹ ಕಕ್ಷಿಯಲ್ಲಿ ಯತಿಭಂಗವಾದರೆ ದೋಷವಿಲ್ಲ"ವೆಂದು, ಪ್ರಾಕೃತಭಾಷೆಯಿಂದ ಉದಾಹರಣೆ ಹೇಳಲಾಗಿ, ಶಾರದಾದೇವಿಯ ಮನಸ್ಸಿಗೆ ಸರಿಬಾರದೆ ತನ್ನ ಗಂಡನ ಪಕ್ಷದ ಕಕ್ಷಿ ಬಿತ್ತು ಎಂದು ತಿಳಿದು 'ಉಭಯರೂ ಭಿಕ್ಷಕ್ಕೆ ಏಳಿ ಎಂದು ಹೇಳಲಾಗಿ, ಮಂಡನಮಿಶ್ರರು ತಾನು ಸೋತುದು ಸರಿಯೆಂದು ನಿಶ್ಚಯಿಸಿ, ಶಂಕರಾಚಾರ್ಯರಿಗೆ ನಮಸ್ಕಾರ ಮಾಡಲಾಗಿ, ಶಂಕರಾಚಾರ್ಯರು ಆಗ ಆತನಿಗೆ ಸಂನ್ಯಾಸವಂ ಕೊಟ್ಟು, ಅವರಿಗೆ ಸುರೇಶ್ವರಾಚಾರ್ಯರು ಎಂದು ಹೆಸರಿಟ್ಟರು.

ಅನಂತರದಲ್ಲಿ ಶಾರದಮ್ಮನವರು ಸತ್ಯಲೋಕಕ್ಕೆ ಹೋಗುತ್ತಿರಲಾಗಿ, ಶಂಕರಾಚಾರ್ಯರು ವನದುರ್ಗಾಮಂತ್ರದಿಂದ ದಿಗ್ಬಂಧನವನ್ನು ಮಾಡಿ ನಿಲ್ಲಿಸಿಕೊಂಡು ಶಾರದಮ್ಮನವರನ್ನು "ನನ್ನ ಮಠದಲ್ಲಿ ನೀನು ವಾಸವಾಗಿರಬೇಕೆಂಬುದಕ್ಕಾಗಿ ನಿನ್ನನ್ನು ಕರೆದುಕೊಂಡು ಹೋಗುವ ಬಗ್ಗೆ ಬಂದೆನೇ ಹೊರತು ನನಗೆ ವಿಶೇಷ ಕಾರ್ಯವಿಲ್ಲ. ನೀನು ದಯಮಾಡಿ ಬರಬೇಕು" ಎಂದು ಕೇಳಿಕೊಂಡರು. 'ತನ್ನ ಪತಿಗೆ ಸಂನ್ಯಾಸವಾಯಿತಲ್ಲಾ!' ಎಂಬ ಕ್ರೋಧದಿಂದ 'ನೀನು ನನಗೆ ವಿದ್ಯಾಪರೀಕ್ಷೆ ಕೊಟ್ಟರೆ ಬರುವೆ'ನೆಂದು ಹೇಳಲಾಗಿ, ಆಗ ಅಮ್ಮನವರು ಕೇಳಿದ ವಿದ್ಯೆಯಲ್ಲಿ ಶಂಕರಾಚಾರ್ಯರು ಪರೀಕ್ಷೆಯನ್ನು ಕೊಡಲು, ಅನಂತರ ಶಾರದಮ್ಮನವರು ಕಲಾಶಾಸ್ತ್ರದಲ್ಲಿ ಪರೀಕ್ಷೆ ಮಾಡಲಾಗಿ 'ಈ ಶಾಸ್ತ್ರವನ್ನು ಓದಿದವನಲ್ಲ, ಓದಿ ಅನುಭವ ಮಾಡಿಕೊಂಡು ಬಂದು ಪರೀಕ್ಷೆ ಕೊಟ್ಟೇನು. ಆ ಪರ್ಯಂತ ಆರುತಿಂಗಳ ವರೆಗೆ ನೀನು ಇಲ್ಲಿ ಇರಬೇಕೆಂ'ದು ಕೇಳಿಕೊಳ್ಳಲು ಅಮ್ಮನವರು ಆದೀತೆಂದು ಹೇಳಿದರು.

ಶಂಕರಾಚಾರ್ಯರು ನಾಲ್ಕು ಜನ ಶಿಷ್ಯರನ್ನು ಕರೆದುಕೊಂಡು ಸಂಚರಿಸುತ್ತ, ಅಮರುಕರಾಜನ ಪಟ್ಟಣದ ಸಮೀಪಕ್ಕೆ ಬರಲು, ಆ ವೇಳೆಯಲ್ಲವನು ಮೃತನಾಗಿದ್ದಾನೆಂಬ ವರ್ತಮಾನವನ್ನು ತಿಳಿದು, ಆಚಾರ್ಯರು ಒಂದು ಅರಣ್ಯದಲ್ಲೊಂದು ಗುಹೆಯಲ್ಲಿ ತಮ್ಮ ದೇಹವನ್ನಿಟ್ಟು ಪರಕಾಯಪ್ರವೇಶವಂ ಮಾಡಿ ಕಲಾಶಾಸ್ತ್ರಪರಿಚಯಮಾಡಬೇಕೆಂದು ಆಲೋಚಿಸಿ, ತಮ್ಮ ಶಿಷ್ಯರಿಗೆ "ನಾವು ಅಮರುಕರಾಜನ ಶರೀರ ಪ್ರವೇಶ ಮಾಡುತ್ತೇವೆ. ನಮ್ಮ ಶರೀರವನ್ನೀ ಗುಹೆಯಲ್ಲಿರುಸುತ್ತೇವೆ. ನೀವು ಕಾದು ಕೊಂಡಿರುತ್ತ ಏನಾದರೊಂದು ಉಪದ್ರವ ಬಂದರೆ ಆ ಕ್ಷಣವೇ ಪಟ್ಟಣಕ್ಕೆ ಬಂದು 'ತತ್ತ್ವಮಸಿ' ಎಂಬ ವಾಕ್ಯಸೂಚನೆಯಿಂದ ನಮಗೆ ವರ್ತಮಾನವಂ ಹೇಳಬೇಕು" ಎಂದು ಹೇಳಿ ಗೊತ್ತುಮಾಡಿ, ತಾವು ಬಂದು ಅಮರುಕರಾಜನ ಶರೀರವಂ ಪ್ರವೇಶಮಾಡಲಾಗಿ, ಆತನ ಪತ್ನಿಯರಿಗೂ ಪ್ರಧಾನ ಮುಂತಾದವರಿಗೆಲ್ಲರಿಗೂ ಸಂತೋಷವಾಗಿ, ಪೂರ್ವಪ್ರಕಾರ ಆತನನ್ನು ಅರಸು ಎಂತಲೇ ತಿಳಿದು ತಮ್ಮ ಮರ್ಯಾದೆಯ ಪ್ರಕಾರ ನಡೆದುಕೊಳ್ಳುತ್ತಿದ್ದರು. ಒಂದಾನೊಂದು ದಿನ ಜ್ಯೇಷ್ಠಪತ್ನಿಯಾದವಳು "ಆ ಶರೀರದಲ್ಲಿ ಪ್ರವೇಶವಾಗಿ ಅನುಭವ ಪಡುವಂತಹ ಜೀವನ ಚಮತ್ಕಾರಗಳ ನೋಡುವಾಗ್ಗೆ ಪೂರ್ವಕ್ಕಿಂತಲೂ ಅಲ್ಲಿ ಚಮತ್ಕಾರವಾಗಿ ಕಾಣುತ್ತದೆ. ಸರ್ವಥಾ ಈ ಶರೀರದಲ್ಲಿ

ಯಾರೋ ಮಹಾಪುರಷನು ಪ್ರವೇಶವಾಗಿರುತ್ತಾನೆ. ಪರಕಾಯ ಪ್ರವೇಶ ಮಾಡಬೇಕಾದರೆ ತಮ್ಮ ಪೂರ್ವದ ಶರೀರವಂ ಜೋಪಾನವಂ ಮಾಡಿದ್ದಾರು. ಅವರನ್ನು ಹುಡುಕಿ ತೆಗೆದು ಪರಿಹರಿಸಿಬಿಟ್ಟರೆ ಈ ಪುರಸನೀ ದೇಹದಲ್ಲೇ ಇರುತ್ತಾನೆ.", ಎಂದು ನಿಶ್ಚಯಿಸಿ, ತಮ್ಮ ಪ್ರಧಾನನಂ ಕರೆದು, "ನಮ್ಮ ದೇಶದೊಳಗಾಗಿ ಊರಲ್ಲಿಯಾಗಲಿ ವನದಲ್ಲಿಯಾಗಲಿ ಎಲ್ಲಿಯಾದರೂ ಸರಿಯೇ, ಮನುಷ್ಯ ಶವವಾಗಲಿ ಬದಲು ಯಾವ ರೂಪಿನ ಶವವಿದ್ದರೂ ಅದನ್ನು ಅಗ್ನಿಯಲ್ಲಿ ದಗ್ಧವನ್ನು ಮಾಡಿಸಿ ಬಿಡು" ಎಂದು ಹೇಳಲಾಗಿ, ಆ ಪ್ರಧಾನನು ಚಾರರಂ ಕರೆದು ಈ ಪ್ರಕಾರ ನೇಮಕ ಮಾಡಿ ಕಳುಹಿಸಿದನು.

ಆ ಚಾರರು ಅದೇ ಪ್ರಕಾರ ದೃಷ್ಟಿ ಗೋಚರವಾದ ಕುಣಪಗಳನ್ನೆಲ್ಲ ದಹಿಸುತ್ತ ಮತ್ತು ಹುಡುಕುತ್ತ ಈ ಶಿಷ್ಯರು ಕಾದಿರುವಂತಹ ವನಾಂತರಕ್ಕೆ ಬಂದು, ಈ ಗುಹೆಯಲ್ಲಿದ್ದ ಶಂಕರಾಚಾರ್ಯರ ದೇಹವನ್ನು ತೆಗೆದು ಚಿತೆಯೊಡ್ಡಿ ಅಗ್ನಿಪ್ರವೇಶ ಮಾಡಿಸುತ್ತಿರಲಾಗಿ, ಈ ನಾಲ್ಕು ಜನ ಶಿಷ್ಯರು ಕಂಡು ಶಾರದಗಾರ ವೇಷವನ್ನು ಧರಿಸಿಕೊಂಡು, ಕೈಯಲ್ಲಿ ತಂಬೂರಿಯನ್ನು ಹಿಡಿದು, ಅಮರುಕರಾಜನ ಪಟ್ಟಣಕ್ಕೆ ಬಂದು 'ತತ್ತ್ವಮಸಿ' ಎಂಬ ವಾಕ್ಯಾರ್ಥಯುಕ್ತವಾದ ಪದ್ಯದಿಂದ ಎಚ್ಚರಿಸುತ್ತ ಆ ಪಟ್ಟಣದಲ್ಲಿ ಸಂಚರಿಸುತ್ತ ಅರಮನೆಯ ಬಾಗಿಲಿಗೆ ಬಂದು ಗಾನವಂ ಮಾಡಲಾಗಿ, ಶಂಕರಾಚಾರ್ಯರು ತಿಳಿದು ತಮ್ಮ ದೇಹಕ್ಕೇನೋ ಉಪಹತಿ ತಟ್ಟಿದ್ದು ಸರಿಯೆಂದು ನಿಶ್ಚೈಸಿ, ಅಮರುಕರಾಜನ ದೇಹದಿಂದ ಹೊರಟು ವನಾಂತರಕ್ಕೆ ಬಂದು ನೋಡಲಾಗಿ, ಚಿತೆಯಲ್ಲಿರಿಸಿ ಅಗ್ನಿ ಪ್ರವೇಶವನ್ನು ಮಾಡಿಸಿದುದನ್ನು ಕಂಡು ನರಸಿಂಹನನ್ನು ಸ್ತುತಿ ಮಾಡಿದುದರಿಂದ, ಆ ಕ್ಷಣವೇ ಮೇಘಾವೃತವಾಗಿ ಮಳೆ ಬಂದು ಅಗ್ನಿಯು ಶಾಂತವಾಯಿತು. ನರಸಿಂಹಸ್ವಾಮಿಯು ಬಂದು ಹಸ್ತದಿಂದ ಶಂಕರಾಚಾರ್ಯರ ದೇಹಸ್ಪರ್ಶಮಾಡಿ ಕೈ ಹಿಡಿದು ಎತ್ತಲಾಗಿ, ಶಂಕರಾಚಾರ್ಯರು ತಮ್ಮ ಕಾಯವನ್ನು ಪ್ರವೇಶಮಾಡಿ ನರಸಿಂಹಸ್ವಾಮಿಯನ್ನು ಸ್ತುತಿಸಿ ಸಂತೋಷಪಡಿಸಿದರು.

ಭಗವಂತನು ಅಂತರ್ಧಾನನಾದ ಬಳಿಕ, ಶಂಕರಾಚಾರ್ಯರು ತಮ್ಮ ಶಿಷ್ಯರನ್ನು ಕೂಡಿಕೊಂಡು ಶಾರದಮ್ಮನವರ ಬಳಿಗೆ ಬಂದು ಕಲಾಶಾಸ್ತ್ರವನ್ನು ಪರೀಕ್ಷೆ ಕೊಡಲು, ಅಮ್ಮನವರು ಸಂತುಷ್ಟಳಾಗಿ 'ನಿನಗೇನುಬೇಕೆಂದು' ಕೇಳಲಾಗಿ, 'ತನ್ನ ಮಠದಲ್ಲಿ ವಾಸವಾಗಿದ್ದುಕೊಂಡು ಶಿಷ್ಯಪರಂಪರೆಯಾಗಿ ಪೂಜಿಸಿಕೊಳ್ಳುತ್ತ ಬರಬೇಕೆಂ'ದು ಪ್ರಾರ್ಥನೆಯಂ ಮಾಡಿದರು. ಶಂಕರಾಚಾರ್ಯರು ಉತ್ತರದಲ್ಲಿ ಬದರಿಕಾಶ್ರಮದಲ್ಲಿ ಒಂದು ಮಠ, ಪೂರ್ವದಲ್ಲಿ ಜಗನ್ನಾಥಕ್ಷೇತ್ರದಲ್ಲಿ ಒಂದು ಮಠ, ಪಶ್ಚಿಮದಿಕ್ಕಿಗೆ ದ್ವಾರಕೆಯಲ್ಲಿ ಒಂದು ಮಠ ಈ ಪ್ರಕಾರ ಮೂರು ದಿಕ್ಕಿನಲ್ಲಿಯೂ ಮೂರು ಮಠವನ್ನು ಮಾಡಿ ಮೂರು ಮಂದಿ ಶಿಷ್ಯರನ್ನಿಟ್ಟು ದಕ್ಷಿಣದೇಶಕ್ಕೆ ಬಂದು 'ಶಾರದಮ್ಮನವರನ್ನು ಪ್ರತಿಷ್ಠೆ ಮಾಡುವುದಕ್ಕೆ ಸ್ಥಳವಾವುದಾದೀತು' ಎಂದು, ತುಂಗಭದ್ರತೀರದಲ್ಲಿ ವಿಭಾಂಡಕುಮಾರರಾದ ಋಷ್ಯಶೃಂಗರ ಆಶ್ರಮವಾದ ಶೃಂಗಪುರಕ್ಕೆ ಬಂದು, ನದೀ ತೀರದಲ್ಲಿ ಬರುತ್ತಿರಲು ಆ ನದೀ ತೀರದಲ್ಲಿ ಒಂದು ಗರ್ಭಿಣಿಯಾದ ಕಪ್ಪೆಗೆ ಮಧ್ಯಾಹ್ನದ ಬಿಸಿಲಿನ ವೇಳೆಯಲ್ಲಿ ಒಂದು ಸರ್ಪವು ತನ್ನ ಹೆಡೆಯಿಂದ ನೆರಳು ಮಾಡಿ ಹಿಡಿದಿರುವುದನ್ನು ಕಂಡು ಆಶ್ಚರ್ಯಪಟ್ಟು, ಈ ಸ್ಥಳವು ಮಹಾ ಉತ್ತಮವಾದುದೆಂದು ನಿಶ್ಚಯಿಸಿ ಅದೇ ಸ್ಥಳದಲ್ಲಿ ಮಠವನ್ನು ಕಟ್ಟಿಸಿ ಚಕ್ರೋದ್ಧಾರಯಂತ್ರವನ್ನು ಶಿಲೆಯಲ್ಲಿ ಬರೆದು, ಅಲ್ಲಿ ಶಾರದಮ್ಮನವರನ್ನು ಪ್ರತಿಷ್ಠೆ ಮಾಡಿ, ಆ ಮಠದಲ್ಲಿ ಸುರೇಶ್ವರಾಚಾರ್ಯರೆಂಬ ಶಿಷ್ಯರನ್ನಿಟ್ಟು ಅಮ್ಮವರಂ

ಪೂಜಿಸುತ್ತಿರಲಾಗಿ, ಶ್ರೀ. ಶಾರದಮ್ಮನವರು ನಿತ್ಯದಲ್ಲಿಯೂ ಒಂದು ಕಲೆಯಿಂದಿರುತ್ತ ನವರಾತ್ರಿಯ ಕಾಲದಲ್ಲಿ ಪೂರ್ಣ ಷೋಡಶ ಕಲೆಯಿಂದಿರುತ್ತೇವೆಂದಪ್ಪಣೆ ಕೊಟ್ಟು, ತಾವು ಸತ್ಯಲೋಕದಲ್ಲಿ ವಾಸವಾಗಿ ಸರ್ವದಾ ಶೃಂಗೇರಿಯಲ್ಲಿ ನೆಲಸಿ ಶಿಷ್ಯ ಪರಂಪರೆಯಾಗಿ ಪೂಜೆಯನ್ನು ತೆಗೆದುಕೊಳ್ಳುತ್ತ ಅದ್ಯಾಪಿ ಇದ್ದಾರೆ. ಶಂಕರಾಚಾರ್ಯರು ಶಿಂಗ[>ಗಿ]ರಿಯೆಂಬ ಬ್ರಹ್ಮರಾಕ್ಷಸನನ್ನು ಶೃಂಗೇರಿಯ ಮಠದಲ್ಲಿ ಕಾದಿರುವ ಹಾಗೆ ನೇಮಕ ಮಾಡಿ, ಅನಂತರದಲ್ಲಿ ದೇಶಸಂಚಾರವನ್ನು ಮಾಡುತ್ತ ದುರ್ಮತದ ಜನರಾದವರು ವಾದಕ್ಕೆ ಬರಲಾಗಿ ಅವರ ಮತಗಳನ್ನು ಶ್ರುತಿ ಸ್ಮೃತಿ ಪುರಾಣಾದಿ ವಾಕ್ಯ ಸಮ್ಮತದಿಂದ ಖಂಡನೆ ಮಾಡುತ್ತ, ಅದ್ವೈತಮತವನ್ನೇ ಸ್ಥಾಪನೆ ಮಾಡುತ್ತಿದ್ದರು.

ಕೇರಳದೇಶದ ಕಾಲಟಿಯೆಂಬ ಗ್ರಾಮದಲ್ಲಿ ತಮ್ಮ ಮಾತೃವಾದ ಅಂಬಾ ಎಂಬರಿಗೆ ಅಂತ್ಯಕಾಲ ಸನ್ನಿಹಿತವಾಗುತ್ತಿರಲಾಗಿ "ಶ್ರೀ ಶಂಕರ! ಶಂಕರ!" ಎಂದು ಸ್ಮರಿಸಲು, ಆ ಕ್ಷಣವೇ ಅಲ್ಲಿಗೆ ಬಂದು ಮಾತನಾಡಿಸಲಾಗಿ, ತದನಂತರದಲ್ಲಿ ಅಮ್ಮನು ಸ್ವರ್ಗಸ್ಥಳಾದಳು. ಆ ದೇಶದಲ್ಲಿರುವ ಬ್ರಾಹ್ಮಣರನ್ನು ಕರೆದು 'ಶವಸಂಸ್ಕಾರ ಮಾಡುವುದಕ್ಕೆ ಅಗುವಂತಹ ಕರ್ತವ್ಯಕ್ಕೆ ಸಹಾಯವಾಗಿ ಬನ್ನಿ'ಎನ್ನಲು, ಅವರು ಬಾರದೆ ಇದ್ದುದರಿಂದ ಆ ಶವವನ್ನು ಮನೆಯಲ್ಲಿಯೇ ಅಗ್ನಿಪ್ರವೇಶವಂ ಮಾಡಿಸಿ ಸಂಸ್ಕರಿಸಿ, ಯತಿಧರ್ಮದಲ್ಲಿ ಮಾಡತಕ್ಕ ಕರ್ತವ್ಯವೇನುಂಟೋ ಆ ಕ್ರಮದಿಂದ ಆಗುವ ಕೃತ್ಯವಂ ಮಾಡಿ, ಆ ಕೇರಳದೇಶದ ಜನರಿಗೆ "ನೀವು ಅನಾಚಾರಯುಕ್ತರಾಗಿ ಹೋಗಿ" ಎಂದು ಶಾಪವನ್ನು ಕೊಟ್ಟು, ಪುನಃ ದೇಶಸಂಚಾರ ಮಾಡುತ್ತ ದುರ್ಮತ ದುಮಾರ್ಗ ಪ್ರವಿಷ್ಟರನೆಲ್ಲ ಖಂಡಿಸುತ್ತಿರಲಾಗಿ, ಭಟ್ಟಾಚಾರ್ಯರು ಶಂಕರರು ಅವತರಿಸಿದ್ದಾರೆಂಬ ವರ್ತಮಾನವಂ ಕೇಳಿ "ಶಂಕರಾಚಾರ್ಯರ ದರ್ಶನವೆಂದಿಗಾದೀತೋ" ಎಂದು ಅಪೇಕ್ಷಿಸುತ್ತಿರಲಾಗಿ, ಶಂಕರಾಚಾರ್ಯರು ದೇಶಸಂಚಾರ ಮಾಡುತ್ತ ಆ ಸ್ಥಳಕ್ಕೆ ಹೋದರು. ಇವರೇ ಶಂಕರಾಚಾರ್ಯರೆಂದು ತಿಳಿದು ಭಟ್ಟಾಚಾರ್ಯರು ಇವರು ಉತ್ತಮರಿದ್ದಾರೆಂದು ತಿಳಿದು ವಿದ್ಯಾಪರೀಕ್ಷೆ, ವೇದಾಂತಗ್ರಂಥಗಳು ಮುಂತಾಗಿ ಆಲೋಚನೆಗಳನ್ನು ಮಾಡುತ್ತ ಅನಂತರದಲ್ಲಿ ಭಟ್ಟಾಚಾರ್ಯರಿಗೆ ಉಪದೇಶವಂ ಮಾಡಿ ಬ್ರಹ್ಮಸೂತ್ರಾರ್ಥವನ್ನು ತಿಳಿಯಪಡಿಸಿ, "ನೀವು ಭಾಗವತಸಂಪ್ರದಾಯಾನುಸಾರವಾಗಿ, ಇರಿ. ನಿಮ್ಮ ಆಚಾರದ ಮೇರೆಗೆ ನಿಮ್ಮ ಶಿಷ್ಯರು ಲೋಕದಲ್ಲಿ ಪ್ರವರ್ತಿಸಲಿ" ಎಂಬುದಾಗಿ ಅವರಿಗೆ ಹೇಳಿ, ಅಲ್ಲಿಂದ ಹೊರಟು ಪುನಃ ದೇಶಸಂಚಾರವನ್ನು ಮಾಡುತ್ತ ಕಾಂಚೀಪಟ್ಟಣಕ್ಕೆ ಬಂದು ಅಲ್ಲಿ ಚಕ್ರಸ್ಥವಾದ ಕಾಮಾಕ್ಷಮ್ಮನವರ ದರ್ಶನವಂ ಮಾಡಿಕೊಂಡು, ಪೀಠವನ್ನೆರಿ, ಅಲ್ಲಿಂದ ಹೊರಟು ಪುನಃ ದೇಶಸಂಚಾರ ಮಾಡುತ್ತ, ಷಡ್ದರ್ಶನಸ್ಥಾಪನೆಯಂ ಮಾಡಿ, ತಮ್ಮ ಮೂವತ್ತೆರಡನೆಯ ವರ್ಷದಲ್ಲಿ ಮಾಘ ಶುದ್ಧ ಸಪ್ತಮೀ (ರಥಸಪ್ತಮಿ) ದಿವಸ ವ್ಯಾಸರ ಹಸ್ತವನ್ನು ಹಿಡಿದುಕೊಂಡು ಅಂತರ್ದಾನವಂ ಪಡೆದರು.

ಅನಂತರ ಅವರ ಶಿಷ್ಯರಾದ ಸುರೇಶ್ವರಾಚಾರ್ಯರು ಶೃಂಗೇರಿಯಲ್ಲಿರುತ್ತಿದ್ದರು. ಇವರ ಶಿಷ್ಯರು:

ಗುರುಪರಂಪರೆ

೧. ಶಿವಾಯ

೧. ಹರಯೇ

೧೧. ಶಂಕರಾಚಾರ್ಯರು

೧೨. ಸುರೇಶ್ವರಾಚಾರ್ಯರು

೧. ಧಾತ್ರೇ

೧. ವಸಿಷ್ಠಾಯ

೧. ಶಕ್ತಯೇ

೧. ಪರಾಶರಾಯ

೧. ವ್ಯಾಸಾಯ

೧. ಶುಕಯೋಗಿನೇ

೧. ಗವುಡಪಾದಾಚಾರ್ಯರು

೧. ಗೋವಿಂದ ಭಗವತ್ಪಾದಾಚಾರ್ಯರು

೧೦

೧೩. ಬೋಧಘನಾಚಾರ್ಯರು

೧೪. ಸಂಜ್ಞಾಚಾರ್ಯರು

೧೫. ಬೋಧಘನಾಚಾರ್ಯರು

೧೬. ಜ್ಞಾನಯೋಗಿಗಳು

೧೭. ಜ್ಞಾನಗಿರಿಯೇ

೧೮. ಶ್ರೀ ಸಿಂಹಗಿರಯೇ

೧೯. ಈಶ್ವರತೀರ್ಥರು

೨೦. ನರಸಿಂಹಭಾರತಿಗಳು

೨೧. ವಿದ್ಯಾತೀರ್ಥರು

೨೨. ವಿದ್ಯಾಶಂಕರಾಚಾರ್ಯರು

೨೩. ಭಾರತೀಕೃಷ್ಣತೀರ್ಥರು

೨೪. ವಿದ್ಯಾರಣ್ಯರು

(ಇವರು ರಾಯರ ಸಂಸ್ಥಾನ ವಿಜಯನಗರ ಹಂಪೆಯಲ್ಲಿ ಸುವರ್ಣವೃಷ್ಟಿ ಮಾಡಿಸಿದವರು.)*

೨ ಇವರ ಶಿಷ್ಯರು ಇಬ್ಬರು –

೧. ಚಂದ್ರಶೇಖರಭಾರತಿಗಳು

೧. ನರಸಿಂಹಭಾರತಿಗಳು

೨

೨೬.

೨೭. ಪುರುಷೋತ್ತಮ ಭಾರತಿಗಳು

೨. ಇವರ ಶಿಷ್ಯರು ಇಬ್ಬರು –

೧. ಚಂದ್ರಶೇಖರಭಾರತಿಗಳು

೧. ನರಸಿಂಹಭಾರತಿಗಳು

೨

* ಇದು ಸಂಪಾದಕರಾದ ಶ್ರೀ ರಾಮರಾವ್ ಅವರು ಸೇರಿಸಿದ್ದು.

೨೯.

೩೦. ಪುರಷೋತ್ತಮಭಾರತಿ,
ಪ್ರಬಂಧಕರ್ತೃಗಳು

೩೧. ರಾಮಚಂದ್ರಭಾರತಿ
ಸ್ವಾಮಿಯವರು

೩೨. ನರಸಿಂಹಭಾರತಿಯವರು

೩೩. ನರಸಿಂಹಭಾರತಿಯವರು

೩೪. ಅಭಿನವನರಸಿಂಹ
ಭಾರತಿಯವರು.

(ಇವರು ಶಿಲಾಸ್ತಂಭದಲ್ಲಿ ವಿಘ್ನೇಶ್ವರದೇವರಂ ಪ್ರತ್ಯಕ್ಷವಂ ಮಾಡಿದರು.ಈಗಲೂ ಪೂಜೆ ನಡೆಯುತ್ತಿದೆ. ಭವಾನಿ ಅಮ್ಮನವರ ಪ್ರತಿಷ್ಠೆ (ಮಾಡಿದರು)*

೩೫. ಇವರ ಶಿಷ್ಯರು
ಸಚ್ಚಿದಾನಂದಭಾರತಿ
ಸ್ವಾಮಿಗಳು

೩೬. ವಿದ್ಯಾನರಸಿಂಹಭಾರತಿಗಳು

೩೭. ಸಚ್ಚಿದಾನಂದಭಾರತಿಗಳು.
ಬಹುಪ್ರೌಢರು

೩೮. ಅಭಿನವಸಚ್ಚಿದಾನಂದ
ಭಾರತಿಸ್ವಾಮಿಗಳು

(ಇವರು ಶಾಲಿವಾಹನ ಶಕ ವ॥೧೭೨೭ನೆಯ ಕ್ರೋಧನ ಸಂವತ್ಸರದಲ್ಲಿ ತಿರುಪತಿಗೆ ಚಿತ್ತೈಸಿದ್ದಾರೆ.)*

೪. ಶಂಕರಾಚಾರ್ಯರು ನಿರ್ಮಿಸಿದ ಮಠಗಳು ನಾಲ್ಕಕ್ಕೆ ವಿವರ:

---

* ಈ ವಾಕ್ಯಗಳನ್ನು ಸಂಪಾದಕರಾದ ಶ್ರೀ ಬಿ. ರಾಮರಾವ್ ಸೇರಿಸಿದ್ದಾರೆ. (ಸಂ)

೧. ದಕ್ಷಿಣದಿಶಿ ರಾಮಕ್ಷೇತ್ರಂ, ಆದಿವರಾಹೋ ದೇವತಾ, ಶಾರದಾದೇವಿ, ತುಂಗಭದ್ರಾ ತೀರ್ಥಂ, ಶೃಂಗೇರಿ ಮಠ; ಭೂರಿವಾಳ ಸಂಪ್ರದಾಯ; ತತ್ತ ಪ್ರವರ್ತಕ ಸಂನ್ಯಾಸನಾಮಾನಿ ಸಂಪ್ರದಾಯಾಶ್ಚದಶ.

೧. ಪಶ್ಚಿಮಸಮುದ್ರತೀರೇ, ದ್ವಾರಕಾಕ್ಷೇತ್ರೇ, ಸಿದ್ಧೇಶ್ವರೋದೇವತಾ, ಭದ್ರಕಾಳೀದೇವೀ, ಗೋಮತೀ ತೀರ್ಥಂ, ಶಾರದಾಮಠ; ಕೀಟವಾಳ ಸಂಪ್ರದಾಯ; ತತ್ರ ಪ್ರವರ್ತಕೋ ಹಸ್ತಾಮಲಕಾಚಾರ್ಯ; ಸಂನ್ಯಾಸನಾಮಾನಿ–ಆಶ್ರಮ ತೀರ್ಥ–ಇತಿ ದ್ವಯಂ.

೧. ಉತ್ತರದಿಶಿ, ಬದರೀಕಾಶ್ರಮಕ್ಷೇತ್ರೇ, ನಾರಾಯಣೋ ದೇವತಾ, ಪೂರ್ಣಗಿರೀದೇವೀ, ಆಳಕನಂದಾತೀರ್ಥಂ, ಜೋತೀರ್ಮಠ; ಆನಂದವಾಳ ಸಂಪ್ರದಾಯ; ತತ್ತ ಪ್ರಮರ್ತಕ; ತೋಟಕಾಚಾರ್ಯ; ಸಂನ್ಯಾಸನಾಮಾನಿ ಗಿರಿಪರ್ವತ ಸಾಗರ ಇತಿ ತ್ರಯಂ.

೧. ಪೂರ್ವದಿಶಿ ಪುರಷೋತ್ತಮಕ್ಷೇತ್ರೇ, ಜಗನ್ನಾಥೋ ದೇವತಾ, ವಿಮಲಾದೇವೀ, ಮಹೋದಧಿ ತೀರ್ಥ, ಭೋಗವಾಳ ಸಂಪ್ರದಾಯ; ತತ್ತ ಪ್ರವರ್ತಕ; ಪದ್ಮಪಾದಾಚಾರ್ಯ; ಸಂನ್ಯಾಸನಾಮಾನಿ ವನ ಅರಣ್ಯ ಇಂದ್ರ ಇತಿ ತ್ರಯಂ

ಈ ಪ್ರಕಾರ ನಾಲ್ಕು ದಿಕ್ಕಿಗೂ ನಾಲ್ಕು ಮಠವನ್ನು ನಿರ್ಮಿಸಿ ನಾಲ್ಕು ಮಂದಿ ಶಿಷ್ಯರನ್ನಿಟ್ಟು ಅಲ್ಲಲ್ಲಿ ದೇವತಾಸೇವೆಯು ಶಿಷ್ಯಪರಂಪರೆಯಾಗಿ ನಡದು ಬರುವ ಹಾಗೆ ನೇಮಕ ಮಾಡಿದರು.

ಈ ಸೀಮೆಯಲ್ಲಿಯ ನದಿಗಳು, ಅವುಗಳ ಹೆಸರು, ಇವುಗಳ ವಿವರ:

೨. ತುಂಗಾ, ಭದ್ರಾ ನದಿಗಳೆರಡು ಕೊಪ್ಪದ ಸೀಮೆಯಲ್ಲಿರುವ ಕೆರೆಗ್ರಾಮದಲ್ಲಿ ವೇದಪಾರ ಎಂಬ ಪರ್ವತದ ಮೇಲೆ ವರಾಹಸ್ವಾಮಿಯ ಕೋರೆದಾಡೆಯಲ್ಲಿ ಹುಟ್ಟಿ ಬೇರೆ ಬೇರೆ ಬಂದು, ಕೂಡಲಿಯಲ್ಲಿ ಸಂಗಮರ ಮನಿವಾರೆ (?) ನದಿಯಾಗಿ ಹೋಗಿ ಶ್ರೀಶೈಲಪರ್ವತದ ಬಳಿಯ ಉಪನದಿಯಂ ಕೂಡಿಕೊಂಡು, ಮುಂದೆ ಸಮುದ್ರಗಾಮಿನಿಯಾಗಿದೆ.

೧. ಇದೇ ವರಾಹಸ್ವಾಮಿಯ ಕಣ್ಣಿನಿಂದ ಹುಟ್ಟಿದ ನೇತ್ರವತಿಯೆಂಬ ಒಂದು ನದಿ ಘಟ್ಟದ ಕೆಳಗೆ ಹೋಗಿ ಕೊಡಿಯಾಲದ ಬಳಿ ಸಮುದ್ರಗಾಮಿನಿಯಾಗಿದೆ.

೧. ಇಕ್ಕೇರಿಸೀಮೆಯಲ್ಲಿ ಪಾರ್ವತೀದೇವಿಯ ಕಾಲೊಳಗೆ ಹುಟ್ಟಿದ ವರದಾನದಿಯು ಗಳಗನಾಥನ ಬಳಿಯಲ್ಲಿ ತುಂಗಭದ್ರೆಗೆ ಕೂಡಿಹೋಗಿದೆ.

೨. ಕುಶಾವತಿ, ಕುಮುದ್ವತಿಯೆಂಬೆರಡು ನದಿಗಳು ಹುಮಚತ್ತ ಉತ್ತ[+ರ]ದಲ್ಲಿ ಪದ್ಮಾವತಿ ದೇಶಿ[>ವಿ] ಬಳಿಯಲ್ಲಿರುವ ಪರ್ವತದಲ್ಲಿ ಹುಟ್ಟಿ, ಬೇರೆ ಬೇರೆ ಎರಡು ನದಿಗಳಾಗಿ ಹೋಗಿದೆ.

೧. ಕುಶಾವತಿಯು ಹೋಗಿ ತೀರ್ಥಹಳ್ಳಿ ಬಳಿಯ ತುಂಗಭದ್ರೆಗೆ ಕೂಡಿ ಮುಂದೆ ಹೋಗಿದೆ.

೧. ಕುಮುದ್ವತಿಯು ವರದಾನದಿಗೆ ಕೂಡಿಹೋಗಿದೆ.

೧. ಕವುಲೆದುರ್ಗದ ತಾಲೂಕ್ ಗೋಣಬೂರುಗ್ರಾಮದಲ್ಲಿ ರಾಮಸ್ವಾಮಿದೇವರು ಮಾರೀಚನಂ ಸಂಹಾರಮಾಡುವ ಬಗ್ಗೆ ಬಾಣ ಹೊಡೆದಾಗ, ಬಾಣದ ಧ್ವನಿಯಿಂದ ಈ ಪರ್ವತದಲ್ಲಿ ಹುಟ್ಟಿದ್ದರಿಂದ ಶರಪವತಿ (ಶರಾವತಿ?) ಎಂಬ ನದಿಯಾಗಿ ಘಟ್ಟದ ಕೆಳಗೆ ಹೋಗಿ ಸಮುದ್ರಕ್ಕೆ ಕೂಡಿದೆ.

೧. ಕೊಪ್ಪದ ಸೀಮೆಯಲ್ಲಿ ಮೇಲುಬಂಗಾಡಿ ತಾಲ್ಲೂಕ ಜವಳಿಗ್ರಾಮದ ಬಳಿಯ ವಿನಾಯಕದೇವರ ಬಳಿಯಲ್ಲಿರುವ ಪರ್ವತದಲ್ಲಿ ಹುಟ್ಟಿ ಮಹೆಮಾತಿ (ಹೇಮಾವತಿ?) ಎಂಬ ನದಿಯು ಕೊಡಗಿನ ಸೀಮೆಗಾಗಿ ಹೋಗಿ ಕಾವೇರಿಗೆ ಕೂಡಿ ಹೋಗಿದೆ.

೧. ಈ ಕೊಪ್ಪದ ತಾಲ್ಲೂಕ್ ರೆಗಡಗ್ರಾಮದಲ್ಲಿ ನರಸಿಂಹದೇವರ ಪರ್ವತದಲ್ಲಿ ನಂದಿನೀನದಿ ಹುಟ್ಟಿ ಘಟ್ಟದ ಕೆಳಗೆ ಹೋಗಿ ಸಮುದ್ರಗಾಮಿನಿಯಾಗಿ ಇದೆ.

೧. ಇದೇ ಕೊಪ್ಪದ ತಾಲ್ಲೂಕ್ ಹಳಸರ ಸೀಮೆಯಲ್ಲಿ ಸೋಮಾವತಿ ಎಂಬ ನದಿ ಬ್ರಹ್ಮದೇವರು ಯಜ್ಞಮಾಡಿದ ಭೂಮಿಯಲ್ಲಿ ಸೋಮಪಾತ್ರಯಲ್ಲಿ ಹುಟ್ಟಿದುದರಿಂದ ಸೋಮಾವತಿಯಾಗಿ ತುಂಗಭದ್ರೆಗೆ ಕೂಡಿದೆ.

೧ ರಾಮಗಿರಿಯಲ್ಲಿ ಹರಿದ್ರಾನದಿ ಹುಟ್ಟಿ ಅಲ್ಲಿಂದ ಬಸವಾಪಟ್ಟಣದ ಸೂಳೆಕರೆಗೆ ಬಂದು ಕೂಡಿ ಈ ಕೆರೆಯ ತೂಬಿನಿಂದ ಹರಿದು ಹೋಗಿ ಹರಿಹರದ ಬಳಿಯಲ್ಲಿ ತುಂಗಭದ್ರೆಗೆ ಕೂಡಿಹೋಗಿದೆ.

ಅಂತು ನದಿ ೧೧ ಈ ಮೇರೆಗೆ ಇದೆ. ಈ ಸೂಳೆಕೆರೆಯ ನೀರಿನಿಂದ ಪೈರುಗಳು ಆಗುತ್ತವೆ. ಕಡಿಮೆ ನದಿಗಳಿಂದ ಕಾಲುವೆ ಬಂದು ಪೈರಾಗುವುದಿಲ್ಲ.*

೧. ಈ ಲೋಕದಲ್ಲಿ ತ್ರೈಮೂರ್ತಿಗಳು ಯಾರೆಂದರೆ ಅದಕ್ಕೆ ವಿವರ:

ಈ ಚತುರ್ದಶ ಭುವನದಲ್ಲಿ ಸೃಷ್ಟಿ ಸ್ಥಿತಿ ಲಯ ಕಾರ್ಯ ಕಾರಣಕ್ಕೆ ನಿಯಾಮಕನಾದ ಸಾಕ್ಷಾತ್ ವಿಪೋ(?) ಸರ್ವೋತ್ತಮ ವಿರಾಟ ಪುರುಷ ಆದಿನಾರಾಯಣ ದೇವರು.

೧. ಇವರ ಆಜ್ಞೆಯಿಂದ ಸೃಷ್ಟಿಗೋಸ್ಕರ ವಟಪತ್ರಶಾಯಿಯಾದ ಭಗವಂತನ ನಾಭಿಕಮಲದಲ್ಲಿ ಬ್ರಹ್ಮದೇವರು ಅವತಾರ ಮಾಡಿ ಪ್ರಪಂಚಾದಿ ಸೃಷ್ಟಿಗಳ ಮಾಡಿದರು.

ಈ ಸೃಷ್ಟಿಯಾದಂತಹ ಜನರಿಗೆ ರಕ್ಷಣೆ ಮಾಡತಕ್ಕ ಬಗ್ಗೆ ಶ್ರೀ ಪುರುಷನ (ವೇಷವನ್ನೊ?) ತಾಳಿ ಪರಿಪಾಲನೆ ಮಾಡಿದ.

೧. ಪ್ರಳಯಕಾಲದಲ್ಲಿ ಸಂಹಾರ ಮಾಡುವ ಬಗ್ಗೆ ರುದ್ರವೇಷವುಳ್ಳವನಾಗಿ ಅವತರಿಸಿದ ಮಹೇಶ್ವರ ರೂಪು. ಆ ಮೇರೆ ಬ್ರಹ್ಮ ವಿಷ್ಣು ಮಹೇಶ್ವರರು ಎನ್ನುವಂತಹ ದೇವರ ಹೆಸರು –

೧. ಈ ರಾಜ್ಯದಲ್ಲಿ . . . . . ಮುಂತಾದ ವ್ಯವಹಾರಗಳನ್ನು ವಿಚಾರಿಸುವುದಕ್ಕೆ ಪ್ರಭುತ್ವಮಾಡುವ ತಮ್ಮ ತಾಬೆದಾರಿಯಿಂದ ಸರಕಾರ ಸಂಬಳ ತಂದು ಚಾಕರಿಯಲ್ಲಿ ಋಜುವಿಲ್ಲದೆ ಲಂಚ ಲಾವಣಿ ತೆಗೆದುಕೊಂಡು ಸರಕಾರದ ಕೆಲಸ ಕೆಡಿಸಿ . . . . ಮಾಡಿದರೆ ಅವರಿಗೆ ನಗರದ ಪ್ರಭುತ್ವಮಾಡುವ ಯಜಮಾನರು ಕೇಳಿ ಚಾಕರಿ ಬರತರ್ಫ ಮಾಡಿ ಅವರಿಗೆ ಮಾಡತಕ್ಕ ಸಶಿಯತುಗಳು ಸಹಾ ಯಜಮಾನನಾಗಿರುವಂತಹವರೆ ಸರಿ. ಇದು ಶಿವಾಯಿ ಅಣ್ಣತಮ್ಮಂದಿರು ವ್ಯಾಜ್ಯ ಸಾಲ ಸೋಲದ ವ್ಯಾಜ್ಯ. ಸ್ವಾಸ್ತಿ ವೃತ್ತಿಗಳ ವ್ಯಾಜ್ಯವನ್ನು ಲೋಕದಲ್ಲಿರುವ ಅನೇಕ ವ್ಯಾಜ್ಯಗಳು ಮುಂತಾದುವನ್ನು

---

* 'ಸಶೇಷ' ಎಂದು ಸಂಪಾದಕರಾದ ಶ್ರೀ ಬಿ. ರಾಮರಾವ್ ಸೂಚಿಸಿದ್ದಾರೆ. (ಸಂ)

ಪೇಟೆ(ಯ) ಶೆಟ್ಟಿ ವರ್ತಕರು ಅಗ್ರಹಾಋದ ಬ್ರಾಹ್ಮಣರು ರೈತರು ಮುಂತಾಗಿ ಕುಳಿತು ವ್ಯಾಜ್ಯಗಳ(ನ್ನು) ಕೇಳಿ, ಪಕ್ಷ ಪರಪಕ್ಷವಿಲ್ಲದ ರೀತಿ ವ್ಯಾಜ್ಯಗಳ ಮಾತನಾಡಿಕೊಂಡು ಪ್ರಭುತ್ವ ಮಾಡುವವರಿಗೆ ಅರಿಕೆ ಮಾಡಿಕೊಂಡಲ್ಲಿ, ವಿಹಿತವಿದ್ದ ಹಾಗೆ ತೀರಿಸಿ ಬಿಡುವುದೇ ಹೊರತು ಸರಕಾರದಿಂದ ಸಂಬಳದವರನ್ನಿಟ್ಟು ಈ ವ್ಯಾಜ್ಯಗಳಂ ತೀರಿಸುವಂತಹುದು ಈ ರಾಜ್ಯ ನಡತೆಯಲ್ಲ ಎಂಬ ಕಲಂ.

೧. ಜರ್ನಲ ಮಾತಿಶನು (ಜನರಲ್ ಮ್ಯಾಥ್ಯೂಸನು?) ಸೇಕಅಯಾಜನು ಏಕವಾಗಿ ಕೂಡಿದ್ದರಿಂದ ಸೇಕ್‌ಅಯಾ(ಜ)ನು ನಗರದ ಕೋಟೆಯನ್ನು ಮುತ್ತಿಶ (Mathews) ಕೊಟ್ಟು ಲತ್ತಾನುಜಬಹ (?) ಯೇರಿ ಹೋದುದರಿಂದ ತಾವು ಈ ವರ್ತಮಾನ ಟಿಪ್ಪುಸುಲ್ತಾನರು ಕೇಳಿ ತಮ್ಮ ದಂಡು ಸಹಾ ಬಂದು, ನಗರದ ಕೋಟೆ(ಗೆ) ನಾಲ್ಕು ಕಡೆಯಿಂದ ಮೋರ್ಜೆ ಕಟ್ಟಿಕೊಂಡು ಒಳಗಣ ಜನ ಹೊರಗೆ ಬಿಡದೆ ಹೊರಗಿನ ಜನ ಒಳಗೆ ಬಿಡದೆ ಗೇರಾಯಿಸಿಕೊಂಡುದರಿಂದಲೂ ಇದರ ಮೇಲೆ ಕವುಲಿನ ಬಗ್ಗೆ ಹೇಳಿ ಕಳುಹಿಸಿದುದರಿಂದಲೂ ಜರ್ನಮತಿ (Gen. Mathews) ಟಿಪ್ಪುಸುಲ್ತಾನರಿಗೆ ಹೇಳಿಕಳಿಹಿಸಿದ ವಿವರ - ನಿಮ್ಮ ಸಾಮಾನು ಸರಂಜಾಮು ಮುಂತಾಗಿ ಏನು ಹೋಗಿದ್ದಾಗ್ಯೂ ನಾವು ಕೊಡುತ್ತೇವೆ; ನಮ್ಮ ಕಡೆ ಜನ ಆಯುಧಪಾಣಿ ಸಹಾ ನಮ್ಮ (ನಮಗೆ?) ಬಿಡಿ - ಎಂಬುದಾಗಿ ಹೇಳಿ ಕಳುಹಿಸಿದುದರಿಂದ, ಆ ಬಗ್ಗೆ ಟಿಪ್ಪುಸುಲ್ತಾನರು ಒಪ್ಪಿಕೊಂಡು ಕೌಲಿನ ಪ್ರಕಾರ ಇಳಿಯಿಸಿಕೊಂಡು ಆಮೇಲೆ ಟಿಪ್ಪುಸುಲ್ತಾನರು ಮತಿಸ ಸಾಹೇಬರಿಗೆ ಹೇಳಿಕಳುಹಿಸಿದ ವಿವರ: "ನಮ್ಮ ಸಾಮಾನು ಕೂಡಿದ ಜನಗಳಲ್ಲಿ ಹೋದದ್ದು ಹೋಯಿತು. ಸೇಕ್ ಅಯಾಜ್ ಎಂಬವನು ನಮ್ಮ ಚಾಕರಿವಾನ. ಅವನೊಬ್ಬ ಮಾತ್ರ . . . . . ಕೇಳಿದುದರಿಂದ ಇಂತಹ ಜರ್ನಲರು ಬಹಳ ಆದೀತು ಹೋದೀತು, ಮರೆ ಬಿದ್ದವನನ್ನು ಕೊಡುವುದಿಲ್ಲ"ಯಂಬುದಾಗಿಯೂ ಟಪ್ಪುಸುಲ್ತಾನ ಹೇಳಿದ ಮಾತು: "ಬಾಯಿಯಿಂದ ಹೇಳಿದ ಮಾತಲ್ಲ. ಪುಕುಳಿಯಿಂದ ಹೇಳಿದ ಮಾತೇ ಸರಿ" ಎಂಬುದಾಗಿ ಬಾಯಿಗೆ ಬಲ್ಲ ಹಾಗೆ ಬೈದುದರಿಂದ ಈ ವರ್ತಮಾನ(ವನ್ನು) ಟೀಪುಸುಲ್ತಾನನು ಕೇಳಿ ಬಹಳ ಸಿಟ್ಟು ಮಾಡಿಕೊಂಡು, ಮತ್ತಿಸ ಸಾಹೇಬರು (ರನ್ನು?) ಬೇಡಿ ಹಾಕಿ ಡೋಲಿಯಲ್ಲಿಟ್ಟು ಪಹರೆಯಿಂದ ಶ್ರೀರಂಗಪಟ್ಟಣದಲ್ಲಿ ಬಂದೀಖಾನೆ(ಗೆ) ಹಾಕಿ ಎಂಬದಾಗಿ ಹೇಳಿ, ಆ ಪ್ರಕಾರ ರವಾನೆ ಮಾಡಿದುದರಿಂದ, ಶ್ರೀರಂಗಪಟ್ಟಣದ ಮಾರ್ಗದಲ್ಲಿ ಚನ್ನಯ್ಯಪಟ್ಟಣವೆಂಬ ಗಡಿಯಿದೆ. ಅಲ್ಲಿ ಮೃತವಾದವರು ಮತ್ತಿಸು (Mathews) ಸಾಹೇಬರು. ಇನ್ನು ಕೆಲವರು ಗಡಿಗಳಲ್ಲಿ ಹಾಕಿದುದರಿಂದ ಅಲ್ಲಲ್ಲಿಯೇ ಸತ್ತುಹೋದರು ಎಂಬ ಕಲಂ.

೧. ಕೊಡೆಯಾಲದಲ್ಲಿ ಜಹಜ್ ಒಡೆದುದರಿಂದ ಅದರಲ್ಲಿದ್ದಂತಹ ಜನದಲ್ಲಿ ಇಬ್ಬರು ಇಂಗ್ರೇಜಿ ಸರಕಾರು ಬಂದು ಸೇರಿದ್ದರಿಂದ, ಟಿಪ್ಪುಸುಲ್ತಾನರು ಸಿಕ್ಕಿದ ಸರಕಾರ ಜನರಿಬ್ಬರನ್ನು ನಗರದ ಕೋಟೆಯಲ್ಲಿ ಬೇಡಿ ಹಾಕಿಸಿ ದಿನ ೧ಕ್ಕೆ ರಾಗಿ ಹಿಟ್ಟಿನ ರೊಟ್ಟಿ ಸೇರಿನ ಪ್ರಕಾರ ಕೊಡುತ್ತಾ ಇಟ್ಟುಕೊಂಡು, ಆಮೇಲೆ ಕೆಲವು ದಿನದ ಮೇಲೆ ನಗರದಲ್ಲಿದ್ದ ಕಿಲ್ಲೆದಾರರು ಆದಂಖಾನ್ ಲಾವಣಿ ಹೆಡ್ ರೈಟರ್ ತಿರುಮಲರಾಯರಿಗೆ ಸಹಾ ಟಿಪ್ಪುಸುಲ್ತಾನರು ಪರವಾನೆ ಬರೆದು ಕಳುಹಿಸಿದ ವಿವರ: ಕೋಟೆಯಲ್ಲಿಬ್ಬರು ಇಂಗ್ರೇಜಿ ಸರ(ದಾರ)ರ(ನ್ನು) ಖೈದಿನಲ್ಲಿಟ್ಟಿದ್ದುದು ಸರಿಯಷ್ಟೆ. ಅವರನ್ನು - ಅಪ್ಪಣೆ ಬಂದಿದೆ ನಿಮ್ಮ ಕೊಡಿಯಾಲಕ್ಕೆ ಕಳುಹಿಸುವ ಹಾಗೆ - (ಎಂದು) ಹೇಳಿ ರಾತ್ರಿ ಕಾಲದಲ್ಲಿ. ಸದ್ದಿಲ್ಲದ ವೇಳೆಯಲ್ಲಿ, ಇಬ್ಬರಿಗೂ ತಿಳಿಯದ ಹಾಗೆ ಇಬ್ಬರು ಸರದಾರರನ್ನು ಕೊಂದು

ಹಾಕುವ ಹಾಗೆ ಬರೆದು ಬಂದುದರಿಂದ, ಈ ಸರದಾರರ ಬಳಿಗೆ ಕಿಲ್ಲೆದಾರ್ ಸಿರಸ್ತೇದಾರರು ಬಂದು 'ನಿಮ್ಮನ್ನು ಕಳುಹಿಸುವ ಹಾಗೆ ನಮಗೆ ಬರೆದು ಬಂದು ಇದೆ. ನೀವು ಯೋಚನೆ ಮಾಡಬೇಡಿ'-ಎಂಬುದಾಗಿ ನಿಮಗೆ ಡೋಲಿ ಆಳುಗಳು ಸಹಾ ಕಳುಹಿಸುತ್ತೇವೆಂಬುದಾಗಿ ಹೇಳಿದುದರಿಂದ ಆ ಸರದಾರರು ಸಂತೋಷ ಪಟ್ಟುಕೊಂಡು ಇದ್ದರು. ಆ ದಿವಸ ರಾತ್ರಿಯಲ್ಲಿ ಇವರನ್ನು ಕೊಲ್ಲತಕ್ಕ ಬಗ್ಗೆ ಬಾರೂದ್‌ಖಾನೆ ಬಳಿಯ ಒಂದು ಮನೆಯನ್ನು ಮಾಡಿ ಆ ಬಳಿಯ ಕಳ್ಳ ಜನ ಹಬ್ಬಸೇರು (ಹಬಸಿಯರು) ಸಹಾ ಇಟ್ಟು, ರಾತ್ರಿ ಜನ ಸಂಚಾರ ನಿಂತಮೇಲೆ ಈ ಸರದಾರರ ಬಳಿಗೆ ಡೋಲಿ ಆಳು ಸಹಾ ಕಳುಹಿಸಿಕೊಟ್ಟು, ರಾತ್ರಿ ವೇಳೆ ಸಾವಕಾಶವಾಗಿ ಹೋಗುವ ಹಾಗೆ ಹೇಳಿ, ಡೋಲಿಯಲ್ಲಿ ಇಬ್ಬರು ಸರದಾರರನ್ನು ಸಹಾ ತೆಗೆದುಕೊಂಢು ಕಿಲ್ಲೆ ಹೊರಗಾಗಿ ಬಾಳೆಕೊಪ್ಪ ಮಾರ್ಗವಾಗಿ ರಾತ್ರೆ ಜಾವ ಹೊತ್ತು ಪರ್ಯಂತರ ಗಲ್ಲಿಗ(ಳ)ಲ್ಲಿ ತಿರುಗಿಸಿ, ಎರಡು ಮೂರು ಹರದಾರಿ ನೆಲ ಬಂದ ಹಗೆ ತೋರಿಸಿ, ಆ ತರುವಾಯ ಬಾರೂದಖಾನೆ ಬಳಿ ಮಾಡಿದ ಮನೆಗೆ ಕರೆದುಕೊಂಡು ಹೋಗಿ ಇಳಿಯಿಸಿ, ಆ ಮನೇ ಕೂಡಿ (?) ಈ ಕಳ್ಳ ಜನರು ಹಬಸೇರು ಸಹ ಮನೆಯಲ್ಲಿ ಕೂಡಿದ್ದುರಿಂದ, ಇಬ್ಬರು ಸರದಾರರನ್ನೂ ಕುತ್ತಿಗೆ ಒತ್ತಿ ಕೊಂದುಬಿಟ್ಟರು. ಕಲಾ(ಕಿಲ್ಲಾ?) ನಗರದಲ್ಲಿ ಶಹರು ತಿಂಬಿ ಹೇರಳ ದಿವಸದಿಂದ ಚೆನ್ನಾಗಿತ್ತು. ಈಚೆಗೆ ಶುಭಕೃತು ಸಂವತ್ಸರದಲ್ಲಿ ದೊಡ್ಡ ನವಾಬು ಸತ್ತು ಹೋದಮೇಲೆ ಟಿಪ್ಪುಸಾಹೇಬರು ದೊರೆತನ ಮಾಡಿಕೊಂಡು ಬರುವುದರೊಳಗೆ, ಸೇಖಲ್ಲಿಯಾಜನು ಕಿಲ್ಲೇ(ಯನ್ನು) ಇಂಗ್ರೇಜಿಗಳಿಗೆ ಕೊಟ್ಟು ತಾನು ಹೋಗುವಾಗ, ಆ ವೇಳೆಯಲ್ಲಿದ್ದ ಜನಗಳು ಗಾಬರಿಯಾಗಿ ವಲಸೆ ತೆಗೆದು ಊರಂ ಬಿಟ್ಟು ಹೋದುದರಿಂದ ಅದರ ಮೇಲೆ ತುಕಡಿ ತುಕಡಿ ಎಂಬದಾಗಿ ಮಾಡಿ ಅಸಫರನ್ನು ಇಟ್ಟಿದ್ದರಿಂದ, ಇವರು ನಜರಾನಾವಾ ಮುಗವಳಿ ಮುಂತಾಗಿ ಪ್ರಜೆಗಳ ಸುಖ ಶಕ್ತಿಯಾದವರ ಕೈಯಲ್ಲಿ ಸಹ ತೆಗೆಯಿಸಿಕೊಂಡುದರಿಂದ ನಿಭಾಯಿಸಲಾರದೆ ಹೊರಟು ಹೋದರು. ಊರು ಹಾಳಾಯಿತು.

೧. ಈ ಸೀಮೆಯಲ್ಲಿ ಒಂದು ವರ್ಷ ಜನರಿಗೆ ಬಹಳ ಜಡನಾಗಿ ನಕಲಾಗುವಂತದಕ್ಕೆ ನಿಮಿತ್ತವೇನೆಂದರೆ, ಹನ್ನೆರಡು ವರುಷಕ್ಕೊಂದು ಸಾರಿ ಪ್ರಚಂಡ ವಾಯುತ (?) ಮಾರಿ ಎಂಬದಾಗಿ ಬರುತ್ತಿದ್ದು ಆ ಕಾಲದಲ್ಲಿ ಜನರಿಗೆ ಎರಡು ದಫಾ ವಾಂತಿ ಭ್ರಾಂತಿ ಆಗುವುದು, ಕೈಕಾಲು ತಣ್ಣಗಾಗಿ ಸಾಯುತ್ತಾರೆ. ಇದರ ಶಿವಾಯಿ ಮೈಲಿ ಉಪದ್ರವಗಳು ಆಗಿಯೂ ಬಹಳ ಲಯವಾಗುತ್ತಾ ಇದೆ.

೧. ಧೋಂಡಜಿ(ಯು) ನಗರಕ್ಕೆ ಬಂದ ಮೇಲೆ ಒಳ್ಳೆ(ಯ)ದು ಏನು ಮಾಡಿದ್ದು? ಕೆಟ್ಟದ್ದು ಏನು ಮಾಡಿದ(ನು?) ಎಂಬ ಬಗ್ಗೆ ಒಳ್ಳೇಯದು ಮಾಡಿದ್ದು ದೇವ ಬ್ರಾಹ್ಮಣರಿಗೆ ದಾನಧರ್ಮಗಳಂ ಮಾಡಿದ(ನು), ಶಿಪಾಯಿಗಳಿಗೆ ಸಂಬಳ ಹೆಚ್ಚಿ ಮಾಡಿಕೊಟ್ಟು ಇನಾಮುಗಳು ಕೊಟ್ಟ(ನು). ಕೆಟ್ಟ ಕೆಲಸ ಮಾಡಿದ್ದು ಯಾವುದೆ ಎಂದರೆ ಆ ತಾಲ್ಲೂಕಿನಲ್ಲಿ ಇದ್ದಂತಹ ಅಸಫರು ಅಮಲದಾರ ಸಹ ಪತ್ತೆ ಹತ್ತಿಸಿ ಹಿಡಿದು, ಅವರ ಜಿಂದಗಾನೆಯನ್ನು ಲೂಟಿಸಿಕೊಂಡು, ನಗರಕ್ಕೆ ಬಂದಾಕ್ಷಣ ವಿಚಾರಿಸದೆ ಮಹದೀನ್ ಖಾಜಿಮ್ಮನ ಕಿಲ್ಲೆದಾರರ(ನ್ನು) ಹೊಡೆದು ಹಾಕಿದ(ನು). ಇನ್ನು ಎಂದರೆ . . . . ರಗಳಲ್ಲಿ(?) ಆಸಾಮಿಗಳನ್ನು ನೋಡಿ ದಂಡವನ್ನು ಕಟ್ಟಿದ(ನು). ಈ ಧೊಂಡು ಮಾಡಿದ ಕಲಂಗಳು

೧. ಈ ಸೀಮೆಗೆ ಗಂಧಕ, ಪೆಟ್ಟಿಗೆ ಉಪ್ಪು ಎಲ್ಲಿಂದ ಬರುತ್ತಾ ಇದೆ ಎಂಥರೆ, ಗಂಧಕ ಬರುವಂತಹುದು ಕೊಡಿಯಾಲ, ಕುಂದಾಪುರ, ತಲಚೇರಿ ಮುಂತಾದ ಬಂದರಿಂದ ಬಂದಲ್ಲಿ ಖರೀದಿಗೆ ತೆಗೆದುಕೊಂಡು ಕಾರ್ಖಾನೆಗೆ ಕೊಡುತ್ತಾ ಇತ್ತು. ಪೆಟ್ಲುಪ್ಪು ಬಳ್ಳಾರಿ ಸೀಮೆಯಲ್ಲಿ ಆಗುತ್ತಾ ಇದೆ; ಹುಬ್ಬಹಳ್ಳಿ ಮುಂತಾದ ಸೀಮೆಯಿಂದ ಬಂದಲ್ಲಿ ಕ್ರಯಕ್ಕೆ ತೆಗೆದುಕೊಂಡು ಕಾರ್ಖಾನೆಗೆ ಕೊಡುತ್ತಾ ಇತ್ತು.

೧. ನಗರ ಬಾರುದ್‌ಖಾನೆಯಲ್ಲಿ ಚಕ್ರ ಯಾರು ಮಾಡಿದರು ಎಂದರೆ, ಮುಂಬೈಯಿಂದ ಇಲ್ಲಿಗೆ ಮಹಮ್ಮದ್ ಹಂಜಾನು ಎಂಬ ಕರೇ ಮನುಷ್ಯ(ನು) ದರೋಗಿ ಮಾಡಿಕೊಂಡು ಸರ್ಕಾರದಲ್ಲಿ ಸಂಬಳಕ್ಕಿದ್ದನು. ಈತನು ಮುಂಬೈಯಿಂದ ತಮ್ಮ ನೆಂಟರನ್ನು ಕರೆಯಿಸಿ ಬಿಟ್ಟು, ಚಕ್ರವನ್ನು ಮಾಡಿಸಿ ಕಾರೆ(ಕಾರು?)ಖಾನೆಯಲ್ಲಿಟ್ಟು ಇದ್ದ ಈ ಹಂಗಾಮದಲ್ಲಿ ಊರ ಬಿಟ್ಟು ಹೋದನು. ಈಗ ಎಲ್ಲಿದ್ದಾನೋ ಅವನು ಗೊತ್ತಿಲ್ಲ ಎಂಬ ಕಲಂ –

೧. ನಗರದಲ್ಲಿ ತೋಫ್‌ಖಾನೆ ಬಂದೂಕ್ ಸಹಾ ಯಾರ ದಿವಸದಲ್ಲಿಯಾಯಿತೋ? ಅದನ್ನು ಮಾಡಿದ ಜನಗಳೆಲ್ಲಿದ್ದಾರೋ? ಈ ಬಗ್ಗೆ ಪ್ರಾಕ್ ಪಾರ್ಥಿವ ಸಂವತ್ಸರದ ವರೆಗೆ ಬೆಂಗಳೂರು ಸೀಮೆಯಿಂದ ಕೊಂಗರು ಬಂದು ಪಂಚಋಷಿ ತೋಪು ಎರೆಯುತ್ತಾ ಇದ್ದರು. ಆ ತೋಪುಗಳು ದುರಸ್ತಾಗದೆ ಜಯಗಳಾದುದರಿಂದ ಪ್ರಧಾನ ವೆಂಕಪ್ಪಯ್ಯನವರು ಸದರಹು . . . . ಮಹಮ್ಮದ್ ಹಂಚನ ಮುಖಾಂತರ ಬೊಂಬೈಯಿಂದ ಕರೆಸಿದ(ನು).

ರಾಯುಲಶೆಟ್ಟಿಯೆಂಬುವನು ಗೊತ್ತುಗಾರ. ಇವನಿಗೆ ಮುನ್ನೂರು ವರಹ ಅಡ್ವಾನ್ಸು ಕೊಟ್ಟು, ಇವರ ಸಂಗಡ ಬರತಕ್ಕ ಜನಗಳಿಗೆ . . . . ಅಡ್ವಾನ್ಸ್ ಕೊಟ್ಟು, ಈ ಮೇರೆ ಹದಿಮೂರು ಜನ ಬಂದುದರಿಂದ ಇವರಿಗೆ ಬೇಕಾದ ಸರಂಜಾಮು ಮಾಡಿಕೊಟ್ಟು, ಇವರು ತಯಾರು ಮಾಡಿದ್ದು ತೋಪುಗಳು, ಗರ್ನಲ ಗುಂಡುಗಳು, ಮಕರಡಿಬ್ಬಿ, ಬೀಡಿನ ಗುಂಡುಗಳು, ತಲಮಂಡಲ, ಕಡಾಯಿ– ಮುಂತಾಗಿ ನಗಗಳು ಮಾಡುತ್ತಾ ಇದ್ದರೆಂಬ ಕಲಂ–

೧. ಕಾರ್ಖಾನೆ ನಿಂತ ಬಳಿಕ ಹೊಸದಾಗಿ ಟಿಪ್ಪುಸುಲತಾನ್ ದಿವಸದಲ್ಲಿ ಅವರು ವಿಶ್ವಾವಸು ಸಂವತ್ಸರದಲ್ಲಿ ಬನಾರಿ ಕಾರ್ಖಾನೆ ಮಾಡಿದ್ದು ಸೈದ್‌ದಾಊದ್ ಎಂಬುವನು ನಗರದಲ್ಲಿಂದ ಹಜೂರಿಗೆ ಹೋಗಿ ಕಾರೆಗಾರು ಕರೆದುಕೊಂಡು ಬಂದದ್ದು, ಅರ್ಕಾಟ್ ಸೀಮೆ ಬಡಾಯಿ ಅಕ್ಕನ್ನ ೧, ಪಂಚಾಳ ಸೊನ್ತಾಚಾರಿ ೧, ಈ ಎರಡು ಜನವನ್ನು ಕರೆತಂದಿಟ್ಟು, ಇವರ ತಾಬಿಕೆಯಲ್ಲಿ ಲೋಹದ ಬಡಾಯಿ ಜನಗಳ(ನ್ನು) ಸಹಾ ಕೊಟ್ಟು, ತಯಾರು ಮಾಡಿದಂತಹ . . . . ನಗು ಬಂದೂಕು, ತಲವಾರು, ತೊಸ್ತಾನು, ಕೋಪಿನ ಜೀನು, ಬೈ(ಕೈ)ಗಾಡಿ, ರಣಗಾಡಿ, ಮುಂತಾಗಿ ಆಗುತ್ತಾ ಇದ್ದಿತೆಂಬ ಕಲಂ.–

೧. ರಾಣುಗು(ವೆ?) ನಿಂಬಯ್ಯನು ಯಾವ ಬಗ್ಗೆ ಆಪ್ತನಾಗಿದ್ದನೆಂದರೆ, ಮೊದಲು ನಿಂಬಯ್ಯನೆಂಬುವನು ರೋಹಿಲಿ ಲಿಂಗಣ್ಣನ ತಮ್ಮ, ಅವನು ಬಹು ಚಂದವುಳ್ಳವನು. ಅರಸು ಬಸಪ್ಪನಾಯಕರು ಗೌಡಿಗಳ ಹೆಣ್ಣು ಹುಡುಗಿಯರನ್ನು ಸಾಕಿದ್ದರು. ಆ ಹೆಣ್ಣು ಹುಡುಗಿಯರನ್ನು ಈತನಿಗೆ ಮದುವೆ ಮಾಡಿಕೊಟ್ಟು ಮಕ್ಕಳ ಹಾಗೆ ಕಾಪಾಡಿಕೊಂಡು ಬರುತ್ತ ಇದ್ದರು. ಈತನಿಗೆ

ಚಿಕ್ಕರಮನೆ ಮೂರುಸಾವಿರ ಮಂದಿಗೆ ಸರದಾರಿಕೆ ಮಾಡಿಕೊಟ್ಟು ಅತಿ ಪ್ರೀತಿಯಿಂದಿಟ್ಟುಕೊಂಡು ಇದ್ದ(ರು). ಅರಸು ಸತ್ತು ಹೋದ ಮೇಲೆ ಈತನ ಹೆಂಡತಿ ರಾಣಿಯು ಸಣ್ಣ ಹುಡುಗನನ್ನು ಸಾಕಿಕೊಂಡಿದ್ದರಿಂದ, ಮಗನಿಗೆ ಸಮಾನವಾದುದರಿಂದ, ಅಂತರಂಗ ಆಲೋಚನೆ ಕೆಲಸಗಳು ಸಹ ಇವನ ಸಂಗಡ ತೆಗೆದುಕೊಳ್ಳುತ್ತಿದ್ದಳು. ಇವನು ಬುದ್ಧಿವಂತ, ಇವನಿಗೆ ಆಗದವರು ಬಹಳ ಜನವಾದುದರಿಂದ ಅಪವಾದ ಮಾತು, ಅದರ ಹೊರತು ಮತ್ತೇನೂ ಇಲ್ಲ ಎಂಬ (ಕಲಂ?) . . . .**ನಗರದ ದೊರೆತನ ಆಳಿದ(ವ)ರು**

೧. ಕೆಳದಿಹಳ್ಳಿ ಬೈಲಗ್ರಾಮದಲ್ಲಿದ್ದ ಬಸಪ್ಪನ ಮಗ ಚೌಡ, ಭದ್ರಪ್ಪನೆಂಬ ಇಬ್ಬರು ಮಕ್ಕಳು. ಇರುವಲ್ಲಿ ಈಶ್ವರನನುಜ್ಞೆಯಾಗಿ ನಿಕ್ಷೇಪ, ನಾಗರಮುರಿಯೆಂಬ ಕತ್ತಿ ಸಹಾ ಸಿಕ್ಕಿದುದರಿಂದ, ಈತನು ಹೀಗೆ ಇರಲಾಗಿ, ರಾಯರ ಸಂಸ್ಥಾನಕ್ಕೆ ಅರಿಕೆಯಾಗಿ, ಆಗ್ಗೆ ಇವರನ್ನು ಕರೆಯಿಸಿ ಅಲ್ಲಿ ಇವರಿಗೆ ಬಹುಮಾನವಂ ಮಾಡಿ, ಈ ರಾಜ್ಯಕ್ಕೆ ದೊರೆಯನ್ನಾ(ಗಿ)ಸಿಕೊಂಡು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ವರ್ಷ ೧೪೨೨ನೇ ವರ್ತಮಾನಕ್ಕೆ ಸಲ್ಲುವ ಸಿದ್ಧಾರ್ಥಿ ಸಂವತ್ಸರ ಮಾಘ ಶುದ್ಧ ೩ರಲ್ಲಿ ಚೌಡಪ್ಪನಿಗೆ ಪಟ್ಟಾಭಿಷೇಕವಾಗಿ, ಇಕ್ಕೇರಿ ಮೊದಲಾದ ಎಂಟು ಮಾಗಣಿಯನ್ನು ಆಳಿಕೊಂಡು, ಇಕ್ಕೇರಿಯಲ್ಲಿ ಕೋಟೆ ಅರಮನೆ ಸಹ ಕಟ್ಟಿಕೊಂಡು, ಈ ಮಾಘ ಶುದ್ಧ ೩ ಆರಭ್ಯ ಶ್ರೀಮುಖ ಸಂವತ್ಸರ ಶ್ರಾವಣ ಶುದ್ಧ॥ ೨ರ ವರೆಗೆ ವರ್ಷ ೧೩, ತಿಂಗಳು ೭ ಪರಿಯಂತರ ರಾಜ್ಯವನ್ನಾಳಿದನು.

೨ನೆಯ ದೊರೆ: ಈ ತರುವಾಯ ಚೌಡಪ್ಪನಾಯಕರ ಮಗ ಸದಾಶಿವನಾಯಕರಿಗೆ ಇಕ್ಕೇರಿಯರಮನೆಯಲ್ಲಿ ಪಟ್ಟವಾದದ್ದು. ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ೩ ಆರಭ್ಯ ವಿಶ್ವಾವಸು ಸಂವತ್ಸರ ವೈಶಾಖ ಶು॥ ೪ರ ವರೆಗೆ ವರ್ಷ ೩೧, ತಿಂಗಳು ೯ ಪರಿಯಂತರಕ್ಕು ದೊರೆತನ ಮಾಡಿ, ಸ್ವಾಮಿ ಕಾರ್ಯದ ಮೇಲೆ ಜಗುಪಾಳ್ಯ ಎಂಬ ಸ್ಥಳದಲ್ಲಿ ಈಶ್ವರಾಧೀನವಾದನು.

೩ನೆಯ ದೊರೆ: ಈ ಸದಾಶಿವರಾಯನಾಯಕನ ಮಗ ದೊಡ್ಡ ಸಂಕಣ್ಣನಾಯಕನಿಗೆ ಪಟ್ಟವಾಗಿದ್ದು, ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ೫ ಆರಭ್ಯ ಕಾಳಯುಕ್ತಿ ಸಂವತ್ಸರದ ಆಶ್ವಯುಜ ಶುದ್ಧ ೪ರ ವರೆಗೆ ವರುಷ ೧೩, ತಿಂಗಳು ೫ ಪರಿಯಂತರ ತಮ್ಮ ತಂದೆ ಆಳಿದ ರಾಜ್ಯ ಯಾವತನ್ನೂ ಪರಿಪಾಲನೆ ಮಾಡಿಕೊಂಡು ಸುಖದಿಂದಿದ್ದನು.

೪ನೆಯ ದೊರೆತನ: ಸ[+ಂಕ]ಣ್ಣನಾಯಕರ ತಮ್ಮ ಚಿಕ್ಕಸಂಕಣ್ಣನಾಯಕರಿಗೆ ಪಟ್ಟವಾದುದು ಕಾಳಯುಕ್ತಿ ಸಂವತ್ಸರದ ಆಶ್ವಯುಜ ಶು॥೫ ಆರಭ್ಯ ಪ್ರಮಾದಿ ಸಂವತ್ಸರದ ಕಾರ್ತಿಕ ಶು॥ ೪ರ ವರೆಗೆ ವರುಷ ೧೨, ತಿಂಗಳು ೧ ಪರಿಯಂತರ ತಮ್ಮ ಅಣ್ಣನಾಳಿದ ರಾಜ್ಯದ ದೊರೆತನವನ್ನು ಸುಖದಿಂದ ಮಾಡಿದನು.

೫. ಚಿಕ್ಕ ಸಂಕಣ್ಣನಾಯಕರ ಅಣ್ಣ ದೊಡ್ಡ ಸಂಕಣ್ಣನಾಯಕರ ಮಗ ರಾಮರಾಜನಾಯಕ ಎಂಬುವನಿಗೆ ಪಟ್ಟವಾಗಿದ್ದು ಪ್ರಮಾದಿ ಸಂವತ್ಸರದ ವರೆಗೆ ವರ್ಷ ೧೨, ತಿಂಗಳು ೧ ಪರಿಯಂತರ ತಮ್ಮ ಚಿಕ್ಕಯ್ಯನಾಳಿದಂತಹ ಸೀಮೆಯು ದೊರೆತನವನ್ನು (ಪ್ರಜಾ ಪರಿಪಾಲನೆ) ಮಾಡಿಕೊಂಡು ಇದ್ದು ಗೇರುಸೊಪ್ಪೆ ಎಂಬ ಬಳಿಯಲ್ಲಿ ದೈವಾಧೀನರಾದರು.

೬. ಈ ರಾಮರಾಜನಾಯಕನ ತಮ್ಮನಾದ ಹಿರೇವೆಂಕಟಪ್ಪನಾಯಕರಿಗೆ ಪಟ್ಟವಾದುದು, ಚಿತ್ರಭಾನು ಸಂವತ್ಸರದ ಮಾರ್ಗಶಿರ ಶು॥ ೫ ಆರಭ್ಯ ಶುಕ್ಲ ಸಂವತ್ಸರದ ಕಾರ್ತಿಕ ಬಹುಳ ೩ರ ವರೆಗೆ ವರ್ಷ ೪೬, ತಿಂಗಳು ೧೧, ದಿನ ೨೫ ಪರಿಯಂತ್ರಕ್ಕೂ ರಾಜ್ಯವನ್ನಾಳಿಕೊಂಡು ದೈವಾಧೀನವಾಗಿ–

೭. ಈ ವೆಂಕಟಪ್ಪನಾಯಕನ ಮುಮ್ಮಗ (ಭದ್ರಪ್ಪನಾಯಕರ ಮಗ) ವೀರಭದ್ರಪ್ಪನಾಯಕನಿಗೆ ಯಡೇರಿಯ ಅರಮನೆಯಲ್ಲಿ ಪಟ್ಟವಾದದ್ದು ಶುಕ್ಲ ಸಂವತ್ಸರದ ಮಾರ್ಗಶಿರ ಶುದ್ಧ ೧, ಆರಭ್ಯ ಪಾರ್ಥಿವ ಸಂವತ್ಸರ ಮಾರ್ಗಶಿರ ಶು॥ ೧೧ ಪರಿಯಂತರ ವರ್ಷ ೧೬, ತಿಂಗಳು ೧೧ರ ವರೆಗೆ ರಾಜ್ಯ ಪರಿಪಾಲನೆ ಮಾಡಿ ತನ್ನೂರಿನಲ್ಲಿ ನಿಂತನು.

೮. ಚಿಕ್ಕಸಂಕಣ್ಣನಾಯಕರ ಜ್ಯೇಷ್ಠ ಕುಮಾರನಾದ ಶಿವಪ್ಪನಾಯಕನಿಗೆ ಬಿದನೂರು ಅರಮನೆಯಲ್ಲಿ ಪಟ್ಟವಾದದ್ದು, ಪಾರ್ಥಿ ಸಂವತ್ಸರದ ಮಾರ್ಗಶಿರ ಶು॥೧೨ ಆರಭ್ಯ ಶಾರ್ವರಿ ಸಂವತ್ಸರದ ಆಶ್ವಯುಜ ಶು॥ ೧ ವರೆಗೆ ವರ್ಷ ೧೪ಕ್ಕೆ ತಿಂಗಳು ೯, ದಿನ ೨೦ ಪರಿಯಂತರ ರಾಜ್ಯವಾಳಿ ದೈವಾಧೀನನಾದನು.

೯. ಶಿವಪ್ಪನಾಯಕನ ತಮ್ಮ ಚಿಕ್ಕವೆಂಕಟಪ್ಪನಾಯಕರಿಗೆ ಬಿದನೂರು ಅರಮನೆಯಲ್ಲಿ ಪಟ್ಟವಾದದ್ದು, ಶಾರ್ವರಿ ಸಂವತ್ಸರದ ಆಶ್ವಯುಜ ಶು॥ ೨ ಆರಭ್ಯ ಪ್ಲವ ಸಂವತ್ಸರ ಭಾದ್ರಪದ ಶುದ್ಧ ೪ರ ವರೆಗೆ ತಿಂಗಳು ೧೧, ದಿನ ೧೪ ವರೆಗೆ ರಾಜ್ಯವಾಳಿ ಶಿವಾಧೀನನಾದನು.

೧೦. ಈ ಚಿಕ್ಕವೆಂಕಟಪ್ಪನಾಯಕರ ತರುವಾಯ ಶಿವಪ್ಪನಾಯಕರ ಹಿರಿಯ ಮಗನಾದ ಭದ್ರಪ್ಪನಾಯಕರಿಗೆ ಬಿದನೂರು ಅರಮನೆಯಲ್ಲಿ ಪಟ್ಟವಾದದ್ದು, ಪ್ಲವ ಸಂವತ್ಸರದ ಭಾದ್ರಪದ ಶು॥ ೫ ಆರಭ್ಯ ಶೋಭಕೃತ್ ಸಂವತ್ಸರದ ಭಾದ್ರಪದ ಶುದ್ಧ ೧೦ರ ವರೆಗೆ ವರ್ಷ ೨ಕ್ಕೆ, ತಿಂಗಳು ೫, ದಿನ ೨೫ರ ವರೆಗೆ ರಾಜ್ಯವಾಳಿದನು.

೧೧. ಭದ್ರನಾಯಕರ ಸೋದರನಾದ ಸೋಮಶೇಖರನಾಯಕರಿಗೆ ಬಿದನೂರು ಅರಮನೆಯಲ್ಲಿ ಪಟ್ಟವಾಗಿ, ಶುಭಕೃತ್ತ ಸಂವತ್ಸರದ ಫಾಲ್ಗುಣ ಶು॥ ೧೧ ಆರಭ್ಯ ಈಶ್ವರ ಸಂವತ್ಸರದ ಶ್ರಾವಣ ಶು॥ ೪ರ ವರೆಗೆ, ಈ ಸೋಮಶೇಖರನಾಯಕರು ರಾಜ್ಯ ಪರಿಪಾಲನೆ ಮಾಡುತ್ತಿರುವಲ್ಲಿ, ಕೆಲವು ದಿವಸದಲ್ಲಿ ಈ ಅರಸುಗಳಿಗೆ ಭ್ರಮೆ ಹುಟ್ಟಿದುದರಿಂದ, ಈ ಸಂಸ್ಥಾನದಲ್ಲಿ ಇದ್ದಂತಹ ತುಂಟ ಜನಗಳು ಒಂದಾಗಿ ಆ ದಾಸಪ್ಪ (ಅಭಾಸ ಬಸಪ್ಪ?) ನಾಯಕ ಎಂಬುವರಿಗೆ ದೊರೆತನವನ್ನು ಕೊಟ್ಟುದರಿಂದ, ಈತನು ಎಂಟು ವರ್ಷ ಪರಿಯಂತರ ರಾಜ್ಯವನ್ನಾಳುತ್ತಾ ಇದ್ದಲ್ಲಿ, ಸೋಮಶೇಖರನಾಯಕರ ಪತ್ನಿ ಚೆನ್ನಮ್ಮಾಜಿಯವರು ಈ ಸಂಸ್ಥಾನದ(ಕ್ಕೆ) ಹೊಂದಿದ ಸಾಮಾಜಿಕ ಜನರು ಸಹಿತವಾಗಿ ಶತೃಗಳಾದಂತಹ ಅಭಾಸ ಬಸಪ್ಪನಾಯಕ ಮುಂತಾದ ತುಂಟ ಜನಗಳನ್ನು ನಿರ್ನಯವನ್ನು ಮಾಡಿ ಈ ಸೋಮಶೇಖರನೆಂಬರಸಿಗೆ ಸಾಕುಮಗ ಬಸಪ್ಪನಾಯಕ ಎಂಬವನ ಮಾಡಿಕೊಂಡು ಈ ಚೆನ್ನಮ್ಮಾಜಿಯವರು ಆಳಿದ್ದು ಸಹಾ ವರ್ಷ ೩೩, ತಿಂಗಳು ೫, ದಿನ ಮೂರಕ್ಕೆ ಈ ದೊರೆಗಳು ಆಳಿದರು.

೧೨. ಈ ಹಿರೇಸೋಮಶೇಖರನಾಯಕರ ಪತ್ನಿಯಾದ ಚೆನ್ನಮ್ಮಾಜಿಯವರ ಮಗನಾದ ಬಸಪ್ಪನಾಯಕರಿಗೆ ಪಟ್ಟವಾದದ್ದು, ಬಿದರೂರು ಅರಮನೆಯಲ್ಲಿ, ಈ ಸಂವತ್ಸರದ ಶ್ರಾವಣ ಶುದ್ಧ ೪ . . . . ಆರಭ್ಯ ಜಯ ಸಂವತ್ಸರದ ಪುಷ್ಯ ಬಹುಳ ೧೦ ವರೆಗೆ ವರ್ಷ ೧೭, ತಿಂಗಳು ೫, ದಿನ ೧೧ ಪರಿಯಂತರ ರಾಜ್ಯವನ್ನು ಪರಿಪಾಲನೆ ಮಾಡಿಕೊಂಡು ಆ ತರುವಾಯ ದೈವಾಧೀನನಾದನು.

೧೩. ಈ ಬಸಪ್ಪನಾಯಕರ ಜ್ಯೇಷ್ಠ ಪುತ್ರರಾದ ಸೋಮಶೇಖರನಾಯಕರಿಗೆ ಬಿದನೂರರಮನೆಯಲ್ಲಿ ಗಗನ ಮಹಲಲ್ಲಿ ಚಾವಡಿಯಲ್ಲಿ ಪಟ್ಟಾಭಿಷೇಕವಾದದ್ದು, ಜಯ ಸಂವತ್ಸರದ ಪುಷ್ಯ ಬಹುಳ ೧೦ ಆರಭ್ಯ ಸಿದ್ಧಾರ್ಥಿ ಸಂವತ್ಸರದ ಜ್ಯೇ॥ಬ॥ ೪ರ ವರೆಗೆ ವರ್ಷ ೨೪, ತಿಂಗಳು ೪, ದಿನ ೨೩ ಪರಿಯಂತರ ರಾಜ್ಯಪರಿಪಾಲನೆ ಮಾಡಿದರು.

೧೪. ಈ ಸೋಮಶೇಖರನಾಯಕರ ತಮ್ಮ ವೀರಭದ್ರನಾಯಕರ ಮಗ ಬಸಪ್ಪನಾಯಕರು ರಾಜ್ಯವಾಳಿದ್ದು ಸಿದ್ಧಾರ್ಥಿ ಸಂವತ್ಸರದ ಜ್ಯೇಷ್ಠ ಬಹುಳ ೫ ಆರಭ್ಯ ಭಾವ ಸಂವತ್ಸರದ ಕಾರ್ತೀಕ ಶು॥ ೫ರ ವರೆಗೆ, ವರ್ಷ ೧೫, ತಿಂಗಳು ೪, ದಿನ ೨೪ರ ವರೆಗೆ ರಾಜ್ಯವನ್ನಾಳಿದನು.

೧೫. ಈ ಬಸಪ್ಪನಾಯಕರ ಸಾಕುಮಗನಾದ ನಿರ್ವಾಣಯ್ಯನ ಮುಮ್ಮಗನಾದ ಚೆನ್ನಬಸಪ್ಪನಾಯಕನು ರಾಜ್ಯಭಾರ ಮಾಡಿಕೊಂಡಿದ್ದದ್ದು, ಭಾವ ಸಂವತ್ಸರದ ಕಾರ್ತೀಕ ಶು॥ ೫ ಆರಭ್ಯ ಈಶ್ವರ ಸಂವತ್ಸರದ ಶ್ರಾವಣ ಶುದ್ಧ॥ ೨ರ ವರೆಗೆ ವರ್ಷ ೨, ತಿಂಗಳು ೮, ದಿನ ೨೭ಕ್ಕೆ ರಾಜ್ಯವನ್ನು ಆಳಿ ದೈವಾಧೀನನಾದನು.

೧೬. ಬಸಪ್ಪನಾಯಕರ ಪತ್ನಿಯಾದ ವೀರಮ್ಮಾಜಿಯು ತಮ್ಮ ಸೋದರಮಾವನಾದ ಬೆಂಕಿಪುರದ ಪಟ್ಟಣಸೆಟ್ಟಿ ಚೆನ್ನವೀರಪ್ಪನ ಮಕ್ಕಳು ನಾಯಕ (ನಾಲಕು?) ಮಂದಿಯಲ್ಲಿ ಹಿರೀ (ಕಿರೀ?) ಮಗ ಬುದ್ಧಿಶಾಲಿಯಾದ ಕಾರಣ ಆತನಂ ತೆಗೆದುಕೊಂಡು ಸೋಮಶೇಖರನಾಯಕನೆಂದು ಆ ಹುಡುಗನಿಗೆ ಹೆಸರಿಟ್ಟು ಅವನಿಗೆ ಪಟ್ಟಾಭಿಷೇಕ ಮಾಡಿ ಸಣ್ಣವನಾದುದರಿಂದ ವೀರಮ್ಮಾಜಿಯವರು ರಾಜ್ಯಪರಿಪಾಲನೆ ಮಾಡಿದರು. ಈಶ್ವರ ಸಂವತ್ಸರದ ಶ್ರಾವಣ ಶುದ್ಧ॥ ೩ ಆರಭ್ಯ ಚಿತ್ರಭಾನು ಸಂವತ್ಸರದ ಪುಷ್ಯಮಾಸದ ವರೆಗೆ ವರ್ಷ ೫, ತಿಂಗಳು ೬, ದಿನ ೩ರ ವರೆಗೆ (ಸೋಮಶೇಖರನಾಯಕನು) ರಾಜ್ಯವಾಳಿದನು.

೧೭. ಅಂತು ಹದಿನಾರು, ಈ ಪ್ರಕಾರ ಚಿತ್ರಭಾನು ಸಂವತ್ಸರದ ವರೆಗೆ ನಗರದ ದೊರೆಗಳು ಧರ್ಮದಿಂದ ರಾಜ್ಯಪರಿಪಾಲನೆ ಮಾಡಿಕೊಂಡು ಬಂದರು.

೧. ನವಾಬ್ ಹೈದರಲ್ಲಿ ಸಾಹೇಬರು ಪಟ್ಣ ಸೀಮೆಯನ್ನು ತೆಗೆದುಕೊಂಡ ತರುವಾಯ, ಈ ನಗರ ಸಂಸ್ಥಾನವನ್ನು ಹೆಂಗಸು ಆಳುತ್ತಾಳೆಂಬ ವರ್ತಮಾನವಂ ಕೇಳಿ, ಈ ನಗರವನ್ನು ತೆಗೆದುಕೊಳ್ಳಬೇಕೆಂಬ ದುರಾಸೆಯಿಂದ ಚಿತ್ರದುರ್ಗಕ್ಕೆ ಬಂದು ತಮ್ಮ ಸಹಾಯಕ್ಕೆ ಮೇದಕೆರೆನಾಯಕನು ಸಹಾ ಕರೆದುಕೊಂಡು, ಈ ಸಂಸ್ಥಾನಕ್ಕೆ ಬಾಳತಕ್ಕ ಈ ಅರಸುಗಳ ಮಗನು ತಮ್ಮ ಸಮೂಹಕ್ಕೆ ಬಂದಿದ್ದುದರಿಂದ ಈತನ ಸಹಾಯಕ್ಕೆ ತಾವು ಬಂದವರೆನಿಸಿಕೊಂಡು, ಈ ಅರಸನ್ನು ಮ(ಸ?)ಹಾ ನಮೂದು ಮಾಡಿಕೊಂಡು ರಾಣಿ ಆಳುವಂತಹ ಸೀಮೆಗಳ(ಲ್ಲಿ) ಅರಸಿನ ನಿಶಾನೆಗಳನ್ನು ಏರಿ(ಸಿ) ತಮ್ಮ ಮಂದಿಗಳ ಠಾಣ್ಯದಲ್ಲಿದ್ದ ಗಡಿಗಳಂ ಸ್ವಾಧೀನ ಮಾಡಿಕೊಂಡು, ನಗರದ ಸಮೀಪದಲ್ಲಿರುವ

ಮಾವಿನಹುಳೇ(ಹೊಳೆ)ಗೆ ಬಂದು ಫೌಜು ಸಹಿತ ಇಳಿದುಕೊಂಡು ಇದ್ದ ವರ್ತಮಾನವನ್ನು ನಗರದ ಕೋಟೆಯಲ್ಲಿದ್ದ ರಾಣಿಯು ತಿಳಿದು, ತಮ್ಮ ಕಡೆ ಶಂಕರನಾರಾಯಣಯ್ಯ ಎಂಬುವರನ್ನು ಕೊಟ್ಟು ದಂಡಿಗೆ ಬಹದರ ಬಳಿಗೆ ಕಳುಹಿಸಿ ಕೊಟ್ಟು "ನಮಗೂ ನಿಮಗೂ ಜಗಳವೇತಕ್ಕೆ? ನಿಮಗೆ ಬಿದ್ದ ಖರ್ಚು ನಾವು ಕೊಡುತ್ತೇವೆಂ"ದು ಹೇಳಿ ಕಳುಹಿಸಿದಲ್ಲಿ, ಈ ಮಾತಿಗೆ ಬಾಹದರವರು ಒಡಂಬಡದೆ, ಬಂದಂತಹವನ್ನು ಹಿಂದಕ್ಕೆ ಕಳುಹಿಸಿ, "ತಾವು ಫೌಜು ಸಹಿತ ಬಂದು ಲಡಾಯಿ ಮಾಡಿ" ಎಂಬದಾಗಿ ಹೇಳಿ, ಬಹದರು ಲಡಾಯಕ್ಕೆ ಹೊರಟು ನಗರಕ್ಕೆ ಬಂದುದರಿಂದ, ಇದನ್ನು ಕಂಡು ರಾಣಿಯು ಈ ಕೋಟೆ(ಯ)ಲ್ಲಿ ನಿಲ್ಲುವುದಕ್ಕೆ ಚೈತನ್ಯವಿಲ್ಲವೆಂದು ತನ್ನ ಮಂದಿ ಕುದುರೆ ಸಾಮಾಜಿಕರು ಮುಂತಾದ ಸಾಕು ಮಗನ ಸಹ ತೆಗೆದುಕೊಂಡು ಕವಲೇ ದುರ್ಗಕ್ಕೆ ಹೋಗಿ ಸೇರಿದಳು. ನವಾಬ ಬಹದರ ಅವರು ಮಗರದ ಕೋಟೆಯನ್ನು ತಗೆದುಕೊಂಡು ಠಾಣ್ಯ ಹಾಕಿ, ಶಹರಿನಲ್ಲಿರುವಂತಹ ಜನರಿಗೆ ಕೌಲು ಕರಾರು ಕೊಟ್ಟು . . . . ಹೇಳಿ, ಇಲ್ಲಿಂದ ರಾಣಿಯನ್ನು ಕೈಸೆರೆ ಹಿಡಿಯಬೇಕೆಂದು ಆಲೋಚನೆಯಂ ಮಾಡಿ, ನಗರವಂ ಬಿಟ್ಟು ಹೊರಟಲ್ಲಿ, ಈ ವರ್ತಮಾನವಂ ದುರ್ಗದಲ್ಲಿದ್ದ ರಾಣಿಯು ಕೇಳಿ, ದುರ್ಗದಲ್ಲಿ ನಿಭಾಯಿಸಲಾರೆನೆಂಬದಾಗಿ ತಿಳಿದುಕೊಂಡು, ಅಲ್ಲಿಂದ ಹೊರಟು ಮಂದಿ ಕುದುರೆ ಮುಂತಾದ ಸಾಮಾಜಿಕರು ಮುಖ್ಯವಾಗಿ ಬರುವಂತಹವರಂ ಕರೆದುಕೊಂಡು ಬಲ್ಲಾಳರಾಯನದುರ್ಗಕ್ಕೆ ಬಂದು ಸೇರಿದಳು.

ನವಾಬರು ಕವುಲೆದುರ್ಗವನ್ನು ತೆಗೆದುಕೊಂಡು ಅಲ್ಲಿ ತಮ್ಮ ಠಾಣ್ಯವನ್ನಿಟ್ಟು, ನಗರ ಸೀಮೆಗೆ ಸೇರಿದ ಸೀಮೆಗಳನ್ನು ತಮ್ಮ ಸ್ವಾಧೀನ ಮಾಡಿಕೊಂಡು, ರಾಣಿಯಿಲ್ಲ[>ದ್ದ] ಬಲ್ಲಾಳರಾಯನ ದುರ್ಗಕ್ಕೆ ಫೌಜು ಸಹಾ ಕಳುಹಿಸಿ ಕೊಟ್ಟು ಕೈಸೆರೆ ತರಬೇಕೆಂದು ಯತ್ನ ಮಾಡಿದ್ದಲ್ಲಿ, ಬಲ್ಲಾಳರಾಯದುರ್ಗ ಮಹಾ ಬಲವಂತವಾದುದರಿಂದ ಉಪಾಯದಲ್ಲಿ ಇಳಿಸಬೇಕೆಂದು ಯೋಚಿಸಿ, ತಮ್ಮ ಕಡೆಯಿಂದ ತಾತಿಶಹ ಎಂಬ ಪೀರಜಾದೆಯರು(ರನ್ನು) ಕಳುಹಿಸಿಕೊಟ್ಟು, "ನೀನು ಯಾವುದಕ್ಕು ಯೋಚನೆ ಮಾಡಬೇಡ, ನಿನ್ನ ಮಗನ್ನು ಸಹಾ ನೀನು ಕರೆದುಕೊಂಡು ಬಂದಲ್ಲಿ ನಿನ್ನ ಮಗನಿಗೆ ಪಟ್ಟಾಕಟ್ಟಿ ಸಂಸ್ಥಾನದಲ್ಲಿಟ್ಟು ಹೋಗುತ್ತೇವೆಂ"ಬದಾಗಿ ಪೀರ್‌ಜಾದೇರ ಮುಖಾಂತರವಾಗಿ ಹೇಳಿಕಳುಹಿಸಿದುದರಿಂದ, ಅವರ ಕೌಲಿನ ಮೇಲೆ ಈ ರಾಣಿ ಇಳಿದು, ತನ್ನ ಮಗನಂ ಸಹಾ ಕರೆದುಕೊಂಡು ಬಂದು, ದಂಡಿಗೆ ದಾಖಲಾದಳು. ಆಗ್ಗೆ ಬಲ್ಲಾಳರಾಯನದುರ್ಗಕ್ಕೆ ಸರಕಾರದ ಠಾಣ್ಯ ಹಾಕಿ, ಇನ್ನು ನಗರ ಸೇರಿದ ಸೀಮೆ ಯಾವ ಯಾವದು ಬರತಕ್ಕದ್ದು ಇದೆಯೋ (ಅವನ್ನು) ಈ ರಾಣಿ, ರಾಣಿ ಮಗನ ಸಹಾ ಸಂಗಡಲೇ ಇಟ್ಟುಕೊಂಡು, ಘಟ್ಟದ ಕೆಳಗೆ ಕೊಡೆಯಾಲ ಮುಂತಾದ ಶೀಮೆಗಳು ಯಾವತ್ತು ತಮ್ಮ ವಶಮಾಡಿಕೊಂಡು, ಆ ತರುವಾಯ ಈ ರಾಣಿ, ರಾಣಿ ಮಗನ ಸಹಾ ಬೈಲಿನಿಂದ ಮದ್ದಗಿರಿಗೆ ಕಳುಹಿಸಿ, ಅಲ್ಲಿ ಕಿಲ್ಲೆಯಲ್ಲಿ ಇರುವಹಾಗೆ ಕಳುಹಿಸಿಕೊಟ್ಟು, ತಾವು ನಗ(ರ)ಕ್ಕೆ ಬಂದು, ನಗರ ಸೀಮೆ ಬಂದೋಬಸ್ತು ಮಾಡಿದರು. ಮದ್ದಗಿರಿಯಲ್ಲಿದ್ದ ರಾಣಿಯನ್ನು ಮರಾಟರ ಫೌಜು ಬಂದ ವೇಳೆಯಲ್ಲಿ ಮದ್ದಗಿರಿಯನ್ನು ತೆಗೆದುಕೊಂಡಾಗ್ಗೆ ಆವಾಗ ಅವರ ಸಂಗಡ ಮರಾಟರ ಸೀಮೆಗೆ ರಾಣಿ, ರಾಣಿ ಮಗ ಸಹಾ ಹೋದರು. ಆ ಸೀಮೆಯಲ್ಲಿ ಆ ಹುಡುಗನಿಗ ಸಿಡುಬು ಕಜ್ಜಿಯೆದ್ದು ಸತ್ತುಹೋದ ಮೇಲೆ ಈ ರಾಣಿಯು ಸತ್ತುಹೋದಳು.

೧. ರಾಜ್ಯದಲ್ಲಿ ಅಗ್ರಹಾರಗಳು ಯಾರ ಯಾರ ದಿವಸದಲ್ಲಿ ಬಿಟ್ಟಿದ್ದು ಎಂಬದಾಗಿ ಕೇಳಿದುದಕ್ಕೆ ವಿವರ:

ಈ ರಾಜ್ಯದಲ್ಲಿ ಬಿಟ್ಟಿರುವುದು ಖಿಲ್ ಅಗ್ರಹಾರ ೧೦೬. ಇದಕ್ಕೆ ವಿವರ : ಈಗ ನಡೆಯುವಂತಾದ್ದು ೮೯, ಅಗ್ರಹಾರ ನಡೆಯದೆ ಮೋಖೂಪು ೧೭, ಇದಕ್ಕೆ ವಿವರ :

೯ ನಗರದ ಹೋಬಳಿ	೧ ಇಕ್ಕೇರಿ ಸಾಗರದಲ್ಲಿ
೩ ಸೊರಬುದಲು(ಬದಲ್ಲಿ?)	೫ ಆನವಟ್ಟಿಯಲ್ಲಿ
೧ ಉಡುಗುಣಿ	೧ ಶಿಕಾರಿಪುರದಲ್ಲಿ
೬ ಬಿದರೆ ಹೊನ್ನಾಡಿ	೧೫ ಶಿವಮೊಗ್ಗೆಯಲ್ಲಿ
೩೩ ಮಂಡಗೆರೆ	೩ ದಾನಿವಾಸ
೧೧ ಕೊಪ್ಪ	

೧೦೬ಕ್ಕೆ ವಿವರ :

ಆನೆಗೊಂದಿ ಸಂಸ್ಥಾನದ ದೊರೆಗಳು

೪೪ ರಾಯದತ್ತ ಅಗ್ರಹಾರ:

೨೩ ಅಜುತಾರಾಯ ವೈಶ್ಯರಾಯರು ಬಿಟ್ಟದ್ದು:

೨ ನಗರ ೧೧ ಮಂಡಹರಲಿ

೪ ಶಿವಮೊಗ್ಗೆ ೩ ಹೊನ್ನಾಳಿ

೩ ಕೌಲೆದುರ್ಗ

೨೩

೫ ನೀಲಕಂಠರಾಯರು ಬಿಟ್ಟದ್ದು: ಆನವಟ್ಟಿ ಸೀಮೆಯಲ್ಲಿ

೨ ಬುಕ್ಕರಾಯರು ಬಿಟ್ಟದ್ದು:

೧ ಉನು[>ಡು]ಗುಣಿ ೧ ಕೊಪ್ಪ

೮ ಹರಿಹರರಾಯರು ಬಿಟ್ಟದ್ದು:

೧ ಶಿವಮೊಗ್ಗೆ ೧ ಮೂಡಗೆರೆ ೬ ಕೊಪ್ಪ

೩ ವೀರಬಲ್ಲಾಳರಾಯ ಬಿಟ್ಟದ್ದು: ಶಿವಮೊಗ್ಗೆಯಲ್ಲಿ

೩ ವೀರಣ್ಣವೊಡೆಯರು ಬಿಟ್ಟದ್ದು: ಕೊಪ್ಪದಲ್ಲಿ

೪೪

೫ ಜನಮೇಜಯರಾಯರು ಬಿಟ್ಟದ್ದು:

೧ ಕರನಂದಿ   ೩ ಅನಂತಪುರ   ೧ ಶಿಕಾರಿಪುರ

೧೮ ನಗರ ಸಂಸ್ಥಾನದಲ್ಲಿದ್ದರಸುಗಳು ಬಿಟ್ಟದ್ದು:

೨ ವೀರಭದ್ರನಾಯಕರು ಬಿಟ್ಟದ್ದು:

೧ ನಗರ   ೧ ಮಂಡಗೆರೆ

೯ ವೆಂಕಟಪ್ಪನಾಯಕರು ಬಿಟ್ಟದ್ದು:

೧ ನಗರ ಕಸಭೆ   ೧ ಇಕ್ಕೇರಿಸಾಗರ

೨ ಸೊರಬ   ೨ ಶಿವಮೊಗ್ಗೆ

೧ ಕರ[>ವ]ಲೆದುರ್ಗ   ೧ ಲಕ್ಕುವಳ್ಳಿ

೧ ಮಂಡಗೆರೆ   ೯

೨ ಭದ್ರಪ್ಪನಾಯಕ ಬಿಟ್ಟದ್ದು – ಮಂಡಗೆರೆ, ಪುತ್ತಿ

೧ ಸೋಮಶೇಖರನಾಯಕರು ಬಿಟ್ಟದ್ದು–ರಾಣಿ[>ದಾನಿ]ವಾಸದಲ್ಲಿ

೨ ಚೆನ್ನಮ್ಮಾಜಿ ಬಿಟ್ಟದ್ದು–ಶಿವಮೊಗ್ಗೆಯಲ್ಲಿ

೩ ಶಿವಪ್ಪನಾಯಕ ಬಿಟ್ಟದ್ದು–೨ ಕೌಲೆದುರ್ಗ ೯.೧.

೬ ಸ್ವಾಮಿಗಳು ಬಿಟ್ಟ ಅಗ್ರಹಾರ:

೧ ಶೃಂಗೇರಿ ನರಸಿಂಹಭಾರತಿ ಸ್ವಾಮಿಗಳು – ಶಿವಮೊಗ್ಗೆಯಲ್ಲಿ

೧ ಮಹಿಸಿ ಸಕಾನಾದ ಸ್ವಾಮಿಗಳು – ಮೂಡಗೆರೆಯಲ್ಲಿ

೨ ಸುಮಂತೇಂದ್ರ ಸ್ವಾಮಿಗಳು – ಮಂಡಗೆರೆಯಲ್ಲಿ

೧ ವ್ಯಾಸರಾಯ ಸ್ವಾಮಿಗಳು – ಕೌಲೆದುರ್ಗದಲ್ಲಿ

೧ ರಾಮಚಂದ್ರ ಸ್ವಾಮಿಗಳು – ಕೌಲೆದುರ್ಗದಲ್ಲಿ

೬

೩೩ ನಗರ ಸಂಸ್ಥಾನದಲ್ಲಿದ್ದಂತಹ ಅಧಿಕಾರಸ್ಥರು ಮಾಡಿಕೊಟ್ಟ ಅಗ್ರಹಾರಗಳು:

೪ ನಗರದ ಕಸಬೆಯಲ್ಲಿ ಬಿಟ್ಟಿರುವುದು:

೧ ರಾಯಸ್ತ ಗಂಗರಸಯ್ಯ   ೧ ಜೋಸ್ಯ ಶ್ರೀನಿವಾಸಯ್ಯ

೧ ನಿಗಳ ಲಕ್ಷ್ಮಯ್ಯ   ೧ ನಾಗಪ್ಪ

೪

೩ ಶಿವಮೊಗ್ಗೆಯಲ್ಲಿ ಬಿಟ್ಟಿರುವುದು:

೧ ಗಾಜಿನೂರು ತಿಮ್ಮಣ್ಣ　　೧ ಚಿನಿಬಂಡಾರ ಸಾಂಬಯ್ಯ

೧ ಹನ್ನೀಶುನಾಯಕ ಮಾಡಿದ್ದು　　೩

೬ ಕೌಲೆದುರ್ಗದಲ್ಲಿ:

೧ ನವಲೂರ ವೆಂಕಪ್ಪ　　೧ ಮಲ್ಲಯ್ಯ

೧ ತಿಮ್ಮರಸಯ್ಯ

೧ ಪರಮೇಶ್ವರಯ್ಯ೧ ಚೀನಿಬಂಡಾರ ಸಾಂಬಯ್ಯ　　೧ ರಾಯಸ್ತವರು ಮಾಡಿದ್ದು

೧೬ ಮಂಡಗೆರೆಯಲ್ಲಿ ಬಿಟ್ಟದ್ದು:

೧ ನಾರಾಯಣ ನಾಯಕ ೧ ಭೀಮಣ್ಣ ನಾಯಕ　　೨ ಕೊಲಾ ರಾಮಪ್ಪಯ್ಯ

೧ ಬೊಮ್ಮರಸಯ್ಯ೧ ರಾಮಾಜಿ ಪಂಥ　　೧ ಪಟ್ಟಿರಂಗಯ್ಯ

೧ ಆವಿನಹಳ್ಳಿ ಪುಟ್ಟಯ್ಯ　　೧ ಸುಬ್ಬರಾಯ

೧ ಪಣಿಯಪ್ಪೈಯ್ಯ

೧ ಜ್ಯೋತಿಷ್ಯದ ಸಂತಯ್ಯ　　೧ ಚನ್ನಪ್ಪಯ್ಯ

೧ ತುಂಕೂಪಂತ

೧ ಗೋಪಾಲಯ್ಯ　　೧ ಕಲ್ಯಾಣಿ ವೆಂಕಪ್ಪ

೧ ಸವಾಯಿ ಕೊನಯ್ಯ

೧೬

೧ ಕೊಪ್ಪ ತಾಲ್ಲೂಕದಲ್ಲಿ ಮಾಡಿದ್ದು – ಶಂಕರನಾರಾಯಣಯ್ಯ ಮಾಡಿದ್ದು.

೩ ಹೊನ್ನಾಳಿಯಲ್ಲಿ ಮಾಡಿದ್ದು: ೨ ಮೊರೆಪಂತ　　೧ ತಿಪ್ಪರಾಯ

೩೩

೧೦೬ ಅಂತು ಅಗ್ರಹಾರ.

ಈ ಪ್ರಕಾರ ಕಲಂಗಳನ್ನು ತಯಾರು ಮಾಡಿ ಬರೆಯಿಸಿದವರು, ನಗರದ ಸೀಮೆ ಕೊಪ್ಪದ ಹೋಬಳಿಯಲ್ಲಿರುವ ಮೇಲುಬಂಗಾಡಿ ತಾಲ್ಲೂಕ್ ಶಿರಸ್ತೇದಾರ್ ಕೃಷ್ಣರಾಯರು ಬರೆಯಿಸಿದರು.

ರುಧಿರೋದ್ಗಾರಿ ಸಂವತ್ಸರದ ಫಾಲ್ಗುಣ ಶು॥ ೩ ಮಂಗಳವಾರ ಬರೆಯಿಸಿದ್ದಾರೆ.

❖❖

೩೭

ಸಾಗರದ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೦

ಸಾಗರದ ಕೈಫಿಯತ್ತು, ಪಟ್ನಶೆಟ್ಟಿ ನಂಬೆಣ್ಣ ಹೇಳಿದ ಮೇರಿಗೆ, ಕ್ಷಯ ಸಂವತ್ಸರ ಯಿ. ಶು. ೧೫ಲ್ಲು ಬರದು. ಪೂರ್ವದಲ್ಲಿ ಯಿಕ್ಕೇರಿ ಸಾಗರವೆಂಬದು ಬಹಳ ಅರಣ್ಯವಾಗಿಯಿತ್ತು. ಯೀ ಪ್ರಾಂತದ ಶೀಮೆಗಳು ಯಾವತ್ತು ಚಂದ್ರುಗುಪ್ತ[>ತ್ತಿ] ರಾಜಧಾನಿ ಕಂಪ[+ಣ]ದ ವಳಗೆ, ಬನವಶಿ ಪನ್ನಿಚ್ಛಾಸರದ ವಳಗೆ, ಕದಂಬವಂಶದ ಪ್ರಭುತ್ವದ ಕೆಳಗೆ ಯಿತ್ತು. ಆ ಸವಸ್ತಾನದ ಖಿಲ್ಲವಾದ ಮೇಲೆ ಯೀ ಶೀಮೆ ಬಲ್ಲಾಳರಾಯರ ಪ್ರಭುತ್ವವಾಯಿತು. ಆವಾಗ್ಯೆ ಯೀ ಶೀಮೆಯನ್ನು ಕುಂದನಾಡು ೧, ಕಡನಾಡು ೧ – ಯೀ ಮೇರಿಗೆ ಯರಡುವಾಗಿ ವಿಂಗಡಿಸಿ, ಬಲ್ಲಾಳರಾಯರ ಕೆಳಗೆ ಚಲ್ಲರ ಪಾಳೆಗಾರು ಬೊಮ್ಮರಸಯ್ಯನ ವಂಶಿಕರು ಆಳಿದರು. ವೀರಬಲ್ಲಾಳನ ಕಾಲದಲ್ಲಿ ಶಾಲಿವಾಹನ ಶಕ ೧೧೪೦ ಬಹುಧಾನ್ಯ ಸಂವತ್ಸರದಲ್ಲು ಬೊಮ್ಮರಸಯ್ಯನ ಮಗ ಬಾಳೆನವಂಗಡಿಯರನು ಕೆಳದಿ ಸೋಮೇಶ್ವರ ದೇವಸ್ಥಾನವನ್ನು ಕಟ್ಟಿಸಿದನು. ಯೀ ಅರಸಿಗೆ ಕಸಬೆ ಸ್ಥಳಾ, ಆ ಸ್ಥಳವು ಅವರಿಗೆ ನಿವಾಸದ ಸ್ಥಳವಾದ ಕಾರಣ ಕೆಲವು ದಿವಸಾ ಕೆಳದಿ ಸಂವಸ್ತಾನಯೆನಿಸಿಕೊಂಡಿತ್ತು. ಯಿದು ಹೊರತ್ತು ಬಲ್ಲಾಳರಾಯರ ಕಾಲದಲ್ಲಿ ಕೆಲವು ಶಿಲ್ಲಾಶಾಸನಗಳೂ ದೇವಸ್ಥಾನದಲ್ಲಿ ಹಾಕಿ ಯಿತ್ತು. ಆ ಶಾಸನಗಳು ಹಳೆಕನ್ನಡದ ಲಿಪಿಯಲ್ಲಿ ಯಿತ್ತು. ಅದರ ನಕಲು ತೆಗೆದುಕೊಂಡು ಯಿದ್ದೇವೆ.

ಪೂರ್ವದಲ್ಲಿ ಕೆಳದಿಯಂಬ ಗ್ರಾಮದ ವಳಗಣ ಹಲ್ಲೆ[>ಹುಲ್ಲೆ]ಬಯಲು ಯಂಬ ಸ್ಥಳದಲ್ಲಿ ಬಸಪ್ಪಾಯಂಬ ಹುಲ್ಲುಮೊಲ್ಲರಸಗೌಡಗೆ ಚವುಡಗೊಂಡ ಭದ್ರಗೊಂಡಯಂಬ ಯಿಬ್ಬರು ಅಣ್ಣತಮ್ಮಂದಿರು ಯಿದ್ದರು. ಯಿವರು ಗದ್ದೆ ಮಾಡಿಕೊಂಡು ಕಾಲಕ್ಷೇಪ ಮಾಡುತ್ತಾ ಯಿರ್‍ರಲಿಕ್ಕೆ, ಯಿವರಿಗೆ ದನಕರವು ಯಿದ್ದ ಕಾರಣ, ಯಿದು ಸಂರಕ್ಷಣೆ ಮಾಡುವ ಬಗ್ಯೆ ಹೊಲೆರ್‍ರ ಯಡವ ಯಂಬವನು ಮುದುಡಿ[>ಮುರಾರಿ] ಯಂಬವಳು ಮೇಯಿಸಿಕೊಂಡು ಯಿದ್ದರು. ಯೀ ಮೇರ್‍ರೆಗೆ ಯಿರ್‍ರುವ ಕಾಲದಲ್ಲಿ ವಂದು ಆಕಳು ಗಿಡದ ವಳಗೆ ವಂದು ಹುತ್ತದ ಮೇಲೆ ಹಾಲು ಕರ್‍ರದು ಬರುತ್ತಾ ಯಿತ್ತು. ಯೀ ವರ್ತಮಾನ ಯಾರಿಗೂ ತಿಳಿಯದೇ ಯಿರಲಿಕ್ಕೆ ಒಂದಾನೊಂದು ದಿವಸ ಯಡವ ಮುರಾರಿಯಂಬವರನ ಕರದು ಅವರಿಗೆ ಹೆದರಿಶಿ "ಯೀ ಆಕಳು ಹಾಲು ಪ್ರತಿದಿನಉ ಕೊಡುವುದಿಲ್ಲ. ಯಿದು ಯೇನು ಕಾರಣ? ಯಿಲ್ಲದೆ ಯಿದರ ಹಾಲು ನೀವೆ ಕರಕೋತ್ತಿರೊ"ಯಂಬದಾಗಿ ಹೆದರಿಶಿ ಕೇಳಿದರಿಂದಾ ಯಿವರು ಭಯದಿಂದ, "ನಾವು ಕರಕೊಂಬೊದು ಯಿಲ್ಲಾ"ಯಂಬುದಾಗಿ ಹೇಳಿ, ಅನಂತರದಲ್ಲಿ ಯೀ ಆಕಳ ಹಿಂದೆ ಬಾಲಾ ಹಿಡಿಕೊಂಡು ಹೋದ ಕಾರಣ, ಯೀ ಆಕಳು ಹುತ್ತದ ಬಳಿಯ ಹೋಗಿ, ತನ್ನಷ್ಟಕ್ಕೆ ತಾನೇ ಹಾಲು ಕರೇದು ನೋಡಿ, ಯಿದರ ಗೊತ್ತು

ತಿಳಿಕೊಂಡು ಚವುಡಗೊಂಡ ಭದ್ರಗೊಂಡಗೆ ಹೇಳಿದ ಕಾರಣ, ಯಿವರ್ರು ಯಡವ ಮುರಾರಿಯಂಬವರನ ಕರದುಕೊಂಡು ಹುತ್ತದ ಬಳಿಯಲ್ಲಿ ಹೋಗಿ, ಆ ಹುತ್ತವ ಅಗಿಸಿ ಹಾಕಿಸಿದರು. ಅದರ ವಳಗೆ ರಾಮೇಶ್ವರ ದೇವರ ಲಿಂಗವು ಅದರ ವಳಗೆ ಯಿದ್ದದ ನೋಡಿ, "ಯಿಲ್ಲಿ ಮಹಾಲಿಂಗ ಉತ್ಸವ[>ಉದ್ಭವ]ವಾಗಿ ಯಿದೆ. ಯೀ ಸ್ವಾಮೀ ಮಹತ್ತಿನಿಂದಾ ಆಕಳು ಯಿಲ್ಲಿ ಕರಿಯುತ್ತಾ ಯಿತ್ತು"ಯಂಬುದಾಗಿ ತಿಳಿದು, ಆ ಕ್ಷಣದಲ್ಲಿ ಲಿಂಗಕ್ಕೆ ಪೂಜೆಗಳೂ ಮಾಡ್ಸಿ, ಅಲ್ಲಿ ತಾತ್ಕಾಲಕ್ಕೆ ಚಪ್ಪರ ಹಾಕಿಶಿ, ಪ್ರತಿದಿನ ಪೂಜಾದಿಗಳ ನೈವೇದ್ಯಾ ಸಹಿತವಾಗಿ ದಿನಚರ್ಯದಲ್ಲಿ ಭಕ್ತಿಯಿಂದಾ ನಡಿಯುತ್ತಾ ಯಿರ್ರಲಿಕ್ಕೆ, ವೊಂದಾನೊಂದು ದಿವಸದಲ್ಲಿ ರಾಮೇಶ್ವರದೇವರು ಸ್ವಪ್ನದಲ್ಲಿ ಬಂದು "ನೀನು ಯೋಗಶಾಲಿ. ನಿನಗೆ ರಾಜ್ಯಾಧಿಕಾರ ಆಗುತ್ತಾಯಿದೆ"ಯೆಂಬುದಾಗಿ ಚವುಡಗೊಂಡಗೆ ಹೇಳಿದರ್ರು. ಅನಂತರದಲ್ಲಿ ಅತ್ಯಂತ ಭಯಭಕ್ತಿಯಿಂದಾ ದೇವರಿಗೆ ನಡದುಕೊಳ್ಳುತ್ತಾ ಯಿರಲಿಕ್ಕೆ, ವೊಂದಾನೊಂದು ದಿವಸದಲ್ಲಿ ಯಡುವ, ಮುರಾರಿಯಂಬವರು ಗದ್ದೆ ಊಳುತ್ತಾ ಯಿದ್ದರು. ಚವುಡಗೊಂಡ ಯಂಬವನು ನೆರಳು ವಳಗೆ ಮಲಗಿ ಯಿದ್ದನು. ಆ ಸಮಯದಲ್ಲಿ ಒಂದು ನಾಗಸರ್ಪವು ಹೆಡೆ ಬಿಚ್ಚಿಕೊಂಡು ಅವರ ಶಿರಸ್ಸಿನ ಮೇಲೆ ಆಡುತ್ತಾ ಯಿದ್ದದು, ಗ್ರಾಮದ ಜ್ಯೋಸ್ಯರು ನೋಡಿ ಆಶ್ಚರ್ಯಬಿ[>ಬ]ಟ್ಟು ಅಲ್ಲಿ ಕುಂತುಕೊಂಡು, ಯೀ ಆಶ್ಚರ್ಯವನ್ನು ನೋಡಿ ಹೋಗಿ, ಮರುದಿನ ಜೋಯಿಸರು ಚವುಡಗೊಂಡನ ಮನಿಗೆ ಹೋಗಿ, ಆತಗೆ ಪಂಚಾಂಗ ಹೇಳಿ, "ನಿನಗೆ ರಾಜ್ಯಾಧಿಕಾರ ಬರುತ್ತಾಯಿದೆ" ಯಂಬುದಾಗಿ ಹೇಳಿದ ಮೇಲೆ, "ನಿನಗೆ ಯೀ ಶೀಮೆ ಶ್ಯಾನುಭೋವಿಕೆ ಕೊಡುತ್ತ ಯಿದ್ದೇನೆ"ಯಂದು ಹೇಳಿದರ್ರು.

ಅನಂತರದಲ್ಲಿ ಮತ್ತೂ ವಂದು ದಿನ ಗದ್ದೆ ಊಳುತ್ತಾ ಯಿರಲಿಕೆ, ಯಡವ ಮುರಾರಿಯವರು ನೇಗಲು ಕೊನೆಗೆ ಧನದ ಕೊಪ್ಪರಿಗೆ ಬಳಿ ಶಿಕ್ಕಿತು. ಅದೇ ಅಗಸೋದು, ಧನಲಕ್ಷ್ಮಿಯು ಮುರ್ರಾರಿ ಮೇಲೆ ಆವೇಶ ಬಂದು "ನರಬಲಿ ಕೊಟ್ಟರೆ ಬರುತ್ತಾ ಯಿದ್ದೇನೆ"ಯಂಬದಾಗಿ ಹೇಳಿದ ಮೇಲೆ, ತನಗೆ ನರಬಲಿ ಕೊಡುವದಕ್ಕೆ ಸಾಮರ್ಥ್ಯವಿಲ್ಲಾಯಂದು ಯೋಚನೆ ಮಾಡುತ್ತ ಯಿರಲಿಕ್ಕೆ, ಯಡವ ಮುರಾರಿ ಯಂಬವರು ಹೇಳಿದು: "ನಿನಗೆ ದೊರೆತನ ಬಂದರೆ ನಾ[>ನೀ]ನು ನಮ್ಮ ಹೆಸರಿನಲ್ಲಿ ಹೊಗಳು ಹಾಗೆ ಮಾಡಿದರೆ ನಾವು ಪ್ರಾಣಿ[>ಣ]ಬಿಡುತ್ತಾ ಯಿದ್ದೇವೆ"ಯಂಬದಾಗಿ ಹೇಳಿದರು. ಅದೇ ಮೇರಿ ವೊಪ್ಪಿಕೊಂಡು ಮೇಲೆ, ಯಿವರು xxಗೆ ಕೊಯಿಕೊಂಬೊದು, ಧನದ ಕೊಪ್ಪರ್ರಗೆ ಮನೀಗೆ ಸಾಗಿಸಿ ಬಂದು ಸ್ವಧೀನವಾಯಿತು. ಅನಂತರದಲ್ಲಿ "ಯಡವ ಮುರಾರಿ ಕೋಟೆಕೋಲಾಹಲ"ಯಂಬದಾಗಿ ಬಿರುದು ವಹಿಸಿದರು. ಯೀ ಮೇರಿಗೆ ಸ್ವಾಧೀನ ಮಾಡಿಕೊಂಡು ಯಿರಲಿಕ್ಕೆ, ದಿನೇ ದಿನೇ ಪ್ರವರ್ದಮಾನವಾಗಿ ಪ್ರಶಿದ್ಧಿಯಾಗಿ ಯಿರ್ರುತ್ತಾ ಯಿರಲಿಕ್ಕೆ, ಆ ಸಮಯದಲ್ಲಿ ನರಪತಿ ಸಂವಸ್ತಾನದ ಅರಸುಗಳು ಅಚ್ಚುತರಾಯ ಸದಾಶಿವರಾಯರು ಯೀ ವರ್ತಮಾನವನ್ನು ಕೇಳಿ, ಯಿವರನ ಕರ್ರೆ ಕಳುಹಿಸಿದಲ್ಲಿ, ಚವುಡಗೊಂಡನು ಭದ್ರಗೊಂಡನಾ ಕಳಿಹಿಸಿದನು. ಯೀತನು ಸಂವಸ್ತಾನಕೆ ಬಂದ ಮೇಲೆ ಸದಾಶಿವರಾಯರು ಕೇಳಿ, ಯಿವರ್ರು ಪುಣ್ಯವಂತರು ಯಂಬದಾಗಿ ತಿಳಿದು, ಯೀ ಭದ್ರಗೊಂಡಗೆ ಸದಾಶಿವರಾಯ ನಾಯಕರು ಯಂಬ ಹೆಸರು ಕೊಟ್ಟು, "ನಿಮ್ಮ ದ್ರವ್ಯ ನೀವೇ ಅನುಭವಿಸಿ"ಯಂಬುದಾಗಿ ಹೇಳಿ, ಬಿರ್ರುದುಗಳು ಕೊಟ್ಟು, "ಆ ಪ್ರಾಂತ್ಯದಲ್ಲಿ ತುಂಟ ಪಾಳ್ಯಾಗಾರ್ರುಯಿದ್ದಾರೆ, ಅವರನ ಮುರ್ರುದು, ನೀವು ರಾಜ್ಯ ಸ್ವಾಧೀನ ಮಾಡಿಕೊಂಡು, ಸುಖದಲ್ಲಿ

ಯಿರುವದು" ಯಂಬದಾಗಿ ಅಮರ ಮಾಗಣಿಯಾಗಿ ಕಾಗದ ಪತ್ರ ನಿರೂಪಗಳು ಸಹಾ ಬರಶಿ ಕೊಟ್ಟು ಕಳುಹಿಸಿದರು. ಶಾಲಿವಾಹನ ಶಕ ವರುಷ ೧೪೬೭ನೇ ವಿಶ್ವಾವಸು ಸಂ|ದಲ್ಲಿ ಕಳುಹಿಸಿದರು.

ಅನಂತರದಲ್ಲಿ ಸದಾಶಿವರಾಯ ನಾಯಕರು ಯಂಬ ಹೆಸರು ಪಡದು, ತಮ್ಮ ಸ್ಥಳಕ್ಕೆ ಬಂದು, ಯಿಲ್ಲಿ ಯಿರುವ ಸುತ್ತು ಮುತ್ತ ಗಲುಡ ಪಾಳ್ಯಾಗಾರರು ಯಿದ್ದದವರನ ಮುರಿಯುವ ಬಗ್ಗೆ ತಾವು ಕುದುರಿ ಮಂದಿ ಕಟ್ಟಿಕೊಂಡು, ಪ್ರಬಲವಾಗಿ ಚತುರಂಗಬಲ ಸಮೇತನಾಗಿ, ಯಿಕ್ಕೇರಿ ಮಲ್ಲನಗೌಡ ೧, ಕಾನಲೆ ಪುಟ್ಟೆ ಗೌಡ ೧, ನಲ್ಲೂರ ಪುಟೆಗೌಡ ೧, ಸುರಗುಪ್ಪಿ ಪುಟೆಗಲುಡ ೧, ಮಾಲವಿ ಪುಟೆಗವುಡ ೧, ಅಂಡಿಗೆ ಪಾಳ್ಯಾಗಾರ ವೀರಣ್ಣ ವಡೆರು ||೫||, ಧೃದ್ರಿ ಮುಪ್ಪಿನ ಗಲುಡರು ೬, ಮಂಚಾಲೆ ಪುಟೆಗಲುಡನ ೭ |, ಯಿಕ್ಕೇರಿ ಮಲ್ಲನ ಗಲುಡ ೮, ಶಿರ್ರವಂತಿ ಪಾಳ್ಯಾಗಾರ ಚಯಿನಾರು ೯, ಯಲಗಲ್ಲಿ ಪುಟೆಗಲುಡ ೧೦, ವುಲ್ಲೂರು ಪುಟೆಗಲುಡ ೧೧ – ಯೀ ಮೊದಲಾದ ಗಲುಡ ಪಾಳ್ಯಗಾರನ ಹೊಡದು, ಶಿಮೇ ಯಾವತ್ತು ಸ್ವಾಧೀನ ಮಾಡಿಕೊಂಡು, ಕೆಳದಿ ವಳಗೆ ಯಿದ್ದುಕೊಂಡು ಶಾಲಿವಾಹನ ಶಖ ೧೪೬೭ ವಿಶ್ವಾವಸು ಸಂ|ಲ್ಲು ಸೆಕ ೧೪೮೩ನೆ ದುರ್ಮುಖಿ ಸಂವತ್ಸರ ವರೆಗೆ, ವರುಷ ೧೬ ಸುಖದಲ್ಲಿ ಯಿರುವ ಕಾಲದಲ್ಲಿ, ವೊಂದಾನೊಂದು ದಿವಸದಲ್ಲಿ ಸವಾರಿಗೆ ಹೋದ ಕರಣ, ಯಿವರ ಸಂಗಡಾ ಗುರಿಕಾರರು ಮುಂತಾದವರು ಯಿದ್ದಲ್ಲಿ, "ಯಿಕ್ಕೇರಿ ಯಿರುವ ಸ್ಥಳದಲ್ಲಿ ಅಡಿವಿಯಾಗಿ ಮಹಾರಮಣೀಯವಾಗಿ ಅದೆ, ಯಿಲ್ಲಿ ಕೋಟೆಯನ್ನು ಕಟ್ಟಿಸಿಕೋ"ಯಂಬದಾಗಿ ಹೇಳುವಲ್ಲಿ, ಸಂಗಡ ಯಿದ್ದವರು ಹೇಳಿದ್ದು: "ಯಿದು ಗಂಡು ಭೂಮಿ, ಯಿಲ್ಲಿ ಮೊಲವು ನಾಯಿಯ ಮೇಲೆ ಬಿತ್ತು"ಯಂಬುದಾಗಿ ಕೇಳಿದಲ್ಲಿ, "ಮೊಲದ ಮೇಲೆ ನಾಯಿ ಬಿದ್ದ ಕಾರಣ ನಾಯಿನ ಮೊಲ ಬಂದು ಕಚ್ಚಿತು"ಯೀ ವರ್ತಮಾನವನ್ನು ಕೇಳಿ, ಯಿದು ಗಂಡು ಭೂಮಿಯೇ ಸರಿಯಂದು ತಿಳದು, ಯಿಲ್ಲಿ ಕೋಟೆ ಕಟ್ಟಿಸಬೇಕು ಯಂಬದಾಗಿ ಯೋಚನೆ ಮಾಡಿ, ಅಲ್ಲಿ ಜೋಯಿಸರನಾ ಕರಶಿ, ಮುಹೂರ್ತದಲ್ಲಿ ಹಳೆ ಯಿಕ್ಕೇರಿ ಭೂಮಿವಳಗೆ ಯಿಕ್ಕೇರಿ ಕೋಟೆಯನ್ನು ಕಟ್ಟಿಶಿ, ಯಿಲ್ಲೆ ಮೊಲದ ಕೋಟೆಯಂಬುದಾಗಿ ವಂದು ಕೋಟೆಯನ್ನು ಮಾಡ್ಸಿ, ಆ ಬಳಿಯಲ್ಲಿ ಪಟ್ಟದಕಲ್ಲು ಗದ್ದಿಗೆ ಹಾಕಿಶಿ ಯಿದೆ. ದಾರ್ರೆಮಂಟಪ ಮಾಡಿದರು. ಯಿದು ಗಂಡು ಭೂಮಿಯಂದು ಯೀ ಪ್ರಕಾರ ಮಾಡಿದರು.

ಯೀ ಮೇರೆಗೆ ಯಿರುತ್ತಾ ಯಿರಲಿಕ್ಕೆ, ಕೆಲವು ದಿವ್ಸದ ಮೇಲೆ ಯಿರಲಿಕ್ಕೆ, "ಪೇಟೆ ಕಟ್ಟಿಸಬೇಕು" ಯಂದು ಸಂಸ್ಥಾನಿಕರ ಸಂಗಡಾ ಯೋಚನೆ ಮಾಡಿ, ಯಿಕ್ಕೇರಿ, ಶಿರಿವಂತಿ, ಯಲಗಲ್ಲ, ಕೆಳದಿ ಯೀ ನಾಲ್ಕು ಗ್ರಾಮದ ಹೊಲವರಿ ಕೂಡಿದ ಗಡಿಯ ಮಧ್ಯದಲ್ಲಿ ಪೇಟೆ ಕಟ್ಟಿಸುದಕ್ಕೆ ಆರಂಭವನ್ನು ಮಾಡಿದ. ಮೂರು ತಿಂಗಳಲ್ಲಿ ಪೇಟೆ ಕಟ್ಟಿ ಆಯಿತು. "ಯೀ ಪೇಟೆಗೆ ವಕ್ಕಲು ಆಗಬೇಕು"ಯಂದು ಕೆಳದಿ ಪಟ್ಟಣದ ನೀಲಕಂಠರಾಯರು ಯಂಬ ಕ್ಷತ್ರಿಯ ಅರಸುಗಳನ ಮುರದು, ಆ ಪಟ್ಟಣ ಸ್ವಾಧೀನ ಮಾಡಿಕೊಂಡು, ಅಲ್ಲಿ ಯಿದ್ದ ವಸಾರಿ ವರ್ತಕರು ಸಹಾ ತೆಗೆದುಕೊಂಡು ಬಂದು, ಹಸಬೆ 'ಶಾಂತಯ್ಯ, ಧೂಳಪ್ಪ, ನಾಗಪ್ಪ, ಬಡದಾಳದ ನಿಂಬೆಣ್ಣ, ತುಪ್ಪದ ರೇವಪ್ಪ ಯೀ ಮೊದಲಾದ ಮುಖ್ಯಸ್ತರಿಗೆ ನೇಮಕಾಮಾಡಿ ಯಿಟ್ಟು, ಮೂವ್ವತ್ತು ವರುಷ ಪರಿಯಂತ್ರ ತಾಯಿ ಕೊಂದು ತಂದೆ ಯಿರ್ರದರು. ತಂದೆಕೊಂದು ತಾಯಿ ಯಿರ್ರದರು. ನೆಟ್ಟ ಕಲ್ಲು ಕಿತ್ತರು, ಬಿಟ್ಟ ಬಶಿವಿ ಆತಳು, ಬಸವ ವೃಷಭಾನ ಕೊಂದು ಹಿರ್ರದರು[>ಇರಿದರು] ಸಕಲದ್ರೋಹ ಮಾಡಿದರು. ಬಿಟ್ಟು

ಬಿರಾಡ, ವಟ್ಟ ವರಾಡ, ಅಪರಾಧ ಮುಂತಾದ್ದು ಯೀ ಪೇಟೆ ಬವರನ ಕೇಳಲಿಕ್ಕೆ ಅರಮನೆಯವರಿಗೆ ಕೆಲಸವಿಲ್ಲಾ ಯಂದು, ನಿರುಪದ್ರವದಿಂದ ಯಿರ್ರಬೇಕುಯೆಂದು ಕವುಲು ಕೊಟ್ಟು, ಕಡೆ ಮೊದಲು ಮುಂತಾದ್ದು ಕೊಟ್ಟ [>ಟ್ಟು] ಪೇಟೆ ತುಂಬಿಸಿದರು. ಯಿದಕ್ಕೆ ಸದಾಶಿವಸಾಗರ ಯಂಬೊ ಹೆಸರು ಯಿಟ್ಟರು. ಯೀ ಪೇಟೆಗೆ ಬಲಗಡಿ ಮೂಡಲ ದಿಕ್ಕಿಗೆ ವರದಾನದಿ ತೀರದಲ್ಲು ವಿಶ್ವನಾಥಪುರಯಂಬದಾಗಿ ಗ್ರಾಮವನ್ನು ಕಟ್ಟಿಶಿ, ಯರಡು ಬೀಡಿ[>ದಿ] ಮಾಡಿ, ಯಿಲ್ಲಿ ನದಿತೀರಲದಲ್ಲು ರಾಮೇಶ್ವರದೇವರು ಅಮೃತಲಿಂಗೇಶ್ವರದೇವರು ಮಲ್ಲಿಕಾರ್ಜುನದೇವರು ಯೀ ಮೂರ್ರು ದೇವಸ್ತಾನವನ್ನು ಕಟ್ಟಿಸಿ, ೬೦ ಮೆಳೆ ಕಟ್ಟಿಶಿ, ೬೦ ವೃತ್ತಿಯನ್ನು ಮಾಡಿ, ಬ್ರಾಹ್ಮರಿಗೆ ಅಗ್ರಹಾರ ಮಾಡಿದರು.

ಅನಂತರ ಪೇಟೆ ಕಟ್ಟಿದ ವಿವರ: ಬೀದಿಗಳು ಮಾಡಿ, ಪೂರ್ವದಿಕ್ಕಿನಲ್ಲು ಅರಮನೆ ಕಟ್ಟಿಶಿ, ಶಕ್ತಿ ಗಣಪತಿಯನ್ನು ಪ್ರತಿಷ್ಟೆ ಮಾಡಿ, ಕೆರ್ರೆಯನ್ನು ಕಟ್ಟಿಸಿ, ಮೇಲು ಉಪ್ಪರಿಗೆಯನ್ನು ಕಟ್ಟಿಸಿದರು. ಯೀ ವಿನಾಯಕಗೆ ಟೆಂಗಿನಕಾಯಿ ೩೬೦ಕೆ, ೧ಕೆ, ಮರಾ ೬೨ಕೆ, ಸಿಸ್ತು ವರ ೮೪೮೪ ಉತ್ತರವನ್ನು ಬಿಟ್ಟರು. ಯಿದರಲ್ಲಿ ಬೀದಿಗಳು: ಬಸವಣ್ಣ ದೇವರ ಪ್ರತಿಷ್ಟೆಯನ್ನು ಮಾಡಿ, ಬಸವಣ್ಣದೇವರ ಬೀದಿ ಪೂರ್ವ ಪಶ್ಚಿಮ ದಿಕ್ಕಿನಲ್ಲು ೧, ಉತ್ತರ ದಕ್ಷಿಣ ಬೀದಿ ೧, ಬಣಜಿಗರ ಕೆರೆ ೧, ಯಿದರ ಮಧ್ಯದಲ್ಲಿ ತಳವಾರ ಕಟ್ಟೆ ೧, ಯೀ ತಳವಾರ ಕಟ್ಟೆ ಚಾವಡಿಗೆ ಕಲಿಸಿ, ನೀಲಕಂಠರಾಯರು[>ರ] ಅರಮನೆ ಮುಂಡಿಗೆ ಮುಂತಾದ್ದು ತಂದು ಕಟ್ಟಿದರ್ರು. ಯಿದರ ವಳಿಗೆ ಬೀದಿಗಳು ಯಿರ್ರುವದು: ಬ್ರಾಹ್ಮರ ಕೇರಿ ೧, ಕುಂಬಾರ ಕೇರಿ ೨, ಕಂಚಗಾರ ಕೇರಿ ೩, ಕೇಣಿ ಮಾಡುವ ಕೇರಿ ೪, ಉಪ್ಪಾರ ಕೇರಿ ೫, ಕಬಾಡಿ ಕೇರಿ ೬, ತುರುಕರ ಕೇರಿ ೭, ಪಟಣನಾಲು ಕೇರಿ ೮, ಕುರುಬರ ಕೇರಿ ೯, ಅಗಸರ ಕೆರಿ ೧೦, ಜಾಡದ[>ರ] ಕೇರಿ ೧೧, ಸಮಗಾರ ಕೇರಿ ೧೨, ಕಯಿಪಲ್ಯೆ ಮಾರುವ ಕೇರಿ ೧೩, ಯಿದರ ಬಾಗಲ ಹೊರಗಣ ಕೊಂಕಣಕೇರಿ ೧೪, ಗವುಜು ಕೇರಿ ೧೫, ಸೂಳೇರ ಕೇರಿ ೧೬ – ಯೀ ಮೇರಿಗೆ ಬೀದಿಗಳು ಕಟ್ಟಿಶಿ, ಯಿದರ ವಳಗೆ ಯಿರುವ ಮಠಗಳಲ್ಲು ಹೊಳೀನ ಹಂಪಯ್ಯನವರು ಕಟ್ಟಿಶಿಸಿದ ಮಠ, ಯೀ ಹಂಪಯ್ಯನು ಜಂಗಮರ ಗುರುಉ ಸರಿ, ಮುಖ್ಯ ವರ್ತಕನು ಸರ್ರಿ, ಯಿವರು ಕಾಲಕಾಲಕ್ಕೆ ಬಣ್ಣ ಸಾವಿರ ಯೆತ್ತು ಹರಾಜು ಮಾಡುವರು. ಯೀ ಪೇಟೆ ಆಚಾರ ವಿಚಾರವನ್ನು ಜಂಗಮಜಾತಿಗೆ, ಯೀ ಮಠಕೆ ಕೂಡಿದ್ದು, ಯಿದೆ ಮಹಂತಿನ ಮಠ. ಯಿದಕ್ಕೆ ಅರಸುಗಳು ಬಿಟ್ಟ ಸ್ವಾಸ್ತಿ; ನಂದಿಹಳ್ಳಿ ಗ್ರಾಮ ೧, ಕಂಬಳಿಕಪಪ್ಪದ ಗ್ರಾಮ ೧, ಹಲಸಿನಕೊಪ್ಪದ ಗ್ರಾಮ ೧, ಕಲ್ಲುಕೊಪ್ಪದ ಗ್ರಾಮ ೧, ಹೊಟ್ಟಿಲ ಸರ್ರುವ್ಯ ಗ್ರಾಮ ೧, ಸೊಗೆಮನೆ ಗ್ರಾಮ ೧ – ಅಂತು ಗ್ರಾಮ ೬ಕೆ ವರಹಾ ೧೦೦೦ ಯಿನಾಮ ಬಿಟ್ಟರು. ಯೀ ಮಠದಲ್ಲಿ ನಡೆಯುವ ಧರ್ಮತನಕೆ ಬರಮಾಡಿದ ಯಿದ್ದು, ಚಿತ್ರಭಾನು ಸಂವತ್ಸರದ ಪರಿಯಂತ್ರವೂ ನಡಿಯುತ್ತ ಯಿತ್ತು. ಯೀಚೆಗೆ ನವಾಬನು ಮೂವತ್ತು ವರಹಾ ಸ್ವಾಸ್ತಿ ನೆಡಸಿದನು. ಮರಿಯಪ್ಪಶೆಟ್ಟರು ಕಟ್ಟಿಸಿದ್ದು ವಿರಕ್ತಮಠ ೧, ಯಿನಾಮು ಅರಸುಗಳು ಕೊಟ್ಟರು. ಚನ್ನಮ್ಮಾಜಿ ಕಾಲಕ್ಕೆ ಕಟ್ಟಿದ್ದು ಯಿನಾಮು ೩೬ ವರಹಾ ಕೊಟ್ಟರು.

ಮಹಂತನಮಠದ ವಳಿಗೆ ಮಾಡುವ ಧರ್ಮದ ಶೇವೆಗೆ, ಅನ್ನದ ಶೇವೆಗೆ ಬೆಣ್ಣೆ ಬಸವಗೋತ್ರಿ ಕೆಳದಿ ಪಾಟ್ನಾಯಳ ಧರ್ಮ ಮುಖ್ಯವಾಗಿ ಹೊಗಳಿಕೊಂಡು ಯಿದ್ದರು.

ಯೀ ಮೇರಿಗೆ ಪೇಟೆಯನ್ನು ಕಟ್ಟಿಶಿ, ಕಉಲು ಕರಾರು ಕೊಟ್ಟು, ಯಿಕ್ಕೇರಿ ವಳಗೆ ಅರಸುತನ ಮಾಡಿಕೊಂಡು, ಸದಾಶಿವರಾಯನಾಯಕರು ಆಳಿದ್ದು, ಶಕ ವರುಷ ೧೪೬೭ನೇ ವಿಶ್ವಾವಸು ಲಾಗಾಯಿತು, ಶಕ ೧೪೮೩ನೇ ದುರ್ಮತಿ ಸಂ. ವರಿಗೆ ವರುಷ ೧೬ ಆಳಿದರು.

ಯೀ ಸದಾಶಿವರಾಯನಾಯಕರ ಮಗ ಹಿರ್‍ರೆ ಸಂಕಣ್ಣನಾಯಕರು, ಚಿಕ್ಕಸಂಕಣ್ಣನಾಯಕರು ಯಂಬದಾಗಿ ಯಿಬ್ಬರು ಮಕ್ಕಳು ಯಿದ್ದರು. ವಳಗೆ ಹಿರೆ ಸಂಕಣ್ಣನಾಯಕರು ರಾಜ್ಯಭಾರ ಮಡುವ ಕಾಲದಲ್ಲಿ ಯಡವ ಮುರಾರಿಯಂಬ ಹೊಲೇರು (ಯೀ ಅರಶಿನ ಆಚಿಗೆ ಬಂದಂತಾ ಐಶ್ವರ್ಯಕೆ ಪ್ರಾಣ ಕೊಟ್ಟವರು) ಮನೆ ವಳಿಗೆ ನಾಗರಮರಿಯಂಬ ಕತ್ತಿಯಿತ್ತು. ಯಿವರ ಮಕ್ಕಳು ಯೀ ಕತ್ತಿ ಯಿಟ್ಟುಕೊಂಡು, ಮಾಂಸ ಹೊ[>ಒ]ಣಗಿ ಹಾಕಿಯಿದ್ದಾ[>ದ್ದ]ರೆ, ಅದಕ್ಕೆ ಯೀ ಕತ್ತಿಯನ್ನು ಕಾವಲು ಯಿಟ್ಟು ಯಿದ್ದರೆ, ಮಾಂಸ ತೆಗೆದುಕೊಂಡು ಹೋಗುವ ಬಗ್ಯೆ ಕಾಗಿ ಬಂದರೆ, ಯೀ ಕತ್ತಿಯು ತನ್ನಹ . . . . ಕೊತಾನೆ ಯದ್ದು ಕೂತು ಕಾಗಿ ಹೊಡಿಯುವದು, ಯಿದನ್ನು ಒಂದು ದಿವ್ಸಾ ನೋಡಿ ಯೀ ಸಂಕಣನಾಯಕರು, ಯೀ ಕತ್ತಿಯನ್ನು ಯಡವ ಮುರ್‍ರಾರಿ ಮಗನಿಗೆ ಯಿನಾಮ ಕೊಟ್ಟು ತೆಗೆದುಕೊಂಡನು. ಅನಂತರ ಯಡವ ಮುರಾರಿಯ ಕತ್ತಿಯನ್ನು ಕೂಡ ತೆಗೆದುಕೊಂಡು ಭೂ ಪ್ರದಕ್ಷಿಣೆ ಮಾಡುವದಕ್ಕೆ ಹೊರಟು ಹೋಗಿ ಯಿರ್‍ರಲಿಕ್ಕೆ, ಕಾಶಿರಾಮೇಶ್ವರ ಮಧ್ಯ ಭೂಮಿ ಯಾವತ್ತು ಸಂಚಾರ ಮಾಡಿ, ಹರಿದ್ವಾರಕ್ಕೆ ಹೋಗಿ ಅಲ್ಲಿ ಅಘೋರವೀರಭದ್ರದೇವರಿಗೆ ನೋಡಿ ೩೨ ಆಯುಧಾ ಧರಿಸಿದಂತಾ ವೀರಭದ್ರನಾ ಪಟಾ ಬರಶಿಕೊಂಡು, ಅಲ್ಲಿಂದಾ ಪುನಹಾ ಯಿಕ್ಕೇರಿಗೆ ಬಂದು, ಯಿಲ್ಲಿ ಅಘೋರ ವೀರಭದ್ರದೇವರ ಮೂರ್ತಿಯನ್ನು ಮುವತ್ತು ಯರಡು ಹಸ್ತಕ್ಕೆ ಮುವತ್ತು ಯರಡು ಆಯುಧ ವಿಶಿಷ್ಟವಾಗಿ ಶಿಲಪಿಶ್ಯಾಗ್ರ[>ಶಿಲ್ಪಶಾಸ್ತ್ರ] ಮೇರಿಗೆ ಮೂರ್ತಿ ಮಾಡಿಶಿ, ದೇವಸ್ಥಾನವನ್ನು ಕಟ್ಟಿಶಿ, ಯಿಕ್ಕೇರಿ ಪೂರ್ವಮಧ್ಯದಲ್ಲಿ ಸುಮುಹೂರ್ತದಲ್ಲಿ ಪ್ರತಿಷ್ಟೆಯನ್ನು ಮಾಡಿ, ನಿತ್ಯೋತ್ಸವ ಮೊದಲಾದವುಗಳ ಜರಗುವ ಬಗ್ಯೆ ಅನೇಕ ದ್ರವ್ಯಗಳನು ವೆಚ್ಚಮಾಡಿ, ಪ್ರತಿ ಸಂ॥ಲ್ಲು ಶ್ರಾವಣ ಶು ೧೦ ದಿವಸ ವರುಷೋತ್ಸವ ಆಗುವ ಹಾಗೆ ನೇಮಕಾಮಾಡಿ, ಆ ದೇವಸ್ಥಾನಕ್ಕೆ ತೆರಾ ಆಗುವದಕೆ ೧೦೦೦೧. . . . ಕೊಡುತ ಯಿದ್ದರು. ಯೀ ಮೇರಿಗೆ ಕೆಲವು ದಿವಸ ರಾಜ್ಯಭಾರವನ್ನು ಮಾಡಿ ಯಿದ್ದರು. ಶಕ ೧೪೮೩ನೇ ದುರ್ಮುಖಿ ಸಂವತ್ಸರ ಲಾಗಾಯಿತು ಶಕ ೧೪೯೪ನೆ ಅಂಗೀರಸ ಸಂ. ವರಿಗೆ ವರುಷ ೧೧ ಆಳಿದರು.

ಅನಂತರ ಹಿರ್‍ರೆ ಸಂಕಣ್ಣನಾಯಕರು ಮಗ ರಾಮರಾಜುನಾಯಕರು ಆಳಿದ್ದು ವರುಷ ೧೦, ಶಕ ೧೪೯೪ನೇ ಅಂಗೀರಸ ಸಂ. ಲಾಗಾಯಿತು ಶಕ ೧೫೦೪ನೆ ಚಿತ್ರಭಾನು ಸಂ. ವರಿಗೆ.

ಅನಂತರ ಯೀ ರಾಮರಾಜನಾಯಕರ ಮಗ ವೀರವಡೇರು ಆಳಿದ್ದು ಶಕ ೧೫೦೪ನೇ ಚಿತ್ರಭಾನು ಸಂ. ವೈಶಾಖ ಲಾಗಾಯಿತು ಕಾರ್ತೀಕ ಮಾಸದ ವರೆಗೆ ಆಳಿದ್ದು ತಿಂಗಳು ೭.

ಅನಂತರದಲ್ಲಿ "ಯೀ ರಾಮರಾಜನಾಯಕರ ತಮ್ಮ ಹಿರೆವೆಂಕಟಪ್ಪ ವೀರವಡೇರ ಚಿಕ್ಕಪ್ಪ ರಾಜ್ಯಭಾರ ಮಾಡುವ ಕಾಲದಲ್ಲಿ, ವರುಷ ೪೭ ಯಿಕ್ಕೇರಿ ವಳಗೆ ಅಘೋರ ವೀರಭದ್ರದೇವರು ವಿಗ್ರಹಾ ಮಾಳಿಗೆ ಮೇಲೆ ಹಲಗೆ ತೆಗೆದುಕೊಂಡು ಹೋಗಿ ಗಂಗೆಕೆರಯಲ್ಲು ಬಿದ್ದದೆ" ಯಂಬುದಾಗಿ ಹೇಳುತ್ತಾರೆ. ಅನಂತರದಲ್ಲಿ ಯೀ ಗುಡಿಯನ್ನು ಹಾಳುಬಿದ್ದು ಯಿರಬಾರದು ಯಂದು, ಯಿಕ್ಕೇರಿ ಪಟ್ಟಣದ ನೀಲಮ್ಮಂಗು ತರ್‍ರವೆಂದು ವಿದ್ವಾಂಸರುನುವಾನಸಿದರಿಂದಾ ಅನೇಕ ಶಾಂತಿಗಳು ಕೊಡಿಸಿ

ಮತ್ತು ವೆಂಕಟಪ್ಪನಾಯಕರು ಅಘೋರೇಶ್ವರಯಂಬುದಾಗಿ ಲಿಂಗಪ್ರತಿಷ್ಠೆ ಮಾಡಿದರು. ಯೀ ಲಿಂಗದ ಯೆದುರಿಗೆ ಬಿಳೆಕಲ್ಲುಯಿಂದಾ ಬಸವೇಶ್ವರನ ಮಾಡಿಯಿಟ್ಟು ಯಿದ್ದಾನೆ. ಯೀಶ್ವರನ ಯಡದ ಭಾಗಕ್ಕೆ ಪಾರ್ವತಿ ಅಮ್ಮಾನವರ ಗುಡಿಯನ್ನು ಕಟ್ಟಿಸಿ ಪ್ರತಿಷ್ಟೆಮಾಡಿ ಯಿದ್ದಾರೆ. ಯೀ ವೆಂಕಟಪ್ಪನಾಯಕರು ಗೆರುಸೊಪ್ಪೆ ಪಟ್ಟಣದ ಅರಸು ಬೈರರಸವಡೇರ್ರು ಯಂಬುದಾಗಿ ಯಿದ್ದರು, ಯೀತನ ಹೆಂಡತಿ ಚನ್ನಚಮ್ಮಾಯಿ. ಯಿವರು ಜಯಿನರ್ರು. ರಾಜ್ಯವಾಳಿ ಭೈರಾರಸ ವೊಡೇಯರು ಹೋದ ಮೇಲೆ ಯೀತನ ಹೆಂಡತಿ ಚನ್ನಚಮ್ಮಾಯಿನವರಿಗೆ ಬೈರಾದೇವಿಯಂಬ ಹೆಸರುನಿಂದಾ ರಾಜ್ಯ ಮಾಡುತ್ತಾ ಯಿರ್ರಲಿಕ್ಕೆ, ಯಿವರನ ಹೊಡದು ವೆಂಕಟಪ್ಪನಾಯಕರು[೧] ತೆಗೆದುಕೊಂಡರು. ಅನಂತರ ಯೀ ರಾಜ್ಯ ಸಹಿತವಾಗಿ ಆಳಿದರು.[೨] ಯಿದಕ್ಕೆ ಶಕವರುಷಗಳು ೧೫೦೪ನೇ ಚಿತ್ರಭಾನು ಸಂವತ್ಸರ ಲಾಗಾಯಿತು ಶಖ ೧೫೫೧ನೇ ಶುಕ್ಲ ಸಂ ವರಿಗೆ ವರುಷ ೪೭.

ಅನಂತರದಲ್ಲಿ ವೀರಭದ್ರನಾಯಕರ್ರು ರಾಜ್ಯಭಾರಮಾಡುವ ಕಾಲದಲ್ಲಿ ತಮ್ಮ ತಮ್ಮ ವಳಗೆ ಕಲಹಾಗಳು ಹುಟ್ಟಿಕೊಂಡು, ಭಾವಮೈದುನನು ಸದಾಶಿವಯಾನಕರ ಬಳಿಗೆ ಸೋದಿ ಬಿಳಗಿಯವರ ಕಡಿಗೆ ಹೋದನು. ಮೊಗಲರ ರಣದುಲ್ಲಾಖಾನು ಬಂದು ಯಿಕ್ಕೇರಿ ತೆಗೆದುಕೊಂಡು ಆ ವರುಷ ಆಳಿದನು. ಪಟ್ಟಗುಪ್ಪೆ ಹೊಳೆಯಿಂದಾ ಯೀಚೆಗೆ ಆಳಿದರು. ಯೀ ವೀರಭದ್ರನಾಯಕರ್ರು ಪಟ್ಟಗುಪ್ಪೆ ಹೊಳೆ . . . . ರಿಬಿಗೆ ಬಿದ್ದು ಊರು ಕಟ್ಟಿಸಿಕೊಂಡು ಯಿಕ್ಕೇರಿ ಬಿಟ್ಟು ಅಲ್ಲೇ ಆಳಿದರು. ಶಕ ವರುಷ ೧೫೫೧ನೆ ಶುಕ್ಲ ಸಂ॥ ಮಾರ್ಗಶಿರ ಲಾಗಾಯಿತು ಶಕ ೧೫೬೬ನೇ ತಾರಣ ಸಂ.ವರಿಗೆ ವರುಷ ೧೫ ಆಳಿದರು. ಯೀತನ ಕಾಲಕ್ಕೆ ವಕ್ಕಲಿಗರ ಅರಸುತನ ತಪ್ಪಿಹೋಗಿ, ಬಣಜಿಗರ ಅರಸುತನವು ಆಯಿತು. ಯೀತನು ಆಘೋರೇಶ್ವರ ದೇವಸ್ಥಾನವನ್ನು ಕಟ್ಟಿಶಿ ಕೆಲವು ಕೆಲಸವೆಲ್ಲಾ ತೀರಿಶಿ ಕಲಶಗಳು ಯಿಟ್ಟರು.

ಯೀ ಕೆಲಸಾ ರಣದುಲ್ಲಾಖಾನನು ಬಾರದಕ್ಕೆ ಮುಂಚಿತವಾಗಿ ಆಯಿತು. ಯೀತನು ಬಿದರೆ ದೊರೆತನಲ್ಲಿರುವಾಗ್ಯೆ ಬಿಜಾಪುರಕ್ಕೆ ತಾನ್ನಾನ[>ತನ್ನಾ] ಕಡೆಯಿಂದಾ ವಕೀಲನ ಕಳುಹಿಸಲಿಲ್ಲ ಸರದಾರ ಮಾಟದಿಲ್ಲಾ ಕೆಲ್ಸ ವಿವೇಕ ಹೊಂದಿಶಿಕೊಂಡ ಯೀ ಫೌಜನ ರಣದುಲ್ಲಾಖಾನರು ಸಮಜಾಯಿಸಿಕೊಂಡು ಯಿಲ್ಲಿ ಕಾರಾ ರಾಜ್ಯಭಾರ ಅದಾಗಿ . . . . ಅರಸಿಗಳು ವಿಜಾಪುರಕ್ಕೆ ಹೋಗಿ, ಪಾದಷಾರ ಸಂಗಡಾ ಅರಿಕೆ ಮಾಡಿಕೊಂಡು, ಯೀ ಶಿವಣ್ಣನಾಯ್ಕ ಅರಿಕೆಕೊಟ್ಟರ ಅಳಕೆ ಕೋಜ್ಜಿನ ಗುರ್ತಾದ ಬಗ್ಗೆ ನಾಲ್ಕು ದಿಕ್ಕಿಗೆ ನಾಲ್ಕು ಸ್ತಂಭ ಲಳಕೆರಾಯ ಶರಿಕಾರೂ ೧೮ ಹೆಜ್ಜೆಯ ಗುರ್ತು ತನ್ನಾ ಹೆಸ್ರು ಸಹಾ ಶಾಶ್ವತವಾಗಿ ಯಿರುವ ಹಾಂಗೆ ಮಾಡಿಶಿದರು.

ಅನಂತರದಲ್ಲಿ ಚಿಕ್ಕ ಸಂಕಣ್ಣನಾಯಕರ ಮೊಮ್ಮಗ ಶಿವಪ್ಪನಾಯಕರು ಯೀ ವೀರಭದ್ರನಾಯ್ಕರು ಜೀವವಾಗಿ ಯಿರುವ ಕಾಲಕ್ಕೆ ಅನೇಕ ದಿವ್ಸಲೂ ಆರೆ ಪ್ರಭುತ್ವ ಬಿದವೂರ್ರ ವಳಗೆ ಯಿದ್ದುಕೊಂಡು, ಮೊಗಲ ರಣದುಲ್ಲಾಖಾನರನ ಹೊಡದು ಯಿಕ್ಕೇರಿ ತೆಗೆದುಕೊಂಡು, ಬಿಳಿಗೆ ವಳಗೆ ಗಂಟೆವಡಿರ್ರಾಯಂಬ ಅರಸುಗಳ ಹೊಡದು ತೆಗೆದುಕೊಂಡನು. ಸೋದೆಯಿಂದ ಚೆನ್ನಮ್ಮಾಜಿಯವರನ ಜಯಿಸಿ ಅರಸಿನ ಹೊಡದು ಚಂದ್ರಗುತ್ತಿ ತೆಗೆದುಕೊಂಡು, ಸವಣೂರು

---

೧. + ಹೊಡದು (ಮಾ) ೨. + ಹೊಡದು (ಮ)

ಶೀಮೆಯಲ್ಲಿ ಕ್ವಾಟಿ ತೆಗೆದುಕೊಂಡನು. ಯೀ ಗ್ರಾಮವನ್ನು ಹಾವನೂರುಯವರಿಗೆ ಹಾಲು ಬೆಣ್ಣಿಗೆ ಕೊಟ್ಟನು. ತುರುಕರ ಹೊನ್ನಾಳಿಯನ್ನು ಮೊಗಲರನ ಹೊಡದು ಸ್ವಾಧೀನ ಮಾಡಿಕೊಂಡನು. ಬೆಳಗುತ್ತಿ ರಾಮರಾಯರಸುಗಳನು ಮುರದು ತೆಗೆದುಕೊಂಡನು. ಆಯನುರ್‍ರ್ರ ಗವುಡನ ಕೊಂಡಯ್ಯನ ಮುರದು ತೆಗೆದುಕೊಂಡನು. ತರಿಕೇರಿ ಕೆಂಗಪ್ಪ ನಾಯಕನ ಮುರದು ತೆಗೆದುಕೊಂಡನು. ಅವರ ಶೀಮೆ ಯಾವತ್ತು ತೆಗೆದುಕೊಂಡನು. ಘಟ್ಟದ ಕೆಳಗೆ ಚಂದ್ರಗಿರಿ ಪರಿಯಂತ್ರವೋ ಶೀಮೆ ಸಾಧಿಶಿ ತೆಗೆದುಕೊಂಡನು. ಅನಂತರಾ ನಿರ್‍ವೈರಾ ಮಾಡಿಕೊಂಡು ಘಟ್ಟದ ಮೇಲೆ ೯ ಲಕ್ಷ ಘಟ್ಟದ ಕೆಳಗೆ ೯ ಲಕ್ಷ, ಉಭಯಂ ೧೮ ಲಕ್ಷ ಶೀಮೆಯನ್ನು ಸಾಧಿಶಿ ಶಿಸ್ತು ಮಾಡಿ ಯಿದ್ರು. ಊರ್‍ರವಳಗೆ ಯಿದ್ದುಕೊಂಡು ರಾಜ್ಯಾಧಿಕಾರವನ್ನು ಮಾಡುತ್ತ ಮಹಿಸೂರ ಮೇಲೆ ಹೊಡದು ಅರಕಲಗೂಡು, ಬೇಲೂರು, ವಸ್ತಾರೆ, ಹೆಬ್ಬೆಚಾಗರವನ್ನು ತೆಗೆದುಕೊಂಡನು. ಯೀತನು ಶಕ ೧೫೬೬ನೆ ತಾರಣ ಸಂ। ಲಾಗಾಯಿತು ಶಕ ೧೫೮೨ನೆ ಶಾರ್‍ವರೀ ಸಂ। ವರಿಗೆ ಆಳಿದ ವರುಷ ೧೫ ತಿಂಗಳು ೯, ಯೀತನ ಕಾಲಕ್ಕೆ ಸಾಗರದ ಪೇಟೆಗೆ ಮನೆ ತೆರಿಗೆ ಮುಂತಾದ ಶಿಸ್ತು ಕಟ್ಟಿ, ಶೆಟ್ಟಿತನ ಬಾದಾವಿ ಲಿಂಗಪ್ಪಶೆಟ್ಟರಿಗೆ ೧೫ ಯೆತ್ತಿನ ಮಾನ್ಯವನ್ನು ಕೊಟ್ಟರು. ಉಂಬಳಿ ೬೦ ವರಹಾದ ಗ್ರಾಮ ಸಹಾ ಕೊಟ್ಟನು.

ಅನಂತರ ಅಂದಕ ವೆಂಕಟಪ್ಪನಾಯಕನು ತಿಂಗಳು ೧೧ ಆಳಿದನು.

ಭದ್ರಪ್ಪನಾಯಕನು ಆಳಿದ ವರುಷ ೨.

ಅನಂತರ ಯೀತನ ತಮ್ಮ ಹುಚ್ಚ ಸೋಮಶೇಖರನಾಯಕರ ಕಾಲ್ಕಕ್ಕೆ ಸಾಗರದ ಮಹಾಗಣಪತಿಗೆ ಸಬ್ಬನಿ[+ಸ] ಶ್ರೀ ಕೃಷ್ಣಪ್ಪಯ್ಯನ[>ನು] ಶಿಲಾಮಯವನ್ನು ಕಟ್ಟಿಸಿ, ಸಂ[>ಸ್ವಾ]ಸ್ಥೆ ಬಿಡಿಶಿ, ರಥೋತ್ಸವವನ್ನು ಮಾಡಿಶಿದನು. ಯೀತನೆ ಶಕ್ತಿಗಣಪತಿಯಂಬದಾಗಿ ಯಿದೇ. ಯೀ ಹುಚ್ಚ ಸೋಮಶೇಖರನಾಯಕನ್ನ ಸಾಮಾಧಿಕರು ಹೊಡದುಹಾಕಿದರು.

ಅನಂತರ ಯೀತನ ಹೆಂಡತಿ ಚನ್ನಮ್ಮಾಜಿಯನ ಕಪ್ಪಲೆದುರ್ಗಕ್ಕೆ ಹೊಡದರ್‍ರು. ಯೀತನು ಆಳಿದ ವರುಷ ೭, ತಿಂಗಳು ೧೦.

ಅನಂತರ ಅಲ್ಲೆ ಶಿವಲಿಂಗನಾಯಕ ಅರಸುಗಳು ತಿಂಗಳು ೮ ಆಳಿದರು. ಯೀತಗೆ ಶಿವಪ್ಪನಾಯಕರುಯಂಬ ಹೆಸರು.

ಅನಂತರ ಹಿರೆಚನ್ನಮ್ಮಾಜಿಯವರ ಮರಿಯಪ್ಪಶೆಟ್ಟಿ, ಕೊಳುವಾಡದ ಬೊಮ್ಮರಸಯ್ಯ, ಕಾಸರಗೋಡು, ತಿಮ್ಮಣ್ಣನಾಯಕರ ಸಹಾ ಶಿದ್ಧಪ್ಪಶೆಟ್ಟಿ ಯೇಕಸ್ತರಾಗಿ ತೊರಸಾಯಿ ಮಂದಿ, ಹಜೂರ್‍ರು ಮಂದಿ, ಚಿಕ್ಕ ಆಯ ದೊಡ್ಡ ಆಯ ಕುದುರೆ ಸಹಾ ಕಪ್ಪಲೆದುರ್ಗವನ್ನು ಮುತ್ತಿ, ಚೆನ್ನಮ್ಮಾಜಿಯಿವರನ ತೆಗೆದುಕೊಂಡು ಬಂದು, ಮರಿಯಪ್ಪಶೆಟ್ಟಿ ಮಗ ಬೂದಿಬಸಪ್ಪನಾಯಕರ ಸಾಕುಮಾಡಿ, ಪಟ್ಟವನ್ನು ಕಟ್ಟಿದರು. ರಾಜ್ಯವನ್ನಾಳುವ ಕಾಲದಲ್ಲಿ ಮೊಗಲರ ತಾಲ್ಲೂಕ ಅಸಮಂತಾರನೆಂಬ ಸರದಾರರು ಬಂದು ಬಿದುಲೂರ್‍ರು ಪೇಟೆ ಠಾಣ್ಯಾಹಾಕಿದನು. ಕೋಟೆ ವಳಗೆ ಚನ್ನಮ್ಮಾಜಿಯವರ ತಾಲ್ಲೂಕ ಮಂದಿ ಯಿದ್ದುಕೊಂಡು ಲಡಾಯಿ ಮಾಡುತ್ತಾ ಯಿದ್ದರು. ಚನ್ನಮ್ಮಾಜಿಯವರು ಕಪ್ಪಲೆದುರ್ಗದಲ್ಲಿ ನಿಂತು "ತಮ್ಮ ಕಡಿ ಫಉಜು ಯಾವತ್ತುಗೆ ಮೊಗಲರ ಫೌಜು ಯಲ್ಲಿ ಬಂದರ್‍ರೆ

ಅಲ್ಲಿ ಬಂಟ್ಟು ಕೊಲ್ಲೆಯಾಗಿ ಸುಲುಕೊಂಬದು" ಯಂಬದಾಗಿ ತಾಕೀದಿ ಮಾಡಿ, ಆನೆ, ವಂಟೆ, ನಗಾರಿ, ನಿಶಾನಿ ಮಾತ್ರ ಅರಮನಿಗೆ ಕೊಟ್ಟು ಕಳಿಸಿ, ಯಾವತ್ತು ಯಿಟ್ಟ ಮಾಪು ಮಾಡಿದರು. ಸುತ್ತ ಮುತ್ತ ಗಟ್ಟದ ಮಾರ್ಗದಲ್ಲಿ ದಿನ್ಸು ಅಕ್ಕಿ ಹುರಳಿ ಮುಂತಾದು ಬಾರದ ಹಾಗೆ ತಾಕೀದುಮಾಡಿಬಿಟ್ಟರು. ಯೀ ಮೇರ್‍ಗೆ ಯಿರುತ್ತಾ ಒಂದು ವರ್ಷ ಮೊಗಲರ ಫಉಜು ಮಾರ್ಗ ಕಾಣದೇ, ಅನ್ನವಿಲ್ಲದೆ, ಕುದುರೆ ಆನೆ ಪದಾತಿ ವಗೈರೆ ಮರಣವಾದರಿಂದಾ ಅಸಮಂತಾರುಯಂಬ ಸರದಾರಿಗೆ ಅಕ್ಕಿ ಉಪ್ಪು ಯಿಲ್ಲದರಿಂದ ಚನ್ನಮ್ಮಾಜಿಯವರ ಕೇಳಿ, ಉಪ್ಪು, ಅಕ್ಕಿ, ಬೇಳೆ, ಮೂಗತ್ತಿ ಸಹಾ ಕಳುಹಿಸಿಕೊಟ್ಟದ್ದರಿಂದ, ವುಪ್ಪು ಬೆಳ್ಳಗೆ ಆದ್ದರಿಂದ ಸಕ್ಕರಿಯಂದು ಬಾಯವಳಗೆ ಹಾಕಿಕೊಂಡ ಕಾರಣ ಅದು ಉಪ್ಪು ಆಗಿತ್ತು. ಅನಂತರ ಅಸಮಂತಾರನೆಂಬ ಸರದಾರನು "ಯೀ ಚನ್ನಮ್ಮಾಜಿಯವರ ಉಪ್ಪು ತಿಂದು ಯಿವರ ಮೇಲೆ ಲಢಾಯಿ ಮಾಡಬಾರದು"ಯಂದು ಸಲ್ಲೀ ಮಾಡಿಕೊಂಡು ಮೂರು ಲಕ್ಷ ವರಹಾ ಯಿಕ್ಕೇರಿ ತೆಗೆದುಕೊಂಡು ಅಸಮಂತಾರನೆ ಬಸರದಾರನು ತನ್ನ ಕಡೆಯಿದ್ದ ಸ್ವಲ್ಪ ಮಂದಿಯನ್ನು ತಗೆದುಕೊಂಡು ಹಿಂದಕ್ಕೆ ಹೋದನು. ಅನಂತರದಲ್ಲಿಯೂ ರಾಜ್ಯಕ್ಕೆ ರಯಿತರಿಗೆ ಹೇಳಿಕೊಂಡು ವರಹಾ ವಂದಕ್ಕೆ ವಂದು ೬೧।೦ ಚವುಲದ ಮೇಲಿಗೆ ತೆಗೆದುಕೊಂಡು ಶಿಸ್ತಿಗೆ ಕೂಡಿದರು. ಅನಂತರದಲ್ಲಿ ಯೀ ಚನ್ನಮ್ಮಾಜಿಯವರು ತನ್ನ ಕಡೆ ಫವುಜು ದೊಡ್ಡಗುರಪ್ಪಯಂಬವನ ಕಳುಹಿಸಿ, ಭರಮಣ್ಣನಾಯಕರ ಹೊಡದು ಬೇಡಿನಿಂದ ಸಂತೆಬೆನ್ನೂರು ತೆಗೆದುಕೊಂಡರು. ಯೀ ಚನ್ನಮ್ಮಾಜಿಯವರು ರಾಜ್ಯವಾಳಿದ್ದು ೧೫೯೪ನೇ ಪರಿಧಾವಿ ಸಂ. ಲಾಗಾಯಿತು ಶಕ ೧೬೧೯ನೇ ಯೀಶ್ವರ ಸಂ.ವರಿಗೆ ವರುಷ ೨೫ ಆಳಿದರು.

ಅನಂತರ ಬೂದಿಬಸಪ್ಪನಾಯಕರು ಸ್ವತಂತ್ರವಾಗಿ ಆಳಿದ ವರುಷ ಶಕ ೧೬೧೯ನೆ ಯೀಶ್ವರ ಸಂ. ದಿಂದ ಶಕ ೧೬೩೬ನೆ ಜಯ ಸಂ. ವರಿಗೆ ಆಳಿದ ವರುಷ ೧೭, ತಿಂಗಳು ೫.

ಅನಂತರದಲ್ಲಿ ಯೀ ಬೂದಿ ಬಸಪ್ಪನಾಯುಕನ ಮುಗ ವೀರಭದ್ರನಾಯುಕ ಸೋಮಶೇಖರನಾಯಕರು ಯಿಬ್ಬರು. ಯಿದರ ಒಳಗೆ ಸೋಮಶೇಖರನಾಯಕರಿಗೆ ಪಟ್ಟವಾಯಿತು. ಯೀತನು ರಾಜ್ಯಭಾರ ಮಾಡುವ ಕಾಲಕ್ಕೆ ಯೀತನ ಮಾವ ನಿರ್ವಾಣಯ್ಯನು ಯಂಬವನು ಶೃಂಗೇರಿಯಲ್ಲಿ ಮಠಾವನ್ನು ಕಟ್ಟಿಸಿದ್ದರಿಂದ, ಶೃಂಗೇರಿಸ್ವಾಮಿಗಳಿಗೂ ಜಂಗಮರಿಗೂ ನ್ಯಾಯಬಂದದರಿಂದ, ಯೀ ಶೃಂಗೇರಿಸ್ವಾಮಿಗಳು "ಯಿಲ್ಲಿ ಮಠವನ್ನು ಕಟ್ಟಿಸಬೇಡಿ. ಯಿದು ಕಟ್ಟಿದರೂ ಕಿತ್ತಿ ಹಾಕಿ ಬಿಡುತ್ತೇವೆ"ಯಂಬುದಾಗಿ ಹೇಳಿ ಪುನಹಾದ ಬಾಜೇರಾಯರಿಗೆ ಹೇಳಿಕಳುಹಿಸಿ, "ಯಿಲ್ಲಿ ಜಂಗಮರ ಉಪದ್ರವ ಬಹಳವಾಗಿ ಯಿದೆ. ಯಿವರಿಗೆ ಯಿಕ್ಕೇರಿಯವರ ಬಲವಿದೆ"ಯಂಬದಾಗಿ ಹೇಳಿದರಿಂದಾ, ಆ ಕ್ಷಣವೇ ಬಾಜೇರಾಯರು ಬಂದು, ಫಉಜು ಸಹಾ ತೆಗೆದುಕೊಂಡು ಬಂದು ಮೇಲೆ ಸೋಮಶೇಖರನಾಯಕರು ಸಲ್ಲಾ ಮಾಡಿಕೊಂಡು, "ಶೃಂಗೇರಿ ವಳಗೆ ತಮ್ಮ ಮಠ ಕೀಳುತ್ತ ಯಿದ್ದೇವೆ"ಯಂಬದಾಗಿ ಹೇಳಿ, "ಚೇಉತಾಯಿ ಮೂರು ಲಕ್ಷ ವರಹಾ ನಿಗದಿ ಮಾಡಿ ಕೊಡುತ್ತೇವೆ" ಯಂಬುದಾಗಿ ಹೇಳಿ ಯೀ ವರಹಾವನ್ನು ಕೊಟ್ಟು, ಯೀ ಬಾಜೇರಾಯರಿಗೆ ಕೊಡಬೇಕಾದರೆ ಶೃಂಗೇರಿಮಠದವರಿಗೆ ಅನೇಕ ಧನವನ್ನು ಕೊಟ್ಟು, ಸಮಾಧಾನ ಮಾಡಿಕೊಂಡು ಯಿರುವ ಯೀ ಬಾಜೇರಾಯನವರು ದಂಡು ಕಟ್ಟಿಕೊಂಡು ಪರಾಭವ ಸಂ।ದಲ್ಲಿ ಹಿಂದಕೆ ಹೋದರು. ಶೃಂಗೇರಿಯವರು ತಮ್ಮ ಸ್ಥಳದಲ್ಲಿ ಯಿದ್ದು[>ದ್ದ] ಜಂಗಮರ ಮಠವನ್ನು ಅಲ್ಲಿ ಯಿರುವ ಭೂಮಿ

ವಳಗಣ ಮಣ್ಣನ್ನು ಸಹಿತವಾಗಿ ಕಿತ್ತು ಹಾಕಿದರು. ಆ ಕಾಲದಲ್ಲಿ ಸೋಮಶೇಖರನಾಯಕರು ತನ್ನ ರಾಜ್ಯದ ಮೇಲೆ ವರಹಾ ೧ಕ್ಕೆ ೫೧।೦ ಚವಲ ಪಗಡಿ ಮಾಡಿ ಶಿಸ್ತಿಗೆ ಕೂಡಿದರು.

ಅನಂತರದಲ್ಲಿ ಮಕ್ಕು ತಮ್ಮ ನವರತ್ನ ಖಚಿತವಾಗಿ ಮಾಡಿಶಿ, ಲಾಲಕಿಯಂಬ ಹೆಸರು ಯಿಟ್ಟು, ಅದರ ಮೇಲೆ ಕೂತು ಯಿದ್ದಾಗೆ[>ನ]ಯಂಬ ನೊಚ್ಚಾದ ವರ್ತಮಾನವನ್ನು ಮೊಗಲರು ನಿಜಾಮಲ್ಲಿಖಾನ್ನನು[>ನ] ತಂದೆ ಖಿಲಜಿಖಾನರ್ರು ಕೇಳಿ, ದಂಡು ತೆಗಶಿಕೊಂಡು ಬಂದು, ಬನವಶಿ ಬಳಿಯ ನಿಂತು ಯಿರ್ರಲಿಕ್ಕೆ, ಸೋಮಶೇಖರನಾಯಕರು ಸುಭೇದಾರ ಲಿಂಗಪ್ಪನ ಕಳುಹಿಸಿ, ಮಧ್ಯಸ್ಥವನ್ನು ಮಾಡಿ ೩ ಲಕ್ಷ ವರಹಾವನ್ನು ಕೊಟ್ಟು, ಹೇರಳ ದ್ರವ್ಯ ಗುನ್ನಗಾರಿಯನ್ನು ಕೊಟ್ಟು ಹಿಂದಕ್ಕೆ ಕಳುಹಿಸಿದರು. ಲಾಲಕಿ ಯಂಬವದು ಅಲ್ಲಿಗೆ ಹತ್ತೋದು ಬಿಟ್ಟರು.

ಅನಂತರದಲ್ಲಿ ಸುಬ್ರಮಣ್ಯ ಪರಿಯಂತ್ರಕೂ ಹೋಗಿ, ಕೊಡಗಿನ ವೀರರಾಜನವರ ಭೇಟಿ ತೆಗೆದುಕೊಂಡು, ಕೊಲ್ಲೂರಿಗೆ ಬಂದು, ಅಲ್ಲಿಂದಾ ಶಿವಮೊಗ್ಗಿ ವಳಗೆ ಮಂಡ್ಲೇಮಠದ ಚಪ್ಪ[>ವ್ವ]ಡಿಯಂಬುವ ಶಕ್ತಿಗೆ ಗೋಡೆ ಹಾಕಿಶಿದ್ದರಿಂದಾ ಆ ಶಕ್ತಿ ಉಪಾದಿಯಿಂದಾ ಸತ್ತನು. ಅಲ್ಲಿಗೆ ಆಳಿದ ವರುಷ ಶಕ ೧೬೩೬ನೇ ಜಯಸಂವತ್ಸರ ಲಾಗಾಯಿತು ಶಕ ೧೬೬೧ನೆ ಸಿದ್ಧಾರ್ಥಿ ವರಿಗೆ ಆಳಿದ ವರುಷ ೨೪, ತಿಂಗಳು ೪, ದಿನ ೪, ಯಿವರ ಕಾಲದಲ್ಲಿ ಪರಾಭವ ಸಂವತ್ಸರದಲ್ಲಿ ಬಾಜೀರಾಯರು ಬಂದು ಹೋದ ಮೇಲೆ ಡೋಗಿಬರಯಂಬುವದು ಬಂತು.

*ಅನಂತರ ಈ ಸೋಮಶೇಖರನಾಯಕರ ಅಣ್ಣ ವೀರಭದ್ರನಾಯಕರ ಮಗ ಚಿಕ್ಕ ಬೂದಿಬಸಪ್ಪನಾಯಕನು ಆಳಿದನು. ಯೀತನ ಕಾಲದಲ್ಲಿ ಪುನಹಾರ[>ದ] ನಾಳಾ[>ರಾಯಣ]ರಾಯರು ಅಂಗೀರಸ ಸಂ॥ ಪಾಲ್ಗುಣಮಾಸದಲ್ಲಿ ಫಉಜು ತೆಗೆದುಕೊಂಡು ಬಂದು, ತುಂಗಭದ್ರಾತೀರದ ಕೂಡಲಸಂಗಮದಲ್ಲಿ ಯಿಳಿದು ಯಿರಲಿಕ್ಕೆ, ಸಲ್ಲಾದ ಮೇಲೆ ೩॥೦ ಲಕ್ಷದ ಯಿಕ್ಕೇರಿ ವರಹಾ ಕೊಟ್ಟು ಹಿಂದಕ್ಕೆ ಕಳುಹಿಸಿದರು. ಆ ಕಾಲದಲ್ಲಿ ರಾಜ್ಯದ ವರಹಾ ೧ಕ್ಕೆ ಹೊನ್ನುವಟ್ಟಿ ಮೇರಿಗೆ ಆಡುಹಲ್ಲಿ ಚನ್ನಪ್ಪಯ್ಯಯೆಂಬ ಯೊಬ್ಬ ಕರಣಿಕರು ೧೮ ಲಕ್ಷದ ಶೀಮೆಗು ಮಾಡಿದ ಕಾರಣ ಬ್ರಾಹ್ಮಣರ ಮಠಮಾನ್ಯಕ್ಕೆ ಭಟ್ಟರಲ್ಲಿ ಅಗ್ರಹಾರಕ್ಕೆ ದೇವತಾರಾಧನೆಗೆ ಸಹಾ ವರಹಾ ೧ಕ್ಕೆ ೧೦೫೦ ವರಹಾ ಕಾಣಿಕೆ ಹಾಕಿ ಉಪಾಧಿ ಮಾಡಿದ್ದರಿಂದ, ಪ್ರಜೆಗಳು ಮಹಾಕೂಟ ಕೂಡಿ ಮೂರು ಲಕ್ಷದ ಮಂದಿ ಯೇಕವಾದರಿಂದಾ ಆ ಸಮಯದಲ್ಲಿ ಬಸಪ್ಪನಾಯಕರು ಪ್ರಜೆಗಳನ ಕರಸಿ, ರಜಾವಂದಿ ಮಾಡಿ ಶ್ರೀಮುಖ ಸಂವತ್ಸರದಲ್ಲಿ ಯೀ ಪಟ್ಟಿ ಯಾವತ್ತು ಬಿಟ್ಟು ವರಹಾ ೧ಕ್ಕೆ ೨೧।೦ ಚವಲದ ಮೇರಿಗೆ ನಿಗದಿ ಮಾಡಿ, ಸ್ವಾಸ್ತಿವಂತರಿಗೆ ವರಹಾ ೧ಕ್ಕೆ ವಂದು ಹೊನ್ನು ಪಗಡಿ ಮಾಡಿಸಿ ಸಿಸ್ತಿಗೆ ಯೇರಿಸಿ ಕಳುಹಿಸಿದರು.

ಆ ಲಾಗಾಯಿತು ಶೀಮೆ ಮೇಲೆ ಮರಾಟೆಯವರು ಪಟ, ವರಹಾ ವಂದಕ್ಕೆ ದಫೆ ೫೨॥ ಧಾರಣದ ಮೇರಿಗೆ ನಿಗದಿ ಆಯಿತು. ಶ್ರೀಮುಖ ಸಂವತ್ಸರಕ್ಕೆ ೧೬ ಲಕ್ಷ ರೂಪಾಯಿಯ ಪಗಡಿ ಕೊಟ್ಟದು, ಮರಾಟೆಯವರಿಗೆ ಕೊಟ್ಟರು. ಭಾವ ಸಂವತ್ಸರದಲ್ಲಿ ಮಾದೋಜಿಯಂಬವ

– ಸೋಗಾನಿ ಅಗ್ರಹಾರದ ಕೈಫಿಯತ್ತು – ೨ರಲ್ಲಿ (ಪು.೧೬೬–೧೬೭) ಇಷ್ಟು ಭಾಗ ಕಂಡುಬರುತ್ತದೆ (ಸಂ).

ಬಂದು ಚಡಿಯ ಆನವಟ್ಟಿ ಯಿಕ್ಕೇರಿ ಸಹಾ ತೆಗೆದುಕೊಂಡದರಿಂದಾ ೧೨ ಲಕ್ಷ ರೂಪಾಯಿ ಕೊಟ್ಟು, ಮರಾಟೆಯವರ ಕಡೆಯಿಂದ ಯೀ ಗ್ರಾಮಗಳನ್ನು ಬಿಡಿಶಿಕೊಂಡರು. ಯೀ ಮೇರಿಗೆ ಆದರಿಂದಾ ಶ್ರೀ ಶಕ ವರುಷ ೧೬೬೧ನೇ ಸಿದ್ಧಾರ್ಥಿ ಲಾಗಾಯಿತು ಶಕ ವರುಷ ೧೬೭೬ನೇ ಭಾವ ಸಂವತ್ಸರದ ವರಿಗೆ ವರುಷ ೧೫, ತಿಂಗಳು ೪ ಆಳಿದರು.

ಅನಂತರದಲ್ಲಿ ಯಿವನ ಹೆಂಡತಿ ವೀರಮ್ಮಾಜಿಯವರು ಆಳಿದ್ದು ಚಿತ್ರಭಾನು ಸಂ। ಮಾರ್ಗಶಿರ ಶು॥ ೨ ಆದಿತ್ಯವಾರ ಪರಿಯಂತ್ರಕು ವರುಷಾ ೧ಕೆ ಮರಾಟೆಯವರಿಗೆ ೧೨ ಲಕ್ಷ ರೂಪಾಯಿ ಕೊಟ್ಟುಕೊಂಡು ರಾಜ್ಯವನಾಳಿದರು. ಯಿದ ಪ್ರಕಾರ ಚಿತ್ರಭಾನು ಸಂ।ವರಿಗೆ ಆಳಿದರು. ಆಗ್ಯೆ ಕಂದ ರಾಜಪ್ಪಯ . . . . ಮಗ ಕುತುಕ . . . . ಚಿತ್ರಭಾನು ಸಂ। ಆಳುತಿರುವಾಗೆ ಸ್ತಳಕೆ ಆಲ್ಲು. . . .? . . ಬಂದು ಬಿದರೂರ ತೆಗೆದುಕೊಂಡು, ವೀರಮ್ಮಾಜಿಯವರನ್ನು ಕೈಸೆರೆ ಹಿಡಿದು, ಮದ್ದಗಿರಿ ವಳಗೆ ಯಿಟ್ಟರು. ಯೀ ಬಿದರೂರ್‍ರಿಗೆ ಹೈದರ ನಗರಯಂಬ ಹೆಸರು ಯಿಟ್ಟರು. ಈ ಚಿತ್ರಭಾನು ಸಂ। ಆರಭ್ಯ ನಗರಯೆಂಬ ಹೆಸರು ಬಂತು. ಯೀತನು ಶೋಭಕೃ ಸಂ। ವರಿಗೆ ಶಿರದ ಯಿಪ್ಪತ್ತನಾಲ್ಕು ವರುಷ ಪರಿಯಂತ್ರ ರಾಜ್ಯವಾಳಿದನು. ಯಿದಕ್ಕೆ ಪೂರ್ವದ . . . . ಆ ಮೇಲೆ ಯೀತನ ಮಗ ಟಿಪ್ಪುಸುಲ್ತಾನ 'ಪಚ್ಚಾಯಿ' ಅನಿಸಿಕೊಂಡು ಶಿದ್ಧಾರ್ಥಿ ಸಂ।ದ ಪರಿಯಂತ್ರ ಯಿತ ಬ. ೭೦[>೭] ಶನಿವಾರ ಪರಿಯಂತ್ರ ಆಳಿದ. ಅಲ್ಲಿಗೆ ಶ್ರೀರಂಗಪಟ್ಟಣ ಯಿಂಗ್ರೇಜಿಯವರು ತೆಗೆದುಕೊಂಡರು. ಆ ಮಧ್ಯದಲ್ಲಿ ರುಡಿಯಾ ಆವಾಂತ್ರ . . . ತಾ, ೩ ಆಮೇಲೆ ಯೀಚಿಗೆ ಶ್ರೀಮಂತ ಪೂರ್ಣಯ್ಯನವರ . . . . ತರ್ಪಿಕ್ಕೆ ಸಾಗರ್‍ರ ಯೀ ಕ್ಷಯ ಸಂವತ್ಸರಕ್ಕೆ ನಡಿಯುತ್ತ ಯಿದೆ. ನರಶಿಂಹರಾಜವಡೆಯರವರಿಂದ ಸವಾರ್ಧಿಕಾರಿಗಳಾಗಿ ನಡಸುತ್ತಾ ಯಿದ್ದಾರ್‍ರೆ.

ಟೀಪುಸುಲತಾನ ಕಾಲಕ್ಕೆ . . . .ಧಾರಣ ಸಂ.ದಲ್ಲಿ ಮಹಾರಾಜ ಪರಶರಾಮಭಾಉ ಕಡೆ ಕುಂದಗೋಳದ ಕೆಂಚನ್ನಗವುಡನು ಸಾಧಾರಣ ಆಶ್ವೀಜ ಮಾಸ ಲಾಗಾಯಿತು ಪರಿಧಾವಿ ಸಂವತ್ಸರ ವೈಶಾಖ ಮಾಸದ ವರೆಗೆ ವರುಷ ೧, ತಿಂಗಳು ೮ ಆಳಿದ. ಆಮೇಲೆ ಮತ್ತು ಟೀಪುಸುಲತಾನ ಬಂದನು. ಯೀ ಕಾಲದಲ್ಲಿ ಬರ್‍ರ[>ಬರ] ಬಂದು ಯಿತ್ತು. ವರುಷ ೨.

ಯೀ ಸಾಗರದ ವಂಶದವರ ವೀರಪ್ರಕರಣ ರಾಜಕ್ಯ ಮೊದಲಾಗಿ ಅರ. ಕಲೆ . . . . ಬರದು ಯಿದೆ. ಯಿನ್ನು ಕೊಟ್ಟ ಸ್ವಾಸ್ತಿ ಉತ್ರಿಗೆ ಕೊಟ್ಟ ಶಿಲಾಶಾಸನಗಳು ತಾಂಬ್ರಶಾಸನ ನಿರೂಪಕ್ಕೆ ಸಹಾ ನಕಲು ನಖಿಮುಖವಾಗಿ ಯೀ ಶೀಮೆಗಳಲ್ಲಿ ಅನೇಕ ಸ್ಥಳಗಳಲ್ಲಿ ದೊರದದೆ.

ಸಾಗರದ ಪೇಟೆಯಿಂದ ಚತುರ್ದಿಕ್ಕಿಗೂ ಹೋಗಿ ಬರುವ ದಿನ್ಸಿನ ವಿವರ:

ಮೆಣಸಿನ ದಿನ್ಸು, ಅಡಿಕೆ ದಿನ್ಸು ೧ಕಿ ವಿವರ, ಪೂರ್ವದಿಕ್ಕಿನಲ್ಲು:

೧ ವಾಲಾಜಿಪೇಟೆ	೧ ಕುಂದನೂರುಪೇಟೆ	೧ ಕಡರಿಪೇಟೆ
೧ ಕುಂಭದಪೇಟೆ	೧ ಕಾದರಾಬಾದು	೧ ಕಂದಕೂರ್‍ರು
೧ ನಗರಗೇರ್‍ರೆ	೧ ಮೊಳಕಾಲಮೂರ್‍ರು	೧ ರಾಯದುರ್ಗ
೧ ವುರವಕೊಂಡೆ	೧ ಒನಗಾನಹಳ್ಳಿ	೧ ಕಾಜೀಪೇಟೆ
೧ ಚರಮೇಲೆ[>ಜರಿಮಲೆ] +	೧ ಬಳ್ಳಾರಿ +	೧ ತಾಡಪತ್ರಿ
		೧೫

ಯೀ ಮೊದಲಾದ ಗ್ರಾಮದ ಪೇಟೆ ಪಯಿರ್ರುದಾರು ಅಡಿಕೆ ತುಂಬುವದು ಸೇ ೧ಕೆ ಯಿಕ್ಕೇರಿ ವರಹಾಗಳು ೮೦. ತೂಕು ಪ್ರಮಾಣ ಸೇ ೧೫ಕೆ ವಂದು ಧಡೆಯು.

ಯಿಂಥಾ ಧಡೆಗಳು ೪ಕೆ ಮಣಗಳು ೧. ಮ ೧೪।೦ಕ್ಕೆ ವಂದು ನಿಜಿಯಾ. ನಿಜವು ೧ಕ್ಕೆ ಖರೀದಿ ಯಿಕ್ಕೇರಿ ವರಹಾ ಗ ೯೬೦ಕ್ಕೆ

ಗ ೪

೧೩೬೦ ಹಾಲಿತ್ರಯಂದರೆ ಸ್ಥಳದ ಸುಂಕ ನಿಜ ೧ಕ್ಕೆ ಯಿಕ್ಕೇರಿ ವರಹ ಶಿಕಾರಿಪುರ ಗಡಿಬಿಟ್ಟು ಪರಿಯಂತ್ರ

ಯೀ ಮೇರೆಗೆ ನಿಜ ೧ಕ್ಕೆ ಯಿಕ್ಕೇರಿ ವರಹಾ ಗ ೧೩೬೦ ಕೊಟ್ಟು ಅಡಿಕೆ ತೆಗೆದುಕೊಂಡು ಹೋಗುತ್ತಿಯದ್ದಾರೆ.

ಮೆಣಸು ತುಂಬು ಸದರಿ ಮಣಗಳು ೧೨ಕೆ ನಿಜ ೧ ಯಿಕ್ಕೇರಿ ಖರೀದಿ.

ಯಿಕ್ಕೇರಿ ವರಹಾಗಳು	೧೨೬೦
ಹಾಳತ್ತದ ಸುಂಕ ಕೊಡುವದು	೪೬೦
	೧೬೬೦

ಯೀ ಮೇರಿಗೆ ನಿಜ ೧ಕ್ಕೆ ಯಿಕ್ಕೇರಿ ಗ ೧೬೬೦ ವರಹಾ ಕೊಟ್ಟು ತೆಗೆದುಕೊಂಡು, ಮೆಣಸು ಸಾಗು ಮಾಡುತ್ತಯಿದ್ದಾರೆ.

ತೋಟದ ಮೆಣಸು

೨ ಉತ್ತರ ದಿಕ್ಕಿನಲ್ಲು ಹಾವೇರಿ ಹುಬ್ಬಳ್ಳಿ, ಪಶ್ಚಿಮ ದಿಕ್ಕಿನಲ್ಲು ಹೊನ್ನಾವರ ಪೇಟೆ ಭಟ್ಕಳು ಪೇಟೆ[1] – ಯೀ ನಾಲ್ಕು ಪೇಟೆಯವರ್ರು ಮೆಣಸು ಸಾಗಿಸುತ್ತಾ ಯಿದ್ದಾರೆ. ಲವಂಗದ ಮೊಗ್ಗೆ ಸದರಿ ಮೇರಿಗೆ ಮ ೧೨ಕ್ಕೆ ನಿಜ ೧ಕೆ ಖರೀದಿ

ಯಿಕ್ಕೇರಿ	೪॥೦ ವರಹಾ
ಹಾಳತದ ಸುಂಕು	॥ ೦
	೫೬೦

ಯಿದು ಅಲ್ಪಸ್ವಲ್ಪ ಆಗುತ್ತದೆ. ಉತ್ತರದಿಕ್ಕಿನವರು ೧ ಹಾವೇರಿಪೇಟೆ, ೧ ಹುಬ್ಬಳ್ಳಿ ಪೇಟೆ = ೨ ಯೀ ಪೇಟೆಯವರು ತೆಗೆದುಕೊಂಡು ಹೋಗುತ್ತ ಯಿದ್ದಾರೆ.

ದಾಲಚಿನ್ನಿ ಆಗೋದು ಯಿಲ್ಲಾ. ಯಾಲಕ್ಕಿ ಸ್ವಲ್ಪ ಆಗುತ್ತದೆ. ಯಿದು ಮಾರುವದು ಯಿಲ್ಲಾ. ತಮ್ಮ ಮನೆ ಬಳಕೆಗೆ ಮಾಡುತ್ತಾ ಯಿದ್ದಾರೆ.

---

೧ + ಪಶ್ಚಿಮ ದಿಕ್ಕು (ಮೂ)

ಅಕ್ಕಿ ರಾಗಿ ಶಿರಾಳಕೊಪ್ಪಕೆ ಹೋಗುತ್ತ ಯಿದೆ. ಗಂಧದ ಯೆಣ್ಣೆ ಯಿಕ್ಕೇರಿ ವರಹಾ ೮೦ ತೂಕಕೆ ಸೇ ೧ ಕ್ಕೆ ಖರೀದಿ ಯಿಕ್ಕೇರಿ ಗಂ॥೦.

ಯಿದು ಪಶ್ಚಿಮದಿಕ್ಕು ಕೊಡಿಯಾಲ ಪೇಟೆ, ಬಟ್ಟೆಗಳ ಪೇಟೆ = ೨.

ಯೀ ದಿನ್ಸುಗಳನ್ನು ೧ ಕಂಬಾ, ೧ ಕಂದನೂಲು, ೧ ಕಡಪದ ಪಟ್ಟೆ, ೧ ತಾಡಪ್ರತಿ ೧ ಕಾದರಾಜಮ, ೧ ಕಂದಕೂರ್‍ರು, ೧ ಬನಗಾನಹಳ್ಳಿ, ೧ ನಗರಿಗೇರ್‍ರಿ, ೧ ಬರಿಮಾಲೆ ಯೀ ಮೊದಲಾದ ಗ್ರಾಮದವರು ತೆಗೆದುಕೊಂಡು ಬರುತ ಯಿದ್ದಾರೆ.

ಉತ್ತರ ದಿಕ್ಕಿನಲ್ಲು ಹುಬ್ಬಳ್ಳಿ+ಹಾವೇರಿ=೨

ಒಟ್ಟು ಯೀ ನಾಲ್ಕು ಪೇಟೆಯವರು ತೆಗೆದುಕೊಂಡು ಹೋಗುತ್ತಯಿದ್ದಾರೆ. ಗಂಧ ಸರ್ಕಾರದ್ದೆ ಹೊರತು ರೈತರದು ಯಿಲ್ಲಾ. ಆದಕಾರಣ ನಗರಕ್ಕೆ ಸಾಗಿ ಹೋಗುತ್ತಾ ಯಿದೆ. ಯಿದರ ಬೇರ್‍ರು ಯಂಣೆ ಬಗ್ಗೆ ಮ ೨೦ಕೆ ಖಂಡೀ ೧ಕ್ಕೆ ಯಿಕ್ಕೇರಿ ವರಹಾ ಗ೧೫ ಯಿದಕ್ಕೆ ಸುಂಕವಿಲ್ಲ.

ಸಾಗರದ ಪೇಟೆಗೆ ಬರುವ ದಿನ್ಸುಗಳು, ಪೂರ್ವದಿಕ್ಕಿನಿಂದ ಸದರಿ ಪೇಟೆಗೆ ೧೫ ಮೊದಲಾದ ವರ್ತಕರು ತರುವದು.

೧ ಚವಲಿ ದಿನ್ಸು

೧ ಬಿಳೆದು

೧ ಕರ್‍ರದು

೧ ಕೆಂಪು

೧ ಪಟ್ಟು ರೇಶಿಮೆ

೪

೧ ಹೊಗೆಸೊಪ್ಪು ತೂಕ ೧ಕೆ ಗ ೪॥

೧ ಜೀರಿಗೆ ಮ.೧ಕೆ ಗ೧॥

೧ ಕಂಬಳಿ ಗ. ೧ಕೆ ೮೬

೧ ತುಪ್ಪಾ ಮ. ೧ಕೆ ಬ. ೧॥ ೨॥

೧ ಯಣ್ಣೆ ಮ. ೧ಕ್ಕೆ ಗ.೧

೧ ಕಬ್ಬಿಣ ಮ. ೧ಕ್ಕೆ ಗ. ೦॥೧।೦

೧ ಗೋಣಿ ತಟ್ಟು

೧ ಕರ್ಬಿಕಾಗದ

೯

ಪಶ್ಚಿಮ ದಿಕ್ಕಿನಲ್ಲು ಬರುವ ದಿನ್ಸುಗಳು:

೧ ಕಾಳು ವ. ೧ಕೆ ಗ. ೦॥೦

೧ ಟೆಂಗಿನ ಕಾಯಿ

೧ ಟೆಂಗಿನ ಹಗ್ಗ

೧ ಹುರಿವ ಗೆರಿ

೧ ವುಪ್ಪು ಗ. ॥೦ ಪಡಿ ೧೬ಕ್ಕೆ ಪಕ್ಕಗೆ ೬೪ ಕೊಡಕೆರಿ

೧ ಟೆಂಗಿನ ಯೆಣ್ಣೆ ಮ. ೧ಕೆ ಗ. ೧೯೨॥೦

೧ ಬಾಶಿ ಕಾಗದ

ಸದರಿ ದಿನ್ಸು ತರುವವರು:

೧ ಬಟ್ಟೆಗಳ[>ಬಟ್ಟಕಳ] ಪೇಟೆಗಟ್ಟೆ

೧ ಗೆರ್‍ರೆಸೊಪ್ಪು ಗಟ್ಟೆ

೧ ಬೈದರೂರು[>ಬೈಂದೂರು]ಗಟ್ಟೆ

ಯೀ ಮೂರು ಘಟ್ಟದ ಕಡೆಯಿಂದಾ ಸದರಿ ದಿನ್ಸು ಬರುತ್ತಾ ಯಿದೆ.

ಉತ್ತರ ದಿಕ್ಕಿನಲ್ಲು ಬರುವ ದಿನ್ಸು:

ಶ್ರವಣೂರ್‍ರು ಸೀಮೆಯಿಂದ

೧ ಹಾವೇರಿಯಿಂದ

೧ ಚಾಕಾಯಿ	೧ ಲವಂಗ
೧ ಚಾ[>ಜಾ]ಪತ್ರಿ	೧ ಯಿಂಗು
೧ ಸಕ್ಕರಿ, ರಾಗಿ ಮಶಿ	೧ ಅಫೀಮು
೧ ಚೂಣಿ ಸಕ್ಕರಿ	೧ ಜಾಯಿಪಳ
೧ ಕಲ್ಲುಸಕ್ಕರಿ	೧ ಕಟಕರೋಹಾಸ [>ರೋಹಿಣಿ]
೧ ಕರ್ಪುರ	೧ ಚಾಷ್ಟುಮರಾ[>ಜೇಷ್ಟಮದಾ]
೧ ಸಾಂಬ್ರಾಣಿ	೧ ತವರು
೧ ಬೆಗದಿ	೧ ಸೀಸ
೧ ಯಿಂಗಳೀಕ	೧ ಸತುವು

೧ ಹರಿದಾಳ್	೧ ತವಾರ್ರ
೧ ನೀಲಿ	೧ ಹಿತ್ತಾಳೆ
೧ ಅಂಟು	೧ ತಾಂಬ್ರಾ
೧ ಸಣಬಿನ ಹುರಿ	೨೫

ಯೀ ದಿನ್ಸುಗಳು ಮೊದಲಾದ ಬರುತಾಯಿವೆ. ವುತ್ತರ ದಿಕ್ಕಿನವು.

ಜವಳಿ ತರುವವರು

೧ ಲಕ್ಷ್ಮೇಶ್ವರ	
೧ ಗದುಗ	೧ ರ್ರೇಟೆಹಳ್ಳಿ
೧ ಬಟ್ಟಗೆರ್ರೆ	೧ ಮಾಸೂರ್ರು
೧ ಹುಬ್ಬಳ್ಳಿ	೧ ಹಲಗೆರೆ
೧ ಬಾಗಡಿಕೋಟೆ	೧ ತಿಳುವಲ್ಲಿ[>ಳ್ಳಿ]
೧ ನಾಗಪುರಿ	೧ ಆಲೂರು
೬ ಜವಳಿ ಬರುತ್ತಾ ಯಿದೆ	೬ ಯೀ ಮೊದಲಾದ ಗ್ರಾಮಗಳಿಂದ ಭತ್ತ ಮುಂತಾದ

೧ ಗೋದಿ	೧ ಹರಳಯೆಣ್ಣೆ	೧ ಅಜವಾನು
೧ ಬೇಳೆ	೧ ವಳ್ಳೆಂಣೆ	೧ ಅವರ್ರೆಕಾಳು
೧ ಕಡಲೆ	೧ ಹುಣಸೇಹಣ್ಣು	೧ ಹತ್ತಿಕಾಳು
೧ ವುಪ್ಪು	೧ ಸಾಸವಿ	೧ ಹತ್ತಿ
೧ ಹೆಸರು	೧ ಕೊತ್ತಂಬರಿ	೧ ಮೆಣಸಿನಕಾಯಿ
೧ ಮೆಂತೆ +	— +	೧೬

ಯೀ ಮೊದಲಾದ ದಿನ್ಸುಗಳು ಬರುತ್ತಾಯಿವೆ.

❖❖

೩೮
ಸಾಲಿಗ್ರಾಮದ ಜೈನಬಸ್ತಿಯ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೨

ಪೂರ್ವದಲ್ಲಿ ಪಂಚದ್ರಾವಿಡ ಕುಂತಳದೇಶದಲ್ಲಿ ರಾಜಶಹಾಪುರ ಪಟ್ಟಣದಲ್ಲಿ ಸತ್ಯಜಿತ [>ಸತ್ಯಂಧರ] ಮಹಾರಾಯನ ಮಗ [1]ಜೀವಂಧರರಾಯಾ, ಅವನ ಮಗ ಯೆಸೆಲೋ[>ಯಶೋ]ಧರ, ಅವನ ಮಗ ಗೋ[>ಗು]ಣಪಾಲರಾಜಾ, ಅವನ ಮಗ ಯಶಪಾಲರಾಜಾ, ಅವನ ಮಗ ಪ್ರಜಾಪಾಲ, ಅವನ ಮಗ ಗೋ[>ಗು]ಣಪಾಲ ಮೊದಲಾದ ದೊರಿಗಳ ರಾಜ್ಯಾಧಿಪತ್ಯವಾಗಿ, ಆಮೇಲೆ ಹಿಮಶೀತಲಮಹಾರಾಜಾ ಕಲಿವರುಷದಲ್ಲಿ ೧೨೫ ಸಂದ ವರ್ತಮಾನ ಪಿಂಗಳ ಸಂವತ್ಸರದಲ್ಲಿ ಮಹಾಶೀತಲಮಹಾರಾಜನ ಸಭೆಯಲ್ಲಿ ಜಯಿನ ಬೌವುದ್ಧ ಸಂವಾದದಲ್ಲಿ, ಅಕಳಂಕಸ್ವಾಮಿಗಳು ವಾದದಿಂದಾ ಮಾಂಸಾಹಾರಿಗಳಾದ ಬವುದ್ಧರ ಜಯಿಸಿ, ದೇಶಭ್ರಷ್ಟರ ಮಾಡಿ, ಸಿಂಹಳದೀ[>ದ್ವಿ]ಪಕಾಗಿ ಕಳುಹಿಸಿ, ಕೆಲವು ಕಾಲಗಳು ಜಯಿನ ಪ್ರಭುಗಳೆ ರಾಜ್ಯ ಆಳುತ್ತಿದ್ದರು.

ಹರಿಭಕ್ತರಶಿಷ್ಯ[>ಹರಿವಿಕ್ರಮ, ಸಿಂಹ]ವಿಕ್ರಮಾ, ಶತರಥಾ, ಧರ್ಮರಥಾ, ನ್ಯಾಯರಥಾ ಮೊದಲಾದವರು ರಾಜ್ಯಾಧಿಪತ್ಯಮಾಡಿ ಅತಿಕ್ರಾಂತರಾಗಿ ಹೋದಮೇಲೆ, ಆ ವಂಶದಲ್ಲಿ ಹುಟ್ಟಿದ ಏಕಚಕ್ರಾದೀ[ತ+]ತ್ಯರ ಚಾವುಂಡಮಹಾರಾಯರು ದಕ್ಷಿಣಮಧುರೆ ಮೊದಲುಕೊಂಡು ಉತ್ತರಮಧುರೆ ಪರಿಯಂತ್ರ ಮೂವತ್ತುಮೂರು ಕೋಟಿ ಮೋಹರ ರಾಜ್ಯಾಧಿಪತ್ಯಮಾಡುವ ಕಾಲದಲ್ಲಿ, ಆತನು "ಪ್ರತಿದಿನವೂ ಶ್ರೀ ಜೈನಬಸ್ತಿ ಆಲಯನಿರ್ಮಾಣ ಹೊರ್ತು ಜಲಪಾನಮಾಡುವದು ಯಿಲ್ಲಾ" ಯೆಂದು ಪ್ರತಿಜ್ಞೆಗೈದು ಯಿದ್ದ ಕಾಲದಲ್ಲಿ, ಅನೇಕ ಸ್ಥಳಗಳಲ್ಲಿ ಅನೇಕ ಚೆತ್ಯಾಲಯ ಬಸ್ತಿಗಳು ಕಟ್ಟಿಸುತ್ತ ಬಂದು, ಶ್ರವನ ಬೆಳಗೊಳದಲ್ಲಿ ಕಲಿವರುಷ ೬೦೦ ಸಂದ ವಿಭವಸಂವತ್ಸರದ ಚೈತ್ರಶುದ್ಧ ೫ ಆದಿತ್ಯವಾರ ಹಸ[>ಹಸ್ತಾ] ನಕ್ಷತ್ರ ಶುಭಯೋಗ ಕುಂಭಲಗ್ನದಲ್ಲಿ ಗೋಮಟೇಶ ಪ್ರತಿಷ್ಟೆಮಾಡಿ, ಪ್ರಮಾಣ . . . . ದಕ್ಷಿಣ ಮಧುರೆಗೆ ಹೋಗುವಾಗೆ, ಮಾರ್ಗದಲ್ಲಿ ಮೆಲೂರು ಬಸ್ತಿಯನ್ನು ಚಾವುಂಡರಾಯ ಕಟ್ಟಿಸಿದನು.

ಯಿದು ಅಂಕಣ ೬ರ[>೬೪]: ಗರ್ಭಗೃಹಾ ಅಂಕಣ ೨, ಸುಕನಾಶಿ ಅಂಕಣ ೩, ಮಹಾಮಂಟಪಾ ಅಂಕಣ ೧೬, ಸಂಗೀತರಂಗಮಂಟಪ ೨೭, ಕ್ಷೇತ್ರಪಾಲ ಮಂಟಪ ಅಂಕಣ ೯ – ಅಂತು ೬೪ ಅಂಕಣ ಕಟ್ಟಿಸಿ, ಸುತ್ತ ಪ್ರಾಕಾರ ಉಪ್ಪರಿಗೆ ಮಾನಸ್ತಂಭಾ ಬಲಿಪೀಟಾ ಮುಂತಾಗಿ ಕಟ್ಟಿಸಿ, ಕೊರಂಮಟಾ[>ದೇಶೀಯಗಣ], ನೆ[>ಸೇ]ನಗಣಾ, ಕಾಳೋಗ್ರಗಣ, ಬಡೋತ್ರಿ[>ಬಳಾತ್ಕಾರ]

೧+ ದೀ (ಮಾ)

ಗಣಾಯಂಬ ನಾಲ್ಕು ಗಣದಲ್ಲಿ, ದೇಶ[>ಶೀಯ]ಗಣಪ್ರಮುಖರಾದ ಭದ್ರಬಾಹ್ಯಮ[>ಹುಮು]ನೀಶ್ವರಗುರುಗಳ ಅಪ್ಪಣೆಯಿಂದಾ ಈ ಕುಲದಲ್ಲಿ ೬೪ ಅಂಕಣ ಬಸ್ತಿ ದೇವಾಲಯದಲ್ಲಿ ಅನಂತನಾಥದೇವರ ವಿಗ್ರಹಾ ಪ್ರತಿಷ್ಟೆಮಾಡಿ, ಚಾವುಂಡರಾಯನು ಕಾಲತ್ರಯೋಚಿತ ಸೇವಾಸತ್ಕಾರ್ಯಗಳಿಗೆ ಅನುಕೂಲವಾಗಿ, ೨೫೦ ವರಹಾ ಮುಕ್ತಾಪುರವೆಂಬ ಗ್ರಾಮವನ್ನು ವುಮ್ಮಳಿ ಬಿಟ್ಟುಕೊಟ್ಟು, ದಕ್ಷಿಣ ಮಧುರೆಗೆ ಹೋಗುವ ಮಾರ್ಗಗಳಲ್ಲಿ ಅನೇಕ ಬಸ್ತಿಗಳಾ ಕಟ್ಟಿಸಿಕೊಂಡು ಮಧುರೆಗೆ ನಡದನು. ಜೈನ[>ಸೇನ]ಗಣಕ್ಕೆ ಸೇರಿದ ಮಟಗಳು ದಿಲ್ಲಿ, ಕೊಲ್ಲಾಪುರ, ಜಿನಕಂಬಿ[>ಚಿ], ಪೆನುಗೊಂಡೆ ಮೊದಲಾದ ಸ್ಥಳಗಳಲ್ಲಿ ಮಟಾ ಕಟ್ಟಿಸಿಕೊಂಡು ನಿಂತ್ತರು. ದೇಶ[>ದೇಶೀಯ] ಗಣದವರ ಸ್ತಾನಮಾನಗಳು ಹನಸೋಗೆ, ಹಾಸನ, ಮೂಡಬಿದರೆ, ಕಾರಕಳಾ, ಬೆಳಗೊಳಾ ಮೊದಲಾದ ಸ್ಥಾನಗಳಲ್ಲಿ ಮಟಾ ಕಟ್ಟಿಸಿಕೊಂಡು ಯಿದ್ದಾರೆ. ಕಾಳೋಗ್ರಗಣದವರು ಹೊಮ್ಮಚಾ, ವರ . . . . ಗಂಗವಾಡಿ, ರಜತಪುರಾ, ಅರುಣಾಪುರಾ ಮೊದಲಾದ ಸ್ಥಳಗಳಲ್ಲಿ ವಾಸಿಸಿಯಿದ್ದಾರೆ.

ದೇಶ[>ದೇಶೀಯ] ಗಣದ ಮೇಲೂರ್ರು ಬಸ್ತಿ ಆದೀಶ್ವರಸ್ವಾಮಿಯನ್ನು ಕೆಳ[>ಕಾಳೋಗ್ರ]ಗಣದವರು ಶಾಲಿವಾಹನಶಕ ವರುಷ ೧೫೫೫ನೆ ವಿಜಯ ಸಂವತ್ಸರದಲ್ಲಿ ಯೀ ಸಾಲಿಗ್ರಾಮಕ್ಕೆ ತೆಗೆದುಕೊಂಡು ಬಂದು ಪ್ರತಿಷ್ಟೆಮಾಡಿ, ಗೆಂಟ್ಟಿನ ಮನೆಗೂಡಿ ೨೫ ಅಂಕಣ ಕಟ್ಟಿಯಿಟ್ಟುಯಿದ್ದಾರೆ. ಮೇಲೂರು ಬಸ್ತಿದೇವಾಲಯ ಜಿರ್ನವಾಗಿ ಯಿದೆ. ಯೀ ಸಾಲಿಗ್ರಾಮದಲ್ಲಿ ಕಾಲತ್ರಯ ಪೂಜಾದಿಗಳು ಯತೋಚಿತವಾಗಿ ಯೀಗಲೂ ನಡದು ಬರುತ್ತಾ ಯಿದೆ. ಯಿದು ಸಾಲಿಗ್ರಾಮದ ಬಸ್ತಿಯ ಕೈಫಿಯತ್ತು.

❖❖

೩೯
ಸೂಳೆಕೆರೆ ಸೀಮೆ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೦

ಉಚ್ಚಂಗಿ ವೇಂಠಕೆ ಸಲ್ಲುವ ಭಾನುಮತಿಪಟ್ಟಣ ವಳಿತವಾದ ಕೇಸನಕೆರೆ ನಾಡು ೧, ಸ್ವರ್ಗಾವತಿ ಪಟ್ಟಣಕೆ ವಳಿತವಾದ ಸೂಳೆಕೆರೆ ನಾಡು ೧, ಉಭಯ ನಾಡು ೨.

ಶ್ರೀ ಸಿದ್ಧೇಶ್ವರದೇವರ ಉತ್ತಪತ್ಯ, ಸೂಳೆಕೆರೆ ಹುಟ್ಟಿದ ಸಂಗತಿ ವಿವರಾ: ಪ್ರಾಕು ಬಲ್ಲಾಳ ಹೊಯಿಸಳರಾಯ ರಾಜ್ಯವಾಳುವ ಕಾಲದಲ್ಲಿ ದೇವರು ಹುಟ್ಟಿದು ತುಂಗಭದ್ರಾಮಹಾತ್ಮೆಯಲ್ಲು ಹೇಳುವ ಪ್ರಕಾರ ಸ್ಕಂದ ಪುರಾಣೋತ್ತರ

॥ಶ್ಲೋಕ॥ ಕೃತೇ ಸಿದ್ಧಾಶ್ರಮಮಂ ಪ್ರೋಕ್ತ ತ್ರೇತಾಯಾಂ ನೀಲಕಂಧರ ।ದ್ವಾಪರೇ ಮರುತ್ತಂ ಪ್ರೋಕ್ತಂ ಕತಾ ರುಷ್ಯಾಶ್ರಮಮಂ ಸ್ಮೃತಂ ॥೧॥

ತುಂಗಭದ್ರಾನದಿಗೆ ಕೂಡಿರುವ ಹರಿದ್ರಾಸಂಗಮವಾಗಿರುವ ಬಳಿಯ, ಸಂಗಮೇಶ್ವರದೇವರು ಯಿದ್ದಾರೆ. ಯೀ ಕ್ಷೇತ್ರ ಸಪ್ತಕೋಶಾಧಿಕದಲ್ಲಿರುವ ಸುರಗಿರಿ ಪರ್ವತ ೧. ಯೀ ಪರ್ವತಾಗ್ರದಲ್ಲಿ ಸ್ವಯಂವೆಕ್ತನಾಗಿ ಯೀಶ್ವರ ಲಿಂಗರೂಪಿನಿಂದ ಸಮಸ್ತ ರುಷಿಗಳು ದೇವತ್ತಿಗಳು ಭೂಸುರರಿಂದ ಪೂಜಿತವಾಗಿ ಯಿದ್ದಾರೆ. ಯೀ ಪರ್ವತಕೆ ದಕ್ಷಿಣದಿಗ್ಭಾಗದಲ್ಲಿ ನರಶಿಂಹಸ್ವಾಮಿ ಯಿದ್ದಾರೆ. ಉತ್ತರದಿಗ್ ಭಾಗದಲ್ಲು ಲೋಕನಾಥ ಅಮ್ಮನವರು ಸ್ವಯಂವೆಕ್ತವಾಗಿ ಲಿಂಗರೂಪಿಂದ ಯಿದ್ದಾರೆ. ಪೂರ್ವದಿಗ್ಭಾಗದಲ್ಲಿ ಯೀ ಪರ್ವತದ ಸಮೀಪದಲ್ಲು ಅಂಜನೇಯದೇವಸ್ಥಾನ ೧, ವೀರಭದ್ರದೇವರ ದೇವಸ್ಥಾನ, ಯಿಂದ್ರದಿಕ್ಕಿನಲ್ಲು ದೇವಗಿರಿಪರ್ವತದಲ್ಲಿ ಹರಿಹರಾತ್ಮಕವಾಗಿ ಲಿಂಗರೂಪಿನಿಂದ ರಂಗನಾಥದೇವರು ಸ್ವವೆಕ್ತವಾಗಿ ಯಿದ್ದಾರೆ. ಯೀ ಪ್ರಕಾರ ಅತಿಮನೋಹರವಾಗಿರುವಂತ ಸ್ಥಳದಲ್ಲಿ ಮಹತ್ತವಾಗಿ ಬೆಳದು ಯಿದ್ದಲ್ಲಿ, ಯೀ ಬಲಾಳವಂಶಸಮಂಧ[>ಸಮುದ್ಧ]ರಣ ವಿಕ್ರಮರಾಜನು ಯೀ ಸ್ಥಳವನ್ನು ನೋಡಿ ಬಹಳ ಮನೋಲ್ಲಾಸವಾಗಿ ಕಂಡದರಿಂದಲು, 'ಪಟ್ಟಣವನ್ನು ಕಟ್ಟಬೇಕು' ಯಂಬದಾಗಿ ಆಲೋಚನೆಯ ಮಾಡಿ . . . . ಮ ಮೆಳೆ ಮಂಚಿರವದು ಕಡಸಿ, ಯೀ ಪರ್ವತದಲ್ಲಿ ಸ್ವಾಮಿಯವರು ಉದ್ಭವಿಸಿದ ಕಾರಣದಿಂದಲ್ಲೂ ಪಟ್ಟಣವನು ಕಟ್ಟಿ, ಸ್ವರ್ಗಾವತಿಯಂಬ ಹೆಸರಿಟ್ಟನು. ಯೀ ಪಟ್ಟಣದಲ್ಲು ಯಿದ್ದ ವಿವರ :

೭೦೦ ಅಗ್ನಿಹೋತ್ರಗಳು ಮಾಡುವ ಬ್ರಾಹ್ಮಂಬರು

೧ ವಾಸುದೇವದೀಕ್ಷಿತರು	೧ ಈಶ್ವರದೀಕ್ಷಿತರು
೧ ಶಿವದೀಕ್ಷಿತರು	೧ ನರುಶಿಂಹ ದೀಕ್ಷಿತರು
೧ ಸಾಂಬವದೀಕ್ಷಿತರು	೧ ಗೌರೀವರದೀಕ್ಷಿತರು
೧ ಕೃಷ್ಣದೀಕ್ಷಿತರು	೧ ಮಂಗಳಮೂರ್ತಿದೀಕ್ಷಿತರು
೧ ಮಲ್ಲಕಾರ್ಜುನದೀಕ್ಷಿತರು	೧ ವಿರೂಪಾಕ್ಷದೀಕ್ಷಿತರು
	೧೦

ಯೀ ಮುಂತಾದ ಮುಖ್ಯಸ್ಥರು ಸಹಿತವಾಗಿ ಯಿದ್ದ ಅಗ್ನಿಹೋತ್ರಿಗಳು, ಯೀಗಲೂ ಕೆರೆಶ್ಯಾಲಿ ವಳಿಗೆ ವಂದು ಕಲ್ಲು ದೃಚಿ ಸ್ತಂಭ ನಿಂತು ಯಿರುವದು. 'ದೀಕ್ಷಿತರ ಕಲ್ಲು' ಯಂಬುದಾಗಿ ಕರಸಿಕೊಳ್ಳುತ್ತದೆಯಾಗಿ ಮೇಲಾಗಿ ಅಧ್ಯಾಪಕ ಬ್ರಾಹ್ಮಂಬರು ಮನೆ ೧೦೦೦. ಯೀ ಸ್ಥಳದ ಶ್ಯಾನಭಾಗ ಬಡಿಗನಾಡ ಕನಡಿಗ ವಾಸಪ್ಪಣ್ಣ, ಆಶ್ವಾಯನೆ ಹೆಸರ್ರು ಕುಕ್ಕು[>ರುಕ್ಕು]ಶಾಖೆಯ ಹೊನ್ನರಸಯ್ಯ ಮೇಲಾಗಿ ಮುಂತಾದ ವಿನಿಯೋಗದವರು ಸಹಿತವಾಗಿ ಯಿಟ್ಟುಕೊಂಡು ಪಟ್ಟಣವನ್ನು ಆಳುತ್ತ ಯಿರಲಾಗಿ, ಹರಿದ್ರಾನದಿತೀರದಲ್ಲು ಸುರಗಿರಿಪರ್ವತದಲ್ಲು ಪ್ರಾಕು ಯುಗಾಂತ್ರದೆವಸ್ಥೆಯಲ್ಲು ಮೊದಲ್ಯು ರುಷೇಶ್ವರರಿಗೆ ಪ್ರತ್ಯೇಕ[>ಕ್ಷ]ವಾದಂಥಾ ಸಿದ್ದೇಶ್ವರಸ್ವಾಮಿಯ ದೇವಸ್ಥಾನ ಶಿಥಿಲವಾಗಿ, ದೇವರ ಮೇಲೆ ವಲ್ಮೀಕ ಬೆಳೆಗು ಯೀ ಪರ್ವತಲು ಮಹಾ ಅರಣ್ಯವಾಗಿದ್ದಲ್ಲಿ, ಯೀ ಅರಸಗೆ

ಗೋವಿನ ಹಿಂಡು ಬಹಳವಾಗಿದ್ದರಿಂದ, ಗೊಲ್ಲರು ಗೋವಿನ ಹಿಂಡುಗಳನ್ನು ಹೊಡಕೊಂಡು ಮೈಸುವದಕ್ಕೆ ಬರುತ್ತ ಯಿರವದರೊಳಗೆ, ಆ ಹಿಂಡಿನಲ್ಲಿ ಕಾಮಧೇನುಯಂಬ ನಾಮದ ಪಂಚಮ[>ಮೊ]ಲೆಯ ಗೋವು, ಹರಿದ್ರಾನದಿ ದಡದಲ್ಲು ಸುರಗಿರಿಪರ್ವತದಲ್ಲು ದಿನಚರಿ ಮೇದುಕೊಂಡು ಯಿದ್ದು, ಯೀ ಗುಡ್ಡದಲ್ಲಿರುವ ವಲ್ಮೀಕದ ಮೇಲೆ ಈ ಪಂಚಮೊಲೆಯ ಗಾಯತ್ರಿಯು ಸುರಭಿಯನ್ನು ಸುರಿಸಿಬರುತ್ತ ಯಿದ್ದಲ್ಲಿ, ರಾತ್ರೆಯಲ್ಲಿ ಮನೆಗೆ ಬಂದ ಗೊಲ್ಲನು ಆಕಳ ಹಿಂಡುಗಳ ಹಾಲು ಕರೆಯುತ್ತ ಯಿದ್ದಲ್ಲಿ, ಯೀ ಗೋವಿನ ಮೊಲೆಯಲ್ಲಿ ವಂದು ಧಾರೆಯಲ್ಲಿಯೂ ಹಾಲು ಬಾರದ್ದರಿಂದ, ದನಕಾಯುವ ಗೊಲ್ಲರು ಆಶ್ಚರ್ಯಬಟ್ಟು, ಯೀ ಗೋವಿನ ಚಾವಡಿ ಕೊಂಡುಹೋಗಿ ನೋಡುವದರೊಳಗೆ, ಅದೆ ಮೇರೆ ಗಾಯತ್ರಿಯು ವಲ್ಮೀಕದ ಮೇಲೆ ಸುರಭಿಯನೆರವುದ ಕಂಡು, ಪುನಃ ತಿರಿಗಿಬಂದು ಯೀ ವರ್ತಮಾನವನ್ನು ರಾಯನ ಬಳಿಗೆ ಬಿನ್ನೈಸಲಾಗಿ, ಆತನು ಪರಮಸಂತೋಷಿತನಾಗಿ, ಅರಸು ಯೀ ಪರ್ವತಕೆ ಬಂದು ನೋಡಿ, "ಯಿಲ್ಲಿ ಯೇನೊ ದೇವತಾ ವ್ಯಾಪಾರವದೆ"ಯಂದು ತಿಳಿದು, ಆ ತಕ್ಷಣದಲ್ಲಿ ಕಾಮದೇವ[>ಕಾಮಟಿಯವರ]ರನ್ನು ಕರಿಶಿ ಆ ವಲ್ಮೀಕವನು ಬಗಸಿ ನೋಡಿದಲ್ಲಿ, ಸಿದ್ಧೇಶ್ವರಸ್ವಾಮಿಯು ಶಿಲಾರೂಪದಲ್ಲಿ ಸ್ವಯಂವ್ಯಕ್ತವಾಗಿ ಲಿಂಗರೂಪವಾಗಿ ಯಿದ್ದಲ್ಲಿ, ಮಹತ್ತಾದಂತಾ ಪೂಜೆಯನ್ನು ಮಾಡ್ಸಿ, ದೇವಸ್ಥಾನವನ್ನು ಕಟ್ಸಿ, ದೇವತಾಸೇವೆಯಲ್ಲಿ ಪರಮಭಕ್ತಿಯಿಂದಲು ದೇವರ ಸೇವೆಯಲ್ಲಿ ಯಿದ್ದುಕೊಂಡು ಯಿರುತ್ತ, ಯೀ . . . . ಸ್ವರ್ಗಾವತಿ ಪಟ್ಟಣವನ್ನು ಆಳಿಕೊಂಡು ಸುಖದಲ್ಲಿ ಯಿರುತ್ತಾ ಯಿರಲು.

ವಂದಾನೊಂದು ದಿವ್ಸ ಯೀ ಪಟ್ಟಣದಲ್ಲಿ ವಬ್ಬಾ ಬಡವಿಗೆ ಹತ್ತು ಜನ ಗಂಡುಮಕ್ಕಳು ಯಿದ್ದದರಿಂದ, ಆಕೆಯು ತನಗೆ ಅನ್ನವಸ್ತ್ರವಿಲ್ಲದೆ ಮಕ್ಕಳ ಜೋಕೆಮಾಡಲಾರೆ, ಯೀ ಅರಸನಿಗೆ ವಬ್ಬಾ ಮಹದ್ರುಪನಾದ [>ಮಹದ್ರೂಪನಾದ] ಮಗನ ಕೊಟ್ಟದರಿಂದಲು, ಅರಸನ ಹೊಟ್ಟೆಯಲ್ಲಿ ಮಕ್ಕಳು ಯಿಲ್ಲದೆ ಮಹಾಯೋಚನೆ ಮಾಡುವಂಥ ವೇಳೇಲ್ಲಿ, ಬಡವಿಯು ಅರಸಿನ ಬಳಿಗೆ ಬಂದು "ಮಗನು ಸಾಕಲಾರೆನು"ಯಂದು ತಂದು ಕೊಟ್ಟದರಿಂದಲು, ಅರ್ಸು ಪರಮಸಂತೋಷದಿಂದಲು ಜೋಪಾನಮಾಡ್ಸಿ, ಅವನಿಗೆ ರಣಜಿರಾಯ ಯಂಬದಾಗಿ ಹೆಸರಿಟ್ಟನು. ಯೀ ಮೇರೆಗೆ ರಾಜ್ಯಭಾರವನ್ನು ಮಾಡುತ್ತಯಿರಲು ಯೀತನ ಹೆಂಡತಿ ನೂತನದೇವಿಯು ತನ್ನ ಹೊಟ್ಟೆಯಲ್ಲು ಸಂತಾನವಿಲ್ಲಯಂಬುದಾಗಿ ಮಹಾಯೋಚನೆ ಮಾಡಿಕೊಳ್ಳುತ್ತ ಯಿರುವಲ್ಲಿ, ಪ್ರಾಕು ದೇವಲೋಕದಲ್ಲಿ ಅಪ್ಸರಸ್ತ್ರೀಯು ಚಿತ್ರಶೋಭಿತೆಯಂಬ ಸ್ತ್ರೀಯು, ಬಹುಗ್ನಾನವಂತೆಯಾಗಿ ಆಕೆಯು ದೇವತೆಗಳ ಸಂಗಡಾ ಬಹುಕಾಲ ಪರ್ಯಟನ ಮಾಡಿಕೊಂಡು ಯಿರುತ್ತಿರಲು, ವಬ್ಬಾ ದೃಷ್ಟದ್ಯುಮ್ನನೆಂಬ ಗಾಂಧರ್ವನು ಯೀ ದೇವತೆಯ ಅಂಗಲಕ್ಷಣ ರೂಪಲಾವಣ್ಯವಂ ಕಂಡು, ಮಹಾ ಕಾಮುಕನಾಗಿ ಯೀಕೆ ಬಳಿಗೆ ಬಂದು, ದೃಢ ವೃತ್ತಿಗಳ ಮಾತನಾಡಿದಲ್ಲಿ "ಯಲೆ! ಗಾಂದರ್ವನೆ, ನೀನು ಕುಳಿತು ಯಿಂಥಾ ದುರ್ವ್ಯವಹಾರಗಳ ನಡಸಿದ ಬಳಿಕ ನರಮನುಷ್ಯರ ಪಾಡೇನಾಗಬೇಕಾಗಿ ಅದೆ, ಯಂದು ಯಷ್ಟು ಹೇಳಿದರೂ ಅವನು ಕೇಳದೇ ಹೋದರಿಂದಲೂ ಅವನಿಗೆ ಶಾಪವನ್ನು ಕೊಟ್ಟು, "ಯಿನ್ನು ಯೀ ಲೋಕದಲ್ಲಿರಬಾರದು" ಯಂಬದಾಗಿ ಸಂಚಾರಾರ್ಥವಾಗಿ ಸುರಗಿರಿ (ಸೂಳೆಕೆರೆ?) ಪ್ರಾಂತಕೆ ಬಂದು, ಯೀ ಸ್ಥಳವನ್ನು ನೋಡಿ ಮಹಾವಿಸ್ಮಯಂಬಟ್ಟು, 'ಯೀ ಸ್ಥಳ ಮಹಾಸ್ಥಳವಾಗಿ ರುಷ್ಯಾಶ್ರಮವಾಗಿ ಯಿದೆ' ಯಂಬುದಾಗಿ ಮಹಾದೃಢವಾಗಿ, ಯಿನ್ನು ಯೀ

ಸ್ತ್ರೀಜೀವನ ತೆಜ್ಸಿ ಸ್ವಾಮಿಪಾದ ಮುಕ್ತಳಾಗಬೇಕೆಂಬುದಾಗಿಯೂ, ಯೀ ಪರ್ವತದ ತಪ್ಪಲಲ್ಲಿ ಶ್ರೀಪರಮೇಶ್ವರನ ಕುರಿತು ವಂದು ಸಂವತ್ಸರದ ಪರಿಯಂತ್ರ ವಾಯು ಆಹಾರವಾಗಿ ತಪಸ್ಸು ಮಾಡಿದ್ದರೊಳಗೆ ಭಕ್ತಿಗೆ ಮೆಚ್ಚಿ, ಸ್ವಾಮಿಯು ನಿಜರೂಪಧರಿಸಿ ಅಪ್ಪಣೆ ನಿರೂಪಿಸಿದಲ್ಲಿ "ಮುಂದೆ ನಿನ್ನಿಂದ ಮಹತ್ತರ ಕೆಲಸವಾಗಬೇಕಾಗುತ್ತದೆ. ಆ ಬಗ್ಯೆ ಈ ಪಟ್ಟಣದ ಅರಸನ ಹೆಂಡತಿ ಹೊಟ್ಟೆಯಲ್ಲಿ ಜನ್ಸು. ನಿನ್ನಿಂದ ಬಹಳವಾಗಿ ಕೆಲಸವಾಗಬೇಕೆಂ"ಬ ಹಾಗೆ ಹರಕೆ ಸಲ್ಸಿ ಅದೃಶ್ಯವಾದರ್ರೂ.

ಯಿತ್ತಲಾಗಿ ಸ್ವರ್ಗಾವತಿಪಟ್ಟಣದ ಅರಸನ ಹೆಂಡತಿ ನೂತನದೇವಿಯು ತನಗೆ ಸಂತಾನವಿಲ್ಲಯಂದು ಶ್ರೀಸ್ವಾಮಿ ಕುರಿತು ಪ್ರಾರ್ಥನೆ ಮಾಡಿಕೊಳ್ಳುತ್ತ, ದಿನಚರಿಯಲ್ಲಿ ಸೇವೆ ಸತ್ಕಾರಗಳ ಮಾಡುತ್ತ ಯಿರಲ್ಲು, ವಂದು ದಿವ್ಸ ಸ್ವಾಮಿಯು ಸ್ವಪ್ನದಲ್ಲಿ ಬಂದು "ನಿನಗೆ ಗಂಡು ಸಂತಾನವಿಲ್ಲ, ವಬ್ಬ ಹೆಣ್ಣುಮಗಳು ಆಗುತ್ತಾಳೆಂ"ದು ಈ ನೂತನದೇವಿಗೆ ವಂದು ವಿಭೂತಿಯನ್ನು ಕೊಟ್ಟು, 'ನಿನಗೆ ವಬ್ಬ ಹೆಣ್ಣು ಮಗಳಾಗುತ್ತಾಳೆ' ಯಂಬುದಾಗಿ ಅಪ್ಪಣೆ ಕೊಟ್ಟದರಿಂದ ಅದೇ ಮೇರೆಗೆ ಅರ್ಸನ ಹೆಂಡತಿಯು ದಿನಚರಿಯಲ್ಲಿ ಯೀ ವಿಭೂತಿಯನ್ನು ಸೇವಿಸಲಾಗಿ, ವಂದು ತಿಂಗಳು ಮೊದಲಾಗಿ ನವಮಾಸ ತುಂಬಿ ಹೆಣ್ಣು ಶಿಶುಯ ಜನನವಾದಳು. ಜಾತಕರ್ಮ ನಾಮಕರ್ಣ ಪೂರ್ಸಿ, ಆಗ ಸ್ವಾಮಿಯವರ ಕುಮಾರವತಿಯಾದರಿಂದ ದೇವರ ಹೆಸರಿನಲ್ಲಿ ಶಾಂತಪರಮೇಶ್ವರಿ ಯಂಬುದಾಗಿ ಹೆಸರಿಟ್ಟರು.

ಅರಸು ಮಹಾಧರ್ಮಿಷ್ಠನಾಗಿ ಸ್ವಧರ್ಮದಿಂದ ಪ್ರಜಾಪಾಲನೆ ಮಾಡಿಕೊಂಡು ಯಿರುವದರೊಳಗೆ ಮಗಳು ಶಾಂತಪರಮೇಶ್ವರಿಗಿ ದ್ವಾದಶಸಂವತ್ಸರ ತುಂಬಿದರಿಂದಲು ವಿವಾಹಕೆ ಅಭ್ಯಗ್ರವಾಯಿತ್ತು. 'ಲಗ್ನವನು ಮಾಡಬೇಕು'ಯಂದು ಅರ್ಸು ತನ್ನೊಳು ಆಲೋಚನೆ ಮಾಡಿ, ಆಗ ಮಹಾವ್ಯಯದಿಂದಲೂ ರಾಜ್ಯದಲ್ಲಿ ವರಗಳನ್ನು ವಿಚಾರಿಸಿ, ತನ್ನ ಮಗಳು ಶಾಂತಪರವೇಶ್ವರಿಯನ್ನು ಕರದು "ನಿನಗೆ ಗಂಡ ಯಾರು ಆದರೆ ಆದೀತು?" ಯಂಬದಾಗಿ ಕೇಳಿದಲ್ಲಿ, ಯಾರನ್ನು ವಪ್ಪದೇ ಹೋದುದರಿಂದ ಅರಸು ತಿಳದು "ಶ್ರೀಸ್ವಾಮಿ ಅಪ್ಪಣೆಯಾದ ಮೇರೆಗೆ ಮಾಡಬಹುದು"ಯಂದು ನಿಶ್ಚಯಿಸಿದಲ್ಲಿ, ಅದೇ ಪ್ರಕಾರ ಶಾಂತಪರಮೇಶ್ವರಿಯು ಸುರಗಿರಿಪರ್ವತಕೆ ದೇವಸ್ತಾನಕೆ ಬಂದು, ಶ್ರೀಸ್ವಾಮಿಯ ಸೇವೆ ಮಾಡಿಕೊಂಡು ಬಹಳ ಭಕ್ತಿಯಲ್ಲಿ ತದೇಕಧ್ಯಾನದಲ್ಲಿ ನಿಜಭರಿತಳಾಗಿ ಸೇವೆಮಾಡಿಕೊಂಡು ಅನುಗಾಲ ಯಿರುತ್ತಾ ಯಿರಲು, ಸ್ವಾಮಿಯು ತನ್ನ ನಿಜರೂಪ ತೋರ್ಸಿದಲ್ಲಿ, ಯಿಕೆಯು ನೋಡಿ ಮಹಾವಿಸ್ಮಯಂಬಟ್ಟು, ಪರಮಸಂತೋಷಂಬಟ್ಟು, "ಯೀತನ ಹೊರ್ತು ಬದಲು ಪತಿಯೇ ಬೇಡ"ಯಂಬದಾಗಿ ಬಹುದೃಢಭರಿತಳಾದರಿಂದಲು, ಯೀಕೆಯ ಭಾವಕೆ ಮೆಚ್ಚಿ ಪರಮೇಶ್ವರನು ಮನುಷ್ಯಾಕೃತಿಯಿಂದ ದಿನಚರಿಯಲ್ಲಿ ನಿಶಾಕಾಲದಲ್ಲಿ ಬರುತ್ತಾಯಿದ್ದರು. ಬಂದಲ್ಲಿ ಚಿಂತೆ[>ಬೊಂತೆ] ಕೊಡಹಿದರಿಂದ ನಿತ್ಯದಲ್ಲಿ ಹಾಸಿಗೆಯಲ್ಲಿ ಬಹಳವಾಗಿ ಸುವರ್ಣಗಳು ಸಿಕ್ಕುತ್ತ ಯಿದ್ದಲ್ಲಿ, ಹಾಸಿಗೆಯಲ್ಲಿ ಉದರಿದಾ ವರ[>ಹ]ಗಳನ್ನು ಮರುದಿವಸ ಹಾಸಿಗೆ ತೆಗೆದಲ್ಲಿ, ಬಿದ್ದು ಯಿದ್ದ ವರಹಗಳನ್ನು ಬಳದು ಕೂಡಹಾಕಿ, ಬೊಗಶಿಕ್ಕೆ[>ಬೊಕ್ಕಸಕ್ಕೆ] ಹಾಕಿಕೊಳ್ಳುತ್ತ ಅನುಗಾಲವಾದರಿಂದ ದಿನಚರಿಯಲ್ಲಿ ಸಿಕ್ಕಿದ ದ್ರವ್ಯವು ಬಹಳ ಅಪಾರವಾಗಿ ಬಿದ್ದುದನು ನೋಡಿ, ಆ ಶಾಂತಪರಮೇಶ್ವರಿಯು ತನ್ನೊಳು ಯೋಚನೆಯನ್ನು ಮಾಡಿ, "ಯೀ ಸ್ತ್ರೀಜಲ್ಮವಷ್ಟಕ್ಕೆ ಸ್ಥಿರವಲ್ಲಾ. ಮುಂದೆ ಹೆಸರು ಉಳಿಯುವಂತೆ ಆಗಬೇಕು" ಯಂಬುದಾಗಿ ತಿಳಕೊಂಡು, ವಂದು ದಿವ್ಸ

ಸ್ವಾಮಿಯ ಕುರಿತು ಯೀ ವೃತ್ತಾಂತವನ್ನು ಬಿನ್ನೈಸಲಾಗಿ, ಆಗ ದೇವರು ಅಪ್ಪಣೆ ನಿರೂಪಿಸಿದ್ದು: "ಯೀ ಪರ್ವತದ ಮಗ್ಗಲಲ್ಲು ಹಾದುಹೋಗಿ ತುಂಗಭದ್ರಾನದಿಗೆ ಸಂಗಮವಾಗಿರುವ ಹರಿದ್ರಾನದಿಗೆ ವಡ್ಡ ಹಾಕಿ ಕೆರೆ ಕಟ್ಟಿಸು"ಯಂಬದಾಗಿ ಅಪ್ಪಣೆ ಕೊಟ್ಟಲ್ಲಿ, ಅದೇ ಮೇರೆಗೆ ತಂದೆ ವಿಕ್ರಮರಾಯನ ಬಳಿಗೆ ಬಂದು, ಯೀ ಪೂರ್ವತ್ರ ವಿಷಯವನ್ನು ಹೇಳಿ, "ಕಲ್ಲುವಡ್ಡರು, ಮೇಣು[>ಮಣ್ಣು]ವಡ್ಡರು ಸಹಾ ಕರಸಿಕೊಂಡು"ಯಂಬದಾಗಿ ಹೇಳಿದರಿಂದ ಆಗ ಬಂದು, ಕೆರೆ ಕಟ್ಟಿದ ವಡ್ಡರ ವಿವರ :

೧೦೦೦೦ ಮಣ್ಣುವಡ್ಡರ ನಾಗರ್ಸು ತನ್ನ ಜನವನ್ನು ಕರಕೊಂಡು ಸಾಯಂಕಾಲ ಪರಿಯಂತ್ರ ಮಣಿ[>ಮಣ್ಣು]ಕೆಲ್ಸವ ಮಾಡ್ಸಿ ಬಂದು, ಶಾಂತಪರಮೇಶ್ವರಿಯ ಮುಂದೆ ನಿಲ್ಲಲು, ಆಕೆಯು ವಡ್ಡರಿಗೆ ಗರ್ಭದಲ್ಲಿರು ಕೂಶಿಗೆ ಸಹವಾಗಿ ಹತ್ತು ಜನ ೧ಕ್ಕೆ ವಂದು ಸೊಲಿಗೆ ಹೊನ್ನ ಮೇರೆಗೆ ಕೊಡುತ್ತ ಬಂದಳು. ಕಲ್ಲುವಡ್ಡನು ತನ್ನ ಕಡೆ ಜನ ಅಸಂಖ್ಯವಾಗಿ ಜನವನ್ನು ಕೂಡ್ಸಿಕೊಂಡು ಯೀ ಮಹತ್ವಾದಂಥ ಕೆರೆಗೆ ವಂದು ತರ ಕಲ್ಲು ಕಟ್ಟಿ, ಸಾಯಂಕಾಲಕ್ಕೆ ಬಂದು ಅಮ್ಮನವರಿಗೆ ಹೇಳಿದಲ್ಲಿ, ವಂದು ಬಗ್ಸಿ ೧ಕೆ ಸೊಲಿಗೆ ವರಹಾದ ಮೇರೆ ಕೊಡುತ ಬಂದರು. ಯೀ ಪ್ರಕಾರ ಕೆರೆಯನ್ನು ಹತ್ತು ವರ್ಷ ಪರಿಯಂತ್ರದಲ್ಲಿ ಕಟ್ಟಿ ವಡ್ಡರಿಗೆ ಪಚ್ಚಿಕಡಗ, ಮುತ್ತಿನ ತುರಾಯಿ, ಝುವಿ ಸತ್ತಿಗೆ ಮುಂತಾದನ್ನು ಕೊಟ್ಟು ಕೆರೆಯನ್ನು ಕಟ್ಟಿಸಿದರು (ಮನ್ಮಥ ಸಂವತ್ಸರ). ಯೀ ಕೆರೆ ತೂಬು ಯಿರುವದು:

೧ ಪರ್ವತದ ಸಮೀಪದಲ್ಲಿರುವ ಸಿದ್ಧೇಶ್ವರ ತೂಬು

೧ ಯಿದರ ಮುಂ।ಕಡರಿ ತೂಬು

೧ ಸಾಂತ್ರಮ್ಮನವರ ಹೆಸರಲ್ಲಿ ತೂಬು

೩

ಯೀ ಮೂರು ತೂಬು ಹಚ್ಚಿ ಕೆರೆ ಕಟ್ಟಿದಾಯಿತು ೧. ಅಮ್ಮನವರ ಚಾಕರಿಯಲ್ಲಿ ಯಿದ್ದ ಗೌಡಿಯು ದಿನಚರಿಯಲ್ಲಿ ಕಸ ತೆಗವಲ್ಲಿ ಸಿಕ್ಕಿದಂತಾ ದ್ರವ್ಯವನ್ನು ಕೂಡಿಹಾಕಿ ಆಕೆಯು ಯೀ ಪರ್ವತದ ಪಶ್ಚಿಮಕ್ಕೆ ತನ್ನ ಹೆಸರಲ್ಲಿ ಕೆರೆ ಕಟ್ಟಿಸಿದಳು. ಯೀಗಲೂ ತೊತ್ತಿನಕೆರೆಯಂದು ಕರ್ಸಿಕೊಳ್ಳುತ್ತದೆ.೧.

ಹೀಗೆ ಕೆಲವು ದಿವ್ಸ ಯಿರುವಲ್ಲಿ ದಿನೆ ದಿನೆ ಕಲಿಯುಗ ಅಭಿವೃದ್ಧಿಯಾಗಿ ಪಾಪಹೆಚ್ಚಿದರಿಂದ ಸ್ವಾಮಿ ಅದೃಶ್ಯವಾದನು. ಆಗ ಶಾಂತಮ್ಮನು "ಸ್ವಾಮಿಯನ್ನು ಯಂದಿನಂತೆ ಕಾಣದೇ ಹೋದುದರಿಂದ ಜಲ್ಮವು ವ್ಯರ್ಥವಾಯಿತು. ಯಿನ್ನು ಮೇಲೆ ಯಿದ್ದು ಸಾರ್ಥಕ್ಯವಿಲ್ಲ" ಯಂದು ಮಹಾ ವೈರಾಗ್ಯದಿಂದಲು ಕಲ್ಲು ಕಟ್ಟಿದಂತ ಕೆರೆಯಲ್ಲಿ ಕಡರಿ ತೂಬಿನ ಬಳಿಯಲ್ಲಿ ನಿಂತು ಗಂಗಾಪೂಜೆಯನ್ನು ಮಾಡಿ, ಯಾವತ್ತು ಬ್ರಾಹ್ಮರಿಗೆ ಮುತ್ತೈದೆರಿಗೆ ಸ್ತೋತ್ರ ಷೋಡಶೋಪಚಾರ ಪೂಜೆಯನ್ನು ಮಾಡಿ, ತಾವು ಗಂಗಾಪ್ರವೇಶವಾದರು. ಆಗುವಾಗ್ಯೆ ಅಪ್ಪಣೆ ಕೊಟ್ಟದು "ನಮ್ಮಯ ಗುರ್ತುಗಳು ಕೆರೆಯ ಹಿಂದೆ ಯಾವ ಯಾವ ಸ್ಥಳದಲ್ಲಿ ಕಾಣುತ್ತದೆಯೋ ಆ ಸ್ಥಳದಲ್ಲು ಹರಿದ್ರಾಕರವಾಗಿದ್ದುದು"ಯಂಬುದಾಗಿ ಅಪ್ಪಣೆ ಕೊಟ್ಟರು. ಅದೇ ಮೆರೆಗೆ ಆಯಾ ಸ್ಥಳದ ಗ್ರಾಮಗಳ ಪಟ್ಟಿ ಯೀಗಲೂ ಅದೇ ಮೇರೆಗೆ ಆಯಾ ಸ್ಥಳದ ಗ್ರಾಮಗಳ ಕಟ್ಟಿ ಯೀಗಲೂ ಅದೇ ನಾಮವನ್ನೇ ಯಿಟ್ಟು ಯಿದ್ದಾರೆ.

ಹೀಗೆ ದಿನೇ ದಿನೇ ಅರಸು ಬಾಹಳ ಐಶ್ವರ್ಯಲು ಹೆಚ್ಚಾಗಿ, ಪಟ್ಟಣಲು ಬಾಹಳ ತುಂಬಾಗಿ, ಧರ್ಮ ಕವಲು ಕೊಟ್ಟು 'ನಾಲ್ಕು ವರ್ನದವರೂ ಸಹಿತವಾಗಿ ಯೀ ಸ್ಥಳದಲ್ಲಿ ಹೊನ್ನರ್ಸಯ್ಯ ಮುಂತಾಗಿ ವಟ್ಟು ಮನೆ ೧೧೧೦೦ಕ್ಕೆ ಅಷ್ಟಹಾರಗಳು[>ಅಗ್ರಹಾರಗಳು] ಬ್ರಾಹ್ಮಂಬರು, ಅಧ್ಯಾಪಕರು ಮುಂತಾದವರಿಗೆ ಅಗ್ರಹಾರ ಕಟ್ಟಿ, ಮಾನ್ಯವನ್ನು ಯೇಕ ಭೋಗ್ಯವಾಗಿ ನಡ್ಸುತ್ತ, ಸ್ಥಳ ರಾನಿ[>ಶ್ಯಾನಭೋಗ] ಹೊನ್ನರ್ಸಯ್ಯನಿಗೆ ಸೀಮೆಯಲ್ಲಿ ಯಿನಾಮ ಗ್ರಾಮಗಳು, ಗ್ರಾಮದ ಗ್ರಾಮಗಳಲ್ಲಿಯೂ ಹೊಲಿಮೆಯ್ನು ಸಹಾ ಯೇಕಭೋಗ್ಯವಾಗಿ ನಡದು ಬರುತ್ತದೆ. ಯೀ ಮೇರೆಗೆ ಧರ್ಮಿಷ್ಟನಾಗಿ ರಾಜ್ಯ ಆಳಿಕೊಂಡು ಯಿರುತ್ತಯಿರಲು.

ವಂದಾನೊಂದು ದಿವ್ಸ ಅರಸು ತನ್ನಾ ಮಂದಿ ಮಾರ್ಬಲ ಸಹಿತವಾಗಿ ಸ್ವಾರಿ ಹೋಗುವ ನಿಮಿತ್ಯ ಪಟ್ಟಣದ ಬೀದಿಯಲ್ಲಿ ಹಾದು, ಬ್ರಾಹ್ಮಂಬರ ಓಣಿಯಲ್ಲಿ ಹಾದು ಬರಲು, ಯಾವತ್ತೂ ಭೂಸುರರು ಮನೆಯಲ್ಲಿ "ಅರಸು ಬಂದಾ"ಯಂದು ಆರತಿಗಳ ತೆಗೆದುಕೊಂಡು ಬಂದಲ್ಲಿ, ಅದರಲ್ಲಿ ವೇದಾದ್ಯ[>ವೇದಾಢ್ಯ]ನಾದ ಚಕೋರಮಲ್ಲಿಭಟ್ಟಯಂಬ ಆಂಧ್ರಬ್ರಾಹ್ಮಣನಿಗೆ ವಬ್ಬ ಹೆಣ್ಣುಮಗಳು ಯಿದ್ದಳು. ಆಕೆಯು ಬಹಳ ಸೌಂದರ್ಯವತಿಯಾಗಿ ಯಿರಲು, ಅರ್ಸಗೆ ಆಕೆ ಮೇಲೆ ಪ್ರೀತಿ ಆದದರಿಂದ, ಅರಸು ಮನಸ್ಸಿನಲ್ಲಿ ಯಿಟ್ಟು ಸವಾರಿ ಹೋಗಿ ಬಂದು, ಮಾರನೆಯ ದಿವ್ಸ ಸ್ಥಳ ಶ್ಯಾನುಭೋಗ ಹೊನ್ನರ್ಸಯ್ಯನಿಗೆ[>ನ], ಸಂಮ್ಮರ ಬೊಮ್ಮರಸಯ್ಯನ ಕರದು "ಆಂಧ್ರ ಬ್ರಾಹ್ಮಣನ ಮಗಳಲ್ಲಿ ನಮ್ಮ ಮನಸ್ಸಾಗಿದೆ. ನೀವು ಆ ಬ್ರಾಹ್ಮಣನ ಬಳಿಗೆ ಹೋಗಿ, ಆ ಹೆಣ್ಣ ಅನುಕೂಲಿಸಿ ಕೊಟ್ಟಲ್ಲಿ ಆ ಬ್ರಾಹ್ಮಣನಿಗೆ ಯಿನ್ನು ಪ್ರತಿಷ್ಟೆರ್‌ಗ್ರಾಹಾತ್ಸಾ ಕೊಟ್ಟೆವು"ಯಂಬದಾಗಿ ಹೇಳಲು, ಅಲ್ಲಿಗೆ ಕಾಲವಿಪರೀತವಾಗಿ ದುರ್ಬುದ್ಧಿ ಬಂದು ಯೀ ಬೊಮ್ಮರಸರ ಸಂಗಡ ಹೇಳಿದಿರಿಂದಲು, ಯೀ ಸ್ಥಳದ ಹೊನ್ನರ್ಸನು ಬೊಮ್ಮರಸೈಯನ್ನು[>ಯನು] ದೊರೆಗಳ ಮಾತ ಮೀರಲಾರದೆ ಮಲ್ಲಿಭಟ್ಟರ ಮನೆಗೆ ಹೋಗಿ, ಆತನ ಮಗಳ ಕರದು ಯೀ ಪ್ರಕಾರ ಮಾತು ಹೇಳಲಾಗಿ, ಆಕೆಯು ಮಹಾ ದುಃಖಂಬಟ್ಟು "ಯಿದ್ದಷ್ಟಕ್ಕೆ ರಾಜವಿಷಯ ಪ್ರಭುತ್ವನಲ್ಲಿ ಹೀಂಗೆ ಆದರೆ ರಾಜ್ಯದಲ್ಲಿ ದಿಕ್ಕು ಯಾರು ಯಾರಯ್ಯ" ಯಂಬದಾಗಿ ಮಹಾಭೀತಸ್ತಳಾಗಿ, ತಮ್ಮ ತಂದೆಯಾದ ಆಂಧ್ರ ಬ್ರಾಹ್ಮನ ಕರದು ಹೇಳಲಾಗಿ, ಆ ಬ್ರಾಹ್ಮಣನು ಮಹಾ ಕ್ಷೋಭೆಪಟ್ಟು "ತಾನು ವೇದಾಧ್ಯಯನ ಸಂಪನ್ನನಾಗಿ ಯೀ ವರಿಗೆ ಬದುಕಿದ ಜಲ್ಮ ವ್ಯರ್ಥವಾಗುವ ಕಾಲ ಬಂತು, ಯಿನ್ನು ಮೇಲೆ ಭೂಮಿ ಮೇಲೆ ಮೋರೆ ತೋರ್ಸಲಿಕ್ಕಾಗದು"ಯಂದು ಬಹಳ ದುಃಖಿತನಾಗಿ, ಯಿನ್ನು ಮಾನ ಉಳಿಯುವದಿಲ್ಲವೆಂದು ತಿಳಿದುಕೊಂಡು, ಆ ಕ್ಷಣದಲ್ಲಿಯೇ ಆತನು ಶಿವಪೂಜೆಯನ್ನು ಮಾಡಿಕೊಂಡು, ತನ್ನ ಮಗಳು ಹೆಂಡತಿ ಮಕ್ಕಳು ಸಹಾ ಕೈ ಹಿಡಿದುಕೊಂಡು ನಿಶಾಕಾಲದಲ್ಲಿ ಸೂಳೆಕೆರ್‍ರೆ ಯೇರ್‍ರಿಮೇಲೆ ನಡದು, ಯೇರ್‍ರಿ ಮೇಲೆ ಬಂದುನಿಂತು, ಆಗ ಗಂಗಾ ಪ್ರಾರ್ಥನೆಯನ್ನು ಮಾಡಿ, ಪೂಜೆಮಾಡಿ, ಕುಟುಂಬಸಹಿತವಾಗಿ ಗಂಗಾಪ್ರವೇಶವಾಗುವ ವ್ಯಾಳೆದಲ್ಲಿ "ಯೀ ಪಟ್ಟದ ಅರಸು, ಸ್ಥಳದ ಶ್ಯಾನುಭೋಗ, ಕೈವಾಡದವರು ಸಹಾ ಯಿವರ ವಂಶ ಹೆಚ್ಚಬೇಡ, ಯೀ ಪಟ್ಟಣವು ನಾಶವಾಗಿ ಯೀ ಸ್ಥಳದಲ್ಲಿ ಅಟವಿ. . . . . ಬೇಡ"ಯಂಬುದಾಗಿ ಶಾಪವನ್ನು ಕೊಟ್ಟು ಗಂಗಾಪ್ರವೇಶವಾದರು. ಆಗ ಶಿಲಾರೂಪಿನಿಂದ ಈ ನಡುಕೆರಿಯ ಮೇಲೆ ಗುರುತು ಗುಡಿ ಕಟ್ಸಿಕೊಂಡ ಬ್ರಾಹ್ಮಣ ಶಕ ೧ಕೆ ಮೂರಾವರ್ತಿ ಬ್ರಾಹ್ಮನನ್ನು ಯೀ ಸ್ಥಳದ ಶ್ಯಾನುಭೋಗರ ವಂಶದವರು ಮಾಡುತ್ತ ಬರುತ್ತರಾಗಿ ೧.

ಹೀಗೆ ಯಿರುತ್ತ ಕೆಲವು ದಿವ್ಸ ಆದ ಮೇಲೆ ಯೀ ಮ್ಮೂಲದಿಂದಲ್ಲು ದಿಳ್ಳಿ ಸೂರಕಾಳ[>ಸುರತಾಳ]ನ ಕಡೆ ಫವುಜು ಬಲ್ಲಾಳರ ಮೇಲೆ ದಂಡೆತ್ತಿ ಬರುವಾಗ್ಗೆ, ಯೀ ಕೆರೆ ಬಳಿಯ ಯಿಳಿದು, ಆಗ ಯೀ ಪಟ್ಟಣವು ಲೂಟಿಯಾಗಿ ಹಾಳಾಗಿ ಹೋಯಿತು. ತದಾರಭ್ಯವಾಗಿ ಯೀಗಲೂ ಯೀ ಸ್ಥಳದಲ್ಲಿ ಗ್ರಾಮಗಳನ್ನು ಬೀಳೆ[>ಬೇರೆ]ಸ್ತಳದಲ್ಲಿ ಕಟ್ಟಿ ನೋಡಿದಾಗ್ಯೂ ಮೂರೆ ತಿಂಗಳು ಆ ಸ್ಥಳದಲ್ಲಿ ಯಿದ್ದುವೆಲ್ಲ ಮಹಾರೋಗದಿಂದಲು ಗ್ರಾಮವು ನಾಶವಾಗಿ ಹೋಯಿತ್ತು. ಯೀ ವರಿಗೂ ಸೂಳೆಕೆರೆ ಹಾಳು ಊರು ೭ ಸ್ಥಳದಲ್ಲಿ ಅದೆ. ಯಿತ್ತಲಾಗಿ . . . . ರಕ್ತಾಕ್ಷಿ ಸಂ।ರಲ್ಲು ಗ್ರಾಮವನ್ನು ಚಲುವಪುರಯೆಂದು ಬೇರೆ ಹೆಸರಿಟ್ಟು, ಪ್ರಾಕು ಪಟ್ಟಣ ಯಿದಾಗ ಕಂಚುಗಾರ ಸಾಲು ಯಿದ್ದ ಸ್ಥಳದ ಸಮೀಪದಲ್ಲಿ ಟಿಕಣೆ ಮೇಲೆ ಗ್ರಾಮಕಟ್ಟಿ ಹುಸಿ[>ಹುಗ್ಗಿ] ಹೋಯ್ಸಿದ ಪ್ರಕಾರ, ಗ್ರಾಮದ ಗೌಡನ ಕೆಂಚಯ್ಯ ಜ೧, ಪೂಜಾರಿ ಸಿದವೀರ೧, ಸಹವಾಗಿ ಗ್ರಾಮಕೆ ಹುಸಿ[>ಹುಗ್ಗಿ] ಹೊಯಿದು ಗ್ರಾಮ ಪ್ರವೇಶವಾದ ಮೂರು ತಿಂಗಳಲ್ಲು ಜ೨ ಮೃತವಾದರ್ರು. ಆಮೇಲೆ ಊಳಿಕೆ[>ಉಳಿಕೆ[ಜನರಿಗೆ ಮಹಾರೋಗವು. ಅದರಲ್ಲಿಯೇ ಕೆಲವು ಮೃತವಾಗಿ ಪುನಃ ಗ್ರಾಮ ಹಾಳುಬಿದ್ದಿತು.

ಹೀಗೆ ಕೆಲವು ದಿವ್ಸದ ಮೇಲೆ ಅತೀ ವೃಷ್ಟಿಯಾಗಿ ಯೀ ಹರಿದ್ರಾನದಿಯು ಮೇರೆದಪ್ಪಿ ಬಂದದರಿಂದ ಸೂಳೆಕೆರೆ ಸಿಥಿಲವಾಯಿತ್ತಾಗಿ . . . . ಹಾಂಗೆ ಕೆಲವು ದಿವ್ಸ ವಡಗೆರೆ ಬಿದ್ದು ಯಿತ್ತು.

ಕೆಲವು ದಿವ್ಸದ ಮೇಲೆ ಶಕ ೧೩೮೯ನೆಯ ಯೀಶ್ವರ ಸಂ।ದಲ್ಲು ತಮ್ಮನ್ನ ಚಾಮುಂಡಲೇಶ್ವರ ಪತ್ತಿ ಸಿಂಹಾಸನಕ್ಕೆ ಕರ್ತರಾದ ಹರಿಹರರಾಯರ ಕಡೆ ತಿಮ್ಮನ್ನಹಾ ಪ್ರಧಾನಿ ಬಸವಧಣ್ಣಾಯಕರು ರಾಜ್ಯವಿಚಾರ ಮಾಡುವ ಉದ್ಧೇಶ್ಯ ಬಂದಲ್ಲಿಯ ಯೀ ಸ್ಥಳಕೆ ಬಂದು, ಯೀ ಶಿಥಿಲವಾಗಿರುವಂತಾ ತಟಾಕವನ್ನು ನೋಡಿ "ಯೀ ಕೆರೆಯ ನೀರು ಯೇನು ಕಾರಣ ಯಿಲ್ಲವಾಯಿತು?"ಯಂದು ಸ್ಥಳದ ಶ್ಯಾನುಭೋಗ ದೇವರ್ಸಯ್ಯನ ಕರದು ಕೇಳಿದರಿಂದಲು, ಆತ ಹೇಳಿದು "ಯೀ ಕೆರೆ ಕಟ್ಟೆಯು ಬಹಾಳ ವಿಸ್ತಾರವಾಗಿ ಹಾಳ ಬಿದ್ದರಿಂದಲು ಅಲ್ಲಿ ಹೊಸದಾಗಿ ಮಡುಗಟ್ಟೆ ಕಟ್ಟಿಸಿ, ಮುಂದಕೆ ಕೊಡಿ[>ಕೋಡಿ] ಮಾಡಿದಲ್ಲಿ ಕೆರೆಯಲ್ಲಿ ಪೂರ್ಣ ತಟಾಕಯಂಬದಾಗಿ ಹೇಳಿದನ್ನು. ಆ ಬಗ್ಯೆ ಬಸವಧಣ್ಣಾಯಕರು ಕೋಟೆ ಬಳಿಯ ಮಡುಗಟ್ಟೆಯನ್ನು ಹೊಸದಾಗಿ ಕೊಡಿ [>ಕೋಡಿ]ಯನ್ನು ಕೊಡ್ಸಿ ಮಾಡಿಸಿ, ತಮ್ಮ ಹೆಸರಲ್ಲಿ ಹೊಸದಾಗಿ ತೂಬು ಕಟ್ಟಿಸಿ, ಆ ತೂಬಿಗೆ 'ಬಸವನ ತೂಬು' ಯಂದು ಹೆಸರಿಟ್ಟರು. ಯಿ ಕೊಗೊನ[>ಕೋಡಿಯ] ಹಿಂದೆ ವಂದು ಕಲ್ಲು ಬಸವನ ಮಾಡಿ ಆ ವಸವನ ಬಾಯಿಯಲ್ಲಿ ನೀರು ಹೊರಡುವ ಹಾಗೆ ಮಾಡಿ ಯಿದ್ದಾರೆ. ಯೀ ತದಾರಭ್ಯ ಕೆರೆಯು ಪೂರ್ಣ ತಟಾಕವಾಗಿ ಯಿದೆ.

ಯೀ ಬಗ್ಯೆ, ಕೆರೆ ಹುಟ್ಟಿದ ಬಗ್ಗೆ, ಪಟ್ಟಣ ಮುಂತಾದ ವಿಚಾರಕೆಲ್ಲ ಶಾಸನಕಲ್ಲು.

ಮಾಲೂರು ಸೀಮೆ, ಸೂಳೆಕೆರೆ ಸೀಮೆ ನಾಡಿಗರ ವಿವರ: ಬಡಗನಾಡತನಲ್ಲಿಗ ವಶಿಷ್ಠಗೋತ್ರದ ಆಶ್ಲಾಯನಸೂತ್ರದ ರುಕ್‌ಶಾಖೆಯ ಹೊನ್ನರ್ಸಯ್ಯನ ವಂಶ ಸಂಬಂಧ ವಿವರ:

ಕೇಸನಕೆರೆ ನಾಡುವಳಗಣ ಮೂರು ಸೀಮೆ

ಟ ೭ ಸೂಳೆಕೆರೆ ಸೀಮೆ ಮಾಗಣಿ

೧ + ೧।೯೧ ಉಭಯ ಮಾಗಣಿ ೨ ಕೆ

೨. ದುರ್ಗದ ತಾಲೂಕಿಗೆ ಏಂಗಡ ಶಕವರುಷ ೧೬೨೭ನೆಯ ಸರ್ವಧಾರಿ ಸಂ।ರಲ್ಲು ಚಿತ್ರದುರ್ಗದ ಭರಮಣ್ಣನಾಯ್ಕ ಪಡದು ಖಾನಸಿದ್ದೋಜಿ ಸಹಾ ಯಿಕ್ಕೇರಿ ಸಂಸ್ಥಾನದ ಮೇಲೆ ದಂಡೆತ್ತಿ ಬಂದು, ಶ್ಯಾಗಲೆಹಳ್ಳದ ಮೇಲೆ ಯಿಳಿದು, ಹೊರೆಕೆರೆ ಸೀಮೆ ಗದ್ದಿ ಸರಹದ್ದಿನ ಯೀ ಸೀಮೆ ಪಾಲು ಸೂಳೆಕೆರೆ ಸೀಮೆ ಗ್ರಾಮ.

ಮತ್ತಿಗ್ರಾಮ ೧ ಹೊನ್ನಮರದಿ[>ಡಿ]೧

―――

೨

ಯರಡು ಗ್ರಾಮವನ್ನು ಠಾಣ್ಯಹಾಕಿಕೊಂಡು ಹೊರೆಕೆರೆ ಸೀಮೆಗೆ ಕೂಡ್ಸಿದ ಶುದ್ಧ ನಿಂತ ಗ್ರಾಮ ೯ ಸೀಮೆ . . . ೨ರ . . . ಅಸಲಿ ದಾಖಲೆ . . . . ಹ್ಯ

ತಪ್ಸೀಲು

೬.೬ ಯಿಕ್ಕೇರಿಸಂಸ್ಥಾನದಲ್ಲು ಕ್ಯಾರಿ[>ಕೆರೆ]ದೆಮಲೂರು ನಾಡು ೧ಕೆ ಯೀ ಸೀಮೆ ಸ್ಥಳದ ಶ್ಯಾನಭೋಗ ಬಡಗಣ . . . . ಕನ್ನಡಿಗ ದೊರ ಸಿದ್ಧಪ್ಪನು ವಬ್ಬಾ ಹೆಣ್ಣುಮಗಳನ್ನು ಯಿಟ್ಟುಕೊಂಡು, ಆಕಿಗೆ ಲಿಂಗಧರಿಸಿ ಯಿಟ್ಟುಕೊಂಡು ಯಿದ್ದಲ್ಲಿ, ಆಕೆಯ ಹೊಟ್ಟೆಯಲ್ಲು ಮಕ್ಕಳು ಕೆಂಚದೇಮಣ ಹುಟ್ಟಿದರಿಂದ ಆ ಹುಡುಗನಿಗೆ ಬರಹಾ ಕಲ್ಸಿ ಯಿಟ್ಟುಕೊಂಡು ಯಿದ್ದರು. ಆ ಸಿದ್ಧಪ್ಪನಿಗೆ ಅವಸಾನ ಕಾಲವಾಗುವ ವ್ಯಾಳೆದಲ್ಲಿ ಆ ಹೆಣ್ಣುಮಗಳು ಬಂದು "ತನ್ನ ಮಕ್ಕಳಿಗೆ ಅನ್ನಕ್ಕೆ ಯೇನು?"ಯಂದು ಕೇಳಿದಲ್ಲಿ ಹೇಳಿ, "ಯರಡು ಸೀಮೆ ಶ್ಯಾನುಭೋವಿಕೆಯನ್ನು ಮಲ್ಲೂರ ನಾಡ ಮಾಗಣೆಯಲ್ಲು ಬರಕೊಂಡು ಹೋಗಿ'ಯಂಬುದಾಗಿಯು "ನಮ್ಮ ಹೆಸರ ಹೇಳಿಕೊಂಡು ಯಿರಿ"ಯಂದು ಅಪ್ಪಣೆ ಕೊಟ್ಟದರಿಂದಲು, ಯೀ ವರಿಗೂ ಅವರ ಸಂತತಿ ನಡದು ಬರುತ್ತದೆ. ಯೀ ಕೆಂಚದೇಮಣ ವಂಶಸ್ಥರಾಗಿ ಯೀ ವರಿಗೂ ಚಕೋರ ಬ್ರಹ್ಮನ ಮಾಡುವಾಗಿ ವರುಷ ೧ . . . . ಸೀರೆ ಕುಪ್ಪಸ ಕಾಣಿಕೆ ೧೨೦ ಮೆರೆ ಕೊಟ್ಟು ನಡಕೊಂಡು ಯಿವ ಹೆಸರು ಹೇಳಿಕೊಂಡು ಬರುತ್ತಾರೆ. ಮುಂದೆ "ಅವರಿಗೆ ದಾನತ್ರಯಾ ವಿಕ್ರಯ, ಜೋಗಿಹಳಿ ಅಗ್ರಹಾರದ ಪ್ರತಿಸ್ಥಳಾ ಅವರಿಗೆ ಕಾರಣವಿಲ್ಲಾ"ಯಂದು ಮೂಲಪುರುಷನಾದವನು ತಾಹಾ ಮಾಡಿದ್ದಾನೆ. ಯಿನಾಮ ಗ್ರಾಮ ಪಿ(?)ಂಗಾಪುರ ಗ್ರಾಮ ೧. ಶುದ್ಧ ನಿಂತುದು ಬಸವಪಟ್ಟಣ ತಾಲೂಕಿಗೆ ಶೇರಿಬಂದದು ಕೆಂಗೆ ಹನುಮಪ್ಪನಾಯ್ಕನ ಕಾಲದಾರಭ್ಯವಾಗಿ ಶಕ ೧೬೦೮ನೆ ದುಂದುಭಿ ಸಂ॥ದಲ್ಲು.

ಯೀ ಸಂವತ್ಸರ ಕಲಿಯುಗ ಯುತ ಯಿ ವರಿಗೂ ನಡದು ಬರುವ ಗ್ರಾಮ ೫.

೨ ನಾಡಿಗರ ಯಿನಾಮ ಗ್ರಾಮಗಳು:

೧ ತದ್ರನಹಳ್ಳಿಗ್ರಾಮ

೧ ಕಾಶಿಪುರಾ

―――

೨

೩ ಶ್ರೀಂಗೇರಿ ಮಠಕ್ಕೆ ಕೂಡಲಸ್ವಾಮಿಗಳವರು . . . . ಕಬಳು ಮುಂತಾಗಿ.

೭ ಬ್ರಾಹಂಬರಿಗೆ ಅಗ್ರಹಾರಗಳು

೩೩ ಮೇಲಾಗಿ ಅರಮನೆ ಗ್ರಾಮಗಳು

೪೫

ಹಾಚೆ ರಾ ।ಕು। ನಾಡಿಗ ಭೀಮಪ್ಪ.

ಸ[+ದ]ರಿ ಕೆರೆ ಹುಟ್ಟಿದಕ್ಕೂ ದೇವರು ಮುಂತಾದ ವಿವರಕ್ಕೆ ಸದರಿ ವಿವರಕೆ ಕಲ್ಲು ಶಾಸನ ವಂದು ಶಾಂತಮ್ಮನವರ ತೂಬಿನ ಬಳಿಯಲ್ಲಿ ಯಿದ್ದದ್ದು . . . . ನೀರಿನಲ್ಲಿ, ಉಸಿಕಿನಲ್ಲಿ ಮನ್ನಿ[>ಣ್ಣಿ]ನಲ್ಲಿ ಹುಗದು ಅದೆ, ಕಾಣುವದಿಲ್ಲ.

❖❖

೪೦

ಸೋಗಾನಿ ಅಗ್ರಹಾರದ ಕೈಫಿಯತ್ತು – ೧

ಕೆ.ಎ. ೩೫೯ / ೩

ಶಾಲಿವಾಹನ ಶಕ ೧೧೩೫ರಲ್ಲೂ (ನೆಯ) ಶ್ರೀಮುಖ ಸಂವತ್ಸರದ ಮಾಘ ಶುದ್ಧ ೧೫ ಇಂದುವಾರ ಚಂದ್ರೋಪರಾಗ ಪರ್ವ[ಣಿ] (ದ) ಪುಣ್ಯಕಾಲದಲ್ಲು ತುಂಗಭದ್ರಾತೀರ ದೂರ್ವಾಸಕ್ಷೇತ್ರ ಶಿವಮೊಗ್ಗೆ. ಶಿವಮಗೆ (ಶಿವಮೊಗ್ಗೆ) ಭೀಮೇಶ್ವರನ ಸನ್ನಿಧಿಯಲ್ಲು, ಆರಗದ ವೇಂದ್ಯ[>ಟ್ಯ]ಕ್ಕೆ ಸಲುವ [ಗಂಗೆ ಮಂಡಲ] ನಾಡ ಒಳಗಣ, ಹೊಳೆಹೊನ್ನೂರ ವಳಿತವಾದ ಯ್ಗ[>ಯ]ಡತೊರೆ (ಶ್ರೀ)ಮೆ(ಸೀ) ಸೋಗಾನಿ ಅಗ್ರಹಾರ ೧ಕ್ಕೆ ವೀರಬಲ್ಲಾಳರಾಯನು [ಹೌಂಸಳ] (ಹೌಸಳ)ಪುರದಲ್ಲು ಸಿಂಹಾಸನ ರೂಢನಾಗಿ ರಾಜ್ಯವನಾಳುತ್ತಿದ್ದಲ್ಲಿ, ಒಂದಾನೊಂದು ದಿವಸ [ಸ್ವಾರಿ] (ಸವಾರಿ) ಮಾರ್ಗವಾಗಿ ಹೊರಟು ತುಂಗಭದ್ರಾ ಸರಹದ್ದು [ಹಿಡದು] (ಹಿಡಿದು) ಬರುತ್ತಾ, [ಶಿವಮೊಗೆ] (ಶಿವಮೊಗ್ಗೆ) ಸ್ಥಳಕ್ಕೆ ಬಂದಲ್ಲಿ, ಚಂದ್ರೋಪರಾಗ ಪರ್ವಣಿ(ದ) ಪುಣ್ಯಕಾಲ ಬಂದದರಿಂದ ಈ ಕಾಲದಲ್ಲು [ಬ್ರಾಹ್ಮರುಗಳಿಗೆ] (ಬ್ರಾಹ್ಮಣರುಗಳಿಗೆ) ಅನೇಕವಾದ ದಾನಧರ್ಮಗಳ ಕೊಟ್ಟು, ಸರ್ವಮಾನ್ಯ ಅಗ್ರಹಾರವನ್ನು ಬಿಟ್ಟುಕೊಡಬೇರೆಂದು ಮಾಧಿ?ಕೊಂಡು ಯೋಗ್ಯ[ವಾ](ರಾ)ದ ಬ್ರಾಹ್ಮರುಗಳು ಆಗಬೇಕೆಂದು ಆ ಸ್ಥಳದಲ್ಲು [ಇದರಿರುಮ ಆ] (ಇದಿರಿರುವ ಮಹಾ) ದೀಕ್ಷಿತರ ಕರಸಿ [ವಿಚಾರಿಸಿದರಿಂದ] (ವಿಚಾರಿಸಲು) ಆತನು ಹೇಳಿದ ವಿವರ:

[ವಳೆ] (ಒಳ್ಳೆ) ಯೋಗ್ಯವಾದ [ಬ್ರಹ್ಮಂಬಿರುಗಳ] [(ಬ್ರಾಹ್ಮಣರುಗಳ) (ರ)] (ಬ್ರಾಹ್ಮಣರನು) ಕರೆದು ತಂದು ಕೊಡುತ್ತೇನೆ [ಎಂತ ಹೇಳಿದಲ್ಲಿ] (ಎಂದು ಹೇಳಲು), ಆ ಪುಣ್ಯಕಾಲದಲ್ಲು (ಲ್ಲಿ) ಸರ್ವಮಾನ್ಯ ಅಗ್ರಹಾರವನ್ನು ಧಾರೆಯೆರೆದು ಭೀಮೇಶ್ವರನ ಸನ್ನಿಧಿಯಲ್ಲು(ಲ್ಲಿ) ಅಗ್ರಹಾರವನ್ನು

ಕಟ್ಟಿ[ಶಿ] (ಸಿ) [ಮನಿಮನಿಗೆ] (ಮನೆಮನೆಗೆ) ಕಾಲಾವಧಿ ಸೋಪಸ್ಕರಗಳ ತುಂಬಿಸಿಕೊಟ್ಟು, ಇದರಿಂದ ಅಲ್ಲಿರುವ ಮಹಾದೀಕ್ಷಿತನು ಹೊಯಿಸಳದೇಶದಿಂದ ಆರು ಬ್ರಾಹ್ಮಣರುಗಳ ಕರತಂದು ಕೊ[ಟ್ಟ] (ಟು)ದರಿಂದ ಈ ಮನೆಗಳು ಸೋಪಸ್ಕರಗ[ಳ] (ಳು) ಸಹ ತೋರಿಸಿಕೊಟ್ಟು ಕೊಡಿಸಿಕೊಟ್ಟು, "ಈ ತುಂಗಭದ್ರಾ ತೀರದಲ್ಲು ಸ್ವಸ್ಥಚಿತ್ತರಾಗಿ ಸ್ನಾನ ಜಪ ಮಾಡಿಕೊಂಡು ಸುಖದಿಂದ ಇದ್ದುಕೊಳ್ಳಿ" ಎಂದು ಅಪ್ಪಣೆ ಕೊಟ್ಟು, ಆಮೇಲೆ ಈ ಬ್ರಾಹ್ಮಣರನು ಕರೆದು "ನಿಮಗೆ ಯಾವ ಸ್ಥಳದಲ್ಲಿ ಉತ್ತಾರ ಗ್ರಾಮ ಭೂಮಿ ವಿಂಗಡಿಸಿಕೊಟ್ಟರೆ ಆದೀತೆಂ"ದು ಕೇಳಿದಲ್ಲಿ, "ದೂರಗಾರ ಹೋಗಲಾರೆವು. ಈ ಸ್ಥಳದಲ್ಲಿ ಉತ್ತಾರವನ್ನು ಬಿಡಿಸಿಕೊಡಬೇಕೆಂ"ದು ಹೇಳಿಕೊಂಡದ್ದರಿಂದ, ಈ ಬ್ರಾಹ್ಮಣ(ರುಗಳ) (ರ) ಕರಕೊಂಡು ಸವಾರಿ ಮಾರ್ಗವಾಗಿ ಹೊಳೆದಾಟಿ ಬರುತ್ತಿದ್ದಲ್ಲಿ (ಗುಡ್ಡೆಗಲ್ಲು ಬಳಿ [ಮಗಬದ]? ಹುಳಿ[>ಲಿ] ಯಿದ್ದುದ ಕಂಡು, ಸಂಗಡಯಿದ್ದ ಮನುಷ್ಯರು ಆ ಹುಲಿಯನ್ನು ಗುಂಡಿನಿಂದ ಹೊಡೆದು ಪ್ರಾಣಘಾತ ಮಾಡಿದ್ದರಿಂದ = ಮಾಡಿದುದರಿಂದ [ಕೋ]ಟೆ (ಮಾ)ಟೆ [>ಹೊಟ್ಟೆ]ಯೊಳಗಣ ಮರಿಗಳು ಯಾವತ್ತೂ (ತ್ತು) ಪತನವಾಗಿ ಮೃತವಾದ್ದರಿಂದ ಆ ವೃತ್ತಾಂತವನ್ನು ರಾಯರು ಪರಾಂಬರಿಸಿ, "ಮಹಾದೋಷ ಜಂ[>ಬ]ತು. ಈ ದೋಷಕ್ಕೆ ಪರಿಹಾರವೇನುಂಟು' ಎಂತ (ಎಂದುಂ ಸಂಗಡಯಿದ್ದ ಬ್ರಾಹ್ಮಣರ ಕೇಳಿದಲ್ಲಿ (ಕೇಳಲು) ಈ ಬ್ರಾಹ್ಮಣರು ಹೇಳಿದ್ದು (ಹೇಳಿದುದು) – "ಈಗ ನೀವು ಯಾವ ಗ್ರಾಮವನ್ನು ಉತ್ತಾರ ಬಿಡುತ್ತೀರೋ ಆ ಗ್ರಾಮಕ್ಕೆ ನಿಮ್ಮ ಹೆಸರಿನಿಂದ ದೊಡ್ಡಕೆರೆ ಕಟ್ಟಿಸಿ. ಶಿವಾಲಯ ವಿಷ್ಣುಆಲಯಗಳ ಕಟ್ಟಿಸಿ ಆ ಗ್ರಾಮದ ನಾಮಧೇಯ "ಸೋಗಾನಿ" ಎಂತ ಹೆಸರಿಟ್ಟು ಬಿಟ್ಟುಕೊಟ್ಟರೆ ಆ ದೋಷ ಪರಿಹಾರ" ಎಂದು [ಹೇಳಿದ್ರಿಂದ] (ಹೇಳಿದುದರಿಂದ), ಮುಂದೆ ಮಾರ್ಗದಲ್ಲಿ ಬರುವಾಗ್ಯೆ=(ಗ) ಗಿಡದಲ್ಲು ದೊಡ್ಡ ಅರೆಕಲ್ಲು ಅದರ ಕೆಳಗೆ ದೊಡ್ಡ ಹಳ್ಳವಿದ್ದುದರಿಂದ ನೋಡಿ ಹಾಗೆ ಮುಂದೆ ಸಮೀಪದಲ್ಲು ಹ್ಯೊಸನಹಳ್ಳಿ ಎಂತ ಗ್ರಾಮಯಿದ್ದುದ ಕಂಡು ಬ್ರಾಹ್ಮಣರುಗಳು ಹೇಳಿಕೊಂಡ ವಿವರ: "ಈ ಸ್ಥಳದಲ್ಲು ಕೆರೆ [ಹು]ಟ್ಟುವದಕ್ಕೆ(ಕ) ಪ್ರಶಸ್ತವಾಗಿದೆ. ಹತ್ತಿರ ಗ್ರಾಮವೂ ಇದೆ. ಈ ಸ್ಥಳದಲ್ಲಿ ಈ ಹಳ್ಳಕೆ ಕೆರೆ ಕಟ್ಟಿಸಿ, ದೇವತಾಪ್ರತಿಷ್ಟೆ ಮಾಡಿಸಿ, ಈ ಗ್ರಾಮದ ನೆಲವರಿ ಹೊಲದರಿ ದನ ಆಡುವ ಗಿಡ ಸಹ ಹೊಕ್ಕುನೋಡಿ [ಚಉ] (ಚೌ) ಮೂಲೆ ವಾಮನಮುದ್ರೆ ಕಲ್ಲು ನೆಡಸಿ, ಶಾಸನ ಬರಸಿಕೊಟ್ಟರೆ ಯಾದೀತೆಂ"ದು ಈ ಬ್ರಾಹ್ಮಣರುಗಳು ಹೇಳಿಕೊಂಡುದರಿಂದ, ಅದೇ ಪ್ರಕಾರ ಈ ಸ್ಥಳದಲ್ಲು ನಿಂತು ಕೆರೆಕಟ್ಟಿಸಿ ಶಿವಾಲಯ ವಿಷ್ಣ್ವಾಲಯಗಳನ್ನು ಕಟ್ಟಿಸಿ, ಚೌಮೂಲೆ ವಾಮನಮುದ್ರೆ ಕಲ್ಲು ನಡಿಸಿ, ಶಾಸನ ಬರಸಿಕೊಟ್ಟು ಆ ಗ್ರಾಮದ ಪ್ರತಿನಾಮ "ಸೋಗಾನಿ" ಎಂದು ಹೆಸರಿಟ್ಟು ಸುಖದಿಂದ ಅನುಭವಿಸಿಕೊಂಡು ವಾಪೀಕೂಪತಟಾಕಾ ನಿಧಿನಿಕ್ಷೇಪಪಾಷಾಣ "ಅಂತಿಬ್ಯಾ?" ಗಾಮಿ, ಉಪಗ್ರಾಮಗಳು ಸಹ ಅನುಭವಿಸಿ ಬಹುದೆಂದು ಪೃಥಕ್ ಪೃಥಕ್ಕಾಗಿ ಸಹಿರಣ್ಯೋದಕದಾನ ಧಾರಾಪೂರ್ವಕವಾಗಿ, ನೀವು ನಿಮ್ಮ ಸಂತಾನ ಪಾರಂಪರ್ಯವಾಗಿ ಆಚಂದ್ರಾರ್ಕಸ್ಥಾಯಿಗಳಾಗಿ ಸುಖದಿಂ ಅನುಭವಸಿಕೊಂಡು ಶಿವಮೊಗೆ(ಗ್ಗೆ) ಭೀಮೇಶ್ವರನ ಸನ್ನಿಧಿಯಲ್ಲು ತುಂಗಭದ್ರಸ್ನಾನ ಮಾಡಿಕೊಂಡು ವೇದಪಾರಾಯಣವನ್ನು ಮಾಡಿಕೊಂಡು ಸುಖದಿಂದ ಇದ್ದುಕೊಳಿ"ಯೆಂತ ಮಾಡಿಕಾಡ್ಸಿಕೊಟ್ಟದ್ದರಿಂದ ಈ ಸ್ಥಳದ ಭೂಮಿಯನ್ನು ಅನುಭವಿಸಿಕೊಂಡು ಇರುತ್ತಿದ್ದಲ್ಲಿ.

ಕೆಲವು ದಿವಸದ ಮೇಲೆ ಬೇಡಸಂಸ್ಥಾನ[ವಾದ್ರಿಂದ] (ವಾದುದರಿಂದ) ಆ ಅರಸುಗಳು ಸಿಮೊಗೆ – ಸೀಮೆಗೆ – ಶಿವಮೊಗ್ಗೆ(ಗೆ) ಚಿತ್ತೈಸಿದಾಗ ಅಲ್ಲಿ ಅಗ್ರಹಾರ ಇದ್ದುದ ಕಂಡು "ಈ

ಸ್ಥಳದಲ್ಲು ಕೋಟೆ ಹಾಕ್ಸ - ಹಾಕಿಸಬೇಕು, ನೀವು ಈ ಸ್ಥಳದಲ್ಲಿ ನೀವು? ಅಗ್ರಹಾರ ಮಾಡಿಸಿಕೊಂಡಿರುವುದಕ್ಕೆ ಕಾರಣವೇ#ನು?" ಎಂದು ವಿಚಾರಿಸಿದಲ್ಲಿ "ಹಿಂದೆ ವೀರಬಲ್ಲಾಳರಾಯನು ಚಂದ್ರೋಪರಾಗ ಪರ್ವಣಿ(ದ) ಪುಣ್ಯಕಾಲದಲ್ಲು ಈ ತುಂಗಭದ್ರಾತೀರದಲ್ಲು ಭೀಮೇಶ್ವರನ ಸನ್ನಿಧಿಯಲ್ಲು ಅಗ್ರಹಾರ ಕಟ್ಟಿಸಿದರು. ದಾರಿ ಮೇಲೆ ಎರಡು ಹೊಳೆಗಳ ಮಧ್ಯೆ ಹ್ಯೊಸನಹಳ್ಳಿಗ್ರಾಮ ಎಂತಯಿದ್ದ ಗ್ರಾಮದ ಪ್ರತಿನಾಮ। ಸೋಗಾನಿ ಯೆಂತ ಹೆಸರಿಟ್ಟು ಸರ್ವಮಾನ್ಯ ಉತ್ತಾರ ಬಿಟ್ಟುದರಿಂದ ಈ ಸ್ಥಳದಲ್ಲು ಸ್ನಾನಜಪ ಮಾಡಿಕೊಂಡಿದ್ದೇವೆ"ಯಂತ ಹೇಳಿದರಿಂದ, ಆ ಅರಸುಗಳು ಅಪ್ಪಣೆ ಕೊಟ್ಟದ್ದು, "ನಾವು ಈ ಸ್ಥಳದಲ್ಲು ಕೋಟೆ ಹಾಕಿಸಬೇಕು. ನೀವು ನಿಮ್ಮ ಉತ್ತಾರದ ಗ್ರಾಮದಲ್ಲೇ ಅಗ್ರಹಾರ ಮಾಡಿಕೊಂಡು ಇರಿ" ಎಂತ ಹೇಳಿದುದರಿಂದ ನಮಗೆ ಉತ್ತಾರವಾದ ಸ್ಥಳಕ್ಕೆ ಹೋಗದೆ ಹೊಳೆಯಾಚೆ ಅರ್ಕನಾಲದ ಮರದ(ನ)ಸಮೀಪದಲ್ಲು ಕೆಲವು ದಿವಸ ಅಗ್ರಹಾರ ಮಾಡಿಕೊಂಡಿದ್ದು ಕೋಟೆಕಾಲುವಾಯಿಯಲ್ಲಿ ನಿಭಾಯಿಸಲಾರದೆ? ಸ್ಥಳಕ್ಕೆ ಬಂದು ಅಗ್ರಹಾರ ಮಾಡಿಕೊಂಡಿರುತ್ತಿದ್ದಲ್ಲಿ ಮೂವರು ಬ್ರಾಹ್ಮಣರು ಹೊರಟರು. ತಿರುಮಲ ದೀಕ್ಷಿತರು "ಈ ತುಂಗಭದ್ರಾ ತೀರದ ವಾಸವನ್ನು ಬಿಡಲಾರೆ"ವೆಂದು ಬಹಳ ಬಗೆಯಿಂದ ಹೇಳಿಕೊಂಡಲ್ಲಿ, ಅರಸುಗಳು ಬಿಡದೆ "ನೀವು ಈ ಸ್ಥಳದಲ್ಲು ಇರುವುದಕ್ಕೆ ಆಗದೆಂದು" ಜುಲುಮೆ ಬಾಸ್ತ ಮಾಡಿಸಿ ಆಳು ಹಾರೆ ಹೊರಡಿಸಿ[ದ] (ದುದರಿಂದ) ಆತನು ಸಿಟ್ಟುಬಂದು, ಈ ಪ್ರಕಾರ ಅರಸುತನ ಮಾಡುವವರು ಬ್ರಾಹ್ಮಣರಿಗೆ ಜುಲುಮೆ ಮಾಡಿಸಿದ ಮೇಲೆ ಈ ಅರಸಿಗೆ ಬ್ರಹ್ಮೆತ್ತಿ? ಸೀಮೆ? ಒಪ್ಪಿಸುತ್ತೇನೆಂದು ಹೆಂಡರು ಮಕ್ಕಳು ಯಾವತ್ತರನ್ನು ಉಕ್ಕಿಡ ಹಚ್ಚಿಕೊಂಡು ಭೀಮದೇವರ ಮಡುಹಿನಲ್ಲಿ ವಿ ಉಕ್ಕಡ ರಜ ರಜ? ಹೊರ[>ಹಾರಿ]ಕೊಂಡು ಯಾವತ್ತರು ಮುಳುಗಿ ಹೋಗಿ, ಆ ತಿರುಮಲದೀಕ್ಷಿತನು ಬ್ರಹ್ಮನಾಗಿ ಆ ಸ್ಥಳದಲ್ಲು ಇದ್ದಾನೆಂದು ಹೇಳುತ್ತಾರೆ. ಆ ಕೋಟೆ ಹುಟ್ಟಿದ ಮೇಲೆ ಸೀಮೆ ಸಾಲದೆಂದು ಹೊನ್ನೂರು ಸೀಮೆಗೆ ನಡೆಯುತ್ತಿದ್ದ ಮ[>ಯ]ಡತೊರೆ ಕಾ ತೊರೆಯನ್ನು ಸೀಮೆಗೆ ವಿಂಗಡಿಸಿದರಿಂದ ಆ [ಶಿಮೊಗೆ] (ಸೀಮೆಗೆ) ವಳಿತವಾಗಿ [ನಡರುಸಿರುತ್ತದೆ] ನಡೆದು ಬರುತ್ತದೆ.

ಆಮೇಲೆ ಬೇಡಸಂಸ್ಥಾನ, ಅದರ ಮೇಲೆ ಶಿವಭಕ್ತಸಂಸ್ಥಾನವಾಯಿತು. ಬಹುಕಾಲ ಶಿವಭಕ್ತರು ಇಕ್ಕೇರಿ ಸಂಸ್ಥಾನ ಎಂತ ಆಳಿ ಬರುತ್ತಿದ್ದಲ್ಲಿ, ಆಮೇಲೆ ತುರುಕಸಂಸ್ಥಾನವಾಗಿ, ದೊಡ್ಡನವಾಬ ಎಂತ ಪಟ್ಟಣದ ಅರಸುಗಳ ಹತ್ತಿರೆಯಿದ್ದ (ರ) ಹೈದರನಾಯಿ-ಯಕ ಎಂಬವನು ದಂಡು ಕಟ್ಟಿಕೊಂಡು ಬಂದು, ಈ ರಾಜ್ಯ ತೆಗೆದುಕೊಂಡು, ನವಾಬ ಎಂತ ಹೆಸರಿನಿಂದ ರಾಜ್ಯವ ಆಳಿದ. ಆತನ ಮಗ ಟೀಪುಸುಲ್ತಾನನು ಬಾದಶಹಾ ಎಂಬ ಹೆಸರಿನಿಂದ ರಾಜ್ಯವ ಆಳಿದ. ಆಮೇಲೆ ಇಂಗ್ರೇಜಿಯವರಿಗೆ ಸಂಸ್ಥಾನವಾಯಿತು.

ಈ ಅಗ್ರಹಾರದಲ್ಲು ಇರುವ ದೊಡ್ಡಕೆರೆ ೧, ವಿಟ್ಠಲದೇವರ ಗುಡಿ ಕಾ ಗುಡಿ ೧, ಊರ ಮುಂದೆ ಶಂತ[>ಕ]ರೇಶ್ವರ ೧ ॥ ನ ದೇವರ ಗುಡಿ ೧, ಕೆರೆ ಹಿಂದೆ ತೋಟಸ್ಥಳ ೧.

❖❖

೪೧

ಸೋಗಾನಿ ಅಗ್ರಹಾರದ ಕೈಫಿಯತ್ತು - ೨*

ಡಿ. ನಂಬರ್ ಸಂಪುಟ : ೧೮೫೦

ಅನಂತರ ಯೀ ಸೋಮಸೇಖರ ಅಂಣ ವೀರಭದ್ರನಾಯ್ಕರ ಮಗ ಚಿಕ್ಕ ಬೂದಿಬಸವಪ್ಪನಾಯಕನೂ ಅವರು ಆಳುವ ಕಾಲದಲ್ಲು ಪುನಹಾದ ನಾರಾಯಣರಾವು ಅಂಗೀರ ಸಂವತ್ಸರದ ಪಾಲ್ಗುಣ ಮುಸದಲ್ಲು ಫವುಜ ತೆಗೆದುಕೊಂಡು ಬಂದು, ಕೂಡ್ಲಿ ಸಂಗಮದ ಮೇಲೆ ಇರಲೀಕೆ, ಸಲಾದ ಮೇಲೆ ೫॥ ಲಕ್ಷ ಯಿಕ್ಕೇರಿ ಕೊಟ್ಟು ಹಿಂದಕ್ಕೆ ಕಳುಹಿಸಿದರ್‍ರು, ಆ ಕಾಲದಲ್ಲಿ ರಾಜ್ಯದ ಮೇಲೆ ಒಂದು ಹೊಂನು ಪಟ್ಟಿ ಮೇರೆಗೆ ಪಗದಿ ನಿಷ್ಕರಿಷೆ ಮಾಡಿಶಿ ಶಿಸ್ತಿಗೆ ಏರಿಸಿ ಬಿಟ್ಟರು. ಪುನಹಃ ಮಾದೋಜಿ ಪುರಂಧರನು ಭಾವ ಸಂ॥ದಲ್ಲು ದಂಡು ತೆಗದುಕೊಂಡು ಬಂದು, ಜಡೇ ಆನವಟ್ಟೀ ಇಕ್ಕೇರಿ ಸಹಾ ತೆಗೆದುಕೊಂಡದರಿಂದಾ ೧೨ ಲಕ್ಷ ರೂಪಾಯಿ ಕೊಟ್ಟು ಮರಾಠೇರಿಂದ ಮೇಲೆ ಬರದ ಶೀಮೆಗಳ ಬಿಡಿಸಿಕೊಂಡರ್‍ರು. ಯೀ ಪ್ರಕಾರ ಯೀ ಚಿಕ್ಕಬೂದಿಬಸವಪ್ಪನಾಯಕರ್‍ರು ರಾಜ್ಯವಾಳಿದ್ದು ವರುಷ ೯೫ [>೧೫].

ಅನಂತರದಲ್ಲಿ ಯೀತನ ಹೆಣ್ಣತಿ ವೀರಂಮ್ಮಾಜಿಯು ಆಳಿದ್ದು ಹ್ಯಾಂಗೆಂದರೆ, ತನ್ನ ಹೊಟ್ಟೆಯಲ್ಲಿಯ ಮಕ್ಕಳು ಯಿಲ್ಲವೆಂದ ಕಾರಣ ತನ್ನ ಸೋದರಮಾವನ ಮಗನನ್ನು ಸಾಕು ತೆಗೆದುಕೊಳ್ಳಬೇಕಾದಕ್ಕೆ ಸಾಮಾಜಿಕರ್‍ರು, ಯೀ ವೂರ ಜನರ ಸಂಮತೀಯಿಂದಾ ತೆಗೆದುಕೊಂಡು, ಸೋಮಸೇಖರನಾಯ್ಕಯೆಂದು ಹೆಸರ್‍ರು ಯಿಟ್ಟು, ಯಿವನಿಗೆ ಪಟ್ಟಾಕಟ್ಟಿಶಿ ಯಿವರನು ಚಿಕ್ಕವನಾದ ಕಾರಣ ತಾನೇ ಅಧಿಕಾರ ಮಾಡುತ್ತಾ, ಪ್ರಧಾನಿ ಮುಖಾಂತ್ರ ಸಮಸ್ತ ಪ್ರಭುತ್ವವ ನಡಶಿದಳು. ಆಗ್ಗೆ ಶ್ರೀ ಶೃಂಗೇರಿಮಠಕ್ಕೆ ಆ ಕಾಲದಲ್ಲಿ ಕೆಲವು ಸ್ವಾಸ್ತ್ಯಮೂಲ ವಿಶೇಷ ಬಹುಮಾನ ಪೂರ್ವಕವಾಗಿ ಮಾಡಿಕೊಟ್ಟಳು. ಆ ಬಳಿಕ ಯಿವರ ಸರಹದ್ದಿಗೆ ಮರಾಠೇರ ಫೌಜು ಬಂದು ಯಿರುವಲ್ಲಿ, ವೀರಭದ್ರೈಯ್ಯನ ಮುಖಾಂತರ ವರುಷಕ್ಕೆ ೧ಕ್ಕೆ ೧೨ ಲಕ್ಷ ರೂಪಾಯಿ ಕೊಟ್ಟು ರಾಜ್ಯವಾಳಿದಳು.

ಯೀ ಪ್ರಕಾರ ಆಳಿಕೊಂಡು ಯಿರುವಾಗ್ಯೆ, ಅರಮನೆ ಬಂದುಬಸ್ತು ಯೇನು ಯಿಲ್ಲವಾಗಿ, ಅನುಚಿತ ಅಜಾಗ್ರಕವಾಗಿ ಪ್ರಭುತ್ವ ಮಾಡುವಾಗ್ಯೆ, ತಂನ ಸಾಕು ಮಗನಂನು ಕೊಂದುಹಾಕುವ ಹಾಗೆ ಯೀಕೆಯು ಅಪ್ಪಣೆ ಕೊಟ್ಟದ್ದರಿಂದಾ, ಸಾಮಾಜೀಕರು ಆತಂನು ಮೊಕ ತಪ್ಪಿಸಿದ ಬಳಿಕ, ಯೀ ಪ್ರಕಾರ ಸೌಂಸ್ತಾನ ಕೆಡಿಸುವದಕ್ಕೆ ಕಾರಣ ಮಾಡಿದಳು.

---

* ಈ ಕೈಫಿಯತ್ತಿನಲ್ಲಿ ಸೋಗಾನಿ ಬಗ್ಗೆ ಪ್ರಸ್ತಾಪವೇ ಇಲ್ಲ. ಈ ಗ್ರಾಮವನ್ನೊಳಗೊಂಡ ಕೆಳದಿರಾಜ್ಯದ ಉತ್ತರ ಕಾಲೀನ ವಿವರ ಮಾತ್ರ ಇದೆ. ಸಾಗರದ ಕೈಫಿಯತ್ತು ಪು. ೧೫೧-೧೫೨ ನೋಡಿರಿ (ಸಂ).

ಆ ಸಮಯದಲ್ಲಿ ಚಿತ್ರದುರ್ಗದ ಪಾಳೇಗಾರಂನ ಕೂಡಿಕೊಂಡು ಬಹದರನು ಬಂದು ಬಿದನೂರು ತೆಗೆದುಕೊಂಡದ್ದು ಚಿತ್ರಭಾನು ಸಂವತ್ಸರದ ಮಾಘಮಾಸದ ವರಿಗೇ, ಯೀಕೆಯು ಚಿತ್ರಭಾನು ಸಂವತ್ಸರದ ವರಿಗೇ ಆಳಿದಳೂ, ಯೀಕೆಯೇ ಯೀ ನಗರದ ಸಂಸ್ತಾನಕ್ಕೆ ಅಖೈರಾಯ್ತು. ಆ ಬಳಿಕ ಹೈದರಲ್ಲಿಖಾನನು ವೀರಂಮಾಜಿಯವರಂನು ಕೈಸೆರೆ ಹಿಡಿದು, ಮದ್ಗಿರಿಯೊಳಗೆ ಯಿಟ್ಟಿದ್ರು. ಬಿದನೂರಿಗೇ ಯಿದಕ್ಕೆ ಪೂರ್ವದ ಅರಸುಗಳ ಅಭಿಪ್ರಾಯವನ್ನು ತಿಳಿದು ಹೈದರನಗರಾಯೆಂಬ ಹೆಸರಿಟ್ಟನು. ಚಿತ್ರಭಾನು ಸಂ॥ ದಾರಭ್ಯ ಶುಭಕೃತು ಸಂ॥ವರಿಗೆ ವರ್ಷ ೨೧ ಆಳಿದನು. ತದನಂತ್ತರ ಯೀತನ ಮಗ ಟೀಪುಸುಲ್ತಾನನೆಂಬಾತನು ಪೌ[>ಚೌ]ಥಾಯಿ ಅನಿಸಿಕೊಂಡು ಸಿದ್ಧಾರ್ಥಿ ಸಂ॥ರದ ಚೈತ್ರ ೩೦ ವರಿಗೆ ಆಳಿದರು.

ಅಂದಿವಾರ ಶನಿವಾರ ಆಳಿಗೆ ಶ್ರೀರಂಗಪಟ್ಟಣವು ಯಿಂಗ್ರೇಜಿಯವರ ಹವಾಲು ಆಗಬೇಕಾದರ್ರೆ, ಮಧ್ಯೆ ಸಾಧಾರಣ ಸಂವತ್ಸರದಲ್ಲು ಮರಾಠೆ ಪರಶರಾಮಭಾಲು ಬಂದಾಗ್ಗೆ, ಹಂಗಾಮೆಯಲ್ಲಿ ಯೀತನ ಕಡೇಯಿಂದಾ ಕುಂದುಗೋಳದ ಕೆಂಚನಗೌಡನು ಸಾಧಾರಣ ಆಶ್ವಿಜ ಲಾಗಾಯ್ತು ಪರಿಧಾವಿ ಸಂವತ್ಸರದ ವರಿಗೇ ವರ್ಷ ೧। ತಿಂಗಳು ಆಳಿದ. ಆಮೇಲೆ ಪುನಃ ಟೀಪುಸುಲ್ತಾನ್ ಮರಾಠೇಯವರ ಸಮಾಧಾನಮಾಡಿ ರಾಜ್ಯಬಿಡಿಸಿಕೊಂಡ ಬಳಿಕ, ಯಿ ಸೀಮೆಯಲ್ಲಿ ಬರಾ ಬಂದು ಯಿತ್ತು. ವರುಷ ೨. ಪುನಲ್ಲಾ[>ಹಾ] ಪರಿಧಾವಿ ಚೈತ್ರದಾರಭ್ಯ ಶಿಧಾರ್ಥಿ ಚೈತ್ರದ ವರಿಗೆ ಟೀಪುಸುಲ್ತಾನನ ಅಮಲು. ಯೀ ಸಂ॥ ಚೈತ್ರ ಬಹುಳ ೩೦ ವರಿಗೆ ಅಮಲು ಆದ ಬಳಿಕ ಆ ಸಂ॥ ಚೈತ್ರ ೪೩೦ಲ್ಲು ಯಿಂಗ್ರೇಜಿ ಬಹದರವರ್‌ಉ ಟೀಪುಸುಲ್ತಾನನ ಹೊಡದು ಶ್ರೀರಂಗಪಟ್ಟಣವಂನು ಸ್ವಾಧೀನ ಮಾಡಿಕೊಂಡ ಬಳಿಕ, ಯೀ ದೇಶಗಳಂನು ಬಂದುಬಸ್ತುಮಾಡುವದರೊಳಗೇ ಮಧ್ಯದಲ್ಲಿ ದೊಡಿಯೂ[ದೊಂಡಿಯಾ] ಕಾಟಕಾಯು ಮಾಡಿದ ತಿಂಗಳು ೩ ಆಯ್ತು. ಆ ಬಳಿಕ ತಾಲೊಕು ಕುಂಪಣಿಯವರ್ರು ಬಂದೋಬಸ್ತು ಮಾಡಿ. ಆ ಮೇಲೆ ಮೈಸೂರಿಗೆ ಧೊರೆತನಕ್ಕೆ ಕೃಷ್ಣರಾಜವಡೆಯರ್ರು ಮೊಕರೂರ್ರು ಮಾಡಿದ ಬಳಿಕ, ಅವರ ಕೆಳಗೆ ಶ್ರೀಮಂತ ಪೂರ್ಣೈಯನವರ ತಾಲ್ಲೂಕ್ಕು ಆದ ಬಳಿಕ ಯೀ ಕ್ಷಯ ಸಂ॥ಕೆ ನಡೆಯುತ್ತಾ ಯಿದೆ.

❖❖

೪೨

ಸೋಮನಾಥಪುರದ ಅಗ್ರಹಾರ ಕೈಫಿಯತ್ತು*

ಡಿ. ನಂಬರ್ ಸಂಪುಟ : ೧೮೩೩

ಮಾರ್ಕಂಡೇಯ ತಪೋವನಕ್ಕೆ ಉತ್ತರದಿಕ್ಕಿನಲ್ಲಿ ಪ್ರಕಾಶಮಾನವಾಗಿರುವಂಥ ವಸಿಷ್ಠಕ್ಷೇತ್ರದಲ್ಲಿ ಸಮಸ್ತದೇವತೆಗಳ ಸಾನಿಧ್ಯವುಳ್ಳಂತ ಶ್ರೀ ಲಕ್ಷ್ಮೀಸಮೇತನಾದ ಶ್ರೀ ವೇಣುಗೋಪಾಲಸ್ವಾಮಿಯವರು ಇದಾರೆ. ಕನಕಾದಿಯೇ ಮೊದಲಾಗಿರುವಂಥ ನದಿಗಳು ಚಾಮಂಬ[>ಜಾಂ]ಬವತೀ ಎಂಬ ಸರಸ್ಸಿನ ಮೇಲೆ ಪ್ರವಹಿಸಿಕೊಂಡು ಇದಾರೆ. ಆ ಸರಸ್ಸಿನ ಉದಕವೆಂಬ ಅಮೃತಪಾನವನ್ನು ಮಾಡಬೇಕು" ಎಂಬ ಇಚ್ಛೆಯಿಂದ ನಿರಂತರವೂ ವಸಿಷ್ಠರ ಕಾಮಧೇನವಿದೆ.

ಸೋಮನಾಥಪುರದ ದೇವಸ್ಥಾನದಲ್ಲಿರುವಂಥ ಕಲ್ಲು ಶಾಸನದಲ್ಲಿ ಬರೆದಿರುವ ಪ್ರಕಾರ ನರಸಿಂಹದೇವ ಹೆಸರು ಕಲಿಯುಗದಲ್ಲಿ ಶಾಲಿವಾಹನ ಶಕ ವರ್ಷ ೧೧೯೨ನೇ ಶುಕ್ಲನಾಮ ಸಂವತ್ಸರದಲ್ಲಿ ಆಷಾಢ ಶು. ೧೨ ಭೃಗುವಾರದಲ್ಲಿ ವಿಷ್ಣುವರ್ಧನ ಪ್ರತಾಪಚಕ್ರವರ್ತಿ ಹೊಯ್ಸಳ ಭುಜಬಳ ಶ್ರೀ ವೀರ ನರಸಿಂಹದೇವರ ಹೆಸರು [>ದೇವರಸರು] ರತ್ನದಾಸ [>ದೋರ]ಸಮುದ್ರದ ನೆತ್ತಿ[>ಲೆ]ವಿಡಿನೊಳು ಸುಖಸಂಕಥಾ ವಿನೋದದಿಂ ಪೃಥಿವಿ ಸಾಂಮ್ರಾಜ್ಯಗೈಉತ್ತಾ ಯಿರಲು . . . . ಪುತ್ರರಾದ ಸೋಮಕ[>ಯ]ದಣ್ಣಾನಾಯಕರು . . . . ಮಾಡಿದ . . . . ಮುಖ್ಯವಾದ ದೇವರುಗಳು ಅಂಗಭೋಗ . . . . ನಿತ್ಯೋತ್ಸವಂ ಮಾಡಿಸಿ ಜೀರ್ಣೋದ್ಧಾರ ಮಾಡಿದಾರೆ. . . .

ಶ್ರೀಮನ್ಮಹಾಪ್ರಧಾನಂ . . . . ಗಂಡ ಪೆಂಡರ ಮಾಂಡಲಿಕ ಜೂಬ ಉದಂಡ . . . . ದಂಡನಾಥ ದೇವೇಂದ್ರ . . . . ಸ್ವಯಂಭು . . . . ಹಯಾರೂಢ . . . . ರೇವಂತ . . . . ಪ್ರಕಾರ ಸಾರೋದಯಃ ದಾನವಿನೋದ . . . . ದಂಡನಾಥ ಪೂರ್ವಾಚಲ . . . . ಪುಷ್ಪಗಮನ . . . . ದಾರಾಪೂರ್ವಕವಾಗಿ ಮಾಡಿ . . . . ಮಹಾ ಅಗ್ರಹಾರ, ವಿದ್ಯಾನಿಧಿ, ಪ್ರಸನ್ನ [ಸೋಮನಾಥ] ಪುರಗ್ರಾಮ ಮಧ್ಯದ ಕೇಶವದೇವರು ವೇಣುಗೋಪಾಲದೇವರು ಜನಾರ್ಧನದೇವರು ಈ ಪ್ರಕಾರದಲ್ಲಿ ಬ್ರಹ್ಮದೇವರು ೬, ಕೇಶವರು ೧೨, ಮತ್ಸ್ಯಾವತಾರದೇವರು ೧೨, ಕೂರ್ಮಾವತಾರ ದೇವರು ೧೨, ಕೃಷ್ಣಾವತಾರದೇವರು ೧೨, ಕಾವೇರಿನದೀ ತೀರದಲ್ಲಿ ಲಕ್ಷ್ಮೀನರಸಿಂಹದೇವರು ಯೋಗ ನಾರಾಯಣದೇವರು ಮಳವಳ್ಳಿ ಸಾರಂಗಪಾಣಿದೇವರು, ಈ ದೇವರುಗಳಿಗೆ ದೇವದಾನದ ಸ್ಥಳಗಳು ಸುವರ್ಣದಾಯ, ಸೋಮಾನಂದ[>ಸೋಮನಾಥ]ಪುರದ ಶಾಸನದಲ್ಲಿ . . . . ೨೮೦[>೨೧೦]

* ಸೋಸಲೆ – ೧ ಕೈಫಿಯತ್ತಿನ ನಡುವೆ ಸೇರಿ ಹೋಗಿದ್ದ ಇದನ್ನು ಪ್ರತ್ಯೇಕಿಸಿಕೊಂಡಿದ್ದೇವೆ. (ಸಂ)

ಆ ವೂರ ಬಂಡೂರ ತಾಕಿನ ಸರ್ವ ಪ್ರಾಣಿ[>ಪ್ತಿ] ಸಹಿತ ಢಣಾಯಕರು ಕೊಟ್ಟು ೨೧ ವೃತ್ತಿಗಳಿಗೆ ಸರ್ವ . . . . ಉಪಾಧ್ಯಾಯರಿಗೆ ಆದ ವೃತ್ತಿಗೆ ಕೊಟ್ಟ ಸಹ ಗದ್ದೆ ಬೆದ್ದಲು ಸರ್ವಪ್ರಾಪ್ತಿ ಸಹಿತವಾಗಿ, ಆ ಬಾಗಿಲ . . . . ಸಮುದ್ರದ ಬಾಗಿಲು ಕಾಲುವೆ ಕೆಳಗೆ ಯಥಾ ಪ್ರಾಪ್ತಿ ಉತ್ಪತ್ತಿಯನ್ನುಳಿಯೆ, ಸರ್ವಶಾಸ್ತ್ರದ ವಿದ್ಯಾದಾನದ ಪರಿವರ್ತನೆಯಂ ಮಾಡಿದ . . . . ಕಾಮಣ್ಣನ ಮ[>ಮಾ]ಗನೂರ ತತ್ತಿನ . . . . ವೃತ್ತಿಗೂಡಿ ೨೧ರ ವಳಗೆ . . . . ಬಾಕಿ ೧೪ರ ಸರ್ವಪ್ರಾಪ್ತಿಯನ್ನು . . . . ಕಾಲುವೆ ಗದ್ದೆಗೆ ಸಲ್ಲುವ[>ಸಲಗೆ] ೨೦೦ ಗುತ್ತಿಗೆ ಪ್ರಕಾರ ಆಗಮಾಡಿಕೊಂಡು . . . . ಯಡತೊರೆನಾಡ ಹಳ್ಳಿ . . . . ಬಡಗಣ ದಿಕ್ಕಿನ ಮುರೆಹಳ್ಳಿಯ . . . . ವಿವರ ಬರೆದಿದೆ. . . . . ಈ ಶಾಸನದಲ್ಲಿ ಢಣಾಯಕನ . . . . ಕುಮಾರ ಚಿಕ್ಕ ಕೆತ್ತಡಣ್ಣ . . . .*

❖❖

೪೩

ಸೋಸಲೆಯ ಕೈಫೀತು-೧*

ಡಿ. ನಂಬರ್ ಸಂಪುಟ : ೧೮೩೩

ಋಣವಿಮೋಚನ, ಪಾಪವಿಮೋಚನ, ಪಿಶಾಚವಿಮೋಚನ ಎಂಬ ತೀರ್ಥವು . . . . ತೀರದತ್ತಿ[>ಲ್ಲಿ]ತ್ತು. ಈ ತೀರ್ಥದ ಮೇಲೆ ಕಾವೇರಿನದಿಯು ಹರಿದುಬಂತು. ಹೀಗಿರುವಲ್ಲಿ ಉತ್ತಂಕಮುನಿಗಳು ತಪಸ್ಸಿಧ್ಯರ್ಥವಾಗಿ ಸ್ಥಳ ನಿರೀಕ್ಷಣೆಯನ್ನು ಮಾಡುತ್ತಾ ಬರುವಲ್ಲಿ, ಕಾವೇರಿಯು[>ಯ] ಪೂರ್ವದಿಕ್ಕಿಗೆ ಬಂದು "ಸ್ನಾನವನ್ನು ಮಾಡಿಕೊಳ್ಳೋಣ" ಬಂ[>ಎಂ]ದು, ತಾವು ಅರ್ಚನೆಯಂ ಮಾಡುವಂಥ ಜನಾರ್ದನಸ್ವಾಮಿಯವರನ್ನು ಈ ಸ್ಥಳದಲ್ಲಿರಿಸಿ, ಸ್ನಾನ ಮುಂತಾದ್ದನ್ನು ಮಾಡಿಕೊಂಡು, ಮುಂದಕ್ಕೆ ತೆರಳಬೇಕೆಂದು ಯೋಚಿಸಿ ದೇವರನ್ನು ತೆಗೆಯಲು, "ನೀನು ಇಲ್ಲಿಯೇ ತಪವನ್ನು ಮಾಡು. ನಿನಗೆ ಕಾಲಾಂತರದಲ್ಲಿ ಮೋಕ್ಷವು ದೊರೆತೀತು" ಎಂದು ಅಪ್ಪಣೆಯನ್ನು ಕೊಟ್ಟದ್ದರಿಂದ ಇಲ್ಲಿಯೇ ತಪಸ್ಸನ್ನು ಮಾಡುತ್ತಿರಲು.

ಒಂದಾನೊಂದು ಕಾಲದಲ್ಲಿ ಸವೀರರಾಯನು ಸವಾರಿ ಬಂದು, ಈ ಋಷಿಗಳನ್ನು ಕಂಡು, "ನನಗೆ ಸಂತಾನಪ್ರಾಪ್ತಿಯಾಗುವ ಹಾಗೆ ಮಾಡಿ, ಕಾಲಾಂತರದಲ್ಲಿ ಸದ್ಗತಿಯಾಗುವ ಹಾಗೆ ಅನುಗ್ರಹವನ್ನು ಮಾಡಬೇಕು" ಎಂದು ಕೇಳಿಕೊಳ್ಳಲು, ಆ ಋಷಿಗಳು ಅದನ್ನು ಕೇಳಿ, "ನಿನ್ನ

---

* ಈ ಶಾಸನದ ಪೂರ್ಣಪಾಠವನ್ನು ಎ.ಪಿ.ಕ.(ಹೊಸ) V ಟಿ. ನರಸಿಪುರ ೮೮ ನೋಡಿರಿ (ಸಂ)

ಮನಸ್ಸಿನಲ್ಲಿ ಇದ್ದಂತೆ ಆಗುವದು. ನಮಗೆ ಬದರಿಕಾಶ್ರಮಕ್ಕೆ ಹೋಗತಕ್ಕ ಕಾಲವು ಒದಗುತ್ತದೆ. ಆಗ್ಗೆ ಈ ದೇವರನ್ನು ಸೇವೆ ಮಾಡು. ನಿನಗೆ ಸಕಲಾಭೀಷ್ಟವೂ ನೆರವೇರುತ್ತದೆ" ಎಂದು ಋಷಿಗಳು ಅಪ್ಪಣೆಯನ್ನು ಕೊಟ್ಟದ್ದರಿಂದ, ಈ ರಾಯನು ತನ್ನ ಕುಟುಂಬ ಸಮೇತನಾಗಿ ಸ್ವಾಮಿಯ ಸೇವೆಯನ್ನು ಮಾಡಿಕೊಂಡು ಇರುತ್ತಿದ್ದನು. ಇದನ್ನು . . . . ಪುರ ಎಂಬದಾಗಿ ಹೆಸರು ಬಂತು. ಹೀಗಿರುತ್ತಿರಲಾಗಿ . . . . ಬಂದು "ಒಡವೆ ವಸ್ತುಗಳನ್ನು ಅಪಹರಿಸಬೇಕು" ಎಂದು ಗುಡಿಯ ಒಳಗೆ ಪ್ರವೇಶಿಸಲು, ತಪಸ್ಸನ್ನು ಮಾಡುತ್ತಿದ್ದ ಉತ್ತಂಕಮುನೀಶ್ವರನಂ ಕಂಡು "ಇವರ . . . . ಮಾಡಬೇಕೆಂ"ದು ಯೋಚಿಸಿ, ಇವರ ಎದೆಯ ಮೇಲೆ ಕುಳಿತು, ಕಾಲು, ಕೊರಳು, ಕೈಯನ್ನು ಕೊಯ್ಯುವುದಕ್ಕೆ ಪ್ರಯತ್ನ ಮಾಡಲು, ಅವರು ಆ ಕಳ್ಳರನ್ನು ಕುರಿತು "ಯಾವ ನಿಮಿತ್ತದಿಂದ ಸಂಹಾರಮಾಡಬೇಕೆಂಧು ಯತ್ನ ಮಾಡುತ್ತಿದೀರಿ? ಹೀಗೆ ಮಾಡಿದ್ದರಿಂದ ಪ್ರಯೋಜನವೇನು? ಇಂಥಾ ವ್ಯಾಪಾರದಿಂದ . . . . ಏನು ನಿಮಿತ್ತವಾಗಿ ಬಂದಿದ್ದೀರಿ?" ಎಂದು ಕೇಳಲು . . . . "ದ್ರವ್ಯಾನುಭಾವ ಸೌಖ್ಯದಲ್ಲಿ, ನಿನಗೆ ಹೆಂಡತಿ ಮಕ್ಕಳಿರುವಲ್ಲಿ ಇಂಥಾ ಕೆಲಸಕ್ಕೆ ಯತ್ನ ಮಾಡಬೇಡ" ಎಂದು ಉಪದೇಶ ಪೂರ್ವಕವಾಗಿ ಹೇಳಿ, ಕಮಂಡಲೋದಕವನ್ನು ಪ್ರೋಕ್ಷಿಸಲು ಆ ಋಷಿಯ ಉಪದೇಶದಿಂದಲೂ, ಕಮಂಡಲೋದಕದ ಬಿಂದುವಿನ ಮಹತ್ತಿನಿಂದಲೂ ಈ ಕಳ್ಳನಿಗೆ ಪೂರ್ವಜ್ಞಾನವು ಬಂದುದರಿಂದ, ಈ ಜನಾರ್ದನ ದೇವರ ಸಮೀಪದಲ್ಲಿ ಈ ದೇಹವನ್ನು ಬಿಟ್ಟು ದಿವ್ಯದೇಹವನ್ನು ತಾಳಿ, ತಾನು ಪೂರ್ವದಲ್ಲಿ ಮಾಡಿದಂಥ ಪಾಪದ ದೆಸೆಯಿಂದ . . . . ಈ ದೇವರ ಸ್ತೋತ್ರವನ್ನು ಮಾಡಿದ್ದರಿಂದ, ಶಾರ್ಙ್ಗ ಚಕ್ರ ಗದಾರೂಢರಾಗಿ ಲಕ್ಷ್ಮೀಸಮೇತನಾಗಿ ವನಮಾಲಾಭೂಷಿತರಾಗಿ ಉತ್ತಂಕಮುನಿಗಳಿಗೆ ಪ್ರತ್ಯಕ್ಷರಾಗಿ "ನೀನು ಮಾಡಿದ ಪೂಜೆಯಿಂದ ಸಂತುಷ್ಟರಾದೆವು. ನಿನಗೆ ಬೇಕಾದ ವರವನ್ನು ಕೇಳಿಕೊ" ಎಂದು ಹೇಳಲು, ಅದಕ್ಕೆ ಆ ಋಷಿಗಳು ಕೇಳಿಕೊಂಡ ವಿವರವೆಂತೆಂದರೆ:

"ನಿಮ್ಮ ಸಂದರ್ಶನವಾದ ಮೇಲೆ ಮತ್ತೊಂದು ಯೋಚನೆಯುಂಟೆ? ಸದಾ ಜನ್ಮಜನ್ಮಾಂತರದಲ್ಲಿಯೂ ನಿಮ್ಮ ಚರಣಧ್ಯಾನವು ಇರಬೇಕು" ಎಂದು ಕೇಳಿಕೊಳ್ಳಲು, "ನೀನು ಬದರಿಕಾಶ್ರಮಕ್ಕೆ ತೆರಳು, ನಿನಗೆ ಪುನರಾವೃತ್ತಿಯಿಲ್ಲ. ಮೋಕ್ಷವನ್ನೇ ಕೊಡುತ್ತೇವೆ' ಎಂದು ಹೇಳಿ, ಮತ್ತು "ನೀವು ಪೂಜೆ ಮಾಡುತ್ತಿದ್ದ ಸ್ವಾಮಿಯವರನ್ನು ಯಾರು ಭಜಿಸುತ್ತಾರೊ ಅವರಿಗೆ ಇಷ್ಟಾರ್ಥವನ್ನು ಕೊಡುತ್ತೇವೆ. ಜನಾರ್ದನರೂಪದಿಂದ ಇಲ್ಲಿಯೇ ವಾಸವನ್ನು ಮಾಡಿಕೊಂಡಿರುತ್ತೇವೆ" ಎಂದು ಅನುಜ್ಞೆಯಂ ಕೊಟ್ಟರು. ಉತ್ತಂಕಮುನಿಗಳು ಬದರಿಕಾಶ್ರಮಕ್ಕೆ ತೆರಳುವಲ್ಲಿ ಸವೀರರಾಯನನ್ನು ಕರೆದು "ಈ ಜನಾರ್ಧನದೇವರನ್ನು ಪೂಜೆಮಾಡಿಕೊಂಡಿರು, ನೀನ ಪುತ್ರ ಮಿತ್ರ ಕಳತ್ರಾದಿಗಳ ಸಮೇತನಾಗಿ ರಾಜ್ಯವನ್ನು ಪರಿಪಾಲಿಸುವೆ" ಎಂದು ಅನುಜ್ಞೆಯನ್ನು ಮಾಡಲು, ಅದೇ ಪ್ರಕಾರ ಆತನು ಪುತ್ರ ಪೌತ್ರ ಪಾರಂಪರ್ಯವಾಗಿ ದೇವರನ್ನು ಆರಾಧನೆಯನ್ನು ಮಾಡಿ ಸದ್ಗತಿಯನ್ನು ಹೊಂದಿದನು. ಕೆಲವು ದಿವಸಗಳ ಮೇಲೆ . . . . ಯಥಾಪ್ರಕಾರವಾಗಿತ್ತು. ಅನಂತರ ಅರಣ್ಯವಾಗಿತ್ತು.

ಈ ಕಲಿಯುಗದಾದಿಯಲ್ಲಿ ಜನಮೇಜಯರಾಯನು ಜೀರ್ಣೋದ್ಧಾರವನ್ನು ಮಾಡಿ, ಜನಾರ್ಧನದೇವರ . . . . ಸೋಸಲೆ ಎಂದು ಪ್ರಸಿದ್ಧವಾಗಿದೆ. ಮಹಿಸೂರ ಸಂಸ್ಥಾನದ ರಾಜ ಒಡೆಯರು ಮಂದಿ ಮಾರ್ಬಲವನ್ನು ಕೂಡಿಕೊಂಡು . . . . ದೇವರಾಯರಿಗೆ ಸೇರಿದ ಬೆನ್ನೂರಿಗೆ ಸೋಸಲೆ . . . . ದೊಡ್ಡದಾಗಿ ಮಾಡಿದ ವಿವರ: ಪೂರ್ವ ಪಶ್ಚಿಮ ಗಜ . . . . ಉತ್ತರ ದಕ್ಷಿಣ ಗಜ ೩೦೨೬ ಬುರುಜು ಎರಡು ಬಾಗಿಲು . . . . ಗುಂಡು ಮಾರ್ಬಲಗಳನ್ನು ಇಟ್ಟು, ಸೋಸಲೆಗೆ

. . . . ಸೀಮೆಗಳನ್ನು ಸೇರಿಸಿ, ಗಡಿಯನ್ನು ಮಾಡಿ, ಮುಂದೆ . . . . ಬನ್ನೂರು ಮುಂತಾದ್ದನ್ನು ಸಾಧಿಸಿದರು. ಶಾಲಿವಾಹನ ಶಕವರ್ಷ ೧೫೩೩ರಲ್ಲಿ ಸಂದ ವರ್ತಮಾನ ಪ್ರಮಾಧೀಚ ಸಂವತ್ಸರದಲ್ಲಿ ಅಶ್ವಯುಜ ಶುದ್ಧ ೧ರಲ್ಲಿ ಇತರ . . . . ಹಳೆ ಅಗ್ರಹಾರದ ಪ್ರತಿನಾಮಧೇಯವಾದ ರಾಜಸಮುದ್ರವೆಂಬ ಗ್ರಾಮವಂ . . . . ರಾಜ ಒಡೆಯರು ಬಿಟ್ಟಿದ್ದು ಶಾಲಿವಾಹನ ಶಕವರ್ಷ ೧೫೩೬ನೆಯ ಸಂದ ವರ್ತಮಾನ ನಂದನ ಸಂವತ್ಸರದ ವೈಶಾಖ ಶುದ್ಧ ೧೫ರಲ್ಲು ಅಗ್ರಹಾರವನ್ನು ಬಿಟ್ಟರು. ಬೇರೀಜು ಗಜ ೫೦ ಕೊಟ್ಟದ್ದರಿಂದ ಅನುಭವಿಸಿಕೊಂಡು ಬಂದ ತರುವಾಯ ಆಳಿದ ವರ್ಷಗಳು ರಾಜಒಡೆಯರು ೧॥, ಚಾಮರಾಜ ಒಡೆಯರು ೨೫, ಕಂಠೀರವ ನರಸರಾಜ ಒಡೆಯರು ೫, ದೊಡ್ಡದೇವರಾಜ ಒಡೆಯರು ೩೨, ಚಿಕ್ಕದೇವರಾಜ ಒಡೆಯರು ೩, ... ೧೦, ಚಾಮರಾಜ ಒಡೆಯರು ೩೫, ಕೃಷ್ಣರಾಜ ಒಡೆಯರು ೧೧, ಚಿಕ್ಕ ಕೃಷ್ಣರಾಜ ಒಡೆಯರು ೫ . . . . ೧೬ . . . . ೧೬ . . . . . .

❖❖

೪೪

ಸೋಷಲೆ ಅಗ್ರಹಾರದ ಕೈಫಿಯತ್ತು-೨

ಮೆಕೆಂಝಿ ಸಂಪುಟ : ೧೬೨

ಸೋಷಲೆಪುರ ಅಗ್ರಹಾರ ಶಾಲಿವಾಹನ ಶಕ ವರುಷ . . . . ಸಂವತ್ಸರ ಮಾಸ ಪರಿಧಾವಿ ಸಂ।ವನ್ನು ಚೈತ್ರ ಶುದ್ಧ ೫ರಲ್ಲಿ ರಾಜವಡೆಯ್ಯನವರು ಬಿಟ್ಟಂತಾ ಅಗ್ರಹಾರಲು . . . . ಇದನ್ನು ತಾಂಬ್ರ ಶಿಲಾಶಾಸನದಲ್ಲಿ ಬರದು ಯಿದ್ದಾರೆ. ಅದರಲ್ಲಿ ವೃತ್ತಿ ೪೧ನೆ ಮುಂಗಳಿಗೆ ವೃತ್ತಿ ೧ . . . . ೮ ಕಾವಲಿ ಕಟ ೬೯ಕಲ್ಲು ವೃತಿ ೪೧ನೆ ಮುಂಗಳಿಗೆ ೩೨೮೯೩ನಲ್ಲಿ . . . . ಟ ರಾಯಿ ೨೪೬೯ಕಾ ವಿವರು:

ತ್ತಾಯುರ್‍ರೂ ತಾಲ್ಲೂಕಿಗೆ ಸೇರಿದ ಅಗ್ರಹಾರಗಳು

೧೪೬೯ ನವಿಲ್ಲೂರು ಗ್ರಾಮ ೧ನೆ . . . . ಸಹ ಯಿವರು ೧

ಗ್ರಾ. ೨ಕೆ ೨ . . . . . ೧

೧ ಹಳೆ ಅರಕಲಗೂಡು ಅಗ್ರಹಾರ ಶಾಲಿವಾಹನ ಶಕ ಸಂವತ್ಸರ . . . . ನಂದನ ೨೯।ಕೊಟ್ಟದ್ದು, ವಿಜಯನಾಮ ಸಂವತ್ಸರ ಪುಷ್ಯ ಶು।೧೦ ಅಂಗಾರಿಕವಾರ ಮಕರಸಂಕ್ರಮಣ ಪುಣ್ಯಕಾಲದಲ್ಲಿ ಮಹಾರಾಜಶ್ರೀ ಹಂಪಿ ವಿರೂಪಾಕ್ಷರಾಯರ್‍ರು ಮಾಡಿದಂತಾ ಅಗ್ರಹಾರ ಹಣ

ಸೆಂಕೆ . . . . ವೃತ್ತಿ ೧ಕ್ಕೆ ಕ . . . . ।೧೨। = ಲ್ಲು ವೃತ್ತಿ ೪೦ ೧೦ಕ್ಕೆ ೧೧೧॥೨ ಸದರಹು ಸೋಸಲೆ ಪೈಕಿ ಹಳೆ ಅರಕಲಗೂಡ ಗ್ರಾಮ ಬಿಟ್ಟು ಅದೆ. . . . . ತಾಂಬ್ರ ಶಾಸನಾ.

ರಾಮಚಂದ್ರಪುರ ಅಗ್ರಹಾರ ೧ಕೆ ಶಾಲಿವಾಹನ ಶಕ ೧೬೭೧ ಶುಕ್ಲನಾಮ ಸಂ॥ ವೈಶಾಖ ಶು.೧೨ ಅಂಗಾರಿಕವಾರದಲ್ಲಿ ಕೃಷ್ಣರಾಜವಡೆಯರವರು ಅಪ್ಪಣೆ ಮೇರ್‍ರೆಗೆ ದಳವಾಯಿ ವೀರರಾಜೈಯ್ಯನವರು ಮಕ್ಕಳು ದಳವಾಯಿ ದೇವರಾಜೈಯ್ಯನವರ್‍ರು ಮಾರಿ[>ಡಿ]ದಂತಾ ಅಗ್ರಹಾರಗಳು ಸಂಖ್ಯೆ ವೃತ್ತಿ ೧೨, ವೃತಿ ೧ಕೆ ೬೦೮ರಲ್ಲು ೧೨೦[>೭೨೦೦]ಗ್ರಾಮ ೧೪ಕೆ

೭೨೦೮೦[>೭೨೦೦]ಕೆ ವಿವರ ತಾಂಬ್ರಶಾಸನ.

೭೩೩೮೪ ಸತ್ಯಗಾಲದ ತ್ತಾಲ್ಲೂಕು ಯರಗಂಬಳಿಗ್ರಾಮ ೧ಕೆ

೧೯೧೦೫೧, ಮುರೂರು ತಾಲ್ಲೂಕು ಗ್ರಾಮ ೬ಕೆ ೧೨೦೦೦ ಕೆರ್‍ರೆಹಟ ತಾಹಳೀ ಆಲಗೋಡು ಸಹಾ ಗ್ರಾಮ ೩ಕೆ ಹಾಲ ಸೊಸಲೆ ಪೈಕಿ

೧೪೦೫೧	ತಾರ್‍ರೆಪುರ ಗ್ರಾಮ ೧ಕೆ
೨೪೦೮೦	ಬಂನ್ನೂರು ಗ್ರಾಮ ೧ಕೆ
೨೩೦೮೦	ಕಾರ್ಯಗ್ರಾಮ ೧ಕೆ
೧೯೧೦೫೧[>೧೯೧೦೮೧]	

೪೮೦ . . . . ಉಮ್ಮತ್ತೂರು ತಾಲ್ಲೂಕು ಸೇರಿರ್‍ರು ಗ್ರಾಮ ೧ಕೆ

೧೨೨೫೮೦[>೧೨೭೫೮೦] ತಾಯುರು. ತಾಲೂಕು ಗ್ರಾಮ ೨ಕೆ

೬೫೧	ಮೆಟವಾಳ ಗ್ರಾಮ ೧ಕೆ
೬೨೪	ಗಣಗನೂರು ಗ್ರಾಮ ೧ಕೆ
೧೨೭೫೮೦	೨

೨೮೭೯೯೦ ಹರದನದಳ[>ಹಳ್ಳಿ] ತಾಲ್ಲೂಕು ಗ್ರಾಮ ೪ಕೆ

೭೨೫೯೦	ನಾಗವಳಿ ಗ್ರಾಮ ೧ಕೆ
೮೬೪೯೦	ಜೊತ್ತಿಗಲುಡ ಊರ್‍ರು
೫೭೭೯೦	ಕಾಗಲವಾಡಿ ಗ್ರಾಮ ೧ಕೆ
೫೯೦೯೦	ಹೊಂಡರ ಹಾಳೆ
೨೮೦೧೮೦	

೭೨೦೦೮೦

೧ ಕೋಣಗಹಳ್ಳಿ ಅಗ್ರಹಾರ ಶಾಲಿವಾಹನ ಶಕವರುಷ ಆನಂದನಾಮ ಸಂವತ್ಸರ ವೈಶಾಖ ಸು॥ ೧೫ಲ್ಲು ರಾಜೀವದೇವೈಯ್ಯನವರು ಬಿಟ್ಟೂದು. ಕೊಣಗಹಳ್ಳಿ ಗ್ರಾಮವನು ಪ್ರತಿನಾಮ ಕಾಟಿಗಪುರಿಯಂಬ ಅಗ್ರಹಾರ ಗ್ರಾ. ೧ಕೆ ವೃತಿ ೫ಕೆ ೧೦ನಲ್ಲು ವೃತಿ ೫೯೦ಕೆ ೫೯೦ ತೊಳತ್ತಪುರ ಅಗ್ರಹಾರ ಶಾಲಿವಾಹನ ಶಕವರುಷ ೧೩೯೯ನೇ ಸಂದ ಯೀಶ್ವರನಾಮ ಸಂ ಶ್ರಾವಣ ಶುದ್ಧ ೫ . . . . ಸಿಂಹಾಸನರಮಣ [>ಸಿಂಹಾಸನಾರೋಹಣ] ಪುಣ್ಯಕಾಲದಲ್ಲು ಹರಿಹರರಾಯರ್ರು ಮಾಡಿದಂಥ ಅಗ್ರಹಾರಗಳು, ವೃ ೩೮ ॥ಕೆ ವೃತ್ತಿ ೧ಕೆ ೩೫೪ = ಲ್ಲು ೯೯೦೫೪॥೦ಕೆ ಬಿಟ್ಟು ಯಿರ್ರುವ ಗ್ರಾಮಗಳು ಚೆನ್ನಪಟ್ಟಣದ . . . . ವಳಿತವಾದ ಹರಿಹರಪುರಕೆ ಪ್ರತಿನಾಮಧೇಯವಾದಂತಾ ತೂಳತ್ತೂರು ಗ್ರಾಮವನ್ನು ಅಗಸ್ತೇಶ್ವರ ಸನ್ನಿಧಿಯಲ್ಲು, ತ್ರಿವೇಣಿ ಸಂಗಮದಲ್ಲು ಬಿಟ್ಟು ಯಿದ್ದುದರ ತಾಂಬ್ರ ಶಾಸನಾ.

ಯಿನಾಮತಿ ಜೋಡಿ ಯಿರ್ರುವಂತಾ ಗ್ರಾಮ ದೊಡ್ಡಪುರದ ಶಿಲ[>ನಿಲ]ಸೊಗೆ ನಾ . . . . ಯಾ ಯಿ ಪುರಿಗೆ ಶಾಲಿವಾಹನ ಶಕವರುಷ ೧೬೬೮ನೆ ಸಂದ ವರ್ತಮಾನ ವ್ಯಯಸಂವತ್ಸರ ಶ್ರಾವಣ ಶು೧೧೫ಲ್ಲು ಕ್ರಿಷ್ಣರಾಜವಡೆಯನವರು ನಾರಾಯಣ ದೇವಣ್ಣರಿಗೆ ಸಹಿರಣ್ಯೋದಕ . . . . ಪೂರ್ವಕವಾಗಿ ಯಿನಾಮತಿ ಬೇರೀಜು ದೊಡಪುರ . . . . ಸನ್ನದು ಅಖಂಡೇಶ್ವರಸ್ವಾಮಿಯವರಿಗೆ ಗ . . . . ಶಿ. ರ . . . . ದಂಡಾ ಕೊಡುವ ಹಾಗೆ ನಿರೂಪಹ ಪ್ರತಿ. ಶಾಲಿವಾಹನ ಶಕವರುಷ ೧೭೬೩ ವಿಶ್ವಾವಸು ಸಂ ಕಾರ್ತೀಕ ೮ಲ್ಲು ಕ್ರಿಷ್ಣರಾಜ . . . . ಪಟ್ಟಣ ಹೊಬಳಿ ವಿಚಾರಿಶಿ . . . . ಡ ನಂಜರಾಜೈಯ್ಯ ಕಳುಹಿಸಿದ ನಿರ್ರೂಪ ಆಗಿ ತಿರುಮಲಕೊಡಲ್ಲಿ . . . . ಯಲ್ಲಿ ಶ್ರೀ ಸಚ್ಚಿದಾನಂದ ಸ್ವಾಮಿಗಳವರು ಪ್ರತಿಷ್ಟೆ ಮಾಡಿಯಿರ್ರುವ ಅಖಂಡೇಶ್ವರಸ್ವಾಮಿಯವರಿಗೆ ಪಡಿತರ ದೀಪಾರಾಧನೆ ಬಗ್ಯೆ ಒಳುಉಗಡೆಯನ್ನು ಸಹಿರಣ್ಯೋದಕದಾನ ಧಾರಾಪೂರ್ವಕವಾಗಿ ಧಾರೆನೆರೆದು ಕೊಟ್ಟು ಯಿದ್ದಾರೆ. ಅದನ್ನು ಯೀ ಬಗ್ಯೆ ನಿನ್ನ ಹವಾತು . . . . ಸೊಸಲೆ ಕಾಲುವೆ ಕೆಳಗೆ ಯಿರುವ ಗದ್ದೆ ಖ ೪ಯನ್ನು ಅಖಂಡೇಶ್ವರಸ್ವಾಮಿಯವರ ಪಡಿತರಾದ ಬಗ್ಗೆ . . . . ಬಿಡ್ಸಿ ಕೊಟ್ಟು ನಡಿಸಿಕೊಂಡು ಬರುವಂತೆ ತಿಳಿದು ಬರುವದು.

❖❖

೪೫

ಹರಿಹರದ ಕೈಫಿಯತ್ತು*

ಡಿ.ನಂಬರ್ : ೨೪೮೫

ಪೂರ್ವ ಕಲಿಯುಗದ ಆದಿಯಲ್ಲಿ ಜನಮೇಜಯರಾಯರು ದಕ್ಷಿಣ ದೇಶದ ದಿಕ್ಕಿಗೆ ಬರಮಾಡೋ ಬಗ್ಯೆ, ಯುಧೀಷ್ಟರ ಶಖ ೧೧೧ನೇ ಸಂವತ್ಸರದಲ್ಲಿ ದೇಶವಂನ್ನು ಸಾಧಿಸುತಾ ಹರಿಹರದ ಸಮೀಪಕ್ಕೆ ಬಂದು, ಅಲ್ಲಿ ಸಕಲ ಮುನೀಶ್ವರ ಸಮೇತವಾಗಿ ಯಿರಲು, ತನಗೆ ಶತ್ರುವಬ್ಬರು ಇಲ್ಲಯೆಂಬದಾಗಿ ಯೋಚಿಸಿದ್ದಲ್ಲು, ತಂನ್ನ ತಂದೆಯಾದ ಪರೀಕ್ಷಿತುರಾಯರಿಗೆ ತಕ್ಷಕನಿಂದಾ ತಂನ್ನ ತಂದೆಗೆ ವುಪದ್ರವವಾಗಿ ಹೋದದರಿಂದಾ ಪ್ರತ್ವಾ ಸಾಧಿಸಬೇಕು. ಹರಿಹರದಲ್ಲು ಹಿ[>ಹ]ರಿದ್ರಾ ನದಿ ತುಂಗಭದ್ರಾ ಸಂಗಮ ಸ್ಥಳದಲ್ಲಿ ಸರ್ಪಯಾಗವನ್ನು ಮಾಡಿಸುವ ಸಮಯದಲ್ಲು ಸಮಸ್ತ ಬ್ರಾಹ್ಮರು ಮುಂತಾದವರೂಗೆ ಯಾಗದ ಪೂರ್ಣಸಮಯದಲ್ಲು ಬಡಗಲದೇಶದಿಂದಾ ಬ್ರಾಂಹ್ಮರು ಗೌತಮಗೋತ್ರದ ಗೋವಿಂದಪ್ಪ ವರ್ಧನಿ, ವಶಿಷ್ಟಗೋತ್ರದ ವಾಮನಪ್ಪ ವರ್ಧನ, ಭಾರದ್ವಾಜಗೋತ್ರದ ಕೇಶವದೀಕ್ಷಿತರು, ಶ್ರೀವತ್ಸಗೋತ್ರದ ನಾರಾಯಣದೀಕ್ಷೀತರೂ, ಚತುರಮುಖ ನಾನಾ ಗೋತ್ರದ ಬ್ರಾಹ್ಮರಿಗೇ ತಮ್ಮ ಆಶ್ರಮವಾದ ಗೌತಮ ಗ್ರಾಮವಂನ್ನು ಧಾರಾಪೂರ್ವಕವಾಗಿ ಧಾರೆಯೆರದು ಕೊಟ್ಟರು. ತಾಂಮ್ರಶಾಸನವಂನ್ನು ಬರದುಕೊಟ್ಟರು. ನಾವು ಅನುಭವಿಸ್ತು ಇದ್ದಲ್ಲಿ ಸರ್ವಮಾನ್ಯವೂ ನುಡಿಯುತ್ತಾ ಬಂದು ತರುವಾಯ ಬಳ್ಳಾಳಲರಾಯರ ಕಾಲದಲ್ಲಿ, ಆನೆಗೊಂದೀರಾಯರ ಕಾಲದಲ್ಲಿ ಸರ್ವಮಾಂನ್ಯವಂನ್ನು ಬ್ರಾಹ್ಮರಿಗೆ ನಡಿಯುತ್ತಾ ಬರುತ್ತಾ ಇದ್ದಲ್ಲಿ, ಇರಲಾಗಿ ಯ[>ಇ]ಕ್ಕೇರಿ ಸಂಸ್ಥಾನ ಶಿವಭಕ್ತರಿಗೆ ಅದರಿಂದಾ ಸಿದ್ಧಪ್ಪನಾಯಕರ ಕಾಲದಲ್ಲಿ ಈ ಗ್ರಾಮಕ್ಕೆ ಕೂಡಿದ ೧೨ ಕುಲ ಗ್ರಾಮವಂನ್ನು ಬಿಡಿಸಿ ಈ ಗೋತಮ ಗ್ರಾಮಕ್ಕೆ ಶಿಸ್ತುಕಟ್ಟಿ ಅರವಾಸಿ ಹಣವಂನ್ನು ತೆಗೆದುಕೊಳ್ಳುತ್ತಾ ಬಂದರು.

ತರುವಾಯ ಮುಸಲ್ಲರ (ಮುಸಲ್‌ಮಾನರ) ಆವಾಂತರದಲ್ಲು ಆಗ್ರಾರವನ್ನ ಸುಟ್ಟು ಹಾಳು ಆಯಿತು. ಈಚಿಗೆ ಬಾಜೀರಾಯರ ಆವಾಂತರದಲ್ಲು ಪುನಃ ಹಾಳು ಆಯಿತು. ತರುವಾಯ ನಾನಾರಾಯರು ಎರಡು ವೇಳೆ ಬಂದು ಹೋದ ಬಳಿಕ ಚಿತ್ರಭಾನು ಸಂವತ್ಸರದಲ್ಲು ಬಾಹದರನ ಆವಾಂತರವಾಗಿ ನಗರದ ರಾಜ್ಯ ಸ್ವಾಧೀನ ಮಾಡಿಕ್ಕೊಂಡು ಸ್ವಭಾನು ಸಂವತ್ಸರದಲ್ಲು ಅರೊವಾ ವರಹಾ xxxxx ಪ್ರಕಾರ ಇದ್ದ xxx ನಗದಿ ಕಟ್ಟು xxxದ ನಾಶಿ ನಡಸುತ್ತಾ ಬಂದರು. ತಾರಣ ಸಂವತ್ಸರದಲ್ಲು ಮಾಧವರಾಯರು ಅವಾಂತ್ರದಲ್ಲು ಸುಟ್ಟು ಹಾಳು ಮಾಡಿದರು. xxx

ಈ ಕೈಫಿಯತ್ತು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಿಂದ ಪ್ರಕಟವಾಗಿದೆ. (ಸಂ)

x ದಾಯಬಾಹದರವರ ಠಾಣಾಯಾಗಿ ಶುಭಕೃತು ಸಂವತ್ಸರ ಪರಿಯಂತ್ರ ಅರವಾಸಿ ಪ್ರಕಾರ ನಡಿಸುತ್ತಾ ಬಂದರು. ತರುವಾಯ ಸುಲ್ತಾನರು ಶೋಭನಕೃತು ಸಂವತ್ಸರದಲ್ಲು ಈ ಗ್ರಾಮವನ್ನು ಅನಂತಪುರ ತಾಲ್ಲುಗೆ ಶೇರಿಸಿ ಜಪ್ತಿ ಮಾಡಿ ಯಾವತ್ತು ರೊಕ್ಕವಂನ್ನು ತೆಗೆದುಕೊಳ್ಳುತ್ತಾ ಬಂದರು. ಈಚೆಗೆ ಸಿದ್ಧಾರ್ಥಿ ಸಂವತ್ಸರದಲ್ಲು ಇಂಗರೀಜಿ ಅವರು ಶ್ರೀರಂಗಪಟ್ಟಣ ಠಾಣೆ ಹಾಕಿ, ಸಂಮಸ್ತಾನ ಮೈಸೂರು ಅರಸುಗಳಿಗೆ ಕೊಟ್ಟಮ್ಯಾಲೆ ಸ್ವಭಾನು ಸಂವತ್ಸರದಲ್ಲಿ ನಡೆದ ಪ್ರಕಾರ ಅರವಾಶಿ ನಡಿಸುತ್ತಾ ಇದ್ದಾರೆ. ಈಗ ನಡೆಯೋ ಬ್ರಾಹ್ಮರು ಅಗ್ರಹಾರದಲ್ಲು ಇರುವಂಥಾದ್ದು ೧೮ ಒಕ್ಕಲುತನ, ದೇವರ ವೃತ್ತಿ ೬, ಉಭಯಂ ೨೪. ಇದಕ್ಕೆ ವಿವರ–

೬ ದೇವರ ವೃತ್ತಿ

೧ ಮರಿಭಟ್ಟರು ಜೋಯಿಸುರು ಕಾಶೀಪದ ಗೋತ್ರದವರು.

೧ ಅಗಸ್ತಿಗೋತ್ರದ ನಾರಾಯಣಭಟ್ಟರ ಸೋಮಭಟ್ಟರು.

೧ ಶ್ರೀ ವತ್ಸಗೋತ್ರದ ನರಶಿಭಟ್ಟರು.

೧ ಗೌತಮಗೋತ್ರದ ಸೂರ್ಯನಾರಾಯಣ ಭಟ್ಟರು.

೧ ವಶಿಷ್ಠ ಗೋತ್ರದ ರಾಮಪ್ಪ ಭಟ್ಟರು.

೧ ವಶಿಷ್ಠ ಗೋತ್ರದ ಲಿಂಗಭಟ್ಟರು.

೧ ಕೌಂಡಿಣ್ಯ ಗೋತ್ರದ ವೆಂಕಟೇಶಭಟ್ಟರು.

೧ ಭಾರದ್ವಾಜ ಗೋತ್ರದ ಕೃಷ್ಣಭಟ್ಟರು.

೧ ಹರಿತ್ಸ ಗೋತ್ರದ ನರಸಿಂಹಭಟ್ಟರು.

೧ ಹರಿತ್ಸ ಗೋತ್ರದ ಸುಬ್ಬಾಭಟ್ಟರು.

೧ ಕಾಶ್ಯಪ ಗೋತ್ರದ ರಾಮಭಟ್ಟರು.

೧ ವಿಶ್ವಾಮಿತ್ರ ಗೋತ್ರದ ಮುಡ್ಲಗಿರಿಭಟ್ಟರು.

೧ ಜಮದಗ್ನಿ ಗೋತ್ರದ ನರಸಿಂಹಭಟ್ಟರು

೧ ಹರಿತ್ಸ ಗೋತ್ರದ ಮಲ್ಲಿಭಟ್ಟರು.

೧ ಭಾರದ್ವಾಜ ಗೋತ್ರದ ಸಿಂಗಾಭಟ್ಟರು.

೧ ಭಾರದ್ವಾಜ ಗೋತ್ರದ ಸುಬ್ಬಾಭಟ್ಟರು.

೧ ಶ್ರೀವತ್ಸ ಗೋತ್ರದ ಮಾಧವಭಟ್ಟರ ನರಸಿಂಹಭಟ್ಟರು.

೧ ಭಾರದ್ವಾಜ ಗೋತ್ರದ ಶ[+ಂ]ಕರಭಟ್ಟರು.

೨೪

ಸದರಿ ಬರದು ಇರುವ ದೇವರ ವೃತ್ತಿಗೆ ವಿವರವೂ:

೧ ಸೋಮೇಶ್ವರ ದೇವರೂ

೧ ವಿನಾಯಕ ದೇವರೂ

೧ ಹನಮಂತ ದೇವರೂ

೧ ಸೂರ್ಯನಾರಾಯಣ ದೇವರೂ

೧ ದುರ್ಗಪರಮೇಶ್ವರ ದೇವರೂ

೧ ವೀರಭದ್ರಾ ದೇವರು.

೬ ಅಂತು ದೇವರು ಆರಕ್ಕೆ ವೃತ್ತಿ ಆರೂ.

ಈ ಪ್ರಕಾರ ಬ್ರಾಂಹ್ಮರು ಬಡಗಲದೇಶ ಬೆಟ್ಟಪುರದ ಶೀಮೆಯಿಂದಾ ಬಂದು ಸರ್ಪಯಾಗ ಕಾಲದಲ್ಲು ಇದ್ದದ್ದರಿಂದ ಅವರಿಗೆ ಸರ್ವಸಾಮಾನ್ಯವಾಗಿ ೧೨ ಹನ್ನೆರಡು ಗ್ರಾಮವನ್ನು ಧಾರೆದತ್ತವಾಗಿ ಕೊಟ್ಟದ್ದರಿಂದಾ ಅದನ್ನು ಅನುಭವಿಸಿಕ್ಕೊಂಡು ಬರುತ್ತಾ ಇದ್ದಾರೆ. ಇವರಿಗೆ x x x x ಗಳಾಡ ನಡಗಿರು ಇಂದು ಹೇಳಿಕೊಳ್ಳುತ್ತಾ ಇದ್ದಾರೆ. x x x x x x x x x x x x x x x x x x x x x

ಈ ಋಷಿಗಳ ಆಶ್ರಮಕ್ಕೆ ಬಂದು ವಾಸವಾಗಿ ಇದ್ದಲ್ಲಿ ಕ್ಷಾಮವೂ ಹೋಗಿ ರಾಜ್ಯವು ಸುಭಿಕ್ಷವಾದ್ದರಿಂದ ಯಾವತ್ತು ಈ ಋಷಿಗಳೂ ತಮ್ಮ ತಮ್ಮ ಮಕ್ಕಳಿಗೆ – – –ವ ತ್ತೆಗದುಕೊಂಡು ಇದ್ದಲ್ಲಿ ಇವರಿಗೆ ಬೇಕುಯಂದು ಕೇಳಿದವರಿಗೆ, ಈಗವೂ ತಮ್ಮ ಋಷಿಗಳು ಯಾವನೂ ಕೊಡದೆ "ನಿಂಮ್ಮ ಸ್ಥಳದಲ್ಲಿಯೇನು ಅದೆ, ಇಲ್ಲೆ ಸುಖಯಿರುವದು" ಯಂಬದಾಗಿ ಹೇಳಿದರಿಂದಾ ಇವರು ಬಹಳ ದಿವಸ ನೋಡಿ ಇವರಾದರೂ ಯಾವನೂ ಕೊಡುವದಿಲ್ಲಾ. ಇವರಿಗೆ ಯೇನಾದರೂ ಒಂದು ಅಪರಾಧವನ್ನು ತುಡಿಸಿ, ತಂಮ್ಮ ಸ್ಥಳಕ್ಕೆ ಹೋಗಬೇಕೆಂದು ಯಾವತ್ತು ಋಷಿಗಳೂ ತಂಮ್ಮ ತಂಮ್ಮ ಮನಶಿಲಿ ಯೋಚನೆಗಳ ಮಾಡಿಕ್ಕೊಂಡು, ಈ ಗೌತಮಋಷಿಗಳು ಬ್ರಾಹ್ಮಣರು – ಸ್ತಳಕ್ಕೆ ಸ್ನಾನಕ್ಕೆ ಹೋಗುವಲ್ಲಿ ನವಧಾನ್ಯ x x x x x x ಸ್ನಾನವಂನ್ನು ಮಾಡಿಕೊಂಡು ತಿರಗಿ ಬರುವಾಗ್ಯೆ ಬಿತ್ತಿದಂತ್ತಾ ಬೆಳೆ ನಡುವೆ x x x x ಯಾವತ್ತು ಋಷಿಗಳೂ ಮಾಯದ ಗೋವು ನಿರ್ಮಾಣಮಾಡಿ ನಿಲ್ಲಿಸಿಯಿದ್ದಲ್ಲಿ, ಆ ಸಮಯದಲ್ಲಿ ಗೌತುಮರು 'ಬೆಳೆಯನ್ನು ತಿಂನ್ನುತ್ತಾ ಇದೆ' ಯಂದು ಕಂಡು ಸುಮ್ಮನೆ ಹೋಗಬಾರದು ಎಂದು, ತಂಮ್ಮ ಕೈಯಲ್ಲಿ ಇದ್ದಂಥಾ ದರ್ಭೆಯಲ್ಲಿ ಆ ಗೋವಂನ್ನು ದೂರದಿಂದ ಹೊಡೆದ ಕಾರಣ ಆ ಗೋವು ಅಲ್ಲಿ ಮೃತವಾಯಿತು. ತನ್ನಿಮಿತ್ಯ ಅಪವಾದ ಯೀ ಋಷಿಗಳಿಗೆ ಬಂದಕಾರಣ ಯಾವತ್ತು ಋಷಿಗಳೂ ತಂಮ್ಮ ತಂಮ್ಮ ಸ್ಥಳಕ್ಕೆ ಹೊರಟು ಹೋದರು.

ಆಮ್ಯಾಲೆ ಗೌತಮರು ಅಪವಾದ ಪರಿಹಾರ ನಿಮಿತ್ಯಕ್ಕೋಸ್ಕರ ತಪಸ್ಸುಮಾಡಿ ಜಗದೀಶ್ವರನ ಪ್ರತ್ಯಕ್ಷವಾ[ಗಿಸಿ]ಕೊಂಡಿದ್ದು, ತಂಮ್ಮ ಜಟೆಯಿಂದಾ ಗೋದಾವರಿ ನದಿ ಹುಟ್ಟಿ ಬಂದು, ಆ ಗೌತಮನ ಮೇಲೆ ಹರಿಯುತ್ತಾ ಇದ್ದಾಳೆ. ಆ ಮೃತವಾದ ಗೋವು ಯೆದ್ದು ಹೋಗುತ್ತಾ ಇದೆ. 'ನವನೀತವನ್ನು

ಕೊಡುತ್ತೇನೆ' ಎಂದು ತೆಗೆದುಕೊಂಡು ಭೂಪ್ರದಕ್ಷಿಣೆಯನ್ನು ಮಾಡಿದಲಿ, "ಯಾವ ಸ್ಥಳದಲ್ಲಿ ಇದು xxxxxವಾಗುತ್ತಾ ಇದೆಯೋ ಆ ಪರಿಯಂತ ಭೂಪ್ರದಕ್ಷಿಣೆ ಮಾಡಿ ಬನ್ನಿ" ಯಂದು ಅಪ್ಪಣೆ ಕೊಟ್ಟದ್ದರಿಂದಾ, ಕೊಟ್ಟಂತಾ ನವನೀತವಂನ್ನು ತೆಗೆದುಕೊಂಡು ಭೂಪ್ರದಕ್ಷಿಣೆ ಮಾಡುತ್ತಾ ಬಂದಲ್ಲಿ, ಈ ಸ್ಥಳದಲ್ಲಿ ಇದ್ದ ತೀರ್ಥವನ್ನು ಕಂಡು ನವನೀತವಂನ್ನು ಇಟ್ಟು, ಅನುಷ್ಠಾಣವನ್ನು ಮುಗಿಸಿಕ್ಕೊಂಡು ಪುನಃ ನವನೀತವನ್ನು ತೆಗೆದುಕೊಳ್ಳಬೇಕು ಅಂತ ಯತ್ತಿದ್ದಲ್ಲಿ, ನವನೀತ ಇದ್ದ ಸ್ತಳದಲ್ಲಿ ಲಿಂಗಾಕೃತಿಯಾಗಿಯಿದ್ದದ್ದರಿಂದ ಈ ಲಿಂಗಕ್ಕೆ ಗೌತಮೇಶ್ವರಯಂದು ಹೆಸರು ಇಟ್ಟು, ಆ ಸ್ಥಳದಲ್ಲಿ ಸ್ಥಾಪನೆ ಮಾಡಿದ. xxxxxxಕಲಿಯುಗ ಬರುತ್ತಾ ಇದೆ. ಆ ಕಲಿಯುಗದಲ್ಲಿ ನವನೀತಲಿಂಗಾ ಸುಳ್ಳುಯಂಬದಾಗಿ ಜನರೂ ಆಡಿಕ್ಕೊಂಡಾರುಯಂದು ಲಿಂಗವನ್ನು xxxxಕಡೆ ಬೊಟ್ಟಿನಲ್ಲಿ ಲಿಂಗವನ್ನು ಎತ್ತಿದ್ದರಿಂದ ಎರಡು ಬೆರಳು ಲಿಂಗದ ಮೇಲೆ ನೆಟ್ಟು ಇದೆ. ತನ್ನಿಮಿತ್ಯ ಗೌತಮೇಶ್ವರಲಿಂಗಾಯೆಂಬೊ ನಾಮಧ್ಯೇಯವಾಯಿತು. ತರುವಾಯ ಈ ಋಷಿಗಳು ಹೊರಟು ಮುಂದಕ್ಕೆ ತಮ್ಮ ಆಶ್ರಮಕ್ಕೆ ಹೋದರು. ಈ ಋಷಿಗಳು ಅಂದ(ಂತೆ) ಲೋಪವಾದ ಊರು ಹಾರವಾಯಿತು.

❖❖

೪೬
ಹಳೆಬೀಡ ಕೈಫಿಯತ್ತು

ಕೆ.ಎ. ೪೦೦ / ೫

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ,
ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಸಂಭವೇ
ಹೊಯಿಸಳೇರ್ವಿರ ವಂಶಾಯ ಸ್ವಸ್ತಿವೈರಿ ಭೃತಾಂ
ಖಂಡನೇ ಮಂಡಲಾಗ್ರಾಮ ರ ಕಥಾರಾಗ್ರಜನ್ಮವೇ

ಸಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷಂಗಳು ೧೦೫೫ನೆ ವರ್ತಮಾನಕ್ಕೆ ಸಲುವ ಪ್ರಮಾದೀಚನಾಮ ಸಂವತ್ಸರದ ಮಾರ್ಗಿಶಿರ ಶು ೧೧ಲ್ಲು, "ನಾ ವಿಷ್ಣು ಪೃಥ್ವೀಪತಿ"ಯೆಂಬ ವಚನಪ್ರಕಾರ ವಿಷ್ಣುವರ್ಧನರಾಯನು ಈ ದ್ವಾರಾಪುರಿಯೆಂಬ ಪಟ್ಟವನ್ನು ಸತ್ಯಸಂಧನಾಗಿ ರಾಜ್ಯಂಗೈಯುತ್ತಿರಲಾಗಿ, ಈ ವಿಷ್ಣುವರ್ಧನರಾಯುನ ಅನ್ವಯು ಸಂಕ[>ದ] ವೃತ್ಯಾಂ[>ವೃತ್ತಾಂ]ತವೇನೆಂತೆಂದರೆ: ಪೂರ್ವದಲ್ಲಿ ಯದುವಂಶದಲ್ಲಿ ಉತ್ಪನ್ನನಾದಂಥಾ

ಒಬ್ಬ[>ಬ್ಬಾ]ನೊಬ್ಬ ಸಳನೆಂಬ ದೊರೆಯು ಉತ್ತರದೇಶದಲ್ಲಿ ಇದ್ದಂತವ *(ಷರಾ–ಮಾತೃಕದೊಳಗೆ ಹಿಂದೆ ಮುಂದಾಗಿದೆ ನೋಡಿಕೊಳ್ಳಬೇಕು). ಯಾದವರು ಒಬ್ಬನಿಗೆ ಸ್ತ್ರೀವೇಷವನ್ನು ಹಾಕಿ ಅಲ್ಲಿ ತಪಸ್ಸು ಮಾಡುವ ಖುಷಿಗಳ ಸಮೀಪಕ್ಕೆ ಬಂದು ದೀರ್ಘನಮಸ್ಕಾರವನ್ನೇ ಮಾಡಿ ಕೇಳುತ್ತಾರೆ, "ಏನ್ಯೆ ಖುಷಿಗಳಿರಾ"ತ್ತ ಹೇಳಿ ತಮ್ಮ ಸಂಗಡ ಕರದುಕೊಂಡು ಬಂದಂಥಾ ಪುರುಷಸ್ತ್ರೀಯನ್ನು ಎದುರಿಗೆ ನಿಲ್ಲಿಸಿ, "ಸ್ವಾಮಿ ಈ ಸ್ತ್ರೀಯು ಎಂತಾ ಮಗುವು ಪ್ರಸುವಾಗುತ್ತಾಳೆ" ಎಂಬದಾಗಿ ಕೇಳಿದರು. ಅದಕ್ಕೆ ಅವರು ಜ್ಞಾನದೃಷ್ಟಿಯಿಂದ ನೋಡಿ ಇವರುಗಳು ತಮ್ಮ ಸಂಗಡ ಕುಚೇಷ್ಟೆಗೆ ಕೇಳುತ್ತಾರೆ ಎಂದು ತಿಳಿದು, ಮಹಾ ಕೋಪಿಷ್ಟರಾಗಿ "ನಿಮ್ಮ ಕುಲಸಂಹಾರಮಾಡುವಂಥಾದೊಂದು ಮುಸಲಾಯುಧ ಹುಟ್ಟುತ್ತಾಯಿದೆ" ಎಂಬದಾಗಿ ಹೇಳಿದರಿಂದಾ, ಅದೇ ಪ್ರಕಾರ ಆ ಸ್ತ್ರೀಯನ್ನು ಸ್ವಾಮಿಯ ಬಳಿಗೆ ಕರತಂದು ನಿಲ್ಲಿಸ್ತರೂ, ಆ ಕ್ಷಣದಲ್ಲಿಯೆ ಒಂದು ಮುಸಲ ಉತ್ಪತ್ತಿಯಾತ್ತು.

ಅದ ಕಂಡು ಭಯಪಟ್ಟು ಉಗ್ರಸೇನನಾದ ದೊರೆಯ ಬಳಿಗೆ ಬಂದು, ತಾವು ಖುಷಿಗಳ ಬಳಿಗೆ ಹೋಗಿ ತಾವು ಮಾಡಿದಂಥಾ ಅಕೃತ್ಯ ಅಪಹಾಸ್ಯ ಇವಗಳೆಲ್ಲಾ ಹೇಳಿದರಿಂದಾ ಆ ಉಗ್ರಸೇನನು ನೋಡಿ, "ನಮ್ಮ ಯಾದವಕುಲಕ್ಕೆ ಮೃತ್ಯುವಾದ ಮುಸಲವನ್ನು ಅದ ಚನ್ನಾಗಿ ಸಣ್ಣಗೆ ಉಜ್ಜಿಸಿ ಆ ಪುಡಿಯಾದ ಪುಡಿಗಳನ್ನು ಸಮುದ್ರದೊಳು ಹಾಕಬೇಕಂ"ತಾ ಹೇಳಿದ ಕಾರಣ, ಅದೇ ಪ್ರಕಾರ ಮುಸಲವನ್ನು ತೀಡಿಸಿ, ಆ ಹುಡಿಗಳನ್ನೇ ಸಮುದ್ರಮಧ್ಯದೊಳು ಹಾಕಿಬಿಟ್ಟರು. ಅದರೊಳಗೆ ಒಂದು ಹೆಬೆಟ್ಟು ಪ್ರಮಾಣ ಮಾತ್ರ ಕೊಯ್ಯುವುದಕ್ಕೆ ಆಗದೆ ಸಮುದ್ರದಲ್ಲಿ ಹಾಗೇ ಹಾಕಿಬಿಟ್ಟರು. ಆ ಉಕ್ಕಿನ ಹುಡಿಯೆಲ್ಲವು ಸಮುದ್ರದಡದಲ್ಲಿ ಗೇಕು ಆಗಿ ಹುಟ್ಟಿತು. ಈ ವೃತ್ತಾಂತ ಯಾವತ್ತಂನು ಶ್ರೀಕೃಷ್ಣಸ್ವಾಮಿಯವರು ತಿಳಿದಂಥವರಾಗಿ, ಇವರು ದ್ವಾರಕೀಯಲ್ಲಿ ಮೃತವಾದರೆ ಸದ್ಯ ಮುಕ್ತಿಯಾಗುತ್ತಾರೆ. ಆದ್ದರಿಂದ ಇವರೆಲ್ಲರು ಮುಕ್ತಿಯಾಗಬಾರದೆಂದು ತಿಳಿದು ಸಮಸ್ತ ಯಾದವರನ್ನು ಕರದುಕೊಂಡು ಪ್ರಭಾಸಕ್ಷೇತ್ರಕ್ಕೆ ಹೋದನು. ಅಲ್ಲಿ ಸಮಸ್ತ ಯಾದವರು ಮಧುಪಾನವಂನು ಮಾಡಿಕೊಂಡು ಮದೋನ್ಮತ್ತರಾಗಿ, ತಮ್ಮ ತಮ್ಮೊಳಗೆ ಮದನಿಸಿ ಅಲ್ಲಿ ಹುಟ್ಟಿರುವ ಗೇಕುಗಳ ಕಿತ್ತುಕೊಂಡು ಹೊಡದಾಡಿ ಸಮಸ್ತರು ಹತವಾದರೂ, ವಜ್ರನೆಂಬ ಯಾದವ ಮಾತ್ರ ಉಳಿದಂತವನಾಗಿ, ಅರ್ಜುನನಿಂದ ಇಂದ್ರಪ್ರಸ್ತದ ಪಟ್ಟಾಭಿಷೇಕವ ಮಾಡಿಸಿಕೊಂಡು, ಬಹುಕಾಲ ವಂಶಪಾರಂಪರೆಯಾಗಿ ಇರುತ್ತಾ ಇದ್ದಲ್ಲಿ, ಶಾಲೀವಾಹನ ಶಕ ವರುಷಂಗಳು ೯ ಎಂಟುನೂರತೊಂಬತ್ತಕ್ಕೆ ಸಲುವ ಪೈಂಗಳದ ವರಿಗೆ ಇಂದ್ರಪ್ರಸ್ತವನ್ನೇ ಆಳಿಕೊಂಡು ಇರುತ್ತಾ ಇದ್ದರು.

ಆದ್ದರಿಂದ ಮಧುಸೂದನನೆಂಬ ರಾಯವೊಬ್ಬನು ತಾನು ರಾಮೇಶ್ವರ ಯಾತ್ರಾನಿಮಿತ್ಯವಾಗಿ ದಕ್ಷಿಣದೇಶಕ್ಕೆ ಈ ಸ್ಥಳಕ್ಕೆ ಬಂದು, ಮಾರ್ಗಸ್ಥನಾಗಿ ಒಪ್ಪತ್ತು ನಿಂತದ್ದರಿಂದ, ಆ ರಾತ್ರಿಯಲ್ಲಿ ಮಧುಸೂದನರಾಯನಿಗೆ "ಈ ಸ್ಥಳದಲ್ಲಿ ನೀನು ಪಟ್ಟಣವನ್ನು ಕಟ್ಟಿಕೊಂಡು ಇರು" ಎಂಬುದಾಗಿ ಪುಷ್ಪಗಿರಿ ಮಲ್ಲಿಕಾರ್ಜುನಸ್ವಾಮಿಯು ಸ್ವಪ್ನದಲ್ಲಿ ಪ್ರತ್ಯಕ್ಷನಾಗಿ ಬಂದು ಅಪ್ಪಣೆ ಕೊಟ್ಟದ್ದರಿಂದಾ, ಆ ರಾಯನು ಈ ಪಟ್ಟಣವನ್ನು ನಿರ್ಮಾಣ ಮಾಡಿಸಿ ತಮ್ಮ ಪಟ್ಟಣ ದ್ವಾರಾವತಿಯಾದ್ದರಿಂದಾ ಇದಕ್ಕು

---

* ಇಷ್ಟು ಭಾಗ ಇಲ್ಲಿ ಅಸಮಂಜಸವೆನಿಸುತ್ತದೆ. (ಸಂ)

ದ್ವಾರಾಪುರಿಯೆಂಬ ನಾಮಧೇಯವನ್ನಿಟ್ಟು, ಸುತ್ತು ವಂದು ಹರಿದಾರಿ ಕೋಟೆ ಕಟ್ಟಿ, ಆ ರಾಜ್ಯವನ್ನಾಳುತ್ತ ಇರಲಾಗಿ, ಸುತ್ತ ಹತ್ತು ಯೋಜನ ಸೀಮೆ ಸಾಧಿಸಿಕೊಂಡು ಮಂದಿ ಮಾರ್ಬಲನೊಡನೆ ಶಾಲಿವಾಹನ ಶಕವರುಷಂಗಳು ೯೨೦ಕ್ಕೆ ಸಲುವ ಸರ್ವಜಿತು ಸಂವತ್ಸರದ ಪರಿಯಂತ ಇದಲ್ಲಿ, ಮಧ್ಯೆ ಒಂದಾನೊಂದು ದಿವಸ ಋಷಿಶೃಂಗಮುನಿಯು ಈ ಪಟ್ಟಣಕ್ಕೆ ಈ ಅರಸಿನ ಆಸ್ಥಾನಕ್ಕೆ ಬರಲಾಗಿ, ಈ ದೊರೆಯು ರಾಜ್ಯಮದದಿಂದಾ ಈ ಋಷಿಯನ್ನು ನೋಡಿದಾಗ್ಯು ಪ್ರತ್ಯಸ್ಥಾನವನ್ನು ಮಾಡದ ಕಾರಣ, ಆ ಋಷಿಯು ಮಹಾಕೋಪದಿಂದಾ "ನಿನ್ನ ರಾಜ್ಯಕೋಶ ಐಶ್ವರ್ಯವು ನಾಶವಾಗಲಿ"ಯೆಂದು ಶಾಪವ ಕೊಟ್ಟು ಹೋದ ಕಾರಣ, ಈತನ ರಾಜ್ಯಕೋಶ ಈ ಪಟ್ಟಣ ಸಹಾ ಕ್ಷಯವಾಗಿ ಹೋಯಿತ್ತು. ಆತನು ಸ್ವರ್ಗಸ್ಥನಾದನು.

ಈಚೆಗೆ ಶಾಲೀವಾಹನ ಶಖವರುಷ ೯೯೫ ವರುಷಕ್ಕೆ ಸಲುವ ಶೋಭಕೃತು ಸಂವತ್ಸರಕ್ಕೆ ಸದರಿ ಪಟ್ಟಣ ನಾಶವಾಗಿ ಅರಣ್ಯವಾಗಿತ್ತು. ಈಚೆಗೆ ಆ ವಂಶಸ್ಥನಾದ ಸಳನೆಂಬವನು ಉತ್ತರದೇಶದಲ್ಲಿ ಇದ್ದಂತಾವನು* ಏಕಾಕಿಯಾಗಿ ಪಶ್ಚಿಮ ದೇಶಕ್ಕೆ ಬರುತ್ತಾ ಇದಲ್ಲಿ ಈ ದ್ವಾಪರಪುರಿಯೆಂಬ ಪಟ್ಟಣಕ್ಕೆ ಪಶ್ಚಿಮದಿಕ್ಕಿನಲ್ಲಿ ಎರಡು ಯೋಜನದಲ್ಲಿ ಹೇಮಾವತಿ ಎಂಬುದೊಂದು ಮಹಾಪುಣ್ಯನದಿಯುಂಟು, ಆ ನದಿಯ ಪಶ್ಚಿಮ ದಿಕ್ಕಿನಲ್ಲಿ ಶಶಕಾಪುರ ಎಂಬುದೊಂದು ಗ್ರಾಮವುಂಟು. ಆ ಗ್ರಾಮಕ್ಕೆ ಈ ಸಳನು ಬಂದಂತವನಾಗಿ ಅಲ್ಲಿಯಿರಲು, ಆ ಶಶಕಪುರದಲ್ಲಿ ವಾಸಂತಿಕಾದೇವಿಯೆಂಬ ದೇವಿಯುಂಟು. ಆ ದೇವತೆಯ ಸಮೀಪದಲ್ಲಿ ಒಬ್ಬ ಜಯಿನಮುನಿಯು ತಪಸ್ಸು ಮಾಡಿ ಆ ದೇವತೆಯ ಆರಾಧಿಸಿಕೊಂಡು ಇರುತ್ತಾ ಇದ್ದಲ್ಲಿ, ಈ ಸಳನು ಈ ವಾಸಂತಿಕಾದೇವಿಯರ ದರುಶನಕ್ಕೆ ಬಂದಂತಾವನು ಈ ಮುನಿಯಂ ಕಂಡು, "ತಾನು ಈ ಮುನಿಯ ಸೇವಾರ್ಥದಲ್ಲಾದರು ಇರುವಾ" ಯಂಬುದಾಗಿ ಆ ಮುನಿಯ ಸಮೀಪಕ್ಕೆ ಬಂದು ವಂದನೆಯಂ ಮಾಡಲು, ಆ ಮುನಿಯು ಈ ಸಳನ ದೃಢಭಕ್ತಿಗೆ ಮೆಚ್ಚಿ "ನಮ್ಮ ಸೇವಾರ್ಥದಲ್ಲಿ ಇದ್ದುಕೊಂಡು ಇರು" ಎಂಬದಾಗಿ ನೇಮಿಸಿ ಈ ಸಳನ ಕೈಯಲ್ಲಿ ಒಂದು ಕುಂಚಗಂ ಕೊಟ್ಟು "ಸದಾ ನಮ್ಮಲ್ಲಿ ಈ ಕುಂಚದ ಊಳಿಗವಂ ಮಾಡಿಕೊಂಡು ಇರು"ಯಂಬದಾಗಿ ಕಟ್ಲೆ ಮಾಡಿಸಿದಲ್ಲಿ, "ಮಹಾಪ್ರಸಾದ"ವೆಂದು ಒಪ್ಪಿಕೊಂಡು ಈ ಸೇವಾರ್ಥದಲ್ಲಿ ಇರುತ್ತಾ ಇದ್ದನು. ಈ ವಾಸಂತಿಕಾ ಅಮ್ಮನವರಿಗೆ ವರ್ಷಂಪ್ರತಿಯಲ್ಲಿಯೂ ಮಹಾಜಾತ್ರೆಯಾಗುವದು ಉಂಟು.

ಈ ಶಶಂಕಪುರದಲ್ಲಿ ಒಂದು ಮಹಾವ್ಯಾಘ್ರವು ಇದ್ದುಕೊಂಡು, ಮನುಷ್ಯಸಂಚಾರಕ್ಕೆ ಅನುಕೂಲವಿಲ್ಲದೆ ಆ ಅಮ್ಮನವರಿಗೆ ಜಾತ್ರೆಯಾಗುವದೇ ದುರ್ಲಭವಾಗಿರಲಾಗಿ, ಆ ದೇಶದ ಗ್ರಾಮದವರು ಮುಂತಾಗಿ ಸಮಸ್ತ ಜನರು ಈ ಮುನಿಯ ಸಮೀಪಕ್ಕೆ ಬಂದು "ಎಲೈ ಮುನಿಶ್ರೇಷ್ಠನೇ ಇಲ್ಲಿ ಇರುವ ವ್ಯಾಘ್ರಭಯದಿಂದಾ ನವು ನಿರ್ವಹಿಸಲಾರೆವು. ಈ ವ್ಯಾಘ್ರವನ್ನು ಯಾರು ಕೊಂದು ಹಾಕುತ್ತಾರೊ ಅವರಿಗೆ ನಮ್ಮ ರಾಜ್ಯದಲ್ಲಿ ಮನೆಗೆ ವಂದು ಹಣವಿನ ಪ್ರಕಾರ ಕಾಲಂಪ್ರತಿಯಲ್ಲು ನಾವು ಕೊಡುತ್ತಾ ಇದೇವೆ" ಎಂಬದಾಗಿ ತಮ್ಮ ಹೆಸರ ದಾನಶಾಸನವನ್ನು ಬರಕೊಟ್ಟಿದ್ದರಿಂದಾ, ತಮ್ಮ ಸಮೀಪದಲ್ಲಿ ಕುಂಚದ ಊಳಿಗವನ್ನು ಮಾಡಿಕೊಂಡು ಇರುವಂಥಾವನ ಕರದು, "ಈ ಹುಲಿಯನ್ನು ಹೊಯಿ ಸಳಾ" ಎಂದು ಈ ಸಳನಿಗೆ ನೇಮಕಾ ಮಾಡಲಾಗಿ, ಈ ಸಳನು ಈ ಗುರುಗಳ ಕಟಾಕ್ಷದಿಂದಾ ತನ್ನ ಕೈಯಲ್ಲಿ ಹಿಡಿದಿರುವಂಥಾ ಕುಂಚದಿಂದಲೇ ಹುಲಿಯನ್ನು ಹೊಡದು ಕೆಡವಲಾಗಿ, ಈ ಮುನಿಯು ಸಂತೋಷಪಟ್ಟಂಥವನಾಗಿ, ಈ ಸಳನಿಗೆ ಹೊಯಿಸಳನೆಂಬ

ನಾಮಧೇಯವ ಕೊಟ್ಟಂಥವರಾಗಿ, “ದ್ವಾರಾಪುರಿಗೇ ನೀನೇ ಅರಸು ಆಗು” ಎಂಬದಾಗಿ ಆ ವಾಸಂತಿಕಾ ಅಮ್ಮನವರ ಕೈಯಿಂದ ವರವನ್ನು ಕೊಡಿಸಿಕೊಟ್ಟು, ಈ ದೇಶದವರು ಬರಕೊಟ್ಟು ಇರುವಂಥಾ ದಾನಶಾಸನವನ್ನು ಕೈಯಲ್ಲಿ ಕೊಟ್ಟುದನ್ನು ಮಹಾಪ್ರಸಾದವೆಂದು ತೆಗೆದುಕೊಂಡು, ಅಡ್ಡೆ ಮೇಲೆ ಹುಲ್ಲಿ[>ಲಿ]ಯನ್ನು ಕಟ್ಟಿಸಿಕೊಂಡು ಗ್ರಾಮಾನುಗ್ರಾಮಗಳಲ್ಲಿ ಮನಿಗೆ ಒಂದು ಹಣವಿನ ಪ್ರಕಾರ ವರ್ತನೆಯನ್ನು ತೆಗೆದುಕೊಂಡು, ಕೆಲವು ದ್ರವ್ಯವು ಕೈಸೇರಲಾಗಿ ಅದಕ್ಕೆ ತಕ್ಕ ಕಪ್ಪುಮಂದಿಯನ್ನು ಕಟ್ಟಿಕೊಂಡು, ಪುನಹಾ ಮೂರ[>ಎರಡ]ನೇ ವರುಷಕ್ಕೆ ಮನಿಗೆ ಎರಡು ಹಣ ತಗೆದುಕೊಂಡು ಮತ್ತು ಕೆಲವು ಮಂದಿಯನ್ನು ಕಟ್ಟಿಕೊಂಡು, ಮೂರನೆ ವರ್ಷಕ್ಕೆ ಮನೆ ಒಂದಕ್ಕೆ ಮೂರು ಹಣವಿನ ಪ್ರಕಾರ ತೆಗದುಕೊಂಡು ಮತ್ತು ಮಂದಿ ಕುದುರೆ ಸಂಗ್ರಹ ಮಾಡಿಸಿಕೊಂಡು, ಕಾಲಂಪ್ರತಿಯಲ್ಲು ಮನಿಮನಿಗೆ ದ್ವಿಗುಣೋತ್ತರವಾಗಿ ಹಣಗಳನ್ನು ತೆಗದುಕೊಂಡು, ಪುನಹ ಈ ಮುನಿಯ ಸಮೀಪಕ್ಕೆ ಬಂದು ತಾನು ಮಾಡಿದ ವೃತ್ತಾಂತವೆಲ್ಲವಂ ಹೇಳಿ “ಮುಂದೆ ನನಗೆ ಏನು ಅಪ್ಪಣೆ”ಯಂದು ಕೇಳಿಕೊಳ್ಳಲಾಗಿ, ಆಗ ಆ ಮುನಿಯು “ಎಲೈ ಹೊಯಿಸಳನೇ ನೀನು ದ್ವರಾಪುರಿಗೆ ಹೋಗು. ಆ ದ್ವಾರಾಪುರಿಯು ಬಹುಜೀರ್ಣವಾಗಿದೆ. ಪೂರ್ವದಲ್ಲಿಯೇ ನಿಮ್ಮ ವಂಶಸ್ಥರು ಆಳಿಕೊಂಡು ಇದ್ದರು. ಈಗಲೂ ನೀನು ಆ ದ್ವಾರಾಪುರಿಗೆ ಹೋಗಿ ನೀನು ನಿಂತಲ್ಲಿಯೇ ನಿಮ್ಮ ವಂಶಸ್ಥರು ಸ್ಥಾಪನೆ ಮಾಡಿಯಿರುವಂಥಾ ದ್ರವ್ಯವು ನಿನಗೆ ಗೋಚರವಾಗುತ್ತಾಯಿದೆ. ಆ ಸಂಸ್ಥಾನವನ್ನು ಜೀರ್ಣೋದ್ಧಾರ ಮಾಡಿಕೊಂಡು ಆ ದ್ವಾರಪುರಿಗೆ ನೀನು ಅಧಿಪತಿಯಾಗು” ಎಂದು ಆ ಮುನಿಯಂ[>ಯು] ಅಪ್ಪಣೆಯಂ ಕೊಡಲಾಗಿ, ಆ ಅಪ್ಪಣೆ ಪ್ರಕಾರ ಈ ಹೊಯಿಸಳನು ಈ ದ್ವಾರಾಪುರಿಗೆ ಬಂದು ಪಟ್ಟಣವನ್ನು ಕಟ್ಟಿಸುತ್ತಾ ಇರಲಾಗಿ, ಪೂರ್ವದಲ್ಲಿ ಸ್ಥಾಪನೆ ಮಾಡಿ ಇರುವಂಥಾ ದ್ರವ್ಯವೂ ಆ ಮುನಿಯ ಅನುಗ್ರಹದಿಂದಾ ಈತಗೆ ಗೋಚರವಾಯ್ತು.

ಆ ಬಳಿಕ ಆ ದ್ರವ್ಯವನ್ನು ತೆಗದುಕೊಂಡು ಈ ಪಟ್ಣವನ್ನು ಕಟ್ಟಿಸಿ, ಮಂದಿ ಮಾರ್ಬಲವನ್ನು ಕೂಡಿಸಿಕೊಂಡು ಅಮ್ಮನವರ ವರಪ್ರಸಾದದಿಂದಾ ದಿನೇ ದಿನೇ ಯಶಃಪ್ರಭಾವವುಂಟಾಗಿ, ತನ್ನ ಭುಜಬಲ ಪರಾಕ್ರಮದಿಂದಾ ರಾಜ್ಯಕೋಶಂಗಳನ್ನು ಸಂಪಾದಿಸಿಕೊಂಡು, ರಾಜ್ಯಭಾರಂಗೈಯುತ್ತಾ ಇದ್ದಲ್ಲಿ, ಈತನಿಗೆ ವಿನಯಾದಿತ್ಯಾನೆಂಬ ಒಬ್ಬ ಕುಮಾರನಾದನು. ಆತನು ಇದೇ ಪ್ರಕಾರ ಶಖ ವರುಷ ೧೦೧೦ಕ್ಕೆ ಸರಿಯಾದ ಪ್ಯೆಂಗಳ ಸಂವತ್ಸರದ ಪರಿಯಂತರಕ್ಕು ರಾಜ್ಯಭಾರಂಗೈಯುತ್ತ ಇರುವಾಗ, ಆತಗೆ ಅಂಗನೃಪಾಲನೆಂಬ ಒಬ್ಬ ಶಖ ಬರುವ ೧೦೪೮ಕ್ಕೆ ಸರಿಯಾದ ಮನ್ಮಥನಾಮ ಸಂವತ್ಸರದಲ್ಲಿ ಒಬ್ಬ ಮಗನಾದನು. ಆ ಅಂಗನೃಪಾಲರಾಯನಿಗೆ ಮೂವರು ಮಕ್ಕಳಾದರು. ಅವರುಗಳ ಹೆಸರು ಬಲ್ಲಾಳನೆಂದು ವಿಷ್ಣುವರ್ಧನ ಇವರಿಬ್ಬರೆ ಪ್ರಖ್ಯಾತಿಯಾಗಿ ರಾಜ್ಯಂಗೆಯ್ಯುತ್ತಿರಲಾಗಿ, ಈ ವಿಷ್ಣುದೇವನಿಗೆ ಒಬ್ಬಳು ಹೆಣ್ಣುಮಗುವಾದಳು. ಆ ಹೆಣ್ಣುಮಗಳಿಗೆ ಬಾಲ್ಯದಿಂದಲೇ ಒಂದು ಸ್ತ್ರೀರಾಕ್ಷಸಗ್ರಹ ಸ್ಪುರುಶವಾಗಿ ವಸ್ತ್ರಗ್ರಹಣ ಮಾಡದೆ ನಿರ್ವಾಣದಿಂದಲೇ ಸ್ವೇಚ್ಛಾಲೀಲಾ ವಿಲಾಸವಾಗಿ ಇರುತ್ತಾ ಇದ್ದಲ್ಲಿ, ತಂದೆಯಾದ ಬಲ್ಲಾಳ ಬಿಟ್ಟಿದೇವನು ಬಹು ಪಶ್ಚಾತ್ತಾಪದಿಂದಾ ಯಂತ್ರ ಮಂತ್ರ ಮುಂತಾದ ನಾನಾ ಶಿಕಿಚ್ಛೆಗಳಿಂದಾ ಬಹಳವಾಗಿ ಮಾಡಿಸಿದ್ದಾಗ್ಯೂ ಒಂದಕ್ಕೂ ಆ ರಾಕ್ಷಸಿಗ್ರಹ ಉಚ್ಚಾಟಣೆ ಆಗದೆ ಇದ್ದ ಕಾರಣ, ಬಹು ಚಿಂತಾಕ್ರಾಂತನಾಗಿ ಇರುತ್ತಾ ಇದ್ದಲ್ಲಿ ಒಂದಾನೊಂದು ದಿವಸ ಈ ಪಟ್ಟಣಕ್ಕೆ ರಾಮಾನುಜಾಚಾರ್ಯರು ಬಂದ ಕಾರಣ, ಬಹುಚಿಂತಾಕ್ರಾಂತನಾಗಿ ಇರುತ್ತಾಯಿದ್ದ ವ್ಯಸನವನ್ನು ಅವರ ಸಮೀಪಕ್ಕೆ ಬಂದು, “ಸ್ವಾಮಿ ತನಗೆ ಒಬ್ಬ ಮಗಳುಂಟು. ಆ ಮಗಳಿಗೆ

ಬಾಲ್ಯದಿಂದಾ ಒಂದು ಸ್ತ್ರೀರಾಕ್ಷಸಿಗ್ರಹ ಸ್ಪರುಷವಾಗಿದೆಯಾದ ಕಾರಣ ವಸ್ತ್ರಗ್ರಹಣ ಮುಂತಾದ ಮಾಡದೇ ನಿರ್ವಾಣದಲ್ಲಿಯೇ ಸ್ವೇಚ್ಛಾಲೀಲಾವಿಲಾಸವಾಗಿದಾಳೆ. ಈಕೆಗೆ ಆ ಗ್ರಹವು ಉಚ್ಚಾಟನೆಯನ್ನು ಮಾಡಬೇಕು" ಎಂಬದಾಗಿಯು ಹೇಳಿಕೊಂಡದ್ದರಿಂದಾ ಅಪ್ಪಣೆ ಕೊಟ್ಟದ್ದು . . . . "ನಮ್ಮ ಮತಕ್ಕೆ ಸೇರಿ ನಮ್ಮ ಕೈಯಿಂದಾ ಚಕ್ರಾಂಕಿತ ಮಾಡಿಸಿಕೊಂಡು ನಮ್ಮ ಶಿಷ್ಯನಾದರೆ ಗ್ರಹ ಉಚ್ಚಾಟಣೆಯಂ ಮಾಡಿಯೇವು" ಎಂಬದಾಗಿ ಈ ರಾಮಾನುಜಾಚಾರ್ಯರು ಹೇಳಿದರಿಂದಾ, ಈ ಬಿಟ್ಟಿದೇವನು ತನ್ನ ಜಯಿನಮತಸ್ಥರ ಯಾವತ್ತನ್ನು ಕರಿಸಿ "ನೀವು ನನ್ನ ಮಗಳ ಗ್ರಹ ಉಚ್ಚಾಟಣೆಯ ಮಾಡುವದಕ್ಕೆ ನಿಮ್ಮ ಕೈಯಲ್ಲಿ ತೀರಿತೊ ಇಲ್ಲವೆ ರಾಮಾನುಜ ಆರ್ಚಾಯರ ಶಿಷ್ಯನಾಗಿ ಚಕ್ರಾಂಕಿತನಾಗಲೊ" ಎಂಬದಾಗಿ ಮತಸ್ಥರ ಕೇಳಲಾಗಿ, "ನಮ್ಮ ಕೈಲಿ ನಿರ್ವಾಹವಿಲ್ಲ"ವೆಂದು ಹೇಳಿದ ಕಾರಣ, ಈ ಬಿಟ್ಟಿದೇವನು ಈ ರಾಮಾನುಜಾಚಾರ್ಯರ ಸಮೀಪಕ್ಕೆ ಬಂದು, "ತನ್ನ ಮಗಳ ಗ್ರಹಣ ಉಚ್ಚಾಟಣೆಯ ಮಾಡಿದ್ದೇ ಉಂಟಾದರೆ ನಿಮ್ಮ ಶಿಷ್ಯನಾಗಿ ಚಕ್ರಾಂಕಿತನಾಗುತ್ತೇನೆ" ಎಂಬದಾಗಿ ಈ ಬಿಟ್ಟಿದೇವ ಹೇಳಿಕೊಂಡ ಕಾರಣ, ಈ ಆಚಾರ್ಯರು ಆ ಹೆಣ್ಣುಮಗಳ ಕರತರಿಸಿ ತೀರ್ಥಪ್ರಸಾದವನ್ನು ಕೊಡಲಾಗಿ ಆ ಹೆಣ್ಣುಮಗಳಿಗೆ ಗ್ರಹವು ಬಿಟ್ಟುಹೋಗಲಾಗಿ, ಸ್ವಾಭಾವಿಕವಾಗಿ ವಸ್ತ್ರಪರಿಗ್ರಹಣ ಮಾಡಿಕೊಂಡು ಸುಖದಲ್ಲಿ ಇದ್ದ ಕಾರಣ, ಈ ಬಿಟ್ಟಿದೇವನು ಆ ಆಚಾರ್ಯರ ಸಮೀಪಕ್ಕೆ ಬಂದಲ್ಲಿ ಚಕ್ರಾಂಕಿತವನ್ನು ಮಾಡಿ, "ನೀನು ಬಿಟ್ಟಿದೇವನಲ್ಲಾ, ವಿಷ್ಣುವರ್ಧನರಾಯ"ನೆಂದು ನಾವು ಧ್ಯೇಯವನ್ನು ರಾಮಾನುಜಾಚಾರ್ಯರು ಕೊಟ್ಟರು. ಈ ವಿಷ್ಣುವರ್ಧನರಾಯನ ವೃತ್ತಾಂತ ಯಾವತ್ತನ್ನು ವೈಲಾಪುರಿ ಕೇಶವ ಮಹಾತ್ಮೆಯಲ್ಲಿ ಹೇಳಿ ಇದೆ.

ಇತ್ತಲಾಗಿ ಈ ಬಲ್ಲಾಳರಾಯನ ವೃತ್ತಾಂತವೇನೆಂದರೆ : ಈ ಉಭಯತ್ತರು ರಾಜ್ಯೈಂಗೈಯುತ್ತಿರಲಾಗಿ "ಇವರಿಗೆ ಪೂರ್ವಫಲದಿಂದ ಸಿದ್ಧರಸ ಹೇಗೆ ಪ್ರಾಪ್ತಿಯಾಯ್ತು" ಎಂದರೆ, ಇತ್ತಲಾಗಿ ಕೇರಳದೇಶದಲ್ಲಿ ಒಬ್ಬ ವಿಷ್ಣುಶರ್ಮನೆಂಬ ಬ್ರಾಹ್ಮಣನು ಬಹುದರಿದ್ರವಂತನಾಗಿ ಇದ್ದು, ಈ ದರಿದ್ರವನ್ನು ಅನುಭವಿಸಲಾರೆನೆಂದು ಚಂದ್ರದ್ರೋಣ ಪರ್ವತಾಗ್ರದ ಮೇಲೋಗಿ "ತಪಸ್ಸು ಮಾಡಿ, ತನ್ನ ಇಷ್ಟಾರ್ಥವನ್ನೇ ಪಡಕೊಂಡು ಬರುತ್ತೇನೆಂ"ದೆಂಬುದಾಗಿ ತನ್ನೊಳು ತಾನೇ ಯೋಚಿಸಿಕೊಂಡು, ಆ ಬಳಿಕ ಈ ಚಂದ್ರದ್ರೋಣಪರ್ವತಕ್ಕೆ ಬಂದು, ಈಶ್ವರನ ಕುರಿತು ಬಹುದಿನ ತಪಸ್ಸು ಮಾಡಲಾಗಿ, ಈಶ್ವರನು ಮೆಚ್ಚಿ ಸಿದ್ಧರೂಪಿನಲ್ಲಿ ಬಂದು "ಎಲ್ಲೈ ಬ್ರಾಹ್ಮಣನೇ, ನೀನು ಏನು ಕಾರಣ ತಪಸ್ಸು ಮಾಡುತ್ತಾ ಇದ್ದೀಯೆ? ನಿನಗೆ ಏನು ಬೇಕು? ಏನು ಕೇಳುತ್ತಾ ಇದ್ದೀಯೊ ಆ ಕೇಳಿದ ವರವನ್ನು ಕೊಡುತ್ತಾ ಇದೇನೆ" ಎಂಬದಾಗಿ ಹೇಳಿದ್ದರಿಂದಾ ಆ ಬಳಿಕ ಈ ಬ್ರಾಹ್ಮಣನು "ಎಲ್ಲೈ ಸ್ವಾಮಿಯೇ ನಾನು ಇದುವರಿ ಪರಿಯಂತ್ರ ಬಹು ದರಿದ್ರವನ್ನು ಅನುಭವಿಸಿದೇನು. ಇನ್ನು ಮೇಲೆ ಅನುಭವಿಸಲಾರದೆ ನಿನ್ನ ಕುರಿತು ತಪಸ್ಸು ಮಾಡಿದೇನೂ" ಎಂಬದಾಗಿ ಹೇಳಿಕೊಂಡದ್ದರಿಂದಾ, ಆಗ ಈ ಸಿದ್ಧರೂಪಿನ ಈಶ್ವರನು ಒಂದು ಗುಹೆಯ ಒಳಯಂಕೆ ಹೋಗಿ ಒಂದು ಪಾತ್ರಯಲ್ಲಿ ಸಿದ್ಧರಸವನ್ನು ತುಂಬಿ ತಂದು ಈ ಬ್ರಾಹ್ಮಣಗೆ ಕೊಟ್ಟು "ಎಲ್ಲೈ ಬ್ರಾಹ್ಮಣೋತ್ತಮನೇ ಕೇಳೈ, ನಿನ್ನ ದರಿದ್ರವು ವಿಚ್ಚಿತಿಯಾಯ್ತು. ಈ ಸಿದ್ಧರಸವನ್ನು ಇಟ್ಟುಕೊಂಡು ಲೋಹಕ್ಕೆ ಸ್ವಲ್ಪ ಮಾತ್ರ ರಸವ ಸೋಂಕಿಸಿದರೆ ಆ ಲೋಹವೆಲ್ಲಾ ಸುವರ್ಣವಾಗತ್ತಾ ಯಿದೆ. ಈ ಪ್ರಕಾರ ನೀನು ಸುವರ್ಣಗಳ ಮಾಡಿಕೊಂಡು ಸುಖದಿಂದ ಇರು" ಎಂಬುದಾಗಿ ಅಪ್ಪಣೆ ಕೊಟ್ಟ ಕಾರಣ, ಈ ಬ್ರಾಹ್ಮಣನು ಸಿದ್ಧರಸವನ್ನು ತೆಗೆದುಕೊಂಡು ಮಾರ್ಗಸ್ಥನಾಗಿ ಈ ದ್ವಾರಪುರಿಗೆ ಬಂದು, ಒಬ್ಬ ಕಮ್ಮಾರನ

ಮನಿಗೆ ಬಂದು ಇಳಿದುಕೊಂಡು, ತಾನು ತಂದು ಇರುವಂಥಾ ಸಿದ್ಧರಸವನ್ನು ಭೂಮಿಯಲ್ಲಿ ಇರಿಸದೆ ಅಂತರದಲ್ಲಿ ತಗಲು ಹಾಕಿ, ಊರ ಹೊರಯಿಂಕೆ ಸ್ವಯಂಪಾಕಕ್ಕೆ ಹೋಗಿ, ನದಿಯ ತೀರದಲ್ಲಿ ಸ್ವಯಂಪಾಕವನ್ನು ಮಾಡಿಕೊಂಡು ಹೊರಟು ಬರುವಂಥಾ ವ್ಯಾಳಕ್ಕೆ, ಇತ್ತಲೀ ಕಮ್ಮಾರನು ತನ್ನ ಮನೆಯಲ್ಲಿ ತನ್ನ ಕುಲ ಉದ್ಯೋಗವ ಮಾಡುತ್ತ ಇರಲಾಗಿ, ಮನೆಯಲ್ಲಿ ಹೂಡಿಯಿರುವಂಥಾ ಈ ಕಮ್ಮಾರನ ಕುಲುಮೆಯ ಶಕೆಗೆ ಅಂತರದಲ್ಲಿ ತಗಲು ಹಾಕಿರುವಂಥಾ ಸಿದ್ಧರಸದ ಪಾತ್ರೆಯು ದ್ರವಿಸಿ, ಆದ್ರವಿಸಿದ ಸಿದ್ಧರಸದ ಬಿಂದು ಕೆಳಗೆ ಇಟ್ಟಿರುವಂತಹ ಲೋಹಗಳ ಮೇಲೆ ಬೀಳಲು, ಯಾವತ್ತು ಸುವರ್ಣವಾಗಿರಲು, ಈ ಕಮ್ಮಾರನು ಕುಲುಮೆಯಿಂದ ಒಳಯಿಂಕೆ ಬಂದು ನೋಡಲು ಈ ಲೋಹಗಳು ಯಾವತ್ತು ಸುವರ್ಣವಾಗಿ ಇದ್ದದನ್ನು ಕಂಡು, "ಇದು ಏನು ನಿಮಿತ್ಯ ಸುವರ್ಣವಾಯ್ತು" ಎಂದು ಯೋಚಿಸಿ ನೋಡಿ, "ಈಗ ನಮ್ಮ ಮನಿಗೆ ಒಬ್ಬ ಬ್ರಾಹ್ಮಣನು ಬಂದು ಇದಾನೆ. ಆತನ ಸಮೀಪದಲ್ಲಿ ಏನೋ ಕ್ರಿಯ ಇದ್ದಿತು. ಈತ ಏನೇನೊ ತಂದು ಇದಾನೆ" ಎಂಬುದಾಗಿ ಈತ ಇಟ್ಟು ಇರುವ ಸಾಮಾನಿನ ಎಡಬಲ ಮುಂತಾಗಿ ನೋಡಿದಲ್ಲಿ ಅಂತರದಲ್ಲಿ ಕಟ್ಟಿರುವ ಪಾತ್ರೆಯಂ ಕಂಡು, ಆ ಪಾತ್ರೆಯ ಕೆಳಗೆ ಇಟ್ಟು ಇರುವಂಥಾ ಈ ಲೋಹಗಳು ಯಾವತ್ತು ಸುವರ್ಣವಾಗಿ ಇದ್ದವಂ ತಿಳಿದು, "ಈ ಪಾತ್ರೆಯಲ್ಲಿ ಕ್ರಿಯೆ ಇದೆ, ಇದಂ ಪರೀಕ್ಷಿಸಬೇಕೆಂ"ತಾ ಆ ಬ್ರಾಹ್ಮಣ ತಂದು ಕಟ್ಟಿ ತೂಗಾಕಿದ್ದ ಪಾತ್ರೆಯಂ ಬಿಚ್ಚಿ, ಒಂದು ಕಡ್ಡಿಯಲ್ಲಿ ರಸವಂ ಅದ್ದಿ ಒಂದು ಲೋಹಕ್ಕೆ ಮುಟ್ಟಿಸಲಾಗಿ ಆ ಲೋಹವು ಸುವರ್ಣವಾಗಲು, ಈ ರಸವೇ ಸಿದ್ಧರಸವೆಂದು ನಿಶ್ಚಯ ಮಾಡಿಕೊಂಡು, ಈ ರಸ ಯಾವತ್ತನ್ನು ತಾನು ಅಪಹರಿಸುವಂಥಾ ಯತ್ನವ ಯಾವ ಪ್ರಕಾರ ಮಾಡಬೇಕೆಂದು ಯೋಚಿಸಿ, ತನ್ನ ಮನೆಯಲ್ಲಿ ಇರುವಂಥಾ ಬದುಕು ಬಾಳು ಒಡವೆ ವಸ್ತು ಮುಂತಾದ ಪದಾರ್ಥ ಯಾವತ್ತನು ಜಾಗ್ರತೆಯಿಂದ ನೆರಮನಿಗೆ ಸಾಗಿಸಿಬಿಟ್ಟು, ತನ್ನ ಮನಿಗೆ ಅಗ್ನಿಪ್ರವೇಶವಂ ಮಾಡಿಕೊಂಡು, ವದನತ್ರಾಡನವಂ ಮಾಡಿಕೊಳ್ಳುತ್ತಾ ಇರುವಂಥಾ ಸಮಯಕ್ಕೆ ಈ ಬ್ರಾಹ್ಮಣನು ತನ್ನ ಸ್ನಾನ ಜಪ ಮುಂತಾಗಿಯು ಭೋಜನವನ್ನು ಮಾಡಿಕೊಂಡು, ತಾನು ಇಟ್ಟಿರುವ ಸಾಮಾನು ಯಾವತ್ತನ್ನು ತೆಗೆದು ಮುಂದೆ ಪ್ರಯಾಣವಾಗಿ ಹೋಗುವ ನಿಮಿತ್ತವಾಗಿ ಈ ಮನಿಗೆ ಬಂದು ನೋಡಲು, ಈ ಮನಿಯು ಅಗ್ನಿಯಿಂದ ದಹಿಸುತ್ತಾ ಇರುವದ ಕಂಡು, ಈತನು ರೋದನ ವದನ ತ್ರಾಡನ ಮುಂತಾದ ಮಾಡಿಕೊಂಡು ಬಹು ದುಃಖಪಡುತ್ತಾ ಈ ದ್ವಾರಾಪುರಿಗೆ ಅಧಿಪತಿಯಾದಂಥಾ ಬಲ್ಲಾಳರಾಯನ ಬಳಿಗೆ ಬಂದು "ಎಲೈ ದೊರೆಯೇ ನಿನ್ನ ಪಟ್ಟಣಕ್ಕೆ ಬಂದು ಬಹು ದಿನ ತಪಸ್ಸುಮಾಡಿ ಈಶ್ವರನಿಂದಾ ಪಡಕೊಂಡು ಬಂದಿದ್ದಂಥಾ? ಸಿದ್ಧರಸವನ್ನು ಕಳಕೊಳ್ಳುವದಕ್ಕೆ ಯೋಗ ನನಗಾಯ್ತು" ಎಂದು ಮೊರೆಯಿಡಲಾಗಿ, ಆ ದೊರೆಯು "ಇದೇನು ನಿಮತ್ತಾ"ವೆಂಬದಾಗಿ ಪೂರ್ವಾಪರ ವೃತ್ತಾಂತವನ್ನು ವಿಚಾರಿಸಿ, "ಈ ಕಮ್ಮಾರನು ಈತನ ಸಿದ್ಧರಸವನ್ನು ಅಪಹರಿಸಿದ್ದಾನೆ. ಇದಕ್ಕೆ ಮೋಸವಿಲ್ಲ. ಈ ಪಂಚಾಳರು ಬಹು ಘಾತಕರು" ಎಂದು ತಿಳಿದು, ಆ ಕಮ್ಮಾರನ ಹಿಡಿತರಿಸಿ ನಾನಾ ಬಗೆ ಶಿಕ್ಷೆಯಿಂದಾ ಉಪದ್ರವ ಮಾಡಲು, ನೆರೆಮನೆಯಲ್ಲಿ ಇಟ್ಟುರುವಂಥಾ ಸಿದ್ಧರಸದ ಪಾತ್ರೆಯನ್ನು ಈ ಬ್ರಾಹ್ಮಣವಶಕ್ಕೆ ತಂದುಕೊಡಲು, ಆಗಾ ಈ ಬ್ರಾಹಣನು ಬಹು ಸಂತೋಷಪಟ್ಟು "ಈ ಸಿದ್ಧರಸವು ನನಗೆ ದಕ್ಕುವುದಿಲ್ಲ, ದೊರೆಗಳಿಗೇ ಸರಿ. ಅವರಿಂದಾ ಸ್ವಾಸ್ತಿವೃತ್ತಿಗಳ ಸಂಪಾದಿಸಿಕೊಂಡು ಸುಖದಿಂದಾ ಇರುವ" ಎಂಬದಾಗಿ ಯೋಚಿಸಿಕೊಂಡು, ಈ ಸಿದ್ಧರಸವನ್ನು ತೆಗೆದುಕೊಂಡು ಹೋಗಿ ದೊರೆಯ ಸಮೀಪದಲ್ಲಿ ಇಟ್ಟು

"ದೊರೆಯೇ, ಈ ಸಿದ್ಧರಸವನ್ನು ಬಹು ಕಷ್ಟಪಟ್ಟು ಸಂಪಾದಿಸಿದೆನು. ನನ್ನಲ್ಲಿ ಇರುವಂತಾದ್ದು ಅಲ್ಲಾ, ನೀವು ದೊರೆಗಳು. ನಿಮ್ಮಲ್ಲಿ ಇದ್ದರೆ ಅನೇಕ ಜನರನ್ನು ಸಂರಕ್ಷಣೆ ಮಾಡೀರಿ. ಆದ್ದರಿಂದ ಈ ಸಿದ್ಧರಸವನ್ನು ನೀವು ತೆಗೆದುಕೊಂಡು ನನಗೆ ಸ್ವಾಸ್ತಿ ವೃತ್ತಿಗಳ ಕೊಡಿಸಿದರೆ ಸ್ವಸ್ತದಲ್ಲಿ ಸ್ನಾನ ಜಪವನ್ನು ಮಾಡಿಕೊಂಡು ಇದ್ದೇನು" ಎಂಬದಾಗಿ ಈ ಬ್ರಾಹ್ಮಣನು ಕೇಳಿಕೊಂಡ ಕಾರಣ, ಈ ದೊರೆಯಾದ ಬಲ್ಲಾಳರಾಯನು ಈ ಸಿದ್ಧರಸವನ್ನು ತೆಗೆದುಕೊಂಡು, ತನ್ನ ಬೊಕ್ಕಸದಲ್ಲಿ ಇಡಿಸಿಬಿಟ್ಟ, ಈ ಬ್ರಾಹ್ಮಣನಿಗೆ ಅನೇಕ ಸ್ವಾಸ್ತಿ ವೃತ್ತಿಗಳ ಕೊಡಿಸಿ ಕೊಟ್ಟು, "ಎಲೈ ಬ್ರಾಹ್ಮಣೋತ್ತಮನೆ, ನೀನು ನಮ್ಮ ಪಟ್ಟಣದಲ್ಲಿ ಸ್ನಾನ ಜಪವನ್ನು ಮಾಡಿಕೊಂಡು ಸುಖದಿಂದ ಇರು" ಎಂಬದಾಗಿ ಅಪ್ಪಣೆ ಕೊಟ್ಟ ಕಾರಣ, (ಈ ಬ್ರಾಹ್ಮಣನು ಸುಖದಿಂದಾ ಇರು ಎಂಬದಾಗಿ) ಈ ಬ್ರಾಹ್ಮಣನು ತನ್ನ ಕುಟುಂಬ ಮುಂತಾಗಿ ಸವುಖ್ಯದಿಂದ ಇರುತ್ತಾ ಇದ್ದನು.

ಇತ್ತಲಾಗಿ ಈ ದೊರೆಯು, ಈ ಸಿದ್ಧರಸವು ನಮ್ಮಲ್ಲಿ ಇದ್ದ ಬಳಿಕ "ನಮ್ಮ ರಾಜ್ಯದ ಪ್ರಜೆಗಳನ್ನು ಸುಖದಿಂದ ಇಟ್ಟುಕೊಂಡು ಇರುವಾ" ಎಂಬದಾಗಿ ಯೋಚಿಸಿಕೊಂಡು, ಪ್ರಜೆಗಳು ಯಾವತ್ತನ್ನು ಕರಸಿಕೊಂಡು "ಎಲೈ ಪ್ರಜೆಗಳಿರಾ, ಇದು ಪರಿಯಂತ್ರವೂ ನಮಗೆ ಸಿದ್ಧಾಯವನ್ನು ಕೊಡುತ್ತಾ ಇದ್ದಿರಿ. ಇನ್ನು ಮೇಲೆ ನಮಗೆ ಸಿದಾಯವ ಕೊಡ ಕೆಲಸವಿಲ್ಲ. ನಿಮ್ಮ ಕೈಲಾದಷ್ಟು ಭೂಮಿಯನ್ನು ಉತ್ತುಕೊಂಡು ಅದ ಫಲ ಯಾವತ್ತನ್ನು ನೀವೆ ತೆಗೆದುಕೊಂಡು ನಮ್ಮ ಸಿಧಾಯದ ಬಗ್ಗೆ ನೀವು ಭೂಮಿಯನ್ನು ಉತ್ತು, ಸವದು ಇರುವ ಮೋಟು ಗುಳುಗಳನ್ನು ನಮಗೆ ತಂದುಕೊಡಿ" ಎಂಬದಾಗಿ ಸಕಲ ಪ್ರಜೆಗಳಿಗೂ ಕಟ್ಟು ಮಾಡಿಸಿದನು. ಆ ಪ್ರಜೆಗಳು ಯಾವತ್ತು ಜನರು ಬಹು ಸಂತೋಷ ಬಟ್ಟು "ಇಂಥ ದೊರೆಯುಂಟೆ? ಈ ಮೋಟು ಕುಳುಗಳಿಂದ ನಮಗೆ ಅಗತಕ್ಕದ್ದೇನು" ಎಂಬುದಾಗಿ ಪ್ರಜೆಗಳು ವರುಷಂಪ್ರತಿಯಲ್ಲೂ ತಾವು ಉತ್ತು ಸವದಂಥಾ ಮೋಟು ಕುಳುಗಳನ್ನು ತಂದುಕೊಡುವರು. ಈ ಕುಳುಗಳು ಯಾವತ್ತಕು ಸಿದ್ಧರಸ ಸ್ಪರುಷವನ್ನೇ ಮಾಡಿಕೊಂಡು, ಹೀಗೆ ಅನೇಕ ದ್ರವ್ಯವನ್ನು ಸಂಪಾದಿಸಿದಲ್ಲಿ, ಈ ದ್ರವ್ಯದ ಬಲುಮೆಯಿಂದಾ ಈ ಬಲ್ಲಾಳ ವಿಷ್ಣುವರ್ಧನರಾಯ ಸಹಾ ಬೇಲೂರು ಪಟ್ಟವನ್ನು ಕಟ್ಟಿಕೊಂಡು, ಈ ದ್ವಾರಾಪುರಿಯಲ್ಲಿ ಕೂಡಾ ಇರುತ್ತಾ ರಾಜ್ಯವ ಪರಿಪಾಲನೆಯನ್ನು ಮಾಡಿಕೊಂಡು ಇರುವಂಥಾ ಸಮಯದಲ್ಲಿ, ದಕ್ಷಿಣದೇಶದಿಂದಾ ಜಕಣಾಚಾರಿಯೆಂಬ ಒಬ್ಬ ಶಿಲ್ಪಿಯು ಹನ್ನೆರಡು ಸಾವಿರ ಭಂಡಿ ಸಮೇತವಾಗಿ ಈ ದ್ವಾರಾಪುರಿಗೆ ಬಂದನು. ಇವನು ಪೂರ್ವಜನ್ಮದಲ್ಲಿ ವಿಶ್ವಕರ್ಮನು. ಅವನಿಗೆ ಶಾಪದ ನಿಮಿತ್ತದಿಂದಾ ಭೂಲೋಕದಲ್ಲಿ ಜನಿಸಿ ಶಿಲ್ಪಿಯಾಗಿ, ಚೋಳದೇಶದಿಂದಾ ಇಲ್ಲಿಗೆ ಬರುವಾಗ್ಗೆ ಅಲ್ಲಿ ಅನೇಕವಾದ ದೇವಾಲಯಗಳ ಕಟ್ಟಿ, ಇಲ್ಲಿಗೆ ಬಂದು, ಈ ಬಲ್ಲಾಳರಾಯನ ಕಂಡು, "ಚೋಳದೇಶದ ದೊರೆಯು ನನ್ನ ಕೈಯಿಂದಾ ಅನೇಕವಾದ ದೇವಾಲಯಗಳನ್ನು ಕಟ್ಟಿಸಿದನು. ಇಲ್ಲಿಗೆ ನಿಮ್ಮ ಮಹಿಮೆಯ ಕೇಳಿ ಬಂದೆನು. ಅಪ್ಪಣೆ ಕೊಟ್ಟರೆ ಇಲ್ಲಿಯೂ ದೇವಾಲಯಗಳ ಕಟ್ಟೇನು" ಎಂಬದಾಗಿ ಕೇಳಿಕೊಂಡ ಕಾರಣ ಈ ಬಲ್ಲಾಳರಾಯನು ಒಪ್ಪಿಕೊಂಡು ಇರುತ್ತಾ ಇದ್ದಲ್ಲಿ, ಈ ಬಲ್ಲಾಳರಾಯಗೆ ಕುಷ್ಟವ್ಯಾಧಿಯಾಗಿಯಿತ್ತು.

ಈ ಬಲ್ಲಾಳರಾಯನು ಒಂದಾನೊಂದು ದಿವಸ ಬೇಂಟೆಯಾಡುವ ನಿಮಿತ್ತವಾಗಿ ಚತುರಂಗಮಾರ್ಬಲವನ್ನು ಕಟ್ಟಿಕೊಂಡು ಬೆಂಟೆಯಾಡುತ್ತಾ ಇರಲಾಗಿ, ಆ ಅರಣ್ಯದಲ್ಲಿ ಒಂದು ಪರ್ವತದಲ್ಲಿ ಋಷ್ಯಶೃಂಗನೆಂಬ ಋಷಿಯು ತಪಸ್ಸು ಮಾಡಿಕೊಂಡು ಇರುತ್ತಾ ಇದ್ದನು. ಈ ದೊರೆಯು ಆ ಋಷಿಯ ದರುಶನ ನಿಮಿತ್ತವಾಗಿ ಋಷಿಯ ಸಮೀಪಕ್ಕೆ ಬಂದು ವಂದನಾದಿಗಳ

ಮಾಡಿ, "ಸ್ವಾಮಿ ಋಷಿಗಳಿರಾ, ನಿಮ್ಮ ದರುಶನದಿಂದಾ ನಾನು ಕೃತಾರ್ಥನಾದೆನು. ನನಗೆ ಕುಷ್ಠವ್ಯಾಧಿಯಿಂದಾ ಬಹು ಸಂಗಟ ಪಡುತ್ತಾ ಇದ್ದೇನೆ. ಇದಕ್ಕೆ ಪರಿಹಾರವೇನು?" ಎಂದು ಕೇಳಿಕೊಂಡದ್ದರಿಂದಾ ಆಗ ಆ ಋಷೀಶ್ವರರು "ಎಲೈ ರಾಯನೇ, ನೀನು ಶಿವಾಲಯಗಳನ್ನು ಕಟ್ಟಿಸಿ ಶಿವಪ್ರತಿಷ್ಠೆಯನ್ನು ಮಾಡಿಸಿದರೆ ಈ ಕುಷ್ಠವ್ಯಾಧಿಯು ನಿನಗೆ ಹೋಗಿ, ಆ ಬಳಿಕ ಅನೇಕ ಸಂಪದವನ್ನು ಉಂಟಾಗುವದು" ಎಂಬದಾಗಿ ಅಪ್ಪಣೆ ಕೊಡಲಾಗಿ. ಆಗ ಈ ರಾಯನು "ಒಳ್ಳೆ ಕೆಲಸವಾಗುತ್ತಾ ಇದೆ, ಶಿವ ಪ್ರತಿಷ್ಠೆಗಳನ್ನು ಮಾಡಿದರೆ ಇಹಲೋಕದಲ್ಲಿ ಸಂಪದವೂ ಪರಲೋಕದಲ್ಲಿ ಅನೇಕ ಪುಣ್ಯವೂ ಉಂಟಾಗುತ್ತೆ" ಎಂಬದಾಗಿ ಯೋಚನೆ ಮಾಡುತ್ತಾ ಇದ್ದಂಥಾ ವ್ಯಾಳಕ್ಕೆ, ಈ ಜಕಣಾಚಾರಿಯೆಂಬಂತಾ ಶಿಲ್ಪಿಯು ಬಂದು ಕೇಳಿದರಿಂದಾ, "ಹಾಗೇ ಆಗಲಿ, ಅನೇಕ ಶಿವಾಲಯಗಳ ನಿರ್ಮಾಣ ಮಾಡು, ನಿನಗೆ ಅನೇಕ ದ್ರವ್ಯವನ್ನು ಕೊಡುತ್ತಾ ಇದೇನೆ" ಎಂಬದಾಗಿ ಹೇಳಿದಲ್ಲಿ, ಆ ಶಿಲ್ಪಿಯು ನನಗೆ ಕ್ಲುಪ್ತವುಂಟು. ನಾನು ನಿಲ್ಲಿಸಿದ ಪ್ರತುಮೆಗಳಲ್ಲಿ ಉದುರವಂಥಾ ಸಣ್ಣ ಕಲ್ಲಪುಡಿ ಎಷ್ಟು ಉಂಟೊ ಆ ತೂಕದ ದ್ರವ್ಯವನ್ನು ಕೊಟ್ಟರೆ ನಾನು ನಿರ್ಮಾಣ ಮಾಡೀನು" ಎಂಬದಾಗಿ ಕೇಳಿಕೊಂಡ ಕಾರಣ, ಅದೇ ಪ್ರಕಾರಕ್ಕೆ ದೇವಾಲಯಗಳ ಕಟ್ಟಿಸಿದನು. ಈ ದೊರೆತನವನ್ನು ಪಡದಂಥಾ ತನ್ನ ಪ್ರಪಿತಾಮಹನಾದಂಥಾ ಹೊಯಿಸಳನೆಂಬ ನಾಮಧೇಯವನ್ನೇ ಈ ಈಶ್ವರನ ಪರಿವಾಹ ದೇವತೆಗಳು, ಈ ಈಶ್ವರನ ಆರಾಧನೆ ಬಗ್ಗೆ ಅನೇಕ ಗ್ರಾಮ ಭೂಮಿಗಳನ್ನು ಬಿಟ್ಟು, ಅನೇಕ ಸೇವಾರ್ಥಗಳನ್ನು ಮಾಡಿಸುತ್ತಾ ಇದ್ದನು.

"ಈ ಹೊಯಿಸಳೇಶ್ವರನ ದೇವಸ್ಥಾನಕ್ಕೆ ವಿಮಾನವನ್ನು ಏಕೆ ಕಟ್ಟಲಿಲ್ಲ?" ಎಂದರೆ ಕೈಲಾಸಪರ್ವತದಿಂದ ಈಶ್ವರನು ಜಂಗಮರೂಪಿನಿಂದ ಈ ಭೂಲೋಕಕ್ಕೆ ಬಂದು, ಈ ದೇವಸ್ಥಾನವನ್ನು ನೋಡಿ, ಅತಿಸಂಭ್ರಮಬಟ್ಟು ಈ ದೇವಸ್ಥಾನವನ್ನು ತನ್ನ ಕೈಲಾಸಪರ್ವತಕ್ಕೆ ತೆಗೆದುಕೊಂಡು ಹೋಗಬೇಕಂಥಾ ಮನಸ್ಸಿನಲ್ಲಿ ಯೋಚಿಸಿ, ಈ ಜಕ್ಕಣಾಚಾರ‍್ಯರ ಸ್ವಪ್ನದಲ್ಲಿ ಈಶ್ವರನು ಬಂದು "ಎಲೈ ಶಿಲ್ಪಿಯೇ, ಈ ದೇವಸ್ಥಾನವನ್ನು ನಾನು ಕೈಲಾಸ ಪರ್ವತಕ್ಕೆ ತೆಗೆದುಕೊಂಡು ಹೋಗುವ ನಿಮಿತ್ತ, ಪುಷ್ಪಗಿರಿಯೆಂಬ ಪರ್ವತದಲ್ಲಿ ವಾಸಾ ಮಾಡಿಕೊಂಡು ಇದ್ದೇನೆ. ಶೀಘ್ರವಾಗಿ ವಿಮಾನವನ್ನು ನಿರ್ಮಾಣಮಾಡು. ನಾನು ತೆಗೆದುಕೊಂಡು ಹೋಗುತ್ತೇನೆ" ಎಂಬದಾಗಿ ಅಪ್ಪಣೆ ಕೊಟ್ಟಿದ್ದರಿಂದಾ, ಆ ಜಕಣಾಚಾರಿಯು ಈ ಬಲ್ಲಾಳನೆಂಬ ದೊರೆಗೆ ತನಗೆ ಕಂಡ ಸ್ವಪ್ನದ ವೃತ್ತಾಂತವನ್ನು ಹೇಳಲಾಗಿ, ಆ ದೊರೆಯು ಮನಸಿನಲ್ಲಿ ಯೋಚಿಸಿ "ಈ ವಿಮಾನವ ಕಟಿದರಷ್ಟೇ ತೆಗೆದುಕೊಂಡು ಹೋಗುವುದು. ಆದ್ದರಿಂದ ವಿಮಾನವನ್ನೇ ಕಟ್ಟಬೇಡ" ಎಂಬದಾಗಿ ಈ ಶಿಲ್ಪಿಯಾದ ಜಕಣಾಚಾರಿಗೆ ಹೇಳಿ ನಿಲ್ಲಿಸಿದರಿಂದ, ಆ ಬಳಿಕ ಆ ದೊರೆಯು ಅತಿವಿಸ್ಮಿತನಾಗಿ ಸಂತೋಷದಿಂದಾ ಈ ದೇವಸ್ಥಾನದ ಪ್ರತಿಮೆಗಳ್ಯಾವತ್ತಕ್ಕು ಇಂಗಲೀಕದ ಬಣ್ಣವನ್ನು ಹಾಕಿಸಿ, ಆ ಬಣ್ಣ ಮಾಸೀತು ಎಂಬದಾಗಿ ಸುರೆಪಟ್ಟುದ ಅವಸಣಿಗೆ ಹಾಕಿಸಿ, ಅತಿಸಂಭ್ರಮದಿಂದಾ ಈ ಹೊಯ್ಸಳೇಶ್ವರದೇವರಿಗೆ ಅನೇಕ ಉತ್ಸವ ಆರಾಧನೆಗಳನ್ನು ಮಾಡಿಸಿಕೊಂಡು, ಈ ದ್ವಾರಾಪುರೀ ಸಂಸ್ಥಾನವನ್ನು ತನ್ನ ಕ್ಷಾತ್ರಿಯಿಂದಾ ರಾಜ್ಯಭಾರವನ್ನೆ ಮಾಡಿಕೊಂಡು ಬಹುದಿವಸ ಇರುತ್ತಾ ಇದ್ದನು.

ಅನಂತರದಲ್ಲಿ ಈ ವಿಷ್ಣುವರ್ಧನರಾಯನೆಂಬ ದೊರೆಗೆ ನರಸಿಂಹರಾಯನೆಂಬ ಮಗ ಹುಟ್ಟಿದನು. ಆತನು ಇದೇ ಪ್ರಕಾರ ರಾಜ್ಯಭಾರಂಗೈಯುತ್ತಾ ಇದ್ದನು. ಆತಗೆ ವೀರಬಲ್ಲಾಳರಾಯ ಹುಟ್ಟಿದನು. ಆತನು ಬಹುಪರಾಕ್ರಮಿಯಾಗಿ ಅನೇಕ ದೇಶಕೋಶಗಳ ಕಟ್ಟಿಕೊಂಡು, ಈ

ದ್ವಾರಾಪುರಿಯೆಂಬ ಪಟ್ಟಣದಲ್ಲಿ ಇದ್ದುಕೊಂಡು ರಾಜ್ಯಭಾರಂಗೈಯುತ್ತಾ ಇದ್ದನು. ಈತನ ಪರಾಕ್ರಮವು ದಶದಿಕ್ಕಿನಲ್ಲಿ ಪ್ರಖ್ಯಾತಿಯಾಗಿ ಇದ್ದಕಾರಣ ಈ ಬಲ್ಲಾಳನ ಪರಾಕ್ರಮವನ್ನು ಈತನ ರೂಪು ಲಾವಣ್ಯ ಮುಂತಾದ್ದನ್ನು ಡಿಳ್ಳಿ ಪಾಶ್ಚಾಯನ ಮಗಳು ಕೇಳಿದರಿಂದಾ, ಆಕೆಯು "ಇಂಥಾ ಪರಾಕ್ರಮಿಯಾದಂಥಾ ಪುರುಷ ವೀರಬಲ್ಲಾಳರಾಯನ್ನೇ ನಾನು ಮದುವೆ ಆಗುವದೇ ಹೊರತಾಗಿ, ಇನ್ನೊಬ್ಬರನ್ನು ನಾನು ವರಿಸುವದಿಲ್ಲ" ಎಂಬ ಮನಸಿನಲ್ಲಿ ನಿಶ್ಚೈಸಿ, ತನ್ನ ತಂದೆಯಾದ ಪಾಛಾಯನ ಸಂಗಡ ಹೇಳಿಕೊಂಡದ್ದೇನೆಂದರೆ "ವೀರಬಲ್ಲಾಳಗೆ ಕೊಟ್ಟು ಮದುವೆಯ ಮಾಡು, ಇನ್ನೊಬ್ಬ ಪುರುಷನ ನಾನು ಮದುವೆ ಆಗುವುದು ಇಲ್ಲ" ಎಂಬದಾಗಿ ಹೇಳಿದ ಕಾರಣ, ಅಸ್ತುಪಟ್ಟು, ತನ್ನ ಬಗೆ ಬುದ್ಧಿ ಮನುಷ್ಯರನ ಕೂಡಲಿಟ್ಟು ತನ್ನ ನಿರೂಪವನ್ನು ಬರಸಿ ಕಳುಹಿಸಿದಲ್ಲಿ, ಈ ಬಲ್ಲಾಳರಾಯನು ತಾನು ಹೋಗದೆ ತಾನು ಹಿಡಿದಿರುವಂಥಾ ಆಯುಧವನ್ನು ತನ್ನ ಬಗೆ ಮಂತ್ರಿ ಪ್ರಧಾನಿಗಳು ಕೂಡಾಲಿಟ್ಟು ಬಹು ಮಂದಿ ಮಾರ್ಬಲ ಸಮೇತವಾಗಿ ಡಿಳ್ಳಿಗೆ ಕಳುಹಿಸಿಕೊಟ್ಟಲ್ಲಿ, ಆ ಪಾಶ್ಚಾಯು ಒಪ್ಪಿಕೊಂಡು, ಆ ಆಯುಧಕ್ಕೆ ತನ್ನ ಕುಮಾರತಿಯ ಧಾರೆಯನೆರೆದುಕೊಟ್ಟು, ತನ್ನ ಚತುರಂಗ ಮಾರ್ಬಲ ಸಮೇತವಾಗಿ ಕೂಡಲಿಟ್ಟು, ತನ್ನ ಮಗಳನ್ನು ಆಯುಧದ ಸಂಗಡಲೆ ಈ ಬಲ್ಲಾಳರಾಯನ ಬಳಿಗೆ ಕಳುಹಿಸಿಕೊಟ್ಟಲ್ಲಿ, ಆ ವೀರಬಲ್ಲಾಳರಾಯನು ಅತಿ ಸಂಭ್ರಮಬಟ್ಟು ತನ್ನ ರಾಣಿವಾಸದಲ್ಲಿ ತಾನಿಟ್ಟು ಬಿಟ್ಟನು.

ಕೆಲವು ದಿವಸದ ಮೇಲೆ ಯೋಚಿಸಿಕೊಂಡು "ತಾನು ಛತ್ರಿಯನು. ತನಗೆ ಮ್ಲೇಚ್ಚಜಾತಿಯಲ್ಲಿ ಸಂಗಮವಾಗುವಂತಾದ್ದು ಯುಕ್ತವಲ್ಲಾ" ಎಂಬದಾಗಿ ಆ ಪಾಛಾಯ ಮಗಳ ಸಂಗಡ ಅಂಗಸಂಗವನು ಮಾಡದೆ ಬಿಟ್ಟನು. ಈ ವೃತಾ ಯಾವತ್ತನ್ನೂ ಸವಿಸ್ತಾರವಾಗಿ ಬರೆಸಿ, ತಮ್ಮ ತಂದೆಯಾದ ಪಾಛಾಯ ಬಳಿಗೆ ಆತನ ಮಗಳು ತನಗೆ ಆಪ್ತರಾದಂಥಾವರನ್ನ ಕೂಡಲಿಟ್ಟು ಗೋಪ್ಯವಾಗಿ ಕಳುಹಿಸಿಕೊಟ್ಟಳು. ಈಕೆ ಕಡೆಯಿಂದಾ ಬಂದಂಥಾ ಅವರುಗಳು ಪಾಛಾಯ ಬೇಟಿ ಮಾಡಿಕೊಂಡು, ಇವಳು ಬರೆದುಕೊಟಂಥಾ ಲೆಕ್ಕವನ್ನು ಕೊಟ್ಟಲ್ಲಿ, ಆ ಪಾಛಾಯಿಯು ನೋಡಿಕೊಂಡು ಬಹಳ ಕೋಪಾಟೋಪದಿಂದಾ ಬಣ್ಣಕ್ಕೆ ಲಕ್ಷ ಕುದುರೆಯನ್ನು ತೆಗೆದುಕೊಂಡು, ಚತುರಂಗಬಲ ಸಮೇತನಾಗಿ ತಾನೇ ಹೊರಟುಬಂದು, ಈ ದ್ವಾರಾಪುರಿಯೆಂಬ ಪಟ್ಟಣಕ್ಕೆ ಮುತ್ತಿಗೆ ಹಾಕಲಾಗಿ, ಈ ವಿವರವನ್ನು ಬಲ್ಲಾಳರಾಯ ತಿಳಿದು, ತನ್ನ ಭುಜಬಲ ಪರಾಕ್ರಮದಿಂದಾ ಚತುರಂಗಬಲ ಸಮೇತನಾಗಿ ಹೊರಹೊರಟು, ಈ ಪಾಛಾಯ ಸಂಗಡ ಯುದ್ಧವಂ ಮಾಡಲಾಗಿ, ಬಂದಂಥಾ ಪಾಛಾಯಿಯು ವೀರಬಲ್ಲಾಳನ ಸಂಗಡ ಯುದ್ಧವನ್ನು ಮಾಡಲಾರದೆ ನಾಲ್ಕು ಯೋಜನದ ಆಚೆಗೆ ಹಿಂದಕ್ಕೆ ಹೋಗಿ, ತನ್ನ ಮಂದಿ ಕುದುರೆ ಮುಂತಾದ ಚತುರಂಗ ಮಾರ್ಬಲವನೂ ಸಹವಾಗಿ ದಂಡನ್ನು ಬಿಟ್ಟುಕೊಂಡನು.

ಇತ್ತಲಾಗಿ ಈ ವೀರಬಲ್ಲಾಳರಾಯನ ಅಕ್ಕನು ದಕ್ಷಿಣದೇಶದಲ್ಲಿ ಚಂದಿಚಂದಾವರಾ ಎಂಬುವಂಥಾ ಪಟ್ಟಣದಲ್ಲಿ ಲಕ್ಕಣ್ಣ ವೀರಣ್ಣ ಎಂಬುವಂಥಾ ಇಬ್ಬರು ಮಕ್ಕಳು ಸಹಿತವಾಗಿ ಇದ್ದುಕೊಂಡು ಇದ್ದಂಥಾವಳು. 'ಈ ದ್ವಾರಾಪುರಿಗೆ ಪಾಛ್ಚಾಯಿ ದಂಡು ಯತ್ತಿ ಬಂದುಯಿದಾನೆ'ಂಬ ವರ್ತಮಾನ ಕೇಳಿ, ತನ್ನ ಮಕ್ಕಳನ್ನು ಕರೆದುಕೊಂಡು ತಮ್ಮನಾದ ವೀರಬಲ್ಲಾಳರಾಯನ ನೋಡುವ ಬಗ್ಗೆ ಅಂಕಣ[>ಅಕ್ಕ]ನಾದ ವೀರಬಲ್ಲಾಳದೇವಿಯು ಈ ದ್ವಾರಪುರಿಗೆ ಬಂದು, ತನ್ನ ತಮ್ಮನ ಮನೆಯಲ್ಲಿ ಇರುತ್ತಾ ಇದ್ದಲ್ಲಿ, ಒಂದಾನೊಂದು ದಿವಸದಲ್ಲಿ ವೀರಬಲ್ಲಾಳನು ಮಂದಿ ಮಾರ್ಬಲ

ಸಮೇತವಾಗಿ ಬೇಂಟೆಯನಾಡುವುದಕ್ಕೆ ಹೊರಟು ಹೋದನು. ಆ ಸಮಯದಲ್ಲಿ ಬಲ್ಲಾಳರಾಯನ ಕಿರಿ ಹೆಂಡತಿಯು ಅತ್ತಿಗೆಯಾದ ಬಲ್ಲಾಳದೇವಿಯ ಮಕ್ಕಳು ಚಿಕ್ಕವರಿಬ್ಬರು ಲಕ್ಕಣ್ಣ ವೀರಣ್ಣ ಎಂಬುವರು ಅತಿ ಸವುಂದರ್ಯಪುರುಷರಾಗಿ ಇದ್ದ ಕಾರಣ, ಅವರ ಮೇಲೆ ಭ್ರಮಿಸಿ, ಅವರನ ಗೋಪ್ಯದಲ್ಲಿ ಕರದು, "ಈಗಲಾದರೆ ದೊರೆ ಸ್ವಾರಿ ಹೋಗಿದಾನೆ, ನಿಮ್ಮ ಮೇಲೆ ಬಹಳ ದಿವಸದಿಂದಾ ನನಗೆ ಭ್ರಮೆಯುಂಟು, ಈ ಸಮಯದಲ್ಲಿ ನೀವು ನನ್ನ ಮನಿಗೆ ಬಂದು ಕಾಮಕ್ರೀಡೆಯಲಿ ನಾಲ್ಕು ಘಳಿಗೆ ಇರಿ" ಎಂಬದಾಗಿ ನಾನಾ ಪ್ರಕಾರ ಒಡಂಬಡಿಕೆ ಮಾಡಿದಾಗ್ಯೂ ಆ ಲಕ್ಕಣ್ಣ ವೀರಣ್ಣನು ಆ ನುಡಿಗಳಿಗೆ ಒಳಗಾಗದೆ. "ಈ ಮಹಾಪಾತಕಕ್ಕೆ ಗುರಿಯಾಗುವರಲ್ಲಾ. ನೀವು ನಮ್ಮ ಮಾತೃ ಸಮಾನವೇ ಹೊರತು ಬದಲುಂಟೇ?" ಎಂದು ಹೇಳಿದರಿಂದಾ "ನನ್ನ ಮಾತು ನೀವು ಕೇಳಿದರೆ ಸರಿ. ಇಲ್ಲವಾಯ್ತೆ ನಿಮ್ಮ ಇಬ್ಬರನ್ನು ಶೂಲಪ್ರಾಪ್ತಿ ಮಾಡಿಸುತ್ತಾ ಇದ್ದೇನೆಂ"ಬುದಾಗಿ ಆಕೆಯು ಹೇಳಲು, "ಹಾಗಾದರೂ ಚಿಂತೆಯಿಲ್ಲ, ಮಾತೃದ್ರೋಹಕ್ಕೆ ನಾವು ಒಳಗಾಗುವರಲ್ಲ" ಎಂಬದಾಗಿ ಹೇಳಿ ಆಕೆಯ ಕೈಯಿಗೆ ಸಿಕ್ಕದೆ ಓಡಿಹೋದರು.

ಆ ತರುವಾಯ ಬಲ್ಲಾಳರಾಯನ ಹೆಂಡತಿಯು ಈ ಅಳಿಯಂದಿರು ತನಗೆ ವಶವಾಗಲಿಲ್ಲವಾದ್ದರಿಂದ ಇತಿ ಕ್ಲೇಶಬಟ್ಟು, "ಯಾವ ತರಹದಿಂದಲಾದರು ಈ ಇಬ್ಬರನ್ನು ಶೂಲಪ್ರಾಪ್ತಿ ಮಾಡಿಸದೇ ಬಿಡೆನು" ಎಂಬದಾಗಿ ಛಲವ ತೊಟ್ಟು, "ಇದಕ್ಕೆ ಏನು ಯತ್ನಾ ಮಾಡಲಿ" ಎಂದು ತನ್ನ ಮನಸ್ಸಿನಲ್ಲಿ ಯೋಚಿಸಿಕೊಂಡು, "ಕೊಮಾರ ರಾಮನಿಗೆ ರತ್ನಿ ಬ್ಯಾಗನೆ ಹ್ಯಾಗೆ ಮಾಡಿದಳೊ ಹಾಗೆ ಮಾಡುತ್ತೇನೆ" ಎಂಬದಾಗಿ ತನ್ನ ಅಂಗಾಂಗಗಳನ್ನು ತನ್ನ ನಖಗಳಿಂದಾ ಘಾಯಗಳ ಮಾಡಿಕೊಂಡು, ಮಲಿನ ವಸ್ತ್ರವನುಟ್ಟುಕೊಂಡು, ತಲೆಯನ್ನು ಕೆದರಿಕೊಂಡು, ಅಂತಃಪುರದಲ್ಲಿ ಹಾಸಿಗೆ ಹೊದ್ದದನೇ ನೆಲದ ಮೇಲೆ ಮೊಖಾಡೆಯಾಗಿ, ಕಣ್ಣುನಿಂದಾ ಧಾರಾರ್ಥವಾಗಿ ನೀರು ಸುರಿಸುತ್ತಾ, ಸಂತೋಸವರ್ಜಿತಳಾಗಿ ಅತಿ ದುಃಖದಿಂದಾ ಮಲಗಿದ್ದಳೂ.

ಇತ್ತಲಾ ಬಲ್ಲಾಳರಾಯನು ಬೇಂಟೆಯನಾಡಿಕೊಂಡು ಅಸ್ತಮಯ ಸಮಯಕ್ಕೆ ಪಟ್ಟಣಪ್ರವೇಶವಾಗಿ ಅರಮನಿಗೆ ಬಂದು ಕುಳಿತುಕೊಂಡು, ತನ್ನ ಮೋಹದ ಕಿರಿ ಹೆಂಡತಿಯನ್ನು ಕಾಣದೆ, ಅಂತಃಪುರಕ್ಕೆ ಹೋಗಿ ನೋಡಿದಲ್ಲಿ ವಿಕಾರಿಯಾಗಿ ಮಲಗಿರುವಂಥಾ ಹೆಂಡತಿಯನ್ನು ಕಂಡು, "ಇದೇನು ಆಶ್ಚರ್ಯ" ವೆಂದು ಹೆಂಡತಿಯನ್ನು ಕೇಳಿದಲ್ಲಿ, ಆಗ ಆಕೆಯು ಅತಿದುಃಖಿತೆಯಾಗಿ ಮಾತನಾಡದೇ ಇದ್ದ ಕಾರಣ. "ನಿನ್ನ ಮನಸ್ಸಿನಲ್ಲಿ ಇದ್ದ ಹಾಗೆ ನಡದುಕೊಳ್ಳುತ್ತಾ ಇದೇನೆ" ಎಂಬದಾಗಿ ಹೇಳಿದರಿಂದಾ, ಆಗ್ಗೆ ತನ್ನ ಗಂಡನ ಸಂಗಡ ಅಭಯವನ್ನು ತೆಗೆದುಕೊಂಡು, "ನಿನ್ನ ಅಳಿಯಂದಿರು ನೀನು ಹೊರಟುಹೋದ ಸಮಯ ನೋಡಿ, ತನ್ನ ವಯೋರೂಪು ಲಾವಣ್ಯವಂ ಕಂಡು, ಅವರು ಸೈರಿಸಲಾರದೆ ಬಲಾತ್ಕಾರದಿಂದಾ ತನ್ನ ಮೈ ಕೈ ಹಿಡಿದು, ತಾನು ವಶವಾಗದೇ ಇದ್ದ ಕಾರಣ, ಶರೀರ ಯಾವತ್ತನ್ನು ಘಾಯಗಳ ಮಾಡಿಬಿಟ್ಟು ಹೋದರು. ಆದಕಾರಣ ಅವರ ಮುಖಾವಲೋಕನವ ಮಾಡಬಾರದು. ಈ ಕ್ಷಣವೇ ಅವರನ್ನು ಶೂಲಕ್ಕೆ ಹಾಕಿಸಿದರೆ ಸರಿ, ಇಲ್ಲವಾಯ್ತೆ ನಾನು ಪ್ರಾಣತ್ಯಾಗವ ಮಾಡಿಕೊಳ್ಳುತ್ತ ಇದ್ದೇನೆ" ಎಂಬದಾಗಿ ಹೇಳಿದ ಕಾರಣ, ಈ ಮಾತು ಕಿವಿಗೆ ಬೀಳಲು ಅತಿಕೋಪಾಟೋಪದಿಂದಾ ಪಾಪಪುಣ್ಯಗಳನು ನೋಡದೆ, ಅವರು ಈ ದುರ್ವರ್ತನೆಯನ್ನು ಮಾಡಿದರೊ ಇಲ್ಲವೊ ಎಂಬದನ್ನು ತಾ ವಿಚಾರಿಸದೆ, ಆ ಕ್ಷಣದಲ್ಲಿಯೆ "ಆ ಲಕ್ಕಣ್ಣ ವೀರಣ್ಣ ಎಂಬುವಂಥಾ ಸೋದರ ಅಳಿಯಂದಿರನ ಎಳಕೊಂಡು ಹೋಗಿ ಶೂಲಕ್ಕೆ

ಹಾಕಿಬಿಡಿ" ಎಂದು ಚರರಿಗೆ ನೇಮಿಸಲಾಗಿ, ಆ ಚರರು ಅರಸಿನ ಆಜ್ಞೆಯ ಮೀರದ ಕಾರಣ ಆ ಕ್ಷಣದಲ್ಲಿಯೇ ಅವರನ ಎಳಕೊಂಡು ಬಂದು, ಪುನಹ ಅಪ್ಪಣೆಯನ್ನು ಕೇಳಿದಲ್ಲಿ, ಮತ್ತು ಅದೇ ಪ್ರಕಾರಕ್ಕೆ ಅಪ್ಪಣೆ ಕೊಟ್ಟ ಕಾರಣ, ಈ ಪಟ್ಟಣಕ್ಕೆ ದಕ್ಷಿಣದಿಕ್ಕಿನಲ್ಲಿರುವ ಭೈರವಬೆಟ್ಟಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಶೂಲದ ಮರಗಳ ನೆಡಿಸಿ, ಪುನಹ ಆ ಚರರು ಬಂದು ಅಪ್ಪಣೆಯನ್ನು ಕೇಳಲಾಗಿ, ಮತ್ತೂ ಕೋಪದಿಂದಾ "ಈ ಕ್ಷಣವೇ ಹಾಕಿಬಿಡಿ" ಎಂದು ಅಪ್ಪಣೆ ಕೊಟ್ಟಿದ್ದರಿಂದಾ, ಆ ಚರರು ಈ ಲಕ್ಕಣ್ಣ ವೀರಣ್ಣನ ಸಹಾ ಹಿಡಕೊಂಡು ಬಂದು ಶೂಲದ ಮರಕ್ಕೆ ಏರಿಸಿ ಬಿಟ್ಟು ಬಂದು, "ದೊರೆಯೇ ಹಾಕಿಬಿಟ್ಟವೆಂ"ಬದಾಗಿ ಹೇಳಿದಲ್ಲಿ "ಒಳ್ಳೆದಾಯ್ತು" ಎಂತ ಸಂತೋಷಬಟ್ಟಂತಾವರಾದರು.

ಅನಂತರದಲ್ಲಿ ಈ ಸಮಾಚಾರವನ್ನು ಈ ಲಕ್ಕಣ್ಣ ತಾಯಿ ಬಲ್ಲಾಳದೇವಿಯು ಕೇಳಿ, ಅತಿ ದುಃಖಿತೆಯಾಗಿ ನಿರಾಪರಾಧಿಗಳಾದಂಥಾ ತನ್ನ ಮಕ್ಕಳನ್ನು ತನ್ನ ತಮ್ಮನಾದ ಬಲ್ಲಾಳರಾಯನು ಶೂಲಕ್ಕೆ ಹಾಕಿಸಿಬಿಟ್ಟನೆಂದು, ಅಂಥಾ ಮಕ್ಕಳು ಹೋದ ಮೇಲೆ ತನ್ನ ಶರೀರವನ್ನು ಇಟ್ಟುಕೊಂಬುವಂಥಾದ್ದು ಇಲ್ಲ. ತಾನು "ತನ್ನ ಮಕ್ಕಳು ಬಿದ್ದಂಥಾ ಶೂಲಕ್ಕೆ ಬೀಳುತ್ತೇನೆ" ಎಂದು ಆ ಪಟ್ಟಣ ರಾಜಬೀದಿ ಮುಂತಾದ ಸಮಸ್ತ ಬೀದಿಯಲ್ಲು ವದನತ್ರಾಡನ ಮಾಡಿಕೊಂಡು, ಕುಂಬಾರರು ಇರುವಂಥಾ ಬೀದಿಗೆ ಬರುವಲ್ಲಿ ಶ್ರಮದಿಂದಾ ಅತಿದಾಹವಾದ ಕಾರಣ, "ಎಲ್ಯೆ ಪುಣ್ಯಾತ್ಮರಿರಾ ನನಗೆ ದಾಹವಾಗುತ್ತಾ ಇದೇ. ನಾನಾದರೆ ಶೂಲಕ್ಕೆ ಬೀಳುತ್ತಾ ಇದೇನೆ. ನೀರನಾದರು ತೆಗೆದುಕೊಂಡು ಸತ್ತೇನು" ಎಂಬದಾಗಿ ಈ ಬಲ್ಲಾಳದೇವಿಯು ಕೇಳಿದಲ್ಲಿ, ಅದರಲ್ಲಿ ಒಬ್ಬ ಕುಂಬಾರನು ಅತಿ ಸಂತೋಷಬಟ್ಟು "ನಿರಪರಾಧಿಗಳಾದ ನಿನ್ನ ಮಕ್ಕಳನ್ನು ಅತಿ ಕ್ರೂರದಿಂದಾ ಹೆಂಡತಿಯ ಮಾತ ಕೇಳಿ ಅರಸು ಶೂಲಕ್ಕೆ ಹಾಕಿಸಿಬಿಟ್ಟನೆಂ"ದು ಅವನು ಬಹುದುಃಖಿತನಾಗಿ, "ತಾಯೆ ತಾಪವ ಪರಿಹರಿಸಿಕೊ" ಎಂದು ಒಳ್ಳೆ ಗಂಗೋದಕವನ್ನು ತಂದುಕೊಟ್ಟಲ್ಲಿ, ಆಕೆಯು ಆ ಗಂಗೋದಕವನ್ನು ತೆಗೆದುಕೊಂಡು ತನ್ನ ದಾಹ ಶಾಂತವಾದ ಬಳಿಕ ಶಾಪವ ಕೊಟ್ಟದು : "ಈ ಪಟ್ಟವು ಹಾಳಾಗಲಿ, ಕುಂಬಾರಬೀದಿ ಮಾತ್ರ ಊರಾಗಲಿ" ಎಂದು ಶಾಪವನಿತ್ತು ಮಕ್ಕಳನ್ನು ಅರಸಿಕೊಂಡು ಭೈರವನಬೆಟ್ಟಕ್ಕೆ ಹೋಗಿ, ಮಕ್ಕಳು ಬಿದ್ದುಯಿರುವಂಥಾ ಶೂಲದ ಮರವನ್ನು ಕಂಡು, ತಾನು ಆ ಶೂಲದ ಮರವನ್ನು ಹತ್ತಿ "ನಾನು ಸತ್ಯವಂತೆ ಆದರೆ ಈ ಶೂಲದ ಮರವು ಈ ಪಟ್ಣದ ಊರ ಮುಂದಕ್ಕೆ ನಡೆಯಲಿ" ಎಂಥಾ ಹೇಳಿಬಿಟ್ಟು, ಆಕೆಯು ಆ ಶೂಲಕ್ಕೆ ಬಿದ್ದಳು.

ಅನಂತರದಲ್ಲಿ ಈ ವೃತ್ತಾಂತ ಯಾವತ್ತನ್ನು ಎರಡು ಯೋಜನದ ಮೇಲೆ ಇಳಿದುಕೊಂಡು ಇರುವಂಥಾ ಪಾಥೆಯು ಕೇಳಿ, "ನಮಗೆ ಇದೇ ಸಮಯವು. ನಿರಪರಾಧಿಗಳಾದ ಮಕ್ಕಳನ್ನು ಶೂಲಕ್ಕೆ ಹಾಕಿಸಿದ ಕಾರಣ, ಆ ಬಲ್ಲಾಳದೇವಿಯು ಶಾಪವನ್ನು ಕೊಟ್ಟು ಇದಾಳೆ. ಆ ಬಲ್ಲಾಳರಾಯಗೆ ಮೃತ್ಯು ಬರುವಂಥಾ ಸಮಯವಾಯ್ತು. ಈ ವ್ಯಾಳದಲ್ಲಿ ಈ ಪಟ್ಣಕ್ಕೆ ಮುತ್ತಿಗೆ ಹಾಕಿದರೆ ನಮಗೆ ಜಯಪ್ರದವಾದೀತು" ಎಂಬದಾಗಿ ಯೋಚಿಸಿ, ತನ್ನ ಮಂದಿ ಮಾರ್ಬಲ ಯಾವತ್ತನ್ನು ತೆಗೆದುಕೊಂಡು ಬಂದು, ಈ ಪಟ್ಣಕ್ಕೆ ಮುತ್ತಿಗೆ ಹಾಕಿದಲ್ಲಿ ಈ ಬಲ್ಲಾಳರಾಯನು ತಿಳಿದು, ಮೊದಲಿನ ಹಾಗೆ ತನಗೆ ಜಯಪ್ರದವಾದೀತು, ಎಂದು ತಾನೇ ಯೋಚಿಸಿಕೊಂಡು, ತನ್ನ ಮಾರ್ಬಲ ಸಹಿತವಾಗಿ ಪಟ್ಣವ ಹೊರವಟ್ಟು, ಆ ಪಾಥಾಯನ ದಂಡಿನ ಮೇಲೆ ಯುದ್ಧವ ಮಾಡಲಾಗಿ, ಈ ಬಲ್ಲಾಳದೇವಿಯನಿತ್ತ ಶಾಪದ ನಿಮಿತ್ಯದಿಂದಾ ಈ ಬಲ್ಲಾಳರಾಯಗೆ ಸತ್ವಕುಂದಿ ಅಧೈರ್ಯ ಹುಟ್ಟಿದ ಕಾರಣ, ಈ

ರಾಯನು ತಾ ನಿಂತು ಯುದ್ಧವ ಮಾಡದೆ ಅಪಜಯದಿಂದ ಚಂದ್ರದ್ರೋಣ ಪರ್ವತದ ಕಡೆಗೆ ತನ್ನ ಮಾರ್ಬಲವನ್ನು ಕಟ್ಟಿಕೊಂಡು ಓಡಿ ಹೋಗಲಾಗಿ, ಈ ಪಾಛಾಯು "ಬಲ್ಲಾಳರಾಯನ ಹಿಡಿದೇ ಹೊರ್ತು ಬಿಡುವದಿಲ್ಲ"ವೆಂದು ಪ್ರತಿಜ್ಞೆಯಂ ಮಾಡಿಕೊಂಡು, ಆತನ ಬೆನ್ನ ಹತ್ತಲಾಗಿ ಈ ಬಲ್ಲಾಳರಾಯನು ನಿರ್ವಹಿಸಲಾರದೆ "ಚಂದ್ರದ್ರೋಣಪರ್ವತಕ್ಕೆ ಹತ್ತಬೇಕು" ಎಂದು ಹತ್ತಲಾಗಿ, ಆ ಪರ್ವತದಲ್ಲಿ ಸೂಚಿಕಲ್ಲುಗಳುಂಟಾಗಿ ಇದ್ದಕಾರಣ, ಆ ಕುದುರೆಯ ಕಾಲ್ಗಳಲ್ಲಿ ಕಬ್ಬಿಣದ ಹಲ್ಲೆಗಳು ಕಟ್ಟಿದವು. ಕುದುರೆಗಳು ಪರ್ವತವ ಹತ್ತುವದಕ್ಕೆ ಸೂಚಿಕಲ್ಲುಗಳು ಬಂಧಿಸುವದಾದ ಕಾರಣ, ಆ ಕುದುರೆಗಳು ಹತ್ತಲಾರದೆ ನಿಲ್ಲಲಾಗಿ, ಈ ವಿವರಗಳನ್ನು ಬಲ್ಲಾಳರಾಯನು ತಿಳಿದು, ಆ ಲೋಹದ ಹಲ್ಲೆಗಳನ್ನು ಕೀಳಿಸಿಬಿಟ್ಟು ಸುವರ್ಣದ ಹಲ್ಲೆಗಳನ್ನು ಮಾಡಿಸಿ, ಕುದುರೆಗಳ ಕಾಲುಗಳಿಗೆ ಹಾಕಿಸಿಬಿಟ್ಟು, ಪವುಜು ಸಹ ಚಂದ್ರದ್ರೋಣಪರ್ವತಕ್ಕೆ ಹತ್ತಲಾಗಿ, ಈ ಪಾಛಾಯಿ "ಈ ಬಲ್ಲಾಳರಾಯನ ಹಿಡಿದ ಹೊರ್ತು ಬಿಡುವುದು ಇಲ್ಲಾ" ಎಂಬದಾಗಿ ಪ್ರತಿಜ್ಞೆಯ ಮಾಡಿಕೊಂಡು, "ಎಲಾ ಬಲ್ಲಾಳರಾಯನೇ ನೀನು ಭೂಮಿಯನ್ನು ಬಗೆದು ಹೊಕ್ಕರೂನೆ ಬಿಡುವುದಿಲ್ಲಾ. ಈ ಬಗ್ಗೆ ನಾನು ಪ್ರತಿಜ್ಞೆಯನ್ನು ಮಾಡಿಯಿದ್ದೇನೆ. ನೀನು ಎಲ್ಲಿ ಹೋದಿ" ಎಂದು ಅಟ್ಟಿಕೊಂಡು ಹೋದಲ್ಲಿ, ಬಲ್ಲಾಳರಾಯನು ಬಹು ಬಳಲಿ ಧೈರ್ಯಕುಂದಿ, ಅಲ್ಲಿ ಭೂಮಿದೇವಿಯನ್ನು ಪ್ರಾರ್ಥನೆಯನ್ನು ಮಾಡಿಕೊಂಡು "ಏ ತಾಯೇ ಭೂದೇವಿಯೇ, ನನ್ನ ನಿನ್ನಲ್ಲಾದರೂ ಇಟ್ಟುಕೊ" ಎಂದು ಬಹಳವಾಗಿ ಸ್ತೋತ್ರವಂ ಮಾಡಲಾಗಿ, ಭೂದೇವಿಯು ಬಲ್ಲಾಳರಾಯನ ಮೇಲೆ ಕರುಣಕಟಾಕ್ಷವಿಟ್ಟು ಬಾಯ್ದೆಗೆದು ಮಾರ್ಗವ ಕೊಡಲು, ಈ ಬಲ್ಲಾಳರಾಯನು ತನ್ನ ಮಾರ್ಬಲ ಸಹವಾಗಿ ತಾನು ಭೂಮಿವಳಯಿಂಕೆ ಹೋದನು. ತದನಂತರದಲ್ಲಿ ಆ ಭೂದೇವಿಯು ಮಾರ್ಗವ ಮುಚ್ಚಿಕೊಂಡುಬಿಟ್ಟಳು.

ಗವಾಕ್ಷಿಯೋಪಾದಿಯಲ್ಲಿ ದ್ವಾರ ಮಾತ್ರ ಕಾಣುತ್ತಾ ಇದೆ. ಹಿಂದಳಿಂದ ಅಟ್ಟಿಕೊಂಡು ಬಂದಂಥಾ ಪಾಛಾಯಿಯು ಈ ಬಲ್ಲಾಳರಾಯನು ಹೋದಂಥಾ ಮಾರ್ಗವನ್ನೇ ನಿರೀಕ್ಷಿಸಿಕೊಂಡು ಅಲ್ಲೇ ಕಾದುಕೊಂಡು, ಕೆಲವು ದಿನ ಇದ್ದುಕೊಂಡು ಇರುತ್ತಾ ಇರುವಾಗ್ಗೆ, ಅಲ್ಲೇ ದೈವಾಧೀನನಾದನು. ಆ ಬಳಿಕ ಅವಗೆ ಅಲ್ಲೆ ಗೋರಿ ಮಾಡಿಬಿಟ್ಟರು. ತದನಂತರ ಪಾದಾಶಾಯಿ ಕಡೆಯ ಮಂತ್ರಿಪ್ರಧಾನಿಗಳು ಉಳಿದಂಥಾ ಮಂದಿ ಮಾರ್ಬಲವನ್ನು ಕರದುಕೊಂಡು, ತಮ್ಮ ಸ್ಥಳವಾದ ಡಿಲ್ಲಿಗೆ ಹೋದರು. ತದನಂತರ ಇತ್ತಲಾಗಿ ಈ ದ್ವಾರಾಪುರಿಯು ಖಿಲವಾಗಿ ಹೋಗಿ ಈ ಕುಂಬಾರಬೀದಿ ಮಾತ್ರ ಊರಾಗಿ, ಹಳೆಬೀಡೆಂಬ ನಾಮಧೇಯವಾಯ್ತು.

ಈಚೆಗೆ ವಿಜಯನಗರ ಸಂಸ್ಥಾನವನ್ನು ವಿದ್ಯಾರಣ್ಯರು ಉದ್ಧಾರ ಮಾಡಿ, ಕ್ಷತ್ರಿಯ ವಂಶದ ಚಿ[>ಹು]ಕ್ಕ ಬುಕ್ಕರಾಯರೆಂಬುವರಿಗೆ ಪಟ್ಟವ ಕಟ್ಟಿದರು. ಆ ಬಳಿಕ ಆ ರಾಯರು ಅನೇಕ ಸಂಸ್ಥಾನವನ್ನು ಕಟ್ಟಿದರು. ಆ ವಂಶದವರು ಹರಿಹರಮಹಾರಾಯ ಬುಕ್ಕರಾಯರು ಅನೇಕ ಗ್ರಾಮಗಳ ಬಿಟ್ಟರು. ಅನೇಕ ಅಗ್ರಹಾರಗಳ ಕಟ್ಟಿಸಿ ಸ್ವಾಸ್ತಿಗಳಿಂದ ಬಿಟ್ಟರು. ಅವರ ಸಂತತಿ ಅಚ್ಯುತರಾಯರು, ಕೃಷ್ಣರಾಯರು, ಶ್ರೀರಂಗರಾಯರು ಸಂಸ್ಥಾನವ ಆಳಿದರು. ಆ ಸಂಸ್ಥಾನದೊಳಗೆ ಬೇಲೂರು ಮೂರು ಲಕ್ಷ ಸೀಮೆಯ ವಿಂಗಡಿಸಿ, ವೀಣೆ ಅನಂತಯ್ಯಗೆ ಇನಾಮು ಕೊಟ್ಟು, ಆ ಅನಂತಯ್ಯನಿಂದಾ ನಿರ್ವಾಹವಿಲ್ಲದೇ ಮನಹಾ ರಾಯರಿಗೆ ಹೇಳಿಕೊಂಡಲ್ಲಿ, ತಮ್ಮ ಕಡೆಯಿಂದಾ ಊಳಿಗದ ವೆಂಕಟಾದ್ರಿನಾಯಕನ ಕಳುಹಿಸಿದರು. ಈ ವೆಂಕಟಾದ್ರಿನಾಯಕರು ಈ ಅನಂತಯ್ಯನವರ

ಕೈಯಿಂದಾ ಕ್ರಯಕ್ಕೆ ತೆಗೆದುಕೊಂಡು ಇರುತ್ತಾ ಇದ್ದಲ್ಲಿ, ಅದರನ ಇಕ್ಕೇರಿಯವರು ಕಟ್ಟಿಕೊಂಡು, ಪುನಹ ವಿಜಯನಗರ ಸಂಸ್ಥಾನವನ್ನು ಪಾಭಾಯಿ ತೆಗೆದುಕೊಳ್ಳಲಾಗಿ, ಶ್ರೀರಂಗರಾಯರು ಹೊರಟುಬಂದು ಇಕ್ಕೇರಿಯವರಿಗೆ ಹೇಳಿಕಳುಹಿಸಲಾಗಿ, ನಾರ[>ಶಿವ]ಪ್ಪನಾಯ್ಕನು ಶ್ರೀರಂಗನಾಯ್ಕನ ಕರೆದುಕೊಂಡುಬಂದು, ಈ ಬೇಲೂರು ಸಂಸ್ಥಾನವನ್ನು ಕೊಟ್ಟನು. ಪುನಹ ಪಾಭಾಯ ಬಗೆ ಮಹಿಸನ್ ಖಾನ್ ಎಂಬವನು ಬಂದು, ಏಳು ವರುಷ ಆಳಿದನು. ಪುನಹ ಇಕ್ಕೇರಿಯವರು ಕಟ್ಟಿಕೊಂಡರು. ಇವರಿಂದ ಮಹಿಸೂರವರು ಕಟ್ಟಿಕೊಂಡು ಇದ್ದಾರೆ. ಮಂಗಳ ಮಹಾಶ್ರೀ.

❖❖

೪೭

ಹಾರನಹಳ್ಳಿ ಕೈಫಿಯತ್ತು

ಮೆಕೆಂಝಿ ಸಂಪುಟ : ೨೯೧

ಪೂರ್ವದಲ್ಲಿ ನೈಮಿಶಾರಣ್ಯವಾಸಿಗಳಾದ, ಚಂದ್ರದ್ರೋಣಪರ್ವತಕ್ಕೆ ಪೂರ್ವಭಾಗ ಹಿಮಗಿರಿವಾಸಿಗಳಾದ ವಶಿಷ್ಟರುಶಿಗಳು ಜನಾರ್ದನಮೂರ್ತಿಯನ್ನು ಆರಾಧನೆ ಮಾಡಿಕೊಂಡು ಯಿರುತ್ತಾ ಯಿದ್ದಲ್ಲಿ, ಶ್ರೀರಾಮಚಂದ್ರದೇವರು ಪಿತೃವಾಕ್ಯಪರಿಪಾಲನಾರ್ಥವಾಗಿ ಪಟ್ಟಾಭಿಷೇಕವನ್ನು ಬಿಟ್ಟು, ಸೀತಾಲಕ್ಷಣಸಮೇತವಾಗಿ ಅಯೋಧ್ಯಾಪಟ್ಟಣದಿಂದ ಪಂಚವಟಿ ತೀರಕ್ಕೆ ಬಂದು ಯಿದ್ದಲ್ಲಿ, ರಾವಣನು ಮಹಾವೇಷವನ್ನು ಮಾಡಿಕೊಂಡು ಬಂದು, ಸೀತಾಅಮ್ಮನವರನ್ನು ಅಪಹರಿಸಿಕೊಂಡು ಲಂಕಾಪಟ್ಟಣಕ್ಕೆ ಹೋದ ತರುವಾಯ, ಶ್ರೀರಾಮಚಂದ್ರದೇವರು ಲಕ್ಷಣಸ್ವಾಮಿಸಹಿತ ಸೀತಾಅಮ್ಮನವರ ಕಾಣದೇ ಬಹಳ ವ್ಯಾಕುಲದಿಂದ ಅರಸುತ್ತಾ ದಂಡಕಾರಣ್ಯಮುಖವಾಗಿ ದಕ್ಷಿಣದೇಶವನ್ನು ಸಂಚಾರ ಮಾಡುತ್ತ ಪಶ್ಚಿಮದೇಶಕ್ಕೆ ಬರುವಲ್ಲಿ.

ಶ್ಲೋಕಾ॥ ಬಹು ಜಾಲಮುಪಾಸೀಯಂ, ಬಹುವೃಕ್ಷ ಮೃಗಾಶ್ರಯಂ, ಬಹುಜನಮಸಕ್ಯಂ ಚ ಪಶ್ಚಿಮಂತ್ಯಂ ಜರಾಯತೇ॥

ಯಂಬ ರೀತಿಯಲ್ಲಿ ಲಕ್ಷ್ಮಣಸ್ವಾಮಿಯವರು ಅರಿಕೆ ಮಾಡಿಕೊಂಡ ಕಾರಣ, ಆ ಪಶ್ಚಿಮದೇಶವನ್ನು ಬಿಟ್ಟು ದಕ್ಷಿಣದಿಕ್ಕಿಗೆ ಬರುತ್ತ ಯಿದ್ದಲ್ಲಿ, ತಮ್ಮ ಗುರುಗಳಾದ ವಶಿಷ್ಟರುಷಿಗಳನ್ನು ಕಂಡು, ಹಿಂದೆ ನಡೆದ ವೃತ್ತಾಂತವನ್ನು ಹೇಳಿ ದಕ್ಷಿ[ಷಾ]ಣಾಭಿಮುಖವಾಗಿ ಹೋಗುತ್ತ ಯಿದ್ದಲ್ಲಿ, ಯೀ ಹಿಮಗಿರಿಪರ್ವತಕ್ಕೆ ದಕ್ಷಿಣದಿಕ್ಕು ವಂದು ಹರದಾರಿಯಲ್ಲಿ ಕಳಲೂರ್ರು ಯಂಬ ಗ್ರಾಮದ ಬಳಿ ಗಂಟಾ. . . . ಶಕ್ರಮುನಿಯಂಬ ಋಷಿ ಯಜ್ಞವನ್ನು ಮಾಡಿ, ಅಗಸ್ತ್ಯಋಷಿಗಳು ಮುಂತಾಗಿ

ಯಿರುತಾ ಯಿದ್ದದರಿಂದ ಶ್ರೀರಾಮಚಂದ್ರದೇವರು ದರುಶನವನ್ನು ಕೊಟ್ಟು, ಮುಂದಕ್ಕೆ ಚಿತ್ತೈಸಿದ ತರುವಾಯ, ರುಷಿಯು ಯಿದಕ್ಕೆ ಪಶ್ಚಿಮದಿಕ್ಕಿನಲು ವಂದು ಹರದಾರಿಯಲ್ಲಿ ಕೈಲಾಸಮಲ್ಲೇಶ್ವರನೆಂಬ ಲಿಂಗವು ಉದ್ಭವವಾಗಿದ್ದ ಕಾರಣ, ಯೀ ದೇವರ್‍ರ ಆರಾಧನೆಯನ್ನು ಮಾಡಿಕೊಂಡು, ಈ ಆಶ್ರಮದಲು ತಪಸ್ಸು ಮಾಡಿಕೊಂಡು ಯಿರುತಯಿದ್ದ ತರುವಾಯ, ಕಲಿಯುಗಕ್ಕೆ ಆದಿಯಾಗಿ ನಡದ ವಿವರ:

ಧರ್ಮರಾಯನ ವಂಶದ ಸಾವಂತ ಪರೀಕ್ಷಿತರಾಯನು ಕಲ್ಲಿಕಟಿ ಧರ್ಮದಿಂದ ರಾಜ್ಯದ ಪರಿಪಾಲನೆಯನ್ನು ಮಾಡಿದನು. ಅನಂತರದಲ್ಲಿ ಅವನ ಮಗ ಜನಮೇಜಯರಾಯ, ಅವನ ಮಗ ಮಗುಟವರ್ಧನರಾಯ, ಅವನ ಮಗ ರಾಜನರೇಂದ್ರರಾಯ. ಅವನ ಮಗ ಕ್ಷೇಮಕರಾಯ, ಅವನ ಮಗ ಹರಿಚಂದ್ರರಾಯ, ಅವನ ಮಗ ಸಾರಂಗಧರರಾಯ ಮುಂತಾದವರು ಹಸ್ತಿನಾಪಟ್ಟಣದಲ್ಲಿ ಪಟ್ಟಾಭಿಷೇಕವನ್ನು ಮಾಡಿಕೊಂಡು, ಆಸೇತ್ತು ಹಿಮಾಚಲ ಪರಿಯಂತ್ರ ರಾಜ್ಯಭಾರ ಮಾಡಿದನು.

ಆ ತರುವಾಯ ಉಜ್ಜನಿಪಟ್ಟಣದಲ್ಲಿ ವಿಕ್ರಮಾದಿತ್ಯರಾಯರು ಸಿಂಹಾಸನಾರೂಢರಾಗಿ ೧. ವಿದ್ಯಾಪರ್ವತ ಆದಿಯಾಗಿ ದಕ್ಷಿಣದೇಶವನ್ನು ಧರ್ಮದಿಂದ ಪರಿಪಾಲಿಸಿದನು. ಯೀಚಿಗೆ ಶಾಲಿವಾಹನ ಶಕೆಯಲ್ಲಿ ರಾಜ್ಯ ನಾಲ್ಕು ಭಾಗವಾಯಿತು.

೧ ವಿಜಯನಗರದಲ್ಲಿ ನರಪತಿ ಸಿಂಹಾಸನ

೧ ಸಾತ್ತಾದ್ರಿಪಟ್ಟಣದಲ್ಲಿ ಅಶ್ವಪತಿ ಸಿಂಹಾಸನ

೧ ಹಸ್ತಿನಾಪಟ್ಟಣದಲ್ಲಿ ಧನಪತಿ ಸಿಂಹಾಸನ

೧ ವೋರಂಗಲ್ಲಿಗೆ ಪ್ರತಿನಾಮದೇಹಿ[>ಧೇಯಿ]ಯಾದ ಮಹೇಂದ್ರಪಟ್ಟಣದಲ್ಲಿ ಪ್ರತಾಪರುದ್ರನ ಸಿಂಹಾಸನ

೪

ಯೀ ರೀತಿಯಲ್ಲಿ ದೇಶವನ್ನು ಪರಿಪಾಲನೆಯನ್ನು ಮಾಡುತ್ತ ಯಿದ್ದಲ್ಲಿ, ತದನಂತರ ವಿಜಯನಗರದಲ್ಲಿ ನರಪತಿಸಿಂಹಾಸನಕ್ಕೆ ಸಲ್ಲುವ ಹರಿಹರ ಸೋಮೇಶ್ವರರಾಯನ್ನು ಧರ್ಮದಿಂದಾ ರಾಜ್ಯಪರಿಪಾಲನೆಯನ್ನು ಮಾಡುತ್ತ ಯಿದ್ದಲ್ಲಿ, ವಂದಾನೊಂದು ದಿವಸ ತನ್ನ ರಾಜ್ಯವನ್ನು ನೋಡಬೇಕುಯಂದು ದಕ್ಷಿಣದೇಶ ಯಾವತನ್ನು ನೋಡಿಕೊಳ್ಳುತ್ತ, ಚಂದ್ರದ್ರೋಣಪರ್ವತಕ್ಕೆ ಪೂರ್ವದಿಕ್ಕಿನಲ್ಲಿ ಯಿರುವ ಅಮರಗಿರಿಪರ್ವತವನ್ನು ನೋಡಬೇಕು ಯೆಂದು ಬಂದು, ಯೀ ಅಮರಗಿರಿಪರ್ವತಾರೋಹಣವನ್ನು ಮಾಡಿ ಜನಾರ್ಧನಮೂರ್ತಿಯನ್ನು ಸಂದರುಷನ ಮಾಡಿಕೊಂಡು, ಗಿಡ ಬಹಳವಾಗಿ ಎಡ ಬಲ ಸುತ್ತ ಗಿಡ ಬೆಳೆದು ಕಾಂತಾರವಾಗಿ ಯಿದ್ದ ಕಾರಣ, ದೇವತಾಪೂಜೆಗೆ ಮನುಷ್ಯಸಂಚಾರವಿಲ್ಲಯಂಬದಾಗಿ ಯಾವತ್ತು ಗಿಡವನ್ನು ಕಡಿಶಿ, ದೇವತಾಪೂಜೆ ನಡೆವಂತೆ ಮಾಡಿಸಿ ಅಲ್ಲಿಂದ ದಕ್ಷಿಣದಿಕ್ಕಿಗೆ ಹರಿಹರಸೋಮೇಶ್ವರರಾಯನು ಸ್ವಾರಿ ಬಂದು, ಯೀ ಪರ್ವತಕ್ಕೆ ನೈರುತ್ಯದಿಕ್ಕಿನಲ್ಲಿ ದೇವರಾಯಪಟ್ಟಣಯೆಂಬ ಗ್ರಾಮ ಯಿದ್ದದರಿಂದ, ಯೀ ಗ್ರಾಮದ ಬಳಿಯಲ್ಲಿ ತನ್ನ ಪ್ರಧಾನರು ಮುಂತಾಗಿ ರಾತ್ರೆಯಲ್ಲಿ ಯಿಳಿದುಕೊಂಡು ನಿದ್ದೆಮಾಡುತ್ತಾ ಯಿದ್ದಲ್ಲಿ, ಹರಿಹರ ಸೋಮೇಶ್ವರರಾಯರಿಗೆ ಸ್ವಪ್ನ ಆದ ವಿವರಾ:

ಅಮರಗಿರಿಪರುವತದಿಂದ ಸಹಸ್ರ ಬ್ರಾಹ್ಮಣರು ಬಂದು ದೊರೆಯನ್ನು ಕಾಣಿಸಿಕೊಂಡ ಕಾರಣ, ಯೀ ಬ್ರಾಹ್ಮಣರಿಗೆ ವ್ರತ್ಯೇಕವಾಗಿ ಅವರ ಮರಿಯಾದಿಯಿಂದ ಬಹಳ ಭಯಭಕ್ತಿಯಲ್ಲಿ ಆರಾಧನೆಯನ್ನು ಮಾಡಿ, "ನೀಉ ಯೇನು ಕಾರಣ ಯಿಷ್ಟು ಜನರು ಬಂದಿರಿ?" ಯಂಬುದಾಗಿ ಕೇಳಿದ ಕಾರಣ, "ನೀನು ಧರ್ಮಿಷ್ಟ ಧೋರೆ. ನಾವು ದ್ವಧರ್ಮದಲ್ಲಿ ಸ್ನಾನ, ಜಪ ಮುಂತಾಗಿ ಮಾಡಿಕೊಂಡು ನಿನ್ನ ಶ್ರೇಯಸ್ಸನ್ನೇ ಅಪೇಕ್ಷಿಸಿಕೊಂಡು ಯಿರುವಂತೆ ಮಾಡಬೇಕು" ಯಂಬುದಾಗಿ ಫಲ, ಮಂತ್ರಾಕ್ಷರ[>ತೆ] ಮುಂತಾಗಿ ಕೊಟ್ಟು, ಯೀ ಬ್ರಾಹ್ಮಣರು ಯಥಾ ಪ್ರಕಾರಕೆ ಹೊರಟುಹೋದ ತರುವಾಯ. ಯೀ ದೊರ್ರಿಗೆ ಯಚ್ಚರವಾಗಿ ಯಡಬಲವನು ನೋಡಿದರಿಂದ ವಬ್ಬರನ್ನು ಕಾಣದೇ ಬಹಳ ಆಶ್ಚರ್ಯಬಟ್ಟು ಯೀ ವಿವರವನ್ನು ತಮ್ಮ ಸಾಮಾಜಿಕರ ಸಂಗಡ ಹೇಳಿದ್ದರಿಂದ, "ಯಿದು ಮಹಾಸಿದ್ಧಿಸ್ಥಳ. ಯೀ ಸ್ಥಳದಲ್ಲಿ ಭಗವಂತನೆ ಬ್ರಾಹ್ಮಣಮುಖದಲ್ಲಿ ಅವತಾರವಾಗಿ ಯಿದ್ದಾನೆ. ಯೀ ಸ್ಥಳದಲ್ಲಿ ಪಟ್ಟಣವನು ಕಟ್ಟಿಶಿ, ಬ್ರಾಹ್ಮಣರಿಗೆ ಅಗ್ರಹಾರವನ್ನು ಕೊಡಿಶಿಕೊಟ್ಟು, ದೇವಾಲಯ ಮುಂತಾಗಿ ಕಟ್ಟಿಸಿದರೆ ಆಚಂದ್ರಾರ್ಕವಾಗಿ ಕೀರ್ತಿನಿಂತು ಸಾರೋದ್ಧಾರವಾಗಿ ಧರ್ಮ ಬೀರುತ್ತಾಯಿದೆ" ಯಂಬದಾಗಿ ಸರ್ವರು ಹೇಳಿದರಿಂದ ಬಹಳ ಸಂತೋಷಬಟ್ಟು, ಯೀ ದೇವರಾಯಪಟ್ಟಣವೆಂಬ ಗ್ರಾಮಕ್ಕೆ ಕೊಂಬಿನ ಸನ್ನೆಯಲ್ಲಿ ಯೀಶಾನ್ಯಭಾಗದಲ್ಲಿ ಕೋಟೆ ಕಟ್ಟುವಂತೆ ನೇಮಕ ಮಾಡಿಸಿ, ಗ್ರಾಮಕೆ ದಕ್ಷಿಣದಿಕ್ಕಿನಲ್ಲಿ ಕೆರ್ರೆಂಯನ್ನು ಕಟ್ಟಿಸಿ, ಯೀ ಗ್ರಾಮಉ ಬ್ರಾಹ್ಮಣರು ಸಾಮರೋಹನ[>ಸಮಾರೋಹಣ]ದಿಂದ ನಿರ್ಮಾಣಮಾಡುವದು ಕಾರಣ. ಬ್ರಹ್ಮಪುರಿಯಂಬ ಹೆಸರು ಯಿಟ್ಟು, ಯೀ ಗ್ರಾಮ ಕಸಬೆಗ್ರಾಮವನ್ನು ಅಗ್ರಹಾರವನ್ನು ಮಾಡಿ ಉತ್ತಿ ೧ಕೆ ೧೨೯ ವರಹಾ ಪ್ರಕಾರ ಶಿಸ್ತುಮಾಡಿ. ೮೪ ಉತ್ತಿಯನ್ನು ಬ್ರಾಹ್ಮಣರಿಗೆ ಹಂಚಿಸಿ, ಶಾಸನವನ್ನು ಬರಶಿಕೊಟ್ಟು, ಯೀ ಊರ ಮಧ್ಯ ಜಕಣಾಚಾರಿ ಕೈಯಿಂದ ತ್ರಿಕೂಟಾಚಲದೇವಸ್ಥಾನವನ್ನು ಕಟ್ಟಿಶಿ, ಶಿವ, ನರಸಿಂಹ್ವಾ, ಗೋಪಾಲಸ್ವಾಮಿ ಮೂರ್ರು ದೇವರ ಪ್ರತಿಷ್ಟೆಯನ್ನು ಮಾಡಿಶಿ, ಯೀ ದೇವರ ಪೂಜೆಗೆ ರತೋತ್ಸವ ಮಾಸೋತ್ಸವ ಮುಂತಾಗಿ ಸಾರೋಧಾರವಾಗಿ ನಡೆವ ಬಗ್ಗೆ.

೧. ಗೋವಿಂದಪುರ್ರಗ್ರಾಮ ೧. ಮಲ್ಲಿದೇವಿಹಳ್ಳಿಗ್ರಾಮ. ಕಾಮಲಾಪುರ್ರಗ್ರಾಮ = ೩

ಕಸಬೆಯಲ್ಲು ಗದ್ದೆಬೆದ್ದಲು ಸಹ ಉಂಬಳಿಮಾಡಿಸಿಕೊಟ್ಟು, ಯಿಶಾನ್ಯದಿಕ್ಕಿನಲ್ಲಿ ಸೋಮೇಶ್ವರ ದೇವಸ್ಥಾನವನ್ನು ಕಟ್ಟಿಶಿ, ಚೆಲಿಕೆರ್ರೆ ಗೊಲ್ಲರಹಳ್ಳಿಯಂಬ ಗ್ರಾಮ ೨ನ್ನು ಪಡಿತರ ದೀಪಾರಾಧನೆ ಬಗ್ಗೆ ನಡೆಯುವಂತೆ ಉಂಬಳಿ ಕೊಡಿಸಿ, ಕಸಬೆಯಲ್ಲು ಗದ್ದೆಬೆದ್ದಲ್ಲು ಸಹ ಉಂಬಳಿ ಕೊಡಿಶಿ. ಕಡವಯನ್ನು ದೇವಸ್ಥಾನಗಳು ಬನಶಂಕರಿಗುಡಿ, ಕೋಡಿ ಅಮ್ಮನವರಗುಡಿ, ಕೈಲಾಸ ಮಲ್ಲೇಶ್ವರ ಸ್ವಾಮಿಯವ್ರ ದೇವಸ್ಥಾನ ಮುಂತಾಗಿ ಕಟ್ಟಿಶಿ, ಮೈಲಾರ ತಮ್ಮಣ್ಣಗೆ ನಾಡಿಗತನವನ್ನು ನೇಮಕಮಾಡಿ, ಶೀಮೆ ಬಾರ್ರವ ದೊಡ್ಡ ತಿಮ್ಮಣ್ಣನಿಗೆ ವ್ಯವಹಾರಿಕೆಯನ್ನು ಕೊಡಿಶಿ, ನಾಗೇನಹಳ್ಳಿಗ್ರಾಮ ೧. ಹಾರನಹಳ್ಳಿಗ್ರಾಮ ೧. ಮಂದಾಲೂರ್ರದ ಗ್ರಾಮ ೧. ಕಸಬೆ ಹಾರನಹಳ್ಳಿಯಲ್ಲು ಗದ್ದೆಬೆದ್ದಲು ಸಹಾ ಕೊಡಿಶಿ, ಉಂಬಳಿ ಸನದು ಬರಸಿ ಕೊಟ್ಟು, ಕೋಟೆಯನ್ನು ಕಟ್ಟಿಶಿ, ತಂನ ಮಗಳು ಸೋಮನಾಗತ್ತಿಗೆ ಯೀ ದಕ್ಷಿಣರಾಜ್ಯವನ್ನು ಜಹಗೀರು ಕೊಟ್ಟು, ಹರಿಹರಸೋಮೇಶ್ವರರಾಯರು ಮುಂದಕ್ಕೆ ಹೊರಟುಹೋದ ತರುವಾಯ. ಯೀ ಕೋಟೆಯನ್ನು ಪೂರ್ತಿಯಾಗಿ ಕಟ್ಟಿಸಿ, ಅಗ್ರಹಾರದ ಬ್ರಾಹ್ಮಣರಿಗೆ ಮುಂತಾಗಿ ಸಾರೋಧಾರವಾಗಿ ನಡವಂತೆ ಮಾಡಿ, ಊರ್ರಿಗೆ ದಕ್ಷಿಣದಲ್ಲು ಕೆರ್ರೆ ಕಟ್ಟಸ್ತಳ ಪ್ರಶಸ್ತವಾಗಿ ಯಿದ್ದದರಿಂದಾ ಯೀ ದೊಡ್ಡ ಕೆರೆಯನ್ನು ಕಟ್ಟಿಶಿ, ಯಿ ಕೆರಿ ಹಿಂದೆ ಕೋಟೆಯನ್ನು

ಮಾಡಿಶಿ, 'ತಂನ ಹೆಸರು ನಿಲ್ಲುವಂತೆ ಮಾಡಬೇಕು' ಯಂದು ಯೋಚನೆ ಮಾಡಿ, ಕೆರೆ ವಿಸ್ತಾರವಾಗಿ ಕಟ್ಟಿಶಿ, ಯೀ ಕೆರೆ ಕೋಡಿಯಲ್ಲು ಯಿದ್ದ ಶಕ್ತಿದೇವತೆ ಕೋಡಿಅಮ್ಮನವರಿಗೆ ಪಡಿತರ ದೀಪಾರಾಧನೆ ಬಗ್ಯೆ ಯೇಳು ಕಂಡಿ . . . . ಕೊಟ . . ಬಿ . . ೨ . . . . ಉಂಬಳಿ ಶಾಸನವನ್ನು ಬರಶಿಕೊಟ್ಟು, ದೇವತಾಸೇವೆ ನಡವಂತೆ ಮಾಡಿದರು.

೧ ಹರಿಹರಸೋಮೇಶ್ವರರಾಯ, ವಿಷ್ಣುವರ್ಧನರಾಯ, ಬುಕ್ಕರಾಯ ಮುಂತಾದವರ್ರು ಯಿವರ ವಂಶಸ್ತರು ರಾಜ್ಯವನ್ನು ಆಳಿದರು.

೧ ತದನಂತರದಲಿ ವಿಜಯನಗರ ಸಿಂಹಾಸನಾರೂಢರಾದ ನರಸಿಂಹರಾಯರು ರಾಜ್ಯ ಪರಿಪಾಲನೆ ಮಾಡಿದರು.

೧ ತದನಂತರ ಅಚ್ಯುತರಾಯರು, ಸದಾಶಿವರಾಯರು ರಾಜ್ಯಪರಿಪಾಲನೆಯನ್ನು ಮಾಡಿದರು.

೧ ತದನಂತರ ಶ್ರೀ ಮಹಾರಾಜಾಧಿರಾಜ ರಾಜಮಾರ್ತಂಡ, ರಾಜಚಂದ್ರೋದಯ, ರಾಜಪರಮೇಶ್ವರ ಶ್ರೀವಿರಪ್ರಕಾಶ[>ತಾಪ] ಶ್ರೀಕೃಷ್ಣರಾಯರು ವಿಜಯನಗರದಲ್ಲಿ ರತ್ನಸಿಂಹಾಸನಾರೂಢವಾಗಿ ಪೃಥ್ವಿಸಾಮ್ರಾಜ್ಯವನ್ನು ಆಳುತ್ತಿರಲು, ದಕ್ಷಿಣದೇಶವನ್ನು ಅಚ್ಯುತರಾಯರ ಅಳಿಯ ರಾಮರಾಯರು ಸಹಾ ರಾಜ್ಯ ಆಳಿದರು.

೧ ತದನಂತರದಲ್ಲಿ ದಕ್ಷಿಣದೇಶದಲ್ಲು ಪಾಳ್ಯಾ ಪಟ್ಟಣ . . . . ಶಿಬಿ ದೇಶದ ಜನರಿಗೆ ಬಹಳ ನಿರ್ಬಂಧವಾದ ಕಾರಣ ಶ್ರೀಕೃಷ್ಣರಾಯರು ತಮ್ಮ ವಂಶಸ್ಥರಾದ ಜಗದೇವರಾಯರನ್ನು ಕರದು, "ದಕ್ಷಿಣರಾಜ್ಯವನ್ನು ನಿಮಗೆ ಜಹಗೀರ್ರು ಸನದ ಬರಶಿಕೊಡುತ್ತ ಯಿದ್ದೇವೆ. ಪಾಳೆ ಪಟ್ಟಿಗಿನವರನೆಲ್ಲ ಶಿಕ್ಷಿಸಿ, ಯಾವತ್ತೂ ರಾಜ್ಯವನ್ನು ಸ್ವಾಧೀನ ಮಾಡಿಕೊಂಡು, ರಾಜ್ಯವನ್ನು ಪರಿಪಾಲನೆ ಮಾಡುತ್ತ ಬರುವದು" ಯಂಬುದಾಗಿ ರಣ ಜಗದೇವರಾಯರಿಗೆ ದಕ್ಷಿಣರಾಜ್ಯವನ್ನು ಜಹಗೀರು ಸನ್ನದ್ದು ಬರಶಿಕೊಟ್ಟ. ಯೀ ರಣ ಜಗದೇವರಾಯರನ್ನು ಕಳುಹಿಸಿಕೊಟ್ಟಲ್ಲಿ, ಅವರು ಬಂದು ದುಷ್ಟ ಪಾಳೆ ಪಟ್ಟದವರನೆಲ್ಲ ಶಿಕ್ಷಿಸಿ, ರಾಜ್ಯವನ್ನು ತಮ್ಮ ಸ್ವಾಧೀನಮಾಡಿಕೊಂಡು, ಯಿವರ ವಂಶಸ್ತರು ರಾಜ್ಯಪರಿಪಾಲನೆ ಮಾಡಿದು.

ಯಿಮ್ಮಡಿ ಜಗದೇವರಾಯ. ಯೀತನ ಮಗ ಜಗದೇವರಾಯ, ಯೀತನ ಮಗ ಅಂಕುಶರಾಯ ಸಹ ಆಳಿದರು.

೧. ತದನಂತರ ತರಿಕೆರ್‍ರೆ ಅರಸು ತಿಮ್ಮಪ್ಪನಾಯಕನೆಂಬೀ ಪಾಳೆಗಾರನು ಬಲವಂತವಾಗಿ ಯೀ ಶೀಮೆ ಯಾವತ್ತನ್ನು ಕಟ್ಟಿಕೊಂಡು ಅಮರಗಿರಿ ಜನಾರ್ಧನಸ್ವಾಮಿಯವರ್ರು ತಿಮ್ಮಪ್ಪನಾಯಕರಿಗೆ ಪ್ರತ್ಯಕ್ಷವಾಗಿ "ದೇವಸ್ಥಾನವನ್ನು ವಿಸ್ತಾರವಾಗಿ ಕಟ್ಟಿಸು" ಯಂಬುದಾಗಿ ಅಪ್ಪಣೆ ಆದ್ದರಿಂದ, ಅಮರಗಿರಿ ಮೇಲಿನ ದೇವಸ್ತಾನವನ್ನು ಕಟ್ಟಿಸಿ, ಗಿರಿಗೆ ಪಶ್ಚಿಮದಿಕ್ಕಿನಲ್ಲಿ 'ತಿಮ್ಮಪ್ಪನಾಯಕನ ಕೆರೆ'ಯಿಂದ[>ಯೆಂದು] ದೊಡ್ಡ ಕೆರೆಯನ್ನು ಕಟ್ಟಿಸಿದನು. ದೇವಸ್ತಾನ ಸೇವೆಯನ್ನು ಮಾಡಿಕೊಂಡು, ದೇವತಾ ಸೇವೆಯನ್ನು ಮಾಡಿಕೊಂಡು ಯಿವರ ವಂಶಸ್ತರು ಹನುಮಪ್ಪನಾಯಕ, ಸರ್ಜಾ ಹನುಮಪ್ಪನಾಯಕ, ಸೀತಾರಾಮಪ್ಪನಾಯಕ ಮುಂತಾದವರು ಆಳಿದರು.

೧ ತದನಂತರದಲ್ಲಿ ಗೊಲ್ಲುಕೊಂಡೆ ಗಜಮಸ್ತೂಕಿ ಆಳಿದು, ಸಿರ್ತೆ[>ಸಿರ್‍ರೈ]ದ ಸುಭೆಯಕೆ ದಾಖಲು ಮಾಡಿ, ಕಾರಬಾರಿ ದಿಲ್ಲಾಮ[>ವ] . . . . ಕಾನ ದಿಲ್ಲಿ, ದಿಲ್ಲಾಪ[>ವ]ರಕಾನ ಮುಂತಾದ ಸರದಾರಿಗೆ ನೇಮಕಾ ಮಾಡಿ ಆಳಿದರು.

೧ ತದನಂತರ ಯಿಕ್ಕೇರಿ ನಗರದ ಸಂಸ್ತಾನದ ಚನ್ನಮ್ಮಾಜಿಯವರು ವೆಂಕಟಪ್ಪನಾಯಕರು ಸಹಾ ಆಳಿದರು.

೧ ತದನಂತರದಲ್ಲಿ ಮೈಸೂರು ಸಂಸ್ಥಾನಕ್ಕೆ ಸಲ್ಲುವಾ ಕಂಠೀರವ ನರಸರಾಜವಡೇರು ಯಿಕ್ಕೇರಿ . . ಕೈಯಿಂದ ಸೀಮೆಯನ್ನು ಸ್ವಾಧೀನಮಾಡಿಕೊಂಡು ಯಿರುತ್ತಾ ಯಿದ್ದಲ್ಲಿ, ಹಾರನಹಳ್ಳಿಗೆ ದಕ್ಷಿಣದಿಕ್ಕಿಗೆ ವಂದೂವರೆ ಹರದಾರಿಯಲ್ಲಿ ಯಿರುವ ಬಾಗಡೆ ಬಳಿಗೆ ಬಂದು, ಯೀ ಕೋಟೆಯನ್ನು ನೋಡಿ, ಯೀ ಕೋಟೆ ಬಹಳ ಪ್ರಶಸ್ತವಾಗಿ ಜಗಳದ ಕೋಟೆ ಸ್ಥಳ ಕಂಡದರಿಂದ, ಯೀ ಕೋಟೆ ಉುತ್ತಾಂತವನ್ನು ಕೇಳಿದಲ್ಲಿ, ಆ ಸ್ಥಳದವರು ಹೇಳಿದ ವಿವರ್‍ರಾ :

"ಹೊಳೆ ನರಸೀಪುರದಿಂದ ತಿಮ್ಮೆಗವುಡನು ಬಂದು ಯೀ ಸ್ಥಳವನ್ನು ನೋಡಿದಲ್ಲಿ . . . ಮೈದಾನವಾಗಿ ಯಿದ್ದ ಕಾರಣ, ಈ ಸ್ಥಳದಲ್ಲಿ ವಂದು ಗ್ರಾಮವನ್ನು ತನ್ನ ಹೆಸರಿನಲ್ಲಿ ಕಟ್ಟಬೇಕೆಂದು ದಾಸ್ತ ಚಿಕ್ಕದಾಗಿ ವಂದು ಊರ ಕಟ್ಟಿ, ಮಗಳೆಯಂಬ ಹೆಸರು ಯಿಟ್ಟು, ಊರ್‍ರಿಗೆ ಪಶ್ಚಿಮದಿಕ್ಕಿನಲ್ಲು ಕೆರೆಯನ್ನು ಕಟ್ಟಿಸಿ ಯಿರುತ್ತಾ ಯಿದ್ದಲ್ಲಿ . . . . ನ. ಮಗನಾದ ನರಸೆಗವುಡನು ಯಿದ್ದಾನೆ" ಯಂಬದಾಗಿ ಹೇಳಿದರಿಂದ, "ಯೀ ಕೋಟೆಯನ್ನು ದುರಸ್ತಾಗಿ ಕಟ್ಟಿಶಿದರೆ ನಮ್ಮ ಸಂಸ್ಥಾನಕ್ಕೆ ಹೆಸರು ಬಂದಿತ್ತು" ಯಂಬದಾಗಿ ಆಲೋಚನೆ . . . . ಪಾಯವನ್ನು ತೆಗೆದು, ಕಂದಕ ಮುಂತಾದನ್ನು ಆಳವಾಗಿ ತೊಡಿಸಿ, ಅಗಳಲ್ಲಿ ಮೀನು ಮೊಸಳೆ ಮುಂತಾದ್ದು ನಿಲ್ಲುವಂತೆ ನೀರ್‍ರು ಬಂದ ಕಾರಣಾ ಕೋಟೆಯನ್ನು ಕಟ್ಟಿಶಿ, ಊರ್‍ರು ಮುಂದನ ಕೆರೆ ಸಹಾ ಕಟ್ಟಿಶಿದರ್‍ರು. ಕಂಠೀರವ ನರಸರಾಜವಡೇರು, ಕೃಷ್ಣರಾಜವಡೇರು ಮುಂತಾಗಿ ಯೀ ವಂಶಸ್ತರು ಆಳಿದರು.

ತದನಂತರಲ್ಲಿ ಮಹಾರಾಜ ಗೋಪಾಲರಾಯನು ದಕ್ಷಿಣರಾಜ್ಯವನ್ನು ತಕ್ಕೊಂಡು ಠಾಣ್ಯ ಹಾಕಿ ಆಳಿದರು.

೧ ತದನಂತರ ನವಾಬ ಹೈದರಲಿಖಾನರವರು, ಯಿವರ ಮಗಾ ಟೀಪುಸುಲತಾನ ನವಾಬರು ಮುಂತಾಗಿ ಸಹಾ ಆಳಿದರು.

ತದನಂತರದಲ್ಲಿ ಶಿದ್ಧಾರ್ಥಿ ಸಂವತ್ಸರದ ಜೇಷ್ಠ ಶು ೩ ಯಲ್ಲು ಯಿಂಗರ್‍ರೇಜು ಬಾಹದವರು ಶ್ರೀರಂಗಪಟ್ಟಣವನ್ನು ತೆಗೆದುಕೊಂಡು, ಮೈಸೂರು ಸಿಂಹಾಸನಾರೂಢರಾದ ಕೃಷ್ಣರಾಜ ವಡೆಯರನವರ ಹವಾಲಾಗಿ ನಡದು ಬರುತ್ತಾ ಯಿದೆ.

❖❖

೪೮

ಹಿರೆಮಗಳೂರು ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೧

ಯಾದಾಸ್ತು ಚಿಕ್ಕಮಗಳೂರು ತಾಲೂಕು ಹಿರೆಮಗಳೂರು ಕೈಫಿಯತು.

ಪೂರ್ವದಲ್ಲಿ ಭಾರ್ಗವಪುರಿಯಂಬಾ ಪಟ್ಟಣದ ನೈಮಿಶಾರಣ್ಯದಲ್ಲಿ ಶವನಕಾದಿ ರುಷಿಗಳು ಸೂತರ ಸಂಗಡ ಸಮಸ್ತಪುರಾ[+ಣ]ವನ್ನು ಹೆಳ್ಳಿದ ಮ್ಯಾಲ, ಯೀ ಭಾರ್ಗವಪುರಿ ಮಹಾತ್ಮೆಯನ್ನು ಕೇಳಬೇಕು. ಅನಂತರದಲ್ಲಿ ಶುಕ[>ಸೂತ]ರು ಹೇಳಿದ ವಿವರ:

ಪೂರ್ವ ತ್ರೇತಾಯುಗದಲ್ಲಿ ಸುಧರ್ಮಕಯಂಬಾ ಬ್ರಾಹ್ಮಣನು ಸಂತಾನ ಯಿಲ್ಲದೆ ಶ್ರಂಗೇರಿಯಲ್ಲಿ ಬಹುಕಾಲವಾಗಿ ತಪಸು ಮಾಡಿದರಿಂದಾ, ಯೀ ಸುಧರ್ಮಕಯಂಬಾ ಬ್ರಾಹ್ಮಣಗೆ ಪ್ರಸನ್ನವಾದರಿಂದಾ "ಭಾರ್ಗವಪುರಿಯಲ್ಲಿ ತಪಸುಮಾಡು" ಯಂಬದಾಗಿ ಹೇಳಿದ್ದರಿಂದ, "ಆ ಸ್ತಳ ನನಗೆ ಹ್ಯಾಗೆ ಗೊತ್ತು ಆಗಬೇಕು?" ಯೆಂಬುದಾಗಿ ಸ್ವಪ್ನದಲ್ಲಿ ಕೇಳಿದ್ದರಿಂದ . . . . "ಚಂದ್ರದ್ರೋಣ ಪರ್ವ[+ತ]ದ ಪಶ್ಚಿಮ ದಿಗು . . . . ದಲ್ಲಿ ಪರ್ವತಯಿದೆ. ಅಲ್ಲಿ ಶ್ರೀಶೈಲ ಮಲ್ಲಿಕಾರ್ಜುನದೇವರ ದೇವಸ್ತಾನ ಯಿದೆ. ಯಿಶ್ವರನ ಜಟಾಮುಗುಟದಲ್ಲಿ ವೇದವಾಹಿನಿಯಂಬದಾಗಿ ನದಿಯು ಉತ್ಪತ್ತಿ ಆಗಿಯಿದೆ. ಆ ನದಿಯು ದಕ್ಷಿಣದಿಗ್ಭಾಗವಾಗಿ ಪ್ರವಹಿಸುತ ಯಿದೆ. ಯೀ ನದಿಗೆ ಪೂರ್ವದಿಕ್ಕಿನಲ್ಲಿ ಅರ್ಧ ಹರದಾರಿಯಲ್ಲಿ ಶ್ರೀಭಾರ್ಗವಪುರಿಯಂಬುದಾಗಿ ಯಿದೆ. ಅಲ್ಲಿ ತಪಸ್ಸು ಮಾಡಿದರೆ ಮಕ್ಕಳು ಆಗುತಾಯಿದೆ" ಯಂಬದಾಗಿ ಸ್ವಪ್ನ ಆದರಿಂದಾ, ತ್ರೇತಾಯುಗದಲ್ಲಿ ಶ್ರೀಭಾರ್ಗವಪುರಿಗೆ ಬಂದು, ಯೀ ಸುಧರ್ಮಕಯಂಬಾ ರುಷಿಯು ತಪಸ್ಸು ಮಾಡಿದ್ದರಿಂದಾ, ವಂಬತ್ತು ಮಂದಿ ಮಕ್ಕಳು ಹುಟ್ಟಿದರಿಂದ ಸಿದ್ಧಕ್ಷೇತ್ರಯಂಬದಾಗಿ ಹೆಸರು ಆಯಿತು. ಯೀ ವಂಬತ್ತು ಮಂದಿ ಮಕ್ಕಳು ನರ[>ವ]ಸಿದ್ಧರೆಂಬೊ ಹೆಸರು ಆಗಿ ವಾಯುಪರ್ವತಕೆ ಹೋದರು.

ಯಿತ್ತಲಾಗಿ ಕೋದಂಡರಾಮಸ್ವಾಮಿ ಅವರು ಜನಕರಾಯಪಟ್ಟಣದಿಂದಾ ಸೀತಾಕಲ್ಯಾಣವನ್ನು ಮಾಡಿಕೊಂಡು ಬರುತಾ ಯಿದ್ದಲ್ಲಿ, ಪರಶುರಾಮನು ಬಂದು "ಯುದ್ಧಾ ಮಾಡಿ ನನ್ನ ಜಯಿಸಿ ಹೋಗು" ಯಂಬುದಾಗಿ ಅಡ್ಡಿ ಹಾಕಿದರಿಂದಾ, ಶ್ರೀ ಕೋದಂಡರಾಮಸ್ವಾಮಿ ಅವರಿಗೆ ಭಾಳಾ ಸಿಟ್ಟು ಬಂದು, ಪರಶುರಾಮನ ಧನುವನ್ನು ಭಂಗಮಾಡಿ ಜಯಿಸಿ, ಅವನು ಪರಾಜಿತ ಆದದರಿಂದಾ ಮಹದ್ರಾ ಪರ್ವತಕೆ ತಪಸಿಗೆ ಹೊರಟು ಹೋದನು. ಆ ತರುವಾಯ ಆ ಪರ್ವತದಲ್ಲಿ ಅನೇಕ ದಿವಸಾ ತಪಸುಮಾಡಿ, ಪುನಹ ಯೀ ಸಿದ್ಧಕ್ಷೇತ್ರಕೆ ಬಂದು ತಪಸ್ಸುಮಾಡಿ[>ಸೆ] ರಾಮಚಂದ್ರಸ್ವಾಮಿ ಅವರು ಪ್ರಸನ್ನವಾದರು. "ಯಿದೆ ರೂಪಿನಲ್ಲಿ ಶ್ರೀ ಸೀತಾ ಲಕ್ಷ್ಮಣಯುಕ್ತವಾಗಿ ಯೀ ಕ್ಷೇತ್ರದಲ್ಲಿ ಸದಾ ವಾಸವಾಗಿ ಯಿರಬೇಕು" ಯಂಬುದಾಗಿ ಪರಶುರಾಮನ[>ನು] ಕೇಳಿಕೊಂಡಿದ್ದರಿಂದ,

ಯೀಗ ಅದೇ ರೂಪಿನಲ್ಲಿ ಯಿದ್ದಾರೆ. ಪರಶುರಾಮನಿಂದಾ ಪ್ರತಿಷ್ಟೆ ಆಯಿತು. ಯೀ ಸ್ಥಳದಲ್ಲಿ ಪರಶುರಾಮನು ತನ್ನ ಗುರುತು ಯಿರಬೇಕು ಯಂಬದಾಗಿ ತನ್ನ ಕೊಡಲಿಯನ್ನು ಯಿವನು[>ಯಿಟ್ಟನು]. ಆ ಕೋಡವನ್ನು [>ಕೊಡಲಿಯು] ಯೀಗ ಶಿಲಾರೂಪಿನಿಂದಾ ಕಾಣಿಸುತಾಯಿದೆ.

ದ್ವಾಪರಾಂತ್ಯದಲ್ಲಿ ಪರೀಕ್ಷಿತರಾಯಗೆ ಸರ್ಪದಿ[>ದ]ಷ್ಟವಾಗಿ, ಕಾಲ ಆದದರಿಂದ ಆತನ ಮಗ ಜನಮೇಜಯರಾಯನು ಮಹಾಕೋಪಿಷ್ಟನಾಗಿ "ಸರ್ಪಯಾಗ ಮಾಡಬೇಕು" ಯಂಬದಾಗಿ ಸಮಸ್ತಸ್ಥಳವನ್ನು ಹುಡುಕಿಕೊಂಡು ಬಂದದರಿಂದಾ, ಯೀ ಸ್ಥಳ ಶಿದ್ಧಕ್ಷೇತ್ರಯಂಬದಾಗಿ ತಿಳಿದು ಯಿಲ್ಲಿ ಸರ್ಪಯಾಗವನ್ನು ಮಾಡಿದನು. ಆ ತರುವಾಯ ಪಂಚಲಿಂಗ ಪ್ರತಿಷ್ಟೆಯನ್ನು ಮಾಡಿ, ಯೀ ರಾಮದೇವಸ್ಥಾನವನ್ನು ಜೀರಣೋದ್ಧಾರ ಮಾಡಿದನು. "ಯೀ ಸ್ಥಳದಲ್ಲು ಸರ್ಪದಿ[>ದ]ಷ್ಟವಾದರೆ ಮರಣಾಯಿಲ್ಲಾ" ಎಂಬದಾಗಿ ಸಮಸ್ತ ಋಷೇಶ್ವರರು ಯಿಲ್ಲಿ ಸರ್ಪದಿ[ನಿದ]ಷ್ಟವಾದರೆ ನಿರ್ವಿಶಾ ಆಗುತಾ ಯಿದೆ" ಯಂಬುದಾಗಿ ಹೇಳಿದರು. ಯೀಗಾ ಯಜ್ಞಕಂಭಾ ಪ್ರತ್ಯೇಕವಾಗಿಯಿದೆ. ಯೀಗ ಪ್ರತಿನಾಮದೆಹಾ[>ಧೇಯ] ಹಿರೆಮಗಳೂರು ಯಂಬುದಾಗಿಯಿದೆ. ಯೀ ರಾಮದೇವರಿಗೆ ಬಾಬತು ೨೨೦ ವರಹ ನಡಿತಾ ಯಿತ್ತು. ಯೀಗ ೬೦ ವರಹ ನಡಿತಾಯಿದೆ. ಯೀ ವೂರಿಗೆ ವುಪಗ್ರಾಮವಾದ ಬಿಳ್ಳೆಕಲ್ಲು ರಂಗನಾಥಸ್ವಾಮಿ ಅವರಿಗೆ ವೆಂಕಟಾದ್ರಿನಾಯಕನು ಬಿಳ್ಳೆಕಲ್ಲು ಗ್ರಾಮಾ ಬಿಟ್ಟು ಕೊಟ್ಟದು. ಯೀ ಸ್ವಾಮಿಗೆ ನಡಿವ ಪಡಿತರ ದೀಪಾರಾಧನೆ ಮಾಸೋತ್ಸವ ಪಕ್ಷೋತ್ಸವ ಸಂವತ್ಸರೋತ್ಸವ ಆಗತಕ್ಕ ಬಗ್ಗೆ ಹುಣಸವಲ್ಲಿ ಬಿಳೆಕಲ್ಲು ಸಹ ೧೨೦ ವರಹ ನಡುತಾ ಯಿತು. ಯೀಗ ಆರು ವರಹ ನಡುತಾ ಯಿದೆ. ಯೀ ವೂರಲ್ಲಿ ದೇವಸ್ಥಾನ : ೧. ರಾಮದೇವರು, ೨. ಪರಶುರಾಮದೇವರು.

❖❖

೪೯

ಹೈದರ ಕೈಫಿಯತ್ತು-೧

ಮೆಕೆಂಝಿ ಸಂಪುಟ : ೩೩೨

ಹೇವಿಳಂಬಿ ಸಂವತ್ಸರದಲ್ಲು ದುರ್ಗಕ್ಕೆ ನವಾಬರ ದಂಡು ಬಂದು ಮುತ್ತಿಗೆ ಹಾಕಿತ್ತು. ಮುತ್ತಿಗೆ ಬಿಟ್ಟು ಶ್ರವಣಾರು ಸೀಮೆ ಕಡಿಗೆ ದಂಡು ಹೋಯಿತ್ತು. ಹೇವಿಳಂಬಿ ಸಂವತ್ಸರದ ಭಾದ್ರಪದ ಶು ೧೦ಲ್ಲು ನವಾಬರ ದಂಡು ಬಸವನಕೋಟೆ ತ್ತೆಕೊಂಡು ಕಣುಕುಪ್ಪೆಗೆ ಬಂದು ಯಿಳಿದರೂ, ಹನ್ನೊಂದು ದಿವಸ ಮುತ್ತಿಗೆ ಹಾಕಿ ಹನ್ನೊಂದನೆ ದಿವಸದಲ್ಲಿ ಕಉಲು ಆಯಿತ್ತು. ನವಾಬರ ಠಾಂಣ್ಯವಾಯಿತ್ತು. ಯಿಲ್ಲಿ ಮುಡ್ಡಿಗರಹಳ್ಳಿ, ಬರಮವರಹಳ್ಳಿ ಬಳಿಯ ತಿಂಗಳು ದಿವ್ಸ ಯಿಳಿದು ಯಿದ್ದು, ಮುಂದೆ ಗುಡಿಕೋಟೆ ಮೊಳಕಾಲುಮುರುವಿಗೆ ಯೆದ್ದು ಹೋಯಿತ್ತು.

ಮೊಳಕಾಲುಮುರುಉ ಗುಡಿಕೋಟೆ ಸಹಾ ತೆಗೆದುಕೊಂಡು ದುರ್ಗಕ್ಕೆ ಹೋಯಿತ್ತು. ಹೊಗಿ ಲಡಾಯಿ ಮಾಡಿ ನಾಲ್ಕು ತಿಂಗಳಿಗೆ ದುರ್ಗ ತ್ತೆಕೊಂಡು ಪಟ್ಟಣಕೆ ಹೊಯಿತ್ತು. ಅಲ್ಲಿಂದಾ ಕಣಿವೆ ಕೆಳಗೆ ಹೋಗಿ, ಆರ್‌ಕಾಟು ತ್ತೆಕೊಂಡು ಪಟ್ಟಣಕ್ಕೆ ಹೋಯಿತ್ತು. ಅಲ್ಲಿಂದ ಕಣಿವೆ ಕೆಳಗೆ ಹೋಗಿ ಆರ್‌ಕಾಟು ತ್ತೆಕೊಂಡು ಆ ಪ್ರಾಂತ್ಯಗಳೆಲ್ಲಾ ಲಡಾಯಿ ಮಾಡಿ, ಬೆಂನ್ನಿನಲ್ಲಿ ರಾಜು ಹುಂಣು ಯೆದ್ದು ಸತ್ತುಹೊದನು.

ಯೀತನ ಮಗ ಟೀಪುಸುಲತಾನಗೆ ಅಧಿಕಾರವಾಯಿತ್ತು. ಆತನು ಮುನ್ನೂರು ಜನ ಕೊಟೆಯಲ್ಲೂ ಠಾಣಾ ಯಿಟ್ಟು ಯಿದ್ದನ್ನೂ. ವಿರೋಧಿಕ್ರುತು ಸಂವತ್ಸರದಲ್ಲು ಯಿಂಗ್ರೆಜಿಯವರ ದಂಡು ಬಂದು ಕಣಿವೆಯಾಚೆಗೆ ಬಂದು, ಬೆಂಗಳೂರು ತ್ತೆಕೊಂಡು ಠಾಣಾಹಾಕುವದರೊಳಗೆ ಮರಾಟೆಯವರ ದಂಡು ಯಿಂಗ್ರೆಜಿಯವರಿಗೆ ಕುಮುಕು ಬಂತ್ತು. ಈ ಸಂವತ್ಸರದ ಶ್ರಾವಣ ಬಹುಳ ೧೪ ರಲ್ಲೂ ಬೆಂಗಳೂರು ಕೆರೆಗೆ ಮರಾಠೆಯವರ ಪರಶುರಾಮಬಾವ ಸರದಾರನ ದಂಡು ಬಂದು ಯಿಳಿತ್ತು. ಬಾದ್ರಪದ ಬಹುಳ ೩ ದಿವ್ಸ ಬೆಂಗಳೂರ್‍ರಿಂದಾ ಫೌಜು ತೋಪು ಸಹಾ ತ್ತೆಕೊಂಡು ಕಣಕುಪಿಗೆ ಬಂತು. ಬರುತ್ತಾಲೆ ಕಉಲು ಆಗಿ, ತಮ ಕಡೆ ಕ್ರಿಷ್ಣಾಜಿಪಂತನಾ ಯಿಲ್ಲಿಯಿಟ್ಟು, ಯಿವರ ಬಗೆ ಠಾಣಾ ಆಯಿತ್ತು. ಪರಿಧಾವಿ ಸಂವತ್ಸರದಲ್ಲು ಪುನಹಾ ಸುಲತಾನನ ಠಾಣ್ಯಾ ಆಯಿತು. ಯೀಚೆಗೆ ಶಿದ್ಧಾರ್ಥಿ ಸಂವತ್ಸರದಲ್ಲು ಶ್ರೀರಂಗಪಟ್ಟಣ ಯಿಂಗ್ರೇಜಿಯವರು ತ್ತೆಕೊಂಡ ಕಾರಣ ಯೀ ಸೀಮೆ ಯಾವತ್ತು ಯಿಂಗ್ರೇಜಿಯವರು ಮಯಿಸೂರವರಿಗೆ ಕೊಟ್ಟರೂ.

ಹಿರಿ ಮೆದೆಕೆರೆನಾಯಕನ ಮಗ ಕಸ್ತೂರಿ ರಂಗಪ್ಪನಾಯಕನು ತನ್ನ ದಂಡು ಸಂತೆಬೆನ್ನೂರಿಗೆ ಶಕ ವರ‍್ರುಷ ೧೬೭೧ನೆ ಶುಕ್ಲ ಸಂವತ್ಸರದಲ್ಲಿ

೧ ಕಸ್ತೂರಿ ರಂಗಪ್ಪನಾಯಕನ ದಂಡು ಸಹ

೧ ಮೊಗಲರ ಕಡೆ ಹಿಲಾಲಿ ಮೊತ್ತಿಖಾನರ ದಂಡು ಲಕ್ಷ ಸುಮಾರ‍್ರು

೧ ಆಕೀ[>ರೇ]ರ ಕಡೆಯಿಂದಾ ಗುತ್ತಿ ಮುರಾರಿರಾರಾ[>ಯ]ನ ದಂಡು ಸಹ

ಯೀ ಪ್ರಕಾರ ಯಿಂನ್ನು ಕೆಲವು ದಂಡು ಕೂಡಿಕೊಂಡು ಸಂತ್ತೆಬೆನ್ನೂರಿಗೆ ಯರಡು ತಿಂಗಳುವೆ ೧ ಹರ್ಚೆ ಹಾಕಿ, ಯುದ್ಧಾಮಾಡಿದಾಗ್ಯು ಕೋಟೆ ಬಾರದೆ ಯಿದ್ದದರಿಂದಾ, ಬಿದರೂರಿಂದ ಅರಸುಗಳು ಹಿಲಾಲಿ ಮೊತ್ತಿಖಾನ, ಮುರಾರಿರಾಯಗೆ ಸಹಾ ಚಉಕಾ[>ತಾ]ಯಿ ಮೊಕರೂರ‍್ರು ಮಾಡಿಕೊಂಡು "ಬಿದರೂರವರಿಗೆ ಮಾಯಿಕ್ಕೊಂಡ ಕೆಲಸವಿಲ್ಲಾ, ದುರ್ಗದವರಿಗೆ ಸಂತೆಬೆನ್ನೂರು ಕೆಲಸವಿಲ್ಲಾ" ಯಂಬುದಾಗಿ ತ್ತಾಹಬಂದಿಮಾಡಿ ಬಿಟ್ಟು, ತಂಮ್ಮ ದಂಡು ತ್ತೆಗದುಕೊಂಡು ಪುನಹ ಸ್ತಳಕ್ಕೆ ಹೊದರ‍್ರೂ, ೪೬ ವರುಷ.

ನವಾಬ ಹೈದರಲ್ಲಿಖಾನ ಬಾಹದರವರು ಚಿತ್ರದುರ್ಗ ರಾಜಾ ಮೇದೆಕೆರೆನಾಯಕರು ಸಹಾ ಪೂರ್ವದಲ್ಲಿ ತಮಗೆ ಬಾರದ ಕಡೆಯಿಂದಾ, ಯೀಗ ನವಾಬ ಹೈದರಲ್ಲಿಖಾನರ ಕಡಿಯಿಂದಾ ಸಂತೆಬೆಂನ್ನೂರಿಗೆ ಟಾಂಣ್ಯ ಹಾಕಿಕೊಂಡು, ವುಭಯತರು ಕೂಡಿಕೊಂಡು, ಬಿದುರೂರಿಗೆ ಹೋಗಿ ಚಿತ್ರಭಾನು ಸಂವತ್ಸರದಲ್ಲು ಟಾಂಣ್ಯಾವನ್ನು ಹಾಕಿ, ಬಿದರೂರುಯೆಂಬದಕ್ಕೆ ನಗರಾಯೆಂಬ ಹೆಸರಿಟ್ಟು, ಪುನಹ ಯೀ ರಾಜಾ ಮೆದಕೆರ‍್ರಿನಾಯಕಗೆ ವೂರಿಗೆ ಅಪ್ಪಣೆ ಕೊಡುವಾಗ್ಗೆ, ಪುನಹಾ ಸಂತ್ತೆಬೆಂನೂರು

ಹೊದಿಗೆರೆ ಸಹಾ ಯೀ ಮೆದಕೆರ್‍ರಿನಾಯಕಗೆ ಕೊಟ್ಟರು. ಯೀ ರಾಜಾಮೆದಕೆರ್‍ರಿನಾಯಕರ ಟಾಂಣ್ಯಾ ಸಂತೆಬೆಂನ್ನೂರಿಗೆ ಶಕವರುಷ ೧೬೮೫ನೆಯ ಸ್ವಭಾನು ಸಂವತ್ಸರದಲ್ಲು, ಯೀ ಆರಭ್ಯ ಶಕ ೧೬೯೯ಕೆಯ ಹೇವಿಳಂಬಿ ಸಂವತ್ಸರದವರಿಗೆ ವರುಷ ೧೫ ಟಾಂಣ್ಯಾ.

ತಿರಿಗಿ ಶಕವರುಷ ೧೭೦೦ನೆಯ ವಿಳಂಬಿ ಸಂವತ್ಸರದಲ್ಲು ನವಾಬ ಬಹದರವರು ಸಂತ್ತೆಬೆಂನ್ನೂರು ಠಾಂಣ್ಯ ಹಾಕಿಕೊಂಡು, ಯೀ ಆರಭ್ಯ ಶಕ ೧೭೧೨ನೆಯ ಸಾಧಾರಣ ಸಂವತ್ಸರದ ವರಿಗೆ ವರುಷ ೧೨ ಪರಿಯಂತ್ರ ಟೀಪುಸುಲ್ತಾನ ಪಾದಪ್ರಾ[>ಷಾ]ಹರ ಟಾಂಣ್ಯ.

ಪ್ರಾಕು ನವಾಬ ಬಾಹದರವರು ಯೀ ಚಿತ್ರದುರ್ಗ ಕೈವಶ ಮಾಡಿಕೊಳ್ಳುವಾಗ್ಗೆ ಯೀ ದುರ್ಗ್ಗದ ಮೇಲೆ ಕಳ್ಳೀವಿಟ್ಟಿಯಲ್ಲು ನಾಡಿಗ ಲಕ್ಷ್ಮಂಣನು ತಂದೆ ಮಕ್ಕಳು ಸಹಾ ಟೀಪುಸುಲ್ತಾನವರಿಗೆ ಬಹಳ ಮೇನತ್ತುಮಾಡಿದರ್‍ರಿಂದಾ, ಧಣಿಗಳು ತಂದೆಮಕ್ಕಳಿಗೆ ಉಡುಗೊರ್‍ರೆಯ ಕೊಟ್ಟು, ಸ್ತಳಕ್ಕೆ ಪರವಾನೆ ಬರಕೊಟ್ಟು, ಅಪ್ಪಣೆ ಕೊಟ್ಟಲ್ಲಿ ಯೀ ಲಕ್ಷಂಣನು "ಸಂತೆಬೆಂನ್ನೂರು ಕೋಟೆಯಲ್ಲು ಯಿಂದತ್ತಾ ಜಕೇರಿ ಮದ್ದುಗುಂಡು ಕೊಟೆ ಪಾರ ಮುಂತಾಗಿ ಮುರಿದು ಚಿತ್ರಕಲ್ಲವರು ಮ್ಯೆ[>ವ್ಯೆ]ದರು, ಯೀಗ ಕೋಟೆಯಲ್ಲಿ ತೋಫುಗಳು ಯಿಲ್ಲಾ"ಯೆಂದು ಬಹಳವಾಗಿ ಅರಿಕೆ ಮಾಡಿಕೊಂಡ್ಡದರ್‍ರಿಂದಾ ಧಣಿಗಳು ಚಿತ್ತಕ್ಕೆ ತಂದು, ಬಿಳಿಚೋಡು ಕಿಲ್ಲೆದಾರಿಗೆ ಪರವಾನೆ ಬರೆಶಿಕೊಟ್ಟು, ಬಿಳಿಚೊಡಿನಿಂದಾ ಮೂರು ಬಂಡಿ ತೋಪುಗಳ ತಂದು ಸಂತೆಬೆಂನ್ನೂರು ಕೊಟೆ ಬತ್ತೆರಿಗೆ ಹಚ್ಚಿಸಿದ. ಶಾಲಿವಾಹನ ಶಕ ೧೭೧೩ನೆಯ ವಿರೋಧಿಕ್ರುತು ಸಂ॥ ರದಲ್ಲು ಮಹಾರಾಷ್ಟ್ರದ ಶ್ರೀಮಂತರ ಕಡೆ ಪರಶರಾಮ ಭಾವುನವರ ಟಾಂಣ್ಯಾ ವರುಷ ೧.

ಸನಾ ತ್ತಿರಿಗಿ ಟೀಪುಸುಲತಾನ ಬಾದಷಾಹರು ಶಕವರುಷ ೧೭೧೪ನೆಯ ಪರಿಧಾವಿ ಸಂವತ್ಸರದಲ್ಲು ಟಾಂಣ್ಯ ಹಾಕಿಕೊಂಡು, ಯೀ ಪರಿಧಾವಿ ಲಗಾಯಿತು, ಶಕ ೧೭೨೦ನೆಯ ಕಾಳಾಯುಕ್ತಿ ಸಂ॥ರದ ವರಿಗೆ ವರುಷ ೭ ಆಳಿದರು. . . . . ದೇವರಹಳ್ಳಿ ಮಾಗಣಿಯ ಚಿತ್ರದುರ್ಗದ ಭರಮಂಣನಾಯಕನ ದಿವ್ಸದಲ್ಲು ಬಸವಾಪಟ್ಟಣಕ್ಕೆ ಮೊಗಲರ ಟಾಂಣ್ಯಕೆ ಸಿ[>ಸೇ] ರಿಯಿದ್ದದು, ಆನಂದ ಸಂವತ್ಸರದಲ್ಲು ಕೋಸು ಬಂದಿ ಪ್ರಕರಕ್ಕೆ ಸಂತೆಬೆಂನ್ನೂರಿಗೆ ಕೂಡಿತ್ತು.

ಯೀ ಶಾಲಿವಾಹನ ಶಕ ೧೭೨೧ನೆಯ ಸಿದ್ಧಾರ್ತ್ಥಿ ಸಂ॥ರದ ಚೈತ್ರ ಶು ೩೦ ವರ್‍ರಿಗೆ ಶನಿವಾರ ಶ್ರೀರಂಗಪಟ್ಟಣಕ್ಕೆ ಯಿಂಗರೇಜಿ ಬಾಹದರವರ ಟಾಂಣ್ಯ.

ತ್ತಿರಿಗಿ ದೊಡ್ಡ ನವಾಬರು ಶಕ ೧೭೦೦ನೆಯ ವಿಳಂಬಿ ಸಂವತ್ಸರದ ಲಾಗಾಯಿತ್ತು ಶಕವರುಷ ೧೭೧೨ನೆಯ ಸಾಧಾರಣದ ವರಿಗೆ ವರುಷ ೧೨ ಆಳಿದರೂ, ೬ ದೊಡ್ಡ ನವಾಬರು ಆಳಿದು, ೬ ಟಿಪುಸುಲ್ತಾನು ಪಾದಿಷಾರು ಆಳಿದರ್‍ರು.

ಯೀ ದೊಡ್ಡ ನವಾಬರ ಆಳಿಕೆಯಲ್ಲಿ ಬಾಗೂರ ಲಕ್ಷ್ಮೀಕಾಂತ್ತಾಚಾರ್ಯ್ಯರಿಗೆ ಪ್ರಾಕು ಮೇರಿಗೆ ಯೀ ಶೀಮೆಯಲ್ಲು ತಿಂಮ್ಮಲ ಮಹಾರಾಷ್ಟ್ರರ ಕಡೆಯಿಂದಾ ಪರಶರಾಮಭಾವು ಪೌಜಿ ತೆಗದುಕೊಂಡು ಬಂದು ಶಕ ವರುಷ । ೧೭೧೩ನೆಯ ವಿರೊಧಿಕೃತ್ತು ಸಂವತ್ಸರದ ವರಿಗೆ ವರುಷ ೧ ಆಳಿದರ್‍ರು. ಪುನಹಾ ಟಿಪುಸುಲತಾನು ಪಾದಿಷಾರು ಶಕ ವರುಷ ೧೭೧೪ನೆಯ ಪರಿಧಾವಿ ಸಂವತ್ಸರದ ಲಾಗಾಯಿತ್ತು ಶಕ ವರುಷ ೧೭೨೦ನೆಯ ಕಾಳಾಯುಕ್ತಿ ಸಂವತ್ಸರದ ವರಿಗೆ ಆರು ವರುಷ ಆಳಿದರ್‍ರೂ.

ಯಿದರಲ್ಲು ದುಂಡಜಿಯು ಶಿವಮೊಗ್ಗೆ ಮೇಲೆ ನಿಂತ್ತು, ಅಲ್ಲಿಂದಾ ತಮ್ಮ ಕಡೆ ಬುಡಣಖಾನ ಕಳುಪ್ಹಿಕೊಟ್ಟು "ಪ್ರಾಕು ಟಿಪುಸುಲ್ತಾನ ಪಾಷಾರ ಕಡೆ ಅಮಲುದಾರು ಯಿದ್ದಾರೆ, ಅವರ ಕಡೆಯಿಂದಾ ಹಣಕಾಸು ವಸೂಲು ಮಾಡು"ಯೆಂಬದಾಗಿ ಹೇಳಿದರಿಂದಾ ಆ ಬುಡಣಖಾನ ಬಂದು ಪ್ರಾಕುಯಿದ್ದ ಅಮಲುದಾರು ಮುಖಾಂತ್ರ ಕೆಲಉ ಹಣಕಾಸು ವಸೂಲು ಮಾಡಿಕೊಂಡು, ಶು ೧ ಲಾಗಾಯಿತ್ತು ಆಶಾಡ ಶು ೧೩ ವರಿಗೆ ತಿಂಗಳು ೨, ದಿನ ೧೩ ಯಿದ್ದನು.

ಹೊಂನ್ನಾಳಿ ತೈನಾತಿಯಲ್ಲು ವಿಳಂಬಿ ಸಂವತ್ಸರದ ಪರಿಯಂತ್ರ ಯಿದ್ದು, ಯೀ ವರುಷದಲ್ಲು ಚಿತ್ರದುರ್ಗದ ಮುತ್ತಿಗೆ ಆದ್ದರಿಂದಾ ಅಪ್ಪಣೆ ಪ್ರಕಾರ ನಗರದಾ ಗಟಿ ಜನ ಮಂದಿ ಯಾವತ್ತಂನ್ನೂ ತ್ತೆಗದುಕೊಂಡು ದುರ್ಗಕ್ಕೆ ನಗರದ ಕಂದಾಚಾರದ ಮಂನ್ನಾರಪ್ಪನವರ ಸಂಗಡ ಮುತ್ತಿಗೆ ಹೊಗಿದಲ್ಲಿ, ದುರ್ಗ ತೆಗೆದುಕೊಂಡು ತರುವಾಯ ಯೀ ವೆಂಕಟಪ್ಪನಾಯಕರು ಅಪ್ಪಣೆ ಬಗ್ಯೆ ಹೊಗಿದ್ದಲ್ಲಿ, ವಿಚಾರಿಸಿ ಮತ್ತು ನಾಲ್ಕುನೂರು ಮಂದಿ ಕಟ್ಟುವ ಬಗ್ಗೆ ಅಪ್ಪಣೆ ಕೊಟ್ಟು, ಯಿವರ ತಂಮ್ಮ ಬಲರಾಯ[>ಮ]ರಾಯರಿಗೆ ಯಿಪ್ಪತ್ತು ವರುಷ ಧರ್ಮ್ಮವಂನ್ನೂ ಮೊಕರೂರು ಮಾಡಿ ದಂಡಿನ ಹೊಬಳಿ ನಾಯ್ಕತನ ಮಾಡ್ಸಿ, ನಗರದಾ ರಾಜಾರಾಮರ ಬಳಿಗೆ ಕಳುಪ್ಹಿದರ್‍ರಿಂದಾ ನಗರದಲ್ಲು ಮಂದಿ ಜಮೆ ಮಾಡುತ್ತಾ ಯಿದ್ದಲ್ಲಿ, ಅಷ್ಟರಲ್ಲೆ ರಾಜಾರಾಮರು ಶಿರಿ ಹೊಗಿಲ್ಸಿ ಆಯಜನ್ನು ಬಂದದರಿಂದ ಯೀತನು ಮಡಕೇರಿ ಕಿಲ್ಲೆಕ್ಕೆ ಬಲರಾಮರಾಯರಿಗೆ ಮಂದಿ ಜನ ೨೦೦ರಂನ್ನೂ ಕೊಟ್ಟು ಕಳುಪ್ಹಿದರಿಂದಾ ಅಲ್ಲಿ ವಂದು ವರುಷ ಯಿದ್ದು, ಆ ತರುವಾಯ ಕೊಡಗಿನವರ ಸಂಗಡ ಲಡಾಯಿ ಮಾಡಿ, ಮಡಕೇರಿ ಲಡಾಯದಲ್ಲು ಯಿವರ ಬಿರಾದರಿ ಮಂದಿ ಹೊಂನ್ನಾಳಿ ಕಿಲ್ಲೆದಾರ ಮಹ್ಮಂದಖಾನಜ ಮಂದಿ ಸಹ ಮುಣುಗಿ ಹೊಗಿ ಯಿದ್ದದರಿಂದಾ, ಬಲರಾಮರಾಯನು ಜಿ[>ಜ]ನ ಮಾತ್ರದಿ ನಗರಕ್ಕೆ ಬಂದು, ವೆಂಕಟಪ್ಪನಾಯಕರ ಬಳಿಯ ಯಿದ್ದಲ್ಲಿ, ಯೀ ಸಂವತ್ಸರದಲ್ಲು ಯಿಂಗ್ರೇಜ ರಕ್ತವಾಯಿ ಆಗಿಯಿದ್ದಲ್ಲಿ, ಟೀಪು ಸುಲತಾನ ಪಾದುಷಾಹರು ಬಂದು ನಗರವನ್ನು ತೆಗೆದುಕೊಂಡು, ಕೊಡಿಯಾಲ ತ್ತೆಗದುಕೊಂಬುವ ಬಗ್ಯೆ ಹೋಗಿ ಯಿದ್ದಲ್ಲಿ, ಅಲ್ಲಿ ಬಲರಾಮರಾಯರಿಗೆ ಗಲ್ಲು ಹಾಕಿದರಿಂದಾ, ವೆಂಕಟಪ್ಪನಾಯಕನು ತಂನ್ನ ಬಿರಾದರಿ ಮಂದಿ ಸಹ ಪರಿಧಾವಿ ಸಂವತ್ಸರದ ಪರಿಯಂತ್ರ ನಗರದ ತ್ರಿನಾತ್ತಿಯಲ್ಲು ಯಿದ್ದದರ್‍ರಿಂದಾ, ಯೀ ಸಂವತ್ಸರದಲ್ಲು ನಜರಾನೆ ಮೊಕರೂರ್‍ರು ಆದದ್ದರ್‍ರಿಂದಾ, ಯೀ ವೆಂಕಟಪ್ಪನಾಯಕರ ತಂದೆ ಆರ್‍ಸು ತಿಂಮಪ್ಪನಾಯ್ಕರು ತೀರಿಹೋದದರ್‍ರಿಂದಾ, ನಗರದಿಂದಾ ಚಾಕರಿಯನ್ನು ಬಿಟ್ಟು, ನಜರಾನೆ ಹಣವಂನ್ನು ಕೊಟ್ಟು, ಬೆಳಗುತ್ತಿಯಲ್ಲು ಯಿದ್ದುಕೊಂಡು ಯಿರುತ್ತಾಯಿದ್ದಲ್ಲಿ, ಕ್ರೋಧನ ಸಂವತ್ಸರದ ವೈಶಾಖ ೨ಲ್ಲು ವೆಂಕಟಪ್ಪನಾಯಕರು ತೀರಿಹೋದನು. ಯೀಗ ಯಿರ್‍ರುವರು ವೆಂಕಟಪ್ಪನಾಯಕರ ಮಗ ಪಟ್ಟದ ಆರ್‍ಸು ತಿಂಮ್ಮಂಣನಾಯ್ಕ. ಯೀತನ ಅಂಣ ರಂಗಪ್ಪನಾಯ್ಕ, ವೆಂಕಟಪ್ಪನಾಯ್ಕರ ತಂಮ್ಮ ರಘುನಾಥರಾಯರು. ಯಿವರ ಮಕ್ಕಳು ಸ್ಥಳದಲ್ಲು ಹಾಜರು ಯಿಧಾರೆ.

ಖರ ಸಂವತ್ಸರದ ಪುಷ್ಯ ಶು ೧೫ರಲ್ಲು ನವಾಬ ಹೈದರಲ್ಲಿಖಾನ ಬಹದರವರು ಬೆಳಗುತ್ತಿ ವೆಂಕಟಪ್ಪನಾಯಕರಿಗೆ ಖರೆ ಕಳುಪ್ಹಿ ನಿರೂಪ ಆದಾಗಿ, "ಬಿದಿರ್‍ರೆ ಕಿಲ್ಲೆವಂನು ನಿಮಗೆ ನೇಮಕಾ ಮಡಿ ಕಳುಪ್ಹಿ ಯಿದ್ದಿತ್ತು. ಆ ಪ್ರಕಾರಕ್ಕೆ ಕಿಲ್ಲೆವನ್ನು ನಿಮ್ಮ ಹವಾಲು ಮಾಡಿಕೊಂಡು ಮದ್ದು ಗುಂಡು ಜಕ್ಕೆರ್‍ರಿ ಮುಂತಾಗಿ ಯಾವತ್ತಂನ್ನು ನೋಡಿಕೊಂಡು ಕೋಟಿ ಕೆಲ್ಸ, ಕೀವಣಿ ಕೆಲಸ.

ಬತೇರಿ ಕೆಲ್ಸ ಮುಂತ್ತಾದಂನ್ನು ಚುರುಕಾಗಿ ಆಗ ಮಾಡಿಸುತ್ತಾ ಕಾವಲು ಕಟ್ಟಲೆಯಂನು ಜಾಗೃತೆಯಾಗಿ ಕಾಯಿಸಿಕೊಂಡು ಅರಮನೆ ಕಾರ್ಯವೇ ಮುಖ್ಯವಾಗಿ ನಡದುಕೊಂಬುವದು. ನೀಉ ಮನೆತನಸ್ತರು. ಯಿಂಥಾ ಬಾರ್‍ರಿ ಮನುಷ್ಯರು ಯಂಬದಾಗಿ ಮಾತು ಬಾರ್‍ರಿ ಕಿಲ್ಲೆವಂನ್ನು ಕೊಡ್ಸಿ ಯಿಧಿಕಾಗಿ ಜಾಗೃತೆಯಿಂದ ವಿಚಾರಿಸಿಕೊಂಡು ಮಾತಿನ ವಾಸೆ ಬರುವಂತ್ತೆ ನಡದುಕೊಂಬುವದು. ಬಿದರೇ ಕಿಲ್ಲೆವಂನ್ನು ನಿಂಮ್ಮ ಹವಾಲು ಮಾಡ್ಸುವಂತೆ ನಗರ ಉಜನ್ನೈಯ್ಯನಿಗೆ ಪರವಾನೆಯನ್ನು ಕಳುಹ್ಸಿಕೊಟ್ಟು ಯಿದಿತ್ತು. ಉಜನೈಯನು ನಿಂಮ್ಮ ಹವಾಲಿಗೆ ಕಿಲ್ಲೆವನ್ನು ಕೊಡಿಸಿ ಕೊಡುತ್ತಾ ಯಿದಾನೆ ನಾಗಿ ಅರಮನೆ ಕಾರ್ಯ ಮುಖ್ಯವಾಗಿ ನಡೆಕೊಂಬುವದು" ಯಂಬದಾಗಿ ಯಂದು ನಿರೂಪ.

೧ ಯೀ ಪರವಾಗಿಯು ಪುಷ್ಯ ಶು ೧೨ಲ್ಲು ಬಂದರ್‍ರಿಂದಾ ಯಿ ಆರಭ್ಯ ಕಿಲ್ಲೆವಂನ್ನು ಮಾಡಿಕೊಂಡ ಬಿರಾದರ್‍ರಿ.

ಪೂ॥ ಬೆಳಗುತ್ತಿ ಅರಸುಗಳ ವಂಶಾವಳಿ:

ಶಕ ವರುಷ ೧೬೮೮ಕೇ ಚಿತ್ರಭಾನು ಸಂವತ್ಸರದ ವರಿಗೆ ನಗರ ಅರ್‍ಸುಗಳ ವಳಗೆ ಗ್ರಾಮ ಯಿನಾಮು ಉಂಡುಕೊಂಡು ಬರುತ್ತಾ ಯಿದ್ದಲ್ಲಿ, ನವಾಬ ಹೈದರಲ್ಲಿಖಾನ್ ನಗರಕ್ಕೆ ಟಾಂಣ್ಯ ಹಾಕುವರಿಗೆ ಬೆಳಗುತ್ತಿಯಲ್ಲು, ಆ ತರುವಾಯಾ ಯೀದೇ ಮಾಘ ಶು ೧೩ಲ್ಲು ಹೊರಟ್ಟವರು ಬೆಳಗುತ್ತಿ ಅರ್‍ಸು ತಿಂಮ್ಮಪ್ಪನಾಯ್ಕ ಮಗ ವೆಂಪಟಪ್ಪನಾಯ್ಕ ಪ್ರದಾನ ಬೆಳಗುತ್ತಿ ಸುಬ್ಬೈಯ್ಯನು ಜನ ನೂರು ಸಹ ತೆಗೆದುಕೊಂಡು ಹೋಗಿ ನವಾಬ ಸಾಹೆಬರವರ ಬೇಟ್ಟಿ ತೆಗೆದುಕೊಂಡಲ್ಲಿ, ಬಹಳ ಸಂತೋಷಬಟ್ಟು ತಂಮ್ಮ ಸಮೀಪದಲ್ಲು ಯಿಟ್ಟುಕೊಂಡು ರಾಜ್ಯ ಠಾಂಣ್ಯಹಾಕುವ ಬಗ್ಗೆ ರಾಯದುರ್ಗದ ಕ್ರಿಷ್ಣಪ್ಪನಾಯಕರು ಕ್ಯಾಬಾರಕಿಯಿವರ ಸಂಗಡ ಕೊಡ್ಸಿ ಕೊಟ್ಟು ಕಳುಹ್ಸಿದರ್‍ರಿಂದಾ ಯಿವರು ಠಾಂಣ್ಯ ಹಾಕಿದ ವಿವರಾ:

೧. ಅನಂತಪುರದ ಕಿಲ್ಲೆ

೧. ಕುಮುಶಿ ಕಿಲ್ಲೆ

೧. ಶಿಕಾರ್‍ರಿಪುರ ಕಿಲ್ಲೆ

೧. ಜಡೇರ ಕಿಲ್ಲೆ

೧. ಉಡುಗಣಿ ಕಿಲ್ಲೆ

೧. ತವನಂದಿ ಕಿಲ್ಲೆ

೧. ಗುತ್ತಿ ಕಿಲ್ಲೆ

೭

ಅಂತ್ತು ಕಿಲ್ಯೆ ೭ ಯೆಳಂನು ತೆಗೆದುಕೊಂಡು ಯಿದ್ದಲ್ಲಿ, ಉಡುಗುಣಿ ತ್ರೆನಾತ್ತಿ ಕಿಲ್ಲೆದಲ್ಲು ಅಪ್ಪಣೆ ಪ್ರಕಾರ ನಾಲ್ಕು ತಿಂಗಳು ಠಾಂಣ್ಯ ಯಿದ್ದ್ರು. ಆ ತರುವಾಯ ನವಾಬರ ಬಳಿಗೆ ಬಂದು "ನಮಗೆ ಪ್ರಾಕರಾಭ್ಯಾ ಗ್ರಾಮ ಯಿನಾಮು ನಡದು ಬರುತ್ತ ಯಿತ್ತು. ಮುಂದೇ ಗ್ರಾಮ ಯಿನಾಮಿಗೆ

ಅಪ್ಪಣೆ ಆಗಬೇಕು. ಮುಂದೇ ನಂಮ್ಮ ಅಂಣ ತಂಮ್ಮದಿರಿಗೇ ಮಂದಿಗೆ ಸಹ ಅಂನ್ನಕ್ಕೆ ಸಹ ಮಾರ್ಗ ಆಗಬೇಕು" ಯಂಬದಾಗಿ ಹೇಳಿಕೊಂಡಲ್ಲಿ, ಅದೇ ಪ್ರಕಾರ ಬೆಳಗುತ್ತಿ ಗ್ರಾಮವಂನ್ನು ಯಿನಾಮಿನ ಬಗ್ಯೆ ಅಮೀಲ ಕುಂಮುಶಿ ನಾರಣಪ್ಪನವರಿಗೆ ಪರವಾನೆ ಬರೆಶಿಕೊಟ್ಟು, "ಮುಂದೆ ನಿಮ್ಮ ಅಣ್ಣತ್ತಂಮ್ಮಿಂದರ, ನಿಂಮ್ಮ ಮಂದಿ ಸಹ ಯರಡು ತಿಂಗಳಲ್ಲಿ ಕರಸುತ್ತಾಯಿದೆವೆಂ"ಬದಾಗಿ ಉಡುಗೊರ್‍ರೆ ವೀಳ್ಯ ಮುಂತ್ತಾಗಿ ಕೊಟ್ಟು ಕಳುಹ್ಸಿರ್‍ರೂ.

ಯೀ ತರುವಾಯ ಜಾಹಗಿರಿ ನಡದ್ದು ಸೊಭಾನು ಸಂವತ್ಸರ ೧, ತಾರಣ ಸಂವತ್ಸರ ೧, ಉಭಯಂ ವರುಷ ೨, ಯಿದರ ಮೇಲೆ ಫಸೆಷಾ[>ಪುನೆಹಾ]ದಿಂದಾ ಶ್ರೀಮಂತ್ತ ನಾನಾಸಾಹೇಬರ್‍ರು ಮಹಧವರಾಯರ ದಂಡು ಬಂದು, ಅನಂತ್ತಪುರ ಪರಿಯಂತ್ರ ಹೊರಲ್ಲಿ, ಸೀಮೆ ಯಾವತ್ತು ಕಉಲ್ಲು ಆಗಿದಲ್ಲಿ, ಬೈ[>ಹೈ]ದರ ಕುದುರ್‍ರೆಯವರು, ಆರೇರ ಕುದುರೆಯವರು ನ್ಯಾಯಮಾಡಿ, ಯಿಬ್ಬರು ವೂರ ಮುಂದಕ್ಕೆ ಬಂದಲ್ಲಿ, ಆರೇದ ಕುದುರ್‍ರೆ ಯಂಬದಾಗಿ ಊರವಳಗಿಂದಾ ಗುಂಡು ಹಾರ್‍ಸಲಾಗಿ, ಬೈ[>ಹೈ]ದರ ಕುದ್ರುಗೆ[>ರೆ] ಗುಂಡು ತಾಕಿ ಕುದ್ರೆ ಬಿದ್ದದರಿಂದಾ, ಯೀ ಬೈ[>ಹೈ]ದುರ್‍ರು ನವಾಬಸಾಹೇಬರ ಮುಂದೆ ಅರಿಕೆ ಮಾಡಲಾಗಿ, ಅವರ್‍ರು ಮನಶಿನಲ್ಲಿ ಶಿಟ್ಟು ಯಿಟ್ಟಿಯಿದ್ದರು. ಆರೇರಿಗೆ ಸಲ್ಲಾ ಮುಗುದು ಅವರು ತಂಮ್ಮ ವೂರ್‍ರಿಗೆ ಹೊದಮೇಲೆ, ಬೆಳಗುತ್ತಿ ಗ್ರಾಮವಂನು ಜಪ್ತಿಮಾಡ್ಸಿ ಯಿವರ ಸಂಗಡಾ ಗುಂನ್ನೆಗಾರಿಗ ೭೫೦ನ ತೆಗದುಕೊಂಡರು.

ಯೀ ತರುವಾಯಾ ಪುನಹ ನವಾಬರ ದಯಸಂಪಾದ್ಸಿಕೊಂಡು ಬೆಳಗುತ್ತಿ ಸುಬ್ಯೆನವರು ಹೋಗಿ ಕಾದು, ಧಣಿರ ನಿಯಮವರಿತು ಅರಿಕೆ ಮಾಡಿ, "ಬೆಳಗುತ್ತಿಯವರು ಸಂಸ್ಥಾನಿಕರು ಯಿದ್ದಾರ್‍ರೆ. ಸರಕಾರದ ಕೆಲ್ಸದಲ್ಲು ಜಾಗ್ರತೆಯಾಗಿ ಯಿದ್ದಾರ್‍ರೆ. ಅಪ್ಪಣೆ ಅರಾದರ್‍ರೆ[>ಆದರೆ] ಕುದ್ರೆ ಮಂದಿ ಕಟ್ಟುತ್ತಾ ಯಿಧೆವೆಂ"ಬದಾಗಿ ಹೇಳಿಕೊಂಡಲ್ಲಿ, ಬಹಳ ಸಂತೋಷಬಟ್ಟು, "ಕುದ್ರೆಮಂದಿ ಕೂಡಿ ತೆಗದುಕೊಂಡು ಬಂನ್ನಿ"ಯಂಬದಾಗಿ ಅಪ್ಪಣೆ ಆದ್ದರಿಂದಾ ವ್ಯಯ ಸಂವತ್ಸರದಲ್ಲು ಕೌಉವು[>ಲು] ಪರವಾನೆ ಬರೆಶಿಕೊಂಡು ಹೋಗಿ, ಮಂದಿ ಕುದ್ರೆ ಲಾವಣ ಬರೆಶಿ, ಧರ್ಮ ಮೊಖರೂರ್‍ರು ಆದ ವಿವರಾ:

ಸರ್ವಧಾರಿ ಸಂವತ್ಸರದಲ್ಲು ಯಿಂಗ್ರೆಜರು ಕೊಡಿಯಾಲ ತೆಗದುಕೊಂಡಾಗ್ಯೆ ಖಾಸ ಸ್ವಾರಿ ಸಂಗಡ ಕೊಡಿಯಾಲಕ್ಕೆ ಹೋಗಿ ಯಿದ್ದಲ್ಲಿ, ಲಡಾಯಿದ್ದಲ್ಲು ಹೊಳುರ ಚ[>ಬ]ತ್ತೆರಿ ಮೇಲೆ ಜನ ೧೦೦ ಷ್ಠಾ[>ಠಾ]ರಾಗಿ ಮುಣಗಿ ಹೋದದರಿಂದಾ, ಕೊಡಿಯಾಲದ ಕೋಟೆ ಬಂದ ತರುವಾಯ್ಯಾ ನವಾಬಸಾಹೇಬರು ಬೆಂಗಳೂರು ಕಡಿಗೆ ಚಿತ್ತೈಸುವಾಗ್ಯೆ, ಬಸವರಾಜನ ದುರ್ಗದ ತ್ರೈನಾತಿಗೆ ಅಪ್ಪಣೆ ಆದದರಿಂದಾ, ವಿರೋಧಿ ಸಂವತ್ಸರದ ವಂದು ವರುಷ ಅಲ್ಲೀ ಯಿದ್ದು, ವಿಕೃತು ಸಂವತ್ಸರದಲ್ಲು ಬಂಕಾಪುರದ ರಂಗಪ್ಪರಾಜಗೆ ಹೊಂನಾಳಿ ಕಿಲ್ಲೆವಂನ್ನು ಕೊಟ್ಟ ಯಥಾ ಪ್ರಕಾರ ದಾಸಪ್ಪನಾಯಕರು ಬೆಳಗುತ್ತಿಗೆ ಹೋದರು. ಪುನಹ ಬೆಳಗುತ್ತಿರಲ್ಲು ಯಿದ್ದರ್‍ರೂ.

ಶ್ರೀ ಮದ್ದಕ್ಷೆಣ ಸಾರ್ವಭೌಮತ್ತನಾಯಾಃ। ಟೀಪು ಸುರತ್ತಾನ್ವಯಾಃ। ಸರ್ವಾದಾತ್ತಿ ಪರಾಭವಾಯ ಮಹಕೆ। ಶ್ರೀತುಂಗಭದ್ರಾತ್ತಲ್ವಿ} ದಾನೊದ್ರೆಕ ಶಕೆ ಪರಾಭವನ ಬೊಮಾಸಿದದಾ ಧರ್ಮಕಃ ದೇವ ಬ್ರಾಂಹ್ಮಣ ಸರ್ವ ಮಾಂನ್ಯೆಮಹತೆ ಉತುಂಗ ಭದ್ರಾಪ್ತಯಾ॥

ಶಿಧಾರ್ತಿ ಸಂ। ಶ್ರಾವಣ ಶು ೭ಲ್ಲು। ಶ್ರೀಮತು ನಾ[+ಗ]ಮಂಗಲದ ಪಾರುಪತ್ಯಗಾರ ದಾಸಪ್ಪಯ್ಯನಿಗೆ ಬರೆಶ್ಸಿ ಕಳುಹ್ಸಿದ ನಿರೂಪಃ "ಅದಾಗಿ ಅಯಿಕನಹಳ್ಳಿ ಅಗ್ರಹಾರದ ಪ್ರಜೆಗಳಂನ್ನು ಬೆಟ್ಟಿಮಾಡ ಹೇಳಿ ಅವರ ಉಪದ್ರಾ ಮಾಡುತ್ತಾಯಿಧಿಯೆಂತ್ತೆ ಪ್ರಾಕಾರಭ್ಯವಾಗಿ ಯಿಲ್ಲದೇ ಯಿರುವಂಥಾದಂನು ಯೀಗ ಮಾಡುವದಕ್ಕೆ ಕಾರಣವೇನು? ಪ್ರಜೆಗಳಂನು ವುಪದ್ರಾ ಮಾಡದೇ ಯೀ ಅಗ್ರಹಾರದ ಐವಜು ವಿಶಯದಲ್ಲು, ಪ್ರಜೆಗಳ ವಿಶಯದಲ್ಲು ಕಿರುಕುಳಾ ಬಹಳಾ ಮಾಡಿಸಿ ೨ ಪ್ರಾಕು ಮೇರಿಗೆ ಸರಾಗವಾಗಿ ನಡಶಿಕೊಂಡು ಬರುವದೂ."

ನಂಬರು ೭೪೩

*ಹಿರೆನವಾಬನು ಬಳ್ಳಾರ್‍ರಿ ಠಾಣ್ಯ ಹಾಕಿದ ಹೊರ್ತುಗಾಗಿ ನಮ್ಮ ಶೀಮೆಗೆ ಬರಲಿಲ್ಲಾ. ತಿರ್ಮಲರಾಯರ ಕಡೆಯಿಂದಾ ಖಂಡಣಿ ತೆಗದುಕೊಂಡದೆ, ರಾಜ್ಯ ಅನುಭವ ಆಗಲಿಲ್ಲಾ. ೧೭೮೬ ಪರಾಭವ ಸಂವತ್ಸರಕ್ಕೆ ಟಿಪುಸುಲತಾನನು ಆದವಾನಿ ಠಾಣ್ಯ ಆಕಿ[>ಹಾಕಿ] ಆನೇಗೊಂದಿ ದೇಶಕ್ಕೆ ಬಂದು, ಯೀ ಶೀಮೆ ಬಹಳ ಹಲಾಕು ಮಾಡಿ, ಆ ವರುಷ ಅರಾಜಿಕವಾಯಿತ್ತು. ಆ ಸಂ॥ದಲ್ಲೂ ಗ್ರಾಮ ದಾ[>ಹಾ]ಳಾಗಿ ಹೋಗಿತ್ತು. ಯೀ ದೇಶ ಕನಕಗಿರಿದೇಶ ಸಹಾ ಠಾಂಣ್ಯ ಹಾಕಿ ಟಿಪುಸುಲತಾನನು ಭಾಸ್ವಾರಿ ದಂಡು ಸುದಾ ಬಂದು, ದರ್‍ರೋಜಿ ಕೆರೆಯೊಳಗೆ ಯಿಳಕೊಂಡದ್ದರಿಂದಾ ಆನೇಗೊಂದಿ ಶೀಮೆ ಕನಕಗಿರಿ ಶೀಮೆ ಸಹ ಪ್ಲವಂಗ ಸಂ॥ರದ ಚೈತ್ರಮಾಸದಲ್ಲೀ ಬಬರಜಂಗಗೆ ಜಹಗಿರಿ ಕೊಟ್ಟು, ಹರಪನಹಳ್ಳಿ ಶೀಮೆಗೆ ಹೊಗು ವೈಳ್ಯೆದಲ್ಲಿ, ಯೀ ಕೆರೆ ವಡುಕು ಬಿದ್ದು ಸುಂಡೂರು ಹಳ್ಳ, ಬ್ರಂಹ್ಮಸಮುದ್ರದ ಹಳ್ಳ, ಆವಿನಮಡುವಿನಹಳ್ಳ ಮೂರು ಹಳ್ಳ ಕೂಡಿ ವಡ್ಡಿರೇ[>ವಡಕಿ]ನ ವಳಗೆ ಹಾದು, ಯಿಟಗೆ ಮುಂದೆ ಹಾದು ತುಂಗಭದ್ರಿಗೆ ಬಿಳ್ತೂ ಯಿರಲಾಗಿ, "ಯೀ ಕೆರ್‍ರೆ ಗಂಡಿ ನಿಲ ಹಾಕಿ ಕಟಿಸು"ಯೆಂದು ಜಹಗೀರ್‍ರಿದಾರ ಬಬರಜಂಗಗೆ ಹೇಳಲಾಗಿ, "ಭಾರ್‍ರಿ ಕೇರೆ, ನಂನಿಂದಾ ಕಟ್ಟೊದು ಆಗುದು"ಯೆಂದು ಹೇಳಿಕೊಂಡದರ್‍ರಿಂದಾ ದರೋಜಿ ತಾಲೂಕಾ ಜಹಗೀರಿ ಬಿಡ್ಸಿ, ಸರಕಾರ ತಾಲೂಕು ಮಾಡಿ, ಯಿಲಾಖೆ ತುಕಡಿ ಚಿತ್ರಕಲ್ಲುದುರ್ಗದ ವಳಗೆ ಶೇರ್‍ಸಿ, ತಾಲೂಕು ಸುಂಡೂರು ಕೈ[>ತೈ]ನಾತಿ ಮಾಡಿ, ಅಮಿಲ ರಾಯಾಜಿ ಕಿಲ್ಲೆದಾರ ಪಿರಖಾನಗೆ ಯಿ ಕೆರ್‍ರಿ ಚಂದಾಗಿ ಕಟಿಸುವಂತ್ತೆ ಟಿಪುಸಾಹೇಬನು ಅಪ್ಪಣೆ ಕೊಟ್ಟು ಟಿಪು ದಂಡು ಸುದಾ ಹರಪನಹಳ್ಳಿ ಕಡಿಗೆ ಹೊಯಿತ್ತು. ಅದರಂತೆ ಆಮಿಲ ರಾಯಾಜಿ ಪಿರಖಾನೆ ಯರಡು ವರುಷ ಪ್ಲವಂಗ ಕೀಲಕ ಯೀ ಯರಡು ಸಂವತ್ಸರವು ಕಾಮಗಾರ್‍ರಿ ಮಾಡಿಸಿದರೂ, ಸೌಂಮ್ಯ ಸಂವತ್ಸರಕ್ಕೆ ತಾಲೂಕು ಸೊಂಡೂರು ಬಿಡ್ಸಿ ದರೊದಿ ತಾಲೊಕು ಹೊಸ್ತಾಗಿ ನೇಮಕಾ ಮಾಡಿ ವಡ್ಡು ಬಾಣರಾವಿ . . . . ಯಿರದ[>ದರ] ಕೈಳಗೆ ಶೇರ್‍ಸಿ, ಸೌಂಮ್ಯ ಸಂ॥ಕ್ಕೆ ಯೀ ತಾಲೊಕಿಗೆ ಅಮೀಲ ಮದ[>ಮ]ದಸಾದಕ, ಸದ್ರಿ ಕಿಲ್ಲೆದಾರ ಮಾಹಕಬಖಾನ್ ಸುಧಾ ಸೌಮ್ಯ ಸಂವತ್ಸರಕ್ಕೆ ಕಾಮಗಾರ್‍ರಿ ಮಾಡ್ಸಿ ಅರ್ದಾ ಮಾಗಣಿ ಆಯಿತ್ತು.

ಸಾದಾರಣ ಸಂ॥ರದ ಭಾದ್ರಪದ ಮಾಸದೊಳಗೆ ನರಪತಿ ತಿರ್ಮಲರಾಯರು ಕ್ರಿಷ್ಣಾದ ಕಡಿಯಿಂದಾ ಬಂದು, ಯೀ ರಾಜ್ಯವಂನು ಠಾಣ್ಯ ಹಾಕಿದರ್‍ರಿಂದಾ ಕೆರೆ ಕಟಿದು ಅರ್ಧಾವರಿ

– ಇಷ್ಟು ಭಾಗ ಪು.೫೧೩ರಲ್ಲಿ ಬಂದಿದೆ (ಸಂ).

ಆಯಿತು. ಕಾಮಗಾರ್ರಿ ಪೂರಾ ಆಗಲಿಲ್ಲಾ. ಯಿವರ ಟಾಂಣ್ಯ ಬಿದ್ದ ಮೇಲೆ ಸಾಧಾರಣ ವಿರೋಧಿಕೃತು ಪರಿಧಾವಿ ಸಂ।ರದ ಪರಿಯಂತ್ರ ಮೂರು ಸಂವತ್ಸರ ಆಳಿದರ್ರೂ.

ಪ್ರಮಾದೀಚ ಸಂ॥ರದ ಚೈತ್ರಮಾಸಕ್ಕೆ ಟೀಪುನ ಕಡೆಯಿಂದ ಕಮರಧಿಖಾನನ ದಂಡು ಬಂದು, ಫೌಜು ಸಹಾ ಯಿದರ ದಂದು[>ಡು] ಮುಣಗಿಶಿ ಟಿಪು ಠಾಂಣ್ಯ ಮಡಿಕೊಂಡರ್ರು. ಆ ತರುವಾಯ ಅವರ ಠಾಂಣ್ಯ ಬಿದ್ದಮೇಲೆ ಪ್ರಮಾದೀಚ ಸಂ॥ವತ್ಸರದ ಲಗಾಯಿತು ಕಾಳಾಯುಕ್ತಿ ಸಂ॥ ಕ್ಕೆ ಐದು ಸಂವತ್ಸರದ ವರ್ರಿಗು ದರೋದಿ ತಾಲೂಕಾ ಆಲಾಹಿದೆ ನೇಮಕಾ ಮಾಡಿ, ಯಿದರ ಕೈಳಗೆ ವಡ್ಡು ಅಂತ್ತು ಪುರಾ ಹಾಕಿ, ಆಮೀಲ ಮಹ್ಮಿ[>ಹ್ಮ]ದಲ್ಲಿ ಜಂಗ್ಗನು ಯೆಕಸಾ ಐದು ವರುಷ ಮಾಮಲತ್ತಿಯಾ ಮಾಡಿಕೊಳ್ಳುತ್ತಾ ಬಂದನೂ, ಕೆರೆಯಂನ್ನು ವುಳುದುದ್ದು ಕಟ್ಟಿಸಬೇಕೆಂದು ಅಪ್ಪಣೆ ಆದಲ್ಲಿ ಆರಂಭಾ ಮಾಡ್ಸಿ, ಯರಡು ಶಾಸನ ಫಾರ್ಷಿ ಅಕ್ಷರದಲ್ಲು "ಮಮದ ಶಿಖಿಲು"ಯಂದು ಬರ್ಸೆ ಆಕಿಸಿಯಿಧಾನೇ, ಯರಡು ಕೋಡಿ ಮೇಲೆ ಯರಡ್ಯು ಶಾಸನ ಹಾಕ್ಸಿ ಯಿಧಾನೆ. ಅಂದಿಗು ಕೆರ್ರೆ ಪೂರ ಕಟ್ಟಿಸಂ[>ಸೋ]ಣ ಪುರಾ ಆಗಲಿಲ್ಲಾ. ಕಾಳಾಯುಕ್ತಿ ಸಂ॥ ಮಾಘ ಮಾಸದಲ್ಲೀ ಮಧ್ಯೆ ಅಡಾವುಡಿ ಬರಲಾಗಿ ನರಪತಿ ತಿರ್ಮಲರಾಯರ್ರು ಶಿದ್ಧಾರ್ತಿ ಸಂ॥ರದ ಶ್ರಾವಣ ಮಾಸ ಪರಿಯಂತ್ರ ಆರು ತಿಂಗಳು ನರಪತಿ ತಿಮ್ಮಪ್ಪಯ್ಯನವರ ಠಾಂಣ್ಯವಾಯಿತ್ತು.*

[೧]ಯಿದಕ್ಕೆ ಪೂರ್ವ ದೇವಿಮಟ[>ಠ] ಬಳಿಯಿ ಖಿ[>ಬ]ಸಾಳ ನಾಯಕನು ಕಟ್ಸಿದ ವಡಕಿನ ಹಿಂದೆ ತಾಳಾಪುರದ ಹಳಗುಯೆಂದು ಆಯು[>ಡು]ತ್ತು ಯಿಧಾರ್ರೆ. ಯೀ ನಾಗನಾಥನ ಗುಡಿ ಪಶ್ಚಿಮದ ಗಂಡಿ ಟಿಪುಸುಲತಾನನು ಕಟಿಸಿದಕಿಂತ್ತ ಮುಂಚ್ಚೆ ಸೊಂಡೂರಯಿಂದಾ ಬಂದ

೧. ನಾರ್ರಿಹಳ್ಳ

೧. ಆವ್ವಿಮಡುವಿನಹಳ್ಳ

೧. ವಡ್ರಹಳ್ಳಿಯಿಂದಾ ಬಂದ ಬ್ರಹ್ಮಸಮುದ್ರದ ಹಳ್ಳ

ಯೀ ಮೂರು ಹಳ್ಳ ಕೂಡಿ ಕೆರೆ ಗಂಡಿ ವಳಗೆ ಹಾದು, ಯಿಟ್ಟಿಗೆ ಮುಂದೆ ಹಾದು ತುಂಗಭದ್ರಿ ಸಂಗಮ ಆಗಿಯಿತ್ತು. ಆ ಹಳ್ಳಕ್ಕೆ ವಡಕಿನ ಬಾಯಿ ವಳಗೆ ದರೋಜಿ ವಡ್ಡುಗಟಿಹಾಕಿ, ಸ್ವಲ್ಪ ಮಾಗಾಣ ಅಸ್ತು[>ಆಗ್ತು]ಯಿತ್ತು. ಟೀಪುಸಾಹೇಬನು ಗಂಡಿ ಹಾಕಿದ ಮೇಲೆ ಕೆರ್ರೆ ತೂಂಬಿ ನೀರು ಅವ್ವಾರೆದ್ದು[>ಅವ್ವಲ್ ದುಯ್ಯಂ] ಯರಡು ತುಬ್ಬಿ [>ತೂಬಿನ] ನೀರು ಚಂದಾಗಿ ಹರದು, ಮಾಗಾಣಿ ಅಸ್ತು[>ಆಗ್ತು]ಯಿಧಿತು. ಶಿ[>ದು]ಯಂ ಕೊ[>ತೂ]ಬುವಂದು ನಿಲ ಸ್ವಲ್ಪ ಮಾಗಾಣಿ ಅಸ್ತು[>ಆಗ್ತು]ಯಿದ್ದೆ. ಕೆರೆ ಕಾಮಗ್ರಾರಿ ಪೂರ ಮಾ[ಮು]ಗಿದ ಕಾರಣ ನಾಲ್ಕಕೇ[>ನೇ] ತೂಬಿಗೆ ನೀರು ಹತ್ತೊದು ಯಿಲ್ಲ. ಪಶ್ಚಿಮದ ಕೋಡಿ ಕಡಿಗೆ ಕೋಡಿ ಗದ್ದೆ ತೈಳಗೆ ಅಧಿಕು[>ಆದೀತು]ಯಂದು ವೀರಭದ್ರದೇವರ ಮುಂದೆ ಕೋಡಿ ಬಹಳ ತಗ್ಗಿಶಿದರಿಂದಾ ಗ್ರಾಮದ ನಡುವೆ ಹಾದು, ಕೆಂಜಿಗನ ತೂಪಿನ ಬಳಿ ಯೀ ಮಾಗಾಣು ವಳಗಿಂದಾ ಹಾದು, ಮುಂಚಿನ ನಾರ್ರಿಹಳ್ಳಕ್ಕೆ ಕೋಡಿ ಕೆರೆ ತುಂಬಿದ ವ್ಯಾಳ್ಯಾದಲ್ಲಿ ಹೆಚ್ಚು ನೀರು ಆ[>ಹ]ಳ್ಳಕ್ಕೆ ಹೋಗುತ್ತಾ ಯಿಧಾವೆ.[೧]

೧–೧ ಇಷ್ಟು ಭಾಗ ಪು.೫೧೭ರಲ್ಲಿ ಬಂದಿದೆ (ಸಂ).

ಪೂರ್ವದಲ್ಲಿ ಅನಂತಪುರ, ಕಂಪಣಿ[>ಲಿ] – ಯೀ ಯರಡು ಗ್ರಾಮದ ಅರಸುಗಳು ಪ್ರಹುಡರಾಯರ್ರು ಲಗಾಯಿತ್ತು ಅರಸುಗಳು ೧೨ ಪ್ರಭುಗಳು ಯಿದಕ್ಕೆ ಪ್ರಹುಡರಾಯರವರ ಶಾಲೀವಾಹನ್ಯ ಶಕವರುಷ ೧೩೬೨ನೆಯ ರವುದ್ರಿ ಸಂವತ್ಸರದ ಲಗಾಯಿತ್ತು ಶಕ ವರುಷ ೧೬೫೦ನ್ನು ಸದರ್‍ರಿ ದೊರೆಗಳು ೧೨ ಆಳಿದರ್‍ರೂ, ೧೩ನೇಯವರು ಹೇವಿಳಂಬಿ ಸಂ॥ರದಲ್ಲಿ ನವಾಬ ಹೈದರಲ್ಲಿಖಾನ್ ಬಹದರವರ ಠಾಂಣ್ಯವಾಯಿತ್ತು. ಯಿದು ವಂದು ವರುಷ ಅವಾಂತ್ರವೇವಾಯಿತ್ತು. ಕಲಾಪ ವಿಳಂಬಿ ಸಂವತ್ಸರದಲ್ಲಿ ನವಾಬನ ಮಾನಮಂತ್ರ ಯಿವರು ಆಳಿದು ವರುಷ ೧೨. ದರ ಅಮಲು ನವಾಬಸಾಹೆಬರು ಮಾನಮಂತ್ರಾ, ದರ ಅಮಲು ಟೀಪುಸುಲ್ತಾನ ಮಾನಮಂತ್ರ ಆಳಿದ್ದೂ, ೨.

ಸಾಧಾರಣ ಸಂವತ್ಸರದಲ್ಲಿ ಆರೇರ ಕಡಿಯಿಂದಾ ಘೋರಪಡೆಯವರ ಠಾಂಣ್ಯ ವಿರೋಧಿಕೃತು ಸಂವತ್ಸರದ ವರ್‍ರಿಗೆ ವರುಷ ೨ ಆಳಿದರ್‍ರೂ.

ಪರಿಧಾವಿ ಸಂವತ್ಸರದಲ್ಲಿ ಆನೆಗೊಂದಿಯೆವರು ಅರಸುಗಳು ರಾಜಾ ತಿಮ್ಮಪ್ಪಯ ಠಾಂಣ್ಯ ವಂದು ವರುಷ ಆದದರಿಂದಾ ಯಿದು ವಂದು ವರುಷ ಕಲಾಪ.

ಪ್ರಮಾದೀಚ ಸಂವತ್ಸರದಲ್ಲೀ ಸುಲ್ತಾನವರ ಠಾಣ್ಯ ಆಗಿ, ಬಬರಜಂಗ ಬಾಹೀದರವರ ಜಾಹಗೀರ್‍ರಿ ಮೂರು ತಿಂಗಳು ನಡಸಿತ್ತು. ಅಷ್ಟರೊಳಗೆ ಮಹಮ್ಮದಲ್ಲೀಬೇಗ ಅಮಲದಾರನು ಹಜಾರುಯಿಂದಾ ದರುಜಿ ಕೆರ್‍ರಿ ಕಾಮಗಾರ್‍ರಿ ವಳತ್ತಿಗೆ ಮಾಡಿಕೊಂಡು ಬಂದದರಿಂದಾ ಮಹ್ಮದಲ್ಲೀಬೇಗ ಕೆಳಗೆ ೧೭೫೫ ರಾಕ್ಷಸ ಸಂವತ್ಸರದ ವರಿಗೆ ವರುಷ ೩ ನಡಿತ್ತು ಕಲಾಪ.

ನಳ ಸಂವತ್ಸರದಲ್ಲೀ ಆಯಿದುಸಾವಿರ ವರುಷಕ್ಕೆ ವಬ್ಬ ಅಮೀಲ ಮೊಖರೂರ್‍ರು ಮಾಡಿಕೊಂಡು ಬಂದದರಿಂದಾ ಅದರಿಂದಾ ಯಿತಾಕಿತ್ತಿಗೆ ಅಹಂಮ್ಮದಸಾಹ್ಬೆಯೆಂಬೋ ಅಮೀಲದಾರ ಮಾಡಿಕೊಂಡು ಬಂದದರಿಂದಾ, ಕಲ್ಯಾಣಿ ಮೊಹದಿನಸಾಬರ ಅಸಬಗಿರಿಯಲ್ಲಿ ಮೊಳಕಾಲಮುರಿದಿ[>ವಿ]ನ ವಳಗೆ ಕಾಳಾಯುಕ್ತಿ ಸಂವತ್ಸರದ ವರ್‍ರಿಗೆ ಮೂರು ವರುಷ ನಡದು ಬಂತು, ಕಲಾಪ.

ಶಿದ್ಧಾರ್ತ್ತಿ ಸಂವತ್ಸರದಲ್ಲೀ ರಾಜಾ ತಿಂಮ್ಮಪ್ಪಯ್ಯ ಠಾಂಣ್ಯ ಆಗಿ, ಶ್ರಾವಣಮಾಸದ ವರಿಗು ಮೂರು ತ್ತಿಂಗಳು ನಡಿತ್ತು.

ಯೀಚಿಗೆ ಪೂರ್ಣಯ್ಯನವರ ಠಾಂಣ್ಯ ಮಾಘ ಫಾಲ್ಗುಣ ಮಾಸದ ವರಿಗು ಚಿತ್ರದುರ್ಗದ ಚನ್ನಮಲ್ಲಪ್ಪನವರ ಮಾರಿಪತ್ತು ಪೂರ್ಣ್ಯೆಯ್ಯನವರಿಗೆ ನಡಿತು, ಕಲಾಪ.

ಶಿಧ್ಧಿರ್ತ್ತಿ ನಾಮ ಸಂ॥ ಫಾಲ್ಗುಣಮಾಸ ಆರಭ್ಯವಾಗಿ ಹ[>ರೌ]ದ್ರಿ ಸಂವತ್ಸರದ ಮಾರ್ಗಿಶರ ಮಾಸದ ವರಿಗೆ ತಿಂಗಳು ೯ಕ್ಕೆ ಮೊಗಲಾಯಿ ಠಾಂಣ್ಯ ಮಿರಸಾಹೆಬನ ಮಾರಿಪತ್ತಿನಲ್ಲಿ ನಡಿತು.

ರಉದ್ರಿ ಸಂವತ್ಸರದ ಮಾರ್ಗಿಶರ ಮಾಸದಲ್ಲಿ ಕುಂಪಣಿ ಕರ್ನಲ್ ಮಂಡ್ರೊಲ ಸಾಹೇಬರು ಅಮಲು ಆದದರಿಂದಾ ಯೀ ಶುಕ್ಲ ಸಂ॥ರದ ವರಿಗೆ ಕುಂಪಣಿ ಅಮಲು ನಡಿಯುತ್ತಾ ಬರುತ್ತಾಯಿದೆ.

ಬಿದಿರೂರು

ನ್ರಂ – ೭೪೫

೨೧ ಅರಸಗುಳು ಆಳುತ್ತಾ ಯಿರುವಾಗ್ಯೆ ೨೨ನೆಯ ನವಾಬರು ನವಾಬಸಾಹೇಬರವರು ಬರುವ ಪರಿಯಂತ್ರ ಪ್ರಾಕು ಮೇರಿಗೆ ನಡಿಯತ್ತಾ ಬಂತ್ತು* ಆ ತರುವಾಯಾ ಚಿತ್ರಭಾನು ಸಂವತ್ಸರದಲ್ಲು ನವಾಬರು ಬಿದರೂರಿಗೆ ಬಂದು ಯುಧವಂನು ಮಾಡಿ, ಯಿಕ್ಕೇರ್‍ರಿ ಅರಸಗಳಂನು ಹಿಡಿದು ಸಂಸ್ಥಾನವನು ತಂಮ್ಮ ಸ್ವಾಧೀನ ಮಾಡಿಕೊಂಡು ಯೀ ಸಂಸ್ತಾನದೊಳಗೆ ಸೆರ್‍ರಿರುವಂಥಾ ಜನರಿಗೆಲ್ಲಾ ಕಉಲು ಕಾಗದಗಳ ಬರೆಶಿಕೊಡುತ್ತಾ, ಯೀ ಚಉಷ್ಠ[>ಟ]ರಿಗಳು [>ಗೂ] ಕಉಲು ಕಾಗದವಂನ್ನು ಬರದು, ಬಜಪೆ ಕ್ರಿಷ್ಣಾಯಂಬವನ ಕೈಯ್ಯ ಕಳುಹ್ಸಿಕೊಟ್ಟಲ್ಲೀ, ಚಉಟ್ಟರು ನವಾಬಿನವರ್‍ರು ಘಟ್ಟಾ ಯಿಳಿದು ಕಾರ್ಕಳಕ್ಕೆ ಬಂದ ತರ್‍ರುವಾಯಾ ಹೋಗಿ ಕಾಣಿಶಿಕೊಂಡಲ್ಲೀ ಯೆದ್ದು ಕುಂಡ್ರಿಶಿಕೊಂಡು, ಸಂನ್ಮಾನ ಬಹುಮಾನವಾಗಿ ಯಿವರ್‍ರು ಕೊಟ್ಟಂಥಾ ಉಡುಗೆರೆಯಂನು ತಾಉ ತಗೆದುಕೊಂಡು, ಅನಂತರದಲ್ಲೀ ಸಂಗಡಲೆ ಮಾ[>ಮೂ]ಡಬರ್‍ರಿಗೆ ಬಂದ ಬಳಿಕಾ, ನವಾಬರು ಪಂನ್ನೆಚಾರು ಮಠದಲ್ಲು ಉಳಿದು, ಅಲ್ಲಿ ಪುನಹಃ ನಿಂಮ್ಮ ನಿಲಯ ವಿಭವ ಕೂಡಿಕೊಂಡು ಭೇಟಿಗೆ ಬುರವ ಹಾಂಗೆ, ಚೋಪ್ರದಾರನ ಕೈಯ್ಯ ಹೇಳಿ ಕಳುಹ್ಸಿದ ಪ್ರಕಾರ ತಮ್ಮ ಬಿರುದು ಬಾವಲಿ ಹಿಡಿಶಿಕೊಂಡು, ಪಲ್ಲಕ್ಕಿ ಹತ್ತಿಕೊಂಡು ಹಿಡಿ ತೇಜಿ ಕುದ್ರಿ ಮುಂತ್ತಾದ ವೈಭವದಿಂದಾ ತಂಮ್ಮ ಸಾಮಾಜಿಕರ ಸಹ ಕೂಡಿಕೊಂಡು, ಭೇಟಿಗೆ ಹೊದಲ್ಲಿ, ಯೀ ಬರುವಂಥಾದಂನ್ನು ವುಪ್ಪರಿಗೆ ಕಡಾಕಟ್ಟಿಲ್ಲೀ ಕುಳಿತು ನೋಡುತ್ತಾ ಹಾಗೆ ಯೆದ್ದು, ಬಾಗಲಿ ಪರಿಯಂತ್ರ ಬಂದು ಚಉಟ್ಟರನ ಕೈ ಹಿಡಿದು ಕರಕ್ಕೊಂಡು ಹೋಗಿ, ತಮ್ಮ ಸಮೀಪದಲ್ಲಿ ಕೂಡ್ರಿಶಿಕೊಂಡು, ಯಿವರ ಕಡೆ ಸಾಮಜಿಕರ ತಂಮ್ಮ ಯಡಬಲದ ಸಾಲಿನಲ್ಲು ಕೂಡ್ರಿಶಿ, ಚಂದ್ರಶೇಖರ ಚಿಕ್ಕರಾಯ ಚಉಟರ್‍ರಿಗೆ ವುಡುಗರೆಯಂನು ಮಾಡಿ, ಯಿವರ ಕ್ಷೇಮಸಮಾಚಾರ ಯಾವೊತ್ತು ವಿಚಾರ್‍ರಿಶಿ, ಯಿವರ ಶೀಮೆ ಯಿವರಿಗೆ ಬಿಟ್ಟುಕೊಟ್ಟು, ತೆರಿಗೆ ನಿಗದಿ ಮಾಡಿದ್ದು ೧೪೦೦೦೯೦. ಆ ಬಳಿಕಾ ಸ್ವಭಾನು ಸಂ॥ಕ್ಕೆ ನಿಗದಿ ಆದ್ದು ಗ ೧೯೦೦೦೯೦. ಆಮೇಲೆ ಪಾರ್ಥಿವ ಸಂ।ವತ್ಸರದಲ್ಲು ಶೀಮೆಯು ಹರವರ್‍ರಿ ಆಗಿ, ಮಂಗಲೂರ ಹೊಬಳಿಗೆ ಬದುಕು ಮಾಡುವ ಶೆಖಲ್ಲೀಗೆ ಅಪ್ಪಣೆ ಬಂದ ಪ್ರಕಾರ ಮನೆತನದವರ ಶೀಮೆಗಳನ್ನೆಲ್ಲ ಮಂಗಳೂರು ಹೋಬಳಿಗೆ ಸೆರ್‍ರಿಸಿಕೊಂಬಾಗ್ಯೆ, ಚಉಟೀರ ಸೀಮೆಗು ಕೊಡಿಯಾಲದಿಂದಾ ವಿಂಗಡವಾಗಿ ಪ್ರತ್ಯೇಕ ಬದುಕು ಮಾಡುವ ಬಗೆದು ಯಾವೊತ್ತು ಹಣಕಾಸಂನ್ನು ಕೊಡೆಯಾಲಕ್ಕೆ ಕಟ್ಟಿಸಿದರ್‍ರು.

ಪಾರ್ಥಿವ ಸಂವತ್ಸರಕ್ಕೆ ನಿಗದಿ ೧೨೧೫೮೪. ಆ ಬಳಿಕಾ ಸರ್ವಜಿತು ಸಂವತ್ಸರದಲ್ಲು ಕುಂಪಣಿಯವರು ಕೊಡೆಯಾಲದ ಕೊಟೆಯಂನು ತೆಗೆದುಕೊಂಡು ಯಿರಲಾಗಿ, ಅದಂನು ಪುನಹಃ ಬಿಡದೆ[>ಡಿಸಿ] ತೆಗೆದುಕೊಂಬ ನಿಮಿತ್ತಾ, ನವಾಬರು ಕೊಡೆಯಾಲಕ್ಕೆ ಬರುವಾಗ ಮೂಡಬಿದ್ರಿಗೆ ಬಂದಲ್ಲೀ ಅಲ್ಲಿ ಹೋಗಿ ಚಂದ್ರಶೇಖರಚಿಕ್ಕರಾಯ ಚಉಟೆರ್‍ರು ಭೇಟ್ಟಿ ಮಾಡಿಕೊಂಡು ಶೆಖರ್ಲಿಯು[>ಶೇಖಲ್ಲಿಯು] ಶೀಮೆಯಂನು ಕೈ ತಪ್ಪಿಸಿ ಮನೆ ಬದುಕು ವಸ್ತು ವಡವೆ ಮುಂತ್ತಾಗಿ ಸರ್ವಾಸ್ಥಾಪಹಾರ ಮಾಡಿದಾ. ಅದರಿಂದಾ ನಿತ್ಯ ಖರ್ಚಿಗೆ ಅನುಸಾರವಿಲ್ಲದೆ ದಣಿಕೊಂಬದಾಗಿ ಯಿಧೆ" ಯೆಂತ್ತಾ ಹೆಳಿಕೊಂಡಲ್ಲೀ, ಆವಾಗ್ಯೆ "ನಿಮ್ಮ ಸೀಮೆ ನೀಉ ಮಾಡಿಕೊಂಡು ಹದಿನೆಂಟು ಸಾವಿರ ವರಹಂನ್ನು ಸರಕಾರಕ್ಕೆ ಕೊಟ್ಟು, ವುಳದ ಹಣವಿನಿಂದಾ ನಿಂಮ್ಮ ಜೀವನ ಮಾಡಿಕೊಳ್ಳಿ"ಯಂತಾ

– ಇಷ್ಟು ಭಾಗ ಪು. ೨೯೩–೨೯೪ರಲ್ಲಿ ಬಂದಿದೆ (ಸಂ).

ಹೇಳುವಾಗ್ಯೆ "ನೀವಾದರೆ ದರಬಾರು ದೂರಸ್ತರಾಗಿ ಯಿರುತ್ತಿಧಿರ್ರಿ. ಯೀ ಮಂಗಲೂರ ಹೊಬಳಿ ಬದುಕು ಆದರ್‍ರೆ ಶೇಖರ್ಲಿ[>ಶೇಖಲ್ಲಿ] ಆಧೀನದಲ್ಲಿ ಯಿಧೆ. ಅವನ ಕಡೆಯಿಂದಾ ನಿಶಾಯಿಸ ತೀರದು. ಯಿಲ್ಲದ ತರಳೆ ತಾಪತ್ರಯಗಳ ಬರದು ಪ್ರಾಣದ ಮೇಲೆ ತಂದಾನು. ಅರಸುತನ ಮಾಡುವರ ಮನಸ್ಸು ವಂದೇ ಪ್ರಕಾರ ಯಿರುವದಲ್ಲ. ನಮಗೆ ಯೇನಾದರ್‍ರು ಯಿನಾಮ ಬಿಟ್ಟು ಕೊಟ್ಟುರ್ರೆ ಕಾಲಕ್ಷೇಪ ಮಾಡಿ ಕೊಂಡಿಧೆವು" ಯಂತ್ತಾ ಹೇಳಿ ಕೊಂಡಲ್ಲಿ, ಆಗ್ಯೆ ಪರವಾನೆ ಬರೆಶಿಕೊಟ್ಟು ಬಿಟ್ಟುಕೊಟ್ಟ ಯಿನಾಮು ಗ ೩೦೦ ೯೦. ಮೆಲಿವಾಶೀ ಗ ೧೫೫ ೯೧ ಉಭಯಂ ೪೫೫ ೯೧ನ್ನೆ.

ಆ ಬಳಿಕಾ ಯಿವರ ಮಗ ಚಂನ್ನರಾಯ ಚವುಟರು ಶಕ ವರುಷ ೧೬೯೧ನ್ನೆ ವಿರೋಧಿ ಸಂವತ್ಸರದ ಶ್ರಾವಣ ಶಕ ಆರಭ್ಯ ಅನುಭವಿದರ್‍ರು.*

ಯಿಕ್ಕೇರಿ ಸಂಸ್ಥಾನದ ಅರಸು ಚಂನಬಸಪ್ಪನಾಯಕರ್‍ರು ಚಿತ್ರಭಾನು ಸಂವತ್ಸರದಲ್ಲು ನವಾಬರು ಕೊಡಿಯಾಲಕ್ಕೆ ಬಂದು ಯಿರುವಾಗ್ಯೆ, ಅರಸುಗಳು ಅಲ್ಲಿಗೆ ಹೋದಲ್ಲಿ, ಕಂಡನೇಗ ೭೦೦೦೯೦ ನಿರ್ನಯವಾಗಿ ವಂದು ವರುಷ ಕೊಟ್ಟು, ಯರಡನೇ ವರುಷಕ್ಕೆ ಶಖರ್ಲಿ[>ಶೇಖಲ್ಲಿ] ಯಂಬವನು ಮಂಗಲೂರ ಅಧಿಕಾರ ಮಾಡಿಕೊಂಡು, ಅರಸುಗಳ ಹಿಡಿತರಿಶಿ, ಪಹರೆಯಲ್ಲು ಯಿಟ್ಟ. ಯಿವರ ಅರಮನೆಯೋ ಹೊತ್ತು ಜಪ್ತಿ ಮಾಡಿ, ಚಿಂನ್ನ ಬೆಳ್ಳಿ ನಾಂಣ್ಯ ಉಳಿದ ದನಕರು ಕಂಚು ತಾಂಬ್ರ ಮುಂತ್ತಾದ ಬದುಕು ಯಾಹೊತ್ತು ಗ ೬೦೦೦೦೯೦ ಬದುಕು ತರಿಶಿಕೊಂಡ. ಯಿದರ ಮೇಲೆ ಗ ೭೦೦೦೯೦ ನಜಿರಾನೆ ಮಾಡಿ ಶೀಮೆ ಯಾಹೊತ್ತು ಬೇರೆ ಬೇರೆ ಬದುಕು ಮಾಡುವರ ಕಳುಹ್ಸಿಕೊಟ್ಟು, ಶೀಮೆ ಯಾವತ್ತು ಸರಕಾರಕ್ಕೆ ದಾಖಲ ಮಾಡಿ, ನವಾಬರ ಬೆಟ್ಟಿ ಯಿನಾಮು ೬೦೯೦ ಪರಿಯಂತ್ರ ಯಿನಾಮು ನಡಕೊಂಡು ಶುಕ್ಲ ಸಂ॥ದ ಪರಿಯಂತ್ರಾ ನಡಕೊಂಡುಬಂತ್ತು.

ನಂ. ೭೪೬

ನಗರದ ವೆಂಕಟಪ್ಪನಾಯಕರ ದಿವಸದಲ್ಲಿ ಜಂಗಮ ಸಂಸ್ತಾನವಾಗಿದದ್ದು, ಚಿತ್ರಭಾನು ಸಂವತ್ಸರದಲ್ಲು ದೊಡ್ಡ ನವಾಬರ್‍ರು ಯಾವತ್ತು ಜಂಗಮರ ಸಂಸ್ತಾನ ತೆಗದುಕೊಂಡ ಮೇಲೆ, ಸ್ವಭಾನು ಸಂ ॥ ಕಂಡಲೂರ ಕೋಟೆಯಂನು ಮುರಿದು ಆ[>ಹಾ]ಕಿದರು. ಆಮೆಲೆ ಮಾಗಣಿ ಮಾತ್ರ ಮಣಿಗಾರತನ ಮಾಡುವರ ಮುಖಾಂತ್ರ ಕಾ[>ತಾ]ರಣ ಸಂವತ್ಸರದ ವರಿಗೆ ನಡದು ಬಂತ್ತು.

ಯೀ ಮೇರ್‍ರಿಗೆ ಹದಿನಾರು ಮಾಗಣಿಯಂನು ಯೀ ಕುಂದಾಪುರಕ್ಕೆ ದಾಖಲೆಮಾಡಿ ಕಸಬೆಯುಂಬದಾಗಿ ವೀರಂವಾಜಿ ಕಾಲಕ್ಕೆ ಆಖ್ಯೆರಿಗೆ ಮಾಡಿದರ್‍ರೂ. ಬಸುರೂರು ಮಹಾಲಿಂಗೇಶ್ವರದೇವರಿಗೆ ನಡಿಯುವದು ಬಿಡ್ಸಿದರು. ಸರಕಾರ ಜಪ್ತಿಮಾಡಿಕೊಂಡು ಅಲ್ಲೀ ಪಾರುಪತ್ಯಗಾರು ವಗ್ಯೆರೆಯವರು ಯಿದ್ದರು. ಯೀ ಮೇರೆ ಯಿರುತ್ತಾ ಯಿರಲೀಕ್ಕೆ ಯರಡು ವರುಷಕ್ಕೆ ದೊಡ್ಡ ನವಾಬರು ಚಿತ್ರಭಾನು ಸಂವತ್ಸರದಲ್ಲಿ ನಗರವಂನು ತೆಗೆದುಕೊಂಡರು. ಆಮೇಲೆ ಯೀ ಕುಂದಾಪುರವಂನು ದೊಡ್ಡ ನವಾಬರ ತಾಲ್ಲೂಕ ಆಯಿತ್ತು. ಸದ್ರಿ ಕಾಲದಲ್ಲೀ ನಗರದ ೧೮ ಲಕ್ಷ ಶೀಮೆ ಯಾವತ್ತು ಪ್ರದಾನ ವೆಂಕಟಪ್ಪಯ್ಯನ ವಶಾ ಮಾಡಿದರ್‍ರು.

ಯೀ ಕುಂದಾಪುರ ಆ ಕಾಲದಲ್ಲಿ ೪೫ಸಾವಿರ ಸೀಮೆ ಬೇರಿಜು ಮಾಡಿ, ಯಿಲ್ಲಿ ವಬ್ಬ ಆಮೀಲದಾರ ಗಂಗಾಧರಯ್ಯನೆಂಬ್ಬವನ ಯಿಟ್ಟರು. ಯೀತನು ಯರಡು ವರುಷ ಮಾಡಿದನು. ಸದ್ರಿ ೨ ವರುಷದೊಳಗೆ ಗಂಗಾಧರಯ್ಯನ ಕಾಲದಲ್ಲಿ ದೊಡ್ಡ ನವಾಬರು ಯಿಲ್ಲಿಗೆ ಬಂದು ಅರಮನೆಯಲ್ಲಿ ಯಿದ್ದುಕೊಂಡು ಮನಸಿಗೆ ಕುಶಾಲು ಕಂಡದರ್‍ರಿಂದಾ ಕುಶಾಲಪುರವೆಂಬ್ಬ ಹೆಸರು ಯಿಟ್ಟರು. ಗಂಗವಳ್ಳಿ ವಳಗೆ ಮಚ್ಚಗಳು ಬಂದದರಿಂದಾ ಯಿದಕ್ಕೆ ಮಚ್ಚಾಲೀಬಂದರು ಯಂಬ ಹಾಗೆ ಹೆಸರು ಯಿಟ್ಟರ್‍ರೂ. ಯೀ ಮೇರ್‍ರಿಗೆ ೧೫ ದಿವ್ಸ ಯಿದ್ದು ಅನಂತರದಲ್ಲಿ ಶ್ರೀರಂಗಪಟ್ಟಣಕ್ಕೆ ಹೊದರ್‍ರೂ.

ಯೀ ಮೇರ್‍ರಿಗೆ ಯಿಪ್ಪತ್ತೊಂದು ವರುಷ ಅಮೀಲದಾರು ಜನ ೮ ಮಂದಿ ಆಳಿದರ್‍ರು. ಶುಭಕೃತ ಸಂವತ್ಸರದ ಪರಿಯಂತ್ರಕ್ಕು ಯಿದ್ದರ್‍ರು. ನಗರದಲ್ಲಿ ಆದವಾನಿ ವೆಂಕಟಪ್ಪಯ್ಯನವರು ವರುಷಗಳು ೩, ರಾಜಾರಾಮರ್‍ರು ವಿಕಾರ್‍ರಿ ಸಂವತ್ಸರದ ವರಿಗೆ ಯಿದ್ದರೂ. ಅನುತ್ತರದಲ್ಲಿ ಸೆಖಿ ಅಯಾಜಿ ಶುಭಕೃತ ಸಂವತ್ಸರದ ಪರಿಯಂತ್ರ ಯಿದ್ದನೂ, ಯೀತನ ಕಾಲದಲ್ಲಿ ದೊಡ್ಡ ನವಾಬರು ಕನವೆ ಕೆಳಗೆ ಆರು ಕಾಟು ಮೇಲೆ ಸತ್ತು ಹೊದದರಿಂದಾ ಯೀ ಸೆಖಿ ಅಯಾಜನು ಯಿಂಗರ್‍ರಿಜಿ ಜನ್ರ ಕೂಡಿಕೊಂಡು ನಗರವನ್ನು ಅವರಿಗೆ ಠಾಣ್ಯ ಆ[>ಹಾ]ಕಿಶಿ ಕೊಟ್ಟು, ತಾನು ಅವರಲ್ಲೆ ಯಿದ್ದು ಯಿದ್ದಲ್ಲಿ ಯರಡು ತಿಂಗಳು ಯಿಂಗರಿಜರ್‍ರು ನಗರದ ಶೀಮೆ ವಳಗೆ ಸ್ವಾಧೀನವಾದ ಶೀಮೆಯಂನು ಅನುಭವಿಸುತ್ತಾ ನಗರದಲ್ಲಿ ಯಿದ್ದರು. ಅನಂತ್ತರ ಕನವೆ ಕೆಳಗಿಂದಾ ಟೀಪುಸುಲ್ತಾನ್ ಫೌಜು ಸಹ ತೆಗೆದುಕೊಂಡು ಬಂದು ನಗರದಲ್ಲಿ ಲಡಾಯಿ ಮಾಡಿ ತೆಗದುಕೊಂಡರು. ಟೀಪುಸುಲ್ತಾನ್ ಸಾಹೆಬರ್‍ರು ಠಾಣ್ಯ ಹಾಕಿದರ್‍ರು. ಆಮೇಲೆ ನಗರದಲ್ಲಿ ಯಿದ್ದ ಮಂದ್ದಿ ಯಿಂಗ್ರೇಜಿಯವರು ಅಯಾಜು ಸಾಹೇಬ ಸಹಾ ಕುಂದಾಪುರಕ್ಕೆ ಬಂದು, ಯಿಲ್ಲಿದ್ದ ಸಾಮಾನು ಸರಂಜಾಮೆ ವಗ್ಯೆರೆ ಖಜಾನಿ ಸಹ ತೆಗೆದುಕೊಂಡು ಕುಂದಾಪುರದಲ್ಲಿ ಯಿದ್ದ ಅರಮನೆಯನ್ನು ಸುಟ್ಟು, ಸಮುದ್ರದಲ್ಲಿ ದೊಡ್ಡ ಹಡುಗುನ ಮೇಲೆ ಹತ್ತಿಕೊಂಡು ಹೊ[>ಓ]ಡಿದರ್‍ರೂ.

ಅಲ್ಲಿ ಟೀಪುಸುಲ್ತಾನ ಸಾಹೇಬರು ಶುಭಕೃತು ಸಂವತ್ಸರದಲ್ಲಿ ಯೀ ತಾಲೂಕು ಯಲ್ಲಾ ಬಂದೊಬಸ್ತು ಮಾಡಿ, ನಗರ ಎಂಬತ್ತು ಲಕ್ಕ ಶೀಮೆಯಂನ್ನು ಕೋಟಿ ಸರಸಪ್ಪಯ್ಯನ ವಶಾ ಮಾಡಿದರ್‍ರು. ಯೀ ಕಾಲಕ್ಕೆ ಯೀ ಕುಂದಾಪುರ, ಕಾರುಕಳ, ಬಾರುಕೂರು ವಗ್ಯೆರಾ ಮೂರು ಹೊಬಳಿ ಸಹ ಲಕ್ಷ ಅರವತ್ತು ಸಾವಿರ ಶೀಮೆಯನ್ನು ಮಹಂಮದಲ್ಲಿಖಾನು ಜನತ್ಯೆ[>ತಯ್ಯ]ಗೆ ಕೊಟ್ಟರು. ಯೀತನು ಪ್ಲವಂಗ ಸಂವತ್ಸರದ ವರಿಗೆ ಮಾಡಿದನು. ಅನಂತರದಲ್ಲೀ ಯೀ ಕುಂದಾಪುರ ವಂದು ಹೊಬಳಿ ೪೫ ಸಾವಿರ ಶೀಮೆಯನು ಮಳಲಿ ಅಬ್ಬುಶ್ರರಿಗೆ ಕೊಟ್ಟರು. ಅನಂತ್ತರ ಮಹಂಮದ ಶಿರೀಫಗೆ ಆಯಿತ್ತು. ವರುಷ – ೨. ಅನಂತ್ತರ* ಮಹಂಮದ ಸೈದು ವರುಷ ೩ ಮಾಡಿರ್‍ರು. ಅನಂತರ* ಗುಲಾಮಲ್ಲೀ ವರುಷ ೩ ಮಾಡಿದರು. ಆನಂದ ಸಂವತ್ಸರದ ಪರಿಯಂತ್ರ ನಡಿಯತು. ಅನಂತ್ತರದಲ್ಲಿ ಸಾಧಾರಣ ಸಂವತ್ಸರದಲ್ಲಿ ಮರಾಟೆ ಕಡೆ ಪೆಂಡಾರೆರ್‍ರು ವಂದು ಹಳ್ಳಿನ ಲೂಟಿಮಾಡಿಕೊಂಡು ಹೋದರು. ಕುಂದಾಪುರಕ್ಕೆ ಬರಲಿಲ್ಲಾ. ನಗರದ ಬೂದಿ ಬಸವಪ್ಪನಾಯಕರ

---

* ಅನಂತಪುರ (ಮೂ).

ಮಗ ಚೆಂನ್ನಬಸವಪ್ಪನಾಯಕನಾಗಿಯಿದ್ದನೂ. ವಂದಾನುವಂದು ದಿವ್ಸ ಯಿವನ ತಾಯಿ ಸದ್ರಿ ಚೆಂನ್ನಂವಾಜಿ[>ವೀರವ್ಮಾಜಿ]ಯೆಂಬವಳು ತಂನ್ನ ಗಂಡ ತೀರಿದ ಬಳಿಕ ತಾನು ಕಾರಬಾರಿಸ್ತಳಾಗಿಯಿದ್ದಳು. ಯಿರ್‍ರುವಾಗ್ಯೆ ನಿಂಬಯ್ಯಯಂಬವನ ಕೂಡಿಕೊಂಡು ಮಲಗಿಯಿದ್ದಲ್ಲಿ ಅದಂನು ಯೀಕೆಯ ಮಗ ಸದ್ರಿ ಚೆಂನ್ನಬಸವಪ್ಪನಾಯಕರು ಕಂಡವನಾಗಿ, ತಂನ್ನ ಮೈಮೇಲೆ ಯಿದ್ದ ಕಂದಿನ ಶಲ್ಯ ಅವರ ಮೇಲೆ ಹಾಕಿದನೂ. ಅವರು ಯೆಚ್ಚರವಾಗಿ ನೋಡಿ, ಯೀತನು ತಿಳಿದನುಯಂತ್ತಾ ಯಿವರು ತಂಮ್ಮ ಮನಸ್ಸಿನಲಿ ತಿಳಿಕೊಂಡು, ತಂನ್ನ ಮಗನಿಗೆ ಯೀ ದಿವ್ಸ ಅಬ್ಯಂಗನೆ ಮಾಡಿಸಬೇಕೆಂತ್ತಾ ಜೆಟ್ಟಿಗಳ ಕರಸಿ ಯೆಂಣೆ ಹಾಕುವಲ್ಲಿ ಅವಂದ್ಯರು ನರ ತ್ರಿಕ್ಕಿ ತಿರುಗಿಶಿ, ಕೈಕಾಲು ತಿರುವಿ ಗುಂಡಿ ತೆಗದು ಹೂಣಿ ಮಂಣುಹಾಕಿ ಹೊದರೂ. ಯೀ ಚಂನಬಸವಪ್ಪನಾಯಕನ ಸ್ನೆಹಿತರು ತಿಳಿದು ಆ ಕ್ಷಣ ಬಂದು ಮಂಣು ತೆಗೆದು, ಅವನ ಅಂತರಂಗದಲ್ಲು ಹೊತ್ತುಕೊಂಡು ಹೋಗಿ ಅಡವಿ ವಳಗೆ ಯಿಟ್ಟುಕೊಂಡು ಬೀಶಿ, ಆರೈಕೆ ಮಾಡಿದಲ್ಲಿ, ಸ್ವಲ್ಪ ವುಸುರು ಯಿದ್ದಕಾರಣ ಮತ್ತೂ ಆರೈಕೆಮಾಡಿ ಬದುಕಿಶಿದರ್‍ರು. ಮತ್ತೆ ಶ್ರೀರಂಗಪಟ್ಟಣಕ್ಕೆ ತೆಗದು ಹೋಗಿ ಯಿದ್ದರ್‍ರೂ.

ಯೀ ಚೆಂನ್ನಂಮಾಜಿ[>ವೀರಮ್ಮಾಜಿ]ಯು ಪ್ರಧಾನಿ ವೀರಭದ್ರೈಯ್ಯನ ಯಿಟ್ಟುಕೊಂಡು ತನ್ನ ಗಂಡ ಆಳಿಕೊಂಡು ಯಿದ್ದ ಮೇರಿಗೆ ರಾಜ್ಯಪರಿಪಾಲನೆ ಮಾಡಿಕೊಂಡು ಯಿದ್ದಳು.

ಯೀ ಪ್ರಕಾರ ಯಿರುತ್ತಾ ಯಿದ್ದಲ್ಲಿ ಯಿಸವಿ ೧೭೬೩ನೆಯ ಚಿತ್ರಭಾನು ಸಂವತ್ಸರದಲ್ಲು ನವಾಬರು ಹೈದರಲ್ಲಿಖಾನ್‌ನವರು ನಗರದಲ್ಲಿ ಹೆಂಗಸು ಆಳಿಕೊಂಡು ಯಿದ್ದಾಳೆಯಂತ್ತಾ ಮೈಸೂರಿಂದಾ ಫೌಜು ತೆಗೆದುಕೊಂಡು ಬಂದು, ನಗರ ಹಲ್ಲಾಮಾಡಿ ರಾಜ್ಯ ತೆಗೆದುಕೊಂಡು ಯಿದ್ದರ್‍ರೂ.

ಅವರ ಮಗ ಟೀಪುಸುಲ್ತಾನರು ಯೀಸ್ವಿ ೧೭೬೮ಕೆ ಕಾಳಾಯುಕ್ತಿ ಸಂವತ್ಸರದ ವರಿಗೆ ರಾಜ್ಯಾ ಆಳುತ್ತಾ ಯಿರುತ್ತಿದ್ದರ್‍ರೂ.

ನಂ – ೭೪೯ – ಬಳ್ಳಾರಿ ತಾಲೊಕು ದೊಡ್ಡಪ್ಪನಾಯಕನ* ದೊರೆನತದಲ್ಲು ಬಾಹದರನು ದಂಡು ಸುಧಾ ಬಂದು, ಬಳ್ಳಾರಿ ಕೋಟಿಗೆ ಮುತ್ತಿಗೆ ಹಾಕಿ ಕೆಲವು ದಿವಸಾ ಲಡಾಯಿ ಮಾಡೊವಾಗ್ಯೆ, ಕಿಲ್ಲೆ ಸ್ವಾಧೀನಕ್ಕೆ ಬಾರದೇ ಹೊಗಿ ಕೋಟೆಯಲು ಯಿಹೊ ಅವರಿಗೆ ಆರೇರ ಮದ್ದತ್ತು ಬಾಹೊದು ಸಮಾಚಾರ ಕೇಳಿ, ಹುಂಡೇಕಾರ ಮುಖಾಂತ್ರ ಸಲ್ಲಾ ಮುಗದು ಖಂಡಣಿ ರೊಕ್ಕ ಶೀನಪ್ಪನಾಯಕನ ಕಡೇಯಿಂದಾ ಪರನಿಶಾವಾದದರಿಂದ್ದಾ ಬಾದರನ ದಂಡು ಶ್ರೀರಂಗಪಟ್ಟಣಕ್ಕೆ ಹೊಯಿತ್ತು. ತರುವಾಯಾ ಶೀನಪ್ಪನಾಯಕನು ತಂನ್ನ ಖಂಡನೀ ರೊಕ್ಕದ ದಶೀಯಿಂದಾ ಶಿದ್ಧಂಮ್ಮಾಜಿ ಪದ್ಮಂಮಾ ದೊಡ್ಡಪ್ಪನಾಯಕ ಸಹ ಕೆಂಚ್ಯನಗುಂಡ ಕೈ[>ಕ]ವಲು ತೆಗೆದುಕೊಂಡು ಹೋಗಿ ಯಿಟ್ಟುಕೊಂಡನು. ಬಳ್ಳಾರಿ ಕುರುಗೋಡಲ್ಲಿ ಕಿಲ್ಲೆದಾರ ಕೆಲ್ಸ ನೋಡುತ್ತಾ ಯಿದ್ದರ್‍ರೂ, ಯೀ ತಾಲೂಕನಲ್ಲಿ ವಸೂಲು ಆದ ಹಣವನ್ನು ಸಾಹುಕಾರ ಶಿನಪ್ಪನಾಯಕಗೆ ಖಂಡಿಣಿ ಹಣಕ್ಕೆ ತಿರುವಳಿ ಮಾತು ಮಾಡುತ್ತಾ ಯಿದ್ದರ್‍ರೂ.

---

* ಇಲ್ಲಿಂದ ಪು. ೨೦೩ರಲ್ಲಿಲ ಸೂಚಿಸಿದ ನಕ್ಷತ್ರ ವರೆಗಿನ ಭಾಗ ಪು. ೪೬೦–೪೬೩ರಲ್ಲಿಯೂ ಇದೆ (ಸಂ).

ಯೀ ಪ್ರಕಾರ ಯಿರುವಲ್ಲಿ ಕೆಂಚನಗುಡ್ಡದಲ್ಲಿ ಸಿದ್ಧಂಮ್ಮಾಜಿ ಪದ್ಮಂಮಾ ದೊಡ್ಡಪ್ಪನಾಯಕ ಸಹ ವೊರಿ[>ಲಿ]ನಲ್ಲಿ ಯಿರುವಾಗ್ಯೆ ಪೂರ್ವದ ವಿರುಧದಿಂದಾ ಕೆಲವು ಸಾಮಾಧಿಕರುೖ ಸ್ಥಳಬಿಟ್ಟು ಹೋದವರನಾ ಶಿದ್ಧಂಮಾಜಿ ಪದ್ಮಂಮಾ ತಮ ಬಳಿಗೆ ಕರಶಿಕೊಂಡು, "ಯೀ ದೊಡ್ಡಪ್ಪನಾಯಕನ ದೊರೆತನಾ ಮಾಡಿ ಯಿಹೋದು ನಮಗೆ ಸಂಮ್ಮತ್ತಿಯಿಲ್ಲಾ"ಯೆಂದು, ಯೀಗ ನೀವು ಕುರುಗೋಡಿಗೆ ಹೋಗಿ ಅಲ್ಲಿ ಯಿರ್ರುವಾ ಕಾಟಿಕರನಾ ಸಂಮಂತ್ರಿ ಮಾಡಿ, ಅನಂತಪುರದ ವಂಶಿಕರನಾ ತೆಗದುಕೊಂಡು ಬಂದು, ಕುರುಗೋಡಿನಲ್ಲಿ ದೊರತನಾ ಪಟ್ಟಕಟ್ಟಿ, ಯೀ ಮೂಲದಿಂದಾ ಬಳ್ಳಾರಿ ಸಹ ಸಾಧಿಸಬೇಕು"ಯಂಬೋ ಮಸಲತ್ತು ಮಾಡಿ ಕುರುಗೋಡಿಗೆ ಕಳುಹ್ಸಿದರು. ಆಗ ಸಾಮಾಧಿಕರು ಕುರುಗೋಡಲ್ಲಿ ಯಿದ್ದ ಕಾಟಿಕರು ಯೇಕಸ್ತರಾಗಿ ಅನಂತಪುರದಿಂದಾ ಪೂರ್ವದಲ್ಲು ಹಂದರಹಳ್ಳಿನಲ್ಲಿ ಆಡೇ[>ಹಂಡೇ] ವಂಶಸ್ತರ ಪ್ರಸಂನ್ನನಾಯಕ ವಂಶಸ್ತರು ಅನಂತಪುರದಲ್ಲಿ ಯಿರಲಾಗಿ, ಅವರ ಬಗಿ ವಬ್ಬ ಹುಡುಗನಾ ತೆಗೆದುಕೊಂಡು ಬಂದು, ಕುರುಗೋಡಿನಲ್ಲಿ ಪಟ್ಟಕಟ್ಟಿ ಆತಗೆ ಪ್ರಸನ್ನರಾಮಪ್ಪನಾಯಕನೆಂದು ಹೆಸರುಕೊಟ್ಟು, ಕುರುಗೋಡಿನಲ್ಲಿ ದೊರೆತನಕ್ಕೆ ಯಿಟ್ಟುಕೊಂಡು, ಸಾಮಾಧಿಕರು ಕುರುಗೋಡು ಮಾಗಣಿಯಲ್ಲಿ ಕೆಲವು ಗ್ರಾಮಗಳು ಕಸುಬೆ ಸಹಿತ ಧೊರೆತನ ಮಾಡುತ್ತಾ ಯಿದ್ದರೂ, ಬಳ್ಳಾರಿಯಲ್ಲಿ ದೊಡ್ಡಪ್ಪನಾಯಕನ ಧೊರೆತನಯಿತ್ತು. ಆ ಬಳಿಕಾ ವಾನಾ[>ಶಾನಾಸ]ಪುರದ ಬಸವನಗೌಡನು ಕೆಂಚನಗುಡ್ಡಕ್ಕೆ ಹೋಗಿ, ವೊರಿ[>ಲಿ]ನಲ್ಲಿ ಯಿರುವಾ* ದೊಡ್ಡಪ್ಪನಾಯಕನಾ ವೊಡಶಿಕೊಂಡು ಬಳ್ಳಾರಿಗೆ ತೆಗೆದುಕೊಂಡು ಬಂದನು. ಆಮ್ಯಾಲೆ ದೊಡ್ಡಪ್ಪನಾಯಕನು ಕುರುಗೋಡು ತನ್ನ ಸ್ವಾಧೀನಾ ಮೀರಿತುಯೆಂದು ಕುರುಗೋಡುಗ್ರಾಮ ಕಸುಬೆ ಸಹಿತವಾಗಿ ಸ್ವಾರಿಮಾಡಿ, ಕೆಲವು ಗ್ರಾಮಗಳು ಠಾಂಣ್ಯಹಾಕಿ ಕೆಲವು ದಿನದ ಮೇಲೆ ಪಿತೂರೀ ಮಾಡಿ, ಕುರುಗೋಡು ಕೋಟೆ ತೆಗದುಕೊಂಡು, ಕೆಲವು ಮಂದಿನಾ ಕೊಂದು ಗುಡ್ಡದ ಮ್ಯಾಲೆಯಿಂದ ಪಾಯನ ಕಿಲ್ಲೆಕ್ಕೆ ಯಿಳಿವ ವ್ಯಾಳ್ಯದಲ್ಲಿ ವೂರೊಳಗೆಯಿದ್ದಾ ಪ್ರಸಂನ್ನರಾಮಪ್ಪನಾಯಕನು ಕೆಲವು ಸಾಮಾದಿಕರು ದೇಶಾಂತ್ರ ಆನೇಗೊಂದಿ ಶೀಮೆ ಹೊದರ್ರೂ.

ಕುರುಗೋಡುಗ್ರಾಮ ದೊಡ್ಡಪ್ಪನಾಯಕನಾ ತಂನ್ನ ಸ್ವಾಧಿನಾ ಮಾಡಿಕೊಂಡು ಯಿರಲಿಕೆ, ಕುರುಗೋಡಿನಲ್ಲಿ ಯಿರುವ ತಾ[>ಕಾ]ಟಕರ ಕಡೆಯಿಂದಾ ದಂಡಾ ತೆಗದುಕೊಂಡು, ಕೆಲವು ಮಂದಿ ಶೀಕ್ಷಾವಂನು ಮಾಡಿದನು. ಬಳಿಕಾ ಕೆಲವು ದಿನದ ಮ್ಯಾಲೆ ದೊಡ್ಡಪ್ಪನಾಯಕನ ಹೆಂಣು ಕೊಟ್ಟ ಮಾಮಾ ತಾತಯ್ಯಪ್ಪಾಯಂಬವನು ಬಳ್ಳಾರಿ ಪಾರುಪತ್ಯಮಾಡುತ್ತಾ ಯಿರಲಾಗಿ, ಬಳ್ಳಾರಿಯಲ್ಲು ಕುರುಬರು ವಂದು ಬ್ಯಾಡುರ್ರ್ [+ಒಂದು] ಮೆಟ್ಟಿಯಿರುವಲ್ಲಿ ಕುರುಬರು ಕರ್ತುತ್ವ ಜನರು ಆದದ್ದರ್ರಿಂದಾ ಬ್ಯಾಡರ್ರ್ ಯಬ್ಬಿಶಿ ಕೂಡಿಶಿ, ಕುರುಬರನಾ ವೂರ ಹೊರಡಿಸಿ ಬಿಟ್ಟರು. ಆ ಕುರುಬರು ಅವರಲ್ಲಿ ಮುಖ್ಯಸ್ತರು ಅರಿಕೆರೆಗೆ ಕೆಲವು ಮಂದಿ ಶಿರಿಮುರಾರ್ರಾಯನ ಕಡೆ ಕೂಡತನಿಗೆ[>ಕುಡುಶನಿಗೆ] ಬಂದು ಶೆರಿದರು. ಕೆಲವು ಮಂದಿ ಅರಿಕೆರಿಯಿಂದಾ ನಾಡು ತಳವಾರ ಹನಿಮಿನಾಯಕನ ಮುಖಾಂತ್ರ ಅದವಾನಿಗೆ ಹೋಗಿ, ದೊಗ[>ಮೊಗಲ]ರ ಕಡೆಯಿಂದಾ ದೇವಿಚಂದು ಮೊದಲಾದರಸ[>ರು] ಸಂಗಡ ಜಮಿಯ್ಯತು ತೆಗೆದುಕೊಂಡು ಬಂದು, ಬಳ್ಳಾರಿ ಮುತ್ತಿಗೆ ಹಾಕಿ, ಮೂರು ತಿಂಗಳು

+ ಯಿರುವ (ಮಾ).

ಲಡಾಯಿ ಆಗಿ ಕಿಲ್ಲೆದೊಳಗೆ ಜಭೆರಿ[>ಜಯಭೇರಿ] ಯಿದ್ದದ್ದು ಝಾಡೆ ಆಗಿ, ದಾಣಾಚಾರಯಿಲ್ಲದೆ ಬಳ್ಳಾರಿ ಹೈರಾಣಿ ಆದದರ್ರಿಂದಾ ಅನಂತ್ತಪುರದಿಂದಾ ದಂಡಿ[>ಹಂಡೆ]ನ ವರಿಗೆ ಕೆಲವು ರಸ್ತು ಮಂದಿ ಸಹಾ ಕಳುಪ್ಪಿಲಾಗಿ, ಅವರು ಕುರುಗಾ[>ಗೋ]ಡಿಗೆ ಬಂದು ಶೇರ್ರಿದರು.

ಯಿಲ್ಲಿಂದಾ ಬಳ್ಳಾರಿ ಸರದ್ದಿಗೆ ರಸ್ತು ಮುಟ್ಟಿಸೊ ಬಗ್ಯ ಮಾರ್ಗವಾಗಲಿಲ್ಲಾ. ಅಷ್ಟರೊಳಗೆ ರಾಯದುರ್ಗದ ಸಂಸ್ತಾನೀಕರ ದಿವಾನ ಕ್ರಿಷ್ಣಪ್ಪನಾಯಕನು ಶ್ರೀರಂಗಪಟ್ಟಣಕ್ಕೆ ಹೋಗಿ ಬಾಹದರವರ್ರಿಗೆ ಹೇಳಿದ್ದು, "ನೀವು ಪೂರ್ವದಲ್ಲಿ ಬಳ್ಳಾರಿಗೆ ಹೊಗಿ ಯಿದ್ದಾಗ ನಿಮಗೆ ಬಳ್ಳಾರ್ರಿ ಕಾರ್ಯ ವೆರ[>ಮೋ]ಡಾಗಿ ಯಿದ್ದಿತೆಲ್ಲಾ, ಯೀಗ ಮೊಗಲಾಯಿ ದಂಡು ಘೆರಾಯಿಶಿ ಯಿಥೆ. ಕಿಲ್ಲೆಯಲ್ಲಿ ಅಂನ್ನಕ್ಕೆಯಿಲ್ಲದೆ ಶಿಕಸ್ತುವಾಗಿ ಯಿಥೆ. ಯೀ ಸಮಯದಲ್ಲು ನೀವು ಜಮಿಯ್ಯತು ಸಹಿತವಾಗಿ ಮೊ[>ಹೋ]ದಲ್ಲು ಕಾರ್ಯವಾಗುತ್ತಾ ಯಿದೆ" ಅನಲಾಗಿ, ಅದೇ ಪ್ರಕಾರ ಟಾಕೊಟಾಕು ಖು[>ಖಿ]ದ್ದು ಬಂದು, ಜಮಿಯತು ಸಹಾ ಬಳ್ಳಾರಿಗೆ ದಿನ ನಾಲ್ಕರಲ್ಲಿ ಬಂದು, ಮೊಗಲಾಯಿ ದಂಡಿನ ಮ್ಯಾಲೆ ಚ್ಚಾಪೆ ಬಂದು[>ಬಿದ್ದು], ಅವರ ದಂಡು ಯಾವತ್ತು ಜನ ಹತವಾಗಿ, ದೇವಿಚಂದು ವ ವಗ್ಯೆರೆ ಮಾತಬರ ಮೊಗಲಾಯಿ ಸರದಾರ್ರು ಹತವಾದದರ್ರಿಂದಾ, ವುಳದವರ್ರು ಹೊ[>ಓ]ಡಿದರ್ರು, ಬಳ್ಳಾರಿ ಬಳಿಯಾ ಬಾಹದರನ ದಂಡು ಬಂತು ಯಿಳಿತ್ತು. ಅದು[>ಅದನ್ನು] ಕಿಲ್ಲೆಯಲ್ಲಿ ಯಿದ್ದ[+ವ]ರು ಕಂಡು ಜನರು ಘಾಬರಿ ಆಗಿ ದಾರ್ರಿ[>ರಾತ್ರಿ] ಕಾಲದಲ್ಲು ದೊಡ್ಡಪ್ಪನಾಯಕಾ ಸಾಮದಿಕರು ಕೆಲವು ಮಾತಬರ ತಾ[>ಕಾ]ಟಕರು ಸಹ ಕಿಲ್ಲೆ ಬಿಟ್ಟು ತುಂಗಭದ್ರಾನದಿ ಘಾರು ಆಗಿ ಹೋದರು. ಮರುದಿನ ಪ್ರಾತಃಕಾಲದಲ್ಲು ಕಿಲ್ಲೆದ ವಳಗೆ ಯಿರುವ ಗೌಡ ಕುಲಕರ್ಣಿ ದೇಶಾಯಿ ತಿಂಮ್ಮರಾಯನು ಸಹಾ ಬಾದರ ಬಳಿಗೆ ಕೊಟೆ ಬೀಗದ ಕೈಗಳು ತಂದು ಯಿಟ್ಟು ಅಡ್ಡಬಿದ್ದು, "ಕಿಲ್ಲೆ ಠಾಂಣ್ಯ ಹೋಗಿ ಹಾಕೊದು"ಯಂದು ಅರಿಕೆ ಮಾಡಲಾಗಿ, ಬಾಹದರನು ಸಂತೋಷದಿಂದಾ ಬಾಹದರನ ಠಾಂಣ್ಯ ಬಳ್ಳಾರಿಗೆ ಆದದು. ಮನ್ಮಥ ಸಂವತ್ಸರದ । ಕಾರ್ತ್ತಿಕ ಬಹುಳ ೨.

ಅಲ್ಲಿಂದಾ ೮ ದಿನದ ಮ್ಯಾಲೆ ಕುರುಗೋಡಿಗೆ ಬಮ್ಮೈ ಜಮಿಯತು ಸಹ ಖು[>ಖಿ]ದ್ದು ತಾನೆ ಕುರುಗೋಡಿಗೆ ಬಂದನೂ. ಆ ಸಮಯದಲ್ಲು ಕಉಲಿನ ಮ್ಯಾಲೆ ಕಿಲ್ಲೆ ಠಾಂಣ್ಯ ಕೊಟ್ಟರ್ರು.

ಬಳ್ಳಾರಿ, ಕುರುಗೋಡು, ತೆಗಲ್ಲುಕೋಟೆ ಯೀ ಮೂರು ಸ್ತಳವಂನು ರಾಯದುರ್ಗದ ಕ್ರಿಷ್ಣನಾಯಕನ ಸ್ವಾಧೀನ ಮಾಡಿ, ಬಾಹದರು ಆದವಾನಿ ಕಡಿಗೆ ಹೋದನು. ಬಹದರನು[>ನ] ಪೂರ್ವದಲ್ಲು ದೊಡ್ಡಪ್ಪನಾಯಕನು ಬಳ್ಳಾರಿ ಕುರುಗೋಡು ಸಹ ೬ ವರುಷ ದೊರೆತನ ಮಾಡಿ ಫರಾರ್ರಿ ಆಗಿ ಹೋದನು. ಬಹದರ ನಾವಾಬು ಕುರುಗೋಡು ಠಾಂಣ್ಯಹಾಕಿದ ಸಮಯದಲ್ಲು ಸ್ತಳದ ಜಮೀದಾರು ದೇಶಾಯಿ ತಿಂಮ್ಮಪ್ಪ, ನಾಡಗೌಡ ಚಿಕ್ಕನಗೌಡ ಯೀ ವುಭಯತಿರಿಗೆ ಮಾಮಲಯತಿ ಕೆಲ್ಸ, ನಾಡುಕುಲಕರ್ಣಿ ಕ್ರಿಷ್ಣಪ್ಪಗೆ ದಪ್ತರ ಕೆಲಸಾ ಯೀ ಪ್ರಕಾರ ನಿಗದಿ ಮಾಡಿಕೊಟ್ಟು, ಯಿವರ ಸ್ವಾಸ್ತಿ ವಗ್ಯೆರೆ ಯಥಾ ಪ್ರಕಾರ ನಡಶಿದನು. ಸರನಾಡುಗೌಡಕಿ ದೊರೆಗಳದು ಆದದರಿಂದಾ ಸರಕಾರ ಜಪ್ತವಾಯಿತು. ಹಾಂಗೆ ಸರದೇಶಾಯಿ ಮಾಲಿಕರು ಹಾಜರುಯಿಲ್ಲದೆ ಯಿದ್ದ ಕಾರಣ ಜಪ್ತವಾಯಿತು. ಕುರುಗೋಡು ಬಳ್ಳಾರ್ರಿ ಕೊಟೆ ಮರಾಮತ್ತು ಮಾಡಿ, ಶೆ[>ತೆ]ಕಲ್ಲಕೊಟೆ ಕಡೆಗಡಿ ಆದದರಿಂದಾ ಕೆಡವಿಶಿದನೂ.

ಕುರುಗೋಡು, ಬಳ್ಳಾರಿ ಕಾಯಂ ಮಾಡಿ ಜಮಿಯ್ಯತು ಸಹಾ ಯಿಟ್ಟು, ಹೈದರು ಬಕಶಿಯಂಬಾತಗೆ ಸುಬೇದಾರ್‍ರಿ ಮಾಡಿ ಕಳುಹ್ಸಿದನೂ, ಕುರುಗೋಡು ಜಮೀದಾರು ಆತನ ಕೆಳಗೆ ನಡಕೊಳ್ಳುತ್ತಾ ಬಂದರು. ಯೀ ಪ್ರಕಾರ ಬಾಹದರ ಅಮಲು ಶುಭಕೃತು ಪರಿಯಂತ್ರಾ ನಡಿತು.

ಶೋಭಕೃತು ಸಂವತ್ಸರದಲ್ಲು ಆತನ ಮಗ ಟೀಪುಸುಲ್ತಾನನ ಅಮಲು, ಆ ಅಮಲಿನಲ್ಲಿ ಬಳ್ಳಾರ್‍ರಿಗೆ ಶಿದ್ದಿ ಮೋದಿನಖಾನ್ ಯಂಬಾತನು ಸುಭೆ ಮಾಡಿಕೊಂಡು ಬಂದನು. ಆತನ ಕಡೆಯಿಂದಾ ಯೀ ಸ್ತಳದ ದೇಶಾಯಿ ನರಸಪ್ಪನು ಕುರುಗೋಡು ಮಾಮಲೇ ಕೆಲ್ಸ ಮಾಡಿಕೊಂಡು ಬಂದನು. ಯೀ ನಾಡುಕುಲಕರ್ಣಿ ಕ್ರಿಷ್ಣಪ್ಪನು ದಫ್ತರದ ಕೆಲಸ ಮಾಡಿಕೊಂಡು ಬಂದನು. ಆತನ ಕಡೇಯಿಂದಾ ನಾಡಗೌಡರು ಸರಕಾರದ ಕೆಲ್ಸ ನೋಡುತ್ತಾ ಬಂದರು. ಯೀ ಜಮಿದಾರರ ವೂರು[>ಉಮ್ಮಳಿ] ಗ್ರಾಮಗಳು ಅರವಾಸಿ ಸರಕಾರ ಜಪ್ತಿಮಾಡಿ, ಬಾಕಿ ಅರವಾಸಿ ಜಮಿದಾರಿಗೆ ಕೊಟ್ಟ[>ಟ್ಟು] ಕಡಮೆ ಭೂಸ್ವಾಸ್ತಿ ವರ್ತನೆ ಜಾರಿಮಾಡಿದರು. ಯೀ ಪ್ರಕಾರ ಪರಾಭವ ಸಂವತ್ಸರದ ಪರಿಯಂತ್ರ ನಡೆಯುತಾ ಬಂತ್ತು. ಪ್ಲವಂಗ ಸಂವತ್ಸರದಲ್ಲಿ ಜಮಿಯದಾರರಿಗೆ ಮಾಮಲಿಯತು ದಫ್ತರ ಕೆಲ್ಸಕ್ಕೆ ಮೊಕುಫ[>ಫ] ಮಾಡಿ, ಸರಕರದ ಕೆಲ್ಸ ಮಾಮಲದಾರು ಬಂದರು. ಆಗಿನ ವ್ಯಾಳದಲ್ಲು ಜಮಿದಾರರ್‍ರಿಗೆ ಪೂರ್ವಾರಭ್ಯ ನಡಿಯುತಾ ಬಂದ ವರ್ತನೆ, ವುಮ್ಮಳಿ, ಅರವಾಶಿ ಗ್ರಾಮ ಸಹಾ ಸರಕಾರ ಜಪ್ತಿ ಮಾಡಿಕೊಂಡುರೂ, ನಿಂತ್ತ ಭೂಮಿ ಸ್ವಾಸ್ತಿಗೆ ಜೋಡಿ ಸರದೇಶಾಯಿ ಸ್ವಾಸ್ತಿ ಸಹ ಬಾಬು ೪ಕ್ಕೆ ಜೊಡಿ ಮೊಕರೂರ್‍ರು ಸರಕಾರಕ್ಕೆ ಕೊಡೊದು. ರಹತಿ ಅರವತ್ತು ವರುಷ[>ರಹಾ] ವರುಷಕ್ಕೆ ಕೊಡುತ್ತಾ ಬರಹೇಳಿ ನಿಗದಿ ಮಾಡಿದರು.

ಯೀ ಜಮಿದಾರರು ಮಾಮಲೆದಾರರ ಮರ್ಜಿ ಅನುಸರಿಶಿಕೊಂಡು ಜೋಡಿ ಹಣ ಸರಕಾರಿಗೆ ಕೊಡದೆ, ಭೂಸ್ವಾಸ್ತಿ ಮಾತ್ರ ಅನುಭವಾ ಮಾಡಿಕೊಂಡು ಸರಕಾರನವರು ಹೇಳಿದ ಕೆಲ್ಸಕ್ಕೆ ಹಾಜರಾಗಿಯಿದ್ದನು. ಯೀ ದೇಶಾಯಿ ನಾಡುಕುಲಕರ್ಣಿಕರಿಗೆ ಕೆಲವು ಗ್ರಾಮದ ಕುಲಕರ್ಣಿಕಿ ಪೂರ್‍ವ್ವಾರಭ್ಯವುಂಟ್ಟು. ಆ ಕೆಲ್ಸವಂನು ನೋಡುತ್ತಾ ಯಿದ್ದರ್‍ರೂ. ನಾಡಗೌಡರ್‍ರಿಗೆ ಕಸುಬೆ ಗೌಡಿಕಿ ಮಾಡುತ್ತಾ ಯಿದ್ದರ್‍ರೂ, ಪೂರ್ವಕ ಮೇ[>ಮ]ಲೆಗೌಡ ಸಂತತಿ ಅವರ ಗುಂಡೇಗೌಡ ಬಸವನಗೌಡರ ಠಾವಿ[>ಪಾಲಿ]ನ ಹೊ[>ಒ]ಳಗೆ ನಾಡಗೌಡಕಿ ವೂರಗೌಡಕಿ ವಳಗೆ ದಾನವಾ[>ಕಾನಾ]ಸಪುರದ ಬಸವನಗೌಡನ ತಮ್ಮ ಸಂಮನಗೌಡನು ೬೦ ಪಾಲು ಕ್ರಯಕ್ಕೆ ತೆಗದುಕೊಂಡುನು. ಯೀ ಪ್ರಕಾರ ಸಾಧಾರಣ ಸಂವತ್ಸರದ ಪರಿಯಂತ್ರಲು ಸುಲತಾನನ ಠಾಂಣ್ಯ ಯಿರಲಾಗಿ ಯಿಂಗ್ರೆಜಿ ಅವರು, ಆರೇರು, ಮೊಗಲಾಯಿ ಅವರು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದ ಸಮಯದಲ್ಲು ಯೀ ರಾಜ್ಯವಂನ್ನು ಅಡಾವುಡಿ ಬಿದ್ದು ಯಿರಲಾಗಿ, ಪೂರ್ವಸಂಸ್ತಾನಿಕರ ರಾಮಪ್ಪನಾಯಕರ ಹೆಂಡತ್ತಿ ಶಿದ್ದಂಮಾ, ಹನುಮಪ್ಪನಾಯಕ ಹೆಂಡತ್ತಿ ಪದ್ಮಂಮಾ ವುಭಯರು ಆರೇರ ಶೀಮೆಯಲ್ಲು ಯಿದ್ದವರು ಯೀ ಶೀಮೆಗೆ ಬಂದು ಕೆಲವು ಗ್ರಾಮಂಗಳು ಠಾಂಣ್ಯಾ ಮಾಡಿಕೊಂಡು ಕುರುಗೋಡಿಗೆ ಸಮೀಪ ದಕ್ಷಿಣಭಾಗದಲ್ಲು ಬಾರನಹಟ್ಟಿಯಂಬೊ ಗ್ರಾಮದಲ್ಲು ನಿಂತ್ತು ಕೆಲವು ಜಮಿಯ್ಯತು ಜಮೆಮಾಡಿ, ಕುರುಗೋಡು ದುರ್ಗದ ಮ್ಯಾಲೆ ಯರಡು ತಿಂಗಳು ಸ್ವಾರಿಮಾಡಿ, ಸ್ತಳದ ಕಿಲ್ಲೆಯಲ್ಲಿ ಯಿದ್ದ ಮಾತಬರ ಮಂದಿನ ಸಂಗಡ ಫಿತುರ್‍ರಿ ಸಾಗಿಶಿ, ಬಳ್ಳಾರ್‍ರಿ ಕಿಲ್ಲೆಯಲ್ಲು ಸುಲತಾನನ ಠಾಂಣ್ಯಯಿತ್ತು. ಬಳ್ಳಾರ್‍ರಿಯಲ್ಲು ಫಿತುರಿ ಸಾಗಲಿಲ್ಲಾ. ಕುರುಗೋಡು ಸ್ತಳ ಮಾತ್ರ ಫಿತುರಿಯಿಂದಾ ಠಾಂಣ್ಯವನ್ನು

ಹಾಕಿ ೧೧ ತಿಂಗಳು ಕುರುಗೋಡು ಪರಗಣೆ ೩೩ ಹಳ್ಳಿಯಲ್ಲು ಕೆಲವು ಗ್ರಾಮಗಳು ಮೊಗಲಾಯಿರು, ಕೆಲವು ಗ್ರಾಮ ಆನೆಗೊಂದಿಯವರು, ಕೆಲವು ಗ್ರಾಮಗಳು ಕಸುಬೆ ಶಿದ್ದಂಮಾ – ಪದ್ಮಂಮಾರ ಠಾಂಣ್ಯ ಆಯಿತು. ಕಡಮೆ ಗ್ರಾಮಗಳು ಸದರಿ ಬಾಹದರವರ್ರು ಠಾಂಣ್ಯ ಹಾಕಿಕೊಂಡರು.

ಆ ಸಮಯದಲ್ಲು ಶಿಬಂದಿ ಖರ್ಚಿಗೆಯಿಲ್ಲದೆ ಹೋಗಿ, ಆ ಸಂಸ್ಥಾನಿಕರ ಸರನಾಡಗೌಡಕಿ ಸ್ವಾಸ್ತಿ ಶಿದ್ದಿಗೆರೆಗೌಡ ದೇವರ ನೀಲಂಮನ ಅಳಿಯಂದ್ರು ಕೊಟ್ಟರೂ. ಗೌಡ ಪರವತಗೌಡಗೆ ಯರಡು ಸಾವಿರ ವರಹಾಕ್ಕೆ ಕುರುಗೋಡು ಪರಗಣೆ ಸ್ವಾಸ್ತಿ ತ್ರ[>ಕ್ರ]ಯಕ್ಕೆ ಕೊಟ್ಟರ್ರೂ.

ತರುವಾಯ್ಯ ಸದ್ರಿ ಶ್ರೀರಂಗಪಟ್ಟಣಕ್ಕೆ ಬಂದ ದಂಡು ಕಉಲಿನ ಮೇಲೆ ಅವರ ದೇಶಕ್ಕೆ ಹೊರಟ್ಟು ಹೊದರ್ರು. ಆ ಸಮಯದಲ್ಲಿ ಬಳ್ಳಾರಿಯಿಂದಾ ಸುಲತಾನನ ಕಡೆಯಿಂದಾ ಜಮಿಯ್ಯತು ಬರಲಾಗಿ, ಶಿದ್ದಂಮಾ ಪದ್ಮಂಮಾ ಸರನಡಗೌಡತ್ರಿ[>ಕಿ] ಕ್ರಯ್ಯೆ ಕೊಂಡದ್ದು ಸಹಾ ದೇಶಾಬಿಟ್ಟು ಪರಾರ್ರಿ ಆದರೂ. ಸುಲತಾನನ ಅಮಲು ಕಾಯಂವಾಯಿತು. ಮೂರು ತಿಂಗಳು ಸರ[+ಕಾರಿ] ಅವಲು ಆದ ಬಳಿಕ ಕುತಬುಧಿಖಾನನಿಗೆ ೧, ಕುರುಗೋಡು ಪರಗಣಾ ೨ಸಾವಿರ ವರಹ ಅಮಲು ಆದ ಬಳಿಕಾ, ಆ ಶೀಮೆ, ವುರವಕೊಂಡೆ ಶೀಮೆ, ४೦ ಸಾವಿರ ವರಹದ ಶೀಮೆ ಅಂತ್ತು ೬೦ ಸಾವಿರ ವರಹಾದ ಶೀಮೆ ಜಾಗೀರು ಸುಲತಾನನು ಕೊಟ್ಟು ಕಳುಹ್ಸಿದನು. ವಂದು ವರುಷ ಜಾಗಿರು ನಡಿಯಿತು. ಕುತುಬುದಿಖಾನನ ಜಾಗಿರ್ರಿ ಜಪ್ತ ಆಗಿ ಸರಕಾರದ ಕಡೆಯಿಂದಾ ಆಮೀಲ ಶಿರಸ್ತೆದಾರು ಕಿಲ್ಲೆದಾರು ೨೦ ಮಂದಿ ಜನ ಶಿರಸ್ತೆದಾರು ಸಹ ಬಂದು ನಿಂತ್ತರು. ಜಮೀದಾರಿಗೆ ಭೂಸ್ವಾಸ್ತಿ ಮಾತ್ರ ನಡಿಯುತಾ ಬಂತ್ತು. ಸರನಾಡಗೌಡಕಿ ಜಪ್ತಿ ಆಗಿಯಿತ್ತು. ಶಿದ್ಧಾರ್ಥಿ ಸಂ॥ದ ಶ್ರಾವಣಮಾಸ ಪರಿಯಂತ್ರಾ ಸುಲತಾನನ ಠಾಂಣ್ಯಾ, ಸುಲತಾನನ ಶಿಮೆ ಹೋದ ಬಳಿಕಾ ಮೊಗಲಾಯಿ ಕಡೇಯಿಂದಾ ಕುರುಗೋಡಿಗೆ ರಹಿಂಖಾನ ಫೌಜು ಬಂದು, ಠಾಂಣ್ಯಾ ಹಾಕಿ ಯರಡು ತಿಂಗಳು ರಹಿಂಖಾನನ ಸ್ವಾಧೀನವಾಗಿ, ಆತನ ಕಡೇ ಮಾಮಲೇ ಕೆಲ್ಸ ದೇಶಾಯಿ ತಿಂಮ್ಮಪ್ಪ, ದೇಶಕುಲಕರ್ಣಿಕಿ ದಪ್ತರ ವೆಂಕಪ್ಪಗೆ ನಡಿಯತು.

ತರ್ರುವಾಯಾ ಮೊಗಲಾಯಿ ಕಡೆ ಜಯಸುಧಿ[>ನುದ್ದೀನ]ಖಾನನು ತಿಂಗಳು ಮಾಡಿದನು. ಮಾಮಲೇ ಸರಕಾರನವರು ಜಮೀದಾರು ಸಹ ಕೂಡಿ ಮಾಡುತ್ತಾ ಯಿದ್ದರ್ರು.

ಶಿದ್ಧಾರ್ಥಿ ಸಂವತ್ಸರದ ಪಾಲ್ಗುಣ ಮಾಸದಲ್ಲು ಮೊಗಲರ ಕಡೆ ನಾಗನಾಥಗೌಡ ಯೀ ರಾಜ್ಯದವ ೧ ಮಲಿಕು ಯಾವತ್ತು ಆ ಸಮಯದಲ್ಲೂ ಕುರುಗೌಡ, ನಾಡಗೌದ[>ಡ] ಬಸವಂಣಗೌಡನು ಕುರುಗೋಡು ಶೀಮೆ ४೦ಸಾವಿರ ರೂಪಾಯಿಗೆ ಯಿಜಾರೆ ಮಾಡಿಕೊಂಡು, ೬ ತಿಂಗಳು ಜಾರಿಯಾಗಿ ನಡೆಯಿತ್ತು.

ದೇಶಾಯಿ ಸರನಾಡಗೌಡನು ಪರಗಣಿ ಬೆ[>ಮಜ]ಕೂರು ಮೂರು ತುಕಡಿ ಮಾಡ್ಸಿ, ಮೂರು ಮಂದಿ ಜಮೀದಾರ್ರು ಅಮಲು ಮಾಡಿಕೊಂಡು ಯಿದ್ದರು. ನಾಡು, ಕುಲಕರ್ಣಿರು ಯೀ ಮೂರು ಮಂದಿ ಬಳಿಯೂ ದಪ್ತರ ಲೆಖ[>ಖ್ಖ] ಬರದುಕೊಂಡು ಯಿದ್ದರ್ರು. ಯೀ ಐದು ಮಂದಿ ಜಮೀದಾರಿಗೆ ಭೂಸ್ವಾಸ್ತಿ ಮಾತ್ರ ನಡಿಯುತ್ತಾ ಬಂತು. ರೌದ್ರಿ ಸಂವತ್ಸರದ ಮಾರ್ಗಿಶಿರ ಶುಧ ೧೫ಯಲ್ಲು ಕುಂಪಣಿ ಅಮಲು ಆಯಿತ್ತು.*

ನಂ - ೭೫೨

ಆ ತರುವಾಯ್ಯಾ ಯಿವರು ಆಳೀದ ವರುಷವೊಳಗೆ ೧ ಅಂಗೀರಸ ಸಂವತ್ಸರದಲ್ಲು ಶ್ರೀಮಂತ ನಾನಾರಾಯರ್ರು ಪಫೌಜು ಸಮೇತವಾಗಿ ಯಿ ದೇಶಕ್ಕೆ ಬಂದು ಯಿದ್ದರ್ರೂ.

ಬಹುದಾನ್ಯ ಸಂವತ್ಸರದಲ್ಲು ಗೋಪಾಲರಾಯರು ತಂಮ್ಮ ಫೌಜು ಸಮೇತವಾಗಿ ಯೀ ರಾಜ್ಯಕ್ಕೆ ಬಂದು ಯಿದ್ದರ್ರು.

ಯೀಚಿಗೆ ಶಾಲೀವಾಹನ ಶಕವರುಷಾ ೧೬೮೫ನೆಯ ಸ್ವಭಾನು ಸಂವತ್ಸರದಲ್ಲು ಶಕವರುಷ ೧೭೨೦ನೆಯ ಕಾಳಾಯುಕ್ತಿ ಸಂವತ್ಸರದ ವರಿಗೆ ಮೈಸೂರ್ರು ಸಂವಸ್ತಾನದ ಅರಸುಗಳವರ ಕಡೆಯಿಂದಾ ನಾವಾಬ ಹೈದರಲ್ಲಿಖಾನ್ ಬಾಹದರವರು ಚಿತ್ರಭಾನು ಸಂವತ್ಸರದಲ್ಲು ಬಂದು ಅಜಂಪುರದ ಶೀಮೆ ಯಾವತ್ತು ಠಾಂಣ್ಯಹಾಕಿಕೊಂಡು, ರಾಜ್ಯಭಾರ ಮಾಡಿ ಆ ತರುವಾಯಾ ಯಿವರ ಮಗ ಟಿಪುಸುಲ್ತಾನನು ಸಹ ಆಳಿ ವರುಷಾ ೩೬ಕ್ಕೆ ಯಿದ್ದ ನಾಡುಗಳು - ೧೨, ಪ್ರಾಕಾರಭ್ಯ ಯಿದ್ದನಾಡು ಸದರ್‍ರಿ ಬರದ ಮೇರೆಗೆ :

೧ ಯಿತ್ತಲಾಗಿ ತಾರಣ ಸಂವತ್ಸರದಲ್ಲು ಯೀ ಶೀಮೆ ಯಡಬಲದ ಗಡಿಗಳು ಯಾವತ್ತು ಕಟ್ಟಿಕೊಂಡು, ಯೀ ಅಜಂಪುರಕ್ಕೆ ಸೇರಿಶಿ ಕೊಟ್ಟ ನಾಡು ತರಿಕೆಕೆ[>ರೆ] ಶೀಮೆ ವಳ್ಳಿತ್ತಾದ ವುಬ್ರಾಣಿ ನಾಡು. ಅಂತ್ತು ೧೩.

ಯೀ ಮೇರ್‍ರಿಗೆ ಯಿವರ್‍ರು ರಾಜ್ಯಪಾಲನೆ ಮಾಡುವಲ್ಲಿ ವಿಕೃತಿ ಸಂ॥ಲ್ಲು ಶ್ರೀಮಂತ ಮಾಮಾನವರ[>ತ್ರಿಂಬಕ ಮಾಮಾಪೇಠೆ] ದಂಡು ಬಂದು, ವಂದು ವರುಷಾ ಯೀ ಶೀಮೆಯು ಅತಂತ್ರವಾಗಿಯಿತ್ತು. ಆಮೇಲೆ ಪುನಃ ದೊಡ್ಡ ನವಾಬರು ಕಟ್ಟಿಕೊಂಡು ಆಳಿದ ವರುಷ ೨೦. ಟಿಪುಸುಲ್ತಾನ್‌ನವರು ಆಳಿದ ವರುಷ ೧೬, ಉಭಯಂ ವರುಷ ೩೬.

ಯೀ ಅರಸುಗಳು ಬಿಟ್ಟು ಅಗ್ರಹಾರಗಳು:

೧. ಯೆಲಂಬೆಳಸೆ ನಾಡಿನಲ್ಲು ಬ್ರಾಹ್ಮರಿಗೆ ಸುರಾಪುರದ ಗ್ರಾಮ ಸರ್ವಮಾನ್ಯ ಅಗ್ರಹಾರ.

೧. ಮುಗಳೀಕಟ್ಟೆ ನಾಡಿಕಲ್ಲು ಮಲ್ಲಿದೇವಿಹಳ್ಳಿ ಗ್ರಾಮ ಬ್ರಾಹ್ಮರಿಗೆ ಸರ್ವಮಾನಬ.

೧. ಕೂಡಲೀ ಶ್ರೀಂಗೇರಿಮಠಕ್ಕೆ ಯೆಲಂಬೆಳಸೆ ಅಗ್ರಹಾರದಲ್ಲು ಮಾರನಹಾಳು ಗ್ರಾಮ ಸರ್ವಮಾನ್ಯ.

೩

ಸದರ್‍ರಿ ಗ್ರಾಮಗಳು ಟೀಪುಸುಲ್ತಾನರ ದಿನದಲ್ಲಿ ಜಪ್ತಿಯಾಗಿ ಸರಕರದ ದಾಖಲು ಆಗಿಯಿದೆ. ಯಿದರ ಶಿವಾ ಯಿ ಭಟಮಾನ್ಯಗಳು ಬಿಟ್ಟು ಯಿದ್ದಾರ್‍ರೆ.

ಯಿತ್ತಲಾಗಿ ದೊಡ್ಡ ನವಾಬ ಹೈದರಲ್ಲಿಖಾನ್‌ನವರ್‍ರು ಶಕ ವರುಷಾ ೧೭೦೩ ಪ್ಲವಸಂವತ್ಸರದಲ್ಲು ಆಳಿದು ವರುಷಾ ಶಕಗಳು ೧೭೦೪ನೆಯ ಶುಭಕೃತ ಸಂವತ್ಸರದ ವರಿಗೆ. ಯಿವರ ಮಕ್ಕಳು ಟೀಪು ಸುಲ್ತಾನವರು ಶಕ ವರುಷಾ ೧೭೦೫ನೆಯ ಶೋಭಕೃತು ಸಂವತ್ಸರದ ಲಾಗಾಯಿತ್ತು. ಶಕವರುಷ ೧೭೨೦ನೆಯ ಕಾಳಾಯುಕ್ತಿ ಸಂ॥ವರ್‍ರಿಗೆ ಆಳಿದ ವರುಷಾ, ಪ್ರಾಕು ಯಿದ್ದ ನಾಡು ೧೬.

ಚಿತ್ರಭಾನು ಸಂವತ್ಸರದ ಪುಷ್ಯದಲ್ಲು ನವಾಬ ಹೈದರಲ್ಲಿಖಾನ ಬಾಹದರವರ್‍ರು ನಗರದ ಸಂಸ್ಥಾನವ ತೆಗೆದುಕೊಂಡರ್‍ರೂ.

ಅವರ್‍ರು ಸಾಧಾರಣ ಸಂವತ್ಸರದ ವರಿಗೆ ಯೀ ಮೆದೆಗೆರೆಗೆ ಯೀ ಮೇರೆ ನಡಶಿದರ್‍ರೂ.

ವಿರೋಧಿಕೃತು ಸಂವತ್ಸರದಲ್ಲು ಪರಶರಾಮಬಾಉನ ಕಡೇಯವರು ಕೋಟೆಯಂನು ತೆಗೆದುಕೊಂಡು, ಸುರಿಸುದಿಗೆ[>ಸೂರೆಸುಲಿಗೆ] ಮಾಡಿ, ಕಿಲ್ಲೆ ಮದ್ದಿನ ಮನಿಗೆ ಸಹಾ ಅಗ್ನಿಪ್ರವೇಶ ಮಾಡಿದರಿಂದಾ ಈ ಕಿಲ್ಲೆ ಸುಟ್ಟು ಹೋಯಿತ್ತು. ಯಿತ್ತಲಾಗಿ ಸರಕಾರದ ಅಪ್ಪಣೆಯಿಲ್ಲದರಿಂದಾ ಕೋಟಿ ಯಾವತ್ತು ಬಿದ್ದು ಹೋಯಿತ್ತು.

ಬೀಜಾಪುರಂನುಂಚ್ಯೆ ವಿಜಾಪುರದಿಂದಾ ಸಾವಕಾರ ಶೇಷಪ್ಪನ ಮಗನು ನಗರದಲ್ಲಿ ಸಾವಕಾರಿಕೆಮಾಡಿಕೊಂಡು ಅಲ್ಲಿ ಜವಳಿ ಅಂಗಡಿ ಹಾಕಿ ವ್ಯಾಪಾರಗಳು ಮಾಡುತ್ತಾ ಯಿರುವಾಗ್ಯೆ, ನಗರದ ಧೊರೆಗಳು ೫೮೦ ವರುಷ ಸಂಬಳ ಯೀ ರಾಮಪ್ಪನವರಿಗೆ ಮೊಖರೂರ್‍ರು ಆಗಿ ನಡಿಯುತ್ತಾ ಯಿತ್ತು. ಯೀತನು ತಂನ್ನ ಸಂಮ್ಮತ್ತದಿಂದಾ ಸಂಬಳಗಳನ್ನು ಬಿಟ್ಟುಕೊಟ್ಟನು. ಯೀ ಪ್ರಕಾರಂ ಪುಂಡಂಗಾ ಯೀ ಪ್ರಕಾರ ಯಿರುವಾಗ್ಯೆ ಸುಲ್ತಾನನ ದಿವ್ಸದಲ್ಲೀ ಕ್ರೋಧಿಸಂವತ್ಸರದಲ್ಲು ನಗರದಲ್ಲಿ ಶ್ರಂಗೇರಿಯಲ್ಲಿ, ವಸ್ತಾರೆಯಲ್ಲಿ ಯೀ ಮೂರು ಸ್ತಳದಲ್ಲಿಯೂ ಯಿದ್ದ ಮನೆಗಳಂನು ಲೂಠಿ ಮಾಡಿದರಿಂದಾ ಸದ್ರಿ ರಾಮಪ್ಪನು "ಅನ್ನಕ್ಕೆ ಮಾರ್ಗವಿಲ್ಲೆಂ"ದು ಪಾದಷಾ ಟೀಪುಸುಲ್ತಾನನವರ ಬಳಿಗೆ ಬಂದು ಅರಿಕೆ ಮಾಡಿಕೊಂಡದರ್‍ರಿಂದಾ, ಆ ಕ್ಷಣವೇ ಮಂಡಗದ್ದೆ ವಗಯಿರೆ ಶಿರಸ್ತಾ ಅಪ್ಪಣೆ ಆಗಿ ೮ ವರಹ ಸಂಬಳ ಮಾಡಿ ಯಿದ್ದರ್‍ರೂ, ಯಿದರಲ್ಲೆ ಯಿರುತ್ತಾ ಯಿದ್ದರ್‍ರು.

ನಂ =- ೭೫೩

೨೬ ವರುಷ ತಲಕಡು ಶೀಮೆಯಂನ್ನು ದೊಡ್ಡ ನವಾಬ ಹೈದರಅಲ್ಲಿಖಾನ ಬಾಹದರವರ್‍ರು ಆಳ್ಳಿದು, ವರುಷ ೧೬ ಟೀಪುಸುಲ್ತಾನ್ ಪಾದಷಾರ್‍ರು ವರುಷ. ನಾಗಮಂಗಳದ ಶೀಮೆಯ ಮೈಸೂರು ಅರಸುಗಳವರ್‍ರು ದೇವಸ್ತಾನದ ಪಡಿತರ ದೀಪಾರಾದನಿಗೆ ಬಿಟ್ಟುಕೊಟ್ಟು ಅಗ್ರಹಾರಗಳು. ಅದೆ ಪ್ರಕಾರ ಮೈಸೂರ ನವಾಬ ಹೈದರಲ್ಲಿ ದಿವ್ಸದಲ್ಲಿ ಯಿನಾಮು ಅಗ್ರಹಾರಗಳು ಯೀ ಶೀಮೆಯಲ್ಲಿ ಪೂರ್‍ವ ಪ್ರಕಾರವೇ ನಡುತ್ತಾ ಯಿತ್ತು. ಅನಂತ್ತರ ಅವರು ಕಾಲವಾದ ಬಳಿಕಾ ಟೀಪುಸುಲತಾನನವರಿಗೆ ರಾಜ್ಯವಾದ ಮೇಲೆ ಸಮಸ್ತ ಯಿನಾಮು ಅಗ್ರಹಾರ ಜಪ್ತಿ ಆಗಿಯಿತ್ತು. ಯಿತ್ತಲಾಗಿ ಶಿಧಾರ್ತಿಯಲ್ಲಿ ಕುಂಪಣಿ ಆದ ಬಳಿಕಾ ಮೈಸೂರ ಧೊರೆಗಳು ಕ್ರಿಷ್ಣರಾಜವಡೆಯರವರಿಗೆ ಆದ ಬಳಿಕಾ ಯಿನಾಮು ವುತ್ತಾರಗಳಿಗೆಲ್ಲಾ ಸುಮಾರ್‍ರು ಕಂಠರಾಯಿ ೩೮೦ ಹಣವಿನ ಮೇರಿಗೆ ಭಟಮಾಂನ್ಯ ಭೂಮಿಗಳು ವುತ್ತರಾ ಬಿಟ್ರಟು ಕೊಟ್ಟರ್‍ರೂ.

ದೇವಾದಾಯಗಳಿಗೆ ಅದಕ್ಕು ಅಲ್ಪಸ್ವಲ್ಪು ತಸ್ತಿಕು ಆಗಿಯಿದೆ. ಹೈದರಲ್ಲೀಖಾನು ಬಾಹದರುಡು । ಫಿತೂರ್‍ರಿಚೇತನೂ ॥ ಬಿದರೂರ್‍ರು । ಸಂಸ್ತಾನಂ ಕೊಟತೀಸುಕೊನಿ । ತಮ ಸ್ವಾಧೀನಂ ಚೇಸು ಕೊನಿರ್‍ರಿಗನುಕ । ವೀರಂಮ್ಮಾಜಿತನ ನಗರ್‍ರಿ ಅಗ್ನಿ ಪ್ರವೇಶಂ ಚೀಯಿಂಚಿ ವಂದುಲಯಿಂಟಕಿ ಸಹಾ । ಖಜಾನಾ ತೀಸುಕೊನಿ । ವೆಳ್ಳಿ ಪೊಯಿ ಬಲ್ಲಾಲ । ರಾಯದುರ್ಗ್ಗ ಮಂದು ವುಂಟು ವುಂಡಗ್ಗಾ । ನವಾಬು ವಾರಿಗರ್‍ರುವು ಕಾಕೀಸಾಹೇಬ ಆನೇವಾಡು । ಸಂಮ್ಮತಂ ಮೀದ ಯೀ ವಿರಂಮಾಜಿನಿ

। ಪಿಲುಚು ಕೊನಿವೊಚ್ಚಿ ವಾರ್ಕಿ । ಕೊಡಿಯಾಲಂದಗ್ಗಿರ ಭೆಟ ಭ್ರಯಿಂಚರ್‍ಯಿಗನುತ । ಅಪ್ಪುಡು ನವಾಬು । ಮದ್ದಗಿರಿ ದುರ್ಗ್ಗಂದಗ್ಗರ ಕು। ವೀರಂಮಾಜಿ । ಯೀ ಕೊಮಾರುಡು ಸಾಕುಮಗ ಸೊಮಶೆಖರ ನಾಯಕುಣ್ಣು । ಸಹ ಅಂಪೆಂಚಿರ್‍ರಿ ।

ಅಯಿ ಮೀದಟ ಅಕ್ಕಡ ನೇ ವೀರು ವುಂಟ್ಟು ವುಂಡಂಗಾ ಅರೇಪಾರಿ ಫೌಜು ವಚ್ಚಿ ಮದ್ದಗಿರ್‍ರಿ ಕೋಟೆ ತೀಸುಕೋನಿ ತಮಠಾಣ ಆಯಿನ ಮೀದಟ ಯೀ ವೀರಂಮಾಜೀನಿ ಕೊಡುಕುನು ಸಹ ಮಠಾರೆವಾಳ್ಳು ಕೊಡಕು ಕೊನಿಪೊತ್ತು ವುಂಡಂಗಾ ಚಂನ್ನಗಿರಿ ಬಸವಾಪಟ್ಣಮಂದು । ವೀರಂಮಾಜಿ ಮೃತಮಾಯನು । ಅನಂತರಂ ಯೀ ಕೊಮಾರಡು । ಸೋಮಶೇಖರನಾಯಕುಡುಂನ್ನು । ವೆಂಬಡಿಗಾ ಪಿಲುಚು ಕೊನಿವೊಯಿರ್‍ರಿ ________ ಅಮೀದಟ ಆ ನವಾಬು । ಯೀ ರಾಜ್ಯಂ । ಠಾಣಾವೇಸುಕೊನಿವುಂಡೆಗನ್ನು । ಯೀತನು ಕೊಂನ್ನಿ ದಿನಮುಲುರಾ ರಾಜ್ಯಭಾರಂ ಚೇಶಿ । ಅನಂತ್ತರ ಮಂದು ಶುಭಕೃತ್ತು ಸಂವತ್ಸರಂ ಪುಷ್ಯ ಶ ೧೦ ಪರಿಯಂತ್ರ ನವಾಬು । ಕಡೆ ಸಖಿಲ[>ಸೇಖು] ಅಮಾ[>ಯಾ]ಜೀ ಮುಖಾಂತ್ರಂವುಂಡೆನು । ಅನಂತ್ತರ ಮಂದು ಯೀ ನವಾಬು ಚೆಚ್ಚಿನ ವರ್‍ತ್ತಮಾನಂವಿ ನೀ । ಯೀ ಸೆಖು ಅಮಾಚಿ[>ಯಾಜಿ] । ಯಿಂಗರಿಜಿವಾಳ್ಳುಕು ಶುಭಕೃತ ಸಂವತ್ಸರಂ । ಪುಷ್ಯ ಬಳ ೧೦ ದಿನ ತಮ ಠಾಣಾ ನುಂಚಿ । ಅನಂತರಂ ಯೀ ಸೆಖು ಅಯಾಜಿ ಕುಯೀಂ ರಾಜ್ಯಂ ಯಿಚ್ಚಿರ್‍ರಿಗನುಕ್ಕು ಯೀತನು ದೊರೆತನಂ ಚ್ರಸ್ತುವಚ್ಚೆನು । ಯೀ ಪ್ರಕಾರಂ । ಮೂಡು ನೆಲಲು ವುಂಡಗ । ಈ ವರ್ತಮಾನಂ । ಟೀಪು ಸುಲತಾನು ವಿನಿ । ಫವುಜು ತೀಸು ಕೊನಿವಚ್ಚತನು ಮುಖಾಂತ್ರ ಠಾಣಾವೇಸು ಕೊನಿರ್‍ರಿ.

ಆ ಮೀದಟ ಟೀಪುಸುಲ್ತಾನು ರಾಜ್ಯಭಾರಂ ಚೇಶಿ । ಶಿಧಾರ್ತಿ ಸಂವತ್ಸರ ಮಂದು ಯಿಂಗರ್‍ರಿಜುವಾರ್‍ರಿ ಮುಖಾಂತ್ರ ಆಯಿಸು ಸ್ವಭಾನು ಸಂವತ್ಸರದ ವರ್‍ರಿಗೆ ವರುಷಂ[೧] ಯೀ ಮೇಲೆ ಚಿತ್ರಭಾನು ಸಂವತ್ಸರಲ್ಲು ದುರ್ಗದ ರಾಜಾ ಮೆದಕೆರೆನಾಯಕರ ಸಂಗಡ ಕರಕೊಂಡು, ಫೌಜು ಸಹಾ ತೆಗದುಕೊಂಡು ಬಂದು, ಬಿದರ್‍ರೂರ್‍ರಿಗೆ ಠಾಣ್ಯವಂನು ಹಾಕಿ, ಯಿದಕ್ಕೆ ನಗರಾಯೆಂಬ ಹೆಸ್ರುಯಿಟ್ಟು, ಶೀಮೆಯನ್ನು ಸಾಧಿಶಿ, ರಾಜ್ಯವಂನ್ನು ಆಳಿದನೂ. ಅಂದಾರಭ್ಯ ಸ್ವಭಾನುಸಂವತ್ಸರದ ಲಾಗಾಯಿತ್ತು ದೊಡ್ಡ ನವಾಬರು ಟೀಪುಸುಲತಾನ ಪಾದಷಾರು ಸಹಾ ಆಳಿದ್ದು ವಿರೋಧಿ ಕೃತು ಸಂವತ್ಸರದ ವರಿಗೆ ವರುಷ ೩೦ ಆಳಿದರ್‍ರೂ.

ಯಿವರ ಕಾಲದಲ್ಲಿ ಮಾಮಲೆಮಾಡಿದ ವಿವರಾ: ಕುಮಶಿ ನಾರಣ್ಯೆಯ್ಯನವರ್‍ರು ವರುಷ ೨. ಹೈದರಗಾಜಿಖಾನ ಜಾಗೀರ್‍ರಿ ಮುರಿದುದ್ದು ವರುಷ ೧೬. ಯಿವರ ಜಾಗೀರಿಯಂನ್ನು ಸೆಖಿಯಾಜಾ ಜಪ್ತಿಮಾಡಿ ತೇಜೊಪಂತ್ತರ್‍ರಿಗೆ ಮಾಮಲೇ ಕೊಟ್ಟರು. ಯಿವರ್‍ರು ಮಾಡಿದ ವರುಷ ೩. ಯೀ ಪ್ರಕಾರ ಟೀಪುಸುಲ್ತಾನ ಪಾದಷಾರ ಠಾಂಣ್ಯ ಯಿರುತ್ತಾ ಯಿದ್ದಲ್ಲಿ, ಮಹಾರಾಷ್ಟ್ರ ಕಡೆ, ಪರಷರಾಮಭಾಉನ ಕಡೆ, ಮಿರ್ಜಿ ರಾಜಗೋವಿಂದನ ಕಡೆ ವೆಂ[+ಕ]ಟರಾಯನು ಬಂದು ಟಾಣೆ ಹಾಕಿಕೊಂಡು. ಯೀ ಆರಭ್ಯ ಪರಿಧಾವಿ ಸಂವತ್ಸರದ ಜೇಷ್ಠ ಪರಿಯಂತ್ರಕ್ಕು ವರುಷ ೩ ತಿಂಗಳು ೬ ದಿನಂ.

೧-೧ ಈ ಭಾಗ ಪು.೧೦೮ರಲ್ಲಿದೆ (ಸಂ).

ಯೀ ಮೇಲೆ ಟೀಪುನ ಕಡೇಯಿಂದಾ ಗುಲಾಂಮ ಮಹಂಮದನು ಬಂದು ಯೀ ಹೊಂನಾಳಿ, ಮಲ್ಲೂರು ಸಹಾ ಅಮೀಲ ಮಾಡಿದ್ದು,ಕ ಯೀ ಆ[>ಲಾ]ಗಾಯಿತ್ತು ಆನಂದ ಸಂವತ್ಸರದ ವರಿಗೆ ವರುಷ ೩.

ಯೀ ತರ್ರುವಾಯಾ ರಾಕ್ಷಸಸಂವತ್ಸರದಲ್ಲು ಗುಲಾಂಮಹಂಮದ ನಿಬೆಗ ಆಸಪ್ಪನು ಬಂದು ಅವುಲ್ಲು । ಬಿದ್ರೆ[>ರ್ರೆ] । ದುಯ್ಯಂ । ಹೊಂನಾಳಿ । ಬಿದ್ರೆ[>ರ್ರೆ] । ನ್ಯಾಮತಿ ಶೀ[>ತೀ]ಯಂ ಬರ್ರೆ ಸಾಸುವೆಹಳ್ಳಿಯೆಂಬದಾಗಿ ಮೂರು ತುಕಡಿಯಂನು ವಿಂಗಡಿಶಿ ಯಿಂ[>ಯೀ] । ಸಾಸುವೆಹಳ್ಳಿ ಶೀಮೆಯಂನ್ನು ಗುಲಾಂ ಮಹಂಮದನಿಗೆ ಕೊಟ್ಟದರ್‍ರಿಂದಾ ಯೀ ಪೈಯಿಂಗಳ ಸಂವತ್ಸರದ ವರ್‍ರಿಗೆ ವರುಷ ೩ ಕಾಳಾಯುಕ್ತಿ ಸಂವತ್ಸರದಲ್ಲು ಗುಲಾಂಮಹಂಮ್ಮದಸಾಹೇಬಯೆಂಬವನಿಗೆ ಆಮೀಲ ಕೆಲ್ಸ ಆಗಿಯಿತ್ತು. ಯೀತನು ಶಿದ್ಧಾರ್ಥಿ ಸಂವತ್ಸರದ ಚೈತ್ರ ಶು ೩೦ ವರ್‍ರಿಗೆ ಯಿಂಗ್ರೆಜಿ ಬಹದರವರ್‍ರು ಶ್ರೀರಂಗಪಟ್ಣಕ್ಕೆ ಠಾಣ್ಯ ಹಾಕುವ ಪರಿಯಂತ್ರ ಯಿದ್ದು, ಯಿದರ ಮೇಲೆ ಪರಾರ್‍ರಿ ಆಗಿ ಹೊದನೂ.

ಆ ತರ್ರುವಾಯಾ ದೊಡ್ಡಜಿಯು ಹೊಂನಾಳಿ ಕೊಟೆಯಂನು ಠಾಣ್ಯಾಹಾಕಿಕೊಂಡು, ಅವಲ್ಲು ದುಯ್ಯುಂ । ಶೀ[>ತೀ]ಯ್ಯಂ ಸಹಾ ಮೂರು ತುಕಡಿಯಂನ್ನು ಕೂಡಿಶಿ, ಆ ತರುವಾಯ್ಯಾ ಬೈ[>ಹೈ]ದರ ಗಾಜಿಖಾನನ ಮಗ ಕಿದರಖಾನಗೆ ಸಾಸುವೇಹಳ್ಳಿ ಶೀಮೆಯಂನ್ನು ಜಾಗೀರಿಕೊಟ್ಟಲ್ಲಿ, ಆಳಿದ ತಿಂಗಳು ೨. ಯೀ ಮೇಲೆ ಶ್ರಾವಣದಲ್ಲು ಯಿಂಗ್ರೇಜಿ ಬಾಹದರವರು ತಂಮ್ಮ ಕಡೆ ಸರದಾರ ದಾಲರಂಪಟ ಸಾಹೇಬ ಬಸವಾಪ್ಪಣದ ರಾಮರಾಯರ್‍ರು ಸಹಾ ಫೌಜು ಸಹಾ ತೆಗೆದುಕೊಂಡು ಗೊಲ್ಲರಹಳ್ಳಿ ಬಳಿಗೆ ಬಂದು ಉಳಿದು, ಯೀ ಹೊಂನ್ನಾಳಿಕೋಟೆಯನ್ನು ಶ್ರಾವಣ ಶು ೭ಲ್ಲಿ ಹಲ್ಲಾಮಾಡಿ ತೆಗದುಕೊಂಡು ಟ್ಹಾಣ್ಯ ಹಾಕಿದರ್‍ರೂ.

ಆಮೇಲೆ ಶ್ರೀಮಂತರು ಪೂರ್ಣೈಯ್ಯನವರ್‍ರು ಯೀ ಹೊಂನಾಳಿ ಮಲ್ಲೂರು ಶೀಮೆಯನ್ನು ಸರ್ವೊತ್ತಮರಾಯರಿಗೆ ನೇಮಕಾಮಾಡಿಕೊಟ್ಟದರಿಂದ ಯೀತನು ಮಾಡಿದ್ದು ರಉದ್ರಿ ಸಂವತ್ಸರದ ವರಿಗೆ ವರುಷಾ ೧.

ನಂಬರು – ೭೬ಳ

ಉಡುಗಣಿ ಶಿಖಾರ್‍ರಿಪುರ ಯೀಚಿಗೆ ಶ್ರೀರಂಗಪಟ್ಟಣದಿಂದ ದೊಡ್ಡನವಾಬರ್‍ರು ಚಿತ್ರಭಾನು ಸಂವತ್ಸರದ ಪುಷ್ಯಮಾಸದಲ್ಲು ನಗರವಂನ್ನು ತೆಗದುಕೊಂಡು, ಯಿವರ ಸರದಾರ ರಾಣೊಜಿ ಯಂಬವನು ಬಂದು ಕಿಲ್ಲೆ ತೆಗದುಕೊಂಡು, ಚಂನ[>ವೀರ]ಮಾಜಿ ಮಲ್ಲಪ್ಪಯ್ಯ ಮಾಮಲೆಯತು ಕೆಲ್ಸಯಿದ್ದದರ್‍ರಿಂದಾ ಆ ದಿನ ಅವನು ಪರಾರ್‍ರಿ ಆಗಿ ಹೋದನು. ಯೀ ಚಿತ್ರಭಾನು ಸಂವತ್ಸರದ ಚೈತ್ರ ಶುದ್ಧ ೩೦ ವರಿಗೆ ವರುಷ ೩೬ ತಿಂಗಳು ೩ಕ್ಕೆ ಮಾರಾಷ್ಟ್ರವರ ಠಾಣ್ಯ ವಿರೋಧಿಕೃತು ಸಂ ॥೧॥ ಶುಧ ನಿಂತ್ತ ವರುಷ ೩೫ ತಿಂಗಳು ೩.

❖❖

೫೦

ಹೈದರನ ಕೈಫಿಯತ್ತು - ೨

ಮೆಕೆಂಝಿ ಸಂಪುಟ : ೩೩೨

ಮೈಸೂರು ಅರಸು ಚಿಕ್ಕಕ್ರಷ್ಣರಾಜವಡೆರ್‍ರು ದಳವಾಯಿ [ನಂ+]ಜರಾಜ್ಯೆಯನವರ ವಳಗೆ ಫತ್ತೆನಾಯ್ಕಿ ಯಂಬವನೂ ನೂರ್‍ರು ಮಂದಿ ಹೋಬಳಿದಾರನಾಗಿರುತ್ತಿದಲ್ಲಿ. ಯಿತನ ಮಗ ಹೈದರಖಾನನು ಸೇವಾಉರ್‍ರುತ್ತಿಯಲ್ಲಿ ನಂಜರಾಜ್ಯೆಯನವರ ಮನೊಉರ್‍ರುತ್ತಿಯಂನ್ನು ಸಂಪಾದಿಶಿಕೊಂಡು ಯಿರ್‍ರುವಲ್ಲಿ, ಯಿ ದಳವಾಯಿ ನಂಜರಾಜ್ಯೆಯನವರು ಶೀಮೆ ಮಮಲಿತು ಮುಂತ್ತಾಗಿ ಯಾವತ್ತಂದು ಕ್ರಮದಿಂದಾ ಯಾವತ್ತು ಕಾರಖಾನೆಯಂನು ಯಿತನು ಅಧೀನಮಾಡಿಕೊಟ್ಟು ಯಿರುವದ್ದರಿಂದಾ, ಯೀ ಕಾರಖಾನೆ ಬಂದೊಬಸ್ತು ಮಾಡಬೇಕಾದರೆ ತಂನವೊಳಗೆ ವಕೀಲನಾದ ಖಂಡೆರಾಯಂಗೆ ದಿವಾನಗಿರಿ ಮೊಕರೂರುಮಾಡಿ, ಯಾವೊಂದು ಕೆಲಸವಂನು ಯೀತನಿಂದಲ್ಲೆ ನಡಿಸುತ್ತಿರುವಲ್ಲಿ, ಕೆಲವು ದಿವ್ಸದ ಮೇಲೆ ಹೈದರಲ್ಲಿಖಾನನು ಯೀ ದಿವಾನ್ ಖಂಡೆರಾಯನು ಅಂತರಂಗ ಚರ್ಚಂ ಸುಟ್ಟಿ ಬಿಗಡಾಟ ಬಂದಿರ್‍ರುವದರ್‍ರಿಂದಾ, ಆ ಸಮಯದಲ್ಲಿ ಶ್ರಿಂಗೇರಿ ಶ್ರೀಕರ್‍ತುರ್‍ ಅಭಿನವ ಸಚಿಳ[>ಸಚ್ಚಿ]ದಾನಂದ ಭಾರತೀಯವರು ರಾಮೇಶ್ವರ ಸೇತು ಯಾತ್ರಾನಿಮಿತ್ಯವಾಗಿ ಹೊರಟ್ಟಿರುವಾಗ್ಯೆ, ಮೈಸೂರ ಅರಸಗಳ ಶ್ರೀರಂಗಪಟಣಕೆ ಬಂದಿರುವಲ್ಲಿ. ಆಗ್ಯೆ ಖಂಡೆರಾಯನು ಅರಸುಗಳವರಿಗೆ ಯೀ ಖಂಡೆರಾಯನ ವಹಿಸುವ ರೀತಿ ಹೆಳಿದರೂ, ಯೀ ಅರಸುಗಳವರಿಗೆ ಯೀ ಖಂಡೆರಾಯನ ವಯಿಶಿದಲ್ಲೀ, ಹೈದರಖಾನನೂ ಯೀ ಶ್ರೀಕರ್‍ತುರ್‍ಗಳಲ್ಲಿ ಅವಿಶ್ವಂ[>ಶ್ವಾ]ಶಿಕನಾದನೂ.

ಆ ತರುವಾಯ ತರ್‍ಕುರ್‍[>ಕರ್‍ತುರ್‍]ಗಳಲ್ಲಿ ರಾಮೇಶ್ವರ ಸೇತುಯಾತ್ರೆ ಮಾಡುವ ಬಗ್ಯೆ ಆ ತರುವಾಯ ಯೀ ಖಂಡ್ಯೆರಾಯನು ದಿನೆ ದಿನೆ ಅಂತರಂಗದಲ್ಲಿ ಡಾಉ ಅರಸುಗಳವರಲ್ಲಿ ನಂಜರಾಜ್ಯೆಯನವರಲ್ಲಿ ಸಹಾಯಿಟ್ಟು, ಬಂದಿ[>ಹಿ]ರಂಗ ಯೀ ಹೈದರಲ್ಲಿಖಾನನ ಸಂಗಡ ವಿಶ್ವಾಸವಾಗಿದಲ್ಲಿ ಸವಸ್ತಾನ ನಾಯಿಕವಾಡಿಗಳು ಸರದಾರು ಕಾರಭಾರಿಗಳು ಸರ್ವಾಧಿಕಾರಿಗಳು ನಂಜರಾಜ್ಯೆನವರು ಸಹಾ ಯೆಳಕ[>ಏಕ]ಮತ್ಯರಾಗಿ ಯೀ ಹೈದರಖಾನನು ಪ್ರಬಲಿಸುತ ತಿರಸ್ಕರ್‍ರಿಶಿ, ಯೀ ಖಂಡೆರಾಯುನಂನ್ನೆ ಸಮಸ್ತ ಕಾರಬಾರ್‍ರಿಯಾಗಿ ಘಟದ ಕೆಳಗಿನ ರಾಜ್ಯವೆಲ್ಲಾ ಸ್ವಾಧೀನಮಾಡಿಕೊಂಡು, ಯೀ ಬಿದರೂರ್‍ರು ಸಂಸ್ಥಾನಕೆ ಶೆರಿಸಿ, ಚಿತ್ರಭಾನು ಸಂವತ್ಸರದ ಫಾಲ್ಗುಣ ಬಹುಳ ೩೦ಗೆ, ಆ ತರುವಾಯ ಸ್ವಭಾನು ಸಂಕ್ಕೆ ಸೊದೆ ಸಂಸ್ಥಾನಕ್ಕೆ ಮೊಹಿಯು ಮಾಡಿ, ಆ ಸಂಸ್ಥಾನ ಸ್ವಾಧೀನವಾಗಬೇಕಾದಕ್ಕೆ ಮೀರಪಡದುಲ್ಲಾಖಾನನ ಫೌಜು ಸುಧಾಕೊಟ್ಟು ಕಳುಹಿ, ಆ ಸಂಸ್ಥಾನ ತನ್ನ ಸ್ವಾಧೀನ ಮಾಡಿಕೊಂಡು, ಅಲ್ಲಿ ಕಾರಭಾರಕ್ಕೆ ಕತ್ತಿ ಗೋಪಾಲ ರಾಜ್ಯೆಯ್ಯನವರ ಯಿಟ್ಟು, ಪಾರ್ಥಿವ ಸಂವತ್ಸರದ ಪುಷ್ಯದ ವರಿಗೆ ಬಿದರೂರಿಗೆ ನಗರಾಯೆಂದು ಪ್ರತಿಹೆಸರಂನ್ನು ಯಿಟ್ಟು, ಅಲ್ಲಿ ಸಮಸ್ತ ಕಾರಭಾರು ಮೈಸೂರು ಚಿಕ್ಕಬಳ್ಳಾಪುರ, ನಗರ, ಕೊಡಿಯಾಲ, ಸೂ[>ಸೋ]ದೆ,

ವಗೈರೆ ಸಂಸ್ಥಾನಗಳ ವಿಚಾರಣೆಗಳ। ಮಾಡಿಕೊಳ್ಳುತ್ತಾ ಯಿರುತ್ತಿರುವಲ್ಲಿ ಪೂರ್ವದ ಖಂಡೆರಾಯ, ನಿಮಿತ್ಯವಾಗಿ, ಶ್ರಿಂಗೇರ್ರಿ ಶ್ರೀ ಕರ್ಕು[>ರ್ತು]ಗಳಲ್ಲಿ ದ್ವೇಷ ಹುಟ್ಟಿದ್ದಂನು ಮನಶಿನಲ್ಲಿ ಯಿಟ್ಟು, ಶ್ರೀಕರ್ಕು[>ರ್ತು]ಗಳವರ ಮೇಲೆ, ನಾನಾ ಪ್ರಕಾರ ಉಪತ್ತಿಯ ಮಾಡುತ್ತಾಯಿರುವಲ್ಲಿ, ಆಗ್ಯೆ ಶ್ರೀಕರ್ಕು[>ರ್ತು]ಗಳವರು ಶ್ರಿಮಂತ ಮಾಧವರಾಯ ಪೇಶ್ವೆರ ಬಳಿಗೆ "ನಂಮನ ತಂಮ್ಮ ಬಳಿಗೆ ಕರಿಶಿಕೊಳ್ಳುಬೇಕು"ಯೆಂದು ಶ್ರೀಮುಖವನ್ನು ಬರೆಹಿಸಿ ಕಳುಹಿಸಿದಲ್ಲಿ ಅವರು "ಅವಶ್ಯ ದಯಮಾಡಿ ಬರಬೇಕು" ಯೆಂದು ಶ್ರೀಕರ್ಕು[>ರ್ತು] ಗಳಿಗೆ ಬಿಂನಹವಂನು ಬರದು ಕಳುಹಿಸಿದರೂ, ಕಾಳುಂದಿ[>ಕಳುಹಿ] ಯೀ ಹೈದರಖಾನ ನವಾಬಗೆ "ನಮ್ಮ ಗುರುಗಳ ಬೇಟೆಯಿಲ್ಲದೆ ಬಹಳ ದಿವಸವಾಗಿ ಅದೆ, ಆ ಬಗ್ಯೆ ಅವರು ದಯಮಾಡಿ ಬರುವ ಹಾಗೆ ಬಿಂನಹಾ ಬರಕೊಂಡು ಯಿಧೆವೆ. ನೀನು ಅವರ್ರು ಬರುವದಕ್ಕೆ ಸರಂಜಾಮೆ ಮಾಡಿಶಿ ಕಳುಹಿಸುವದು" ಯಂದು ತಾಕಿಶಿ ಸಹಾ ಕಳುಹಿಶಿ ಶ್ರೀಕರ್ಕು[>ರ್ತು]ಳವರಂನು ಸಮೀಪಕ್ಕೆ ಕರಶಿಕೊಂಡು, ನಾಶಿಕಾ ಸಮೀಪದಲ್ಲಿರುವ ಪಂಚವಟಿಯಲ್ಲು ಮಠಾ ಕಟಿಶಿಕೊಟ್ಟು, ಅಲ್ಲಿ ಯಿಟ್ಟುಕೊಂಡು ಯಿದೇ ಉದಿಕ್ಯ ಶ್ರೀಮಂತ ಮಾಧವರಾಯನೂ ಫೌಜು ಸುಧಾ ಸ್ವಾರಿಯಾಗಿ. ದೇವಗಿರಿ ನದಿ ಬಳಿಗೆ ಮೊಕಾಂಮು ಆಗಿರುವಾಗ್ಯೆ. ಯೀ ಹೈದರನವಾಬ ಫೌಜು ಸುಧಾ ಆನವಟ್ಟಿಗೆ ಹೊಗಲಿಲ್ಲ. ಹುರಳೀಗುಡ್ಡದ ಸಮೀಪದಲ್ಲು ಬಾರಿ ಲಡಯಿಯಾಗಿ, ಯೀ ನವಾಬನ ಫೌಜು ಪರಾರ್ರಿ, ಯೀತನಂನು. ಗುತ್ತಿ ಮುರಾರ್ರಿರಾಯನಂನು ಯಿವರ ತಪ್ಪಿಶಿ ಕಳಶಿಕೊಟ್ಟದರಿಂದ ಹತ್ತು ಫೌಜು ಸಹಿತವಾಗಿ ಅನಂತ್ತಪುರಕ್ಕೆ ಬಂದು, ಗೌಹೆಕ್ಕೆ ಬಂದು ಮೊಕಾಂಮು ಮಾಡಿ ನಿಂತ್ತಿರಲಾಗಿ, ಆಗ್ಯೆ ನವಾಬ ಹೈದರನು ಲಡಾಯಿ ಮಾಡಲಾರದೆ ಗುತ್ತಿ ಮುರಾರ್ರಿರಾಯನ ಮಾರ್ರಿಪತ್ತು ಸಾಲ್ ಜವಾಬು ಸಲ ಹತ್ತಿಶಿ ಸಲ್ಲಾ ಮಾಡಿಕೊಂಡು ತಲು ಹಣವಿಗೆ ಖಂಡಣಿ ಮಾಡಿಕೊಂಡು, ಚೌಥಾಯಿಯೆಂನು ಮೊಕರರ್ರು ಯೀ ಶ್ರಿಂಗೇರಿ ಕರ್ತುರಿಗೆ ಉತ್ತಾರ ಶೀಮೆಗೆ ಉಪಹತಿಯಿಲ್ಲದ ರೀತಿ ಮಾಡಿ, ಶ್ರೀಮಂತ್ತರು ತಂಮ ಫೌಜು ಸಹಿತವಾಗಿ ಮುನಹಾಕ್ಕೆ ಹೋದರು.

ಆ ತರುವಾಯ ವಿಶೇಷವಾಗಿ ಕುದುರೆ ಮಂದಿ ಕಟ್ಟಿಕೊಂಡು, ಪಾರ್ಥಿವ ಸಂ॥ ಮಾಘದಲ್ಲು ಕೇರಳ ಪ್ರಾಂತ್ಯಕ್ಕೆ ಹೋಗಿ ಚರಕಲ್ಲಲ್ಲು ಮಹಾ ಯುಧವಾಗಿ, ಆ ಅರಸು ಪರಾರ್ರಿಯಾಗಿ ಹೊಗಲಾಗಿ, ಆತನ ಜಿಂದಗಿ ಮೊದಲಾಗಿ ತೆಗದುಕೊಂಡು, ಆ ಶೀಮೆಯಲ್ಲಿರುವ ನಾಯಮಾರರ್ರು ವಳ್ಳೆವಳ್ಳೆ ಹುಡುಗರಂನು ನೋಡಿ ಕೆಲಲು ಹುಡಗರಂನು ಚೆಲೆಕಿ[>ಚೇಲೆರ] ಮಾಡಿಶಿದರಲ್ಲಿ ಶಿಖಹಯಾಜಿಯು ಪ್ರಬ

ಚರಕಲ್ಲಾರಭ್ಯ ಕಲ್ಲಿಕೋಟೆ ಪರ್ಯಂತ್ತರ ತಂನ್ನಾ ಅಮಲಂನು ಚಡಾಯಿಶಿ, ಹಾಂಗೆ ಫೌಜು ಸುಧಾ ಶ್ರೀರಂಗಪಟ್ಟಣಕ್ಕೆ ಬಂದು, ಶುಕ್ರವಾರಪೇಠೆಯಲ್ಲಿ ಯಿಳಿದೂ, ವಳಿಗೆ ಯಿರುವ ಕದೀಮ ಮುಂತಾದವರಿಗೆ ದಂಡಖಂಡನೆ ಮಾಡಿ, ಪಟ್ಟಣದಲ್ಲಿ ಆಳಿಕೊಂಡು ಯಿರುವ ಮಹಾಸ್ವಾಮಿಯವರ ಭಂಡಾರದಲ್ಲಿರುವ ವಸ್ತು ವಡವೆ ಕರಾಚೂರ್ರಿ ನಂಜರಾಜ್ಯೆಯನವರ ಮೆನ ಜಿಂದಗಿ ಸಹಾ ತೆಗದುಕೊಂಡು, ಕರ್ತುಗಳಗೆ ದಳವಾಯಿಗೆ ಸಹ ಲೆಶ ಆಸ್ಪತವಿಲ್ಲದರತಿ ಮಡಿ ಹಾಂಗೆ ಪಟಣ ಕಿಲ್ಲೆದ ವಳಗೆ ಪ್ರವೇಶಿಶಿ. ದಳವಾಯಿ ನಂಜರಾಜ್ಯೆಯನವರ ಮನೆಯಂನು ತಂನ್ನಾ ಖಾಸಾರಂ[>ಹ]ವೆಲಿ ಮಾಡಿಕೊಂಡು, ಅಲ್ಲಿ ಯಿರುತ್ತಿದ್ದರೂ, ವ್ಯಯಸಂವತ್ಸರದಲ್ಲು ಆ ತರುವಾಯ

ಪ್ರಾಕು ತಿರ್ಚನಾಪಳ್ಳಿಗೆ ಮೈಸೂರ ದಳವಾಯಿ ನಂಜರಾಜೈಯನವರ ಕಡೆ ಸರದಾರನಾಗಿ ಹೊಗಿರುವಾಗ್ಯೆ ಮಂಮ್ಮದಲ್ಲಿಖಾನಗೆ ಕುಂಮ್ಮಕು ಮಾಡಿದಲ್ಲಿ, ಯಿವರಿಗೆ ಹೇರಳ ರೊಕ್ಕ ಪಾಕಿ ಬಹಳ ಮುಟ್ಟಿದಾಗ್ಯು, ಆ ಮಂಮ್ಮದಲ್ಲಿಯೂ ಯೀತನ ತಿರಸ್ಕರಿಶಿರ್ರುವದರಿಂದಾ ಯಾವತಂನ್ನು ಮನಶಿನಲ್ಲಿಟ್ಟು ತನಗೆ ಮೇಲೆ ಬರದ ಪ್ರಾಕು ನಾಲ್ಕು ಮುರು ಸಂಸ್ಥಾ ವಶವಾಗಿ ನಾಗಿ[>ಸಾಗಿ] ಶ್ರೀರಂಗಪಟ್ಣ ವಳಗೆರೆ ಸಂಸ್ಥಾನವನ್ನು ಬಂದೊಬಸ್ತು ಮಾಡಿಕೊಂಡು ಮೇಲಿ ಬರದ ವ್ಯಯ ಸಂವತ್ಸರದಲ್ಲು ಪೂರ್ಣೈಯನವರಂನ್ನು ತಂಮ್ಮ ಮಹಲಾತ್ತಿ ಕಚೇರಿಯಲ್ಲು ಚಾಕರಿಯಿಟ್ಟು, ಆ ತರುವಾಯ ಯೀ ಮಂಮ್ಮದಲ್ಲಿ ನವಾಬಗೆ ಯೀ ಹೈದರಲ್ಲಿಖಾನ[+ನ]ವಾಬು ಶಹುದಾ[>ಬಹದೂ]ರನು ಹೇಳಿ ಕಳುಹಿಸಿದು : "ಪ್ರಾಕು ನಿಮಗು ಕುಮಕಿ ಬಂದಾಗ, ನಮಗೆ ಕೊಡತಕ್ಕ ಶೀಮೆದು ಸಹಾ ಕೊಟ್ಟರೆ, ನಮಗು ನಿಮಗು ನಿರ್ವ್ಯಾಜವೆ ಸರ್‍ರಿ, ಯಿಲ್ಲದೆ ಯಿದರೆ ಮೊಹಿಮು ಮಾಡುವದು ಸರಿಯಂದು ಹೇಳಿ ಕಳುಹ್ಸಿದಲ್ಲಿ, ಆತನು ಯೀ ಮಾತಿಗೆ ಅಂಗಿಕಾರವಾಗದ್ರಿಂದಾ, ಫೌಜು ಸುಧಾ ಮೊಹಿಮು ಮಾಡಿದಲ್ಲಿ, ಆಗ್ಯೆ ಯಿಂಗ್ರೇಜಿಯವರು ಮಂಮ್ಮದಲ್ಲಿಖಾನಗೆ ಕುಮುಕಾನಿಯಿದದರ್‍ರಿಂದಾ, ಯೀತಗು ಅವರ್‍ರಿಗು ಯುಧ ಪ್ರಾರಂಭಾವಾದದರಿಂದಾ, ಹೈದರ ನವಾಬ ಕಣವೆ ಕೆಳಗೆ ಯಿರುವಾಗ್ಯೆ ನಗರದಲ್ಲು ಸರ್ವಾಧಿಕಾರ ಮಾಡುತ್ತಾ ಯಿರುವ ತುಮಕೂರು ವೆಂಕಪ್ಪೈಯ್ಯರ್ಗೆ ಹೊಂನ್ನಾವರದಲ್ಲು ಯಿರುವ ಯಿಂಗ್ರೇಜಿ x x x ರಿಗೆ ಪ್ರಾಕು ಕಠಾ[>ರಾ]ರು ಮಾಡಿ ಯಿರ್‍ರುವ ಪ್ರಕಾರ ಮಾಡಿರುವ ಪ್ರಕಾರಕ್ಕೆ ಗಂಧ ಮೆಣಸು ಸಹಾ ವಂದೆ ತೃಣಮಾತ್ರದಷ್ಟು ಕೊಡುವ ಕೆಲಸವಿಲ್ಲಾ ಯಂಬದಾಗಿ ತಾಕಿತಿ ಪರವಾನೆ ಶ[+ಬ]ರೆಶಿ ಕಳುಹಿಶಿರುವದರಿಂದಾ, ಆ ಹೊಂನ್ನಾವರದ ಕೊಠಿಯವರಿಗೆ ಗಂಧ ಮೆಣಸಿನ ವ್ಯವಹಾರ ಹರಕತ್ತು ಆದದರಿಂದಾ, ಯೀ ನಿಮಿತ್ಯದಿಂದಾ ಮೊದಲುಕಿಂತ್ತಲ್ಲು ಯಿಂಗ್ರೇಜಿಯವರಿಗೆ ಹೈದರಿಗು ವಿಶೇಷ ಯುಧ ಪ್ರಸಕ್ತಿಯುಂಟಾಗಿ ಸರ್ವಜಿತು ಸಂವತ್ಸರದಲ್ಲಿ ಯೀ ಯಿಂಗ್ರೇಜಿಯವರು ಕೊಡಿಯಾಲದ ಕಿಲ್ಲೆ ತ್ತೆಗದುಕೊಂಡೂ ಯಿದ್ದಲ್ಲಿ ಯೀ ವರ್ತಮಾನವಂನು ನವಾಬನು ಕೇಳಿ, ಟಾಕೊಟಾಕು ಫೌಜು ಸುದಾ ಬಂದು, ಕೊಡಿಯಾಲ ಪ್ರಾಂತ್ಯಕ್ಕೆ ಬಂದು ಕಾರಕಳ ಮಾರ್ಗವಾಗಿ ಗು[+ರು]ಪುರದ ವಡ್ಡಿನಲ್ಲೀರುವಾ ಯಿಂಗ್ರೇಜಿ ಫೌಜಂನು ಯಿವರ್‍ರು ಜೆಡ್ಡಿಗುಡ್ಡದ ವಡ್ಡಿನಲ್ಲು ಯಿದ್ದು ಲಡಾಯಿ ಕೊಟ್ಟು, ಅಲಿಂದಾ ಮುರದವರು ಜಹಜು ಹತ್ತಿ ಕಿಲ್ಲೆ ಬಿಟ್ಟುಹೊದರು.

ಆಮೇಲೆ ಕಿಲ್ಲೇದ ಬಂದೊಬಸ್ತುಮಾಡಿ, ಅಲಿಂದಾ ನಗರಕ್ಕೆ ಬಂದು ಮೂರು ದಿವಸ ಯಿದ್ದು, ಅಲ್ಲಿಂದಾ ಪುನಹ ತಿರ್ಚನಾಪಳ್ಳಿ ಪ್ರಾಂತ್ಯಕ್ಕೆ ಆಗಿನ ಪ್ರಕೃತೋಚಿತವಾಗಿ ಆ ಕಡಿ ರಾಜಕಾರ್ಯವಂನು ತೀರಿಶಿಕೊಂಡು, ಶ್ರೀರಂಗಪಟ್ಣಕ್ಕೆ ಬಂದು, ಸರ್ವಜಿತು ಆರಭ್ಯ ಪಟ್ಣದಲ್ಲು ವಿಕೃತು ವರಿಗೆ ಯಿರುತ್ತಿರುವಲ್ಲಿ, ಆಗ ಚೆನ್ನಪ್ಪಯೆಂಬವಗೆ ರಾಜಾರಾಮನೆಂದು ಹೆಸರು ಕೊಟ್ಟು, ನಗರದ ಸರ್ವಾಧಿಕಾರ ಕೊಟ್ಟು, ಯೀ ರೀತಿಯಲ್ಲು ಯಿರುವಾಗ ಸಂವತ್ಸರದಲ್ಲು ಖಂಡಣಿ ಹಣವಿನ ನಿಮಿತ್ಯಾವಾಗಿ ಶ್ರೀಮಂತ್ತ ಮಾಧವರಾಯರು ಶ್ರೀ[>ತ್ರಿ]ಯಂಬಕ ಪೂಮಾ [>ಮಾಮ]ನೆಂಬ ಸರದಾರನ ಲಕ್ಷಾಂತರ ಫೌಜು ಕೊಟ್ಟು ಕಳಶಿದಲ್ಲಿ, ಆತನು ಯಿಟ್ಣ ಪ್ರಾಂತ್ಯಕ್ಕೆ ಫೌಜು ಸಹಾ ಬಂದು, ಮೊ ಕೊಟೆಗೆ ಸಮೀಪದಲ್ಲು ಯಿರುವ ಚಿರು[>ನ]ಕುರ್ಲಿ ಬಳಿಯಲ್ಲು ಯೀ ನವಾಬ ಹೈದರಿಗು ಅವರ್‍ರಿಗು ಲಡಾಯಿ ಆಗಿ, ಯೀ ನವಾಬನ ಫೌಜು ಮುಂ[>ರಿ]ದು ಯೀತನು ಪಟಣಕೆ ಪರಾರಿಯಾಗಿ ಬಂದು, ಪುನಃಹ ಫೌಜು ಜಮಾಹಿಶಿ ಕಿಲ್ಲೆ ಬಂದೊಬಸ್ತು ಮಾಡಿಕೊಂಡು

ಯಿದ್ದಲ್ಲಿ, ಯೀ ಸರದಾರನೂ ಫೌಜು ಸಹಿತಾ ಬಂದು, ಶ್ರೀರಂಗಪಟ್ಣಕ್ಕೆ ಮುತ್ತಿಗೆ ಹಾಕಿದಲ್ಲಿ, ಅಪ್ಪಾಜಿರಾಮನ ಮುಖಾಂತ್ರ ಸಲಹಾದ ಜವಾಬು ಸಾಲ್ ಹತ್ತಿ, ಅಖಂಡಿಣಿ ಮುಟ್ಟಿ ತರುವಾಯ ತ್ರಿಯಂ[+ಬ]ಕ ಮಾನುನು[>ಮಾಮನು] ತಿರುಗಿ ಪುಣಾಕ್ಕೆ ಹೋಗಲಾಗಿ, ಅಲ್ಲಿ ಶ್ರೀಮಂತ ಮಾಧವರಾಯಂಣ ದೈವಾಧೀನವಾದ ತರುವಾಯ ಆತನ ತಂಮ್ಮ ನಾರಾಯಣರಾಯಗೆ ಪಟ್ಟವಾಯಿತು.

ಆಗ್ಯೆ ಯೀ ನಾರಾಯಣರಾಯ ಚಿಕ್ಕವನಾದ್ದರ್‍ರಿಂದಾ ಅಲ್ಲಿ ಸರದಾರು ಕೆಲವರು ಯೀತನ ಕಕ್ಕನಾದವರು ನವಾಬನ ಕಡಿಗೆ ಆಗಿ ಕೆಲವರ್‍ರು ಉಭಯಕ್ಕು ಸಮವಾಗಿ, ಹೀಗೆ ಯಿರ್‍ರುವಾಗ ಯೀ ನಾರಾಯಣರಾಲು ಗೌರವಿಟ್ಟಿ ಯೇಕೀಕಾರವಾಗಿ ನಡದು ಕೊಳ್ಳುತ್ತ ಯಿರುವಲ್ಲಿ, ಅವರ ಗೃಹಕೃತ್ಯದಲ್ಲಿ ದುರಾಲೋಚನ ಹುಟ್ಟಿ ಯೀ ನಾರಾಯಣರಾಯನಂನು ದಘು ಮಾಡಿಶಿದರಿಂದಾ, ಆಗ್ಯೆ ಯಿ ನಾರಾಯಣರಾಯನ ಹೆಂಡತಿ ಗರ್ಭಿಣಿ ಆಗಿರುವಲ್ಲಿ, ಆ ಸಂಸ್ಥಾನಕ್ಕೆ ನಡಗಿಸಲಾರ[>ಫಡಣಿಸನಾಗಿ], ನಾನಾ ನಡಗಿಸನು[>ನಾನ ಪಡಣಿಸನು] ಯೀ ಸಂಸ್ಥಾನವ ಬಂದೋವಸ್ತು ಮಾಡಿತ್ತಿರುತ್ತಿದ್ದು, ಯೀ ರಾಘೊಬಗೆ ಲೇಶ[>ದೇಶ] ಸ್ವಾಧೀನಕ್ಕೆ ಬಾರದ ಹಾಂಗೆ ಮಾಡಿಸಿದಲ್ಲಿ, ಯೀತನು ಪುಂಡನಾಗಿ ತ್ತಿರುಗುತ್ತಿರುವಲ್ಲಿ ಮರಾಠರ ಸಂಸ್ಥಾನಕ್ಕೆ ಅಪರಾಜಿಕವೆಂದು ಭಾರಿಯಾಗಿ ಫೌಜು ತೆಗೆದುಕೊಂಡು ಸವಣೂರು ನವಾಬನು ಮರಾಠೆರಿಗೆ ಕೊಟ್ಟ ಹನ್ನೊಂದು ಮಹಾಲಂನ್ನು ಠಾಣೆ ಹಾಕಿಕೊಂಡು, ಗುತ್ತಿ ಬಳ್ಳಾರಿ ಠಾಣೆ ಹಾಕಿಕೊಂಡು ಮುರಾರ್‍ರಿಯ ಕೈಶರೆ ಹಿಡಿದು, ತಾನು ಠಾಣೆ ಹಾಕಿದ ಸೀಮೆಯಂನ್ನು ಶೀಮೆಮೆ ಅಮಲು ಕಿಲ್ಲೆಕ್ಕೆ ಬಂದೊಬಸ್ತುಮಾಡಿಕೊಂಡು ಬಂದು, ಶ್ರೀರಂಗಪಟ್ಣಕ್ಕೆ ಬಂದು, ಭಾರ್‍ರಿ ಲಡಾಯಿ ಸರಂಜಾಮೆ ಮಾಡಿಕೊಂಡು, ಚಿತ್ರಕಲ್ಲುದುರ್ಗ ಕಿಲ್ಲೆಯಂನು ಆರು ತಿಂಗಳು ಲಡಾಯಿ ಮಾಡಿ ತೆಗೆದುಕೊಂಡು, ವಿಳಂಬಿ ಸಂವತ್ಸರದಲ್ಲು ಕಿಲ್ಲೆ ಶೀಮೆ ಬಂದೊಬಸ್ತು ಮಾಡಿತ್ತರಲು, ಯೀ ಶ್ರೀರಂಗಪಟ್ಣಕ್ಕೆ ಹೋಗಿ ಸ್ವಸ್ತವಾಗಿ ಯಿರುವಾಗ್ಯೆ ನಗರದ ರಾಜಾರಾಮನು ಮೃತವಾದದರ್‍ರಿಂದಾ ಗೊಲ್ಲಭದ್ರ ತಿಂಮ್ಮಪ್ಪಗು ಪರವಾನೆ ಬರದು ಕಳುಹಿಸಿ ಸಂಸ್ಥಾನ ಬಂದೋಬಸ್ತು ಆಗುವಾಂಗೆ ಮಾಡಿ, ಆ ತರ್‍ರುವಾಯಾ ನಾಲ್ಕಾರು ತಿಂಗಳ ಮೇಲೆ ಪ್ರಾಕು ಚೇಷ್ಠೆ ಮಾಡಿದ ನಾಯಿಮಾರ ಸೀಮೆಯಾ ನಗರ ಸಂಸ್ಥಾನಕ್ಕೆ ಕಳಿಶಿದು, ವಿಕಾರಿ ಸಂವತ್ಸರದಲ್ಲು, ಆ ತರುವಾಯಾ ಶುಭಕೃತು ಸಂವತ್ಸರದ ಪುಷ್ಯ ಶುಭದಲ್ಲು ಯಿಂಗ್ರೇಜಿರೂ ಕೊಡಿಯಾಲ ಪ್ರಾಂತ್ಯಕ್ಕೆ ಫೌಜುಗಿಶಿ[>ರಿ] ಬರಲಾಗ, ಜನ್ರಾಲು ಮೆಥಿಸಾಹೇಬರು ಫೌಜುಗಿಶಿ[>ರಿ] ಬಂದ್ರಿರುವಲ್ಲಿ, ಯೀ ಸಂವತ್ಸರದ ಬಾದ್ರಪದ ಪರ್‍ವದಲ್ಲು ಭಾರ್‍ರಿ ಫೌಜು ತೆಗೆದುಕೊಂಡು ಹೋಗಿ, ಮಂಮದಲ್ಲಿ ಹೈದರ ನವಾಬರಂನು ಸುಲಗೆಮಾಡಿ, ಚಂನ್ನಪಟ್ಣ ಪೇಠೆ ಸಹಾ ಲೂಟಾಯಿಶಿ ಪುನಃ ಲೊಬಳಿಯಲ್ಲು ಯಿಂಗ್ರೇಜಿ ಫೌಜು ಸಂಗಡಾ ಲಡಾಯಿಯಾಗಿ, ಫೌಜು ಶಿಕಸ್ತು ಆದ್ದರ್‍ರಿಂದಾ ಆರುಕಾಟು ಕಿಲ್ಲೆ ತೆಗೆದುಕೊಂಡು, ಅಲ್ಲಿ ಯರಡು ವರುಷ ಪರ್‍ಯಂತ್ತ ಅಲ್ಲಿರುತ್ತಿರಲಾಗಿ, ಯೀ ಕೊಡಯಾಲ ಪ್ರಾಂತ್ಯಕ್ಕೆ ಯಿಂಗ್ರೇಜರು ಆಗಮನವಾಗಲಾಗಿ, ಯಿಲ್ಲಿ ನವಾಬ ಹೈದರು ಮೃತವಾದ ತರುವಾಯ, ಯೀ ಸೆಖುಯಾಜಿ ಯೀ ಯಿಂಗ್ರೇಜಿರಲ್ಲು ಷಾಮೀಲಾಗಿ ಕೊಡಿಯಾಲಾರಭ್ಯ ಹೊಂನ್ನವಾರ ಮೊದಲುಮಾಡಿಕೊಂಡು ಅನಂತಪುರ ಪರಿಯಂತ್ತ ರಾಜ್ಯಸ್ವಾಧೀನಮಾಡಿಕೊಟ್ಟು, ತಾನು ನಗರದಲ್ಲು ಯಿರುವ ಲಕ್ಷಾಂತರದ ವರಹದ ಜಿಂದಗಿಯಂನು ಜಹಜುನಲ್ಲು ಹಾಕಿಕೊಂಡು ತಾನು ಜಹಜು ಹತ್ತಿಕೊ ಹೋದ ತರುವಾಯ ಹಲ್ಲಿ ಆರಕಾಟದಿಂದಲ್ಲು ಉಟ ಆ ತರುವಾಯ ಯೀತ ಫೌಜು ತೆಗೆದುಕೊಂಡು

ಬಂದು, ಕೊಡಿಯಾಲ ಪ್ರಾಂತ್ಯಕ್ಕೆ ಬಂದು, ಲಡಾಯಿ ಮಾಡಿ, ಯಿಂಗ್ರೇಜರು ಠಾಣೆಹೋದ ಶೀಮೆ ಯಾವತ್ತು ತೆಗೆದುಕೊಂಡು, ಜನ್ರಾಲ ಮೆಥೀಸಾಹೆಬರಂನ್ನು ಕ್ಯಾರಾಕೈವಶಾ ಮಾಡಿಕೊಂಡು ಬಂದೀಖಾನಿಯಲ್ಲು ಹಾಕಿ, ಆಮೇಲೆ ರಾಜ್ಯ ಬಂದೊಬಸ್ತು ಮಾಡಿದ ತರುವಾಯ, ಶ್ರೀರಂಗಪಟ್ನಕ್ಕೆ ಬರಬೇಕಾದ ಕೊಡಿಯಾಲದ ಕಿಲ್ಲೆ ೩ ತಿಂಗಳು ಆದರು ಬಾರದರಿಂದ, ಚಂನ್ನಪಟ್ಟಣಕ್ಕೆ ಅಪ್ಪಾಜಿರಾಮನ ಕಳುಹಿಶಿ ಅಲ್ಲಿಂದಾ ಕೊಡಿಯಾಲ ಕಿಲ್ಲೆದಲ್ಲು ಯಿರುವ ಯಿಂಗ್ರೇಜಿ ಸರದಾರಿಗೆ ವಡಂಬಡಿಕೆ ಮಾಡಲೀಕೆ, ಆ ಸರದಾರ ಕರಶಿಕೊಂಡು ಅವರ ಮುಖಾಂತ್ರ ಕೊಟ್ಟು ಯಿರುವಲ್ಲಿ, ತಂನ್ನಾ ಫೌಜು ಸುಧಾ ಜಹಾಜು ಹತ್ತಿಕೊಂಡು ಹೊದ ತರುವಾಯಾ ಕೊಡಿಯಾಲ ಕಿಲ್ಲೆ ಬಂದೊಬಸ್ತು ಮಾಡಿ, ಆ ಶೀಮೆ ನಗರ ಕೊಡಿಯಾಲ ವಗ್ಯೆರೆ ಶೀಮೆಗಳ ಬಂದೊಬಸ್ತಿನ ಬಗ್ಯೆ ಕೋಟಿ ನರಪ್ಪಯ್ಯ ಯಿಟ್ಟು, ಕಡದ ಘಟ್ಟದ ಮೇಲೆ ಹೊಗುವಾಗ್ಯೆ, ಉಜಕ್ರಿಗುಡಾಯಂಬದು ಎನ್ನಾರವಾಗಿ ಯಿರುವದಂನ್ನು ಕಂಡು ಅದರ ಮೇಲೆ ಜಲಸಮುದ್ರಿ[>ಸಮೃದ್ಧಿ] ಯಾಗಿರುವದಂನು ಕಂಡು, ಅಲ್ಲಿ ಕಿಲ್ಲೆ ಕಟ್ಟುವ ಹಾಂಗೆ ಅದಕ್ಕೆ ತಕ್ಕ ಜನಗಳಂನು ಯಿಟ್ಟು, ತಾನು ಶ್ರಿರಂಗಪಟಣಕ್ಕೆ ಹೊದ ಶುಭಕೃ. ಸಂವತ್ಸರದ ಕಾರ್ತ್ತಿಕದಲ್ಲು. ದಾಖಲಾ.

❖❖

೫೧

ಹೊದಿಗೆರೆ ಶೀಮೆ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೦

ಸ್ಥಳದ ನಾಡಿಗ ಪುಟ್ಟಯ್ಯ ಬರಶಿದ ಪ್ರಕಾರ:

ಉಚ್ಚಂಗಿ ವೇಂಟಿಕೆ ಸಲ್ಲುವ ದುಂಬಿ[>ಮ್ಮಿ]ನಾಡಿನಲ್ಲಿ ಕೆದಿಗೆರೆಯಂಬ ಗ್ರಾಮ ಯಿರುತ ಯಿದ್ದಲ್ಲಿ, ಸಂತೆಬೆನ್ನೂರುಯಿಂದಾ ಯಿ ಸ್ಥಳಕ್ಕೆ ಸ್ವಾರಿ ಬಂದಲ್ಲಿ, ನಾಯಿ ಮೇಲೆ ಮೊಲ ತಿರಿಗಿ ಬಿದ್ದದರಿಂದ ಯಿದು ಗಂಡುಭೂಮಿಯಂದು ತಿಳಿದು, ಯಿಲ್ಲಿ ವಂದು ಕೋಟೆಯನ್ನು ಕಟ್ಟಿಸಬೇಕೆಂದು ಮನಸು ಮಾಡಿ, ಪುನಹಾ ಸಂತೆಬೆನ್ನೂರಿಗೆ ಹೋಗಿ, ಶಾಲಿವಾಹನ ಶಕ ೧೪೮೭ನೆಯ ವರ್ತಮಾನಕೆ ಸಲ್ಲುವ ಕ್ರೋಧನಸಂವತ್ಸರದ ಸುಮೂಹೂರ್ತದಿಂದ ಕೋಟೆ ಕಟ್ಟಿಸಿ, ರಂಗನಾಥ ದೇವರನ್ನು ಪ್ರತಿಷ್ಠೆಯ ಮಾಡಿ, ದೇವಸ್ಥಾನವನ್ನು ಕಟ್ಟಿಶಿ, ಪ್ರಭವಸಂವತ್ಸರದ ವರಿಗೆ ಶಕ ವರುಷ ೧೪೮೯ ಪ್ರಭವ ಸಂ। ವರಿಗೆ ವರುಷ ೩ ಆಳಿದರು.

ದುಮ್ಮಿ ನಾಡಿಗೆ ಸಲುವ ನಾಡಿಗತನವು ಯೀಶ್ವರಯ್ಯನ ಮಕ್ಕಳು ಪುಟ್ಟಮಲ್ಲಪ್ಪ, ತಿಮ್ಮಪ್ಪನು "ನಾವು ಪೂರ್ವಿಕರು, ನಮ್ಮ ಹಿರಿಯರು ಪಡೆದಂಥ ಸ್ಥಳ ಮನೆ ಕಾದುಕೊಂಡು ಇದ್ದೆವು"ಯಂಬದಾಗಿ

ಹೇಳಿಕೊಳಲಾಗಿ ಚಿತ್ತಕೆ ತಂದು, ಪೂರ್ವದಲ್ಲಿ ಯಿದ್ದಂಥಾ ಸನ್ನದುಗಳನೆಲ್ಲ ತರಿಸಿ, ಪೂರ್ವಸ್ಥಳದವರು ಅಹುದುಯೆಂಬದರಿಂದಾ "ಪೂರ್ವಪ್ರಕಾರ ಸ್ಥಳದ ನಾಡಿಗತನ ವಿಚಾರಿಸಿಕೊಂಡುಹೋಗಿ" ಯಂಬದಾಗಿ ಹೇಳಿ ಗದ್ದೆಬೆದ್ದಲು ಸಹಾ ನಡಸುವ ಹಾಗೆ ಉತ್ರಾ ಬರಸಿಕೊಟ್ಟು, ಯೀ ಕೆದಿಗೆರೆಯಂಬ ಹಳ್ಳಿಗೆ ಹೊದಿಗೆರೆಯೆಂಬದಾಗಿ ಹೆಸರು ಯಿಟ್ಟು, ಯೀ ಪ್ರಕಾರಾ ಮೂರು ವರುಷ ಆಳಿದರು.

೧. ಯಿವರ ಮಕ್ಕಳು ಯಿಮ್ಮಡಿ ಹನುಮಪ್ಪನಾಯಕರು, ಯೀ ಕೋಟೆಗೆ ಕೊಮಾರ್‍ರು ಯಿರುವ ಸ್ಥಳಯೆಂಬುದಾಗಿ ರಾಮನಾಯಕ ಕೆಂಚನಾಯಕಾ ಮುನ್ನೂರು ಜನ ವಾಲೆಕಾರ್‍ರು ಕಾಮಾಟಿ ಜನ ೨೫ ಯಿಟ್ಟು, ಯರಡು ಹರದಾರಿ ಮೇಲೆ ಹೋಗುತ್ತ ಯಿದ್ದಂಥ ಹಳ್ಳವನ್ನು ವಡ್ಡು ಹಾಕ್ಸಿ ತಿರುಹಿಸಿ, ಹೊದಿಕೆರೆ ಪಶ್ಚಿಮದಿಕ್ಕಿನಲ್ಲು ದೊಡ್ಡಕೆರೆಯನ್ನು ಕಟ್ಟಿಸಿ, ಯೀ ರಾಮನಾಯಕನ ಹೆಸರ್‍ರಿನಲು ರಾಮೇನಹಳ್ಳಿ ಗ್ರಾಮ ೧, ಯೀ ಗ್ರಾಮಕೆ ದೊಡ್ಡಕೆರೆ ೧, ಕೆಂಚಳನಾಯಕರು ಕೆಂಚಾಪುರಯೆಂಬ ಗ್ರಾಮ ೧ ಹೊದಿಗೆರೆಯಲ್ಲು ಮಜರಿ ಮಾಡಿ, ಶಕ ವರುಷ ೧೪೯೨ನೆಯ ಪ್ರಮೋದ ಸಂವತ್ಸರ ವರಿಗೆ ವರುಷ ೩ ಆಳಿದರು.

ಯಿವರ ಮಕ್ಕಳು ಕೆಂಗೆ ನಿತ್ಯಮದುವಣಿಗ ಹನುಮಪ್ಪನಾಯಕರು ಶಕ ವರುಷ ೧೫೦೨ನೆಯ ವಿಕ್ರಮದ ವರಿಗೆ ವರುಷ ೧೦ ಆಳಿದರು.

೧. ಯಿವರ ಮಕ್ಕಳು ಹಿರೆ ಕೆಂಗೆಹನುಮಪ್ಪನಾಯಕರು, ಚಿಕ್ಕ ಕೆಂಗೆಹನುಮಪ್ಪನಾಯಕರು ಸಹಾ ಶಕವರುಷ ೧೫೦೩ನೆಯ ವಿಷು ಸಂ।ರದ ಲಾಗಾಯಿತು ಉಭಯತರು ರಾಜ್ಯ ಆಳುತ್ತಾ ಯಿರಲಾಗಿ, ವಂದಾನೊಂದು ಕಾಲದಲ್ಲಿ ಅಣ್ಣತಮ್ಮಂದಿರಿಗೆ ಕಲಹಾ ಹುಟ್ಟಿದ ಕಾರಣ ಕೆಂಗೆಹನುಮಪ್ಪನಾಯಕರು ಬಾಣಾವರಕ್ಕೆ ಚಿತ್ತೈಸಿದರು. ಹಿರೆ ಕೆಂಗೆಹನುಮಪ್ಪನಾಯಕರು ಬಸವಾಪಟ್ಟಣದಲ್ಲಿ ರಾಜ್ಯವನ್ನು ಆಳುತ್ತಾ ಸುಖದಿಂದ ಯಿದ್ದರು. ಯಿಲ್ಲಿಗೆ ಶಕ ೧೫೦೪ನೆಯ ಚಿತ್ರಭಾನು ಸಂ। ವರಿಗೆ ವರುಷ ೨ ಕೂಡಿಯಿದ್ದರು.

೧. ಯೀ ಸ್ವಭಾನು ಸಂ. ಆರಭ್ಯವಾಗಿ ಶಕವರುಷ ೧೫೬೦ನೆಯ ಬಹುಧಾನ್ಯ ಸಂ।ವರಿಗೆ ಹಿರೆ ಕೆಂಗೆಹನುಮಪ್ಪನಾಯಕರು ೫೬ ಆಳಿದರು ಯೀ ಪ್ರಕಾರ ತರೆಕೆರೆಯವರು ಆಳುತ್ತ ಯಿರಲಾಗಿ ಮೊಗಲರ ಠಾಣ್ಯ:

೧. ಭಾಗನಗರದ ವಜೀರ ರಣದುಲ್ಲಾಖಾನರು ದಂಡು ತೆಗೆದುಕೊಂಡು ಯಾವತ್ತೂ ಪಾಳೆಗಾರರನೆಲ್ಲ ಮುರದು, ಬಸವಾಪಟ್ಟಣದ ಕೋಟೆಯನ್ನು ಹಲ್ಲಾಮಾಡಿ ತೆಗೆದುಕೊಂಡು ಹೋಗುವಾಗ್ಯೆ, ಹನುಮಪ್ಪನಾಯಕರ ಸಂಗಡ ಭಾಗನಗರಕ್ಕೆ ಕರಕೊಂಡು ಹೋಗುವಾಗ್ಯೆ, ಯೀ ರಣದುಲ್ಲಾಖಾನರು ಯೀ ಹೊದಿಕೆರೆಯಲ್ಲು ಮಸೀದಿ ಕಟ್ಟಿಸುವ ಹಾಗೆ ತಾಕೀತು ಮಾಡಿಸಿ, ವಬ್ಬ ಮುಲ್ಲಾನ ಯಿಟ್ಟು, ಶಕವರುಷ ೧೫೬೧ನೆಯ ಪ್ರಮಾದಿ ಸಂ।ದಲ್ಲು ಠಾಣ್ಯಹಾಕಿ, ತಮ್ಮ ಕಡೆ ಮುರ್ತುಜಾಬೇಗರನ್ನು ಬಸವಾಪಟ್ಟಣಕ್ಕೆ ಯಿಟ್ಟು, ಹಿರೆ ಕೆಂಗೆಹನುಮಪ್ಪನಾಯಕರನ್ನು ಕರಕೊಂಡು ಭಾಗಾನಗರಕ್ಕೆ ಹೋದರು.

೧. ಯೀ ಸದರಿ ಮುರ್ತಜಾಬೇಗನ ಕಡೆ ಭುಜಬಲರಾಮ ಶಕೆ ೧೫೬೨ನೆಯ ವಿಕ್ರಮ ಸಂ.ದ ವರಿಗೆ ಆ ವರುಷ ೧ ಆಳಿದರು.

೯. ಯೀ ರಣದುಲ್ಲಾಖಾನರ ಬಗ್ಗೆ ಮುರ್ತುಜಾಬೇಗರ ಕಡೆ ಖಾನರು ಶಕವರುಷ ೧೮೫೩[>೧೫೬೨]ನೆ ವಿಷು ಸಂ। ಲಾಗಾಯಿತು ಶಕ ೧೫೭೧ನೇ ವಿರೋಧಿ ಸಂ. ವರಿಗೆ ವರುಷ ೯ ಆಳಿದರ್‍ರು.

೫ ಯೀ ಮುರ್ತುರ್ಜಾಬೇಗನ ಕಡೆ ಪತ್ತೆಖಾನರು ಶಕ ೧೫೭೨ನೆಯ ವಿಕೃತ ಸಂ ಲಾಗಾಯಿತು ಶಕ ೧೫೭೬ನೆಯ ಜಯ ಸಂ ವರಿಗೆ ವರುಷ ೫ ಆಳಿದರು.

೨ ಯೀ ಮುರ್ತುರ್ಜಾಬೇಗನ ಕಡೆ ಫರೀದಖಾನನು ಶಕ ೧೫೭೭ನೆಯ ಮನ್ಮಥ ಸಂ। ಲಾಗಾಯಿತು ಶಕ ೧೫೭೮ನೆಯ ದುರ್ಮುಖಿ ಸಂ। ವರಿಗೆ ವರುಷ ೨ ಆಳಿದರು.

ಸದರೀ ಮೊಗಲರು ಆಳುತ್ತ ಯಿದ್ದಲ್ಲಿ ಬಾಣಾವರದಲ್ಲು ಯಿದ್ದ ಚಿಕ್ಕ ಕೆಂಗೆ ಹನುಮಪ್ಪನಾಯಕರು ತಮ್ಮ ಅಣ್ಣ ಹಿರೆ ಕೆಂಗೆಹನುಮಪ್ಪನಾಯಕರನ್ನು ಭಾಗನಗರಕ್ಕೆ ಕರಕೊಂಡು ಹೋದ ಬಗ್ಯೆ ಯೀ ಚಿಕ್ಕ ಕೆಂಗೆಹನುಮಪ್ಪನಾಯಕರು ಭಾಗನಗರಕ್ಕೆ ಹೋಗಿ, ಪಾದಷಾಹಾರ ಕಂಡು ಮರ್ಜಿಕಾದುಕೊಂಡು ಯಿರುತ್ತ ಯಿದ್ದಲ್ಲಿ, ವಂದು . . . . ಲದಲ್ಲಿ ಹುಲಿಕಾಳಗವನ್ನು ಬಿಡ್ಸಿ ಯಿದ್ದಲ್ಲಿ, ಯೀತನು ಹುಲಿಮೇಲೆ ಬಿದ್ದು ಹುಲಿಯನ್ನು ಹೊಡದು ಬಹಳ ಮೆಹನತ್ತು ಮಾಡಿದ್ದರಿಂದ, ದಣೀರು ಚಿತ್ತಕ್ಕೆ ತಂದು, ಯೀತಗೆ ಸರ್ಜಾಯೆಂಬುದಾಗಿ ಕಿತ್ತಾಬುಕೊಟ್ಟು, "ನೀಉ ಪೂರ್ವದಲ್ಲಿ ಆಳುತ್ತ ಯಿದ್ದ ರಾಜ್ಯವನ್ನು ಆಳಿ"ಯಂಬುದಾಗಿ ಪರವಾನೆ ಕೊಟ್ಟು, ಹಸರ್‍ರು ಪಾಲಕಿ, ಹಸರು ಕೊಡೆ, ಹಸರ್‍ರು ಶಾಲು ಮುಂತಾಗಿಯು ತಸರೀಪು ಕೊಟ್ಟು ಕಳುಹಿಸಿದಲ್ಲಿ. ಯೀತನು ಪುನಹಾ ಬಸವಾಪಟ್ಟಣಕ್ಕೆ ಬಂದು ಶಕ ೧೫೭೮ನೆಯ ದುರ್ಮುಖಿ ಸಂ ಲಾಗಾಯಿತು ಶಕ ೧೫೮೪ನೆಯ ಶುಭಕೃತ ಸಂ. ವರಿಗೆ ವರುಷ ೬ ಆಳಿದನು.

೧. ಯೀ ಪ್ರಕಾರ ಕೆಂಗೆ ಸಣ್ಣ ಹನುಮಪ್ಪನಾಯಕರು ರಾಜ್ಯ ಆಳುತ್ತಾಯಿದಲ್ಲಿ ಪುನಹಾ ಮೊಗಲರ ಕಡೆ ಸರ್ಜಾಖಾನರು ಸಯ್ಯದ ಕಡೆಯಿಂದಾ ಬಂದು ಯೀ ಹನುಮಪ್ಪನಾಯಕರಿಗೆ ಬಲವಿಲ್ಲದೆ ಯಿದ್ದದರಿಂದ ಬಸವಾಪಟ್ಟಣಕ್ಕೆ ಠಾಣ್ಯ ಹಾಕಿಕೊಂಡು, ಶಕ ೧೫೮೫ನೆಯ ಶುಭಕೃತ ಸಂ. ಲಾಗಾಯಿತು ೧೫೯೩ನೆಯ ವಿರೋಧಿ ಕೃತ ಸಂ. ವರಿಗೆ ವರುಷ ೯ ಆಳಿದರು.

೧. ಯೀ ಸರ್ಜಾಖಾನ ನವಾಬನ ಬಗ್ಗೆ ಮಹಮ್ಮದಸಾಧಕ ಬೇಗರು ೧೫೯೩ನೆಯ ಪ್ರಥಾಬಿ[>ಪರಿಧಾವಿ] ಲಾಗಾಯಿತು ಶಕ ೧೫೯೮ನೆಯ ನಳ ಸಂ. ವರಿಗೆ ವರುಷಾ ೫ ಆಳಿದರು.

೧. ಯೀ ಸರ್ಜಾಖಾನನ ಬಗ್ಯೆ ಕಾಶೀಮಖಾನರು ಶಕ ವರುಷ ೧೫೯೯ನೆಯ ಪಿಂಗಳ ಸಂವತ್ಸರ ಲಾಗಾಯಿತು ಶಕ ೧೬೦೮ನೆಯ ಕ್ಷಯ ಸಂ. ವರಿಗೆ ವರುಷಾ ೧೦ ಆಳಿದರು.

೨

ಯೀ ಸದರಿ ಸರ್ಜಾಖಾನರಿಗೆ ನಾಡಿಗ ತಮ್ಮಪ್ಪನ ಮಗ ರಂಗಪ್ಪನು "ನಾನು ಸ್ಥಳದವನಾದುಕೊಂಡು ಯಿದ್ದೇನೆಂ"ಬದಾಗಿ ಹೇಳಿಕೊಳ್ಳಲಾಗಿ, ಯೀ ಮಾತು ಚಿತ್ತಕ್ಕೆ ತಂದು,

ಪೂರ್ವಾಪರ ವಿಚಾರಿಸಿ ತಮ್ಮ ಕಡೆಯಲಿ ಬಸವಾಪಟ್ಟಣದಲು ಯಿದ್ದ ಸರದಾರಿಗೆ ತಾಕೀದಿ ಮಾಡ್ಸಿ, "ಯೀತನ ಬದುಕು ಯಥಾ ಪ್ರಕಾರ ಯಿದ್ದ ಮೇರೆಗೆ ನಡ್ಸಿಕೊಂಡು ಬರ್‍ರುವದು"ಯೆಂಬದಾಗಿ ಪರವಾನೆಯನ್ನು ಬರ್‍ಸಿಕೊಟ್ಟು, "ನಿನ್ನ ಬದುಕು ನೀನು ಮಾಡಿಕೊಂಡು ಬರುವದು"ಯೆಂಬುದಾಗಿ ಹೇಳಿಯಿಟ್ಟು ಹೋದರು.

೧. ಸದರೀ ಸರ್ಜಾಖಾನರ ತೆಗದು ಹಸನಲಿ ನವಾಬಖಾನರು ಶಕ ೧೬೧೦ನೆಯ ಪ್ರಭವ ಸಂ. ಲಾಗಾಯಿತು ಶಕ ೧೬೨೫ಯೆನ ಸ್ವಭಾನು ಸಂವತ್ಸರದ ವರಿಗೆ ವರುಷ ೧೭ ಆಳಿದರು. ಆಳುತ್ತ ಯಿರುವಾಗ್ಯೆ ಯೀ ನವಾಬನು ಹೊಳೆಹೊನ್ನೂರು ಮೇಲೆ ಲಡಾಯಕ್ಕೆ ಹೋಗುವಾಗ್ಯೆ ಚಿತ್ರದುರ್ಗದ ಅರ್‍ಸು ಆ ಸೀಮೆ ಮೇಲೆ ಮೆಹನತು ಮಾಡಿದಾ. ಯಿದು ಹೊರತು ಯೀತನ ಆನೆಯು ಸತ್ತದರಿಂದಲು ಪುನಹಾ ತಿರಗಿ ಬರುವಾಗೆ ಯೀ ದುಂಭಿ[>ಮ್ಮಿ] ನಾಡನ ವಳಗೆ ಯಿದ್ದ ಗ್ರಾಮ ೪೯ ವಳಗೆ ದುರ್ಗದ ಅರ್‍ಸು ಭರಮಣ್ಣನಾಯಕರಿಗೆ ವಿಂಗಡಿಸಿಕೊಟ್ಟು ಗ್ರಾಮ ೨೧. ಬ್ಯಾರೆ ನಿಂತ ಗ್ರಾಮ ೨೮ ಹೊದಿಕೆರೆಯಲ್ಲು ನಡಿದು ಬರುತ್ತಾ ಯಿದೆ. ದುರ್ಗದಲರ್‍ಸನಿಗೆ ವಿಂಗಡಿಸಿಕೊಟ್ಟದ್ದರಿಂದ ಆ ಗ್ರಾಮ ಯಿಪ್ಪತ್ತುವಂದು ದುರ್ಗದ ಸೀಮೆಗೆ ಕೂಡಿಯಿದೆ. ಅದರಲ್ಲು ರಾಮಗಿರಿ ಕೋಟೆಯನ್ನು ಕಟ್ಟಿಸಿ, ಆ ಕೋಟೆ ಹುಟ್ಟುದು ಶಕ ೧೬೧೨ನೆಯ ಪ್ರಮೋದ ಸಂ.ದಲ್ಲು ಹುಟ್ಟಿತು.

೧ ಮಹಮ್ಮದಖಾನರು ಶಕವರುಷ ೧೬೨೬ನೆಯ ತಾರಣ ಸಂ. ಲಾಗಾಯಿತು ಶಕವರುಷ ೧೬೩೧ನೆಯ ವಿರೋಧಿ ಸಂ. ವರಿಗೆ ವರುಷ ೫ ಆಳಿದರು.

೧. ಅಬ್ದುಲ್ ಕುಸುಮೂಲಖಾನ ನವಾಬರು ಶಕವರುಷ ೧೬೩೨ನೆಯ ವಿಕೃತ ಸಂ. ಲಾಗಾಯಿತು ಶಕ ವರುಷ ೧೬೩೪ನೆಯ ನಂದ ಸಂ. ವರಿಗೆ ವರುಷ ೩ ಆಳಿದರು.

೧. ಯೀ ನಜೀರಖಾನ ನವಾಬರು ತನ್ನ ಕಡೆ ಸರದಾರ್‍ರು ಅಜಾದಾರಿಯು ಶಕವರುಷ ೧೬೩೫ನೆಯ ವಿಜಯ ಸಂ. ಲಾಗಾಯಿತು ಶಕವರುಷ ೧೬೪೦ನೆಯ ವಿಳಂಬ ಸಂ. ವರಿಗೆ ಆಳಿದ ವರುಷ ೫. ಯೀ ಸರದಾರ್‍ರ ಅಜಾದಾರಿಯು ಸ[>ಸೀ]ರ್ಯಕು ಬಸವಾಪಟ್ಟಣಕು ತಿರುಗುವ ಮಾರ್ಗದಲ್ಲಿ ನೀರ್‍ರು ಯಿಲ್ಲದೆ ದಾರಿಯು ಬೆಂಗಾಡು ಆದುದರಿಂದ ಯೀ ಮಾರ್ಗದಲ್ಲಿ ಒಂದು ಭಾವಿಯನ್ನು ಕಟ್ಟಿಸಬೇಕೆಂದು ನಿಶ್ಚಯ ಮಾಡಿ, ಹೊದಿಕೆರೆ ಸೀಮೆಯ ವಳಿತವಾದ ಹರಾಳಕಟದ ಗ್ರಾಮದ ಪಶ್ಚಿಮಕೆ ಮೂರು ಭಾವಿಯಂನ್ನು ತೆಗಸಿ, ಕಲ್ಲು ಕಟ್ಟಿಸಿ ನೀರು ಬೀಳದೆ ಯಿದ್ದದರಿಂದಲು "ಯಿನ್ನು ವಂದು ಮಟ್ಟ ತೆಗಸಿದರೆ ನೀರು ಬೀಳುತ್ತಾ ಯಿದ್ದಾವೆ"ಯೆಂಬುದಾಗಿ ಹೇಳಿದ್ದರಿಂದ "ಯಿನ್ನು ವಂದು ಮಟ್ಟ ತೆಗಿಸಬೇಕು"ಯೆಂಬುದಾಗಿ ಮಾಡಿಕೊಂಡು ಯಿದ್ದಲ್ಲಿ, ಅಷ್ಟರಲ್ಲಿ ಯೀತನ ಬದುಕು ಹೊದ್ದರಿಂದಾ ಆ ಕೆಲ್ಸಾ ಅಷ್ಟಕೆ ನಿಂತಿತು.

೧ ವಜೀರಖಾನ ನವಾಬರು ಶಕವರುಷ ೧೬೪೧ನೆಯ ವಿಕಾರಿ ಸಂ. ಲಾಗಾಯಿತು ಶಕವರುಷ ೧೬೪೨ನೆಯ ಪ್ಲವ. ಸಂ. ವರಿಗೆ ವರುಷ ೨ ಆಳಿದರು.

ಯೀ ಪ್ರಕಾರ ಆಳಿಕೊಂಡು ಮೊಗಲರು ಯಿರುತ್ತ ಯಿರಲಾಗಿ ಯಿವರ ಸಂಸ್ಥಾನ ಬಲತರ್‍ರಿದರಿಂದಾ ದುರ್ಗದಲರ್‍ಸು ಹಿರೆಮೆದೆಕೆರಿನಾಯಕರು ಶಕವರುಷ ೧೬೮೫ನೆಯ ಶೋಭಕೃತ ಸಂ. ಲಾಗಾಯಿತು

ಶಕವರುಷ ೧೬೬೧ನೆಯ ಸಿದ್ಧಾರ್ಥಿ ಸಂ। ವರಿಗೆ ವರುಷಾ ೧೮ ಆಳಿದರು. ಯೀ ಅರ್ಸು ಯೀ ಗ್ರಾಮಕೆ ಪ್ರಾಕು ತರೆಕೆರೆ ಅರ್ಸುಗಳು ಕೆರೆಕಟ್ಟಿಸಿ, ಕೋಡಿಗಳನ್ನು ಹಾಕ್ಸಿ ಯಿದ್ದಲ್ಲಿ "ನಮಗು ಮಲನಾಡದವರಿಗು ವ್ಯಾಜ್ಯಾ, ಯಿಲ್ಲಿ ಕೋಟೆಗಳು ಯಿದ್ದರೆ ಯಿದರ ಲಡವಿನಾಂದ[>ಲಡಾವಿನಿಂದ] ನಮ್ಮ ಶೀಮೆ ಸಾಧಿಸುತ್ತಾ ಯಿದ್ದಾರೆ" ಯಂಬುದಾಗಿ ತಿಳಕೊಂಡು, ಯೀ ಕೆರೆಯನ್ನು ಹೊದಿಗೆರೆಯಲ್ಲಿ ಯೀತ ಕುಳಿತು, ಕೆರೆವಡಸಿ, ಕೋಟೆಗಳಲ್ಲು ಯಿದ್ದಂತಾ ಮರಗಳನ್ನು ಕಡಕೊಂಡು ದುರ್ಗಕೆ ಸಾಗಿಸಿಕೊಂಡು ಹೋದರು. ಯೀ ಪ್ರಕಾರ ಯೀ ದುರ್ಗದಲರ್ಸು ಮೆದಕೆರೆನಾಯಕರ್ರು ಆಳುತ್ತಾ ಯಿದ್ದರು.

೧. ಬಿದರೂರ ಅರ್ಸು ಸೋಮಶೇಖರನಾಯಕರ್ರು ತಮ್ಮ ಕಡೆ ಸುಭೆದಾರು ಲೋವಿ ನಿಂಗಣ್ಣ ದಂಡು ಸಹಾ ತೆಗೆದುಕೊಂಡು ಬಂದು, ಯೀ ಕೋಟೆಗೆ ಮೂರ್ರು ತಿಂಗಳು ಮುತ್ತಿಗೆ ಹಾಕಿ, ಯೀ ಕೋಟೆಯನ್ನು ಕಾವಲು ಮೇಲೆ ತೆಗದುಕೊಂಡು, ೧೬೬೨ನೆಯ ರಉದ್ರಿ ಸಂ. ಲಾಗಾಯಿತು ಶಕ ವರುಷ ೧೬೮೪ನೆಯ ಚಿತ್ರಭಾನು ಸಂವತ್ಸರ ವರಿಗೆ ವರುಷ ೨೨ ಆಳಿದರು.

೧ ನವಾಬ ಹೈದರ ಬಾಹದರವರು ಚಿತ್ರಭಾನು ಸಂ. ದಲ್ಲು ಚಿತ್ರದುರ್ಗದ ಅರಸು ರಾಜಾ ಮೆದಕೆರಿ ನಾಯಕರು ಸಹಾ ಸಂತೆಬೆನ್ನೂರು ಹೊದಗೆರೆ ಯರಡು ಕೋಟೆಗೂ ಠಾಣ್ಯ ಹಾಕಿ ಉಭಯತರು ಕೂಡಿಕೊಂಡು ಬಿದರೂರಿಗೆ ಹೋಗಿ ಬಿದರೂರಿಗೆ ಠಾಣ್ಯ ಹಾಕಿ, ಯೀ ಬಿದರೂರಿಗೆ ನಗರಯೆಂಬಾ ಹೆಸರು ಯಿಟ್ಟು, ಪುನಹಾ ಯೀ ಚಿತ್ರದುರ್ಗದ ಅರ್ಸು ರಾಜಾ ಮೆದಕೆರಿನಾಯಕರು ಊರಿಗೆ ಹೋಗುವಾಗ್ಯೆ "ನಮಗೆ ಹೊದಿಗೆರೆ ಸಂತೆಬೆನ್ನೂರು ಸಹಾ ಪೂರ್ವದಲು ನಮಗೆ ಯಿದ್ದಉ" ಯಂಬುದಾಗಿ ನವಾಬರಿಗೆ ಹೇಳಿಕೊಂಡಿದ್ದರಿಂದಾ, ಯೀ ರಾಜಾ ಮೆದಕೆರಿನಾಯಕರಿಗೆ ಸಂತೆಬೆನ್ನೂರು ಹೊದಿಗೆರ್ರೆಯನ್ನು ಕೊಟ್ಟರು. ಶಕವರುಷ ೧೬೮೫ನೆಯ ಸ್ವಭಾನು ಸಂ. ಲಾಗಾಯಿತು ಶಕ ೧೯೯೯ ಹೇವಳಂಬಿ ಸಂವತ್ಸರದ ವರಿಗೆ ವರುಷ ೧೫ ಆಳಿದರು.

ನಾಡಿಗ ತಿಮ್ಮಪ್ಪಗೆ "ನೀನು ಯೇಕ ಪ್ರಕಾರ ಸ್ತಳದಲ್ಲು ನಿನ್ನ ನಾಡಿಗತನ ನೀನು ಮಾಡಿಕೊಂಡು ಯಿರ್ರು"ಯಂಬುದಾಗಿ ನಿರೂಪ ಬರ್ಸಿಕೊಟ್ಟು, ಅಲ್ಲಿ ಪಾರುಪತ್ಯ ಮಾಡುತ್ತ ಯಿದ್ದ ಮೆದಕೆರೆ ಪನ[>ನಾಯಕನ] ಕಾಗದ ೧ ಸಹಾ ಬರಸಿಕೊಟ್ಟು, ಸ್ಥಳದ ಬದುಕು ಮಾಡಿಕೊಂಡು ಯಿರುತ್ತಾ ಯಿದ್ದನು.

೧. ತಿರಿಗಿ ದೊಡ್ಡ ನವಾಬರು ಶಕ ೧೭೦೦ನೆಯ ಹೇವಿಳಂಬಿ ಸಂವತ್ಸರ ಲಾಗಾಯಿತು, ಶಕ ವರುಷ ೧೭೧೨ನೆಯ ಸಾಧಾರಣದ ವರ್‍ರಿಗೆ ವರುಷ ೧೨ ಆಳಿದರು.*

---

* + ೬ ದೊಡ್ಡ ನವಾಬರು ಆಳಿದರು. ೬ ಟೀಪು ಸುಲತಾನ ಪಾದಷಾಹರು ಆಳಿದರು.(ಮೂ)

ಯೀ ದೊಡ್ಡನವಾಬರ ಆಳಿಕೆಯಲ್ಲಿ ಬಾಗೂರ ಲಕ್ಷ್ಮೀಕಾಂತಾಚಾರಿಗೆ ಪ್ರಾಕು ಮೇರೆಗೆ ಯೀ ಶೀಮೆಯಲ್ಲು ತಿಮ್ಮಲ ಮಹಾರಾಷ್ಟ್ರದ ಕಡೆಯಿಂದಾ ಪರಶುರಾಮಭಾವೂ ಫೌಜು ತೆಗೆದುಕೊಂಡು ಬಂದು ಶಕವರುಷ ೧೭೧೩ನೆಯ ವಿರೋಧಿಕೃತ ಸಂ. ವರಿಗೆ ವರುಷ ೧ ಆಳಿದರು.

೧ ಪುನಃ ಟೀಪುಸುಲತಾನು ಪಾದಶಾಹಾರು ಶಕವರುಷ ೧೭೧೪ ಪರಿಧಾವಿ ಸಂ. ಲಾಗಾಯಿತು ಶಕ ೧೭೨೦ನೆಯ ಕಾಳಯುಕ್ತಿ ಸಂ. ವರಿಗೆ ವರುಷ ೬ ಆಳಿದರು.

ಯಿಂಗ್ರೇಜು ಬಾಹದರವರು ಶಕ ೧೭೭೧[>೧೭೨೧]ನೆಯ ಸಿದ್ಧಾರ್ಥಿ ಸಂವತ್ಸರದಾ ಚೈತ್ರ ಬ.೩೦ ಶ್ರೀರಂಗಪಟ್ಟಣಕ್ಕೆ ಠಾಣ್ಯ ಹಾಕಿದರು.

೧ ಯಿದರಲ್ಲು ದುಂಡೋಜಿಯು ಶಿವಮೊಗ್ಗೆ ಕಡೆ ನಿಂತು, ಅಲ್ಲಿಂದಾ ತಮ್ಮ ಕಡೆ ಬುಡಾಖಾನನ ಕಳುಹಿಸಿಕೊಟ್ಟು "ಪ್ರಾಕು ಟೀಪುಸುಲತಾನ ಪಾದಶಾಹಾರವರ ಕಡೆ ಅಮಲುದಾರ್ರು ಯಿದ್ದಾರೆ. ಅವರ ಕಡೆಯಿಂದಾ ಹಣಕಾಸು ವಸೂಲು ಮಾಡು" ಯಂಬದಾಗಿ ಹೇಳಿದ್ದರಿಂದ, ಆ ಬುಡಾನಖಾನ ಬಂದು ಪ್ರಾಕು ಯಿದ್ದು, ಅಮಲದಾರ್ರ ಕಡೆಯಿಂದ ಕೆಲವು ಹಣಕಾಸು ವಸೂಲು ಮಾಡಿಕೊಂಡು ಆ ಶು. ೧. ಲಾಗಾಯಿತು ಆಷಾಢ ಶು. ೧೩ ವರಿಗೆ ತಿಂಗಳು ೨ ದಿನ ೧೩ ಯಿದ್ದನು.

೧ ಸದರಿ ಬುಡಾನಖಾನ ಯಿರುತ್ತ ಯಿದ್ದಲ್ಲಿ, ದಾಲರಂಪಟ ಸಾಹೇಬ ಬಾಹದರವರು ಯೀ ಬುಡಾನಖಾನನ ಹಿಡಿವ ಬಗ್ಗೆ ಬಂದಲ್ಲಿ, ಯೀ ಬುಡಾನಖಾನನು ಕೈಗೆ ಸಿಕ್ಕದೆ ವೋಡಿ ಹೋದರಿಂದಾ, ಯಿವರ ಕಡೆಯಿಂದಾ ದುರ್ಗದ ಪಾಲನಾಯಕನ ಮಂದಿಯನ್ನು ಆಷಾಢ ಶು. ೧೪ಯಲ್ಲಿ ಠಾಣ್ಯಹಾಕಿ, ಶ್ರಾವಣ ಶು. ೩ವರಿಗೆ ದಿನ ೨೦ ಪರಿಯಂತ್ರಕು ಯಿದ್ದರು.

೧ ತಿರಿಗಿ ಶು. ೪. ಲಾಗಾಯಿತು ಪೂರ್ಣಪ್ಪನವರು ದುರ್ಗದ ಮೇಲೆ ಬಂದು, ಯಿವರ ಕಡೆಯಿಂದಾ ಶಂಕರರಾಯರನ್ನು ಬಸವಾಪಟ್ಟಣದಲ್ಲಿ ಮಳಿಗೆ ಕಳುಹಿಸಿಕೊಟ್ಟದರಿಂದಾ, ಯಿವರಿಗೆ ನಡಿಯುತ್ತಾ ಬರುತ್ತ ಯಿದಲ್ಲಿ, ಯಿವರ ಕಡೆಯಿಂದಾ ಬಸವಾಪಟ್ಟಣದಾ ನಾರಾಯಣರಾಯ ಸೆಕದಾರಿ ಮಾಡಿಕೊಂಡು ಶು. ೧೦ಲ್ಲು ಹೊದಿಗೆರೆಗೆ ಬಂದನು.

ಯೀ ಕ್ರೋಧನ ಸಂವತ್ಸರ, ಮಾರ್ಗಶಿರ ಬ ೩೦ ಶುಕ್ರವಾರ ಬರದು ಕೊಟ್ಟರು. ದರ ಜಾಗಾ ಹೊನ್ನಾಳಿ, ಯಿಂಗ್ರೇಜು ಬಾಹದರ ಸರದಾರ ಮೇಜರ ಮೆಕೆಂಜಿ ಸಾಹೇಬರು ಕಡೆ ಲಕ್ಷ್ಮಣರಾಯರ ವಶಕ್ಕೆ ಬರದು ಕೊಟ್ಟು ಯಿದೆ. ಯೀ ವರಿಗೆ ಯಿವರ ಠಾಣ್ಯ.

❖❖

೫೨

ಹೊಳೆಹೊನ್ನೂರು ಕೈಫಿಯತ್ತು-೧*

ಡಿ. ನಂಬರ್ ಸಂಪುಟ : ೨೪೮೫

ಕಲಿಯುಗದ ಶ್ಯಾಲೀವಾಹನ ಶಖ ೯೯೧ನೇ ಶಕ ದೋರಸ x x x ಬಳ್ಳಾಳ ರಾಯರು ರಾಜ್ಯವಂನ್ನು ಆಳುತ್ತಾ ಇರಲಾಗಿ, ಈ ಸ್ಥಳ ಅರಣ್ಯವಾಗಿತ್ತು. ಬಳ್ಳಾಳರಾಯರೂ x x xದಿವ್ಯ ಬಳ್ಳಾಳವಂಶದಲ್ಲಿ x x x x ಅರಸುರಾಜ್ಯ ಭಾರಮಾಡುವ ಕಾಲದಲ್ಲಿ ಈತಗೆ ಕುಷ್ಟರೋಗ ಇದ್ದದ್ದರಿಂದ ಪರಿಹಾರಾರ್ಥವಾಗಿ ನದಿಗಳಲ್ಲಿ ಸ್ನಾನವನ್ನು ಮಾಡುವ ಬಗ್ಯೆ ಈ ಸ್ತಳಕ್ಕೆ ಬಂದು ಇದ್ದರು. ಈ ಕುಷ್ಟರೋಗ ಪೂರ್ವಜನ್ಮ ಪರಿಪಾಕದಿಂದ, ಈ ಸ್ಥಳಕ್ಕೆ ತಂನ್ನ ದಂಡು ಸಹವಾಗಿ ಬಂದು ಮೂರುದಿನ ಮೊಕ್ಕಾಂ ಮಾಡ್ಸಿ ಮೂರವರ್ತಿ ಮೂರು ಸ್ನಾನವಂನ್ನು ಮಾಡಿದ್ದರಿಂದ ಈತ್ತಗೆ ಮೂರು ದಿವಸದ ಮೇಲೆ ಬಹಳ ಗುಣ ಕಂಡ. ಹಿಂದೆ ಈ ಸ್ಥಳ ಮಹಾಸ್ತಳವೆಂದುವೆಂಬದಾಗಿ ತಿಳಕೊಂಡು ಅಲ್ಲಿಗೆ ಶಕವರ್ಷ ೯೯೧ನೇ ಸಾಧಾರಣ ಸಂವತ್ಸರ ಸಾಧಾರಣವಾಗಿ ಒಂದು ಮಂಣ್ಣು ಕೋಟೆ ಕಟ್ಟಿಸಿ ಅಲ್ಲಿ x x x x ಡಾ - ತರಿಸಿ ಗ್ರಾಮವನ್ನು ಮಾಡಿಸಿ ಅಗ್ರಹಾರವಂನ್ನು ಮಾಡ್ಸಿ ಬ್ರಾಹ್ಮಣರಿಗೆ ಕೊಟ್ಟು, ಆ ಬ್ರಾಂಹ್ಮರೂ ಅಲ್ಲಿ ವಾಸಮಾಡಿಕ್ಕೊಂಡು ಇರುವ ಹಾಂಗೇ ಮಾಡಿದ.

ತರುವಾಯ ಈತನ್ನು ಅರ್‍ಸು x ವಾದಾಗ್ಯೂ ಶರೀರದಲ್ಲಿ ದೇವರ ಅನುಗ್ರಹದಿಂದಾ ಬಹಳ ಗುಣ ಕಂಡದ್ದರಿಂದ ಅನೇಕ ವೃತ್ತಿಗಳನ್ನ ದೇವರಿಗೆ ಕೊಟ್ಟು ದೇವಸ್ತಾನಗಳಲ್ಲಿ ಯಾವತ್ತು ಚನ್ನಾಗಿ ಕಟ್ಟಿಶಿ, ಧೊಡ್ಡ ಧೊಡ್ಡ ಬ್ರಾಂಹ್ಮರ ಕಡೆಇಂದಾ ಸ್ತಳಪುರಾಣವಂನ್ನು ಕೇಳಿ ರೋಗ ನಿಃಶೇಷವಾಗುವ ಬಗ್ಗೆ ಯಥಾ ವಿದ್ಯುಕ್ತವಾಗಿ ಮಹೋತ್ವಸ ಮಾಡಿಸಿ, ಹತ್ತು ಸಾವಿತ ವರಹಾ ಪರಿಯಂತ್ರ ಧರ್ಮವನ್ನು ಮಾಡಿಸಿದ್ದರಿಂದ ರೋಗ ನಿಃಶೇಷವಾಯಿತು. ಆದಾಗ್ಯೂ ಈತನ ಹಣೆಯ ಮೇಲೆ ವಂದು ಹೊನ್ನಿನಷ್ಟು ಚಿನ್ಹೆ ನಿಂತು, ಆಮೇಲೆ ದೇವರು ಸ್ವಪ್ನದಲ್ಲಿ ಬಂದು "ನಿನ್ನ ದೇಹವಿರುವ ಪರಿಯಂತಯಿದು ಹೊಗಲಿಕ್ಕೆ ಇಲ್ಲಾ" ಎಂಬುದಾಗಿ ಹೇಳಿದ್ದಲ್ಲಿ ಆ ಮೇಲೆ x x x x x ಹಣೆ ಮೇಲೆ ಇರುವಂಥಾ ಕುಷ್ಟವಂನ್ನೆ x x ಕಾಣದೇ ಹಾಗೆ ಹೊಂನ್ನ ಮಾಡ್ಸಿ ಕಟ್ಟಿತು. x x x x ಅಲ್ಲಿಂದ ಈ ಗ್ರಾಮಕ್ಕೆ ಹೆಸರು ಹೊಳೆಹೊನ್ನೂರುಯಂಬದಾಗಿ x x x ಟ್ಟನು. ಆಮೇಲೆ x x x ಹೊನ್ನು ಮಾಡಿಸಿ ಹಣೆಗೆ ಕಟ್ಟಿಕೊಂಡ ಮೇಲೆ ಭದ್ರಾನದಿ ದಡದಲ್ಲಿ ಗ್ರಾಮವಂನ್ನು ಕಟ್ಟಿಸಿ ಹೊಳೆಹೊನ್ನೂರುಯಂಬೊ ಹೆಸರು ಇಟ್ಟು x ನ್ನು ದೋರಸಮುದ್ರಕ್ಕೆ ಬಂದನು. ೨೨೫ ಗ್ರಾಮ

* ಈ ಕೈಫಿಯತ್ತು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಿಂದ ಪ್ರಕಟವಾಗಿದೆ (ಸಂ)

ಕಟ್ಟಿಶಿದ್ದರಿಂದ ಹೊಳೆಹೊನ್ನೂರುಯಂಬೋ ಹೆಸರಾಯಿತು. ಆಮೇಲೆ ೪ ವರ್ಷಯಾಳಿ ಇದೆ. ಅರಸು ಮೊದಲು ೨೬ ವರುಷ ಆಳಿದ್ದನ್ನು. ಅಂತು ೩೦ ವರುಷ ಸಕಲ ಧರ್ಮದಿಂದ ಪ್ರಭುತ್ವ ಮಾಡಿ ೯೪ನೇ ಪರಿಧಾವಿ ಸಂವತ್ಸರದಲ್ಲಿ ಮೃತನಾದನು.

೨. ಈತನ ಮಗ ಎರೆಯಂಗರಾಯನ್ನ ತಂನ್ನ ತಂದೆ ಮಾಡಿದಂತಾ ರಾಜ್ಯವಂನ್ನು ಕಟ್ಟಿಕೊಂಡು ಶಕ ೯೫ ಪ್ರಮಾದೀಚ ಸಂವತ್ಸರ ಆರು. ಶಕ ೧೦೩೫ ವಿಜಯ ಸಂವತ್ಸರದ ವರಿಗೆ ವರುಷ ೪೧ ಆಳಿದನೂ.

೩. ಈತನ ಮಗ ವಿಷ್ಣುವರ್ಧನರಾಯನ[>ನು] ಶಕ ೧೦೩೬ನೇ ಜಯಸಂವತ್ಸರ ಆರಭ್ಯ ಶಕ ೧೦೮೬ನೇ ಕಾ[>ತಾ]ರಣ ಸಂವತ್ಸರದ ವರೆಗೆ ವರುಷ ೫೧, ಈತನ ಮಗ ವಿಜಯ ನರಸಿಂಹರಾಯರಿಗೆ ೧೦೮೭ ಪ್ಲವಂಗ ಸಂವತ್ಸರ ಪರಿಯಂತ್ರ ವರುಷ ಶಕ ೨೩ ಆಳಿದನು. ಈತನ ಮಗ ವೀರಬಳ್ಳಾಳರಾಯನು ಶಕ ವರುಷ ೧೧೧೦ ಲಾಗಾಯಿತು ಶಕ ೧೧೫೪ ನಂದನ ಸಂವತ್ಸರ ವರಿವಿಗೂ ವರುಷ ೪೫. ಈತನ ದಿವ್ಸದಲ್ಲಿ ಕಲ್ಲೂಬತಿಗೆ ಗಂಗಾತಿಲರಾಯನ್ನು ದಂಡು ತೆಗದುಕ್ಕೊಂಡು ಬಂದು, ಈತನ್ನು ದಿಲ್ಲಿ ಪಾದಶಾಹಾ ಅಪ್ಪಣೆ ಮೇರಿಗೆ ಹೊಳೆಹೊನ್ನೂರ ಮಾರ್ಗವಾಗಿ ಬಂದು ಇಲ್ಲಿ ಹದಿನೈದು ಪರಿಯಂತ್ರ ಮುಕ್ಕಾಂ ಮಾಡಿ ಹೊಳೆಹೊನ್ನೂರು ಕಿಲ್ಲೆಯನ್ನು ಹಾಳು ಮಾಡಿದನು. ಆವಾಗ ಆ ಸ್ಥಳದಲ್ಲಿ ಸ್ವಲ್ಪ ಜನ ಇದ್ದದು x x x x ಈತನ ಮಗ ವೀರನರಶಿಂಹರಾಯ ಬಳ್ಳಾಳ ಶಕ ವರುಷ ೧೧೫೫ ವಿಜಯದಾರಭ್ಯ x x x ೭೧ x ದ ವರೆಗೆ ವರುಷ. ಈತನ ಮಗ x x x ಯ ಬಳ್ಳಾಳ ಪ್ರತಿನಾಮ ವೀರಸೋಮೇಶ್ವರ ಶಕ ೧೧೭೧ ಸೋಮ್ಯದಾ[>ವಾ]ರ [ಶ+]ಕ ೧೧೮೯ ನೇ ಪ್ರಭವ (ಸಂವತ್ಸರ)ದ ವರಿಗೆ ಶಕ ವರುಷ ೧೯. ಈತನ ಮಗ ವೀರನರಶಿಂಹಬಳ್ಳಾಳ ಶಕ ವರುಷ ೧೧೯೦ನೇ ವಿಭವ ಸಂತ್ಸರದಾರಭ್ಯ ಸಂ॥ ೧೨೩೫ ಪ್ರಮಾದೀಚ ಸಂವತ್ಸರದ ವರಿಗೆ ವರುಷ ೪೬.

ಈತನ ಮಗಾ ಭೀಮಳರಾಯನು ಶಕ ೧೨೩೬ನೇ ಆನಂದ ಸಂವತ್ಸರ ೧೨೫೭ ಯುವಸಂವತ್ಸರ ವರಿವಿಗೂ ವರುಷ ೨೨. ಈತನ ಪ್ರಭುತ್ವ x x x ಈತಂನು ಕಾಮಾತುರನಾಗಿ ತಂನ್ನ ರಾಜ್ಯ ಯಾವತ್ತು ಕೆಡಿಸಿಕ್ಕೊಂಡು ಬಹಳ ಅಜಾಗ್ರತೆಯಿಂದಾ ಇದ್ದು, ದಿನಸರಿಯಲ್ಲಿ ಬೇಟೆ ಯಾಡುವ ವ್ಯಸನಗಳಲ್ಲಿ ದಿನ ಕಳೆದು ಅನ್ಯಾಯದಿಂದ ತಂನ್ನ ಸೋದರ ಅಳಿಯಂದರಿಗೆ ಅಕ್ಕಗೆ ಸೊತ್ತನ್ನ ಹೆಂಡತಿ ಮಾತು ಕೇಳಿ, ಗಲ್ಲಿ ಚಡಾವು ಮಾಡಿಸಿದನು. ಆತ x x ಶ್ಯಾಪವನ್ನು ಕೊಟ್ಟದ್ದು, "ಈತನ ವಂಶ ನಿರ್ವಂಶವಾಗಿ ರಾಜ್ಯ ಯಾವತ್ತು ಹಾಳಾಗಿ ಹೋಗಲಿ" ಯಂಬದಾಗಿ, ಬಹಳ ದುಃಖದಿಂದ ಶ್ಯಾಪವನ್ನು ಕೊಟ್ಟದ್ದರಿಂದ ದಿಲ್ಲಿ ಸುಲ್ತಾನರಿಂದ ಶ್ಯಾಹಾರು ಈ ಸೀಮೆ ಯಾವತ್ತು ಈತ ಕಟ್ಟಿಕ್ಕೊಂಡದ್ದು ಸಮಾಚಾರವನ್ನು ಕೇಳಿ ಹರಿಹರರಾಯ ಬುಕ್ಕರಾಯಗೇ ದಂಡು ಕಳುಹಿಸಿಕೊಟ್ಟು ಬಳ್ಳಾಳ ಸೀಮೆಯವರಂನ್ನು ಕಟ್ಟಿಕೊಂಡು, ಆ ವಿವರಕ್ಕೆ ಬರಶಿ ಕಳುಹಿಸಿಯಂಬದಾಗಿ ತಾಕೀದು ಮಾಡಿಸಿ ಕಳುಹಿಸಿದ ವಿಷಯದಲ್ಲಿ ಅವರು ಬಂದು ಕೃಷ್ಣಾನದಿ ಬಳಿಯಲ್ಲು ಮೊದಲು ಯುದ್ಧಮಾಡಿದ್ದಲ್ಲಿ ಪಾದಶಾಹಾನ ಕಡೆಯವರು ಮಾಡ್ಸಿ ಹೊದ್ದರಿಂದ ಪುನಹಾ ವಿದ್ಯಾರಣ್ಯರ ಅನುಗ್ರಹದಿಂದ ಶತ್ರುಗಳನ್ನು ಫೌಜು ಯಾವತ್ತನ್ನು x x x ಕ್ಕೊಂಡು ಬಳ್ಳಾಳರಾಯರ ಜಯಿಸಿ

ವಿಜಯನಗರವೆಂಬ ಪಟ್ಟಣವನ್ನು ಕಟ್ಟಿಶಿದ ಶಕೆ ೧೨೫೮ ಧಾತುಸಂವತ್ಸರದಲ್ಲಿ ವುದ್ಧಾರಮಾಡಿ ಈ ಸಂವತ್ಸರದಲ್ಲಿ ವಿದ್ಯಾರಂಣ್ಯರೂ ಈ ಪಟ್ಟಣವನ್ನು ಕಟ್ಟಿಶಿದರು.

ಹರಿಹರರಾಯರು x x x ಕೈಶಿ x x ಯಾವತ್ತು ವಿ x x x ಹೊಳೆಹೊನ್ನೂರು ಶೀಮೆ ಮೂಲ ಯಾವತ್ತು ಕೇಳಿ ತಂನ್ನ ಕಡೆಯವರಿಗೆ ತಾಕೀದು ಮಾಡಿಸಲಾಗಿ, ಅವರು ಹೊಳೆಹೊನ್ನೂರಿಗೆ ವಾಂಗ್ಮೂಲ ಯಾವತ್ತು ಕೇಳಿ ಅವರು ಮೊದಲು ಇದ್ದ ಕೊಟ್ಟೆ[>ಕೋಟೆ]ಗೆ ಸ್ವಲ್ಪ ದೂರದಲ್ಲಿ ಮಣ್ಣು ಕೋಟೆಯು ಕಟಿ ಅಲ್ಲಿ ಊರು ಬಸ್ತಿ ಮಾಡಿಸಿ, ಅಲ್ಲಿ ನಾಡಿಗರನ ಕೈ ಬಡಗನಾಡು ಬ್ರಹ್ಮಣರಿಗೆ ಅ[>ನಾ]ಡಿಗತನವಂನ್ನು ಕ್ಕೊಟ್ಟು ಮೈಲಾರಲಿಂಗಯ್ಯಗೆ ಬಸವಯ್ಯಗೆ ಶಾಲಿವಾಹನ ಶಕ ೧೨೫೯ ನೇ ಈಶ್ವರ ಸಂವತ್ಸರದಲ್ಲಿ ಶ್ಯಾಸನದಲ್ಲಿ ಶ್ಯಾಸನವನ್ನು ಬರಸಿಕೊಟ್ಟನು. ಅದರ ಸುತ್ತಲೂ ಈ ಹೊಳೆಹೊಂನ್ನಿನ ನಾಡಿಗನ ಬಳಿಯಲ್ಲಿ x x x ದೆದಹಲಿಗೆಗಳನ್ನು ನಂಜರಾಯನ ಅವಾಂತರದಲ್ಲು ಹೋಯಿತು. ಶಾಲಿವಾಹನ ಶಕೆ ೧೨೫೮ ಧಾತು ಸಂವತ್ಸರ ಹರಿಹರರಾಯರು ಆದಿಯಾಗಿ ವಿರುಪಾಕ್ಷರಾಯರ ವರಿಗೆ x x x x ಅರುಸುಗಳು ೧೩ ಮಂದಿ ಆನೇಗೊಂದಿ ಪ್ರಭುತ್ವಮಾಡಿದರು. ವರುಷ ೧೫೫. ಶಾಲಿವಾಹನ ಶಕ ೧೪೧೨ ಸಾಧಾರಣ ಚೈತ್ರ ೪೩೦.

೧೪ ಹರಿಹರರಾಯರು	೨೯ ಹರಿಹರರಾಯರು
೩೧ ಬುಕ್ಕರಾಯರು	೧೭ ವೀರದೇವರಾಯರು
೧೬ ಪ್ರಹುಢ ಬುಕ್ಕರಾಯರು	೧೬ ಪ್ರೌಢ ದೇವರಾಯ
೧೭ ಮಲ್ಲಿಕಾರ್ಜುರಾಯ	೪ ವಿರುಪಾಕ್ಷರಾಯ
೯ ತಿಂಗಳು ರಾಮರಾಯ	೬ ದೇವರಾಯ
೧೦ ತಿಂಗಳು, ವಿಜವಿರುಪಾಕ್ಷರಾಯರು	೧-೩ ತಿಂಗಳು, ರಾಮರಾಯ
	೨-೨ ತಿಂಗಳು, ವಿರುಪಾಕ್ಷರಾಯ
	೧೫೫

ತರುವಾಯ ಶಕ ೧೪೧೨ನೇ ಸಾಧಾರಣ ಸಂವತ್ಸರದಾರಭ್ಯ ೧೪೮೬ ರಕ್ತಾಕ್ಷಿ ಸಂವತ್ಸರದ ಮಾಘ ಬಹುಳ ೧೪ ವರುಷಗಳು ಆಳುವಲ್ಲಿ ಅರಸುಗಳು ಆನೆಗೊಂದಿ ಸಂಸ್ತಾನವನ್ನು ೮ ಮಂದಿ, ೭೪-೮ ತಿಂಗಳು ರಾಮರಾಯರ ಕಾಲದವರಿಗೆ ಆಳಿದವರ ವಿವರ:

೫ ಪ್ರವುಢಶಿಂಗರಾಯನ ಪುತ್ರನಾದ ಪ್ರೌಢದೇವರಾಯ

೨ ವೀರನರಶಿಂಹರಾಯ

೧೨ ಹ್ನನೆನರಶಿಂಗರಾಯ

೫ ಸದಾಶಿವರಾಯ

೧೨ ಅಂಮ್ರುಪತಿರಾಯ

೨–೮ ತಿಂಗಳು, ದಿ x x ತಿಂಮ್ಮಯ್ಯ

೨೨ ರಾಮರಾಯರಿಗೆ ಸದಾಶಿವರಾಯಯೆಂಬ ಹೆಸರೂ ಇಟ್ಟುಕೊಂಡ್ಡದ್ದು ತಿಳಿಯೋದು.

೭೪–೮

ಪ್ರಭುತ್ವ ಅಂತ್ಯದಲ್ಲಿ ಈ ಸದಾಶಿವರಾಯರ ಕಾಲಕ್ಕೆ ಅಂಗದ ನಾಡು ವೆಂಟೆ, ಗುದ್ದಿನಾಡು ವೆಂಟೆ ಅಮರಮಾಗಣಿಯಾದಿ ಇಕ್ಕೇರಿ ಭದ್ರಗ x x x x ನಾಮ ಸದಾಶಿವರಾಯ ಶಾಲಿವಾಹನ ಶ ೧೪೬೭ ವಿಶ್ವಾವಸು ಸಂವತ್ಸರದಲ್ಲಿ ಕೊಟ್ಟುಬಿಟ್ಟಾ. ಆನೆಗೊಂದಿ ಸದಾಶಿವರಾಯನ ಕಾಲದಲ್ಲಿ ರಾಮರಾಯರು ಪ್ರಭುತ್ವಮಾಡುವಲ್ಲಿ ಹೊಳೆಹೊಂನ್ನೂರ ಸೀಮೆ ಮೇಲಾದಿ ಸಂಘತಿ ೪೫ಕ್ಕೆ ೯ ಲಕ್ಷ ಶೀಮೆ ರಾಣೋಜಿ ಚಿಕ್ಕದೇವರಾಯನಿಗೆ ಕೊಟ್ಟನ್ನು. ಶಾಲಿವಾಹನ ಶಕ ೧೪೭೬ ಆನಂದ ಸಂವತ್ಸರ ಚಂನ್ನಪಟ್ಟಣ ಮುದುರು ರಾಜಧಾನಿ ಮಾಡ್ಸಿ ಹೊಳೊಹೊನ್ನೂರು ಶೀಮೆ ಯಾವತ್ತು ೫೪ ವರುಷ ವರಿವಿಗೆ ಆಳಿದ್ದು.

ಶಾಲಿವಾಹನ ಶಕ ೧೪೮೦ ಕಾಳಯುಕ್ತಿ ಸಂವತ್ಸರ ಆನೆಗೊಂದಿ ಸದಾಶಿವರಾಯರೀ ಹೊಳೆಹೊನ್ನೂರ, ಹುಲ್ಲುಕೆರೆ.

ಉಡಗಣ ಶೀಮೆ ಆಜಂಪುರ ಸೀಮೆನಾ ಸದಾಶಿವರಾಯನ ಮಗಳಿಗೆ ಸಂತೋx x x ಹಾಲು ಬೆಣ್ಣೆಗೆ ಹಸುಗಳು ಒಡವೆಗಳೂ ಮುಂತಾದ್ದು ಕೊಟ್ಟುದ್ದರಿಂದ x x x ಡಿಗೆ ಬಂಗಾರಾ ಯಂಬದಾಗಿ ಹೆಸರು ಬಂತು. ಸದಾಶಿವರಾಯರು ರಾಣೋಜಿ ಚಿಕ್ಕದೇವರಾಯರಿಗೆ ದಕ್ಷಿಣದೇಶದಲ್ಲಿ ಹೊಳೆಹೊನ್ನೂರಿಗೆ ಬದಲಾಗಿ ಮತ್ತೊಂದು x x ಆವಾಗ ಹೊಳೆಹೊನ್ನೂರು ಸದಾಶಿವನಾಯಕರು ಕಾಳಯುಕ್ತ ಸಂ॥ ಆರಭ್ಯ ದುರ್ಮತಿ ಸಂವತ್ಸರ ವರಗೆಯಾಳಿದ್ದು, ತರುವಾಯ ಸದಾಶಿವನಾಯಕನ ಮಗ ಹ[>ಹಿ]ರಿಸಂಕಣ ನಾಯಕನು ಇಕ್ಕೇರಿ ಸಂಸ್ತಾನ ಕೆಳಗೆ ಕೆಲವು ದಿವಸ ಹೊಳೆಹೊನ್ನೂರು ಸೀಮೆಯನ್ನು ಆಳಿದನು. ಶಕೆ ೧೪೯೦ ವಿಭವ ಸಂವತ್ಸರ ಹರಿಸಂತಾನ[>ಹಿರಿಸಂಕಣ] ನಾಯಕನು ಹುಡುಗನಾದ್ದರಿಂದ ಸಂತಿಬೆನ್ನೂರು ಬೇಡರ ಹನುಮಪ್ಪನಾಯಕಂನ್ನು ಅಭಿಪ್ರಥಿ[>ಅಧಿಪತಿ]ಯಾಗಿ ಬಲವಂತದಿಂದಾ ಕೆಳಗೆ ಬರದಿರುವ ಗಡ್ಡಿಗಳೂ ಬಿದರೂರು ಸಂಸ್ಥಾನಕ್ಕೆ ಸೇರಿ x x ದು ಕಟ್ಟಿಕೊಂಡು ೧ ಹೊಳೆಹೊನ್ನೂರು ೨ ಹುಲ್ಲಿಕೆರಿ ಚೆನ್ನಗಿರಿ ೩ ತಾವರೆಕರೆ ಈ ಮೂರು ಗ್ರಾಮಗಳನ್ನು ಹೊಳೊಹೊನ್ನೂರು ಗ್ರಾಮಕ್ಕೆ ಶೇರಿಸಿದ್ದು. ಈ ಹೊಳೆಹೊನ್ನೂರು ಶೀಮೆಯಿಂದ ೧ ಹೊನ್ನಗವಾಡಿ ೨ ಲಿಂಗಾರಾಪುರ ೩ ತಗಡಿಕೋಟೆ ಈ ಮೂರನ್ನು ಇತ್ತರಿಗ ೩೦೧೨ ಹಣ ೨ ಶೀಮೆ, ಆವಾಗ್ಯೆ ಈ ಮೂರು ಶೀಮೆಗಳನ್ನು (ಬಿದರೂರು ಸಂಸ್ತಾನಕ್ಕೆ ಸೇರಿ ನಡಿಯೂ ಹಂಗೆ ಕಟ್ಟಿಕ್ಕೊಂಡನು). ಪ್ರತ್ಯೇಕವಾಗಿ ಇದ್ರು. ೧ ಶಿವಮೊಗ್ಗೆ ೨ ಗಾಜಿನೂರು ೩ ದಾನಿವ್ಸಾ ೪ ಮೂಡಗದ್ದೆ ೫ ಕುಮಶಿ ೬ ಅಯನ್ನರೂ ೭ ಮು[>ಹು]ಮಚ ೮ ಹೊಂನ್ನೆಕೆರೆ ಈ ಮೇರೆಗೆ ಯಾರ ಬಳಿಯ ಇರುವದ್ದುಗ್ಗಾ x x x ಪರಿಯಂತ್ರ ಕಟ್ಟಿಣಂ x x ಯಾವಾಗೆ ಸಂತೆಬೆನ್ನೂರು ಪಾಳೆಗಾರರು ಅ[>ಹ]ನುಮಪ್ಪನಾಯಕನ್ನ ಈ ಮಲ್ಲೂರು ಶಿಮೆ ಕಡಸಿ ಮುಟ್ಟದ ನರಸಿಂಹ ಭಾರತಿಗಳಿಗೆ ಶಿಷ್ಯರು ಶಂಕರಭಾರತಿಗಳಿಗೆ ಕೊಟ್ಟನ್ನು. ಶಾಲಿವಾಹನ ಶಕೆ ೧೪೯೦ ವಿಭವ ಸಂವತ್ಸರ ಚೈತ್ರ ಶು ೯ ಲ್ಲು ಆರಭ್ಯ ಸಂತೆಬೆನ್ನೂರು x x x x ಹನುಮಂತನಾಯಕನ್ನ x x ೪೮

ಆವಾಗ್ಗೆ ಹೊಳೆಹೊನ್ನೂರು ಶೀಮೆ ಬಸವಾಪಟ್ಟಣದ ಶಿಮೇ ಸಹಾ ಸಂತೆಬೆನ್ನೂರು ಕೆಳಗೇ x x x x ಶೆಕೆ ೧೫೪೭ ಕ್ರೋಧ ಸಂವತ್ಸರ x x x x ಸದರಿ ತರುವಾಯ ಹನುಮಪ್ಪನಾಯಕನಿಗೆ ಮೊಗಲರು ಹಿಡಿದು ಹೋದರು. ರಣದುಲ್ಲಖಾನರೂ ಬಸವಪಟ್ಟಣವನ್ನು ಆಕ್ರಮಿಸಿಕ್ಕೊಂಡು ಈತನ ವಿಜಯಾಪುರಕ್ಕೆ ಪಾಹರೇ ಹಾಕಿ ಕರದುಕ್ಕೊಂಡು ಹೋದರು.

ಆಮೇಲೆ ಶಾಲಿವಾಹನ ಶಕ ೧೫೪೮ ಅಕ್ಷಯ ಸಂವತ್ಸರದಲ್ಲು ಪಿ. ವೆಂಕಟಪ್ಪನಾಯಕನು ಮೆದನು. ಸಂತೆಬೆನ್ನೂರು ಹನುಮಪ್ಪನಾಯಕನು ಆಕ್ರಮಿಸಿಕೊಂಡಾ ಗಡ್ಡಿಗಳನ್ನು ಕಟ್ಟಿಕ್ಕೊಂಡು ಹೊಳೆಹೊನ್ನೂರು ಮೊದಲಗಿ ದುಗ್ರಾಣಕಟ್ಟೆ ಪರಿಯಂತ್ರ ಕಟ್ಟಿಕ್ಕೊಂಡನ್ನು, ತರುವಾಯ ಈ ಅ[>ಹ]ನುಮಪ್ಪನಾಯಕನು ಮಗ ಹಿ[>ರಿ]ಕುಮಾರ ಹಿರಿಹನುಮಪ್ಪನಾಯಕ, ಚಿಕ್ಕ ಅ[>ಹ]ಣುಮಪ್ಪನಾಯಕ ಇವರು ಹುಡುಗರಾದ್ದರಿಂದ, ಈ ಅಂಣ–ತಂಮ್ಮಂದಿರ ಮಧ್ಯೆ ಕಲಹ ಬಂದದ್ದರಿಂದಾ ಶಾಲಿವಾಹನ ಶಕೆ ೧೫೫೯ವಿಭವ ಸಂವತ್ಸರ ನಗರದ ಸಂಸ್ಥಾನ ಹಿರಿವೆಂಕಟಪ್ಪನಾಯಕಂನ್ನ ಸಂಗಡ ಸ್ನೇಹಮಾಡಿದ್ದರಿಂದ ವೆಂಕಟಪ್ಪನಾಯಕನ ಬಳಿಗೆ ಪ್ರಸಂನ್ನಯ್ಯ ಹರಿಕಾರನ ಕಳುಹಿಸಿ ಹಿರಿವೆಂಕಟಪ್ಪನಾಯಕಂನ್ನ ಕರಿಸಿ ಹಿಂದ ಯಾಂರನ್ನು ಒಂದು ಕೂಡುವಲ್ಲಿ ನಿಂತು ಈ x x ಯರನ್ನು ಕರೆಕಳುಹಿಸಿ ಈ x x x ಮೇರಿಗೆ ಶೀಮೆ ಹಂಚಿಬಿಟ್ಟದ್ದು. ಬಸವಪಟ್ಟಣದ ಶೀಮೆ ಹಿರಿಹನುಮಪ್ಪನಾಯಕಗೆ ಚಿಕ್ಕಹನುಮಪ್ಪನಾಯಕನಿಗೆ x x x ಕೊಟ್ಟುಯಿರುವ ರಾಜ್ಯ ಯಾವತ್ತು ಪರಿಷ್ಕಾರ ಮಾಡಿಸಿದ್ದನ್ನು, ಈವಾಗ್ಯೆ ಈ x x ಯರ್ರು ಅಂಣತಮ್ಮಂದಿರು ಲಿಕುವಾ x x ಸಾವಿರ ಶೀಮೆಯನ್ನು ಹಿರಿವೆಂಕಟಪ್ಪನಾಯ್ಕನಿಗೆ x x x ಈತರ ವ್ಯಾಜ್ಯ ಪರಿಷ್ಕಾರ ಮಾಡಿದರು. ಆದಫ ತ್ತಿರುಸಲು ಮೊಕ್ತವಾಗಿ ಕೊಟ್ಟರು. ತರುವಾಯ ಹಿರಿವೆಂಕಟಪ್ಪನಾಯಕನ್ನು ಬಿದನೂರಿಗೆ ಬಂದು ಕಲಸಿದ ಮೇಲೆ ಲಕ್ಕವಳ್ಳಿ x x ಇಕ್ಕೇರಿ ಸಂಸ್ಥಾನಕ್ಕೆ ಬೇಡರ ಸಂಸ್ಥಾನದ ಸರಹದ್ದಿಗೆ ಕಡೆಗಡ್ಡಿಯಾಗಿ ಇರುವದ್ದರಿಂದ ಆ ಲಕುವಳಿ ಶೀಮೆ ದೊಡ್ಡ ಗದ್ದಿ ಮಾಡಿಸಬೇಕೆಂದು ಬೇಡರ ಉಪದ್ರವ ತಟ್ಟ ಹಾಗೆ ಮಾಡಬೇಕೆಂಬುದಾಗಿ ಯೋಚಿಸಿ ಈ ಸಂವತ್ಸರದಲ್ಲಿ ತಂನ್ನ ಶೀಮೆವಳಿಗೆ ಹಣ ಯೆರಡು ಸಾವಿರ ಶೀಮೆಯ ಹೇರ್ಸಿಸಿದ ವಿವರ: ಹೊಳೆಹೊನ್ನೂರು ಶೀಮೆಯಿಂದಾ ಗ್ರಾಮ ೧೩ಕ್ಕೆ ಬೇರೀಜು ದಾನಿದಾನಿವ್ಹಾದ[>ದಾನಿವಾಸದ] ಶಿಮೆಯಿಂದ ೧೦೦೦ ವರಹಾ ಗ್ರಾಮಗಳ ಶೇರಿಸಿ ಲಕ್ಕವಳ್ಳಿ ಒಂದುಸಾವಿರ ತಾಲ್ಲುಕು ಮಾಡಿ, ಅಲ್ಲಿ ವಂದು ಕೋಟೆಯನ್ನು ಕಟ್ಟಿಶಿ ಅಲ್ಲಿ ಒಂದು ಗದ್ದಿಮಾಡಿ, ಆ ಗದ್ದಿಯಲ್ಲಿ ಒಬ್ಬ ಠಾಣೆ ದಾಕಲ್ಲೆದಾರನ ಇಟ್ಟು, ಕಡೆ ಗಡಿಯಾದ್ದರಿಂದ ತೆಲಿಯ ಮಂದಿಯೂ ಇಟ್ಟು ಶಾಲಿವಾಹನ ಶಖ ೧೫೫೯ ನೇ ವಿಭವಸಂವತ್ಸರದಲ್ಲಿ ಹಿರಿವೆಂಕಟಪ್ಪನಾಯಕನು ಹೊಳೆಹೊಂನ್ನೂರ ಶೀಮೆ ವಗ್ಯೆರೆ. ಗ್ರಾಮ ೧೧, ಲಕ್ಕವಳ್ಳಿಗೆ ಸೇರಿದ ವಿವರ : ೧ ವಡ್ಡಿಯೂರೂ, ೨ ತಾವರೆಕೆರೆ, ೩ ವಾಯನಹಳ್ಳಿ, ೪ ಶಿಂಗನಮನೆ, ೫ ಜಿಹಾರೊಪ್ಪ, ೬ ಹಳೆಬೀಡು, ೭ ನಂತರಗುತ್ತಿ, ೮ ನಲ್ಲಿನೂರು – ಈ ಯಂಟು ಗ್ರಾಮಗಳನ್ನು ಹೊಳೆಹೊನ್ನೂರು ಶೀಮೆಗೆ ಗಂಗಮುಂದ[>ಮಂಡ]ಲನಾಡು ಯಡತೊರೆನಾಡು ಲಕ್ಕುವಳ್ಳಿ ಸೇರಿದ ವಿವರ: ೧ ಭೋಪಾಲ, ೨ ಬಸವನಹಳ್ಳಿ, ೩ ವೀರಹಳ್ಳಿಪುರ – ಈ ಮೂರು ಗ್ರಾಮಗಳ್ನನು ಬೆಂಕಿಪುರದ ಶೀಮೆಗೆ ನಡ್ಸಿದ ಹೊಳೆಹೊನ್ನೂರು ಶೀಮೆಗೆ ಸುತ್ತುಮುತ್ತು ಇದ್ದದ್ದು ಗ್ರಾಮಗಳನ್ನು ಲಕ್ಕುವಳಿಗೆ ಶೇರಿಶಿದರು. ಅಂತು ಈ ಹನ್ನೊಂದು ೧೧ ಗ್ರಾಮಗಳನ್ನು ಲಕ್ಕುವಳ್ಳಿಗೆ ಶೇರಿಸಿದರು.

ಇ ಸಂವತ್ಸರದಲ್ಲಿ ಹಿರಿವೆಂಕಟಪ್ಪನಾಯಕರು x x x ತುಂಗ ಭದ್ರ ಈ ಎರಡು ಹೊಳೆ ನಡುವೆ ಇರುವ ಗಂಗಮಂಡಲನಾಡು ಯೆಂಬ ಯೆಡತೊರೆಗೆನಾಡು ಗುಡವಳನಾಡು ಯಂಬ ೨ ನಾಡಿಗೆ ೮೦ ಗ್ರಾಮ ಲಕ್ಕವಳ್ಳಿಗೆ ಶೇರಿ ಕಿರಿದ ಹೊಬಳಿ ಶೇರಿಸಿ ಮೊಗಲರ ವುಪದ್ರವ ಯಾವುದು ಬರದೆಂಬದಾಗಿ ಶೇರಿಸಿಬಿಟ್ಟನು. ವಂದು ವೇಳೆಗೆ ಅವರು ಆಚೆಇಂದ ಬಂದು ಹೊಳೆಹೊನ್ನೂರು ಶೀಮೆಗೆ ಮುತ್ತಗೆ ಹಾಕಿದಲ್ಲಿ ಈ ಪೈಕಿ ಯರಡುನಾಡು ಹೊಳೆ ಆಚೆಗೆ ಇರಬೇಕು ಯೆಂದು ಮಾಡ್ಸಿ ಬಿಟ್ಟನ್ನು. ಖಿರಿದಿ ಹೋಬಳಿಯಂದರೆ ಉಗ್ರಾಣಕ್ಕೆ ಧಾನ್ಯವನ್ನೆ ಕ್ರಯಕ್ಕೆ ತೆಗೆದುಕ್ಕೊಳ್ಳುವಂತೆ ಗ್ರಾಮಗಳಿಗೆ ಹೆಸ್ಸರು. ಆ ಗ್ರಾಮಗಳ ವಟ್ಟು ಮಾಡ್ಸಿ ಖಿರದಿ ಹೋಬಳಿಯಂಬದಾಗಿ ಹೆಸರು ಆಯಿತು. ವಿವರ:

೧ ಕುಮರಿ[>ಶಿ]

೨ ಹಾರನಹಳ್ಳಿ

೩ ಅಯ್ಯನೂರು

೪ ನಾಚನ್ನೂರು

೫ ಲಕ್ಕೊಳ್ಳಿ

೬ ದಾನಿವಾಸ

೭ ಅಜಂಪುರ

೮ ಹುಲಿಗೆರೆ

ಈ ಮೇರಿಗೆ ಇರುವಲ್ಲಿ ಯಾರನ್ನೂ ಯಾವೂರನ್ನೂ ಹೊಳೆಹೊನ್ನೂರು ಶೀಮೆ ಖಿರದಿ ಹೋಬಳಿಗೆ ಸೇರಿಸಿದಾಗ್ಯೂ ಮೊಗಲಾಯರ ಉಪದ್ರವನ್ನ ಆಗದು ಯೆಂಬ ನಂಬಿಗೆಯಿಲ್ಲದೆಕೆ ಶಾಲಿವಾಹನಶಕ ೧೫೪೮ನೇ ಅಕ್ಷಯ ಸಂವತ್ಸರ ಆರಭ್ಯ ಇಕ್ಕೇರಿ ಹಿರೆವೆಂಕಟಪ್ಪನಾಯಕನು ಹೊಳೆಹೊನ್ನುರ ಶೀಮೆ ಸ್ವಾಧೀನವಾದ ಮೇಲೆ, ಈ ಮೇಲೆ ಹೇಳಿದ ಗ್ರಾಮಗಳನ್ನು ಈ ಶೀಮೆಇಂದ ವಿಂಗಡಿಸಿ ಬಿಲ್ಲವತ್ತ ಲಕ್ಕವಳ್ಳಿಗೆ ಶೇರಿಸಿ ಇ ತ್ತಾಲ್ಲುಕು ಶುಕ್ಲ ಸಂವತ್ಸರ ವರಿಗೆ ವರುಷ ನಾಲ್ಕು ಪರಿಯಂತ್ರ ಮಾಡಿದ ತರುವಾಯ ಇದು x x x ವಾದ ಮೇಲೆ ಈತನ ಮೊಮ್ಮಗನಾದ ವೀರಭದ್ರಪ್ಪನಾಯಕನು ಪ್ರಮಾದ ಸಂವತ್ಸರ ಮಾರ್ಗಶಿರ ೧ ಪ್ರತಿಪದಾರಭ್ಯ ತಾರಣ ಸಂವತ್ಸರ ಮಾರ್ಗಶಿರ ಶುದ್ಧ ೧೩ ತ್ರಯೋದಶಿ ವರಿವಿಗೆ ಆಳಿದ್ದಕ್ಕೆ ವರುಷ ೧೫ ತಿಂಗಳು ೧೦ ದಿವಸ ೨೮.

ಈತಗೆ ಗಂಡು ಸಂತಾನ ಇಲ್ಲದೆ ಹೋದ ಕಾರಣ, ಸದಾಶಿವರಾಯರು ತನ್ನ ಮೊಮ್ಮಗನಾದ ಭದ್ರಪ್ಪನಾಯಕನ ಮ[>ಗ]ನಾದ ಶಿವಪ್ಪನಾಯಕನು ಹೊಳೆಹೊನ್ನುರು ಶೀಮೆಗೆ ಪ್ರಭುತ್ವವನ್ನು ಮಾಡಿದ್ದನು. ತಾರಣ ಸಂವತ್ಸರ ಮಾರ್ಗಶಿರ ಶುದ್ಧ ೧೪ ಆರಭ್ಯ ಸರ್ವಜಿತು ಸಂವತ್ಸರ ಮಾರ್ಗಶಿರ ಶುದ್ಧ ಪ್ರತಿಪದ ೧ ವರಿವಿಗೆ ವರುಷ ೧೧ ದಿವಸ ೧೭ ಪರಿಯಂತ್ರ ಪ್ರಥಮದಲ್ಲಿ ಆಳಿದ್ದನು. ಆ ಕಾಲದಲ್ಲಿ ಬಿಜಾಪುರದ ಶಾಹಾರ ಕಡೆಯಿಂದ ಅಹಂಮ್ಮದಖಾನ ಮಹಮ್ಮದುಖಾನರು ಫೌಜು ಸಹಾ ಬಂದು ಹೊಳೆಹೊನ್ನೂರ ಶೀಮೆ ಸ್ವಾಧೀನಮಾಡಿಕ್ಕೊಂಡು ರಾಮಾಜಿಪಂತ

ಭೀಮಾಜಿಪಂತನು ಕಿಲ್ಲೆದ ವಿಆ x x x ತಂದಾಜಾ x xಗೆ ಇಟ್ಟುಬೆಟ ಶಾಲಿವಾಹನ ಶಕೆ ೧೫೭೦ ಸರ್ವಧಾರಿ ಸಂವತ್ಸರದಾರಭ್ಯ ಮನ್ಮಥ ಸಂವತ್ಸರ ವರೆಗೆ ಅವರು ಪ್ರಬುತ್ವ ಮಾಡಿದರು. ವರುಷ ೭.

ಪುನಹ ಶಕ ೧೫೭೭ಲನೆ ದುರ್ಮುಖ ಸಂವತ್ಸರದಲ್ಲಿ ಶಿವಪ್ಪನಾಯಕರು ದಂಡು ತೆಗೆದುಕ್ಕೊಂಡು ಬಂದು ಹೊಳೆಹೊನ್ನುರು ಠಾಣಾ ಹಾಕಿಕ್ಕೊಂಡು ಠಾಣೆಗೆ ಶಿವಪ್ಪನಾಯಕನ ಮಗ ಕರೆಭದ್ರಪ್ಪನಾಯಕನ್ನ ಇಟ್ಟು ಗಂಜರಾಜಯಂಬ ಪಿರಂಗಿಯನ್ನು ಕಲಿಉ ಮಂದಿ ಸಾ ಯಿಟ್ಟದ್ದರಿಂದ ಈ ಕಿಲ್ಲೆದಾರನ್ನು ಹಜರಾ ಮದಿನ ಮನೆ ಉಗ್ರಾಣ ಕುಪ್ಪದಗಚ್ಚು ಯಣೆಗಚ್ಚು ಸಹಾ ಕಟ್ಟಿಶಿ ಪಶ್ಚಿಮ ದಿಕ್ಕಿನ ಕೋಟೆಗೋಡೆಯನ್ನು ಬಂದೊಬಸ್ತಾಗಿ ಕಟ್ಟಿಸಿ, ಪಟ್ಟಣತ್ತವನ್ನು ಕಟ್ಟಿಸಿದನು. ಆ ಕಾಲದಲ್ಲಿ ಪಾರಪತ್ಯದ ಬಗ್ಗೆ ಅರಳಿಕೊಪ್ಪದ ನರಸಣಂನ್ನ x x xಡಗೆ ಸಮೆತರಾಗಿ ಮೊಕರೂರು ಮಾಡ್ಸಿ ಇಟ್ಟನು. ಸನ್ ೧೫೮೮ನೆ ಪರಾಭವ ಸಂವತ್ಸರದ ವರಿವಿಗೆ ವರುಷ ೧೧ ಪ್ರಭುತ್ವ ಮಾಡಿದನು. ಈ ಹನ್ನೊಂದು ವರುಷದಲ್ಲಿ ಈ ದೇಶವಂನ್ನು ಕಾಯಿದೆ ಮೇರಿಗೆ ಶಿಸ್ತು ಕಟ್ಟಿದನು. ತರುವಾಯ ಶಿವಪ್ಪನಾಯಕನ ಮಗ ಭದ್ರಪ್ಪನಾಯಕನು ಪ್ರಭುತ್ವದಲ್ಲಿ ವಿಜಾಪುರದ ಬಾದಶಾಹನ ಕಡೆಇಂದ ಮಿರ್ಜ ಮುಚಕ್ಕಿನ ಜಬಿಬಿಖಾನ ಕವಾಯತ್ಮದಿನ ದರಗಾಕುಲ್ಲಿಖಾನ ಸಾ ಬಂದು ಈ ಕಿಲ್ಲೆಗೆ ದಿನ ಹದಿನೈದು ಮುತ್ತಿಗೆ ಹಾಕಿ ಕಿಲ್ಲೆಯನ್ನು ಠಾಣೆ ಹಾಕಿದನು. ಪ್ಲವಂಗ ಸಂವತ್ಸರದ ಆರಭ್ಯ ಶಕ ೧೬೪೫ ಶುಭಕೃತು ಸಂವತ್ಸರ ವರಿವಿಗೆ ಮುಸಲಮಾನರು ಇದರ ಕಡೆಯವರು. ಉಮತ್ತಿಗೆ ಕಿಲ್ಲೆಗೆ ಇದ್ದು, ವಿಜಾಪುರದ ಶುಬೆ ಶಿರಿಯಾ ಶುಭೆದಾರ ಸಾಲುಳಿದ ವರುಷ ೫೭ ವಿವರ: ವಿಜಾಪುರದ ಕೆಳಗೆ ಅಬ್ದುಲ್‌ಖಾನೆಂಬುವನೂ ಕೆಲ್ಲೆರ ಕನಕೈ ಶೀಮೆಗೆ ಸಾಮುಖಿ ಸರದಾರನಾಗಿ ಇದ್ದನ್ನು. ಆವಾಗ ಈ ಶೀಮೆ ಶೇಭಾನಯೆಂಬ ಜಾಹಗೀರುದಾನಗೆ ನಡೆಯುತ್ತಾ ಇತ್ತು. ಯಾರನ್ನ ಬ x x ವೊಬ್ಬಣದಲ್ಲು x x ಇರುತ್ತಿದ್ದನು. ಇವನ್ನ ಯಾಪಿಲರ ಕಡೆಯಿಂದ ಹಣ ವಸೂಲು ಮಾಡಿಕ್ಕೊಂಬವನು. ಈ ಮೇರಿಗೆ ಆಳಿದನುಭವಿಸಿದನು ವರುಷ ೩೦. ಆಮೇಲೆ ತಿಯರ್‌ಖಾನ್ ಎಂಬುವನು ವಿಜಾಪುರದ ಸುಬೇದಾರನ ಮಾಡಿಕ್ಕೊಂಡು ಬಂದುನ್ನು. ಈತನ್ನು ಬರದೆ ಇದ್ದ ಮುಂಚಿತವಾಗಿ ಮೇಲೆ ಬರದಿರುವ ಸರ[+ತಿಯರ್]ಖಾನನೂ ಮೃತವಾದನು.

ಈತ ಶಿಲೇಮಾನ್‌ಖಾನ್ ಮೇಲೆ ಬರದಿರುವ ಅಮಲ್‌ದಾರನ ಕಡೆಇಂದಲ್ಲಿ ಪ್ರಭುತ್ವ ನರಸಿಂಗರಾಯ x ನ್ನು ತಿಯರಖಾನನ್ನು ಶಿರ್ಯದ ಸುಭೆಗೆ ಬಂದು ಈತನ ತಂದೆ ಹಕ್ಕಿನಿಂದ ಶಿವಪ್ಪಗೆ ತೆಗೆದುಬಿಟ್ಟು ಶೀಮೆ ಸ್ವಾಧೀನ ಮಾಡಿಕ್ಕೊಂಡು, ಮೇಲಿನ ಅಮಲದಾರನ್ನು ಬದಕು ಮಾಡುವಲ್ಲಿ ಬುದ್ಧಿವಂತನಾದ್ದರಿಂದ ಆತಗೆ ಅಮಲತ್ತನ್ನು ಕಿಲ್ಲೆಸಾ ಕೊಟ್ಟು ನಡಶಿಕ್ಕೊಂಡು ಬಂದನು. ಇದೇ ಅಬ್ದುಲ್‌ಖಾನುನ್ನು ಶಿರ್ಯಸುಭೆ ಕೆಳಗೆ ವರುಷ ೨೭ ಮಾಡಿಕ್ಕೊಂಡು ಬಂದನ್ನು. ತರುವಾಯ ಕೆಲವು ದಿವಸಗಳ ತರುವಾಯ ತನ್ನ ಶೆಕ ವರುಷ ೧೬೪೬ ಕ್ರೋಧಿ ಸಂವತ್ಸರ ಶಿರ್ಯ ದುದುಖಾನನ ಸಂಗಡ ಸಲ್ಲಾದ ಬಗ್ಗೆ ಅಲ್ಲಿ ಲಿಂಗಪ್ಪನ ಮುಖಾಂತ್ರದಿಂದಾ ಸಲಹ ಮಾಡಿಕ್ಕೊಂಡು, ಅವರಿಗೆ ವಂದು ಲಕ್ಷರೂಪಾಯಿ ಕೊಟ್ಟು ಈ ಕಿಲ್ಲೆಯಂನ್ನು ಕಡೆವಡ್ಡಿ ಶೀಮೆಯಾದ್ದರಿಂದ ಕ್ರಯಕ್ಕೆ ತೆಗೆದುಕ್ಕೊಂಡು, ಆ ಕೋಟೆಯಲ್ಲಿ ಕೆಲವು ಕಡೆ ಫೌಜನ್ನು ಇಟ್ಟು ಮಂದಿಘಟ್ಟದ ಶಿವಪ್ಪಗೆ x x ಲ್ಲೆದಾರಿ ಕೊಟ್ಟು, ಈ

ಶೀಮೆ ಪಾರುಪತ್ಯದ ಬಗ್ಗೆ ವೀರಯ್ಯಗೆ ಕರಾರು ಮಾಡಿ ಕ್ರೋಧಸಂವತ್ಸರದಾರಭ್ಯ ಪರಾಭವಸಂವತ್ಸರ ವರಿವಿಗೆ ವರುಷ ೧೫ ಕೆಳದಿ ಸೋಮಾ[>ಮಶೇ]ಕರನಾಯಕರೂ ೨ ಬಸಪ್ಪನಾಯಕರು ೧೫ ವೀರಮ್ಮಜಿ ಈವೇ ದತಮಾ ಸೋಮಾಜಿ[>ಶೇ]ಕರನಾಯಕರು ೮ ತಿಂ ೧೦. ಅಂತು ೩೮೬೧೦ ವೀರಮ್ಮಜಿ ದತ್ತಪುರ[>ತ್ರ] ಸೋಮಾಜಿ[>ಶೇ]ಕರನಾಯಕನ ಕಾಲುಕು ಮೇಲೆ ಬರದ ಪಾರಪತ್ಯಗಾರ ಕಿಲ್ಲೇದಾರು ಇದ್ದರು. ಇವರ ಪ್ರಭುತ್ವದಲ್ಲಿ ಬೆಂಕಿಪುರನಾಡು ೫೪ ಗ್ರಾಮಗಳೂ ಹೊಳೆಹೊನ್ನೂರು ಶೀಮೆಯಿಂದ ತೆಗೆದು ಬೇರೆ ತಾಲ್ಲು ಮಾಡಿ ಊರ್ರ ಊರಿಗೆ ವಬ್ಬ ಪಾರಪತ್ಯಗಾರನ್ನ ಮಕರೂರು ಮಾಡಿದರು. ಬಸವಪ್ಪನಾಯಕನ ಕಾಲದಲ್ಲಿ ಲಿಂಗಪ್ಪನಾಯಕನಿಗೆ ತಲೆದೊರೆತನಕೊಟ್ಟು ಹೊನ್ನಪ್ಪಯ್ಯಗೆ ಪಾರುಪತ್ಯವಂನ್ನು ಕೊಟ್ಟನು. ಇವರೂ ಶ. ೧೫ ಪರಿಯಂತ್ರಯಾಳಿದರು. ವೀರಮ್ಮಾಜಿ ಕಾಲಕ್ಕೆ ಸೋಮಶೇಖರನಾಯಕ ಅಂಡಿಗೆ ಲಿಂಗಪ್ಪ xxxxxxxxxxxxxxxxxxxx xxxxxxxxxxxxxಕದಂಬರಾಯರ ವಂಶಸ್ಥರೂ ಇದೆ ರಾಜಿರಾಜಿಯಾಗಿ ಆಳಿದರು. x xx ನಗರದ ದೊರೆತನದಲ್ಲು ದೇವರಾಯ xx ಪ್ರಧಾನ ಚಂದನಸವಡೆರ್ರು ಶಕವರುಷ ೧೪೩೨ ಲಾಗಾಯಿತು ಸರ್ವಧಾರಿ ಲಾಗಾಯಿತು. ೧೪೫೬ ಜಯಸಂವತ್ಸರ ಸ್ವಾತಂತ್ರ ನಿಮಿತ್ಯ ಈ ಪ್ರಾಂತ್ಯಕ್ಕೆ ಚಿತ್ತೈಸಿ ಹ್ಯಾಗೆ ವಡಗಣಿಗ್ರಾಮದ ರೈತರಂನ್ನು ತಂಮ್ಮ ತಂಮ್ಮ xxx ಸಿ ತಪ್ಪಿನ ನ್ಯಾಯವಂನ್ನು ತೀರುಪು ಮಾಡಿಕ್ಕೊಂಡಲ್ಲಿ, ಆ ಭೂಮಿಯನ್ನು ಮರಾಮತ್ತು ಸುತ್ತ ಬೀಳದ್ದು ಈ ಕೊಟ್ಟ ಮಷ್ಟಿಯರು ಇದ್ದು xxxxxxx ಬಸಲ್ಲಿ ಮರದ ಬುಡದಲ್ಲು ಒಂದು ಹುತ್ತ ಇತ್ತು. ಅದರಿಂದ ಒಂದು ಉಡವು ಯದ್ದು ಪ್ರಧಾನ ಮಹ ಇದ್ದ ಕಾಲ ನಾಯಗರ ಮೇಲೆ ಉಡು ಉತ್ತರಿಸಿ ಬಿದ್ದು, ತಡಗಣಿ ಮುಖದಲ್ಲಿ ಇರುವ ಗಿಡದ ವಳಗೆ ಹೊಕ್ಕದ್ದರಿಂದ ಅಲ್ಲಿಗೆ ತಡಗಣಿ xxxxx ಮುಕ್ಕಾರೂರುಯಿಂದ ಮುಕ್ಕಾಮು ಮಾಡಿ ಮಲ್ಲಿಕಾರ್ಜುನದೇವರು ಪ್ರತಿಷ್ಠೆಮಾಡಿದರು.

❖❖

೫೩

ಹೊಳೆಹೊನ್ನೂರು ಕೈಫಿಯತ್ತು-೨

ಮೆಕೆಂಝಿ ಸಂಪುಟ : ೧೬೧

ಹೊಳೆಹೊನ್ನೂರು ಕೈಫಿಯತ್ತು. ಶಾಲಿವಾಹನ ಶಕ ೧೭೨೭ ನೆಯ ಕ್ರೋಧನಸಂವತ್ಸರದ ಚೈತ್ರ ಶು. ೧೩ ಮಂಗಳವಾರದ ವರಿಗೆ ನಡದ ಕೈಫಿಯತು. ಸ್ಥಳದ ನಾಡಿಗರ ಸುಭಯ್ಯನವರು ಬರಸಿದ ಮೇರಿಗೆ . . . . ಸ್ಥಳಮಾಹಾತ್ಮೆ:

ಹೊಳೆಹೊನ್ನೂರು ಬೆಂಕಿಪುರ ಸ್ಥಳನಿಕ ಸ್ಕಂದಪುರಾಣೋಕ್ತ ತುಂಗಭದ್ರಮಹಾತ್ಮೆ ವಳಗೆ ಅಷ್ಟಸಂಬೋ[>ಅಷ್ಟಾದಶಾ]ಧ್ಯಾಯದಲ್ಲಿ ಯಿರುವದು.

ಶ್ರೀಶೈಲಶ್ಚ ನಿವೃತ್ತಿಶ್ಚ ಮುಕ್ತಿನಾಥಸ್ತದಾ ಪರಃ । ಆಲಮಪುರೀತಿ ವಿಖ್ಯಾತಾ ಪಂಪಾಚೈವ ತಥಾ ಪರಾ। ಲಾಂಗುಲಾಲ್ಯಂಗುಹರಣ್ಯಾ ಮಾರ್ಕಂಡೇಯ ತತಃ ಪರಂ । ಅಗಸ್ತ್ಯ ಪದ ಪಾದಾಬ್ಯ ಪದಾಶ್ಯಾಕ್ಯ ಮತಃ ಪರಂ । ಏ ಕಹಂ ನಾಶಕಂ ಪ್ರೋಕ್ತಂ ನಾರಶಿಂಹ ಷಡ್ಸ್ಥಲಃ ।

ಯೀ ಪ್ರಕಾರ ನಾರಶಿಂಹಕ್ಷೇತ್ರದ ಪೊಡವಿ ಸಂಗಮಕ್ಕೆ ಪೂರ್ವದಿಕ್ಕಿನಲ್ಲು ದ್ರೋಣ ಪರ್ವತವಿದೆ. ಯೀ ಪರ್ವತದ ಮೇಲೆ ಕಾಳಭೈರವನ ದೇವಾಲಯ ವಂದು. ಯೀ ಪರ್ವತಕೆ ದಕ್ಷಿಣ ದಿಕ್ಕಿನಲ್ಲು ಕ್ರೋಶದ್ವಯ ಪರಿಯಂತ್ರಕ್ಕು ಸಾಂಬಕ್ಷೇತ್ರವು ಯಿದೆ. ಯೀ ಕ್ಷೇತ್ರದಲ್ಲು ಭದ್ರಾ ತೀರದಲ್ಲು ಸುವರ್ಣಾಲಯವು ಯಿದೆ. ಯಿದರ ವೊಳಗೆ ಸುವರ್ಣೇಶ್ವರಸ್ವಾಮಿ ಯಿದ್ದಾನೆ. ಯೀ ಸ್ಥಳ ಪೂರ್ವದಲ್ಲಿ ಮಹದಾರಣ್ಯಬಾಗಿ ಯಿತ್ತು. ಯೀ ಘೋರಾರಣ್ಯದಲ್ಲಿ ಸುವರ್ಣಾಲಯೇಶ್ವರ ದೇವಸ್ಥಾನ ಯುಗಾಂತ್ರದಿಂದ ಯಿತ್ತು.

ಯೀ ಮೇರಿಗೆ ಯಿರುವಕಾಲಕ್ಕೆ ವಿನಯಾದಿತ್ಯರಾಯನು ದೇಶಾನೋಡೊದಕ್ಕೆ ಸ್ವಾರಿ ಮಾರ್ಗವಾಗಿ ಬಂದು, ಯೀ ಸುವರ್ಣಾಲಯಕ್ಕೆ ದಕ್ಷಿಣದಿಕ್ಕಿನಲ್ಲಿ ಭದ್ರಾಪೂರ್ವ ಕಾಲದ[>ಕಾಲುವೆಯ]ಲ್ಲು ಹೊಳೆಮಲ್ಲಿಕಾರ್ಜುನೇಶ್ವರ ಸಮೀಪದಲ್ಲಿ ಸೈನ್ಯ ಸಮೇತನಾಗಿ ಯಿಳಿದು ಯಿದ್ದಲ್ಲಿ, ಯೀ ಸ್ಥಲದಲ್ಲಿ ಅರಮನೆಯ ನಾಯಿಗಳು ತೆಗೆದುಕೊಂಡು ಬೇಟೆಗೆ ಹೋದರ್ರು. ಅಲ್ಲಿ ಮೊಲಗಳ ಮೇಲೆ ನಾಯಿಗಳ ಬಿಟ್ಟಲ್ಲಿ ಯೀ ನಾಯಿಗಳನ ಅಟ್ಟಿಕೊಂಡು ಮೊಲಗಳು ಬಂದದರಿಂದ ಯೀ ವರ್ತಮಾನವನ್ನು ವಿನಯಾದಿತ್ಯರಾಯನು ಕೇಳಿ ಆಶ್ಚರ್ಯ ಪಟ್ಟು, "ಯಿದು ಗಂಡುಭೂಮಿ, ಯೀ ಸ್ಥಳದಲ್ಲಿ ವಂದು ಕೋಟೆ ಕಟ್ಟಿದರೆ ಯಿಲ್ಲಿ ಯಿರ್ರೋ ಜನರು ಯಾವತ್ತು ಬಹು ವಿಶೇಷದಿಂದ ಅತ್ಯಂತ ಧೌರ್ಯಶಾಲಿಗಳೂ ಆಗುತ್ತಾ ಯಿರುತ್ತಾರೆ. ದೈವಾಧೀನದಿಂದಾ ಶತ್ರು ಅರಸುಗಳು ಬಂದಾಗ್ಯೂ ಹೆದರಿ ಲಡಾಯಿ ಮಾಡುವ ಸ್ಥಳವು" ಯಂದು ಯೋಚನೆ ಮಾಡಿ, ಯೀ ಸ್ಥಳದಲ್ಲಿ ಶಾಲಿವಾಹನ ಶಕ ೯೬೬ನೆ ತಾರಣ ಸಂ|ದ ಆಶ್ವೀಜ ಶು. ೧ಲ್ಲು ಪ್ರಾರಂಭ ಮಾಡಿ ಕೋಟೆಯನ್ನು ಕಟ್ಟಿಸಿದರು. ಯಿದರಲ್ಲಿ ಪಟ್ನಾ ನಿರ್ಮಾಣ ಮಾಡಿ. ಉತ್ತರಗೆ ಕವುಲು ಕರಾರ್ರು ಕೊಟ್ಟು, ಬಸ್ತಿ ಮಾಡಿ ಆಳಿಕೊಂಡು ಯಿರ್ರೊ ಕಾಲದಲ್ಲಿ, ಯಿದು ದೊಡ್ಡ ಪಟ್ಟಣವಾದ್ದರಿಂದ ಯಿಲ್ಲಿ ಪಟ್ನಗಳ ವರ್ತಕರು ಬಹುಜನ ಯಿರುತಾ ಯಿದ್ದಾರೆ ಯಂಬದಾಗಿ ತಿಳಿಯುವದು.

ಯಿದರ ಮೇಲೆ "ಯೀ ಸ್ಥಳವು ಅನಾದಿ ಸಂಸಿದ್ಧಿಯಾಗಿ ಯುಗಾಂತರ ವ್ಯ[+ವ]ಸ್ತೆಯಿಂದಾ ಪುರಾಣ ಪ್ರಸಿದ್ಧಿಯಾಗಿ ಯಿರ್ರೊದು. ಯಿಲ್ಲಿ ಯೇಳು[>ಯೇನು] ಕೆಲಸಗಳು ಮಾಡಿದರು, ಅನೆಕ ಟವಸ[>ದಿವಸ]ಸ್ಥಾಯಿಯಾಗಿ ಯಿರುತ್ತಾ ಯಿದೆ" ಯಂಬದಾಗಿ ಮನಸಿನ ವಳಗೆ ಯೋಚನೆ ಮಾಡಿ, ಯೀ ಹೊಳೆಹೊನ್ನೂರಿಗೆ ಕೆಲವು ನಾಡು ಸೇರಿಶಿ, ನಾಡ ವಿವರಾ ಮಾಡಬೇಕು ಯಂಬುದಾಗಿ ನಿಶ್ಚಯಿಸಿ, ಯೀ ಹೊಳೆಹೊನ್ನೂರು ಕಟ್ಟಿಮನೆ ಮಾಡಿದ್ದು, ಯಿದಕೆ ನಾಡಿನ ವಿವರ:

೧ ಕಸಬೆ ಹೊಳೆಹೊನ್ನೂರು ನಾಡು ೧ಕೆ ಗ್ರಾಮಗಳು ೫.

೧ ಆನವೇರಿ ನಾಡು ೧ಕೆ ಗ್ರಾಮ ೨೨.

೧ ಹನಗವಾಡಿ ಬಾಗದ ನಾಡು ಚ[>೧ಕೆ]ಗ್ರಾಮ ೩.

೧ ಗಂಗೆಮಂಡಲ ಯರಡು, ಕೊರ್ರೆನಾಡು ೧ಕೆ ಗ್ರಾಮಗಳು ೭೦.

೧ ಗುಡ್ಡವಲ್ಲಿ ನಾಡು ೧ಕೆ ಗ್ರಾಮ ೧೩.

೧ ಬೆಂಕಿಪುರಾದ ನಾಡು ೧ಕೆ ಗ್ರಾಮ ೫೭

೬	೨೨೦

ಈ ಮೇರಿಗೆ ಮೊಕರರ್ರು ಮಾಡಿ, ಕಸಬೆ ಹೊಳೆಹೊನ್ನೂರು ಪಟ್ನಕೆ ಶೆರಿಶಿದು.

❖❖

ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳ ಕೈಫಿಯತ್ತುಗಳು

೫೪
ಅಜಿಲರ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಪೂರ್ವದಲ್ಲಿ ತಿಮ್ಮಣ್ಣ ಅಜಿಲರು ವಂಗದೇಶದ ಗಂಗನಾಡು ಎಂಬ ಪಟ್ಟಣದಲ್ಲಿ ಆಳಿಕೊಂಡು ಇರುತ್ತಿದ್ದಲ್ಲಿ, ಪರರಾಷ್ಟ್ರದ ಅರಸುಗಳು ದಂಡು ತೆಗೆದುಕೊಂಡು ಬಂದು, ಆ ಪಟ್ಟಣಕ್ಕೆ ಮುತ್ತಿಗೆ ಹಾಕಿ ಅಘೋರಾಯುದ್ಧ ಮಾಡುತ್ತ ಇರುವಲ್ಲಿ, ದಂಡು ಯಾವತ್ತು ಬಹಳ ಲಯವಾಯಿತು. ಇವರ ಸಂಗಡ ಯುದ್ಧಮಾಡಿ ಜಯಿಸುವ ಬಗ್ಯೆ ಸಾಮರ್ಥ್ಯವಿಲ್ಲವೆಂಬದಾಗಿ ಆಲೋಚನೆ ಮಾಡಿಕೊಂಡು, ಅವರ ಕೈಸೆರೆ ಸಿಕ್ಕಬಾರದೆಂಬ ಪ್ರಯುಕ್ತ ತಿಮ್ಮಣ್ಣಾಜಿಲರು, ತಮ್ಮ ಲಕ್ಷ್ಮಣಪ್ಪ, ತಮ್ಮ ಮನೆದೇವರು ಸೋಮನಾಥ, ವೀರಭದ್ರ, ತನ್ನ ಹೆಂಗಸರು, ಮಕ್ಕಳು, ಸಾಮಾಜಿಕರು ದಂಡು ಸಹಿತವಾಗಿ, ಅಲ್ಲಿಂದ ಪಲಾಯನವಾಗಿ ಪರಶುರಾಮಕ್ಷೇತ್ರಕ್ಕೆ ಹೋಗಬೇಕೆಂಬದಾಗಿ ಬರುವಲ್ಲಿ, ಘಟ್ಟಕೆಳಗೆ ಇಳಿಯುವ ಬಗ್ಯೆ ಮಾರ್ಗವಿಲ್ಲದ್ದರಿಂದ ಘಟ್ಟ ಕಡದು ದಾರಿ ಮಾಡಿಕೊಂಡು ಈ ಘಟ್ಟಕ್ಕೆ 'ಕಡದ ಕಲ್ಲು ಘಟ್ಟ'ಯಂಬದಾಗಿ ಹೆಸರಿಟ್ಟು, ಕೆಳಗೆ ಇಳಿದು ಬರುವಾಗ್ಯೆ, ಈ ಘಟ್ಟದ ಬುಡದಲ್ಲು ಅಡವಿಯಲ್ಲು ಮಲೆಕುಡಿಯರು ಹತ್ತು ಗುಡಿಸಲು ಕಟ್ಟಿಕೊಂಡು ಇರುತ್ತಿದ್ದರು. ಇವರು ಆ ಸ್ಥಳಕ್ಕೆ ಬಂದು ಅಡವಿ ಕಡಿದು ಗದ್ದೆ ತೋಟಗಳ ಮಾಡಿಸಿ, ಮನೆ ಬಾಗಿಲು ಮಾಡಿಕೊಂಡು ಸಂಗಡ ಬಂದ ಸಾಮಾಜಿಕರು ಯಾವತ್ತು ಮನೆಗಳ ಕಟ್ಟಿರುವಾಗ್ಯೆ, ತಿಮ್ಮಣ್ಣಾಜಿಲರು ತನ್ನ ದೇಶದ ಹೆಸರಿಡಬೇಕೆಂಬದಾಗಿ ಆಲೋಚನೆ ಮಾಡಿಕೊಂಡು, ತನ್ನ ಊರು ವಂಗದೇಶ, ಈ ಊರಿಗೂ ಅದೇ ಹೆಸರಿನಲ್ಲು ಇಡಬೇಕೆಂಬದಾಗಿ 'ವಂಗಾಡಿ'ಯೆಂತ ಹೆಸರಿಟ್ಟು, ತಮ್ಮ ಸಂಗಡ ತೆಗೆದುಕೊಂಡ ಮನೆ ದೇವರಿಗೆ ಪ್ರಾಕು ಜಾಗಿಬಲ್ಲಾಳಯೆಂಬುವನ ಮನೆಯು ಜೀರ್ಣವಾಗಿ ಹೋದಂಥಾ ಸ್ಥಳದಲ್ಲು ಈ ದೇವರ ಪ್ರತಿಷ್ಠೆಮಾಡಿ, ಆ ಸ್ಥಳಕ್ಕೆ ಕಲ್ಲುಗುಂಡುಯೆಂತ ಪ್ರತಿನಾಮಧೇಯವಿಟ್ಟು, ಹೀಗೆ ಕೆಲವು ದಿವಸದ ಮೇಲೆ ತಿಮ್ಮಣ್ಣಾಜಿಲರು, ತಮ್ಮ ಲಕ್ಷ್ಮಣಪ್ಪ ಸಹಾ 'ಇದು ಘಟ್ಟದ ಬುಡ. ಇಲ್ಲಿ ಇರತಕ್ಕ ಬಗ್ಯೆ ಸ್ಥಳ ಸಾಲದು. ಇಬ್ಬರು ಪ್ರತ್ಯೇಕ ಪ್ರತ್ಯೇಕ ಯಿರಬೇಕೆಂಬದಾಗಿ ಮಾತನಾಡಿಕೊಂಡು, ಲಕ್ಷ್ಮಣಪ್ಪನು ಬೆಳತಂಗಡಿಗೆ ಬಂದು ಮನೆ ಬಾಗಿಲು ಮಾಡಿಕೊಂಡು ಇದ್ದರು. ತಿಮ್ಮಣ್ಣಾಜಿಲರು ವೇಣೂರಿಗೆ ಬಂದು ಅಲ್ಲಿ ಮನೆ ಬಾಗಿಲು ಮಾಡಿಕೊಂಡು ಇರುತ್ತಿದ್ದರು. ಈ ಪ್ರಕಾರ ಉಭಯತರು

ಪ್ರತ್ಯೇಕ ಪ್ರತ್ಯೇಕ ಇರುತ್ತಿದ್ದರು. ಈ ಪ್ರಕಾರ ಇದ್ದುಕೊಳ್ಳುತ್ತಾ ಗದ್ದೆ ತೋಟಗಳ ಮಾಡಿಕೊಂಡು ಆವಾವ ಸ್ಥಳಗಳ ಬಲಕಾಯಿಸಿಕೊಂಡು ಆ ಊರಿಗೆ ತಾವೆ ಗೊತ್ತುಗಾರರಾಗಿ, ಸರಕಾರಕ್ಕೆ ಸಲ್ಲತಕ್ಕ ಹಣ ತಾವೇ ಕೊಟ್ಟುಕೊಂಡು ಇರುತ್ತಿದ್ದರು. ಈ ಪ್ರಕಾರ ಇರುವಾಗ್ಯೆ "ತಾವು ಅಣ್ಣತಮ್ಮಂದಿರು ಪ್ರತ್ಯೇಕ ಪ್ರತ್ಯೇಕವಿದ್ದಮೇಲೆ ಇಬ್ಬರಿಗೂ ಒಂದೇ ನಾಮಧೇಯವಾಗುತ್ತದೆ. ಬೇರೆ ಬೇರೆ ಹೆಸರಿಟ್ಟುಕೊಳ್ಳಬೇಕು" ಎಂಬದಾಗಿ ಆಲೋಚನೆ ಮಾಡಿಕೊಂಡು, ತಿಮ್ಮಣ್ಣ ಅಜಿಲರು ತಮ್ಮ ಮನೆತನದ ಪ್ರಾಕು ಇದ್ದ ಹೆಸರು ಅಜಿಲರು ಎಂತಲೇ ಇಟ್ಟುಕೊಂಡು, "ತನ್ನ ತಮ್ಮ ಲಕ್ಷ್ಮಣಪ್ಪಗೆ ತಮ್ಮ ಪೂರ್ವದ ಊರಿನ ಹೆಸರು ಇಡಬೇಕು" ಎಂತ ತಮ್ಮ ಊರು ವಂಗದೇಶವಾದ ಕಾರಣ 'ವಂಗರು' ಎಂಬ ನಾಮಧೇಯವಿಟ್ಟ ಕಾರಣ, ಲೋಕಾರೂಢಿಗೆ 'ಬಂಗರು' ಎಂಬ ನಾಮಧೇಯ ಆಗಿಸಿ, ಈ ಪ್ರಕಾರ ಪ್ರತ್ಯೇಕ ಪ್ರತ್ಯೇಕ ಹೆಸರಿಟ್ಟುಕೊಂಡು ಇರುತ್ತಿದ್ದರು.

ಹೀಗೆ ಕೆಲವು ದಿವಸದ ಮೇಲೆ ತಿಮ್ಮಣ್ಣಾಜಿಲರು ಮೃತಬಟ್ಟು ಹೋದರು. ಇವರಿಗೆ ಸಂತಾನವಿಲ್ಲದೆ ಹೋಯಿತು. ಇದರ ವಂಶದಲ್ಲಿ ಇಬ್ಬರು ಹೆಣ್ಣುಮಕ್ಕಳು ಇದ್ದರು. ಅವರಲ್ಲಿ ಒಬ್ಬಳು ಕನ್ನಿಕೆ. ಒಬ್ಬಳು ವಿಧವೆ. ಈ ಪ್ರಕಾರ ಇಬ್ಬರೆ ಅಕ್ಕತಂಗಿಯರು ಇರುತ್ತಿದ್ದರು. ಈ ತಿಮ್ಮಣ್ಣ ಅಜಿಲರ ಸುತ್ತಮುತ್ತ ಇರುವ ಇವರ ದ್ವೇಷಿಗಳು ಇವರ ಮನೆ, ಬದುಕು, ಭೂಮಿ, ತೋಟ ಯಾವತ್ತೂ ಆಕ್ರಮಿಸಿಕೊಂಡು ಈ ಹೆಣ್ಣು-ಮಕ್ಕಳಿಗೆ ಏನೂ ಆಸ್ಪದವಿಲ್ಲದ ಹಾಗೆ ಮಾಡಿ, ಉಪದ್ರ ಮಾಡುತ್ತ ಇದ್ದರು. "ಈ ಪ್ರಕಾರ ಉಪದ್ರವಾದರೆ ನಾವು ಅಕ್ಕತಂಗಿಯರು ಇಬ್ಬರು ಇದ್ದು ನಿರ್ವಾಹ ಮಾಡಲಾರೆವು" ಎಂಬದಾಗಿಯೂ, "ದ್ವೇಷಿಗಳ ಉಪದ್ರ ಬಹಳವಾಗಿದೆ" ಎಂಬದಾಗಿ ಸಹಾ ತಮ್ಮ ತಮ್ಮ ಒಳಗೆ ಮಾತನಾಡಿಕೊಂಡು "ಈ ಸ್ಥಳಬಿಟ್ಟು ಪರದೇಶಕ್ಕೆ ಹೋಗಿ ಕಾಲಕ್ಷೇಪ ಮಾಡುವ'ಯೆಂಬ ತಮ್ಮ ಜಿಂದಗಾನಿ ಯಾವತ್ತನ್ನು ತೆಗೆದುಕೊಂಡು "ವಿಜಯನಗರದ ರಾಯರು ಮಹಾಧರ್ಮಿಷ್ಠರು. ಈ ರಾಜ್ಯಕೂಡಾ ಅವರೇ ಆಳುತ್ತಾ ಇದ್ದಾರೆ. ಅಲ್ಲಿಗೆ ಹೋಗುವ" ಎಂತ ಹೊರಟು ಹೋಗಿ ಆ ವಿಜಯನಗರದ ಪಟ್ಟಣಕ್ಕೆ ಹೊರಟು ಹೋಗಿ ಹೀಗೆ ತಿರುಗಾಡುತ್ತ ಇರುವ ಸಮಯದಲ್ಲಿ, ಆ ಊರು ಜನರು "ಯಾರೋ ಇಬ್ಬರು ಹೆಂಗಸರು ಬಂದಿದ್ದಾರೆ" ಎಂಬದಾಗಿ ರಾಯರು ಪರಿಯಂತ್ರ ವರ್ತಮಾನವಾದ್ದರಿಂದ "ಅವರು ಯಾರು? ಎಲ್ಲಿಂದ ಬಂದರು? ವಿಚಾರಿಸಬೇಕು. ಅವರನ್ನು ಕರಸಿ"ಯಂಬದಾಗಿ ಹೇಳಿ ಆ ಹೆಂಗಸರಿಬ್ಬರನ್ನು ಕರಸಿ ಕೇಳಿದ ವಿವರ: "ನೀವು ಯಾರು? ಎಲ್ಲಿಂದ ಬಂದವರು? ಯಾವ ದೇಶದವರು? ಇಬ್ಬರೇ ಹೆಂಗಸರು ಏನು ನಿಮಿತ್ತ ಈ ಊರಿಗೆ ಬಂದಿರಿ?" ಎಂಬದಾಗಿ ವಿಚಾರಿಸುವಾಗ್ಯೆ ಈ ಹೆಂಗಸರು ಹೇಳಿದ ವಿವರ: 'ನಾವಾದರೆ ವಂಗದೇಶದ ಅರಸುಗಳ ಮಕ್ಕಳು. ನಮ್ಮ ತಂದೆ ವಂಗದೇಶದ ಗಂಗನಾಡು ಎಂಬ ಪಟ್ಟಣ ಆಳಿಕೊಂಡು ಇರುತ್ತಿದ್ದಲ್ಲಿ, ಪರರಾಷ್ಟ್ರದ ಅರಸುಗಳು ದಂಡು ತೆಗೆದುಕೊಂಡು ಬಂದು ಯುದ್ಧಮಾಡಿದಲ್ಲಿ, ಅವರ ಸಂಗಡ ಲಡಾಯಿ ಮಾಡಿ, ಜಯಿಸಲಾರದೆ ಅಲ್ಲಿಂದ ತನ್ನ ಸಾಮಾಜಿಕರು ಹೆಂಗಸರು ಮಕ್ಕಳು ದಂಡು ಸಹಿತವಾಗಿ ಪಲಾಯನವಾಗಿ ಬಂದು, ಪರಶುರಾಮ ಸೃಷ್ಟಿಗೆ ಬರಬೇಕೆಂಬದಾಗಿ ಬಂದು, ಘಟ್ಟ ಕಡಿಸಿ ಆ ಘಟ್ಟಕ್ಕೆ 'ಕಡದಕಲ್ಲು ಘಟ್ಟಾ' ಎಂತ ಹೆಸರಿಟ್ಟು, ಘಟ್ಟದ ಕೆಳಗೆ ಬಂದು ಅಲ್ಲಿ ಮನೆ ಬಾಗಿಲು ಮಾಡಿಕೊಂಡು, ತೋಟಗಳ ಗದ್ದೆಗಳ ಮಾಡಿಸಿ, ಆ ಬಳಿಕ ಅಣ್ಣ ತಿಮ್ಮಣ್ಣಾಜಿಲರು ಆ ಊರಿಗೆ ವಂಗ್ವಾಡಿಯೆಂಬ ಹೆಸರಿಟ್ಟು, ಅಲ್ಲಿಂದ ತಿಮ್ಮಣ್ಣಾಜಿಲರು ವೇಣೂರಿಗೆ ಬಂದರು. ಇವರ ತಮ್ಮ ಲಕ್ಷ್ಮಣಪ್ಪನು ಬೆಳತಂಗಡಿಯಲ್ಲು

ಮನೆ ಬಾಗಿಲು ಮಾಡಿಕೊಂಡ. ತಮ್ಮ ಊರ ಹೆಸರು ವಂಗರು ಎಂತ ಇಟ್ಟುಕೊಂಡು, ಈ ಪ್ರಕಾರ ಕೆಲವು ದಿವಸ ಇರುತ್ತಿರುವಾಗ್ಯೆ ತಿಮ್ಮಣ್ಣಾಜಿಲರು ಮೃತಪಟ್ಟು ಹೋದ್ದರಿಂದ ಈ ಸಂತತಿ ಒಳಗೆ ಗಂಡಸರು ಯಾರೂ ಇಲ್ಲವಾದ ಕಾರಣ, ನಾವು ಇಬ್ಬರೇ ಹೆಂಗಸರು ಇರುವಾಗ್ಯೆ, ಅಲ್ಲಿರುವಂಥ ನಮ್ಮ ದ್ವೇಷಿಗಳು ಯಾವತ್ತೂ ನಮ್ಮ ಗ್ರಾಮ, ಭೂಮಿ, ಮನೆ, ಬದುಕು ಅಪಹರಿಸಿಕೊಂಡು ಏನೂ ಆಸ್ಪದ ಕೊಡದೆ ನಿರಾಸ್ಪದ ಮಾಡಿ, ಆ ಸ್ಥಳದಲ್ಲಿ ಸಹಾ ನಮಗೆ ಇರಗೊಡದೆ ಉಪದ್ರ ಮಾಡಿದ್ದರಿಂದ, ತಾವು ಧರ್ಮಪ್ರಭುಗಳು ಇದ್ದೀರಿ. ಆ ರಾಜ್ಯ ಕೂಡ ತಾವೇ ಆಳಿತ್ತೀರಿ. ತಮ್ಮ ಸಮೀಪಕ್ಕಾದರೂ ಬಂದು ತಮ್ಮ ಭೇಟಿ ಮಾಡಿಕೊಂಡು, ನಮ್ಮ ಸುಖ ದುಃಖ ಯಾವತ್ತು ಹೇಳಿಕೊಂಡು ತಮ್ಮ ಅಪ್ಪಣೆ ಆದ ರೀತಿ ಕೇಳಿ ನಡಕೊಂಬಾಯೆಂಬ ಆಲೋಚನೆ ಮಾಡಿಕೊಂಡು, ತಮ್ಮ ಸಮೀಪಕ್ಕೆ ಬಂದು ಇದ್ದೇವೆ' ಎಂಬದಾಗಿ ಈ ಹೆಂಗಸರು ಹೇಳುವಂಥ ಅಭಿಪ್ರಾಯ ಯಾವತ್ತು ರಾಯರು ಕೇಳಿ, ಬಹಳ ಸಂತೋಷಬಟ್ಟು, ಈ ಹೆಂಗಸರ ಕೂಡೆ 'ನೀವು ಯಾವ ಬಗ್ಯೂ ಯೋಚನೆ ಮಾಡಬೇಡಿ. ನಿಮ್ಮ ಮನಸಾಭೀಷ್ಟ ಮಾಡಿಸಿಕೊಡುತ್ತೇನೆ" ಎಂಬದಾಗಿ ಧೈರ್ಯವಿಲಾಸ ಹೇಳಿಸಿ, ತನ್ನ ಮನಸ್ಸಿನಲ್ಲಿ ಆಲೋಚನೆ ಮಾಡಿದ್ದು. ಈ ಇಬ್ಬರು ಹೆಂಗಸರ ಒಳಗೆ ಒಬ್ಬಳು ಕನ್ನಿಕೆಯಾಗಿ ರೂಪು ಲಾವಣ್ಯಯುಕ್ತಳಾಗಿ, ಅತಿ ಸೌಂದರ್ಯವಾಗಿ ಇದ್ದಾಳೆ. ಈ ಹೆಣ್ಣು ತನಗೆ ವಿವಾಹ ಮಾಡಿಕೊಳ್ಳಬೇಕೆಂಬ ಪ್ರಯುಕ್ತ ಇವರ ಜಾತಿ, ನೀತಿ, ಕುಲ, ಧರ್ಮ, ಗೋತ್ರ, ಸೂತ್ರ ವಿಚಾರಣೆ ಮಾಡಿ, "ಅರಸುಗಳ ಮಕ್ಕಳು ಹೌದಾದರೆ ಮದುವೆ ಮಾಡಿಕೊಳ್ಳಬೇಕು" ಎಂತ ನಿಶ್ಚಯಿಸಿ, ಈ ಕನ್ನಿಕೆ ಅಕ್ಕನ ಕಯ್ಯ ಯಾವತ್ತು ಅಭಿಪ್ರಾಯವು ಕೇಳಿ, ಆಕೆ ರಾಜಿ ಮಾಡಿಕೊಂಡು* ಅತಿ ಉಲ್ಲಾಸದಿಂದ ಮದುವೆಮಾಡಿಕೊಂಡು ಹೀಗೆ ಇರುವಾಗ್ಯೆ, ಯೀಶ್ವರಕಟಾಕ್ಷದಿಂದ ಯೀತನ ಹೆಂಡತಿಗೆ ಗರ್ಭೋತ್ಪತ್ತಿಯಾಗಿ, ನವಮಾಸ ನಂತರದಲ್ಲಿ ಯಿಬ್ಬರು ಗಂಡು ಮಕ್ಕಳು ಹುಟ್ಟಿದರು. ಯಿದರಲ್ಲು ಹಿರೆಯವನ ಹೆಸರು ತಿಮ್ಮಣ್ಣರಾಯ, ಚಿಕ್ಕವನ ಹೆಸರು ಕಾಮಿರಾಯ ಯಂಬದಾಗಿ ಹೆಸರಿಟ್ಟು, ಬಹಳ ಸಂತೋಷದಿಂದ ಅವರಿಗೆ ವಿದ್ಯಾಭ್ಯಾಸಗಳು ಮಾಡಿಸಿ, ಮಕ್ಕಳು ಪ್ರಬುದ್ಧರಾದ ಮೇಲೆ ಯೀ ಮಕ್ಕಳ ದೊಡ್ಡ ತಾಯಿಯು ರಾಯರ ಬಳಿಗೆ ಬಂದು, ಬಹಳ ದೈನ್ಯ ವೃತ್ತಿಯಿಂದ ಕೇಳಿದ ವಿವರ: "ತಾ[>ನಾ]ವಾದರೆ ತ[>ನ]ಮ್ಮಾ ದೇಶದಿಂದ ಬಹಳ ಅವಮಾನಿಕೆಯಾಗಿ ಬಂದಂತವರು. ತಮ್ಮ ದಯದಿಂದ ಯಿಷ್ಟ ಆದ ಮೇಲೆ ಯಿಬ್ಬರ ಮಕ್ಕಳ ಕರಕೊಂಡು ನಮ್ಮ ಸ್ವದೇಶಕ್ಕೆ ಹೋಗಿ ಬರಬೇಕು"ಯಂದಾಗ್ಯೆ "ವಳ್ಳೇದು ಹಾಗೆ ಮಾಡಿ"ಯಂಬದಾಗಿ ಹೇಳಿ, ಹಿರೇ ಮಗ ತಿಮ್ಮಣ್ಣರಾಯಗೆ ಮೂರು ಸಾವಿರ ವರಹಾಕ್ಕೆ ಸಮನಾಗಿ ಮಂಗಲೂರ ಹೊಬಳಿ ಪೈಕಿ ಹನ್ನೆರಡು ಮಾಗಣೆ ವಿಂಗಡಿಸಿ ಜಾಗೀರು ಸನದು ಬರಕೊಟ್ಟದ್ದು॥

ಆಳುವದು ಮಾಗಣಿ ೧	ಸುಳ್ಳಿಕೆರಿ ಮಾಗಣಿ ೧
ಯರಡೂರ ಮಾಗಣಿ ೧	ಯೆಣೂರ ಮಾಗಣಿ ೧
ಕೆಳದ ಮಾಗಣಿ ೧	ಪೆರಂಜದ ಮಾಗಣಿ ೧

---

* ಈ ವರೆಗಿನ ಭಾಗ ಮೈಸೂರು ಪುರಾತತ್ವ ಇಲಾಖೆಯ ಡಿ.ನಂಬರ್ ೩೪೭ ಪುಟ ೧೦೭–೧೧೧ ದಿಂದ ಬರೆಯಲಾಗಿದೆ. ಇಲ್ಲಿಂದ ಮುಂದಿನದು ಮದ್ರಾಸದ ಲೋಕಲ್ ರೆಕಾರ್ಡ್ಸ್‌ದಿಂದ ಬರೆದುಕೊಂಡುದು. (ಸಂ)

ಅಜಬೆಟ್ಟು ಮಾಗಣಿ ೧ ಬೆಳ್ಳೂರ ಮಾಗಣಿ ೧
ಪಂಜಿಕಟ ಮಾಗಣಿ ೧ ಯಿರವತ್ತೂರ ಮಾಗಣಿ ೧
ಸಲುಣಾಟಿ ಮಾಗಣಿ ೧ ನಾರಾವಿ ಮಾಗಣೀ ೧

ಯೀ ಪ್ರಕಾರ ಹನ್ನೆರಡು ಮಾಗಣೀಗೆ ಹಿರೆಮಗನ ಹೆಸರಿಗೆ ಸನ್ನದು ಬರಕೊಟ್ಟು, ಚಿಕ್ಕ ಮಗ ಕಾಮಿರಾಯನಿಗೆ ಬಹಾಳ ಅಂತಃಕರಣ ಮಮತೆಯಿಂದ ಮಂಗಳೂರು ಹೊಬಳಿ ಪೈಕಿ ಆರುಸಾವಿರ ವರಹಾನ್ನ ಶೀಮೆ ಜಾಗೀರು ಸನದು ಬರಕೊಟ್ಟ, ಯಿವರು ಯಿಬ್ಬರಿಗೂ ಬಿರುದಾವಳಿ ಕೊಟ್ಟರು. ಜೇಷ್ಟಪುತ್ರ ತಿಮ್ಮಣ್ಣಜಿಲರಿಗೆ ಸ್ವೇತಛತ್ರ, ಮುಕ್ಕಣ್ಣ, ಕಠಾರಿ, ನಿಶಾನಿ, ಪಂಚದೀವಟಿಗೆ, ಉಭಯಚಾಮರ, ಹಾರಿಸು[>ಹಸಿರು] ರುಮಾಲು, ಹುದಯ ಕತ್ತಿ, ಗಗ್ಗರದ ಯೀಟಿ, ಅಂದೋಳಿಕಾ, ಆನೆ, ಅಂಬಾರಿ, ಕುದುರೆ, ಪಾಯದಳ ಅನೇಕ ದ್ರವ್ಯವ ಕೊಟ್ಟು ದೊಡ್ಡ ತಾಯಿಯ ಸಂಗಡ ಯೀ ಯಿಬ್ಬರು ಮಕ್ಕಳ ಕೊಟ್ಟು, ತನ್ನ ವಳಿಗೆ ಮಂಗಲೂರಲ್ಲು ಅಧಿಕಾರ ಮಾಡುವವನಿಗೆ ತನ್ನ ಹೆಸರು ಪರವಾನೆ ಬರಸಿಕೊಟ್ಟು ಅತಿ ಸಂತೋಷದಿಂದ ಊರಿಗೆ ಕಳುಹಿಸಿಕೊಟ್ಟನು. ಯಿವರು ಪರಶುರಾಮ ಕ್ಷೇತ್ರಕ್ಕೆ ಬಂದು ಮಂಗಲೂರಸಂಸ್ಥಾನದ ಅಧಿಕಾರ ಮಾಡುವವನಿಗೆ ರಾಯರು ಬರದ ಫರವಾನೆ ಕೊಟ್ಟು, ತಮಗೆ ಪೂರ್ವದಲ್ಲು ಜಾಗೀರು ಕೊಟ್ಟ ಹನ್ನೆರಡು ಮಾಗಣಿ ವಳಗೆ ಯೇಣೂರಿಗೆ ಬಂದು ಯಿದ್ದು, ತನ್ನ ಶೀಮೆ ಆಳಿಕೊಂಡು ಯಿರುತ್ತಿದ್ದನು. ಪ್ರಾಕು ಬೆಳತಂಗಡಿಯಲ್ಲು ಯಿರುವ ಲಕ್ಷ್ಮಪ್ಪ ವಂಗರು ನಿರ್ವಂಶರಾಗಿ ಹೋದರು. ಸದರಿ ತಿಮ್ಮಣ್ಣಜಿಲರ ತಮ್ಮ ಕಾಮಿರಾಯನು ತನಗೆ ಜಾಗೀರು ಕೊಟ್ಟ ಆರುಸಾವಿರ ವರಹಾ ಹೊನ್ನ ಶೀಮೆ ವಳಗಾಗಿ ನಂದಾಮರಾ[>ನಂದಾವರ]ಯಂಬ ಜಾಗಾದಲ್ಲಿ ವಳ್ಳೆ ಕಾರಣಿಕ ಸ್ಥಳಯಂತ ಆತನೆ ಅನುಭವ ಕಂಡದರಿಂದ ಅಲ್ಲೆ ಅರಮನೆ ಮುಂತಾಗಿ ಕಟಿಸಿಕೊಂಡು, ಆರು ಸಾವಿರ ಸೀಮೆ ಅನುಭವಿಸಿಕೊಂಡು ಬರುತ್ತಿದ್ದನು. ತಿಮ್ಮಣ್ಣಜಿಲರು ತನ್ನ ಮೂರುಸಾವಿರ ಶೀಮೆ ಬಹಳ ದಿವಸ ಅನುಭವಿಸಿಕೊಂಡು ಬಂದು, ಆ ಬಳಿಕ ಮೃತಪಟ್ಟು ಹೋದನು. ಯಿವರ ಮಗ ಪಾಂಡ್ಯಪ್ಪ ಆ ಮೇಲೆ ತಿಮ್ಮಣ್ಣ ಪಾಂಡ್ಯಪ್ಪ ಹಾಗೆ ನಾಲ್ಕು ತಲೆ ಪರಿಯಂತ್ರ ಅಜಿಲರು ಬಂಗರು ಸಹಾ ಮಕ್ಕಳು ಸಂತಾನದಲ್ಲಿ ಸೀಮೆ ಉಂಬಳಿ ಮಾಡಿಕೊಂಡು ಯಿರುತ್ತಿದ್ದು, ಆ ಮೇಲೆ ಯಿವರಿಗೆ ಹೆಸರು ಬೀಳುವ ಬಗ್ಗೆ ಪಾರಂಪರಿಯಾಗಿ ಹೆಸರು ತಿಳಿಯಬೇಕಾದ ಕಾರಣ ಹೆಸರು ಯರಡೆ ಯಿಟ್ಟು ಕೊಂಡು ಬಂದರು. ಆ ಮೇಲೆ ಐದನೆ ತಲೆ ತಿಮ್ಮಣ್ಣ ಅಜಲರಿಗೆ ಸೋಮವಂಶದಲ್ಲು ಹೆಣ್ಣು ತರುವ ಬಗ್ಯೆ ಆಳವಿಟ್ಟು ಹೋದ್ದರಿಂದ ಜೈನರ ಕಡೆ ಹೆಣ್ಣು ತಂದು ಮದುವೆ ಮಾಡಿ ಕೊಟ್ಟ ಕಾರಣ, ಅಳಿಯನ ಸಂತಾನದಲ್ಲು ಯಪ್ಪತ್ತು ತಲೆ ನಡದು ಬಂತು. ಯಿವರು ಆಳಿಕೊಂಡು ಯಿರುವಾಗ್ಯೆ ಉತ್ಪತ್ತಿಮಾಡಿದ ಬಾಬತು:

ಶಾಲಿವಾಹನ ಶಕ ವರುಷ ೧೪೧೧ನೇಯ ಸಾಂಮ್ಯ ಸಂವತ್ಸರದಲ್ಲು ಅಜಿಲರ ಪ್ರತಿಷ್ಟಾ ದೇವಸ್ಥಾನವೊಂದು, ಜೈನಬಸ್ತಿ ೧, ಸ್ತಾನಾ ೧, ದೂರಕಣ್ಣಪ್ಪ ರುಷಿ ಪ್ರತಿಷ್ಟಾ ಜನಾರ್ಧನ ದೇವಸ್ಥಾನ ೧, ಅಜಿಲರು ಪ್ರತಿಷ್ಟೆ ಆಳುವದ ಪಾರಿಶ್ವನಾಥ ಬಸ್ತಿ ೧, ಪಾಂಡವರ ಪ್ರತಿಷ್ಟಾ ಬಳಂಜಿ ಪಂಚಲಿಂಗ ದೇವಸ್ಥಾನವೊಂದು, ಶಿರಾಸುರ ಪ್ರತಿಷ್ಟಾ ಶಿರಳಾಲ ಮಹಾದೇವರ ದೇವಸ್ಥಾನ ೧, ಅಜಿಲರ ಪ್ರತಿಷ್ಟೆ ಬೆಟ್ಟದ ಬ್ರಮ್ಹದೇವರು ಬಸ್ತಿ ೧, ಅಜಿಲರ ಪ್ರತಿಷ್ಟಾ ಆಳುವದಂಗಡಿ ಸೋಮನಾಥದೇವರ ದೇವಸ್ಥಾನ ೧ – ಯೀ ಪ್ರಕಾರ ದೇವಸ್ಥಾನ ಬಸ್ತಿ ಭೂತಸಹಾ ಕಟ್ಟಿಸ್ತರು.

ಆ ತರುವಾಯ ಕೆಲವು ದಿವಸದ ಮೇಲೆ ಯೇಣೂರ ಗುಮ್ಮಟದೇವರು ಯಿರುವದರಿಂದ, ಯಿಲ್ಲಿ ಯೇಣೂರಲ್ಲಿಯೂ ಯರಡು ಕಡೆಯಲ್ಲಿಯು ಗುಮ್ಮಟದೇವರು ಉತ್ಪತ್ತಿ ಆಗುವದರಿಂದ ಯೇಣೂರಲ್ಲಿ ಪ್ರತಿಷ್ಟೆ ಮಾಡುವ ಬಗ್ಗೆ ಬಿಡುವದಿಲ್ಲಯಂತ ತುಳುವರಾಜ್ಯದ ಅರಸು ಬೈರರಸವೊಡೇರು ದಂಡೆತ್ತಿ ತೆಗೆದುಕೊಂಡು ಲಡಾಯಕ್ಕೆ ಬಂದಲ್ಲಿ, ನಾರಾವಿ ಮಾಗಣಿಯಲ್ಲು ಅರಸುಗಳಿಗು ಅವರಿಗು ಲಡಾಯಿ ಆಗಿ ಬೈರರಸವೊಡೇರು ದಂಡ ಮುರದು ಕಾರ್ಕಳಕ್ಕೆ ಓಡಿಹೋದ್ದರಿಂದ ಆ ಮೇಲೆ ವಿವೇಕವಾಗಿ ಯೇಣೂರಲ್ಲಿ ಗುಮ್ಮಟದೇವರ ಪ್ರತಿಷ್ಟೆ ಮಾಇದರು. ಆಮೇಲೆ ಕೆಲಉ ದಿವಸದಲ್ಲಿ ಯಿಕ್ಕೇರಿ ಸಂಸ್ತಾನಾ ನಗರದಲ್ಲು ಮೊಕರರು ಆಗಿ ಚನ್ನಬಸಪ್ಪನಾಯಕರು ಯಂಬ ಅರಸು ಯೀ ತುಳುರಾಜ್ಯಕ್ಕೆಲ್ಲಾ ಕಪ್ಪಗಳ ನಿರ್ನಯ ಮಾಡಿ ಕೊಟ್ಟು ಬರುತ್ತಿದ್ದರು. ಆಮೇಲೆ ನಾಲ್ಕು ತಲೆ ಆದ ಮೇಲೆ ಪಾಂಡ್ಯಪ್ಪ ಅಜಲರಿಗೆ ಕಪ್ಪ ೨೫೦೦೯೦ ವರಹಾ ಕಪ್ಪಾ ನೇಮಕ ಮಾಡಿಕೊಟ್ಟು ಬರುತ್ತಿದ್ದರು. ಆಮೇಲೆ ನಾಲ್ಕು ತಲೆ ಆದ ಮೇಲೆ ಪಾಂಡ್ಯಪ್ಪ ಅಜಲರಿಗೆ ೩೦೦೦೯೦ ವರಹಾ ನಿರ್ನಯ ಮಾಡಿದರು. ಆಮೇಲೆ ನಾಲ್ಕು ತಲೆ ಆದ ಮೇಲೆ ।ಗ ೪೦೦೦೯೦ ವರಹಾ ಶಂಕರದೇವಿ ಅಜಲರಿಗೆ ನಿರ್ನಯಾ ಮಾಡಿಕೊಟ್ಟು ಬಂದರು. ಆಮೇಲೆ ಚಿತ್ರಭಾನು ಸಂವತ್ಸರದಲ್ಲು ನವಾಬರು ಕೊಡೆಯಾಲಕ್ಕೆ ಬಂದು ಯರಡನೆ ವರುಷಕ್ಕೆ ಶೇಖಲ್ಲಿಯಂಬವನು ಮಂಗಲೂರ ಅತಿಕಾರ ಮಾಡಿಕ್ಕೊಂಡು, ಅರಸುಗಳ ಹಿಡಿತರಿಸಿ ಪರಂಪರೆಯಲ್ಲು ಯಿಟ್ಟು, ಯಿವರ ಅರಮನೇಯ ಹೆ . . . . . ಜಪ್ತಿ ಮಾಡಿ ಚಿನ್ನಾ ಬೆಳ್ಳಿ ನಾಣ್ಯಾ ಜಉಳಿ ದನಕರ ಕಂಚು ತಾಂಬ್ರ ಮುಂತಾದ ಬದುಕು ಯಾವತ್ತು ।ಗ ೬೦೦೦೦೯೦ ವರಹಾನ ಬದುಕು ತರಿಸಿಕೊಂಡು, ಯಿದರ ಮೇಲೆ ಗ ೭೦೦೦೦೯೦ ನಜಿರಾನೆ ಮಾಡಿಶಿ ಮನೆ ಯಾವತ್ತು ಬೇರೆ ಬೇರೆ ಬದುಕು ಮಾಡುವವರ ಕಳುಹಿಸಿಕೊಟ್ಟು, ಶೀಮೆ ದರೊಬಸ್ತು ಸರಕಾರಕ್ಕೆ ದಾಖಲು ಮಾಡಿ, ನವಾಬರು ಬಿಟ್ಟ ಯಿನಾಮು ।ಗ ೬೯೦ ಪರಿಯಂತ್ರ ಯಿನಾಮು ನಡಕೊಂಡು, ಕೀಲಕ ಸಂವತ್ಸರದ ಪರಿಯಂತ್ರ ನಡಕೊಂಡು ಬಂತು. ಆ ತರುವಾಯ ಯಿತಲಾಗಿ ಅದರಿಂದ ಉ । ಗ । ೯ ॥ ೦೨ ॥ ೦ ಸರಕಾರಕ್ಕೆ ಜಪ್ತಿ ಮಾಡಿ ಬಾಕಿ – ಗ ೫೯೨ ॥ ೦ ಯಿನಾಮು ಯೀ ವರೆಗೂ ನಡಕೊಂಡು ಬರುತ್ತಾಯಿದೆ. ಹೀಗೆ ಕ್ರೋಧನ ಸಂವತ್ಸರದ ವೈಶಾಖ ಬ ೧೪ ವರೆಗೆ ತಿಮ್ಮಣ ಅಜಲರು ತಮ್ಮಾ ಸ್ವಥಾ ಭೂಮಿ ಮನೆ ನೋಡಿಕೊಂಡು ಸರಕಾರಕ್ಕೆ ಸಲ್ಲುವ ಹಣಕಾಸು ಕೊಟ್ಟು ಕೊಂಡು ಸದರಿ । ಗ ೫೯೨ ॥ ೦ವನ್ನು ಕುಂಪಣಿಯಿಂದ ಯಿನಾಮು ಕೊಟ್ಟಂಥಾದ್ದು ತೆಗೆದುಕೊಂಡು, ಕಾಲಕ್ಷೇಪ ಮಾಡಿಕೊಂಡು ಯಿದ್ದಾರೆ. ಯಿವರ ಬಿರುದಾವಳಿ ॥

ಶ್ರೀ ಮತ್ತ್ರೋಮುಕುಲಾಂಬರ ರ[>ದ್ಯು]ಮಣಿ ॥ ಸಾಹಿತ್ಯಚಿಂತಾಮಣಿ । ಮಾರಾಕಾರಸ್ವರೂಪದೇಹಸುಮಣೀ । ಲೋಕೈಕ ಚೂಡಾಮಣಿ । ದೃಷ್ಟಾಷ್ಟದಶದೊಶ್ಯಾ[>ದೇಶ] ಕುಂಜರನಗಾ ನಿರ್ಭೇದ ಪಂಚಾನನ[>ನೋ]ಪಾಯ ತಿಮ್ಮಣ್ಣಜಲ ಭೂವರಗುಣಾ ಶ್ರೀಪಾರ್ಶ್ವನಾಥಸ್ಥಿರಂ। ಶ್ರೀ ಜೈನಾಮತಮಹಂಭೊರಾಸಿ ಚಂದಿರಂ, ರಾದಿತ ಶಿಲಶಿಲಾಗುಣಲುಂದಾ ಬಂದುರಂ ಕವಿಜಿನಾನಂದಕಂ ದಾನಚಿಂತಾಮಣೀಂ ಅವನಿಕಗಮಕ ಜಿನಾಲ್ರುಂದ ಚಿಂತಾಮಣಿಂ ಕಾಮಿಗ್ನಿ[>ನಿ] ಜ[>ಜ]ನಮನೋಹರಾ ರೂಪಾ ಭಾಸುರಂ ಗೋಮಿಗ್ನಿ[>ನಿ] ಸಿಧಿಸಾಧನ ಪುಣ್ಯಭಾಸುರಂ ವಾದಿಜನ ವಿನುತಧರ್ಮಸತ್ಯಾಕ್ಷಕಂ ಬೆದಕಾಸುವಾಗ್ನಿನುತಾ ಭುವನ ಸಂರಕ್ಷಕಂ ನ್ಯಾಯಭಾಸುರ ರಾಜನೀತಿಪ್ರಕಾಶಕಂ । ಕಾಯಜ ಮಹಾಂತಾತ್ರರಸ ಭಾವ ಭಾಸಕಂ ।

ಯೇಕಾಂಗಲ್ಲೀರ[>ವೀರ] ಮುಭಯಾನ್ವಯ ಸುನಿರ್ಮಲಂ ಲೋಕಪೂಜಿತ ಗುಣತ್ರಯ ಚಾರುಪೆಸಲಂ ಚತುರೊಪಾಯಪ್ರಾಪ್ತಾ ಸಕಲಪುರ ಶಾರ್ದಕಂ ಸುಕ್ತ ಪಂಚಾಮಂತ್ರಸಾಧಿತ ಕಾರ್ಯಶಾರ್ತಕಂ। ಯೋನಾದಿ ವೈರಿಸದ್ಗುಣಾ ಮನೋಹರಾಧಿ ಬೇಷಣಂ । ಮಾನಾದಿ ವೈರಿ ಷಡ್ವರ್ಗಾ ಸರಿ ಭೀಷಣಂ ಸಪ್ತಾಂಗರಾಜ್ಯಸುಖರಮಣೀಯರುತರಂ । ಅಷ್ಟದಿಗ್ವಿಜಯ ತ್ರಿಕ್ತಾ ಸಾರಲಕ್ಷ್ಮೀ ಪೆದಂ, ಅಷ್ಟಗುಣಸಂತುಷ್ಟಬೋಧಾಸ್ಪದಂ । ಕಲಿಜಿನ್ನಾವಿನುತ ನವನಿಧಿಸಿದ್ಧ ಸಾಧನಂ ನವರಸ ರಹಸ್ಯಪ್ರಾಕಾರಕ ಸುಬೋಧನಂ । ಮಲ್ಲಿದೇವಿ ಗರ್ಭರಾದಿಚಂತದ್ರೋದಯುಂ ಮಲ್ಲಿಕಾದಾಮನಿಭ ಕೀರ್ತಿಪುಣ್ಯೋದಯಂ । ವಿನುತ ಕಾಶೀನಾಥ ಪಾರ್ಶ್ವದಿನಾ । ಚರಣಕಂ ಘನತನ್ನೊ[ರೋ]ತ್ತರ ಮಧುರಾನಗರಿ ಶಾಭಾಚರಣಕಂ ನುತ ದಕ್ಷಣಾ । ಮಧುರಾನಗರ ರಕ್ಷಾಮಣಿಂ । ಭಾನುಕಾಸಕ್ಯಗಾ । ಕರ್ನಜಿಂತ ಮಣಿಂ । ಸ್ಮರನಿಭಾಕುಮರಪಟಿಸಾ ಸಂಸ್ತಾನಂ । ಪರವ ಕಾಶ್ಯಪಗೋತ್ರ ನಿರೇಜದಿನಕರಂ । ಪರಮಕಾದಂಬಾ ವಂಶಾಬುಧಿ ಚಂ ವಿರಂ ವರಬಾಲಿ ರಾಚೇಂದ್ರ ಬಂದ ನಿಭಸಂಪದಂ ಪರಮಜಿನಧರ್ಮ ಜಿನಧರ್ಮ ಸಂಪ್ರಾಪ್ತಾ ಸಚಿಪ್ರಾದಂ ಉರು ಜಿನಸಂಗ ನಾಮಕಾ ಪಟ್ಟಿ ಬಾಸುರಂ, ವರ ಭವ್ಯಸಂದೋಹ ದಾರಿದ್ರಗುಣ ಬಂಧುವಂ, ವರಪಾರ್ಶ್ವಜಿನನಾಥ ರಕ್ಷರಕ್ಷಾಮಣಿಂ । ಚತುಸಮುದ್ರಾದೀಶ್ವರ ರಾಯ ಕುಮಾರರಾಮ ಭೀಮದಾಮ ವಿರಾಜಮಾನಂ, ಶ್ರೀ ವೀರನರಪುರೇಶ್ವರಾ ಮಾತುಲಂ । ತಲುಳವದೇಶ ಮಧುರಾನಗರ ಪುಂಜಳಿಕಾದೇಶ ಪರಿಪಾಲಕಾ ಕುಮಾರ ಸಿಂಹಾಸನಾಧೀಶ್ವರಂ ಕಸ್ತೂರಿಕೋಲಾಹಲ ಮುಕ್ಕಣ್ಣ ಕಠಾರಿ ಸಳ್ವದೊ ಖಂಡೆಯಾ ಸೂರಿತ್ರಳಾ ಕರ್ಪೂರಧೂಳಿ ವಸಂತ ಗುಳಿರತ್ನಭೂಷಣೋಯಮಾನ ಚಾಮುಂಡರಾಯ ಕುಲತಿಲಕಾ ತಲುಳವ ಕುಲಸ್ತಾಪನಾಚಾರ್ಯ ಬಿರುದಾವಳಿ ವಿರಾಜಮಾನಂ ಬಾಲರಾಜಾಧಿರಾಜ ನಾಮಧೇಯ ಭವ್ಯಶಿಖಾಮಣಿ ಮಹಾರಾಜಾಧಿರಾಜಂ ಭೋ ಭೋ ಪಾರಿಶ್ವಜಿನರಕ್ಷಕ ರಕ್ಷ॥

❖❖

೫೫

ಆದಮಾರು ಮಠದ ಕೈಫಿಯತ್ತು*

ಮೆಕೆಂರಿಝಿ ಸಂಪುಟ: ೩೫೧

ಉಡುಪಿಯ ಅಷ್ಟಮಠ ವಳಗಿನ ಆದಮಾರಮಠ. ಅಕ್ಷಯ ಸಂವತ್ಸರದ ಜೇಷ್ಟ ಶು ॥೫ಯಲ್ಲು ಆದಮಾರಮಠದ ಕೃಷ್ಣಭಟ್ಟನು ಬರಸಿದ ವಂಶಾವಳಿ ॥

ನಮ್ಮ ಮೂಲಗುರು ಮದ್ವಾಚಾರ್ಯರು ಅವತಾರ ಮಾಡಿದ್ದು ಚತುಃಸಹಸ್ರೇ ತ್ರಿಶತೋತ್ತರೇ ಗತೇ ಸಂವತ್ಸರಾಣಾಂತು । ಕತಾ ಪ್ರಥಿವ್ಯಾಂ ಚಾತುಃ ಪುನರ್ವಿಪುತನುಃ ಸ ಭೀಮೋದೈತ್ಯೈರ್ನಿಗೂಡಂ ಹರಿತತ್ವಮಾಹ । ಶಾಲಿವಾಹನ ಶಕ ವರುಷ ೧೧೨೧ನೆ ಕಾಳಯುಕ್ತಿ ಸಂವತ್ಸರದ ಮಾಘ ಶು ॥

---

* 'ಪ್ರಾಚೀನ ಕರ್ನಾಟಕ' ಪತ್ರಿಕೆಯ ೧-೧ದಲ್ಲಿ ಪ್ರಕಟವಾಗಿದೆ. (ಸಂ)

೭[>೯]ಯಲ್ಲು ಮದಿ[>ಧ್ಯ]ಗೇಹಭಟ್ಟರಲ್ಲಿ ಅವತಾರ ಮಾಡಿ, ೧೧೨೮ನೆ ಕ್ರೋಧನ ಸಂವತ್ಸರದ ಪುಷ್ಯ ಶು॥ ೫ಯಲ್ಲು ಉಪನಿತರಾಗಿ. ೧೧೩೦ನೇ ಪ್ರಭವ ಸಂವತ್ಸರದ ವೈಶಾಖ ಶು॥ ೩ ಯಲ್ಲು ಸನಕಾದಿಗಳ ಪರಂಪರಾ ಶಿಷ್ಯರಾದ ಅಚ್ಯುತಪ್ರೇಕ್ಷಾಚಾರ್ಯರಿಂದ ಯೆತಿ ಆಶ್ರಮವನ್ನು ಸ್ವೀಕರಿಸಿ, ೧೧೬೦ನೇ ಹೇವಳಂಬಿ ಸಂವತ್ಸರದ ಮಾಘ ಶು ॥ ೩ಯಲ್ಲಿ ಶ್ರೀ ಕೃಷ್ಣದೇವರ ಪ್ರತಿಷ್ಟೆಯನ್ನು ಮಾಡಿ, ಬದರಿಕಾಶ್ರಮದಿಂದ ತಂದ ವ್ಯಾಸಮೂರ್ತಿ ಸಾಲಿಗ್ರಾಮಗಳಲು ಮಧ್ಯತಾಳಮಠದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆಮಾಡಿ, ಸುಬ್ರಹ್ಮಣ್ಯ ಕ್ಷೇತ್ರದಲ್ಲು ವೊಂದು ಮೂರ್ತಿಯನ್ನು ಪ್ರತಷ್ಠೆ ಮಾಡಿ, ಯೀ ಮೂರು ಸ್ಥಳದಲ್ಲು ಪ್ರಾತಃಕಾಲಾದಿ ಕ್ರಮದಿಂದಂತ[>ದತ್ತ]ಲೆ ಸರ್ವದಾ ಪೂಜೆಗಳನ್ನು ಮಾಡುತ್ತ ಕೆಲಉ ದಿವಸ ಯಿದ್ದರು. ಕ್ರಮದಿಂದ ಪೂಜೆಯನ್ನು ಮಾಡುವಾಗ್ಯೆ ಮಧ್ಯತಳ ಮಠದಲ್ಲು ಮಧ್ಯಾಹ್ನ ಪೂಜೆ ಗಟನೆ ಆದ್ದರಿಂದ, ಅಧ್ಯಾಅಪಿ ಅಲ್ಲಿ ಮಧ್ಯಾಹ್ನ ಪೂಜೆಯೆ ಸರಿ. ಯೀ ಉಭಯ ಸ್ತಳದಲ್ಲು ತ್ರಿಕಾಲದಲ್ಲು ಪೂಜೆಯಿಧೆ.

ಯೀ ಪ್ರಕಾರ ಆಚಾರ್ಯರು ಯಿದ್ದು ಆ ಮೇಲೆ ತಾಉ ಬದರಿಕಾಶ್ರಮವನ್ನು ಹೊಗುವ ಅಪೇಕ್ಷೆಹ[>ಅಪೇಕ್ಷಿ]ತರಾಗಿ, ಶ್ರೀಕೃಷ್ಣದೇವರ ಪೂಜಾ ಸ್ವಮತಸ್ಥಾಪನಾರ್ಥವಾಗಿ, ತಮ್ಮಾ ಅನುಜನಾದ ವಿಷ್ಣುತೀರ್ಥಾಚಾರ್ಯರ ಸಹವಾಗಿ ಅಷ್ಟಬ್ರಹ್ಮಚಾರಿಗಳು ಗೋದಾವರಿ ತೀರಸ್ಥರಾದ ವಿವಿದ ಸಂಸಾರಿಕದ ಮುಖ್ಯ ದರುಶನೇನ ವಿರಕ್ತರಾದ ಸಜ್ಜನೋದ್ಧಾರಕ ಶ್ರೀ ಮಧ್ವಾಚಾರ್ಯ ಪಾದಶೇವಾಸನ್ಮಾರ್ಗಾವಲಂಬಾಪೇಕ್ಷೆಯಿಂದ ಗೋದಾವರಿ ತೀರದೆಸೆಯಿಂದ ಬಂದ ಶೋಭನಭಟ್ಟರಿಗೆ ಸಹಾ ೧೧೮೦ನೆ ಪಿಂಗಳ ಸಂವತ್ಸರದ ವೈಶಾಖ ಶು ॥ ೭ ಯಲ್ಲು ಕಣ್ಣು[>ಣ್ವ]ತೀರ್ಥ ಮಹಾಕ್ಷೇತ್ರದಲ್ಲು ಆಶ್ರಮ ಮಂತ್ರೋಪದೇಶಗಳನ್ನು ಕೊಟ್ಟು, ರಜತಪೀಟಪುರಕ್ಕೆ ಕರತಂದು, ಸ್ವಮತಗ್ರಂಥಾದಿ ಸಕಲಸಚ್ಚು[>ಚ್ಛಾ]ಸ್ತ್ರೋಪದೇಶವನ್ನು ಮಾಡಿ, ಯೀ ನವಯತೀಶ್ವರರಿಗು ತಮ್ಮಾ "ಕರಪೂಜಿತಗಳಾದ ರಾಮದ್ವಯ, ಚತುರ್ಭುಜಕಾಳಿಯ ಮಥನ, ದ್ವಿಬುಜಕಾಳಿಯ ಮಥನ, ವಿಠ್ಠಲತ್ರಯ, ಶ್ರೀಭೂವರಹಾ ಪ್ರತ್ಯೇಕತ್ತ ಯರಡು ವರುಷ ನಮ್ಮ ಆಜ್ಞಾನುಸಾರ ತಂತ್ರಸಾರೋಕ್ತ ವಿಧಿಯಿಂದ ಪೂಜಾಧರ್ಮಗಳು ಶಾಸ್ತ್ರಪ್ರವಚನಗಳ ಮಾಡಿಕೊಂಡು ಯಿರ್‍ರಿ"ಯೆಂತ ಅಪ್ಪಣೆ ಕೊಟ್ಟು, ಪದ್ಮನಾಭತೀರ್ಥರಿಗೆ ರಾಮಪ್ರತಿಮೆಯನ್ನು ಕೊಟ್ಟು, "ನೀಉ ಯೇತನ್ಮತ ಸ್ಥಾಪನೆ ಮಾಡಿಕ್ಕೊಂಡು ಸಕಲದೇಶಗಳಲ್ಲಿ ಸಂಚಾರಮಾಡುತ್ತಾ ಬಹುಮಂದಿ ಸಜ್ಜನರಿಗೆ ಸನ್ಮಾರ್ಗೊಪದೇಶದ್ವಾರ ಉದ್ದರಿಸಿಕೊಂಡು ದ್ರವ್ಯಾರ್ಜನೆಮಾಡಿಕೊಂಡು ಯೀ ಅಷ್ಟಯತಗಳಿಗೆ ಶ್ರೀಕೃಷ್ಣದೇವರ ಪೂಜೋಪಯುಕ್ತ ದ್ರವ್ಯಸಹಾಯವನ್ನು ಮಾಡಿಕೊಂಡು ಯಿರಿ"ಯಂತ ಅಪ್ಪಣೆ ಕೊಟ್ಟು, ೧೨೦೦ ನೇ ಯೀಶ್ವರ ಸಂವತ್ಸರದ ಮಾಘ ಶು॥೯ ಯಲ್ಲು ಬದರಿಕಾಶ್ರಮ ಪ್ರವೇಶ ಮಾಡಿ, ಶ್ರೀ ವೇದವ್ಯಾಸದೇವರ ಸನ್ನಿಧಿಯಲ್ಲು ಅದ್ಯಾಪಿತ ಏಕವ್ರತರಾಗಿ ಯಿದ್ದಾರೆ. ಅವರ ಶಿಷ್ಯರು ಅಷ್ಟಯೆತೀಶ್ವರ ನಾಮಧೇಯಗಳು॥ ವಂದೇ ಹೃಷಿಕೇಶ ಮೀಮಾಂ ನೃಸಿಂಹಂ । ಜನಾರ್ಧನಂ ಚಿಂತಯತಿರುಪೇಂದ್ರಂ।

ಶ್ರೀ ವಾಮನಂ ಚ ಸ್ಮರ ವಿಷ್ಣು ನೇಮಿ । ಶ್ರೀ ರಾಮಮಂಚೈವಮಧೋಕ್ಷಜಿಂಚ ।

ಗಟ್ಟದ ಮೇಲಿನವರು ಪದ್ಮನಾಭ ತೀರ್ಥರು ಯಿವರಿಗೆ ಆಚಾರ್ಯರ ದತ್ತಪ್ರತಿಮೆಗಳು ॥

ರಘು ತಾ ಕಾಳಿಯ ಮದಸೌ । ಸುವಿಲತಾ ಸುಕರಂ ನರಸಿಹ್ಮಂಚ ।

ಅನ್ಯಂ ವಿಟಲಮಗಣಿತ ಮತಿ ಶಿಷ್ಯೆ ಪೂಜಿತಂ ನಮಾಮಿ ಸದಾ ।

ಯಿನ್ನು ನರಸಿಹ್ಮತೀರ್ಥಾಚಾರ್ಯರ ವಂಶಾವಳಿ ॥ ವಂಶಾದಿನ್ ಸನಕಾದಿ ಸುವಾಸೆ । ದೂರ್ವಾಸ ಸಂಪರ ತೀರ್ಥಾರಭ್ಯ ಭಿಕ್ಷುಂ । ಸತ್ಯ ಪ್ರಗ್ನಂ ಪ್ರಗ್ನತೀರ್ಥಂ ಕ್ರಮತಭ್ಭೀಷ್ಯ ॥ ವಂದೆ ಚಾಚುತಪ್ರಕ್ಷಾ ಮದ್ವಾ । ಮದ್ವನ್ನಮಾಮಿ । ನರಶಿಹ್ಮದಂ ಪ್ರಪದ್ಯೆ । ವಾಥೆ ನೃಸಿಹ್ಮಂಚ । ಕಮಲೇಕ್ಷಣ ರಾಮಚಂದ್ರಾ । ವಿದ್ಯದ್ಯದೀಶ ಮಥವಿಶ್ವಪತಿಂ ಚ ವಂದೆ । ವಿಶ್ವೇಶ ತೀರ್ಥ ಮಥವೆ । ದನಿದಂ ಪ್ರಪದ್ಯೆ ಶ್ರೀವೆರವಾಜಿಚರಣ ಶರಣಂಚ ವಿದ್ಯಾಮೂರ್ತಿ ತಿಪದಂ ಪ್ರತಿಗತೊಸ್ಮಿತ ದೈವ ಸಂಮ್ಯಾಕ್ । ವೈಕುಂಠರಾಜಿ ಸುಮಲಂ ಶೃತ ವಿಶ್ವರಾಜಂ । ಶ್ರೀ ವೇದ ಗರ್ಭ ಮದಸೌ ಮಿಹಿರಣ್ಯ ಗರ್ಭಂದಿಶ್ವಸ್ಯದಿ ಶಮದನ ಉಮಿಚ ವಿಶ್ವಪೂರ್ವ ಶ್ರೀ ವಲ್ಲಭೋತ್ತರ ಪದಂಚ ಗುರುಂ ಗ್ರಣಾಮಿ॥ ವಿಶ್ವೆಂದ್ರತೀರ್ಥ ಮದವೆದ ಪತೀಂ ಪ್ರಪದ್ಯೆ । ವಾದಿಂದ್ರತೀರ್ಥ ಗುರು ಮನ್ವಹಮಾನತೊಸ್ಮಿ । ವಿಬುಧ ಪತ್ಯ ಬಿದಂಚನತ್ಮ । ಶ್ರೀ ವೇದ ವಲ್ಲಭ ಮತ ಪ್ರಣತೊಸ್ಮಿನಿತ್ಯಾಂ ॥ ಶ್ರೀ ವೇದ ವಂದ್ಯ ಚರಣಾ ಹೃದಯೆ ನಿದಯು । ವಿದ್ಯೆ ಶವುಸ್ಕರಿವರಂ ಪ್ರಣವಾಮಿ ನಿತ್ಯಂ । ನಂದಾದ್ಮಜಾಂಘ್ರಿಯುಗಳಾಂಬುಜ ಷಟ್ಪದೇಂದ್ರಂ । ವಂದಾರುಹಿ ಸನ್ನಿಕರ ಕಲ್ಪ ಮಹಿಮಹೇಂದ್ರಂ। ಅನಂದತೀರ್ಥ ಸಮಯಾಂಬುಧಿ ಪೂರ್ಣಚಂದ್ರಂ । ವಂದಾಮಹಿ ವಿಬುಧವಲ್ಲಭ ಸಯ್ಯು ಮಿಂದ್ರಂ । ಶ್ರಿಪತೆ ರಂಗ್ರಿನಳಿನಾಸಕ್ತ ಭಕ್ತಾ ಸುರದ್ರೂಮಾ । ಮಹಿರಷಿಕಲ್ಪವಿಭುಧಾವಂದ್ಯ ತೀರ್ಥ ಪ್ರಶಿರಮೆ ॥

ನಮ್ಮಾ ನರಸಿಹ್ಮ ತೀರ್ಥಾಚಾರ್ಯರು ಚತುರ್ಭುಜಕಾಳಿಯ ಮದನ [>ಮಥನ] ಶ್ರೀಕೃಷ್ಣದೇವರ ಪೂಜಾಕ್ರಮ ಪ್ರಾಪ್ತವಾದಂತಾ ಶ್ರೀ ಕೃಷ್ಣದೇವರ ಪೂಜಾ ಧರ್ಮ ಸಹಾ ಮಾಡಿಕ್ಕೊಂಡು ಸಕಲ ಸಛ್ಛಾಸ್ತ್ರಪ್ರವಚನೆಯನ್ನು ಮಾಡುತ್ತ ಮಹಾತಪೋನಿಷ್ಟರಾಗಿ ತೀರ್ಥಯಾತ್ರೆಗಳನ್ನು ಮಾಡಿಕ್ಕೊಂಡು ಮುಂದೆ ಸ್ವಸ್ತಾನಕ್ಕೆ ಕಮಲೇಕ್ಷತೀರ್ಥರಿಗೆ ಆಶ್ರಮವನ್ನು ಕೊಟ್ಟು ತಾಉ ಸಿದ್ಧಿಕಾಲವನ್ನು ತಿಳಿದು ಉತ್ತರಯಾತ್ರೆಗೆ ಹೋಗಿ ಭಾಗೀರತಿಯಲ್ಲು ೧೨೩೨ನೆ ಸಉಮ್ಯ ಸಂವತ್ಸರದ ಚೈತ್ರ ಶುದ್ಧ ॥ ೫ಯಲ್ಲು ದೇಹತ್ಯಾಗವನ್ನು ಮಾಡಿದರು.

ಆಮೇಲೆ ಕಮಲೇಕ್ಷಣ ತೀರ್ಥರು ರಾಮಚಂದ್ರತೀರ್ಥರಿಗೆ ಸಮಸ್ತಾನವನ್ನು ಕೊಟ್ಟು ತಪೋನಿಷ್ಟರಾದ ತಾಉ ವಿದತಿವಂತರಾಗಿ ದ್ವಾರಕಾದಿ ಸಕಲತೀರ್ಥಯಾತ್ರೆಗಳನ್ನು ಮಾಡಿಕ್ಕೊಂಡು ಭಾಗೀರತಿಯಲ್ಲು ೧೨೫೩ನೆ ಪ್ರಮೊದೂತ ಸಂವತ್ಸರ ಮಾಘ ಶು ॥ ೧೨ಯಲ್ಲು ದೇವರ ಯಾತ್ರೆ ಮಾಡಿದರು. ಮಹಾತಪಸ್ವಿಗಳಾದ ರಾಮಚಂದ್ರತೀರ್ಥರು ಉಡುಪಿಯಲ್ಲು ಯಾವತ್ತೂ ಮತಗ್ರಂಥಗಳನ್ನು ಯಿಪ್ಪತ್ತೊಂದಾವರ್ತಿ ಅಮೂಲಾಗ್ರವಾಗಿ ಬಹುಮಂದಿ ಶಿಷ್ಯರಿಗೆ ವ್ಯಾಖ್ಯಾನ ಹೇಳಿ ತೀರ್ಥಯಾತ್ರೆ ವ್ಯಾಜಿದಿಂದ ಉತ್ತರದೇಶಕ್ಕೆ ಹೋಗಿ ೧೨೭೧ನೆ ಸರ್ವದಾರಿ ಸಂವತ್ಸರದ ವೈಶಾಖ ಶು ॥ ೧೫ ಯಲ್ಲು ಅಯೋಧ್ಯೆಯಲ್ಲು ಸಿದ್ಧಿವಂತರಾದರು.

ಅವರ ಶಿಷ್ಟರು ವಿದ್ಯಾಧೀಶತೀರ್ಥರು ತೀರ್ಥಯಾತ್ರಾಪ್ರಯುಕ್ತ ತೆರಳಿ ಹೋದವರು ಶುಭಕೃತು ಸಂವತ್ಸರ ಪುಷ್ಯ ಶು ॥ ೧೫ಯಲ್ಲು ದ್ವಾರಕ್ಕಿಯಲ್ಲು ದೇವರ ಯಾತ್ರೆ ಮಾಡಿದರು.

ಅವರ ಕರಕಮಲಸಂಜಾತರಾದ ವಿಶ್ವಪತಿತೀರ್ಥರು ಗೋದಾವರಿತೀರ ಟೋಕೆಯಲ್ಲು ಕಾಳಯುಕ್ತಿ ಸಂವತ್ಸರ ಜೇಷ್ಟ ಶು ॥ ೧೦ಯಲ್ಲು ದೇಹತ್ಯಾಗವನ್ನು ಮಾಡಿದರು.

ಅವರ ಶಿಷ್ಯರು ವಿಶ್ವೇಶತೀರ್ಥರು ತೀರ್ಥಯಾತ್ರೆ ನಿಮಿತ್ತ ಹೋದವರು ಉೃಂದಾವನ ಕ್ಷೇತ್ರದಲ್ಲು ಶುಕ್ಲ ಸಂವತ್ಸರದ ಜೇಷ್ಟ ಶು ॥ ೩ ಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ವೇದನಿಧಿತೀರ್ಥರು ಶಾಪಾನುಗ್ರಹಸಾಮರ್ತ್ರ್ಯ ಉಳ್ಳವರು, ಸ್ವೇತುಯಾತ್ತೇಗೆ[>ಸೇತುಯಾತ್ರೆಗೆ] ಹೋದವರು, ದಕ್ಷಿಣದೇಶದಲ್ಲು ಅನೇಕವಿದ್ವಾಂಸರ ಸಭೆಯಲ್ಲಿ ವಾದವನ್ನು ಮಾಡಿ ಜಯಸಂಪಾದಿಸಿಕೊಂಡು ತಾಉ ಅವಸಾನಕಾಲವನ್ನು ತಿಳಿದು ವೇದರಾಜತೀರ್ಥರ ವಶಕ್ಕೆ ಸಂಸ್ತಾನವನ್ನು ಕೊಟ್ಟು ಮೂಲಕಾವೇರಿಯಲ್ಲು ೧೩೨೬ನೆ ಸ್ವಭಾನು ಸಂವತ್ಸರದ ಜೇಷ್ಟ ಶು॥ ೫ಲ್ಲು ದೇಹತ್ಯಾಗವನ್ನು ಮಾಡಿದರು.

ವೇದರಾಜತೀರ್ಥರು ಸ್ವೇತು[>ಸೇತು]ಸ್ತಾನಕ್ಕೆ ಹೊದವರು, ಸರ್ವಜಿತು ಸಂವತ್ಸರದ ಕಾರ್ತಿಕ ಬ॥ಯಲ್ಲು ಸ್ವೇತಿನಲ್ಲಿ [>ಸೇತುವಿನಲ್ಲಿ] ದೇವರಯಾತ್ರೆ ಮಾಡಿದರು.

ಅವರ ಕರಕಮಲಸಂಜಾತರಾದ ವೇದಮೂರ್ತಿತೀರ್ಥರು ನಮ್ಮಾತುವೆ ಮಠದಲ್ಲು ಹೇವಳಂಬಿ ಸಂವತ್ಸರದ ಭಾದ್ರಪದ ಬಹುಳ ೫ಯಲ್ಲು ಅವರ ಉ್ರಂದಾವನು.

ಅವರ ಶಿಷ್ಯರು ವೈಕುಂಠರಾಜತೀರ್ಥರು ವಿಶ್ವಾವಸು ಸಂವತ್ಸರದ ಭಾದ್ರಪದ ಬಹುಳ ೫ಲ್ಲು ತುಂಗಭದ್ರಾತೀರ ತೀರ್ಥರಾಜಪುರದಲ್ಲಿ ದೇವರಯಾತ್ರೆ ಮಾಡಿದರು.

ತಚ್ಚಿಷ್ಯರು ವಿಶ್ವರಾಜತೀರ್ಥರು ನಮ್ಮಾ ತಲಕಳದ ಮಠದಲ್ಲು ನಳಸಂವತ್ಸರ ಚೈತ್ರ ಬಹುಳ ೩ರಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಮಹಾಪಂಡಿತರಾದ ವೇದಗರ್ಭತೀರ್ಥರು ಕಾಸಿ ಪ್ರಯಾಗಾದಿ ಸಕಲತೀರ್ಥಯಾತ್ರೆಗಳನ್ನು ಮಾಡಿಕ್ಕೊಂಡು, ವಿಜಯನಗರಕ್ಕೆ ಬಂದು ದೇವರಾಯ ಮಹಾರಾಯರ ಬೇಟಿ ಮಾಡಿಕ್ಕೊಂಡು, ಆ ಸಭೆಯಲ್ಲಿ ಅನೇಕವಿದ್ವಾಂಸರ ಸಂಗಡ ತತ್ತ್ವಶಾಸ್ತ್ರಾದಿ ಸಕಲಶಾಸ್ತ್ರಗಳಿಂದ ಪ್ರಸಂಗ ಮಾಡಿ ಜೈಸಲಾಗಿ, ರಾಮ[>ದೇವ]ರಾಯರು ಸಂತೋಷದಿಂದ ಕನಕ ಪಲ್ಲಕ್ಕಿ ಮೊದಲಾದ ಬಹಳ ಬಿರುದಾವಳಿ ಪಡದು ಮಹಾಕೀರ್ತಿವಂತರಾಗಿ ಯಿದ್ದು, ಯೀಶ್ವರ ಸಂವತ್ಸರ ಚೈತ್ರ ಶು॥೧೨ಯಲ್ಲು ಪಾಜಿಕಾ ಕ್ಷೇತ್ರದಲ್ಲು ಸಿದ್ಧಿವಂತರಾದರು.

ಅವರ ಶಿಷ್ಯರು ಹಿರಣ್ಯಗರ್ಭತೀರ್ಥರು ಸಿದ್ಧಾರ್ಥಿ ಸಂವತ್ಸರದ ವೈಶಾಖ ಶು॥೧೨ಯಲ್ಲು ಪಾಜಿಕಾ ಕ್ಷೇತ್ರದಲ್ಲು ಉ್ರಂದಾವನ.

ತಚ್ಚಿಷ್ಯರು ವಿಶ್ವಾಧೀಶತೀರ್ಥರು ಸರ್ವಜಿತು ಸಂವತ್ಸರ ಭಾದ್ರಪದ ಶು॥೫ಯಲ್ಲು ಭಾಗೀರತಿಯಲ್ಲು ದೇಹತ್ಯಾಗವನ್ನು ಮಾಡಿದರು.

ಅವರ ಶಿಷ್ಯರು ವಿಶ್ವವಲ್ಲಭತೀರ್ಥರು ಸ್ವೇತಿ[>ಸೇತುವಿ]ನಲ್ಲಿ ಸಿದ್ಧಾರ್ಥಿ ಸಂವತ್ಸರ ಪುಷ್ಯ ಶು॥೫ ಯಲ್ಲು ದೇವತ ಯಾತ್ರೆ ಮಾಡಿದರು.

ಅವರ ಕರಕಮಲ ಸಂಜಾತರಾದ ವಿಶ್ವೇಂದ್ರತೀರ್ಥರು ಬಹಳ ತೀರ್ಥಯಾತ್ರೆ ಮಾಡಿ ಕೃಷ್ಣಾತೀರ ಶೂರ್ಪಾಲಕ್ಷೇತ್ರದಲ್ಲು ಸರ್ವಧಾರಿ ಸಂವತ್ಸರ ಜೇಷ್ಟ ಬಹುಳ ೧ಯಲ್ಲು ಸಿದ್ಧಿವಂತರಾದರು.

ತಚ್ಚಿಷ್ಯರು ವೇದಪತಿತೀರ್ಥರು ಗೋದಾವರಿ ತೀರದ ಧರ್ಮಪುರಿಯಲ್ಲು ಸಿದ್ಧಾರ್ಥಿ ಸಂವತ್ಸರದ ವೈಶಾಖ ಬ॥೩೦ ಯಲ್ಲು ದೇವರ ಯಾತ್ರ ಮಾಡಿದರು.

ಅವರ ಶಿಷ್ಯರು ಸಕಲಶಾಸ್ತ್ರ ಅಭಿಗ್ಞಾನ ವಾದಿಂದ್ರತೀರ್ಥರು ಗೋದಾವರಿತೀರ ಧರ್ಮಪುರಿಯಲ್ಲಿ ಮಾಸ ಮಾಡಿಕ್ಕೊಂಡು ಬಹುಮಂದಿ ಶಿಷ್ಯರಿಗೆ ಯಾವದ್ದರುಶನ ಗ್ರಂಥಗಳನ್ನು

ಹದಿನೆಂಟಾವರ್ತಿ ವ್ಯಾಖ್ಯಾನ ಹೇಳುವಾಗ್ಯೆ ಪರಿಯಾಯಪೂಜಾ ಕಾಲಕ್ಕೆ ಮತ್ರ ಬಂದು, ಪರಿಯಾಯ ಪೂಜಾಧರ್ಮಗಳನ್ನು ಮಾಡಿಕ್ಕೊಂಡು, ಪುನಹಾ ಆ ಸ್ಥಳಕ್ಕೆ ಹೋಗಿ ವಾಸವನ್ನು ಮಾಡಿಕ್ಕೊಂಡು ಯಿದ್ದರು. ಅಂತ್ಯಕಾಲಕ್ಕೆ ಯಿಲ್ಲಿಗೆ ಬಂದು ಪಾಜಿಕಾಕ್ಷೇತ್ರದಲ್ಲು ಪಾರ್ಥಿವ ಸಂವತ್ಸರದ ಮಾಗ ಶು॥೩ ಯಲ್ಲು ಉ್ರ

ಂದಾವನ . . . .

ಅವರ ಕರಕಮಲಸಂಜಾತರು ವಿದ್ಯಾಪತಿತೀರ್ಥರು ಕೀಲಕ ಸಂವತ್ಸರದ ವೈಶಾಖ ಶು॥೫ಯಲ್ಲು ಉಡುಪಿಯಲ್ಲಿ ಉ್ರಂದಾವನ.

ತಚ್ಛಿಷ್ಯರು ವೇದವಲ್ಲಭತೀರ್ಥರು ಸಕಲತೀರ್ಥಯಾತ್ರೆಗಳನ್ನು ಮಾಡಿ ಭಾಗೀರತಿಯಲ್ಲು ವಿಜಯ ಸಂವತ್ಸರದ ಮಾರ್ಗಶಿರ ಬಹುಳ ೩ಯಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ವೇದವಂದ್ಯತೀರ್ಥರು ನಳ ಸಂವತ್ಸರದ ಫಾಲ್ಗುಣ ಬಹುಳ ೧೦ಯಲ್ಲು ಅದಮಾರು ಉ್ರಂದಾವನ.

ಅವರ ಶಿಷ್ಯರು ವಿದ್ಯೆಶತೀರ್ಥರು ಸಕಲಶಾಸ್ತ್ರಪವಚನರು, ಬಹುತರ ಶಾಸ್ತ್ರಪ್ರವಚನ ಮಾಡಿಕ್ಕೊಂಡು ಶುಕ್ಲ ಸಂವತ್ಸರದ ಭಾದ್ರಪದ ಬಹುಳ ೧೦ಯಲ್ಲು ಉಡುಪಿನಲ್ಲಿ ಉ್ರಂದಾವನ.

ಅವರ ಕರಕಮಲಸಂಜಾತರಾದ ವಿಬುಧವಲ್ಲಭತೀರ್ಥರಿಗೆ ಆನಂದ ಸಂವತ್ಸರದ ಪುಷ್ಯ ಬಹುಳ ೬ಯಲ್ಲು ಉಡುಪಿಯಲ್ಲು ಉ್ರಂದಾವನ.

ಅವರ ಶಿಷ್ಯರು ವಿಭುವಂಧ್ಯತೀರ್ಥರು ಕಾಳಯುಕ್ತಿ ಸಂವತ್ಸರದ ಮಾರ್ಗಶಿರ ಬಹುಳ ೩ಯಲ್ಲು ಅದಮಾರಲ್ಲು ಉ್ರಂದಾವನ.

ಯೀ ಪ್ರಕಾರಾ ಶ್ರೀ ಮದ್ವಾಚಾರ್ಯರ ಶಿಷ್ಯರಾದ ಯೇತದ್ವತಿರಿಕ್ತ ಅನೇಕ ತುರಿಯಾಶ್ರಮಗಳು ಅನೇಕ ಗ್ರಹಸ್ತಾಶ್ರಮಗಳಲ್ಲು ವಿಶೇಷವಾಗಿ ಪರಮಾನುಗ್ರಹಪಾತ್ರರಾದ ವಿಕುಚಕುಲೋತ್ಪನ್ನರಾದ ಶ್ರೀ ವಿಕ್ರಮ ಪಂಡಿತಾಚಾರ್ಯರು ತತ್ಪುತ್ರ ನಾರಾಯಣ ಪಂಡಿತಾಚಾರ್ಯರು ಶಂಕರರಾಚಾರ್ಯರೆಂಬ ಮೂರು ಮಂದಿ ಸದ್ಮತ ಪ್ರತಿಷ್ಟಾಪನರಕ್ತತತ್ವಪ್ರದೀಪಿಕಾದಿ ಬಹುಗ್ರಂಥಗಳಿಗೆ ಮಧ್ವವಿಜಯಾದಿ ಅನೇಕ ಕಾವ್ಯಗಳಿಗೆ ಸಹಾ ಕರ್ತರುಗಳಾದ ಮಹಾ ಪಂಡಿತಾಚಾರ್ಯರಿಂದ ಕೂಡಿಕ್ಕೊಂಡು ಗುರುವಾಜ್ಞಾನುಸಾರದಿಂದ ತನ್ಮಥ[>ತ] ಸ್ಥಾಪನೆಯನ್ನು ಮಾಡಿಕ್ಕೊಂಡು, ತದುಪರಿಜ್ಞಾನದಿಂದ ಶ್ರೀ ಭಗವದ್ ಹು[>ಉ]ಪಾಸನ ಮಾಡಿಕ್ಕೊಂಡು ಸ್ವಶಿಷ್ಯರಲ್ಲಿ ಸತ್ಸಂಪ್ರದಾಯ ಪ್ರವರ್ತನೆಯನ್ನು ಮಾಡುವಂತಾ ಯೀ ಅಷ್ಟಾಯತೀಶ್ವರರ ಮಧ್ಯದಲ್ಲಿ ನರಸಿಹ್ಮತೀರ್ಥಾಚಾರ್ಯರ ವಂಶಾವಳಿ:

ಯೆಸ್ಮಿನ್ವಾಗ್ವಜ್ರಧಾರಾ । ದುರಿತಕುಲ ಮಹಾ । ತೂಲದಾಹೇತಿ ಶೂರಾದಂಡ ಪ್ರದ್ಭಾಸಿ ಹಸ್ತಾಃ ಸ್ಫುರದಸಿಸಮಸಸನ್ಮಾರ್ಗ ಸಕ್ತಾಃ ಸಮಾನಸ್ತಾ । ಶ್ರೀಕೃಷ್ಣ ಸ್ನೇಹಪಾಶಾಃ । ಶಾಂತಿಭಾಜೊ ವಿರಕ್ತಾಃ । ಯೋಗೀಂದ್ರಾಶ್ಚಿತ್ರ ಲೋಕಾ । ದೀಪನಿಭ ವಿಭವಾ । ಮಧ್ವದಾಸಾ ಜಯಂತಿ॥ಆದಮಾರ ಮಠದಲ್ಲಿ ಯಿರುವ ಪುಸ್ತುಕಗಳ ವಿವರ'

ಗೀತಾಭಾಷ್ಯದ ಪುಸ್ಕುಕ	೨	ತಂತ್ರಸಾರದ ಪುಸ್ತುಕ	೧
ಗೀತಾ ತಾತ್ಪರ್ಯದ ಪುಸ್ತುಕ	೨	ಭಾಗವತದ ತಾತ್ಪರ್ಯ ಪುಸ್ತುಕ	೧
ಗೀತಾ ಪ್ರಮೇಯ ದ್ವೀಪದ ಕಾವ್ಯ ಪುಸ್ತುಕ	೧	ಭಾಗವತ ಪುಸ್ತುಕ	೩

ಗೀತಾ ವಿವೃತಿ ಪುಸ್ತಕ	೧
ಗೀತಾ ಮೂಲಕ ಪುಸ್ತಕ	೧
ಅಂತೂ ಪುಸ್ತಕ	೬

ಬ್ರಹ್ಮಸೂತ್ರದ ಪುಸ್ತಕ	೧
ಅನುವ್ಯಾಖ್ಯಾನ ಪುಸ್ತಕ	೧
ಭಾಷ್ಯದ ಪುಸ್ತಕ	೧
ಆಣಿ ಭಾಷ್ಯದ ಪುಸ್ತಕ	೧
ಸುಧಾ ಪುಸ್ತಕ	೩
ಯೀ ಬಗ್ಗ್ಯೆ ರಾಘವೇಂದ್ರಯತಿ ನೀತಿ	೧
ತತ್ವಪ್ರಕಾಸಿತ ಪುಸ್ತಕ	೩
ಯಿದರ ಬಗ್ಗೆ ವ್ಯಾಖ್ಯಾನ	
ರಾಘವೇಂದ್ರಿಯ ಪುಸ್ತಕ	೧
ಅನಂತಬಟ್ಟಯ್ಯ ಪುಸ್ತಕ	೧
ಯಿದುಪತಿಯ ಪುಸ್ತಕ	೧
ಅಂತೂ ಪುಸ್ತಕ	೧೪
ಪ್ರಮಾಣ ಲಕ್ಷಣಾದಿ ದಶಪ್ರಕರಣ ಪುಸ್ತಕ	೨
ಯೀ ಬಗ್ಯೆ ಜಯಕೀರ್ತಿಯ ಪುಸ್ತಕ	೨
ಯಿದರ ರಾಘವೇಂದ್ರಿಯ ಪುಸ್ತಕ	೩
ಅಂತು ಪುಸ್ತಕ	೭

ದಶೋಪನಿಷದ್ಭಾಷ್ಯದ ಪುಸ್ತಕ	೩
ಯಿದರ ಕಂದಾರ್ಥದ ಪುಸ್ತಕ	೧
ಯೀ ಉಪನಿಷತ್ತುಗಳ ಮೂಲ ಪುಸ್ತಕ	೧
ರ್ಭಾಷ್ಯಾದ ಪುಸ್ತಕ	೧
ಯಿದರ ಖಂಡಾರ್ಥದ ಪುಸ್ತಕ	೧
ಅಂತು ಪುಸ್ತಕ	೭

ತಾತ್ಪರ್ಯ ನಿರ್ಣಯ ಪುಸ್ತಕ	೪

ದ್ವಾದಶಸ್ತೋತ್ರ ವಾಯುಸ್ರುತಿ	
ಸಹಾ ಪುಸ್ತಕ	೧
ಚಂದ್ರಿಕಾ ಪುಸ್ತಕ	೧
ವಿಜಯದ್ವಜಿಯ್ಯ ಪುಸ್ತಕ	೧
ಅಂತೂ ಪುಸ್ತಕ	೧೫
ಭಾರತ	೧
ಭೀಷ್ಮ ದ್ರೋಣಪರ್ವ ಸಹಾ ಪುಸ್ತಕ	೧
ಆದಿಪರ್ವದ ಪುಸ್ತಕ	೧
ಅರಣ್ಯಪರ್ವ ಪುಸ್ತಕ	೧
ಉದ್ಯೋಗಪರ್ವ ಪುಸ್ತಕ	೧
ವಿರಾಟಪರ್ವ ಪುಸ್ತಕ	೧
ಕರ್ನಾದಿಪೂರ್ವೋತ್ರಿಯ ಪುಸ್ತಕ	೧
ಅಂತೂ ಪುಸ್ತಕ	೭
ಮಧ್ವವಿಜಯ ಪುಸ್ತಕ	೧
ಯಿದ ವ್ಯಾಖ್ಯಾನ ಪುಸ್ತಕ	೧
ವೇದದ ಪುಸ್ತಕ	೨
ಇದರ ಪದರ ಪುಸ್ತಕ	೧
ಮಾಸತ್ರಯ ಪುಸ್ತಕ	೧
ಶ್ರೀಮದ್ರಾರಾಮಾಯಣ ಪುಸ್ತಕ	೧
ಸಂಗ್ರಹರಾಮಾಯಣ ಪುಸ್ತಕ	೧
ಯಿದರ ಟೀಕು ವಿಶ್ವಪತಿಯ ಪುಸ್ತಕ	೧
ಅಂತೂ ಪುಸ್ತಕ	೯

ತರ್ಕ ಸಂಗ್ರಹ ದೀಪಿಕಾ ಸಹಾ ಪುಸ್ತುಕ	೧
ಮುಕ್ತಾವಳಿ ಪುಸ್ತುಕ	೧
ಪರಿಭಾಷಾ ಪುಸ್ತುಕ	೧
ದಿನಕರಿಯ ಪುಸ್ತುಕ	೧
ಗೋಪಿನಾಥಿಯ ಪುಸ್ತುಕ	೧
ಅಂತು ಪುಸ್ತುಕ	೫
ವ್ಯಾಕರಣ ಮದ್ಯ ಕಲುಮದಿ ಪುಸ್ತುಕ	೧
ಪ್ರಾಕ್ರಿಯ ಕೌಮುದಿ ಪುಸ್ತುಕ	೧
ಸಿದ್ಧಾಂತ ಕೌಮುದಿ ಪುಸ್ತುಕ	೧
ಭಾಷ್ಯಾ ಪುಸ್ತುಕ	೧
ಅಮರ ಪುಸ್ತುಕ	೧
ಅಂತು ಪುಸ್ತುಕ	೫
ಅಂತು ಪುಸ್ತುಕ	೨೫

❖❖

೫೬

ಕದರಿ ಮಾಗಣೆಯ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಪ್ರಾಕು ಕಡರಿ ಮಾಗಣಿಯೆಂಬ ಹೆಸರು, ಶಿ[>ಖ]ರಾಸುರನು ಮಾಸಂಜ ಗ್ರಾಮದಲ್ಲು ಮಹಾಲಿಂಗದೇವರು ಪ್ರತಿಷ್ಟೆ ಮಾಡಿ, ಯಿದಕ್ಕೆ ಕಡರಿಯಂತ ಹೆಸರು ಯಿಟ್ಟ ಕಾರಣ ಕಡರಿಯಂಬ ಹೆಸರು ಬಿತ್ತುಯಂತ ಹೇಳುತ್ತಾರೆ.

ಆ ಮೇಲೆ ಯೀ ವಾಗಣಿ ಬಾರಕೂರ ತಾಲೂಕು ಅರಸರ ಕಡೆಯು ಹೊನ್ನೆಕಂಬಳಿಯಂಬವನು ಯೀ ಊರಲ್ಲು ಹೊನ್ನ . . . . ಯೀ ದೇವರುಯಂತ ಪ್ರತಿಷ್ಟೆ ಮಾಡಿ, ಮನೆಯನ್ನು ಕಟ್ಟಿಕೊಂಡು ಯೀ ತಾಲೂಕು ಮಾಗಣಿಗಳು ಸಾಧಿಸಿಕೊಂಡು ಯಿರುತ್ತಿದ್ದಲ್ಲಿ, ಯೀತನ ಕಡೆ ಶಂಕರನಾರಾಯಣಭಟ್ಟನು ಬಗ್ವಾಲಿಯಲ್ಲು ಕೋಟೆ ಕಟ್ಟಿ ಬಗ್ವಾಲಿ ಹೊಬಳಿಯಂತ ಹೆಸರು ಯಿಟ್ಟ ಕಾರಣ, ಯೀ ಕಡರಿ ಮಾಗಣಿಯು ಬಗ್ವಾಲಿಗೆ ಶೇರಿಸಿ, ತನ್ನ ಪ್ರಧಾನತೆ ಯೇನು ಯಿದ್ದಾಗ್ಯೂ ಶಂಕರನಾರಾಯಣಭಟ್ಟಗೆ ಕೊಟ್ಟು ಆತನ ಮುಖಾಂತ್ರ ಈ ಶೀಮೆಗಳು ಯಾವತ್ತು

ಆಳಿಕ್ಕೊಂಡು ಯಿದ್ದನು. ಆಮೇಲೆ ವೆಂಕಟಪ್ಪನಾಯಕನ ಮಗ ಸಂಕಣ್ಣನಾಯಕನು ಸಾದಿಸಿ ತ್ತೆಗೆದುಕ್ಕೊಂಡು ಯಿರುತಿದ್ದಲ್ಲಿ, ಯೀ ಬಗ್ವಾಲಿಗೆ ತನ್ನ ಕಡೆ ಬದುಕು ಮಾಡಿದವರನ್ನ ಯಿಟ್ಟು, ಆತನ ಕಡೆ ಮಣಿಗಾರನ ಮುಖಾಂತ್ರವೆ ನಡದು ಬಂತು. ಆಮೇಲೆ ಬಹದರನು ತೆಗೆದುಕ್ಕೊಂಡ ಮೇಲೆ ಅದೇ ಪ್ರಕಾರ ನಡೇತು. ಬಹದರನು ತೀರಿಹೋದ ಮೇಲೆ ಟೀಪುಸುಲ್ತಾನನ ದಿವಸದಲು ಕೆಲಉ ದಿನ ಮಣಿಗಾರನ ಮುಖಾಂತ್ರವೆ ನಡೇತು. ಆ ಮೇಲೆ ರಾಕ್ಷಸ ಸಂವತ್ಸರದಲ್ಲು ತುಕುಡಿ ಮಾಡಿದ್ದರಿಂದ ತುಕುಡಿ ಮುಖಾಂತ್ರ ಹೊಸಂಗಡಿ ತುಕಡಿಗೆ ದಾಖಲು ಮಾಡಿ ನಡೇತು. ಆ ಮೇಲೆ ಕುಂಪಣಿ ದರಬಾರು ಆದ ಮೇಲೆ ಕದರಿ ಮಾಗಣಿ ಪ್ರತ್ಯೇಕ ಯಿಟ್ಟು ಪಟೇರಲು ಮಾಡಿ ನಡೇತು. ಆ ಮಾಗಣಿಯಲ್ಲು ಶಿದ್ದಮ್ಮಾಜಿ ಕಡೆ ಶಡಾಕ್ಷರಯ್ಯನು ಕಪ್ಪಾಡಿ ಗ್ರಮದಲ್ಲು ಪುರವರ್ಗದ ಮಠ ಕಟ್ಟಿ ರೇಣುಕಾ ಸಿದ್ದೇಶ್ವರದೇವರ ಪ್ರತಿಷ್ಟೆ ಮಾಡಿ ಸಿದ್ದಾಪುರಯಂತ ಹೆಸರು ಯಿಟ್ಟು, ಪೇಟೆ ಮುಂತಾಗಿ ಕಟ್ಟಿಶಿ ಯಿದ್ದರು. ಆ ಮೇಲೆ ಸುಲತಾನನ ದಿವಸ ಪರಿಯಂತ್ರಕ್ಕೂ ಪ್ರಾಕು ಬಾರಕೂರ ತಾಲೂಕು ಮಜಕೂರಲ್ಲಿ ಉತ್ತರಾ ಪೆತ್ತು. ಬಹದರನ ದಿವಸದಲ್ಲಿ ಉತ್ತರ ಮೊಕೊಪ್ಪೆ ಆಗಿ, ಕುಂಪಣಿ ಮುಂದೆ ಮರಹಮತ್ತೀನ ಬಿಗೆ ಗ ೩೦೦ ವರಹಾನ್ನ ಸುಲತಾನನ ಕಾಲ ಆಖೈರು ವರಿಗೆ ಸರಕಾರದಿಂದ ಸಲುವಡ[>ದ] ಬರದು ಸಂದಾಯ ಕೊಟ್ಟರು. ಆ ಮೇಲೆ ಕುಂಪಣಿ ಸರಕಾರದಲ್ಲಿ ಮಂಡ್ರೊಲು ಸಾಹೇಬರ ದಿವಸದಲ್ಲಿ ನೂರು ವರಹಾ ಕೊಟ್ಟು ಅರೆವಾಸಿ ಮರೆ ಇಮ್ಮಾತು ಮಾಡಿದರು. ಆ ಮೇಲೆ ಯೇನೂ ಸಲ್ಲದೆ ಯಿರುವದರಿಂದ ಪುರ ಯಾವತ್ತು ಜೇನಹ[>ಜೇರ್ಣ]ವಾಗಿ ಬಿದ್ದು ಯಿಥೆ. ಕಲಮು.

ಯೀ ಮಾಗಣೀಗೆ ಯಿರುವ ಶಾನುಭವರು ಸ್ಥಳಪ್ರತಿ, ಪ್ರಾಕು ಹೊನ್ನೆಕಂಬಳಿ ಕಾಲದಾರಭ್ಯ ಹೆಚಿ ಮಲ್ಲಪ್ಪಯ್ಯನು ಮಾಡಿಕ್ಕೊಂಡು ಶಿವಭಕ್ತರ ಕಾಲ ಆಖೈರ ವರಿಗೆ ತಾವೆ ನೋಡಿಕ್ಕೊಂಡು ಬಂದರು. ಆಮೇಲೆ ಬಹದರನ ದಿವಸದಲ್ಲಿ ಸುಲತಾನ ಕಾಲದಲ್ಲಿ ಕೀಲಕದ ವರೆಗೆ ಆತಗೆ ನಡೇತು. ಅದರ ಮೇ ಮೊಕೂಬ್ ಆಗಿ ಆ ಪ್ರತಿ ನಿಂತು ಬಂತು. ಯರಡನೆ ಉಭಯರ ಪ್ರತಿ ಬಸವಪ್ಪನಾಯಕನ ಕಾಲದಲ್ಲು ಕಾಣಿಕೆ ಕೊಟ್ಟು ಯೀಗ ಯಿರುವ ಕೋನಪ್ಪಯ್ಯನ ಹಿರಿಯರು ಗೋಪಯ್ಯ ಕೃಷ್ಣಪ್ಪನ ಕಾಲದಾರಭ್ಯ ಮಾಡಿಕೊಂಡು ಅನುಭವಿಸಿಕ್ಕೊಂಡು ಬಂದದರಿಂದ ಯೀ ವರೇಗೆ ಅವರ ಸಂತಾನದ ಕೋನಪ್ಪಯ್ಯ ಯಂಬವನು ಹಾಜರು ಯಿದ್ದಾನೆ. ಯೀಗ ಕುಂಪಣಿ ಕಾಲದಲ್ಲು ಯೀ ಕೋನಪ್ಪಯ್ಯನೆ ನೋಡಿಕ್ಕೊಂಡು ಬರುತ್ತಾನೆ, ಕಲಮು.

ಪಾರುಪತ್ಯಗಾರನ ಮುಖಾಂತ್ರ ಲಾಗಾಯಿತು, ಮಾಗಣಿ ಅಲ್ಲಿಂದಾಗಲು . . . . ನಡದು ಬಂತು. ಹಾಲಿ ಸರಕಾರ ಕುಂಪಣಿ ತಾಲೂಕು ಆದಮೇಲೆ ಮೊಕರರು ಮಾಡಿದ ವಿವರ:

೧ ಮಾನಂಬಿಗೆ ಹೊನ್ನಪ್ಪ (೧) ಸುಬ್ಬಯ್ಯ (೧)

೧ ಮೂಡಬಾಗಿ ಗ್ರಾಮಕ್ಕೆ ಚಿಕ್ಕಶೆಟ್ಟಿ

೧ ಕಪ್ಪಾಲಿ ಗ್ರಾಮಕ್ಕೆ ಪುಟ್ಟಯ್ಯ ಸೂರ ಮೆರಿ

೧ ಆಜರಿ ಗ್ರಾಮಕ್ಕೆ

೧ ಯಿಡೂರ ಗ್ರಾಮಕ್ಕೆ ಮಂಜಶೆಟ್ಟಿ

೧ ಕೊಡಲಾಡಿ ಗ್ರಾಮಕ್ಕೆ ಕುಪ್ಪಾಚಾರಿ ಮುಕುಂದನಾಯಕ

೬ ಯಿದಕ್ಕೆ ಉಪಗ್ರಾಮ ಯಿಲ್ಲಾ।

ಯೀ ಮಾಗಣಿಯಲ್ಲಾ ಯಿರುವ ದೇವರು:

೧ ಮಾನಂಜರ ಗುಡಿ ದೇವರು, ಹೆ[>ಹೊ]ನ್ನೆ ಕಂಬಳಿ

೧ ಕದರಿ ಮಹಲಿಂಗ ದೇವರು, ಖರಾಸುರ ಪ್ರತಿಷ್ಟೆ

೧ ಮೌಜೆ ಮೂಡಬಾಗಿ ವಿನಾಯಕದೇವರು, ಹೊನ್ನೆ ಕಂಬಳಿ

೧ ಮಲ್ಲಿಕಾರ್ಜುನ ದೇವರು, ಹೆಜ್ಯಲಿಂಗಪ್ಪ ಪ್ರತಿಷ್ಟೆ

೧ ವೀರಭದ್ರದೇವರು, ಬಸವಪ್ಪನಾಯಕ ಪ್ರತಿಷ್ಟೆ

೧ ಮೌಜೆ ಕಪಾಲಿ ಜನ್ನಪಾಲೆ ಗೊಪಿನಾಥ ದೇವರು, ಶಂಕರನಾರಾಯಣಭಟ್ಟನ ಪ್ರತಿಷ್ಟೆ

೧ ಗೋಪಾಲಕೃಷ್ಣದೇವರು, ಶಂಕರನಾರಣಭಟ್ಟ

೧ ಮಹಲಿಂಗದೇವರು, ಖರಾಸುರನ ಪ್ರತಿಷ್ಟೆ

*ವಿಷ್ಣುಮೂರ್ತಿ ದೇವರು, ಸೋಮಯಾಜಿ ಸೋಮೇಶ ಪ್ರತಿಷ್ಠೆ

೧ ಭೈರಾದೇವಿ ಪುರಾಣದ ಯೋಗಿ ಪ್ರತಿಷ್ಠೆ

೧ ಸುಬ್ಬರಾಯ ದೇವರು, ಷಡಕ್ಷನ[>ರ]ಯ್ಯನವರ ಪ್ರತಿಷ್ಠೆ

೧ ಮೌಜಿ ಆಜ್ರಿಯರು ಮಹೇಶ್ವರದೇವರು, ಹೊನ್ನೆ ಕಂಬಳಿ ಪ್ರತಿಷ್ಠೆ

೧ ಮಹಾಲಿಂಗದೇವರು, ಖರಾಸುರ ಪ್ರತಿಷ್ಠೆ

೧ ಕಾಳಿಕಾ ಪರಮೇಶ್ವರಿ, ಹೊನ್ನೆ ಕಂಬಳಿ ಪ್ರತಿಷ್ಠೆ

೧ ಕೊಡಲಾಡಿ ಭಾಂಡ್ಯ ತ್ರಿಯಂಬಕೇಶ್ವರದೇವರು, ಸಬನೀಸ ಕೃಷ್ಣಪ್ಪಯ ಪ್ರತಿಷ್ಠೆ

೧ ಚಿನ್ನ ಭಂಡಾರದ ರಾಮಕೃಷ್ಣಪ್ಪಯ್ಯನ ವೆಂಕಟರಮಣದೇವರು ತ್ರಿಯಂಬಕೇಶ್ವರ ಕನ್ನಿಕಾ ಪರಮೇಶ್ವರಿ, ಶಿರಾಮಿವರ ಪುರವರ್ಗ ಜುಮ್ಲಾ ೧೯ ॥ ಈ ಪ್ರಕಾರ ಕೈಫಿಯತು.

❖❖

೫೭

ಕಬ್ಬುನಾಡ ಮಾಗಣಿ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಪ್ರಾಕು ಹೊನ್ನೆ ಕಂಬಳಿ ಕಾಲದಲ್ಲು ಶಂಕರನಾರಾಯಣಬಟ್ಟನು ಅನುಭವಿಸಿಕೊಂಡು ಬಂದು, ಬಗ್ವಾಲಿ ಹೊಬಳಿಗೆ ದಾಖಲಾಗಿ ತಮ್ಮಾ ಕಡೆ ಮಾಣಿಗಾರರ ಮುಖಾಂತ್ರ ನೋಡಿಕ್ಕೊಂಡು

* ಇಲ್ಲಿಂದ ಮುಂದಿನ ಭಾಗವು ಡಿ.೧ಲ೩ಲ ಮೈಸೂರು ಹಸ್ತಪ್ರತಿಯಲ್ಲಿ ಹೆಚ್ಚಿಗೆ ಇದೆ. (ಸಂ)

ಬರುತಿದ್ದಲ್ಲಿ, ಆಮೇಲೆ ಶಂಕರನಾರಾಯಣಬಟ್ಟನು ಅಳಿದು . . . . ನಗರದ ವೆಂಕಟಪ್ಪನಾಯಕರ ತಾಲೂಕಿಗೆ ಆಗಿ, ತಮ್ಮಾ ಕಡೆ ಬದುಕು ಮಾಡಿದವಳ ಯಿಟ್ಟು ನಡದು ಬರುತಿದ್ದಲ್ಲಿ, ಆ ಮೇಲೆ ಶಿವಪ್ಪನಾಯಕರ ಕಾಲದಲ್ಲು ಕೊಲ್ಲಾರ ಅಮ್ಮಾನವರಿಗೆ ಉತ್ತರವಾಗಿ, ದೊಡ್ಡ ನವಾಬರ ದಿವಸದಲ್ಲು ಶೀಮೆಗೆ ಶೀಮೆಯೇ ಯಿಟ್ಟು ಯಿರುವದರಿಂದ ನಡದು ಬಂತು. ಶೋಭಕೃತ ಸಂವತ್ಸರದಲ್ಲು ಉತ್ತರ ಜಪ್ತಿಯಾಗಿರುವದರಿಂದ ಸದರಿ ಮಾಗರ್ಣಿಯ ನಗರದ ತಾಲೂಕು ದಾಖಲು ಆಗಿ, ಕುಂಪಣಿ ಅಮಲು ಆಗುವ ಪರಿಯಂತ್ರಕ್ಕೂ ನಗರದ ತಾಲೂಕುನಲ್ಲಿ ನಡದು ಬಂತು. ಆ ಮೇಲೆ ಕುಂಪಣಿ ಅಮಲು ಆದ ಮೇಲೆ ಕುಂದಾಪುರ ಕಾಲೂಕಿಗೆ ದಾಖಲಾಗಿ ನಡದು ಬಂದಿದೆ. ಯಿದಕ್ಕೆ ಹೊನ್ನೆ ಕಂಬಳಿ ಆರಭ್ಯ ಶ್ಯಾನುಭೋವರು ಪಟ್ಟಿ ಸಂಕಪ್ಪಯ್ಯನ ಕಡೆ ಜನ ೧, ಹಲಸುನಾಡ ಚನ್ನಪ್ಪೈಯ್ಯ ಜನ ೧ ಯೀ ಪ್ರಕಾರ ಜನ ೨ಕ್ಕೆ ಕೆಲಉ ದಿವಸದ ವರೇಗೆ ನಡೇಯಿತು. ಆ ಮೇಲೆ ಕುಂಪಣಿ ದರಬಾರದ ಮೇಲೆ ಹಳಿಗೇರಿ ನಾಗೂರು ಗ್ರಾಮದ ಸಂಖಯ್ಯಗೆ ನೇಮಕಾ ಮಾಡಿದ್ದಾರೆ.

ಕಲಮು, ಸದರಿ ಮಾಗಣಿಯು ಸುಲತಾನನ ಕಾಲದಲ್ಲು ನಗರ ತುಕ್ಕಡಿಗೆ ದಾಖಲು ಆಗಿ ನಡದು ಬಂತು. ಹಾಲಿ ಕುಂಪಣಿ ಅಮುಲು ಆದ ಮೇಲೆ ಕುಂಪಣಿ ತಾಲುಕಿಗೆ ಸೇರಿದ ಗ್ರಾಮ ಯೆಂಟಕ್ಕ ವಿವರ ೧ ಬೆಳ್ಗಡಳ, ೧ ಹೊಸೂರು, ೧ ನೈ ಕಂಬಳಿ, ೧ ಕರೊಳಿ, ೧ ಚಿತ್ತುರು, ೧ ನಂದ್ರವಳಿ, ೧ ಕೆರಾಡಿ. ಉಪಗ್ರಾಮ ವಿವರ

ಯಿಲ್ಲಿ ಯಿರುವ ದೇವರು:

೧. ಖರಾಸುರನ ಪ್ರತಿಷ್ಟೆ, ಮೆಟ್ಟಿಕಲ್ಲು ಮಹಾಲಿಂಗದೇವರು

೧. ಹುಕಲಿ ಮಹಾಲಿಂಗದೇವರು, ಹೊನ್ನೆಕಂಬಳಿ

೧. ಮುರಡೀನ ಗೋಪಾಲಕೃಷ್ಣದೇವರು

೧. ಭಂಡರ ಲಿಂಗೇಶ್ವರದೇವರು. ಬಳಿಗಾರ ಬಸ್ತಿ

೧. ಕಾಸಬೆದ ದುರ್ಗಾದೇವರು, ಹೊನ್ನೆಕಂಬಳ ಶಂಕರನಾರಣ

೧. ವಿನಾಯಕದೇವರು ಶಂಕರನಾರಾಯಣಭಟ್ಟ

೧. ಮೆಲಿಹೊಸಾವ ಮಹಲಿಂಗದೇವರು, ಹೊನ್ನೆಕಂಬಳಿ

೧. ಅರೆಹೊಳೆ ವಿನಾಯಕ ದೇವರು.

೧. ಕರೊಳಿ ಮಹಲಿಂಗದೇವರು, ಬಕಾಸುರ ಪ್ರತಿಷ್ಟೆ

೧. ಮಾರಯಕ್ಕ ದೇವರು, ೧ ನೈಕಂಬಳಿ ಮಹಲಿಂಗದೇವರು

೧. ಚಿತ್ತುರ ಗೋಪಾಲಕೃಷ್ಣದೇವರು, ೧ ಕೂರ ದುರ್ಗಾದೇವರು

೧. ನಂದರವಳಿ ಲಕ್ಷ್ಮೀನಾರಾಯಣ ದೇವರು

೧. ಸರಾ[>ದಾ]ನಂದ ದೇವರು ಬದ್ರಿವ ಚಿರಾ[>ದಾ]ನಂದಾದ್ರಿ ಬಗೆ

೧. ದುರ್ಗಾದೇವರು, ಶಂಕರನಾರಾಯಣಭಟ್ಟ

೧. ಹರಚಿ ರಾಮೇಶ್ವರ ದೇವರು

೧. ಕರಾಡಿ ದುರ್ಗದೇವರು, ೧ ಮೂಡಗಲ ಕೇಶವನಾಥ ದೇವರು
೧. ಬಡಾ ಬೇಡಿನ ಬಳಗಾರ ಖ್ಯಾರವದೇವರು
೧. ಕುಳಂಬಳಿ ವಿನಾಯಕ ದೇವರು

೨೧

೧ ನಂದರವಳಿ ಜಂಗಮರ ಮದನಗರದ ದರಶಾಲಾ ಬಸವಪ್ಪಣ್ಣನ ದಿವಸ ಸದರಿ ಗ್ರಾಮ ಯೆಂಟರ ಪ್ರಾಕು ಅಮ್ಮಾನವರಿಗೆ ಉತ್ತರವಾದ ವೆ[>ವೊ]ಳಕೆ ದೇವಸ್ಥಾನದ ತಾಲೂಕು (ಮಣಿಗಾರ ನೋಡಿಕೊಂಡು ಬಂದ ಮಹಾಲಿ ಕುಂಪಣಿ ಅಮಲಿನಲ್ಲು) ಮಣಿಗಾರನ ಮೊಕೂಫ್ ಮಾಡಿ, ಪಟೇಲರು ಮೊಕರರು ಮಾಡಿ ಕುಂಪಣಿಯಿಂದ ಸಂಬಳ ಸಲ್ಲತದೆ॥ ಯಿದಕ್ಕೆ ವಿವರ

೧. ಬೇಳಾಲಕ್ಕೆ ವೆಂಕಮ್ಮಾ ಶೆಟ್ಟತಿ . . . . ಕುಪಯ ಸೆಟ್ಟು॥
೧. ಹೊಸೂರ ಗ್ರಾಮಕ್ಕೆ ಬೆಡಶೆಟ್ಟಿ ಹಾವಳಿ ಸೆಟ್ಟಿ
೧. ನೈಕಂಬಳಿಗೆ ಪುಟ್ಟಪ್ಪಶೆಟ್ಟಿ ಚಿಕ್ಕಶೆಟ್ಟಿ
೧. ಕರೋಳಿ ಸಂಕಪ್ಪಯ್ಯ ಸಿರಯ್ಯಶೆಟ್ಟಿ
೧. ಚಿತ್ತಾರ ಕೃಷ್ಣಯ್ಯಾಶೆಟ್ಟಿ ಚಿಕ್ಕಯ್ಯಶೆಟ್ಟಿ
೧. ಸಂತ್ರಾವಳಿ ಮಾರಶೆಟ್ಟಿ ಮಾಕಣ ಶೆಟ್ಟಿ ।
೧. ಕೇರಾಡಿ ಚಿಕ್ಕಯ್ಯಶೆಟ್ಟಿ ಚಿಕ್ಕಯ್ಯಶೆಟ್ಟಿ
೧. ಕಳಂಬಳ್ಲಿ ನಾರಣಪ್ಪ ವಿಟ್ಠೈ

೮

ಯೀ ಪ್ರಕಾರ ನಡದು ಬರುತ್ತದೆ.

❖❖

೫೮
ಕಾಣೂರು ಮಠದ ಕೈಫಿಯತ್ತು*

ಮೆಕೆಂಝಿ ಸಂಪುಟ : ೩೫೧

ಕ್ಷಯಸಂವತ್ಸರದ ಜೇಷ್ಟ ಶು॥ ೫ಲ್ಲು ಕಾಣೂರು ಮಠದ ನರಸಿಹ್ಮಭಟ್ಟನು ಬರಶಿದ ವಂಶಾವಳಿ: ನಮ್ಮ ಮೂಲಗುರು ಮದ್ವಾಚಾರ್ಯರು ಅವತಾರ ಮಾಡಿದ್ದು ಚತುಃಸಹಸ್ರೇ ತ್ರಿಶತೋತ್ತರೇ

* ಇದಕ್ಕೆ 'ಕಾಣೂರು ಮಠದ ಗುರುಗಳ ವಂಶಾವಳಿ' ಎಂಬ ಹೆಸರಿದೆ. ಆದರೆ ಬೇರೆ ಪ್ರತಿಗಳಲ್ಲಿ ಇದನ್ನು ಕೈಫಿಯತ್ತು ಎಂದೇ ಕರೆಯುವುದರಿಂದ ನಾವು ಈ ಹೆಸರನ್ನೇ ಸ್ವೀಕರಿಸಿದ್ದೇವೆ.(ಸಂ)

ಗತೇ ಸಂವತ್ಸರಣಾಂ ತು ಕತಾ ಪೃಥಿವ್ಯಾಂ॥ ಜಾತಃ ಪುನರ್ವಿಪ್ರತನುಸ್ಸಭೀಮೋದ್ಯೈರ್ನಿಗೂಢಂ ಹರಿತತ್ವಮಾಹ॥

ಶಾಲಿವಾಹನ ಶಕವರುಷ ೧೧೨೧ನೆಯ ಕಾಳಯುಕ್ತಿ ಸಂವತ್ಸರದ ಮಾಘ ಶು॥೭[>೯]ಯಲ್ಲು ಮಧ್ಯಗೇಹಭಟ್ಟರಲ್ಲಿ, ೧೧೨೮ನೆಯ ಕ್ರೋಧನ ಸಂವತ್ಸರದ ಪುಷ್ಯ ಶು॥೫ಯಲ್ಲು ಉಪನಿತ್ತವಾಗಿ, ೧೧೩೦ನೇ ಪ್ರಭವ ಸಂವತ್ಸರದ ವೈಶಾಖ ಶು॥ ೩ದಲ್ಲು ಅವತಾರ ಮಾಡಿ, ಸನಕಾದಿಗಳ ಪರಂಪರಾ ಶಿಷ್ಯರಾದ ಅಚ್ಚುತಪ್ರೇಕ್ಷಾಚಾರ್ಯರಿಂದ ಯೆತ್ಯಾಶ್ರಮವನ್ನು ಸ್ವೀಕರಿಸಿ, ೧೧೬೦ ನೇ ಹೇವಳಂಬಿ ಸಂವತ್ಸರದ ಮಾಘ ಶುದ್ಧ॥ ೩ಯಲ್ಲು ಶ್ರೀ ಕೃಷ್ಣದೇವರ ಪ್ರತಿಷ್ಟೆಯನ್ನು ಮಾಡಿ, ಬದರಿಕಾಶ್ರಮದಿಂದ ತಂದ ವ್ಯಾಸಮೂರ್ತಿ ಸಾಲಿಗ್ರಾಮಗಗಳಲ್ಲಿ ಮದ್ಯತಳಮಠದಲ್ಲಿ ವೊಂದು ಮೂರ್ತಿಯನ್ನು ಪ್ರತಿಷ್ಟೆ ಮಾಡಿ, ಸುಬ್ರಹ್ಮಣ್ಯಂಕ್ಷೇತ್ರದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆ, ಯೀ ಮೂರು ಸ್ಥಳದಲ್ಲು ಪ್ರಾತಃಕಾಲಾದಿ ಕ್ರಮದಿಂದಾ ತಾವೆ ಸರ್ವದಾ ಪೂಜೆಗಳನ್ನೂ ಮಾಡುತ್ತಾ ಕೆಲವು ದಿವಸ ಯಿದ್ದರು. ಕ್ರಮದಿಂದಾ ಪೂಜೆಯನ್ನು ಮಾಡುವಾಗ್ಯೆ ಮದ್ಯತಳಮಠದಲ್ಲು ಮದ್ಯಾಹ್ನ ಪೂಜೆ ನಟನೆ [>ಘಟನೆ] ಆದ್ದರಿಂದ, ಅದ್ಯಾಪಿ ಅಲ್ಲಿ ಮದ್ಯಾಹ್ನ ಪೂಜೆಯೇ ಸರಿ. ಯೀ ಉಭಯ ಸ್ಥಳದಲ್ಲು ತ್ರಿಕಾಲದಲ್ಲೂ ಪೂಜೆ ಅದೆ.

ಯೀ ಪ್ರಕಾರ ಆಚಾರ್ಯರು ಯಿದ್ದು ಆಮೇಲೆ ತಾವು ಬದರಿಕಾಶ್ರಮವನ್ನು ಹೋಗುವ ಅಪೇಕ್ಷೆವಂತರಾಗಿ ಶ್ರೀಕೃಷ್ಣದೇವರ ಪೂಜಾ ಸ್ವಮತ್ತಾಸ್ಥಾಪನಾರ್ಥವಾಗಿ ತಮ್ಮ ಲ[>ಅ]ನುಜನಾದ ವಿಷ್ಣುತೀರ್ಥಾಚಾರ್ಯರ ಸಹಾಯವಾಗಿ[>ಸಹವಾಗಿ] ಅಷ್ಟಬ್ರಹ್ಮಚಾರಿಗಳು ಗೋದಾತೀರಸ್ತ ಬಂದು[>ದ] ಶೋಭನಭಟ್ಟರಿಗೆ ಸಹಾ ಪ್ಲವಂಗ ಸಂವತ್ಸರದ ವೈಶಾಖ ಶುದ್ಧ॥೭ಲ್ಲು ಕಣ್ಣು[>ಣ್ವ] ತೀರ್ಥಮಹಾಕ್ಷೇತ್ರದಲ್ಲು ಆಶ್ರಮ ಮಂತ್ರೋಪದೇಶಗಳನ್ನು ಮಾಡಿ, ಯೀ ನವಯತೀಶ್ವರರಿಗು ತವ್ಮಾ ಕರಪೂಜಿತಗಳಾ[>ರಾ]ದ ರಾಮದ್ವಯ, ಚತುರ್ಭುಜಕಾಳಿಯಾಮರ್ದನ, ದ್ವಿಭುಜಕಾಳಿಯಮರ್ದನ, ವಿಟಲತ್ರಯ, ತ್ರಿ[>ಶ್ರೀ]ಭೂವರಹಾ, ನೃಸಿಹ್ಮಮೂರ್ತಿಗಳನ್ನು ಕೊಟ್ಟು, "ನೀಉ ಯೆಂಟು ಮಂದಿ ಬಾಲಯತಿಗಳು ಪ್ರತ್ಯೇಕತ್ತು ಯರಡು ಯರಡು ವರುಷ ನಮ್ಮ ಆಜ್ಞಾನುಸಾರ ತಂತ್ರಸಾರೋಕ್ತ ವಿಧಿಯಿಂದಾ ಪೂಜಾಧರ್ಮಗಳು ಶಾಸ್ತ್ರಪ್ರವಚನಗಳು ಮಾಡಿಕೊಳ್ಳುತ್ತ ಯಿರಿ"ಯಂದು ಅಪ್ಪಣೆಕೊಟ್ಟು, ಪದ್ಮನಾಭತೀರ್ಥರಿಗೆ ಶ್ರೀರಾಮಪ್ರತಿಮೆಯನ್ನು ಕೊಟ್ಟು, "ನೀಉ ಯೆತ್ತನ್ಮತ[>ಏತನ್ಮತಿ] ಸ್ಥಾಮಾಡಿಕೊಂಡು ಸಕಲದೇಶಗಳಲ್ಲಿ ಸಂಚಾರಮಾಡುತ್ತ ಬಹುಮಂದಿ ಸಜ್ಜನರಿಗೆ ಸನ್ಮಾರ್ಗೋಪದ್ವಾರ ದ್ರವ್ಯಾರ್ಜುನ ಮಾಡಿಕೊಂಡು ಯೀ ಅಷ್ಟ ಯತಿಗಳಿಗೆ ಶ್ರೀಕೃಷ್ಣದೇವರ ಪೂಜೋಪಯುಕ್ತ ದ್ರವ್ಯಸಹಾಯವನ್ನು ಮಾಡಿಕೊಂಡು ಯಿರಿ"ಯಂತ ಅಪ್ಪಣೆ ಕೊಟ್ಟು, ೧೨೦೦ನೇ ಯೀಶ್ವರಸಂವತ್ಸರದ ಮಾಘ ಶು॥ ೯ಲ್ಲು ಬದರಿಕಾಶ್ರಮಪ್ರದೇಶವನ್ನು ಮಾಡಿ, ಶ್ರೀ ವೇದವ್ಯಾಸದೇವರ ಸನ್ನಿಧಿಯಲ್ಲು ಅದ್ಯಾಪಿತಟ್ಷೇವರತರಾಗಿ ಯಿದ್ದಾರೆ. ಯೀ ಮದ್ವಾಚಾರ್ಯರ ಕರಕಮಲ ಸಂಜಾತರಾದ ಅಷ್ಟಮಠದ ಮೂಲಪುರುಷರ ನಾಮಗಳು ಅವರು ಪ್ರತಿ ದಿವಸದಲ್ಲು ಅರ್ಪಿಸುವ ಬಗ್ಯೆ ಕೊಟ್ಟ ದೇವರ ಹೆಸರುಗಳು: ರಾಮೋವ್ಯಾತಿವವಿ ಮಾರು ಮಸ್ಮರಿನ್ ಮಣಿಃ ಕೃಷ್ಣೋದ ಮಾರು ಪ್ರಭೋಃ ಶ್ರೀಕೃಷ್ಣಾಪುರ ವಾಸಿನಶ್ಚಸು ಯತೇಃ ನ್ಯಾರ ಪುತ್ತಿಗೆ ಸ್ವಾಮಿನಃ ಶಿರುತಾರ ಉತ್ರಿನಸ್ಯ ವಿಠಲ ಹರಿಃ ಸೋದೆ ಮುನೇಸ್ಸೂಕರಃ ಕಾಣೂರೋ ಉತ್ರಿ ನೋ ನೃಸಿಂಹಾ ಯುಕ್ತರಃ

ಪೇಜಾವರೋ ವಿಧ॥ ವಂದೇ ಹೃಷಿಕೇಶಮಿಯಂ ನೃಸಿಂಹಂ ಜನಾರ್ದನಃ ಚಿಂತಾಯತಿರುಪೇದ್ರಂ ಶ್ರೀ ವಾಮನಂ ವಿಷ್ಣುನೇಮಿ ಶ್ರೀರಾಮಮಂ ಚೈಯಮಧೋಕ್ಷಜಂ ಚ॥

ಯೀ ಶ್ಲೋಕ ಕ್ರಮದಿಂದಾಚಾರ್ಯರು ಅನುಗ್ರಹಮಾಡಿ ಕೊಟ್ಟು, ಶ್ರೀ ನೃಸಿಂಹ್ಮದೇವರ ಪೂಜಿತ[>ಪೂಜಕ]ರಾದ ರಾಮತೀರ್ಥರು ಸಹಸ್ರಪ್ರವಚನೆ ಮಾಡಿಕೊಳ್ಳುತ್ತ ಕ್ರಮಪ್ರಾಪ್ತವಾದರ್ರೆ ಕೃಷ್ಣದೇವರ ಪೂಜೆಯನ್ನು ಮಾಡಿಕೊಂಡು ಶಿಷ್ಯರಾದ ರಘುನಾಥತೀರ್ಥರ ವಶಕ್ಕೆ ಸಮಸ್ತಾನದ ಭಾರವನ್ನು ವಹಿಸಿ, ವಂದಾವರ್ತಿ ಭೂಪ್ರದಕ್ಷಿಣೆಯನ್ನು ಮಾಡಿ, ೧೨೩೮ನೇ ನಂದನ ಸಂವತ್ಸರದ ಮಾಘ ಬಹುಳ ೫ಲ್ಲು ಹಿಮತ್ಕೀತಾರ ಮಹಾಕ್ಷೇತ್ರದಲ್ಲು ಶ್ರೀ ಹರಿಪಾದವನ್ನು ಯೆಯಿದಿರಲು, ಆಮೇಲೆ ರಘುನಾಥತೀರ್ಥರು ರಘುಪ[+ತಿ]ತೀರ್ಥರ[>ರಿಗೆ] ಸ್ತಾನವನ್ನು ವಪ್ಪಿಸಿಕೊಟ್ಟು, ತಪೋನಿಷ್ಟರಾಗಿ ವಿರತಿವಂತರಾಗಿ ದ್ವಾರಕಾದಿ ಸಕಲತೀರ್ಥಯಾತ್ರೆಯನ್ನು ಮಾಡಿ, ಭಾಗೀರತಿತೀರದಲಿ ೧೨೬೦ನೇ ಆನಂದ ಸಂವತ್ಸರದ ಚೈತ್ರ ಶು॥ ೫ಲ್ಲು ದೇವರಯಾತ್ರೆಯಂ [+ಮಾಡಿದರು].

ಮಹ ಸಹಸ್ರಪ್ರವಚನರಾದ ರಘುಪತಿತೀರ್ಥರು ಮಹಾಪಂಡಿತರಾಗಿ ಸಕಲದೇಶಗಳಲ್ಲಿ ಜಯಸಂಪಾದಿಸಿಕೊಂಡು, ಗೋದತೀರನಾಸಿಕ ತ್ರಿಯಂಬಕ ಕ್ಷೇತ್ರದಲ್ಲು ಪ್ರಮಾದಿ ಸಂವತ್ಸರದ ವೈಶಾಖ ಬ॥ ೧೩ಲ್ಲು ಶ್ರೀಹರಿ ಪಾದವನ್ನು ಯೆಯಿದಿರಲು, ಅವರ ಕರಕಮಲಸಂಜಾತರಾದ ರಘುನಂದನತೀರ್ಥರು ಉಡುಪಿನಲ್ಲು ಯಾವತ್ತು ಮತಗ್ರಂಥಗಳನ್ನು ಹದಿನೆಂಟುವರ್ತಿ ಅಮೂಲಾಗ್ರವಾಗಿ ಅನೇಕ ತೀರ್ಥಕರಿಗೆ ವ್ಯಾಖ್ಯಾನಗಳ ಹೇಳಿ, ಭೂ ಪ್ರದಕ್ಷಿಣೆಯನ್ನು ಮಾಡಿ, ತೀರ್ಥಯಾತ್ರೆಗಳ ಗಟಣೆ ಸಹಾ ಮಾಡಿ, ಮೂಲಕಾಪ[>ವೇ]ರಿ ತೀರದಲ್ಲು ಕ್ರೋಧನ ಸಂವತ್ಸರದ ಮಾಘ ಶು ॥೩ ಯಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಶಿಷ್ಯರಾದ ಯದುನಂದನತೀರ್ಥರು ಸಹಸ್ರವಚನರಾಗಿ ಬಹುತೀರ್ಥಯಾತ್ರೆಯನ್ನು ಮಾಡಿಕೊಂಡು, ಪುಣ್ಯಕ್ಷೇತ್ರವಾದ ದಕ್ಷಿಣರಾಮೇಶ್ವರದಲ್ಲು ಸಿದ್ದಾರ್ತಿ ಸಂವತ್ಸರದ ಫಾಲ್ಗುಣ ಬಹುಳ ೧೦ಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ತತ್ಶಿಷ್ಯರಾದ ವಿಶ್ವನಾಥತೀರ್ಥರು ಉತ್ತರಯಾತ್ರೆ ಪ್ರಯುಕ್ತ ತೆರಳಿ ಹೋಗಿ ಮಹಾ ಯಾವತ್ತು ತೀರ್ಥಯಾತ್ರೆಗಳನ್ನು ಮಾಡಿ, ದ್ವಾರಕಾ ಮಗ[>ಹ] ಕ್ಷೇತ್ರದಲ್ಲು ವ್ಯಯಸಂವತ್ಸರದ ಕಾರ್ತೀಕ ಶುದ್ಧ॥೫ಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಕರಕಮಲಸಂಜಾತರಾದ ದೇವ[>ವೇದ]ಗರ್ಭತೀರ್ಥರು ಸಛಾಸ್ತ್ರಪಂಡಿತರಾಗಿ ಭೂಪ್ರದಕ್ಷಿಣ ಮಾಡಿಕೊಂಡು, ತಪೋನಿಷ್ಟರಾಗಿ ತುಂಗಭದ್ರಮಹಾಕ್ಷೇತ್ರದಲ್ಲು ಸಿದ್ದಾರ್ತಿ ಸಂವತ್ಸರದ ಮುಷ್ಯ ಶ॥೧೫ಲ್ಲು ಶ್ರೀ ಹರಿಪಾದವ ಸೇರಿದರು.

ಅವರ ಶಿಷ್ಯರಾದ ವಾಗೀಶತೀರ್ಥರು ಮಹಾ ವಿದ್ವತ್ತವನ್ನು ಪಡಕೊಂಡು ದಕ್ಷಿಣಯಾತ್ರೆ ಮಾಡಿ, ಅನೇಕ ಶಿಷ್ಯರಿಗೆ ಸನ್ಮಥ ಗ್ರಂಥಗಳ ಪ್ರವಚನಗಳನ್ನು ಮಾಡಿಸಿ, ವಿರಕ್ತರಾಗಿ ಉತ್ರಯಾತ್ರೆ ನಿಮಿತ್ತ ತೆರಳಿ ಹೋದವರು. ಗಂಗಾಭಾಗೀರತಿಲ್ಲು ಚಿತ್ರಭಾನು ಸಂವತ್ಸರದ ಮಾರ್ಘ ಶು॥ ೧ಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಕರಕಮಲಸಂಜಾತರಾದ ವರದಪ್ಪತೀರ್ಥರು ಸಹಸ್ರನಾಮಪಂಡಿತರಾಗಿ ಭೂಪ್ರದಕ್ಷಿಣೆ ತೀರ್ಥಯಾತ್ರೆಗಳ ಸಹ ಮಾಡಿ, ಜಯಸಂಪಾದನೆಗಳ ಮಾಡಿಕೊಂಡು ಜಗನ್ನಾಥಕ್ಷೇತ್ರದಲ್ಲು ವ್ಯಯಸಂವತ್ಸರದ ಮಾಘ ಬಹುಳ॥೫ಲ್ಲು ಆ ಹರಿಪಾದವನ್ನೆಯೆಯಿದಿದರು.

ಅವರ ಶಿಷ್ಯರಾದ ವಿಶ್ವಪತೀತೀರ್ಥರು ತಪೋನಿಷ್ಠರಾಗಿ ಅನೇಕತೀರ್ಥಯಾತ್ರೆಗಳು ಮಾಡಿ, ಸಕಲಶಾಸ್ತ್ರಗಳನ್ನು ಬಹುಮಂದಿ ಶಿಷ್ಯರಿಗೆ ಪ್ರವಚನಗಳ ಮಾಡಿ. ಕುರುಕ್ಷೇತ್ರದಲ್ಲು ಯಿವ ಸಂವತ್ಸರದ ಕಾರ್ತಿಕ ಶು॥೧೪ ಯಲ್ಲು ದೇಹತ್ಯಾಗವನ್ನು ಮಾಡಿದರು.

ಅವರ ಕರಕಮಲಸಂಜಾತರಾದ ವಿಶ್ವಮೂರ್ತಿತೀರ್ಥರರು ಸಕಲಸಹಸ್ರ ಪಂಡಿತರಾಗಿ, ಅನೇಕ ಶಿಷ್ಯರ ಮಾಡಿಕ್ಕೊಂಡು ಭೂ ಪ್ರದಕ್ಷಿಣೆ ತೀರ್ಥಯಾತ್ರ ಸಹಾ ಮಾಡಿಕೊಂಡು. ಬಂದು, ವಿರಕ್ತರಾಗಿ ದಕ್ಷಿಣ ಮೂಲಕಾವೇರಿಗೆ ಹೋಗಿ ಅಲ್ಲಿಯೇ ಶಾರ್ವರೀ ಸಂವತ್ಸರ ಕಾರ್ತೀಕ ಶು॥೮ಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಶಿಷ್ಯರಾದ ವೇದವತಿತೀರ್ಥರು ತಪೋನಿಷ್ಠರಾಗಿ ಯಾವದ[>ದ್ದ]ರುಶನಗ್ರಂಥಗಳನ್ನು ಪ್ರವಚನಗಳನ್ನು ಮಾಡುತ್ತಾ, ಕ್ರಮದಿಂದಾ ತೀರ್ಥವಾಗಿ ಹೊರಟು, ಕೃಷ್ಣಕ್ಷೇತ್ರದಲ್ಲು ಕ್ರೋಧನ ಸಂವತ್ಸರದ ಮಾಘ ಶು॥ಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ತತಿಷ್ಯರಾದ ವೇದರಾಜತೀರ್ಥರು ಸಭಾಸ್ತ್ರಪಂಡಿತರಾಗಿ ಸಕಲತೀರ್ಥಯಾತ್ರೆಗಳನ್ನು ಮಾಡಿ, ಮದ[>ಹ] ತಪೋನಿಷ್ಠಯಿಂದಾ ಗೋದಾವರಿಕ್ಷೇತ್ರದಲ್ಲು ಪಾರ್ಥಿವ ಸಂವತ್ಸರದ ಶ್ರಾವಣ ಬಹುಳ ೯ಲ್ಲು ಸಿಧಿವಂತರಾದರು.

ಅವರ ಕರಕಮಲಸಂಜಾತರಾದ ವಿದ್ಯಾಧೀಶತೀರ್ಥರು ಮಹತಪೋನಿಷ್ಠರಾಗಿ ನೇತ್ರಾವತಿ ದಕ್ಷಿಣತೀರದಲ್ಲು ಕಡೆ ಶಿವಾಯಕ್ಯಾ[>ಯಾಖ್ಯ] ನರಸಿಹ್ಮಕ್ಷೇತ್ರದಲ್ಲು ಹನ್ನೆರಡು ವರುಷ ನರಸಿಂಹ್ಮ ಯೇಕಾಕ್ಷರಿ ಉಪಾಸನೆ ಮಾಡಿ, ರುದ್ರದೇವರು ಪ್ರಸನ್ನರಾಗುತ್ತಿರಲಾಗಿ "ಸಹ್ಯಂ ನೋ ಪಾಸಕೊನ್ಯಂ ಪ್ರಾಪ್ನುತೆ"ಯೆಂಬನ್ಯಾಯದಿಂದಾ "ನಿಮ್ಮಾ ಉಪಾಸನೆ ಮಾಡಲಿಲ್ಲಾ, ನಿಮ್ಮಲ್ಲಿ ನಮಗೆ ಪ್ರಯೋಜನಯಿಲ್ಲ"ಯೆಂತ ಯೀ ಯೆತಿಗಳು ಆ ರುದ್ರದೇವರನ್ನು ಪ್ರತ್ಯಾಖ್ಯಾನ ಮಾಡುತ್ತಿರಲಾಗಿ, ರುದ್ರದೇವರು ಅಪ್ಪಣೆ ಕೊಟ್ಟ ಪ್ರಕಾರ "ಪ್ರಾರಬ್ಧಕರ್ಮದಿಂದಾ ಅನುಭವಿಸಲಿಕ್ಕೆ ತಕ್ಕದ್ದು, ಹತ್ತು ಜನ್ಮವದೇ, ವೊಂದಾವರ್ತಿ ನರಕ ಮಾಧನ[>ಯಾತನ] ಮತ್ತು [>ಎಪ್ಪತ್ತು] ಯರಡು ಮಾಸ ಅದೆ"ಯಂತ ಅಪ್ಪಣೆ ಕೊಟ್ಟರು. ಅದಕ್ಕರ ಯೀ ಯತಿಗಳು ಹೇಳಿಕೊಂಡ ಪ್ರಕಾರ "ಹತ್ತು ಜನ್ಮ ಪ್ರತ್ಯೇಕ ಅನುಭವಿಸಲಾರೆ. ಆ ಹತ್ತು ಜನ್ಮದ ಕರ್ಮವು ವೊಂದೇ ಜನ್ಮದಲ್ಲಿ ತೀರುವ ಹಾಗೆ ಅಪ್ಪಣೆ ಆಗಬೇಕು, ಹೊಗೆ[>ಹಾಗೆ] ನರಕಯಾತನೇಗು ಯಿಲ್ಲಿಯೆ ಅಪ್ಪಣೆ ಆಗಬೇಕು"ಯಂತ ಅರಿಕೆ ಮಾಡಿಕೊಂಡರು. ಆ ರುದ್ರದೇವರು "ಯಿಂತಾ ಜನ್ಮ ಯಾವದು ಅದೆ ಯಂತ ಮನಸ ವಿಚಾರಿಸಿ. ನಿನಗೆವೊಂದು ಸರ್ಪಜನ್ನ[>ನ್ಮ]ದಲ್ಲೆ ಹತ್ತು ಜನ್ಮದ ಕರ್ಮಉ ತೀರಲಿ, ನರಕಯಾತನೆಯು 'ಉಪಮರ್ದಂಚ' ಯಂಬ ಸೂತ್ರಾರ್ಥನುಸಾರವಾಗಿ ಯೆಪತ್ತ ಯರಡು ಮಾಸಕ್ಕೆ ಯೆಪ್ಪತ್ತೆರಡು ದಿವಸ ಯೀ ಮಾನುಷ ಜನ್ಮದಲ್ಲೆ ನರಕಯಾತನೆಯು ಮಾಡಿಕೊ"ಯಂತ ಅಪ್ಪಣೆಕೊಟ್ಟು, ಪೂಜಾರ್ತವಾಗಿ ನಳಿಕೇರ[>ನಾಳಿಕೇರ]ರ ಫಲ ಪ್ರಪ್ರಮಾಣ ಶಿವನಾಭಿಯನ್ನು ಕೊಟ್ಟರು. ಅಪ್ಪಣೆ ಪ್ರಕಾರ ನಮ್ಮ ಕೊಕ್ಕಡ ತಾಲೂಕು ಬಲ್ಯದ ಮಠದಲ್ಲು ಅನೇಕ ಪ್ರಕಾರ ದುಃಖಪ್ರದವಾದ ನರಕ ಮಾಡಿಸಿ, ತಾವು ಶಿಷ್ಯರಾದ ವಿಭುದೇಶತೀರ್ಥರಿಗೆ ಸಂಸ್ತಾನವನ್ನು ವೊಪ್ಪಿಸಿ, ತಾಉ ನರಕ ಅನುಭವಿಸಿ ಕೆಲಉ ದಿವಸಯಿದ್ದು ಯಿದೇ ಮಠದಲ್ಲಿ ದೇವರಯಾತ್ರೆಯನ್ನು ಮಾಡಿದಾರೆ. ಅವರು ಸರ್ವಜನದಲ್ಲು ಅದ್ಯಾಪಿ ಯಿದ್ದಾರೆ. ಯಿವರು ಕಾಳಾಯುಕ್ತಿ ಸಂವತ್ಸರದ ಚೈತ್ರ ಶುದ್ಧ॥೫ಲ್ಲು [>ದೇವರಯಾತ್ರೆ ಮಾಡಿದರು].

ಯಿವರ ಶಿಷ್ಯರಾದ ವಿಭುದೇಶತೀರ್ಥರು ಮಹತ್ತಪೋನಿಷ್ಟರಾಗಿ ಸಛಾಸ್ತ್ರಪಂಡಿತರಾಗಿ ಮಹತ್ತಪಸ್ವಿಗಳಾಗಿ"ತ್ತಮೇವದೇಶಂ ಸೇವತ್ರಾತ್ತಾಂ ಕಾಲಂತಮುಪಸ್ತಿತಿ ತಾನೇವಭೊಗಾನ್ ಸೇವೆತ್ತಾ ಮನೊಯತ್ರ ಪ್ರಸಿದತ್ತಿ" ಯೀ ಪ್ರಮಾಣಾನುಸಾರವಾಗಿ ತಪಸ್ವಿಗೆ ಸ್ತಳ ಹುಡುಕುತ್ತ ಭೂಪ್ರದಕ್ಷಿಣಾ ವ್ಯಾಜ್ಯದಿಂದಾ ಕುಂಭಕೋಣದೇಶದ ಮನ್ನಾರು ಗುಡಿ ಕ್ಷೇತ್ರಕ್ಕೆ ಹೋಗಿ, ತತ್ಸಮೀಪಸ್ತವಾದ ಚಂಗಂಮಲೆ ಸ್ತಳದಲ್ಲು ಪ್ರತಿಷ್ಟಿತ ಶ್ರೀಕೃಷ್ಣದೇವರನ್ನು ಕುರಿತು ತಪಸುಮಾಡಿ, ಆ ಕೃಷ್ಣದೇವರನ್ನ ಅಪರೋಕ್ಷೀಕರಸಿಕೊಂಡು ಯೆಂಟು ಶ್ರೀಕೃಷ್ಣ ಪ್ರತಿಮೆಯನ್ನು ತಾವೆ ಪ್ರಾಣ ಪ್ರತಿಷ್ಟೆ ಮಾಡಿ, ವೊಂದು ಪ್ರತಿಮೆಯನ್ನು ಸ್ವತಾ ಯಿಟ್ಟುಕೊಂಡು, ಮೊದಲಾದ ಯೇಳು ಮಠಕ್ಕೆ ಯೇಳು ಪ್ರತಿಮೆಯನ್ನು ಕೊಟ್ಟು, ತಾಉ ಆ ಸ್ತಳದಲ್ಲು ಆವಾಸ ಮಾಡಿಕ್ಕೊಂಡು ಯಿರುವಾಗ್ಯೆ, ತಮ್ಮ ಪರಿಯಾರ್ಯಗಳಿಗೆ ಮಾತ್ರ ಉಡುಪಿಗೆ ಒಂದು ಪರಿಯಾಯಾ ಪೂಜಾಧರ್ಮಗಳ ಮಾಡಿ, ತಮ್ಮ ಶಿಷ್ಯರಾದ ವಾರಿಜಾಕ್ಷತೀರ್ಥರಿಗೆ ಸಂಸ್ಥಾನವನ್ನು ಕೊಟ್ಟು, ಪುನಹಾ ಆ ಸ್ಥಳಕ್ಕೆ ಹೋಗಿ ಜನನದಿಂದಾ ಉತ್ರಾಚರಣೆ ವೀಣಗಾನಗಳಿಂದಾ ತಾಉ ಮಾಡಿದ ಗದ್ಯ ಪದ್ಯಂಗಳಿಂದಾ ಸಹಾಯ ಕೃಷ್ಣದೇವರ ಅನುಗ್ರಹ ಸಂಪಾದಿಸಿ, ಸ್ವಭಾನು ಸಂವತ್ಸರದ ಮಾಘ ಬ॥೧೦ಯಲ್ಲು ಸಿದ್ಧಿವಂತರಾದರು.

ಆ ಮೇಲೆ ವಾರಿಜಾಕ್ಷತೀರ್ಥರು ತಪೋನಿಷ್ಟರಾಗಿ, ಸಛಾಸ್ತ್ರ ಪಂಡಿತವಂತರಾಗಿ, ಅನೇಕ ಶಿಷ್ಯರನ್ನು ಕೂಡಿ ಪ್ರವಚನಾದಿ ವ್ಯಾಖ್ಯಾನಗಳನ್ನು ಸಹಾ ಮಾಡಿಕ್ಕೊಂಡು, ಭೂಪ್ರದಕ್ಷಿಣ ತೀರ್ಥಯಾತ್ರಾಮಾಡಿ ಬಂದು, ಪರಾಭವ ಸಂವತ್ಸರದ ವೈಶಾಖ ಶು॥೫ಯಲ್ಲು ಸಿದ್ಧಿವಂತರಾದರು.

ಅವರ ಕರಕಮಲಸಂಜಾತರಾದ ವಿಶ್ವೇಂದ್ರತೀರ್ಥರು ಸಛಾಸ್ತ್ರ ಪಂಡಿತರಾದಂತವರಾಗಿ ಉಡಿಪಿಕ್ಷೇತ್ರದಲ್ಲಿ ದೇಶ ಸಂಚಾರಿಗಳಾಗಿ, ಅನೇಕ ಶಿಷ್ಯರುಗಳಿಗೆ ವ್ಯಾಖ್ಯಾನಾದಿ ಪ್ರವಚನಗಳ ಮಾಡಿ, ದಕ್ಷಿಣಯಾತ್ರಾ ಸಮಗ್ರಸ್ತಳವನ್ನು ತಿರುಗಿ ಬಂದು, ಶುಕ್ಲ ಸಂವತ್ಸರದ ಮಾಘ ಬ॥ ೧೦ಯಲ್ಲು ಕಣ್ವರುಷಿಯಾಶ್ರಮ ಕಣ್ಣೂರ ಸ್ಥಳದಲ್ಲು ದೇವರ ಯಾತ್ರಾ ಮಾಡಿದರು.

ತತ್ಸಿಷ್ಯರು ವಿಭುವವದ್ಯತೀರ್ಥರು ತಪೋನಿಷ್ಟಾವಂತರಾಗಿ ಮದ್ವಶಾಸ್ತ್ರ ಪ್ರಸಂಗಧಾರಿಗಳಲ್ಲಿ ಶಿಖಾಮಣಿಗಳು ಯಂತ ಜಯರಾಸಗಳನ್ನು ತೆಗೆದುಕೊಂಡು, ತೀರ್ಥಯಾತ್ರೆ ಮಾಡಿ ಬಂದು, ಕಣ್ವರುಷಿ ಆಶ್ರಮವಾದ ಕಾಣೂರಲ್ಲು ವ್ಯಯ ಸಂವತ್ಸರದ ಮಾಘ ಶು॥೧ಲ್ಲು ದೇವರ ಯಾತ್ರೆಯನ್ನು ಯೆಯಿದಿದರು.

ವಿಭುದವಂದ್ಯಾತೀರ್ಥರ ಶ್ರೀಪಾದಂಗಳವರ ಕರಕಮಲಸಂಜಾತರಾದ ವಿದ್ಯಾಧಿರಾಜತೀರ್ಥರು ತಪೋನಿಷ್ಟರಾಗಿ ಸಛಾಸ್ತ್ರಪ್ರವಚನರಾದಾಂತಾ ಮ ಉನಾತ್ಮರಾದವರು ಅನೇಕ ಶಿಷ್ಯರಿಗೆ ಮದ್ವಶಾಸ್ತ್ರಪ್ರವನಗಳನ್ನು ಹೇಳುತ್ತಾ ಬಹುಕಾಲದ ಮೇಲೆ ತೀರ್ಥಯಾತ್ರಾರ್ಥವಾಗಿ ಹೋಗಿ ಸಕಲಯಾತ್ರೆಗಳನ್ನು ಮಾಡಿಕೊಂಡು ಕಣ್ವರುಷೇಶ್ವರ ಆಶ್ರಮ ಕಾಣುವ [>ಕಾಣೂರು] ಸ್ಥಳದಲ್ಲು, ಸಾಧಾರಣ ಸಂವತ್ಸರ ಚೈತ್ರ ಬಹುಳ ೫ಲ್ಲು ದೇವರ ಯಾತ್ರೆಯನ್ನು ಮಾಡಿದರು.

ತತ್ಸಿಷ್ಯರು ವಿದ್ಯಾರಾಜತೀರ್ಥರು "ಯೋ ಸೌರಂಜಿತ ಭಾಜನ್ಯೈಃ ಸುಲಿ ಸದ್ಗಂಗೇಯ ಭಾಷಾಗಣ್ಯೈರ್ವಚ್ರೆಂದ್ರೋಪಲಪದ್ಮರಾಗ ಖಚಿತ್ಯೆ ನಾನಾನುದಾನ್ಯೈರ್ಯ್ಯಕಃ॥ ಕಾವೇರಿ ಮಗ ಮದ್ದಿಶಂ ಸುರಂಸುರದು ನಿನ್ನಾನಾದರೋಚಿತ್ವರ್ರೋ ವಿದ್ಯಾರಾಜ ಪದಾಂತಿನೋ ಮಮಗುರೋ ದೇಯಾದಲಂ ಮಂಗಲಂ", ಯೀ ಪ್ರಕಾರ ಮಹಾಚರಿತ್ರೆಗಳ ಮಾಡಿಕ್ಕೊಂಡು ಕಾಸಿ, ಪ್ರಯಾಗಿ, ಗಂಡಕ್ಕಿ, ಚಿಕ್ಕ

ಬದರಿ ಮೊದಲದ ಉತ್ತರಯಾತ್ರೆಗಳ ಮಾಡಿಕ್ಕೊಂಡು ಬಹು ಮಂದಿ ಶಿಷ್ಯರುಗಳಿಗೆ ವ್ಯಾಖ್ಯಾನಾದಿಗಳ ಹೇಳುತ್ತಾ ವಿದ್ವಸ್ಸಭಾ ಮಧ್ಯದಲ್ಲಿ ಜಯಸಂಪಾದಿಸಿಕೊಂಡು ಮಹಾತಪೋನಿಷ್ಟರಾಗಿ ಕಣ್ವರುಷಿ ಆಶ್ರಮ ಕಾಣೂರಲ್ಲಿ . . . . ಸಂವತ್ಸರದ ಮಾರ್ಗಶಿರ ಬ॥೬ಲ್ಲು ದೇವರಯಾತ್ರೆಯನ್ನು ಯೆಯಿದಿದರು.

ಅವರ ಕರಕಮಲಸಂಜಾತರಾದ ವಿಬುಧಪ್ರಿಯತೀರ್ಥರು ಮಹಾತಪೋನಿಷ್ಟರಾಗಿ ಮದ್ವಶಾಸ್ತ್ರಪ್ರವಚನರಾಗಿ ಉತ್ತರ ಯಾತ್ರೆ ಪ್ರಯುಕ್ತವಾಗಿ ಸಕಲಯಾತ್ರೆಗಳು ಮಾಡಿಕೊಂಡು, ಗೋದಾವರಿತೀರಕ್ಕೆ ಬಂದು, ತಪೋನಿಷ್ಠರಾಗಿ ಕುಳಿತು ಯಿರೊ ವೇಳ್ಯೆದಲ್ಲಿ ವಜ್ರಸಂಗಮದಲ್ಲು ಗಂಗಾಭಾಗೀರತಿ ಅಮ್ಮನವರು ಶಿಲಾರೂಪದಿಂದ ಸಂಗಮಮಧ್ಯದಲ್ಲಿ ಯಿವರು ಆಸನ ಪ್ರಾಣಾಯಾವಗಳ ಮಾಡುತ್ತ ಯಿರುತ್ತಿರುವಲ್ಲಿ, ತರ್ಪಣಕಾಲದಲ್ಲು ಅವರ ಕರಕಮಲಮಧ್ಯಕ್ಕೆ ಪ್ರಸನ್ನರಾಗಿ ಬಂದು ಯಿರುವ ಭಾಗೀರತಿ ಅಮ್ಮನವರನ್ನು ಸರ್ವಜನರು ನೋಡಿ, ಆ ಊರಾಳುವಂತಾ ಅರಸುಗಳು ಬಂದು ನೋಡಿ, ಪರಮ ಆಶ್ಚರ್ಯರಾಗಿ "ಯಿವರು ಮಹಾ ದೊಡ್ಡ ಯತೀಶ್ವರರು"ಯಂತ ಸನ್ಮಾನಾದಿ ಸಕಲವೈಭವಂಗಳನ್ನು ಕೊಟ್ಟು, ಯೀ ಭಾಗೀರತಿ ಅಮ್ಮನವರಿಗೆ ಗೋಮೇಧಿಕದ ಕರಡಿಕೆಯನ್ನು ಕೊಟ್ಟು, ಮಹಾಭಕ್ತಿವಂತರಾಗಿ ನಡಕೊಂಡು, "ಸದಾ ಯೀ ಸ್ಥಳದಲ್ಲಿಯೇ ನೀವು ಆವಸವಾಗಿ ಯಿರಬೇಕೆಂ"ತ ಪಾದಕ್ರಾಂತನಾಗಿ ಹೇಳಿಕೊಂಡಲ್ಲಿ ಯಿವರು ಅಪ್ಪಣೆ ಕೊಟ್ಟದ್ದು "ನಮಗೆ ಉಡುಪಿಯ ಶ್ರೀಕೃಷ್ಣದೇವರ ಪರಿಯಾಯ ಪೂಜಾಧರ್ಮಗಳು ಆಗಬೇಕು. ನಮಗೆ ಯಿಲ್ಲಿ ಆವಾಸಕ್ಕೆ ಅನುಗುಣಾ ಯಿಲ್ಲಾ"ಯೆಂತ ಹೇಳಿದರು. "ವಳ್ಳೇದು"ಯಂತ ಸಕಲಸನ್ಮಾನಗಳ ಮಾಡಿ ಕಳುಹಿಸಿಕೊಟ್ಟು ಅಪ್ಪಣೆ ತೆಗೆದುಕೊಂಡು ಹೋದ ಯಿವರು ತಿರುಗಾ ಉಡುಪಿಗೆ ಬಂದು, ಶ್ರೀ॥ಕೃಷ್ಣ ಪರಿಯಾಯ ಪೂಜಾಧರ್ಮಗಳ ಮಾಡಿ, ಸನ್ಮಾರ್ಗಸ್ತರಾಗಿ ಸಕಲವೇದಾಂತಾದಿ ಸರ್ವಶಾಸ್ತ್ರಗಳ ಪ್ರವಚನರಾಗಿ, ಉಡುಪಿನಲ್ಲಿ ಕ್ರೋಧಿ ಸಂವತ್ಸರ ಆಷಾಡ ಶು॥೧೨ಲ್ಲು ದೇವರ ಯಾತ್ರೆಯನ್ನು ಮಾಡಿದರು. ಯೀಗ ಅದ್ಯಾಪಿ ಅವರಿಗೆ ಪ್ರತ್ಯಕ್ಷವಾದ ಶಿಲಾಮಯದಲ್ಲು ಬಂದು ಯಿರು ಭಾಗೀರತಿ ಅಮ್ಮಾನವರನ್ನು ಶ್ರೀ ನೃಸಿಹ್ಮದೇವರ ಸನ್ನಿಧಿಯಲ್ಲು ನಿತ್ಯ ಪೂಜೆಯು ನಡೆಯುತ್ತಿದೆಯಂತ ಬರಶಿ ಕೊಟ್ಟ ವಂಶಾವಳಿ. ನರಸಿಂಹ್ಮಾಚಾರ್ಯರ ರುಜು॥

❖❖

೫೯

ಕಾಪಿನ ದೇವಸ್ಥಾನದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಕುಂಪಣಿ ಸರಕಾರಕ್ಕೆ ಕಾಪಿನ ದೇವಸ್ಥಾನದ ಕೃಷ್ಣಭಟ್ಟ ಕೃಷ್ಣಯ್ಯ ತಂತ್ರಿ, ಉಪಾದಿ ರಾಂಭಟ್ಟ ಅಪ್ಪಯ್ಯ, ಭಟ್ಟಕಿಳಿ[>ಕಳ] ಶಾಂತಿ ಶಂಕರನಾರಾಯಣ ಸಹಾ ಬರಸಿಕೊಟ್ಟ ಕೈಫಿಯತು ನಾಮೆ॥

ಸದರಿ ಕಾಪಿನ ಮಾಗಣಿ ಶ್ರೀಜನಾರ್ಧನದೇವ ದೇವಾಲಯಯಲು, ಪೂರ್ವದಲ್ಲು ಕಲಿಯುಗದಲ್ಲಿ ಭಾರ್ಗವ ರುಷೀಶ್ವರರು ಪಿಲಾರಕಾನಾಯಂಬ ವನದಲ್ಲು ತಪೋನಿಷ್ಟರಾಗಿ ಯಿರುವಾಗ್ಯೆ, ಆ ತಮ್ಮ ಆಶ್ರಯ[>ಮ]ದಲ್ಲು ಯೀಶ್ವರ ಪ್ರತಿಷ್ಟೆಯನ್ನು ಮಾಡಿ ಬಹುಕಾಲ ಅಲ್ಲಿ ಆವಾಸಾ ಮಾಡಿಕ್ಕೊಂಡು ಯಿದ್ದು, ಅನಂತರದಲ್ಲಿ ಯೀ ರುಷೀಶ್ವರರು ಸಮುದ್ರಸ್ನಾನಾರ್ಥವಾಗಿ ಬಂದವರು, ಯೀ ಸಮುದ್ರತೀರದಲ್ಲಿ ಯಿರುವ ಸರೋವರದಲ್ಲು ಸಮುದ್ರಸ್ನಾನಾತು ಪೂರ್ವಸ್ನಾನವನ್ನು ಮಾಡಿ, ಆ ಸರಸ್ಸಿನಲ್ಲು ಬೀಜಾವ್ಯಾಪಯಿಲ್ಲದೆ ಕಮಲೋತ್ಪತ್ಯಾ ಆಗುವಂತೆ ವರವನ್ನು ಕೊಟ್ಟು, 'ಕಮಲ ಸರೋವರಾ'ಯಂತ ನಾಮದೇಂಉನಾ ಯಿಟ್ಟು, ಯಿದರ ಯೀಶಾನ್ಯಭಾಗದಲ್ಲು ವಾಸುದೇವಮೂರ್ತಿಯನ್ನು ಪ್ರತಿಷ್ಟೆಮಾಡಿ, ಆ ಮೇಲೆ ಸಮುದ್ರಸ್ನಾನವನ್ನು ಮಾಡಿ, ಪುನಹಾ ತಮ್ಮ ಆಶ್ರಮವನ್ನು ಕುರಿತು ಹೋಗುವದಾಗಿ "ಮಹಾ ಮಹಿಮರಾದ ತಮ್ಮ ಮಹಾತ್ಮೆ ಬಹುಕಾಲ ಪರಿಯಂತ್ರ ಯೀ ಸ್ಥಳದಲ್ಲಿ ಯಿರಬೇಕು. ಯಂತ, ಅಶೇಷ ಉತ್ತಮ ಬ್ರಾಹ್ಮರು ನಾಲು ಈ ಸ್ಥಳದಲ್ಲು ವೊಂದು ದೇವತಾಪ್ರತಿಷ್ಟೆಯನ್ನು ಅಪೇಕ್ಷಿಸುತ್ತೇವೆ, ದೇವತಾಪ್ರತಿಷ್ಟೆಮಾಡಿ ನಮ್ಮ ಉದ್ಧಾರ ಮಾಡಬೇಕು"ಯಂತ ವಿಜ್ಞಾಪನಾ ಮಾಡಿಕೊಂಡದರಿಂದ, ಶಾಲಿವಾಹನ ಶಕ ವರುಷ ೬೫೫ನೆ ಶ್ರೀಮುಖ ಸಂವತ್ಸರದ ಮಾಘ ಶು॥೫ ಭಾರ್ಗವಾಸರದಲ್ಲು ಶ್ರೀ ಜನಾರ್ಧನದೇವರನ್ನು ಪ್ರತಿಷ್ಟೆ ಮಾಡಿ, ಯಿದರ ದಕ್ಷಿಣ ಪಶ್ಚಿಮ ದಿಕ್ಕಿನಲ್ಲು ಚಕ್ರತೀರ್ಥಯಂಬಂಥಾ ತೀರ್ಥವನ್ನು ಮಾಡಿ, "ಯೇಕ[>ತ]ದ್ಗ್ರಾಮಸ್ತರಾದಂಥಾ ಅಶೇಷ ಸಜ್ಜನ ಬ್ರಾಹ್ಮರು ನೀಉ ದಿಕ್ಕಿನಲ್ಲಿ ನಮ್ಮಿಂದಾ ಪ್ರತಿಷ್ಟಿತವಾದ ಯೀ ಜನಾರ್ಧನ ದೇವರ ಪೂಜಾ ಪ್ರತಿದಿನದಲ್ಲು ಮಾಡಿಕೊಳ್ಳುತ್ತಾ ಯಿರ್ರಿ"ಯಂದು ಅಪ್ಪಣೆ ಕೊಟ್ಟು ತಮ್ಮ ಆಶ್ರಮಕ್ಕೆ ತೆರಳಿಹೋದರು. ಆ ತರುವಾಯ ಯೀ ಗ್ರಾಮಸ್ಥರಾದಾ ಅಶೇಷಬ್ರಾಹ್ಮರು ಭಾರ್ಗವರುಷೀಶ್ವರ ಆಜ್ಞಾನುಸಾರ ಯೀ ಜನಾರ್ಧನ ದೇವರಿಗೆ . . . . ಗಳನ್ನು ತಮ್ಮ ತಮ್ಮಾ ಸ್ವಾರ್ಜನೆಯಿಂದ ನಡಸಿಕೊಂಡು ಕೆಲಉ ದಿವಸಾ ಯಿರುತಿದ್ದಲ್ಲಿ, ಆ ತರುವಾಯ ಯೀ ಗ್ರಾಮಪ್ರಭುವಾದ ಚಿನ್ನಸಾವಂತನಾದ ವದ್ದ ಹೆಗಡೇಗೆ ವೊಂದು ದಿವಸ ರಾತ್ರಿ ಸ್ವಪ್ನದಲ್ಲು ಬ್ರಾಹ್ಮಣ ಸ್ವರೂಪನಾಗಿ ಬಂದು "ಭಾರ್ಗವರುಷಿಯಿಂದಾ ಪ್ರತಿಷ್ಟಿತನಾದೆ. ನಾನು ಯೇಕ[>ತ]ದ್ಗ್ರಾಮ ಸ್ವಾಮಿಯಾಗಿ ಯಿದ್ದೇನೆ. ದೇವಾಲಯ ಕಟ್ಟಿಸಿ ಪೂಜೋತ್ಸಹಗಳನ್ನು ವಿಶೇಷಕಾರದಿಂದಾ . . . . ಪ್ರೆ ಮಾಡು"ಯಂತ ಅಪ್ಪಣೆ ಆಯಿತು.

ಆ ಹೆಗಡೆಯು ಬುದ್ಧಮತಪ್ರವಿಷ್ಟನಾದ ಪ್ರಯುಕ್ತ ಯೀ ದೇವತಾ ಆಜ್ಞೆಯಲ್ಲಿ ಸಂದೇಹದಿಂದಾ ಉಪೇಕ್ಷಾಮಾಡಲಾಗಿ, ಯೇಕದೇ[>ತದ್ದೇ]ಶದಲ್ಲಿ ಅಶನಿಪಾತ ಅಕಾಲಮೃತ್ಯು ಮುಂತಾದ ಮಹಾ ಧ[>ಅ]ನಿಷ್ಟಗಳು ಆದ್ದರಿಂದ ಯೀ ಗ್ರಾಮಪ್ರಭು ಸ್ವದೇಶದಲ್ಲಿ ಯಿದ್ದ ಅಶೇಷಬ್ರಾಹ್ಮಣರನ್ನು ಕರದು, "ಯೀ ಅನಿಷ್ಟ ಕಾರಣ ಯೇಕ[>ಕೆ?] ಎಂತ್ಯುಪಾಯ" ಕೇಳಲಾಗಿ, "ಸಕಲ ವ್ಯಾದ[>ವೇದ]ಸಂಪನ್ನರಾದ ಯೀ ಬ್ರಾಹ್ಮರ ನಿನ್ನು ವ್ರಿ[>ನೀನು ಋ]ಷೀಕರ ಪೂಜಿತನಾದ ದುಷ್ಟನಿಗ್ರಹ ಶಿಷ್ಟ ಪರಿಪಾಲನ ನಿರತರಾದ ಶ್ರೀ ಜನಾರ್ಧನಸ್ವಾಮಿಯಾ ಅ . . . . ಲಂಗನವನ್ನು ಮಾಡಿದ ಕಾರಣವೇ ಸಾ[>ಸ]ರಿ. ಯೀ ದೇವರಿಗೆ ದೇವಾಲಯಾ ಕಟ್ಟಿಸಿ, ನಿತ್ಯಪೂಜಾ ಪ್ರತಿವರುಷಕ್ಕೂ ಸಾಂವತ್ಸರಿಕೋತ್ಸವಾ। ರಥೋತ್ಸವ ಮೊದಲಾದನ್ನು ಮಾಡಿಸಿ, ನಿನ್ನ ಕುಲಸ್ವಾಮಿಯನ್ನು ಮಾಡಿಕ್ಕೊಂಡು ಪ್ರಸನ್ನಿರ್ತಕೊ[>ಪ್ರಸನ್ನಿಸಿಕೋ]" ಯಂತ ಹೇಳಲಾಗಿ, ಯೀ ಗ್ರಾಮಪ್ರಭು ಬ್ರಾಹ್ಮರ ಆಗ್ನೆಗೆ ವೊಡಂಬಟ್ಟು, ದೇವಾಲಯ ಕಟ್ಟಿಸಿ, ಶಾಲಿವಾಹನ ಶಕ ವರುಷ ೬೮೫ನೆ ಶೋಭಕೃತು ಸಂವತ್ಸರದ ಮಾಘ

ಶು॥೧೦ ಯು ಬ್ರಹಸ್ಪತಿ ವಾರದಲ್ಲು ಬ್ರಹ್ಮಕಲಶಾ ಸಂಪ್ರೊಕ್ಷಣೆಯನ್ನು ಮಾಡಿಸಿ, ಯೀ ದೇವರ ಪೂಜೋತ್ಸಹದ ಬಗ್ಯೆ ತನ್ನ ವಳಗಣ ಉಂಬಳಿಯಿಂದಾ ಶ್ರೀದೇವರ ಸನ್ಮುಖದಲ್ಲಿ ನಾನಾ ದೇಶಸ್ತರಾದಾ ಅಶೇಷಬ್ರಾಹ್ಮರ ಸಭಾ ಮದ್ಯದಲ್ಲು ಸಹಿರಣ್ಯೊದಕವಾಗಿ ಭೂದಾನವನ್ನು ಮಾಡಿ, ಕುಂಭಸಂಕ್ರಮಣ ದಿವಸದಲ್ಲು ಧ್ವಜಾರೋಹಣ ರಥೋತ್ಸಹ ಮುಂತಾದ ಉತ್ಸಾಹಂಗಳು ಕ್ಲಿ[>ಕೃ]ಪೆ ಮಾಡಿ, ತನ್ನ ವಂಶಪಾರಂಪರಿಯಕ್ಕೆ ಯೀ ದೇವರನ್ನು ಕುಲಸ್ವಾಮಿ ಕೈನಪ್ರಸನ್ನೆ[>ನ್ನೀ] ಕರಿಸಿಕ್ಕೊಂಡು, ಬಹುಕಾಲ ಯೀ ಪ್ರಕಾರಾ ಯಿರುತಿದ್ದಲ್ಲಿ, ಆ ಮೇಲೆ ಕೆಳದಿ ಸಿವಪ್ಪನಾಯಕರ ಕಾಲದಲ್ಲಿ ಸಮಸ್ತದೇಶದಲ್ಲು ರೆ[>ರೇ]ಖೆ ಸಿಸ್ತು ಆಗುವಾಗ್ಯೆ, ಯೀ ದೇವರ ಅಮೃತ ನಂದಾದೀಪ್ತಿ ಉತ್ಸಹಂಗಳ ಬಗ್ಯೆ ಸಾಹಾ ಸದರಿ ಹೆಗಡೇಯು ನೇಮಕಾ ಮಾಡಿಸಿಯಿರುವ ಭೂಮಿಯನ್ನ ರೆ[>ರೇ]ಖೆಗೆ ಸೇರಿಸಿಕ್ಕೊಂಡು, ರೇಖೆ ಸಿಸ್ತು ಗ ೯೩ ತೊಂಬತ್ತು ಮೂರು ವರಾಹನ್ನ ಭೂಮಿಯನ್ನು ಸದರಿ ದೇವರಿಗೆ ಯೀ ಪ್ರಕಾರ ಉತ್ತಾರಕ್ಕೆ ಅಪ್ಪಣೆ ಆಗಿ, ತದಾರಭ್ಯಾ ನಡದು ಬಂದು ಬಹದರ ನವಾಬರ ಕಾಲ ಸ್ವಭಾನು ಸಂವತ್ಸರದಲ್ಲು ಅಪ್ಪಣೆ ಪ್ರಕಾರ ಅರವಾಸೆ ಆದ್ದರಿಂದ ಆ ಪ್ರಕಾರ ನಡದು ಬಂದು, ಆ ತರುವಾಯ ಕುಂಪಣಿ ಅಮಲಿನಲ್ಲು ದುರ್ಮತಿ ಸಂವತ್ಸರದಲ್ಲು ಹುಟ್ಟುವಳಿ ಪ್ರಕಾರ ಸರಕಾರಕ್ಕೆ ಮೇಲುವಾಸಿಗೆ ದಾಖಲು ಮಾಡಿಕ್ಕೊಂಡು, ಯೀ ದೇವರಿಗೆ ದೊರೆಗಳವರು ಗ ೫೦ ೦ ಐವತ್ತು ವರಹಾನ್ನ ತಸ್ವೀರು ನಡಸಿಕೊಡುವದರಿಂದಾ ಯೀ ದೇವರಿಗೆ ನಡವಂತಾ ಪೂಜಾವೈಭೋಗಗಳು ಪ್ರತಿ ವರುಷದಲ್ಲು ನಡವ ಉತ್ಸಹಗಳ ಮುಂತಾಗಿ ಯತಾ ಪ್ರಕಾರಕ್ಕೆ ನಡದು ಬರುತ್ತದೆ.

❖❖

೬೦
ಕಾರ್ಕಳದ ಅರಸರ ಕೈಫಿಯತ್ತು

ಮೆಕೆಂರ್ಝಿ ಸಂಪುಟ : ೩೫೧

ಕಾರ್ಕಳದಲ್ಲು ಪ್ರಾಕು ಆಳಿದಂತಾ ಅರಸುಗಳು, ಪ್ರಾಕು ಯಳದಾ[>ನಾಡ] ಹೆಗಡೆ ವಳಗಾಗಿ ಮುಖಿಸ್ತ[>ಮುಖ್ಯಸ್ಥ]ನಾಗಿ ಆಳಿಕೊಂಡು ಬಂದ ಕಾಬೇಲಿ[>ಟಿ]ನ ಹೆಗಡೆ. ಯೀ ಹೆಗಡೆಯು ಆಳಿಕೊಂಡು ಯಿರುತ್ತಿದ್ದಲ್ಲಿ, ಯೀತನ ವಶವಾಗಿ ನಡಕೊಂಡು ಯಿರುವ ಪ್ರಜೆಗಳು ಕಾಣಿಕೆ ಕಪ್ಪು ತಂದು, ಯೀ ಹೆಗಡೆ ಬೇಟೆಗೆ ಬಂದಲ್ಲಿ ಆಗೆ ಯೀ ಹೆಗಡೆಯು ಯೆರೆದುಕೊಂಡು ಮಲಗಿದಾ. ಆಗ್ಯೆ ಯೀ ಪ್ರಜೆಗಳು "ಕಾಣಿಕೆ ಕಾಯಿ ತಂದು ಯಿದ್ದೇವೆ; ಕಾಣಿಕೆ ತಗೆದುಕೊಳ್ಳಬೇಕು"ಯಂತ ಹೇಳಿಕೊಂಡು ಯಿದ್ದಲ್ಲಿ, ಯೀ ಹೆಗ್ಗಡೆಯು "ತಾನು ಮಲಗಿದಲೆ ಕಾಣಿಕೆ ತೊ[>ತೋ]ರಿ" ಯಂತ ಹೇಳಿದನು. ಆಗ್ಯೆ ಯೀ ಪ್ರಜೆಗಳು ಕೂಡಿಕೊಂಡು ತಮ್ಮಾ ತಮ್ಮಾ ವಳಗೆ ಆಲೋಚನೆಗಳ ಮಾಡಿ,* "ಅರಸು ಮಲಗಿದಲ್ಲಿ ಕಾಣಿಕೆ ತೆಗೆದುಕೊಂಬಂತಾದ್ದು ಆದಮೇಲೆ, ತಾವು ಕುಳಿತು

---

*+ಮಲಗಿದಲಿ ಕಾಣ್ಕೆ ತೆಗೆದುಕೊಂಬಂತ ಯೀತ ಅರಸು ಆದ ಮೇಲೆ, ಅದಕ್ಕೆ ಯೀ ಪ್ರಜೆಗಳು(ಸಂ).

ಕಾಣಿಕೆ ಕೊಡುವ"ಯಂತ ಪ್ರಜೆಗಳು ಬಂದ್ರು. ಮಲಗಿದ ಹೆಗಡೆ ಅಲ್ಲಿ ಕೈವಿಡಿದಾ, ಪ್ರಜೆಗಳು ಯಾವತ್ತು ಕುಳುತು ಕಾಣಿಕೆ ಕೊಟ್ಟರು. ಆಗ್ಯೆ ಯೀ ಹೆಗಡೆಯು ಪ್ರಜೆಗಳಿಗೆ "ನೀಉ ಕುಳಿತು ಕಾಣಿಕೆ ಕೊಡುವ ಬಗ್ಗೆ ಸಮ್ಮಂದವೇನು?"ಯಂತ ಕೂಡಿದಂತ ಪ್ರಜೆಗಳಿಗೆ ನಿರ್ಬಂದನೆಮಾಡಿ ಸೆರೆ ಸಂಕೋಲಿ ಹಾಕಿದ್ದರಿಂದ ಆಗ್ಗೆ ಯೀ ಪ್ರಜೆಗಳು "ನೀನಾದರೆ ನಮ್ಮ ಖಾವಂದ, ನಮ್ಮಿಂದ ಬಂದ ತಪ್ಪು ಯೇನಿದ್ದಾಗ್ಯು ಪಾಲಿಸಿ ಬಿಡಬೇಕು. ಮುಂದೆ ತಮ್ಮಾ ಅಪ್ಪಣೆ ಆದ ರೀತಿ ನಡಕೊಂಡು ಯಿರುತ್ತೇವೆಂ"ದು ಹೇಳಿಕೊಂಡು ಹೆಗಡೆ ಕೈ ಅಪ್ಪಣೆ ತಗೆದುಕೊಂಡು, ತಮ್ಮಾ ಸ್ಥಳ ಮನೇಗೆ ಹೋದವರು ಅಲ್ಲಿಂದಲು ಪ್ರಜೆಗಳು ಯಾವತ್ತು ಕೂಡಿಕೊಂಡು, "ತಮ್ಮಾಗೆ ಆದರೆ ಯೀ ಖಾವಂದ ಯೀ ರೀತಿ ನಡಸುವದಾದ್ದರಿಂದ ಯಿದಕ್ಕೆ ಮುಂದೆ ಏನಾದರೂ ಬದಲು ಪ್ರಯತ್ನ ಮಾಡಿಕೊಳ್ಳುವಂತಾದ್ದು ಯೇನು ನೋಡಬೇಕು"ಯಂತ ಪ್ರಜೆಗಳು ಕೂಡಿಕೊಂಡು ಯಿದ್ದರು.

ಆಗ್ಯೆ ಗಟ್ಟಾದ[>ಘಟ್ಟದ] ಮೇಲೆ ಹುಮ್ಮಚದಲಿ ಜಿನದತ್ತರಾಯರು ವಂಶದ ಬೈರರಸರೊಡೆಯ ಆ ಸ್ಥಳದಲ್ಲು ಮಂದಿ ಮಾರ್ಬಲ ತೆಗೆದುಕೊಂಡು ಹುಮ್ಮಾಚದ ಶೀಮೆ ಆಳಿಕ್ಕೊಂಡು ಯಿರುವಾಗ್ಯೆ, ಯೆಳನಾಡ ಹೆಗಡೆ ವಳಗೆ ಯಿರುವ ಪ್ರಜೆಗಳು ಆ ಬೈರರಸನ ಬಳಿಗೆ ಹೆಬಿರ್ಕೆ[>ಹೇಜೀಬರಿಗೆ] ಕಳುಹಿಸಿ ಕೊಟ್ಟು ಯಿದ್ದಲ್ಲಿ, ಅಲ್ಲಿಂದ ಬೈರರಸುನ ಮಂದಿ ಬಲ ಕೂಡಿಕೊಂಡು ಹುಮ್ಮಾಚದಿಂದ ಕಳಸದ ಸೀಮೆಗೆ ಬಂದು ಯೀ ಸೀಮೆಯನ್ನು ತನ್ನ ಸ್ವಾಧೀನ ಮಾಡಿಕ್ಕೊಂಡು, ಅಲ್ಲಿಂದ ಕಳಸದ ಘಟ್ಟಕ್ಕಾಗಿ ಯಿಳದು ಕೆರವಸೆಯಂಬ ಊರಿಗೆ ಬಂದು ಯಿದ್ದಲ್ಲಿ, ಆಗ್ಯೆ ಯೀ ಹೆಗಡೆ ವಳಗೆ ನಡಕೊಂಡು ಯಿರುವ ಪ್ರಜೆಗಳು ಕೂಡಿಕೊಂಡು ಆ ಬೈರರಸ ಭೇಟಿಗೆ ಹೋಗಿ ಅಲ್ಲಿ ಕಾಣಿಸಿಕೊಂಡು, ತಮ್ಮ ಸುಖಕಷ್ಟಗಳ ಹೇಳಿಕೊಂಡು ಯಿದ್ದಲ್ಲಿ, ಆತನು ಈ ಪ್ರಜೆಗಳಿಗೆ ಧೈರ್ಯದಿಂದ ಭಾಷೆಕೊಟ್ಟು ಯಿದ್ದಲ್ಲಿ, ಆತನ ಭರವಸೆಯಲ್ಲಿ ಯಿದ್ದರು. ಯೀ ಬೈರರಸ ಆ ಕೆರೆವಶೆಯಂಬ ಊರಲ್ಲಿ ಅರಮನೆಗಳ ಕಟ್ಟಿಸಿ ಅಲ್ಲಿಯಿದ್ದರು. ಆ ಮೇಲೆ ಅಲ್ಲಿಂದ ಮಂದಿ ಕುದುರೆ ಯಾವತ್ತು ಕೂಡಿಕೊಂಡು ಆ ಕಾಬೇಟಿ ನಲ್ಲೂರಿಗೆ ಬಂದರು. ಯೀ ಹೆಗಡೇಯು ತನ್ನ ಕುಟುಂಬ ಸಹಿತವಾಗಿ ತಗೆದುಕೊಂಡು ಪರಾರಿಯಾಗಿ ಘಟ್ಟದ ಮೇಲೆ ಹೋದ.

ಆ ಮೇಲೆಯೂ ಬೈರರಸನು ಕಾಬೇಟಿನ ಹೆಗಡೆ ಮನೇಯ ಬಳಿಯ ಅರಮನೆ ಬಳಿಯಲ್ಲಿ ಅರಮನೆ ಕಟ್ಟುವ ಬಗ್ಗೆ ಜಾಗ ನೋಡಬೇಕು ಯಂತ ಹೋದಲ್ಲಿ, ಆ ಸ್ಥಳದಲ್ಲಿ ವೊಂದು ಮೊಲಾ ಯೆದು[>ದ್ದು]ಕೊಂಡು ಯಿವರ ಸಂಗಡ ಬಂದ ನಾಯಿಗೆ ಅಟ್ಟಾಡಿದ್ದರಿಂದ ಯಿದ ಕಂಡು, "ಯೀ ಜಾಗಾ ಆದರೆ ಗಂಡಸ್ಥಳ ಯಿದ್ದಂತಾದ್ದು, ಯಿದೇ ಜಾಗಾದಲ್ಲಿ ಅರಮನೆ ಕಟ್ಟಬೇಕು"ಯಂತ, "ಕೆಸರಕಲ್ಲು ಹಾಕಿ ಅರಮನೆ ಕಟ್ಟಿಸಿ, ಪ್ರವೇಶ ಆಗಬೇಕು"ಯಂತ ಮಾಡಿದಲ್ಲಿ, ಆ ಹೆಗಡೆ ಆಳಿಕೊಂಡು ಯಿದ್ದ ಜಾಗದಲ್ಲಿ ಯಿದ್ದಂತ ದೈವದ ಉಪದ್ರವದಿಂದ ವಕ್ಕಲತನ ಆಗುವ ಬಗ್ಗೆ ದೈವ ಉಪದ್ರ ಕೊಟ್ಟದ್ದರಿಂದ, ಯೀ ದಯಿವಕ್ಕೆ ನಾನಾ ಪ್ರಕಾರದಲ್ಲೂ ವಡಂಬಡಿಕೆ ಮಾಡಿದಾಗ್ಯೂ ಆ ದಯಿವ ಕೇಳದ್ದರಿಂದ, ಯಿದಕ್ಕೆ ಬಲ್ಲಾದವರ ಕೈಯ್ಯ ದಯಿವ ಬರಶಿ ಕೇಳಿದಲ್ಲಿ, ಆ ದೈವಲು "ಆ ಹೆಗಡೆ ಕೈಯಿಂದ ತನಗೆ ವೊಂದು ತೆಂಗಿನಕಾಯಿ ಕೊಟ್ಟಾಗ್ಯೂ ವೊಡಂಬಡಿಕೆ ಹೊರತು ಅನ್ಯತ್ಯಾ ವಬ್ಬರು ಕನಕಾಭಿಷೇಕ ಮಾಡಿದಾಗ್ಯೂ ವೊಡಂಬಡಿಕೆ ಯಿಲ್ಲ"ಯಂತ ಆ ದೈವ ಹೇಳಿದಲ್ಲಿ, ಆ ಹೆಗಡೆಗೆ ಆತಕ ದೈರ್ಯ ದಿಲಾಶೆ ಹೇಳಿ ಕಳುಹಿ, ಸಂಬಲಿಗೆ ಮೇಲೆ ಆ ಹೆಗಡೆಯ ಕರಶಿ, ಆ

ದೈವಕ್ಕೆ ವಡಂಬಡಿಕೆ ಹೇಳಿಶಿದ ಮೇಲೆ ದೈವ ಉಪದ್ರ ನಿಂತು ಹೋಯಿತು. ಆ ಮೇಲೆ ಆ ಬೈರರಸ ಕಟ್ಟಿಸಿದ ಅರಮನೇಗೆ ವಕ್ಕಲತನ ಆದರು. ಯೀ ಹೆಗಡೀಗೆ ಯೀತನ ಸ್ಥಳ ಮನೇಯಲ್ಲಿ ಯಿಟ್ಟು, ಉಂಬಳಿ ಗದ್ಯಾಣ ೧೨೯೨ ಬಿಟ್ಟು ಕೊಟ್ಟು, ಯೀ ಹೆಗಡೆ ತನ್ನ ಮನೆತನ ನೋಡಿಕ್ಕೊಂಡು ಯಿದ್ದ. ಯೀ ಬೈರರಸ, ಯೀ ಹೆಗಡೆ ಆಳಿಕ್ಕೊಂಡು ಬಂದಂತಾ ಊರು ಯಾವತ್ತೂ ಅನುಭವಿಶಿಕೊಂಡು ಯಿದ್ದರು.

ತದನಂತರದಲ್ಲಿ "ತನ್ನ ಕುಲಾಧರ್ಮಕ್ಕೆ ವೊಂದು, ಕುಲದೇವರಿಗೆ ವೊಂದು, ಸ್ಥಳ ಕಟ್ಟಿಸಬೇಕು"ಯಂತ ಯೀ ಬೈರರಸನು ತಾನು ಕಟ್ಟಿಸಿದ ಅರಮನೆಯಿಂದ ದಕ್ಷಿಣದಲ್ಲು ಜಾಗಾ ನೋಡುವ ಬಗ್ಗೆ ಹೋದಲ್ಲಿ, ಆ ಸ್ಥಳದಲ್ಲಿ ಕಾರೆಮರದ ಬುಡದಲ್ಲಿ ಹುಲಿ ಗೋಉ ಸಹಾ ಕೂಡಿಕೊಂಡು ಇರುವಂತಾದ್ದು ಕಂಡು ಯಿದ್ದಲ್ಲಿ, ಯಿದು ವೈರ ಕೈಲಿದ್ದ ಜಾಗಾಯೆಂದು ಆ ಸ್ಥಳದಲ್ಲು ತನ್ನ ಕುಲದೇವರು ನೇಮೇಶ್ವರದೇವರಿಗೆ ಚೈತ್ಯಾಲಯವನ್ನು ಕಟ್ಟಿಸಿ, ದೇವರಿಗೆ ಪ್ರತಿಷ್ಟೆಯನ್ನು ವಾಡಿಶಿದನು. ಆ ವೇಲೆ ತಾನು ಆಳಿಕೊಂಡು ಬರುವಂತಾ ಊರಿಗೆ ವೊಂದು ಹೆಸರಿಡಬೇಕುಯೆಂದು ಆಲೋಚನೆ ಮಾಡಿ ಕಾರೆಮರನ ಬುಡದಲ್ಲಿ ಹುಲಿಯು ಗೋಉ ವೊಂದು ಕಡೆಯಿದ್ದು ಕಾರಣ ಯೀ ಊರಿಗೆ ಕಾರಕಳಯಂತ ಹೆಸರಿಟ್ಟು, ಯೀ ಹೆಸರು ಪ್ರಖ್ಯಾತ ಮಾಡಿ, ಯಡಬಲದಲ್ಲು ಯಿದ್ದಂತಾ ಊರನ್ನು ಸಾದ್ಯಗಳು ಮಾಡಿಕ್ಕೊಂಡು, ಆಯಿದು ಸಾವಿರ ಶೀಮೆ ಪರಯಂತ್ರ ಸ್ವಾದೀನ ಮಾಡಿಕ್ಕೊಂಡು, ಯಿದರಲ್ಲಿ ಕಾರಕಳ ಹೊಬಳಿಯಂತ ಹೆಸರಿಟ್ಟು, ಯಿದಕ್ಕೆ ಐದು ಮಾಗಣಿ ಮೊಕರೂರು ಮಾಡಿ, ಕೆರವಶೆಯಂತ ಮಾಗಣಿ ೧, ಕಾರಕಳಯಂತ ಮಾಗಣಿ ೧, ಪೆದ್ದೂರಯಂತ ಮಾಗಣಿ ೧, ಆರೂರುಯಂತ ಮಾಗಣಿ ೧, ಮೂರೂರಯಂತ ಮಾಗಣಿ ೧ – ಯೀ ಪ್ರಕಾರ ಮಾಗಣಿಗಳ ಮಾಡಿ, ಯಿದಕ್ಕೆಲ್ಲಾ ಹೆಸರು ಯಿಟ್ಟು ಆಳಿಕ್ಕೊಂಡು ಯಿದ್ದಾ. ಆ ಮೇಲೆ ಹೆರಿಯಂಗಡಿ ಪೇಟೆ ಮೂಡದಿಕ್ಕಿನಲ್ಲು ತಿರುಗಾವೊಂದು ಅರಮನೆ ಕಟ್ಟಿಸಿ ವಕ್ಕಲು ಆಗಿ, ಆ ಮೇಲೆ ದಿನೆ ದಿನೆ ರಾಜಕಾರ್ಯ ಮಾಡಿಕ್ಕೊಂಡು ಆಳಿ ಕೊಳ್ಲತ್ತಾ ಯಿದ್ದ.

ಆ ಮೇಲೆ ತಾನು ವೊಂದು ಕಾರಕಳದ ಸಂಸ್ಥಾನದವನು ಯಂತ ಮಾಡಿಕ್ಕೊಂಡು, ಯಿದಕ್ಕೆ ಹೊಗಳಿಕೆ ಬಿರುದಾವಳಿ: "ಸ್ವಸ್ತಿ ಶ್ರೀ ಮಹಾಮಂಡಲೇಶ್ವರ, ಅರಿರಾಯರ ಗಂಡ, ಆಡಿದ ಭಾಷೇಗೆ ತಪ್ಪುವ ರಾಯರ ಗಂಡ, ಮರೆಹೊಕ್ಕವರ ಕಾಯುವ – ಮಲತ್ತರ ಗೆಲ್ಲುವ ಮಲ್ಲ, ಬಂಟರ ನಿಕಳಂಕಲೋಹಾ, ಪರನಾರಿಸಹೋದರಾ, ಅರವತ್ತು ನಾಲ್ಕು ಮಂಡಲಿಕರ ಗಂಡ, ಗುತ್ತಿ ಹನಿಬರ ಗಂಡ, ಪಟೆ–ವೊಂಬುಚ ಪುರವರಾದೀಶ್ವರ, ಸುವರ್ನಕಲಶಸ್ಥಾಪನಾಚಾರ್ಯ, ಶ್ರೀ ವೀರಬೈರವೇಂದ್ರರ ಸೋಮವಂಶ, ಕಾಶ್ಯಪಗೋತ್ರ, ಸತ್ಪಾತ್ರದಾನ, ಜಿನಪೂಜಾದುರಂಧರರಾದ ಕಾರಕಳದ ಶಿದ್ದ ಸಿಹ್ವಾಸನಾಧೀಶ್ವರರಾದ" ಯೀ ಪ್ರಕಾರ ಬಿರುದಾವಳಿ ಹೇಳಿಸಿಕೊಂಡು ಆಳಿಕ್ಕೊಂಡು ಯಿರುತ್ತಿದ್ದ. ತದನಂತರದಲ್ಲಿ ಯೀತನ ಮಗ ಯಿಮ್ಮಾಡ[>ಇಮ್ಮಡಿ] ಬೈರರಸ ವೊಡೇರು, ಯೀತನ ಮಗ ರಾಮನಾಥವೊಡೇರು, ತದನಂತರ ಯೀತನ ಮಗ ಪಾಂಡಪ್ಪವೊಡೇರು, ಯೀ ತದನಂತರದಲ್ಲು ಬೊಮ್ಮರಾಜವೊಡೇರು, ಯೀ ತದನಂತರ ಪಾಂಡಪ್ಪವೊಡೇರು, ಯೀ ತದನಂತರ ಕರಿಬೈರರಸವಡೇರು, ಯೀತನ ನಂತರ ಪರಿಯಂತ್ರ ಆಳಿಕ್ಕೊಂಡು ಬಂದರು. ಯೀ ಬೈರರಸನ ಪಟ್ಟದಲ್ಲು ಆಳಿಕ್ಕೊಂಡು ಬಂದಂತಾ ಅರಸುಗಳ ವಳಗೆ ಪಾಂಡ್ಯಪ್ಪವೊಡೇರು ಯಂಬವನು ತನ್ನ ಕಾಲದಲ್ಲು ತಮ್ಮ ಕುಲಧರ್ಮದ ಗುರುಗಳ ಉಪದೇಶದಿಂದ "ನೀವಾದರೆ ಜಯಿನಮತದಲ್ಲಿ ಜನಿ[>ಜಿನ]ದತರಾಯನ ವಂಶಾವಳಿಯಲ್ಲಿ

ಹುಟ್ಟಿದವನೀಗ ಯೀ ದೇಶಕ್ಕೆ ಬಂದು, ಯೀ ಊರು ದೊರೆತನ ಆಳಿಕೊಂಡು ಬಂದದ್ದಾಯಿತು. ನೀನು ವಬ್ಬ ಸಂಸ್ಥಾನದಲ್ಲಿ ಅಧಿಪತಿ ಆದ ಮೇಲೆ ನಿನ್ನ ಕೀರ್ತಿ ಯಾವತ್ತು ಜನರು ಹೊಗಳಬೇಕು. ಯೀ ಬಗ್ಯೆ ಜೈನಮತಕ್ಕೆ ಉದ್ದಾರವಾಗಿ ವಪ್ಪುವಂತ ದೆವರಿಗೆ ಮನೆ ಪ್ರತಿಷ್ಟೆ ಮಾಡಿಸಬೇಕು"ಯಂತ ಯಿವರ ಮತದಲ್ಲಿ ಕೀರ್ತಿಗುರುಗಳು ಯೀ ಪಾಂಡಪವೊಡೇರಿಗೆ ಉಪದೇಶವಾದ್ದರಿಂದ, ಯಿವರ ವಚನಪ್ರಕಾರ ಯೀ ಬೈರರಸನ ಅರಮನೆ ಪೂರ್ವದಿಕ್ಕಿನಲ್ಲು ಕಲಿಬೆಟ್ಟದ ಮೇಲೆ ಶಿಲಾಮಯದ ಗುಮ್ಮಟನ ಬಿಂಬವನ್ನು ಜ[>ಚಿ]ಕ್ಕಣ್ಣಾಚಾರಿ ಕೈ[>ಲಿ] ಮಾಡಿಸಿ, ಪ್ರತಿಮೆಯನ್ನು ಶಿಲಾಸ್ಥಾಪನೆ ಮಾಡಿಸಿದರು. ಯೀ ಪ್ರತಿಮೆ ನಿಲಿಸಿದ ಮೇಲೆ ಯೀ ಜ[>ಚಿ] ಕ್ಕಣಾಚಾರಿಗೆ ಕರಶಿ "ನನ್ನ ಸ್ಥಳದಲ್ಲಿ ಯೀ ಪ್ರತಿಮೆ ಮಾಡಿಸಿದ ಮೇಲೆ ಬೇರೆ ಯಿನ್ನೊಂದು ಸ್ಥಳದಲ್ಲಿ ಯಿದೇ ರೀತಿ ಗುಮ್ಮಟನ ಪ್ರತಿಮೆ ಮಾಡಬಾರದು"ಯಂತ ಹೇಳಿ, ಆ ಚಿಕ್ಕಣಾಚಾರಿಗೆ ಬಲಭಾಗದ ವೊಂದು ಕೈಯ್ಯ ಹಸ್ತ ತಗೆಸಿ ಬಿಟ್ಟು ಕಳುಹಿಸಿ ಕೊಟ್ಟು ಯಿದ್ದಲ್ಲಿ, ಯೀ ಚಿಕ್ಕಣಾಚಾರಿಯು ಅಜಿಲ್ಲರ ಶೀಮೆ ಆಳುವಂತ ಅಜಿಲ್ಲರನ ಭೇಟಿ ಮಾಡಿಕ್ಕೊಂಡು ಯಿದ್ದಲ್ಲಿ, ಆಗ್ಯೆ ಯೀ ಚಿಕ್ಕಣ್ಣಾಚಾರಿಯು ಕಾರಕಳದಲ್ಲಿ ಪಾಂಡಪ್ಪವೊಡೇರು ಮಾಡಿಸಿದಂತಾ ಪೂರ್ವೋತ್ತರಗಳು ಹೇಳಿ, ಆ ಪ್ರತಿಮ್ಮಾನಾಯಕೆ[>ಕಗೆ] ಯಿ ಅಚಿ[>ಜಿ]ಲರು "ತನ್ನ ಸ್ಥಳದಲ್ಲು ವೊಂದು ಗುಮ್ಮಟಪ್ರತಿಮೆ ಮಾಡಿಕೊಡಬೇಕು"ಯಂತ ಹೇಳಿದಲ್ಲಿ, ಆ ಮೇರೆಗೆ ಪ್ರತಿಮಾನಾಯಕ ಗುಮ್ಮಟನ ಪ್ರತಿಮೆ ಮಾಡಿಕೊಟ್ಟಲ್ಲಿ. ಯೀ ಪ್ರತಿಮೆ ಸ್ಥಾಪನೆ ಮಾಡಿಸುವಂತಾ ಸಮಯದಲ್ಲಿ, ಯೀ ವರ್ತಮಾನ ಕಾರಕಳದ ಪಾಂಡಪ್ಪವೊಡೇರು ಕೇಳಿದಲ್ಲಿ, ಆ ಆಜಿಲೀರ ಮೇಲೆ ಕಾಳಗಕ್ಕೆ ಮಂದಿ ಕುದರೆಗಳ ತಗೆದುಕೊಂಡು ಹೋಗಿ, ಮಾಡಿಸಿದಂತಾ ಗುಮ್ಮಟನ ಪ್ರತಿಮೆಯನ್ನು ಪ್ರತಿಷ್ಟೆ ಮಾಡುವದಕ್ಕೆ ಬಿಡದೆ ಯಿದ್ದದರಿಂದ, ಆಗ್ಯೆ ಯೀ ಪಾಂಡಪ್ಪವೊಡೇರಿಗೆ ಯೀ ಅಜಲರು ತಾಉ ಅನುಭವಿಸಿಕೊಂಡು ಬರುವಂತಾ ಶೀಮೆಯಿಂದ ನಾರಾಲಿ ಶೀಮೆಯಂಬ ಊರು ಉಂಬಳಿ ಬಿಟ್ಟುಕೊಟ್ಟು ಯಿದ್ದಲ್ಲಿ, ಆ ಮೇಲೆ ವೀವೇಕವಾಗಿ ಯಿರುವಲ್ಲಿ, ಆ ಅಜಲಿರು ತಾಉ ಮಾಡಿಶಿದಂತಾ ಗುಮ್ಮಟನ ಪ್ರತಿಮೆಯನ್ನು ಸ್ಥಾಪನೆ ಮಾಡಿಸಿದರು. ಯೀ ಪಾಂಡಪ್ಪವೊಡೇರು ತಮ್ಮಾ ಶೀಮೆ ಅಜಲಿರು ಉಂಬಳಿ ಬಿಟ್ಟಂತಾ ನಾರಾಲಿ ಶೀಮೆ ಸಹಾ ಅನುಭವಿಶಿ ಬಂದರು.

ಆ ಮೇಲೆ ಯೀ ತದನಂತರದ ಪಾಂಡಪ್ಪ ವೊಡೇರು ಯಂಬವರು, ಯೀ ಗುಮ್ಮಟಪ್ರತಿಮೆ ಉತ್ತರದಿಕ್ಕಿನಲ್ಲು ಸಣ್ಣ ಬೆಟ್ಟದಲ್ಲು ಚತುರ್ಮುಖದ ಚೈತ್ಯಾಲಯವನ್ನು ಕಟ್ಟಿಸಿ ನಾಲ್ಕು ಬಾಗಲಕ್ಕು ಅವರ ಕುಲಧರ್ಮ ದೇವರು ಪ್ರತಿಷ್ಟೆ ಮಾಡಿಸಿದರು. ಯಿವರು ಆಳಿದ ತದನಂತರ ಕರಿಬೈರರಸ ಆಳಿಕ್ಕೊಂಡು ಯಿರುವಂತಾ ಸಯಮದಲ್ಲೂ ಸಂಸ್ಥಾನದ ಅರಸುಗಳು ಕಂಡು[>ದಂಡು] ತೆಗೆದುಕೊಂಡು ಬಂದರೆ ಯೀ ಬಗ್ಯೆ ಬಂಗರು, ಅಜಲಿರು, ಚಉಟರು, ಮೂಲಿರು ಸಹಾ ಕಾರಕಳಕ್ಕೆ ಬಂದು ನಾಉ ಯೆಲ್ಲಾ ವೊಂದು ಮತದವರು ಯಿದ್ದೇವೆ, ಯಿದಕ್ಕೆ ತಾಉ ತಾಉ ಮಾತನಾಡಿಕ್ಕೊಂಡು ಯಾವ ಕೆಲಸ ಬಂದು ಬಿದ್ದಾಗ್ಯೂ ಯಿದಕೆಲ್ಲಾ ತಾವು ಐದು ಮಂದಿ ವೊಂದೆ ಸರಿ, ಬದಲಿ ಯೋಚನೆ ಮಾಡ ಕೆಲಸವಿಲ್ಲಾ, ಯಿದರಲ್ಲಿ ಯಾರು ಅಡ್ಡಯೋಚನೆ ಮಾಡಬಾರದು" ಯಂದು, ಯಿದಕ್ಕೆ ತಾಉ ತಾಉ "ತಂದೇ ಸರಿಯಂತ" ಯೀ ಬೈರರಸಗೆ ಕೊಡುವಾಗ್ಯೆ, ಚಉಟತಿಯ್ಯು ನಂಬುಗೆ ಕೊಡುವಾಗ್ಯೆ ಕೈಯಿಯಲ್ಲು ವೊಂದು ಜೀವದ ನೊಣ ಹಿಡಿದು "ಯೀ ಜೀವ ಯಿರುವ ಸಿರಯಂತ್ರ ನಾವು ವೊಂದೆ ಸರಿಯಂತ" ಭಾಷೆಕೊಟ್ಟು ಕೈಮೇಲೆ ಕೈ ಹೊಡದು, ತಾಉ ತಾಉ ಹೊರಟು ಹೋಗುವಂತ ಸಮಯದಲ್ಲಿ, ಚೈಉತಟಿಯ್ಯು ಕೈಯ್ಯಲ್ಲು ಹಿಡಿದಂತಾ

ಜೀವ ನೊಣಾವನ್ನು ಕೊಂದುಬಿಟ್ಟು ಹೋಗಿ, ತನ್ನ ಊರಿಗೆ ಹೋಗಿ ಕುಳಿತು, ಯಿಕ್ಕೇರಿ ಸೀಮೆ ಆಳಿಕ್ಕೊಂಡು ಯಿರುವ ಅರಸಿಗೆ ಸಂಚು ನಡಶಿದ ವರ್ತಮಾನವು ಯೀ ಬೈರರಸನು ತಿಳಕೊಂಡವನಾಗಿ, ಆ ಮೇಲೆ ಆ ಚಉಟತಿ ಮೇಲೆ ಯೀ ಬೈರರಸನು "ತನ್ನ ಕೈಯ್ಯು ಯೀ ರೀತಿ ಆಣೆ ಭಾಷೆಗಳ ಕೊಟ್ಟ, ವೊಳಗಿನಿಂದ ವಳಗೆ ಸಂಚು ನಡಸಿದಳೆ"ಯಂತ ಯೀ ಬೈರರಸನು ಚೈಉಟತಿಯ ಮೇಲೆ ದಂಡು ತೆಗೆದುಕೊಂಡು ಹೋಗಿ, ಆ ಚಉಟತೀಗೆ ನಂಬಿಕೆ ಮೇಲೆ ಕರಶಿದಲ್ಲಿ, ಅವಳು ಪರಾರಿಯಾಗಿ ಹೋಗುವಂತಾ ಸಮಯದಲ್ಲಿ, ಯಡದಾರಿ ಸಾಣೂರಗ್ರಾಮದ ಬಳಿಯ ಶಿರದಲ್ಲಿ ತಲೆ ಹೊಡ[>ಹಿಡಿ]ದರು. ಯೀ ಬಗ್ಯೆ ಸಾಣೋರಗ್ರಾಮದಿಂದ ಚಉಟತೀಗೆ ಗ ೪೦ ೦ನ್ನು ಉಂಬಳಿ ಬಿಟ್ಟು, ಆ ಮೇಲೆ ಯೇಕಸ್ತರ ಆದರು. ಯೀ ಭೈರರಸನ ಯಿಕ್ಕೇರಿ ಸಂಸ್ಥಾನದ ಅರಸು ಮಂದಿ ಮಾರ್ಬಲ ತೆಗೆದುಕ್ಕೊಂಡು ಬಂದು ಘಟ್ಟದ ಕೆಳಗಣ ಶೀಮೆಯನ್ನು ಸಾದ್ಯಾಮಾಡಿಕ್ಕೊಂಡು ಆಳಿಕೊಂಡು ಬಂದರು.

ಯೀ ಬೈರರಸನು ಆಳಿಕ್ಕೊಂಡು ಬಂದ ಕಾರಕಳ ಊರಿಗೆ ಮೊಕರೂರು ಮಾಡಿದ ಮಾಗಣಿಗಳಲ್ಲು ಯಿರುವಂತಾ ದೇವಸ್ಥಾನಗಳು ಬಸ್ತಿಗಳು ಯಿರುವ ವಿವರ: ಕಾರಕಳದ ಮಾಗಣಿಯಲ್ಲು ಕಸಬಾ ಗ್ರಾಮದಲ್ಲೂ ಮಾತಬರದೇವರು, ಪ್ರಾಕು ಯೀ ಭೈರರಸನ ಮಗ ಪಾಂಡ್ಯರಾಜ ಕಾಲದಲ್ಲು ಪ್ರತಿಷ್ಟೆ ಮಾಡಿಸಿದ ಅನಂತಶಯನದೇವರು ವೊಂದು, ಪ್ರಾಕು ಯೇಳನಾಡ ಹೆಗಡೆ ವೊಳಗೆ ಮುಖ್ಯವಾದ ಕಾಬೇಟಿನ ಹೆಗಡೆ ಕಾಲದಲ್ಲು ಪ್ರತಿಷ್ಟೆ ಮಾಡಿಸಿದ ಬ್ರಹ್ಮೇಶ್ವರದ ಬ್ರಹ್ಮಲಿಂಗ ದೇವರು ೧, ಗೋಪಾಲಕೃಷ್ಣ ದೇವರು ೧, ಚೋಳಪಾಡಿ ಗೋಪಾಳಕ್ರಿಷ್ಣದೇವರು ೧, ಬೆಟ್ಟದಂಗಡಿಯಲ್ಲು ನೆಕರಜೆ ಕಾಳಿಕಾ ಅಮ್ಮಾನವರ ದೇವಸ್ತಾನ ೧, ಅಗ್ರಹಾರ ಜನಾರ್ದನ ದೇವರು ೧, ಕಲಮಟದ ಗೋಪಾಲಕೃಷ್ಣದೇವರು ೧, ಹೆಗಡೆ ಬೆಟ್ಟದ ವಿನಾಯಕ ದೇವರು ೧, ಕನಪೇಟೆಯಲ್ಲು ಕೊಂಕಣಿಗಳು ಪ್ರತಿಷ್ಟೆ ಮಾಡಿಸಿದ ವೆಂಕತಟಮಣದೇವರ ದೇವಸ್ತಾನ ೧, ಕೋಟೆ ಹನುಮಂತದೇವರು ದೇವಸ್ಥಾನ ಪೇಟೆಯಲ್ಲಿಯೂ ವೆಂಕಟರಮಣದೇವರ ಯದರು ನಿಲ್ಲಿಸಿದ ಹನುಮಂತ ದೇವರು ದೇವಸ್ಥಾನ. ೧, ಅಂತು ಕಸಬಾ ಕಾರಕಳದ ಗ್ರಾಮದಲ್ಲು ದೇವಸ್ಥಾನ ೧೧. ಬಸ್ತಿಗಳ ವಿವರ: ಕು[>ಕರಿ]ಬೈರರಸನು ಕಟ್ಟಿಸಿದ ನೇಮೀಶ್ವರ ಬಸ್ತಿ ೧, ಚತುರ್ಮುಖ ಬಸ್ತಿ ೧, ಬೆಟ್ಟದಲ್ಲು ನಿಲ್ಲಿಸಿದ ಗುಮ್ಮಾಟದ ಪ್ರತಿಮೆ ೧, ಯೀ ಬೈರರಸನ ಪೇಟೇಲಿ ಆಳಿಕ್ಕೊಂಡು ಬಂದ ತರುವಾಯ ಯೀ ಹಿರಿಯಂಗಡಿ ಪೇಟೆಯಲ್ಲು ಯಿರುವಂತ ಹಲ್ಲರು ಕೂಡಿ ನೇಮಿಸಿದ ಬಸ್ತಿ, ಪೂರ್ವದಿಕ್ಕಿನದಲ್ಲು ಕಟ್ಟಿಸಿದ ಹಲ್ಲರ ಬಸ್ತಿ ಪದ್ಮಾವತಿ ದೇವರು ೧, ಜೈನರ ಮತದ ಗುರುಗಳ ಬಗ್ಯೆ ದೊಡ್ಡೋರು ಕಟ್ಟಿಸಿದ ಗುರುರಾಯ ಬಸ್ತಿ ೧, ಗುಮ್ಮಾಕರಿ ಕಟ್ಟಿಸಿದ ಪಾರಿಸ್ವನಾಥ ಬಸ್ತಿ ೧, ಅಬದಾರ ಕಟ್ಟಿಸಿದ ಚಂದ್ರನಾಥ ಬಸ್ತಿ ೧, ವರಂಗದ ಜೆಯ್ಯು ಕಟ್ಟಿಸಿದ ಚಂದ್ರನಾಥ ಬಸ್ತಿ ೧, ಬೊಮ್ಮೆರಾಜವೊಡೇರು ಕಟ್ಟಿಸಿದ ಬಸ್ತಿ ೧, ಅಂತು ಬಸ್ತಿ ೯. ಪ್ರಾಕು ಯೇಳುನಾಡ ಹೆಗಡೆ ಮುಖ್ಯವಾದ ಕಾಬೇಲಿ[>ಟಿ]ನ ಹೆಗಡೆ ಕಾಲದಲ್ಲಿ ಕಟ್ಟಿಸಿದ ಅಡಗರೆ ಬಸ್ತಿ ೧, ಉಭಯ ಬಸ್ತಿ ೧೦, ಉಭಯಂ ದೇವರು ೧೧, ಬಸ್ತಿ ೧೦. ಪೆರೆವಾಚೆಗ್ರಾಮದಲ್ಲೂ ಮಾಡಿಸಿದಂತಾ ಮಹಾಲಿಂಗದೇವರ ದೇವಸ್ಥಾನ ೧, ಶಾಸ್ತಾವಿ ಮಹಾಲಿಂಗದೇವರ ದೇವಸ್ಥಾನ ೧, ಉಭಯಂ ದೇವಸ್ಥಾನ ೨, ಉಭಯಂ ಗ್ರಾಮ ೨ರ ದೇವಸ್ಥಾನ ೧೩, ಬಸ್ತಿ ೧೦. ಯೀ ಪ್ರಕಾರ ಯರಡು ಗ್ರಾಮದಲ್ಲು ದೇವರ ಬಸ್ತಿ ಸಹಾ ಪ್ರತಿಷ್ಟೆ ಮಾಡಿಸಿ ಯಿದ್ದಾರೆ. ಯೀ ದೇವರ ಉತ್ತರ ಸಲುವಾಗಿ ಸರಕಾರದಿಂದ ತಸಲೀತು ಮೊಕರೂರು ಆಗಿಯಿದೆ॥

❖❖

೬೧

ಕಾಳತೋಡು ಮಾಗಣೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಪ್ರಾಕು ಯೀ ಮಾಗಣೆಯು ಕಾನಾವ[>ಕಣ್ವ]ರುಷೀಶ್ವರ ಆಶ್ರಮವಾಗಿದ್ದರಿಂದಲು, ಯೀ ಸ್ಥಳದಲ್ಲು ಶ್ರೀ ಮಹಾಲಿಂಗದೇವರು ಯಂತ ಉದ್ಭವವಾಗಿ ಯಿರುವದಿರಂದ, ಯೀ ಮಾಗಣೀಗೆ ಕಾನ್ವರುಷೀಶ್ವರನ ಆಶ್ರಮವಾಗಿರುವದರಿಂದ ಕಾನ್ವಕೊಡುಯಂತ ಹೆಸರು ಬಿತ್ತು. ಯೀ ಮಾಗಣೆ ಯೀ ಪ್ರಾಕು ಭಟ್ಟಕಳ ತಾಲೂಕಯಲ್ಲು ಯಿರುವ ಬೀರ್‍ರಾದೇವಿ ತಾಲೂಕು, ಯಿದು ಅನುಭವಿಸಿಕೊಂಡು ಬರುತ್ತಿದ್ದಲ್ಲಿ ಯೀ ವರೇಗೆ ನಡೇತು. ಆ ಮೇಲೆ ವೆಂಕಟಪ್ಪನಾಯಕರ ದಿವಸದಲ್ಲಿ ಬೀರಾದೇವಿ ಕೈಯ್ಯಲಿರುವದನ್ನು ಹೊಡದು ತೆಗದುಕ್ಕೊಂಡು ಬಗ್ವಾಲಿ ಹೊಬಳಿಗೆ ದಾಖಲು ಆಗಿ, ಬಗ್ವಾಲಿ ಹೊಬಳಿ ಬದುಕು ಮಾಡಿದವನ ಕಡೆ ಮಣಿಗಾರನ ಮುಖಾಂತ್ರ ನಡದು ಬಂತು. ಈ ಮೇಲೆ ಬಹದರನು ಯೀ ರಾಜ್ಯವನ್ನು ತೆಗೆದುಕ್ಕೊಂಡ ಮೇಲೆ ಸ್ವಭಾನು ಸಂವತ್ಸರದಲ್ಲು ಶ್ಯಾಮಯ್ಯಾ ಯಂಬವನು ಬಲ್ಲಾಳಿಕೆಯನ್ನು ಮಾಡಿಕ್ಕೊಂಡು, ಗ್ರಾಮಗಳು ಗುತ್ತಿಗೆ ಮಾಡಿಕ್ಕೊಂಡು, ಕೈಕಾಗದ ಕೊಟ್ಟು, ಯೆಂಟ ವರುಷ ಪರಿಯಂತ್ರ ಅನುಭವಿಸಿಕ್ಕೊಂಡು ಬರುತಿದ್ದಲ್ಲಿ, ಆ ಮೇಲೆ ಪ್ರಾಕು ಪ್ರಕಾರ ಶೀಮೆಯನ್ನು ಬಗ್ವಾಲಿ ಹೊಬಳಿ ಯಿವರ ಕಡೆ ಮಣಿಗಾರನ ಮುಖಾಂತ್ರ ಸರಕಾರದ ಹಣ ವಗ್ಯೆರೆ ವಸುಲಾಗತಿತ್ತು. ಆಮೇಲೆ ಸುಲತಾನರ ಕಾಲದಲ್ಲಿ ಆನಂದ ಸಂವತ್ಸರದ ವರೇಗೆ ನಡೇತು. ರಾಕ್ಷಸ ಸಂವತ್ಸರದಲ್ಲಿ ತುಕಡಿಯಾಗಿ ಹಳ್ಳಿಕೇರಿ ತುಕಡೀಗೆ ಸೇರಿಸಿದರಿಂದ ತುಕಡಿ ಬಾರಕೂರವರ ಮುಖಾಂತ್ರ ನಡದು ಬಂತು. ಆ ಮೇಲೆ ಕುಂಪಣಿ ಆಮಲಿನಲ್ಲು ಪಟೇಲರ ಮುಖಾಂತ್ರ ಗೊತ್ತು ಮಾಡಿ ಯಿರುವದರಿಂದಲು ಮಾಗಣಿಗ್ರಾಮ ೪ರ ಪಟೇಲರು:

೧. ಕಸಬಾ ಕುಳಕೊಡ ವೆಂಕಟಪತ್ಯೆಯ್ಯ ೧. ಸಣ್ಣಮಹಲಿಂಗ್ಯೆಯ್ಯ ೧.

೧. ಪಡು ಹೆರಂಜಾಲ ವಾಸುದೇವ ಹೆಬ್ಬಾರ ೧

೧. ಮೂಡ ಹೆರಂಜಾಲ

೧. ಮೂರರ ಜಿಟ್ಟಿಯಣ್ಣ ಶೆಟ್ಟಿ, ತಿಮ್ಮಪ್ಪಶೆಟ್ಟಿ

೪

ಉಪಗ್ರಾಮ ಯಿಲ್ಲ.

ಯಿದಕ್ಕೆ ಶ್ಯಾನುಭವರು:

ಸಾಬಕ ಸ್ತಳದ ವೆಂಕಟಪತ್ಯೆಯ್ಯ, ಬೀರಾದೇವಿ ಕಾಲದಾರಭ್ಯ ಯಿವರ ಹಿರಿಯವರಿಗೆ ನಡೇತು. ಹಾಲಿ ಸುಲತಾನನ ಅಮಲ ಅಖ್ಯೆರು ಪರಿಯಂತ್ರ ನಡೇತು. ಮುಂದೆ ಕುಂಪಣಿ ಅಮಲು ಆದ ಮೇಲೆ ಬಿಜೂರ ಮಂಜ್ಯೆಯ್ಯನ ತಾಲೂಕಿಗೆ ಆಗಿ ಯಿದೆ. ಯೀಗೆ ಆತನ ಮುಖಾಂತ್ರವೆ ನಡೆಯುತ್ತದೆ॥

ತಾಲೂಕು ಮಜಕೂರ ದೇವರು:

೧. ಕಸಬಾ ಕಾಳಕೊಡ ಉಮಂದ ದುರ್ಗಾದೇವರು ಶುಕಶಾಲ್ಮ ರುಷಿದ[>ಯ]ರಿಗೆ ಪ್ರತ್ಯಕ್ಷವಾಗಿ ಲಿಂಗದೇಹದಿಂದ ಉದ್ಭವವಾದ ಕಾರಣ ದುರ್ಗಾಪರಮೇಶ್ವರಿಯಂತ ಹೇಳುತ್ತಾರೆ.

೧. ವಿನಾಯಕ ದೇವರು

೧. ಅರಮದೇವರು

೧. ಹ್ಮಾನಸಾ ದೇವರು

೧. ಹಳೆ ಕಾಡತೊಡ ವಿನಾಯಕ ದೇವರು

೧. ಗೋಪಾಲಕೃಷ್ಣ ದೇವರು

೧. ಮಹಾಬಲೇಶ್ವರ ದೇವರು

೧. ಪಡು ಹೆರಂಜಾಲ ದುರ್ಗಾದೇವರು

೧. ಮನಿಸಿ ವಿನಾಯಕದೇವರು

೧. ಮೇಡಿನ ಹೊಳೆ ತಿರುಮಲದೇವರು

೧. ಮೂರೂರ ಮುದ್ಧೇಶ್ವರ ದೇವರು

೧. ಮಹಾಲಿಂಗೇಶ್ವರ ದೇವರು

೧. ಗೋಪಿನಾಥ ದೇವರು

೧೪

ಯೀ ಪ್ರಕಾರ ಮಾಗಣಿ ೧ರ ಕೈಫಿಯತು.

❖❖

೬೨
ಕ್ರಿಷ್ಣಾಪೂರ ಮಠದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಅಕ್ಷಯನಾಮ ಸಂವತ್ಸರದ ಪುಷ್ಯ ಶು॥೭ಯಲ್ಲು ಕ್ರಿಷ್ಣಾಪುರ ಮಠದ ಕ್ರಿಷ್ಣಾಚಾರ್ಯರು ಬರಸಿಕೊಟ್ಟ ಕೈಫಿಯತು ನಾಮಾ:

ನಮ್ಮ ಮೂಲ ಗುರುಗಳು ಮಧ್ವಾಚಾರ್ಯರು ಅವತಾರ ಮಾಡಿದ್ದು: "ದೇವೈರಾಜ್ಞಾಪಿತೋಯಸ್ಸು ವಾಯುಮಾಜ್ಞಾಪಯಿಷ್ಯತಿ। ಉದ್ಧರಸ್ವಮಹಾಬಾಹೋ। ಮಮಧರ್ಮ ಸನಾತನಂ॥ ಈತ್ಯಾರಜ್ಞಪ್ತಸ್ತು ಭಗವನ್ ಕಲೌವಾಯುರ್ಭವಿಷ್ಯತಿ ಮಧ್ವನಾಮಯತಿರಯಂ ಪಾರಿಪ್ರಾಜಿಕಮೇಷ್ಯತಿ॥ ಚತುಃಸಹಸ್ರೇತ್ರಿಶತೋತ್ತರೇ ಗತೇ। ಸಂವತ್ಸರಾಣಾಂ ತು ಕಲೌಪೃಥವ್ಯಾಂ॥ ಜಾತಃ ಪುನರ್ವಿಪ್ರ ತನುಃ ಸಭೀಮೋದೈತ್ಯೈರ್ನಿಗೂಢಂ ಹರಿತತ್ವಮಾಹ॥

ಶಾಲಿವಾಹನ ಶಕ ೧೧೨೧ . . . . ಸಂವತ್ಸರದ ಮಾಘ ಶು॥ ೭[>೯] ಯಲ್ಲು ಮದ್ಯಗೇಹಭಟ್ಟರಲ್ಲಿ ಅವತರಿಸಿ, ಶಕ ೧೧೨೮ನೇ ಕ್ರೋಧನ ಸಂವತ್ಸರದ ಪುಷ್ಯ ಶು॥ ೫ಲ್ಲು

ಉಪನೀತರಾಗಿ ಸಾಂಗವೇದಾಭ್ಯಾಸವನ್ನು ಮಾಡಿ, ಶಕ ೧೧೩೦ನೇ ಪ್ರಭವ ಸಂವತ್ಸರದ ವೈಶಾಖ ಶು॥ ೩ಲ್ಲು ಸನಕಾದಿ ಪರಂಪರಾಪ್ರಾಪ್ತರಾದ ಅಚ್ಯುತಪ್ರೇಕ್ಷಾಚಾರ್ಯರಿಂದ ಪರಮಹಂಸಾಸ್ರ[+ಮ]ವನ್ನು ಸ್ವೀಕರಿಸಿ, ಶಕ ೧೧೬೦ನೆ ಹೇವಳಂಬಿ ಸಂವತ್ಸರ ಮಾಘ ಶು॥೩ಲ್ಲು ಸರ್ವಭೂಧರಮರ್ಥಪೂರ್ವಕವಾಗಿ ತಂತ್ರಸಾರೋಕ್ತ ವಿಧಾನದಿಂದ ರಜ[+ತ] ಶ್ರೀ ಪೀಟಪುರದಲ್ಲಿ ಶ್ರೀ ಕೃಷ್ಣಪ್ರತಿಮೆಯನ್ನು ಮಾಡಿ,

ಪ್ರಾಪಸನಾಯಣತಃ ಶುದ್ಧ ಶಿಲಾಪ್ರತಿಮಾಯಾಸುಸ ಪದ್ಮಾನಹಿ ತೊದೊಪ್ಯ ಹಿಕ:

ಬದರಿಕಾಶ್ರಮದಿಂದ ಬಂದ ವ್ಯಾಸಮೂರ್ತಿ ಸಾಲಿಗ್ರಾಮಗಳಲ್ಲು ಮಧ್ಯವಾಟಾ[>ತಾಳ] ಮಟದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆ ಮಾಡಿ, ಸುಬ್ರಮಣ್ಯಕ್ಷೇತ್ರದಲ್ಲು ವೊಂದು ವೊಂದು ಮೂರ್ತಿಯನ್ನು ಪ್ರತಿಷ್ಟೆ ಮಾಡಿದಾರೆ. ಯೀ ಮೂರು ಸ್ಥಳದಲ್ಲು ಪ್ರಾತಃಕಾಲಾದಿ ಕ್ರಮದಿಂದ ತಾವೆ ಸರ್ವದಾ ಪೂಜೆಗಳನ್ನು ಮಾಡುತ್ತ ಕೆಲಉ ದಿವಸ ಯಿದ್ದರು. ಕ್ರಮದಿಂದ ಪೂಜೆಯನ್ನು ಮಾಡುವಾಗ್ಯೆ ಮದ್ಯವಾಟ[>ತಾಳ] ಮಟದಲ್ಲು ಮದ್ಯಾನ್ನ ಪೂಜೆಯ ಗಟಣೆ ಆದ್ದರಿಂದ ಅದ್ಯಾಪಿ ಅಲ್ಲಿ ಮದ್ಯಾಹ್ನದ ಪೂಜೆಯೇ ಸರಿ. ಯಿ ಉಭಯ ಸ್ಥಳದಲ್ಲು ತ್ರಿಕಾಲದಲ್ಲು ಪೂಜಿ ಅದೆ. ಯೀ ಪ್ರಕಾರ ಶ್ರೀ ಮದ್ವಾಚಾರ್ಯರು ಯಿದ್ದು, ಆ ಮೇಲೆ ತಾವು ಬದರಿಕಾಶ್ರಮವನ್ನು ಕುರಿತು ಗಮನಾರ್ತಿಗಳಾಗಿ, ಶ್ರೀ ಕೃಷ್ಣಪೂಜಾ ಸ್ವಮತಸ್ಥಾಪನಾರ್ಥವಾಗಿ ಯೆಂಟು ಮಂದಿ ಬ್ರಹ್ಮಚಾರಿಗಳಿಗೆ . . . . ದಿ ತೀರಸ್ಥರಾದ ದಿಲಿದ[>ವಿವಿಧ] ಸಾಂಸಾರಿಕ ದುಕ್ಕ ದುರುಶನೆನ ವಿರಕ್ತರಾದ ಸಜ್ಜನೋದ್ಧಾರ ಶ್ರೀ ಮಟಾ[>ಧ್ವಾ]ಚಾರ್ಯರ ಪಾದಶೇವಾ ಸನ್ಮಾರ್ಗವಲಂಬಾಪೇಕ್ಷೆಯಿಂದ ಬಂದ ದೇಶಸ್ತರಾದ ಶೋಭನಬಟ್ಟರಿಗೆ ಸಹಾ ಶಕ ೧೧೮೦ನೇ ಪಿಂಗಳ ಸಂವತ್ಸರದ ವೈಶಾಖ ಶು॥೭ ಯಲ್ಲು, ಕಣ್ವತೀರ್ಥ ಮಹಾಕ್ಷೇತ್ರದಲ್ಲು, ತೂರಿಯಾಶ್ರಮ ಮಂತ್ರೋಪದೇಶಗಳನ್ನು ಕೊಟ್ಟು, ರಜತಪೀಟಪುರಕ್ಕೆ ಕರತಂದು, ಅನಂತಾಸನ[>ಶಯನ] ದೇವರ ಮುಂಭಾಗದಲ್ಲು ಸ್ವಮತಗ್ರಳಧಾ[>ಗ್ರಂಥಾದಿ] ಸಕಲ ಸಯಾಸ್ರೋ[>ಸಚ್ಛಾಸ್ತ್ರೋ]ಪದೇಶವನ್ನು ಮಾಡಿ, ಯೀ ನವಯತೀಶ್ವರರಿಗು ಸನಕಾದಿಗಳಿಂದ ಆ ಪೂಜಿತಗಳಾದ ರಘುವತಾ[>ವೌ] ಕಾಳಿಯ ಮತನಾ ಸುಟ್ಟದ ಆ[>ವಿಠಲಾ] ಸೂಕರ ನ್ನಸಿಂಹ್ಯಂಚ ಅಂನ್ಯಂ ವಿಠಲಮಿತಿ ಪ್ರಾಮೇಣೊಸಿ ನವಪ್ರತಿಮೆಗಳನ್ನು ಉ್ರಷಿಕೇಶತೀರ್ಥರು ಮುಂತಾದವರಿಗೆ ಕೊಟ್ಟು, "ನೀಉ . . . . ಯಂಟು ಮಂದಿ ಯರಡು ವರುಷ ಕ್ರಮದಿಂದ ನಮ್ಮಲ್ಲಿಚಾ[>ನಮ್ಮ ಆಜ್ಞಾ]ನುಸಾರ ತಂತ್ರ ಸಹಿತ ವಿಧಿಯಿಂದ ಶ್ರೀ ಕೃಷ್ಣಪೂಜಾ ಧರ್ಮಗಳು ಶಾಸ್ತ್ರಪ್ರವಚನೆ ಮಾಡುತ್ತ ಸ್ವಮತ ಸ್ಥಾಪನೆ ಮಾಡಿ, ಸಜ್ಜನರನ್ನು ಉದ್ಧರಿಸಿಕೊಂಡು ಸರ್ವತಂತ್ರ ಸ್ವತಂತ್ರರಾಗಿ ಶ್ರೀಮದ್ವೈಷ್ಣವ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾಗಿ ಸಕಲಸುರನಿಕರಮಾದಿಮಕು[+ಟ] ಪ್ರಭಾ ಮಂಜರಂಜಿತ ಶ್ರೀಮದುಡುಪೀನ ಶ್ರೀಕೃಷ್ಣದೇವರ ದಿವ್ಯಶ್ರೀಪಾದಪದ್ಮರಾದಕರಾಗಿ ಯಿರಿ"ಯಂತ ಆಗ್ನ್ಯಾ ಕೊಟ್ಟು, ಆಮೇಲೆ ಪದ್ಮನಾಭತೀರ್ಥರಿಗೆ ಸೀತಾ ಸಮೇತ ಶ್ರೀರಾಮನಾಥ ಸಾಲಿಗ್ರಾಮವನ್ನು ಕೊಟ್ಟು ನೀ ಯೇ[+ತ]ತ್ನತ ಸ್ಥಾಪನೆಯನ್ನು ಮಾಡಿಕ್ಕೊಂಡು ಸಕಲದೇಶಗಳಲ್ಲಿ ಸಂಚಾರಮಾಡುತ್ತ, ಬಹುಮಂದಿ ಸಜ್ಜನರಿಗೆ ಸನ್ಮಾರ್ಗೋಪದೇಶ ದ್ವಾರ ಉದರಿಸಿಕೊಂಡು ಶ್ರೀಕೃಷ್ಣಪೂಜಾ ಪ್ರಯುಕ್ತ ದ್ರವ್ಯಾರ್ಜನೆ ಮಾಡಿಕ್ಕೊಂಡು ಯಿರಿ ಯಂತ ಅಪ್ಪಣೆ ಕೊಟ್ಟು, ಶಕ ೧೨೦೦ನೆ ಯೀಶ್ವರ ಸಂವತ್ಸರದ ಮಾಘ ಶು॥೯ಲ್ಲು ಬದರಿಕಾಶ್ರಮಕ್ಕೆ ಹೋಗುವರಾಗಿ . . . . ತಿಲದಲ್ಲು ಗ್ರಂಥಸ್ತಾಪನೆ ಮಾಡಿ, ಆ ಸ್ತಳದಲ್ಲು ಹೀಗೆ ಪರಿಯಾಯ ನಡೆಯಬೇಕೆಂತ ಹೇಳಿ, ಸ್ಥಿಲಂ ಪ್ಯಾ[>ವ್ಯಾ]ಸಮಂದಿರವನ್ನು ಪ್ರಾಪಿಸ್ತರು.

ತರುವಾಯ ನಿಮ್ಮಾ ಗುರುಗಳಿಗೆ, ವಂಶಸ್ಯಾದಿನ್ ಸನಕಾದಿನುಪಾನ್ನೇ ದುರ್ವಾಸಸಂ ಪರ ತೀರ್ಥಾಖ್ಯಾ ಯತೀನ್॥ ಸತ್ಯಪ್ರಜ್ಞಂ ಪ್ರಾಜ್ಞತೀರ್ಥಂ ಕ್ರಮಾತ್ ವಂದೇ ಅಚ್ಚುತಪ್ರೇಕ್ಷ ಮದ್ವಂ॥ ಮದ್ವಶಿಷ್ಯಯುನಿಂ ವಂದೆ ಜನಾರ್ಥನವರಾಬಿದಂ। ಶ್ರೀವತ್ಸಾಂಕಂ ಚ ವಾಗೀಶಂ। ಯಾದವೇಂದ್ರಮುನಿಂ ಪುನಃ। ಲೋಕನಾಥಂ। ಲೋಕಪೂಜ್ಯ ವಿದ್ಯಾರಾಜಮುನಿಂ ತಥಾ। ವಿಶ್ವಾಧಿರಾಜ ಮುನಿಪಂ।ವಿಶ್ವಾಧೀಶಂ ನಮಾಮ್ಯಹಂ। ವಿಶ್ವೇಶ್ವರಂ ವಿಶ್ವವಂದ್ಯಂ ಚ। ವಿಶ್ವರಾಜ ಮಹಾಮುನಿಂ। ಧರಣಿಧರತೀರ್ಥಂ ಚ। ಸೇವಯೇಕಂ ಧರಾಧರಂ। ಪ್ರಜ್ಞಾಮೂರ್ತಿಮುನಿಪಂ। ತಪೋಮೂರ್ತಿಮುನಿಂ ಭಜೆ। ಸೂರೇಶ್ವರಂ ಜಗನ್ನಾಥಂ ಸೂರೇಶ ಮುನಪುಂಗವಂ। ವಿಶ್ವಮಂಗವಸಾಮಾನಂ। ಕಚೈಷ್ಯಂ ವಿಶ್ವವಲ್ಲಭಂ ವಿಶ್ವಭೂಷಣಯೋಗೀಶಂ ಯಾದವೇಂದ್ರಂ ಮುನಿಂ ಪುನಃ ಪ್ರಜ್ಞಾನಮೂರ್ತಿ ಮುನಿಪಂ। ವಿದ್ಯಾರಾಜಂ ಮಹಾಯತಿಂ। ವಿದ್ಯಾಮೂರ್ತಿಂಕಥಾ ವಿದ್ಯಾವಲ್ಲಭಂ ಯತಿಪುಂಗವಮ। ವಿದ್ಯೇಂದ್ರ ಮುನಿಪಂ ವಂದೆ। ಗಂಗಾಮಾಂತ್ಯತ ವಿಗ್ರಹಂ। ವಿದ್ಯಾನಿಧಿಮುನಿಸಾ ವಂದೆ । ನರಸಿಹ್ಮ ಪದಾಶ್ರಿತಾನ್। ಸನಕಾದಿ ಮಹಾಯೋಗಿ ಮಂತಸ್ಥಾನ ಗುರುವಲ್ಲಭಾನ್। ಶ್ರೀ ಮದ್ವವಿದ್ಯಾನಿದ್ಯಂ ಕಾಃ॥ ಪ್ರಿಯಂತಾಲ ಗುರವೊ ಮಮ।

ಯೀ ಪ್ರಣಾಮಾನುಸಾರವಾಗಿ ಗುರುಪೀಳಿಗೆ ಕ್ರಮ, ನಮಗೆ ಮುಖ್ಯ ಗುರುಗಳಾದ ಮಧ್ವಾಚಾರ್ಯರ ಕರಕಮಲಸಂಜಾತರಾದ ಜನಾರ್ಥನಸ್ವಾಮಿಗಳವರು ತಮಗೆ ಪ್ರತಿಮಾ ಪ್ರದಾನಕಾಲದಲ್ಲು ಸ್ವಾಪಾನನಾಸಿದ್ಧವಾದ ನರಸಿಹ್ಮ ಪ್ರಥಿಮೆಯನ್ನು ತಾವು ಪರಿಗ್ರಹಿಸಿ ಪೂಜೆಲ್ಲಿ ನರಸಿಹ್ಮ ಪ್ರತಿವಾಪೂರ್ವಕವಾಗಿ ದ್ವಿಭುಜಕಾಳಿಮರ್ಧನ ಕೃಷ್ಣ[>ಅಷ್ಟ]ಪ್ರತಿಮೆಯನ್ನು ಆನಂದತೀರ್ಥಾಚಾರ್ಯರು ಅವರಿಗೆ ಕೊಟ್ಟು, "ಪ್ರತಿಮೇಗೆ ತಂತ್ರಸಾರೋಕ್ತಪೂಜಾವಿಧಾನದಿಂದ ಪೂಜಾ ಜಪ ವ್ಯಾಖ್ಯಾನಕ್ರಮಪ್ರಾಪ್ತಗಳಾದ ಪರ್ಯ್ಯಾಯ ಪೂಜಾಧರ್ಮಗಳನ್ನು ಮಾಡಿಕೊಳ್ಳುತ್ತ ಯಿರರಿ" ಯಂತ ಆಜ್ಞಾಪಿಸಿ, ಶ್ರೀ ಮಧ್ವಾಚಾರ್ಯರು ತೆರಳಿ ಹೋದರು. ತತ್ಪ್ರಮಾಣಂ ನರಸಿಹ್ಮ ಸಮಾಯುಕ್ತ ಶ್ರೀಕೃಷ್ಣ ವೃದ್ಧಿಮಾಂತುರುಕದತ್ವಾ ಜನಾರ್ಥನ ಯಾದ ಯಯ್ಯೈ ಬದರಿಕಾಶ್ರಮಂ।

ಆ ಮೇಲೆ ಜನಾರ್ಧನತೀರ್ಥ ಶ್ರೀಪಾದಂಗಳವರು।ಆಜ್ಞಾನುಸಾರ ಜಪವ್ಯಾಖ್ಯಾನಂಗಳನ್ನು ತಂತ್ರನರಾತ್ತೊ[>ತಂತ್ರಸಾರೋಕ್ತ] ಪೂಜಾದಿ ಸದ್ಧರ್ಮಗಳನ್ನು ಮಾಡಿಕೊಳ್ಳುತ್ತು, ತಮ್ಮಾ ಸಂಸ್ಥಾನಕ್ಕೆ ಶ್ರೀವತ್ಸಾಂಕರೆಂಬ ಶಿಷ್ಯರನ್ನು ಮಾಡಿ, ತತ್ಸಮೇತರಾಗಿ ಪರ್ಯಾಯಗಳಲ್ಲಿ ಕೃಷ್ಣಪೂಜಾದಿಗಳನ್ನು ಮಾಡಿ, ಆ ಮೇಲೆ ತಮ್ಮಾ ನಿರ್ಮಾ[>ರ್ಯಾ]ಣ ಕಾಲವನ್ನು ತಿಳಿದು ಪ್ರಯಾಗ ಕ್ಷೇತ್ರವನ್ನು ಪ್ರಾಸ್ಥಾಪಿಸಿ, ತಮ್ಮಾ ಶಾಲಿವಾಹನ ಶಕ ೧೨೧೩ನೆಯ ವಿಕೃತಿ ಸಂವತ್ಸರದ ವೈಶಾಖ ಶುದ್ಧ ೧೨ಯಲ್ಲು ಹರಿಸಾಯುಜ್ಯವನ್ನು ಪ್ರಾಪಿಸ್ತರು.

ಅವರ ಕರಕಮಲಸಂಜಾತರಾದ। ಶ್ರೀವತ್ಸಾಂಕತೀರ್ಥರು ಸ್ವಾಶ್ರನೊ[>ಮೋ] ಚಿತತ್ಸಂಪ್ರದಾಯಕ ಪರಂಪರಾ ಪ್ರಾಪ್ತ ಸಕಲ ಧರ್ಮಗಳನ್ನಾ ಮಾಡುತ್ತಾ, ವಾಗೀಶರಿಗೆ ಆಶ್ರಮವನ್ನು ಕೊಟ್ಟು, ಸಕಲರಹಸ್ಯೋಪದೇಶಗಳನ್ನು ಮಾಡಿ, ಶಾಲಿವಾಹನ ಶಕ ೧೨೫೪ನೇ ಪ್ರಜೋತ್ಪತ್ತಿ ಸಂವತ್ಸರ ಕಾರ್ತೀಕ ಬಹುಳ ೫ಯಲ್ಲು ಪ್ರಯಾಗಕ್ಷೇತ್ರದಲ್ಲಿ ನಿರ್ಯ್ಯಾ ಮಾಡಿದರು.

ಅವರ ಶಿಷ್ಯರು ವಾಗೀಶತೀರ್ಥರು ಸದ್ಧರ್ಮನಿರತರಾಗಿ, ಕೃಷ್ಣಪೂಜಾಪರಾಯಣರಾಗಿ, ಶಿಷ್ಯರಿಗೆ ಭಾಷ್ಯಾದಿ ಉಪದೇಶಗಳನ್ನು ಮಾಡಿ, ತೀರ್ಥ ಯಾತ್ರಾ ಪರರರಾಗಿ, ವಾರಣಾಸಿ ಕ್ಷೇತ್ರವನ್ನು

ಸ್ಥಾಪಿಸಿ, ಬ್ರಹ್ಮಾವರ್ತದಲ್ಲಿ ಶಾಲಿವಾಹನ ಶಕ ೧೩೦೧ನೆ ಕಾಳಯುಕ್ತಿ ಸಂವತ್ಸರದ ಮಾರ್ಗಶಿರ ಶು॥೬ಲ್ಲು ಪ್ರಾತಃಕಾಲದಲ್ಲು ದೇವಯಾತ್ರಾ ಮಾಡಿದರು.

ಅವರ ಶಿಷ್ಯರು ಲೋಕೇಶರು ತಂತ್ರಸಾರೋಕ್ತಮಂತ್ರಪುನಶ್ಚರಣೆಗಳಿಂದ ಪ್ರಾಪ್ತದೇವತಾಪ್ರಸಾದ ಉಳ್ಳವರಾಗಿ, ನಿಗ್ರಹಾನುಗ್ರಹಸಾಮರ್ಥ್ಯದಿಂದ ಜಗತ್ಪೂಜ್ಯರಾಗಿ ಸ್ವವಂಶೋದ್ಧಾರಾರ್ಥವಾಗಿ ಸಂಸ್ಥಾನದಲ್ಲು ಲೋಕನಾಥರಿಗೆ ಆಶ್ರಮವನ್ನಾ ಕೊಟ್ಟು, ತಾವು ಕೃಷ್ಣಾತೀರದಲ್ಲು ಶಕ ವರುಷ ೧೩೪೨ನೆ ವಿಕಾರಿ ಸಂವತ್ಸರ ಆಷಾಢ ಶು॥ ೮ಯಲ್ಲು ಶ್ರೀ ಹರಿಪದಾರೂಢರಾದರು.

ಅವರ ಶಿಷ್ಯರಾದ ಲೋಕನಾಥಯತಿಗಳು ಗುರುಗಳ ಆಜ್ಞಾನುಸಾರದಿಂದ ಸಂಸಾರ[>ಸಂಸ್ಕಾರ]ಪಾಲಕರಾಗಿ ಸುದ್ಧಾ[>ಧಾ]ದಿಗ್ರಂಥಗಳನ್ನು ಬಹು ತರುವಾಯ ಹೇಳಿ ಲೋಕ ಪೂಜ್ಯರಿಗೆ ಸಂಸ್ಥಾನ ಕೊಟ್ಟು, ತಾಉ ಹರಿದ್ವಾರದಲ್ಲು ಶಕ ೧೩೫೬ನೆ ಪ್ರಮಾದೀಚ ಸಂವತ್ಸರ ಮಾರ್ಗಶಿರ ಬ ೬ಲ್ಲು ಹರಿಪದವನ್ನಾ ಪ್ರಾಪಿಸ್ಥರು.

ಅವರ ಶಿಷ್ಯರು ಲೋಕಪೂಜ್ಯರು ಸರ್ವತಂತ್ರಕುಶಲರಾಗಿ ಬಹು ಆವರ್ತಿ ಶಿಷ್ಯರಿಗೆ ಶಾಸ್ತ್ರ ಪ್ರವಚನಂಗಳಾ ಮಾಡಿ, ಸಂಸ್ಥಾನದಲ್ಲು ವಿದ್ಯಾರಾಜರನ್ನು ಶಿಷ್ಯರನ್ನಾಗಿ ಮಾಡಿ ಆ ಮೇಲೆ ಶಕ ೧೩೩೮ನೆ ಕ್ರೋಧನ ಸಂವತ್ಸರ ಆಶ್ವೀಜ ಶು॥೮ಯಲ್ಲು ರುತಿಮತಿಕಟ್ಟದಲ್ಲು ಕೈವಲ್ಯಪ್ರಾಪ್ತರಾದರು.

ತಚ್ಚಿಶ್ಯರಾದ ವಿದ್ಯಾರಾಜಸ್ವಾಮಿಯವರು ತಂತ್ರಸಾರೋಕ್ತ ಮಂತ್ರಜಪಪಾರಾಯಣರಾಗಿ, ಭೂ ಪ್ರದಕ್ಷಣವನ್ನು ಮಾಡಿ, ವಿಶ್ವದಿರಾಜರಿಗೆ ತುರಿಯಾಶ್ರಮಾ ಕೊಟ್ಟು, ವಾರಾಹಿತಾರದಲ್ಲು ಶಕ। ೧೩೭೮ಧಾತು ಸಂವತ್ಸರ ಕಾರ್ತಿಕ ಶುದ್ಧ॥ ೮ಲ್ಲು ಉ್ರಂದಾವನಸ್ತರಾದರು.

ಅವರ ಶಿಷ್ಯರು ವಿಶ್ವಾಧಿರಾಜತೀರ್ಥ ಶ್ರೀಪಾದಂಗಳವರು ಮಹಾ ಪಂಡಿತರಾಗಿ ಭೂಮಂಡಲಸಂಚಾರಮಾಡಿ ಪಂಡಿದಿಗ್ವಂತಿ[>ಪಂಡಿತ ದಿಗ್ದಂತಿ] ಗಂಡಬೇರುಂಡರಾಗಿ ದಿಗಂತವಿಶ್ರಾಂತಕೀರ್ತಿ ಉಳ್ಳವರಾಗಿ ಕೊ[>ತೊ]ಟ್ಟು ಜಗನ್ನಾಥದಲ್ಲು ಶಕ ವರುಷ ೧೩೮೮ನೆ ವ್ಯಯಸಂವತ್ಸರ ಶು॥೫ಲ್ಲು ವಿಷ್ಣುಪಾದನಯಿಂ[>ಪಾದಾವಲಂ]ಬಿಗಳಾದರು.

ವಿಶ್ವದೀಶತೀರ್ಥಶ್ರೀಪಾದಂಗಳವರು ತಪಃಪರರಾಗಿ ಅನೇಕತೀರ್ಥಯಾತ್ರೆಗಳನ್ನು ಮಾಡಿ ಬಂದು ವಿಶ್ವೇಶ ತೀರ್ಥರಿಗೆ ಆಶ್ರಮವನ್ನು ಕೊಟ್ಟು, ಕೆಲಉ ದಿವಸದ ಮೇಲೆ ಕಾವೇರಿತೀರದಲ್ಲು ಶಕ ವರುಷ ೧೪೦೨ನೆ ವಿಕಾರಿ ಸಂವತ್ಸರ ಮಾರ್ಘಶುದ್ಧ॥೧೦ಯಲ್ಲು ಶ್ರೀ ಹರಿಪಾದ ಸರೋಜವನ್ನು ಪ್ರಾಪಿಸಿದರು.

ಅವರ ಕರಕಮಲಸಂಜಾತರಾದ ವಿಶ್ವೇಶತೀರ್ಥರು ಅನೇಕ . . . . . ಉ್ರತ್ತ[>ವ್ರತ] ಪರಾಯಣರಾಗಿ ಭಾಗವತ ದಿಶಚ್ಮಸ್ತ್ರ ನಿಷ್ಟೆಯಿಂದ ಯಿದ್ದು ವಿಶ್ವವಂದ್ಯರಿಗೆ ಆಶ್ರಮವನ್ನು ಕೊಟ್ಟು, ಶಕ ವರುಷ ೧೪೧೫ನೆ ಪರಿಧಾವಿ ಸಂವತ್ಸರದ ಆಷಾಢ ಶುದ್ಧ॥೩ಲ್ಲು ಕಾಲಧರ್ಮವನ್ನೈದಿದರು.

ಆ ಮೇಲೆ ಅವರ ಶಿಷ್ಯರು ವಿಶ್ವವಂದ್ಯತೀರ್ಥಶ್ರೀಪಾದಂಗಳವರು ಮಹಾ ತಪೋನಿಷ್ಟರಾಗಿ ಪರಿಯಾಯಪೂಜಾಕಾಲದಲ್ಲು ಶ್ರೀ ಕೃಷ್ಣಪೂಜಾದಿ ಅನೇಕ ಧರ್ಮಗಳನ್ನು ಮಾಡಿಕೊಳ್ಳುತ್ತ ಸಂಸ್ಥಾನದಲ್ಲು ವಿಶ್ವರಾಜರಿಗೆ ಆಶ್ರಮವನ್ನು ಕೊಟ್ಟು ಕಾಶಿಕ್ಷೇತ್ರದ ಮಣಿಕರ್ನಿಕಾ ಗಟದಲ್ಲು ೧೪೨೬ನೆ ರುದಿರೋದ್ಗಾರಿ ಸಂವತ್ಸರದ ಶ್ರಾವಣ ಶು॥೬ಯಲ್ಲು ಸಿದ್ಧಿವಂತರಾದರು.

ಅವರ ಶಿಷ್ಯರಾದ ವಿಶ್ವರಾಜತೀರ್ಥಶ್ರೀಪಾದಂಗಳವರು ತಂತ್ರಸಾರೋಕ್ತ ಜಪಶಾಸ್ತ್ರ ಪ್ರವಚನಗಳು ಮಾಡಿಕೊಳ್ಳುತ್ತ ಸ್ವಧರ್ಮನಿಷ್ಠರಾಗಿ, ತಮ್ಮ ಸಂಸ್ಥಾನಕ್ಕೆ ಧರಣೀಧರತೀರ್ಥರಿಗೆ ಆಶ್ರಮವನ್ನು ಕೊಟ್ಟು, ಕೆಲವು ದಿನ ಯಿದ್ದು, ನೇತ್ರಾವತಿತೀರದಲ್ಲು ೧೪೫೭ನೆ ಭಾವಸಂವತ್ಸರದ ಆಶ್ವೀಜ ಬಹುಳ ೩೦ಯಲ್ಲು ಮುಕ್ತರಾದರು.

ಆ ಮೇಲೆ ಧರಣೀಧರತೀರ್ಥಶ್ರೀಪಾದಂಗಳವರು ಅನೇಕ ಶಿಷ್ಯರುಗಳಲ್ಲಿ ಅನೇಕಾವರ್ತಿ ಸಿದ್ಧಾಂತ ಉಪದೇಶ ಮಾಡಿ ದಿಗಂತವಿಶ್ರಾಂತರಾಗಿ ಧರಣೀಧರತೀರ್ಥರಿಗೆ ಆಶ್ರಯ ಕೊಟ್ಟು ೧೪೫೧ ಸರ್ವಧಾರಿ ಸಂವತ್ಸರದ ವೈಶಾಖ ಬ॥೩೦ಯಲ್ಲು ಶುಕ್ತಿಮತಿ ತೀರದಲ್ಲು ದೇವರಯಾತ್ರೆ ಮಾಡಿದರು.

ಅವರ ಶಿಷ್ಯರು ಧರಣೀಧರತೀರ್ಥಶ್ರೀಪಾದಂಗಳವರು ಸುಗುರುತುಲ್ಯರಾಗಿ ಪ್ರಜ್ಞಾನುಮೂರ್ತಿಗಳಿಗೆ ಆಶ್ರಮವನ್ನು ಕೊಟ್ಟು ಪ್ರವಾ[>ಭಾ]ಸ ಕ್ಷೇತ್ರದಲ್ಲು ೧೪೫೩ನೆ ಶಾರ್ವರಿ ಸಂವತ್ಸರದ ಚೈತ್ರ ಬಹುಳ ಆಲ್ಲು ಮೃತರಾದರು.

ಅವರ ಶಿಷ್ಯರು ಪ್ರಜ್ಞಾನುಮೂರ್ತಿತೀರ್ಥಶ್ರೀಪಾಂದಗಳವರು ಮಹಾ ತಪಸಿಗಳಾಗಿ ದ್ವಾರಕಾದಿಸಮಸ್ತಯಾತ್ರೆಗಳನ್ನು ಮಾಡಿ ಬಂದು, ತಂತ್ರಸಾರಂತಗ್ರಂಥಗಳನ್ನು ಬಹಳಾವರ್ತಿ ಶಿಷ್ಯರುಗಳಿಗೆ ಹೇಳಿ, ಸಂಸ್ತಾನವನ್ನು ತಪೋಮೂರ್ತಿಗಳಲ್ಲು ಯಿಟ್ಟು, ತಾವು ಶುಕ್ತಿತೀತರದಲ್ಲು ೧೪೭೫ನೆ ಪರಿಧಾವಿ ಸಂವತ್ಸರದ ಮಾಘ ಬ. ೩ಲ್ಲು ದೇವರಯಾತ್ರೆ ಮಾಡಿದರು.

ಅವರ ಕರಕಮಲಸಂಜಾತರಾದ ತಪೋಮೂರ್ತಿ ಶ್ರೀಪಾದಂಗಳವರು ತಪಶಿಧಿಯುಳ್ಳವರಾಗಿ, ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣ ಸಮಾದ್ಯಷ್ಟಾಂಗ ಯೋಗನಿರತರಾಗಿ, ವಿಷ್ಣುಸಾಕ್ಷಾತ್ಕಾರಯುಳ್ಳವರಾಗಿ, ಶೂ[>ಸೂ]ರೇಶಂಗೆ ಆಶ್ರಮಕೊಟ್ಟು ನೆರಂಬಳಿ ಸ್ಥಳದಲ್ಲು ೧೪೮೫ನೆ ದುಂದುಭಿ ಸಂವತ್ಸರ ಫಾಲ್ಗುಣ ಬಹುಳ ೫ಯಲ್ಲು ಹರಿಪದಾರೂಢರಾದರು.

ತಶಿಷ್ಯರಾದ ಸೂರೇಶತೀರ್ಥಾಶ್ರೀಪಾದಂಗಳವರು ವೇದಾಂತ ಉಪಯುಕ್ತವಾದ ತರ್ಕಶಾಸ್ತ್ರಪ್ರವೀಣರಾಗಿ ದುರ್ವಾದಿಗಳ ಖಂಡಿಸಿ ಪರಮದಿಗ್ವಿಜಯ ಉಳ್ಳವರಾಗಿ, ಭೂಸಂಚಾರ ಮಾಡಿ ಬಂದು, ಜಗನ್ನಾಥರಿಗೆ ಕೊಟ್ಟು ಮುಕ್ತರಾದರು. ೧೪೩೮ ಯೀವ ಸಂವತ್ಸರದ ಚೈತ್ರ ಶುದ್ಧ॥೨ಲ್ಲು ವೈಕುಂಠಯಾತ್ರೆ ಮಾಡಿದರು.

ತತ್ಕರಕಮಲಸಂಜಾತರಾದ ಜಗನ್ನಾಥತೀರ್ಥರು ಸ್ಮ[>ಸ್ವ]ಸಿದ್ಧಾಂತವನ್ನು ಶಿಷ್ಯರಿಗೆ ಉಪದೇಶ ಮಾಡಿಕೊಳ್ಳುತ್ತ ಯಿದ್ದರು. ಸೂರೇಶರಿಗೆ ಆಶ್ರಯವನ್ನು ಕೊಟ್ಟು ತಾಲು ಪ್ರಯಾಗ ಕ್ಷೇತ್ರದಲ್ಲು ಶಕ ವರುಷ ೧೫೧೦ನೆ ಸರ್ವಜಿತು ಸಂವತ್ಸರ ವೈಶಾಖ ಶು॥೭ಯಲ್ಲು ಉ್ರಂದಾವನಾರೂಢರಾದರು.

ತಚ್ಛಿಷ್ಯರಾದ ಸೂರೇಶತೀರ್ಥಶ್ರೀಪಾದಂಗಳವರು ತಂತ್ರಸಾರೋಕ್ತ ಜಪವಾಖ್ಯಾನ ದೇವರ ಪೂಜಾದಿಗಳನ್ನು ಮಾಡಿಕೋತ ವಿಶ್ವಪುಂಗವರಿಗೆ ಸಂಸ್ಥಾನ ಯಿಟ್ಟು, ಗಂಡಕಿ ತೀರವನ್ನು ಪ್ರಾಪಿಸಿ ಹರಿಪದವನ್ನು ೧೫೨೪ನೆ ಪ್ಲವ ಸಂವತ್ಸರ ಆಷಾಡ್ ಶು॥೩ ಯಲ್ಲು ಯೈದಿದರು.

ತಚ್ಛಿಷ್ಯರಾದ ವಿಶ್ವಪುಂಗವರು ವಿದ್ಯಾಸಂಪನ್ನರಾಗಿ ಉಡುಪಿಯಲ್ಲು ಸುಧಾಂತ ಗ್ರಂಥಗಳನ್ನು ಹೇಳಿ ಶ್ರೀ ಕೃಷ್ಣದೇವರ ಪೂಜಾದಿಗಳನ್ನು ಮಾಡಿ, ಗುರುಗಳ ಉ್ರಂದಾವನ ಸಮೀಪದಲ್ಲು ಶಕ ವರುಷ ೧೫೩೪ನೇ ಕಾರ್ತೀಕ ಶು॥೧೦ ಲ್ಲು ಉ್ರಂದಾವನರೂಢರಾದರು.

ತಚ್ಛಿಷ್ಯರಾದ ವಿಶ್ವವಲ್ಲಭತೀರ್ಥಶ್ರೀಪಾದಂಗಳವರು ಮಹಾತಪಸ್ವಿಗಳಾಗಿ ಕಾಷ್ಟಮೌನಾದಿ ಉ್ರತಗಳಿಂದ ಶ್ರೀನರಸಿಹ್ಮಪಾದಭಜಿತರಾಗಿ ತಮ್ಮಾ ಶಿಷ್ಯ ವಿಶ್ವಭೂಷಣರಿಗೆ ಸಂಸ್ಥಾನಾ ಕೊಟ್ಟು ಸ್ವಗುರುಸನ್ನಿಧಾನದಲ್ಲು ೧೫೪೫ ದುಂಧುಭಿ ಸಂವತ್ಸರ ಮಾರ್ಗಶಿರ ಬಹುಳ ೩೦ಯಲ್ಲು ಮೋಕ್ಷವನ್ನು ಪ್ರಾಪಿಸ್ತರು.

ತಚ್ಛಿಷ್ಯರಾದ ವಿಶ್ವಭೂಷಣ ಜಗತ್ಪಂಡಿತರಾಗಿ ದಂಡ ಕರಕಮಲಾದಿ ಅನೇಕ ಗ್ರಂಥರಚನಾ ಮಾಡಿ ಸ್ವಶಿಷ್ಯರಾದ ಯಾದವೇಂದ್ರಯತಿಗಳಿಗೆ ಸದ್ಧಾಂತರಹಸ್ಯೋಪದೇಶಗಳನ್ನು ಮಾಡಿ, ಶಕ ವರುಷ ೧೫೫೫ನೆ ಅಂಗೀರಸ ಸಂವತ್ಸರದ ಕಾರ್ತೀಕ ಶು॥೮ಯಲ್ಲು ನೆರಂಬಳಿಯಲ್ಲಿ ಹರಿಪದ ಪ್ರಾಪಿಸ್ತರು.

ತಚ್ಛಿಷ್ಯರಾದ ಯಾದವೇಂದ್ರಸ್ವಾಮಿರಾಯರು ವೇದಾಂತಪ್ರಯುಕ್ತ ವ್ಯಾಕರಣ ಶಾಸ್ತ್ರಪ್ರವೀಣರಾಗಿ ದುರ್ವಾದಿಗಳನ್ನು ಖಂಡಿಸಿ, ಪ್ರಜ್ಞಾನತೀರ್ಥರಿಗೆ ಆಶ್ರಮಕೊಟ್ಟು, ೧೫೬೬ನೆ ಸಂವತ್ಸರದ ಫಾಲ್ಗುಣ ಬಹುಳ ೧೦ಯಲ್ಲು ದೇವರ ಯಾತ್ರೆ ಮಾಡಿದರು.

ಪ್ರಜ್ಞಾನಮೂರ್ತಿಗಳು ಉಡಪಿಯಲ್ಲು ನಾಲ್ಕು ತರುವಾಯ ಸಿದ್ಧಾಂತಗ್ರಂಥಗಳ ಹೇಳಿಕೊಂತ ಯಲ್ಲು ವಿಶ್ವನಾಥದೇವರ ಸನ್ನಿಧಿಯಲ್ಲು ವಿದ್ಯಾರಣ್ಯರಿಗೆ ಆಶ್ರಮಕೊಟ್ಟು, ಆ ದೇಶಸ್ತಳದಲ್ಲು ೧೫೭೮ನೆ ವಿಶ್ವಾವಸು ಸಂವತ್ಸರ ಮಾಘ ಬ॥ ಯಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರಾದ ವಿದ್ಯಾರಾಜತೀರ್ಥಶ್ರೀಪಾದಂಗಳವರು ವಿರಕ್ತರಾಗಿ ಭೂ ಪ್ರದಕ್ಷಿಣವನ್ನು ಮಾಡಿ ಬಂದು, ತಂತ್ರಸಾರೋಕ್ತವಿಧಿಯಿಂದಾ ಪೂಜಾದಿಗಳ ಮಾಡಿಕೊಳ್ಳುತ್ತ ಯಿದ್ದು, ವಿದ್ಯಾಮೂರ್ತಿಗಳಿಗೆ ಪರಮಹಾಸ್ರಮಕೊಟ್ಟು . . . . ಸಉಮ್ಯ ಸಂವತ್ಸರ ವೈಶಾಖ ಬಹುಳ॥೫ಲ್ಲು ಶ್ರೀ ದೇವರಯಾತ್ರೆ ಮಾಡಿದರು.

ಅವರ ಶಿಷ್ಯರು ವಿದ್ಯಾಮೂರ್ತಿಗಳು ಬಾಲ್ಯಾವಸ್ಥೆಯಲ್ಲು ಸೈಕುರುಯೋಗದಿಂದ ಕಿ[>ಖಿ]ನ್ನಾರಾಗಿ ಸ್ವಾರೆ[>ದಿ]ರಾಜರ ಉ್ರಂದಾವನದಲ್ಲು ಸೇವಾಬಸತ್ಕರದಿಂದ ಮಂತ್ರಸಿದ್ಧರಾಗಿ, ಅತ್ಯುಗ್ರತಪಃ ಸಾಮರ್ಥ್ಯದಿಂದ ಅನುಗ್ರಹಿಸಿ ಗ್ರಹ ಸಾಮರ್ಥ್ಯ ಉಳ್ಳವರಾಗಿ ಗಜತುರಗಚಕ್ರಚಾಮರದ ಅನೇಕ ಬಿರುದಾವಳಿಗಳನ್ನು ಸಂಪಾದಿಸಿಕೊಂಡು ಬಂದು, ಶ್ರೀಕೃಷ್ಣದೇವರ ಸನ್ನಿಧಿಯಲ್ಲು ತಂತ್ರಸಾರಾಂತ ಗ್ರಂಥಗಳ ಪ್ರವಚನಮಾಡುತ್ತಾ ಯಿದ್ದು, ಪರಿಯ ನಾಲ್ಕರಲ್ಲಿ ಆ ಕೃಷ್ಣಪೂಜಾಧರ್ಮ ಜಪವ್ಯಾಖ್ಯಾನಾದಿಗಳನ್ನು ಪ್ರವಚನೆಯನ್ನು ಮಾಡುತ್ತ ಯಿದ್ದು, ಸ್ವಮಠದಲ್ಲು ವಿದ್ಯಾವಲ್ಲಭತೀರ್ಥ ಶ್ರೀಪಾದಂಗಳವರಿಗೆ ಹಂಸಾಸ್ರಮಧಾರಣ ಮಾಡಿ, ಶಕ ವರುಷ ೧೬೫೭ನೆ ಸೌಂಮ್ಯ ಸಂವತ್ಸರದ ಭಾದ್ರಪದ ಶು॥೮ಯಲ್ಲು ಯೋಗಾರೂಢರಾದರು.

ತತ್ಕರಕಮಲಸಂಜಾತರಾದ ವಿದ್ಯಾವಲ್ಲಭತೀರ್ಥವಲ್ಲಭರು ಆಶ್ರಮೊಜುಕ್ತ ಅನೇಕ ಧರ್ಮಪರವಾಗಿ ಸುಧಾದಿಸಿದ್ಧಾಂತಶಾಸ್ತ್ರಗಳನ್ನು ಪ್ರಚವನಮಾಡಿಕ್ಕೊಂಡು ವಿದ್ಯೇಂದ್ರರಿಗೆ ಹಂಸಾಶ್ರಮವನ್ನು ಕೊಟ್ಟು, ಸ್ವಗುರು ಸನ್ನಿಧಿಯಲ್ಲು ಪೇಜಾವರ ಸ್ಥಳದಲ್ಲು ಶಕವರುಷ ೧೬೬೧ನೆ ಕಾಳಯುಕ್ತಿ ಸಂವತ್ಸರದ ಭಾದ್ರಪದ ಶು॥೭ಯಲ್ಲು ಉ್ರಂದಾವನರೂಢರಾದರು.

ಆ ತರುವಾಯ ವಿದ್ಯೇಂದ್ರತೀರ್ಥಶ್ರೀಪಾದಂಗಳವರು ಸ್ವಗುರ್ವಾಜ್ಞಾನುಸಾರ ತಪೋವ್ಯಾಖ್ಯಾನ ಪರರಾಗಿ ಯಿದ್ದು, [ವಿ+]ಧ್ಯಾನಿಧಿ ಆ [>ಶ್ರೀ]ಪಾದಂಗಳವರಿಗೆ ತ್ರುಯಾಶ್ರಮವನ್ನು

ಕೊಟ್ಟು ಸ್ವಸಂಪ್ರದಾಯಪಾರಂಪರ್ಯವಾಗಿ ಬಂದ ಸ್ವಸಿದ್ಧಾಂತರಹಸ್ಯಗಳನ್ನು ಪ್ರವಚನೆ ಮಾಡಿ, ವಿರಕ್ತ ಪ್ರಯಾಗಕ್ಷೇತ್ರದಲ್ಲಿ ಶಕ ವರುಷ ೧೬೭೦ನೆ ಪ್ರಭವ ಸಂವತ್ಸರದ ಭಾದ್ರಪದ ಶು॥೧ ಯಲ್ಲಿ ಗಂಗಾ ಯಮುನಾ ಸಂಗಮದಲ್ಲು ಸಿದ್ಧರಾದರು.

ವಿದ್ಯಾನಿಧಿತೀರ್ಥಶ್ರೀಪಾದಂಗಳವರು ಶಮದಮಾದಿ ಸಂಪನ್ನರಾದ ಶಿಷ್ಯರುಗಳಿಗೆ ಸಭಾಸ್ರವನ್ನು ಅಮೂಲಾಗ್ರವಾಗಿ ಉಪದೇಶಗಳು ಮಾಡಿ, ಕ್ರಮಪ್ರಾಪ್ತವಾದಂತ ಪರಿಯಾಯ ಪೂಜೆಗಳನ್ನು ಮೂರಾವರ್ತಿ ಮಾಡಿಕೊಂಡು, ಗಂಗಾದಿಸಕಲತೀರ್ಥಯಾತ್ರೆಗಳನ್ನು ಶ್ರೀ[>ತ್ರಿ]ದಾವರ್ತಿ ಮಾಡಿಕ್ಕೊಂಡು, ಸಕಲರಾಜಚೂಡಾಮಣಿಗಳಾದ ಅರಸುಗಳಿಂದಾ ಬಹು ಸನ್ಮಾನಿತರಾಗಿ ಕುರುಕ್ಷೇತ್ರ ಸುವರ್ನಾ ದ್ವಾರಕಿ ದರುಶನ ಮಾಡಿಕೊಂಡು ಬಂದು, ಭಾಷಾದಿ ಸ್ವಸಿದ್ಧಾಂತ ಗ್ರಂಥಗಳನ್ನು ಅಮೂಲಾಗ್ರವಾಗಿ ಮೂರಾವರ್ತಿ ಪ್ರವಚನೆಯನ್ನು ಮಾಡಿ, ಸ್ವಕು[+ತ]ಯತ್ರಾ ಪ್ರವಚನಾದಿಗಳ ಫಲವನ್ನು ಶ್ರೀಕೃಷ್ಣದೇವರಿಗೆ ಅರ್ಪಣೆಯನ್ನು ಮಾಡಿ, ವಿದ್ಯಾಸಮುದ್ರತೀರ್ಥಶ್ರೀಪಾದಂಗಳವರಿಗೆ ಹಂಸಾಶ್ರಮವನ್ನು ಕೊಟ್ಟು ತಾಲು ಕೃಷ್ಣಾಪುರದಲ್ಲು ಶಕ ವರುಷ ೧೭೧೫ನೆ ಪರಿಧಾವಿ ಸಂವತ್ಸರದ ಸಿಂಹ ಮಾಸ ಭಾದ್ರಪದ ಶು॥ಲ್ಲು ಯೋಗಸಾಮರ್ಥ್ಯದಿಂದ ಶ್ರೀ ವ್ಯಾಸ ಮಂದಿರವನ್ನು ಪ್ರಾಪಿಸಿದಾರೆ.

ಅವರ ಕರಕಮಲಸಂಜಾತರಾದ ವಿದ್ಯಾಸಮುದ್ರತೀರ್ಥಶ್ರೀಪಾದಂಗಳವರು ದೊರೆಗಳಿಗೆ ಕರಿತುರಗಾದ್ಯನೇಕ ಸ್ತಿರಸಾಮ್ರಾಜ್ಯಾದಿ ವಿಭವಗಳು ದಿನೆ ದಿನೆ ಯಿತ್ತೊ, ಪ್ರತಿಶಯವಾಗುವ ಹಾಗೆ ನಿರಂತರದಲ್ಲು ಶ್ರೀ ಮದ್ವಾಚಾರ್ಯರ ಕರಪೂಜಿತ ಶ್ರೀಕೃಷ್ಣದೇವಾ ಸನ್ನಿಧಿಯಲ್ಲು ಪ್ರಾರ್ಥಿಸಿಕೊಳ್ಳುತ್ತ, ತತ್ಸಾಭಿಮಾನದಿಂದ ನಿತ್ಯಾನಂದರಾಗಿ ಪೂಜಾಜಪವ್ಯಾಖ್ಯಾನ ಮಾಡಿಕೊಳ್ಳುತ್ತಾ ಯಿದ್ದಾರೆ ಯಂತ ಬರಶಿ ಕೊಟ್ಟ ಗುರುಪಾರಂಪರ್ಯದ ಕೈಫಿಯತು ನಾಮೆ.

ಕೃಷ್ಣಾಪುರಮಠದಲ್ಲಿ ಯಿರುವ ಪುಸ್ತಕದ ವಿವರ ತಿಳಿದು ಕೊಳ್ಳುವದು:

ಮಹಾಭಾರತ ಪುಸ್ತಕ	೧೧
ಭಾಗವತದ ಪುಸ್ತಕ	೧
ರಾಮಾಯಣದ ಪುಸ್ತಕ	೧
ಭಾಗವತ ತಾತ್ಪರ್ಯ ವಿಜಯದ್ವಜ ವ್ಯಾಖ್ಯಾನ	೨
ಮಹಾಭಾರತ ತಾತ್ಪರ್ಯನಿರ್ಣಯದ ಪುಸ್ತುಕ	೨
ತದ್ಯವ್ಯಾಖ್ಯಾನ ಪುಸ್ತುಕ	೧
ಪ್ರಮಾಣಪದ್ಧತಿ ತದ್ವಿವ್ಯಾಖ್ಯಾನ ಪುಸ್ತುಕ	೨
ಮಿಮಾಂಸಃಶ್ಯಹಸ್ರಾದ್ಧಿ ಪಿಗ ಬಾಲಸಂಗ್ರಹ ಅದರ ಟಿಪ್ಪಣಿ ಸಹಾ ಪುಸ್ತುಕ	೫
ಅಂತೂ ಯಿ ಪ್ರಕಾರ ಯಿಧೆ	
ತ್ರಿಜಾಂತ ರೂಪಾ ಪುಸ್ತುಕ	೧
ಯುಕ್ತಿ ಮಲ್ಲಿಕಾ ಪುಸ್ತುಕ	೧
ಬ್ರಹತ್ಸಿದ್ಧಾಂತ ಕೌಮುದಿ	೧

ಮಧ್ಯಕೌಮುದಿ ಪುಸ್ತಕ	೨
ದಶಪ್ರಕರಣಕತಿ ವ್ಯಾಖ್ಯಾನ ಪುಸ್ತಕ	೪
ದಶೋಪನಿಷದೊಭಾಷ್ಯ ಸಹಾ ಪುಸ್ತಕ	೪
ತೀಗೃಭಾಷ್ಯ ತತ್ವತಿಯ ಪುಸ್ತಕ	೨
ಸೂತ್ರಭಾಷ್ಯ ತತ್ವಪ್ರಕಾಶಿಕ ಅದರ ಟಿಪಣೆ ಸಹಾ ಪುಸ್ತಕ	೩
ಅನುವ್ಯಾಖ್ಯಾನ ಸುಧಾ ಅದರ ಟಿಪಣಿ ಸಹಾ ಪುಸ್ತಕು	೭
ನ್ಯಾಯಾಮೃತ ತರ್ಕತಾಂಡವ ಚಂದ್ರಿಕಾ ಅದರ ಟಿಪಣಿಗಳು ಸಹಾ ಪುಸ್ತಕ	೯
ಪ್ರಾಚೀನತರ್ಕ ನವೀನತರ್ಕ ವ್ಯಾಕರಣ ಕ್ರಮದಿ ತದ್ದು ವ್ಯಾಖ್ಯಾನ ಸಹಾ ಪುಸ್ತಕ	೧೨
ಶಿವಸ್ತುತಿ ವಿಷ್ಣುಸ್ತುತಿ ದ್ವಾದಶಸೋತ್ರ ಮುಂತಾದ ಪುಸ್ತಕ	೧
ವಾಯುಸ್ತುತಿವ್ಯಾಖ್ಯಾನ ಪುಸ್ತಕ	೨
ವಿಷ್ಣುಪುರಾಣ ಅಗ್ನಿಪುರಾಣ ನಾರದಪುರಾಣ ಸಂಗ್ರಹ ಪುಸ್ತಕ	೪
ಚಿಲ್ಲರಿ ಕಾವ್ಯ ನಿಘಂಟುಗಳು ಸಹಾ ಪುಸ್ತಕ	೪
ಕಥಾ ಟೀಕಾ ಪುಸ್ತಕ	೧
ಪ್ರಕ್ರಿಯಾ ಟೀಕು	೧
ರುಕ್ಮಿಣೇಶ ವಿಜಯ	೧
ವೈಶೇಶಿಕ ಭಾಷ್ಯಾ	೧
ತರ್ಕ ಪ್ರಕರಣ	೧
ರಘುವಂಶ ಸವ್ಯಾಖ್ಯಾನ ಪುಸ್ತಕ	೧
ನ್ಯಾಯ ಸುಧಾ	೧
ಹಲಧರ	೧
ಪ್ರಕ್ರಿಯಾ ಕೌಮುದಿ	೧
ತರ್ಕತಾಂಡವ ಟೀಕಾ ರಾಘವೇಂದ್ರಿಯ	೧
ಸಿದ್ಧಾಂತ ಶೇಖರ	೧
ಪ್ರಪಂಚಸಾರ	೧
ಭಾಗವತಸಂಗ್ರಹ	೧
ಮಾಘವ್ಯಾಖ್ಯಾನ	೧
ಮೂಸಲ ಪರ್ವ	೧

ಕೊಲಾಯ ನಂದಿ	೧
ಅಷ್ಟಾದ್ಯಾಯ ಸೂತ್ರ	೧
ಕ್ರಮದೀಪಿಕಾ ಪುಸ್ತುಕ	೧
ಶಾಸ್ತ್ರ ದೀಪಿಕ	೧
ತಂತ್ರದೀಪಿಕ	೧
ಯೋಗ ದೀಪಿಕಾ	೧
ಚಂಬು ರಾಮಾಯಣ	೧
ಬಾದರಾಯಣ ಗೀತಾ	೧

ಅಂತೂ . . . . ಪುಸ್ತುಕ ಯಿಥೆ

ಪುತ್ತಿಗೆ ಮಠದಲ್ಲಿ ಇದ್ದ ಪುಸ್ತುಕಗಳ ವಿವರ:

ಪ್ರಮಾಣ ಪದ್ಧತಿ ಸಹಾ ಪುಸ್ತುಕ	೧	ರುಗ್‌ಭಾಷ್ಯಾ ಪುಸ್ತುಕ	೧
ದಶಪ್ರಕರಣ ಪುಸ್ತುಕ	೩	ಪ್ರಮೇಯದೀಪಿಕ ಪುಸ್ತುಕ	೧
ವ್ಯಾಖ್ಯಾನ ರಾಘವೇಂದ್ರ ಪುಸ್ತುಕ	೨	ಗೀತ ವಿವರ್ತಿ ಪುಸ್ತುಕ	೧
ಶೆದ್ರಹಳ್ಳಿ ಆಚಾರ ಟೀವಣಿ ಪುಸ್ತುಕ	೧	ಬ್ರಹ್ಮರುಪನಿಷತ ಪುಸ್ತುಕ	೧
ವಿಷ್ಣುತತ್ವ ನಿರ್ನಯದ ಪುಸ್ತುಕ	೩	ಖಂಡಾರ್ಥಭಾಷ್ಯ ಪುಸ್ತುಕ	೧
ವ್ಯಾಖ್ಯಾನ ಪುಸ್ತುಕ	೧	ತಂತ್ರಸಾರ ಪುಸ್ತುಕ	೧
ತತ್ವಪ್ರಕಾಸಿಕಾ ಪುಸ್ತುಕ	೨	ಭಾಗವತ ಪುಸ್ತುಕ	೨
ಟೀಪುಣಿ ಪುಸ್ತುಕ	೩	ಟೀಕು ಪುಸ್ತುಕ	೧
ಸುರಾ[>ಧಾ] ಪುಸ್ತುಕ	೨	ಆ . . . . ವ್ಯಾಖ್ಯಾನ ಪುಸ್ತುಕ	೧
ಟೀಪಣಿಯವರು ಪದ್ಯಾ ಪುಸ್ತಕ	೧	ಬ್ರಹ್ಮಸೂತ್ರಭಾಷ್ಯದ ಪುಸ್ತುಕ	೧
ರಾಘವೇಂದ್ರಯ ಪುಸ್ತುಕ	೧	ಭಾಗವತ ತಾತ್ವರ್ಯ ಪುಸ್ತುಕ	೧
ಶ್ರೀನಿಧಿತೀರ್ಥಯ ಪುಸ್ತುಕ	೧	ತರ್ಕ ಪುಸ್ತುಕ	೧
ಉಪನಿಷತ್ತು ಪುಸ್ತುಕ	೧	ವ್ಯಾಖ್ಯಾನ ಮಳ[>ಣಿ]ಮಂಜರಿ ಪುಸ್ತುಕ	೧
ಖಂಡಾರ್ದ ಪುಸ್ತುಕಿ	೧	ಕಾವ್ಯ ಪುಸ್ತುಕ	೩
ಉಪನಿ[+ಷ]ದ್ಭಾಷ್ಯ ಪುಸ್ತುಕ	೧	ಮಾಸತ್ರಯ ಪುಸ್ತುಕ	೧
ವ್ಯಾಸತೀರ್ಥಯ ಪುಸ್ತುಕ	೧	ಅಂತೂ ಪುಸ್ತುಕ	೧
			೪೫

❖❖

೬೩

ಕುಂಜಾರು ಕೈಫಿಯತ್ತು

ಮೆಕೆಂರ್ಝಿ ಸಂಪುಟ : ೩೫೩

ಕುಂಪಣಿ ಸರಕಾರಕ್ಕೆ :

ಅಕ್ಷಯ ಸಂವತ್ಸರದ ಜೇಷ್ಠ ಶು॥ ೮ ಉ ಕುಂಜಾರ ಜೋಗಿಭಟ್ಟ ಬರಕೊಟ್ಟ ಕೈಫಿಯತ್ತು. ಅದಾಗಿ ಪೂರ್ವ್ವದಲಿ ತ್ರೇತಾಯುಗದಲ್ಲಿ ಶ್ರೀಪರಶುರಾಮದೇವರು ಕಾರ್ತಿವೀರ್ಯ್ಯಾರ್ಜುನಪ್ರಭೃತಿ ಅಶೇಷ ದುಷ್ಟಕ್ಷತ್ರಿಯರನ್ನು ಸಂಹಾ[+ರಿಸಿ] ಸ್ವಬಾಹು ಬಲಾರ್ಜಿತವಾದಂತಾ ಚತುಸಾಗರಾಂತವಾದಂತಾ ಸಮಸ್ತಭೂಮಿಯನ್ನು ಯಜ್ಞರಕ್ಷಣಾರ್ಥವಾ[+ಗಿ] ಕಾಸ್ಯಪ ರಮೇಶ್ವರರಿಗೆ [>ಕಾಸ್ಯಪ ಋಷೀಶ್ವರರಿಗೆ] ದಾನಕೊಟ್ಟು, ಸ್ವತ್ವಪರಿತ್ಯಾಗಪೂರ್ವಕವಾಗಿ ಕೊಟ್ಟು, "ಭೂಮಿಯಲ್ಲು ತಾನು ಅನುಚಿತ ನೂತನವಾಗಿ ತನಗೆ ದಾನಾರ್ಥವಾಗಿ ಸ್ಥಳ ನಿರ್ಮಾಣಮಾಡುತ್ತೇನೆ"ಯಂತ ಸಂಕಪ್ಪ[ಲ್ಪ] ಮಾಡಿಕ್ಕೊಂಡು, ಸಂಹ್ಯಪರ್ವತದ ಶಿಖರದಲ್ಲಿ ಬಂದು ನಿಂತು, ಸ್ವಾಜ್ಞೆಯಿಂದ ಸಮುದ್ರರಾಜನಿಂದ ದತ್ತವಾದಂತಾ ಯೀ ದೇಶವನ್ನು ಕುರುತು ಬಂದು, ಯೇಕದೇಶ ಮಧ್ಯದಲ್ಲಿ ಸ್ವರ್ಗಾಪವರ್ಗಗಳಿಗೆ ಸಾಧಕವಾದಂತಾ ಮಹಾಕ್ಷೇತ್ರವನ್ನು ನಿರ್ಮಾಣಮಾಡಿ. ಆ ಕ್ಷೇತ್ರದಲ್ಲಿ ಜನನಿ ರೇಣುಕಾದೇವಿಯಿಂದ ಕೂಡಿಕ್ಕೊಂಡು ಅ[>ಆ]ವಾಸ ಮಾಡಬೇಕು ಯಂತ ಅಪೇಕ್ಷೆಯಿಂದ ಸಪಾದಯೋಜನ ಪರಿಮಿತವಾದಂತಾ ಯೀ ಗಿರಿಗೆ ಬಂದು ನಿಂತು, ತನ್ನ ಪಾದಗಳಿಂದ ಎತ್ತಿ ಯೀ ಪರ್ವತವನ್ನು ಪಾದಯೋಜನ ಉನ್ನತವಾದ್ದಂತಾದ್ದನ್ನು ಮಾಡಿ ಅತ್ಯುತ್ತಮ ಭೂಮಿಯಾದ ಪ್ರಯುಕ್ತ, ಆ ಪರ್ವತದಲ್ಲಿ ಶ್ರೀ ಹರಿ ಸ್ವಸ್ತಿಮರಾದಂತಾ ಶ್ರೀ ದುರ್ಗಾದೇವಿಯರನ್ನು ಪ್ರತಿಷ್ಠೆ ಮಡಿ, ಯೀ ಗಿರಿ ಅಧೋಭಾಗದಲ್ಲಿ ಚತುರ್ದಿಕ್ಕಿನಲ್ಲಿ ಪರಶು ಧನು ಗದಾ ಬಾಣ ಎಂಬಂತಾ ನಾಲ್ಕು ತೀರ್ಥಗಳನ್ನು ಯೇತನ್ನಾಮ ವಿಶೇಷಗಳಾದ ತನ್ನ ಆಯುಧಗಳಿಂದ ಮಾಡಿಯೂ ಮಹಾಕ್ಷೇತ್ರವನ್ನು ತನ್ನ ಆಶ್ರಮ ಶ್ರೀದುರ್ಗಾದೇವಿಯರ ಮಹಾಪೂಜ್ಯೋತ್ಸಹವನ್ನು ಮಾಡಲಾಗಿ, ಶ್ರೀಬ್ರಹ್ಮಾದಿದೇವತೆಗಳು ಉನ್ನತವಾದಂತಾ ಪರ್ವತದ ಹ್ರೆಸ್ವಿ[>ಹೃಸ್ವೀ]ಕರಣ ನಿರ್ಜಲಪ್ರದೇಶ ಶಿಲಾಸ್ಥಳದಲ್ಲಿ ಅಮೃತೋಪರಾರಿಪೂರೀಕಗಳಾದ ತೀರ್ಥಗಳ ನಿರ್ಮಾಣ, ಶ್ರೀದುರ್ಗಾಪ್ರತಿಷ್ಠೆ ಪೂರ್ವಕವಾಗಿ ಮಹಾ ಅಹಿಕಾಮುಷ್ಮಿಕ ಫಲಕವಾದಂತಾ, ಕ್ಷೇತ್ರೋತ್ಪಾದನರೂಪವಾದಂತಾ ಶ್ರೀ ಪರಶುರಾಮದೇವರ ಮಹಾತ್ಮ ದರ್ಶನಾಸುಖದಿಂದ ವಿಮಾನರೂಢರಾಗಿ ಬಂದು, ಶ್ರೀ ಪರಶುರಾಮದೇವರ ಸಂದರುಷನ ಶ್ರೀ ದುರ್ಗಾದೇವಿಯರ ಸಂದರುಶನವನ್ನು ಮಾಡಿ, ತದಾಜ್ಞೆಯಿಂದ ಸುರಲೋಕಗಮನಾರ್ಥವಾಗಿ ವಿಮಾನಯ[>ಯಾ]ನೊದ್ಯೋಗವನ್ನು ಮಾಡಲಾಗಿ, ಯೀ ವಿಮಾನಗಳು ಪರ್ವತದಲ್ಲಿ ಸಂಬಂಧಗಳಾದ್ದರಿಂದ ಯೀ ದೇವತೆಗಳು ಯೇತನ್ಮಹಿಮೆಯನ್ನು ನೋಡಿಯೂ ಪರವಾ[>ವ]ತಕ್ಕೆ ಶ್ರೀರಾಮದೇವರ ಆಜ್ಞೆಯಿಂದ ವಿಮಾನಗಿರಿ ಮುಂ[>ಯಂ]ತಾ ನಾಮದೇಯವನ್ನು ಯಿಟ್ಟು, ಸ್ವಲೋಕಗಳನ್ನು ಕುರುತು ತೆರಳಿದರು.

ಅನಂತರದಲ್ಲಿ ಶ್ರೀರಾಮದೇವರು ಯಿದೇ ಆಶ್ರಮದಲ್ಲಿ ಯಿರಲಾಗಿ, ಜನನಿ ರೇಣುಕಾದೇವಿಯು ಭಾಗೀರತ್ಯಾದಿ ಸಕಲತೀರ್ಥಸ್ನಾನಾದ್ಯಾಯುಕ್ತಗಳಾದ ಯೀ ತೀರ್ಥಗಳಲ್ಲು ಪ್ರತಿದಿನದಲ್ಲೆ ಪ್ರತ್ಯೇಕತೆ ಸ್ನಾನವನ್ನು ಮಾಡುವದಕ್ಕೋಸ್ಕರ ಉದ್ಧಳಾದ ಪ್ರಯುಕ್ತ, ಅಶಕ್ತಳಮಿತ ತ್ತೀರ್ಥ ಚಟುಷ್ಟಯನ್ನಾವ ಫಲಿಯಾ ವಂದೆ ಜಲಾಶಯ್ಯೊದಲ್ಲೆಗ ನೆರಾಗಬೇಕೆಂಬ ಯಿಚ್ಛೆಯಿಂದ, ತನ್ನ ಪುತ್ರನಾದ ಶ್ರೀರಾಮನನ್ನು ಕುರಿತು "ಯಾಗಾದಿ ಸರ್‍ವ್ವತೀರ್ಥಗಳು ವಿಶೇಷತಃ ಸನ್ನಿಹಿತವಾದಂತಾ ಅನಾಮಸ್ಯೇನ ಗಮ್ಯವಾದಂತಾ ನದಿಯುನ್ನು ಶ್ರಿಷ್ಟಿವಮಾಡು"ವದಕ್ಕೆ ಪ್ರಾರ್ಥಿಸಲಾಗಿ, ಶ್ರೀರಾಮದೇವರು[>ರ] ಮನಭಿಪ್ರಾಯವನ್ನು ತಿಳಿದು "ಸ್ವಸಮೀಪವನ್ನು ರೂಪವತಿಯಾಗಿ ಬಂದು ನಿಂತು ತನ್ನ ಸೇವೆಯನ್ನು ಆಜ್ಞಾಪಿಸಬೇಕು"ಯಂತ ಹೇಳಿಕೊಳ್ಳಲಾಗಿ, ಸಹ್ಯಾಪರ್‍ವ್ವತವನ್ನು ಆರಂಭಿಸಿಕೊಂಡು ಪಶ್ಚಿಮಸಮುದ್ರದ ಸಾಮಂತ್ರವಾಗಿ ನದಿರೂಪದಿಂದ ಪ್ರವಹಿಸಿಕೊಂಡು ಯಿರುವಂತ ಆಜ್ಞೆಯನ್ನು ಕೊಟ್ಟು, ಸಹ್ಯಾ ಪರ್‍ವ್ವತದ ಶಿಖರವನ್ನು ಕುರಿತು ಬಾಣಪ್ರಯೋಗವನ್ನು ಮಾಡಲಾಗಿ, ಆ ಬಾಣಘಾತಮಾರ್ಗದಿಂದ ಗಂಗೆ[+ಯ]ಮುನಿ ನಿಶ್ಮತಳಾಗಿ ಶ್ರೀನಿ[>ವಿ]ಮಾನಗಿರಿ ಉತ್ತರಭಾಗದಲ್ಲು ನದೀರೂಪಳಾಗಿ ಸಮುದ್ರಪ್ರವೇಶವನ್ನು ಮಾಡುತ್ತಾ ರಾಮಾಜ್ಞಾನುಸಾರವಾಗಿ ರೇಣುಕಾದೇವಿಯ ಅಭೀಷ್ಟ ಪೂರಣೆಯನ್ನು ಮಾಡುತ್ತಾ ಯಿದ್ದಳು. ಯೀ ಪ್ರಕಾರ ಶ್ರೀರಾಮದೇವರು ಬಹುಕಾಲ ಪರಿಯಂತ್ರವಾಗಿ ಯೀ ಮಹಾಪುಣ್ಯಕ್ಷೇತ್ರದಲ್ಲಿ ಯಿದ್ದು ಕಾಲಕ್ರಮದಿಂದ ಸಾಲಗ್ರಾಮಾಚಲವನ್ನು ಕುರಿತು ಪ್ರಯಾಣವನ್ನು ಮಾಡಿದರು. ಆ ಮೇಲೆ ವಿಮಾನಗಿರಿ ಆರೂಢಳಾದಂತಾ ದುರ್ಗಾದೇವಿಯು ಆ ಗ್ರಾಮಸ್ತರಾದಂತಾ ನಾಲ್ಕು ಮಂದಿ ಬ್ರಾಹ್ಮರು ವಿಷ್ಣು ಬರಕನ್ನಾಡಿ, ಬಾಲಕೃಷ್ಣನ ಮಲಾಮ[>ವಯಲಾಯ], ವಿಷ್ಣು ತುರಗನ್ಯಾರ್ಗ, ನಾರಾಯಣ ಬರಕನ್ನಾಡಿ ಸಹಾ ನಾಲ್ಕು ಕಡೆಯವರು ತಮ್ಮ ತಮ್ಮಾ ಸರ್‍ವ್ವಸ್ವದಿಂದ ಪೂಜೆ ಸಹಗಳನ್ನು ನಡೆಸಿಕೊಳ್ಳುತ್ತಾಯಿದ್ದರು. ಆ ತರುವಾಯ ಕೆಲಉ ವರುಷದ ಮೇಲೆ ಯಿ ನಾಲ್ಕು ಮಂದಿ ಬ್ರಾಹ್ಮರು ಶ್ರೀದುರ್ಗಾದೇವಿ ಸನ್ನಿಧಿಯಲ್ಲು ಆಗುವಂತಾ ವೈಭೋಗಗಳು ಮುಂತಾದ್ದು ತಮ್ಮಾ ಮುಖದಲ್ಲೂ ಸಾಂಗವಾಗಿ ನಡದು ಬಾರದೆ ಯಿದ್ದ ಕಾರಣ, ವಿಶ್ವೇಶ್ವರತೀರ್ಥಶ್ರೀಪಾದಂಗಳವರ ಶಿಷ್ಯರಾದ ವೇದವತಿತೀರ್ಥಶ್ರೀಪಾದಂಗಳವರನ್ನು ಯೀ ದೇವಾಲಯಕ್ಕೆ ಕರಕೊಂಡು ಬಂದು, ದೇವರ ಸಮ್ಮುಖಮಂಟಪದಲ್ಲು ಕಾಳಿಯ ಮರ್ದಾ[>ರ್ದ]ನ ಶ್ರೀಕೃಷ್ಣದೇವರ ಪೂಜೆಯನ್ನು ಮಾಡಿಸಿ, ಯೀ ಪೂಜಾವಸನಾಕಾಲದಲ್ಲೆ ಅಮ್ಮಾನವರ ಪೂರ್ವಭಾಗದಲ್ಲಿ ಯೀ ನಾಲ್ಕು ಮಂದಿ ಬ್ರಾಹ್ಮರು ಯೇತ[>ಕ]ಸ್ತರಾಗಿ ತಮ್ಮ ಸರ್‍ವಾದಿಭೂಮಿಯನ್ನು ಯೀ ದೇವಸ್ಥಾನ ಸರ್‍ವ್ವಸ್ವ ನಾಲ್ಕು ಮಂದಿ ಮೊದಲಾದ ಹದಿನಾರು ವಕ್ಕಲು ಬ್ರಾಹ್ಮರ ಪುರೋಹಿತ್ಯಾ ಆಚರ ವಿಚಾರ ಶೀಕ್ಷೆ ರಕ್ಷೆ ಮುಂತಾದ್ದನ್ನು ಸಹಾ ಶಾಲಿವಾಹನ ಶಕ ವರುಷ ೧೫೫೧ನೆ ಮನ್ಮತ ಸಂವತ್ಸರದ ಮಾಘ ಶು॥೮ಲ್ಲು ಶ್ರೀ ವೇದವತಿತೀರ್ಥಪಾಂದಗಳವರು ಆರಾಧಿಸುವ ಕಾಳಿಯ ಮರ್ಧನ ಶ್ರೀಕೃಷ್ಣದೇವರ ಭಂಡಾರಕ್ಕೆ, ವೆಸುಗುಂಡಿ ರಾಜ್ಯವನ್ನು ಯೇಕಾದಿಪತ್ಯವಾಗಿ ಆಳುವ ವೀರವೆಂಕಟರಾಮ[>ಯ] ವಳಗೆ ಕೆಳದಿ ವೆಂಕಟಪ್ಪನಾಯಕನ ಅಗ್ನಾನುಸಾರ ಬಾರಕೂರಲ್ಲಿ ಚೆ[>ಚಿ]ನ್ನಬಂಡಾರದ ಬುಕ್ಕಪ್ಪನ ಮಗ ರಾಮಕೃಷ್ಣ ಒಡೇರು ಕಾಲದಲ್ಲು ಸಹಿರದ್ಯೋ[>ಣ್ಯೋ]ದಕದಾನ ಧಾರಪೂರ್ವಕವಾಗಿ ದಾರೇಯನೆರದು ಕೊಟ್ಟು, ಯೀ ಅರ್ಥಕ್ಕೆ ಶಿಲಾಶಾಸನವನ್ನು ಬರಸಿ ಕೊಟ್ಟದರಿಂದ, ಆ ಪ್ರಕಾರ ಯೀ ಸ್ವಾಮಿಗಳವರ ಸ್ವಾಧೀನದಲ್ಲಿ ಧಾರದತ್ತವಾದ ಭೂಮಿ, ಯೀ ಸ್ಥಾನಸರ್‍ವ್ವಸ್ವ ಯೀ ಹದಿನಾರು ಮಂದಿ ಬ್ರಾಹ್ಮರ ಆಚಾರ ವಿಚಾರ ಮುಂತಾದ್ದು

ನಡದು ಬರುತಿದ್ದಲ್ಲೆ, ಯಿವರ ಪ್ರಶಿಷ್ಯರಾದ ವಿದ್ಯಾಪತಿತೀರ್ಥಶ್ರೀಪಾದಂಗಳವರು ಬಾಲ್ಯಾವಸ್ಥೆಯಲ್ಲು ಯೆತ್ಯಾಶ್ರಮ ಸ್ವೀಕಾರಮಾಡಿ, ಸ್ವಲ್ಪ ಕಾಲದಲೆ ಯಿವರ ಗುರುಗಳು ಯೀಗ[>ಯೋಗಾ]ರೂಢರಾದ ಪ್ರಯುಕ್ತ ಧಾರದತ್ತವಾದ ಬೂಮಿಯಲ್ಲು ಕೆಲಉ ಭೂಮಿಯು ಆಂನ್ಯಕ್ರಾಂತವಾದ ಭೂಮಿಗೆ ಗ ೪೨॥೩।೦ ರೇಖೆ ಉತ್ತರವಾಗಿ ನಡದು ಬರುತಿದ್ದಲ್ಲಿ, ಯೀ ಜಾಗೆ ಕುಂಪನಿ ಅಮಲು[>ಲಿ]ನಲ್ಲು ಯೀ ಬಗೆ ಹುಟ್ಟುವಳಿ ಬೇರೆ ಕೈಧರ್ಮವಳ ಧರ್ಮದಿಂದ ಸಹಾ ಮೇಲುವಾಸಿಗೆ ಸೇರಿಸಿಕೊಂಡು ತ್ಸತೀಗ ೧೧೯೬೨॥ನೂರ ಹದಿನಾರು ವರಹಾನ್ನು ಧರಣವನ್ನು ಧೊರೆಗಳವರು ಕುಡುವದರಿಂದ ಯೀ ಸ್ಥಳದಲ್ಲು ನಡವ ಪೂಜೋತ್ಸಹಗಳಿಂದ ಸಂತುಷ್ಟಳಾಗಿ, ಸಕಲಸಜ್ಜನಮನೊಬಿಲಷಿತ್ತ ವೈಹಿಕಾಮುಷ್ಟಿತ [>ಐಹಿಕಾಮುಷ್ಮಿಕ] ಫಲವನ್ನು ಕೊಡುತ್ತಾ, ಮಹಾವಿಶಿಷ್ಟಳಾಗಿ ಯಿದ್ದಾಳೆಯಂತ ಬರಕೊಟ್ಟ ಕೈಫಿಯತು ೧॥

❖❖

೬೪

ಕುಂದಾಪುರದ ಕೈಫಿಯತ್ತು

ಡಿ. ನಂಬರ್ ಸಂಪುಟ ೧೮೩೮ ಮತ್ತು ಮೆಕೆಂಝಿ ಸಂಪುಟ: ೩೫೩

ಇದನ್ನು ಸ್ಥಳದ ಶ್ಯಾನುಭಾಗ ಮೊ[>ಲಿಂ]ಗ್ಗಯ್ಯ ಮತ್ತು ಪಂಡ್ಯ [ಸೆರುವ]ಗಾರ ಸಹ ಬರೆಸಿರುವರು.

ಪೂರ್ವದಲ್ಲಿ ಪರಶುರಾಮದೇವರ ಕಡೆಯಿಂದ ಸಮುದ್ರರಾಜನು ಸ್ತುತಿಗೆ ಮೆಚ್ಚಿ, ಆತನು ಬಲವಂತನಾಗಿದ್ದುದನ್ನು ತಿಳಿದು, ಈತಗೆ ಸಮುದ್ರರಾಜನು ಬಿಟ್ಟ ಭೂಮಿ: ನಾಸಿಕಾ ತ್ರಿಯಂಬಕ ಆದಿಯಾಗಿ ಕನ್ಯಾಕುಮಾರಿ ಪರಿಯಂತ್ರವೂ ಬಿಟ್ಟನು. ಇದು ದಕ್ಷಿಣೋತ್ತರಯೋಜನ ೫೦ ॥ ಪೂರ್ವ ಪಶ್ಚಿಮ ದ್ವಿತ್ರಿಯೋಜನ ವಿಸ್ತಾರ. ಇದು ಸಹ್ಯಾದ್ರಿಯಿಂದ ಸಮುದ್ರಕ್ಕೂ ಇರುವುದು. ಈ ಮೇರೆಗೆ ಭೂಮಿ ಇದ್ದುದರಿಂದ ಇದರಲ್ಲಿ ಕುಂಭಾಸುರನೆಂಬ ರಾಕ್ಷಸನು ಕುಂಭಕಾಶಿಯಲ್ಲಿ ರಾಜ್ಯವನ್ನಾಳುತ್ತಿದ್ದನು. ಆ ಕಾಲದಲ್ಲಿ ಈತನ ಪ್ರಧಾನಿಯು ಮಹಾಲಿಂಗವನ್ನು ಪ್ರತಿಷ್ಠೆ ಮಾಡಿದನು.

ಆ ಮೇಲೆ ಇದು ಖಿಲವಾದ ನಂತರ ಉತ್ತರದೇಶದಲ್ಲಿರುವ ಚೈದ್ಯದೇಶದಿಂದ ವಸುರಾಯರು ಸಂಚಾರಾರ್ಥವಾಗಿ ದಕ್ಷಿಣದೇಶಕ್ಕೆ ಬರುವ ಕಾಲದಲ್ಲಿ, ಸಮಸ್ತ ತೀರ್ಥಕ್ಷೇತ್ರಗಳನ್ನು ನೋಡಿಕೊಂಡು ಬರುತ್ತಾ, ವಸುಪುರ ಎಂಬುವದು ಕಟ್ಟಿಸಿ, ಆ ಸ್ಥಳದಲ್ಲಿ ನಿಂತರು. ಅನಂತರ ಈತನ ಪ್ರಧಾನಿಯಾದ ಕುಂದಿರಾಯರು ಎಂಬವರು ವಸುಪುರಕ್ಕೆ ಪ್ರತಿನಾಮಧೇಯ ಬಸುರೂರಿಗೆ ಪಶ್ಚಿಮದಲ್ಲಿ ಒಂದು ಕೋ[>ಕ್ರೋ]ಶದ ಮೇಲೆ ಇರುವ ಮಹಾಲಿಂಗವನ್ನು ನೋಡಿ, ಅದನ್ನು ಜೀರ್ಣೋದ್ಧಾರ ಮಾಡಿಸಿ, ಅಲ್ಲಿ ಒಂದು ಗ್ರಾಮವನ್ನು ಕಟ್ಟಿಸಿ ಇಲ್ಲಿ ಒಸ್ತಿ ಮಾಡಿದ ಮೇಲೆ ಆ ಲಿಂಗಕ್ಕೆ ಕುಂದೇಶ್ವರ ಎಂಬ

ಹೆಸರನ್ನು ಹೇಳುತ್ತಾ ಬಂದರು. ಇದನ್ನು ಕುಂದರಾಯನು ಕಟ್ಟಿಸಿದ ಕಾರಣ ಕುಂದಾಪುರವೆಂಬ ಹೆಸರನ್ನಿಟ್ಟರು. ಅದೇ ಆದಿಯಾಗಿ ನಡೆಯುತ್ತಾ ಬಂತು. ಆ ಕಾಲದಕ್ಕೆ ಮನಗೆಳು ಮಾತ್ರ ಇತ್ತು.

ಅನಂತರದಲ್ಲಿ ಕೆಲವು ದಿವಸದ ಮೇಲೆ ಶಕವರ್ಷ ೧೧೮೪ನೇ ದುಂದುಭಿ ಸಂವತ್ಸರದಲ್ಲಿ ಬಾರಕೂರ ರಾಜಧಾನಿಯಲ್ಲಿ ಪಾಂಡ್ಯದೇಶವನ್ನಾಳುವಂಥ ದೇವರಸ ರಾಜ್ಯಂಗ್ಯೆಯುತ್ತಿರಲು ಅ[>ಆ] ಕಾಲದಲ್ಲಿ ಈ ಕುಂದಾಪುರವನ್ನು ಬಾರಕೂರರವರಿಗೆ ನಡೆಯುತ್ತಾ ಇದ್ದುದಕ್ಕೆ ಶಿಲಾಶಾಸನವಿದೆ. ಇವರಿಗೆ ಕೆಲವು ದಿವಸ ನಡೆದ ಮೇಲೆ ಬಸರೂರಲ್ಲಿ ಚೊಕ್ಕ ರಾಮಸೆಟ್ಟಿಯೆಂಬವನು ರಾಜ್ಯವನ್ನಾಳುವ ಕಾಲದಲ್ಲಿ ಈ ಕುಂದಾಪುರವೂ ಸೇರಿತ್ತು. ಆ ಕಾಲದಲ್ಲಿ ಚಿಕಣಿಸಾಲು ಹೊಳೆಬ[>ಹೊಬ]ಳಿಯಲ್ಲಿ ಕೋಟೆಯನ್ನು ಕಟ್ಟಿಸಿದುದರಿಂದ ಚೊಕ್ಕರಾಮಸೆಟ್ಟಿಕೋಟೆ ಎಂಬ ಹೆಸರಾಯಿತು. ಈಗ ಇದಕ್ಕೆ ಜನರು ಹಳೇಕೋಟೆ ಎಂದು ಹೇಳುತ್ತಾರೆ. ಅನಂತರದಲ್ಲಿ ಬಸರೂರನ್ನು ನಗರದ ದೊಡ್ಡಸಂಕಣ್ಣನಾಯಕರು ಈ ಸ್ಥಳದಲ್ಲಿ ಚೊಕ್ಕರಾಮಸೆಟ್ಟಿಯನ್ನು ಹೊಡೆದು ತೆಗೆದುಕೊಂಡನು. ಈ ಕುಂದಾಪುರವು ಬಸರೂರಿನ ಒಳಗೆ ಇದ್ದ ಕಾರಣ ನಗರದವರ ಕಡೆಯಾಯಿತು. ಅನಂತರದಲ್ಲಿ ಈ ಸಂ[>ಕ]ಣ್ಣನಾಯಕರು ಸಮುದ್ರದಡದಲ್ಲಿರುವ ಅಳಿವೆಯ ಬಳಿಯಲ್ಲಿ ಕೋಟೆಯನ್ನು ಕಟ್ಟಿಸಿ, ಅದಕ್ಕೆ ಗಂಗುಳ್ಳಿ ಎಂಬ ಹೆಸರನ್ನಿಟ್ಟು, ಇದಕ್ಕೆ ಈ ಹೆಸರು ಬರಲು ಕಾರಣವೇನೆಂದರೆ" ಗಂಗಾವಳೀ ಎಂಬ ಪಂಚನದೀ ಸಂಗಮವು ಸಮುದ್ರಕ್ಕೆ ಆಗಿದ್ದುದರಿಂದ ಅದಕ್ಕೆ ಗಂಗುಳೀ ಎಂಬ ಹೆಸರನ್ನು ಹೇಳುತ್ತಿದ್ದರು. ಅದೇ ಮೇರೆಗೆ ಕೋಟೆಗೂ ಗಂಗುಳಿ ಎಂಬ ಹೆಸರೇ ಆಯಿತು. ಅನಂತರ ಈ ಸ್ಥಳದಲ್ಲಿ ಕೆಲವು ಮಂದಿ ಸಹಾ ಯಿಟ್ಟು ಬಂದೋ ಬಸ್ತುಮಾಡಿ, ಶತ್ರುಗಳ ಉಪದ್ರವು ಬಾರದಂಥೆ ಹಡಗಿನ ಉಪದ್ರವೂ ಸಹ ಇಲ್ಲದಂತೆ ಮಾಡಿ, ಸ್ಥಳದಲ್ಲಿ ಹುಟ್ಟಿದ ಹಣಸಹಿತವಾಗಿ ಈ ಸ್ಥಳವನ್ನು ಬಸರೂರ ಮಹಾಲಿಂಗೇಶ್ವರ ದೇವರಿಗೆ ಧಾರೆಯನ್ನು ಎರೆದುಕೊಟ್ಟನು. ಅನಂತರದಲ್ಲಿ ಈ ಸ್ಥಳವು ಸುರಕ್ಷಿತವಾಗಿ ದೇವರಿಗೆ ನಡೆಯುತ್ತಾ ಬಂತು. ಈ ಮೇರೆಗೆ ಇರುತ್ತಿರಲು ಕೆಲವು ದಿವಸದ ಮೇಲೆ ಗೋವೆ ಸೀಮೆಯಲ್ಲಿದ್ದ ಪರಂಗಿಯವರು ಬಂದು ಸಂಕಣ್ಣನಾಯಕರಿಗೆ ಸಂಧಾನವನ್ನು ಯಿಟ್ಟು, "ಈ ಕುಂದಾಪುರದಲ್ಲಿ ಸ್ಥಳವನ್ನು ಕೊಟ್ಟರೆ ಇಲ್ಲಿ ಕೋಟೆಯನ್ನು ಕಟ್ಟಿಕೊಂಡು ನಾವು ವ್ಯಾಪಾರವನ್ನು ಮಾಡಿಕೊಂಡು ಹಿತರಾಗಿ ವರ್ತಕತನವನ್ನು ಮಾಡಿಕೊಂಡಿರುತ್ತೇವೆ"–ಎಂಬುದಾಗಿ ಹೇಳಿಕೊಂಡಿದ್ದರಿಂದ ಅದೇ ಮೇರೆ[+ಗೆ] ಅಪ್ಪಣೆಯನ್ನು ಕೊಟ್ಟರು. ಅನಂತರ ಸಂಕಣ್ಣನಾಯಕರ ಅಪ್ಪಣೀ ಮೇರೆ[+ಗೆ] ಗೋವೆ ಫರಂಗಿಯವರು ಇಲ್ಲಿಗೆ ಬಂದು ಒಂದು ಕೋಟೆಯನ್ನು ಕಟ್ಟಿಕೊಂಡು, ಬೇಕಾದ ದಿನಸು ವಗೈರೆಯನ್ನು ತಂದು, ಇಲ್ಲಿ ಮಾಡಿಕೊಂಡಿರುತ್ತಿದ್ದರು. ಈ ಮೇರೆಗೆ ಬಹುದಿವಸ ನಡೆಯುತ್ತಾ ಬಂದ ಮೇಲೆ ಕೆಲವು ದಿವಸದಲ್ಲಿ ಇವರು ಬಲವಂತರಾದರು. ಈ ಸ್ಥಳವನ್ನು ಗೋವೆಯವರು ಬಲಪಡಿಸಿಕೊಂಡು ನಗರದ ಅರಸುಗಳನ್ನು ಲಕ್ಷ್ಯಕ್ಕೆ ತಾರದೆ ಯಿದ್ದುಕೊಂಡು, ಈ ಮೇರೆಗೆ ಬಹುದಿವಸವು ನಡಿಯುತ್ತಾ ಬಂತು. ಅನಂತರ ಶಿವಪ್ಪನಾಯಕನು ಅರಸುತನವನ್ನು ಮಾಡಿಕೊಂಡು ನಗರದಲ್ಲಿ ಇದ್ದ ಕಾಲಕ್ಕೆ ಈ ವರ್ತಮಾನವನ್ನು ತಿಳೀದು "ಈ ಕುಂದಾಪುರದಲ್ಲಿ ಗೋವೆಯ ಫರಂಗಿಯವರು ಬಲವಂತವಾಗಿದಾರೆ. ಇವರನ್ನು ಹಾಗೆಯೇ ಇಟ್ಟಿದ್ದರೆ ಆ ಸ್ಥಳವನ್ನು ಸ್ವಾಧೀನ ಮಾಡಿಕೊಂಡು ನಮಗೆ ಶತ್ರುಗಳಾದಾರು. ಇವರನ್ನು ಅಲ್ಲಿರಿಸುವುದು ಒಳ್ಳೆಯದಲ್ಲ." ಎಂದು ಯೋಚನೆಯನ್ನು ಮಾಡಿ ಕಲೆವು ಫೌಜುಗಳನ್ನು ಕಳಿಹಿಸಿ, "ನೀವು ಇಲ್ಲಿ ಕೋಟೆಯನ್ನು ಕಟ್ಟಿಕೊಂಡು ಇರಲು ಕೆಲಸವಿಲ್ಲೆಂ"ದು ಹೇಳಿಸಿ, ಅವರನ್ನು ಈ ಸ್ಥಳದಿಂದ ಬಿಡಿಸಿದರು. ಅನಂತರ

ಈ ಗೋವೆ ಪಿರಂಗಿಯವರು ಕೋಟೆಯಲ್ಲಿದ್ದ ಸಾಮಾನು ಸರಂಜಾಮು ವಗೈರೆ ಯಾವತ್ತನ್ನೂ ತೆಗೆದುಕೊಂಡು ಹೋಗಿ ತಮ್ಮ ಸ್ಥಳಕ್ಕೆ ಸೇರಿಸಿಕೊಂಡರು.

ಅನಂತರದಲ್ಲಿ ಇವರು ಕೋಟೆಯನ್ನು ಮಾಡಿಕೊಂಡಿದ್ದ ಸ್ಥಳದಲ್ಲಿ ಶಿವಪ್ಪನಾಯಕರು ಕೋಟೆಯನ್ನು ಕಟ್ಟಿಸಿ ಶಿವಪ್ಪನಾಯಕರ ಕೋಟೆ ಎಂಬುದಾಗಿ ಹೆಸರನ್ನಿಟ್ಟು, ಈ ಮೇರೆ[+ಗೆ] ನಗರದ ಸಂಸ್ಥಾನವಿರುವ ಪರ್ಯಂತವೂ ಬಸರೂರು ಮಹಾಲಿಂಗೇಶ್ವರದೇವಸ್ಥಾನಕ್ಕೆ ನಡೆಯುತ್ತಾ ಬಂತು. ಅನಂತರ ಬಸಪ್ಪನಾಯಕರ ಕಾಲದಲ್ಲಿ ಷಡಕ್ಷರಯ್ಯ ಎಂಬವರು ಇಲ್ಲಿರುವ ಶಿವಪ್ಪನಾಯಕರ ಕೋಟೆಯ ಪಶ್ಚಿಮಭಾಗದಲ್ಲಿ ಅರಮನೆಯನ್ನು ಕಟ್ಟಿಸಿದನು. ಅನಂತರ ಇಲ್ಲಿ ಕಸಬೆಯನ್ನು ಮಾಡಿಕೊಂಡು ಇದರೊಳಗೆ ೧೬ ಮಾಗಣಿಯನ್ನು ದಾಖಲುಮಾಡಿದರು. ಇದಕ್ಕೆ ವಿವರ ೧. ಅರುನಾಡು ಮಾಗಣೀ ಗ್ರಾಮ ೧೫. ೧. ಹಲಸನಾಡು ಮಾಗಣೀ ಗ್ರಾಮ ೧೬ ॥. ಅ ಹೆಮ್ಮಡಿ ಮಾಗಣೀ ಗ್ರಾಮ ೩೯ ॥. ೧ ಮುನು[>ಗು]ವು ಮಾಗಣೀ ಗ್ರಾಮ ೧೧ ನಡೆಯುತ್ತದೆ. ೧ ಪಡುವುಕೋಣೆ ಮಾಗಣೆ ಗ್ರಾಮ ೩ ॥೧॥, ಬೈದೂರು ಮಾಗಣಿ ಗ್ರಾಮ ೧ ॥ ಈಗ ಮೂರು ೧ ॥, ಮೆಲ್ಲಗೇರಿ ಮಾಗಣಿ ಗ್ರಾಮ ೧೩ ॥೧॥, ಕಾಳಕೋಡು ಗ್ರಾಮ ೪ಕ್ಕೆ ಮಾಗಣಿ ॥೧॥, ಕೊಲ್ಲೂರು ಉತ್ತರ ಮಾಗಣಿ ಗ್ರಾಮ ೭ ॥೧॥ ಬಸರೂರು ಮಾಗಣೀ ಗ್ರಾಮ ೩, ಹಾಲಿಗ್ರಾಮ ೪ ॥. ಕುಂದಾಪುರಮಾಗಣಿ ಗ್ರಾಮ ೧ ॥. ಇಡೂರು ಕುನ್ನೇಡಿ ಮಾಗಣೀ ಗ್ರಾಮ ॥೧॥, ಎಳತ್ತಿ ಮಾಗನೀ ಗ್ರಾಮ ೭ ॥, ಹಾಲಿ ಶಂಕರನಾರಾಯಣಗ್ರಾಮ ಸಹ ॥೧. ಕಡರೆ ಮಾಗಣಿಗ್ರಾಮ ೬॥, ಹೊಸಂಗಡಿ ಮಾಗಣೀ ಗ್ರಾಮ ೧೮॥ ೧, ಬಸರೂರು ಬಸ್ತಿ ಮಾಗಣಿ ಗ್ರಾಮ ॥೫॥, ಜುಮ್ಲ ೧೬ ॥, ಈ ಮೇರೆ[+ಗೆ] ಹದಿನಾರು ಮಾಗಣಿಗ್ರಾಮಗಳನ್ನು ಈ ಕುಂದಾಪುರಕ್ಕೆ ದಾಖಲು ಮಾಡಿ, ಕಸಬೆ ಎಂಬದಾಗಿ ವೀರವಮ್ಮಾಜಿ ಕಾಲಕ್ಕೆ ಅಖೈರಿಗೆ ವಾಡಿದರು. ಬಸರೂರು ಮಹಾಲಿಂಗೇಶ್ವರದೇವರಿಗೆ ನಡೆಯುವುದನ್ನು ಬಿಡಿಸಿದರು. ಸರ್ಕಾರ ಜಪ್ತಿ ಮಾಡಿಕೊಂಡು ಅಲ್ಲಿ ಪಾರುಪತ್ಯಗಾರರು ವಗೈರೆಯವರು ಇದ್ದರು.

ಈ ಮೇರೆ ಇರುತ್ತಿರಲು ಎರಡು ವರ್ಷಕ್ಕೆ ದೊಡ್ಡನವಾಬರು ಚಿತ್ರಭಾನು ಸಂವತ್ಸರದಲ್ಲಿ ನಗರವನ್ನು ತೆಗೆದುಕೊಂಡರು. ಅನಂತರ ಕುಂದಾಪುರವು ದೊಡನವಾಬರ ಕಾ[>ತಾ]ಲ್ಲೂಕು ಆಯಿತು. ಇವರ ಕಾಲದಲ್ಲಿ ನಗರದ ೧೮ ಲಕ್ಷದ ಸೀಮೆ ಯಾವತ್ತು ಪ್ರಧಾನ ವೆಂಕಪ್ಪಯ್ಯನ ವಶವನ್ನು ಮಾಡಿದರು. ಈ ಕುಂದಾಪುರವನ್ನು ಆ ಕಾಲದಲ್ಲಿ ನಲವತ್ತೈದು ಸಾವಿರ ಸೀಮೆಯ ಬೇರೀಜು ಮಾಡಿ, ಇಲ್ಲಿ ಗಂಗಾಧರಯ್ಯಾ ಎಂಬ ಅಮಲ್ದಾರರನ್ನು ಇಟ್ಟರು. ಈತನು ಎರಡು ವರ್ಷ ಮಾಡಿದರು.

ಸದರಿ ಗಂಗಾಧರಯ್ಯ, ಮಹಮದ ಹಗಲ್, ೧ ಅಗ್ರಹಾರದ ಸುಬ್ಬರಾಯ, ೩ ಮಹಮದ ಹಮ್ಮಾಜಿ, ೧೨ ಶಾನೂರು ಆಲಿ, ೧೫ ಲಕ್ಕೊಳಿ ಸುಬ್ಬಯ ಕಮ್ಮದಕೋಣೆ ಗಣಪಯ್ಯ, ೧ ಶಾನೂರಾಲಿ, ಜುಮ್ಲ ॥೨೧॥[>॥೩೧॥].

ಸದರೀ ಗಂಗಾಧರಯ್ಯನ ಕಾಲದಲ್ಲಿ ದೊಡ್ಡ ನವಾಬರು ಇಲ್ಲಿಗೆ ಬಂದು ಅರಮನೆಯಲ್ಲಿ ಇದ್ದುಕೊಂಡು, ಮನಸ್ಸಿಗೆ ಕುಶಾಲು ಕಂಡದ್ದರಿಂದ ಕುಶಾಲಪುರ ಎಂಬ ಹೆಸರನಿಟ್ಟರು. ಗಂಗವಳ್ಳಿ ಒಳಗೆ ಮತ್ಸ್ಯಗಳು ಬಂದುದರಿಂದ ಇದಕ್ಕೆ ಮಚಲೀಬಂದರ ಎಂಬ ಹೆಸರನ್ನಿಟ್ಟರು. ಅನಂತರ ೧೫ ದಿನವಿದ್ದು ಶ್ರೀರಂಗಪಟ್ಟಣಕ್ಕೆ ಹೊರಟರು. ಈ ಮೇರೆ ಇಪ್ಪತ್ತೊಂದು ವರ್ಷ ಎಂಟು ಮಂದಿ

ಅಮಲ್ದಾರರು ಆಳಿದರು. ಶೋಭಕೃತ್ ಸಂವತ್ಸರದ ಪರ್ಯಂತರಕ್ಕೂ ಇದ್ದರು. ನಗರದಲ್ಲಿ ಪ್ರಧಾನ ವೆಂಕಪ್ಪಯ್ಯನವರು ವರ್ಷಗಳು ೩॥ ರಾಜಾರಾಮರು ವಿಕಾರಿ ಸಂವತ್ಸರದ ವರೆಗೆ ಇದ್ದರು. ಅನಂತರದಲ್ಲಿ ಶೇತ[>ಕ]ಯಾಜ ಶುಭಕೃತ ಸಂವತ್ಸರದ ಪರ್ಯಂತರ ಇದ್ದನು. ಯೀತನ ಕಾಲದಲ್ಲಿ ದೊಡ್ಡ ನವಾಬರು ಕಣಿವೆ ಕೆಳಗೆ ಆರ್ಕಾಟು ಮೇಲೆ ಸತ್ತು ಹೋದುದರಿಂದ ಇಲ್ಲಿ ಶೇಖ ಅಯಾಜನು ಇಂಗ್ರೇಜನವನ್ನು ಕೂಡಿಕೊಂಡು ನಗರವನ್ನು ಅವರಿಗೆ ತೋರಿಸಿ ಹಾರಿಸಿಕೊಟ್ಟು [>ಠಾಣಾ ಹಾಕಿಸಿಕೊಟ್ಟು], ತಾನು ಅವರಲ್ಲಿಯೇ ಇದ್ದುಕೊಂಡಿದ್ದನು. ಎರಡು ತಿಂಗಳು ಇಂಗ್ರೇಜನರು ನಗರ ಸೀಮೆಯೊಳಗೆ ಸ್ವಾಧೀನವಾದ ಸೀಮೆಯನ್ನು ಅನುಭವಿಸುತ್ತಾ ನಗರದಲ್ಲಿದ್ದರು. ಅನಂತರ ಕಣಿವೆ ಕೆಗಿನಿಂದ ಟೀಪುಸುಲ್ತಾನನು ಫೌಜನ್ನು ತೆಗೆದುಕೊಂಡು ಬಂದು, ನಗರದಲ್ಲಿ ಲಡಾಯಿ ಮಾಡಿತೆಗೆದುಕೊಂಡರು.

ನಗರ ಆವುಂಗುಲ?[>ನಗರದಲ್ಲಿ ಸುಲ]ತಾನು ಸಾಹೇಬರ ಠಾಣ್ಯಹಾಕಿದನು. ಅನಂತರದಲ್ಲಿ ನಗರದಲ್ಲಿದ್ದ ಇಂಗ್ರೇಜಿಯವರು ಆಬೂಬು[>ಆಯಾಜು]ಸಾಹೇಬ ಸಹಾ ಕುಂದಾಪುರಕ್ಕೆ ಬಂದು. ಇಲ್ಲಿ ಇದ್ದ ಸಾಮಾನು ಸರಂಜಾಮ ವಗೈರಾ ಖಜಾನೆ ಸಹ ತೆಗೆದುಕೊಂಡು ಇಲ್ಲಿದ್ದ ಅರಮನೆಯನ್ನು ಸುಟ್ಟು ಸಮುದ್ರದಲ್ಲಿ ದೊಡ್ಡ ಹಡಗಿನ ಮೇಲೆ ಹತ್ತಿಕೊಂಡು ಬೊಂಬಾಯಿಗೆ ಓಡಿಹೋದರು. ಆ ಮೇಲೆ ತೀಪುಸುಲ್ತಾನ ಸಾಹೇಬರು ಶೋಭಕೃತ್ ಸಂವತ್ಸರದಲ್ಲಿ ಈ ಕಾವಾತ[>ತಾಲೂಕ]ನ್ನೆಲ್ಲಾ ಬಂದೂಬಸ್ತು ಮಾಡಿ ನಗರ ಒಂಭತ್ತು ಲಕ್ಷ ಸೀಮೆ ಯಾವತ್ತನ್ನು ಕೋಟೀನರಸಪ್ಪಯ್ಯನ ವಶಾವನ್ನು ಮಾಡಿದರು. ಈ ಕಾಲಕ್ಕೆ ಕುಂದಾಪುರ ಕಾರಕಳ ಬಾರಕೂರು ವಗೈರೆ ಮೂರು ಹೋಬಳಿ ಸಹ. ಒಂದು ಲಕ್ಷ ಅರವತ್ತು ಸಾವಿರ ಸೀಮೆಯನ್ನು ಮಹಮದಖಾನ ಝುಳಕನಿಗೆ ಕೊಟ್ಟರು. ಈತನು ಪ್ಲವಂಗಸಂವತ್ಸರದ ವರೆಗೆ ಮಾಡಿದನು. ಅನಂತರ ಈ ಕುಂದಾಪುರದ ಒಂದು ಹೋಬಳಿಯ ನಲವತ್ತೈದು ಸಾವಿರ ಸೀಮೆಯನ್ನು ಆರುತಿಂಗಳು ಮಾಲತೀ ಅಬ್ಬುಬೇರಿಗೆ[> ಮಳಲಿ ಹಬ್ಬಸೇರಿಗೆ] ಕೊಟ್ಟರು. ಅನಂತರ ಮಹಮದ ಷರೀಫನಿಗೆ ಆಯಿತು, ವರ್ಷ ॥೨॥. ಅನಂತರ ಮಹಮ್ಮದ ಸೈಯದ್ದು ೩ ವರ್ಷ ಮಾಡಿದನು. ಅನಂತರ ಮರಿಗುಲಾಮಲ್ಲಿ ೩ ವರ್ಷ ಮಾಡಿದನು. ಆನಂದ ಸಂವತ್ಸರ ಪರ್ಯಂತವೂ ನಡೆಯಿತು.

ಅನಂತರದಲ್ಲಿ ಸಾಧಾರಣ ಸಂವತ್ಸರದಲ್ಲಿ ಮರಾಟಿ ಕಂಡೇರಾಯರು ಬಂದು ಒಂದು ಹಳ್ಳಿಯಲ್ಲಿ ೫೦ ಪಕ್ಕ ಲೂಟಿ ಮಾಡಿಕೊಂಡು ಹೋದರು. ಕುಂದಾಪುರಕ್ಕೆ ಬರಲಿಲ್ಲ. ರಾಕ್ಷಸಂವತ್ಸರದ ಲಾಗಾಯ್ತು ಕಾಳಾಯುಕ್ತಿ ಸಂವತ್ಸರದ ಆಖೈರು ವರಿಗೂ ಐದು ಸಾವಿರ ಸೀಮೆ ಮೇಲೆ ತುಕ್ಕಡಿಗಳನ್ನು ಹಕ್ಕು ಮಾಡಿದರು. ಈ ಕುಂದಾಪುರವು ಐದು ಸಾವಿರ ಸೀಮೆ ತುಕಡಿಯಾಯಿತು. ಅನಂತರದಲ್ಲಿ ಸಿದ್ಧಾರ್ಥಿನಾಮಸಂವತ್ಸರದ ಚೈತ್ರಮಾಸ ಬಹುಳ ೩೦ ಶನಿವಾರದಲ್ಲಿ ಶ್ರೀರಂಗಪಟ್ಟಣವು ಇಂಗ್ಲೀಷರ ವಶವಾಯಿತು. ಆದಕಾರಣದಿಂದ ಈ ತಾಲೂಕನ್ನು ಇಂಗ್ಲಿಷ ತಾಲೋಕು ಮಾಂಡ್ರೋಲುಸಾಹೇಬರು ಸಿದ್ಧಾರ್ಥಿ ಸಂವತ್ಸರ ರೌದ್ರಿ ಸಂವತ್ಸರದ ವರೆಗೆ ನೋಡಿಕೊಂಡಿದ್ದರು. ಇವರ ಕಡೆಯ ಈ ಕುಂದಾಪುರದ ಅಮಲು ರಾಮರಾಯರ ಕಡೆಯಾಯಿತು. ಅನಂತರದಲ್ಲಿ ರೀಟ್ ಸಾಹೇಬರಿಗೆ ಆಯಿತು. ಕ್ರೋಧನ ಸಂವತ್ಸರದ ವರೆಗೆ ನಡೆಯಿತು. ಅನಂತರ ಅಮಲ್ಕಾರರು ತಿರುಮಲರಾಯರು ಒಂದು ವರ್ಷ ಮಾಡಿದರು. ಗಂಗರ್ಸ ಲಿಂಗಪ್ಪ ೩ ತಿಂಗಳು, ಮಂಗೇಶರಾಯರು ವರ್ಷ ॥೨॥, ಈಗ ಕೋನೇರಿರಾಯರಿಗೆ ನಡೆಯುತ್ತಿದೆ. ಕ್ಷಯಸಂವತ್ಸರದಲ್ಲಿ ಟಿಪ್ಪುಸುಲ್ತಾನನ ಕಾಲಕ್ಕೆ ವಿರೋಧಿಕೃತ್ ಸಂವತ್ಸರದ ವರೆಗೆ॥ ಶರಾರತ್ತು ಮಾಡುವರು. ಹೆಬ್ಬುಲ್ಲೆಗೌಡ, ಮಾದ ಸಾವಂತರು, ಕೆಲಮಂದಿಯನ್ನು

ಇಟ್ಟುಕೊಂಡು ಈ ತಾಲೂಕನ್ನು ಲೂಟಿ ಮಾಡಿದರು. ಈ ಕಾಲದಲ್ಲಿ ನಗರದಿಂದ ಮಂದಿ ಸಹ ಬಂದ ಕಾರಣ ಮಹಮ್ಮದ ಹೈದರು ಆದವಾನುಮರು, ಮಹಮ್ಮದ ಸೈದು ಅಮಲ್ದಾರರನ್ನು ಕುಂದಾಪುರಕ್ಕೆ ಹೋಗಿ ಅವರ ಕಡೆ ಬರತಕ್ಕ ನಾಲ್ಕು ಜನ ಸಿಕ್ಕಿದ್ದುದರಿಂದ ಹೊನ್ನಾವರದಲ್ಲಿ ಇಬ್ಬರನ್ನೂ ಗಲ್ಲಿಗೆ ಹಾಕಿದರು. ಈ ಕುಂದಾಪುರದಲ್ಲಿ ಮಾಸ್ತಿಕೋಟೆಯಲ್ಲಿ ಇಬ್ಬರಿಗೂ ಗಲ್ಲಿಗೆ ಹಾಕಿದರು.

೨೦॥೧॥ = ಅಸಲು ಘಟ್ಟದ ಮೇಲೆ ಸುಂಕ ಸಹಿತವಾಗಿ ೨೫॥ ಈ ಮೇರೆ ತೆಗೆದುಕೊಂಡು ಸ್ಥಳದವರು ಬೊಂಬಾಯಿಯ ವರಿಗೆ ಕೊಡುವರು ಹೊರತು, ಮತ್ತೊಬ್ಬರು ಇಲ್ಲ. ೨೬॥ ರಂಬಹರವರ ಬಂಡಿ ೧೮ ಮಾರುವದು ಬಹಳ. ೨೫॥ ಇದು ಅಸಲು ೧ ಲಾಭನ್ನು ತೆಗೆದುಕೊಂಬರು, ಜುಮ್ಲ ೨೬॥. ಕೊಬ್ಬರಿ ಖಂಡಿ ಒಂದಕ್ಕೆ ಬರುವದು ವರಹ ೭॥ ಮಾರುವರು ಅಸಲು ೭॥೨॥ ಸುಂಕ ಬರುವುದು ೨॥ ನಷ್ಟ ಬರೋದು ಜುಮ್ಲ ೭॥. ದಾಲಚಿನ್ನಿ ಖಂಡಿ ಒಂದಕ್ಕೆ ಬರುವದು ೫॥೨॥ ಮೇರೆ ಈ ಸ್ಥಳದಲ್ಲಿ ಆಗುವದನ್ನು ತೆಗೆದುಕೊಂಡು ಸುಂಕ ಸಹ। ಅಸಲು ೫೯೨॥೦ ಸುಂಕ ಬರುವುದು. ೯೨॥೦ ಸುಂಕ ಬಹದರು ೫॥೨॥. ಈ ಮೇಲೆ ತೆಗೆದುಕೊಂಡು ೯೨॥೦ ನಫೆ ಬರುವುದು. ಜುಮ್ಲ ೬ ೯೦ ಈ ಮೇರೆ ಕೊಡುತ್ತಿದ್ದಾರೆ. ಗೋವೆ ಸೀಮೆಯವರು ತೆಗೆದುಕೊಂಬರು. ಕಬಾಬು ಚಿನ್ನಿ ಖಂಡಿ ಒಂದಕ್ಕೆ ಬಹದರು ೭೯೦ ತೆಗೆದುಕೊಳ್ಳುವರು. ಸುಂಕ ಸಹ ಅಸಲು ೬॥೨॥ ಸುಂಕ ೯೨॥೦ ಜುಮ್ಲ ೭೯೦೦॥೦ ನಫೆ ಬರುವುದು. ಕೊಟ್ಟು ಬೊಂಬಾಯಿಗೆ ತೆಗೆದುಕೊಂಡು ಹೋಗುವುದು ೭॥೦. ಈ ದಿನಸು ಯಾವತ್ತೂ ಇಲ್ಲಿಂದ ಪರಸ್ಥಳಕ್ಕೆ ಹೋಗುತ್ತಿದೆ. ಪರಸ್ಥಳದಿಂದ ಇಲ್ಲಿಗೆ ಬರುವ ದಿನಸುಗಳು.*

ಕುಂದಾಪುರ ಗಂಗೊಳ್ಳಯಿಂದ ದಿನಸು ವಗೈರಾ ದೇಶಾಂತ್ರಕ್ಕೆ ಹೋಗುವದು ೧. ಅಕ್ಕಿ ದಿನಸು ೧ಕ್ಕೆ ಮುಡೆ ೧ಕ್ಕೆ ಪಕ್ಕಾಸೇರು ಮೂವತ್ತೈದು ಮೇರೆಗೆ, ಮುಡೆ ೪೨ಕ್ಕೆ ಕೊರಿಜಿ ೧ಕ್ಕೆ ಖರೀದಿಯಲ್ಲಿ ಯಿದ್ದು, ಸಾಉಕಾರು ಕ್ರೋಧನ ಸಂವತ್ಸರ ಪುಷ್ಯಮಾಸದಲ್ಲಿ ರೈತರ ಕಡೆಯಿಂದಾ ತೆಗದುಕೊಂಡದ್ದು ಕೊರಿಜಿ ೧ಕ್ಕೆ ಬಹದರಿ ವರಹಗಳು ಗ೧೩೯೦ ಪ್ರಕಾರ ಕುದಪಲಕ್ಕಿ ತೆಗೆದುಕ್ಕೊಂಡರು. ಬೆಳತಿಗಿಅಕ್ಕಿ ಕೊರಿಜಿ ೧ಕ್ಕೆ ಬಹದರಿ ೧೬೯೦ ವರಹಾ ಮೇರೇಗೆ ತೆಗೆದುಕ್ಕೊಂಡರು. ಗೋವೆ ಸೀಮೆ ಬೊಂಬಾಯಿ ಕಡೆಯಿಂದಾ ಸಾವಕಾರ ಬಂದು ತೆಗೆದುಕ್ಕೊಂಡು ಹೊಗುವದು. ರಾಳಾಪುರ । ತಲಚೇರಿ । ಕಲ್ಲಿಕೋಟೆ ಯೀ ಗ್ರಾಮಗಳಿಂದಾ ಸಾವಕಾರರು ಬಂದು ತೆಗೆದುಕ್ಕೊಂಡು ಹೊಗುವದು ೧೬೯೦ ವರಹ ಬಹದರಿ ಮೇರೆಗೆ ಕುದಪಲಅಕ್ಕಿ ಕೋರಿ ಜಿ ೧ಕ್ಕೆ ಕೊಡುತಾ ಯಿದ್ದಾರೆ.

	೧೩	ಅಸಲು ಗಂಟು ಯಿರುವದು, ಬಹದರಿ ವರಹ ಕೊರಿಜಿ ೧ಕ್ಕೆ.
ಗ	೨	ಸರಕಾರದ ಸುಂಕ ಕೊರಿಜಿ ೧ಕ್ಕೆ ಬಹದರಿ ವರಹ
	೧	ನಫೆ ತೆಗೆದುಕ್ಕೊಂಬುದು
	೧೬	

* ಇಲ್ಲಿಯ ವರೆಗಿನ ಪಾಠ ಮೈಸೂರಿನ ಪುರಾತತ್ವ ಇಲಾಖೆಯಿಂದ ತಂದ ಡಿ. ೧೮೩೮ಕ್ಕೆ ಸಂಬಂಧಿಸಿದುದು. ಮುಂದಿನ ಪಾಠ ಮದ್ರಾಸ ಪ್ರಾಚ್ಯ ಸಂಗ್ರಹಾಲಯಕ್ಕೆ ಸಂಬಂಧಿಸಿದುದು.

೧೯೮೦ ಬೆಳತಿಗೆ ಅಕ್ಕಿ ಕೊರಿಜಿ ೧ಕ್ಕೆ ಖರೀದಿ ಬಹದರಿ ವರಹ ಸದರಿ

೧೬೮೦ ಅಸಲು ಗಂಟು ಬಹದರಿ ಕೊರಜಿ ೧ಕ್ಕೆ.

೨ ಸರಕಾರದ ಸುಂಕ ಕೊರಿಜಿ ಕ್ಕೆ ಬಹದರಿ.

೧ ನಫೆ ತೆಗದುಕ್ಕೊಂಬುವದು ಬಹದರಿ.

೧೯ ೦

೩೫

ಯೀ ಮೇರೇಗೆ ಯಿಲ್ಲಿ ಯಿದ್ದು ಸಾವಕಾರಗೆ ನಫೆ ಸುಂಕ ಸಹಾ ಕೊಟ್ಟು ತೆಗೆದುಕ್ಕೊಂಡು ಹೋಗುತ್ತಾ ಯಿದ್ದಾರೆ॥ ಯೀ ಸ್ಥಳದವರು ಹಡಗಿನ ಮೇಲೆ ಹಾಕಿಸಿಕೊಡುತ್ತಾ ಯಿದ್ದಾರೆ. ಯಿದೆ ಖರೀದಿ ಸ್ಥಳದವರದೆ ಹೊರ್ತು ಪರಸ್ಥಳದವರು ಕೊಡುವದು ಯಿಲ್ಲಾ॥

ಹಡಗು ಬರೋದು, ಆಯಿದು ಕೊರಿಜಿ ಹಿಡಿಯೊದು ಆರಂಭ ಮಾಡಿಕ್ಕೊಂಡು ಕೊರಿಜಿ ನಲವತ್ತು ಹಿಡಿಯುವ . . . . ಬಂದು ತೆಗೆದುಕ್ಕೊಂಡು ಹೋಗುತ್ತಾ ಯಿದ್ದಾರೆ ॥

೧. ಅಲಸಂದಿ, ಯಿದು ತೆಗೆದುಕ್ಕೊಂಬುವರು ಕೊರಿಜಿ ೧ಕ್ಕೆ ಬಹದರಿ ೧೩ ವರಹಾ ಮೇರೆಗೆ, ಸಾವಕಾರಗೆ ಕೊಡುವದು ಬಹದರಿ ವರಹಾ ೧೩॥ ೦ ಮೇರೇಗೆ ಕೊಡುತ್ತಾ ಯಿದ್ದಾರೆ. ಯಿದಕ್ಕೆ ಸುಂಕಪೂರ್ವಕ್ಕೆ ಅಕ್ಕಿ ಸುಂಕಕ್ಕೆ ಅರವಾಸಿ ಮೇರೆಗೆ ತೆಗದುಕೊಳ್ಳುತ್ತಾ ಯಿದ್ದಾರೆ. ಯೀಗ ಕುಂಪಣಿ ಅಮಲು ಆದ ಮೇಲೆ ಸುಂಕಾ ಮಾಫ ಮಾಡಿ ಯಿದ್ದಾರೆ ॥

೧. ಹುರುಳಿ ದಿನಸು ೧ಕ್ಕೆ ಕೊರಿಜಿ ೧ಕ್ಕೆ ಬಹದರಿ ೧೩॥ ಮೇರಿಗೆ ತೆಗೆದುಕೊಂಬುವರು. ಕೊಡುವದು ಬಹದರಿ ೧೮೮೦ ಮೇರೆಗೆ ಕೊಡುತ್ತಾ ಯಿದ್ದಾರೆ. ಯಿದಕ್ಕೆ ಸುಂಕವಿಲ್ಲಾ. ಬಿಡಿಸಿ ಯಿದ್ದಾರೆ ಕುಂಪಣಿಯವರು॥

೧. ಹೆಸರು ಕೊರಿಜಿ ೧ಕ್ಕೆ ಬಹದರಿ ೧೮೮೦ ಮೇರೇಗೆ, ಯಿದಕ್ಕೆ ಸುಂಕವಿಲ್ಲಾ ॥

೧. ರಾಗಿ ದಿನಸು ಕೊರಿಜಿ ೧ಕ್ಕೆ ಬಹದರಿ ೯೮೦ ವರಹಾ ಮೇರೆಗೆ ತೆಗೆದುಕೊಂಬುವರು, ಬಹದರಿ ೧೦ ೮೦ ವರಹ ಮೇರೆಗೆ ಸುಂಕವಿಲ್ಲಾ.

೧. ತೊಗರಿ ಬೇಳೆ ಸ್ಥಳದ ವೊಳಗೆ ಖರ್ಚು ಹೊರ್ತು ನಗದು ಮೇಲೆ ಹೋಗುವದು ಯಿಲ್ಲಾ.

೧. ಯೆಳ್ಳು ಸ್ಥಳದ ಖರ್ಚಿ ಹೊರ್ತು ಮತ್ತೊಂದು ಯಿಲ್ಲಾ ॥

೧. ಟೆಂಗಿನಕಾಯಿ ೧೦೦೦ಕ್ಕೆ ಬಹದರ ಗ ೩॥೦ ಮೇರಿಗೆ ತೆಗೆದುಕೊಂಬುವರು. ಮಾರುವದು ಬೊಂಬಾಯಿ ರಾಜಾಪುರಕ್ಕೆ ಹೋಗುತ್ತಾ ಯಿಥೆ ॥ ಯಿಲ್ಲಿ ಸಾವಕಾರರು ಬಂದು ತೆಗೆದುಕ್ಕೊಂಡು ಹೋಗುವದು॥

೪೮೦ ಬಹದರಿ ಮೇರೇಗೆ ಕಾಯಿ ೧೦೦೦ಕ್ಕೆ ಕೊಡುತ್ತಾ ಯಿದ್ದಾರೆ.

೩॥೦ ಆಯಿನ ನಗದು ಖರೀದಿ ಪ್ರಾಕು ತೆಗೆದುಕೊಂಡ ಮೊದಲು:

೩೮ = ಸುಂಕ ೧೦೦೦ಕ್ಕೆ ಬಹದರಿ

೮೧॥ = ನವೆ ತೆಗೆದುಕ್ಕೊಂಬರು॥

೪೮೦

೧. ಬೆಲ್ಲ ದಿನಸು ಮಣ ೨೦ಕ್ಕೆ ಖಂಡಿ ೧ಕ್ಕೆ ಖರೀದಿ ಸ್ಥಳದಲ್ಲು ಬಹದರೀ ೬।।೦ ವರಹಾ ತಲಚೇರಿ, ಕಲ್ಲಿಕೋಟೆ, ಗೋವೆ ಸೀಮೆಯವರು ಸಾವಕಾರ್‍ರು ತೆಗೆದುಕ್ಕೊಂಡು ಹೋಗುವದು.

೮೬೦ ಬಹದರಿ ವರಹ ಬೆಲ್ಲ ಖಂಡಗ ೧ಕ್ಕೆ:

೬।।೦ ಮೊದಲು ಗಂಟು ಬಹದರಿ

೦।।೪। = ಸುಂಕ ಕೊಡುವರು

೬೧।। = ಚಾಪೆ ಕಟ್ಟುವ ಖರ್ಚು

೬೪ ನಫೆ ತೆಗದುಕೊಂಬುವದು ಬಹದರಿ

೮೬೦

೧. ಅಡಿಕೆ ಮಣ ೨೦ಕ್ಕೆ ಖಂಡಿ ೧ಕ್ಕೆ . . . . ತೆಗೆದುಕೊಂಬವರು. ಸುಂಕ ಸಹಿತ ಬಹದರಿ ೧೩೬೦ ವರಹ ಮೇರೆಗೆ ಸ್ಥಳದವರು ತೆಗೆದುಕೊಳ್ಳುತ್ತಾ ಯಿದ್ದಾರೆ. ಯಿದು ಕಲ್ಲಿಕೋಟೆಯವರು ಬಂದು ತೆಗೆದುಕ್ಕೊಂಡು ಹೋಗುವದು ಹೋರ್ತು ಮತ್ತೊಬ್ಬರು ತೆಗದುಕ್ಕೊಂಡು ಹೋಗುವದು ಯಿಲ್ಲಾ

೩।।೩೬ = ಸುಂಕ ತೆಗೆದುಕೊಂಬವರು

೯೬೧।।। = ಅಸಲು ತೆಗೆದುಕೊಂಡು ಬರುವರು ಬಹದರಿ

೧೩೬೦ ಯೀ ಮೇರೆಗೆ ಸ್ಥಳದವರು ತೆಗೆದುಕ್ಕೊಂಡು ಕಲ್ಲಿಕೋಟೆಯವರಿಗೆ ಅಡಿಕೆ ಮಾರುವದು.

೧೪ ಬಹದರಿ ವರಹ ಸದರಿ ಅಡಿಕೆ ಖಂಡಗ ೧ಕ್ಕೆ:

೧೩೬೦ ಅಸಲು ಬಹದರಿ ವರಹ

೧ ನಫೆ ತೆಗದುಕ್ಕೊಂಬರು

೧೪

೧. ಅಡಿಕೆ ಗೋಟು ಯರಡನೆ ತರಲು ಅಡಿಕೆ ಖಂಡಗ ೧ಕ್ಕೆ ಬಹದರಿ ವರಹ ಮೇರೆಗೆ ತೆಗೆದುಕ್ಕೊಂಬವ.

ಚಿಕಣಿ ಅಡಿಕೆ ಸುಂಕಕ್ಕೆ ಅರವಾಸಿ ಮೇರೆಗೆ ಸುಂಕವನ್ನು ಕೊಟ್ಟು ತೆಗೆದುಕೊಳ್ಳುತ್ತ ಯಿದ್ದಾರೆ. ಮಾರಿದ್ದು ಬಹದರಿ ೫।। ವರಹಾ ಮೇರೇಗೆ ಕೊಟ್ಟರು ನಷ್ಟವಾಯಿತು.

೧. ಅಡಿಕೆ ಮೂರನೆ ತರಲು ಬೆಳಿ ಅಡಿಕೆ ಕೊಟು ಖಂಡಗ ೧ಕ್ಕೆ ಬಹದರಿ ವರಹ ೬೬೦ ಸುಂಕ ಸಹಿತ ಸದರಿ ಮೇರೆಗೆ ತೆಗೆದುಕ್ಕೊಂಡು ಮಾರಿದ್ದು ಬಹದರಿ ೫೬೦ ವರಹಾ ನಷ್ಯವಾಯಿತು. ಯೀ ದಿನಸು, ಗೋಟು ಅಡಿಕೆ ೨ ದಿನುಸುನ್ನು ಬೊಂಬಾಯಿ ರಾಜಾಮರಕ್ಕೆ ಹೋಗೋದು ಹೊರ್ತು ಮತ್ತೊಂದು ಕಡೆ ಹೋಗೋದು ಯಿಲ್ಲಾ. ಯೀ ಮೂರು ದಿನಸು ಸ್ಥಳದ್ದು.

೧. ಮೆಣಸು ದಿನಸು ೧ಕ್ಕೆ ಖಂಡಗ ೧ಕ್ಕೆ ಬಹದರಿ ವರಹಾ ೨೫ ತೆಗದುಕೊಂಬುವರು. ಸ್ಥಳದವರ ಸುಂಕ ಸಹಿತವಾಗಿ ಘಟ್ಟದ ಯಿಂದಾ ಬರುತ್ತದೆ.

೪೯೩೯ =	ಸುಂಕ ತೆಗದುಕೊಂಬರು
೨	ಹೊಸಂಗಡಿ ಸುಂಕ ಬಹದರಿ
೨	ಕ ಊರು ಸುಂಕ ಬಹದರಿ
	ಕೊರೆ ಸುಂಕ ಬಹದರಿ ೯೩೯ =
	೪೯೩೯ =

❖❖

೬೫

ಕುಂಬಕಾಸಿ ಸ್ಥಳದ ಕುಂಬೇಶ್ವರ ಕೈಫಿಯತ್ತು*

ಮೆಕೆಂಝಿ ಸಂಪುತ : ೩೫೩

ಕುಂಭಕಾಸಿ ಸ್ಥಳದ ಕುಂಭೇಶ್ವರದೇವರ ಅಣೆಗುಡ್ಡೈ ಗಣಪತಿ ಸಹಾ ಕೈಫಿಯತ್ತಿನ ವಿವರ: ಕ್ಷಯನಾಮ ಸಂವತ್ಸರದ ಜೇಷ್ಟ ಶು॥೧೨ ಲ್ಲು ಆ ಸ್ಥಳದ ಉಪಾದ್ಯಾಯ ಪುರಾಣಿಕ ರಾಮಭದ್ರಾಚಾರ್ಯ್ಯ ಅರ್ಚಕ ವೆಂಕಣ್ಣಭಟ್ಟ ಮುಂತಾದವರು ಕುಂಪಣಿ ಸರಕಾರಕ್ಕೆ ಬರಸಿಕೊಟ್ಟ ಕೈಫಿಯತು ನಾಮೆ ವಿವರ:

ಪದ್ಮಪುರಾಣ ಪುಷ್ಕರಖಂಡ ೬೫ ಅಧ್ಯಾಯದ ಮೇಲೆ ೮೯ನೆ ಆಧ್ಯಾಯ ಪರಿಯಂತ್ರ ೨೪ ಅಧ್ಯಾಯದಿಂದ ಹೇಳಲ್ಪಟ್ಟ ಆ ಕ್ಷೇತ್ರ ಮಹಿಮಾ. ವೈವಸ್ಪತ ಮನ್ವಂತರದಲ್ಲು ೨೮ನೆ ತ್ರೇತಾಯುಗ ಅಂತ್ಯ ದ್ವಾಪಾರಯುಗ ಕಾಲದಲ್ಲು ಮಧುನಾಯ[>ಮ]ಕನಾದ ವಸಂತಪುರುಷನು ಯೀ ಸ್ಥಳದಲ್ಲಿ ನಾರಾಯಣನನ್ನು ಕುರಿತು ತಪಸ್ಸುಮಾಡಿದ್ದರಿಂದ ಆ ದೇವರು ಅವನಿಗೆ ಪ್ರಸನ್ನರಾಗಿ "ಯೇನು ಕಾರಣ ತಪಸ್ಸನ್ನು ಮಾಡಿದೆ? ನಿನ್ನ ತಪಸ್ಸಿಗೆ ನಾಲು ಸಂತೋಷಚಿತ್ತರಾದೆಲು. ಯೇನು . . . . ರ್ಥ ವಾಗಬೇಕು?"ಯಂತ ಕೇಳಿದಲ್ಲಿ, "ಸ್ವಾಮಿ, ನಿಮ್ಮ ಸಂದರುಶನದಿಂದ ಸಕಲ ಮನೊಸಿದ್ದಿ ಆಯಿತು. ಮುಂದೆ ಯೀ ಸ್ಥಳದಲ್ಲಿ ನೀಉ ಯಿದ್ದುಕ್ಕೊಂಡು ನನ್ನ ಹೆಸರು ನಡವ ರೀತಿಗು ಯೀ ಸ್ಥಳ ಪ್ರಸಿದ್ಧವಾಗೊ ರೀತಿಗೂ ಯೀ ಸ್ಥಳದಲ್ಲಿ ತಪಸ್ಸು ಮಾಡಿದವರಿಗೆ ಶೀಗ್ರ ಮನಸಾಭಿಷ್ಟವಾಗೊ ರೀತಿಗು ಅನುಗರಹ ಮಾಡಬೇಕು"ಯಂತ ಹೇಳಿಕ್ಕೊಂಡ ಕಾರಣ, ಅದೇ ರೀತಿಗೆ "ಅಗಲಿ"ಯಂಬದಾಗಿ ಅನುಗ್ರಹಿಸಿ, ಆ ಸ್ಥಳದಲ್ಲಿ ಸನ್ನಿಧಾನವಾಗಿ ಮಧುರನಾ[>ಮಧುವನಾ]ಯಂಬದಾಗಿ ಪ್ರಸಿದ್ದಿಯನ್ನು ಮಾಡಿ, ಅಲ್ಲಿ ತಪಸ್ಸು ಮಾಡಿದಂತಾವರಿಗೆ ಸಕಲ ಮನೋಭಿಷ್ಟವ ಕೊಡುತ್ತಾ ಯಿದ್ದರು.

* "ಕುಂಬಕಾಸಿ ಸ್ಥಳದ ಕುಂಬೇಶ್ವರ ಮಹತ್ಮ್ಯ" ಎಂಬ ಶೀರ್ಷಿಕೆ ಇದ್ದರೂ ಆದಿ ಮತ್ತು ಅಂತ್ಯದಲ್ಲಿ ಕೈಫಿಯತ್ತು ಎಂದು ಕರೆದಿರುವುದರಿಂದ ನಾವು 'ಕೈಫಿಯತ್ತು' ಎಂಬ ಶೀರ್ಷಿಕೆ ಇಟ್ಟುಕೊಂಡಿದ್ದೇವೆ(ಸಂ).

ತದನಂತರ ಪರಶರಾಮದೇವರು ತಮ್ಮಿಂದ ನಿರ್ಮಿತವಾದ ಕ್ಷೇತ್ರಗಳನ್ನಾ ನೋಡಿಕೊಂಡು ಬರುತ ಯೀ ಕ್ಷೇತ್ರಕ್ಕೆ ಬಂದು, ಈ ಕ್ಷೇತ್ರ ಉತ್ರಾಂತವನ್ನು ತಿಳದು, ಯಿದೇ ರೀತಿಯಲ್ಲಿ ಪ್ರಸಿದ್ಧವಾಗಲಿಯಂದು ನೇಮಿಸಿದರು. ತದನಂತರ ಗೌತಮಕ್ಷೇತ್ರದಲ್ಲು ದ್ವಾದಶವರುಷ ಕ್ಷಾಮದ ದೆಶೆಯಿಂದ ವಾಸವಾಗಿ ಯಿದ್ದು, ಕ್ಷಾಮಾನಂತರದಲ್ಲಿ ವಿನಾಯಕ ಉಪದೇಶದಿಂದ ಗೌತಮನಿಗೆ ಗೋಹತ್ಯವನ್ನು ಕಲ್ಪಿಸಿದ ಕಾರಣಉ ಬ್ರಾಹ್ಮರಿಗೆ ಮಹಾರುಷಿಭಾವ[>ಶಾಪ] ಬಂದದರಿಂಧ ಯೀ ಶ್ಯಾಪ ನಿವಾರಣಾರ್ಥವಾಗಿ ಕೋಟೇಶ್ವರದಲ್ಲು ಶ್ರೀಕೃಷ್ಣದೇವರನ ಕುರಿತು ತಪಸು ಮಾಡಿದ[>ರು]. ಯೀ ಕೃಷ್ಣದೇವರು ಪ್ರಸನ್ನರಾಗಿ ಕೋಟಿಲಿಂಗ ರೂಪನಿಂದ ಕಾಣಿಸಿಕೊಂಡು, "ನಿಮ್ಮಾ ಮನಸಾಭಿಷ್ಟವೇನೆಂ"ಬದಾಗಿ ಕೇಳಿದಲ್ಲಿ, "ನಮಗೆ ಮಹಾರುಷಿ ಶಾಪವಿಮೋಚನೆ ಆಗಬೇಕು. ನಮ್ಮಾ ಮನೋಭಿಷ್ಟಸಿದ್ಧಿ ಆಗಬೇಕು"ಯಂಬದಾಗಿ ಕೇಳಿಕ್ಕೊಂಡಲ್ಲಿ, "ಯೀ ಸ್ಥಳಕ್ಕೆ ಆಗ್ನೇಯ ಭಾಗದಲ್ಲಿ ಮದುರನಾಯ[>ಮಧುನಾಮ]ಕನಾದ ಪುರುಷಗೆ ಶ್ರೀನಾರಾಯಣದೇವರು ಪ್ರಸನ್ನರಾಗಿ ವರವನ್ನ ಕೊಟ್ಟು ಯಿದ್ದಾರೆ. ಅಲ್ಲಿ ತಪಸ್ಸು ಮಾಡಿದ್ದಲ್ಲಿ ಸಕಲಮನೋಭಿಷ್ಟ ಸಿದ್ಧಿ ಆಗುತ್ತದೆ. ನೀಉ ಅಲ್ಲಿಗೆ ಹೋಗಿ ಶ್ರೀನಾರಾಯಣದೇವರನ್ನು ಕುರಿತು ತಪಸ್ಸು ಮಾಡಿದ್ದಲ್ಲಿ ನಾಉ ಅಲ್ಲಿಗೆ ಬಂದು ಉಭಯಸ್ಥರು ಕೂಡಿ, ನಿಮಗೆ ಮಹಾಋಷಿ ಶಾಪವಿಮೋಚನೆ ಮಾಡಿ, ಮನಸಾಭಿಷ್ಟವನ್ನು ಕೊಡುತೇವೆ"ಯಂಬುದಾಗಿ ಆಜ್ಞಾಪಿಸಿದ್ದರಿಂದ ಅದೇ ರೀತಿಗೆ ಯೀ ವಸಿಷ್ಟಾದಿ ಸಕಲರುಷಿಗಳು ಆ ಮಧುವನಕ್ಕೆ ಬಂದು, ಶ್ರೀನಾರಾಯಣದೇವರನ ಕುರಿತು ತಪಸ್ಸು ಮಾಡುವಾಗ ಶ್ರೀಕೃಷ್ಣದೇವರು ಸಹ ನಾರಾಯಣದೇವರು ಸಹಾ ಯೀ ಕೋಟಿರುಷಿಗಳಿಗೆ ಪ್ರಸನ್ನರಾಗಿ, ಯಿವರ ಶಾಪವಿಮೋಚನೆ ಮಾಡಿ, "ಯಥಾ ಪ್ರಕಾರ ಜ್ಞಾನಿಗಳಾಗಿರಿ"ಯಂಬದಾಗಿ ವರವನ್ನು ಕೊಟ್ಟು, "ಯೀ ಸ್ಥಳದಲ್ಲು ನಾಉ ಉಭಯಸ್ಥರು ಯಿರಬೇಕೆಂ"ಬುದಾಗಿ ಹೇಳಿ, ಸುನೇತ್ರದಿಂದ ಯರಡು ತೀರ್ಥವನ್ನು ನೇಮಿಸಿ, ಚಂದ್ರ ಸೂರ್ಯ ಪುಷ್ಕರಣ್ಯಾಭಿಧಾನವಾಗಿ ನಿರ್ಮಿಸಿ, ವಿಶ್ವಕರ್ಮಗೆ ವಿಜ್ಞಾಪಿಸಿದರು "ಉಭಯತ್ರಕರುಗೆ ವಾಸಪ್ರವಾಸಪ್ರಯುಕ್ತ ಚಿತ್ತವಾದಂತಾ ದೇವಾಲಯಗಳು ಯರಡು ನಿರ್ಮಿಸು"ಯಂತಾ ಕೊಟ್ಟ ಆಜ್ಞೇಯನ್ನು ಸಿರಸಾವಹಿಸಿಕೊಂಡು, ತಮ್ಮಾ ಮಯಗಳಾದ ದೇವಾಲಯಗಳನ್ನು ನಿರ್ಮಿಸಿ, ಉಭಯ ದೇವರಿಗೆ ಅರಿಕೆ ಮಾಡಲಾಗಿ, ಆಗ ತಾಉ ಉಯಸ್ತರು ಕೆಲಉ ದಿನಾ ವಾಸವಾಡಿ ಯಿದ್ರು. ಮುಂದೆ ಕಲ್ಪಾಂತಕವಾಗುತದೆಯಾ ಯೀ ಯರಡು ಅಲಯನ್ನೆ ನಾಗಾಚಲವನ್ನು ಆ ದೇವಾಲಯದಿಂದ ಆ ಶಿವನು ಭಾಗೀರತಿಯನ್ನು ಬಿಡೆ ಚಂದ್ರ ಸೂರ್ಯ ಪುಷ್ಕರಣಿಗೆ ಪೂರ್ವದಲ್ಲಿ ಚಿಕ್ಕ ಸರೋವರದಲ್ಲು ಪ್ರಖ್ಯಾತವಾಯಿತು. ತತ್ಸರಸಿ ವೊಳಗೆ ಹರಿ ವಿಷ್ಣು ಲಿಂಗಉ ಅವಿರ್ಭೂತವಾದ್ದು ಶಿಲಾಂತರ್ಗತವಾಗಿ ಅದೆ.

ದಾನಾದಿಗಳ ಮಾಡಿದವರಿಗೆ ಪುರಷಾರ್ಥ ಚತುಷ್ಟಯಉ ಆಗುತ್ತದೆ ಯಂದು ವುತ್ತರವಾಯಿತು. ಯ್ರೀ ಆಚಾದಿಕ[>ತ]ವಾದ ನಾಗಾಚಲದ ಅವಿರ್ಭೂತ ಶ್ರೀಗಣಪತಿಯು, ಯೀ ಪೂರ್ವದಲ್ಲಿ ಶಾಪನಿವಾರಣಾರ್ಥವಾಗಿ ತಪಸು ಮಾಡಿದವರಿಗೆ ವಿಘ್ನ ನಿವಾರಣವನ್ನು ಮಾಡಿ ಮಹಾ ಧಿರಾವಾಗಿರುತಾರೆ.

ದ್ವಾಪರಾಂತ್ಯದಲ್ಲು ಪಂಚಪಂಡವರು ವನವಾಸಕ್ಕೆ ಹೋದಲ್ಲು, ಯೀ ಹರಿಕ್ಷೇತ್ರದಲ್ಲು ಕುಂಭಾಸುರನೆಂಬವನು ರಾವಣನ ಮಗನು ರಾಮಬಾಣದಿಂದ ತಪ್ಪಿಶಿಕೊಂಡು ಜೀವಮಾತ್ರದಿಂದ ಸಮುದ್ರದಲ್ಲಿ ಬಿದ್ದು, ಬಂದು, ವೊಂದು ಗುಹಾಪ್ರವೇಶವನ್ನು ಮಾಡಿಕ್ಕೊಂಡು ಯಿರುವಲ್ಲಿ, ಕೆಲಉ ದಿನದ ಮೇಲೆ ಅನು ಹನ್ನೆರಡು ಅಕ್ಷೋಹಿಣಿ ಸೈನ್ಯವ ಸೇರಿಸಿಕೊಂಡು ಬಂದು, ಸಮಸ್ತ ದೇಶಗಳನ್ನು

ಆಕ್ರಮಿಸಿಕೊಂಡು ಯಿರುವಲ್ಲಿ, ಕೆಲಉ ದಿನದ ಮೇಲೆ ಯೀ ಪಾಂಡವರು ಸಹ್ಯಾದ್ರಿಪರ್ವತವನ್ನು ಯಿಳಿದು ಗೋಕರ್ನಾದಿ ಕ್ಷೇತ್ರಗಳನ್ನು ನೋಡಿಕೊಳ್ಳುತ್ತ ಶ್ರೀಕೋಟೀಶ್ವರನ ದರ್ಶನಕ್ಕಾಗಿ ಬಂದು, ಕೋಟಿತೀರ್ಥಸ್ನಾನಾ ಮಾಡುವ ವೇಳ್ಯೆದಲ್ಲು, ಯಿಲ್ಲಿ ಯಿದ್ದಾ ಸಮಸ್ತರುಷಿಗಳು ಯೀ ರಾಕ್ಷಸ ಉಪದ್ರವ ಹೇಳಿ, ಆ ಧರ್ಮರಾಯನಿಂದ ಭೀಮಸೇನನಿಗೆ ಅಪ್ಪಣೆಯಾಗಿ, ತಾನು ಬಹುಸತ್ವದಿಂದ ಅಧಿಕವಾಗಿ ಆ ಕುಂಭಾಸುರನ ಸಂಹಾರಮಾಡಿದಲ್ಲಿ ಯೀ ಹರಿಹರಕ್ಷೇತ್ರಕ್ಕೆ ಕುಂಭಾಕ್ಷೇತ್ರಯಂಬ ಹೆಸರು ಬಂತು. ಯಿದಕ್ಕು ಪೂರ್ವದಲ್ಲಿ ಉದ್ಭವದ್ವರದಲ್ಲು ಕುಂಭದಿಂದ ಯೀಶ್ವರ ಅವಿರ್ಭೂತವಾಗಿದ್ದರಿಂದಲು ಸಹಾ ಯೀ ಕ್ಷೇತ್ರಕ್ಕೆ ಕುಂಭಕಾಸಿಯಂಬ ಹೆಸರು, ಮಹಾಕ್ಷೇತ್ರ. ಅಲ್ಲಿ ಪಾಂಡವರಿಂದ ಕೇಶವದೇವರನ್ನು ಸ್ಥಾಪಿಸಲಾಯಿತು. ಅನಂತರದಲ್ಲಿ ಆ ವೂರುಗಳು ಸ್ವಾಸ್ತಿ ಉತ್ತಿಗಳು ಕೊಟ್ಟು ನಡಸಿಕೊಳ್ಳುತ್ತಾ ಬಂದದಕ್ಕೆ ಶಾಸನದ ಮೇಲೆ ಗಣಪತಿಗೆ ಅನೇಕ ಭಕ್ತರುಗಳು ಹೇಳಿಕ್ಕೊಂಡರೆ ಸಮಸ್ತ ಪ್ರಯೋಜನವೂ ಆಗುವದರಿದ . . . . ಮೂಷಿ ಯರಡಿಗೆ ಸಾಸೀ ಮಾ ೩, ನಾಚೆ ಪರ್ಯಂತರವನು ವರೆಸರಿ ಯಿತ್ಯಾದಿ ಮಹಾಮಹಿಮವಾದ ಮಹಾಸ್ಥಳಾ ಯಂತ ಬರಶಿಕೊಟ್ಟ ಕೈಫಿಉತು ನಾಮೆ.

❖❖

೬೬
ಕೊಡಕರೊ ಮಾಗಣಿ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಯೀ ಗ್ರಾಮದಲ್ಲಿ ಸದರಿ ವೆಂಕಟರಮಣದೇವರು. ಪ್ರಾಕು ನಾರಾಯಣಮಲ್ಲಯಂಬವನು ದೇವಸ್ಥಾನ ಕಟ್ಟಿ ಪ್ರತಿಷ್ಟೆ ಮಾಡಿ, ಉತ್ತರವನ್ನು ಬಿಡಿಸಿ, ಪೇಟೆ ಮುಂತಾಗಿ ರಾಣಿ ಕಾಲದಲ್ಲು ಉತ್ತರ ಮುಂತಾಗಿ ಬಿಡಿಸಿ ಯಿದ್ದಾರೆ. ಯೀ ಪ್ರಕಾರ ಕೈಫಿಯತು.

ಆ ಮೇಲೆ ಯೀ ಮಾಗಣಿ ಯೀ ಪ್ರಾಕು ಬಗ್ವಾಲಿ ಹೊಬಳಿಗೆ ದಾಖಲು ಆದ ಆರಭ್ಯಕ್ಕು ಮಣಿಗಾರನ ಮುಖಾಂತ್ರ ನಡದು ಬಂದು, ಸುಲತಾನನ ಕಾಲದಲ್ಲು ತುಕಡಿ ಆದ ಮೇಲೆ ಕುಂದಾಪುರ ತುಕಡೀಗೆ ಸೇರಿದ್ದು.

೧. ಕೋಟಿಗ್ರಾಮ   ೧ ಬಾವೆಹತ್ತು ಗ್ರಾಮ, ಹಲಸುನಾಡು ೧
                                  ಹೆಮ್ಮಾಡಿ ಗ್ರಾಮ ೩

ಯೀ ಪ್ರಕಾರ ತುಕುಡಿ ೧ ಆಯಿತು. ಯಿದಕ್ಕೆ ಹಾಲಿ ಕುಂಪಣಿ ಸರಕಾರಕ್ಕೆ ಸೇರಿದ ಮೇಲೆ ಕುಂಪಣಿಯಲ್ಲು ಮೊಕರರುಉ ಆದ ಪಟೇಲರು:

೧ ಯೀ ಗ್ರಾಮಕ್ಕೆ ದೇವಪ್ಪಯ್ಯ

೧ ಹೊಸನಾಡಿ।ಕೃಷ್ಣಯ್ಯ ನಾವಡ ೧।   ಯಿ ನಾವಡ ೧

೧ ಹೊಕಳಿ|ಬರದಪ್ಪ ೧ ಮಹಮ್ಮದ ಹುಸೇನಿ ೧

೧ ದೇವಳಿ ತೀರಕ್ಕೆ ಕಾರಂತ

೧ ತ್ರಾಸಿ ಕೃಷ್ಣಪ್ಪಶೆಟ್ಟಿ

೧ ಕೊಟಪಾಲಿಗೆ ಗೋಪಾಲಮ್ಯೆ ವೆಂಕಟಶೆಟ್ಟಿ

೧ ಯಿಡುಹಡು ಅಪ್ಪುಶೆಟ್ಟಿ ೧ ಚಿಕ್ಕಯ್ಯಶೆಟ್ಟಿ

೧ ಚಿಣ್ಣೆಗೆರೆ ಕೃಷ್ಣಯ್ಯನಾವರ ೧

೧ ಸುಜಾವಡಿ ನರಸನಾಯಕ ಕೇಶವ ಕೊರಬ ೧

೧ ಬಡಾಹಡುವಿಗೆ ವೆಂಕಟೇಶ ೧

೧ ಕೊಡಿಗೆ ನಾರಾಣಪ್ಪ ೧

೧೧

ಯಿದರಲ್ಲಿ ಯಿರುವ ದೇವಸ್ಥಾನದ ತಪಶೀಲು:

೧ ಗುಹೇಶ್ವರ ಪ್ರಾಕು ಆರಭ್ಯ ಪುರಾಣಸ್ಥಳ

೧ ಕೇಶವಯ್ಯ ಕಟ್ಟಿದ ವೀರೇಶ್ವರ

೧ ರಾಮಪ್ಪಮಠ ವೆಂಕಟರಮಣದೇವರು

೧ ಮಲ್ಯರಮಠ ವೆಂಕಟರಮಣದೇವರು

೪

ಮಹಜೀದಿ ೧

೬[>೫]

ಯಿದಕ್ಕೆ ಸ್ಥಳ ಶಾನಭವರು ಪ್ರಾಕು ಆರಭ್ಯ ಶಂಕರನಾರಾಯಣಭಟ್ಟನು ಆಳುವ ಕಾಲದಾರಭ್ಯ ಶುಂಭವಿ[>ಭು] ಸೇವಭವನ [>ಭೋವನ] ದಿವಸ ನಡದು ಬಂದು ಯಿಥೆ, ಯೀ ವರೆಗು ನಡೆಯುತ್ತಿದೆ. ಯೀಗ ಕುಂಪಣಿ ಕಾಲದಾರಭ್ಯ ಮುಂಜ್ಯೆ ಜೋಯಿಸ ೧, ನಾರಾಣಪ್ಪ ಜೋಯಿಸ ೧ ಹೀಗೆ ಅಣ್ಣತಮ್ಮಾದಿ ಕಳುಜ ೨ರ ಯೀ ಸೀಮೆ ಶಾನುಭವಿಕೇಯ ನಡೆಯುತದೆ॥

ಪ್ರಾಕು ಯೀ ಮಾಗಣಿಗೆ ಪ್ರತ್ಯೇಕ ಬದುಕು ಮಾಡಿದವರು ಯಿಲ್ಲಿ ಮಣಿಗಾರತನ ಮಾಡುವವನ ಮುಖಾಂತ್ರವೆ ನಡದು ಬಂತು. ಯೀ ಮಾಗಣೆಯಲ್ಲು ಪ್ರಾಕು ಗಂಗುಳಿ ಬಳಿ ಮಹಳೆ ಅಳುವೆಯಿರುವದನ್ನು ಮೂರ್ಚಿ ಹೊಸ್ತಾಗಿ ಅಳುವೆಯನ್ನು ಬಸವಪ್ಪನಾಯಕನ ದಿವಸದಲ್ಲು ಬಿದ್ದು ಯಿರುವದರಿಂದ, ಯೀ ಆಳುವೇಯಲ್ಲು ಸಮುದ್ರದಿಂದ ನಗಗಳು ಹೋಗಿ ಬರುವ ಸಮ್ಮಂದ ಬೆಣ್ಣೆಗೆರೆಯಂಬ ಗ್ರಾಮದಲ್ಲಿ ಕೋಟಿಕ್ಕಟಿ ಯಿರುವಲ್ಲಿ, ಸುಲತಾನನ ಕಾಲ ಪರಿಯಂತ್ರಕ್ಕೂ ಯೀ ಕೋಟೀಗೆ ಕಿಲ್ಲೆದಾರನು ಮಂದಿ ಸಹಾ ಯಿಟ್ಟು ನಡೇತು. ಆ ಮೇಲೆ ವಿಕೃತ ಸಂವತ್ಸರದಲ್ಲಿ ಬಹದರನ ಕಾಲದಲ್ಲು ಪಹರೆ ಬಂದೊಬಸ್ತು ಬಗ್ಯೆ ಆಳುವೆ ಕಟ್ಟ ಯಿಲ್ಲಿ ಬತ್ತೇರಿಯು ಕಟ್ಟಿದರು.

ಅದರ ಪಾಹಾರಾ ಬಂದೋಬಸ್ತುವಿನ ಮಿ[>ನಿ]ತ್ಯ ಪಹರಾ ಮುಂತಾಗಿ ಯಿತ್ತು. ಯಿದಕ್ಕೆ ಗಂಗಾವಳಿಯಂತ ಯಾವರಿಂದ ಹೆಸರು ಬಿತ್ತು ಯಂತ ಹೇಳಿದರೆ

೧ ವಾರಾಹಿ ನದಿ ೧ ಶುಕ್ತಿಮತಿ

೧ ಸಾಪರ್ಣಿ ೧ ಖೇಟಾನದಿ

೧ ಚಕ್ರನದಿ

ಯೀ ಆಯಿದು ನದಿಯು ಗಂಗುಪಳಿಯಂಬ ಸ್ಥಳದಲ್ಲಿ ಕೂಡಿ ಅಳುವೇಗೆ ಸೇರಿದ್ದರಿಂದ ವಾಚ[>ಪಂಚ]ನದಿ ಸಂಗಮವಾದ್ದರಿಂದ ಗಂಗಾವಳಿಯಂಬ ಹೆಸರು ಬಿತ್ತು.

❖❖

೬೭
ಕೊಲ್ಲೂರ ಉತ್ತರ ಮಾಗಣೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಪ್ರಾಕು ಯೀ ಮಾಗಣೀಯು ಕೆಳದಿ ಸಂಕಣ್ಣನಾಯಕನ ಕಾಲದಲ್ಲು ಅಮ್ಮಾನವರಿಗೆ ಉತ್ತರ ಬಿಡುವಾಗ್ಯೆ ಕಾಳಕೊಡ ಪೈಕಿ ಉಪ್ಪಾರಗ್ರಾಮ, ಹಳ್ಳಿಕೇರಿ ಪೈಕಿ, ಬವಳಾಡಿ ॥೧॥, ಹಳ್ಳಿಹೊರಿ ಬೈರೂರ ಪೈಕಿ ಯಳಚಿತ್ತ ॥೧॥, ಗೊಳಿಹೊಳೆ ॥೧॥, ಹಳಿಹೊಳೆ ॥೧॥ ಶಿರೂರು, ಹೊಸಂಗಡಿ ಪೈಕಿ ಬರೆ ಗುಂಡಿ[>ಹುಂಡಿ]ಗ್ರಾಮ ೧, ಮುಗಿಲಿ[>ವಿ]ನ ಪೈಕಿ ತ್ರಾ[>ಸು]ಮಗ್ರ[>ಗ್ರಾಮ] ೧ ಯೀ ಪ್ರಕಾರ ಗ್ರಾಮಗಳು ಯೀ ಮಾಗಣಿಯಂತ ಮಾಡಿ, ಯೀ ಹೊಬಳಿಯಿಂದ ಉತ್ತಾರ ಬಿಟ್ಟಲ್ಲಿ ಜಂಗಮರ ಕಾಲದಲ್ಲು ದೇವಸ್ಥಾನ ರರು[>ಮ]ಣಿಗಾರನದು.

ಬಹದರನು ರಾಜ್ಯವನ್ನು ತೆಗೆದುಕೊಂಡ ಮೇಲೆ ಸದರೀ ಗ್ರಾಮವನ್ನು ಜಪ್ತಿ ಮಾಡಿದ ಮೇಲೆ ಕೆಲಉ ಕಾಲ ಸುಲತಾನನ ದಿವಸದಲ್ಲು ಪ್ಲವಂಗ ವರೆಗೆ ತ್ರಾಸುಗ್ರಾಮ ೧, ಬರೇಹುಂಡಿ ೧ ಯೀ ಯರಡು ಗ್ರಾಮಉ ಪ್ರತ್ಯೇಕ ನಡವದನ್ನು ಮಾಗಣೀಗೆ ಶೇರಿಸಿದರಿಂದ ಆಆ ಮಾಗಣಿ ಮಣಿಗಾರನ ಮುಖಾಂತ್ರ ಸರಕಾರದ ಹಣಉ ವಸೂಲು ಯಿತ್ತು, ಮೇಲಾಣಿ ಉಪ್ಪಾರ॥೧॥, ಬವಳಾಡಿ॥೧॥, ಯೆಳಚಿತ್ತ॥೧॥, ಶಿರೂರ॥೧॥, ಹಳಿಹುಸರಿ[>ಹಳ್ಳಿಹೊಳೆ] ॥೧॥, ಹಳ್ಳಿಬೇರು[>ಹೊರಿ] ॥೧॥, ಗೂಳಿಹೊಣೆ[>ಳೆ] ಯೀ ಗ್ರಾಮಗಳು ಪ್ರಕು ತುಕಡಿ ಆಗುವ ವರಿಗೆ ವಟ್ಟು ಹೊಬಳಿಯಲ್ಲು ವೊಟ್ಟಾಗಿ ನಡದು ಬಂತು, ಆ ಮೇಲೆ ಸುಲತಾನರ ಕಾಲದಲ್ಲು ತುಕಡಿ ಆಗುವಾಗ್ಯೆ ಪಡುವರಿ ಕೂಟಿಗೆ, ಗೊಳಿ . . . . ಗೊಳಿಹೊಳೆ॥೧॥, ಪಾಂರ॥೧॥, ಹಳ್ಳಿಕೆರೆ॥೧॥, ಶಿರೂರು, ಯೀ ಗ್ರಾಮಗಳು ಕೊಟ ಆ ತುಕಡಿಗೆ ದಾಖಲು ಆಯಿತು.. ಬೈರೂರು ತುಕಡಿಗೆ ಬವಳಾಡಿ, ಯೆಳವೇಕ[>ಚಿತ್ತ] ಗೊಳಿಹೊಳೆ ದಾಖಲು ಆಯಿತು. ಯೀ ಪ್ರಕಾರ ಸುಲತಾನನ ಕಾಲ ಆಖೈರು ಪರಿಯಂತ್ರಕ್ಕೆ

ನಡೀತು. ಸುಲತಾನನು ಕಾಲವಾದ ಮೇಲೆ ಕುಂಪಣಿಕಾಲ ಆದಮೇಲೆ ಪಟೇಲರ ಮುಖಾಂತ್ರ ನಡೇತು. ಯೀ ಗ್ರಾಮಯೇಳರ ಪಟೇಲರ ವಿವರ:

೧ ಶಿರೂರ ಶೇನಶೆಟ್ಟಿ

೧ ಉಪ್ಪಾರ ಶಂಕರನಾರಾಯಣಯ್ಯ ತಿರಕಶೆಟ್ಟಿ

೧ ಬವಳಾಡಿ ನಾರಾಣಪ್ಪ ಹೆಬ್ಬಾರ ೧, ಮಂಜಶೆಟ್ಟಿ ೧

೧ ಯೆಳಚಿತಾಪುರ ಶಾನಭಾಗ

೧ ಗೊಳಿಹೊಳೆ ವೆಂಕಟಪತಿ

೧ ಹಳಿಹೊಸ್ರಿ[>ಹೊಳೆ]ಸುಬ್ಬಮ್ಮೆಯ್ಯಾ

೧ ಹಳ್ಳಿಬೆರುಪಗೌಡ.

೭

೭ ವಳಗ್ರಾಮ ೭ರ: ೧ ಬವಳಾಡಿ ಪೈಕಿ ಗುಂಡಿಹೊಳೆ

೧೪ ೬ ಸಿರೂರು ಪೈಕಿ ಜೋಗುರು ೧, ಸಾಂತೊಲ ೧, ಹಡವಿನ ಕೊಂಡ ೧,

ನಿರೊಡಿ ೧, ಶೊನಾಮಕ್ಕಿ ೧, ಹಾರೊಬೈಲು

೭

ಶಾನುಭವರ ವಿವರ:

ಪ್ರಾಕು ನಮ್ಮೊಂದ ಬವಳಾಡಿಗೆ ಹಲಸುನಾಡ ನಾಗಪ್ಪಯ್ಯನವರ ಕಡೆಯವರ ಕುಂಪಣಿ ದರಬಾರು ವರೆಗೂ ಅನುಭವಿಸಿಕ್ಕೊಂಡು ಬಂದು, ಯಿತ್ತಲಗಿ ಮೂರು ವರುಷದಾರಭ್ಯ ಸುಬ್ಬಯ್ಯಯಂಬವನಿಗೆ ಗೊತ್ತುಮಾಡಿ ಯಿಥೆ॥

ಶಿರೂರ ವಗೈರೆ ಗ್ರಾಮ ೫ರ ಸಾಬಕ ಕಲಿಗಲ್ಲ ನರಸಪ್ಪಯ್ಯಗೆ ಯಿಲ್ಲಿ ಅವನ ಕಾಲೂಕಿಗೆ ಸುಲತಾನನ ಅಮಲು ಅಖೈರು ಪರಿಯಂತ್ರಕ್ಕೂ ನಡದು ಬಂತು. ಕುಂಪಣಿ ಅಮಲು ಆದಮೇಲೆ ಆ ಗ್ರಾಮದ ಪರವೇಶ್ವರೈಯ್ಯ ಗೊತ್ತು ಆಗಿ ಆತನ ಮಗಗೆ ಯೀಗೆ ನಡೆಯುತ್ತದೆ.

ಯಿಲ್ಲಿ ಯಿರುವ ದೇವರು:

೧ ಬವಳಾಡಿ ಮಹಲಿಂಗೇಶ್ವರ ದೇವರು

೧ ತಿರುಮಲದೇವರು

೧ ಉಳಬೆತ್ತಿ ಹೆರಗುಡೆ ವಿನಾಯಕದೇವರು

೧ ಹಳಿ ಹೊಸರಿ ದುರ್ಗಾದೇವರು

೧ ಶಿರೂರ ಉರ . . . . ಗೇಶ್ವರದೇವರು

೧ ವೆಂಕಟರಮಣದೇವರು

೧ ಗೊಳಿಹೊಳೆ ವಿನಾಯಕದೇವರು
೭

ಈ ಪ್ರಕಾರ ಕೈಫಿಯತು.

❖❖

೬೮

ಗೆರುಸೊಪ್ಪೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಗೆರುಸೊಪ್ಪೆಯಲ್ಲು ಹಳೆ ಬಸ್ತಿಯಲ್ಲು ಪಾರ್ಶ್ವನಾಥನು ಮೂಲವಿಗ್ರಹ ಪದ್ಮಾಸನದಿಂದಾ ಕುಳಿತಿರುವರು, ಯಿವರ ವರ್ಣ ಕರೇದು. ಯಿದರ ಎಡದ ಬದಿಯಲ್ಲಿ ಬಾಗಲ ಹೊರಗೆ ಲೋಹವಿಗ್ರಹ ವೃಷತೀರ್ಥಕಂಚಿ[>ಕರ]. ಯೀ ವಿಗ್ರಹಲು ನಿಂತು ಅದೆ. ಯಿದರ ಪ್ರಭಾವಳಿ ಯಿಪ್ಪತ್ತೊಂದು ಬಿಂಬಗಳು ಯಿದ್ದಾವೆ. ಯಿದರ ಹೆಸರುಗಳು ಯೀ ಜೈನಪುರಾಣದಲ್ಲಿ ಪ್ರಸಿದ್ಧ. ಯಿದರ ಸಿವಾಯಿ ಯೀ ಗೆರುಸೊಪ್ಪೆಯಲ್ಲು ಯಿರುವ ಬಸ್ತಿಗಳು ೨೦ವೊಂದು. ಯಿದರಲ್ಲಾ ಕೆಲವು ಆಲಯಗಳು ಶಿಥಿಲವಾಗಿದ್ದಾವೆ. ಕೆಲಉ ದೃಢವಾಗಿದ್ದಾವೆ. ಯಿದರವೊಳಗೆ ಮೊದಲು ಬರದ[>ಬರೆದ] ಬಸ್ತಿಗೆ ಮಾತ್ರ ಪೂಜೆ ಆಗುತ್ತದೆ. ಮೇಲಾದ ಬಸ್ತಿ ಪೂಜೆಯಿಲ್ಲಾ.

ಯೀ ಯಿಪ್ಪತ್ತಕ್ಕೆ ಹೆಸರುಗಳು : ಯಿವಷ್ಟು ಶಿಲಾವಿಗ್ರಹಗಳು – ವೃಷಭ।೧।, ಅಜಿತ।೧।, ಶಂಭರ।೩।, ಅಭಿನಂದನ ನಾಲ್ಕು, ಸುಮತಿ ।೫।, ಪದ್ಮಪ್ರಭಾ ।೬।, ಯಿದೇ ಹೆಸರಿಂದಾ ಯಿನ್ನು ಯರಡು ಉಭಯಂ ।೮।, ಪಾರ್ಶ್ವನಾಥ ವಿಗ್ರಹಗಳು ।೩।, ಮೇಲಿಂದರ ಹೊರ್ತು ಉಭಯಂ।೧೧।, ನೇಮಿನಾಥತೀರ್ಥಯೆಂಬ ಹೆಸರಿನ ಮೂರ್ತಿ ೨: ಯಿದರಲ್ಲಿ ವೊಂದು ವಿಗ್ರಹಲು ಪಶ್ಚಿಮಮುಖವಾಗಿ . . . . ವಿಗ್ರಹವು ನಾಲ್ಕು ದಿಕ್ಕಿಗೆ ನಾಲ್ಕು ಮುಖವಾಗಿ ಯಿದೆ. ಉಭಯಂ–೧೩. ಶಾಂತಿ ವಿಗ್ರಹ।೪।, ಉಭಯಂ।೧೭।, ೧೮ ಮಲ್ಲಾ, ।೧೯। ಮುನಿಸುವ್ರತಾ, ಅಂತು ।೨೦।, ಮೇಲೆ ಬರದ್ದು ಸಹವಾಗಿ।೨೩।.

ಯೀ ಬಸ್ತಿಗಳ ವಳಗೆ ಶಾಸನಗಳು ಯಿರುವದು।೧೪।, ಯಿದಕ್ಕೆ ನಕಲು ತಯಾರು ಆದ್ದು ಹದಿಮೂರು, ।೧। ಶಾಸನ ಶಿಥಿಲವಾದ್ದರಿಂದ ಬರಹಾ ಕಾಣದ್ದರಿಂದಲು ಬರೆಯಲಿಲ್ಲಾ. ಯೀ ಬಸ್ತಿ ಯಿಪ್ಪತ್ತುವೊಂದು ಬಸ್ತಿಗಳು ನಿರ್ಮಾಣವಾದದ್ದು ಮೇಲಿನ ಸೀಮೆ ಆನೆಗುಂದಿಯವರ ಅರಸುತನದ ಕಾಲಾ ಆಗ್ಯೆ ಯೀ ಗೆರುಸೊಪ್ಪೆಗೆ ಬೈರಾದೇವಿ ಆಳುತ್ತಿದ್ದಳು. ಯಿದು ಶಾಲಿವಾಹನ ಶಕದಲ್ಲು ಸಾವಿರದ ಮುನ್ನೂರ ಮೇಲೆ ಆದ ಬಸ್ತಿಗಳು, ಶಾಸನ ಹೊರ್ತು ಕೆಳಗಾರ ಶಾಸನವಾಗಲಿ ಬಸ್ತಿಗಳು ಗಲ್ಲಿ[>ಬಸ್ತಿಗಳಾಗಲೀ] ಕಾಣಿಸಲಿಲ್ಲಾ. ಯಿದ ಶಿವಾಯಿ ಬೈರಾದೇವಿ ಕಟ್ಟಿಸಿದ್ದುಯಂದರೆ। ಯೀಕಿಯು ದೊರೆತನ ಮಾಡುವಾಗ್ಯೆ ಯೀಕೆ ಮನವರ್ತೆ ಶಾನುಭೋಗ। ಶ್ರೀ . . . . ಕಟ್ಟಿಸಿ ಶಾಸನ ಸಹಾ ಬರದು। ಸ್ವಾಸ್ತಿಗಳು ಬಿಡಿಸಿದ್ರು. ಯೀ ವರಿಗೆ ಬ್ರಾಹ್ಮರಿಂದಾ ಪೂಜೆ ನಡಸುತ್ತದೆ.

ಯೀ ಮೇಲೆ ಬರದ ೨೧ ವಸ್ತಿಗಳ ವೊಳಗೆ ಯಿದ ಮೂರ್ತಿ ೨೩ಲ್ಲಿ ವೊಂದು ಮೂರ್ತಿ ಪಾಶ್ವನಾಥ, ನಾಲ್ಕೂ[>ಲ್ಕ]ರಲ್ಲಿ ವೊಂದು ಮೂರ್ತಿಯನ್ನು ಸರ್‌ದಾರ್ರು ಮೇಜರ್ ಮಕ್ಕಿಂಜಿ ಸಾಹೇಬರು ತೆಗೆದುಕೊಂಡು ಬಂದ್ರು. ಉಳದ ಯಿಪ್ಪತ್ತು ಮೂರು ಮೂರ್ತಿಗಳು ಆ ಉರಲ್ಲು ಹಾಜರು.

❖❖

೬೯

ಗೋಕರ್ನದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಗೋಕರ್ನದ ಕೈಫಿಯತು. ಯಿಲ್ಲಿ ಯಿರುವ ದೇವರುಗಳು ದೇವತಾತೀರ್ಥಗಳು ಸಹಾ ವಿವರಾ:

ಪೂರ್ವದಲ್ಲಿ ತ್ರೇತಾಯುಗ ಪ್ರಥಮಪಾದದಲ್ಲಿ ಪರಶರಾಮದೇವರು ಕ್ಷತ್ರಿಯರ ಸಂ[+ಹಾರ] ಮಾಡಿ ಬ್ರಾಹ್ಮರಿಗೆ ಭೂಮಿ ಸಮಗ್ರವು ದಾನವನ್ನು ಮಾಡಿ, ಮಹೇಂದ್ರಪರ್ವತದಲ್ಲಿ ತಪಸ್ಸುಮಾಡುತ್ತಾ ಯಿದ್ದನು. ಯೀ ಸಮಯದಲ್ಲಿ ಕಸ್ಯಪರುಷಿ ಮೊದಲಾದ ಮಹಾರುಷಿಗಳು "ತಮ್ಮಗೆ ತಪಸ್ವಿಗೆ ಸ್ಥಳವಿಲ್ಲಾ, ಅನಾದಿ ಸಂಸಿದ್ಧಿಯಾಗಿ ಯಿರುವ ಗೋಕರ್ನ ಸಮುದ್ರದ ವಳಗೆ ಮುಣಿಗಿ ಹೋಗಿಯಿಧೆ. ಯಿದು ಪುನಹಾ ಉದ್ಧಾರ ಮಾಡುವವರು ಯಾರೂ ಯಿಲ್ಲಾ, ಪರಶರಾಮನು ವೊಬ್ಬನೆ ಸರಿ. ಆತನ್ನ ಬೇಡಿಕೊಂಡು ಆತನ ಮುಖಾಂತ್ರ ಯೀ ಗೋಕರ್ನಸ್ಥಳ ಉದ್ಧಾರವನ್ನು ಮಾಡಿಸಿ ಯಿಲ್ಲಿ ತಪಸ್ಸು ಮಾಡಿದರೆ ಸಕಲ ಇಷ್ಟಾರ್ಥ ಶಿದ್ಧಿ ಆಗುತ್ತಾಯಿದೆ"ಯಂಬದಾಗಿ ಯೋಚಿಸಿ, ಪರಶರಾಮದೇವರ ಸಮೀಪಕ್ಕೆ ಸಕಲರುಷಿಗಳು ಹೋಗಿ ಕಾದುಕ್ಕೊಂಡು ಮಹೇಂದ್ರಪರ್ವತದಲ್ಲಿ ಯಿರಲಿಕ್ಕೆ, ಕೆಲಉ ದಿವಸದ ಮೇಲೆ ಪರಶರಾಮದೇವರಿಗೆ ತಮ್ಮಾ ತಂದೆ ಶ್ರಾರ್ಧ ದಿವಸವನ್ನು ಬಂತು. ಆ ಸಮಯದಲ್ಲಿ ಕಾಸ್ಯಪಾದಿ ಸಪ್ತರುಷಿಗಳನ್ನು ನಿಮಂತ್ರಣವನ್ನು ಹೇಳಲಿಕ್ಕೆ ಅವರು ಬ್ರಾಹ್ಮಣಾರ್ಥ ಕೂತುಕ್ಕೊಂಡು, ಆಪೋಶನವನ್ನು ತೆಗೆದುಕ್ಕೊಂಬೊ ಸಮುಯದಲ್ಲಿ ಪರಶರಾಮದೇವರನ ಕುರಿತು ಸಪ್ತರುಷಿಗಳು ಹೇಳಿದ್ದು "ನಮ್ಮಗೆ ವೊಂದು ಸಂಕಲ್ಪ ಯಿಧೆ. ಅದು ಪೂರ್ತಿ ಮಾಡಿಸಿದರೆ ಆಪೋಶನವನ್ನು ತೆಗೆದುಕೊಳ್ಳುತ್ತಾ ಯಿದ್ದೇವೆ, ಯಿಲ್ಲದೆ ಯಿದ್ದರೆ ತೆಗೆದು ಕೊಂಬೊವದು ಯಿಲ್ಲಾ" ಯೆಂಬದಾಗಿ ಹೇಳಲಿಕ್ಕೆ ಆ ಸಮಯದಲ್ಲಿ ಪರಶುರಾಮದೇವರು ರುಷಿಗಳ ಸಂಗಡ "ನಿಮ್ಮ ಮನೋಭಿಷ್ಟ ಮಾಡುತ್ತಾ ಯಿದ್ದೇನೆ. ವಂಚನೆಯಿಲ್ಲದೇ ಹೇಳಬೇಕು"ಯಂಬುದಾಗಿ ಹೇಳಿದ್ದರಿಂದ ಯೀ ರುಷಿಗಳು ಹೇಳಿದ್ದು "ಗೋಕರ್ನ ಯಂಬೊ ಸ್ಥಳ ಪೂರ್ವದಲ್ಲಿ ಉಂಟು, ಅದು ಪುನರುದ್ಧಾರಾ ಮಾಡಿಸಬೇಕು." ಯಂಬದಾಗಿ ಹೇಳಿದರು. ಯಿದು ಪರಶರಾಮದೇವರು ವಡಂಬಟ್ಟು "ಉದ್ಧಾರವನ್ನು ಮಾಡುತ್ತಾ ಯಿದ್ದೇವೆ, ಯೀ ಗೋಕರ್ನ ಸ್ಥಳದಲ್ಲಿ ತಪಸ್ಸು ಮಾಡಬೇಕು ಯಂಬುವದು ಯೇನು? ಯೀ ಸ್ತಳದ ಉತ್ಪತ್ತಿ ಹೇಳಬೇಕು" ಯಂಬುದಾಗಿ ಕೇಳಲಿಕ್ಕೆ ರುಷಿಗಳು ಹೇಳಿದ್ದು:

॥ಶ್ಲೋ॥ ಪ್ರಪಂಚೇ ಪಂಚತ್ವೇಗತವತಿ ಮಹಾಂಬೋಧಿಮ ಯತಃ ಪ್ರಲೀನೇ ಬ್ರಹ್ಮಾಂಡೇ ತದುಪರಿಶಯಾನಸ್ಯ ಮಹತಃ॥ ಅಭುನ್ನಾಭೇರೇಕಂ ಕಮಲಮಜ ಸಂಜ್ಞೋಜ ನೀತವಾನ್। ಪುಮಾನೇಕೋಜಾತಃ ಸ್ಫುಟಕರರಜೋಹರ ಕವಿತಃ ಅವಿರ್ಭಬೂವ। ತದ್ದೇಹ ಶಂಕರೋ ಭಕ್ತವತ್ಸಲಃ॥ ಬ್ರಹ್ಮಪ್ರೋವಾಚ ತಂದ್ರಷ್ಟಾ ಸೃಷ್ಟಿಂ ಕುರು ಮಹಾಮತೇ॥ ತದೇತ್ಯುಕ್ತ್ವಾತ ದಾರುದ್ರೊ ಪಾತಾಳೇ ತಪಸಿ ಸ್ಥಿತಃ॥ ತತಃ ತ್ರೈಲೋಕ್ಯಮಖಿಲಂ। ಕೃತವಾನಬ್ಜಸಂಭವಃ॥ ಉವಾಚ ರುದ್ರಂ ಪ್ರಕೃತಿಃ। ನಿವೃತ್ತಂ ಚಿಂತಿತಂ ತವ॥ ಶುತ್ವಾ ತತ್ಪ್ರಕೃತೋರ್ವಾಕ್ಯಂ॥ ಉದ್ಯತಸ್ಯಚ ಆಸತುಃ॥ ಆಗತ್ಯದೃಷ್ಟವಾನ್ ರುದ್ರಃ। ಮೇದಿನಿಚಕ್ರಸಂಸ್ಥಿತಾಂ॥ ಕೃದ್ಧಃ ಪ್ರೋವಾಚ ತಾಂ ರುದ್ರೋ। ದೇಹಿ ಪಂದಾನಮಿತ್ಯುತಾ। ಭೂರುವಾಚಾ॥ ನಮೋರುಜಂ ದೇವ ದೇವ ಕರ್ತುಮರ್ಹಸಿ ಶಂಕರ॥ ಕಣೌಚ್ಚಿ ದ್ರೇಹಿಮೇದೇವ ಹ್ರಸ್ವೋ ಭೂತ್ವೋರ್ಧ್ವ ಮುತ್ಪತ॥ ಶಂಕರಃ॥ ತಥಾ ಭದ್ರೇ ಕರಿಷ್ಯಾಮಿ। ಯಧಾನೆ ವೇಷಿವೇದನಾಂ॥ ಅಂಗುಷ್ಠಮಾತ್ರ ವ ಪ್ರಷಾನಿರ್ಗಮಿಷ್ಯಾಮಿಶೋಭನೇ॥ ಇತ್ಯುಕ್ತೋತ್ತತ್ಪತ್ಯಕರ್ಣಾತ್ತು ಧರಣೀಂ ಪ್ರಾಯ ಶಂಕರಃ॥ ಗೋಶಬ್ದಂ ಪ್ರಥಮಂ ದೇವಿತ್ವಯಿ ಸಂ ಪರಿವರ್ತತೇ। ಕರ್ಣತ್ವಾತ್ತರ ಕಲ್ಯಾಣಿ ಗೋಕರ್ಣಮಿತಿ ಶಬ್ದ್ಯತೇ॥ ಯೇಸ್ಮರಿಷ್ಯಂತಿ ಗೋಕರ್ಣಂ। ಪಾತರುತ್ಥಾಯ ನಿತ್ಯಶಃ॥ ತೇಷಾಂತ್ರಿ ಜನ್ಮ ಚರಿತಂ ಪಾವನೇನಾಸ್ತಿ ಸಂಶಯಃ॥

ಯೀ ಮೇರೆಗೆ ಭೂದೇವಿ ಸಂಗಡ ಯೀಶ್ವರನು ಹೇಳಿ ಯಿಲ್ಲಿ ಉಧ್ಭವ ಆಗಿ ಯಿದ್ದ ಕಾರಣ, ಯಿದು ಆದಿ ಗೋಕರ್ನಯೆಂಬ ನಾಮಕರಣ ತ್ರಿಲೋಕದಲ್ಲಿ ಪ್ರಸಿಧ್ಧಿಯಾಗಿ ಆದೀತು.

ಅನಂತರ ಯೀ ಮೇರೆಗೆ ಯಿರುತ್ತಾ ಯಿರಲಿಕ್ಕೆ ಸಗರಚಕ್ರವರ್ತಿಯೆಂಬ ಯಿಕ್ಷ್ವಾಕು ಅರಸು ಅಶ್ವಮೇಧವನ್ನು ಮಾಡುವ ಬಗ್ಯೆ ಅಶ್ವವನ್ನು ಬಿಟ್ಟು ಯಿರಲಿಕ್ಕೆ, ದೇವೇಂದ್ರ ಬಂದು ಪಾತಾಳಲೋಕದಲ್ಲಿ ಕಪಿಲೆರುಷಿ ಹಿಂದುಗಡೆ ಕಟ್ಟಿಯಿದ್ದದರಿಂದ, ಕುದುರೆಯನ್ನು ಕಾಣದೆ ಸಗರಚಕ್ರವರ್ತಿ ಮಕ್ಕಳು ಅರವತ್ತು ಸಾವಿರ ಜನರು ಹೊರಟು ಬಂದು ಸಮಸ್ತ ದಿಕ್ಕುಗಳನ್ನು ನೋಡಿ, ಭೂಮಿಯನ್ನು ಅಗಿದು ಪಾತಾಳಕ್ಕೆ ಹೋಗಿ ಕುದುರೆಯನ್ನ ಕಪಿಲೆರುಷಿ ಹಿಂದೆ ಯಿರುವದನ್ನು ಕಂಡು, ಕಪಿಲೆರುಷಿಯನ್ನು ಹೊಡದುರು. ಆ ಮೇಲೆ ಕಪಿಲೆರುಷಿಗಳು[>ಳ] ನೇತ್ರಾಗ್ನಿಯಿಂದ ಸಾಗರರು ಅರವತ್ತು ಸಾವಿರ ಭಸ್ಮೀಕೃತವಾದರು. ಅನಂತರ ಯೀ ವರ್ತಮಾನವನ್ನು ಸಗರಚಕ್ರವರ್ತಿ ಯೋಚನೆ ಮಾಡಿದ್ದು, "ತನಗೆ ಮಕ್ಕಳು ಯಾವತ್ತು ಸತ್ತು ಹೋದರು. ಹಿರೆ ಹೆಂಡತಿ ಸುಮಿತ್ರೆ ಮಗ ಅನಮಂಟ[>ಅಸಮಂಭಸ] ಯೀತನ ಮಗ ಅಂಶುಮಂತು[>ತ] ವೊಬ್ಬಯಿದ್ದಾನೆಯೆಂದು ಯೀತನ ಕರೆಕಳುಹಿಸಿ, ಕಪಿಲೆರುಷಿಗಳಿಗೆ ಪ್ರಾರ್ಥನೆ ಮಾಡಿ, ಕುದುರೆಯನ್ನು ತೆಗೆದುಕ್ಕೊಂಡು ಬಂದರೆ ಅಶ್ವಮೇಧ ಪೂರ್ತಿಯಾಗುತ್ತಾ ಯಿಧೆ"ಯಂಬುದಾಗಿ ಅಂಶ್ಯುಮಂತಗೆ ಹೇಳಿದ್ದರಿಂದಾ ಯೀತನು ಹೋಗಿ ಕುದುರೆಯನ್ನು ತಂದು ಯಾಗ ಪೂರ್ತಿ ಮಾಡಿಸಿದನು. ಅನಂತರದಲ್ಲಿ ಯೀತನ ಮಗ ದಿಲೀಪ, ಯೀತನ ಮಗ ರಘುಮಹಾರಾಯನು, ಯೀತನ ಮಗ ಭಗೀರಥನು ಯೀತನು ತಮ್ಮ ಸಮಸ್ತ ಪಿತೃಗಳಿಗೂ ಗತಕಲ್ಪನೆ ಮಾಡಬೇಕಾಗಿ ಯೀಶ್ವರನ ಜಡೆಯಲ್ಲಿ ಯಿರುವ ಗಂಗೆಯನ್ನು ಭೂಲೋಕಕ್ಕೆ ತಂದು ಸಮಸ್ತ ಪಿತೃಗಳಿಗು ಉದ್ಧಾರ ಮಾಡಿದನು. ಯೀ ಗಂಗೆಯನ್ನು ಸಮುದ್ರಗಾಮಿನಿ ಆದ ಕಾರಣ ಸಮುದ್ರವನ್ನು ಅಧಿಕವಾಯಿತು. ಯೀ ಸಮುದ್ರ ಅಧಿಕವಾದ ಕಾರಣ ಗೋಕರ್ನ ಸಮುದ್ರದ ವೊಳಗೆ ಮುಣಿಗಿ ಹೋಗಿ ಯಿಧೆ. ಯಿದನ್ನು ಉದ್ದಾರ ಮಾಡಬೇಕು" ಯಂಬ

ಸಮಸ್ತ ರುಷಿಗಳು ಹೇಳಿದ ಮಾತು ಕೇಳಿ, ಯೀ ವೃತ್ತಾಂತ ಯಾವತ್ತು ಮನಸಿಗೆ ತಂದು, ಪರಶರಾಮದೇವರು ಯೀ ಸಮುದ್ರನ ಬೇಡಿಕ್ಕೊಂಡು ಗೋಕರ್ನ ಉದ್ಧಾರವನ್ನು ಮಾಡಿದನು.

ಯೀ ಮೇರೆಗೆ ಗೋಕರ್ನಕ್ಷೇತ್ರವನ್ನು ಯಿರುತ್ತಾ ಯಿರಲಿಕ್ಕೆ ಹಿಮವಂತಪರ್ವತಕ್ಕೆ ಶೃಂಗವಾಗಿ ಯಿರುವಂಥಾ ಶತಶೃಂಗ ಪರ್ವತನಾಮದೇಯವಾಗಿ ಯಿರುವಂಥಾ ಹಿಮವಂತಶೃಂಗದಲ್ಲಿ ಬ್ರಮ್ಹದೇವರಿಗೆ ವಾಸವಾಗಿ ಯಿರುವಂಥಾದನ್ನು ಚಂಪಕಾದಿ ಉಕ್ಷಗಳಿಂದಾ ಪುಷ್ಪಿಸಿ ಘಟಿಸಿ ಯಿರುವಂಥಾ ಷಡೃತುವುಗಳಿಗು ಸಮಾನವಾಗಿ ಯೇಕಕಾಲದಲ್ಲಿ ಸದಾ ಫಲಪುಷ್ಪಾದಿಗಳಿಂದ ಆವೃತವಾಗಿ ಯಿರುವಂಥಾದನ್ನು ಚತುರ್ದಶ ಸಹಸ್ರಾಣಿ ಮುನಿ ಸಾಹಶ್ರಹನ್ವಿತಃ॥ ಯಿಂಥಾ ಶತಶೃಂಗ ಪರ್ವತದಲ್ಲಿ ಯಿರುವಂಥಾ ದುರ್ಮುಖಂ ಯಂಬ ನಾಗನಾಯಕನ್ನ ಗರುಡದೇವರು ತೆಗೆದುಕೊಂಡು ಖೇಚರ ಮಾರ್ಗದಲ್ಲಿ ಹೋದರು. ಅನಂತರದಲ್ಲಿ ದುರ್ಮುಖಿ[>ಖ]ಯೆಂಬ ನಾಗನಾಯಕನು ಗರುಡನ ಕಡೆಯಿಂದಾ ತಪ್ಪಿಸಿಕೊಂಡು ಶತಶೃಂಗದಲ್ಲಿ ಹೋದನು. ಅನಂತರದಲ್ಲಿ ಗರುಡದೇವರು ಯೆಲ್ಲಿ ನೋಡಿದರು ಸಿಕ್ಕದೆ ಯಿದ್ದದರಿಂದ ಅತಿಕ್ರೋಧದಿಂದಾ ಗರುಡದೇವರು ಶತಶೃಂಗಪರ್ವತವನ್ನು ಸಾರ್ಧಯೋಜನ ಮುಚ್ಚುತವಾಗಿ ಯಿರುವ ಪರ್ವತಂ ಉತ್ಪಾಟ್ಯ ಆಕಾಶಮಾರ್ಗದಿಂದಾ ಬಂದನು॥ ಸಬ್ರಂಹಕಾ ಮುನಿವರಾಃ ಸಹಸ್ರಾಣಾಂ ಚತುರ್ದಶಾ॥ ಸಂತಿದ್ವಿಕೋಟಿ ತೀರ್ಥಾ ನಿತ್ಯೆ ಸರ್ವೇಸ್ಸಹಿತೋ ಗಿರಿಃ॥ ತತೋ ಬುಭೋದ ಭಗವಾನ್ ಬ್ರಹ್ಮಾ ತತ್ಕರ್ಮ ಗಾರುಡಂ॥ ತ್ರೈಲೋಕ್ಯಭಾರಂ ಗರುಡೇ ವಧಾನೆ ಪರ್ವತಂ ನ್ಯದಾತ ತಸ್ಮಿನ್ ಕಾಲೇ ಸಗರುಡೋ ಗೊಕರ್ಣೇ ಪರಿಸಂಸ್ಥಿತಃ॥

ರುರೋದ ಭೃಶಭಾರಾರ್ತೋದದರ್ಶಾಧೋ ಮಹಾಮುನಿಂ। ತಪೋವನೇ ತಪಸ್ಯಂತ ಮಾಗಸ್ತ್ಯಂ ಪ್ರಾಹ ವಿಹ್ವಲಃ॥ ಭಾರೇಣ ಪೀಡಿತೋ ಹಂಚಂ ತ್ರಾಹಿ ಕ್ಷಿಪ್ರತಪೋಧನ। ಅಗಸ್ತೋತದ್ವಚಃಶೃತ್ವಾ ಮಾ ಭೈಷಿರಿತಿ ತಾ ಬ್ರವೀತ್॥ ಮುಚ್ಚಮಾನಂ ಸಗರುಡಂ॥ ಶಿಖರಂ ವೀಷ್ಯ ಸುವೃತಃ॥ ಅವತಾರಯಾಮಾಸಗಿರಿಂ। ವಾಮಹಸ್ತೇನ ಲೋಲಯಾ॥ ನಿಧಾಯಾಂಭೋಸಿ ಧೌಶೃಂಗಂ। ಗರುಡಂ ವಿಜ್ವರಂ ನಿಧಾತ್। ಸ್ವಯಂತ ಪಶ್ಚಿರಂಸಾಸ್ತಿ। ತಪೋವನ ಗತೋಮುನಿಃ ಗರುಡಂ ಮೋಚಿತಂ ದೃಷ್ಟಾ ಬ್ರಹ್ಮಾಪ್ರೋವಾಚ ಹೃಷ್ಟಧೀಃ॥ ತುಷ್ಟೋಸ್ಮಿತೇ ಪಕ್ಷಿರಾಜ। ಶಂಭೋರ್ಮನಸಿಸಂ ಸ್ಥಿತಂ॥ ಕೃತವಾನಸಿ ಭದ್ರಾಂತ್ಯೆ। ವರಂ ದಾಸ್ಯಾಮಿತೇ ಖಗ॥ ಗರುಡಂ ತ್ರೈಲೋಕ್ಯ ಭಾರಂಭಗರ್ವಾವೋಢುಂ ಶಕ್ತಿರ್ಭವೇನ್ಮಮ। ನಮತ್ತೋಮಾದಿಕೋ ಲೋಕೇ ಭಾವಿತವ್ಯ ಪರಾಕ್ರಮ॥ ಬ್ರಹ್ಮಾ॥ ಆದಿತೋ ಭರ್ವನ್ ಸರ್ವೇ ಭೋ। ತ್ರಿಲೋಕಿ ವಹನಕ್ಷುಮಃ। ಯಿತಿ ತಸ್ಮೆವರಂ ದತ್ವಾ ಬ್ರಹ್ಮೋವಾಸರುಷಿಬಿಸಹಂ॥ ತಸ್ಮಿನ್ ತಪೋವನಂ ಪುಣ್ಯಂ। ದೇವಾನಾಂ ವಿಶೃತಂ ಮಹತ್। ಆಬ್ರಹ್ಮತೀರ್ಥಾ ಬ್ರಹ್ಮರುಷಿಗಂಗಾಧಾರಾಂತಮಿಷ್ಯತೇ॥ ತಪೋವನಂ ಪುಣ್ಯತಮಂ। ದೇವಗಂದರ್ವ ಸೇವಿತಂ। ತೀರ್ಥಾನಾಂ ಕೋಟಿದ ತ್ರ್ಯೆವತ್ರ್ಯೆವ ಯೇತ ಸ್ಥಾತ್‌ಭವತಿ ದ್ವಿಜ। ಕೋಟಿತೀರ್ಥ ಮಿತಿಖ್ಯಾತಂ। ಕೋಟಿ ದ್ರವಸಮನ್ವಿತಂ। ಭಂಯಾತ್ಪತಗರಾಜಸ್ಯಂಯೇಕೀಭೂತಂ ಪುರಾತನಂ॥ದಶಾಸ್ವಮೇಧಾವಭೃತೇನ ತುಲ್ಯಂ ವದಂತ್ಯಾಪ್ತಾಃ॥ಕೋಟಿತೀರ್ಥಂ ದ್ವಿಜಾಗ್ರ್ಯಾಃ। ಮಹತ್ಪುಣ್ಯಂ ಪುಣ್ಯ ಕೃಶಾಂ। ವರಿಷ್ಟಂ ತಸ್ಮಿನ್ನಾತಾನಾಕ ಪೃಷ್ಟಂ ಪ್ರಜಂತಿ॥ ದೃಷ್ಟಾ ಯಕ್ಕೋಟಿತೀರ್ಥಂ ಪ್ರಭಾವ ತೇಜಗತಾ ಕೋಟಿ ದುಖ್ಖ ಪ್ರಭಂಗಃ॥ ಸ್ಪೃಷ್ಟೆಯತ್ಯೋಪಿ ತೀರ್ಥ ಕೋಟಿ ಜನ್ಮಾಘಹಾನಿಃ ॥ ಪಾಸಂಯತ್ಕೋಟಿತೀರ್ಥೇ। ಪ್ರಭಾವ ತೇಜಗತಾ। ಕೋಟಿ ಪುಣ್ಯಂ ಪ್ರದಾಯಿನಿ

ಯಿಂಥಾ ಕೋಟಿತೀರ್ಥಉಳ್ಳಂಥಾ ಶತಶೃಂಗಪರ್ವತವನ್ನು ಗರುಡದೇವರು ತಂದು ಗೋಕರ್ನದಲ್ಲಿ ಯಿಟ್ಟನು. ಯೀ ಶತಶೃಂಗಪರ್ವತದಲ್ಲಿ ಯಿರುವ ತೀರ್ಥದ ಮಹತ್ತು:

೧. ಯೀ ಶತಶೃಂಗಪರ್ವತ ಯೇಳುವರೆ ಕ್ರೋಶದ ವಿಸ್ತಾರಉ ಯಿಥೆ. ಯಿದರಲ್ಲಿ ಯಿರುವ ವನಗಳು: ಬ್ರಹ್ಮತೀರ್ಥದ ಮೊದಲಿಂದಾ ಗಂಗಾಧಾರಾತೀರ್ಥ ಪರಿಯಂತ್ರಉ 'ತಪೋವನ'ಯಂಬ ಹೆಸರು ಉಂಟು.

೧. ಯೀ ಬ್ರಹ್ಮತೀರ್ಥಕ್ಕೆ ಉತ್ತರ ದಿಕ್ಕಿನಲ್ಲು ಯಿರುವದು 'ಶ್ಲೇಷ್ಮಾತಕವನ'ಯೆಂಬ ಹೆಸರು ಉಂಟು, ಪಶ್ಚಿಮ ದಿಕ್ಕಿನಲ್ಲು ತಾಂಬ್ರಪರ್ಣಿನದಿ ಸಮುದ್ರ ಸಂಗಮ ಪರಿಯಂತಉ. ಪೂರ್ವ ಉತ್ತರದಲ್ಲಿ ತಾಂಬ್ರಪರ್ಣಿ ನದಿ ಸರಿಹದ್ದು ಮಾಡಿಕ್ಕೊಂಡು ಯಿದೆ. ದಕ್ಷಿಣದಲ್ಲಿ ಬ್ರಹ್ಮತೀರ್ಥ ಪರಿಯಂತ್ರಕ್ಕು ಯಿಥೆ.

---

೨ ಯೀ ಶ್ಲೇಷ್ಮಾತಕವನದಲ್ಲಿ ಯಿರುವ ಗೋಕರ್ಣೇಶ್ವರ ಯಿದ್ದಾನೆ. ಯೀ ಉಭಯ ವನಗಳು ವಿಶಿಷ್ಟವಾಗಿ ಶತಶೃಂಗಪರ್ವತಉ ಯಿಥೆ. ಯಿದರಲ್ಲಿ ಯಿರುವ ಮಹಾತ್ತು:

ತಪೋವನದಲ್ಲಿ ಯಿರುವ ತೀರ್ಥಗಳು ದೇವತೆಗಳು ಸಹಾ ಯೀ ವನದಲ್ಲಿ ಪರ್ವತದಿಂದಾ ಸಮುದ್ರದ ವಳಕ್ಕೆ ದುರ್ಮುಖಿಯಂಬ ಸರ್ಪವನ್ನು ಗೋಕರ್ಣೇಶ್ವರಕ್ಕೆ ನೈರುತಿಭಾಗದಲ್ಲಿ ಹೋಗಿ ಯಿದ್ದಾನೆ. ಯಿದಕ್ಕೆ ಗುತ್ತು[>ಗುರುತು] ಶಿಲೆಯಲ್ಲಿ ಸರ್ಪ ಹೊದಾಗಿ ಲಾಂಛನವನ್ನು ಸಮುದ್ರತೀರದಲ್ಲಿ ಪರಿಯಂತ್ರಕ್ಕು ಯಿಥೆ. ಯಿದಕ್ಕೆ ಮಣಿನಾಗನ ಅದ್ರಿಯಂಬ ಹೆಸರು ಉಂಟು.

ಯೀ ಉಭಯ ವನಉ ವಿಶಿಷ್ಟವಾಗಿ ಯಿರುವ ಶತಶೃಂಗಪರ್ವತಕ್ಕೆ ಗೋಕರ್ನಕ್ಷೇತ್ರಯಂಬ ನಾಮಧೇಯ ಉಂಟು.

ಯೀ ಕ್ಷೇತ್ರಕ್ಕೆ ಗಡಿ ಸರಹದ್ದು ಯಿರುವದು:

ಶ್ಲೋಕ॥ ಪೂರ್ವಂ ಸಿದ್ದಾಶ್ರಮಂ ಸೀಮಾ।ದಕ್ಷಿಣೆತ್ವಘನಾಶಿನೀ॥ಉತ್ತರೇ ಶಾಲ್ಮಲೀಗಂಗಾ। ಪಶ್ಚಿಮೇ ಲವಣಾಂಬುಧಿಃ॥ಸರ್ವಂ ಲಿಂಗಮಯಂ ಕ್ಷೇತ್ರಂ। ಸಂತಾನ ವರ್ತುಲಂ। ಪಂಚಕ್ರೋಶ ಪರೀಮಾಣಂ। ಗೋಕರ್ಣಂ ಕ್ಷೇತ್ರಮುತ್ತಮಂ॥ಸರ್ವಾಣ್ಯಶ್ಮಾನಿಲಿಂಗಾನಿ। ತೀರ್ಥಾನ್ಯಂ ಭಾತಿ ಸರ್ವಶಃ॥ ಬಹುನಾತ್ರ ಕಿಮುಕ್ತೇನ। ನಾತ್ರಕಾರ್ಯಾ ವಿಚಾರಣಾ॥ ಶಿವೈವ ತಸ್ಮಿನ್ ನಾನ್ಯೋಸ್ತಿ ದೃಶ್ಯಾದೃಶ್ಯೇನ ಸಂಸ್ಥಿತಃ॥

ತೀರ್ಥಗಳ ವಿವರ॥

೧ ಗೋಕರ್ನತೀರ್ಥ ಗುಡಿ ವಳಗೆ ಆದಿಗೊಕರ್ನೇಶ್ವರಸೋಮ[>ಸ್ವಾಮಿ]ಯವರು ತೀರ್ಥದ ವಳಗೆ ಯಿದ್ದಾರೆ. ಯಿದೆ ಗೋಕರ್ಣತೀರ್ಥ.

೧ ಗುಹತೀರ್ಥವೊಂದು ಯಿದು ಆದಿಗೋಕರ್ನ ಯಿಶ್ಯಾನ್ಯಭಾಗದಲ್ಲಿ ಗುಂಡಿನ ಹೆ[>ಎ]ಸಕೆ ಯಿದೆ, ಭೂಮಿಯಲ್ಲಿ ಕೊಳವಾಗಿ ಕಲ್ಲು ಕಟ್ಟಿ ಯಿಥೆ. ಯಿದ ಭೂಮಿಯೊಳಗೆ ಉತ್ಪತ್ತಿ.

ಯಲ್ಲಿ[>ಇಲ್ಲಿ] ಕೊಳಕಟ್ಟಿ ಯಿದ್ದಾರೆ, ಯಿದರ ವೊಳಗೆ ಯಿದೆ. ಯಿದು ಹರಿಯೊದು ಯಿಲ್ಲಾ.

೧ ಗೋಶೃಂಗಪರ್ವತದಲ್ಲಿ ತಾಂಬ್ರಪರ್ಣಿನದಿ ಉತ್ಪತ್ತಿ. ಯಿದು ಆದಿಗೋಕರ್ನಕ್ಕೆ ಯೀಶಾನ್ಯ ಭಾಗದಲ್ಲಿ ವೊಂದು ಚಿಕ್ಕ ಕ್ರೊಶಉ ಯಿದೆ. ಯೀ ಪರ್ವತದಲ್ಲಿ ಉತ್ಪತ್ತಿಯಾಗಿ ಪ್ರವಾಹಮುಖದಿಂದಾ ತಾಂಬ್ರಗೌರಿ ಅಮ್ಮಾನವರ ಗುಡಿ ಮುಂದೆ ಬಂದು ಉತ್ತರಮುಖವಾಗಿ ಪಶ್ಚಿಮದಲ್ಲಿ ಸಮುದ್ರ ಪ್ರವೇಶ ಆಗಿ ಯಿದೆ. ಯಿದು ನದಿ ತಾಂಬ್ರಪರ್ಣಿಯಂಬ ಹೆಸರು.

೧ ಗಾಯತ್ರಿತೀರ್ಥ ಆದಿಗೋಕರ್ನಕ್ಕೆ ಆಗ್ನೇಯ ಭಾಗದಲ್ಲಿ ನೂರು ಮಾರು ಮೇಲೆ ಭೂಮಿವಳಗೆ ಕೊಳವಾಗಿ ಯಿಧೆ; ಪ್ರವಾಹವಿಲ್ಲಾ.

೧ ಬ್ರಹ್ಮತೀರ್ಥಯಂಬವದು ಆದಿಗೋಕರ್ನಕ್ಕೆ ದಕ್ಷಿಣಭಾಗದಲ್ಲಿ ನೂರು ಮಾರು ವಳಗೆ ಯಿಧೆ. ಯಿದು ಕೊಣ[>ಕೊಳ]ವಾಗಿ ಯಿಧೆ; ಪ್ರವಾಹವಿಲ್ಲಾ.

೧ ಯೀ ಬ್ರಹ್ಮಕೋಣದ[>ಕೊಳದ]ದಕ್ಷಿಣದಲ್ಲಿ ಸಮೀಪದಲ್ಲಿ ವಿಶ್ವಾಮಿತ್ರತೀರ್ಥಉ ಯಿಧೆ.

೧ ಸರಸ್ವತಿತೀರ್ಥ ಆದಿಗೋಕರ್ನಕೆ ದಕ್ಷಿಣದಲ್ಲಿ ೫೩ ಕೊಣವಾಗಿ[>ಕೊಳವಾಗಿ] ಯಿಧೆ. ಭೂಮಿ ಮೇಲೆ.

೧ ಆದಿಗೊರ್ಕನದ ಪಶ್ಚಿಮಭಾಗದಲ್ಲಿ ತಾಂಬ್ರಗೌರೀನದಿ ಸಮುದ್ರಸಂಗಮವಾಗಿ ಯಿರುವದು, ಗಂಗಾಸಾಗರ ಸಂಗಮವೆಂಬ ಹೆಸರು ಉಂಟು. ಆದಿಗೋಕರ್ನಕ್ಕೆ ಮೂವತ್ತುಮೂರು ವಳಗೆ ಸಮಯದಲ್ಲೆ ಯಿಧೆ.

೧ ಚಕ್ರತೀರ್ಥ ಆದಿಗೋಕರ್ನಕ್ಕೆ ಉತ್ತರ ಭಾಗದಲ್ಲಿ ಭೂಮಿ ಮೇಲೆ ವೊಂದು ಕೋಸು[>ಕ್ರೋಶ] ಅರ್ದಉ ಯಿಧೆ. ಯಿದು ಕೊಳವಾಗಿ ಯಿಧೆ, ಕಲ್ಲು ಕಟ್ಟಲಿಲ್ಲಾ.

೧ ಕಪಿಲತೀರ್ಥಉ ಚಕ್ರತೀರ್ಥಕ್ಕೆ ಸಮೀಪವಾಗಿ ಆದಿಗೋಕರ್ನದ ಉತ್ತರಭಾಗದಲ್ಲಿ ಅರ್ದ ಕೊಸು[>ಕ್ರೋಶ] ಯಿಧೆ. ಭೂಮಿ ಮೇಲೆ ಕೊಳವಾಗಿ ಯಿಧೆ; ಪ್ರವಾಹಉ ಯಿಲ್ಲಾ.

೧ ಅರಣ್ಯತೀರ್ಥಉ ಆದಿಗೋಕರ್ನಕ್ಕೆ ಉತ್ತರದಿಕ್ಕು ವೊಂದು ಕೊಸು[>ಕ್ರೋಶ] ಯಿದೆ. ಕಪಿಲತೀರ್ಥಕ್ಕೆ ಸಮೀಪದಲ್ಲಿ ಅದೃಶ್ಯವಾಗಿ ಯಿದೆ. ಪುರಾಣಪ್ರತ್ಯಾಕ್ಷವೇ ಹೊರ್ತು ಪ್ರತ್ಯಕ್ಷವಿಲ್ಲಾ. ಯಿದು ಸ್ಥಳ ಸಹಿತ ಗೊತ್ತು ಕಾಂಬೊದು ಯಿಲ್ಲಾ.

೧ ಅಗ್ನಿತೀರ್ಥವು ಆದಿಗೋಕರ್ನಕ್ಕೆ ಯೀಶಾನ್ಯ ಭಾಗದಲ್ಲಿ ಅರ್ಧ ಕೋಸು[>ಕ್ರೋಶ] ಯಿದೆ, ಗೋಶೃಂಗಪರ್ವತದಲ್ಲಿ ಹುಟ್ಟಿಯಿದೆ; ಅದೃಶ್ಯವಾಗಿ ಯಿಧೆ.

೧ ವಿನಾಯಕತೀರ್ಥಉ ಆದಿಗೋಕರ್ನಕ್ಕೆ ಉತ್ತರ ಭಾಗದಲ್ಲಿ ಪಾಉ ಕೊಸು[>ಕ್ರೋಶ]ವಳಗೆ, ಭೂಮಿ ಮೇಲೆ ಕೊಣ[>ಕೊಳ]ವಾಗಿ ಯಿಧೆ.

೧ ಕುಬೇರತೀರ್ಥಉ ಸ್ಥಾನಾಗೊತ್ತುಯಿಲ್ಲ. ಪುರಾಣಪ್ರಸಿದ್ಧಿಯಾಗಿ ಅದೃಶ್ಯವಾಗಿ ಯಿಧೆ.

೧ ನಾರದತೀರ್ಥಉ ಅದೃಶ್ಯವಾಗಿ ಪುರಾಣಸಿದ್ಧವಾಗಿ ಯಿಧೆ. ಗೊತ್ತು ಯಿಲ್ಲಾ.

೧ ಸಂವರ್ತಕವಾಪಿಯೆಂಬ ತೀರ್ಥಉ ಆದಿಗೋಕರ್ನಕ್ಕೆ ಸ್ವಲ್ಪ ಯಿಶಾನ್ಯ ಕೂಡಿದ ಪೂರ್ವಭಾಗಕ್ಕೆ ಯಿನ್ನೂರು ಮಾರು ಮೇಲೆ, ಭೂಮಿ ಮೇಲೆ ಭಾವಿಯಾಗಿ ಯಿಧೆ, ಯಿದಕ್ಕೆ ಸಂವರ್ತಕವಾಪಿಯೆಂಬ ಹೆಸರು ಉಂಟು.

೧ ಆದಿತ್ಯತೀರ್ಥಉ ಆದಿಗೋಕರ್ನಕ್ಕೆ ಮೂರು ಮಾರು ಮೇಲೆ ಪೂರ್ವಭಾಗಕ್ಕೆ ಯಿಧೆ. ಭೂಮಿ ಮೇಲೆ ಕೊಳವಾಗಿ ಯಿಧೆ.

೧ ಮಾರ್ಕಾಂಡೇಯತೀರ್ಥ ಆದಿಗೋಕರ್ನಕ್ಕೆ ಪೂರ್ವಭಾಗ ನೂರು ಮಾರು ಮೇಲೆ, ಆದಿತ್ಯತೀರ್ಥಕ್ಕೆ ಸಮೀಪದಲ್ಲಿ ಭೂಮಿ ಮೇಲೆ ಕೊಳವಾಗಿ ಯಿಧೆ.

೧ ದುರ್ಗಾಕೊಂಡವೆಂಬ ತೀರ್ಥ ಆದಿಗೋಕರ್ನಕ್ಕೆ ಆಗ್ನೆಯಭಾಗದಲ್ಲಿ ನೂರು ಮಾರು ಮೇಲೆ ಯಿದೆ. ಕೊಳವಾಗಿ ಯಿಧೆ.

೧ ಕೋಟಿತೀರ್ಥಉ ಆದಿಗೋಕರ್ನಕ್ಕೆ ಯಿನ್ನೂರು ಮಾರು ಮೇಲೆ ಭೂಮಿ ಮೇಲೆ ದೊಡ್ಡ ಕೊಳವಾಗಿ ಯಿಧೆ. ಯಿದಕ್ಕೆ ತಟಾಕಯಂಬದು ಹೇಳುತ್ತಾ ಯಿದ್ದಾರೆ. ಯಿದರ ವಳಗೆ ಸಮಸ್ತಜನರು ಸ್ನಾನಾದಿಗಳು ಮಾಡುವದು. ಯಿದು ಹರಿಯುತ್ತಾ ಯಿಧೆ. ಯಿದು ತಾಂಬ್ರಪರ್ಣಿ ನದೀ ವಳಗೆ ಕಲತು ಸಮುದ್ರಗಾಮಿನಿಯಾಗಿ ಯಿಧೆ. ಯಿದಕ್ಕೆ ಕಲ್ಲು ಕಟ್ಟಿಯಿದ್ದಾರೆ. ಚತುಶ್ರಮವಾಗಿ ಕೂಗಿದರೆ ಕೆಳಗೆ ಯಿದ್ದಷ್ಟು ದೊಡ್ಡದಾಗಿ ಯಿಧೆ.

೧ ಮು[>ಉ]ನ್ಮಜ್ಜನತೀರ್ಥ. ಆದಿಗೋಕರ್ನಕ್ಕೆ ಪಾಉ ಕೋಸು[>ಕ್ರೋಶ] ಮೇಲೆ ಪೂರ್ವ ಜಾಗಕ್ಕೆ ಯಿದೆ. ಯಿದು ಭೂಮಿ ಮೇಲೆ ಪ್ರವಾಹ ಉತ್ಪತ್ತಿ ಆಗಿ, ಕೋಟಿತೀರ್ಥದ ಪ್ರವಾಹದಲ್ಲಿ ಕಲತು, ಪ್ರವಾಹದಿಂದಾ ತಾಂಬ್ರಪರ್ಣಿ ನದಿವೊಳಗೆ ಕೂಡಿ ಸಮುದ್ರಗಾಮಿನಿ ಆಗುತ್ತಾ ಯಿದೆ.

೧ ವೈತರುಣೀ[>ವೈತರಣೀ] ತೀರ್ಥವು ಉನ್ಮಬ್ಬ[>ಜ್ಜ] ನಿತೀರ್ಥಕ್ಕೆ ಸಮೀಪದಲ್ಲಿ ಯಿದೆ. ಯಿದು ಕಲ್ಲು ಕಟ್ಟಿಸಿ ಕೂಪವಾಗಿ ಯಿಧೆ. ಯಿದೆ ಪ್ರವಾಹವಾಗಿ ಹರಿತಾ ಯಿಧೆ. ಯಿದಕ್ಕೆ ವೈತರಣೀನದಿಯೆಂಬ ಹೆಸರು ಉಂಟು.

೧ ಅಶೋಕಾಪಂಚಕತೀರ್ಥಉ. ಯೀ ಆಯಿದು ತೀರ್ಥಉ ವೊಂದು ಕಡಿಯಲ್ಲಿ ಉತ್ಪತ್ತಿಯಾಗಿ ಯಿಧೆ. ಆದಿಗೋಕರ್ನಕ್ಕೆ ಆಗ್ನೇಯಭಾಗದಲ್ಲಿ ಕೋಸು[>ಕ್ರೋಶ]ಪರಿಮಾಣ ಶತಶೃಂಗಪರ್ವತಕ್ಕೆ ಕೆಳಗೆ ಯಿದೆ. ಕಲ್ಲು ಕಟ್ಟಿ ಕೊಣರುವಕ[>ಕೊಳ ರೂಪಕ]ವಾಗಿ ಯಿಧೆ.

೧ ಗಂಗಾಧಾರಾಯಂಬೊ ತೀರ್ಥಉ ಆದಿಗೋಕರ್ನಕ್ಕೆ ಆಗ್ನೇಯಭಾಗದಲ್ಲಿ ಅರ್ಧಕೋಸು[>ಕ್ರೋಶ]ಮೇಲೆ ಪರ್ವತ ಪ್ರಾಂತ್ಯದಲ್ಲಿ ಅರ್ಧ ಪಾರರ್ಶ[>ಪ್ರಾಂತ್ಯ] ಶತಶೃಂಗಪರ್ವತಕ್ಕೆ ಯಿದೆ. ಯಿದ್ದು ಅಲ್ಲಿಂದಾ ಪ್ರವಾಹ ರೂಪಕವಾಗಿ ಕೋಟಿತೀರ್ಥಕ್ಕೆ ಬಂದು ಸಂಗಮವಾಗುತ್ತಾ ಯಿಧೆ.

೧ ಯೀ ಗಂಗಾಧಾರಾಕ್ಕೆ ಸಮೀಪದಲ್ಲಿ ಭೀಮಕುಂಡಯೆಂಬ ತೀರ್ಥಉ ಯಿದೆ. ಶತಶೃಂಗಪರ್ವತಕ್ಕೆ ಅರ್ಧಪ್ರಾಂತ್ಯ ಭಾಗದಲ್ಲಿ ಉತ್ಪತ್ತಿಯಾಗಿ ಯಿಧೆ. ಯಿದು ತಟಾಕವಾಗಿ ಕಟ್ಟಿ ಯಿದ್ದಾರೆ.

೧ ಅಗಸ್ತ್ಯತೀರ್ಥ ಆದಿಗೋಕರ್ಣಕ್ಕೆ ಆಗ್ನೇಯಭಾಗದಲ್ಲಿ ಕೋಟಿತೀರ್ಥಕ್ಕೆ ಸಮೀಪದಲ್ಲಿ ಭೂಮಿ ಮೇಲೆ ಉತ್ಪತ್ತಿ ಆಗಿ ಯಿಥೆ. ಯಿದು ಕೊಳವಾಗಿ ಕಲ್ಲು ಕಟ್ಟಿ ಯಿಥೆ.

ವಶಿಷ್ಟತೀರ್ಥ ಆದಿಗೋಕರ್ಣಕ್ಕೆ ಆಗ್ನೇಯದಿಕ್ಕಿನಲ್ಲು ಕೋಟಿತೀರ್ಥದ ಮೇಲುಗಡೆಯಲ್ಲಿ ವಾಪೀರೂಪವಾಗಿ ಯಿಥೆ.

೧ ಗರುಡತೀರ್ಥ ಆದಿಗೋಕರ್ಣಕ್ಕೆ ಪೂರ್ವಭಾಗದಲ್ಲಿ ಕೋಟಿತೀರ್ಥದವೊಳಗೇ ಯಿಥೆ.

೧ ಮಾಲಿನೀನದಿ ಆದಿಗೋಕರ್ಣಕ್ಕೆ ದಕ್ಷಿಣದ ಭಾಗದಲ್ಲಿ ವೊಂದು ಕೋಸು[>ಕ್ರೋಶ] ಮೇಲೆ ಶತಶೃಂಗಪರ್ವತ ಪ್ರಾಂತ್ಯದಲ್ಲಿ ಸಮುದ್ರಸಮೀಪವಾಗಿ ಯಿಥೆ. ಯಿದು ಸ್ವೇತಬ[>ಜ]ಲ, ಯಿಂದ ಪಾನ ಮಾಡಿದವರಿಗೆ ಬ್ರಾಹ್ಮಣ ವರ್ಜಿತಯಂಬದಾಗಿ ಪುರಾಣಪ್ರಸಿದ್ಧಿಯಾಗಿ ಯಿಥೆ. ಅದೃಶ್ಯವಾಗಿ ಯಿಥೆ.

೧ ಶಿಂಶುಮಾರತೀರ್ಥ ಆದಿಗೋಕರ್ಣಕ್ಕೆ ದಕ್ಷಿಣಭಾಗದಲ್ಲಿ ವೊಂದು ಕೋಸು[>ಕ್ರೋಶ] ಮೇಲೆ ಶತಶೃಂಗಪರ್ವತ ದಕ್ಷಿಣ ನಿತಂಬದಲ್ಲಿ ಸಮುದ್ರಸಮೀಪದಲ್ಲಿ ಕಲ್ಲು ವಳಗೆ ಯಿಂದಾ ಧಾರಾಪೂರ್ವಕವಾಗಿ ಯಿಥೆ. ಯಿದಕ್ಕೆ ಬಲ್ಲಾಳರಾಯ ಹೋಗಿ ಅಲ್ಲಿ ಮೃತವಾದ ಕಾರಣ ಬಲ್ಲಾಳತೀರ್ಥಯೆಂಬ ಹೆಸರು ಉಂಟು. ಯಿದಕ್ಕೆ ಹೋಗುವದು ಬಹು ಸಂಕಟವಾಗಿ ಯಿವೊ[>ದೆ]. ಪರ್ವತ ಯಿಳದು ಹೋಗಬೇಕು.

೧ ಶತಬಿಂದು ಸಹಸ್ರಬಿಂದು ಯಂಬವದಕ್ಕೆ ಆತ್ರೆಯತೀರ್ಥಯೆಂಬ ಹೆಸರು ಉಂಟು. ಯಿದಕ್ಕೆ ಯೇಕಬಿಂದು ದ್ವಿಬಿಂದು ಶತಬಿಂದು ಸಹಸ್ರಬಿಂದು ಯೆಂಬ ಹೆಸರು ಉಂಟು. ಯಿದು ಆದಿಗೋಕರ್ಣಕ್ಕೆ ದಕ್ಷಿಣಭಾಗದಲ್ಲಿ ಶತಶೃಂಗಪರ್ವತಕ್ಕೆ ನಿತಂಬಭಾಗದಲ್ಲಿ ಕಲ್ಲುವಳಗೆಯಿಂದಾ ಬಿಂದುರೂಪಕವಾಗಿ ಬೀಳುತ್ತಾ ಯಿದೆ. ಯಿದು ಸಮುದ್ರಸಮೀಪದಲ್ಲಿ ಯಿದೆ. ಯಿದಕ್ಕೆ ಹೋಗುವದು ಕಠಿಣವಾಗಿ ಯಿಥೆ. ಪರ್ವತ ಯಿಳಿದು ಹೋಗಬೇಕು. ಯಿದು ವೊಂದೇ ಕಡೆಯಲ್ಲಿ ಉತ್ಪತ್ತಿಯಾಗಿ ಯಿಥೆ.

೩೩

ಯೀ ಮೂವತ್ತು ಮೂರು ತೀರ್ಥಗಳು ಪುರಾಣಪ್ರಸಿದ್ಧಿಯಾಗಿ ನಾಯಕತೀರ್ಥಯೆಂಬ ಹೆಸರುಗಳು ಉಂಟು. ಯಿದು ವೊಂದು ಕೋಟಿಗೆ ವೊಂದು ತೀರ್ಥ ಯಂಬದಾಗಿ ಮೂವತ್ತು ಮೂರು ಕೋಟಿಗು ಮೂವತ್ತು ಮೂರು ತೀರ್ಥಂಗಳು ಉಂಟು.

ಯಿದು ಹೊರ್ತಾಗಿ ವಿಶೇಷತೀರ್ಥಗಳು ಯಿರುವದು:

೧ ನಾದತೀರ್ಥಯೆಂಬುವದು ಆದಿಗೋಕರ್ಣಕ್ಕೆ ಪೂರ್ವಭಾಗದಲ್ಲಿ ಯಿನ್ನೂರು ಮಾರು ಮೇಲೆ ಅದೃಶ್ಯವಾಗಿ ಯಿಥೆ.

೧ ಗೋಗರ್ಭ ಸ್ಥಾನವಾಗಿ ಪರ್ವತದ ಮೇಲೆ ಯಿದೆ.

೧ ಕಮಂಡಲತೀರ್ಥ ಯಿಲ್ಲೆ ಯಿಥೆ. ದಕ್ಷಿಣಭಾಗ ಕೋಸು[>ಕ್ರೋಶ].

೧ ಉಮಾಹ್ರದಯಂಬ ತೀರ್ಥ ಆದಿಗೋಕರ್ನಕ್ಕೆ ದಕ್ಷಿಣಭಾಗ ವೊಂದು ಕೊಸು[>ಕ್ರೋಶ] ಮೇಲೆ ಯಿದೆ. ಪರ್ವತಪ್ರಾಂತ್ಯ.

೧ ಜಟಾತೀರ್ಥ ಆದಿಗೋಕರ್ನಕ್ಕೆ ದಕ್ಷಿಣಭಾಗದಲ್ಲಿ ಅರ್ಧ ಕೋಸು[>ಕ್ರೋಶ] ಮೇಲೆ ಪರ್ವತಪ್ರಾಂತ್ಯವಾಗಿ ಜಟಾಧಾರಿಯಾಗಿ ಯಿಥೆ.

೧ ರಾಮತೀರ್ಥ ಗೋಕರ್ನಕ್ಕೆ ದಕ್ಷಿಣಭಾಗ ಪರ್ವತಪ್ರಾಂತ್ಯ ಸಮುದ್ರತೀರದಲ್ಲಿ ಯಿಥೆ. ಸಮೀಪ ಪಾಉ ಕೋಸು[>ಕ್ರೋಶ] ವಳಗೆ ಯಿಥೆ.

---

೬ ಯಿದು ವಿಶೇಷತೀರ್ಥಗಳು.

ನದಿ ಯಿರುವದು:

೧ ಅಘನಾಶಿನೀನದಿ ಸಮುದ್ರಸಂಗಮದಲ್ಲಿ ಆದಿಗೋಕರ್ನಕ್ಕೆ ದಕ್ಷಿಣಭಾಗದಲ್ಲಿ ಯಿದೆ, ಕೊಸು[>ಕ್ರೋಶ] ಮೇಲೆ.

೧ ಶಾಲೂಕಿನದಿ ಆದಿಗೋಕರ್ನಕ್ಕೆ ಉತ್ತರಭಾಗದಲ್ಲಿ ಯಿಥೆ. ಉತ್ಪತ್ತಿ ತಿಳಿಯದು, ಕೊಸು[>ಕ್ರೋಶ] ಮೇಲೆ ಯಿಥೆ.

೧ ತಾಂಬ್ರಪಣಿನದಿ ಆದಿಗೋಕರ್ನದಲ್ಲಿ ಸಮುದ್ರ ಸಂಗಮ ಆಗಿಯಿದೆ.

೧ ವೈತರಣಿನದಿ ಪೂರ್ವದಲ್ಲಿ ಬರುತಾ ಯಿದೆ.

೪ ಯಿ ನದಿಗಳು ಸಮುದ್ರ ಸಂಗಮವಾಗಿ ಯಿಥೆ.

ಯೀಶ್ವರನ ಸ್ಥಳಗಳು:

೧ ಮಹಾಬಲೇಶ್ವರಸ್ವಾಮಿಯವರು ಯೀಶ್ವರಸ್ವಾಮಿಗೆ ಪ್ರಾಣಭಂಗ[>ಲಿಂಗ]ವಾಗಿ ಯಿರುವದು. ರಾವಣಾಸುರನ ಕಡೆಯಿಂದ ಮಾಡಿ ಯಿಶ್ವರನ ವರಪ್ರಸಾದದಿಂದ ಪ್ರಾಣಲಿಂಗ ಕೊಟ್ಟ ಕಾರಣ ಯೀ ಲಿಂಗ ಕೆಳಗೆ ಯಿಟ್ಟರು. ನಿನ್ನ ಸ್ವಾಧೀನ ಬರುವದಿಲ್ಲಾ"ಯೆಂದು ಹೇಳಲಿಕ್ಕೆ ಅದೆ ಮೇರೆ ತೆಗೆದುಕ್ಕೊಂಡು ಬರುತ್ತಾ ಯಿರಲಿಕ್ಕೆ, ಸಾಯಂಕಾಲಕ್ಕೆ ಪಶ್ಚಿಮಸಮುದ್ರ ಸಮೀಪದಲ್ಲಿ ಯಿರುವ ಗೋಕರ್ನಕ್ಕೆ ಬಂದ ಕಾರಣ ಯಿಲ್ಲಿ ವಟ್ಟು[>ವ್ಯಕ್ತ]ರೂಪವಾಗಿ ದೇವತೆಗಳ . . . . ಯಿಂದಾ ಬಂದು ಯಿಲ್ಲಿ ವಿಘ್ನೇಶ್ವರ ಬರಲಿಕ್ಕೆ ಯೀತನ ಕೈಯಲ್ಲು ರಾವಣಾಸುರನು ಕೊಟ್ಟ ಕಾರಣ, ಯೀತನು ಹಿಡಿಯಲಾರದೆ "ತ್ರಿವರ್ತ[>ರ್ತಿ] ಕರೆಯಲಿಕ್ಕೆ . . . . ಸರಿ, ಯಿಲ್ಲದಿದ್ದರೆ ನಾನು ಕೆಳಕ್ಕೆ ಯಿಟ್ಟು ಹೋಗತೀನಿ" ಯಂಬದಾಗಿ ಹೇಳಿದ್ದರಿಂದ ಅದೇ ಮೇರೆಗೆ ವಡಂಬಟ್ಟು ಸಂಧ್ಯಾವಂದನೆ ಮಾಡುವ ಬಗ್ಯೆ ಸಮುದ್ರ ಬಳಿಯ ಹೋದನು. ಯಿಷ್ಟರ ವೊಳಗೆ ಸಂಧ್ಯಾವಂದನೆ ಆರಂಭವನ್ನು ಮಾಡುವ, ಯಿಷ್ಟರವೊಳಗೆ ತ್ರಿವರ್ತಿ ಕರದು ಯೀ ಲಿಂಗವನ್ನು ಅಲ್ಲಿ ಯಿಟ್ಟನು. ಅನಂತರದಲ್ಲಿ ವಿಘ್ನೇಶ್ವರದೇವರು ಅಂತರ್ಧಾನರಾದರು. ಆಮೇಲೆ ರಾವಣಾಸುರನು ಬಂದು ಯೀ ಲಿಂಗವನ್ನು ಯಿ[>ಹಿ]ಡಿದು ಕೀಳಲಿಕ್ಕೆ ಯೀ ಲಿಂಗ ಬಾರದೆ ಬಲವಾಗಿ ಯಿದ್ದದರಿಂದಾ, ಯೀ ರಾವಣಾಸುರನು ಹರಕೊಂಡು ಬಿದ್ದನು. ಯಿವನಿಗೆ ಕಿವಿ ಮೂಗಿನಲ್ಲು ರಕ್ತ ಬಂದು ಬಹುಶ್ರಮ ಬಿದ್ದು ತಲೆಕೆಳಗಾಗಿ

ಬಿದ್ದನು. ಅನಂತರದಲ್ಲಿ ಯೀ ಲಿಂಗ ಅಸಾಧ್ಯವಾಯಿತು – ಯೆಂಬುದಾಗಿ ನಿರ್ವಾಹವಿಲ್ಲದೆ ರಾವಣಾಸುರನು ಲಂಕಾದ್ವೀಪಕ್ಕೆ ಹೋದನು. ಅನಂತರದಲ್ಲಿ ಸಮಸ್ತದೇವತೆಗಳು ಬಂದು ಮಹಾಬಲಯೆಂಬ ಹೆಸರು ಯಿಟ್ಟು, ಸಮಸ್ತರೂ ಪೂಜೆ ಮಾಡಿ, ಯೀ ಮಹಾಬಲೇಶ್ವರಸ್ವಾಮಿಯಿಂದಾ ಅನೇಕ ವರಗಳನ್ನು ಪಡಕೊಂಡು ತಮ್ಮ ತಮ್ಮ ಮನಸ್ಸಿಗೆ ತಕ್ಕ ಸ್ಥಳವನ್ನು ನೋಡಿಕ್ಕೊಂಡು ಗೋಕರ್ನದಲ್ಲೆ ವಾಸ ಮಾಡಿಕ್ಕೊಂಡು ಯಿದ್ದರು. ಯೀ ಲಾಗಾಯಿತು ಯಿಂದಾ ಮಹಾಬಲೇಶ್ವರದೇವರುಯಂಬ ಹೆಸರು ಉಂಟು. ಯಿದು ಮಹಾಕ್ಷೇತ್ರ. ಸಕಲದೇಶದಿಂದ ಬಂದು ಯೀ ಸ್ವಾಮಿದರುಶನವನ್ನು ಮಾಡಿಕ್ಕೊಂಡು ಪುಣ್ಯವನ್ನು ಸಂಪಾದಿಸಿಕ್ಕೊಂಡು ಹೋಗುತ್ತಾ ಯಿದ್ದಾರೆ ॥ಶ್ಲೋಕ॥ ದೃಷ್ಟ್ವಾವಾದಿವ್ಯ। ಲಿಂಗಂಚ । ಶೃತ್ವಾವಾ ಸಾಗರ ಧ್ವನಿಂ। ಕೋಟಿತೀರ್ಥೇನರಸ್ನಾತ್ವಾ ಪುನರ್ಜನ್ಮ ನ ವಿದ್ಯತೇ॥ ಇಲ್ಲಿ ಲಿಂಗಗಳು ಯಿರುವದು ೩೩ ಯಿದೆ. ॥ಶ್ಲೋಕ॥ ಮಹೇಶ್ವರಂ ಕುಮಾರೇಶಂ। ಸಂವರ್ತೇಶಂಕಳಂಕಳಂ॥ ಸನತ್ಕುಮಾರಂ ಕೌಮಾರಂ। ವಾರುಣ್ಯಂ ಸೂರ್ಯನಾಯಕಂ॥ ಮಾರ್ಕಂಡೇಯಂ ಧರ್ಮ್ಮಶಿಖಾಶಾಸ್ತ್ರಂ। ಸರ್ವೇಶ್ವರಂ ತಥಾ। ರಸಲಿಂಗಂ ಭಾವಲಿಂಗಂ ಸಾವಿತ್ರಂ ವಾರುಣಂ ತದಾ । ಕೌಶಿಕಂ ಕಾಮದಹನಂ ನಾದೇಶ್ವರ ಮಧೋವನಃ। ಭರದ್ವಾಜಂ ತದಾ ಚೌ ಮೌಸಾಮಿತ್ರಂ ಚ ಗಣೇಶ್ವರಂ। ಅಗಸ್ತ್ಯಂ ನಾರದೀಯಂಚ ಸೌವರ್ಣಂ ಚ ವಿನಾಯಕಂ। ಮಾಹೇಂದ್ರಂ ಮಧುಪರ್ಕೇಶಂ। ನಾರಾಯಣಮಿತಿಸ್ಮಹ। ಸ್ಥಾನೇಶ್ವರಂ ಪಂಚಭೂತಂ ಮಹಾಬಲಮತಿಪ್ರಭೋ। ತ್ರಯಸ್ತ್ರೀಶ್ಯನ್ಮಹಾಲಿಂಗ ನಾಯಕಾಕೋಟಿರೇತತಃ। ಕ್ಷಿಪ್ರ ಪ್ರಸಿದ್ಧಿ ಕರುಣ್ಯಾ ಹುಃ ಸರ್ವಾಣಿ ನೃಪಸತ್ತದು॥೩॥ ಲಿಂಗಲು ಯಿದಕ್ಕೆ ವಿವರ :

೧ ಮಹಾಬಲೇಶ್ವರದೇವಸ್ಥಾನದಲ್ಲಿ ಯಿರುವದು ಆದಿಗೋಕರ್ನೇಶ್ವರ ದೇವಸ್ಥಾನ॥ ಯೀತ ಬಲದ ವಳಗೆ ಯಿದ್ದಾನೆ.

೧ ಕುಮಾರೇಶ್ವರ ಮಹಾಬಲೇಶ್ವರದೇವಸ್ಥಾನಕ್ಕೆ ಉತ್ತರಭಾಗದಲ್ಲಿ ನೂರು ಮಾರು ಮೇಲೆ ಯಿಧೆ.

೧ ಸಂವರ್ತಕೇಶ್ವರ ಮಹಾಬಲೇಶ್ವರ ದೇವಸ್ಥಾನಕ್ಕೆ ಪೂರ್ವಭಾಗದಲ್ಲು ಮಾರು ೫೩ ಮೇಲೆ ಯಿಧೆ.

೧ ಕಳಂಕಳೇಶ್ವರ ಮಹಾಬಲೇಶ್ವರಗೆ ಪಾಲು ಕೊಸು[>ಕ್ರೋಶ] ಯಿಧೆ ಉತ್ತರ.

೧ ಸನತ್ಕುಮಾರ ಮಹಾಬಲಗೆ ಉತ್ತರ ದಿಕ್ಕಿಗೆ ಕೊಸು[>ಕ್ರೋಶ]೧.

೧ ಕೌಮಾರೇಶ್ವರ ಅದೃಶ್ಯವಾಗಿ ಯಿಧೆ, ಉತ್ತರದಲ್ಲಿ.

೧ ವಾರಣೇಶ್ವರ ದಕ್ಷಿಣದಿಕ್ಕು ಮೇಲೆ ಯಿಧೆ.

೧ ಸೂರ್ಯನಾಯಕೇಶ್ವರ ಪೂರ್ವಭಾಗಕ್ಕೆ ನೂರು ಆಯಿವತ್ತು ಮಾರು ಮೇಲೆ ಯಿದೆ.

೧ ಮಾರ್ಕಂಡೇಶ್ವರ ಪೂರ್ವಭಾಗ ಯಿನ್ನೂರು ಮಾರು ಯಿಧೆ.

೧ ಧರ್ಮೇಶ್ವರ ಪೂರ್ವಭಾಗ ನೂರು ಐವತ್ತು ಮಾರು ಯಿಧೆ.

೧ ಶಾಸ್ತ್ರೇಶ್ವರ ಯಿದಕ್ಕೆ ಸಾಕ್ಷೇಶ್ವರ ಯಂಬ ಹೆಸರು ಉಂಟು. ಮಹಾಬಲೇಶ್ವರ ದೇವಸ್ಥಾನದ ವಳಗೆ ಉತ್ತರಭಾಗಕ್ಕೆ ಯಿದೆ.

೧ ಶರ್ವೇಶ್ವರ ಅದೃಶ್ಯವಾಗಿ ಯಿಧೆ.

೧ ರಸಲಿಂಗ ಅದೃಶ್ಯವಾಗಿ ಯಿಧೆ.

೧ ಭಾವಲಿಂಗ ಅದೃಶ್ಯವಾಗಿ ಯಿದೆ.

೧ ಸಾವಿತ್ರೇಶ್ವರ ಮಹಾಬಲಗೆ ಆಗ್ನೇಯದಲ್ಲಿ ನೂರಾ ಆಯಿವತ್ತು ಮಾರು ಮೇಲೆ ಯಿಧೆ.

೧ ಗಣೇಶ್ವರ ಉತ್ತರಭಾಗಕ್ಕೆ ಪಾಉ ಕೊಸು[>ಕ್ರೋಶ] ಯಿಧೆ. ಚತುರ್ಬುಜೆ ಗಣಪತಿ ಆಗಿ ಯಿಧೆ.

೧ ಅಗಸ್ತ್ಯೇಶ್ವರ ಪೂರ್ವಭಾಗದಲ್ಲಿ ಕೋಟಿತೀರ್ಥ ಮೇಲೆ ಯಿಧೆ. ಯಿನ್ನು ಮಾರು ಯಿಧೆ.

೧ ನಾರದೇಶ್ವರ ಅದೃಶ್ಯವಾಗಿ ಯಿಧೆ.

೧ ಸಾವರ್ಣ ಯೆಂಬವನು ಗರುಡೇಶ್ವರ ಪೂರ್ವಭಾಗಕ್ಕೆ ಕೋಟಿತೀರ್ಥ ಮೇಲೆ ಯಿದೆ.

೧ ವಿನಾಯಕೇಶ್ವರ ಪೂರ್ವ ಯಿನ್ನೂರ ಆಯಿವತ್ತು ಮಾರು ಮೇಲೆ ಯಿದೆ.

೧ ಮಹೇಂದ್ರೇಶ್ವರ ದಕ್ಷಿಣಭಾಗ ಮಾರು ೫೦ ಯಿಧೆ.

೧ ಮಧುವಕೇಶ್ವರ ಉತ್ತರದಲ್ಲಿ ಪಾಉ ಕೊಸು[>ಕ್ರೋಶ] ಮೇಲೆ ಯಿಧೆ.

೧ ನಾರಾಯಣೇಶ್ವರ ಯಿದಕ್ಕೆ ಶಂಕರನಾರಾಯಣಯೆಂಬ ಹೆಸರು, ಪೂರ್ವಭಾಗ ೨೦೦ ಮಾರು.

೧ ಸ್ಥಾನೇಶ್ವರಕ್ಕೆ ಪಂಚಸ್ಥಾನೇಶ್ವರಯೆಂಬ ಹೆಸರು. ಆಗ್ನೇಯಕ್ಕೆ ನೂರು ಮಾಡು ಯಿದೆ. ವಿವರ: ಗಣಪತಿ ದುರ್ಗ ಸೂರ್ಯ ವಿಷ್ನು ಯೀಶ್ವರ ಯೀ ಆಯಿದು ಯಿದೆ. ಯಿದಕ್ಕೆ ಪಂಚಸ್ಥಾನಾ.

೧ ಮಹಾಬಲೇಶ್ವರಸ್ವಾಮಿ ರಾವಣಾಸುರ ತಂದದ್ದು, ವಿಘ್ನೇಶ್ವರ ಪ್ರತಿಷ್ಟೆಯಿದು. ಯೀಶ್ವರ ಪ್ರಾಣಲಿಂಗಉ. ಯಿದು ಪಶ್ಚಿಮಮುಖ ಯಿದೆ.

---

೩೩ ಯಿದು ಪುರಾಣದಲ್ಲಿ ಯಿರುವದು. ಲಿಂಗವು ಯಿನ್ನು ವಿಶೇಷ:

೧ ದ್ವಿಭೂಜ ಗಣಪತಿ ಮಹಾಬಲದೇವಸ್ಥಾನ ಸಮೀಪ ದಕ್ಷಿಣದಲ್ಲಿ ಯಿಧೆ.

೧ ತಾಂಬ್ರಗೌರಿ ಅಮ್ಮಾನವರ ದೇವಸ್ಥಾನ ಮಹಾಬಲದೇವರ ದೇವಸ್ಥಾನವೊಳಗೆ ಪೂರ್ವಭಾಗಕ್ಕೆ ಯಿದೆ.

೧ ದೇವಸ್ಥಾನದ ವೊಳಗೆ ನಂದಿ ಸಮೀಪದಲ್ಲಿ ದುರ್ಗಾದೇವಿಯಿಧೆ.

೧ ಸರಸ್ವತೀಶ್ವರ ದಕ್ಷಬಾಗನ ಸಮೀಪದಲ್ಲಿ ಯಿಧೆ.

೧ ಅಮೃತೇಶ್ವರ ದಕ್ಷಿಣದಲ್ಲಿ ಸಮೀಪ ಯಿಧೆ.

೧ ಮಾಣೇಶ್ವರ ನೈರುತಿಭಾಗ ಗುಡ್ಡದ ಮೇಲೆ ಯಿನ್ನೂರು ಮಾರು ಯಿಧೆ.

೧ ಸಾಗರೇಶ್ವರ ಪಶ್ಚಿಮದಲ್ಲಿ ಸಮೀಪ ಯಿಪ್ಪತ್ತು ಮಾರು ಯಿಧೆ.

೧ ದೂತಪಾವ[>ಪ]ಸ್ಥಾಲೇ[>ನೇ]ಶ್ವರ ಪಶ್ಚಿಮ ಆಯಿವತ್ತು ಮಾರು ಯಿಧೆ.

೧ ಕೃಷ್ಣದೇವರು ಆಗ್ನೇಯಕ್ಕೆ ನೂರು ಮಾಡು ಮೇಲೆ ಯಿಧೆ.

೧ ವಶಿಷ್ಟೇಶ್ವರ ಆಗ್ನೇಯ ಯಿನ್ನೂರು ಮಾರು ಯಿಧೆ.

೧ ಮತ್ತು ವರುಣೇಶ್ವರ ಆಗ್ನೇಯ ಕೋಸು[>ಕ್ರೋಶ] ಯಿಧೆ.

೧ ನಾಗೇಶ್ವರ ದಕ್ಷಿಣಭಾಗ ಆಯಿವತ್ತು ಮಾರು ಯಿಧೆ.

೧ ಚತುರ್ವೇದಕ್ಕೂ ನಾಲ್ಕು ಲಿಂಗವಿದೆ. ದಕ್ಷಿಣಭಾಗ ಮೂವತ್ತು ಮಾರು.

೧ ರಾವಣೇಶ್ವರ ದಕ್ಷಿಣ ಯಿಪ್ಪತ್ತು ಮಾರು.

೧ ಕುಂಭಕಣೇ[>ಕರ್ಣೆ]ಶ್ವರ ಯಿಲ್ಲೆ ಯಿಧೆ.

೧ ವಿಭಿಷಣೇಶ್ವರ ಯಿಲ್ಲೆ ಯಿದೆ.

೧ ರಾಮ ಲಕ್ಷ್ಮಣ ಸೀತಾ ಸಹಿತ ದೇವಸ್ಥಾನ ನೈರುತ್ಯದಿಕ್ಕು ಪಾಲು ಕೋಸು[>ಕ್ರೋಶ].

೧ ಉಮಾಮಹೇಶ್ವರ ದಕ್ಷಿಣಭಾಗ ಕೋಸು[>ಕ್ರೋಶ] ಯಿಧೆ. ಬೆಟ್ಟದ ಮೇಲೆ ದೊರ್ರೆ ಹೋಗಿ ಯಿಧೆ.

೧ ಪೇಟೆ ವೆಂಕಟರಮಣ ಪೂರ್ವಭಾಗದಲ್ಲಿ ನೂರು ಮಾರು ಯಿಧೆ.

೧ ಕಪರ್ದಿನಾಗಾ ಯಿರ್ರೆಭಟ್ಟಿ ಮನೆವಳಗೆ ಯಿಧೆ. ನೂರು ಮಾರು.

೧ ದಕ್ಷಿಣಕಾಳಿ ಪಾಲು ಕೋಸು[>ಕ್ರೋಶ] ವಳಗೆ ಯಿಧೆ.

೧ ಗಂಗಾ ಅಮ್ಮಾನವರು ಉತ್ತರದಲ್ಲಿ ಕೋಸು[>ಕ್ರೋಶ] ಮೇಲೆ ಯಿದೆ.

---

೨೬ ಯಿದು ವಿಷೇಷ ದೇವರುಗಳು, ಯಿನ್ನ ಅನೇಕ ಯಿಧೆ ಗೊತ್ತೆ ಯಿಲ್ಲಾ:

೧ ಪೂರ್ವದಲ್ಲಿ ಶಿದ್ಧೇಶ್ವರ, ಕೋಸು[>ಕ್ರೋಶ] ಮೇಲೆ ಯಿಧೆ.

೧ ದಕ್ಷಿಣಕ್ಕೆ ರಾಮೇಶ್ವರ, ಕೋಸು[>ಕ್ರೋಶ] ಮೇಲೆ ಯಿಧೆ.

೧ ಪಶ್ಚಿಮಕ್ಕೆ ಸಾಗರೇಶ್ವರ, ಕೋಸು[>ಕ್ರೋಶ] ಮೇಲೆ ಯಿಧೆ.

೧ ಉತ್ತರದಲ್ಲಿ ಗಂಗೇಶ್ವರ, ಕೋಸು[>ಕ್ರೋಶ] ಮೇಲೆ ಯಿಧೆ.

೪

ಪಂಚಲಿಂಗಕ್ಕೆ ನಾಮಧೇಯ :

೧ ಸಜ್ಜೇಶ್ವರ, ಗೋಕರ್ನ ಉತ್ತರಕ್ಕೆ ೩॥ ಮೂರುವರೆ ಗಾವುದ ಯಿಧೆ.

. . . . . ಡದಲ್ಲಿ ಯಿಧೆ॥

೧ ಧಾರೇಶ್ವರ, ಗೋಕರ್ನಕ್ಕೆ ದಕ್ಷಿಣಭಾಗ ಕೋಸ[>ಕ್ರೋಶ] ಆರು ಯಿಧೆ. ಧಾರಾಪುರದಲ್ಲಿ.

೧ ಮುರುಡೇಶ್ವರ, ಗೋಕರ್ನಕ್ಕೆ ದಕ್ಷಿಣಕ್ಕೆ ಗಾಉ ೪॥೦

೧ ಗುಣವಂತೇಶ್ವರ, ದಕ್ಷಿಣ ದಿಕ್ಕು ಗಾಉದ ೩॥೦.

೧ ಗೋಕರ್ನ ಮಹಾಬಲೇಶ್ವರ

೫ ಅಂತು ಪಂಚಲಿಂಗಗಳು, ಮಹಾಕ್ಷೇತ್ರಗಳು, ಆಶ್ರಮಗಳು:

॥ಶ್ಲೋಕ॥ ಸನತ್ಕುಮರಂ ಸೌಮಿತ್ರಂ ಸೌಮಿತ ವಾರುಣಂ ತಥಾ। ಆಗ್ನೇಯ ಬೊಮ್ಮಮಾಗಸ್ತ್ಯಂ ವಿಶ್ವಾಮಿತ್ರಾಶ್ರಮಂ ತಥಾ॥ ಅಶೋಕಾಸ್ಯಾಶ್ರಮಂ ಪುಣ್ಯಂ। ಸಪ್ತರುಷಿಣಾಂಚ ಸಪ್ತಮ। ಅಂಗೀರಸಂಚೌಶನಸಂ। ಅತ್ರೇಯಂ ಭಾರ್ಗವಂ ತಥಾ। ಎಂದು ಪೂರ್ವಾಶ್ರಮಂ ಚೈವ। ಅನಂತಸ್ಯಾಶ್ರಮಂ ದ್ರಭೋ।ಸಾಪಣಮಧ ಸಯ್ಯಂಚ। ಸಾರಸ್ವತ ಮತಃ ಪರಂ ಲೋಕಾಶ್ರಮಂಚ ರಾಜೇಂದ್ರ। ಆಯಿಂದ್ರಂ ಚೌ ಭೇದಮೇವಚ। ಶಕಾಶ್ರಮಂ ಪುಣ್ಯತನುಂ। ತಾದ್ರಂ ಪಿತ್ರು ವಸಂತಭಾ। ವಿಶ್ವೇದೇವಾಶ್ರಮಂ ಪುಣ್ಯಂ। ವೈಷ್ಣವಂ ಚನೃವೋತ್ತಮ ಯೇಕೇಚಾಶ್ರಮ ಮುಖ್ಯೇಷು। ಸರ್ವೇಷು ಮನುರ್ಜಷಾಭ। ಸಿದ್ಧಾಸಿದ್ಧಿಂ ಗತಾಸ್ತಿಹಿ। ಗಮಪ್ಯಾಂತ್ಯ ಪರೇನೃಪ॥ ಯಿದು ಆಶ್ರಮಗಳು, ಯಿದು ಪುರಾಣ ಪ್ರಸಿದ್ಧ ಯಿದೆ.

ಮನುವುಗಳ ಹೆಸರು:

ಸ್ವಾಯಂಭುವು॥ ಸ್ವಾರೋಚಿಷ॥ ಔತ್ತಮ। ತಾಮಸ। ಚಾಕ್ಷುಸ। ಶೈವತ। ವೈವಸ್ವತ ಸೂರ್ಯಸಾವರ್ಣಿ। ದಕ್ಷಸಾವರ್ಣಿ॥ ರುದ್ರ ಸಾವರ್ಣಿ॥ ಬ್ರಹ್ಮ ಸಾವರ್ಣಿ। ವಿಷ್ಣು ಸಾವರ್ಣಿ। ರುಭು ॥ರುಚಿ॥

ಅಂತು ೧೪ ಮನುವುವೊಳಗೆ ಪ್ರಥಮ ಸ್ವಾಯಂಭುವು ಅಡಿಯಾಗಿ ವೈವಸ್ವತ ಮನುದ್ಯ [>ಉ] ವರಿಗೆ ೭ ಮನುಉ ವರಿಗೆ. ಅಸಂಖ್ಯಾತವಾದ ರುಷಿಗಳು ಗೋಕರ್ನಕ್ಷೇತ್ರದಲ್ಲಿ ಮೋಕ್ಷವನ್ನು ಪಡದು ಹೋಗಿ ಯಿದ್ದಾರೆ. ಯಿದು ಪುರಾಣವೊಳಗೆ ಹೇಳಿ ಯಿದೆ. ಸಮಾಪ್ತ.

❖❖

೭೦

ಚಲುಟ ಅರಸುಗಳ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕವರುಷ ೧೧೮೨ನೆಯ ವಿಕ್ರಮ ಸಂವತ್ಸರದ ವೈಶಾಖ ಶು॥ ೫ಲ್ಲು, ತಿರುಮಲರಾಯ ಚಲುಟರು ಸೋಮವಂಶ ಉತ್ಪನ್ನರಾದ ಭೂಪಾಲ ಜನಿತರಾಗಿ ಯಿರುತ್ತ, ಪಶ್ಚಿಮಸಮುದ್ರತೀರವಾಗಿ ನೇತ್ರವತಿನದಿತೀರವಾಗಿ ಯಿರುವ ಸೋಮಲಾ ಯಂಬ ಊರಿನ ಸೋಮೇಶ್ವರಾಯಂಬ ಗ್ರಾಮದಲ್ಲು ಉದ್ಭವಿಸಿ ಯಿರುವಂತಾ ದೇವದೇವೋತ್ತಮ ದೇವತಾಸಾರ್ವಭೌಮ ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನಾದ ಶ್ರೀ ಸೋಮನಾಥೇಶ್ವರ ಸ್ವಾಮಿಯನ್ನು ಯೇಕಭಕ್ತಿಯಿಂದ ಸ್ಮರಿಸಿಕೊಂಡು, ಯೇಕಭುಕ್ತ ಉಪವಾಸವ್ರತಾದಿಗಳ ಮಾಡಿಕ್ಕೊಂಡು ಭಜಿಸುತ್ತಿರುವ ವೇಳ್ಯೆದಲ್ಲಿ, ಶ್ರೀ ಸೋಮನಾಥೇಶ್ವರನು ವೊಂದಾನೊಂದು ದಿವಸ ಸ್ವಪ್ನದಲ್ಲಿ ಬ್ರಾಹ್ಮಣರೂಪಿನಲ್ಲಿ ದಂಪತಿಯುಕ್ತನಾಗಿ ಬಂದು “ಏನು ಕಾರಣ ಯೀ ನದಿ ತೀರದಲ್ಲಿ ಯೇಕಭುಕ್ತ ಉಪವಾಸ ಮೊದಲಾದ ವ್ರತಗಳ ಮಾಡಿ ಕಷ್ಟಬಡುತ್ತಿದ್ದಿ?”ಯಂತ ಕೇಳುವಾಗ್ಯೆ “ನನ್ನ ಹಿರೆರಾದ ಸೋಮವಂಶ ದೊರೋಗಳಿಂದ ಜನಿತವಾದಂತಾ ಅನ್ವಯದವರು, ನಾನು ದಾರಿದ್ರ್ಯದೋಷದಿಂದ ಬಹಳ ದಣಕೊಂಬದಾಗಿ ಯಿಧೆ; ಯೀ ದಾರಿದ್ರವನ್ನು ಪರಿಹರಿಸಿ ಸಲುಭಾಗ್ಯವನ್ನು ದಯಮಾಡಬೇಕು”ಯಂಬುದಾಗಿ ಯೀ ರುದ್ರಪಾದಕ್ಷೇತ್ರಸ್ಥಿತ ಸೋಮೇಶ್ವರ ಗ್ರಾಮವಾಸಿಯಾದ ಶ್ರೀ ಸೋಮನಾಥೇಶ್ವರಸ್ವಾಮಿಯನ್ನು ಭಜಿಸುತ್ತಿದ್ದೇನೆ”ಯೆಂತ ಹೇಳಿದಲ್ಲಿ, “ಹೆದರಬೇಡಾ, ನಿನಗೆ ಯೀ ದೇಶಾಧಿಪತ್ಯವನ್ನು ಯೀಶ್ವರ ದಯಮಾಡ್ಯಾನು, ಧರ್ಮದಲ್ಲಿ ದೃಢಚಿತ್ತನಾಗಿರು” ಯಂತ ಬ್ರಾಹ್ಮಣ ದಂಪತಿ ಸಹಾ ಹೇಳಿ ಅದೃಶ್ಯವಾದ ಬಳಿಕ, ನಿದ್ರೆಯಚ್ಚರವಾಗಿ ಯೆದ್ದು ನೋಡುವಾಗ್ಯೆ ಅರುಣೋದಯಕಾಲವಾಗಿರುವದ ಕಂಡು, ಹಸ್ತಪಾದಮುಖಪ್ರಕ್ಷಾಳನ ಮಾಡಿಕ್ಕೊಂಡು, ಮಡಿವಸ್ತ್ರವನ್ನು ಉಟ್ಟುಕೊಂಡು, ದಿನಂಪ್ರತಿಯಲ್ಲು, ನಡದು ಬರುವ ಪ್ರಕಾರಕ್ಕೆ ಶ್ರೀ ಸೋಮನಾಥೇಶ್ವರದೇವರು ದೇವಸ್ಥಾನಕ್ಕೆ ಬಂದು, ದೇವರ ದರುಶನವನ್ನು ಮಾಡಿಕ್ಕೊಂಡು, ಪ್ರಸಾದವನ್ನು ತೆಗೆದುಕೊಂಡು, ಯೀ ಸ್ವಪ್ನವನ್ನು ಆಗಲು ತನ ಪೂಜೆ ಮಾಡುವಂತಾ ಬ್ರಾಹ್ಮಣನಾ ತೃ[>ಕೈ]ಯ್ಯ ಹೇಳಿದಲ್ಲಿ “ನೀಉ ಮಾಡುವಂಥಾ ತಪಸ್ಸಿಗೆ ದೇವರು ಪ್ರಸನ್ನನಾದ, ನೀಉ ಯೋಚಿಸಿದ ಕಾರ್ಯವೆಲ್ಲ ಸಿದ್ದಿ ಆಗುತ್ತದೆ. ದೇವರನ್ನು ಮರೆಯಬೇಡಾ. ದೃಢಭಕ್ತಿಯಿಂದ ಭಜಿಸಿಕೊಂಡು ಯಿರಿ”ಯಂತ ಬ್ರಾಹ್ಮಣ ಹೇಳಿದ ಮಾತು ಕೇಳಿಕ್ಕೊಂಡು, ಮನಸ್ಸಿಗೆ ಸಂತೋಷಮಾಡಿಕ್ಕೊಂಡು, ತಮ್ಮ ಅರಮನೆಗೆ ಬಂದು ಯಿರುತಿದ್ದಲ್ಲಿ, ಅರಮನೆ ಉತ್ರಪಾರ್ಶ್ವದಲ್ಲಿ ಬಿದ್ದಂಥಾ ಗೃಹಗಳನ್ನು ಗಚ್ಚು ಮಾಡಿಸುವಾಗ್ಯೆ ಅಲ್ಲಿ ದ್ರವ್ಯಪ್ರಾಪ್ತಿ ಆದದ್ದರಿಂದ ‘ದೇವರು ದಯಮಾಡಿದಾ’ಯಂತ ಆ ದ್ರವ್ಯವನ್ನು ಜೋಪಾನದಿಂದ ವಳಗೆ ಯಿಟ್ಟುಕೊಂಡು, ಜೀರ್ನವಾದಂಥಾ ಅರಮನೆಯನ್ನು ದಡಾ[>ದೃಢ]ಮಾಡಿಸಿ ಯಿರುತ್ತ ಯಿದ್ದರು. ಆಗ್ಯೆ ಯಿವರ ಕೈಕೆಳಗೆ ಯಿರುವಂತ ಶೀಮೆ ವಿವರ: ಉಳ್ಳಾಲದ ಮಾಗಣೆ ೧,

ಸೋಮೇಶ್ವರದ ಗ್ರಾಮ ೧, ಕಲಪಾಡಿ ಮಾಗಣೆ ೧, ಅಮ್ಯಂಬಳದ ಮಾಗಣೆ ೧, ಬಾಳೆಪುಣೆಕ್ಕೆರಂಗಳದ ಗ್ರಾಮ ೧ – ಅಂತು ಯಿಷ್ಟು ಯೀ ಶೀಮೆ ಪ್ರಜೆಗಳನ್ನೆಲ್ಲಾ ಕರಶಿಕ್ಕೊಂಡು ಯಿಷ್ಟಾಲಾಪವಾದಂತಾ ಮಾತಗಳ ಹೇಳಿ, ಸುಖದಿಂದ ರಾಜ್ಯಂಗ್ಯೆಉತ್ತ ಯಿದ್ದರು.

ಆ ಬಳಿಕ ಶಾಲಿವಾಹನ ಶಕ ವರುಷ ೧೧೦೧ನೆ ವಿಕಾರಿ ಸಂವತ್ಸರದ ಜೇಷ್ಟ ಶು॥ ೫ ಆರಭ್ಯಾ ಯಿವರ ಅಳಿಯ ಚನ್ನರಾಯ ಚಉಟೀರು ಆಳಿಕ್ಕೊಂಡು ಯಿರುತ್ತಿರುವಾಗ್ಯೆ, ಯಿವರ ಅಳಿಯ ವರದೈಯ್ಯನ ಸಂಗಡ ವಬ್ಬ ದ್ರಾವಿಡಬ್ರಾಹ್ಮಣ ಕೇಶವಾಯಂಬವನ ಸಂಗಡ ಕರಕ್ಕೊಂಡು, ತಮ್ಮಾ ಸಂನಗ್ಣಾತಿ ಪಕ್ಷರಾದ ಸುರಾಲಿ ತೊಳಹಾರರಲ್ಲಿಗೆ ಹೋಗಿ, ಅಲ್ಲಿ ಕೆಲಉ ದಿವಸ ಯಿದ್ದು ಪುನಹಾ ಬರುವಾಗ್ಯೆ, ಮಾರ್ಗದಲ್ಲಿ ಪುತ್ತಿಗೆ ಮಾಗಣೆ ಕಬೀರಗುಡ್ಡೆ ಬಳಿಯಲ್ಲು ವೊಂದು ಕಾಸರಕನ ಮರದ ಬುಡದಲ್ಲು ಬಿಸಲಿಗೆ ದಣಿವು ಬಂದು ನೆಳಲ ಆಶ್ರಯಿಸಿ ಕಳುಹುತ್ತಿರಲಾಗಿ, ಆ ಕಾಸರಕನ ವೃಕ್ಷದಿಂದ ವೊಂದು ಹಣ್ಣು ಬಿದ್ದು ವಡದಂಥಾದ್ದನ್ನು ನೋಡಿ ಅದರ ರಸವನ್ನು ತುದಿಬೆರಳಿನಿಂದಾ ತೆಗದು ತುದಿನಾಲಿಗೆಗೆ ಹಚ್ಚಿಕೊಂಡಲ್ಲಿ ಸಿಯ್ಯಾಗಿ ರುಚಿಸಿದ್ದರಿಂದ, ಆಶ್ಚರ್ಯಬಟ್ಟು 'ಯೀ ಜಾಗಾ ಬಿಡಬಾರದು' ಯಂತ ನಿಶ್ಚೈಸಿ ಎಡಬಲದಲ್ಲಿ ಯಿರುವ ವಕ್ಕಲುಗಳ ಮನೇಗೆ ಹೋಗಿ, "ನಮಗೆ ಯಿರೂ ಬಗ್ಗೆ ವೊಂದು ಮನೆಕಟ್ಟಬೇಕು. ಆಳುಕಾಳು ಸಹಾಯಮಾಡಿ ಕೊಡಬೇಕು"ಯಂತ ಕೇಳಿದಲ್ಲಿ, ಅವರು ಆಳು ಕಾಳು ಹಾರಿ ಗುದ್ದಳಿ ಮುಂತಾಗಿ ಸಹಾಯ ಮಾಡಿಕೊಟ್ಟದ್ದರಿಂದ ಅದೇ ಕಾಸರಕನ ಮರದ ಬುಡಕ್ಕೆ ಬಂದು, ಆ ಮರವನ್ನು ಕಡದು ನೆಲಾ ಅಗದು ಸಮಕಟ್ಟು ಮಾಡುವಾಗ್ಯೆ ವೊಂದು ಕೊಪ್ಪರಿಗೆ ದ್ರವ್ಯ ಸಿಕ್ಕಿತು. ಅದರ ಸಂಗಡ ದೃವಂತಿಯಂಬ ದೇವತೆಯು ಯೆದ್ದು ಕಾಣೆಸಿಕೊಂಡದ್ದರಿಂದ ತತ್ಪ್ರಾರ್ಥನೆಯನ್ನು ಮಾಡಿ, ಬಲಿಯನ್ನು ಕೊಟ್ಟು ಸಮಾಧಾನ ಮಾಡಿಸಿ. ಆ ಸ್ಥಳದಲ್ಲಿ ಆ ದೃವಂತಿಯಂಬ ದೇವತೆಗೆ ಗುಡಿಯನ್ನು ಕಟ್ಟಿಸಿ ಪ್ರತಿಷ್ಟೆ ಮಾಡಿ, ಪೂಜಿಸುತ್ತ, ಅದರ ವತ್ತಿಗೆ ಸಮೀಪದಲ್ಲಿ ವಾಯವ್ಯದಿಕ್ಕಿನಲ್ಲಿ ಅರಮನೆಯನ್ನು ಕಟ್ಟಿ, ತಮಗೆ ಬೇಕಾದ್ದಂಥಾ ಮಂದಿಮಕ್ಕಳ ಕೂಡಿಕ್ಕೊಂಡು, "ಯಿನ್ನು ಮುಂದೆ ಯಡಬಲದ ಸೀಮೆ ಸಾಧಿಸಬೇಕು"ಯಂತ ಆಲೋಚನೆ ಮಾಡಿಕ್ಕೊಂಡು ಯಿರುತ್ತಿರುವಾಗ್ಯೆ, ಘಟ್ಟದ ಮೇಲಣಿಂದ ಕರ್ನಾಟಕ ಬ್ರಾಹ್ಮರು ತಿಮ್ಮಪ್ಪಯ್ಯ ವೆಂಕಟನಾರಾಣಪ್ಪಯ್ಯ ನಾಗಭಟ್ಟ ಮುಂತಾದವರು ಹತ್ತು ಮಂದಿ ಬ್ರಾಹ್ಮರು ಬಂದು ಕಾಣೆಸಿಕೊಂಡಲ್ಲಿ, ಯಿವರಿಗು ವರದಪ್ಪನವರಿಗು ಮಾತುಕತೆಯಾಗಿ ಯಿವರನೆಲ್ಲಾ ನಿಲ್ಲಿಸಿಕೊಂಡು ಮತ್ತು ಎಡಬಲದ ಜನರಲ್ಲಿ ಮಿತ್ರತ್ವವನ್ನು ಬಳಸಿ, ಮತ್ತಿನ್ನುರಾರು ಜನ ಮನುಷ್ಯಾರ ಮಕ್ಕಳ ಕಟ್ಟಿಕೊಂಡು ಯಿರುತಿದ್ದಲ್ಲಿ, ಆ ಸಮಯದಲ್ಲಿ ಯಿವರ ಬಗ್ಗೆ ವೊಬ್ಬ ಮನುಷ್ಯನ[>ನು] ಮೂಲಿಕೆ ಕಡೆಗೆ ಹೋಗಿ ಬರುವಾಗ್ಯೆ, ಮಧ್ಯೆ ಮಾರ್ಗದಲ್ಲು ಸರಳಿಮಂಜಿದ ತಿಮ್ಮಪ್ಪ ಬಲ್ಲಾಳ ಯಂಬವನನ್ನು[>ವನು] ತಡೆದು ನಿಲ್ಲಿಸಿಕೊಂಡು "ನೀನು ಯಾರ ಬಗೆಯುವ?"ಯಂತ ಕೇಳಿದಲ್ಲಿ "ವರದಪ್ಪನವರ ಬಗೆಯುವ"ಯಂತ ಹೇಳಿದಲ್ಲಿ, "ಅವರ ಕಾರುಭಾರ ಬಹಾಳಾ ಆಗಿ ಆಯಿತು. ಯೀ ಸ್ತಳದಲ್ಲಿ ಬಲ್ಲಾಳಿಕೆ ಮನೆತನದವರು ನಾಉ ಯಿರುತಿದ್ದಂತೆ ಯಿವರಿಗೆ ದೊಡ್ಡ ಅರಮನೆ ಕಟ್ಟುವ ಬಗ್ಗೆ ಕಾರಣವೇನು? ಯಡಬಲದಲ್ಲಿ ಮರ ಮುಟ್ಟುಗಳ ಕಡಿಯುವ ಬಗ್ಯೆ ಕಾವಣವೇನು? ಮಂದಿ ಮಕ್ಕಳ ಕಟ್ಟುವದಕ್ಕೆ ಕಾರಣವೇನು? ಅರಮನೆ ಕಟ್ಟಲೆಯಿಲ್ಲ ಯಂಬ ಹಾಗೆ ಮಾಡಿಶಿಯೇನು" ಯಂಬ ವಾಕ್ಯ ಮೊದಲಾಗಿ ಬಹಳ ಪರಾಕ್ರಮದ ಮಾತು ಹೇಳಿ, "ಅಂಥಾ ಸಾಮರ್ಥ್ಯ ಯಿದ್ದರೆ ನಾನು ಮಂದಿ ಕಟ್ಟಿಕೊಂಡು ಬರುತ್ತೇನೆ. ಅವರು ಬರಲಿ, ವೊಂದು

ಕೈ ನೋಡಿ ಬಿಡುವಾ"ಯಂತ ಯಿವರ ಬಗೆ ಮನುಷ್ಯನ ಕೈಯ್ಯು ತನ್ನ ಪರಾಕ್ರಮ ಹೇಳಿ ಕಳುಹಿಸಿ ಕೊಟ್ಟದ್ದರಿಂದ, ಆ ಕ್ಷಣವೇ ಯೀ ವರದಪ್ಪನವರು ಮಂದಿ ಮಕ್ಕಳ ಕಟ್ಟಿಕ್ಕೊಂಡು ಹೋಗಿ ಆ ಸರಳಿಮಂಜದ ತಿಮ್ಮಪ್ಪ ಬಲ್ಲಾಳನ ಹಿಡಿದು, ಸರ್ವಸ್ವವನ್ನು ಅಪಹರಿಸಿ, ಅನುಭವಿಸಿ ಬಂದಂಥಾ ಗ್ರಾಮವನ್ನು ತಮ್ಮ ಆಧೀನ ಮಾಡಿಕೊಂಡರು.

ಆ ಬಳಿಕಾ ಬೊಂಣ್ಯದಬೆಟ್ಟಿನ ತಿಮ್ಮಪ್ಪ ಬಂಗಾಯಂಬವನು ಪ್ರಬಲಸ್ತನಾಗಿ ಯಿರುತಿದ್ದಲ್ಲಿ ಅವನ್ನು ಮುರದು ಸರ್ವಸ್ವವನ್ನು ಅಪಹರಿಸಿ ಅವ ಅನುಭವಿಸುವಂತಾ ಗ್ರಾಮವನ್ನು ತಮ್ಮಾ ಆಧೀನ ಮಾಡಿಕೊಂಡರು. ಆ ಬಳಿಕಾ ಯಾದರ ಬಲ್ಲಾಳ ಯಂಬವನು ಯಿವರ ಮೇಲೆ ಮಲಿತು ನಿಂತಿದ್ದರಿಂದ ಅವನನ್ನು ಮುರದು, ಅವನ ಸರ್ವಸ್ವವನ್ನು ಅಪಹರಿಸಿ, ಅವ ಅನುಭವಿಸುವಂತಾ ಗ್ರಾಮವನ್ನು ತಮ್ಮಾಧೀನ ಮಾಡಿಕೊಂಡು ಕಬರಗುಡ್ಡೆ ಹತ್ತರ ಬಲವಂತವಾಗಿ ಅರಮನೆ ಕಟ್ಟಿ ಯಿರುತ್ತ, ಯೀ ವರ್ತಮಾನಗಳಿಗೆ ಉಳ್ಳಾಲಕ್ಕೆ ತಮ್ಮಾ ಮಾವನಾದ ಚನ್ನರಾಯ ಚಉಟರ ಬಳಿಗೆ ಹೇಳಿ ಕಳುಹಿಸಿಕೊಡುತ್ತ, ಮನುಷ್ಯರ ಕಳುಹಿಸುತ್ತ, ಯಿರುತಿದ್ದಲ್ಲಿ, ಯೀ ಮಧ್ಯದ ಮಾರ್ಗದಲ್ಲು ಹೋಗಿ ಬರುವಂತಾ ಮನುಷ್ಯರಿಗೆ ಮಚಾರ[>ವಿಚಾರ]ಲ್ಲು ಆ ಶೀಮೆ ಅನುಭವಿಸಿಕೊಂಡು ಯಿರುವ ಕ್ಷತ್ರಿಯ ಚನ್ನಪ್ಪರಸಾ ಯಂಬವನ್ನು ತ್ತೊಡರು ಮಾಡುತ್ತ ಯಿರುವ ಕಾರಣ, ಉಳ್ಳಾಲದಿಂದಾ ಚನ್ನರಾಯ ಚಉಟರು ಮಂದಿ ಮಕ್ಕಳು ಕಟ್ಟಿಕೊಂಡು ಬಂದರು, ಯೀ ಪುತ್ತಿಗೆ ಕಡೆಯಿಂದ ಅಳಿಯ ವರದಪ್ಪನವರು ಮಂದಿ ಮಕ್ಕಳು ಕಟ್ಟಿಕೊಂಡು ಹೋಗಿ, ಉಭಯತರು ವೊಟ್ಟಾಗಿ ವಿಚಾರದಲ್ಲಿ ಚನ್ನಪ್ಪರಸನ ಹಿಡಿದು, ಅವನ ಅರಮನೆಯಲ್ಲಾ ಸೂರೆ ಸುಲಿಗೆ ಮಾಡಿ, ವಿಚಾರ ಮಾಗಣಿ ತಮ್ಮ ಸ್ವಾಧೀನ ಮಾಡಿಕ್ಕೊಂಡು, ಮುಂದೆ ವೊತ್ತಿ ಹೋಗಿ ಮಳಲಿಸೀಮೆಯನ್ನು ತಮ್ಮಾ ಸ್ವಾಧೀನ ಮಾಡಿಕೊಂಡು, ಮಾವ ಅಳಿಯ ಸಹಾ ಪುತ್ತಿಗೆಯಲ್ಲು ಕಟ್ಟಿದ ಅರಮನೇಗೆ ಪುನಹಾ ಬಂದು, ಅರಮನೆ ನೋಡಿ, ಯೀ ಅರಮನೆಗೆ ಕಾಸರಕನ ಮರ ಕಡದ ಸ್ತಳದ ಬಳಿಯಲ್ಲಿ ಕಟ್ಟಿದ ಕಾರಣಾ ಕಾಯರಮಂಜದ ಅರಮನೆಯಂತ ಹೆಸರು ಯಿಟ್ಟು, ಯೀ ಸ್ತಳವನ್ನೇ ಬಲವಂತ ಮಾಡಿ ಹಿಡಿದು ನಿಂತು, ಉಳ್ಳಾಲಿದಿಂದಾ ಶ್ರೀ ಸೋಮೇಶ್ವರ ದೇವರ ತೀರ್ಥಪ್ರಸಾದವನ್ನು ನಿತ್ಯಂಪ್ರತಿ ತರಿಸಿಕೊಳ್ಳುತ್ತ, ರಾಜ್ಯಭಾರ ಮಾಡುತ್ತ ಯಿದ್ದರು.

ಆಗಾ ತಮ್ಮ ಶೀಮೆ ಶಾನುಭವಿಕೆಯುನ್ನು ಬೆಟ್ಟದ ಮೇಲಣಿಂದಾ ಬಂದ ವೆಂಕಟನಾರಾಣಪ್ಪಯ್ಯಯಂಬಾತಗೆ ನೇಮಕಾ ಮಾಡಿಕೊಟ್ಟು, ಪ್ರಧಾನಿತನವನ್ನು ನರಸಪ್ಪಯ್ಯಗೆ ಕೊಟ್ಟು, ಪುತ್ತಿಗೆಯಲ್ಲು ಭೂಮಿ ಮನೆ ಸ್ಥಳ ಮಾಡಿಶಿಕೊಟ್ಟರು. ಕವಳೀಗೆ ಶ್ಯಾನಭಾವ ವೆಂಕಟನಾರಣಪ್ಪನು ಮೂಡಬರಿಯಲ್ಲಿ ಮನೆಮಾಡಿ ನಿಂತನು. ಯೀತನ ತಮ್ಮ ತಿಮ್ಮಪ್ಪಯ್ಯನು ಬಿನ್ನಾಣದಲ್ಲಿ ಶ್ಯಾನಭವಿಕೆ ಮಾಡಿಕೊಂಡು ಅಣ್ಣನ ಸಂಗಡಲೆ ಯಿರುತಿದ್ದನು. ಚಉಟರಲ್ಲಿ ಪೌರೋಹಿತ್ಯವನ್ನು ನಾಗಭಟ್ಟರಿಗೆ ನೇಮಕಾ ಮಾಡಿ ಕೊಟ್ಟರು. ಅವಸರದ ಬದಕನ್ನು ದ್ರಾವಿಡ ಬ್ರಾಹ್ಮಣರು[>ರ] ರಾಮಭದ್ರಯ್ಯ ಯಂಬವಗೆ ನೇಮಕಾ ಮಾಡಿ, ಬಿಳುವಾಲು ಗ್ರಾಮದಲ್ಲಿ ಅಂಬಿಡಿ ಬಯಲು ಎಂಬ ಸ್ಥಳ ಮನೆಮಾಡಿ ಕೊಟ್ಟರು, ಪುಟ್ಟಯ್ಯಾ ಲಕ್ಷ್ಮಿನಾರಾಣಯ್ಯ ಯಂಬವರಿಗೆ ಸಹಾ ಯಿಬ್ಬರಿಗು ರಾಯಸದ ಬದುಕು ನೇಮಕಾ ಮಾಡಿಕೊಟ್ಟರು. ಮಂದಿಗೆ ತಿದ್ದು ಹಣವಿನ ಶ್ಯಾನಭವಿಕೆ ಸಬನಸಿತನವನ್ನು ವಿಷ್ಣು ಶ್ಯಾನಭವದೆಡ[>ವಗೆ] ನೇಮಕಾ ಮಾಡಿಕೊಟ್ಟರು. ಬೊಕ್ಕಸ

ಶ್ಯಾನಭೋಗತನವನ್ನು ಸ್ತಾನಿಕ ನಾರಣಪ್ಪಗೆ ನೇಮಕಾ ಮಾಡಿಕೊಟ್ಟರು. ನಾಯಕವಾಲಿ[>ಡಿ]ಗಳು ಪದುಮನಾಯಕ ಜನ ೧, ತಿಮ್ಮನಾಯಕ ಜನ ೧, ತಮ್ಮಾನಾಯಕ ಜನ ೧, ಕೊಲ್ಲೂರ ನಾಯಕ ಜನ ೧ – ಅಂತು ಜನ ೪ಕ್ಕೆ ನೇಮಕಾ ಮಾಡಿಕೊಟ್ಟರು. ತಾವು ಆಳುವಂಥಾ ಸೀಮೆಯಲ್ಲು ತಾವ್ರ ರಾಜಕಾರಣಕ್ಕೆ ಹೊರಡುವ ವೇಳ್ಯೆದಲ್ಲಿ ಆಯುಧಪಾಣಿಗಳಾಗಿ ಮನೆಗೆ ವೊಂದು ಜನ ಹೊರಟು ಬರಬೇಕುಯಂತ ಮಾಡಿದರು. ಯೀ ಮೇರೆಗೆ ರಾಜ್ಯವಾಳಿಕೊಂಡು ಯಿರುತಿದ್ದರು.

೩ ಆ ಬಳಿಕಾ ಯಿವರ ಅಳಿಯ ವರದೈಯ್ಯಗೆ ಪಟ್ಟವಾಗಿ, ದೇವರಾಯಚಉಟರು ಯಂತಾ ನಾಮಕರಣವಾಗಿ ಸುಖದಿಂದ ರಾಜ್ಯಭಾರ ಮಾಡಿಕೊಂಡಿದ್ದರು. ಶಾಲಿವಾಹನಶಕವರುಷ ೧೧೪೧ನೆ ಪ್ರಮಾತಿ ಸಂವತ್ಸರದ ಶ್ರಾವಣ ಶು॥೭ ಆರಭ್ಯಾ ಆಳಿದರು. ಆ ಬಳಿಕಾ

೪ ಶಾಲಿವಾಹನ ಶಕವರುಷ ೧೧೬೭ನೆ ವಿಶ್ವಾವಸು ಸಂವತ್ಸರದ ಆಶ್ವೀಜ ಶು॥ ೧೩ ಆರಭ್ಯಾ ಯಿವರ ಅಳಿಯ ತಿರುಮಲರಾಯಚಉಟರು ಆಳಿದರು. ಯಿವರು ಯೀಶ್ವರನಲ್ಲಿ ಪರಮಭಕ್ತಿಯುಕ್ತರು, ಶಿವಪೂಜಾವ್ರತರು. ಯಿವರ ನಿಶಾನಿಗೆ ಉ್ರಷಭಧ್ವಜಾಂಕಿತರು. ಕಳಾಶಾಸ್ತ್ರ ಪರಿಚಿತರು, ಮಧುರವಾದ ಪದಾರ್ಥಬೋಜನಪ್ರಿಯರು. ಶ್ವೇತವಸ್ತ್ರಪ್ರಿಯರು, ವಿದ್ವಜ್ಜನಮನೋಹರಸಿಕರು, ತ್ಯಾಗಿಗಳು, ಕೀರ್ತಿವನಂತರು. ಯೀ ಪ್ರಕಾರ ಯಿರುವಂತವರಾಗಿ "ನಿತ್ಯದಲ್ಲಿಯೂ ಸೋಮೇಶ್ವರದ ಶ್ರೀ ಸೋಮನಾಥದೇವರ ಸನ್ನಿಧಿಯಿಂದ ತೀರ್ಥಪ್ರಸಾದ ಬರುವದಕ್ಕೆ ಬಹಳ ದೂರವಾಗಿ ನಿತ್ಯಂಪ್ರತಿ ಬ್ರಾಹ್ಮರು ಬಹಳ ದಣಿಯುತ್ತಿದ್ದಾರೆ. ಆರೋಗಣೇಗೆ ಹೊತ್ತು ವೇಳ್ಯೆ ವ್ಯತ್ಯಾಸವಾಗುತ್ತದೆ ಯಂಬದರಿಂದ ಉಳ್ಳಾಲದ ಸೋಮೇಶ್ವರಕ್ಕೆ ಹೋಗಿ, ಶ್ರೀ ಸೋಮನಾಥೇಸ್ವರ ಸ್ವಾಮಿಯನ್ನು ಪ್ರಾರ್ಥನೆ ಮಾಡಿಕೊಂಡು, ಪ್ರಸಾದತೀರ್ಥ ತರಿಸಿಕೊಂಡು, ನಡಕೊಂಡೇಉ"ಯಂತ ಹೇಳಿಕ್ಕೊಂಡು, ಪ್ರಸಾದಪ್ರಶ್ನೆ ನೋಡುವಾಗ್ಯೆ ವಳ್ಳಿತಾಗಿ ಅಪ್ಪಣೆ ಬಂದದರಿಂದ ಪುನಹಾ ಪುತ್ತಿಗೆ ಬಂದು "ದೇವಸ್ಥಾನ ಕಟ್ಟುವ ಬಗ್ಗೆ ಸ್ತಳ ಯಾವುದು ಆದೀತು?"ಯಂದು ನೋಡಿಕೊಳ್ಳುತ್ತಲು, ಮೇಗುಂಡಿ ಬ್ರಹ್ಮಸ್ತಾನಕ್ಕೆ ಹೋಗಿ ಪ್ರಾರ್ಥನೆ ಮಾಡಿಕ್ಕೊಂಡು, ಅದರಿಂದಲು ಪಶ್ಚಿಮದಿಕ್ಕಿಗೆ ಹೋಗಿ ಸ್ತಳ ನೋಡುವಾಗ್ಯೆ ಹಳ್ಳದ ಹೊದ್ದಿನಲ್ಲಿ ಕುರುಚು ಗಿಡಾ ಪೊದರು ಬೆಳದಂಥಾ ಜಾಗಾದಲ್ಲಿ ಹೊಕ್ಕು ನೋಡುವಾಗ್ಯೆ. ವೊಂದು ಕಪೀಲೆ ದನಉ ವೊಂದು ವ್ಯಾಘ್ರಉ ಪಶ್ಚಿಮಮುಖವಾಗಿ ವಟ್ಟಿಗೆ ಮಲ್ಲಿಕೊಂಡು ಯಿರುವದ ಕಂಡು, ವೊಂದು ಘಳಿಗೆ ಪರಿಯಂತ್ರ ನೋಡಿದಾಗ್ಯೂ ಯರಡು ಯಚ್ಚರಿಕೆ ಮೇಲೆ ಮಲಗಿರಲಾಗಿ ನೋಡಿ ಆಶ್ಚರ್ಯಬಟ್ಟು, 'ಯೀ ಸ್ಥಳದಲ್ಲಿ ಮಹತ್ತು ಉಂಟು, ಯಿದೆ ಸ್ಥಳದಲ್ಲಿ ದೇವಸ್ಥಾನ ಕಟ್ಟಬೇಕು' ಯಂತ ನಿಶ್ಚೈಸಿ, ಆ ಹುಲಿಯನ್ನು ಆ ದನವ ಸಹಾ ಕೈಚಪ್ಪಳೆ ತಟ್ಟಿ ಅಟ್ಟುವಾಗ್ಯೆ ಹುಲಿಯು ಪೂರ್ವಮುಖವಾಗಿ ನೆಲ್ಲಿಗುಡ್ಡೆಗೆ ಹೋಗಿ ಅಲ್ಲಿ ಮಾಯವಾಗಿ ಹೋಯಿತು. ದನವು ಪಶ್ಚಿಮಮುಖವಾಗಿ ಹೋಯಿತು. ಅದು ಕಾರಣ ಅದೇ ಸ್ಥಳದಲ್ಲಿ ದೇವಸ್ತಾನವನ್ನು ಕಟ್ಟಿ ಪಶ್ಚಿಮ ಮುಖವಾಗಿ ಬಾಗಲು ಯಿಟ್ಟು ಶಾಲಿವಾಹನ ಶಕ ವರು ಷ೧೧೭೭ನೆಯ ಕ್ರೋಧನ ಸಂವತ್ಸರದ॥ ...... ದೇವತಾ ಪ್ರತಿಷ್ಟೆ ಮಾಡಿದರು. ಹುಲಿಯು ಮಾಯವಾದ ಬಳಿಯ ಪಂಚದುಮಾವತಿ ಭೂತಕ್ಕೆ ಗುಡಿಯನ್ನು ಕಟ್ಟಿಸಿಕೊಟ್ಟರು.

ಆ ಬಳಿಕಾ ಮತ್ತೇ ಕೆಲವು ದಿವಸದ ಮೇಲೆ ಪಣಂಬೂರ ಮದ್ದಹೆಗ್ಗಡೆ ಕೂಡೆ ಸ್ನೇಹವನ್ನು ಬಳಸಿ ಪ್ರಧಾನಿ ನರಸಪ್ಪಯ್ಯನ ರಾಜೊಷ್ಪು ಮಾತುಕತೆ ನಿಯೋಗತನಕ್ಕೆ ಕಳುಹಿಸಿಕೊಟ್ಟು,

ಬಾಳಕಳುವಾರ ಪೇಜಾವರದ ತೊಕೂರು ಬಜಪಿ ಮುಂತಾದ್ದು ಗ್ರಾಮದ ಪ್ರಜೆಗಳನ್ನೆಲ್ಲಾ ವಳಲು ತೆಗೆದುಕೊಂಡು, ಆ ಶೀಮೆಯನ್ನು ಸಾಧಿಸಿ ತಮ್ಮ ಸ್ವಾಧೀನ ಮಾಡಿಕೊಂಡು, ನರಸಪ್ಪಯ್ಯನು ಬಂದು ಯೀ ವರ್ತಮಾನವನ್ನು ಅರಿಕೆ ಮಾಡಿದಲ್ಲಿ ತಿರುಮಲರಾಯ ಚಉಟರ ಪೇಜಾವರಕ್ಕೆ ಹೋಗಿ, ಆದ್ಯಂತ ಸೀಮೆ ಪ್ರಜೆಗಳನೆಲ್ಲಾ ಕರಶಿಕೊಂಡು, ಅವರಿಗೆ ಉಡುಗರೆ ಉಚಿತಗಳ ಕೊಟ್ಟು, ಉಂಬಳಿ ಉತ್ತರ ಬಿಟ್ಟು, ಆ ಪ್ರಜೆಗಳು ಸಹಿತ ಪುತ್ತಿಗೆ ಬರುವಾಗ್ಯೆ ನೆಲ್ಲಿತೀರ್ಥಯಂಬ ಸ್ಥಳದಲ್ಲು ಜಾಬಾಲಿರುಷಿಗಳ ಆಶ್ರಮಾ ಬಿಲ್ವವನ ದರುಶನ ಗುಹಾತೀರ್ಥಾ ಸ್ಥಾನಮಾಡಿಕ್ಕೊಂಡು, ಆ ರುಷಿಗಳು ಪ್ರತಿಷ್ಟೆ ಮಾಡಿದ ಶ್ರೀ ಸೋಮನಾಥೇಶ್ವರ ದೇವರ ದರುಶನವನ್ನು ಮಾಡಿಕೊಂಡು, ಆ ದೇವತಾಶೇವೆ ನಡವ ಬಗ್ಯೆ ಆ ನೆಲ್ಲಿತೀರ್ಥ ಗ್ರಾಮ, ಕರಂಬಾದುಯಂಬಿ ಗ್ರಾಮ ಸಹಾ ಯರಡು ಗ್ರಾಮವನ್ನು ಉತ್ತರ ಬಿಟ್ಟುಕೊಟ್ಟು, ಪ್ರಜೆಗಳಿಗೆ ಊರಿಗೆ ಅಪ್ಪಣೆ ಕೊಟ್ಟು, ಹಾಗೆ ವಿಚಾರ ಮಾಗಣಿ ಯಿರುವಲ್ಲಿಗೆ ಬಂದು, ಅಲ್ಲಿ ಜಲದುರ್ಗದೇವರ ದರುಶನವನ್ನು ಮಾಡಿಕ್ಕೊಂಡು, ದೇವತಾ ಸೇವೆ ನಡವ ಬಗ್ಯೆ ಉತ್ತರವನ್ನು ಬಿಟ್ಟುಕೊಟ್ಟು, ಅಲ್ಲಿಂದ ಹಾಗೆ ಪೊಳಲಿಗೆ ಹೋಗಿ ಅಲ್ಲಿನೆಕೆತ್ತಿರದಲ್ಲಿ ಹಿಂದೆ ಯುಗಾಂತರದಲ್ಲು ಸುರತ ಮಹಾರಾಯನು ಪ್ರತಿಷ್ಟೆಮಾಡಿ ಪೂಜಿಸಿದಂತಾ ದುರ್ಗಾಪರಮೇಶ್ವರಿ ಅಮ್ಮನವರ ದರುಶನವನ್ನು ಮಾಡಿ, ಆ ದೇವತಾ ಸೇವೆ ನಡವ ಬಗ್ಗೆ ಚನ್ನಾಗಿ ವಿಚಾರಿಸಿ, ಉಂಬಳಿ ಉತ್ತರ ಮತ್ತು ಅತಿಶಯವಾಗಿ ಬಿಟ್ಟುಕೊಟ್ಟು, ಮಳಲಿ ಮಾಗಣಿ ಆದ್ಯಂತ ಪ್ರಜೆಗಳ ಕರಶಿಕೊಂಡು, ಸೀಮೆ ಉಟವಳಿ ಲೆಖಪಕ್ಕೆ ವಿಚಾರಿಸಿ, ಅರಮನೇಗೆ ಹೆಚ್ಚಾಗಿ ಹಣಕಾಸು ಕೂಡಿ ಬರುವಂತೆ ಮಾಡಿಕ್ಕೊಂಡು, ಪ್ರಜೆಗಳಿಗೆ ಉಂಬಳಿ ಉತ್ತರವನ್ನು ಬಿಟ್ಟುಕೊಟ್ಟು, ದೇವರ ಆಯಿನ ಉತ್ಸವವನ್ನು ನೋಡಿಕೊಂಡು, ಹಾಗೆ ಅಂಮಣಿಂಜಿದ ವರದೇಶ್ವರ ವಿನಾಯಕದೇವರ ದರುಶನವನ್ನು ಮಾಡಿಕ್ಕೊಂಡು, ನೇತ್ರವತಿನದಿಯನ್ನು ದಾಟಿ, ಅಂಮ್ಯುಂಬಳಕೆ ಹೋಗಿ, ಅಲ್ಲಿ ಕುಂಡಲಿಪರ್ವತದಲ್ಲು ಕುಂಡಲಿಮುನೀಶ್ವರನಿಂದ ಪ್ರತಿಷ್ಟಿತವಾದಂತಾ ಶ್ರೀ ಸೋಮನಾಥಸ್ವಾಮಿದೇವರ ದರುಶನವನ್ನು ಮಾಡಿಕ್ಕೊಂಡು, ದೇವಸ್ಥಾನಲು ಜೀರ್ಣವಾದಂತಾದ್ದು ನೋಡಿ ಜೀರ್ನೋದ್ಧಾರ ಮಾಡಿಸಿ, ದೇವತಾಸೇವೆ ಸಾಂಗವಾಗಿ ನಡದುಬರುವ ಹಾಗೆ ಉತ್ತರವನ್ನು ಬಿಟ್ಟುಕೊಟ್ಟು, ಹಾಗ್ಯೆ ತನ್ನ ಮೂಲಸ್ಥಾನವಾದ ಉಳ್ಯಾಲಕ್ಕೆ ಹೋಗಿ, ಅಲ್ಲಿ ಶೀಮೆ ಪ್ರಜೆಗಳ ಕರಶಿಕೊಂಡು, ಲೆಕ್ಕಪಕ್ಕೆ ವಿಚಾರಿಸಿಕೊಂಡು, ಅರಮನೆಗೆ ಹೆಚ್ಚಾಗಿ ಹಣಕಾಸು ಕೂಡಿ ಬರುವಂತೆ ಮಾಡಿಕ್ಕೊಂಡು, ಶ್ರೀ ಸೋಮನಾಥಸ್ವಾಮಿ ದರುಶನವನ್ನು ಮಾಡಿಕ್ಕೊಂಡು, ಪುನಹಾ ಪುತ್ತಿಗೆ ಅರಮನೇಗೆ ಬಂದು ಸುಖಸತ್ಕಥಾವಿನೋದದಿಂದಾ ರಾಜ್ಯಂಗ್ಯೆಉತ್ತಿದ್ದರು.

೫. ಯಿವರ ಸೊಸೆ ಅಬ್ಬಕದೇವಿಯರಾದ ಚಉಟರು ಶಾಲಿವಾಹನ ಶಕ ವರುಷ ೧೨೦೫ನೆಯ ಸ್ವಭಾನು ಸಂವತ್ಸರದ ಮಾಘ ಬ. ೧೦ ಆರಭ್ಯ ಆಳಿದರು.

೬. ಯಿವರ ಮಗ ಭೋಜರಾಯಚಉಟರು ಶಕ ವರುಷ ೧೨೩೮ನೆಯ ನಳ ಸಂವತ್ಸರದ ಕಾರ್ತೀಕ ಶುದ್ಧ ೧೫ ಆರಭ್ಯ ಆಳಿದರು. ಆಳುತಿರಲಾಗಿ ಯಿವರು 'ರಾಯರು'ಯಂಬ ಹೆಸರು ಯಿಟ್ಟುಕೊಂಡು ಅರಸ್ತಾನ[>ಅರಸುತನ] ಮಾಡುತ್ತಾರೆಂಬ ವರ್ತಮಾನಲು ವಿಜಯನಗರದಲ್ಲು ಅಚ್ಚುತ ಕ್ರಿಷ್ಣರಾಯರು ತಿಳಿದು, ಯಿವರನ ತಮ್ಮಾ ಬಳಿಗೆ ಬರುವಂತೆ ನಿರೂಪ ಅಪ್ಪಣೆಕೊಟ್ಟು, ಜಿಲ್ಲೇನ ಹರಕಾರ ಕಳುಹಿಸಿ ಕೊಟ್ಟು ಕರಶಿದಲ್ಲಿ, ಅರಮನೆಯಲ್ಲು ಯಿವರ ತಮ್ಮ ಲಕ್ಷ್ಮೀಅರಸರನ

ಯಿಟ್ಟು, ಸಂಗಡಾ ಕರಕೊಂಡ ಜನರ ಪ್ರಧಾನಿ ನಾರಣಪ್ಪಯ ಜನ ೧, ಕಳವ[>ಕವ]ಳಿಗೆ ನಾರಣ ಶ್ಯಾನುಭೋಗ ಜನ ೧, ರಾಯಸ್ತದ ಕಾಶಿಪಂತ್ಯ ಜನ ೧, ಅರ[>ವ]ಸರದ ಸುಬ್ಬರಾಯ ಜನ ೧, ನಾಯಕವಾಡಿಗಳು ಪದುಮ ನಾಯಕ ಜನ ೧, ಕೋಟಿನಾಯಕ ಜನ ೧, ಅಂತು ಯಿಷ್ಟು ಮಂದಿ ಮುಖ್ಯಾ ಜನರು ಊಳಿಗದವರು ಜ ೫೦ ಆಯುಧಪಾಣಿಗಳಾಗಿ ಹೋರಟು, ಶ್ರೀ ಸೋಮನಾಥಸ್ವಾಮಿ ದರುಶನವ ಮಾಡಿಕೊಂಡು ಹೊರಟು ವಿಜಯನಗರಕ್ಕೆ ಹೋಗಿ, ವೊಂದು ಬಿಡಾರವನ್ನು ಮಾಡಿಕ್ಕೊಂಡು ಆರು ತಿಂಗಳು ಪರಿಯಂತ್ರ ಕಾದುಕೊಂಡು ಯಿರುತ್ತ, ರಾಯರ ದರುಶನಲು ಆಗದೆ ಬಹಳ ಚಿಂತೆಯಿಂದ ವೊಂದಾನೊಂದು ದಿನ ರಾತ್ರೆ ಮಲಗಿ ನಿದ್ರೆಗೈವ ವೇಳ್ಯೆದಲ್ಲಿ ಸ್ವಪ್ನದಲ್ಲು ವೊಬ್ಬ ಬ್ರಹ್ಮಚಾರಿ ಹುಡುಗನು ಬಂದು, "ನಾನು ರಾಯರ ಭೇಟಿ ಮಾಡಿಸಿ ಕೊಡುತ್ತೇನೆ. ನಿನ್ನ ಬೀಡಾರದ ಸಮೀಪದ ವಟವೃಕ್ಷದ ಬುಡದಲ್ಲಿ ವೊಂದು ದೇವತಾ ಬಿಂಬಅದೆ. ಅದನ್ನು ನಿನ್ನ ಊರಿಗೆ ಕೊಂಡು ಹೋಗಿ, ದೇವಸ್ಥಾನ ಕಟ್ಟಿಸಿ ಪೂಜೆ ಮಾಡೀಯಾ?" ಯಂತ ಕೇಳುವಾಗ್ಯೆ "ಆದೀತು"ಯಂತ ಹೇಳಿದಲ್ಲಿ, ಹಾಗೆ ಎಚ್ಚರಿಕೆ ಆಗಿ ಯೆದ್ದು, ಬೆಳಗಾದ ಬಳಿಕ ತಮ್ಮ ಕಡೆ ಸಾಮಾಜಿಗರ ಕೈಯ್ಯ ಹೇಳಿ, ಅವರನ್ನು ಕರಕೊಂಡು ಆ ಮರದ ಬುಡಕ್ಕೆ ಹೋಗಿ ನೋಡುವಾಗ್ಯೆ ವೊಂದು ಶಿಲಾಮೂರ್ತಿಯು ಯಿದ್ದಲ್ಲಿ, ಅದನ್ನು ಕಂಡು, ಬಿಡಾರದಲ್ಲಿ ಯಿಟ್ಟುಕೊಂಡು, ಬ್ರಹ್ಮಚಾರಿಯು ಸ್ವಪ್ನದಲ್ಲಿ ಬಂದು ಹೇಳಿದ ಕಾರಣ ಸುಬ್ಬರಾಯದೇವರೆ ಯಂತ ನಿಶ್ಚೈಸಿ, ಪ್ರಾರ್ಥನೆಯನ್ನು ಮಾಡಿದ ತರುವಾಯ, ಮೂರನೆ ದಿವಸದಲ್ಲಿ ರಾಯರಿಗೆ ಗ್ಯಾಪಕ ಬಂದು "ಚವುಟರನ ಅವರ ಸಾಮಾಜಿಕರ ಸಹಾ ವಡ್ಡೋಲಗದಲ್ಲಿ ಕರಶಿ"ಯಂತ ಅಪ್ಪಣೆಯಾಗಿ, ಯಿವರನ ಕರಕೊಂಡು ಹೋಗಿ ರಾಯರ ಸನ್ನಿಧಾನದ ಆಸ್ಥಾನದಲ್ಲಿ ರಾಯರ ಭೇಟಿ ಆದಲ್ಲಿ "ನೀಉ ರಾಜ್ಯವನ್ನು ಅನುಭವಿಸಿಕೊಂಡು ನಮಗೆ ಕಪ್ಪನ್ನು ಕೊಡದೆ ರಾಯರು ಯಂತ ಹೆಸರು ಯಿಟ್ಟುಕ್ಕೊಂಡು ಯೀ ಮೇರೆಗೆ ಮದಯುಕ್ತರಾಗಿ ನಡವ ಕಾರಣವೇಣು?"ಯಂತ ಭೋಜರಾಜಚವುಟರ ಕೈಯ ಪರಾಂಬರಿಸಿ. ಯಿವರ ಕಡೆ ಸಾಮಾಜಿಕರ ಮುಖವನ್ನು ನೋಡಿ "ಯೀ ವಿದ್ಯಮಾನ ಯೇನು?"ಯಂತ ಅಪ್ಪಣೆ ಆದಲ್ಲಿ, ಆಗ್ಯೆ ಕವಳಿಗೆ ನಾರಣಪ್ಪ ಶ್ಯಾನುಭಾಗನು ಅರಿಕೆ ಮಾಡಿಕೊಂಡ ವಿವರ: "ಯೀ ಚವುಟರ ತಾಯಿಗೆ ಗಂಡುಮಕ್ಕಳು ಹುಟ್ಟದೇ ಯಿದ್ದ ಕಾರಣ, ಮಗ ಹುಟ್ಟಿದರೆ ರಾಯರ ಹೆಸರ ಯಿಟ್ಟೇನಂತ ಹೇಳಿ, ತಮ್ಮಾ ಚರಣವನ್ನು ಮನದಲ್ಲಿ ಧ್ಯಾನಿಸಿ ಪ್ರಾರ್ಥನೆ ಮಾಡಿಕೊಂಡದರಿಂದ, ಯೀ ಗಂಡುಕುಮಾರ ಜನಿಸಿದ್ದರಿಂದ ಯಿವರಿಗೆ ದೇವರಪಾದ ಹೆಸರು ಯಿಟ್ಟಿದ್ದಾರೆ. ಮಗನ ಸಂರಕ್ಷಣ್ಯವೇನಿದ್ದರು ದೇವರ ಪಾದಕ್ಕೆ ಕೂಡಿದೆಯಂತ ಅರಿಕೆ ಮಾಡಿದಲ್ಲಿ, ಆ ಮಾತನ್ನು ರಾಯರು ಚಿತ್ತಕ್ಕೆ ತಂದು, ಕಾಲುಗಳಿಗೆ ಪರಿಯಂತ್ರ ಭೋಜರಾಜ ಚಉಟರ ಮುಖವನ್ನು ನೋಡಿ, ಆ ಬಳಿಕಾ "ನಮಗೆ ಹರಿಕೆ ಹೇಳಿಕೊಂಡು ಹುಟ್ಟಿದ ಮಗನಾದ ಮೇಲೆ ನಮ್ಮಲ್ಲಿ ನಿಮಗೆ ದೇವತಾ ಭಾವನೆಯುಂಟಾಯಿತು. ಅದರಿಂದ ಯೀ ಭೋಜರಾಯನು ನಮಗೆ ಮಗನೆ ಸರಿ"ಯಂತ ಹತ್ತಿರ ಕರದು ಕೂಡ್ರಿಸಿಕೊಂಡು ಅಪ್ಪಣೆ ಕೊಟ್ಟ ವಿವರ: "ನೀವು ಯಾರ ವಂಶಸ್ತರು? ನಿಮ್ಮ ಕುಲದೇವರು ಯಾವ ದೇವರು?"ಯಂತ ಪರಾಂಬರಿಸಿದಲ್ಲಿ, "ನಾವು ಸೋಮಾನ್ವಯಭೂಪಾಲಜನಿತ ಜೈನಕ್ಷೇತ್ರೆಯ ವಂಶದವರು, ನಮ್ಮಾ ಕುಲಸ್ವಾಮಿಯು ನೇತ್ರಾವತಿನದಿಯು ಪಶ್ಚಿಮಸಮುದ್ರ ಸಂಗಮ ಸ್ಥಳಕ್ಕೆ ಸಮೀಪವಾದ ಸಮುದ್ರ ತೀರದಲ್ಲಿ ಯಿರುವ ರುದ್ರಪಾದ ಕ್ಷೇತ್ರವಾದ ಉಳ್ಳಾಲದ ಮಾಗಣಿ ಸೋಮೇಶ್ವರದಾ ಶ್ರೀ ಸೋಮನಾಥಸ್ವಾಮಿಯೇ ನಮ್ಮ ಕುಲದೇವರು, ಆ ಸ್ವಾಮಿ ಅನುಗ್ರಹದಿಂದ

ನಮ್ಮ ಹಿರೇರಿಗೆ ಯೀ ರಾಜ್ಯಪ್ರಾಪ್ತಿ ಆದಂತಾದ್ದು"ಯಂಬ ಉತ್ತಾಂತ ಯಾವತ್ತು ಅರಿಕೆ ಮಡಿದಲ್ಲಿ ಪರಾಂಬರಿಸಿ ಸಂತೋಷಬಟ್ಟು, ವೀಳ್ಯವನ್ನು ತರಸಿಕೊಟ್ಟು, "ಯೀಗ ಬಿಡಾರಿಗೆ ಹೋಗಿ, ನಾಡದು ನಿಮ್ಮಾ ಸಾಮಾಜಿಕರನ್ನು ಕರಕೊಂಡು ಬನ್ನಿ"ಯಂತ ಅಪ್ಪಣೆ ಕೊಟ್ಟಲ್ಲಿ ಅದೇ ಪ್ರಕಾರ ಬಿಡಾರಕ್ಕೆ ಬಂದು, ಮರುದಿವಸಾ ವಿರೂಪಾಕ್ಷದೇವರ ದರುಶನವನ್ನು ಮಾಡಿಕ್ಕೊಂಡು, ಆ ಮರುದಿವಸ ರಾಯರ[>ರು] ಆಸ್ತಾನದಲ್ಲಿ ಕುಳಿತಿರುವ ಸಮಯದಲ್ಲಿ ಹೋಗಿ, ದರುಶನವನ್ನು ಮಾಡಿ ಕುಳಿತಿರುವಾಗ್ಯೆ ಪರಾಂಬರಿಸಿ "ನಿಮ್ಮಾ ಊರಿಗೆ ನೀವು ಹೋಗಿ, ನಿಮ್ಮ ಶೀಮೆ ನೀವು ಅನುಭವಿಸಿಕೊಂಡು ದೇವತಾಧರ್ಮ ಅಗ್ರಹಾರ ಬ್ರಹ್ಮದಾಯು ಮುಂತಾದ ಧರ್ಮಂಗಳ ನಡಸಿಕೊಂಡು ರಾಜ್ಯಧರ್ಮ ಪದ್ಧತಿ ಪ್ರಕಾರ ನಡಕೊಳ್ಳುತ್ತ ನಿಮ್ಮ ಶೀಮೆ ಪೂರ್ವಪ್ರಕಾರ ಉಂಬಳಿಯಾಗಿ ಅನುಭವಿಸಿಕೊಂಡು, ನಿಮ್ಮ ವಂಶದಲ್ಲಿ ಜನಿತರಾಗಿ ರಾಜ್ಯಭಾರ ಮಾಡುವಂತಾವರಿಗೆ 'ರಾಯ' ಶಬ್ದ ಪೂರ್ವಕವಾಗಿ ನಾಮಕರಣ ಯಿಟ್ಟು, ಸುಖದಿಂದಾ ಧರ್ಮಯುಕ್ತ ಅಪಯಶಸ್ಸು ಬಾರದಂತೆ ನಡಕೊಳ್ಳಿ"ಯಂತ ಅಪ್ಪಣೆ ಮಾಡಿದಲ್ಲಿ, ಆಗ್ಯೆ "ದೇವರ ಸನ್ನಿಧಾನದಿಂದ ಯೇನಾದರೂ ವೊಂದು ಧ್ವಜ ಚಿಹ್ನೆಗೆ ಅಪ್ಪಣೆ ಆಗಬೇಕೆಂ"ತ ಅರಿಕೆ ಮಾಡಿಕೊಂಡಲ್ಲಿ, "ನೀಉ ನಮ್ಮ ಮಗನೇ ಸರಿಯಂತ ಶಿರಸ್ಸಿನಲ್ಲಿ ಅಭಯಹಸ್ತವನ್ನು ಯಿಟ್ಟು, ನಾಉ ಯಿರಿಸುವಂಥಾ ಬಿರಿದು ಬಾವಲಿ ನೀಉ ಯಿರಿಸಿಕೊಳ್ಳಿ"ಯಂತ ಅಪ್ಪಣೆ ಆದ್ದರಿಂದ ಅಪ್ಪಣೆ ತೆಗೆದುಕೊಳ್ಳುವಾಗ್ಯೆ ಮುಂಡಾಸು ಹಚ್ಚಡ ಅಂಗಿ ಶಲ್ಯ ನಡುಕಟ್ಟು ಮುತ್ತಿನ ತುರಾಯಿ ಸರ ಪದಕ ಹಸ್ತ ಕಡಗ ಮುಂತಾಗಿ ಉಡುಗರೆ ದಯವಿಟ್ಟು, ಆ ಬಳಿಕಾ 'ವಾಹನ ಯೇನದೆ?'ಯಂತ ಪರಾಂಬರಿಸಿ ಪಾಲಕಿಯನ್ನು ದಯವಿಟ್ಟು ಕೊಟ್ಟು, ಅಪ್ಪಣೆ ತೆಗೆದುಕೊಂಡು ಹೊರಡುವಾಗ್ಯೆ ಹಿಡಿಸಿಕೊಂಡು ಬಂದಂತಾ ಬಿರದು ಬಾವಲಿ, ಕುಳಿತುಕೊಂಬಂತಾ ಹಸರು ಸದರು, ಹಸರು ಅಲಂಕೃತವಾದ ಪಲ್ಲಕ್ಕಿ ವಂದು, ಹಸರು ಬಸವನ ಟೇಕ್ಕೆ, ನಿಶಾನಿವೊಂದು ಹರಸು, ಯರಡು ಹಸರು ಜಾಲಿಹತ್ತಿಗೆ, ಯರಡು ಹಸರು ರುಮಾಲು, ಯರಡು ಹಸರು ಬೀಸಣಿಗೆ, ಯರಡು ಹಸರು ಚಉರಿ, ಯರಡು ಗಗ್ಗರದ ಯಿಟ್ಟಿ, ಯರಡು ವೊಂಟಿಕಶೆ ಯಿಟ್ಟಿ, ೨ ಜಾಡಿಹರಿಗೆ, ಯರಡು ಹುದೆಯದ ಕತ್ತಿ, ಹಸರು ರುಮಾಲು, ಹಾಕುವವರ ಕೈಯ್ಯ ಬಗಲಲ್ಲು ಯಿರುವ ಕತ್ತಿ ಯರಡು, ವಳಗನ ಉಳಿಗದವರ ಕೈಯ ಹಿಟವ ಹುಚಿರಕತ್ತಿ ಯರಡು, ಉಭಯಂ ಕತ್ತಿ ನಾಲ್ಕು, ಬೆಳ್ಳಿ ಕಟ್ಟಿದ ಬೆತ್ತ ಯರಡು, ನೆಗಳ ಬಾಯಿ ಸಗ್ಗಳೆ, ಚಿನ್ನದ ಗಿಂಡಿ ವೊಂದು, ಪಟ್ಟಿ ಯರಡು, ರಣಗಾಳೆ ಯರಡು, ವಂಟೆ ಮಾಲೆ, ನಗಾರಿ ಯರಡು, ಪಟ್ಟದ ಆನೆ ವೊಂದು, ಪಟ್ಟದ ಕುದುರೆ ಯರಡು, ಪಂಚದೀವಟಿಗೆ ಯರಡು, ವಾದ್ಯಮೇಳ ಹಲಗೆ ಕೊಂಬು ಪಾಟಕ ಜನ ೨ ಮುಂತಾದ ತೂರ್ಮ್ಯಾತ್ರಯ ಯಿಂತಿ ಸಂಭಮದಿಂದಾ ವಿಜಯನಗರದಿಂದ ಹೊರಟು ತಮ್ಮಾ ಸ್ಥಳಕ್ಕೆ ಬಂದರು.

ಅಲ್ಲಿ ವಿಜಯನಗರದಿಂದ ಹೊರಡುವಾಗ್ಯೆ ಪಲ್ಲಕ್ಕಿ ಬೋಯರು "ತಮ್ಮಾ ಮಾರಿಯಮ್ಮ ದೇವರಿಗೆ ಗುಡಿ ಕಟ್ಟಿಸಿಕೊಟ್ಟು ಉಂಬಳಿ ಉತ್ತರ ಬಿಟ್ಟುಕೊಟ್ಟರೆ ಬಂದೇಉ"ಯಂತ ಹೇಳಿಕೊಂಡದರಿಂದ, "ಅದೇ ಪ್ರಕಾರ ಆಗಲಿ"ಯಂತ ಹೇಳಿ ಸಂಗಡ ಬಂದ ಬಳಿಕ, ಮೂಡಬರಿಯಲ್ಲು ಮಾರಿಯಮ್ಮನ ಗುಡಿ ಕಟ್ಟಿಸಿಕೊಟ್ಟು, ಉಂಬಳಿಯನ್ನು ಬಿಟ್ಟು ಕೊಟ್ಟರು. ವಿಜಯನಗರದಲ್ಲು ಸ್ವಪ್ನಸೂಚಕವಾಗಿ ಬಂದಾ ಸುಬ್ಬರಾಯದೇವರ ಮೂರ್ತಿಯನ್ನು ಸಂಗಡಲೆ

ಸಾಗಿಸಿಕೊಂಡು ಬಂದು, ಕಡಂದಿಲೆ ಮಾಗಣೆಯಲ್ಲು ದೇವಸ್ಥಾನ ಕಟ್ಟಿಸಿ ಪ್ರತಿಷ್ಟೆ ಮಾಡಿಸಿ, ಉಂಬಳಿ ಉತ್ತರ ಬಿಟ್ಟು, ಪೂಜೆ ಪುನಸ್ಕಾರ ನಡಸುತ್ತಾ ಬಂದರು. ಯೀ ಭೋಜರಾಯರು ಅತೀ ಸೌಂದರ್ಯಪುರುಷರು, ಮಿತಭಾಷೆಗಳು ಮಿತ ಆಹಾರಿಗಳು, ಮಧುರವಾದ ಆಹಾರ ಪ್ರೀಯರೂ, ಸ್ವಸ್ತ್ರೀ ವ್ರತರು, ದೇವತಾಭಕ್ತಿಪರರು, ಸತ್ಕಥಾಶ್ರವಣಾಸಕ್ತರು, ಸತ್ಪಾತ್ರದಾನಿಗಳು, ಪ್ರಜಾಪಾಲಕರು, ಪಾಪಭೀತರು, ಯಶೋವಂತರು.

೭ ಯಿವರ ಸೊಸೆ ಪದುಮಲದೇವಿಯರಾದ ಚಉಟರು ಶಕ ವರುಷ ೧೨೭೨ನೆಯ ವಿಕ್ರತಿ ಸಂವತ್ಸರದ ಚೈತ್ರ ಶು ॥೫ ಆರಭ್ಯಾ ಆಳಿದರು. ಆಳುತಿರಲಾಗಿ ಯಿವರ ಗಂಡ ಮೂಲ್ಗಿಕೆ ದುಗ್ಗಣಸಾವಂತರ ಮನೇಗೆ ವೊಂದಾನೊಂದು ದಿನ ಹೋಗಿದಲ್ಲಿ, ಆತನು ಯಿವರ ಕೈಯ್ಯಿಂದ ಪಟ್ಟದ ಮುದ್ರೆ ಉಂಗರವನ್ನು ತೆಗೆದುಕೊಂಡು, ಯೀ ಚಉಟರನ್ನು ಹತಮಾಡಿ ಸೀಮೆಯನ್ನು ತನ್ನ ಸ್ವಾಧೀನ ಮಾಡಿಕೊಳ್ಳಬೇಕೆಂತ ಮಾಡಿದಲ್ಲಿ, ಯೀ ವಿವರವನ್ನು ಪದುಮಲದೇವಿಚಉಟೀರು ತಿಳಿದು ಚಿಂತಾಕ್ರಾಂತರಾಗಿ, "ಶ್ರೀಸೋಮನಾಥ"ಯಂತ ತದೇಕಧ್ಯಾನದಲ್ಲಿ ಉಪ್ಪರಿಗೆ ಮೇಲೆ ಕುಳಿತಿರಲಾಗಿ, ಯಿತ್ತಲಾಗಿ ಪುತ್ತಿಗೆ ಅರಮನೆಯಲ್ಲು ಕಟ್ಟಿದ್ದ ಆನೆಯು ಸಂಕಲೆಯನ್ನು ಮುರಕೊಂಡು ಮೂಲ್ಗಿಕೆ ಸಾವಂತರ ಅರಮನೇಗೆ ಬಂದು, ಉಪ್ಪರಿಗೆ ಕಡಕಟ್ಟು ಮುರದು, ಪದುಮಲಾದೇವಿ ಚಉಟರಿಗೆ ಸೊಂಡಿಲು ಕೊಟ್ಟು, ಉಪ್ಪರಿಗೆಯಿಂದಾ ಯಿಳಿಸಿ, ತನ್ನ ಬೆನ್ನ ಮೇಲೆ ಕೂಡಿಸಿಕೊಂಡು, ಪುತ್ತಿಗೆ ಅರಮನೇಗೆ ಕರಕೊಂಡು ಬರುವಾಗ್ಯೆ, ಮೂಲ್ಗಿಕೆ ಸಾವಂತರ ಕಡೆಯವರು ಕಳ್ಳತನದಿಂದ ಬಂದು ಅಗ್ನಿಪ್ರವೇಶಾ ಮಾಡಿದರು. ಅದನ್ನು ಕಂಡು, ನಂದಿಸಿ ಅರಮನೆ ಹೊಕ್ಕು ಪುನಹಾ ಕಟ್ಟಿಸಿ, ಯಿನ್ನು ಮೇಲೆ ಸಾವಂತರ ಮನೆತನಕ್ಕೂ ಚವುಟರ ಮನೆತನಕ್ಕೂ ನಂಟತನ ಕಾರಣವಿಲ್ಲಾಯಂತ ತಹ ಮಾಡಿದರು.

೮ ಯಿವರ ಮಗ ಚೆನ್ನರಾಯಚಉಟರು ಶೀಮೆ ಆಳಿಕ್ಕೊಂಡು ಯಿದ್ದರು. ಶಾಲಿವಾಹನ ಶಕ ವರುಷ ೧೩೦೪ನೆಯ ದುಂದುಭಿ ಸಂವತ್ಸರದ ಆಷಾಡ ಬಹುಳ ೯ ಆರಭ್ಯ ಆಳಿದರು.

೯ ಸೊಸಿ ಚೆನ್ನಮ್ಮಾದೇವಿಚಉಟರು ಶಕ ವರುಷ ೧೩೨೫ನೆ ಸ್ವಭಾನು ಸಂವತ್ಸರದ ಶ್ರಾವಣ ಬಹುಳ ೫ ಆರಭ್ಯಾ ಆಳಿದರು.

೧೦ ಮಗ ಭೋಜರಾಯಚಉಟರು ಶಾಲಿವಾಹನ ಶಕ ವರುಷ ೧೩೬೦ . . . . . ಸಂವತ್ಸರದ ಚಯಿತ್ರ ಶು॥ ೧೧ ಆರಭ್ಯಾ ಆಳಿದರು.

೧೧ ಅಳಿಯ ತಿರುಮಲರಾಯಚಉಟರು ಶಾಲಿವಾಹನ ಶಕ ವರುಷ ೧೩೯೦ನೆ ಸರ್ವಧಾರಿ ಸಂವತ್ಸರದ ಮಾಘಶು॥ ೧೨ ಆರಭ್ಯ ಆಳಿದರು.

೧೨ ಸೊಸಿ ತಿರುಮಲದೇವಿಚಉಟರು ಶಕ ವರುಷ ೧೪೩೬ನೇ ಭಾವ ಸಂವತ್ಸರದಾರಭ್ಯ ಆಳಿದರು.

೧೩ ಮಗಳು ಅಬ್ಬಕ್ಕದೇವಿ ಚಉಟರು ಶಾಲಿವಾಹನ ಶಕ ವರುಷ ೧೪೫೯ನೇ ಹೇವಳಂಬಿ ನಾಮ ಸಂವತ್ಸರದ ವೈಶಾಖ ಶ॥೩ ಆರಭಾ ಯಿರಲಾಗಿ, ಕಾರ್ಕಳದ ಬೈರಸ ಒಡೆಯರಿಗೂ ಯಿವರಿಗೂ ಜಗಳ ಬಂದು, ಆತನು ಮಂದಿ ಮಕ್ಕಳ ಕಟ್ಟಿಕೊಂಡು ಬಂದು, ಯುದ್ಧಕ್ಕೆ ಬಂದಲ್ಲಿ

ಯೀ ಚಉಟರ ಕಡೆಯಿಂದ ಪ್ರಧಾನಿ ನಾರಣಪ್ಪಯ್ಯ, ತಿಮ್ಮಾನಾಯಕ, ಪದುಮನಾಯಕ ಸಹಾ ಮಂದಿ ಮಕ್ಕಳ ಕಟ್ಟಿಕೊಂಡು ಹೋಗಿ ಯುದ್ಧವಾಗಿ ಸಮಯುದ್ಧವಾಗಿ, ವಂದು ಧಫಕ್ಕೆ ಆತನು ತಿರುಗಿ ಹೋದನು. ದಫಾ ವೊಂದಕ್ಕೆ ಪುನಹಾ ಮಂದಿ ಮಕ್ಕಳ ಕಟ್ಟಿಕೊಂಡು ಬಂದು ಯುದ್ಧ ಆಗುವಾಗ್ಯೆ ಯೀ ಚವುಟರ ಕಡೆಯವರೆಲ್ಲ ಭಗ್ನರಾಗಿ ವೋಡಿ ಬಂದರು. ಆ ಮೇಲೆ ಅಬ್ಬಕ್ಕದೇವಿ ಚವುಟೀರು ತನ್ನಾ ಕಡೆ ಪ್ರಧಾನಿ ನಾಯಕವಾಡಿಗಳು ಸಹಾ ತಂಡ ತಂಡವಾಗಿ ಮಂದಿಮಕ್ಕಳ ಕಟ್ಟಿಕೊಂಡು ಹೋಗಿ ಜಗಳಾ ಆಗುವಾಗ್ಯೆ, ಬೈರಸವೊಡೇರು ಸಾಣಾರ ಕಣಿವೆ ಬಳೀಲಿ ಲಿಂ[>ವಿಂ]ಗಡವಾಗಿ ಗಿಡದಲ್ಲು ವೊಂದು ಸ್ತಳದಲ್ಲು ಮಂದಿ ಮಕ್ಕಳ ಕಟ್ಟಿಕೊಂಡು ಯೀ ಚವುಟರನ ಮುಂದೆ ಬಿಟ್ಟುಕೊಂಡು, ಹಿಂದಣಿಂದ ಬೆನ್ನಟ್ಟಿಹೋಗಿ ತಲೆ ಹೊಡದಲ್ಲಿ, ಮುಂದೆ ಹೋಗುವಾಗ್ಯೆ ಅವನ ಕಡೆ ನಾಯಕವಾಡಿಯು ಆ ತಲೆಯನ್ನು ತೆಕ್ಕೊಂಡು ಹೋಗಿ ಬೈರಸವೊಡೇರು ಕಾರ್ಕಳಕ್ಕೆ ಹೋದ ತರುವಾಯ ಒಪ್ಪಿಸಿದಲ್ಲಿ, ವೊಂದು ಹರಿವಾಣದಲ್ಲಿ ಹಾಕಿ ಬೈರಸವೊಡೇರ ಮುಂದುಗಡೆ ಯಿಟ್ಟಲ್ಲಿ, ಆ ತಲೆಯು ಬೈರಸವೊಡೇರು[>ರ] ಅಭಿಮುಖವಾಗದೆ ತಿರುಗಿದಲ್ಲಿ ಆಶ್ಚರ್ಯಬಟ್ಟು, 'ಸತ್ತ ಮೇಲೂ ಕೂಡಾ ನನ್ನ ಮುಖಾ ನೋಡದೆ ಮುಖಾ ತಿರುಗಿಸಿದ ಮೇಲೆ ಯೀ ತಲೆ ಶೂಲದ ಮೇಲೆ ಯೇರಿಸಿ ಬಿಡಿ'ಯಂತ ತನ್ನ ಕಡೆಯವರಿಗೆ ಹೇಳುವಾಗ್ಯೆ, ಯೀ ಮಧ್ಯದಲ್ಲಿ ಚವುಟರ ಕಡೆ ವೊಬ್ಬ ಮಂಗಿಲಾ ಯಂಬವನು ಬೈರಸವೊಡೇರ ಬಗ್ಯೆ ಜನರ ಕೈಯಿಂದ ಅಪಹರಿಸಿಕೊಂಡು ಕಾಡುದಾರಿ ಹೊಕ್ಕು ತಕ್ಕೊಂಡು ಬಂದನು. ಅಷ್ಟರ ವಳಗೆ ಯಿತ್ತಲಾಗಿ ಚಉಟರ ತಲೆ ಬಿದ್ದ ತರುವಾಯ ಮಂದಿ ಮಕ್ಕಳೆಲ್ಲಾ ಚ . . . . ವರಿದಲ್ಲಿ, ಅಷ್ಟರ ವಳಗೆ ಚವುಟರ ಕಡೆ ಪ್ರಧಾನಿ ನಾಯಕವಾಡಿಗಳು ಮುಂತಾಗಿ ಚವುಟರ ಕಳೇಬರ ಬಿದ್ದ ಬಳಿಗೆ ಹೋಗಿ, ಯೀ ವರ್ತಮಾನಕ್ಕೆ ಪುತ್ತಿಗೆಯವರ ಮಗ ಚಿಕ್ಕರಾಯಚಉಟರ ಬಳಿಗೆ ಹೇಳಿ ಕಳುಹಿಸಿ ಕೊಟ್ಟಲ್ಲಿ, ಅವರು ಅಲ್ಲಿಗೆ ಬಂದು ದುಃಖ ಪಡುತಿರಲಾಗಿ, ಆ ವೇಳ್ಯೆದಲ್ಲಿ ಮಂಗಿಲಾ ಯಂಬವನ[>ನು] ಶಿರಸ್ಸನ್ನು ತಂದು ವೊಪ್ಪಿಸಿದಲ್ಲಿ, ಅವರ ಶವಾ ಶಿರಸ್ಸು ಸಹಾ ಪುತ್ತಿಗೆ ಸಾಗಿಸಿಕೊಂಡು ಹೋಗಿ ಸಂಸ್ಕಾರವನ್ನು ಮಾಡಿದರು.

೧೪ ಆ ತರುವಾಯ ಮಗ ಚಿಕ್ಕರಾಯಚವುಟರಿಗೆ ಶಾಲಿವಾಹನ ಶಕ ವರುಷ ೧೪೮೩ನೇ ದುರ್ಮುಖಿ ಸಂವತ್ಸರದ ಮಾರ್ಗಶಿರದಲ್ಲು ಪಟ್ಟವಾಗಿ, ತಮ್ಮಾ ಕಡೆ ಪ್ರಧಾನಿ ಕವಳಿಗೆ ಶಾನಭಾಗರು ಮೊದಲಾಗಿದ್ದವರನ್ನೆಲ್ಲಾರೂ ಕೂಡಿ ಆಲೋಚನೆ ಮಾಡಿ, "ತಮ್ಮ ತಾಯನ್ನು ಬೈರಸವೊಡೇರು ಹೊಡೆದು ಹಾಕಿದಕ್ಕೆ ಸರ್ವಯತ್ನದಲ್ಲಿ ಅವನ ತಲೆ ನೆಲಕ್ಕೆ ಬೀಳಗೆಡಹದೆ ಯಿದ್ದರೆ ಹುಟ್ಟಿ ಪ್ರಯೋಜನ ಯೇನದೆ?"ಯಂತ ನಿಶ್ಚೆಯಿಸಿ ಯೀ ಬಗ್ಗೆ ತಮ್ಮಾ ಸಂತಾನದವರಾದ ಸುರಾಲ ತ್ತೊಳಹಾರ ಬಳಿಗೆ ಸವಿಸ್ತಾರವಾಗಿ ಹೇಳಿ ಕಳುಹಿಸಿ ಕೊಟ್ಟಲ್ಲಿ ಅವರು ಪಶ್ಚಾತ್ತಾಪ ಬಟ್ಟು, "ಬಿದರೂರಲ್ಲು ಯಿಕ್ಕೇರಿ ಅರಸುಗಳಾದ ವೆಂಕಟಪ್ಪನಾಯಕರು ಬಹಳ ಕುದಿರಿ ಮಂದಿ ಕಟ್ಟಿಕೊಂಡು ಪ್ರಬಲರಾಗಿ ಯಿದ್ದಾರೆ; ಅವರ ದಂಡ ಯಿಳಿಸ್ತರೆ ಯಿವನ ಸಾಧ್ಯಾಮಾಡಬಹುದು"ಯಂಬುದಾಗಿ ಆಲೋಚಿಸಿ. ಯೀ ವಿವರವನ್ನು ಚವುಟರ ಬಳಿಗೆ ಹೇಳಿ ಕಳುಹಿಸಿ ಕೊಟ್ಟು, ಉಭಯತರು ವೊಟ್ಟಾಗಿ ಯಿಕ್ಕೇರಿ ವೆಂಕಟಪ್ಪನಾಯಕರ ಬಳಿಗೆ ರಾಯಸ್ತ ಕಾಶೀಪತಿ ಪಯಣಾಮಾಡಿ ಹೇಳಿ ಕಳುಹಿಸಿ ಕೊಟ್ಟು, ಅವರು ಬರುವಂತೆ ಮಾತು ಗೊತ್ತುಮಾಡಿಕೊಂಡು, ಆ ಬಳಿಕಾ ಹೊಸಂಗಡಿ ಘಟ್ಟವನ್ನು ಕಡದು ಮಾರ್ಗವನ್ನು ಮಾಡಿಸಿಕೊಟ್ಟು, ಅತ್ತಲಾಗಿಂದ ಮಂದು ಕುದರಿ ದಂಡು ತೆಗೆದುಕೊಂಡು

ವೆಂಗಟಪ್ಪನಾಯಕರು ಬಂದು ವತಯವಾಗಲಾಗಿ, ಯಿತ್ತಲಾಗಿಂದ ಚಿಕ್ಕರಾಯಚವುಟರು ಮಂದಿಮಕ್ಕಳ ತೆಗೆದುಕೊಂಡು ಹೋಗಿ ವತ್ತಿ ಯುದ್ಧವನ್ನು ಮಾಡಿ ಬೈರಸವೊಡೇರನ್ನ ಹತಗೊಳಿಸಿದರು.

ಆ ತರುವಾಯ ವೆಂಗಟಪ್ಪನಾಯಕರು ಕಾರಕಳದ ಹೊಬಳಿ ಸೀಮೆಯ ಹೊಕನ್ನು ತಮ್ಮಾ ಆಧೀನ ಮಾಡಿಕೊಂಡು, ವೆಂಗಟಪ್ಪನಾಯಕರಿಗೂ ಚವುಟರಿಗೂ ಭೇಟಿ ಆಗಿ ಯಿಷ್ಟಾಲಾಪಗಳಾಗಿ ಯೀ ಚವುಟರ ತಾಯಿ ಅಬ್ಬಕ್ಕದೇವಿಯವರನ ಘಾತಿಸಿದ ಸ್ತಳಾ ಸಾಣೂರ ಗ್ರಾಮವನ್ನು ಕಾರ್ಕಳದ ಸೀಮೆಯಿಂದ ವಿಂಗಡಿಸಿ ಚಿಕ್ಕರಾಯಚವುಟರಿಗೆ ಉಂಬಳಿ ಬಿಟ್ಟುಕೊಟ್ಟರು. ಸಂಗಡವೆ ಕೊಡಿಯಾಲ ಪರಿಯಂತರದಲ್ಲು ಹೋಗಿ ಕೊಡೆಯಾಲದಲ್ಲಿ ಬಂಗರ ಮೇಲೆ ಯುದ್ಧ ಮಾಡುವಾಗ್ಯೆ ಕಲುಲು ಮಾಡಿಕೊಂಡು, ಯಿಕ್ಕೇರಿ ಅರಸುಗಳಿಗೆ ಬಿಟ್ಟುಕೊಟ್ಟು, ತಾಉ ನಂದಾವರಕ್ಕೆ ಹೋದರು.

ಅನಂತರದಲ್ಲಿ ಅಜಲರು ಚಉಟರ ಮುಖಾಂತ್ರ ಬಂದು ಕಾಣಿಶಿಕೊಂಡು ಕಲುಲು ಮಾಡಿಕೊಂಡರು. ಕುಂಬಿಳೆ ಕೌಸಿಂಗ ಅರಸುಗಳು ಚಉಟರ ಮುಖದಲ್ಲೆ ಬಂದು ಕಲುಲು ಮಾಡಿಕೊಂಡರು. ಮೂಲರು ಚವುಟರ ಮುಖದಲ್ಲೆ ಬಂದು ಕಾಣಿಸಿಕೊಂಡು ಕಲುಲು ಮಾಡಿಕೊಂಡರು.

ಆ ಬಳಿಕಾ ವೆಂಕಟಪ್ಪನಾಯಕರು ಮೂಲ್ಗಿಕೆ ಮಾರ್ಗವಾಗಿ ಬಾರಕೂರಿಗೆ ಹೋಗಬೇಕೆಂಬದಾಗಿ ಬರುವಾಗ್ಯೆ ಮೂಲ್ಗಿಕೆ ಸಾವಂತರು ತನ್ನ ಸೀಮೆಗೆ ಯೀ ದಂಡು ಬಾರದಂತೆ ಮಾರ್ಗ ಮಾರ್ಗದಲ್ಲಿ ಹೊಳೆಗಳು ಯಿರುವದರಿಂದ ಮಾರ್ಗಗಳ ಕಟ್ಟಿ ಬಿಗಿ ಬಂದು ಕಟ್ಟು ಮಾಡಿಕೊಂಡಲ್ಲಿ, ಆಗ್ಗೆ ಯಿಕ್ಕೇರಿ ಅರಸುಗಳ ದಂಡನ್ನು ಬದಲಿದಾರಿ ತೋರಿಸಿ ಕೊಟ್ಟು, ಹೆಜ್ಜಿಮಾಡಿಯಲ್ಲು ತಂದು ಯಿಳಿಸಿ, ಯೀ ಚಿಕ್ಕರಾಯಚಉಟರು ತಮ್ಮ ಕಡೆಯಿಂದ ಮಂದಿ ಮಕ್ಕಳ ತೆಗದುಕೊಂಡು ಪಟ್ಟಿಗ್ರಾಮದ ಮಾರ್ಗವಾಗಿ ಹೊಕ್ಕು ಹೊಡದ್ದರಿಂದ, ಆಗ್ಯೆ ಸಾವಂತರು ವೆಂಗಟಪ್ಪನಾಯಕರ ಕಾಣಿಸಿಕೊಂಡು ಕಲುಲು ಮಾಡಿಕೊಂಡರು. ಆಗ್ಯೆ ಮೂಲ್ಗಿಕೆ ಸೀಮೆ ಪಟ್ಟಿಗ್ರಾಮವನ್ನು ಚಉಟರಿಗೆ ಉಂಬಳಿ ಬಿಟ್ಟುಕೊಟ್ಟರು. ಅನಂತರ ಹಾಗೆ ಬಾರಕೂರಿಗೆ ಸಂಗಡಲೆ ಹೋಗಿ ಆ ಶೀಮೆಯನ್ನು ಕಲುಲು ಮಾಡಿಕೊಟ್ಟದ್ದರಿಂದ ವೆಂಕಟಪ್ಪನಾಯಕರು ಸೀಮೆನೆಲ್ಲ ತಮ್ಮ ಸ್ವಾಧೀನ ಮಾಡಿಕೊಂಡು, ಯೀ ಚಿಕ್ಕರಾಯಚವುಟರಿಗೆ ಮುಂಡಕೂರ ಮಾಗಣಿ ೧. ಹೆಜಮಾಡಿ ಮಾಗಣಿ ೧, ಸಹಾ ಉಂಬಳಿ ಬಿಟ್ಟು ಕೊಟ್ಟು "ನಿಮ್ಮ ಸೀಮೆ ನೀಉ ಅನುಭವಿಸಿಕೊಂಡು ಸ್ವಸ್ಥವಾಗಿ ಯಿದ್ದುಕೊಳ್ಳಿ"ಯಂತ ಅಪ್ಪಣೆಕೊಟ್ಟು ತಾಉ ಬಿದರೂರಿಗೆ ಹೊದರು.

ಯೀ ವರೆಗೆ ಚಉಟರಿಗೆ ಸೇರಿರುವ ಸೀಮೆ ವಿವರ: ಉಳ್ಳಂತಾ ಮಾಗಣಿ ೧, ತಲಪಾಡಿ ಮಾಗಣಿ ೧, ಅಯ್ಯಬೀಳದ ಮಾಗಣಿ ೧, ಸೋಮೇಶ್ವರದ ಗ್ರಾಮ ೧, ಬಾಳೆಪುಣಿಕೈರಂಗಳವೊಂದು, ಗೊಳದ ಗ್ರಾಮ ೧, ಅಂತು ಪ್ರಾಕು ಯಿದ್ದ ಸೀಮೆ ೬, ಯರಡನೆ ತಲೆ ಅರಸುಗಳು ಚನ್ನರಾಯಚಉಟರು ಸಾಧಿಸಿದ ಸೀಮೆ: ವಿಚಾರ ಮಾಗಣಿ ೧, ಮಳಲಿ ಮಾಗಣಿ ೧, ಪುತ್ತಿಗೆ ಮಾಗಣಿ ೧, ಕಡಂದಲೆ ಮಾಗಣಿ ೧, ಅಂತು ಮಾಗಣಿ ೪, ನಾಲ್ಕನೇ ಅರಸುಗಳು ತಿರುಮಲರಾಯಚಉಟರು ಸಂಪಾದಿಸ್ತ ಪೇಜಾವರದ ಮಾಗಣಿ ೧, (ಬಾಳಕಳುವಾರ) ಶೀಮೆ ೧, ಉಭಯಂ ಯರಡು, ಹದಿನಾಲ್ಕನೆ ಅರಸುಗಳು ಯೀ ಚಿಕ್ಕರಾಯಚಉಟರು ಸಂಪಾದಿಸಿದ್ದು

ಸೀಮೆ: ಮುಂಡಕೂರ ಮಾಗಣಿ ೧, ಹೆಜಿಮಾಡಿ ಮಾಗಣಿ ೧, ಸಾಣೂರ ಗ್ರಾಮವೊಂದು, ಪಟ್ಟೆಗ್ರಾಮವೊಂದು ಅಂತು ನಾಲ್ಕು. ಯೀ ಶೀಮೆಗೆ ಸೇರಿದ ಸುಂಕ: ಅಮ್ಮಾಣಿಂಜಿದ ಸುಂಕ ೧, ಯಿನ್ನಾ ಹೊಸಕೇರಿ ಸುಂಕ ೧ ಉಭಯಂ ಸುಂಕ ಯರಡು, ಅಂತೂ ಸುಂಕ ೧೮.

೧೫ ಯಿವರ ಸೊಸಿ ಚನ್ನಮ್ಮಾದೇವಿಯರಾದ ಚಉಟರು ಶಾಲಿವಾಹನ ಶಕ ವರುಷ ೧೫೦೭ನೆಯ ಪಾರ್ಥಿವ ಸಂವತ್ಸರದ . . . . ಆರಭ್ಯ ಆಳುತ್ತಿದ್ದರು. ಆಗ್ಯೆ ಯಿಕ್ಕೇರಿ ಅರಸುಗಳು ಶಿವಪ್ಪನಾಯಕರು ನೀಲೇಶ್ವರದ ಪರಿಯಂತ್ರ ಸೀಮೆ ಸಾಧಿಸುವುದಕ್ಕೆ ಬಂದರು. ತಾಉ ಬಂದ ಕೆಲಸಾ ಸಾಧಿಸುವ ನಿಮಿತ್ತ ಯೀ ಘಟ್ಟದ ಕೆಳಗೆ ಯಿರುವಂತಾ ಚಉತರು, ಬಂಗರು ಮೊದಲಾದ ಯಾವೊತ್ತು ಮನೆತನದ ಅರಸುಗಳನ್ನು ಸಂಗಡ ಕರಕೊಂಡು ನೀಲೇಶ್ವರ ಪರಿಯಂತ್ರ ಸೀಮೆ ಸಾಧಿಸಿ ಪುನಹಾ ಊರಿಗೆ ಹೊಹಾಗ್ಯೆ, ಯೀ ಚಉಟರ ಕವಳಿಗೆ ಶ್ಯಾನಭಾಗನ ಸಂಗಡ ಕರಕೊಂಡು ಹೋಗಿ, ಹುಟ್ಟುವಳಿ ಲೆಕ್ಕಾ ಬರಶಿಕೊಂಡು, 'ಯೀ ಬಗ್ಯೆ ತೆರಿಗೆ ಗ ೩೦೦೦೯೦ ಮೂರು ಸಾವಿರ ವರಹಾನ ಕೊಟ್ಟುಕೊಂಡು ನಿಮ್ಮಾ ಸೀಮೆ ನೀಉ ನೋಡಿಕೊಂಡು ಯಿರಿ'ಯಂತ ತಹ ಮಾಡಿದರು.

೧೬ ಯಿವರ ಮಗ ಭೋಜರಾಯಚಉಟರು ಶಾಲಿವಾಹನ ಶಕ ವರುಷ ೧೫೨೫ನೇ ಶೋಭಕೃತ ಸಂವತ್ಸರ ಆರಭ್ಯ ಆಳಿಕೊಂಡು ವಿಶೇಷವಾಗಿ ಮಂದಿಮಕ್ಕಳ ಕಟ್ಟಿಕ್ಕೊಂಡು ಯಿರುತಿರಲಾಗಿ, ಯೀ ವರ್ತಮಾನ ಯಿಕ್ಕೇರಿ ಅರಸುಗಳು ಶಿವಪ್ಪಾನಾಯಕರು ಕೇಳಿ, ಬಿದರೂರಿಗೆ ಕರಸಿ ಕೋಟೆಯಲ್ಲು ಕಾವಲು ಮಾಡಿಸಿದಲ್ಲಿ, ಆರು ತಿಂಗಳು ಪರಿಯಂತ್ರ ಅನುಭವಿಸಿ ಆಗ್ಯೆ 'ಶ್ರೀ ಸೋಮನಾಥಾ'ಯಂತ ತಮ್ಮ ಕುಲಸ್ವಾಮಿಯನ್ನು ಪ್ರಾರ್ಥನೆ ಮಾಡಿಕೊಂಡು ಆಯ್ಯುಂಬಳದ ಶ್ರೀ ಸೋಮನಾಥದೇವರು, ಪುತ್ತಿಗೆ ಶ್ರೀ ಸೋಮನಾಥದೇವರು, ಅಯ್ಯುಬಳದ ಮೂಡಿಪಿನಾಯ ದೇವತೆ, ಕೊಡ ಕಲಾಯ ಗ್ರಹದೇವತೆಗೆ ಸಹಾ ಪ್ರಾರ್ಥನೆ ಮಾಡಿಕ್ಕೊಂಡು "ನಮ್ಮಾ ಸೆರೆ ಬಿಡಿಸಿ ಕೊಡಬೇಕೆಂ"ಬುದಾಗಿ ಹೇಳಿ ಪ್ರಾರ್ಥನೆ ಮಾಡಿಕೊಂಡದಲ್ಲಿ, ವೊಂದಾನೊಂದು ದಿನ ರಾತ್ರೆ ಕಾಲದಲ್ಲು ಯಿವರಿಗೆ ತಿಳಿಯದಂತೆ ಅಯ್ಯುಂಬಳದ ಮಾಗಣಿ ಅರಕಾನಾ ಯಂಬ ಸ್ಥಳದಲ್ಲಿ ವೊಂದು ಅಡವಿಯಲ್ಲು ಯಿಟ್ಟಲ್ಲಿ, ಬೆಳಗಾದ ಮೇಲೆ ಯಚ್ಚತ್ತು ನೋಡುವಾಗ್ಯೆ ಕಾಡುಗುಡ್ಡೆಯಲ್ಲಿ ಮಲಗಿದ್ದು ಸ್ತಳ ಕಂಡು ಬೀತಿಬಿ[>ಬ]ಡುವಂತಾ ವೇಳ್ಯೆದಲ್ಲಿ, ದನಕಾವ ಹುಡುಗರು ಗುಡ್ಡೆಗೆ ದನವಿನ ಸಂಗಡ ಬಂದು ತಮ್ಮಾ ತಮ್ಮಾ ವಳಗೆ ತುಳು ಮಾತನಾಡುತ್ತಾ ಆ ಸ್ಥಳಕ್ಕೆ ಬಂದು, ಯೀ ಚಉಟರು[>ಚೌಟರ] ಕಂಡು ಆಶ್ಚರ್ಯಬಟ್ಟು, ತಮ್ಮ ಯಜಮಾನನಾದ ಬ್ರಾಹ್ಮಣಗೆ ಹೇಳಿದಲ್ಲಿ, ಅವನು ಬಂದು ಮಾತನಾಡಿಸುವಾಗ್ಯೆ "ಯಿದು ಯಾವ ಊರು?"ಯಂತ ಕೇಳುವಾಗ್ಯೆ "ಚಉಟರ ಸೀಮೆ ಅಯ್ಯುಂಬಳದ ಮಾಗಣಿ ಅರಕಾನಾ ಯಂಬ ಸ್ಥಳ, ತನ್ನ ಹೆಸರು ಮಹಾದೇವಭಟ್ಟಾ"ಯಂತ ಹೇಳಿದಲ್ಲಿ, ದೈವವೇ ತಂದು ಬಿಟ್ಟದ್ದು ಸರಿಯಂತ ಮನಸ್ಸಿನಲ್ಲಿ ತಮ್ಮಾ ನಿಜನಾಮಧೇಯವನ್ನು ಹೇಳಬೇಕಾದರೆ ಆ ಬ್ರಾಹ್ಮಣನು ಸ್ವಲ್ಪ ಮರೆಯಾಗಿರುವ ಜಾಗಾಕ್ಕೆ ಕರಕೊಂಡು ಹೋಗಿ, 'ಪ್ರಕಟಮಾಡಬೇಡಾ'ಯಂತ ಅವನ ಕೈಯ್ಯಿಂದ ಧೈರ್ಯ ದೃಢನಂಬಿಗೆ ತಕ್ಕೊಂಡು, ತಮ್ಮ ಹೆಸರು ಹೇಳಿದಲ್ಲಿ, ಅವನು ತನ್ನ ಮನೆ ಸಮೀಪದಲ್ಲಿ ವೊಂದು ರಹಸ್ಯವಾದ ಸ್ಥಳಮಾಡಿಕೊಟ್ಟು, ಸೇವಾಉತ್ತಿಗೆ ತಕ್ಕಂಥಾ ಜನರನ್ನು ಅನುಕೂಲಮಾಡಿಕೊಟ್ಟು, ಬಹಳ ಸರ್ತ್ಕಾಗಳ ಮಾಡಿ, ಕೆಲಉ ದಿವಸಾ ಅಂತರಂಗದಲ್ಲೊ ಕಾಲಕ್ಷೇಪಾ ಮಾಡಿಕೊಂಡಿರಲಾಗಿ, ಯಿತ್ತಲಾಗಿ ಯಿಕ್ಕೇರಿ ಅರಸುಗಳು "ಯೆಲ್ಲಿ

ತಪ್ಪಿಸಿಕೊಂಡು ಹೋದರು?" ಯಂತ ಬೆಲಿ[>ಬೇಹಿ]ನವರ ಕಳುಹಿಸಿ ಕೊಟ್ಟು ಹುಡುಕಿಸುತ್ತ ಯಿರಲಾಗಿ, 'ಯೀ ಸ್ಥಳದಲ್ಲಿ ಯಿದ್ದಾರೆಂ'ಬ ಸೂಚನೆಯು ಯಾರ ಮುಖಾಂತರದಲ್ಲೊ ತಿಳದದ್ದರಿಂದ, ಯಿಕ್ಕೇರಿ ಅರಸುಗಳಿಗೆ ಕರ್ನಶ್ರವಣವಾಗಿ, ಅಯ್ಯುಂಬಳದ ಮಾಗಣಿ ಪ್ರಜೆಗಳಿಗೆ "ಚವುಟರನ ಕರಕೊಂಡು ಬರುವದೆಂ"ಬ ಹಾಗೆ ನಿರೂಪವನ್ನು ತೆಗೆದುಕೊಂಡು, ಬಿಲಿನ[>ಬೇಹಿನ] ಹರಿದಾ[>ಹರಿಕಾರನು]ರನ್ನು ಸಂಗಡ ನಾಲ್ಕು ಜನ ವಡಹುಟ್ಟಿನ ಊಳಿಗದವರು, ಯಿಬ್ಬರು ಗೊಲ್ಲಿಕ್ಕೆ ಊಳಿಗದವರು ಸಹಿತಾ ಕುದುರಿ ಹತ್ತಿಕೊಂಡು ಕೊಡೆ ಹಿಡಿಸಿಕೊಂಡು ಅಯ್ಯುಂಬಳದೇವಸ್ಥಾನ ಸಮೀಪಕ್ಕೆ ಬರುವ ವೇಳ್ಯೆದಲ್ಲಿ, ಕುದುರಿಮಾರು ಯಂಬ ಸ್ಥಳದಲ್ಲಿ, ಕುದುರಿ ಮಾಯವಾಗಿ, 'ಹರಿಕಾರ ನೆಲದ ಮೇಲೆ ನಿಂತನು. ಮುಂದೆ ಬರುವಾಗ್ಯೆ ಹಿಡಿಶಿಕೊಂಡ ಸತ್ತಿಗೆ ಕೊ[>ಕೂ]ಡಾ ಬೋಯಿ ಸಹಾ ಮಾಯವಾಗಿ ಹೋದನು. ಅನಂತರದಲ್ಲಿ ಆ ಹರಿಕಾರ ಊಳಿಗದವರು ಸಹಾ ಭೀತಿಬಟ್ಟು ಆಯ್ಯುಂಬಲದ ಶ್ರೀ ಸೋಮನಾಥದೇವರ ದೇವಸ್ತಾನಕ್ಕೆ ಬಂದು, ಆ ಮಾಗಣಿ ಪ್ರಜೆಗಳ ಕರಶಿಕೊಂಡು, ಯಿಕ್ಕೇರಿ ಅರಸುಗಳು ಬರದ ನಿರೂಪವನ್ನು ಕೊಟ್ಟು, ತಮಗೆ ಆದಂತಾ ಭಯೋತ್ಪಾತವನ್ನು ಹೇಳಿದಲ್ಲಿ, ಆಗ್ಯೆ ಶೀಮೆ ಪ್ರಜೆಗಳು ದೇವರ ಪ್ರಾರ್ಥನೆಮಾಡಿ ಪ್ರಸಾದವಂ ಕೊಡಸಿ "ಚಉಟರು ಯೀ ಸ್ಥಳದಲ್ಲಿ ಯಿದ್ದಾರೆ. ದೇವರ ಅಪ್ಪಣೆಯಿಂದ ದೈವದಗಳು ಕರತಂದು ಯಿಟ್ಟಿರುವದು ಸರಿ"ಯಂತ ಯೀ ಉತ್ತಾಂತವನ್ನು ಹೇಳಿ, "ಚವುಟರಾದರೆ ಭಯಸ್ತರಾಗಿದ್ದಾರೆ. ಯಿಕ್ಕೇರಿ ಅರಸುಗಳು ಅಭಯ ನಿರೂಪ ಬಂದರೆ ಬರುತಾರೆ. ಯಿಲ್ಲದಿದ್ದರೆ ಅವರು ಶರೀರಕ್ಕೆ ಯೇನು ಮಾಡಿಕೊಳ್ಳುತಿದ್ದಾರೊ ತಿಳಿಯದು"ಯಂತ ಹೇಳಿದಲ್ಲಿ, ಆಗ್ಯೆ ಬಂದ ಆ ಹರಿಕಾರ ಊಳಿಗದವರು ಸಹಾ ಯಿಕ್ಕೇರಿ ಅರಸುಗಳಿಗೆ ಯೀ ಉತ್ತಾಂತನೆಲ್ಲಾ ಬಿನ್ನವತ್ತಲೆ ಬರಕೊಂಡಲ್ಲಿ, ಅಲ್ಲಿಂದ ಅಭಯ ನಿರೂಪಉ 'ನಿಮ್ಮಾ ದೈವ ಸಹಾ ಕರಕೊಂಡು ಬಹದೆಂ'ತ ಬಂದಲ್ಲಿ, ಆಗ್ಯೆ ಚವುಟರು ಆ ಶೀಮೆ ಪ್ರಜೆಗಳು ಸಹಾ ದೇವರಿಗೆ ದೈವಕ್ಕೆ ಸಹಾ ಪ್ರಾರ್ಥನೆಯನ್ನು ಮಾಡಿಕ್ಕೊಂಡು, ಕರೆವ ಬಗ್ಯೆ ಬಂದ ಹರಿಕಾರ ಊಳಿಗದವರ ಸಹಾ ಸಂಗಡ ಹೊರಟು ಅ[>ಬಿ]ದರೂರಿಗೆ ಹೋದಲ್ಲಿ, ಅರಸುಗಳ ಭೇಟಿಯು ಆಗಿ ಯೀ ಉತ್ತಾಂತ ಯಾವತ್ತು ಮುಖತ ಪರಾಂಬರಿಕೆಯಾಗಿ, ಆ ದಿವಸ ಬಿಡಾರಕ್ಕೆ ಕಳುಹಿಸಿಕೊಟ್ಟು ಮೂರು ದಿವಸದ ಮೇಲೆ ಅರಸಿ, "ನಿಮ್ಮಾ ದೈವ ಎಲ್ಲಿ?"ಯಂತ ಪರಾಂಬರಿಸುವಾಗ್ಯೆ, "ದೈವಿಕದ ಮಾಯ ಯೇನಿದ್ದರು ಶಿವನೆ ಬಲ್ಲ, ನಡದ ಉತ್ತಾಂತ ತಂದ ಹರಿಕಾರ ಊಳಿಗದವರ ಮುಖದಲ್ಲಿ ಪರಾಂಬರಿಸಬೇಕಂ"ತ ಹೇಳಿದಲ್ಲಿ, ಪರಾಂಬರಿಸಿ, ಹರಿಕಾರನು ಕುದ್ರಿ ಕೊಡೆ ಸಹಾ ಪ್ರತ್ಯಕ್ಷಮಾಯವಾದದ್ದು ಕೇಳಿ, ಆಶ್ಚರ್ಯವ ಪಟ್ಟು ಸಹಾ ಚಉಟರಿಗೆ ದೈವ ಸಹಿತವಾಗಿ ಅಪ್ಪಣೆ ಕೊಟ್ಟ, ಆಗ್ಯೆ ತೆರಿಗೆ ನಿಗದಿ ಮಾಡಿದ್ದು, ಪ್ರಾಕು ನೇಮಕಾ ಮಾಡಿದ್ದು, ಗ ೩೦೦೦ ದಫಾ ವಂದಕ್ಕೆ ಪ್ರವೇಶವಾಗಿ ಕೊಟ್ಟ ಸೀಮೆಗೆ ಹೆಚ್ಚಿಸಿದ್ದು॥ ಗ ೧೦೫೮೯೪॥–ಉಭಯಂ ಗ॥ ೪೦೫೦ ೯೪॥ = ನ್ನು ತೆತ್ತು ಬಾಹಂತೆ ನಿಗದಿ ಮಾಡಿಕೊಟ್ಟು, ಯಿವರಿಗೆ ಕಟ್ಟಲೆ ಕಂದಾಚಾರ ನೇಮಕಾ ಮಾಡಿಕೊಟ್ಟ ವಿವರ: ನಿಮ್ಮಾ ಮನೆತನಕ್ಕೆ ಕುದುರಿ ೧೦, ಊಳಿಗದ ಪಾಳಿಗದವರ ಜನ ೧೦೦ ನ್ನೂರು, ನಿಮ್ಮಾ ಪಾಲಕಿ ದಂಡಿಗೆ ನಿಮ್ಮಾ ಬಿರುದು ಬಾವಲಿ ಹೊಗಳುವ ಪಾಟಕರು, ಲಿಲಯ ಹಿಡಿಯುವ ಬಗ್ಯೆ ತಕ್ಕಷ್ಟು ಜನರು ಯಿಷ್ಟರಲ್ಲಿ ಯಿರಬೇಕು ಹೊರ್ತ್ತು ಹೆಚ್ಚು ಕಟ್ಟಲೆ ಕುದುರಿ ಮಂದಿ ಯಿಡುವದಕ್ಕೆ ಕಾರಣ ಯಿಲ್ಲಾಯಂತ ತಕಹ ಮಾಡಿ, ಪುನಹಾ ಊರಿಗೆ ಕಳುಹಿಸಿಕೊಟ್ಟದ್ದರಿಂದ ಯಥಾ ಪ್ರಕಾರ ಪುತ್ತಿಗೆ

ಬಂದು ರಾಜ್ಯಭಾರ ಮಾಡಿಸಿಕೊಂಡಿದ್ದರು. ಆ ತರುವಾಯ ಅರಮನೆಯನ್ನು ಮೂಡಬರಿಯಲ್ಲು ಅರಮನೆ ಕಟ್ಟಿ ಬಿನ್ನಾಣರ ಕೂಡೆ ನಂಟತನವನ್ನು ಮಾಡಿಕೊಂಡು ಸುಖದಿಂದ ಯಿರುತಿದ್ದರು. ಬಿದರೂರಿಂದ ಅಪ್ಪಣೆ ಕೊಟ್ಟು ಕಳುಹಿಸುವಾಗ್ಯೆ ಉಳ್ಳಾಲದ ಮಾಗಣಿಯಲ್ಲು ಸೋಮೇಶ್ವರದ ಗ್ರಾಮ ಹೊರ್ತು ಉಳ್ಳಾಲದ ಮಾಗಣಿ ೧, ಬೋಳುಮದ ಗ್ರಾಮ ೧ ಸಹಾ ಕೊಡೆಯಾಲಕ್ಕೆ ಕೂಡಿಕೊಂಡರು.

೧೭ ಆ ಬಳಿಕ ಯಿವರ ಸೊಸೆ ಚನ್ನಮ್ಮಾದೇವಿಯರಾದ ಚವುಟರು ಶಾಲಿವಾಹನ ಶಕ ವರುಷ ೧೫೬೬ನೇ ತಾರಣ ಸಂವತ್ಸರದಾರಭ್ಯಾ ಆಳಿದರು.

೧೮ ಮಗ ಚಿಕ್ಕರಾಯಚಉಟರು ಶಕ ವರುಷ ೧೬೦೦ನೇ ಸಿದ್ದಾರ್ತಿ ಸಂವತ್ಸರದಾರಭ್ಯಾ ಆಳಿದರು.

೧೯ ಇವರ ಸಹೋದರಿಯಾದ ಪದುಮಲದೇವಿಚಉಟರು ಶಾಲಿವಾಹನ ಶಕ ವರುಷ ೧೬೩೭ನೆಯ ಮನ್ಮಥ ಸಂವತ್ಸರದಾರಭ್ಯ ಆಳಿದರು.

೨೦ ಯಿವರ ತಂಗಿ ಅಬ್ಬಕ್ಕದೇವಿಯರಾದ ಚಉಟರು ಶಾಲಿವಾಹನ ಶಕ ವರುಷ ೧೬೪೮ನೆ ಪರಾಭವ ಸಂವತ್ಸರದಾರಭ್ಯ ಆಳಿದರು. ಆಗ್ಯೆ ಯಿಕ್ಕೇರಿ ಅರಸುಗಳು ಸೋಮಶೇಖರನಾಯಕರು ಘಟ್ಟದ ತಗ್ಗಿನ ಸೀಮೇಗೆ ಬಂದಲ್ಲಿ, ಯೀ ಚವುಟರು ಹೋಗಿ ಕಾಣಿಸಿಕೊಂಡಲ್ಲಿ, ಮಾನ ಮರಿಯಾದಿ ಪೂರ್ವ ಪದ್ಧತಿ ಮೇರೇಗೆ ಯೆದ್ದು ಕುಂಡ್ರಿಸಿಕೊಂಡು, ಅನ್ಯೋನ್ಯ ಪರಸ್ಪರ ಉಚಿತ ಉಡುಗರೆಗಳಾಗಿ ಯಿರುತಿದ್ದಲ್ಲಿ, ಆ ಬಳಿಕಾ ಅವರಿವರಿಗೆ ಮಾತುಕಥೆಯಲ್ಲಿ ರಟ್ಟಿಸಿ ಬಂದು, ಅಂತಃಕಲಹ ಮನಃಕ್ಕಶಾಯ ಬಂದದರಿಂದ, 'ಯೀ ಅಬ್ಬಕದೇವಿಯರನ್ನು ಬಿದರೂರಿಗೆ ತೆಗೆದುಕೊಂಡು ಹೋಗಬೇಕೆಂ'ತ ಆಲೋಚನೆ ಮಾಡಿದಲ್ಲಿ, ಅದನ್ನು ಯೀ ಚವುಟರು ತಿಳದು, ಮಗಳು ಚನ್ನಮ್ಮಾದೇವಿ ಮೊಮ್ಮಗ ಚಂದ್ರಶೇಖರ ಚಿಕ್ಕರಾಯರು ಸಹಾ ಕರಕೊಂಡು ಮಂದಿ ಮಕ್ಕಳ ಕೂಡಿಕೊಂಡು ಮಲೆಯಾಳದ ಸೀಮೆ ಚರಕಲ್ಲಿಗೆ ಹೋಗಿ ಯಿದ್ದುಕೊಂಡು, ಯೀ ಶೀಮೆಯಲ್ಲು ತಮ್ಮಾ ಕಡೆ ಪಾರುಪತ್ಯಗಾರನ ಯಿಟ್ಟು ವಿಚಾರಿಸಿಕೊಂಡು, ಹಣಕಾಸು ತರಿಸಿಕೊಳ್ಳುತ್ತ ಮಂಗಲೂರಿಗೆ ಸಲ್ಲುವ ನಿಗದಿ ಗ ೪೦೫೦೭೪॥ =ಯನ್ನು ಸಂದಾಯ ಮಾಡಿಕೊಳ್ಳುತ್ತ, ಕ್ರೋದನ ಸಂವತ್ಸರ ಪರಿಯಂತ್ರ ನಡದು ಬಂತು. ಆ ಬಳಿಕಾ ಕ್ಷಯ ಸಂವತ್ಸರದಲ್ಲು ಯೀ ಸೀಮೇಗೆ ಯಿಕ್ಕೇರಿ ಅರಸುಗಳು ತಮ್ಮ ಕಡೆಯಿಂದಾ ಪಾರುಪತ್ಯಗಾರ ಮುದರಾಡಿ ಅನಂತೈಯನ ಯಿಟ್ಟು, ಸೀಮೆ ಹಣಕಾಸು ಯಾವತ್ತುನು ತರಿಸಿಕೊಂಡರು. ಯೀ ವರ್ತಮಾನ ಚವುಟರಿಗೆ ತಲ್ಪಿದ ಬಳಿಕ ಮಲೆಯಾಳದ ಅರಸುಗಳ ಕಡೆಯಿಂದ ಬೇಕಾದ ಮಂದಿ ಮಕ್ಕಳ ಸಹಾಯಕ್ಕೆ ತೆಗೆದುಕೊಂಡು ಯಿಕ್ಕೇರಿ ಅರಸುಗಳ ಸೀಮೆ ಮೇಲೆ ಸೂರೆ ಸೂಲಿಗೆ ಮಾಡುತ್ತ ಯಿರುತಿರಲಾಗಿ, ಅನಂತರದಲ್ಲಿ ಯಿಕ್ಕೇರಿ ಸಂಸ್ಥಾನದಲ್ಲು ಸೋಮಶೇಖರನಾಯಕರು ಹೋಗಿ ಬಸವಪ್ಪಾನಾಯಕರಿಗೆ ಪಟ್ಟ ಆಗಲಾಗಿ, ಅವರ ಬಳಿಗೆ ತಕ್ಕಂಥಾ ಸಾಮಾಜಿಕರ ಕಳುಹಿಸಿ ಕೊಟ್ಟು, ತಮ್ಮ ಶೀಮೆ ತಮಗೆ ಬಿಟ್ಟು ಕೊಡಬೇಕೆಂತ ಮಾತು ಕರಾರು ಮಾಡಿಕೊಂಡು. ನಂಬಿಗೆ ನಿರೂಪವನ್ನು ತರಿಸಿಕೊಂಡು, ಮಲೆಯಾಳದಿಂದ ಹೊರಟು ಬರುತಿರಲಾಗಿ ಮದ್ಯ ಮಾರ್ಗದಲ್ಲಿ ಅಬ್ಬಕ್ಕದೇವಿ ಚವುಟರು ಸ್ವರ್ಗಸ್ತರಾದರು.

೨೧ ಆ ಬಳಿಕ ಯಿವರ ಮೊಮ್ಮಗ ಚಂದ್ರಶೇಖರ ಚಿಕ್ಕರಾಯ ಚವುಟರಿಗೆ ಶಕ ವರುಷ ೧೬೭೧ನೆ ಶುಕ್ಲ ಸಂವತ್ಸರದಲ್ಲು ಪಟ್ಟವಾಗಿ, ಯಿಕ್ಕೇರಿ ಅರಸುಗಳು ಬಸವಪ್ಪನಾಯಕರಿಗೂ ಯಿವರಿಗೂ ಬೇಟಿ ಆಗಿ, ಯಿವರು ಅವರಿಗೆ ಆನೆ ಕಾಣಿಕೆಯನ್ನು ನಜರು ಹಿಡಿದು ವಪ್ಪಿಸಿ, ಅವರು ಯಿವರಿಗೆ ಬೇಕಾದ ಉಡುಗರೆ ಉಚಿತಗಳ ಕೊಟ್ಟು, ಬಿಡಾರ ಬಿಡಿಸಿಕೊಟ್ಟು, ಉಲ್ಲುಪೆ, ಜಿನಸು ಯಾವೊತ್ತು ಕೊಡಿಸಿ ಕೊಟ್ಟು, ಹತ್ತೆಂಟು ದಿವಸದ ಬಿದರೂರಲ್ಲಿ ಯಿಟ್ಟುಕೊಂಡು, ಶೀಮೆ ಹುಟ್ಟುವಳಿ ಲೆಕ್ಕಪಕ್ಕೆ ನೋಡಿಸಿ, ದೇವತಾ ಉತ್ತರಾ ದೈವ ಉತ್ತರಾ ಬ್ರಹ್ಮಾದಾಯ ಉತ್ತರಾ ಬಸ್ತಿ ಉತ್ತರಾ ಉಂಬ್ಲಿ ಉತ್ತರಾ ಅಜಿಲ ಉತ್ತರಾ ಪುರವರ್ಗ ಮುಂತಾದ್ದು ಕಳದು ಮಾಡಿರಸಿಗರಿ। ಗ ೧೩೭೯೨ ॥೧॥ ಯಿದಕ್ಕೆ ಚಂದ್ರಶೇಖರ ಚಿಕ್ಕರಾಯ ಚಉಟರಿಗೆ ಬಿಟ್ಟು ಕೊಟ್ಟು, ಉಂಬಳಿ ।ಗ ೬೦೦೦೯೦ ಶುಧ ತೆತ್ತು ಬಾಹಬಗ್ಗೆ ನೇಮಕ ಮಾಡಿದ್ದು ಗ ೭೭೯೨ ॥೧॥ ಕೊಟ್ಟುಕೊಂಡು, "ನಿಮ್ಮ ಸೀಮೆ ನೀಉ ಅನುಭವಿಸಿಕೊಂಡು ಸುಖದಿಂದ ಯಿರಿ"ಯಂತ ಅಪ್ಪಣೆ ಕೊಟ್ಟು ಕಳುಹಿಸಿ ಕೊಟ್ಟ ಪ್ರಕಾರ ಮೂಡ[+ಬ]ರಿಗೆ ಬಂದು, ತಮ್ಮ ಅರಮನೆಯಲ್ಲು ವಕ್ಕಲಾಗಿ ಜೀರ್ನವಾದ್ದನ್ನು ಧಡಾ[>ದೃಢಾ] ಮಾಡಿಶಿ, ಶೀಮೆಯನ್ನು ಪ್ರಜಾಪಾಲನೆ ಮಾಡಿಕ್ಕೊಂಡು ನವಾಬ್ ಸಾಹೇಬರವರು ಬರುವ ಪರಿಯಂತ್ರಯದೆ ಮೇರೆಗೆ ನಡೆಯುತ್ತ ಬಂತು.

*ಆ ತರುವಾಯ ಚಿತ್ರಭಾನು ಸಂವತ್ಸರದಲ್ಲು ನವಾಬರು ಬಿದರೂರಿಗೆ ಬಂದು, ಯುದ್ಧವನ್ನು ಮಾಡಿಕೊಂಡು, ಯೀ ಸಂಸ್ಥಾನದೊಳಗೆ ಸೇರಿರುವಂತಾ ಜನರಿಗೆಲ್ಲಾ ಕಉಲು ಕಾಗದಗಳ ಬರಶಿಕೊಡುತ್ತ, ಯೀ ಚಉಟರಿಗೂ ಕಉಲು ಕಾಗದವನ್ನು ಬರದು ಭಜಿಪಿ ಕೃಷ್ಣಯಂಬವನ ಕೈಯ್ಯ ಕಳುಹಿಸಿ ಕೊಟ್ಟಲ್ಲಿ, ಚಉಟರು ನವಾಬರನ್ನು ಘಟ್ಟಾ ಯಿಳಿದು ಕಾರ್ಕಳಕ್ಕೆ ಬಂದ ತರುವಾಯ ಹೋಗಿ ಕಾಣಿಶಿ ಕೊಂಡಲ್ಲು, ಯೆದ್ದು ಕೂಡ್ರಿಸಿಕೊಂಡು ಸನ್ಮಾನ ಬಹುಮಾನವಾಗಿ ಯಿವರು ಕೊಟ್ಟಂತಾ ಉಡುಗರೆಯನ್ನು ತಾವು ತೆಗೆದುಕೊಂಡು. ಅನಂತರದಲ್ಲಿ ಸಂಗಡಲೆ ಮೂಡಬರಿಗೆ ಬಂದ ಬಳಿಕಾ ನವಾಬರು ಪನ್ನೆಚಾರುಮಠದಲ್ಲಿ ಉಳದು, ಅಲ್ಲಿ ಪುನಹಾ ನಿಮ್ಮಲ್ಲಿಯ ವಿಭವ ಕೂಡುಕ್ಕೊಂಡು ಭೇಟಿಗೆ ಬರುವದೆಂಬ ಹಾಗೆ ಚೋಪುದಾರನ ಕೈಯ್ಯ ಹೇಳಿ ಕಳುಹಿಸಿದ ಪ್ರಕಾರ, ತಮ್ಮ ಬಿರುದು ಬಾವಲಿ ಹಿಡಿಸಿಕೊಂಡು ಪಲ್ಲಕ್ಕೆ ಹತ್ತಿಕೊಂಡು ಹಿಡಿ ತೇಜಿ ಕುದರಿ ಮುಂತಾದ ವೈಭವದಿಂದ ತಮ್ಮಾ ಸಾಮಾಜಿಕರ ಸಹಾ ಕೂಡಿಕೊಂಡು ಭೇಟಿಗೆ ಹೋದಲ್ಲಿ, ಯೀ ಬರುವಂತಾದನ್ನು ಉಪ್ಪರಿಗೆ ಕಡಾಕಟ್ಟಿನಲ್ಲಿ ಕುಳಿತು ನೋಡುತ್ತ ಹಾಗೆ ಯೆದ್ದು ಬಾಗಲಿ ಪರಿಯಂತ್ರ ಬಂದು, ಚಉಟರನ ಕೈ ಹಿಡದು ಕರಕೊಂಡು ಹೋಗಿ ತಮ್ಮಾ ಸಮೀಪದಲ್ಲಿ ಕುಂಡ್ರಿಸಿಕೊಂಡು, ಯಿವರ ಕಡೆ ಸಾಮಾಜಿಕರ ತಮ್ಮ ಯಡಬಲದ ಸಾಲಿನಲ್ಲಿ ಕುಂಡ್ರಿಸಿ, ಚಂದ್ರಶೇಖರ ಚಿಕ್ಕರಾಯ ಚಉಟರಿಗೆ ಉಡುಗೊರೆಯನ್ನ ಮಾಡಿ, ಯಿವರ ಕ್ಷೇಮಸಮಾಚಾರ ಯಾವತ್ತು ವಿಚಾರಿಸಿ, ಯಿವರ ಶೀಮೆ ಯಿವರಿಗೆ ಬಿಟ್ಟುಕೊಟ್ಟು, ತೆರಿಗೆ ನಿಗದಿ ಮಾಡಿದು ।ಗ ೧೪೦೦೦೯೦. ಆ ಬಳಿಕಾ ಸ್ವಭಾನು ಸಂವತ್ಸರಕ್ಕೆ ಮಾಡಿದ ನಿಗದಿ ।ಗ ೧೮೦೦೦೯೦. ತಾರಣ ಸಂವತ್ಸರಕ್ಕೆ ನಿಗದಿ ಆದ್ದು । ಗ ೧೯೦೦೦೯೦. ಆ ಮೇಲೆ ಪಾರ್ಥಿವ ಸಂವತ್ಸರದಲ್ಲು ಶೀಮೆಯು ಹರವರಿಯಾಗಿ ಮಂಗಲೂರ ಹೊಬಳಿ ಬದಕ್ಕು ಮಾಡುವ ಶೆಖ್ಯಲ್ಲಿಗೆ ಅಪ್ಪಣೆ ಬಂದ ಪ್ರಕಾರ ಮನೆತನದವರ ಶೀಮೆಗಳನ್ನೆಲ್ಲಾ

* – * ಇಷ್ಟು ಭಾಗ ಪು. ೧೯೭–೧೯೮ರಲ್ಲಿ ಇದೆ(ಸಂ)

ಮಂಗಲೂರ ಹೊಬಳಿಗೆ ಶೇರಿಸಿಕೊಂಬಾಗ್ಯೆ ಯೀ ಚಉಟರ ಸೀಮೆಗು ಕೊಡೆಯಾಲದಿಂದ ವಿಂಗಡವಾಗಿ, ಪ್ರತ್ಯೇಕ ಬದುಕು ಮಾಡುವ ಬಂದ ಯಾವತ್ತು ಹಣಕಾಸನ್ನು ಕೊಡೆಯಾಲಕ್ಕೆ ಕಟ್ಟಿಸಿದರು. ಪಾರ್ಥಿವ ಸಂವತ್ಸರಕ್ಕೆ ನಿಗದಿ। ಗ ೬೨೧೧೫ ೪. ವ್ಯಯ ಸಂವತ್ಸರಕ್ಕೆ ನಿಗದಿ। ೨೧೨೧೫೬೪.

ಆ ಬಳಿಕಾ ಸರ್ವಜಿತು ಸಂವತ್ಸರದಲ್ಲು ಕುಂಪಣಿ ಅವರು ಕೊಡಿಯಾಲದ ಕೋಟಿ ತೆಗೆದುಕೊಂಡಿರಲಾಗಿ, ಅದನ್ನು ಪುನಹಾ ಬಿಡಿಶಿ ತೆಗೆದುಕೊಂಬೊ ನಿಮಿತ್ತ ನವಾಬರು ಕೊಡಿಯಾಲಕ್ಕೆ ಬರುವಾಗ್ಯೆ ಮೂಡಬಿದ್ರಿಗೆ ಬಂದಲ್ಲಿ, ಅಲ್ಲಿ ಹೋಗಿ ಚಂದ್ರಶೇಖರಚಿಕ್ಕರಾಯಚಉಟರು ಭೇಟಿಮಾಡಿಕೊಂಡು "ಶೇಖಲ್ಲಿಯ[>ಯು] ಸೀಮೆಯನ್ನು ಕೈ ತಪ್ಪಿಸಿ ಮನೆ ಬದುಕು ವಸ್ತು ವಡವೆ ಮುಂತಾಗ ಸರ್ವಾಸ್ಥಾಪಹಾರ ಮಾಡಿದಾ. ಅದರಿಂದ ನಿತ್ಯ ಖರ್ಚಿಗೆ ಅನುಸಾರವಿಲ್ಲದೆ ದಣುಕೊಂಬದಾಗಿ ಯಿಧೆ"ಯಂತ ಹೇಳಿಕೊಂಡಲ್ಲಿ, ಆಗ್ಯೆ "ನಿಮ್ಮಾ ಸೀಮೆ ನೀಉ ಮಾಡಿಕೊಂಡು ಹದಿನೆಂಟು ಸಾವಿರ ವರಹಾನ್ನ ಸರಕಾರಕ್ಕೆ ಕೊಟ್ಟು ಉಳದ ಹಣವಿನಿಂದ ನಿಮ್ಮ ಜೀವನ ಮಾಡುಕೊಳ್ಳಿ"ಯಂತ ಹೇಳುವಾಗ್ಯೆ, "ನೀವಾದರೆ ದರಬಾರು ದು[>ದೂ]ರಸ್ತರಾಗಿ ಯಿರುತಿದ್ದೀರಿ. ಯೀ ಮಂಗಲೂರು ಹೊಬಳಿ ಬದುಕು ಆದರೆ ಶೇಖಲ್ಲಿ ಅಧೀನದಲ್ಲಿ ಯಿಧೆ. ಅವನ ಕಡೆಯಿಂದ ನಿಬಾಯಿಸ ತೀರದು. ಯಿಲ್ಲದ ತರಳೆ ತಾಪತ್ರಯಗಳ ಬರದು ಪ್ರಾಣದ ಮೇಲೆ ತಂದಾನು. ಅರಸುತನ ಮಾಡುವವರ ಮನಸ್ಸು ವಂದೇ ಪ್ರಕಾರ ಯಿರುವದಿಲ್ಲ. ನಮಗೆ ಯೇನಾದರೂ ಯಿನಾಮು ಬಿಟ್ಟುಕೊಟ್ಟು ಕಾಲಕ್ಷೇಪ ಆಗುವ ಹಾಗೆ ಮಾಡಿಸಿ ಕೊಟ್ಟರೆ ಕಾಲಕ್ಷೇಪ ಮಾಡಿಕೊಂಡಿದ್ದೇಉ"ಯಂತ ಹೇಳಿಕೊಂಡಲ್ಲಿ, ಆಗ್ಯೆ ಪರವಾನೆ ಬರಸಿ ಕೊಟ್ಟು, ಬಿಟ್ಟು ಕೊಟ್ಟು ಯಿನಾಮು ಗದ್ಯಾಣ ೩೦೦೬೦. ಮೇಲವಾಸಿ ಬಗೇ ಯೀ। ಗ ೧೫೫೨೧. ಉಭಯಂ। ಗ ೪೫೫೯೧.

೨೨ ಆ ಬಳಿಕಾ ಯಿವರ ಮಗ ಚನ್ನರಾಯಚಉಟರು ಶಕ ವರುಷಗಳು ೧೯೯೧ನೇ ವಿರೋಧಿ ಸಂವತ್ಸರದಾ ಶ್ರಾವಣಾ ಬಹುಳ ೯ ಆರಭ್ಯಾ ಅನುಭವಿಸಿದನು.

೨೩ ಯಿತಲಾಗಿ ಯಿವರ ತಮ್ಮ ಚಂದ್ರಶೇಖರಚಿಕ್ಕರಾಯಚಉಟರು ಶಕವರುಷ ೧೭೦೫ ನೆ ಶೋಭಕೃತು ಸಂವತ್ಸರದಾರಭ್ಯ ಅನುಭವಿಸುತ್ತ ಯಿದ್ದಾರೆ. ಯಿವರಿಗೆ ನಡದು ಬರುವ ಯಿನಾಮು ವಳಗೆ ಬರದ ಪ್ರಕಾರಾ ಐ ನು । ಗ ೩೦೦೬೦. ಮೇಲವಾಸಿ । ಗ ೧೫೫೬೧ ॥ ೦. ಉಭಯಂ । ಗ ೪೫೫೬೦ ೧॥ಕ್ಕೆ ವಜಾ ಶೋಭಕೃತು ಸಂವತ್ಸರದಲ್ಲು ಸುಲ್ತಾನ ಜಪ್ತಿಗೆ ದಾಖಲಾದು । ಗ೯೩೦೦ ೦. ಜಾತಿ ಮೇಲವಾಸಿ ಬಗೇಯಿ ನಡದು ಬಾಹದು ಗದ್ಯಾಣ ೧೫೫೬೧ ॥ ಅವೆ ತ್ರಯವಾಸಿ । ಗ೫೦ ೬೨।೦. ಉಭಯಂ । ಗ ೬೨೦೫ ೩॥. ಯೀ ಮೇರೆಗೆ ನಡದು ಬರುತ್ತಿದ್ದಲ್ಲಿ ಯಿತ್ತಲಾಗಿ ಕುಂಪಣಿಯವರು ಟೀಪುಸುಲ್ತಾನರ ಜೈಸಿ ಯಾವತ್ತು ರಾಜ್ಯವನ್ನು ತಮ್ಮ ಸ್ವಾಧೀನ ಮಾಡಿಕೊಂಡು, ಯೀ ಬಗ್ಯೆ ಲೆಕ್ಕ ಪಕ್ಕ ಯಾವತ್ತನ್ನು ವಿಚಾರಿಸಿ ನಡಸಿ ಯಿರುವ ಯಿನಾಮು ತಸ್ತೀತು ಪ್ರಕಾರ। ಗ ೧೯೬೪ । = ಯೀ ಪ್ರಕಾರ ಶಾಲಿವಾಹನ ಶಕ ವರುಷ ೧೭೨೭ ಕ್ರೋಧನ ಸಂವತ್ಸರದಲ್ಲಿ ನಡದು ಬರುತ್ತ ಯಿಧೆ. ಯಿವರ ಬಿರಿದು । ಅಮಂದಪ॥

ಯೀ ಚಉಟರ ಜಿರಿದು ಬನ್ನಿಪೂಜೆ ಮಾಡುವಾಗ್ಯೆ: ಶ್ರೀಮದ್ಭಂನಿಮಹಾಂಕಾಳಿಯಮ್ಮನವರ ದಿವ್ಯ ಶ್ರೀಚರಣಾರವಿಂದಗಳಿಗೆ ಅಮಂದವಂದಾರು ಬೃಂದ ವಂದ್ಯಸಂಕ್ರಂದನ ಮಣಿಮಕುಟ ಮಂದಾರಪ್ರಸವಮರಂದಕುಂದಿಲ್ಲವಿಳಂದಬಂಧುರಝೆಂಕಾರಲಂಕಾರ ಮಣಿಯ್ಯ ಚರಣ ಉಮಾರಮಣಪದಕಮಲ ಪ್ರಸಾದಲಬ್ಧ ಮಹದೈಶ್ವರಿಯ ಸೋಮಾನ್ವಯೊತ್ಪಂನ ಭೂಭೃತ್ಸು ಮುಹಾದ್ಯ ಕ್ಷತ್ರಿಲೋಕಸನ್ನೂತ ತಿಲಕಾಯಮಾನ ತಉಳವ ದೇಶಾಧಿಶಾಚೈತ್ರ ನೃಪಪುಣ್ಯಪ್ರಭಾವ ಚಾತುರ್ಯರೂಪ ಸೌಂದರಿಯ ಸರ್ವಜನೊಪಕಾರಿ ದೀನಜನಬಂಧು ಚಉಟರಾಖ್ಯದಾನ ಭೂಮೀಶ ಗೋತ್ರಪ್ರದೀಪ ನಿಖ್ಯಾತ ತಿರುಮಲರಾಯಚಉಟ ಮಹೀಪಾಲಾ ಸ್ವಯೋಧಾರಕಾ ಪುತ್ತಿಗೆ ಪುರವರಾಧೀಶ್ವರ ಶ್ರೀ ಸೋಮನಾಥದೇವರ ದಿವ್ಯಶ್ರೀಪಾದಪದ್ಮರಾದರಾ ಚಿಕ್ಕರಾಯ ಚಉಟರ ಸಹೋದರಿ ಪದುಮಲದೇವಿಯರಾದ ಚಉಟರ ಸಹಭವರಾದ ಅಬ್ಬಕ್ಕದೇವಿಯರಾದ ಚಉಟರ ಪುತ್ರಿಯರಾದ ಚನ್ನಮ್ಮಾದೇವಿಯ ಪುತ್ರರಾದ ಚಂದ್ರಶೇಖರ ಚಿಕ್ಕರಾಯ ಚಉಟರ ಪುತ್ರರಾದ ಚಂದ್ರಶೇಖರ ಚಿಕ್ಕರಾಯ ಚಉಟರು ಸಾಷ್ಟಾಂಗವೆರಸಿ ಪೊಡಮಟ್ಟು ಮಾಡುವ ಬಿನ್ನಹಾ. ದೇವರು ನಮ್ಮಾ ಮೇಲೆ ಪೂರ್ನ ಕಟಾಕ್ಷವಿಟ್ಟು ಸಕಲದಿಗ್ವಿಜಯ ಮನೊವಾರ[>ಮನೋವಾಂ]ಛಿತಾರ್ಥವನ್ನು ಸಿದ್ದಿಸಿ ಕೊಡಬೇಕೆಂದು ಸದ್ವಿನಯಭಯಭಕ್ತಿಯಿಂದ ಪ್ರಾರ್ಥನೆ ಪ್ರಯುಕ್ತವಿಡಿದು ಮಾಡುವ ಬಿನ್ನಹಾ: ಶಮೀಶಮಯತೇ ಪಾಪಂ ಶಮೀ ಶತ್ರು ನಿವಾರಣಂ ಅರ್ಜುನಸ್ಯ ಧನುರ್ಧಾರಿ।ರಾಮಸ್ಯ ಪ್ರಿಯ ದರ್ಶನಂ॥ ಶಮಿಕಮಲಪತ್ರಾಕ್ಷಿ। ಶಮೀಕಂಟಕಹಾರಿಣಿ। ಆರೋಗ್ಯವಿಜಯಲಕ್ಷ್ಮಿ। ಆಯುಃ ಪ್ರಾಣಂತು ರಕ್ಷತು॥ ಆದಿರಾಜ ಮಹಾರಾಜ। ವನರಾಜ ವನಸ್ಪತೇ। ಇಷ್ಟದರ್ಶನಮ್ಮೃಷ್ಟಾನ್ನ ಕಷ್ಟದಾರಿದ್ರನಾಶನ॥ ಅಗಜಾನನ ಪದ್ಮಾರ್ಕಂ। ಗಜಾನನಮಹಿರ್ನಿಶಂ। ಅನೇಕ ದಂತಂ ಭಕ್ತಾನಾಂ। ಏಕದಂತಮುಪಾಸ್ಮಹೇ॥ ಯಃ ಶಿವೋನಾಮ ರೂಪಾಖ್ಯೋ। ಯಾ ದೇವಿ ಸರ್ವಮಂಗಲಾ॥ ತಯೋಃ ಸಂಸ್ಮರಣಾತ್ಪುಂಸಾಂ। ಸರ್ವತೊ ಜಯ ಮಂಗಲಂ ॥ಸ॥

ಯೀ ಪ್ರಕಾರ ನವರಾತ್ರೆ ವಿಜಯಲಕ್ಷ್ಮಿ[>ದಶಮಿ]ದಿವಸ ಚಉಟರು ಸ್ವಾರಿ ಹೊರಟು ಹೋಗಿ, ಬನ್ನಿಮರದ ಪೂಜೆಯನ್ನು ಮಾಡಿ, ಯೀ ಪ್ರಕಾರ ಬಿನ್ನವತ್ತಲೇಯ ವೋದಿ ವಪ್ಪಿಸಿ, ಶಮೀಪತ್ರಪ್ರಸಾದವಂ ಮುಡಿದು, ಪುನಹಾ ಅರಮನೇಗೆ ಬಂದು ಸದರ ಹಾಕಿ ಕುಳಿತುಕೊಂಡು, ದೀವಟಿಗೆ ಸಲಾಂ ಆದ ತರುವಾಯ ಕಟ್ಟಲೆ ಪ್ರಕಾರ ವೀಳ್ಯ ಪಟ್ಟಿಯನ್ನು ಕೊಡುವಂತವರಿಗೆ ಕೊಡಿಸಿಕೊಟ್ಟು ಕಳುಹಿಸಿ ಕೊಡುವ ಸಂಪ್ರದಾಯಾ.

ಕಂಠೆ ಚದ್ಗರಳಂ। ಗಂಗಾಜಲ ಯಸ್ತತೆ। ವಾಮಾಂಕೆ ಗಿರಿರಾಜತನಯಾ। ಧ್ಯಾಯೆ ಭವಾನಿ ಪತಿ॥ ನಂದಿಸ್ಕಂದ ಗಣೇಶ ರಾಜ ಸಹಿತೋ। ಶ್ರೀ ಸೋಮನಾಥ ಪ್ರಭುತ್ವಂ ಕಾರುಣ್ಯರಸೇನಾಕ್ಷ ಭುವನಂ। ಶ್ರೀ ಶೇಷ್ಮ ಕಾಮಪ್ರದ ॥೧॥

ಹರನಯನ ಹರವಾಹನ ಕಲಚಲ್ಪಿನ ಕತ್ತಿಯ ಕದಾರಗಳು ಪಚ್ಚೆಯ ಬಿರಿದಿನದ ಹಲ್ಲಳು॥ ನೆರೆಕೊರೆಯೊಳು ನೃಪರುಂಟೆ। ಧರೆಯೊಳತಿ ಪುಣ್ಯಜೀವಿ ಅಬ್ಬಕ್ಕದೇವಿ॥೧॥ ಗುರುಪಟ್ಟವ ನೀನು ಧರಿಸಿದೆ ಗುರುಕರುಣೆಯೆನಿಸಿ ಮೆರೆದೆ ಕುಮಲಯದೊಳ್ ವಿಸ್ತರಿಸಿ ಕೀರ್ತಿವಡದಿಹಳಾರ್ಕರ ಸಲಹಲ್ ಬಿರದಾಂಕಿತನಿನೆಸದೆ ಅರಿಗಜ ಮೃಗರಾಜ ಠೀವಿ ಅಬ್ಬಕದೇವಿ॥೨॥ ಯುಗ ವಿಜಯ ಸಮಯ ಸಮಾರಂಭ ವಿಜ್ರುಂಭಮಾನ ಝುಂಕಾಭವನಾ। ಝುಂಪಾ ಸಂಪಾತ ಕಂಪಮಾನ ಘನ

ಘನರೂಡ ವೀಥ ಗಣ ಕಠೊರ ವಿಕುಟದಾಟ ಪಟಹ ಭೇರಿ ಭಾಂಕಾರ ರಿಪುರ್ದಂಡದೊರ್ದಂಡ ಚಂಡಿ ಮುಖಂಡಿತ ರಿಪುಧರಣೀ ಮಂಡಲೇಶ್ವರಾ॥

ಚಉಟರ ಶೀಮೆಯಲ್ಲಿ ಯಿರುವ ದೇವರುಗಳು:

೧. ಪುತ್ತಿಗೆ ಸೋಮನಾಥದೇವರು ಚಉಟರು ಪ್ರತಿಷ್ಟೆ ಮಾಡಿದರು. ಉತ್ತರ ಹೇರಳವಾಗಿ । ಗ ೧೦೦೦೯೦ ಬಿಟ್ಟರು.

೧. ಕಡಂದಲೆ ಷಣ್ಮುಖದೇವರು. ವಿಜಯನಗರಕ್ಕೆ ರಾಯರ ಬಳಿಗೆ ಚಉಟರು ಭೋಜರಾಯರು ಹೋದ ವೇಳ್ಯೆದಲ್ಲಿ ಅಲ್ಲಿ ಸ್ವಪ್ನ ಸೂಚಕವಾಗಿ ಬಂದಲ್ಲಿ ಕಡಂದಲೆಯಲ್ಲಿ ಪ್ರತಿಷ್ಟೆಮಾಡಿ ಪೂಜೆ ಪುನಸ್ಕಾರಕ್ಕೆ ಉತ್ತರ ಬಿಟ್ಟರು.

೧. ಸಾಣೂರ ಮಹಲಿಂಗದೇವರು. ಉದ್ಭವಲಿಂಗ ಪೂಜೇಗೆ ತಕ್ಕ ಉತ್ತರಾ ಭಟ್ಟರು.

೧. ಹೊಸಕೇರಿ ಹನುಮಂತದೇವರು.

೧. ಮಿಚಾರ ಮಾಗಣಿಯಲ್ಲು

೧. ಯಿರವ್ಯೆಲ ಜಲದುರ್ಗಾಮ್ಮಾನವರು ಹಿಂದೆ ಯುಗಾಂತ್ರದಲ್ಲು ಬಿಲಾಸುರಯಂಬ ದ್ಯೆತ್ಯನ ಮಗ ದುರ್ದುಯಂಬವನ ಸಂಹರಿಸಿ, ಪಾಪನಾಶಿನಿಯಂಬ ನದೀ ಸಮೀಪದಲ್ಲಿ ಬಂದು ಉದ್ಭವಲಿಂಗ ರೂಪಿನಲ್ಲಿ ಯಿದ್ದಾರೆ.

೧. ಯಡಪದವಿನ ವಿಷ್ಣುಮೂರ್ತಿದೇವರು.

೧. ಕಾಂಬೇಟಿನ ಸೋಮನಾಥ ದೇವರು.

೩

೧ ಮಳಲಿ [>ಪೊಳಲಿ] ಮಾಗಣಿಯಲ್ಲು ಹಿಂದೆ ಯುಗಾಂತ್ರದಲ್ಲು ಸುರದ[>ಥ] ಮಹಾರಾಯ ಪೂಜಿಸಿದಂತಾ ದುರ್ಗಾದೇವರು.

೧ ಮಳಲಿ [>ಪೊಳಲಿ] ಮಾಗಣಿ ಅಮುಣಿಂಜಿದಲ್ಲು ವರದೇಶ್ವರ ದೇವರು . . . .ಯೀ ಪ್ರಕಾರದಲ್ಲಿ ವಿನಾಯ[+ಕ]ದೇವರು.

೧ ಅಯ್ಯುಂಬಳದ ಮಾಗಣಿಯಲ್ಲು ಕುಂಡಲಿಪರ್ವತದಲ್ಲು ಕುಂಡಲೀಮುನೀಶ್ವರರಿಂದ ಪ್ರತಿಷ್ಟೆಯಾದ ಸೋಮನಾಥದೇವರು.

೧ ತಲಪಾಡಿ ಅಮ್ಮಾನವರು ಬ್ರಾಹ್ಮಣಗೆ ಪ್ರತ್ಯಕ್ಷವಾಗಿ ಬಂದು ನೆಲಸಿದರು. ಅರಸುಗಳು ಉತ್ತರಾ ಬಿಟ್ಟರು॥

❖❖

೭೧

ಜಮಲಾಬಾದು ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಆಮೇಲೆ ಕಲಿಯುಗದ ಆರಂಭದಲ್ಲು ಮಯೂರವರ್ಮ ಯಂಬ ಅರಸು ತ್ರಿ[>ಅ]ಹಿಕ್ಷೇತ್ರದಿಂದ ಬ್ರಾಹ್ಮರನ ಕರತಂದು, ತುಳು ಮೂವತೆರದು[>ಡು] ಗ್ರಾಮದ ಪೈಕಿ ಉಜಿರೆಯಂಬ ಗ್ರಾಮದ ಕೆಳಗೆ ದೇಶಾತೀ[>ಧಿ]ಕಾರಕ್ಕೆ ಸೇರಿಸಿಕೊಟ್ಟರು. ಹೀಗೆ ಯಿರುತಿದ್ದಲ್ಲಿ ನಗರದ ಸಂಸ್ಥಾನದಲ್ಲು ಅಂಮಾಜಿ ಯಿಕ್ಕೇರಿ ಸಂಸ್ಥಾನ ಆಳಿಕೊಂಡು ಯಿರುತಿದ್ದಲ್ಲಿ, ಹಯದರನಾಯಕನು ಪ್ರಭಲಿಶಿಕೊಂಡು ಮೈಸೂರುಶೀಮೆ ಸ್ವಾಧೀನ ಮಾಡಿಕೊಂಡು, ನಗರಕ್ಕೆ ಬಂದ[>ದು] ಅಂಮಾಜಿರ ಕೈಸೆರೆ ಹಿಡಿದು, ಯಿಕ್ಕೇರಿ ಸಂಸ್ಥಾನ ತನ್ನ ಅಧಿನ ಮಾಡಿಕೊಂಡು ಯಿರುತಿದ್ದಲ್ಲಿ, ಹಯಿದರ ನಾಯಕ ತೀರಿಹೋಗಿ, ಆತನ ಮಗ ಟೀಪುಸುಲ್ತಾನ ರಾಜ್ಯ ಆಳಿಕ್ಕೊಂಡು ಯಿರುತಿದ್ದಲ್ಲಿ ಯಿಂಗೌಜಿ ಅವರು ಬಂದು ಕೊಡಿಯಾಲದ ಕೋಟೆ ತೆಗೆದುಕೊಂಡ ನಿಮಿತ್ಯವಾಗಿ, ಟೀಪುಸುಲ್ತಾನ ಶ್ರೀರಂಗಪಟ್ಟಣದಿಂದ ಕೊಡಿಯಾಲಕ್ಕೆ ಬಂದು ಯಿಂಗ್ರೇಜಿಯವರ ಕೈಯ ಲಡಾಯಿ ಮಾಡಿ, ಯರಡನೆ ವಿವೇಕದಲ್ಲು ಆ ಕೊಡಿಯಾಲದ ಕೋಟೆ ತನ್ನ ಅಧಿನ ಮಾಡಿಕೊಂಡು, ತಿರಗಾ ಶ್ರೀರಂಗಪಟ್ಟಣಕ್ಕೆ ಹೋಗುವಾಗ್ಯೆ ಯೀ ವಳಿಗೆ ಬರದ ಚಂದಕೂರು ಮಾರ್ಗವಾಗಿ ಬಂದಲ್ಲಿ, 'ಯೀ ವುನ್ನತವಾದ ಕಲ್ಲು ನೋಡಿಕೊಂಡು ಯಿದರ ಮೇಲೆ ಕೋಟೆ ಹಾಕಬೇಕು' ಯಂಬದಾಗಿ ಯೋಚನೆ ಮಾಡಿ, ಅಜೀಜಿಖಾನನ ಮೇಲೆ ಯವಕಲ್ಲು ಮೊಕರರು ಮಾಡಿಯಿಟ್ಟು, ಯಿ ಕಲ್ಲಿಗೆ ಜಮಾಲಬಾದು ಯಂತ ಹೆಸರಿಟ್ಟು ಹೋದ. ಯೀ ಕಲ್ಲಿಗೆ ಮಾರ್ಗಉ ಕಡದು, ಮೇಲೆ ಕೋಟೆಯ ಕಟ್ಟಿ, ಪಕಿರನಿಗೆ ಶೇರಿಸಿ ಯಿಟ್ಟು, ಕೆಳಗೆ ವಂದು ಸುತ್ತು ಕೋಟೆಯ ಕಟ್ಟಿಸಿ, ಕೋಟೆ ವಳಗೆ ಪೇಟೆ ಅಂಗಡಿಯು ಮಾಡಿಸಿ, ದೊಡ್ಡ ಕಚೇರಿ ಕಟ್ಟಿಸಿ, ಯೀ ಪ್ರಕಾರ ಕೆಲಉ ದಿವಸ ಯಿರುತ್ತಿದ್ದಲ್ಲಿ, ಕಾಳಾಯುಕ್ತಿ ಸಂವತ್ಸರದಲ್ಲು (ಕ್ರಿ. ಶ. ೧೭೯೮) ಶ್ರೀರಂಗಪಟ್ಟಣವನ್ನು ಯಿಂಗ್ರೇಜವರು ತೆಗೆದುಕೊಂಡು ಕೊಡಿಯಾಲಕ್ಕೆ ಬಂದು, ಆ ರೇಉ ಠಾಣ್ಯ ಹಾಕಿಕೊಂಡು, ತುಳುದೇಶ ಯಾವತ್ತು ತನ್ನ ಸ್ವಾಧೀನ ಮಾಡಿಕೊಂಡು ಜಮಾಲಾಬಾದಿಗೆ ಬಂದಲ್ಲಿ, "ಮೇಲೆ ಕೋಟೆ ಬಿಡಬೇಕಾದರೆ ಲಡಾಯಿ ಮಾಡಿ ಬಿಡುವುದು ಹೊರ್ತು ಅನಕರ ಬಿಡುವದಿಲ್ಲಾ"ಯಂಬದಾಗಿ ಕಿಲ್ಲೆದಾರು ಹೇಳಿದ್ದರಿಂದ ಕೊಡೆಯಾಲದಿಂದ ಕಪತಾನರು ಮಂದಿ ತೆಗೆದುಕೊಂಡು ಬಂದು, ಆ ಕಲ್ಲಿನ ಸರಿಯಾಗಿ ಯತ್ತರವಾಗಿ ಮೊರ್ಜೆ ಕಟ್ಟಿ, ಮೇಲಕೆ ಗುಂಡು ಹೊಡದ್ದರಿಂದ ಭಯಬಟ್ಟು ಕೋಟೆಯನ್ನು ಕೌಲು ಮಾಡಿಕೊಂಡು ಬಿಟ್ಟುಕೊಟ್ಟರು. ಆ ಬಳಿಕ ಕಲ್ಲಮೇಲಿಂದ ಕಿಲ್ಲೆದಾರನ ಮಾತ್ರ ಕೆಳಗೆ ಯಿಳಿಶಿ, ಯೀತನ ಸಂಗಡ ಯಿದ್ದ ಜನಗಳು ಯಾವತ್ತು ಅಲ್ಲೆಯಿಟ್ಟು, ಆ ಕಲ್ಲಿನ ಕೆಳಗೆ ಸರದಾರನ್ನು ಚಾವಣಿ ಮಾಡಿಕೊಂಡು ಯಿರುತ್ತಿದ್ದರು.

ಯೀ ಪ್ರಕಾರ ಯಿರುವಾಗೆ ಕಣ್ಣಾನೂರಿನಿಂದ ಪತ್ತೆಹಯಿದರಾ ಯಂಬವನು ಬಂದು, ಅದೂರ ಹಕ[>ತ್ತ]ರ ಆದೂರು[>ಐಗೂರು]ಯಂಬ ಗ್ರಾಮದಲ್ಲು ಯಿರುತಿದ್ದಾ. ಅಲ್ಲಿ ಯಡಬಲದ

ಜನಗಳ "ತ[>ಕ]ಲಬುಕೊಡುತ್ತೇನೆ, ಸಂಬಳ ಕೊಡುತ್ತೇನೆಂ"ಬುದಾಗಿ ನೂರಾರು ಜನಗಲ ಜಮಾಯಿಸಿಕೊಂಡು ಯಿರುವ ವೇಳ್ಯೆದಲ್ಲಿ, ಐಗೂರ ಅರಸು (ವೈಗರಾರು) ಕೃಷ್ಣಪ್ಪನಾಯಕನೆಂಬವನು ಆ ಊರ ಯೆಸಗೆ ಆಳು ಜಮಾಯಿಸಿಕೊಂಡು, ಬಾಳೆಕಟ್ಟೆಯಂಬ ಸ್ಥಳದಲ್ಲು ಕುಂಪಣ ಸುಂಕದ ಕಟ್ಟೆಯಲ್ಲು ಪೂರ್ನಯನವರ ಕಡೆ ಯರಡು ಮೂರು ಪಾರಾಜನ ಶಿಪಾಯಿ ಜನರು ಯಿರುವವರ ಮೇಲೆ ಬಂದು ಬಿದ್ದು, ಅಲ್ಲಿ ಯಿರುವಂತಾ ಜನರ ಯಾವತ್ತು ಕಡದು ಕೊಚ್ಚಿ ಸಾಪು ಮಾಡಿ, ಆ ಸುಂಕದ ಕಟ್ಟೆಯಲ್ಲು ತನ್ನ ಕಡೆ ಜನರ ಪಾರಾಯಿಟ್ಟು, ಪುನಶ್ಚ ಅಯಿಗೂರಿಗೆ ಹೊರಟು ಹೋದನು. ಯೀ ಸಮಾಚಾರ ಯಾವತ್ತು ಪತ್ತೆಹೈದರ ಕೇಳಿ ತನ್ನ ಕಡೆ ಜಮೆದಾರನ ಐಗೂರಿಗೆ ಕಲುಹಿಸಿಕೊಟ್ಟು, 'ಬಾಳೆಕಟ್ಟೆ, ಸುಂಕದಕಟ್ಟೆ ಬಳಿಯ್ಯ ಯಾರೊ ಲಡಾಯಿ ಮಾಡಿದರು' ಯಂಬ ಸಮಾಚಾರ ಕೇಳುತ, "ಆ ಊರವರೆ ತಮ್ಮ ತಮ್ಮ ವಳಗೆ ಜಗಳವಾಡಿದರೊ, ಆದ ಪ್ರತ್ಯೇಕ ಅರಸು ಹುಟ್ಟಿ ಆ ಊರವರ ಮೇಲೆ ಬಿದ್ದು ಲಡಾಯಿ ಮಾಡಿದರ ಯಂಬ ನೆಲವರ ವರ್ತಮಾನ ಕೇಳಿಕೊಂಡು ಬಾ"ಯಂಬುದಾಗಿ ಹೇಳಿದ್ದರಿಂದ, ಯೀ ಜಮಾದಾರ ಐಗೂರಿಗೆ ಹೋಗಿ, ಅಲ್ಲಿ ಅರಸುಗಳ ಕೂಡೆ "ನೀವು ಯಾರು? ಯಾವ ದೇಶದವರು? ಮೊನ್ನೆ ಯಿಲ್ಲಿ ಲಡಾಯಿ ಮಾಡಿದವರು ಯಾರು?"ಯಂತ ಕೇಳುವಾಗ್ಯೆ, "ನಾವಾದರೆ ಯಿದೆವೂರು ಅರಸುಗಳು. ನಾವೆ ಲಡಾಯಿ ಮಾಡಿದರು." ಯಂಬುದಾಗಿ ಹೇಳಿದ್ದರಿಂದ, ಯೀ ಮಾತು ಯಾವತ್ತು ಕೇಳಿ "ನಾನು ಪತ್ತೆಹಯಿದರ ಕಡೆಯಿಂದಾ ಬಂದವಾ"ಯಂಬುದಾಗಿ ಹೇಳಿದ್ದರಿಂದ, ತನ್ನ ಕಡೆಯಿಂದ ವಬ್ಬ ಜಮೆದಾರನ ಯಿವನ ಸಂಗಡ ಕೂಡಿಶಿಕೊಂಡು, ತನ್ನ ಹೆಸರಲು ಪತ್ತೆಐ[>ಹೈ]ದರಗೆ ಉತ್ತರವು ಬರಕೊಟ್ಟು ಕಳುಹಿಸಿ ಕೊಟ್ಟಿದ್ದರಿಂದ, ಯಿವರು ವುಭಯತರು ಜಮೆದಾರು ಆ ಹೂರಿಗೆ[>ಊರಿಗೆ] ಬಂದು, ಅರಸು ಕೊಟ್ಟಂತಾ ಕಾಗದವನ್ನು ಕೊಟ್ಟು, ಆ ಕಾಗದ ನೋಡಿಕೊಂಡು ತಾನು ಜಮೆಮಾಡಿದಂತಾ ಜನರನ್ನು ಕರಕೊಂಡು, ಕೊಂಬಾರದ ಘಟ್ಟಾನಿ ಐಗೂರು ಅರಸನ ಬಳಿಗೆ ಹೋಗಿ, ಅಲ್ಲಿ ಅರಸನ ಭೇಟಿಯಾಡಿದ್ದಲ್ಲಿ "ನೀವು ಯಾರು?ಪತ್ತೆಹಯಿದರೆ ಸಹಿಯೊ"ಯೆಂತ ಕೇಳಿದ್ದರಿಂದ "ನಾವೇ ಪತ್ತೆಹಯದರು"ಯಂತ ಹೇಳಿದ್ದರಿಂದ, ಯಿವರ ವಶಕ್ಕೆ ತನ್ನ ಯಸಗೆ ಆಳು ಪೈಕಿ ಮೂನ್ನೂರು ಜನರುಗಳ ಕೂಡಿಶಿ ಕೊಟ್ಟು, ಆ ಜನರುಗಳನ್ನು ಕರಕೊಂಡು, ಅಲ್ಲೇ ಸಮೀಪದಲ್ಲು ದೇವರಮನೆಯಂಬ ಹಳ್ಳಿಗೆ ಬಂದು ನಿಂತು, ಅಲ್ಲಿಂದ ಜಮಾಲಾಗಡದ ಕಲ್ಲಿನ ಮೇಲೆ ಪ್ರಾಕು ಯಿರುವ ಜನರ ಬಳಿಗೆ ಪಿತೂರಿ ಕಳುಹಿಸಿಕೊಟ್ಟದ್ದರಿಂದ, ಆ ಜನರು ಜಮಾಲಾಬಾದು ಕಲ್ಲ ಮೇಲೆಕೆ ಬಂದು, ತಾವು ಬಂದ ಅಭಿಪ್ರಾಯ ಯಾವತ್ತು ಹೇಳಿ, ಅಲ್ಲಿಂದಲ್ಲು ವಬ್ಬನ ಸಂಗಡ ಕರಕೊಂಡು ಯೀ ಪತ್ತೆಹಯಿದರನ ಬಳಿಗೆ ಬಂದು, ಜಮಾಲಾಬಾದು ಕಿಲ್ಲೆಯಲ್ಲು ಯಿರುವ ಶಿಪಾಯಿ ಯಾವತ್ತು ಹೇಳಿದ ಮಾತು ಕೇಳಿಕೊಂಡು, ತನ್ನ ಕಡೆ ತಿಮ್ಮನಾಯಕಯಂಬವನ ಸಂಗಡ ಕೆಲವು ಜನ ಕೊಟ್ಟು ಕಳುಹಿಕೊಟ್ಟದ್ದರಿಂದ ಯಿವರು ಬಂದು ಜಮಾಲಾಬಾದು ಕಿಲ್ಲೆಯನ್ನು ತೆಗೆದುಕೊಂಡರು.

ಆ ಬಳಿಕ ಪತ್ತುಮೂಡಿ ಸುಬ್ಬರಾಯ ಯಂಬವನು ಆ ದೇವರಮನೆಗೆ ಬಂದು, ಯಿ ಪತ್ತೆಯಿ[>ಹೈ]ದರ ಭೇಟಿ ಮಾಡಿಕೊಂಡು ಯಿವರು ಉಭಯತರು ದೇವರಮನೆಗೆ ಯಿಳಿದಂಪುತ್ತೂರು ದೇವಸ್ತಾನಕ್ಕೆ ಬಂದು ಯಿರುವಾಗ್ಯೆ, ಯಿತಲಾಗಿ ಕುಡುಮರ[>ದ] ಹೆಗ್ಗಡೆಯವರು ತಮ್ಮ ಕಡೆ ಜನಾ ತೆಗೆದುಕೊಂಡು ಪುತ್ತೂರು ದೇವಸ್ತಾನಕ್ಕೆ ಬಂದು ಲಥಾಯಿ ಮಾಡುವ ವೈಳ್ಯೆದಲ್ಲು,

ಹೆಗ್ಗಡೆಯವರಿಗೆ ಕಯಿಗೆ ಗುಂಡು ತಾಗಿದ್ದರಿಂದ ಹೆಗ್ಗಡೇರು ಜನ ಸಹಾ ಹಿಂತಿರುಗಿ ಹೋಗುವಾಗ್ಯೆ, ಯಿವರ ಕಡೆ ಜನಲು ಪುನಹಾ ತಮ್ಮ ಟಿಕಾಣಿಗೆ ಹೋದರು.

ಆ ಮೇಲೆ ಪತ್ತೆಹೈದರನ್ನು ಅಡೊರು ಮಾರ್ಗವಾಗಿ ಬಂದು, ಕುಡುಮರ[>ದ] ಹಕರಸಹಾಯ ಯಂಬವನ ಮನೆಯಲ್ಲಿ ಬಿಡಾರ ಮಾಡಿಕೊಂಡು ಯಿರುತ್ತಿರುವಾಗ್ಯೆ, ಸುಬ್ರಮಣ್ಯದಿಂದ ಕುಂಪಣಿ ಜನ ತೆಗೆದುಕೊಂಡು ನೂಜಿನಾಯರ ತಮ್ಮ ಕೃಷ್ಣಯಯಂಬವನ್ನು ಸಂತಯ ಯಂಬಿವನ ಮನೇ ಹತರ ಬಂದು, ಲಡಾಯಿ ಮಾಡಿದ್ದರಿಂದ ಜೆಯಿಸಲಾರದೆ ಪರಾರಿ ಆಗಿ ತನ್ನ ಕಡೆ ಕುದುರೆ ಜನಾ ಸಹಾ ಬಿಟ್ಟು ಹಿಂದಕ್ಕೆ ಬಳೆಘಟ್ಟಾದಿ ಹೋದವಾ ಉಗ್ಗೆಹಳ್ಳಿ ದೇವಸ್ಥಾನಕ್ಕೆ ಹೋಗಿ, ಯೀ ಪರಾರಿ ಆದಂತಾ ಜನರ ಯಾವತ್ತು ಜಮ್ಮಾಶಿಕೊಂಡು, ಅಲ್ಲಿಂದ ಅಸ್ತಾರೆಗೆ ಪಿತ್ತೂರು ನಡೆಶಿದ್ದರಿಂದ, ಆ ಊರ ಕಿಲ್ಲೆದಾರನು ಯಿವರಿಗೆ ಬರುವ ಹಾಗೆ ಮಾತು ಕೊಟ್ಟದ್ದರಿಂದ, ಯಿದರ ಸಂಗಡ ಯಿರುವ ಪತ್ತುಮುರಿ[>ಮಾಡಿ] ಸುಬ್ಬಿರಾಯನು ಆಗೆಡ-ಜೆನ ತೆಗೆದುಕೊಂಡು ಹೋಗಿ, ಕೋಟೆ ಮೂಲಿಗೆ ಹೋಗುವಾಗ್ಯೆ ಕಿಲ್ಲೆದಾರನು ಕೋಟೆ ವಳಗಿನಿಂದಾ ಬಿಚ್ಚುಗತ್ತಿ ತೆಗೆದುಕೊಂಡು ಬಂದು, ಸುಬ್ಬರಾಯನು[>ಸುಬ್ಬರಾಯನನ್ನು] ಕಿಲೆದಾರನು ಕೋಟೆವಳಗೆ ಹೋಗಿ ಹಿಂದಿರುಗಿ ಬರುವಾಗ್ಯೆ ಕತ್ತಿಯಿಂದ ಹೊಡೆದು ಹಾಕಿದ. ಯಿವನ ಸಂಗಡ ಹೋದ ಜನ ಯಾವತ್ತು ಪರಾರಿ ಆಗಿ ಹಿಂದಿರುಗಿ ಬಂದರು. ಅಲ್ಲಿಂದ ಪತ್ತೆಹಯಿದರಾ ಯಾವಲ್ಲಿಗೆ ಹೋದಾಯಂಬದ್ದು ಗೊತ್ತು ಯಿಲ್ಲಾ.

ಯಿತ್ತಲಾಗಿ ಜಮಲಾಬಾದಿನಲ್ಲು ಯಿರುವ ತಿಮ್ಮಾನಾಯಕಯಂಬವನ ಮೇಳೆ ಕುಂಪಣಿ ಫವುಜು ಬಂದು ಯುದ್ಧಾಮಾಡಿದ್ದರಿಂದ ಕಲ್ಲಿನ ಮೇಲೆ ಯಿರುವ ಜನ ಪೈಕಿ ಕೆಲವು ಜನ ಪರಾರಿ ಆಗಿ ಹೋಯಿತು. ಕೆಲವು ಜನರು ಕೈಸೆರೆ ಸಿಕ್ಕಿದರು. ಕಿಲ್ಲೆಯು ತಮ್ಮಾ ಸ್ವಾಧೀನ ಮಾಡಿಕೊಂಡು ಠಾಣ್ಯ ಹಾಕಿ ತಮ್ಮ ಕಡೆ ಜನರ ಯಿಟ್ಟು ಯಿದ್ದಾರೆ.

ಯೀ ಊರಲ್ಲಿ ಯಿರುವ ದೇವಸ್ಥಾನದ ವಿವರ:

೧ ದುರ್ಗದ ಮೇಲೆ ಅಮ್ಮನವರ ದೇವಸ್ಥಾನ.

೧ ಗಣಪತಿದೇವರ ದೇವಸ್ಥಾನ.

೩ ಊರೊಳಗೆ ಚಿಕ್ಕದು ದೊಡ್ಡದು ಸಹಾಯಿದ್ದು ದೇವಸ್ಥಾನ.

೨ ವಿಷ್ಣುದೇವಸ್ಥಾನ.

೨ ಭೂತಸ್ಥಾನ.

೨ ವಿರೇಶ್ವರ ದೇವಸ್ಥಾನ.

೧೧

೧ ಜುಮ್ಮಮಹಜೀದು

೨ ಅಲಾವಿ ದೇವರ ಮಹಜೀದು

೩

ಯೀ ಊರ ಬಾಗಲಿಗಳ ವಿವರಾ:

೧ ಕೊಡೆಯಾಲದ ಬಾಗಲು	೩ ಬಾಗಲು
೧ ಯೀ ಬಾಗಲಿ ಹೊರಗೆ ಜುಮ್ಮಾ ಮಹಜೀದು	೧ ಮಜೀದ
	———
೧ ಪಟ್ಟಣದ ಬಾಗಲು	೪
೧ ಡಿಳ್ಳಿ ಬಾಗಲು	

———

೪

❖❖

೭೨
ತುಳುವದೇಶ ಕಡಬಾ ಸಂಸ್ಥಾನದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಯೀ ಕೈಫಿಯತು ತುಳುವದೇಶ ಕಡಬಾ ಸಂಸ್ಥಾನದ್ದು, ಬರಸಿಕೊಟ್ಟದ್ದು : ಕಡಬಾ ಶ್ಯಾನಭಾಗ ಸುಬ್ಬೆಯ್ಯನವರು, ದೇವಸ್ಥಾನದ ಕುಂಬಾಟ ಸಂಕ್ಯೆಯ್ಯಸಾಬರು.

ಕೃತಯುಗದಲ್ಲಿ ದಕ್ಷಪ್ರದೀಪರಾಯನು ತನಗೆ ಬ್ರಹ್ಮಪಟ್ಟ ಉಂಟಾಗಬೇಕೆಂಬ ನಿಮಿತ್ಯ ನೂರು ಯಜ್ಞ ಮಾಡಬೇಕೆಂತ ತೊಂಬತ್ತುವೊಂಬತ್ತು ಯಜ್ಞಮಾಡಿ, ಅಖ್ಯೆರು ಯಜ್ಞಕ್ಕೆ ಆ ದಕ್ಷಪ್ರದೀಪರಾಯನು ಬ್ರಹ್ಮವಿಷ್ಣು ಮೊದಲಾದ ದೇವಾದಿತ್ತೆ[>ದೇವಾದಿದೇವತೆ]ಗಳ ಕರದು ಯೀಶ್ವರದೇವರ ಬಳಿಗೆ ಕರೆಯಲಿಕ್ಕೆ ಬಂದಲ್ಲಿ, ಯೀಶ್ವರ ದೇವರು ಯೆದ್ದು ಕಾಜೀಮು ಕೊಡಲಿಲ್ಲಾ, ಯಾತರಿಂದ ಯಂದರೆ ತಾನು ಸಾಕ್ಷಾತ್ ಪರಮೇಶ್ವರ, ಯೀತನಾದರೆ ಅರಸು, ತಾನೆ ಯೆದ್ದು ಕಾಜೀಮು ಕೊಟ್ಟದೆ[>ರೆ] ಯೀ ಅರಸು ತಲೆ ಸಹಸ್ರಛಿದ್ರವಾದೀತು ಯಂಬುದ ಯೀಶ್ವರದೇವರು ತಿಳಕೊಂಡು ಯೆದ್ದು ಕಾಜೀಮು ಕೊಡಲಿಲ್ಲಾ. ಯೀ ಅರಸು ಅದನ್ನು ನೋಡಿ ಶಾನು ಪೃಥುವಿಪತಿ, ಯೀ ಯೀಶ್ವರದೇವರಿಗೆ ಹೆಣ್ಣುಕೊಟ್ಟು ಮಾವನಾಗಿ ಯಿದ್ದೇನೆ. ನಾನು ಯೀತನ ಬಳಿಗೆ ಬರುವಾಗ್ಯೆ ಯೆದ್ದು ಕಾಜೀಮು ಕೊಡಲಿಲ್ಲಾಯಂಬ ಸಿಟ್ಟಿನಿಂದ ತಿರುಗಾ ಹೊರಟು ಹೋದರು.

ಆ ತರುವಾಯ ದಕ್ಷಪ್ರದೀಪರಾಯನ ಮಗಳು ಯೀಶ್ವರನ ಅರ್ಧಾಂಗಿ ದಾಕ್ಷಾಯಣಿ ಅಮ್ಮನವರು ತನ್ನ ಪತಿ ಯೀಶ್ವರದೇವರ ಕೈಯ್ಯ ಕೇಳಿಕ್ಕೊಂಡ ವಿವರ : "ತನ್ನ ತಂದೆ

ದಕ್ಷಪ್ರದೀಪರಾಯನ ಮನಿಯಲ್ಲು ಯಜ್ಞವಾಗುತ್ತದೆ. ಅಲ್ಲಿಗೆ ಸಕಲ ದೇವತೆಗಳು . . . . ಪರು ಬರುತ್ತಾರೆ. ತಾನು ಹೋಗಿ ಬರುತ್ತೇನೆ"ಯಂತ ಕೇಳಿಕೊಂಡಲ್ಲಿ, ಯೀಶ್ವರನು ತನ್ನ ಗಣಗಳ ಕೊಟ್ಟು ಉ್ರಷಭರಾಜನ ಕೂಡಿಸಿ ದಾಕ್ಷಾಯಿನಿ ಅಮ್ಮಾನವರ ಕಳುಹಿಸಿಕೊಟ್ಟು ಯಿರುವಲ್ಲಿ, ತಂದೆಮನೆಯಲ್ಲು ಯಜ್ಞಸಾಲೆ ಬಳಿಗೆ ಬಂದು ನಿಂತು ಯಿರುವಾಗ್ಯೆ, ತನ್ನನಾರು ಮಾತನಾಡಿಸಲಲ್ಲ, ಆದ್ದರಿಂದ ಯಜ್ಞಕೊಂಡದ ಸಮೀಪದಲ್ಲು ನಿಂತುಕೊಂಡು ಯಿದ್ದಳು. ಯಜ್ಞದೀಕ್ಷಿತನು ಸಕಳದೇವಾದಿ ದೇವತೆಗಳಿಗೆಲ್ಲ ಅವರವರ ಹೆಸರಿನಿಂದ ಆಹುತ್ತಿಗಳ ಕೊಟ್ಟು ಯೀಶ್ವರನ ಹೆಸರಿನಿಂದ ಆಹುತಿ ಕೊಡಲಿಲ್ಲವಾದ್ದ ಕಾರಣ, ದೇವಿಯು "ತನ್ನ . . . . ಯೆಂತು ಮಾತನಾಡಲಿಲ್ಲ. ತನ್ನ ಪತಿಗು ಆಹುತಿ ಕೊಡದ ಹಾಗೆ ಅವಮಾನ ಮಾಡಿದ"ನೆಂದು ಬಹಾಳ ಚಿಂತೆಯಿಂದ ಯಜ್ಞಕೊಂಡದಲ್ಲಿ ಪ್ರವೇಶವಾದಳು.

ಯೀ ವರ್ತಮಾನ ಯಾವತ್ತೂ ಪ್ರಮಥಗಣಗಳು ಯೀಶ್ವರದೇವರಿಗೆ ತಿಳಿಯ ಹೇಳಿದಲ್ಲಿ ಮಹಾಕೋಪದಿಂದ ತನ್ನ ಜಟೆಯನ್ನು ತೆಗೆದು ಭೂಮಿಗೆ ಅಪ್ಪಳಿಸುವಂತಾ ವೇಳೆಯಲ್ಲು, ಭೂಮಿ ಸೀಳಿ ವೀರಾವೇಶನಾಗಿ ಶ್ರೀ ವೀರಭದ್ರದೇವರು ಅಘೋರರೂಪಿನಿಂದ ಉತ್ಪನ್ಯವಾಗಿ, ಸ್ವಾಮಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ. "ಯೇನು ಅಪ್ಪಣೆ."ಯಂತ ಕೇಳುವಾಗ್ಯೆ ಯೀಶ್ವರದೇವರು ಹೇಳಿದ್ದು, "ನಿನ್ನ ತಾಯಿ ವರ್ತಮಾನ ವಿಚಾರಿಸಿಕೊ ಹೋಗು"ಯಂತ ಅಪ್ಪಣೆ ಕೊಡಲಾಗಿ, ಆ ಕ್ಷಣ ಹೊರಗೆ ಬಂದು ಪ್ರಮಥಗಳಗಳ ಕೈಯ್ಯ ಕೇಳಿಕ್ಕೊಂಡು ತನ್ನ ಸಕಲ ಆಯುಧಗಳನ್ನು ತೆಗೆದುಕ್ಕೊಂಡು, ದಕ್ಷಪ್ರದೀಪರಾಯ ಯಜ್ಞಮಾಡುವಂತಾ ಯಜ್ಞಾಸಾಲಿಗೆ ಹೊರಟು ಹೋದನು. ಅಲ್ಲಿ ದಾರಿಗಳಲ್ಲಿ ಸೂರ್ಯಚಂದ್ರರು ಕಾವಲು ಯಿದ್ದರು. ಶ್ರೀ ವೀರಭದ್ರದೇವರು ಅಘೋರರೂಪನಾಗಿ ಬರುವಂತಾದ್ದನ್ನು ಕಂಡು ನಕ್ಕರು. ಆಗ್ಯೆ ಸೂರ್ಯದೇವರಿಗೆ ತಪರಾಕು ಹೊಡದಲ್ಲಿ ಬಾಯಿಯಿಂದ ಹಲ್ಲು ಮುರಿದು ಹೆಳಗೆ ಬಿದ್ದದಾಯಿತು. ಹಾಗೆ ಪಳಗೆ ಹೋಗಿ ನೋಡುವಾಗ್ಯೆ, ಅರಸು ದಂಪತಿಯುಕ್ತನಾಗಿ ಯಜ್ಞಮಾಡುವ ಕಾಲದಲ್ಲಿ ಆ ಯರಡು ಜನರಿಗು ಶಿರಚ್ಛೇದನ ಮಾಡಿ ದೇವತೆಗಳ ಬಡದು ಬೆರಸುವ ವೇಳ್ಯೆದಲ್ಲಿ ಅವರು ಪಲಾಯನವಾದರು. ಯಜ್ಞಧ್ವಂಸ ಮಾಡಿ ಯೀಶ್ವರನ ಬಳಿಗೆ ತಿರುಗಾ ಬಂದನು.

ಯಿತ್ತಲಾಗಿ ಯೀಶ್ವರದೇವರು ಮಹಾಚಿಂತಾಕ್ರಾಂತರಾಗಿ, ತನ್ನ ಅರ್ಧಾಂಗಿ ಹೋದ ಬಳಿಕ ತನಗೆ ಯಾತರ ಸಂಸಾರ ಯಂಬದಾಗಿ ವಯಿರಾಗ್ಯವನ್ನು ತೆಗೆದುಕ್ಕೊಂಡು, ಅರಣ್ಯಕೆ ತಪಸ್ಸು ಮಾಡುವದಕ್ಕೆ ಹೊರಡು ಹೋದರು. ಯಿತ್ತಲಾಗಿ ಅಗ್ನಿಮುಖದಿಂದ ದ್ಯೆಸಿ ಹೋದಂತಾ ದಾಕ್ಷಾಯಣಿ ಅಮ್ಮಾನವರು ಹೇಮಂತಯಂಬ ಪರ್ವತರಾಯನ ಉದರದಲ್ಲಿ ಜನನ ಮಾಡಿ, ಮಹಾಸೌಂದರ್ಯ ಸ್ತ್ರೀಯಾಗಿ ಯಿರುತ್ತಿದ್ದಲ್ಲಿ, ಆ ಪರ್ವತರಾಯನು ಯೀ ಕನ್ನಿಕೆ ಮಹಾರೂಪವತಿಯಾಗಿ ಯಿದ್ದಾಳೆ, ಶ್ರೀವಿಷ್ಣುದೇವರಿಗೆ ವಿವಾಹಮಾಡಬೇಕೆಂಬ ಆಲೋಚನೆಯಿಂದ ಯಿದ್ದಲ್ಲಿ, ಯೀ ಕನ್ನಿಕೆಯು "ತನಗೆ ರುದ್ರದೇವರು ವರ ಆಗಬೇಕೆಂ"ತ ಸಂಕಲ್ಪಮಾಡಿಕ್ಕೊಂಡು, "ಯೀ ಬಗ್ಯೆ ಯೀಶ್ವರನ ಕುರಿತು ತಪಸ್ಸು ಮಾಡುತ್ತೇನೆಂ"ತ ಅರಣ್ಯಕ್ಕೆ ಹೊರಟು ಹೋದಲ್ಲಿ, ಅಲ್ಲಿ ಯೀಶ್ವರದೇವರು ತಪಸ್ಸುಮಾಡುತ್ತ ಯಿರುವದನ್ನು ಯೀ ಪಾರ್ವತಿ ಅಮ್ಮಾನವರು ಕಂಡು, "ಯಿಲ್ಲಿ ಯಾರೊ ತಪಸ್ವಿಗಳು ಯಿದ್ದಾರೆ. ಯಿವರ ಶಿಸ್ರೂಷತನ ಮಾಡಿಕ್ಕೊಂಡು ತಾನು ನಿಂತರೆ ಯೀಶ್ವರದೇವರ ದಯೆ ಉಂಟಾದೀತು"ಯಂತ ಗ್ರಹಿಸಿ, ಕೆಲಉ ಕಾಲ ಶಿಸ್ರೂಷೆಯಿಂದ ಯಿರುತಿದ್ದರು.

ಯಿದೇ ರೀತಿ ಕೆಲಉ ಕಾಲ ಯಿರುವಂತಾ ವೇಳ್ಯೆದಲ್ಲು ದೇವತೆಗಳು ಯಾವತ್ತು ಕೂಡಿ "ಯೀಶ್ವರದೇವರಾದರೆ ತಪಸ್ಸಿಗೆ ಹೊರಟು ಹೋದರು. ತಾರಕಾಸುರ ಶಿಹ್ಮವತ್ತಾಸುರ ಗಜಾಸುರ ಸೂರಪದ್ಮಾಸುರ ಯಿವರು ನಾಲ್ಕು ಜನ ಅಣ್ಣತಮ್ಮಂದರು ಸದರಿ ನಾಲ್ಕು ಜನರು ಯೀಶ್ವರನ ಕೈಯ್ಯ ಪೂರ್ವದಲ್ಲಿ ವರಹಾ ಪಡಕೊಂಡು ಯಿದ್ದರು. ಆದ್ದರಿಂದ ಸಕಲದೇವತೆಗಳ ಲೋಕವನ್ನು ಸೂರೆ ಮಾಡಿಕ್ಕೊಂಡು ಬರುತ್ತಾರೆ. ಯಿವಂದರ ಉಪದ್ರ ಬಹಾಳವಾಯಿತು. ಯೀ ದೈತ್ಯರಾದರೆ "ಯೀಶ್ವರನ ಪುತ್ರನ ಕೈಯ್ಯ ಮರಣವೆ ಸರಿಯಂತ ವರ ಬೇಡಿಕೊಂಡು ಯಿದ್ದಾರೆ. ಯೀ ಬಗ್ಗೆ ಪಾರ್ವತೀ ಅಮ್ಮಾನವರು ಯೀಶ್ವರನ ಶಿಸ್ರೂಷೆತನದಲ್ಲಿ ಯಿದ್ದಾರೆ. ಯಿವರಿಬ್ಬರ ಗಟ್ಟಣಿ ಆಗಬೇಕು. ಆ ಬಳಿಕ ಕೊಮಾರಸ್ವಾಮಿ ಹುಟ್ಟಿ ಯಿವಂದರ ಸಂಹಾರ ಮಾಡ್ಯಾರು"ಯಂಬದರಿಂದ ಮನ್ಮಥನ ಕರೆದು, "ನೀಉ ಯೀಶ್ವರದೇವರು ತಪಸ್ಸುಮಾಡುವ ಬಳಿಗೆ ಹೋಗಿ ನ[>ನಿ] ನ್ನ ಮದನಾಶ್ರ[>ಸ್ತ್ರ] ಮೊದಲಾದ ಆಯುಧಗಳಿಂದ ಪುಷ್ಪಬಾಣವನ್ನು ಯೀಶ್ವರದೇವರ ಸರ್ವಾಂಗ ಅವಯವಕ್ಕೂ ಪ್ರಹರಿಸಿದಲ್ಲಿ, ವಿಸ್ಮಯವಾಗಿ ಯೀಶ್ವರನು ತ್ರಿಕಣ್ಣು ತೆಗೆದು ನೋಡುವಂತಾ ವೇಳೆ ಕಾಮಚಕ್ರೇಶ್ವರನು ಭಸ್ಮಗತನಾಗಿ ಹೊದಾಯಿತು. ಮಹಾತ್ಮವಂತಾ ಕಮಾಂಧಕಾರನಾಗಿ ಶಾಂತದೃಷ್ಟಿಯಿಂದ ನೋಡುತ್ತಿದ್ದಲ್ಲಿ, ತನ್ನ ಸಮೀಪದಲ್ಲಿ ಶಿಸ್ರೂಸೆತನ ವಾಡಿಕ್ಕೊಂಡು ಯಿದ್ದಂತಾ ಪಾರ್ವತಿ ಆಮ್ಮನವರು ಸೌಂದರ್ಯಶ್ರೀಯಾಗಿ ಯಿದ್ದುದನ್ನು ನೋಡಿ, ಬಹಾಳ ಮೋಹದಿಂದ ಯಿಬ್ಬರು ಬಹುಕಾಲ ಕ್ರೀಡೆಮಾಡುತ್ತ ಯಿದ್ದರು. ಯಿಂತಾ ಕಾಲದಲ್ಲಿ ಸದರಿ ರಾಕ್ಷಸರು ಯಿದೆ ಕಾಲವೆಂದು ಸಕಲ ದೇವತೆಗಳ ಲೋಕವನ್ನು ಧ್ವಂಸಮಾಡುತ್ತಾ ಯಿದ್ದರು.

ಯೀ ಬಗ್ಯೆ ದೇವೇಂದ್ರ ಮೊದಲಾಗಿ ದೇವತೆಗಳು ಕೂಡಿ ಯೀಶ್ವರನ ಕ್ರೀಡೆಯಿಂದ ಬಹುಕಾಲವಾಗಿ ಹೋಯಿತು. ಯಿನ್ನು ಮುಂದೆ ಪುತ್ರಸಂತಾನವಾಗಿ ರಾಕ್ಷಸರ ಸಂಹಾರ ಆಗಬೇಕು ಯಂತ ಆಲೋಚಿಸಿ, ಅಗ್ನಿ ವಾಯು ಮುಂತಾದ ದೇವತೆಗಳ ಕ್ರೀಡೆಸ್ಥಳಕ್ಕೆ ಕಳಿಸಿದರು. ಯಿವರು ಬರುತ್ತಲೆ ಅಮ್ಮಾನವರು ಲಜ್ಜೆಮಾನವಾಗಿ ಹೊರಟು ಹೋದರು. ಆಗ್ಯೆ ರುದ್ರ ವೀರ್ಯ್ಯ ಭೂಮಿಗೆ ಬಿದ್ದಂತಾಯಿತು. "ಗರ್ಭೋತ್ಪನ್ನ ಆಗುವಂತಾ ವೀರ್ಯ್ಯ ವೆರ್ತ್ತ ಮಾಡಿದರಷ್ಟೆ"ಯಂಬ ದುಃಖದಿಂದ ಪಾರ್ವತಿ ಅಮ್ಮಾನವರು "ದೇವತೆಗಳಿಗೆ ಸಂತತಿ ಯಿಲ್ಲದೆ ಹೋಗಲಿ"ಯಂತ ಶಾಪಕೊಡುವಂತಾದರು. ನೆಲಕ್ಕೆ ಬಿದ್ದಂತಾ ವೀರ್ಯವನ್ನು ಭೂಮಿ ಸಯಿರಿಸಲಾರದೆ ಮೊರೆಯಿಟ್ಟಳು. ಅಗ್ನಿದೇವತೆ ಬಂದು ಸಯಿರಿಸಿಕ್ಕೊಂಡಳು. ಅವರಿಗು ಶಖ್ಯಾವಿಲ್ಲದೆ ಗಂಗಾನದಿಯಲ್ಲು ಬಿಟ್ಟನು[>ಳು]. ಆಗ್ಯೆ ಕಡಬಿ ಕಾಶಿರ್ಗೊಡು ಮಂಗಲೂರು ಬಾರಕೂರು ಯೀ ನಾಲ್ಕು ಸ್ಥಳದಲ್ಲಿಯು ಆ ರೇತಸ್ಸು ದರವೆ[>ದ್ರುವ]ಗಳು ನಿಂತು ಬಂದದರಿಂದ ಈ ನಾಲ್ಕು ಸ್ಥಳದಲ್ಲಿಯೂ ರಸಭಾವಿಯುಂಟಾಯಿತು. ಆ ಕಾಲದಲ್ಲಿ ಯೀ ರಸಕ್ಕೆ ಕಬ್ಬಿಣ ಮುಟ್ಟಿದಾಕ್ಷಣ ಚಿನ್ನವಾಗುತ್ತಾಯಿರುತಿತ್ತು. ಆಗ್ಯೆ ಯೀ ಸ್ಥಳ ಅರಣ್ಯವಾಗಿ ಯಿರುತ್ತಿತ್ತು. ಹೀಗೆ ಕೆಲಉ ಕಾಲದಲ್ಲು ಮಯೂರವರ್ಮನ ಸಂತತಿಗಾರ ತವಳವ ಅರಸು ಯಂಬವ ಅರಣ್ಯಕ್ಕೆ ಬೇಟೆ ಆಡುತ್ತಾ ಬಂದಲ್ಲಿ, ಕಡವೆ ಮೃಗದ್ರಿಷ್ಟಿಗೆ ಕಂಡಿತು. ಆ ಮೃಗವು ಯೀ ರಸಭಾವಿ ಯಿದ್ದಾ ಅರಣ್ಯಕ್ಕೆ ಹೋಗಲಾಗಿ, ಅರಸು ಸೇನೆ ಸಹಾ ಅರಣ್ಯಕ್ಕೆ ಹೋಗುತ್ತೇವೆಯಂಬ ಯಿಷ್ಟರಲ್ಲು ಬಹಾಳ ಉರಿಜ್ವಾಲೆ ಆದ್ದರಿಂದ ಯೇನಾದರು ಕಾರ್ಯಕಾರಣವದೆಯಂತ ಮನಸಿನಲ್ಲು ಗ್ರಹಿಸಿ, ಆಯುಧಗಳನ್ನು ಆ ಅರಣ್ಯದ ಹೊರಗೆ ಯಿರಿಸಿ ತಾನು ಕ್ರಿಯಾವಂತನಾಗಿ ವಳಹೊಕ್ಕು ನೋಡುವಾಗ್ಯೆ ಯೀ ರಸಬಾವಿಯು ದೃಷ್ಟಿಗೆ ಕಂಡಿತು. ಯಿದು ಕಾರಣಿಕಸ್ಥಳ. ಕಬ್ಬಿಣ ಹೋಗಿ ಚಿನ್ನವಾಗುವಂತಾ

ಸ್ಥಳಯೆಂಬುದಾಗಿ ಗ್ರಹಿಸಿ ಅರಣ್ಯ ಯಾವತ್ತು ಕಡದು, ಅರಮನೆಯ ಕಟ್ಟಿಸಿ, ಯೇಳು ಸುತ್ತಿನ ಕೋಟೆ ಬತ್ತೇರಿಗಳು ಯಿರಿಶಿ, ಷಹಾರಗಳು ಯೆಬ್ಬಿಸಿ, ಕಡವೆಮೃಗದ ನೆತನವಾಗಿ ರಸಭಾವಿ ದೃಷ್ಟಿಗೆ ಬಿದ್ದರಿಂದ ಯೀ ಸ್ಥಳಕ್ಕೆ ಕಡಬಿ ಸಂಸ್ಥಾನವೆಂಬ ಹೆಸರು ಯಿಟ್ಟು, ಯೀ ಸಂಸ್ಥಾನದ ಕೆಳಗೆ ಮೂವತ್ತು[>ಯಾವತ್ತು] ಯರಡು ಸಾವಿರ ಸೀಮೆನ್ತತನ[>ಸ್ತಿತಿನ] ಭೂಮಿಯನ್ನು ಯಿಟ್ಟು ಯಿದ್ದಲ್ಲಿ ಆ ಶೀಮೆಗ್ರಾಮಗಳ ವಿವರ:

೧ ಕಸಬಾ ಕಡಬದ ಗ್ರಾಮ
೧ ಯೆಳಿಯೂರ ಗ್ರಾಮ
೧ ಕೊಡ್ಡಿಬಳಿ ಗ್ರಾಮ
೧ ಕೊಡ್ಡಿಬಳಿ ಗ್ರಾಮ
೧ ಬಿಳುಪದ ಗ್ರಾಮ
೧ ಯೆಡ ಮಂಗಲ ಗ್ರಾಮ
೧ ಪುಚಪಾಡಿ ಗ್ರಾಮ
೧ ಕಾಸುಪಾಡಿ ಗ್ರಾಮ
೧ ಚೊಕ್ಕಾಡಿ ಗ್ರಾಮ
೧ ಕನ್ನರ್ಪಡಿ ಗ್ರಾಮ
೧ ರಂಜಿಲಾಡಿ ಗ್ರಾಮ
೧ ಯೆಣಕಲ್ಲು ಗ್ರಾಮ
೧ ಸುಬ್ರಹ್ಮಣ್ಯಕುಕ್ಕೆ ಗ್ರಾಮ
೧ ಕೇಪುಮಟ್ಟಂತಾಡಿ ಗ್ರಾಮ
೧ ಕೂಡ್ರುಪಾಡಿ ಗ್ರಾಮ
೧ ನೆಕ್ಕಿಲಾಡಿ ಗ್ರಾಮ
೧ ಆವಲಿಂಕಾರದ ಗ್ರಾಮ
೧ ಖಂಡೆತಡುಕದ ಗ್ರಾಮ
೧ ಕುಂತೂರ ಗ್ರಾಮ
೧ ಬರೆಪಾಡಿ ಗ್ರಾಮ
೧ ಬಂಡಾದ್ರಿ ಅಡೆಕಲ್ಲು ಗ್ರಾಮ
೧ ಪೆರಿ ಬಂಡಾಡಿ ಗ್ರಾಮ
೧ ಕೊಯಿಲ ಗ್ರಾಮ
೧ ಕಳಾಯಿ ಗ್ರಾಮ
೧ ಕೆಮ್ಮಾರ ಗ್ರಾಮ
೧ ಕಲಕಂಪಾಡಿ ಗ್ರಾಮ
೧ ರಾಮಕುಂಜದ ಗ್ರಾಮ
೧ ಯಿಜಿಲಿಂಪಾಡಿ ಗ್ರಾಮ
೧ ಬಲ್ಯದ ಗ್ರಾಮ
೧ ಪಡಣೂರ ಗ್ರಾಮ
೧ ಕಿರಿಬಾಗ ಗ್ರಾಮ
೧ ಕಳಮಕಾರು ಗ್ರಾಮರ
೧ ದಬ್ಬದ ಗ್ರಾಮ
೧ ನಗರ ಗ್ರಾಮ
೧ ಪೇರಾಜಿ ಗ್ರಾಮ
೧ ಪುಳಕುಕ್ಕಿನ ಗ್ರಾಮ
೧ ಉಳುಪುಹಣಗೂರ ಗ್ರಾಮ
೧ ಕೊಣಾಜಿ ಗ್ರಾಮ

೩೭

ಮೂವತ್ತುಯೇಳು ಗ್ರಾಮಗಳನ್ನು ಯೀ ಸಮಸ್ಥಾನದಕ್ಕೆ ಯಿಟ್ಟು ಕೊಂಡು, ತನ್ನ ಅರಮನೆಯಲ್ಲು ಸಂಕ್ರನಾರಾಯಣ ದೇವರು ೧, ಗಣಪತಿ ದೇವರು ೧, ಯೀ ಯರಡೂ ದೇವರನ್ನು ಮನೆದೇವತೆ ಮಾಡಿ ಪೂಜಿಸಿಕ್ಕೊಂಡು, ರಸಭಾವಿಯ ಬಳಿಯ ತನ್ನ ಕಡೆಯ ಕಾಯುವವರನ್ನು ಯಿಟ್ಟು ಬಂದೊಬಸ್ತು ಮಾಡಿಕ್ಕೊಂಡು, ರಾಜ್ಯವಾಳುತ್ತಾ ಯಿರುತ್ತಿದ್ದರು. ಅವರ ಸಂತತಿ ವಿವರಾ:

ತೌಳವ ಅರಸು ಮಗ ಅಡದಲಿ ವೀರರಾಜ ಅರಸು. ಯೀತ ಅಜಾನುಬಾಹು ಆಗಿ ಭುಜಬಲ ಪರಾಕ್ರಮದಿಂದ ಕೆಲಉ ದಿವಸ ರಾಜ್ಯವಾಳುತ್ತಾ ಯಿರುತಿದ್ದು, ಯೀತ ಯಿರುವ ಮಟ್ಟಿಗೂ ಪರರಾಷ್ಟ್ರದವರು ಬಂದು ಜಗಳಕ್ಕೆ ನಿಲ್ಲಲಿಲ್ಲಾ. ಆತನ ಮಗ ತೌಳವರಾಜ ಕೆಲಉ ವರುಷ ರಾಜ್ಯವಾಳಿಕ್ಕೊಂಡು ಸದರಿ ಅರಸು ರಾಜ್ಯವಾಳುವಂತಾ ದಿವಸದಲ್ಲಿ ಕಂದಾಯದ ಹಣಗಳು ಯಾವತ್ತು ಮಾಪುಮಾಡಿ ಪ್ರಜಾವರಿಪಾಲನೆ ಮಾಡಿಕೊಳ್ಳುತ್ತ ಯಿತನ ಕೈಕೆಳಗೆ ಯಿದ್ದಂಥಾ ರಯಿತರು ಕಡೆಯಿಂತಾ ಬರುವಂತ ಕಂದಾಯದ ಹಣವಿಗೆ "ನೀಲು ಹೂಡುವ ನ್ನೆಗಲು[>ನೇಗಿಲು] ಅವು ಯಿರುವ ಸಮ[>ವ]ಕಲು ಕಬ್ಬಿಣದ ಸವಕಲುಗಳನ್ನು ವರ್ಗವೊಂದಕ್ಕೆ ವರುಷವೊಂದಕ್ಕೆ ಯರಡು ಗುಳಾ ಕೊಡುತ್ತಾ ಬನ್ನಿ" ಯಂಬ ತಾಹಾ ಮಾಡಿ, ಆ ಗುಳವನ್ನು ಸದರಿ ಬರದ ರಸದ ಬಾವಿಯಿಂದಾ ಮುಳುಗಿಸಿ ಚಿನ್ನ ಮಾಡಿಕೊಳ್ಳುತ್ತ ರಾಜ್ಯವಾಳಿಕ್ಕೊಂಡು ಯಿರುತಿದ್ದ. ಆತನ ಮಗ ಬೈರರಸರಾಜಾ ಕೆಲಉ ವರುಷ ತನ್ನ ತಂದೆ ಮಾಡಿದ ಕಟ್ಟು ಪ್ರಕಾರ ರಯಿತರ ಪರಿಪಾಲನೆಯಿಂದಾ ರಾಜ್ಯವಾಳುತ್ತಾ ಯಿರುತಿದ್ದ. ಅವನ ಮಗ ಶಂಕರರಾಜಾಯಂಬವ ತನ್ನ ಶೀಮೆಗಳಿಗೆ ಗಡೀ ಸರಹದ್ದುಗಳಾಗಬೇಕೆಂಬುದಾಗಿ ತನ್ನ ಶೀಮೆಗೆ ಯಾವತ್ತು ಸುತ್ತು ಕಟ್ಟಿಕ್ಕೊಂಡು, ಕಡಂಗಳ ತೆಗಸಿ, ಶೀಮೆ ಬಂದೊಬಸ್ತು ಮಾಡಿಕ್ಕೊಂಡು ರಾಜ್ಯವಾಳುತ್ತಾ ಯಿರುತ್ತಿದ್ದ. ಅವನ ಮಗ ಚಂದ್ರರಾಜಯಂಬವನು ರಾಜ್ಯವಾಳಿಕ್ಕೊಂಡು ಯಿರುವಾಗ್ಯೆ ದುರ್ಗಾಪರಮೇಶ್ವರಿ ಅಮ್ಮಾನವರು ಬಿಳುಪದಗ್ರಾಮದಲ್ಲು ಉದ್ಭವಿಸಿ, ಯೀ ರಾಜಗೆ ಪ್ರತ್ಯಕ್ಷವಾಗಿ ಯಿರುವದರಿಂದಾ ಆ ದೇವರ ದೇವಾಲಯವನ್ನು ಶಿಲಾಮಯದಿಂದ ಕಟ್ಟಿ ತನ್ನ ಶೀಮೆಯಿಂದಾ ಉತ್ತರವನ್ನು ಬಿಟ್ಟು ಮಹೋತ್ಸವಗಳ ನಡಸಿಕೊಳ್ಳುತ್ತಾ ತನ್ನ ಸೀಮೆಯು ಆಳಿಕ್ಕೊಂಡು ಸಉಖ್ಯವಾಗಿ ಯಿರುತಿದ್ದಾ. ಯೀತನ ಮಗ ಪ್ರತಾಪಲಿಂಗ ರಾಜಾಧಿಪತಿಯು ತಮ್ಮ ಹಿರಿಯರ ಕಾಲದಾರಭ್ಯಾ ಬ[>ಬಿ]ಳುಪದ ದುರ್ಗಾಪರಮೇಶ್ವರಮ್ಮನವರಿಗೂ ನಡೆವ ದೀಪಾರಾಧನೆ ಕಾಣಿಕೆಯನ್ನು ನಡಸಿಕೊಳ್ಳುತ್ತಾ ಯಿ ರಸಭಾವಿಯನ್ನು ಯಥಾಪ್ರಕಾರ ಬಂದೋಬಸ್ತಿನಿಂದ ಯಿಟ್ಟುಕೊಂಡು, ಬ್ರಹ್ಮರ ಸೌರಕ್ಷಿಣ್ಯ ಮಾಡಿಕ್ಕೊಂಡು ಸುಖದಿಂದಾ ಯಿರುತಿದ್ದನು. ಅವನ ಮಗ ರಂಗರಾಜಯಂಬವನು ಯರಡು ಲಗ್ನಾ ಮಾಡಿಕ್ಕೊಂಡು ಕೊಮಾರಧಾರಾಶೀದಲ್ಲು ಹೊಸ ಪಟ್ನಾ ಕಟ್ಟಿಸಿ ಕಿರಿಹೆಂಡತಿಯನ್ನು ಆ ಕಟ್ಟಣದಲ್ಲು ಯಿರಿಸಿ. ಯಥಾ ಪ್ರಕಾರ ರಾಜ್ಯವಾಳಿಕ್ಕೊಂಡು ಯಿರುತ್ತಾ ಯಿದ್ದನು. ತದನಂತರ ಕೆಲಉ ಕಾಲದಲ್ಲು ನಗರದಲ್ಲು ಸಂಕಣ್ಣನಾಯಕರ ಮಗ ಶಿವಪ್ಪನಾಯಕರು ಯಂಬವರು ಹುಟ್ಟಿ "ಯೀ ತುಳುವ ರಾಜ್ಯಾ ಸ್ವಾಧೀನಮಾಡಿಕೊಳ್ಳಬೇಕು"ಯಂಬದಾಗಿ ಪೊಉಜು ತೆಗೆದುಕ್ಕೊಂಡು ಬಂದಾಗ್ಯೆ ಯಿಲ್ಲಿ ಯಿರುವಂತಾ ರಂಗರಾಜರು ಯರಡು ಲಗ್ನಾ ಮಾಡಿಕ್ಕೊಂಡು ಯಿದ್ದರಷ್ಟೆ. ಅವರ ಕಿರಿಯ ಹೆಂಡತಿ ತಂದಂಥಾ ತಉರು ಮನೆಯವರಿಗು ಯಿ ರಂಗರಾಜರಿಗೂ ನೆಂಟತನದ ವ್ಯವಹಾರ ಬಂದು, ಅವರು ಹೆಣ್ಣು ಕರಕೊಂಡು ಹೋಗುವದಕ್ಕೆ ಬಂದಲ್ಲಿ, ಆ ರಂಗರಾಜರ

ಕೈಯಲ್ಲು ಬಂದಂಥಾ ನಂಟರವರು ವಾಗ್ವಾದ ಮಾಡೂ ಕಾಲದಲ್ಲಿ "ನಿಮ್ಮಾ ಮಾಂಸಾ ನಿಮ್ಮಾಗೆ ಆಹಾರವಂನೀಗ ಕೊಟ್ಟೇನು" ಯಂಬದಾಗಿ ಹೇಳಿದನು. ಆ ದುರ್ವಾಕ್ಯನ್ನು ಕೇಳಿದಂತಾ ನಂಟರು ಯೀ ರಂಗರಾಜರ ಸಂಗಡ ಬಹಳ ನಿಷ್ಟೂರ ವಾಕ್ಕುವಾದರಿಂದ ಬಹಳಾ ದುರ್ವಾಕ್ಯುಗಳಾಡಿದಲ್ಲಿ, ಬಹಾಳ ಕ್ರೋಧವನ್ನು ತಾಳಿದವನಾಗಿ, ಆ ರಂಗರಾಜನು ತನ್ನ ಕಿರಿಹೆಂಡತಿಯನ್ನು ಶಿರಚ್ಛೇದನವನ್ನು ಮಾಡಿ, ಆ ಹೆಂಡತಿ ಮಾಂಸವನ್ನು ಈ ನಂಟರಾದವರಿಗೆ ಶಾಖಿಗಳು ಮಾಡಿ ಬಡಿಸಿದ್ದರಿಂದ, ಯೀ ನಂಟರಾದವರು ಯಿದೆ ಕ್ಲೇಶದಿಂದಾ ಬಹಳ ರೌದ್ರವನ್ನು ತಾಳಿ, ಯೀ ರಂಗರಾಜನಿಗೆ ನಾಲು ದ್ರೋಹವನ್ನು ಮಾಡಬೇಕೆಮದಾಗಿ ಮನಸ್ಸಿನಲ್ಲಿ ನಿಶ್ಚೈಯಿಸಿ ಹೊರಟು ಹೋಗಿ, ಸಂಕಣ್ಣನಾಯಕರ ಮಗ ಶಿವಪ್ಪನಾಯಕರ ಕೈಯುಲ್ಲಿ "ನಮಗೆ ಕಡಬಿ ಸಂಸ್ಥಾನದ ರಂಗರಾಜಾಯಂಬವನು ನಮ್ಮಲ್ಲಿ ನಂಟಸ್ತನವನ್ನೀಗ ಮಾಡಿದಲ್ಲಿಲ, ನಮ್ಮಾ ಮಗಳನ್ನು ನಮ್ಮಾ ಮನೆಗೆ ಕಳುಹಿಸಿ ಕೊಡಿಯಂಬ ಮಾತು ನಾಲು ಕೇಳಿದಲ್ಲಿ, ಆತ ಕಳುಹಿಸಿ ಕೊಡದೆ ಯಿದ್ದರಿಂದಾ ನಮ್ಮಾಗೆ ಬಹಾಳ ಕೋಪ ಬಂದು, ನಾಲು ವಂದು ನಿಷ್ಟೂರ ಮಾತುಗಳನ್ನೀಗ ಆಡಿದಲ್ಲಿ, ನಿಮ್ಮಾ ಹೆಣ್ಣಿನ ಮಾಂಸವನ್ನು ನಿಮ್ಮಾಗೆ ತಿನ್ನಿಶೇನು ಅಂಥಾ ಹೇಳಿದನು. ಅದೇ ಪ್ರಕಾರ ಆ ದಿವಸ ರಾತ್ರಿಯಲ್ಲಿ ನಮ್ಮ ಮಗಳನ್ನೀಗೆ ಶಿರಛೇದನವನ್ನು ಮಾಡಿ, ನಮ್ಮಗೆ ಬಲೊದ್ಭಾದೆಯಿಂದಾ ನಮ್ಮ ಹೆಣ್ಣಿನ ಮಾಂಸವನ್ನೀಗ ನಮಗೆ ಬಲೋದ್ಬಾದೆಯಿಂದಾ ತಿನ್ನಿಸ್ತನು. ನೀಉ ನಮ್ಮಾ ಸಂಗಡ ಪಉಜು ತೆಗೆದುಕ್ಕೊಂಡು ಬಂದರೆ ಆ ರಂಗರಾಜನ ಸಂಸ್ಥಾನ ನಿಮ್ಮಾ ಸ್ವಾಧೀನಾ ಮಾಡಿ ಕೊಡುತ್ತೇವೆ" ಯಂಬದಾಗಿ ಹೇಳಿದ್ದರಿಂದ ನಗರಸಂಸ್ಥಾನದ ಸಂಕಣ್ಣನಾಯಕರ ಮಗ ಶಿವಪ್ಪನಾಯಕರಾದವರು ಆನೆ ಕುದುರೆ ಕಾಲಾಳು ವಂಟೆ ಗುನುಗು ಬಾಜಾರು ಪಾಯಿದಳ ಸಹಾ ತೆಗೆದುಕ್ಕೊಂಡು ಯಿ ಕ[+ಡ]ಬ್ಬ ಸಂಸ್ಥಾನದ ರಂಗರಾಜರ ಮೇಲೆ ಜಗಳಕ್ಕೆ ಬಂದಲ್ಲಿ, ಅವರು ಮಂದಿ ಮಹರ್ಬಲವನ್ನು, ಆ ನಗರದ ಶಿವಪ್ಪನಾಯಕರ ಮಂದಿ ಮಾರ್ಬಲವನ್ನು, ಯಿ ಕಡಬದ ರಂಗರಾಜರು ಅವರಲ್ಲಿ ಯಿರುವಂಥಾ ಮಹರ್ಬಲವನ್ನು ತಿಳಿದುಕ್ಕೊಂಡು, "ಯೀ ನಗರದ ಶಿವಪ್ಪನಾಯಕ ಕೈಯಲ್ಲೂ ನಾಲು ಜಗಳಕ್ಕೆ ನಿಂತರೆ ಸಖ್ಯವಲ್ಲ" ಯಂಬದಾಗಿ ಮನಸ್ಸಿನಲ್ಲಿ ನಿಶ್ಚೈಸಿ, ತಮ್ಮಾ ಮನೆದೇವತೆಯಾದ ಗಣಪತಿದೇವರನ್ನು ಆ ರಸಭಾವಿಯಲ್ಲು ಪ್ರತಿಷ್ಟೆ ಮಾಡಿ, ಶಂಕರನಾರಾಯಣದೇವರನ್ನು ನಾಲೂರು ಯಂಬ ಸ್ಥಳದಲ್ಲಿ ಪ್ರತಿಷ್ಟೆಯನ್ನಿಗ ಮಾಡಿ ತಾನು ತನ್ನ ಸಂತತಿ ಸಹಿತವಾಗಿ ಕೇರಳದೇಶಕ್ಕೆ ಹೊರಟು ಹೋದನು. ಆರಭ್ಯಾ ಯಿಕ್ಕೇರಿ ಸಿವಪ್ಪನಾಯಕರು ರಾಜ್ಯವಾಳುತ್ತಾ ಯಿದ್ದರು. ಅವರ ಸಂತತಿ ವಿವರ ಸಂಕಣ್ಣನಾಯಕರು. ಅವರ ಮಗ ಸಿವಪ್ಪನಾಯಕರು, ಯಿವರ ಮಗ ಸೋಮಶೇಖರನಾಯಕರು, ಯಿವರ ತಮ್ಮ ಕಿರಿಸೋಮಸೇಕರನಯಕರು, ಯಿವರ ಮಗ ಬೂದೇ ಬಸವಪ್ಪನಾಯಕರು, ಯಿವರ ಮಗ ಚನ್ನಬಸಪ್ಪನಾಯಕರು. ಯಿವನು ಮೃತನಾದ ಮೇಲೆ ಆತನ ಮಗನು ಚೆನ್ನಬಸಪ್ಪನಾಯಕನು ಯಿದ್ದನು.

ವೊಂದಾನೊಂದು ದಿವಸ ಯಿವನ ತಾಯಿ ಚನ್ನಮ್ಮಾಜಿ[>ವೀರಮ್ಮಾಜಿ]ಯಂಬವಳು ನಿಂಬಯ್ಯ ಯಂಬವನ್ನ ಕೂಡಿಕ್ಕೊಂಡು ಮಲಗಿದಲ್ಲಿ, ಅದನ್ನು ಯೀಕೆ ಮಗ ಸದರಿ ಚನ್ನಬಸಪ್ಪನಾಯಕನು ಕಂಡವನಾಗಿ ತನ್ನ ಮೈ ಮೇಲೆ ಯಿದ್ದ ಕಂದಿನ ಶಲ್ಯವನ್ನು ಅವರ ಮೇಲೆ ಹಾಕಿದನು. ಅವರು ಯೆಚ್ಚರವಾಗಿ ನೋಡಿ "ಯೀತನು ತಿಳಿದನು"ಯಂತ ಯಿವರು ಮನಸ್ಸಿನಲ್ಲಿ ತಿಳಿದುಕೊಂಡು, ತನ್ನ ಮಗನಿಗೆ ಯೀ ದಿವಸ ಯೆಣ್ಣೆ ಅಭ್ಯಂಗನ ಮಾಡಿಸಬೇಕೆಂತ ಬೇಲಿಗಳ

ಕಯಿ ಯೆಣ್ಣೆ ಹಾಕಿದಲ್ಲಿ, ಅವಂದ್ಯ[>ದಿ]ರು ನರತೆ[>ತಿ]ಕ್ಕಿ ತಿರಿಗಿಸಿ ಕೈಕಾಲು ತಿರುವಿ, ಗುಂಡಿ ತೆಗದು ಹೂಣಿ ಮಣ್ಣುಹಾಕಿ ಹೋದರು. ಯೀ ಚನ್ನಬಸಪ್ಪನಾಯಕನ ಸ್ನೇಹಿತರು ತಿಳಿದು ಆ ಕ್ಷಣ ಮಣ್ಣು ತೆಗದು ಅವನ ಅಂತರಂಗದಲ್ಲಿ ಹೊತ್ತುಕ್ಕೊಂಡು ಹೋಗಿ ಅಡವಿ ವಳಗೆ ಯಿಟ್ಟುಕ್ಕೊಂಡು ಬೀಸಿ, ಆರೈಕ್ಕೆ ಮಾಡಿದಲ್ಲಿ ಸ್ವಲ್ಪ ಉಸುರು ಯಿದ್ದ ಕಾರಣ ಮತ್ತು ಆರೈಕೆ ಮಾಡಿ ಬದುಕಿಸಿದರು. ಮತ್ತು ಶ್ರೀರಂಗಪಟ್ಟಣಕ್ಕೆ ತೆಗೆದುಕ್ಕೊಂಡು ಹೋಗಿದ್ದರು.

ಯೀ ಚನ್ನಮ್ಮಾಜಿಯು[>ವೀರಮ್ಮಾಜಿಯು] ಪ್ರಧಾನಿ ವೀರಭದ್ರಯ್ಯನ ಯಿಟ್ಟುಕ್ಕೊಂಡು, ತನ್ನ ಗಂಡ ಆಳಿಕ್ಕೊಂಡು ಯಿದ್ದಾ ಮೇರೆಗೆ ರಾಜ್ಯಾ ಪರಿಪಾಲನೆ ಮಾಡಿಕ್ಕೊಂಡು ಯಿದ್ದಳು. ಯೀ ಪ್ರಕಾರ ಪಾರಂಪರ್ಯವಾಗಿ ರಾಜ್ಯಾ ಆಳಿಕೊಂಡು ಪ್ರಜಪರಿಪಾಲನೆ ಮಾಡಿಕ್ಕೊಂಡು ಯೀ ಪ್ರಕಾರ ಯಿರುತಾ ಯಿದ್ದಲ್ಲಿ, ಚಿತ್ರಭಾನು ಸಂವತ್ಸರ ಯಿಸವಿ ೧೭೬೨ದಲ್ಲು ನವಾಬರು ಹೈದರಲ್ಲಿಖಾನವರು "ನಗರದಲ್ಲಿ ಹೆಂಗುಸು ಆಳಿಕ್ಕೊಂಡು ಯಿದ್ದಾಳೆ"ಯಂತ ಕೇಳಿ, ಮೈಸೂರಿಂದಾ ಫಉಜು ತೆಗೆದುಕ್ಕೊಂಡು ಬಂದು,ನಗರ ಹಲ್ಲಾ ಮಾಡಿ ರಾಜ್ಯಾ ತೆಗೆದುಕ್ಕೊಂಡು ಯಿದ್ದರು. ಅವರ ಮಗ ಟೀಪುಸುಲತಾನರು ಯಿಸ್ವಿ ೧೭೯೮ ಕಾಳಾಯುಕ್ತಿ ಸಂವತ್ಸರದ ವರೆಗೆ ರಾಜ್ಯವಾಳುತ್ತಾ ಯಿರುತಿದ್ದರು. ಯಿತಲಾಗಿ ಕಾಳಯುಕ್ತಿ ಸಂವತ್ಸರದಾರಭ್ಯ ಕುಂಪನಿ ಸರ ತಾಲುಕು ಆಗಿ ಯಿಧೆಯಂಬದಾಗಿ ಬರಸಿಕೊಟ್ಟ ಕೈಫಿಯತು.

ಯೀ ಕಡಬಾ ಸಂಸ್ಥಾನಕ್ಕೆ ದಕ್ಷಿಣ ದಿಕ್ಕಿನಲ್ಲಿ ಕೊಮಾರಧಾರಾ ನದಿ ೧, ಪಶ್ಚಿಮ ದಿಕ್ಕಿನಲ್ಲಿ ಹೊಸಮಠದ ಹಳ್ಳವೊಂದು, ಉತ್ತ ದಿಕ್ಕಿನಲ್ಲಿ ಕೇಪಿನ ಹಳ್ಳವೊಂದು, ಕಡಬ ದೇವಸ್ಥಾನದ ಪೂರ್ವದಿಕ್ಕಿನಲ್ಲು ಯಿಳಿಯೊ ಭಾವಿವೊಂದು, ದೊಡ್ಡ ಕೆರೆವೊಂದು, ಯೀ ಕೆರೆಯಿಂದಾ ಪೂರ್ವದಿಕ್ಕಿಗೆ ಸಾಲುಮರದ ಕೆರೆವೊಂದು, ಅದರಿಂದಾ ಪೂರ್ವದಿಕ್ಕಿನಲ್ಲು ಹೊಸಕೆರೆವೊಂದು. ಯೀ ಕೆರೆಯಿಂದಾ ನೈರುತ್ಯ ಮೂಡಿಯಲ್ಲು ಮಂಜುಟಿ ಕೆರೆ ಕೊಮಾರದಾರೆ ತೀರದಲ್ಲು ಕೆಕ್ಕಡುಕಾಯಂಬ ಅಡಕೆಮರನ ಕೋಟೆವೊಂದು, ಕಡಬದ ಲಿ[>ವಿ]ನಾಯಕ ದೇವರ ದೇವಸ್ಥಾನವೊಂದು, ಕೊಡಿಂಬಳದ ವಿಷ್ಣುಮೂರ್ತಿದೇವರ ದೇವಸ್ಥಾನವೊಂದು, ಕೇಪಿನ ಜನಾರ್ಧನ ದೇವರ ದೇವಸ್ಥಾನವೊಂದು, ಪಿಜಗದ ವಿಷ್ಣುಮೂರ್ತಿದೇವರ ದೇವಸ್ಥಾನವೊಂದು, ಯಳೆಊರ ವೀರಭದ್ರದೇವರ ದೇವಸ್ಥಾನವೊಂದು, ಕಡಂಬಳಿ ತಾಯಭೂತದ ಗುಡಿವೊಂದು, ಮುಸಲಮಾನರ ಮಸೀದಿವೊಂದು, ಜಯನಗರ ಚಂದ್ರನಾಥದೇವರ ಬಸ್ತಿ ಗುಡಿವೊಂದು.

ಯೀ ಕಡಬದ ಸಂಸ್ಥಾನದಲ್ಲು ಕಸಬಾ ಕಡಬದ ಮಾಗಣೀಗೆ ಯಿರುವ ಗ್ರಾಮದ ವಿವರ: ಐನ ಕಡಬ ಗ್ರಾಮವೊಂದು. ಯೆಳೆಯೂರ ಗ್ರಾಮವೊಂದು. ಕೊಡೆಂಬಳ ಗ್ರಾಮ ೧ – ಅಂತು ಗ್ರಾಮ ೩. ಯೀ ದೇಶದಲ್ಲಿ ಪರಶುರಾಮಶಾಪದಿಂದಾ ಭೂಮಿ ಬೆಳೆಯುವದಿಲ್ಲಾದ ಕಾರಣ ಭೂಮಿಗಳ ಸುಟ್ಟು ಫಲಗಳು ಹಾಕಿದರೆ ಪಯಿರು ಕೊಡುತ್ತದೆ. ಯಿಲ್ಲಿ ಪೈರು ಆಗುವ ಧಾನ್ಯದ ವಿವರಾ: ೧ ಬತ್ತಾ, ೧ ಸಣ್ಣ ಮೆಣಸು, ೧ ಅಡಕೆ.

ಯೀ ಊರಲ್ಲಿ ಮನೆಗಳು ದೂರದೂರವಾಗಿ ಕಟ್ಟುತ್ತಾ ಯಿದ್ದಾರೆ. ಅದೇನು ಕಾರಣಯಂದರೆ, ಯಾರು ಯಾರು ವ್ಯವಸಾಯ ಮಾಡುತ್ತಾರೆ ಅವರು ಅವರ ಸ್ಥಳದಲ್ಲೆ ಮನೆಗಳು ಕಟ್ಟುತ್ತಾರೆ.

❖❖

೭೩
ಧರ್ಮಸ್ಥಳದ ಕೈಫಿಯತ್ತು*

ಮೆಕೆಂಝಿ ಸಂಪುಟ : ೧೭೮

ಶ್ರೀ ಧರ್ಮಸ್ಥಳ ದೇವಸ್ಥಾನದ ದೇವರ ನಿರ್ಮಾಣವಾಗಿ ಯೆಷ್ಟು ವರುಷವಾಯಿತು? ಆ ದೇವರು ಯಾರಿಗೆ ಪ್ರಸನ್ನರಾದರು? ಆ ದೇವಸ್ತಾನಕೆ ಬ್ರಾಹ್ಮರ ಪೂಜಾ, ಯಾವತೂ ಜಾತಿಯವರು ನಡಕೊಳತಾ ಯಿದ್ದಂತೆ ಜೈನಜಾತಿಯವರ ಹುಕುಮ್ಮತು ನಡೆವುದಕ್ಕೆ ಕಾರಣವೇನು? ಜಯಿನ ಜಾತಿಯವರ ದೇವಸ್ತಾನದಲ್ಲಿ ಬ್ರಾಹ್ಮರ ಪೂಜಾ ಆಗುವದಕೆ ಸಬಬ ಯೇನು? ಯೀ ಬಗ್ಯೆ ಚೆನ್ನಾಗಿ ವಿಚಾರಿಶಿ ಆ ಬಗ್ಗೆ ಕೈಫಿಯತು ಬರಶಿ ಕಳುಹಿಸುವಂತೆ ಅಪ್ಪಣೆ ಬಂದ ಪ್ರಕಾರ, ಧರ್ಮಸ್ತಳದ ಕೊಮಾರಹೆಗ್ಗಡೆರಿಗೆ ಕರಸಿ ಸ್ಥಳದ ಕೈಫಿಯತು ವಿಚಾರಿಶಿದಲ್ಲಿ ತಮಗೆ ತಿಳಿದಷ್ಟು ಅನುಭವ ಬರಸಿಕೊಡುತ್ತೇವೆಯಂಬದಾಗಿ ಹೇಳಿ, ಹೆಗ್ಗಡೆ ಮಜಕಕೂರನು ಸ್ತಳದ ಕೈಫಿಯತು ಬರಸಿದ ವಿವರಾ :

ಧರ್ಮಸ್ಥಳದಲ್ಲಿ ಪ್ರಾಕು ಜಯಿನ ಜಾತಿ ಅಮ್ಮಾದೇವಿ, ಬಲ್ಲಾಳತಿಯರಿಗೆ ಪ್ರಸನ್ನ ಆಗಿ, ದುರ್ಗಾಂಶ ಕಾಳಾರ್ಕಾಯಿಯಂಬ ಅಮ್ಮನವರ ಹೆಸರು, ಯೀಚೆಗೆ ಕನ್ಯಾಕುಮಾರಿಯಂಬ ಪ್ರಸಿದ್ಧ ಹೆಸರುವಳ[>ವುಳ್ಳ] ಅಮ್ಮನವರು ಸದರಿ ಬಲ್ಲಾಳತಿಯವರಿಗೆ ರಾತ್ರಿಕಾಲ ಸ್ವಪ್ನದಲ್ಲು ಬಂದು "ನಾವು ಯಿದೆ ನೆಲ್ಯಾಡಿ ಬೀಡಿನಲ್ಲಿ ವಾಸವಾಗಿ ಯಿರುತ್ತೇವೆ. ಯೀ ಸ್ಥಳದಲ್ಲಿ (ಮನಶ್ಯಾನ)ಯಿರಿಸಿ ದೀಪಾಹಚ್ಚಿ ಪೂಜೆಮಾಡಿಕೊಂಡು ನೀವು ಬಾಹದು. ಯೀ ಬೀಡಿನ ಸಮೀಪದಲ್ಲಿ ಬದಲು ಬೀಡು ಕಟ್ಟಿಕೊಂಡು ಅಲ್ಲೆಯಿದ್ದು ನಿತ್ಯಗಟ್ಲೆ ಶೇವೆ ಮಾಡುತ್ತಾ ಬರುವದು. ಮುಂದೆ ನಿಮ್ಮ ಸಂತಾನ ಪಾರಂಪರ್ಯವಾಗಿ ಶೇವೆ ತೆಗೆದುಕೊಳ್ಳುತ್ತೇವೆ. ಕಾರ್ಯಕಾರಣ ಬಹಳವದೆ"ಯಂಬ ರೀತಿ ಸ್ವಪ್ನದಲ್ಲಿ ಕನ್ನಿಕೆ ರೂಪವಾಗಿ ಕಾಣಿಶಿಕೊಂಡು ಅಪ್ಪಣೆ ಆದ ಪ್ರಕಾರ, ಬಲ್ಲಾಳತಿಯವರು ತಾವು ಯಿದ್ದ ಬೀಡು ಅಮ್ಮನವರಿಗೆ ಬಿಟ್ಟುಕೊಟ್ಟು, ಆ ಸಮೀಪದಲ್ಲು ತಾವು ಯಿರತಕ್ಕ ಬಗ್ಗೆ ಬದಲು ಬೀಡು ಕಟ್ಟಿಕೊಂಡು ಅಲ್ಲೆಯಿದ್ದು, ಅಮ್ಮನವರಿಗೆ ಮನ್ಸಾನ[>ಮನಶ್ಯಾನ]ಯಿಟ್ಟು ದೀಪಾ ಹಚ್ಚಿ ಆಗುವ ಶೇವೆ ನಿತ್ಯದಲ್ಲು ತಮ್ಮ ಕೈಯಿಂದಲೆ ಮಾಡುತ್ತ ಬರುತ್ತಾ ಯಿದ್ದಲ್ಲಿ, ಆ ಮೇಲೆ ಕೆಲವು ವರುಷದ ಮೇಲೆ ಶ್ಯಾಲಿವಾಹನ ಶಕ ವರುಷ ೧೪೩೬ನೆ ಖರ ಸಂವತ್ಸರದಲ್ಲು ಉಡುಪಿನ ಶೊದೆ ಮಠದ ವಾದಿರಾಜಸ್ವಾಮಿಯವರು ಯೀ ಧರ್ಮಸ್ಥಳದ ಮಾರ್ಗವಾಗಿ ಬಂದಲ್ಲಿ "ಯೀ ಸ್ತಳದಲ್ಲಿ ನಾಳಿನ ದಿವಸ ನಿಂತು ಬಿಕ್ಷಾ ತೆಗೆದುಕೊಂಡು ಹೋಗಬೇಕೆಂ"ದು ಸದರಿ ಬಲ್ಲಾಳತಿಯು ಹೇಳಿಸಿಕೊಂಡಲ್ಲಿ, ಸ್ವಾಮಿಗಳವರು "ಯೀ ಸ್ಥಳ ದೈವಿಕ ಆದ್ದರಿಂದಾ ಯೀ ಸ್ಥಳದಲ್ಲು ದೇವತಾ

* ಮೆಕೆಂಝಿ ಸಂಪುಟ ೩೫೩, ಪುಟ ೪೬೧-೪೬೫ ಇಲ್ಲಿ ಈ ಕೈಫಿಯತ್ತನ್ನು 'ಕುಂದಾಪುರೆ ಕೈಫಿಯತ್ತು' ಎಂದು ಕರೆಯಲಾಗಿದೆ. ಬಹುಶಃ ಕುಡುಮಪುರ ಎಂಬುದನ್ನೇ 'ಕುಂದಾಪುರ' ಎಂದು ತಪ್ಪಾಗಿ ಈದಿದಂತಿದೆ (ಸಂ.)

ಪ್ರತಿಷ್ಟೆ ಮಾಡಿದರೆ ಬಿಕ್ಷಾ ತೆಗೆದುಕೊಳ್ಳಬಹುದು"ಯಂಬುದಾಗಿ ಹೇಳಿದ್ದರಿಂದ ಆ ರಾತ್ರಿಯಲ್ಲು ಬಲ್ಲಾಳತಿಯವರು "ಸ್ವಾಮಿಗಳವರು ಯೀ ಪ್ರಕಾರ ಹೇಳುತ್ತಾರೆ. ಯೀ ಬಗ್ಯೆ ಯಾವ ಪ್ರಕಾರ ಮಾಡಬೇಕುಯಂತ ಅಪ್ಪಣೆ ಆಗಬೇಕೆಂ"ಬುದಾಗಿ ಪ್ರಾರ್ಥನೆ ಮಾಡಿಕೊಂಡಲ್ಲಿ, ರಾತ್ರಿ ಸ್ವಪ್ನದಲ್ಲಿ "ನೀವು ಚಿಂತೆ ಮಾಡುವದು ಕೆಲಸವಿಲ್ಲ. ಸ್ವಾಮಿಗಳಿಗೆ ಬಿಕ್ಷಾ ಆಗುವ ಸನ್ನಾಹ ಮಾಡಿಶಿ, ನಾವು ಕದರಿಯಿಂದ ದೇವರ ತಂದ ಪ್ರತಿಷ್ಟೆ ಮಾಡುತ್ತೇವೆ. ಯೀ ಸಮಾಚಾರ ಅವರಿಗೆ ಹೇಳಿದಲ್ಲಿ ಅವರು ವಡಂಬಟ್ಟು ನಿಲ್ಲುತ್ತಾರೆ. ನಾವು ದೇವರ ತಂದು ಗರ್ಭಗೃಹ ಕಟ್ಟಿಸಿ, ಪ್ರತಿಮಾ ರೂಪದಲ್ಲಿ ಮೂರ್ತಿ ಮಾಡಿಶಿ ಯಿಟ್ಟು ಶ್ರೀದೇವರಿಗೆ ತಮಗೆ ಸಹ ಬ್ರಾಹ್ಮರ ಕೈಯಿಂದಲೆ ಪೂಜೆ ಮಾಡಿಸುವದು. ಮುಂದೆ ಕಾರ್ಯ ಕಾರಣವು ಬಹಳ ನಡೆಯುತ್ತದೆ"ಯಂಬುದಾಗಿ ಸ್ವಪ್ನದಲ್ಲಿ ಅಪ್ಪಣೆ ಆದ ಪ್ರಕಾರ, ಅದೇ ರಾತ್ರಿಯಲ್ಲಿ ಅಮ್ಮನವರು ಶ್ರೀಮಂಜುನಾಥ ದೇವರ ಲಿಂಗಾ ತಂದು ಪ್ರತಿಷ್ಟೆ ಮಾಡಿದರು. ಅರುಣೋದಯಕ್ಕೆ ಯೆದ್ದು ನೋಡುವಾಗ್ಯೆ ಶ್ರೀದೇವರು ಗರ್ಭಗೃಹ ಸಹ ಪ್ರತಿಷ್ಟೆ ಆಗಿ ಯಿದ್ದರು. ಆ ಮೇಲೆ ಸ್ವಾಮಿಗಳವರಿಗೆ ಕರತಂದು "ದೇವರು ಪ್ರತಿಷ್ಟೆ ಆಗಿ ಯಿದ್ದಾರೆ, ತಾವು ಯೀ ಸ್ಥಳದಲ್ಲಿ ಬಿಕ್ಷಾ ತೆಗೆದುಕೊಳ್ಳಬೇಕು"ಯಂಬುದಾಗಿ ಹೇಳಿಕೊಂಡಲ್ಲಿ ಅವರು ಬಂದು ಬಿಕ್ಷಾ ತೆಗೆದುಕೊಂಡು ಮುಂದೆ ಹೋದರು.

ಆ ಬಳಿಕ ಬಲ್ಲಾಳತಿಯವರು ಶ್ರೀ ದೇವರ ಯಡಭಾಗದಲ್ಲಿ ಗರ್ಭಗೃಹ ಕಟ್ಟಿಶಿ ಅಮ್ಮನವರ ಪ್ರತಿಮೆ ಪ್ರತಿಷ್ಟೆಮಾಡಿ, ಶ್ರೀದೇವರಿಗೆ ಅಮ್ಮನವರಿಗೆ ಸಹ ಬ್ರಾಹ್ಮರ ಕೈಯಿಂದ ಪೂಜೆ ಮಾಡಿಸುತ್ತಾ ಬಂದರು. ಆಮೇಲೆ "ಕಾರ್ಯಕಾರಣ ನಡಸುವ ಬಗ್ಯೆ ಹಳತಾಯಯಂಬ ಗಣಕ್ಕೆ ಪ್ರಧಾನಿಕೆ ನೇಮಕಾ ಮಾಡಿಶಿ ಯಿಧೆ. ಆತಗು ಪ್ರತ್ಯೇಕವಾಗಿ ವಂದು ಸ್ಥಳವು ಕಟ್ಟಿಶಿಕೊಟ್ಟು, ನಿತ್ಯಗಟ್ಲೆ ದೀಪ ಮುಂತಾಗಿ ನಡಸುವದು. ಸ್ಥಳಕೆ ಕಾಣಕೆ ಕಪ್ಪು ಬಹಳವಾಗಿ ಬರುತದೆ. ವ್ಯಾಜ್ಯಗಳು ಬರುತ್ತದೆ. ಯಿದನೆಲ್ಲ ವಿ[>ನಿ]ಯತವಾಗಿ ಶಿರಿಶಿ ದೇವತಾಶೇವೆ ಧರ್ಮ ಸಹ ಸಾಂಗವಾಗಿ ದಿನದಿನಕೆ ಅತಿಶಯವಾಗಿ ನಡಶಿಕೊಂಡು ಬರುತ್ತಾ ಬಾಹದು" ಯಂಬುದಾಗಿ ಬಲ್ಲಾಳತಿಯವರಿಗೆ ಅಪ್ಪಣೆ ಆದ ಪ್ರಕಾರ ಕೆಲವು ವರುಷ ನಡದು ಬಂದಲ್ಲಿ, ಸದರಿ ಹಳಕಾ[>ತಾ]ಯನಿಂದ ದೇವತಾ ಶೇವೆಗೆ ಧರ್ಮಕೆ ಕಾಣಿಕೆ ಕಪ್ಪು ಬರುವದಕೆ ವಿಳಂಬವಾದ್ದರಿಂದ, "ಯಿತನ ಪ್ರಧಾನಿಕೆ ಬಗ್ಗೆ ಅಣ್ಣಪ್ಪಾಯಂಬ ಗಣಕೆ ಗೊತ್ತು ಮಾಡಿಶಿ ಅದೆ. ಯೀತಗೆ ಪ್ರತ್ಯೇಕ ಸ್ತಾನಾ ಕಟ್ಟಿಶಿ ನಡವ ಕಟ್ಲೆ ನಡಶಿದಲ್ಲಿ ಅತಿಶಯ ಹರಿಕೆ ಕಾಣಿಕೆ ಬರುತ್ತದೆ. ಸ್ಥಳದಲ್ಲಿ ಧರ್ಮಸಾಂಗವಾಗಿ ನಡಶಿಕೊಂಡು ಬರತಕ್ಕ ಬಗ್ಯೆ ನಾಲ್ಕು ಜನ ಬುದ್ಧಿವಂತರಿಗೆ ಗೊತ್ತು ಮಾಡಿಯಿಟ್ಟು ಅವರ ಮುಖದಲ್ಲಿ ನಡಶಿಕೊಂಡು ಬರುವದು"ಯಂದು ದರುಶನದಲ್ಲಿ ಅಪ್ಪಣೆ ಆದ ಪ್ರಕಾರ ಪಾರಂಪರ್ಯ ನಡದು ಬರುತ್ತದೆ. ಶ್ರೀದೇವರ ಶೇವೆ ಧರ್ಮಸಹ ಸಾಂಗವಾಗಿ ನಡಶಿಕೊಂಡು ಬರತಕ್ಕ ಬಗ್ಯೆ ಬಂದಂಥಾ ಹರಿಕೆ ಕಾಣಿಕೆಯು ತೆಗೆದುಕೊಂಡು ಸ್ಥಳಕೆ ಬಂದಂಥಾ ವ್ಯಾಜ್ಯಗಳು ವಿ[>ನಿ]ಯುತವಾಗಿ ಶಿ[>ತೀ]ರಿಸು ಬಗ್ಯೆ ಸಹ ನಾಲ್ಕು ಜನ ಬುದ್ಧಿವಂತರಿಗೆ ಅಪ್ಪಣೆ ಪ್ರಕಾರ ಗೊತ್ತಾಗಿ ನಡದು ಬಂದ ವಿವರಾ:

೧ ಬಲ್ಲಾಳ ಶ್ರೀ ಪಾರಂಪರೆ ನಡದು ಬಂದ ಕೊಮಾರ ಹೆಗ್ಗಡೆ ಜಯಿನ ಜಾತಿಜತಾ.

೨ ಸ್ತಳದ ಕದೀಮ ಜನದಲ್ಲು:

೧ ಹಾಜರಿ ಬಂಟ ಮಾಸಾದಿಕ ಜಾತಿ ಮೊದಲಾದ ಮನೆಯವ ಜನ.

೧ ಮಣ್ಣೊಣಿತ್ರಾಯಯಂಬ ಶಿವಳ್ಳಿ ಬ್ರಾಹ್ಮಣ ನಾಲ್ಕನೆ ಮನೆ ಜನ.

೨

೩. ಯಡ ಬಲದಲ್ಲಿ ಯಿದ್ದಂತವರು:

೧ ಯರಡನೆ ಮನೆ ದೇಲಂಪಾಡಿಯಂಬ ಸ್ಥಾನಿಕ ಜಾತಿ ಜನ.

೧ ಮೂರನೆ ಮನೆ ಕೋಟಣ್ಣಾಯಂಬ ಜಯಿನ ಜಾತಿ ಜನ.

೧ ಅಯಿದನೆ ಮನೆ ಕಂಬಳ ಬಂಟಯಂಬ ಜಯಿನ ಜಾತಿ ಜನ ೧.

೩

೬

ಯೀ ಬಗೆ ಆರು ಜನ ದೇವತಾ ಶೇವೆಗೆ ಅನುಕೂಲವಾಗಿ ನಡಕೊಳ್ಳಬೇಕು. ಯೀ ಜನದಲ್ಲಿ ವಿಶೇಷ ಉತ್ಸವಾದಿ ದಿವಸದಲ್ಲು ದರುಶನಾ ಬರುವಂಥಾ ಜನ ಸ್ತಾನಿಕ ದೇಲಂಪಾಡಿ ಜನ ೧, ಜಯಿನ ಕೋಟಣ್ಣಾ ಜನ ೧ – ಯೀ ಯರಡು ಜನರ ಮೇಲೆ ದರುಶನಾ ಬಂದು ಆಗುವ ಧರ್ಮ ಮುಂತಾದ ಕಟ್ಟುಕಟ್ಲೆ ಬಗ್ಯೆ ಅಪ್ಪಣೆ ಆಗುತ್ತಾ ಯಿಧೆ. ಯೀ ಪ್ರಕಾರದ ಅನುಭವ ಯಿ[+ದ್ದ]ದನ್ನು ಬರಶಿದೇನೆಂಬದಾಗಿ ಹೆಗ್ಗಡೆ ಮಜಕೂರನು ಬರಶಿಯಿದ್ದಾನೆ. ದಿವ್ಯಚಿತ್ತಕೆ ಪರಾಂಬರಿಕೆ ಯಿರಬೇಕು. ಯೀ ಸ್ಥಳ ನಿರ್ಮಾಣವಾಗಿ ಬಲ್ಲಾಳತಿಗೆ ಸ್ವಪ್ನವಾದಂಥಾ ವರುಷ ಯಿಂಥಾವದೆಂಬುವದು ಗೊತ್ತು ಕಾಂಬೋದಿಲ್ಲ. ಪೂರ್ವದಲ್ಲಿ ಬರದು ಹಾಕಿದಂಥಾ ಪುಸ್ತಕ ಯಿದದ್ದು ಬಲ್ಯದವರ ತ್ತವಾಯಿ[>ಕಾವಲು] ಹೋಗಿ ಯಿಧೆ. ಯೀಚೆಗೆ ಶ್ರೀಮಂಜುನಾಥದೇವರ ಪ್ರತಿಷ್ಟೆ ಸ್ವೊದೆ ಸೋಮ[>ಸ್ವಾಮಿ]ರಾಯರು ಬಂದು ಆದಂಥಾ ವರುಷ ಶಕ ಸಹ ತಿಳಿದಂತಾದ್ದು ಸದರಿ ಬರದು ಯಿದೆ. ಯೀ ವಿವರಾ ದಿವ್ಯಚಿತ್ತಕ್ಕೆ ಪರಾಂಬರಿಕೆ ಯಿರಬೇಕು.

❖❖

೭೪
ಪುತಿಗೆ ಮಠ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಅಕ್ಷಯ ಸಂವತ್ಸರದ ಜೇಷ್ಟ ಶು॥ ೫ಯಲ್ಲು ಉಡುಪಿನ ಅಷ್ಟಮಟದೊಳಗಣ ಪುತ್ತಿಗೆ ಮಟದ ಕೃಷ್ಣ ಉಪಾದ್ಯಾಯನು ಬರಶಿ ಕೊಟ್ಟ ಕೈಫಿಯತುನಾಮೆ ವಿವರಾ:

ನಮ್ಮಾ ಮೂಲ ಗುರುಗಳು ಮದ್ವಾಚಾರ್ಯರು ಅವತಾರ ಮಾಡಿದ್ದು,

ಚತುಃಸಾಹಸ್ರೇ ತ್ರಿಶತೋತ್ತರೇ ಗತೇ ಸಂವತ್ಸರಾಣಾಂ ತು ಕತಾಪ್ರಥಿವ್ಯಾಂ॥ ಜಾತಃ ಪುನರ್ವಿಪ್ರತನುಃ ಸಭೀಮೋದ್ಯೈತ್ಯೈರ್ನಿಗೂಢಂ ಹರಿತತ್ವಮಹಾ॥

ಶಾಲಿವಾಹನ ಶಕ ವರುಷ ೧೧೨೧ನೆ ಕಾಳಾಯುಕ್ತಿ ಸಂವತ್ಸರದ ಮಾಘ ಶುದ್ಧ ೭[>೯]ಯಲ್ಲು ಮದ್ಯಗೇಹಭಟ್ಟರಲ್ಲಿ ಅವತಾರಮಾಡಿ, ೧೧೨೮ನೆ ಕ್ರೋಧನಸಂವತ್ಸರದ ಪುಷ್ಯ ಶು ೫ ಯಲ್ಲು ಉಪನೀತರಾಗಿ, ೧೧೩೦ನೇ ಪ್ರಭವ ಸಂವತ್ಸರದ ವೈಶಾಖ ಬಹುಳ ೩ ಲ್ಲು ಅಚ್ಯುತಪ್ರೇಕ್ಷಾ ಆಚಾರ್ಯರಿಂದ ಯತ್ಯಾಶ್ರಮವನ್ನು ಸ್ವೀಕರಿಸಿ, ೧೧೬೦ ನೇ ಹೇವಳಂಬಿ ಸಂವತ್ಸರದ ಮಾಘ ಶು ೩ಯಲ್ಲು ಶ್ರೀಕೃಷ್ಣದೇವರ ಪ್ರತಿಷ್ಟೆಯನ್ನು ಮಾಡಿ, ಬದರಿಕಾಶ್ರಮದಿಂದ ತಂದ ವ್ಯಾಸಮೂರ್ತಿ ಸಾಲಗ್ರಾಮಗಳಲ್ಲಿ, ಮದ್ಯಕಾಳ[>ತಾಳ] ಮಟದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆ ಮಾಡಿ, ಸುಬ್ರಹ್ಮಣ್ಯ ಕ್ಷೇತ್ರದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆ ಮಾಡಿ, ಯೀ ಮೂರು ಸ್ಥಳದಲ್ಲು ಪ್ರಾತಃಕಾಲಾದಿ ಕ್ರಮದಿಂದಾ ಸರ್ವಾದ ಪೂಜೆಗಳನ್ನು ಮಾಡುತ್ತಾ ಕೆಲವು ದಿವಸ ಯಿದ್ದರು. ಕ್ರಮದಿಂದ ಪೂಜೆಯನ್ನು ಮಾಡುವಾಗ್ಯೆ ಮದ್ಯಕಾಳ[>ತಾಳ]ಮಠದಲ್ಲು ಮದ್ಯಾನ್ನದ ಪೂಜೆಯೆ ಘಟಣೆ ಆದ್ದರಿಂದ ಆದ್ಯಾಪಿ ಅಲ್ಲಿ ಮದ್ಯಾನ್ನದ ಪೂಜೆಯೆ ಸರಿ. ಯೀ ಉಭಯ ಸ್ಥಳದಲ್ಲು ತ್ರಿಕಾಲದಲ್ಲು ಪೂಜೆಯಿಧೆ.

ಯೀ ಪ್ರಕಾರ ಮಿ[>ಆ]ಚಾರ್ಯರು ಯಿದ್ದು ಆ ಮೇಲೆ ತಾಉ ಬದರಿಕಾಶ್ರಮವನ್ನು ಕುರಿತು ಹೋಗುವ ಅಪೇಕ್ಷೆವಂತರಾಗಿ ಶ್ರೀಕೃಷ್ಣದೇವರ ಪೂಜಾ ಸ್ವಮತ ಸ್ಥಾಪನಾರ್ಥವಾಗಿ ತಮ್ಮ ಅನುಜರಾದ ವಿಷ್ಣುತೀರ್ಥಆಚಾರ್ಯರು ಅಷ್ಟಬ್ರಹ್ಮಚಾರಿಗಳಿಗೆ ಸಹಾ ಗೋದಾವರಿ ತೀರಸ್ಥರಾದ ವಿವಿಧ ಸಂಸಾರಿಕ ದುಃಖದರುಶನೆ ಸವಿರಕ್ತರಾದ ಸಜ್ಜನೋದ್ಧಾರಕ ಶ್ರೀಮದಾಚಾರ್ಯರ ಪಾದಸೇವಾ ಸನ್ಮಾರ್ಗ ನಿವಲಿಂ ಭಾಷೆ[>ಸನ್ಮಾರ್ಗಾವಲಂಬಾಪೇಕ್ಷೆ]ಯಿಂದ ಗೋದಾವರಿತೀರ ದೇಶದಿಂದ ಬಂದ ಶೋಭನಭಟ್ಟರಿಗೆ ಸಹಾ ೧೧೮೦ನೆ ಪಿಂಗಳ ಸಂವತ್ಸರ ವೈಶಾಖ ಶು ॥ ೭ಯಲ್ಲು ಕಣ್ವತೀರ್ಥಮಹಾಕ್ಷೇತ್ರದಲ್ಲು ಆಶ್ರಮಮಂತ್ರೋಪದೇಶಗಳನ್ನು ಕೊಟ್ಟು, ರಜಿತಪಿಟಪುರಕ್ಕೆ ಕರತಂದು ಸ್ವಮಥ ಗಂಗಾದಿ[>ಗ್ರಂಥಾದಿ] ಸಕಲಶಭಾಸ್ತ್ರೋಪದೇಶವನ್ನು ಮಾಡಿ, ಯೀ ನವಯತೀಶ್ವರಿಗು ತಮ್ಮಾ ಕರಪೂಜಿತಗಳಾದ ರಾಮದ್ವಯ, ಚತುರ್ಭುಜಕಾಳಿಯ ಮಥನ, ವಿಠಲತ್ರಯ, ಶ್ರೀಭೂವರಹಾ, ನರಶಿಹ್ಮಮೂರ್ತಿಗಳನ್ನು ಕೊಟ್ಟು, "ನೀಉ ಯೆಂಟು ಮಂದಿ ಬಾಲ ಯತಿಗಳು ಪ್ರತ್ಯೇಕತಾ ಯರಡು ಯರಡು ವರುಷವನ್ನು ನಮ್ಮಾ ಆಜ್ಞಾನುಸಾರ ತಂಥ್ರಸಾರೋಕ್ತ ವಿಧಿಯಿಂದ ಪೂಜಾಧರ್ಮಗಳನ್ನು ಶಾಸ್ತ್ರಪ್ರವಚನಗಳು ಮಾಡುತ್ತ ಯಿರಿ"ಯಂತ ಅಪ್ಪಣೆ ಕೊಟ್ಟು, ಪದ್ಮನಾಭತೀರ್ಥರಿಗೆ ಆ ರಾಮಪ್ರತಿಮೆಯನ್ನು ಕೊಟ್ಟು "ನೀಉ ಯತನ್ಮತ ಸ್ಥಾಪನೆ ಮಾಡಿಕೊಂಡು, ಸಕಲದೇಶಗಳಲ್ಲಿ ಸಂಚಾರಮಾಡುತ್ತ, ಬಹುಮಂದಿ ಸಜ್ಜನರಿಗೆ ಸನ್ಮಾರ್ಗೋಪದೇಶದ್ವಾರ ಉಡಿಸಿ[>ಉದ್ಧರಿಸಿ] ಕೊಂಡು ದ್ರವ್ಯಾರ್ಜನ ಮಾಡಿಕ್ಕೊಂಡು, ಯೀ ಅಷ್ಟಯತಿಗಳಿಗೆ ಶ್ರೀಕೃಷ್ಣದೇವರ ಪೂಜೋಪಯುಕ್ತಾ ದ್ರವ್ಯಸಹಾಯವನ್ನು ಮಾಡಿಕೊಂಡು ಯಿರಿ"ಯಂತ ಅಪ್ಪಣೆ ಕೊಟ್ಟು, ೧೨೦೦ ಯೀಶ್ವರ ಸಂವತ್ಸರ ಮಾಘ ಶು॥ ೯ಯಲ್ಲು ಬದರಿಕಾಶ್ರಮಪ್ರದೇಶವನ್ನು ಮಾಡಿ, ಶ್ರೀವೇದವ್ಯಾಸದೇವರ ಸನ್ನಿಧಿಯಲ್ಲು ಅದ್ಯಾಪಿತತ್ಸೇವಾಸಕ್ತರಾಗಿ ಯಿದ್ದರು. ಅವರ ಶಿಷ್ಯರು ಅಷ್ಟಯೇತೀಶ್ವರ ನಾಮಗಳು:

ವಂದೇ ಹೃಷಿಕೇಶಮೀಯಾಂ ನೃಸಿಂಹಂ। ಜನಾರ್ಧನಂ ಚಿಂತಯತೀರುಪೇಂದ್ರಂ।

ಶ್ರೀ ವಾಮನಂ ಚ ಸ್ಮರ ವಿಷ್ಣುನೇಮಿ। ಶ್ರೀರಾಮಮಾಚ್ಯೈವವಮಧೋಕ್ಷಜಂ ಚ॥

ಘಟ್ಟದ ಮೇಲಿನವರು ಪದ್ಮನಾಭತೀರ್ಥರು ಯಿವರಿಗೆ ಆಚಾರ್ಯರ ದತ್ತವಾಗಿ ಪ್ರತಿಮೆಗಳು। ರಘಪಾ[>ವೌ]ಕಾಳಿಯ ಮಥನೇ। ಸುವಿಠ[+ಲ] ಸೂಕರ ನೃಸಿಂಹಂ। ಚ ಅನ್ಯ ವಿಠಲದಮಗಣಿತ ಮತಿ ಶಿಷ್ಯೇಃ ಪೂಜಿತಾರಂ ನಮಾಮಿ ಸದಾ ವಂಶಾದ್ಯಾದಿರ್ನಾಸನ ಸನಕಾದಿನಾಪಾಸೆ ದೂರ್ವಾಸ ಸಂ ಪರತೀರ್ಥಾಖ್ಯ ಭಿಕ್ಷುಃ। ಸತ್ಯಪ್ರಾಜ್ಯಂ ಪ್ರಾಜ್ಞ ತೀರ್ಥಂ ಕ್ರಮಾತ ಶಿಷ್ಯಾನ್ ವಂದೇ ಚಾಚ್ಚುತ್‌ಪ್ರೇಕ್ಷ ಮಧ್ವೌ ಶ್ರೀಮಧ್ವ ಉಪೇಂದ್ರಮುನಿಂ ಗುರು ಸೇವ್ಯ ಕವೀಂದ್ರ ಹಸೇಂದ್ರಂ ಯಾದವೇಂದ್ರಮುಪಾಸ್ಮಹೇ। ಧರಣೀಧರಂ ಸಂಪ್ರದ್ಯದಾಮೋದರಮುನಿಂ ಭಜೇ। ರಘುನಾಥಮುನಿಂ ನಮಃ ಲೋಕನಾಥ ನಮಃ ಕುರ್ಮೋಃ। ರಮಾನಾಥಮುನಿಂ ಸ್ತುಮಃ। ಶ್ರೀಯೊ ಶ್ರೀವಲ್ಲಭಮುನಿಂ। ಶ್ರೀನಿವಾಸಂ ನತೋಸ್ಮಹಂ। ಉಪಾಸಿ ಶ್ರೀನಿಧಿ ಗುರುಂ। ಗುಣನಿಧಿರ್ಯಮಾಶ್ರಯ। ನಂದ ಯಾಂಮ್ಯಾ ನಂದ ನಿಧಿಂ ತೋಷಯಾಮಿ ತಪೋನಿಧಿಂ। ಪ್ರಾಣಿಯಾಮ ರಾಘವೇಂದ್ರಂ। ಕವೀಂದ್ರಂ ದೈಶಿಕಂ।ಜಾನಾಶ್ರಮೇ। ರಾಘವೇಂದ್ರಮುನಿಂ ವಂದೇ। ವಿಭುದೇಂದ್ರ ಸಮಾಶ್ರಯೇ। ಶ್ರೀ ಸುರೇಂದ್ರಗುರುಂ ವಂದೇ ಭಕ್ತಿಜ್ಞಾನ ವಿರಾಜಿತಂ।

ನಮ್ಮಾ ಉಪೇಂದ್ರತೀರ್ಥಶ್ರೀಪಾದಂಗಳವರು ಶ್ರೀ ವಿಠಲದೇವರ ಪೂಜೆಯನ್ನು ಮಾಡಿಕ್ಕೊಂಡು ಕ್ರಮಪ್ರಾಪ್ತವಾದ ಶ್ರೀಕೃಷ್ಣದೇವರ ಪೂಜಾಧರ್ಮಗಳನ್ನು ಮಾಡಿಕ್ಕೊಂಡು ಸಭಾಸ್ತ್ರಪ್ರವಚನ ಮಾಡುತ್ತ ಮಹಾ ತಪೋನಿಷ್ಟರಾಗಿ ತೀರ್ಥಯಾತ್ರೆಗಳನ್ನು ಮಾಡಿಕ್ಕೊಂಡು ಕೃಷ್ಣತೀರದಲ್ಲು ಶಕವರುಷ ೧೨೧೧ನೆ ಸರ್ವದಾರಿ ಸಂವತ್ಸರ ಮಾಘ ಶು॥ ೧೨ಯಲ್ಲು ವೈಕುಂಠಯಾತ್ರೆಯನ್ನು ಮಾಡಿದರು.

ಅವರ ಕರಕಮಲ ಸಂಜಾತರಾದ ಕವಿಂದ್ರತೀರ್ಥಶ್ರೀಪಾದಂಗಳವರು ತೀರ್ಥಯಾತ್ರೆ ನಿಮಿತ್ತ ದೇಶಾಂತರಕ್ಕೆ ಹೋದವರು . . . . ಉತ್ತರ ದೇಶಲು ದೇವರ ಯಾತ್ರೆ ಮಾಡಿದವರು, ಪರಿಧಾವಿ ಸಂವತ್ಸರ ಶ್ರಾವಣ ಶು ೫ಲ್ಲು.

ಯಿವರ ಕರಕಮಲಸಂಜಾತರಾದ ಹಸೇಂದ್ರತೀರ್ಥಶ್ರೀಪಾದಂಗಳವರು ಪುತ್ತಿಗೆಯಲ್ಲು ಪ್ರಮಾತಿ ಸಂವತ್ಸರ ಪಾಲ್ಗುಣ ಶು॥ ೫ಯಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಮಾಧವೇಂದ್ರತೀರ್ಥರು ಉಡುಪಿಯಲ್ಲು ಶ್ರೀಕೃಷ್ಣ ಸನ್ನಿಧಿಯಲ್ಲಿ ಪ್ಲವಸಂವತ್ಸರದ ಚೈತ್ರಶುದ್ಧ ೧ ಯಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಧರಣೀಧರತೀರ್ಥರು ನರಸಿಹಕ್ಷೇತ್ರದಲ್ಲು ರಉದ್ರಿ ಸಂವತ್ಸರ ವೈಸಾಖ ಶು ೧ಲ್ಲು ದೇವರ ಯಾತ್ರೆ ಮಾಡಿ, ದೇಶ ಸಂಚಾರ ಮಾಡಿಕ್ಕೊಂಡು, ಕಾಶಿ ಭಾಗೀರತಿ ತೀರದಲ್ಲಿ ದೇಹತ್ಯಾಗವನ್ನು ವಿಷು ಸಂವತ್ಸರದ ಪುಷ್ಯ ಬಹುಳ ೫ ಲ್ಲು ಮಾಡಿದರು.

ಅವರ ಶಿಷ್ಯರು ದಾಮೋದರತೀರ್ಥರು ಬಹಾಳ ತೀರ್ಥಯಾತ್ರೆ ಮಾಡಿ, ದೇಶಸಂಚಾರ ಮಾಡಿಕ್ಕೊಂಡು ಕಾಶಿ ಭಾಗೀರತಿ ತೀರದಲ್ಲಿ ದೇಹತ್ಯಾಗ ಮಾಡಿದರು.

ಅವರ ಶಿಷ್ಯರು ರಘುನಾಥತೀರ್ಥರು ಬಹಾಳ ತಪೋನಿಷ್ಠರಾಗಿ ಪಾಟಪ್ರವಚನ ಮಾಡಿಕ್ಕೊಂಡು ಉಡುಪಿಯಲ್ಲು ಶ್ರೀಕೃಷ್ಣದೇವರ ಸನ್ನಿಧಿಯಲ್ಲು ವಿಕಾರಿ ಸಂವತ್ಸರ ಚೈತ್ರ ಶು ೫ಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ತರುವಾಯ ಶ್ರೀವತ್ಸಾಂಕಸ್ವಾಮಿಗಳವರು ಯಾತ್ರೆ ನಿಮಿತ್ಯ ಹೊರಟು ಹೋದವರು, ರಾಮೇಶ್ವರದಲ್ಲು ಸಿದ್ಧಾರ್ತಿ ಸಂವತ್ಸರದ ಭಾದ್ರಪದ ಶು ೭ ಯಲ್ಲು ದೇಹತ್ಯಾಗವನ್ನು ಮಾಡಿದರು.

ಅವರ ಶಿಷ್ಯರು ಗೋಪಿನಾಥತೀರ್ಥರು ಬಹಳ ದೇಶಗಳಲ್ಲಿ ತೀರ್ಥಯಾತ್ರೆ ಮಾಡಿಕ್ಕೊಂಡು ಗೋಕುಲ ಬೃಂದಾವನ ಕ್ಷೇತ್ರದಲ್ಲು ಚಿತ್ರಭಾನು ಸಂವತ್ಸರ ಶ್ರಾವಣ ಬಹುಳ ೫ಲ್ಲು ದೇವರಯಾತ್ರೆಯನ್ನು ಮಾಡಿದರು.

ಅವರ ಶಿಷ್ಯ ರಘುನಾಥತೀರ್ಥರು ಉಡುಪಿಯಲ್ಲು ಶ್ರೀಕೃಷ್ಣದೇವರ ಸನ್ನಿಧಿಯಲ್ಲು ದೇಹತ್ಯಾಗವನ್ನು ಪರಿಧಾವಿ ಸಂವತ್ಸರ ಆಶ್ವಿ ಬ. ೩೦ದಲ್ಲು ದೇಹತ್ಯಾಗ ಮಾಡಿದರು.

ಅವರ ಕರಕಮಲ ಸಂಜಾತರಾದ ಲೋಕನಾಥತೀರ್ಥಶ್ರೀಪಾದಂಗಳವರು ಗೋದಾವರಿ ತೀರದಲ್ಲು ದೇಹತ್ಯಾಗವನ್ನು ಶುಕ್ಲ ಸಂವತ್ಸರ ಆಶ್ವಿಜ ಶು ೫ಲ್ಲು ಮಾಡಿದರು.

ಅವರ ಶಿಷ್ಯರು ರಾಮನಾಥತೀರ್ಥರು ಪುತ್ತಿಗೆಯಲ್ಲು ಜಯ ಸಂವತ್ಸರ ಚೈತ್ರ ಬ ೫ಲ್ಲು ದೇವರ ಯಾತ್ರೆ ಮಾಡಿದರು.

ಅವರ ಕರಕಮಲ ಸಂಜಾತರಾದ ಶ್ರೀ ವಲ್ಲಭತೀರ್ಥಪಾದಂಗಳವರು ಬಹಾಳ ತರುವಾಯ ಸುದಾ ಮಂಗಳವನ್ನು ಮಾಡಿ, ತಪೋನಿಷ್ಠರಾಗಿ ಯಿದ್ದು, ಉಡುಪಿಯಲ್ಲು ಶ್ರೀಕೃಷ್ಣ ಸನ್ನಿಧಿಯಲ್ಲು ಶ್ರೀಮುಖ ಸಂವತ್ಸರ ವೈಶಾಖ ಬಹುಳ ೩೦ಯಲ್ಲು ದೆವರಯಾತ್ರೆ ಮಾಡಿದರು.

ಅವರ ಶಿಷ್ಯ ಶ್ರೀ ಶ್ರೀನಿವಾಸತೀರ್ಥರು ಉಡುಪಿಯಲ್ಲು ಪರಾಭವ ಸಂ।ಜೇಷ್ಟ ಶು। ೧ಲ್ಲು ದೇವರಯಾತ್ರೆ ಮಾಡಿದರು.

ಅವರ ಶಿಷ್ಯರು ಶ್ರೀನಿಧಿತೀರ್ಥಶ್ರೀಪಾದಂಗಳವರು ಉಡುಪಿಯಲ್ಲು ದೇವರ ಯಾತ್ರೆ ಮಾಡಿದರು. ಯುವ ಸಂವತ್ಸರದ ಚೈತ್ರ ಶು ೫ಲ್ಲು.

ಅವರ ಶಿಷ್ಯರು ಆನಂದನಿಧಿತೀರ್ಥರು ಪುತ್ತಿ[>ಗೆ]ಯಲ್ಲು ವಿಕಾರಿ ಸಂವತ್ಸರದ ಮಾಘ ಬಹುಳ ೫ಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ತಪೋನಿಧಿತೀರ್ಥರು ಉಡುಪಿಯಲ್ಲು ಕ್ಷಯ ಸಂವತ್ಸರದ ಮಾಘ ಬ. ೩೦ಲ್ಲು ದೇವರ ಯಾತ್ರೆ ಮಾಡಿದರು. ಅವರ ಶಿಷ್ಯರು ರಾಘವೇಂದ್ರತೀರ್ಥರು ಶ್ರೀಮದಲ್ಲು ಖರ ಸಂವತ್ಸರ ಚೈತ್ರ ಬಹುಳ ೫ ಲ್ಲು ದೇವರ ಯಾತ್ರೆ ಮಾಡಿದರು.

ಅವರ ಕರಕಮಲ ಸಂಜಾತರಾದ ಕವೀಂದ್ರಸ್ವಾಮಿಗಳವರು ಬಹಾಳ ವಿದ್ವಾಂಸರು. ಬಹಾಳ ತರುವಾಯ ಪಾಟ ಪ್ರವಚನೆ ಮಾಡಿಕ್ಕೊಂಡು ಯಿದ್ದು ಪುತ್ತಿಗೆಯಲ್ಲು ಕ್ಷಯಸಂವತ್ಸರ ವೈಶಾಖ ಶು ೧೦ಯಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಶಿಷ್ಯರು ರಾಘವೇಂದ್ರಸ್ವಾಮಿಗಳವರು ಬಹುದೊಡ್ಡ ವಿದ್ವಾಂಸರು, ಬಹುಸ್ವಾಮಿಗಳಿಗೆ ಬಹಾಳ ತರುವಾಯ ಪಾಠ ಹೇಳಿಕೊಂಡು ಸಕಲದೇಶ ಸಂಚಾರವಮಾಡಿಕೊಂಡು ಮಹಾರಾಜಾಧಿಗಳಿಂದ ವಿದ್ವಾಂಸರಿಂದ ಸಹಾ ಮಾನಿತರಾಗಿ ಗಜಾಂತಾ[>ಗಜಾಶ್ವಾ]ದಿಗಳ ಸಂಪಾದಿಸಿ ಬಹಾಳ ದಿವ್ಸ ಶಾಸ್ತ್ರಪ್ರವಚನೆ ಮಾಡಿಕ್ಕೊಂಡು ಯಿದ್ದು ಪುತ್ತಿಗೆಯಲ್ಲು ನಂದನ ಸಂವತ್ಸರ ಆಷಾಢ ಶುದ್ಧ ೧ ಯಲ್ಲು ವೈಕುಂಠಯಾತ್ರೆಯನ್ನು ಮಾಡಿದರು.

ಅವರ ಶಿಷ್ಯರು ವಿಭುದೇಂದ್ರಸ್ವಾಮಿಗಳು ಉಡುಪಿಯಲ್ಲು ಜಯ ಸಂವತ್ಸರ ಜೇಷ್ಟ ಶು ೫ಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಅಸುರೇಂದ್ರತೀರ್ಥಶ್ರೀಪಾದಂಗಳವರು ಯಾತ್ರಾನಿಮಿತ್ತ ಕಾಸಿಗೆ ಹೊರಟು ಹೋಗುವಾಗ್ಯೆ ನಾಗಪುರಿಯಲ್ಲು ನದಿತೀರದಲ್ಲು ಸಉಮ್ಯ ಸಂವತ್ಸರ ಪಾಲ್ಗುಣ ಶು ೧೨ ಯಲ್ಲು ದೇವರ ಯಾತ್ರೆಮಾಡಿದರು ಯಂತ ಉಪೇಂದ್ರತೀರ್ಥ ಶ್ರೀಪಾದಂಗಳವರ ಆರಭ್ಯ ಗುರುಗಳ ಪಾರಂಪರ್ಯ ಬರಸಿಕೊಟ್ಟ ಕೈಫಿಯತು ನಾಮೆ.

ಮಠದಲ್ಲಿ ಯಿದ್ದ ಪುಸ್ತಕದ ವಿವರ:

ಭಾಗವತ ಪುಸ್ತಕ	೧
ಭಾಗವತದ ತಾತ್ಪರ್ಯ ಪುಸ್ತಕ	೧
ಭಾಗವತದ ಟೀಕು ವಿಜಯದ್ವಜಿದ ಪುಸ್ತು	೧
ಭಾಗವತದ ತಾತ್ಪರ್ಯ ದೀಪಿಕೆ ಪುಸ್ತಕ	೧
ಶ್ರೀಮದ್ರರಾಮಾಯಣ ಸಪ್ತಕಾಂಡ ಪುಸ್ತಕ	೧
ನಾಗರ ರಾಮಾಯಣ ಪುಸ್ತಕ	೧
ಅದರ ಟೀಕು ವಿಸ್ವಪತಿ ಪುಸ್ತಕ	೧
ಭಾರತ ಸಮಗ್ರಕಾ ಪುಸ್ತಕ	೧೨
ತತ್ತ್ವಪ್ರಕಾಸಿಕ ಪುಸ್ತುಕ	೧
ಅದರ ಟೀಕಿನ ಪುಸ್ತುಕ	೨
ಅನುವ್ಯಾಖ್ಯಾನದ ಪುಸ್ತುಕ	೧
ಸುರಾಜನ್ಮ	೨
ಅದರ ಟೀಕುನ ಪುಸ್ತುಕ	೨
ಚಂದ್ರಿಕಾ ಪುಸ್ತುಕ	೧
ಅದರ ಟೀಕಿನ ಪುಸ್ತುಕ	೧

ನ್ಯಾಯಾಮೃತದ ಪುಸ್ತಕ ೧

ಅದರ ಟೀಕಿನ ೧

ಅದರ ಟೀಕು ಲಕ್ಷ ಅಲಂಕಾರ ಪುಸ್ತಕ ೨

ಮಾಸತ್ರಯ ಪುಸ್ತುಕ ೧

ಶ್ರೀ ಮಹಾಭಾರತ ತಾತ್ಪರ್ಯ ನಿರ್ನಯದ ೨

ಅದರ ಟೀಕಿನ ಪುಸ್ತುಕ ೨

ಬ್ರಹ್ಮಸೂತ್ರ ಭಾಷ್ಯದ ಪುಸ್ತುಕ

ತರ್ಕತಂಡದ ಪುಸ್ತುಕ ೧

ನೀತಿಭಾಷ್ಯದ ಪುಸ್ತುಕ ೧

ಅದರ ಟೀಕು ಪ್ರಮಯದಿತಿ[>ದೀಪಿ]ಕಾ ಪುಸ್ತುಕ ೧

ಗೀತಾತಾತ್ಪರ್ಯದ ಪುಸ್ತುಕ ೧

ಅದರ ಟೀಕಿನ ಪುಸ್ತುಕ ೧

ದ್ವಂ[>ಮ]ದ್ವವಿಜಯದ ಪುಸ್ತಕ ೧

ಅದರ ಟೀಕು ಪುಸ್ತುಕ ೧

ಸಟೀಕು ಕೃಷ್ಣಾಮೃತ ಮಹರ್ನವದ ಪುಸ್ತಕ ೧

ಅದ್ಯಾಯನದ ಪುಸ್ತಕ ೧

ಸಟೀಕು ದ್ವಾದಶಸ್ತೋತ್ರದ ಪುಸ್ತಕ ೧

ವಾಮಸ್ತುತಿ ಸಟೀಕು ಪುಸ್ತುಕ ೧

ಮಣಿಮಂಜರಿ ಸಟೀಕು ಪುಸ್ತುಕ ೧

ಚಿಕ್ಕೆಳು ಉಪನಿಷತ್ತುಗಳ ಪುಸ್ತುಕ ೧

ಅವುಗಳ ಭಾಷ್ಯದ ಪುಸ್ತುಕ ೧

ವ್ಯಾತೀರ್ಥಯದ ಪುಸ್ತುಕ ೧

ಕಂದಾರ್ತದ ಪುಸ್ತಕ ೧

ಪ್ರಮಾಣ ಪದ್ದತಿ ಪುಸ್ತಕ ೧

ಅದರ ಟೀಕಿನ ಪುಸ್ತಕ ೨

ದಶಪ್ರಕರಣ ಮೂಲ ಪುಸ್ತುಕ	೧
ಜಹ್ಮತೀರ್ತೀಯ ಪುಸ್ತುಕ	೨
ಅದರ ಟೀಕಿನ ಪುಸ್ತುಕ	೩
ಸಟೀಕು ತಂತ್ರಸಾರೊಕ್ತದ ಪುಸ್ತುಕ	೧
ತಂತ್ರದೀಪಿಕಾ ಪುಸ್ತಕ	೧
ತರ್ಕ ಸಂಗ್ರಹ	೧
ಅನ್ನಭಟ್ಟಿಯ್ಯಾ ಸಹ ಪುಸ್ತಕ	೧
ಅಂತು ಪುಸ್ತಕ	೬೮

❖❖

೭೫
ಪೆರಡುರ ಮಾಗಣಿ ದೇವಾಲಯದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಕುಂಪಣಿ ಸರಕಾರಕ್ಕೆ ಅಕ್ಷಯ ಸಂವತ್ಸರದ ಜೇಷ್ಟ ಶು ೧೨ ಮೇ ತಾರೀಖು ೨೯ಲ್ಲು, ಬಾರಕೂರು ತಾಲೂಕು ಪೆರಡೂರು ಮಾಗಣಿ ಮಾಳಿಗೆ ಹೆಬ್ಬಾರ ಅನಂತಯ್ಯ, ನೆಲ್ಲಿ ಸುಬ್ಬಯ್ಯ ಮುಂತಾದವರು ಬರಸಿಕೊಟ್ಟ ಕೈಫಿಯತು ನಾಮೆ.

ಪೂರ್ವದಲ್ಲಿ ಪಾರ್ಕಾಳದ ಗ್ರಾಮದಲ್ಲು ರುಕ್‌ಶ್ಯಾಖಾದ್ಯಾಯ ಆಶ್ಲಾಯನ ಸೂತ್ರ ಅಂಗೀರಸ ಗೋತ್ರೋತ್ಪನ್ನನಾದ ಕೃಷ್ಣಹೆಬ್ಬಾರಯಂಬವನು ಬಹುಸತ್ಯವಂತನಾಗಿ ತನ್ನ ಸ್ವಕರ್ಮನಿರತನಾಗಿ ನಿತ್ಯದಲ್ಲು ಉಡಪಿ ಶ್ರೀ ಅನಂತಸೇನ[>ಶಯನ]ದೇವರ ಸಂದರಶನವನ್ನು ಮಾಡಿಕ್ಕೊಂಡು ಯೀ ದೇವರ ಉಪಾಶಕನಾಗಿ ಯಿರುತಿದ್ದಲ್ಲಿ, ಯೀ ಮದ್ಯ ತುಳುವ ಪಾಳ್ಯಗಾರರಿಂದಾ ಯೀ ದೇಶದಲ್ಲಿ ಬಹುತರ ಉಪದ್ರವಾದ್ದರಿಂದಾ, ಪೆರಡೂರ ಪಾಳ್ಯಗಾರ ಸಂಕಹೆಗ್ಗಡೇನಾ ಶೇರಿಕ್ಕೊಂಡು ಯೀತನ ಆಶ್ರಯದಲ್ಲು ಯಿರತಕ್ಕ ಬಗ್ಯೆ "ತನಗೆ ಆ ವಾಸಕ್ಕೆ ಸ್ವಲ್ಪ ಸ್ಥಳಾ ಕೊಡುವಂತೆ" ಯೀ ಹೆಗಡೇಗೆ ಹೇಳಿದ್ದಲ್ಲಿ, ಆತನು ಸಂತುಷ್ಟನಾಗಿ "ಹನ್ನೊಂದನೆ ಮುನ್ನೂರು ಯೆಂಬ ಗ್ರಾಮದಲ್ಲಿ ನಿಮ್ಮಾ ವಿಹಿತಾಚರಣೆ ಮಾಡಿಕ್ಕೊಂಡು ಯಿರಿ"ಯಂಬದಾಗಿ ಹೇಳಿ, ಗ್ರಾಮ ನಿರ್ಮಾಣ ಮಾಡಿಕೊಟ್ಟು, ಆ ಗ್ರಾಮವನ್ನು ಸರ್ವಮಾನ್ಯವಾಗಿ ಕೊಟ್ಟದರಿಂದಾ ಅಲ್ಲಿ ವಾಸವನ್ನು ಮಾಡಿಕ್ಕೊಂಡು, ಅಲ್ಲಿಂದ ಬಂದು ಉಡುಪಿನ ಅನಂತಸೇನ[>ಶಯನ] ದೇವರ ಸಂದರುಶನ ಮಾಡುತ್ತಾ ಯಿರಲಾಗಿ, ಶ್ರೀದೇವರು ಯೀತನ ನೇಮವನ್ನು ನೋಡಿ ಬಹಾಳ ಸಂತುಷ್ಟನಾಗಿ "ಪರಮ ಭಕ್ತನಾದದರಿಂದಾ ಯೀತಗೆ ಪ್ರಸನ್ನನಾಗಬೇಕು"ಯಂತ, ವೊಂದು ದಿವಸ ಸ್ವಪ್ನದಲ್ಲು "ನಿನ್ನ ಸಮೀಪ ಸ್ಥಳದಲ್ಲಿ ನಿನಗೆ

ಪ್ರಸನ್ನನಾಗುತ್ತೇನೆ"ಯಂತ ಆಗ್ನೆ ಕೊಟ್ಟು, "ನೆಲ್ಲಿಕಾರಗ್ರಾಮದಲ್ಲಿ ಬಹುದ್ದ[>ಬೌದ್ಧ] ಯಿದ್ದಾನೆ. ಆತನಲ್ಲಿ ತನ್ನ ದೇವತಾ ಪ್ರಥಿ[>ತಿ]ಮಾ ನಿರ್ಮಾಣಾರ್ಥವಾಗಿ ಅತ್ಯು[+ತ್ತ]ಮವಾದವೊಂದು ಶಿಲಾಸಂಗ್ರಹ ಮಾಡಿಕ್ಕೊಂಡು, ತನ್ನ ಬಹುದ್ದ[>ಬೌದ್ಧ] ಪ್ರತಿಮೆಯನ್ನು ಮಾಡಿಸಬೇಕೆಂತ ಮಾಡಿಯಿದ್ದಾನೆ. ಅದೆ ಶಿಲೆಯಲ್ಲು ನಾನು ಶಂಖ ಚಕ್ರ ಗದಾ ಪದ್ಮಗಳೆಂಬಾ ನಾಲ್ಕು ಆಯುಧಾ ವಿಶಿಷ್ಟಗಳಾದ ಚತುರ್ಭುಜಗಳನ್ನು ನನ್ನ ಮೂಲರೂಪವನ್ನು ದರಿಶಿಕ್ಕೊಂಡು ನಿನಗೆ ಕಾಣಿಸಿ ಕೊಳ್ಳುತ್ತೇನೆ. ಯಿನ್ನು ಪ್ರತಿವಾರ್ಥವಾಗಿ ಆತನ ಕೈಯ್ಯ ಕೇಳಿದಾಕ್ಷಣಾ ನಿನಗೆ ಕೊಡುತ್ತೇ[>ತ್ತಾ]ನೆ"ಯೆಂಬುದಾಗಿ ಅಪ್ಪಣೆಯಾದ್ದರಿಂದಾ, ಆ ಪ್ರಕಾರ ತನ್ನ ಗ್ರಾಮಸ್ಥರಾದ ಅಶೇಷಬ್ರಾಹ್ಮರಿಂದಾ ಕೂಡಿಕ್ಕೊಂಡು, ಆ ನೆಲ್ಲಿಕಾರಗ್ರಾಮದ ಬಲುದ್ದನ[>ಬೌದ್ಧನ] ಸಮೀಪಕ್ಕೆ ಹೋಗಿ ಯೀ ಶಿಲೇಯನ್ನು ಕೇಳಿದ್ದಲ್ಲಿ, ಆ ಬಹುದ್ದನು[>ಬೌದ್ಧನು] ತನಗೆ ರಾತ್ರೆಯಲ್ಲಿ ಆದ ಸ್ವಪ್ನ ಅಭಿಪ್ರಾಯವನ್ನು ಯೀ ಬ್ರಾಹ್ಮಣನಿಗೆ ಕೊಟ್ಟಲ್ಲಿ, ಆ ಶಿಲೆಯನ್ನು ತೆಗೆದುಕ್ಕೊಂಡು ಬರುವಾಗ್ಯೆ ಮಧ್ಯ ಮಾರ್ಗದಲ್ಲು ವೊಬ್ಬಾ ವ್ಯಾಪಾರಿಯು ಕದಳಿಫಲಾಭಾರವನ್ನು ಹೊತ್ತುಕ್ಕೊಂಡು ಹೋಗುವವನು ಯೀ ಶಿಲೆಯನ್ನು ಬ್ರಾಹ್ಮರ ಸಹಾ ಅತಿಕ್ರಮಿಸಿ ಮುಂದೆ ಮಾರ್ಗದಲ್ಲು ಹೋಗುವಾಗ್ಯೆ, ಆತನ ಶರೀರದಲ್ಲು ಬಹಾಳ ಆಯಾಸವಾಗಿ ಬುದ್ಧಿ ವಿಸ್ಮಿತೆಯಾಗಿ ತಿರಗಾ ಬಂದು, ಯೀ ಕದಳಿಫಲಭಾರವನ್ನು ಯೀ ಶಿಲೆ ಮುಂದೆ ಯಿರಿಸಿ ಪುನಹಾ ಸ್ವಸ್ತಚಿತ್ತನಾಗಿ ಬ್ರಾಹ್ಮರ ಆಗ್ನೆಯನ್ನು ತೆಗೆದುಕೊಂಡು ಹೊದನು.

ಆ ತರುವಾಯ ಯೀ ಬ್ರಾಹ್ಮರು ಶಿಲೆಯನ್ನು ತೆಗೆದುಕ್ಕೊಂಡು ಸ್ವಗ್ರಾಮಕ್ಕೆ ಬಂದು ಯೀ ಗ್ರಾಮದಲ್ಲು ಯೀ ಹೆಬ್ಬಾರನ ಮನೆ ಸಮೀಪದಲ್ಲಿ ದೇವಾಲಯ ಕಟ್ಟುನ ವಿದ್ಯೆವಂತನಾಗಿ ಯಿರಲಾಗಿ, ಆ ದಿವಸ ರಾತ್ರೆಯಲ್ಲು ಯಿದೆ ಹೆಬ್ಬಾರಗೆ ಸ್ವಪ್ನದಲ್ಲು ತನಗೆ ಆಲಯಕ್ಕೆ "ನಿನ್ನ ಮನೆ ಪೂರ್ವಭಾಗದಲ್ಲಿ ಕಂಟಕವನವಥೆ. ಆ ವನದ ಮಧ್ಯದಲ್ಲಿ ಗೋವ್ಯಾಗ್ರಗಳು ನಿರ್ದ್ಥೇಶದಿಂದಾ ಕೂಡಿಕೊಂಡು ಯಿದ್ದಾವೆ. ಗೊವಿಸ್ತನ್ಯ ಪ್ರಸ್ತುವಣ ಉಂಟಾಗುತ್ತದೆ. ಅದೇ ಸ್ಥಳದಲ್ಲಿ ದೇವಾಲಯವನ್ನು ಕಟ್ಟಿಸು" ಯಂಬದಾಗಿ ಸ್ವಪ್ನದಲ್ಲಿ ಶ್ರೀ ದೇವರ ಆಜ್ಞೆಯಾದ್ದರಿಂದಾ ಮರುದಿವಸಾ ಪ್ರಾತಃಕಾಲಕ್ಕೆ ಆ ಸ್ಥಳಕ್ಕೆ ಬಂದು ನೋಡುವಾಗ್ಯೆ, ಅದೇ ರಿತಿ ವತ್ಸಯುಕ್ತವಾದಂತಾ ಕಪಿಲೆಗೋಉ ವ್ಯಾಘ್ರವನ್ನು ಸಹಾ ನೋಡಿ ಆಶ್ಚರ್ಯ ಬಟ್ಟು, ಅಲ್ಲಿ ಭೂಶೋಧನೆಯನ್ನು ಮಾಡಿ, ದೇವಾಲಯ ಕಟ್ಟಿಸುವ ಬಗ್ಯೆ ದ್ರವ್ಯಾನುಕೂಲ ಚಿಂತೆಯಿಂದ ಯಿದ್ದಲ್ಲಿ, ಅದೇ ದಿವಸ ರಾತ್ರೆ "ನಾಳೆ ಒಬ್ಬಾ ಸೀಮಂತರಾಯಾ ಯಂಬ ಬ್ರಾಹ್ಮಣ ಅಪುತ್ರನಾಗಿ ವೈರಾಗ್ಯದಿಂದಾ ಗಂಗಾಯಾತ್ರಾ ಉದ್ದಿಶ್ಯವಾಗಿ ಹೋಗುತ್ತ ಯೀ ಸ್ಥಳಕ್ಕಾಗಿ ಬರುತ್ತಾನೆ. ಆತನು ಬಹಾಳ ದ್ರವ್ಯವಂತನು. ಯೀ ದೇವಾಲಯಕ್ಕೆ ಉಪಯುಕ್ತವಾದ ದ್ರವ್ಯವನ್ನು ಆ ಬ್ರಾಹ್ಮನ ಕೈಯ್ಯ ಕೇಳಿದಲ್ಲಿ ದ್ರವ್ಯವನ್ನು ಕೊಡುತ್ತಾನೆ. ಆತನಿಗೆ ಸತ್ಪುತ್ರರನ್ನು ನಾಲು ಕೊಡುತ್ತೇವೆ" ಯೆಂಬುದಾಗಿ ಅಪ್ಪಣೆ ಆದ ಪ್ರಕಾರ, ಮರುದಿವಸಾ ಅದೆ ಬ್ರಹ್ಮಣ ಸಕುಟುಂಬನಾಗಿ ಯೀ ಸ್ಥಳದ ಸಮೀಪದಲ್ಲು ವೊಂದು ಥಾ[>ರಾ]ತ್ರಿ ಉಕ್ಷಮೂಲದಲ್ಲು ಬಂದು ಕೂತಿರಲಿಕ್ಕೆ ಯೀ ಬ್ರಾಹ್ಮರು ಅತನ್ನ ಕಂಡು "ನಿನಗೆ ನಮ್ಮಾ ಶ್ರೀ ದೇವರು ಮನೋರಥವನ್ನು ಕೊಡುತ್ತಾನೆ. ದೇವಾಲಯ ಕಟ್ಟುವ ಬಗ್ಗ್ಯೆ ದ್ರವ್ಯಾನುಕೂಲವನ್ನು ಮಾಡಬೇಕು"ಯಂಬುದಾಗಿ ಹೇಳಿದಲ್ಲಿ, "ಮನಸಾಭೀಷ್ಟ ಕೊಡುವಂತಾ ದೇವರು ನನಗೆ ಸ್ವಪ್ನದಲ್ಲಿ ಆಜ್ಞಾಪಿಸಿದಲ್ಲಿ ದ್ರವ್ಯಾ ಕೊಡುತ್ತೇನೆ"ಯೆಂಬದಾಗಿ ಹೇಳಿದ್ದರಿಂದಾ ಆ ಥಾ[>ರಾ]ತ್ರೆಯಲ್ಲು ಆ ಸೀಮಂತರಾಯ ಬ್ರಾಹ್ಮಣಗೆ ಉರ್ದ್ಧ ಬ್ರಾಹ್ಮಣ ರೂಪದಿಂದಾ ಬಂದು

“ನಿನಗೆ ಸತ್ಪುತ್ರೋತ್ಪತ್ತಿ ಆಗುತ್ತದೆ. ನೀನು ಯೇಕಾಗ್ರಚಿತ್ತನಾಗಿ ನನ್ನ ಸೇವೇಯನ್ನು ಮಾಡು”ಯೆಂತ ಅಪ್ಪಣೆ ಮಾಡಲಾಗಿ, ಯೀ ಭಗವತಾಜ್ಞೆಯನ್ನು ಶಿರಸಾವಹಿಸಿಕ್ಕೊಂಡು ಪರಮಸಂತೋಷಿತನಾಗಿ, ಯೀ ದೇವಾಲಯ ಕಟ್ಟುವ ಬಗ್ಗ್ಯೆ ದ್ರವ್ಯಾನುಕೂಲವನ್ನು ಮಾಡಿಕೊಟ್ಟು, “ನಾನು ಯೀ ಸ್ಥಳದ ಹೆಬ್ಬಾರ ಮುಂತಾದ ಬ್ರಾಹ್ಮರೊಡನೆ ಶ್ರೀದೇವರ ಸೇವಾನಿರತನಾಗಿ ವಂಶಪಾರಂಪರ್ಯಕ್ಕೂ ಯಿಲ್ಲಿ ಸ್ಥಳಿಕನಾಗಿ ಯಿರುತೇನೆ”ಯೆಂತ ಪ್ರತಿಜ್ಞೆಯನ್ನು ಮಾಡಿ, ಕೃಷ್ಣ ಹೆಬ್ಬಾರ ಸೀಮಂತರಾಯ ಮುಂತಾದ ಬ್ರಾಹ್ಮರು ಸಹಾ ಕೂಡಿ ಯೀ ದೇವಾಲಯವನ್ನು ಕಟ್ಟಿಸಿ ಶಿಲ್ಪಮುಖದಿಂದಾ ಯೀ ಶಿಲೆಯಲ್ಲು ಅನಂತಪದ್ಮನಾಭದೇವರ ವಿಗ್ರಹವನ್ನು ಮಾಡಿಸಿ, ಉತ್ತಮವಾದ ದೈವಜ್ಞಬ್ರಾಹ್ಮರ ಮುಖದಿಂದಾ ಸುಮೂಹೂರ್ತವನ್ನು ನೋಡಿ, ಶಾಲಿವಾಹನ ಶಕವರುಷ ೧೩೪೦ನೆ ಹೇವಿಳಂಬಿ ಸಂವತ್ಸರದ ಪಾಲ್ಗುಣ ಶು ೧೩ ಯಲ್ಲು ಸಮಸ್ಥ ದೇಶದಲ್ಲಿ ವಿದ್ಯನ್ಮಂಡಲದಿಂದಾ ಅನುಮತರಾಗಿ ವಿದ್ಯುಕ್ತ ಪ್ರಕಾರ ಶ್ರೀ ದೇವರನ್ನು ಪ್ರತಿಷ್ಟೆಮಾಡಿ, ಯೀ ದೇವರಿಗೆ ತಮ್ಮ ಸರ್ವಸ್ವದಿಂದಾ ಪೂಜೋತ್ಸಾಯಗಳನ್ನು ಮಾಡಿಕ್ಕೊಂಡು ಬರುತಿದ್ದಲ್ಲಿ, ಆ ಮೇಲೆ ಕೃಷ್ಣರಾಯರ ಕಾಲದಲ್ಲು ಬಾರಕೂರ ರಾಜ್ಯವನ್ನಾಳುವ ವಿಜಯಪ್ಪವೊಡೆಯರು ಸ್ತಳಕ ಬಂದಲ್ಲಿ, ಯೀ ದೇವರ ಮಹಾತ್ಮೆಯನ್ನು ನೋಡಿ, ಯೀ ಅನಂತಪದ್ಮನಾಭದೇವರ ಅಮೃತ ಪಡಿ ನಂದಾದೀಪ್ತಿ ಬಗ್ಗ್ಯೆ ಹೆರಡೆ ಬಂಡಂಪಳ್ಳಿ ನಾಡವಳಗಣ ಪೆರಡೂರ ಗ್ರಾಮದಿಂದ ಗ॥ ೧೨೦ ನೂರಾಯಿಪ್ಪತ್ತು ವರಹಾನ್ನ ಉತ್ತರವ ಕೊಟ್ಟು, ಆ ಪ್ರಕಾರಾ ಶಿಲಾಶಾಸನ ಸ್ಥಾಪನೆಯನ್ನು ಮಾಡಿಕೊಟ್ಟು, ಆ ಪ್ರಕಾರಾ ಬಹಾದರ ನವಾಬರ ಕಾಲ ಚಿತ್ರಭಾನು ಸಂವತ್ಸರದ ವರೇಗೆ ನಡದು ಬಂದು, ಸ್ವಭಾನು ಸಂವತ್ಸರದಲ್ಲು ಅರೆವಾಸಿ ಆಗಿ, ಆ ಪ್ರಕಾರಾ ಕುಂಪಣಿ ಅಮಲು ವರೇಗೆ ನಡದು, ಕುಂಪಣಿ ಅಮಲುನಲ್ಲಿ ಮೇಲುವಾಸಿಗೆ ಕೈಧರ್ಮ ವಳಧರ್ಮದಿಂದಾ ಸಹಾ ಕೈಕಾಗದಕ್ಕೆ ಶೇರಿ, ತಸ್ಥೀಕು ಆದ್ದು ಗ ೨೦೧ಯಿನ್ನೂರ ವೊಂದು ವರಹಾಉ. ಆ ದೇವರ ಅಮೃತಪಡಿ ನಂದಾದೀಪ್ತಿ ನಿತ್ಯ ಉತ್ಸಾಹಾ ವಿಶೇಷೋತ್ಸಹಾ ಸಹಾ ನಡೆದು ಬರುತ್ತದೆ ಯಂತ ಬರಸಿಕೊಟ್ಟ ಕೈಫಿಯತು ನಾಮೆ. ಮಾಳಿಗೆ ಹೆಬ್ಬಾರ ಅನಂತಯ್ಯನ ರುಜು, ನೆಲ್ಲು ಸುಭಯ್ಯನ ರುಜು.

❖❖

೭೬
ಪೇಜಾವರಮಠದ ಕೈಫಿಯತ್ತು

ಮೆಕೆಂಜಿ಼ ಸಂಪುಟ : ೩೫೧

ಕ್ಷಯಸಂವತ್ಸರದ ಜೆಷ್ಟ ಶು ೫ ಲ್ಲು ಪೇಜಾವರಮಠದ ವಿಠ್ಠಲಭಟ್ಟನು ಬರಸಿದ ವಿವರ:

ನಮ್ಮ ಮೂಲಗುರು ಮದ್ವಾಚಾರ್ಯರು ಅವತಾರಮಾಡಿದ್ದು ಚತುಃಸಹಸ್ರೇ ತ್ರಿಶತೋತ್ತರೇ ಗತೇ ಸಂವತ್ಸರಾಣಾಂ ತು ಕತಾಪ್ರಥಿವ್ಯಾಂ॥ ಜಾತಃ ಪುನರ್ವಿಪ್ರತನುಃ ಸಭೀಮೋದ್ಯೈತೈರ್ನಿಗೂಢಂ ಹರಿತತ್ವ ಮಾಹ॥

ಶಾಲಿವಾಹನ ಶಕ ವರುಷ ೧೧೨೧ ಕಾಳಯುಕ್ತಿಸಂವತ್ಸರದ ಮಾಘ ಶುದ್ಧ ೭[>೯]ಯಲ್ಲು ಮದ್ಯಗೇಹಬಟ್ಟರಲ್ಲಿ ಅವತಾರ ಮಾಡಿ, ೧೧೨೮ ಕ್ರೋಧನಸಂವತ್ಸರದ ಪುಷ್ಯ ಶು ೫ಲ್ಲು ಉಪನಿತ್ತ[>ನೀತ]ರಾಗಿ, ೧೧೩೦ನೆ ಪ್ರಭವ ಸಂವತ್ಸರದ ವೈಶಾಖ ಶು ೩ಲ್ಲು ಅಚ್ಚುತಪ್ರೇಕ್ಷಾಚಾರರಿಂದ ಯೆತಿಯಾಶ್ರಮವನ್ನು ಸ್ವೀಕರಿಸಿ, ೧೧೬೦ ಹೇವಳಂಬಿ ಸಂವತ್ಸರದ ಮಾಘ ಶು ೩ಲ್ಲು ಶ್ರೀಕೃಷ್ಣದೇವರ ಪ್ರತಿಷ್ಟೆಯನ್ನು ಮಾಡಿ, ಬದರಿಕಾಶ್ರಮದಿಂದ ತಂದ ವ್ಯಾಸಮೂರ್ತಿ ಸಾಲಿಗ್ರಾಮಗಳಲ್ಲಿ ಮದ್ಯತ್ತಳಾ ಮಠದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆಮಾಡಿ, ಸುಬ್ರಹ್ಮಣ್ಯಕ್ಷೇತ್ರದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆ ಮಾಡಿ, ಯೀ ಮೂರು ಸ್ಥಳದಲ್ಲು ಪ್ರಾತಃಕ್ಕಾಲಕ್ಕೆ ಕ್ರಮದಿಂದಲೆ ಸರ್ವದಾ ಪೂಜೆಗಳನ್ನು ಮಾಡುತ್ತ ಕೆಲವು ದಿವಸ ಯಿದ್ದರು. ಕ್ರಮದಿಂದ ಪೂಜೆಯನ್ನು ಮಾಡುವಾಗ್ಯೆ ಮದ್ಯತ್ತಳಮಠದಲ್ಲು ಮದ್ಯಾಹ್ನ ಪೂಜೆಯ ಘಟನೆ ಆದ್ದರಿಂದ, ಅದ್ಯಾಪಿ ಅಲ್ಲಿ ಮದ್ಯಾಹ್ನ ಪೂಜೆಯೆ ಸರಿ. ಯೀಉಭಯಸ್ಥಳದಲ್ಲು ತ್ರಿಕಾಲದಲ್ಲಿ ಪೂಜೆ ಅದೆ.

ಯೀ ಪ್ರಕಾರ ಆಚಾರ್ಯರು ಯಿದ್ದು ಆಮೇಲೆ ತಾವು ಬದರಿಕಾಶ್ರಮವನ್ನು ಹೊಗುವಾಪೇಕ್ಷಾವಂತರಾಗಿ ಶ್ರೀಕೃಷ್ಣದೇವರ ಪೂಜಾ ಸ್ವಮತಾಸ್ಥಾಪನಾರ್ಥವಾಗಿ ತಮ್ಮ ಅನುಜರಾದ ವಿಷ್ಣುತೀರ್ಥಾಚಾರ್ಯರು ಸಹವಾಗಿ ಅಷ್ಟಬ್ರಹ್ಮಚಾರಿಗಳು, ಗೋದಾವರಿತೀರಸ್ಥರಾದ ವಿವಿಧ ಸಂಸಾರಿಕ ದುಃಖದರುಶನೇನ ವಿರಕ್ತರಾದ ಸಜನೋದ್ಧಾರಕ ಶ್ರೀಮಧ್ವಾಚಾರ್ಯ ಪಾದಶೇವಾಸನ್ಮಾರ್ಗವಸಂಭಾ[>ಸನ್ಮಾರ್ಗವಲಂಬಾ] ಪೇಕ್ಷೆಯಿಂದಾ ಗೋದಾವರಿ ತೀರ ದೆಶೆಯಿಂದ ಬಂದ ಶೋಭನಭಟ್ಟರಿಗೆ ಸಹಾ ೧೧೮೦ ನೆ ಪಿಂಗಳ ಸಂವತ್ಸರದ ವೈಶಾಖ ಶು ೭ ಯಲ್ಲು ಕಣ್ವತೀರ್ಥಮಹಾಕ್ಷೇತ್ರದಲ್ಲು ಆಶ್ರಮ ಮಂತ್ರೋಪದೇಶವನ್ನು ಕೊಟ್ಟು, ರಜತಪೀಟಪುರಕ್ಕೆ ಕರತಂದು, ಸ್ವಮತಾದಿ ಸಕಲಸಭಾಸ್ರೊ[>ಸಚ್ಚಾಸ್ತ್ರೋ]ಪದೇಶವನ್ನು ಮಾಡಿ ಯೀ ನವಯತೀಶ್ವರರಿಗು ತಮ್ಮ ಕರಪೂಜಿತಗಳಾದ ರಾಮದೈಯ್ಯ [>ದ್ವಯ], ಚತುರ್ಭ[+ಜ]ಕಾಳಿಯ ಮರ್ಧನ, ದ್ವಿಭುಜ ಕಾಳಿಯ ಮಥನ, ವಿಟ್ಟಲತ್ರಯ, ಶ್ರೀಭೂವರಹಾ, ನೃಶಿಹ್ಮಮೂರ್ತಿಗಳನ್ನು ಕೊಟ್ಟು "ನೀವು ಯೆಂಟು ಮಂದಿ ಬಾಲಯೆತಿಗಳು ಪ್ರತ್ಯೇಕತ್ತಿರೆ ಯರಡು ವರುಷ ನಮ್ಮ ಆಜ್ಞಾನುಸಾರ ಸತಂತ್ರ ಸಾರೊತ್ತವಿಧಿಯಿಂದ ಪೂಜಾಧರ್ಮಗಳು ಶಾಸ್ತ್ರಪ್ರವಚನಗಳ ಮಾಡುತ್ತ ಯಿರಿ" ಯಂತ ಅಪ್ಪಣೆ ಕೊಟ್ಟು, ಪದ್ಮನಾಭತೀರ್ಥರಿಗೆ ಶ್ರೀರಾಮಪ್ರಥಮೆಯನ್ನು ಕೊಟ್ಟು, "ನೀಉ ಯೇತನ್ಮತ ಸ್ಥಾಪನೆ ಮಾಡಿಕೊಂಡು, ಸಕಲದೇಶಗಳಲ್ಲಿ ಸಂಚಾರಮಾಡುತ್ತಾ ಬಹುಮಂದಿ ಸಜ್ಜನರಿಗೆ ಸನ್ಮಾರ್ಗೋಪ ದೇಶದ್ವಾರ ಉಧರಿಸಿಕೊಂಡು, ದ್ರವ್ಯಾರ್ಜನೆ ಮಾಡಿಕೊಂಡು, ಶ್ರೀಕೃಷ್ಣಪೂಜೋಪಯುಕ್ತ ಶವ್ಯ[>ದ್ರವ್ಯ] ಸಹಾಯವನ್ನು ಮಾಡಿಕೊಂಡು ಯಿರಿ"ಯೆಂತಲು ಅಷ್ಟಯತಿಗಳಿಗೆ ಅಪ್ಪಣೆ ಕೊಟ್ಟು, ೧೨೦೦ನೆ ಯೀಶ್ವರ ಸಂವತ್ಸರದ ಮಾಘ ಶು ೯ಲ್ಲು ಬದರಿಕಾಶ್ರಮಪ್ರವೇಶವನ್ನು ಮಾಡಿ, ಶ್ರೀ ವೇದವ್ಯಾಸದೇವರ ಸನ್ನಿಧಿಯಲ್ಲು ಅದ್ಯಾಪಿತ ಸೇವಾಗತವಾಗಿ ಯಿದ್ದಾರೆ ಯಂತ ಅಹಿತಿಂಹ್ಯಾ. ಅವರ ಶಿಷ್ಯರು ಯೀ ಅಷ್ಟ ಯೆತೀಶ್ವರರ ನಾಮ ಹೇಳಲು

ವಂದೇ ಹೃಷಿಕೇಶಮಿಯಾಂ ನೃಸಿಹಂ। ಜನಾರ್ಧನಂ ಚಿಂತಯತಿರುಪೇಂದ್ರಂ॥

ಶ್ರೀ ವಾಮನಂ ಚ ಸ್ಮರ ವಿಷ್ಣು ನೇಮಿ ಶ್ರೀರಾಮಮಂ ಚೈವಮಧೋಕ್ಷಜಂಚ।

ಘಟ್ಟದ ಮೇಲಿನವರು ಪದ್ಮನಾಭತೀರ್ಥರು ಯಿವರಿಗೆ ಆಚಾರ್ಯ ವಕ್ತಾ ಪ್ರಥುಮೆಗಳು . . . . ಕಾಳಿಯಮಥನೌ ಸುವಿರತಾ ಸೂಕರಂ ನೃಸಿಹಂ ಚ ಅನ್ಯಂ ವಿಠಲಮಗಣಿತಮತಿ ಶಿಷ್ಯೇಃ ಪೂಜಿತಾನ್ನಮಾಮಿ ಸದಾಯಿನ್ನು ಅಧೋಕ್ಷ ಜಿತೀರ್ಥಾಚಾರ್ಯರ ವಂಶಾವಳಿ। ವಂಶಸ್ಯಾದಿನ್ ಸನಕಾದಿನುಪಾಸ್ಯೇ ದೂರ್ವಾಸಂ ಪರತೀರ್ಥಾಖ್ಯ ಭಿಕ್ಷುಂ ಸತ್ಯಪ್ರಜ್ಞಪ್ರಾಜ್ಞ ತೀರ್ಥಕ್ರಮತಿವಿಕ್ಷ್ಯ ವಂದೇ ಅಚ್ಯುತಪ್ರೇಕ್ಷ ಮಧ್ವಾ ವಂಶಿದೋಕ್ಷಜ ತೀರ್ಥಮೇಮಿ ಕಮಲಾಕ್ಷಂ ಪುಷ್ಕರಾಕ್ಷಂ ಸದಾ ॥ ಸಾಷ್ಟಾಂಗ ಪ್ರಣಮೇಮರೇಂದ್ರ ವಿಜಯೌ ಸೇವೇ ಮಹೀಂದ್ರಂ ಮುಹುಃ। ಸಂಸೇವೆ ವಿಜಯಧ್ವಜೋತ್ತಮ ಪರಿವ್ರಾಜಂ ಚ ಚಿಂತಾಮಣಿಂ । ಶ್ರೀ ದಾಮೋದರ ವಾಸುದೇವ ಮುನಿಪಾಯೋಗಿಂದ್ರ ಕರ್ಮಂದಿನಂ। ವಂದೇಹಂ ನನು ವೇದಗರ್ಭ ಮಜಣಿ ಪ್ರಜ್ಞತೀರ್ಥಂ ಮುದಾ॥ ವಿಶ್ವಪ್ರಜ್ಞಮನಾರತಂ ಯತಿವರಂ। ವಿಶ್ವೇಶ್ವರಂ ಸೌಮ್ಯಹಂ ಪಾದಾಬ್ಜೇಭುಜ ವಿಶ್ವಭೂಷಣಮುನೆ। ಶ್ರೀ ವಿಶ್ವವಂದ್ಯಂ ಪುನಃ। ವಿದ್ಯಾರಾಜಮುನೀಂದ್ರ ದೇಮಿಶರಣಂ ಶ್ರೀ ವಿಶ್ವಮೂರ್ತಿಂ ಭಜೇ॥ ವಿಶ್ವಜ್ಯಶಾಸ್ತ್ರಂ ನಿರತಂ। ವಿಶ್ವರಕ್ಷೈಕ ದೀಕ್ಷಿತನ್। ವಿಶ್ವಪತ್ಯ ಬಿದಾಖ್ಯಾರ್ತ। ಶಶ್ವನೌಮಿಗುರ್ರೂ ಮಮ॥ ಮಂತ್ರಾ ಯಂತ್ರೇಕ್ಷು ಕುಶಲಾನ್ ಸರ್ವ ಶಾಸ್ತ್ರೀರು ನಿಷ್ಣಿತನ್ ಶ್ರೀವಿಶ್ವನಿಧಿಯೊನಿಂದ್ರನ್ ದಯಾಳು ನೌಮಿ ಸರ್ವದಾ। ವಿರಕ್ತಿಜ್ಞಾನ ಭಕ್ತ್ಯಾದಿ ವಿಶುದ್ಧ ಗುಣಮಂಡಿತನ್ ಭಕ್ತ್ಯಾನಶನ। ವಿಶ್ವಾದಿ ಶಾಖ್ಯ ಯೋಗೀಂದ್ರಾ। ಸದಾವ್ಯಾಖ್ಯಾನ ತತ್ಪರಾನ್। ವೈರಾಗ್ಯ ಭಕ್ತ್ಯನಶನ। ಕೃಬ್ರನೃತ ಸಮನ್ವಿತಾನ್ ವಿಶ್ವಾದಿ ರಾಜಯೋಗಿಂದ್ರಾನ್। ಸದಾವಿಠಲ ಪೂಜಿತಾನ್ । ಬ್ರಹ್ಮರಾಕ್ಷಸ ಭೂತಾದಿ।ನಾ ಉಚ್ಛಲನ ವಿಚಕ್ಷಣಾನ್। ವಿಶ್ವಬೋಧ ಗ್ಯೂದೂನಾ। ವಂದೇ ದಿಗಂತಖ್ಯಾತ ವಿಕ್ರಮಾನ್॥ ಚಿತೇಂದ್ರಿಯಾನ್ ಜಿತಕ್ರೋಧಾನ್ ಬಹುದಾನರತನ್ ಪರಾನ್। ವಿಶ್ವವಲ್ಲಭಯಾನಿಂದ್ರ। ನಾವಂದೇಹಂಬುಧಿ ಶುದಯೇ॥

ನಮ್ಮಾ ಅಧೋಕ್ಷಜತೀರ್ಥಾಚಾರ್ಯ್ಯರು ಶ್ರಿಮದಾಚಾರ್ಯ್ಯರಿಂದ ದತ್ತವಾದ॥ದ್ವಿಜ ಶ್ರೀವಿದ್ಯಾವಿಠಲದೇವರ ಪೂಜಾಕ್ರಮಪ್ರಾಪ್ತವಾದ ಶ್ರೀ ಕೃಷ್ಣದೇವರ ಪೂಜಾಧರ್ಮ ಸಹಾ ಮಾಡಿಕ್ಕೊಂಡು, ಸಕಲಸಂಶಾಸ್ತ್ರಪ್ರವಚನೆಯನ್ನು ಮಾಡುತ್ತಾ ಮಹಾತಪೋನಿಷ್ಟರಾಗಿ, ಸಕಲ ಭಾಗೆದತ್ಯಾದಿ ತೀರ್ಥಯಾತ್ರೆಗಳನ್ನು ಮಾಡಿಕ್ಕೊಂಡು, ಮುಂದೆ ಸಂಸ್ಥಾನಕ್ಕೆ ಕಮಲಾಕ್ಷತೀರ್ಥರಿಗೆ ಆಶ್ರಮವನ್ನು ಕೊಟ್ಟು ತಾಉ ಸೇತುಯಾತ್ರೆ ನಿಮಿತ್ತ್ಯ ತೆರಳಿಹೋದ ವರುಷ ೧೨೩೫ನೆ ಪರಿಧಾವಿ ಸಂವತ್ಸರ ಮಾಘ ಶು॥ ೭ ಯಲ್ಲು ಧನುಷ್ಕೋಟಿಯಲು ಸಿದ್ದಿವಂತರಾದರು.

ಕಮಲಾಕ್ಷತೀರ್ಥರು ಸಕಲಶಾಸ್ತ್ರನಿರತರಾಗಿ ತೀರ್ಥಯಾತ್ರೆ ನಿಮಿತ್ತ ಭಾಗೀರತಿಗೆ ಹೋಗಿ ಪ್ರಮೊದೂತ ಸಂವತ್ಸರ ಕಾರ್ತಿಕ ಶುದ್ಧ॥ ೫ಲ್ಲು ಭಾಗೀರತಿಯಲ್ಲು ಶ್ರೀಹರಿಪಾದವನ್ನು ಯೆಯಿದಿದರು.

ಅರಶಿಪುರು ಪುಷ್ಕವಾಕ್ಷತೀರ್ಥರು ಮಹಾತಪಸ್ವಿಗಳು ಭೂಪ್ರದಕ್ಷಿಣಾರ್ಥವಾಗಿ ತೆರಳಿಹೋದವರು ನಂದನ ಸಂವತ್ಸರದ ಪುಷ್ಯ ಶು ೧ಲ್ಲು ದ್ವಾದಸಿಯಲ್ಲು ಪಾವನವಾದರು.

ಅವರ ಕರಕಮಲಸಂಜಾತರು ಅಮರೇಂದ್ರತೀರ್ಥರು ಮಹಾಪಂಡಿತರು, ಬಹುತರ ವ್ಯಾಖ್ಯಾನ ಹೇಳಿ ವಿಜಯತೀರ್ಥರಿಗೆ ಸಂಸ್ಥಾನ ವಪಶಿ ಮೂಲಕಾವೇರಿಯ ರಾಕ್ಷಸ ಸಂವತ್ಸರ ಪಾಲ್ಗುಣ ೯ ಶು ೯ಲ್ಲು ಹರಿಪಾದ ಶೇರಿದರು.

ವಿಜಯತೀರ್ಥರು ತೀರ್ಥಯಾತ್ರಾಪರರು. ಯೀಶ್ವರ ಸಂವತ್ಸರ ಜೇಷ್ಟ ಬಹುಳ ದಸಿಮಿಯಲ್ಲು ಉಂದಾವನ ಕ್ಷೇತ್ರದಲ್ಲು ದೇಹತ್ಯಾಗವನ್ನು ಮಾಡಿದರು.

ಅವರ ಶಿಷ್ಯರು ಮಹೇಂದ್ರತೀರ್ಥರು ಮಹಾ ವಿರಕ್ತವಂತರಾಗಿ ಅನಶನಾದಿ ವ್ರತಪರರಾಗಿ ಬಹುತೀರ್ಥಯಾತ್ರೆಗಳ ಮಾಡಿ ಗೋದಾವರಿ ತೀರ ನಿವೃತಿ ಸಂಗಮದಲು ಹರಿಪಾದವನ್ನು ಸೇರಿದರು.

ಅವರ ಕರಕಮಲಸಂಜಾತರಾದ ಮಹಾಪಂಡಿತರಾದ ವಿಜಯಧ್ವಜ ಆಚಾರ್ಯರು ಮಹಾಹರಿಭಕ್ತಿಯಿಂದ ಪೂರ್ನರಾಗಿ ಶ್ರಿಮನ್ ಮಹಾಭಾಗವರಕ್ಕೆ ಶ್ರೀಹರಿಗುರುಗಳ ಆಜ್ಞಾನುಸಾರವಾಗಿ ವ್ಯಾಖ್ಯಾನವನ್ನು ಮಾಡುತ್ತ, ಭೂಪ್ರದಕ್ಷಿಣೆಯನ್ನು ದ್ವಿವಾದ ಮಾಡಿದ ಶ್ರೀ ಮನ್ಮಹಾಭಾಗವತ ವ್ಯಾಖ್ಯಾನವನ್ನು ಶ್ರೀಕೃಷ್ಣಸನ್ನಿಧಿಯಲ್ಲು ಸಮರ್ಪಣೆಮಾಡಿ, ಕಣ್ವತೀರ್ಥಮಹಾಕ್ಷೇತ್ರದಲ್ಲಿ ೧೩೪೮ನೆ ಪರಾಭವ ಸಂವತ್ಸರದ ವೈಶಾಖ ಶು ೧೨ಯಲ್ಲು ವೈಕುಂಠಯಾತ್ರೆಯನ್ನು ಮಾಡಿದರು.

ಅವರ ಶಿಷ್ಯರು ಚಿಂತಾಮಣಿತೀರ್ಥರು ಮಹಾತಪೋನಿಷ್ಟರಾಗಿ ಹರಿ ಆರಾಧನೆಯನ್ನು ಮಾಡುತ್ತಾ ರಉದ್ರಿ ಸಂವತ್ಸರ ಜೇಷ್ಟ ಶು॥೫ಲ್ಲು ಕಣ್ವತೀರ್ಥಕ್ಷೇತ್ರದಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಕರಕಮಲಸಂಜಾತರು ದಾಮೋದರತೀರ್ಥರು ಬಹುತರ ವ್ಯಾಖ್ಯಾನ ಹೇಳಿಕ್ಕೊಂಡು, ಬಹು ಹರಿಭಕ್ತರ ಸಾದುಗುಣವಿಶಿಷ್ಟವನ್ನು ಮಾಡಿ ಉಡುಪಿಯಲ್ಲು ಹೇವಳಂಬಿ ಸಂವತ್ಸರ ಭಾದ್ರಪದ ಬಹುಳ ೧೪ಲ್ಲು ದೇಹತ್ಯಾಗವನ್ನು ಮಾಡಿದರು.

ಅವರ ಶಿಷ್ಯರು ವಾಸುದೇವತೀರ್ಥರು ಭಾಗೀರತಿಯಾತ್ರಾಪ್ರಯುಕ್ತ ಹೋದವರು ರಾಕ್ಷಸ ಸಂವತ್ಸರದ ಕಾರ್ತೀಕ ಶು ೧೫ ಯಲ್ಲು ಭಾಗೀರತಿಯಲ್ಲು ದೇಹತ್ಯಾಗವನ್ನು ಮಾಡಿದರು.

ಅವರ ಕರಕಮಲಸಂಜಾತರು ಯೋಗೇಂದ್ರತೀರ್ಥರು ಬಹುತಪೋನಿಷ್ಟರಾಗಿ ಮೂಲ ಕಾವೇರಿಯಲ್ಲು ದುಂದುಭಿಸಂವತ್ಸರ ಪುಷ್ಯ ಶು ೧೦ಯಲ್ಲು ವೈಕುಂಠಯಾತ್ರೆಗೆ ತೆರಳಿದರು.

ಅವರ ಶಿಷ್ಯರು ವೇದಗರ್ಭತೀರ್ಥರು ಮಹಾಕೀರ್ತಿವಂತರಾಗಿ ಸ್ವಮತೋದ್ಧಾರಕ್ಕಾಗಿ ಯಾತ್ರಾನಿಮಿತ್ತವಾಗಿ ತೆರಳಿಹೋದವರು ಉಂದಾವನಕ್ಷೇತ್ರದಲ್ಲು ಯುವಸಂವತ್ಸರ ಆಶ್ವೀಜ ಶು ೧೫ಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಕರಕಮಲಸಂಜಾತರು ಅಣುಪ್ರಜ್ಞತೀರ್ಥರು ಮಹಾತಪೋನಿಷ್ಟರಾಗಿ ಮಹಾಶಾಪಾನುಗ್ರಹುಳ್ಳವರಾಗಿ ಜಗನ್ನಾಥದಲ್ಲು ವಿಕೃತಿ ಸಂವತ್ಸರ ಜೇಷ್ಟ ಬಹುಳ ೫ಯಲ್ಲು ಸಿದ್ಧಿವಂತರಾದರು.

ಅವರ ಶಿಷ್ಯರಾದ ವಿಶ್ವಪ್ರಜ್ಞತೀರ್ಥರು ಮಹಾಪಂಡಿತರಾಗಿ ಹರಿಭಕ್ತರನ್ನು ಉದ್ಧರಿಸಿ ಗೋದಾತೀರ ನಾಸಿಕಾ ತ್ರಿಯಂಬಕದಲ್ಲು ಪ್ಲವಂಗ ಸಂವತ್ಸರದ ಶ್ರಾವಣ ಬ ೭ಯಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಕರಕಮಲಸಂಜಾತರಾದ ವಿಶ್ವೇಶ್ವರತೀರ್ಥರು ಮಹಾಯಾತ್ರೆ ಮೊದಲಾದ ಯಾತ್ರೆಗಳನ್ನು ಮಾಡಿದರು. ಪ್ರೊಷ್ಟಿಯಲ್ಲು ದುಂದುಭಿಸಂವತ್ಸರ ಜೇಷ್ಟ ಬಹುಳ ೯ಲ್ಲು ದೇಹತ್ಯಾಗವನ್ನು ಮಾಡಿದರು.

ಅವರ ಶಿಷ್ಯರು ಮಹಾತಪೋನಿಷ್ಟರಾದ ವಿದ್ವ[>ಶ್ವ]ಭೂಷಣತೀರ್ಥರು ತಮ್ಮಾ ಪಾದಶೇವಕರಿಗೆ ಬ್ರಹ್ಮರಾಕ್ಷಸಾದಿ ಸಕಲಭೂತಪಿಶಾಚಾದಿಗಳನ್ನು ನಿವೃತ್ತಿಮಾಡುತ್ತಾ ಪ್ರಮಾದಿಸಂವತ್ಸರ ಕಾರ್ತೀಕ ಬಹುಳ ೫ಲ್ಲು ಕಾವೇರಿ ತೀರ ರಾಮನಾಥಪುರದಲ್ಲು ದೇವರ ಯಾತ್ರೆ ಮಾಡಿದರು.

ಅವರ ಕರಕಮಲಸಂಜಾತರು ವಿಶ್ವವಂದ್ಯತೀರ್ಥರು ಆಗಾ ದೇವರ ಯಾತ್ರೆ ಮಾಡಿದರು.

ಅವರ ಕರಕಮಲ ಸಂಜಾತರಾದ ವಿಶ್ವವಂದ್ಯತೀರ್ಥರು ಆಗಾಧಬೋಧವಿಶಿಷ್ಟರಾಗಿ ಮಹಾವ್ಯಾಖ್ಯಾನಗಳನ್ನು ಹೇಳುತ್ತ, ಶುಭಕೃತು ಸಂವತ್ಸರ ಮಾಘ ಶು ೧೪ಲ್ಲು ತುಂಗಭದ್ರಾಸಂಗಮ ಕೂಡಲಕ್ಷೇತ್ರದಲ್ಲಿ ಹರಿಪಾದವನ್ನು ಸೇರಿದರು.

ಅವರ ಶಿಷ್ಯರು ವಿದ್ಯಾರಾಜಿತೀರ್ಥರು ಸ್ವೆತು[>ಸೇತು]ಯಾತ್ರಾ ನಿಮಿತ್ತವಾಗಿ ಹೋಗಿ ವಿಭವ ಸಂವತ್ಸರದ ಫಾಲ್ಗುಣ ಶು ೫ಲ್ಲು ಕಾವೇರಿ ತೀರ ಹಿರೆ ಶ್ರೀರಂಗದಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಶಿಷ್ಯರು ವಿಶ್ವಮೂರ್ತಿ ತೀರ್ಥರು ಮಹಾತಪೋನಿಷ್ಟರಾಗಿ ಬಹುತ್ತರ ವ್ಯಾಖ್ಯಾನಗಳು ಹೇಳಿಕೊಂಡು ವಿಳಂಬಿ ಸಂವತ್ಸರ ಪುಷ್ಯ ಶು॥ ೧೨ಯಲ್ಲು ಪೇಜಾವರ ಮಠದಲ್ಲು ಹರಿಪದವನ್ನು ಹೊಂದಿದರು.

ಅವರ ಶಿಷ್ಯರು ವಿಶ್ವಪತಿತೀರ್ಥರು ಮಹಾಜ್ಞಾನವಿಶೇಷರಾಗಿ ಸ್ವಮತಪ್ರತಿಪಾದಕಗಳಾದ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಮಾಡುತ್ತಾ ಭಾಗೀರತಿಯಾತ್ರೆಯನ್ನು ಮಾಡಿ, ನಳ ಸಂವತ್ಸರ ವೈಶಾಖ ಶು ೨ ಲ್ಲು ವೈಕುಂಠ ಯಾತ್ರೆಯನ್ನು ಮಾಡಿದರು.

ಅವರ ಶಿಷ್ಯರು ವಿಶ್ವನಿಧಿತೀರ್ಥರು ಮಹಾವಿರಕ್ತವಂತರಾಗಿ ಮಹಾತಪೋನಿಷ್ಟರಾಗಿ ಪೇಜಾವರದಲ್ಲು ವಿಭವಸಂವತ್ಸರ ಪಾಲ್ಗುಣ ಶು ೭ಯಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಶಿಷ್ಯರು ವಿಶ್ವಾದಿಶಕ್ತತೀರ್ಥರು ಬಹುಶಾಸ್ತ್ರಗ್ನಾನರಾಗಿ ಬಹು ವ್ಯಾಖ್ಯಾನಗಳನ್ನು ಹೇಳುತ್ತ, ಶ್ರೀ ಕೃಷ್ಣಸನ್ನಿಧಿಯಲ್ಲು ವಿಳಂಬ ಸಂವತ್ಸರ ಕಾರ್ತೀಕ ಶುದ್ಧ ೧೦ಲ್ಲು ಉಡುಪಿಯಲ್ಲು ಹರಿಪಾದವನ್ನು ಯ್ಯೆಯಿದರು.

ಅವರ ಶಿಷ್ಯರಾದ ವಿಶ್ವಾದಿರಾಜತೀರ್ಥರು ಬಹುತಪವನ್ನು ಮಾಡಿ ಅನಶನಾದಿ ವ್ರತಪರರಾಗಿ ಭಾವ ಸಂವತ್ಸರ ಜೇಷ್ಟ ಶು ೨ಲ್ಲು ಉಡುಪಿಯಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರಾದ ವಿಶ್ವಬೊದತೀರ್ಥರು ಬಹುನೂಶಾ[+ಪಾ]ನುಗ್ರಹ ವಿಶೇಷದಿಂದ ಮಹಾಖ್ಯಾತಿವಂತರಾಗಿ ಸ್ವಭಕ್ತರನ್ನು ಉದ್ಧಾರಮಾಡುತ್ತ ಪೇಜಾವರದಲ್ಲು ವಿಕಾರಿ ಸಂವತ್ಸರ ಆಷಾಢ ಬ ೪ಲ್ಲು ಹರಿಪಾದವನ್ನು ಯ್ಯೆದಿದರು.

ಅವರ ಶಿಷ್ಯರು ವಿಶ್ವವಲ್ಲಭತೀರ್ಥರು ಬಹುದಾನಶೀಲರು ಭಾಗೀರತ್ಯಾದಿಯಾತ್ರೆಗಳನ್ನು ದ್ವಿವಾರ ಮಾಡಿ ಲಗಾಳಬೊರ ವಿಶಿಷ್ಟರಾಗಿ ನರಸಿಂಹಕ್ಷೇತ್ರದಲ್ಲು ಶ್ರೀಪಾದರಾಯರ ಉ್ರಂದಾವನ ಸನ್ನಿಧಿಯ ರಕ್ತಾಕ್ಷಿಸಂವತ್ಸರದ ಪಾಲ್ಗುಣ ಬಹುಳ ಚತುರ್ದಶಿಯಲ್ಲು ವೈಕುಂಠಯಾತ್ರೆಯನ್ನು ಮಾಡಿದರು. ಯೀ ಪ್ರಕಾರ ಶ್ರೀಮನ್ಮಾಧ್ವಾಚಾರಿಯರ ಶಿಷ್ಯರಾದ ಯೇತದ್ವ್ಯತೀರ್ಥರು ಅನೇಕ

ತುರ್ಯ್ಯಾಶ್ರಮಗಳು, ಅನೇಕ ಗ್ರಹಸ್ತಾಶ್ರಮಗಳಲ್ಲು ವಿಶೇಷವಾಗಿ ಪರಮಾನುಗ್ರಹಪಾತ್ರರಾದ ಲಿಕು . . . . ಚಕುಲೋತ್ಪನ್ನರಾದ ಶ್ರೀ ವಿಕ್ರಮಪಂಡಿತಾಚಾರ್ಯ್ಯರು ತತ್ಪುತ್ರ ನಾರಾಯಣಪಂಡಿತಾಚಾರ್ಯ್ಯರು, ಶಂಕ್ರಾಚಾರ್ಯ್ಯರೆಂಬ ಮೂರು ಮಂದಿ ಸನ್ಮತ ಪ್ರತಿಷ್ಠಾಪನರ ತತ್ವಪ್ರದೀಪಿಕಾದಿ ಬಹುಗ್ರಂಥಗಳಿಗೆ ಮಧ್ವವಿಜಯಾದಿ ಅನೇಕ ಕಾವ್ಯಗಳಿಗೆ ಸಹಾ ಕರ್ತ್ತುಗಳಾದ ಮಹಾಪಂಡಿತಾಚಾರ್ಯ್ಯರಿಂದ ಕೂಡಿಕೊಂಡು ಗುರ್ವಾಜ್ಞಾನುಸಾರದಿಂದ ತನ್ಮತ ಸ್ಥಾಪನೆಯನ್ನು ಮಾಡಿಕೊಂಡು, ತ್ತದುಪದಿಷ್ಟ ಜ್ಞಾನದಿಂದ ಶ್ರೀಭಗವದುಪಾಸನೆಯನ್ನು ಮಾಡಿಕ್ಕೊಂಡು, ಸ್ವಶಿಷ್ಯರಲ್ಲಿ ಸತ್ಸಂಪ್ರದಾಯ ಪ್ರವರ್ತನೆಯನ್ನು ಮಾಡುವಂತಾ ಯಿ ಅಷ್ಟಯೆತೀಶ್ವರರ ಮದ್ಯದಲ್ಲಿ ಅದೊಕ್ಷಜತೀರ್ಥಾಚಾರ್ಯ್ಯರ ವಂಶಾವಳಿ : ಯಸ್ಮಸ್ವಾಗ್ವಜಾಧಾರಾ ದುರಿತ ಕುಲಮಹಾಕೂಲದಾಹೇತಿ ಶೂರಾ ದಂಡ ಪ್ರೋದ್ಭಸಿಹಸ್ತಃ ಸ್ಫುರದಸಿಸಮಸನ್ಮಾರ್ಗ ಹಸ್ತಾಃ ಸಮಸ್ತಾಹಃ ಶ್ರೀಕೃಷ್ಣ ಸ್ನೇಹಪಾಶಾಃಶ್ರಮರರಗತಯಃ ಶಾಂತಿ ಖಾಜೋ ವಿರಕ್ತಾಃ ಯೊಗಿಂದ್ರಾಹಶ್ಚಿತ್ರಾ ಲೋಕಾಧಿಪನಿಭವಿಭವಾ ಮದ್ವದಾಸಾಜಯಂತೇ॥

ಪೇಜಾವರ ಮಠದಲ್ಲಿ ಯಿರುವ ಪುಸ್ತಕಗಳ ವಿವರ:

ಗೀತಾಭಾಷ್ಯದ ಪುಸ್ತುಕ	೧
ಭಾಷ್ಯದ ಪುಸ್ತುಕ	೧
ಅಣ್ಣುಭಾಷ್ಯದ ಪುಸ್ತುಕ	೧
ಅಣ್ಣು ವ್ಯಾಖ್ಯಾನದ ಪುಸ್ತುಕ	೧
ತತ್ವದ್ಯುತ್ತರ ಪುಸ್ತುಕ	೧
ಉದರ ಟ್ಟಿ ಕುಮೆ	೧
ಕರ್ಮನಿನರ್ಯ್ಯದ ಪುಸ್ತುಕ	೧
ವಿಷ್ಣುತತ್ವನಿರ್ನಯದ ಪುಸ್ತುಕ	೧
ತದೋಪನಿಷದ್ಭಾಷ್ಯದ ಪುಸ್ತುಕ	೧
ಗೀತಾತಾತ್ಪರ್ಯದ ಪುಸ್ತುಕ	೧
ಗೀತಾಪುಸ್ತುಕ	೧
ಪ್ರಮಾಣ ಲಕ್ಷಣದ ಪುಸ್ತುಕ	೧
ಉಪಾದಿಖಂಡದ ಪುಸ್ತುಕ	೧
ಮಾಯಾವಾದಖಂಡನದ ಪುಸ್ತುಕ	೧
ಪ್ರಪಂಚಮಿತ್ಯಾತ್ವಾಣುಮಾನಖಂಡನದ ಪುಸ್ತುಕ	೧
ತತ್ವಸಂಖ್ಯಾನ ತತ್ವವಿವೇಕದಾ ಪುಸ್ತುಕದ ಹಾಯಿ	೧

ನ್ಯಾಯವಿಯರ್ತಿ ಪುಸ್ತಕ	೧
ಪಂಚಸ್ತುತಿ ಪುಸ್ತಕ	೧
ಕೃಷ್ಣಾಮೃತಮಹಾರ್ಣವದ ಪುಸ್ತಕ	೧
ತಂತ್ರಸಾರದ ಪುಸ್ತಕ	೧
ಶ್ರೀ ಮನ್ಮಹಾಭಾಗವತದ ಪುಸ್ತಕ	೧
ಭಾಗವತ ತಾತ್ಪರ್ಯ ಪುಸ್ತಕ	೧
ಮಹಾಭಾಗವತ ತಾತ್ಪರ್ಯ ನಿರ್ಣಯದ ಪುಸ್ತಕ	೧
ಯಿದರಲ್ಲಿ ಕಾವರದ ರಾಜಯ ಪುಸ್ತಕ	೧
ದ್ವಾದಶಸ್ತೋೃಸ್ತರುಗ್ಮಿಣೇಶವಿಜಸಹಾ ಪುಸ್ತಕ	೧
ತತ್ವಪ್ರಕಾಸಿಕ ಪುಸ್ತಕ	೧
ಯಿದರ ಟೀಕಾ ರಾಘವೇಂದ್ರಯ್ಯ ಪುಸ್ತಕ	೧
ಚಂದ್ರಿಕಾ ಪುಸ್ತಕ	೧
ಭಾಗವತ ಪುಸ್ತಕ	೧
ಶ್ರೀ ಮನ್ಮಹಾಭಾರತದ ಶಲ್ಯಪರ್ವದ ಪುಸ್ತಕ	೧
ಆದಿಪರ್ವ ಅರಣ್ಯಪರ್ವದ ಪುಸ್ತಕ	೧
ಕರ್ನಪರ್ವದ ಪುಸ್ತಕ	೧
ವಿರಾಟಪರ್ವದ ಪುಸ್ತಕ	೧
ಸಂಭವಪರ್ವದ ಪುಸ್ತಕ	೧
ಮಧ್ವಜಯದ ಪುಸ್ತಕ	೧
ಯಿದರ ಟಿಕಾ ವಿಶ್ವಪತಿ ಪುಸ್ತಕ	೧
ಪಂಚನೀತಿವ್ಯಾಖ್ಯಾನದ ಪುಸ್ತಕ	೧
ಪ್ರಕ್ರಿಯಕಲುಮದಿ ಪುಸ್ತಕ	೧
ಮದ್ವಸಿದ್ಧಾಂತ ಪುಸ್ತಕ	೧
ಕವುಮದಿ ಪುಸ್ತಕ	೧
ಸುಧಾ ಪುಸ್ತಕ	೧

ಯಿದರ ಟೀಕಾ ಪುಸ್ತುಕ	೧
ವೇದದ ಪುಸ್ತುಕ	೧
ಸಾಕ್ತಬಾಗದ ಪುಸ್ತುಕ	೧
ತರ್ಕಸಂಗ್ರಹಾ ಅನ್ನಭಟ್ಟಿಯ ಮುಕ್ತಾವಳಿ ಸಹಾ ಪುಸ್ತುಕ	೧
ಮಣಿಮಂಜರಿ ಅದರ ಟೀಕಾ ಸಹಾ ಪುಸ್ತುಕ	೧
ಶ್ರೀಮದ್ರಾಮಾಯಣ ಪುಸ್ತುಕ	೧
ಪರಿಭಾಷಾ ಪುಸ್ತುಕ	೧
ಕಾರಿಕಾವಳಿ ಪುಸ್ತುಕ	೧
ಸಿತಿಕಂಟ ಪುಸ್ತುಕ	೧
ಅಂತು ಪುಸ್ತುಕ	೫೩

❖❖

೭೭
ಫಲಿಮಾರ ಮಠದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಕ್ಷಯಸಂವತ್ಸರದ ಜೇಷ್ಟ ಶು॥ ೫ಯಲ್ಲು ಪಲಿಮಾರ ಮಠದ ರಾಮಾಚಾರ್ಯನು ಬರಸಿದ ಕೈಫಿಯತು ನಾಮೆ, ವಿವರ:

ನಮ್ಮ ಮೂಲಗುರು ಮುಖ್ಯಗುರು ಮದ್ವಾಚಾರ್ಯರು ಅವತಾರ ಮಾಡಿದ್ದು: ದೇವೈರ್ವಿಜ್ಞಾಪತೋವಿಷ್ಣುಃ। ವಾಯುಮಾಜ್ಞಾಪಯಿಷ್ಯತಿ ಉದ್ಧರಸ್ವ ಮಹಾಬಾಹೋ ಮಮ ಧರ್ಮಾನ್ ಸನಾತನಾನ್॥ ಇತ್ಯಾಜ್ಞಾಪ್ತೋ ಭಾಗವತಾ ಕತಾವಾಯುರ್ಭವಿಷ್ಯತಿ। ಮಧ್ವನಾಮ್ನಾ ಸಯತಿರಸೌ ಸಚ್ಛಾಸ್ತ್ರಾಣಿ ಕರಿಷ್ಯತಿ॥ ಚತುಃಸಹಸ್ರೇ ತ್ರಿಶತೋತ್ತರೇಗತೇ। ಸಂವತ್ಸರಾಣಾಂ ತು ಕತಾ ಪೃಥಿವ್ಯಾಂ ಜಾತಃ ಪುನರ್ವಿಪ್ರತನುಃ ಸಭೀಮೋ। ದೈತ್ಯೈರ್ನಿಗೂಢಂ ಹರಿತತ್ವಮಾಹ॥

ಶಾಲಿವಾಹನ ಶಕವರುಷ ೧೧೨೧ನೆ ಕಾಳಯುಕ್ತಿ ಸಂವತ್ಸರದ ಮಾಗ ಶು ೭[>೯]ಯಲ್ಲು ಮದ್ಯಗೇಹಭಟ್ಟರಲ್ಲಿ ಅವತರಿಸಿ, ಶಕವರುಷ ೧೧೨೮ನೆ ಕ್ರೋಧನ ಸಂವತ್ಸರದ ಪುಷ್ಯ ಶು ೫ಯಲ್ಲು ಉಪನೀತರಾಗಿ, ಸಾಂಗವೇದಾಭ್ಯಾಸವನ್ನು ಮಾಡಿ, ಶಕ ವರುಷ ೧೧೩೦ನೇ ಪ್ರಭವ ಸಂವತ್ಸರದ ವೈಶಾಖ ಶು ೩ಲ್ಲು ಸನಕಾದಿ ಪರಂಪರಾಪ್ರಾಪ್ತರಾದ ಅಚ್ಚುತಪ್ರೇಕ್ಷಾಚಾರ್ಯರಿಂದ

ಪರಮಹಂಸಾಶ್ರಮವನ್ನು ಸ್ವೀಕರಿಸಿ, ಶಕ ವರುಷ ೧೧೬೦ನೇ ಹೇವಳಂಬಿ ಸಂವತ್ಸರದ ಮಾಘ ಶು ೩ಲ್ಲು, ಸರ್ವಭೂದರ ಸಮರ್ಥಪೂರ್ವಕವಾಗಿ ಶ್ರೀಕೃಷ್ಣಪ್ರತಿಷ್ಟೆಯನ್ನು ಮಾಡಿ,

ಪ್ರಾಪಸನಾರಾಯಣತಃ ಶುದ್ಧ ಶಿಲಾತ್ಮ ಪ್ರತಿಮಾಯಾಸುಪದ್ಮಾ ಸಹಿರೊದೋಷ್ಯಹಿತಃ ಸನ್ನಿಹಿತಃ

ಬದರಿಕಾಶ್ರಮದಿಂದ ತಂದ ವ್ಯಾಸಮೂರ್ತಿ ಸಾಲಿಗ್ರಾಮಗಳಲ್ಲು ಮದ್ವ[>ಧ್ಯ]ವಾಟಾ ಮಠದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆ ಮಾಡಿ, ಸುಬ್ರಹ್ಮಣ್ಯ ಕ್ಷೇತ್ರದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆ ಮಾಡಿದ್ದಾರೆ. ಯೀ ಮೂರು ಸ್ಥಳದಲ್ಲು ಪ್ರಾತಃಕಾಲಾದಿ ಕ್ರಮದಿಂದ ತಾವೆ ಸರ್ವದಾ ಪೂಜೆಗಳನ್ನು ಮಾಡುತ್ತಾ ಕೆಲವು ದಿವಸ ಯಿದ್ದರು. ಕ್ರಮದಿಂದ ಪೂಜೆಯನ್ನು ಮಾಡುವಾಗೆ ಮದ್ಯವಾಟಾ ಮಠದಲ್ಲು ಮದ್ಯಾನ್ಹ ಪೂಜೆಯ ಘಟನೆಯಾದ್ದರಿಂದ ಅದ್ಯಾಪಿ ಅಲ್ಲಿ ಮದ್ಯಾನ್ನ ಪೂಜೆಯೇ ಸರಿ. ಯೀ ಉಭಯ ಸ್ಥಳದಲ್ಲು ತ್ರಿಕಾಲ ಪೂಜೆಯಿದೆ.

ಯೀ ಪ್ರಕಾರ ಶ್ರೀಮದ್ವಾಚಾರ್ಯರು ಯಿದ್ದು ಆಮೇಲೆ ತಾವು ಬದರಿಕಾಶ್ರಮವನ್ನು ಕುರಿತು ಗಮನಾಕಾಂಕ್ಷಿಗಳಾಗಿ ಶ್ರೀಕೃಷ್ಣಪೂಜಾ ಸ್ವಮತ ಸ್ಥಾಪನಾರ್ಥವಾಗಿ ತೌಳವರಾದ ಅಪ್ಟ[>ಷ್ಟ]ಬ್ರಹ್ಮಚಾರಿಗಳು ಗೋದಾವರಿ ತೀರಸ್ಥರಾದ ವಿವಿಧ ಸಂಸಾರಿಕ ದುಕ್ಕ ದರುಶನೆಯಲ್ಲಿ ವಿರಕ್ತರಾದ ಸಜ್ಜನೋದ್ಧಾರಕ ಶ್ರೀಮದ್ವಾಚಾರ್ಯರ ಪಾದಶೇವಾಸನ್ಮಾರ್ಗಾವಲಂಬಾಪೇಕ್ಷೆಯಿಂದ ಬಂದ ದೇಶಸ್ಥರಾದ ಶೋಭನಭಟ್ಟರಿಗೆ ಸಹಾ ಶಕವರುಷ ೧೧೮೦ನೆ ಪಿಂಗಳ ಸಂವತ್ಸರದ ವೈಶಾಖ ಶು ೭ಯಲ್ಲು ಕಣ್ವತೀರ್ಥ ಮಹಾಕ್ಷೇತ್ರದಲ್ಲಿ ಆಶ್ರಮ ಮಂತ್ರೋಪದೇಶಗಳನ್ನು ಕೊಟ್ಟು, ರಜತಪೀಠಪುರಕ್ಕೆ ಕರತಂದು, ಅನಂತಾಸನ[>ತಶಯನ]ದೇವರ ಮುಂಭಾಗದಲಲ್ಲು ಸ್ವಮತ ಗ್ರಂಥಾದಿ ಸಕಲಸಭಾಸ್ತೋಪದೇಶವನ್ನು ಮಾಡಿ, ಯೀ ನವಯತೀಶ್ವರರಿಗು ತಮ್ಮಾ ಕರಪೂಜಿತಗಳಾದ ಸೀತಾ ಲಕ್ಷ್ಮಣ ಸಮೇತ ಶ್ರೀರಾಮ, ಸೀತಾ ಸಮೇತ ಶ್ರೀರಾಮ, ಚತುರ್ಭುಜ ಕಾಳಿಯ ಮರ್ಧನ, ದ್ವಿಭುಜಕಾಳಿಯ ಮರ್ಧನ, ವಿಠ್ಠಲದ್ವಯ, ಶ್ರೀಭೂಸ[ಸೂ]ಕರ, ಶ್ರೀ ನೃಸಿಹ್ಮ, ವಸಂತ ವಿಠ್ಠಲ ಪ್ರತಿಮೆಗಳನ್ನು ಕೊಟ್ಟು, "ನೀಉ ಪ್ರತ್ಯೇಕತಃ ಯರಡು ಯರಡು ವರುಷ ನಮ್ಮ ಆಜ್ಞಾನುಸಾರ ತಂತ್ರಸಾರೋಕ್ತ ವಿಧಿಯಿಂದ ಪೂಜಾಧರ್ಮಗಳು ಶಾಸ್ತ್ರಪ್ರವಚನಗಳ ಮಾಡುತ್ತ ಸ್ವಮತ ಸ್ಥಾಪನೆಮಾಡಿಕೊಂಡು, ಸಜ್ಜನರನ್ನು ಉದ್ಧರಿಸಿಕೊಂಡು ಯಿರಿ"ಯೆಂತ ಅಪ್ಪಣೆಕೊಟ್ಟು ಪದ್ಮನಾಭತೀರ್ಥರಿಗೆ ಸೀತಾಸಮೇತ ಶ್ರೀರಾಮ ವ್ಯಾಸ ಸಾಲಿಗ್ರಾಮವನ್ನು ಸಹಾ ಕೊಟ್ಟು, "ನೀಉ ಯೇತನ್ಮತ ಸ್ಥಾಪನೆಯನ್ನು ಮಾಡಿಕೊಂಡು ಸಕಲದೇಶಗಳಲ್ಲಿ ಸಂಚಾರಮಾಡುತ್ತಾ ಬಹುಮಂದಿ ಸಜ್ಜನರಿಗೆ ಸನ್ಮಾರ್ಗೋಪದೇಶದ್ವಾರ ಉದ್ಧರಿಸಿಕೊಂಡು ದ್ರವ್ಯಾರ್ಜನಮಾಡಿಕೊಂಡು, ಶ್ರೀಕೃಷ್ಣ ಪೂಜೋಪಯುಕ್ತ ದ್ರವ್ಯಸಹಾಯವನ್ನು ಮಾಡಿಕ್ಕೊಂಡು ಯಿರಿ"ಯಂತ ಅಪ್ಪಣೆ ಕೊಟ್ಟು, ಶಕವರುಷ ೧೨೦೦ನೆ ಯಿಶ್ವರ ಸಂವತ್ಸರದ ಮಾಘ ಶು ೯ಲ್ಲು ಬದರಿಕಾಶ್ರಮಪ್ರವೇಶವನ್ನು ಮಾಡಿದರು. ಗಮನಾತ್ಪೂರ್ವದಲ್ಲಿ ಶೇತುತಿಲಾಂಹ್ವಯ ಸ್ತಳದಲ್ಲು ಗ್ರಂಥಪ್ರತಿಷ್ಟಾಪನೆಯನ್ನು ಮಾಡಿದ್ದಾರೆ. ಬದರಿಕಾಶ್ರಮದಲ್ಲು ಶ್ರೀವೇದವ್ಯಾಸದೇವರ ಸನ್ನಿಧಿಯಲ್ಲು ಅದ್ಯಾಪಿ ತಥೇವಾಗತರಾಗಿ ಯಿದ್ದಾರೆ.

ಅವರ ಶಿಷ್ಯರು ಯೀ ಅಷ್ಟಯತೀಶ್ವರರ ನಾಮಧೇಯಗಳು॥ ವಂದೆ ಹೃಷಿಕೇಶ ಮಿಯಾಂ ನೃಸಿಂಹಂ। ಜನಾರ್ಧನಂ ಚಿಂತಯತಿರುಪೇಂದ್ರಂ। ಶ್ರೀವಾಮನಂ ಚ ಸ್ಮರ। ವಿಷ್ಣು ನೇಮಿ। ಶ್ರೀರಾಮಮಂ

ಚೈವಮಧೋಕ್ಷಜಂ ಚ॥ ಘಟ್ಟದ ಮೇಲಿನವರು ಪದ್ಮನಾಭತೀರ್ಥರು ಯಿವರುಗಳಿಗೆ ಆಚಾರ್ಯರಿಂದ ದತ್ತವಾದ ಪ್ರತಿಮೆಗಳು॥ ರಘುವೌ ಕಾಳೀಯ ಮಥನೌ। ಸುವಿಠಲೌ ಸೂಕರಂ ನೃಸಿಂಹಂ ಚ। ಅನ್ಯಂ ವಿಠ್ಠಲಮಗಣಿತ ಮತಿಶಿಷ್ಯೈಃ ಪೂಜಿತಾಂ ನಮಾಮಿ ಸದಾ ಯಿನ್ನು, ಅವದತ್ಸಕಥಾಂರದಾಂಗ ಪಾಣಿ ಭಗರ್ವಾ ಭಾಗಪತೆ ಭವಾ ಪಹಂತ್ರಿಂ ಅನುಕೂಲ ಗುಣಸ್ವರಾದಿ ಭಾಜಾಗ್ನಿಜ ಶಿಷ್ಯ ಪ್ರವದ್ವೇಣ ವಾಚ್ಯಮಾನ ಯತಿ ಮಧ್ವವಿಜಯ ಶ್ಲೋಕೇ॥ ನಿಜಶಿಷ್ಯ ಪ್ರವರೇಣೆತ್ಯಗೇನ ಪ್ರಥಮೋತ್ಕರ್ಷತ್ವಂ ಸಿದ್ದಂ ಅಸ್ಯಪದಸ್ಯ ಭಾವದೀ ಪೇಟೀ ಕಾಯಾಂಚ ಹೃಷಿಕೇಶ ತೀರ್ಥೇನೇತಿ ವಾಖ್ಯಾನಾತ್ ಅತಯೇವ ವಂದೇ ಹೃಷಿಕೇಶಮಿತಿ॥ ಪ್ರಥಮೋತ್ಕರ್ಷರಾದ ಹೃಷಿಕೇಶ ತೀರ್ಥ ಶ್ರೀಪಾದಂಗಳವರ ವಂಶಾವಳಿ॥ ವಂಶಸ್ಯಾದಿನ್ ಸನಕಾದೀನುಪಾಸ್ಯೇ ದೂರ್ವಾಸ ಸಂಪದ ತೀರ್ಥಾಖ್ಯಾಭಿಕ್ಷುಂ। ಸತ್ಯಪ್ರಜ್ಞಂ ಪ್ರಾಜ್ಞತೀರ್ಥಂ ಕ್ರಮಾತ ಶಿಷ್ಯಾ ವಂದೇಚಾಚ್ಯುತ ಪ್ರೇಕ್ಷೇಮಧ್ವೌ ಶ್ರೀಮದ್ವಾಚಾರ್ಯ ಹೃಷಿಕೇಶ ಸಮಾತ್ಮೆಶ್ವರ ಸಂಬವಾನ್ ನಮೋಪರಾಜತಾನಾ ವಿದ್ಯಾಮೂರ್ತಿ ಶ್ರೀನಿಧಿ ಯೊಗಿನಃ ವಿದ್ಯೇಶತೀರ್ಥಮುನಿಪಾನ್ ಶ್ರೀ ವಲ್ಲಭಮುನಿಂಸ್ತಥ। ಜಗದ ಭೂಷಣ ತೀರ್ಥಾಯ್ಯಾರ್ರಾಮಚಂದ್ರ ಯತಿಂ ನಮಃ ವಿದ್ಯಾನಿಧಿ ಸುರೆಶಾರ್ಯ್ಯ ರ್ರಾಘವೇಂದ್ರಯತಿನ್ನಮಃ ರಘುನಂದನ ಯೋಗೀಂದ್ರಾನಾ ವಿದ್ಯಾಪತಿ ಗುರೂನ್ನಮಃ॥ ಗುರ್ರೂರ್ರಘುಪತಿಂ ನತ್ವಾ ರಘುನಾಥಮುನಿಂಸ್ತಥಾ। ರಘೂತ್ತಮ ಮುನೀನ್ನಾತ್ವಾ ರಾಮಭದ್ರಮುನೀಸ್ತಥಾ। ರಘುವರ್ಯಮುನೀನ್ನಾತ್ವಾ ರಘುಪುಂಗವಯೊಗಿನಃ ಶ್ರೀಮದ್ರ್ರಗುವರಾಂ ನತ್ವಾ ರಾಮಪಾದಾಜ್ಜ ಸಂತ್ರಯಾನ್।ರಘುಪ್ರವೀರ ಯೋಗೀಂದ್ರಾನ್ನಾತ್ವಾಕುರ್ಮಾಃ ಕ್ರಿಯಾತ್ಸದಾಂ।

ಪ್ರಥಮೋತ್ಕರ್ಷರಾದ ಹೃಷಿಕೇಶತೀರ್ಥಪಾದಂಗಳವರು ಸರ್ವಜ್ಞಾಚಾರ್ಯರಿಂದ ದತ್ತವಾದಂತಾ ಶ್ರೀ ಸೀತಾಲಕ್ಷಣಸಮೇತ ಶ್ರೀರಾಮಚಂದ್ರದೇವರ ಪೂಜಾಧರ್ಮ ಸಹಾ ಮಾಡಿಕ್ಕೊಂಡು ಸಛಾಸ್ತ್ರ ಪ್ರವಚನೆಯನ್ನು ಮಾಡುತ್ತಾ ಮಹಾತಪಸ್ವಿಗಳಾಗಿ ತೀರ್ಥಯಾತ್ರೆಯನ್ನು ಮಾಡಿಕ್ಕೊಂಡು ಸಂಸ್ಥಾನದಲ್ಲು ಸಮಾತ್ಮೆಶಕ್ತಿರ್ಥ[>ಸಮಾಕೇಶತೀರ್ಥ] ಶ್ರೀಪಾದಂಗಳವರಿಗೆ ಆಶ್ರಮವನ್ನು ಕೊಟ್ಟು, ತಮ್ಮಾ ಸಿದ್ಧಿಕಾಲವನ್ನು ತಿಳಿದು ಯಾತ್ರಾಮುಖರಾಗಿ ಉತ್ತರದೇಶವನ್ನು ಕುರಿತು ಹೋದವರು ಕಾಶೀಕ್ಷೇತ್ರದಲ್ಲು ಶಕ ವರುಷ ೧೨೧೨ನೆ ವಿರೋಧಿ ಸಂವತ್ಸರದ ಮಾಘ ಶು ೭ಯಲ್ಲು ದೇವರ ಯಾತ್ರೆ ಮಾಡಿದರು.

ಸಮಾಕೇಶತೀರ್ಥಶ್ರೀಪಾದಂಗಳವರು ಭೂಪ್ರದಕ್ಷಿಣಾದಿಗಳ ಮಾಡಿ ಕೀರ್ತಿಯಿಂದ ದಿಂಗತವಿಶ್ರಾಂತರಾಗಿ ಮಹಾತಪೊನಿಷ್ಟರಾಗಿ ಸಕಲಶಾಸ್ತ್ರಾಭಿಜ್ಞರಾಗಿ ಕ್ರಮಪ್ರಾಪ್ತರಾದಂತಾ ಶ್ರೀಕೃಷ್ಣ ಪೂಜಾಧರ್ಮಗಳ ಮಾಡಿಕ್ಕೊಂಡು, ಶಿಷ್ಯರಿಗೆ ವ್ಯಾಖ್ಯಾನ ಹೇಳಿಕ್ಕೊಂಡು ಸಂಭವತೀರ್ಥ ಶ್ರೀಪಾದಂಗಳವರಿಗೆ ಸನ್ಯಾಸಾಶ್ರಮವನ್ನು ಕೊಟ್ಟು, ಕೃಷ್ಣತೀರದಲ್ಲು ಶಕ ವರುಷ ೧೨೩೫ನೆ ಪರಿದಾವಿ ಸಂವತ್ಸರದ ಶ್ರಾವಣ ಶು ೨ಲ್ಲು ಶ್ರೀಹರಿಪಾದ ಸರೋರುಹವನ್ನು ಪ್ರಾಪ್ತಿಸಿದಾರ್ರೆ.

ಆ ಸಂಭವತೀರ್ಥಶ್ರೀಪಾದಂಗಳವರು ಮಹಾತಪೋನಿಷ್ಟರಾಗಿ ಮಹಾ ಪಂಡಿತರಾಗಿ ಬಹು ತೀರ್ಥಯಾತ್ರೆಗಳನ್ನು ಮಾಡಿಕ್ಕೊಂಡು ಅಯೋಧ್ಯಾಪುರದಲ್ಲು ಶಕರವರುಷ ೧೨೫೨ನೆ ಶುಕ್ಲ ಸಂವತ್ಸರದ ವೈಶಾಖ ಶು ೫ಲ್ಲು ಯೋಗಾರೂಢರಾಗಿದ್ದಾರೆ.

ಅವರ ಕರಕಮಲ ಸಂಜಾತರಾದ ಅಪರಾಜಿತತೀರ್ಥಶ್ರೀಪಾದಂಗಳವರು ಸ್ವಶಾಸ್ತ್ರ ಸಂಪನ್ನರಾಗಿ ಮಹಾತಪೊಭೂಷರಾಗಿ ತೀರ್ಥಯಾತ್ರೆಗಳನ್ನು ಮಾಡಿಕ್ಕೊಂಡು ಕ್ರಮಪ್ರಾಪ್ತವಾದ ಶ್ರೀಕೃಷ್ಣದೇವರ ಪೂಜೆಯನ್ನು ಮಾಡಿಕ್ಕೊಂಡು, ಸ್ಥಾನದಲ್ಲು ವಿದ್ಯಾಮೂರ್ತಿತೀರ್ಥಶ್ರೀಪಾದಂಗಳವರಿಗೆ ಚತುರ್ಥಾಶ್ರಮವನ್ನು ಕೊಟ್ಟು, ಗೋದಾವರಿತೀರದಲ್ಲು ಶಕ ವರುಷ ೧೨೭೨ನೆ ವಿರೋಧಿ ಸಂವತ್ಸರದ ಮಾಘ ಶು ೬ಯಲ್ಲು ಸಿದ್ಧಿವಂತರಾದರು.

ವಾಯು ವಿದ್ಯಾಮೂರ್ತಿತೀರ್ಥಶ್ರೀಪಾದಂಗಳವರು ಚತುಃಶಾಸ್ತ್ರಸಂಪನ್ನರಾಗಿ ನಾಲ್ಕು ತರುವಾಯ ಸಧಾವಿ ಸಕಲ ಮದ್ವಶಾಸ್ತ್ರಗಳನ್ನು ಹೇಳಿ, ಕ್ರಮದಿಂದ ಲಭ್ಯವಾದಂತಾ ಶ್ರೀಕೃಷ್ಣಪೂಜಾಧರ್ಮ ಪ್ರವಚನಾದಿಗಳ ಮಾಡಿಕ್ಕೊಂಡು, ಶ್ರೀನಿಧಿತೀರ್ಥಶ್ರೀಪಾದಂಗಳವರಿಗೆ ಸನ್ಯಾಶಾಶ್ರಮವನ್ನು ಕೊಟ್ಟು, ತೀರ್ಥಯಾತ್ರೆ ನಿಮಿತ್ತ ಹೋದವರು ಶಕ ವರುಷ ೧೨೯೦ನೆ ಪ್ಲವಂಗ ಸಂವತ್ಸರದ ವೈಶಾಖ ಬ ೮ಲ್ಲು ರಾಮೇಶ್ವರದಲ್ಲು ವೈಕುಂಠಯಾತ್ರೆಯನ್ನು ಮಾಡಿದಾರೆ.

ಶ್ರೀನಿಧಿತೀರ್ಥಶ್ರೀಪಾದಂಗಳವ ಸ್ವಶಾಸ್ತ್ರಸಂಪನ್ನರಾಗಿ ತಾರ್ಕಿಕ ಶಿಖಾಮಣಿಗಳಾಗಿ ಕ್ರಮದಿಂದ ಸಾಧ್ಯವಾದಂತ ಶ್ರೀಕೃಷ್ಣಪೂಜಾರಾಧನೆಗಳನ್ನು ಮಾಡಿಕ್ಕೊಂಡು, ವಿದ್ಯೇಶತೀರ್ಥಶ್ರೀಪಾದಂಗಳವರಿಗೆ ಯತ್ಯಾಶ್ರಮವನ್ನು ಕೊಟ್ಟು, ತೀರ್ಥಯಾತ್ರೆ ಮಾಡಿಕ್ಕೊಂಡು ಜಗನ್ನಾಥದಲ್ಲು ಶಕ ವರುಷ ೧೩೧೨ನೆ ಶುಕ್ಲ ಸಂವತ್ಸರದ ಆಷಾಢ ಶು ೬ಲ್ಲು ದೇವರ ಯಾತ್ರೆ ಮಾಡಿದರು.

ತದುಪರಿತಚ್ಛಿಷ್ಯರಾದ ವಿದ್ಯಾಶಕ್ತಿತೀರ್ಥಶ್ರೀಪಾದಂಗಳವರು ವ್ಯಾಕರಣಶಾಸ್ತ್ರ ಸ್ವಶಾಸ್ತ್ರಾಭಿಜ್ಞರಾಗಿ ಸಕಲದೇಶಗಳಲ್ಲು ದಿಗ್ವಿಜಯವನ್ನು ಪ್ರಾಪಿಸಿಕೊಂಡು ಸಂಸ್ಥಾನದಲ್ಲು ಶ್ರೀ ವಲ್ಲಭತೀರ್ಥರಿಗೆ ಹಂಸಾಸ್ತ್ರ[>ಶ್ರಮ]ವನ್ನು ಕೊಟ್ಟು ಸಮಪ್ರಾಪ್ತವಾದ ಪರಿಯಾಯ ಪೂಜೆಯನ್ನು ಮಾಡಿಕ್ಕೊಂಡು, ಭಾಗೀರಥ್ಯಾದಿ ಸಕಲ ತೀರ್ಥಯಾತ್ರೆಗಳನ್ನು ಮಾಡಿಕ್ಕೊಂಡು ಗೋದಾವರಿತೀರದಲ್ಲು ಶಕ ವರುಷ ೧೩೨೨ನೆ ಪ್ರಮಾದೀಚ ಸಂವತ್ಸರದ ಶ್ರಾವಣ ಬಹುಳ ೬ಲ್ಲು ಶ್ರೀ ಹರಿಸಾಯುಜ್ಯವನ್ನು ಪ್ರಾಪ್ತರಾಗಿದ್ದಾರೆ.

ಶ್ರೀವಲ್ಲಭತೀರ್ಥಶ್ರೀಪಾದಂಗಳವರು ಮಹಾ ತಪಸ್ವಿಗಳಾಗಿ ಮಧ್ವಶಾಸ್ತ್ರಾಭಿಜ್ಞರಾಗಿ ಸಮಸ್ತದೂರ್ವಾದಿಗಳನ್ನು ನಿರಾಕರಣೆಯನ್ನು ಮಾಡಿಕ್ಕೊಂಡು, ಅಶೇಷ ತೀರ್ಥಯಾತ್ರೆಗಳನ್ನು ವಾಡಿಕ್ಕೊಂಡು ಪರಿಯಾಯ ಪೂಜಾಧರ್ಮಗಳನ್ನು ವಿಶೇಷತಃ ವಾಡಿಕ್ಕೊಂಡು, ಜಗದ್ಭೂಷಣತೀರ್ಥಶ್ರೀಪಾದಂಗಳವರಿಗೆ ತುರ್ಯಾಶ್ರಮವನ್ನು ಕೊಟ್ಟು ಕಾಸಿಕ್ಷೇತ್ರದಲ್ಲು ಶಕವರುಷ ೧೩೩೬ನೆ ವಿಜಯ ಸಂವತ್ಸರದ ಪುಷ್ಯ ಶು ೧ಯಲ್ಲು ಉರಂದಾವನೊಪರಿಗತರಾಗಿದಾರೆ.

ಜಗದ್ಭೂಷಣತೀರ್ಥಶ್ರೀಪಾದಂಗಳವರು ಷಟ್‌ಶಾಸ್ತ್ರಾಭಿಜ್ಞರಾಗಿ ತೀರ್ಥಯಾತ್ರಾದಿಗಳನ್ನು ಬಹುಶಾ ಮಾಡಿಕ್ಕೊಂಡು. ಕ್ರಮದಿಂದ ಬಂದಂತ ಶ್ರೀಕೃಷ್ಣಪೂಜಾ ಧರ್ಮಾದಿಗಳನ್ನು ಮಾಡಿಕ್ಕೊಂಡು, ಶ್ರೀರಾಮಚಂದ್ರತೀರ್ಥಶ್ರೀಪಾದಂಗಳವರಿಗೆ ಹಂಸಾಶ್ರಮವನ್ನು ಕೊಟ್ಟು ಫಲಿಮಾರದಲ್ಲು ಶಕ ವರುಷ ೧೩೪೬ನೆ ಶೊಭಕೃತು ಸಂವತ್ಸರದ ಚೈತ್ರ ಶ ೧೨ಲ್ಲು ದೇವರ ಯಾತ್ರೆ ಮಾಡಿದ್ದಾರೆ.

ಅನಂತರದಲ್ಲು ರಾಮಚಂದ್ರತೀರ್ಥಶ್ರೀಪಾದಂಗಳವರು ಮಹಾಪಂಡಿತರಾಗಿ ಕ್ರಮೇಣಲಭ್ಯವಾದ ಪರಿಯಾಯಪೂಜಾ ಆರಾಧನಾದಿಗಳ ಮಾಡಿಕ್ಕೊಂಡು, ದ್ವಿರಾ[>ಧಾ]ವರ್ತಿ ಭೂಪ್ರದಕ್ಷಿಣೆ ಮಾಡಿಕ್ಕೊಂಡು. ವಿದ್ಯಾನಿಧಿತೀರ್ಥಶ್ರೀಪಾದಂಗಳವರಿಗೆ ಚತುರ್ಥಾಶ್ರಮವನ್ನು ಕೊಟ್ಟು,

ಪಲಿಮಾರದಲ್ಲು ಶಕ ವರುಷ ೧೩೬೪ನೆ ದುರ್ಮತಿ ಸಂವತ್ಸರದ ಕಾರ್ತೀಕ ಬಹುಳ ೧೪ಯಲ್ಲಿ ಸಿದ್ಧಿವಂತರಾಗಿದ್ದಾರೆ.

ಆಮೇಲೆ ವಿದ್ಯಾನಿಧಿತೀರ್ಥಶ್ರೀಪಾದಂಗಳವರು ಅತಿಪಾಂಡಿತ್ಯ ಉಳ್ಳವರಾಗಿ ಕ್ರಮಪ್ರಾಪ್ತಿ ಶ್ರೀಕೃಷ್ಣಾರ್ಚನ ಧರ್ಮಗಳ ಮಾಡಿಕ್ಕೊಂಡು, ಸಪ್ತದಾಸುಧಾಪ್ರವಚನವನ್ನು ಮಾಡಿಕ್ಕೊಂಡು, ಸೂರೇಶತೀರ್ಥಶ್ರೀಪಾದಂಗಳವರಿಗೆ ಆಶ್ರಯವನ್ನು ಕೊಟ್ಟು, ಪಲಿಮಾರಲ್ಲು ಶಕ ವರುಷ ೧೩೭೬ನೆ ಶ್ರೀಮುಖಿ ಸಂವತ್ಸರದ ವೈಶಾಖ ಶು ೧೫ಯಲ್ಲು ಯೋಗಾರೂಢರಾದರು.

ಅವರ ಕರಕಮಲಸಂಜಾತರಾದ ಸೂರೇಶತೀರ್ಥಶ್ರೀಪಾದಂಗಳವರು ಕಾಷ್ಟಮೌನಾದಿವ್ರತಗಳ ಮಾಡಿಕ್ಕೊಂಡು, ಮಹಾತಪಸ್ವಿಗಳಾಗಿ ಪರಿಯಾಯಪೂಜಾಧರ್ಮಗಳನ್ನು ಮಾಡಿಕ್ಕೊಂಡು, ಸ್ವಶಾಸ್ತ್ರಸಂಪನ್ನರಾಗಿ ರಾಘವೇಂದ್ರತೀರ್ಥಶ್ರೀಪಾದಂಗಳವರಿಗೆ ಸನ್ಯಸಾಶ್ರಮವನ್ನು ಕೊಟ್ಟು, ಪಲಿಮಾರಲ್ಲು ಶಕವರುಷ ೧೩೯೨ನೆ ವಿರೋಧಿ ಸಂವತ್ಸರದ ಜೇಷ್ಟ ಬಹುಳ ೫ಲ್ಲು ಯೋಗಾರೂಢರಾದರು.

ರಾಘವೇಂದ್ರತೀರ್ಥಶ್ರೀಪಾದಂಗಳವರು ಹಿರಿಯ ಶ್ರೀರಂಗದಲ್ಲಿ ಮಹಾಜ್ಞಾನಿಗಳಾಗಿ ಕೃಚಚಾಂದ್ರಾಯಣಾದಿ ವೃತಗಳ ಮಾಡಿಕ್ಕೊಂಡು, ಪ್ರಾಪ್ತವಾದ ಶ್ರೀಕೃಷ್ಣಪೂಜಾಧರ್ಮಗಳನ್ನು ಅತಿಶಯದಿಂದ ಮಾಡಿಕ್ಕೊಂಡು, ರಘುನಂದನತೀರ್ಥಶ್ರೀಪಾದಂಗಳವರಿಗೆ ಆಶ್ರಮಮಂತ್ರೋಪದೇಶವನ್ನು ಕೊಟ್ಟು, ಉಭಯ ಕಾವೇರಿ ಮಧ್ಯದಲ್ಲು ಶಕವರುಷ ೧೪೦೫ನೆ ಶುಭಕೃತು ಸಂವತ್ಸರದ ಮಾಘ ಶುದ್ಧ ೮ಯಲ್ಲು ಮುಕ್ತರಾಗಿದ್ದಾರೆ.

ರಘುನಂದನತೀರ್ಥಶ್ರೀಪಾದಂಗಳವರು ಚತುಸ್ತಂತ್ರ ಪಂಡಿತರಾಗಿ ಶ್ರೀಕೃಷ್ಣಪೂಜಾಧರ್ಮಗಳ ಮಾಡಿಕ್ಕೊಂಡು, ನಾಲ್ಕು ಆವರ್ತಿ ಸುಧಾಪ್ರವಚನೆಯನ್ನು ಮಾಡಿಕ್ಕೊಂಡು ತೀರ್ಥಯಾತ್ರೆ ಮಾಡಿಕ್ಕೊಂಡು, ವಿದ್ಯಾಪತಿತೀರ್ಥಶ್ರೀಪಾದಂಗಳವರಿಗೆ ಆಶ್ರಮವನ್ನು ಕೊಟ್ಟು, ಪಲಿಮಾರುದಲ್ಲು ಶಕ ವರುಷ ೧೪೧೧ನೆ ಪ್ರಮಾದೀಚ ಸಂವತ್ಸರದ ಭಾದ್ರಪದ ಶು ೯ಲ್ಲು ಯೋಗಾರೂಢರಾದರು.

ವಿದ್ಯಾಪತಿತೀರ್ಥಶ್ರೀಪಾದಂಗಳವರು ಮಹಾತಪೋನಿಷ್ಟರಾಗಿ ಮಹಾಪಂಡಿತರಾಗಿ ಶ್ರೀಕೃಷ್ಣದೇವರ ಪೂಜೆಯನ್ನು ಮಾಡಿಕ್ಕೊಂಡು, ರಘುಪತಿತೀರ್ಥಶ್ರೀಪಾದಂಗಳವರಿಗೆ ತೂರ್ಯಾಶ್ರಮವನ್ನು ಕೊಟ್ಟು, ತೀರ್ಥಯಾತ್ರೆ ಮಾಡಿಕ್ಕೊಂಡು, ಕಾಸಿಕ್ಷೇತ್ರದಲ್ಲು ಸ್ವಮತಸ್ಥಾಪನೆಯನ್ನು ಮಾಡಿಕೊಂಡು, ದಿಗ್ವಿಜಯ ಮಾಡಿಕೊಂಡು, ಗೋದಾತೀರದಲ್ಲು ಶಕವರುಷ ೧೪೩೪ನೇ ಪ್ರಜೋತ್ಪತ್ತಿ ಸಂವತ್ಸರದ ವೈಶಾಖ ಶು ೭ಯಲ್ಲು ಹರಿಸಾಯುಜ್ಯವನ್ನು ಪ್ರಾಪ್ತರಾದರು.

ರಘುಪತಿತೀರ್ಥಶ್ರೀಪಾದಂಗಳವರು ಮಹಾಜ್ಞಾನಿಗಳಾಗಿ ತಪೋನಿಷ್ಟರಾಗಿ ತೀರ್ಥಯಾತ್ರೆ ಮಾಡಿಕ್ಕೊಂಡು, ಕ್ರಮದಿಂದ ಪ್ರಾಪ್ತ ಶ್ರೀಕೃಷ್ಣಪೂಜೆ ಧರ್ಮಗಳನ್ನು ಮಾಡಿಕ್ಕೊಂಡು, ಸ್ವಶಾಸ್ತ್ರಾಭಿಜ್ಞರಾಗಿ ರಘುನಾಥತೀರ್ಥಶ್ರೀಪಾದಂಗಳವರಿಗೆ ಸನ್ಯಾಸಾಶ್ರಮವನ್ನು ಕೊಟ್ಟು, ಕಾಸಿ ಕ್ಷೇತ್ರದಲ್ಲು ಶಕವರುಷ ೧೪೫೧ನೆ ಸರ್ವಧಾರಿ ಸಂವತ್ಸರದ ಜೇಷ್ಟ ಬಹುಳ ೨ಯಲ್ಲು ಯಾತ್ರೆಯಾದರು.

ಆ ರಘುನಾಥತೀರ್ಥಶ್ರೀಪಾದಂಗಳವರು ಮಹಾಜಿಪ್ತ್ರುಗಳಾಗಿ [>ಮಹಾಜ್ಞಪ್ತೃಗಳಾಗಿ] ಶಾಪಾನುಗ್ರಹಸಾಮರ್ಥ್ಯ ಉಳ್ಳಂತವರಾಗಿ, ಕ್ರಮಪ್ರಾಪ್ತವಾದಂತಾ ಶ್ರೀಕೃಷ್ಣ ಪೂಜಾಧರ್ಮಗಳ

ಮಾಡಿಕ್ಕೊಂಡು ಸ್ವಶಾಸ್ತ್ರಾಭಿಜ್ಞರಾಗಿ, ಶಾಪಾನುಗ್ರಹವಂತರಾಗಿ ರಘುತಮ[>ತ್ತಮ] ತೀರ್ಥಶ್ರೀಪಾದಂಗಳವರಿಗೆ ಸನ್ಯಾಸಾಶ್ರಮವನ್ನು ಕೊಟ್ಟು ಅಯೋಧ್ಯಾದಲ್ಲಿ ಶಕವರುಷ ೧೪೮೪ನೇಯ ರಕ್ತಾಕ್ಷಿ ಸಂವತ್ಸರದ ಚಯಿತ್ರ ಶು ೯ಲ್ಲು ವೈಕುಂಠಯಾತ್ರೆ ಮಾಡಿದ್ದಾರೆ.

ಆ ತರುವಾಯದ ಗೌತಮ[>ರಘೂತ್ತಮ]ತೀರ್ಥ ಶ್ರೀಪಾದಂಗಳವರು ಚತುಸ್ತಂತ್ರದಲ್ಲು ಅತಿ ಪಾಂಡಿತ್ಯ ಉಳ್ಳವರಾಗಿ ಹನ್ನೆರಡಾವರ್ತಿ ಸುಧಾಪಾಠವನ್ನು ಹೇಳಿ ತ್ರಿರಾ[>ಧಾ]ವರ್ತಿ ಭೂಪ್ರದಕ್ಷಿಣೇಯನ್ನು ಮಾಡಿ, ಕಾಶಿಕ್ಷೇತ್ರದಲ್ಲು ಮೂರು ಸಂವತ್ಸರದ ಪ್ರವಚನ ಹೇಳಿ ಕ್ರಮಪ್ರಾಪ್ತವಾದ ಪೂಜಾಧರ್ಮಗಳ ಮಾಡಿಕ್ಕೊಂಡು, ರಾಮಭದ್ರತೀರ್ಥಶ್ರೀಪಾದಂಗಳವರಿಗೆ ಯತಿ ಆಶ್ರಯವನ್ನು ಕೊಟ್ಟು, ಪಲಿಮರಲ್ಲು ಸಿದ್ದಿಕಾಲವನ್ನು ತಿಳಿದು ಶಕ ವರುಷ ೧೫೪೫ನೆ ಶುಕ್ಲಸಂವತ್ಸರದ ಮಾಘ ಶು ೫ಲ್ಲು ಹರಿಪಾದಪ್ರಾಪ್ತರಾಗಿದ್ದಾರೆ.

ತತ್ಕರಕಮಲಸಂಜಾತರಾದ ರಾಮಭದ್ರತೀರ್ಥಶ್ರೀಪಾದಂಗಳವರು ಸ್ವಶಾಸ್ತ್ರಪ್ರವಚನಾ ನಿರತರಾಗಿ ಯಿಕ್ಕೆರಿ ಸಂಸ್ಥಾನದಲ್ಲು ಕೆಳದಿ ಬದ್ರಪ್ಪನಾಯಕರಿಂದ ಅರಸುಗಳಿಂದ ಮಹಾಮಾನಿತರಾಗಿ, ಕ್ರಮಪ್ರಾಪ್ತ ಶ್ರೀಕೃಷ್ಣಪೂಜಾಧರ್ಮಗಳ ಮಾಡಿಕ್ಕೊಂಡು, ರಘುವರ್ಯ್ಯತೀರ್ಥಶ್ರೀಪಾದಂಗಳವರಿಗೆ ಹಂಸಾಶ್ರಮವನ್ನು ಕೊಟ್ಟು, ಪಲಿಮಾರಲ್ಲು ಶಕ ವರುಷ ೧೫೯೭ನೇ ಕೀಲಕ ಸಂವತ್ಸರದ ಆಶ್ವೀಜ ಶು॥ ೧೫ಯಲ್ಲು ಉಂದಾವನಗತರಾಗಿದ್ದಾರೆ.

ರಘುವರ್ಯ್ಯತೀರ್ಥಶ್ರೀಪಾದಂಗಳವರು ಷೋಡಶವರುಷದೊಳಗೆ ಮಹಾಪಂಡಿತರಾಗಿ ಯಿಪ್ಪತ್ತು ವರುಷದಲ್ಲು ಉತ್ತರತ್ನಾಕರೊದಾಹರಣ ರಘುನಾಥವಿಜಯಾ ರಘುಪರಿಭಾಷಾಯಂಬ ತರ್ಕಪ್ರಕರಣ, ಯಿದು ಹೊರತು ಗದ್ಯಪದ್ಯಸೂಳಾದಿಗಳ ಸಹಾ ಮಾಡಿ, ಬಹು ತೀರ್ಥಯಾತ್ರೆ ಮಾಡಿಕ್ಕೊಂಡು, ಕಾಶೀ ಕ್ಷೇತ್ರದಲ್ಲು ಆ ಮೂಲಗ್ರಂಥವನ್ನು ಹೇಳಿ[>ಯ]ಲ್ಲಲ್ಲಿ ಪ್ರಸಂಗಗಳ ಮಾಡಿಕ್ಕೊಂಡು, ದಿಗ್ವಿಜಯಾ ಮಾಡಿಕ್ಕೊಂಡು, ಯೇಳುತ್ತರುವಾಯ ಸುಧಾಪಾಠವನ್ನು ಹೇಳಿ, ಕ್ರಮಲಭ್ಯವಾದ ಶ್ರೀಕೃಷ್ಣಪೂಜಾಧರ್ಮಗಳ ಮಾಡಿಕ್ಕೊಂಡು, ರಘುಪುಂಗವತೀರ್ಥಶ್ರೀಪಾದಂಗಳವರಿಗೆ ಆಶ್ರಮವನ್ನು ಕೊಟ್ಟು, ಪಲುಮಾರಲ್ಲು ಶಕ ವರುಷ ೧೬೩೪ನೆ ನಂದನ ಸಂವತ್ಸರದ ಮಾಘ ಶು ೬ಲ್ಲು ಹರಿಸಾಯುಜ್ಯವನ್ನು ಪ್ರಾಪ್ತಿಸಿದ್ದಾರೆ.

ಆಮೇಲೆ ರಘುಪುಂಗವತೀರ್ಥಶ್ರೀಪಾದಂಗಳವರು ಮಹಾ ವಿರಕ್ತರಾಗಿ ಮಹಾತಪಸ್ವಿಗಳಾಗಿ ಕ್ರಮಲಭ್ಯ ಶ್ರೀಕೃಷ್ಣಪೂಜಾಧರ್ಮಗಳ ಮಾಡಿಕ್ಕೊಂಡು, ಸ್ವಶಾಸ್ತ್ರಪ್ರವಚನಾದಿಗಳ ಮಾಡಿಕೊಂಡು ರಘುವರತೀರ್ಥಶ್ರೀಪಾದಂಗಳವರಿಗೆ ಸಂಸ್ಥಾನದಲ್ಲು ಚತುರ್ಥಾಶ್ರಮವನ್ನು ಕೊಟ್ಟು, ಶಕ ವರುಷ ೧೬೩೩ನೆ ಸಂವತ್ಸರದ ಆಷಾಢ ಶು ೬ಯಲ್ಲು ಸಿದ್ದಿವಂತರಾಗಿದ್ದಾರೆ.

ರಘುವರತೀರ್ಥಶ್ರೀಪಾದಂಗಳವರು ಸ್ವಶಾಸ್ತ್ರನಿರತರಾಗಿ ಪ್ರವಚನೆಯನ್ನು ಮಾಡಿಕ್ಕೊಂಡು ಕ್ರಮಪ್ರಾಪ್ತ ಶ್ರೀಕೃಷ್ಣಪೂಜಾಧರ್ಮಗಳನ್ನು ಅತಿಶಯದಿಂದ ಮಾಡಿಕ್ಕೊಂಡು ಶ್ರೀಮದ್ರಘುಪ್ರವೀರತೀರ್ಥಶ್ರೀಪಾದಂಗಳವರಿಗೆ ಹಂಸಾಶ್ರಮವನ್ನು ಕೊಟ್ಟು, ಪಲಿಮಾರಲ್ಲು ಶಕ ವರುಷ ೧೬೮೮ನೆ ಪ್ರಮೋದ ಸಂವತ್ಸರದ ಆಶ್ವೀಜ ಶು ೭ಯಲ್ಲು ದೇವರ ಯಾತ್ರೆ ಮಾಡಿದರು.

ತತ್ಕರಕಮಲಸಂಜಾತರಾದ ಪ್ರತಮೋತ್ಕರ್ಷರಾದ ರಘುಪ್ರವೀರತೀರ್ಥಶ್ರೀಪಾದಂಗಳವರು ತಿರಪತಿಯಾತ್ರೆ ಮಾಡಿ, ಶ್ರೀನಿವಾಸದೇವರ ಪೂರ್ನಾನುಗ್ರಹವನ್ನು ಸಂಪಾದಿಸಿಕೊಂಡು,

ತದಾಜ್ಞಾನುಸಾರವಾಗಿ ಆರಣಿ ಸಂಸ್ಥಾನದಲ್ಲು ಶಾಸ್ತ್ರಾಭ್ಯಾಸ ಮಾಡಿ, ನಾಲ್ಕು ವರುಷದೊಳಗೆ ಚತುಃಶಾಸ್ತ್ರಸಂಪನ್ನರಾಗಿ, ಮಹಾಪಂಡಿತರಾಗಿ, ಪುನಃ ಶ್ರೀನಿವಾಸದೇವರ ಸನ್ನಿಧಾನಕ್ಕೆ ಬಂದು, ಧನ್ವಂತರಿ ರಾಮಾಚಾರ್ಯರು ಮೊದಲಾದ ಪಂಡಿತರುಗಳಲ್ಲಿ ಪ್ರಸಂಗಮಾಡಿ, ಅವರಿಂದ ಮಹಾಮಾನಿತರಾಗಿದದರಿಂದ ಆರಣಿಸಂಸ್ಥಾನಾದಿಪತಿಯಿಂದಲ್ಲು ಪೂಜಿತರಾಗಿ ದಿಗಂತವಿಶ್ರಾಂತಕೀರ್ತಿವಂತರಾಗಿ, ಮಹಾತಪೋಬಲದಿಂದ ಶಾಪಾನುಗ್ರಹಸಾಮರ್ಥ್ಯವಂತರಾಗಿ, ಮ್ಲೆಂಛಾದಿ ಪ್ರಭೃತಿಗಳಿಂದ ಮಹಾಮಾನಿತರಾಗಿ, ಮಹಮದರಜಾ ನವಾಬುಯಿಂದ ರೌಪ್ಯಶ್ವೇತಛತ್ರವನ್ನು ಸಂಪಾದಿಸಿ, ಯಂಟಾವರ್ತಿ ಸುಧಾಪ್ರವಚನೆರಗ್ನಾಷ್ಯ ಗೀತಾಭಾಷ್ಯ ತಂತ್ರಸಾರ ಮೊದಲಾದ ಗ್ರಂಥಗಳನ್ನು ತರ್ಕಮೀಮಾಂಸಾದಿ ಸಮಸ್ತಶಾಸ್ತ್ರಗಳನ್ನು ಸಹಾ ಹೇಳಿ. ಕ್ರಮದಿಂದ ಲಭ್ಯವಾದಂತಾ ಶ್ರೀಕೃಷ್ಣ ಪೂಜಾಧರ್ಮಗಳನ್ನು ಅತಿಶಯದಿಂದ ಮಾಡಿಕ್ಕೊಂಡು, ಪ್ರಥಮಸಂಸ್ಥಾನದಲ್ಲು ರಘುಭೂಷಣತೀರ್ಥಶ್ರೀಪಾದಂಗಳವರಿಗೆ ತೂರ್ಯ್ಯಾಶ್ರಮವನ್ನು ಕೊಟ್ಟು ತಮ್ಮ ಸಿದ್ದಿಕಾಲವನ್ನು ತಿಳಿದು ಶ್ರೀಕೃಷ್ಣಸನ್ನಿಧಿಯಲ್ಲು ಶಕವರುಷ ೧೭೧೮ನೆ ರಾಕ್ಷಸ ಸಂವತ್ಸರದ ಶ್ರಾವಣ ಬಹುಳ ೨ಲ್ಲು ಯೋಗಾರೂಢರಾದರು.

ಅವರ ಕರಕಮಲಸಂಜಾತರಾದ ರಘುಭೂಷಣತೀರ್ಥಶ್ರೀಪಾದಂಗಳವರು ಶ್ರೀರಾಮಚಂದ್ರ ದೇವರ ಪೂಜಾಜಪವ್ಯಾಖ್ಯಾನಾದಿಗಳು ಮಾಡಿಕೊಳ್ಳತ್ತ, ಧೊರೆಗಳಿಗೆ ಕುರಿತುರಗಾದ್ಯನೇಕ ಸ್ಥಿರಸಾಮ್ರಾಜ್ಯ ಮಹದೈಶ್ವರ್ಯ್ಯಾದಿಗಳು ದಿನೇ ದಿನೇ ಯಿತೋಪತೆಶಯಗಳಾಗಬೇಕೆಂದು ಪರಮಸಂತೋಷದಿಂದ ಯಿದ್ದಾರೆ. ಯೀ ಪ್ರಕಾರ ಹೃಷಿಕೇಶತೀರ್ಥಾಚಾರ್ಯರ ಪಾರಂಪರ್ಯವಾಗಿ ಗುರುಪೀಳಿಗೆ ಕ್ರಮದ ಕೈಫಿಯತು ನಾಮೆ.

❖❖

೭೮
ಬನವಾಶಿ ಸ್ತಳದ ಕೈಫಿಯತ್ತು – ೧

ಮೆಕೆಂರ್ಝಿ ಸಂಪುಟ : ೩೩೨

ಅರಸುಗಳು ಆಳಿದ ವಿವರ:

ಕೃತಯುಗ ೧೭೨೮೦೦೦ ವರುಷ, ಮಛ, ಕೂರ್ಮ, ವರಾಹ, ನಾರಸಿಂಹ್ವ ಅವತಾರ. ಹರಿಶ್ಚಂದ್ರ, ನಳ, ಪುರುಕುತ್ಸ, ಪುರೂರವ, ಸಗರ, ಕಾರ್ತ್ತಿವೀರ್ಯ್ಯಾರ್ಜುನ. ವಾರಣಾಶಿ ವಿಶ್ವೆಶಪುರುಷ. ಯೇಕವಿಂವಶತಿ ಕಾ[>ತಾ]ಳು ಸಹ ಗ್ರಾಮುಷ್ಯ[>ಮಾನುಷ್ಯ], ದೇವಾಸುರ ಯುದ್ಧ, ಕನಕಮಯ ಭೂಮಿ. ರತ್ನವ[>ಪ]ವಡಿ ರೊಕ್ಕಾ॥

ತ್ರೆತಾಯುಗ ಪ್ರಮಾಣ ೧೨೯೬೦೦೦ ವರುಷ. ಕೇದಾರಲಿಂಗ, ಹದಿನಾರು ಕಾ[>ತಾ]ಳು ಮನುಜರು. ರಾಮರಾವು[+ಣ] ಯಥಾ[>ಯುದ್ಧ], ರಜಿ[>ಜ]ತಮಮು[>ಯ]ದ ಭೂಮಿ. ಹೇಮ ಪಕಿ[>ಡಿ] ರೊಕ್ಕ ನೊ[>ಸೋ]ಂಕಿದಿರ ಕಾಮಪರ್ನಿದರಾ ಹೊರು. ಯಕ ನಾ[>ಪಾ]ದ ಪಾಪಂ.

ದ್ವಾಪರಯುಗ ಪ್ರಮಾಣ ೮೬೪೦೦೦ ವರುಷ, ವಿರೂಪಾಕ್ಷ ದೇವತಾರಾಧನೆ. ೧೪ ಹದಿನಾಲ್ಕು ಕಾ[>ತಾ]ಲು ಮನುಜರು. ಧರ್ಮ ದುರ್‍ಯೋಧನ ಯುದ್ದ, ತಾಂಬ್ರಮಯ ಭೂಮಿ, ರಚಿ[>ಜಿ] ಪಡ್ರಿ ರೊಕ್ಕ, ಹೇಮ ಮುಖ್ಯವಾಗಿ ನಡುವರ್‍ತ್ತೆರೆ, ಶ್ರೀ[>ಸ್ತ್ರೀ]ಪುರುಷ ಕೂಟವಂದಾಗಿ ಬೇಡಿದದ ಕೊಡುವ ಧರ್‍ಮ ಸಾವಕಾಲದಲ್ಲು ಪಾಪ ಯರಡು ಪಾದ.

ಕಲಿಯುಗದ ಪ್ರಮಾಣ ೪೩೨೦೦೦ ವರುಷ. ಶ್ರೀಶೈಲ ಮಲ್ಲಿಕಾರ್ಜುನ ಮುಖ್ಯಲಿಂಗವನ್ನಾರಾಧಿಸುವರು. ೩॥ ಹಸ್ತ ದಳ ೩[>ತಾಳು] ಮನುಜರು, ಮೃತ್ತಿತಾ[>ಕಾ] ಭೂಮಿ, ರಚಿ[>ಜ]ತ ಹೇಮತಾಂಬ್ರ ಪಡ[>ಡಿ]ರೊಕ್ಕ, ಕಾಮವಕರೆಲಾ ಸಾರ್‍ವಕಾಲದಲ್ಲು, ಶೇವಕ ಧರ್‍ಮಮಂ ತಮ್ಮ ಅವರಿಗೆ ಕೊಡೊಕೆ ಪರ, ಬಡವಾದವರ ಬಡದು ನೂಕುವದು ಕಲಿಧರ್‍ಮವೇಂದು, ಮ್ಲೆಂಛಮಯವಾಗಿ ಚಾಕಿನಂಕರ ಪಾದ ರುತಾಂತ್ಯದ ಕ್ಯಾಮಕರಹುದು. ಸಕ್ಯ[>ತ್ಯ] ಗುರುಗುಹೇಶ್ವರ ವಚನ. ಧರ್‍ಮವು ಶಾಲೀವಾಹನನಿಂದಾ ನುಲಕಾನನ ಶಿಖೆ ಪ್ರಮೊದಲಾದ ಸರ್‍ವಮತ ಸಂಮತ ನೆನೆ ಸರ್‍ವಮಂತ್ರ ಸೂನ್ಯವಹುದು. ಮುಂದೆ ಕಲಿಯುಗದ ಪ್ರಮಾಣ ೪೩೨೦೦೦ ವರುಷಕ್ಕೆ ಕ್ರೋಧನ ಸಂವತ್ಸರದ ವರಿಗೆ ಸಂದದ್ದು ೪೯೦೬ಕ್ಕೆ ಅರಸುಗಳು ಆಳಿದ ವಿವರಾ:

ಬನವಶಿಗೆ ನಾಲ್ಕು ಯುಗಕ್ಕೆ ನಾಮಧೇಯಾ ಶ್ಲೋಕಂ॥ ಕೃತೀತು ಕೌಮುದೀ ಪ್ರೊಕ್ತಾ। ತ್ರೆತಾಯಂ ಚೈದಲೀಪುರಾ। ದ್ವಾಪಾರೆ ಕಂ ಜಯಂತಿ ಶ್ಯಾತ್।ವಾನವಾಶಿ ಕಲೌಯುಗೆ॥ ಚಿತ್ರನಾಮ ವಿಲನ ಕದರದಾ ಕಟೇ। ಬನವಾಶಿಕ್ಷೇತ್ರ ಶ್ರೀಮದುಲಿಂಗಪುರಾಣಮಹಾತ್ಮೆ ವಿವರ ಬರದು ಯಿಧೆ: ಯುಗಾಂತರದಲ್ಲು ಅಂ[>ಲಿಂ]ಗಕ್ಕೆ ಪೂರ್‍ವನಾಮ ಪ್ರಳಯಕಾಲದಲ್ಲು ಜೀವಾತ್ಮಲಿಂಗ ಸ್ತಾವರಾತ್ಮಕಲಿಂಗ. ಯೀ ಲಿಂಗವನ್ನು[>ವು] ವಿಷ್ಣು ಕರ್ಣಮಲಯಿಂದಾ ವುತ್ಪತ್ತಿ ಬಾ[>ಯಾ] ಮಧುಕೈಟಭರು ಆರಾದಿಸಿ ವರಪ್ರದರಾಗಿ ಶಸ್ತ್ರಾಸ್ತ್ರದಿಂದಾ ದೇವಾಸುರಮನುಷ್ಯರಿಂದಾ ಮರಣೆಯಿಲ್ಲಾ. ಆ ಲಿಂಗದಿಂದಾ ವರವನ್ನು ಪಡದು ಸಮಸ್ತ ದೇವತೆಗಳನ್ನು ಪಲಾಯನವನ್ನು ಮಾಡಿ ಜಯಿಶಿ ಮಹಾವಿಷ್ಣು ವಟಪತ್ರಶಾಯಿರಾಗಿ[>ಶಾಹಿಯಾಗಿ]ಯಿದ್ದಲ್ಲಿ, ನಾಭಿಕಮಲದಲ್ಲಿ ಬ್ರಂಹ ವುದಯಿಶಿ ಯಿದ್ದಾ ಸಮತ. ಯೀ ರಾಕ್ಷಸರು ಯುದ್ಧಾಮಾಡಿ ಸ್ವಾಮಿಯುದ್ಧಕ್ಕೆ ಮೆಚ್ಚಿ "ನೀನು ನಂಮಿಂದಾ ವರವು ಬೇಡು"ಯಂಬದಾಗಿ ಕೇಳಿದಲ್ಲಿ "ನನ್ನ ಕೈಯಿಂದಾ ನೀವು ಯಿಬ್ಬರು ವಧಿಕರಾಗೆಂ"ದು ಯಂದು ವರವನ್ನು ಬೇಡಿದಲ್ಲಿ, ಅವರು "ನಮ್ಮ ನಾಮಧೇಯವನ್ನು ಯೀ ಲಿಂಗಗಳಲ್ಲಿ ಯಿಟ್ಟು ಮಧುಕನಾಥ ಕೆಂ[>ಕೈ]ಟಿನಾಥ ಸ್ವಾಮಿ ನಿಮ್ಮ ನಿಮ್ಮ ಮುಖದಿಂದಾ ಪೂಜಿಸಲಾಗಿ ಸಮಸ್ತ ದೇವಾಸುರ ಮುನಿಗಣ ಮನುಷ್ಯಾದಿಗಳು ಪೂಜಿಸುವರು"ಯಂದು ವರಪ್ರದವನ್ನು ಬೇಡಿಕೊಂಡರ್‍ರು. ಆ ಪ್ರಕಾರದಿಂದಾ ನಾಮವನ್ನುವುಂಟಾಗಿ ಪೂಜಿಸಿ ತಾನು ಆಧಿಮಾಧವಾಯಂಬ ನಾಮಧೇಯದಿಂದಾ ಯೀ ಸ್ತಳದಲ್ಲು ಯಿದ್ದಾರೆಯಂಬ ಪುರಾಣಾರ್ಥ.

ಕೈಲಾಸಾದ್ರಿಯೊಳು ಭವಾನಿ ಸರೊಚಿಖಲೆಯನ್ನು ನೆನದು, ಯೀ ಸಹ್ಯಾದ್ರಿಯೊಳು ಕೊಟಿ ಶಿವಾಲಯ ನಿರ್‍ಮಿಶಿದನು. ಕೊ[>ಕೈ]ಟೇಶ್ವರ ಮಧುಕೇಶ್ವರ ಕೈಲಾಸ ಭವನವಂ ವಿಶ್ವಕರ್‍ಮನುಂ ನಿರ್‍ಮಿಶಿದನು. ಯೀ ಪ್ರಕಾರ ವಿವರವನ್ನು ಕೈರುಮುಟ್ಟುರು. ದೇವಸ್ತಾನದ ಬಳಿಯಲ್ಲು ಶಿಲಾಶಾಸನ ಬರದು ಯಿಧೆ.

ಕಲಿಯುಗದಲ್ಲು ಆಳಿದ ಅರಸುಗಳ ವಿವರ:

೧. ಪರೀಕ್ಷಿತರಾಯರು

೧. ಜನಮೇಜಯರಾಯರು

೧. ಗಣಪತಿಭೂಪಾಲಾ

೧. ಸುದ್ರಕಮಹಾರಾಯ

೧. ವಿಕ್ರಮಾದಿತ್ಯ ರಾಯರು ಯಿ ಸ್ತಳಕ್ಕೆ ಬಂದು ಯಿವರಿಗೆ ಯಿಪ್ಪತ್ತು ಸಾವಿರ ವರಹಾದ ಶೀಮೆ ದೇವರಿಗೆ ಧರ್ಮಕ್ಕೆ ಬಿಟ್ಟು ಯಿದ್ದದಕ್ಕೆ ವಿವರಾ: ಕಾಗಿನೆಲೆ ಮಹಲು, ಕುಂದಗೊಳು ಶೀಮೆಯ ಸಹಸ್ರಾವಳಿ. ಸೊದೆ ಶೀಮೆಯಲ್ಲು ಶಿವಭರತನಹಳ್ಳಿಯಲ್ಲು ಗಾಮಿ[>ಗ್ರಾಮ] ೧, ಹಂದಿಗಾರು ೧, ಶಾಂಕಪುರ ಅಂತ್ತು. ಯಸಳೂರು ಶೀಮೆಯಲ್ಲು, ಸೌರಂಭದ ಶೀಮೆಯಲ್ಲು ಕಾನುಕೊಪ್ಪ . . . . ೧ ಚರ್ಮಶಕುನ . . . . ೧. ತವನಂದಿ ಶೀಮೆಯಲ್ಲು ಬನವಸಿ ವಳಗಾದ ಭಾಸೆ ಕಂಪಣಕ್ಕೆ ಸೇರಿದು ಗ್ರಾಮ ೩೬. ಕೆರೆಹಳ್ಳಿ . . . . ೧. ಸದರಿ ಬರದ ಗ್ರಾಮಗಳ ಬಿಟ್ಟರ್‍ರು.

೧. ಭೋಜರಾಯರ ಕಾಲದಲ್ಲು ಯಿದೆ ಪ್ರಕಾರವಾಗಿ ನಡಪ್ಸಿತ್ತಾ ಬಂದರು.

೧. ಶಿಂಹಣಭೂಪಾಲಾಯಂಬ ಅರಸು ರುದ್ರಹರಯಂಬ ಸ್ತಳದಲ್ಲು ರಾಜಾಧಿಪತ್ಯವನ್ನು ಮಾಡುತ್ತಾ ಯಿದ್ದದ್ದು ಯಿವರ ದಿನದಲ್ಲು ನಡದ ಚರ್ಯಾಕನ ರಾಜ್ಯದ್ವಾರದಲ್ಲು ಯರಡು ಶಿಂಹನ ಜೀವಿವುಳ್ಳಂತಾ ಶಿಂಹನಕಟ್ಟೆ ರಾಜ್ಯದಲ್ಲು ಮಾಡುವ ಸೇವಕ ಮುಂತಾದ ಜನರು ರಾಜಾಸ್ನಾ[>ಸ್ಥಾ]ಪಿಸಿದ ಮೆರಿಗೆ ನಡಕೊಂಡು. ರಾಜದರುಶನಕ್ಕೆ ಬಂದು, ದ್ವಾರದಲ್ಲು ಯಿರ್‍ರುವ ಶಿಂಹನ ಶಿರಶ್ಯಿನ ಮೇಲೆ ತಮ್ಮ ಯರಡು ಕೈಯನ್ನು ಯಿಟ್ಟು, "ನೀವುದ್ರಿಗ್ನಾಪಿಶಿದ[>ನೀವು ಆಜ್ಞಾಪಿಸಿದ] ಧರ್ಮದ ಮೆರಿಗೆ ನಡಕೊಂಡದು ಸರಿ"ಯಂಬದಾಗಿ ಹೇಳಿದವರು, ರಾಜ್ಯ ಆಗ್ನೆಯಲ್ಲು ತಪ್ಪಿದ ಕುರುವಾ[>ಹಾ]ದಡೆ ತಕ್ಷಣಕ್ಕೆ ಶಿಂಹ ಬಡದು ರಕ್ತಪಾನವನ್ನು ಮಾಡಿ ಬಿಡೋದೆ ಸರಿ. ಯೀತನ ದ್ವಾರದಲ್ಲು ಶಿಂಹ ಕಟ್ಟಿಕೊಂಡು ರಾಜ್ಯಾಧಿಪತ್ಯ ಮಾಡಿದ್ದರಿಂದಾ ಶಿಂಹಣಭೂಪತಿಯೆಂಬ ನಾಮಧೇಯವುಂಟಾಯಿತು. ಯೀ ಶಿಂಹಣಭೂಪತಿ ಬನವಶಿದೇವಸ್ತಾನದಲು ದೇವರಿಗೆ ಧರ್ಮವನ್ನು ನಡಶಿ, ಸ್ವಾಮಿ ಶಿಖರವನ್ನು ನಿರ್ಮಾಣ ಮಾಡಿ, ಶಿಲಾಶಾಸನ ಹಾಕಿ ಯಿದ್ದಾರೆ. ಯೀತನ ಮಗ ಕಲಿಕಾಲ ಚೂಡಾಮಣಿ ೧, ಯೀತನ ಮಗ ಸಂಗಭೂಪಾಲ ೧, ಯೀತನ ರಾಜ್ಯಭಾರದಲ್ಲು ಶಿಂಹಯಿಲ್ಲದೆ ಹೊಯಿತ್ತು. ಶಿಂಹಣ ಭೂಪಾಲನ ಸಂಗಡಲೆ ಶಿಂಹಮ[>ಮಾ]ಯವಾಗಿ ಹೊಯಿತ್ತು.

ಜಯಿನ ಅರಸುಗಳ ವಿವರ:

೧ ಭರತ ಚಕ್ರೇಶ್ವರ

೧ ಧರಣಿಧರ ಚಕ್ರವರ್ತಿ

೧ ಲಕ್ಷ್ಮಿದರ

೧ ಜಿನೆಂದ್ರಾ ಶ್ಲೋಕ॥ ಆಶಿದಹೆ ಕ್ಷೇತ್ರದ ತೊವಳಭ್ಯಾಂ ಮತ್ರಾಸ ಲಕ್ಷ್ಮಿಧರ ಕಂಧರಾಬ್ಯಾಂ।

ರಾಜ್ಯಾ ಜಿನೆಂದ್ರ ಪ್ರೆಮ ಚಕ್ರವರ್ತಿ ರಾಣಿ ಚೇರಾಗ್ನಿ ದ್ವಿಜದೇವ ಭಕ್ತಾ। ರಾಜ್ಯಾಸೊವೇದನಿಂದಾ ನಿರತಮಿಶರ ಭೂತು ಬ್ರಾಂಹಣ ದ್ವೇಶಕಾರಿ। ಹರ ತಾ ನಿತ್ಯಂ ಮಭಾಣಾಂತದನುಗತದಿ ಯಾತತ್ತ ಪ್ರಜ್ಯಾತ್ವದದಾಸನು। ವಿಕ್ಷೆಕಂ ವೇದಮಾರ್ಗಂ ಸಕಲ ಮಹಿಶದಾನಷ್ವಮಿಷ್ವಂ ಸ ಭಟ್ಟೊ। ಜಯನಾಂತತ ವಕ್ಷಮೇವಾಕ್ಷ ಪಯತು ಮಮಲೊವ್ಯೆಕ್ಷಿಕಂ ಕ್ಷಿಪ್ರಮೋಕಃ।

ಸಮಸ್ತದೇಶದಲ್ಲು ಯಿರುವ ನಗ[+ರ] ಪಟ್ಟಣ ಅಗ್ರಹಾರ ವುರು ಪಳ್ಳಿ ವೂರು ಸ್ರ್ಟಂಗ[>ಶೃಂಗ] ಸ್ತಳಗಳಲ್ಲಿ ಕಾಂತಿ ಚೈತ್ಯಾಲಯ ಜಿನದೇವಸ್ತಾವ[>ಪ]ನೆಯನ್ನು ಭರತಚಕ್ರೇಶ್ವರ ಯಂಬವನು ಮೂಲಪುರುಷನು ರಾಜ್ಯಭಾರವನ್ನು ಮಾಡುತ್ತಿರಲಾಗಿ ನಡದ ಚರ್‍ಯ. ಯಿದನು [>ಈತನು] ಮುಕ್ತಾಗಿರಿ ಜಯನಕಾಶಿ ಶ್ರವಣಬೆಳಗೊಳ ಕಾಶಿಕ್ಷೇತ್ರ ಹುಮನ[>ಚ]ದಿ ಧರಣೇಂದ್ರ ಪದ್ಮಾವತಿ ವರಪ್ರಸಾದದಿಂದಾ ಸಮಸ್ತಶಾಸ್ತ್ರ ನಾಟಕಾಲಂಕಾರಚಿ ಮುಕ್ತಾರಾ ಬಂಗಿ ಭಾವಣ ಕವಿಗಮಕ ವಾದಿ ವಿದ್ವಾಂಸಾಮಂಡಲವಂ ಜೆಯಿಸಿದಾ. ಸ್ವಸ್ತಿ ಶ್ರೀಮದ ರಾಜರಾಜಗುರು ಭೂಮಂಡಲಾಚಾರ್ಯವರ್ರ್ಯ ಮಾಹವಾದಿವಾದೇಶ್ವರ ರಾಯುವಾದಿಪಿತಾಮಹ ಸಕಲವಿದ್ವಜನಚಕ್ರವರ್ತಿಗಳಂ ಬಲ್ಲಾಳರಾಯಜಿನರಕ್ಷಪಾಲಕ ಚಾಮುಂಡರಾಯಪಾದಾರ್ಚಿತ ಸ್ವಸ್ತಿಸಮಸ್ತಜನನೀಯಾ ವಿಸ್ತಾರಸೋದರ್ಯ ಸುರಚಿರಕಾಪು ಮಂದಿರರಾಜ ನಂದ ಕುಂದರಾಜ ನಂದುಕುಂದಸ್ವರೂಪ ಯಿಂದುಶೇಖರಗೆ ಕರೆಂರ್‍ತ್ರೀವಲಯಾನ ಖರನಿಖರ ಮುಖಾರಿ ಕರ್‍ನ ಸುಧಾಕರ್‍ನ ಸ್ಮಂಸಕ್ರಿಶಿ[>ಸಂಸ್ಕೃತ]ಪ್ರಾಕ್ರಿತ ಅಪಬ್ರಂಶಿಕ ಪೈಶಾಚಿಕ ಮಾಗಧೆಯ ಸರತರ್ಕ ವ್ಯಾಕರ್ಣ ವೈಯಾಕರ್‍ನ ಅಂತಃಕರ್‍ನ ಆದರ್ಶಾಕರ್‍ನ ಪ್ರಸಾದಲಕ್ಷಣ ಪ್ರತಿಮಾಲಕ್ಷಣ ಲಿಂಗಲಕ್ಷಣಮಾರ್ಣ ಮೋಹನ ಸ್ತಂಭನ ವಶೀಕರ್‍ನ ಆಕ್ಷದೋ ನಿಘಂಟು ಅಲಂಕಾರ ಹಮಾ[>ಯಾ]ರೂಢ ಗಜಲಕ್ಷಣ ನೀತಿಶಾಸ್ತ್ರ ಜ್ಯೋತಿಷ್ಯ ಮಂತ್ರವಾದ ಕನ್ಯಾವಾದ ಘಟಿಕಾಶುದಿ ಅಂಜನಾಶುದಿ ಕಾಲಜ್ಞಾನ ಯಂತ್ರಶಿಧ್ಧಿ ಮಂತ್ರಶಿಧ್ಧಿ ತುರಂಗಸಾಧನ ದಾಡಾಬಂಧನ ಆಗ್ನಿಸ್ತಂಭ ಜಲಸ್ತಂಭ ವಾಯುಸ್ತಂಬಾ ಶೇನಸ್ತಂಭಾ ಪರಕಾಯಪ್ರಯೋಗ ಮಂತ್ರವಡ್ಡಿಪ್ರಯೋಗ ಕುಮಾರಪ್ರಯೋಗ ಪರವಿದ್ಯಾಪ್ರಯೋಗ ಕ್ಷೆದನತ್ಮಕ್ಷಯಪ್ರಯೋಗ ರಾಜವಸ್ಯ ಶ್ರೀವಸ್ಯ[>ಸ್ತ್ರೀವಶ್ಯ] ಜನವಸ್ಯ ಶೇನಾಸ್ತಂಭನ ಸಕಲಕರ್ಮ ಭಾಜನಕರ್ಮಾ ವಾಸ್ತುವಿದ್ಯಾ ವೀಣಾವಿದ್ಯಾ ಮೃದಂಗಾದಿವಿದ್ಯಾಮತ ವೇದಾಂತ ಮೊದಲಾದ ಚೌಷಷ್ಟಿಕಳಾಪ್ರವೀಣರಪ್ಪ ಭರತೇಶ್ವರ ಚಕ್ರವರ್ತಿಗೆ ಹದಿನೆಂಟು ಕೊಟಿ ಚ್ಯಾಕೆಸ್ವ [>ಜಾತ್ಯಶ್ವ] ಯಂಭತು ನಾಲ್ಕು ಸಹ್ರ ಭದ್ರದಂಶಿ[>ತಿ] ಹಸ್ತಿಗಳು, ೧ಲಕ್ಕೆ ಸಾವಿರ ರಥ, ೯೬ ಸಾವಿರ ರಾಣಿವಾಸ, ೯೬ ಸಾವಿರ ವೀರಭಟರ್‍ರು, ೬೪ ಸಾವಿರ ರಾಜಕುಮಾರರು, ನಂಮಂದಿ ಖಾನಿಸಿಗರು, ಸುದರ್ಶನನೆಂಬ ಚಕ್ರ, ನಂದಾಕವೆಂಬ ಖಡ್ಗರತ್ನ, ಜಿಲತಾರೆಯಂಬ ಚರ್ಮ[>ಕ್ರ]ರತ್ನ, ಮುಂಡರೀಕ ಕರ್ಣಿಯಂಬ ಸ್ವೇತ ಕ್ಷೇತ್ರ, ಚೂಡಾಮಣಿಯಂಬ ವುರಗಮಣಿರತ್ನ, ಭೂತಾಂತನೆಂಬ ದಂಡರತ್ನ, ಕಾಂತಾರಿಯಂಬ ಕಾಕಿಣಿರತ್ನ, ಯಿಂತು ತಂಮ ಮನಿಯಲ್ಲಿ ಸಾದರವಾದ ಸಾರ್‍ವಕಾಲದಲು ಯಿರುವ ಜೀವರತ್ನ, ಜಯಮೇಷೆಶ್ವರವೆಂಬ ಸೇನಾಪತಿರತ್ನ, ಅಜಂಭಯನೆಂಬ ಅಶ್ವಪತಿರತ್ನಾ, ವಿಜಯಾಬ್ದಿದನ ಪರುವತನೆಂಬ ಗಜಪತ್ತಿರತ್ನಾಂ, ಬುಧಿಸಾಗರನೆಂಬ ಪುರೋಹಿತಮಳ ವಿಜಯಾರ್ದಪರ್ವತದಲ್ಲಿ ಪುಟ್ಟಿ, ಕಾಳ ಮಹಾಕಾಳ ಮಾಣವಸ ಪನ ಪಾಂಡುಕ ಮಾಳ ಸರ್‍ವಾನಹೀಸರು ಪಿಂಗಳ ಪದ್ಮ ನಾನಾ ರತ್ನದ ನಿಧಿಯು, ವಜ್ರಕುಂಡವೆಂಬ ಸಹುಸ್ರಮುಖಿ, ಶಿಂಶಾಟಿಯಂಬಾ ಕೊಂಕಚಿಲ್ತಾರೆವೆಂಬೊ ಶಿಂಗಟ್ಟು, ಮನೊರ್ದ ಮಾರ್‍ದಂಡಯಂಬ ಕಣಿಯು. ಭುತಮೊಖವೆಂಬ ಬಾಣ. ಅಭೆದ್ಯವೆಂಬ ಕವಚ, ಹನ್ನೆರಡು ಪಟಂಗಳ ವೇದಿನಿಸೊವಂಧಾ

ಜಯಾನಂದವೆಂಬ ಭೇರಿ, ಮತಂ ಹನ್ನೆರಡು ಯೋಜನ ಕೇಳಿಸುವಂಥಾ ಗಂಭೀರ ಪಾರ್ಕಮಾನವೆಂಬ ಯಿಪ್ಪತ್ತು ನಾಲ್ಕು ಮಹಾಶಂಖ, ಜಯಗೊಷ ವಿಜಯಗೊಷ ೧೨, ಮಹಾಪಟಂಗಳೊಹನಹಷ ನಾಗಾರರ್ಣತಿವೆಂಬ ಯಿಪ್ಪತ್ತು ನಾಲ್ಕು ನಿಸಾಳಾ ಸಮುದ್ರಗೊಷ್ಟಿ ನಾಲ್ವತ್ತೆಂಟು ಮಾಹ ತಮಟ, ತ್ರಿಭುವನ ಚೂಡಾಮಣಿವೆಂಬ ಮಕುಟನ, ಮೆರುಘಣಿಯಂಬ ಕರ್ನಾಭರಣ, ವಿಪ್ರಭೆದವೆಂಬ ಕುಂಡಲ, ನಕ್ಷತ್ರಮಾಲೆವೆಂಬ ಹಾರ, ಕೌಂಸ್ತುಕವೆಂಬ ಪದಕ, ಕೀರ್ತಿ ಮುಖವೆಂಬ ಬಾಹುದಂಡೆ, ರಿಪುವನಮರ್ದನವೆಂಬ ಮುರಾರಿ, ವಿಹಜಯನೆಂಬ ಹಸ್ತಾವಳಿ, ಕಾಮರೂಪನಿಯಂಬ ಮುದ್ರಿಕೆ, ಜಗನ್ಮೋಹಿನಿಯಂಬ ಕರಿ ಬಂದ, ಚತುರ್ಮುಖವೆಂಬ ಪಾದುಪೆಯು, ಸಿಂಹಧ್ವನಿಯಂಬ ಖೆಡ್ಯವು, ಮತಂಮಂ ಮುವತು ಸಾವಿರ ಮಕುಟಬದ್ಧರು, ಮತಂ ಮುನ್ನೂರು ಅರವತು ಮಿ[>ಲ]ಕ್ಷರಾಜರು, ೧೬ ಸಾವಿರ ವೀರದ್ರೋಣಪುರವು, ೪೮ ಸಾವಿರ ಪಟ್ಟಣವು, ೧೬ ಸಾವಿರ ಪಳ್ಳಿಯು, ೬೦ ಸಾವಿರ ಖೆಡೆಯು, ೮೦ ಸಾವಿರ ಅಂತರದೀವ ನಗರವು, ೪೮ ಸಾವರಿದ್ಯೆನೂರು ಅರವತು ಶೃಂಗಪದವು, ವಂದುವರೆ ಕೊಟಿ ಗಿರಿದುರ್ಗವೂ, ಮೂರು ಲಕ್ಷ ಜಲದುರ್ಗವು, ೭ ಲಕ್ಷ ಯೇಳು ಲಕ್ಷ ವನದುರ್ಗವು, ೪೮ ಕೋಟಿ ಪದಾತಿ ಬಲವು, ೭೦೦ ಯೇಳುನೂರು ಸಹ ಪಂಙ್ತವಾಸಕರು, ಮತಂ ಧರ್ಮಾಧಿಕವೆಂಬ ವಜರಕವಾಟಗ್ರಹವು, ಗ್ರಹಾದಿಕ ಕೂಟಯಂಬ ಶಿಂಹಾಸನ, ಪುಷ್ಕರಾವತಿ ಲಕ್ಷ್ಮಿಯಂಬ ಯರಡು ಭಂಡಾರ ಗೃಹ, ಸುವರ್ಣದ ಧಾರಾಯುಕ್ತ ಸಮಾರಮ್ಯ ವಜ್ರನೀಲ ನವರತ್ನ ಖಚಿತ ಭೋಜನ ಸಾಲೆ, ೩೨ ಸಾವಿರ ಸಂಗೀತ ಸಾಹಿತ್ಯ ನಾಟಕ ಸಾಲೆ, ಕೀರ್ತಿಸಾಗರಯಂಬ ೯೬ ಸಾವಿರ ನರ್ಕನ ನಿವಾಸ ಗೃಹವು, ಸರ್ವತೋಭದ್ರವೆಂಬ ಮಂಟಪವಯಜಯಂತಿವೆಂಬ ಶಿಂಹದ್ವಾರ, ದೀಕ್ಷಸ್ತಿತವೆಂಬ ಕಟಕಗಿರಿಕುಟ, ಅದರ ಮೇಲೆ ದಿಶಾವಲೋಕನವೆಂಬ ನೋಟಕ ಪ್ರಸಾದ, ಅಮಳ ಕಮಲವೆಂಬ ೩೨ ಚಾಮರಂಗಳು ರವಿಭದ್ರಪ್ರಭೆವೆಂಬ ಕ್ಷೆತ್ರವು, ಕಲ್ಪವಿನಕ್ಷಿವೆಂಬ ತ್ಯಾಗ, ಕರ್ಮ ಮೂಲಸ್ತಂಭ ಸಪ್ತಾಂಗ ರಾಜ್ಯಾ, ಷಡಾಂಗ ಬಲ, ೪೮ ಯೋಜನ ಬಿಡುವ ಬಿಡು ವಾಯು[>ಪಾಯ]ದಳ, ಷಟ್ಖಂಡ ಮಂಡಲಾಧಿಪತಿ ಮಂಡಲೇಶ್ವರ ವೃಷಭಗಿರೀಯಾ ಪ್ರಥಮಚಕ್ರೇಶ್ವರಾ ಭರತಚಕ್ರೇಶ್ವರಗೆ ಸಕಲಸಾಂಮ್ರಾಜ್ಯಾಭ್ಯುದಯಾರ್ದ ಮಂಗಳ ಮಹಾ ಶ್ರೀ॥ ಶ್ರೀ॥ ಶ್ರೀ॥

❖❖

೭೯
ಬನವಾಶಿ ಸ್ಥಳ ಕೈಫಿಯತ್ತು – ೨

ಡಿ. ನಂಬರ್ ಸಂಪುಟ : ೧೮೩೯

ಸನ್ ೧೮೧೩ನೆಯ ಇಸವಿ (ಶ್ರೀಮುಖ ಸಂವತ್ಸರದ) ಡಿಶಂಬರು ಮಾಹೆ ತಾರೀಖು ೮ನೆಯ ಶ್ರುಮುಖ ಸಂವತ್ಸರದ ಮಾರ್ಗಶಿರ ಶ ೧೪ ಸೋಮವಾರದಲ್ಲು ಬನವಶಿ ಸ್ಥಳದ ಮಹಾಜನಂಗಳು, ತ್ರಿಕಾಲ ಅರ್ಚಕರು, ಆಚಾರ್ಯರು, ಪುರೋಹಿತ ಲಿಂಗಾಭಟ್ಟರು, ಜೋಯಿಸ

ರಾಮಾಭಟ್ಟರು ಮಹಾಜನಂಗಳು ಸಹಾ ಬರೆಸಿ ಕೊಟ್ಟ ಕೈಫಿಯತ್ತು ವಿವರ:

ಬನವಶಿ ಕ್ಷೇತ್ರವು ಬ್ರಹ್ಮದೇವನು ಪ್ರಥಮ ಸೃಷ್ಟಿಯಲ್ಲಿ ಸಪ್ತಪುರಿ ನಿರ್ಮಾಣಮಾಡಿ ಸಪ್ತ ಉಪಪುರಿ ನಿರ್ಮಾಣಮಾಡಿದ್ದಕ್ಕೆ ಶ್ಲೋಕಗಳು

ಅಯೋಧ್ಯಾ ಮಥುರಾ ಮಾಯಾ।
ಕಾಶೀ ಕಾಂಚೀ ಅವಂತಿಕಾ।
ಪುರೀ ದ್ವಾರಾವತೀ ಚೈವ।
ಸಪ್ತೈತೇ ಮೋಕ್ಷದಾಯಿಕಾಃ॥

ಈ ಏಳು ಮಹಾಪುರಿಗಳು,

ವಿನಾವಾಸೀ ಕುಶಾ ಲಂಕಾ।
ಕಾಶ್ಮೀರಿ ಕುಂಡಿನೀ ಪುರೀ॥
ಜಹಾರೀ ಮಂಜರೀ ಚೇತಿ।
ಹ್ಯ ಪುರ್ಯಃ ಪ್ರಕೀರ್ತಿತಃ॥

ಈ ಏಳು ಉಪಪುರಿಗಳಿತ.

ಈ ಪ್ರಕಾರದಲ್ಲಿ ಸ್ಥಳ ಮಹಾತ್ಮೆಯಲ್ಲಿ ಕಂಡದ್ದರಿಂದ ಪ್ರಥಮದಲ್ಲಿ ವಿಧಾತ್ರನಿರ್ಮಿತವೆಂದು ಕಂಡು ಬಂತು. ಇದಕ್ಕೆ ಯುಗಯುಗಕ್ಕೂ ಇರುವಂಥ ಅಭಿಧಾನಃ

'ಕೃತೇತು ಕೌಮುದೀ ಪ್ರೋಕ್ತಾ। ತ್ರೇತಾಯಾಂಚೈಂದುವೀ ಮತಾ॥
ದ್ವಾಪರೇತು ಜಯಂತಿ ಸ್ಯಾತ್।ವಾನವಾಸೀ ಕಲೌಯುಗೇ॥

ಈ ನಾಲ್ಕು ಅಭಿಧಾನಕ್ಕೂ ನಿರ್ವಚ[+ನ]ಗಳು:

ಪೂರ್ವದಲ್ಲಿ ಜಾಬಾಲಿಕಲ್ಪದಲ್ಲಿ ರೈವತಮನ್ವಂತರದಲ್ಲಿ ಕೃತಯುಗದಲ್ಲಿ ಕೃಷ್ಣಾಕ್ಷನೆಂಬಂತಹ ಅರಸಿದ್ದನು. ಇವನು ಭೈರವನಿಂದ ವಧ್ಯನಾದನು. ಆ ಪ್ರಕಾರ ಆಗುತ್ತಿರಲಾಗಿ ಜೀವಾಭಿಲಾಷೆಯಿಂದ ಇವನ ಮಗ ಸೂದನು ಪಲಾಯಿತನಾಗಿ ಸಹ್ಯಾದ್ರಿಗುಹೆಯಲ್ಲಿ ಬಹುಕಾಲವಿರುತ್ತಿರಲಾಗಿ ವಿದ್ಯುನ್ಮಾಲಿಯೆಂಬ ದೈತ್ಯನು ಇವನಿದ್ದಂಥ ವೃತ್ತಾಂತವನ್ನು ತಿಳಿದು, ಮಗಳು ಕೊಟ್ಟು ಮದುವೆ ಮಾಡಿ ಈ ಸೂದನು ಭೈರವ ಹಂತತೇಜಸ್ಕನಾಗಿ ತಿಳಿದು ಪಾತಾಳವಾಸಿಗಳಾದಂಥ ದೈತ್ಯರನ್ನು ಕರೆಸುವಂಥವನಾಗುತ್ತಿರಲಾಗಿ ಆ ಸಮಯದಲ್ಲಿ ದೈತ್ಯ ಗುರುವಾದಂಥ ಶುಕ್ರಾಚಾರ್ಯರು ಬಂದರು. ಅವರಿಗೆ ಅರ್ಘ್ಯಾದ್ಯುಪಚಾರದಿಂದ ಪೂಜೆಮಾಡಿ, ತನ್ನ ಸಕಲ ವೃತ್ತಾಂತವನ್ನು ಹೇಳಿಕೊಳ್ಳಲಾಗಿ, ಈ ಸೂದನಲ್ಲಿ ಅನುಗ್ರಹದಿಂದ ಸಹ್ಯಪರ್ವತಾಶ್ರಯದಲ್ಲು ಒಂದು ದುರ್ಗವನ್ನು ನಿರ್ಮಾಣಮಾಡಿಕೊಂಡು ಈ ದೈತ್ಯ ಸೇನಾಪರಿವೃತನಾಗಿದ್ದಲ್ಲಿ, "ನಿನಗೆ ಸಕಲ ರಾಜ್ಯವು ಪ್ರಾಪ್ತಿಯಾಗಿ ಸುಖದಲ್ಲಿರುತ್ತೀ" ಎಂತ ಅನುಗ್ರಹ ಮಾಡಲಾಗಿ, ಅದೇ ಪ್ರಕಾರ ಇದ್ದಲ್ಲಿ, ಪುನಃ ಆ ಶುಕ್ರಾಚಾರ್ಯರು ಆತನ ವಿಭವನ್ನು

ನೋಡಲಪೇಕ್ಷಿತಿರಾಗಿ ಸೂದ ನಿರ್ಮಿತವಾದ ಸೌದಪುರಿಗೆ ಬಂದಲ್ಲಿ ಮಧುಪರ್ಕಾದ್ಯುಪಚಾರದಿಂದ ಪೂಜೆಯನ್ನು ಮಾಡಿ, ಪುನಃ ಸ್ವರ್ಗಾಪೇಕ್ಷಿತವಾದ ವಾಂಛೆಯನ್ನು ಹೇಳಿಕೊಳ್ಳಲಾಗಿ, ಅವರು ಜ್ಞಾನದೃಷ್ಟಿಯಿಂದ ನೋಡಿ, "ನಿನಗೆ ಸ್ವರ್ಗಪ್ರಾಪ್ತಿಯಿಲ್ಲ, ನಿನ್ನ ಮಗನಿಂಥ ಸ್ವರ್ಗಸುಖಾನುಭವ"ವೆಂದು ಮಂತ್ರಪೂತವಾದಂಥ ಪಿಂಡಗಳು ಕೊಟ್ಟಲ್ಲಿ, ತನ್ಮಹಿಮೆಯಿಂದ ಆತನ ಹೆಂಡತಿಯಲ್ಲಿ ಇಬ್ಬರು ಕುಮಾರರು ಜನಿಯಿಸಿದರು. ಅವರಿಗೆ ಪಿತನಾದ ಸೂದನು ಮಧು ಕೈಟಭರೆಂದು ಹೆಸರಿಟ್ಟಿರಲಾಗಿ ಕಾಲಾಂತರದಲ್ಲಿ ಪುನಃ ಶುಕ್ರಾಚಾರ್ಯರು ಬಂದು ಶಿವಸರ್ವೋತ್ತಮವಾದ ಈ ಸಕಲರಹಸ್ಯವನ್ನು ತಿಳಿಸಿ, ಶಿವಪೂಜಾ ಪರಾಯಣರಾಗಲು ಮಂತ್ರೋಪದೇಶವನ್ನು ಕೊಟ್ಟು, ಸ್ವಸ್ಥಾನಕ್ಕೆ ಹೋಗಲಾಗಿ, ಆ ಉಭಯ ಕುಮಾರರು ಈ ವಾನವಾಶಿಕ್ಷೇತ್ರಕ್ಕೆ ಬಂದು, ಉತ್ತಮ ಮುಹೂರ್ತದಲ್ಲಿ ತಂತಮ್ಮ ಅಭಿದಾನಪೂರ್ವಕವಾಗಿ ಲಿಂಗಪ್ರತಿಷ್ಠೆಯನ್ನು ಮಾಡಿ, ಪೂಜಾನಿರತರಾಗಿರುವಲ್ಲಿ ಶಿವಾರ್ಚನೆ ಮಹಿಮೆಯಿಂದ ಸ್ವರ್ಗಾದಿಲೋಕಗಳು ಜಯವಾಗಿ, ಸರ್ವತ್ರ ಅಪ್ರತಿಹತಶಾಸನರಾಗಿ ಶಿವೇತರ ದೇವತಾರ್ಚಕರನ್ನು ಶಿಕ್ಷಿಸುತ್ತಿರಲಾಗಿ, ಈ ವೃತ್ತಾಂತವನ್ನು ಶ್ರೀಪರಮೇಶ್ವರನು ನಾರದರ ಮುಖದಿಂದ ಕೇಳಿ, ಅತ್ಯಂತ ಕುಪಿತನಾಗಿ, ವಿಷ್ಣುವನ್ನು ಕುರಿತು ಹೇಳಿದ್ದು : "ನೀನು ಮದ್ಭಕ್ತಿಯುಕ್ತನಾಗಿ ಆ ದುರಾತ್ಮರ ವಧೆಯನ್ನು ಮಾಡು. ಅವರು ತಿರಿಗಿ ಅದೇ ಅಭಿಧಾನದಿಂದ ಪ್ರಳಯದಲ್ಲಿ ನಿನ್ನ ಕರ್ಣದಿಂದ ಉದ್ಭವಿಸುತ್ತಲಿದ್ದಾರೆ. ಅವರನ್ನು ವಧೆ ಮಾಡು. ತಿರಿಗಿ ಸ್ವಾರೋಚಿಷ ಮನ್ವಂತರದಲ್ಲಿ ನಿನ್ನ ಉದರದಿಂದ ಉದ್ಭವಿಸುತ್ತಾರೆ. ಆ ಸ್ವಾರೋಚಿಷ ಮನುವನ್ನು ಜೈಸು, ಈ ಪ್ರಕಾರ ಮೂರಾವರ್ತಿ ಜಯಿಸಿ ಆ ಲಿಂಗ ಸಮೇತರಾಗಿ ಮಧುದ್ಯಾವನವನ್ನು(?) ಹೊಂದಿಸು. ಅವರಿಗೆ ಮತ್ಪೂಜಾಪರಾಯಣರಾದ ಕಾರಣ ಗಾಣಾ[>ಗಣಾಧಿ]ಪತ್ಯತ್ವನ್ನು ಕೊಡುತ್ತೇನೆ" ಎಂದು ಆಜ್ಞಾಪಿಸಲಾಗಿ, ಅದೇ ಪ್ರಕಾರ ವಿಷ್ಣುವು ಮೂರಾವರ್ತಿ [ಮಾಡಿ], ಅವರನ್ನು (ಜಯಿಸಿ), ನಾಶವನ್ನು ಎಯ್ದಿಸಿ, ಆಶ್ಚರ್ಯಕರವಾದಂಥ ಲಿಂಗದ್ವಯವನ್ನು ಕಂಡು ಯಥಾವಿಧಿಯಿಂದ ಅರ್ಚಿಸಲಾಗಿ, ಸ್ವರ್ಗದಿಂದ ಲಿಂಗಮೌಳಿಯಲ್ಲಿ ಪುಷ್ಪವೃಷ್ಟಿಯಾಗಲಾಗಿ, ಆ ಸಮಯದಲ್ಲಿ ಸಾಂಬನು [ಆ ಮಹೋತ್ಸವ ಕಾಲದಲ್ಲಿ] ಆ ಲಿಂಗಮಧ್ಯದಿಂದ ವೃಷಭಾರೂಢನಾಗಿಯೂ ಪಾರ್ವತಿಸಮೇತನಾಗಿಯೂ ಅವಿರ್ಭೂತನಾಗಿ, ಸಮಸ್ತದೇವತೆಗಳನ್ನು ಕುರಿತು ಹೇಳಿದ್ದೇನೆಂದರೆ " ಈ ಮಧುರಕೇಶ್ವರಾ ವಿಧ ಲಿಂಗದಲ್ಲಿ ಪುಣ್ಯತಮವಾದಂಥ ವಾನವಾಶೀಕ್ಷೇತ್ರದಲ್ಲಿ ಸರ್ವಾಘಹಾರಿಣಿ (ಪರಿಹಾರ) ಆಗಿರುವ ವರದಾ ನದೀ ತೀರದಲ್ಲಿ ಸರ್ವದಾ ವಾಸ ಮಾಡಿಕೊಂಡಿದ್ದೇನೆ. ಇಲ್ಲಿ ಸ್ನಾನದಾನಪೂಜೆಯಿಂದ ಯುಕ್ತರಾದಂಥವರಿಗೆ ಇಷ್ಟಾರ್ಥಪ್ರಾಪ್ತಿಯಾಗಿ ಜನ್ಮಾಂತರವಿಲ್ಲದೇ ಹೋದೀತು" ಎಂದು ಪರಮೇಶ್ವರನು ಆಜ್ಞಾಪಿಸಿ ಅಂತರ್ಧಾನನಾದನು. ಇದು ಅತಿ ಮಹಿಮಾಯುಕ್ತವಾದಂಥ ಸ್ಥಳವೆಂದು ಸಮಸ್ತದೇವತೆ ಋಷಿಗಳು ಸರ್ವದಾ ಇಲ್ಲಿಯೇ ವಾಸವಂ ಮಾಡುವರಾದರು. ಈ ಮಧುಕೇಶ್ವರಾಭಿಧಾನವಾದ ಸ್ಥಳಕ್ಕೆ ಪ್ರತಿಯೊಂದು ಯುಗದ ಅಭಿದಾನ ಮೇಲೆ ಬರೆಯಿರಿ[>ದಿದೆ].

ಮತ್ತು ಕೈಟಭೇಶ್ವರ ಎಂಬ ಲಿಂಗ ಇದ್ದ ಸ್ಥಳದ ಅಭಿದಾನ ಏನು ಎಂದರೆ: ಕುಂತಳಪುರ, ಕಮಠಪುರ ಈ, ಅಭಿದಾನಗಳು. ಈ ಬನವಶಿಕ್ಷೇತ್ರವು ಜಯಂತಿಯೆಂಬ ಪಟ್ಟಣವಾಗಿ ಪೂರ್ವದಲ್ಲಿ ಹೇಳಿದ ಪ್ರಕಾರ ಸೂರ್ಯಸೋಮವಂಶದರಸುಗಳು ಅವರ ಕಡೆಯವರು ಸಹಾ ಈ ಮೇಲೆ ಬರೆದ ಮನ್ವಂತರ ೨೮ನೆಯ ದ್ವಾಪರಾಂತ್ಯ ಪರ್ಯಂತಕ್ಕೂ ಆಳಿಕೊಂಡು ಬಂದರು. ಆಮೇಲೆ ಕಲಿಯುಗ

ಪ್ರಾರಂಭವಾದ ಬಳಿಕ ಯುಧಿಷ್ಠಿರ ಶಕದೊಳಗೆ ಆಳಿದ ಅರಸುಗಳು, ಯುಧಿಷ್ಠಿರ ಶಕ ೩೦೪೪ಕ್ಕೆ ಪೃಥ್ವಿಯಾಳಿದ ಅರಸುಗಳ ವಿವರ:

೬೦ ಪರೀಕ್ಷಿತರಾಯ ಆಳಿದ ವರ್ಷ

೬೧೭ ಆಮೇಲೆ ಜನಮೇಜಯ ಮೊದಲು ಮಾಡಿಕೊಂಡು ಪುರಂಜಯನ ಅರಸುತನ ಪರ್ಯಂತಕ್ಕೂ, ಇವನು ಬೃಹದ್ರಥ (?) ೮ ಇವನ ಪರ್ಯಂತಕ್ಕೂ ಆಳಿದ ವರ್ಷ. ಈ ಅರಸುಗಳ ಹೆಸರು ಗ್ರಂಥಾಂತರದಲ್ಲಿ ನಿಧಾನವಾಗಿ ನೋಡಬೇಕು.

೧೩೮ ಈ ಮೇಲೆ ಬರೆದ ಪುರಂಜಯಗೆ ಪಾಲಕ ಮಗ. ಇವನ ಪ್ರಧಾನಿ ಶುನಕನೆಂಬವನು, ಈ ಅರಸನ್ನು ವಧೆಮಾಡಿ, ಪ್ರದ್ಯೋತನನೆಂಬ ತನ್ನ ಮುನ್ನು ಮಗನನ್ನು ಸದರಿ ಅರಸಿಗೆ ಪಾಲಕನ ಮಾಡಿದ. ಪ್ರದ್ಯೋತನ ವಂಶ:

೧. ಪುರಂಜಯ

೧. ವಿಶಾಲಯೋಪ

೧. ನಂದಿವರ್ಧನ

೧. ಪ್ರದ್ಯೋತನ

೧. ವಾಜಕ

---

೫ ಈ ಐದು ಅರಸುಗಳು ಆಳಿದ ವರ್ಷ ೧೩೮.

೩೬೦ ಈ ಶಿಶುನಾಗನು ಪ್ರದ್ಯೋತನನ ವಂಶಸ್ಥನಾದಾಗ್ಯೂ ಪ್ರಖ್ಯಾತಪುರುಷನಾದುದರಿಂದ ಇವನ ಹೆಸರು ಮೊದಲಾಗಿ ವಂಶ ನಡಿಯಿತು. ಈ ಜನ ೧೦ಕ್ಕೆ ವಿವರ:

೧. ಶಿಶುನಾಗ

೧. ಕ್ಷೇಮವರ್ಮ ಈತಗೆ ಕ್ಷೇತ್ರಜನಾದಂಥವ

೧. ವಿಧಿಸಾರ

೧. ದರ್ಭಕಃ

೧. ನಂದಿವರ್ಧನ

೧. ಕಾಕವರ್ಮ

೧. ಕ್ಷೇತ್ರಧರ್ಮ

೧. ಅಜಾತಶತ್ರು

೧. ಅಜೇಯಃ

೧. ಮಹಾನಂದಿ

———

೧೦. ಅಂತು ಜನ ೧೦ಕ್ಕೆ ೩೬೦. ಯಭಯಂ ೪೯೮. ಅಂತು ವರ್ಷ ೧೧೭೫, ಅಂತು ಜನಕ್ಕೆ ೨೦೦. ಈ ಮೇಲೆ ಬರೆದ ಮಹಾನಂದಿಗೆ ಶೂದ್ರಿಯ ಹೊಟ್ಟೆಯೊಳಗೆ ಹುಟ್ಟಿದವ ಮಹಾಪಾತ್ಮ ಎಂಬವನು ರಾಜ್ಯಭಾರಕ್ಕೆ ಆರಂಭ ಮಾಡಿದ.

*ಇವನು ಮಹಾಪರಾಕ್ರಮಶಾಲಿಗಾಯಿ ಪರಶುರಾಮಸೋಪಾದಿಯಲ್ಲಿ ಕ್ಷತ್ರಿಯ ವಂಶವನ್ನು ಸಂಹಾರಮಾಡಿ ಭೂಮಿಯ ಮೇಲೆ ಕ್ಷತ್ರಿಯ ಅರಸುತನವಿಲ್ಲದ ಹಾಗೆ ಮಾಡಿದ. ಅದು ಮೊದಲು ಮಾಡಿ ಸಂಕರಜಾತಿ ಅರಸುತನವಾಯಿತು. ಇವನಿಗೆ ನಂದ ಎಂತ ಹೆಸರು ಆಯಿತು. ಇವನು ಏಕಚ್ಛತ್ರವಾಗಿ ರಾಜ್ಯಭಾರ ಮಾಡಿಕೊಂಡು ಇದ್ದ. ಇವನ ಆಜ್ಞೆಗೆ ಪ್ರತಿಹತವಾಗಿ ಇದಿಲ್ಲ. ಸಮಸ್ತರೂ ಇವರೂ[>ಎಲ್ಲರೂ] ಇವನ ಆಜ್ಞೇಯಲ್ಲೀ ನಡೆದುಕೊಂಡು ಬರುತ್ತ ಇದ್ದರು. ಇವನಿಗೆ ಎಂಟು ಜನ ಮಕ್ಕಳು.

೧ ನಂದ ಎಂಬವ

೧ ಇವನ ಹಿರೇಮಗ ಸುಮಾಪೋ

೧ ಕಡೇ ಮಗ ಸರ್ವಾರ್ಥಸಿದ್ಧಿ ಪರ್ಯಂತಕೂ ಒಂಭತ್ತು ಜನ

೬ ನಡುವಿನ ಜನ ಆರಕ್ಕೆ ಹೆಸರು ಗೊತ್ತಿಲ್ಲ

———

೯ ಈ ಸಮಸ್ತಪೃಥ್ವಿಯನ್ನು ಒಂಭತ್ತು ಭಾಗ ಮಾಡಿಕೊಂಡು ಒಂಭತ್ತು ಸಿಂಹಾಸನದಿಂದ ಆಳಿಕೊಂಡು ಬರುತ್ತಿರುವಾಗ್ಗೆ ವರುಷ ೨೦೦ ಸಂದಿತು.

೧೩೭. ಈ ಸರ್ವಾರ್ಥಸಿದ್ಧಿಗೆ ವಕ್ರ ಮೊದಲು ಮಾಡಿಕೊಂಡು ಪ್ರಧಾನಿಗಳು ಇರುವುದರಲ್ಲಿ ರಾಕ್ಷಸನೆಂಬ ಪ್ರಧಾನಿ ಪ್ರಖ್ಯಾತನಾಗಿ, ದಂಡನೀತಿಪ್ರವೀಣನಾಗಿ, ಭೂಭಾಗವನ್ನು ಷಡ್ಭಾಗಗ್ರಹಣದಲ್ಲಿ ಪ್ರವೀಣನಾಗಿ, ಶುಚಿವಂತನಾಗಿ ಶೂರನಾಗಿ ಮೇಲೆ ಬರೆದ ನಂದರಿಂದ ಮಾನ್ಯವಾಗಿ ಸಮಸ್ತ ಪ್ರಜಾಪಾಲನದಲ್ಲಿ ವಿಚಕ್ಷಣನಾಗಿ ಇದ್ದ ಇವನು ಬ್ರಾಹ್ಮಣನು.

ಈ ಸರ್ವಾರ್ಥಸಿದ್ಧಿಗೆ ಸುನಂದಾ ಎಂಬಾಕೆ ಹಿರೇಹೆಂಡತಿ, ವೃಷಲಾ ಪುತ್ರಿಯಾದಂಥಾಕೆ ಮುರಾಯೆಂಬವಳು. ಇವರಿಬ್ಬರಿಗೂ ಮಕ್ಕಳಿಲ್ಲದೆ ಇರುವುದರಿಂದ ಒಬ್ಬ ತಪಸ್ವಿಯಾಶ್ರಯ[>ಮ]ದಿಂದ ಅನುಗ್ರಹ ಸಂಪಾದಿಸಿಕೊಂಡಲ್ಲಿ, ಅವರು ಕಮಂಡಲೋದಕ ಪ್ರೋಕ್ಷಣೆ ಮಾಡಿದುದರಿಂದ ಒಂಭತ್ತು ಬಿಂದು ಸುನಂದಾ ಎಂಬುವಳ ಮಸ್ತಕ ಮೇಲೆ ಬಿದ್ದಿತು. ಮೇಲೆ ಬರೆದಾಕೆ ಒಂಭತ್ತು ಮಂದಿ ಮಕ್ಕಳು ಹಡೆದಳು. ಈ ಕೆಳಗಿನಾಕೆ ಒಬ್ಬ ಮಗ ಹಡೆದಳು. ಇವರು ಯೌವನಸ್ಥರಾಗುತ್ತಲೆ ಈ ಸರ್ವರ್ಥಸಿದ್ಧಿಯು ಇವರಿಗೆ ಪಟ್ಟ[ಣ]ವನ್ನು ಕಟ್ಟಿ ಪೂರ್ವಪ್ರಕಾರಕ್ಕೆ ರಾಜ್ಯಭಾರಕ್ಕೆ ಇಟ್ಟನು. ಇವರಿಗೆ ನವನಂದರೆಂದು ಹೆಸರು. ಈ ಮುರಾ ಎಂಬಾಕೆಯ ಮಗ ಮೌರ್ಯನೆಂಬುವನಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟಿ ಸರ್ವಾರ್ಥಸಿದ್ಧಿಯು ವಿಶ್ರಾಂತಿಯನ್ನು ಪಡೆದ.

---

* ಇಲ್ಲಿಂದ ಕೊನೆಯ ವರೆಗಿನ ಭಾಗ ಸೋದೆ ಸಂಸ್ಥಾನದ ಕೈಫಿಯತ್ತಿನ ಮಧ್ಯದಲ್ಲಿದೆ (ಸಂ)

೧೩೭. ಆ ಬಳಿಕ ಈ ಮೌರ್ಯನಿಗೆ ನೂರು ಮಂದಿ ಮಕ್ಕಳಾದರು. ಇವರೊಳಗೆ ಚಂದ್ರಗುಪ್ತನೆಂಬುವನೇ ಕಡೆಯ ಮಗ. "ಈ ನೂರು ಮಂದಿ ಮಕ್ಕಳಿಂದ ಈ ಸೇನಾಧಿಪತಿ ಮಹಾ ಪ್ರಬಲನಾಗಿದ್ದಾನೆ, ಮುಂದೆ ನಮಗೆ ರಾಜ್ಯ ನಿಂತಿತೋ ಹೇಗೊ" ಎಂಬ ಭಯದಿಂದ ರಾಕ್ಷಸನೆಂಬ ಮಂತ್ರಿಯೊಡನೆ ಗುಪ್ತಾಲೋಚನೆ ಮಾಡಿಕೊಂಡು ಈ ನೂರು ಜನವನ್ನೂ ಮೌರ್ಯನ ಸಹ [ಭೂಗ್ರಹಾಯಾಗಿ] ನೆಲಮಾಳಿಗೆಯಲ್ಲಿ ಹಾಕಿಟ್ಟು, ಇವರು ರಾಜ್ಯಭಾರ ಮಾಡಿದ್ದು ವರುಷ ೧೩೭. ಇದರಲ್ಲಿ ಮೌರ್ಯ ಆದಿಯಾಗಿ ಯಾವತ್ತರೂ (ಎಲ್ಲರೂ) ನೆಲಮಾಳಿಗೆಯಲ್ಲಿ ಹತರಾಗಿ ಚಂದ್ರಗುಪ್ತನೆಂಬುವನುಳಿಯುತ್ತ, ನೆಲಮಾಳಿಗೆಯಿಂದ ತೆಗೆದು ಇವನನ್ನು ಅನ್ನಸತ್ರದ ಮೇಲೆ ಇಟ್ಟಿದ್ದರು. ಈ ಪ್ರಕಾರವಿರುವಾಗ್ಯೆ ಕೆಲವು ದಿವಸದಲ್ಲಿ ಚಣಕನೆಂಬ ಬ್ರಾಹ್ಮಣನ ಮಗನು ವಿಷ್ಣುಗುಪ್ತನೆಂಬುವನು, ಆತನು ದಂಡನೀತಿಯಲ್ಲಿ ವಿಶಾರದನು. ಜೋತಿಶ್ಯಾಸ್ತ್ರದಲ್ಲಿ ಪ್ರವೀಣನು. ಸಕಲಧರ್ಮವನ್ನು ತಿಳಿದಂಥವನು. ಈತನು ನಾಲ್ಕು ಮಂದಿ ಶಿಷ್ಯರು ಸಹಿತವಾಗಿ ಅನ್ನಸತ್ರಾಭಿಮುಖವಾಗಿ ಬರುವಾಗ್ಯೆ ಕಾಲಿಗೆ ದರ್ಭಾಂಕುರವು ತಾಗಿದುದರಿಂದ ಅದರ ಮೇಲೆ ಕ್ರೋಧದಿಂದ ಆಮೂಲಾಗ್ರವಾಗಿ ತೆಗೆದನು. ಚಂದ್ರಗುಪ್ತನು ಕಂಡು "ಇವನಿಂದ ನಮ್ಮ ವೈರಿ ನಿರ್ಯಾತನವಾದೀತು" ಎಂದು ತಿಳಿದು, ಯಿವನಂ ಶರಣುವೊಕ್ಕು ಅಭಯವನ್ನು ಪಡೆದು, ಯಿವನ ತಂತ್ರದಿಂದ ಈ ನವನಂದರನ್ನೂ, ಪರ್ವತಕ ಇವನ ಮಗ ಮಲಯಕೇತು ಮೊದಲಾದಯಿವನರನ್ನೂ ಜೈಸಿ, ತಾನು ರಾಜ್ಯಾಧಿಕಾರಿಯಾಗಿ, ಪುನಃ ಪ್ರಧಾನಿತನಕ್ಕೆ ರಾಕ್ಷಸನನ್ನೇ ನಿಲ್ಲಿಸಿಕೊಂಡು ರಾಜ್ಯಭಾರ ಮಾಡಿಕೊಂಡು ಬಂದರು. ಇವರ ವಂಶದ ವಿವರ:

೧. ಮೇಲೆ ಬರೆದ ಚಂದ್ರಗುಪ್ತ ಜನ

೧. ಇವನ ಮಗ ವಾರಿಧಾರ . . . .

೧. ಇವನ ಮಗ ಅಶೋಕವರ್ಧನ

೧. ಸುಯಶ

೧. ಶಾಲಿಶೂಕ

೧. ಶತ್ರುಧನ್ವ

೧. ಅಸಂಗತ

೧. ಸೋಮಶರ್ಮ

೧. ಬೃಹದ್ರಥ

೯ ಜನಕ್ಕೆ ವರ್ಷ ೧೩೭.

ಈ ಬೃಹದ್ರಥನನ್ನು ಅವನ ಸೇನಾಪತಿಯಾದ ಪುಷ್ಯಮಿತ್ರಶೃಂಗನೆಂಬುವನು ವಧೆ ಮಾಡಿ ತಾನೇ ರಾಜ್ಯವನ್ನು ಮಾಡಿದ.

❖❖

೮೦

ಬನವಾಶಿಸ್ಥಳದ ಕೈಫಿಯತ್ತು ೧- ೩*

ಬನವಾಶಿ ಶ್ರೀ ಮಧುಕೇಶ್ವರ ದೇವಾಲಯವನ್ನು ಯಾವ ಯಾವ ಯುಗದಲ್ಲಿ ಯಾವ ಯಾವ ಅರಸುಗಳು ಆದರೋ ಅವರು ರಾಗರೂಜಿ ಮಾಡಿ, ಕಟ್ಟುತ್ತ ಬಂದರ್ರು, ಕಲಿಯುಗದಲ್ಲಿ ಪ್ರತೀಕ್ಷಿತ[>ಪರೀಕ್ಷಿತ]ರಾಯನಾರಭ್ಯ ನಂದನ ಪರಿಯಂತ್ರ ಅರ್ರುಸತನ ಮಾಡಿದವರ್ರು ಯೇಕ ಚಕ್ರಾಧಿಪತಿಗಳಾರ್ರಿಂದಾ ಅವರ ಕಡೆಯವರು ದೇವತಾಸೇವೆಯನ್ನು ನಡಶಿಕೋರ್ಳಳುತ್ತ ಬಂದರು. ಯಿತ್ತಲಾಗಿ ನಂದನಾರಭ್ಯ ತ್ರಿನೇತ್ರಕಾದಂಬ ಹುಟ್ಟುವ ಪರಿಯಂತ್ರ ಕ್ಷತ್ರಿಯರೆಲ್ಲ ನಾಶವಾಗಿ, ದೇಶವೆಲ್ಲ ಖಂಡ ಮಂಡಲವಾಗಿ ತಂಮ್ಮ ತ್ತಂಮ ಸ್ವಯಿಚ್ಛೆಗಳಿಂದ ಜನರ್ರು ನಡಸುತ್ತ ಬಂದು, ಅರಸುತನಗಳಲ್ಲಿ ಯೀ ಪ್ರಕಾರವಾದರಿಂದಾ ಕೆಲವು ದಿನ ಅವಾಂತರ ರೂಪವಾಗೆ ಯಿತ್ತು. ಆಮೇಲೆ ಕದಂಬಾಯಂಬವನು ಧರುಣಿದೇವಿಗು ಯೀಶ್ವರನು ಹುಟ್ಟಿದಲ್ಲಿ, ಯೀತನು ವರಪ್ರದಾನವಂನ್ನು ಕೊಟ್ಟು ಪ್ರಥವಿಪತ್ತಿ ಆದ ಬಳಿಕ ೭೭ ಸಿಂಹಾಸನವು ಯೀತ್ತನ ಕೆಳಗೇನ ನಡವುತ್ತ ಬರುತಿದಲ್ಲಿ ಆಗ್ಯೆ ಯೀ ಬನವಶಿಯೆ ಮುಖ್ಯ, ಯೀತನ ವಂಶಸ್ತರು ಸಹಾ ಆಳಿಕೊಂಡು ಬಂದರ್ರು. ಆಗ್ಯೇ ಯೀ ದೇವತ್ತಾ ಸೇವೆ ಕಟ್ಟಲೆ ಕಂದಾಚಾರ್ರ ಸಹಾ ಯಥಾವಿಧಿಯಾಗಿತ್ತತ್ತ ಬ್ರಾಂಹ್ಮರಿಂದಾ ನಡಶಿಕೊಂಡು ಬರ್ರುತ್ತ ಯಿದ್ದರು. ಆಮೇಲೆ ಯೀ ಕದಂಬನ ವಂಶರಲ್ಲೂ ಯಿರುವಂಥ ಅರ್ರುಸತನವು ಬರ್ಬರರಾಯರ ಸ್ವಾಧೀನವಾದ ಬಳಿಕ ಅವರ್ರು ತಮ್ಮ ಯಿಚ್ಛೆ ಬಂದ ಹಾಂಗೆ ನಡಶಿಕೊಳುತ್ತ ಬರುವಲ್ಲಿ, ಆಗ್ಯೆ ಯೀ ದೇವಾಲಯಕ್ಕೆ ಆಧ್ಯರಾಗಿ ಯಾರ್ರು ಯಿಲ್ಲದೆ ದಿನೆ ದಿನೆ ಶಿಥ[ಥಿ]ಳಕ್ಷವಂನ್ನು ಹೊಂದುತ್ತ ಬಂತ್ತು. ಪುನಹಾ ಯೀ ಕದಂಬರ ವಂಶದವರ್ರು ತಂಮ್ಮ ರಾಜ್ಯವಂನ್ನು ತಂಮ್ಮ ಸ್ವಾಧೀನ ಮಾಡಿಕೊಂಡ ಬಳಿಕ ಯೀ ವಂಶದಲ್ಲಿ ಕೀರ್ತಿವರ್ಮಯಂಬವನು ಶ್ಯಾಲಿವಾಹನ ಶಕ ೯೯೦ನೆ ಕಿಲಕ ಸಂ॥ದಲ್ಲಿ ದ್ವಾರಪಾಲಕರ್ರು ಯಿದ[>ದ್ದ] ಬಾಗಲ ಹೊರಗೆ ಸಿಂಹಾಸನದ ಲಂ[>ಅಂ]ಕಣದಾರಭ್ಯ ನಂದಿಕೇಶ್ವರ ದೇವರ ಮುಂದಿನ ಅಂಕಣ ಪರಿಯಂತ್ರಾ ಮಾಡಿ ಕಟ್ಟಿಶಿದ. ಮಹಾದ್ವಾರದ ಗೋಪುರದ ಉತ್ತರ ದಿಕ್ಕಿನ ಬಾಗಲ, ಗೋಪುರದ ಸುತ್ತಲ್ಲು ಯಿಟ್ಟಿಗೆ ಪ್ರಾಕಾರ್ರ ಗೋಡೆ ಸಹಾ ಯೀತ್ತನೆ ಕಟ್ಟಿಶಿ, ಪೂಜಾ ವಿನಿಯೋಗ ಕಟ್ಟಲೆ ಮರ್ರಿಯಾದಿ ಮಾಡಿಶಿ, ಆ ಬಗ್ಯೆ ಕೆಲವು ಗ್ರಾಮಗಳ ಯಿನಾಮು ಬಿಟ್ಟು ನಡಶಿಕೊಂಡು ಬರುತ್ತ ಯಿದಲ್ಲಿ, ಯಿತ್ತಲಾಗಿ ಆನೆಗೊಂದಿಯವರ್ರು ಹರಿಹರ್ರರಾಯರ್ರು ಬುಕ್ಕರಾಯರ್ರು ಯಿದೆ ಪ್ರಕಾರ ಮತ್ತು ಗ್ರಾಮಗಳ ಅಶೇಷವಾಗಿ ಬಿಟ್ಟು ಸುಂಕ ಮುಂತ್ತಾದು ದೇವರ್ರಿಗೆ ಯಿನಾಮು ಬಿಟ್ಟು ನಡಶಿಕೊಂಡು ಬಂದರ್ರು.

ಆ ಮೇಲೆ ಯಿವರ ವಂಶಸ್ತರ್ರು ಮೊದಲ್ಲು ಮಾಡಿಕೊಂಡು ಆನೆಗೊಂದಿ ಸಂಸ್ಥಾನ ಆಳಿದ ಶ್ರೀಸದಾಶಿವದೇವ ಮಹಾರಾಯರ್ರ ಕಾಲಪರ್ರಿಯಂತ್ರ ನಡದು ಬಂತ್ತು. ಯೀ ದೇವಾಲಯಕ್ಕೆ

+ನಕಲ್ಲು (ಮೂ), * ಇದಕ್ಕೆ ಮೂಲದಲ್ಲಿಯೇ ಆಕರ ಸೂಚಿಸಿಲ್ಲ (ಸಂ).

ಯಿವರ ಕಾರ್‍ಯ್ಯಕ್ಕೆ ಕ್ಕರ್ತರಾದ ರಾಮರಾಜ್ಯೆಯ ವೆಂಕಟರಾಜ್ಯೆಯನವರ್ರು ಚಂದ್ರಗುತ್ತಿಯಲ್ಲು ಯಿದೆ ರಾಜ್ಯ ಆಳುತ್ತಿರ್ರುವಾಗ್ಯೆ, ಯಿವರ ಆಜ್ಞಾಧಾರಕರಾದ ಯಿಂಮಡಿ ಅರಸಪ್ಪವಡೆಯರ್ರು ಸೊದೆ ಸಂಸ್ಥಾನವಂನ್ನು ಆಳಿ ಬರ್ರುವ ಕಾಲದಲ್ಲು ಶ್ಯಾಲಿವಾಹನ ಶಕ ವರ್ಷ ೧೪೪೪ನೆಯ ಪ್ರಜೋತ್ಪತ್ಯ ಸಂ॥ರದ ವೈಶಾಖ ಬ ೧೪ ಮಂಗಳವಾರ್ರ ಶ್ರೀನಾರಸಿಂಹ್ವದೇವರಿಗೆ ಗ್ರಾಮ ೧ ದಂನ್ನು ಬಿಟ್ಟು, ಸದ್ರಿ ಸದಾಶಿವದೇವ ಮಹಾರಾಯರ್ರ ಆಖೈರವರ್‍ರಿಗು ದೇವತ್ತಾ ಸೇವೆ ನಡದು ಬಂತ್ತು. ಆ ಮೇಲೆ ಆನೆಗೊಂದಿ ಸಂಸ್ಥಾನವು ದಿನೆ ದಿನೆ ಶಿಥ[ಥಿ]ಳಕ್ಕವಾಗುತ್ತ ಬಂದ ಬಳಿಕ, ಆ ಸೋದೆ ಸಂಸ್ಥಾನವುಂನ್ನು ಸದ್ರಿ ಯಿಂಮಡಿ ಅರ್‍ಸಪ್ಪವಡೆಯರ ಮಗ ಹಂಪೆರಾಯರ್ರು ಗೊವೆ ಚಂದ್ರಗುತ್ತಿ ರಾಜ್ಯವಂನ್ನು ಆಳುತ್ತ ಯಿವರ ಮೊದಲ್ಲು ಮಾಡಿಕೊಂಡು ಆನೆಗೊಂದಿಯವರ ವಳಗೆ ಯೀ ವಂಶಸ್ತರ್‍ರೆ ನಡಕೊಂಡು, ಯಿಂಮಡಿ ಅರ್‍ಸಪನಾಯ್ಕರ್ರ ಮೊದಲು ಮಾಡಕೊಂಡು ಯೀ ಸೊದೆ ಶೀಮೆಯಂನೆ ಆಳಿಕೊಂಡು ಯಿರ್ರುತ್ತ ಯಿದರ್ರು. ಯೀ ಯಿಮ್ಮಡಿ ಅರ್‍ಸಪನಾಯ್ಕರ ಕಾಲಕ್ಕೆ ಶಕ ೧೫೩೧ನೆ ವಿಳಂಬ ಸಂ ।ರಲ್ಲು ಕೆಲವು ಗ್ರಾಮಗಳ ಯಿನಾಮು ಬಿಟ್ಟು ಯಿದಕ್ಕೆ ಶಿಲಾಶಾಸನ ಬರದು ಕಟ್ಟಿಶಿ, ಯಿದೆ ಪ್ರಕಾರ್ರ ದೇವರ ಸೇವೆ ನಡಶಿಕೊಂಡು ಬಂದರ್ರು. ಆಮೇಲೆ ಯೀ ವಂಶದ ರಾಮಚಂದ್ರನಾಯ್ಕರ್ರು ನಂದಿಕೇಶ್ವರದೇವರ್ರ ಪ್ರತಿಷ್ಟೆ ಮಾಡಿ, ಯೀ ಜಾಗಾದಲ್ಲಿ ವಂದೂವರೆ ಅಂಕಣ ಗುಡಿ ಕಟ್ಟಿಶಿ ಧ್ವಜಸ್ತಂಭವಂನ್ನು ಪ್ರತಿಷ್ಟೆ ಮಾಡಿ ದೊಡ ರಥವಂನ್ನು ಕಟಿಶಿದರ್ರು. ರಘುನಾಥರಾಯರ್ರು ಕಾಲ್ಲಿನ ಚಕ್ರ ಮಂಚವಂನ್ನು ಮಾಡಿಶಿಕೊಟರ್ರು. ಸದಾಶಿವರಾಯರ್ರು ಅಮ್ಮನವರ ದೇವಾಲಯವಂನ್ನು ಕಟ್ಟಿಶಿದರ್ರು. ಬಸವಲಿಂಗರಾಜರ ಕಾಲಕ್ಕೆ ಮಂತ್ರಿ ಲಕ್ಷ್ಮಯ್ಯನವರು ಅಷ್ಟದಿಕ್ಪಾಲಕರ್ರ ಪ್ರತಿಷ್ಟೆಮಾಡಿ, ದೇವರ ಸೇವೆಯನ್ನು ಸಾಂಗವಾಗಿ ನಡಶಿಕೊಂಡು ಬಂದರ್ರು.

ಪೂರ್ವಕಲ್ಪಾದಿಯಲ್ಲಿ ಬ್ರಂಹ್ಮದೇವರ ಉತ್ಪತ್ಯ, ಆನಂತ್ರದಲ್ಲಿ ಸಮಸ್ತವಾದ ಭೂಮಿಯಂನ್ನು, ಜನರಂನ್ನು, ವೃಕ್ಷವಂನ್ನು ಸೃಷ್ಟಿ ಮಾಡುವಾಗ್ಯೆ, ಯೀ ಜನಕ್ಕೆ ಮೋಕ್ಷವಾಗಬೇಕುಯಂಬ ನಿಮಿತ್ಯವಾಗಿ ಅಯೋಧ್ಯಾದಿ ಸಪ್ತಮಹಾಪುರಿಯಂನ್ನು ಸೃಷ್ಟಿಮಾಡಿದಾ ಯಿವರನ್ನು ಕುರಿತು ಹೋಗಲಾರದಂಥಾ ಜನರಿಗೆ ಸಪ್ತಮೋಕ್ಷದಾಯಕವಾದಂಥಾ ಪುರಿಯಂನ್ನು ಸೃಷ್ಟಿ ಮಾಡಿದಾ, ಅದು ಯಾವದು ಯಂದ್ರೆ ವಾರನಾಶಿ ೧, ಕುಶ ೨, ಲಂಕಾ ೩, ಕಾಶ್ಮೀರ್ರ ೪, ಕುಂಡಿನಿ ೫, ಜಹರ್‍ರಿ ೬, ಮಂಜರ್‍ರಿ ೭. – ಯೀ ಯೇಳು ಉಪಪುರಿಯಂನ್ನು ಸೃಷ್ಟಿ ಮಾಡಿ ಅದೆ[>ಜ]ಕಲ್ಪಕೋಟಿಯುಗ ದೈವತ್ತು ಮನು ಕಾಲದಲ್ಲಿ ಸೂದಾಯಂಬ ರಾಕ್ಷಸನ ಮಕ್ಕಳಾದಂಥಾ ಮಧುಕೈಟಕ್ಷಭರ್ರು ಶುಕ್ರನ ವರ ಪ್ರದಾನದಿಂದಾ ಯೀ ವಾನವಾಸಿ ಕ್ಷೇತ್ರದಲ್ಲಿ ಮಧುಕೇಶ್ವರ ಕಮಠ ಕ್ಷೇತ್ರದಲ್ಲಿ ಕೈಟಭೇಶ್ವರ್ರ ಸ್ಥಾಪನೆಯಂನು ಮಾಡಿ, ಸ್ವರ್ಗಜಯವಂನ್ನು ಮಾಡಿದರ್ರು. ಆ ಮೇಲೆ ಕೇವಲ ಶಿವಭಕ್ತರ್‍ರನ ವಿಷ್ಣುದೇವಾಲಯ ವಿಷ್ಣುಪ್ರಥಮೆಗಳಂನ್ನು ವಡದ ಕಾರ್‍ರಣಾ ನಾರದ ಮೊಖದಿಂದಾ ಯೀಶ್ವರನು ಯೀ ವರ್ತಮಾನಾ ಕೇಳಿ, ವಿಷ್ಣುವಿನಂನ್ನು ಕುರ್‍ರಿತ್ತು ಹೇಳಿದ್ದುಳ ಯೀ ರಾಕ್ಷಸರಂನು ಕೊಂದು ನನ್ನ ಕೇವಲ ಭಕ್ತರಾದ ಕಾರಣಾ ಕೈಲಾಸದ ಉದ್ಯಾವನದಲ್ಲು ತಂದು ಯಿಡುಯಂತಾ ಅಪ್ಪಣೆ ಕೊಟ್ಟು, ಅದೆ ಪ್ರಕಾರ್ರ ತಂದು ಯಿಟ್ಟರು. ಪುನಹಾ ಯೀಶ್ವರನು ವಿಷ್ಣುವಿನ ಕುರ್‍ರಿತ್ತು ಹೇಳಿದನು: ಯಿವರು ಮೊಕ್ಷಕ್ಕೆ ಅಧಿಕಾರ್‍ರಿಗಳಲ್ಲಾ ಯಿಂನೂ ಪ್ರಾಲಬ್ಧ ಉಂಟು . . . . ಪ್ರಳಕಾಲದಲ್ಲಿ ನಿಂನ ಕರ್ನದಲ್ಲಿ ಉತ್ಪತ್ಯ ಆಗಿ ಯಿದೆ ಮಧುಕೇಶ್ವರ ಕೈಟಭೇಶ್ವರ ಆರಾಧಿಕರ್‍ರಾಗಿ ಬ್ರಹ್ಮದೇವ ಮಾಡುವಂಥಾ ಸೃಷ್ಟಿಗೆ ವಿಡ್ಡರವಂನು ಮಾಡುಥಾರ್‍ರೆ. ಅದರ್‍ರಿಂದ ಆಗ್ಯೆ ನಿನೆ ಕೊಲ್ಲು ಪುನ ಶತಕಲ್ಪಾದಿಯಲ್ಲಿ ನಿನ್ನ ನಾಭಿಕಮಲದಲ್ಲಿ

ಹುಟ್ಟುತಾರ್ರೆ. ಅವಾಗಲ್ಲೂ ಯಿದೆ ಲಿಂಗಾಧಿಕರಾಗುತ್ತಾರೆ. ಆವಾಗ್ಯೂ ಕೂಡಾ ನೀನೇ ಕೊಂಡು ತಂದರ್ರೆ ಮೋಕ್ಷ ಕೊಡಲ್ಲಾದರು ಯಂತಾ ಯೀಶ್ವರನು ಹೇಳಿದನು. ಅದು ಕಾರಣಾ ಯರಡನೆ ಕಲ್ಪದಲ್ಲಿ ವಿಷ್ಣುವು [>ಶೇಷ]ಶ್ಯಾಯಿಯಾಗಿ ಮಲ್ಗಿರುವ ಕಾಲದಲ್ಲು ಅವ ಕರ್ಣಮಲದಿಂದಾ ಮಧುಕೈಟಭರು ಉತ್ಪತ್ಯರಾಗಿ ಪೂರ್ವಜನ್ಮದಲ್ಲಿ ತಾವು ಪ್ರತಿಷ್ಠೆ ಮಾಡಿದಂತಾ ಲಿಂಗದ ಭಕ್ತಿಯ ಸ್ವರೂಪನಾಗಿ, ಸ್ವಾಮಿಯು ಆ ವಟರಿರ್ದಕೆ ಆಧಾರಿಯಾಗಿ ಯಿದ್ದ ಕಾರಣಾ, ಆ ಲಿಂಗಾರಾಧಿಕರಾಗಿ ಯೀ ಬ್ರಹ್ಮದೇವ ಮಾಡಿದಂತಾ ಸೃಷ್ಟಿಯಂನ್ನು ಅಘಾತ ಮಾಡಿದ ಕಾರಣಾ, ವಿಷ್ಣುವಿಗೆ ಕೊಟ್ಟ ದಿವ್ಯ ಸಹಸ್ರಾರ ಆಯುಧವನ್ನು ಮಾಡಿ, ಆ ಲಿಂಗಾರಾಧಿಕ ಮಹಿಮೆದಾ ಅವರಂನು ವಂಚನೆಯಿಂದ ಜೈಶಿ, ಅವರು ನಂಮ್ಮ ಗ್ರಾಮದಿಂದಾ ೨೩೦ ಗವಂಣ್ಯ ಸ್ಥಾಪನೆಮಾಡು ಯಂತಾ ಕೇಳಿಕೊಂಡ ಪ್ರಕಾರ, ಯೀ ವಾನವಾಶಿ ಕ್ಷೇತ್ರದಲ್ಲಿ ಮಧುಕೇಶ್ವರ ಸ್ಥಾಪನೆಯನ್ನು ಮಾಡಿ, ಕೈಟಭೇಶ್ವರನ ಪ್ರತಿಷ್ಠೆ ಮಡಿ, ಯೀ ಮಧುಕೇಶ್ವರನ ಯಿತ್ಯಾದಿ ಗರ್ಭದಲ್ಲಿ ತಾನು ನಿಂತು ಯಿಧಾನೆ. ಆಧಿಮಾಧವಾಯಂತ ಹೇಳುತಾರೆ. ಅದು ಕಾರಣ ಬ್ರಹ್ಮದೇವರ ವಂದು ಕಲ್ಪಿ ಸಂದು ೨ನೆ ಕಲ್ಪದಲ್ಲಿ ಬ್ರಹ್ಮನೆ ೫೦ವ . . . . ಕಲಿಯುಗ ಆರಂಭವಾಗುತ್ತಾ ಅಲ್ಲಿನ ಆಳಿದ ಅರಸುಗಳ ವಿವರ:

ಶ್ಯಾಲಿವಾಹನ ಶಕ ೧೬೭೯ ವಿಶು ಸಂ॥ರದ ನಿಜ ಆಶ್ವಿಜ ಬ ೧೪ ಗುರುವಾರ್ರದಲ್ಲಿ ಕೊಳೆ? ಹುಳ್ಳವುಲಿ ಸೌಖ್ಯತನ ಕಂಡೆವು.

ಕಲಿ ಶಕ ೧೧೧ನೆ ಶುಕ್ಲ ಸಂ॥ರಲ್ಲಿ ಜನಮೆಜಯರಾಯ ಸರ್ಪಯಾಗ ಮಾಡಿದ್ದು.

ಶಾಲಿವಾಹನ ಶಕ ೧೨೯೦ನೆ ಕಿಲಕ ಸಂ॥ರಲ್ಲು ಬುಕ್ಕರಾಯಗೆ ಪಟವಾದ್ದು.

ಶ್ಯಾಲಿ॥ಶಕ ೧೩೦೬ನೆ ಕ್ರೋಧನ ಸಂ॥ರದಲ್ಲಿ ತ್ರಿಯಂಬಕರಾಯರು.

ಶ್ಯಾ॥ ಶಕ ೧೪೭೪ನೆ ಪರಿಧಾವಿ ಸಂ॥ರಲ್ಲು ರಾಮರಾಜ್ಯೆಯನವರ ವೆಂಕಟಾದ್ರಿ ರಾಜ್ಯೆಯನವರ್ರ ನಿರೂಪದಿಂ ವಾಳಿಗದ ಹಂಪ್ಯೆಯನು ಮಾಡಿದ ಸೇವೆ:

೧. ನರಶಿಂಹ್ಮದೇವರ ಶಜ್ಯಾಗೃಹ

೧. ಅಂಮನವರ ಶಜ್ಯಾಗೃಹ

ಶಕ ೧೫೫೦ನೆ ವಿಭವ ಸಂ॥ರದಲ್ಲು ರಘುನಾಥನಾಯ್ಕರ್ರು ಕೊಟ ಕಲ್ಲಮಂಚಾ ೧.

ಶಕ ೧೬೦೮ನೆ ಕ್ಷಯ ಸಂ॥ರದಲ್ಲು ವಿಜ್ಯಾಪುರದ ಅವಾಂತ್ತರ್ರ.

ಶಕ ೧೬೧೧ನೆ ಶುಕ್ಲ ಸಂ॥ರದ ವೈಶಾಖ ಶುಲ ಮಂಗಳವಾರ್ರ ಅವಾಂತ್ತರ್ರ.

ಶಕ ೧೬೮೦ನೆ ಬಹುಧಾನ್ಯ ಸಂ॥ರದ ವೈಶಾಖ ಶುಲ ಮಂಗಳವಾರ್ರ ಕೊಂಕಿಗ ಕಾಲ.

ಕೆಳದಿ:

೧ ಚವುಡಗೊಂಡ

೨ ಭದ್ರಗೊಂಡ

ಚಿಕ್ಕು ಮಟ್ಟದ ವಂಶಾವಳಿ:

ದೊಡ ಸದಾಶಿವರಾಜರ ಕಾಲ

೧ ಕ್ಕೆ ಶಿವಲಿಂಗದೇವರ ಪಟ್ಟ

೩ ಸದಾಶಿವನಾಯ್ಕ
೪ ಸಂಕಣ್ಣನಾಯ್ಕ
೫ ವೆಂಕಟಪ್ಪನಾಯ್ಕ
೬ ಭದ್ರಪ್ಪನಾಯ್ಕ
೭ ಶಿವ್ವನಾಯ್ಕ
೮ ಸೋಮಶೇಖರನಾಯಕ
೯ ಸ್ವೀಕಾರ ಪುತ್ರ್ಸಬ್ಸದ[>ವ]ನಾಯಕ
೧೦ ಸೋಮಶೇಖರನಾಯ್ಕ
೧೧ ಅನುಜ ವಿರಭದ್ರನಾಯ್ಕ
೧೨ ಸ್ವೀಕಾರ ಪುತ್ರ ಚಂನಬ್ಸವನಾಯ್ಕ
೧೩ ಬ್ಸವನಾಯ್ಕ

೨ ಶಂಕ್ರದೇವರ ಪಟ್ಟ
೩ ಸಂಗನಬ್ಸವದೇವರ ಪಟ
೪ ಶಿವರುದ್ರದೇವರ ಪಟ
೫ ಶಿವಲಿಂಗದೇವರ ಪಟ
ಆದಿ ಧಾರವಾಡದ ಆಚೆಗೆ ಪತ್ತಿಗೆ ಶ್ರೀಮಠದಿಂದಾ ಸದ್ರಿ ಶಿವಲಿಂಗದೇವರು ಯಂಬುವರು ಬಂದರು. ಆಗ್ಯೆ ಯೀ ಸ್ತಳದಲ್ಲು ಚಿಕ್ಕಮಟ್ಟಾಯಂತ ಹುಟ್ಟಿಶಿ ಯಿನಾಮು ಬಿಟಕೊಟ್ಟರ್ರು.

❖❖

೮೧
ಬಸರೂರು ಜಪ್ತಿ ಮಾಗಣಿ ಕೈಫಿಯತು

ಮೆಕೆಂರ್ಝಿ ಸಂಪುಟ : ೩೫೩

ಪ್ರಾಕು ಯೀ ಮಾಗಣಿ ಪ್ರತ್ಯೇಕವಿಲ್ಲ. ಬಸರ್ರೂರು ಶ್ರೀ ಮಹಾಲಿಂಗದೇವರಿಗೆ ಪ್ರಾಕು ಹಲ್ಲರ[>ಹಲರ] ಕಾಲದಲ್ಲು ಬಸುರೂರು ಮಾಗಣಿ ಪೈಕಿ ವರ ಗ್ರಾಮದಿಂದ, ಬಸೂರೂರ ಹವಿಗ್ರಾಮದಿಂದ ಕೆಲವು ಬಾಯಿಕುದರ ಗ್ರಾಮ ೧, ಹಟ್ಟಿಕುದರಗ್ರಾಮ ವೊಂದು, ಆ[>ಹಾ]ರನಾಡ ಪ್ರಣಿ ಹಿರುಕು[>ಹಿರಿಕೂರು]ಗ್ರಾಮ ೧, ಕೈಮ ೧, ಸಬಲಾಡಿ ೧, ಕಟ್ಟುಬೆಲತ್ತೂರು ಗ್ರಾಮ ೧, ಯೀ ಪ್ರಕಾರ ಗ್ರಾಮಗಳು ಹಾರನಾಡು ಮಾಗಣಿಯಿಂದ ಸಹಾ ಬಿಟ್ಟು ಯಿರುವದರಿಂದ, ಯೀ ಗ್ರಾಮಗಳು ಹಲವರ[>ಹಲರ] ಕಾಲದಾರಭ್ಯಾ ಶ್ರೀ ಮಹಾಲಿಂಗೇಶ್ವರದೇವಸ್ಥಾನದ ಮಣಿಗಾರನ ಮುಖಾಂತ್ರ ನಡದು ಬಂದು, ಯಿತಲಾಗಿ ಹೈದರನ ದಿರ[>ವ]ಸದಲ್ಲಿ ಸ್ವಭಾನು ಸಂವತ್ಸರದಲ್ಲು ನವಾಬರು ಮಾ[>ಮ]ಡಿದ ಮೇಲೆ, ಸದರಿ ಗ್ರಾಮಗಳು ಜಪ್ತಿಮಾಜಿದ್ದರಿಂದಲು, ಯಿದು ಶಿವಾಯಿ

ಉಪ್ಪಿನ ಗುತ್ತಿಗೆ ಬಗೇಲುಂ ಗ ೧೨೦, ಕುಂದಾಪುರ ಗ್ರಾಮ ೧ ಸಹಾ ಅಲಾಹಿದೆ ಬಿಟ್ಟಿದರಿಂದ, ಆ ಪೈಕಿ ಜಂಗಮರ ಕಾಲದಲ್ಲು ಕುಂದಾಪುರಗ್ರಾಮ ಜಾಗಾ ಆದ್ದರಿಂದ, ಕಸಬಾ ಮೊಕರೂರು ಮಾಡುವಾಗೆ ಬಸುರೂರ ಸುಂಕದಲ್ಲು ಗ ೫೧೦ ವರಹಾ ಬಿಟ್ಟು ಯೀ ಗ್ರಾಮ ಜಪ್ತಿಮಾಡಿ, ಕುಂದಾಪುರ ಗ್ರಾಮ ಕಸಬಾ ದಾಖಲು ಮಾಡಿದರು. ಮೇಲಾದ ಹ[>ಹಾ]ರನಾಡ ಪೈಕಿ ಯಿರುವ ಗ್ರಾಮಗಳು, ಬಸುರೂರ ಪೈಕಿ ಯಿರುವ ಗ್ರಾಮಗಳು ಸುಂಕ ಉಪ್ಪಿನಗುತ್ತಿಗೆ ಸಹಾ ಬಹದರನ ದಿವಸದಲ್ಲು ಪ್ರತ್ಯೇಕ ಬಸುರೂರ ದೇವಸ್ಥಾನದವರ ಮುಖಾಂತ್ರ ಹಣ ಮುಂತಾಗಿ ತರಸುತ್ತಿದ್ದರು.

ಆ ಮೇಲೆ ಸುಲತಾನನ ಕಾಲ ಆದ ಮೇಲೆ, ಯೀ ಗ್ರಾಮಗಳ ಪೈಕಿ ಹಾರನಾಡು ಮಾಗಣಿಗೆ ಕೈಮ ೧, ಸಬಲಡಿ ಯರಡು ಗ್ರಾಮ ಹೋಗಲಾಗಿ, ಸುಂಕದ ಬಾಪ್ತಿ ಉಪ್ಪಿನಗುತ್ತಿಗೆ ವರಹಾ ಸಹಾ ಶೊಭಕೃತು ಸಂವತ್ಸರದಲ್ಲು ಜಪ್ತಿ ಆಗಿ ಸುಂಕಕ್ಕೆ ಸೇರಿತು. ಬಾಕಿ ಹಾರನಾಡ ಪೈಕಿ ಹಿರಿಕೂರು ೧, ಹಟಕೂರು[>ಹಟ್ಟಿಕುದುರೆ] ೧, ಬಸುರೂರು ಪೈಕಿ ಬಾವಕುರು ೧, ಕುಂದಾವರ [>ಕುಂದಾಪುರ] ಜಪ್ತಿಗ್ರಾಮ ೧, ಕಟ್ಟು ಬೆಲತ್ತೂರಗ್ರಾಮ ೧ – ೫

ಉಭಯಂ ಗ್ರಾಮ ೫ರ ಶೊಭಕೃತು ಸಂವತ್ಸರದಾರಭ್ಯ ಪ[>ವ]ಟ್ಟು ಹೋಬಳಿಯಲ್ಲು ಪೊಟಗ್ರಾಮಗಳ ಮುಖಾಂತ್ರ ಸರಕಾರಕ್ಕೆ ಹಣ ವಸೂಲು ಆಯಿತು. ಶಾನಬವರು ದೇವಸ್ಥಾನದ ಶಾನಭೋವಿಕೆ ಮಾಡಿದವರ ನೋಡಿಕ್ಕೊಂಡು ಬಂದರು. ಯೀ ಪ್ರಕಾರ ಆನಂದ ಸಂವತ್ಸರದ ವರೆಗೆ ಸುಲತಾನನ ಕಾಲದಲ್ಲು ನಡದು ಬಂತು. ಯಿತಲಾಗಿ ತುಕಡಿ ಆದ ಮೇಲೆ ರಾಕ್ಷಸ ಸಂವತ್ಸರದಲ್ಲು ಕುಂದಾಪುರ ತುಕಡಿಗೆ ಹಡಿಕೂರು, ಹಿರೆಕೂರು ೧, ಜಪ್ತಿಗ್ರಾಮ ೧, ಬಾಉಕೂರು – ಅಂತು ಗ್ರಾಮ ೪ ಸೇರಿ ಬಾಕಿ ಕಟ್ಟುಬೆಲತ್ತೂರು ಗ್ರಾಮ ೧ನ್ನು ಮೂಗಿವಿನ ತುಕಡಿ ಮುಖಾಂತ್ರ ನಡೇತು. ಯಿ ಪ್ರಕಾರ ಸುಲತಾನನ ಬದಕು ಆಖ್ಯೆರು ವರೆಗೆ ನಡೆತು. ಯಿತಲಾಗಿ ತುಕಡಿ ಆದ ಮೇಲೆ ಸದರಿ ಗ್ರಾಮ ೫ರ ಪಟೇಲರು ಮೊಕರರು ಮಾಡಿದ್ದು:

೧ ಕುಂದಾವರ[>ಕುಂದಾಪುರ]ಗ್ರಾಮ ಹಾಳ್ಳಿ ಜಪ್ತಿ ಬಗೆ ಯೀ ಕೃಷ್ಣಭಟ್ಟ ಲ್ಲಿಂಗಾಭಟ್ಟ ೧.

೧ ಹಿರಿಕುರೂರಿಗೆ ಕೆಡಿಮಣ್ಣಶೆಟ್ಟಿ ೧, ಪುಟ್ಟಸೆಟ್ಟಿ ೧.

೧ ಹಡಿಕುದರಿಗೆ[>ಹಟ್ಟಿಕುದುರೆ]ವಾಸುಭಟ್ಟ ೧, ಪುಟ್ಟಭಟ್ಟ ೧.

೧ ಬಾರಕುದರಿಗೆ ವಾಸುಭಟ್ಟ.

೧ ಕಟ್ಟುಬೆಲತ್ತೂರು ಹಾವಳಿಸೆಟ್ಟಿ ೧, ದೇವೈಶೆಟ್ಟಿ ೧

---

೫ ಯಿದಕ್ಕೆ ಉಪಗ್ರಾಮ ಆಯೀರ ಬಸ್ತಿಗೆ

೧ ಉಂಬಳಿ

೧ ಹೆಲಕಾವಿ

೧ ಬಡಾಕೆರೆ

೩

೮ಕ್ಕೆ

ಯಿದಕ್ಕೆ ಶಾನುಭವರು:

ಪ್ರಾಕು ಉತ್ತಾರ ಬಿಟ್ಟ ಲಾಗಾಯಿತು ಸ್ಥಳದ ಪ್ರತಿ ರಂಗಪ್ಪಯ್ಯಯಂತ ಲಾಗಾಯಿತು ಆರಭ್ಯಾ ಯಿತನ ಕುಟುಂಬ ಕಡೆ ಅಪ್ಪಣ್ಣಯಂಬವನು ಯೀ ವರೇಗೆ ದೇವಸ್ಥಾನದ ಶಾನುಭವದತನ ಯಿ ಗ್ರಾಮದ ಶಾನುಭೋವತನಕ್ಕೆ ಸಹಾ ಹಾಜರು ಯಿದ್ದಾನೆ. ನರಸಪ್ಪಯ್ಯ ಯಂಬವನು ಸೋಮಶೇಖರನಾಯಕರ ದಿವಸದಲ್ಲು ಕಾಣಿಕೆ . . . . ಟ್ಟು ಮಾಡಿಕೊಂಡು ಅನುಭವಿಸಿಕೊಂಡು ಬಂದದರಿಂದ, ಹಾರಿ[>ಹಾಲಿ]ದೇವಸ್ತಾನದ ಶ್ಯಾನಭವಿಕೆ ಮಾತ್ರ ನಡೆಯತದೆ. ಶಿಮೆ ಶಾನುಭವಿಕೆ ಕುಂಪಣಿ ಸರಕಾರ ಆದ ಮೇಲೆ ನಡೆಯುವದಿಲ್ಲ.

ಅಂತು ದೇವರು ೩ಕ್ಕೆ

೧ ಯೀ ಗ್ರಾಮದವರು ಪ್ರಾಕು ಪ್ರತಿಷ್ಟೆ ಮಾಡಿದ ಬಗೆ ಯೀ ಹಳ್ಳಿ[>ಟ್ಟಿ]ಕುರದ ವಿನಾಯಕ ದೇವರು.

೧ ಸದರಿ ಪ್ರಕಾರ ಬಾವಕುರು[>ಬಾಯಿಕುದುರ]ಗೋಃನಾದೇವರು

೧ ಹಳ್ಳಿಕುದುರೆ[>ಹಟ್ಟಿಕುದುರ] ವೆಂಕಟರಮಣ ದೇವರು

೩

❖❖

೮೨
[ಬಸರೂರು ಮಾಗಣೆ ಕೈಫಿಯತ್ತು]

ಡಿ. ನಂಬರ್ ೧೮೩೮

ಶ್ರೀರಾಮ ಸಹಾಯಂ.

ಯಾದಾಸ್ತು ಮಾಗಣೆಗಳ ಕೈಫೀಯತ್ತು:

ಬಸರೂರ ಮಾಗಣೆ ಒಂದಕ್ಕೆ ಪ್ರಾಕ್. ಬಸ್ರೂರ ಪಟ್ಟಣ ಶುಕ್ತಮತಿವಾಹಿ[+ನಿ] ತೀರವಾಗಿರುವದರಿಂದಲೂ ನದಿ ತಟಾಕಕ್ಕೆ ಪ್ರಾಕ್ ಚೈದ್ಯದೇಶದ ಅರಸು ವಸುಚಕ್ರವರ್ತಿಯು ಭೂಸಂಚಾರ ನಿಮಿತ್ತವಾಗಿ ಬಂದು, ಈ ಸ್ಥಳಕ್ಕೆ ಬಂದಲ್ಲಿ ಶುಕ್ತಮತಿ ಸಮೇತ ವಾರ್ಥಿವೇಶ್ವರ ದೇವರ ಪೂಜೆಯನ್ನು [+ಮಾಡಲಾಗಿ] ದ್ವಾಪರಯುಗದ ಕಾರ್ತೀಕಮಾಸದಲ್ಲಿ ಸೋಮವಾರ ಪ್ರದೋಷಕಾಲದಲ್ಲಿ ದೇವರು ಪ್ರತ್ಯಕ್ಷವಾಗಿ ದೇವಾಲಯವನ್ನು ನಿರ್ಮಾಣ ಮಾಡಿಸಿ, ಪಟ್ಟಣವನ್ನು ಕಟ್ಟಿಸಿ ರಾಜ್ಯವನ್ನು ಆಳಿಕೊಂಡು ಶುಕ್ತಮತೀ ತೀರದಲ್ಲು ದ್ವಾಪರಯುಗದಲ್ಲಿ ನಡೆಯಿತು. ಆ

ಮೇಲೆ ಚಂದ್ರಸೇನನೆಂಬವನು ಬಾರಕೂರ ರಾಜ್ಯವನ್ನಾಳುವಾಗ್ಯೆ ಚಿತ್ರಸೇನ ಎಂಬವನ ಪರ್ಯಂತರಕ್ಕೂ ನಡೆಯಿತು.

ಆ ಮೇಲೆ ಭೂತಪಾಂಡ್ಯ . . . ಎಂಬವನು ಹುಟ್ಟಿ ಬಾರಕೂರ ರಾಜ್ಯವನ್ನು ಆಳಿಕೊಂಡು ಬರುತ್ತಿರಲು ಆತನ ವಂಶದಲ್ಲಿ ಈ ಹಲವರು[>ಹಲರು] ಎಂಕ ಬದರಸಾ ಎಂಬವರು ಹುಟ್ಟಿ ಬಾರಕೂರರಾಜ್ಯವನ್ನು ಆಳುತ್ತಿರುವಾಗ್ಯೆ, ಬಸ್ರೂರ ಪಟ್ಟಣವನ್ನು ತನ್ನ ಕಡೆ ಚಾಕರರು [ಚೋಕರಾಮ]ಸೆಟ್ಟಿ ಎಂಬವನ ಅಧೀನ ಮಾಡಿರುವುದರಿಂದ ಚೋಕರಾಮಸೆಟ್ಟಿ ಎಂಬವನು ಬಸ್ರೂರ ಪಟ್ಟಣಕ್ಕೆ ಹಲವರು [>ಹಲರು] ಎಂಬ ಹೆಸರಿನಿಂದ ಮಹಲಿಂಗದೇವರ ಅರಸರನ್ನು ಮಾಡಿಕೊಂಡು ಬಾಳಿಕೊಂಡು ಇರುವಾಗ್ಯೆ, ಕೆಳದಿ ವೆಂಕಟಪ್ಪನಾಯಕ ಎಂಬವನು ಒಂದು ಪಟ್ಟಣದ ಕೆಳಗಿನ ರಾಜ್ಯವನ್ನು ಅನುಭವಿಸಿಕೊಂಡು ಬರುವಾಗ್ಯೆ, ಅವನ ಕೈ ಕೌಲು ಬರೆಸಿಕೊಂಡು, ಅವನ ಕೆಳಗೆ ಬಸ್ರೂರ ಪಟ್ಟಣ ಬಗ್ವಾರಿ?[>ಲಿ] ಹೋಬಳಿಗೆ ದಾಖಲಾಗಿ ನಡೆದು ಬಂತು. ಈ ಮಾಗಣಿಗೆ ಇರುವ ಮೋಜಿ? ೧ ಕಂದಾವರ ಗ್ರಾಮ, ೧ ಕಸಬಾ ಉಸ್ರೂರಿಗೆ ಪ್ರಾಕ್ ಮಧುರಹರಿಗ್ರಾಮ, ೧ ಆನಗಳಿಗ್ರಾಮ. ಅಂತು ಗ್ರಾಮ ಮೂರು ಇರುತ್ತಿದ್ದಲ್ಲಿ, ಇದರಲ್ಲು ಇತ್ತಲಾಗಿ ಕೊಟ್ಟಿತೇರು ಎಂಬುದು ಗ್ರಾಮ ೧, ಕಸಬೇಗ್ರಾಮ (ಬಸ್ರೂರು) ಎಂದು . . . ಪ್ರಾಕ್ ಮಧುರ ಹದಿಯಲ್ಲಿ ಇದ್ದೂದನ್ನು ಸುಲತಾನನ ಕಾಲದಲ್ಲಿ ರಾಕ್ಷಸ ಸಂವತ್ಸರದ ಕಟ್ಟಿಕೊಂಡು ವಾಗ್ಗೆ ಮಾಡಿದರು . . . . ಇದರ ದೇವಾಲಯ: ೧ ಪ್ರಾಕ್ ಅಗಸ್ತ್ಯರ ಪ್ರತಿಷ್ಠೆ ಆದಿನಾಥದೇವರು.

೧ ಆನಗಳಿ ಚೆನ್ನಕೇಶ್ವರದೇವರು, ೧, ದೇವಿದೇವಸ್ತಾನ(ಯಿರಚವು)?.

೧, ವೀರಭದ್ರದೇವರು. ೧, ಹನುಮಂತದೇವರು. ೧, ಹಲವರು[>ಹಲರು] ತಿರುಪತಿ ತ ಪ್ರತಿಷ್ಠೆ ಮಾಡಿದ ಬಗೆ . . . . ವೆಂಕಟರಮಣದೇವರು.

೧, ಉಜೂರು ಸ್ವಾಮಿ ಕಾರ್ತಿಕದೇವರು ಸ . . . . ನವರ ಪ್ರತಿಷ್ಠಿತ ದತ್ತಾತ್ರೇಯದೇವರ. ೧, ರಾಮಚಂದ್ರದೇವಸ್ಥಾನ. ೧, ಕೊಡಲಿ ನಾಲ್ಕು ದೇವರು. ೧, ಬಡಾಕೆರಿ ವಿಷ್ಣುಮೂರ್ತಿ. ೧, ಹೇರಂಬಪುರ ಲಿಂಕ[>ಗ] ದೇವರು. ೧, ಜಂಬುನದಿ ಜಂಬುಕೇಶ್ವರ, ಜಂಬುನದಿ ಜಾಂಬವರ ಪ್ರತಿಷ್ಠೆ. ೧, ಆಂಜನೇಯದೇವರು. ೧, ಅಮಟಿಕೂಡಲ ಜನಾರ್ಧನ. ೧, ಉಂಬುಳಿ ಜನಾರ್ಧನದೇವರು. ೧, ಗಾಲವೇಶ್ವರ ಗಾಲವರು . . . . ೧, ವಿಶ್ವೇಶ್ವರ ದೇವರು. ೧, ಕಳಂಜಿ ವಿನಾಯಕದೇವರು – ಒಟ್ಟು ೨೧ ದೇವರು.

೨ ಮಹಜಿರು: ೧ ಜುಮ್ಮಾ ಮಹಜಿರು. ೧ ಅಲಿರಾಜನು ಕಟ್ಟಿಸಿದ ಮಹಜಿರು = ಜುಮ್ಲ ೨. ೧ ದರಗಾ. ೧ ಜಂಗಮ ಮಲ್ಲಪ್ಪ . . . . ೧ ಸುಂಕದ ಕಟ್ಟೆ ಶಿಲಾಶಾಸನ ೬೦ರ ವಿವರವನ್ನು ಪ್ರತ್ಯೇಕವಾಗಿ ಬರೆಯಬೇಕು. ಇದಕ್ಕೆ ಬದುಕು ಮಾಡಿದವರು ಹಲ್ಗಿರ[>ಹಲರ] ಕಾಲದ ಆರಭ್ಯ ಹಲ್ಗಿರಿಗೆ[>ಹಲರಿಗೆ] ನಡೆಯಿತು.

ಆ ಮೇಲೆ ಶಿವಭಕ್ತರ ದಿವಸದಲ್ಲಿ ಬಗ್ವಾವೀ[>ಲಿ] ಹೋಬಳಿ ಬದುಕು ಮಾಡಿದವನು ಸರಕಾರದಿಂದ ಮಣೀಗಾರನನ್ನು ಇಟ್ಟು ನಡೆದುಬಂತು. ಶಾನುಬವರು ಹಲ್ಲಿರ[>ಹಲರ] ಕಾಲದಾರಭ್ಯ ಸಬನಿಸ(ಪುಟ್ಟಪ್ಪಯ್ಯ) ಎಂಬವನ ಹಿರಿಯವರು ಬಸ್ರೂರ ಪುಟ್ಟಪ್ಪಯ್ಯ ಎಂಬವರ ಕಡೆಯವರು

ಸಹ ಅನುಭವಿಸಿಕೊಂಡು ಜಂಗಮರ ಕಾಲದಲ್ಲು, ದೊಡ್ಡನವಾಬರ ಕಾಲ, ಪಾಶ್ಚಾ ಇವರ ಕಾಲದಲ್ಲಿ ಸಹ ಇದರ ಈ ಸ್ಥಳದ ಪ್ರತಿ ಗುಮಾಸ್ಥಗಿರಿಯಲ್ಲಿ ತಮ್ಮ ಕಡೆ ಜನವನ್ನಿಟ್ಟು ವಿಚಾರಿಸುತ್ತಿದ್ದರು. ಯಿತ್ತಲಾಗಿ ನವಾಬರ ಕಾಲದಾರಭ್ಯ ತಂದು [ದೇ+]ವಪ್ಪಯ್ಯ ಎಂಬವನಿಗೆ ಇಟ್ಟು ಇರುವುದರಿಂದ ಇ ವರೇಗೆ ಪ್ರತಿಯಾಗಿ ನಡೆ(ಯು)ತ್ತದೆ. ಈಗ ಅವರ ಕಡೆ ದೇವಪ್ಪಯಂತ ಇದ್ದಾನೆ. ಬಸ್ರೂರ ಪುಟ್ಟಪ್ಪಯ್ಯನವರ ಪ್ರತಿ ಅವರ ಕಡೆ ಗುಮಾಸ್ತ ಲಿಂಗಪ್ಪ ಎಂಬವನ ಇಟ್ಟು ಸುಲ್ತಾನರ ಕಾಲದಾರಭ್ಯ ನಡೆಯಿತು. ಈಗ ಕುಂಪಣಿ ಅಮಲು ಆದಮೇಲೆ ಬಸ್ರೂರು ಗ್ರಾಮ ೪ರ ಪೈಕಿ ದೇವಪ್ಪನಿಗೆ ೧ ಬಸ್ರೂರು, ೧ ಕಂದಾವರ, ೧ ಮಧುರಹದಿ – ಜುಮ್ಲ ೩, ೧ ಲಿಂಗಪ್ಪಗೆ ಆನಗಳ್ಳಿ ಗ್ರಾಮ – ಈ ಪ್ರಕಾರ ನಡೆದಿರುತ್ತದೆ. ಪಟ್ಟವಿದ್ರು ಈ ಊರಿಗೆ ಪ್ರಾಕ್ ಮಾಣಿಗಾರಕನ ಮಾಡುವವನ ಮುಖಾಂತ್ರ ನಡದು ಬಂದಿರುವುದರಿಂದ, ಪಟ್ಟವಿದ್ರು ಇಯೆಂತ ಗೊತ್ತಿಲ್ಲ. ಈಗ ಕುಂಪಣಿಯ ಅಮಲಾದ ಮೇಲೆ ಪಟ್ಟವಿಕೆ ಸಂಬಳವನ್ನು ಗೊತ್ತು ಮಾಡಿದರು. ೧ ಬಸ್ರೂರಿಗೆ ಮಹಲಿಂಗಸೆಟ್ಟಿ, ೧ ಆನಗಳ್ಳಿಗೆ, ೧ ನರಸಪ್ಪ ಹೆಬ್ಬಾರ, ೨ ಮದುರಹದಿ, ೧ ಚಿಕ್ಕಸೆಟ್ಟಿ, ೧ ಸುಬ್ಬಸೆಟ್ಟಿ, ೧ ಕಂದಾವರಕ್ಕೆ ಪುಟ್ಟಯ್ಯ . . . ಮಂಚಪುಟ್ಟಯ್ಯ ೧ ರಾಮಸರುಹಾಗ – ಜುಮ್ಲ ೬, ಈ ಪ್ರಕಾರ ನಡೆದು ಬಂದಿದೆ. ಈ ಮಾಗಣಿಯಲ್ಲು ಇನಾಮಾಗಿ ಜೋಯಿಸ ಕೃಷ್ಣಯ್ಯ ಮಂಜರಿಗೆಗ ನಡೆತ್ತದೆ. ಸದರಿ ಮಾಗಣಿ ಈ ಸುಲ್ತಾನ ದಿವಸದಲ್ಲಿ ತುಕಟಿ ಆದ ಕುಂದಾಪುರದಲ್ಲು ನಡೆದಿದೆ.

❖❖

೮೩
ಬಳಿಸಾಗರದ ಎಣೆಗುಡ್ಡೆ ದೇವಾಲಯ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಕುಂಪಣಿ ಸರಕಾರಕ್ಕೆ, ಬಳಿಸಾಗರದ ಯೆಣ್ಣೆಗುಡ್ಡೆಗ್ರಾಮದ ಮಹಾಲಿಂಗೇಶ್ವರ ದುರ್ಗಾಪರಮೇಶ್ವರಿ ವೀರಸ್ತಂಭದವರ[>ವೀರಭದ್ರದೇವರ] ಕೈಫಿಯತು.

ಶಾಲಿವಾಹನ ಶಕಾಬ್ದಿ ೧೫೧೭ನೆ ಜಯ ಸಂವತ್ಸರ ಕಾರ್ತೀಕದಲ್ಲು ಪೂರ್ವದಲ್ಲಿ ಖರಾಸುರ ಪ್ರತಿಷ್ಟೆ ಮಹಾಲಿಂಗೇಶ್ವರದೇವರು ಪೂಜಾರುಹರಾಗಿ ಯಿರುವಲ್ಲಿ, ಆ ಸ್ಥಳದಲ್ಲು ಕೊಂಡೆಯಂಬುವ ಬ್ರಾಹ್ಮಣನು ಪರಮಭಕ್ತಿಯಿಂದಾ ದೇವರ ಸೇವೆಮಾಡಿಕ್ಕೊಂಡು ಯಿರುತ್ತಾಯಿದ್ದು, ತನಗೆ ಅಮ್ಮಾನೋರು ಪ್ರಸನ್ನವಾಗಬೇಕೆಂಬುದಾಗಿ ಕೊಲ್ಲುರಿಗೆ ಹೋಗಿ, ಮೂಕಾಂಬಿಕಾ ಅಮ್ಮಾನೋರಲ್ಲಿ ಭಜನೆ ಬಹುದಿವಸ ಮಾಡಿದ್ದರಿಂದಾ ಅಮ್ಮಾನೋರು ಪರಮಸಂತೋಷಪಟ್ಟು, ಯೀ ಬ್ರಾಹ್ಮಣರಿಗೆ ಪ್ರತ್ಯಕ್ಷವಾಗಿ "ಯೇನು ಕಾರಣ ನೀನು ಭಜನೆ ಮಾಡಿದೆ?" ಯಂಬುದಾಗಿ ಕೇಳಿದಲ್ಲಿ, "ನನ್ನ ಸ್ಥಳದಲ್ಲಿ ನನಗೆ ನೀನು ಪ್ರಸನ್ನಳಾಗಿ ನನ್ನ ಯಿಂದಾ ಪೂಜೆಯನ್ನು ತೆಗೆದುಕ್ಕೊಂಡು ನನಗೆ ಮೋಕ್ಷವನ್ನು ಕೊಡಬೇಕು"ಯಂಬುದಾಗಿ ಕೇಳಿಕೊಂಡದರಿಂದಾ, "ಅದೇ ರೀತಿಗೆ ಆಗಲಿ"ಯಂಬದಾಗಿ ಅಭಯವನ್ನು ಕೊಟ್ಟು, "ನೀನು ಸ್ಥಳಕ್ಕೆ ಹೋದಲ್ಲಿ ಅಲ್ಲಿಗೆ ನಾನು ವೀರಭದ್ರ ಸಹಿತವಾಗಿ ಬರುತ್ತಾ

ಯಿದ್ದೇವೆ. ಯಿಶ್ವರ ಸನ್ನಿಧಿಯಲ್ಲು ನಿಲ್ಲುತ್ತಾ ಯಿದ್ದೇವೆ. ನಿನ್ನ ಮನಸಾಭಿಷ್ಟವು ಕೊಡುತ್ತೇನೆಂ"ಬದಾಗಿ ಅಭಯವನ್ನು ಕೊಟ್ಟದರಿಂದ, ಅದೆ ರೀತಿಗೆ ಮಹಾಪ್ರಸಾದವೆಂದು ತಿಳದುಕೊಂಡು ಯೀ ಬ್ರಾಹ್ಮಣ ತನ್ನ ಸ್ಥಳಕ್ಕೆ ಬಂದು ಸೇರಿದನು.

ಅನಂತರ ವಬ್ಬಾನೊಬ್ಬ ಶಿಲ್ಪಿ ತಾನು ಅಮ್ಮಾನೋರ ಪ್ರಾರ್ಥನೆ ಮಾಡಿಕ್ಕೊಂಡು, ವೊಂದು ಅಮ್ಮಾನೋರ ವಿಗ್ರಹಲು, ವೊಂದು ವೀರಭದ್ರ ವಿಗ್ರಹಾ ಸಹಿತವಾಗಿ ಮಾಡಿಕ್ಕೊಂಡು ಕೊಲ್ಲುರಿಗೆ ಹೋಗಿ, ಸಮರ್ಪಣೆಮಾಡಬೇಕೆಂಬುದಾಗಿ ಹೊರಟು ಬರುವಲ್ಲು, ಯಿದೆ ಮಾರ್ಗಸ್ತನಾಗಿ ಬಂದು ದೇವಸ್ಥಾನದಲ್ಲಿ ರಾತ್ರಿವಾಸ ಮಾಡಿದನು. ಆ ರಾತ್ರಿ ಅಮ್ಮಾನೋರು ಆ ಶಿಲ್ಪಿ ಸ್ವಪ್ನದಲ್ಲಿ ಬಂದು "ನಾನು ಯಿಲ್ಲಿಯೇ ನಿಲ್ಲುತಾ ಯಿದ್ದೇನೆ. ಮುಂದೆ ತೆಗೆದುಕೊಂಡು ಹೋಗ ಕಾರಣ ಎ[>ಯಿ]ಲ್ಲಾ. ಯೀ ಪ್ರತಿಮೆ ಕೊಂಡೆಯ ಯಂಬ ಬ್ರಾಹ್ಮಣನ ವಶಕ್ಕೆ ಕೊಡುವದೆಂ"ಬದಾಗಿ ಸ್ವಪ್ನವಾದ್ದರಿಂದ, ಅದೇ ರೀತಿಗೆ ಉದಯದಲ್ಲಿ ಪ್ರತಿಮೆಯನ್ನು ತೆಗೆದುಕ್ಕೊಂಡು ಬಂದು, ಕೊಂಡೆಯಂಬ ಬ್ರಾಹ್ಮಣನ ವಶಕ್ಕೆ ಕೊಟ್ಟು ಹೋದನು. ಯೀ ಬ್ರಾಹ್ಮಣ ಪರಮಸಂತೋಷಚಿತ್ತನಾಗಿ, 'ಅಮ್ಮಾನೋರು ಹೇಳಿದ ಪ್ರಕಾರ ಪ್ರಸನ್ನವಾದರೆಂ'ಬುದಾಗಿ ಯೀ ಮಹಾಲಿಂಗೇಶ್ವರದೇವಸ್ಥಾನ ಆವರ್ನದಲ್ಲಿ ದೇವರ ಬಲಭಾಗದಲ್ಲಿ ವೊಂದು ದೇವಸ್ಥಾನ ಕಟ್ಟಿಸಿ, ಯಡಭಾಗದಲ್ಲಿ ವೊಂದು ದೇವಸ್ಥಾನವನ್ನು ಕಟ್ಟಿಸಿ, ಭಾದ್ರಪದ ಶು ೧೨ ದಿವಸ ಶುಭಮೂಹುರ್ತದಲ್ಲಿ ದೇವರ ಬಲಭಾಗದಲ್ಲಿ ಅಮ್ಮಾನೋರನು, ಯಡಭಾಗದಲಿ ವೀರಭದ್ರದೇವರನು ಪ್ರತಿಷ್ಟೆಮಾಡಿ, ಬಹುದಿವಸ ದೇವರ ಸೇವೆಮಾಡಿಕ್ಕೊಂಡು ಯಿರುವ ಕಾಲದಲ್ಲಿ, ದೇವರ ಪೂಜೆ ಬಗ್ಗೆ ಪೂರ್ವದಲ್ಲಿ ಯಿದ್ದ ಬ್ರಾಹ್ಮಣ ಮೃತನಷ್ಟವಾಗಿ ಹೋದುದರಿಂದ ದೇವರ ಪೂಜೆ ಬಗ್ಗೆ ಕಲ್ಲುಮಂಜೆಯಿದ್ದಾ ರುಕಶ್ಯಾಖಾದ್ಯಾಯಿ ಅಶ್ವಾಲಾಯನ ಸೂತ್ರ ಅಂಗೀರಸ ಗೋತ್ರೋತ್ಪನ್ನನಾದ ನಾರಣಭಟ್ಟರು ಯಂಬ ಬ್ರಾಹ್ಮಣ ಕರತಂದು ಯಿಟ್ಟು, ಪೂಜೆಯನ್ನು ನಡಸುತ್ತಾ ಯಿದ್ದನು. ಅನಂತರಾ ಅಮೃತಪಡಿ ನಂದಾದೀಪದ ಬಗ್ಗ್ಯೆ ದೇವರು ಸುತ್ತಾ ಮುತ್ತಾ ಗ್ರಾಮಗಳಲ್ಲಿ, ಭಕ್ತಾದಿಗಳಿಗೆ ಮನಸಾಭೀಷ್ಟವನ್ನು ಕೊಟ್ಟು, ಅವರವರ ಕೇಣಿಯಲ್ಲಿ ಕೆಲಉ ಭೂಮಿ ಸಂಪಾದಿಸಿಕ್ಕೊಂಡು ಯೀ ರೀತಿ ಯಿರುವಲ್ಲಿ, ಆ ಕೊಂಡೆಯಂಬ ಬ್ರಾಹ್ಮಣನು ಮೋಕ್ಷವನ್ನು ಹೊಂದಿದನು. ಅನಂತರಾ ಯಿದೇ ಈ ರೀತಿ ಅಮೃತಪಡಿ ನಂದಾದೀಪ ನಡೆಯುತ್ತಾ ಬರುತಿರಲಾಗಿ, ಯೀಚಿಗೆ ಬಾರಕೂರ ಅರಸುಕಾಲದಲ್ಲು ಆ ಬಗೆ ಭೂಮಿಯನ್ನು ಅರಮನಿಗೆ ಶೇರಿಸಿ, ಅರಮನೆಯಿಂದಾ ೬೭೯೨॥ದ ಭೂಮಿಯನ್ನು ವಟ್ಟಾಗಿ ಧಾರೆಯರದು ಕೊಟ್ಟನು. ಯೀ ಬಗ್ಗ್ಯೆ ಸನ್ನದು ಮನೆವಳಗೆ ಯಿದ್ದಲ್ಲು, ತಿಂಗಳ ಹೆಗ್ಗಡೆ ಅವಾಂತ್ರದಲ್ಲಿ ಮನೆ ಅಗ್ನಿದಗ್ಧವಾದ ಕಾಲದಲ್ಲಿ. ಅಗ್ನಿಯಲ್ಲಿ ಹೋಯಿತು. ಅನುಭವದ ಮ್ಯಾಲೆ ನಡದು ಬರುತ್ತಾ ಬಂತು. ಯೀಚಿಗೆ ಕುಂಪಣಿ ಸರಕಾರವಾದ ಮೇಲೆ ಮಂಡ್ರೋಲು ಸಾಹೇಬರು ನೋಡಿ ೨೪೯೦ ತಸದೀಕು ಮಾಡಿಕೊಟ್ಟರು. ಪೂರ್ವದಲ್ಲಿ ಹಿರೇರ ದಿವಸದಲ್ಲಿ ದೇವರ ವಡವೆ ಕೆಲಉ ಸಾದನೆ ಸನ್ನದು ಪತ್ರ ಮುಂತಾದ್ದನ್ನು ಅರ್ಚಕ ಕೃಷ್ಣಯ್ಯನ್ನ ಕಳ್ಳರು ತಡೆದು ತೆಗೆದುಕ್ಕೊಂಡು ಹೋದರು. ಯೀಗ ಸದರುಹು ಕುಂಪಣಿ ತಗದೀಕಿನಿಂದಾ ದೇವರಿಗೆ ನಿತ್ಯೋತ್ಸವವನ್ನು ಆಗುತ್ತಾ ರಾಜ್ಯಪರಿಪಾಲನೆ ಮಾಡುವಂತಾ ಧಣಿಗಳಿಗೆ ಆಯುರಾರೋಗ್ಯವಾಗುವ ಪ್ರಕಾರ ದೇವರ ಪೂಜೆ ನಡದು ಬರುತ್ತಾ ಯಿಧೆ.

❖❖

೮೪

ಬಾರಕೂರ ಸಂಸ್ಥಾನ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಬಾರಕೂರು ಯಂತ ಹೆಸರು ಬಂದು ಯಿರುವದು ಯೇನು ಯಂದರೆ, ಯೀ ಪಟ್ಟಣಕ್ಕೆ ವಾರಕನ್ಯಾಪುರಯೆಂಬ ಹೆಸರುವೊಂದು, ವಾರಕೂಲಾಯೆಂಬ ಹೆಸರು ವೊಂದು – ಯೀ ಯೆರಡು ಹೆಸರು ವೊಂದೆ ಸ। ಅದು ಹ್ಯಾಂಗೆ ಯಂದರೆ: ವಾರಕೂಲಾ ಯಿದೋಗ್ರಾಮೋ। ವಾರಕೂಲಾ ಯಿದಂ ಪುರಂ॥ ಸಾಮದ್ವಿತತ ಸಂಮುಕ್ತಮಭೇದಂ ವಿಧ್ಧಿಶಾಸಕ ದ್ವಾದಶಾಪ್ಸರ ಸಃಪೂರ್ವ ಊರ್ವಶ್ಯಾದ್ಯಾಃ ಸಮೇತ್ಯು ಮೈ॥ ಕುರ್ವಂತಿ ನಿಶಿ ಸಂಚಾರಂ ಕೂಲೇತ್ತು ಸರಿತಃ ಶುಭೆ। ವಾರಕೂಲಿಂ ತತಃ ಪ್ರೋಕ್ತಂ। ವಾರಕನ್ಯಾಪುರಂ ತಥಾ॥ ಯೀ ಪ್ರಕಾರ ಪ್ರಮಾಣಗ್ರಂಥವಿರುವದರಿಂದ ಯೀ ಬಾರಕೂರಲ್ಲು ಯಿರುವ ಶಿದ್ಧೇಶ್ವರದೇವಸ್ಥಾನದ ಪಶ್ಚಿಮಭಾಗದಲ್ಲಿ ಯಿರುವ ಸಿದ್ಧಸರಸ್ವಿನ[>ಸರಸ್ಸಿನ] ತೀರದಲ್ಲು ಪೂರ್ವದಲ್ಲಿ ಊರ್ವ್ವಶಿ ಮೊದಲಾದ ಹನ್ನೆರಡು ಮಂದಿ ಅಪ್ಸರ ಸ್ತ್ರೀಯರು ನಿತ್ಯದಲ್ಲು ನಿಶಾಕಾಲದಲ್ಲಿ ಬಂದು ಕ್ರೀಡಾ ನಿಮಿತ್ತ ಸಂಚಾರವನ್ನು ಮಾಡುವದರಿಂದ ವೇಶ್ಯಾನಿಮಿತ್ತರಾಗಿ ವಾರ ಶಬ್ದವು, ತೀರ ನಿಮಿತ್ತವಾಗಿ ಕೂಲಾ ಯಂಬ ಶಬ್ದವು ಪ್ರಾಪ್ತವಾದ್ದರಿಂದ ವಾರಕೂಲಾಯೆಂಬ ಹೆಸರು ಹಾಗೆವೆ. ಹನ್ನೆಡರು ಮಂದಿ ಅಪ್ಸರಸ್ತ್ರೀಯರ ನಿಮಿತ್ತಿ ಕರಸಿ ವಾರಕನ್ಯಾಪುರಯೆಂಬ ಹೆಸರು, ಯೀ ಯರಡು ಹೆಸರು ಬಂದಂತಾಯಿತು. ಅದರಂದ ಯೀಗ ಜನರು ಹೇಳಿಕೊಂಬುದು ಬಾರಕೂರು ಬಾರಾಹಕನ್ಯಾಪುರಾಯಂತ ಹೇಳಿಕೊಳ್ಳುತ್ತಾರೆ. ಬಹುಪೂರ್ವದಲ್ಲು ಬಾರಾಹಕನ್ಯಾಪುರಾಮೆಂಬ ಹೆಸರು ನಡದು ಬಂದು ಯಿತ್ತು. ಅದಕ್ಕೆ ದೃಷ್ಟಾಂತ ಯೇನುಯೆಂದರೆ : ಯುದೀಷ್ಟರ ಶಕದಲ್ಲಿ ಜನಮೇಜಯುರಾಯನು ಬರಸಿಕೊಟ್ಟ ಧರ್ಮಶಿಲಾಶಾಸನದಲ್ಲಿ ಬಾರಾಹಕನ್ಯಾನಗರೆ ರಾಮ್ನೆನವತಿ ಸುಗ್ಣತೆ। ಯಂತ ಬರದು ಯಿರುವದರಿಂದ ಪೂರ್ವದಲ್ಲಿಯೂ ಯಿದೆ ಹೆಸರೆ ಸರಿ. ಯೀ ಬಾರಾಕೂರಾ ಪಟ್ಟಣಲು ನೇತ್ರಾ[>ಸೀತಾ]ನದಿ ಉತ್ತರ ತೀರದಲ್ಲಿ ಯಿರುವದರಿಂದ, ಸಂಹೋ[>ಸಹ್ಯಾ]ಚ್ಯಲೋತ್ಪನ್ನಳಾದ ಸೀತಾನದಿಯು ಪಶ್ಚಿಮಾಭಿಮುಖವಾಗಿ ಬರುವದಕ್ಕೆ ಕಾರಣವೇನು ಯೆಂದರೆ॥ನಂದಿನೀ। ನಳಿನೀ। ಸೀತಾ। ಗಧೀಶ್ರ ಮಮ ಭೂತ್ಯರಾ॥ ಅನ್ಯೊನ್ಯ ಕರ್ಣಹಂತೈತ್ವಾ ಸೀತಾ ಗಾತ್ಪಶ್ಚಿಮಾಂದಿ ಶಂ॥ ತಾಬ್ಯಂ ನಿರುದ್ಧ್ಯ ಮಾನಾ। ಪಿತೊ ಪಾದ್ದು ದ್ರಾವ ವೈದುನೀ॥ ತದಾಕ್ತೆ ಶೆಪತುಃ ಕ್ರುದ್ದೆ ಮಹಾರಣ್ಯ ಚರೇತಿಚ ಸಿತಾಪಿ ಮನಸಾ ಲೋಚ್ಯ ತಾಖ್ಯಾ ಮಪ್ಯದಿದಾಹ್ಯಹಂ॥ ಭವೇಮಮಿತಿ ಮದ್ದಾನಂ ಸಂಹ್ಯೊಚ್ಯಮಗಾತ್ತದಾ। ತತಾಪ ಬಹುವರ್ಷಾಣಿ ನೀರಾಹಾರ ನಿದಿಂ ಪ್ರತಿ॥ ಧ್ಯಾಮಾತೀ ಮನಸಾ ಬ್ರಹ್ಮಪದದ್ವಂದ್ವಂ ಸುನಿಶ್ಚಲಾ ಹಾಮನೇಷು ಜಗವ್ವತ್ಯು। ಕದಾ ಜಿದ್ಭುವನೇಶ್ವರಃ। ಭಾರತ್ಯಾಪ್ರಿಯಮಾಸಾರ್ಥ। ಮಗಾತ್ಸಹ್ಯಾ ಚಟಂ ವಿಧಿಃ। ಯೆಕಾಗ್ರ ಮನಸಾ ನೇತಾಂಧ್ಯಾಮಂತೀ ಸ್ವಪದಾಂಬುಜಂ॥ ಉವಾಚ ಪರಾಮ ಪ್ರೀತ್ ದುನೀಂದ್ರುಷ್ಟಾದ ಮಾಕರಃ। ಉತ್ತಿಷ್ಠ್ಮೊ ಕ್ರಿಷ್ಣವತ್ಸೇಮಾಂವರಂದಾ ಕುಸುಮಾಗತಂ॥ ಉನ್ಮೀಲ್ಯ ನಯನೆ ಪಶ್ಯಾ। ಭಾರತಿಕಾಂತಮಾಗತಂ॥ ಯೀತಿ ತಸ್ಯಾವಚ ಶೃತ್ವಾನೇತಾ ಜೊನ್ಮಿಲ್ಯಲೋಚನೆ ದದರ್ಶ ಸರ್ವ್ವದಾಕಾರಂ। ಪರೆಂಣ್ಯಾಂಪರಮು ಪ್ರಭುಂ ಪ್ರಣಮ್ಯದಂಡ ವದ್ಭೂಮಾ।ಸ್ತುತ್ವಾಸ್ತೋತ್ರವರ್ಯೈಃ

ಶುಭೇ। ಕೃತಾಂಜಲ್ಯಿಪುಷ್ವ ಭೂತ್ವಾ ಪರಂಪರೆ ಮಹಾ ನದೀ॥ ಸ್ವಾಮಿನ್ ಪಿತಾಮಹ ಬ್ರಹ್ಮಂನೆ ಸರ್ವಲೋಕೇಶ್ವರೇಶ್ವರಾ। ಅನುಜಾಬ್ಯಾಮಹಂಶಶಪ್ತಾ। ವನಚಾರಿಭವೆ ಭವೆದಿಸಿ॥ ಯತ್ರ ಯತ್ರ ಗತಾಬಾಹಂ ಪಾರ್ಶ್ವಮೊರು ಭಮೊರ್ಮಾಮ॥ ಪಂಚಯೊಜನದೇಶೇತುವಗ್ರ ಹೊಮಾಸ್ತು ಸರ್ವದಾ। ವರಪಂತು ಮೇಘಃ ಕಾಲೇಚ ಸನ್ಯಾನಿ ಪಣ್ಯವಾನಿಜೆ॥ ಅಹಂ ಪುಣ್ಯಾಕಮಾಲೊಕೆ। ಮತ್ತಿರೆರುಷ ಯಃ ಸದಾ॥ ದಿತ್ಯಾಷದಿರನೊವೇಕ॥ ಕೂಪೊಸ್ತು ಮಮವೈತೆಷ್ಮೆ॥ ಯಿರೆ ಬ್ರುವಂತೀಂತ್ತಾಂಬ್ರಹ್ಮೊತ್ತೊಮಿತ್ಯಂಗೀಚ ಕಾರಸಃ॥ ಅನುಗ್ಯಾಪ್ಯ ಮಮಾನೆಧಾಃ ಸತ್ಯಾ ಲೋಕಂತ ದಾದ್ವಿಜಾಃ॥ ನೇತಾ ತುಹುಪ್ತ್ನ ಮನಸಾ। ಸಂಹ್ಯಾಪ್ಸಾಗರಮಾಮಮೌ॥ ತತ್ತಿರೆರುರುಷಮ ಸರ್ವಗ್ನಾತ್ವಾತ ದ್ವೈಭವಂ ದ್ವಿಜಾಃ ಕುತ್ರಾಶ್ರಮಾಣಿ ಸರ್ವತ್ರ ಚಕ್ರುಸ್ತೆ ಪರಮಂ ಕರಃ॥

ಯೀ ಪ್ರಕಾರ ನಂದಿನೀ ನಳಿನೀ ಸೀತೆಯಂತ ಮೂರು ನದಿಗಳು ಸಂಹ್ಯಾದ್ರಿಪರ್ವತದಲ್ಲಿ ಹುಟ್ಟಿರುವಲ್ಲಿ ಸೀತಾನದಿಯು ಕಲ್ಯಿಯ[>ಕಲಹ] ನಿಮಿತ್ತವಾಗಿ ತನ್ನ ಅಕ್ಕೆಂದರಿಂದ ವನಸಂಚಾರ ಮಾಡೆಂದು ಶಾಪಗ್ರಸ್ತಳಾಗಿ ಯಿರುವಲ್ಲಿ, ಅವರಿಬ್ಬರಿಂದಲು ತಾನು ಶ್ರೇಷ್ಟಳಾಗಿ ಯಿರಬೇಕೆಂದು ಮನಸ್ಸಿನಲ್ಲಿ ಆಲೋಚನೆ ಮಾಡಿಕ್ಕೊಂಡು, ಸಂಹ್ಯಪರ್ವತದಲ್ಲಿ ಕುಳಿತು ನಿರಾಹಾರಾವ್ರತದಿಂದ ಬ್ರಹ್ಮದೇವರನ್ನು ಕುರುತು ಉತ್ತಮವಾದ ತಪಸ್ಸು ಮಾಡುತ್ತಿರಲಾಗಿ, ಆ ತಪವ್ರತಕ್ಕೆ ಬ್ರಹ್ಮದೇವರು ಮೆಚ್ಚಿ ಶಾರದಾಂಮನವರಿಂದ ಸಹಿತವಾಗಿ ತಾಉ ಸೀತಾ ನದಿಯಿಂದ ಬಳಿಗೆ ಬಂದು, "ನಿನ್ನ ತಪಸ್ಸಿಗೆ ಸಂತೂಷ್ಟನಾಗಿ ವರ ಕೊಡುವದಕ್ಕೋಸ್ಕರ ಬಂದು ಯಿದ್ದೆನೆ. ನಿನಗೆ ಬೇಕಾದ ವರಗಳು ಕೇಳಿಕೊ"ಯಂತ ಹೇಳಲಾಗಿ, ಸೀತಾನದಿಯು ಆ ಮಾತು ಕೇಳಿ ಸಂತುಷ್ಟಳಾಗಿ ವರವ ಕೇಳಿಕೊಂಡಳು, "ತಾನು ಯೆಲ್ಲಿ ಪರಿಯಂತರ ಹೊಗುತ್ತದೆನೊ ತನ್ನ ಉಭಯ ಪಾರ್ಶ್ವದಲ್ಲಿಯೂ ಐದು ಗಾಉದ ದೇಶದಲ್ಲಿ ಅನಾವಸ್ಥೆ ಆಗಬಾರದು. ಕಾಲಕಾಲದಲ್ಲಿ ಅನುಕೂಲವಾಗಿ ಮಳೆ ಬರಬೇಕು. ಸಸ್ಯ ಸಮೃದ್ಧಿಯಾಗಿ ಯಥೇಶ್ಚಫಲವಾಗಬೇಕು. ತನ್ನ ತೀರದಲ್ಲಿ ಸರ್ವಾತ್ರ ರುಷಿಗಳು ಆಶ್ರಮಗಳಿಂದ ಆವಾಸಮಾಡಿಕ್ಕೊಂಡು ಯಿರಬೇಕು." ಯೀ ಪ್ರಕಾರ ವರವ ಕೊಟ್ಟು ಅಂತರ್ಧಾನರಾದರು.

ಸೀತಾನದಿಯು ಲಭ್ಯವರಳಾಗಿ ಅತ್ಯಂತ ಸಂತೋಷಚಿತ್ತದಿಂದ ಸಹ್ಯಾಪರ್ವತದಿಂದ ಹೊರಟು, ಪಶ್ಚಿಮಸಮುದ್ರವನ್ನು ಕುರುತು ಬಂದು ಸಾಗರಸಂಗಮವನ್ನು ಪಡೆದಳು. ಯೀ ಸೀತಾ ನದಿಯು ಸಮುದ್ರಕ್ಕೆ ಕೂಡಿಯಿರುವ ಸ್ಥಳವು 'ಅಯಿರೊಡಿ ಅಳುವೆ'ಯಂತ ಹೆಸರು. ಯೀ ಅಳವೆಯಲ್ಲಿ ಬಾರಕೂರ ಹೋಬಳಿ ಮೆ[>ಯೊ]ಳಗಣ ಬಿಡಗವಣಿಗಳ ಅಕ್ಕಿ ಮೊದಲಾಗಿ ಯೇನುಂಟಾದ ವ್ಯಾಪಾರಉ ಯಿದೆ. ಅಳತೆ[>ವೆ]ವಳಗೆ ಆಗುತ್ತದೆ. ಯೀ ಅಯಿರೊಡಿ ಅಳುವೆಗೆ ಯಿತ್ತಲಾಗಿ ನೂರು ವರುಷದಿಂದ ಯೀದೇನೆ. ಅಂಗಾರ ಕಟ್ಟಿ ಆಳವೆಯಂತ ಗೊಲೆ[>ಗೋವೆ]ಯಿಂದ ಅಕ್ಕಿವ್ಯಾಪಾರಕ್ಕೆ ಬಂದ ನಗದ ತಂಡುಲಿರು ಹೆಸರು ಯಿದಿಂ[>ಯಿಟ್ಟು]ಕೊಂಡು ಯಿರುವದರಿಂದ, ಯೀಗಲು ಅಯರೊಡಿ ಅಳಲೆ[>ವೆ]. ಅಂಗಾರಕಟ್ಟಿ ಅಳುವೆಯಂತಲುಮೆರಡು ಹೆಸರನ್ನು ಯೇಳಿ ಕೊಳ್ಳುತ್ತಿದ್ದಾರೆ. ಯೀ ಅಳವೇಗೆ ಪೂರ್ವದ ಹೆಸರು ಬಾರಕೂರ ಅಳವೆಯಂತೆ ಹೆಸರು.

ಯೀ ಸೀತಾನದಿಯು ಪುರಾಣಪ್ರಸಿದ್ಧವಾದ ನದಿಯು, ಯೀ ಸೀತಾನದಿ ತೀರದಲ್ಲಿ ಪೂರ್ವದಲ್ಲಿ ಮಾರ್ಕಂಡೇಯರು ಪಂಚಬ್ರಹ್ಮ ಮುಕವಾದ ಪಂಚಲಿಂಗಪ್ರತಿಷ್ಠೆ ಮಾಡಿ ರಸಕೂಪ ಪ್ರಾಪ್ತಿ ಮಾಡುವ ಹ್ಯಾಂಗೆಯೆಂದರೆ.

ಸೀತೊತ್ತರ ತಷ್ಮೆ ವಿಪ್ರಾ ಮಾರ್ಕಂಡೇಯ ಮಹಾಮುನಿಃ॥ ಕುಶ್ವಾಶ್ರಮ ಪದಂ ರರುಂ। ಚ ಚಾರತಪ ಉತ್ತಮಂ॥ ತಾನ್ಯೊಗ್ರತಪಸಾಚೈಕ। ಕುಭ್ಯಮಾಸೀ ಜಗತ್ರಮಂ॥ ತದಾದೇವಾಸಹೇಂದ್ರೇಣ ಬ್ರಹ್ಮಣಾ ವಿಷ್ಣುನಾ ಸಹ॥ ಗತ್ವಾ ದಕ್ಷಿಣ ಕೈಲಾಸಂ ಶಂಕರಾಮಸ್ಯ ವೇದಯಂ॥ ಸ್ವಾಮಿಂ ತಾತಪ್ವೆಶಂಭೊ। ಮಾರ್ಕಂಡೇಯ ಮಹತ್ತಪಾ॥ ಚರತ್ವಾಕೊಭ ಮಾಮನಾ ಲೋಕಶ್ರಿತ ಮಕಂ ಮುನಿಃ॥ ತಗ್ಯೊಗ್ರ ತಪಸಾ ಸರ್ವೆ ಪಯಂಕ್ಷುಬ್ಧಾ ಜಗದ್ಗುರೊ॥ ತತ್ಪಾದ ಯುಗಳಂ ಪ್ರಾಪ್ತಾ। ರಕ್ಷರಕ್ಷದಯಾನಿಧೆ। ಯಿತ್ಯುತ್ವಾದಂಡವದ್ಭುಮಾಪ್ರಣೆ ಮೂರ್ತಿ ಬುಧಾಸ್ತಧಾ॥ ತಾನುವಾಚ ಹರಃ ಪ್ರೇತ್ಯಾಂ। ದೇವಾ ಉತ್ತಿಷ್ಟತಾಧುನಾ। ನೇತೊತ್ತರಕ ಪಿಂಗತ್ವಾ ಛಂದಯಿತ್ವಾಮಧಾಮನಃ॥ ಮುಷತ್ತೋಭಂ ವಿನೇಷ್ಯಾಮಿ। ನಿಜ್ವರಾಭವಕಾಮರಾಃ॥ ಶ್ರುಶ್ವಾತೆ ಶಾಂಭವೀಂ ವಾಣಿ। ಮಮರಾಮಂದಿಶಾಸ್ತಧಾ। ಶಿವಸ್ಯಾನುಗ್ನಮಾ ಸರ್ವೆಗತಾಃ ಸ್ವಂ। ಸ್ವಂ ಪದಂ ಸುತಾಃ ॥ ವಾರಂದಾ ಕುಂಚಮುನಮೆ ಮಾರ್ಕಂಡೇಯಾಮಧೀ ಮತೆ॥ ಗಂತು ಮೈಛವ್ವಿವಃ ಸಾಂಬಸ್ತದಾರುದ್ರ

॥ವೀರಭದ್ರ ವಿರೂಪಾಕ್ಷ ಬ್ರುಂಗಿ ಸೊಮೇಶಚಂದಿಕಾಃ॥ ಶಿದ್ದೆಶಸ್ತಾರಕೆಶಶ್ಚ। ದಂಡಕೊ ಗುಂಡಿಕೇಶ್ವರಃ। ಚಂದೇಶಾಃ ಕರ್ನಿಕಾರಶ್ಚ ಗುಡಾಕೇಶೊ ಜಲೇಶ್ವರಃ॥ ವ್ಯಾಘ್ರೆಶೊ ಭೂತಿಕೆಶಶ್ಚ ಪಿಂಗಲಾಕ್ಷಃ ಕಪರ್ದಿರಾಟ್ಪು॥ ರುಷಯಃ ಸಿದ್ಧ ಗಂಧರ್ವಾ ನಾರದಾದ್ಯಾಮ ಹರ್ಷಮಂ ಸೊಮನಂದೀ ಪ್ರಭೃತಯಃ ಶಿವಸ್ಯ ಪರಿತೊಮಮುಃ॥ ಸಹಚರ್ಮ್ಯೊಭಿಕಾಮಾಶ್ಚ। ರುದ್ರಕನ್ಯಾಶ್ಚಹಸ್ರಶಃ॥ ಅರ್ಭಕಾ ದಾರಿಕಾ ಕ್ರೌಂಚೆ ಚಂಡಿಕಾ ಚ ಕಪರ್ದಿತಾ॥ ಕಾಳೀ ಕರಾಳೀ ಭೀಮೇಶೀ। ಭೀಮಚಂಡಿ ಗುಹಾರುಣಿಃ॥ ಮುಜತೇಶೀ ಗುಂಜಿನಾದೀ ಘೋರಕಾ ಗುಹ್ಯಕೇಶ್ವರೀ॥ ಮಹಾಕಾಳಿ ಮಹಾಲಕ್ಷ್ಮಿ। ರ್ಮಹತ್ಪೂರ್ವಾ ಸರಸ್ವತಿ ಮಹೇಶ್ವರೀ ವೃಷಾಸ್ಯಾಂಚ। ಭೂರಿ ಕಾರ್ಯಾ ಸಮೂಸಮಮುಃ॥ ತೈರನ್ವಿತೊ ಮಹಾದೇವಃ ಸಾಂಬೀ ಕಾರುಷ್ಯವಾರಿಧಿಃ॥ ಶಾಕ್ವರೇಃ ಪೃಷ್ಟು ಮಾರುಹ್ಯಮಮಾರಾಕಾಶ ಮಾರ್ಗತಃ॥ ಮಾರ್ಕಂಡೇಯಃ ಶವಂ ದುಷ್ಟ್ವಾ। ಪ್ರಣಿಪತ್ಯಾ ಪುನಃ ಪುನಃ ತುಷ್ಟೊವ ಪರಮಾಭಕ್ತ್ಯಾ। ಶಂಕರರಂ ಕರುಣಾನಿಧಿಂ॥ ನಮಾಮಿ ಪರಮಾತ್ಮನಂ। ಶಂಕರಂಚ ಪರಾತ್ಪರಂ॥ ವಿದ್ಯಾ ವಿದ್ಯಾ ಪಣೇತಾರಂ। ಮಂಗಳಾನಾಂ ಚ ಮಂಗಳಂ। ಕೃಷ್ಣಾತ್ವಾಂ ಸ್ರಷ್ಟರೊವೊಸಿ ಸಿದ್ದಾರೆ ಕಾಲೆಹರಿರ್ಭವಾನೆ॥ ಸಂಹಾರೆ ರುಧ ರೂಪೊಸೆನಮಸ್ತುಭ್ಯಂ ತ್ರಿದಾತ್ಮನೆ॥ ದ್ವಿಜನಾಂ ಭುವನೆ ನಿತ್ಯಂ। ಪಂಚರೊಪೊಸಿ ಸರ್ವದಾ॥ ಸರ್ವೆಶ ಸರ್ವತತ್ವಾಸಢ್ಯೆ ಸರ್ವತತ್ವಾತ್ಮನೆ ನಮಃ॥ ನಮಃ ಪರಾಪರಶಾಮ। ಯೊಗ ಗಮ್ಯಾ ಮೆನಧನೆ॥ ನಿತ್ಯಾಮ ನಿತ್ಯ ಶುದ್ಧಾಮ। ಶಿವಾಮಸಕತಂ ನಮಃ॥ ಬಸ್ಮೆ ಪ್ರಿಮಾಮ ದೇವಾಮನಾಗಮಗ್ನ್ಯೊಪನೀತಿನೆ॥ ನಾಗಾಲಂಕೃತ ದೇಹಾಯ। ಪುರುಷಾಯ ನಮೊ ನಮಃ। ಗ್ನ್ಯಾನಾಮಗ್ನ್ಯಾನ ಗಮ್ಯಾಯ ಗ್ನ್ಯಾಕೃಪಾಪಹರಾಯಚ। ಯೊಗಿನೆ ಯೋಗರೂಪಾಯ ಸರ್ವಾಂತರ್ಯ್ಯಾಮಿನೆ ನಮಃ॥ ಯಿತಿ ಸ್ತುತ್ವಾ ಮಹಾದೇವಂ॥ ಪ್ರಣಾನಾಮ ಪುನಃ ಪುನಃ। ತದ್ಭಕ್ತಿ ವಶಗಃ ಶಂಭು।ರುವಾಚ ಮುನಿಪುಂಗವಂ ವರಂ ಉರಣರಿಷ್ವಯೋಗೀಂದ್ರ। ವರಹೊಹಂ ಸಮಾಗತಃ.

ಯೀ ಪ್ರಕಾರ ಪುರಾಣವಾಕ್ಯವಿರುವದರಿಂದ ಸೀತಾನದಿ ಕಟ್ಟಿದಲ್ಲಿ[>ತಟದಲ್ಲಿ]ಪೂರ್ವದಲ್ಲಿ ಮಾರ್ಕಂಡೇಯರು ಆಶ್ರಮವನ್ನು ಮಾಡಿಕ್ಕೊಂಡು ಅತ್ಯುಗ್ರತಪಃಸನ್ನು ಮಾಡುತ್ತಿರಲಾಗಿ, ಆ ತಪೊಗ್ರಜ್ವಾಲಾಸಂತಾಪದಿಂದ ವ್ಯಾಕೂಟಕ[>ವ್ಯಾಕುಲಿತ]ವಾದ ಲೋಕಕ್ರಮವನ್ನು ನೊಡಿ ಸಕಲದೇವತೆಗಳಿಂದ ಸಹಿತವಾಗಿ ಬ್ರಹ್ಮವಿಷ್ಣುದೇವೇಂದ್ರ ಸಹಾ ಕೈಲಾಸಕ್ಕೆ ಬಂದು "ಸೀತಾನದಿತಟದಲ್ಲಿ

ಮಾರ್ಕಂಡೇಯವರು ಮಾಡುವಂಥಾ ತಪಃಪ್ರಭಾವಜ್ವಾಲಾವ್ಯಾಕುಲಿತವಾದ ಲೋಕಕ್ರಮವನ್ನು ಸಂರಕ್ಷ್ಣ್ಯಾ ಮಾಡಬೇಕು"ಯಂತ ಬಹುಪ್ರಕಾರ ಹೇಳಿಕೊಂಡಂತಾದ್ದನ್ನು ಕೇಳಿ, ಜಗದೀಶ್ವರನು "ನೀಉ ಭಯ ಪಡಬೇಡಿ. ಛಿ ತದುದ್ಧಿದ್ಯ ನಾಉ ಮಾರ್ಕಂಡೇಯಾಶ್ರಮಕ್ಕೆ ಬಂದು ಅವರ ಮನೋಭಿಷ್ಟವನ್ನು ಕೊಟ್ಟು ಹಾಗೆ ನಿಮ್ಮಾ ಉಪದ್ರವನ್ನು ಪರಿಹರಿಸಿ ಕೊಡುತೇವೆ}ಯಂತ ಅಭಯವನ್ನು ಕೊಟ್ಟು, ಹಾಗೆ ಅವಮ್ಮಾನವರಿಂದ ಸಹಿತರಾಗಿ ಸಕಲರುದ್ರಗಣಗಳಿಂದ ಸಕಲಶಕ್ತಿಗಣಗಳಿಂದ ಮಾ[>ಕೂ]ಡಿಕ್ಕೊಂಡು ಮಾರ್ಕಂಡೇಯರ ಆಶ್ರಮಕ್ಕೆ ಬರಲಾಗಿ, ಮಾರ್ಕಂಡೇಯರು ಜಗದೀಶ್ವರನ ಕಾಣುತ್ತಲೆ ಬಹಳ ನಮಸ್ಕಾರ ಪೂರ್ವಕವಾಗಿ ನಾನಾ ವಿಧ ಸ್ತೋತ್ರವನ್ನು ಮಾಡುತ್ತಿರಲಾಗಿ, ಆ ಭಕ್ತಿಗೆ ಮೆಚ್ಚಿ "ನಿಮ್ಮ ಮನೋಭಿಷ್ಟವನ್ನು ಕೊಡುವ ಬಗ್ಯೆ ವರದಾತ್ತು[>ತೃ]ಗಳಾಗಿ ನಾವು ಬಂದು ಯಿದ್ದೇವೆ. ಯೇನು ನಿಮ್ಮ ಮನೊಭಿಷ್ಟ ಯಿದೆಯೊ ಅದರ ಕೇಳಿಕೊಳ್ಳಿ"ಯಂತ ಜಗದೀಶ್ವರನ ಅಪ್ಪಣೆ ಆಗುವಾಗ್ಗ್ಯೆ ಮಾರ್ಕಂಡೇಯರು ವರಗಳನ್ನು ಕೇಳಿಕೊಂಡದ್ದು ಯೇನೆಂದರೆ,

॥ಸದಾ ನಿರಚಃ ಶ್ರುಶ್ವಾ॥ ಮಾರ್ಕಂಡೇಮೊ ಮಹಾಮುನಿಃ। ಪರಂಪರೆ ಮಹಾದೇವಂ ಕ್ರುತಾಂಜಲ್ಲ್ಯಿ ಪುಟಸ್ತಥಾ॥ ಪಂಚಬ್ರಹ್ಮ ಸ್ವರೂಪೇಣ ಮಹೀಯೇಷುಚ ಪಂಚಸು॥ ಲಿಂಗೇಷುವತಾ ಸ್ವಾಮಿಂ। ವಸ್ತವ್ಯಂ ಸರ್ವದಾ ಶಿವಾ॥ ಜಿತ್ತೆಗಣಾ ರುದ್ರಕನ್ಯಾ। ನಸಂತ್ವ ತ್ರ ಮಹಶ್ರಮೆವಿಹ್ಯಾ ಪದಿರ ನೊವೇತ। ಕೂ ಪಂಚಾಸ್ತುಕಾರಾಗ್ರತಃ॥ ತ್ವತ್ಪೂಜಿಯಾ ಜನಾ ಸರ್ವೇ ಭವಂತಿಷ್ಟಾರ್ಥ ಬೊಗಿನಃ॥ ಯತಿ ತಸ್ಯವಚಃ ಶ್ರೈತ್ವಾ। ವಾರ್ಕಂಡೇಸ್ಯ ಶಂಕರಃ॥ ಪಶ್ಯಾತಾಂ ಸರ್ವಲೋಕಾನಾಂ। ಲ್ಲಿಂಗೇಷ್ವಂತರ್ದ್ದಿರೂಗಮನ್॥ ಪ್ರಮಥಾ ರುದ್ರಕನ್ಯಾಶ್ಚಮುದಿತಾ ಶಂಕರಾಗ್ನಯಾ॥ ತತ್ರೈವ ವಶತಿಂ ಚಕ್ರುಃ ಸೀತೊತ್ತರ ತಷ್ಮಿದ್ವಿಜಾಃ॥

ಮಾರ್ಕಂಡೇಯರು "ತಾಉ ಪ್ರತಿಷ್ಠೆ ಮಾಡಿದ ಅಯಿದು ಲಿಂಗಗಳಲ್ಲಿ ಪಂಚಬ್ರಹ್ಮಾಕಾರದಿಂದ ನೀಉ ವಾಸಾ ಮಾಡಿಕ್ಕುಂಡು ಯಿರಬೇಕು. ನಿಮ್ಮ ಸಂಗಡ ಬಂದಂಥಾ ರುದ್ರಗಣಗಳು ಶಕ್ತಿಗಣಗಳು ಸಹಾ ನಮ್ಮ ಆಶ್ರಮದ ಸಮೀಪದಲ್ಲಿಯ ವಾಸಾ ಮಾಡಿಕ್ಕೊಂಡು ಸನ್ನಿಹಿತರಾಗಿ ಯಿರಬೇಕು. ದಿವ್ಯಾಶರೀರಸಂಯುಕ್ತವಾದ ರಸಕೂಪವು ನಿಮ್ಮಾ ಮುಂದುಗಡೆಯಲ್ಲಿ ಯಿರಬೇಕು. ನೀಉ ಸನ್ನಿಧಾನವಿದ್ದಂತಾ ಯೀವೈದು ಲಿಂಗವವನ್ನು ಯಾವ ಮನುಷ್ಯರು ಪೂಜೆ ಮಾಡುತ್ತಿದ್ದಾರೊ ಅವರೆಲ್ಲವರು ಯಿಷ್ಟಾರ್ಥಭೋಗಿಗಳಾಗಬೇಕು. ಯೀ ಪ್ರಕಾರ ಅನುಗ್ರಹಾ ಮಾಡಿಬೇಕೆಂ"ದು ಮಾರ್ಕಂಡೇಯರು ಕೇಳಿಕೊಂಡುದಕ್ಕೆ ಜಗದೀಶ್ವರನು ಪ್ರಸನ್ನನಾಗಿ ಸರ್ವಜನರು ಮಾಡುವ ಹಾಗೆ ಮಾರ್ಕಂಡೇಯರು ಪ್ರತಿಷ್ಠೆಮಾಡಿದ ಪಂಚಲಿಂಗಗಳಲ್ಲು ಅಂತರ್ಧಾನವಾದಂತಾವರಾದರು. ಹಾಗೆ ಯೀಶ್ವರನ ಅಪ್ಪಣೆಯಿಂದ ಪ್ರಮಥಗಣಗಳು, ಶಕ್ತಿಗಳಗಳು ಆ ಮಾರ್ಕಂಡೇಯರ ಆಶ್ರಮದಲ್ಲಿಯೇ ಸ್ಥಾನಗಳನ್ನು ಮಾಡಿಕ್ಕೊಂಡು, ವಾಸಉ ಮಾಡಿಕ್ಕೊಂಡು ಯಿದ್ದರಾದ ಕಾರಣ ರೇವಂತ ಮಹಿಷಾಸುರ ಮೊದಲಾದ ಪ್ರಮಥಗಣಗಳು ಅರ್ಭಕೇ ದಾರತೆ[>ಕೇ] ಮೊದಲಾದ ಶಕ್ತಿಗಣಗಳು ಸಹ ಬಾರಕೂರಲ್ಲು ಯಿರುವದರಿಂದ ಯೀ ಹೊತ್ತಿಗು ಪೂಜೆ ಪುನಸ್ಕಾರಗಳು ನಡೆಯುತ್ತವೆ. ಯೀ ಗಣಗಳಿಗೆಲ್ಲಾ ರೇವಂತನು ಅರಸುದೈವ, ಮಹಿಷಾಸುರನು ಪ್ರಧಾನದೈವ. ಅರಸುದೈವ ರೇವಂತ ಯಿದ್ದಾಗ್ಯೂ ಸರ್ವಸ್ವತಂತ್ರಉ ಮಹಿಷಾಸುರಂದೆ ಆಗಿ ಪ್ರಾಕಾರಭ್ಯ ನಡದು ಬಂದು ಯಿರುವದರಿಂದ ಯೀಗಲೂ ಅದೇ ಪ್ರಕಾರ ನಡದು ಬರುತ್ತದೆ. ರೇವಂತನ ಸ್ಥಾ[>ಸ್ಥಾ]ನಉ ಪಂಚಲಿಂಗೇಶ್ವರದೇವಸ್ಥಾನ

ಹೊರ ಪ್ರಾಕಾರದ ನೈರುತ್ಯದಿಕ್ಕಿನಲ್ಲು ಅದೆ. ಮಹಿಷಾಸುರನ ಸ್ಥಾನವು ಮೂಡಕೇರಿ ಸೋಮೇಶ್ವರದೇವಸ್ಥಾನದ ವಾಯವ್ಯದಿಕ್ಕಿನಲ್ಲು ಅದೆ. ಯೀ ಮಹಿಷಾಸುರನ ಸ್ಥಾನಉ ಮುಂದುಗಡೆ ಯಿಲ್ಲಿ ಮೂರು ನಿ[>ಸಿ]ಡಿ ಕಂಬದಲ್ಲಿರಿಸಿ ಅದೆ. ಕಾಲಕ್ಕೆ ವೊಂದಾವರ್ತಿ ಸಂಕ್ರಾಂತಿ ಮರುದಿವಸ ಸಿಡಿಹಬ್ಬ ಆಗುತ್ತದೆ. ಆಗ್ಯೆ ನೂರಾರು ಮಂದಿ ಸಿಡಿಯಾಡುತ್ತಿದ್ದಾರೆ. ಸಿಡಿಯಾಡುವದು ಯೇನು ಯೆಂದರೆ, ವಳ ವಳಗೆ ಬರದ ಮೂರು ಕಂಬಗಳ ಮೇಲು ಅಡ್ಡ ತೊಲೆಗಳ ಹಾಕಿ, ಆ ತೊಲೆ ತುದಿಗೆ ಕಬ್ಬಿಣದ ಕುಕ್ಕೆಗಳ ಹಾಕಿ, "ಆ ಕುಕ್ಕೆಗೆ ಮಹಿಷಾಸುರಗೆ ಸಿಡಿ ಅ[>ಆ]ಡಿಯೇನು"ಯಂತ ಅರಿಕೆ ಹೇಳಿಕೊಂಡು ಯಿರುವದಾ ಬೆನ್ನ ಮಧ್ಯದಲ್ಲಿ ಉಕ್ಕಿನ ಕುಕ್ಕೆಗಳ ಸರುದು, ಆ ಕೊಕ್ಕೆಯನ್ನು ಸಿಡಿತ್ತುಲೆ[>ಸಿಡಿತೊಲೆ] ತುದಿ ಕುಕ್ಕೇಗೆ ಸಿಕ್ಕಿ, ಆ ತೊಲೆ ಬುಡಕ್ಕೆ ಹಗ್ಗಾ ಹಾಕಿ ಯಳೆಯುವಾಗ್ಯೆ ಸಿಡಿ ಆಡುವವನೆ ನಾಲ್ಕು ಆಳು ಅಯಿದು ಆಳು ಉದ್ದಾದ ಮೇಲೆ ಹೋಗುವದರಿಂದ ಹಾಗೆ ಅಂತರೀಕ್ಷದಲ್ಲಿ ಕಂಬದ ಸುತ್ತುವರಿಯ ಮೂರು ಆರು ವಂಬತ್ತು ಹನ್ನೆರಡು ಪ್ರದಕ್ಷಿಣೆ ಬಂದು, ಆ ಸಮಯದಲ್ಲಿ ಅಡಕೆ ಹೂಉ ಬಾಳೆಹಣ್ಣುಗೊನೆ ಮುಂತಾದ್ದನ್ನು ಮಹಿಷಾಸುರಗೆ ಸಮರ್ಪಣೆ ಮಾಡಿ, ಆ ಸಮಯದಲ್ಲಿ ಐದು ತಿಂಗಳು ಆರು ತಿಂಗಳು ವೊಂದು ವರುಷ ಸಂಣ ಸಂಣ ಶಿಶುಗಳನ್ನು ಕೈವೊಳಗೆ ತೆಗೆದುಕ್ಕುಂಡು ಅಂತರಿಕ್ಷದಲ್ಲಿಯೇ ಪ್ರದಕ್ಷಿಣೆ ಮಾಡಿಸಿ, ಕೆಳಗೆ ಯಿಳಿಸುತ್ತದ್ದಾರೆ. ಯಿನ್ನು ಕೆಲವರು ಅಂತರಿಕ್ಷದಲ್ಲಿ ಪ್ರದಕ್ಷಿಣೆ ಬರುವಾಗ್ಯೆ ಕೂವಿ[>ಕೋವಿ]ಗಳ ಹೊಡೆಯುತ್ತಾ, ಬಿರಿಸು ಬಾಣಗಳ ಹೊಚ್ಚುತ್ತಾ, ಅಂಬುಗಳ ಹೊಡೆಯುತ್ತಾ ಪ್ರದಕ್ಷಿಣೆ ಬರುತ್ತಾರೆ. ಯೀ ಸಿಡಿ ಆಡುವವರು ಯಾರು ಯಂದರೆ ನಾಡವರು ಕುಂಬಾರ್ರು ಮುಂತಾದ ಶೂದ್ರಜಾತಿ ಹಳೆಲ್ಯೆ[>ಪೈ]ಕದವರು ಆ ಸಿಡಿ ಆಡುತ್ತಿದ್ದಾರೆ. ಮೊಗೆವೊಂದ ಜಾತಿ ಮಾತ್ರ ಬೆಣ್ಣೆಕುದುರ ಗರಡಿಯಂ ತರಿದು ಬಾರಕೂರ ಬಾಗಲ ದೇವಸ್ಥಾನದಲ್ಲಿ ಸಿಡಿ ಆಡಿಕೊಳ್ಳುತ್ತಿದ್ದಾರೆ. ಯೀ ಸಿಡೀ ಉರತ್ತಾಂತ ಯೀಗಿನ ಸಹಾ ಯೀ ಮಹಿಷಾಸುರದಲ್ಲಿ ಸ್ಥಳದಲ್ಲಿ ಯಿರುವಂತಾವರು ಸಹ ತಮ್ಮ ತಮ್ಮ ಮನೊಭಿಷ್ಟಗಳು ಯೇನಾದರು ಪ್ರಕೃತೊಚಿತ ಆಗುವಂತಾದ್ದು ಯಿದ್ದರೆ, ತಮ್ಮ ತಮ್ಮ ಯಥಾಶಕ್ತಿ ಹರಕೆಗಳ ಹೇಳಿಕೊಂಡು, ಆ ಕಾರ್ಯಗಳು ಆಗುತ್ತಲೇ ಬಂದು, "ನಾನು ಯಿಂಥಾ ಕೆಲಸಕ್ಕೆ ಹೀಗೆ ಹರಕೆ ಹೇಳಿಕೊಂಡು ಯಿದ್ದೇನೆ"ಯಂತ ಬಂದು ಹೇಳಿಕೊಂಡ ಹರಕೆಯನ್ನು ವಪ್ಪಿಸಿ, ಪ್ರಸಾದಾ ತೆಗೆದುಕೊಂಡು ಹೊಗುತ್ತಿದ್ದಾರೆ. ಯೀ ಮಹಿಷಾಸುರನು ಮನುಷ್ಯ ಪಾತ್ರ[>ತ್ರಿ] ಮೇಲೆ ಆಳಿ ಬಂದು ಆಗುವಂತಾ ಕೆಲಸಗಳು ಯೇನಾದರು ಯಿದ್ದರೆ "ಹೀಗಲ್ಲ ಹೀಗೆ"ಯಂತ ಹೇಳುವ ಕಟ್ಟಲೆ ಉಂಟು. ಜನರುಗಳಿಗೆ ಯೇನಾದರು ರೋಗಾದ್ಯುಪದ್ರವಗಳು ಬಂದರೆ, ಚೋರರಿಂದ ಕದ್ದುಕೊಂಡು ಹೊದಂತಾದ್ದು ಯೇನಾದರು ಯಿದ್ದರೆ, ಭೂತಪ್ರೇತ ಪಿಶಾಚಾದ್ಯುಪದ್ರವ ಹಿಡದು ಹಣ[>ಣಿ]ದು ಕೊಳ್ಳುತ್ತಿದ್ದಾರೆ. ಸಂತಾನವಿಷಯದಲ್ಲಿ ಯೇನದರು ಪ್ರತಿಬಂಧಕ ಯಿದ್ದರೆ ಆ ಬಗ್ಯೆಲ್ಲಾ ಮಹಿಷಾಸುರನ ಸಮೀಪಕ್ಕೆ ಬಂದು, ಪಾತ್ರ[>ತ್ರಿ] ಮೈ ಬರಸಿ ಕೇಳಿ, ಆ ಬಗ್ಯೆ ದೈವಾಧೀನದಲ್ಲೆ ಯೇನು ಅಪ್ಪಣೆ ಕೊಡುತ್ತದೆಯೊ ಆ ಪ್ರಕಾರ ನಡಕೊಳ್ಳುತ್ತಾ ತಮ್ಮ ತಮ್ಮ ಕೆಲಸಗಳು ಆದಂಥಾದಕ್ಕೆ ಯಥಾನುಶಕ್ತಿ ಹರಕೆಗಳನ್ನು ತಂದು ವಪ್ಪಿಸುವಂಥಾ ನಡತೆಗಳು ಆಧ್ಯಾಪಿ ನಡೆಯುತ್ತವೆ. ಯೀ ಮಹಿಷಾಸುರನು ಪಾತ್ರೆ[>ತ್ರಿ] ಮೇಲೆ ಮೈದುಂಬಿ ಆಡುವ ಮಾತುಗಳ ಘನಮೋಹ ಆ ಮಾತುಗಳೆ ಹೊರತು, ಕ್ಷುದ್ರ ಮಾತುಗಳ ಆಡುವ ಸಂಪ್ರದಾಯವಿಲ್ಲ. ಯೀ ಬರಕೂರ ಸ್ಥಳದಲ್ಲಿ ಯೇನಂ[>ನೊಂ]ದು ಕೆಲಸಾಮಾಡಬೇಕಾದುರು ಮಹಿಷಾಸುರನಲ್ಲಿ ಕೇಳಿಕೊಂಡು, ಅವನ ಅಪ್ಪಣೆ ಹ್ಯಾಗೆ ಆಗುತ್ತದೆಯೊ ಅದೆ ಪ್ರಕಾರ ಮಾಡುವದೆ

ಹೊರ್ತು, ದೈವಾಧೀನದಲ್ಲಿ ಬೇಡಾಯಂತ ಹೇಳಿದರೆ ಕೆಲಸಾಮಾಡುವ ಸಂಪ್ರದಾಯವಿಲ್ಲ. ಯೀ ಮಹಿಷಾಸುರನ ಉತ್ತಾಂತ ಯೀ ಪ್ರಕಾರವಿರುತ್ತದೆ

ಮಾರ್ಕಂಡೇಯರು ತಪಃಸಿದ್ಧಿಯನ್ನು ಪಡದಂಥಾ ಸ್ಥಳ ಯಾವದು? ರಸದ ಭಾವಿಯಲ್ಲಿ ಅದೆ? ಯಂಬುದಕ್ಕೆ

ಧಾತ್ರಿತರು ಸ್ವರೊಪೇಣ । ಕಲ್ಪವೃಕ್ಷೊ ಮಹತ್ತರಃ॥ ನಿರಂತರ ಫಲೊಪೇತೊ ನಿಭಾಲೈವಸ ಸಂಶಯಃ॥ ತದೇವ ತಪತಸ್ಥಾನಂ। ಮಾರ್ಕಂಡೇಯಸ್ಸದೀ ಮತಃ॥ ಮಾರ್ಕಂಡೇಯಶ್ವರನ್ಯಾಗ್ರೆ ಗುಹಾ ಭಾತಿಸು ಶೊಭನಾ। ರಸಪೂರ್ನಾ ಸಿದ್ಧವಾಪಿ। ಸಿವೆಸಾ ಸ್ಸೈ ಪ್ರದರ್ಶಿಕಾ ॥ ಕ್ಷಿಪ್ತಾನಿ ಶ್ಯಾಮಲೊಹಾನಿವಾಷ್ಯಾಂತತ್ರ ಗುಹಾಂತರೆ॥ ಸುವರ್ಣಾ ನಿಭಮತೈವ। ನಾತ್ರ ಕಾರ್ಯ್ಯ ವಿಚಾರಣಾ॥

ಬಾರಕೂರ ಪಂಚಲಿಂಗೇಶ್ವರ ದೇವರ ವಳಪ್ರಾಕಾರದ ವಳಗೆ ಉತ್ತರ ದಿಕ್ಕಿನಲ್ಲಿ ಮಾರ್ಕಂಡೇಯರು ಕುಳಿತುಕೊಂಡು ತಪಸ್ಸು ಮಾಡಿದ ಸ್ಥಳದಲ್ಲಿ ಧಾತ್ರಿಉತ್ಕ್ಷಉ ಯೀಗ್ಯೂ ಅದೆ. ವಂದೆ ರೀತಿಯಲ್ಲಿ ಯಿರುತ್ತದೆ. ಯೀ ಉರಕ್ಷವು ಸಮೀಪದಲ್ಲಿ ತಾಉ ತಪಸ್ಸುಮಾಡಿದ ಸ್ಥಳಗಳಲ್ಲಿ ಮಾರ್ಕಂಡೇಯರು ಶಿವಲಿಂಗಪ್ರತಿಷ್ಟೆ ಮಾಡಿ ಯಿದ್ದಾರೆ. ಯೀಗ್ಯು ಮಾರ್ಕಂಡೇಶ್ವರಿ[>ರ]ಯಂತ ಈಶ್ವರದೇವಸ್ಥಾನವು ಅದೆ. ಪ್ರತಿನಿತ್ಯದಲ್ಲು ಪೂಜೆ ಪುನಸ್ಕಾರಗಳು ನಡೆಉತ್ತದೆ. ಮಾರ್ಕಂಡೇಯರಿಂದ ಪ್ರತಿಷ್ಟೆಯಾದ ಪಂಚಲಿಂಗೇಶ್ವರದೇವರ ದೇವಸ್ಥಾನದ ಮುಂದುಗಡೆಯಲ್ಲಿ ಸಮೀಪದಲ್ಲಿ ಆಗ್ನೇಯದಿಕ್ಕಿನಲ್ಲಿ ಸಂಣದಾಗಿ ವೊಂದು ಗುಹೆ ಅದೆ. ಅದರಲ್ಲಿ ವೊಂದು ಬಾವಿ ಅಧೆ. ಅದರ ಮೇಲೆ ಶಿಲೆಯನ್ನು ಮುಚ್ಚಿ ಅದೆ. ಅದೆ ರಸದ ಬಾವಿಯೆಂತ ಪೂರ್ವದಾರಭ್ಯ ಹೇಳಿಕೊಂಡು ಬರುವಂತಾದ್ದು. ಯಿಗ್ಯೂ ಅದೆ ಪ್ರಕಾರ ಹೇಳಿಕೊಳ್ಳುತ್ತಿದ್ದಾರೆ. ಪೂರ್ವದಲ್ಲಿ ಯೀ ರಸದ ಭಾವಿವೊಳಗೆ ಕಬ್ಬಿಣವನ್ನು ಹಾಕಿದಲ್ಲಿ ಆ ಕ್ಷಣದಲ್ಲಿ ಸುವರ್ಣವಾಗುವದು ಯಂತ ಹೇಳುವ ಮಾತು ಯಿದಕ್ಕೆ ಗ್ರಂಥದಲ್ಲಿ ಹೇಳಿ ಯಿರುವ ದೃಷ್ಟಾಂತವೆ ಹೊರ್ತು ಬದಲೇನು ದೃಷ್ಟಾಂತವಿಲ್ಲ. ಗ್ರಂಥದಲ್ಲಿ ಹೇಳಿರುವದು ಯೇನು ಯಂದರೆ "ಯೀಶ್ವರಾನುಗ್ರಹದಿಂದ ದಂಡರಸ ಕೂಪಕ್ಕೆ ಕಾಲಾಂತರದಲ್ಲಿ ಯೇನಾದರೂಉ ಹತ್ತಿ ಬಂದೀತು ಯಂತ ಮಾರ್ಕಂಡೇಯರು ಶಿಲೆಯನ್ನು ಮುಚ್ಚಿ ಯಿರುವಲ್ಲಿ ಭೂತಪಾಂಡುರಾಯಗೆ ಸ್ವಪ್ನವಾಗಿ ಆತನ ಸ್ವಾಧೀನವಾದೀತು"ಯಂಬ ಮಾತಿಗೆ ತತಃ ಕಾಲೇನ ಮಹತಾ। ಭೂತ ಪಾಂಡ್ಯಮಹೀಪತಿಃ॥ ರಾಜ್ಯಂ ಚಕ್ರೆ ಸಮಭ್ಯೆತ್ಯ ತತ್ರೈವ ಬಹುವತ್ಸರಂ॥ ಸ್ವಪ್ನಂದರರ ಸನ್ನಪತೀ ರಾಜ್ಯಾಂ ಸಮನುಪಾಲಿಮಂ॥ ಶ್ರುಣು ಭೂಪ ಮಹಾರಾಜ ಪಾಂಡ್ಯವಂಶ ಯಶೋಧರಾ। ತಪಕ್ರಿಯೂವಿಭಾನ್ಯಾಮ ಲೊಕಾನುಗ್ರಹಕಾರಕಂ॥ ಪಶ್ಚಿಮಸ್ಯೊದ ಧೆಸ್ತರೆ। ಮಾಸಹ್ಯಗಿರಿಸಂಭರಾ॥ ಸೀತಾರಾಮ ನದೀ ಪುಣ್ಯಾ ವರ್ತತೆ ಲೋಕಪಾವರ್ನಿ॥ ಮಾರ್ಕಂಡೇಯ ಮುನೀಶ್ರಕ್ತ ತಪಸ್ತಿಸ್ತಾ ಚಿರಂ ಸ್ಥಿತಃ॥ ತದೀಮ ನಾಮ್ನಾ ವಿಖ್ಯಾತಃ। ಪಂಚಲಿಂಗೇಶ್ವರಾ ಹ್ವಮ ॥ ಸ್ತಾನಾಲಿಂಗ ತನೊಃ ಶಂಭೊರಗ್ರೇವಾಪೀ ಪ್ರದುಶ್ಯತ್ರೆ ವಿರಾಗ್ಣಮಾ ಮುನಿಸ್ತಾಂವೈ। ಶಿಲಾಮಾವ್ವಾದ್ಯ ನಿರ್ಗತಃ ॥ ರಸವಾಪೀಂತ್ಯ ಚಿದ್ಧೀತ್ಯಾತ್ತಂತಾಶ್ರಮ ಭೂಪತೇಃ॥ ಯತಿ ಸ್ವಪ್ನಂ ಸದೃಷ್ಟಾ ಶುಕ್ರಾ ಕರುಧಾಮ ಮಂತ್ರಿಹಿಃ॥ ಸಮಾಲೊಚ್ಚವೆನಿರಗಾದ್ರಸವಾಲೇ ಸ್ಥಳಂ ಪ್ರತಿ॥ ತತಃ ಶೀಲಾಃ ಸಮುದ್ಧಾಪ್ಯ ಕುಂದೊದರ ರಜೊಗ್ರುಣಂ ರಾಜ್ಯಂಚಕೆ ನ್ರುಪಃ ತೇತ್ಯಾ। ಬಹುಕಾಲಮತ ದ್ರಿತಃ॥

ಆಖ್ಯಾನ ಯೀ ರೀತಿ ಯಿರುದರಿಂದ ಭೂತಪಾಂಡುರಾಯನು ಯೀಶ್ವರನ ಪಾರ್ಶ್ವವರ್ತಿಯಾದ ಕುಂಡೋದರನ ಭಜಿಸಿಕ್ಕೊಂಡು ಯಿರುವುದರಿಂದ ಆತನ ಅನುಗ್ರಹದಿಂದ ಸ್ವಪ್ನದಲ್ಲಿ ತೊರಿದ ಪ್ರಕಾರಕ್ಕೆ ಯಲೆ[>ತಿ] ಮುಚ್ಚಿದ ಶಿಲೆಯನ್ನು ತೆಗಸಿ, ರಸವಾಪಿಯನ್ನು ತನ್ನ ಸ್ವಾಧೀನಮಾಡಿಕೊಂಡು, ಅದರಿಂದ ಸುವರ್ನಸಮೃದ್ಧಿ ಉಳ್ಳಂತವನಾಗಿ, ಧರ್ಮದಿಂದ ರಾಜ್ಯಪಾಲನೆ ಮಾಡಿದನು. ರಸದ ಭಾವಿ ವೃತ್ತಾಂತ ಯಿಷ್ಟೆ ಸರಿ.

"ಯೀ ಭೂತಪಾಂಡುರಾಯನು ರಾಜ್ಯಪರಿಪಾಲನೆ ಮಾಡುವ ಸಮಯದಲ್ಲಿ ಯೀಶ್ವರಾನುಗ್ರಹದಿಂದ ನವರತ್ನಖಚಿತವಾದಂಥ ಸಿಂಹಾಸನವು ಭೂಮಿಯಿಂದ ಮೇಲಕ್ಕೆ ಯದ್ದು[>ಎದ್ದು] ಬಂದದರಿಂದ ಆ ಸಹ್ಮಾಸನದಲ್ಲಿ ಕುಳಿತು ರಾಜ್ಯಪರಿಪಾಲನೆ ಮಾಡುತ್ತಿದ್ದಾನೆ"ಯಂತ ಪೂರ್ವದಾರಭ್ಯ ಪಾರಂಪರ್ಯವಾಗಿ ಹೇಳಿ ಬರುವ ಮಾತು ಯೀಗ್ಯು ಪಂಚಲಿಂಗೇಶ್ವರದೇವಸ್ಥಾನದ ನೈರುತ್ಯದಿಕ್ಕಿನಲ್ಲಿ ಸಿಂಹಾಸನ ಸ್ಥಾನಲು ಯಿದೆ. ಪ್ರತಿನಿತ್ಯದಲ್ಲಿ ಪೂಜೆ ಪುನಸ್ಕಾರಗಳು ನಡಉತ್ತವೆ. ನವರಾತ್ರಿಯಲ್ಲಿ ಆಶ್ವಿಜ ಶು ಪಾಡ್ಯದಾರಭ್ಯ ವಿಜಯದಶಮಿ ಸಹಾ ಹತ್ತು ದಿವಸಲು ವಿಶೇಷ ಉತ್ಸವಗಳು ಆಗುತ್ತವೆ. ಅಲ್ಲಿ ಆಗುವ ಕಟ್ಟಳೆಗಳು ಯೇನು ಯಂದರೆ: ಆಶ್ವೀಜ ಶು ಪಾಡ್ಯದ ದಿವಸ ಸಿಹ್ಮಾಸನದಲ್ಲಿ ಪೂಜೆಗೆ ಆರಂಭವಾಗಬೇಕಾದರೆ ಬಾರಕೂರ ಹೊಬಳಿ ಬದುಕು ಮಾಡುವ ಬಳಿಯಿಂದ ಸರಕಾರದ ಮುದ್ರೆ ಉಂಗರ, ಹದ್ದೆ ಕತ್ತಿ, ಸಹ ವಾಹನದ ಮೇಲೆಯಿಟ್ಟು ವಾದ್ಯ ತಾಳ ಮೇಳ ಯುಕ್ತನಾಗಿ ಬರಬೇಕು. ಬುರವಂಥಾ ಕತ್ತಿ ಮುದ್ರೆಉಂಗರಕ್ಕೆ ಆ ಬಾರ[+ಕೂರು] ಸ್ಥಳದವರು ಅ[>ಆ]ದ್ಯಾಂತರು ವಾದ್ಯ ತಾಳ ಮೇಳ ಸಹಿತವಾಗಿ ಬಂದು ಯದರುಗೊಂಡು ಕರಕೊಂಡು ಹೋಗಿ, ಕತ್ತಿ ಮುದ್ರೆಉಂಗರವನ್ನು ಪಂಚರಂಗದಿಂದ ಶ್ರೀಚಕ್ರಯಂತ್ರೊದ್ಧಾ[>ಯಂತ್ರೋದ್ಧಾರ] ಮಾಡಿದಂಥ ಸಿಹ್ಮಾಸನದ ಪಶ್ಚಿಮಭಾಗದಲ್ಲು ಯಿಟ್ಟು, "ಅನ್ಯರಾಗ್ಞಃ ಸಮಸ್ತ ಶತ್ರುಕವೆ। ಕಾಮ್ಯಾರ್ಥ ಸಿದ್ಯಾರ್ಥಂ"ಯೆಂದು ಯೀ ರಾಜ್ಯಕ್ಕೆ ಯಾರು ಧುರೆಗಳು ಅವರಿಗೆ ಶ್ರೆಯೋಭಿಉದ್ದಿಯಾಗಬೇಕೆಂದು ಸಂಕಲ್ಪವನ್ನು ಮಾಡಿ, ವಂಬತ್ತು ದಿವಸಲು ಕಲ್ಪೋಕ್ತ ಪೂಜಿ ಜಪ ಹೋಮ ಬ್ರಾಹ್ಮಣ ಸುವಾಸಿನಿ ಸಂತರ್ಪಣ ಮುಂತಾದ ವಿಶೇಷ ಕಟ್ಟಳೆಯಿಂದ ಮೂಲಾನಕ್ಷತ್ರ ಮೂರು ದಿವಸಲು ಸಂಸ್ಥಾನದಲ್ಲಿ ಯಾವ ಮರ್ಯಾದೆಯಲ್ಲಿ ನಡೆಯುತ್ತದೇಯೊ ಅದೇ ಮೆರೇಗೆ ಅಶ್ವಾಂದೋಳಿಕ ಆಯುಧಾದಿ ಪೂಜೆಗಳು ಆಗಿ, ನವಮಿ ದಿವಸದಲ್ಲಿ ಅತಿಶಯವಾಗಿ ಭೂರಿ ದಕ್ಷಿಣೆಯನ್ನು ಕೊಟ್ಟು, ದಶಮಿ ದಿವಸದಲ್ಲು ಸರ್ವರಿಂದ ಸಮೇತವಾಗಿ ಪಉಜು ಯತ್ತಿ ಹೋಗಿ, ಬನ್ನಿ ಪೂಜೆಯಾಗಿ, ಅರಸುಗಳಿಗೆ ದಿಗ್ವಿಜಯವಾಗಬೇಕೆಂದು ಚತುರ್ದಿಕ್ಕುಗಳು ಬಾಣಗಳ ಹೊಡದು ಹೋಗಿ, ಸಿಹ್ಮಾಸನದ ಮುಂದುಗಡೆ ಬಲದ ಪಾರ್ಶ್ವದಲ್ಲಿ ಯಿಟ್ಟು ಯಿರುವ ಸದರಿನ ಮೇಲೆ ಕತ್ತಿ ಮುದ್ರೆ ಉಂಗುರವನ್ನು ಯಿಟ್ಟು, ಪಟ್ಟಾಭೀಷಚನಿಕವಾದ ವೇದಮಂತ್ರಗಳಿಂದಲು ಮಾಂಗಲ್ಯಸ್ತೋತ್ರಗಳ ಮಂಗಳಾಷ್ಟಕಗಳಿಂದ ಕತ್ತಿ ಮುದ್ರೆಉಂಗುರಕ್ಕೆ ಪಟ್ಟಾಭಿಷೇಕವಾಗಿ, ಹಾಗೆ ಆದ್ಯಂತ ಹೋಬಳಿಯಿಂದಲು ಪ್ರತ್ಯೇಕ ಮಾಗಣಿಗಳಿಂದ ಪೂರ್ವಪದ್ಧತಿ ಪ್ರಕಾರಕ್ಕೆ ಕಾಣಿಕೆ ಆಗಿ, ಪದ್ಧತಿಪ್ರಕಾರಕ್ಕೆ ಪೂರ್ವೊತ್ತರ ರೀತ್ಯಾ ತಾಂಬೂಲವನ್ನು ಕೊಟ್ಟು, ಹಾಗೆ ಸರ್ವರು ಸಮೇತವಾಗಿ ವಿಭವದಿಂದ ಕತ್ತಿ ಮುದ್ರೆಉಂಗರವನ್ನು ತೆರಳಿಸಿಕೊಂಡು ಕಚ್ಚೆಂಗೆ[>ಕಚೇರಿಗೆ] ಬರಬೇಕು. ಯಿಗ್ಯು ಸಿಂಹಾಸನದಲ್ಲಿ ನಡವ ಪದ್ಧತಿ, ಯಿದೆ ಮೇರೆಗೆ ನಡೆಯಬೇಕು. ಸಿಹ್ಮಾಸನದ ಉತ್ತಾಂತ ಯೀ ಪ್ರಕಾರ ಯಿರುತ್ತದೆ. ಪೂರ್ವದಲ್ಲಿ ಭೂತಪಾಂಡ್ಯರಾಯಗೆ ಯೀ ಸಿಂಹಾಸನವು ಲಭ್ಯವಾದ್ದಕ್ಕೆ ದೃಷ್ಟಾಂತ ಯೇನು ಯಂದರೆ, ಗ್ರಂಥ ಮುಖ ದೃಷ್ಟಾಂತವೆ ಸರಿ.ಆ ಬಗೆ ಗ್ರಂಥಗಳು :

ಭೂತಪಾಂಡ್ಯಮಹೀಪಾಲೇ। ರಾಜ್ಯಶಾಸತಿಸಾದರಂ॥ ತಸ್ಮಿಂಶ್ಚನಗರೆ ರಮ್ಯನವರತ್ನ ವಿಚಿತ್ರತಂ। ಸಿಹ್ಮಾಸನಂ ಸಮುಹಾರಾಜಿ ಸಿಹ್ಮಾಸನಮುಪಸ್ಥಿತಂ॥ ಕೈಲಾಸಾದೇವ ಸುಪ್ರೇತ್ಯಾ ಶಿವಾಂ ಪ್ರೇಷಿತ ವಾಸ್ತವ॥ ಯತ್ತಿ ಸ್ವಪ್ನಂದರಿ ಶಯಿತ್ವಾ ತ್ರತ್ತ್ಯೈವಾಂತರಿಧಿಯಶ॥ ತತೊಘುಡು ಘುಡಿಕುಚ್ಚೆ। ಶಬ್ದಂ ಶುಸ್ರಾವ ಭೂಪತಿಃ॥ ಭೂಮೇರ ದಸ್ತಾತ್ಸಂಜಾಂತಂ। ಶೃತ್ವಾಭೂದ್ವಿಸಮೊನೃಪಃ॥ ತತ್ತ್ರೈವ ಗತ್ವಾ ಸಹಸಾ। ಭೂತಪಾಂಡ್ಯಮಹೀಪತಿಃ॥ ಊರ್ದ್ವಮುದ್ದಿತಮಾಲೊಕ್ಯ। ಸಿಹ್ಮಾಸನ ಮುದಾರಧೀ॥ ಸುಮುಹ್ವರ್ತೆ ಮಹಾರಾಜೊ ವಿದ್ವದ್ಭಿಶಶ್ಚಸುಮೇದಿತೆ॥ ಆರೊಹಯಾಮಾ ಸಮುದಾ। ಶಿವನ್ಯಾಗ್ಯಾವ ಶಂಕರಃ ॥ ವಿಪ್ರಾಗ್ರೆ ಸಂತರ್ಪಯಾಮಾಸ। ಭೂತಪಾಂಡ್ಯಮಹೀಪತಿಃ। ರತ್ನೈಃ ಸುವರ್ನೈಃ ಸಹಸಾ। ಜಗದಾಸೀತ್ಸುಬಾಸ್ವದಂ॥

ಯೀ ಪ್ರಕಾರ ಭೂತಪಾಂಡುರಾಯನು ರಾಜ್ಯಪರಿಪಾಲನೆ ಮಾಡುವ ಸಮಯದಲ್ಲಿ ಕುಂಡೊದರನ ಮುಖದಿಂಧ ಯೀಶ್ವರಾನುಗ್ರಹವಾಗಿ ನವರತ್ನಖಚಿತರಾದಂಥಾದ್ದು ಭೂಮಿಯಿಂದ ಮೇಲಕ್ಕೆ ಯೆದ್ದು ಬಂದು, ಆ ವೇಳೆಯಲ್ಲಿ ಸ್ವಪ್ನದಲ್ಲಿ ಭೂತಪಾಂಡ್ಯರಾಯಗೆ ಕೈಲಾಸದಿಂದಾ ಯೀಶ್ವರನ ಅಪ್ಪಣೆಯಿಂದ "ನವರತ್ನಖಚಿತವಾದ ಸಿಂಹಾಸನವು ಭೂಮಿಯಿಂದ ಮೇಲಕ್ಕೆ ಬಂದಂಥದಾಗಿ ಅದೆ. ಯಿದರ ನೀನು ನೋಡಿದಂಥವನಾಗು"ಯಂತ ಸ್ವಪ್ನಸೂಚಿತವಾದ್ದನ್ನು ತಿಳಿದು, ಹಾಗೆ ಪ್ರಬುದ್ಧನಾಗಿ ಆಶ್ಚರ್ಯದಿಂದ "ಯಿದು ಯೇನು?" ಯಂತ ಚಿಂತಿಸುತ್ತಿರುವ ಸಮಯದಲ್ಲಿ ಭೂಮಿಯಿಂದ ಘಡುಘುಡುಯೆಂಬ ಶಬ್ಬಉ ಹುಟ್ಟಿದ್ದು ಕೇಳಿ, ಆಶ್ಚರ್ಯಬಟ್ಟು ಆ ಶಬ್ದ ಹುಟ್ಟಿದ ಸ್ಥಳಕ್ಕೆ ಹೋಗಿ, ಭೂಮಿಯಿಂದ ಮೇಲಕ್ಕೆ ಬಂದ ಸಿಂಹ್ಮಾಸನವನ್ನು ನೋಡಿ ಸಂತುಷ್ಟಚಿತ್ತನಾಗಿ, ಬ್ರಾಹ್ಮರು ಯಿಟ್ಟು ಕೊಟ್ಟಿಸು[>ರು]ವ ಮುಹೂರ್ತದಲ್ಲಿ ಈಶ್ವರನ ಅಪ್ಪಣೆಯಿಂದ ಸಿಂಹಾಸನಾರೋಹಣವನ್ನು ಮಾಡಿ, ವಿಶೇಷಬ್ರಾಹ್ಮರಿಗೆ ಸುವರ್ನಾರತ್ನ ಮೊದಲಾದ್ದನ್ನು ಕೊಟ್ಟು ಸಂತೋಷಬಡಿಸಿದ್ದರಿಂದ, ಆ ರಾಷ್ಟ್ರದ ಜನಪದರು ಆದ್ಯಂತರು ಬಹಳ ಪ್ರಮುದಿತರಾಗಿ ಯಿದ್ದರು. ಯೀ ರೀತಿಯಿಂದ ಸಿಂಹಾಸನದಲ್ಲಿ ಕುಳಿತು ಭೂತಪಾಂಡುರಾಯನು ರಾಜ್ಯಪರಿಪಾಲನೆ ಮಾಡುತ್ತಿದ್ದನು.

ಏವಂ ಪ್ರವರ್ತಮಾನೇತು। ಭೂತಪಾಂಡ್ಯಮಹೀಪತೆಃ॥ ಸಿಂಹ್ಮಾಸನಂ ಬ್ರಾಜಿಮಾನಮಲಕ್ಷ್ಯ ಮಭಿವತ್ತಲಿ॥

ಯೀ ರೀತಿಯಿಂದ ರಾಜ್ಯಪರಿಪಾಲನೆ ಮಾಡುವಾಗ್ಯೆ ಕೆಲಉ ಕಾಲಾಂತರದಲ್ಲಿ ಅತಿ ಶೋಭೆಯಿಂದ ಬ್ರಾಜಿ[>ವಿರಾಜ]ಮಾನವಾದಂತಾ ಸಿಂಹಾಸನವು ಅದ್ರುಶ್ಯವಾದಂತಾದಾಯಿತು, ಯಂತಉ ಯೀ ಪ್ರಕಾರ ಸಿಂಹಾಸನದ ವೃತ್ತಾಂತ.

ಬಾರಕೂರಲ್ಲಿ ಸಿದ್ಧೇಶ್ವರದೇವಾಲಯವೆಂದು, ಅ[>ಆ] ಪೂರ್ವ ದಿಗ್ಭಾಗದಲ್ಲಿ ಸಿದ್ದರಸವಾಪಿವೆಂದು ಸಹಾಯಿರುವದರಿಂದ ಯೀ ಉತ್ರಾಂತ ಯೇನು ಯೆಂದರು :

ಸಿದ್ದೇಶ್ವರೊನಾಮತಶ್ಚಿ। ತ್ಯೆಲಾಸಾದಾಗತಃ ಪುರಾ॥ ಲಿಂಗಂ ಸಂಸ್ಥಾಪಯಾನ। ಸಿದ್ಧೇಶ್ವರ ಸಮುಹ್ವಮಂ॥ ದೇವ ಗಂಧರ್ವ ಕನ್ಯಾಶ್ಚ। ಸನ್ನಿಧಾಶಸ್ಯದೂರ್ಭಿಷ್ಟ॥ ಸಂಸ್ತಿರಂ ಸಮಾನಾದ್ಯ ವಿಹರಂತಿ ಸಮಂತತಃ॥ ತತ್ಪೂರ್ವಸ್ಮಿನ್ ಸಿದ್ಧರಸ॥ವಾಪೀ ಕೈಲಾಸತಃ ಪುರಾ॥ ಸಮಾಗತೆ ಸಸಂಲಿಬ್ಧಿಂ ಶಿವಕಾರಣ್ಯತೊ ಮುನೆ॥ ತತ್ರೈವತಾಂ ಮೃಲೊಹಾನಿ। ನಿಕ್ಷಿಪ್ತಾ ನಿಕ್ಷಣಾರ್ತತಃ॥ ಸುವರ್ನಶ್ಚಂ ಸಮಾನಾದ್ಯ।

ಭಾಗ್ಯಯೋಗ್ಯ ಭವೇಸ್ರುಣಾಂ॥ ಭೂತಪಾಂಡ್ಯಸ್ಯ ತನಯೊ ವಿದ್ಯುಜ್ಜಿಹ್ವಾಯತಿ ಶುತಃ॥ ತಂ ರಸಂನ್ಮೇವಮಾನೊ ।ಸಾ।ರಾಜ್ಯಂ ಚಕ್ರೆಮುದ್ಯೈವತ.

ಪೂರ್ವದಲ್ಲಿ ಸಿದ್ದೇಶ್ವರಾಯಂಬ ವೊಬ್ಬ ಗಂಧರ್ವನು ಕೈಲಾಸದಿಂದ ಭೂಲೋಕಕ್ಕೆ ಬಂದವನು, ತನ್ನ ಹೆಸರಿನಿಂದ ಸಿದ್ದೇ[+ಶ್ವ]ರಾಯಂತ ಲಿಂಗಪ್ರತಿಷ್ಟೆಯನ್ನು ಮಾಡಿದನು. ಯೀ ಸಿದ್ಧೇಶ್ವರನ ಪೂರೋಭಾಗದಲ್ಲಿ ಯಿರುವ ಸರಸೀರದಲ್ಲಿ[>ಸಿರಸಿಯಲ್ಲಿ] ದೇವತಾಸ್ತ್ರೀಯರು ಗಂಧರ್ವಸ್ತ್ರೀಯರು ಸಹಾ ಅಲ್ಲಿ ಬಂದಂಥವರಾಗಿ, ನಿತ್ಯದಲ್ಲು ಕ್ರೀಡಾವಿಹಾರವನ್ನು ಮಾಡಿಕ್ಕೊಂಡು ಯಿರುವರು. ಆ ದೇವಾಲಯದ ಪ್ರಾಕಾರದವೊಳಗೆ ಪೂರ್ವದಿಗ್ಭಾಗದಲ್ಲಿ ಯೀಶ್ವರಾನುಗ್ರಹದಿಂದ ಕೈಲಾಸದಿಂದ ಬಂದಂತ ಪ್ರಾಚೀಣವಾದ ಸಿದ್ಧರಸವಾಪಿಯು ಪ್ರಾಪ್ತಿವಾದಂತಾದಾಯಿತು. ಆ ವಾಪಿಯಲ್ಲಿ ತಾಂಬ್ರ ಲೋಹಾದಿಗಳು ನಿಕ್ಷೇಪಿಸಲಾಗಿ ಕ್ಷಣಾರ್ಧದಲ್ಲಿ ಸುವರ್ಣವಾದಂಥಾಗಿ ಭಾಗ್ಯ ಹೇತುವಾಗುವದು. ಭೂತಪಾಂಡುರಾಯನ ಮಗ ವಿದ್ಯುಜಿಂಹ್ವನೆಂಬಾತನು ಯೀಶ್ವರಾನುಗ್ರಹದಿಂದ ಯೀ ಸಿದ್ಧರಸವಾಪಿಯನ್ನು ಕಂಡಂಥವನಾಗಿ, ಸಂತೋಷಚಿತ್ತನಾಗಿ ರಾಜ್ಯಪರಿಪಾಲನೆ ಮಾಡಿದನು. ಸದ್ಧೇಶ್ವರಸ್ವಾಮಿ ಉತ್ತಾಂತ ಸಿದ್ದರಸವಾಪಿ ಉತ್ತಾಂತ ಸಹಾ ಹೀಗೆ ಯಂತ ಹೇಳುವರು:

ಯೀ ಪೂರ್ವದಿಗ್ಭಾಗದಲ್ಲಿ ಶ್ರೀಸೋಮೇಶ್ವರ ದೇವಾಲಯವೊಂದು, ತೀರ್ಥರೂಪಾ ಸರಸು ತಂದು[>ಒಂದು] ಸಹಾ ಯಿರುತದೆ. ಯಿದರ ವೃತ್ತಾಂತ ಯೇನು ಯಂದರೆ:

ಲೊಕೊಪಪ್ಲವಮಾಲೊಕ್ಯ ಸರ್ವಕಾರಣಕಾರತಃ॥ ಅತ್ರಿಉಸ್ಟುವ್ರಾರ ಮುಕ್ತಂ ಲಿಂಗರೂಪೆ ಬಬೂವಹ॥ ಪುರಾಹಿ ಮುಚುಕುಂದಾಭೊ ಮುನಿ ಸ್ವಾದುಂ ಭೂವಾಂತರ॥ ಸಿಕ್ತಾಂ ಮಾಸ್ತೀರ ಮಾಸಾದ್ಯ ಚಕ್ರೆ ಸ್ವಾಶ್ರಮಮದ್ಭುತಂ॥ ತಸ್ಯೈಕ ಗೌಃಸರೂವಣ। ಶುಭ್ರಾಂಗಾ ಸರ್ವಸುಂದರಾ॥ ಚಲ್ಲಿರೀತ್ತುವ್ವಾ ಸಮಾಗತ್ಯ। ಪಾದದ್ವಿತಯ ಮಂಜಿನಾ॥ ಸಂನಾಪ್ಯ ಲಿಂಗ ಶಿರಸಿ ಸ್ರವಂತೀ ಕ್ಷೆರಮಾದರಾತ್॥ ಪ್ರತ್ಯಹಂ ಚೈವಸಾ ಮೊನ್ನ। ತ್ಯಕ್ತಕ್ಷೇರಾ। ವಿಲೊತ್ಯಸಃ। ಮನಸಾ ಚಿಂತಯಾ ಮಾಸ। ಬಂದ ನೀ ಮಾಹಿಗೌರತಿ॥ ಪರಸ್ಮಿನ ದಿವಸೆ ದೃಷ್ಟಾ ನಿಶೀಕ್ಷೀರ ವಿವರ್ಜಿತಾಂ॥ ಕರಣಂ ಚಿಂತಯಾಮಾಸ। ಗವಾಸಹವಿನಿಮ್ಯುಯೊ॥ ಲಿಂಗಲೊಪ ಲಿಂಗಾಂ ದೃಷ್ಟಾಸ್ತ್ರವಂತೀಂ ದೂರತಃ ಸ್ಥಿತಃ॥ ಮುನಿರ್ವಿಸ್ಮಯ ರೂಪನ್ನೆ ಲಿಂಗನ್ಯಾಗ್ರೇಪವಾತಹ॥ ದೃಷ್ಟಾತಾದುಗ್ದಿವಾಂಗಾಂತು ಕಾಮಧೇನುರಿತೀ ಸ್ಮರನ್॥ ಶಿವಸ್ಯ ಸೇವಾಂಕುರ್ವಾಣ। ಸ್ತಿತ್ಸಮೀವಾಶ್ರಮೇವ ಸಂ॥ ದುಗ್ದಾಭಿಷೇಕಂ ವಿದಧೆ ಮುನಿಃ ಪರಮಹರ್ಷಿತಃ ತದಗ್ರೇನ್ನಾನಪಾನರ್ಥಂ। ಪರಿತಃ ಪೂರತೊದಕಂ॥ ಕಷ್ಟಾಕಂಬಾತ ಯಾಮಾಸ। ಶಿಷ್ಯೈಃ ಸ್ವಸ್ಯಾ ಮಹಾಮುದಿಂ॥ ಪ್ರತ್ಯಹಂ ಮುಚುಕುಂದೊಸಾನ್ನಾತ್ವಾತಸ್ಮಿನ್ ಮಹಾಮುನಿಃ॥ ಸೊಮಂಚಾಬ್ಯರ್ಚದೇವೇಶಂ ಪ್ರತ್ಯಕ್ಷೆ ಕೃತ್ಯ ತಸ್ಥಿವಾನೆ॥ ಸೋಮೇಶ್ವರಸ್ಯಾಗ್ರಭಾಗ। ಮುಚುಕುಂದ ಸಮೂಹ್ವಯೇ ತೀರ್ಥಸ್ನಾನಾಂ ಪ್ರತುರ್ವಂತಿ। ಯೇ ನರಾಃ ಪುಣ್ಯಕರ್ಮಿಣ॥ ತೇಯಾಂತಿ ಸೌಖ್ಯ ಪದವೀಂ। ನಾತ್ರತಾರ್ಮ್ಯಾವಿಚಾರಣಾ॥

ಪೂರ್ವದಲ್ಲಿ ಅತಿ ಉಸ್ಟಿಯಾಗಿ ಅದರಿಂದ ಲೊಕೋಪದ್ರವ ಆಗುವದರಿಂದ ಲೊಕಾನುಗ್ರಹತತ್ಪರನಾದ ಶ್ರೀ ಸಾಂಬಸದಾಶಿವನು "ಯೀ ಅತಿಉಸ್ಟೆಯನ್ನು ಪರಿಹರಿಸಿ, ಕಾಲಾನುಗುಂಣ್ಯ ಉಸ್ಟಿಮಾತ್ರದಿಂದ ಲೊಕೋದ್ಧಾರವನ್ನು ಮಾಡಬೇಕು"ಯೆಂಬ ನಿಮಿತ್ಯವಾಗಿ ಭೂಮಿಯಲ್ಲಿ ಯೀ ಬಾರಕೂರಸ್ಥಳದಲ್ಲಿ ಲಿಂಗರೂಪಿನಿಂದ ಪ್ರಾತುರ್ಭೂತರಾಗಿ ಯಿರುವಲ್ಲಿ,

ಪೂರ್ವದಲ್ಲಿ ಸ್ವಾಯಂಯವ[>ಸ್ವಾಯಂಭುವ] ಮನ್ವಂತರದಲ್ಲಿ ಮುಚುಕುಂದನೆಂಬ ಕ್ಷಯು[>ಋಷಿಯು] ಸೀತಾನದಿ ತೀರಕ್ಕೆ ಬಂದು ಆಶ್ರಮವನ್ನು ಮಾಡಿಕ್ಕೊಂಡು ಯಿರುವಲ್ಲಿ, ಆ ಮುಚುಕುಂದಾಶ್ರಮದಲ್ಲಿ ಸರ್ವಾವಾಯದ[>ಸರ್ವಾವಯವದ] ಸುಂದರನದಂತಾ ಶ್ವೇತಗೋಉ ಯಿರುವಲ್ಲಿ, ಪ್ರತಿನಿತ್ಯದಲ್ಲಿ ಮೇವಿಗೆ ಬಿಡುವದನ್ನು ಬಾಲವನ್ನು ಯೆತ್ತಿಕೊಂಡು ವೋಡಿಬಂದು, ಪ್ರಾದುರ್ಭವಾದ ಶ್ರೀಸೋಮೇಶ್ವರಲಿಂಗದ ಶರಸ್ಸಿನ ಮೇಲೆ ಯೆರಡೂ ಕಾಲನ್ನು ಯಿಟ್ಟು, ತನ್ನ ಕೆಚ್ಚಲಲ್ಲಿ ಯಿರುವ ಕ್ಷೀರವನ್ನೆಲ್ಲಾ ಸುರಿಸುತ್ತಾ ಸಾಯಂಕಾಲಕ್ಕೆ ಮನೇಗೆ ಬರುವಾಗ್ಗೆ ಕೆಚ್ಚಲಲ್ಲಿ ಯೇನು ಹಾಲು ಯಿಲ್ಲದೆ ಯಿರುವ ಗೋವನ್ನು ನೋಡಿ, ಯೀ ಗೋವನ್ನು ಕೊಟ್ಟಿಗೆ ವಳಗೆ ಕಟ್ಟಿ ಹಾಕಬೇಕುಯೆಂತ ಯೋಚಿಸಿಕೊಂಡು, ಮರುದಿವಸಲು ಅದೆ ರೀತಿಗೆ ಹಾಲು ಯೇನೂ ಯಿಲ್ಲದೆ ಯಿರುವಂಥ ಗೋವನ್ನು ನೋಡಿ, "ಯೀದ ಯೇನೊ ವೊಂದು ಕಾರಣವದೆ"ಯಂಬದಾಗಿ ಯೊಚಿಸಿಕೊಂಡು ಮರುದಿವಸ ದನಾ ಬಿಡುವಾಗ್ಗೆ ಆ ಗೋವಿನ ಸಂಗಡಲೆ ತಾನು ಹೊಗಿ ನೊಡುವಾಗ್ಯೆ, ಪೂರ್ವಪ್ರಕಾರಕ್ಕೆ ವೊಡಿ ಹೋಗಿ ಲಿಂಗದ ತಲೆ ಮೇಲೆ ಕ್ಷೀರವನ್ನು ಸುರಿಸುವಂತಾ ಗೋವನ್ನು ದೂರದಲ್ಲಿ ನಿಂತು ನೋಡಿ, ಆಶ್ಚರ್ಯಬಟ್ಟು, ಆ ಮುಚುಕುಂದಮುನಿಯು ಲಿಂಗವನ್ನು ನೊಡಿ, ನಮಸ್ಕಾರವನ್ನು ಮಾಡಿ, "ಸ್ವಬುಧ್ಯಾ ಪ್ರತಿದಿನದಲ್ಲು ಲಿಂಗಕ್ಕೆ ಕ್ಷೀರಾಭಿಷೇಕವನ್ನು ಮಾಡುತ್ತದೆ. ಯೀ ಗೋವು ಕಾಮಧೇನು ಸದೃಶವಾದ್ದು" ಯಂತ ತಿಳಿದುಕ್ಕೊಂಡು, ಆ ಲಿಂಗ ಸಮೀಪದಲ್ಲಿ ಆಶ್ರಮವನ್ನು ಮಾಡಿಕ್ಕೊಂಡು ಪ್ರತಿನಿತ್ಯದಲ್ಲು ಲಿಂಗಕ್ಕೆ ಕ್ಷೀರಾಭಿಷೇಕವನ್ನು ಮಾಡುತ್ತಾ, ಯೀಶ್ವರಸೇವೆಯನ್ನು ಮಾಡಿಕ್ಕೊಂಡು ಯಿರುವಲ್ಲಿ, ಸ್ನಾನಪಾನಾರ್ಥವಾಗಿ ಸರ್ವಲೋಕೋಪಕಾರ ನಿಮಿತ್ತದಿಂದ ಸಾರ್ವಕಾಲ ಜಲಸಮೃದ್ಧಿ ಯಿರಬೇಕೆಂದು ತಮ್ಮ ಶಿಷ್ಯರ ಕೈಯಿಂದ ವೊಂದು ತಟಾಕವನ್ನು ತೋಡಿಸಿ, ಆ ತಟಾಕದಲ್ಲಿಯೆ ತ್ರಿವಣ ಸ್ನಾನಮಾಡುತ್ತಾ, ದಿನದಲ್ಲಿ ರಾತ್ರೆಯಲ್ಲಿ ಸಹ ಉಭಯಕಾಲದಲ್ಲು ಲಿಂಗಪೂಜೆಯನ್ನು ಮಾಡುತ್ತಾ, ಯಿಶ್ವರಪ್ರತ್ಯಕ್ಷವನ್ನು ಮಾಡಿಕ್ಕೊಂಡು ಯಿರುತಿದ್ದರು. ಯೀ ಸೋಮೇಶ್ವರಲಿಂಗದ ಮುಂದುಗಡೆಯಲ್ಲಿರುವ ಸರಸ್ಸು ಮುಚುಕುಂದತೀರ್ಥವಾಸಿ[>ವೆನಿಸಿ]ಕ್ಕೊಂಬುವದರಿಂದ ಯೀ ತೀರ್ಥದಲ್ಲಿ ಪ್ರತಿನಿತ್ಯದಲ್ಲು ಯಿವನು ಮನುಷ್ಯರು ಸ್ನಾನವನ್ನೂ ಮಾಡುತ್ತಿದ್ದರು. ಅವರು ಅವರು ಪಾಪದಿಂದ ಮುಕ್ತರಾಗಿ ಸುಖದಲ್ಲಿ ಯಿರುತ್ತಿದ್ದಾರೆಯಂಬ ವಾಕ್ಯಗಳಿಂದ ಮೂಡಕೆರೆ ಸೋಮೇಶ್ವರದೇವಸ್ಥಾನದ ಮುಂದುಗಡೆಯಲ್ಲಿರುವ ಸರಸ್ಸಿಗೆ ಮುಚುಕುಂದತೀರ್ಥವೆಂಬ ಹೆಸರು ಬಂದ ವೃತ್ತಾಂತ ಹೀಗೆ ಇರುತ್ತದೆ. ಯೀ ಪ್ರಾದರ್ಭವಾದಂತಾ ಲಿಂಗಕ್ಕೆ ಸೋಮೇಶ್ವರಯೆಂಬ ಹೆಸರು ಬರುವದಕ್ಕೆ ಕಾರಣವೇನುಯೆಂದರೆ,

ಪುರಾ ಕೈಲಾಸಶಿಖರಾದಾಗತಃ ಪರಮೇಶ್ವರಃ॥ ಶಿವ ಸಹ ಸಂಚಾರಂ ಸೀತಾತೀರೇಚಕಾರಹ॥ ಗಿರಿಜ ಮಿದಮಾಹಸ್ಮ ಚಿ ತಂದ್ರುಷ್ಮಾಮಹತ್ತರಂ॥ ಅಯ ಪಶ್ಯವರಾರೊಹೆ ಲಿಂಗಮೆತದುಪಾಸ್ಥಿತಂ॥ ಸ್ವಯಂವ್ಯಕ್ತಂ ಬವಾಮ್ಯಾದ್ದಯಿಹಮೇ ಮಹಿಮೊದಮಾ॥ ಸೋಮೇಶ್ವರಾಭಿದಾನೇನ। ತ್ವಮಾಸಾಕಂ ಮಹೇಶ್ವರ॥ ಪ್ರಾದುರ್ಭೂತ ಮಹಾಲಿಂಗಾ ವಸಾಮ್ಯೇವನ ಸಂಶಯಃ ರಹಸ್ಯಸ್ಥಾನ ಪೇಕದ್ವಿ ಸರ್ವಪಾತಕ ನಾಶನಂ॥ ಗೊಮಾಕರಃ ಸುಸೀಲಾದ್ಯಸ್ರುತ್ವಾವೆ ಮಹಿಮೊದಯಂ॥ ಭುವಮಾ ಸಾಧ್ಯ ಯತ್ನೇನ। ಸ್ವೊದುಭಾರೇಣಪೇಡಿತಾಃ॥ ಸ್ರವಂತೆ ಪ್ರತ್ಯಾಹಂ ಕ್ಷೀರೈಃ ಸ್ನೇಹೇನ ಪರಿವಾರ್ಧಿತಾಃ॥ ಯಿತ್ಯುತ್ಯಾಂ ಶರ್ದೇಕಸ್ಮಿಂದ ವ್ಯಾಸಾಕರಿ ಸದಾಶಿವಹಾ॥

ಪೂರ್ವದಲ್ಲಿ ವೊಂದಾನೊಂದು ವೇಳೆಯಲ್ಲಿ ಕೈಲಾಸಪರ್ವತದಿಂದ ಸರ್ವಮಂಗಲೆಯಾದ ಅಮ್ಮನವರಿಂದ ಸಹಿತವಾಗಿ, ವಿನೋದ ವಿಚಾರಗಳಿಂದ ಸೀತಾನದಿತೀರದಲ್ಲಿ ಸಂಚಾರವನ್ನು ಮಾಡುವ ಸಮಯದಲ್ಲಿ "ಪೂರ್ವದಲ್ಲಿ ಲೊಕೋಪಪ್ಲವ ಪರಿಹಾರಾರ್ಥವಾಗಿ ಕಾಲು[>ನಾವು] ಲಿಂಗರೂಪಿನಿಂದ ಪ್ರಾದುರ್ಭಾವರಾದ ವೃತ್ತಾಂತವನ್ನು ಅಮ್ಮಾನವರಿಗೆ ತಿಳಿಸುವ ನಿಮಿತ್ತ, ಯೀ ಸ್ಥಳದಲ್ಲಿ ನಿಮ್ಮಿಂದ ಸಹಿತವಾಗಿ ನಾವು ಲಿಂಗರೂಪಿನಿಂದ ಪಾದುರ್ಭಾವರಾಗಿ ಯಿದ್ದೇವೆ. ಸೋಮೇಶ್ವರನೆಂಬ ಹೆಸರಿನಿಂದ ನಿಮ್ಮಿಂದ ಸಹಿತವಾಗಿ ನಾವು ಯೀ ಲಿಂಗದಲ್ಲಿ ನಾಉ ವಾಸ ಮಾಡಿಕ್ಕೊಂಡು ಯಿರುತ್ತೇನೆ. ಯೀ ಸ್ಥಳವಾದರೆ ನಮಗೆ ರಹಸ್ಯಸ್ಥಾನವಾದಂಥಾದ್ದು. ಸಕಲ ಪಾಪನಾಶಕಾರಕವಾದಂಥಾದ್ದು. ಲೊಕಕ್ಕೆ ಮಾತ್ರ ರೂಪಿಗಳಾದ ಕಾಮಧೇನು ಕುಲೋತ್ಪನ್ನರಾದ ಸುಶೀಲ ಮೊದಲಾದ ಗುಣಗಳು ನಾವು ಯಿಲ್ಲಿ ಲಿಂಗರೂಪಿನಿಂದ ಪ್ರಾದುರ್ಭಾವ ಆದ ಮಹಿಮೆಯನ್ನು ತಿಳಿದುಕ್ಕೊಂಡು, ಭೂಲೋಕಕ್ಕೆ ಬಂದು ಉಧೊ ಭಾರದಿಂದ ಪೀಡಿತರಾದಂಥಾವಗಳಾಗಿ ಸ್ನೇಹ ಉದ್ಧಿಯಿಂದ ನಮಗೆ ಪ್ರತ್ಯಾಹದಲ್ಲು ಕ್ಷೀರಾಭಿಷೇಕವನ್ನು ಮಾಡಿದಂಥಾವಗಳಾಗುತ್ತ ಥಾವೆ"ಯಂಬದಗಾಗಿ ಅಮ್ಮಾನವರ ಕೂಡೆ ಹೇಳಿ ಹಾಗೆ, ಅಮ್ಮನವರಿಂದ ಸಹಿತವಾಗಿ ಆ ಲಿಂಗದಲ್ಲಿ ಅಂತರ್ಧಾನವಾದರು ಯಂಬ ಉತ್ರಾಂತದಿಂದ ಅದ್ಯಾಪಿ ಸೋಮೇಶ್ವರಃ ಯಂಬ ಹೆಸರು ನಡೆಯುತ್ತದೆ.

❖❖

೮೫
ಭಟ್ಟಕಳದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಬಟ್ಟಕಳದ ಕೈಫಿಯತ್ತು. ವೆಂಕಟೇಶ ಪುರಾಣೀಕನು, ಶಾನುಭಾಗ ತಿಮ್ಮಾಜಿ, ಪರಮೇಶ್ವರೈಯ್ಯಾ, ಗೋಪಾಳಯ್ಯಾ.

ಅಭಿನವ ಬಟ್ಟಾಕಳಂಕ ಯಂಬ ಸನ್ಯಾಸಿ ಜಯಿನ ಗುರುಯಿದ್ದನು. ಯೀತಗೆ ಬಯಿರು[>ಜಯಿನರು]ಯಂಬುದಾಗಿ ಹೇಳುತ್ತ ಇದ್ದರು. ಇವರು ಮಹಾಮರುಷರಾದಕಾರಣ, ಯಿವರಿಗೆ ಶಿಷ್ಯರಾಗಿ ಹಾಡುವಲ್ಲಿಗೆ ಪ್ರತಿನಾಮಧೇಯ ಸಂಗೀತಪುರಯಂಬುವದು ಉಂಟು. ಈ ಸ್ಥಳದಲ್ಲೆ ಕದಂಬವಂಶಸ್ಥರು ದೊರೆತನ ಮಾಡಿಕ್ಕೊಂಡು ಯಿದ್ದರು. ಯೀ ಸಂಗೀತಪುರದಲ್ಲಿ ನಡಿಯುತ್ತಾ ಯಿದ್ದ ಸೂಸಗಡಿಂಬ ಗ್ರಾಮದಲ್ಲಿ ಸಂಹ್ಯಾನದಿ ಯಂಬುವದು ಉಂಟು. ಕಾರಣ ಯೀ ಸ್ಥಳದಲ್ಲಿ ಅಭಿನವ ಭಟ್ಟಾಕಳಂಕ ವಾಸವನ್ನು ಮಾಡಿಕೊಂಡು ಯಿದ್ದರು. "ಯಿವರು ಮಹಾಮರುಷರು, ಆದ ಕಾರಣ ಯಿವರ ಸೇವೆಯನ್ನು ಮಾಡುವ ಬಗ್ಗೆ, ದೂರವಾಗಿ ಯಿಧ ಯಿವರನ[>ನು] ದಿನಉ ದರಶನವನ್ನು ಮಾಡುವುದಕ್ಕೆ ಯಿಲ್ಲಾ"ಯಂದು ಯೋಚನೆ ಮಾಡಿ, ಗುರುವಿನ ಅಪ್ಪಣೆ ಕೇಳಲಿಕ್ಕೆ, ಅವರು ಹೇಳಿದ್ದು "ಆ ಸ್ಥಳಯುಕ್ತವಾಗಿಯಿಲ್ಲಾ, ಅದು ಅರಣ್ಯವಾಗಿಯಿಧ,

ಬೆಟ್ಟದ ಕೆಳಗೆ ಯಿಥ, ಆದ ಕಾರಣ ಅದು ಬಿಟ್ಟು ಯಿಲ್ಲಿ ಯಿದ್ದಾರೆ. ಯಿದು ಪ್ರಸಿದ್ಧಿಯಾಗಿ ಯರುತ್ತಾಯಿಧಿ, ಯಿಲ್ಲೆ ಸಮುದ್ರದ ಮೇಲೆ ಹಡಗು ಸಹಾ ಬರುವದಕ್ಕೆ ಮಾರ್ಗವಿಥೆ. ಯಿಲ್ಲಿ ವರ್ತಕರಿಗೆ ಕಉಲು ಕೊಟ್ಟು ಪಟ್ಟಣವನ್ನು ಕಟ್ಟಿಸಿ ಇಲ್ಲೆ ಇದ್ದಾರೆ[>ದ್ದರೆ] ಚೆನ್ನಾಗಿಯಿರುತ್ತಾ ಯಿಥೆ"ಯಂಬುದಾಗಿ ಹೇಳಿದ್ದರಿಂದಾ, ಅದೆ ಮೇರೇಗೆ ಗುರುಭಕ್ತಿಯಿಂದಾ ಸಂಗೀತಪುರವನ್ನು ಬಿಟ್ಟು ಯಿಲ್ಲಿ ಕಿಲ್ಲೆ ಕಟ್ಟಿಸಿ, ಪಟ್ಟಣವನ್ನು ನಿರ್ಮಾಣಮಾಡಿ, ಯಿದಕ್ಕೆ ಪೂರ್ವದಲ್ಲಿ ಯಿದ್ದ ಸೂಸಗಡಿ ಯಂಬವದು ಹೆಸರು ಬಿಡಿಸಿ, ಗುರುಭಕ್ತಿಯಿಂದ ಗುರುವಿನ ಹೆಸರು ಇದಕ್ಕೆ ಬಟಾಕಳಾಯಂಬ ಹೆಸರು ಯಿಟ್ಟರು. ಯಿದಕ್ಕೆ ಲೋಕದ ಜನರು ಬಟಕಳಯೆಂಬ ಹೆಸರು ಹೇಳುತ್ತಾ ಯಿದ್ದಾರೆ. ಅನಂತರದಲ್ಲೆ ಸಂಗೀ[+ತ]ಪುರಯಂಬಾ ರಾಜಧಾನಿಯಲ್ಲಿ ಯಿದ್ದರು. ಯೀ ಬಟಕಳ ಯಂಬವದನ್ನು ಆಳಿಕ್ಕುಂಡು, ಗುರುವಿನ ವ[>ಉ]ದ್ದಿಸ್ಯವಾಗಿ ನಗರ ಕಟ್ಟಿಸಿ ಯಿಲ್ಲಿ ಬರುತ್ತಾ ಕೆಲ ದಿವಸವಿದ್ದು, ತಮ್ಮ ರಾಜ್ಯವನ್ನು ಪರಿಪಾಲನೆ ಮಾಡುತ್ತಾ ಯಿದ್ದರು. ಯಿದಕ್ಕೆ ರಾಜಧಾನಿ ಸಂಗೀತಪುರ. ಯೀ ಮೇರೆಗೆ ಕೆಲವು ದಿವಸವನ್ನು ಪರಿಪಾಲನೆ ಮಾಡಿದರು. ಅನಂತರದಲ್ಲೆ ಗುರುರಾಜವಡೇಯರು ಯಂಬವರು ಜಯನರು ಕೆಲಉ ದಿವಸ ಆಳಿದರು. ಸಂಗರಾಜ ವುಡೆಯರು ವೀರರಾಜ ವುಡೆಯರು ಸಹಾ ಆಳಿದರು. ಯಿವರ ವಂಶ ಪಾರಪಂರ್ಯ್ಯ ತಿಳಿಯಲಿಲ್ಲಾ. ಯಿ ಗುರುರಾಜ ವುಡೇರು ಯೀ ಸ್ಥಳದಲ್ಲಿ ಬಸ್ತಿಯನ್ನು ಕಟ್ಟಿಸಿ ಯಿದ್ದಾರೆ. ಯಿದರ ಶಾಸನವಿಲ್ಲಾ. ಅನಂತರದಲ್ಲಿ ಬುಕ್ಕರಾಯರು ಕೆಲಉ ದಿವಸ ಆಳಿದರು. ೧ ಶಕ ೧೨೬೦ನೇ ಕೀಲಕ ಸಂವತ್ಸರದಲ್ಲಿ ಯಿವರ ಶ್ರೀ ಮನ್ಮಾಹಾಪ್ರದಾನ ರಾಜರಸವುಡೇಯರು ಮಂಡಲಿ ಮಠದ ನರಸಿಂಹ ದೇವರಿಗೆ ಕೆಲಉ ದೂಪದೀಪಕ್ಕೆ ಉತ್ತಾರವನ್ನು ಬಿಡಿಸಿ ಶಿಲಾಶಾಸನಉ ಹಾಕಿ ಯಿದ್ದಾರೆ. ಯೀ ಸಾಧನೆ[>ಶಾಸನ] ಹುಲ್ಲು ಹೊಳೆಯಲ್ಲು ಯಿಥ. ಯೀ ಮೇರೆಗೆ ಕೆಲವು ಅರಸಗುಳು ಆಳಿಯಿದ್ದಾರೆ. ಅನಂತರದಲ್ಲಿ ಭೈರಾದೇವಿಯಂಬವರು ೭ ಯೇಳು ಮಂದಿ ಯಿದ್ದರು. ಯಿವರು ಯಿದ್ದ ಸ್ಥಳದ ವಿವರ:

ಹಿರೇ ಭೈರಾದೇವಿ ಭಟ್ಟಕಳದಲ್ಲಿ ಅರಸುತನವನ್ನು ಮಾಡಿದರು. ೧. ಚನ್ನಭೈರಾದೇವಿ ಹಾಡುವ ಹಳ್ಳೀವಳಗೆ ರಾಜ್ಯ ಪಾಲನೆ ಮಾಡಿದಳು. ೨ ಗೆರಸೊಪ್ಪೆ ವಳಗೆ ಭೈರಾದೇವಿ ವಬ್ಬಳು ರಾಜ್ಯ ಪಾಲನೆ ಮಾಡಿದಳು. ೩ ಮೂಡಬಿದರೆಯಲ್ಲು ಒಬ್ಬ ಭೈರಾದೇವಿ ರಾಜ್ಯವನಾಳಿದಳು. ೪ ಕಾರಕಳದಲ್ಲಿ ವಬ್ಬ ಭೈರಾದೇವಿ ಯಂಬರು ಆಳಿದರು. ೫ ಮಂಗವಾ[>ಲೂ]ರುವಲ್ಲಿ ಮಂಗಲ ಭೈರಾದೇವಿ ರಾಜ್ಯವನಾಳಿದಳು. ಬಗ್ಗು ಭೈರಾದೇ[+ವಿ] ಯಂಬ ಹೆಸರು. ೬ ಕಿಲೆ ಭೈರಾದೇವಿ ಮೂಡ ಬಟಕಳದಲ್ಲಿ ರಾಜ್ಯವನಾಳಿದರು. ೭ ಯಿಕೆ ಶಂಕರದೇವಿಯಂಬ ಪಟ್ಟಣದಲ್ಲಿ ರಾಜ್ಯವನ್ನು ಆಳಿದರು.

ಯಿವರು ಯೇಳು ಮಂದಿ ಭೈರಾದೇವಿಯವರು ಅಕ್ಕ ತಂಗೇರು. ಯಿವರು ಕದಂಬರಾಯಗೆ ಶಾಂತೀಶ್ವರಿ ಯಂಬ ಹೆಂಡತಿಯಲ್ಲಿ ಭೈರವೇಶ್ವರನ ವರದಿಂದಾ ವರದಿಂದಾ ಹುಟ್ಟಿದರು. ಯಿವರಿಗೆ ಮದಿವೆ ಯಿಲ್ಲಾ ಯಂಬುದಾಗಿ ಹೇಳುತ್ತಾ ಯಿದ್ದಾರೆ. ಇವರು ಜಯಿನರು.

ಯೀ ಜಯಿನ ಮತಕ್ಕೆ ಉತ್ತರಕಾಸಿ ಗೆರುಸೊಪ್ಪೆ, ದಕ್ಷಿಣಕಾಸಿ ಮೂಡಬಿದರೆ ಯಂಬವದು. ಗೆರಸೊಪ್ಪೆಯಲ್ಲಿ ಹೆರೆಬಸ್ತಿಯಲ್ಲು ಪಾರ್ಶ್ವನಾಥದೇವರು ಜ್ವಲಾಮುಖಿ[>ಮಾಲಿನಿ] ಅಮ್ಮನವರು ಯಿದ್ದ ಕರಣ ಕಾಸಿಯಂಬ ಹೆಸರು, ಯಿ ಮೂಡಬಿದರೆಯಲ್ಲು ಸಹಸ್ರಕಂಬದ ಹಿರೆ ಬಸ್ತಿಯಲ್ಲು

ಪಾಶ್ವನಾಥಸ್ವಾಮಿ ಜ್ವಾಲಾಮುಖಿ[<ಮಾಲಿನಿ] ಅಮ್ಮಾನವರು ಯಿದ್ದ ಕಾರಣ ದಕ್ಷಿಣ ಕಾಸಿಯಂಬುದಾಗಿ ಹೇಳುತ್ತಾಯಿದ್ದಾರೆ. ಯಿಲ್ಲಿ ಮೂಡಬಿದರೆಯಲ್ಲು ಬಸ್ತಿ ೭೦೦, ಜಯಿನ ಮನೆ ೭೭೭ಯಿಥೆ ಯಂಬುದಾಗಿ ಹೇಳುತ್ತಾ ಯಿದ್ದಾರೆ.

ಯೀ ಮೇರೆ ಭೈರಾದೇವಿ ಅಮ್ಮನವರು ಬಟ್ಟಕಳೆಯಲ್ಲಿ ರಾಜ್ಯವನ್ನು ಮಾಡುವ ಕಾಲದಲ್ಲಿ ಯೀ ವೂರಿಗೆ ಪಶ್ಚಿಮಭಾಗವುಂ[>ವೊಂ]ದು ಕೋಸು ವಳಾಗೆ ಸಮುದ್ರಉ ಯಿಥೆ. ಯೀ ಸಮುದ್ರದಲ್ಲಿ ವಾಡೆ ಬರುವಂಥಾ ತಾರಿಯಲ್ಲು ಮುತ್ತುಗಳು ಸಮುದ್ರದಲ್ಲಿ ಆಗುತ್ತಾಯಿತ್ತು. ಯಿದು ವರ್ತಕರು ಬಂದು ಮುತ್ತಿನ ಸಲಾಪಾ ತೆಗೆದುಕೊಂಡು ಹೋಗುತ್ತಾ ಯಿದ್ದರು. ಆದ ಕಾರಣ ಯಿದಕ್ಕೆ ಮುತ್ತಿನ ಬಟಗಳೆಯಂಬ ಹೆಸರು ಉಂಟು. ಯೀ ಮೇರೆಗೆ ಪ್ರಸಿದ್ಧಿ ಆಯಿತು "ಯೀ ಮುತ್ತುಗಳ ವ್ಯಾಜದಿಂದಾ ಶತ್ರುಗಳು ಬಂದು ಈ ಪಟ್ಟಣಕ್ಕೆ ಉಪದ್ರಉ ಆದೀತು"ಯಂಬ ಭಾವನೆಯಿಂದ ಮುತ್ತುಗಳು ಅ[>ಆ]ಗೊ ಸ್ಥಳದಲ್ಲಿ ಕಲ್ಲುಗಳು ಹಾಕಿಸಿ, ಆ ಸ್ಥಳವನ್ನು ಮುಚ್ಚಿ ಬಿಟ್ಟರು. "ಯಿದೆ ಸಮುದ್ರದಲ್ಲಿ ಯಿ ಸ್ಥಳದಲ್ಲಿ ಯರಡು ಆಳು ಉದ್ದ ನೀರು ವಳಗೆ, ಗೇಣು ಮಣ್ಣು ತೆಗದು, ಕೆಳಗೆ ಯಿರುವ ಮಣ್ಣು ತೆಗದುಕ್ಕೊಂಡು ಬಂದರೆ, ಆ ಮಣ್ಣು ಬಂಗಾರು ಬೆಳ್ಳಿಗೆ ವಪ್ಪವನ್ನು ಹಾಕೊದಕ್ಕೆ ಬರುತ್ತಾಯಿಥೆ"ಯಂದು ಕುಮರಗು ಪಟ್ಟಿಯಿಸುಕಲಿನನರು ಸ್ವಲ್ಪ ಕೆಂಪು ವರ್ನವಾಗಿ ಯಿಥೆ. ಯಿದು ಯಿಕ್ಕೆ ಅಚಕ್ರವಂಟುಕ್ಕೆ ಹಳಿ ದುಡ್ಡು. ಯಿದಕ್ಕೆ ಸೇಣಕ್ಕೆ ದುಡ್ಡು ಪ್ರಮಾಣನೆ ನ್ನು ತೆಗೆದುಕ್ಕೊಂಡು ಹೋಗುತ್ತಾಯಿದ್ದರು.

ಹಿರೆ ನಬಾಬ ಕಾಲ ಪರಿಯಂತ್ರಉ ಕೊಟೆ ಒಳಗೆ ಮಂದಿ ಯಿದ್ದ ಕಾರಣ, ಪಾರೆ ಜನ ಮಣ್ಣು ತೆಗೆಯಲ್ಲಿಸದೆ ಬಂದೂಬಸ್ತು ಮಾಡಿಸಿ ಯಿದ್ದರು. ಯೀಚೀಗೆ ಹಾಳುಹಾಗಿ ಹೋಯಿತು. ಯೀಗೆ ಮನಸು ಬಂದವರು ತೆಗೆದುಕ್ಕೊಂಡು ಹೊಗುತ್ತಾಯಿದ್ದಾರೆ. ಯಿದು ಪ್ರತ್ಯಕ್ಷವಾಗಿ ಯಿಥೆ.

ಯೀ ಭೈರಾದೇವಿ ಕಾಲದಲ್ಲಿ ಅರಬಸ್ತಾನುಯಿಂದಾ ನವಾಯತರು ಬಂದರು. ಶಾಲಿವಾಹನ ಶಕ ವರುಷ ೧೭೨೭ ಕ್ರೋಧನ ಸಂವತ್ಸರಕ್ಕೆ ಅರಬಸ್ತಾನ ಬಿಟ್ಟು ೫೬೦ ವರುಷ ಅಯತ್ತು. ಅಲ್ಲಿ ಬನವಾಯತರು ಯಂಬ ಹೆಸರು, ಯೀಲ್ಲಿಯೂ ಬನರಾ[>ವಾ]ಯತು ಯೆಂಬ ಹೆಸರು. ಯಿದಕ್ಕೆ ನವಾಯತರು ಯಂದು ಹೇಳುತ್ತಾ ಯಿದ್ದಾರೆ. "ಅರಬಸ್ತಾನು ಬಿಟ್ಟು ಉತ್ತರ ದೇಶದಲ್ಲಿ ಬಗದಾದು ಯಂಬ ಪಟ್ಟಣದಲ್ಲು ಕೆಲವು ದಿವಸ ಯಿದ್ದರು. ಅಲ್ಲಿ ಹೊಟ್ಟೆಗೆ ಯಿಲ್ಲದೆ ಬಟ್ಟಗಳಕ್ಕೆ ಬಂದು ವರುಷ . . . . ಆಯಿತು." ಯೆಂಬುದಾಗಿ ಹಿರೇರು ಹೇಳುತ್ತಾ ಯಿದ್ದ ಮಾತು. ಅಲ್ಲಿಂದಾ ಯಷ್ಟು ಮನೆಯವರು ಬಂದರು ಯಂಬದಾಗಿ ತಿಳಿಯಲಿಲ್ಲಾ. ಯೀ ಕಾಲಕ್ಕೆ ಯಿರುವ ಮನೆ ಸುಮಾರು ಮನೆ ಆದೀತು. ಯ[>ಯಿ]ವರು ಲಡಾಯಾ ಮಾಡುವವರು ಅಲ್ಲಾ. ವ್ಯಾಪಾರಾ ಮಾಡಿಕ್ಕೊಂಡು ಯಿದ್ದಾರೆ. ಟೀಪುಸುಲತಾನು ಕಾಲದಲ್ಲಿ ಹತ್ತು ಜನವನ್ನು ಬಲವಂತದಿಂದಾ ಕರದುಕ್ಕುಂಡು ಹೋಗಿ ಪಾರೆ ಹಾಕಿಶಿ, ಅಮಲು ಕೊಟ್ಟು ಯಿದ್ದರು. ಕೆಲಉ ದಿವಸದ ಮೇಲೆ ನಬ[>ಜ]ರಾನಾ ಕಟ್ಟಿ ತಮ್ಮ ದೇಶ ಹೊರಕ್ಕೆ ಹಾಕಿದರು. ಯಿದೆ ಹೊರ್ತು ಸರಕಾರ ಕೆಲಸ ಮಾಡಿದವರು ಅಲ್ಲಾ. ಯಿವರಿಗೆ ವ್ಯಾಪಾರವೆ ಹೊರ್ತು ಮತ್ತೊಂದು ಕೆಲಸ ಮಾಡುವವರು ಅಲ್ಲಾ.

ಯಿವರು ಕೊಡಿಯಾಲು ಬಂದರಗೆ, ಕಲ್ಲೆಕೊಟೆ ಸೀಮೇಗೆ, ಕಂದನೂಲುಗೆ, ನಗರಕ್ಕೆ ಹೋಗಿ ಜವಳಿವ್ಯಾಪಾರ ಮಾಡುವದೆ ಹೊರ್ತು ಮತ್ತೊಂದು ಮಾಡುವದು ಯಿಲ್ಲಾ. ಸಣ್ಣ

ಡೋಣಿವಳಗೆ ಅಕ್ಕಿ ಕಾಯಿ ಬೆಲ್ಲ ಯೆಣ್ಣೆ ಅಡಿಕೆ ತೆಗದುಕ್ಕೊಂಡು ಕುಡಿಯಾಲ ಕಲ್ಲೆಕೊಟೆಗೆ ಹೊಗಿ ಅಲ್ಲಿ ಮಾರಿಕ್ಕುಂಡು, ಅಲ್ಲಿಂದಾ ಹೊಗೆಸೊಪ್ಪು ಕೊಬ್ಬರಿ ಕೊಪಿಚಂದನ ಸುಂಟಿ ಯೀ ಜಿನಸುಗಳು ಯಿಲ್ಲೆಗೆ ತಂದು ಬಟ್ಟಗಳಿಯಲ್ಲಿ ಮಾರುತ್ತಾ ಯಿದ್ದಾರೆ. ನಗರದಲ್ಲಿ ತಂದ ನೂಲುಯಲ್ಲಿ ಜವಳಿ ತೆಗೆದುಕ್ಕೊಂಡು ಅಲ್ಲೆ ಮಾಡಿಕ್ಕೊಂಡು ಯೇನಾದರು ಹತ್ತು ಹಣ ಸಿಕ್ಕದರೆ ಯಿಲ್ಲಿ ತೆಗೆದುಕ್ಕುಂಡು ಬಂದು, ಗುಜರಾನಾ ಮಾಡುತ್ತಾ ಯಿದ್ದಾರೆ. ಯಿದು ಗು[>ಹೊ]ರ್ತು ಲಡಾಯಿ ಮಾಡುವರು ಅಲ್ಲಾ; ಕತ್ತಿ ಕಟ್ಟುವರು ಅಲ್ಲಾ. ಯಿಲ್ಲಿಗೆ ಹುಟ್ಟಿ ಕಾಲಕ್ಷೇಪಮಾಡಿಕ್ಕುಂಡೆ ಯಿಬಗ್ಯೆ ಹಿರಿಯವರು ಯಿಲ್ಲೆ ಬಂದು ನಿಂತ ಕಾರಣ, ಯೀ ಸ್ಥಳವನ್ನು ಬಿಡದೆ ಶಿಲಿಶಿಲೆ ಲಾಗಾಯಿತು ಯಿಲ್ಲೆ ಯಿದ್ದಾರೆ. ಮತ್ತೊಂಡು ಕಡೆ ಹೋಗಲಿಲ್ಲಾ.

ಯಿವರು ಕೆಲವರು ಭೂಮಿಯನ್ನು ವ್ಯವಸಾಯಾ ಮಾಡುತ್ತಾ ಯಿದ್ದಾರೆ. ತೆಂಗಿನ ತೋಟಗಳು ಉಂಟು. ಮುಸಲಮಾನರಿಗು ಸ[>ನ]ವಾಯತರುಗು ಬೇದವಿಲ್ಲಾ. ಯಿವರು ಸೈದುಕುಲದ ವಳಗೆ ದಾಖಲು ಹೊರ್ತು ಮತ್ತೊಂದು ಯಿಲ್ಲ. ಯಿವರ ಹೆಣ್ಣ ಸೇಬು[>ಖ], ಮುಗಲ, ಪಠಾಣ ಅವರಿಗೆ ಕುಡುವದು ಯಿಲ್ಲಾ. ಸೈದುಕುಲಕ್ಕೆ ಕುಡುತ್ತಾ ಯಿದ್ದಾರೆ. ಯಿವರು ಸೇಖು ಸೈಯದು ಮೊಗಲ ಪಠಾಣೆಯವರಲ್ಲಿ ಹೆಣ್ಣ ತೆಗದುಕ್ಕುಂಡು ಬರುತ್ತಾ ಯಿದ್ದಾರೆ.

ಯೀ ಮೇರೆಗೆ ರಾಜ್ಯವನ್ನು ಭೈರಾದೇವಿ ಪರಿಪಾಲನೆಮಾಡಿಯಿರುವ ಕಾಲದಲ್ಲಿ ನಗರದ ಹಿರೆ ವೆಂಕಟಪ್ಪನಾಯಕರು ಯಿಲ್ಲಿಗೆ ದಂಡು ತಂದು, ಹೊಡದು ತೆಗದುಕ್ಕೊಂಡು ಹೋಗಿ, ಆ ಲಾಗಾಯಿತು ನಗರದವರಿಗೆ ನಡಿಯುತಾ ಬಂತು. ಅನಂತರದಲ್ಲಿ ಯೀ ಭೈರಾದೇವಿಯು ವೆಂಕಟಪ್ಪನಾಯಕರ ವಶವಾಗಿಯಿದ್ದು, ಕೆಲವು ದಿವಸದ ಮೇಲೆ ಮೃತಿಹೊಂದಿದಳು. ಅನಂತರದಲ್ಲಿ ಅಖೈರು ವೀರಮ್ಮಾಜಿ ಕಾಲಕ್ಕೆ ಸಮುದ್ರದ ಬಳಿಯ ಆಳಿವೆ ಬಾಗದಲ್ಲಿ ಸಮೀಪ ಕೋಟೆಯನ್ನು ಕಟ್ಟಿಸಿ, ಯಿಲ್ಲ[>ಲ್ಲಿ] ಪ್ರಾಕು ಕಟಮಾಳಿಯಂಬ ದೈವ ಯಿತ್ತು. ಅನಂತರದಲ್ಲಿ ಕುಟಮೀಶೆಯಂಬ ಹೆಸರು ಆಯಿತ್ತು. ಅಲ್ಲಿಗೆ ವರಣದಿಕ್ಕುನಲ್ಲಿ ಸಮುದ್ರಮಧ್ಯದಲ್ಲಿ ಆರು ಕೋಸು ವಳಗೆ ನೇತ್ರಾಣಿ ಬೆಟ್ಟವುಂದು ಯಿದೆ. ಯಿದು ಯರಡು ಕೋಸು ವಿಸ್ತಾರವದೆ. ಯಿದರ ಮಧ್ಯದಲ್ಲಿ ನೇತ್ರಾಣಿ ಬೆಟ್ಟಗ ಯಂಬ ಯ[>ಹೆ]ಸರು ಯಿಂದಾ ದೈವವನ್ನು ಯಿಧೆ. ಯಿದಕ್ಕೆ ಹರಿಕೆ ಮಾಡಿಕುಂಡವರು ಯೇನು ಹಾಕಿದರು ಅಲ್ಲಿ ಯಿರುತ್ತಾಯಿದೆ. ಯಿದು ಯಾರಾದರು ಮುಟ್ಟಿ ತೆಗೆದುಕೊಂಡು ಬಂದರೆ ಅವರಿಗೆ ಉಪದ್ರವಾಗಿ ಬದಕಲಿಕ್ಕೆ ಯಿಲ್ಲಾ. ಯೀ ಬೆಟ್ಟದಲ್ಲಿ ಶಿಯ್ಯು ನೀರು ಯಿರುತ್ತಾಯಿದೆ. ಯಿದು ದ[>ಹ]ಡಗಿನವರು ತುಂಬಿಕೊಂಡು ಹೊಗುತ್ತಾ ಯಿದ್ದಾರೆ. ಯಿವರಿಗೆ ಘಾಳಿ ಉಪದ್ರಕ್ಕೆ ಹಡಗು ಬಂದು ನಿಲ್ಲುತ್ತಾಯಿದೆ. ಅನಂತರ ವೀರಮ್ಮಾಜಿಯವರನ ಹೊಡದು ಹಿರೆನವಾಬು ತೆಗದುಕ್ಕುಂಡನು. ಅನಂತರ ಟಿಪ್ಪುಸುಲ್ತಾನು ಸಿದ್ಧಾರ್ಥಿ ಸಂವತ್ಸರದ ಜೇಷ್ಟಮಾಸದ ಪರಿಯಂತ್ರಕ್ಕು ಆಳಿದನು. ಅನಂತರದಲ್ಲಿ ಯಂಗರೇಜಿಯವರ ಠಾಣ ಆಯಿತು.

❖❖

೮೬

ಭೈರೂರು ಮಾಗಣೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಯೀ ಮಾಗಣೆಯು ಪ್ರಾಕು ದಿವಸದಲ್ಲು ಶ್ರೀರಾಮದೇವರು ಸೇತುವೆ ಕಟ್ಟುವ ನಿಮಿತ್ಯ ಯಿಲ್ಲಿ ಬಂದು ಸೇತುವೆ ಕಟ್ಟಿ, ಅಗಸ್ತ್ಯರಿಗೆ "ಸೆಶೇಶ್ವರ[>ಸೋಮೇಶ್ವರ]ಯೆಂಬ ಲಿಂಗವನ್ನು ಪ್ರತಿಷ್ಟೆಮಾಡಿ"ಯಂಬುದಾಗಿ ಹೇಳಿ, ಲಿಂಗ ಪ್ರತಿಷ್ಟೆಯನ್ನು ಅಗಸ್ತ್ಯರು ಮಾಡಿದ್ದರಿಂದ ಯೀ ಅಗಸ್ತ್ಯರಿಗೆ ಬಿಂದುಮುನೀಶ್ವರರು ಯೆಂಬ ಹೆಸರು ಯಿದ್ದ ಕಾರಣ, ಬಿಂದುಪುರಾಯೆಂಬ ಹೆಸರು ಆಯಿತು. ಯೀಗ ಪ್ರಖ್ಯಾತಕ್ಕೆ ಬಿಂದುಪುರಾಯಂಬ ನಿಮಿತ್ಯ ಭೈರೂರು ಯಂಬುದಾಗಿ ಕರೆತಾರೆ. ಯೀ ಊರಲ್ಲು ಯೀ ಬೈರಾದೇವಿಯು ಭಟಕಳದಲ್ಲು ರಾಜ್ಯವನ್ನು ಆಳಿಕ್ಕೊಂಡು ಯಿರುವಾಗೆ, ಯೀ ಊರು ತನ್ನ ಅಧೀನ ಮಾಡಿಕ್ಕೊಂಡು . . . . ಕೊಲ್ಲಿದೇವ ಸಾವಂತಯೆಂಬವನ ಅಧೀನದಲ್ಲಿ ಮಾಡಿದ್ದರಿಂದ, ಆತನು ಪೇಟೆಯು ಕಟ್ಟಿ ಊರು ಆಳಿಕ್ಕೊಂಡು ಯಿದ್ದನು.

ಆ ಮೇಲೆ ಯೀ ಘಟ್ಟದ ಕೆಳಗಣ ಸ್ಥಳ ಯಾವತ್ತು ಕೆಳದಿ ವೆಂಕಟಪ್ಪನಾಯಕನು ತೆಗೆದುಕ್ಕೊಂಡ ಮೇಲೆ, ಪ್ರಾಕು ಹಳ್ಳಿಗೇರಿ ಮಾಗಣೆಯಲ್ಲು ಕೋಟೆ ಯಿರುವದರಿಂದ ಆ ಕೋಟೆಯ ಮುರದು ಭೈರೂರಲ್ಲಿ ಊರ ಕೋಟೆ ಕಟ್ಟಿ, ಪೇಟೆ ಮುಂತಾಗಿ ಆಳಿಕ್ಕೊಂಡು ತನ್ನ ತಾಲೂಕು ಬಗ್ವಾಲಿ ಹೊಗಳಿಗೆ ಸೇರಿಸಿ, ಆಳಿಕ್ಕೊಂಡು ಬಂದನು. ಆ ಮೇಲೆ ಸೋಮಶೇಖರನಾಯಕನ ದಿವಸದಲ್ಲಿ ಪ್ರಾಕು ಯಿರುವ ಕೋಟೆಯನ್ನು ತೆಗೆದು, ಪೇಟೆ ಪಶ್ಚಿಮದಿಕ್ಕಿನಲ್ಲು ಅಳವೆಭಾವಿ, ಆ ಬಳಿಯಲ್ಲು ಕೋಟೆ ಕಟ್ಟಿ, ಯಥಾಪ್ರಕಾರ ಬಗ್ವಾಲಿ ಹೊಬಳಿ ಬದುಕು ಮಾಡಿದವರ ಕಡೆ ಮಣೆಗಾರಿಗೆ ಮಾಡಿದವರ ಮುಖಾಂತ್ರ ನಡದು ಬಂತು. ಆಮೇಲೆ ಅದೇ ಪ್ರಕಾರ ರಾಣಿ ಕಾಲ ಪರಿಯಂತ್ರ ನಡಿಯಿತು. ಸದರಿ ಅಳುವೆ ಬಾಗಿಲಲ್ಲು ಯಿರುವ ಕೋಟೆಗೆ ಪ್ರಾಕು ೨೦೦ ಐವತ್ತು ಜನ ಸಿಬ್ಬಂದಿಯಿತ್ತು.

ಅದರ ಮೇಲೆ ಬಹದರನ ದಿವಸ ಆರಭ್ಯಾ ಸುಲತಾನ ದಿವಸದ ವರಿಗೆ ಯೀ ಕೋಟೆಗೆ ಕುಂದಾಪುರ ತಾಲೂಕು ಐದು ಕೋಟೆಯಂತ ಸೇರಿಶಿ ಗೊತ್ತು ಮಾಡಿ, ಕಿಲ್ಲೆದಾರನ ಮುಂತಾಗಿ ಯಿಟ್ಟು, ಯಿಪ್ಪತ್ತೈದು ಜನ ಸಿಬ್ಬಂದಿ ಸ್ಥಳದ ಮಂದಿಗೆ ಗೊತ್ತು ಮಾಡಿ ಯಿರುವದರಿಂದ, ಕುಂಪಣಿ ಸರಕಾರು ಆಗುವ ಪರಿಯಂತ್ರಕ್ಕೂ ನಡೀತು.

ಕುಂಪಣಿ ಸರಕಾರ ಆದ ಮೇಲೆ ಮೊಕೂಫ್ ಮಾಡಿದ್ದರಿಂದ ಯೀ ವರೇಗೆ ಕೋಟೆ ಶಿಬ್ಬಂದಿಯಿಲ್ಲದೆ ಕೋಟೆ ಹಾಳಾಗಿ ಯಿಧೆ. ಮಾಗಣೆ ಮಾತ್ರ ಬಹದರನ ದಿವಸ ಯಿತಲಾಗಿ ಸುಲತಾನನ ದಿವಸ ತುಕುಡಿ ಆಗುವವರಿಗೆ ಮಣೆಗಾರತನ ಮಾಡಿದವನ ಮುಖಾಂತ್ರವೆ ನಡೀತು. ಆಮೇಲೆ ರಾಕ್ಷಸ ಸಂವತ್ಸರದಲ್ಲು ತುಕಡಿ ಆದ ಮೇಲೆ ಬೈರೂರ ತುಕಡಿ ೧, ಪಡುವರಿ ತುಕಡಿ ೧ ಯೀ ಪ್ರಕಾರ ಯರಡು ತುಕಡಿ ಗೊತ್ತುಮಾಡಿ, ಭೈರೂರ ತುಕಡಿಗೆ ಭೈರೂರಗ್ರಾಮ೧, ಯಡತಗ್ರೆ, ಹಳ್ಳಿಗೆರೆ ಪೈಕಿ ಬಿಚೊರ೧, ಉತ್ತರ ಪೈಕಿ ಬವವಾಡಿ, ಯೀ ಪೈಕಿ ಉಳಚಿ, ಗೊಳಿಹೊಳೆ ೧ –

ಅಂತು ಗ್ರಾಮ ೬ರ ತುಕಡಿ. ೧. ಪಡುವರಿ ತುಕಡಿಗೆ ಪಡುವರಿ ೧, ಶಿರೂರ ೧, ಉಪ್ಪುಂದಗ್ರಾಮ ೧, ಹಳಿಬೇರು ೧ ಹಳಿಹೆಸರಿ ಗ್ರಾಮ ೧ – ಯೀ ಪ್ರಕಾರ ಗ್ರಾಮಗಳು ಕೂಡಿ ಕೂಡಿ ೧ ಮಾಡಿದರು. ಯೀ ಮೇರೆಗೆ ತುಕಡಿ ಆಗುವ ವರಿಗು ನಡೇತು. ತುಕುಡಿ ಆಗಿ ಕುಂಪಣಿ ದರಬಾರು ಅದ ಮೇಲೆ . . . . ಸದರಿ ಮಾಗಣಿ ಗ್ರಾಮ ೩ಕ್ಕೆ ಪಟೇಲ ಮುಖಾಂತ್ರ ಗೊತ್ತುಮಾಡಿ ಬಂದ ಬಗೆಯು:

೧ ಭೈರೂರ ಬೇಕೈಶೆಟ್ಟಿ

೧ ಯಿಡತಕ್ರಿತಿ ತಮ್ಮೈಶೆಟ್ಟಿ

೧ ಪಡುವರಿ ಕುಂಬಶೆಟ್ಟಿ, ಶಾಮೈಯ ಹಾಲಿಯವರು ಮೃತಪಟ್ಟದರಿಂದಾ ಮಂಜಶೆಟ್ಟಿ ತಿಮ್ಮಾಪೈಶೆಟ್ಟಿ.

ಯಿದಕ್ಕೆ ವಳಗೆ ಗ್ರಾಮ ೧೬ಕ್ಕೆ

೧ ಭೈರೂರಿಗೆ ೧ ಮಯಿಲ

೧ ಗಂಗನಾಡು ೧ ಅಲಂಮಾರ ಉಭಯ ೨. ಗೋಳಿ ೧ ಬೇರ ಮರಾವ್ಲಿ

೧ ಯಿಡತಕ್ರ[>ಯಡತಗ್ರ] ಗೊಕಡಕ್ಲೆ ತೂರಹೊಳೆ

೧ ಹ್ಸೊ . . . . ರು ೧ ಯಿವರ ಬಿರು। ೧ ಮೈಕಳ ೧ ಯಿರೂರು

೧ ಪಡುವರಿಗೆ ಕಲ್ಲಣಿಕೆ, ನಿರೊಡಿ ೧, ಸಾಊರು ೧, ತಗ್ಗರಸಿ ೧,

೧ ಸೂರಮಂಡ– ೫

ಅಂತು ಗ್ರಾಮ ಮೂರಲ್ಲು ಉಪಗ್ರಾಮ ೧೬ ಉಭಯಂ ೧೯ಕ್ಕೆ ಶಾನುಭಾವರು.

ಪ್ರಾಕು ಭೈರಾದೇವಿ ಕಾಲದಾರಭ್ಯ ಸ್ಥಳದ ಕಲಿಗಲ್ಲ ರಾಮಕೃಷ್ಣಯ್ಯಗೆ ಸುಲತಾನನ ದಿವಸದ ಆರಭ್ಯ ಆಖ್ಯೆರು ವರಿಗೆ ನಡೆತು. ಆ ಮೇಲೆ ತನ್ನಿಂದ ನಿರ್ವಾಹವಾಗದುಯೆಂತ ಹೇಳಿದ್ದರಿಂದ ಪಡುವರಿಗೆ ವೆಂಕಟೇಶೈಯ್ಯನ ಉಭಯ ಪ್ರತಿ ಚನ್ನಮ್ಮಾಜಿ ಕಾಲದಲ್ಲು ಚಿಕ್ಕರಮನೆ ಮರಿಯನು ನರಸಣ್ಣನು ಕಾಣಿಕೆ ಕೊಟ್ಟು ಮಾ . . . . ಶುಭಕೃತು ವರಿಗೆ ಸಮಸ್ತನ ಯಿಟ್ಟು ಬರಕೊಂಡು ಬಂದರು. ಆ ಮೇಲೆ ಆ ಮೂಲ ನಿರೂಪ ಸಹಾ ಬಿಮಾರ ಸಾತಮ್ಯಾ[>ಯ್ಯಾ]ಗೆ ಕ್ರಯಕ್ಕೆ ಕೊಟ್ಟದರಿಂದ ಸುಲತಾನನ ದಿವಸದ ವರೀಗೆ ನಡೇತು. ಹಾಲಿ ಕುಂಪಣಿ ದರಬಾರ ಆದ ಮೇಲೆ ಬೈರೂರಿಗೆ ಸದರಿ ಶಾಂತೈಯನ ಯಡಕರೇಗೆ ರಾಮಣ್ಣ . . . . ಉಭಯಂ ಜನ ೨, ಉಭಯಂ ಜನ ೩ ಹಾಲಿ ಹಾಜರು ಯಿಧೆ.

ದೇವಸ್ಥಾನಗಳು:

೧ ಬೈರೂರ ಮೂಡಬರ ಶನೇಶ್ವರದೇವಸ್ಥಾನ ಯಿದರ

೧ ಟ್ಯೆನ ಶನೇಶ್ವರದೇವರು

೧ ಸೋಮೇಶ್ವರದೇವರು. ಅಗಸ್ತ್ಯರ ಪ್ರತಿಷ್ಟೆ ಬಾಬತು.

೧ ಖರಾಸುರನ ಪ್ರತಿಷ್ಟೆ ಬಾಬತು ಬಂಕೇಶ್ವರ ದೇವರು, ಗಣಪತಿ

೧ ಪಿಡಿ ಸೀತಾರಾಮ ದೇವರು, ಶಿರಬವ್ವನ ಪ್ರತಿಷ್ಟೆ ೧, ಮಹಾಲಿಂಗಾ

೧ ಬಿಯೂಕ ಅನಂತೇಶ್ವರ ಗ್ರಾಮದೇವರ ಪ್ರತಿಷ್ಟೆ

೧ ಆಳವೆಗದ್ದೆ ವಿನಾಯಕ ದೇವರು, ಬ್ಯಾರಾದೇವ ಕಾಲದಲ್ಲು

೧ ತೂರಹೊಳೆ ವಿಷ್ಣುಮೂರ್ತಿ ದೇವರು, ಪ್ರಾಕು ಗ್ರಾಮದೇವರು

೧ ಕೆರೆತ್ತೂರ ನಾರಸಿಹ್ಮದೇವರು

೧ ಶಿಂಥಗೆರೆ ಮಹಲಿಂಗದೇವರು

೧ ಮೂಡಕೆರೆ ಹನುಮಂತದೇವರು, ಬೂದಿ ಬಸವಣ್ಣನ ಕಾಲದಲ್ಲು

೧ ಆಲಂದೂರ ವಿಟ್ಟಲದೇವರು ಗ್ರಾಮ

೧ ನಾರಾಯಣ ಬಟಕಡಿ ಶಿರಲಕ್ಷ್ಮಿನಾರಾಯಣ ದೇವರು

೧ ವಿಠ್ಠಲದೇವರು . . . . ೧, ಕುಳಕೇರಿ ವೆಂಕಟರಮಣದೇವರು

೧ ಯಡಕೊರೆ ವಿಷ್ಣುಮೂರ್ತಿದೇವರು ೧, ಕಂಚಲದೇವಿ ಬಳಗಾರನ ಮಟ

೧ ಕಳವಡಿ ವೀರಭದ್ರದೇವರು ೧, ತಗ್ಗರಸಿ ಮಹಲಿಂಗದೇವರು

೧ ತಿರುಮಲ ದೇವರು ೧, ಕೊಂಜಿವಳಿ ದುರ್ಗಾದೇವರು

೧ ಕುಂದರಿ ವಿನಾಯಕದೇವರು ೧,

೧ ಬಸ್ತಿ ಪಾರೇಶ್ವರ ದೇವರು

೧ ಸುಂಕದಕಟ್ಟೆ ಪೇಟೆಯಲ್ಲು ೧, ಹೆರಗುಡೆ ದುರ್ಗಾದೇವರು

೧ ಮಹಜೀದಿ ಮುಸಲಮಾನರ ಕೇರಿಯಲ್ಲು

ಒಟ್ಟು ೨೫ ಯೀ ಪ್ರಕಾರ ಕೈಫಿಯತು.

❖❖

೮೭
ಮರದಾಳ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಮರದಾಳದ ಸೀಮೆ ಉತ್ಪತ್ಯ: ಬಾಲಬಲ್ಲಾಳಯಂಬವನು ಉತ್ರದೇಶದಿಂದ ಬಂದು, ರಾಯ ಸರಕಾರಕ್ಕೆ ಅರಿಕೆಮಾಡಿ, ಕುಮ್ಮಾಕು ತೆಗದುಕ್ಕೊಂಡು ಬಂದು, ಮರದಾಳ ಅರಣ್ಯಕೆ ಮಜಲೊರು ಮಾಡಿದ್ದು. ಬಾಲಬಲ್ಲಾಳಗೆ ಬಲ್ಲಾಳಕೆ ಪಟ್ಟಕಟ್ಟಿಶಿಕ್ಕೊಂಡು ಯಿದ್ದಲ್ಲಿ, ಅವನಿಗೆ ಪಟ್ಟದ ದೃವ[>ದೈವ] ಮರುಳುಭೂತಾ ಯಿಗ ಯಿರುವಾಗ್ಯೆ, ವೊಂದಾನೊಂದು ದಿವಸ ನೆರಂತಿ[>ನ್ಯಾರಂತಿ] ಅರಸುಗಳು ಯೀ ಬಾಲಬಲ್ಲಾಳಗೆ ಹೊಡದು ಯೀ ರಾಜ್ಯ ತೆಗೆದುಕೊಳ್ಳಬೇಕೆಂತ ಯಿದ್ದಲ್ಲಿ, ಯೀತನ ದೈವ ಪುನಹ ಬಂತು. ಆ ದೈವಕ್ಕೆ ನ್ಯಾರಂತಿ ಅರಮನೆಯಲ್ಲು ಕೊಲಾಕಟ್ಟಿಸಿ[>ಕೋಲ ಕಟ್ಟಿಸಿ]ಭೂತಾ ಆಲಿಯಿದೆ. ಯೀ ಸಮಯದಲ್ಲಿ ಬಾಲಬಲ್ಲಾಳಗೆ ಹೊಡೆಯಬೇಕಂತ ಕದಿಕಾರ ಗುತ್ತಿನವನ ಸಂಗಡ ಮಂದಿ ಕೂಡಿಸಿ ಕಳುಹಿಸಿದಲ್ಲಿ, ಆತನು ಯೀ ಮರದಾಳಕ್ಕೆ ಬಂದಲ್ಲಿ, ಯೀ ಸದರಿ ಬಲ್ಲಾಳನು ಶಿವಪೂಜೆ ಮಾಡುತ್ತಾ ಯಿದ್ದ ಕಾರಣ, "ಯಿಂತಾ ದೈವ ಯಿದ್ದರೆ ಕಾಳಗಾ ಮಾಡಲಿ"ಯಂತ ಹೇಳಿದನೂ. ಆವಾಗ್ಯೆ ಮರುಲು[>ಳು]ಭೂತಾ ಕತ್ತಿ ತೆಗೆದುಕ್ಕೊಂಡು ಹೋಗಿ ಕದಿಕಾರ ಗುತ್ತಿನವನ ತಲೆ ಹೊಡದು ಮಂದಿ ಸಂಹಾರ ಮಾಡಿತು. ಕದಿಕಾರ ಗುತ್ತಿನವನ ತಲೆ ಹೊಡದು ಬೀಳುವಾಗ್ಯೆ ನೀರಜೆಯಂಬ ಸ್ಥಳ. ಅಲ್ಲಿ ದೈವಕ್ಕೆ ಯರಡು ನೆಲೆಮಾಡಿ[>ಡ] ಕಟ್ಟಿಶಿ ಹೊಲಾ ಕೊಟ್ಟನು.

ಯೀ ಪೂರೋತ್ತರ ಸರಕಾರಕ್ಕೆ ಬೆಲಾಗಿ[>ಬೇಸರಿ] ಬಿಟ ಉತ್ತರಕ್ಕೆ ಸಿಸ್ತು ಗು ೧೫೦. ರಾಣಿಕಾಲದಲ್ಲಿ ಭದ್ರಯ್ಯಬಲ್ಲಾಳಾಯಂಬವನು ಯಿರುತಿದ್ದನು. ಅದರ ಮೇಲೆ ಆ ಭದ್ರೈಯ್ಯಾಬಲ್ಲಾಳಗೆ ಆಗೆ ಸರಕಾರದ ಸೋಮಶೇಖರೈಯ್ಯನಾಯಕರು. ಅವರ ಬಳಿಗೆ ಐಗೂರ ವೆಂಕಟಾದ್ರಿನಾಯಕರು ಹೋಗಿ ಯಿದ್ದಲ್ಲಿ ಹಾಲುಬೆಣ್ಣೆಗೆ ಯಂತ ಬಹಳ ಬ್ಯಾಸರಿ ಬಿಟ್ಟು ಮರದಾಳ ಮಾಗಣಿ ೧, ಕಡಬದ ಮಾಗಣಿ ೧, ನ್ಯಾರಂತಿ ಮಾಗಣಿ ೧, ಸದರಿ ವೆಂಕಟಾದ್ರಿನಾಯಕರಿಗೆ ಪಸಂದಾಗಿ ಯಿದ್ದ ಕಾರಣ ಬದ್ರೆಯ್ಯನು ಅವರ ಸಮೀಪದಲ್ಲು ಯಿದ್ದಲ್ಲಿ, ಯೀ ಮಾಗಣಿಯಲ್ಲು ಬೇಸರಿ ಬಿಟ್ಟುದ್ದು ಸಿಸ್ತುಗು ೭೪॥೪॥. ಶಂಕರದೇವಿಯಂಬೊ ಬಲ್ಲಾಳತಿ. ಆಕೀಗೆ ಸರಕಾರ ಶಿವಪ್ಪನಾಯಕರು, ಬೂದಿಬಸವಪ್ಪನಾಯಕರು. ಆಕೀಗೆ ಮಗನಾದವನು ಚೆನ್ನೈಯ್ಯಬಲ್ಲಾಳರಿಗೆ ಚನ್ನಬಸವಪ್ಪನಾಯಕ ಕಾಲದಲ್ಲು ಕೊಟ್ಟು[>ಕೋಟೆ] ಬಲ್ಲಾಳಾ. ಚನ್ನಮ್ಮಾಜಿ ಕಾಲದಲ್ಲು ಲಕ್ಷುಮಯ್ಯಾ ಬಲ್ಲಾಳ. ಸ್ವಲ್ಪ ವರುಷ ಹೈದರಲ್ಲಿ ಆ ಕಾಲದಲ್ಲು ಯೀತನ ಮಗ ನುಜಿನಾಯ ಕೃಷ್ಣಯ್ಯ. ಯೀತನು ಕೋಟೆ ಬಲ್ಲಾಳಗೆ ಸಹಿ ಆಗಿ ನಡದುಕೊಂಡು ಯಿದ್ದ ಕಾರಣ, ಸಕಲವಿಚಾರಲು ನುಜಿನಾಯರದೆ ಆಗಿ ಯಿತ್ತು. ಆಗ್ಯೆ ಬಲ್ಲಾಳ ಕೃಷ್ಣಪ್ಪಯ್ಯ ಸಾದ್ರಿ[>ಸದರಿ] ಬೇಹಾರಿಗಳು ಸಹಾ ಶುಭಕೃತು ಸಂವತ್ಸರದಲ್ಲು ಶೀಮೆ ವಿಚಾರವಾಗಿ ಬಂದಲ್ಲಿ, ಯೀ ಬಲ್ಲಾಳನ ಭೂಮಿ ಹಣ ಬಾಕಿ ಹ್ಯಾರಳವಾಗಿ ಯಿದ್ದ ಕಾರಣ, ಸದರಿ ಭೂಮಿಯನ್ನು ನೂಜೆನಾಯ ಕೃಷ್ಣಯ್ಯನ ಕೈಯಿಂದಾ ವಸೂಲು ಮಾಡಿಕೊಂಡದ್ದು.

ಗ ೫೦೦೮೦. ಸದರಿ ನೂಜಿನಾಯ ಕೃಷ್ಣಯ್ಯ ಯಿರುತ್ತಾ ಯಿದ್ದಲ್ಲಿ ಕೀಲಕ ಸಂವತ್ಸರದಲ್ಲಿ ಮರದಾಳ ಶ್ಯಾನಭಾಗ ವೆಂಕಟರಾಮೈಯನು, ಯೀ ನೂಜಿನಾಯರ ಮನೇಗೆ ಬಂದು ಯಿದ್ದನು.

❖❖

೮೮
ಮುಗುವಿನ ಮಾಗಣೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಮಗುವಿನ[>ಮುಗುವಿನ]ಮಾಗಣೆಯಂತ ಹೆಸರು ಹ್ಯಾಗೆ ಬಿತ್ತು ಯಂದರೆ, ಕೃತಾಯುಗದಲ್ಲಿ ಮೇಘನಾಥಯಂಬ ರಾಕ್ಷಸನು ಪ್ರಬಲವಾಗಿ ಯಿರುವದರಿಂದ, ಅವನ ಭಯಗೋಸ್ಕರವಾಗಿ ರುಷಿಗಳು ಸಮುದ್ರ ನದಿ ಮಧ್ಯದಲ್ಲಿ ನಿಂತು, ದಕ್ಷಿಣಮುಖವಾಗಿ ನೋಡಿದಲ್ಲಿ ಸುತ್ತಲೂ ನದಿ ಆದ್ದರಿಂದ, ಪಶ್ಚಿಮದಲ್ಲು ಸಮುದ್ರ ಮಧ್ಯದಲ್ಲು ಘೋರಾರಣ್ಯವಾಗಿ ಯಿರು ಕ್ಷೇತ್ರವನ್ನು ನೋಡಿ, ಯಿಲ್ಲಿ ಯಿರುವ ಯಂತ ಆಲೋಚನೆಯನ್ನು ಮಾಡಿ, ಕ್ಷೇತ್ರ ಮಧ್ಯದಲ್ಲು ಯಿರುವ ಶಿಲೆಗುಹೆಗಳಲ್ಲಿ ವಾಸಾ ಮಾಡಿಕ್ಕೊಂಡು ಯಿರುವಾಗ್ಯೆ, ಯೀ ಸ್ಥಳದಲ್ಲಿ ಮೃಗಗಳು ಬಹಳವಾಗಿ ಯಿರುವದರಿಂದ ಯೀ ರುಷಿಗಳು, ಮೃಗರೂಪರಾಯಂಬ ಹೆಸರು ಯಿಟ್ಟದರಿಂದ ಯೀಗ ಮುಗು ಯಂತ ಕರೆಯುತ್ತಾರೆ. ಆಮೇಲೆ ರುಷಿಗಳು ಬಹಳ ಕಾಲವಾಗಿ ತಪಸ್ಸು ಮಾಡಿ ಯಿರುತಿದ್ದಲ್ಲಿ ಪ್ರತ್ಯಕ್ಷವಾಗಿ "ಬೇಡಿಕೊಳ್ಳಿ ಯೀತನ ಅಪ್ಪಣೆ ಆದಲ್ಲಿ ಮೇಘನಾಥನ ಭಯ ಪರಿಹರಿಸಿಕೊಡಬೇಕೆಂತ ಅರಿಕೆ ಮಾಡಿದಲ್ಲಿ, ಕೆಲಉ ದಿವಸದಲ್ಲಿ ರಾಕ್ಷಸ ಭಯ ಪರಿಹರಿಸಿ ಕೊಡುತ್ತೇವಂತ" ಅಪ್ಪಣೆ ಆಯಿತು. ಆ ಮೇಲೆ ನಿತ್ಯದಲ್ಲಿ ತಮ್ಮಾಭಿಷ್ಟವಾಗಬೇಕೆಂದು ಹೇಳಿಕೊಂಡಲ್ಲಿ ಲಿಂಗಾಕಾರವಾಗಿ ಗುಹ್ಯದಲ್ಲು ವಾಸವಾದ್ದರಿಂದ ಗುಹೇಶ್ವರಯೆಂಬ ಹೆಸರು ಆಯಿತು.

ಆಮೇಲೆ ಯೀ ಊರ ಹೊನ್ನೆ ಕಂಬಳಿ ಕಡೆ ಶಂಕರನಾರಾಯಣಭಟ್ಟನು ಅನುಭವಿಸಿಕ್ಕೊಂಡು ಬಂದು, ಬಗ್ವಾಲಿ ಹೋಬಳೀಗೆ ದಾಖಲು ಮಾಡಿದ್ದರಿಂದ ಬಗ್ವಾಲಿ ಹೊಬಳಿ ಮುಖಾಂತ್ರ ನಡದು ಬಂದು ಯಿರುವ ಗ್ರಾಮ ೧ಕ್ಕೆ ವಳಗ್ರಾಮ ೧೧ಕ್ಕೆ ವಿವರ:

೧ ಮಂಕಿ	೧ ಯಿಡಾಹಡು	೧ ದೇವಳಿ
೧ ಬೆಣ್ಣೆಗೆರೆ	೧ ಹೊಕಳಿ	೧ ಬಡಾಹಡು
೧ ಹೊಸಡು	೧ ಹುಜಡಿ	೧ ತ್ರಾನೆ
೧ ಕೊಲ	೧ ಕೊಟಪಾಲ	ಅಂತು ಗ್ರಾಮ ೧೧.

❖❖

೮೯
ಮೂಡನಾಡ ಮಾಗಣೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಪ್ರಾಕು ಯೀ ಮಾಗಣೆಯು ಹೊನ್ನೆಕಂಬಳಿಯು ಆಳುತ್ತಿರುವಾಗ್ಯೆ, ಯೀ ಮಾಗಣೆಯು ಯೀತನ್ನ ಆಧೀನ ಮಾಡಿಕ್ಕೊಂಡು ಶಂಕರನಾರಾಯಣಭಟ್ಟನ ಮುಖಾಂತ್ರ ಸರ್ವಾಧಿಕಾರ ನಡದುಕ್ಕೊಂಡು ಬರುವಾಗ್ಯೆ, ಯೀ ಮಾಗಣೆಯು ಶ್ರೀ ಕೊಉೂ[>ಲ್ಲೂ]ರ ಅಮ್ಮನವರು ಪ್ರಾಕು ಮುಕಾ[>ಮೂಕಾ]ಸುರನ ವಧೆ ನಿಮಿತ್ಯವಾಗಿ ಲಿಂಗದೇಹದಿಂದ ಸುವರ್ಣರೇಖೆಯುಕ್ತವಾಗಿ ಉದ್ಭವವಾಗುತಿರುತಿದ್ದಲ್ಲಿ, ಸದರಿ ಹೊನ್ನೆಕಂಬಳಿಯು ದೇವಸ್ಥಾನವನ್ನು ಕಟ್ಟಿ ಯೀ ಮಾಗಣೆ ಪೈಕಿ ವಳಸೀಮೆ ಗ್ರಾಮದಲು ಹಾಲಿಕಟ್ಲ ಸಹಾ ಉತ್ತರವನ್ನು ಬಿಟ್ಟು, ಬಾಕಿ ಮಾಗಣೆ ಯೀ ಬಗ್ವಾಲಿ ತಾಲೂಕಿಗೆ ಸೇರಿಕ್ಕೊಂಡು ನಡಕೊಂಡು ಬರುತಿದ್ದಲ್ಲಿ, ಹೊನ್ನೆಕಂಬಳಿ ಶಂಕರನಾರಾಯಣಭಟ್ಟ ಸಹಾ ಆಳಿದ್ದು ಹೋಗಿ, ನಗರದವರು ಕೆಳದಿ ವೆಂಕಟಪ್ಪನಾಯಕರ ಬಾಳಿನವಾದ ಮೇಲೆ ವೀರಭದ್ರನಾಯಕರು ಯೀ ಮಾಗಣೆ ಯಾವತ್ತು ಉತ್ತರಕ್ಕೆ ಬಿಟ್ಟದರಿಂದ ದೇವಸ್ಥಾನದ ಮುಖಾಂತ್ರ ಜಂಗಮರ ಕಾಲದಾರಭ್ಯ ಲಿಂಗವಂತರ ಕಾಲದ ವರಿಗೆ ನಡೇತು. ಆ ಮೇಲೆ ಶೋಭಕೃತು ಸಂವತ್ಸರದಲ್ಲಿ ಟೀಪುಸುಲತಾನ ಕಾಲದಲ್ಲು ಜಪ್ತಿ ಆಗಿ ನಗರದ ತಾಲೂಕಿಗೆ ಸೇರಿದ್ದರಿಂದ ಆವಾಗಲೂ ನಗರದ ತಾಲೂಕು ತುಕುಡಿ ಮಣಿಗಾರರ ಮುಖಾಂತ್ರ ನಡದು ಬಂತು. ಆ ಮೇಲೆ ಕುಂಪಣಿ ತಾಲೂಕು ಆದಮೇಲೆ ಸದರಿ ಮಾಗಣೆಯನ್ನು ನಗರ ತಾಲೂಕದಿಂದ ವಿಂಗಡಿಸಿ ಕುಂದಾಪುರ ತಾಲೂಕುಗೆ ಶೇರಿಸಿದದರಿಂದ ತಾಲೂಕು ಮಜಕೂರಲ್ಲು ಯೀ ವರಿಗೆ ನಡದು ಬರುತ್ತದೆ. ಯಿಲ್ಲಿ ಯಿರುವ ಶಾನಭೋವರು ವಿವರ:

ಪ್ರಾಕು ಬಗ್ವಾಲಿ ತಾಲೂಕುನಲ್ಲಿ ಶಂಕರನಾರಾಯಣಭಟ್ಟನ ದಿವಸದಲ್ಲಿ ಮೂಲಿ ಶಂಕರಲಿಂಗ ಶಾನುಬೊವ. ಅದರ ಮೇಲೆ ಜಂಗಮರ ಕಾಲದಲ್ಲಿ ಉತ್ತರವಾದ ಮೇಲೆ ಟೀಪು ಕಾಲದ ವರೆಗೆ ನಾಗಪ್ಪಯ್ಯ.

ಯಿತಲಾಗಿ ಕುಂಪಣಿ ದಿವಸದಲ್ಲಿನ ವೊಡೆಯ ಯೀ ಪ್ರಕಾರ ನಡದು ಬಂತು. ಮಣಿಗಾರಕ ತನಲು ದೇವಸ್ಥಾನದ ಮುಖಾಂತ್ರ ನಡೇತು. ಜಪ್ತಿ ಆದ ಮೇಲೆ ನಗರದವರ ಮುಖಾಂತ್ರ ನಡೇತು. ನಗರದಿಂದ ವಿಂಗಡಿಸಿ ತಾಲೂಕು ಮಜಕೂರಿಗೆ ಸೇರಿದ ಮೇಲೆ ಕುಂಪಣಿ ದರಬಾರನಲ್ಲು ಪಟೇಲರ ಮೊಕರರು ಮಾಡಿದ ವಿವರ:

೧ ವಳಶೀಮೆಗೆ ಮಹದೇವ ಅಲ್ಲಿ ೧

೧ ಸಳಕೊಡು ಕೃಷ್ಣಯ್ಯ ಹೊಲೈಶೆಟ್ಟಿ

೧ ಮುದ್ದೂರಿಗೆ ಪುಟ್ಟಭಟ್ಟ ೧, ತಿಮ್ಮಯ್ಯ ೧

೧ ಬಡುಕಲ್ಲಿ ಪಾಲಯ್ಯ ೧

೧ ಯಲ್ಲೂರ ಸುಬ್ಬಶೆಟ್ಟಿ ತಿಮ್ಮಶೆಟ್ಟಿ ೧

೧ ಅರೆ ಶಿರೂರ ಸುಬ್ಬಶೆಟ್ಟಿ ಲಿಂಗಗವುಡಾ ೧

---

೬ ಕ್ಕೆ ಪಟೇಲರ ನೇಮಕಾ ಮಾಡಿದಲ್ಲಿ, ಪಟೇಲರು ಸರಕಾರದ ಹಣಕಾಸು ಕೊಟ್ಟು ಬರುತ್ತಾರೆ. ಯೀ ತಾಲೂಕಿನಲ್ಲಿ ಯಿರುವ ದೇವರು ಶ್ರೀ ಕೊಲ್ಲೂರ ಅಮ್ಮಾನವರ ಮಾತಬರ[>ಮಹಾತ್ಮರ] ದೇವಸ್ಥಾನ, ಉಧ್ಭವಮೂರ್ತಿ, ಪರಿವಾರದೇವರು ಸಹಾ:

೧ ಶುಕ್ಲತೀರ್ಥ ಉಮಾಮಹೇಶ್ವರ ದೇವರು, ಹೊನ್ನೆಕಂಬಳಿ ಕಟ್ಟಿದ್ದು

೧ ಸಂಪಿ ವಿನಾಯಕದೇವರು

೧ ಸಳಕೊಡ ದುರ್ಗಾಮಹಿಷಿಮರ್ದಿನಿದೇವರು

೧ ಹೈವೇರು ಪ್ರತಿಷ್ಟೆ ಗೋಪಾಲಕೃಷ್ಣದೇವರು

೧ ಮುದುಕ ಹನುಮಂತದೇವರು

೧ ಬೆಳಗಲ್ಲ ಕೋಟೆಲಿಂಗದೇವರು, ಪ್ರಾತುರ್ಬಾವ ಉಧ್ಭವ

೧ ಮೌಜೆ ಅರೆ ಶಿರೂರ ದುರ್ಗಾದೇವರು

೧ ಬ್ಯಾರವದೇವರು

೧ ಸುಬ್ಬಶೆಟ್ಟಿ ಚಿತ್ತರಿ

೧೦

೧ ಮುರುವಪ್ಪ ಮೂರು ಸುಂಕದ ಕಟ್ಟೆ

---

೧೧ ಯೀ ಪ್ರಕಾರ ಯಿಧೆ.

❖❖

೯೦
ಯಲ್ಲೂರ ದೇವಸ್ಥಾನದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಕೈಫಿಯತು ನಾಮ, ಸೂರಸನ್ ೧೮೦೬ ಫಸಲಿ ಅಕ್ಷಯ ಸಂವತ್ಸರದ ಮಾಹೆ ಮೇ ತಾರೀಕು ೨೬ಲ್ಲು ಯೆಲ್ಲೂರ ವಿಶ್ವನಾಥದೇವಸ್ಥಳದ ಯೀ ಮಾಗಣೀಯ ಸಹಾ ಶ್ಯಾನಬಾಗ ವಿಶ್ವೇಶ್ವರೈಯ್ಯ, ಗಂಗಾಧರಯ್ಯ, ದೇವಸ್ಥಾನದ ಶಾನಭಾಗ ನರಸಯ್ಯ, ನಾರಣ ಕಂತ್ರಿ[>ತಂತ್ರಿ] ಅಡಿಗಳು, ಮುಕ್ತಿಭಟ್ಟ, ಅಣ್ಣೈಯ್ಯಭಟ್ಟ, ಕಿಳುಶಾಂತಿ ನಾರಾಯಣ, ವಿಶ್ವನಾಥ ಉಪಾದಿವಂತರು, ರಾಮಕೃಷ್ಣಭಟ್ಟ, ಅನಂತಭಟ್ಟ, ಅಣ್ಣಭಟ್ಟ ಸಚಿದ[>ವ], ಕೃಷ್ಣಜೋಯಿಸ, ಮಲಿಜೋಯಿಸ, ಸ್ಥಾನೀಕ ಅನಂತಕೃಷ್ಣ, ವಿಶ್ವನಾಥ, ಯಿಚ್ಯುಕಿಟ್ಟ ದೆಉಡಿಗ, ಪದಾರ್ತಿ ತುರಗ ಬಾಸುಮಂತದವರು ಬರಸಿಕೊಟ್ಟ ಕೈಫಿಯತು ನಾಮೆ.

ಹಲ್ಲರ ಜಾತಿಯ ಕುಂದಹೆಗಡೆಯಂಬವರ ಮಗ ಕುಂಡ ಹೆಗಡೇಯು ಪ್ರಾಕು ಹುಟ್ಟಿದ್ದು ಹಲರಶೆಟ್ಟಿಯ ಮನೆತನದಲ್ಲಿ. ಕುಂದಹೆಗಡೇಯು[>ಯ] ಮನೇಗೆ ಸಾಕು ಬಿದ್ದರಿಂದ ಯೀಚೆ ಯೀ ಮನೆತನಕ್ಕೆ ಯಾರ ಸಾಕು ತಂದಾಗ್ಯೂ ಕುಂದಹೆಗ್ಗಡೆಯಂತ ಹೇಳುತ್ತಾ ಬರುತ್ತಾರಾದ್ದರಿಂದ ಯೀ ಸಾಕು ಬಂದ ಹಲ್ಲರ ಜಾತಿ ಹುಡುಗೆ[>ಗ]ಗೆ ಕುಂದಹೆಗ್ಗಡೆಯಂಬ ಹೆಸರು. ಯಿವನು ಮನೆತನ ಮಾಡಿಕ್ಕೊಂಡು ಕೆಲಉ ಕಾಲ ಯಿರುತಿದ್ದಲ್ಲಿ ಯೀತಗೆ ಸಂತಾನಯಿಲ್ಲದೆ ಯಿರಲಾಗಿ ದೇವಾಲಯಉ ಯಿಲ್ಲದೆ ಯಿರಲಾಗಿ ಶಾಲಿವಾಹನ ಶಕ ವರುಷ ೬೦೧ನೇಯ ಪ್ರಮಾದಿ ಸಂವತ್ಸರದಲ್ಲು ಹಂಪೆ, ಹಳೆಬೀಡು, ಬಾರಕೂರ ಸಹಾ ಆಳುವ ಬಲ್ಲಾಳರು, ಚಿಕ್ಕಯಿತಾಯಿ ಬಳ್ಳಾಳ, ಸಿಂಧುಬಲ್ಲಾಳರು ಚಉನ ಭಾರ್ಗವನ ಸಂತತಿಯವರು ಭಾರ್ಗವಾಭಿರಾಮನಾ[>ರಾ]ಗಿ ಯಿರುವ ಮಹಾನುಭಾವರಿಗೆ ಯೀ ಕುಂದಹೆಗ್ಗಡೆಯು ಹೋಗಿ ಸಂತಾನ ಅಭಿರುಧಿ ತನ್ನ ಸ್ಥಳದಲ್ಲು ದೇವಾಲಯಉ ಆಗುವ ಕಾರಣವನ್ನು ಸಹಾ ಕೇಳಿಕೊಳ್ಳಲಾಗಿ. ಅವರ ಆಜ್ಞೆಮಾಡುತ್ತಾ "ವಿಶ್ವನಾಥನ ಅನುಗ್ರಹದಿಂದಾ ಸಂತಾನಉ ಆದೀತು, ನಿನ್ನ ಸ್ಥಳದಲ್ಲು ದೇವರು ಅನುಗ್ರಹಿಸಿಯಾರು"ಮಂ[>ಯಂತ] ಅಪ್ಪಣೆ ಕೊಡಲಾಗಿ, "ತಾವು[>ವೂ] ದಯಮಾಡಬೇಕೆಂ"ದು ವಿಶ್ವೇಶ್ವರನ ಪ್ರಾರ್ಥನೆಯನ್ನು ಮಾಡಿಕ್ಕೊಂಡು, ಅವರ ಸಹಾ ಕರಕುಂಡು ಕಾಸಿಗೆ ಶ್ರೀ ವಿಶ್ವನಾಥದೇವರ ಸನ್ನಿಧಿಯಲ್ಲು ಗುರುಪದಿಷ್ಟೆ, ಮಾರ್ಗದಿಂದಾ ಸ್ವನ್ನಾನುಸಾರದಿಂದಾ ಅಷ್ಟಚತ್ವಾಅಂಶ ದಿನ ಅನಶನವ್ರತದಿಂದಾ ಭಜನೆ ಬ್ರಾಹ್ಮಣಸಂತರ್ಪಣೆ, ದೇವತಾ ಅತಿಥಿಪೂಜೆಸಹಾ ಮಾಡಲಾಗಿ, ಶ್ರೀ ಸಾಂಬಶಿವನು ಸಂತುಷ್ಟನಾಗಿ ಸ್ವಪ್ನದಲ್ಲಿ ಬಂದು ಅಪ್ಪಣೆ ಕೊಟ್ಟದ್ದು, "ನೀನು ನನ್ನ ಸ್ಥಳಕ್ಕೆ ಹೋದಲ್ಲಿ ಉತ್ತಮವಾದ ನಿರ್ವೈರ ಸ್ಥಳದಲ್ಲು ಲಿಂಗರೂಪದಿಂದಾ ಮಾಘ ಬ ೧೪ ದಿವಸ ಶಿವಯೋಗದಲ್ಲು ಅವಿರ್ಭೂತರಾಗುತ್ತೇವೆ. ಆ ಕ್ಷೇತ್ರವು ಸಾ[>ಸು]ಕ್ಷೇತ್ರಕ್ಕೆ ಸಮಾನ ಆಗುವ ಹಾಗೆ ಅನುಗ್ರಹ ಮಾಡುತ್ತೇವೆ. ನಿನ್ನ ಮನೊವ್ರತ ಪೂರ್ನವನ್ನು ಮಾಡುತ್ತೇವೆ. ಅದಕ್ಕೆ ನಿದರಶನಾರ್ಥವಾಗಿ ನಿನ್ನ ಮನೇಗೇ ಯೀಶಾನ್ಯ ದಿಕ್ಕಿನಲ್ಲು ಯಿರುವ ಕೊಣ[>ಕೊಳ]ದಲ್ಲು ಬಾಗಿರತಿಯು ಮಾಘಮಾಸದಲ್ಲು ಆವಿರ್ಭೂತವಾಗುತ್ತಾಳೆ. ಯಿಥೆ ನಿಶ್ಚಯವನ್ನು ತಿಳಿದುಕೊಂಡು ಯಿರವದು" ಯಂಬದಾಗಿ ಅಪ್ಪಣೆ

ಆದ ಪ್ರಕಾರಾ ಬ್ರಾಹ್ಮಣ ಸಮೇತನಾಗಿ ಊರಿಗೆ ಬಂದಲ್ಲಿ, ಯೀ ಸಂವತ್ಸರದ ಮಾಘ ಮಾಸದಲ್ಲು ಗಂಗಾದೇವಿಯು ಆವಿರ್ಭೂತವಾಗಿ, ಮುಂದೆ ಶಿವಯೋಗದಲ್ಲು ಶ್ರೀ ವಿಶ್ವೇಶ್ವರನು ಲಿಂಗರೂಪದಿಂದಾ ಆವಿರ್ಭೂತನಾದನು. ಆ ಸ್ವಾಮಿ ಸಂಗಡ ಬಂದ ಗಣಉ ವೊಬ್ಬ ಬ್ರಾಹ್ಮಣನ ಮೇಲೆ ಆವೇಶವಾಗಿ ಸೊಪನೊಕ್ತಿಯು ಯಲ್ಲವರಿಗೆ ಪ್ರಕಟ ಆಗುವ ರೀತಿ ಆ ಕುಂದಹೆಗ್ಗಡೇಯನ್ನು ಕರದು ಹೇಳಿ "ಯಿಲ್ಲಿ ಆವಿರ್ಭೂತವಾದ ಗಂಗೆಯನ್ನು ನೀಉ ಯಲ್ಲವರು ಕುಡಿದು ಪೂಜೆಯನ್ನು ಮಾಡಿ, ಸ್ನಾನಗಳ ಮಾಡಿ, ಪವಿತ್ರರಾಗಿ. ಯಿದೆ ಪ್ರಕಾರಾ ದ್ವಾದಶಾಧ್ವಮರಮಾದಿಯಲ್ಲಿ ಗಂಗಾದೇವಿಯು ಯಿಧ[>ದೆ] ಸರಸಿನಲ್ಲಿ ಪ್ರಾತರ್ಭೂತ [>ಪ್ರಾದುರ್ಭೂತ]ರಾಗುತ್ತಾರೆ. ಯೀ ಕ್ಷೇತ್ರಉ ತ್ಸಾ[ಸು]ಕ್ಷೇತ್ರಕ್ಕೆ ಸದೃಶವೆ ಸರಿಯಂದು, ಯೀ ಲಿಂಗಕ್ಕೆ ವಿಶ್ವನಾಥಯಂಬ ಅಭಿಧಾನ, ಆಗಮೋಕ್ತ ವಿಧಿಗಳಿಂದಾ ನಿತ್ಯೋತ್ಸವ। ಪಕ್ಷೋತ್ಸವ ಮಾಸೋತ್ಸವ। ಸಂವತ್ಸರೋತ್ಸವ। ರಥೋತ್ಸವಾ ಶಿಬಿಕೋತ್ಸವ ಮೊದಲಾಗಿ ಆವಾವ ನುರ[>ಮರಿ]ಯಾದಿಯಿಂದಾ ಮಾಡಿಕೊಳ್ಳುತ್ತಾ ಬಹುದು. ಪ್ರತ್ಸಾಹಾದಲ್ಲು ಶ್ರೀಕಾಲರುದ್ರಾಭಿಷೇಕ ಅಷ್ಟೋತ್ತರ ಸಹಸ್ರನಾಮ ಮಂತ್ರ ಪುಷ್ಪದ್ಯರ್ಚನೆಗಳನ್ನು ಮಾಡಿಕೊಳ್ಳುತ್ತಾ ಬನ್ನಿ"ಯಂಬುದಾಗಿ ಯೀ ಆವೇಶವಾದ ಗಣಉ ಆಜ್ಞೆಪಿಸಿ, "ನಾನು ವೊಂದು ಶಿಲ್ಲೆಯಲ್ಲು ಆವಿರ್ಭೂತನಾಗುತ್ತೇನೆ. ನನ್ನನು ಕೂಡಾ ಪೂಜೆ ಮಾಡಿಕೊಳ್ಳುತ್ತಾ ಬನ್ನಿ"ಯಂಬದಾಗಿ ಹೇಳಿ ಆವೇಶವಾದ ಗಣಉ ತ್ತಿರೋಧಾನವಾಯಿತು. ಆಮೇಲೆ ಯೀ ಕುಂದಹೆಗಡೇಯು ಆ ಲಿಂಗ ಆವಿರ್ಭೂತವಾದ ಸ್ಥಳದಲ್ಲು ಚಿಲಾಂತ ಸ್ಥಳ ಶೋಧನೆಯನ್ನು ಮಾಡಿ, ದೇವಾಗಾರವನ್ನು ನಿರ್ಮಾಣ ಮಾಡಿ, ಯತೋಕ್ತ ವಿಧಾನದಿಂದಾ ಸಪರಿಮಾಧಿಗಳ ಮಾಡಲಾಗಿ, ಆ ಕುಂದಹೆಗಡೆಯ ಮನೋಭಿಷ್ಟವಾಗಿ, ಸಂತತಿಯು ಆಯಿತು.

ಅನಂತರದಲ್ಲಿ ಭಾರ್ಗವ ರುಷೇಶ್ವರರು ಕಾನನಾಭ್ಯಾಶ್ರಮ[>ಕಾನನದ್ಯಾಶ್ರಮ]ದಿಂದಾ ಶ್ರೀ ವಿಶ್ವನಾಥದೇವರ ಸಂದರುಶನಾರ್ಥವಾಗಿ ಬಂದು ದರುಶನ ಮಾಡಿಕ್ಕೊಂಡು, ಕುಂದಹೆಗಡೇಯು ತದ್ದೇಶೀಯಾದ ಬ್ರಾಹ್ಮಣರು ಆ ಮಹಾರುಷಿಗಳಿಗೆ ಅರ್ಗ್ಯಪಾದ್ಯಾದಿಗಳಿಂದಾ ಪೂಜಿಶಿ, ಸಂತುಷ್ಟರಾಗಿ ಕ್ಷೇಮವಿಚಾರ ನಂತರದಲ್ಲಿ ಕುಂದಹೆಗ್ಗಡೆಯು ವಿನಯದಿಂದ ಕೇಳಿಕ್ಕೊಂಡನು "ಸ್ವಾಮಿ ತಮ್ಮ ಅಪ್ಪಣೆ ಪ್ರಕಾರ ಯೀ ಸ್ಥಳದಲ್ಲು ಶ್ರೀವಿಶ್ವನಾಥದೇವರು ನನ್ನ ಮೇಲೆ ಅನುಗ್ರಹಮಾಡಿ ಲಿಂಗರೂಪದಿಂದಾ ಆವಿರ್ಭೂತವಾದದ್ದು. ತಸ್ಸಹಾ ಬಂದ ಗಣದ ಆಜ್ಞೆಪ್ರಕಾರ ನಡಕೊಂಡು ಯಿದ್ದೇನೆ. ಯೀ ಸ್ಥಳದಲ್ಲು ತಾಉ ಯಜ್ಞಾದಿಗಳ ಮಾಡಿ ಸ್ತಳಮಹಿಮಾ ಅತಿಶಯ ಪುರಸ್ಸರವಾಗಿ ನನ್ನ ಹೆಸರು ವಂಶ ಪಾರಂಪರ್ಯರಾಗಿ ನಡದು ಬರುವಂತೆ ಅನುಗ್ರಹ ಮಾಡಬೇಕು"ಯಂತ ಹೇಳಿಕೊಳಲಾಗಿ, ಆ ರುಷಿಗಳು ಹಾಗೆ ಅನುಗ್ರಹವನ್ನು ಮಾಡಿ, "ಆ ಸ್ತಳದ ಪೂರ್ವ ದಕ್ಷಿಣ ಪಶ್ಚಿಮೊತ್ತರ ಯಂಬ ನಾಲ್ಕು ದಿಕ್ಕುಗಳಲ್ಲಿ ಭಾರ್ಗವೇಶ್ವರ ಮಹಿಷಾಮರ್ಧಿನಿ ಕ್ರೂರಮಹಿಷಾಮರ್ಧಿನಿ ಉಮಾಮಹೇಶ್ವರ ಯೀ ನಾಲ್ಕು ಸ್ಥಳದಿಂದಾ ಕೂಡಿದ ಯೀ ಸ್ಥಳಉ ಪರಮಪವಿತ್ರವಾಗಿ ಭಕ್ತಮನೊಭೀಷ್ಟಪ್ರದವಾಗಿ ನಿನ್ನ ವಂಶಸ್ತರ ಹೆಸರು ಪ್ರಸಿದ್ಧವಾಗಿ ಯಿರಲಿ"ಯಂತ ತೆರಳಿದರ.

ಕುಂದಹೆಗ್ಗಡೆಯು ತನಗೆ ನಡದು ಬರುವ ಬಾಉ ಸಿಸ್ತಿನಲ್ಲು ಶ್ರೀ ದೇವರಿಗೆ ನಿತ್ಯ ಕೆಳ್ಳೆ[>ಕೇಳಿ] ಮೊದಲಾದ ಉಸ್ಸಹಾ[>ಉತ್ಸವ] ಸಾಂಗೋಪಾಂಗವಾಗಿ ನಡದು ಬರುವ ಬಗ್ಗೆ ಗ ೨೨೨॥ ೪॥೦ ದ ಭೂಮಿಯನ್ನು ವಿಂಗಡಿಸಿ ದಾನಧಾರಾ ಪೂರ್ವಕವಾಗಿ ಬಿಟ್ಟು ಕೊಟ್ಟು, ಯೀ

ಬಗೆ ಹಣವನ್ನು ತನ್ನ ಕೈಯಿಂದ ಸರಕಾರಕ್ಕೆ ತೆತ್ತುಕೊಂಡು ಬರುತ್ತಿದ್ದಾಗ್ಯೆ, ಅಮಲು ನಗರದ ಸಂಸ್ಥಾನದೊಳಗೆ ನಡದು ಬರುವ ಬಾರಕೂರ ಹಂಪೆ ಹಳೆಬೀಡು ಬಲಾ[+ಳ]ವಡೆಯರ ಕಾಲ ಪರಿಯಂತ್ರ ಯಿದೇ ಪ್ರಕಾರದಲ್ಲು ಬಿದರೂರ ಅರಸ್ತನದೊಳಗೆ ಬಾರಕೂರ ಬದುಕು ಮಾಡದೆ ವೊಡೆಯರ ಕಾಲ ಪರಿಯಂತ್ರ ನಡದು ಬಂತು. ಸ್ವಭಾನು ಸಂವತ್ಸರದಲ್ಲು ದುಡ್ಡಿ[>ದೊಡ್ಡ]ನವಾಬನ ಕಾಲದಲ್ಲು ಕೆಲಉ ಯಿದೇ ಪ್ರಕಾರ ನಡದು ಬಂತು. ಆಮೇಲೆ ಅರವಾಸಿ ಸಿಸ್ತು ಕೈಕಾಗದಕ್ಕೆ ಕೊಡಿಸಿ ಅರವಾಸಿ ಮೇಲೆ ನಡೆಯುತ್ತಾ ಬಂತು. ಟೀಪು ಕಾಲಕ್ಕೆ ಯಲ್ಲಾ ಕಡೆಯಲ್ಲು ಜಪ್ತಿ ಆದ್ದರಿಂದ ಯಿಲ್ಲಿಯೂ ಜಪ್ತಿ ಆಗಿ ಮೇಲುವಾಸಿ ವೈರಜಿನಿಂದಾ ಯಥಾ ಪ್ರಕಾರ ಸೇವೆ ಸತ್ಕಾರಗಳು ನಡದು ಬಂದವು. ಹಾಲ್ಲಿ ಸಿದ್ದಾರ್ತಿ ಸಂವತ್ಸರದಲ್ಲು ಕುಂಪಣಿಯು ಆದಮೇಲೆ ವಟ್ಟು ತಾಲೂಕಿಗೆ ಬದುಕು ಮಾಡಿಕೊಂಡು ಬಂದ ಮಂಡ್ರೊಲು ಸಾಹೇಬರು ಯಲ್ಲಾ ತಾಲ್ಲೂಕಿನಲ್ಲು ಯಿರುವ ವಳಧರ್ಮ ಕೈಧರ್ಮ ವಿಚಾರಿಸಿ, ಪಟ್ಟೆ ಬರಕುಡಿಯಂತ ಅಪ್ಪಣೆ ಕೊಟ್ಟು ಪ್ರಕಾರಕ್ಕೆ ವಳಧರ್ಮ ಕೈಧರ್ಮ ವಿಚಾರಿಸಿ ಕಟ್ಟೆ ಬರಕೊಟ್ಟದ್ದು ಗ ೧೦೪೯೩ = ಜಮಲಾ ಗ ೩೨೭೯೨॥ =ಕ್ಕೆ ಪೈಕಿ ತಗ್ಗಿದ್ದು ಗ ೪೭॥೩॥ ಹೊಗಲಾಗಿ ಜಾತಾ ಗ ೨೯೯೩ ॥=ಕ್ಕೆ ಯೀ ಸ್ಥಳವನ್ನು ವಿಚಾರಿಸಿ ಮಹ ಪ್ರಖ್ಯಾತವಾದ ಸ್ಥಳವೆಂದು ಮನವರ್ಿಕೆ ಮಾಡಿಕ್ಕೊಂಡು, ದೇವರಿಗೆ ಸೇವಾ ಸತ್ಕಾರಾದಿ ಉತ್ಸಹಂಗಳು ನಡೆಯಬೇಕೆಂದು ತಿಳಿದು, ಮೊಕರರು ಮಾಡಿಕೊಟ್ಟು, ತಸ್ತಿಕು ತಂತ್ರಿ ಅಡಿಗಳು ಉಪಾದಿವಂತರು ವಿನಿಯೊಗದವರಿಗೆ ಸಹಾ ತಸ್ತಕುಮಾಡಿಕೊಟ್ಟದ್ದು ಗ ೨೯೯॥ಕ್ಕೆ ವಿವರ : ವೈನದೇವತಾ ಖರ್ಚು ಗ ೨೦೨ ॥೩। = ಕ್ಕೆ ವಿವರಾ ನಿತ್ಯ ತಳಿಗೆ ಬಾಬತು ಗ ೧೨೪೯೩ = ಪಂಚಪರ್ವದ ಬಗೆಉ ಗ ೩೭॥೪॥ ರತಉತ್ಸಹದ ಬಗೇಲು ಗ ೪೧ ॥೦॥ - ಅಂತು ಗ ೨೦೨ ॥೩। = ಕುಂದಾ[>ಕಂದಾ]ಚಾರದವರ ಸಂಬಳದ ಬಗೇಲು ಗ ೯೭೯೨ = ಉಭಯಂ। ಯಿನ್ನೂರ ತುಂಭತ್ತುವೊಂಬತ್ತು ಅಡ್ಡುವೀಸವು ದಸ್ತಿಕು ಪ್ರಕಾರ ಯಿವರಿಗೆ ನಡೆಯುತ್ತಾ ಬರುತ್ತದೆ.

ಪ್ರಾಕಾರಭ್ಯ ಯೀ ದೇವಸ್ಥಾನವು ಮಾಗಣಿ ಶಾನಭವತನವು ನಾರಪ್ಪಯ್ಯಗ ರಂಗಣ್ಣಗೆ ಸಹಾ ನಡೆಯುತ್ತಾ ಬಂತು. ಯಿತಲಾಗಿ ಮಾಗಣಿ ಶ್ಯಾನುಭಾವಿಕೇಯು ವಿಶ್ವೇಶ್ವರಯ್ಯಾ ಗಂಗಾದರ್ಯೆಯ್ಯಾಗೆ ನಡದು ಬರುತ್ತದೆ. ದುಂದುಭಿ ಸಂವತ್ಸರದಲ್ಲು ಆದ ಮೇಲೆ ರುದಿರೊದ್ಗಾರೊ ಸಂವತ್ಸರದಾರಭ್ಯ ಯೀ ವರೀಗೆ ದೇವಸ್ಥಾನದ ಶಾನಭಾಗತನುಉ ನರಸೈಯ್ಯಗೆ ನಡೆಯುತ್ತಾ ಬರುತ್ತದೆಯಂತ ಬರಸಿ ಕೊಟ್ಟ ಕೈಫಿಯತು ನಾಮಾ. ವಿಶ್ವೆಶ್ವರಯ್ಯಾ, ಗಂಗಾಧರ್ಯೆಯಾ, ನರಸೈಯ್ಯಾ.

❖❖

೯೧
ಯಿಡೂರು ಕನಡಿ ಗ್ರಾಮದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಪ್ರಾಕು ಯೀ ಗ್ರಾಮವು ಹೊನ್ನೆಕಂಬಳಿ ಕಾಲದಲ್ಲು ತನ್ನ ಮನವರ್ತಿಗೆ ಗ್ರಾಮವನ್ನು ಯಂತ ಮಾಡಿ, ಶಿಸ್ತು ಮುಂತಾಗಿ ಮಾಡಿ, ತನ್ನ ಕಡೆ ಶಂಕರನಾರಾಯಣಭಟ್ಟಯಂಬವನ

ಮುಖಾಂತ್ರ ಅನುಭವಿಸಿಕ್ಕೊಂಡು ಬರುತಿದ್ದಲ್ಲಿ, ಅವರ ಅಳುವಿಟ್ಟಮೇಲೆ ಶಿವಭಕ್ತರ ತಾಲೂಕಿಗೆ ನಡದು ಬಂತು. ಯಿದಕ್ಕೆ ಸದರಿ ಶಂಕರಭಟ್ಟನ ತಾಲೂಕಿಗೆ ಯಿರುವದರಿಂದ ಬಗ್ವಾಲಿ ಹೊಬಳಿ ತಾಲೂಕು ಲಾಗಾಯಿತು ಸೇರಿ ಬಂದದೆ. ಯಿದಕ್ಕೆ ಲಾಗಾಯತು ಹಲಸುನಾಡ ಮಾಗಣಿ ಲಕ್ಷ್ಮೀನಾರಾಯಣನಾಯಕನ ಕಾಲದಾರಭ್ಯ ಹೊನ್ನೆಕಂಬಳಿ ಕಾಲ ಲಾಗಾಯತಿನ ವರಿಗೆ ನಡದು ಬಂದದೆ. ಸುಲತಾನ ಕಾಲದಲ್ಲು ಯೀ ಗ್ರಾಮಉ ಪ್ರಾಕು ಮಣೆಗಾರನ ಹಲಸುನಾಡ ತುಕಡಿಗೆ ದಾಖಲಾಗಿ ಬಂತು. ಯಿಗಾ ಕುಂಪಣಿ ಅಮಲು ಆದ ಮೇಲೆ ಪಟೇಲರ ಮೊಕರರು ಮಾಡಿ, ಹಾಲಿ ಪಟೇಲ :

೧ ಚಿಕ್ಕೈಯಶೆಟ್ಟಿ, ೧ ಚನ್ನಯ್ಯಶೆಟ್ಟಿ, ೨ ಜನಉ ಹಾಜರು ಯಿದೆ. ಯಿವರ ಮುಖಾಂತ್ರ ನಡದು ಬರುತ್ತದೆ.

ಯಿಲ್ಲಿ ಯಿರುವ ದೇವಸ್ಥಾನ :

೧ ಮಹಾಲಿಂಗದೇವರು

೧ ಮಲ್ಲಿಕಾರ್ಜುದೇವರು

೧ ವನದುರ್ಗಿದೇವರು

ಜುಮಾಲಾ ೩

ಯೀ ಗ್ರಾಮಕ್ಕೆ ಉಪಗ್ರಾಮ ೨:

೧ ತುಕಡೆ

೧ ಜನಾಉ

೨ ಜುಮಲಾ, ಯೀ ಮೇರೆಗೆ ಕೈಫಿಯತ್ತು.

❖❖

೯೨
ಯೆಳರೆ ಮಾಗಣಿ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಪ್ರಾಕು ಕೊರಗರು ಯಂಬದು ಮಾದಿಗರು ಯಂತ ಘಟ್ಟದ ಮೇಲೆ ಯಿರುತ್ತಾರೆ. ಆದರೆ ಘಟ್ಟದ ಕೆಳಗೆ ಕೊರಗರು ಯೆಂತ ಹೇಳುತಾರೆ. ಅವರು ಕೆಲವು ಪ್ರಬಲವಾಗಿ ತಮ್ಮೊಳಗೆ

ತಾವೇ ಬಲವಂತವಾಗಿ ಯೆಳರೆಯಂಬ ಜಾಗಾದಲ್ಲಿ ಅಂಪಾರುಯಂಬ ಸ್ಥಳದಲ್ಲು ಕೋಟಿ ಮುಂತಾಗಿ ಕಟ್ಟಿ, ಯೀ ಮಾಗಣೀಗೆ ಅಂಪೂರು, ಕಾಪರಾಲ, ಮುಡೆಬಾಗಿ, ಗುಡೆಬೆಟ್ಟ, ಹಳ್ಳನಾಡು, ವಾಲ್ತೂರು, ಕಂಡಊರು ಯಂತ ಯೇಳುಗ್ರಾಮಕ್ಕೆ "ಯೇಳುಅರೆ"ಯೆಂಬ ಹೆಸರು ಹಾಕಿ, ತುಂಡು ಪಾಳೆಗಾರನಾ[>ರಾ]ಗಿ ಅನುಭವಿಸಿಕೊಂಡು ಬರುತಿದ್ದಲ್ಲಿ, ಬಾರಕೂರು ಮಾದರಸುಯೆಂಬವನು ಹೊಡದು ತೆಗೆದುಕ್ಕೊಂಡು, ಸುರಹಾಲಿ ಕೊಳಹಾರತಿಯೆಂಬವಳ ವಶಕ್ಕೆ ಮಾಡಿಕೊಟ್ಟದರಿಂದ, ಕೊಳಹಾರತಿ ಯೀ ಕಂಡಊರ ಕೋಟೆ ಮುಂತಾಗಿ ಕೌಲುಕೊಟ್ಟು ಅನುಭವಿಸಿಕ್ಕೊಂಡು ಬರುತಿದ್ದಲ್ಲಿ, ಆಮೇಲೆ ನಗರ ವೆಂಕಟಪ್ಪನಾಯಕರ ದಿವಸದಲ್ಲಿ ಜಂಗಮ ಸಂಸ್ಥಾನವೊಡದು ತೆಗೆದುಕ್ಕೊಂಡರು. ಅನುಭವಿಸಿಕ್ಕೊಂಡು ಬಗ್ವಾಲಿ ಹೊಬಳಿಗೆ ಶೇರಿಕ್ಕೊಂಡು ಬದುಕು ಮಾಡಿದವರ ಕಡೆ ಮಣಿಗಾರನ ಯಿಟ್ಟು ಅನುಭವಿಸಿಕೊಂಡು ಬಂದರು.

ಆಮೇಲೆ ಚಿತ್ರಭಾನು ಸಂವತ್ಸರದಲ್ಲು ದೊಡ್ಡ ನವಾಬರು ಯಾವತ್ತು ಜಂಗಮರ ಸಂಸ್ಥಾನ ತೆಗೆದುಕೊಂಡ ಮೇಲೆ, ಸ್ವಭಾನು ಸಂವತ್ಸರದಲು ಕಂಡಊರ ಕೋಟೆಯನ್ನು ಮುರಿದು ಹಾಕಿದರು. ಆಮೇಲೆ ಮಾಗಣಿ ಮಾತ್ರ ಮಣಿಗಾರತನ ಮಾಡಿದವರ ಮುಖಾಂತ್ರ ತಾರಣ ಸಂವತ್ಸರದ ವರಿಗೆ ನಡದು ಬಂತು. ಯಿದು ಶಿವಾಯಿ ಶಂಕರನಾರಾಯಣದೇವರಿಗೆ ಪ್ರಾಕು ರಾಣಿಕಾಲದಲ್ಲು ಕಡರಿ ತಾಲೂಕಿನಿಂದ. . . . .ಮೊಡಬಾಗೆ ಗ್ರಾಮದಿಂದ ಕೆಲಉ ಮೇಲಾಗಿ ಸದರಿ ಗ್ರಾಮ ೭ ದಿಂದ ಕೆಲಉ ಯೀ ಪ್ರಕಾರವಾಗಿ ಉತ್ತರ ಬಿಟ್ಟದರಿಂದ, ಶತ[>ಶಂಕರ]ನಾರಾಯಣದ ಉತ್ತರದ ಗ್ರಾಮಯಂತ ಪ್ರಾಕು ಉತ್ತರ ಯಿರುವ ಪರಿಯಂತ್ರ ದೇವಸ್ಥಾನದ ಮಣಿಗಾರ ಶಾನುಭೋವರ ಮುಖಾಂತ್ರ ನಡದು ಬಂತು. ಆಮೇಲೆ ಸ್ವಭಾನು ಸಂವತ್ಸರದಲ್ಲು ಅರವಾಸಿ ಆದಮೇಲೆ ಯೀ ದೇವಸ್ಥಾನದ ಗ್ರಾಮಯಂತ ಚಿಲ್ಲರೆ ಗ್ರಾಮಯಿಟ್ಟು, ಸುಲತಾನ ಕಾಲಕ್ಕು ತುಕಡಿ ಆಗುವ ಪರಿಯಂತ್ರ ಚಿಲ್ಲರೆ ಶಂಕರನಾರಾಯಣಗ್ರಾಮ ಯಂತಲೆ ನಡದು ಬಂತು. ರಾಕ್ಷಸ ಸಂವತ್ಸರದಲ್ಲು ತುಕಡಿ ಆದಮೇಲೆ ಯೇಳರೆ ತುಕಡಿ ಕಂಡೂರು ಮಾಡಿರುವಲ್ಲಿ ಆ ತುಕಡಿಗೆ ಕೊಟ್ಟದರಿಂದ ಶಿದ್ದಾರ್ಥಿ ವರಿಗೆ ತುಕಡಿ ಮುಖಾಂತ್ರ ನಡದು ಬಂತು. ಆಮೇಲೆ ಪಟೇಲರ ಮೊಕರರು ಮಾಡಿ ಶಿದ್ದಾರ್ಥಿ ಲಾಗಾಯತು ಕುಂಪಣಿ ಸರಕಾರ ಆದಮೇಲೆ ನಡದ್ದರಿಂದ ಸದರಿ ಪಟೇಲರ ವಿವರ:

೧ ಕಂಡೂರಿಗೆ ಮಾನಭಕ್ತ ೧	ಭದ್ರಯ್ಯಾ ಸೇಡು[>ರು]ಗಾರ ೧
೧ ಅಂಪಾ[>ಪೂ]ರ ಸೋಮಪ್ಪಶೆಟ್ಟಿ ೧	ಕೊಟದರಿಯನ್ನಾಶೆಟ್ಟಿ ೧
೧ ಹಳನಾಡು ಪುಟ್ಟಯ್ಯಶೆಟ್ಟಿ ೧	ಕರಿಯಣಶೆಟ್ಟಿ ೧
೧ ವಾಲ್ತುರ ವೀರಶೆಟ್ಟಿ ೧	೧ ಲಿಂಗಶೆಟ್ಟಿ
೧ ಕಾವವಾಲಿ ತಿಮ್ಮಪ್ಪ ೧	೧ ಚಿಕ್ಕಶೆಟ್ಟಿ
೧ ಮೂಡುಬಾಗೆ ನೀಲ ಹೆಗಡೆ	೧ ನಂದಿಯಣ್ಣಶೆಟ್ಟಿ
೧ ಗೂಡೆಬೆಟ್ಟು ದೇವೈಯ ಶೆಟ್ಟಿ	೧ ನಂದಿಯಣ್ಣಶೆಟ್ಟಿ

———
೭

೧ ಶಂಕ್ರನಾರಾಯಣ ಸುಬ್ಬೈಕಳು	೧ ವಿಷ್ಣುಮೂರ್ತಿ

———
೮

ಯೀ ಮಾಗಣೆಗೆ ಶಾನುಭಾವರು:

ಸುರಹಾಲ ಕೊಳಹಾರತಿ ಕಾಲದಾರಭ್ಯ ಸ್ಥಳದ ಪ್ರತಿ[>ವೃತ್ತಿ] ಸೂರಪ್ಪಯ್ಯಯಂತ ನಾಲ್ಕು ಪಳಿಗೆ ಪರಿಗೆ ಪ್ರಾಕು ಹೆಸರು ಪಡೆದು, ಯೀಗ ತಿಮ್ಮಪ್ಪಯ್ಯಯೆಂಬವನು ಯಿದ್ದಾನೆ. ಲಾಗಾಯತು ಆರಭ್ಯ ಸ್ಥಳ ಪ್ರ[>ವೃ]ತ್ತಿ ಅವರದೆ ಸರಿ. ಉಭಯ ಪ್ರ[>ವೃ]ತಿ ಹಲಸುನಾಡ ಚನ್ನಪ್ಪಯ್ಯನವರು ಸೋಮಶೇಖರ ನಾಯಕರ ಕಾಲದಲ್ಲಿ ಕಾಣಿಕೆ ಕೊಟ್ಟು ಮಾಡಿಕೊಂಡದರಿಂದ ತುಕಡಿ ಅಖೈರು ವರೆಗೂ ನಡೇತು. ಕುಂಪಣಿ ದರಬಾರು ಆದ ಮೇಲೆ ಮೊಕುಪ್ಪು ಮಾಡಿ ಯಿದರ ಐವಜು ಗುಡೆಬೆಟ್ಟು, ಮಾಡಬಾನಿ, ಶಂಕರನಾರಾಯಣ – ೩ ಗ್ರಾಮಕ್ಕೆ ದಕೈಯ ಯಂಬವನ ಮುಖಾಂತ್ರ ನಡದು ಬರುತ್ತದೆ. ಶಂಕರನಾರಾಯಣ ದೇವಸ್ಥಾನಕ್ಕೆ ಸ್ಥಳ ಪ್ರ[>ವೃ]ತಿ ಹಲಸುನಾಡು ಚನ್ನಪ್ಪ ಬಾರಕೂರು ರಾಮಪ್ಪ ಕರಣಿಕರ ಕಡೆಯವರು ಯೀ ಪ್ರಕಾರ ಸ್ಥಳ ಪ್ರ[>ವೃ]ತಿಯನಿಸಿಕೊಂಡು, ಉತ್ತರ ಬಿಟ್ಟ ಲಾಗಾಯತು ಸುಲತಾನರ ಕಾಲದ ಪರಿಯಂತ್ರಕ್ಕೂ ಶೀಮೆ ಲೆಕ್ಕ ಸಹಾ ಬರಕೊಂಡು ಬಂದರು. ಯೀಗ ಸೀಮೆ ದಕ್ಕೈನ ಮುಖಾಂತ್ರ ಆಗಿ ದೇವಂತಿನ ಶಾನುಭಾವಿಕೆ ರಾಮಪ್ಪ ಕರಣೀಕರ ಕಡೆ ವೆಂಕಪ್ಪಯೆಂಬವನ ಮುಖಾಂತ್ರ ನಡಿತಿದೆ.

ಯೀ ಮಾಗಣೇಗೆ ದೇವರು [>ಗ್ರಾಮಗಳು] ವಿವರಾ ಸಹಾ: ಸದರಿ ಮಾಗಣಿ ದೇವರುಗಳು[<ಗ್ರಾಮಗಳು] ೮, ಉಪಗ್ರಾಮ ನಾಲ್ಕಕ್ಕೆ ಯಡಮಕ್ಕಾ, ಕುಪಾರ, ಹಾರರಳಿ, ಬ್ಯಯಿವ – ಅಂತು ಗ್ರಾಮ ೪. ಉಭಯಂ ಗ್ರಾಮ ೧೨. ಯೀ ಊರೂರ ದೇವರ ವಿವರ:

೧ ಶಂಕ್ರನಾರಾಯಣ ಮಾತಬರ[>ಮಹಾತ್ಮರ] ದೇವರು

೧ ಶಂಕ್ರನಾರಾಯಣ ದೇವರು

೧ ಕೆರೆಕಟ್ಟೆ ವೆಂಕಟರಮಣದೇವರು

೧ ಬಸವೇಶ್ವರ ದೇವರು

೧ ಮಹಾಲಿಂಗೇಶ್ವರದೇವರು

೧ ಗೋಪಾಲಕೃಷ್ಣದೇವರು

೧ ಗೋಪಿನಾಥ ದೇವರು

೧ ಅಗ್ರಹಾರ ಸದಾಶಿವದೇವರು

೧ ಕುಪಾರ ವಿಷ್ಣುಮೂರ್ತಿ

೧ ವೆಂಕಟರಮಣ ದೇವರು

೧ ಉಮಾಮಹೇಶ್ವರ ದೇವರು

೧ . . . . .

೧ ಮೆಟ್ಟಿಕಲ್ಲಿ ವಿನಾಯಕದೇವರು

೧ ಅರೆಕಲ್ಲಿಗೆ ಮಹಾಲಿಂಗದೇವರು

೧ ಅಂಬಾಮಹಿಷಾಸುರಮರ್ಧಿನಿ ಅಮ್ಮಾನವರು, ಗೋಪಾಲವರ ಪ್ರತಿಷ್ಠೆ

೧ ಸಾ . . . . ಮಿ ದೇವರು, ಹೊನ್ನೆಕಂಬಳಿ ಪ್ರತಿಷ್ಠೆ

೧ ಕಂಡಊರ ನಾನಾ ಪರಮೇಶ್ವರ ಉತ್ಸವ

೧ ಕೋಟಿ ಹನುಮಂತದೇವರು, ತೊಳ ಹನುಮಂತ

೧ ಕಾವರಾಡಿ ಲಕ್ಷ್ಮಿನಾರಾಯಣದೇವರು

೧ ಮಲ್ಲಿಕಾರ್ಜುನದೇವರು, ೧ ಬೊರಾದೇವಿ

೧ ರಾಮೇಶ್ವರದೇವರು, ನಾಗಪ್ಪಯ್ಯ

೧ ಹಳನಾಡ ವಿನಾಯಕದೇವರು

೧ ಮೂಡಬಾಗೆ ಗುಡೆ ವಿನಾಯಕದೇವರು

೧ ಮಸಿಯಾಡಿ ವಿನಾಯಕದೇವರು

೧ ವಿಷ್ಣುಮೂರ್ತಿದೇವರು

೧ ವಾಲ್ಲೂರ ಭಯಿರೇಶ್ವರ ದೇವರು

ಅಂತು ಯೀ ಪ್ರಕಾರ ಕೈಫಿಯತು.

❖❖

೯೩
ಶಿರಸಿ ಕೈಫಿಯತ್ತು[೧]

ಮೆಕೆಂಝಿ ಸಂಪುಟ : ೩೬೪

ಭಾವ ಸಂವತ್ಸರದ ಆಷಾಡ ಶುದ್ದ ೧೫ಲ್ಲು ಶಿರಶಿ ಮಾಗಣಿ ಶ್ಯಾನುಭೋಗ ರಾಮಯ್ಯ, ನಾಡಿಗ ಶೇಷಯ್ಯ, ಪಡಿಗೆರಿ ಶಿವಯ್ಯ ಮೊದಲಾದವರು ಬರಶಿಕೊಟ್ಟ ಶಿರಶಿ ಮಾಗಣಿ ಕೈಫಿಯತು:

೧. ಕಸಬಾ ಶಿರಶಿಗೆ ಪಶ್ಚಿಮ ದಿಗ್ಭಾಗ ಲಿಂಗದ ಕೊಣಾ[>ಕೊಳ]ಯಂತ ವೊಂದು ತಟಾಕವುಂಟು. (೧). ಯಿದಕ್ಕೆ 'ಲಿಂಗದ ಕೊಣಾ' ಅಂತಾ ಹೆಸರು ಬಂದದ್ದು ಹ್ಯಾಗೆಂದರೆ, ಕೆಳಗೆ ಕೊಣಾ ಮೇಲೆ ಲಿಂಗಾ ಯಿರುವದರಿಂದಾ, ಜನರು ಯೀ ಯರಡು ಕೂಡಿಸಿ ಲಿಂಗದ ಕೊಣದ ರಾಮೇಶ್ವರದೇವರಂತಾ ಹೇಳುತ್ತಾರೆ.

ಯೀ ದೇವರ ಕೈಫಿಯತು: ಯೀ ದೇವರು ಪುರಾಣಪ್ರಸಿದ್ಧ. ಯೀ ದೇವರ ಪಾದಪದ್ಮದಿಂದಾ ಶಾಲ್ಮಲೀನದಿ ಉತ್ಪತ್ತಿ ಆಗಿ, ಪಶ್ಚಿಮಸಮುದ್ರಸಂಗಮ ಗೋಕರ್ನಕ್ಕೆ ಉತ್ತರದಿಕ್ಕಿನಲ್ಲಿ ಸಂಗಮವಾಗಿ ಅದೆ. ಕಲಂ.

---

[೧] 'ಸಿರಸಿ ಮಾಗಣಿ ಐದು ಬಾಗಿಲ ಕೈಫಿಯತ್ತು' – ಎಂಬ ಹೆಸರು ಬೇರೆ ಪ್ರತಿಗಳಲ್ಲಿ ಇದೆ (ಸಂ).

೨. ಯೀ ದೇವರ ಸಮೀಪದಲ್ಲಿ ಯಿರುವ ಶಂಕರದೇವರ ಕೈಫಿಯತು: ಶಂಕರಶೆಟ್ಟಿಯೆಂಬವನು ವೊಬ್ಬ ಕೊಮಟಿಗ ದೊಡ್ಡ ಸಾಹುಕಾರನಾಗಿ ಯಿದ್ದು, ಅಘನಾಶಿನಿ ಉತ್ಪತ್ತಿಯಲ್ಲಿ ಕೆರೆ ತೋಡಿಶಿ, ಆ ಕೆರೆ ದಡದ ಮೇಲೆ ಶೀಮೇಯ ದೇವಸ್ಥಾನ ಕಟ್ಟಿಶಿ, ಯೀಶ್ವರ ಸ್ಥಾಪನೆಮಾಡಿಶಿ ಅಮೃತ ಪಡಿ ನೈವೇದ್ಯಕ್ಕೆ ಯಸಳೆಗ್ರಾಮದಲ್ಲು ಗ ೬ ವರಹಾ ಸ್ವಾಸ್ಥಿ ಬಿಡಿಶಿದನು. ಆ ಸ್ವಾಸ್ಥಿ ಬಗ್ಗೆ ಹಾಲಿ ಸಲ್ಲುವುದು ಗ.೩. ವರಹಾ ತಲುಪದೆ. ಸದರಹಿ ದೇವರಪ್ರತಿಷ್ಟೆ ಮಾಡಿಸಿದ್ದರಿಂದಾ "ಶಂಕರದೇವರ ಹೊಂಡಾ" ಅಂತಾ ಜನರು ಹೇಳಿಕೊಳ್ಳುತ್ತಾರೆ.

೩. ಯೀ ಶಿರಶಿವೂರು ಮದ್ಯದಲ್ಲಿರುವ ಗಣಪತಿದೇವಸ್ಥಾನ, ರಾಮಚಂದ್ರನಾಯಕರು ಯೀ ಶಿರಶಿ ಹತ್ತಲಿರುವ ಚನ್ನಪಟ್ಟಣದ ಕಿಲ್ಲೆ ಕಟ್ಟುವಾಗ್ಯೆ ಯೀ ಗಣಪತಿ ದೇವಸ್ಥಾನ ಕಟ್ಟಿಶಿ, ಗಣಪತಿ ಪ್ರತಿಷ್ಟೆ ಮಾಡಿಸಿ, ಶೀಮೆವೊಳಗೆ ಸ್ವಾಸ್ಥಿ ಬಿಟ್ಟದ್ದು.

೪. ಶಿರಶಿ ಮಾರಮ್ಮಾ ದೇವರ ಕೈಫಿಯತು: ಪ್ರಾಕು ಮೊಗಲರ ಅವಾಂತ್ರದಲ್ಲಿ ಅವರ ದಂಡು ಬಂದು ಬಂಕಾಪುರ ಕಿಲ್ಲೆಗೆ ಮುತ್ತಿಗೆ ಹಾಕಿ, ಯುದ್ಧಮಾಡಿ ಕಿಲ್ಲೆ ಠಾಣ್ಯ ಹಾಕಿದರು. ಆಮೇಲೆ ಕಿಲ್ಲೇದಲ್ಲು ಗುಳ್ಯಾಕೆ ಯಿದ್ದ ಜನರಿಗೆಲ್ಲ "ನಿಮ್ಮ ನಿಮ್ಮ ಸಾಮಾನು ಯೇನು ಯಿದ್ದದ್ದು ತೆಕ್ಕೊಂಡು ಗಡಿಪಾರು ಆಗಿ ಹೋಗಿ"ಯಂತ ಅಪ್ಪಣೆ ಕೊಟ್ಟರಂತೆ. ಆಗ್ಯೆ ಗುಳ್ಯಾದ ಜನರೆಲ್ಲಾ ಕಿಲ್ಲೇದಿಂದ ಹೊರಟು ಬರುವಾಗ್ಯೆ ಆ ಸ್ಥಳದಲ್ಲಿ ಪ್ರಾಕಾರಭ್ಯ ಮಾರಿದೇವರು ಯಿತ್ತು. ಆ ದೇವರ ಯಿಳಿಶಿ ಪೆಟ್ಟಿಗೆಯಲ್ಲು ಹಾಕಿ ಕಟ್ಟಿ, ಅರಗಿನ ಮುದ್ರೆ ಹಾಕಿ ಯಿಟ್ಟಂತಾ ಪೆಟ್ಟಿಗೆಯನ್ನು ಕೋಟೆವಳಗಿಂದಾ ಹೊರಟು ಬರುವಾಗ್ಯೆ ವೊಬ್ಬ ಪೆಟ್ಟಿಗೆ ನೋಡಿ, "ಭಾರಿ ಅದೆ. ಯಿದರಲ್ಲು ಯೇನಾದರೂ ಯಿದ್ದೀತು"ಯಂತ ಆ ಪೆಟ್ಟಿಗೆ ಹೊತ್ತುಕೊಂಡು ಬಂದು, ಯೀ ಶಿರಶಿ ಕೋಟೆ ಕೆರೆ ಮೇಲಗಡೆ ಗುಡ್ಡದ ಮೇಲೆ, ಆ ಕಡಿಂದಾ ಬಂದ ಜನರು ಯಾವತ್ತು ಆ ಗುಡ್ಡದ ಮೇಲೆ ವುಳಕೊಂಡರು. ಆ ಸ್ಥಳದಲ್ಲಿ ವೊಬ್ಬ ಸಣ್ಣವನ ಮೇಲೆ ಆ ದೇವರು ಬಂದು ಕೂಗಲಿಕ್ಕೆ ಆರಂಭವಾಯಿತು. ಆಗ್ಯೆ ಸಮೀಪದಲ್ಲಿ ಯಿದ್ದವರು. "ನೀನು ಯಾರು?"ಯಂತ ಕೇಳಿದಲ್ಲಿ "ನಾನು ಬಂಕಾಪುರದ ಮಾಡಿ, ಯೀ ಸ್ಥಳದಲ್ಲಿ ಯಿದ್ದವರ ಯಜಮಾನದ ಕರಶಿ"ಯಂತ ಅಪ್ಪಣೆ ಆಯಿತು. ಅಪ್ಪಣೆ ಪ್ರಕಾರ ವೂರಾಗೆ ಯಿದ್ದವರಿಗೆಲ್ಲಾ "ಮಾರೆಮ್ಮದೇವರು ನಿಮ್ಮನ್ನು ಯಲ್ಲಾ ಬರಹೇಳೋದಕ್ಕೆ ಅಪ್ಪಣೆ ಆಯಿತು"ಯಂತ ಹೇಳಲಾಗಿ, ಆಗ್ಯೆ ಸ್ಥಳ ಪರಸ್ಥಳ ವೂರಾಗೆ ಯಿದ್ದವರು ಯಾವತ್ತು ಜನರು ಅಲ್ಲಿಗೆ ಹೋಗಿ, "ನೀನು ಯಾರು?"ಯಂತ ಕೇಳಿದಲ್ಲಿ, "ನಾನು ಬಂಕಾಪುರದಲ್ಲಿ ಯಿದ್ದೆ. ನನ್ನ ಹೆಸರು ಮಾರೆಮ್ಮ. ನಾನು ಅವಾಂತ್ರದಿಂದಾ ಯೀ ಜನರ ಸಂಗಡಾ ಬಂದೆ. ನಿಮ್ಮ ಸ್ಥಳದಲ್ಲಿ ನಾನು ಯಿರಬೇಕು. ನನಗೆ ವೊಂದು ಸ್ಥಳಾ ಮಾಡಿಕೊಡಿ"ಯಂತಾ ಅಪ್ಪಣೆ ಆದ್ದರಿಂದಾ, ವಾಲಗ ಬಜಂತ್ರಿಯಿಂದಾ ವೂರ ವೊಳಗೆ ಕರಕೊಂದು ಬಂದು, ಕಸುಬೆಯಲ್ಲು ಸ್ಥಾಪನೆಮಾಡಿ, ಅಮೃತಪಡಿ ನೈವೇದ್ಯದ ಬಗ್ಯೆ ಮಾರೀ ಸರುವಿನ ಹೊಲವ ೫, ಗುತ್ತಿಗೆ ಭತ್ತ ಖಂಡಗ ೧೮ ಹದಿನೆಂಟು ಖಂಡಗ ಭತ್ತ ಸಲ್ಲುತ್ತಿತು. "ಮೂರು ವರುಷಕ್ಕೊಂಡು ಧಪಾತಿ ಹಬ್ಬಾ ಮಾಡಬೇಕಂ"ತ ಅಪ್ಪಣೆ ಆಯಿತು. ಆ ಪ್ರಕಾರ ಪೂಜೆಗೆ ಪಂಚಾಳ ನರಸಣ್ಣಾಯಂಬವನ ಪೂಜಿಗೆ ಯಿಟ್ಟು, ಯಿ ವರಿಗು ಸದಾಶಿವರಾಜರ ಅಮಲು ಯಿದ್ದಾ ಪರಿಯಂತ್ರ ಅಮೃತಪಡಿ ಭತ್ತ ಸಲ್ಲುತ ಬಂತು. ಅಲ್ಲಿಂದಾ ಪೂಜೆ ನಡದು ಬಂತು. ಆಮೇಲೆ ಕುಂಪಣಿ ಅಮಲು ಆಗುತ್ತಲೆ ತಸದೀಕು ಗ ೧೦॥ ಹತ್ತುವರಿ ವರಹಾ ಸಲುತ್ತ ಬರುತ್ತದೆ. ಪೂಜೆ ನಡೆಯುತ್ತಲೆ ಬರುತ್ತದೆ, ಹಾಲಿ ಕುಂಪಣಿಯಲ್ಲಿ, ಕಲಂ.

೫. ಶಿರಶಿ ಹನುಮಂತದೇವರ ಕೈಫಿಯತು: ಪ್ರಾಕು ಶಿರಶಿ ಹತ್ತಲಿ ಯಿರುವ ಚನ್ನಪಟ್ನ ಕಿಲ್ಲೇದಲ್ಲು ರಾಮಚಂದ್ರನಾಯಕರ ದೊರೆತನದಲ್ಲು ಶ್ರೀ ಮಾರಮ್ಮದೇವರ ಸ್ಥಾಪನೆ ಆಗುತ್ತಲೇ ಯೆದರನೆ ಹುಲ್ಲು ಮನೆಗಳು ಯಿದ್ದಂಥಾವು ವರುಷಕ್ಕೆ ವೊಂದು ಸಾರಿ ಕಾಲಕಾಲಕ್ಕೆ ಸುಟ್ಟು ಹೋಗುತ್ತಿದ್ದುವಂತೆ. ಅದರಿಂದಾ ಶ್ರೀ ಮುಖ್ಯಪ್ರಾಣದೇವರ ಗುಡಿಕಟ್ಟೆ ಸ್ಥಾಪನೆ ಮಾಡಿದ ಮೇಲೆ ಮನೆಗಳು ಸುಟ್ಟು ಹೋಗುವದು ತಪ್ಪಿತು. ಆ ದೇವರಿಗೆ ಮೂಲಮೂರ್ತಿಗೆ ಪೂಜೆಗೆ ಬ್ರಾಹ್ಮಣನ ಯಿಟ್ಟರು. ವುತ್ಸವಮೂರ್ತಿ ಚ.ಪ್ರ. ಹನುಮಂತದೇವರಿಗೆ, ಧ್ಯಾನಪೂಜೆ ಯೀ ಪ್ರಕಾರ ನೇಮಕಾ ಮಾಡಿಕೊಟ್ಟು, ಸ್ವಾಸ್ಥಿ ಬಿಟ್ಟದ್ದು: ಗೋಪಿನಾಥಪುರದಲ್ಲಿ ಗದ್ದೆ ಬೀಜ ಪರಿ ಖ ೬ ಆರು ಖಂಡಗ ಬೀಜ ವರಿಗೆ ಗುತ್ತಿಗೆ ಖಂಡ ೨೪ ಬರುತ್ತದೆ. ಹಾಲು[>ಲಿ] ಕುಂಪಣಿಯಲ್ಲು ಸಹಾ ಯಿದರ ಹೊರ್ತು ಬಳಸಿ ಮನೆ ಗ್ರಾಮದಲ್ಲು ಹಾಲಹಳ್ಳದ ವುತ್ತಾರ ಸ್ವಾಸ್ಥಿಯಿತ್ತು. ಯೀಗಾ ಅದು ಬೀಳುಬಿದ್ದು ಅದೆ.

೬. ಶಿರಶಿ ಶ್ರೀ ವೀರಭದ್ರದೇವರು ಕೈಫಿಯತು; ಸದರ ಹೀ ಚನ್ನಪಟ್ನದ ಕಿಲ್ಲೇದಲ್ಲು ಸೋದೆ ರಾಮಚಂದ್ರನಾಯಕರು ಯಿರುವ ಕಾಲದಲ್ಲಿ ವೀರಭದ್ರದೇವರ ಗುಡಿಕಟ್ಟಿ ದೇವರನ ಪ್ರತಿಷ್ಟೆ ಮಾಡಿ, ಯೀ ವೀರಭದ್ರದೇವರಿಗೆ 'ಯಸಳೆ'ಗ್ರಾಮವನ್ನು ವುತ್ತಾರ ಬಿಡಿಸಿ, ತಮ್ಮಡಿ ಪೂಜೆಗೆ ಯಿಟ್ಟಿದ್ದರು. ಆಮೇಲೆ ಬಹದರನ ಅಮುಲು ಪರಿಯಂತ್ರ ನಡಿಯಿತು. ಆಮೇಲೆ ಟೀಪುನ ಅಮಲಿನಲ್ಲಿ ಜಪ್ತಿ ಆಯಿತು. ಕುಂಪಣಿ ಅಮಲುನಲ್ಲಿ ತಸ್ತೀಕು ಬಹದರಿ ಗ ೧೨ ೨ = ಹನ್ನೆರಡು ವರಹಾ ಯಿಪ್ಪಣಾ ಮೂರು ಪೀಸ[>ವೀಸ] ತಸ್ತಿಕು ನಡೆಯುತ್ತವೆ.

ಶಿರಸಿ ವೊದಲುಭಾಗಿ ತೋರಣಶೀ ಕೈಫಿಯ್ಯತು: ಪ್ರಾಕು ತೋರಣಶೀ ಗ್ರಾಮದಲ್ಲು[>ಗ್ರಾಮವು] ಕಳಚೂರ್ಯ ಭುಜಬಲಚಕ್ರವರ್ತಿ ಮುರಾರಿ ಸಾದಿ[>ಸೋವಿ]ದೇವರ ಕಾಲದಲ್ಲು, ಕದಂಬಕುಲದ ಕೀರ್ತಿದೇವರಸನು ಬನವಶಿ ಪನ್ನಿಚ್ಛಾಸಿರ, ಹಾನುಗಲ ಯೀಸೂ[>ಐನೂ]ರುಮುಂ[+ಮಂ] ಆಳುತಿರುವ ಕಾಲದಲ್ಲಿ, ಕಬ್ಬನಾಳಿಗೆ ಎಪ್ಪತ್ತರ ಅಧಿಕಾರ[>ರಿ] ಕರವೂರ ಹಾಲಣ್ಣ ದಣ್ಣಾಯಕನ ಕಾಲದಲ್ಲು, ಶಕ ವರುಷ ೯೧೫ನೆ ವಿಜಯ ಸಂವತ್ಸರದ ವರಿಗೆ ಕಬ್ಬನಾಳಿಗೇಯ ವಳಗೆ ಯಿತ್ತು. ಯಿದಕ್ಕೆ ಸಹಸ್ರವಲ್ಲಿ ಕಲ್ಲೇಶ್ವರ ಬಳಿಯ ಶಾಸನ ಅದೆ. ಯೀಗಿರುವ ರಾಮೇಶ್ವರದೇವರ ಗುಡಿಗೆ ಆಗ್ನೇಯ ದಕ್ಷಿಣಪಾರ್ಶ್ವಕ್ಕೆ ಯಿರುವ ಗುಡ್ಡದ ಮೇಲೆ ಕೋಟೆ ಅದೆ. ಯೀ ಕೋಟೆಯಲ್ಲು ಯಿರುವಂಥಾವನು ಹಾರಶಿಯಲ್ಲಿ ಹುಟ್ಟಿದ ಬೆಳೈಯ್ಯನಾಯಕ. ಯಿದು ಹ್ಯಾಗೆಂದರೆ: ಮೇಲೆ ಬರದ ಚಕ್ರವರ್ತಿ ವಂಶದವರ ಕಾಲದಲ್ಲು ಕದಂಬ ಸಂಗೀದೇವರ ಮಗ ಕಾಮದೇವರ ಕಾಲದಲ್ಲಿ ಬೆಳೈಯ್ಯನಾಯಕ ಯಂಬವನು ಯಿದ್ದು, ಯುದ್ಧಾ ಮಾಡಿದಕ್ಕೆ ಯೀ ಮೇಲೆ ಬಂದ ರಾಮೇಶ್ವರದೇವರ ಗುಡಿ ಹತ್ರ ಆಗ್ನೇಯಭಾಗದಲ್ಲು ಯಿರುವ ವೀರಗಲ್ಲಿನಲ್ಲು ಯಿದ್ದ[>ದೆ]. ಶಕ ವುರಷ ೧೧೧೦೪ನೆ ಪ್ಲವ ಸಂವತ್ಸರದ ವರಿಗೆ ಯೀ ಬೆಳೈಯ್ಯನಾಯಕನು ಯಿವನ ಪೂರ್ವಿಕರು ಸಹಾ ಕರಿವೂರ ದಣ್ಣಾಯಕನ ವಳಗೆ ನಡಕೊಂಡಿದ್ದರು. ಯಿದೇ ಪ್ರಕಾರ ಯಿರುತ್ತಿದ್ದಲ್ಲಿ ಆಮೇಲೆ ಯೀ ಸಮಸ್ತ ರಾಜ್ಯವು ಆನೆಗೊಂದಿ ಹರಿಹರರಾಯರ ವಶವಾದ್ದರಿಂದಾ ಅವರು ತಮ್ಮ ಕಡೆಯಿಂದಾ ಯಿ ಬನವಸಿ ಪನ್ನಿಚ್ಛಾಸ್ತಿರಕ್ಕೆ ಬಾಚಣ್ಣ ವೊಡೇರು ಪಾಲಿಸುವಲ್ಲಿ, ಯಿವರ ವಳಗೆ ಯೀ ಕರೂರಿಗೆ ಹಾಲಣ್ಣ ದಣ್ಣಾಯಕನ ಮಗ ಕಲದಣ್ಣಾಯಕನ ಮಗ ಸಾಂತ್ಯ ಯ್ಯ

ದಣ್ಣಾಯಕರ ವಳಗೆ ಯೀ ಬೈಳೈಯ್ಯನಾಯಕನ ವಂಶದವರು ನಡಕೊಂಡು ಬರುತಲಿದ್ದರು. ಯೀ ಹರಿಹರರಾಯರ ತಮ್ಮ ಬುಕ್ಕನಾಯಕರ ಮಗ ಹರಿಹರ ರಾಯರ ಕಾಲದಲ್ಲು ಯೀ ಬಾಚಣ್ಣ ವೊಡೇರು ಬನವಶಿ ಪನ್ನಿಛ್ಛಾಸಿರವ ಪಾಲಿಸುವ ಕಾಲದಲ್ಲಿ, ಯೀ ಕರಿವೂರ ಸಾಂತಯ್ಯ ದಣ್ಣಾಯಕರು ಯೀ ತೋರಣಸಿ ನಾಡಿಗೆ ಸೇರಿದ ಮಾಳೆನಹಳ್ಳಿ ವಳಗಣ ಕರಸವಲ್ಲಿಯನ್ನು ಬ್ರಾಹ್ಮರಿಗೆ ಸರ್ವಮಾನ್ಯವಾಗಿ ಕೊಟ್ಟದ್ದಕ್ಕೆ ಯೀ ಕರಸವಲ್ಲಿಗೆ ಆಜ್ಞೇಯ ದಿಗ್ಭಾಗದಲ್ಲಿರುವ ಗದ್ದೆಗೆ ಪೂರ್ವದಿಕ್ಕಿನಲ್ಲಿರುವ ಶಾಸನ ೧೩೨೦ನೇ ಯೀಶ್ವರ ಸಂವತ್ಸರದ ವರೇಗೆ ಹೀಂಗೆ ನಡದು ಬಂತು. ಯಿದೇ ಪ್ರಕಾರ ನಡದು ಬರುತಿದ್ದಲ್ಲಿ ಮೇಲೆ ಬರದ ಆನೆಗೊಂದಿ ಸಂಸ್ಥಾನವು ಶಿಥಿಲವಾಗುತ್ತಾ ಬಂದಲ್ಲಿ, ಯೀ ಯೀ ಅಧಿಕಾರಿಗಳು ಯೀ ಯೀ ದಣ್ಣಾಯಕರು ತಮ್ಮ ತಮ್ಮ ಸ್ವತಂತ್ರದಲ್ಲಿ ಅಧಿಕಾರ ಮಾಡುತ್ತಾ ಬಂದರು.

೮. ಯೀ ಪೂಜೆ[>ಭಾಗ] ವಳಗಣ ಗ್ರಾಮಗಳು:

೧ ಕಲುಕುಣಿ ಗ್ರಾಮಾ

೧ ಹಿಪವಳ್ಳಿ ದಾಸನಕೊಪ್ಪಸಹಾ ಗ್ರಾಮಾ

೧ ದೀಪನಹಳ್ಳಿ ಗ್ರಾಮಾ

೧ ಹನುಮತ್ತಿ ಗ್ರಾಮಾ

೧ ಲಿಂಗದ ಕೊಣಾ

೩

ಅಂತು ಮೂರು ಗ್ರಾಮ, ಯೀ ನಾಡುವಳಗೆ ನಡದು ಬರುತ್ತಿತ್ತು.

೯. ಶಿರಶಿ ಮಾಗಣೆಯಲ್ಲಿ ಸೇರಿದ ೨ರಡನೆ ತೆರಕನಹಳ್ಳಿ ಭಾಗಿ ಕೈಫಿಯತು: ತೆರಕನಹಳ್ಳಿ ಗ್ರಾಮದಲ್ಲು ಪ್ರಾಕು ಕಳಚೂರ್ಯ ಭುಜಬಲ ಚಕ್ರವರ್ತಿ ಮುರಾರಿ ಆ ಸಾದಿ[>ಸೋವಿ]ದೇವರ ಕಾಲದಲ್ಲು ಕದಂಬಕುಲದ ಕೀರ್ತಿದೇವರಸನು ಬನವಶಿ ಪನ್ನಿರ್ಛಾಸಿರದ ಹಾನಂಗಲ್ಲ ಯೀ ಸೂರ[>ಐನೂರ]ಮಂ ಆಳುತ್ತಿರುವ ಕಾಲದಲ್ಲು, ಕಬ್ಬುನಾಳಿಗೆ ಎಪ್ಪತರ ಅಧಿಕಾರಿ ಕರಿವೂರ ಹಾಲಣ್ಣ ದಣ್ಣಾಯಕನ ಮಗ ಕಳದಣ್ಣಾಯಕ. ಯಿವನ ಮಗ ಸಾತೈದಣ್ಣಾಯಕ. ಯಿವನ ಮಗ ಕಳದಣ್ಣಾಯಕ. ಯಿವರ ಕಾಲದಲ್ಲು ತೆರಕನಹಳ್ಳಿ ಭಾಗಿ ಅವರ ವಳಗೆ ಯಿತ್ತು. ಯೀ ಭಾಗಿಗೆ ಮುಖಯವಾಗಿ ಯಿದ್ದಂಥಾ ಕಾಳಗೊಡ[>ಕಾಳಗೊಂಡ], ಯಿವರ ಪೂರ್ವಿಕರ ಸಹಾ ಯೀ ಭಾಗಿಯಲ್ಲು ಯೀಗೆ ಹೆಸರು ಹೇಳುವ ಹೊಲೆಹೊನಲುಕೋಟೆ ಕಟ್ಟಿಕ್ಕೊಂಡು ಯಿರುತಿದ್ದಲ್ಲಿ, ಯೀ ಕರಿವೂರ ದಣ್ಣಾಯಕರ ವಳಗೆ ನಡಕೊಂಡು ಬರುತಿದ್ದದ್ದು, ಪೂರ್ವದಾರಭ್ಯ ಆನೆಗೊಂದಿ ಹರಿಹರರಾಯರ ಕಾಲದ ವರಿಗು ಯೀ ಆನೆಗೊಂದಿ ಸಂಸ್ಥಾನವು ಶಿಥಿಲವಾದ ಬಳಿಕ ಯೀ ದಣ್ಣಾಯಕೆ ಪ್ರಬಲವಾಗಿ ಸ್ವತಂತ್ರರಾದರು.

೧೦. ಕುಳವೆಗ್ರಾಮವು ಪ್ರಾಕು ಕಬ್ಬನಾಡ ಶೀಮೆ ವಳಗೆ ಯಿತ್ತು. ಸಾತಣ್ಣಗವುಡನ ಗವುಡಿಕೆ ಅರಸಪ್ಪನಾಯಕರ ಕಾಲದಲ್ಲು ಜಯಿನರ ಬಸ್ತಿಗೆ ಅಕಳಂಕಗೆ ವುತ್ತರಾ. ಹಿರೆ ಸದಾಶಿವ[+ಪ್ಪ]ನವರ ಕಾಲಕ್ಕೆ ಸೋದೆ ಸದಾಶಿವಪೂರದ ಮಠಕ್ಕೆ ಸರ್ವದಾರಿ ಸಂವತ್ಸರದಲ್ಲು ವುತ್ತಾರಾ.

೧೧. ಆಮೇಲೆ ಸ್ವಭಾನು ಸಂವತ್ರದಲ್ಲು ಬಹದರನ ಕಾಲದಲ್ಲು ವಿಷ್ಣು ಸಭಾಯಿತರ ಕಾಲಕ್ಕೆ ಜಪ್ತಿಆಗಿ ತೆರಕುನಹಳ್ಳಿ ಭಾಗಿಗೆ ಕೂಡಿತು.

೧೨. ಶಿರಶಿ ಮಾಗಣಿ ಪೈಕಿ ಮೂರನೆ ವ[>ಒ]ಳಭಾಗಿ ಕೈಫಿಯತ್ತು: ಸೊನ್ನೆಹಳ್ಳಿ ಗ್ರಾಮದಲ್ಲಿ ಯಿರುವ ಕಲ್ಲೆಯದೇವರ ದೇವಸ್ಥಾನಕ್ಕೆ ಆಗ್ನೇಯ ದಿಕ್ಕಿನಲ್ಲಿ ಯಿನ್ನೂರು ಮುನ್ನೂರು ಗಜ ಸುಮಾರುನಲ್ಲಿ ಯಿರುವ ಗುಡ್ಡದ ಮೇಲೆ ಕೋಟೆ ಕಟ್ಟಿಕೊಂಡು ಯಿದ್ದವ ಕದಂಬ ವಂಶದ ಫೀ[>ವೀ]ರಕಾಮದೇವರಸರ ಕಾರ[>ಲ]ದಲ್ಲಿ, ಬಂಕಿನಾಯಕನ ರಾಜ್ಯದಲ್ಲಿ ಯೀ ಬಂಕಿನಾಯಕನು ಬಾಡದನಾಡೆಪ್ಪತ್ತಕ್ಕೆ ಅಧಿಕಾರಿ. ಯೀತನ ವಳಗೆ ಮೇಲೆ ಬರದ ಕೋಟೆಯಲ್ಲು ಯಿರುವ ನಾಡಗವುಡ ಸೊನ್ನಹಳ್ಳಿಯಲ್ಲು ಸವಳೀ ಗವಳೈಯ್ಯನ ಮಗ ಮಾಳಗಾಮಂಡ. ಯಿವನ ಮಗ ಕಾಳಗಾಮಂಡ ವೀರಕಾಮಧೆವನ ಶಕ ೪೪ ಖರ ಸಂವತ್ಸರದ ವರಿಗು ಯಿದ್ದಾ. ಯಿವನ ವಂಶಸ್ಥರು ಪಾರಂಪರ್ಯವಾಗಿ ಯಿವನ ತಮ್ಮ ದೊಡ್ಡಗೊಂಡ ಮೊದಲಾದವರು ಯೀ ನಾಡ ಅನುಭವಿಸಿಕ್ಕೊಂಡು ಬಾಡದ ಬಂಕಿನಾಯಕನ ವಳಗೆ ನಡಕೊಂಡು ಯಿರುತಿದ್ದರು. ಯೀ ಬಾಡಲು[>ವು] ಗೋಕರ್ನಕ್ಕೆ ಪೂರ್ವ ಮಿಡಿಜಿಗೆ ದಕ್ಷಿಣ, ಹೊಳೆ ಯೀಚಿಗೆ ಚಂದಾವರದ ಶೀಮೆ ವಳಗೆ ಅದೆ. ಯೀಗ್ಯೆ ಮೇಲೆ ಬರದ ದೊಡ್ಡಗೊಂಡನ ವಂಶದ ತಮ್ಮಗೊಂಡನ ಮಗ ಕರೆಗೊಂಡನು, ಯೀ ಬಗೆ[>ಬಂಕಿ]ನಾಯಕನ ವಂಶದ ನಾಗನಾಯಕನ ಅಳಿಯನು ಶಾಲಿವಾಹನ ಶಕ ವರುಷ ೧೧೪೭ನೆಯ ಪರಾಭವ ಸಂವತ್ಸರದ ವರಿಗೆ ಕಾಮದೇವರಸರ ಮಗ ಯಾಗಿದೇವರಸರು ಸಾಯೂರಲ್ಲಿ ರಾಜ್ಯಾ ಮಾಡುವಾಗ್ಯೆ, ಅವರ ವಳಗೆ ನಡಕೊಂಡು ಬರುತಿದ್ದರು. ಯೀ ರಾಜ್ಯವು ಆನೆಗೊಂದಿ ಹರಿಹರರಾಯರ ಸಾಂಬ್ರಾ[>ಜ್ಯ]ಕ್ಕೆ ಸೇರಿದ ಬಳಿಕ ಅವರ ವಳಗೆ ನಡಕೊಂಡಿದ್ದರು. ಆ ಸಂಸ್ಥಾನ ಶಿಥಿಲವಾದ ಬಳಿಕ ಸ್ವತಂತ್ರ ಪುಟೆಗಾರ್ರು ಆದರು.

೧೩. ಈ ಗ್ರಾಮದ ವಳಗ್ರಾಮಗಳು:

೧. ಸೊನ್ನವಲ್ಲಿ ವಳಗಣ ಹುಣಶಿಕೊಪ್ಪ.

೧. ಯತಡೀ ವಳಗಿನ ಸಂಡನಹಳ್ಳಿ.

೧ ಹಾರನಹಳ್ಳಿ ವಳಗಿನ ಕಣಬೆ,

೧ ಕೂಗಡೆ ಮನೆ ಗ್ರಾಮಾ.

೧ ಅಮ್ಮೆವಲ್ಲಿ ವಳಗಣ ಕಲ್ಲುಮನೆ, ಕೂಗತೆ[>ಡೆ] ಕರೂರು ಶೀಮೆ ವಳಗಣ ಕಾನಹಳ್ಳಿಗ್ರಾಮಾ.

೧ ಸೊನ್ನಹಳ್ಳಿ ವೊಳಗಣ ಬಳಗಲ್ಲಮನೆ

೧ ಹೆಡಿಗೆಮನೆ ಬಳಗಲ್ಲಮನೆ ಗ್ರಾಮ ವಳಭಾಗಿ ವಳಗಿಂದಾ

---

೭ ಜಮಲಾ ಯೇಳು ಗ್ರಾಮಗಳ ವಿವರ.

೧೪. ಹೊನ್ನಗದ್ದೆ, ೧ ಸಿಂಗನ ಮನೆ, ೧ ಗವಡಗುಳಿ, ೧ ಗಿರಿವಲ್ಲಿ, ೧. ಅಂದವಲ್ಲಿ, ೧ ಕಲುಕೊಪ್ಪ, ೧ ಕಂಚಿಹಳ್ಳಿ – ಜುಮಲಾ ಯೇಳು ಗ್ರಾಮಗಳು ವಳಗಿನದು.

ಸದರಹೀ ಶಿರಶಿ ಮಾಗಣಿ ಪೈಕಿ ವೊಳಭಾಗಿ ವೊಳಗೆ ಶೇರಿದ ಸೊನ್ನವಳ್ಳಿಗ್ರಾಮಕ್ಕೆ ಯೀಶಾನ್ಯ ಭಾಗದಲ್ಲಿ ಯಿರುವ ಕಲ್ಲಯ್ಯದೇವರ ದೇವಸ್ಥಾನಕ್ಕೆ ಆಗ್ನೇಯ ದಿಕ್ಕಿನಲ್ಲಿ ಯಿನ್ನೂರು ಮುನ್ನೂರು ಗಜದ ಸುಮಾರಿನಲ್ಲಿ ಇದ್ದಂಥಾ ಗುಡ್ಡಾ ಕೋಟೆಗುಡ್ಡಾಯಂತ ಹೇಳುತ್ತಾರೆ. ಅಲ್ಲಿ ಇರುವ ಕಲ್ಲಿನ ಹೆಸರು[+ಆನೆಕಟ್ಟುವ ಕಲ್ಲು].

೧೫. ಬೆತಲ್ಲಿ ಭಾಗಿ ಕೈಫಿಯತ್ತು: ಯೀ ಬೆತಲ್ಲಿ ಭಾಗಿಯು ಯೀಗ ಯಿದ್ದವ[>ಇದ್ದುದು] ಶಿರಸಿಗೆ ಸಮೀಪ ಚೆನ್ನಪಟ್ಟಣದ ಕೋಟೆಗೆ ವೊಂದು ಭಾಂಡೆದ ಗುಂಡಿನ ಅಳತೆಕೆಯಲ್ಲು ಹೊಲತೆಕೋಟೆಯಂಥ ಯೀಗ ಹೆಸರು ಹೇಳುತ್ತಾರೆ. ಯೀ ಕೋಟೆ ಕಟ್ಟಿಕೊಂಢು ಹಿರಿಯ ಹದವಳದ[>ನ] ಮಗ ಬಲ್ಮೆ ಹದವಳ. ಯಿವನ ಮಗ ಹದವಳೆ ಕುಪ್ಪಯ್ಯ. ಯಿವನ ಮಗ ಮರದಿಯಣ್ಣ ಸಾಹ ಯಿಂತಿವರ ವಂಶಪಾರಂಪರ್ಯವಾಗಿ ಕಾಮದೇವರಸರ ಅನ್ವಯದ ವೀರದೇವರಸರ ಅನುಜ ತೈಲದೇವನೃಪಾಲ ಹಲಶಿಗೆ, ಹಯಕೊಂಡು, ವೀರಮಕ್ಕಳೀ, ಗಂಗ, ಪಾಂಡ್ಯ ಮೊದಲಾದ ಬನವಶಿ ಪನ್ನಿಚ್ಚಾಸಿರಕ್ಕೆ ಮೊದಲಾದನ್ನು ಆಳಿಕೊಂಡು ಯಿರುವಾಗ್ಯೆ, ಶಕ ವರುಷ ೪೨೧ನೆ ಕೀಲಕ ಸಂವತ್ಸರದ ವರಿಗೆ ಮೇಲೆ ಬರದ ಹದವಳ ಮರದಿಯಣ್ಣನು ಆಳಿಕ್ಕೊಂಡು ಯಿದ್ದನು.

೧೬. ಯಿವನು ಆಳಿಕ್ಕೊಂಡು ಬಂದ ವಳಗ್ರಾಮಗಳು.

೧. ಕೋಟೆಕೊಪ್ಪ ೧. ತೈಲಗಾರೂ ೧. ಬಳಸೆಮನೆ ೧.ಕ ಕಲ್ಲಗಾರು ೧. ಯಚ್ಚಿಮನೆ ೧. ಪುಟ್ಟನಮನೆ.

ಜುಮಲಾ ಆರು ಗ್ರಾಮಗಳು ಸದರಹೀ ಬರದ ಗ್ರಾಮಗಳು ವಳಭಾಗಿಯಿಂದ ಕೂಡಿದ ಗ್ರಾಮಗಳು.

೧೭. ಶಿರಶಿ ಮೂಡಶಿ ಭಾಗಿ ಕೈಫಿಯತ್ತು. ಗ್ರಾಮಗಳ ವಿವರಾ:

೧ ಬೆರ[>ತ]ಲ್ಲಿ ಪ್ರಾಕು ಶಿರಸೆ ಕಸಬೆ	೧ ಜಂಬೆಹಳ್ಳಿ ನಾಡು ಪೈಕಿ
೧ ಬಚ್ಚನಾವಿ	೧ ಹುಸರೆ
೧ ಯಸಳೆ	೧ ವುಡುಗನಹಳ್ಳಿ
೧ ಕಬ್ಬುಗಾರು	೧ ಬಿಸಳೆಕೊಪ್ಪ
೧ ಸುರುಕಲಕೊಪ್ಪ; ಭದ್ರಾಪೂರ	೧ ಮಣಚದಲ್ಲಿ
೧ ಕೆರೆಕೊಪ್ಪ	೧ ಬಗೇರಿಕೊಪ್ಪ
೧ ಗೋಪಿನಾಥಪುರ	೧ ಚಿಪ್ಪಿಗೆಗ್ರಾಮ

ಜುಮಲಾ ಗ್ರಾಮಗಳು ಹದಿನಾಲ್ಕು

೧೮. ಯೀ ಜಂಬೆಹಳ್ಳಿ ನಾಡಿಗೆ ಕಿಲ್ಲೇಗಳು ಮೂರಕ್ಕೆ ವಿವರ:

೧ ಚನ್ನಪಟ್ಟಣದಲ್ಲಿ ಸೋದೆ ರಾಮಚಂದ್ರನಾಯಕರು ಕಟ್ಟಿಸಿದ ಕಿಲ್ಲೆ

೧ ಬಶೆಟ್ಟಿಕೆರೆ ಮೇಲೆ ಯಿರುವ ಕಿಲ್ಲೆ ಬಸಲಿಂಗರಾಜರ ಕಾಲಕ್ಕೆ ಕಟ್ಟಿದ್ದು.

೧ ಹಿತ್ತಲಗದ್ದೆ ಮೇಲಗಡೆ ಯಿರುವ ಕಿಲ್ಲೆ, ಪೂರ್ವದಲ್ಲಿ ಮೂಡಶಿ ಭಾಗಿ ಪಾಳೆಗಾರನ ಕಾಲದ್ದು. ಯೀಗಾ ಕಿಲ್ಲೆದ ಪಾಯಾ ಮಾತ್ರ ಹೊಲುವೆ ಮೇಲೆ ಕಾಣುತ್ತದೆ.

೩

ಸದರಹೀ ಬರದ ಯೀ ಮೂರು ಕಿಲ್ಲೆಗಳು ಹಾಲಿ ಬೀಳು ಬಿದ್ದು ಅದೆ. ಸದರಹಿ ವಳಭಾಗಿ ವಳಗೆ ಶೇರಿದ ಸೊನ್ನವಳ್ಳಿ ಕಲ್ಲಯ್ಯದೇವಸ್ಥಾನಕ್ಕೆ ಆಗ್ನೇಯ ಭಾಗದಲ್ಲಿ ಯಿನ್ನೂರು ಮುನ್ನೂರು ಗಜದ ಸುಮಾರಲ್ಲು ಯಿದ್ದಂತಾ ಗುಡ್ಡ ಕೋಟೆಗುಡ್ಡಾಯಂತ ಹೇಳುತ್ತಾರೆ. ಅಲ್ಲಿ ಯಿರುವ ಕಲ್ಲಿನ ಹೆಸರು 'ಆನೆ ಕಟ್ಟುವ ಕಲ್ಲು'ಯಂತಾ ಹೇಳುತ್ತಾರೆ. ದೇವಸ್ಥಾನಕ್ಕೆ ವುತ್ತರ ದಿಕ್ಕಿನಲ್ಲಿ ಮನೆದಳ ಪ್ಯಾಠೆ ಸಾಲಿನ ಹಾಗೆ ಕಾಣುತ್ತದೆ. ಯಿದಕ್ಕೆ ಗುರ್ತು ಯೇನೆಂದರೆ, ಸುಟ್ಟ ಯಿಟ್ಟಿಗೆ ಕಲ್ಲು ಅದೆ. ಅದು ಯೀಗ ಅಡಿವಿ ಕೂಡಿ ಹೋಗಿದೆ. ಯೀ ಕೋಟೆಯಲ್ಲು ಯಿದ್ದವ ಬಂಕಿನಾಯಕ. ಯಿವನ ರಾಜ್ಯದಲ್ಲಿ ಸೊನ್ನವಳ್ಳಿ ಕಾಳಗಾಮಂಡನ ತಮ್ಮ ದೊಡ್ಡಯ್ಯಗೌಡ ನಿಲಿಸಿದ ವೀರಕಲ್ಲಲ್ಲು ಸದರೀ ಬರದ ದಾಖಲೇ ಅದೆ. ಅದರ ಮುಂದೆ ಲೆಖ್ಖದಿಂದಾ ಸನದನಿಂದಾ ಪತ್ರದಿಂದಾ, ಹೇಳಿಕೇಳಿದ್ದರಿಂದ ಸಹಾ ದಾಖಲೇಯಲ್ಲು ಯಿಲ್ಲಾ. ಯೀ ಸೊನ್ನಹಳ್ಳಿಗ್ರಾಮವು ಹುಣಶೀಕೊಪ್ಪದ ವಳಗೆ ನಡದು ಬರುತ್ತದೆ.

ಪೂರ್ವದಲ್ಲಿ ಯಿರುವಂಥಾ ಸೊನ್ನವಳ್ಳಿ ವಳಗೆ ಯಿತ್ತಲಾಗಿ ವರ್ಗ ವಿಂಗಡವಾದಂಥಾದ್ದು ಬಿಳಗಲ ಮನೆ ಯೀಗ್ಯೂ ಪ್ರತ್ಯೇಕ ಬರಿಯುತ್ತಾ ಬರುತ್ತದೆ ಯಂದು ಭಾವ ಸಂವತ್ಸರದ ಆಷಾಡ ಶು॥೬ಲ್ಲಿ, ಹುಣಶಿಕೊಪ್ಪದ ಪುಟ್ಟಯ್ಯ ಹೆಗ್ಗಡೆ, ನರಸಪ್ಪ ಹೆಗ್ಗಡೆ, ವಿಘ್ನೇಶ್ವರ ಹೆಗ್ಗಡೆ, ಬಿಷ್ಮಪ್ಪನ ಪುಟ್ಟಯ್ಯ ಹೆಗ್ಗಡೆ ಮುಂತಾದವರು ಸಹಾ ಬರಶಿಕೊಟ್ಟ ಕೈಫಿಯತು.

ಯೀ ಶಿರಶಿ ಕಸಬೆಯು ಬೇಡಲ್ಲಿ ಭಾಗಿವಳಗಣ ಪುಟ್ಟನಮನೆಗ್ರಾಮಕ್ಕೆ ಶೇರಿದ್ದು. ಆಗ್ನೆ . ಯೀಗ ಹೇಳುವ ಹಿತ್ತಲಗದ್ದೆ ಮೇಲಗಡೆ ಮಠದ ಬೇಣಾ ಮಾಡಿದ್ದು, ಕೋಟೆಯೂ ಯೀಗ ಹೊಲತಿಕೋಟೆಯಂತ ಹೇಳುತ್ತಾರೆ. ಆ ಕೋಟೆಯನ್ನು ಕೆಲವು ದಿವಸದ ಮೇಲೆ ಬಿಟ್ಟು ಯೀಗ ಹೇಳುವ ಹೊಲತಿಕಾನಕೋಟೆ ಕಟ್ಟಿದರು. ಆ ಕೈಫಿಯತು ಬೆಟ್ಟಳ್ಳಿ ವಳಗೆ ಕೈಫಿಯತು ಬರಶಿ ಅದೆ. ಆ ಮೇಲೆ[>ಲು] ಘಟ್ಟದ ಶೀಮೆಯು ಅಲಾಹಿದೆ. ವಂಶಾವಳಿ ಬರದ ಸೋದೆ ಅರಸುಗಳ ವಂಶಸ್ಥರಾದ ರಾಮಚಂದ್ರನಾಯಕರ ಕಾಲದಲ್ಲು, ಯೀಗ ಬರದ ಯರಡು ಕೋಟೆ ಮಧ್ಯಭಾಗದಲ್ಲು ದೇವಿಕೆರೆಗೆ ದಕ್ಷಿಣ ದಿಕ್ಕಿನಲ್ಲು ಕೋಟೆ ಕಟ್ಟಿ, ಚನ್ನಪಟ್ಟಣಾಯಂಬ ಹೆಸರಿಟ್ಟು ಯಾವತ್ತು ಮೇಲುಘಟ್ಟಿ ಶೀಮೆ ರಾಜ್ಯಭಾರ ಯೀ ಕೋಟೆವಳಗೆ ಯಿದ್ದು ಮಾಡುತ್ತಿದ್ದರು. ಆ ಸಮಯದಲ್ಲು ಬಿದರೂರ ಅರಸು ಕೆಳದಿ ಚನ್ನಮ್ಮಾಜಿ ಮಗ ವೀರಭದ್ರನಾ ಫೌಜು ತೆಕ್ಕೊಂಡು ಬಂದು, ಯುದ್ಧಾ ಮಾಡಿ ಚನ್ನಪಟ್ಟಣ ಕಿಲೋ[>ಲ್ಲೆ] ಠಾಣೆ ಹಾಕಿದ್ದರಿಂದ, ಅರಸು ಬಿಟ್ಟು ಹೋಗಿ ಕೆಂಗೆರಿ ಹೊಳೆ ಬದಿಲಿ ಕೋಟೆಯಿತ್ತು. ಆ ಕೋಟೆಯಲ್ಲು ಹೋಗಿ ನಿಂತರು. ಅಲ್ಲಿ ಆವಾಂತ್ರ ಬಂತು. ಅಲ್ಲಿಂದಾ ಬಿಟ್ಟು ಹೋಗಿ ಕುಕ್ಕಳಿಯಲ್ಲಿ ಯಿದ್ದರು.

ಕುಕ್ಕಳಿಂದಾ ಅವರ ತಮ್ಮ ಸದಾಶಿವನಾಯಕರು ವಿಜಾಪೂರ ಪಾಚ್ಛಾಯಿ ಬಳಿಗೆ ಹೋಗಿ, ಆತನ ಭೇಟಿ ತಕ್ಕೊಂಡು ದಶಾವತಾರ ಆಟವನ್ನು ಆಡಿ, ಪಾದಶಾಹಿ ಮನಸು ಸಂತೋಷ ಮಾಡಿ, ಅಲ್ಲಿಂದಾ ಕಿಲ್ಸಿಖಾನ ಯಂಬ ಸರದಾರಗೆ ಅಪ್ಪಣೆ ಆಗಿ, ಸಂಗಡ ಪೌಜು ೪೦೦೦೦ ಸಾವಿರ ನೇಮಕಾ ಮಾಡಿಕೊಟ್ಟು, ಆ ಮೇಲೆ ಪಾಚ್ಛಾಯಿ ಸಿಫಲರಸಿಗೆ[>ಸದಾಶಿವರಿಗೆ] "ನೀನು ನಮ್ಮಲ್ಲಿ ಊಟಕ್ಕೆ ಬರಬೇಕು"ಯಂತಾ ಮೊಕ್ತಾ ಅಪ್ಪಣೆ ಆದ್ದರಿಂದಾ, ಬಹಳ ಜನಕ್ಕೆ ಹೇಳಿಕೊಂಡು 'ಯಿದು ವೂಟದ ಸಂಗತಿ ತಪ್ಪಿಸಬೇಕೆಂ'ತ ಯತ್ನಾ ಮಾಡಿದಾಗ್ಯೂ ನಿರ್ವಾಹವಿಲ್ಲ. ಆಮೇಲೆ ಸದಾಶಿವನಾಯಕರು ಗುರು ಸಹಾ ವೂಟಕ್ಕೆ ಹೋದರು. ಅಲ್ಲಿ ಅನೇಕ ಮಂದಿ ವಜೀರರು ವೂಟಕ್ಕೆ ಕುಳಿತಿದ್ದರೂ. ಯಿವರಿಗೂ ವೂಟಕ್ಕೆ ಯಲ್ಲವರಿಗ್ಯೂ ಯಿಟ್ಟ ಹಾಗೆ ಚಿನ್ನ ತಳಿಗೆಯಲ್ಲಿ ತಾವು ವೂಟಾ ಮಾಡುವ ಜಿನಸು ಯಾವತ್ತು ತಂದು ಯಿಟ್ಟು, ಆಗ್ಯೆ ಯೀ ಸದಾಶಿವನಾಯಕರು "ನಮ್ಮ ಶ್ರೀದೇವರ ತೀರ್ಥವುಂಟು. ಅದು ಬಿಡಾರದಲ್ಲಿ ಮರೆತು ಬಂದಿದ್ದೇವೆ"ಯಂತ ಹೇಳಿದರು. ಅದು ತರಶಿ ವಸ್ತ್ರಾ ಮುಚ್ಚಿವೂಟ ಸಾಮಾನು ತಂದು ಯಿಟ್ಟಿದರ ಮೇಲೆ ತೀರ್ಥ ಹಾಕಿ, ವಸ್ತ್ರ ತೆಗೆದೊರಳಗೆ ಯಾವತ್ತೂ ಪದಾರ್ಥವೂ ನಾನಾ ಪ್ರಕಾರ ಹೂವುಗಳಾದವು. "ಯಿದು ಯೇನು ಆಶ್ಚರ್ಯ"ಯಂತ ಬಾದಶಹಾ ನೋಡಿ "ನೀನು ದೊಡ್ಡಂತನ ಮಹಾಪುಣ್ಯಪುರುಷ"ಯಂತ ಹೇಳಿ, ಬೀಡಾರಕ್ಕೆ ಅಪ್ಪಣೆ ಕೊಟ್ಟು, ಅಲ್ಲಿಂದಾ ಪೌಜು ಮುಂದೆ ರವಾನೆ ಮಾಡಿದರು. ತಾವು ಕೆಲವು ದಿವಸ ನಿಂತು ಅಪ್ಪಣೆ ಯಿಸುಕೊಂಡು ಅನೇಕ ತಸರೀಪು ಕೊಟ್ಟು "ಬಾವಲಿ ರಾಜರು" ಯಂತ ಕಿತಾಬು ಕೊಟ್ಟು ಕಳಶಿದರು. ಅಲ್ಲಿಂದಾ ವೂರಿಗೆ ಬಂದು ಯಾವತ್ತು ತಮ್ಮ ಶೀಮೆ ಠಾಣೆ ಹಾಕಿ ರಾಮಚಂದ್ರರಾಜರು ಸದಾಶಿವರಾಜರು ಉಭಯತರು ಬಿದರೂರಿಗೆ ರಾಮಚಂದ್ರ ಪೂರಾ.

❖❖

೯೪
ಶಿರೂರ ಮಠದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಅಕ್ಷಯಸಂವತ್ಸರದ ಜೇಷ್ಟ ಶು ೬ಯಲ್ಲು ಶ್ರೀ ವಿಠಲಾರಾದಕ್ಕೆ ಶಿರೂರಮಠ ಲಕ್ಷ್ಮಿಮನೋಹರಸ್ವಾಮಿಗಳವರ ಮಠದ ವಿಠಲಾಚಾರು ಬರಸಿಕೊಟ್ಟ ಗುರುಪೇ[>ಪೀ]ಠಿಕಾ ಕ್ರಮಾ:

ನಮ್ಮಾ ಮೂಲಗುರುಗಳು ಮದ್ವಾಚಾರ್ಯರು ಅವತಾರ ಮಾಡಿದ್ದು : ಚತುಃಸಹಸ್ರೇ ತ್ರಿಶಕೊತ್ತರೇ ಗತೇ ಸಂವತ್ಸರಾಣಾಂ ತು ಕತಾ ಪ್ರಥಿವ್ಯಃ ॥ ಜಾತಃ ಪುನರ್ವಿಪ್ರತನುಃ ಸಭೀಮೋ ದೈತ್ಯೆರ್ನಿಗೂಢಂ ಹರಿತತ್ವಮಾಹ ॥

ಶಾಲಿವಾಹನ ಶಕ ವರುಷ ೧೧೨೧ನೇ ಕಾಳಾಯುಕ್ತಿ ಸಂವತ್ಸರದ ಮಾಘ ಶು ೭ಯಲ್ಲು ಮದ್ಯಗೇಹಭಟ್ಟರಲ್ಲಿ ಅವತಾರಮಾಡಿ, ೧೧೨೮ನೆ ಕ್ರೋಧನ ಸಂವತ್ಸರದ ಪುಶ್ಯ ಶುದ್ಧ ೫ಯಲ್ಲು

ಉಪನೀತರಾಗಿ, ಗುರುಕುಲಾವಾಸವನು ಮಾಡಿ, ಸಕೃದುಪದೇಶಮಾಕ್ಕಡಿಂದ ಸಕಲವೇದಾಭ್ಯಾಸವನ್ನು ಮಾಡಿ, ಪಾಠಂ ವ್ಯಾಜದಿಂದ ಉಪಾದ್ಯಯರಿಗೆ ಸಕಲವೇದಾರ್ಥವನ್ನು ಉಪದೇಶ ಮಾಡಿ, ೧೧೩೦ನೇ ಪ್ರಭವನಾಮ ಸಂವತ್ಸರದ ವೈಶಾಖ ಶು ೩ಲ್ಲು ಸನಕಾದಿ ವಂಶಸ್ಥರಾದ ಅಚ್ಚುತಪೇಕ್ಷಾಚಾರಿಯರಿಂದ ಪರಮಹಂಸಾಶ್ರಮವನ್ನು ಸ್ವೀಕರಿಸಿ, ಅಚ್ಯುತಪ್ರೇಕ್ಷಾಚಾರ್ಯರಿಂದ ವೇದಾಂತಸಾಂಬ್ರಾಜ್ಯದಲ್ಲಿ ಪಟ್ಟಾಭಿಷಕ್ತರಾಗಿ, ಭಗವದ್‌ಗೀತ ಭಾಷ್ಯವನ್ನು ಮಾಡಿ, ತಮ್ಮ ಉಪದೇಶವ್ಯಾಚಿದಿಂದ ಸಕಲಸಿದ್ಧಾಂತರಹಸ್ಯವನ್ನು ಗುರುಗಳಿಗೆ ಉಪದೇಶ ಮಾಡಿ ಉತ್ತ, ಬದರಿಂಯನ್ನು ಕುರುತು ಹೋಗಿ, ವೇದವ್ಯಾಸದೇವರಿಂದ ಆಜ್ಞಾಪ್ತರಾಗಿ ಶ್ರೀಮತಾಬ್ರಹ್ಮಸೂಕ್ತಭಾಷ್ಯಾದಿಗಳ ನಿರ್ಮಿಸಿ, ಪುನರಲುಪ್ಯಪೀಟಕ್ಕೆ ಬಂದು, ೧೧೬೦ನೇ ಹೇವಳಂಬಿ ಸಂವತ್ಸರದ ಮಾಘ ಶುದ್ಧ ೩ಯಲ್ಲು ಸಿದ್ದಿವಿಘ್ನಮುಖದೋಷಬೇಷಜಿ[>ಜ]ನಾದ ರುಗ್ಮಿಣಿಕರಪಲ್ಲವರ್ಜಿತನಾದ ಗೋಪಿವಲ್ಲಭ ಶ್ರೀಕೃಷ್ಣನನ್ನು ಲೋಕೋದ್ಧರಣ ನಿಮಿತ್ಯವಾಗಿ ಪ್ರತಿಷ್ಟಾಪನೆಯನ್ನು ಮಾಡಿ, ಬದರಿಕಾಶ್ರಮದಿಂದ ತಂದ ವ್ಯಾಸಮೂರ್ತಿ ಸಾಲಿಗ್ರಾಮಗಳಲ್ಲಿ ಮದ್ಯತಳಾಮಠದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆಮಾಡಿ, ಸುಬ್ರಮಣ್ಯದಲ್ಲೊಂದು ಮೂರ್ತಿಯನ್ನು ಪ್ರತಿಷ್ಟೆ ಮಾಡಿ, ಯೀ ಮೂರು ಸ್ಥಳದಲ್ಲು ಪ್ರಾತಃಕಾಲಾದಿ ಕ್ರಮದಿಂದ ತಾವೆ ಸರ್ವದಾ ಪೂಜೆಗಳನ್ನು ಮಾಡುತ್ತ ಕೆಲಉ ದಿವಸ ಯಿದ್ದರು.

ಆಮೇಲೆ ತಾಉ ಬದರಿಕಾಶ್ರಮಕ್ಕೆ ಹೋಗಬೇಕು ಯೆಂಬ ಅಪೆಕ್ಷೆಯಿಂದ ಶ್ರೀಕೃಷ್ಣಪೂಜಾ ಸ್ವಮತಸ್ಥಾಪನಾರ್ಥವಾಗಿ ತಮ್ಮಾ ಸಹೋದರರಾದ ವಿಷ್ಣುತೀರ್ಥಾಚಾರ್ಯರು ಸಹಾ ವೈರಾಗ್ಯಭರಿತರಾದ ಅಷ್ಟಬ್ರಹ್ಮಚಾರಿಗಳಿಗೆ, ಗೋದಾವರಿತೀರದಿಮದ ಶ್ರೀಮಧಾ[>ಧ್ವಾ]ಚಾರ್ಯರ ಗುಣೊತ್ಕರುಷವನ್ನು ಕೇಳಿ ವೈರಾಗ್ಯತಿಶಯದಿಂದ ಬಮದ ಶೋಭನಭಟ್ಟರಿಗೆ ಸಹಾ ೧೧೮೦ನೆ ಪಿಂಗಳಸಂವತ್ಸರದ ವೈಶಾಖ ಶು ೭ಯಲ್ಲು ಕಣ್ವತೀರ್ಥ ಮಹಾಕ್ಷೇತ್ರದಲ್ಲು ಆಶ್ರಮಮಂತ್ರೋಪದೇಶಗಳನ್ನು ಕೊಟ್ಟು, ರಜಿತಪೀಠಪುರಕ್ಕೆ ಕರತಂದು, ಸ್ವಮಥಗ್ರಂಥಾದಿ ಸಕಲಸಭಾಸ್ತೋ[>ಸಕಲ ಸಚ್ಛಾಸ್ತ್ರೋ]ಪದೇಶವನ್ನು ಮಾಡಿ, ಯಿ ನವಯತೀಶ್ವರರಿಗು ತಮ್ಮಾ ಕರಪೂಜಿತಗಳಾದ ರಾಘವೌ ಕಾಳಿಯ ಮಥನೌ ಸುವಿಠಕಾ[ಲಾ]ಸೂತ[>ಕ]ರಂ, ನ್ರುಸಿಹ್ಮಂಚ ಅಸ್ಯ[>ನ್ಯ] ವಿಠಲಿ[>ಲ] ಮಗಣೀತಮತಿ ಶಿಷ್ಯೆ ಸೂಪಿಜ[>ಪೂಜಿ]ತ ನಾಮಾಮಿ ಸದಾಯಂನಾ.

ಯೀ ನರ[>ನವ]ಮೂರ್ತಿಗಳನ್ನು ಕೊಟ್ಟು, "ನೀವು ಯಂಟು ಮಂದಿ ಬಾಲಯತಿಗಲು ಪ್ರತ್ಯೇಕತ್ತಃ ಯರಡು ಯರಡು ವರುಷ ನಮ್ಮಾ ಆಜ್ಞಾನುಸಾರ ತಂತ್ರಸಾರೋಕ್ತವಿಧಿಯಿಂದ ಪೂಜಾಧರ್ಮಗಳು ಶಾಸ್ತ್ರಪ್ರವಚನಗಳು ಮಾಡುತ್ತ ಯಿರಿ"ಯಂತ ಅಪ್ಪಣೆ ಕೊಟ್ಟು, ಪದ್ಮನಾಭತೀರ್ಥರಿಗೆ ಶ್ರೀರಾಮಪ್ರತಿಮೆಯನ್ನು ಕೊಟ್ಟು, "ನೀವು ಯೇತನ್ಮತ ಸ್ಥಾಪನೆಮಾಡಿಕೊಂಡು ಸಕಲದೇಶಗಳಲ್ಲಿ ಸಂಚಾರ ಮಾಡುತ್ತ ಸಕಲಸಜ್ಜನರಿಗೆ ಸನ್ಮಾರ್ಗೋಪದೇಶವನ್ನು ಮಾಡುತ್ತ ದ್ರವ್ಯಾರ್ಜನವನ್ನು ಮಾಡಿ, ಯೀ ಅಷ್ಟಯತಿಗಳಿಗೆ ಶ್ರೀಕೃಷ್ಣಪೂಜಾಸಹಾಯವನ್ನು ಮಾಡಿಕೊಂಡು ಯಿರಿ"ಯಂತ ಅಪ್ಪಣೆ ಕೊಟ್ಟು, ೧೨೦೦ನೆ ಯಿಶ್ವರ ಸಂವತ್ಸರದ ಮಾಘ ಶು॥೯ಯಲ್ಲು ಬದರಿಕಾಶ್ರಮವನ್ನು ಪ್ರವೇಶಮಾಡಿ ಶ್ರೀವೇದವ್ಯಾಸದೇವರ ಸನ್ನಿಧಿಯಲ್ಲು ಅದ್ಯಾಪಿ ತತ್ಸೇವಕರಾಗಿಯಿದ್ದಾರೆ ಯಂತ ಅಯಿತಿಹ್ಯಃ. ಅವರ ಶಿಷ್ಯರು ಅಷ್ಟಯತೀಶ್ವರರ ನಾಮಧೇಯಗಳು: ವಂದೇ ಹೃಷಿಕೇಶ ಮೀಯಾನೃಸಿಹ್ಮಂ ಜನಾರ್ಧನಂ ಚಿಂತಯತಿರುಪೇಂದ್ರಂ॥ ಶ್ರೀವಾವನಂ ಚಸ್ಮರ ವಿಷ್ಣುನೇಮಿ

ಶ್ರೀರಾಮಮಂಚೈವ ಮಧೋಕ್ಷಜಂಚ॥ ಗುರುಪೇ[>ಪೀ]ಳಿಗೆ: ವಂಶ್ಯಾಸ್ಯಾದಿನ್ ಸನಕಾದಿನುಪಾಸ್ಯೇ। ದುರ್ವಾಸಸಂ ಪರತೀರ್ಥಾಖ್ಯಾ ಯತೀನ್। ಸತ್ಯಪ್ರಜ್ಞಂ ಪ್ರಾಜ್ಞತೀರ್ಥಂಕ್ರಮಾತ್ ವಂದೇ ಅಚ್ಯುತಪ್ರೇಕ್ಷಮಧ್ವೌಶೀಮನ್ ಮಧ್ವಂ ವಾಮನಂ ವಾಸುದೇವಂ ಪುಣ್ಯಶ್ಲೋಕಂ ವೇದಗಮ್ಯಂ ಯತೀಂದ್ರಂ ವೇದಭೂಷಣಂ ಶ್ರೀನಿವಾಸಂ ವೇದನಿಧಿಂ ಮುನಿಂ ಶ್ರೀ ಶ್ರೀಧರಂ ಭಜೇ ಯಾದವೋತ್ತಮಂ ಪು[>ಮು]ನಿಪುಂಗವಂ ಶ್ರಿರಾಘವೋತ್ತಮಂ ಲಕ್ಷ್ಮೀನಾರಾಯಣಮುನಿಂ ಶ್ರಯೇಶ್ರಿ ವಿಶ್ವಭೂಷಣಂ ವಂದ್ಯೇ ಶ್ರೀ ಮತ್ರೈಲೊಕ್ಯ ಪಾವನಂ ಲಕ್ಷ್ಮೀಕಾಂತಂ ಮುನಿಂ ಲಕ್ಷ್ಮೀನಾರಾಯಣ ಮಹಾಮುನಿಂ। ಲಕ್ಷ್ಮಿಪತಿ ಮುನಿಯುಂ ವಂದೇ ಲಕ್ಷೀಧರ ಗುರುಂ ಸದಾ । ಶ್ರೀ ಲಕ್ಷ್ಮಿರಮಣಂ ನತ್ವಾ ಕೂರ್ಮಾ: ಸರ್ವಕ್ರಿಯಾಃ ಸದಾ।

ವಾಮನತೀರ್ಥಾಚಾರ್ಯರು ಶ್ರೀಮದಾಚಾರ್ಯರು[>ರ] ಆಜ್ಞಾನುಸಾರವಾಗಿ ಧನವಿಠ್ಠಲದೇವರ ಚರಣಾರವಿಂದವನ್ನು ಸರ್ವದಾಪೂಜೆಮಾಡುತ್ತ ಕಾಲಪ್ರಾಪ್ತ ಶ್ರೀಕೃಷ್ಣ ಪರಿಯಾಪೂಜೆಯನ್ನು ಚನ್ನಾಗಿ ಮಾಡಿಕೊಂಡು ಸಕಲಸ್ವಮತಗ್ರಂಥಗಳನ್ನು ಶಿಷ್ಯರಲ್ಲಿ ಪ್ರವಚನಪೂರ್ವಕವಾಗಿ ಗಂಗಾನದಿ ಸಕಲತೀರ್ಥಗಳು ಕುರುಕ್ಷೇತ್ರಗಳಲ್ಲಿ ಮತ್ಸರವತ್ಸಾರಾರ್ಥ ಪರಿಯಂತ್ರ ಮಹಾತಪೊನಿಷ್ಠರಾಗಿ, ರೇಚಕಃ ಪೂರಕಹ ಶ್ಚೈವ ಕುಂಭಕಃ ಸ್ಮತಿದಾಸ್ಮೂತಂ ಯಿತ್ಯೂತ್ತ ಪ್ರಾಣಾಯಾಮ ಪೂರ್ವಕವಾಗಿ ಶರೀರನ್ತಿವಾಯುನಿರೋಧದಿಂದ ಹೃದ್ಗತ ಪರಮಾತ್ಮಜ್ಞಾನವನ್ನು ಸಂಪಾದಿಸಿಕೊಂಡು ವಾಸುದೇವತೀರ್ಥದಲ್ಲಿ ಸಮಸ್ತಾ(ಸಮಸ್ತಾನ) ಸಾಂಬ್ರಾಜ್ಯ ಭಾರತನ್ನಾ ಸ್ತಾಪಿಸಿ ಶಾಲಿವಾಹನ ಶಕ ವರುಷ ೧೨೭೯ನೆ ಪರಾಭವ ಸಂವತ್ಸರದ ವೈಶಾಖ ಶು ೧೦ಯಲ್ಲು ಗಂಗಾ ಯಮುನ ಸಂಗಮದಲ್ಲಿ ದೇಹವನ್ನು ಬಿಟ್ಟು ಹರಿಪಾದವನ್ನು ಹೊಂದಿದರು.

ಅವರ ಶಿಷ್ಯರು ವಾಸುದೇವತೀರ್ಥರು ವೈರಾಗ್ಯಭೋಗ್ಯಸಂಪನ್ನರಾಗಿ ಸಕಲಶಾಸ್ತ್ರಗಳಲ್ಲಿ ಪ್ರವೀಣರಾಗಿ ಪುಣ್ಯಶ್ಲೋಕತೀರ್ಥರಿಗೆ ಆಶ್ರಮವನ್ನು ಕೊಟ್ಟು ಸಕಲತೀರ್ಥಕ್ಷೇತ್ರಗಳಲ್ಲಿ ಸಂಚರಿಸಿಕೊಂಡು ದುರ್ಮುಖಿಸಂವತ್ಸರದ ಮಾಗ ಶು ೨ಲ್ಲು ದ್ವಾರಕ ಪುರಿಯಲ್ಲಿ ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಸಕಲಶಾಸ್ತ್ರಗಳಲ್ಲಿ ಪ್ರವೀಣರಾಗಿ ಹನ್ನೆರಡಾವರ್ತಿ ಶುಧಾ ಪಾಟ[>ಸುಧಾಪಾಠ]ವನ್ನು ಹೇಳಿ ತಮ್ಮ ಅಂತ್ಯಕಾಲವನ್ನು ತಿಳಿದುಕೊಂಡು, ವೇದಗಂಮ್ಯುತಿರ್ಥರಿಗೆ ಆಶ್ರಮವನ್ನು ಕೊಟ್ಟು ತೀರ್ಥಯಾತ್ರ ಪರರಾಗಿ, ಕುಂಭತೋಣಕ್ಷೇತ್ರದಲ್ಲು ವಿಕೃತಿಸಂವತ್ಸರದ ಕಾರ್ತೀಕ ಶುದ್ದ ೨ಲ್ಲು ದೇವರ ಯಾತ್ರೆ ಮಾಡಿದರು.

ಅವರ ಕರಕಮಲಸಂಜಾತರು ವೇಂದಗಮ್ಯುತೀರ್ಥರು ಕ್ರುಛ್ರಚಾಂದಾಮಣಾದಿ ವ್ರತಗಳನ್ನು ಮಾಡಿ, ಮಹ ತಪಸ್ವಿಗಳಾಗಿ ವೈರಾಗ್ಯಭಕ್ತಿ ಪೂರ್ವಕವಾಗಿ, ಕೃಷ್ಣ ಚರಣಾರವಿಂದವನ್ನು ಅರ್ಚಿಸಿ ವೇದವ್ಯಾಸತೀರ್ಥರನ್ನು ಸಂಸ್ಥಾನದಲ್ಲಿ ನಿಯೋಜಿಸಿ, ಸೇತುಯಾತ್ರೆಯನ್ನು ಮಾಡಿ ಬರುತ್ತ ತಾಂಬ್ರಪರ್ನಿ ತೀರದಲ್ಲಿ ತ್ರಣಾವಲ್ಲಿಕ್ಷೇತ್ರದಲ್ಲಿ ಪರಾಭವ ಸಂವತ್ಸರದ ಚೈತ್ರ ಶು ೫ಲ್ಲು ದೇವರ ಯಾತ್ರೆ ಮಾಡಿದರು.

ಅವರ ಕರಕಮಲಸಂಜಾತರಾದ ವೇದವ್ಯಾಸತೀರ್ಥರು ಚತುಃಸ್ತಂತ್ರ ಪಂಡಿತರಾಗಿ ಸಕಲ ದೇಶಸ್ಥ ದೂರ್ವಾದಿಗಳ ಖಂಡಿಸಿ ಜಯಪತ್ರಿಕೆಯನ್ನು ತಂದು ಶ್ರೀಕೃಷ್ಣಗೆ ಸಮರ್ಪಿಸಿ, ತುಂಗಭದ್ರಾತೀರದಲ್ಲಿ ರುದಿರೊದ್ಗಾರಿ ಸಂವತ್ಸರದ ಪುಷ್ಯ ಬ ೫ಯಲ್ಲು ದೇವರ ಯಾತ್ರೆ ಮಾಡಿದರು.

ಅವರ ಕರಕಮಲಸಂಜಾರತಾದ ವೇದವೇದ್ಯತೀರ್ಥರು ಅಖಿಲವೇದಶಾಸ್ತ್ರಚತುರರಾಗಿ ಶಿಷ್ಯರುಗಳಲ್ಲಿ ಶಾಸನಸಂಪ್ರದಾಯವನ್ನು ಪ್ರವರ್ತಿಸಿ ತೀರ್ಥಯಾತ್ರೆಗಳನ್ನು ಮಾಡಿಕೊಳ್ಳುತ್ತ, ಗೋಕರ್ಣಕ್ಷೇತ್ರದಲ್ಲಿ ಧಾತು ಸಂವತ್ಸರದ ಪಾಲ್ಗುಣ ಬಹುಳ ೩೦ಯಲ್ಲು ದೇವರ ಯಾತ್ರೆಯನ್ನು ಮಾಡಿದರು.

ಅವರ ಕರಕಮಲಸಂಜಾತರು ಮಹೇಶತೀರ್ಥರು ಶಮಧಮಾಧಿ ಸಂಪನ್ನರಾಗಿ, ಸಕಲಶಾಸ್ತ್ರವನ್ನು ಪ್ರವಚನ ಮಾಡಿ, ಗೋದವಾರಿ ತೀರದಲ್ಲಿ ಸರ್ವಜಿತು ಸಂವತ್ಸರದ ಶ್ರಾವಣ ಶು॥ ೨ಯಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಕೃಷ್ಣತೀರ್ಥರು ಸರ್ವಶಾಸ್ತ್ರ ಅಭಿಜ್ಞರಾಗಿ, ಅನಶನಧಾರಣೆ ಪಾರಣಾದಿ ಮಹವ್ರತಗಳನ್ನು ಮಾಡಿ, ಕೃಷ್ಣತೀರದಲ್ಲಿ ಜಯಸಂವತ್ಸರದ ಮಾರ್ಗಶಿರ ಶು ೧೦ಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ರಾಘವತೀರ್ಥರು ಸಕಲ ಸ್ವಸಿದ್ಧಾಂತವನ್ನು ಶಿಷ್ಯರುಗಳಲ್ಲಿ ಬಹ್ವವರೆ ವಚನಗಳನ್ನು ಮಾಡಿ, ನೇತ್ರಾವತಿತೀರದಲ್ಲು ನರಸಿಹ್ಮಕ್ಷೇತ್ರದಲ್ಲಿ ಪರಾಭವಸಂವತ್ಸರದ ಜೇಷ್ಟ ಶು ೫ಲ್ಲು ದೇವರ ಯಾತ್ರೆ ಮಾಡಿದರು. ಅವರ ಶಿಷ್ಯರು ಸುರೇಶತೀರ್ಥರು ಬದರಿಕಾಶ್ರಮಾದಿ ಸಕಲತೀರ್ಥಯಾತ್ರೆಯನ್ನು ಮಾಡಿ, ಭಾಗೀರತಿ ತೀರದಲ್ಲು ಸುಧಾಪಾಠವನ್ನು ಮೂರಾವರ್ತಿ ಹೇಳಿ, ಅಲ್ಲಿಯೇ ಗಂಗಾತೀರದಲ್ಲಿ ಆನಂದಸಂವತ್ಸರದ ವೈಶಾಖ ಶು ೭ಯಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ವೇದಭೂಷಣತೀರ್ಥರು ತಪಃಸ್ವಾದ್ಯಾಯುಗಳಿಂದ ದಿಗಂತವಿಶ್ರಾಂತಿಕಿರೆ[>ಕೀರ್ತಿ]ಯನ್ನು ಸಂಪಾದಿಸಿಕೊಂಡು ವಿಭವಸಮವತ್ಸರದ ಭಾದ್ರಪದ ಬ ೩ಯಲ್ಲು ಶಿವಪುರದಲ್ಲಿ ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಶ್ರೀನಿವಾಸತೀರ್ಥರು ಜ್ಞಾನಭಕ್ತ್ಯಾದಿ ಪುರ್ನರಾಗಿ, ಸಕಲತೀರ್ಥಯಾತ್ರೆಗಳನ್ನು ಮಾಡಿ, ವೆಂಕಟಾದ್ರಿ ಸನ್ನಿಧಿಯಲ್ಲಿ ರಾಕ್ಷಸಸಂವತ್ಸರದ ಆಶ್ವೀಜ ಶು ೭ಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ವೇದನಿಧಿತೀರ್ಥರು ಮಹಾಪಾಂಡಿತ್ಯದಿಂದ ದಕ್ಷಿಣದೇಶದ ವಿದ್ವಾಂಸರನ್ನು ಪ್ರಸಂಗದಿಂದ ಗೆದ್ದು, ರುಧಿರೋದ್ಗಾರಿ ಸಂವತ್ಸರದ ಪುಶ್ಯ ಶು ೫ಲ್ಲು ಶಿವಪುರದಲ್ಲಿ ದೇಹಪರಿತ್ಯಾಗವನ್ನು ಮಾಡಿ ಉಂದಾವನಸ್ತರಾದರು.

ಅವರ ಶಿಷ್ಯರು ಶ್ರೀಧರತೀರ್ಥರು ಸರ್ವದಾ ಶ್ರೀಮದ್ಭಾಗವತದಲ್ಲಿ ನಿರತರಾಗಿ ಜ್ಞಾನವಿಶೇಷದಿಂದ ಭಗವನ್ನಾಮ ಕೀರ್ತನಪದಾ ಗದ್ಯಪದ್ಯಗಳನ್ನು ನಿರ್ಮಿಸಿಕೊಂಡು ಮಹತಪಸ್ವಿಗಳಾಗಿ ಪಾವಜಿಯ ಗ್ರಾಮದಲ್ಲು ಶ್ರೀಮುಖಸಂವತ್ಸರದ ಫಾಲ್ಗುಣ ಬ ೧೦ಲ್ಲು ಹರಿಪಾದವನ್ನು ಹೊಂದಿದರು.

ಅವರ ಕರಕಮಲಸಂಜಾತರು ಯಾದವೋತ್ತಮತೀರ್ಥಶ್ರೀಪಾದಂಗಳವರು ಸರ್ವಶಾಸ್ತ್ರಪಾರಂಗತರಾಗಿ ಯರಡಾವರ್ತಿ ಭಾಗೀರತಿಸ್ಥಾ[>ಸ್ನಾ]ನವನ್ನು ಮಾಡಿ, ಬದರಿಕಾಶ್ರಮದಿಂದ

ಶ್ರೀನರಸಿಂಹ ವಿಗ್ರಹವನ್ನು ತಂದು ಶಿವಪುರದಲ್ಲು ಪ್ರತಿಷ್ಠಾಪನೆಯನ್ನು ಮಾಡಿ, ಯರಡಾವರ್ತಿ ವಿಜಯನಗರಕ್ಕೆ ಪ್ರಯಾಣಮಾಡಿ, ರಾಜಾಧಿರಾಜ ಕೃಷ್ಣರಾಯರಿಂದ ವಿದ್ವಸ್ಸಭಾಮಧ್ಯದಲ್ಲಿ, ಸರ್ನಾರ್ಗಿಕ[>ಸನ್ಮಾನಿತ]ರಾಗಿ ಶಿವಪುರಿ ಶ್ರೀಗ್ರಾಮ ಕ್ಷೇತ್ರವನ್ನು ಸಂಪಾದಿಸಿ ಶಿವಪಾದದಲ್ಲು ಸರ್ವದಾರಿಸಂವತ್ಸರದ ವೈಶಾಖ ಶುದ್ಧ ೧೩ಯಲ್ಲು ದೇವರ ಯಾತ್ರೆ ಮಾಡಿದರು.

ಅವರ ಕರಕಮಲ ಸಂಜಾತರಾದ ರಾಘವೋತ್ತಮತೀರ್ಥರು ಬಹುಶಾ[>ಧಾ]ವರ್ತಿ ಶಾಸ್ತ್ರಪ್ರವಚನಗಳನ್ನು ಮಾಡಿ ಪೂರ್ವತಿ ಕ್ಷೇತ್ರದಲ್ಲಿ ಕೃಷ್ಣಾತೀರದಲ್ಲಿ ರಕ್ತಾಕ್ಷಿ ಸಂವತ್ಸರದ ಚೈತ್ರ ಬಹುಳ ೯ಯಲ್ಲು ಉ್ರಂದಾವನಸ್ಥರಾದರು.

ಅವರ ಕರಕಮಲೋತ್ಪನ್ನರಾದ ಲಕ್ಷ್ಮಿನಾರಾಯಣತೀರ್ಥರು ತಪೋನಿರತರಾಗಿ ಶ್ರೀ ಕಾವೇರಿ ತೀರದಲ್ಲಿ ಬಹು ಸಂವತ್ಸಸರದಲ್ಲಿ ಅನುಶನವ್ರತ ಪೂರಸ್ಸರರಾಗಿ ಮಹಾತಪಸ್ಸನ್ನು ಮಾಡಿ, ಗಾಯತ್ರಿ ಶಿಲಾಸಮೀಪದಲ್ಲಿ ವ್ಯಯ ಸಂವತ್ಸರದ ಕಾರ್ತೀಕ ಬಹುಳ ೫ಲ್ಲು ವಿಷ್ಣುಲೋಕಕ್ಕೆ ಪ್ರಯಾಣ ಮಾಡಿದರು.

ಅವರ ಶಿಷ್ಯರು ವಿಶ್ವಭೂಷಣತೀರ್ಥರು ಶಾಸ್ತ್ರ ಪ್ರವಚನಗಳನ್ನು ಮಾಡಿ ಶಿವಪುರದಲ್ಲಿ ಪರಿದಾವಿ ಸಂವತ್ಸರದ ಶ್ರಾವಣ ಬಹುಳ ೧೩ಯಲ್ಲು ವೈಕುಂಠಯಾತ್ರೆ ಮಾಡಿದರು. ಅವರ ಶಿಷ್ಯರು ತ್ರೈಲೋಕ್ಯಪಾವನತೀರ್ಥ ಶ್ರೀಪಾದಂಗಳವರು ಶಾಸ್ತ್ರಪ್ರವಚನಗಳು ಮಾಡಿ, ಮಾಲಾರಿಮಠದಲ್ಲು ಬಹುಧಾನ್ಯ ಸಂವತ್ಸರದ ಆಷಾಢ ಬಹುಳ ೫ಲ್ಲು ಭಗವತ್‌ಲೋಕಕ್ಕೆ ಹೋದರು.

ಅವರ ಶಿಷ್ಯರು ಲಕ್ಷ್ಮಿಕಾಂತತೀರ್ಥರು ಸಕಲತೀರ್ಥಯಾತ್ರೆಯನ್ನು ಮಾಡಿ, ನಿಉ್ರತಿ ಸಂಗಮದಲ್ಲು ಕ್ರೋಧಿಸಂವತ್ಸರದ ವೈಶಾಖ ಬಹುಳ ೩ಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಲಕ್ಷ್ಮಿನಾರಾಯಣತೀರ್ಥಶ್ರೀಪಾದಂಗಳವರು ಹದಿಮೂರಾವರ್ತಿ ಸುಧಾಪಾಠವನ್ನು ಹೇಳಿ, ಪ್ರಭವ ಸಂವತ್ಸರದ ಆಷಾಢ ಶು ೫ಯಲ್ಲು ಉಡುಪಿಯಲ್ಲು ಶ್ರೀದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಲಕ್ಷ್ಮಿಪತಿತೀರ್ಥಶ್ರೀಪಾದಂಗಳವರು ಮಹಾಪಂಡಿತರಾಗಿ, ಲಕ್ಷದ್ರವ್ಯಸಂಪಾದನೆ ಮಾಡಿ, ಲಕ್ಷಪತಿಗಳು ಯಂತ ಪ್ರಸಿದ್ಧರಾಗಿ ಉಡುಪಿ ಕ್ಷೇತ್ರದಲ್ಲು ವಿರೋಧಿಸಂವತ್ಸರ ಶ್ರಾವಣ ಬಹುಳ ೧೦ಯಲ್ಲಿ ಮೋಕ್ಷಗತರಾದರು.

ಅವರ ಶಿಷ್ಯರು ಲಕ್ಷ್ಮಿಧರಸ್ವಾಮಿಗಳವರು ಕಾಶೀರಾಮೇಶ್ವರ ಯಾತ್ರೆಯನ್ನು ಮಾಡಿ, ಉಡುಪಿಯಲ್ಲು ಸಾಧಾರಣಸಂವತ್ಸರದ ಚೈತ್ರ ಶು ೨ಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯರು ಲಕ್ಷ್ಮಿರಮಣತೀರ್ಥಶ್ರೀಪಾದಂಗಳವರು ಜಪವ್ಯಾಖ್ಯಾನಶೀಲರಾಗಿ, ಶಮದಮಾಧಿ ಸತ್ಪನ್ನರಾಗಿ[>ಸಮ್ಪನ್ನರಾಗಿ] ಬಹುದಾವರ್ತಿ ಶ್ರೀಕೃಷ್ಣಪೂಜೆಯನ್ನು ಮಾಡಿ, ಶ್ರೀ ಲಕ್ಷ್ಮಮನೋಹರಾರ್ಥ[>ಮನೋಹರತೀರ್ಥ]ಶ್ರೀಪಾದಂಗಳವರಲ್ಲಿ ಸಂಸ್ಥಾನಸಾಂಬ್ರಾಜ್ಯವಿಟ್ಟು, ಉಡುಪಿಕ್ಷೇತ್ರದಲ್ಲಿ ವಿಕಾರಿಸಂವತ್ಸರ ಜೇಷ್ಟ ಬಹುಳ ೫ಲ್ಲು ಶ್ರೀಕೃಷ್ಣ ಚರಣಾರವಿಂದವನ್ನು ಸೇರಿದರು ಯಂತ ಬರದ ವಂಶಾವಳಿ. ವಿಠಲಾಚಾರ ರುಜು.

❖❖

೯೫

ಶೊದೆ ಮಠದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಶೊದೆ ಮಠದ ನಾರಣಪ್ಪನು ಬರಸಿಕೊಟ್ಟ ಗುರುಪೀಳಿಗೆ. ಶಿಷ್ಟಾಚಾರ ಸನಕಾದಿಗಳಾರಭ್ಯಾ ಅಕ್ಷಯಸಂವತ್ಸರದ ಜೇಷ್ಟ ಶು ೩ಲ್ಲು ಬರಸಿದ ವಿವರ:

ನಮ್ಮ ಮೂಲಗುರುಗಳು ಮದ್ವಾಚಾರ್ಯರು ಅವತಾರ ಮಾಡಿದ್ದು ॥ಶ್ಲೋಕ॥ ಚತುಃಸಹಸ್ರೇ ತ್ರಿಶಕೋತ್ತರೇಗತೇ ಸಂವತ್ಸರಾಣಾಂ ತು ಕತಾ ಪೃಥಿವ್ಯಾಂ॥ಜಾತಃ ಪುನರ್ವಿಪ್ರತನುಃ ಸಭೀರ್ಮೋದೈತ್ಯೈರ್ನಿಗೂಢಂ ಹರಿತತ್ವಮಾಹ॥

ಶಾಲಿವಾಹನ ಶಕ ವರುಷ ೧೧೨೧ನೇ ಕಾಳಯುಕ್ತಿಸಂವತ್ಸರದ ಮಾಘ ಶು ೭ಯಲ್ಲು ಮದ್ಯಗೇಹಭಟ್ಟರಲ್ಲಿ ಅವತಾರ ಮಾಡಿ, ಶಾಲಿವಾಹನ ಶಕ ವರುಷ ೧೧೨೮ನೆ ಕ್ರೋಧನ ಸಂವತ್ಸರದ ಪುಷ್ಯ ಶು॥೫ಯಲ್ಲು ಉಪನಿಷತ್ತರಾಗಿ, ಶಾಲಿವಾಹನ ಶಕವರುಷ ೧೧೩೦ನೆ ಪ್ರಭವಸಂವತ್ಸರದ ವೈಶಾಖ ಶು ೩ಯಲ್ಲು ಅಚ್ಚುತಪ್ರೆಕ್ಷಾಚಾರ್ಯರಿಂದ ಯತತ್ರ್ಯಾ[>ಯತ್ಯಾ]ಶ್ರಮವನ್ನು ಸ್ವೀಕರಿಸಿ, ಶಾಲಿವಾಹನ ಶಕ ವರುಷ ೧೧೬೦ನೆ ಹೇವಿಳಂಬಿ ಸಂವತ್ಸರದ ಮಾಘ ಶು ೩[>೯]ಲ್ಲು ಕೃಷ್ಣದೇವರ ಪ್ರತಿಷ್ಟೆಯನ್ನು ಮಾಡಿ. ಬದರಿಕಾಶ್ರಮದಿಂದ ತಂದ ವ್ಯಾಸಮೂರ್ತಿ ಸಾಲಿಗ್ರಾಮಗಳಲ್ಲು ಮದ್ಯತಾಳ ಮಟದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆಮಾಡಿ, ಸುಬ್ರಮಣ್ಯಕ್ಷೇತ್ರದಲ್ಲು ವೊಂದು ಮೂರ್ತಿಯನ್ನು ಪ್ರತಿಷ್ಟೆಮಾಡಿ, ಯೀ ಮೂರು ಸ್ಥಳಗಳಲ್ಲು ಪ್ರಾತಃಕಾಲಾದಿ ಕ್ರಮದಿಂದ ತಾವೆ ಸರ್ವದಾ ಪೂಜೆಗಳನ್ನು ವಾಡುತ್ತ ಕೆಲಉ ದಿವಸ ಯಿದ್ದರು. ಕ್ರಮದಿಂದ ಪೂಜೆಯನ್ನು ವಾಡುವಾಗ್ಯೆ ಮದ್ಯತೀರ[>ತಾಳ]ಮಠದಲ್ಲು ಮದ್ಯಾನ್ಹ ಪೂಜೆ ಘಟನೆ ಆದ್ದರಿಂದ, ಅದ್ಯಾಪಿ ಅಲ್ಲಿ ಮದ್ಯಾನ್ಹ ಪೂಜೆಯೇ ಸರಿ. ಯೀ ಉಭಯಸ್ಥಳದಲ್ಲು ತ್ರಿಕಾಲದಲ್ಲು ಪೂಜೆ ಅಥೆ.

ಯೀ ಪ್ರಕಾರ ಆಚಾರ್ಯರು ಯಿದ್ದು ಆಮೇಲೆ ತಾವು ಬದರಿಕಾಶ್ರಮವನ್ನು ಹೋಗುವ ಅಪೇಕ್ಷೆವಂತರಾಗಿ ಶ್ರೀಕೇಷ್ಣದೇವರ ಪೂಜಾ ಸ್ವಮತಸ್ಥಾಪನಾರ್ಥವಾಗಿ ತಮ್ಮ ಅನುಜರಾದ ವಿಷ್ಣುತೀರ್ಥಾಚಾರ್‍ಯ್ಯರು ಸಹವಾಗಿ ಅಷ್ಟಬ್ರಹ್ಮಚಾರಿಗಳು, ಗೊದಾವರಿ ತೀರಸ್ಥರಾದ ವಿವಿಧ ಸಂಸಾರಿಕ ದುಃಖ ದರುಶನೆ ವಿರಕ್ತರಾದ ಸಜ್ಜನೊದ್ಧಾರಕ ಶ್ರೀ ವುದ್ವಾಚಾರ್ಯ ಪಾದಸೇವಾಸನ್ಮಾರ್ಗವಲ್ಲಭಾಪೇಕ್ಷೆಯಿಂದ ಗೋದಾವಾರಿತೀರ ದೆಶೆಯಿಂದ ಬಂದ ಶೋಭನಭಟ್ಟರಿಗೆ ಶಾಲಿವಾಹನ ಶಕ ವರುಷ ೧೧೮೦ನೆ ಪಿಂಗಳ ಸಂವತ್ಸರದ ವೈಶಾಖ ಬ ೭ಯಲ್ಲು ಕಣ್ವತೀರ್ಥಮಹಾಕ್ಷೇತ್ರದಲ್ಲು ಆಶ್ರಮ ಮಂತ್ರೋಪದೇಶಗಳನ್ನು ಕೊಟ್ಟು ರಜತಪೀಟಪುರಕ್ಕೆ ಕರತಂದು, ಸ್ವಮಥಗ್ರಂಥಾದಿ ಸಕಲಸಚ್ಛಾಸ್ತ್ರೋಪದೇಶವನ್ನು ಮಾಡಿ, ಯೀ ನವಯೆತೀಶ್ವರಿಗು ತಮ್ಮ ಕರಪೂಜಿತಗಳಾದ ವಾ[>ರಾ]ಮಾದ್ವಯ, ಚತುರ್ಭುಜ ಕಾಳಿಯ ಮಥಯ[>ನ], ದ್ವಿಭುಜ ಕಾಳಿಯ ಮಥಯ[>ನ], ವಿಠಲತ್ರಯ, ಶ್ರೀಭೂವರಹ, ನರಸಿಹ್ಮಮೂರ್ತಿಗಳನ್ನು ಕೊಟ್ಟು, "ನೀಉ ಯೆಂಟು

ಮಂದಿ ಬಾಲಯತಿಗಳು ಪ್ರತ್ಯೇಕತ್ತಹ ಯರಡು ಯರಡು ವರುಷ ನಮ್ಮ ಆಜ್ಞಾನುಸಾರ ತಂತ್ರಸಾರೋಕ್ತ ವಿಧಿಯಿಂದ ಪೂಜಾಧರ್ಮಗಳು ಶಾಸ್ತ್ರಪ್ರವಚನಗಳ ಮಾಡುತ್ತ ಯಿರಿ"ಯಂತ ಅಪ್ಪಣೆ ಕೊಟ್ಟು, ಪದ್ಮನಾಭತೀರ್ಥರಿಗೆ ಶ್ರೀರಾಮ ಪ್ರತಿಮೆಯನ್ನು ವ್ಯಾಸಸಾಲಿಗ್ರಾಮ ಸಹಾ ಕೊಟ್ಟು, ನೀಲು ಯೇಕನ್ಮತ ಸ್ಥಾಪನೆ ಮಾಡಿಕೊಂಡು ಸಕಲ ದೇಶಗಳಲ್ಲಿ ಸಂಚಾರ ಮಾಡುತ್ತ ಬಹುಮಂದಿ ಸಜ್ಜನರಿಗೆ ಸನ್ಮಾರ್ಗೋಪದೇಶದ್ವಾರಾ ಉದ್ದರಿಸಿಕೊಂಡು ದ್ರವ್ಯಾರ್ಜನೆ ಮಾಡಿಕೊಂಡು ಯೀ ಅಷ್ಟಯತಿಗಳಿಂಗೆ ಶ್ರೀಕೃಷ್ಣಪೂಜೋಪಯುಕ್ತ ದ್ರವ್ಯಸಹಾಯವನ್ನು ಮಾಡಿಕೊಂಡು ಯಿರಿ"ಯಂತ ಅಪ್ಪಣೆ ಕೊಟ್ಟು, ಶಾಲಿವಾಹನ ಶಕ ೧೨೦೦ನೆ ಯೀಶ್ವರ ಸಂವತ್ಸರದ ಮಾಘ ಶು॥ಲ್ಲು ಬದರಿಕಾಶ್ರಮಪ್ರವೇಶವನ್ನು ಮಾಡಿ, ಶ್ರೀವೇದವ್ಯಾಸ ದೇವರ ಸನ್ನಿಧಿಯಲ್ಲಿ ಅದ್ಯಾಪಿ ತತ್ಸೇವಾರತವಾಗಿ ಯಿದ್ದಾರೆ.

ಯಿವರ ಶಿಷ್ಯರು ಅಷ್ಟಯತೀಶ್ವರರ ನಾಮಾಃ ಹೃಷಿಕೇಶತೀರ್ಥರು, ನರಸಿಹ್ಮತೀರ್ಥರು, ಜನಾರ್ಧನತೀರ್ಥರು, ಉಪೇಂದ್ರತೀರ್ಥರು, ವಾಮನತೀರ್ಥರು, ವಿಷ್ಣುತೀರ್ಥರು, ರಾಮತೀರ್ಥರು, ಅಧೋಕ್ಷಜತೀರ್ಥರು – ಯೀ ಅಷ್ಟಯತಿಗಳಿಗೆ ಆಚಾರ್ಯರಿಂದ ದತ್ತವಾದ ವಿಗ್ರಹಗಳು: ಹೃಷಿಕೇಶತೀರ್ಥರಿಗೆ ಶ್ರೀರಾಮಚಂದ್ರದೇವರು, ನರಸಿಹ್ಮತೀರ್ಥರಿಗೆ ಚತುರ್ಭುಜ ಕಾಳಿಯ ಮರ್ಧನ ಕೃಷ್ಣದೇವರು, ಜನಾಧನತೀರ್ಥರಿಗೆ ದ್ವಿಜಕಾಳಿಯ ಮಥನ ಕೃಸ್ಣದೇವರು, ಉಪೇಂದ್ರತೀರ್ಥರಿಗೆ ವಿಠಲದೇವರು, ವಾಮನತೀರ್ಥರಿಗೆ ಚತುರ್ಭುಜಭೂಸಮೇತ ವರಹಾದೇವರು, ರಾಮತೀರ್ಥರಿಗೆ ನರಸಿಹ್ಮದೇವರು, ಅದೋಕ್ಷಜತೀರ್ಥರಿಗೆ ವಿಠ್ಠಲದೇವರು, ಘಟ್ಟದ ಮೇಲಿನವರು ಪದ್ಮನಾಭತೀರ್ಥರಿಗೆ ರಾಮದೇವರು ವ್ಯಾಸಸಾಲಿಗ್ರಾಮ.

ಶ್ರೀ ಮಠಾಚಾರ್ಯರ ವಂಶಾವಳಿ: ಸನಕಾದಿಗಳು ದೂರ್ವಾಸ ಶಿಷ್ಯರು ಪರತೀರ್ಥರು ಸತ್ಯಪ್ರಜ್ಞತೀರ್ಥರು ಪ್ರಾಜ್ಞತೀರ್ಥರು ಅಚ್ಚುತಪ್ರೇಕ್ಷಾಚಾರ್ಯರು ಶ್ರೀಮದ್ವಾಚಾರು. ಯಿವರು ಬದರಿಕಾಶ್ರಮಕ್ಕೆ ತೆರಳುವಾಗ್ಗೆ ಪ್ರಾಕ ಬದರಿಕಾಶ್ರಮದಲ್ಲಿ ವೇದವ್ಯಾಸದೇವರಿಂದ ದತ್ತವಾದ ಸಂಪುಟ ನರಸಿಹ್ಮದೇವರ ಅಭೇದ್ಯಸಂಪುಟವನ್ನು ಸಹಾ ಮುಂದೆ ಮತೋದ್ಧಾರ ಮಾಡುವವರಾದ ಕಾರಣ ತಮ್ಮ ಸಹೋದರ ವಿಷ್ಣುತೀರ್ಥಾಚಾರ್ಯರ ಕೈಯ್ಯು ಕೊಟ್ಟು ತೆರಳಿದರು. ಆ ವಿಷ್ಣುತೀಥಾಚಾರ್ಯರು ವ್ಯಾಸತೀರ್ಥರಿಗೆ ಆಶ್ರಮವನ್ನು ಕೊಟ್ಟು ಸಚ್ಛಾಸ್ತ್ರಗಳನ್ನು ಉಪದೇಶಮಾಡಿ ಸುಬ್ರಹ್ಮಣ್ಯದಲ್ಲು ಆವಾಸಂಗಳ ಮಾಡಿಕ್ಕೊಂಡು ಯಿರುವಾಗ್ಯೆ, ಪರಿಯಾಯಕಾಲಪ್ರಾಪ್ತವಾದ್ದರಿಂದ ತಾವು ವ್ಯಾಸತೀರ್ಥರ ಕೈಯಿಂದ ಬಾದರಾಯಣತೀರ್ಥರಿಗೆ ಆಶ್ರಮವಾ ಕೊಡಿಸಿ, ಸುಬ್ರಹ್ಮಣ್ಯದಲ್ಲು ವೇದವ್ಯಾಸದೇವರ ಪೂಜಾರ್ಥವಾಗಿ ಬಾದರಾಯಣತೀರ್ಥರಲ್ಲು ಅಲ್ಲಿ ಪರಿಯಾಯ ಪೂಜಾರ್ಥವಾಗಿ ಆ ವಿಷ್ಣುತೀರ್ಥಚಾರ್ಯರು ವ್ಯಾಸತೀರ್ಥರು ಸಹಾ ಉಡುಪಿಗೆ ಬಂದು, ಪರಿಯಾಯ ಪೂಜೆಯನ್ನಾ ಮಾಡಿ, ವ್ಯಾಸತೀರ್ಥರಿಗೆ ತಮ್ಮಾ ಗುರುಗಳಿಂದ ದತ್ತವಾದ ಭೂವರಾಹದೇವರನ್ನು ಕೊಟ್ಟು ಪೂರ್ವಾನುಗ್ರಹ ಮಾಡಿ, ತಾವು ಗುರುಗಳಿಂದ ದತ್ತವಾದ ಸಂಪುಟ ನರಸಿಹ್ಮದೇವರನ್ನು ತೆಗೆದುಕೊಂಡು ಸುಬ್ರಹ್ಮಣ್ಯಕ್ಷೇತ್ರಕ್ಕೆ ಪ್ರಯಾಣವನ್ನು ಮಾಡಿ, ಬಾದರಾಯಣತೀರ್ಥರಿಗೆ ಪೂರ್ಣಾನುಗ್ರಹ ಮಾಡಿ ಶಾಲಿವಾಹನ ಶಕ ವರುಷ ೧೨೩೫ನೆ ಪರಿಧಾವಿ ಸಂವತ್ಸರದ ಮಾರ್ಗಶಿರ ಬಹುಳ ೧೩ಲ್ಲು ಕುಮಾರ ಪರ್ವತಾರೊಹಣವನ್ನು ಆ ಕುಮಾರಪರ್ವತದ ಮೇಲೆ ಸಿದ್ಧಪರ್ವತಯಂಬ ಅಘಂಮ್ಯಪ್ರದೇಶದಲ್ಲಿ ಅದ್ಯಾಪಿ ತಪೋನಿರತರಾಗಿ ಯಿದ್ದಾರೆ. ಆ ಸಂಗಡ ನರಸಿಹ್ಮದೇವರನ್ನು

ಕುಮಾರಧಾರ ನದಿಪ್ರವಾಹದಲ್ಲಿ ಬಿಟ್ಟು, ಶಿಷ್ಯರಿಂದ ಆ ನರಸಿಹ್ಮದೇವರನ್ನು ಪ್ರಾಕು ಆಚಾರ್ಯರು ಪ್ರತಿಷ್ಠೆ ಮಾಡಿದ ವೇದವ್ಯಾಸ ದೇವರ ಸಂಗಾತ ಪ್ರತಿಷ್ಠಾಪನೆ ಮಾಡಿಶಿಸಿದ್ದಾರೆ. ಆ ವಿಚಿತ್ರವರ್ನೋಪೇತವಾದ ಅಭೇದ್ಯಸಂಪುಟ ನರಸಿಂಹದೇವರು ಸುಬ್ರಹ್ಮಣ್ಯದಲ್ಲಿ ಯಿದ್ದಾರೆ. ಆ ವಿಷ್ಣು ತೀರ್ಥಾಚಾರ್ಯರು ಯೇಷ್ಯತಿಗೆ ಯೀ ಮದ್ವಮತವು ಸಾಂಕರ್ಯವಾಗುವಾಗ್ಯೆ ತಾವೆ ಬಂದು ಯಥಾಪ್ರಕಾರ ಮಧ್ವಮತವನ್ನು ಸ್ಥಾಪನೆ ಮಾಡುತ್ತಾರೆ. ಯೀ ವಿಷ್ಣುತೀರ್ಥಚಾರ್ಯರ ಶಿಷ್ಯ ವ್ಯಾಸತೀರ್ಥರು ಶಕ ವರುಷ ೧೨೫೩ನೆ ಪ್ರಮೊದೂತ ಸಂವತ್ಸರದ ವೈಶಾಖ ಶು॥೪ ಯಲ್ಲು ದೇವರ ಯಾತ್ರೆ ಮಾಡಿದರು.

ತಚ್ಚಿಷ್ಯ ವೇದಗರ್ಭತೀರ್ಥರು ಶಕ ವರುಷ ೧೨೭೨ನೆ ವಿರೋಧಿ ಸಂವತ್ಸರದ ಪಾಲ್ಗುಣ ಬ ೫ಲ್ಲು ದೇವರ ಯಾತ್ರೆ ಮಾಡಿದರು.

ಅವರ ಶಿಷ್ಯ ವಾಮನತೀರ್ಥರು ಶಕ ವರುಷ ೧೯೯೨ನೆ ಸಉಮ್ಯ ಸಂವತ್ಸರದ ಮಾಘ ಶು ೧ ಯಲ್ಲು ದೇವರ ಯಾತ್ರೆ ಮಾಡಿದರು.

ವಾಸುದೇವತೀರ್ಥರು ಶಾಲಿವಾಹನ ಶಕ ವರುಷ ೧೩೦೨ನೆ ಸಿದ್ದಾರ್ತಿ ಸಂವತ್ಸರದ ಶ್ರಾವಣ ಶು॥ ೬ಲ್ಲು ದೇವರಯಾತ್ರೆ ಮಾಡಿದರು.

ವೇದವ್ಯಾಸತೀರ್ಥರು ಶಕ ವರುಷ ೧೩೧೮ನೆ ಯಿವಸಂವತ್ಸರದ ಆಶ್ವೀಜ ಶು೪ಲ್ಲು ದೇವರಯಾತ್ರೆ ಮಾಡಿದರು.

ವರಾಹತೀರ್ಥರು ಶಕ ೧೩೨೮ನೆ ಪಾರ್ಥಿವಸಂವತ್ಸರದ ವೈಶಾಖ ಶು ೪ಯಲ್ಲು ಯಾತ್ರೆ ಮಾಡಿದರು.

ವಿಶ್ವವಂದ್ಯತೀರ್ಥರು ಶಾಲಿವಾಹನ ಶಕ ೧೩೪೦ನೆ ಹೇವಳಂಬಿಸಂವತ್ಸರದ ಜೇಷ್ಠ ಶುದ್ಧ ೧೦ಯಲ್ಲು ದೇವರಯಾತ್ರೆ ಮಾಡಿದರು.

ರತ್ನಗರ್ಭತೀರ್ಥರು ಶಕವರುಷ ೧೩೪೩ನೆ ಶಾರ್ವರಿಸಂವತ್ಸರದ ಮಾಘ ೫ಲ್ಲು ಯಾತ್ರೆ, ವೇದಾಂಗತೀರ್ಥ ಶಕವುರಷ ೧೩೫೦ನೆ ಪ್ಲವಂಗಸಂವತ್ಸರ ಪುಷ್ಯ ಶು ೮ಯಲ್ಲು ದೇವರ ಯಾತ್ರೆ ಮಾಡಿದರು. ವಿದ್ಯಾಪತಿತೀರ್ಥರು ಶಕ ವರುಷ ೧೩೬೩ನೆ ರಉದ್ರಿಸಂವತ್ಸರದ ಭಾದ್ರಪದ ಶು ೫ಯಲ್ಲು ಯಾತ್ರೆ ಮಾಡಿದರು.

ವಿಶ್ವವಂದ್ಯತೀರ್ಥರು ಶಕವರುಷ ೧೩೮೨ನೆ ಪ್ರಮಾದಿಸವಂತ್ಸರದ ಜೇಷ್ಟ ಬ ೩೦ಲ್ಲು ದೇವರ ಯಾತ್ರೆ ಮಾಡಿದರು.

ವಿಠ್ಠಲತೀರ್ಥರು ಶಕ ೧೩೮೭ನೆ ತಾರಣಸಂವತ್ಸರದ ಆಶ್ವಿಜ ಶು ೫ಯಲ್ಲು ಯಾತ್ರೆ ಮಾಡಿದರು.

ವರಾಹರಾಜತೀರ್ಥರು ಶಾಲಿವಾಹನ ಶಕ ೧೪೦೨ನೆ ವಿಕಾರಿಸಂವತ್ಸರದ ಕಾರ್ತಿಕ ಶು ೮ಯಲ್ಲು ಯಾತ್ರೆ ಮಾಡಿದರು.

ವಾಗೀಶತೀರ್ಥರು ಶಕ ವರುಷ ೧೪೪೨ನೆ ಪ್ರಮಾದಿಸಂವತ್ಸರ ಮಾಘ ಶು ೧೦ಯಲ್ಲು ಯಾತ್ರೆ ಮಾಡಿದರು.

ವಿಷ್ಣುತೀರ್ಥಾಚಾರ್ಯರಾದ[>ರ]ಬ್ಯ ೧೭ನೆಯ ಶ್ರೀವಾದಿರಾಜ ತೀರ್ಥರು ಪ್ರಾಕು ಆಚಾರ್ಯರು ಕಲ್ಪಿತ ಮಾಡಿದ ಪೂಜೆ ವಿಶೇಷಗಳಲ್ಲಿ ಸಂಕೋಜಿಗಳಾಗುತ್ತ ಬಂದದರಿಂದ, ತಾಲು ಶ್ರೀಹಯಗ್ರೀವದೇವರ ಉಪಾಸಕರಾಗಿ ಅಪುರೋಕ್ಷಿತರಿ[>ರೆನಿ]ಸಿಕೊಂಡವರಾದ ಕಾರಣ ಶ್ರೀಮದ್ವಾಚಾರ್ಯರ ಸಂಕಲ್ಪಾನುಸಾರವಾಗಿ ಶ್ರೀದೇವರ ಪೂಜಾಧರ್ಮಗಳಲೆ ಮೊದಲಾದ ಮರಿಯಾದಿ ವಿಶೇಷಗಳನ್ನು ವಿಸ್ತಾರಮಾಡಿ ಶ್ರೀಕೃಷ್ಣದೇವರ ಗರ್ಭಗೃಹ ಜೀರ್ನೊದ್ಧಾರ ಮಾಡಿದರು. ಮುಖ್ಯಪ್ರಾಣ ಮದ್ವ ಗರುಡದೇವರ ಸಹಾ ಪ್ರತಿಷ್ಟೆ ಮಾಡಿ, ಶ್ರೀ ಕೃಷ್ಣದೇವರಿಗೆ ಕಿರೀಟ ಕವಚಾದಿ ವಿಶೇಷಾಭರಣಗಳನ್ನು ಮಾಡಿಸಿ, ತಮ್ಮ ಉಪಾಸನಾಮೂರ್ತಿ ಯೇಳು ಹಯಗ್ರೀವ ವಿಗ್ರಹಗಳನ್ನು ಮೇಲಾದ ಯೇಳು ಮಠದ ಶ್ರೀಪಾದಂಗಳಿಗೆ ಪೂಜಾರ್ಥವಾಗಿ ಕೊಟ್ಟು, ತಾಲು ಸಚ್ಚಾಸ್ತ್ರಪ್ರವರ್ತಕರಾದ ಪ್ರಯುಕ್ತಾ ಶ್ರೀಪಾದತೀರ್ಥಯಾತ್ರಾವ್ಯಾಜದಿಂದ ದುರ್ಮತ ನಿರಾಕರಣೆಯನ್ನು ಮಾಡುತ್ತ, ಅಲ್ಲಿ ವಿದ್ಯಾಮಾನಗಳಾದ ತೀರ್ಥಗಳು ದೇವತೆಗಳ ಸ್ತೋತ್ರರೂಪವಾಗಿ ಪ್ರಬಂದ ರುಗ್ಮಣೀಶವಿಜಯ, ಮಹಾಭಾರತ ತಾತ್ಪರ್ಯ್ಯನಿರ್ನಯಕ್ಕೆ ಟೀಕು, ತಂತ್ರ[>ತತ್ವ]ಪ್ರಕಾಶಿಕ ವ್ಯಾಖ್ಯಾನ ಗುರುವರ್ಥ[>ರ್ಥ]ದೀಪೀಕಾ, ಸುಧಾವ್ಯಾಖ್ಯಾನ ಯುಕ್ತಿಯಲ್ಲಂತ[>ಮಲ್ಲಿಕಾ] ಮಹಾಭಾರತಕ್ಕೆ ಲಕ್ಷಾಭರಣಯಂಬ ಟೀಕು, ಯೇವಮಾದಿ ವೃಷ[>ವೈಷ್ಣ]ವಮತಕ್ಕೆ ಉಪಯುಕ್ತವಾದ ಗ್ರಂಥಗಳು ಮಾಡಿ, ನಾನಾ ಸುಳಾದಿ ಗದ್ಯ ಪದ್ಯಗಳ ಮಾಡಿ, ಧಾರೆ ಭೂ ಪ್ರದಕ್ಷಿಣೆ ಮಾಡುವಾಗ್ಯೆ ಆನೆಗುಂದಿ ಸಂಸ್ಥಾನಕ್ಕೆ ಹೋಗಿ, ಅಲ್ಲಿ ಪರವಾದಿಗಳ ಸಂಗಾತ ಪ್ರಸಂಗಿಸಿ ಅರಸುಗಳ ಕೈಯ್ಯು ಮುತ್ತಿನ ಗದ್ದಿಗೆ ಮುತ್ತಿನ ಟೋಪಿ ಸುವರ್ನಮಯ ಪಾದುಕ ಅಷ್ಟಾದಶ ಬಿರುದಾವಳಿ ಕೃಷ್ಣರಾಯರ ಸಭೆಯಿಂದ ಮೆಚ್ಚಶಿಕೊಂಡಿದ್ದಾರೆ. ಬಾಳೆಹಳ್ಳಿ ಚನ್ನಯ್ಯಯಂಬ ಶಿವಭಕ್ತರ ಗುರುವಿನ ಸಂಗಾತ ಪ್ರಸಂಗ ಮಾಡಿ ಆತನನ್ನು ಜಯಿಸಿ, ಜಯಪತ್ರಿಕೆ ಪ್ರತ್ಯುಮ್ನಯವಾಗಿ ಬಸವನ ಘಂಟೆಯನ್ನು ತೆಗೆದುಕೊಂಡು, ಶ್ರೀ ಭೂವರಾಹ ಹಯಗ್ರೀವದೇವರಿಗೆ ಸಮರ್ಪಣೆ ಮಡಿದಾರೆ. ಆ ಬಾಳೆಹಳ್ಳಿ ಚೆನ್ನೈಯ್ಯಯಂಬ ಶಿವಭಕ್ತ ಗುರು ಯೀ ವಾದಿರಾಜರ ಮೇಲೆ ಅನೇಕ ಪದ್ಯಗಳು ಮಾಡಿಧಾನೆ. ಸೊದಾಪುರದಲ್ಲಿ ಅರಸುಗಳಿಂದ ಬಾಹಾಳ ಪ್ರಾರ್ಥಿಸಿಕೊಂಡು ಅವರಿಂದ ದತ್ತವಾದ ಸ್ವಾಸ್ತಿವ್ರತಿಗಳ ಸಂಪಾದನೆ ಮಾಡಿಕೊಂಡು ತಮ್ಮಾ ಶಿಷ್ಯ ವೇದವೇದ್ಯತೀರ್ಥರನ್ನು ಅಲ್ಲಿ ಯಿಟ್ಟು, ಪುನಹಾ ಮಹಾಯಾತ್ರೆ ಭೂಪ್ರದಕ್ಷಿಣೆಗೆ ಹೋದವರು ದ್ವಾರಕಾ ಪಟ್ಟಣದಿಂದ ಶ್ರೀ ತ್ರಿವಿಕ್ರಮ ದೇವರನ್ನು ತಂದಾ ಭಾಗೀರತಿಯನ್ನು ಪ್ರಾರ್ಥನೆ ಮಾಡಿ, ಭಾಗೀರತಿಯನ್ನು ಸಹಾ ತಂದು ಸೋದಾಪುರದಲ್ಲು ಶಿಲಾಮಯದೇವಸ್ಥಾನ ನಿರ್ಮಾಣಮಾಡಿಸಿ ದೇವತಾ ಪ್ರತಿಷ್ಟಮಾಡಿ, ಸರೋವರವನ್ನು ಕಟ್ಟಿಸಿ, ಭಾಗೀರತಿಯನ್ನು ಸನ್ನಿಹಿತಳನ್ನು ಮಾಡಿದ್ದಾರೆ. ಪ್ರತ್ಯಬ್ದಕ್ಕೂ ಆ ಭಾಗೀರತಿದೇವಿಯು ಶ್ವೇತರೂಪದಿಂದ ಆ ಡವಳಗಂಗಾ ತೀರ್ಥಕ್ಕೆ ಬರುತ್ತಾಳೆ. ಅದರಿಂದ ಡವಳಗಂಗಾಯಂದು ಆ ತೀರ್ಥಕ್ಕೆ ಪ್ರಸಿದ್ಧನಾಮ. ತೀರ ದಕ್ಷಿಣಭಾಗದಲ್ಲಿ ಗಂಗಾಧರೇಶ್ವರಲಿಂಗ ಪ್ರತಿಷ್ಟೆ, ಪಶ್ಚಿಮಭಾಗದಲ್ಲಿ ಮುಖ್ಯಪ್ರಾಣಪ್ರತಿಷ್ಟೆ, ತರುಗೆ[>ತಿರುಗಿ] ಪರಿಯಾಯಕ್ಕೆ ಉಡುಪಿಗೆ ಬರುವರೆ ಬಹಾಳ ಉಧ್ರಾರಾದ ಪ್ರಯುಕ್ತಾ ತಮ್ಮಾ ಶಿಷ್ಯರಾದ ವೇದವೇದ್ಯತೀರ್ಥರಿಗೆ ಪರಿಯಾಯದ ಮಹಾಪೂಜೆ ಆಗದೆ ಯಿದ್ದದರಿಂದ ಸಹಾ ಆ ವೇದವೇದ್ಯತೀರ್ಥರಿಗೆ ಅವರ ಶಿಷ್ಯ ವಿದ್ಯಾನಿಧಿತೀರ್ಥರಿಗೆ ಆಜ್ಞಾಪಿಸಿ ಅವರ ಕೈಯ್ಯ ಉಡಪಿಯಲ್ಲು

ಪರಿಯಾಯ ಪೂಜೆಯನ್ನು ಮಾಡಿಸಿದರು. ತಾಉ ಯೀ ತೀರ್ಥದ ಉತ್ತರ ಭಾಗದಲ್ಲು ಶ್ರೀ ಗೋಪಾಲ ಕೃಷ್ಣದೇವರ ಪ್ರತಿಷ್ಟೆಯನ್ನು ಮಾಡಿದರು.

ಪದ್ಯ ॥ ವೃದ್ಧನಾದೆನು ಪಲ್ಗಳೆಲ್ಲಉ ಬಿದ್ದವು ಕಣಿಕಾಣದು ಯೆದ್ದ ನಿಲ್ಲಲಾರನೈಯ್ಯಾ ಉದ್ಧರಿಸೊ ಹಯವದನಾ॥ ಯೇವಮಾದಿ ನಾನಾ ಪದ್ಯಗಳಿಂದ ಸ್ತೋತ್ರಮಾಡಿದ್ದಾರೆ. ಆಮೇಲೆ ಶ್ರೀವಿಕ್ರಮದೇವರ ಮುಂಭಾಗದಲ್ಲಿ ಶಿಲಾಮಯವಾದ ಧ್ವಜವನ್ನು ಪ್ರತಿಷ್ಟೆ ಮಾಡಿದ್ದಾರೆ. ತತ್ಪೂರ್ವಭಾಗದಲ್ಲಿ ಲಕ್ಷುಮಿ ಪ್ರತಿಷ್ಟೆ. ತಥಾ ಸಪ್ತಾಹ ಶ್ರೀವಿಕ್ರಮದೇವರಿಗೆ ಉತ್ಸಾಹಂಗಳ ಸಹಾ ಮಾಡಿಸಿ, ಅಶ್ವತ, ಚೂತ, ಫನಸ ತಿಂತ್ರಿ ಮೊದಲಾದ ವೃಕ್ಷಗಳನ್ನು ಸ್ಥಾಪನೆ ಮಾಡಿ, ತಮಗೆ ಡವಳಗನಾ[>ವನಾ] ಪೂರ್ವ್ವಭಾಗದಲ್ಲು ಪಂಚ ಉ್ರಂದಾವನವನ್ನು ಮಾಡಿಸಿ, ತತ್ಪೂರ್ವಭಾಗದಲ್ಲಿ ವೇದವ್ಯಾಸ ಪ್ರತಿಷ್ಟೆ, ಉತ್ತರಭಾಗದಲ್ಲು ಅಶ್ವತನಾರಾಯಣ ಮೂರ್ತಿಯನ್ನು ಸ್ಥಾಪನೆ ಮಾಡಿದ್ದಾರೆ, ದಕ್ಷಿಣಭಾಗದಲ್ಲು ನಾರಾಯಣ ಮೂರ್ತಿಯನ್ನು ಸ್ಥಾಪನೆ ಮಾಡಿ ತಾವು ನೂರಾಯಿಪ್ಪತ್ತು ವರುಷ ಪರಿಯಂತ್ರ ಯೆವಮಾದಿ ವಿವಿಧ ಚರಿತ್ರೆಗಳನ್ನು ದೇಹ್ಯಸಹಿತವಾಗಿ ಮಾಡುತ್ತ, ಶಾಲಿವಾಹನ ಶಕ ೧೫೨೩ನೇಯ ಶಾರ್ವ್ವರಿಸಂವತ್ಸರದ ಫಾಲ್ಗುಣ ಬಹುಳ ೩ಯು ಬುಧುವಾರ ಸ್ವಾತಿ ನಕ್ಷತ್ರ ಹರಿಷಣಯೋಗದಲ್ಲಿ ಹರಿಪದವನ್ನು ಯೈದಿದರು. ಯಿದಕ್ಕೆ ಪ್ರಮಾಣಾ : ಸ್ವಸ್ತಿ ಶ್ರೀವಿಜಯ ಶಾಲಿವಾಹನ ಶಕೆ ಸಾರ್ದಾಸಹಾಸಾಕ್ಯರಂ ದ್ವಾವಿಂಶೆ ಶರಣಾಂಗಕೆ ಪ್ರಭವತೆ ಶ್ರೀ ಶಾರ್ವ್ವರಿ ವತ್ಸರೆ ಮಾಸೆ ಪಾಲ್ಗುನಿಕೆಸಿತೆತ್ತರ ಶ್ರೀತಿಯಾಯಾಂತಿತ್ತಾ ವಿದ್ದೇನೆ. ಸ್ವಾತಿ ಹರಷಣಿ ಸಂಯುತೆ ಹರಿಪದಂ ಶ್ರೀವಾದಿರರಾಜೋಗಮತ್॥ ಯೀ ವಾದಿರಾಜಸ್ವಾಮಿಗಳ ಮಹಾತ್ಮೇ: ಅವರಿಂದ ಉಕ್ತವಾದ ಉ್ರಂದಾನಾಖ್ಯಾನವನ್ನು ನೋಡಿದವರಿಗೆ ಮಹಾತ್ಮ್ಯ ವಿದಿತವಾದೀತು. ಉ್ರಂದಾವನದಲ್ಲಿ ವಿದ್ಯಮಾನವಾದ ಮೃತಿಕಾನೆತಿ[>ತ್ತಿ]ಸಿದವರಿಗೆ ಯಿತ್ತ ಅಪಸ್ಮರ ಕೂಷ್ಟ[>ಕುಷ್ಟ] ಬಾಲಸ್ಥೂಲಕವೇ ಮೊದಲಾಗಿ ಉಳ್ಳಂತ ಅನುಷ್ಟಗಳ ನಿರ್ವ್ರತ್ತಿವಾಗುತ್ತದೆ. ಭೂತಪ್ರೇತಪಿಶಾಚಿಬ್ರಹ್ಮರಾಕ್ಷಸಾದಿಗಳು ಸೇವೆ ಆರಾಧನಾದಿಗಳಿಂದ ನಿಉ್ರತ್ತಿ ಆಗುತ್ತದೆ. ಅವರ ಆಖ್ಯಾನ ಕವಚ ಅವರಿಂದ ತ್ರೊತ್ತವಾದ ವ್ಯಾಸಾಷ್ಟಕಾದಿ ಸ್ತೋತ್ರಗಳಿಂದ ಸ್ತುತಿಸಿದವರಿಗೆ ವಿದ್ಯಾಸಂತತಿ ಮೊದಲಾದ ಸರ್ವ್ವಮನೋಭಿಷ್ಟಗಳು ಪರಮಭಕ್ತಿಯಿಂದ ಸೇವಿಸಿದವರಿಗೆ ಆಗುತ್ತವೆ.

ವಾದಿರಾಜರಾಯರಿಗೆ ವೈಕುಂಠಯಾತ್ರಾ ನಂತರದಲ್ಲಿ ತಚ್ಚಷ್ಯ ವೇದತೀರ್ಥರು ಶಾಲಿವಾಹನ ಶಕ ವರುಷ ೧೫೨೭ನೆ ಕ್ರೋಧಿ ಸಂವತ್ಸರದ ಆಶ್ವಿಜ ಶು ೨ಲ್ಲು ದೇವರಯಾತ್ರೆ ಮಾಡಿದರು.

ವಿದ್ಯಾನಿಧಿತೀರ್ಥರು ಶಕವರುಷ ೧೫೩೩ನೆ ಸಾಧಾರಣ ಸಂವತ್ಸರದ ವೈಶಾಖ ಬಹುಳ ೧೦ಲ್ಲು ದೇವರ ಯಾತ್ರೆ ಮಾಡಿದರು.

ವೇದನಿಧಿತೀರ್ಥರು ಶಕವರುಷ ೧೫೪೪ನೆ ದುರ್ಮತಿ ಸಂವತ್ಸರದ ಫಾಲ್ಗುಣ ಬಹುಳ ೧೪ಯಲ್ಲು ಯಾತ್ರೆ ಮಾಡಿದ್ದಾರೆ.

ವರದರಾಜತೀರ್ಥರು ಶಕವರುಷ ೧೩೬೪ನೆ ವಿಷು ಸಂವತ್ಸರದ ಜೇಷ್ಟ ಬಹುಳ ೧೪ಯಲ್ಲು ದೇವರ ಯಾತ್ರೆ ಮಾಡಿದರು.

ವಿಶ್ವಾಧಿರಾಜೇಂದ್ರತೀರ್ಥರು ಶಕವರುಷ ೧೫೮೭ನೆ ಕ್ರೋಧಿ ಸಂವತ್ಸರದ ಫಾಲ್ಗುಣ ಬಹುಳ ೮ಯಲ್ಲು ಯಾತ್ರೆ ಮಾಡಿದರು.

ವೇ[>ವಾ]ದವಂದ್ಯತೀರ್ಥರು ಶಕವರುಷ ೧೬೧೫ನೇ ಆಂಗೀರಸ ಸಂವತ್ಸರದ ಆಶ್ವೀಜ ಶುಃಲ್ಲು ಯಾತ್ರೆ ಮಾಡಿದರು.

ಶಿಷ್ಯ[>ವಿಶ್ವ]ವಂದ್ಯತೀರ್ಥರು ಶಕವರುಷ ೧೬೪೫ನೇ ಶುಭಕೃತ ಸಂವತ್ಸರದ ಕಾರ್ತೀಕ ಬಹುಳ ೪ಲ್ಲು ಯಾತ್ರೆ ಮಾಡಿದರು.

ವಿಭುದವರ್ಯತೀರ್ಥರು ಶಕವರುಷ ೧೬೬೦ನೆ ಪಿಂಗಳ ಸಂವತ್ಸರ ಮಾರ್ಗಶಿರ ಶು ೫ಲ್ಲು ಯಾತ್ರೆ ಮಾಡಿದರು.

ವಿಶ್ವನಿಧಿತೀರ್ಥರು ಶಕವರುಷ ೧೬೯೯ನೆ ದುಂದುಭಿಸಂವತ್ಸರದ ಮಾರ್ಗಶಿರ ಶು ೩ಲ್ಲು ದೇವರ ಯಾತ್ರೆ ಮಾಡಿದರು.

ಸೊದೆ ಶ್ರೀಸ್ವಾಮಿಗಳವರ ಮಠದಲ್ಲಿ ಯಿದ್ದ ಪುಸ್ತಕಗಳ ವಿವರ:

ಮಣಿಮಂಜರಿ। ಪಂಚಸ್ತುತಿ

ವಾಯುಸ್ತುತಿ। ನರಸಿಹ್ಮಸ್ತುತಿ

ವಿಷ್ಣುಸ್ತುತಿ। ನಭಿನ್ನೃತಿ ।ಶಿವಸ್ತುತಿ

ಯಿಷ್ವಕ್ಕೆ ಸಟೀಕು ಪುಸ್ತುಕ	೧
ಮದ್ವಿಜಯ ಪುಸ್ತುಕ	೧
ಯಿದರ ಟೀಕು ಪುಸ್ತುಕ	೧
ತಾತ್ಪರ್ಯನಿರ್ಣಯದ ಪುಸ್ತುಕ	೧
ಯಿದರ ಟೀಕು ಪುಸ್ತುಕ	೧
ಚಿಕ್ಕಯೇಳು ಉಪನಿಷತ್ತಿನ ಪುಸ್ತುಕ	೧
ಬಾಷ್ಯದ ಪುಸ್ತುಕ	೧
ಯಿದರ ಟೀಕು ವ್ಯಾಸತೀರ್ಥಿಯ ಪುಸ್ತುಕ	೧
ಉಪನಿಷತ್ತಿನ ಖಾಂಡದರ್ಥದ ಪುಸ್ತುಕ	೨
ತತ್ವಪ್ರಕಾಶಿಕ ಪುಸ್ತುಕ	೧
ಯಿದರ ಟೀಕು ರಾಘವೇಂದ್ರಯ್ಯರ ಪುಸ್ತುಕ	೧
ಗುರುವರ್ತ ದೀಪಿಕೆ ಪುಸ್ತುಕ	೧
ಸುರಾಪುಸ್ತುಕ	೧
ಭಾಗವತ ಪುಸ್ತುಕ	೧

ಸುರಾ ಯಿದರ ಟೀಕು ರಾಘವೆಂದ್ರೈಯ್ಯರ ಪುಸ್ತುಕ ೧
ಅನುವ್ಯಾಖ್ಯಾನ ಪುಸ್ತುಕ– ೧
ಬ್ರಹ್ಮಸೂತ್ರಭಾಷ್ಯ ಪುಸ್ತುಕ– ೧
ಸಂಗ್ರಹ ರಾಮಾಯಣ ಪುಸ್ತುಕ– ೧
ಭಾಗವತ ಭೀಷ್ಮಪರ್ವ ಪುಸ್ತುಕ– ೧
ದ್ರೋಣಪರ್ವ ಪುಸ್ತುಕ– ೧
ಸನ್ಯಾಸ ಪದ್ಧತಿ ಪುಸ್ತುಕ– ೧
ವೃಂದಾವನ ವ್ಯಾಖ್ಯಾನ ಪುಸ್ತುಕ– ೧
ರತ್ನಸಂಗ್ರಹ ಪುಸ್ತುಕ ೧
ರುಗ್ಮಣೀಶವಿಜಯ ಪುಸ್ತುಕ– ೧
ಮಾಸಕ್ರಿ[>ತ್ರ]ಯದ ಪುಸ್ತುಕ ೧
ಪಉಮಾನ ಸೂತ್ರದ ಮೊದಲ ಮೂರದ್ಯಾಯದ ಪುಸ್ತುಕ ೧
ತಿರುಪ್ರಬಂಧ ಪುಸ್ತುಕ– ೧
ವ್ಯಾಸಕರಣ ಪ್ರಕ್ರಿಯಾ ಕಉಮುದಿ ಪುಸ್ತುಕ– ೧
ತರ್ಕಸಂಗ್ರಹ ಅನ್ನಭಟ್ಟಿ ಪುಸ್ತುಕ– ೧
ಮುಕ್ತಾವಳಿ ಸಹಾ . . . .
ಅಂತು ಪುಸ್ತುಕ ೨೯ಕ್ಕೆ ವಿಂಗಡ
ಸಂಚಾರಕ್ಕೆ ಹೋದ ಪುಸ್ತುಕದ ವಿವರ:
ತತ್ವ ಪ್ರಕಾಶ ಪುಸ್ತುಕ– ೧
ಅದರ ಟೀಕು ರಾಘವೇಂದ್ರ ಪುಸ್ತುಕ – ೧
ಬ್ರಹ್ಮಸುತ್ತಿರ[>ಸೂತ್ರ]ದ ಬಾಷ್ಯಾದ ಪುಸ್ತುಕ – ೧
ಅನುವ್ಯಾಖ್ಯಾನದ ಪುಸ್ತುಕ ೧
ಸುಧಾ ಪುಸ್ತುಕ ೧
ಅದರ ಟೀಕು ರಾಘವೇಂದ್ರ ಪುಸ್ತುಕ ೧
ಭಾರತ ಭೀಷ್ಮಪರ್ವ ಪುಸ್ತುಕ ೧

ಸಂಗ್ರಹ ರಾಮಾಯಣ ಪುಸ್ತುಕ	೧
ಮಾಸತ್ರಯದ ಪುಸ್ತುಕ	೧
ರುಗ್ಮಣಿಶಯದ ಪುಸ್ತುಕ	೧
ತಿರುಪ್ರಬಂಧ ಪುಸ್ತುಕ	೧
ಸನ್ಯಾಸಪದವಿನ ಪುಸ್ತುಕ	೧
ಪಉಮಾನಸೂತ್ರ ಮೊದಲು ಮೂರಧ್ಯಾಯದ ಪುಸ್ತುಕ	೧
ಅಂತು ಪುಸ್ತುಕ	೧೩
ಶುದ್ಧ ಯೀಗ ಯಿರುವ ಪುಸ್ತುಕ	೧೬

❖❖

೯೬
ಸೋದೆ ಸಂಸ್ಥಾನದ ಕೈಫಿಯತ್ತು

ಡಿ.ಎಸ್.ನಂಬರ್ ಸಂಪುಟ ೧೮೩

ಕೈಫಿಯತ್ತು ಸೋದೆ ರಾಜವಂಶಾವಳೀ ಸಹಾ. ಸೋದೆ ಸಂಸ್ಥಾನದ ಕೈಫಿಯತ್ತು. ಗುಮಾಸ್ತೆ ಕೃಷ್ಣರಾವ್, ಇಲಾಖೆ ಕರ್ಲಲ ಕಾಲ[>ಕಾಲಿನ್] ಮಕೆಂಜಿ ಸರವಿಯೆರ ಜಿರ್ನಲಿ[>ಜನ್ರಲ್], ಸೂರಸನ್ ೧೮೧೫ (ಕ್ರಿ.ಶ) ಜನವರಿಯಲ್ಲು ಬರೆದು ಈ ತಾಲೂಕ್ ದರಿಯಾಪ್ತಿ ದಾಖಲೆ ಪ್ರಕಾರ.

ಪೂರ್ವದಲ್ಲಿ ಈ ವೈವಸ್ವತ ಮನುವಿನಲ್ಲಿ ಇಪ್ಪತ್ತೆಂಟನೆಯ ಚತುರ್ಯುಗದಲ್ಲಿ ಕೃತ, ತ್ರೇತ, ದ್ವಾಪರ ಈ ಮೂರು ಯುಗಗಳೂ ಸಂದ ತಱುವಾಯ ಕಲಿಯುಗ ಪ್ರಾರಂಭವಾಗುತ್ತಿರಲಾಗಿ, ಸಮಸ್ತಋಷಿಗಳೂ ಕೂಡಿ ಆಲೋಚನೆ ಮಾಡಿ, "ಈ ಸಮಸ್ತ ದೇಶಗಳೂ ಕಲಿಯಿಂದ ಮಲಿನವಾಗಿದ್ದ ಕಾರಣ ಸುಖಸಂಚಾರಕ್ಕೆ ಯುಕ್ತವಾಗುವುದಿಲ್ಲ. ನಿರ್ದೋಷವಾದ ಸ್ಥಳವೆಲ್ಲಿದ್ದೀತು?" ಎಂತ ತಮ್ಮೊಳಗೆ ತಾವೆ ಶೌನಕ ಮೊದಲಾದ ಋಷೀಶ್ವರರು ವಿಚಾರಿಸಿ, ಆಲೋಚನೆಗೆ ಬಗೆ ಹರಿಯದೆ ಜಗತ್ಕರ್ತೃಗಳಾದ ಹರಿಹರಬ್ರಹ್ಮದೇವರುಗಳ ಕುರಿತು ಕೇಳಲಾಗಿ ಅವರ ಅಪ್ಪಣೆಯೇನೆಂದರೆ : "ಸಮಸ್ತಪುರಾಣಕ್ಕೆ ವೇದಶಾಸ್ತ್ರಗಳ ನಿರ್ಣಯ ಸಿದ್ಧಾಂತ ಹೇಳಿ ನಿಸ್ಸಂಶಯ ಮಾಡುವ ಬಗ್ಗೆ ತ್ರಿಗುಣಾತ್ಮಕವಾಗಿ ವೇದವ್ಯಾಸಾಭಿಧಾನದಿಂದ ಕರ್ಮಭೂಮಿಯಾದ ಭರತಖಂಡದಲ್ಲಿ ಪರಾಶರರಿಗೆ ಮಗನಾಗಿ ಜನಿಸಿದಾರೆ. ಅವರನ್ನು ಕೇ[ವ ಬಗೆ]ಳಲಾಗಿ ಸರ್ವವೂ ವಿವೇಚನೆಯಾದೀತು" ಎಂತ ಆದ ಅಪ್ಪಣೆಯ ಪ್ರಕಾರ, ಅವರು ಇರುವ ಸ್ಥಳಗಳನ್ನು ವಿಚಾರಿಸಿಕೊಂಡು ಬಂದು, ಶ್ರೀಬದರಿಕಾಶ್ರಮಕ್ಕೆ ನರನಾರಾಯಣರು

ಋಷಿಗಳ ಆಶ್ರಮ ಸಮೀಪದಲ್ಲಿ ತಪೋನಿಷ್ಠರಾದ ಕೃಷ್ಣದ್ವೈಪಾಯನರನ್ನು ಕಂಡು. ಮಧುಪರ್ಯಾದ್ಯುಪಚಾರಗಳಿಂದ ಪೂಜಿಸಿ, ಸಾಷ್ಟಾಂಗನಮಸ್ಕರಿಸಿ, "ತಮಗೆ ಕಲಿಯುಗಾಂತ್ಯಪರ್ಯಂತ ಸದಾನುಷ್ಠಾನತಪಃ ಕ್ರಿಯಾದಿಗಳಿಗೆ ಯುಕ್ತವಾಗಿರುವ ಉತ್ತಮ ಪ್ರದೇಶವನ್ನು ಹೇಳಿ. ಅಲ್ಲಿ ನಮಗೆ ಕಾಲಕ್ಷೇಪಕ್ಕೆ ಉಪಾಯವಾಗುವ ಸಂಗತಿಮಾಡಿಕೊಡುವಲ್ಲಿ ನಿಮ್ಮ ವ್ಯಾತಿರಿಕ್ತ ಇನ್ನೊಬ್ಬರನ್ನು ಕಾಣೆವು' ಎಂತ ಹೇಳಲಾಗಿ, ಆ ಕೃಪಾನಿಧಿಯಾದಂಥ ಬಾದರಾಯಣರು ಹೇಳಿದ್ದು:

"ಪೂರ್ವದಲ್ಲಿ ಬ್ರಹ್ಮದೇವರ ಸೃಷ್ಟಿಯಲ್ಲಿ ಉತ್ತಮವಾದ ಏಳು ಪುರಿಗಳು ಏಳು ಉಪಪುರಿಗಳು ಸಹ ಮಹಾನದಿಯುಕ್ತವಾಗಿ ನಿರ್ಮಿಸಿ, ಇಲ್ಲಿ ಜನರಿಗೆ ಸ್ವಲ್ಪಕಾಲ ನಿವಾಸಸ್ಮರಣೆ ತತ್ರಸ್ಥ ಗಂಗಾಸ್ನಾನಗಳಿಂದ ಸಹ ಭವಬಂಧನಿವಾರಣೆಗಳು ಆಗತಕ್ಕುದಕ್ಕೆ ಸಂದೇಹವಿಲ್ಲ. ಇದರಲ್ಲಿ ಯಾವ ಸ್ಥಳ ಯೋಗ್ಯವೋ ನೋಡಿ ಇದ್ದು ಕಾಲಕ್ಷೇಪ ಮಾಡಬಹುದು" ಎಂತ ಹೇಳಿದ ಮಾತಿಗೆ "ಆ ಸ್ಥಳಗಳು ಯಾವಾವವು?" ಎಂತ ಕೇಳಲಾಗಿ, ಆ ಸತ್ಯವತೀ ಸುತ[>ನಾ]ದ ವ್ಯಾಸರು ರೋಮಹರ್ಷಿಣಿ ಸೂತನನ್ನು ಕರೆದು ತಮ್ಮಿಂದ ನಿರ್ಮಿತವಾದ ಅಷ್ಟಾದಶ ಪುರಾಣಗಳು, ಅಷ್ಟಾದಶ ಉಪಪುರಾಣಗಳು ಸಹ ಈತನ ಪರವಶಕ್ಕೆ ಕೊಟ್ಟು, "ಕಲಿಯುಗ ಪರ್ಯಾಪ್ತಿ ವರೆಗೆ ಇವರ ಸಮೀಪದಲ್ಲಿದ್ದು, ಈ ಸಮಸ್ತಕಥೆಗಳನ್ನು ಇವರಿಗೆ ಶ್ರುತ ಪಡಿಸಿ, ಇವರ ಚಿತ್ತಾಹ್ಲಾದ ಮಾಡಿ, ಸಮಸ್ತ ಸಂಶಯಗಳೂ ತೀರಿ ಹೋಗುವ ರೀತಿ ಮಾಡಿಸುವುದು" ಎಂತ ಅಪ್ಪಣೆ ಕೊಟ್ಟು, ತಾವು ತಪಸ್ಸಿಗೆ ಹೊರಟು ಹೋದ ತರುವಾಯ ಆ ಋಷಿಗಳನ್ನು ಕುರಿತು ಸೂತನು ಹೇಳಿದ್ದು: "ನಮ್ಮ ಗುರುಗಳಾದ ವ್ಯಾಸರು ಹೇಳಿದ ಪ್ರ(ಕಾರ) ಪುಣ್ಯಕ್ಷೇತ್ರವಾದ ಸಪ್ತಪುರಿಗಳಿಗೆ ಹೆಸರು, ಉಪಪುರಿಗಳಿಗೆ ಹೆಸರು ಸಹ ಹೇಳುತ್ತೇನೆ. ಇನ್ನೂ ಅನೇಕ ಪುಣ್ಯಕ್ಷೇತ್ರಗಳು ಇದ್ದಾವೆ. ಅವು ಕೇಳಿ ತಾವು ಯಾವ ಸ್ಥಳ(ದಲ್ಲಿ) ವಿಶ್ರಾಂತಿ ಪಡೆಯುತ್ತಿರೋ ಅಲ್ಲಿ ಸಮಸ್ತ ಪುರಾಣಗಳು ಕೇಳಿ ಸರ್ವಸಂಶಯಗಳನ್ನೂ ಕ[ಳ](ಳೆದು)ಕೊಳ್ಳಾಬಹುದು" ಎಂದು ಹೇಳಲಾರಂಭ ಮಾಡಿದ್ದು:

ಶ್ಲೋಕ॥ ಅಯೋಧ್ಯಾ ಮಧುರಾ ಮಾಯಾ। ಕಾಶೀ ಕಾಂಚೀ ಅವಂತಿಕಾ।

ಪುರಿ ದ್ವಾರಾವತೀ ಚೇತಿ।ಸಪ್ತೈತೇ ಮೋಕ್ಷದಾಯಕಾಃ॥

ಇವೇ ಏಳು ಮಹಾಪುರಿಗಳ ಸ್ಮರಣೆಯಿದ ಸಮಸ್ತಪಾಪಕ್ಷಯವಾಗುವುದು. ದರ್ಶನದಿಂ ಪೂರ್ವಜನ್ಮಪಾಪಕ್ಷಯವಾಗುವುದು. ವಾಸ(ದಿಂದಂ [ಮಾಡಿದ] ಮೋಕ್ಷವಾಗುವುದು. ಇನು ಉಪಪುರಿಗಳು ಇದ್ದಾವೆ. ಅವು ಕೇಳಬೇಕೆಂದು ಹೇಳಿದ್ದು.

ಶ್ಲೋಕ॥ ವಾನವಾಸೀ ಕುಶಾ ಲಂಕಾ ಕಾಶ್ಮೀರೀ ಕುಂಡಿನೀ ಪುರೀ॥

ಜಹಾರೀ ಮಂಜರೀ ಚೇತಿ ಹ್ಯುಪಪುರ್ಯಃ ಪ್ರಕೀರ್ತಿತಾಃ॥

"ಈ ಏಳು ಉಪಪುರಿಗಳಲ್ಲಿ ಸಮಸ್ತಪ್ರಕಾರ ಸ್ನಾನ, ದಾನ, ಸೇವೆ ಮೊದಲಾದವು ಮಾಡಿಕೊಂಡು, ಇನ್ನೊಂದು ಜನ್ಮದಲ್ಲಿ ಈ ಮಹಾಪುರೀವಾಸ್ತವ್ಯ ದೊರಕುತ್ತದೆ"ಯಂತ ಹೇಳಿದ್ದು ಕೇಳಿ, ಇನ್ನೂ ಅನೇಕವಾದ ಕ್ಷೇತ್ರಗಳು ದೇವತೆಗಳು ಸಹ ಆಯಾ ಸ್ಥಳದಲ್ಲಿ ಬಂದವತರಿಸಿ ಜನಗಳಿಗೆ ಕೊಟ್ಟಂಥ ಫಲಗಳು ಮುಂದೆ ನೋಡತಕ್ಕುದು ಫಲಗಳನ್ನು ಕೇಳಿ, ಸಂತೋಷಯುಕ್ತರಾಗಿ, ಅದರಲ್ಲೂ ಈ ವಾನವಾಶೀಕ್ಷೇತ್ರ, ವರದಾನದಿ, ಶ್ರೀಮಧುಕೇಶ್ವರದೇವರು, ಆದಿಮಾಧವಸ್ವಾಮಿ,

ವಿಘ್ನೇಶ್ವರ, ಚಿಂತಾಮಣಿ, ನರಸಿಂಹ, ವನದುರ್ಗ, ಆದಿಮಧುಕೇಶ್ವರ ಇದರ ಹೊರತು ತೀರ್ಥಗಳು ಶ್ರೀಗಣಪತಿ ತೀರ್ಥ, ವಶಿಷ್ಠತೀರ್ಥ, ಬ್ರಹ್ಮತೀರ್ಥ, ಚಕ್ರತೀರ್ಥ, ಜಟಾತೀರ್ಥ, ಅಗಸ್ತ್ಯತೀರ್ಥ, ಕಾಶ್ಯಪತೀರ್ಥ, ಕೋಟಿತೀರ್ಥ, ಚಂದ್ರಪುಷ್ಕರಣಿ, ಸೂರ್ಯತೀರ್ಥ ಮೊದಲಾದ ತೀರ್ಥಗಳ ದೇವರುಗಳ ಮಹಿಮೆಯನ್ನ ಕೇಳಿ. "ಈ ಸ್ಥಳದಲ್ಲಿ ಸಾಕ್ಷಾಜ್ಜಗದೀಶ್ವರನು ಶ್ರೀಮಧುಕೇಶ್ವರ ಎಂಬ ಹೆಸರಿನಲ್ಲಿ ಶ್ರೀಗಂಗೆಯ[>ಯು] ವರದ ಎಂಬ ಹೆಸರಿನಲ್ಲಿ ವಾಸಮಾಡಿದ್ದಕ್ಕೆ ಕಾರಣವೇನೆಂ"ದು ಕೇಳಲಾಗಿ ಸೂತರು ಈ ಋಷಿಗಳನ್ನು ಕುರಿತು ಹೇಳಿದ್ದೇನೆಂದರೆ, "ಕೈಲಾಸಪರ್ವತದಲ್ಲಿ ಶ್ರೀಷಣ್ಮುಖಸ್ವಾಮಿಯು ಸನತ್ಕುಮಾರಋಷಿಗಳನ್ನು ಕುರಿತು ಹೇಳಿದ ಕಥೆಯನ್ನು ಈಗ ನಿಮಗೋಸ್ಕರ ಹೇಳುತ್ತೇನೆ, ಕೇಳಿ:

ಪೂರ್ವದಲ್ಲಿ ರೈವತ ಮನ್ವಂತರದ ಜಾಬಾಲಿಕಲ್ಪದಲ್ಲಿ ಕೃಷ್ಣಾಕ್ಷನೆಂಬ ದೈತ್ಯನು ವರದೃಪ್ತನಾಗಿ ದೇವಮಾನವಯಕ್ಷ ಕಿಂಪುರುಷನಾಗಗಂಧರ್ವ ಮೊದಲದ ದೇವಯೋಗಿ[>ನಿ] ಪ್ರವಿಶರನ್ನೂ, ಋಷಿಗಳನ್ನೂ, ಬ್ರಾಹ್ಮಣರುಗಳನ್ನೂ ಸ್ತ್ರೀಯರುಗಳನ್ನೂ ಸಹ ಉಪದ್ರವಿಸಿ, ಸಮಸ್ತಭುವನವನ್ನು ಸ್ವಾಧೀನಮಾಡಿಕೊಂಡು, ಸಮಸ್ತರನ್ನೂ ಕರ್ಮವಿಹೀನರನ್ನಾಗಿ ಮಾಡಲುಪಕ್ರಮಿಸಲು, ಈ ಸಮಸ್ತರೂ ಕೈಲಾಸದಲ್ಲಿ ಶ್ರೀ ಯೀಶ್ವರಗೆ ಶರಣು ಹೊಗಲು, ಶ್ರೀ ಜಗದೀಶ್ವರನು ಭೈರವನ ಕರದು ಈ ಕೃಷ್ಣಾಕ್ಷವಧೇಗೋಸ್ಕರ ಆಜ್ಞಾಪಿಸಲಾಗಿ, ಭೈರವನಿಗೂ ಈ ದೈತ್ಯನಿಗೂ ಅನೇಕ ಯುದ್ಧ(?) ಪರಾಜಿತನಾಗಿ, ಭೈರವನು ಸಹ್ಯಾದ್ರಿಪರ್ವತದಲ್ಲಿ ಕೇಸರೀಶೃಂಗದ ಸಮೀಪದಲ್ಲಿ ಸುಧಾಶೃಂಗಗುಹೆಯಲ್ಲಿ ಪ್ರವೇಶಿಸುವ ಸಮಯದಲ್ಲಿ ಈ ದೈತ್ಯನು ಸಂಗಡಲೆ ಬಂದು, ಯುದ್ಧಾ ಮಾಡುವ ಬುದ್ಧಿಯುಳ್ಳವನನ್ನು ಕ್ರೋಧದಿಂದ ಮೂರನೇ ಕಣ್ಣಿನಿಂದ (ನೋಡಲು) ದೈತ್ಯನು ಭಸ್ಮವಾದನು. ಸಮಸ್ತರೂ ಸಂತೋಷಯುಕ್ತರಾದರು. ಈ ಭೈರವನು ಅದೇ ಶೃಂಗದಲ್ಲಿ ವಾಸಮಾಡಿದಾರೆ. ಈಗ ಆ ಸ್ಥಳಕ್ಕೆ 'ಯಾಣ' ಎಂತ ಕನ್ನಡ ಮಾತಿನಿಂದ ಹೇಳುತ್ತಾರೆ. ಶಿವರಾತ್ರೀ ದಿನ ಮಹಾ ಉತ್ಸವ ಭೈರವಮಸ್ತಕದ ಮೇಲೆ ಗಂಗೆ ಬಂದು ಬಿದ್ದು ಹೊರಗೆ ಪ್ರವಾಹವಾಗುತ್ತದೆ. ಆ ಸ್ಥಳದಲ್ಲಿ ಅದೆ ಜಲ (?) ಆ ಪರ್ವತದ ಕಲ್ಲು ಯಾವತ್ತು ಸುಟ್ಟ ಹಾಗೆ ಈ ಹೊತ್ತಿಗೂ ಇದೆ. ಸುಣ್ಣಕ್ಕೆ ಬರುತ್ತದೆ.

ಆ ತರುವಾಯ ಕೆಲವು ದಿನದ ಮೇಲೆ ರಕ್ತಾಕ್ಷನೆಂಬುವನು, ಅವನ ತಮ್ಮನು ಈ ಭೈರವನ ಸಂಗಡ ಯುದ್ಧಕ್ಕೆ ಬರಲಾಗಿ ಅವನನ್ನೂ ಭೂಮಿಯಿಂದ ಅವಿರ್ಭೂತನಾಗಿ ಮಾಡಿದ (?). ಆ ಸ್ಥಳ ಈಗ ಬನವಾಶಿಗೆ ದಕ್ಷಿಣ ಒಂದು ಹರದಾರಿ ಮೇಲೆ ಬಾಸಿಯೆಂಬ ಗ್ರಾಮದಲ್ಲಿ ಈಗಲೂ ಆ ಭೈರವಪ್ರತಿ ಮೂರು ರೂಪವಾಗಿ ಇಲ್ಲ, ಸ್ವಯಂವ್ಯಕ್ತ ಶಿವರೂಪವಾಗಿಯೇ ಅದೇ. [ಶೃಂಗೆ] (ಶೃಂಗದಲ್ಲಿಯೇ) ಉಭಯ ದೈತ್ಯರೀ ಹತರಾಗಲಾಗಿ ಆ ಕೃಷ್ಣಾಕ್ಷನ ಮಗ 'ಸೂದಾ'ಯೆಂಬವನು ಪಿತೃಪಿತೃವ್ಯ ವಧೆಯನ್ನು ಕಂಡು ಅತಿಶಯ ಭಯೋದ್ವಿಘ್ನ ಚಿತ್ತನಾಗಿ, ಮಹಾ ಬಲಿಷ್ಠನಾದಾಗ್ಯೂ ಕೃತ್ಯಾಕೃತ್ಯಗಳನ್ನು ತಿಳಿಯದೆ ಜೀವಾಭಿಲಾಷೆಯಿಂದ ಈ ಸಹ್ಯಾದ್ರಿಪರ್ವತದಲ್ಲಿ ಈ ಹೇಳಿಸಿ ಕೊಂಕಿ ಗಡಕ್ಕೆ(?) ಪರ್ವತದಲ್ಲಿ ಇದರ ಹೆಸರು ಚಿತ್ರಶೃಂಗವೆಂತ. ಇದರ ಗುಹೆಯಲ್ಲಿ ಗುಪ್ತನಾಗಿರುತ್ತಿರಲಾಗಿ ಪಾತಾಳದಲ್ಲಿರುವ ವಿದ್ಯುನ್ಮಾಲಿಯೆಂಬ ದೈತ್ಯನು ಈ ವೃಂತಾಂತವನ್ನು ತಿಳಿದು, ಇವನ ಸಮೀಪಕ್ಕೆ ಬಂದು, ಆಶ್ವಾಸನೆಯನ್ನು ಮಾಡಿ, ಸಮಸ್ತ ಪ್ರಕಾರದಲ್ಲೂ ಭಯರಹಿತನನ್ನಾಗಿ ಮಾಡಿ, ತನ್ನ ಮಗಳನ್ನು ಈ ಸೂದನಿಗೆ ಮದುವೆ ಮಾಡಿಕೊಟ್ಟು, ಭೈರವಭಯಯುಕ್ತರಾದ ಇನ್ನೂ ಕೆಲವು ದೈತ್ಯರುಗಳು ಪಾತಾಳಾದಿ ಸ್ಥಳವಾಸಮಾಡಿಕೊಂಡಿರುವಂಥವರನ್ನು ಕರೆಸಿ, ಈ

ಸೂದನನ್ನು ಸಮಸ್ತಪರಿವಾರಯುಕ್ತನನ್ನಾಗಿ ಮಾಡಿದ ನಂತರ, ಕೆಲವು ಕಾಲ ಹೀಗೆ ಸಮಸ್ತರಿಂದಲೂ ಕೂಡಿರುತ್ತಿರುವ ಸೂದನ ಸಮೀಪಕ್ಕೆ ದೈತ್ಯಗುರುಗಳಾದ ಶುಕ್ರಾಚಾರ್ಯರು ಬಂದರು. ಈ ಸೂದನಿಂದ ಮಧುಪರ್ಕಾದ್ಯುಪಚಾರಗಳಿಂದ ಪೂಜಿತರಾಗಿ ಇವನನ್ನು ಕುಶಲಪ್ರಶ್ನೆ ಮಾಡಿ ಸಭೆಯಲ್ಲಿ ಕುಳಿತಿರುವ ಸಮಯದಲ್ಲಿ ಸೂದನು ತನ್ನ ಸಕಲ ವೃತ್ತಾಂತವನ್ನು ತಿಳಿಯಿಸಿ, ಮತ್ತು ಏನೆಂತ ಹೇಳಿದನೆಂದರೆ "ಸ್ವಪಿತೃವವಸಾನದಾರಭ್ಯ ಏತಾವತ್ಕಾಲ ಪರ್ಯಂತರವೂ ವನವಾಸವಾಗಿಯೇ ಹೊರತಾಗಿ ರಾಜಾಧಿಕಾರಕ್ಕೆ ಯೋಗ್ಯತೆಯಿಲ್ಲವಾಗಿಯದೆಯಾದ ಕಾರಣ, ತಾವು ಅನುಗ್ರಹ ಮಾಡಿ ರಾಜ್ಯಸಂಪ್ರಾಪ್ತಿಯಾಗುವ ಸಂಗತಿ ಮಾಡಬೇಕೆಂ"ದು ಕೇಳಿಕೊಳ್ಳಲಾಗಿ, ಈ ಶುಕ್ರಾಚಾರ್ಯರು ಅವನ ಮೇಲಣನುಗ್ರಹದಿಂದ ಸುಮೂಹೂರ್ತವನ್ನು ವಿಚಾರಿಸಿ, ಶಾಲ್ಮಲೀನದೀತೀರದಲ್ಲಿ ಶಿಲ್ಪಶಾಸ್ತ್ರದಿಂದ ಸಲಕ್ಷಣವಾಗಿರುವಂಥ ಸ್ಥಳವನ್ನು, ಮೇಲೆ ಚಿತ್ರಶೃಂಗದಾರಭ್ಯ ಈ ನದೀಪರ್ಯಂತರ ಪಟ್ಟಣವನ್ನಾಗಿ ಕೂರ್ಮಚಕ್ರದಲ್ಲಿ ಹೇಳಿದ ಪ್ರಕಾರ ಕೋಟೆಯನ್ನು, ಇದಕ್ಕೆ ನಾಲ್ಕು ದಿಕ್ಕಿನಲ್ಲಿ ನಾಲ್ಕು ವಿದಿಕ್ಕಿನಲ್ಲಿ ಸಹ ಎಂಟು ಉಪಪುರಿಯನ್ನು ನಿರ್ಮಿಸಿದರು. ಆ ಒಂಭತ್ತು ಪುರಿಗಳ ಹೆಸರು ಕೆಳಗೆ ಬರುವ ಪ್ರಕಾರ ಇಟ್ಟರು.

ಅವು ಯಾವವೆಂದರೆ:

೧. ಮಧ್ಯಭಾಗದಲ್ಲಿ ಮೂಲರಾಜಸ್ಥಾನವಾದ ಪಟ್ಟಣಕ್ಕೆ ಸೂದನಿಂದ ನಿರ್ಮಿತವಾದುದರಿಂದ ಸೌದಾಪುರೆಯೆಂತ ಪ್ರಸಿದ್ಧವಾಗಿ, ಇದರಲ್ಲಿ ಈ ಸೂದನಿದ್ದು ರಾಜ್ಯಭಾರ ಮಾಡಿಕೊಂಡು [ಇದ್ದು] ಆ ಸಮುದ್ರಾಂತಸಕಲರಾಜ್ಯವನ್ನೂ ಸಾಧಿಸಿ, ತನ್ನ ಸ್ವಾಧೀನಮಾಡಿ, ಆಗ್ಯೆ ಇರವ ದೇಶಾಧಿಪತೆಗಳೆಲ್ಲರನ್ನೂ ತನಗನುಕೂಲರಾದವರ(ನ್ನು) ಅಲ್ಲಿ ಅರಸುತನಕ್ಕಿಟ್ಟು, ಅವರಿಂದ ಕರಭಾರವನ್ನು ತೆಗೆದುಕೊಳ್ಳುತ್ತ ಬಂದನು. ತನಗೆ ಪ್ರತಿಕೂಲರಾಗಿದ್ದರಸುಗಳನ್ನು ಯುದ್ಧದಲ್ಲಿ ಜಯಿಸಿ ಅವರ ಮಕ್ಕಳುಗಳ(ನ್ನು) ಪ್ರಭುತ್ವಕ್ಕೆ ಇಟ್ಟನು. ಮಕ್ಕಳುಗಳಿಲ್ಲದಿದ್ದಲ್ಲಿ ತನ್ನ ಕಡೆ ದೈತ್ಯರನ್ನೇ ಅಲ್ಲಿನಧಿಕಾರಕ್ಕಿಟ್ಟು ಅವರಿಂದ ಸಕಲಕಾರ್ಯಗಳನ್ನು ಮಾಡಿಸಿಕೊಳ್ಳುತ್ತ ಬರುತ್ತಿದ್ದನು.

೨. ಇನ್ನು ಉಪಪುರಿ ಯೆಂಟಕ್ಕೆ ವಿವರ:

ಎರಡನೇ ಪುರವು, ಪೂರ್ವದಿಕ್ಕಿನಲ್ಲಿ ಸಮಶೀಗೆಯೆಂತ ಈಗ ಹೇಳುತ್ತ ಇದ್ದಾರೆ. [ಕುಂದಗಳ ತ್ತಿಳವಲ್ಲಿ?] ಅಲ್ಲಿ ಕೋಟೆ ಕಟ್ಟಿ, ಊರು ನಿರ್ಮಾಣಮಾಡಿಯದಕ್ಕೆ ಸಮರಶೀಲಿಯಂತ.

೩. ಮೂರನೆಯುಪುಪುರಿ, ಈಗ ಹೇಳುವ ಚಂದ್ರಗುತ್ತಿ ವೆಂಡೆ[>ಟೆ]ದ ವೊಳಗಿರುವ ಅರಸರ ಕಂಪನರವಳ ಕೌಲ್ಲೆದುರ್ಗವ ಅಸಮಂಭಾತ ಪಟ್ಟಣ ನಿರ್ಮಾಣಮಾಡಿ ಹೆಸರಿಟ್ಟನು. ಇದು ಆಗ್ನೇಯಭಾಗ.

೪. ನಾಲ್ಕನೆಯಯುಪಪುರಿ ದಕ್ಷಿಣಕ್ಕೆ, ಈಗ ಹೇಳುವ ಹಿರೇಗುಡ್ಡ ಎಂಬುದರ ಆಚೆ ಕಡೆಯಲ್ಲಿ ಕುಂತಗಿರಿ. ಅದು ಸಹ್ಯಾದ್ರಿ ಸಮೀಪದಲ್ಲಿ ಜ್ಯಹವಶ್ರಂಗವೆಂಬ ಹೆಸರು.

೫. ಐದನೆಯಯುಪಪುರಿ, ಈಗ ಹೇಳುವ ಗೇರುಸೊಪ್ಪೆ. ಮೊದಲು ಹೊನ್ನಾವರ ಪರ್ಯಂತರಕ್ಕೆ ಸರ್ವ್ವರಕ್ಷೋಧಿವಾಸವೆಂದು ಹೆಸರು.

೬. ಆರನೆಯುಪಪುರಿ, ಪಶ್ಚಿಮದಲ್ಲಿ ಈಗ ಹೇಳುವ ಅಂಕೋಲೆ ಶೃಗಾಲವೆಂಬಭಿದಾನ.

೭. ಏಳನೆಯುಪಪುರಿ, ಈಗ ಹೇಳುವ ಸುಂಕೇರಿ ಶಿವೇಶ್ವರ ಸಹ ವಾಯುವ್ಯದಿಕ್ಕಿನಲ್ಲಿ, ಅದಕ್ಕೆ ಸೋಮಪುರಿಯಂತ ಹೆಸರು.

೮. ಎಂಟನೆಯುಪಪುರಿ, ಈಗ ಹೇಳುವ ಭೀಮಗಡದಿಂದ ಸೂಟಿ ಪರ್ಯಂತರಕ್ಕೆ ಅದಕ್ಕೆ ಭೀಮಪುರಯಂತ ಹೆಸರು.

೯. ಒಂಭತ್ತನೆಯಯುಪಪುರಿ, ಈಶಾನ್ಯದಿಕ್ಕಿಗೆ ಈಗ ಹೇಳುವ ಧಾರವಾಡದ ಬಳಿಯಿರುವ ನವಲೂರನ್ನೆ ನಿರ್ಮಾಣ ಮಾಡಿ ಮಯೂರಪುರವೆಂಬ ಹೆಸರಿಟ್ಟರು.

ಈ ಪ್ರಕಾರ ಎಂಟು ಉಪಪುರಿ ಸಹ ನಿರ್ಮಿಸಿ, ಅದರಲ್ಲಿ ವಿದ್ವಜ್ಜಿಹ್ವ, ವೃಶ್ಚಿನರೋಮ, ಸರ್ಪರೋಮ, ಸುಮಾಲಿ, ಸುಗ್ರೀವ, ಕಾಲನೇಮಿ, ಪ್ರಚಂಘ, ಮಕರಾಕ್ಷ ಈ ಎಂಟು ಜನಗಳನ್ನು ಅಧಿಕಾರಕ್ಕಿಟ್ಟು, ಇವರು ಸಮೇತವಾಗಿ ಸಪ್ತದ್ವೀಪಯುಕ್ತವಾದ ಸಮಸ್ತ ಭೂಮಂಡಲವನ್ನೂ ಸ್ವಾಧೀನಮಾಡಿಕೊಂಡು, ಸ್ವರ್ಗಾಧಿಪತ್ಯವನ್ನು ಅಪೇಕ್ಷಿಸುತ್ತಿರಲಾಗಿ, ಆ ಸಮಯದಲ್ಲಿ ಇವರಿಗೆ ಗುರುವಾದ ಶುಕ್ರಾಚಾರ್ಯರು ಬರಲಾಗಿ ತನ್ನ ಅಪೇಕ್ಷೆಯನ್ನು ಹೇಳಿದಲ್ಲಿ, ಅವರು ಜ್ಞಾನದೃಷ್ಟಿಯಿಂದ ನೋಡಿ "ನಿನಗೆ ಯೋಗವಿಲ್ಲ, ನಿನ್ನ ಮಕ್ಕಳಿಂದ ಆ ಸೌಖ್ಯವನ್ನನುಭವಿಸಬಹುದು" ಎಂದು ಹೇಳಿ ಪಿಂಡಗಳನ್ನು ಅಭಿಮಂತ್ರಿಸಿ ಕೊಡಲಾಗಿ, ಆ ಪಿಂಡಗಳನ್ನು ಈ ಸೂದ ದೈತ್ಯನ ಹೆಂಡತಿ ಭಕ್ಷಿಸಲಾಗಿ ಆಕೆಯಲ್ಲಿ ಸುಮೂಹೂರ್ತದಲ್ಲಿ ಮಹಾಬಲಶಾಲಿಗಳಾಗಿ ಇಬ್ಬರು ಮಕ್ಕಳು ಉತ್ಪನ್ನರಾದರು. ಜೇಷ್ಠನಿಗೆ 'ಮಧು'ವೆಂದೂ, ಕನಿಷ್ಠನಿಗೆ ಕೈಟಭನೆಂದೂ [ಹೆಸರಿಟ್ಟು] ನಾಮಕರಣವನ್ನು ಮಾಡಿ, ಸಕಲ ವಿದ್ಯಾಭ್ಯಾಸಯುಕ್ತರನ್ನಾಗಿ ಮಾಡಿದ ತರುವಾಯ ಶುಕ್ರಾಚಾರ್ಯರು ಬಂದು ಶಿವಸರ್ವೋತ್ತಮವಾದನೇಕ ಶಿವರಹಸ್ಯಗಳನ್ನು ಹೇಳಿ, ಶಿವನೇ ಸಮಸ್ತ ದೇವಾಧಿದೇವನೆಂದು ತಿಳಿಸಲಾಗಿವರುಗಳು ವ . . . . ಹೆಸರುಗಳಿಂದ ಲಿಂಗಗಳನ್ನು ಮಾಡಿಕೊಂಡು ಸುಮೂಹೂರ್ತದಲ್ಲಿ ಪ್ರತಿಷ್ಠೆಯನ್ನು ಮಾಡಿ, ಆರಾಧಿಸಿ ಸಮಸ್ತ ಬಲ ಸಂಪನ್ನರಾ[ದ] (ಗಿ), ವಿಷ್ಣು ಮೊದಲಾದ ದೇವತೆಗಳ ರ . . . . ರನ ದೂಷಿಸಿ, ಸ್ವರ್ಗಾಧಿಪತ್ಯವನ್ನು ಸ್ವಾಧೀನಮಾಡಿಕೊಂಡು ಇರುತ್ತಿರಲಾಗಿ, ವಿಷ್ಣು ಮೊದಲಾದ ದೇವತೆಗಳು ಶ್ರೀ ಕೈಲಾಸಕ್ಕೆ ಈಶ್ವರನ[>ನ್ನು] ಸಮೀಪಕ್ಕೆ ಹೋಗಲಾಗಿ, ಈ ವೃತ್ತಾಂತವನ್ನರಿಕೆ ಮಾಡಲಾಗಿ, ಶ್ರೀಸದಾಶಿವನ ಅಪ್ಪಣೆ ಶಿವಾಯಿ (?) ಈ ವಿಷ್ಣುವನ್ನು ಕುರಿತು "ಅದು (?) ಇವರನ್ನು ಮಧ ಹತ್ತಿ ಯಿರುವಾಗ ನೀ ವಧೆ ಮಾಡಿ, ಇವರು ಪೂವು (?) ಶಿವಲಿಂಗವನ್ನು ನಟ್ಟುಯಿಟ್ಟ ನವನದಲ್ಲಿ (ಸೇರಿಸು, ತಿರಿಗಿ ಎರಡಾವರ್ತಿ ವುಟ್ಟುತ್ತಾರೆ ನಿನ್ನ ಉದರದಲ್ಲಿ) ಒಂದಾವರ್ತಿ, ನಿನ್ನ ಕರ್ಣದಲ್ಲಿ ಒಂದಾವರ್ತಿ ಈ ಪ್ರಕಾರ ಹುಟ್ಟಿದವರನ್ನು ಸಂಹರಿಸಿದಲ್ಲಿ ಅವರು ಶಿವಪೂಜಾ ಧುರಂಧರರಾದ ಕಾರಣ ಗಣಾಧಿಪತ್ಯವನವರಿಗೆ ಕೊಡುತ್ತೇನೆಂ"ದು ಹೇಳಿದ ಪ್ರಕಾರ, ಈ ವಿಷ್ಣುವಿನಿಂದ ಮೂರಾವರ್ತಿಯಂ ವಧೆಯಾಗಿ, ಅಲ್ಲಿ (ಲಿಂ)ಗಳನ್ನು (?) ಈಶ್ವರಾಜ್ಞೆ(ಯ) ಪ್ರಕಾರ ವರದಾನದಿಯುಭಯ ಪಾರ್ಶ್ವದಲ್ಲಿ ಈ ದೈತ್ಯರುಗಳಭಿಧಾನದಿಂದ ಪ್ರತಿಷ್ಠೆ ಮಾಡಿದಲ್ಲಿ, ಇವರಲ್ಲಿ ಸಾಂಬನು ಪ್ರತ್ಯಕ್ಷನಾಗಿ "ಪರಿಪೂರ್ಣವಾಗಿ ಇಲ್ಲಿ ವಾಸ ಮಾಡಿರುತ್ತೇನೆ ನೀನು ಸರ್ವತ್ರಕ್ಷೇತ್ರದಲ್ಲಿ ವಾಸ ಮಾಡಿಬೇಕೆಂ"ದೆನಲಾಗಿ, ಅದೇ ಪ್ರಕಾರ ಸಮಸ್ತದೇವತೆಗಳು ವಾಸ ಮಾಡಿದರು.

ಆಮೇಲೆ ಈ ವೈವಸ್ವತಮನುವಾದ ಬಳಿಕ ಮಧುಕೈಟಭರ ಸಂಹಾರವಾದ ಬಳಿಕ, ಅಪ್ಪಟಿಕಾಲಂಲೋವುನ್ನಘುವಂಟಿ(?) ಸೂರ್ಯವಂಶ ಚಂದ್ರವಂಶ ರಾಜರಿಂ ತನು (?) ಸಮಸ್ತದೇಶವು

ಪ್ರತಿಪಾಲನೆಮಾಡಿಕೊಳ್ಳುತ್ತ ಬಂದರು. ಆಗ್ಯೆ ಇದು ರಾಜಧಾನಿಯಾಗಿ ತಮ್ಮ ಕಡಿಯವರನ್ನೆ ಇಲ್ಲಿಟ್ಟು ರಾಜ್ಯ(ಭಾರ) ಮಾಡಿಕೊಳ್ಳುತ್ತ ಬಂದರು. ಆಗ್ಯೆ ಈ ಪ್ರಾಂತ್ಯದಲ್ಲಿ ದಂಡ(ಕ) ಎಂಬ ದೈತ್ಯನು, ಅವನು ಹಿರಣ್ಯಾಕ್ಷವಂಶದಲ್ಲಿ ಹುಟ್ಟಿದವ, ಪ್ರಭಲಿಸಿ ಈ ಸಮಸ್ತದೇಶವು ದ್ವೀಪಗಳು ಸ್ವಾಧೀನ ಮಾಡಿಕೊಂಡಿರುವಾಗ್ಯೆ ಮದ್ವಾಕೊಂದು(?)ದಿನ ಮೃಗ ಬೇಟೆಗೆ ಹೊರಟು ಅರ[ಣ್ಯರ]ಣ್ಯದಲ್ಲಿ ಬೇಟೆಯಾಡುತ್ತ ಶುಕ್ರಾಚಾರ್ಯರ ಆಶ್ರಮಸಮೀಪಕ್ಕೆ ಬಂದು, ಅಲ್ಲಿ ವಿಹರಿಸುತ್ತಿರು[ಗು]ತ್ತ ಈ ಶುಕ್ರಾಚಾರ್ಯರಿಂದ ಮಗಳಿಗಿಂತ ಹೆಚ್ಚಾಗಿ ಪೋಷಣೆ ಮಾಡಿ ತನ್ನ ಆಶ್ರಮದಲ್ಲಿಟ್ಟುಕೊಂಡಿದ್ದಂಥ ಕನ್ನಿಕೆಗೆ ಯೌವನ ಪ್ರಾದುರ್ಭಾವವಾಗುತಿರಲಾಗಿ ಈ ಕನ್ನಿಕೆಯನ್ನು ಒಳ್ಳೇ ಸ್ಥಳ ಸದ್ವಂಶದಲ್ಲಿ ಸೇರಿಸಬೇಕೆಂತ ಆಲೋಚಿಸಿಕೊಂಡಿದ್ದು, ಆ ಕನ್ನಿಕೆ ಅವರಿಗೆ ಕೇವಲ ಪ್ರೀತ್ಯಾಸ್ಪದಳಾಗಿಯೂ ಇದ್ದಳು. ಇವರು ನಿತ್ಯಕರ್ಮಾನುಷ್ಠಾನ ಬಗ್ಯೆ ಗಂಗಾತೀರಕ್ಕೆ ಹೋದರು. ಆ ಸಮಯದಲ್ಲಿ ಸದರಹಿ ಬಂದ ದಂಡ ನೆಂಬುವನು ಇವರ ಆಶ್ರಮ ನೋಡಲಿಕ್ಕೆ ಬಂದು, ಸರ್ವ್ವಲಕ್ಷಣಯೌವನ[ರೂಪ]ಯುಕ್ತಳಾದಂಥ ಕನ್ನಿಕೆಯನ್ನು ಕಂಡು, ಕಾಮಮೋಹಿತನಾಗಿ ಆಕೆಯನ್ನು ಮಾತಾಡಿಸಿದಲ್ಲಿ, ಆಕೆ ಅನಂಗೀಕಾರ [ವಾ] (ಮಾಡಿ)ದ್ದರಿಂದ ಬಲವಂತವನ್ನು ಮಾಡಿ, ಆಕೆಯನ್ನು ಅನುಭವಿಸಿ ಇವನು ಹೊರಟು ತನ್ನ ದೇಶಕ್ಕೆ ಬಂದನು. ಆ ಕನ್ನಿಕೆಯು ಈ ಭ್ರಷ್ಟನ ಕೈಕೆಳಗೆ ಸಿಕ್ಕಿ ಇವನ ಇಚ್ಛೆ ಹೋಗೋ ಆ ಪ್ರಕಾರದಲ್ಲಿ ಭೂಮಿಯೇ ಮ[ಂ]ಚವನ್ನು ಮಾಡಿಕೊಂಡದ್ದರಿಂದ ಆ ಪ್ರಕಾರ ಮಣ್ಣಿನಿಂದ ಕೂಡಿಕೊಂಡಿದ್ದಳು. ಹಾಗೆ ಇರುವಂಥ ಕನ್ನಿಕೆಯನ್ನು ಶುಕ್ರಾಚಾರ್ಯರು ಬಂದು ಕಂಡು, ಈ ವೃತ್ತಾಂತವನ್ನು ಆ ಕನ್ನಿಕೆ ಮುಖದಿಂದ ಕೇಳಿ ಮಹಾಕ್ರೋಧಯುಕ್ತರಾಗಿ, ಈ ದಂಡ[ಕ]ನನ್ನು ಶಾಪಹತನ ಮಾಡಿ, “ಇವನ ದೇಶಸಂಪೂರ್ಣ ಪಾಂಸುವೃಷ್ಟಿ (ಧೂಳಿನ ಮಳೆ) ಮಳೆ ಆಗಲೇ (?) ಅರಣ್ಯವಾಗಲಿ, ಅರಾಜಕವಾಗಲಿ, ಇವನ ವಂಶ ನಿರ್ವ್ವಂಶವಾಗಲಿ” ಎಂತ ಕ್ರೂರಶಾಪವನ್ನು ಕೊಟ್ಟು, ಆ ಕನ್ನಿಕೆಯನ್ನು ಕರಕೊಂಡು ಮತ್ತೊಂದು ಸ್ಥಳಕ್ಕೆ ಹೋದರು. ಆಮೇಲೆ ಅವರು ಹೇಳಿದ ಪ್ರಕಾರವೇ ಆಗುತ್ತಿರಲಾಗಿ, ಈ ದಂಡ[>ಕ]ನ ಹೆಂಡತಿ ಈ ವೃತ್ತಾಂತವನ್ನು ತಿಳಿದು ಶುಕ್ರಾಚಾರ್ಯರಿಗೆ ಶರಣು ಬಂದು, “ಏಕಪಾಪಾನಿ ಕುರುತೇ ಫಲಂ ಭುಜ್ತೇ ಮಹಾಜನಾ” ಒಬ್ಬನು ಪಾಪ ಮಾಡಿದರೆ ಅನೇಕ ಮಂದಿ ಅನುಭವಿಸುತ್ತಾರೆ [ಅಂಬೋ] (ಎನ್ನುವ) ನ್ಯಾಯಪ್ರಕಾರ ಇವನ ಪಾಪದಿಂದ ಅನೇಕ ಮಂದಿ ಕೆಟ್ಟು ಅರಾಜಕ[ವನ್ನು ಆಗಿ] (ಎಂದು)ದರಿಂದ ಇದಕ್ಕೆ ಪ್ರತಿಶಾಪವನ್ನು ದಯೆ ಮಾಡಬೇಕು” ಎಂತ ಬಹಳ ಪ್ರಕಾರ ಕೇಳಿಕೊಂಡಲ್ಲಿ, ಅವರು ಈಕೆಯಲ್ಲಿ ಅಂತಃಕರಣ ಪಟ್ಟು, “ನಮ್ಮ ಮಾತು ಅಮೋಘ. ಅದು ವ್ಯರ್ಥವಾಗಲಾರದು. ಆದ್ದರಿಂದ ಇದಕ್ಕೆ ಉಪಾಯ ಹೇಳುತ್ತೇವೆ ಕೇಳು” ಎಂತ ಹೇಳಿದ್ದು ಏನಂದರೆ:

“ಈ ಅರಣ್ಯಕ್ಕೆ ದಂಡಕಾರಣ್ಯವೆಂದು ಹೆಸರು, ಇದರಲ್ಲಿ ಒ[ಂದೆ](ಬ್ಬನೆ) ಅರಸ ಆಗುವುದಿಲ್ಲ, ಬಹುಮಂದಿ ಅರಸುಗಳು ಕಾಲಾನಂತರದಲ್ಲಿ ಆಗಲು ಕೆಲವು ಕಾಲ ಅರಣ್ಯವಾಗಿಯೂ ಇರುತ್ತದೆ. ಈ ಪ್ರಕಾರ ಖಂಡಮಂಡಲವಾಗಿ ಇದಿರಲಿದ್ದೀತು” ಎಂತ ಹೇಳಿ ಆಕೆಯನ್ನು ಸಮಾಧಾನಮಾಡಿ ಕಳುಹಿಸಿದರು. ತದಾರಭ್ಯ ಇದಕ್ಕೆ ದಂಡಕಾರಣ್ಯವೆಂತ ಹೆಸರಾಯಿತು. ಇದು ಎಷ್ಟು ಯೋಜನವೆಂದರೆ ನೂರು ಯೋಜನ ಉದ್ದ, ಅರವತ್ತು ಯೋಜನ ಅಗಲ, ಇಷ್ಟಕ್ಕೂ ದಂಡಕಾರಣ್ಯವೆಂತ ಹೆಸರು. ಅದೇ ಪ್ರಕಾರ ನಡೆದುಕೊಳ್ಳುತ್ತ ಬಂದಿತು. ಈ ದಂಡಕಾರಣ್ಯದೇಶದಲ್ಲಿ ಶುಕ್ರಾಚಾರ್ಯರು ಹೇಳಿದ ಪ್ರಕಾರವೇ ನಡೆಯುತ್ತ ಬಂದಿತು. ಆಮೇಲೆ ಈ ದಂಡಕಾರಣ್ಯ[ದಾಗೆ] (ದಲ್ಲಿ) ಇರುವಂಥ

ಬನವಾಶಿ ಮೊದಲಾದಂಥ ಮಹಾಕ್ಷೇತ್ರಗಳು ಅರಣ್ಯಪ್ರಾಯವಾಗಿ ವಿಶೇಷಜನರುಗಳು ನಿವಾಸಗಳಿಲ್ಲದೆ [ಕೆಲಕೆಲವರು] ಇರುತ್ತಿದ್ದಲ್ಲಿ ಲಂಕೆಯಲ್ಲಿ ರಾವಣನು ಪ್ರಬಲನಾಗಿ ಸಮಸ್ತದ್ವೀಪಗಳನ್ನೂ ಶೋಧಿಸಿ ಈ ಜನಸ್ಥಾನದಲ್ಲಿ ಹದಿನಾಲ್ಕು ಸಾವಿರ ಅಧ್ಯಕ್ಷರ ಸಹಿತರಾಗಿ ಇಟ್ಟದ್ದರಿಂದ, ಈ ರಾಕ್ಷಸಭಾಧೆಯಿಂದ ಕೇವಲ ಜನನಿವಾಸವೇ ತಪ್ಪಿ ಹೋಗಿ, ಶುದ್ಧ ಅರಣ್ಯಪ್ರಾಯವೇ ಆಗಿ ಈ ಸೋದಾ, ಬನವಾಶಿ ಮೊದಲಾದಂಥಾದ್ದು ಶುದ್ಧ ಅರಣ್ಯವೇ ಆಯಿತು. ಪುರಾಣಗಳಿಂದ ತಿಳಿದುಕೊಳ್ಳತಕ್ಕದ್ದೇ ಹೊರತು ಪ್ರತ್ಯಕ್ಷನೋಡಬೇಕೆಂದರೆ ತಿಳಿಯತಕ್ಕುದ್ದಾಗಿ ಯಿದ್ದಿಲ್ಲ. ಮಹರ್ಷಿಗಳು ದೇವತೆಗಳು ಬಂದು ಪೂಜೆ ಮಾಡಿಕೊಂಡು ಹೋಗುವುದೇ ಹೊರತು ಮನುಷ್ಯರಿಂದ ಪೂಜೆ ಮಾಡುತ್ತಿದ್ದಿಲ್ಲ. ಹೀಗೆ ಅತಿಶಯಾರಣ್ಯವಾಗಿರುತ್ತಿರಲಾಗಿ, ಪರಶುರಾಮನು ಜಮದಗ್ನಿಋಷೀಶ್ವರರಿಂದ ರೇಣುಕಾಗರ್ಭದಲ್ಲಿ ಹುಟ್ಟಿದ ಬಳಿಕ ಕಾರ್ತಿವಿರ್ಯಾರ್ಜುನನಿಂದ ಜಮದಗ್ನಿ ಋಷೀಶ್ವರರಿಗೆ ಉಪದ್ರವವಾದುದರಿಂದ ಕ್ಷತ್ರಿಯ ಕುಲವನ್ನು ಇಪ್ಪತ್ತೊಂದು (೨೧) ಆವೃತ್ತಿ ಸಂಹಾರಮಾಡಿ, ಆ ಪಾಪಪರಿಹಾರಾರ್ಥ ಅಶ್ವಮೇಧಯಜ್ಞವನ್ನು ಮಾಡಿ, ಈ ಸಮಸ್ತಭೂಮಿಯನ್ನು ಹಿಮಾಚಲ ಮೊದಲುಮಾಡಿಕೊಂಡು ಸಮುದ್ರಾಂತಭೂಮಿಯನ್ನು ಬ್ರಾಹ್ಮ(ಣ)ರಿಗೆ ದಾನವನ್ನು ಕೊಟ್ಟು ತಾನು ತಪಸ್ಸಿ[ಗೆ] (ಗಾಗಿ) ಸಹ್ಯ, ಮಹೇಂದ್ರ, ಮಲಯ ಈ ಮೂರು ಪರ್ವತಗಳಲ್ಲಿದ್ದುಕೊಂಡು ಮಾತಾಪಿತೃಗಳ ಸೇವೆಯನ್ನು ಮಾಡುತ್ತ ಇರುತ್ತಿದ್ದಲ್ಲಿ, ಈ ಪರಶುರಾಮಋಷೀಶ್ವರನಲ್ಲಿ ಪಿತೃಯಜ್ಞಕ್ಕೋಸ್ಕರ ಒಂದಾನೊಂದು ದಿವಸ ಕಶ್ಯಪಾದಿ ಋಷಿಗಳು ಬಂದಲ್ಲಿ ಅವರು ಹೇಳಿದ್ದು:

"ಗೋಕರ್ಣಾದಿ ಮೊದಲಾದ ಕ್ಷೇತ್ರಗಳು ಸಮುದ್ರದಿಂದ ಮುಳುಗಿ ಹೋಗಿ [ಅ]ದೆ. ಬನವಾಸಿ ಮೊದಲಾದ ಕ್ಷೇತ್ರಗಳು ಅರಣ್ಯಪ್ರಾಯವಾಗಿದೆ. [ಇದರ] (ಇವುಗಳನ್ನು) ಉದ್ಧರಿಸಿ ಸಮಸ್ತರಿಗೂ ಸುಗಮವಾಗುವ ರೀತಿ ಮಾಡಬೇಕೆಂ"ದು ಹೇಳಲಾಗಿ, ಅದಕ್ಕೆ "ಅಸ್ತು" ಎಂದು, ಆ ಋಷಿಗಳನ್ನು ಸತ್ಕರಿಸಿ ಕಳುಹಿಸಿಕೊಟ್ಟು, ತಾನು ಸಹ್ಯಾದ್ರಿಪರ್ವತದಲ್ಲಿ ಕೇಸರಶೃಂಗಕ್ಕೆ ಬಂದು ತತ್ಸಮೀಪದಲ್ಲಿರುವಂಥ ಸಮುದ್ರನ ಕರೆದು "ನಿನ್ನ ಜಲದಿಂದ ಮುಚ್ಚಿಕೊಂಡಂಥ ಗೋಕರ್ಣ ಮೊದಲಾದ ಕ್ಷೇತ್ರಗಳನ್ನು ಬಿಟ್ಟು ಹಿಂದಕ್ಕೆ ಹೋಗೆ'ನಲಾಗಿ, "ನನಗೆ ಇಷ್ಟು ಜಾಗ ಬಿಟ್ಟು ಹೋಗು ಎಂತ ನಿರ್ಭಂಧನೆ ಹೇಳಿದರೆ ಆ ಪ್ರಕಾರದಲ್ಲಿ ನಡೆದುಕೊಳ್ಳುತ್ತೇನೆಂ"ತ ಹೇಳಿದಲ್ಲಿ, ಅದೇ ಪ್ರಕಾರ ದರ್ಭೆಯಿಂದ ಪರಶು[ವನ್ನು] ಮಾಡಿ ನಿಕ್ಷೇಪಣ ಹಾಕಿದಲ್ಲಿ, ನಾಶಿಕ, ತ್ರಿಯಂಬಕ ಮೊದಲು ಮಾಡಿಕೊಂಡು ದಕ್ಷಿಣ ಶುಚೀಂದ್ರ (?) ಪೂರ್ವಸಹ್ಯಾದ್ರಿ(ಯನ್ನು) ಬಿಟ್ಟು ಮೂರು ಯೋಜನ ದೂರ ಪಶ್ಚಿಮಕ್ಕೆ ಸಮುದ್ರರಾಜನು ನಡೆದ. ಆಗ್ಯೆ ಗೋಕರ್ಣ ಮೊದಲಾದ ಕ್ಷೇತ್ರಗಳು ವ್ಯಕ್ತವಾಗಿ ಕಾಣಲ್ಪಟ್ಟುವು. ಈ ಸ್ಥಳವು ಸಮುದ್ರಪಂಕಮಲೀನವಾದ್ದರಿಂದ ಆಕಾಶಗಂಗೆ ಆಕರ್ಷವನ್ನು (?) ಶುದ್ಧಿ ಮಾಡಿಸಿ, ಸಮಸ್ತಋಷಿ, ದೇವತೆಗಳು, ಮನುಷ್ಯರಿಗೆ ಸಹ ಸಂಚಾರಕ್ಕೆ ಯೋಗ್ಯಮಾಡಿಟ್ಟನಂತರದಲ್ಲಿ ದಾಶರಥಿ ರಾಮನಿಂದ ಜನಸ್ಥಾನದಲ್ಲಿರುವ ಖರದೂಷಣಾದಿ ರಾಕ್ಷಸರ [ಸಂಹಾರ]ವನ್ನು ಲಂಕೆಯಲ್ಲಿರುವ ರಾವಣನನ್ನೂ ಸಂ[ಹಾರವಾ] (ಹರಿಸಿ)ದ ಬಳಿಕ, ಈ ದಂಡಕಾರಣ್ಯದಲ್ಲಿ ನಿರ್ಭಯದಿಂದ ಋಷಿಗಳಿಗೆ ಸಂಚಾರಕ್ಕೆ ಯೋಗ್ಯವಾಗಿಯಾದ ಬಳಿಕ, ಪರಶುರಾಮನನ್ನು ಕುರಿತು ಈ ಸಮಸ್ತ ಋಷಿಗಳು ಹೇಳಿದ್ದೇನೆಂದರೆ "ನಿನಗೆ ಸ್ವರ್ಗಗಮನವು ಶ್ರೀರಾಮನಿಂದ ಕಡೆಯಲ್ಪಟ್ಟಿತು. ನೀನಾದರೆ ಈ ಬ್ರಾಹ್ಮಣದತ್ತ ಭೂಮಿಯಲ್ಲಿ ವಾಸಮಾಡಿಕೊಂಡು ನಿತ್ಯಕರ್ಮಾನುಷ್ಠಾನ ಜಲಪಾನಾದಿಗಳು ಮಾಡಿದರೆ ದತ್ತಾಪಹಾರ ಮಾಡಿದ ಹಾಗೆ ಆಗುತ್ತದೆ.

ಧರ್ಮಶಾಸ್ತ್ರದಲ್ಲಿ ದತ್ತವಾದಂಥ ಪದಾರ್ಥವನ್ನು ಪುನರನುಭವ ಮಾಡಲಾಗದೆಂಬುದಾಗಿ ನಿನಗೂ ತಿಳಿದಿರುವಲ್ಲಿ ನಾವು ವಿಶೇಷವಾಗಿ ಹೇಳತಕ್ಕುದೇನು?" ಎನಲು ಆ ಮಾತಿಗೆ ಒಡಂಬಿಟ್ಟು ತನ್ನಿಂದ ನಿರ್ಮಾಣವಾದಂಥ ಭೂಮಿಗೆ ಬಂದು, ಸಪ್ತಭಾಗವನ್ನು ಮಾಡಿ, ಅದಕ್ಕೆ ಸಪ್ತಕೊಂಕಣವೆಂದಭಿಧಾನಮನಿಟ್ಟು, ಕೇರಳ, ತುಳುವ, ಹೈವ, ಕೊಂಕಣ, ಕರಹಾಟ, ವರಾಲಾಟ, ಬರ್ಬರವೆಂಬದಾಗಿ ಪ್ರತ್ಯೇಕ ಹೆಸರುಗಳನಿಟ್ಟು, ಅಲ್ಲಿ ದೇವಾಲಯಂಗ[ಳು] (ಳನ್ನು) ನಿರ್ಮಾಣ ಮಾಡಿ, ತನ್ನ ತಪೋಮಹಿಮೆಯಿಂದ ಈ ಭರತಖಂಡದಲ್ಲಿರುವಂಥ ತೀರ್ಥಗ [ಳು] (ಳನ್ನು) ಆಕರ್ಷಣೆ ಮಾಡಿ. ಅದಕ್ಕೆ ಅಭಿದಾನಗಳಿಟ್ಟು, ಇಲ್ಲಿ ನಿವಾಸಕ್ಕೆ ಕಡಿಮೆ ವರ್ಣಗಳ ಯಾವತ್ತರನ್ನು ನಿವಾಸ ಮಾಡಿಸಿ, ಹೀಗೆ ತಾನು ಇಲ್ಲೇ ಸಂಚಾರ ಮಾಡಿಕೊಂಡಿರುತ್ತಿರುವಾಗ್ಯೆ ಪಿತೃಯಜ್ಞಕ್ಕೆ ಬ್ರಾಹ್ಮಣರಗಳು ದೊರಕದೆ ಯಿದ್ದ ಪಕ್ಷದಲ್ಲಿ ಅಲ್ಲಿರುವಂಥ ದಾಶರನ್ನು ಬ್ರಾಹ್ಮಣರನ್ನು ಮಾಡಿ, ಪಿತೃಯಜ್ಞ ಸಾಗಿಸಿಕೊಳ್ಳುತ್ತ ಬಂದು, ಈ ಬ್ರಾಹ್ಮಣರಿಗೆ ಈ ಸಪ್ತಕೊಂಕಣದಲ್ಲಿ ಭೂಮಿಯನ್ನು [ಇವರಿಗೆ] ಅಗ್ರಹಾರವನ್ನು ಕೊಟ್ಟು, ಇವರಿಗೆ ವರಪ್ರಧಾನವನ್ನು ಕೊಟ್ಟು, "ಸಮಸ್ತ ಪ್ರಕಾರವು ನಿಮಗೆ ವಿಪತ್ತು ಬಂದಲ್ಲಿ ಸ್ಮರಣೆ ಮಾಡಿದಾಕ್ಷಣ ಬರುತ್ತೇನೆಂ"ದೂ, "ನಿ[ಮಗೆ](ಮ್ಮ) ವಿಪತ್ತು ಪರಿಹಾರ ಮಾಡುತ್ತೇನೆಂ"ದೂ ಹೇಳಿ, ತನ್ನ ತಪಸ್ಸಿ[ನಲ್ಲಿ] (ಗಾಗಿ) ಮಹೇಂದ್ರಕ್ಕೆ ಹೋಗಿರುವಲ್ಲಿ, ಇವರುಗಳು "ಈ ದೇಶಕ್ಕೆ ಅಧಿಪತಿಯಾಗಿ ರಾಮರಾಜ ಎಂಬ ಅಭಿಧಾನದಿಂದ ಪರಶುರಾಮನಿಂದ ಸ್ಥಾಪಿಸಲ್ಪಟ್ಟ ಅರಸಿನಿಂದ ಯಥಾಮರ್ಯಾದೆಯಿಂದ ಪ್ರತಿಪಾಲಕರಾಗಿ, ಗರ್ವಿಷ್ಟರಾಗಿ ಪರಶುರಾಮ ಹೇಳಿದ ಮಾತು ನಿಧಾನಿಸಬೇಕು"ಯೆಂತ ಆಲೋಚಿಸಿ, ಯಾವತ್ತರು ಕೂಡಿ ದೇವರ ಹೆಸರಿನಿಂದ ಸಮಾರಾಧನೆಯನ್ನು ಮಾಡಿ, ಮೃಷ್ಟಾನ್ನಭೋಜನ ಮಾಡಿಕೊಂಡು, ಭೋಜನಾನಂತರದಲ್ಲಿ ತಾಂಬೂಲ ಹಾಕಿಕೊಳ್ಳುತ್ತ ಕುಳಿತುಕೊಂಡು ಪರಶುರಾಮಸ್ಮರನೆ ಮಾಡಿದಲ್ಲಿ, ಪರಶುರಾಮನು ಬಂದು "ಏತ[ರಿಂದ] (ಕ್ಕಾಗಿ) ಸ್ಮರಣೆ ಮಾಡಿದಿರೆಂದು ಕೇಳಿದಲ್ಲಿ, "ನೀವು ಹೇಳಿದ ಮಾತು ಪರೀಕ್ಷಾರ್ಥವಾಗಿ ಮಾಡಿದೆವು" ಎಂತ ಹೇಳಿದ್ದರಿಂದ ಅವರ ಮೇಲೆ ಕೋಪದಿಂದ ಪರಶುರಾಮನು ಆ ಬ್ರಾಹ್ಮಣರಿಗೆ "ನೀವು ಭ್ರಷ್ಟರಾಗಿ, ನಿವು ಶೂದ್ರಪ್ರಾಯರಾಗಿ. ಕಷ್ಟ, ಮಾಡಿಕೊಂಡಾಗ್ಯೂ ಅರ್ಧಗ್ರಾಸ ಪರಿಪೂರ್ಣವಾಗದೇ ಇರಲಿ" (ಎಂದು) ಮಹೇಂದ್ರಕ್ಕೆ ತಪಸ್ಸಿಗೆ ಹೋದ[ನು]. ಆ ಮೇಲೆ ಈ ಸಪ್ತಕೊಂಕಣದೇಶ ಅಬ್ರಾಹ್ಮಣವಾಗಿರುತ್ತಿತ್ತು.

ಇಪ್ಪತ್ತೆಂಟನೆ ತ್ರೇತಾಯುಗದಲ್ಲಿ ಈಶ್ವರನಿಂದ ತ್ರಿಪುರದಹನವಾದ ಬಳಿಕ ಆತನ ಶರೀರದಿಂದ ಬೆವರು ಬಿಂದು ಬಿದ್ದು, ಅದು ಒಂದು ಕದಂಬವೃಕ್ಷದ ಕೋಟರದಲ್ಲಿ ಪುರುಷಾಕೃತಿಯಾಗಿ ಬೆಳೆದು ತ್ರಿನೇತ್ರನ ಚತುರ್ಭುಜಯುಕ್ತವಾಗಿರುವಾಗ್ಯೆ ಅದಕ್ಕೆ ಈಶ್ವರನನ್ನು ಕೋಟೇಶ್ವರ ಸ್ಥಳದಲ್ಲಿ ಪ್ರತ್ಯಕ್ಷನಾಗಿ, ಈ ಹುಡುಗನನ್ನು ಕುರಿತು "ಈ ಕದಂಬದಿಂದ ಹುಟ್ಟಿದ್ದರಿಂದ ಕಾದಂಬ ಎಂಬ ಹೆಸರಾಗಲಿ. ನಿನಗೆ ಅಧಿಪತ್ಯವನ್ನು ಕೊಟ್ಟೆ(ನು), ಮಾಡಿಕೊಂಡಿದ್ದು ಮಹಾಬಲಿಷ್ಠನಾಗಿರು" ಎಂದು ವರವನ್ನು (ಕೊಟ್ಟು) ಅಂತರ್ಧಾನವಾಗುತ್ತಿರಲಾಗಿ ಅದೇ ಪ್ರಕಾರದಲ್ಲಿ ಈ ಕದಂಬವನು ಈ ಸಮಸ್ತಕೊಂಕಣ ದೇಶಾಧಿಪತ್ಯವನ್ನು ಮಾಡಿಕೊಂಡು, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡಿಕೊಂಡಿದ್ದು, ಈ ವಾನವಾಶಿ ಮೊದಲಾದಂಥ ಕ್ಷೇತ್ರಗಳು ಸಹ್ಯಾದ್ರಿಯ ಮೇಲ್ಪ್ರದೇಶಗಳಲ್ಲಿರುವಂಥಾದ್ದುಗಳನೆಲ್ಲ ಗ್ರಾಮಭೂಮಿಗಳಾಗಿ ಯೇರ್ಪಡಿಸಿ, ಒಂದೊಂದು ದೇಶಕ್ಕೆ ಒಂದೊಂದು ರಾಜಧಾನಿಯಾಗಿ ನಿರ್ಮಾಣ ಮಾಡಿಕೊಂಡು ರಾಜ್ಯಭಾರ ಮಾಡಿಕೊಂಡು ಇರುವಾಗ್ಯೆ, ಅವನಿಗೆ ವಸುವೆಂಬ ಮಗ

ಹುಟ್ಟಿದ. ಅವನಿಗೆ ಸಮಸ್ತವಿದ್ಯಾಭ್ಯಾಸವನ್ನು ಮಾಡಿಸಿ ಅವನು ಪ್ರೌಢನಾಗೋದು ತನ್ನ ಸಮಸ್ತರಾಜ್ಯಾಧಿಪತ್ಯವನ್ನೂ ಅವನಿಗೆ ಕೊಟ್ಟು, ತಾನು ತಪಸ್ಸಿಗೆ ಹೋದ ತರುವಾಯ ಅವನು ರಾಜ್ಯಭಾರ ಮಾಡುತ್ತಿರುವಾಗ್ಯೆ, ಕೋಲಾಹಲಪರ್ವತದಿಂದ ಶುಕ್ತಿಮತೀನದಿಯಲ್ಲಿ ಹುಟ್ಟಿದಂಥ ಗಿರಿಕನ್ನಿಕೆಯನ್ನು ಮದುವೆಯಾಗಿ ರಾಜ್ಯಭಾರ ಮಡುವಾಗ್ಯೆ, ಒಂದಾನೊಂದು ಸಮಯದಲ್ಲಿ ಹೆಂಡತಿ ಸಹಿತವಾಗಿ ತೀರ್ಥಯಾತ್ರೆಗೆ ಹೊರಟು ಬರುವಾಗ್ಯೆ, ಈತನ ಅತ್ತಿಯಾದಂಥ ಶುಕ್ತಿಮತಿ "ನಿನ್ನಿಂದ ಶಿಕ್ಷಿತನಾದಂಥ ಕೋಲಾಹಲವನು ನಿನಗೆ ಪುನಃ ಉಪದ್ರವ ಮಾಡುತ್ತಾನೆ, ನಿನ್ನ ಸಂಗಡಲೇ ಬರುತ್ತೇನೆಂ" [ದು]ತ ಹೇಳಲಾಗಿ ಆಕೆಯನ್ನು ಕಮಂಡಲ[ದಾಗ] (ದೊಳಗೆ) ಹಾಕಿಕೊಂಡು ಬರುತ್ತಿರುವಾಗ್ಯೆ, ಪೂರ್ವದಲ್ಲಿ ತಮ್ಮ ತಂದೆಯಾದಂಥ ಕದಂಬಗೆ ಅನುಗ್ರಹ ಮಾಡಿದಂಥ ಕೋಟೀಶ್ವರ ದರ್ಶನವನ್ನು ತಕ್ಕೊಂಡು, ಸಮಸ್ತ ಉಪಚಾರದಿಂದ ಪೂಜೆಗಳನ್ನು ಮಾಡಿ, ಅಲ್ಲಿಂದ ಶಂಕರನಾರಾಯಣಕ್ಕೆ ಹೋಗಿ ಶಂಕರನಾರಾಯಣಸ್ವಾಮಿಯವರ ದರ್ಶನವನ್ನು ತಕ್ಕೊಂಡ ಬಳಿಕ ಈ ಶುಕ್ತಿಮತಿ ಹೇಳಿದ್ದು:

"ನಾನು ವಾರಾಹಿ ಸಂಗಡ ಇಲ್ಲಿ [ನಾನು] ಇರುತ್ತೇನೆ" ಎಂತ ಹೇಳಲು ಈ ಶುಕ್ತಿಮತಿಯನ್ನು ಆ ವಾರಾಹಿ ಸಂಗಡ ಕೂಡಿಸಿದ ಬಳಿಕ ಶುಕ್ತಿಮತಿ ವಾರಾಹಿ ಎಂತಲೇ ಹೆಸರಾಯಿತು. ಆಮೇಲೆ ಈ ವಸುರಾಜನು ಈ ಶಂಕರನಾರಾಯಣಕ್ಕೆ ಪಶ್ಚಿಮ ಕೋಟೀಶ್ವರಕ್ಕೆ ಈಶಾನ್ಯದಿಕ್ಕಿನಲ್ಲಿ ವರಾಹಿಶುಕ್ತಿಮತೀ ನದಿತೀರದಲ್ಲಿ ಶಿವರಾತ್ರಿ(ಯ) ದಿವಸ ಮಳಲಿನಿಂದ ಲಿಂಗವನ್ನು ಮಾಡಿ, ನಾಲ್ಕು ಯಾಮ ಪೂಜೆ ಮಾಡಿ ವಿಸರ್ಜನೆಯನ್ನು ಮಾಡಬೇಕುಯಂತ ಹೋದಲ್ಲಿ ಅಶರೀರವಾಕ್ಕು ಏನೆಂಧರೆ:

"ಇಲ್ಲೇ ನಾನು ಸ್ಥಿರವಾಗಿರುತ್ತೇನೆ. ವಿಸರ್ಜನೆ ಮಾಡಬೇಡ. ನಿತ್ಯಪೂಜೆ ನಡೆಯುವ ಹಾಗೆ ಮಾಡು" ಎಂತ ಹೇಳಲಾಗಿ, ಅಲ್ಲಿ ಪಟ್ಟಣವನ್ನು ಕಟ್ಟಿ, ವಸ್ತು[>ವಸು]ಪುರ ಎಂತ ಹೆಸರಿಟ್ಟು, ಆ ಲಿಂಗಕ್ಕೆ ಮಹಾಲಿಂಗವೆಂತ ಹೆಸರಿಟ್ಟುದಕ್ಕೆ ಈಗ್ಯೆ ಆ ಪಟ್ಟಣಕ್ಕೆ ಬಸರೂರೆಂತ ಹೇಳುತ್ತಾರೆ. ಅಲ್ಲೇ ಕೆಲವು ದಿವಸ ಇದ್ದಲ್ಲಿ ಸ್ವಾಮಿಯನುಗ್ರಹದಿಂದ ಒಂದು (?) ಕುಮಾರಿತಿ ಒಬ್ಬ ಮಗ ಹುಟ್ಟಿದಲ್ಲಿ, ಆ ಕುಮಾರಿತಿಯನ್ನು ಸೂರ್ಯವಂಶದಾಗೆ ಹುಟ್ಟಿದಂಥ ಹೇಮಾಯೆಂಬ ಅರಸಿಗೆ ಮದುವೆ ಮಾಡಿಕೊಟ್ಟು, ಅಲ್ಲಿಂದ ಘಟ್ಟ ಇಳಿದು (?) ಬಂದು ವಾನವಾಶಿಕ್ಷೇತ್ರಕ್ಕೆ ಬಂದು, ಮಧುಕೇಶ್ವರದೇವರ ದರ್ಶನವನ್ನು ತಕ್ಕೊಂಡು, ಇಲ್ಲಿ ಆಗೋ ಸೇವೆ ಸತ್ಕಾರಗಳನ್ನು ಮಾಡಿ, ಈ ವಾನವಾಶಿಕ್ಷೇತ್ರಕ್ಕೆ ಒಂದುವರೆ ಯೋಜನ ಈಶಾನ್ಯ ದಿಕ್ಕಿನಲ್ಲಿ ಧರ್ಮಾನದೀತೀರದಲ್ಲಿ ಒಂದು ಪುರವನ್ನು ನಿರ್ಮಾಣಮಾಡಿ, ಅದಕ್ಕೆ ತರಳಪುರ ಎಂತ ಹೆಸರಿಟ್ಟು (ವಪಾಟಪುರ ?). ಅಲ್ಲಿ ತರಳೇಸ್ವರ ಎಂತ ಈಶ್ವರ ಪ್ರತಿಷ್ಠೆಯನ್ನು ಮಾಡಿ, ತನ್ನ ಮಗನನ್ನು ಅಲ್ಲಿಟ್ಟು, ಅಲ್ಲಿಗೆ ಪೂರ್ವದಿಕ್ಕಿಗೆ ಯೋಜನದ ಮೇಲೆ ವರದಾನದೀತೀರದಲ್ಲಿ ತನ್ನ ಮಗಳ ಹೆಸರಿನಿಂದ ಒಂದು ಊರು ಕಟ್ಟಿ ಅಜಾಪುರಯೆಂತ ಹೆಸರಿಟ್ಟು, ಆ ಸೀಮೆ ಭೂಮಿಯನ್ನು ಆಕೆಗೆ ಬಳುವಳಿಯಾಗಿ ಕೊಟ್ಟು, ತಾನು ತನ್ನ ಸ್ಥಳಕ್ಕೆ ಹೋದ ಬಳಿಕ ಈ ಅಜಾವತಿಯೆಂಬುವಳಲ್ಲಿ ಆ ಹೇಮನಿಂದೊಬ್ಬ ಮಗ ಅಭುಕ್ತಮೂಲದಲ್ಲಿ ಹುಟ್ಟಿದ. ಈ ದೋಷದಿಂದ ಹೇಮ ಎಂಬುವನು ಕಾಲವಾ[ದ](ಗಲು), ಆ ದೇಶವನ್ನು ಶತ್ರುಗಳಾದಂಥವರು ಕಟ್ಟಿಕೊಂಡಿದ್ದರಿಂದ ಈಕೆಗೆ ಅಸ್ವತಂತ್ರವಾಗಿ ದೇಶವನ್ನು ಬಿಟ್ಟು ತನ್ನ

ಪಿತೃವಂಶಪರಂಪರೆಯಾಗಿದ್ದ ಕೋಟಿಶ್ವರಕ್ಕೆ ಬಂದು (ಇಲ್ಲಿ) ವಾಸಮಾಡಿಕೊಂಡಿರುತ್ತಿರುವಾಗ್ಯೆ, ಸೂರ್ಯವಂಶಕ್ಕೆ ಗುರುವಾದಂಥ ವಶಿಷ್ಠರು ಕೋಟಿಶ್ವರಸ್ವಾಮಿ ದರ್ಶನಕ್ಕೆ ಬಂದಲ್ಲಿ, ಅವರ ದರ್ಶನವನ್ನು ಈ ಅಜಾವತಿ ತಕ್ಕೊಂಡು, ತನ್ನ ಶಿಶುಸಹಿತವಾಗಿ ನಮಸ್ಕಾರ ಮಾಡಿ, ತನ್ನ ವೃತ್ತಾಂತವನ್ನು ಹೇಳಿಕೊಂಡಲ್ಲಿ ಅವರು ಅಂತಃಕರಣದಿಂದ ಆ ಶಿಶುವಿಗೆ ಜಾತಕರ್ಮನಾಮಕರಣಗಳು ಮಾಡಿ, ಮಯೂರವರ್ಮನೆಂತ ಹೆಸರಿಟ್ಟು ಉಪನಯನವನ್ನು ಮಾಡಿ, ಸಮಸ್ತ ವಿದ್ಯಾಬುದ್ಧಿ ಹೇಳಿ ಸ್ವಾಮಿಯಾರಾಧನೆ ಮಾಡಿಕೊಂಡಿರಲಾಗಿ, "ನಿನಗೆ ಈ ರಾಜ್ಯ ಪ್ರಾಪ್ತಿಯಾಗುತ್ತದೆ"ಯೆಂತ ಹೇಳಿದ ಪ್ರಕಾರ, ಆ ಆ ಕೋಟೀಶ್ವರಸ್ವಾಮಿಯನುಗ್ರಹದಿಂದ ಈ ರಾಜ್ಯವೇ ಅವನಿಗೆ ಪ್ರಾಪ್ತವಾಗಿ, ಈ ವಸುಪುರದಲ್ಲೇ ಇದ್ದು, ಈ ಘಟ್ಟದ ಕೆಳಗಣ ಕೊಂಕಣದೇಶ, ವಾನವಾಶಿ ಮೊದಲಾದಂಥ ಸ್ಥಳಕ್ಕೆ ಅಧಿಪತಿಯಾಗಿ ರಾಜ್ಯಪಾಲನೆ ಮಾಡುತ್ತಿರುವಾಗ್ಯೆ, ಒಂದಾನೊಂದು ದಿವಸ ಕಶ್ಯಪಋಷೀಶ್ವರರು ಕೋಟೀಶ್ವರದರ್ಶನಕ್ಕೆ ಬಂದಲ್ಲಿ ಆ ಋಷೀಶ್ವರ(ರಿಗೆ) ಅರ್ಘ್ಯಪಾದ್ಯಾಚಮನಂಗಳು ಕೊಟ್ಟು ಸತ್ಕರಿಸಿ, "ಇಲ್ಲೆ ಆತಿಥ್ಯಮಾಡಿಕೊಂಡು ಹೋಗಿ" ಎಂತ ಹೇಳಿದಲ್ಲಿ ಅವರು ಹೇಳಿದ್ದು : "ಇದು ಬ್ರಾಹ್ಮಣೀಯ ಭೂಮಿಯಾ[>ಭೂಮಿಯಲ್ಲ]ದುದರಿಂದ ಇಲ್ಲಿ ಆತಿಥ್ಯ ಮಾಡೋದಿಲ್ಲ" ಎಂತ ಹೇಳಿದ್ದರಿಂದ ಬಹಳ ಭಿ[>ಖಿ]ನ್ನನಾಗಿ "ಇದಕ್ಕೆ ಉಪಾಯವೇನೆಂ"ತ ಕೇಳಲಾಗಿ, ಅವರು ಹೇಳಿದ್ದು "ಗಂಗಾತೀರದಲ್ಲಿ ವಳಭಿಪುರದಲ್ಲಿ ಬ್ರಾಹ್ಮಣರು ಇದ್ದಾರೆ. ಅವರನ್ನು ತಂದಿಡು" ಎಂತ ಅವರ ಅಪ್ಪಣೆಯಾಗಲಾಗಿ, ಅದೇ ಪ್ರಕಾರ ವಳಭಿಗ್ರಾಮಕ್ಕೆ ಹೋಗಿ ಬ್ರಾಹ್ಮಣರನು [ತಂದು ತಕ್ಕೊಂಡು] (ಕರೆದುಕೊಂಡು) ಬಂದು ಮೇಲುದೇಶ (?) ಘಟ್ಟದ ಕೆಳಗೆ [ಸದದಲಾದಂಥ (?)] (ಇರುವಂಥ) ಕೊಂಕಣದೇಶದಲ್ಲಿಟ್ಟು, ಅವರಿಗೆ ವೃತ್ತಿಕ್ಷೇತ್ರಗಳು ನಡೆಸುತ್ತ ಇರುವಾಗ್ಯೆ, ಇವನಿಗೆ ಒಬ್ಬ ಮಗ ಹುಟ್ಟಿದ. ಅವನಿಗೆ ಚಂದ್ರಾಂಗದನೆಂಬ ಹೆಸರಿಟ್ಟು ಇರುವಾಗ್ಯೆ, ಈ ಮಯೂರವರ್ಮನು ಕಾಲವಾದ ಮೇಲೆ ಈ ಚಂದ್ರಾಂಗದನು ರಾಜ್ಯಭಾರ ಮಾಡುವಾಗ್ಯೆ, ಈ ಬ್ರಾಹ್ಮಣರುಗಳೆಲ್ಲ ಆಲೋಚನೆ ಮಾಡಿದ್ದು, "ಈ ಅರಸನಿಂದ ನಮಗೆ ನಿರ್ವಹವಾಗುತದೋ ಇಲ್ಲವೋ, ಇವನು ಪೂರ್ವ ಪ್ರಕಾರ ನಮ್ಮನ್ನು ಸಂರಕ್ಷಣೆ ಮಾಡುತಾನೋ ಇಲ್ಲವೋ"ಯೆಂತ ಆಲೋಚನೆ ಮಾಡಿ, "ನಮ್ಮ ದೇಶಕ್ಕೆ ನಾವು ಹೋದರೆ ನಮಗೆ ಸರ್ವಸೌಖ್ಯವು ಅದೆ"ಯಂತ ಸರ್ವರೂ ಹೊರಟು ಹೋದರು. ತಮ್ಮ ಸ್ಥಳವನ್ನು ಸೇರಿದಲ್ಲಿ ಅಲ್ಲಿರುವಂಥ ಸ್ಥಳದ ಬ್ರಾಹ್ಮಣರು "ಇವರು ಆ ದೇಶದಲ್ಲೇನು ತಪ್ಪು ಮಾಡಿದ್ದಾರೋ, ಏತರಿಂದ ಬಿಟ್ಟು ಬಂದಿದ್ದಾರೋ", ಬಹುಕಾಲ ಅಲ್ಲಿ ಬಳಕೆ ಮಾಡಿದ್ದರಿಂದ ಇವರ ಸಂಗಡ ಬಳಕೆ ಮಾಡದೆ ಇವರನ್ನು ಬೇರೆ ತೆಗೆದುದಿಟ್ಟು ಬಿಟ್ಟರು. ಹೀಗಿರುವಾಗ್ಯೆ ಈ ದೇಶದಲ್ಲಿ [ವಂ] (ಚಂ)ದ್ರಾಂಗದನು ಪ್ರೌಢನಾಗುತ್ತಲೆ ಈ ಬ್ರಾಹ್ಮಣರುಗಳ ವೃತ್ತಾಂತವು ಸರ್ವವೂ ಕೇಳಿ, ತನ್ನ ಪ್ರಧಾನಿಯಾದಂಥ ಅಮಿತ್ರಶರ್ಮನ ವಿಚಾರಿಸಿ, ಅವ(ನು) ಹೇಳಿದ ಮಾತಿನಿಂದ "ಇದು ಏನೋ ಕೃತ್ರಿಮವಾಗಿ ಹೊರಟು ಹೋಗಿದ್ದಾರೆಂತ ತಿಳಿದುಕೊಂಡು, ಇವರನ್ನು ತಕ್ಕೊಂಡು ಬರುವ ಉಪಯವೇನೋ ಅದು ಆಲೋಚಿಸಿ, ಪ್ರಧಾನಿಗೆ ಇಲ್ಲಿ ಕೆಲಸಗಳು ಯಾವತ್ತೂ ಸ್ವಾಧೀನ ಮಾಡಿಕೊಟ್ಟು, ತಾನು ಉತ್ತರದೇಶಕ್ಕೆ ಹೋಗಿ ಈ ಬ್ರಾಹ್ಮಣರುಗಳು ಇದ್ದ ಸ್ಥಳಕ್ಕೆ ಪ್ರವೇಶಿಸಿ, ಈ ಬ್ರಾಹ್ಮಣರುಗಳನ್ನು ಯಾವತ್ತೂ ಕಂಡು, ಇವರ ಸಂಗಡ "ಏತಕ್ಕೋಸ್ಕರ ಬಂದಿರೆಂ"ತ ಕೇಳಿದಲ್ಲಿ, ಪೂರ್ವದಲ್ಲಿ ತಾವು ನಿಶ್ಚಯ ಮಾಡಿಕೊಂಡು ಹೊರಟು ಬಂದ ವೃತ್ತಾಂತವನ್ನು ಹೇಳಿದಲ್ಲಿ, ಅದು ತಿಳಿದುಕೊಂಡು ಆ ಸ್ಥಳದ ಬ್ರಾಹ್ಮಣರುಗಳನ್ನು ಕೇಳಿ, ಎಲ್ಲರನ್ನೂ ಕರೆದುಕೊಂಡು ಸ್ಥಳಕ್ಕೆ ಬಂದು

ಸೇರಿ, ಇವರುಗಳು ಇದೇ ಪ್ರಕಾರವಿದ್ದರೆ [ಯಿವರು] ಪುನಃ ಹೋಗುತ್ತಾರೆಂದು ಇವರಿಗೆ ಹೆಸರುಗಳು ಇವರ ಆಚಾರಗಳು ಸಹ ಬೇರೆ ಬೇರೆ ಕಲ್ಪಿಸಿದ್ದು ಹೇಗೆಂದರೆ :

ಕೇರಳ ದೇಶದಲ್ಲಿದ್ದಂಥ ಬ್ರಾಹ್ಮಣರುಗಳಿಗೆ ಕೇರಳರು ಅಂತಾ, ಇವರಿಗೆ ಪುರಶ್ಪೂ . . . . ಮುಂಜುಟ್ಟು ಏಕಾಸನ ಭೋಜನ ಸ್ತ್ರೀಯರುಗಳಿಗೆ ವಸ್ತ್ರ ಕಟ್ಟಿ . . . . ದರಲ್ಲಿ ಚಿಹ್ನೆ ಬಾಗಿಲಲ್ಲಿ ಸ್ವಸ್ತಿಕಾಧ್ವಜಂ ಬರಿಯೋದು ಕೇರಳ ಭಾಷೆ, ಆಡುವುದು ಮಲೆಯಾಳ. ಈ ಪ್ರಕಾರ ಅವರಿಗೆ ಕಲ್ಪನೆ ಮಾಡಿದ.

ತುಳುವ ದೇಶದಲ್ಲಿರುವವರಿಗೆ ತುಳುವ ಭಾಷೆ, ತುಳುವ ಲಿಪಿ. ಸ್ತ್ರೀಯರುಗಳಿಗೆ ಕಟ್ರಾಹಿನ, ವಸ್ತ್ರಾಧಾರಣ, ಕುತ್ತಿಗೆಯಲ್ಲಿ ಸೆರಗಸಿಕ್ಕುವುದು.

ಈ ಪ್ರಕಾರದಲ್ಲಿ ಹೈಗದೇಶದಲ್ಲಿರುವವರಿಗೆ ಹೈಗಯ–ಎಂತ ಹೆಸರಿಟ್ಟು ಯಿವರಿಗೆ ಹಳೆಕನ್ನಡ ಮಾತು ಕುಡ್ಮೆ (?) ತುಳುವರ ಆಚಾರ.

ಕೊಂಕಣ ದೇಶದಲ್ಲಿದ್ದಂಥ ಬ್ರಾಹ್ಮಣರಿಗೆ ಮಧ್ಯೆರೂಬುನುವಾಡಿಕೆ . . . ಪದ್ಯರು . . . . ಎಂತ ಹಸರು. ಇವರಿಗೆ ಭಾಷೆ ಮಹಾರಾಷ್ಟ್ರ, ಅಭಾಸವಾದಂಥ ಮಾತುಗಳು, ಇವರಿಗೆ ಸ್ತ್ರೀಯರುಗಳಿಗೆ ಚಿಹ್ನೆ.

ಕರಹಾಡದಲ್ಲಿದ್ದಂಥ ಬ್ರಾಹ್ಮಣರು ಕರಹಾಡೀರು ಎಂತ ಹೆಸರು ಅಮ್ಮ . . . . ಮಹಾರಾಷ್ಟ್ರಭಾಷೆ, ಮಹಾರಾಷ್ಟ್ರದ ಆಂಗ್ಯೆ ವರಾಲಾಯ (?) ದೇಶದಲ್ಲಿದ್ದಂಥವರಿಗೆ ಪರಶುರಾಮನು ಪೂರ್ವದಲ್ಲಿ ಈ ತನ್ನಿಂದ ಸೃಷ್ಟಿಯ ಯಾವತ್ತೂ ಬ್ರಾಹ್ಮಣರಿಗೆ ಶಾಪ ಕೊಟ್ಟ ಮೇಲೆ, ತನಗೆ ಪಿತೃಯಜ್ಞಾದಿಗಳಿಗೆ ಬ್ರಾಹ್ಮಣರುಗಳಲ್ಲದೆ ನಿರ್‍ವಾಹಕವಿಲ್ಲದೆ ಆರ್‍ಯಾವರ್ತದಿಂದ ಆಯಿವತ್ತುನಾಲ್ಕು ಕುಟುಂಬದವರ ಕರೆದುಕೊಂಡು ಬಂದು ಇವರ ಆಚಾರ ವ್ಯವಹಾರವನ್ನೆಲ್ಲ ನೋಡಿ ಯಿವರಿಗೆ ಚಿತ್ತಪಾವನರೆಂತ ಹೆಸರಿಟ್ಟು, ಇವರಿಗೆ ಲಿಪಿ, ಬಾಳಬಂದು[>ಬೋಧೆ], ಭಾಷೆ ಮಹಾರಾಷ್ಟ್ರ, ಯಿವರಿಗೆ ಯಿರುವುದಕ್ಕೆ ಗ್ರಾಮಗಳು ಕ್ಷೇತ್ರಗಳು ಏಂಗಡಿಸಿಟ್ಟು, ಯಿವರಿಂದಲೇ ವೈದಿಕ ಕರ್‍ಮಗಳು, ಯಿವರಿಂದಲೇ ಮಾಡಿಕೊಂಡು ಬರುತ್ತಲ್ಲಿದ್ದ. ಆದ್ದರಿಂದ ಇವರು ತನ್ನ ಸ್ವಧರ್‍ಮದಿಂದ ಯಿದ್ದದ್ದರಿಂದ . . . . ಶಕೆ ಯೀ ಬ್ರಾಹ್ಮಣರನ್ನು ಯಿಡುವುದಕ್ಕೆ ಯೀ ಯರಸಿಗೆ ಸಂದರ್ಭವಾಗಲಿಲ್ಲ . . . . ರಲ್ಲಿ ಪರಶುರಾಮ ಶಾಪಹತರಾಗಿ ಯೀ . . . . ಯೀಗೆ ಹಳೆ ಕೊಂಕಣಿಗರೆಂತ . . . . ಆ ಕೊಂಕಣಿಗರಿಗೆ ಕ್ಷಣಿಗರಿಗೂ ಆಗಲಿ, ಕಡ್ಮಯಾರಿಗೆಯಾಗಲಿ ಸಂಬಂಧಗಳಾಗೋದಿಲ್ಲ. ತಮ್ಮೊಳಗೇ ಸಂಬಂಧವೇ ನ . . . . ಬರ್ಬರ ದೇಶದಲ್ಲಿದ್ದಂಥ ಬ್ರಾಹ್ಮಣರಿಗೆ . . . . ಧ್ಯಂಜನರುಯೆಂತ ಹೆಸರು. ಅವರು . . . . ಮಶಾಖಿಗಳಂತ ಇವರಿಗೆ ಭಾಷೆ, ಅದೆ ಯಾವತ್ತೂ ಬಾಳಬಂದು[>ಬೋಧ], ಮಹಾರಾಷ್ಟ್ರ. ಯೀ . . . . ಯಿಟ್ಟು ತಾನು ರಾಜ್ಯವಾಳಿಕೊಂಡು . . . . ದ್ದಾ ಚಾತುರ್‍ವರ್‍ಣ ಪರಿಪಾಲನೆ ಮಾಡಿ, ಇದೇ ಪ್ರಕಾರವಾಗಿ ಯೀ ಚಂದ್ರಾಂ ಪರಿಯಾಗಿ ದ್ವಾಪರಾಂತ್ಯಪರ್‍ಯಂತ . . . . ಬಂತು.

ಇವನ ವಂಶದಲ್ಲಿ ಹುಟ್ಟಿದಂಥ . . . . ಕಾಲಾನುಸಾರವಾಗಿ ನಡೆಯಿಸಿಕೊಂಡು . . . . ಈ ದ್ವಾಪರಾಂತ್ಯದಲ್ಲಿ ಪೂರ್‍ವದಲ್ಲಿ . . . . ವಂಶದ . . . . ರಾಯ ತರಳ ಆ . . . . ಪುರ ಯೆಂತ

ಹೆಸರಿಟ್ಟು, ಅಲ್ಲಿ ಯಿದ್ದವರಾ ಲಾ . . . . ಬರ್ಬರ ಕರಹಾಡದೇಶದಲ್ಲಿ ತ್ರಕಾಳವಾಸುದೇವನು ಪ್ರತ್ಯೇಕ ರಾಜ್ಯವಾಳುತ್ತಿದ್ದ ನಮ್ಮ ಕರಹಾಡದೇಶದಲ್ಲಿ ತ್ರಿಕಾಳದೇಶದಲ್ಲಿ ಉಪದ್ರವ ಮಾಡುತ್ತಾನೆ. ಮತ್ತು ಶ್ರೀಕೃಷ್ಣನ ಸಂಗಡ ಹೇಳಲಾಗಿ ಕರವೀರಪುರದ . . . . ದ್ದ ಅವನನ್ನು ಕೃಷ್ಣನು ಹೊಡೆದು ಅವನ ಮಗ ಬರ್ಬ . . . . ರ್‍ಯವನ ರಾಜ್ಯಾಧಿಕಾರ್‍ಯಕೆ ಯಿಟ್ಟ. ಈ . . . . ಂಕಣದಲ್ಲಿ ಎಲ್ಪಿಖನಳಿವಾಸನು (?) ಯಿತ್ತು. . . . . ವ . . . . ತುಳುವ ದೇಶಕೆ ತ್ರಿಗರ್ತಾಯೆಂತ ಹೆಸರು . . . . ದಲ್ಲಿ ಸುಶರ್ಮನೆಂಬುವನು ಯಿದ್ದನು. . . . ದಲ್ಲಿ ಪರಶುರಾಮನಿಂದ ಶಾಪಹತರಾಗಿ . . . . ಬ್ರಾಹ್ಮಣರಿಗೆ ಮಾಡಿದ ಮರ್‍ಯಾದೆಯೇನೆಂದರೆ, ಶ . . . . ಗ್ರಾಮವನ್ನು ಕೊಟ್ಟು ಅವರು ಕುಶಸ್ಥಳರು ಎಂತ . . . . ಸೂಷ್ಟಿಕಾರಯೆಂತ ಹೆಸರನ್ನು ಯಿಟ್ಟ, ಮಟ್ಟು ವಂದು ಗ್ರಾಮವನ್ನು ಕೊಟ್ಟು ಮಟ್ಟಿನವರು ಯೆಂತ ಹೆಸರು, ನಾಗೂರಯೆಂಬೋ ಗ್ರಾಮವನ್ನು ಕೊಟ್ಟು ನಾಗೂರ . . . . ರುಯೆಂತ ಹೆಸರನ್ನು ಕೊಟ್ಟು, ಯೀ ಪ್ರಕಾರ ಅವರಿಗೆ ವಿಭಾಗವನ್ನು ಮಾಡಿಕೊಟ್ಟದ್ದರಿಂದ ಯಿವರಿಗೂ ಅದೇ ಹೆಸರಿನಿಂದ ಅವರು ನಡೆದುಕೊಂಡು ಬರುತ್ತಿದ್ದಾರೆ. ಈ ಪ್ರಕಾರದಲ್ಲಿ ಆಗ್ಯೆ ಘಟ್ಟದ ಕೆಳಗೆ . . . . ಪ್ತ ಕೊಂಕಣದೊಳಗೆ ನೇಮಕ ಮಾಡಿದ ಬಳಿಕ ಆಮೇಲೆ ದ್ವಾಪರಾಂತ್ಯದಲ್ಲಿ ಭಾರತ ಯುದ್ಧವಾದ ಬಳಿಕ ಯುಧಿಷ್ಟಿರ ಶಕ ವರ್ತಕವಾದ ಬಳಿಕ, ಯೀ ದೇಶ ವಸುವಂಶ ಸಂಬವಿತರಾಗಿರ್ಪ ವಿರಾಟ, ವಿರಾಟನ ಮಗ ಉತ್ತರ ಯಿಬ್ಬರೂ ಯೀ ದೇಶಾಧಿಪತಿಯಾದ ಸುಶರ್ಮ ಹತರಾದಲ್ಲಿ, ವಿರಾಟಗೆ ಸಂತತಿಯೇ ಇಲ್ಲದೆ ಹೋಯಿತು. ಯೀ ಸುಶರ್ಮನ ಮಗ ಮಹೇಂದ್ರವರ್ಮ ಯಾ ತ್ರಗರ್ತ ಆ . . . .ತುಳುವ ಮಲೆಯಾಳಕ್ಕೆ ಅಧಿಪತಿಯಾಗಿ ಯುಧಿಷ್ಠಿರ ಆಧೀನವಾಗಿದ್ದ. ಅನಂತರದಲ್ಲಿ ಯುದಿಷ್ಠಿರ ವಂಶಸ್ಥರು ಪರೀಕ್ಷಿತ ಜನಮೇಜಯ ಕಲಿಯುಗ ಆರಂಭವಾದ ಬಳಿಕ ಅಜಿವತ್ತು ವರ್ಷ, ಜನಮೇಜಯ ನೂಜು ಮೂವತ್ತು ವರುಷ ಆಗ್ಯೆ ಜನಮೇಜಯ ಸರ್ಪಯಾಗ ಮಾಡಿದ್ದು, ಕಲಿಪ್ರವರ್ತಮಾನವಾದ ಬಳಿಕ ನೂಜಿ ಹ್ನನೊಂದನೆಯ ಶುಕ್ಲ ಸಂವತ್ಸರದಲ್ಲಿ. ಯೀ ಜನಮೇಜಯನ ಮಗ ಶೌನಿಕ ಮೊದಲುಮಾಡಿಕೊಂಡು ಪುರಂಜಯನ ಪರ್‍ಯಂತಕ್ಕೆ ಜನ ೨೦ಕ್ಕೆ ೧೦೦೦ ವರುಷ ಅದಕ್ಕೆ ವಿವರ ಷೋಡಶಕುಮಾರರು . . . . ನ ೧೬, ಶೌನಿಕ ವಬ್ಬ, ಅಶ್ವಮೇಧ ವಬ್ಬ, ಮಹಾಕ್ಷೇಮೇಂದ್ರ ಭೂಪತಿಯೊಬ್ಬ, ಪುರಂಜಯನೊಬ್ಬ – ಅಂತು ಜನ (?) ೨೦ಕ್ಕೆ ವರುಷ ಸಾವಿರ. ಈ ಪುರಂಜಯಗೆ ಸಂತಾನವಿಲ್ಲದೆ ದತ್ತು ಮಗ ಪಾಲಕಪುತ್ರ. ಆತನ ಪ್ರಧಾನಿ ಶುನಕನೆಂಬುವನು ಯೀ ಅರಸನ್ನು ವಧೆಮಾಡಿ, ತನ್ನ ಮಗ ಪ್ರದ್ಯೋತನನೆಂಬುವನಿಗೆ ಅರಸು ಪಟ್ಟಗಟ್ಟಿ ತಾನು ಸಕಲಕಾರ್‍ಯಭಾರವನ್ನು ಮಾಡಿಕೊಂಡು ಬರುಯಿವರು ಬಾರಹಾ[>ಬೃಹ]ದ್ರಥರು ಈ ಜನ ಐದಕ್ಕೆ ೧೩೮ ವರುಷ, ಅದಕ್ಕೆ ವಿವರ : ಪುರಂಜಯ, ಪ್ರದ್ಯೋತನ, ವಿಶಾಲಯೋಪ, ವಾಜಕ, ನಂದಿವರ್ಧನ, ಆಮೇಲೆ ಯೀ ನಂದಿವರ್ಧನನ ಮಗ ಶಿಶುನಾಗ. ಈ ಶಿಶುನಾಗನು ಬಾರಹಾ[>ಬೃಹ]ದ್ರಥ ವಂಶಸ್ತನಾದಾಗ್ಯೂ ಯಿವನ ವಿಶೇಷ ಪ್ರಖ್ಯಾತ ಪುರುಷನಾದುದರಿಂದ ಇವನ ಹೆಸರಲ್ಲೇ ಶಿಶುನಾಗಯೆಂಬ ಇವನ ವಂಶದ ಹೆಸರಾಯಿತು. ಈ ಶಿಶುನಾಗವಂಶದ ಜನ ೧೦ಕ್ಕೆ ೩೬೦ ವರುಷ. ಆ ಜನದ (?) ವಿವರ: ಶಿಶುನಾಗ, ಕಾಕವರ್ಮ, ಕ್ಷೇಮವರ್ಮ, ಕ್ಷೇತ್ರವರ್ಮ, ವಿಧಿಸಾರ, ಅಜಾಶತ್ರು, ದರ್ಭಕ, ಅಜೇಯ, ನಂದಿವರ್ಧನ, ಮಹಾನಂದಿ – ಯೀ ಜನ ಹತ್ತು ಅಂತು . . . . ೫೮ ವರುಷ ಕಲಿಯುಗ ಯಿಷ್ಟು. ಆ . . . . ಈ ಮೇಲೆ ಬರೆದ ಮಹಾನಂದಿಗೆ ಶೂದ್ರಿಯ ಹೊಟ್ಟೆಯೊಳಗೆ ಹುಟ್ಟಿದವ ಮಹಾಪಾತ್ಮನೆಂಬುವನು.

ರಾಜ್ಯಭಾರಕ್ಕಾರಂಭ ಮಾಡಿದ.* ಇವನು ಮಹಾ ಪರಾಕ್ರಮಶಾಲಿಯಾಗಿ ಪರಶುರಾಮನೋಪಾದಿಯಲ್ಲಿ ಕ್ಷತ್ರಿಯವಂಶವನ್ನು ಸಂಹಾರ ಮಾಡಿ ಭೂಮಿಯ ಮೇಲೆ ಕ್ಷತ್ರಿಯ ಅರಸುತನವಿಲ್ಲದ ಹಾಗೆ ಮಾಡಿದ. ಅದು ಮೊದಲು ಮಾಡಿ ಸಂಕರಜಾತಿ ಅರಸುತನವಾಯಿತು. ಇವನಿಗೆ ನಂದ ಎಂತ ಹೆಸರು ಆಯಿತು. ಇವನು ಏಕಚ್ಛತ್ರವಾಗಿ ರಾಜ್ಯಭಾರ ಮಾಡಿಕೊಂಡು ಇದ್ದು. ಇವನ ಆಜ್ಞೆಗೆ ಪ್ರತಿಹತವಾಗಿ ಇದಿಲ್ಲ. ಸಮಸ್ತರೂ ಇವನ ಆಜ್ಞೇಯಲ್ಲೀ ನಡೆದುಕೊಂಡು ಬರುತ್ತ ಇದ್ದರು. ಇವನಿಗೆ ಎಂಟು ಜನ ಮಕ್ಕಳು.

೧. ನಂದ ಎಂಬವ

೧. ಇವನ ಹಿರೇ ಮಗ ಸುಮಾಪೋ

೧. ಕಡೇ ಮಗ ಸರ್ವಾರ್ಥಸಿದ್ಧಿ ಪರ್ಯಂತಕ್ಕೂ ಒಂಬತ್ತು ಜನ

೬. ನಡುವಿನ ಜನ ಆರಕ್ಕೆ ಹೆಸರು ಗೊತ್ತಿಲ್ಲ

---

* ಈ ಸಮಸ್ತಪೃಥ್ವಿಯನ್ನೂ ಒಂಬತ್ತು ಭಾಗ ಮಾಡಿಕೊಂಡು ಒಂಬತ್ತು ಸಿಂಹಾಸನದಿಂದ ಆಳಿಕೊಂಡು ಬರುತ್ತಿರುವಾಗ್ಯೆ ವರುಷ ೨೦೦ ಸಂದಿತು.

೧೩೭ ಈ ಸರ್ವಾರ್ಥಸಿದ್ಧಿಗೆ ವಕ್ರ ಮೊದಲು ಮಾಡಿಕೊಂಡು ಪ್ರಧಾನಿಗಳು ಇರುವುದರಲ್ಲಿ ರಾಕ್ಷಸನೆಂಬ ಪ್ರಧಾನಿ ಪ್ರಖ್ಯಾತನಾಗಿ, ದಂಡನೀತಿಪ್ರವೀಣನಾಗಿ, ಭೂಭಾಗವನ್ನು ಷಡ್ಭಾಗಗ್ರಹಣದಲ್ಲಿ ಪ್ರವೀಣನಾಗಿ, ಶುಚಿವಂತನಾಗಿ ಶೂರನಾಗಿ, ಮೇಲೆ ಬರೆದ ನಂದರಿಂದ ಮಾನ್ಯನಾಗಿ, ಸಮಸ್ತ ಪ್ರಜಾಪಾಲನದಲ್ಲಿ ವಿಚಕ್ಷಣನಾಗಿ ಇದ್ದ. ಇವನು ಬ್ರಾಹ್ಮಣನು.

ಈ ಸರ್ವಾರ್ಥಸಿದ್ಧಿಗೆ ಸುನಂದಾ ಎಂಬಾಕೆ ಹಿರೇ ಹೆಂಡತಿ, ವೃಷಲಾಪುತ್ರಿಯಾದಂಥಾಕೆ ಮುರಾಯೆಂಬವಳು. ಇವರಿಬ್ಬರಿಗೂ ಮಕ್ಕಳಿಲ್ಲದೆ ಇರುವುದರಿಂದ ಒಬ್ಬ ತೇಜಸ್ವಿಯಾಶ್ರಯದಿಂದ ಅನುಗ್ರಹ ಸಂಪಾದಿಸಿಕೊಂಡಲ್ಲಿ, ಅವರ ಕಮಂಡಲೋದಕ ಪ್ರೋಕ್ಷಣೆ ಮಾಡಿದುದರಿಂದ ಒಂಬತ್ತು ಬಿಂದು ಸುನಂದಾ ಎಂಬುವಳ ಮಸ್ತಕದ ಮೇಲೆ ನಿಂತು, ಒಂದು ಬಿಂದು ಮುರಾ ಎಂಬವಳ ಮಸ್ತಕದ ಮೇಲೆ ಬಿದ್ದಿತು. ಮೇಲೆ ಬರೆದಾಕೆ ಒಂಬತ್ತು ಮಂದಿ ಮಕ್ಕಳ ಹಡೆದಳು. ಈ ಕೆಳಗಿನಾಕೆ ಒಬ್ಬ ಮಗ ಹಡೆದಳು. ಇವರು ಯೌವನಸ್ಥರಾಗುತ್ತಲೇ ಈ ಸರ್ವಾರ್ಥಸಿದ್ಧಿಯು ಇವರಿಗೆ ಪಟ್ಟವನ್ನು ಕಟ್ಟಿ ಪೂರ್ವಪ್ರಕಾರ ರಾಜ್ಯಭಾರಕ್ಕೆ ಇಟ್ಟನು. ಇವರಿಗೆ ನವನಂದರೆಂದು ಹೆಸರು. ಈ ಮುರಾ ಎಂಬಾಕೆಯ ಮಗ ಮೌರ್ಯನೆಂಬುವನಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟಿ ಸರ್ವಾರ್ಥಸಿದ್ಧಿಯು ವಿಶ್ರಾಂತಿಯನ್ನು ಪಡೆದ.

೧೩೭ ಆ ಬಳಿಕ ಈ ಮೌರ್ಯನಿಗೆ ನೂರು ಮಂದಿ ಮಕ್ಕಳಾದರು. ಇವರೊಳಗೆ ಚಂದ್ರಗುಪ್ತನೆಂಬುವನೇ ಕಡೆಯ ಮಗ. "ಈ ನೂರು ಮಂದಿ ಮಕ್ಕಳಿಂದ ಈ ಸೇನಾಪತಿ

– ಇಷ್ಟು ಭಾಗ ಬನವಾಸಿ ಸ್ಥಳದ ಕೈಫಿಯತ್ತು – ೨ರ ಕೊನೆಯಲ್ಲಿ ಕಂಡುಬರುತ್ತದೆ. (ಸಂ).

ಮಹಾಪ್ರಬಲನಾಗಿದ್ದಾನೆ. ಮುಂದೆ ನಮಗೆ ರಾಜ್ಯ ನಿಂತೀತೊ ಹೇಗೋ" ಎಂಬ ಭಯದಿಂದ ರಾಕ್ಷಸನೆಂಬ ಮಂತ್ರಿಯೊಡನೆ ಗುಪ್ತಾಲೋಚನೆ ಮಾಡಿಕೊಂಡು, ಈ ನೂರು ಜನವನ್ನೂ ಮೌರ್ಯನ ಸಹ [ಭೂಗ್ರಹಾಯಾಗಿ] ನೆಲಮಾಳಿಗೆಯಲ್ಲಿ ಹಾಕಿಟ್ಟು ಇವರು ರಾಜ್ಯಭಾರ ಮಾಡಿದ್ದು ವರುಷ ೧೩೭. ಇದರಲ್ಲಿ ಮೌರ್ಯ ಆದಿಯಾಗಿ ಯಾವತ್ತರೂ (ಎಲ್ಲರೂ) ನೆಲಮಾಳಿಗೆಯಲ್ಲಿ ಹತರಾಗಿ, ಚಂದ್ರಗುಪ್ತನೆಂಬುವನುಳಿಯುತ್ತಲೆ ನೆಲಮಾಳಿಗೆಯಿಂದ ತೆಗೆದು ಇವನನ್ನು ಅನ್ನಸತ್ರದ ಮೇಲೆ ಇಟ್ಟಿದ್ದರು. ಈ ಪ್ರಕಾರವಿರುವಾಗ್ಯೆ ಕೆಲವು ದಿವಸದಲ್ಲಿ ಚಣಕನೆಂಬ ಬ್ರಾಹ್ಮಣನ ಮಗನು ವಿಷ್ಣುಗುಪ್ತನೆಂಬುವನು, ಆತನು ದಂಡನೀತಿಯಲ್ಲಿ ವಿಶಾರದನು. ಜೋತಿಶ್ಯಾಸ್ತ್ರದಲ್ಲಿ ಪ್ರವೀಣನು. ಸಕಲಧರ್ಮವನ್ನೂ ತಿಳಿದಂಥವನು. ಈತನು ನಾಲ್ಕು ಮಂದಿ ಶಿಷ್ಯರು ಸಹಿತವಾಗಿ ಅನ್ನಸತ್ರಾಭಿಮುಖವಾಗಿ ಬರುವಾಗ್ಯೆ ಕಾಲಿಗೆ ದರ್ಭಾಂಕುರವು ತಾಗಿದುದರಿಂದ ಅದರ ಮೇಲೆ ಕ್ರೋಧದಿಂದ ಆಮೂಲಾಗ್ರವಾಗಿ ತೆಗೆದನು. ಚಂದ್ರಗುಪ್ತನು ಕಂಡು "ಇವನಿಂದ ನಮ್ಮ ವೈರಿ ನಿರ್ಯಾತನವಾದೀತು" ಎಂದು ತಿಳಿದು, ಯಿವನಂ ಶರಣುಹೊಕ್ಕು, ಅಭಯವನ್ನು ಪಡೆದು, ಯಿವನ ತಂತ್ರದಿಂದ ಈ ನವನಂದರನ್ನೂ, ಪರ್ವತಕ ಇವನ ಮಗ ಮಲಯಕೇತು ಮೊದಲಾದ ಯವನರನ್ನೂ ಜೈಸಿ, ತಾನು ರಾಜ್ಯಾಧಿಕಾರಿಯಾಗಿ, ಪುನಃ ಪ್ರಧಾನಿತನಕ್ಕೆ ರಾಕ್ಷಸನನ್ನೇ ನಿಲ್ಲಿಸಿಕೊಂಡು ರಾಜ್ಯಭಾರ ಮಾಡಿಕೊಂಡು ಬಂದರು. ಇವರ ವಂಶದ ವಿವರ:

೧. ಮೇಲೆ ಬರೆದ ಚಂದ್ರಗುಪ್ತ ಜನ

೧. ಇವನ ಮಗ ವಾರಿಧಾರ

೧. ಇವನ ಮಗ ಅಶೋಕವರ್ಧನ

೧. ಸುಯಶ

೧. ಶಾಲಿಶೂಕ

೧. ಶತ್ರುಧನ್ವ

೧. ಅಸಂಗತ

೧. ಸೋಮಶರ್ಮ

೧. ಬೃಹದ್ರಥ

---

೯ ಜನಕ್ಕೆ ವರ್ಷ ೧೩೭.

ಈ ಬೃಹದ್ರಥನನ್ನು ಅವನ ಸೇನಾಪತಿಯಾದ ಪುಷ್ಯಮಿತ್ರಶೃಂಗನೆಂಬುವನು ವಧೆ ಮಾಡಿ, ತಾನೇ ರಾಜ್ಯವನ್ನು ಮಾಡಿದ. ಆಮೇಲೆ ಈ ಶೃಂಗನ ಮಕ್ಕಳು ಹತ್ತುಮಂದಿಗೆ ವಿವರ:

೧ ಪುಷ್ಯಮಿತ್ರ

೧ ಅಹಿಮಿತ್ರ

೧ ಸುಜೇಷ್ಟ

೧ ಪರಿಮಿತ್ರ

೧ ಭದ್ರಕ

೧ ಪುಳಿಂದ

೧ ಘೋರ

೧ ವಜ್ರಮಿತ್ರ

೧ ಭಾಗವತ

೧ ದೇವಭೂಮಿ

---

೧೦ ಅಂತು ಜುಮ್ಲ.

ಈ ಹತ್ತು ಮಂದಿಯು ರಾಜ್ಯಭಾರ ಮಾಡಿದ್ದು ನೂರು ಹತ್ತು ವರ್ಷ (೧೧೦ ವರ್ಷ), ಈ ದೇವಭೂಮಿಯು ಮಹಾ ಕಾಮಕನಾದುದರಿಂದ ಇವನ ಪ್ರಧಾನಿ ಕಣ್ವನೆಂಬುವನು ಯೀ ಅರಸನ್ನು ವಧೆಮಾಡಿ, ತಾನೇ ರಾಜ್ಯಭಾರವನ್ನು ಮಾಡಿದ. ಈ ಕಾಣ್ವ(ಕಣ್ವಕುಲದವರು)ರು ಮೊದಲಿನವ ವಸುದೇವ. ಇವನ ಮಗ ಭೂ . . . . ಇವನ ಮಗ ನಾರಾಯಣ, ಸುಶರ್ಮ ಯೀ ಮು . . . . ರಾಜ್ಯಭಾರ ಮಾಡಿದ್ದು ೩೫೪ ವರ್ಷ.

ಕಾಣ್ವನಾದಂಥ ಸುಶರ್ಮನ ಭೃತ್ಯನು ಜಂಬುಕಾಯೆಂಬ ಇವನು ಆಂಧ್ರಜಾತಿಯವನು. ಈ ಸುಶರ್ಮನ ವಧೆ ಮಾಡಿ ತಾನು ಸ್ವಲ್ಪದಿವಸ ರಾಜ್ಯಭಾರ ಮಾಡಿದ. ಆಮೇಲೆ ಈ ಜಂಬುಕನ ತಮ್ಮ ಕೃಷ್ಣನೆಂಬುವನು ಪೃಥ್ವೀಪತಿಯಾದನು. ಆಮೇಲೆ ಯಿವನ ವಂಶದವರು ರಾಜ್ಯವಾಳಿದ ವಿವರ:

೧. ಜಂಬುಕ

೧. ಇವನ ತಮ್ಮ ಕೃಷ್ಣ

೧ ಇವನ ಮಗ ಶಾತಕರ್ಣ

೧ ಇವನ ಮಗ ಪೂರ್ಣಮಾಸ

೧ ಇವನ ಮಗ ಲಂಬೋದರ

೧ ಇವನ ಮಗ ಚಿಲ್ಲಕಲ

೧ ಇವನ ಮಗ ಮೇಘಸ್ವಾತಿ

೧ ಇವನ ಮಗ ಅನಿಷ್ಟಕರ್ಮ

೧ ಇವನ ಮಗ ಹಾಲೆಯ

೧ ಇವನ ಮಗ ತಾಳಕ

೧ ಇವನ ಮಗ ಪುರೀಷಕ

೧ ಇವನ ಮಗ ಸುನೋದ್ಧನ

೧ ಇವನ ಮಗ ಶಿವಸ್ವಾತಿ

೧ ಇವನ ಮಗ ಗೋಮತಿ

೧ ಇವನ ಮಗ ಪುರಿರ್ಮಾ

೧ ಇವನ ಮಗ ಶತಕರ್ಣಿ

೧ ಇವನ ಮಗ ಶಿವಸ್ಕಂದ

೧ ಇವನ ಮಗ ಯಜ್ಞಶ್ರೀಕ

೧ ಇವನ ಮಗ ವಿಜಯ

೧ ಇವನ ಮಗ ಚಂದ್ರವೀರ್ಯ

೨೦

ಅಂತು ಜನ ಇಪ್ಪತ್ತಕ್ಕೆ ಆಳಿದ ವರ್ಷ ೪೨೭. ಇಲ್ಲಿಗೆ ಕಲಿಯು . . . . ಮಾಡಿಕೊಂಡು ಈ ವರೆಗೆ ಸಂದ (ವರ್ಷಗಳು) ೩೦೪೪, ಇಲ್ಲಿಗೆ ಯುಧಿಲಾ . . . .

ಆಮೇಲೆ ಚಂದ್ರವೀರ್ಯನು ರಾಜ್ಯವಾ(ಳುವಾಗ ಆ)ತನು ಸಮಸ್ತ ದೇಶಾಧಿಪತಿಯಾಗಿದ್ದಾಗ್ಯೂ. . . . ಧರ್ಮದಿಂದ ರಾಜ್ಯಪರಿಪಾಲನೆ ಮಾಡುತ್ತಾ ಯಿದ್ದಾಗ್ಯೆ ಸಮಸ್ತದೇಶಾಧಿಪತಿಗಳಾದಂಥ ಅರಸುಗಳು . . . . ಇವನಿಗೆ ಕಪ್ಪಕಾಣಿಕೆಗಳು ಕೊಟ್ಟುಕೊಂಡು ಯಿದ್ದಾಗ್ಯೂ, ಸಮಸ್ತ ರಾಜನೀತಿ ಪ್ರವೀಣನಾಗಿ ಮಂತ್ರಾಲೋಚನೆಯುಳ್ಳವನಾದಾಗ್ಯೂ ಕೂಡ, ಇವನಿಗೆ ಗಂಡು ಸಂತಾನವಿಲ್ಲದ್ದರಿಂದ ಬಹಳ ಆಲೋಚನೆಯಲ್ಲಿರುತ್ತಿರುವಾಗ್ಯೆ ಯೀತನಿಗೆ ಒಬ್ಬ ಮಗಳಿದ್ದಳು. ಈ ಮಗಳು ಯಾರಿಗಾದರೂ ಅರಸುಮಕ್ಕಳಿಗೆ ಮದುವೆ ಮಾಡಿಕೊಟ್ಟು ಅಳಿಯ ಸಂತಾನವಾದಾಗ್ಯೂ ಮಾಡಿಕೋಬೇಕೆಂತ ಆಲೋಚನೆ ಮಾಡುವಾಗ್ಯೆ, ಗೋವಿಂದ . . ರ್ಹಿಯೆಂಬ ಬ್ರಾಹ್ಮಣನು ಸಕಲವೇದ (ಸಕಲಾಗಮ ಸ)ಕಲ ತಂತ್ರಪಾರಂಗತನೂ, ಸಕಲ ಕರ್ಮಾ . . . . ಹ್ಯ ತಪಸ್ವಿಯಾ ಬ್ರಾಹ್ಮಣನಂ ಕಂದು "ಪರಮ . . . . ಬ್ರಾಹ್ಮಣದರ್ಶನ ಮಹಿಮೆಯಿಂದ ಬೆ . . . . ರ್ವಣ್ಯ ವಿವಾಹವ ಮಾಡಬಹುದು ಯೆಂತ ಧರ್ಮವಿರುವುದರಿಂದಾ ಈ ಬ್ರಾಹ್ಮಣಗೆ ತನ್ನ ಮಗಳಲ್ಲಿ ಹುಟ್ಟಿದ ಮಗನನ್ನು, ಈ ರಾಜಾಧಿಕಾರಿಯಾಗಿ ಮಾಡಬಹುದು ಯೆಂತ" ಅನೇಕ ಪ್ರಕಾರ ಆ ಬ್ರಾಹ್ಮಣಂಗೆ ಹೇಳಿ ಕೊ . . . . ದು ನಿಶ್ಚಯ ಮಾಡಿದಲ್ಲಿ ಆ ಬ್ರಾಹ್ಮಣನು ಹೇಳಿದುದೇನೆಂದರೆ: "ಬ್ರಾಹ್ಮಣರಿಗೆ ಚಾತುರ್ವರ್ಣ್ಯವು ಸಿದ್ಧವು. ಕ್ಷತ್ರಿಯರಿಗೆ ಮೂರು ವರ್ಣ, ವೈಶ್ಯರಿಗೆ ಎರಡು ವರ್ಣ, ಶೂದ್ರರಿಗೆ ಸ್ವವರ್ಣ . . . .ಗಿ ಬದುಲು ಆಗದು. ಈ ಪ್ರಕಾರವಿರುವಂಥಾದ್ದು ಆದಾಗ್ಯೂ ಅದು ಕ್ಷತ್ರಿಯನಿಗೆ ಆಗಬೇಕೇ ಹೊರತು ಹಾಗೆ ಆಗ . . . . ಮಾ ಎಂದರೆ ಬ್ರಾಹ್ಮಣನು . . . . ಕ್ಷತ್ರಿಯ ವೈಶ್ಯ ಶೂದ್ರ ಸ್ತ್ರೀ ವಿವಾಹಗಳು . . . . ಕ್ಷತ್ರಿಯನು ಹಾಗೆ ವ ಅದೇ ಪ್ರಕಾರವೇ ಹೀಗಿರುವಲ್ಲಿ ಮೊದ . . . . ಸ್ತ್ರೀವಿವಾಹ ಹೇಗೆ ಮಾಡಿ . . . ."

ಎಂತ ಹೇಳಿದಲ್ಲಿ ಈ ಅರಸು ತನ್ನ ಮಗಳ ಸಂಗಡ ಆಲೋಚಿಸಿ, ಒಬ್ಬಳು ಬ್ರಾಹ್ಮಣ ಕನ್ನಿಕೆಯನ್ನು ನಿಶ್ಚಯ ಮಾಡಿಸಿ, ಹಾಗೆಯೇ ವೈಶ್ಯಸ್ತ್ರೀ ವಿವಾಹ ಮಾಡಿಸಿ, ಆಮೇಲೆ ಶೂದ್ರ ಕನ್ಯೆಯನ್ನು ವಿವಾಹ ಮಾಡಿಸಿದಲ್ಲಿ ಈ ನಾಲ್ಕು ಜಾತಿ ಸ್ತ್ರೀಯರ ವಿವಾಹವಾದ ತರುವಾಯ ಯೀ ಸ್ತ್ರೀಯರು ತತ್ತಜ್ಜಾತೇಯೋಕ್ತ ಕಾಲದಲ್ಲಿ . . . . ವಾದ್ದರಿಂದ ಮೊದಲು ಶೂದ್ರಸ್ತ್ರೀಯಲ್ಲಿ ಸಂತಾನವಾಯಿತು. ಎರಡನೆಯಲ್ಲಿ ವೈಶ್ಯಸ್ತ್ರೀಯಲ್ಲಿ . . . . ರೆದು ಬ್ರಾಹ್ಮಣಸ್ತ್ರೀಯಲ್ಲಿ ನಾಲ್ಕನೆಯಲ್ಲಿ . . . . ಸಂತಾನವಾಯಿತು. ಈ ನಾಲ್ಕು ಗಂಡು ಸಂತಾನವು . . . . ಜಾತಕರ್ಮ ಮೊದಲಾದ . . . . ರ್ಮಾ ಬ್ರಾಹ್ಮಣನು . . ವ . . . .ವಿಕ್ರಮಯೆಂತ ಹೆ . . . . ದೇವನಿಗೆ ಭಟ್ಟಿಯೆಂತ . . . . ಟ್ಟಿದೇವನಿಗೆ ಭರ್ತ ಯೀ . . . . ಟ್ಟು ಅವರವರ ಯೋ . . . . ಭ್ಯಾಸವನ್ನು ಮಾಡಿಸಿ . . . . ಯೋಗ್ಯ ತಾನು ಸಾ . . . . ಮಾಡಿಸಿರುವಲ್ಲಿ . . . . ಬ್ಬ ಬ್ರಾಹ್ಮಣನು . . . . ನ್ನು ಮಾಡಿದ ವರುಷ . . . . ರ್ಯ ಯು. ವನು . . . . ರ್‍ಯ ಕಾರ್ಯಗಳು ನೋಡಬೇಕಾ . . . . ಗಳು ಆದುದರಿಂದ ಸಕಲ . . . . ಅನಂತರ ಯೀ ಮಕ್ಕಳುಗಳು . . . . ವರಿಗೆ ಪ್ರತ್ಯೇಕ ಪ್ರತ್ಯೇಕ ವಿಭಾಗ ಮಾ . . . . ಲೋಚಿಸಿ ಮಾಡಿದ್ದುಯೇನೆಂದರೆ ; ಈ . . . . ಪುಸ್ತಕ ತಮ್ಮ ಬಳಿಯಲ್ಲಿ ಯಿ . . . . ಕೊಟ್ಟರು. ಈ ಭಟ್ಟಿಯು . . . . ಡಿ ಕೊಟ್ಟು ಯಿಂಭರ್ತುಲ . . . . ವುಯೀತಗೆ ಕೊಟ್ಟು ವಿಕ್ರ . . . . ಕೊಟ್ಟು ತಾ . . . . ತೆಗೆದುಕೊಡಬೇಕುಯೆಂತ . . . . ನ್ನು ಬಿಟ್ಟು ಹೊರಟು ಹೊ . . . . ಮಂದಿ ಮಕ್ಕಳಿಗೂ ಬು . . . . ಟ್ಟಿಗೆ ಸಭಾ ಪಾಂಡಿತ್ಯ . . . . ಮಾಡಿ ಯೀ ವುಭಯ . . . . ಚನೆಗನುಕೂಲವಾಗಿ . . . .

❖❖

೯೭
ಹಲಸನಾಡ ಮಾಗಣಿ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಪ್ರಾಕು ಯೀ ಮಾಗಣಿಯು ಬೈರಾದೇವಿ ಕಾಲದಲ್ಲು ಅರೆಹೊಳೆಯಿಂದ ಆಚೀನ ಸೀಮೆ ಯಾವತ್ತು ಆಳಿದಲ್ಲು, ಯಿತಲಾಗಿ ತಡರಿ[>ಕದರಿ] ಸೀಮೆಯಲ್ಲು ಹೊನ್ನೆಕಂಬಳಿಯಂಬವನು ಪ್ರಬಲವಾಗಿ ಹಲಸುನಾಡು ಸೀಮೆಯು ತನ್ನ ಆಧೀನಕ್ಕೆ ಮಾಡಿಕ್ಕೊಂಡು, ಯೀ ಮಾಗಣಿಯು ತನ್ನ ಕಡೆ ಶಂಕರನಾರಾಯಣಭಟ್ಟ ಯಂಬವನ ಆಧೀನಮಾಡಿ ನಡದು ಬರುತ್ತಿದ್ದಲ್ಲಿ, ಯೀ ಶಂಕ್ರನಾರಾಯಣಭಟ್ಟನು ಯೀ ಮಾಗಣಿ ವಳಗು ಹರಕ್ಕೊ[+ರ]ಗ್ರಾಮದಲ್ಲು, ಬಗ್ವಾಲಿಯಂಬ ಉಪಗ್ರಾಮದಲ್ಲು ಕೋಟಿಯನ್ನು ಕಟ್ಟಿ, ಹಾಕಮನಲಿಸಿ ಜಾಗಾಯಂತ ಮಾಡಿ, ಹೊನ್ನೆ ಕಂಬಳಿ ತಾಲೂಕ ಯಿರುವ ಮಾಗಣಿಗಳು: ೧ ಹಲಸು ೧ ಕಬನಾಡು ೧ ಮೂಡಣನಾಡು.

ಯೀ ಪ್ರಕಾರ ಸೀಮೆಗಳು ತನ್ನ ತಾಲೂಕಿಗೆ ಮಾಡಿಕ್ಕೊಂಡು ಅನುಭವಿಸಿಕ್ಕೊಂಡು ಬಗ್ವಾಲಿ ಹೊಬಳಿಯಂತ ಹೆಸರು ಹಾಕಿ ನಡಕೊಂಡು, ಯೀ ಹಲಸುನಾಡ ಮಾಗಣಿ ಗ್ರಾಮ ೧೬ರನ್ನು ಮಾಡಿ ಅನುಭವಿಸಿಕೊಂಡು ಬರುವಲ್ಲಿ, ಆಮೇಲೆ ಹೊನ್ನೆಕಂಬಳಿ ಕಯ್ಯ, ನಗರದ ವೆಂಕಟಪ್ಪನಾಯಕರು ಹೊಡದು ತೆಗೆದುಕ್ಕೊಂಡು, ಮೇಲೆ ಯೀ ಹೊಬಳಿಗೆ ಪ್ರಾಕು ಯಿರುವ ಮಾಗಣಿ ಸದರಿ ಪ್ರಕಾರ ೧೦[>೧೧] ಹಾಲಿ ಕೊಟ್ಟುರು, ಕುಂದಾಪುರ ೧, ಯೆಳರೆ ೧, ಬೈಸೂರು ೧ ಯೀ ಪ್ರಕಾರ ಮೂರು ಉಭಯ ಮಾಗಣಿ ೧೪. ಯಿದು ಶಿವಾಯಿ ಬೈರಾದೇವಿ ತಾಲೂಕಿನಲ್ಲಿ ಯಿರುವ ಹಳ್ಳಿಗೆರಿ ೧, ಕುಳಕೊಡು ೧, ಬೈರೂರು ೧, ಕೊಲಾಪಉತ್ತರ ೧, ಯೀ ಪ್ರಕಾರ ಮಾಗಣಿ ನಾಲ್ಕು ಬಸುರೂರಿಗೆ ಉತ್ತರವಾಗಿ ಯಿರುವ 'ಬಸರೂರುಉತ್ತರ'ಯಂತ ಹೆಸರು ಯಿಟ್ಟು ನಡದು ಬುರವ ಮಾಗಣಿ ೧, ಅಂತು ಮಾಗಣಿ ೧೮ರ ವಿಂಗಡಹೊದು.

೧ ಕೆರೆಕಟ್ಟ ಹನುಮಂತದೇವರು

೧ ಹರಕೂರ ಬೈಲೂರವಿಷ್ಣುಮೂರ್ತಿದೇವರು

೧ ಕಾಂಚಾನಿ ಮಹಿಶಿಮರ್ದಿನಿ ಅಮ್ಮಾನವರು

೧ ನುಚಾಡಿ ಶಿದ್ದೇಶ್ವದೇವರು

೧ ಮೂಡದೆ ದುರ್ಗಾದೇವರು

೧ ಮಠದ ಸಿದ್ಧೇಶ್ವರದೇವರು

೧ ಹಳಿಹೊಸ ಮಂದು ಮಹಲಿಂಗದೇವರು

೧ ಗುಡುಂಮಾಡಿ ದುರ್ಗಾದೇವರು, ಲಕ್ಷ್ಮಿನಾರಾಯಣದೇವರು

೧ ಯಳ್ಳೂರಮಠದ ಗೋಪಿನಾಥದೇವರು

೧ ಕಾರಿಬಳಲಿ ವಿನಾಯಕದೇವರು, ೧ ಸೋಮೇಶ್ವರದೇವರು

೧ ಹರವರಿಮಠದ ಗೋಪಾಲಕೃಷ್ಣದೇವರು

೧ ಬ್ರಹ್ಮೇರಿಮಠದ ನರಸಿಹ್ಮದೇವರು

೧ ಕೊರಳಿ ವಿಷ್ಣುಮೂರ್ತಿದೇವರು

೧ ಆಲೂರ ರಾಮೇಶ್ವರದೇವರು

೧ ಸೇನಾಪಾದ ವಿಷ್ಣುಮೂರ್ತಿದೇವರು ೧, ಮಠದ ಗೋಪಾಲಕೃಷ್ಣದೇವರು

೧ ಬಾರಂದಾಡಿ ಮಹಾಲಿಂಗದೇವರು ೧, ವಿಷ್ಣುಮೂರ್ತಿದೇವರು

೧ ರಾಮೇಶ್ವರದೇವರು ೧, ವಂಡಶೆ ತಿರುಮಲದೇವರು

೧ ದುರ್ಗಾದೇವರು ೧ ರಪಾ ಮ[>ದು]ರ್ಗಾದೇವರು

೧ ವಿನಾಯಕದೇವರು

೧ ವಂಡಸೆ ಜಂಗಮರ ಮಠ, ಶಿವಭಕ್ತರ ಕಾಲದಲ್ಲು

೨೭

ಯೀ ಪ್ರಕಾರ ಕೈಫಿಯತು ಮಾಗಣಿ:

೧ ಬ್ರಹ್ಮೆ ಶ್ರೀ ಕೃಷ್ಣಯ್ಯ ೧, ಆತ್ರಾಲಿ ಚನ್ನಯ್ಯ ಶೆಟ್ಟಿ

೧ ಆಲೂರ ಕೃಷ್ಣಯ್ಯ ಜೊಸಿ ೧, ಕಡಶಂಕರಭಟ್ಟ ನಾರಣಶೆಟ್ಟಿ

೧ ಹರವರಿ ಶಂಕರನಾರಾಯಣಶೆಟ್ಟಿ

೧ ಸೇನಾಪುರ ಕೃಷ್ಣಚಾರಿ ೧, ಕರಿ ಬಳಿಲ

೧ ಹಳಿಕಲ್ಲಿ ೧ ರೊದವಲ್ಲಿ ರಂಗಯ್ಯ ಹೆಗಡೆ

೧ ಉಪಗ್ರಾಮ ೫ಕ್ಕೆ

೧ ಬಗ್ವಾಲಿ

೧ ನಾರಕಲ್ಲಿ

೧ ಮಾಡಿಕೊಡಳು ೧ ಹೊಳಮೊಗೆ

೧ ಹೊರಣು

೧೬

ಯೀ ಪ್ರಕಾರ ಗ್ರಾಮ ೧೬ಕ್ಕೆ ಶಾನುಭವರು :

ಪ್ರಾಕು ಶಂಕರನಾರಾಯಣಭಟ್ಟನ ಕಾಲದಾರಭ್ಯ ಸ್ಥಳ ಪ್ರತಿ[>ವೃತ್ತಿ] ಹಲಸುನಾಡ ನಾಗಪ್ಪಯ್ಯನ ಹಿರಿಯವರು ಲಕ್ಷ್ಮಿನಾರಾಯಣನಾಯಕನ ಕಾಲದಾರಭ್ಯ ತುಕುಡಿ ಆಖೈರು ವರೆಗೆ ನಡದು ಬಂತು, ಉಭಯ ಪ್ರತಿ [>ವೃತ್ತಿ] ಚನ್ನಪ್ಪಯ್ಯ ಮೂರಪ್ಪ ವೊಡೇರ ಕಾಲದಾರಭ್ಯ ನಡದು ಬಂತು. ಕುಂಪಣಿ ದರಬಾರು ಆದಮೇಲೆ

೧ ಹಲಸುನಾಡ ಚನ್ನಪ್ಪಯ್ಯನವರ ಕಡೆಯ ವರಿಗೆ

೧ ರಾಮಪ್ಪಯ್ಯ

೧ ನಾಗಪ್ಪಯ್ಯನವರ ಕಡೆ ರಾಮಪ್ಪಯ್ಯ ಉಡೂರ ಕುಣ್ಯಾಡಿ ಸಹಾ

೧ ಹೊಸ್ತಾಗಿ ಮೊಕರುರು ಆದ ಬಸರೂರು ಚನ್ನಡಿ

೩ [>೪]

೧ ಯೀ ಮಾಗಣಿಗೆ ಯಿರುವ ದೇವರ್ದು ೨೪ರ ವಿವರ:

ಹಕಲಾಡಿ ಮಾಗಣಿ ಕೊಳಲ ಚನ್ನಕೇಶವದೇವರ ಉದ್ಭವ, ಕೊಲ್ಲುರ ಉತ್ಕ[>ತ್ತ]ರಕ್ಕೆ ದಾಖಲು ಆದ ಬಗೆ: ಯೀ ನಗರಕ್ಕೆ ಸೇರಿದ ಕಬುನಾಡು ೧ ಮೂಡಣನಾಡು ೧ ಉಭಯ ೨, ಜಾತಾ ಮಾಗಣಿ ೧೬ನ್ನು ಜಂಗಮರ ದಿವಸ, ಬಹದರನ ದಿವಸ, ಪಾಚ್ಚಾಯನ ದಿವಸದ ವರೆಗೆ ಬಗ್ವಾಲಿ ಹೊಬಳಿಯಂತ ಹೆಸರು ಮಾಡಿಕ್ಕೊಂಡು, ಕುಂದಾಪುರದಲ್ಲಿ ಜಂಗಮರ ಕಾಲದಾರಭ್ಯ ಕಚ್ಚೇರಿ ಕುಂದಾಪುರದಲ್ಲು ಮಾಡಿಕ್ಕೊಂಡು, ಬದುಕು ಮಾಡಿದವರ ಯಿಟ್ಟು, ಮಣಿಗಾರತನ ಮಾಡಿದವರು ಮುಖಾಂತ್ರ ಯೀ ಮಾಗಣಿ ನಡಕೊಂಡಿತ್ತು.

ಆಮೇಲೆ ಸುಲತಾನನ ದಿವಸದಲ್ಲಿ ರಾಕ್ಷಸದಾರಭ್ಯ ಹಲಸುನಾಡು ತುಕುಡಿಯಂತ ಮಾಡಿ ಯಿತ್ತು. ತುಕುಡಿಯಲ್ಲು ಯೀ ಹಲಸುನಾಡು ಮಾಗಣಿ ಗ್ರಾಮ ೧೬ರ ಮಗುವಿನ ತುಕುಡಿಗೆ ಗ್ರಾಮ ೧, ಮಳಿರುಭಾವಿಗೆ ಗ್ರಾಮ ೧೫, ಯಿಡೂರು ಕುಣ್ಯಾಡಿ ೧, ಪಡುಕೊಣೆ ಪೈಕಿ ಬಡಾಕೆರೆ ಗ್ರಾಮ ೧, ಮಳಿರುಕೆರೆಗ್ರಾಮ ೧, ಹಳ್ಳಿಕೇರಿ ಪೈಕಿ ಹೇರು ೧ – ಯೀ ಪ್ರಕಾರ ಗ್ರಾಮಗಳು ಕೂಡಿ ತುಕಡಿ ಮಾಡಿ ಯಿದ್ದಲ್ಲಿ ಯೀ ಪ್ರಕಾರಕ್ಕೆ ನಡೇತು.

ಸಿದ್ಧಾರ್ತಿ ಸಂವತ್ಸರದಲ್ಲು ಕುಂಪನಿ ಸರಕಾರ ಆದಮೇಲೆ ಪ್ರತ್ಯೇಕ ಮಾಗಣಿ ಆದ್ದರಿಂದ ಪಟೇಲರನ ಮೊಕರರು ಮಾಡಿ ಪಟೇಲರ ಮುಖಾಂತ್ರ ನಡದು ಬಂದ ಗ್ರಾಮದ ವಿವರ:

ಹರಕೂರು ಗೋವಿಂದ ಶೆಟ್ಟಿ ಪಕೀರಸಲಾ[>ಪಕೀರಶೆಟ್ಟಿ]

೧ ಹಕಲಾಡಿ ವೆಂಕಟಹೆಗಡೆ

೧ ವಂಡಸೆ ತಿಮ್ಮಪ್ಪಶೆಟ್ಟಿ

೧ ಚನ್ನಯ್ಯಶೆಟ್ಟಿ, ೧ ಕುಂಡಬಾದರಾಡಿ ಚಿಕ್ಕಶೆಟ್ಟಿ

೧ ತಿಮ್ಮರಸಯ್ಯ, ೧ ಸೂಜಾಡಿ ದುಗ್ಗಯ್ಯ

೧ ಗುಡಂಮೂಡಿ ಪಕೀರಶೆಟ್ಟಿ

೧ ಯಳೂರ ಸುಬ್ಬಶೆಟ್ಟಿ, ೧ ಪರಮ್ಮೆಸೆಟ್ಟಿ

❖❖

೯೮

ಹಾರನಾಡ ಮಾಗಣೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ವಿಶ್ವನಾಥನಾರಾಯಣ. ಯೀ ಮಾಗಣೆಯು ಪ್ರಾಕು ಬಾರಕೂರು ಭೂತಪಾಂಡ್ಯರಾಯನ ಸಂತತಿಯಲ್ಲು ಹುಟ್ಟಿದ ಹೊನ್ನೆಕಂಬಳಿಯಂಬವನು ಆಳಿಕ್ಕೊಂಡು ಬರುತಿದ್ದಲ್ಲಿ, ಹೊನ್ನೆಕಂಬಳಿ ಕಡೆ ಶಂಕರನಾರಾಯಣಭಟ್ಟನು ಬಗ್ವಾಲಿಯಲ್ಲು ಕೋಟಿಕಟ್ಟಿ ಬಗ್ವಾಲಿ ಹೊಬಳಿಯಲ್ಲು ಕೂಡಿಶಿಕೊಂಡು ಹಾರನಾಡ ಮಾಗಣೆಯಂತ ಹೆಸರುಯಿಟ್ಟು ಬರುವ ಕ್ರಮಾ, ಪ್ರಾಕು ಲೋಕಾದಿತ್ಯರಾಯನ ಕಾಲದಲ್ಲು ತ್ರಿಗರ್ತದೇಶದ ಸಂಸ್ಥಾನಾ . . . ಲು ಹಾರವನಾಡುಯಂಬ ಸವಸ್ಥಾನ ೧ ಪ್ರತ್ಯೇಕ ಯಿರುವದರಿಂದ ಲೋಕಾದಿತ್ಯರಾಯನು ಆಳಿಕ್ಕೊಂಡು, ಲೋಕನಾಥೇಶ್ವರನ ಪ್ರತಿಷ್ಟೆಯನ್ನು ಮಾಡಿ, ಕಲಿಯುಗದ ಆದಿಯಲ್ಲು ಆಳುವಾಗ್ಯೆ ಸದರಿ ಸಂಸ್ಥಾನ ಳಲ್ಲು ಬಾರಕೂರ ೧ . . . .

ಹೊಗಲಾಗಿ ಯೀ ತಾಲೂಕಿಗೆ ಹೊ[>ಹಾ]ರನಾಡುಯಂಬ ಹೆಸರು ಹಾಕಿದ್ದರಿಂದ, ಯೀ ವರೇಗೆ ನಡೀತು. ಸದರಿ ಯೀ ಮಾಗಣೆಗೆ ಹೊನ್ನೆಕಂಬಳಿ ಕಾಲದಾರಭ್ಯ ಗ್ರಾಮ ೧೫.

ವಿವರ:

೧ ಕಲೂರ	೧ ಹಟ್ಟಿಯಂ	೧ ಪಾಸನೂಗ್ರಾ	
೧ ಸಬಲಾಲಿ	೧ ಕರಿಕೆ	೧ ಗುಳಮಲಿ	
೧ ರಾಜಾಲಿ	೧ ಕೈಮ	೧ ಕೆಂಚನೂರು	
೧ ದೇವಲ ಕುಂದ	೧ ಕಣ್ಣನ	೧ ಸವಕೂರು	೧ ಕರಕುಂಬಿ
	೧ ಮುರೂರು		

೧೫

೧೧ ಉಪಗ್ರಾಮ:

೧ ಜಾಡಿ	೧ ಹೊಸಕಳಿ	೧ ಹೊಸಮದ	೧ ಹೆರೆಜಾಲಿ
೧ ಕೂಕನಾಡು		೧ ಮೂಡಕುರು	೧ ಗುದರೆ
೧ ಹರೆಗೊಡು	೧ ಕಟ್ಟಿ	೧ ಶಂಕರಪ್ಪನ ·ಕೋಡ	

ದೇವಸ್ಥಾನ ೨೦:

೧ ಮಹಲಿಂಗದೇವರು ಮೂ[>ಮಾಂ]ಡವರುಷ[>ಷಿ] ಪ್ರತಿಷ್ಟೆ, ೧ ವೆಂಕಟರಮಣ ದೇವರು, ಯಿತ್ತಲಾಗಿ ವೆಂಕಟೇಶ ಮರಸನ್ತಿ . . . .

೧ ಕನ್ಯಾಸ ವಾಸುದೇವ ೧ ದೇವಲಕುಂದ ವಿಷ್ಣುಮೂರ್ತಿದೇವರು

೧ ಮೂಡೂರ ಗಣಪತಿ ೧ ಕೆಂಚನೂರ ನಾಗದೇವ ಸಹ

೧ ಶಂಕರಪ್ಪನ ಕೊಡಲು ೧ ಹೊಸಮಠ ಗೋಪಾಲಕೃಷ್ಣದೇವರು

ವೆಂಕಟರಮಣದೇವರು

೧ ಕರಕುಂಬಿ ವೆಂಕಟರಮಣ ದೇವರು, ೧ ದುರ್ಗಾಪರಮೇಶ್ವರಿ

೧ ಗುಡರೆ ತಿರುಮಲದೇವರು ೧ ಸವನೂರ ದುರ್ಗಾಪರಮೇಶ್ವರಿ ಅಮ್ಮಾನವರು

೧ ವಿಶ್ವೇಶ್ವರದೇವರು ೧ ಗೋಪಾಲಕೃಷ್ಣದೇವರು

೧ ಹನುಮಂತದೇವರು

೧ ವಿನಾಯಕದೇವರು

೧ ಶಿವಾಮೌನೇಶ್ವವರದೇವರು

೧ ಹಟ್ಟಿಯಂಗಡಿ ಲೋಕನಾಥದೇವರು

೧ ಗುಳವಾಡಿ ವಿಶ್ವೇಶ್ವರದೇವರು

೧ ಶಂಕರನಾರಾಯಣದೇವರು

---

೨೦ ದೇವಸ್ಥಾನ

೧ ಹಟ್ಟಿಯಂಗಡಿಯಲ್ಲಿ ಬಸ್ತಿ ೧ ಕರಕುಂಚಿಯಲ್ಲು ಮಠ

೨ ಜಂಗಮರ ಮಠ

೩ ಯೀ ಮಾಗಣಿಗೆ ಪ್ರತ್ಯೇಕ ಬದುಕು ಮಾಡಿದವರು ಲಾಗಾಯಿತು ಆರಭ್ಯಾ ಇಲ್ಲಿ ಮಣಿಗಾರತನ ಮಾಡಿದವನ ಮುಖಾಂತ್ರವೆ ನಡೀತು. ಶಾನುಭವಿಕೆ ಮಾಡಿದವರು:

ಪ್ರಾಕು ಹಟ್ಟಿಯಂಗಡಿಯಲ್ಲು ಮುರುಗು ಶಾನುಭವನ ಹಿರಿಯವರ ಕಾಲದಾರಭ್ಯ ಸ್ಥಳದ ಪ್ರತಿ[>ವೃತ್ತಿ] ಹೊನ್ನೆಕಂಬಳಿ ಆರಭ್ಯಾ ನಡದು ಬರುತ್ತದೆ. ಯೀಗ ಅವರ ಸಂತಾನದ ಗಂಗಾಧಯ್ಯ ಯಂಬವನು ಯಿದ್ದಾನೆ.

ಉಭಯದ ಪ್ರತಿ[>ವೃತ್ತಿ] ಕೊಳಾಲದ ವೆಂಕಪ್ಪಯ್ಯನು ನಗರದಲ್ಲು ಬಸವಪ್ಪನಾಯಕರ ಕಾಲದಾರಭ್ಯಾ ಮಾಡಿಕ್ಕೊಂಡು ತನ್ನ ಕಡೆ ಗುಮಾಸ್ತೆರಲ್ಲು ಯಿಟ್ಟು, ಸುಲತಾನನ ಕಾಲದ ವರೆಗೆ ನಡೇತು. ಹಾಲಿ ಕುಂಪಣಿ ಕಾಲದಲ್ಲು ಪ್ರಾಕು ಸ್ಥಳದ ಪ್ರತಿ>ವೃತ್ತಿ ಯಿರುವ ಪೈಕಿ ಯೀಗ

ಆ ಸ್ಥಳದ ಪ್ರತಿ[>ವೃತ್ತಿ]ಗಂಗಾಧರೈಯ್ಯಗೆ

೧. ಹಟ್ಟಿಯಂಗಡಿ ೧ ಕುಂಪನಿ ಅಮಲಿನಲ್ಲಿ ಮೊಕರೂರಾದ ಮಹಾದೇವೈಯ್ಯಗೆ . . . .

೧. ಕರಿಕೆ ೧. ಕಲೂರು ಸದರಿ ಪ್ರಕಾರ ಹಾಲಿ ಮೊಕರೂರು ಆದ ಅನಂತಯ್ಯಗೆ

೧. ಕೈಮ	೧. ಸಬಲಾಡಿ	೧ ಗುಳುವಾಲ
೧. ಕನ್ಯಾಸ	೧. ಚಾಲುಡಿ	೧. ಸವಕೂರು
೧. ಸಾಸನೂರು	೧. ರಾಡಾಲಾಡಿ	೧. ಕರಕುಂಬಿ
೧. ಮುಡೂರು	೧. ದೇವಲಕುಂದ	೧. ಕೆಂಚನೂರು
೬	೫	೪

೩ ರ ಗ್ರಾಮ ೧೫ದರ ಪಟೇಲರು ಕುಂಪಣಿ ಅಮುಲು ಲಾಗಾಯಿತು:

೧. ಕಲೂರ ಸೂರಪ್ಪ ಸಾವಂತ ವೀರಪ್ಪ ೧. ಕೈಮ ಚಿಕ್ಕಯ್ಯಶೇಟ್ಟಿ

೧. ಪಬಲಾಡಿ ಸುಬ್ಬಹೆಗ್ಗಡೆ ಮಿಂಗ್ಗಲಿ ೧. ಕನ್ಯಾಕ ವಿಷ್ಣು ಅಡಿ ಬೆಡಶೆಟ್ಟಿ

೧. ರಾಚಾಡಿ ಪರಮೈಶೆಟ್ಟಿ

೧. ಚಾಲಾಡಿ ಸುಬ್ಬಶಾಮಯ್ಯ ೧. ಸಾಸನೂರ ಶೇಷಾಚಾರಿ

೧. ದೇವಲಕುಂದಕ್ಕೆ ಕಾಮೈಶೆಟ್ಟಿ ವೆಂಕಟಹೆಗಡೆ

೧. ಹಟ್ಟಿಯಂಗಡಿ ಐಸಿಲ ಮಾದಯ್ಯಶೆಟ್ಟಿ

೧. ಕರಿಕೆ ನಂದೈಯ್ಯಾಶೆಟ್ಟಿ ೧. ಮೂಡೂರ ತಿಮ್ಮೆಯ್ಯಶೆಟ್ಟಿ

೧. ಗುಳವಾಡಿ . . . . ದಕೆ ಲೂತಿಮೈಯ್ಯಶೆಟ್ಟಿ

೧. ಸಾವಕಾರು ಮೊನಪ್ಪ ಹೆಗಡೆ, ಕೃಷ್ಣಯ್ಯ

೧. ಕೆಂಚನುರ ಪುಟ್ಟಯ್ಯಾ ಹೆಗಡೆ

೧. ಕರಕುಂಜಿ ನಾಗಪ್ಪಶೆಟ್ಟಿ ಕುಪ್ಪಯ್ಯ

೧೫

ಯೀ ಪ್ರಕಾರ ನಡೆದು ಬರುತ್ತದೆ.

❖❖

೯೯
ಹೆಮ್ಮಾಡಿ ಮಾಗಣೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಹೇಮಂತರಾಯ ಯಂಬ ಅರಸು ಯೀ ವೂರಲ್ಲು ಪಟ್ಟಣಾ ಮುಂತಾಗಿ ಕಟ್ಟಿ, ಪ್ರಾಕು ವಂಡಶೆಯೆಂಬ ಸ್ಥಳದಲ್ಲಿ ಶ್ರೀ ನಾರಾಯಣದೇವರ ಮೂರ್ತಿಯನ್ನು[>ಯು] ಹೊಳೆಯಲ್ಲು ಜಲದಲ್ಲು ಯಿರುವುದರಿಂದ ಯೀ ಹೇಮಂತಪ್ಪಗೆ ಸ್ವಪ್ನವಾಗಿ ಮೂರ್ತಿತಂದು ಪ್ರತಿಷ್ಟೆಮಾಡಿ, ನಾರಾಯಣದೇವರು ಯಂಬ ಹೆಸರುಯಿಟ್ಟು, ಪೇಟೆ ಮುಂತಾಗಿ ಕಟ್ಟಿ ಆಳಿಕ್ಕೊಂಡು, ಯೀ ದೇವರಿಗೆ ಉತ್ತರ ಮುಂತಾಗಿ ಬಿಟ್ಟು ಯಿರುವದರಿಂದ, ಆಮೇಲೆ ಆತನು ಹೋದ್ದರಿಂದ ಪಟ್ಟಣವನ್ನು ಹಾಳಾಗಿ ಹೋಯಿತು. ಯೀಗ ಆ ಪಟ್ಟಣದಲ್ಲಿದ್ದ ಭಾವಿಗಳು ನೆಲಗಟ್ಟು ಮುಂತಾಗಿ ಅದೇ ಸ್ಥಳ ಬರೆ ಸ್ಥಳವಾಗಿ ಅದೆ.

ಆಮೇಲೆ ಬಾರಕೂರ ದೇಶ ಪಾಂಡ್ಯರಾಯನ ಕಡೆ ಹೊನ್ನೈಕಂಬಳಿಯು ಯೀ ತಾಲೂಕು ಹೊರನಾಡು ವಗ್ಯೆರೆ ಆಳಿಕ್ಕೊಂಡು ಯಿರುವಾಗೆ ತನ್ನ ಕಡೆ ಶಂಕರನರಾಯಣಭಟ್ಟನು ಬಗ್ವಾಲಿಯಲ್ಲು ಕೋಟೆ ಕಟ್ಟಿದರಿಂದ ಆ ಕೋಟೆಯಲ್ಲು ಯಿದ್ದುಕ್ಕೊಂಡು, ಯೀ ಮಾಗಣೀಯು ತನ್ನ ಕಡೆಯವರ ಯಿಟ್ಟು ಆಳಿದ್ದರಿಂದ ಬಗ್ವಾಲಿ ಹೊಬಳಿ ತಾಲೂಕು ಯಂತ ಬರದು ಬ[>ಇ]ರುತದೆ. ಆಮೇಲೆ ಕಾಲದಾರಭ್ಯಕ್ಕೂ ಬಗ್ವಾಲಿ ಹೊಬಳಿಯಲ್ಲಿಯಂತ ನಡದು ಬರುತ್ತದೆ.

ಆ ಹೊನ್ನೆಕಂಬಳಿ ತಾಲೂಕು ಶಂಕರನಾರಾಯಣಭಟ್ಟನ ದಿವಸದಲ್ಲು ಸ್ತಳದ ಪ್ರತಿ[>ವೃತ್ತಿ] ಶಂಭಶಾನುಭವನ ಸಂತತಿ, ಶಾನುಭವ ಅನಂತಯ್ಯನ ವರಿಗೆ ನಡದು ಬಂತು. ಆಮೇಲೆ ಅವರು ತೊಶೆಖಾನಿ ಪ್ರತಿ[>ವೃತ್ತಿ]ಯು ವಿರೋಧಿ ಸಂವತ್ಸರದಲ್ಲು ದೊಡ್ಡ ನವಾಬರ ದಿವಸದಲ್ಲು ತೊಶೆಖಾನಿ ಪ್ರತಿ[>ವೃತ್ತಿ]ಯಂತ ಮಾಡಿದರು. ಆಮೇಲೆ ಸುಲತಾನ ದರಬಾರ ಆದ ಮೇಲೆ ಆ ಸ್ಥಳದ ಪ್ರತಿ[>ವೃತ್ತಿ]ಯು ೧ ಮಹಬಲ್ಪಿ[>ಲ್ಯೆ] ೧ ಯೀ ಪ್ರಕಾರ ಯರಡು ಜನ ಯಿರುತ್ತಿತು. ಹಾಲಿ ಕುಂಪಣಿ ದರಬಾರು ಆದ ಮೇಲೆ ಮಾಗಣೀಗೆ ಆಸಾಮಿ ೧ ಆಗಿರುವದರಿಂದ ಮಹಾಬಲ್ಯೆಯಗೆ ನೇಮಕಾ ಮಾಡಿ ಯಿರುವದರಿಂದ ಮಹಾಬಲಯ್ಯನು ಬರದು ಬ[>ಇ]ರುತ್ತಾನೆ.

ಯೀ ಶೀಮೆಯು ಲಾಗಾಯಿತು ಮಣಿಗಾರರು ಯಿಟ್ಟು ನಡದು ಬರುತ್ತಿದ್ದಲ್ಲಿ, ಯಿತಲಾಗಿ ತುಕುಡಿಯನ್ನು ಸುಲತಾನನ ಕಾಲದಲ್ಲು ರಾಕ್ಷಸ ಸಂವತ್ಸರದಲ್ಲು ಗೊತ್ತುಮಾಡಿ ಯಿರುವದರಿಂದ ಮುಗುವಿನ ತುಕಡಿಯಲ್ಲಿ ನಡದು ಬಂತು. ಆಮೇಲೆ ಕುಂಪನಿ ದರಬಾರು ಆಗಿರುವದರಿಂದ ಪಟೇಲರು ಯಿಟ್ಟು ನಡದು ಬಂದ ವಿವರ:

೧ ಹೆಮ್ಮಾಡಿ ಗ್ರಾಮಕ್ಕೆ ಮಂಜೆ ಮೇಲಾಡಿ ಪರಮೇಶ್ವರ ಹೆಬ್ಬಾರು.

೧ ಉಪ್ಪಿನಕೂರು ಗ್ರಾಮಕ್ಕೆ ರಾಮಪ್ಪ ಲಕ್ಷ್ಮಯ್ಯ ಮೇಲಾಡಿ

೧ ಲಾಲಕುರಿ[>ಬಾಲಿಕೂರು]ಗೊವಾಸು[>ಗೋಪಾಲ]ದೇವ ೧, ಸುಬ್ಬಮಯ್ಯ ೧

೩

೨ ಉಪಗ್ರಾಮ ಅಮಲ್ಲಾಡಿ (ಹರೆಗೊಡ್ಲು)

---

೫ ಯೀ ಗ್ರಾಮಗಳಲ್ಲಿ ಯಿರುವ ದೇವಸ್ಥಾನ:

೧. ಹೆಮ್ಮಾಡಿ ನಾರಾಯಣದೇವರು

೧. ಉಪ್ಪಿನಕೂರು ವಾಸುದೇವರು

೧. ನರಸಿಂಹ್ಮದೇವರು

೧. ಸೆಲಕಡೆಲಿ[>ವಿ] ನಾಯಕದೇವರು

೧. ಹರೆಗೊಡ ವಿಷ್ಣುಮೂರ್ತಿದೇವರು

೧. ದತ್ತಾತ್ರಯದೇವರು

೧. ಗೋಪಾಲಕೃಷ್ಣದೇವರು

೧. ನರಸಿಂಹ್ಮದೇವರು (ಉಪ್ಪಕರ ಪೈಕಿ)

೧. ಬಾಲಿಕೂರು ಗೋಪಾಲಕೃಷ್ಣದೇವರು

೧. ವಿನಾಯಕದೇವರು

೧. ಗೋಪಿನಾಥದೇವರು

೧. ಬರ್ಮದೇವರು

---

೧೨ ಯೀ ಪ್ರಕಾರ ದೇವರು ಹನ್ನೆರಡು.

❖❖

೧೦೦
ಹೊಸಂಗಡಿ ಮಾಗಣೆ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೩

ಯೀ ಹೊಸಂಗಡೆ ಮಾಗಣೆ, ಯೀ ಪ್ರಾಕು ಲೋಕಾದಿತ್ಯರಾಯನು ಯೀ ರಾಜ್ಯವನ್ನು ಆಳುತ್ತಾ, ಯೀ ಮಾಗಣೀಯು ಘಟ್ಟದ ಸರಹದ್ದು ಮಲಘತು ಆಗಿ ಯಿರುವದರಿಂದಾ, ಮಲಘತು ಕಡದು ಗ್ರಾಮಗಳ ಮಾಡಿ, ಹೊಸಂಗಡಿಯೆಂಬ ಜಾಗಾದಲ್ಲು ಅಂಗಡಿ ಪೇಟೆ ಮುಂತಾಗಿ ಕಟ್ಟಿ, ಕೋಟೆ ಮುಂತಾಗಿ ಕಟ್ಟಿದ್ದರಿಂದ ಹೊಸಂಗಡಿಯಂಬ ಜಾಗಾ ಪೇಟಸ್ತಳಕ್ಕೆ ಬಿತ್ತು. ಮಾಗಣೆ ಯೀ ಪ್ರಾಕು ಯಿಲ್ಲದೆ ಹೊಸ್ತಾಗಿ ಮಲೆಘತು ಕಡದು ಮಾಡಿದ್ದರಿಂದ, ಮಾಗಣೆ ಯೀ ಲೋಕಾದಿತ್ಯರಾಯನು ಆಳಿದ ಮೇಲೆ ಬಾರಕೂರ ತಾಲೂಕು ಮದರ್ಸವ ಕಡೆ ಹೊನ್ನೆಕಂಬಳಿಯು ಆಳಿಕ್ಕೊಂಡು ಬರುವಾಗೆ, ಯೀತನ ಕಡೆ ಶಂಕರನಾರಾಯಣಭಟ್ಟ ಯಂಬವನು ಆಳುವಾಗ್ಯೆ ಕಸಬೆ ಜಾಗಾ ಬಗ್ವಾ[+ಲಿ]ಯಂತಲು ಹೊಬಳಿಗೆ ಹೆಸರು ಯಿಟ್ಟದರಿಂದ ಸದರಿ ಮಾಗಣೆಯನ್ನು ಯೀ ತಾಲೂಕಿಗೆ ದಾಖಲು ಮಾಡಿದರಿಂದ, ಆತನ ದಿವಸದಲ್ಲು ತನ್ನ ಕಡೆ ಮಣಿಗಾರನ ಯಿಟ್ಟು ನಡದು ಬಂತು.

ಆಮೇಲೆ ಕೆಳದಿ ವೆಂಕಟಪ್ಪನಾಯಕನು ಯೀ ರಾಜ್ಯವನ್ನು ಹೊನ್ನಯ್ಯ ಕಂಬಳಿ ಹತ್ರ ತೆಗದುಕ್ಕೊಂಡ ಮೇಲೆ ಕೆಲಉ ದಿವಸಉ ಬಗ್ವಾಲಿ ಹೊಬಳಿ ಮುಖಾಂತ್ರ ನಡೇತು.

ಆಮೇಲೆ ತನ್ನ ಮನವರ್ತಿಗೆ ಆಗತಕ್ಕ ಸಾಮಾನಿನ ಬಗ್ಯೆ ಬೇಕು ಯಂಬದಾಗಿ ಖರೀದಿ ಹೊಬಳಿಯಂತ ಮಾಡಿ ಕಾರಕಳ ೧ ಭಟಕಳ ಶಿರಾಲಿ ವಗೈರೆ ಮಾಗಣೆಗಳು ಏಂಗಡಿಸುವಾಗ್ಯೆ ಯೀ ಮಾಗಣೆಯು ಅಡಿಕೆ ಮೆಣಸು ವಗೈರೆ ಆಗುವ ಸಮ್ಮಂದ ಯಿದನು ಖರೀದಿ ಹೊಬಳಿಗೆ ಸೇರಿದ್ದರಿಂದ ಯೀ ಪ್ರಕಾರ ನವಾಬಗೆ ರಾಜ್ಯಾವಾಗುವ ವರೇಗೆ ನಡೆದು, ಆ ಮೇಲೆ ಚಿತ್ರಭಾನು ಸಂವತ್ಸರದಲ್ಲು ದೊಡ್ಡನವಾಬನು ಯೀ ರಾಜ್ಯ ತೆಗೆದುಕೊಂಡ ಮೇಲೆ, ಯಥಾ ಪ್ರಕಾರ ಬಗ್ವಾಲಿ ಹೋಬಳಿಗೆ ಕೂಡಿ ಯಿರುವದರಿಂದ ಕುಂದಾಪುರ ತಾಲೂಕು ಬದುಕು ಮಾಡಿದವರ ಕಡೆ ಮಣಿಗಾರನ ಮುಖಾಂತ್ರವೆ ಸುಲತಾನ ದಿವಸ ಆನಂದ ಸಂವತ್ಸರದ ವರೇಗೆ ನಡೇತು.

ಅವರ ಮೇಲೆ ರಾಕ್ಷಸ ಸಂವತ್ಸರದಲ್ಲು ಯೀ ಹೊಬಳಿ ತುಕಡಿ ಆಗುವಾಗ್ಯೆ ಹೊಸಂಗಡಿ ತುಕುಡಿಯಂತ ಹೆಸರು ಯಿಟ್ಟು ನಡೇತು. ಸದರಿ ಕೋಟಿಯಲ್ಲು ಲಾಗಾಯತು ಆರಭ್ಯಾ ಘಟ್ಟದ ಸರಹದ್ದು ಕೋಟಿ ಆಗಿ ಯಿರುವದರಿಂದ ಯೀ ಕೋಟಿಯು ಕುಂದಾಪುರದ ಕಸಬಾ ಕೋಟಿಗೆ ಐದು ಕೋಟಿಯಂತ ನೇಮಕಾ ಮಾಡಿ, ಅದರ ತಾಲೂಕಿನಲ್ಲು ಕುಂಪಣಿ ದರಬಾರು ಆಗುವ ಪರಿಯಂತ್ರ ಯಿತ್ತು. ಆಮೇಲೆ ಕುಂಪಣಿ ದರಬಾರು ಆದಮೆಲೆ ಕೋಟಿ ಮೊಕದೂರು ಮಾಡಿಸಿ ಮಾಗಣಿ ಪ್ರತ್ಯೇಕ ಮಾಡಿ, ಪಟೇಲರ ಮುಖಾಂತ್ರವೆ ನಡೇತು. ಯೀ ಮಾಗಣಿ ಗ್ರಾಮ ೧೮ರ ವಿವರ:

೧. ಕೆದಕಾಡಗ್ರಾಮಕ್ಕೆ ಪುಟ್ಟಯ್ಯ.

೧. ಯಿಡಮೊಗೆ ಕೊಳಾಳಿ ಕೃಷ್ಣಯ್ಯ.

೧. ಹಳಿ ಉಂಬಳಿಗ್ರಾಮಕ್ಕೆ ಸುಬ್ಬಯ್ಯ ವೆಂಕಟಪತಿ.

೧. ಹಳೆಹೊಳೆಗ್ರಾಮ ೧ಕ್ಕೆ ಸನ್ಯಾ ವೆಂಕಟಪತಿ.

೧. ಮುಂಡಗಲ್ಲೆಗ್ರಾಮ ೧ಕ್ಕೆ ಮಲ್ಲಿಕಾರ್ಜುನಯ್ಯ.

೧. ಯಿಳಚಿರಗ್ರಾಮ ೧ಕ್ಕೆ ನಾರಣಪ್ಪ ಜೋಯಿಸ.

೧ ಕಲಬತ್ತುಗ್ರಾಮ ೧ರ . . . . ಜೊಯಿಸ

೧ ಚಿಲ್ಲರೆಗ್ರಾಮ ವೀರಪ್ಪಜೊಯಿಸ

೧ ಅಸದೆಮನೆಗ್ರಾಮ ಅನಂತ . . . . ಪುಟ್ಟಣ್ಣ

೧ ಉತ್ತರಗ್ರಾಮಕ್ಕೆ ನಾರಣಪ್ಪ ಜೊಯಿಸ

೧ ಹತ್ತರಕಲ್ಲುಗ್ರಾಮ ರಂಗಾದೀಕ್ಷಿತ ಜೊಯಿಸ

೧ ಅಂಡೆಹೊಳೆಗ್ರಾಮಕ್ಕೆ ಕೃಷ್ಣಪ್ಪವೊಬ್ಬ

೧ ಬರೆಹುಂಡಿಗ್ರಾಮಕ್ಕೆ ಸುಬ್ಬಭಟ್ಟ ಜೊಯಿಸ

೧ ಆದಕೊಡಗ್ರಾಮಕ್ಕೆ ಕೃಷ್ಣಯ್ಯ ಜೊಯಿಸ

೧ ಕಂಬಟ್ಟುಗ್ರಾಮಕ್ಕೆ ಕೃಷ್ಣಯ್ಯ ಜೊಯಿಸ

೧ ವೊಟ್ಟಬಚಲಗ್ರಾಮಕ್ಕೆ ಕೃಷ್ಣಯ್ಯ ಜೊಯಿಸ

೧ ನಡತುಂಡಗ್ರಾಮಕ್ಕೆ ಹಿರಣ್ಯ ಜೊಯಿಸ

೧೮

ಉಪಗ್ರಾಮಂ

ಶ್ಯಾನುಬವರು:

ಪ್ರಾಕಾರಭ್ಯ ಸ್ಥಳಶ್ಯಾನುಭವ ನಾಗಪ್ಪಯ್ಯ ಹೊನ್ನೆಕಂಬಳಿ ಕಾಲದಾರಭ್ಯ ಕುಂಪಣಿ ಅಮಲು ವರೆಗೆ ಯೀ ಊರಕಡೆ ಗುಮಾಸ್ತ ರಾಮಪ್ಪನ್ನ ಪುಟ್ಟಯ್ಯನ್ನ ಯಿಟ್ಟು ಬರಕೊಂಡು ಬಂದರು. ಹೀಗೆ ಯಿದರ ಮೇಲೆ ಕುಂಪಣಿ ದರಬಾರು ಆದಮೇಲೆ ಸುಭರಾಯ ಯಂಬವನ ಯಿಟ್ಟದರಿಂದ ಯೀತನ ಮುಖಾಂತ್ರವೆ ನಡದು ಬರುತದೆ.

ಉಭಯರ ಪ್ರತಿ[>ವೃತ್ತಿ] ಲಿಂಗಪ್ಪಯ್ಯಗೆ ಪ್ರಾಕು ಹೊನ್ನೆಕಂಬಳಿ ಆರಭ್ಯ ಯಿವರ ಕಡೆ ಗುಮಾಸ್ತೇರ ಯಿಡದೆ ತಾವೆ ಟೀಪು ಅಮಲು ಪರಿಯಂತ್ರ ಬರದು ಬಂದರು. ಆಮೇಲೆ ಕುಂಪಣಿ ಅಮಲು ಆದ ಮೇಲೆ ಮೊಕೂಪ್ ಆಯಿತು.

ಯೀ ಮಾಗಣಿಯಲ್ಲಿ ಯಿರುವ ದೇವರು:

೧ ಖರಟಾಸುರನ ನಿಮಿತ್ಯವಾಗಿ ಶ್ರೀ ಸ್ವಾಮಿ ಅಪ್ಪಣೆ ಪ್ರಕಾರಕ್ಕು ಜಗನ್ಮೋಹನರೂಪವನ್ನು ಧರಿಶಿ ರಾಕ್ಷಸ ಮೋಹಿಸಿದ ಬಗೆ ಯೀ ಉದ್ಭವವಾದ ಬ್ರಹ್ಮಿದುರ್ಗಾಪರಮೇಶ್ವರಿಯೆಂಬ ಹೆಸರಿನಲ್ಲಿ ಲಿಂಗ ಉದ್ಭವವನ್ನು ಕಮಲದಲ್ಲಿ ಆಗಿ ಶಿರಸ್ವದಲ್ಲು ಸುವರ್ನರೇಖೆಯುಕ್ತವಾಗಿರುವದರಿಂದ ಬ್ರಹ್ಮದುರ್ಗಾಪರಮೇಶ್ವರಿದೇವರು.

೧ ಪ್ರಾತುರ್ಭವ ಹೊಳೆ ಶಂಕರನಾರಾಯಣದೇವರು, ಉಕಾರದ ಮಾಗಣಿಯಲ್ಲು.

೧ ವಿರುಪಾಕ್ಷದೇವರು ಹೊನ್ನೆ ಕಂಬಳಿ

೧ ಚಿಲ್ಲರೆಗ್ರಾಮ ಶಾಂತೇಶ್ವರ ಪುರಾತನಮೂರ್ತಿ

೧ ವೆಂಕಟರಮಣದೇವರು

೧ ಹನುಮಂತದೇವರು

೧ ವಿಟ್ಟಲದೇವರು

೧ ಬ್ರಹ್ಮಲಿಂಗದೇವರು

೧ ತಿರುಮಲದೇವರು

೧ ಕೊಂಬಡಿನ ವಿನಾಯಕದೇವರು. ಸದರಿ ಕರಲಸಿಲೆ ಅಮ್ಮಾನವರು ಉದ್ಭವಾಗುವಾಗ್ಯೆ ಶ್ರೀಸ್ವಾಮಿ ಅಪ್ಪಣೆ ಪ್ರಕಾರ ಉದ್ಭವವಾದ ವಿನಾಯಕದೇವರು.

೧ ಕೆರಕಾಡ ಗೋಪಿನಾಥದೇವರು ಯೀ ಗ್ರಾಮವಾಗುವಾಗ್ಯೆ ಕಟ್ಟಿತು.

೧ ಯಿರಿಗೆ ಗೋಪಿನಾಥದೇವರು

೧ ಹಳಿಸಾಮಿಲಿಂಗದೇವರು

೧ ಯೆಳಬೆರ ಗೋಪಿನಾಥದೇವರು

೧ ಅಂಡೆಹೊಳೆ ಗೋಪಿನಾಥದೇವರು

೧ ಅಸರೆಮನೆ ಬ್ಯಾರದೇವರು

೧ ವನದುರ್ಗಾ

___

೧೯

೨ ಜಂಗಮ ಮಠ ಸಹಾ

೧ ಹೊಸಂಗಡಿ ಮಠ ನಿರ್ವಾಣರಯ್ಯ ಕಟ್ಟಿಸಿದ್ದು ಬಗೆಯಿ

೧ ಹಲವರಿ ಮಠ

___ ___

೨೧ ೨

೧ ಸುಂಕದ ಕಟ್ಟೆ. ಅಂತು ಯೀ ಊರು ಪ್ರಕಾರ ಕೈಫಿಯತು.

❖❖

ಬಳ್ಳಾರಿ ಪ್ರದೇಶದ ಕೈಫಿಯತ್ತುಗಳು

೧೦೧
ಅಂತಾಪುರ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಯಾದಾಸ್ತೂ ಕೈಫಿಯತುಪಟ್ಟಿ, ಮಾಗಣಿ ಅಂತಾಪುರ, ತಾಲೂಕು ಕಂಪಲಿ, ಸರಕರ್ ಕುಂಪಣಿ, ಶುಕ್ಲಸಂವತ್ಸರ ಮಾಘ ಶು॥ ೧ ಸೋಮವಾರಲು.

೧. ಕಸಬಾ ಅಂತಾಪುರವೆಂಬೊದು ಪೂರ್ವಕ್ಕೆ ಶಿಲಶಿಲಾ[>ಖಿಲಖಿಲಾ] ಹಳ್ಳಿಯಾಗಿ ಯಿತ್ತು. ಪುನಹಾ ಆನೆಗೊಂದಿ ಅರಸುಗಳು ಮನಮಂತ್ರಕ್ಕೆ[>ಮನ್ವಂತರ] ಬೇಡರ ದೇಶಾಯಿ ತಿಮ್ಮಪ್ಪಯೆಂಬೋ ಆತನು ಕೋಟೆ ಕಟ್ಟಿಸಿದನು. ಯೀ ಗ್ರಾಮದಲ್ಲಿ ದೇವಸ್ಥಾನ ಯಿರೊದು

೧. ಮುಖ್ಯಪ್ರಾಣದೇವರ ಗುಡಿ ವೊಂದು ೧, ಯೀಶ್ವರ ದೇವರ ಗುಡಿ ಯೋಗಪ್ಪಯ್ಯ ಕಟ್ಟಿಸಿದ್ದಾನೆ.

೧. ಯೀ ಮಾಗಣಿ ಹಳ್ಳಿಗಳು ಸಣ್ಣಸಣ್ಣವು. ಗ್ರಾಮದ ಗವುಡ ಶಾನಭಾಗರು ರೈತ ವಗೈರೆಯವರು ತಮ್ಮಾಕ್ಕುಮಾಡಿ ಕೋಟೆ ಬರುಜು ಸಹಾ ಕಟ್ಟಿಸಿದರು. ಯೀ ಗ್ರಾಮಗಳಲ್ಲಿ ಗುಡಿಗಳು ಗ್ರಾಮಸ್ತರೆ ಕಟ್ಟಿಸಿದ ಗ್ರಾಮಗಳು.

೧. ಪೂರ್ವದಲ್ಲಿ ಅರಸುಗಳು ಆಳಿದ್ದು:

೧. ಪ್ರಹುಡರಾಯರಿಗೆ ಪಟ್ಟಾ ಕಟ್ಟಿದ್ದು ರಉದ್ರಿ ಸಂವತ್ಸರದಲ್ಲಿ, ಶಕ ವರುಷ ೧೩೬೨ನೇದು, ಆಳಿದ್ದು ವೊಂಬತ್ತು ವರುಷ.

೧. ರಾಮಚಂದ್ರರಾಯರಿಗೆ ಪಟ್ಟಾಕಟ್ಟಿದ್ದು ಶುಕ್ಲ ಸಂವತ್ಸರದಲ್ಲಿ, ಶಕ ವರುಷ ೧೩೭೧ನೆ, ಆಳಿದ್ದು ವರುಷ ೧೪.

೧. ವಿರೂಪಾಕ್ಷರಾಯರಿಗೆ ಪಟ್ಟಾಕಟ್ಟಿದ್ದು ಶೋಭಕೃತು ಸಂವತ್ಸರದಲ್ಲಿ, ಶಖ ವರುಷ ೧೩೮೫ನೇದು, ಆಳಿದ್ದು ೧೩ ವರುಷ.

೧. ನರಸಿಹ್ಮರಾಯರಿಗೆ ಪಟ್ಟಾಕಟ್ಟಿದ್ದು ದುರ್ಮುಕಿನಾಮ ಸಂವತ್ಸರದಲ್ಲಿ, ಶಕ ವರುಷ ೧೩೭೮ನೇದ್ದು, ಆಳಿದ್ದು ೧೩ ವರುಷ.

೧. ವೀರನರಸಿಹ್ಮರಾಯರಿಗೆ ಪಟ್ಟಾಕಟ್ಟಿದ್ದು ಸೌಮ್ಯ ಸಂವತ್ಸರದಲ್ಲಿ, ಶಕ ವರುಷ ೧೪೧೧ನೇದ್ದು, ಆಳಿದ್ದು ಯಿಪ್ಪತ್ತು ವರುಷ.

೧. ಕ್ರಿಷ್ಣರಾಯರಿಗೆ ಪಟ್ಟಾಕಟ್ಟಿದ್ದು ಸುಕ್ಲ ಸಂವತ್ಸರದಲ್ಲಿ, ಶಕ ವರುಷ ೧೪೩೧ನೇದ್ದು, ಆಳಿದ್ದು ೧೬ ವರುಷ.

೧. ಅಚ್ಚುತರಾಯರಿಗೆ ಪಟ್ಟಾಕಟ್ಟಿದ್ದು ಪಾರ್ಥಿವ ಸಂವತ್ಸರದಲ್ಲಿ, ಶಕ ವರುಷ ೧೪೪೭ನೇದ್ದು, ಆಳಿದ್ದು ಮೂರು ವರುಷ.

೧. ಅಳಿಯ ರಾಮರಾಜರಿಗೆ ಪಟ್ಟಾಕಟ್ಟಿದ್ದು ಸರ್ವದಾರಿ ನಾಮ ಸಂವತ್ಸರದಲ್ಲಿ, ಶಕ ವರುಷ ೧೪೫೦, ಆಳಿದ್ದು ೩೬ ವರುಷ.

೧. ರಕ್ತಾಕ್ಷಿನಾಮ ಸಂವತ್ಸರದಲ್ಲಿ ಠಾಣ್ಯ ಆದ್ದು, ಮೊಗಲಾಯಿ ಡಿಲ್ಲಿ ಅವರ ಸ್ವಾಧೀನವಾಯಿತು, ಶಕವರುಷ ೧೪೮೬ನೇದ್ದು॥

೧. ಯೀ ಮೊಗಲಾಯಿ ಠಾಣ್ಯ ಯಿರಲಿಕ್ಕೆ ಮೊರಳೆನವರು ಯೆಂಬೊ ಪಾಳೆಗಾರ್ರು ಬೇಡರು ಪ್ರಬಲವಾಗಿ, ಗುಡಿಕೋಟೆ ಜರಿಮಾಲಿ ಬಾಣರಾವಿ ವಡ್ಡು ದೇಶ ವಗೈರೆ ಠಾಣ್ಯ ಹಾಕಿಕೊಂಡು ಮರಳೆನವರು ಆಳಿದರು.

೧. ಪುನಹಾ ಆನೆಗೊಂದಿರಾಯರು ಪ್ರಬಲವಾಗಿ ತಿಮ್ಮಪ್ಪನವರು ರಾಜ್ಯಸಾಧನೆ ಮಾಡಿಕ್ಕೊಂಡು ವಡ್ಡು ಬಾಣರಾವಿ ಶೀಮಿ ಸಹಾ ಸಾಧಿಸಿಕೊಂಡು ಆಳಿದರು.

೧. ಸೌಮ್ಯಸಂವತ್ಸರದಲ್ಲಿ ಚಿತ್ರದುರ್ಗದ ಹಿರೆಮಡಿ[>ದಿ]ಕೇರಿನಾಯಕರು ಬಾಣರಾವಿ ಸೀಮೆ ಠಾಣ್ಯಹಾಕಿದರು. ಯಿವರ ವಂಶದವರು ರಾಜ್ಯ ಆಳಿದ ಅರಸುಗಳ ಹೆಸರು ವಿವರವು:

ಶಕ ವರುಷ ೧೬೫೦ನೇದ್ದು ಆಳಿದ್ದು ಮೂರು ಮಂದಿ ಅರಸುಗಳು:

೧ ಅಮಲು ಹಿರೆಮಡಿ[>ದಿ]ಕೆರಿನಾಯಕರು ಆಳಿದರು.

೧ ಯರಡನೆ ಸರ್ತಿಗೆ ಕಸ್ತೂರಿರಂಗಪ್ಪನಾಯಕರು

೧ ಚಿಕ್ಕ ಮಡಿ[>ದಿ]ಕೆರಿ ನಾಯಕರು ಕಡಿಗೆ.

೩

೧ ಹೇವಳಂಬಿನಾಮ ಸಂವತ್ಸರದಲ್ಲಿ ನವಾಬ ಹೈದರಲ್ಲಿಖಾನ್ ಬಹದರನವರ ಠಾಣ್ಯ ಆಯಿತು. ಯಿದು ವೊಂದು ವರುಷ ಅವಾಂತ್ರವೆ ಆಯಿತು ॥ಕಲಾ[>ಲಂ]॥

೧ ವಿಳಂಬಿ ಸಂವತ್ಸರದಲ್ಲಿ ನವಾಬನ ಮನಮಂತ್ರ[>ಮನ್ವಂತರ] ಯಿವರು ಆಳಿದ್ದು ವರುಷ ೧೨.

೧ ದರ ಅಮಲು ನವಾಬಸಾಹೇಬರು ಮನಮಂತ್ರ[>ಮನ್ವಂತರ] ಆಳಿದ್ದು

೧ ದರ ಅಮಲು ಟೀಪುಸುಲ್ತಾನ ಆಳಿದ್ದು

೨

೧. ಸಾಧಾರಣ ಸಂವತ್ಸರದಲ್ಲಿ ಆರೇದ ಕಡೆಯಿಂದ ಘೋರಪಡೆಯವರು ಠಾಣ್ಯ, ವಿರೋಧಿಕೃತು ಸಂವತ್ಸರದ ವರಿಗೆ ಯರಡು ವರುಷ ಆಳಿದರು.

೧. ಪರಿಧಾವಿ ಸಂವತ್ಸರದಲ್ಲಿ ಆನೆಗೊಂದಿಯವರು ಅರಸುಗಳು ರಾಜಾ ತಿಮ್ಮಪ್ಪಯ್ಯನ ಠಾಣ್ಯ ಆದದರಿಂದ, ವೊಂದು ವರುಷ ನಡೀತು.

೧. ಪ್ರಮಾದೀಚ ಸಂವತ್ಸರದಲ್ಲಿ ಸುಲ್ತಾನ್ ಠಾಣ್ಯ ಆಗಿ, ಬಬ್ಬರಜಂಗಬಹದರವರ ಜಹಗೀರು ಮೂರು ತಿಂಗಳು ನಡೀತಾ ಬಂತು.

೧. ಅಪ್ಪರ ವಳಗೆ ಮಹಮ್ಮದಲ್ಲಿ ಬೇಗ್ ಅಮಲ್‌ದಾರನು ಹಜೂರುಯಿಂದಾ ದರುಜಿಕೆರಿ ಕಾಮಗಾರಿ ವಳತಿಗೆ ಮಾಡಿಕ್ಕೊಂಡು ಬಂದದರಿಂದ, ಮಹಮ್ಮದಲ್ಲಿಬೇಗನ ಕೆಳಗೆ ರಾಕ್ಷಸಸಂವತ್ಸರದ ವರಿಗೆ ಮೂರು ವರುಷ ನಡೀತು॥ ಕಲಂ.

೧. ನಳಸಂವತ್ಸರದಲ್ಲಿ ಅಯಿದು ಸಾವಿರಕ್ಕೆ ವೊಬ್ಬಾ ಅಮಲ ಮೊಕರರು ಮಾಡಿಕ್ಕೊಂಡು ಬಂದದರಿಂದ, ಅದರಿಂದಾ ಯೀ ತಾಲೊಕಿಗೆ ಅಹಮ್ಮದ್‌ಸಾಹೇಬ್‌ಯೆಂಬೊ ಅಮಲದಾರ ಮಾಡಿಕೊಂಡು ಬಂದದರಿಂದಾ, ಕಲ್ಯಾಣಿ ಮೊಹದೀನ್‌ಸಾಹೇಬರ ಅಸಫಗಿರಿಯಲ್ಲಿ ಮೊಳಕಾಲಮೂರಿವಿನ ವಳಗೆ ಕಾಳಾಯುಕ್ತಿಸಂವತ್ಸರದ ವರಿಗೆ ಮೂರು ವರುಷ ನಡದು ಬಂತು. ಕಲಂ.

೧. ಶಿದ್ದಾರ್ಥಿಸಂವತ್ಸರದಲ್ಲಿ ರಾಜಾ ತಿಮ್ಮಪ್ಪಯ್ಯನ ಠಾಣ್ಯ ಆಗಿ, ಶ್ರಾವಣಮಾಸದ ವರಿಗೆ ಮೂರು ತಿಂಗಳು ನಡೀತು. ಯೀಚೆಗೆ ಪೂರ್ಣಯ್ಯನ ಠಾಣ್ಯ, ಪಾಲ್ಗುಣ ಮಾಸದ ವರಿಗೆ ಚಿತ್ರದುರ್ಗದ ಚನಮಲ್ಲಪ್ಪನ ಮಾರಿಪತ್ತು ಪೂರ್ಣಯ್ಯನ ವರಿಗೆ ನಡೀತು.

೧. ಶಿದ್ದಾರ್ಥಿನಾಮಸಂವತ್ಸರದ ಪಾಲ್ಗುಣಮಾಸ ಆರಭ್ಯವಾಗಿ ರಉದ್ರಿಸಂವತ್ಸರದ ಮಾರ್ಗಶಿರ ಮಾಸದ ವರಿಗೆ ತಿಂಗಳು ೯ಕ್ಕೆ ಮೊಗಲಾಯಿ ಟಾಂಣ್ಯಾ ಮೀರಾಸಾಹೇಬನ ಮಾರಿಪತ್ತೇಲಿ ನಡೀತು.

೧. ರಉದ್ರಿಸಂವತ್ಸರದ ಮಾರ್ಗಶಿರ ಮಾಸದಲ್ಲಿ ಕುಂಪಣಿ ಠಾಣ್ಯ, ಕರ್ನಲ್ ಮಂಡ್ರೊಲ್ ಸಾಹೇಬರು ಅಮಾಲು ಆದ್ದರಿಂದ ಯೀ ಶುಕ್ಲ ಸಂವತ್ಸರದ ವರಿಗೆ ಕುಂಪಣಿ ಅಮಲು ನಡಿಯುತ್ತಾ ಬರತದೆ.

೧. ಶಾಸನದ ಕಲ್ಲು ಯಿಹೋದು ಕಸಬೆ ಅಂತಾಪುರದಲ್ಲಿ ॥೩.

೧. ನೈವೇದ್ಯಾ ಯಿನಾಮು ಗಡಿ ಬಾಬತು ಶಾಸನದ ಕಲ್ಲು, ಶಕವರುಷ ೧೪೭೩.

೧. ಸುಂಕದರಲ್ಲಿ ದೇವರಿಗೆ ನೆಡೋದು ಶಾಸನದ ಕಲ್ಲು, ಶಕವರುಷ ೧೪೭೫.

೧. ಯೇಗಪ್ಪಯ್ಯಾಯೆಂಬೊನು ವಕ್ಕಲಿಗರವ ತನ್ನ ಹೆಸರಿನಲ್ಲಿ ಹಾಕಿಸಿ ಯಿರೊದು ಶಾಸನದ ಕಲ್ಲು ವೊಂದು.

೩

ಸದರಹು ಶಾಸನದಲ್ಲಿ ನೈವೇದ್ಯ ಬಾಬತು, ಸುಂಕದ ಮೇಲೆ ನಡೊದು ಶಾಸನ ಬಾಬತು ೧, ಉಭಯಂ ಯರಡು ಶಾಸನದ ಕಲ್ಲಿನ ನಕಲು ಮುತ್ಸದ್ದಿ ನಾರಾಯಣರಾಯರ ಬಳಿಗೆ ಬರದು ಕಳಿಹಿಸಿಯಿದೆ. ಕಡಿಮೆ[>ಯ] ಶಾಸನವೊಂದು ಅಕ್ಷರ ತಿಳೀದು.

೧. ಸ್ವಾಸ್ತಿ ಬಾಬಗಳು ಹುಟ್ಟದಾ ಶಿಲಾಶಿಲಾ[>ಖಿಲಖಿಲ] ಆನೆಗೊಂದಿಯುವರ ಮನಮಂತ್ರ[>ಮನ್ವಂತರ] ಅರಸುಗಳವರ ಕಾಲದಲ್ಲಿ ಗ್ರಾಮಗಳು ಹುಟ್ಟಿದಾಗಲಿ[>ಲೆ] ಸ್ವಾಸ್ತಿ ಬಾಬು ಹುಟ್ಟಿತು.

೧. ಗಲುಡಿತ[>ಕ] ಸ್ವಾಸ್ತಿಬಾಬು
೧. ನಾಡಕುಲಕರ್ಣಿಕಿ ಬಾಬು
೧. ನಾಡಗೌಡಕಿ ಸ್ವಾಸ್ತಿಬಾಬು
೧. ದೇಶಾಯಿಕಿ ಬಾಬು
೧. ಶಾನಭಾಗಕಿ ಬಾಬು
೧. ಬಾರಾಬಲವತಿಯವರು ಸ್ವಾಸ್ತಿಗಳು.

ಯಿ ಪ್ರಕಾರಕ್ಕೆ ಮದಿಕೆರಿನಾಯಕರ ಮನ್ಮಂತ[>ಮನ್ವಂತರ]ವರಿಗೆ ಸ್ವಾಸ್ತಿ ಸದರಹು ಬಾಬುಗಳು ನಡದು ಬಂದವು.

ಯೀಚೀಗೆ ನಾಡಗೌಡರು ದೇಶಾಯಿಗಳು ಯಿಬ್ಬರು ಮನಿತನ ನಷ್ಟ ಸಂತತಿ ಆದ್ದರಿಂದ, ಯೀ ಯರಡು ಬಾಬು ಸ್ವಾಸ್ತಿ ಸರಕಾರು ದಾಖಲು ಆಯಿತು. ಕಡಿಮಿ ಸ್ವಾಸ್ತಿ ಸದರಿ ಪ್ರಕಾರಕ್ಕೆ ನಡಿಯುತ್ತ ಬರತದೆ ॥ ಕಲಂ.

೧. ನಮ್ಮಾ ಮಾಗಣಿ ಗ್ರಾಮಗಳಲ್ಲಿ ಆಗೊ ಧಾನ್ಯ ಜಿನಸಾ ಹೆಸರು:

೧. ಜೋಳಾ
೧. ತೊಗರಿ
೧. ಶೆಜ್ಜಿ
೧. ಅವುಡ್ಲಾ ಯೆಳ್ಳು
೧. ಹುರುಳಿ
೧. ಅವರಿ
೧. ಹೆಸರು
೧. ನವಣಿ

೧ ಪಾರ್ಚೆ ಜಿನಸು:

೧ ಕುರುಬರಯಿಂದಾ ತೊಂತ ನರೆ ಕಂಬಳಿ ಹುಟ್ಟುತದೆ.

೧ ಕರೆ ಕಂಬಳಿ ಕಿರದು ಹುಟ್ಟುತದೆ.

೧. ಯೀ ಮಾಗಾಣಿ ಗ್ರಾಮಗಳ ಹೆಸರು:

೧. ಸ[>ಸು]ಬಾ ಅಂತಾಪುರ

೧. ವಿಟ್ಲಾಪುರ

೧. ಮೆಟ್ರಕಿ

೧. ಗುಂಡುಹಳ್ಳಿ

೧. ಗಂಗಲಾಪುರ, ಮಾದಿಕೆರೆ ನಾಯಿಕರ ಮನುಮಂತ್ರಕ್ಕೆ[>ಮನ್ವಂತರಕ್ಕೆ] ದುರ್ಗದ ವೆಂಕಟಶಾಸ್ತ್ರಿಗಳಿಗೆ ಅಗ್ರಹಾರ ಉಮ್ಮಳಿ ಯಿನಾಮು ನಡೀತಿತ್ತು. ಯೀಚೀಗೆ ಅವರ ಬಾರದ ಪ್ರಯುಕ್ತ ಸರಕಾರ ದಾಖಲು.

೧. ರಾಮಾಪುರ

೧. ಮರಟ್ಲು

೧. ಮಾಳಾಪುರ

೧. ರಾಜಿಪುರ, ನಾಡಕುಲಕರ್ಣಿಕಿ ಉಮ್ಮಳಿಗ್ರಾಮ

೧. ಉಬಲಗಂಡಿ	೧. ಆಯಿನಹಳ್ಳಿ
೧. ಯಾರಬಾನಹಳ್ಳಿ	೧. ನಾಗಲಬಂಡಿ
೧. ತಾಮ್ಮಾಟ	೧. ತಿಮ್ಮಲಾಪುರ
೧. ಚಿಕ್ಕ ಅಂತಾಪುರ	೧. ನಾಗರನಹಳ್ಳಿ

೧. ಮಲ್ಲಾಪುರ

೧. ರಾಮಸಾಗರ

೧. ಹೊಸಹಳ್ಳಿ, ಯಿನಾಮತಿ ರಾಘವೇಂದ್ರಸ್ವಾಮಿಗಳ ಮಾಡದು ಶಿಲಶಿಲಾ[>ಖಿಲಖಿಲ] ಆರಭ್ಯವಾಗಿ ಯಿವರಿಗೆ ನಿಜೀವಜಿಗೆ ಜಾರಿ.

ಬೇಚಿರಾಕ್‌ಗ್ರಾಮಲು:

೧. ಮುಶೆನಾಯಕನಹಳ್ಳಿ, ಸತ್ಯಪೂರ್ಣಸ್ವಾಮಿಗಳ ಉಮ್ಮಾಳಿ. ಅಪಲಾಪುರ ಕವೇಶ್ವರ ತಿಮ್ಮಾಪ್ಪನ ಯಿನಾಮ. ತುರುಕರಹಳ್ಳಿ ಸರಕಾರ.

೨೩

ಯೀ ಪ್ರಕಾರಕ್ಕೆ ಬರಿಸಿದ್ದು ಶಾ॥ ವೆಂಕಪ್ಪನು ಬರಿಸಿಯಿದ್ದಾನೆ.

ಪೂರ್ವದಲ್ಲಿ ಕೊಮಾರರಾಮಯೆಂಬಾತನು ಯೀ ರಾಜ್ಯವನ್ನು ಪ್ರತಿಪಾಲಿಸುತ್ತ ಯಿರಲಾಗಿ,

“ಶ್ರೀ . . . . ಷ್ಮರಾಯರ ಗಂಡನೆಂದು ಪಾಷಾವಜೀರರ ಮಿಂಡ”ನೆಂದು ಹೊಗಳಿಶಿಕೊಳ್ಳುತ್ತ ಯಿರಲಾಗಿ, ಯೀ ವರ್ತಮಾನವನ್ನು ನೇಮಿಯವರು ಪಾಷಾನವರು ಕೇಳಿ, ಹನ್ನೆರಡು ಲಕ್ಷ ಪೌಜು ತೆಗೆದುಕೊಂಡು ಮೊಹಿಮು ಮಾಡಿ, ಯೀ ದೇಶಕ್ಕೆ ಬರಲಾಗಿ, ದರೋಜಿಗ್ರಾಮ ನಂದಿದುರ್ಗ ಆರಂಬಮಾಡಿಕೊಂಡು ಸಂಡೂರ ವಳಗಣ ಮಾರ್ತಾಂಡದುರ್ಗದ ಪರಿಯಂತ್ರವಾಗಿ ಉತ್ರದಕ್ಷಣ ಪೂರ್ವಪಶ್ಚಿಮ ಬುದ್ಧಿಗಣಿಮೆ ಆರಂಭಮಾಡಿ ವಡ್ಡರಹಳ್ಳಿ ಆರಂಭಮಾಡಿಕ್ಕೊಂಡು, ಪೂರ್ವಪಶ್ಚಿಮ ಯೀ ಮೇರೆಯಿಂದ ಪೌಜು ಯಿರಲಾಗಿ, ಯೀ ಪೌಜಿಗೆ ಸರದಾರನಾದಂತಾ ನೇಮಿಯಂಬವನು ಯೀ ವಡ್ಡನ ಜಂಡೆ ಹಾಕಿ ನಿಂತು ಯಿರಲಾಗಿ, ಆ ಸಮಯದಲ್ಲಿ ಕುಮಾರರಾಮನು ಯಿವರಿಗೂ ಮೊಗಲಾಯಿ ಸೀಮೆ ನದಿ ಆಚೀಗೆ ಕಮ್ಮಾಟಾಯೆಂಬೊ ಹತ್ರ ಮಹಾತ್ತು ಯಿದ್ದವಾಯಿತು. ಅವನ್ನ ಜೆಯಿಸಿಕ್ಕೊಂಡು ಪುನಹಾ ತಮ್ಮ ದೇಶಕ್ಕೆ ತೆರಳಿ ಹೋಗೋ ವ್ಯಾಳೆದಲ್ಲಿ, ಯೀ ದೇಶದಲ್ಲಿ ನಮ್ಮಾ ಗುರುತು ಯಿರಬೇಕೆಂದು ಯೋಚನೆ ಮಾಡಿ, ಪಾಲಕಿನಲ್ಲಿ ನಕಲ ವಜೀರರನ್ನು ಕರಿಸಿ, ಯಿ ದಂಡಿಗೆ ನೀರುಬೇಕೆಂದು ಹೇಳಿ, “ನಿಮ್ಮಾ ನಿಮ್ಮಾ ಪಾಲಿಗೆ ಹಂಚಿಕೆ ಮೇರಿಗೆ ವೊಂದು ಸಮುದ್ರಕ್ಕೆ ಸವನಾದ ಕೆರೆ ನಿರ್ಮಾಣಮಾಡಿರಿ”ಯಂದು ನೇಮಿಯವರು ಅಪ್ಪಣೆ ಕೊಡಲಾಗಿ, ಅವರು ಹಂಚಿಕೆ ಮಾಡಿಕ್ಕೊಂಡ ವಿವರವು:

ನಂದಿದುರ್ಗಕ್ಕೆ ಉಪನಾಮಾ ದ್ವಾರಾವತಿದುರ್ಗ, ಬೆಟ್ಟ ಆರಂಭ ಮಾಡಿಕೊಂಡು ಕೂಡಿಗುಡ್ಡದ ಪರಿಯಂತ್ರ ತಗಲಿ ಯಿದ್ದೀತೆ ನಮ್ಮ ಪಾಲಕಿಯಿಟ್ಟು ಬೊಂಬಿನ ಅಡ್ಡಾಗಲ ಜಂಡೆದ ಉದ್ದ ಯೀ ಮರ್ಯಾದಿಯಲ್ಲಿ ಕೆರೆಯನ್ನು ನಿರ್ಮಾಣಮಾಡಲಾಗಿ, ಯಿಬ್ಬರು ಬಾನಿ[>ಖಾನ]ರಿಗೆ ಯೀ ಮಾಡಿದ ಮರ್ಯಾದಿಯಲ್ಲಿ ಕೆರೆ ಮುಗದು ಯಿವರಿಬ್ಬರು ಉಳಿಯಲಾಗಿ, ಖಾನ್‌ಸಾಹೇಬಯೆಂಬೊ ಆತನು ನಮ್ಮಾ ಪಾಲಿಗೆ ಹಂಚಿಕೆ ಬರಲಿಲ್ಲಾವೆಂದು ಪ್ರತ್ಯೇಕವಾದ ಕೆರೆಯನ್ನು ನಿರ್ಮಾಣಮಾಡಿ ಖಾನ್‌ಕೆರೆಯಂದು ಹೆಸರು ಯಿಟ್ಟನು. ಯಿನ್ನೊಬ್ಬ ಸರದಾರನು ಅದೇ ಮೇರಿಗೆ ತಾನು ವೊಂದು ಕೆರೆ ಕಟ್ಟಿ ಸಿಂಗನಕೆರೆಯೆಂದು ಹೆಸರು ಯಿಟ್ಟನು. ಉಭಯ ಜಿವದ ನಡ್ವೆ, ಕೆರೆ ಕಟ್ಟಿಸದರು. ಹಿರೆಕೆರಿಗೆ ದರಿಯಾತಲಾವುಯಂದು, ಸಮುದ್ರದ ಹಾಗೆ ಯಿದ್ದ ಕಾರಣ ಹೆಸರು ಯಿಟ್ಟನು. ಯೀ ಕೆರಿಗೆ ಉತ್ರಭಾಗ ಹರದಾರಿ ಖಾನನಕೆರೆ, ಪಶ್ಚಿಮಭಾಗ ಶಿಂಗನಕೆರೆ ಕೂಗಳಿತಿ ನಿರ್ಮಾಣ ಮಾಡಿ ನೇಮಯಶದ ಜಾಗಾದಲ್ಲಿ ವಡ್ಡರು ಯಿಳಿದ ಕಾರಣ ದರೊಜಿಕೆರೆ ಹುಟ್ಟಿ ವಳಗೆ ಎರಡು ಹರದಾರಿ ಮೇಲೆ ದಕ್ಷಿಣಕ್ಕೆ ವಡ್ಡು ಯಂದು ಹೆಸರು ಯಿಟ್ಟು, ಗ್ರಾಮ ಕಟ್ಟಿಸಿ ಹನುಮಂತದೇವರು ಪ್ರತಿಷ್ಟಾ ಮಾಡಿ ಹೋಗಲಾಗಿ ವೊಡ್ಡರು ಯಿಳದ ಯಿದ್ದ ಕಾರಣ ವಡ್ಡುಯೆಂಬೊ ಹೆಸರು ನಿರ್ಮಾಣವಾಯಿತು. ಅವರು ಕೆಲಉ ಕಾಲ ರಾಜ್ಯ ಆಳಿದರು.

ಆಮೇಲೆ ವಿಜಯನಗರದ ನರಪತಿಗಳು ಆಳುತ್ತ ಯಿರಲಾಗಿ ಕ್ರಿಷ್ಣರಾಯರಿಗೆ ಪಟ್ಟವಾಗಿ ಪ್ರಾಗ್ಧೇಶಕ್ಕೆ ತೆರಳುವ ವೇಳೆದಲ್ಲಿ ತಮ್ಮಾ ರಾಜ್ಯದೊಳಗೆ ಯಿದ್ದ ಪಾಳೆಗಾರರನು ಕರಿಸಿ, ಪೌಜು ಮಂದಿ ಮಾಡಿಕ್ಕೊಂಡು ಹೋಗಿ, ತಾಉ ಜೈಶಿ ಬಂದು ಯೀ ಪಾಳೆಗಾರರಿಗೆ ಅವರವರ ಮರ್ಯಾದೆ ಪೂರ್ವಕ ಮಾನಪಾನಗಳು ಮಾಡಿ ಕಳುಹಿಸಿದ ವೇಳೆಯಲ್ಲಿ, ಮೂಲಪುರುಷ ಕೊಮಾರರಾಮನ ವಂಶಸ್ತರು ಬೊಮ್ಮಂತರಾಜ ಮರಳನವರು ವಂಶಸ್ತರಿಗು ಮರ್ಯಾದಿ ಮಾಡೊ ವ್ಯಾಳ್ಯೆದಲ್ಲಿ ಯೀತನು ಬಿನ್ನಹಾ ಮಾಡಿಕೊಂಡದ್ದು, “ನಮಗೆ ಪೂರ್ವದಲ್ಲಿ ನಾಡದಳವಾರಿಕೆ ಕಾವಲಿ

ಸ್ವಾಸ್ತಿ ಬಾಗದ್ದು ಸುದ್ದಾ ನಡಉತ್ತಾ ಯಿತ್ತು. ಅದೆ ಪಾಲಿಸಿದರೆ ಪಾಲಿಸಬೇಕೆಂ"ದು ಬಿನ್ನಗಾ ಮಾಡಿಕೊಳಗಾಲಿ[>ಲಾಗಿ] ಅದೆ ಮೇರಿಗೆ ರಾಯರು ಸಂತೋಷಬಟ್ಟು, (ಬಟ್ಟು) ಕೊಟ್ಟ ತಾಲೂಕು ವಿವರಉ:

೧. ಕುತ್ತಾನೆ ೧. ಸೊಂಡೂರು ೧. ಜೆರಿಮಲ ೧. ವನು[>ಡ್ಡು] ದರೊದಿ[>ಜಿ] ಸಹಾ

೧. ಗುಡೆಕೊಟೆ ೧. ಬಾಣರಾವಿ ೧. ಉಜನಿ

ಯಿಉ ಯೇಳು ತಾಲೂಕು ಜಾಗೀರು ಕೊಟ್ಟು, ನಾಡದಳವಾರಿಕೆ ಕಾವಲಿ ಸ್ವಾಸ್ತಿ ಸುದ್ದಾ ಮಾಡಿಕೊಟ್ಟು ಕಳುಹಿಸಲಾಗಿ, ಆತನು ಹಲವ್ಯ ಕಾಲ ರಾಜ್ಯ ಕಾ॥ ಅನುಭವಿಸಿ ಕೊಳ್ಳುತ್ತ ಯಿರಲಾಗಿ, ಆತಗೆ ಮಕ್ಕಳು ಯಿಲ್ಲದೆ ಯಿರಲಾಗಿ, ತಮ್ಮ ಮನಿದೇವರು ಶ್ರೀಟಂಗಿರಾಯನ ಸೇವೆಯನ್ನು ಮಾಡಲಾಗಿ, ಆ ದೇವರು ಸ್ವಪ್ನದಲ್ಲಿ ಬಂದು ಅಷ್ಟ ಪುತ್ರರು ಆಗುತ್ತಾ ಯಿದ್ದಾರೆಂದು ಹೇಳಿ ಹೋದರು. ಅದೇ ಮೇರಿಗೆ ಗರ್ಭ ಉತ್ಪತ್ಯವಾಗಿ ಸಂ॥ ರ ಸಂವತ್ಸರಕ್ಕೂ ಯೇಳು ಮಂದಿ ಪುತ್ರರು ಹುಟ್ಟಿದರು. ಅವರ ನಾಮಕರಣಗಳ ಮಾಡಿ ಹೆಸರು ಯಿಟ್ಟು ವೊಬ್ಬ ವೊಬ್ಬರಿಗೆ ವೊಂದು ವೊಂದು ಹೆಸರು ಯಿಟ್ಟರು॥

೧. ಚೊಚ್ಚಲ ಮಗ ಹಿರೆ ಬೊಮ್ಮಂತರಾಜನು.

೧. ಯರಡನೆ ಮಗ ಬಿಸಳರಾಜನು.

೧. ಮೂರನೆ ಆತ ರಾಜಪ್ಪನಾಯಕನು.

೧. ನಾಲ್ಕನೇ ಆತ ವಿರಪ್ಪನಾಯಕನು.

೧. ಆಯಿದನೆ ಆತ ಯಿಮ್ಮಡಿ ರಾಜ[+ನಾಯಕ]ನು.

೧. ಆರನೆ ಆತ ಮಲ್ಕಾರ್ಜುನನಾಯಕನು.

೧. ಯೇಳನೆ ಆತನು ಚಿನ್ನರಾಜನು.

೭

ಯೀ ಮರ್ಯಾದಿಯಲ್ಲಿ ಹೆಸರು ಯಿಟ್ಟು ಸುಕದಿಂದ ಯಿರುತ್ತ ಯಿರಲಾಗಿ, ಯಿವರ ತಂದೆ ಭೂಮರಾಜಗೆ ವಾರ್ದಿಕ್ಯ ಪ್ರಾಪ್ತವಾಗಲಾಗಿ ಆತನು "ಯೀ ಮಕ್ಕಳು ಯೇಳು ಮಂದಿ ದೇವರ ವರನಿಂದ ಹುಟ್ಟಿದವರು. ಯಿವರೊಳಗೆ ವಬ್ಬಗ್ಗೆ ಪಟ್ಟ ಕಟ್ಟ್ಲಿಕ್ಕೆ ಬಾರದು"ಯಂದು ತಿಳದು ಯೇಳು ಮಂದಿಗೂ ಯೇಳು ತಾಲೂಕಾ ನೇಮಕಾ ಮಾಡಿ, ಆ ತಾಲೂಕುಗೆ ವಬ್ಬ ವಬ್ಬನ ಹೆಸರನ್ನು ಪಟ್ಟವನ್ನು ಮಾಡಿ, ಅವರ ಅವರ ಗ್ರಾಮಗಳೆ ನೇಮಕಾ ಮಾಡಿದ ವಿವರಉ॥

೧. ಹಿರೆಬೊಮ್ಮಂತ ರಾಜಗೆ ಕುತ್ತಾನ

೧. ಬಿಸಳರಾಜಗೆ ಸೊಂಡೂರು

೧. ರಾಜಪ್ಪನಾಯಕನಿಗೆ ಬಾಣರಾವಿ

೧. ಮಲ್ಕರ್ಜಿನಾಯಕಗೆ ಜೆರಿಮಠ[>ಲೆ]

೧. ವೀರಪ್ಪನಾಯಕಗೆ ವುಜನಿ

೧. ಯಿಮ್ಮಡಿ ನಾಯಕಗೆ ಗುಡೆಕೋಟಿ

೧. ಚಿನ್ನರಾಜಗೆ ವಡ್ಡುದರೋದಿ

ಯೀ ಪ್ರಕಾರ ತಾಲೂಕುಗಳು ನಿರ್ಧಾರಮಾಡಿ, ಸುಮೂಹುರ್ತಾ ನೋಡಿ, ಅವರವರ ಸೀಮೆಗಳಿಗೆ ಅವರವರನು ಕಳುಹಿಸಿಕೊಟ್ಟು, ಮಧ್ಯಮಗನ ಬಳಿಯಲ್ಲಿ ನಿಂತನು.

ವಡ್ಡುದರೋಜಿಗೆ ತಾಲೂಕಿಗೆ ಬಂದಾತ ಚಿನ್ನಯರಾಜನು. ಆತನು ಹಲವು ದಿವಸ ತಾಲೂಕು ವಡ್ಡುದರೋಜಿ ಅನುಭವಿಸುತ್ತಾ ಯಿರಲಾಗಿ, ಆತನ ಮನ್ಮಂತ್ರದಲ್ಲಿ ಸೊಂಡೂರಲ್ಲಿ ಯಿರೋ ಕೆರಿಯನು ತ್ರಿಶಂಕರಾಯರು ಕಟ್ಟಿಸಿದ್ದುಯೆಂದು ಜನ ಆಡಿಕೊಳ್ಳುತ್ತಯಿದ್ದೀತೆ. ಆ ಕೆರಿ ನೋಡಲಾಗಿ ಪುರಾತನ ಕೆರಿಯಂದು ಕಾಣಿಸುತ್ತಾ ಯಿದ್ದೀತೆ. ನೇ[>ಸೋ]ಮನಹಳ್ಳಿ ಕೆರಿ ಕೂ[>ಕೋ]ಡಿ ಬಿದ್ದು ಬಂದ ನರಿಹಳ್ಳ ಗಂಡಿ ಆಚೆಗೆ ಹೊರಗಂಡಿಯಿಂದ ನರಸಿಹ್ಮಗಂಡಿಗೆ ಮೂರು ಹರದಾರಿಯಿಂದ ಬಂದ ಹಳ್ಳ ಆ ಕೆರಿಯನ್ನು ವಡದು ಬಂದು, ಅದಕ್ಕೇನೆ ಯೀ ದರೊದಿಕೆರಿಯು ವಡದು ಹೋಗಿ ಯಿತ್ತು. ಆ ಕೇರಿ ವಡದು ಬಹೋ ವ್ಯಾಳ್ಯೆದಲ್ಲಿ ಆ ಕೆರಿಮ್ಯಾಲೆ ಹಳದರಾಯನೆಂಬೊ ದೇವರು ಅಲ್ಲಿಯಿದ್ದ ಕಾರಣ ಆ ಹಳ್ಳದಲ್ಲಿ ಬಂದು, ಯೀಗ ಕಟ್ಟಿಯರುವ ಗುಡೀಗೆ ಪಶ್ಚಿಮಭಾಗಕ್ಕೆ ಸಮೀಪದಲ್ಲಿ ಆ ಮಡಿವಿನಿಲ್ಲಿ ಯಿರಲಾಗಿ, ಯಿ ಧೊರೆ ಚನ್ನಯಿರಾಜಗೆ ಸ್ವಪ್ನದಲ್ಲಿ ಬಂದು ಯೀ ಸದರಿ ವರ್ತಮಾನವನ್ನು ಹೇಳಲಾಗಿ, ಆ ಮರುದಿವಸ ದೊರಿಯು ನೋಡಿಸಲಾಗಿ ಅಲ್ಲಿ ಯೀ ದೇವರು ಯಿತ್ತು. ತೆಗೆದುಕೊಂಡು ಬಂದು ಪ್ರತಿಷ್ಟೆಯನ್ನು ಮಾಡಿ ಹನುಮಂತದೇವರಿಗೆ ಹಳ್ಳದಾಗೆ ಬಂದ ಕಾರಣ ಹಳ್ಳದರಾಯನೆಂಬೊ ಹೆಸರು ಯಿಟ್ಟು ಯಿದ್ದಾರೆ. ಯೀಗೆ ಅದೇ ನಾಮ ನಡಿಯುತ್ತಾ ಯಿಧೆ. ಆ ದೇಚರು ಯಿದ್ದ ಸ್ಥಳಕ್ಕು ಹಳ್ಳದರಾಯನ ಮಡುಉ ಯಂದು ನಾಮ ನಡಉತ್ತಾ ಯಿಧ್ಧೀತೆ.

ಆತನು ಹಲವು ಕಾಲ ಯಿರಲಾಗಿ ನರಪತಿವಂಶಕ್ಕೆ ಅಳಿಯನಾದಂತಾ ಅಳಿಯ ರಾಮರಾಜರು ಮುಸಲಮಾನರಿಗೆ ಪ್ರವರ್ತಕ ಮಾಡಲಾಗಿ, ಅವರು ಯೀ ವರ್ತಮಾನ ಕೇಳಿ ಸಯಿಸಲಾರದೆ ಬಂದು ರಾಜ್ಯವನ್ನು ಧ್ವಂಸಮಾಡಿ, ಆ ರಾಮರಾಜನವರ ತಲೆ ಕೊಯಿದು ಜಂಡೇಕೆ ಕಟ್ಟಿದರು. ಆಮೇಲೆ ಮೊಗಲಾಯಿ ಕೆಲಉ ಕಾಲಯಿತ್ತು. ನರಪತಿ ವಂಶಸ್ತರು ಸದಾಶಿವರಾಯಗೆ ಪಾಕ್ಷಾನವರು ನೇಮಕಾ ಮಾಡಿ ಕೊಟ್ಟರು. ಆ ತರುವಾಯ ಪುನಹಾ ಮೊಗಲಾಯಿ ಆಯಿತು. ಆ ವೇಳೆದಲ್ಲಿ ಮರುಳೆನವರ ವಂಶಸ್ಥ ಜಿನ[>ಚಿನ್ನ]ರಾಜನ ಮಗ ಬಸಳನಾಯಕನು ಯೀ ದೇಶ ವಡಿ[>ಡ್ಡಿ]ನಸೀಮೆಯನ್ನು ಜೋರಾವಾರಿಯಿಂದ ದರೋದಿ ಸಹಾ ಠಾಣ್ಯ ಹಾಕಿಕೊಂಡು, ಯೀ ಸೀಮೆಯನ್ನು ಕೆಲಉ ಕಾಲ ಅನುಭವ ಮಾಡುತ್ತಾ ಯಿದ್ದನು. ವೊಂದಾನೊಂದು ದಿವಸ ಬೇಟೆ ಆಡುತ್ತಾ ಹೋಗಲಾಗಿ ಪೂರ್ವದಲ್ಲಿ ನೇಮಿಯವರ ಸರದಾರ ಕಟ್ಟಿಸಿದ್ದು ಕೆರಿಯು ವಡದು

ಬಾಹಾಳ ದಿವಸ ಆಗಿ ಯಿಧೆಯೆಂದು ತಿಳದು ಜೀರಣೋದ್ಧಾರವನ್ನು ಮಾಡಿದನು. ಬಸಳನಾಯಕನ ವಡಕುಯಂದು ನಾಗನಾಥ ಬಸವಣ್ಣದೇವರ ಗುಡೀಗೆ ಪೂರ್ವಭಾಗದಲ್ಲಿ ಯಿದ್ದೀತೆ. ಕೆರೆ ಕಟ್ಟಿಸಿದ ಮೇಲೆ ಹಲಉ ಕಾಲ ಅನುಭವಿಶಿಕೊಳ್ಳುತ ಯಿರಲಾಗಿ ನರಪತಿವಂಶದವರು ಯಿತಲಾಗಿ ಅವರೆ ಅನುಭವಿಸಿ ಕೊಳ್ಳುತ್ತ, ಹಿರೆ ವೆಂಕಟಪತಿರಾಯರ ಕಾಲದ ಪರಿಯಂತ್ರ ಅನುಭವಿಸಿ ಕೊಳ್ಳುತ್ತ ಬಂದರು. ಹಿರೆವೆಂಕಟಪತಿರಾಯರ ಕಾಲದಲ್ಲಿ ಮರಳನವರ ವಂಶಕ್ಕೆ ಅಳಿಯನಾದ ಮದಿಕೆರಿನಾಯಕನು ಬಂದು, ಜಬರದಸ್ತಿನಿಂದಾ ವೊಡ್ಡು ಠಾಣ್ಯ ಹಾಕಿಕೊಂಡು, ದರೋದಿಗೆ ಬರಲಾಗಿ, ದರೋದಿಗೆ ಮುತ್ತಿಗೆ ಹಾಕಲಾಗಿ, ಆನೆಗೊಂದಿ ದೊರಿಗಳು ಬಂದು ಕಡದು ಮುತ್ತಿಗೆ ಯೆಬ್ಬಿಸಿದರು. ಮದಿಕೆರಿನಾಯಕನು ಚಿತ್ರದುರ್ಗಕ್ಕೆ ಹೋದನು. ಮದಿಕೆರಿನಾಯಕನ ಠಾಣ್ಯ ವಡುಯಿತಾಯಿತನುಲಾಗಿ ಮದಿಕೆರಿನಾಯಕನು ಹಲವು ಕಾಲ ಅನುಭವಿಸಿದನು. ಆತನ ಮಗ ಕಸ್ತೂರಿ ರಂಗಪ್ಪನಾಯಕ ಕೆಲವು ಕಾಲ ಆಳಿದನು. ಆತನ ಮಗ ಮದಿಕೆರಿನಾಯಕನು ವಿಳಂಬಿ ಸಂವತ್ಸರ ಪರಿಯಂತ್ರ ಆಳಿದನು. ಯೀಚೀಗೆ ದೊಡ್ಡ ನವಾಬರ ಠಾಣ್ಯ ಆಯಿತು. ಆತನು ಕೆಲಉ ದಿವಸ ಅನುಭವಿಸಿದನು. ಆತನ ಮಗ ಟೀಪುಸುಲ್ತಾನನು ಸೌಮ್ಯ ಸಂವತ್ಸರದ ಪರಿಯಂತ್ರ ಅನುಭವಿಸಿದನು. ಪುನಹಾ ನರಪತಿ ತಿರುಮಲರಾಯರು ಸಾಧಾರಣ ಲಾಗಾಯಿತು ಪರಿಧಾವಿ ಸಂವತ್ಸರದ ಮಾಘಮಾಸದ ವರಿಗೆ ಬಾಣರಾವಿ ರಾಜ್ಯಾ ಸಾಧಿಸಿ ಅನುಭವಿಸಿದರು. ಪುನಹಾ ಟೀಪುಸುಲ್‌ತಾನ್‌ನವರು ಬಬ್ಬರಜಂಗನವಾಬನೆಂಬ ಆತಮಿರಕ ಮರಧಿಖಾನ್‌ನ ಫೌಜು ಸುದ್ದಾ ಬಂದು ಠಾಣ್ಯ ಹಾಕಿದರು. ಸಿದ್ಧಾರ್ತಿ ಸಂವತ್ಸರದ ಜೇಷ್ಠಮಾಸದಲ್ಲು ನರಪತಿ ತಿರುಮಲರಾಯರು ಬಂದು ಠಾಣ್ಯ ಆಯಿತು. ಸಿದ್ಧಾರ್ತಿನಾಮ ಸಂವತ್ಸರದ ಶ್ರಾವಣಮಾಸದಲ್ಲಿ ಆಮೇಲೆ ಮೊಗಲಾಯಿವರಿಗೆ ಪಾಲ್ಗುಣಮಾಸದಲ್ಲಿ ರಉದ್ರಿ ಸಂವತ್ಸರ ಕಾರ್ತಿಕಮಾಸದ ಪರಿಯಂತ್ರಕ್ಕೂ ಠಾಣ್ಯಯಿತ್ತು. ಆಮೇಲೆ ಕುಂಪಣಿ ಸರಕಾರ ಠಾಣ್ಯ ಆಯಿತು. ಮಾರ್ಗಶಿರ ಮಾಸಲಾಗಾಯಿತು ಶುಕ್ಲ ಸಂವತ್ಸರದ ಪುನಹಾ ಸರಕಾರ ಯಿಂಗರೇಜಿ ಅಮಲು ನಡಉತ್ತಾ ಯಿದೆಯೆಂದು ಬರಕೊಟ್ಟ ಕೈಫಿಯತು.

ವಡ್ಡಿನ ಶೀಮೆ ಹಳ್ಳಿಗಳ ವಿವರಉ :

೧. ಯಿಂಗಳಿಗಿ
೧. ಬಂನಿಹಟ್ಟಿ
೧. ಯೆತ್ತಿನ ಹಟ್ಟಿ
೧. ನಾಗಲಾಪುರ
೧. ತೋರಣಗಲ್ಲು
೧. ಗೌರಿಪುರ
೧. ಮುರಾರಿಪುರ
೧. ತಾಳೂರು
೧. ಹತ್ತಿಗನಹಳ್ಳಿ
೧. ಗಂಗಲಾಪುರ
೧. ಯಿರಾಪುರ
೧. ಹೊಸಹಳ್ಳಿ
೧. ಜಿಲಾಣಾ

೪ ಯೀ ಗ್ರಾಮದ ಮುಜರೆ ಗ್ರಾಮ

೧. ವಡ್ಡು
೧. ಬಸಾಪುರ
೧. ಕುರೆಕುಂಪಿ
೧. ವೆಂಮನಹಳ್ಳಿ
೧. ಬವನಹಳ್ಳಿ
೧. ಗೊಣಾಹಾಳ
೧. ಗಾದಿಗನೂರು
೧. ಕೋಟಿಗನಹಾಳು
೧. ಧರ್ಮಸಾಗರ

೧. ವದಿಗೆರೆ	೧. ಗುಂಡ್ಲದಿಗೆರಿ	೧. ಕಾಕುಬಾಳ
೧. ಪಾಲನಾಯಕನಹಳ್ಳಿ	೧. ವಡ್ರಹಳ್ಳಿ	೧. ಶ್ರೀ[ರ+]ಂಗಾಪುರ
೫	೫	೫

ಯೀ ಪ್ರಕಾರ ತಾ॥ ವಡ್ಡು ಗ್ರಾಮಹಳ್ಳಿ ವಿವರಉ.

೩. ಸೊಂಡೂರಿಗೆ ಶೇರಿದ ಗ್ರಾಮಗಳು :	ಹಾಳು ಗ್ರಾಮಗಳು:
೧. ಯತ್ತಿನಹಟ್ಟಿ ಗ್ರಾಮ	೧ ಹುತ್ತಿನಹಾಳು
೧. ಮುರಾರಿಪುರ ಗ್ರಾಮ	೧ ಹೊಸಹಳ್ಳಿ
೧ ವೀರಾಪುರ ಗ್ರಾಮ	೪ ಜ್ವ[>ಜೊ]ಗದ ವಳಗೆ ಮುಜರೆ ಗ್ರಾಮ
೩	೬

ಜಾತಾಬಾಕಿ ಬಸ್ತಿ[>ವಸತಿ] ಹಳ್ಳಿಗಳು ೨೩ ವಿವರವು :

ಕಮಲಾಪುರಕ್ಕೆ ಶೇರಿದ ಗ್ರಾಮ:

೧. ಕಾಕಬಾಳು	೧. ವದಿಗೆರಿ
೧. ಗುಂಡ್ಲುಗೆರಿ	೧. ವಡ್ರಹಳ್ಳಿ
೧. ಪೊಪನಾಯಕನ ಹಳ್ಳಿ	೨
೩	

ವಡ್ಡಿನ ಕೆಳಗೆ ಯಿಹೊ ಗ್ರಾಮಗಳು:

೧. ವಡ್ಡುಗ್ರಾಮ	೧. ತೋರಣಗಲ್ಲು	೧. ಗೋನಾಹಳ್ಳಿ	೧. ಗಂಗಲಾಪುರ
೧. ಬವನಹಳ್ಳಿ	೧. ಶ್ರೀರಂಗಾಪುರ	೧. ಗಾದಿನೂರು	೧. ಕುರೆಕುಂಪಿ
೧. ಗೌರಿಪುರ	೧. ವೇಮನಹಳ್ಳಿ	೧. ಬಸಾಪುರ	೧. ಧರ್ಮಸಾಗರ
೧. ತಾಳೂರು	೧. ಬನ್ನಿಹಟ್ಟಿ	೧. ಯಿಂಗಳಿಗೆ	೧. ಕೋಟಿಗನ ಹಾಳ
೧. ನಾಗಲಾಪುರ	೧. ಜೋಗಾ		

ಗ್ರಾಮಕ್ಕೆ ಚೆಕಬಂದಿ, ವಡ್ಡಿನ ಗ್ರಾಮದ ಚೆಕಬಂದಿ:

೧. ಯಿಂದ್ರದಿಕ್ಕಿಗೆ ಹತ್ತಿಗನಾಳು ಹೊಲಮಕ್ಕಿ[>ಮೇರೆ].

೧. ಅಗ್ನಿದಿಕ್ಕಿಗೆ ಕರಡಿಕೊಳಲು.

೧. ಯಮದಿಕ್ಕಿಗೆ ಮಾಗವಗೂಳ ಪಿಚಲಕುಂಟೆ.

೧. ನೈರೂತ್ಯದಿಕ್ಕಿಗೆ ತಾಳೂರ ಹೊಲಮಕ್ಕೆ[>ಮೇರೆ].

೧. ವರುಣದಿಕ್ಕಿಗೆ ಆನೆಗುಂಡು.

೧. ವಾಯವ್ಯದಿಕ್ಕಿಗೆ ಬಸಾಪುರ ಹೊಲಮಕ್ಕೆ[>ಮೇರೆ].

೧. ಕುಬೇರದಿಕ್ಕಿಗೆ ಕುರೆಕುಂಪೆ.

೧. ಯೀಶಾನ್ಯದಿಕ್ಕಿಗೆ ತೋರಣಗಲ್ಲು.

೮

ವಡ್ಡಿನ ಪಶ್ಚಿಮದಿಂದ ಹಾದು ದರೋದಿಕೆರಿ ದಾಖಲು ಆದ್ದು, ನಾರಿಹಳ್ಳ ಹುಟ್ಟಿದ್ದು, ಸೊಮೇನಹಳ್ಳಿ ಕೆರಿ ಕೋಡಿಯಿಂದ ಬಂದದ್ದು, ನರಸಿಹ್ಮದೇವರುಗುಂಡಿ ವಡೆ ಬಡಕೊಂಡು[>ಒಳಕೊಂಡು], ಸೊಂಡೂರ ವಳಗಿಂದಾ ಭೀಮನಗುಂಡಿ ವಡಕೊಂಡು [>ಒಳಕೊಂಡು], ಯೆತ್ತಿನಹಟ್ಟಿ ಬಳಿಯಿಂದ ಹಾದು ಗೌರಿಪುರದ ಮುಂದೆ ಆರಂಭ ಮಾಡಿಕ್ಕೊಂಡು, ದರೊದಿಕೆರೆ ಪರಿಯಂತ್ರಕ್ಕೂ ಬಂದದ್ದು. ಹಳ್ಳ ಪೂರ್ವದಲ್ಲಿ ನದೀಗೆ ತುಂಗಭದ್ರಕ್ಕೆ ಹೋಗಿ ಯಿಟ್ಟಿಗೆ ಮುದ್ದಾಪುರದ ಬಳಿಯಲ್ಲು ಹೋಗಿ, ಸಂಗಮ ಆಗುತ್ತಾ ಯಿತ್ತು. ದರೊದಿಕೆರೆ ಕಟ್ಟಿದ ಮೇಲೆ ಕೆರಿಗೆ ರುದು ಬೀಳುತ್ತಾ ಯಿದ್ದೀತೆ. ಯೀ ಕಾ[>ನಾ]ರಿಹಳ್ಳಕ್ಕೆ ಕಾಲ್ವೆ ಹುಟ್ಟಿದ ವಿವರವು:

೧. ಸೊಂಡೂರು ತಾಲೂಕು ಪೈಕಿ ಯೆತ್ತಿನಹಟ್ಟಿ ಊರ ಮುಂದೆ ಹುಟ್ಟಿದ ಕಾಲ್ವೆ ಗೌರಿಪುರದ ಮಾಗಣಿಗೆ ಬತ್ತಾ ಯಿದ್ದೀತೆ ಹೊರ್ತು ಯೀತನಹಟ್ಟಿಗೆ[>ಯತ್ತಿನ ಹಟ್ಟಿಗೆ] ಕಾಲ್ವೆ ನೀರಿನಿಂದ ಫಲವಿಲ್ಲಲು.

೧. ಗೌರಿಪುರ ಕಂಪ್ಲಿ ತಾಲೂಕು ಪೈಕೀಲಿ ಗ್ರಾಮದಲ್ಲಿ ಹುಟ್ಟಿದ ಕಾಲ್ವೆಯಿತ್ತಾ. ಪೈಕಿ ಗಂಗಲಾಪುರಕ್ಕೆ ಮಾಗಾಣಿ ಆಗುತ್ತಾ ಯಿದ್ದೀತೆ.

೧. ಕಂ* ॥ ತಾಲ್ಲೂಕ ಪಯಕಿ ಗಂಗಲಾಪುರದ ಮುಂದೆ ಹುಟ್ಟಿ ನಾಗಲಾಪುರಕ್ಕೆ ನೀರು ಹತ್ತಿ ಯಿದ್ಧೀತೆ.

೨. ನಾಗಲಾಪುರದ ಮುಂದೆ ಹುಟ್ಟಿದ ಕಾಲ್ವೆ :

೧. ಬನ್ನಿಹಟ್ಟಿ ಕಾಲ್ವೆ

೧. ತಾಳೂರುಕಟ್ಟಿ ಕಾಲ್ವೆ

೨

(ಕಂ=ಕಂಪಲಿ (ಸಂ)

೧. ವಡಿ[>ಡ್ಡಿ]ನ ಕೋಟೆ ತಾಳೂರು ಹೊಲಬಿನಲ್ಲಿ ಹುಟ್ಟಿದ ಕಟ್ಟೆ ಕಾಲ್ವೆ

೧. ಬಸಾಪುರ ಕಾಲ್ವಿ ವಡ್ಡಿನ ಹೊಲಬಿನಲ್ಲಿ ಹುಟ್ಟಿದ ಕಟ್ಟೆ ಕಾಲ್ವೆ

೧. ಕುರೆಕುಂಪ ಹೊಲಬಿನಲ್ಲಿ ಕಟ್ಟೆ ಹುಟ್ಟಿ ಬಂದ ಕಾಲ್ವೆ

೮

ವಡ್ಡಿನ ಶೀಮೆಯಲ್ಲಿ ಬೆಳೆವೊ ಧಾನ್ಯ:

ಖುಷ್ಕಿ			ಬಾಗಾಯಿತು	
೧ ಜೋಳಲು	೧ ತೊಗರಿ	೧ ಹುರುಳಿ	೧ ನೀರುಜೋಳ	
೧ ನವಣಿ	೧ ಹ್ಯೆಸರು	೧ ಪುಂಡಿ	೧ ನವಣಿ	
೧ ಶಜ್ಜೆ	೧ ಅಲಸಂದಿ	೧ ಗುರ್‍ರೆಳ್ಳು	೧ ರಾಗಿ	೧ ತರಿ
೧ ಯೆಳ್ಳು	೧ ಹತ್ತಿ	೧೨	೧ ಸಾಸ್ವಿ	೧ ಯೆಲಕ್ಕೊ
			೧ ಕಡ್ಲೆ	೧ ನೆಲ್ಲು
			೧೬	೨

ವಡ್ಡಿಗೆ ಬಂದ ಜಿ[>ಚಿ]ನ್ನಯಿರಾಜನ ವಂಶ ರಾಮಪ್ಪನಾಯಕನಲ್ಲಿ ನಿಂತುಹೋಯಿತು. ಸೊಂಡೂರುಯಲ್ಲಿ ಯಿದ್ದಂತಾ ವಂಶಸ್ತ ಹೊಕಳಿ ಹೊನ್ನಿನ ಹಿರೆ ಬಿ[+ಸ]ಳನಾಯಕನ ಕಡೆಯಿಂದ, ಸೊಂಡೂರು ಹಿರೆ ಹಿಂದುರಾಯನು[>ನ] ಕರಕೊಂಡು ಬಿಸಳನಾಯಕನೆ ಮ[>ಯ]ತ್ತಿನಹಟ್ಟಿ ಜಾಗೇರು ಕೊಟ್ಟನು. ಬಿಸಳನಾಯಕ ಹೋದ ಬಳಿಕ ಯತ್ತಿನಹಟ್ಟಿ ಜಾಗೀರು ಬಂದುಮಾಡಿದನು. ಈತನ ಮಗ ರಾಮಪ್ಪನಾಯಕಗೆ ಆನೆಗೊಂದಿ ನರಪತಿಗಳು ಯೀರ ವೆಂಕಟಪತಿರಾಯರು ಬಳಿಗೆ ಹೋಗಿ, ಅಷ್ಟಕ್ಕೆ ಏಳವಾರ ಕಟ್ಟಿ ಸ್ವಾ ಕಾವಲೀದು ಗಾದಿಗನೂರು ಉಮ್ಮಳಿ ಗ್ರಾಮ ಕಾಕುಬಾಳು ಗುಂದಿಗೆರಿ ವದ್ದಿಗೆರಿ ಸಹಾ ಬರದು ಕೊಟ್ಟು ನಡೀತು.

ಯೀತನ ಮಗ ಅಪ್ಪನಾಯಕನ ಮನ್ಮಂತ್ರದಲ್ಲಿ ಕೆಲವು ದಿನ ಗ್ರಾಮ ನಡೀತು.

ಅಪ್ಪನಾಯಕನ ಮಗ ಜೆಟೆಂಗಿನಾಯಕಗೆ ಉಮ್ಮಾಳಿ ನಡಿಯಲಿಲ್ಲಯ. ಹಾಲಿ ಕಂಪ್ಲಿ ವಳಗಣದ ದಳವಾರಿಕೆ ಮಾಡಿಕ್ಕೊಂಡು ಯೀತನ ಮಗ ಬಿಸಳನಾಯ್ಕ ಹಾಜರು ಯಿದ್ಧಾನೆ.

ಯೀ ಪ್ರಕಾರ ಬರದು ಕೊಟ್ಟಾತ ವಡ್ಡಿನ ಗಉಡ, ಶಾನಭೋಗ ಹನುಮಂತಗೌಡ ಬ್ರಂಹ್ಮಣ್ಣ ಶಾನುಭೋಗನು ಗೌಡನು ನಾನೆಯೆಂದು ಬರಸಿಕೊಟ್ಟ ಕೈಫಿಯತು ಸಹಿ.

❖❖

೧೦೨
ಆರ್ಕಾಡ ಸಂಸ್ಥಾನದ ಕೈಫಿಯತ್ತು

ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ೯–೨

ಪೂರ್ವದಲ್ಲಿ ಶ್ರೀ ವಿದ್ಯಾರಣ್ಯಸ್ವಾಮಿಗಳವರ ಅನುಗ್ರಹದಿಂದ ವಿಜಯನಗರ ಪಟ್ಟಣ ಕರ್ನಾಟಕ ಸಂಸ್ಥಾನದ ನರಪತಿಯಾದ . . . . ಬುಕ್ಕರಾಯರು, ಅವರ ತಮ್ಮ ಚಿಕ್ಕರಾಯರು, ಅವರ ವಂಶದ ನರಸಿಂಹರಾಯರು, ಅವರ ಕುಮಾರ ಕೃಷ್ಣರಾಯರು, ಅವರ ಕುಮಾರ ಕೃಷ್ಣರಾಯರು, ಅವರ ಅಳಿಯ ರಾಮರಾಯರ ವಂಶಸ್ಥರಾದ ವೆಂಕಟಪತಿರಾಯರೆಂಬವರು ವಿಜಯನಗರ ಪಟ್ಟಣವನ್ನು ಬಿಟ್ಟು . . . . ಸಲತಲತು ಮಾಡಿಕೊಂಡು. . . . ದೊರೆತನ ಮಾಡುತ್ತ ಇದ್ದು, ವಂದು ದಿವಸ ತಿರುಪತಿಗೆ ದೇವರ ಸೇವೆ ನಿಮಿತ್ತ್ಯ ತನ್ನ ಫವುಜು ಅಹಲೇಕಾರರು ತನ್ನ ಕೈಕೆಳಗಣ ಎಪ್ಪತ್ತೆರಡು ಜನ ಮುಖಂಡ ಪಾಳ್ಯಗಾರರು ಮುಂತಾದವರನ್ನು ಸಂಗಡ ಕರೆದುಕೊಂಡು ಬಂದು ಇದ್ದದ್ದರಿಂದ, ಆತನ ಸೂಳೆ ದೊಡ್ಡ ಭೋಗಸಾನಿಯು ಚೇತಪಟ್ಟಿ ಚೆಂಗಲ್ಪಟ್ಟಿ ಪಾಳ್ಯಗಾರ ರಂಗಪತಿರಾಜನ ಮೇಲೆ ದೃಷ್ಟಿಯಿಟ್ಟದ್ದರಿಂದ ಆತನು, 'ತಮ್ಮ ಧಣಿಯಿಟ್ಟುಕೊಂಡ ಸೂಳೆಯು ತನಗೆ ತಾಯಿ ಸಮಾನ"ವೆಂಬುದಾಗಿ ಒಪ್ಪದೆ ಹೋದ ಕಾರಣ, ಆಕೆ ಮರೆಮಾಚಿ ಮತ್ತೊಂದು ಪ್ರಕಾರ ವೆಂಕಟಪತಿರಾಯರ ಸಂಗಡ ಕ್ಷುದ್ರಗಳ ಹೇಳಿದ್ದರಿಂದ, ವೆಂಕಟಪತಿರಾಯರವರಿಗೆ ರಂಗಪತಿರಾಜನ ಮೇಲೆ ಸಿಟ್ಟು ಬಂದು, ಉಭಯತ್ರರಿಗೂ ಯುದ್ಧವಾಗಿ ವೆಂಕಟಪತಿರಾಯರ ಫವುಝು ಸುಮಾರು ಹತ್ತು ಲಕ್ಷ ಜನ ಪರಿಯಂತರ ಇದ್ದದ್ದು ಸಿಕತ್ತಾಗಿ, ರಂಗಪತಿರಾಜನ ಹದಿನಾರು ಸಾವಿರ ಫವುಜಿನ ಒಂದು ಪತ್ತೆಯಾಗಿ ವೆಂಕಟಪತಿರಾಯರು ಅವರ ಸೂಳೆ ದೊಡ್ಡ ಭೋಗಸಾನಿ ಮುಂತಾದವರು ರಂಗಪತಿರಾಜನ ಹಸ್ತಗತವಾದ್ದರಿಂದ, ರಂಗಪತಿರಾಜನು ದೊಡ್ಡ ಭೋಗಸಾನಿಯ ಮಲೆಗಳ ಕುಯಿಸಿ ಕೊಂಡು ಹಾಕಿಸಿಬಿಟ್ಟನು.

ದಂಡಿನಲ್ಲಿದ್ದ ಭಾರಿ ಅಹಲೇಕಾರರೂ ಬಾಕಿ ಯಪ್ಪತ್ತೊಂದು ಜನ ಪಾಳ್ಯಗಾರರೂ ಸಹ ಏಕಸ್ತರಾಗಿ ಮಾತನಾಡಿಕೊಂಡು, ರಂಗಪತಿರಾಜಗೂ ಹೇಳತಕ್ಕ ಮಾತುಗಳ ಹೇಳಿ ಸಮದಾಯಿಸಿ, ವೆಂಕಟಪತಿರಾಜರಿಗೂ ರಂಗಪತಿರಾಜಗೂ ಮುಂದೆ ಜಿದ್ದಿಲ್ಲದಂತೆ ಪ್ರಮಾಣ ಪ್ರತ್ಯಯಗಳ ಮಾಡಿಸಿ, ವೆಂಕಟಪತಿರಾಯರಿಗೆ ಪುನಃ ಪೆನುಗೊಂಡೆ ರಾಯಸಂಸ್ಥಾನದ ಕರ್ಣಾಟಕ ಸಿಂಹಾಸನಾಧಿಪತ್ಯವನ್ನು ಬಹಲು ಮಾಡಿಸಿ, ರಾಯರನ ಪೆನುಗೊಂಡೆಗೆ ಕರೆದುಕೊಂಡು ಹೋದರು. ರಂಗಪತಿರಾಜ ಮುಂತಾದ ಯೆಪ್ಪತ್ತೆರಡು ಜನ ಪಾಳ್ಯಗಾರರೂ ತಂತಮ್ಮ ರಾಜ್ಯಗಳಿಗೆ ಹೊರಟು ಹೋದರು. ವೆಂಕಟಪತಿರಾಯರು ಪೆನುಗೊಂಡೆಯಲ್ಲಿ ಸದರಿ ದೊಡ್ಡಭೋಗಸಾನಿಯ ತಂಗಿಯಾದ ಚಿಕ್ಕಭೋಗಸಾನಿಯೆಂಬುವಳ ತಾವು ಸ್ವಂತವಾಗಿ ಯಿರಿಸಿಕೊಂಡು, ಅವಳ ತಮ್ಮನಾದ ನಾರೆನ್ನನೆಂಬುವನ್ನ ತಮ್ಮ ಖಾಸ್ ಚವುರಿ ಬರದಾರಿವಳಕ್ಕೆ ಸೇರಿಸಿಕೊಂಡು, ಅವನ್ನ[>ನು] ಕೇವಲ ಬಡಾಯಿಸಿ ಆಪ್ತಾಲೋಚನೆ ಮುಂತಾದ್ದ ಮಾಡುತ ಬಂದದರಿಂದ ಅವನು ದೊಡ್ಡ ದೊಡ್ಡ ಅಹಲೇಕಾರರನ್ನೆಲ್ಲ ಮೂಲೆಗೆ ಕೂಡಿಸಿ, ತನಗೆ ಬೇಕಾದ ಹಲ್ಕೆ ಜನರು ದುರ್ಮಾರ್ಗರು

ಇಂಥವರಿಗೆ ಸಹ ಹುದ್ದೆಗಳ ಕೊಡಿಸಿಕೊಟ್ಟು, ಕಾರುಬಾರು ಯಾವತ್ತು ಕೆಡಿಸಿ, ರಂಗಪತಿರಾಜ ಅವರ ಅಣ್ಣನ ದೊಡ್ಡಮಗ ಬಂಗಾರು ತಿಮ್ಮರಾಜನ ಮೇಲೂ ಕೇವಲ ಕ್ಷುದ್ರಗಳನ್ನೇ ಬೆಳಿಸುತ್ತ ಬಂದರೂ.

ರಂಗಪತಿರಾಜನು ಕೆಲವು ದಿವಸದ ಮೇಲೆ ತಾನು ಮುದುಕನಾದೆನೆಂಬುದಾಗಿ ತಮ್ಮ ಅಣ್ಣನ ದೊಡ್ಡ ಮಗನಾದ ಬಂಗಾರು ತಿಮ್ಮರಾಜಗೆ ಚೇತಪಟ್ಟಿ, ಚೆಂಗಲ್‌ಪಟ್ಟಿ ದೊರೆತನವನ್ನು ಕೊಟ್ಟು, ಆ ವಿವರಕ್ಕೆ ಪೆನುಗೊಂಡೆಗೆ ರಾಯರ ಬಳಿಗೆ ನಜರನ್ಯಾಜ್ ಕೊಟ್ಟು, ಅರ್ಜಿ ಸಹ ತಮ್ಮ ಕಡೆ ವಕೀಲನ ಸಂಗಡ ಕಳುಹಿಸಿದ್ದರಿಂದ ರಾಯರು ಪರಾಂಬರಿಸಿ, ಸದರಿ ಬಂಗಾರು ತಿಮ್ಮರಾಜನ್ನ ಪೆನುಗೊಂಡೆಗೆ ತಮ್ಮ ಸನ್ನಿದಾನಕ್ಕೆ ಕಳುಹಿಸುವಂತೆಯು ತಾವು ಮೊಖ್ತ ಪರಾಂಬರಿಸಿ, ವಸ್ತ್ರ ಪಾತ್ರ ಮುಂತಾದ್ದ ಕೊಟ್ಟು, ಸ್ಥಳಕ್ಕೆ ಕಳುಹಿಸುತ್ತೇವೆಂಬದಾಗಿ ವಕೀಲನ ಸಂಗಡಲು ಮೊಖ್ತ ಅಪ್ಪಣೆ ಕೊಟ್ಟು, ಬುದ್ಧಿನಿರೂಪ ಸಹ ಬರಿಸಿಕೊಟ್ಟು, ವಕೀಲನ್ನ ಕಳುಹಿಸಿದ್ದರಿಂದ ರಂಗಪತಿರಾಜನು ರಾಯರ ಬುದ್ಧಿನಿರೂಪ ಪ್ರಕಾರಕ್ಕೆ ಬಂಗಾರು ತಿಮ್ಮರಾಜನ ತಮ್ಮ ಪೂಲರಂಗನ್ನ ಯೆಂಬಾತನನ್ನ ಸ್ಥಳದಲ್ಲಿ ಕಾರುಬಾರು ವಿಚಾರಿಸಿಕೊಳ್ಳುವಂತೆ ಮಡಗಿ, ಬಂಗಾರು ತಿಮ್ಮರಾಜನ್ನೂ ಕೆಲವು ಅಹಲೇಕಾರರನ್ನೂ ಕೆಲವು ಫವುಜನ್ನೂ ಸಹ ಕರೆದುಕೊಂಡು, ರಾಯರಿಗೆ ನಜರನ್ಯಾಜ ಮುಂತಾದ ನಿಮಿತ್ಯ ಕೆಲವು ವೂಚು ಜವಾಹಿರ ಹಣಕಾಸು ಮುಂತಾದ್ದು ತೆಗಿಸಿಕೊಂಡು, ರಂಗಪತಿರಾಯರು ತಾನೇ ಹೊರಟು, ಲೇಪಾಕ್ಷಿ ಬಳಿಗೆ ಬಂದು, ಲೇಪಾಕ್ಷಿ ಬಸವಣ್ಣ ದೇವರಿಗೆ ಯಲೆಪೂಜೆ ಅಭಿಷೇಕ ಸಮಾರಾಧನೆ ಮುಂತಾದ್ದು ಮಾಡಿಸಿ, ದೇವರನ ಪ್ರಸಾದ ಕೇಳಿದ್ದರಿಂದ ದೇವರು ವೈನವಾಗಿ ಪ್ರಸಾದ ಕೊಡದೆ ಹೋದ್ದರಿಂದ ಆದಾಗ್ಯೂ ಖಾವಂದರ ಹುಕುಂ ಜರೂರ ತಿಳಿದು ಮುಂದಕ್ಕೆ ಪೆನುಗೊಂಡೆ ಕೋಟೆ ಹೊರಗೆ ಬಾಬೈನ ಮಸೀತಿ ಬಳಿ ಯಿಳಿದುಕೊಂಡು, ರಾಯರ ಬಳಿಗೆ ಹೇಳಿಕಳುಹಿಸಿದ್ದರಿಂದ ರಾಯರು ಸಂತೋಷಪಟ್ಟುಕೊಂಡು ಖಾಸ್ಸವಾರಿ ಮತೀತಿ ಬಳಿಗೆ ಬಂದು, ಮಸೀತಿ ವಳಗೆ ರಂಗಪತಿರಾಜಗೆ, ಬಂಗಾರು ತಿಮ್ಮರಾಜಗೆ ಸಹ ಪ್ರಮಾಣ ಪ್ರತ್ಯಯಗಳ ಕೊಟ್ಟು, ಖಾತರ ಜಮೆಮಾಡಿ, ಅವರ ಫವುಜನ್ನೆಲ್ಲ ಮಸೀತಿ ಬಳಿ ಯಿಳಿಸಿ, ರಂಗಪತಿರಾಜು ಬಂಗಾರು ತಿಮ್ಮರಾಜು ಅವರ ಸಂಗಡ ಬಂದಿದ್ದ ಮುಖ್ಯಸ್ಥ ಅಹಲೇಕಾರರು ಮುನ್ನೂರು ಜನ ಪರಿಯಂತರ ಕೋಟೆಯೊಳಕ್ಕೆ ಕರೆದುಕೊಂಡು ಹೋಗಿ, ಬೇರೆ ಬೇರೆ ಮನೆಗಳು ಬಿಡದಿಗಳ ಮಾಡಿಸಿ ಯಿಳಿಸಿ, ಎಲ್ಲರಿಗೂ ಸರ್ಕಾರದಿಂದ ಉಲುಫೆಗಳು ಕಳುಹಿಸುತ್ತ, ಸರಕಾರದಲ್ಲಿ ಅವುತಣಗಳ ಮುಂತಾದ್ದು ಮಾಡಿಸುತ್ತ, ಎಂಟು ದಿವಸದ ಪರಿಯಂತ ಇಟ್ಟು ಕೊಂಡಿದ್ದು, ವಂದು ದಿವಸ ರಾಯರ ಬಳೀಲಿರುವ ಚವುರಪ್ಪ ನಾರೆನ್ನ ಇನ್ನೂ ಕೆಲವು ಜನ ಸಾಮಾಧೀಕರು ಸಹ ಬದ್ದ ಮಸಲತ್ತು ಮಾಡಿದ್ದರಿಂದ, ರಾಯರು ತಮ್ಮ ಶಿಖಾಸರವನ್ನು ಚವುರಪ್ಪ ನಾರೆನ್ನನ ವಶಕ್ಕೆ ಕೊಟ್ಟು, ಆತ ಹೇಳಿದ ಪ್ರಕಾರ ಕೇಳುವಂತೆ ಮೊಖಂಡ ಅಹಲೇಕಾರರಿಗೆ ತಾಕೀದಿ ಮಾಡಿ, ತಾವು ಬೆಟ್ಟದ ಮೇಲಕ್ಕೆ ಹೊರಟು ಹೋದರು. ಚಿಕ್ಕಭೋಗಸಾನಿಯು ಗಗನಮಹಲಿನ ಮೇಲೆ ಕುಳಿತುಕೊಂಡಳು.

ಚವುರಪ್ಪ ನಾರೆನ್ನನು ಹನ್ನೆರಡು ಸಾವಿರ ಮಂದಿನ, ಸದರಿ ಬಂಗಾರು ತಿಮ್ಮರಾಜು ಅವರ ಅಹಲೇಕಾರರನ್ನ ಸಹ ಹೊಡೆದು ಹಾಕುವಂತೆ ರಾತ್ರಿ ಇಪ್ಪತ್ತು ಘಳಿಗೆ ವೇಳೆಯಲ್ಲಿ ಹುಕುಂ ಕೊಟ್ಟದ್ದರಿಂದ, ಈ ಮಂದಿ ಬಂದು ಯಾವತ್ತು ಮನೆಗಳಿಗೂ ಸುತ್ತಿಕೊಂಡಿದ್ದರಿಂದ, ಈ ವರ್ತಮಾನ

ವಬ್ಬಳು ಬಾಂದೀ ಬಂಗಾರು ತಿಮ್ಮರಾಜುಗೆ ತಿಳಿಸಲಾಗಿ, ತಿಮ್ಮರಾಜು ಅವರ ಚಿಕ್ಕಪ್ಪನ ಹತ್ತಿರ ಮಲಗಿದ್ದ ಹತ್ತು ಇಪ್ಪತ್ತು ಜನ ಸಹ ಹೊರಗೆ ಹೊರಟು, ಬೆತ್ತಲ ಕುದುರೆಗಳ ಮೇಲೆ ಹತ್ತಿಕೊಂಡು, ಕೈಗಳಿಗೆ ಪಟ್ಟೆಗಳ ಯೇರಿಸಿಕೊಂಡು, ಸದರಿ ಮಂದೆ ಮೇಲೆ ಬಿದ್ದು ಕಡಿಯುತ್ತ ಬಂದದ್ದರಿಂದ, ಅಲ್ಲಲ್ಲಿ ಮನೆಗಳಲ್ಲಿ ಇಳಿದಿದ್ದವರು ಈ ಗಡಬಡೆ ಕೇಳಿ, ಯೆಲ್ಲಿನವರಲ್ಲೇ ಎದ್ದು ಹುಷಾರಾದ್ದರಿಂದ, ಅಲ್ಲಲ್ಲೇ ಮಂದಿ ಸುತ್ತಿಕೊಂಡು ಕಡಿದುಹಾಕಿದ್ದರಿಂದ ಕೆಲವು ಜನ ಅಲ್ಲಲ್ಲೇ ಸತ್ತರು. ಕೆಲವು ಜನ ಆ ಮಂದೀನ, ಕಡಿದು ಹೊರಗೆ ಹೊರಟು ತಿಮ್ಮರಾಜನ ಬಳಿಗೆ ಬಂದು ತಲುಪಿದರು. ಇವರ ಮುನ್ನೂರು ಜನರ ಪೈಕಿ ಇನ್ನೂರು ಜನ ಪರಿಯಂತ ಅಲ್ಲಲ್ಲೇ ಸತ್ತುಹೋದರು. ಬಾಕಿ ನೂರು ಜನ ಪರಿಯಂತರ ನಿಂತವರು ತಿಮ್ಮರಾಜು ರಂಗಪತಿರಾಜ ಸಹ ಏಕವಾಗಿ ತಮ್ಮ ಮೇಲೆ ಬಂದ ಫವುಜಿನ ಮೇಲೆ ಬಿದ್ದು ಕಡಿದು ಕುದುರೆಗಳ ಚಲಾಯಿಸಿಕೊಂಡು, ಬಾಬೈನ ಮಸೀತಿ ರೋಬಿನಲ್ಲಿರುವ ಯಲಮಂಚಿ ಬಾಗಿಲಹೊಕ್ಕು, ಆ ಬಾಗಿಲಲ್ಲಿದ್ದವರನ್ನ ಯಾವತ್ತರನು ಕಡಿದು, ಆ ಬಾಗಿಲು ಬೀಗಮುದ್ರೆ ಆಗಿದ್ದಂಥಾ ಲಾಳಮಂಡಿಗೆಯನ್ನು ಕಡಿದು, ಬಾಗಿಲ ತೆರೆದುಕೊಂಡು ತಮ್ಮ ದಂಡು ಇಳಿದಿದ್ದ ಬಳಿಗೆ ಪೋಗಿ ತಲಪಿ, ಆ ರಾತ್ರೆಯೆಲ್ಲಾ ದಂಡಿನಲ್ಲಿದ್ದು ಮರುದಿನ ಬೆಳಿಗ್ಗೆ ದಂಡು ಕೂಚು ಮಾಡಿಕೊಂಡು ಚೇತಪಟ್ಟಿ ಚೆಂಗಲ್‌ಪಟ್ಟಿಗೆ ಹೊರಟು ಹೋದರು.

ಈ ವರ್ತಮಾನ ರಾಯರಿಗೆ ತಿಳಿದು ಬೆಟ್ಟದ ಮೇಲಿಂದ ಕೆಳಕ್ಕೆ ಬಂದು, ಯಾವತ್ತು ಜನ ಅಹಲೇಕಾರರು ತಾವು ಸಹ ಮಸಲತ್ತು ಮಾಡಿ, ಈಗಲೇ ಚೇತಪ್ಪಿ ಚೆಂಗಲ್‌ಪಟ್ಟಿ ಮೇಲೆ ಕಾರ್ಯಭಾಗ ಮಾಡಿ ಬಂದೋಬಸ್ತು ಮಾಡಬೇಕೆಂಬುದಾಗಿ ರಾಯಸಂಸ್ಥಾನದ ಯಾವತ್ತು ಫವುಜನ್ನು ತೆಗೆದುಕೊಂಡು ಚೇತಪಟ್ಟಿ ಚೆಂಗಲ್‌ಪಟ್ಟಿ ಬಳಿಗೆ ಬಂದು, ಮುತ್ತಿಗೆ ಹಾಕಿದ್ದರಿಂದ, ಕೋಟೆ ವಳಗಿದ್ದ ಪೂಲರಂಗನ್ನ ನಿತ್ಯ ಜಗಳ ಮಾಡುತ್ತಿರಲಾಗಿ ರಂಗಪತಿರಾಜನು ಬಂಗಾರು ತಿಮ್ಮರಾಜು ಅವರ ಸಂಗಡ ಇದ್ದ ಫವುಜು ಸಹ ತಿರುಪತಿಗೆ ಪೋಗಿ, ಅಲ್ಲಿ ದೇವರ ಸೇವೆ ಮುಂತಾದ್ದು ಮಾಡಿಸಿದ್ದಲ್ಲಿ ಪೂಜಾರಿ ಮೇಲೆ ದೇವರು ಆವೇಶ ಬಂದು, "ನೀವು ಚೇತಪಟ್ಟಿ ಬಳಿಗೆ ಹೋಗಬೇಡಿ, ಹೋದಲ್ಲಿ ಜಯವಾಗುವುದಿಲ್ಲ"ವೆಂದು ಅಪ್ಪಣೆಯಾದ್ದರಿಂದ, ಇವರು ತಮ್ಮ ಚಾಹಿಲಿಯತಿನ ಮೇಲೆ ದೇವರ ಅಪ್ಪಣೆಯುಲ್ಲಂಘಿಸಿ ದಂಡು ಕೂಚು ಮಾಡಿಕೊಂಡು, ಚೆಂಗಲ್‌ಪಟ್ಟಿ ಬಳಿಗೆ ಹೋಗಿ ಕೋಟೆಯೊಳಕ್ಕೆ ಹೋಗುವುದಕ್ಕಾಗದೆ ಹೋದ್ದರಿಂದ ಹೊರಗೆ ಯಿವರು ಒಂದು ಕಡೆ ಬಾಜೂದಲ್ಲಿ ಯಿಳಿದುಕೊಂಡು ಯಿರಲಾಗಿ, ಈ ತಿಮ್ಮರಾಜನ ಭಾವಮೈದನಾದ ಮಾಕರಾಜಪಾಳ್ಯದ ಪಾಳ್ಯಗಾರ ಮಾಕರಾಜನು ತನ್ನ ಫವುಜು ಸಹ ಈ ತಿಮ್ಮರಾಜಗೆ ಕುಮಕೀ ಬಂದ ರೀತಿಯಿಂದ ಬಂದು, ಇಲ್ಲಿ ಇವರ ಬಳಿ ಇಳಿದುಕೊಂಡು ವಳತರಕ್ಕೆ ರಾಯರಿಗೆ ವಳಬಿದ್ದು ಫಿತೂರಿವಳಗಿದ್ದ ಕಾರಣ, ವಂದು ದಿವಸ ರಾತ್ರಿ ರಾಯರ ಫವುಜು ಬಂದು, ತಿಮ್ಮರಾಜನ ಫವುಜಿನ ಮೇಲೆ ಬಿದ್ದದ್ದರಿಂದ ಮಾಕರಾಜನು ತನ್ನ ಫವುಜು ಸಹ ಸಮಯದಲ್ಲಿ ವಾರೆಯಾಗಿ, ಇವರ ಫವುಜನ್ನೇ ಕಡದ್ದರಿಂದ ಆ ಲಡಾಯಿಗಳಲ್ಲಿ ರಂಗಪತಿರಾಜನು ಸತ್ತು ಹೋದನು.

ತಿಮ್ಮರಾಜನಿಗೆ ಮೂರು ಬಂದೂಖಿನ ಪೆಟ್ಟುಗಳು ತಗಲಿ ಕೋಟೆವಳಕ್ಕೆ ವಂಟಿ ಕುದುರೆ ಸಂಗಡ ಓಡಿಬಂದು, ಕೋಟೆಯೊಳಗಿದ್ದ ತನ್ನ ತಮ್ಮ ಮುಂತಾದವರನ ಕಂಡು ತನಗೆ ಘಾಯಗಳು ಬಹಳವಾಯಿತು. ತನಗನಕ ದೇಹ ವುಳಿಯುವದಿಲ್ಲ. "ತಮ್ಮ ಅಪ್ಪನಿಗೆ ನೀನು ಹುಟ್ಟಿರುವದು

ನಿಶ್ಚಯವಾದಲ್ಲಿ ಈ ಹಗೆ ತೀರಿಸಿಕೊಳ್ಳುವದು" ಎಂಬದಾಗಿ ತನ್ನ ತಮ್ಮ ಪೂಲರಂಗನ್ನನ ಸಂಗಡ ಹೇಳಿ ತಾನು ದೇಹಬಿಟ್ಟಿದ್ದರಿಂದ, ಅವನ ಸ್ವಜನ ಮುನ್ನೂರು ಜನ ಪರಿಯಂತ ಹೆಂಗಸರು ಗಂಡಸರು ಸಹ ಹೊಂಡದಲ್ಲಿ ಬಿದ್ದು ಸತ್ತುಹೋದರು. ಪೂಲರಂಗನ್ನ ತನಗೆ ಬೇಕಾದ ಹತ್ತೆಂಟು ಜನ ಆಪ್ತರನ ಸಂಗಡ ಕರೆದುಕೊಂಡು ವೋಡಿಹೋಗಿ ದಿಳೀ[>ಳ್ಳೀ] ಪಾಥಾವರ ಬಳೀಲಿ ಚಾಕರಿಗೆ ಸೇರಿದನು.

ಸದರಿ ಚೇತಪಟ್ಟಿ ಚೆಂಗಲ್‌ಪಟ್ಟಿ ರಾಜ್ಯವನ್ನು ರಾಯರು ತಿಮ್ಮರಾಯನ ಭಾವಮೈದನಾದ ಮಾಕರಾಜಗೆ ಕೊಟ್ಟು, ಫವುಜು ಸಹ ತಾವು ಪೆನುಗೊಂಡೆಗೆ ಪೋಗಿ ತಲುಪಿದರು. ಪೂಲರಂಗನ್ನನು ದಿಳೀ[>ಳ್ಳಿ] ಪಾದಷಾಯವರಿಗೆ ಅರಿಕೆ ಮಾಡಿಸಿದ್ದರಿಂದ ದಿಳೀ[>ಳ್ಳಿ]ಯಿಂದ ಭಾರೀ ಫವುಜು ಸರದಾರರು ಸಹ ಪಯಣ ಮಾಡಿ, ಅವರ ಸಂಗಡ ಈ ಪೂಲರಂಗನ್ನನನ್ನೂ ಕೂಡಲಿಟ್ಟು ಈ ಕರ್ಣಾಟಕ ರಾಜ್ಯಕ್ಕೆ ಕಳುಹಿಸಿದ್ದರಿಂದ ಅವರು ಬಂದು, ಪೆನುಗೊಂಡೆಗೆ ಮುತ್ತಿಗೆ ಹಾಕಿ, ಪೆನುಗೊಂಡೆ ಹಲ್ಲಾ ಮಾಡಿ ತೆಗೆದುಕೊಂಡು, ವೆಂಕಟಪತಿರಾಯರನು, ಅವರ ಸೂಳೆ ಚಿಕ್ಕಭೋಗಸಾನೀನು, ಅವಳ ತಮ್ಮ ಚವುರಪ್ಪ ನಾರನ್ನ ಮುಂತಾದವರೆನ್ನಾ ಹುಯಿದು ಹಾಕಿಸಿ, ಅವರ ರಾಜ್ಯ ಯಾವತ್ತು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು. ಪೂಲರಂಗನ್ನನು ಕೆಲವು ಫವುಜು ತೆಗೆದುಕೊಂಡು ಚೇತಪಟ್ಟಿ ಚೆಂಗಲ್‌ಪಟ್ಟಿ ಬಳಿಗೆ ಹೋಗಿ ಮುತ್ತಿಗೆ ಹಾಕಿ ಹಲ್ಲಾ ಮಾಡಿ ಕಿಲ್ಲೆಯನ್ನು ಸ್ವಾಧೀನಮಾಡಿಕೊಂಡು, ಕಿಲ್ಲೇದಲ್ಲಿದ್ದ ತನ್ನ ಭಾವಮೈದನಾದ ಮಾಕರಾಜನ್ನು ಹುಯಿದು ಹಾಕಿ, ತಮ್ಮ ಚಿಕ್ಕಪ್ಪ ತಮ್ಮ ಅಣ್ಣ ರಂಗಪತಿರಾಜು, ಬಂಗಾರು ತಿಮ್ಮರಾಜನ್ನ ಹುಯಿದು ಹಾಕಿದ ಹಗೆ ಯಾವತ್ತೂ ತಾನು ತೀರಿಸಿಕೊಂಡನು. ಮುಂದೆ ತಾನು ಯಾವ ಬಗ್ಗೆ ಬದುಕಬೇಕೆಂಬದಾಗಿ ತನ್ನ ಕತ್ತಿ ಹೂಣಿಕೊಂಡು ಆ ಕತ್ತಿಯ ಮೇಲೆ ಪ್ರಾಣಬಿಟ್ಟನು.

ಈ ವರ್ತಮಾನ ದಿಳ್ಳಿಯಿಂದ ಬಂದಿದ್ದ ಫವುಜಿನ ಸರದಾರರು ದಿಳ್ಳಿ ಪಾದಿಷಾಯವರಿಗೆ ಬರೆದ್ದರಿಂದ, ಅಲ್ಲಿನ ವಜೀರ ಹಸದ್‌ಖಾನರ ಕೊಮಾರ ಜುಲುಫಿಕರ ಖಾನರನ ಅವರ ಸಂಗಡ ಕೆಲವು ಫವುಜು ಸಹ ಕೊಟ್ಟು, ಈ ಕರ್ಣಾಟಕ ಸಂಸ್ಥಾನದ ರಾಜ್ಯದ ಬಂದೋಬಸ್ತು ಮಾಡಿಸಿ ಬರುವಂತೆ ಕಳುಹಿಸಿದ್ದರಿಂದ, ಅಪ್ಪಣೆ ಪ್ರಕಾರ ಜುಲಫಿಕರಖಾನರು ಈ ರಾಜ್ಯಕ್ಕೆ ಬಂದು, ಕ್ಷೀರನದೀ ತೀರದಲ್ಲಿರುವ ಷಡಾರಣ್ಯವೆಂಬ ಅಡವಿಯಲ್ಲಿ ಇಳಿದುಕೊಂಡು, ಸುತ್ತೂ ಯಾವತ್ತು ಜನ ಪಾಳ್ಯಗಾರರು ಮುಂತಾದವರನ್ನೆಲ್ಲಾ ಕರಸಿಕೊಂಡು, ಮಸಲತ್ತು ಮಾಡಿ ತಾವು ಇಳಿದಿದ್ದ ಅರಣ್ಯವೇ ವಂದು ಊರು ಕಟ್ಟಿಸಿ, ಅದಕ್ಕೆ ಆರುಕಾಡು ಯೆಂಬದಾಗಿ ಹೆಸರಿಟ್ಟು, ಅದು ವಂದು ಸುಭೆ ಮೊಕರರುಮಾಡಿ, ಆ ಸುಭೇದ ನವಾಬಗಿರಿ ತಮ್ಮ ಸಂಗಡ ಬಂದಿದ್ದ ಸರದಾರರ ಪೈಕಿ ದಾವೂದಖಾನರೆಂಬುವರಿಗೆ ಮೊಕರರು ಮಾಡಿಸಿ, ಅವರ ಕೈಕೆಳಗೆ ಹನ್ನೆರಡು ಸಾವಿರ ಕುದುರೆ ಹತ್ತು ಸಾವಿರ ಬಾರು ಇಪ್ಪತ್ತು ಸಾವಿರ ಅಹಪಾಂ ಕರ್ಣಾಟಕ ಮುಂತಾಗಿ ಐವತ್ತು ಸಾವಿರ ಫವುಜು ಯಿಡುವಂತೆ ಮೊಕರರು ಮಾಡಿಸಿ, ಅವರ ಹುಕ್ಕುಮಿನಲ್ಲಿ ಶ್ರೀಂಗರಪಟ್ಟ ಸಾತಗಡ ಘಾಟಗಳಿಂದ ಹಿಂದು ಪೂರ್ವ ಸಮುದ್ರ ತೀರದ ಪರಿಯಂತರ ಇರುವ ದ್ರಾವಿಡರಾಜ್ಯ ಕಾಳಹಸ್ತಿ ದಾಮೆರ್ಲ ವಲಗೋಟಿ ತಿರುಚನಾಪಲ್ಲಿ ಮಧುರೆ ತಂಜೈವೂರು ನೆಲ್ಲೂರು ಸರ್ವಾಪಲ್ಲಿ ಮಛಲಿಬಂದರ್ ಚಿತ್ತೂರು ಮುಂತಾದ ಪಾಳ್ಯಗಾರರು ಪಗದಿ ಕೊಟ್ಟುಕೊಂಡು, ಸುಭೇ ನವಾಬರ ತಾಬೇದಾರಿಯೊಳಗೆ ಹಾಜರಿರುವಂತೆಯೂ, ಸುಭೇದ

ನವಾಬರು ಹೈದರಾಬಾದು ಅಸಫಜಹಾನ್‌ರವರ ತಾಬೇದಾರಿಯಲ್ಲಿರುವಂತೆಯೂ ಮೊಕರರು ಮಾಡಿಸಿ, ಈ ಬಗ್ಗೆಲ್ಲಾ ದಿಳ್ಳಿಯಿಂದ ಸನ್ನದು ಖಿಲ್ಲತ್ತು ಮುಂತಾದ್ದು ತರಿಸಿಕೊಟ್ಟು, ಕೃಷ್ಣಾನದಿಯಿಂದ ಶಿಂಗರಪಟ್ಟಿ ಘಾಟ ಪರಿಯಂತರ ಇರುವ ರಾಜ್ಯವೆಲ್ಲಾ ಶೀರ್‍ಯ ವಂದು ಸುಭೆ ಮೊಕರರು ಮಾಡಿ, ಅಲ್ಲಿ ಒಬ್ಬ ನವಾಬರನ ಇಟ್ಟು, ಪೆನುಗೊಂಡೆ ಸಹ ಕರ್ಣಾಟಕದೇಶ ಶೀರ್‍ಯದ ಸುಭೇಕ್ಕೆ ದಾಖಲ್ಮಾಡಿ, ವುತ್ತರ ದಿಕ್ಕಿನಲ್ಲಿ ಕೆಲವು ಆಂಧ್ರದೇಶ ಆದವಾನಿ ವಂದು ಸುಭೆ ಮೊಕರರು ಮಾಡಿ, ಆ ಸುಭೇಕ್ಕೆ ದಾಖಲು ಮಾಡಿಸಿ, ಸದರಿ ಮೂರು ಸುಭೆ ಸವಾಬರೂ ಬಿಜಾಪುರ (ಮಹಾರಾಷ್ಟ್ರ ರಾಜ್ಯ), ಬಿದರೆ (ಹಿಂದೂರಾಜ್ಯ), ಅಹಮ್ಮದನಗರ (ಗುಜ್ಜರರಾಜ್ಯ) ಮುಂತಾದ ಮೂರು ಸುಭೆ ನವಾಬರು ಸಹ ಸಾರೆಟ ಸುಭೆಅ ದಖನ್ ನವಾಬರು ಇದು ಹೊರ್ತು ದಿಳ್ಳಿಯಿಂದ ಜಹಗೀರು ಸನ್ನದು ಆದಂಥ ಕಡಪ ಕಂದನೂರು ಸವಣೂರು ದೊಡ್ಡಬಳ್ಳಾಪುರ ಮುಂತಾದ ಚಿಲ್ಲರ ನವಾಬರು ಸಹ ಯಾವತ್ತು ಜನವೂ ದಿಳ್ಳಿಗೆ ದಕ್ಷಿಣದೇಶದ ವಜೀರನಾದ ಹೈದರಾಬಾದು ಅಸಫಜಹಾನ್‌ರ ತಾಬೇತಾರೀಲಿ ಇರುವಂತೆ ಮೊಕರರು ಮಾಡಿಸಿ, ಜುಲಫಿಕರಖಾನರು ಫವುಜು ಸದಾ[>ಹಾ] ದಿಳ್ಳಿಗೆ ಹೊರಟು ಹೋದರು.

ವರುಷ ಯೆರಡು ವರುಷದ ಮೇಲೆ ಅರ್ಕಾಡು ನವಾಬ ದಾವೂದಖಾನರಿಗೆ ಬಿಜಾಪುರದ ಸುಭೆ ನವಾಬಗಿರಿ ಮೊಕರರಾಗಿ, ಸಾತ್ತುಲ್ಲಾಖಾನರಿಗೆ ಆರ್ಕಾಡು ಸುಭೆ ನವಾಬಗಿರಿ ಮೊಕರರಾಗಿ ಸಂನದು ಶಿರಪೇಂಚ ಖಿಲ್ಲತು ಮುಂತಾದ್ದು ದಿಳ್ಳಿಯಿಂದಲೇ ಆರ್ಕಾಡಿಗೆ ಬಂತು. ಅದು ವರೆಗೆ ನವಾಬ ಸಾತ್ತುಲ್ಲಾಖಾನರಿಗೆ ಸುಮಾರು ಐವತ್ತು ವರುಷ ವಯಸ್ಸಾಗಿತ್ತು ಮತ್ತು ಐವತ್ತೈದು ವರುಷ ಪರಿಯಂತರ ದವುಲತ್ತು ಮಾಡಿದರು. ಮಧ್ಯೇ ಚಂಚಿ ಜಯಸಿಂಗು ಮುಂತಾದ ಕೆಲವು ಜನ ಪಾಳ್ಯಗಾರರು ಜಮೀನ್‌ದಾರ್ ಮುಂತಾದವರು ಪಗದಿ ವಗೈರೆ ಸಲೀಸು ಕೊಡದೆ, ಹುಕ್ಕುಮಿನಲ್ಲಿ ಚನ್ನಾಗಿ ನಡೆಯದೆ, ತುಂಟಾಟ ಮಾಡಿದವರಿಗೆ ಚೆನ್ನಾಗಿ ನಶೀಯತ್ತುಗಳ ಮಾಡಿಸಿ ಬಂದೋಬಸ್ತ ಮಾಡಿಸಿ ದುಷ್ಟನಿಗ್ರಹ ಶಿಷ್ಟಪರಿಪಾಲನೆ ಸಹ ಮಾಡಿಸುತ್ತ ಅವರವರ ವರ್ಣಾಶ್ರಮ ಜಾತಿ ಮರ್ಯಾದೆಯಲ್ಲಿರುವಂತೆ ಯಾವ ರೀತಿಯಿಂದ ಬಂದೋಬಸ್ತು ಮಾಡಬೇಕೋ ಆ ರೀತಿಯಲ್ಲಿ ಬಂದೋಬಸ್ತು ಮಾಡಿಸಿ, ದೇವಬ್ರಾಹ್ಮರ ಅಗ್ರಾಹಾರಗಳು ಇನಾಮತಿ ಭಟಮಾನ್ಯಗಳು ಫಕೀರ ಜಂಗಮ ದಾಸರಿ ಮುಂತಾದವರ ಇನಾಮು ಗ್ರಾಮ ಭೂಮಿಗಳು ಜಮೀನದಾರ್ ತ್ಯಾಜಗಾರ್, ಅಹಲೇಕಾರ, ಬಾರಾಬಲೂತಿ ಜನ ಮುಂತಾದವರ ಇನಾಮ ಜಹಗೀರು ಮುಂತಾದ ಗ್ರಾಮ ಭೂಮಿಗಳು ರುಸುಮು ವರ್ತನೆ ತಹರೀರು ಮುಂತಾದ್ದು ಯಾವತ್ತು ಲೇಶ ಹರಕತ್ತು ಇಲ್ಲದಂತೆ ಸಲೀಸು ನಡೆಯುವಂತೆ ಬಂದೋಬಸ್ತುಮಾಡಿಸಿ, ಅಹಲೇಕಾರರು ಮುಂತಾದ ಜನಗಳಿಗೆ ತಾಜಿಂ ತವಾಜಿಂ ಮುಂತಾದ ಮರ್ಯಾದೆಗಳು ಅವರವರ ಲಾಯಖ ಮೇರೆಗೆ ಲೇಶ ನ್ಯೂನತೆ ಇಲ್ಲದೆ ನಡೆಯುವಂತೆಯೂ ತನ್ನ ರಾಜ್ಯದಲ್ಲಿ ಒಬ್ಬರಿಗೊಬ್ಬರು ಬೇಜಾ ಜಗಳಗಳು ಆಡದೆ ವಬ್ಬರನ ಕಂಡರೆ ಒಬ್ಬರಿಗೆ ಅಸ್ಯತೆಯಿಲ್ಲದೆ, ದೇವರು ಗುರು ಧಣಿ ತಂದೆ ಅಣ್ಣ ಮಾವ ಮುಂತಾದ ಹಿರಿಯರಲ್ಲಿ ಜನರು ಭಕ್ತಿಯಿಂದ ಇರುವಂತೆಯೂ ಲೇಶ ಅನ್ಯಾಯಗಳು ಅನಾಚಾರಗಳು ಸುಳ್ಳುಚಾಡಿ ಕ್ಷುದ್ರಗಳು ಮುಂತಾದ್ದು ನಡೆಯದಂತೆಯೂ ಹಿಂದೂ ಮುಸಲ್ಮಾನರೂ ತಮ್ಮ ತಮ್ಮ ಶಾಸ್ತ್ರದ ಕಿತಾಬುಗಳ ಪ್ರಕಾರ ನಡೆಯುವಂತೆಯೂ ಬಂದೋಬಸ್ತು ಮಾಡಿಸಿ, ಸದರಿ ಬರೆದಿರುವ ಪ್ರಕಾರ ಸತ್ಯವಾಗಿ ನಡೆಯುವಂಥ ದೊಡ್ಡ ಮನುಷ್ಯರಿಗೆ ದೊಡ್ಡ ದೊಡ್ಡ ಅಧಿಕಾರಗಳ ಮೊಕರರು

ಮಾಡಿಸಿ, ಅವರವರು ಸ್ನೇಹದಲ್ಲಿ ಲೇಶ ವಿರುದ್ಧವಿಲ್ಲದೆ ಅರಮನೆ ಕೆಲಸದಲ್ಲಿ ನಿರ್ವಂಚನೆಯಿಂದ ಇರುವಂತೆ ಬಂದೋಬಸ್ತು ಮಾಡಿಸಿ, ತುಂಟರಾದ ಹಲ್ಕೆ ಜನರನ ದರಬಾರಿನಲ್ಲೂ ಅಹಲೇಕಾರ ಮನೆಗಳಲ್ಲೂ ಚಾಕರಿ ಮುಂತಾದ ಕೆಲಸದಲ್ಲಿ ಯಿಟ್ಟು ಬಳಸಿಕೊಳ್ಳದಂತೆಯೂ ಶೆಟ್ಟಿ ವರ್ತಕ ರೈತ ಮುಂತಾದವರು ಸುಳ್ಳು ಫಿರಿಯಾದು ಮೆಣಸಮಯ ಮುಂತಾದ್ದು ಮಾಡದೆ ತಂತಮ್ಮ ವ್ಯಾಪಾರ ಸಾಗುವಳಿ ಮುಂತಾದ ಕೆಲಸದಲ್ಲಿ ಯಿರುವಂತೆ ಬಂದೋಬಸ್ತು ಮಾಡಿಸಿ, ಬ್ರಾಹ್ಮಣ ಅಹಲೇಕರರು ಪ್ರಾತಃಕಾಲವಾದ ಯರಡು ಘಳಿಗೆಯೊಳಗಾಗಿ ಸ್ನಾನ ಸಂಧ್ಯಾವಂದನೆ ಮುಂತಾದ್ದು ಮಾಡಿಕೊಂಡು ಕಚೇರಿಗೆ ಬರುವಂತೆಯೂ, ಬಾಕಿ ಹಿಂದು ಮುಸಲ್ಮಾನ ಯಾವತ್ತು ಜನವೂ ಕೈಕಾಲು ಮುಖ ತೊಳೆದುಕೊಂಡು ಪ್ರಾತಃಕಾಲವಾದ ವಂದು ಘಳಿಗೆ ವರೆಗೆ ನಮಾಜು ಮುಂತಾದ್ದು ಮಾಡಿಕೊಂಡು ಕಚೇರಿಗೆ ಬಂದು, ಯಾವತ್ತು ಜನರು ಹದಿನಾಲ್ಕು ಘಳಿಗೆ ಪರಿಯಂತರ ಹಾಜರು ಇದ್ದು, ತಂತಮ್ಮ ಮನೆಗಳಿಗೆ ಹೋಗಿ ಮೂರು ಝಾವಕ್ಕೆ ಪುನಃ ಕಚೇರಿಗಳೀಗೆ ಬಂದು ಸಾಯಂಕಾಲಕ್ಕೆ ಅರೆ ಘಳಿಗೆ ಯರುವಾಗ್ಯೆ ನದಿಗೆ, ತಮ್ಮ ತಮ್ಮ ಮನೆಗಳಿಗೆ ಸಹ ಹೋಗಿ ಸಂಧ್ಯಾವಂದನೆ ಮುಂತಾದ್ದು ಮಾಡಿಕೊಂಡು ಸಾಯಂಕಾಲವಾದ ಅರೆಘಳಿಗ್ಗೆ ಪುನಃ ಕಚೇರಿಗಳಿಗೆ ಬಂದು, ಸಾಯಂಕಾಲವಾದ ನಾಲ್ಕು ಘಳಿಗ್ಗೆ ತಮ್ಮ ಮನೆಗಳಿಗೆ ಹೋಗುವಂತೆ ಕಾಯಿದೆ ಮಾಡಿಸಿ, ಸತ್ಯದಿಂದ ಐವತ್ತೈದು ವರುಷ ಪರಿಯಂತ ದವಲತ್ತು ಮಾಡಿದರು.

ಮಧ್ಯೇ ಈ ಸಾತುಲ್ಲಾಖಾನರಿಗೆ ದಿಳ್ಳಿಯಿಂದ ಹೈದರಾಬಾದ ಅಸಫಜಹಾರ ಮೇಲೆ ಯೆತರಾಜಿ ಆಗಿದ್ದು, ಆ ಹುದ್ದೆ ಇವರಿಗೆ ನೇಮಕವಾಗಿ ಬರೆದು ಬಂದದ್ದರಿಂದ ಇವರು ತಮ್ಮ ಮಾತಬರ ಅಹಲೇಕಾರರ ಸಂಗಡ ಮಸಲತ್ತು ಮಾಡಿ, "ಅಸಫಜಾಯವರಂಥಾ ಖೈರಖಾಯವರು ಇನ್ನು ಬೇರೆ ದೊರೆಯಲರರು. ಅವರ ವಿಚಾರಣೆ ಬಲದಿಂದ ತಾನು ಈ ರಾಜ್ಯದ ಅಧಿಕಾರ ಕೈಲಾದ ಮಟ್ಟಿನಲ್ಲಿ ಮಾಡುತ್ತೇನೆ. ಆ ದೊಡ್ಡ ಅಧಿಕಾರ ತನ್ನ ಕೈಯಲ್ಲಿ ಬಿಲ್‌ಖಿಲ್ ಆಗತಕ್ಕದ್ದಲ್ಲ" ಎಂಬದಾಗಿ ದಿಳ್ಳಿಗೆ ಅರ್ಜಿ ಬರೆದುಕೊಂಡು ತಪ್ಪಿಸಿಕೊಂಡರು. ಈ ವರ್ತಮಾನ ಅಸಫಝಾಯವರಿಗೆ ತಿಳಿದು ಸಾತುಲ್ಲಾಖಾನರು ಇವರ ಮಕ್ಕಳು ಮೊಮ್ಮಕ್ಕಳು ನೆಂಟರಿಷ್ಟರ ಮೇಲೆ ಕೇವಲ ಪ್ರೀತಿಯಿಟ್ಟು ಸರ್ಕಾರದ ಅಧಿಕಾರಗಳ ನಡಿಸಿಕೊಂಡು ಬಂದು, ಇವರ ವಿಷಯವಾಗಿ ತಮ್ಮ ಮಗ ನಾಜರಜಂಗರಿಗೆ ಸಹ ಹೇಳಿದರು. ಆ ತರುವಾಯ ತಾನು ಕೇವಲ ಮುದುಕನಾದೆನೆಂದು ತಮ್ಮ ಅಣ್ಣನ ಮಗನಾದ ಅಲ್ಲೀದೋಸ್ತಖಾನರಿಗೆ ದವುಲತ್ತು ಕೊಟ್ಟು ತಾವು ಸತ್ತು ಹೋದರು. ನೂರೈದು ವರುಷದ ಪರಿಯಂತರ ಸಾತುಲ್ಲಾಖಾನರು ಬದುಕಿ ಯಿದ್ದರು.

ಅಲ್ಲೀದೋಸ್ತಖಾನರು ತಮ್ಮ ಚಿಕ್ಕಪ್ಪನವರು ಮಾಡಿದ್ದ ಕಾಯಿದೆಗಳ ಬಿಟ್ಟು, ತನ್ನ ಮನಸ್ಸನು ಬಂದಂತೆ ಹೊಸ ಕಾಯಿದೆಗಳ ಮಾಡಿ, ಹಲ್ಕಿ ಜನ ದುಷ್ಟ ಬುದ್ಧಿ ಜನರನ ಸಹ ಬೆಳಿಸಿದ್ದರಿಂದ, ಸ್ವಜನರಲ್ಲಿ ಅಹಲೇಕಾರರಲ್ಲಿ ಸಹ ವಿರೋಧಗಳು ಬೆಳಿದು ಕೆಲವು ಜನರು ಅಲ್ಲೀದೋಸ್ತಖಾನರ ಮಗ ಸಬ್ದರಲ್ಲಿಖಾನರಲ್ಲಿ ಷಾಮೀಲಾಗಿ, ಅವರು ವುಭಯತ್ರರಿಗೂ ಕೇವಲ ದ್ವೇಷಗಳು ಬಂದದ್ದರಿಂದ ಸಬ್ದರಲ್ಲಿಖಾನರು ತಮ್ಮ ತಂದೆಗೆ ತಿಳಿಯದಂತೆ ಲಾಖಫಿಯಿಂದ ನಾಗಪುರದ ಫತ್ತೇಶಿಂಗ್ ಭೋಸಲಾ . . . . ಯವರಿಗೆ ಕಾಗದ ಬರೆದ್ದರಿಂದ, ಫತ್ತೇಶಿಂಗ್ ಭೋಸಲಾ ಎಪ್ಪತ್ತುಸಾವಿರ ಸವಾರರ ನಿಶಿ ಆರ್ಕಾಡು ಮೇಲೆ ಮೋಜಂ ಬಂದದ್ದರಿಂದ ಅಲ್ಲೀದೋಸ್ತಖಾನರು ತಮ್ಮ ಫವುಜು ಯಾವತ್ತು

ತೆಗೆದುಕೊಂಡು ಹೊರಗೆ ಹೊರಟು, ಉಭಯ ಫವುಜಿಗೂ ಚಿಂಗಮಾವು ಘಾಟಿ ಬಳಿ ಲಡಾಯಿ ಆಗಿ, ಲಡಾಯಿಯೊಳಗೆ ಅಲ್ಲೀದೋಸ್ತಖಾನರು ಠಾರಾದರು. ಹತ್ತು ಹನ್ನೆರಡು ವರುಷ ಪರಿಯಂತರ ದವುಲತ್ತು ಮಾಡಿದರು.

ಫತ್ತೇಶಿಂಗರ ಫವುಜು ಆರ್ಕಾಡು ಪಟ್ಟಣ ಮೂರು ದಿವಸ ಲೂಟಿ ಮಾಡಿ, ಆ ತರುವಾಯ ಸಬ್ದರಲ್ಲಿಖಾನರಿಗೆ ದವಲತ್ತು ಕೊಟ್ಟು ಚಂದಾಸಾಹೇಬರನ ಹಿಡಿದುಕೊಂಡು ಹೋಗಿ, ಪುನೆದಲ್ಲಿ ಕೈದು ಮಾಡಿಟ್ಟು, ಅವರ ಖರ್ಚಿನ ಬಗ್ಗೆ ತಿಂಗಳಿಗೆ ಹನ್ನೆರಡು ಸಾವಿರ ರೂಪಾಯಿ ಪರಿಯಂತರ ಕೊಡಿಸುತ ಇದ್ದರು. ನೂರು ಇನ್ನೂರ ಜನರ ಪರಿಯಂತರ ಆತಗೆ ಬೇಕಾದ ಜನ ಹತ್ತಿರ ಇದ್ದರು. ಸಬ್ದರಲ್ಲಿಸಾಹೇಬರು ಕೆಲವು ದಿವಸ ಅವಿವೇಕದಿಂದಲೇ ದವುಲತ್ತು ಮಾಡಿದ್ದರಿಂದ ಅವರ ಭಾವಮೈದ ಚಂದಾಸಾಹೇಬರ ಷಡ್ಡಕನಾದ ಮುರ್ತುಜಾಖಾನರೆಂಬ ವೇಲೂರು ಜಹಗೀರುದಾರನೂ ಸಬ್ದರಲ್ಲಿಖಾನರನ ತನ್ನ ವೇಲೂರಿಗೆ ಕರೆದುಕೊಂಡು ಹೋಗಿ, ತನ್ನ ಮನೆಯಲ್ಲಿ ಇಳಿಸಿಕೊಂಡು ರಾತ್ರೆ ಹೊತ್ತು ಮೋಸದಿಂದ ಕೊರಳ ಕುಯಿದು ಹಾಕಿದ್ದರಿಂದ, ಈ ವರ್ತಮಾನ ಯಾವತ್ತೂ ತಿಳಿದು ಹೈದರಾಬಾದ ಬೊಂಕೀಲಿಸಖಾ ಅಸಫಜಾನ್ ಬಹದರವರು ಫವುಜು ಸುದಾ ಖುದ್ದು ತಾವೇ ಆರ್ಕಾಡಿಗೆ ಬಂದು, ಸಬ್ದರಲ್ಲಿಖಾನರ ಮಗ ವಬ್ಬ ೫(೧೦) ವರುಷವನಿಗೆ ದವಲತ್ತು ಮೊಕಕರು ಮಾಡಿ, ಆತನ ಬಳಿಯಲ್ಲಿ ಖುದ್ದು ಮೊಖ್ತಿಯಾರಿ ದಿವಾನ್‌ಗಿರಿಯನ್ನು ಖಾಜೆಅಬ್ದುಲ್ಲಾಖಾನರಿಗೆ ಕೊಡುತ್ತಾಲೇ ಆ ರಾತ್ರಿಗೆ ಅವರು ಸತ್ತು ಮೃತವಾದ್ದರಿಂದ ಮರುದಿನ ಬೆಳಿಗ್ಗೆ ತನ್ನ ಫೌಜಿನಲ್ಲಿದ್ದ ಪಂಚ ಹಜಾರಿ ಸರದಾರ ಅನವರ್ದೀನ್‌ಖಾನರಿಗೆ ಮೊಕರರು ಮಾಡಿಯಿಟ್ಟು, ನವಾಬ ಸಾತ್ತುಲ್ಲಾಖಾನರ ದಿವಸದಲ್ಲಿ ಯಾವ ಪ್ರಕಾರ ಕಾನೂನು ಮುಂತಾದ್ದು ನಡೆಯುತ್ತ ಇತ್ತೋ ಅದೇ ಪ್ರಕಾರ ನಡೆಯುವಂತೆ ತಾಕೀದು ಮಾಡಿ, ಅಸಫಜಹಾರವರು ಬಮ್ಮೆ ಫವುಜು ಸದಾ ಹೈದರಾಬಾದಿಗೆ ಹೊರಟು ಹೋದರು.

ಅನವರ್ದೀನ್‌ಖಾನರು ಪೂರ್ವದಲ್ಲಿ, ಸಾತುಲ್ಲಾಖಾನರು ಮಾಡಿ ಯಿದ್ದ ಕಾಯಿದೆಗಳ ಪೈಕಿ ದುಷ್ಟನಿಗ್ರಹ ಮಾಡುವಂಥಾದ್ದು ಬಿಟ್ಟು, ಯಾವ ಜನರನೂ ರಕ್ಷಣೆ ಮಾಡಬೇಕೆಂಬಂಥಾದ್ದೆ ದೃಷ್ಟಿಯಲ್ಲಿ ಇಟ್ಟು, ಯೆಲ್ಲರೂ ಅಲಂ ಅವುಲಾದ್ ಇದಾರೆಂಬದಾಗಿ ನಾಕಾರೆ ಬೇಕೂಫ ನಾದಾನ್ ಹಲ್ಕೆ ತುಂಟ ಜನ ಮುಂತಾದವರಿಗೂ ವಳ್ಳೆ ಜನರಿಗು ಸಹ ರೋಜಗಾರಿಗಳ ಕೊಡುತ್ತ ಬಂದದ್ದರಿಂದ, ಆರ್ಕಾಡದಲ್ಲಿ ನವಾಯಿತರ ಮನೆಯಲ್ಲಿ ಮದುವೆ ಪ್ರಸ್ತವಾಗಿ. ಆ ಪ್ರಸ್ತದಲ್ಲಿ ಮಜಲೀಷಿನಲ್ಲಿ ಕೆಲವು ಜನ ಪಠಾಣರು ನವಾಯಿತರು ಸಹ ಜಗಳಗಳಾಡಿ ವಬ್ಬರನ ವಬ್ಬರು ಕಡಿದು ನೂರಾರು ಜನ ಉಭಯ ದಿಕ್ಕಿನಲ್ಲಿಯೂ ಠಾರಾದ್ದರಿಂದ, ಆ ಸಂದಡಿಯಲ್ಲಿ ಸಬ್ದರಲ್ಲಿಖಾನರ ಮಗನೂ ಠಾರಾದ ಕಾರಣ, ಅನವರ್ದೀನ್‌ಖಾನರಿಗೆ ನವಾಬಗಿರಿ ಮೊಕರರಾಗಿ ತಾವೇ ಕಾರುಬಾರು ಮಾಡುತ್ತಿರಲಾಗಿ ಪುನೆದಲ್ಲಿ ಚಂದಾಸಾಹೇಬರನ ಪಹರೆಯಿಂದ ಬಿಟ್ಟ ಕಾರಣ ಆವರು ತಮ್ಮ ಸಂಗಡ ಇದ್ದ ನೂರಾರು ಜನರನ್ನು ತಮ್ಮ ದಿವಾನ್ ಶೇಷರಾಯರನು ವಬ್ಬ ಮಗನ ಸಹ ಕರೆದುಕೊಂಡು ಚಿತ್ರದುರ್ಗದ ದೊಡ್ಡ ಮೆದಿಕೆರಿನಾಯಕರ ಮಗ . . [ಕಸ್ತೂರಿ+] ರಂಗಪ್ಪನಾಯಕರಿಗೂ ನಗರದವರಿಗೂ ಮಾಯಿಕೊಂಡೆ ಮೇಲೆ ಶುಕ್ಲ ಸಂ॥ಲ್ಲಿ ಜಗಳವಾಗುತ್ತ ಇದ್ದದ್ದರಿಂದ ಸದರಿ ಚಂದಾಸಾಹೇಬರು ಅಲ್ಲಿಗೆ ಬಂದು. ಚಿತ್ರದುರ್ಗದವರ ಭೇಟಿ ತೆಗೆದುಕೊಂಡು ಚಿತ್ರದುರ್ಗದವರಿಗೆ

ಷಾಮೀಲಾಗಿ, ನಗರದವರ ಸಂಗಡ ಜಗಳವಾಡುತ್ತ ಚಂದಾಸಾಹೇಬರ ಮಗನ ತಲೆ ಹೋದ್ದರಿಂದ, ಚಂದಾಸಾಹೇಬರು ಆದವಾನಿಗೆ ಬಂದು ಅಲ್ಲಿ ದವುಲತ್ತು ಮಾಡುತ್ತಿದ ಪೂರ್ವ ಷಾಯೀಜಹಾನ್ ಬಾದಷಹರ ವಜೀರ ಮುಲ್ಲಾ ಸಾತ್ತುಲ್ಲಾಖಾನರ ಮೊಮ್ಮಗ ನವಾಬ ಮುತರಾಶಿಲ್‌ಖಾನರ ಮಗ ನವಾಬ ಹಿತಾಯತ್ ಮೊಹದೀನ್‌ಖಾನರೆಂಬುವರು ನಾಜರಜಂಗಿನ ಸೋದರಳಿಯನಾದ್ದರಿಂದ ಆತನ ಬಳಿಗೆ ಹೋಗಿ, ಆತನ ಸಂಗಡ ಕೋಟಿ ರೂಪಾಯಿ ಕೊಡುತ್ತೇವೆಂಬದಾಗಿ ಮಾತನಾಡಿ ಆತನ ಫವುಜು ಇಪ್ಪತ್ತು ಸಾವಿರ ಕುದುರೆ ಬಾರು ಅಹಷಾಂ ತೋಪುಗಳು ವಗ್ಯೆರೆ ತೆಗೆದುಕೊಂಡು, ಆರ್ಕಾಡು ಮೇಲೆ ಬಂದದ್ದರಿಂದ ನವಾಬ ಅನವರದೀನ್‌ಖಾನರಿಗೂ ನವಾಬ ಹಿತಾಯತ ಮೋಹದೀನ್‌ಖಾನರಿಗೂ ಅಂಬೂರಘಡದ ಬಳಿ ಜಗಳವಾಗಿ ಅನವರ್ದೀನ್‌ಖಾನರ ಫವುಜು ನಾಕರೆಯಿದ್ದದ್ದರಿಂದ ಜನ ಯಾವತ್ತು ಫರಾರಿಯಾಗಿ ಅನವರ್ದೀನ್‌ಖನರು ಅವರ ಸಂಗಡ ರಂಜನಗಡದ ನವಾಬ ಹುಸೇನ್‌ತಾಯರ್‌ಖಾನರು ಮುಂತಾದ ಕೆಲವು ಜನ ಅಂಬಾರಿ ಹತ್ತಿಕೊಂಡು ಜಗಳಕ್ಕೆ ಹೋಗಿ, ತೀರಂದಾಜೀ ವಳಗೆ ಅನವರ್ದೀನ್‌ಖಾನರು ಹುಸೇನತಾಯರ್‌ಖಾನರು ಮುಂತಾದವರು ಸತ್ತುಹೋದ್ದರಿಂದ ಆರ್ಕಾಡು ರಾಜ್ಯದ ದವುಲತ್ತು ಚಂದಾಸಾಹೇಬರನ ಬಂದೋಬಸ್ತು ಮಾಡಿಕೊಳ್ಳುವಂತೆ ಹಿತಾಯತ್ ಮೊಹದೀನ್‌ಖಾನರು ಹೇಳಿದರು.

ಅನವರ್ದೀನ್‌ಖಾನರ ಮಗ ಮಹಮ್ಮದಲ್ಲೀಖಾನರು ಕೆಲವು ಸೀಮೆ ಬಲಕಾಯಿಸಿಕೊಂಡು ಇದ್ದರು. ಹೈದರಾಬಾದಿನಲ್ಲಿ ಜೂಂ ವಿಕಲಿಸ್‌ಖಾನ್ ಅಸಫಜಹಾನ್ ಬಹದರವರು ಐವತ್ತು ವರುಷ ಪರಿಯಂತರ ಹೈದರಾಬಾದು ದವುಲತ್ತು ಮಾಡಿ ನೂರು ವರುಷ ಪರಿಯಂತರ ಬದುಕಿ, ದೇಹಕ್ಕೆ ಕೆವಲ ಸ್ವಸ್ಥವಿಲ್ಲದೆ ತಮ್ಮ ದೊಡ್ಡ ಮಗನಾದ ಗಾಜಿವುದ್ದೀನ್‌ಖಾನರಿಗೆ ದಿಳ್ಳಿ ವಜೀರಿಯಿದ್ದು ಸತ್ತು ಹೋಗಿ, ಅವರ ಮಗ ಚಿಕ್ಕ ಪ್ರಾಯದವನು ದಿಳ್ಳಿ ವಜೀರಿ ಮಾಡುತ್ತ ಇದ್ದಕಾರಣ, ಎರಡನೇ ಮಗನಾದ ನಿಜಾಮಲ್‌ಮುಲುಕು ನಾಜರಜಂಗ ಬಹದರವರಿಗೆ ಹೈದರಾಬಾದು ಅಸಫಜಹಾಗಿರಿಯನ್ನು ಸ್ವಾಧೀನ ಮಾಡಿಕೊಟ್ಟು, ತಾವು ಸ್ವರ್ಗಸ್ಥರಾದ್ದರಿಂದ ತಮ್ಮ ತಂದೆಯವರಾದ ಅಸಫಜಹಾರವರು ಬರಿಸಿಕೊಟ್ಟ ಹದಿನೇಳು ಕಲಮಿನ ಹುಕ್ಕುಂ ನಾಮೆ ಮೇರೆಗು ಮೊಖತಾ ಅಪ್ಪಣೆ ಕೊಟ್ಟ ಮೇರೆಗು ಸಹ ನಡೆಯದೆ ಆತ ಮಾಡಿದ್ದ ಕಾಯಿದೆಗಳ ಮೇರೆಗೂ ನಡೆಯದೆ ತನ್ನ ಸ್ವಬುದ್ಧಿಯಿಂದ ಜಾಹಿಲಿಯತ್ತಿನಿಂದ . . . . ದಿವಾನ್ ಪೂರ್ನಚಂದ ಎಂಬಾತನ್ನು ತಗ್ಯೆರು ಮಾಡಿ, ಷಹನವಾಸಖಾನನೆಂಬರಿಗೆ ದಿವಾನ್‌ಗಿರಿ ಕೊಟ್ಟು, ಕೆಲವು ಬೇಜಾ ಹಲ್ಕಿ ಚಾಲ ನಡೆಯುತ್ತ ಇದ್ದರು.

ಅಷ್ಟರಲ್ಲೇ ಈ ಆರ್ಕಾಡು ಸೀಮೆಯಲ್ಲಿ ನಡೆದ ಅನಾಹುತಗಳ ಕೇಳಿ, ಇದರ ಬಂದೋಬಸ್ತಿ ಬಗ್ಗೆ ತಮ್ಮ ಫೌಜು ಸುದಾ ಹೊಸಕೋಟೆ ಮಾರ್ಗವಾಗಿ ಆರುಕಾಡು ಸೀಮೆಗೆ ಬಂದರು. ಅವರ ಸಂಗಡ ಮೊಖ್ತಿಯಾರಿ ದಿವಾನ್ ಸದರಿ ಶಹನವಾಸಖಾನರೆಂಬರಿಗೆ ಈ ನಾಜರಜಂಗರೇ ಹೊಸತಾಗಿ ಕೊಟ್ಟು ಯಿದ್ದದ್ದರಿಂದ ಅವರು ಸಂಗಡಲೇ ಇದ್ದರು. ಕಡಪೆ ಕಂದನೂರು ಸವಣೂರು ಮುಂತಾದ ನವಾಬರು ಗದವಾಲ ಮುಂತಾದ ಪಾಳ್ಯಗಾರರು ತಮ್ಮ ತಮ್ಮ ಫವುಜು ಸಹ ಸಂಗಡ ಬಂದಿದ್ದರು. ನಾಜರಜಂಗರವರು ತಮ್ಮ ಸೋದರಳಿಯನಾದ ಆದವಾನಿ ನವಾಬ ಹಿತಾಯತ್ ಮೊಹದೀನ್‌ಖಾನರನ್ನು ಹಿಡಿದು "ತಮ್ಮ ಹುಕ್ಕುಂ ಶಿವಾಯಿ ಚಂದಾಸಾಹೇಬರ ಮಾತಿನ ಮೇಲೆ

ನೀವು ಹೇಗೆ ಬಂದಿರಿ"ಯೆಂದು ತಪ್ಪು ಹೊರಿಸಿ ಬೇಡಿ ಹಾಕಿಸಿ ಪಹರೇಲಿಟ್ಟರು. ಚಂದಾಸಾಹೇಬರು ತಾವು ಕೆಲವು ಫವುಜು ಜಮಾಯಿಸಿಕೊಂಡು ಫರಾಷೀಷರಿಗೆ ಆಸರೆ ಕೊಟ್ಟು ಕರಿಸಿಕೊಂಡು, ನಾಜರಜಂಗ್ ಬಹದೂರರ ಸಂಗಡ ತಿರುಗ ಬಿದ್ದು ಪುಲಿಚೇರಿಯಲ್ಲಿರಲಾಗಿ ಪ್ರಮೋದೂತ ಸಂ॥ಲ್ಲಿ ಹುಚ್ಚುಹೊಳೆ ಬಂದು ಕಂದನೂರು ಕೋಟೆ ಕೊಚ್ಚಿಹೋದ್ದರಿಂದ, ಕಂದನೂರು ನವಾಬ ಹಿಮ್ಮತ್‌ಬಹದರು ಸ್ಥಳಕ್ಕೆ ಅಪ್ಪಣೆ ಕೇಳಿದಲ್ಲಿ ನಾಜರಜಂಗ್ ಬಹದರವರು ಅಪ್ಪಣೆ ಕೊಡದೆ ಹೋದಕಾರಣ, ಮನಸ್ಸಿನಲ್ಲಿ . . . . ಯಿಟ್ಟು ಕಡಪೆ ಸವಣೂರು ಮುಂತಾದ ನವಾಬರು ವಜೀರ ಶಹನವಾಸ್‌ಖಾನರು ಮುಂತಾಗಿ ಯಾವತ್ತೂ ಏಕವಾಗಿ ಫಿತೂರಿವಳಗೆ ಯಿದ್ದು, ಒಂದು ದಿವಸ ರಾತ್ರಿ ಫರಾಷೀಷರ ಮೇಲೆ ಜಗಳಕ್ಕೆ ಯೆಂಬದಾಗಿ ನಾಜರಜಂಗರನ ಅಂಬಾರಿ ಮೇಲೆ ಕೂಡಿಸಿ ತಾವೂ ಅಂಬಾರಿಗಳಲ್ಲಿ ಕುಳಿತುಕೊಂಡು, ಎಲ್ಲರೂ ಹೊರಗೆ ಹೊರಟು ಆ ಗಡಬಿಡಿಯಲ್ಲಿ ಹಿಮ್ಮತ್‌ಬಹದರು ಪಿಸ್ತೋಲಿನಿಂದ ಹೊಡೆದ ಕಾರಣ ನಾಜರಜಂಗರ ಎದೆಗೆ ಗುಂಡು ತಗಲಿ ನಾಜರಜಂಗರು ಸತ್ತುಹೋದರು. ಹಿಮ್ಮತ್‌ಬಹದರು ತಮ್ಮ ಆನೆಯನ್ನು ನಾಜರಜಂಗರ ಸಮೀಪಕ್ಕೆ ತಂದು ಪ್ರಾಣ ಹೋಗಿದ್ದ ನಾಜರಜಂಗರ ತಲೆಯನ್ನು ಕುಯಿದರು. ದಂಡಿನಲ್ಲಿ ಖಜಾನೆ ಮುಂತಾದ್ದು ಯಾವತ್ತೂ ಸಿಕ್ಕಿದವರು ಸಿಕ್ಕಿದ ಹಾಗೆ ಲೂಟಿಸಿಕೊಂಡು ವಬ್ಬರನ ಒಬ್ಬರು ಕಡಿದು ಕೇವಲ ಅನಾಹತವಾಯಿತು. ನಾಜರಜಂಗರ ಬಳಿಗೆ ಮಮ್ಮದಲ್ಲೀಖಾನರು ಬಂದು ಇದ್ದದ್ದರಿಂದ ಈ ಗಡಬಡಿಯೊಳಗೆ ಮಮ್ಮದಲ್ಲೀಖಾನರು ವಂಟಿ ಕುದುರೆ ಸಂಗಡ ವೋಡಿಹೋಗಿ ರಂಜನಗಡದ ನವಾಬ ಮಾತಬರಖಾನರನ ಕಂಡು ಅವರ ಸಂಗಡ ಕೆಲವು ಮಂದಿ ಆಡು ತೆಗೆದುಕೊಂಡು, ತಿರುಚನಾಪಲ್ಲಿ ಕೋಟೆಗೆ ವೋಡಿಹೋಗಿ, ಅಲ್ಲಿ ತನ್ನ ಹೆಂಡತಿ ಮಕ್ಕಳು ಯಿದ್ದದ್ದರಿಂದ ಅಲ್ಲಿಗೆ ಸೇರಿ ಇಂಗ್ರೀಜರಿಗೆ ಮಧ್ಯಸ್ಥ ಇಟ್ಟು, ಅವರ ಫವುಜು ಕೆಲವು ತರಸಿಕೊಂಡು ತಿರುಚನಾಪಲ್ಲಿ ಕೋಟೆಯೊಳಗೆ ಅವರ ಠಾಣೆಯಿಟ್ಟು, ಚನ್ನಪಟ್ಟಣದ ಕೋಟೆ ಕಟ್ಟುವ ಬಗ್ಗೆ ಅವರಿಗೆ ಸ್ಥಲಕೊಟ್ಟು, ಬಂದೋಬಸ್ತು ಮಾಡಿಕೊಂಡಿರಲಾಗಿ ಅಸಫಜಹಾ ಹಿತಾಯತ್ ಮೊಹದೀನ್‌ಖಾನರು ದಿವಾನ್ ಷಹನವಾಸ್‌ಖಾನರು ಕಡಪೆ ಕಂದನೂರು ವಗ್ಯೆರೆ ನವಾಬರು ಹೈದರಾಬಾದು ಫವುಜು ಸುದಾ ಆರ್ಕಾಡು ಸೀಮೆ ನವಾಬಗಿರಿ ಬಂದೋಬಸ್ತು ನೀವೇ ಮಾಡಿಕೊಳ್ಳಿಯೆಂಬದಾಗಿ ಚಂದಾಸಾಹೇಬರಿಗೆ ಅಪ್ಪಣೆ ಕೊಟ್ಟು, ತಾವೆಲ್ಲಾ ಹೈದರಾಬಾದಿಗೆ ಹೋಗತಕ್ಕ ಬಗ್ಗೆ ಕಲ್ಲೂರು ಕಣಿವೆಯೊಳಗೆ ಹೊರಟು ಸಿದ್ಧವಟ ರಾಚೋಟಿಯ ಬಳಿಯಲ್ಲಿ ದಂಡು ಇಳಿದದ್ದರಿಂದ ನಾಜರಜಂಗರ ತಮ್ಮಂದಿರಾದ ನಿಜಾಮಲ್ಲಿಖಾನರು ಸಲಾಬತ್‌ಜಂಗರು ಬಸಾಲತ್‌ಜಂಗರು ಮಗಲಲ್ಲೀಸಾಬರು ಮುಂತಾದ ನಾಲ್ಕು ಜನ ತಮ್ಮಂದಿರು ಪುನೇದ ಶ್ರೀಮಂತರ ಕಡೆಯಿಂದ ಕುಮುಕಿ ಬಂದಿದ್ದ ನಾಲ್ವತ್ತು ಸಾವಿರ ಕುದುರೆ ಸರದಾರನಾದ ರಾಜಾಚಂದ್ರಸೇನ ಬಹದರು ಬಳಿ ಸೇರಿದ್ದರು. ಕಡಪೆ ನವಾಬರು ಸಿದ್ಧವಟದ ಕೋಟೆಯೊಳಗೆ ಅವುತನಕ್ಕೆ ಯತ್ನ ಮಾಡಿಸಿ, ಹಿತಾಯತ್ ಮೊಹದೀನ್‌ಖಾನರನ್ನು ಕಂದನೂರು ನವಾಬ ಮುಂತಾದ ನವಾಬರು ಇನ್ನೂ ದೊಡ್ಡ ದೊಡ್ಡ ಸರದಾರರನ್ನ ಸಹ ಚ್ಯಾಫತಿಗೆ ಕರೆದ್ದರಿಂದ ಹಿತಾಯತ್‌ಮೋಹದೀನ್‌ಖಾನರು ತಮಗೆ ಶರೀರಕ್ಕೆ ಸ್ವಸ್ಥವಿಲ್ಲವೆಂದು ಬಹಾನೆ ತೆಗೆದುಕೊಂಡು ಬಾರದೆ ತನ್ನ ಡೇರೆಯಲ್ಲಿಯೇ ನಿಂತದ್ದರಿಂದ ಬಾಕಿ ಜನರು ಯಾವತ್ತು ಕೋಟೆಯೊಳಕ್ಕೆ ಅವುತನಕ್ಕೆ ಹೋದ ಕಾರಣ, ವೂರು ಬಾಗಿಲ್ಲಲಿ ಅಪ್ಪಣೆಯಾಗಿದ್ದದ್ದರಿಂದ ಅಸಫಜಹಾನ್‌ಗಿರಿ ಮಾಡುತಿದ್ದ ಹಿತಾಯತ್ ಮೊಜದೀನ್‌ಖಾನರು ತಮ್ಮ ಬಳಿಯಲ್ಲಿರುವ ಬದ್ದ

ಮಸಲತ್ತಿನವರ ಮಾತಿನ ಮೇಲೆ ಕೆಲವು ಜನ ತುಂಟ ಸರದಾರರು ಫವುಜಿಗೆ ಸಹ ಅಪ್ಪಣೆ ಕೊಟ್ಟಿದ್ದರಿಂದ ಇವರು ಕೋಟೆಯೊಳಗೆ ಹೊಕ್ಕು ಚ್ಯಾಫತಿಗೆ ಕುಳಿತಿದ್ದ ಜನರನ ಕಡಿದ್ದರಿಂದ ಅವರು ಇವರನ ಕಡಿದು ಹೇರಳ ಜಗಳವಾಗಿ, ಕಡಪೆ ನವಾಬರ ಕಾಲಿಗೆ ಭಾಲೆಯ ಪೆಟ್ಟು ತಗಲಿ ವಂಟಿ ಕುದುರೆ ಸಂಗಡ ತನ್ನ ಇಲಾಖೆ ಗುರ್‍ರಂಕೊಂಡೆಗೆ ಓಡಿಹೋದರು. ಕಂದನೂರು ನವಾಬ ಹಿಮ್ಮತ್‌ಬಹದರ್ ದಿವಾನ್ ಷಹನವಾಸ್‌ಖಾನರು ಮುಂತಾದವರು ಲಡಾಯಿ ಮಾಡಿ ಪಾರಾಗಿ ಹೋದರು. ಇನ್ನೂ ಹೇರಳ ಜನ ಉಭಯ ಫೌಜಿನಲ್ಲೂ ಠಾರಾದರು. ಈ ವರ್ತಮಾನ ಹಿತಾಯತ್ ಮೊಹದೀನ್‌ಖಾನರಿಗೆ ತಿಳಿಯುವುದಕ್ಕೆ ಮೊದಲೇ ನಿಜಾಮಲ್ಲಿಖಾನರ ಮುಂತಾದವರ ಮಸಲತ್ತಿನ ಮೇಲೆ ಚಂದ್ರಸೇನರ ಕಡೆ ಫವುಜ ಇತಾಯತ್ ಮೊಹದ್ದೀನಖಾನರ ಖಾಸ ಡೇರೆ ಮೇಲೆ ಬಿದ್ದು, ಹಿತಾಯತ್ ಮೊಹದೀನ್‌ಸಾಹೆಬರ ತಲೆ ಕುಯಿದು ಹಾಕಿದರು. ವಟ್ಟಿಗೆ ಆ ಹೊತ್ತಿನ ಲಡಾಯಿಯಲ್ಲಿ ಐವತ್ತು ಅಂಬಾರಿ ಖಾಲಿ ಆಗಿ ಹೋದವು. ಸವಣೂರು ವಗೈರೆ ಕೆಲವು ನವಾಬರು ಕೆಲವು ಸರದಾರರೂ ಸಹ ತಂತಮ್ಮ ವೂರುಗಳಿಗೆ ಓಡಿಹೋದರು. ಚಂದ್ರಸೇನನು ನಿಜಾಮಲ್ಲಿಖಾನರ ಅಣ್ಣ ಮಗಲಲ್ಲೀಗೆ ಹೈದರಾಬಾದ ದವಲತ್ತು, ಸಾಲಜಂಗರಿಗೆ ಆದವಾನಿ ನವಾಬಗಿರಿ, ಸಲಾಬತಜಂಗರಿಗೆ ಗೋಲಕೊಂಡೆ ಮೊಕರರು ಮಾಡಿ ಪುನೆಗೆ ಹೊರಟು ಹೋದರು.

ಮೈಸೂರು ಶ್ರೀರಂಗಪಟ್ಟಣ ಸಂಸ್ಥಾನದಿಂದ ಕುಮಕಿ ಹೋಗಿದ್ದ ಬರಕಿ ವೆಂಕಟರಾಯರು ನಾಲ್ಕು ಸಾವಿರ ಕುದುರೆ ಅವರ ತೈನಿನಲ್ಲಿಟ್ಟು ಹೈದರಲ್ಲಿಖಾನರು ಸಹ ಪಟ್ಟಣಕ್ಕೆ ಹೊರಟುಬಂದರು. ಹೈದರಾಬಾದು ವಗೈರೆ ಖಜಾನೆಗಳು ಲೂಟಿ ಆಗುವಲ್ಲು ಹೈದರಲ್ಲಿಖಾನರಿಗೆ ಹೇರಳ ದ್ರವ್ಯ ಸಿಕ್ಕಿತು. ಹೈದರಾಬಾದಿನಲ್ಲಿ ದವಲತ್ತು ಮಾಡುವ ಮಗಲಲ್ಲಿಗೆ ಸ್ವಲ್ಪ ಹುಚ್ಚು ಹಿಡಿದ್ದರಿಂದ ಅವಿವೇಕ ಕಾರುಬಾರು ಮಾಡಿದ್ದರಿಂದ ಅಹಲೇಕಾರರೆಲ್ಲಾ ಕೂಡಿ ಆತನ್ನ ಕೈದುಮಾಡಿ ಆಸಫಜಹಾನ್‌ಗಿರಿ ದವುಲತ್ತನ್ನು ನಿಜಾಮಲ್‌ಮುಲ್ಕ ನಿಜಾಮಲ್ಲೀಖಾನ್ ಬಹದರವರಿಗೆ ಮೊಕರರು ಮಾಡಿ, ದಿಳ್ಳಿಗೆ ಬರಿಸಿ ಕಳುಹಿಸಿದ್ದರಿಂದ ಸನ್ನದು ಶಿರಫೇಷು ಖಿಲ್ಲತ್ತು ಮುಂತಾದ್ದು ಬಂದ ಕಾರಣ ನಿಜಾಮಲ್ಲೀಖಾನರು ತಮ್ಮ ತಮ್ಮನಾದ ಬಸಾಲತ್‌ಜಂಗರಿಗೆ ಆದವಾನಿ ಸುಭೆ ನವಾಬಗಿರಿ ಮೊಕರರು ಮಾಡಿ, ರಾಜಾ ವಿಟ್ಠಲರು ಕಮ್ಮದ್ದೌಲಾ ಬಹದವರಿಗೆ ದಿವಾನ್‌ಗಿರಿ ಖಿಜಮತು ಮೊಕರರು ಮಾಡಿ, ಪೂರ್ವದಲ್ಲಿ ಇದ್ದ ಮಾತಬರ ಜನರು ತಮ್ಮ ಸ್ವಕೀಯರು ಮುಂತಾದವರಿಗೆ ತಮ್ಮ ತಂದೆಯ ದಿವಸದಲ್ಲಿದ್ದ ಪ್ರಕಾರ ಜಾಗೀರಿ ಮನ್‌ಸಬ್ದಾರಿ ವಗೈರೆ ಖಿಜಮತ್ತುಗಳು ಮೊಕರರ್‍ಮಾಡಿಕೊಟ್ಟು, ಮಷೀರಗೆ ದಿವಾನ್‌ಗಿರಿ ಮೊಕರರು ಮಾಡಿ, ಜಮೀನ್‌ದಾರ್ ಬ್ರಾಹ್ಮಣ ಫಕೀರ ವಗೈರೆ ಜನರಿಗೆ ತಹರಿದ ರುಸುಂ ರೋಜೀನಾ ಇನಾಂ ಮುಂತಾದ್ದು ಸರುಸು ನಡಿಸಿಕೊಡುತ್ತ ಐವತ್ತು ವರುಷ ಪರಿಯಂತರ ದವಲತ್ತು ಮಾಡಿ, ಆ ತರುವಾಯ ದುರ್ಮತಿ ಸಂ॥ಲ್ಲಿ ತನ್ನ ಹೆಂಡತಿಯಾದ ಬೇಗಂಸಾಬರ ಮಸಲತ್ತಿನ ಮೇಲೆ ತನ್ನ ಮಕ್ಕಳ ಪೈಕಿ ಪೋಲಾತಜಂಗ್ ಷಿಕಂದರಜಾ ಬಹದವರಿಗೆ ದವಲತ್ತು ಮೊಕರರು ಮಾಡುವಂತೆ ತನ್ನ ದಿವಾನ್ ಮಷೀರನ ಸಂಗಡ ಅಪ್ಪಣೆ ಕೊಟ್ಟು ನಿಜಾಮಲ್ಲಿಖಾನರು ಮೃತರಾದರು.

ಚಂದಾಸಾಹೇಬರು ಕೆಲವು ಸಈಮೆ ಬಲಕಾಯಿಸಿಕೊಂಡು ಕೆಲವು ಫೌವುಜನ್ನು ಜಮಾಯಿಸಿಕೊಂಡು ಫರಾಷೀಷರನು ಕುಮಕಿಗೆ ಕರಿಸಿಕೊಂಡು, ತಿರಚನಾಪಲ್ಲಿ ಕೋಟೆಗೆ ಮುತ್ತಿಗೆ ಹಾಕಿದ್ದರಿಂದ ಕೋಟೆಯೊಳಗೆ ರುಸ್ತುಮುಸ್ತೈದು ಇಲ್ಲದೆ ರಂಜನಗಡದ ನವಾಬ ಮಾತಬರ್‌ಖಾನರು

ಮುಂತಾದ ಕೆಲವು ಜನ ದೊಡ್ಡ ಮನುಷ್ಯರ ಸಂಗಡ ಮಸಲತ್ತು ಮಾಡಿ, ತಂಜಾವೂರು ಸಂಸ್ಥಾನದಿಂದ ಕೆಲವು ಫವುಜು ಮಾನಾಜಿಫಾಕೆಯೆಂಬ ಸರದಾರನ್ನ ಕುಮಕಿ ಕರಿಸಿಕೊಂಡು, ತಿರುಚನಾಪಲ್ಲಿ ಕೋಟೆ ಹೊರಗೆ ವಂದು ರೋಖಿನಲ್ಲಿ ಯಿಳಿಸಿ, ಶ್ರೀರಂಗಪಟ್ಟಣಕ್ಕೆ ಆಳಿದ ಮಹಾಸ್ವಾಮಿ ಕೃಷ್ಣರಾಜವಡೆಯರವರ ಸನ್ನಿಧಾನಕ್ಕೆ ಕಾಗದ ಬರೆದು, ವಕೀಲ ಶೇಷಗಿರಿಪಂತರನ ಕಳುಹಿಸಿ, ನೀವು ಭಾರೀ ಫವುಜು ಕುಮಕಿ ಕಳುಹಿಸಿ ಚಂದಾಸಾಹೇಬರನ ಹೊಡೆದು ಹಾಕಿಸಿದಲ್ಲಿ ತಿರುಚಾನಪಲ್ಲಿ ಕೋಟೆ ಆ ಸೀಮೆ ಸಹ ನಿಮ್ಮ ಸಂಸ್ಥಾನಕ್ಕೆ ಕೊಡುತ್ತೇನೆಂಬದಾಗಿ ಹೇಳಿ ಕಳುಹಿಸಿದ್ದರಿಂದ ಆಳಿದ ಮಹಾಸ್ವಾಮಿಯವರ ಅಪ್ಪಣೆ ಮೇರೆಗೆ ದಳವಾಯಿ ದೇವರಾಜಯ್ಯರಸಿನವರ ತಮ್ಮಂದಿರು ಕರಾಚೂರು ನಂಜರಾಜಯ್ಯರಸಿನವರು ಅವರ ಸಂಗಡ ಹನ್ನೆರಡು ಸಾವಿರ ಕುದುರೆ ಅಹಷಾಂ ಕರ್ಣಾಟಕ ವಗೈರೆ ವಂದು ಲಕ್ಷ ಪಾಯಿದಳ ಬರಕಿ ವೆಂಕಟರಾಯರು ಕತ್ತಿ ಗೋಪಾಲರಾಜಯ್ಯರಸಿನವರು ಹೈದರಲ್ಲಿಖಾನರು ಹರಿಸಿಂಗು ಮುಂತಾದ ಜಮಾದಾರರು ಮುಂತಾಗಿ ಫೌಜು ತೆಗೆದುಕೊಂಡು ಹೊರಟುಹೋಗುವಲ್ಲೂ ಮಧ್ಯೇ ಮಾರ್ಗಕ್ಕೆ ಕೃಷ್ಣರಾಜಪುರದ ಬಳಿಗೆ . . . . ಚಂದಾಸಾಹೇಬರ ಫವುಜು ಬಂದು ಕಣವೆ ಕಟ್ಟಿದ್ದರಿಂದ ವುಭಯ ಫವುಜುಗಳೂ ಲಡಾಯಿ ಮಾಡಿ, ಅವರ ಕಡೆ ಹುಬ್ಬುಸಾಬ್ ಸೈದ ಯಾಕೂಫ ವಗೈರೇರು ಕೈಸೆರೆ ಸಿಕ್ಕಿದ್ದರಿಂದ ಮಮ್ಮದಲ್ಲಿಖಾನರು ತಮ್ಮ ಅಬ್ದುಲ್‌ವಹಾಬಖಾನರ ಸಂಗಡ ಕೆಲವು ಫವುಜು ಕೊಟ್ಟು, ಎದಿರಾಗಿ ಕಳುಹಿಸಿದ್ದರಿಂದ ಅಬ್ದುಲ್‌ವಹಾಬಖಾನರು ಬಂದು ಕರಾಚೂರು ಅರಸಿನವರ ಭೇಟಿ ತೆಗೆದುಕೊಂಡು, ಬದಲು ಮಾರ್ಗದಲ್ಲಿ ಯಿವರನ ತಿರುಚನಾಪಲ್ಲಿಗೆ ಕರೆದುಕೊಂಡು ಹೋದ್ದರಿಂದ ಕರಾಚೂರು ಅರಸಿನವರು ಶ್ರೀರಂಗದ ದೇವಸ್ಥಾನದ ಬಳಿ ಯಿಳಿದುಕೊಂಡು, ಕೆಲವು ಫವುಜು ಹೈದರಲ್ಲಿಖಾನರ ಸಹ ಜಂಬುಕೇಶ್ವರ ದೇವಸ್ಥಾನದ ಬಳಿ ಯಿಳಿಸಿದ್ದರು. ಆವಾಗ ಗುತ್ತಿ ಮುರಾರಿರಾಯರು ಕೆಲವು ಫವುಜಿನ ಸಂಗಡ ಕುಮಕಿ ಬಂದಿದ್ದರು. ಚಂದಾಸಾಹೇಬನು ಈ ಫವುಜನ್ನು ನೋಡಿ ಭಯಪಟ್ಟು ಒಂದು ಕಡೆ ಕಿನಾರೇಲಿ ಇಳಿದು ಕೊಂಡನು. ಆತನ ಕಡೆ ಕೆಲವು ಫವುಜು ಅಡವಡ ಬಂದಿದ್ದದ್ದು ವಾಪಸು ಬಂದು ಸೇರಿದರು. ಸದರಿ ಫವುಜಿಗೆ ಫರಾಷೀಷರವರಿಗೆ ಸಹ ಖರ್ಚಿಗೆ ಕೊಡುವುದಕ್ಕಿಲ್ಲದ ಕಾರಣ ಚಂದಾಸಾಹೇಬರ ಸಂಗಡ ಜಗಳವಾಡಿಕೊಂಡು ಫರಾಷೀಷರು ಪುಲಿಚೇರಿಗೆ ಹೊರಟು ಹೋದರು. ಕರಾಚೂರು ಅರಸಿನವರ ಕಡೆ ಫವುಜಿನವರು ತಂಜಾವೂರು ಮಾನಾಜಿ ಸಹ ಏಕವಾಗಿ ಮೋಸದಿಂದ ಚಂದಾಸಾಹೇಬರ ತಲೆ ಕುಯಿದುಕೊಂಡು ಅವರ ದಿವಾನ ಶೇಷ[+ಗಿರಿ]ರಾಯನ್ನ ಸಹ ಬಂದರು[>ಕೊಂದರು]. ಚಂದಾಸಾಹೇಬನ ಫವುಜು ಯಾವತ್ತು ತೀನತೇರೆಯಾಗಿ ಮಮ್ಮದಲ್ಲಿಖಾನರ ಸ್ವಾಧೀನವಾಯಿತು. ಆ ತರುವಾಯ ಕರಾಚೂರು ಅರಸಿನವರಿಗೆ ಕೋಟೆ ಕೊಡುತ್ತೇವೆ ಯೆಂಬದಾಗಿ ಜೀಬಿವಳಕ್ಕೆ ಕರಿಸಿ ವಳಬಾಗಿಲು ಎರಡು ಹಾಕಿಕೊಂಡು ಕೋಟೆ ಮೇಲಿನಿಂದ ಗುಂಡುಗಳ ಹೊಡೆದ್ದರಿಂದ ಈ ವರ್ತಮಾನ ಮಮ್ಮದಲ್ಲಿಖಾನರ ತಾಯಿ ಕೇಳಿ, "ನಮಗೆ ಕುಮಕ್ಕು ಬಂದು ವುಪಕಾರ ಮಾಡಿದವರ ಮೇಲೆ ನಾವೇ ಗುಂಡು ಹೊಡೆದಲ್ಲಿ ಜಯವಾಗತಕ್ಕದ್ದಿಲ್ಲವೆಂಬದಾಗಿಯು, ಪೂರ್ವದಲ್ಲಿ ಚಂದಾಸಾಹೇಬರು ಮಧುರೆ ಮಂಗಮ್ಮಗೆ ಮಾತು ಕೊಟ್ಟು ತಪ್ಪಿದ್ದರಿಂದ ಚಂದಾಸಾಹೇಬರ ದವಲತ್ತು ಅಸತ್ಯದಿಂದ ಹೋಯಿತು" ಎಂಬದಾಗಿ ತನ್ನ ಮಗನಿಗೆ ಬುದ್ಧಿ ಹೇಳಿ, ಜೀಬಿಕಡೆ ಊರುಬಾಗಲು ತೆಗಿಸಿದ್ದರಿಂದ ಕರಾಚೂರು ಅರಸಿನವರು ಹಿಂದಕ್ಕೆ ಬಂದು ತಾವು ಇಳಿದಿದ್ದ ಕಡೆಗೆ ಸೇರಿದರು.

ಯದಾಷ್ತ ರಂಜನಗಡ ನವಾಬ ತಾಯರ್ ಹುಶೇನುಖಾನರು ನವಾಬ ಸಬ್ದರಲ್ಲಿಖಾನರ ಸಂಗಡ ಆದವಾನಿ ನವಾಬ ಹಿತಾಯತ್‌ಮೊಹದೀನ್‌ಖಾನರು ವ ಚಂದಾಸಾಹೇಬರ ಸಂಗಡ ಲಡಾಯಿಯಲ್ಲಿ ಅನವರ್ದೀನ್‌ಖಾನರ ಮಗ ಮಮ್ಮದಲ್ಲಿಖಾನರು, ಹೈದರಾಬಾದ್ ಆಸಫಜಹಾ ನಾಜರಜಂಗರವರ ತಲೆ ಕಂದನೂರ ನವಾಬ ಹಿಮ್ಮತ್‌ಬಹದರ ವಗೈರೆಯವರು ಕೊಯಿದಾಗ, ಸದರಿ ಮಮ್ಮದಲ್ಲಿಖಾನರು ತಿರುಚಾನಪಲ್ಲಿಗೆ ವೋಡಿಬರುತ್ತಾ ಮಧ್ಯೆ ಮಾರ್ಗದಲ್ಲಿ ರಂಜನಗಡದ ಹುಶೇನ್‌ತಾಯರ್‌ಖಾನ ನವಾಬರ ಮಗ ಮಾತಬರ್‌ಖಾನರು ಮಮ್ಮದಲ್ಲಿಖಾನರಿಗೆ ಅನ್ನಾಯಿಕ್ಕಿ, ಆಳು ಕಾಳು ಕುಮಕು ಮಾಡಿಕೊಟ್ಟು ತಿರುಚನಾಪಲ್ಲಿಗೆ ರವಾನೆ ಮಾಡಿದರು. ಚಂದಾಸಾಹೇಬರಿಗೆ ಹಿಡಕೊಡಲಿಲ್ಲ. ಆ ತರ್ವಾಯ ಆರ್ಕಾಡ ದವಲತ್ತು ಮಹಮ್ಮದಲಿಖಾನರು ಬಂದೋಬಸ್ತ ಮಾಡಿಕೊಂಡ ಮೇಲೆ, ರಂಜನಗಡ ನವಾಬರಿಗೆ ಮೊದಲು ಐವತ್ತು ಸಾವಿರ ರೂಪಾಯಿ ಶೀಮೆಯಿದ್ದದ್ದರಿಂದ ಹಾಲಿ ಐವತ್ತು ಸಾವಿರ ರೂಪಾಯಿ ಹೆಚ್ಚಾಗಿ ಕೊಟ್ಟು ಬಹಳ ಪ್ರೀತಿಯಿಂದ ಯಿಟ್ಟುಕೊಂಡು ಇದ್ದರು.

❖❖

೧೦೩
ಉತ್ಸಂಗಿ ವೆಂಟೆಕೆ ಸಲ್ಲುವ ಸಂತೆಬೆನ್ನೂರ ಶೀಮೆ ಕೈಫಿಯತು

ಮೆಕೆಂಝಿ ಸಂಪುಟ : ೧೬೦

ಕ್ರಿಷ್ಣರಾಯರ ಅಳಿಯ ರಾಮರಾಯರು ಪೃಥ್ವಿಸಾಮ್ರಾಜ್ಯವನ್ನು ಆಳುತ್ತಿರಲು . . . . ಯದ ಹನುಮಪ್ಪನಾಯಕರಿಗೆ ಉತ್ಸಂಗಿ ವೆಂಟೆಕೆ ಸಲ್ಲುವ ಮದಕರಿನಾಡನ್ನು ಅಮರಮಾಗಣಿಯಾಗಿ ದಯಪಾಲಿಸಿದರಿಂದ, ಈ ಹನುಮಪ್ಪನಾಯಕನು ಮದಕರಿನಾಡಿನ ಸ್ತಳವಿನ ಚಿಕ್ಕಕೂಗಲ್ಲೂರುಯಂಬ ಸ್ಥಳದಲ್ಲಿದ್ದುಕೊಂಡು ಯಿರಲಾಗಿ, ಅಲ್ಲಿ ಹನುಮಂತದೇವರು ಆತಗೆ ನಿಜರೂಪ ತೋರಿದರಿಂದ ಯೀತನು ರೋಮಪುಳಕಿತನಾಗಿ, ಯೀ ದೇವರು ಕುಲದೇವತೆಯಾಗಿ ನಡಕೊಂಡನಾದ ಕಾರಣ ರೋಮಕೋಟೆ ಹನುಮಪ್ಪನಾಯಕ. ಆತನ ಮಕ್ಕಳು ೧. ಹುಚ್ಚಪ್ಪನಾಯಕ, ಚಿಕ್ಕಣ್ಣನಾಯಕ, ಬಿಲ್ಲಪ್ಪನಾಯಕ, ಬಾಳಪ್ಪನಾಯಕ, ಹನುಮನಾಯಕ, ಚಿಕ್ಕಣ್ಣನಾಯಕ, ಬಾಲಹನುಮನಾಯಕ.

ಯೀ ಪ್ರಕಾರ ಯಿವರು ಶೂರಧರ್ಮದಲ್ಲಿ ಯಿರಲಾಗಿ, ಹನುಮಪ್ಪನಾಯಕರ ಮಕ್ಕಳು ೧. ಕೆಂಗಪ್ಪನಾಯಕ, ಹುಚ್ಚಪ್ಪನಾಯಕ

ಯೀ ಪ್ರಕಾರ ತಮ್ಮ ಕ್ಷಾತ್ರಧರ್ಮದಲ್ಲಿ ಯಿರಲಗಿ ಒಂದಾನೊಂದು ಕಾಲದಲ್ಲಿ ಕೆಂಗಪ್ಪನಾಯಕರು ಬ್ಯಾಟಿ ಆಡುವ ನಿಮಿತ್ಯ ಮದಕರಿಶೀಮೆ ವಳಿತವಾದ ರಂಗಾಪುರಿಗ್ರಾಮದ ಬಳಿಯ ಬರಲು, ಆ ಸ್ಥಳದಲ್ಲಿ ಮೊಲನು ಯೆದ್ದು ನಾಯಿಯನ್ನು ತಿರುಗಿ ಬಿದ್ದು ಕಡದದರಿಂದ, ಯೀ ಸ್ಥಳವು ಗಂಡುಭೂಮಿಯೆಂಬದಾಗಿ ಯೀ ಸ್ಥಳಕ್ಕೆ ಗುರುತು ಮಾಡಿಸಿ, ಅಲ್ಲಿಂದ ಮುಂದಕೆ

ಬ್ಯಾಟಿ ಆಡುತ್ತ ಹೋಗುತಾ ಯಿದ್ದಲ್ಲಿ ವಿಶ್ರಮಿಸಿಕೊಳುವ ನಿಮಿತ್ಯ ಪ್ರಕ್ಷಚ್ಛಯ[>ವೃಕ್ಷಛಾಯ]ದಲ್ಲಿ ವಿಶ್ರಮಿಸಿಕೊಂಡರು. ಅಲ್ಲಿ ಶುಕದಲ್ಲಿ ವೃಷಬೇಶ್ವರರು ಯಿದ್ದರು. ಅವರು ಸ್ವಪ್ನದಲ್ಲಿ ಪ್ರಸನ್ನವಾಗಿ ಭೂವಿಷ್ಯೋತ್ತರ ಶುಭಸೂಚನೆಯನ್ನು ಹೇಳಿ, ನಿಧಿಯನ್ನು ವರವ ಕೊಟ್ಟರು. ಆ ನಂದೀಶ್ವರ, ಚಿಕ್ಕ[+ಕೂ]ಗಲ್ಲೂರ ಹನುಮಂತದೇವರ ಕೃಪೆಯಿಂದಲು ಪೂರ್ವಜನ್ಮದ ತಪಸ್ಸಿನಿಂದಲು ಮೊದಲು ಬ್ಯಾಟೆಯಲ್ಲು ಆಡುವ ಕಾಲದಲ್ಲಿ ಗಂಡುಭೂಮಿಯಂದು ಗುರುತುಮಾಡಿದ ಸ್ಥಳದಲ್ಲಿ ಕೋಟೆಯನ್ನು ಕಟ್ಟಿಸಿದ್ದರು ಶಕ ೧೪೮೦ನೇ ಕಾಳಯುಕ್ತಿ ಸಂ। ಆ ಸ್ತಳದಲ್ಲಿ ರಾಮಚಂದ್ರದೇವರನ್ನು ಪ್ರತಿಷ್ಟೆಮಾಡಿ, ಆ ದೇವಸ್ಥಾನದ ಮುಂದೆ ರಾಮತೀರ್ಥವೆಂದು ಸರೋವರವನ್ನು ಕಟ್ಟಿಶಿ, ಆ ಸರೋವರದ ಕೂಪಶಾಂತಿ ಬಿಗ್ಯೆಕ್ಷೇತ್ರ ೧೦೮ ಸಾಲಿಗ್ರಾಮ ಉತುವವಾನಿದಂತಾಲು ಯಿಟ್ಟು, ಪೂರ್ವದಲ್ಲು ರೋಮಕೋಟೆ ಹನುಮಪ್ಪನಾಯಕಗೆ ವರಪ್ರಸನ್ನರು ಚಿಕ್ಕೂಗಲ್ಲೂರಯಂಬ ಸ್ಥಳದಲ್ಲಿ ಮುಖ್ಯಪ್ರಾಣದೇವರ ದೇವಸ್ಥಾನವನ್ನು ವಿಸ್ತಾರವಾಗಿ ಕಟ್ಟಿಶಿ, ಆ ಗ್ರಾಮವನ್ನು ಆ ದೇವರಿಗೆ ಉತಾರ[>ಉತ್ತಾರ]ವನ್ನು ಕೊಟ್ಟು, ಯೀ ದೇವರು ತನ್ನ ಕುಲದೇವತೆಯಂಬದಾಗಿ ಮಾಡಿಕೊಂಡು, ದೇವಗಿರಿ ಬಳಿಯಿರುವ ದೇವರಹಳಿ ಉಡುಮರೂಪಿ ರಂಗನಾಥದೇವರಿಗೆ ಪೂರ್ವದಲ್ಲಿ ರಾಯರು ಕಟ್ಟಿಸಿದ ದೇವಸ್ತಾನದ ಮುಂದಕೆ ವಿಸ್ತಾರವಾಗಿ ದೇವಸ್ತಾನವನ್ನು ಜೀರ್ಣೋದ್ಧಾರವಾಗುವಂತೆ ರಾಯರು ಕೊಟ್ಟಯಿದಂತಾ ಗ್ರಾಮಗಳನ್ನು ದೇವರಿಗೆ ಉತ್ತರಾ ಕೊಟ್ಟು, ಪೂರ್ವದಲ್ಲಿ ರಾಯರು ಶ್ರೀ ವಸ್ತಗೋತ್ರದ . . . . ಸ್ತಂಬ ಸೂತ್ರದ ಯಜುಶ್ಯಾಖೆಯ ಯಿಂದ್ರಕಂಟಿ ಆವಲಿ ಮಲ್ಲಿಭಟ್ಟರ ಮಕ್ಕಳು ಅಪ್ಪಾಜಿಭಟ್ಟರ ತಮ್ಮ ಲಿಂಗಣ್ಣನು ತಾನು "ಪೂರ್ವಿಕ ತನ್ನ ಹಿರಿಯರು ಪಡದಂಥ ಸ್ಥಳ ಮನೆ ಕಾದುಕೊಂಡು ನಿಮ್ಮ ಆಶ್ರಿತನಾಗಿ ಯಿದ್ದೇನೆ"ಯಂಬದಾಗಿ ಹೇಳಿಕೊಳ್ಳಲಾಗಿ ಚಿತ್ತಕೆ ತಂದು, ಅದೇ ಪ್ರಕಾರಕೆ ತಾಂಬ್ರದ ಶಾಸನವನ್ನು ಶಾಲಿವಾಹನ ಶಕ ೧೪೮೬ನೆಯ ರಕ್ತಾಕ್ಷಿ ಸಂವತ್ಸರದ ಮಾಗ ಶ ೧೫ಯ ಸೋಮ್ಯವಾರ ಚಂದ್ರೋಪರಾಗವರ್ಣಿ ಪುಣ್ಯಕಾಲದಲ್ಲಿ ಕೆಂಗಪ್ಪನಾಯಕರು ಬರಸಿ ಕೊಟ್ಟು, ಯೀ ರಂಗನಾಥಪುರದ ಗ್ರಾಮಕ್ಕೆ ಸಂತೆಬೆನ್ನೂರಯೆಂದು ಹೆಸರು ಯಿಟ್ಟು, ರಾಜ್ಯವನ್ನು ಧರ್ಮದಿಂದ ಆಳುತ್ತ ಬಂದರು, ಶಾಲಿವಾಹನ ಶಕ ೧೪೯೯ನೆ ಪ್ರಭವ ಸಂ।ವರಿಗೆ, ವರ್ಷ ೯.

ಯಿವರ ಮಕ್ಕಳು ಯಿಮ್ಮಡಿ ಕೆಂಗೆ ಹನುಮಂತಪ್ಪನಾಯಕರು. ಯಿವರು ಸಂತೆಗೆನ್ನೂರು ಸೀಮೆಯ ವಳಿತವಾದ ಗ್ರಾಮಗಳಲ್ಲಿ ಕೆರೆಗಳ ಕಟ್ಟಿಸಿದು:

೧. ಹಿರೇಕೂಗಲ್ಲುಗ್ರಾಮದ ಕೆರೆ,

೧. ಸಂತೆಬೆನ್ನೂರ ಗ್ರಾಮದ ಕೆರೆ,

೧. ಮೆದಕೆರಿಗ್ರಾಮ ಕೆರೆ.

೧. ತಳಿಗೆರೆಗ್ರಾಮದ ಕೆರೆ.

೧. ಸಿದ್ಧನಮಟದ ಗ್ರಾಮ ಕೆರೆ,

ಯೀ ಐದು ಗ್ರಾಮದಲ್ಲಿ ಕೆರೆಗಳ ಕಟ್ಟಿಸಿ, ರಾಜ್ಯವನ್ನು ಧರ್ಮದಿಂದ ಆಳಿದರು. ಶಕ ೧೪೯೨ನೆಯ ಪ್ರಮೋದೂತ ಸಂ ವರಿಗೆ, ವರುಷ ೩.

ಯಿವರ ಮಕ್ಕಳು ಕೆಂಗೆ ನಿಚ್ಚಮದವಣಿಗ ಹನುಮಪ್ಪನಾಯಕರು ಕೆರೆ ಕಟ್ಟಿಸಿದ್ದು :

೧ ಬೆಳಿಗನುಡುವಗ್ರಾಮದ ಕೆರೆ, ೧ ಕುಳನೂರುಗ್ರಾಮದ ಕೆರೆ.

ಯೀ ಪ್ರಕಾರ ಕೆರೆಗಳ ಕಟ್ಟಿಶಿ ರಾಜ್ಯವನ್ನು ಆಳುತ್ತಾ ಬಂದರು, ಶಕ ೧೫೦೨ನೇ ವಿಕ್ರಮ ಸಂ. ರದ ವರಿಗೆ, ವರುಷ ೧೦.

ಯಿವರ ಮಕ್ಕಳು ೧ ಹಿರೆ ಕೆಂಗೆಹನುಮಪ್ಪನಾಯಕರು, ೧ ಚಿಕ್ಕ ಕೆಂಗೆಹನುಮಪ್ಪನಾಯಕರು ಸಾಹಾ ಶಕ ೧೫೦೩ನೆಯ ವಿಷು ಸಂ. ಆರಭ್ಯಾ ಯೀ ಉಭಯತರು ರಾಜ್ಯವನ್ನಾಳುತಾ ಯಿರಲಾಗಿ, ವಂದಾನೊಂದು ಕಾಲದಲ್ಲಿ ಅಣ್ಣತಮ್ಮಂದಿರಿಗೆ ಕಲಹ ಹುಟ್ಟಿದರಿಂದ ಚಿಕ್ಕ ಕೆಂಗೆ ಹನುಮಪ್ಪನಾಯಕರು ಬಾಣಾವರಕ್ಕೆ ಚಿತ್ತೈಸಿದರು. ಹಿರೆ ಕೆಂಗಣ್ಣ[>ಗೆಹನು]ಪ್ಪನಾಯಕರು ಬಸವಾಪಟ್ಟಣದಲ್ಲಿ ರಾಜ್ಯವನ್ನು ಆಳುತಾ ಸುಖದಿಂದ ಯಿದ್ದರು. ಯಿಲ್ಲಿಗೆ ಶಕ ೧೫೦೪ನೆಯ ಚಿತ್ರಭಾನು ಸಂವತ್ಸರದ ವರಿಗೆ ವರುಷ ೨ ಕೂಡಿ ಯಿದ್ದು, ಯೀ ಸ್ವಭಾನು ಸಂ. ಆರಭ್ಯಾ ಶಕ ೧೫೬೦ನೇ ಬಹುಧಾನ್ಯ ಸಂ।ರ ವರಿಗೆ ವರುಷ ೫೬ಕೆ ಹಿರೆ ಕೆಂಗೆಹನುಮಪ್ಪನಾಯಕರು ಆಳುತಾ ಯಿದ್ದಲ್ಲಿ, ಭಾಗಾನಗರದವರ ವಜೀರ ರಣದುಲ್ಲಾಖಾನರು ದಂಡು ತೆಗೆದುಕೊಂಡು ಯಾವತ್ತು ಪಾಳೆಗಾರನು ಮುರ್‍ರಿದು, ಬಸವಾಪಟ್ಟಣಕ್ಕೆ ಬಂದು, ಬಸವಾಪಟ್ಣ ಕೋಟೆಯನ್ನು ಹಲ್ಲಾಮಾಡಿ ತೆಗೆದುಕೊಂಡು, ಯೀ ಹಿರೆ ಕೆಂಗೆಹನುಮಪ್ಪನಾಯಕರ ಕುಲದೇವತಿ ಸಂತೆಬೆನ್ನೂರ ರಾಮಚಂದ್ರದೇವರ ದೇವಸ್ಥಾನ, ಯಿನ್ನು ಯೆಂದರೆ[>ಇತರೆ] ದೇವಸ್ತಾನಂಗಳನ್ನು ಮುರಿದು, ಮಸೂತಿಯನ್ನು ಕಟ್ಟುವ ಹಾಗೆ ಮಾಡಿಶಿ, ಯೀ ಮಸೂತಿಯಲ್ಲು ಧರ್ಮ . . . .

೧ ಕೂಳನೂರುಗ್ರಾಮ, ೧ ಕೆಂಪನಹಳ್ಳಿಗ್ರಾಮ – ಯೀ ಪ್ರಕಾರ ಯರಡು ಗ್ರಾಮಕೂ ಮಸೂತಿ ಮುದ್ರೆ ಕಲ್ಲು ನೆಡಿಶಿ, ಯೀ ಸಂತೆಬೆನ್ನೂರಿಗೆ ಶಾಲಿವಾಹನ ಶಕ ೧೫೬೧ನೇ ಪ್ರಮಾತಿ ಸಂ॥ದಲ್ಲಿ ಠಾಣ್ಯವನ್ನು ಹಾಕಿ, ತಮ್ಮ ಕಡೆ ಮಾ[>ಮು]ರ್ತುಜಾಬೇಗರನ್ನು ಬಸವಾಪಟ್ಟಣಕೆ ಸಹಾ ಯಿಟ್ಟು, ಹಿರೆ ಕೆಂಗೆಹನುಮಪ್ಪನಾಯಕರನ್ನು ಸಂಗಡ ಕರಕೊಂಡು ಬಾಗಾನೂರಕ್ಕೆ[>ಭಾಗಾನಗರಕ್ಕೆ] ಹೋದರು. ಯೀ ಮುರ್ತುಜಾಬೆಗ ಕಡೆ ಭುಜಬಲರಾಮರು ಶಕ ೧೫೬೨ನೆ ವಿಕ್ರಮ ಸಂ॥ದಲ್ಲಿ ವರುಷ ೧ ಆಳಿದನು.

ಯೀ ರಣದುಲ್ಲಾಖಾನರಿಗೆ ಮುರ್ತುಜಾಬೇಗರ ಕಡೆ ಖಾನಖಾನನನ್ನು . . . . ಶಾಲಿವಾಹನ ಶಕ ೧೫೬೩ನೆ ವಿಷು ಲಾಗಾಯಿತು ಶಕ ೧೫೭೧ನೇ ವಿರೋಧಿ ಸಂ. ವರಿಗೆ ವರುಷ ೯ ಪರಿಯಂತ್ರ ಸಂತೆಬೆನ್ನೂರ ಠಾಣ್ಯ ಹಾಕಿಕೊಂಡು ಯಿದ್ದು, ಅಲ್ಲಿ ಯಿದ್ದಾ ರಾಮಚಂದ್ರದೇವರ ದೇವಸ್ಥಾನವನ್ನು ಮುರಿದು, ಮಸೂದಿಯನ್ನು ಕಟ್ಟಿಸುವದಕ್ಕೆ ಆರಂಭವನ್ನು ಮಾಡಿ, ಅದಕೆ ಮಾ[>ಮು]ರುಸಿದ ದೇವಸ್ಥಾನಗಳು:

೩. ಹಿರೆಕೂಗಲ್ಲೂರಲ್ಲು

೧ ಸುಖನೇಶ್ವರ ದೇವಸ್ಥಾನ

೧ ಕಲ್ಲೇಶ್ವರ ದೇವಸ್ಥಾನ

೧ ಮಲ್ಲೇಶ್ವರ ದೇವಸ್ಥಾನ

———

೩

೨. ಸಂತೆಬೆನ್ನೂರಲ್ಲಿ

೧ ರಾಮಚಂದ್ರ ದೇವಸ್ಥಾನ

೧ ಕಲ್ಲೇಶ್ವರನ ದೇವಸ್ಥಾನ

———

೨

೧ ಸಿದ್ಧನಮಠದಲ್ಲು ರಾಮೇಶ್ವರ ದೇವಸ್ಥಾನ

೧ ತಳಿಗೆರೆಯಲ್ಲು ಕಲ್ಲೇಶ್ವರ ದೇವಸ್ಥಾನ

ಯೀ ದೇವಸ್ಥಾನಂಗಳನು ಮುರಿದು, ಉಡುಮರೂಪಿ ರಂಗನಾಥನ ದೇವರ ದೇವಸ್ಥಾನವನ್ನು ಮುರಿವ ಬಗ್ಗೆ ಬಂದಲ್ಲಿ ದೇವಸ್ಥಾನಕ್ಕೆ ಜೇನುಯಿಟ್ಟು, ಈ ಹುಳುವು ಯೀ ಜನರನ್ನು ಹೋಗಗೊಡದೇ ಯಿದ್ದದರಿಂದ ಯೀ ದೇವಸ್ಥಾನವನ್ನು ಮುರವದು ಬಿಟ್ಟು, ಯೀ ದೇವರಿಗೆ ಹಾಕಿಕೊಟ್ಟ ಉತ್ತರದಾ ಶಾಸನದ ಕಲ್ಲನು ತ್ತೆಗೆದುಕೊಂಡುಹೋಗಿ ಮಸೂದಿಗೆ ಹಾಕಿದರು.

ಯೀ ಮುರ್ತೂಜಾಬೇಗರ ಕಡೆ ಪತ್ತೆಖಾನನು ಶಕ ೧೫೨೭ನೇ ವಿಕ್ರಮ ಲಾಗಾಯಿತು ಶಕ ೧೫೭೬ನೆಯ ಜಯಸಂವತ್ಸರ ವರಿಗೆ ವರುಷ ೫ ಸಂತೆಬೆನ್ನೂರ್ರು ಠಾಣ್ಯದಲ್ಲಿ ಮಸೂತಿಯನ್ನು ಕಟ್ಟಿಸುತ್ತ ಯಿದ್ದಾನೆ[>ದ್ದನು].

ಯೀ ಮುರ್ತೂಜಾಬೇಗರ ಕಡೆ ಪರೀದಖಾನಪಠಾಣನು ಶ್ಯಾಲಿವಾಹನ ಶಕ ೧೫೭೮ನೆಯ ದುರ್ಮುಖಿ ಸಂ॥ರದ ವರೆಗೆ ವರುಷ ೨ ಪರಿಯಂತರ ಸಂತೆಬೆನ್ನೂರ ಠಾಣ್ಯದಲ್ಲಿ ಮಸೂತಿ ಕಟ್ಟಿಸಿಕೊಳ್ಳುತ್ತಾ ಯಿದ್ದನು[>ದ್ದನು].

ಬಾಣಾವರದಲ್ಲಿಯೂ ಯಿದ್ದ ಚಿಕ್ಕ ಕೆಂಗೆಹನುಮಪ್ಪನಾಯಕರು ತಮ್ಮ ಅಣ್ಣನ ಬಾಗಾನಗರಕೆ ಕರಕೊಂಡು ಹೋದ ಬಗ್ಗೆ ತಾಉ ಭಾಗಾನಗರ ವಿಜಾಪುರಕೆ ಹೋಗಿ, ಅಲ್ಲಿ ಪಾದಶಾಹಾರ ಮರ್ಜಿ ಕಾದುಕೊಂಡು ಯಿದ್ದಲ್ಲಿ, ವಂದಾನುವಂದು ಕಾಲದಲ್ಲಿ ಪಾದಶಾಹಾರು ಹುಲಿಕಾಳಗವನ್ನು ಬಿಡಿಶಿಯಿದ್ದಲ್ಲಿ, ಯೀತನು ಹುಲಿ ಮೇಲೆ ಬಿದ್ದು ಹುಲಿಯನ್ನು ಹೊಡದು, ಬಾಹಳ ಮೆಹನತು ಮಾಡಿದ್ದರಿಂದ ಧಣೇರ ಚಿತ್ತಕ್ಕೆ ತಂದು, ಯೀತಗೆ ಸರ್ಜಾಯಂಬುದಾಗಿ ಕಿತ್ತಾಬು ಕೊಟ್ಟು, ಪೂರ್ವ ಮೇರೆ ಯಾವತ್ತು ರಾಜ್ಯವನ್ನು ಆಳುವಂತೆ ಪರವಾನೆ ಬರಶಿಕೊಂಡು, ಹಸ್ರು ಪಾಲಕ್ಕಿ ಹಸ್ರು ಕೊಡೆ ಹಸ್ರು ಶಾಲು ಮುಂತಾದ ತಸರೀಪು ತೆಗದುಕೊಂಡು ಪುನಹಾ ಬಸವಾಪಟ್ಟಣಕೆ ಬಂದು, ಸಂತೆಬೆನ್ನೂರಲ್ಲು ಯಿದ್ದ ತನ್ನ ಕುಲದೇವರು ರಾಮಚಂದ್ರದೇವರ ದೇವಸ್ಥಾನವನ್ನು ಮುರದು ಮಸೂತಿಯನ್ನು ಕಟ್ಟಿದ ವಾಂಚಲ್ಯಕ್ಕೆ ಯೀ ಮಸೂತಿಯ ಅರೆಗೆಲಸವಾಗಿಯಿತ್ತು. ಅಷ್ಟರಲ್ಲೆ ಯೀತನ್ನು ಮಸೂತಿಯಲ್ಲು ಹಂದಿಯನ್ನು ಕೊಯಿಸಿ, ಅಂಕಣಕೆ ವಂದು ವಂದು ಕಲ್ಲು ಕೀಳಿಸಿ, ಅಲ್ಲಿ ಯಿದ್ದ ರಣದುಲ್ಲಾಖಾನ ಕಡೆ ಫರೀದಖಾನ ಪಠಾಣ ಫಖೀರರು ಮೂಸಲಮಾನರು ಯಾವತ್ತರ ಬಾಯಿವಳಗ ಹಂದಿ ಮಾವಸವನ್ನು ತಿನ್ನಿಸಿ, ಆ ಅಂಕಣದ ಕಂಬಿಗಳಿಗೆ ವಂದು ವಂದು ರಕತದ ಚಟ್ಟು ಬಿಡಿಶಿ, ಯೀ ಪ್ರಕಾರ ಮಾಡುವದೊರಳಗೆ ಯಿದರ ಕಾಮಗಾರಿಯನ್ನು ಅರ್ಧಕೆ ನಿಲ್ಲಿಸಿ, ತಾನು ಬಸವಾಪಟ್ಟಣದಲ್ಲು ರಾಜ್ಯವನಾಳಿಕೊಂಡು ಇದ್ದರು. ಯೀ ಚಿಕ್ಕ ಸರ್ಜಾ ಕೆಂಗೆಹನುಮಪ್ಪನಾಯಕನೆಂದು ಹೆಸರು ಉಂಟು. ಶಕ ೧೫೭೮ನೆಯ ದುರ್ಮುಖಿ ಲಾಗಾಯಿತು ಶಕ ೧೫೮೪ನೇ ಶುಭಕೃತ ಸಂ. ವರಿಗೆ ವರುಷ ೬ ಆಳಿದನು.

ಯೀ ಪ್ರಕಾರ ಸರ್ಜಾಕೆಂಗೆಹನುಮಪ್ಪನಾಯಕರು ಯಿರುತ್ತ ಯಿದ್ದಲ್ಲಿ, ಹನುಮಪ್ಪ ಮಾಲಿಗರ[>ನಾಯಕರ] ಕಡೆ ಸರ್ಜಾಖಾನರು ಸಯ್ಯದ ಕಡೆಯಿಂದ ಬಂದು, ಯೀ ಹನುಮಪ್ಪನಾಯಕಗೆ ಬಲವಿಲ್ಲದೆ ಯಿದ್ದದರಿಂದ ಬಸವಾಪಟ್ಟಣಕ್ಕೆ ಠಾಣ್ಯ ಶಕ ೧೫೮೫ಕೆ ಶೋಭನಕೃತ

ಸಂ। ರದಲ್ಲು ಹಾಕಿಕೊಂಡು, ಯೀ ಶೋಭಕೃತು ಲಾಗಾಯಿತು ಶಕ ೧೫೫೩ನೆಯ ವಿರೋಧಿಕೃತ ಸಂವತ್ಸರದ ವರಿಗೆ ವರುಷ ೯ ಆಳಿದರು.

ಯೀ ಸರ್ಜಾಕೆಂಗೆಹನುಮಪ್ಪನಾಯಕರು ತರಿಕೆರೆ ಪ್ರಾಂತ್ಯಕ್ಕೆ ಹೊರಟುಹೋದರು. ಮಸೂತಿ ಕಾಮಗಾರಿಯು ಯೀ ಸರ್ಜಾಹನುಮಪ್ಪನಾಯಕರು ಮಸೂತಿಯಲ್ಲಿ ಹಂದಿ ಕೊಯಿಸಿ ಅನಾಹುತಾ ಮಾಡಿದ್ದರಿಂದ, ಯಿದು ಮುಡದಾರು ಆಯಿತು, ಕೆಲ್ಸಕೆ ಬಾರದುಯೆಂದು ಕಾಮಗಾರಿಯನ್ನು ಅರ್ಧಾಕೆ ನಿಲ್ಲಿಸಿದರು. ಯೀ ಸರ್ಜಾಖಾನರು ನಾಡಿಗ ನರಸಣ್ಣಗೆ ಪೂರ್ವದಲ್ಲಿ ನಡಯುತ್ತಿದ್ದ ಯಿನಾಮತಿಗಳಿಗೆ ಸನ್ನು ೧೦೭೨ಯಲ್ಲು ಬರಶಿಕೊಟ್ಟ ಪರವಾನೆ ೧.

ಯೀ ಸರ್ಜಾಖಾನರ ಬಗೆ ಮಗ[>ಹ]ಮ್ಮದಸಾದಕ ಬೇಗರು ಶಕ ೧೫೫೩ನೇ ವಿರೋಧಿಕೃತ ಲಾಗಾಯಿತು ಶಕ ೧೫೫೮ನೆಯ ನಳ ಸಂ।ರದ ವರಿಗೆ ವರುಷ ೫ ಸಂತೆಬೆನ್ನೂರು ಠಾಣ್ಯದಲ್ಲಿ ಯಿದ್ದನು.

ಯೀ ಸರ್ಜಾಖಾನರ ಬಗೆ ಕಾಸೀಮಖಾನನು ಶಕ ೧೫೫೮ನೆ ನಳ ಸಂವತ್ಸರ ಲಾಗಾಯಿತು ಶಕ ೧೬೦೩ನೇ ದುರ್ಮುಖಿ ಸಂವತ್ಸರದ ವರಿಗೆ ವರುಷ ೫ ಸಂತೆಬೆನ್ನೂರು ಠಾಣ್ಯದಲ್ಲಿ ಯಿದ್ದನು.

ಚಿತ್ರಕಲ್ಲುದುರ್ಗದ ಭರಮಣ್ಣನಾಯಕನು ಯೀ ಸರ್ಜಾಖಾನರ ಬಗೆ ಕಾಶೀಮಖಾನನು ಸಂತೆಬೆನ್ನೂರ ಠಾಣ್ಯದಲ್ಲಿ ಯಿರುತ್ತಾ ಯಿದ್ದಲ್ಲಿ ಯೀ ಭರಮಣ್ಣನಾಯಕನು ಸಂತೆಬೆನ್ನೂರಿಗೆ ಮುತ್ತಿಗೆಯನ್ನು ಹಾಕಿ, ಕೋಟೆಯನ್ನು ಠಾಣ್ಯವನ್ನು ಶಕ ೧೬೦೪ನೇ ದುಂದುಭಿ ಸಂ।ದಲ್ಲಿ ಹಾಕಿಕೊಂಡು . . . . ದುಂದುಭಿ ಸಂವತ್ಸರ ಲಾಗಾಯಿತು ಶಕ ೧೬೩೮ನೆಯ ದುರ್ಮುಖಿ ಸಂ।ವರಿಗೆ ವರುಷ ೩೫ಕೆ ಸಂತೆಬೆನ್ನೂರ ಶೀಮೆಯನ್ನು ಚಿತ್ರದುರ್ಗ ವಳ್ಗೆ ಕೂಡ್ಸಿಕೊಂಡು ಆಳಿದನು.

ಯೀ ಸಂತೆಬೆನ್ನೂರ ಸೀಮೆಯ ವಳಗಣ ದೇವರಹಳಿ ಮಾಗಣಿಯು[>ಯ] ಬಸವಾಪಟ್ಟಣವನ್ನು ಮೊಗಲರು ಠಾಣ್ಯಹಾಕಿಕೊಂಡು ಯೀ ಸರ್ಜಾ ಕೆಂಗೆಹನುಮಪ್ಪನಾಯಕರು ತರಿಕೆರೆ ಸೀಮೆಗೆ ಹೋದದರಿಂದ ಬಸವಾಪಟ್ಟಣಕೆ ಸೇರಿತು.

ಯೀ ಸಂತೆಬೆನ್ನೂರ ಶೀಮೆ ನಾಡಿಗ ನರಸಣ್ಣಗೆ ಶುಕ್ಲ ಸಂ।ರದಲ್ಲು ಪ್ರಾಕು ನಡೆಯುತ್ತಿದ್ದ ಯಿನಾಮುಗಳನ್ನು ಸರ್ವಮಾನ್ಯವಾಗಿ ನಡದು ಬರುವಂತೆ ಬರಶಿಕೊಟ್ಟ ನಿರೂಪ ೧.

ಬಿದರೂರ ಸೋಮಶೇಖರನಾಯಕರು ಸರ್ವಾಧಿಕಾರದ ನಿರ್ವಾಣೈಯ್ಯನವರ ಅಣ್ಣ ಗುರಪ್ಪನವರ ಸಂಗಡ ದಂಡು ಕಳುಹಿಸಿ, ಸಂತೆಬೆನ್ನೂರ ಠಾಣ್ಯ ಶಕ ೧೬೫೯ನೆಯ ಹೇವಿಳಂಬಿ ಸಂವತ್ಸರದಲ್ಲು ಹಾಕಿ, ತಮ್ಮ ಗುರುಪ್ಪನವರು ಅಲ್ಲಿಯೇ ಶಿವಲೋಕ ಹೊಂದಿದರಿಂದ ಯೀ ವರ್ತಮಾನವನ್ನು ಅರಸು ಕೇಳಿ, ಯೀ ಸಂತೆಬೆನ್ನೂರ ಸ್ಥಳದಲ್ಲೆ ಕಲ್ಲುಮಂಟಪವನ್ನು ಕಟ್ಟಿಶಿ, ಯೀ ಮಟಕ್ಕೆ ನಾಲ್ವತು ವರಹಾದ ಭೂಮಿಗೆ ಅಪ್ಪಣೆ ಕೊಟ್ಟು, ಯೀ ಮಟದಲ್ಲಿ ಪಕ್ವಾನ್ನ ಧರ್ಮಕೆ

೧. ಚನ್ನಗಿರಿ ಶೀಮೆ ಲಕ್ಷಸಾಗರಗ್ರಾಮ

೧. ಯಡತೊರೆಎ ಶೀಮೆಯಲ್ಲಿ ಪದ್ಮನಹಳ್ಳಿಯಂಬ ಗ್ರಾಮ

ಯೀ ಪ್ರಕಾರ ಗ್ರಾಮಗಳ ಕೊಟ್ಟು, ಯೀ ಹೇವಿಳಂಬಿ ಲಾಗಾಯತು ಶಕ ೧೬೮೪ನೆಯ ಚಿತ್ರಭಾನು ಸಂ|ರ ಪರಿಯಂತರ ಆಳಿದರು.

೧ ಶಕ ೧೬೬೨ನೆಯ ರವುದ್ರಿ ಸಂ|ರದಲ್ಲು ಚಿತ್ರದುರ್ಗದ ಹಿರೆಮದಕರಿನಾಯಕನು ದಂಡು ತೆಗೆದುಕೊಂಡು ಸಂತೆಬೆನ್ನೂರಿಗೆ ಬಂದು ಮುತ್ತಿಗೆ ಹಾಕಿದಲ್ಲಿ, ಜಯಪ್ರದವಾಗದರಿಂದ ಫಿರಂಗಿಯನ್ನು ಬಿಟ್ಟು ಪುನಹಾ ದುರ್ಗಕೆ ಹೋದನು. ಅಲ್ಲಿ ಸಂತೆಬೆನ್ನೂರು ತನಗೆ ವಶವಾಗಬೇಕೆಂಬ ಬಗ್ಗೆ 'ಸಂತೆಬೆನ್ನೂರ ಪರಾಕ್ಕು'ಯಂಬ ಗ್ಯಾಪಕದ ಬಗ್ಗೆ ಹೊಗಳಿಸಿಕೊಳ್ಳುತ್ತಾ ಯಿದ್ದನು.

೧ ಹಿರೆಮದಕರಿನಾಯಕನ ಮಗ ಕಸ್ತೂರಿರಂಗಪ್ಪನಾಯಕನು ಶಕ ೧೬೭೧ನೆಯ ಶುಕ್ಲಸಂವತ್ಸರದಲ್ಲಿ

೧ ಕಸ್ತೂರಿ ರಂಗಪ್ಪನಾಯಕನ ದಂಡು ಸಾ ೬

೧ ಮೊಗಲರ ಕಡೆ ಹಿಲಾಲಿ ಮೋತಿಖಾನರ ದಂಡು ಲಕ್ಷ ಸುಮಾರ್ರು

೧ ಆರೇರ ಕಡೆಯಿಂದ ಗುತ್ತಿ ಮೂ[+ರಾರ್ರ]ರಾಯನ ದಂಡು ಸಾ ೫

ಯೀ ಪ್ರಕಾರ ಯಿನ್ನು ಕೆಲವು ದಂಡು ಕೂಡಿಶಿಕೊಂಡು ಸಂತೆಬೆನ್ನೂರಿಗೆ ಯರಡು ತಿಂಗಳು ಮೊಹರ್ಜೆ ಹಾಕಿ, ಯುದ್ಧಮಾಡಿದಾಗ್ಯೂ ಕೋಟೆ ಬಾರದೆ ಯಿದ್ದರಿಂದ ಬಿದರೂರಿಂದ ಅರಸುಗಳು ಹಿಲಾಲಿ ಮೋತಿಖಾನ ಮೂರಾರ್ರರಾಯಗೆ ಸಾಹಾ ಚಲುತಾಯಿ ಮೊಕರರ್ರು ಮಾಡಿಕೊಂಡು, "ಬಿದರೂರವರಿಗೆ ಮಾಯಕೊಂಡ ಕೆಲ್ಸವಿಲ್ಲಾ, ದುರ್ಗದವರಿಗೆ ಸಂತೆಬೆನ್ನೂರ ಕೆಲ್ಸವಿಲ್ಲಾ" ಯಂಬುದಾಗಿ ತ್ತಾಹಬಂದಿ ಮಾಡ್ಸಿ ಬಿಟ್ಟು, ತಮ್ಮ ದಂಡು ತೆಗದುಕೊಂಡು ಪುನಹ ಸ್ತಳಕೆ ಹೋದರು. ವರುಷ ೪೬.

ನವಾಬ ಹೈದರಲ್ಲಿಖಾನಬಾಹದರವರು ಚಿತ್ರದುರ್ಗದ ರಾಜ ಮದಕೆರಿನಾಯಕರು ಸಹಾ, ಪೂರ್ವದಲ್ಲಿ ತಮಗೆ ಬಂದ ಕಡೆಯಿಂದಾ ಯೀಗ ನವಾಬರು ಹೈದರಲಿಖಾನರವರ ಕಡೆಯಿಂದಾ ಸಂತೆಬೆನ್ನೂರಿಗೆ ಠಾಣ್ಯ ಹಾಕಿಕೊಂಡು, ಉಭಯತರು ಕೂಡಿಕೊಂಡು, ಬಿದರೂರಿಗೆ ಚಿತ್ರಭಾನು ಸಂ||ದಲ್ಲು ಠಾಣ್ಯವನ್ನು ಹಾಕಿ, ಬಿದರೂರ ಎಂಬುದಕೆ ನಗರಯೆಂಬ ಹೆಸರು ಯಿಟ್ಟು, ಪುನಹಾ ಯೀ ರಾಜಾ ಮೆದಕರಿನಾಯಕರಿಗೆ. ಯೀ ರಾಜಾ ಮೆದಕೆರಿನಾಯಕರ ಠಾಣ್ಯ ಸಂತೆಬೆನ್ನೂರಿಗೆ ಶಕ ೧೬೮೫ನೆಯ ಸ್ವಭಾನು ಸಂ|ದಲ್ಲಿ ಯೀ ಆರಭ್ಯಾ ಶಕ ೧೬೯೯ನೆಯ ಹೇವಿಳಂಬಿ ಸಂ|ವರೆಗೆ ವರುಷ ೧೫ಕೆ ಠಾಣ್ಯ.

. . . .ಚಿತ್ತು ಸಂವತ್ಸರದಲ್ಲು ।ನಾ। ಗುರುರಾಯರಿಗೆ ರಾಜಾಮೆದಕೆರಿನಾಯಕರು, ಅರಸುಗಳು ಮೃಖೋ . . . .ದ ಹೊದಿಕೆ ಆತನಿರಿ[>ಅಪ್ಪಾಗಿರಿ] ಕುದುರೆ ಸಹಾ ಕೊಟ್ಟು, ಪೂರ್ವಪ್ರಕಾರ ನಡೆದು ಬಾಹಂತ ಸ್ವಾಸ್ತಿ ಬಗ್ಯೆ ಆತನಿಗಿ[>ಅಪ್ಪಾಗಿರಿ] ಬಗ್ಗೆ ಕುಳುನೂರಲ್ಲು ಹೊಲಿಕೆ ಸಹಾ ನಿರೂಪವ ಬರಶಿಕೊಟ್ಟುದುರು ಪಟ್ಟ ೧.

ತಿರಿಗಿ ಶಕ ೧೭೦೦ನೆಯ ವಿಳಂಬಿ ಸಂ|ರದಲ್ಲು ನವಾಬಿ[>ಬ] ಬಾಹದರವರು ಸಂತೆಬೆನ್ನೂರು ಠಾಣ್ಯಹಾಕಿಕೊಂಡು, ಯೀ ಆರಭ್ಯಾ ಶಕ ೧೭೧೨ನೆಯ ಸಾಧಾರಣ ಸಂ|ವರಿಗೆ ವರುಷ ೧೨ ಪರಿಯಂತ್ರ ಟೀಪ್ಪುಸುಲ್ಲತಾನ ಪಾದಶಾಹಾರವರ ಠಾಣ್ಯ.

ಪ್ರಾಕು ನವಾಬ ಬಾಹದರವರು ಯೀ ಚಿತ್ರದುರ್ಗ ಕೈವಶಮಾಡಿಕೊಳ್ಳುವಾಗ್ಗೆ, ಯೀ ದುರ್ಗದ ಮೇಲೆ ಕಳಿಬಿಟ್ಟಿಯಲ್ಲು ನಾಡಿಗ ಲಕ್ಷ್ಮಣನು ತಂದೆ ಮಕ್ಕಳು ಸಹಾ ಟೀಪು ಸುಲತಾನರವರಿಗೆ

ಬಹಳ ಮೆಹನತು ಮಾಡಿದರಿಂದಾ ಧಣಿಗಳು ತಂದೆ ಮಕ್ಕಳಿಗೆ ಉಡುಗೊರೆಯ ಕೊಟ್ಟು, ಸ್ಥಳಕೆ ಪರವಾನೆ ಬರಕೊಟ್ಟು ಅಪ್ಪಣೆ ಕೊಟ್ಟು, ಯೀ ಲಕ್ಷ್ಮಣನ್ನು ಸಂತೆಬೆನ್ನೂರ ಕೋಟೆಯಲ್ಲು ಯಿದ್ದಂಥಾ ಚಿಕೆರಿ[>ಬತೇರಿ] ಮದ್ದು ಗುಂಡು ಕೋಟೆ ಪಾಗಾರ್ರು ಮುಂತಾಗಿ ಚಿತ್ರಕಲ್ಲವರು ವೈದರು.

"ಯೀಗ ಕೋಟೆಯಲ್ಲು ತೋಪುಗಳು ಯಿಲ್ಲಾ"ಯಂದು ಬಹಳವಾಗಿ ಅರಿಕೆ ಮಾಡಿಕೊಂಡದರಿಂದ, ಧಣಿಗಳು ಚಿತ್ರ[>ತ್ತ]ಕೆ ತಂದು, ಬಳಿದೊಡ್ಡು[>ಬಿಳಿಚೋಡು] ಕಿಲ್ಲೆದಾರಿಗೆ ಪರವಾನೆ ಬರಶಿಕೊಟ್ಟು, ಬಿಳೀಚೋಡಿಂದ ಮೂರು ಬೀದಿ[>ಡಿ]ನ ತೋಪುಗಳ ತಂದು ಸಂತೆಬೆನ್ನೂರ್ರು ಕೋಟಿ ಬತ್ತೇರಿಗೆ ಹಚ್ಚಿಯಿದ್ದನು.

ಶಾಲಿವಾಹನ ಶಕ ೧೭೧೩ನೆಯ ವಿರೋಧಿಕೃತ ಸಂ।ರಲ್ಲು ಮಹಾರಾಷ್ಟ್ರದ ಶ್ರೀಮಂತರ ಕಡೆ ಪರಶುರಾಮಬಾಉನವರು ಠಾಣ್ಯ ವರುಷ ೧.

ತ್ತಿರಿಗಿ ಟೀಪುಸುಲತಾನ ಬಾದಶಾಹಾರವರು ಶಕ ೧೭೧೪ನೇ ಪರಿಧಾವಿ ಸಂ, ರಲ್ಲು ಠಾಣ್ಯವನ್ನು ಹಾಕಿಕೊಂಡು, ಯೀ ಪರಿಧಾವಿ ಸಂ॥ ಲಾಗಾಯಿತು ಸಕ ೧೭೨೦ನೇ ಕಾಳಯುಕ್ತಿ ಸಂ. ವರೆಗೆ ವರುಷ ೭ ಠಾಣ್ಯ ಆಳಿದರು.

ದೇವರಹಳ್ಳಿ ಮಾಗಣಿಯು ಚಿತ್ರದುರ್ಗದ ಭರಮಣ್ಣನಾಯಕನ ದಿವ್ಸದಲ್ಲು ಬಸವಪಟ್ಟಣಕೆ ಮೊಗಲರ ಠಾಣ್ಯಕೆ ಸೇರಿಯಿದದು, ಆನಂದ ಸಂ। ರದಲ್ಲು ಕೋಸುಬಂದಿ ಪ್ರಕಾರಕೆ ಸಂತೆಬೆನ್ನೂರಿಗೆ

ಯೀ ಶಾಲಿವಾಹನ ಶಕ ೧೭೨೧ನೆಯ ಸಿದ್ಧಾರ್ತಿ ಸಂ॥ದ ಚೈತ್ರ ಬ. ೩೦ ಶನಿವಾರ ಶ್ರೀರಂಗಪಟ್ಟಣಕೆ ಯಿಂಗ್ರೇಜಿ ಬಾಹದರರ ಠಾಣ್ಯ.

೧. ವೈಶಾಖ ಲಾಗಾಯಿತು ಆಷಾಢ ಶುದ್ಧ ೧೩ ವರಿಗೆ ೬೨ ದಿನ ೧೩ನೆ ವರಿಗೆ ತರಿಕೆರಿ ಅರಸು ಸರ್ಜಾ ಕ್ರಿಷ್ಣಪ್ಪನಾಯಕರು ಠಾಣ್ಯ, ಅರಸುಗಳ ಅಳಿಯ ರಘುನಾಥನಾಯಕರು ಯಿದ್ದರು.

೧. ಯೀ ಆಷಾಢ ಶುದ್ಧ ೧೩ಲ್ಲು ಯಿಂಗ್ರೇಜಿ ಬಾಹದರ ಡಾಲಿ . . . . ವಪ ಸಾಹೇಬರವರು ಚನ್ನಗಿರಿಯನ್ನು ಠಾಣ್ಯವನ್ನು ಹಾಕಿಕೊಂಡು, ಯಿ ಶುದ್ಧ ೧೪ ದಿವ್ಸ ಸಂತೆಬೆನ್ನೂರಿಗೆ ಠಾಣ್ಯಹಾಕಿ, ಚಿತ್ರದುರ್ಗದ ಮೊಳಕಾಲ್ಮುರುವಿನ ಭರಮಣ್ಣನಾಯಕನ ಕಡೆಗೆ ಠಾಣ್ಯಕೆ ಯಿಟ್ಟು, ಪುನಹಾ ದುರ್ಗಕ್ಕೆ ಹೋದರು. ಯೀ ಶು. ಚತುರ್ದಶಿ ಲಾಗಾಯಿತು ಶ್ರಾವಣ ಶು ೪ವರಿಗೆ ದಿನ ೨೦ ವರಿಗೆ ಠಾಣ್ಯಯಿತ್ತು.

೧. ತ್ತಿರಿಗಿ ಯೀರೂಳಿಲ್ಲು[>ಯೀ ಊರಲ್ಲು] ಶ್ರೀಮಂತ ಪೂರ್ಣಪ್ಪನವರ ಕಡೆಯಿಂದ . . . ದೆ ಯಿಂದ ಶಂಕರರಾಯರಿಗೆ ಮಾಮಲಿತ್ತು ಆಗಿ, ಅವರ . . . . ಸಂತೆಬೆನ್ನೂರಿಗೆ ಬಂದವಿ[>ರು], ಶ್ರಾವಣ ಶು ೬ಲ್ಲು ಶಂಕ[+ರ]ರಾಯರ ಕಡೆಯಿಂದ ಹರಿಹರದ ಲಿಂಗೋಹಂ[>ಪಂ]ತರು ಬಂದರು.

೩

❖❖

೧೦೪

ಕಮಲಾಪುರದ ಕೈಫಿಯತ್ತು

ಮೆಕೆಂಝಿ ಸಂಪುಟ : ೧೪೬

ಯೀ ಕಮಲಾಪುರವೆಂಬುವ ಹೆಸರು ಬಂದ ಕಾರಣವೇನೆಂದರೆ: ನೈರುತ್ಯದಿಕ್ಕಿನಲ್ಲಿ ಘಟ್ಟದ ಕೆಳಗೆ ಹೊನ್ನಾವರದಲ್ಲಿ ಯಿರ್‍ರುವ ಮಾಧವಭಟ್ಟರು ಯಂಬ ಬ್ರಾಹ್ಮಣನು ದಾರಿದ್ರ್ಯಪೀಡಿತದಿಂದಾ ಬಹಾಳ ಶ್ರಮಪಡುತ್ತ ಯಿರಲಗಿ, ಆತನ ಪತ್ನಿ "ನೀವು ಸಕಲವಿದ್ಯಂಗಳ ಬಲ್ಲಿರಿ, ನಾವು ದಾರಿದ್ರ ಅನುಭವಿಸುವದಕೆ ಕಾರಣವೇನೆಂ"ದು ಕೇಳಲಾಗಿ, ಆಗ ಮಾಧವಭಟ್ಟರು "ಯಿದಕೆ ವೊಂದು ದೇವಿ ಕುರಿತು ಪ್ರಾರ್ಥನೆ ಮಾಡದ ಪರಿಯಂತ್ರ ನಮ್ಮ ದಾರಿದ್ರ್ಯ ವಿಚ್ಛಿನ್ನವಾಗೋದಿಲ್ಲ"ವೆಂದು ತಿಳಿದು ತನ್ನ ಪತ್ನಿ ಮುಂದೆ ಹೇಳಲಾಗಿ, ಆಕಿ "ದಾವ ದೇವತಾ ಅದೋ ಆದೇವತೆಯನ್ನು ಕುರಿತು ಆ ಜಪವನ್ನು ಸಾಂಗಮಾಡಿ ದರಿದ್ರ ವಿಚ್ಛಿನ್ನವಾಗುವಂತೆ ಮಾಡುವದು"ಯೆಂದು ಹೇಳಲಾಗಿ, "ನಾನು ಹೋದ ಬಳಿಕ ನೀನು ಹ್ಯಾಗೆ ಸಂವಸಾರ ತೀರಿಸಿಕೊಂಡು ಹೋದಿ"ಯೆಂದು ಹೇಳಲಾಗಿ, "ನೀವು ಯಿದ್ದು ಕಷ್ಟ ಪಡುವದಕ್ಕಿಂತ ಹೋದಮೇಲೆ ಕಷ್ಟಬಡುವುದು ಲೇಸು"ಯಂದು ಯನಲಾಗಿ, ಆ ಮಾತಿಗೆ ವಡಂಬಟ್ಟು ಶ್ರೀಶೈಲಕ್ಕೆ ಬಂದು, ಅಲ್ಲಿ ಅಭಿಮಾನದೇವತೆ ಭ್ರಮರಾಂಬಿಕೆಯಂಬೊ ಶಕ್ತಿಗುಡಿಯಲ್ಲಿ ವೊಂದು ಸಂ೧ರ ಅನುಷ್ಠಾನವನ್ನು ಮಾಡುತ್ತ ಯಿರಲಾಗಿ, ಆ ದೇವತೆಯು ಪ್ರಸನ್ನವಾಗಿ ಹೇಳಿದ್ದು: "ನಿನಗೆ ಈ ಜನ್ಮದಲ್ಲಿ ಧನಲಭ್ಯವಿಲ್ಲ"ಯೆಂದು ಹೇಳಲಾಗಿ, ನಾನು ಯಿಷ್ಟು ತಪಸ್ಸು ಮಾಡಿದ್ದು ವ್ಯರ್ಥವಾಯಿತುಯೆಂದು, ಯೀ ಮಹಮಂತ್ರಿ[>ತ್ರ] ಗಳು ಅಬದ್ಧವೆಂದು, ತಿಳಿದು [೧]ದೇವತ್ರಿ[>ತೆ] ಮ್ಯಾಲೆ ಕೋಪವನ್ನು ಮಾಡಿ ಬೆತ್ರಿ[>ತ್ತ] ವಟ್ಟಿ[೧] ಆ ಮಂತ್ರಗಳನ್ನು ದಹ್ಸಿಬಿಡಲಾಗಿ, ಆಮಂತ್ರ ಅಭಿಮಾನದೇವತಿ ಮರುರ್ಗಿ ಶೀರೆಯನ್ನು ಸ್ವಲ್ಪ ದಹಿಸಲಾಗಿ, ಆ ದುರ್ಗಿ ಬಂದು "ನೀನು ಯೇನು ಶ್ರಮಬಟ್ಟ ಕಾಲಕ್ಕೂ ಯೀ ಜಲ್ಮದಲ್ಲಿ ಯಿಲ್ಲ"ಯಂದು ಹೇಳಲಾಗಿ, ಅಲ್ಲಿಂದ ವಿ[>ಬಿ]ಜಯಮಾಡಿ ಪಂಪಾಸರೋವರಕ್ಕೆ ಬಂದು ಆ ಸರೋವರದ ಪಶ್ಚಿಮಭಾಗದಲ್ಲಿ ಇರುವ ಕಮಲಾದೇವಿಯಂಬುವ ದುರ್ಗಿದೇವಸ್ಥಾನ ಕಂಡು, ಯೀ ಸರೋವರವನ್ನು ನೋಡಿ, ನಮ್ಮ ತಪಶ್ಚಿಗೆ ಚನ್ನಾಗಿ ಯಿದೆಯಂದು ಆ ಕಮಲಾದೇವಿ ಗುಡಿಯಲ್ಲಿ ತಮ್ಮ ತಪಸ್ಸು ಮಾಡುತ್ತ ಇರಲಾಗಿ, ಪೂರ್ವದ ಪ್ರಕಾರಕ್ಕೆ ಸ್ವಪ್ನವಂನ್ನು ಆಗಲಾಗಿ ಮನಶಿಗೆ ವ್ಯಾಕುಲದಿಂದಾ ಸನ್ನೇಶಿ ಆಶ್ರಮವನ್ನು ಧರಿಶಿದರು. ಶಕ ೧೧೮೮ನೆ ಪರಾಭವ ಸಂ೧ದಲ್ಲಿ ದೇವಿಯು ಪ್ರತ್ಯಕ್ಷವಾಗಿ "ಯೇನು ಬೇಡುತ್ತ ಯಿದ್ದಿ ಬೇಡು?"ಯೆಂದು ಕೇಳಲಾಗಿ "ನಾನು ಯೇನು ವಲ್ಲೆನು"ಯಂದು ಹೇಳಲಾಗಿ, ಹೇಳಿದ ಕಾಲಕ್ಕೆ . . . . ವೊ ಮಹತ್ವದ ಫಲ ತಪ್ಪದು" ಯೆಂದು ದ್ರವ್ಯಮೂಲಕದಿಂದ ದೇವಿಯು ಪ್ರಸನ್ನಳಾದಳು. ಆ ದ್ರವ್ಯವನ್ನು ಸಾಧಿಸಿಕೊಂಡು ಪಂಪಾಕ್ಷೇತ್ರಕ್ಕೆ ಬಂದು, ಹೇಮಕೂಟದ ಮೇಲೆ ಪ್ರಸನ್ನವಿರೂಪಾಕ್ಷದೇವರ ಗುಡಿಯಲ್ಲಿ ವಾಸ ಮಾಡಿ, ಅಲ್ಲಿ ಕೆಲವು ಕಾಲ ವಿದ್ಯಾರಣ್ಯಭಾಷ್ಯವನ್ನು

೧–೧ ದೇವ ನೆಲಕೆ ವಶವನ್ನು ಮಾಡಿಕ್ಕೊಂಡು ಆ ಶಿತಿವೂರ್ಹಿಮೂ), ಮೇಲಿನ ಪಾಠ 'ತಾಲೂಕು ಕಂಪಲಿ ಕೈಫಿಯತ್ತು'ದಿಂದ ಸ್ವೀಕೃತ (ಸಂ)

ನಿರ್ಮಾಣಮಾಡಿ, ಅದು ಸುಬದ್ಧ ಇಬದ್ಧ ತಿಳಿಬೇಕುಯಂದು ಕಾಶಿಯಾತ್ರೆಗೆ ಹೋಗಬೇಕೆಂದು ಪ್ರಯಾಣಮಾಡಿದರು.

ಕಾಶಿಗೆ ಹೋಗೋ ಮಾರ್ಗದಲ್ಲಿ "ವೇದವ್ಯಾಸರನ ಕಾಣುವದು ಹೇಗೆ ಆದೀತೆಂ"ದು ಮನಸ್ಸಿನಲ್ಲಿ ಚಿಂತೆಮಾಡುತ್ತ ಗೋಂಡಾರಣ್ಯಮಾರ್ಗವನ್ನು ಕುರಿತು ಹೋಗುತ್ತ ಯಿರಲಾಗಿ, ವೊಬ್ಬ ಪರುಷನು ವೊಬ್ಬರಿಗೂ ಕಾಣಿಸಿಕೊಳ್ಳದ ಹಾಗೆ ಆ ಮಾರ್ಗದಲ್ಲಿ ಬಂದವರಿಗಳಿಗೆಲ್ಲ 'ಆ ಕಾಮಾವೈಕೂ ನನ್ನತಾ'ಯೆಂದು ಪ್ರಶ್ನೆಯನ್ನು ಮಾಡುತ್ತ ಯಿರಲಾಗಿ, ದಾರೂ ಆ ಪ್ರಶ್ನೆಗೆ ಪ್ರತಿ ಉತ್ರ ಕೊಡದ ಯಿದ್ದ ಕಾರಣ, ಬಹು ಮಂದಿ ಆ ಶಬ್ದವನ್ನು ಕೇಳಿ, ಯೀತನುಯಿಂದ[>ಯೀತನಿಂದ] ಲಯವಾಗುತ್ತಾ ಯಿದ್ದರು. "ಯೀ ಪ್ರಶ್ನೆಯನ್ನು ಯೇನು ಕಾರಣ ಕೇಳುತ್ತ ಯಿದ್ದಿ?"ಯೆಂದರೆ ಪೂರ್ವದಲ್ಲಿ ತ್ರೆತಾಯುಗ ರಾಮಾವತಾರದಲ್ಲಿ ಕಾಳ[>ತುಳಾ]ಪುರುಷದಾನ ಹಿಡದ ಕಾರಣ ಯೀ ಶ್ರಿಂಗೇರಿಭಟ್ಟಗೆ ಪಿಶ್ಯಾಚಿ ಜಲ್ಮವು ಪ್ರಾಪ್ತಿ ಆಗಲಾಗಿ, ಆ ಶೃಂಗೇರಿಭಟ್ಟನು "ನನಗೆ ಯೀ ದೋಷವನ್ನು ಯೆಂದಿಗೆ ನಿವೃರ್ತಿ ಆದೀತು?"ಯೆಂದು ಶ್ರೀರಾಮರ ಕೇಳಲಗಿ ಆ ಶೃಂಗೇರಿಭಟ್ಟಗೆ "ಕಲಿಯುಗದಲ್ಲಿ ಕಾಶಿಗೆ ಹೋಗೊ ಮಾರ್ಗದಲ್ಲಿ ಸದರಿ ಅರಣ್ಯದಲ್ಲಿ ಈ ನಾಲ್ಕು ಅಕ್ಷರವನ್ನು ಕೇಳುತ್ತ ಯಿರು"ಯಂದು ಆಜ್ಞಾ ಕೊಡಲಾಗಿ, ಯಿದಕ್ಕೆ ದಾರ್‍ರು ನಿನಗೆ ಪ್ರತ್ಯುತ್ತರ ಕೊಡುತಾರೆ ಅವರಿಂದಲೇ ಯೀ ದೋಷ ನಿವೃತ್ತಿಯಾದೀತು"ಯೆಂದು ಹೇಳಲಾಗಿ ಅದೇ ಮರ್ಯಾದಿಯಿಂದಲೇ ಕೇಳುತ್ತ ಯಿದ್ದನು. ಮಾರ್ಗ ಹಿಡಿದು ವಿದ್ಯಾರಣ್ಯರು ಹೋಗುತ್ತ ಯಿರಲಾಗಿ ಯಥಾಪ್ರಕಾರಕೆ ಸದರೀ ನಾಲ್ಕು ಅಕ್ಷರವನ್ನು ವಿದ್ಯಾರಣ್ಯರನ್ನು ಕೇಳಲಾಗಿ, "ತ್ವಂ ನ ಸ್ನಾತ"ಯೆಂದು ಆಡಲಾಗಿ, ಯಿವರಿಗೆ ನಿದರ್ಶನವಾಗಿ ಕಾಣಿಶಿಕೊಂಡು ಸಾಷ್ಟಾಂಗ ನಮಸ್ಕಾರವನ್ನು ಮಾಡಲಾಗಿ, "ನೀನು ದಾರ್‍ರು?"ಯಂದು ಆಡಲಾಗಿ ಪೂರ್ವದ ವೃತ್ತಾಂತವನ್ನು ಹೇಳಲಾಗ, "ನಾನು ವ್ಯಾಸರ ದರುಶನಾರ್ಥವಾಗಿ ವಾರಣಾಶಿಗೆ ಹೋಗುತ್ತಾ ಯಿದ್ದೇನೆ. ನನಗೆ ವ್ಯಾಸರ ದರುಶನ ಹೇಗೆ ಆದೀತು?"ಯಂದು ಕೇಳಲಾಗಿ, ಆ ಶೃಂಗೇರಿಭಟ್ಟನು ವ್ಯಾಸರು ಇರುವ ಮರ್ಯಾದಿಯನ್ನು ತಿಳಿಸಿಕೊಟ್ಟು, "ನನಗೆ ಯೇನು ಮಾರ್ಗ"ಯೆಂದು ಕೇಳಲಾಗಿ, "ನಾನು ವ್ಯಾಸರ ದರುಶನ ತೆಗೆದುಕೊಂಡು ಪುನಶ್ಚ ಬರುವಾಗ ನಿನ್ನ ತೆಗೆದುಕೊಂಡು ಹೋಗಿ ನಿನ್ನ ಮನೋಸಂಕಲ್ಪ ಮನೋಭಿಷ್ಟ ಆಗೀ ಆಹೆ ಮಾಡುವೆನು"ಯಂದು ವಚನ ಕೊಟ್ಟು ವಾರಣಾಶಿಗೆ ಹೋಗಿ ವ್ಯಾಸರ ದರುಶನ ಪಡೆದುಕೊಂಡು, ತಾವು ಮಾಡಿದಂಥಾ ಗ್ರಂಥಗಳನು ಶ್ರುತಗೊಳಿಸಿ ಸುಬದ್ಧ ಮಾಡಿಕೊಂಡು, ಯಿದೇ ಮಾರ್ಗತ್ಯೆನ ಬಾಹೋ ವ್ಯಾಳ್ಯೆದಲ್ಲಿ ಶ್ರೀಂಗೇರಿಭಟ್ಟನ್ನ ಕರದುಕೊಂಡು ಹೇಮಕೂಟಕ್ಕೆ ಬಂದು, ಹೇಮಕೂಟಕೆ ದಕ್ಷಿಣಭಾಗ ಸಾಮೀಪ್ಯದಲ್ಲಿ ಮಲ್ಲಿಕಾರ್ಜುನದೇವರ ದೇವರ ಗುಡಿ ಜೀರ್ನೋದ್ಧಾರ ಮಾಡಿ, ಅದರ ಸಮೀಪದಲ್ಲಿ ಚವುಡೇಶ್ವರಿ ದೇವರ ಗುಡಿ ಜೀರ್ನೋದ್ಧಾರ ಮಾಡಿ, ಮುದ್ದು ವೀರಭದ್ರದೇವರ ಪ್ರತಿಷ್ಟೆ ಮಾಡಿ, ಗುಡಿ ಕಟ್ಟಿಸಿ, ಆ ಗುಡಿ ವಳಗೆ ತ್ರಿಕೋಣಯಂತ್ರ ನಿರ್ಮಾಣಮಾಡಿ ಯಿದ್ದಾರೆ. ಅದೆ ಶಿಲೆಗೆ ಯೀಗ ಜನರು "ಮೂರ್‍ರು ಮೂಲ[>ಲಿ]ಕಲ್ಲು ಮೂವತ್ತಾರು ಲಿಂಗಾ"ಯೆಂದು . . . . ಬಿದ್ದು ಜನರು ಅನ್ನುತ್ತಾರೆ. ಹಾಗೆ ಅಲ್ಲಿ ಸಹಸ್ರ ಕಲ್ಲುಮಂಟಪ ಕಟ್ಟಿಶಿ ಯಿದ್ದಾರೆ.

ಯೀ ಶೃಂಗೇರಿಭಟ್ಟನ್ನ "ಮುದ್ದುವೀರಭದ್ರದೇವರ ಗುಡಿ ಮುಂದೆ ಬಳೆಲಿ ಅಶ್ವಥವೃಕ್ಷದ ವಳಗೆ ವಾಸ ಮಾಡಿಕೊಂಡು ಯಿರು"ಯೆಂದು ಹೇಳಿ ಅನ್ನದಾನವ . . . . ಲಕರಿಂದ ಆ ಬ್ರಹ್ಮರಾಕ್ಷಸ ಜಲ್ಮವು ನಿವೃತ್ತಿ ಮಾಡಿ ದೇವತ್ವವನ್ನು ಸ್ಥಾಪಿಶಿ ಯಿಟ್ಟರು.

ತದನಂತರ ಯೀ ದ್ರವ್ಯವನ್ನು ಸಾರ್ಥಕವಾಗೊ ವುಪದೇಶ್ಯ[>ಉದ್ದೇಶ]ದಿಂದಾ ವೊಂದು ಪಟ್ಟಣವ ನಿರ್ಮಾಣ ಮಾಡಬೇಕುಯಂದು ಮನಸಾ ಯೋಚಿಸಿ ಯಿರುವಾಗ್ಯೆ, ಅಭಿಮಾನದೇವತೆಯ ಹೆಸರಲಿ ವಂದು ಗ್ರಾಮವನ್ನು ರಚಿಸಿ, ಅದಕೆ ಹೆಸರು ಕಮಲಾಪುರಯಂಬೋ ನಾಮವನ್ನು ಯಿಟ್ಟು, ತದನಂತರ ವಿದ್ಯಾರಣ್ಯರನಗರಯೆಂದು ಪಟ್ಟಣನಿರ್ಮಾಣ ಮಾಡಿ, ಆ ಪಟ್ಟಣಕ್ಕೆ ಗ್ರಾಮ ಅಭಿಮಾನದೇವತೆ ಯಲ್ಲಮ್ಮ ಯಂಬೋ ದೇವತೆಯನ್ನು ಪ್ರತಿಷ್ಟೆಮಾಡಿ, ತಾವೇ ರಾಜಾಧಿಪತ್ಯವನ್ನು ಮಾಡುತ್ತ ಯಿದ್ದರು. ಶಕ ೧೨೫೮ ಧಾತು ಸಂ।ರ ವೈಶಾಖ ಶು ೭ ಆಶ್ಲೇಷಾ ನಕ್ಷತ್ರ, ತದನಂತರದಲ್ಲಿ ಯಿವರು ಪಟ್ಟಣವನ್ನು ನಿರ್ಮಾಣ ಮಾಡಿದ ಮೇಲೆ, ಯಿಪ್ಪತ್ತಾರು ವರುಷದ ಪರಿಯಂತವು ರಾಜ್ಯಭಾರ ಮಾಡಿದರು. ಯಿವರಿಗೆ ತತ್ಪೂರ್ವ ಜಂಬುಕೇಶ್ವರರಾಯನು ರಾಜ್ಯ ಮಾಡುತ್ತ ಯಿದ್ದನು. ನಮಗೆ ದೇಹ ಸ್ಥಿರವಲ್ಲಯಂದು ತಿಳಿದು ಪೂರ್ವದಲ್ಲಿ ದೇವಿಗುಡಿಯಲ್ಲಿ ತಪಸ್ಸು ಮಾಡುವ ಸಮಯದಲ್ಲಿ ವಬ್ಬ ಗೊಲ್ಲರ ಬುಕ್ಕರಾಯ ಯಂಬವನು ನಿತ್ಯ ರುತ್ರದಲ್ಲಿ ಹಾಲು ತಂದು ಕೊಟ್ಟು ಯಿವರಿಗೆ ಬಹಲ ಉಪಚಾರ ಮಾಡಿಕೊಂಡು ಯಿರಲಾಗಿ, ಯೀ ಬುಕ್ಕಗೆ ಪಟ್ಟಾಭಿಷೇಕ ಮಾಡಿ, ತಾವು ನಿರ್ಮಾಣ ಮಾಡಿದಂಥಾ ಪಟ್ಟಣಕೆ ಅಧಿಪತಿ ಮಾಡಿ, ಬುಕ್ಕಮಹಾರಾಯಯೆಂಬ ಹೆಸರು ಕೊಟ್ಟು ತಾವು ಪರಂಧಾಮಯಾತ್ರೆ ಮಾಡಿದರು, ಶಕ.

ಯೀ ಬುಕ್ಕ ಮಹಾರಾಯ ೬೦ ಅರವತ್ತು ವರುಷ ರಾಜ್ಯಭಾರ ಮಾಡಿದ. ಯೀತನ ಮಗ ಹರಿಹರರಾಯ ೧೮ ವರುಷ ಆಳಿದನು. ಯೀತನ ಮಗ ಪ್ರಹುಢದೇವಮಹಾರಾಯನು ವಂಭತ್ತು ವರುಷ ಆಳಿದನು. ಯೀತನು ಕಮಲಾಪುರದ ಪಶ್ಚಿಮಕ್ಕೆ ಕೆರೆ ಕಟ್ಟಿಸಿದನು, ಕಲಮು, ಹಾರನಹಳ್ಳಿ ಶೀಮೆ ಕುರುದಗಡೇ ಬಳಿಯ ಕಟ್ಟಿ ಕಟ್ಟಿಸಿ ನಾಲಾ ತಂದು ಯಿದ್ದಾರೆ.

ಯೀತನ ಮಗ ರಾಮ[+ಚಂದ್ರ]ದೇವ ಮಹಾರಾಯರು. ಯೀತನ ಹೆಸರು ವಿಜಯಭೂಪತಿ ೧೪ ಹದಿನಾಲ್ಕು ವರುಷ ಆಳಿದನು, ಕಲುಮು.

ಯೀತನ ಮಕ್ಕಳು ವಿರೂಪಾಕ್ಷರಾಯ ಪ್ರಹುಢರಾಯ ಉಭಯತರ್ರು ಹದಿಮೂರ್ರು ವರುಷ ಆಳಿದರು. ಶಕ ಕಲಮು, ಯೀ ದಿವಸದ ವರೆಗೆ ಶಾಲಿವಾಹನ ಶಕ ೧೩೯೮.

ಯಿತ್ತಲಾಗಿ ಅನ್ಯಕುಲದವರು ನರಸಿಂಹರಾಯ ೧೩ ಹದಿಮೂರು ವರುಷ ಆಳಿದರು. ಯಿತ್ತಲಾಗಿ ವೀರ ನರಸಿಂಹರಾಯ ೨೦ ವರುಷ ಆಳಿದರು . . . .ಶಕ, ಯಿತ್ತಲಾಗಿ ಯೀತನ ಮಕ್ಕಳು ಯಿಬ್ಬರು

೧. ಪಟ್ಟದ ಹೆಂಡತಿ ಮಗ ಅಚ್ಚುತರಾಯ

೧. ದಾಸಿಪುತ್ರರಾದಂಥಾ ಕ್ರಿಷ್ಣರಾಯನು

ಯೀ ಕೃಷ್ಣರಾಯರ್ರು ೧೬ ಹದಿನಾರು ವರುಷ ಪರಿಯಂತ್ರ ಆಳಿದರು. ಯೀ ದಿವಸದ ವರಿಗೆ ಶಾಲಿವಾಹನ ಶಕಗಳು ೧೪೪೭ ಕಲಮು ಯಿಲ್ಲಿಗೆ ಸಮಾಪ್ತಿ.

ಯಿವರ ಮನ್ನಂತರದಲ್ಲಿ ಕಟ್ಟಿಶಿದಂಥಾ ದೇವಸ್ಥಾನಗಳು ಮಹಲುಗಳು ದಿವಾಣ ವಗ್ಯೆರೆ ಕಟ್ಟಿಸಿದ ವಿವರವು:

೧ ವಿದ್ಯಾರಣ್ಯರು ಕಟ್ಟಿಸಿದಂತಾ ಪಟ್ಟದ[>ದೆ]ಲ್ಲಮ್ಮನ ಗುಡಿಗೆ ಉತ್ತರಭಾಗದಲ್ಲಿ ಯಿರುವ ದಿವಾಣವು. ಯಿದರ ವಳಗೆ ಯಿರೋ ಮಹಲುಗಳ ವಿವರವು:

೧ ಶಿಂಹಾಸನಗಳು

೧ ಮಧ್ಯದಲ್ಲಿ ಮಂಚದ ವುಪ್ಪರಿಗೆ

೧ ಯಿದರ ವುತ್ತರಕೆ ಕ . . . . ರಿ ವುಪ್ಪರಿಗೆ

೧ ಯಿದಕೆ ಪೂರ್ವದ . . . . ಹರಳಿಕಾಯಿ ವುಪ್ಪರಿಗೆ ಬಿದ್ದು ಯಿದ್ದಿತೆ.

೧ ಯಿದಕೆ ದಕ್ಷಿಣಕೆ ಕತ್ತಲ ವುಪ್ಪರಿಗೆ

೧ ಮಂಚದ ವುಪ್ಪರಿಗೇ ಪಶ್ಚಿಮ ಉತ್ತರ ಗರುಡಿ ಮನೆ, ಭೀಮನ ಗರುಡಿ.

. ೭ ಯಿದರ ವಳಗೆ ಯಿರೋರು.

೧ ಯೀ ದಿವಾಣದ ಪೂರ್ವಭಾಗಕ್ಕೆ ಆನೆ ಸಾಲು

೧ ಯಿದಕ್ಕೆ ಪಶ್ಚಿಮ ಹಿರ್‍ರೆಕಚೇರಿ ಚಾವುಡಿ

೧ ಅಚ್ಯುತರಾಯರ ದಿವಾಣಕೆ ಪೂರ್ವ ಹಳೆ ಕೋಟೆಗೆ ಉತ್ತರ ವಸಂತಪ್ಪರುಉ. ಯೀಗ ಅದಕ್ಕೆ ವೋಕಳಿಕೊಂಡ ಅಂತ ಯಿದ್ದಾರ್‍ರೆ.

೧ ಯಿದಕ್ಕೆ ಪೂರ್ವ ಶಿವಾಲಯ ಚಂದ್ರಶೇಖರಸ್ವಾಮಿ ಗುಡಿ ಅಂತಾರೆ.

೧ ಯಿದಕ್ಕೆ ಉತ್ತರ ಪಾತ್ರದವರ ಹೊಲದೊಳಗೆ ಯಿರುವ ದೇವಮ್ಮ ದೇವಸ್ಥಾನವು

೧ ಯಿದಕೆ ಪೂರ್ವ ವೊಕಳಿ ಆಡುವರು

ಯಿದರ ಶಿವಾ ಯಿನ್ನು ಹಾಳು ಮಂಟಪಗಳು, ಗುಡಿಗಳು ಹಾಳು ಬಿದ್ದು ಕಲ್ಲುಗಳು . . . . ಚ್ಚಿಕಲ್ಲಿನಲ್ಲಿ ಆದ ದೇವರ್‍ರುಗಳು . . . . ಗುಡಿಗಳು ಯಿದ್ದುವೆ ಕಲಮು.

ಯೀಚಿಗೆ ಯೀತನ ಕಡೆಯವರು ಪ್ರತಾಪರಾಯ ಮೂರು ವರುಷ ಆಳಿದರು. ಯಿತ್ತಲಾಗಿ ನರಸಿಂಹದೇವರಾಯನ ಮಗ ಅಚ್ಯುತರಾಯರ್‍ರು ಮೂರು ವರುಷ ಆಳಿದರು. ಯಿವರ ಮನ್ಮಂತರಕೆ ಕಟ್ಟಿಶಿದಂತಾ ಗುಡಿಗೆ . . . . ಯ ದಿವಾಣಗಳ ವಿವರವು:

ಯಿವರ ದಿವಾಣಗಳು:

೧ ವಿರೂಪಾಕ್ಷ ದಿನ್ನೆ ಹೊಲದೊಳಗೆ ಯಿರೊ ದಿವಾಣರ . . . . ೧ಕೆ ಯಿದ ವಳಗೆ . . . .

೧ ಯಿದಕೆ ಉತ್ತರ ಸದರಿ ಹೊಲದ ವಳಗೆ ದಿವಾನಖಾನೆ

೧ ಯಿದಕ್ಕೆ ಪಶ್ಚಿಮ ಸುತ್ತಿನ ವುಪ್ಪರಿಗೆ ಸದರಿ ಹೊಲದ ವಳಗೆ ಯಿರೋದು

೧ ಯಿದಕ್ಕೆ ವುತ್ತರ ಪಟ್ಟಿಗೆ ದಕ್ಷಿಣ ಗಾಳಿ ಮಹಲು

೧ ಯೀ ಹೊಲದೊಳಗೆ ಹಂಪೆ ರಸ್ತೇಕ್ಕೆ ಪೂರ್ವ ನೆಲಮಾಳಿಗೆ. ಯಿದರ ವಳಗೆ ಶೆರೊ[>ದೊ]ಭಾವಿ

೧ ದೊಡ್ಡ ಕಲ್ಲುಕಂಭವು ಯಿದ್ದಾವೆ.

೨[>೬]

ಯೀ ದಿವಾಣಕ್ಕೆ ಪೂರ್ವ . . . . ರಿ ಸದರ್‍ರು ಯಿರುವ ಹವೇಲಿ ಕೋಟೆ. ಯೀ ಹವೇಲಿ ವಳಗೆ ಯಿರ್‍ರುವದು:

೧ ಹಿರೆ ಸಿಂಹಾಸನವು

೧ ಸಣ್ಣಸಿಂಹಾಸನವು

೧ ಕರೆಕಲ್ಲಿನ ನೆಲಮಾಳಿಗೆ

೧ ಸಿಂಹಾಸನಕ್ಕೆ ಉತ್ತರ ಕಲ್ಲು ಡೋಣಿ ಹನ್ನೆರಡು ಯೋಜನ

೧ ಕಾರಂಜಿ ಶಿಥಿಲವಾಗಿದೆ

೧ ವೋಕಳಿಕೊಂಡ ನೀರು ತುಂಬೋದು

೧ ಸದರಿ ಹವೇಲಿ ಬಾಗಲಿಗೆ ಉತ್ತರ ಬಾಗಲಿಗೆ ದಕ್ಷಿಣಭಾಗಕ್ಕೆ ದುರ್ಗಗುಡಿ

೭ ಯೀ ಪ್ರಕಾರ ಹವೇಲಿ ವಳಗೆ ಯಿದ್ದಾವೆ.

೧ ಹಿರೆ ದಿವಾಣರ ಕೋಟೆ ಗೋಡೆಗೆ ಉತ್ತರ ಪಟ್ಟದ[>ದೆ]ಲ್ಲಮ್ಮ ಗುಡಿಗೆ ಪಶ್ಚಿಮ ಹಜಾರದ ರಾಮಚಂದ್ರದೇವರ ಗುಡಿ

೧ ರಾಮಚಂದ್ರದೇವರ ಗುಡಿ ಪೂರ್ವಭಾಗದಲ್ಲಿ ಯಿರುವಂಥಾ ವಿಷ್ಣುದೇವಾಲಯ, ಶಿವಾಲಯಗಳು, ಆಂಜನೇಯಸ್ವಾಮಿ ಗುಡಿ ಮೊದಲಾದವು ಶಿಥಿಲವಾದಂಥವುಗಳು. ಸುಮಾರು ೧೨ ಬಿದ್ದ ಗುಡಿಗಳು ಯಿದಾವೆ.

೨ ಹಿರೇ ದಿವಾಣದ ಅರಮನೆ ಗೋಡಿಗೆ ದಕ್ಷಿಣ ಕೋಟಿಗೆ ವುತ್ತರ ಹರಿವಾಣದ ವಳಗೆ ಯಿದ್ದ ಅರವಂಟಿಗಳು

೧ ಯಿದಕ್ಕೆ ಪೂರ್ವಪರಂ ಹೇ ರ ವಳಗೆ ಯೀ ರೇವಾಗಂಜಿ . . . . ನಕಲ್ಲು ಬಾಳೆಯ . . . .ಬೆಳದಿಂಗಳೊ . . . . ಯಿದರ ಬಳಿಲಿ ಪಟ್ಟಣ . . . . ಮನಿಮನಿಗೆ . . . . ವಂಥಾ ಕಾರಂಜಿ. . . . .

ಯಿದರ ಶಿವಾಯಿ ಯಿರುವಂಥ ಪ್ರಸಿದ್ಧ ಆದಂಥಾ ದೇವಸ್ಥಾನಗಳು . . . . ಅಚ್ಚುತರಾಯ ವಗ್ಯೆರೆ ಕಟ್ಟಿಸಿದ ದೇವಸ್ಥಾನಗಳು.

ಕಮಲಾಪುರದ ಪೂರ್ವಭಾಗದಲ್ಲಿ ಯಿರ್‍ರುವ ಶ್ರೀಪಟ್ಟಾಭಿರಾಮದೇವರ ದೇವಸ್ಥಾನವು. ಯೀಗ ಆ ದೇವಸ್ತಾನಕೆ ಹಿರ್‍ರೆ ಹೂಡೆ . . ?ವೆಂದು ಹೆಸರು. ಇಲ್ಲಿ ಮು[>ಮ]ನಿಗಳು ಕಟ್ಟಿ ಯಿದ್ದರು. ಯೀ ಗೃಹಗಳು ಹಾಳಾಗಿ ಯಿಲ್ಲಿಗೆ ದೇವರು ಯಿಲ್ಲ. ಕಲಂ.

ಯಿದಕ್ಕೆ ಪೂರ್ವ ವಿಷ್ಣುದೇವಾಲಯ. ಯೀಗ ಅದಕೆ . . . . ಬೆಹುರ್ರು ಯಂದು ಜನರು ಅಂತಾರೆ. ಯಿದಕ್ಕೆ ದಕ್ಷಿಣ ಪೆನಗೊಂಡೆ ಬಾಗಿಲ ಬಳಿಯ ರಘುನಾಥದೇವರ ಗುಡಿ ವಳಗೆ ದೇವನು ಯಿದ್ದು ಹಾಳುಗುಡಿ.

೧ ಗ್ರಾಮಕೆ . . . . ಸ್ತಳವಳಗೆ . . . . ವಳಗೆ ಯಿರುವ ಜಯಿನ ಬಸ್ತಿ . . ಯೀಗ ಗಾಣಸ್ತು[>ಗಿತ್ತಿ]ಗುಡಿ ಅಂತಾರೆ.

೧ ಯಿದಕೆ ಪೂರ್ವ . . . . ಬಾಗಲು

೧ ಯಿದಕೆ ದಕ್ಷಿಣ . . . . ಶಿಥಿಲವಾಗಿದೆ.

ಯಿದಕ್ಕೆ ಪೂರ್ವ ಸಣ್ಣಕ್ಕಿ ವೀರಭದ್ರದೇವರ ಗುಡಿ. ಯೀಗ ದೇವರು ಯಿದ್ದು ಪೂಜೆ ನಡಿಯುತ್ತ ಯಿದ್ದಿತೆ, ಸರಕಾರ ತಸ್ತೀಕು ಯಿಲ್ಲ. ಭಕ್ತರು ಮಾಡುತ್ತ ಯಿದ್ದಾರೆ.

೧ . . . . ರೆ ಹಳ್ಳಿ ಪಟ್ಟಣಕೆ ಪೂರ್ವ ಕಂಪ್ಲಿ ರಸ್ತೆಕ್ಕೆ ಉತ್ತರ ಮಾಲ್ಲಿವಂತ ಪೂರ್ವ . . . . ಯಿರುವರು.

೧ ರಘುನಾಥದೇವರ ಗುಡಿ.

೧ ಪ್ರಸನ್ನ ವಿರೂಪಾಕ್ಷದೇವರ ಗುಡಿ

೧ ಪ್ರಭುಸ್ವಾಮಿ ಗುಡಿ

೧ ರಾಮದೇವರ ದಶರಥರಾಯರಿಗೆ ಪಿಂಡಯಿಟ್ಟ . . . .

೨ ಹೊಂಡಗಳು

೧ ಪ್ರಸನ್ನ ವಿರೂಪಾಕ್ಷದೇವರ ಗುಡಿ ಮುಂದೆ ಯಿದೆ ಕುಳಲು

೧ ರಘುನಾಥದೇವರ ಗುಡಿ ದಕ್ಷಿಣಕ್ಕೆ

ಯಿನ್ನು ಯಿದೆ ಶಿವಾಯ ಬೇರೆ ದೇವಸ್ಥಾನಗಳು, ವಿಷ್ಣುದೇವಸ್ಥಾನ ಶಿವಾಲಯಗಳು ಪಟ್ಟಣ ಅಗಶಿ ಬಾಗಿಲುಗಳು, ಕುಲಂ[>ಮ್ಲೇಂ]ಛ್ಯರ ದರಗ, ಗೋರಿಗಳು, ಮಸೂದಿಗಳು ವಗ್ಯೆರ್ರೆ ಕಮಲಾಪುರದ ಪಟ್ಟಣದ ವಳಿಗೆ ಯಿರುವಂಥವು ಶಿಥಿಲವಾಗಿ ದೇವರು ಯಿಲ್ಲದೆ ಹಾಳು ಬಿದ್ದು ಯಿದ್ದವು. ಸುಮಾರು ೨೫೦ ಯಿದ್ದಿತೆ.

ಯಿತ್ತಲಾಗಿ ಕೃಷ್ಣರಾಯರಿಗೆ ಸಂತತಿ ಯಿಲ್ಲದರಿಂದ ಅಚ್ಚುತರಾಯರಿಗೆ ಪಟ್ಟಗಟ್ಟಿದರು. ಆತನು ಮೂವತ್ತಾರು ವರುಷ ಪರಿಯಂತ್ರ ಆಳಿದನು. ಅವಗೆ ಶಾಲಿವಾಹನ ಶಕ ೧೪೮೬ನೇ ರಕ್ತಾಕ್ಷಿ ಸಂ॥ದಲ್ಲಿ ಮೊಗಲರು ಯಿವರ್‍ರ ಸಂಗಡ ಯುದ್ಧವನ್ನು ಮಾಡಿ ಸರ . . . . ತನ್ನ ದಂಡು ಮಂದು ಮಾರ್ಬಲ ಸಹಿತವಾಗಿ ಕೃಷ್ಣಾತೀರದಲ್ಲಿ ರಕ್ಕಸತಂಗಡಗಿ ಯಂಬೊ ಗ್ರಾಮದಲ್ಲಿ ತನ್ನ ಫಉಜು ಸಹಿತವಾಗಿ ನುಗ್ಗಿ ಹೋದರು. ಆ ವೇಳ್ಯೆ ಮೊಗಲಾಯಿ ಅವರ ದಂಡು ಬಂದು ಪಟ್ಟಣ ಯಾವತ್ತು ದೇವಸ್ಥಾನಗಳು ದಿವಾಣಗಳು ಮಹಲಗಳು ದಿವಾನಖಾನಗಳು ಮತ್ತು ದೇವಸ್ಥಾನ ಗೋಪುರಗಳು ಮುಂತಾದುವು ಯಾವತ್ತು ಬೆಂಕಿಹಾಕಿ ಸುಟ್ಟು ಬಿಟ್ಟರು. ಪಟ್ಟಣ ತಮುಲ ಕಾಯ್ಸಿ ಬೊಕ್ಕಸದ ವಳಗೆನ ದ್ರವ್ಯ ಯಾವತ್ತ ತೆಗೆದುಕೊಂಡು ಹೋದರು. ಆ ವೇಳ್ಯೆದಲ್ಲಿ ಪಟ್ಟಣ ಹಾಳು ಯಿತ್ತು. ಕಲಂ.

ಯಿತ್ತಲಾಗಿ ಅಚ್ಚುತರಾಯನ ಮಗ ಸದಾಶಿವರಾಯನು ನಾಲ್ಕು ವರುಷ ಆಳಿದನು. ಆ ರಾಮರಾಯರು ಯಿರ‍್ರುವಾಗ್ಯೆ ಸದಾಶಿವರಾಯನೇ ಪಟ್ಟವ ನಡಶಿದನು, ಕಲಂ. ಆ ತರುವಾಯ ಯೀತನ ಮಗ ತಿರುಮಲರಾಯನು ಮೂರು ವರುಷ ಆಳಿದರು. ಯೀತನ ಮಗ ಶ್ರೀರಂಗರಾಯ ೧೬ ವರುಷ ಆಳಿದನು. ಯಿತ್ತಲಾಗಿ ಯೀತನ ತಮ್ಮ ವೆಂಕಟರಾಯರು ೨೮ ಇಪ್ಪತ್ತೆಂಟು ವರ್ಷ ಆಳಿದನು. ಕಲಮು. ಯೀತನ ತಮ್ಮ ರಾಮದೇವರಾಯ ೧೭ ಹದಿನೇಳು ವರುಷ ಆಳಿದನು.

ಯೀತಗೆ ಸಂತತಿಯಿಲ್ಲದ ಕಾರಣ ವೆಂಕಟರಾಯನ ಪಾಲನೆ ತೆಗೆದುಕೊಂಡು ಪಟ್ಟಕ್ಕಿ ೧೨ ವರುಷ ಆಳಿದನು. ಕಲಮಂ. ಯೀತನ ಮಗ ಶ್ರೀರಂಗರಾಯ ೨೮ ವರುಷ ಆಳಿದನು. ಯೀತನ ಮನ್ಮಂತರಕ್ಕೆ[>ಮನ್ವಂತರಕ್ಕೆ] ಯಿವರ ರಾಜ್ಯ ಯಾವತ್ತು ಮೊಗಲಾಯಿ ಅವರು ತೆಗೆದುಕೊಂಡು ಯಿರಲಾಗಿ, ಯಿವರ ಸವಸ್ಥಾನ ಬಿಟ್ಟು ಚಂದ್ರಗಿರಿಗೆ ಹೋಗಿ ಯಿರಲಾಗಿ, ಮೊಗಲರ‍್ರು ಚಂದ್ರಗಿರಿಯಿಂದ ಇವರನ ಕರಿಶಿ . . . . ಅಳಿದು ಪರಗಣಿ ನೇಮಕ ಮಾಡಿಕೊಟ್ಟ ವಿವರವು:

೧ ಗಂಗಾವತಿ ಪರಗಣಿ
೧ ಬಾಣರಾವಿ ಪರಗಣಿ
೧ ತೆಕ್ಕಲ ಕೋಟೆ ಪರಗಣಿ
೧ ಹೊಸೂರ‍್ರು ಪರಗಣಿ
೧ ಕುರ‍್ರುಗೋಡು ಪರಗಣಿ

ಯೀ ಪ್ರಕಾರ . . . . ಪರಗಣಿ ನೇಮಕ ಮಾಡಿಕೊಟ್ಟರು, ಕಲಮು.

ಯಿತನ ಮಗ ತಮ್ಮ ಚೆ[>ಚಿ]ನ್ನರಾಯ, ಯೀತನ ಹೆಸರು ವೆಂಕಣ್ಣಯ್ಯ. ಯೀತ ೧೧ ಹನ್ನೊಂದು ವರುಷ ಆಳಿದನು. ಯೀತನ ಮನ್ಮಂತರದಲ್ಲಿ ಕಮಲಾಪುರ ಕೋಟೆ ಹುಲಿಮುಖ ಹುಡೆ ಕಟ್ಟಿಸಿದನು. ಶಕ ೧೬೨೫ . . . . ಸಂ.ವರಿಗೆ ಯೀತನ ಮಗ ಹಿರ‍್ರೆದಾಸರಾಯರು ಹದಿನೇಳು ವರುಷ ಆಳಿದರು, ಯೀತನ ಮನ್ಮಂತರದಲ್ಲಿ ಐದು ಪರಗಣಿ ಪೈಕಿ ಪಾಳ್ಯೆಗಾರರು ಪ್ರಬಲರಾಗಿ ಕೆಲವು ತೆಗೆದುಕೊಂಡ ವಿವರ:

೧ ಹೊಸೂರ‍್ರ ಪರಗಣಿ ಹರುಪ್ನಹಳ್ಳಿ ಅವರು ತೆಗೆದುಕೊಂಡರು, ಶಕ ೧೭೪೨ ಶಾರ್ವರೀ ಸಂ।ದಲ್ಲಿ.

೧ ಬಾಣರಾವಿ ತಾಲ್ಲೂಕು ಚಿತ್ರಕಲ್ಲು ಅವರು ತೆಗೆದುಕೊಂಡರು.

೧ ಕುರ‍್ರುಗೋಡು ಪರಗಣಿ . . . . ಕೆಲವು ಗ್ರಾಮಗಳು ಸಹ . . . . ತೆಗೆದುಕೊಂಡರು.

೧ ಗಂಗಾವತಿ ಪರಗಣಿ ಪೈಕಿ ಕೆಲವು ಗ್ರಾಮಗಳು ಕನಕಗಿರಿ ಅವರು ತೆಗೆದುಕೊಂಡರು.

ಯೀ ಪ್ರಕಾರ ಪಾಳ್ಯಗಾರರು ತೆಗೆದುಕೊಂಡದ್ದು ಹೋಗಲಾಗಿ ಉಳದವು ಯಿವರ‍್ರೇ ಆಳಿದರು. ಕಲಮು, ಯಿತ್ತಲಾಗಿ ಯಿವರ ತಮ್ಮ ಚಿಕ್ಕದಾಸರಾಯ ೧೩ ವರುಷ ಆಳಿದರು. ಯೀತನ ಮಗ ಬಡೇರಾಮರಾಯ ೭ ವರುಷ ಆಳಿದನು. ಯೀತಗೆ ಸಂತತಿಯಿಲ್ಲವು. ಯೀತನು ವೀರವೆಂಕಟಪತಿರಾಯನ್ನ ಪಾಲನೆ ತ್ತೆಗೆದುಕೊಂಡು ಯಿತ್ತ ೧೬ ವರುಷ ಆಳಿದರು. ಯಿಲ್ಲಿಗೆ

೧೬೭೮ ಯಿಲ್ಲಿಗೆ ಸಮಾಪ್ತ. ಯೀತನ ಮಗ ತಿರುಮಲರಾಯರು, ಧಾತು ಸಂ।ರಕ್ಕೆ ಪಟ್ಟವಾಯಿತು. ಯೀ ಸಂ। ಆರಭ್ಯಾ ಪರಾಭವ ಸಂ। ಆಷಾಢಮಾಸಕೆ ಮೊಗಲರ ಟಾಣ್ಯವಾಗಿ ಬಬರಜಂಗನ ಜಹಗೀರು ಆಯಿತು. ಯಿತ್ತಲಾಗಿ ಪರಾಭವ ಸಂ। ಕಾರ್ತೀಕ ಮಾಸದಲ್ಲಿ ಪುನಹ ತಿರುಮಲರಾಯರು ಕಮಲಾಪುರ ಮಾತ್ರ ಠಾಣ್ಯ ಹಾಕಿಕೊಂಡು ಪ್ಲವಂಗ ಸಂ।ರದ ಜೇಯಿಷ್ಟಮಾಸದ ಪರಿಯಂತ್ರ ಯಿದ್ದರು, ಕಲಮು.

ಯೀ . . . . ಕಮಲಾಪುರದಲ್ಲಿ ಹಾಜರ್ರು ಯಿರುವ ತಿರುಮಲರಾಯರು, ಯಿತ್ತಲಾಗಿ ಪ್ಲವಂಗ ಸಂ।ದಲ್ಲಿ ಪುನಹ ಟೀಪುಸುಲ್ತಾನನ ಠಾಣ್ಯ ವಾಸಿಸಲು, ಸುಲತಾನನು ಕೊಪ್ಪಳದ ಬಳಿಯಲ್ಲಿರುವ ಬಾಹದರನ ಠಾಣ್ಯ ಹಾಕಿಕೊಂಡು, ಆನೆಗೊಂದಿಗೆ ಬಂದು ದರೋಬಸ್ತು ರಾಜ್ಯ ಸುತ್ತ[>ಲ]ತಾನ ಠಾಣ್ಯವಾಯಿತು. ಬಬರಜಂಗರ ಬಹದರ ಆಳಿಕೆ.

ಪುನಹ ವಿರೋಧಿಕೃತ ಸಂ।ದಲ್ಲಿ ತಿರುಮಲರಾಯನ ದಿನದಲಿ ಯೀ ರಾಜ್ಯ ಕಂಪಲಿ ಕಮಲಾಪುರ ಯಾವತ್ತು ಅರ್ರಿನವರು ಠಾಣ್ಯ ಹಾಕಿದರು . . . . ರಾಜ್ಯಾ ಜಂತಗಲ್ಲು ಗಂಗಾವತಿ ಆನೆಗೊಂದಿ ವಗೈರೆ ಮೊಗಲರ ಠಾಣ್ಯೆಯವಾಯಿತ್ತು.

ಪುನಃ ಇದೇ ಸಂ।ರದ ಪುಷ್ಯಮಾಸಕೆ ಆನೆಗೊಂದಿ ಸಹ ಅರ್ರುಗಳ . . . . ಠಾಣ್ಯ ಹಾಕಿಕೊಂಡು ಪರಿಧಾವಿ ಸಂ।ರದ ಮಾಘಮಾಸದ ಪರಿಯಂತ್ರ ಅರಸುಗಳವರ ಠಾಣ್ಯವಾಯಿತು, ಕಲಮು.

ಪರಿಧಾವಿ ಸಂ।ರದಲ್ಲಿ ಸುಲತಾನನ ಕಡೆ ಕಡೆ ಪೂರಕ ಮುದ್ದಾನಖಾನನು ಬಂದು ಪುನಹ ರಾಜ್ಯ ಯಾವತ್ತು ಠಾಣ್ಯಹಾಕಿ ಬಬರಜಂಗನ ಜಹಗೀರು ವಳಗೆ ಅಮಲು . . . .

೧ ರಾಕ್ಷಸನಾಮ ಸಂ।ರದ ಪರಿಯಂತ್ರ ಬಬರಜಂಗನ ಬಾಹದ . . . . .

೧ ಪಿಂಗಳ ಸಂ।ರಕ್ಕೆ ಪುರಮಾರ ಜೆಂತ್ತೂರಿ ಸೂ॥ . . . .

೧ ಪಿಂಗಳ ಸಂ।ರದ ಮಾರ್ಗಶಿರಮಾಸದ ವರಿಗೆ ರಜಬಲ್ಲಿ ಮಾರನಹಳ್ಳಿ ಆಸಮಗಿರಿ ಮಾಡಿದರ್ರು ಕಲಮು.

೩

ಪುನಹ ಪಿಂಗಳ ಸಂ।ರದ ಮಾಘಮಾಸದಲ್ಲಿ ಆನೆಗೊಂದಿ ಅರಸುಗಳು ಬಂದು, ಆನೆಗೊಂದಿ ಕಮಲಾಪುರ ದರೋಜಿ ವಗೈರೆ ಠಾಣ್ಯ ಹಾಕಿಕೊಂಡರ್ರು. ಕಂಪ್ಲಿ ಗಂಗಾವತಿ ಯರಡು ಮಾತ್ರ ಠಾಣ್ಯ ಬೀಳಲಿಲ್ಲ. ಯೀ ಪ್ರಕಾರ ಮೂರ್ರು ತಿಂಗಳು ಯಿದ್ದನು. ಕಲಂ ಕಾಳಯುಕ್ತಿ ಸಂ।ರದಲ್ಲಿ ಸುಲತಾನನ ಕಡೆಯಿಂದ ಬಾದಾವ ಜೇಷ್ಠವ್ರ ಹಿರೆನಾಯ್ಕ ವುಭಯತರು ಫವುಜ ತೆಗೆದುಕೊಂಡು ಬಂದು . . . . ಜ್ಯಾ . . . . ಬಸ್ತು ಠಾಣ್ಯ ಹಾಕಿದರು. ಅರ್ರುಗಳವರು ವೋಡಿಹೋದರು.

ಪುನಹಃ ಇದೆ ಸಂ।ರದ ಫಾಲ್ಗುಣ ಮಾಸಕ್ಕೆ ತಿರುಮಲರಾಯರು ಬಂದು ರಾಜ್ಯ ಠಾಣ್ಯ ಹಾಕಿ, ಕಂಪಲಿವಳಗೆ ಹಿರೇನಾಯ್ಕನ ಹಿಡುಕೊಂಡು ಗಂಗಾವತಿಗೆ ವಯ್ಯಿದರು. ಕೈದಿನಲ್ಲಿಟ್ಟರು. ಯಿವು . . . . ಶಕ . . . . ಶ್ರಾವಣ ಮಾಸದ ಪರಿಯಂತ್ರ ಯಿದ್ದನು, ಕಲಮು.

ಯಿತ್ತಲಾಗಿ ಶಿದ್ಧಾರ್ತಿ ಸಂ।ದಲ್ಲಿ ಯಿಂಗ್ಗೇಜಿ ಬಹದರವರ ಅಮಲು, ಪೂರ್ಣಯ್ಯನ ಅಮಲು, ಸುಬಾ . . . . ಬಂದು ರಾಜ್ಯ ಠಾಣೆಹಾಕಿ, ಯೀ ತಾಲೂಕಿನ . . . . ಭೀಮರಾಯಕೆ ಮೊಕರರ್ರು ಮಾಡಿಯಿಟ್ಟರು, ಕಲಮು.

ರವುದ್ರಿ ಸಂ।ರದಲ್ಲಿ ಮಾಘಮಾಸಕ್ಕೆ ಭೀಮರಾಯ ಅಮಲು ಹೋಗ ವೇಗಲಾ . . . . ಗಿ ಅವರ ಠಾಣ್ಯವಾಗಿ, ಯೀ ತಾಲೂಕಿನ ಮಾ . . . . ವೀರಸಾಹೇಬನೆಂಬೊವಗೆ ಮೊಕರರ್ರು ಮಾಡಿ, ಯೀ ಪ್ರಕಾರ ವಂದು ಸಂ।ರ ನಡಿಯುತ್ತ ಅಮಲು.

ಪುನಹ ಅವರು ದುರ್ಮತ್ತಿ ಸಂ।ರಕ್ಕೆ ಕುಂಪಣಿ ಠಾಣ್ಯೆ ಆಯಿತ್ತು. ಹ॥ಪುನಹಾ . . . . ಲ ಸಾಹೆಬರು ಬಂದು ಯೀ . . . . ರಾರದಲ್ಲಿ ಅಲ್ಲಿ ಮೊಕರರ್ರು ಮೇಲೆ ರಾಜ್ಯಾರ ಜಮಾಬಂದಿ ವಹ್ಸಿ, ಯೀ ತಾಲೂಕಿಗೆ ಕ್ರಿಷ್ಣರಾಯರಿಗೆ ಕೌಲು ಮೊಕರರ್ರು ಮಾಡಿ ಯಿದ್ದರು, ಅಮಲು, ಯೀ ಶುಕ್ಲ ಸಂ।ರದ ವರಿಗೆ ಕುಂಪಣಿ ಸರಕಾರಕ್ಕೆ ಅಮಲು:

೧ ಯೀ ಗ್ರಾಮಕ್ಕೆ ಅಷ್ಟದಿಕ್ಕಿಗೆ ಯಿರ್ರುವ ಪಟಲಿ ಕಣಿವೆಗಳು

೧ ಯಿಂದ್ರ ದಿಕ್ಕಿಗೆ ಗ್ರಾಮಕ್ಕೆ ಪೂರ್ವ ಬಸಲಿಂಗಪ್ಪನ ಭಾವಿಕಣ್ವಿ, ದರೋಜಿ ಶೀಮೆ ಪೈಕಿ ವುಪ್ಪಾರಹಳ್ಳಿ ದಿಕ್ಕಿಗೆ ಮೊನೆಗಲ್ಲು ಮುದ್ದಲಾಪುರದ ಗೂಡಗಾರಿಗನೂರ್ರು ಸರಹದಿ.

೧ ಯಮದಿಕ್ಕಿಗೆ ಅರಶೀಮೆಟಿನ ಕಣ್ವಿ ಸರಹದ್ದು, ಪಾಪಿನಾಯ್ಕನಹಳ್ಳಿ ಸರಹದ್ದು

೧ ನೈರುತ್ಯದಿಕ್ಕಿಗೆ ಮುಜರ್ರೆಗೆ . . . . ಮೇಲೆ ಬೀಳೆ ಕಲ್ಲುಗುಡ್ಡ ಸರಹದ್ದು, ಸಾರಿಗನೂರು ಯಿಂಗಳಿಗೆ

೧ ವರುಣದಿಕ್ಕಿಗೆ ಭದ್ರಶೆಟ್ಟಿ ಬ. ಡೆ ಕಂಬಳೆಯನ ಗುಡಿ ಹೊಲ ಮೇರಿಗೆ ಬಸಾಪುರದ ಭೂಮಿ ಸರಹದ್ದು, ಮಲ್ಲಪಣ್ಣಗುಡಿ,

೧ ವಾಯವ್ಯದಿಕ್ಕಿಗೆ ಸೋಮೇಶ್ವರನ ಮಠ ಸರಹದ್ದು, ಸಿಂಗನಾಥನ ಹಳ್ಳಿ ಹೊಲ ಮೇರೆ

೧ ಕುಬೇರದಿಕ್ಕಿಗೆ ಮಜರ್ರೆ ಹಾಳುಪಟ್ಟಣದ ಮೇರ್ರೆ ಮಾತ್ತಂಗದೇವರ ಬೆಟ್ಟ

೧ ಯೀಶಾನ್ಯೆದಿಕ್ಕಿಗೆ ತಿಮ್ಮಪ್ಪನ ಗುಡ್ಡ ಸರಹದ್ದು, ವೆಂಕಟಪುರದ ಮುಜರೇ ಕಳಸಪುರದ ಮೇರ್ರೆ

---

೮ ಯೀ ಪ್ರಕಾರ ಅಷ್ಟದಿಕ್ಕುಗಳು ಯಿದ್ದ ಕಲಮು.

ಯೀ ಗ್ರಾಮಕ್ಕೆ ಅಷ್ಟದಿಕ್ಕಿನಲ್ಲಲಿ ಯಿರುವಂಥ ಪ್ರಾಚೀನ ಗ್ರಾಮಗಳು:

೧ ಯಿಂದ್ರದಿಕ್ಕಿಗೆ ದರೋಜಿಗ್ರಾಮ, ಯಿಲ್ಲಿ ಆರ್ರು ಹರದಾರಿಯಲ್ಲಿದೆ.

೧ ಅಗ್ನಿದಿಕ್ಕಿಗೆ ವೊರುಂಗಲ್ಲಿಗೆ ಆರ್ರು ಹರದಾರಿಯಲ್ಲಿದೆ.

೧ ಯಮದಿಕ್ಕಿಗೆ ಶುದ್ಧ ದಕ್ಷಿಣಕೆ ಗೂಂಡೂರು ಮಠ.

೧ ನೈರುತ್ಯದಿಕ್ಕಿಗೆ ಜಂಬನಾಥನ ಗುಡ್ಡ ಯಿದ್ದಿತು.

೧ ಕುಬೇರನದಿಕ್ಕಿಗೆ ಶುದ್ಧ ಉತ್ತರಕ್ಕೆ ನದಿ ಆಹಿ[>ಚೆ]ಗೆ ಆನೆಗೊಂದಿ, ಅದಕ್ಕೆ ಶುದ್ಧ ವುತ್ತರಕ್ಕೆ ಗಂಗಾವತಿಯಲ್ಲಿಗೆ ಮೂರ‍್ರು ಹರದಾರಿ ಯಿದ್ದಿತು.

೧ ವರುಣದಿಕ್ಕಿಗೆ ಹರುಪನಹಳ್ಳಿ ಶೀಮೆ . . . . ಪೇಟೆಯಿದ್ದಿತು. ಯಿಲ್ಲಿಗೆ ಯರಡು ಹರದಾರಿ ಯಿದ್ದಿತು.

೧ ವಾಯವ್ಯದಿಕ್ಕಿಗೆ ಶೆಗತಂಗಡಿ . . . . ಆ ಕಡೆ ಕನಕಗಿರಿ ಶೀಮೆ, ಶೀಪುರದುರ್ಗ. ಯೀಗ ಮೊಗಲಾಯಿ ಅವರ ರಾಯಚೂರು ಮೂರ‍್ರು ಹರದಾರಿಯಲ್ಲಿದೆ.

೧ ಈಶಾನ್ಯದಿಕ್ಕಿಗೆ ಕಂಪಲಿಗ್ರಾಮ ಯಿಲ್ಲಿಗೆ ನಾಲ್ಕು ಹರದಾರಿ ಯಿದ್ದಿತು. ಯಿದರ ಶಿವಾ ಯೀ ಭರಾಮಾರ್ಗ ಯೀ ಗ್ರಾಮಕೆ . . . .

೧ ಯೀ ಗ್ರಾಮಕೆ ಪೂರ್ವ ಗೋರಂಟಹಳ್ಳ ಬಸಲಿಂಗಪ್ಪಾನ ಭಾವಿ ಮಾರ್ಗ, ಬಳ್ಳಾರಿ ಮಾರ್ಗ.

೧ ದಕ್ಷಿಣದಿಕ್ಕಿಗೆ ವರಾಗೆರ‍್ರೆ ಮೇಲೆ ಹಾದು ಹೋದ ವಡೆನವರ ಶೀಮೆ, ಸೊಂಡೂರು ಭಾರಮಾರ್ಗ.

೧ ಯೀಶಾನ್ಯದಿಕ್ಕಿಗೆ ಭಾರಮಾರ್ಗ ಕಣಿಗಳು, ಕಂಪಲಿ ಮೇಲೆ ಹಾದು ಆದವಾನಿ ಶೀಮೆಗೆ ಹೋಗೋ ಮಾರ್ಗದ ಕಣಿವೆಗಳು ಕಂಪ್ಲಿ ಪರಿಯಂತ್ರಕ್ಕೂ.

೧ ಬುಕ್ಕಸಾಗರದ ಕಣ್ವಿ ೧ ನಾಗರಕಣ್ವಿ ತೋಪಿನ ಅಳಿತಿ.

೧ ಚಂದಿಕಣ್ವಿ ಸುಮಾರ‍್ರು ಹರದಾರಿ ೧.

೧ ಪಶ್ಚಿಮದಿಕ್ಕಿಗೆ ಹೊಸರಿಪೇಟೆ ಬಳಿಯ ರಾಯರ ಕಣ್ವಿ ಮೇಲೆ ಹರುಪನಹಳ್ಳಿ ಶೀಮೆಗೆ ಭಾರಮಾರ್ಗ.

೧ ಪಶ್ಚಿಮದಿಕ್ಕಿಗೆ ಕಾಳಗಟೆ ಬಳಿಯ ನಲಿಹಟ್ಟಿ ಶಿಪುರದ ಮೇಲೆ ಹಾದು ಕೊಪ್ಪರದ . . . . ? ಸೀಮೆಗೆ ಹೋಗುವ ಮಾರ್ಗ.

೧ ಉತ್ತರದಿಕ್ಕಿಗೆ ಆನೆಗೊಂದಿ ಮುಂಟೊ ಹೊಳೆರಾಯನ ಶೀಮೆ ಮೇಲೆ ಹಾದು ಮೊಗಲಾಯಿ . . . . ಮೂರು, ಕಲ್ಲು ಕನಕಗಿರಿ ಶೀಮೆಗೆ ಭಾರೀ ಮಾರ್ಗ.

ಯೀ ಗ್ರಾಮದಲ್ಲಿ ಹುಟ್ಟುವಂಥ ಧಾನ್ಯ ದಿನಸುಗಳು:

೧ ಜೋಳ, ಸಜ್ಜೆ, ಹೆಸರು, ಹುರಳಿ, ಅವರೆ, ತೊಗರಿ, ಯೆಳ್ಳು, ಗುರ‍್ರೆಳ್ಳು, ಪುಂಡಿ, ಕಡ್ಲಿ, ನವಣೆ, = ೧೧ ಧಾನ್ಯಗಳ ಪೈಕಿ ಯಿಕ್ಕೇರಿಯಿಂದ ಯಿಲ್ಲಿಗೆ ಬರುವಂಥ ಧಾನ್ಯಗಳ ಜಿನಸು: ೧ ಸಣ್ಣನೆಲ್ಲು, ೧ ಶಿರಂಗನ ನೆಲ್ಲು, ೧ ಕಾಮದಾರಿ, ೧ ಮರಸಣ್ಣನೆಲ್ಲು, ೧ ಕಬ್ಬು, ೧ ತೆಂಗು – ಯೀ ಪ್ರಕಾರಕ್ಕೆ ಬೆಳವುತ್ತ ಯಿದ್ದಾವೆ ಕಲಮು.

ಸ . . . . ಹುಪರಾಯ ಶೀಮೆಗೆ ಹೋಗೊ ವಿವರ: ೧ ಆದವಾನಿ, ಬಿಳಿಗಿರಿ, ಕಂಪ್ಲಿ ಯೀ ಪ್ರಕಾರ ಹೋಗುತ್ತ ಯಿದ್ದಾವೆ.

. . . . ದರ್ಾಕ್ಕಿ ನಯಿಕರ ಯಿಲ್ಲಿಗೆ ಬರ‍್ರುವಂಥ ಧಾನ್ಯಗಳ ಜಿನಸು:

೫ ಹೊಳೆ ಆಚೆ ಮೊಗಲಾಯಿ ಶೀಮೆಯಿಂದ ಬರುವಂಥಾ ಜಿನಸುಗಳು:

೧ ಗೋದಿ, ೧ ಕಡ್ಲಿ, ೧ ಉದ್ದು, ೧ ಅಗಸಿ – ೪

೧ ವಳ್ಳೆಯಣ್ಣಿ ೧ ಹರುಪನಹಳ್ಳಿ ಶೀಮೆಯಿಂದ ಬರುವಂಥದು.

ಬೆಲ್ಲ ಅಡಿಕೆ . . . . ।

ನಗರಶೀಮೆ . . . . ಮಲ ಶೀಮೆಯಿಂದ ಹರುಪನಹಳ್ಳಿ ಮೇಲೆ ಹಾದು ಬರುವಂಥಾದ್ದು ಕಿರಾಣಿ ಜಿನಸು:

೧ ಬಿಚ್ಚು (ಬಿಳ್ಸು ಜೋಳ) . . . . ।

೧ ಮೆಣಸು, ೧ ಯಿಂಗು, ೧ ಕಾರೀಖು, ೧ ಗೋಪಿಚಂದನ, ೧ ಮೆಣ್ಸಿನಕಾಯಿ, ೧ ಯಾಲಕ್ಕಿ, ೧ ಲವಂಗ, ೧ ಜಾಜಿಕಾಯಿ = ೯ ಜಿನಸು.

ಜವಳಿ ಜಿನಸು ಬರುವಂಥಾದ್ದು :

ಮೂಡಲ ಶೀಮೆಯಿಂದ ಬಳ್ಳಾರಿ ಮೇಲೆ ಹಾದು ಬರುವಂಥಾ ಜಿನಸುಗಳು: ೧ ರುಮ್ಮಾಲುಗಳು,

೧ ಶೆಲ್ಯೆಗಳು, ೧ ಹಚ್ಚಡಗಳು, ೧ ಧೋತ್ರಗಳು = ೪

ಕಂಪ್ಲಿಯಿಂದ ಬರೋ ಜಿನಸುಗಳು: ಕೆಂಪು . . . . ರೇಶ್ಮೆ, ಬಿಳಿದು ವಗೈರೆ, ಕಲಮು.

ಯಿದರ ಶಿವಾಯಿ ಗ್ರಾಮಕ್ಕೆ ಉತ್ತರಭಾಗ ಹರದಾರಿ ಕಂಪ್ಲಿ . . . . ಹರದಾರಿ ಮೇಲ ತುಂಗಭದ್ರ . . . . ತೀರದಲ್ಲಿ ಪಂಪಾಕ್ಷೇತ್ರಕ್ಕೆ ಚಯಿತ್ರಮಾಸದ ಶು॥ ೧೫ ರಥೋತ್ಸವಕ್ಕೆ ಬೇಕಾದದಕ್ಕು ಶೀಮೆಯಿಂದ ಬರುವಂಥ ಹರಬಾಬಿ ಜಿನಸು, ರಾಜ್ಯಗಳಲ್ಲಿ ಹುಟ್ಟುವಂಥಾ ಮ್ಯಾಲಿನದು ಜವಳಿ ಜಿನಸು, ಕಿರಾಣಿ ಜಿನಸು, ರಸ ಬಂಡವಾಲ, ಬೆಳ್ಳಿಬಂಗಾರ, ತಾಂಬ್ರದ ನಗಗಳು, ಪಂಚಲೋಹ ಮತ್ತು ಹವಳ ವಗೈರೆ ಯೇನುಬೇಕಾದ ಜಿನಸು ವಗೈರೆ ಬರುತ್ತ ಯಿದಾವೆ ಕಲಂ.

ವಿಜಯನಗರದ ಸೂತ್ರಕೋಟಿ ಪೂರ್ವದಲ್ಲಿ ಯಿದ್ದ ವಿಸ್ತಾರ, ದರವಾಜಿ ಗ . . . .

೧ ಪೂರ್ವದಿಕ್ಕಿಗೆ ರಾಮಸಾಗರದ ಕಣಿವೆ ದರವಾಜ, ಪಟ್ಟಣದ ಯಲ್ಲಮ್ಮನ ದೇವಸ್ಥಾನಕೆ ಉತ್ತರ ಕ್ರಿಷ್ಣರಾಯರ ದಿವಾಣರ ಕೋಟೆಗೆ ಯರಡುವರೆ ಹರದಾರಿ ಯಿದ್ದಿತೆ.

೧ ಅಗ್ನಿದಿಕ್ಕಿಗೆ ವುಪ್ಪಾರಹಳ್ಳಿ ಬಾಜಾರದ ದರವಾಜೆ ಯಿಲ್ಲಿಗೆ ಯರಡುವರೆ ಹರದಾರಿ, ಸದರಿ ಕೋಟಿ.

೧ ದಕ್ಷಿಣದಿಕ್ಕಿಗೆ ವಡಿಗೇರ್ರೆ ಕೆರೆ ಬಳಿಯ ಯಿದ್ದ ಕೋಟಿಗೆ ದರವಾಜ ಯೀಗ ಬಿದ್ದು ಯಿದ್ದಿತೆ. ಯಿಲ್ಲಿಗೆ ಯರಡೂವರೆ ಹರದಾರಿ.

೧ ನೈರುತ್ಯದಿಕ್ಕಿಗೆ ಹಾರಪ್ನಹಳ್ಳಿ ಶೀಮೆ ಹೊಸಪೇಟೆ, ಆ ಕಡೆ ಜೋಳದರಾಶಿ, ಗುಡ್ಡರಾಯರ ಖಣ್ವೆ ದರವಾಜ, ಯಿಲ್ಲಿಗೆ ೨॥ ಹರದಾರಿ.

೧ ವರುಣದಿಕ್ಕಿಗೆ ಹಾರಪ್ನಹಳ್ಳಿ ಶೀಮೆ ಹೊಸೂರು ತಾಲೂಕು, ಬೆನಕಾಪುರದ ದರವಾಜ, ಯಿಲ್ಲಿಗೆ ೨॥ ಹರದಾರಿ.

೧ ಶುದ್ಧ ಉತ್ತರದಿಕ್ಕಿಗೆ ತುಂಗಭದ್ರತೀರದ ಆಚೆಗೆ ಆನೆಗೊಂದಿ ೨ ಹರದಾರಿ ಮೇಲೆ ಬಸವಪಟ್ಟಣದ ದರವಾಜ, ಯಿಲ್ಲಿಗೆ ೩ ಹರದಾರಿ ಮೇಲೆ ಯಿದ್ದಿತೆ.

೪

ಯಿದರ ವಳಗಾಗಿ ಚಕ್ರಕೋಟೆಗಳು ದರವಾಜಿಗಳು ಬಹಾಳ ಯಿದ್ದವು. ಯಿದರ ವಳಗಾಗಿ ಯೇಳು ಸುತ್ತಿನ ಕೋಟೆಗಳು ಯಿದ್ದವು. ಪೂರ್ವಕ್ಕೆ ಯಿತ್ತು . . . . ಯಿಧಾವೆ. ಬೆಟ್ಟಗಳ ಅಲ್ಲಿಗೆ ಪ್ರಾಕುಗಳು ಪುರಾವೆ ಕಲ್ಲು ಯಿದ್ದಾವೆ.

ತುಂಗಭದ್ರಾತೀರದಲ್ಲಿ ಯಿರುವ ಪಂಪಾಕ್ಷೇತ್ರದ ಚತುರ್ದಿಕ್ಕು . . . . ವಳ ಪ್ರಾಕಾರದ ಪ್ರಕಾರ ದೇವಸ್ಥಾನ ವಳ ಪ್ರಾಕಾರಗಳು:

೧ ಪೂರ್ವದಿಕ್ಕಿಗೆ ಕನ್ನಿಕೇಶ್ವರನ ಕ್ಷೇತ್ರ, ಬುಕ್ಕಸಾಗರ ಯಿಲ್ಲಿಗೆ ಯರಡು ಹರದಾರಿ ಯಿದ್ದಿತೆ.

೧ ದಕ್ಷಿಣದಿಕ್ಕಿಗೆ ಜಂಬುಕೇಶ್ವರನ ಕ್ಷೇತ್ರ, ಹರಪನಹಳ್ಳಿ ಶೀಮೆ. ಹೊಸಪೇಟೆ ಸರಹದ್ದು ಯಿಲ್ಲಿಗೆ ಯರಡು ಹರದಾದಿ.

೧ ಪಶ್ಚಿಮದಿಕ್ಕಿಗೆ ಕಡೆಕಲ್ಲು ಸೋಮೇಶ್ವರನ ಕ್ಷೇತ್ರ, ಮೊಗಲಾಯಿ ತಾಲ್ಲುಕ. ನದಿ ಆಚೆ, ಶೀಪುರದ ಗುಡ್ಡ ಯಿಲ್ಲಿಗೆ ಯರಡು ಹರದಾರಿ ಯಿದ್ದಿತೆ.

೧ ಉತ್ರದಿಕ್ಕಿಎ ವಾಣಭದ್ರೇಶ್ವರ ಕ್ಷೇತ್ರ ನದಿ ಆಚೆಗೆ, ಮೊಗಲಾಯಿ ತಾಲೂಕು ಬಸವಪಟ್ಟಣದ ಗುಡ್ಡ ಯಿಲ್ಲಿಗೆ ಮೂರು ಹರದಾರಿ ಯಿದ್ದಿತೆ.

೪

ಹೊರ ಪ್ರಾಕುಗಳು :

೧ ಪೂರ್ವದಿಕ್ಕಿಗೆ ಕುಂಪಣಿ ಶೀಮೆ, ಕುರುಗೋಡು ಬಸವೇಶ್ವರನ ಕ್ಷೇತ್ರ ಯಿಲ್ಲಿಗೆ ವಂಬತ್ತು ಹರದಾರಿ.

೧ ದಕ್ಷಿಣದಿಕ್ಕಿಗೆ ಕೊಮಾರಸ್ವಾಮಿಕ್ಷೇತ್ರ, ಪೇಶ್ವೇಯ ಯಿಲಾಖೆ ಘೋರಪಡೆಯವರ ತಾಲೂಕ ಸೊಂಡೂರೂ ಸರಹದ್ದು ಯಿಲ್ಲಿಗೆ ಹನ್ನೊಂದು ಹರದಾರಿ.

೧ ಪಶ್ಚಿಮದಿಕ್ಕಿಗೆ ನದಿ ಆಚಿಕೆ ಮೊಗಲಾಯಿ ತಾಲ್ಲೂಕ, ಕೊಕ್ಕಸಮುದ್ರ ಮಹಾಲಕ್ಷ್ಮಿಕ್ಷೇತ್ರ ಯಿಲ್ಲಿಗೆ ಯೆಂಟು ಹರದಾರಿ ಯಿದ್ದೀತೆ.

೧ ಉತ್ತರದಿಕ್ಕಿಗೆ ನದಿ ಆಚೆಗೆ ಮೊಗಲಾಯಿ ತಾಲೂಕಿನ ಕನಕಗಿರಿ ನರಸಿಂಹಕ್ಷೇತ್ರ, ಯಿಲ್ಲಿಗೆ ಯೆಂಟು ಹರದಾರಿ ಯಿದ್ದೀತೆ.

ಯೀ ಪ್ರಕಾರ ಕೈಫಿಯತು ಬರಕೊಟ್ಟದ್ದು ದೇಶಾಯಿ ಶೀನಪ್ಪ. ಯೀ ಗ್ರಾಮದಲ್ಲು ಕಬ್ಬಿಣ ಆಗುತ್ತಯಿದೆ. ಸೊಂಡೂರು ಬೆಟ್ಟದಿಂದಾ ಬಿಳೆಕಲ್ಲುಗಳು ತಂದು ಮಾಡುತಾರೆ.

❖❖

೧೦೫
ಕೈಫಿಯತು ಕುರುಗೋಡು, ತಾಲೂಕೆ ಬಳ್ಳಾರಿ

ಮೆಕೆಂಝಿ ಸಂಪುಟ : ೩೬೯

ಪೂರ್ವದಲ್ಲಿ ಯೀ ಗ್ರಾಮಕ್ಕೆ ಪಶ್ಚಿಮಭಾಗ ಯರಡು ಯೋಜನೆಯಲ್ಲಿ ದಕ್ಷಿಣಕಾಶಿಯನಿಸುವ ಪಂಪಾಕ್ಷೇತ್ರವು. ಮತಂಗ, ಮೌಲ್ಯವಂತ, ಹೇಮಕೂಟ, ರುಷಿಶೃಂಗ, ಕಿಷ್ಕಿಂದಾ ಯೀ ಪಂಚಪರ್ವತದ ಮಧ್ಯೇ ಭಾಸ್ಕರಕ್ಷೇತ್ರೇ ತುಂಗಭದ್ರಾತೀರೇ ಶ್ರೀ ಪಂಪಾವಿರೂಪಾಕ್ಷೇಶ್ವರಕ್ಷೇತ್ರಕ್ಕೆ ಪೂರ್ವದ್ವಾರಯೆನಿಸುವ ನಂದೀಶ ಯಿರುವಂಥಾ ಸ್ಥಳ ನಂದಿದುರ್ಗಯೆನಿಸುವುದಕ್ಕೆ ಕಾರಣ, ಪಂಪಾವಿರೂಪಾಕ್ಷದೇವರಿಗೆ ಪೂರ್ವದ್ವಾರಯಂದು ನಂದೀಶ್ವರ ಯಿರೋದ್ದರಿಂದ ಯೀ ದುರ್ಗಗಳಿಗೆ ನಂದಿದುರ್ಗಯೆಂಬೊ ನಾಮಾ. ಯೀ ಪ್ರಕಾರ ಪಂಪಾಕ್ಷೇತ್ರಮಹಾತ್ಮೆಯಲ್ಲಿದೆ. ಪ್ರಾಕೃತಯಿಂದಾ ನಡೋ ನಾಮಾ ನಂದೀಶ್ವರಗೆ ಶೃಂಗಗಳು ಕಿರಿಯಾಗಿ ಯಿಹೋದ್ದರಿಂದಾ ಕಿರಿಗೋಡು ಯೆಂಬೊ ನಾಮಾ, ಅದಕ್ಕೆ ಜನರ ವಾಡಿಕೆ ಕುರುಗೋಡು ಯಂಬೊ ನಾಮಾ. ಯೀ ಸ್ಥಳಕ್ಕೆ ಆವರ್ತವಾಗಿ ಯಿರುವಂಥಾ ಪರ್ವತಗಳ ವಿವರ:

೧ ಪ್ರಕೃತ ಯಿರುವಂಥಾ ಕಿಲ್ಲೆದುರ್ಗಕ್ಕೆ ಪ್ರಾಚೀನನಾಮಾ ಯರ್ರದುರ್ಗ. ಗುಡ್ಡ ಕೆಂಪಾಗಿ ಯಿರುವದರಿಂದ ಯರ್ರದುರ್ಗ.

೧ ಯಿದಕ್ಕೆ ಪಶ್ಚಿಮ ಬೂದೀಕೊಳ್ಳದ ಗುಡ್ಡಾ. ಯಿದರಲ್ಲಿ ಮಣ್ಣು ಬೂದಿಯಾಗಿ ಯಿದೆ.

೧ ಯಿದಕ್ಕೆ ಪಶ್ಚಿಮ ಬಾಳೆಕೊಳ್ಳದ ಗುಡ್ಡಾ. ಅಲ್ಲಿ ಪೂರ್ವದಲ್ಲಿ ಅರಸುಗಳು ಸ್ತ್ರೀಗಳು ಜಲಕ್ರೀಡೆ ಆಡುತಾ ಯಿಹೊ ಸ್ಥಳವಾದ್ದರಿಂದಾ ಬಾಳೆಕೊಳದ ಬೆಟ್ಟಾಯಂಬೊ ನಾಮಾ.

೧ ಯಿದಕ್ಕೆ ಪಶ್ಚಿಮ ಬಾಲೆಕಿಲ್ಲೆ. ಯಿದಕ್ಕೆ ಪ್ರಾಚೀನ ಹಳೆ ಕುರುಗೋಡು ಗ್ರಾಮಯಿದ್ದಾಗ್ಯೂ ಫಿರಂಗಿಸಾಲುದುರ್ಗಯಂಬೊ ನಾಮಾ.

೧ ಯಿದಕ್ಕೆ ಉತ್ತರ ಚೆಂ[>ಜೆಂ]ಕಲವರ ಹರವಿನ ಗುಡ್ಡಾಯಂಬೋ ನಾಮಾ. ಪೂರ್ವದಲ್ಲು ಹಳೆಕುರುಗೋಡು ಗ್ರಾಮಯಿದ್ದಾಗ್ಯೂ ಗೊಲ್ಲರ ವಳಗೆ ಜೆಂಕಲವರು ಯಂಬೋ ನಾಯಕರು ಉಕಡದಲ್ಲಿ ಯಿದ್ದರು. ಆದ್ದರಿಂದಾ ಜೆಂಕಲಹರವಿನ ಗುಡ್ಡಾಯಂಬೋ ನಾಮಾ.

೧ ಯಿದಕ್ಕೆ ದಕ್ಷಿಣ ಹಳೆಕೋಟೆ ಗೋಡೆ ಹೊಂದಿ ಯಿಹೋದು[+ಕೊಂಡಲನಾಯಕ ಗುಡ್ಡ] ಅಂಥಾ, ಕೊಂಡಲನಾಯಕಯಂಬೊ ನಾಯಕ ಆ ಸ್ಥಳದಲ್ಲು ತತ್ಪೂರ್ವದಲ್ಲು ಯಿದ್ದದರಿಂದ ಆತನ ಹೆಸರೆ ಆ ಬೆಟ್ಟಕ್ಕೆ ಆಯಿತು.

೧ ಯಿದಕ್ಕೆ ಪಶ್ಚಿಮ ಕೋಳೀಗುಡ್ಡಾ. ಆ ಬೆಟ್ಟದ ಆಕಾರ ಕೋಳಿ ಆದ್ದರಿಂದಾ ಕೋಳಿಗುಡ್ಡಾಯಂಬೊ ನಾಮಾ.

೧ ಯಿದಕ್ಕೆ ಪಶ್ಚಿಮ ರಾಮಲಿಂಗನ ಗುಡ್ಡಾ. ಅಲ್ಲಿ ರಾಮಲಿಂಗದೇವಸ್ಥಾನ ಯಿದ್ದ ಸ್ಥಳ. ಯಿದಕ್ಕೆ ಉಪನಾಮ ನಾಗಲಿಂಗಯ್ಯ ಯಂಬೊ ಮಹಾತ್ಮ ಕೆಲವು ದಿವಸ ತಪಸು ಮಾಡಿಕ್ಕೊಂಡು ಯಿದ್ದದರಿಂದಾ ನಾಗಲಿಂಗಯ್ಯನ ಗುಡ್ಡಾಯೆಂದು ಅಂಥಾರೆ.

೮

ಯಿದು ಹೊರ್ತು ಪಶ್ಚಿಮಕ್ಕೆ ದಿಡಿ[>ಡ್ಡಿ] ಹನುಮಂತನ ಕನಿ[>ಣಿ]ವಿ ೧. ಯಿದರ ಸಮೀಪ ಹಾಲಭಾವಿ ಕಣಿವಿ. ಸದರಿ ಯೀ ಬೆಟ್ಟಗಳು ವಳಗೆ ಮಾಡಿ ಸುತ್ತು ಕೋಡೆ ಮಧ್ಯದಲ್ಲಿ ಹಳೆ ಕುರಗೋಡುಯಂಬೊ ಸ್ಥಳವನ್ನು ಪ್ರಖ್ಯಾತಿಯಾಗಿ ಯಿದ್ದ ಸ್ಥಳ. ಕುಂತಳದೇಶಕ್ಕೆ ಸಲ್ಲುವ ಕುರಗೋಡು ಪಟ್ಟಣ ಕೋಟೆದುರ್ಗಯಂದು ನಾಮಾ, ಯಿದಕ್ಕೆ ರಾಜಧಾನಿ. ಪೂರ್ವದಲ್ಲಿ ಯೀ ವೂರಿಗೆ ೫ ಹರದಾರಿ ಯಿಶಾನ್ಯಭಾಗದಲ್ಲು ಕುಂತಳನಗರಾಯಂಬೊ ನಾಮ. ಪ್ರಾಚೀನ ಪ್ರಕೃತ ಕುಗ್ರಾಮವಾಗಿ ತೆಕ್ಕಲಕೋಟೆ ಸಮ್ಮತು ಬಲಕುಂದಿಯೆಂಬಾ ನಾಮವಾಗಿ ಯಿದೆ. ಯೀ ಕುರಗೋಡಿಗೆ ಸುತ್ತ ಯಿರುವಂಥಾ ಪ್ರಾಚೀನ ಪ್ರಸಿದ್ಧಿಗ್ರಾಮಗಳ ವಿವರ:

೧ ಪೂರ್ವಕ್ಕೆ ಯರಡು ಹರದಾರಿಯಲ್ಲಿ ಶಿಂದಿಗೆರೆಯೆಂಬೋ ಗ್ರಾಮ.

೧ ಅಗ್ನಿದಿಕ್ಕು ಯರಡು ಹರದಾರಿ ಕೊಳೂರು ದೇವಾಲಯಗಳು.

೧ ದಕ್ಷಿಣ ಭಾಗ ನಾಲ್ಕು ಹರದಾರಿ ಕೊಳಗಲ್ಲುಯೆಂಬೊ ಗ್ರಾಮ ದೇವಾಲಯ ಮುಂತಾದ್ದು ಉಂಟು.

೧ ನೈರುತ್ಯ ನಾಲ್ಕು ಹರದಾರಿಯಲ್ಲಿ ಕುಡ[+ತಿನಿ]ಯಂಬೊ ಗ್ರಾಮ ದೇವಾಲಯ ಮುಂತಾದ್ದು ಉಂಟು.

೧ ಪಶ್ಚಿಮ ೩ ಹರದಾರಿ ಮೇಲೆ ವೊರವಾಯಿ ಯಂಬೋ ಗ್ರಾಮದಲ್ಲಿ ವಿಘ್ನೇಶ್ವರ ದೇವಾಲಯ, ರಾಮಲಿಂಗದೇವಾಲಯ, ಯೀ ಉಭಯ ದೇವಾಲಯದಲ್ಲಿ ಶಿಲಾಶಾಸನಗಳು ಹಳೆಕನ್ನಡ ಅಕ್ಷರದಿಂದಾ ಯಿದೆ. ಅದರಲ್ಲಿ ಶಾಸನದಲ್ಲು ರಾಜಮಲ್ಲ, ಯೀತನ ಮಗನಿರುಂಗೊಳಭೂಪಾಲ, ಯೀತನ ಮಗ ಗಿ[>ನಿ]ಮ್ಮಡಿ ರಾಜಮಲ್ಲದೇವಯಂದು ಯಿದೆ. ಶಕ ಮಾತ್ರ ಹಾಕಲಿಲ್ಲಾ. ಯರಣ್ಣೆ ಶಾಸನದಲ್ಲು ಯಾದವನಾರಾಯಣಚಕ್ರವರ್ತಿ ವೀರಬಲ್ಲಾಳರಾಯನ ಪ್ರಧಾನಿ ಬಸವದಂಡನಾಯಕಾಯಂದು ಯಿದೆ. ಯಿದರಲ್ಲಿ ಶಕವಿಲ್ಲಾ, ಸಂವತ್ಸರ ಮಾತ್ರ ಯಿಥೆ. ಮೂರನೆ ಶಾಸನದಲ್ಲಿ ಜಗದೇಕಮಲ್ಲ ಶಕ ೧೦೭೧ಯಂದು ಯಿದೆ. ಯಿವರ ಕಡೆ ಕೆಲವು ನಾಮಗಳ ಹೆಸರು ಯಿದೆ. ನಾಲ್ಕನೆ ಶಾಸನದಲ್ಲು ಜಗದೇಕಮಲ್ಲ ಯೀತನ ಪ್ರಧಾನಿ ಕಲಿಯ ಭೀಮರದ ನಾಯಕ, ಶಕ . . . . ೧೧೦೮ ಯಂದು ಯಿದೆ. ಯೀ ಗ್ರಾಮ ಪ್ರಾಚೀನಸ್ತಳಉ.

೧. ವಾಯವ್ಯದಿಕ್ಕಿಗೆ ೧ ಹರದಾರಿಯಲ್ಲು ಭಟ್ಟರಹಳ್ಳಿಯೆಂಬೊ ಗ್ರಾಮದಲ್ಲಿ ಭಟ್ಟರು ಯಿರುವಂಥಾ ಸ್ಥಳ. ಯಿವರಿಗೆ ಪೂರ್ವದಲ್ಲು ಕೊಮಾರರಾಮಾಯಂಬೊ ಅರಸು ಭಟ್ಟರಿಗೆ ಉಮ್ಮಳಿಯಾಗಿ ಕೊಟ್ಟ ಗ್ರಾಮಾ. ಆ ಗ್ರಾಮದಲ್ಲು ಹಳೆಕನ್ನಡ ಶಾಸನ ವಡದು ಹೋಗಿ ಯಿಥೆ. ಯಿದಕ್ಕೆ ಹರದಾರಿಯಲ್ಲಿ ವೀರಾಪುರ ಗ್ರಾಮದಲ್ಲು ದೇವಾಲಯ ಯಿದೆ.

೧. ಉತ್ತರ ಹಾವಿನಹಾಳು ಗ್ರಾಮ ೧. ಯೀ ಗ್ರಾಮದಲ್ಲು ದೇವಾಲಯಗಳು ಯಿದೆ. ಗುಂಡಿಗನೂರು, ಯೀ ಗ್ರಾಮದಲ್ಲು ದೇವಾಲಯಯಿದೆ. ಯೀ ಗ್ರಾಮದ ಸಮೀಪವಾಗಿ ಶಿರಿಗೆರೆಯೆಂಬೊ ಗ್ರಾಮದಲ್ಲಿ ದೇವಾಲಯಗಳು ಯಿದೆ.

೧. ಯೀಶಾನ್ಯ ಭಾಗದಲ್ಲು ೫ ಹರದಾರಿ ಬಲಕುಂದಿಯಂಬೊ ಗ್ರಾಮಕ್ಕೆ ಪ್ರಾಚೀನ ನಾಮಾ ಕುಂಥಳನಗರಾಯಂಬೊ ನಾಮದಿಂದಾ ರಾಜಧಾನಿ ಸ್ಥಳ.

೮ ಯೀ ಗ್ರಾಮಗಳು ಪೂರ್ವಪ್ರಾಚೀನ ಪ್ರಸಿದ್ಧಿ ಸ್ಥಳಗಳು. ವರ್ತಮಾನ ಕಾಲದಲ್ಲು ಕೊಚಿತ ಗ್ರಾಮಗಳಾಗಿ ಯಿಧೆ.

ಯೀ ಕುರಗೋಡು ಗ್ರಾಮದಲ್ಲು ಆಳಿದ ಅರಸುಗಳ ವಿವರ:

ಶಿಲಾಶಾಸನದಲ್ಲು ಯಿರುವಂಥಾ ಅರಸುಗಳು ಮಾಡಿ ಹಾಕಿಸಿದ ಶಾಸನದ ಸಾರಾಂಶ ಕೆಳಗೆ ಬರದು ಯಿದೆ.

ವೊರವಾಯಯಂಬೋ ಗ್ರಾಮದಲ್ಲು ಯಿರುವ ಶಾಸನದ ಸಾರಾಂಶ:[೧]

೧ ಶ್ರೀಮದ್ವಿಗ್ನೇಶ್ವರಂ ಶ[+ಂ]ಕರಸುತನಮರೇಂದ್ರ ಖಗೇ[>ಸುರೇ]ಂದ್ರ ಸ್ತೊಮಾಭ್ಯಾವರ್ಣಾನಪ್ರಾ [>ಪ್ರೊ]ನತ ಪದಕಮಳಂ। ರಕ್ಷಿಸುತ್ತಿರ್ಕದಿಶೇಂ[>ಧೀಶಂ] ದ್ರಂ[>ಪ್ರೇ]ಮ ಕೈಗಣಾಲಯಂ[>ಣ್ಮಲೀಯಂ] ಬಲವೊಸರ [>ಬಲಿವೆಸರೆ]ಸೆವಿ ಯೆಚಿಸೆದ್ದಿ ದ್ರ[>ಪ್ರ]ಮುಖ್ಯಂಗಿ ಮಾರ್ತಾಂಡಾಂಬರುಳಂ।ನೆಗೆ[>ಗೆ]ವಮರವರಂ ಸರ್ವ್ವೇದಾರ್ಥವೇದ್ಯಂ। ನವರತಪ್ರಾತದಿಂಡ [>ರತ್ನವ್ರಾತದಿಂದ] ಜಕ[>ರ]ಟಕಮಟ ಪಾಠಿಸ[>ನ] ಸಂತಾನದಿಂದುದ್ಭವನಖ ಪ್ರಾಢವಂ [>ವನೇಭಪ್ರೋದ್ಭವ]॥ ಪ್ರಾನ್ನತ ರಳ[>ಕ]ಬಸಮೂರ್ತಿ [>ಹಂ]ಗಳಿನ್ನಕ್ರಭ[>ಚ]ಕ್ರಪ್ರವರ ಬ್ಯಾಳಾವಳಿ ಕರ್ಕಟ। ಕಟಕದಿನಾಶಂಕು[>ಶಿಂಶು] ಮಾರದಿನಾನಾರವದಿಂದಂ ನಾಡೆಯಂ ಪೂರ್ಣನು ಮೋಹಮೋವಧಿಕ[>ಘೂರ್ಣಿಸುವುದಧಿಕ] ಗಂಭೀರ ಭದ್ರಂ। ಆ ಸಮುದ್ರದ ಸುತ್ತಿಂಗೊಳಗಾದ ಜಂ[+ಬುದ್ವೀಪ] ಭೂಪಾಳ ಭಂಕೆ[>ಚಂಚ]......... ಕಿರೀಟಾಮಾನವಾದ ಮೆರುಗಿರಿಯಾ ತೆಂಕಣ ಭಾರತ ವರಖಂಡದೊಳಿ ಜನಪದಾತಿಶಯಮೆನಿಸಿ ಬಲಕುಂಟೆಯೆಂಬ ನಾಡುಂಟದ ಸುರೇಂದ್ರನಾಜ್ಞೆಯಂ ಮಂಥರ ಗಿರೀಂದ್ರಂ ಪರಿವೇಷ್ಟಿಶಿದುದೆಂಬಂತಿತುಂನತಿರ್ಕವೆಶ[>ತಿಕೆವೆತ್ತ] ಪ್ರಕಾರದಿಂ ರಾಜಧಾನಿ ಕುರುಗೋಡೆನೆವೊಡಾ[>ಸೆವದಾ] ಪುರವರಧೀಶ್ವರ ಗುಣ ಪರಭಾವಮೆಂತೆಂದೆಡೆ। ವರ ಗಾಂಭಿರ್ಯದೊಳುದ್ವ[>ದ್ಘ]ದಾನಗುಣದೊಳು ಸೌಂದರ್ಯದೊಳ್ಧೈರ್ಯದೊಧಿರ[>ಳ್ವರ] ಸತ್ಯವೃತದೊಳು ಪರಾಕ್ರಮದೊಳು ಐಶ್ವರ್ಯದೊಳ್ಗಜದೊಳ್ವರ [>ದೊಳ್ತೇಜದೊಳತಿ]. . . . ಗಳೊಳು ದಯೆಯೊಳಂ ಶ್ರೀ ಪಾರ್ವ್ವತಿಶಾಂಬ್ರು [>ಫ್ರಿ]ನಿರ್ಬ್ಬ[+ರ] ಭಕ್ತಂ ವಿಭೂ ರಾಜಮಲ್ಲನೆಸೆದಂ ಶ್ರೇಸಿದ್ಧ[>ಶ್ರೀ ಸಿಂಧ] ವಂಶೋದಯಂ। ಳಾ[>ಆ]ತನ ತನಯಂ ಭುವನ ಖ್ಯಾತಿಯೊಳೆಸೆದಿರ್ದ ನಳ ನಹುಷನ ಬ್ರದುದೂಂದಾ ತವದಾರೆ[>ಪ್ರಿಥುಮಾಂಧಾತರ ದೊರೆ] ಯೆನಿಸಿದಂ ನನ್ವಿತನಿರಂಗೊಳದೇವ ನುರ್ಬಿಪಾಳಂ ತತನಯಂ

---

೧. ಮೂಲಶಾಸನಕ್ಕಾಗಿ SII IX-i ನಂ ೩೨೨ ನೋಡಿರಿ (ಸಂ)

ಸ್ಥಿರಸತ್ಯವರ್ಧಿರ್ಮಂ[>ದಿರ್ಮಡಿ] ಬಂದುರತನ[>ರ] ದಾನಾದಿ ಸಕಳ ಗುಣಧರ್ಮಾದಿಯೆಂ [>ದಿರ್ಮಡಿಯಿಂ] ದೊರೆರ್ವ[>ವ] ತುದು ಷ[>ಪೆ]ಸರಿಂತಿ ದರೆ।ಗಿರ್ಮಡಿರಾಜಮಲ್ಲದೇವ ಸೂಳಿಸನುಂ[>ನೊಳೆನಸಂ] ವೆನಿಸಿ ರಾಜ್ಯಂಗೆಯ್ಯುತ್ತಿರ್ಜ [>ರ್ಪಿ]ನವಾ ನಾದೊ[>ಡೊ]ಳ್॥ ಆನಂದ ಸಂ॥ ದಲ್ಲು ದೇವರಿಗೆ ಮಾನ್ಯಬಿಟ್ಟು ಯಿದ್ದಾರೆ. ಯೀ ಶಾಸನದಲ್ಲಿ ಯಿರುವ ಅರಸುಗಳು:

೧ ರಾಜಮಲ್ಲ

೧ ಯೀತನ ಮಗನಿರುಗೊಳ ಭೂಪಾಲ

೧ ಯೀತನ ಮಗಗಿ[>ನಿ]ರ್ಮಡಿ ರಾಜಮಲ್ಲ

೩

೨. ಯರಡನೆ ಶಾಸನದಲ್ಲು:[2]

ಸ್ವಸ್ತಿ ಶ್ರೀಮತು ಯಾದವನಾರಾಯಣ ಪ್ರತಾಪಚಕ್ರವರ್ತಿ ಪೊಯ್ಸ್ಯೆ[>ಹೊಯ್ಸ]ಳ ವೀರಬಲ್ಲಾಳದೇವ ರಾಜ್ಯ ಸಮುದ್ಯರಂ ಬಸವಣ್ಣದಂಡನಾಯಕನ ಗುಣಪ್ರಭಾವವೆಂತೆಂದಡೆ॥ ನುಡಿವಂ ಸತ್ಯವಬೊ[>ಚೋ]ಕ್ತಿಯ ಸಕಳ ಧರ್ಮಖ್ಯಾತಿ ಶಯೆದತ್ತಮಂ[>ವ್ಯಾಪ್ತಿಯಿಂದರ್ಥಮಂ] ಪಡೆಯ[>ವ] ವಿಪ್ರಸುತಾ[>ರಾ]ದಿ ಸಿದ್ದ[>ಷ್ಟ]ಜನ ಸಂತೋಷಂತುಜ್ಜ[>ಸಂತುಷ್ಟಿ]ಯಾಗಲ್ಕೆ ತಾಡುದಂವ[>ತಾ ಕುಡುವಂ] ಪ್ರಖ್ಯ[>ದ್ರವ್ಯ]ಮನಿ ಗುಣತ್ರ[>ಣಾಶ್ರ]ಯಮುಮಂ ಲೊಕಂ ಬಬಾಪೂಜೆನ[>ಬಬಾಪ್ಪೆಂಬಿನಂ] ಪಡೆದಂ। ಸದ್ಗುಣ[>ಣಿ] ದಂಡನಾಥಬಸವಂ ಪ್ರಖ್ಯಾತಿಯಂ ಕೀರ್ತಿಯಂ ಕಲಿ[+ಯ]ಮೃತ ದಂಡನಾಥದ ಲಲಿತಾತ್ಮಜನೆಂದೊಡೊಪ್ಪುಗು ಕಲಿತನಮುಂ ಸತಿ[>ಲೆ] ಸತ್ಯಾಮೃತವಾಕ್ಯಂ ಕುಳಿತಿಳಕಂ ಬಸವದಂಡನಾಥಾದಿಪನೊಳ್॥

ಯೀಶ್ವರ ಸಂವತ್ಸರದ ಶ್ರಾವಣ ಬಹುಳ ಅಮವಾಸ್ಯೆ ಶುಕ್ರವಾರ ಸೂರ್ಯಗ್ರಹಣದಂದು ಶ್ರೀ ವಿಗ್ನೇಶ್ವರ ದೇವರ್ಗೆ, ದೇವರಿಗೆ ಮಾನ್ಯ ಬಿಟ್ಟದ್ದು ಬರದಿದ್ದಾರೆ.

ಯಿದರಲ್ಲಿ ಯಿರುವ ಅರಸರುಗಳು:

೧. ಯಾದವನಾರಾಯಣ ಪ್ರತಾಪಚಕ್ರವರ್ತಿ ವೀರಬಲ್ಲಾಳರಾಯಾ, ಯೀತನ ಪ್ರಧಾನಿ ಬಸವಣ್ಣ ದಂಡನಾಯಕ, ಯೀತನ ಮಗ ಬಸವದಂಡನಾಥಾ॥

೩. ಮೂರನೇ ಶಾಸನದಲ್ಲು[3]

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ। ತ್ರೈಲೋಕ್ಯನಗರಾರಂಭಾ ಮೂಲಸ್ತಂಬಾಯ ಶಂಭವೆ॥ ಸ್ವಸ್ತಿ ಶ್ರೀ ಸಮಸ್ತು ಭುವನಾಶ್ರಯಂ ಪೃಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಶ್ರಯ ಕುಲತಿಲಕಂ ಚಾಳುಕ್ಯಾಭರಣಂ ಶ್ರೀಮತ್ಪ್ರತಾಪ ಚಕ್ರವರ್ತಿ

---

೨. ಮೂಲಶಾಸನಕ್ಕಾಗಿ SII IX-i ನಂ ೩೩೪ ನೋಡಿರಿ (ಸಂ)
೩. ಮೂಲಶಾಸನಕ್ಕಾಗಿ SII IX-i ನಂ ೨೫೩ ನೋಡಿರಿ (ಸಂ)

ಜಗದೇಕಮಲ್ಲ ವಿಜಯರಾಜ್ಯಮಾಚಂದ್ರಾರ್ಕತಾರಂಬರಂ। ಸಲೆ ಕಲ್ಯಾಣಪುರದ ನೆಲೆವೀಡಿನೊಳ್ ಸುಖಸತ್ಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಿಮಿರೆ। ಶ್ರೀಮನ್ಮಹಾ ಮಂಡಲೇಶ್ವರ ಬು[>ದ್ದೊ]ರವಡಿನಾಥಂ ಕಾಬ[>ಚ]ರಸ ಗಂದರ್ವ[>ಗಂಗ]ರಸರು ಮುಖ್ಯವಾಗಿ ಶ್ರೀಮನ್ಮಹಾ ಪ್ರಧಾನ ಮಲ್ಲ[>ಲೆ]ಗಳಾದಿತ್ಯಂ। ವಿತರಣ ವಿಕ್ರಮಾದಿತ್ಯಂ ಜೊಗುಡಿ[>ಜಂಗುಳಿ] ಮನ್ನೆಯರ ದಂಡು[>ಗಂಡ] ನುಡಿದಂತೆ। ಗಂಡ ಗಂಡರೊಡ್ಡಿಡಿ[>ಡ್ಡಳಿ]ವ ಮರುಮಾದೊ[>ವುಗೆ]ಕಾವಂ ವ್ಯೊರಿ ಸು[>ಸಾ]ಮಂತ ಸಂಹಾರಂ ರಣರಂಗಧೀರಂ ಶೋಡಚ[>ಸ]ಯಾಚನ ಜನಪ್ಟಫಳ ಪ್ರಧಾಯಕಂ ವಿಗಡಯುವತಿ ಜನಕುನ್ಮ[>ಸ್ಮ]ಸಾಯಕಂ ಇಮ್ಮಡಿ ರಾಜಮಲ್ಲದೇವರಾಜ್ಯ ಸಮುದ್ಧರಣಂ ಕೃತಯುಗಚರಿತ್ರಂದ್ಯೆ[>ತ್ರೋದ್ಧ]ರಣಂ ಕಟ್ಪ್[>ಪ್ಪೆ]ಯರಾ ಪು[>ಹಾ]ರದಾನ ವಿನೊಳ[>ದ] ಕೃತನಿಜ[>ಪರಿಜ]ನಾಪು[>ಹ್ಲಾ]ದಂ ವಿಧ್ವಿಷ್ಟಸಾಮಂತ ವಾಹಿನಿ ತ್ರಿಪುರತ್ರಿನೇತ್ರಂ ಪರಂಗನಾಪುತ ಶ್ರೀ ಭೀಮೇಶ್ವರದೇವರ ಪಾದಾರಾಧಕಂ ಶ್ರೀಮತು ದಮ್ಮಾಂ[>ಸಾಮಂ]ತ ಲಜ್ಜ[>ಖ್ಬೆ]ಯನಾಯಕ ತನ್ನೊಡಮಾದ್ವಿ[>ವುಟ್ಟಿ]ದ ಮಾದೆಯನಾಯಕ ವಿರಪೆಯನಾಯಕ ಆಛೆ[>ಚೆ]ಯನಾಯಕನುಂ ಕ[>ತ]ಳಪರಿಗ್ರಹಮುಂ ದೆಟಪದಿಂತೊಪ್ಪ [>ದೊರವಡಿಯಪ್ಪ]ತ್ಮರ ಪ್ರಭುಗಾಹುಂಡುಗಳುಂ ಮೂಲಿಗೆರು ವೊಂದುಬಾಡೂ[>ವೆಂಟು ಹಿಟ್ಟು]ಗಳು ಸಹಿತ ಕುತ ......ಕ್ತನೂರ ವಿರೂಪಾಕ್ಷದೇವಸ್ಥಾನಮುಮಂ ದ್ಯಾನೂರ ಮಹಾಕಾಳ ದೇವರ ಸ್ಥಾನವನಮುಂ ನೆಲ ಕುರುಗೋಡ ಬೋಗೇಶ್ವರ ದೇವಸ್ಥಾನಮಮಂ ಶಕ ವರುಷಂ ೧೦೭೧ನೇಯ ವಿಭವ ಸಂವತ್ಸರ ಪುಷ್ಯ ಶು॥ ೧೦ ಸೋಮವಾರದಂದುತ್ತರಾಯಣ ಸಂಕ್ರಾಂತಿಯ ದೇವರಿಗೆ ಬ್ರಾಹ್ಮರಿಗೆ ಮಾನ್ಯ ಕೊಟ್ಟದ್ದು ಬರದು ಯಿದೆ. ಯಿದರಲ್ಲಿ ಯಿರುವ ಅರಸರುಗಳು:

೧ ಜಗದೇಕಮಲ್ಲ

೧ ಯಿಮ್ಮಡಿ ರಾಜಮಲ್ಲ

೨ ಯಿವರ ಕಡೆಯಿರುವ ನಾಯಕರ ಹೆಸರು.

೪ ನಾಲ್ಕನೇ ಶಾಸನ :[೪]

ಶ್ರೀಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವಿವಲ್ಲಭಂ ಮಹಾರಾಜಾಧಿರಾಜ ಪರಮೇಶ್ವರಂ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀ ಮಜ್ಜಗದೇಕಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕತಾರಂಬರಂ ಸಲ್ಲುತ್ತಮಿರೆ। ವಾಸು[>ಪೊಟ್ಟ]ಳಗೆರೆಯಾ ನೆಲೆವೀಡಿನೊಳ್ ಸುಖಸಂಕಥಾವಿನೋದದಿಂದ ರಾಜ್ಯಂಗೈಯುತಿರೆ ಸ್ವಸ್ತಿಸ್ತನರೇ[>ಸ್ವಸ್ತ್ಯನವ]ರತ ಪರಮಕಲ್ಯಾಣಭ್ಯೂತುರು[>ಭ್ಯುದಯ] ಸಹಸ್ರ ಕ್ಷೆ[>ಫ]ಳಭೋಗ ಬೋಗಿನಿ ದ್ವಿತಿಯ್ಯಲಕ್ಷ್ಮಿಸ್ವರ್ಮನೆ ಹಾರಿ[>ಯೆರ್] ಶ್ರೀಮನ್ ಜಗದೇಕಮಲ್ಲದೇವರ ವಿಸಾಳಾರಸ್ತ[+ಳ] ಜಯಾಂಗನಾಲಬ್ದೆ ನೊಣಂಬನವಸಿ[>ನಣುಗಿ] . . . . ನಾರ್ವಿ[>ಮಾ]ದಿ ಸಮಸ್ತ ಪ್ರಸಿಸ್ತ ಸಹಿತ। ಶ್ರೀಮನ್ ಜಗದೇವಳದೇವಿಯರು ಸಮಧಿಗತ ಪಂಚಮಹಾಶಬ್ದಮಹಾಮಂಡಲೇಶ್ವರಂಮ[>ಪ]ಲ್ಲವ

---

೪. ಮೂಲಶಾಸನಕ್ಕಾಗಿ SII IX-i ನಂ ೬೨ ನೋಡಿರಿ (ಸಂ)

ಕುಳತಿಳಕನಮೊಪ್ರಮೊಪು[>ಮೋಘ]ವಾ ಕೈ ಕಾಂಬಿ[>ಚಿ] ಪರವರೇಶ್ವರಂ ಶ್ರೀಮನ್ಮಹಾಮಂಡಲೇಶ್ವರಂ ದ್ವಿತಿ[>ನೊದ]ಯಾದಿತ್ಯ ದೇವರುಮಿರ್ದ ಶಕ ವರುಷ . . . . ನೇಯ ಧಾತು ಸಂವತ್ಸರ ದುತ್ತರಾಯಣ ಸಂಕ್ರಾತಿಯಂ॥

ದೇವರಿಗೆ ದಾನಾ ಕೊಟ್ಟದ್ದು ಬರದು ಯಿದೆ.

ಯಿದರಲ್ಲಿ ಯಿರುವ ಅರಸು ಜಗದೇಕಮಲ್ಲ, ಯೀತನ ಶ್ರೀ[>ಸ್ತ್ರೀ] ಜಗದೇವಳದೇವಿಯರು, ಯೀತನ ಪ್ರಧಾನಿ ಭೀಮರದ ಕಲ್ಲೆಯದನಾಯಕರು. ಅಂತು ಹಾರವಾಯಿಯಂಬ ಗ್ರಾಮದಲ್ಲು ಯಿರುವ ಶಾಸನ ನಾಲ್ಕು. ಅದರಲ್ಲಿ ಯಿರೊ ಸಾರಾಂಶ ಬರದು ಯಿದೆ. ಕುರುಗೋಡಿನಲ್ಲಿರುವ ಶಾಸನದ ಸಾರಾಂಶ ಬರದು ಇದೆ:

೧ ಕಲಿದೇವ[೧] ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯನಗರಾರಂಭಾ ಮೂಲಸ್ಥಂಬಾಯ ಶಂಭವೆ॥ಶ್ರೀರಾಮಾರಮಣ ಪ್ರಸೂತ ಮಹಿಮಂ। ಬೃದಾರಕೊದಾರಭ್ಯ ಜಾರಾಧ್ಯಂ। ತ್ರಿದಶಾಧಿನಾಥನಗರ್ಜಂ ಭಬತ್ತುಬಾಲೊಉಕಾಸ್ಮಿರೊಸ್ಥಳನಬ್ಜ। ನವರೆನಂತ ತ್ರೈಲೊಕ್ಯನಿಸ್ಥೊರಂ। ಶ್ರೀಕಲಿದೇವನೊಲ್ದು ನಮಗೆ ಸಿವಾರ್ಥಸಂಸಿದ್ಧಿಯಂ॥

॥ವೃತ್ತ॥ ಅಂತು ಜಗತ್ಕರ್ತನೆನಿಸಿದ ಮಹಾದೇವನೆಂದುದ್ಭಾವಿತಮಾಡಿ[>ದಿ]ಳಾವನಿತೆಗೆ ಕೊಂಬ ಗ್ರೊದ್ರೆಯರಿತೊ ಭದ್ರಮೆನಿಸಿದ ಸಮುದ್ರಮಂತೆನೆ ॥ವೃತ್ತ॥ ಮದುವನಿರೆಭನಿರಾಶ್ಚಕ ಕರಿಮಕರೊಬ್ಬಡಂ। ಮಾಡುಕಂಗಡುಪದನಾನಾನಕ್ರ ಭಕ್ರಕ್ರಕಭಕಮಠಲೊಠತ್ಸು ಪಾಟಿನರಾಜೆ ವಿದಿತಕ್ಷ ಪ್ರಾಡಕಾದಿ ಪ್ರಭಳ ಜಳ ಭಮನಿಕ ಸಂಕ್ಷೋಬ ಪ್ರಬ್ಧಬ್ಧವಾಕಾಪೂತ ಭೂತೊದ್ಭಹಾಳಲಹಾರಿಕಾಸ್ವಾರ ಭದ್ರಂ ಸಮುದ್ರಂ ॥ವೃತ್ತ॥ ಅಂತು ಜಂಬೂದ್ವೀಪದೊಳೀ ಬರತ ಮಹಿಕಾಂತೆಯ ಕುಂತಳದ ತೆಸೆಲೊತಿರ್ದ್ದ ಕುಂತಳದೇಶದ ತುಂಗಭದ್ರಾನದಿಯೆಂ ತೆಂಕಲಾ॥ ವನರುಹಾಷಂಡದಿಂ ಬೆಳೆದಕೆಯ್ದೊಲಿದಿಂ ಸಹಕಾರ ಸತ್ವಸನ ಅಂವಗರುಗಳ ತಿಳಕ ಪ್ರತಳ ಪ್ರವಾಳ ನೂತನ ತರನಾ ಗಂಡಾಗ ಸಕಳರ್ತ್ಥಕನನ್ವಿನ ದಿನ್ವವೆಯ್ದೆ ತಾನೆ ನಲಿದು ಬಾಲ್ಲಕುನ್ದೆ ನಡುನಾಳ್ತರದೆಷ್ಟಗುವೆತ್ತ ನೊರ್ಪಡಂ॥ ಅಲ್ಲಿ ಪಟ್ಟಣಂ ಕುರುಗೋಡ ದುರ್ಗಂ ಮೆಂತನೆ॥ ವೃತ್ತ॥ ಚೊಳನಾಳಾಳ ಪಾಡ್ಯಮ[>ಮಾಡುವ]ದು ಗೂರ್ಜರಂ ನಸತಿ[>ಲೆ]ತರ್ಜಕುಂ। ಕರ ಲಾಳನ ನಾಳಿಮಾಗುದು ಪಾಂಡ್ಯ। ಕನ್ನಡ ತೆಗು ತೆಲುಂಗಭೂಪಾಳನ ನೆಳಿದಿರ್ಗ್ಗಿಯನೆ ಮುಡು ಬದಿ ಕುರುಗೋಡ ಕೊಟ್ಟಂತಾ ಕೊ[>ಕಾ]ಳಗ ಮೆಂತೆಂದೆಡ॥ ಘು[+ಮ]ಡಿಪೆಬ್ಬಾ[>ರ್ಚು]ಮದಬ್ಬತಿ[>ಚ್ಚರಿ] ಯಾರೊ ಕಾದುರಿಮಂ ॥ಕ॥ ಆ ಪುರಮಂ ಪ್ರತಿಪಾಳಿವ॥ ಭೂಪ ಶಿಖಾಮಣಿ ಶಿ ವ್ರತ ಚೂಡಾಮಣಿ ದಿಗ್ವ್ಯಾಪಿಯಸೊದರ್ಪಣ। ಮಣಿ ಕಾಪಿತರಿಪುರಾಜಮಲ್ಲನ। ಪ್ರತಿಮಲ್ಲಂ ॥ ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಲೇಶ್ವರನುಂ। ಬೊಗಾವತಿ ಪುರವರಾಧೀಶ್ವರನುಂ। ಸಿತಗರಗಂಡನುಂ। ಸಿಂಧುಗೋವಿಂದನುಂ। ಪಾತಾಳ ಚಕ್ರವರ್ತಿಯುಂ ಶ್ರೀ ವೀರಕಲಿದೇವ ಪಾದಾರಾಧಕಮೆನಿಸಿದ ರಾಜಮಲ್ಲದೇವನ ರಾಜ್ಯಮುತ್ತರೋತ್ತರವಾಗುತ್ತಿರಲು ತತ್ಪಾ[>ತ್ಪು]ರನಿವಾಸಿಗಳಪ್ಪ ಮಮ್ಮುರಿದಂಡಗಳ ಮಹಿಮೆಯಂತಂದೆಡೆ ॥ರಗಳೆ॥ ಸ್ವಸ್ತಿ ಗವರೇಶ್ವರ ಪದಪದ್ಮ ಶಬ್ಬರಸನಾಮಂ[>ಷಟ್ಚರಣರುಂ] ವಿಸ್ತೀರ್ಣ ಸಮಸ್ತ ಗುಣವಿಹಿತಾಭರಣಮಂ ಪಂಚಶಕ[>ತ] ವೀರ ಶಾಸನ ಗುಣಾಢ್ಯರಣರುಂ।

---

೧. ಮೂಲಶಾಸನಕ್ಕಾಗಿ SII IX-i ನಂ ೨೫೩ ನೋಡಿರಿ (ಸಂ)

ಸಂಚಿತ ಸಮಸ್ತ ಧರ್ಮಕನಿಸ್ತರಣಿರುಂ ಭುವರ್ಹಾಕನೆಯ ವಿನಯ ವಿಜ್ಞಾನರುಂ ನವರತ್ನವಾಹನ ಪರಿಕ್ಷಾನವದ್ಯರುಂ। ಶರನೊಠಕಂದರುಂ ಕರಣದಿ ಕಾವರುಂ ಬಿರುದಿಂಗೆ ಬಗುವರಹಾರಣವನೊವೆರುಂ। ತೊದಿ[>ತೋಟಿ]ಯಂದಡಿ ಕೊದಿ[>ಕೋಟಿ]ಲಾಬವೆಂದುಲಿವರುಂ ಆದಂದಭವರಕರ್ನಾಟಕಂ ನಲಿವೆರುಂ। ಆಯ್ಯನಾಳ್ತೆಯ ತಳದಿನಿದುವೆನಿರ್ಗಿರಿದೆನಿಪ ರಯ್ಯೋಮ ದ್ವಾರಾವತಿಪುರಕ್ಕೆ ಶೂರ[>ಕುರು]ನೆನಿಪ ಕುರುಗೊಡ ತಳದೊಳ್ ಗೊ ತಳರದಯ್ಯುರ್ವಿರುಂ ನೆರೆ ನೊರ್ಪಡತೆ[>ವ]ರೊಳಗೊಷಗೊಂಗಜರೊರ್ಬರುಂ ॥ವೃ॥ ಆ ಮುಮ್ಮರಿದಂಡಂಗಳೊಳ ಮಹಾವಿನಹಾಳ ಕಲಿಶೆಟ್ಟಿ ಆನ್ವಯವೆಂತೆಂಣನ॥ ॥ಕ॥ರ್ಪಳಿಯೊಳಗಂ ಶಿಂದವಾಡಿಗೆ। ತಿಳಕದವಾಲೆ ಸಮಾದಿಯನೊಳಳ್ಪಂ। ಷಿಗಳದ ಬಣಜಿಗಣೆ ಮೂಗುಳಬುದ್ಧಿಯ ಕೆಲೆಸೆಟ್ಟಿಯಂ ಪಾಗಳದರಾಮಂ ॥ವೃ॥ ಮುಗುಳಬುದಿಯೆಂ ಪೆಸರಂ ಪಡಿದೊಪ್ಪವ ನೆಲೆ[>ಕೇತಿ] ಸೆಟ್ಟಿಂಗ ಬೋಗಿನಿಂಭದಿಕಬ್ಬೆಗೊಗೆದಿರ್ದ ಸುತರ್ಗೆಣಿಯಾರೆ। ಲೋಕದೊಳ್ ನಾಗಶೆಟ್ಟಿಗೆ ನೆಗಳ್ತೆ ಪೊಗಳ್ತಿಯಲಿ ಬೆಲಿಶೆಟ್ಟಿಂಗೆ ॥ಕ॥ ಅಂತೆನಿಪ ನಾಗಶೆಟ್ಟಿಂಗೆ। ಕಾಂತೆ ಪತಿರ್ಬತಿಗೆ ಮಾಕ।ನಾಬ್ಬೆಗೆ ಸುತರ।ತ್ಯಂಗುನಿ ಮಾದಿಶೆಟ್ಟಿಯು।ಮುಂತಾ ಕಲಿದೇವಶೆಟ್ಟಿಯಂ ಪೆಸರ್ವಿಡೆದನು। ಅಂತಿರ್ಪರೊಳಗೊ ಬಿರುದ ಬಣ್ಣಿಜಿಗರಯಾನರ್ವಿತಪುತ್ರಂ ಕಲಿಶೆಟ್ಟಿ ಗೋತ್ರಪವಿತ್ರಂ ಹಾರಿಯಾಳಪುರದ ಕಲಿದೇವರ ವರಪುತ್ರಂ ಪರಂಗನಾಜನಪುತ್ರಂ॥

ಸಮಸ್ತ ಭುವನಾಶ್ರಯಂ ಶ್ರೀಪೃಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ ಕಳಚೂರ್ಯಕುಳತಿಳಕಂ ಬುಜಬಲಿಮಲ್ಲ ಕುಂತಳದೇಶ ಚಕ್ರವರ್ತಿ ರಾಯ ಮುರಾರಿ ಸಾವಿದೇವರಾಜ್ಯ ಪ್ರವರ್ತಿಸುತ್ತಮಿರಲು ಶಕ ವರುಷ ೧೦೯೭ನೇಯ ಮನ್ಮಥ ಸಂವತ್ಸರದ ಪುಷ್ಯದಮಾವಾಸ್ಯೆ ಸೋಮವಾರ ಸೂರ್ಯಗ್ರಹಂ ಉತ್ತರಾಯಣ ಸಂಕ್ರಮಣ ಪುಣ್ಯತಿಥಿಯಲ್ಲು ಶ್ರೀಮನ್ಮಹಾಮಂಡಳೇಶ್ವರ ಪರಮ ಮಹೇಶ್ವರಂ ರಾಜಮಲ್ಲದೇವರು ಕಲಿಶೆಟ್ಟಿಯಂ ಸುಪ್ರತಿಷ್ಟಿತ ವೇದ ಶ್ರೀ ಕಲಿದೇವರ್ಗೆ ಭಕ್ತಿಪೂರ್ವಕವಾಗಿ . . . .

ದೇವಾಲಯ ಕಟ್ಟಿಸಿ ದಾನಾ ಕೊಟ್ಟದು ಬರದು ಯಿದೆ. ಯಿದರಲ್ಲಿ ಯಿರುವ ಅರಸುಗಳು:

೧ ಕಳಚೂರ್ಯ ಕುಳತಿಳಕಂ ಭುಜಬಲಮಲ್ಲ ಕುಂತಳದೇಶ ಚಕ್ರವರ್ತಿ ರಾಯಮುರಾರಿದೇವ ರಾಜ್ಯ ಪ್ರವರ್ತಿಸುತಿರಲು, ಯಂದಿನ ಶಕ ವರುಷಗಳು ಹಾಕಿಯಿದೆ.

೧ ರಾಜಮಲ್ಲ.

೨

ಯಿವರ ಪುರದಲ್ಲಿಯಿರುವಂಥಾ ವರ್ತ[+ಕ]ನು ಬಹು ಪ್ರತಿಷ್ಟೆ ಪುರುಷನು. ಯೀತನು ದೇವಾಲಯಗಳು ಕಟ್ಟಿಸಿ ಧರ್ಮವನ್ನು ನಡಿಸಿದನು. ಯೀತನ ಹೆಸರು ಮಹಾವಿನಹಳಯಂಬೊ ಗ್ರಾಮದಲ್ಲಿ ಯಿದ್ದ ಕಲಿಶೆಟ್ಟಿ. ಯಿತನ ಮಗ ಮೂಲಪುರುಷಾ . . . .

೧ ಕಲಿಶೆಟ್ಟಿ

೧ ಯೀತನ ಮಗ ಕೇಳಿಶೆಟ್ಟಿ

೧ ಯೀತನ ಮಗ ನಾಗಿಶೆಟ್ಟಿ

೧ ಯೀತನ ಮಗ ಬೇಡಿಶೆಟ್ಟಿ

೧ ಯೀತನ ಮಗ ರುದ್ರಶೆಟ್ಟಿ

೧ ಯೀತನ ಮಗ ಯಲಿಬೇಲಿಶೆಟ್ಟಿ

೧ ಯೀತನ ಮಗ ಮಾಧವಶೆಟ್ಟಿ ೧ ಯೀತನ ಮಗ ನಾಗಿಶೆಟ್ಟಿ

೨ ಯೀತಗೆ ಮಕ್ಕಳು ಯೀತನ ಸ್ತ್ರೀ ಮೂಕನಾಂಬಿಕೆ ಮಕ್ಕಳು॥

೧ ಗೂಣಿಮಾದಿ ಶೆಟ್ಟಿ

೧ ಕಲಿದೇವ ಶೆಟ್ಟಿ

೧೦

ಕುರುಗೊಡದಲ್ಲಿ ಯಿರುವ ಯರಡನೆ ಶಾಸನ :[೫]

ಓಂ ನಮಃ ಶಿವಾಯ॥ ಸಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ। ತ್ರೈಲೋಕ್ಯನಗರಾರಂಭಾ ಮೂಲಸ್ಥಂಭಾಯ ಶಂಭವೆ। ಜಯತಿ ಭುವನಕರ್ತಾ। ದುಷ್ಟರಾ ಪೋರ್ಪುಪಾತಾ೯। ಸಕಳಸುರವರಿಷ್ಟು ಸನ್ನತಾದೊರ್ಯ್ಯ ನಿಷ್ಠಃ। ಪರಮಸುಖಸುಮುತ್ತೆ ರ್ಪೆವತಾ ಚಕ್ರವರ್ತಿ। ಯಿರಿಸುರವರಬ್ರಿಂದ। ಸ್ತೋತ್ರಪಾತ್ರಂ ನಮಾಮಿ। ಶ್ರೀಮದಮರೇಂದ್ರ ಯಕ್ಷಸಘಮಾರ್ಭಿತ। ಭರಣ ನವನಿವನ ಭಾಮ ರುದ್ದ್ಯೆ ಮಾತ್ತೆಂದ್ದಿನ ತನುವಿಗಿ ಮಂಮುರಿದಂಡಾದಿಷ್ವಮಂ ವರೆಳೇ[>ಗವರೇ]ಶಂ। ಶ್ರೀಮದದಮರೇಂದ್ರ। ಯಕ್ಷ ಸೋಮಾರ್ಬಿತ। ಭರಣನವ ನಿವನ। ಭಾಮರುದ್ದ್ಯೆಮಾತ್ತಂದ್ವಿನತನುವಿಗಿ ಮಂಮುರಿದಂಡಾದಿಷ್ವಮಂ ಗವರೇಶಂ॥*

ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ ಕಡ[>ಳ]ಚರ್ಯ ಕುರಕವುಳ ವೂತಾಂಡ ಶ್ರೀ ವುತ್ಯ[+ಂ]ಖವರ್ಮದೇವ ಚಕ್ರವರ್ತಿ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾ ಚಂದ್ರಾರ್ಕತಾರಂ ಸಲುತ್ತಿಮಿರೆ ಕಲ್ಯಾಣಪುರದ ನೆಲೆವೀಡಿನೊಳ್ ಸುಖಸತ್ಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರಲು॥ ಜಂಬುದ್ವೀಪಲಕ್ಷ್ಮೀವದನ ತಿಳಕಮಿಪ್ಪಂತೆ ಬೆಲ್ವಾಗಿ ಲಕ್ಷ್ಮೀಬಾಜಂ। ಶ್ರೀ ತುಂಗಬ್ರಾಪಾ[>ಭದ್ರಾ] ಯುನುರನದಿಯು ತೆಣಕಲೊಪುತ್ತಮಿಕಂ ರಾಜಿತತ್ಕೀರ್ಣಂ ಷುಡ ಪ್ರತತಿಗಂಳಿಸ ಶಾಕಾಂಮ್ರಪುನ್ರಾಗತಾಳೊರ್ವಿರ್ಜ ನಿಕಂಗಳಿಂ ಕಿರಿಗಿರದುಜಗತ್ಸೆಬ್ಯ ಮತ್ಯಂತ್ಯಾಭಭ್ಯಿ॥ ತಿಳಿಗೊಳದಿಂ ಮಡಲ್ತು। ತಳಿತಾರಮಯೆನ್ನೆರೆ ಪೂತು ಕಾಯ್ತುಪೆ॥ ಣ್ತಳಗೆ ವಿಳಾಸಮಪ್ಪವನದಿಂ ಪದಿಕರ್ಗೆ ಕೃಪಾಶ್ರಿ ಮಕ್ಷುದಾವಳಿಯನದೊಗಲಿಯವಣವಾರ್ಗೆ ವೆನಲ್ಕದು ಕಯ್ಯಮಾಗಿ ಕಣ್ಣಳಿಸುವ ಮಡಲತಶಾಲಿವನದಿಂ ಬೆಳಗಾದ ಸಮಸ್ತುಡುಂಕು ಕುಂಗಳಿಗಳ ಪಿಂಡಿನೆನ್ದೆಸೆವಕೆಯ್ಯೊಲದಿಂದ ಮಗಿಯಿರ್ದ್ದವಾಗಿ ಮೂವಳಿಸಿದ ಕೋಟಿಯಂ ಧನ ಧಾನ್ಯ ಸೊಮ್ಮಿನ ಸೋರ್ಕ ನಿನ್ದೆಮಾಗ್ಗೆಳದೆರ್ಗೆ ನಮ್ಮೊಳಂಬಕುಡಿಯೊರ್ಕರ್ಲ ಮಕ್ಕಳಿನೊರ್ಗ ಳೊಪುರ್ಸ॥ ಆವಾಳ ರಾಜಧಾನಿ ಧರಾನಾರಿ ಪೂರಳುಲಿತ ನಾಯುಕವುಣಿವೊಲ್ಸನಾರತ್ನ ಕಿಣ್ಣಿನ ಗಾನಿಕದ ಬಳಿ ಸಿನ್ನಿದ ಕುರುಗೋಡೆಸಗು॥ ಮತ್ತಮೆತನಿರ್ದುವೆಂತೆಂದೆಡೆ॥ ಕುರುಗಿರಿಗಳ್ಕೆ ಮೆರುಗಿರಿಯೆಪ್ಪವೊಲಿರ್ದುದು ತಾನ್ನದಿನದಾವರೆಳಿಗೆರ್ಪ ಯುಂಪರೊದಿನೆಗಳ್ದಿರ್ಪ ವೊಲಿರ್ದುದು ತಾರಕಾ ಸವಾನ ಕುಳ ವುಹಿವಾಂ

೫. ಮೂಲಶಾಸನಕ್ಕಾಗಿ SII IX-i ನಂ ೨೯೭ ನೋಡಿರಿ (ಸಂ)

* ಕಂಡ ಪದ್ಯ ಇಲ್ಲಿ ಎರಡು ಸಲ ಕಾಣಿಸಿಕೊಂಡಿದೆ (ಸಂ)

ಶ್ರೀಬಿಂರ್ಬಸಿದಿರ್ಪವೊಲಿರ್ದು ದಧಾರೆ ಸುಸ್ಥರಾ ಲಲನೆಗೆ ವಕ್ರ ಹಂ ಕರ್ನ್ನ ಹಾಮಿಪುಣವ್ರೊಲಿರ್ದುದು ನೊರ್ಪದಾಪುರ॥ ಆ ಪುರದ ನಳನಳಿಸುತ್ತಮಿರ್ಪ ಲತೆಯುಂ ..ಪಕ್ವಪಳಪ್ರಭಾರದಿಂ ಬಳಬಳಬಳ್ಕವಾಂಬ್ರವನದಿನ್ವತಿ ನಿರ್ಮ್ಮಳ ಪದ್ಮ ಪಡದಂ ತಿಳಕ, ತಮಾಳ, ತಾಳ ಮುಕುಳದ್ರುಮಲೊದ್ರ ಅಂವಣ ಬ್ಯಾರು ಡಾವಳಿಗಳಿ ನಿಕ್ಷೆ ಪರ್ಗೆತಿ ಮನೊಹರವಲ್ಲೆ ಬಹಿಃಪುರಂಕರಂ॥ ಅಲ್ಲಲ್ಲಿಗೆ ತಿಳಿಗೊಳನುಂ। ಮಲ್ಲಿಗೆಯೆಂ ಮಾದವಿ ಲತಾಮಂಟಪಮಂ। ಪಲ್ಲವಿತ ಭೂವನಮುಂ। ಸಲ್ಲಲಿಂತಣೊಡಲೆತ್ತಲುಂ। ಪೊರಪಡಲೊಳ್॥ ಅಂಬೆಗಳಿಂ ಬರಂ ಮಂ। ಸುತ್ತು ಬೆಳ್ವೆನಿಸಿರ್ದ್ದ ಗಂಧಶಳಿಗಳಿಂ ಮತ್ತಂ ಚಕ್ರವಾಕಹಂಷಂ ಸಂಬರದಿಂದೆಸೆವ ಬಹೀ ತಟಾಕದಿನೆಗಳು॥ ಉರುವಣಿಯೆಂದೆಂಬದೂಮಗಂಧಾದ್ರಕಳಿಂಗಚಾಳುಕ್ಯ ಪಾಂಡ್ಯ ಗೂರ್ಜರರೆನಿಪಗ್ಗದನ್ನೆಲೆಗಳೆನ್ನುಳಂ ಭಗಮಂ ನಾಕು ಪ್ರೊಡರಾ।

ಯೀ ಶಾಸನದಲ್ಲಿರುವ ಅರಸುಗಳು ಶೆಟ್ಟಿಗಳು ಸಹಾ ಕಡ[>ಳ]ಚರ್ಯು ಕರಕಮಲಮಾರ್ತಾಂಡ ಶ್ರೀಮಂತ್ಯಂ[>ತ್ಯಂ] ಖವರ್ಮದೇವ ಚಕ್ರವರ್ತಿ ಕಲ್ಯಾಣಪುರದ ನೆಲೆವೀಡಿವನೊಳು ರಾಜಮಲ್ಲದೇವ ಶಕ ವರುಷ ೯೦೯[>೧೦೯೯].

ಯಿದರಲ್ಲಿ ಯಿರುವ ಶೆಟ್ಟಿಗಳು:

ಬಾಗಿಶೆಟ್ಟಿಸುತಂ ಸೂರ್ಯ[>ರಿ]ಶೆಟ್ಟಿ, ಯೀತನ ಅನ್ವಯ ಶ್ರೀಮನ್ ಮಹಾನಾಡಭುವಹಾರಿ ಮಲ್ಲಿಶೆಟ್ಟಿ ಅನ್ವಯ ಭೋ[>ಬಾ]ಗಿಶೆಟ್ಟಿಯ ಸುತಂ ಸೂರ್ಯ[>ರಿ]ಶೆಟ್ಟಿ, ಸಹೋದರ ತನುಬೇಡಿ [>ಸೌಂದರ ತನುರೇಚ]ಶೆಟ್ಟಿ, ಯಿವರಿಗೆ ಮಲ್ಲಿಶೆಟ್ಟಿ ಮಲ್ಲಿಕಾರ್ಜುನದೇವರಿಗೆ ದೀಪಾರಾಧನೆ ನೇವೇದ್ಯಕ್ಕೆ ಸಹವಾಗಿ ಹೊರಗಿಂದಾ ಹೇರಿಗೆ ತಲೆ ಮೊಟ್ಟೆಗಳಿಗೊ ಹಾಗೂ ಸ್ಥಳದ ವಳಗಾದ ತೆಗದುಕ್ಕೊಂಡು ಹೋಗುವ ಹೇರಿಗಳಿಗೂ ತಲೆಮೊಟ್ಟೆಗಳಿಗೆ ಸಹವಾಗಿ ವರ್ತನೆ ನೇಮಕಾ ಮಾಡಿಕೊಟ್ಟು ಯಿದ್ದಾರೆ.

ಪೂರ್ವದಲ್ಲಿ ಹಳೆ ಕುರುಗೋಡದಲ್ಲಿ ಯಿದ್ದ ವಿವರ ಶಿಲಾಗುಡಿಗಳು:

೧ ಮಧ್ಯಭಾಗದಲ್ಲು ಹಿಂಡುಲಿ ಸಂಗಮೇಶ್ವರ

೧ ಯಿದಕ್ಕೆ ಪಶ್ಚಿಮ ವರ್ಜಬಂಡೆ ಬಸವಪ್ಪನ ಗುಡಿ

೧ ಯಿದಕ್ಕೆ ದಕ್ಷಿಣ ತಳಕಾದಲ್ಲಿ ಯೀಶ್ವರನ ಗುಡಿ

೧ ಪ್ರಥಮದಲ್ಲಿ ಬರದ ಹಿಂಡುಲಿ ಸಂಗಮೇಶ್ವರ ದೇವಾಲಯಕ್ಕೆ ಪೂರ್ವಭಾಗದಲ್ಲು ಚನ್ನಕೇಶ್ವರಗುಡಿ

೧ ಯಿದಕ್ಕೆ ಪೂರ್ವ ನಗರೇಶ್ವರನ ಗುಡಿ

೧ ಯಿದಕ್ಕೆ ಪೂರ್ವಭಾಗದಲ್ಲು ಭಾಝಾರ ಬಸವಪ್ಪನ ಗುಡಿ

೧ ಯಿದಕ್ಕೆ ಉತ್ತರ ಜಯಿನ ಬಸ್ತು, ಕೈಲವು ದಿವಸದ ಮೇಲೆ ಅಲ್ಲಿ ಬಸವಣ್ಣನ ಪ್ರತಿಷ್ಟೆಮಾಡಿ ಯಿದ್ದಾರೆ.

೧ ಯಿದಕ್ಕೆ ಪೂರ್ವಭಾಗ ಬಸವೇಶ್ವರಗುಡಿ

೧ ಯಿದಕ್ಕೆ ದಕ್ಷಿಣ ವಿರೂಪಾಕ್ಷೇಶ್ವರಗುಡಿ

೧ ಯಿದಕ್ಕೆ ಉತ್ತರ ತಳವಾರ ಯೀಶ್ವರನ ಗುಡಿ

೧ ಯಿದಕ್ಕೆ ದಕ್ಷಿಣ ನೀಲಕಂಠದೇವರ ಗುಡಿ

೧ ಯಿದಕ್ಕೆ ಪೂರ್ವಭಾಗದಲ್ಲು ಕಲ್ಲೇಶ್ವರಗುಡಿ

೧ ಯಿದಕ್ಕೆ ಪೂರ್ವಭಾಗದಲ್ಲು ಬಸವೇಶ್ವರ ಗುಡಿ

೧ ಯಿದಕ್ಕೆ ದಕ್ಷಿಣ ರಾಜಮಲ್ಲನ ಗುಡಿ. ಯಿದಕ್ಕೆ ರಾಜಮಲ್ಲಿಕಾರ್ಜುನ ಯೀಶ್ವರ

೧ ಯಿದಕ್ಕೆ ದಕ್ಷಿಣ ರಾಮದೇವಯ್ಯನ ಗುಡಿ

೧ ಯಿದಕ್ಕೆ ದಕ್ಷಿಣ ಆಚಾರದ ಭೀಮಯ್ಯನ ಗುಡಿ

೧೬

ಯೀ ದೇವಾಲಯಗಳು ಈಗ ಸಹ ಸ್ವಲ್ಪ ಖಿಲವಾಗಿ ಯಿಧೆ. ಪೂರ್ವದಲ್ಲು ಅನೇಕ ದೇವಾಲಯಗಳು ಯಿದ್ದದ್ದು ಖಿಲವಾಗಿ ಹೋಗಿ ಯಿದೆಯೆಂದು ಹೇಳುತ್ತಾರೆ. ಯರ್ರದುರ್ಗದ ಮ್ಯಾಲೆ ಹನುಮಂತರಾಯನ ಗುಡಿ. ಯೀ ಪರ್ವತಕ್ಕೆ ಉತ್ತರ ಭಾಗದಲ್ಲು ಹುಜಾಳೇಶ್ವರನ ಗುಡಿ. ಯೀ ಪ್ರಕಾರ ದೇವಾಲಯಗಳು ಮುಂತಾದ್ದು ಮಲ್ಲರಾಯರ ವಂಶದವರು ಕಟ್ಟಿಸಿ ಸ್ಥಳವನ್ನು ಪ್ರಬಲಮಾಡಿ, ಕೋಟೆ ಮುಂತಾದ್ದು ಕಟ್ಟಿಸಿ, ಕೆಲವು ದಿವಸ ರಾಜ್ಯಭಾರ ಮಾಡುತಾ ಯಿದ್ದು, ಅವರ ವಂಶ ನಾಶವಾದ ತರುವಾಯ ಕೊಮಾರರಾಮನ ದೊರೆತನಾ ಮಾಡಿದನು.. ತರುವಾಯ

ವಿಜಯನಗರ ವಿದ್ಯಾರಣ್ಯರಿಂದಾ ನಿರ್ಮಿತ ವಿವರ: ಶಾಲಿವಾಹನ ಶಕ ವರುಷ ೧೨೫೮ನೆ ಧಾತು ಸಂವತ್ಸರ ವೈಶಾಖ ಶುದ್ಧ॥೭ ಸೌಮ್ಯವಾರದಲ್ಲು, ಯಿದಕ್ಕೆ ದೃಷ್ಟಾಂತ : ಶ್ಲೋಕ ॥ ವಾಗೆಷ್ವರ್ಕೈನ ಮಿತ ಶಕೆ ಶಾಲಿವಾನಯಾತೆ ಧಾತುರ್ಯ್ಯಾಬ್ದೆ ಸುಗುಣ ಸಹಿತೆ ಮಾಸ ವೈಶಾಖ ನಾಮ್ನೇ। ಶುಕ್ಲಪಕ್ಷೆ ಸುರುಗುರಸಹಿತೆ ಸೌಮ್ಯವಾಸರೆ ಸುಲ್ಲಗ್ನೆ ಸಪ್ತಮ್ಯಾಂ ಶ್ರೀ ವಿಜೆನಗರಿ ನಿರ್ಮಮೆ ನಿರ್ಮಮೇಂದ್ರಾ॥

ಯೀ ಪ್ರಕಾರ ಶ್ಲೋಕಯಿದೆ. ಆ ಸ್ಥಳಕ್ಕೆ ವಿಜಯನಗರಾಯೆಂದು ನಾಮವನ್ನು ಯಿಟ್ಟು ಆ ವಿದ್ಯಾರಣ್ಯಸ್ವಾಮಿಗಳು ಬುಕ್ಕರಾಯನ ಮಗ ಹರಿಹರರಾಯಗೆ ವಿಜಯನಗರದ ಪಟ್ಟಾಭಿಷೇಕ ಮಾಡಿ, ಶ್ರೀ ಮನ್ಮಹಾ ರಾಜಾಧಿರಾಜಪರಮೇಶ್ವರ ಶ್ರೀವಿರಪ್ರತಾಪ ಯಂಬ ಬಿರುದಾವಳಿಯಂ ಕೊಟ್ಟು ಮಾಡಿದರು. ಯೀತನ ತಮ್ಮ ನಗದರಾಯಾ ಕೆಲವು ದಿವಸ ರಾಜ್ಯ ಮಾಡಿ, ಯೀತನ ಮಗ ಬುಕ್ಕರಾಯನು, ಯೀತನ ಮಗ ಹರಿಹರರಾಯಾ, ಯೀತನ ತಮ್ಮ ವಿಕ್ರಮರಾಯಾ, ಯೀತನ[>ನೆ] ಬುಕ್ಕರಾಯ, ಯೀತನ ಮಗ ಪ್ರವುಡದೇವರಾಯ, ಯೀತನ ಮಗಾ ವಿರೂಪಾಕ್ಷರಾಯಾ, ಯೀ ವರಿಗೆ ಪುರುಷರು ಲಕ್ಕೆ ೧೫೦ ವರುಷ ರಾಜ್ಯವನ್ನು ಮಾಡಿದರು. ಯೀವರಿಗೆ ಶಾಲಿವಾಹನ ಶಕ ೧೪೧೩ ತರುವಾಯ ಕ್ಷತ್ರಿಯ ತುಳುವರು ರಾಜ್ಯಾಧಿಕರ ಮಾಡಿದವರು ನರಸಿಂಗದೇವರಾಯ. ಯೀತಗೆ ಯಿಬ್ಬರು ಮಕ್ಕಳು॥

೧ ರಾಜಾಧಿಕಾರಿ ಅಚ್ಚುತರಾಯ

೧ ದಾಸಿ ಪುತ್ರನಾದ ಕೃಷ್ಣರಾಯ

೨

ಅಚ್ಯುತರಾಯನ ಮಗ ಸದಾಶಿವರಾಯಾ. ಯೀ ನಾಲ್ಕು ಮಂದಿ ೫೧ ವರುಷ ರಾಜ್ಯಭಾರ ಮಾಡಿದರು. ಯಿವರಿಗೆ ಶಾಲಿವಾಹನ ಶಕ ೧೪೬೪ ಕ್ರಿಷ್ಣರಾಯರಿಗೆ ಪುತ್ರಸಂತಾನ ಯಿಲ್ಲದೇ ಹೊದ್ದರಿಂದಾ ಅಳಿಯ ರಾಮರಾಯರಿಗೆ ಹೆಣ್ಣು ಕೊಟ್ಟು ಪಟ್ಟಾಭಿಷೇಕ ಮಾಡಿಸಿದನು. ಯೀ ರಾಮರಾಜನು ೨೨ ವರುಷ ದೊರೆತನಾ ಮಾಡಿದ ತರುವಾಯ, ವಿಜಾಪುರದ ಆದಿಲಶಹಾ ಪಾದಶಹಾ ನಿಜಾಂಶಹಾ ಬಹಿರಿ ಅವರ ಜಮಿಯತು ಬಂದು, ಕ್ರಿಷ್ಣಾನದಿ ತೀರದ ರಕ್ಕಸದ ತಂಗಡಿಯಂಬಾ ಸ್ತಳದಲ್ಲು ಯುದ್ಧವಾಗಿ, ಅಳಿಯ ರಾಮರಾಯನು ಹತವಾದ, ಶಾಲಿವಾಹನ ೧೪೮೬ನೇಯ ರಕ್ತಾಕ್ಷಿ ಸಂವತ್ಸರ ವೈಶಾಖ ಬಹುಳ ಅಷ್ಟಮಿ ಸೋಮವಾರ ಶ್ರವಣ ನಕ್ಷತ್ರದಲ್ಲಿ. ತರುವಾಯ ಬಿಜಾಪುರದ ಮೊದ[>ಗ]ಲಶಾಹಾನವರ ಸ್ವಾಧೀನ, ಪೆನಗೊಂಡೆ ಪರಿಯಂತ್ರ ರಾಜ್ಯ ಸ್ವಾಧೀನವಾಯಿತು. ಠಾಣೆ ಕಾಯಮವಾಗಿ ನಿಂದರಲಿಲ್ಲ. ಪುನಹಾ ಅಳಿಯ ರಾಮರಾಜನ ತಮ್ಮಾ ಕೋದಂಡರಾಮರಾಜನು ಕೆಲವು ಜಮಿಯತ ಭರತಿ ಮಾಡಿಕ್ಕೊಂಡು ಕ್ರಿಷ್ಣಾನದಿ ಆರಂಭಾ ಮಾಡಿಕ್ಕೊಂಡು ಠಾಣ್ಯವನ್ನು ಕಾಯಮ ಮಾಡಿ, ೧೯ ವರುಷ ಆಳೋದರ ವಳಗೆ ಪುನಹಾ ವಿಜಾಪುರದ ಆದಲಶಹಾ ಪಾದಶಹಾನ ಕಡೆಯಿಂದಾ ಫೌಜು ತಗೆದುಕೊಂಡು ಬಂದು, ಕೋದಂಡರಾಮರಾಜನ ಹತಮಾಡಿ, ವಿಜಯನಗರದ ಪಟ್ಟಣ ಗುಡಿಗೋಪುರವನ ಕೆಡಿಸಿದರು. ಶಕ ೧೫೦೫ನೆ ಸ್ವಭಾನು ಸಂವತ್ಸರದ ಮಾಘ ಬಹುಳ ೧೪ ಸೋಮವಾರ ೨೮ ಘಳಿಗೇಯಲ್ಲು ಕರ್ನಾಟಕದೇಶವನ್ನು ನಾಶವಾಯಿತು. ತದನಂತರ ನಾಲ್ಕು ಆಯಿದು ವರುಷ ರಾಜ್ಯ ಅನಾಯಕವಾಗಿ ಯಿತ್ತು.

ತದನಂತರದಲ್ಲಿ ವಿಜಾಪುರದ ಪಾದಶಾಹಾನಲ್ಲಿ ಬಿಜಾಪುರದ ಸೀಮೆಯಲ್ಲಿ ಮುತ್ತಿಗೆಯಂಬೊ ಗ್ರಾಮದ ಗೌಡ ಹಂಡೆ ಕುರುಬರ ವಂಶಸ್ತ ಹಂಡೆ ಬಾಲದಹನುಮಪ್ಪನಾಯಕಯಂಬವನು ವಿಜಾಪುರದ ಪಾದಶಹಾನಲ್ಲಿ ಸರದಾರ್ರನಾಗಿ ಯಿದ್ದ. ದಕ್ಷಿಣರಾಜ್ಯ ಸಾಧಿಸೋ ಬಗ್ಯೆ ಯೀತಗೇ ವಜೀರ ಕಿತಾಬು ಕೊಟ್ಟು, ಬಂಕಾಪುರದ ಜಾಗೀರಿ ಹಪ್ತ ಹಜಾರಿ ಮುನಸುಬೆ ಕೊಟ್ಟು, ದೇಶವನ್ನು ಕೀರ್ದಿ ಮಾಡೋ ಬಗ್ಗೆ ಕಳಿಹಿಸಿದರು. ಆತನು ಬಂಕಾಪುರಕ್ಕೆ ಶಾಲಿವಾಹನ ಶಕ ೧೫೧೦ನೇಯ ಸರ್ವದಾರಿ ಸಂವತ್ಸರದಲ್ಲು ಬಂದು, ಆವಾಗ್ಯೆ ರಾಜ್ಯಾ ಹಾಳಾಗಿ ಯಿದ್ದದ್ದರಿಂದಾ ಆ ಸಮಯದಲ್ಲಿ ಯೀ ಕುರಗೋಡಿಗೆ ಪರಗಣೆಯಂದು ಮೊಕರರು ಮಾಡಿ, ಯಿದರ ಕೆಳಗೆ ೪೮ ಹಳ್ಳಿ, ಯಿದಕ್ಕೆ ಮೂರು ಬಾಬು ಜಮೀದಾರಿ ಮೊಕರರು ಮಾಡಿದ ವಿವರ।

೧. ದೇಶಾಯಿ, ದೇಶಕುಲಕರ್ಣಿಕಿ ಬಾಬು ಯರಡಕ್ಕೆ ಪೂರ್ವದಾರಭ್ಯಾ ಕುರುಗೋಡು ಕೆಳಗೆ ಯಿದ್ದ ಕೆಲವು ಗ್ರಾಮಗಳಿಗೆ ಕಸುಬು ಸಹಾ ಶ್ಯಾನಭೋಗಕಿ. ಯಿದು ಹೊರ್ತು ಪತಿಕೆತನವೆಂದರೆ ಜಕಾತಿ ಬಾಬಿನ ರುಸುಮು, ಕೆಲವು ಭೂಸ್ವಾಸ್ತಿ ಸಹಾ ಅನುಭವಾಮಾಡಿಕ್ಕೊಂಡು ಬರತಿದ್ದವರ ಸಂತತಿ. ವೆಂಗರಸಯ್ಯಯಂಬೊ ಆತಗೆ ನೇಮಕಾ ಮಾಡಿದ ವಿವರ: ಪರಗಣಿ ಮಜಕೂರು ಗ್ರಾಮಾನುಗ್ರಾಮಗಳಲ್ಲಿ ಗ್ರಾಮದ ಮುನಾಸಬು ಪ್ರಕಾರ ಭೂಸ್ವಾಸ್ತಿ. ಯಿದು ಹೊರತು ನೂರು ವರಹಾದ ಬೇರಿಜು ಸರಕಾರಿಗೆ ನಿಗದಿ ಆದದಕ್ಕೆ ಬಾಬುವೊಂದಕ್ಕೆ ಆಯಿದು ಹೊನ್ನಿನ ಪ್ರಕಾರಾ ಬಾಬು ೨ಕ್ಕೆ ಆಯಿದು ವರಹ. ಯಿದರ ಶಿವಾಯ ಜಾಗೀರು ಗ್ರಾಮಗಳು ದೇಶಾಯಿಕಿ ಬಾಬಿಗೆ ಗುತ್ತಿಗಿನೂರು ಯಂಬೊ ಗ್ರಾಮ ೧, ಪಾಲಖಿ ಬಗ್ಯೆ ಜಾಗೀರ ಕಂಚ್ಲಾಯಂಬೊ ಗ್ರಾಮ ೧ –

ಅಂತು ಗ್ರಾಮ ೨, ಯಿದು ಹೊರತು ದೇಶಕುಲಕರ್ಣಿ ಬಾಬಿಗೆ ಜಾಗೀರು ಬೈಲೂರುಗ್ರಾಮ ಗ್ರಾಮ ೧, ಪಾಲಕಿಗೆ ಬೈರಾದ್ಯಾವನಹಳ್ಳಿ ೧ – ಅಂತೂ ೨ ಗ್ರಾಮ.

೧ ನಾಡಗೌಡಕಿ ಪೂರ್ವಾರಭ್ಯ ಕಸುಬೆ ಗೌಡಕೆ ಮಾಡೊವಂಥಾ ಮಲೆಗೌಡನ ಸಂತತಿ, ಅವರು ಪೂರ್ವದಲ್ಲಿ ರಾಜ್ಯ ಅರಾಜವಾಗಿ ಯಿದ್ದ ಸವಯದಲ್ಲಿ ದೇಶಾಗತವಾಗಿ ಹೋಗಿ ಯಿದ್ದದರಿಂದ ಸದರಿ ಹನುಮಪ್ಪನಾಯಕನ ಸಂಗಡಾ ಆಶ್ರಯ ಮಾಡಿಕೊಂಡು ಬಂಕಾಪುರದ ಶಿಮೇಯಿಂದಾ ಬಸವನಗೌಡಾಯಂಬೊ ಆತಗೆ ನಾಡಗೌಡಕಿ, ಕಸುಬೆ ಗೌಡಕಿ ಸಹಾ ಕಿರ್ದು ಮೊಕರರು ಮಾಡಿ, ಸದರಿ ಪೂರ್ವಿಕರು ದೇಶಾಗತವಾಗಿ ಹೋದಂತಾ ಅವರು ಸ್ತಳಕ್ಕೆ ಬಂದಲ್ಲಿ ಉಭಯ ಸ್ವಾಸ್ತಿಯಲ್ಲು ಸಮಭಾಗವಾಗಿ ಅನುಭವಿಸಬೇಕು'ಯೆಂದು ನಿಗದಿ ಮಾಡಿ, ಊರು ಗೌಡಿಕೆ ಮಾನ್ಯ ಪೂರ್ವ ಪ್ರಕಾರ ಮೊಕರರು ಮಾಡಿ ನಾಡಗೌಡಕಿ ಜಮಿದಾರಕಿ ಬಾಬಿಗೆ ಮೊಕರರು ಮಾಡಿದ ವಿವರ : ಬಾಬು ೧ಕ್ಕೆ ಭೂಸ್ವಾಸ್ತಿ. ಕಸಬೇ ಮಜಕೂರು ಪರಗಣೆ ಗ್ರಾಮಾನುಗ್ರಾಮಕ್ಕೆ ಮುನಾಸಬು ಪ್ರಕಾರ ಭೂಸ್ವಾಸ್ತಿ ವರ್ತನೆ ಮೂರು ವರಹಾದ ಬೇರಿಜಿಗೆ ಆಯಿದು ಹೊನ್ನು. ಯಿದು ಹೊರತು ಜಾಗೀರು ಗ್ರಾಮಾ ಕಗ್ಗಲು ೧, ಪಾಲಕಿ ಬಗ್ಯೆ ಪಟ್ಟಣಶರಗು ಯಂಬೊ ಗ್ರಾಮಾ ೧. ಅಂತು ಯರಡು ಗ್ರಾಮ ಸಹ ನಿಗದಿವಾಯಿತು.

೩

ಯೀ ಪ್ರಕಾರ ನಿಗದಿ ಮೂರು ಬಾಬು ಜಮೀದಾರಿಕೆ ಕೆಲವು ಗ್ರಾಮಗಳಲ್ಲಿ ಪೂರ್ವಿಗೌಡ ಶಾನುಭೋಗರು ಹಜೂರು ಯಿದ್ದವರಿಗೆ . . . . ಕಾಯಮು ಮಾಡಿ, ಕೆಲವು ಗ್ರಾಮದವರು ಅರಾಜಕ ಮೂಲದಿಂದ ದೇಶಗತರಾಗಿ ಹೋದಂಥಾ ಗ್ರಾಮಗಳಿಗೆ ಕೀರ್ದಿ ಗೌಡ ಕುಲಕರ್ಣಿಕಿ ನಿಗಧಿಮಾಡಿ, ಪೂರ್ವಿಕರು ಬಂದಲ್ಲಿ ಸಮಭಾಗವಾಗಿ ಅನುಭವಿಸಿಕೊಂಡು ಯಿರೋದುಯಂದು ನಿಗಧಿಮಾಡಿದರು. ಯೀ ಬಾಲದ ಹನುಮಪ್ಪನಾಯಕಗೆ ಬಾಲಹನುಮಪ್ಪನಾಯಕಯಂದು ಹೆಸರಿಗೆ ಕಾರಣವೆಂತೆಂದರೆ: ಯೀತನ ಪೃಷ್ಟದಲ್ಲು ಗೇಣು ಬಾಲ ಯಿದ್ದದರಿಂದ ಬಾಲಹನುಮಪ್ಪನಾಯಕಯಂದು ಹೆಸರು ಯೀತಗೆ. ಬಂಕಾಪುರದ ಶೀಮೆ ಅಲ್ಲಿಂದಾ ಬಳ್ಳಾರಿಗೆ ಬಂದು, ಅಲ್ಲೆ ಕೋಟೆಯನ್ನು ಕಟ್ಟಿಸಿ, ಕುರಗೊಡ ಪರಗಣೆ ೧, ಶಿರಗುಪ್ಪಿ ಪರಗಣಿ, ತೆಕ್ಕಲಕೋಟೆ ಶೀಮೆ ಪರಗಣಿ, ಸಿಂಧನೂರು ಪರಗಣಿ, ದರೋಜಿ ಸಮ್ಮತು ೧. ವಡ್ಡು ಸಮ್ಮತು ೧, ಕಣಿಕಲ್ಲು ಸಮ್ಮತು ೧, ಅನಂತಪುರ ಧರ್ಮಾವರಾ ವಗೈರಾ ಪರಗಣಿಗಳು. ನಂದ್ಯಾಲಾ ಸಿರವಾಳಾ ಪರಗಣೆಗಳು. ಯೀ ಸದರಿ ಶೀಮೆಗಳು, ಕ್ರಿಷ್ಣಾನದಿ ಆರಂಭ ಮಾಡಿತಾಹದು ಪೆನುಗೊಂಡೆ ಪರಿಯಂತ್ರ ರಾಜ್ಯಭಾರವನ್ನು ಮಾಡಿಕೊಂಡು ಬಿಜಾಪುರದ ಪಾದಶಾಹನ ಕೆಳಗೆ ನಡಕೊಂಡು ಯಿದ್ದನು. ಯೀತಗೆ ಮಕ್ಕಳು ಆಯಿದಗೆ ವಿವರ:

೧ ಅಂಕುಶರಾಯ, ಯೀತನು ಬಹು ಧರ್ಮಿಷ್ಟ.
೧ ದ್ಯಾಮಣ್ಣನಾಯಕನು, ಬಹು ಪರಾಕ್ರಮಿ.
೧ ನಿಚ್ಚಮದುವಣಿಗಿ ರಾಮಪ್ಪನಾಯಕ, ಯೀತನು ಬಹುಭೋಗಿ.
೧ ಹಿರೆಮಲ್ಕಪ್ಪನಾಯಕ
೧ ಚಿಕ್ಕಮಲ್ಕಪ್ಪನಾಯಕ.

ಯಿವರು ಪ್ರಸಿದ್ಧ ಪುರುಷರು. ಯಿವರಿಗೆ ಭಟ್ಟರಾಜುಗಳು ಹೊಗಳುವದು ಯೆಂತೆಂದೆಡೆ : "ಭಟ್ಟಾಂಗಿನಿ"

ಧರಿಗೆ ಧರ್ಮಜನಂಕುಶ। ಪರಬಲದೊಳ್ ಬೀಮ ದೇವ। ಅರ್ಜುನ ರಾಮ। ಧುರಧೀರನು ನಕುಲ ಮಲ್ಕನು। ನೆರೆಗೆಲೆ ಸಹದೇವ ಚಿಕ್ಕಮಲ್ಕವಜೀರಾ॥

ಯೀ ಪ್ರಕಾರ ಭಟಾಂಗಿನಿ ಹೊಗಳೊಯಲ್ಲಿ ಸದರಿ ಬರದಲ್ಲಿ ಅಯಿದು ಮಂದಿಗೆ ಹೆಸರು ಯಿಧೆ. ಬಾಲಹನುಮಪ್ಪನಾಯಕನು ಅಯಿದು ಮಂದಿ ಮಕ್ಕಳು ಸಹಿತವಾಗಿ ಬಿಜಾಪುರಕ್ಕೆ ಪಾದಶಾಹನ ಕಡೆ ಬೇಟಿಗೆ ಹೋಗಿ ಯಿದ್ದಾಗ್ಯೆ, ಯೀ ಅಯಿದು ಮಂದಿ ಮಕ್ಕಳು ಬಹುರೂಪದಿಂದ ಸೌಂದರ್ಯರಾಗಿದ್ದುದು ಬಾದಶಹಾನವರು ಕಂಡು, "ಯೀ ಮಕ್ಕಳ ವಳಗೆ ವೊಬ್ಬ ನಮಗೆ ಕೊಡು"ಯಂದು ಕೇಳಲಾಗಿ, ಬಾದಶಹಾನವರ ಆಂತರ್ಯ 'ಯೀ ಆಯಿದು ಮಂದಿ ಮಕ್ಕಳ ಪೈಕಿ ವಬ್ಬನ್ನಾ ತೆಗದುಕ್ಕೊಂಡು ತುರಕಜಾತಿಯಲ್ಲಿ ಕಲಹಿಸಬೇಕು'ಯಂದು ಯಿಹೋ ಭಾವವನ್ನು ಹನುಮಪ್ಪನಾಯಕ ತಿಳದು, ಪಾದಶಹಾನವರಿಗೆ ಹನುಮಪ್ಪನಾಯಕನು ಜವಾಬು ಕೊಟ್ಟದ್ದು, "ನಿಮ್ಮಾ ಜನಾನಿ ವಳಗೆ ವೊಬ್ಬ ಹೆಂಗಸನ್ನು ಕೊಟ್ಟರೆ ಯೀ ತರಾನೇ ವಬ್ಬನ್ನ ಹುಟ್ಟಿಸಿ ಕೊಡುತ್ತೇನೆ"ಯೆಂದು ಹೇಳಿ ಅಲ್ಲಿ ನಿಂದರದೆ, ತ್ವರಿತಮಾಡಿ ತನ್ನ ಸೈನ್ಯ ಸಹಿತವಾಗಿ ವಿಜಾಪುರ ಬಿಟ್ಟು ಬಾಹೊವಾಗ್ಯೆ ಕ್ರಿಷ್ಣಾನದಿ ಪರಿಯಂತ್ರವೂ ೧೦ ಸಾವಿರ ಸೈನ್ಯ ಬೆನ್ನಹತ್ತಿ ಬಂದಲ್ಲಿ, ಹನುಮಪ್ಪನಾಯಕನು ತನ್ನ ಸೈನ್ಯ ಸಹಿತ ಕ್ರಿಷ್ಣಾನದಿಯಿಳಿದು ಬಂದನು. ಗಂಗಾಭವಾನಿಯು ಯೀತನಲ್ಲಿ ಕೃಪೆಮಾಡಿ ದಾರಿಕೊಟ್ಟಳು, ಬಾದಶಾಹ ಸೈನ್ಯಕ್ಕೆ ದಾರಿ ಕೊಡಲಿಲ್ಲ. ಅವರು ಬಿಜಾಪುರಕ್ಕೆ ಹೋಗಿ ಬಾದಶಾಹನವರಿಗೆ ನಡೆದು ವೃತ್ತಾಂತವನ್ನು ಅರ್ಜಿ ಮಾಡಲಾಗಿ, ಪಾದಶಹಾನವರು ಆತನು ಮಹಾಪುರುಷನೆಂದು ತಿಳಿದರು. ಆದಾಗ್ಯೂ ಹನುಮಪ್ಪನಾಯಕನು ಆಡಿದ ಮಾತಿನ ಕ್ರೋಧ ಮನಸ್ಸಿನಲ್ಲಿತ್ತು. ಹನುಮಪ್ಪನಾಯಕನು ಯೀ ದೇಶಕ್ಕೆ ಬಂದು ಕೆಲವು ದಿವಸ ರಾಜ್ಯವನ್ನು ಮಾಡಿ ಸ್ವರ್ಗಸ್ಥವಾದನು. ಯೀತನ ಮಕ್ಕಳು ರಾಜ್ಯವನ್ನು ಹಂಚಿಕೊಂಡ ವಿವರ :

೧ ಅಂಕುಶರಾಯನು ನಂದ್ಯಾಳಾ, ಶಿರವಾಳ ದೇಶಕ್ಕೆ ದೊರೆಯಾದನು.

೧. ಹಿರೆಮಲಕಪ್ಪನಾಯಕ ಅನಂತಪುರ ಧರ್ಮದವರ[>ವರದ] ದೇಶಕ್ಕೆ ದೊರೆಯಾಹನು.

೧. ನಿಜ್ಜಮದವಣಿಗ ರಾಮಪ್ಪನಾಯಕನು ರಾಯದುರ್ಗದ ಶೀಮೆ ಕುಂದರ್ಪಿಯಂಬೊ ಗ್ರಾಮದ ಮೇಲೆ ಮುತ್ತಿಗೆ ಹಾಕಿ, ಯುದ್ಧವಾಗಿ ಹಲ್ಲಾ ಮಾಡೋ ಸಮಯದಲ್ಲಿ ಗುಂಡು ತಗಲಿ ಮೃತವಾದನು.

೨ ಬಳ್ಳಾರಿ, ಕುರಗೋಡ, ತೆಕ್ಕಲಕೋಟೆ, ಶಿಂಧನೂರು, ಶಿರಕುಪ್ಪಿ, ಕಣೆಕಲ್ಲು, ರುಪನಗಡಿ, ವಡ್ಡು, ದರೋಜಿ ಮುಂತಾದ ತಾಲೂಕಿಗೆ ದ್ಯಾಮಣ್ಣನಾಯಕ, ಚಿಕ್ಕ ಮಲಕಪ್ಪನಾಯಕ ಉಭಯರು. ಯಿದರಲ್ಲಿ ದ್ಯಾಮಣನಾಯಕನು ಪಟ್ಟಾಧಿಕಾರಿಯಾಗಿ ನಿಂತನು.

ಯೀ ಪ್ರಕಾರ ದೇಶವನ್ನು ಹಂಚಿಕೊಂಡಲ್ಲಿ, ಕುರಗೋಡ ವಗ್ಯೆರಾ ಸ್ಥಳದಲ್ಲಿ ದ್ಯಾಮಣನಾಯಕನು ದೊರೆತನದಲ್ಲಿ ಬಿಜಾಪುರದ ಕಡೆಯಿಂದಾ ದಂಡು ಬಂದು, ಬಂಕಾಪುರದ ಶೀಮೆ ಜಪ್ತಿಮಾಡಿ, ಅಲ್ಲಿಂದಾ ತುಂಗಭದ್ರಾನದಿ ಸಮೀಪದಲ್ಲಿ ಬಂದಲ್ಲಿ ದ್ಯಾಮಪ್ಪನಾಯಕನು ಸಲಾಹ ಮಾಡಿ ಕೆಲಉ ಹಣ ಕೊಟ್ಟದರಿಂದ ಅವರು ವಿಜಾಪುರಕ್ಕೆ ಹೋದರು. ಯೀ

ದ್ಯಾಮಣ್ಣನಾಯಕನು ಕೆಲವು ದಿವಸ ದೊರೆತನ ಮಾಡಿ ಶಾಲಿವಾಹನ ಶಕ ೧೫೭೧ನೆ ವಿರೋಧಿ ಸಂವತ್ಸರಕ್ಕೆ ತೀರಿದನು.

ಯೀತನ ಮಗ ಪವಾಡದ ರಾಮಪ್ಪನಾಯಕ ನಾಲ್ಕು ವರುಷ ಕುರಗೊಡ ಸ್ತಳದಲ್ಲು ವೊಡೆತನ ಮಾಡಿದನು. ಯೀತನ ಮನ್ವಂತ್ರದಲ್ಲು ದಂಡಾ ಮುಂತಾದ್ದು ತೆಗದು ದುರ್ದಶೆಯಿಂದಾ ದೊರೆತನಾ ಮಾಡಿ ತೀರಿಹೋದನು. ಯೀತಗೆ ಸಂತಾನಯಿಲ್ಲ.

ಯೀತನ ಚಿಕ್ಕಪ್ಪ ಚಿಕ್ಕಮಲಕಪ್ಪನಾಯಕನ ಮಗ ಚಿಕ್ಕನಾಯಕಸಾಹೇಬ ಬಳ್ಳಾರಿಯಲ್ಲಿ ದೊರೆತನ ಮಾಡಿಕ್ಕೊಂಡು ಯಿದ್ದನು. ಆತನ ಕೆಳಗೆ ಯೀ ಕುರುಗೋಡು ನಡಿಯುತ್ತಾ ಯಿತ್ತು. ತದನಂತರದಲ್ಲು ಯಿವರ ಸೀಮೆ ವಳಗೆ ವಿಜಾಪುರದಾ ಪಾದಶಹಾನ ಕಡೆಯಿಂದಾ ಕನ್ನೂಲು ಬಾಬಾಸಾಹೇಬಯಂಬೋ ತುರುಕನ ಸಂಗಡ ಫೌಜು ಬಂದು, ಕಣಿಕಲ್ಲು, ರುಪನಗುಡ್ಡಿ, ವಡ್ಡು, ದರೋಜಿ, ಶಿಂಧನೂರು, ಶಿರಕುಪ್ಪೆ ವಗೈರಾ ಸ್ತಳಗಳು ಠಾಣ್ಯ ಹಾಕೋ ಕಾಲದಲ್ಲು ಕುರುಗೋಡು ಪರಗಣೆ ತಮದೆ ಮಾಡಿಕ್ಕೊಂಡು, ಯೀ ಸ್ಥಳಕ್ಕೆ ಹವಾಲದಾರಕಿ ದೊಡ್ಡಯಲ್ಲಪ್ಪನಾಯಕ ಚಿಕ್ಕಯಲ್ಲಪ್ಪನಾಯಕಯಂಬೊ ಅಣ್ಣತಮ್ಮರನಾ ಕಳುಹಿಸಿ ಕೊಟ್ಟರು. ಅವರು ಯೀ ಸ್ಥಳಕ್ಕೆ ಬಂದು ಯೀ ಪರಗಣೆ ಗ್ರಾಮಾನುಗ್ರಾಮ ಕಸಬೆ ಮುಂತಾದ್ದು ಸ್ವಾಧೀನ ಮಾಡಿಕ್ಕೊಂಡು ಯಿದ್ದಾ ಸಮಯದಲ್ಲಿ, ಹಳೆ ಕುರಗಗೋಡುಯಲ್ಲಿ ಯಿರುವ ಬಾಲೆಕಿಲ್ಲೆ ಮೇಲೆ ಸ್ಥಳದ ನಾಡುತಳವಾರು ವಿಠ್ಠಲಘನಾಯಕ ಎಂಬವಗೇ ಪೂರ್ವದಾರಭ್ಯ ನಾಡ ತಳವಾರಿಕಿ ಮೇರೆ ವರ್ತನೆ ಭೂಸ್ವಾಸ್ತಿ ಜಕಾತಿ ರುಸುಮು ಜಾಗೀರಿಗ್ರಾಮಾ ಮುಷ್ಟಿಗಟೆ[>ಗೆರೆ] ಸೋಮಲಾಪುರ – ಯೀ ೨ ಗ್ರಾಮ ಸಹಾ ನಡದು ಬರುತಾ ಯಿದ್ದದ್ದು, ಯೀ ಮೊಗಲಾಯಿ ಅವರು ನಡಸೋದಕ್ಕೆ ಬಂದೋಬಸ್ತ ಮಾಡಿಸಿಕೊಂಬೊ ನಿಮಿತ್ಯವಾಗಿ ಸರದಿ ಬರದ ಬಾಲೆಕಿಲ್ಲೆ ಬಲಕಾಯಿಶಿಕ್ಕೊಂಡು ಯಿದ್ದರು. ಶೀಮೆ ಯಾವತ್ತು ಮೊಗಲಾಯಿ ಅವರ ಸ್ವಾಧೀನದಲ್ಲಿ ನಡೀತಾಯಿತ್ತು. ಆರು ತಿಂಗಳು ಕಿಲ್ಲೆ ಸ್ವಾಧೀನ ಆಗದೇ ಯಿದ್ದದರಿಂದ ಯೀ ಗೊಲ್ಲರ ಯಲ್ಲಪ್ಪನಾಯಕನು ತಾನು ಯಿರೋದಕ್ಕೆ ಹಳೆಕುರಗೋಡಿಗೆ ಪೂರ್ವದಿಕ್ಕಿನಲ್ಲಿ ಸಾಮಿಪ್ಯವಾಗಿ ಬಳ್ಳಾರಿ ಮಾರ್ಗದಲ್ಲು ಹನುಮಂತದೇವರ ಗುಡಿ ಬಳಿಯಾ ನಾಲ್ಕು ಬ್ಹುರುಜಿನ ಕಿಲ್ಲೆ ಕಟ್ಟಿಸಿ ತಾನು ಯಿರುತಾ ಯಿದ್ದನು. ತರುವಾಯ ಸದರಿ ನಾಡು ತಳವಾರ ನಾಯಕಗೆ 'ನಿಮಗೆ ಪೂರ್ವಪ್ರಕಾರ ಸ್ವಾಸ್ತಿ ಉತ್ತಿ ಉಮ್ಮಳಿ ಗ್ರಾಮಗಳು ಮುಂತಾದ್ದು ನಡಸಿ ಕೊಡುತ್ತೇವೆ'ಯೆಂದು ಕರಾರು ಮಾಡಿ, ಬಾಲೆಕಿಲ್ಲೆ ತಮ್ಮ ಸ್ವಾಧೀನ ಮಾಡಿಕ್ಕೊಂಡರು. ಯೀ ನಾಡ ತಳವಾರರು ತಮ್ಮ ಜಾಗೀರ ಗ್ರಾಮಗಳಲ್ಲಿ ಯಿದ್ದು, ತಮ್ಮ ಕಡೆಯಿಂದ ಆಳು ಯಿಟ್ಟು, ಸರಕಾರಿ ಹುಕುಂ ಪ್ರಕರಾ ಯಿರುತಾ ಯಿದ್ದರು. ಬಳ್ಳಾರಿ ತೆಕ್ಕಲಕೋಟೆ – ಯೀ ಯರಡು ಪರಗಣೆ ಹಂಡೆ ಚಕ್ಕನಾಯಕನ ದೊರೆತನ ಯಿತ್ತು. ಮಿಗಿಲಾದ ಸ್ಥಳಗಳು ಯಾವತ್ತು ಮೊಗಲಾಯಿ ಅವರ ಸ್ವಾಧೀನವಾಯಿತು. ಯಿವರು ೧೫ ವರ್ಷ ಶಾಲಿವಾಹನ ಶಕ ೧೪೯೦ ವರಿಗೆ ನಡದ ವೃತ್ತಾಂತ:

ಬಾಲೆಕಿಲ್ಲೇದ ಮೇಲೆ ಠಾಣೆಯಿಟ್ಟು, ತಾನು ಹೊಸತಾಗಿ ಕಟ್ಟಿಸಿದ ನಾಲ್ಕು ಬುರುಜಿನ ಕಿಲ್ಲೆಯಲ್ಲು ತಮ್ಮ ಸಂಸಾರ ಅರಮನೆ ಸಹಾ ಮಾಡುತಾ ಯಿದ್ದರು. ಪೆದ್ದಯಲ್ಲಪ್ಪನ ಮಕ್ಕಳು ೨ : ಹಿರೆ ದಾಸಳನಾಯಕ ೧. ಚಿಕ್ಕ ದಾಸಳನಾಯಕ ೧. ಯೀ ಉಭಯರೂ ತಂದೆ ಸಂಗಡಲೇ ಯಿದ್ದರು.

ದೇಶಾಯಿ ವೆಂಗರಸಯ್ಯನ ಸಂತತಿ ಅವರಿಗೆ ದೇಶಾಯಿಕಿ ದೇಶಕುಲಕರ್ಣಿಕಿ ಸ್ವಾಸ್ತಿ ಹಂಡೆಬಾಲದ ಹನುಮಪ್ಪನಾಯಕರ ದೊರೆತನದಲ್ಲಿ ಆದದ್ದು, ಮಧ್ಯೆ ಮಲ್ಲಪ್ಪನಾಯಕನ ಅಮಲಿನಲ್ಲಿ ಹಾಗಲೂರು ಅಂತರಸಯ್ಯಯಂಬೋ ಆತನು ಹಗಲೂರು, ಹೊಸಹಳ್ಳಿ, ದರುರು - ಯೀ ಮೂರು ಗ್ರಾಮಗಳ ಕುಲಕರ್ಣಿಕಿ ಪೂರ್ವಾರಭ್ಯ ಮಾಡಿಕ್ಕೊಂಡು ಯಿರಲಾಗಿ, ಸದರಿ ಮಲ್ಲಪ್ಪನಾಯಕನ ಅಪ್ಪ? ಯಾ ಮಾಡಿಕ್ಕೊಂಡು, ದೇಶಕುಲಕರ್ಣಿಕಿ ಸ್ವಾಸ್ತಿ ದೇಸಾಯಿ ವೆಂಗರಸಯ್ಯನ ಸಂತತಿ ಸದಾಶಿವಯ್ಯನ ಸ್ವಾಸ್ತಿ ವಳಗೆ ಯೀ ಅಂತರಸಯ್ಯಗೆ ದೇಶಕುಲಕರ್ಣಿಕಿ ಸ್ವಾಸ್ತಿ ಮಾಡಿಕ್ಕೊಂಡನು. ದೇಶಗತಿ ಸ್ವಾಸ್ತಿ ಮಾತ್ರ ಸದಾಶಿವಯ್ಯನು ಕರ್ನೂಲ ನವಾಬಗೆ ಖುರ್ದುಬುರ್ದು ಮಾಡಿ, ಪಟ್ಟಿ ೭೦೦ ವರಹ ಬರದು ಕೊಟ್ಟು, ಯಲ್ಲಪ್ಪನ ಕಡೆಯಿಂದಾ ತೆಗದುಕ್ಕೊಂಡು, ಸದಾಶಿವಯ್ಯನು ಅಮುಲು ಮಾಡಿಕ್ಕೊಂಡು, ಯಲ್ಲಪ್ಪ ಸರಕಾರಿ ಹವಾಲದಾರಿಕೆ ಸಮಯದಲ್ಲು ವಿಶ ಶೇಕಿದ ಮಲಕ ಸದಾಶಿವಯ್ಯ ಮೃತವಾದನು. ಯಿದೇ ಕಾರಣ ಸ್ವಾಸ್ತಿ ಹೋದದ್ದು. ದೇಶಗತಿ ಸ್ವಾಸ್ತಿ ಸದಾಶಿವಯ್ಯನ ಸಂತತಿ ಅವರಿಗೆ ಅನುಭವಾ, ದೇಶಕುಲಕರ್ಣಿಕಿ ಸ್ವಾಸ್ತಿ ತ[>ಹ]ಗಲೂರು ಅಂತರಸಯ್ಯಗೆ ಅನುಭವಾ ಜಾರಿ ಕಲಂ ॥೧.

ನಾಡಗೌಡಕಿ ಪೂರ್ವದಲ್ಲು ಹನುಮಪ್ಪನಾಯಕನ ತತ್ಪೂರ್ವದಲ್ಲಿ ದೇಶಾಗತವಾಗಿ ಹೋಗಿದ್ದ ಗೌಡರು ಕೆಲವು ದಿವಸದ ಮ್ಯಾಲೆ ಸ್ತಳಕ್ಕೆ ಬಂದು ಸೇರಿ, ಹನುಮಪ್ಪನಾಯಕನು ಕೀರ್ದಿ ಅವರಿಗೆ ನಾಡಗೌಡಕಿ, ಕಸುಬೆ ಊರುಗೌಡಕಿ ಮೊಕರರು ಮಾಡಿ ಕೊಡುವಾಗ, ಕರಾರು ಮಾಡಿದ್ದ ಪ್ರಕಾರ, ಪೂರ್ವಿಕ ಮಲೆಗೌಡಯಂಬಾತ ಸ್ಥಳಕ್ಕೆ ಬಂದದರಿಂದ ಸದರಿ ನಾಡಗೌಡಕಿ, ಕಸುಬೆ ಊರುಗೌಡಕಿ ಸಹಾ ಅಡ್ಡಿ ಪಾಲು - ಯೀ ಪ್ರಕಾರಾ ಸ್ವಾಸ್ತಿ ಅನುಭವಾ ಮಾಡುತ್ತಾ ಬರುವಲ್ಲಿ, ಗೊಲ್ಲರ ಯಲ್ಲಪ್ಪನ ಕಡೆ ದಳವಾಯಿ ಗಿಡ್ಡಿಯ್ಯ ಯಂಬೋ ಆತಗೆ ಪೂರ್ವಿಕರ ಅಡ್ಡಿಪಾಲಿನಲ್ಲಿ ೯ = ಕ್ರಯಕ್ಕೆ ತೆಗೆದುಕ್ಕೊಂಡನು. ಆದ್ದರಿಂದ ಆತನ ಪಾಲು ಆತಗೆ ನಡಿಯುತ್ತಾ ಬಂತು. ಯೀ ಯಲ್ಲಪ್ಪನಾಯಕನು ತನ್ನ ಹೆಸರಿಂದಾ ಕಸುಬ ಭೂಮಿಯಲ್ಲು ಹೊಸತಾಗಿ ಕುರುಗೋಡು ನೈರುತ್ಯದಿಕ್ಕಿನಲ್ಲು ಹರದಾರಿಯಲ್ಲು ಯಲ್ಲಾಪುರಯೆಂಬೋ ಗ್ರಾಮ ಕಟ್ಟಿಸಿದನು. ಯೀತನ ಹೆಂಡತಿ ಬಾದನಹಟ್ಟಿ ಭೂಮಿಯಲ್ಲು ಆ ಗ್ರಾಮಕ್ಕೆ ಮಜರೆವಾಗಿ ತನ್ನ ಹೆಸರಿಂದಾ ಅಮ್ಮಾಪುರಾಯಂಬೋ ಗ್ರಾಮ ಕಟ್ಟಿಸಿದಳು. ಯೀತನ ಮಗ ದಾಸಾಳನಾಯಕ ತನ್ನ ಹೆಸರಿಂದಾ ಕುರಗೋಡ ಕಸುಬೆ ಭೂಮಿಯಲ್ಲಿ ದೇಶಾಯಿ ಕಲ್ಲರಸಯ್ಯನ ಮಾನ್ಯದಲ್ಲಿ ಕೆರೆ ಕಟ್ಟಿಸಿ, 'ನಾಯಕನಕೆರೆ'ಯಂದು ಹೆಸರುಯಿಟ್ಟನು. ಯೀ ಯಲ್ಲಪ್ಪನಾಯಕನು ಕರ್ನೂಲ ನವಾಬು ಬಾಬಾಸಾಹೇಬರವರಿಗೆ ಜಮಾ ಬಂದಿ ಪ್ರಕಾರ ಶಿಬ್ಬಂದಿ ಖರ್ಚು ಹೋಗಲಾಗಿ, ಬಾಕಿ ಹಣವನ್ನು ಕೊಟ್ಟುಕೊಂಡು ಯಿರಲಾಗಿ, ವೆಂಗರಸಯ್ಯನ ಸಂತತಿ ದೇಶಾಯಿ ದೇಶಕುಲಕರ್ಣಿಕಿ ಸಹಾ ಸದಾಶಿವ ಅಯ್ಯಗೆ ಪೂರ್ವದಲ್ಲಿ ಹಂಡೆ ಹನುಮಪ್ಪನಾಯಕನು ಹಗಲುರು ಕುಲಕರ್ಣಿ ಅಂತರಸಯ್ಯಗೆ ನಾಡ ಕುಲಕರ್ಣಿ ಸ್ವಾಸ್ತಿಯವರದು ತೆಗದುಕೊಟ್ಟದ್ದರಿಂದ, ಸದಾಶಿವಯ್ಯನ ಮಗ ವೆಂಕಪ್ಪನು ಆದವಾನಿ ಸುಭೆ ಬಿಜಾಪುರದ ವೆಂಕಪ್ಪನ ಕಡೆಯಿಂದ ಶಿಧ್ದಿಮಸೂದಖಾನಯಂಬವರ ಕಡೆ ಆದವಾನಿಗೆ ಹೋಗಿ, ಅವರ ಕಡೆಯಿಂದಾ ಫೌಜು ತೆಗದುಕ್ಕೊಂಡು ಬಂದು ಕುರಗೋಡು ಕೋಟಿಗೆ ಮೂರು ತಿಂಗಳು ಮುತ್ತಿಗೆ ಹಾಕಿ ಯಿರುವಾಗ್ಯೆ, ವೆಂಕಪ್ಪನು ತನ್ನ ಉಮ್ಮಳಿಗ್ರಾಮ ವೀರಾಪುರಯಂಬೊ ಗ್ರಾಮಕ್ಕೆ ಹನುಮಂತದೇವರ

ದರುಶನಕ್ಕೆ ಕೆಲವು ಮಂದಿನಾ ಸಂಗಡ ಕರಕೊಂಡು ಹೋಗಿ ಬಾಹೋದರ ವಳಗೆ, ಯಲ್ಲಪ್ಪನಾಯಕನು ಪೂರ್ವದಲ್ಲಿ ಮೃತವಾಗಿ ಹೋಗಿ ಯಿದ್ದನು. ಯೀತನ ಮಗ ದಾಸಳನಾಯಕ ೧, ಚಿಕ್ಕದಾಸಾಳನಾಯಕ ಉಭಯತ್ರರು ಪರಗಣಿ ಮಾಡಿಕ್ಕೊಂಡು ಯಿದ್ದವರು ಕಿಲ್ಲೆ ಬಿಟ್ಟು ಫರಾರಿಯಾಗಿ ಕರ್ನೂಲಿಗೆ ಹೋದನು. ಆವಾಗ್ಯೆ ವೆಂಕಪ್ಪನು ಕುರುಗೋಡ ಕಿಲ್ಲೆ ಶಿದ್ಧಿ ಮಸೂದಖಾನವರ ಠಾಣೆ ಮಾಡಿಸಿ, ತಾನಾ ಕುರುಗೋಡ ಪರಗಣಿ ಮಾಮಲಿಯತು ತಾನು ಮಾಡಿಕ್ಕೊಂಡು, ಕೆಲವು ದಿವಸ ಅಂತರಸಯ್ಯನ ಮಗ ವೆಂಕಪ್ಪನ ಮಗ, ಯೀತನ ಮಗ ತಿಮ್ಮಪ್ಪನ ಸಂಗಡ ನಾಡಕುಲಕರ್ಣಿಕಿ ಸ್ವಾಸ್ತಿ ನಿಮಿತ್ಯ ವ್ಯಾಜ್ಯವನ್ನು ಮಾಡುತಿರಲಾಗಿ, ಆ ತಿಮ್ಮಪ್ಪನು ಆದವಾನಿಯಲ್ಲು ಸಿದ್ಧಿಮಸೂದಖಾನನವರ ದಿವಾನಗಿರಿ ಮಾಡುತಾ ಯಿದ್ದ ವೆಂಕಣ್ಣಪಂತರಿಗೆ ತನ್ನ ನಾಡಕುಲಕರ್ಣಿ ಸ್ವಾಸ್ತಿಯಲ್ಲು ೯॥೦ ಅಡ್ಡಿಪಾಲು ವೆಂಕಣ್ಣಪಂತರಿಗೆ ಕೊಟ್ಟದ್ದರಿಂದ, ದೇಶಾಯಿ ವೆಂಕಪ್ಪನು ದಿವಾನಗಿರಿ ಮಾಡುವಂಥಾವನು ಅಡ್ಡಿಪಾಲು ತೆಗದುಕ್ಕೊಂಡದರಿಂದಾ ನಾಡಕುಲಕರ್ಣಿ ಸ್ವಾಸ್ತಿ ಅಂತರಸಯ್ಯನ ಮೊಮ್ಮಗ ತಿಮ್ಮಪ್ಪಗೆ ಶೇರಿತು, ವೆಂಕಪ್ಪನು ದೇಶಾಯಿ ಮಾಮಲಕಿ ಸಹಾ ಮಾಡಿಕ್ಕೊಂಡು ಯಿದ್ದನು.

ನಾಡ ಕುಲಕರ್ಣಿಕಿ ದಪ್ತರ ಸದರಿ ತಿಮ್ಮವೆಂಕಣ್ಣಪಂತರ ಮುತಾಲಕ ಸಹ ಉಭಯರು ಮಾಡಿಕ್ಕೊಂಡು ಯಿದ್ದರು.

ನಾಡಗೌಡಕಿ ಪೂರ್ವಿಕ ಮಲೆಗೌಡನ ಸಂತತಿ ಅವನು ಮಲೆಗೌಡಯಂಬವನು, ಕೀರ್ದಿಕಾರ ಬಸವನಗೌಡನ ಸಂತತಿ ಅಯ್ಯನಗೌಡ ಸಹ ಪರಗಣಿ ನಾಡಗೌಡಕಿ ಮಾಡಿಕ್ಕೊಂಡು ಪರಗಣಿ ಮಜಕೂರು ಸಾಗು ಸಂಚನಿ ಹಿರೇತನ ಮಾಡಿಕ್ಕೊಂಡು ಯಿದ್ದರು. ಶಿದ್ದಿವೆಂಕಣ್ಣಪಂತ ದಿವಾನು ಸರದೇಶಗತಿ ಸ್ವಾಸ್ತಿ ಮಾಡಿಕ್ಕೊಂಡ ವಿವರಾ:

ಪೂರ್ವ ಆದವಾನಿ ಸುಭೆಗೆ ವಿಜಾಪುರದ ಕಡೆಯಿಂದಾ ಬಂದು, ಕೆಲವು ದಿವಸಮ ಮ್ಯಾಲೆ ಆಲಂಗಿರ ಬಾದಶಹಾ ವಿಜಾಪುರ ತಖ್ತು ಮುಳಗಿಸಿದ ಬಳಿಕಾ, ಸಿದ್ದಿಮಸೂದಖಾನನು ಆಲಂಗೀರಬಾದಶಾಹಾವಾಗಿ ನಗೆರೆ ಸ್ತಳದಲ್ಲು ಯಿರಲಾಗಿ, ಧಾನಮಜಕೂರನು ಹೋಗಿ ಬಾದಶಹಾನವರಿಗೆ ರುಜುವಾಗಿ ತಿರಿಗಿ, ಪೂರ್ವದ ಪ್ರಕಾರ ಆದವಾನಿ ಸುಭೆ ಖಾಯಂ ಮಾಡಿಕ್ಕೊಂಡು, ಯಿರೋ ಸಮಯದಲ್ಲು, ಯೀತನ ದಿವಾನ ವೆಂಕಣ್ಣಪಂತನು ಕುರುಗೋಡ ಪರಗಣಿ ಸರದೇಶಾಯಕೀ ತನ್ನ ಹೆಸರಿನಲ್ಲಿ ಸರದೇಶಗತ್ತಿ ಆಗಿ, ಆ ಗ್ರಾಮದ ಮುನಾಸಬು ಪ್ರಕಾರಾ ಭೂಸ್ವಾಸ್ತಿ ನೂರು ವರಹ ಕ ೨॥೦ ವರಹ ವರ್ತನಿ. ಯಿದು ಹೊರತು ಹುಳ್ಳೂರಯಂಬೊ ಗ್ರಾಮ ಜಾಗೀರು ಪಾದಶಾಯಿ ಸನ್ನದು ಮಾಡಿಸಿಕ್ಕೊಂಡು ಬಂದು, ತನ್ನ ಕಡೆ ಮುತಾಲೀಕರನ ಯಿಟ್ಟು ಅನುಭವಿಸುತಾ ಬಂದನು.

ದೇಶಾಯಿ ವೆಂಕಟಪ್ಪಗೆ ಪೂರ್ವಾರಭ್ಯ ನಡದು ಬಂದಂಥಾ ಗುತ್ತಿಗೆನೂರು ಯಂಬೊ ಗ್ರಾಮಾ ಜಾಗೀರು ಯಿದ್ದದ್ದು. ಆ ಗ್ರಾಮಾ ಯೀ ಪರಗಣೀಕೆ ಕಡೆ ಗಡಿಯಾಗಿ ಯಿದ್ದದರಿಂದಾ, ಆ ಸ್ಥಳವನ್ನು ಆನೆಗೊಂದಿ ಅರಸುಗಳು ಠಾಣ್ಯ ಬಲಕಾಯಿಸಿಕ್ಕೊಂಡು ಯಿದ್ದದರಿಂದ, ಮಸೂದ್‌ಖಾನನು ದೇಶಾಯಿ ವೆಂಕಪ್ಪಗೆ ಆ ಗ್ರಾಮದ ಬಲದಲ್ಲಿ ವೀರಾಪುರಯಂಬೊ ಗ್ರಾಮಾ ಜಾಗೀರಿ ಸನ್ನದು ಬರದುಕೊಟ್ಟು ನಡಸುತಾ ಬಂದರು. ಕೆಲವು ದಿವಸದ ಮ್ಯಾಲೆ ಹಂಡೆಚಿಕ್ಕನಾಯಕಸಾಹೇಬನ ಮಗ ದ್ಯಾವಪ್ಪನಾಯಕನು ಬಳ್ಳಾರಿ ತೆಕ್ಕಲುಕೋಟೆ – ಯೀ ೨

ತಾಲೂಕು ಮಾಡುತಾ ಯಿದ್ದು, ಅಲ್ಲಿಂದಾ ಜಮೀಯತು ಸಹ ಕುರಗೋಡಿಗೆ ಬಂದು, ಕೆಲವು ಸ್ಥಳದಲ್ಲಿ ಯಿದ್ದ ಜನರ ಕಡೆಯಿಂದಾ ಪಿತೂರಿಮಾಡಿ ಕಿಲ್ಲೆ ಠಾಣ್ಯ ಹಾಕಿ, ಕುರಗೋಡು ಪರಗಣೆ ತನ್ನ ಸ್ವಾಧೀನ ಮಾಡಿಕ್ಕೊಂಡ ಶಕ ೧೬೨೦ನೇ ಬಹುದಾನ್ಯ ಸಂವತ್ಸರ. ಯೀತನ ತಂದೆ ಚಿಕ್ಕನಾಯಕಸಾಹೇಬನು ವಳಗಾಗಿ ಅಲಂಗೀರಬಾದಷಾಹಾನ ಬಳಿಗೆ ತನ್ನ ಕಡೆಯಿಂದಾ ಕಾರಕೂನರ ಕಳಿಹಿಸಿ ಕೊಟ್ಟು, ಶಿಧ್ಧಿವೆಂಕಟಪಂತನು ಸರದೇಶಗತಿ ಸ್ವಾಸ್ತಿ ಮಾಡಿಕ್ಕೊಂಡ ಪ್ರಕಾರಾ ಕುರುಗೋಡು ಬಳ್ಳಾರಿ ತೆಕ್ಕಲಕೋಟೆ ಮೊಕ ಪರಗಣೆ ಆದವಾನಿ ದೇಶದಲ್ಲು ಕೆಲವು ಗ್ರಾಮ, ಕಂಚಗಾರ ಬೇಗಳಗಲ್ಲು ವಗೈರಾ ಗ್ರಾಮಗಳು ಸಹ ಸರನಾಡಗೌಡಕಿ ಸ್ವಸ್ತಿ ಸದರಿ ಅಲಂಗೀರಬಾದಷಹಾನ ಕಡೆಯಿಂದಾ ಸನ್ನದು ಆಗಿ ಯಿದ್ದದಕ್ಕೆ ಕುರಗೋಡು ಪರಗಣೆ ಶಿಧ್ಧಿ ಮಸೂದ್‌ಖಾನನ ಅಮಲು ಯಿದ್ದದರಿಂದಾ ಅನುಭವಾಯಿಲ್ಲ.

ತರುವಾಯ ಯೀತನ ಮಗ ದ್ಯಾವಪ್ಪನಾಯಕನು ಕುರಗೋಡ ಠಾಣ್ಯ ಹಾಕಿದ ಬಳಿಕಾ, ಯೀ ಸರನಾಡುಗೌಡಕಿ ಬಾಬಿಗೆ ಬಾಹ ಶಾಸನ ಸನ್ನದು ಪ್ರಕಾರಾ ಪರಗಣೆ ಮಜಕೂರು ಗ್ರಾಮಾನುಗ್ರಾಮಗಳಲ್ಲಿ ಭೂಸ್ವಾಸ್ತಿ ಯಿಹೋದು ಹೊರತು, ನೂರಕ್ಕೆ ಆಯಿದು ಹೊನ್ನ ವರ್ತನಿ, ಉಮ್ಮಳಿ ಗ್ರಾಮ ಸೋಮಸಮುದ್ರ ೧ – ಯೀ ಪ್ರಕಾರ ಸ್ವಾಸ್ತಿ ಮಾಡಿಕ್ಕೊಂಡನು. ಅಂತು ಕುರುಗೋಡುದೇಶಕ್ಕೆ ಜಮಿದಾರಿ ಬಾಬು ಪೂರ್ವದಲ್ಲು ಆದದ್ದು ೪, ಹೊಸತಾಗಿ ಆದದ್ದು ಬಾಬು ೧ – ಅಂತು ಆಯಿದು ಬಾಬು ಜಮೀದಾರಿಕಿ ಜಾರಿಯಾಗಿ ನಡಿಯುತಾ ಬಂತು. ಯೀತನು ಬಳ್ಳಾರಿಯಲ್ಲಿ ನಿಂತು, ತನ್ನ ಕಡೆ ಠಾನ್ಯ ಮಂದಿ ವಗೈರೆ ಕುರುಗೋಡಲ್ಲಿ ಯಿಟ್ಟು ಯಿರುತಾ ಯಿರಲಿಕ್ಕೆ, ಯೀ ದುರ್ಗ ದೊಡ್ಡದು, ವಳಗೆ ಯಿರುವ ಜನರು ಸ್ವಲ್ಪ ಆದದರಿಂದಾ ಯಿದು ಹೊರತು ಸ್ತಳದ ಜಮೀದಾರು ಪೂರ್ವದಲ್ಲು ಮೊಗಲಾಯಿ ಅಮಲಿನ ವಳಗೆ ದೇಶಾಯಿ ವೆಂಕ ಮಾಮಲಿಯತು ಕೆಲಸಾ, ನಾಡುಕುಲಕರ್ಣಿ ತಿಮ್ಮಪ್ಪಗೆ ದಪ್ತರದ ಕೆಲಸ, ಯೀ ಪ್ರಕಾರ ನಡಿಯುತಾ ಬಂದದಕ್ಕೆ ಹಂಡೆ ದ್ಯಾವಪ್ಪನಾಯಕನ ಠಾಣ್ಯ ಆದ ಬಳಿಕಾ, ಜಮೀದಾರರ ಸ್ವಾಸ್ತಿ ವರ್ತನೆ ಉಮ್ಮಳಿಗೆ ಗ್ರಾಮಗಳು ಸಹಾ ಜಾರಿಮಾಡಿ, ಮಾಮಲೆ ಕೆಲಸ ದಪ್ತರದ ಕೆಲಸ ಯರಡನ್ನು ಮೇಕೂಪ್ ಮಾಡಿ, ತನ್ನ ಕಡೆಯಿಂದಾ ಮಾಮಲೆದಾರ ದಪ್ತರದ ಮುಂಜುದಾರನ್ನಾ ಯಿಟ್ಟು ಕೆಲಸ ತೆಗೆದುಕ್ಕೊಂಡು ಬರುತಾ ಯಿರಲಾಗಿ, ಯೀ ಜಮೀದಾರರಿಗೆ ತಮ್ಮಾ ಅಧಿಕಾರದ ಕೆಲಸ ಹೋದದರಿಂದ ಮನಸ್ಸಿನಲ್ಲಿ ವಿಕಲ್ಪ ಹುಟ್ಟಿ, ವಂದಾವರ್ತಿ ನಾಡಕುಲಕರ್ಣಿ ತಿಮ್ಮಪ್ಪಯಂಬವನು ಗುಡೇಕೋಟೆಗೆ ಹೋಗಿ, ಅಲ್ಲಿ ಸಂಸ್ಥಾನಿಕರ ಆಶ್ರಯಾ ಮಾಡಿ, ಕೆಲವು ಜಮೀಯತು ತೆಗದುಕ್ಕೊಂಡು ಬಂದು, ಕುರಗೋಡು ಗ್ರಾಮವನ್ನು ಸುಲದು ಹೊರಟುಹೋದರು. ತರುವಾಯ ಹಂಡೆದ್ಯಾವಪ್ಪನಾಯಕನು "ಯೀ ಕೋಟೆ ದೊಡ್ಡದು ನಿಭಾಯಿಸಲಾರದು" ಯಂದು ತಿಳದು, ಯೀ ದುರ್ಗಕ್ಕೆ ಪೂರ್ವಭಾಗಕ್ಕೆ ಅಯ್ಯವಾಗಿ ಸಾಮಿಪ್ಯದಲ್ಲಿ ಯಿರುವಂಥಾ ಯರ್‍ರದುರ್ಗದ ಗುಡ್ಡಕ್ಕೆ ಕಿಲ್ಲೆ ಕಟ್ಟಿಸುವದಕ್ಕೆ ಪ್ರಾರಂಭ ಮಾಡುತಾ ಯಿರುವಾಗ್ಯೆ, ಸದರೀ ಬರದ ದೇಶಾಯಿ ವೆಂಕಪ್ಪನು ಗುಡೆಕೋಟೆಗೆ ಹೋಗಿ, ಆ ಸಂಸ್ಥಾನಿಕರ ಕಡೆಯಿಂದಾ ಜಮೀಯತು ತೆಗೆದುಕ್ಕೊಂಡು ಬಂದು, ಹಳೆ ಕುರುಗೋಡು ಠಾಣ್ಯವನ್ನು ಹಾಕಿಸಿ, ವೊಂದು ವರುಷ ಪರಿಯಂತ ಅಮಲುಮಾಡಿ, ಯರ್‍ರದುರ್ಗದ ಮ್ಯಾಲೆ ಹಂಡೆ ದ್ಯಾವಪ್ಪನಾಯಕನು ಕಟ್ಟಿಸುತಾ ಯಿದ್ದ ದುರ್ಗದ ಮ್ಯಾಲೆ ಕೆಲವು ಮರಾಮತು ಯರಡು ಬುರುಜು ಕಟ್ಟಿಸಿದರು. ತರುವಾಯ ದ್ಯಾವಪ್ಪನಾಯಕನು ಕೆಲವು ಜಮೀಯತು

ಸಮೇತವಾಗಿ ಬಳ್ಳಾರಿಯಿಂದಾ ಬಂತು, ಸ್ತಳದಲ್ಲು ಯಿರುವಂತಾ ಅವರನಾ ಪಿತೂರಿ ಮಾಡಿ, ಠಾಣ್ಯ ಹಾಕಿಸಿದ ಸಮಯದಲ್ಲಿ, ಗುಡೆಕೋಟೆ ಅವರು ದೇಶಾಯಿ ವೆಂಕಪ್ಪ ಸಹಾ ಗುಡೆಕೋಟೆಗೆ ಹೋದರು. ದ್ಯಾವಪ್ಪನಾಯಕನು ಠಾಣ್ಯವನ್ನು ಖಾಯಾಂ ಮಾಡಿ ಯರ್‍ರದುರ್ಗದ ಮ್ಯಾಲೆ ಕೋಟೆ ಪುರಾ ಕಟ್ಟಿಸಿ, ಯೀ ದುರ್ಗಕ್ಕೆ ಪೂರ್ವಭಾಗದಲ್ಲು ಪಾಯನಕಿಲ್ಲೆ ಕಟ್ಟಿಸಿ, ಆ ಕಿಲ್ಲೇದ ವಳಗೆ ೧ ಭಾವಿಯನ್ನು ಅಗಿಸಿ, ತನಗೆ ಯಿರೋ ಬಗ್ಯೆ ಅರಮನೆಯ ಕಟ್ಟಿಶಿ, ದೇಶಾಯಿ ನಾಡಗಿರು ಕಾರಕೂನರು ಬಾರಾಬಳೊತಿ ಅವರು ಮುಂತಾದವರಿಗೆ ಮನಿಗಳಿಗೆ ಪಾಯಾ ಹಾಕಿಸಿ ಕೊಟ್ಟನು. ಕೆಲವು ಮನಿಗಳು ಕಟ್ಟೋ ಬಗ್ಯೆ ಸರಕಾರನಿಂದಾ ರೊಕ್ಕವನ್ನು ಕೊಟ್ಟದ್ದರಿಂದಾ ಹಳೆ ಕುರಗೋಡಿನಲ್ಲಿ ಯಿರುವ ಮನಿಗಳು ಬಿಟ್ಟು ಹೊಸತಾಗಿ ಕಟ್ಟಿಸಿದ ಯರ್‍ರದುರ್ಗದ ಕೆಳಗೆ ಯಿರುವ ಪಾಯನಕಿಲ್ಲೆ ವಳಗೆ ಮನಿಗಳು ಕಟ್ಟಿಕೊಂಡರು. ಯಿದು ಹೊರತು ಯರ್‍ರದುರ್ಗಕ್ಕೆ ದಕ್ಷಿಣಭಾಗದಲ್ಲಿ ಸಾಮಿಪ್ಯವಾಗಿ ಪೇಟೆ ಕಟ್ಟಿಸಿ, ಯೀ ಯರ್‍ರದುರ್ಗಕ್ಕೆ ಉತ್ತರ ಭಾಗದಲ್ಲಿ ಸಾಮಿಪ್ಯವಾಗಿ ಪೂರ್ವದಲ್ಲು ರಾಜಮಲ್ಲರಾಯನ ದಿನದಲ್ಲು ಹಾ[>ಹು]ಜಿಹಳ ಯೀಶ್ವರನ ದೇವಾಲಯಾ, ಅದಕ್ಕೆ ಸುತ್ತ ಪಟ್ಟಣ ಸಹಾ ಯಿದ್ದ ಸ್ಥಳದಲ್ಲಿ ಖಿಲವಾಗಿ ಹೋಗಿ ಯಿದ್ದದರಿಂದಾ, ಆ ಸ್ಥಳದಲ್ಲು ಸಹಾ ಪೇಟೆ ಕಟ್ಟಿಸಿದನು. ಅದರ ಹೆಸರು ಹುಜಿಹಳ್ಳಿನ ಪೇಟೆ.

ಪೂರ್ವದಲ್ಲು ಯಿರುವ ಕುರುಗೋಡು ಬಿಟ್ಟು ಪೂರ್ವಭಾಗದಲ್ಲು ಪ್ಯಾಟಿ ಕೋಟಿ ಸಹಾ ಹೊಸತಾಗಿ ಕಟ್ಟಿಸಿದ್ದರಿಂದಾ ಅದಕ್ಕೆ ಹೊಸ ಕುರುಗೋಡುಯಂದು ಹೆಸರು. ಪೂರ್ವದಲ್ಲು ಯಿರುವ ವೂರು ಹಾಳಾದ್ದರಿಂದಾ ಅದಕ್ಕೆ ಹಳೆ ಕುರುಗೋಡುಯಂದು ಹೆಸರು. ಯರ್‍ರದುರ್ಗ ಕಟ್ಟಿಸಿದ ಶಾಲಿವಾಹನ ಶಕೆ ೧೬೬೪ನೆ ಚಿತ್ರಭಾನು ಸಂವತ್ಸರದಲ್ಲು ಕಿಲ್ಲೆದ ವಳಗು ತನ್ನ ಕಡೆ ಕಿಲ್ಲೇದಾರು ೪೦೦ ಮಂದೀನ ಬಿನಸಿ ಮುಂತಾದ ಮುತಸುದ್ದಿಗಳು ಸಹಾ ಮಾಮಲೆ ಕೆಲಸಕ್ಕೆ ಮುಜುಮದಾರಿ ಯರಡು ಕೆಲಸವನ್ನು ನೇಮಕಾ ಮಾಡಿಸಿದನು. ಯರಡು ವರುಷದ ಮ್ಯಾಲೆ ದೇಶಾಯಿ ವೆಂಕಪ್ಪನು ಗುಡಿಕೋಟೆ ಸೀಮೆಯಲ್ಲಿ ಹೋಗಿ ಯಿರುವಾಗ್ಯೆ, ಕಉಲು ಭಾಶಾಪತ್ರ ಮುಂತಾದ್ದು ಕೊಟ್ಟು ಕರೆ ಕಳುಹಿಸಿ, ಅವರ ಸ್ವಾಸ್ತಿ ವೃತ್ತಿ ಯಥಾ ಪ್ರಕಾರಾ ಉಮ್ಮಳಿ ಗ್ರಾಮಗಳು ಸಹಾ ಬಾಹಾಲು ಮಾಡಿ ಯಿಟ್ಟು, ತನ್ನ ಕಡೆ ಮಾಮಲೇದಾರನ ಸಂಗಡ ಸರಕಾರದ ಕೆಲಸದಲ್ಲಿ ಹಾಜರಾಗಿ ಯಿರುತಾ ಯಿದ್ದರು. ನಾಡಕುಲಕರ್ಣಿ ತಿಮ್ಮಪ್ಪನು ಕಉ[+ಲು] ಕರಾರಿನಿಂದಾ ಸ್ತಳಕ್ಕೆ ಹೊಂದಿ ತನ್ನ ಕೆಲಸ ಯಥಾ ಪ್ರಕಾರಕ್ಕೆ ಮಾಡಿಕೊಳ್ಳುತ್ತಾ ಯಿದ್ದನು. ನಾಡಗಉಡರು ತನ್ನ ಮಿರಾಸಿ ಅನುಭವಿಸಿಕೊಂಡು ಯಿದ್ಧ ಸರದೇಶಾಯಿರು ತನ್ನ ಕಡೆ ಮುತಾಲೀಕರನಾ ಯಿಟ್ಟು ಅನುಭವಿಸುತಾ ಬಂದರು. ಅದೇ ಪ್ರಕಾರ ಸರನಾಡಗೌಡಕಿ ನಡಿಯುತಾ ಬಂತು.

ತರುವಾಯಾ ಪೂರ್ವದಲ್ಲಿ ಯೀ ದೇಶಾಯಿ ವೆಂಕಪ್ಪನು ಮಾಡಿದ ಹಕ್ಕ ಸ್ವತಂತ್ರ ದ್ಯಾವಪ್ಪನಾಯಕನು ಮನಸ್ಸಿನಲ್ಲಿಯಿಟ್ಟು ಉಪದ್ರವ ಕೊಡಬೇಕೆಂದು ಯಿರಲಾಗಿ, ಯೀ ಅರ್ಥವನ್ನು ವೆಂಕಪ್ಪಗೆ ತಿಳದು ತನ್ನ ಹೆಂಡರ ಮಕ್ಕಳನ್ನಾ ವೀರಾಪುರಯಂಬೋ ಉಮ್ಮಳಿ ಗ್ರಾಮದಲ್ಲಿ ಮಂದಿ ಸಹಾಯಿಟ್ಟು, ತಾನು ಯೀ ಕುರಗೋಡ ಸ್ಥಳವನ್ನು ಬಿಟ್ಟು ಹೋಗೋ ಸಮಯದಲ್ಲಿ ವೀರಾಪುರದ ಮಾರ್ಗದಲ್ಲಿ ಸಿಕ್ಕಿದ್ದರಿಂದ ವೆಂಕಟ್ಟ[>ಪ್ಪ]ನ ಹಿಡತಂದು ಖೈದಿನಲ್ಲಿ ಯಿಟ್ಟು, ಯೀತನ ಕಂಬಳಿಯಲ್ಲಿ

ಮೊಟ್ಟೆ ಕಟ್ಟಿ ಆನೇ ಕಾಲಿನ ಕೆಳಗೆ ಹಾಕಿದಲ್ಲಿ ನಾಲ್ಕು ಗಳಿಗೆ ವರೇಗೆ ಆನೆ ತುಳೀಲಿಲ್ಲಾ. ಆ ಸಮಯದಲ್ಲಿ ಬಳಿಯು ಯಿದ್ದ ಸಾಮಾಧಿಕರು ಗ್ರಾಮಸ್ಥರು ಸಹಾ "ಆನೆ ತುಳಿಯಲಿಲ್ಲಾ, ದಯಮಾಡಿ ಪಾಲಿಸಬೇಕು"ಯಂದು ದ್ಯಾವಪ್ಪನಾಯಕರಿಗೆ ಬಿನ್ನಹಾ ಮಾಡಲಾಗಿ, ಆನೆಕಾಲಿನ ಕೆಳಗೆ ಹಾಕಿದವನ ಬಿಡಿಶಿ ಸಾವಿರ ವರಹಾ ದಂಡಾ ತೆಗೆದುಕ್ಕೊಂಡು, ಯೀತನ ಸ್ವಾಸ್ಥಿ ಯತಾಪ್ರಕಾರಕ್ಕೆ ನಡಿಯಿಸುತಾ ಯಿರಲಾಗಿ, ಕೆಲವು ದಿವಸದ ಮೇಲೆ ವೆಂಕಪ್ಪನ ಮನಸ್ಸಿಗೆ ಸಮಾಧಾನ ಯಿಲ್ಲದೇ ಸ್ಥಳಾ ಬಿಟ್ಟು, ಕುಡುತಿನಿ, ಗುಡೆಗೋಟೆಸಂಸ್ಥಾನಿಕರ ಕೆಳಗೆ ಯಿದ್ದದರಿಂದಾ ಅಲ್ಲಿಗೆ ಶೇರಿ, ತನ್ನ ಹೆಂಡರು ಮಕ್ಕಳು ಸಹಾ ಸಂಗಡಾ ಕರಕೊಂಡು ಕುಡುತಿನ ಕಿಲ್ಲೆದಾರಿ ಮಾಡಿಕ್ಕೊಂಡು, ಯಿರಲಾಗಿ, ಕುರಗೋಡು ಪರಗಣೆಯಲ್ಲಿ ಯೀತನ ಅಣ್ಣತಮ್ಮರು ಕುರುಗೋಡಿನಲ್ಲಿ ಯಿದ್ದರು. ಅವರಿಗೆ ಪಾಲಖಿ ಉಮ್ಮಳಿಗಿ ಕಲ್ಲುಕಂಬಾಂಬೋ ಗ್ರಾಮ ಸರಕಾರ ಜಪ್ತಿಮಾಡಿ, ವೀರಾಪುರದ ಉಮ್ಮಳಿಗೆ ಭೂಸ್ವಾಸ್ತಿ ವರ್ತನೆ ಮುಂತಾದ್ದು ಮಾತ್ರ ಅವರಿಗೆ ನಡಹಿಸಿದರು. ತರುವಾಯ ಕೆಲಉ ದಿವಸದ ಮೇಲೆ ವೆಂಕಪ್ಪಗೆ ದ್ಯಾವಪ್ಪನಾಯಕರು ಕಉಲು ಕರಾರು ಕೊಟ್ಟು ಕರೆಕಳುಹಿಸಿ, ಕುರುಗೋಡು ಸ್ಥಳಕ್ಕೆ ಹೊಂದಿದ ಬಳಿಕಾ ವೊಂದು ತಮ್ಮ ಅಣ್ಣ ತಮ್ಮಂದರವರ ಸಂಗಡಾ ಯಿದ್ದು, ಸ್ವಾಸ್ತಿ ಅನುಭವ ಮಾಡಿಕ್ಕೊಂಡು ತೀರಿ ಹೋದನು. ಯೀತನ ಮೊಮ್ಮಕ್ಕಳು ಹಿರೆವೆಂಕಣ್ಣ ಚಿಕ್ಕವೆಂಕಪ್ಪಯಂಬಾ ಅವರಿಗೆ ದ್ಯಾವಪ್ಪನಾಯಕನು ಅರಮನಿಗೆ ಕರಿಕಳುಹಿಸಿ ಮಾನಬಹುಮಾದ ಮಾಡಿಸಿ, ಬಹುಮಾನವಾಗಿ ನಡಹಿಸುತಾ ಬಂದನು. ಸ್ವಾಸ್ಥಿ ಅನುಭವಾ ಮಾಡಿಕ್ಕೊಂಡು ಯಿದ್ದರು. ವೆಂಕಪ್ಪನ ಪಾಲಕಿ ಉಮ್ಮಳಿಗಿಗ್ರಾಮ ಸರಕಾರ ಜಪ್ತಿ ಮಾಡಿಕೊಂಡ ಸಮಯದಲ್ಲಿ ನಾಡಕುಲಕರ್ಣಿರಿಗೆ ನಡೆವಂಥಾ ಪಾಲಖಿ ಉಮ್ಮಳಿಗಿಗ್ರಾಮ ಸರಕಾರ ಜಪ್ತಿ ಮಾಡಿದರು. ಅದೇ ಪ್ರಕಾರಕ್ಕೆ ನಾಡಗೌಡರ ಪಾಲಖಿ ಉಮ್ಮಳಿಗ್ರಾಮ ಸಹಾ ಜಪ್ತಿ. ಯೀ ದ್ಯಾವಪ್ಪನಾಯಕನು ಕುರಗೋಡಿಗೆ ಮೂರು ಹರದಾರಿ ಪಶ್ಚಿಮಭಾಗದಲ್ಲು ವೊರವಾಯಿಯಂಬಾ ಗ್ರಾಮಕ್ಕೆ ಪಶ್ಚಿಮಾ ಸಾಮೀಪ್ಯವಾಗಿ ಗುತ್ತಿಗನೂರು ಯಂಬೊ ಗ್ರಾಮ ಆನೆಗೊಂದಿ ಅವರ ಸರಹದ್ದು, ಅದರಿಂದಾ ಅವರ ಸೀಮೆಗೆ ಉಪದ್ರಮಾಡುತಾ ಯಿರೋದ್ದರಿಂದಾ ಗುತ್ತಿಗನೂರು ಕೋಟೆ ಕಟ್ಟಿಸಿ, ಮಂದಿಯಿಟ್ಟು ಠಾಣ್ಯ ಬಂದೋಬಸ್ತು ಮಾಡಿ, ಪೂರ್ವದಲ್ಲಿ ವೊರವಾಯಿಗ್ರಾಮ ಯಿದ್ದ ಕೋಟೆ ಬಿಟ್ಟು ಆ ಕೋಟೆಗೆ ಪಶ್ಚಿಮ ಸಾಮೀಪ್ಯವಾಗಿ ಹೊಸತಾಗಿ ಗ್ರಾಮ ಕಟ್ಟಿಸಿ ಬಸ್ತಿ ಮಾಡಿದನು. ಆ ಗ್ರಾಮಕ್ಕೆ ಉತ್ತರ ೧ ಹರದಾರಿ ಮೇಲೆ ಯಮ್ಮಿಗನೂರು ಯಂಬೋ ಗ್ರಾಮದ ಕೋಟೆ ಮರಾಮತು ಮಾಡಿ, ಆ ಗ್ರಾಮಕ್ಕೆ ಪೂರ್ವಭಾಗದಲ್ಲಿ ೨ ಹರದಾರಿಯಲಿ ಹಾವಿನಪಾಳಯಂಬ ಗ್ರಾಮದ ಕೋಟೆ ಮರಾಮತು ಮಾಡಿ, ಆ ಗ್ರಾಮಕ್ಕೆ ಪೂರ್ವ ೧ ಹರದಾರಿಯಲ್ಲು ಶಿರಿಗೆರೆಯಂಬ ಗ್ರಾಮದ ಕೋಟೆ ಮರಾಮತು ಮಾಡಿ, ಆ ಗ್ರಾಮಕ್ಕೆ ಪೂರ್ವದಲ್ಲಿ ೨ ಹರದಾರಿ ಕರೂರುಯಂಬೊ ಗ್ರಾಮದ ಕೋಟೆ ಮರಾಮತು ಮಾಡಿ, ಯೀ ಪ್ರಕಾರ ಯಿನ್ನೂ ಕೆಲವು ಗಡಿಗಳು ಮರಾಮತು ಮಾಡಿ, ಆ ಸ್ಥಳದಲ್ಲಿ ಠಾಣ್ಯವನ್ನು ಯಿಟ್ಟು ಬಂದೋಬಸ್ತು ಮಾಡಿದನು. ಕುರುಗೋಡು ಯರ್‍ರದುರ್ಗದ ಕೋಟೆ ಕಟ್ಟಿಸಿದ ವರುಷದ ಮ್ಯಾಲೆ ದೇಶ ಉಪದ್ರವದಿಂದಾ ಸ್ವರ್ಗಸ್ತವಾದನು. ಯೀತಗೆ ಯಿಬ್ಬರು ಹೆಂಡರು

೧ ಮೊದಲ ಹೆಂಡತಿ ಪುದ[>ಪದ್ಮ]ಮ್ಮಾ ಯೀಕಿಗೆ ಮೂರು ಮಂದಿ ಮಕ್ಕಳು

೧ ಹಿರೇರಾಮಪ್ಪನಾಯಕ

೧ ಹನುಮಪ್ಪನಾಯಕ

೧ ಚಿಕ್ಕರಾಮಪ್ಪನಾಯಕ

೩

೧ ಚಿಕ್ಕ ಹೆಂಡತಿ ನೀಲಮ್ಮಾಯಂಬೊ ಆಕಿಗೆ ಸಂತಾನವಿಲ್ಲ

೨

ಯೀ ಪ್ರಕಾರ ದ್ಯಾವಪ್ಪನಾಯಕಗೆ ಮೂರು ಮಂದಿ ಮಕ್ಕಳು. ಯೀ ಮೂರು ಮಂದಿ ದೇಶವನ್ನು ಹಂಚಿಕೊಂಡದ್ದು ವಿವರಾ:

೧ ಹಿರೇರಾಮಪ್ಪನಾಯಕಗೆ ಬಳ್ಳಾರಿ ಸೀಮೆ.

೧ ಹನುಮಪ್ಪನಾಯಕಗೆ ಕುರುಗೋಡು ಸೀಮೆ. ಯೀತನು ಬಳ್ಳಾರಿ ವಳಗೆ ನಿಂತು ಕುರುಗೋಡು ದೊರೆತನಾ ಮಾಡುತ್ತಿದ್ದನು.

೧ ಚಿಕ್ಕರಾಮಪ್ಪನಾಯಕಗೆ ತೆಕ್ಕಲುಕೋಟೆ.

೩

ಯೀ ಪ್ರಕಾರಾ ಹಂಚಿಕೊಂಡು ಯಿದ್ದರು. ಯಿವರು ದೊರೆತನ ಮಾಡಿದ ವರುಷಗಳು:

೯. ಹಿರೇರಾಮಪ್ಪನಾಯಕನು ೯ ವರ್ಷ ದೊರೆತನ ಮಾಡಿ ಸ್ವರ್ಗಸ್ಥವಾದನು. ಈತನಿಗೆ ಸಂತಾನವಿಲ್ಲ.

೭. ಯೀತನ ತಮ್ಮಾ ಬಳ್ಳಾರಿ ಕುರಗೋಡ ಯರಡು ಸ್ಥಳ ದೊರೆತನಾ ೭ ವರ್ಷ ಮಾಡಿ ಸ್ವರ್ಗಸ್ತವಾದನು. ಈತನಿಗೆ ಸಂತಾನವಿಲ್ಲ.

೫. ಯೀತನ ತಮ್ಮ ತೆಕ್ಕಲಕೋಟೆಯಲ್ಲು ಯಿದ್ದ ಚಿಕ್ಕರಾಮಪ್ಪನಾಯಕನು ಬಳ್ಳಾರಿಗೆ ಬಂದು, ಬಳ್ಳಾರಿ ಕುರುಗೋಡು ತೆಕ್ಕಲಕೋಡೆ ಯೀ ಮೂರು ಸ್ಥಳಗಳ ದೊರೆತನಾ ೫ ವರ್ಷ ಮಾಡಿದನು. ಯೀತಗೆ ಸಂತಾನವಿಲ್ಲ.

೨೧ ವರುಷ ಅವರ ದೊರೆತನದಲ್ಲಿ ಜಮಿದಾರಿ ೫ ಬಾಬು ಅವರವರು ಅನುಭವಾ ಮಾಡಿಕ್ಕೊಂಡು ಬಂದರು. ಯಿವರ ದೊರೆತನದಲ್ಲಿ ಮೊಗಲಾಯಿ ದಂಡು, ಆರೇರ ದಂಡು ಬಂದಾಗ್ಯೆ ಯಿವರ ಖಂಡಣಿ ಚವಧಾ[>ಥಾ]ಯಿ ಕೊಟ್ಟು ದೊರೆತನಾ ಸಂಸ್ಥಾನಿಕರು ಮಾಡುತಾ ಯಿದ್ದರು. ಯೀ ಮೂರು ಮಂದಿಗೆ ಸಂತಾನ ಯಿಲ್ಲದೆ ಯಿದ್ದದರಿಂದಾ ದ್ಯಾವಪ್ಪನಾಯಕನ ಚಿಕ್ಕಹೆಂಡತಿ ನೀಲವ್ಮಾಯೆಂಬೋ ಹೆಂಗಸು, ಸಾಮಾಧಿಕರ ಮೂಲದಿಂದಾ ಪೂರ್ವದಲ್ಲಿ ಬಾಲದ ಹನುಮಪ್ಪನಾಯಕನ ಹಿರೆಮಗ ಅಂಕುಶರಾಯಾ ಯಂಬವನು ನಂದ್ಯಾಲಾ ಶಿರವಾಳಾ ಶೀಮೆಯಲ್ಲು ದೊರೆತನ ಮಾಡಿಕ್ಕೊಂಡು ಯಿದ್ದವರ ಸಂತತಿ, ಅವರಿಗೆ ನಂದ್ಯಾಲದ ದೊರೆತನವನ್ನು ಕಳಕೊಂಡು ಅವರ ಸಂತತಿ ಅವರು ಶಿದ್ದಪ್ಪ ಪ್ರಸನ್ನಪ್ಪಯಂಬ ಅಣ್ಣತಮ್ಮಂದರು ಬಳ್ಳಾರಿಗೆ ಪೂರ್ವಭಾಗದಲ್ಲು

೧ ಹರದಾರಿ ಮೇಲೆ ಹಂದರಹಾಳುಯಂಬೋ ಗ್ರಾಮದಲ್ಲಿ ಕೆಲವು ಖರ್ಚುವೆಚ್ಚಗೆ ಬಳ್ಳಾರಿ ಅವರ ಕಡಿಯಿಂದಾ ತೆಗೆದುಕೊಂಡು, ವ್ಯವಸಾಯ ಮಾಡಿಕ್ಕೊಂಡು ಯಿದ್ದರು. ಆ ಸಿದ್ದಪ್ಪಗೆ ಯಿಬ್ಬರು ಮಕ್ಕಳು ವಿವರಾ :

೧ ದೊಡ್ಡತಲೆ ರಾಮಪ್ಪನಾಯಕ

೧ ಹನುಮಪ್ಪನಾಯಕ

೨

ಯೀ ಉಭಯತ್ರರನು ಬಳ್ಳಾರಿಗೆ ಕರಕೊಂಡು ಬಂದು, ಸದರಿ ಬರದ ದ್ಯಾವಪ್ಪನಾಯಕನ ಚಿಕ್ಕ ಹೆಂಡತಿ ನೀಲಮ್ಮನು ಸಾಮಾಧಿಕರ ಅನುಮತಿಯಿಂದಾ ದೊಡ್ಡತಲೆ ರಾಮಪ್ಪನಾಯಕಗೆ ಬಳ್ಳಾರಿ, ಕುರಗೋಡ, ತೆಕ್ಕಲಕೋಟೆ ಯೀ ಮೂರು ಸ್ಥಳದ ಪಟ್ಟಾಭಿಷೇಕವನ್ನು ಮಾಡಿದರು. ಆಗ ದೊಡ್ಡತಲೆ ರಾಮಪ್ಪನಾಯಕಗೆ ಹತ್ತುವರುಷ ಆದ್ದರಿಂದಾ, ಯೀತನ ಪಟ್ಟಕ್ಕೆ ಕೂಡ ನೀಲಮ್ಮನು ಸಾಮಾಧಿಕರ ಯಿಟ್ಟುಕೊಂಡು ೩ ವರುಷ ದೊರೆತನ ಮಾಡೋದರೊಳಗೆ, ಯೀ ದೊಡ್ಡತಲೆ ರಾಮಪ್ಪನಾಯಕನ ತಂದೆ ಸಿದ್ದಪ್ಪನಾಯಕ ಆತನ ತಮ್ಮ ಪ್ರಸನ್ನನಾಯಕ ಯೀ ಉಭಯರು ಯಿದ್ದರೆ ತನ್ನ ಅಧಿಕಾರಾ ಸಾಗದುಯೆಂದು ತಿಳಿದು, ಯೀ ಉಭಯರನಾ ಶಿರಚ್ಛೇದ ಮಾಡಿಸಿದಳು. ಯಿದು ಹೊರತು ಜನರನಾ ಉಪದ್ರ ಮಾಡುತಿರಲಾಗಿ, ಬಹುಜನರಿಗೆ ಕಂಟಕವಾಗಿ ಯಿದ್ದದರಿಂದ ಸಾಮಾಧಿಕರು ಕಾಟಕರು ಸಹಾಯಕಸ್ತರಾಗಿ ನೀಲಮ್ಮನ ಶಿರಚ್ಛೇದಾ ಬಳ್ಳಾರಿಯಲ್ಲಿ ಮಾಡಿ, ದೊಡ್ಡತಲೆ ರಾಮಪ್ಪನಾಯಕನ ಯಿಟ್ಟುಕೊಂಡು ಸಾಮಾಧಿಕರು ಅಧಿಕಾರ ಮಾಡುತಾ ಯಿದ್ದರು. ಯೀತನ ತಮ್ಮ ಹನುಮಪ್ಪನಾಯಕನು ಅಣ್ಣನ ಹತ್ರ ಬಳ್ಳಾರಿಯಲ್ಲು ಯಿರುತಾ ಯಿದ್ದನು. ಆನೆಗೊಂದಿ ಅರಸು ವೀರವೆಂಕಟಪತಿರಾಯನ ಮಗ ತಿಮ್ಮಪ್ಪಯ್ಯರಾಯರಿಗೆ ಯಿವರಿಗೆ ವಿರುದ್ಧವಾಗಿ, ಯಿವರ ಗ್ರಾಮಗಳು ಯುದ್ಧಾಮಾಡಿ ಕೆಲವು ಗ್ರಾಮಗಳು ಠಾಣ್ಯ ಹಾಕೋಣ, ಯಿವರು ಹೋಗಿ ಅವರ ಗ್ರಾಮಗಳು ಲೂಠಾಯಿಸಿ ಅವರ ಠಾಣ್ಯ ಹಾಕಿದ ಗ್ರಾಮಗಳು ಠಾಣ್ಯಾ ಬಿಡಿಸಿ ತಮ್ಮ ಠಾಣ್ಯ ಕಾಯಾಂ ಮಾಡೋದು, ಯೀ ಪ್ರಕಾರ ಕಲಾಪನೆ ನಡಿಯುತಾ ಬಂತು, ಯಿದು ಹೊರ್ತು ನೀಲಮ್ಮನ ಕಾಟಕರು ಸಂಹ್ವಾರ ಮಾಡೋ ನಿಮಿತ್ಯ ಮೊಗಲಾಯಿ ದಂಡು ತಂದು ಯಿದ್ದದ್ದಕ್ಕೆ, ಆ ದಂಡಿಗೆ ಚವಥಾ ಕೊಡೋ ಬಗ್ಯೆ ಸಂಸ್ಥಾನದಲ್ಲಿ ದ್ರವ್ಯಬಲ ಯಿಲ್ಲದೆ ಯಿದ್ದದರಿಂದಾ, ಖಂಡಣೆ ವ್ಯೆವಜು ಬಗ್ಯೆ ತೆಕ್ಕಲಕೋಟೆ ಶೀಮೆಯಲ್ಲು ಕೆಲವು ಗ್ರಾಮಗಳು ಕಸುಬಾ ಕಿಲ್ಲೇಗಳು ಸಹಾ ಕೊಟ್ಟರು. ತರುವಾಯ ಹಂಡೆ ಅವರಿಗೆ ಕಸಬಾ ತೆಕ್ಕಲಕೋಟೆ ಯಿವರ ಸ್ವಾಧೀನವಾಗಲಿಲ್ಲ. ಕೆಲವು ಗ್ರಾಮಗಳು ಮಾತ್ರ ಯಿವರ ಸ್ವಾಧೀನಯಿತ್ತು. ಆ ಶೀಮೆ ಸರನಾಡಗೌಡಿಕಿ ಮೀರಾಸಿ ವರ್ತನೆ ಉಮ್ಮಳಿಗ್ರಾಮ ಮಾತ್ರ ನಡಿಯುತಾ ಬಂತು. ಅಣ್ಣತಮ್ಮಂದರ ವಳಗೆ ಕಲಾಪನೆ ಹುಟ್ಟಿ ಹನುಮಪ್ಪನಾಯಕನು ಬಳ್ಳಾ[+ರಿ] ಸ್ಥಳವನ್ನು ಬಿಟ್ಟು, ಬಳ್ಳಾರಿಗೆ ಮೂರು ಗಾವುದ ದೂರದ ಶಿರಕುಪ್ಪೆ ತಾಲೂಕೆ ಕೆಂಚನಗುಡ್ಡಯಂಬೊ ಸ್ಥಳದಲ್ಲಿ ಅಲ್ಲಿ ಜಮೀದಾರಾ ಪಂಪಾಪತಿಗೌಡನೆಂಬಾತನ ಬಳಿಯಾ ಯಿದ್ದನು. ಯೀ ಗ್ರಾಮಾ ತುಂಗಬದ್ರಾನದೀ ತೀರಾ.

ಯೀ ದೊಡ್ಡತಲೆರಾಮಪ್ಪನಾಯಕನು ತನ್ನ ದೊರೆತನದಲ್ಲಿ ಆರೇರು, ಮೊಗಲಾಯೇರು ಬಂದು ತನ್ನ ಶೀಮೆಗೆ . . . . ಅವರಿಗೆ ಚವಥಾಯಿ ಕೊಟ್ಟುಕೊಂಡು, ಪರಾಕ್ರಮದಿಂದಾ ಪಟ್ಟಕ್ಕೆ

ಕೂತು ಆರಭ್ಯಾ ೩೩ ವರುಷ ದೊರೆತನಾ ಮಾಡಿ. ತಾರಣ ಸಂವತ್ಸರ ಜೇಷ್ಟ ಬಹುಳ ೯ಯಲ್ಲು ಸ್ವರ್ಗಸ್ಥವಾದನು. ಯೀತಗೆ ಸಂತತಿ ಯಿಲ್ಲಾ. ತರುವಾಯ ದೊರೆತನಕ್ಕೆ ಯೀತನ ತಮ್ಮ ಹನುಮಪ್ಪನಾಯಕ ಕೇ[>ಂ]ಚನಗುಡ್ಡದಲ್ಲಿ ಯಿದ್ದ, ಆತನ ಸಾಮಾಧಿಕರು[>ಸಂಬಂಧಿಕರು] ಅಲ್ಲಿಗೆ ಹೋಗಿ ಹನುಮಪ್ಪನಾಯಕನ ಬಳ್ಳಾರಿಗೆ ಕರಕೊಂಡು ಬಂದು, ಪಟ್ಟಾಭಿಷೇಕ ಸದರಿ ಸಂವತ್ಸರ ಜೇಷ್ಟ ಬಹುಳ ೧೪ಯಲ್ಲು ಬಳ್ಳಾರಿಯಲ್ಲು ಮಾಡಿದರು. ಯೀತನು ಕುರುಗೋಡು, ಬಳ್ಳಾರಿ, ತೆಕ್ಕಲಕೋಟೆ ಶೀಮೆಯಲ್ಲು ಕೆಲವು ಗ್ರಾಮಗಳು ದೊರೆತನಾ ಮಾಡೊವಾಗ್ಯೆ ವಂದಾವರ್ತಿ ಕರೂರುಯಂಬೋ ಗ್ರಾಮಕ್ಕೆ ಬಂದು ಮುತ್ತಿಗೆ ಹಾಕಿ. ಮೂರು ತಿಂಗಳು ಆ ಕಿಲ್ಲೆ ಲಡಾಯಿ ಮಾಡಿ, ಕಿಲ್ಲೆ ಸ್ವಾಧೀನಕ್ಕೆ ಬಾರದೇ ಹೊರಟು ಹೋದರು. ಆ ವ್ಯಾಳ್ಯೆದಲ್ಲು ಆರೇರ ಗೋಪಾಳರಾಯರ ದಂಡು ಯಿವರಿಗೆ ಕುಮ್ಮಕು ಆದ್ದರಿಂದಾ ಮೊಗಲಾಯವರು ಹೊರಟು ಹೋದರು. ಹನುಮಪ್ಪನಾಯಕನು ೫ ವರುಷ ರಾಜ್ಯವನ್ನು ಮಾಡಿ ವಿರೋಧಿ ಸಂವತ್ಸರ ಆಷಾಡ ಬಹುಳ ೩೦ ಯಲ್ಲು ಸ್ವರ್ಗಸ್ಥನಾದನು. ಯೀತಗೆ ಸಂತತಿಯಲ್ಲಾ.

ತರುವಾಯಾ ರಾಮಪ್ಪನಾಯಕನ ಹೆಂಡತಿ ಶಿದ್ದಮ್ಮಾ. ಹನುಮಪ್ಪನಾಯಕನ ಹೆಂಡತಿ ಪದ್ಮಮ್ಮ ಸಹಾ ಸಾಮಾಧಿಕರನ[>ಸಂಬಂಧಿಕರನ] ಯಾವತ್ತರನಾ ಕರಶಿ ಮಾತನಾಡಿಕ್ಕೊಂಡು, "ನಮ್ಮ ಸಂತತಿ ಅವರು ಯಿಲ್ಲದೇ ಹೋದರು. ಮುಂದೆ ಯೀ ದೊರೆತನಕ್ಕೆ ದಾರನಾದರೂ ವೊಬ್ಬರನಾ ನೇಮಕಾ ಮಾಡಬೇಕಾಗತದೆ"ಯಂತಾ ಮಸಲತು ಮಾಡಿ, ಹನುಮಪ್ಪನಾಯಕನ ಭಾವಮೈದನನ ಮಗ ಆರು ವರುಷದಾ ಕೂಶಿಗೆ ದ್ಯಾವಪ್ಪನಾಯಕ ಯಂಬೋ ಹೆಸರು ಯಿಟ್ಟು, ಆ ಕೂಸಿನ ಮುಂದೆ ಯಿಟ್ಟುಕೊಂಡು ದೊರೆತನಾ ಮಾಡಬೇಕೆಂಬೊದರೊಳಗೆ ಸ್ಥಳದಲ್ಲು ಯಿರುವಂಥ ಕಾಟಕರು ಯೇಕಸ್ಥರಾಗಿ, ಯೀ ಹಂಡೇದವರ ದೊರೆತನಾ ಗುಬ್ಬಿ ಅವರಿಗೆ ದೊರೆತನಾ ಆಗಲಿಕ್ಕೆ ಕಾರಣಯಿಲ್ಲಾಯಂದು, ಪೂರ್ವದಲ್ಲು ಹನುಮಪ್ಪನು ಕೆಂಚನಗುಡ್ಡದಲ್ಲು ಯಿರುವಾಗ್ಯೆ ಸಿದ್ಧರಾಮವ್ವಾಯಂಬೋ ಬ್ರಾಹ್ಮಣಜಾತಿಯಿಂದಾ ಕುಲಕೆಟ್ಟು ಯೀತನ ಬಳಿಗೆ ಶೇರಿ ಯಿದ್ದಾಗೆ, ಯಿವಳ ಬಳಿಯ ಶೇವಾಉತ್ರಿ ಮಾಡಿಕ್ಕೊಂಡು ಯಿರುವಂಥಾ ಚಿಪ್ಪಿಗರ ಬುದಿಯಂಬವನು ವಂದು ಆಗಾಂತ ಕೂಸಿನ ತಂದುಕೊಟ್ಟದಕ್ಕೆ ಸಿದ್ಧರಾಮವ್ವನು ಸಂರಕ್ಷಣ ಮಾಡಿಕೊಂಡಿದ್ದಳು, ಆ ಚಿಕ್ಕವಾ ೧೨ ವರುಷದ ಪ್ರಾಯವಾಗಿ ಹನುಮಪ್ಪನಾಯಕನ ದೊರೆತನದ ವಳಗೆ ಆತನ ಬಳಿಯ . ? . ಮತರಾಗಿಯಲ್ಲು ಯಿದ್ದ, ಆತ ಯೀತನ ಹೆಸರು ದೊಡ್ಡಯಂದು ಹೆಸರು ಯಿತ್ತು. ಕಾಟಕರಲ್ಲಿ ಮುಖ್ಯವಾದ ಕೋಟೆ ನೀಲಯ್ಯ ಮೊದಲಾದವರು ಯೇಕಸ್ತರಾಗಿ ಸಿದ್ದಮ್ಮಾ ಪದ್ಮಮ್ಮಾ ಉಭಯ ಹೆಂಗಸರಿಗೆ ಸಮ್ಮತಯಿಲ್ಲದೆ, ತಮ್ಮ ಸ್ವತಂತ್ರದಲ್ಲು ಯೀ ದೊಡ್ಡಯ್ಯನೆಂಬವನಾ ದೊರೆಯಂತಾ ಮಾಡಿ, ದೊಡ್ಡಪ್ಪನಾಯಕ ಯಂಬೋ ಹೆಸರುಯಿಟ್ಟು, ಆ ಬಳಿಕಾ ದಿವಾಣ ಅರಮನೇಗೆ ನಿಚ್ಚಣಿಕೆಗಳು ಹಾಕಿ ವೊಳಗೆ ಯಿಳೆಬಿದ್ದು, ದೊರೆಗಳ ಸಿಖಾಪಟ್ಟದವರು ಹಿಡಿದಂಥಾ ವಜ್ರದ ಬಾಕು ಸಹಾ ತೆಗೆದುಕ್ಕೊಂಡು, ಹನುಮಪ್ಪನಾಯಕನ ಭಾವಮೈದನ ಮಗನಾ ದ್ಯಾವಪ್ಪನಾಯಕಯೆಂದು ಹೆಸರು ಯಿಟ್ಟು ದೊರೆತನಕ್ಕೆ ನೇಮಕಮಾಡಿದ ಹುಡುಗನಾ ತೆಗೆದುಕ್ಕೊಂಡು, ಹಾಂಗೆ ಹನುಮಪ್ಪನಾಯಕನ ಭಾವಮೈದನನಾದ ರುದ್ರಪ್ಪ ಚೆ[>ಚೆ]ನ್ನಬಸಪ್ಪ ಉಭಯತ್ರನ ತೆಗದುಕ್ಕೊಂಡು ಅರಮನೆ ಹೊರೆಗೆ ಬಂದು, ಶಿಖಾ ಬಾಂಕು[>ಬಾಕು] ತಾಉ ಮಾಡಿದ ದೊಡ್ಡಪ್ಪನಾಯಕಗೆ ಕೊಟ್ಟು, ದ್ಯಾವಪ್ಪನಾಯಕಯೆಂಬೊ ಹುಡುಗನಾ, ರುದ್ರಪ್ಪ ಚೆನ್ನಬಸಪ್ಪ ಯೀ ಮೂರು ಮಂದೀನಾ ಬಳ್ಳಾರಿ

ಯರಡು ಗುಡ್ಡದ ಮಧ್ಯದಲ್ಲು ಸಂಹಾರ ಮಾಡಿದರು. ಆ ಬಳಿಕಾ ಯೀ ದೊಡ್ಡಪ್ಪನಾಯಕನು ದೊರೆತನಾ ಮಾಡಿಕೊಂಡು ಯಿದ್ದನು. ಸಿದ್ದಮ್ಮಾ ಪದ್ಮಮ್ಮಾ ಉಭಯರು ತಮ್ಮಾ ಅರಮನೆಯಲ್ಲು ಸುಖವಾಗಿ ಖರ್ಚು ವೆಚ್ಚಕ್ಕೆ ತೆಗೆದುಕ್ಕೊಂಡು ಯಿರುತಾ ಯಿದ್ದರು. ಕಡಿಮೆ ಸಮಾಧಿಕರು[>ಸಂಬಂಧಿಕರು] ಸಮರ್ಪಕವಾದವರು ನಿಂತರು. ಮಿಕ್ಕಾ ಮಂದಿಸ್ಥಳ ಬಿಟ್ಟು ಹೋದರು. ಯೀತನ* ದೊರೆತನದಲ್ಲಿ ಬಹದರನ ದಂಡು ಸುದ್ದಾ ಬಳ್ಳಾರಿಕೋಟೆಗೆ ಮುತ್ತಿಗೆ ಹಾಕಿ ಕೆಲವು ದಿವಸ ಲಡಾಯಿ ಮಾಡೊವಾಗ್ಯೆ ಕಿಲ್ಲೆ ಸ್ವಾಧೀನಕ್ಕೆ ಬಾರದೇ ಹೋಗಿ, ಕೋಟೆಯಲ್ಲು ಯಿಹೋ ಅವರಿಗೆ ಆರೇರ ಮು[>ಮ]ದ್ದತು ಬಾಹೋದು ಸಮಾಚಾರ ಕೇಳಿ, ಹುಂಡೇಕಾರ ಸೀನಪ್ಪನಾಯಕನ ಮುಖಾಂತ್ರ ಸಲಹಾ ಮುಗದು ಖಂಡಣಿ ರೊಕ್ಕ ಸೀನಪ್ಪನಾಯುಕನ ಕಡೆಯಿಂದ ಪರನಿತ[>ಶಾ]ವಾದ್ದರಿಂದಾ ಬಹದರನ ದಂಡು ಶ್ರೀರಂಗಪಟ್ಟಣಕ್ಕೆ ಹೋಯಿತು. ತರುವಾಯ ಶೀನಪ್ಪನಾಯಕನು ತನ್ನ ಖಂಡಣಿ ರೊಕ್ಕದ ದಸಿಯಿಂದಾ ಸಿದ್ದಮ್ಮಾ ಪದ್ಮಮ್ಮಾ ದೊಡ್ಡಪ್ಪನಾಯಕನ ಸಹಾ ಕಿ[>ಕೆಂ]ಚನಗುಡ್ಡಕ್ಕೆ ವೊಲು ತೆಗೆದುಕ್ಕೊಂಡು ಹೋಗಿ ಯಿಟ್ಟುಕೊಂಡನು. ಬಳ್ಳಾರಿ ಕುರುಗೋಡದಲ್ಲಿ ಮಾಮಲೇದಾರು ಕೆಲಸ ನೋಡುತ್ತಾ ಯಿದ್ದರು. ತಾಲೂಕಿನಲ್ಲಿ ವಸೂಲಿ ಆದ ಹಣವನ್ನು ಸಾಹುಕಾರ ಸೀನಪ್ಪನಾಯಕಗೆ ಖಂಡಣೆ ಹಣಕ್ಕೆ ತಿರುವಳಿ ಮಾಡುತಾ ಯಿದ್ದರು.

ಯೀ ಪ್ರಕಾರಾ ಯಿರುವಲ್ಲಿ ಕೆಂಚನಗುಡ್ಡದಲ್ಲಿ ಸಿದ್ದಮ್ಮಾ ಪದ್ಮಮ್ಮಾ ದೊಡ್ಡನಾಯಕ ಸಹಾ ವೊಲಿನಲ್ಲಿ ಯಿರುವಾಗ್ಯೆ ಪೂರ್ವದ ಲ್ಲಿವುದ[>ವಿರುಧ]ದಿಂದಾ ಕೆಲಉ ಸಾಮಾಧಿಕರು[>ಸಂಬಂಧಿಕರು] ಸ್ಥಳಬಿಟ್ಟು ಹೊದವರನಾ ಸಿದ್ದಮ್ಮಾ ಪದ್ಮಮ್ಮಾ ತಮ್ಮ ಬಳಿಗೆ ಕರಿಸಿಕೊಂಡು, "ಯೀ ದೊಡ್ಡಪ್ಪನಾಯಕನಾ ದೊರೆತ ಮಾಡಿ ಯಿಹೋದು ನಮಗೆ ಸಂತತಿಯಿಲ್ಲಾ ಯಂದು. ಯೀಗಾ ನೀವು ಕುರುಗೋಡಿಗೆ ಹೋಗಿ, ಅಲ್ಲಿ ಯಿರುವ ಕಾಟಕರನಾ ಸಮ್ಮತಿಮಾಡಿ, ಅನಂತಪುರದ ವಂಶಿಕರನಾ ತೆಗದುಕ್ಕೊಂಡು ಬಂದು, ಕುರುಗೋಡಿನಲ್ಲಿ ದೊರೆತನಾ ಪಟ್ಟಕಟ್ಟಿ, ಯೀ ಮೂಲದಿಂದಾ ಬಳ್ಳಾರಿ ಸಹಾ ಸಾಧಿಸಬೇಕು"ಯಂಬೋ ಮಸಲತು ಮಾಡಿ ಕುರುಗೋಡಿಗೆ ಕಳಿಹಿಸಿದರು. ಯೀ ಸಾಮಾಧಿಕರು[>ಸಂಬಂಧಿಕರು] ಕುರುಗೋಡದಲ್ಲಿ ಯಿದ್ದ ಕಾಟಕರು ಯೇಕಸ್ತರಾಗಿ, ಅನಂತಪುರದಿಂದಾ ಪೂರ್ವದಲ್ಲು ಹಂದರಹಳ್ಳಿನಲ್ಲು ಹಂಡೆವಂಶಸ್ಥರ ಪ್ರಸನ್ನನಾಯಕನ ವಂಶಸ್ತರು ಅನಂತರಪುರದಲ್ಲಿ ಯಿರಲಾಗಿ, ಅವರ ಬಗಿ ವೊಬ್ಬ ಹುಡುಗನಾ ತೆಗೆದುಕ್ಕೊಂಡು ಬಂದು, ಕುರುಗೋಡಿನಲ್ಲಿ ಪಟ್ಟಾಕಟ್ಟಿ, ಆತಗೆ ಪ್ರಸನ್ನರಾಮಪ್ಪನಾಯಕಾಯೆಂದು ಹೆಸರುಯಿಟ್ಟು, ಕುರುಗೋಡಿನಲ್ಲಿ ದೊರೆತನಕ್ಕೆ ಯಿಟ್ಟುಕೊಂಡು, ಸಾಮಾಧಿಕರು[>ಸಂಬಂಧಿಕರು] ಕುರುಗೋಡು ವಳಗಣಯಲ್ಲು ಕೆಲವು ಗ್ರಾಮಗಳು ಕಸುಬೆ ಸಹಿತ ದೊರೆತನಾ ಮಾಡುತಾ ಯಿದ್ದರು. ಬಳ್ಳಾರಿಯಲ್ಲು ದೊಡ್ಡಪ್ಪನಾಯಕನ ದೊರೆತನಾ ಯಿತ್ತು. ಆ ಬಳಿಕಾ ಶಾನಾಸಪುರದ ಜನವನಗೌಡನು ಕೆಂಚನಗುಡ್ಡಕ್ಕೆ ಹೋಗಿ ವೊಲಿನಲ್ಲಿ . . . . ಯಿರುವ ದೊಡ್ಡಪ್ಪನಾಯಕನಾ ವೋಡಿಸಿಕ್ಕೊಂಡು ಬಳ್ಳಾರಿಗೆ ತೆಗೆದುಕ್ಕೊಂಡು ಬಂದನು. ಆ ಮ್ಯಾಲೆ ದೊಡ್ಡಪ್ಪನಾಯಕನು "ಕುರುಗೋಡು ತನ್ನ ಸ್ವಾಧೀನಾ ಮೀರಿತು"ಯಂದು ಕುರುಗೋಡದ ಗ್ರಾಮಗಳ ಕಸುಬೆ ಸಹಿತವಾಗಿ ಸ್ವಾಮಾ ಕೆಲವು ಗ್ರಾಮಗಳು

* ಇಲ್ಲಿಂದ ಪು. ೪೬೩ಯಲ್ಲಿ ಸೂಚಿಸಿದ ನಕ್ಷತ್ರ ಚಿಹ್ನೆ ಬರೆಗಿನ ಭಾಗ ಪು. ೨೦೦-೨೦೩ರಲ್ಲಿಯೂ ಇದೆ (ಸಂ)

ಠಾಣ್ಯವನ್ನು ಹಾಕಿ, ಕೆಲವು ದಿವಸದ ಮ್ಯಾಲೆ ಫಿತೂರಿ ಮಾಡಿ, ಕುರುಗೋಡು ಕೋಟೆ ತೆಗೆದುಕ್ಕೊಂಡು, ಕೆಲಉ ಮಂದೀನಾ ಕೊಂದು, ಗುಡ್ಡದ ಮ್ಯಾಲಿಂದಾ ಪಾಯನಕಿಲ್ಲೇಗೆ ಯಿಳಿಯೋ ವ್ಯಾಳೆದಲ್ಲಿ ವೂರೊಳಗೆ ಯಿದ್ದ ಪ್ರಸನ್ನರಾಮಪ್ಪನಾಯಕನು ಕೆಲವು ಸಾಮಾಧಿಕರನು ಸಹಾ ದೇಶಾಂತ್ರ ಆನೆಗೊಂದಿ ಸೀಮೆಗೆ ಹೋದರು. ಕುರುಗೋಡು ಠಾಣ್ಯ ದೊಡ್ಡಪ್ಪನಾಯಕನ ಸ್ವಾಧೀನ ಮಾಡಿಕ್ಕೊಂಡು ಯಿರಲಿಕ್ಕೆ, ಕುರುಗೋಡಿನಲ್ಲಿ ಯಿರುವ ಕಾಟಕರ ಕಡೆಯಿಂದಾ ದಂಡ ತೆಗೆದುಕ್ಕೊಂಡು, ಕೆಲವು ಮಂದೀನಾ ಶಿಕ್ಷವನ್ನು ಮಾಡಿದನು.

ಬಳಿಕಾ ಕೆಲವು ದಿನದ ಮ್ಯಾಲೆ ದೊಡ್ಡಪ್ಪನಾಯಕನ ಹೆಣ್ಣು ಕೊಟ್ಟ ಮಾಮ ತಾಕ[>ತಯ್ಯ]ಪ್ಪಯಂಬೊ ಅವನು ಬಳ್ಳಾರಿ ಪಾರುಪತ್ಯ ಮಾಡುತಿರಲಾಗಿ, ಬಳ್ಳಾರಿಯಲ್ಲಿ ಕುರುಬರು ೧, ಬ್ಯಾಡ್ರು ೧ ಮೆಟ್ಟ ಯಿರುವಲ್ಲಿ, ಕುರುಬರು ಕರ್ತುತ್ವದ ಜನರು, ಆದದರಿಂದಾ ಬ್ಯಾಡರನ [>ಬ್ಯಾಡರು] ಯೆಬ್ಬಿಸಿ ಕುರಿ ಕುರುಬರನಾ ವೂರಿನ ಹೊರಗ ಹೊರಡಿಶಿ ಬಿಟ್ಟರು. ಆ ಕುರುಬರು ಅವರಲ್ಲಿ ಮುಖ್ಯಸ್ಥರು ಅರಿಕೆರೇಗೆ, ಕೆಲವು ಮಂದಿ ಶಿರಿ[+ಮುರಾ]ರಾಯನ ಕಡೆ ಕುಡುತನಿಗೆ ಬಂದು ಸೇರಿದರು. ಕೆಲವು ಮಂದಿ ಅರಿಕೆರೆಯಿಂದಾ ಅರಿಯಿರುವ ನಾಡು ತಳವಾರ ಹನುಮನಾಯಕನ ಮುಖಂತ[+ರ] ಆದವಾನಿಗೆ ಹೋಗಿ, ಮೊಗಲರ ಕಡೆಯಿಂದಾ ದೇವಿಚಂದಾ ಮೊದಲಾದವರು ಸಂಗಡ ಜಮಿಯತು ತೆಗೆದುಕೊಂಡು ಬಂದು, ಬಳ್ಳಾರಿಗೆ ಮುತ್ತಿಗೆ ಹಾಕಿ, ಮೂರು ತಿಂಗಳು ಲಡಾಯಿ ಆಗಿ, ಕಿಲ್ಲೆದೊಳಗೆ ಜ. . ಖೆರೆ ಯಿದ್ದದ್ದು ಝಾಡೆ ಆಗಿ, ದಾಣಾಚಾರ ಯಿಲ್ಲದೆ ಬಾಳಾ ಹೈರಾಣಾ ಆಗೊ[>ದೊ]ದರಿಂದಾ, ಅನಂತಪುರದಿಂದಾ ಹಂಡೆನವರಿಗೆ ಕೆಲಉ ರಸ್ತು ಮಂದಿ ಸಹಾ ಕಳಿಸಲಾಗಿ, ಅವರು ಕುರಗೋಡಿಗೆ ಬಂದು ಶೇರಿದರು. ಯಿಲ್ಲಿಂದಾ ಬಳ್ಳಾರಿ ಮದ್ದುದು[>ಸರದ್ದಿಗೆ] ರಸ್ತು ಮುಟ್ಟಿಸುವ ಬಗ್ಗೆ ಮಾರ್ಗತಾ[>ವಾ]ಗಲಿಲ್ಲಾ.

ಅಷ್ಟರ ವಳಗೆ ರಾಯದುರ್ಗದ ಸಂಸ್ಥಾನಿಕರ ದಿವಾನ ಕೃಷ್ಣನಾಯಕನು ಶ್ರೀರಂಗಪಟ್ಟಣಕ್ಕೆ ಹೋಗಿ, ಬಾಹದರ ನವಾಬಗೆ ಹೇಳಿದ್ದು: "ನೀವು ಬಳ್ಳಾರಿಗೆ ಹೋಗಿ ಯಿದ್ದಾಗ ನಿಮಗೆ ಬಳ್ಳಾರಿಕಾರ್ಯ ಮೊಡಾಗಿ ಯಿದ್ದೀತೆಲ್ಲಾ. ಯೀಗೆ ಮೊಗಲಾಯಿ ದಂಡು ಬಂದು ಘೇರಾಯಿಸಿ ಯಿದೆ. ಕಿಲ್ಲೇಯಲ್ಲು ಅನ್ನಕ್ಕೆ ಯಿಲ್ಲದೇ ಸಿಕುಸ್ತವಾಗಿ ಯಿಧೆ. ಯೀ ಸಮಯದಲ್ಲಿ ನೀವು ಜಮಿಯತ್ತು ಸಹಿತವಾಗಿ ಹೋದಲ್ಲಿ ಕಾರ್ಯವಾಗುತ್ತದೆ." ಅನಲಾಗಿ ಅದೇ ಪ್ರಕಾರಾ ಟಾಕೊ ಟಾಕಂ – ಖುದ್ದು – ಖಮ್ಮೆ ಜಮಿಯತ್ತು ಸಹಾ ಬಳ್ಳಾರಿಗೆ ದಿನ ನಾಲ್ಕರಲ್ಲಿ ಬಂದು, ಮೊಗಲಾಯಿ ದಂಡಿನ ಮ್ಯಾಲೆ ಕ್ವಾ[>ಚ್ಯಾ]ಪೆ ಬಿದ್ದು, ಅವರ ದಂಡು ಯಾವತ್ತು ವಾತಾಹತವಾಗಿ, ದೇವಿಚಂದು ವಗೈರೆ ಮಾತಬರ ಮೊಗಲಯಿ ಸರದಾರ್ರು ಹತವಾದ್ದರಿಂದಾ, ಉಳದವರು ವೋಡಿಹೋದರು. ಬಳ್ಳಾರಿ ಬಳಿಯಾ, ಬಹದರನ ದಂಡು ಬಂದು ಯಿಳಿಯಿತು. ಅದು [>ಅದನ್ನು] ಕಿಲ್ಲೆಯಲ್ಲಿ ಯಿದ್ದವರು ಕಂಡ[>ಡು] ಜನರು ಗಾಬರೆ ಆಗಿ, ರಾತ್ರಿಕಾಲದಲ್ಲು ದೊಡ್ಡಪ್ಪನಾಯಕಾ ಸಾಮಾಧಿಕರು ಕೆಲಉ ಮಾತಬರ ಕಾಟಕರು ಸಹಾ ಕಿಲ್ಲೆಬಿಟ್ಟು ತುಂಗಭದ್ರಾ ನದೀ ಪಾರು ಆಗಿ ಹೋದರು. ಮರುದಿನ ಪ್ರಾತಃಕಾಲದಲ್ಲು ಕಿಲ್ಲೆ ವಳಗೆ ಯಿರುವ ಗೌಡ ಕುಲಕರ್ಣಿ ದೇಶಾಯಿ ತಿಮ್ಮರಾಯನು ಸಹಾ ಬಾಹದರ ಬಳಿಗೆ ಕೋಟೆ ಬೀಗದ ಕೈಗಳು ತಂದು ಯಿಟ್ಟು ಅಡ್ಡ ಬಿದ್ದರು. ಕಿಲ್ಲೆ ಠಾಣ್ಯ ಹಾಕೋದು ಯಂದು ಕು . . . .ಕೆ ಮಾಡಲಾಗಿ, ಬಹದರನು ಸಂತೋಷದಿಂದಾ . . . . ಬಹದರನ ಠಾಣ್ಯ

ಬಳ್ಳಾರಿಗೆ ಆದುದು ಮನ್ಮಥ ಸಂವತ್ಸರದ ಕಾರ್ತೀಕ ಬಹಳು ೨. ಅಲ್ಲಿಂದಾ ಯಂಟು ದಿವಸದ ಮ್ಯಾಲೆ ಕುರಗೋಡಿಗೆ ಒಮ್ಮೆ ಜಮಿಯತು ಸಹಾ ಖುದ್ದು ತಾನೆ ಕುರುಗೋಡಿಗೆ ಬಂದನು. ಆ ಸಮಯದಲ್ಲು ಕಉಲಿನ ಮ್ಯಾಲೆ ಕಿಲ್ಲೆ ಠಾಣ್ಯ ಕೊಟ್ಟರು. ಬಳ್ಳಾರಿ, ಕುರುಗೋಡು, ತೆಕ್ಕಲಕೋಟೆ ಯೀ ಮುರು ಸ್ಥಳವನ್ನು ರಾಯದುರ್ಗದ ಕ್ರಿಷ್ಣಪ್ಪನಾಯಕನ ಸ್ವಾಧೀನಾ ಮಾಡಿ ಬಹದರು ಆದವಾನಿ ಕಡೆ ಹೋದನು. ಬಹದರನ ಪೂರ್ವದಲ್ಲು ದೊಡ್ಡಪ್ಪನಾಯಕನು ಬಳ್ಳಾರಿ ಕುರುಗೊಡು ಸಹಾ ೬ ವರುಷ ದೊರೆತನ ಮಾಡಿ ಫರಾರಿ ಆಗಿ ಹೋದನು. ಬಹಾದರ ನವಾಬನು ಕುರಗೋಡ ಠಾಣ್ಯ ಹಾಕಿದ ಸಮಯದಲ್ಲು ಸ್ತಳದ ಜಮೀದಾರ ದೇಶಾಯಿ ತಿಮ್ಮಪ್ಪ ನಾಡಗೌಡ ಚಿಕ್ಕನಗೌಡ ಯೀ ಉಭಯತ್ರರಿಗೆ ಯೀ ಮಾಮಲಿಯತು ಕೆಲಸಾ, ನಾಡು ಕುಲಕರ್ಣಿ ಕೃಷ್ಣಪ್ಪಗೆ ದಪ್ತರದ ಕೆಲಸಾ – ಯೀ ಪ್ರಕಾರ ನಿಗದಿ ಮಾಡಿಕೊಟ್ಟು, ಯಿವರ ಸ್ವಾಸ್ಥಿ ವಗ್ಯೆರೆ ಯಥಾ ಪ್ರಕಾರ ನಡಸಿದನು. ಸರನಾಡಗೌಡಕಿ ದೊರೆಗಳದು ಆದ್ದರಿಂದಾ ಸರಕಾರ ಜಪ್ತವಾಯಿತು. ಕುರುಗೋಡು ಬಳ್ಳಾರಿ ಕೋಟೆ ಮರಾಮತು ಮಾಡಿ ತೆಕ್ಕಲುಕೋಟೆ ಕಡೆ[>ಗಡಿ] ಆದ್ದರಿಂದಾ ಕೆಡವಿಸಿದನು. ಕುರುಗೋಡು ಬಳ್ಳಾರಿ ಖಾಯಂ ಮಾಡಿ ಜಮಿಯತು ಸಹಾ ಯಿಟ್ಟು, ಹೈದರು ಬಕಷಿಯಂಬಾತಗೆ ಸುಭೇದಾರಿ ಮಾಡಿ ಕಳಿಹಿಸಿದನು. ಕುರುಗೋಡು ಜಮೀದಾರು ಆತನ ಕೆಳಗೆ ನಡಕೊಳ್ಳುತ್ತಾ ಬಂದರು. ಯೀ ಪ್ರಕಾರ ಬಹದರ ಅಮಲು ಶುಭಕೃತು ಪರಿಯಂತ್ರ ನಡಿಯಿತು.

ಬಳಿಕ ಶು[>ಶೋ]ಭಕೃತ ಸಂ। ಆತನ ಮಗ ಟೀಪುಸುಲ್ತಾನನ ಅಮಲು ಆಯಿತು. ಯೀತನ ಅಮಲಿನಲ್ಲಿ ಬಳ್ಳಾರಿಗೆ ಶಿದ್ಧಿಮೋದೀಖಾನ ಯಂಬಾತನು ಬಂದು ಸುಭೆ ಮಾಡಿಕ್ಕೊಂಡು ಬಂದನು. ನಾಡ ಕುಲಕರ್ಣಿಕಿ ಕ್ರಿಷ್ಣಪ್ಪನು ದಪ್ತರದ ಕೆಲಸ ಮಾಡಿಕ್ಕೊಂಡು ಬಂದನು. ನಾಡಗೌಡರು ಸರಕಾರದ ಕೆಲಸಾ ನೋಡುತಾ ಬಂದರು. ಯೀ ಜಮೀದಾರರ ಉಮ್ಮಳಿಗ್ರಾಮಗಳು ಅರವಾಸಿ ಸರಕಾರ ಜಪ್ತಿಮಾಡಿ, ಬಾಕಿ ಅರವಾಸಿ ಜಮೀದಾರರಿಗೆ ಕೊಟ್ಟು ಕಡಿಮೆ ಭೂಸ್ವಾಸ್ತಿ ವರ್ತನೆ ಜಾರಿ ಮಾಡಿದರು. ಯೀ ಪ್ರಕಾರ ಪರಾಭವ ಸಂವತ್ಸರದ ಪರಿಯಂತ್ರ ನಡಿಯುತಾ ಬಂತು. ಪ್ಲವಂಗ ಸಂವತ್ಸರದಲ್ಲಿ ಜಮೀದಾರರಿಗೆ ಮಾಮಲಿಯತು ದಪ್ತರದ ಕೆಲಉ ಮೊಕೂಬ್ ಮಾಡಿ ಸರಕಾರದ ಕಡೆ ಮಾಮಲೆದಾರ ಬಂದರು. ಆಗಿನ ವ್ಯಾಳ್ಯಾದಲ್ಲಿ ಜಮೀನದಾರರಿಗೆ ಪೂರ್ವಾರಭ್ಯ ನಡಿಯುತಾ ಬಂದ ವರ್ತನೆ ಉಮ್ಮಳಿ ಅರವಾಸಿ ಗ್ರಾಮ ಸಹಾ ಸರಕಾರ ಜಪ್ತಿ ಮಾಡಿಕೊಂಡರು. ನಿಂತ ಭೂ ಸ್ವಾಸ್ತಿಗೆ ಜೊಡಿ ಸರದೇಶಾಯಿ ಸ್ವಾನ[>ಸ್ವಾಸ್ತಿನ]ಹ ಬಾಬು ೪ಕ್ಕೆ ಜೋಡಿ ಮೊಕರರು ಸರಕಾರಕ್ಕೆ ಕೊಡೋದು. ರಾಹತಿ ಅರವತ್ತು ವರಹಾ ವರ್ಷಕ್ಕೆ ಕೊಡುತಾ ಬರಹೇಳಿ ನಿಗದಿ ಮಾಡಿದರು. ಯೀ ಜಮೀದಾರ್ರು ಮಾಮಲೇದಾರನ ಮರ್ಜಿ ಅನುಸರಿಕ್ಕೊಂಡು, ಜೋಡಿ ಹಣ ಸರಕಾರಿಗೆ ಕೊಡದೇ ಭೂ ಸ್ವಾಸ್ತಿ ಮಾತ್ರ ಅನುಭವಿಸಿಕೊಂಡು, ಸರಕಾರದವರು ಹೇಳಿದ ಕೆಲಸಕ್ಕೆ ಹಾಜರಾಗಿ ಯಿದ್ದರು. ಯೀ ದೇಶಾಯಿ ನಾಡಕುಲಕರ್ಣಿಕರಿಗೆ ಕೆಲಉ ಗ್ರಾಮಗದ ಕುಲಕರ್ಣಿಕಿ ಪೂರ್ವಾರಭ್ಯ ವುಂಟು. ಆ ಕೆಲಸವನ್ನು ನೋಡುತಾ ಯಿದ್ದರು. ನಾಡಗೌಡರಿಗೆ ಕಸುಬೆಗೌಡಕಿ ಮಾಡುತಾ ಯಿದ್ದರು. ಪೂರ್ವಿಕ ಮಲೆಗೌಡನ ಸಂತತಿ ಅವರ ಗುಂಡೆಗೌಡ ಬಸವನಗೌಡರ ಪಾಲನ ವಳಗೆ ನಾಡಗೌಡಕಿ ಊರಗೌಡಕಿ ವಲಗೆ, ಶಾವಾ[>ನಾ]ಸಪುರದ ಬಸವನ ತಮ್ಮ ಸು[>ಸಂ]ಮನಗೌಡನು ೯ ಪಾಲು ಕ್ರಯಕ್ಕೆ ತೆಗದುಕ್ಕೊಂಡನು.

ಯೀ ಪ್ರಕಾರ ಸಾಧಾರಣ ಸಂವತ್ಸರ ಅಖೈರ ಪರಿಯಂತ್ರಲು ಸುಲತಾನನ ಠಾಣ್ಯ ಯಿರಲಾಗಿ ಯಿಂಗ್ರೇಜಿ ಅವರು, ಆರೇರು ಮೊಗಲಾಯಿ ಅವರು ಶ್ರೀರಂಗಪಟ್ಟಣಕ್ಕೆ ಮುತ್ತಿಗಿ ಹಾಕಿದ ಸಮಯದಲ್ಲು ಯೀ ರಾಜ್ಯವನ್ನು ಅಡಾಉಡ್ಡಿ ಬಿದ್ದು ಯಿರಲಾಗಿ, ಪೂರ್ವ ಸಂಸ್ಥಾನೀಕರ ರಾಮಪ್ಪನಾಯಕನ ಹೆಂಡತಿ ಶಿದ್ದಮ್ಮಾ. ಹನುಮನಾಯಕನ ಹೆಂಡತಿ ಪದ್ಮಮ್ಮಾ ಉಭರು ಅ[>ಆ]ರೆಶೀಮೆಯಲ್ಲು ಯಿದ್ದವರು ಯೀ ಶೀಮೆಗೆ ಬಂದು, ಕೆಲವು ಗ್ರಾಮಂಗಳು ಠಾಣ್ಯ ಮಾಡಿಕ್ಕೊಂಡು ಕುರುಗೋಡಿಗೆ ಸಮೀಪ ದಕ್ಷಿಣಭಾಗದಲ್ಲು ಬಾರನಹಟ್ಟಿಯಂಬೋ ಗ್ರಾಮದಲ್ಲಿ ನಿಂತು, ಕೆಲವು ಜಮಿನತ್ತ ಜಮೆ ಮಾಡಿ, ಕುರುಗೋಡ ದುರ್ಗದ ಮ್ಯಾಲೆ ಯರಡು ತಿಂಗಳು ಸ್ವಾರಿಮಾಡಿ, ಸ್ಥಳದ ಕಿಲ್ಲೆಯಲ್ಲಿ ಯಿದ್ದ ಮಾತಬರ ಮು[>ಮಂ]ದಿನ ಸಂಗಡ ಪಿತೂರಿ ಸಾಗಿಸಿ, ಬಳ್ಳಾರಿಕಿಲ್ಲೆಯಲ್ಲು ಸುಲತಾನ ಠಾಣ್ಯಯಿತ್ತು, ಬಳ್ಳಾರಿಯಲ್ಲಿ ಪಿತೂರಿ ಸಾಗಲಿಲ್ಲಾ. ಕುರುಗೋಡು ಸ್ಥಳ ಮಾತ್ರ ಪಿತೂರಿಯಿಂದಾ ಠಾಣ್ಯವನ್ನು ಹಾಕಿ ೧೧ ತಿಂಗಳು ಕುರುಗೋಡು ಪರಗಣೆ ೩೩ ಹಳ್ಳಿಯಲ್ಲು ಕೆಲವು ಗ್ರಾಮಗಳ ಮೊಗಲಾಯಿದು. ಕೆಲವು ಗ್ರಾಮಗಳು ಆನೆಗೊಂದಿ ಅವರು, ಕೆಲವು ಗ್ರಾಮಗಳು ಕನುಡಿ[>ಹಂಡೆ] ಸಿದ್ದಮ್ಮ, ಪದ್ಮಮ್ಮನ ಠಾಣ್ಯ ಆಯಿತು. ಕಡಿಮೆ ಗ್ರಾಮಂಗಳ ಸದರಿ ಬರ[>ಹ]ದವರು ಠಾಣ್ಯ ಹಾಕಿಕೊಂಡರು. ಆ ಸಮಯದಲ್ಲು ಸಿಬ್ಬಂದಿ ಖರ್ಚಿಗೆ ಯಿಲ್ಲದೇ ಹೋಗಿ ಆ ಸಂಸ್ಥಾನೀಕರ ಸರನಾಡಗೌಡಕಿ ಸ್ವಾಸ್ತಿ ಸಿಂದಿಗೆರೆಗೌಡ ದೇವರ ನೀಲಮ್ಮನ ಆಲ್ಲಿಯಂದು[>ಹಳ್ಳಿಯೆಂದು] ೯ ಕೊಟ್ಟರು. ಗೌಡಾ ಪರವತಗೌಡಗೆ ಯರಡು ಸಾವಿರ ವರಹಾಕ್ಕೆ ಕುರುಗೋಡು ಪರಗಣೆ ಸ್ವಾಸ್ತಿ ಕ್ರಯಕ್ಕೆ ಕೊಟ್ಟರು. ತರುವಾಯ ಸದರಿ ಶ್ರೀರಂಗಪಟ್ಟಣಕ್ಕೆ ಬಂದ ದಂಡು ಕೌಲಿನ ಮ್ಯಾಲೆ ಅವರವರ ದೇಶಕ್ಕೆ ಹೊರಟುಹೋದರು.

ಆ ಸಮಯದಲ್ಲಿ ಬಳ್ಳಾಯಿಂದಾ ಸುಲತಾನನ ಕಡೆಯಿಂದಾ ಜಮಿಯತು ಬರಲಾಗಿ, ಸಿದ್ದಮ್ಮಾ ಪದ್ಮಮ್ಮಾ ಸರನಾಡಗೌಡಕಿ ಕ್ರಯಕ್ಕೆ ಕೊಂಡವರು ಸಹಾ ದೇಶಬಿಟ್ಟು ಪರಾರಿ ಆದರು. ಸುಲತಾನನ ಅಮಲು ಕಾಯಾಮಾಯಿತು. ಮೂರು ತಿಂಗಳು ಸರಕಾರಿ ಅಮಲು ಆದ ಬಳಿಕಾ, ಕುತುಬುದ್ದಿನಖಾನನಗೆ ಕುರುಗೊಡು ಪರಗಣೆ, ಸಾವಿರದ ವರಹಾದ ಸೀಮೆ, ಉರುವಕೊಂಡೆ ಶೀಮೆ, ೪೦ ಸಾವಿರ ವರಹಾದ ಶೀಮೆ, ಅಂತು ೬೦ ಸಾವಿರ ವರಹಾದ ಶೀಮೆ ಜಾಗೀರು ಸುಲತಾನನು ಕೊಟ್ಟು ಕಳುಹಿಸಿದನು. ವೊಂದು ವರುಷ ಜಾಗಿರು ನಡೀತು. ಕುತುಬುದ್ದೀನಖಾನನ ಜಾಗೀರು ಜಪ್ತಿ ಆಗಿ ಸರಕಾರ ಕಡೆಯಿಂದಾ ಅಮೀಲು ಸಿರಸ್ತೆದಾರು ಕಿಲ್ಲೇದಾರು ೨೦ ಮಂದಿ ಸಿರಸ್ಥೆದಾರ್ರು ಸಹಾ ಬಂದು ನಿಂತರು. ಜಮೀದಾರರಿಗೆ ಭೂಸ್ವಾಸ್ತಿ ಮಾತ್ರ ನಡಿಯುತಾ ಬಂತು. ಸರನಾಡಗೌಡಕಿ ಜಪ್ತಿ ಆಗಿ ಯಿತ್ತು. ಶಿದ್ದಾರ್ಥಿ ಸಂವತ್ಸರ ಶ್ರಾವಣಮಾಸ ಪರಿಯಂತ್ರವೂ ಸುಲ್ತಾನನ ಠಾಣ್ಯ. ಸುಲ್ತಾನನ ಶೀಮೆ ಹೋದ ಬಳಿಕಾ, ಮೊಗಲಾಯಿ ಕಡೆಯಿಂದಾ ಕುರುಗೋಡಿಗೆ ರಹಿಂಖಾನನ ಸ್ವಾಧೀನವಾಗಿ, ಆತನ ಕಡೆ ಮಾಮಲೆ ಕೆಲಸಾ ದೇಶಾಯಿ ತಿಮ್ಮಪ್ಪ ದೇಶಕುಲಕರ್ಣಿ ದಪ್ತರ ವೆಂಕಟಪ್ಪಗೆ ನಡೀತು. ತರುವಾಯ ಮೊಗಲಾಯಿ ಕಡೆ ಜಯಿನುದ್ದೀನಖಾನನು ಮೂರು ತಿಂಗಳು ಮಾಡಿದನು. ಮಾಮಲೆ ಸರಕಾರಿನವರು ಜಮೀದಾರು ಸಹಾ ಕೂಡಿ ಮಾಡುತಾ ಯಿದ್ದರು. ಶಿದ್ದಾರ್ಥಿ ಸಂವತ್ಸರದ ಪಾಲ್ಗುಣ ಮಾಸದಲ್ಲು ಮೊಗಲ ಕಡೆ ನಾಗನಾಥಗೌಡ ಸಂಬಣಗೌಡನು ಕುರುಗೋಡ ಸೀಮೆ ೪೦ ಸಾವಿರ ರೂಪಾಯಿಗೆ ಯಿಜಾರೆ ಮಾಡಿಕೊಂಡು ಆರು ತಿಂಗಳು ದೇಶಾಯಿ ಸರನಾಡಗೌಡ ಸಹಾ ಪರಗಣೆ ಮಜಕೂರು ಮೂರು ತುಕುಡಿ ಮಾಡಿ, ಮೂರು

ಮಂದಿ ಜಮೀದಾರರು ಅಮಲು ಮಾಡಿಕ್ಕೊಂಡು ಯಿದ್ದರು. ನಾಡ ಕುಲಕರ್ಣಿಕರು ಯೀ ಮೂರು ಮಂದಿ ಬಳಿಯ ದಪ್ತರದ ಲೆಖ್ಖ ಬರಕೊಂಡು ಯಿದ್ದರು. ಯೀ ಐದು ಮಂದಿ ಜಮೀದಾರರಿಗೆ ಭೂಸ್ವಾಸ್ತಿ ಮಾತ್ರ ನಡಿಯುತಾ ಬಂತು.

ರೌದ್ರಿ ಸಂವತ್ಸರ ಮಾರ್ಗಶಿರ ಶು॥ ೧೫ ಯಲ್ಲಿ ಕುಂಪಣಿ ಅಮಲು ಆಯಿತು. ಮೇಜರು ಮಂಡ್ರೋಲ ಸಾಹೇಬರವರು ಕುಂಪಣಿ ಕಡೆ ಕಲಕಟರಾಗಿ ಬಂದು, ರಾಜ್ಯದ ಅಮಲು ಮಾಡುತಾ ಯಿರುವಾಗ್ಯೆ, ಅಕ್ಷಯ ಸಂವತ್ಸರ ಪರಿಯಂತ್ರಲು ಯಿ ಅಯಿದು ಬಾಬಿನ ಜಮೀದಾರರಿಗೆ ಭೂ ಸ್ವಾಸ್ಥಿ ಜೋಡಿ ಹಣವನ್ನು ತೆಗೆದುಕ್ಕೊಂಡು ಜೋಡಿಮಾಡಿ ಯಿದ್ದರು. ಭೂಮಿ ಪೈಮಾಸೆಯಾಗಿ ತದನಂತರ ಪ್ರಭವ ಸಂವತ್ಸರದಲ್ಲು ನಿಗದಿ ಜಮೀದಾರರಿಗೆ ಆದದ್ದು ವಿವರಾ: ಭೂ ಸ್ವಾಸ್ತಿ ವಳಗೆ ಬಂಜರು ಜಮೀನು ದರೊಬಸ್ತು ಸರಕಾರ ದಾಖಲು, ಸಾಗು ಜಮೀನು ಐದು ಮಂದಿಗೆ ಮಾಡಿ ಕೊಟ್ಟ ವಿವರಾ:

೧ ದೇಶಾಯಿ ಅರ್ದ ಸರಕಾರಿಗೆ, ಅರ್ದ ಅವರಿಗೆ

೧ ನಾಡಗೌಡಗೆ ಕಾಲು ಪಾಲು ಸರಕಾರಕ್ಕೆ, ಮುಕ್ಕಾಲು ಅವರಿಗೆ

೧ ನಾಡಕುಲಕರ್ಣಿಗೆ ಆರು ಆಣೆ ಸರಕಾರಕ್ಕೆ, ಹತ್ತು ಆಣೆ ಅವರಿಗೆ

೧ ಸರನಾಡಗೌಡರುಗಳಗೆ ಕಾಲು ಸರಕಾರಕ್ಕೆ, ಮುಕ್ಕಾಲು ನಾಡಿಗರುಗಳಿಗೆ


೧ ಸರನಾಡಗೌಡರುಗಳಿಗೆ ಹತ್ತು ಆಣೆ ಸರಕಾರಕ್ಕೆ, ಆರು ಆಣೆ ಅವರಿಗೆ

ಯೀ ಪ್ರಕಾರ ಮಾಡಿದರು. ಯೀ ಕುಂಪಣಿ ಅಮಲಿನಲ್ಲಿ ಹಂಡೆಯವರಿಗೆ ಪುತ್ರಸಂತಾನವಿಲ್ಲದೇ ಹೋಯಿತು. ದೊರ್ರಪ್ಪನಾಯಕನ ಹೆಂಡತಿ ವೀರಮ್ಮ ಯಂಬವಳಿಗೆ ಕುಂಪನಿ ಅಮಲು ಷರು ಲಾಗಾಯಿತು ಮಂಡ್ರೊಲ್‌ಸಾಬರು ಯಿರುವ ಪರಿಯಂತ್ರಲು ತಿಂಗಳ ವೊಂದಕ್ಕೆ ೪೦ ರೂಪಾಯಿ ಧರ್ಮಾ ಮಾಡಿಕೊಟ್ಟರು. ಕೆಲಉ ಭೂಸ್ವಾಸ್ತಿ ನಡಸಿದರು. ಆ ವೀರಮ್ಮನು ತೀರಿಹೋದ ಮೇಲೆ ಆಕೆ ಮಗಳಾದ ಶಿದ್ದಿರಾಮವ್ವಗೆ ನಡೆಯುತಾ ಬಂತು. ತರುವಾಯಾ ಪೂರ್ವದಲ್ಲಿ ಕುರುಗೋಡಲ್ಲಿ ಪಟ್ಟಾಕಟ್ಟಿದ ಪ್ರಸನ್ನರಾಮಪ್ಪನಾಯಕನ ಹೆಂಡತಿ ಮಂಡ್ರೋಲ ಸಾಹೇಬರ ಕಡೇಗೆ ಹೋಗಿ, 'ತನಗೆ ಸಂಬಳ ನಡಸಬೇಕು ನಾಉ ಬಾದ್ಯಸ್ತರು'ಯೆಂದು ಫಿರ್ಯಾದಿ ಮಾಡಲಾಗಿ, ಆ ವೀರಮ್ಮನ ಮಗಳಿಗೆ ನಡೆಯುವಂತಾ ಸಂಬಳ ಜಪ್ತಿ ಆಯಿತು. ಅವರಿಗೆ ಯಿನ್ನು ಜಾರಿಯಾಗದೇ ಹೋಯಿತು. ಅಷ್ಟರೊಳಗೆ ಕರ್ನಲ್ ಮಂಡ್ರೋಲ್ ಸಾಹೇಬರು ಚನ್ನಪಟ್ಟಣಕ್ಕೆ ಹೋದ್ದರಿಂದಾ ನಿಂತು ಹೋಯಿತು.

ಹಂಡೆಯವರ ವಂಶಾವಳಿ ವಿವರ: ಮೂಲಪುರುಷ ಬಾಲದ ಹನುಮಪ್ಪನಾಯಕ. ಯಿತಗೆ ಐದು ಮಕ್ಕಳು ೧. ಅಂಕುಶರಾಮಗೆ ನಂದ್ಯಾಲಶೀಮೆ, ೧ ದ್ಯಾವಪ್ಪನಾಯಕಗೆ ಬಳ್ಳಾರಿ ವಗ್ಯೆರೆ ಶೀಮೆ, ಯೀತನ ಮಗ ಪವಾಡರಾಮಪ್ಪನಾಯಕಗೆ ಸಂತಾನವಿಲ್ಲ. ೧ ರಾಮಮಪ್ಪನಾಯಕ ಯೀತನಿಗೂ ಸಂತತಿಯಿಲ್ಲ. ೧ ಹಿರಿಯ ಮಲಕಪ್ಪನಾಯಕ ಅನಂತಪುರದ ಶೀಮೆ; ೧ ಚಿಕ್ಕಮಲಕಪ್ಪನಾಯಕ ಬಳ್ಳಾರಿ ವಗ್ಯೆರೆ, ಚಿಕ್ಕಮಲಕಪ್ಪನಾಯಕನ ಸಂತತಿ ಬಳಾಳ[>ರಿ] ಶೀಮೆ

ಆಳಿದರು. ಯೀತನ ಮಗ ಚಿಕ್ಕನಾಯಕ ಸಾಹೇಬ. ಯೀತನ ಮಗ ದೇವಪ್ಪನಾಯಕ, ಯೀತನ ಹಿರೆಹೆಂಡತಿ ಮಕ್ಕಳು ಕಿರರಾಮಪ್ಪನಾಯಕ ಹನುಮಪ್ಪನಾಯಕ ಚಿಕ್ಕರಾಮಪ್ಪನಾಯಕ ಕೂಡಿ ಆ ೩, ಯಿ ಮೂವರಿಗೂ ಸಂತತಿಯಿಲ್ಲ. ತರುವಾಯಾ ಹನುಮಪ್ಪನಯಕನ ಜೇಷ್ಟಪುತ್ರ ಅಂಕುಶರಾಯನ ಸಂತತಿ ಶಿವ[>ದ್ದ]ಪ್ಪನಾಯಕನ ಮಕ್ಕಳು ೨ ದೊಡ್ಡತಲೆರಾಮಪ್ಪನಾಯಕ, ಯೀತಗೆ ಸಂತತಿಯಿಲ್ಲ. ಹನುಮಪ್ಪನಾಯಕ ಯೀತಗೂ ಸಂತತಿಯಿಲ್ಲ. ಸದರಿ ಬರದ ಶಿವ[>ದ್ದ]ಪ್ಪನಾಯಕನ ತಮ್ಮ ಪ್ರಸನ್ನನಾಯಕನ ಸಂತತಿ, ಪ್ರಸನ್ನರಾಮಪ್ಪನಾಯಕ ಯೀತಗೆ ಸಂತತಿಯಿಲ್ಲ. ಸಿದ್ದಪ್ಪನಾಯಕನ ಮಗ ಹನುಮಪ್ಪನಾಯಕನು ಅನ್ಯಕುಲಜ್ಯಾ ಸಾಕಿದವನು ದೊಡ್ಡಪ್ಪನಾಯಕ ಯೀತನಿಗೂ ಸಂತತಿಯಿಲ್ಲ.

ಹಂಡೆ ಬಾಲದ ಹನುಮಪ್ಪನಾಯಕ ಯೀತನ ಮಕ್ಕಳು



ಸೀಮೆಗೆ ಸಂತತಿಯಿಲ್ಲದ್ದರಿಂದಾ ಯಿವರು ಸಾಕಿಕೊಂಡರು, ದೊರೆತನ ಮಾಡಿದರು.

ಯೀ ಸೀಮೆಯಲ್ಲಿ ಬೆಳೆಯುವ ಜಿನಸಗುಳು: ಸಜ್ಜೆ, ಜೋಳಾ, ನವಣೆ, ರಾಗಿ, ಹುರುಳಿ, ಮಡಕೆ, ಹೆಸರು. ಅಲಸಂದಿ, ಯೆಳ್ಳು, ಕುಸುಬಿ, ಅಗಶಿ, ತೊಗರಿ, ಕಡ್ಲೆ, ಗೋದಿ, ಆಹಾರಕ್ಕೆ ಸ್ವಲ್ಪ ಭತ್ತ, ಸ್ವಲ್ಪ ಹತ್ತಿ, ತಂಬಾಕು, ಮೆಂತೆ, ಜೋಳಾ.

ಯೀ ಪರಗಣಿಯಲ್ಲಿ ಕೆನ್ನಿಮರ, ಬಾಳೆ, ಬಾಳೆಯಲಿ.

ಯಿದು ಮೂ[>ಮಾ]ಗಳೀ ಶೀಮೆ. ಯೀ ಶೀಮೆಯಲ್ಲಿ ಆಗುವಂತಾ ಬಟ್ಟೆಗಳು:

ಧೋತ್ರ ೧॥ ರೂಪಾಯಿ ಮೊದಲು ಮಾಡಿಕ್ಕೊಂಡು ೭ ರೂಪಾಯಿ ಪರಿಯಂತ್ರ.

---

* ಈ ಮೂವರೂ ಅಣ್ಣ ತಮ್ಮಂದಿರೆಂಬಂತೆ ಮೇಲಿನ ಗದ್ದಯ ಹೇಳಿದೆ. ಈ ವಂಶಾವಳಿಯಲ್ಲಿ ಒಬ್ಬನ ಮಗ ಇನ್ನೊಬ್ಬರೆಂಬಂತೆ ತೋರಿಸಲಾಗಿದೆ. (ಸಂ)

ಶೀರೆಗಳು ೧॥ ರೂಪಾಯಿ ಮೊದಲು ಮಾಡಿಕ್ಕೊಂಡು ೧೦ ರೂಪಾಯಿ ಪರಿಯಂತ್ರ.

ಖಾದಿ ೧॥ರೂಪಾಯಿ ಮೊದಲು ಮಾಡಿಕ್ಕೊಂಡು ೨ ರೂಪಾಯಿ ಪರಿಯಂತ್ರ.

ಸೆಲಗಳು ೨ ಮೊದಲು ೪ ರೂಪಾಯಿ ಪರಿಯಂತರ.

ಕಂಬಳಿ ೨ ರೂಪಾಯಿ ಮೊದಲು ೪ರೂ ಪರಿಯಂತ್ರ.

ಯೀ ಪ್ರಕಾರ ಕೈಫಿಯತು ಬರಶಿದವರು:

ದೇಶಾಯಿ ತಿಮ್ಮಪ್ಪ, ವರುಷ ೭೦

ದೇಶಾಯಿ ಸೀನಪ್ಪ. ವರುಷ ೪೦

ದೇಶಾಯಿ ವಿರೂಪಾಕ್ಷಪ್ಪಾ, ವರುಷ ೩೫

ನಾಡಕುಲಕರಣಿ ರಾಮಪ್ಪ, ೩೫ ವರುಷ

ಸುಬ್ಬರಾಯ ಯಿವರ ಮಾತಾಹಮಂಗಳು, ಯಿವರ ತಂದೆ ಹಂಡೇ ಅವರ ಕಡೆ ಕಾರಕೂನ ವರುಷ ೩೨.

ಬ, ದಸ್ತೂರ ನಾರಾಣಯರಾವ ಮುತ್ಸದ್ದಿ. ಮುತ್ತೈನ ಮೆಸ್ತರ್ ವಾರ್ಡು ಸಾಹೇಬ್ ಅಶಿಷ್ಟಂಟ ಪೈಮಾಯಿಸಿ ಸರದಾರ್, ಯಿಲಾಖೆ ಮೇಜರ್ ಕಾಲನ್ ಮೆಕೆಂಜಿ ಸಾಹೇಬ ತಾರೀಖು ೧೨ ಮಾಹೆ ಅಗಟೋಬರ ಸನ್ ೧೮೦೯ ಯಿಸವಿ. ದರ ಜಾಗಾ ಕುರುಗೋಡು.

ಹಂಡೆ ಅವರಿಗೆ, ಅವರ ಕಡೆ ಅವರು ಬರಿಯೊ ಬಿನ್ನಪತ್ರ ಪದ್ಧತಿ, ತಾಲು ಬರಿಯೋದು ಸಾ॥ "ಶ್ರೀಮನ್ಮಹಾರಾಜಾಧಿರಾಜ, ರಾಜಖಂಡೆ ಯಶವಂತ, ಪರದಳ ವಿಭಾಡ, ಅರಿರಾಯರು[>ಮಾ]ನ ಮರ್ದನ, ಸದಾಶ್ರೀ ಸಿದ್ಧರಾಮದೇವರ ವರಪ್ರಸನ್ನರಾದ ಹಂಡೆ ದೇವಪ್ಪನಾಯಕರವರು" ಯಂದು ಯಿವರು ಬರೆಯುವದು.

ಯೆರಡನೇಯವರು ಸನ್ನಿಧಾನಂಗಳಿಗೆ.

❖❖

೧೦೬
ಕೈಫಿಯತು ಭಟ್ಟರಹಳ್ಳಿ, ತಾಲೂಕೆ ಬಳ್ಳಾರಿ*

ಮೆಕೆಂಝಿ ಸಂಪುಟ : ೩೬೯

ಕೊಮಾರರಾಮನ ಕೈಫಿಯತು.

ಯೀತನು[>ನ] ಮೂಲಪುರುಷ: ೧, ಖಂಡೆರಾಯಾ,

[+೧] ಯೀತನ ಮಗಾ ಖಂಡೆರಾಯ

೧. ಯೀತನ ಮಗಾ ಮುತ್ತಿನ ಮುಮ್ಮಣಿರಾಯಾ

೧. ಯೀತನ ಮಗಾ ನರಸಿಂಗರಾಯಾ

೧. ಯೀತನ ಮಗಾ ಕೋವಿನ ತಿಮ್ಮನಾಯಕ

೧. ಯೀತನ ಮಗಾ ಹೆಬ್ಬುಲಿ ಕಂಪಲಿರಾಯಾ

೧. ಯೀತನ ಮಗಾ ಕೊಮಾರರಾಮ

೭

ಯಿವರು ಬ್ಯಾಡರು. ಯಿವರ ಮನೇ ಹೆಸರು ಮುಮ್ಮಡಿ ಅವರು.

ಯೀ ಕೊಮಾರರಾಮನ[>ನು], ತಂದೆ ಕಂಪಲಿರಾಯನು ಯಿರೊವಾಗ್ಯೆ ಬಹುಬಲದಿಂದಾ ಪ್ರಶಿದ್ಧಪುರುಷನಾಗಿ ಪರಾಕ್ರಮದಿಂದ ಯಿರಲಾಗಿ, ಕಂಪಿಲಿರಾಯನು ಬಹು ಸಂತೋಷದಿಂದ ಲಾಲನೆ ಮಾಡಿ ನಡಿಯಿಸುತಾ ಬಂದನು. ವೊರಂಗಲ್ಲುಯಲ್ಲಿಗೆ ಹೋಗಿ, ಪ್ರತಾಪರುದ್ರ ಅವರನಾ ಕಂಡು, "ಆ ಹೇಸರಕತ್ತೆ ಮೇಲೆ ನಾನು ಸ್ವಾರಿ ಮಾಡುತ್ತೇನೆ"ಯೆಂದು ಹೇಳಲಾಗಿ, ಅದಕ್ಕೆ ಪ್ರತಾಪರುದ್ರರವರು "ಬಹುಮಂದಿ ರಾಹುತರು ಬಂದು ಅವರ ಕೈಯ್ಯಗೆ ಆಗದೇ ಹೋದರು. ನೀಉ ಹಸಿ ಮಗನು" ಯನಲಾಗಿ, "ಸ್ವಾಮಿ ನೀಉ ದಯಮಾಡಿ ನೋಡಬೇಕು" ಯನಲಾಗಿ, ಆ ಹೇಸರಕತ್ತೆಯು ಜನರನಾ ಕೇರ[>ಶೇ]ರದಂತೆ ನಾಲ್ಕು ಕಡೆ ಗೋಡಿ ಹಾಕಿ, ಅವರ ಮಧ್ಯೆ ಖಬ್ಬಿಣದ ಸರಪಳಿ ಕಟ್ಟಿಯಿರೋದನು. ಕೊಮಾರರಾಯನು ಕಂಡು ಸಮೀಪಕ್ಕೆ ಹೋದಲ್ಲಿ ಉಪದ್ರವ ಮಾಡದಂತೆ ಯಿದ್ದರಿಂದ, ಯೀತನು ಅದರ ಮೇಲೆ ಸ್ವಾರಿ ಮಾಡಿ ತಿರುಗತಾ ವೋರಂಗಲ್ಲು ಪಟ್ಟಣವನ್ನು ಬಿಟ್ಟು ತನ್ನ ದೇಶಕ್ಕೆ ಬಂದನು.

---

* ಇದಕ್ಕೆ 'ಕೊಮಾರರಾಮನ ಕೈಫಿಯತು' ಎಂಬ ಹೆಸರೂ ಇದೆ. (ಸಂ)

ಯೀ ಕೊಮಾರರಾಮಗೆ ರಾಜಧಾನಿ ಸ್ಥಳ ತುಂಗಭದ್ರಾನದಿಗೆ ಉತ್ತರಭಾಗದಲ್ಲು ೪ ಹರದಾರಿ ಗುಮ್ಮಟಾಯಂಬೋ ಸ್ಥಳಾ, ಹಂಪೆ ವಿರೂಪಾಕ್ಷಕ್ಕೆ ೪ ಹರದಾರಿಯಿದೆ. ಆ ಹೇಸರಕತ್ತಿಗೆ ಕೊಮಾರರಾಮನು ಹೆಸರು ಯಿಟ್ಟದ್ದು "ತೇಜಿ ಯಪತ್ತ[>ಎಪ್ಪತ್ತು]ರಾಯನ ಬಲು[>ಬೊಲ್ಲ]"ಯಂದು ಹೆಸರು ಯಿಟ್ಟನು. ಅದು ಯೀತನ ಕಡೆ ಬಂದ ಬಳಿಕಾ ಕುದುರೆ ತೇಜಿಯುಂದು ಯೆನೆಸಿಕೊಳ್ಳುತ್ತಾರೆ[>ತ್ತದೆ]. ಅದರ ಪರಾಕ್ರಮ "ಗುಂಬಟದ ಬೆಟ್ಟದ ಮೇಲಿಂದಾ ಕುದುರೆ ಹಾರಿಸಿದಲ್ಲಿ ಅಲ್ಲಿಂದಾ ಹಾರಿ ಯರಣ್ಣೆ[>ಎರಡನೆಯ] ಬೆಟ್ಟಕ್ಕೆ ಹೋಯಿತು. ಹಾರಿ ಬೆಟ್ಟದ ಮೇಲೆ ಹೋಗಿ ನಿಂತಿತು. "ಬೆಟ್ಟದ ಮೇಲೆ ಕಲ್ಲಿನ ಮ್ಯಾಗೆ ಕುದುರೇ ಪಾದಾ ಹೂಳಿ ತಗ್ಗು ಬಿದ್ದು ಯಿದೆ"ಯಂದು ಹೇಳುತ್ತಾರೆ. ಯೀತನ ಕೆಳಗೆ ಕಪ್ಪು ಕೊಟ್ಟುಕೊಂಡು ಯಿದ್ದ ಅರಸುಗಳ ವಿವರಾ:

ಹನ್ನೊಂದು ಬೀಡಿನ ಮಂಡಳಕರು:

೧. ಚೋಳರ ಭೀಮಾ ೧. ಚೋಳರ ನಾರಾಯಣ ೧. ಯೇಳುಬೀಡಿನ ಗು[>ಗೂ]ಳಿ

೧. ಕೆಂಚರ ಮಾಯಿದೇವ ೧. ಕರಿಮಾಯಿದೇವ ೧. ಚಿಕ್ಕರಾಯಣ

೧. ಬಳ್ಳಾರಿ ಭೈರವಾ ೧. ಕುರುಗೋಡು ಸಂಗಮಾ ೧. ವೀರನರಸಿಂಗಾ

೧. ಬೀಡೀನ ಹಂಬಡಿನಾಯಕರು ೧. ಬಳ್ಳಾರಿ ಬಡಗ ಬಲ್ಲಾಳ

ಅಂತು ೯[>೧೧] ಅರಸುಗಳು ಮುಖ್ಯಸ್ಥರು. ಯಿದು ಹೊರ್ತು ಚಿಲ್ಲರೆ ಅನೇಕ ಮಂದಿ ಸಹಾ ಯೀತನ ಆಜ್ಞೆಪ್ರಾಜ್ಞದಲ್ಲಿ ನಡಕೊಳ್ಳುತ್ತಾ ಯಿದ್ದರು. ಯೀತನು ಹೊಗಳಿಸಿಕೊಂಬೋದು "ಮುಖದ ಕನ್ನಡಿ, ಸಮಯಝಿಲಿಶಿಹ್ಮ[>ಸಮರದಲಿ ಸಿಂಹ]ಕಲಾಲಾ, ಹೊಕ್ಕಳಘಂಟೆ ಹುಲಿಚರ್ಮ ಮುಂತಾದವು ಹಿಡಿಯಸೊ ರಾಯರ ಗಂಡಾ"ಯಂದು ಪರಾಕ್ರಮದಿಂದಾ ರಾಜ್ಯಭಾರ ಮಾಡುತ್ತಾ ಯಿರಲಾಗಿ, ಯೀತನ ಕಡೆ ಯಿರುವಂಥಾ ಭಟ್ಟರು ಮುಖ್ಯಸ್ಥರು.

೧. ಭಟ್ಟರ ಗೋವಿಂದಾ ೧. ಗೋಪಾಲಯ್ಯ – ಜ ೨

ಯಿವರು ಯಿಬ್ಬರು ಅಣ್ಣ ತಮ್ಮಂದಿರು, ಯಿವರ ಭಾವಮ್ಯೆದನಾ ರೂಪದೇವಯ್ಯಯಂಬವನು. ಯಿವರು ಮೂರು ಮಂದಿ ವಿದ್ಯದಲ್ಲಿ ಸಮರ್ಥರು ಯೆನಿಸಿಕೊಂಡು ಯಿದ್ದರು. ವಂದು ದಿವಸಾ ಸೊಂಡೂರ ಹೊಸಮಲೆದುರ್ಗದಿಂದಾ ವೊಂದು ಹಂದಿ, ಅದರ ಹೆಸರು ಕೋಟಿಶಂಕರ ಯಂದು. ನಾಮಕೆ ಕಾರಣ ಯೀ ಹಂದಿ ಬಹು ಜನರ ಸಂಹಾರ ಮಾಡಿದ್ದರಿಂದಾ, ಆ ಹಂದಿನಾ ಕೊಮಾರರಾಮನು ಕಂಡು ಬೆನ್ನಟ್ಟಿ ಬರಲಾಗಿ ಪೂರ್ವದಲ್ಲಿ ಯೀ ಭಟ್ಟರಹಳ್ಳಿಗೆ ಪ್ರಾಚೀನ ನಾಮಾ ಕಾಟಗೊಂಡನಹಳ್ಳಿಯೆಂದು ಯಿರುವ ಗ್ರಾಮಕ್ಕೆ ಆಗ್ನೇಯ ಭಾಗದಲು ವೊಂದು ಬೆಟ್ಟ ಯಿರಲಾಗಿ, ಅಲ್ಲಿಗೆ ಆ ಹಂದಿಯನ್ನು ಕೊಂದನು. ಯೀ ಗುಡ್ಡಕ್ಕೆ ವುತ್ತರಭಾಗ ಕುರುಗೋಡು ದಾರಿಯಲ್ಲಿ ಕೊಮಾರರಾಮನು ಬಂದು ತನ್ನ ಕ್ಯೆಯಲ್ಲಿ ಯಿರುವ ಯೀಟಿ ಕಲ್ಲಿನ ಮೇಲೆ ಯಿಟ್ಟು, ಸ್ಥಳದಲ್ಲಿ ಕಲ್ಲು ತೂತು ಬಿದ್ದು ಯಿದೆ. ಆ ಕಲ್ಲಿಗೆ ಸೆಜ್ಜಿದ ಗುಂಡು ಯೆಂದು ಅಂತಾರೆ. ಕೊಮಾರರಾಮನು ಯೀ ಸ್ಥಳಕ್ಕೆ ಬೇಟೆಗೆ ಬಂದ ಸಮಯದಲ್ಲಿ ಸದರಿ ಬರದ[>ಬರೆದ] ಭಟ್ಟರು ಅಣ್ಣತಮ್ಮಂದರು ಗೋವಿಂದಯ್ಯ, ಗೋಪಾಲಯ್ಯ ಯಿಬ್ಬರೂ ಹೊಗಳಿದ್ದು: ಭಟಾಂಗನಿ:

ಬಡವರಿಗೆ ಯೀತ ದಿಕ್ಕು ದಿಟವಾಗಿಯೂ ಅನ್ನವಾ ವಸ್ತ್ರದಾನಗಳ । ಕೊಡುತಿದಿ ಸಾರ್‍ವಕಾಲದಲಿ ನಿಜರೂಪನ ತೋರುವ ಧಾತ್ರಿ ಮಧ್ಯದೊಳು ತಾ ಕೊಟ್ಟದು ನಡಿಸುವ ಭಟ್ಟ ಜನರಿಗೆ ದೃಡದಲ್ಲಿ ನಂಬಿ ಕಂಪಲಿರಾಯನು ಕೊಮಾರರಾಮನೆ ಮಂಡಲೇಶ್ವರಾ॥

ಯೀ ಪ್ರಕಾರ ಭಟ್ಟರು ಹೊಗಳಲಾಗಿ ಕಾಲ[>ಟ]ಗೊಂಡನಹಳ್ಳಿ ಗ್ರಾಮವನ್ನು ಭಟರಿಗೆ ಸರ್‍ವಮಾನ್ಯ ವುಮಳಿಗೆ ದಾನಪತ್ರ ಬರಕೊಟ್ಟ. ಆ ಗ್ರಾಮಕ್ಕೆ ಭಟ್ಟರಹರ್ಳಳಿಯೆಂದು ಹೆಸರು ಯಿಟ್ಟು ನಡಿಹಿ, ಸಿಲಾ(ಶಿಲಾ)ಶಾಸನವ ಹಳೆಕನ್ನಡದ ಅಕ್ಷರದಿಂದಾ ಬರುವು[+ವೂ]ರು ಬಳಿಯೂ ಹಾಕಿಸಿ, ಅದರ ಬಳಿಯಾ ವೊಂದು ಕಲ್ಲಿನ ಮೇಲೆ ಯೀ ಧರ್ಮ ತಪ್ಪಿದವರು ಕತ್ತಿ ತುಣ್ಣಿ ಕಲ್ಲುವು[+ಪ್ಪು] ತಿಂದವರು ಯೆಂದು ಕತ್ತಿ ಕಡದು ಯಿಥೆ.

ಯೀ ಪ್ರಕಾರ ಯೀ ಗ್ರಾಮಕ್ಕೆ ಭಟ್ಟರಹಳ್ಳಿಯಂಬೊ ಹೆಸರು ಪ್ರಕಟವಾಯಿತು. ಕೆಲವು ದಿವಸದ ಮೇಲೆ ಯೀ ಕೊಮಾರರಾಮನ ತಂದೆ ಕಂಪಲಿರಾಯನು ಬೇಟೇ ಆಡೋ ಬಗ್ಗೆ ಹೊಸಮಲೆದುರ್ಗಕ್ಕೆ ಹೋಗೋ ಸಮಯದಲ್ಲಿ, ಕಂಪಲಿರಾಯನ ಚಿಕ್ಕ ಹೆಂಡತಿ ರತ್ನಾಜಿಯಂಬೊ ಅವಳ ಮನೀಗೆ ಹೋಗಿ "ನಾನು ಬೇಟೆ ಆಡಿ ಬರುತ್ತೇನೆ" ಎನಲಾಗಿ ರತ್ನಾಜೀ ಸ್ತ್ರೀ ಬಹುಕ್ಲೇಶದಿಂದಾ ತನ್ನ ಪತಿಯಾದ ಕಂಪಲಿರಾಯನಾ ಆಲಿಂಗನೆ ಮಾಡಿಕೊಂಡು, "ಹೇ ಪ್ರಾಣನಾಥಾ, ನಿನ್ನನ್ನು ಬಿಟ್ಟು ವೊಂದು ಕ್ಷಣವಾದರೂ ನಾನು ಯಿರಲಾರೆ. ವಿರಹತಾಪವನ್ನು ತಡೀಲಾರೆ" ಯನಲಾಗಿ ಕಂಪಲಿರಾಯನು ಸಮಾಧಾನ ಮಾಡಿ, ತಾನು ಬೇಟೆಗೆ ವಿದ್ವಾಂಸರು ಪಂಡಿತರು ಚತುರಂಗ ಬಲಸಮೇತವಾಗಿ ಬಹು ವುಲ್ಲಾಸದಿಂದಾ ಹೋದನು. ಆ ಸಮಯದಲ್ಲಿ ತನ್ನ ಮಗನಾದ ಕೊಮಾರರಾಮನ ಬೇಟೆಗೆ ಬರಹೇಳಿ ತಾನು ಮುಂದ ಅರಣ್ಯವನ್ನು ಕುರಿತು ನುಡಿದನು.

ಮಗನಾದ ಕೊಮಾರರಾಮನು ತನ್ನ ಕಡೆಯಿಂದಾ ೭೭ ಮಂದಿ ಮನ್ನಿಯರು ಸ್ತೋಮ ಸಹಿತವಾಗಿ ರಾಜಾರೂಢನಾಗಿ ಬರುತಾ ಯಿರುವ ಸಮಯದಲ್ಲಿ, ಯೀತನ ಸಂಗಡ ಯಿದ್ದ ಪುಸಾಧಿಕರು[>ಸಂಬಂಧಿಕರು] ಮನೆಗಾರು ಸಹಾ ಕೂಡಿ, "ತುಂಗಭದ್ರಾನದಿ ಪೂರ್ವಪ್ರವಾಹಾ ಹಾಯುತ ಯಿದ್ದಾಳೆ; ಆದರಿಂದಾ ನಾವು ಯೀ ದಿವಸಾ ನೀರಾಟಾ ಆಡಬೇಕೆಂ"ದು ಕೊಮಾರರಾಮಗೆ ಮನವಿ ಮಾಡಲಾಗಿ, 'ಅವರ ಮನವಿ ಆಲಿಸಬೇಕು'ಯಂದು ಬೇಟೆಗೆ ಹೋಗುವ ಸನ್ನಾಹವನ್ನು ನಿಂದ್ರಿಸಿ, ವಿರೂಪಾಕ್ಷ ಸಮೀಪವಾಗಿ ಬಂದವರು ಕೊಮಾರರಾಮಾ, ಯೀತನ ಅಣ್ಣಾ ಕಾ[+ಟ]ಮರಾಜು, ೭೭ ಮನ್ನಿಯರು, ಪ್ರಧಾನಿ ಬೈಚಪ್ಪ ಯೀತನು ಕೊಮಾರರಾಮನ ಸೋದರಮಾಮಾ, ಮುಂತಾದವರು ಸಹಿತವಾಗಿ, ನದೀ ದಡಿಯಲ್ಲು ಯಿರುವಂಥಾ ಹಾರಗೋಲುಗಳು ೩ ಸಾವಿರ ಜಮೆ ಮಾಡಿ, ಕೊಮಾರರಾಮನು ಅಲಂಕಾರ ಆರಭರಣಯುಕ್ತನಾದ ವಿವರ ಮತ್ತು ನವರತ್ನಾ ಕೆತ್ತಿಸಿ ಹೊನ್ನಿನ ವೊಡ್ಯಾಣಗಳು– ಯೀ ಪ್ರಕಾರ ನಾನಾವಿಧ ಆಭರಗಳು ಅಲಂಕಾರಯುಕ್ತನಾಗಿ, ಅದೇ ಪ್ರಕಾರ ತನ್ನ ಪರಿವಾರದವರಿಗೆ ಸಹಾ ಆಭರಣ ಅಲಂಕಾರ ಸಹಾ ಕೊಡಹಿಸಿ, ಹರಗೋಲು ಮಧ್ಯದಲ್ಲಿ ದಿವ್ಯಾಲಂಕಾರಯುಕ್ತವಾದ ಚಪ್ಪರವನ್ನು ಕಟ್ಟಿಸಿ ಪರಿವಾರಸ್ತೋಮ ಸಹಿತವಾಗಿ ಕುಳಿತು, ತನ್ನ ಹೆಣ್ಣುಮಕ್ಕಳು ಸಹಿತವಾಗಿ ಕುಳಿತು, ನದಿ ಮಧ್ಯೆ ನೀರಾಟಾ ಆಡುತಾ, ಪನ್ನೀರು ವೋಕಳಿಯನ್ನು ಆಡುತಾ, ಬಹು ಸಂಭ್ರಮದಿಂದಾ ಗಂಗಾಳೆ ತುಂಬಾ ವೊಬ್ಬರ ಮೇಲೆ ವೊಬ್ಬರು ಚೆಲ್ಲುತಾ, ಅವರ ಅವರ ಮನಸು ತೃಪ್ತಿ ಆಗೊ

ಹಾಗೆ ಆಡಿದರು. ಯೀತನ ಅಣ್ಣ ಕಾಟಮರಾಜನು ೫೦ ಹರಗೋಲಿನ ಮೇಲೆ ಕುಳಿತು ಯೀತನ ಬಳಿ ಬಂದನು. ಆತನ ಮೇಲೆ ತನ್ನ ಕಡೆ ಮನ್ನೇರ ಮೇಲೆ ಕೊಮಾರರಾಮನು ವೋಕಳಿ ಚೆಲ್ಲೊ ಸಮಯದಲ್ಲಿ ಅವರು ಯೀತನ ಸಮವಾಗಿ ನಿಲ್ಲಲಾರದಂತೆ ವೋಡುತಾ ಯಿದ್ದರು. ಅವರವರ[>ರು] ಹಾಡೊವರು. ನದಿಯದಲ್ಲಿ ಯಿರುವಂಥಾ ಮತ್ಸ ಮೊದಲಾದ ಜಲಜೀವಿಗಳು ತತ್ತರಿಸುತ್ತಾ ಯಿದ್ದವು. ಆಕಾಶದಿಂದ ಮಹತ್ತಾದ ಪ್ರಜನ್ಯವೋಪಾಯದಲ್ಲಿ ವೋಕಳಿ ಆಡಿದರು. ತರುವಾಯ ಕೊಮಾರರಾಮನು ನೀರಾಟಾ ಆಡಿ ತನ್ನ ಅಣ್ಣನಾದ ಕಾಟಮರಾಜಗೆ ಹೇಳಿ "ಶುಭ್ರ ವಸ್ತ್ರ ಅಲಂಕಾರವು ತರಸು"ಯಂದು ಹೇಳಿ, ತಾಉ ಶುದ್ಧ ನೀರಾಟಾ ಆಡಿ, ಅಲಂಕಾರಯುಕ್ತವಾಗಿ ಅಂಬಿಕಾರರಿಗೆ ವಸ್ತ್ರ ಬಹುಮಾನಂಗಳು ಮಾಡಿ, ಅಲ್ಲಿಂದಾ ಗಜಾರೂಢರಾಗಿ ತನ್ನ ಚತುರಂಗ ಬಲ ಸಹಿತವಾಗಿ ಕುಮ್ಮಟಾಯಂಬೊ ಸ್ಥಳದಲ್ಲಿ ತನ್ನ ಅರಮನೆಗೆ ಹೋಗೊ ಸಮಯದಲ್ಲಿ, ಮಾರ್ಗದಲ್ಲಿ ಭಟ್ಟರು ಮುಂತಾದವರು ಯೀತನ ಪ್ರಭಾವವನ್ನು ಹೊಗಳುತಾ, ಮನೆಯವರು ಮುಂತಾದವರಿಗೆ ಅಪ್ಪಣೆ ಕೊಟ್ಟು, ತಾನು ತನ್ನ ಮಾತಾ ಆದ ಹರಿಯಾಳದೇವಿ ಮನಿಗೆ ಪ್ರವೇಶ ಮಾಡಿ, ತಾಯಿಗೆ ಸಾಷ್ಟಾಂಗ ನಮನಾ ಮಾಡಿದನು.

ಮರುದಿನ ಕೊಮಾರರಾಮನು ಮುತ್ತಿನ ಹೊದಿಕೆ ಆಭರಣ ಅಲಂಕಾರದಿಂದಾ ಯುಕ್ತನಾಗಿ ತನ್ನ ಪರಿವಾರ ಮನೆಯವರು ಸಮೇತ ಚತುರಂಗಬಲ ಸಹಾ ಶಿದ್ಧಮಾಡಿ, ತಾಯಿ ಹರಿಯಾಳದೇವಿ ಮನೀಗೆ ಬಂದು, ತಾಯಿ ಮಗನಾ ಕಂಡು "ನೀನು ಸಿದ್ಧವಾದ ಕಾರಣ ಯೇನು?" ಯಂದು ಕೇಳಿದಲ್ಲಿ "ಅಮ್ಮಾ ನಾನು ಮುತ್ತಿನ ಚಂಡು ಆಡಬೇಕುಯೆಂದು ಅಪೇಕ್ಷೆಯಿದೆ," ಅದರಿಂದಾ "ಮನಿಯಲ್ಲಿ ಯಿರುವ ಮುತ್ತಿನ ಚಂಡು ಆಡಿದರ ಅಪಜಯವಾಗುತಾ ಯಿದೆ" ಅನಲಾಗಿ, ಆ ಮಾತು ಕೇಳಿದಂದೆ "ಅತ್ಯವಾಗಿ ಚಂಡು ಕೊಡು" ಎನಲಾಗಿ, ಮತ್ತ ಹಿರಿಯಾಳದೇವಿ ಹೇಳುತಾಳೆ : "ಯೀ ಚಂಡು ಆಡಿದರೆ ನಾಶವನ್ನು ಹೊಂದೋರು. ಯಿದು ಹೊರತು ಯೀ ಪಟ್ಟಣದಲ್ಲು ಅನೇಕ ಅರಸಗಳ ಮು[>ಮ]ನಿಗಳು, ಯಿದು ಹೊರತು ಊರಿನಲ್ಲಿ ಯಿರುವ ಮನೆ[>ನ್ನೆ]ಯವರ ಮನೆಗಳು ಯಿಥೆ. ಅಲ್ಲಿ ಚೆಂಡು ಹೋತಿ ಬಿದ್ದರೆ, ಹೆಂಗಸರು ಯಿದ್ದ ಸ್ಥಳಕ್ಕೆ ಬಿದ್ದಲ್ಲಿ ಗಂಡಸರು ಹೋಗುವದು ಅಯುಕ್ತ." ಅನಲಾಗಿ ಕೊಮಾರರಾಮನು ಕೇಳದೆ ಹಟ ಮಾಡಿದದರಿಂದಾ ಮತ್ತು ಹೇಳುತಾಳೆ "ನಿನ್ನ ತಂದೆ ಬೇಟೆಗೆ ಹೋಗಿ ಯಿದ್ದಾನೆ. ಆತನು ಬಂದ ಬಳಿಕಾ ತೆಗೆದುಕೊಂಡು ಹೋಗೋದು. ಯಿದು ಹೊರತು ಪೂರ್ವದಾರಭ್ಯ ಈ ಮುತ್ತಿನ ಚಂಡಿ ಚಂಡು ಪೂಜಿಬಡುತಾ ಯಿಥೆ. ನಿನ್ನ ಹಿರೇರು ಮುತ್ತಿನ ಮುಮ್ಮಡಿರಾಯನು ನರಸಿಂಗರಾಯನು ಯೀ ಮುತ್ತಿನ ಚಂಡಾಡಾ ನಾಶವನ್ನು ಹೊಂದಿದರು. ಯೀ ಚೆಂಡು ಶ್ರೀಕೃಷ್ಣಮಹಾಸ್ವಾಮಿ ಅವರ ಕಡೆಯಿಂದಾ ಪಂಚಪಾಂಡವರು ಮುಂತಾದವರು ಪೂಜಿ ಮಾಡಿದರು. ಅದರಿಂದಾ ಮಗನೇ ಯೀ ಚಂಡಾಡುವ ಮುನಸು ಬೇಡ"ಯೆಂದು ಹೇಳಿದಲ್ಲಿ ಕೇಳಲಿಲ್ಲ. ಮತ್ತನ್ನೂ ಹೇಳುತಾಳೆ. "ನೀನು ಯೀ ಚಂಡು ಆಡಿನಲ್ಲಿ ವೀರಬಲ್ಲಾಳರಾಯ, ಯಿನ್ನು ವೋರಂಗಲ್ಲು ಪ್ರತಾಪರುದ್ರಾ, ಯಿನ್ನು ನೇಮಿಯವರು ಯದ್ದು ಬಂದು ನಿನ್ನಾ ಸಂಹಾರ ಮಾಡುವರು"ಅನಲಾಗಿ, "ಅವರ ಲಕ್ಷ ನನಗೆ ಯಿಲ್ಲಾ. ಅವರ ಕಡೆಯಿಂದಾ ನಾನು ಪರಾಜಿತವಾಗಿ ಯಿದ್ದೆನಂದು ನೀನು ಎಣಿಸುವ ಕೆಲಸವಿಲ್ಲ. ಅನಲಾಗಿ ಹಿರಿಯಾಳದೇವಿ ಸಾಮಾಧಿಕರ[>ಸಂಬಂಧಿಕರ] ಕಡೆಯಿಂದಾ ಹೇಳಿಸಿದಲ್ಲಿ, ಕೊಮಾರರಾಮನು ಕೇಳದೇ ಯಿದ್ದಲ್ಲಿ, ತಾಯಿ ಹಿರೆಯಾಳದೇವಿಗೆ ಮನಸಿನಲ್ಲಿ "ಮಗನು ಯೀ ಮೂಲದಿಂದಾ ನಷ್ಟವಾಗುತಾನೆ"ಯಂದು

ರೋದನೆ ಮಾಡಲಾಗಿ, ಕೊಮಾರರಾಮನು ರೋಧನಾ ಮಾಡಿದನು. ಹೊರತು "ಚಂಡು ಕೊಡು"ಯಂದು ಹಟ ಮಾಡಲಾಗಿ, ತಾಯಿ ಹಿರೆಯಾಳದೇವಿ ಬಹು ದುಃಖದಿಂದಾ ಮುತ್ತಿನ ಚೆಂಡು ತಂದು ಕೊಟ್ಟಳು. ಕೊಮಾರರಾಮನು ಅದನ್ನು ತೆಗೆದುಕೊಂಡು ಅರಮನೆ ಬಿಟ್ಟು ಹೊರಗೆ ಬಂದು ತನ್ನ ಅಣ್ಣನಾದ ಕಾಟಮರಾಜನಾ ಕರಿಸಿ, "ಮುತ್ತಿನ ಚಂಡು ಆಡೊ ಬಗ್ಗೆ ಪರಿವಾರವನ್ನು ಶಿದ್ಧಮಾಡು"ಯೆನಲಾಗಿ, ಆತಾ ಪರಿವಾರಾ ಅರಸುಗಳು ಮನ್ನೇಯರು ಸಿದ್ಧಮಾಡಿದ ವಿವರಾ:

೧. ಚಿನುಮಯಾ	೧. ಅಟ್ಟಿಕಾರರು ಅಳ್ಳಿಕಾರರು
೧. ದಿಟ್ಟಗಾಣಿಗೆ ಬೊಮ್ಮನವರು	೧. ಚಿಕ್ಕಭೀಮಸೇನನವರು, ತಿಮ್ಮ
೧. ಕಂಡಾಳು ಕುಂಬಾರಾ ಸೋಮನು	೧. ಕಬ್ಬುಲಿಗರ ನಾಗಾ
೧. ಹೆಬುಲಿ ಚಿಕಾನ	೧. ಚಿನುಮಯ ತಿಮ್ಮ
೧. ಮಾಳಿಗೆ ಹನುಮಾ	೧ ಅಬ್ಬಯ್ಯ ನಾಯಕನವರು
೧. ಕುಟ್ಟುದ ಬೇಡರು	೧. ಲಿರುಪಾನು (ಯಿರುಪನು ಈರಪಾ)

ವೀರಾಧಿ ವೀರರು:

೧. ನಲ್ಲಾರತಿ ಬುಕ್ಕು	೧. ವೀರ ಬೊಬ್ಬರಿದೇವಾ	
೧. ಬಟ್ಟ ತಿಪ್ಪನು	೧. ಅಣ್ಣಾ ಕಾಟಣ್ಣಾ	
೧. ಕುಲಕ್ಕೆ ಜ್ಯೋತಿ ಕೊಪ್ಪನವರು	೧. ಕಲ್ಲಯ್ಯ ಕನುಮಾ	
೧. ಕಾಸಾಲೆ ಜೀನನ್ನು	೧. ಚಿತ್ತಾಮ ಪೊತ್ತಾನು	
೧. ಶಿಂಗಾ	೧. ಸಿಂಗನವರು	೧. ಕಾಹಿದೇವನು
೧. ಶಿವಲಿಂಗದೇವ	೧. ಚಲದಂಕಭೀಮಾ	೧. ಪೀರಪ್ಪಾ
೧. ವಕ್ಕಲಿಕ ಮುದ್ದಾ	೧. ಬೋಗುರ ಮಲ್ಲ	೧. ಮಾಯಿದೇವಾ
೧. ಅಕ್ಕಸಲೇರ ಚಿಕ್ಕ	೧. ಕುಲದಿಪಭಲಕನವರು	೧ ಸೋಮಿದೇವಾ
೧. ಮಿಕ್ಕಬೊಮ್ಮಮನಿಗೇ ಅವರು	೧. ಬುಲಿಕ ಬೊಮ್ಮನು	೧. ಸಾಯಿದೇವಾ
೧. ಪಾಳ್ಯನಾಗಾ	೧. ದೇಮುಗಾ	೧.ಬಾಹಿನ ಬೊಲುಗನವರು

೧. ದೇವಿಶೆಟ್ಟಿಲಿಂಗಾ

೧. ಬಲುಗಾ | ೧. ಕಂಪಲಿದೇವಾ

೧. ಖಾನನ ಮಗಾ ಮಹಿಮೋಖಾನ | ೧. ಬಲುಬೊಮ್ಮ ದೇಮುಗಾನವರು

೧. ಬಸವನಾಯಕಾ

೧. ಜಿಲಿಬಿಲಿ ಬುಕ್ಕಿಟ್ಟಿನನಾಯಕಾ | ೧. ತೆಲುಗಾ ಮನೆಯಾ ಮಕ್ಕಳು ಸಲೆ ರಾಜನು ವುಳವರು

೧. ಕಲ್ಲುಕೋಟೆ ಚಿತಾನವರು

೧. ನಲ್ಲಾರಾನು ನಾಮಿನಾಯಕಾ

ಅರಸು ಮಕ್ಕಳು

೧. ಕೆಪ್ಪರಾಜನು | ೧. ಬಿರದಂಕ ಕಾಳಮ ॥

೧. ಹನುಮರಾಜನು | ೧. ರಾಮರಾಜಾ

೧. ಅರಿಬಿರಿದನ ತಿಮ್ಮರಾಜನು | ೧. ಸಿಂಗರಾಜಾ

ಯೀ ಪ್ರಕಾರ ಮುಖ್ಯಸ್ಥರನಾ, ಯಿದರಲ್ಲಿ ಬಲವಾಗಿ ಯಿರುವಂತಾ ಅವರನಾ ಅಣ್ಣ ಕಾಟಯ್ಯರಾಜಗೆ ಹಂಚಿಕೊಟ್ಟು, ಬಲಹೀನರಾಗಿ ಯಿದ್ದವರನಾ ತನ್ನ ಹತ್ತಿರ ಯಿಟ್ಟು, ಕೊಮಾರರಾಮನು ಕಾಟಮರಾಜು ವುಭಯರು ಯರಡು ಭಾಗ ಮಾಡಿ ಕಮ್ಮಟದ ರಾಜಬೀದಿಯಲ್ಲು ಮುತ್ತಿನ ಚೆಂಡು ಆಡೋ ಬಗ್ಗೆ ಬೀದಿಗಳಿಗೆ ತೋರಣಾ ಮುಂತಾದ್ದು ಕಟ್ಟಿಶಿ, ಕೊಮಾರರಾಮನು ತನ್ನ ಕಡೆ ಮಾಡಿಕೊಂಡವರ ವಿವರಾ:

೧. ಬಣ್ಣಗಾರ ತಿಪ್ಪು, ಬಹಾದ್ದೂರಖಾನ, ಮಾಧವಾನು, ದೋಣಿಯ ಬಂಟರಗಾಳು, ಯೀ ಪ್ರಕಾರ ಮಾಡಿ ಅವರವರ ಯೋಗ್ಯತಾನುಸಾರಾ ವುಡಗರಿ ಕೊಟ್ಟು ಅಣ್ಣನ ಕಡೆ ಯಿಟ್ಟನು. ಯರಡು ಕಡೆ ಯರಡು ಭಾಗವಾಗಿ ಮಧ್ಯದಲ್ಲು ಲಗೆ ಪುಡಿ ಆಟಾ ಆಗೋ ಸಮಯದಲ್ಲಿ ಅವರವರ ಪರಾಕ್ರಮ ತೋರಿಸುತ್ತಾ ಯಿರಲಾಗಿ, ಯೀ ಆಟಾ ನೋಡೊ ಬಗ್ಗೆ ಪಟ್ಟಣದಲ್ಲು ಯಿರುವಂಥಾ ಜನರು ಯಾವತ್ತು ಬಂದು ವುಪ್ಪರಿಗೆ ಮೇಲೆ ಯೇರಿ ಆಟದ ವೈಭೋಗವನ್ನು ನೋಡುತಾ ಯಿದ್ದರು. ಯೀ ಸಮಾಚಾರವನ್ನು ಕಂಪಿಲಿರಾಯನ ಚಿಕ್ಕ ಹೆಂಡತಿ ಕಾಮಾರರಾಮನ ಮಲತಾಯಿ ರತ್ನಾಜಿಯಂಬವಳು ಸರ್ವಾಭರಣ ಅಲಂಕಾರ ವಸ್ತ್ರ ಭೂಷಿತಳಾಗಿ ವುಪ್ಪರಿಗೆ ಮೇಲಿಂದಾ ಚಂಡಾಟ ನೋಡುತಾ ಯಿದ್ದಳು. ಆಕೀನ ಮನಸಿನಲ್ಲಿ ಪೂರ್ವಾರಭ್ಯಾ ಕೊಮಾರರಾಮನು ಬಹುರೂಪಲಾವಣ್ಯನಾಗಿ ಯಿರೋದ ಕಂಡು ಯೀತನ ಸಂಗಡಾ ಸಂಭೋಗ ಮಾಡಬೇಕೆಂದು ದೇವರನಾ ಕುರಿತು ಪ್ರಾರ್ಥನೆ ಮಾಡಿದ ವಿವರ: "ಸ್ವಾಮಿ. ಕುಮಾರರಾಮನು ಆಡುವ ಮುತ್ತಿನ ಚೆಂಡು ನನ್ನ ಮನಿಯಲ್ಲಿ ಬಂದು ಬಿದ್ದರೆ ನಾನು ನಿನಗೆ ಹರಿಕೆ ನಾನಾ ವಿಧದಿಂದ ಮಾಡುತ್ತೇನೆ" ಯೀ ಪ್ರಕಾರ ದುರ್ಬುದ್ಧಿ ಯೆಣಿಸುತಾ ಯಿದ್ದಳು. ಕಾಟಮರಾಜನ ಕಡೆ ಬಲವಾದವರು ಯಿದ್ದಾಗ್ಯೂ ಕೊಮಾರರಾಮನ ಕಡೆ ಬಲಾ ಹೆಚ್ಚಾಯಿತು. ಚಂಡಾಟ ಬಹು ಸಂಭ್ರಮವಾಗಿಯಿದ್ದದು

ಕೊಮಾರರಾಮನ ಮಲತಾಯಿ ರತ್ನಾಜಿಯಂಬವಳು ತನ್ನ ಕಡೆಯಿರುವ ಸಂಗಾಯಿಯಂಬ ದಾಸಿಗಿತ್ತಿ ಕುರುತು, "ಯೀ ಚಂಡಾಟ ಸಮೋಹದಲ್ಲಿ ಯಿರುವ ಅವರು ಯಾರು?" ಅನಲಾಸಿ ದಾಸಿ ಹೋಳುತಾಳೆ:

೧ ನೆಗಳುರು ಹಿರಿಯಾ, ೧ ಕಲುಕೋಟಿ ಚಿತ್ತಾ

೧ ಕುಂಬಾರ ಕಲ್ಲಾ, ೧ ಕಚಿಗಲ್ಲರ ನಾಗಾ, ೧ ವಕ್ಕಿಲಗಲಿ ಮುದ್ದಾ ಯೀ ಪ್ರಕಾರ ಸದರಿ ಉಭಯ ಪಾರ್ಶ್ವದಲ್ಲೂ ಸದರಿ ಬರದವರು ಯಾವತ್ತು ಮಂದಿ ಯಿದ್ದರು. ಇವರ ಹೊರ್ರು ಬಂದವರು ೧. ಮಡಿವಾಳ ಮಾಚಯ್ಯ, ೧. ಜಂಗಮರ ಬಸವಯ್ಯ, ಅಕ್ಕಸಾಲೆರ ಚಿಕ್ಕ ೧. ಆದವಾನಿ ಯಾದವರು.

೧ ಗಂಗರಾಜಾ ಗಂಡಿಕೋಟಿ ಅರಸು, ೧. ಚಂದ್ರಗಿರಿ ನಾಗರಾಜಾ, ೧ ಗುತ್ತಿ ಚಿಕ್ಕ, ೧ ವುದ್ದಗಿರಿ ಸಿದ್ದಾ, ೧ ಪೆನುಗೊಂಡೆ ಸೋಮನಾಥಾ, ೧ ಮಿಡಿಗಿ ಶೀಮೆ ಮುಮ್ಮಡಿ ನಾಯಕಾ, ೧ ಕರ್ಣಸಮಾನಾ ದಾನ ಮಾಡುವ ಕಾಮನಿಃಶಿಮಾ, ೧ ಕುಂದರ್ಪ ತಮ್ಮರಾಜಾ, ೧ ರಾಯದುರ‍್ಗ ರಾಮಾ, ೧ ಗುಡಿಕೋಟೆ ಗಡಿಯಂಕ ಭೀಮಾ, ೧ ಕುರುಗೋಡ ಸಂಗಮನು, ೧ ಕುಂದರ್ಪಿ ನಾಗಾ, ೧ ವುಚಂಗಿ ದುರ್ಗದ ವೀರಾ, ೧ ಜಾಡರ ಕನ್ನಾ, ೧ ಚಿತ್ರಕಲ್ಲುದುರ್ಗದ ಶಿಂಗಾ, ೧ ಕೋಳಿಯ ನಾಗಾ, ೧ ದೇವಿಶೆಟ್ಟಿ, ೧ ಅಗಸರ ಬಸವಾ, ೧ ತೊರಗಳ ನಾಯಕಾ, ಕೆರೆಶೆಟ್ಟಿ ಲಿಂಗಾ ೧, ಕಂಚುಗಾರ ನಾಗಾ, ೧ ಶಿದ್ದರಾಜ ಬಸವಯ್ಯ.

೧ ಕಂಪಿಲಿರಾಯನ ಅಳಿಯ ಕೊಮಾರರಾಮನ ಭಾವ ಸಂಗಮದೇವ, ಕಂಪಲಿರಾಯನ ಜೇಷ್ಟಪುತ್ರ ಕಾಟಮರಾಯ, ಕಂಪಲಿರಾಯನ ಪರದಾನಿ ಮಗಾ ತ್ರಿ[>ಮಂತ್ರಿ] ಬಹುಚಪ್ಪನ ಮಗಳು[>ಮಕ್ಕಳು]. ೭೭ ಮನ್ನೆರ ವಳಗೆ ಮುಖ್ಯಸ್ಥಾ ವುತ್ತಮರಾಜಾ ೧.

ತರುವಾಯಾ ರತ್ನಾಜಿ ದಾಸೀನ ಕುರಿತು ಹೇಳುತಾಳೆ, "ಪೊಡವಿಯೊಳಗೆ ಅಷ್ಟದಿಕ್ಕಿನ ರಾಯರ ಗಂಡಾ ಕೊಮಾರರಾಮನ ತೊರಿಸಿದರೆ ನಿನಗೆ ೭೭ ವುಡುಗರಿ ಕೊಡುತೇನೆ" ಅಂದಳು. "ನಿನ್ನಾ ಕೊಮಾರರಾಮನ ತೋರಿಸು ಯಂದಲ್ಲಿ, ಭೂಮಿಯಲ್ಲಿ ಇರುವಂಥಾ ರಾಯನಾ ತೋರಿಸಿದಿ. ಶೀಘ್ರವಾಗಿ ಕೊಮಾರರಾಮನ ತೋರಿಸು" ಅನಲಾಗಿ, ದಾಶಿ ತೋರಿಸಿದಳು. ಆ ಸಮಯದಲ್ಲಿ ರತ್ನಾಜಿಗೆ ಕಾಮಾ ಶರೀರದಲ್ಲಿ ಹುಟ್ಟಿ ಕಾಮಾತುರವಾದಳು. ಆ ಸಮಯದಲ್ಲು ದೇವರಿಗೆ ನಾನಾ ವಿಧದಿಂದಾ "ಕೊಮಾರ ಸಂಗಡ ಸಂಭೋಗವಾದಲ್ಲಿ ಹರಿಕೆ ಮಾಡುತ್ತೇನೆ" ಯೆಂದು ಪ್ರಾರ್ಥನೆ ಮಾಡುತಾ ಯಿದ್ದಳು. ಕೊಮಾರರಾಮನು ಆಡುವ ಮುತ್ತಿನ ಚೆಂಡು ರತ್ನಾಜಿ ಯಿರುವ ಅರಮನೆಯಲ್ಲಿ ಹೋಗಿ ಬಿತ್ತು. ಆ ಸಮಯದಲ್ಲಿ ರತ್ನಾಜಿ ಆ ಮುತ್ತಿನ ಚಂಡನ್ನು ಕಂಡು ಬಹು ಸಂತೋಷದಿಂದಾ "ಕೊಮಾರರಾಮನು ಸಿಕ್ಕಿದನು. ಆತನ ಸಂಗಡ ಅನುಭವ ಮಾಡಬೇಕೆಂ"ದು ಯಿರಲಾಗಿ, ಕೊಮಾರರಾಮನು ತನ್ನ ಕಡೆಯಿದ್ದ ಮುಖ್ಯಸ್ಥರಾದ ಮನ್ನೆಯರನ ರತ್ನಾಜಿ ಬಳಿಗೆ ಹೋಗಿ "ಚೆಂಡು ಕೊಡು"ಯಂದು ಕೇಳಿದಲ್ಲಿ "ಕೊಡೊದಿಲ್ಲಾ, ಕೊಮಾರರಾಮನು ಯಿಲ್ಲಿಗೆ ಬಂದಲ್ಲಿ ಕೊಡುತೇನೆ. ಇಮ್ಮ ಕೈಯ್ಯಲ್ಲಿ ಕೊಡೊದಿಲ್ಲಾ" ಯನಲಾಗಿ, ಅವರು ಬಂದು ಕೊಮಾರರಾಮಗೆ ಹೇಳಿದರು. ತರುವಾಯ ತನ್ನ ಅಣ್ಣನಾದ ಕಾಟಣ್ಣರಾಯನ ರತ್ನಾಜಿ ಬಳಿಯ ಕಳುಹಿಸಿ ಮುತ್ತಿನ ಚೆಂಡು ತರಲು ಹೇಳಲಾಗಿ, ಆತನು ಹೋಗಿ ಕೇಳಲಾಗಿ "ಕೊಮಾರರಾಮನು ಬಂದರೆ ಕೊಡುತೇನೆ

ನಿನ್ನ ಕೈಯಲ್ಲಿ ಕೊಡೊದಿಲ್ಲಾ" ಅನಲಾಗಿ, ಕಾಟಣ್ಣರಾಯ ಬಹುವಿಧದಿಂದಾ ಹೇಳಲಾಗಿ ಕೊಡಲಿಲ್ಲಾ. ಅದರಿಂದ ಆತನು ಕೊಮಾರರಾಮನ ಬಳಿಯ ಬಂದು ನಡದ ಸಂಗತಿ ಹೇಳಿದನು. ಆ ಸಮಯದಲ್ಲಿ ಕೊಮಾರರಾಮನ ಹಡದ ತಾಯಿ ಹರಿಯಾಳದೇವಿಗೆ ಅಪಶಕುನವಾಯಿತು. ಅದರಿಂದಾ ಕೊಮಾರರಾಮಗೆ ಕಷ್ಟಕಾಲಾ, ಮುತ್ತಿನಚೆಂಡು ಆಟದೊಳಗೆ ಚೆಂಡು ಸವತಿ ರತ್ನಾಜಿ ಮನಿಯಲ್ಲಿ ಹೋಗಿ ಬಿದ್ದು ಯಿದ್ದದು ಕೇಳಿ, ಯಿದರಿಂದಾ ಕೊಮಾರಾಮಗೆ ಅಪಾಯ ಬಂದೀತು ಯಂದು ಬಹುಪ್ರಲಾಪಮಾಡುತಾ ಯಿದ್ದಳು.

ಕೊಮಾರರಾಮನು ರತ್ನಾಜಿ ಮನಿಗೆ ಹೋಗಿ "ಮುತ್ತಿನ ಚೆಂಡು ಕೊಡು"ಯೆಂದು ಕೇಳೊಬಗೆ[>ಗ್ಗೆ] ಅರಮನೆಯಲ್ಲಿ ಹೋಗಲಾಗಿ, ಅಲ್ಲಿ ವೊಂದು ಗಿಳಿ ಯಿದ್ದದು ಕೊಮಾರರಾಮನು[>ನ] ಕಂಡು "ನೀನು ಯಾವದೇಶದ ರಾಯನು? ಅರಸು ಯಿಲ್ಲದೇ ಯಿರುವ ಅರಮನಿಗೆ ನೀನು ಬರಲಿಕ್ಕೆ ಯೇನು ಕಾರಣ?" ಅನಲಾಗಿ, ಕೊಮಾರರಾಮನು ಆ ಗಿಳಿನಾ ಕುರಿತು ಉತ್ತರವನ್ನು ಕೊಟ್ಟಂಥವನಾದನು. "ಹೇ ಗಿಳಿಯೆ, ನಿನ್ನಾ ನಾನೇ ತಂದದ್ದು ಅರಿಯಾ. ನಾನು ಕಂಪಿಲಿರಾಯನ ಮಗಾ. ನನ್ನ ಹೆಸರು ಕೊಮಾರರಾಮನು. ನಾನು ಮುತ್ತಿನ ಚೆಂಡು ಆಡುತಾ ಯಿರಲಾಗಿ ಆ ಚಂಡು ಯಿಲ್ಲಿ ಬಂದು ಬಿದ್ದದರಿಂದಾ ನಾನು ತೆಗೆದುಕೊಂಡು ಹೋಗಬೇಕು" ಅನಲಾಗಿ, ಗಿಳಿ ಹೇಳಿದ್ದು "ನಿನ್ನ ಮುತ್ತಿನ ಚಂಡು ಹಾಳಾಯಿತು. ನೀನು ಚಂಡಿನ ಭ್ರಮೆ ಬಿಟ್ಟು ಹೊರಟು ಹೋಗೋದು. ಯಿಲ್ಲಿ ಚಂಡಿನಿ ನಿಮಿತ್ಯ ನಿನ್ನ ಪ್ರಾಣ ಹೋಗೋದು" ಅನಲಾಗಿ, ಕೊಮಾರರಾಮನು ಯೀಶ್ವರನ ಧ್ಯಾನಮಾಡಿ ರತ್ನಾಜಿ ಯಿದ್ದ ಸ್ಥಳದಲ್ಲು ಹೋಗಲಾಗಿ, ರತ್ನಾಜಿ ಬಳಿ ಯೀ ಸಂಗಾಯಿ ಯಂಬಾ ದಾಸಿ ರತ್ನಾಜಿ ಉಭಯರು ಯಿದ್ದದು ಕಂಡು, ಕೊಮಾರರಾಮನು "ತಾಯಿ, ನಾನು ಮುತ್ತಿನ ಚೆಂಡು ಆಡುತಾ ಯಿದ್ದದ್ದು, ನಿಮ್ಮ ಅರಮನೆಯಲ್ಲಿ ಬಿದ್ದುದ್ದು ಕೊಡು"ಯನಲಾಗಿ ಅದಕ್ಕೆ ರತ್ನಾಜಿ ವುತ್ತರ ಕೊಟ್ಟದ್ದು, "ನಿನ್ನ ತಂದಿ ಮಲಗುವ ಮಂಚದ ಮೇಲೆ ಯಿರಿಸಿದೇನೆ. ನೀನು ಹೋಗಿ ತೆಗೆದುಕೊಂಡು ಬಾ" ಎನಲಾಗಿ, ಕುಮಾರರಾಮನು ಅರಮನೆಯಲ್ಲು ಪ್ರವೇಶ ಆದ ಬಳಿಕಾ ರತ್ನಾಜಿ ಯಾವತ್ತು ಬಾಗಲು ಹಾಕಿಸಿದಳು. ಕುಮಾರರಾಮನು ಮಂಚಾಯಿರುವ ಮನೇಗೆ ಹೋಗಿ ಮುತ್ತಿನ ಚಂಡು ತೆಗದು ಕೊಂಬೊ ಸಮಯದಲ್ಲಿ ರತ್ನಾಜಿ ಆ ಮನೆಯಲ್ಲಿ ಹೋಗಿ ಕೊಮಾರರಾಮನ ಕೂದಲು ಹಿಡಿದುಕೊಂಡು ಜಗ್ಗಲಾಗಿ, "ತಾಯಿ ನನ್ನ ಜಗ್ಗಾಡುವ ಕಾರಣವೇನು?" ಅನಲಾಗಿ, "ನೀನು ಬಂಗಾರದಂಥವನು ನನಗೆ ಶಿಕ್ಕಿದಿ, ನಾನು ನಿಲಗೆ ಬಿಡೊದು ಯಿಲ್ಲಾ"ಯಂದು ಕಾಮಚೇಷ್ಟೆ ಮಾಡಲಾಗಿ, ಕೊಮಾರರಾಮನು "ಹರಹರಾ"ಯಂದು ಕಿವಿ ಮುಚ್ಚಿಕೊಂಡು "ನನಗೆ ಹಡದ ತಾಯಿ ಹರಿಯಾಳದೇವಿ ಸಮಾನಾ ಬಿಡು" ಅನಲಾಗಿ, "ಯಿನ್ನು ನನ್ನ ಹಿಡಿದ ಕಾರಣ ನಿರ್ಮಲದಿಂದ ಹೇಳು" ಅನಲಾಗಿ, "ನೀನು ನನ್ನ ಕೈಯಲ್ಲಿ ಶಿಕ್ಕಿದಿ. ನನಗೆ ಕಾಮವೇದನೆ ಆಗುತಾ ಯಿದೆ. ನನ್ನ ಸಂಗಡಾ ಭೋಗವ ಮಾಡು. ನಿನ್ನ ದೆಶೆಯಿಂದಾ ನಾನು ಬಹುದಿನದಿಂದಾ ಅಪೇಕ್ಷವಾಗಿ ಯಿದ್ದೇನೆ. ಯೀ ದಿನ ದೇವರು ನನ್ನ ಪಾಲಿಗೆ ಶೇರಿಸಿದನು. ಆದ್ದರಿಂದಾ ನೀನು ಅನುಮಾನ ಮಾಡದಂತೆ ಸಂಭೋಗಾ ಮಾಡು, ನಾನು ಯಂತ ಕೆಟ್ಟನು" ಯನಲಾಗಿ, "ನಾನು ನಿನ್ನ ಮಗಾ. ನೀನು ನನ್ನ ತಾಯಿ. ಹರಿಯಾಳದೇವಿ ಸಮಾನಾ" ಅಂದಲ್ಲಿ, ರತ್ನಾಜಿ ವುತ್ತರ ಕೊಡುತಾಳೆ "ಪೂರ್ವದಲ್ಲಿ ನನಗೆ ನಿನಗೆ ವಿವಾಹ ಮಾಡಿಕೊಡಬೇಕೆಂದು ಕಂಪಿಲಿರಾಯನು ಮಾತನಾಡಿ, ನನ್ನಾ ಕಂಡ ಬಳಿಕಾ ನನ್ನ ಸೌಂದರ್ಯವನ್ನು ಕಂಡು ಕಂಪಲಿರಾಯನೇ

ಮದಿವಿ ಮಾಡಿಕೊಂಡನು. ತದಾರಭ್ಯಾ ನನ್ನ ಮನಸು ನಿನ್ನಲ್ಲಿ ಯಿದ್ದೀತು." ಅಂದಲ್ಲಿ, ಕೊಮಾರರಾಮನು ಆಕಿ ಆಡುವಂಥಾ ನೀಚ ಶಬ್ದವನ್ನು ಕೇಳಿ "ಶಿವ ಶಿವಾ ನೀನು ತಾಯಿ, ನಾನು ಮಗನು ಯಿಂಥಾ ಅನ್ಯಾಯದ ಮಾಡು ಆಡಬೇಡಾ. ನನ್ನ ತಂದೆ ಅನುಭವಿಸಿದ ಹಿಪ್ಪಿ ನಾನು ಅನುಭವಿಸಿದಲ್ಲಿ ಯೀಶ್ವರ ತಡಿಲಾರನು" ಅನಲಾಗಿ, ರತ್ನಾಜಿ ಹೇಳೋದು "ನನ್ನ ಗಂಡ ಕಂಪಲಿರಾಯ ವೃದ್ಧಾ. ಆತನಿಂದ ನನ್ನ ಕಾಮತೃಪ್ತಿಯಾಗಲಿಲ್ಲಾ. ನೀನು ನನ್ನ ಸಂಗಡಾ ಸಂಭೋಗ ಮಾಡಿದಲ್ಲಿ ಕಂಪಿಲಿರಾಯಗೆ ವಿಷಪ್ರಯೋಗಾ ಮಾಡಿ ಕೊಂಡು ನಿನಗೆ ಪಟ್ಟಾಭಿಷೇಕ ಮಾಡಿ ಹೊಸಬಲೆದುರ್ಗಾ ಸಹ ನಿನಗೆ ಕೊಡುತೇನೆ"ಯಂದು ನಾನಾ ವಿಧದಿಂದ ಬೋಧನೆ ಕಾಮಚೇಷ್ಟೆ ಮಾಡಲಾಗಿ, ಕೊಮಾರರಾಮ ಆ ಶಬ್ದವನ್ನು ಕೇಳಿದಂತಾವನಾಗಿ "ನನ್ನ ಯದುರಿಗೆ ತಂದೀನ ಕೊಲ್ಲುತ್ತೇನೆ ಯಂಬಾ ಮಾತು ನುಡಿಯಬೇಡಾ ತಾಯೀ, ಶಿವ ಶಿವಾ" ಯಂದು ಕರ್ಣವಾ ಮುಚ್ಚಿಕೊಂಡ. ಮತ್ತು ರತ್ನಾಜಿ ಕಾಮಚೇಷ್ಟೆ ಮಾಡಲಾಗಿ ಕೊಮಾರರಾಮನು ವುತ್ತರಾ ಕೊಟ್ಟದ್ದು "ಭೂತಳದಲ್ಲಿ ಮಾತೃಗಮನಾ ಮಾಡುವದುಂಟೆ?"ಅನಲಾಗಿ ರತ್ನಾಜಿಯಂದದ್ದು, "ನೀನು ನನ್ನ ಸಂಗಡ ಸಂಭೋಗ ಮಾಡಿದರೆ ಉತ್ತಮಾ, ಯಿಲ್ಲದಿದ್ದರೆ ನನ್ನ ಕೊಂದು ಹೋಗೋದು"ಯಂದು ಕೊಮಾರರಾಮನ ತಲೆಕೂದಲು ಬಿಟ್ಟು ಪಾದಕ್ಕೆ ಬಿದ್ದು, "ನಿನ್ನ ಪಾದದಲ್ಲಿ ನನ್ನ ಪ್ರಾಣಾ ಬಿಡುತಾ ಯಿದ್ದೇನೆ" ಅನಲಾಗಿ, ಯಿನ್ನು ಹೇಳುತಾಳೆ "ನನ್ನ ಕಾಮಾತುರಾ ನೀನು ಪರಿಹಾರ ಮಾಡಿದರೆ ತಾನೆ ಮುಂದಕ್ಕೆ ಸುಖದಿಂದಾ ರಾಜ್ಯಭಾರ ಮಾಡೋದು ನೀನು ಪುರಷನಾಗಿ ನನ್ನಂಥ ರೂಪಲಾವಣ್ಯ ಸ್ತ್ರೀನ ಕಂಡು ಬಿಡೋದುವುಂಟೆ?" ಅನಲಾಗಿ, ಕೊಮಾರರಾಮನು ಬಾಗಿಲಗಳ ಮುಚ್ಚಿದ್ದು, ಯೀತನ ಸತ್ಯ ಕಂಡು ತನಗೆ ತಾನೇ ಬಾಗಲಗಳು ತೆರೆದು ಹೋಯಿತು. ಕೊಮಾರರಾಮನು ಹೊರಟು ಬಾಹೋ ಸಮಯದಲ್ಲಿ ಮತ್ತು ಕೊಮಾರರಾಮನ ಕಾಲಿಗೆ ಕಟ್ಟಿಕೊಂಡಳು. ಯೀತನು ಅಂಗೀಕಾರ ಮಾಡದಂತೆ ಅರಮನೆ ಬಿಟ್ಟು ಹೋದನು. ಆವಾಗ್ಯೆ ರತ್ನಾಜಿ ಕೊರಳಲ್ಲಿ ಯಿರುವ ಮುತ್ತಿನ ಹಾರ ಕಡದು ಕೆಳಗೆ ಚಲ್ಲಿದಳು. ಮತ್ತು ಕೊಮಾರರಾಮನ ಮೇಲೆ ಮಣ್ಣು ತೂರಿ ಮತ್ತು ಶಪಥ ಮಾಡಿದಳು. "ಕುಮಾರರಾಮನ ನಾನು ಕೊಲ್ಲುಸುತ್ತೇನೆ"ಯಂದು ಹೇಳಿದಳು. ಅಲ್ಲಿಂದಾ ಕೋಣೆಯಲ್ಲಿ ಕುಳಿತು ಕೂದಲು ಬಿಡಿಸಿ ಮೈಕ್ಯೆ ಹರಕೊಂಡು ರೋಧನೆ ಮಾಡುತಾ ಯಿದ್ದಳು.

ಕೊಮಾರರಾಮನು ಬೀದಿಯಲ್ಲಿ ಚಂಡಾಡುತಾ ಯಿದ್ದನು. ಕಂಪಿಲಿರಾಯನು ಬೇಟೆಯಾಡುತಾ ಯಿದ್ದ ಸಮಯದಲ್ಲಿ ರತ್ನಾಜಿಯಂಬ ಚಿಕ್ಕ ಹೆಂಡತಿಯು ನೆನಸಿಕೊಂಡು ಬೇಟೆ ಆಡುವದು ಬಿಟ್ಟು, ತನ್ನ ಸ್ತೋಮ ಪರಿವಾರ ಸಹಿತವಾಗಿ ತೆರಳಿ ಬಾಹೊವಾಗ್ಯೆ ಭಟ್ಟರು ಕವೀಶ್ವರರು ಮುಂತಾದವರು ಯೀತನ ಪ್ರಭಾವವನ್ನು ಹೊಗಳುತಾ ಅರಮನೆಯಲ್ಲಿ ಪ್ರವೇಶಾ ಮಾಡುವ ಸಮಯದಲ್ಲಿ, ಮಂತ್ರಿ ಬೈಚಪ್ಪ ಬಹಾದೂರಖಾನಾ ಮತ್ತು ತೆಲಗು ಮನ್ಯೆಯರು ತುಳುವ ಯಕ್ಕಡಿಗೆ ಮನ್ನೆಯರು ಸರ್ವತರಿಗೆ "ನೀವು ಯಿಂಥಾ ಬ್ಯಾಟಿ ಕಂಡಿರ್‍ಯಾ" ಅನಲಾಗಿ ಬೈಚಪ್ಪಾ ಬಹಾದೂರಖಾನಾ ಮುಂತಾದವರು "ಸ್ವಾಮಿ ಚಕ್ರವರ್ತಿಗಳು ಪೂರ್ವದಲ್ಲಿ ಆಡಿದ ಬ್ಯಾಟೆಕಿಂತಾ ತಾವು ಆಡಿದ ಬ್ಯಾಟಿಗೆ ಸಮಾನಯಿಲ್ಲ"ವೆಂದು ಸ್ತೋತ್ರ ಮಾಡಿದರು. ಕಂಪಿಲಿರಾಯರು ಪ್ರಧಾನಿ ಮುಂತಾದವರು "ಬಹು ಆಯಾಸದಿಂದಾ ಯೀದ್ದೀರಿ, ಮನಿಗೆ ಹೋಗರಿ"ಯಂದು ಅಪ್ಪಣೆ ಕೊಟ್ಟು, ಕಂಪಿಲಿರಾಯನು ಹರಿಯಾಳದೇವಿ ಮನಿಗೆ ಬರಲಾಗಿ ಆರತಿಯೆತ್ತಿದರು. ಆ ಸಮಯದಲ್ಲಿ ಕಂಪಲಿರಾಯನ[>ನು] "ಚಿಕ್ಕ ಹೆಂಡತಿ ಬಹು ಪ್ರೇಮಕರವಾಗಿ ಯಿರುವಂತಾ ರತ್ನಾಜಿ ಯೇನು ಕಾರಣ ಬರಲಿಲ್ಲಾ?"ಯಂದು

ಅಲ್ಲಿಂದಾ ರತ್ನಾಜಿ ಯಿರುವಂತಾ ಅರಮನೆಯಲ್ಲಿ ಪ್ರವೇಶ ಮಾಡಿದ. ಬಳಿಕಾ ಅಲ್ಲಿ ರತ್ನಾಜಿ ರೋಧನೆ ಮಾಡುತ "ನನಗೆ ಅಪಕೀರ್ತಿ ಬಂತು"ಯಂದು ಯೇಳುತಾಳೆ. "ನಿನ್ನ ಮಗನು ಕೊಮಾರರಾಯನು ನನ್ನ ಅರಮನೆಯಲ್ಲಿ ಬಂದು ನನ್ನ ಹಿಡಿದು ಸಂಭೋಗ ಮಾಡಬೇಕೆಂದು ಹಿಡಿದು ಜಗ್ಗಾಡಿದನು. ಆ ಸಮಯದಲ್ಲಿ ನಾನು "ನೀ ಯಿಂಥಾ ಬುದ್ಧಿ ಮಾಡಲಾಗದು"ಯಂದು ಹೇಳಿದಲ್ಲಿ ನನ್ನ ಮೈ ಬೆರದು ಮುತ್ತಿನ ಹಾರಗಳ ಕಡಿದು ಹಾಕಿದನು. ಆ ಮುತ್ತುಗಳು ಸಹಾ ಕೆಳಗೆ ಬಿದ್ದು ಯಿದೆ. ನೀವು ಬೇಟೆಗೆ ಹೋದ ಸಮಯದಲ್ಲಿ ಗೊಲ್ಲರನು ಕಾವಲು ಯಿಟ್ಟು ಹೋಗಿತಿರಿ. ಆದದರಿಂದಾ ಯೀ ಗತಿಯಾಯಿತು. ಕೊಮಾರರಾಮ ದುಷ್ಟಬುದ್ಧಿಯನ್ನು ನೆನೆಸಿದನು. ನಾನು ಅಂಗೀಕಾರಾ ಬಡದಂತೆ ಹೋದನು. ಬಳಿಕಾ ನನ್ನ ಬಡದು ಹೊರಟು ಹೋದನು. ನಿನ್ನಂಥಾ ಮಹಾರಾಯನ ಹೊಟ್ಟೆಯಲ್ಲಿ ಯಂಥಾ ಮಗನು ಹುಟ್ಟಿದನು. ಯೀ ಕ್ಷಣದಲ್ಲಿ ಕೊಮಾರರಾಮನ ತಲೆ ಹೋಯಿಸಿದರೆ ವುತ್ತಮ. ಯಿಲ್ಲದೇ ಯಿದ್ದಲ್ಲಿ ನಾನು [ವಿ+]ಷಪ್ರಾಶನಾ ಮಾಡುತ್ತೇನೆ"ಯೆಂದು ಬಹು ಆಲಾಪನೆ ಮಾಡಿದಳು. ಆ ಮಾತುಗಳು ಕಂಪಲಿರಾಯನು ಕೇಳಿ, ತನ್ನ ಪುತ್ರನಾದ ಕೊಮಾರರಾಮನ ಮೇಲೆ ಬಹು ಕ್ರೋಧದಿಂದಾ ತನ್ನ ಪ್ರಧಾನಿಯಾದ ಬೈಚಪ್ಪನ್ನ ಕರಸಿ ಯೇಕಾಂತದಲ್ಲಿ ರತ್ನಾಜಿ ಹೇಳಿದ ವೃತ್ತಾಂತವನ್ನು ಹೇಳಿ, "ನನಗೆ ಅಪಕೀರ್ತಿಯನ್ನು ಬಾಹೊಹಂತ ಕೊಮಾರರಾಮನು ಮಾಡಿದನು. ತನಗೆ ಕಾಮ ಅಧಿಕರಾದರೆ ತನ್ನ ಸ್ತ್ರೀಯಲ್ಲು ಅನುಭವಿಸಬೇಕು, ಮಲತಾಯಿಯಲ್ಲಿ ಅಪೇಕ್ಷಿಸಿದಂತಾ ಆತನ ಶಿರಚ್ಛೇಧನ ಮಾಡಬೇಕು"ಯೆಂದು ಹೇಳಲಾಗಿ, ಪ್ರಧಾನಿ ಆ ಮಾತುಗಳು ಕೇಳಿ ಕಂಪಿಲಿರಾಯಗೆ ವುತ್ತರಾ ಕೊಡುವಂಥಾತನಾದನು.

"ಸ್ವಾಮಿ! ಕೊಮಾರರಾಮನು ಪರನಾರಿ ಸಹೋದರನು. ಯಿಂಥಾ ದುರನಡತೆಗಳು ಯಾ[>ಅ]ವನಿಂದಾ ಆಗತಕ್ಕದಿಲ್ಲಾ"ಯಂದು ಬಹುವಿಧದಿಂದಾ ಸಮಾಧಾನ ಮಾಡಿದಲ್ಲಿ, ಕಂಪಿಲಿರಾಯನು ರತ್ನಾಜಿಯಲ್ಲು ಆಸಕ್ತವಾದ್ದರಿಂದ ಪ್ರಧಾನಿ ಬೈಚಪ್ಪನಾಯಕನ ಅಂತಃಪುರದಲ್ಲಿ ಕರಕೊಂಡು ಹೋಗಿ, ಅಲ್ಲಿ ಯಿರುವಂಥಾ ರತ್ನಾಜಿ ವೃತ್ತಾಂತವನ್ನು ಕಂಡನು. ಕಂಪಲಿರಾಯನು ತೋರಿಸಿ "ಯಿಂಥಾ ಅಕೃತ್ಯ ಮಾಡಿದವಗೆ ಶಿರಚ್ಛೇದನೆ ಮಾಡಬೇಕು. ನೀನು ಆತನ ಪಕ್ಷವೇ ಮಾತನಾಡುತಾ ಯಿದ್ಧೀ. ಯೀ ಕ್ಷಣದಲ್ಲು ಕೊಮಾರರಾಮನ ಶಿರಸ್ಸು ಭೇದಿಸಿ ತಾಹೋದು" ಯಂದು ರತ್ನಾಜಿ ಹೇಳಿ ನೀನು" ಕೊಮಾರರಾಮನ ತಲೆ ಭೇದನಮಾಡಿ ತಾರದೇ ಯಿದ್ದಲ್ಲಿ ನನ್ನನ್ನು ಕೋಮಾರರಾಮನ ಸಂಗಡ ಕಲಿತು ಯೀ ಪ್ರಕಾರ ಮಾಡಿದರಿ ಯಂತಾಣೆ ಬರುತ್ತದೆ" ಅನಲಾಗಿ, ಕಂಪಲಿರಾಯನು ಅದೇ ಪ್ರಕಾರ ಕೋಮಾರರಾಮನ ಶಿರಚ್ಚೇದ ಮಾಡೋ ಬಗ್ಯೆ ಅಪ್ಪಣೆ ಕೊಟ್ಟನು. ಪ್ರಧಾನಿ ಯೆಷ್ಟು ಸಮಾಧಾನ ಮಾಡಿದಾಗ್ಯೂ ಕೇಳಲಿಲ್ಲಾ. ಆದರಿಂದಾ ಪ್ರಧಾನಿ ಕರ್ಣವನ್ನು ಮುಚ್ಚಿಕೊಂಡು "ಯಿ ವರಿಗೆ ಕುಮ್ಮಟದುರ್ಗದ ಪಟ್ಟಣ ಬೊಗಸರಿ" ಯಂದು ಕೊಮಾರರಾಮನಾ ಶಿರಚ್ಚೇದ ಮಾಡೋ ಬಗ್ಗೆ ಕಂಪಲಿರಾಯನ ಕಡೆಯಿಂದಾ ಮೂರು ಅಪ್ಪಣೆ ತೆಗೆದುಕೊಂಡು, "ಮರುದಿನಾ ಕೊಮಾರರಾಮನಾ ಶಿರಚ್ಚೇದ ಮಾಡಿ, ಆತನ ಶಿರಸ್ಸು ತಂದು ಕೊಡೆಂ"ದು ಯೀ ಪ್ರಕಾರ ಅಪ್ಪಣೆ ತೆಗೆದುಕೊಂಡು, ಪ್ರಧಾನಿ ಬೈಚಪ್ಪನು ತನ್ನ ಮನಿಗೆ ಬಂದು, ತನ್ನ ಮನಸ್ಸಿನಲ್ಲಿ "ಕೊಮಾರರಾಮನು ಪರನಾರಿ ಸಹೋದರಾ, ಆತನಿಂದಾ ಯಿಂಥಾ ಅಕೃತ್ಯಾ ನಡೆಯತ್ಕದಿಲ್ಲಾ. ರತ್ನಾಜಿಯಿಂದ ಅನ್ಯಾಯ"ಯೆಂದು ತಿಳಿದು, ಬಹು ವ್ಯಸನದಿಂದ ಮರುದಿನಾ ಪ್ರಧಾನಿ ಬೈಚಪ್ಪ ಕೊಮಾರರಾಮನ ಮನಿಗೆ ಹೋಗಿ, ಯೇಕಾಂತದಲ್ಲಿ ಕೊಮಾರರಾಮಾ, ಆತನ

ತಮ್ಮ ಯನಿಕೊಂಬೊ ಕಂಪಲಿರಾಯನ ದಾಸೀಪುತ್ರನಾದ ಕಳ್ಳ ಬಂಟರಾಮಾ ಯಂಬವನು ಯೀ ಮೂರು ಮಂದಿ ವೊಂದು ಮನಿಯಲ್ಲಿ ಕೂತು, ಪ್ರಧಾನಿ ಕುಮಾರರಾಮನಾ ಕುರಿತು "ನಿನ್ನ ತಲೆ ಹೋಯಿಡು"ಯಂದೆ ಅಪ್ಪಣೆ ಆಗಿಯಿದೆಯಂದು ನಡದ ಸಂಗತಿ ಹೇಳಲಾಗಿ, ಕೊಮಾರರಾಮನು ವುತ್ತರಾ ಕೊಟ್ಟದ್ದು "ತಂದೆ ಅಪ್ಪಣೆ ಆದಲ್ಲಿ ನೀನು ಯೋಚನಾ ಮಾಡುವ ಕೆಲಸವಿಲ್ಲಾ. ಯೀ ಕ್ಷಣವೇ ನನ್ನ ತಲೆ ಕೊಯಿದು ತೆಗದುಕೊಂಡು ಹೋಗೋದು. ನೀನು ಅವಮಾನ ಮಾಡದಂತೆ ತಲೆ ಕೊಯಿದುಕ್ಕೊಂಡು ಹೋದರೆ ನೀನು ಉತ್ತಮ ಪ್ರಧಾನಿ" ಅನಲಾಗಿ ಪ್ರಧಾನಿ ಹೇಳುತಾನೆ. "ನಿನ್ನಿಂದಾ ಅನ್ಯಾಯ ಯಿಲ್ಲದೇ ನಿನ್ನಾ ಕೊಂದಲ್ಲಿ ದೇವರು ನನ್ನ ಮೇಲೆ ಕೋಪಾ ಮಾಡ್ಯಾನು. ನೀನು ಬಹು ಧರ್ಮಿಷ್ಟ, ಪರನಾರಿ ಸಹೋದರ, ಸೂರ್ಯನ ಸಮಾನ ತೇಜವುಳ್ಳವ, ಶೂರನೆನಿಸಿಕೊಂಡು ಯಿದ್ದೀ"ಯಂದು ಬಹುಶೋಕದಿಂದಾ ಪ್ರಲಾಪ ಮಾಡಿ ಕೊಮಾರರಾಮನಾ ಅಪ್ಪಿಕೊಂಡನು.

ಆ ಸಮಯದಲ್ಲಿ ಕೊಮಾರರಾಮನು ತಾನಾ ಮುತ್ತಿನ ಚೆಂಡು ತೆಗದುಕೊಂಡು ಬರೊ ಬಗ್ಗ್ಯೆ ರತ್ನಾಜಿ ಮನಿಗೆ ಹೋಗಿ ಬಂದು, ಅಲ್ಲಿ ನಡದಂತಾ ವೃತ್ತಾಂತವನ್ನು ಸಾಕಲ್ಯ ಹೇಳಿ "ಪ್ರಧಾನಿ ನೀನು ವೆಸನ ಬಡ ಕೆಲಸವಿಲ್ಲಾ. ತಂದೆ ಅಪ್ಪಣೆ ಪ್ರಕಾರ ನನ್ನ ತಲೆ ಕೊಯಿದು ಕೊಂಡು ಹೋಗೋದು" ಯನಲಾಗಿ, ಪ್ರಧಾನನಿ "ಅನ್ಯಾಯದಿಂದ ಕೊಮಾರರಾಮನು ಉತ್ತರಾ ಕೊಟ್ಟದ್ದು "ನನಗೆ ಕಾಲ ಸಮೀಪವಾಯಿತು. ನೀನು ವೆಸನ ಪಡಬೇಡ"ಯಂದು, ತನ್ನ ಕೈಯಲ್ಲಿ ಯಿದ್ದ ಕಠಾರಿಯನ್ನು ಕೊಮಾರರಾಮನು ಪ್ರಧಾನಿ ಕೈಯಲ್ಲಿ ಕೊಟ್ಟು, "ಯೀ ಕ್ಷಣವೇ ನನ್ನ ಶಿರಕಮಲವು ಕೊಯಿದು ಅರಸಗೆ ತೆಗೆದುಕೊಂಡು ಹೋಗಿ ಕೊಡೋದು" ಅನಲಾಗಿ, ಪ್ರಧಾನಿ ತನ್ನ ಮನಸ್ಸಿನಲ್ಲಿ ಯೋಚನೆ ಮಾಡಿದ್ದು ವ"ಕೊಮಾರರಾಮನಾ ವೊಂದು ಸ್ಥಳದಲ್ಲು ಯಿಟ್ಟು, ಯೀತನ ಪ್ರಾಣ ತಪ್ಪಿಸಬೇಕೆಂ"ದು "ಗುಮ್ಮಟದ ಬಳಿಯಾ ಜಟಿಂಗೀಶ್ವರ ಗುಡಿಯ ಬಳಿ, ನೆಲಮಾಳಿಗೆ ಮಾಡಿ ಪ್ರಕಟವಾಗದಂತೆ ಯಿಡಬೇಕು" ಯಂದು ಯೋಚನೆಮಾಡಿ, ಅದೇ ಪ್ರಕಾರ ನೆಲಮಾಳಿಗೆ ಮಾಡಿ, ಅಲ್ಲಿ ಕೊಮಾರರಾಮನ ಯಿನ್ನು ಕೆಲವು ಮಂದೀನಾ ಕುಮಾರರಾಮನ ಸಂಗಡಾ ಅಯಿದು ಮಂದಿನಾ ಕುಮಾರರಾಮನು ಆರುತಿಂಗಳ ಸನೀರು ಸಕಲಸಾಹಿತ್ಯ ಸಹಾ ಯಿಟ್ಟನು. ನೆಲಮಾಳಿಗೆಯಲ್ಲು ಯಿಟ್ಟವರ ವಿವರಾ:

೧. ಕೊಮಾರರಾಮ

೧. ಯೀತನ ಅಣ್ಣ ಕಾಟಣ್ಣ

೧. ಯಿವರ ಕಡೆ ಯಿರುವಂಥಾ ಮುಖ್ಯಸ್ತರಾದ ಶೂರರು:

೧. ಲಿಂಗಾ

೧. ಕೋಳಿಯ ನಾಗ

೧. ಶಿಂಗಯ್ಯ ಮುಮ್ಮಡಿಯಪ್ಪ

೫

ಯೀ ಅಯಿದು ಮಂದೀನಾ ನೆಲಮಾಳಿಗೆಯಲ್ಲಿ ಯಿಟ್ಟು ಬಂದನು. ಯೀ ಸಮಾಚಾರ ಯರಣ್ಡೇ ಅವರಿಗೆ ತಿಳಿಯದು. ತರುವಾಯ ಪ್ರಧಾನಿ ಜೈಚಪ್ಪ ಶರೆಯಲ್ಲಿ ಯಿರುವಂಥಾ ಅಯಿದು ಮಂದಿ ಕಳ್ಳರನಾ ಭಿನ್ನಾಭಿನ್ನ ಮಾಡಿ ತಲೆ ಕೊಯಿದು ಕಂಪಲಿರಾಯನ ಬಳಿಗೆ ತೆಗದುಕೊಂಡೀಗಿ. ತಮ್ಮ ಅಪ್ಪಣೆ ಪ್ರಕಾರ ಕೊಮಾರರಾಮನ ತಲೆ ಆತನ ಮುಖ್ಯವಾದಂಥಾ ಅವರ ನಾಲ್ಕು ಮಂದಿ ಕೊಮಾರರಾಮ ಸಹಾ ಅಯಿದು ಮಂದಿ ತಲೆಯಂದು ಹೇಳಲಾಗಿ, ಆ ವಾಕ್ಯ ರತ್ನಾಜಿಗೆ ಪ್ರಧಾನಿ ತಾನು ತಂದ ತಲೆಗಳು ತೋರಿಸಿ ಅವರ ಹೆಸರುಗಳು ಸಹಾ ಹೇಳುತಾನೆ.

೧. ಯಿದು ಕುಮಾರರಾಮನ ತಲೆ

೧. ಯಿದು ಕಾಟಣ್ಣರಾಯನ ತಲೆ

೧. ಯಿದು ನಾಗಲಿಂಗನ ತಲೆ

೧. ಯಿದು ಕೋಳಿಯ ನಾಗನ ತಲೆ

೧. ಯಿದು ಸಂಗಶಿಂಗನ ತಲೆ

೫

ಅಂತು ಅಯಿದು ತಲೆಯಂದು ಮುದದಿಂದಾ ಕಂಪಿಲಿರಾಯಾ ರತ್ನಾಜಿಗೆ ಸಹಾ ತೋರಿಸಲಾಗಿ, ರತ್ನಾಜಿ ಕೊಮಾರರಾಮನ ತಲೆಕಂಡು ಕಾಲಿಂದ ವೊದ್ದಳು. ಕಂಪಿಲಿರಾಯನು ಪ್ರಧಾನೀನ ಕೇಳಿದ್ದು "ನಾವು ನಿನ್ನ ಕೊಮಾರರಾಮನ ಕೊಲ್ಲಯಂದು ಹೇಳಿದಲ್ಲಿ ಕಡಿಮೆ ನಾಲ್ಕು ಮಂದಿಯೇನು ಕಾರಣ ಕೊಂದಿ?" ಯಂದು ಕೇಳಲಾಗಿ, ಪ್ರಧಾನಿ ಹೇಳಿದ್ದು "ಸ್ವಾಮಿ ನಾನು ಕುಮಾರರಾಮನ ತಲೆ ಕೊಯ್ಯಲಿಕ್ಕೆ ಹೋದಲ್ಲಿ ಆತನ ಪ್ರಾಣಸಮಾನ ಯಿದ್ದವರು ಸದರಿ ಬಂದು ನಾಲ್ಕು ಬಂದಿ ತನಗ ತಾನೇ ತಲೆ ಕೊಯಿದುಕೊಂಡರು" ಅಂದ ತರುವಾಯ, ರತ್ನಾಜಿ "ತಾನು ಮಾಡಿದ ಭಾಷೆ ಆಯಿತೆಂ"ದು ಬಹು ಸಂತೋಷದಿಂದ ಮಲಿನ ವಸ್ತ್ರ ಆಭರಣ ಬಿಟ್ಟು, ವುತ್ತಮವಾದ ವಸ್ತ್ರಾಭರಣ ಅಲಂಕಾರಯುಕ್ತಳಾದಳು. ಕಂಪಲಿರಾಯಗೆ ಮಗಾ ಹೋದನೆಂದು ಪಶ್ಚಾತಾಪವನ್ನು ಹುಟ್ಟಿ "ಯಲೋ ಪ್ರಧಾನಿಯೇ ನಾನು ನಿನಗೆ ಕೊಮಾರರಾಮನ ಕೋಪದಿಂದ ಕೊಲ್ಲಹೇಳಿದರೆ, ನೀನು ಸವಕಾಶ ಮಾಡಿ[>ಡ]ದಂತೆ ತ್ವರೆಮಾಡಿ ಕೊಂದೆ. ನನಗೆ ಅಪಕೀರ್ತಿ ಪ್ರಾಪ್ತವಾಯಿತು. ಕೊಮಾರರಾಮನು ಪ್ರಾಣ ಬಿಡುವಾಗ್ಯೆ ಯೇನು ಹೇಳಿದನು?"ಯೆಂದು ಕೇಳಲಾಗಿ, ಪ್ರಧಾನಿ ಹೇಳುವಂಥವನಾದನು: "ತಮ್ಮ ತಂದೆ ಕಂಪಿಲಿರಾಯನು ಸುಖದಿಂದಾ ರಾಜ್ಯಭಾರ ಮಾಡಿಕೊಂಡು ತನ್ನ ಬಳೀಗೆ ಸಹ ಹರಿಯಾಳದೇವಿಯ ವಾಲೆ ಕುಂಕುಮಕೆ ಅಭಿವೃದ್ಧಿ ಆಗಿ ಯಿರಬೇಕುಯಂದು ದೇವರ ಕುರಿತು ಪ್ರಾರ್ಥನೆ ಮಾಡಿದನು" ಅನಲಾಗಿ, ಅದಕ್ಕೆ ಕಂಪಲಿರಾಯನು ಪುತ್ರ ಹೋದನೆಂದು ಬಹು ಕ್ಲೇಶ ಮಾಡಿದನು. ಅದಕ್ಕೆ ಪ್ರಧಾನಿ "ತಮ್ಮ ಅನುಗ್ರಹ ಯಿದ್ದರೆ ಅನ್ನಾ ಕೊಟ್ಟು ಪಾಲಿಸಿದಲ್ಲಿ ಕೊಮಾರರಾಮನಕ್ಕಿಂತ ಅಧಿಕ ಪರಾಕ್ರಮಿ ಬಂಟರನಾ ತಂದು ಯಿಟ್ಟೇನು" ಯಂದು ಸಮಾಧಾನ ಮಾಡಿದನು. "ಕೊಮಾರರಾಮನು ತೀರಿದನು"ಯಂದು ತಾಯಿ ಹರಿಯಾಳದೇವಿ ಕೇಳಿ ಬಹು ಪ್ರಳಾಪ ಮಾಡಿ, ಭೂಮಿ ಮೇಲೆ ಬಿದ್ದು "ಹೇ ಕೊಮಾರರಾಮಾ, ನೀನು ಬಹು ಪರಾಕ್ರಮಶಾಲಿ, ನಿನ್ನ ಸಮಾನ ಯೀ ಪೃಥ್ವಿಯಲ್ಲಿ ಯಿಲ್ಲಾ ಯನಿಕೊಂಡು, ನಿರರ್ಥಕವಾಗಿ ನಿನ್ನ ತಂದೆ ಕೊಂದ.

ಶತೃಗಳ ಸೈನ್ಯದಲ್ಲು ಪರಾಕ್ರಮದಿಂದ ಪ್ರಾಣ ಕಳೆದಿದ್ದರೆ ನಾನು ವೆಸನ ಪಡಲಾರೆ. ನಿರಪರಾಧದಿಂದಾ ಪ್ರಾಣ ಕಳದಿ. ನಿನ್ನ ತಂದೆ[+ಗೆ] ಸೂರ್‍ಯ ಚಂದ್ರರು ವುಳ್ಳ ಪರಿಯಂತ್ರವು ಅಪಕೀರ್ತಿಪ್ರಾಪ್ತವಾಯಿತು"ಯಂದು ಬಹುವಿಧದಿಂದಾ ಮಗನ ಪರಾಕ್ರಮ ಸೌಂದರ್‍ಯ ವರ್ನಿಸುತಾ ಪ್ರಳಾಪ ಮಾಡುತಾ ಯಿದ್ದಂಥಾವಳಾದಳು.

ಯೀ ಆಯಿದು ಮಂದಿ ಹೋದ ಸಮಾಚಾರ ಕೊಮಾರರಾಮನಾ ಸ್ತ್ರೀ ಮತ್ತು ನಾಲ್ಕು ಮಂದಿ ಸ್ತ್ರೀಗಳು ಪ್ರಳಾಪ ಮಾಡುತಾ ತಮ್ಮಾ ಮಾವನಾದ ಕಂಪಲಿರಾಯನ ಬಳಿಗೆ ಬಂದು, "ಹೇ ಮಾಮಾ ಕಂಪಲಿರಾಯನೇ, ನೀನು ನಮ್ಮ ಪತಿಗಳನಾ ಯಾ ದೇಶಕ್ಕೆ ಕಳುಹಿಸಿದೆ? ಯೆಲ್ಲಿ ಯುದ್ಧ ಪ್ರಸಂಗ ಪ್ರಾಪ್ತವಾಯಿತು? ಯಾವ ದೇಶದಲ್ಲಿ ಜಯಪ್ರದ ಮಾಡೋ ಬಗ್ಯೆ ಬಿಜಯ ಮಾಡೊ ಬಗ್ಗೆ ಕಳೀಸಿದಿ"ಯೆಂದು ಕೇಳಲಾಗಿ, ಕಂಪಲಿರಾಯ ಖಿನ್ನಸ್ತನಾಗಿ ತಲೆಕೆಳಗೆ ಬಗ್ಗಿಸಿಕೊಂಡನು. ಮತ್ತು ಆ ಸ್ತ್ರೀಗಳು ಹೇಳಿ ಬಿಟ್ಟರು: "ನಮ್ಮ ಪತಿಗಳನು ಯುದ್ಧರಂಗದಲ್ಲಿ ಕೊಲ್ಲಿಸಿದರೆ ನಾವು ಯಿಷ್ಟು ಕ್ಲೇಶಾ ಮಾಡಲಾರೆವು. ನಿನ್ನ ಸ್ತ್ರೀ ರತ್ನಾಜಿ ಮಾತಿನ ಮೇಲೆ ಕೊಲ್ಲಿಸಿದಿ. ಅದರಿಂದಾ ನಿನಗೆ ಬಹು[>ಅಪ]ಕೀರ್ತಿಯನ್ನು ಪಡದಿ. ನಿನ್ನ ಸಮಾನು ಯಿಂಥಾ ಕ್ರಿಯ ಮಾಡುವಂಥಾ ಅರಸುಗಳು ನಾವು ಯೀ ವರಿಗೆ ಕೇಳಲಿಲ್ಲ. ಯೀ ಮುಂದಕ್ಕೆ ಶಾಶ್ವತವಾಗಿ ಇರುವಂಥಾ ಕೀರ್ತಿ ಪಡದಿ. ಮುಂದೆ ನಾವು ಅಗ್ನಿ ಪ್ರವೇಶಾ ಮಾಡುತ್ತೇವೆ"ಯಂದು ಅಪ್ಪಣೆ ಕೇಳಿದರು. ಅದಕ್ಕೆ ಕಂಪಲಿರಾಯನು "ನೀವು ಅಗ್ನಿ ಪ್ರವೇಶ ಮಾಡಕೆಲಸವಿಲ್ಲ. ನಿಮಗೆ ಬೇಕಾದ್ದು ರಾಜ್ಯವನ್ನು ಕೊಡುತ್ತೇನೆ. ಅನಲಾಗಿ, ಯೀ ಸ್ತ್ರೀಗಳು ಉತ್ತರಾ ಕೊಟ್ಟರು. "ನಮ್ಮ ಪತಿ ನಷ್ಟವಾಗಿ ಹೋದ ಬಳಿಕಾ ನಮಗೆ ಸಂಪತ್ತು ಯೇನು ಮಾಡಬೇಕು? ಸಕಲ ಸಂಪತ್ತು ನೀವೇ ಅನುಭವಿಸಿ"ಯೆಂದು ಹೇಳಿದ ಬಳಿಕಾ ಕಂಪಲಿರಾಯನು ಪ್ರಧಾನಿ ಮುಖಾಂತ್ರ "ಆ ಸ್ತ್ರೀಗಳನು ಸಮಾಧಾನ ಮಾಡು"ಯಂದು ಅಪ್ಪಣೆ ಕೊಡಲಾಗಿ, ಆ ಸ್ತ್ರೀಗಳನಾ ಕುರಿತು ಹೇಳಿಧಾರೆ "ನೀವು ಆರು ತಿಂಗಳು ನಿಂತ ತರುವಾಯ ನೀವು ಅಗ್ನಿ ಪ್ರವೇಶಾ ಮಾಡೋದು"ಯಂದು ಆರುತಿಂಗಳ ನೇಮಾ ಮಾಡಿಸಿದನು. ಯೀ ಪ್ರಕಾರ ಸಕಲ ಜನರು "ಕಂಪಲಿರಾಯರು ಅನ್ಯಾಯದಿಂದಾ ಮನಗ ಕೊಲಿಸಿದನು"ಯಂದು ಅಪಕೀರ್ತಿ ದೇಶದಲ್ಲಿ ಪ್ರಕಟವಾಯಿತು.

ಯೀ ಕೊಮಾರರಾಮನು ಹೋದನೆಂಬೋ ಸಮಾಚಾರವನ್ನು ದೇಶದಲ್ಲಿ ಪ್ರಖ್ಯಾತಿಯಾಗಿ, ಸುರಿತಾಳನೆಂಬೋ ಅರಸು ತನಗೆ ವುಪದ್ರವ ಕೊಡುವಂಥಾ ಕೊಮಾರರಾಮನು ಹೋದನೆಂದು ಬಹು ಸಂತೋಷದಿಂದಾ ಕುಮ್ಮಟದುರ್ಗ ಸಾಧಿಸಬೇಕೆಂದು, ತನ್ನ ಕಡೆಯಿದ್ದಂತಾ ಸೈನ್ಯವನ್ನು ಸಿದ್ಧ ಮಾಡಿಕೊಂಡು, ತನಗೆ ಸಹಾಯವಾಗಿ ಯಿರೋ ಬಗ್ಗೆ ನೇಮಿ ಅಯಿವ[+ರ]ನಾ ಕರಹಿಸಿ, ಅವರ ಕಡೆಯಲಿರುವ ದಳವನ್ನು ತರಹಿಸಿ, ಅವರಿಗೆ ಬೇಕಾದ್ದು ರೊಕ್ಕವನ್ನು ಕೊಟ್ಟು ಸರ್ವಸಾಹಿತ್ಯ ಮಾಡಿಸಿ, ಯುದ್ಧ ಸನ್ನಾಗಿ ವುದ್ಯುಕ್ತನಾಗಿ ದಂಡಿನಲ್ಲಿ ಯಿರುವಂಥಾ ಅವರಿಗೆ ಅವರವರ ಯೋಗ್ಯತಾನುಸಾರ ಬಹುಮಾನ ಮಾಡಿ, ಕಮ್ಮಟಕ್ಕೆ ಬರೋ ಬಗ್ಗೆ ಸ್ತೋಮಸಹಿತವಾಗಿ ಹೊರಟರು. ಮಜಲಿ, ದರ ಮಜಲಿ ಹೊರಟು ಅಲ್ಲಿಂದಾ ವೊಂದು ಮಜಲಿ ದೂರ ಯಿರಲಾಗಿ ಸ್ತೋಮಲ್ಲು ಯಿರುವಂಥಾ ಜನರಿಗೆ "ನಾಳೆ ದಿವಸಾ ಪ್ರಯಾಣ ದೂರಾ ಯಿಧೆ. ಆದದರಿಂದಾ ನೀವು ಭಕ್ಕರಿ ಸಾರಾಯಿ ಗಂಜಾ ಮುಂತಾದ ಲಹ[>ಷ್ಕ]ರಿ ಸಾಮಾನು ತೆಗದುಕ್ಕೊಂಡು ಭಕ್ಕರಿತಿ [>ಚಕ್ಕಡಿ]ಗಳಾ

ತುಂಬಿಕೊಂಡು ಆಯತವಾಗಿ ಹೇರಿ ಅಲ್ಲಿಂದಾ 'ದಂಡ ಮಾಧವಾ'ಯಂದು ಗರ್ಜನೆ ಮಾಡುತಾ, ರಣಭೇರಿ, ಚಿನಗಾಳೆ, ಗಿಡಿಬಿಡಿ, ಧಪಡೆ, ನಿಸ್ಸಾಳುವು, ತಮ್ಮಟಾ, ನಾಗಸರಾ, ಭೂರುಗಾ, ಕೊಂಬುಕೊರಳ ತಪ್ಪಚೆ ಮುಂತಾದ ವಾದ್ಯಗಳಿಂದಾ ಪಯಣಾ ಹೊರಡಿರಿ"ಯಂದು ಡಂಗುರ ಸಾರಿದನು. ಆವಾಗ್ಯ ಸುರತಾಳಿನ ದಂಡು, ನೇಮಿ ತುರಕರ ದಂಡು ಸಹಾ ಬಹು ವಾದ್ಯಗಳಿಂದಾ ಭೂಕಂಪವಾಗೋ ಹಾಗೆ ಚಿಕ್ಕ[>ಕ್ಕೋ]ಡಿ ಪಟ್ಟಣಕ್ಕೆ ಬಂದು ಸೇರಿದರು. ಅಲ್ಲಿಂದಾ ಮಜಲಿ ಮಾಡಿ ಹೊರಡೊವಾಗ್ಯೆ ಸೈನ್ಯ ನಡುವದರಿಂದಾ ದೂಳಿ ಅಂಬರಕೆ ಮುಚ್ಚಿಕೊಂಡು, ದಿಕ್ಕುಗಳು ತಿಳಿದಂತೆ ಬಹಳ ಧೂಳಿ ತುಂಬಿತು. ನೇಮಿಖಾನನ ಸಂಗಡ ೧೦ ಸಾವಿರ ಆನೆಗಳು ಅಂಬಾರಿ ಸಹಾ ಸಮುದ್ರ ಉಕ್ಕೇರಿ ಬಂದ ವುಪಾಯದಲಿ ಮಿರಜಿಗೆ ಬಂದರು. ಮಿರಿಜಿ ಪಟ್ಟಣದಿಂದಾ ಪ್ರಜಯಪಟ್ಟಣಕ್ಕೆ ಬರುವಾಗ ಅಡ್ಡಿ[>ಡ್ಡ]ಅಗಲಾ ಆರುಗಾವುದಾ, ವುದ್ದಾ ಹನ್ನೆರಡು ಗಾವುದಾ-ಯೀ ಪ್ರಕಾರಾ ದಂಡು ನಡಿಯೋದು. ಅಲ್ಲಿಂದಾ ವಡ್ಡು ದರೋಜಿಗೆ, ಅಗಾಡಿ ಯಿರುವ ಮನ್ನೆಯರು ಬಂದರು. ನೇಮಿ ಸಂಗಡ ಬಂದವರು ಖಡ್ಗಗಳು ಚಮಕಾಯಿಸುತಾ ನಿಂತರು. ಆ ದಂಡು ನಡುವ ಧೂಳಿಯಿಂದಾ ಸೂರ್ಯರಸ್ಮಿ ಕಾಣದೇ ಯಿತ್ತು. ಯಿವರು ಬಾಹೊವಾಗ್ಯೆ ಅಯಿದು ಪಯಣ ದಾರಿ ಯರಡು ಪಯಣವಾಗಿ ಬರುತ್ತಾ ಯಿದ್ದರು. ಆವಾಗ್ಯೆ ನೇಮಿ ತನ್ನ ಕಡೆಯಿರುವಂಥಾ ದಂಡು ಗಣಿತೆ ಮಾಡಿದನು.

ಆ ಸಮಯದಲ್ಲಿ ತನ್ನ ಬಳಿಯಿದ್ದ ಕರಣಿಕರು ನೂರೊಂದು ೧೦೧ ಮಂದಿ ಶಾಸ್ತ್ರಿರನಾ ಕರಹಿಸಿ, "ಮುಂದೆ ಯುದ್ಧ ಮಾಡಿದಲ್ಲಿ ಜಯಾ ಅಪಜಯಾ ಹ್ಯಾಗೆ ಯಿದ್ದೀತು?" ಅನಲಾಗಿ, ಅವರು ಜ್ಯೋತಿಷ್ಯಶಾಸ್ತ್ರವನ್ನು ನೋಡಿ, ನಿನಗೆ ಶಕುನ ನೋಡಿ "ನಿನಗೆ ಅಪಜಯಾ ಆಗುತಾ ಯಿದೆ" ಅನಲಾಗಿ ಮತ್ತು ಸೈನ್ಯದಲ್ಲು ಯಿರುವವರು ಕೋಳಿ ಹುಂಜ ಯರಡು ತೆಗದು ವಂದು ನೇಮಿ ದಂಡಿನ ಕಡೇದು, ವೊಂದು ಕುಮಾರರಾಮನ ಕಡೇಯದು. ಆ ಯರಡು ಕೋಳಿಗಳಿಗೆ ಕಾಳಗಕ್ಕೆ ಬಿಟ್ಟರು. ಕೊಮಾರರಾಮನ ಕೋಳಿ ನೇಮಿಯ ಕೇಳಿ ಯನಿಸಿಕೊಂಡದಕ್ಕೆ ಕೊಂದಿತು. ಯಿದೇ ಪ್ರಕಾರ ಯರಡು ಟಗರು ತರಿಸಿ, ಅವನ್ನೂ ಯಿದೇ ಪ್ರಕಾರ ಕೊಮಾರರಾಮನ ಕಡೆಯ ಟಗರಿಗೆ ಬಣ್ಣದ ಹೂವ್ವಿನ ದಂಡೆ ಹಾಕಿ, ನೇಮಿಯ ಟಗರಿಗೆ ಮುತ್ತಿ ದಂಡೆ. ಅದೇ ಪ್ರಕಾರ ಮುತ್ತಿನ ಸತ್ತಿಗೆ ಯಂದರೆ ಕೊಡೆ, ಕೊಮಾರರಾಮನು ಬಡವನಂದು ಆ ಟಗರಿಗೆ ಕೊಡೆಯ ಸತ್ತಿಗೆ ಹಿಡಿಸಿದರು. ತರುವಾಯ ಆ ಯರಡು ಟಗರ ಕಿವಿಯಲ್ಲಿ ಯಿಬ್ಬರು, ವೊಂದು ಟಗರ ಕಿವಿಯಲ್ಲಿ 'ಕೊಮಾರರಾಮಾ'ಯಂದು, ಯರಡನೇ ಟಗರು ಕಿವಿಯಲ್ಲಿ 'ನೇಮಿ'ಯಂದು ಆಗಾಧ ಶಬ್ದವನ್ನು ಮಾಡಿ ಕಾಳಗಕ್ಕೆ ಬಿಟ್ಟರು. ಆ ಟಗರುಗಳು ಮೂರು ಸಾರಿ ಪೆಟ್ಟು ಕೊಟ್ಟು ನಾಲ್ಕನೇ ಸರತೀಗೆ ಕೊಮಾರರಾಮಾ ಯನಿಸಿಕೊಂಡಂಥಾ ಟಗರು ನೇಮಿಯನಿಸಿಕೊಂಡ ಟಗರಿನಾ ಸಂಹಾರ ಮಾಡಿತು. ಮತ್ತು ನೇಮಿ ತನ್ನ ದಂಡಿನಲ್ಲಿ ಯಿರುವಂಥಾ ಒಂದು ಬಲವಾದ ಹುಂಜ ತಂದು ಅದಕ್ಕೆ ಬಲವಾದ ಕವಳಾ ತಿನಿಸಿ ಸಾನೆ[>ಣೆ] ಮಾಡಿ ಕತ್ತಿಯನ್ನು ಕಟ್ಟಿ ನೇಮಿ ಹೆಸರು ಅದಕ್ಕೆ ಯಿಟ್ಟರು. ವೊಂದು ಬಲವಾದ ಕೋಳಿ ತಂದು ಅದಕ್ಕೆ ವೊಂದು ಮೋಟು ಕತ್ತಿಯನ್ನು ಕಟ್ಟಿ ಅದರ ಹೆಸರು 'ಕೊಮಾರರಾಮ'ಯೆಂದಿಟ್ಟು ವುಭಯ ಕೋಳಿಗಳಿಗೆ ಕಾಳಗ ಮಾಡಿಸಲಾಗಿ, ರಾಮನ ಹೆಸರಾದ ಕೋಳಿ ಪೆಟ್ಟುಗಳ ತಪ್ಪಿಸಿಕೊಂಡು ನೇಮಿಯಂದು ಹೆಸರಾದ ಕೋಳೀನಾ ಸಂಹಾರ ಮಾಡಿತು. ಆ ಸಮಯದಲ್ಲು ಪಂಡಿತರು, "ನಾವು ಹೇಳಿದಕೆ ದೃಷ್ಟಾಂತ ಬ್ರಹ್ಮದೇವರ

ಕೃಪಾ ಕೊಮಾರರಾಮನ ಮೇಲೆ ವುಂಟು"ಯನಲಾಗಿ, ನೇಮಿ ಹಿಂದಕೆ ಹೋಗಬೇಕೆಂದರೆ "ನಮ್ಮನು ಸುರತ್ರಾಳನು ಸಂಹಾರ ಮಾಡತಾನ. ಅದರಿಂದಾ ಯುದ್ಧಾ ಮಾಡಬೇಕೆಂ"ದು ಸಿದ್ಧಾಂತ ಮಾಡಿದರು.

ಅಲ್ಲಿಂದಾ ನೇಮಿ ದಂಡು ಮಲ್ಲುಬುದ್ಧಿ [>ಮಲ್ಲಾಬಾದಿ]ಯಂಬೋ ಸ್ಥಳಕ್ಕೆ ಬರೋವಾಗ ತೊರಗಲ್ಲು ಬಾದಾಮಿಗೆ ಅರ್ಧದಂಡು ಬಂತು. ಯೀ ನೇಮಿ ದಂಡು ಬಂದ ರಭಸಕ್ಕೆ ಕೊಮಾರರಾಮನ ದೇಶ ಯಾವತು ವಲಶೆ ತೆಗೀತು. ದೊಡ್ಡ ಗ್ರಾಮಗಳು ಸಹಾ ಹಾಳಾಯಿತು. ಕೆಲಮಂದಿ ಬ್ಯಾಡರ ನಾಯಕರು ನಾಯಿ, ಬಡಿಕೋಲು, ತಲೆ ಮೇಲೆ ಗಂಟು, ಕೈಯಲ್ಲಿ ಡ್ಯಾಗಿ ತೆಗದುಕ್ಕೊಂಡು ಹೋದರು. ಕೈಯಲ್ಲಿ ಹಕ್ಕಿಪಂಜರ ಸಹಾ ತೆಗದುಕ್ಕೊಂಡು ಹೋದರು. ಬಲೆಗಳು ಸಹ ಅವರವರು ಬೇಟೆಗಾರ್‍ರು ಅವರ ಸಾಮಾನು ತೆಗೆದುಕ್ಕೊಂಡು ಹೋದರು.[೧] ಪೇಟೆಗಾರರು ತನ್ನ ತನ್ನ ಜಾತಿಗಳು ಸಹಾ ತೆಗೆದುಕ್ಕೊಂಡು ಹೋದರು. ಹಾಂಗೆ ಕುರುಬರು ತನ್ನ ಕುರಿಯ ಹಿಂಡುಗಳು ತರಿಸಿ, ಅದರ ಮರಿಗಳು ಹೆಗಲಲ್ಲಿ ಹಾಕಿಕೊಂಡು ತನ್ನ ಹೆಂಡರನಾ ಕೈಹಿಡಕೊಂಡು ಕುರುಬರು ಗುಳಾ ನಡದು ಹೋದರು. ಅಗಸರು ತನ್ನ ಹೊದಿಕೆಗಳು ಕತ್ತಿಗಳ ಮೇಲೆ ಹಾಕಿಕೊಂಡು ಅಗಸರು ಹೊರಟರು. ಬ್ರಾಹ್ಮರು ತಮ್ಮಾ ವೋದುವ ಕಡಿತಾ ಪೆಟ್ಟಿಗೆ ಅವರ ಹೆಂಡರು ಮಕ್ಕಳು ಸಹಾ ಬ್ರಾಹ್ಮಣರು ಗುಳ್ಯಾ ಹೊರಟರು. ಯಿದೇ ಪ್ರಕಾರ ಶಟ್ಟಿಗರು ಹೊರಟರು. ಕುಂಬಾರು, ತೆಲಗರು, ಕೋಟೆಗಾರು, ನಾವಿದರು ಹೊರಟರು. ಹಳೆಕಾರು ಹೊರಟರು, ಕೊಮಟಿಗರು, ಗಾಣೀಗರು, ಚಿಂಪಿಗರು, ಬ್ರಾಹ್ಮರು ವೈಶಾಧಿಗಳು ಮುಂತಾದವರು ಹೊರಟರು.

ಇದೇ ಪ್ರಕಾರ ನೇಮಿದಂಡಿಗೆ ತಾಳಲಾರದೆ ಅರಸುಗಳು ಹೊರಟರು. ಹೊಲೇರು ಹೊರಟರು. ಮಾದಿಗರು ತನ್ನ ಕುಲದ ತೊಗಲು ಮೊರಾ ಮುಂತಾದ್ದು ತೆಗದುಕ್ಕೊಂಡು ಹೋದರು. ವಕ್ಕಲಿಗರು ಕೊರವರು ಹಟ್ಟಿಗಾರರು ನಾನಾ ಜಾತಿಯವರು ಹೊರಟರು. ಸದರಿ ಬರದವರು ವಲಶೆ ತೆಗದು ಕುಮ್ಮಟದುರ್ಗಕ್ಕೆ ಬಂದರು.

ಯೀ ವಲಸೆ ಜನರನಾ ನೇಮಿ ಕಡೆ ರಾವತರು ಸುಲಿದಾಗ, ಬ್ಯಾಡರು ಕೆಲವು ಮಂದಿ ವಲಸೆ ಸಂಗಡ ಯಿದ್ದವರು ಕಠಾರಿಯಿಂದಾ ಯಿರದವರು. ಉತ್ತಮವಾದ ಶೀಮೆ ಕಡೆ ಕುದುರಿಗಳು ತಲೆ ವುರುಳಿ ಬಿದ್ದವು. ಅದೇ ಪ್ರಕಾರಾ ಜನರು ಸಹಾ ಮೃತವಾದರು. ತರುವಾಯಾ ನೇಮಿ ಅವರ ಕಡೆಯಿಂದಾ ಭಟ್ಟರು ನೇಮಿ ಅಪ್ಪಣೆ ಪ್ರಕಾರ ಕಂಪಲಿರಾಯನ ಬಳಿಗೆ ಕಮ್ಮಟದುರ್ಗಕ್ಕೆ ಬಂದು "ನೀವು ನೇಮಿ ಸಂಗಡ ಯುದ್ಧಮಾಡಿ ಜಯಸಲಾರರಿ. ನಮ್ಮ ಕಡೆಯಿಂದ ಬಾಹದರಖಾನನೆಂಬವನು ನ[>ನಿ]ಮ್ಮಲ್ಲಿ ಬಂದು ಶೇರಿದ್ದಾನೆ. ಆತನ್ನ ನಮ್ಮ ವಶಕ್ಕೆ ಕೊಟ್ಟು ಕೆಲವು ರೊಕ್ಕವನ್ನು ಕೊಟ್ಟರೆ ಸಮಾಧಾನವಾಗಿ ಹೋಗುವದು. ಯಿಲ್ಲದೇ ಯಿದ್ದಲ್ಲಿ ಯುದ್ಧಾ ಮಾಡುತ್ತೇವೆ" ಅನಲಾಗಿ, ಕಂಪಲಿರಾಯನ ಕಡೆಯಿದ್ದವರು "ಅದೇ ಪ್ರಕಾರಾ ಮಾಡು" ಅನಲಾಗಿ, ಕಂಪಲಿರಾಯನು "ನನಗೆ ಮೊರೆಹೊಕ್ಕು ಯಿರುವಂಥಾ ಆತನ ಕೊಡೊದಿಲ್ಲಾ" ಯಂದು ಪಟ್ಟಣದಲ್ಲಿ ಕಾಳಾ ಹಿಡಿಯಿಸಿದನು. ಆವಾಗ್ಯೆ ಮತ್ತು ಕಂಪಲಿರಾಯಗೆ ಅವರ ಕಡೆ ಯಿದ್ದವರು ಹೇಳುತಾರೆ: "ನೇಮಿದಂಡು ಬೆಟ್ಟ

+ ಬೇಟೆಗಾರ್‍ರು ಅವರ ಸಾಮಾನು ತೆಗದುಕ್ಕೊಂಡು ಹೋದರು. (ಮೂ)

ಸಮಾನವಾಗಿ ಯಿಥೆ. ಅವರ ಸಂಗಡಾ ಜಯಿಸಲಾರೆವು. ಆದ್ದರಿಂದ ಖಾನನ ಕೊಡು" ಅನಲಾಗಿ ಕಂಪಲಿರಾಯನು ಕೇಳದೇ ಹೋದರು. ಮತ್ತು ಕಂಪಲಿರಾಯರು ನೇಮಿಗೆ ಹೇಳಿ ಕಳಿಸಿದ್ದು: "ನಿಮ್ಮ ಕಡೆಗೆ ಸಾವಿರ ಆನೆ ಯಿದ್ದರೂ ಸಿಂಹದ ಮುಂದೆ ಏನು ಮಾಡತಕ್ಕದ್ದು?" ಅಂದು ನೇಮಿ ಕಡೆ ಬಂದ ಭಟ್ಟರಿಗೆ ಉಡುಗೊರೆ ಕೊಟ್ಟು ಹೇಳಿ ಕಳುಹಿಸಿದರು.

ಆ ಭಟ್ಟರು ಕುದುರೆಗಳು ಯೇರಿಕೊಂಡು ನೇಮಿ ಕಡೆ ದಂಡಿಗೆ ಹೋಗಿ ನೇಮಿ ಸಂಗಡ ಹೇಳಿದರು ಮತ್ತು ನೇಮಿ ಅವರು ತನ್ನ ಸೈನ್ಯವನ್ನು ಶಿದ್ಧಾಮಾಡಿ ಯುದ್ಧಕ್ಕೆ ಹೊರಟರು. ಆ ಸಮಯದಲ್ಲಿ ಕುಮ್ಮಟದುರ್ಗದ ಮೇಲೆ ಯಿರುವ ಜನರು, ಪಟ್ಟಣದಲ್ಲಿ ಯಿರುವ ಜನರು ಭಯಭೀತಸ್ತರಾಗಿ ಯಿದ್ದರು. ಕಂಪಲಿರಾಯಗೆ ಹೇಳಿದರು. ಕಂಪಲಿರಾಯನು ತನ್ನ ಸ್ತೋಮ ಸಹಿತವಾಗಿ ಯುದ್ಧಕ್ಕೆ ಹೊರಗೆ ಹೊರಟರು. ಆ ಸಮಯದಲ್ಲಿ ಪಟ್ಟಣದಲ್ಲಿ ಯಿರುವಂಥಾ ಜನರು ತಾವರೆಯೆಲಿವಳಗೆ ನೀರು ಆಡುವ ಪ್ರಕಾರ ಆಡುತಾ ಯಿದ್ದರು. ಯಿದು ಕಂಪಲಿರಾಯನು ಕಂಡು "ತನ್ನ ಮಗನಾದ ಕೊಮಾರರಾಮನಾ ಕೊಲ್ಲಿಶಿದೆ, ಆತ ಯಿದ್ದರೆ ಯೀ ಪ್ರಕಾರ ವುಪದ್ರವಾಗುತ್ತಿರಲಿಲ್ಲ"ಯಂದು ಬಹುಕ್ಲೇಶದಿಂದ ಪ್ರಧಾನಿ ಬೈಚಪ್ಪನಾ ಕುರಿತು ಹೇಳಿದನು. ಆವಾಗ್ಗೆ ಪ್ರಧಾನಿ ಹೇಳುತಾನೆ "ಯೀ ಸಮಯದಲ್ಲಿ ವೆಸನ ಬಡುವಂತಾದ್ದು ಪ್ರಯೋಜನವಿಲ್ಲ. ಪಟ್ಟಣವನ್ನು ಶೃಂಗಾರ ಮಾಡಿ ಯುದ್ಧದಲ್ಲಿ ಅಷ್ಟದಿಕ್ಕಿನ ರಾಯರು ಮೆಚ್ಚುವಂತೆ ಯುದ್ಧಾ ಮಾಡಬೇಕು. ಧೈರ್ಯ ಬಿಡಬೇಡಾ. ಕೋಟೆ ಕೊತ್ತಳೆಗಳು ಹುಲಿಮುಖಾ ಮುಂತಾದ ಅನವು ಮಾಡಿಸಿ, ಅಲೆಲ್ಲ ಜನರಾ ಯಿಟ್ಟು ಯುದ್ಧ ಸಂಗ್ರಹಮಾಡಿ, ನೇಮಿ ದಂಡು ಮುರಿವಂತೆ ಮಾಡಬೇಕು"ಯಂದು ಧೈರ್ಯ ಕೊಟ್ಟನು. "ರಕ್ಕರಣಬಲ್ಲಾಯಂಬೊ ಕೊತ್ತಳಕ್ಕೆ ಕೋಣವ ಬಲಿಕೊಟ್ಟು ಚೋರಗಿಡಿಯಂಬೊ ರಣಭೂತಗಳನ್ನು ಯಿಕ್ಕಿಸು" ಯಂದನು. ಬಂದ ಶತೃವಿನ ದಂಡು ಕಂಡು ಕಂಪಲಿರಾಯನು ತನ್ನ ಮಗನಾದ ಕೊಮಾರರಾಮನ ನೆನಿಸಿಕ್ಕೊಂಡು ಪ್ರಳಾಪ ಮಾಡಿ, ಚಾವಡಿಯಲ್ಲಿ ಕುಳಿತನು. "ಯಂದು ತುರುಕರ ದಂಡು ಸಂಹಾರಮಾಡೇನು" ಯಂದು ಯೋಚನೆ ಮಾಡಿ, "ಯಿಂದಿನ ರಾತ್ರಿಯಲ್ಲಿ ಪರದಳ ಮೇಲೆ ಹೋಗಬೇಕು" ಯಂದು ತನ ಕಡೆ ಮಂದಿನಾ ಕರಸಿ ಹೇಳಿದನು. ಅರ್ಧರಾತ್ರಿ ಸಮಯದಲ್ಲಿ ಚೋರಖಿಂಡಿಯಿಂದಾ ಕಂಪಲಿರಾಯನ ಕಡೆ ಮುಖ್ಯಸ್ಥರು ಶೂರರು ನೇಮಿದಂಡಿನ ಮೇಲೆ ಬಿದ್ದು ರಣರಂಗವನ್ನು ಮಾಡಿ ನೂರು ಕುದುರೆ ಹಿಡಿಕೊಂಡು ಬಂದರು. ನೇಮಿ ಕಡೆ ಅವರು ಕೆಲವು ಮಂದಿ ಯಿಂದು ಯಿರುವ ದಂಡಿನಲ್ಲಿ ಶೇರಿದರು. ನೇಮಿದಂಡಿನಲ್ಲಿ ರಾತ್ರಿ ಸಮಯದಲ್ಲಿ ಅವರೊಳಗೆ ಅವರ ಯಿರದಾಡಿ ಬಹು ಜನ ನಷ್ಟವಾದರು. ಅವರ ದಂಡಿನಲ್ಲಿ ಗಡಬಡ ಬಿದ್ದು ಸಾಮಾನು ಮುಂತಾದ್ದು ಕಳಕೊಂಡರು. ಮತ್ತು ನೇಮಿ ಕಡೆ ಅವರು ವೊಂದು ಗಾವುದಾ ಬೆಳಗಾಗೊ ಹೊತ್ತಿಗೆ ಹೋಗಿ, ಅಲ್ಲಿ ತಮ್ಮ ಕಡೆ ಯಿವ[>ದ]ಂಥಾ ಹಳವ[>ಬ]ರಾದ ಮುಖ್ಯಸ್ಥರಾದ ಶೂರರನಾ ಕರಿಸಿ "ರಾತ್ರಿ ಆದ ಅನರ್ಥಕ್ಕೆ ಯೇನು ವುಪಾಯ?" ಅನಲಾಗಿ, ಅವರು "ಮತ್ತು ಯುದ್ಧಾ ಮಾಡಬೇಕು" ಅಂದು, ಸೈನ್ಯ ಸೇರಿಸಿ ಯುದ್ಧಕ್ಕೆ ಸನ್ನಾಹಮಾಡಿ ನಡದು ಬಂದರು. ಯಿನ್ನು ನೇಮಿ ಅವರು ಯಂಬೋದು : "ಕುಮ್ಮಟ ದುರ್ಗದವರಿಗೆ ಹಬ್ಬವಾಯಿತು ಯಂದು ನಾವುನ್ನು ರಾತ್ರಿ ಸಮಯದಲ್ಲಿ ಆನಿಮುಖ ದೊಡ್ಡ ಕನ್ನಡಿಗಳು ಕಟ್ಟಿ ಕಂಪಲಿರಾಯನ ಕಡೆ ದಂಡು ಕಾಣಬರಬೇಕೆಂ"ದು ಕನ್ನಿ[>ಕನ್ನಡಿ] ಕಟ್ಟಿದರು. ನೇಮಿದಂಡು ಬಾಹೊ ಸಮಯದಲ್ಲಿ ಮುಖ್ಯವಾದ ಸರದಾರ್‍ರು ೧೨೦೦೦ ಶೂರರು ಹೊರಟರು. ಕುದುರಿ ಗಜ ಪಾಯದಳದ

ಸಮೇತ ನಾಲ್ಕು ತುಕಡಿ ಮಾಡಿ ಕಳುಹಿಸಿದನು. ಮತ್ತು ಲಕ್ಷೋಪಲಕ್ಷ ದಂಡ ಕಳುಹಿಸಿ ಕುಮ್ಮಟ ಪಟ್ಟಣಕ್ಕೆ ಹೊರಗೆ ಯಿರುವಂಥಾ ವುತ್ತಮವಾದ ಚಿನ್ನದ ಕಳಸಗಳು ಮುತ್ತಿನ ಗುಡಿ ಹಸರು ಗುಡಿ ಮುಂತಾದ ಗುಡಿಗಳು ನೇಮಿ ಅವರು ಆಳಿಸಿದರು. ನೇಮಿ ಅವರು ಯಿದ ಕಂಡು ಆಶ್ಚರ್ಯ ಬಟ್ಟು ಚಂದ್ರಕಳೆ ಪ್ರಕಾರ ಯಿದ್ದದು ಸ್ಥಳಗಳು ಕೆಡಸಿದರು.

ನೇಮಿ ಕಡೆ ಅವರ ಯೀ ಪ್ರಕಾರಾ ವುಪದ್ರವ ಕೊಡಲಾಗಿ ಪಟ್ಟಣದಲ್ಲಿ ಯಿರುವಂಥಾ ಜನರು ತತ್ತಳಿಸಿದರು. ಬುಧಿಬುಧಿಯನಾಯಕ ಮೊದಲಾದವರು ಅಂದರು. ಆ ಸಮಯದಲ್ಲಿ ಕಂಪಲಿರಾಯನು "ತನ್ನ ಮಗ ಸತ್ತ ದುಃಖದಿಂದಾ ಯೀ ದುಃಖ ಹೆಚ್ಚಾಯಿತು." ದುಃಖವನ್ನು ಹೊಂದಿದನು ಮತ್ತು ಕಂಪಲಿರಾಯನು ಹೇಳುತಾನೆ: "ನಾನು ದುರ್ಬುದ್ಧಿ ರತ್ನಾಜಿ ಮಾತು ಕೇಳಿ ನನ್ನ ಮಗನಾದ ಕೊಮಾರರಾಮನಾ ಕೊಲ್ಲಿಸಿದೆ. ಅದರಿಂದಾ ದೇಶದಲ್ಲಿ ಯಿರುವಂಥಾ ಅರಸುಗಳ ವಳಗೆ ಯಿರು ಅವರು ಯಾವತ್ತು ನಗಿಯೋರು. ನಾನು ಹುಟ್ಟಿದಾಗ್ಯೆ ಮೃತವನ್ನು ಹೊಂದಿ ಯಿದ್ದರೆ ಯೀ ಅಪಕೀರ್ತಿ ಪಾಲಾಗೆನು. ನನಗೆ ಅಪಕೀರ್ತಿಗೆ ರತ್ನಾಜಿ ಮೂಲವಾದಳು" ಯಂದು ಬಹು ಚಿಂತಾಕ್ರಾಂತನಾಗಿ ಯಿರಲಾಗಿ, ಯೀ ಮಾತುಗಳು ಬೈಚಪ್ಪನು ಕೇಳಿ ಕಂಪಲಿರಾಯನ ಕುರಿತು ಹೇಳುತ್ತಾನೆ: "ನೀನು ರತ್ನಾಜಿ ನಿಮಿತ್ಯವಾಗಿ ಕೊಮಾರರಾಮನಾ ಕೊಲ್ಲಿಸಿದಿ. ನಾನು ಅನೇಕ ವಿಧದಿಂದಾ ಹೇಳಿದಲ್ಲಿ ಕೇಳದೇ ರತ್ನಾಜಿಗೆ ಸಮಾದಾನ ಪ್ರಯುಕ್ತ ಮಾಡಿಸಿದಿರಿ. ಯೀ ನೇಮಿ ಯುದ್ಧರಂಗಕ್ಕೆ ರತ್ನಾಜಿ ಕೈಯ್ಯ ಖಡ್ಗವನ್ನು ಕೊಡಹಿಸಿ ಯುದ್ಧಕ್ಕೆ ಕಳುಹಿ ನೋಡಿ" ಅನಲಾಗಿ, ಕಂಪಲಿರಾಯನು ಬಹು ಕ್ಲೇಶಬಿ[>ಬ]ಟ್ಟು ಯೀ ಪ್ರಧಾನಿ ಮಾತುಗಳು ಕೇಳಿ "ನಾನು ಮಾಡಿದ ದುರ್ಬುದ್ಧಿ ನನಗೆ ಅಶುಭವಾಯಿತು. ಮತ್ತಂ ನೀನು ಆ ಪ್ರಸ್ತಾಪಾ ಸಾಕು ಮಾಡು. ನನ ಮುಕ್ಕಿಗೆ [>ಮೂಗಿಗೆ] ಸುಣ್ಣ ಹತ್ತಿತು"ಯಂದು "ಲೋಕಪತಿಯಾದ ಕೊಮಾರರಾಮನಾ ಕೊಲ್ಲಿಸಿದ್ದೆ ನನ್ನ ತಪ್ಪು, ನನಗೆ ಕೇಡಾಯಿತು. ಯೀಗ ನೇಮಿನ ದಂಡಿಗೆ ನಾನು ಅನ್ನಿನು[>ನ] ತುತ್ತೋಪಾಯದಲ್ಲಿ ವಾದ[>ದೆ]ನು." "ದಶರಥರಾಯನು ಕೈಕೇ ಮಾತು ಕೇಳಿ ಶ್ರೀರಾಮನಾ ವನವಾಸಕ್ಕೆ ಕಳುಹಿಸಿದನು. ನೀನು ಅದೇ ಪ್ರಕಾರ ರತ್ನಾಜಿಯಂಬೊ ಚಿಕ್ಕ ಹೆಂಡತಿ ಮಾತು ಕೇಳಿ ನಿನ್ನ ಮಗನಾದ ಕೊಮಾರರಾಮನ ಕೊಲ್ಲಿಸಿದಿ"ಯಂದನು. ಮತ್ತು ಕಂಪಲಿರಾಯನ ಕಡೆ ಅವರು ಮುಖ್ಯಸ್ಥರು ಬಂದು ಯಿದೇ ಪ್ರಕಾರ "ಅನ್ಯಾಯದಿಂದಾ ಮಗನ ಕೊಲ್ಲಿಸಿದಿ"ಯಂದು ನಾನಾ ವಿಧದಿಂದ ದೃಷ್ಟಾಂತವನ್ನು ಕೊಟ್ಟು ಹೇಳಲಾಗಿ, ಕಂಪಲಿರಾಯಗೆ ಅಪಾರವಾದ ಕ್ಲೇಶವನ್ನು ಪ್ರಾಪ್ತವಾಯಿತು.

ಆ ಸಮಯದಲ್ಲಿ ಪ್ರಧಾನಿ ಬೈಚಪ್ಪನು ಕಂಪಿಲಿರಾಯನ ಕುರಿತು ಹೇಳುತಾರೆ: "ಹೇ, ಸ್ವಾಮಿ, ನನ್ನ ವೊಡೆಯಾ, 'ಕಂಪಲಿರಾಯಾ' ಯೀ ನೇಮಿ ಅವರ ದಂಡಿಗೆ ಹತ ಮಾಡುವಂತಾ ಶೂರನಾ ನಾನು ತಂದು ಕೊಡುತೇನೆ. ನೀನು ಕ್ಲೇಶವನ್ನು ಬಿಟ್ಟು ಧೈರ್ಯಸ್ಥನಾಗು" ಅನಲಾಗಿ, ಕಂಪಲಿರಾಯನು ಸಂತೋಷದಿಂದ "ಅಂಥಾ ಶೂರ ಯಾರು ಯಿದ್ದಾನೆ? ಆತನು ಯೀ ಅಸರಿನ ಮಗಾ, ಯೀಗ ಬಂದಂಥಾ ನೇಮಿ ದಂಡಿಗೆ ಪರಾಜಿತ ಮಾಡಿದವನೆ ನನಗೆ ಅರಸು, ಆತನೆ ನನ್ನ ಕುಲಕ್ಕೆ ತಿಲಕನಾದವಾ. ಅವನೇ ಸೂರ್ಯಸಮಾನಾ, ನನ್ನ ದೇಶಕ್ಕೆ ಆತನೆ ಅರಸು. ಆತನ ಹೆಸರು ನನಗೆ ಹೇಳು" ಯಂದು ಕಂಪಲಿರಾಯನು ಪ್ರಧಾನಿಯನ್ನು ಕುರಿತು ಹೇಳುತಾನೆ: "ವೊಂದು ಸಾರಿ ನೇಮಿ ದಂಡು ಮುರಿಲಿ, ಆದರೆ ಆತನೆ ಯಿ[>ಮು]ಮ್ಮಡಿರಾಯನೆನಿಸುವನು" ಅನಲಾಗಿ, ಪ್ರಧಾನಿ ಹೇಳಿತಾನೆ: "ಬ್ರಹ್ಮಲೋಕದಲ್ಲು ಹೊಕ್ಕಿದರು ಬಿಡತಕ್ಕವನಲ್ಲ" ಅನಲಾಗಿ, ಕಂಪಲಿರಾಯನು

“ಆತನ ಹೆಸರು, ಯಾ ರಾಯ ಮಗಾ, ಯಾವ ದೇಶವನ್ನಿವಸು, ಅಂಥಾ ಅವನಾ ನೀನು ಯಾವ ಕಾಲ ಸಂಗ್ರಹ ಮಾಡಿ ಯಿದ್ದೀಯಾ? ವೃತ್ತಾಂತ ವಿಸ್ತಾರವಾಗಿ ಹೇಳು” ಅನಲಾಗಿ, ಪ್ರಧಾನಿ ಹೇಳುತಾನೆ ಮುಶಿ ನಗಿ ನಗುತ: “ಹೇ ಕಂಪಲಿರಾಯನೆ, ಯೀಗ ಬಂದ ತುರಕರನಾ ಸಂಹಾರ ಮಾಡಿಸುಥೇ[>ತ್ತೇ]ನೆ ಯಂದು, “ಬಹು ಧೈರ್ಯದಿಂದಾ ಯುದ್ದ ಸನ್ನಹ ಮಾಡು”ಯಂದು ಮತ್ತು ಪ್ರಧಾನಿ ಬಹಾದರಖಾನನಾ ಸಂಗಡ ಹೇಳುತಾನೆ. “ನೀನು ಬಹು ಪರಾಕ್ರಮಿ. ನಾನು ಯೀಗೆ ಬಂದೆ, ಯಿರು ನೇಮಿದಂಡಿಗೆ ಕಾಳ ಯಮನೋಪಾದಿಯಲ್ಲಿ ಯಿರುವಂಥಾ ಶೂರನಾ ಕರಿಹಿಸುಥೇನೆ. ನೀನಿನ್ನು ಜಾಗ್ರತವಾಗಿ ಯಿರು”ಯಂದು ಮತ್ತು ಕಂಪಲಿರಾಯನಾ ಕುರಿತು ಹೇಳುತಾನೆ “ಶೂರನಾ ತರುತೇನೆ. ಮೇದಿನಿ ವಳಗೆ ಹೊಸ ಪರಿಯಾಗಿ ಯುದ್ಧಾ ಮಾಡಿಸುತ್ತೇನೆ. ಕೊಮಾರರಾಮಾ ಯೇರುವಂಥಾ ತೇಜಿ ಕೊಡಬೇಕು” ಅನಲಾಗಿ ಆ ತೇಜಿಯನು ತರಲಾಗಿ ಕಂಪಲಿರಾಯಗೆ ಕ್ಲೇಶದಿಂದಾ ಕಣ್ಣಿಂದಾ ನೀರು ಧಾರೆಗಳು ಕಾಲಿ[>ಕಾಲುವೆ]ಗಳೋಪಾದಿಯಲ್ಲಿ ಹಾಯಿತು. “ಕೊಮಾರರಾಮನ ತೇಜಿ ಮೇಲೆ ಯೇರುವ ರಾಹುತ ಯೀ ಭೂಮಂಡಲದಲ್ಲಿ ಯಾರು ಯಿದ್ದಾರೆ”ಯಂದು ಯೋಚಿಸಿದನು.

ಆ ಸಮಯದಲ್ಲಿ ಪ್ರಧಾನಿ ಬೈಚಪ್ಪನು ಕಂಪಲಿರಾಯನ ಕಡೆಯಿಂದಾ ಅಪ್ಪಣೆ ತೆಗದುಕೊಂಡು, ಕೊಮಾರರಾಮ ಯಿರುವ ನೆಲಮಾಳಿಗೆ ಸ್ಥಳದ ಗೊತ್ತು ಸಿಕ್ಕದೆ ಹುಡುಕಿ, ತರುವಾಯಾ ಸ್ಥಳವನ್ನು ಕಂದು, ಕುರಿ ಕೋಣಾ ಕೋಳಿ ಮುಂತಾದ ಬಲಿಗಳ ಕೊಟ್ಟು ತನ್ನ ಸಂಗಡ ಯಿರುವಂಥಾ ಪರಿವಾರದ ಜನರಿಗೆ ತಿಳಿಸದೆ, ತಾನು ಮಾತ್ರ ಕೊಮಾರರಾಮ ಯಿದ್ದ ನೆಲಮಾಳಿಗೆ ವಳಗೆ ಪ್ರವಾಶಾ ಮಾಡಿ, ಕೊಮಾರರಾಮನಾ ಕಂಡು “ಹೇ ದೇವೇಂದ್ರಗೆ ಸಮಾನವಾಗಿರುವಂಥಾ ಕೊಮಾರರಾಮನೇ, ಯೀ ಸಮಯದಲ್ಲಿ ಜನರಿಗೆ ವುಪದ್ರವವಾದ ನೇಮಿ ದಂಡಿನ ಮೇಲೆ ನಿನ್ನ ಪರಾಕ್ರಮಾ ತೋರಿಸು”ಯಂದು ಹೇಳಲಾಗಿ, ಯೀ ಪ್ರಧಾನಿ ಬೈಚಪ್ಪನ ಮಾತು ಕೇಳಿ ಕೊಮಾರರಾಮನಾ ವುತ್ತರಾ ಬೈಚಪ್ಪಗೆ ಕೊಡುವಂಥಾವನಾದನು, “ಯಿಷ್ಟು ದಿನದ ಮೇಲೆ ದೇವರು ದಯಮಾಡಿ ನನ್ನ ಮೇಲೆ ಕಣ್ಣು ತೆರೆದು ನೋಡಿದನು. ನಾನು ಯಿಹಪರಕ್ಕೆ ಕೀರ್ತಿ ನಿನಗೆ ತರುತೇನೆ’ ಅನಲಾಗಿ, ಪ್ರಧಾನಿ ಕೊಮಾರರಾಮನಾ ಮುದ್ದಾಡಿ “ನೀನು ಯಿಷ್ಟು ದಿನಾ ಬಹು ಪ್ರಯಾಸಬಟ್ಟ. ನಿನಗೆ ಯೀ ಪರಿಯಿಂದಾ ದಿನ ಕಳಿತಿಹೆ, ಹೇ ವೀರಾಧಿವೀರಾ ನೀನೆ ನಮಗೆ ತಂದೆತಾಯಿ” ಅನಲಾಗಿ ಕೊಮಾರರಾಮನಾ ವುತ್ತರಾ: “ಹೇ ಪ್ರಧಾನಿ ನೀನು ಬುದ್ಧಿಯಲ್ಲಿ ಶ್ರೇಷ್ಠವಾದಂಥವನು. ಆದ್ದರಿಂದಾ ನನ್ನ ಪ್ರಾಣ ವುಳಿಸಿದಿ. ತಂದೆ ಕಂಪಲಿರಾಯನ ಸಮಾಧಾನ ಪಡಿಸಿದಿ. ಆದದರಿಂದಾ ನಿನ್ನ ಬುದ್ಧಿ ಸಾಮರ್ಥ್ಯಕ್ಕೆ ಪ್ರತಿಯಿಲ್ಲಾ”ಯಂದು ಸ್ತೋತ್ರ ಮಾಡಿದನು. ತರುವಾಯ ಪ್ರಧಾನಿ ಕೊಮಾರರಾಮನಾ ಕುರಿತು ಹೇಳಿದಂಥಾದು: “ನಿನ್ನಾ ಕಂಪಲಿರಾಯನು ಕೊಲ್ಲಿಸಿದನೆಂದು ಸಮಾಚಾರವನ್ನು ಸುರಿತ್ಯಾಳ ಅರಸು ಕೇಳಿ ನೇಮಿಯವರ ದಂಡು ಕಳುಹಿಸಿ ದೇಶವನ್ನು ನಿಪಾತಾ ಮಾಡಿಸಿದನು. ಆತನ ಸೈನ್ಯ ಭೂಮಿ ತುಂಬಿಯಿದೆ. ಅದಕ್ಕೆ ನೀನು ಕಾಳ ಸಮಾನವಾಗಿ ಪರಾಕ್ರಮಾ ತೋರಿಸಬೇಕು”ಯಂದು ಹೇಳಲಾಗಿ, ಕೊಮಾರರಾಮನು ಗರ್ಜಿಸುತ್ತಾ ಯದ್ದು ಕಣ್ಣುವನ್ನು ಕೆಂಪಗೆ ಮಾಡಿದನು. “ಭೂತಬೇತಾಳಗಳಿಗೆ ಮರಳು ಆಗುವಂತೆ, ಪ್ರಳಯಕಾಲದ ದಂಡು ಬಂದು ಮೋಡವನ್ನು ಮುಚ್ಚಿನ ವೋಪಾದಿಯಲ್ಲಿ ಯಿರುವಂಥಾ ದಂಡಿನ ಸಂಹಾರ ಮಾಡುತೇನೆ”ಯಂದು. ಕೊಮಾರರಾಮನು ವುಟ್ಟ ರೇಶಿಮಿದಟ್ಟಿ ಹೊನ್ನ ಸುರಗಿಯ ಬಿಗಿದು

ತಾನುವೊಬ್ಬನೆ ಯೆಕಾಂಗಿ ಶೂರನು ಹೊರಟನು. ಕೆ[+ಕೇ] ಸರುವುಪಾದಲ್ಲಿ ಶೃಂಗಾರಯುಕ್ತನಾಗಿ ವೊಪ್ಪಿದನು. ಹೇಮದ ತೊಡಿಗಿ ತೊಟ್ಟು ನಗುತಾ ಹೊರಟನು.

ಆಗ ಪ್ರಧಾನಿ ಕಂಡು ಕೊಮಾರರಾಮಗೆ ವಜ್ರದ ಅಂಗಿ ರಾಘವಳಿ ಗುಜ್ಜಿಯ ಜೋಡು ಯೀ ಪ್ರಕಾರ ನಾನಾ ಆಭರಣದಿಂದಾ ಶೃಂಗಾರ ಮಾಡಿದನು. ಪ್ರಧಾನಿ ಕಂಪಲಿರಾಯನ ಬಳಿಗೆ ಕರಕೊಂಡು ಹೋಗುವಾಗ್ಯೆ ಕೊಮಾರರಾಮಗೆ 'ರಾಯರಾವುತಾ'ಯಂಬೊ ಹೆಸರುಯಿಟ್ಟು, ಜಟಿಂಗಿರಾಮೇಶ್ವರ ದರುಷನ ಧ್ಯಾನವನ್ನು ಕೊಮಾರರಾಮನು ಮಾಡಿ, ಗಂಧಪ್ರಸಾದ ತೆಗೆದುಕೊಂಡು, ಪ್ರಧಾನಿ ಸಂಗಡ ನೇಮನ[>ಮಿಯ] ದಂಡಿನ ಮೇಲೆ ಬಾಹೊವಾಗ್ಯೆ 'ಯಪ್ಪತ್ತರಾಯನ ಬಲ್ಲಾ'ಯಂಬೋ ತೇಜಿ ಅಲಂಕಾರಯುಕ್ತವಾಗಿ ಯಿರುವಂಥಾ ತೇಜಿ ಮೇಲೆ ಆರೂಢವಾಗುವಾಗೆ, ಆ ತೇಜಿ ತನ್ನ ವೊಡೆಯ ಕೊಮಾರರಾಮನುಯಂದು ತಿಳದು ವಂದನೆ ಮಾಡಿತು. ತರುವಾಯ ಕೊಮಾರರಾಮನು ಆ ತೇಜಿಗೆ ಅಪ್ಪಿಕೊಂಡು ಗಂಧಾಕ್ಷತೆಯನ್ನು ಯಿಟ್ಟು ಮೈಸವರಿದನು. ನೆಲದ ಮೇಲೆ ನಿಂದರದೇ ಹಾರ್‍ಯಾಡುತಾ ಯಿತ್ತು. ಜನರು ಕಂಡು "ಯೀ ರಾವುತ ಯಲ್ಲಿಂದ ಬಂದನು?" ಅನಲಾಗಿ, ಪ್ರಧಾನಿ ಜನರನಾ ಕುರಿತು "ಯೀ ರಾಯರಾವುತಯಂಬವನು ಕಲ್ಯಾಣದಿಂದಾ ಬಂದನು"ಯಂದು ಹೇಳಿದನು ಮತ್ತು ಬೈಚಪ್ಪ ತನ್ನ ಕಡೆ ಯಿರುವಂಥಾ ಚತುರಂಗಗಜ ಮುಂತಾದ ಅವರಿಗೆ ಸಕಳ ಅಲಂಕಾರಯುಕ್ತವಾಗಿ ಸಾಹಿತ್ಯ ಭೇರಿ ಮುಂತಾದ ವಾದ್ಯಗಳಿಂದಾ ಮಂದವಾದ ಆನೆಗಳಿಂದಾ ಯುದ್ಧಕ್ಕೆ ವುದ್ಯುಕ್ತನಾಗಿ, ಕೊಮಾರರಾಮನು ತನ್ನ ಸಂಗಡ ಸಾವಿರ ಕುದುರೆ ತೆಗದುಕೊಂಡು ನೇಮಿ ಅವರ ದಂಡಿನಲ್ಲಿ ಪ್ರವೇಶಾ ಮಾಡಿ, ಕೈಯಲ್ಲು ಪಟ್ಟಾ ತೆಗದುಕೊಂಡು ಬರುವಾಗ್ಯೆ, ಮಹಾತ್ತಾದ ಯುದ್ದದಲ್ಲಿ ವಾತಾಹತ ಮಾಡಿದ ಸಮಯದಲ್ಲು ರಕ್ತ ಕೋಡಿ ಹರದು, ಅದರಲ್ಲಿ ಮುಂಡಗಳು ತೇಲುತ್ತಾ ಯಿತ್ತು. ರಾಮನ ಖಡ್ಗಾಯಂಬೊ ಬಹುಮಂದಿನ ಬಲಿ ತೆಗೆದುಕೊಂಡಿತ್ತು. ಕೊಮಾರರಾಮನ ಕಡೆಯಿದ್ದ ತುಂಬರಖಾನಯಂಬವನು ಬಹು ಪರಾಕ್ರಮಾ ಮಾಡಿದನು. ಅನೇಕ ಮಂದಿ ಸಂಹಾರ ಮಾಡಿದನು. ಕೊಮಾರರಾಮನು "ಯುದ್ಧಕ್ಕೆ ಸಮ್ಮುಖವಾದವರನಾ ಕೊಲ್ಲೋದು, ವೋಡುತಾ ಯಿರುವವರನ ಕೊಲ್ಲಬ್ಯಾಡರಿ"ಯಂದು ತಮ್ಮಾ ಕಡೆ ಅವರಿಗೆ ಹೇಳಿದನು. ಯೀ ಕೊಮಾರಾಮನು ಮಹತ್ತಾದ ಯುದ್ದವನ್ನು ಮಾಡಿದನು

ಆ ಸಮಯದಲ್ಲು ಭೂತಪ್ರೇತಗಳು ಸತ್ತವರನಾ ರಕ್ತಮಾಂಸವು ಭಕ್ಷಿಸುತಾ ಯಿತ್ತು. ಕೆಲವು ಪ್ರೇತಗಳು ಕಲವಲಿಸುತ್ತಾ ಇತ್ತು. ನೇಮಿಯು "ಕೊಮಾರರಾಮನು ಮೃತವಾದ ಸಮಾಚಾರ ಕೇಳಿ ನಾವು ಬಂದೀವಿ. ಯಿಲ್ಲದೇ ಯಿದ್ದರೆ ನಾವು ದಂಡು ತಕ್ಕೊಂಡು ಬರತಕ್ಕದ್ದಿಲ್ಲಾ"ಯಂದು ಬಹುಜನ ಕ್ಷೇ[>ಖೇ]ದವಾಯಿತು. "ಕೊಮಾರರಾಮನು ಸಮಯವಾಗಿ ಯುದ್ಧ ಮಾಡಲಿಕ್ಕೆ ಅಶಖ್ಯಾ"ಯಂದು ಹಿಂದಕೆ ಹೋದರು. ಕೊಮಾರರಾಮನು "ಹಿಂದಕೆ ಹೋದವರ ಸಂಹಾರ ಮಾಡೋದು ಧರ್ಮವಲ್ಲ"ಯೆಂದು ಧರ್ಮದ ಭೇರಿ ಬಾರಿಸಿ, ಅಲ್ಲಿಂದ ಭಟ್ಟರ ಮೊದಲಾದವರು ಹೊಗಳುತ ಕುಮ್ಮಟದ ಪಟ್ಟಣಕ್ಕೆ ಪ್ರವೇಶಾ ಮಾಡಿದ ಸಮಯದಲ್ಲಿ ಜನರು ಯಾವತ್ತು ಕೊಮಾರರಾಮನ ಕಂಡು "ಯೀತನೇ ಕೊಮಾರರಾಮನು"ಯಂದು ನುಡಿದರು. ಕೊಮಾರರಾಮಗೆ ಶರೀರ ಯಾವತ್ತು ಬಾಣಗಳಿಂದಾ ತುಂಬಿತ್ತು. ಅಲ್ಲಿಂದಾ ಕೊಮಾರರಾಮನು ವೊಂದು ವಸ್ತ್ರಾ ತನ್ನ ಮೈ ಕಾಣದಂತೆ ಮುಚ್ಚಿಕೊಂಡು ತನ್ನ ತಂದೆ ಕಂಪಲಿರಾಯನು[>ನ] ಅರಮನೆಗೆ ಬಂದು,

ತಂದಿಗೆ ನಮನಾ ಮಾಡಿದನು. ಯೀತನು[>ನ] ಕಂಡು ಕಂಪಲಿರಾಯನು ಬಹು ಸಂತೋಷದಿಂದಾ, "ಯೀ ಮಹಾಶೂರಾ ಯಾರು?, ಯೀತನ ತಂದೆ ಯಾರು?, ಯಾವ ದೇಶದ ಅರಸು ಮಗಾ?" ಅನಲಾಗಿ ಕೊಮಾರರಾಮನು ತಾನು ಹೊತ್ತುಕೊಂಡ ಹೊದಿಕೆ ತೆಗೆದರು. ಆವಾಗ್ಯೆ ಕಂಪಲಿರಾಯನು ಕಂಡು ಕೊಮಾರರಾಮನ ಗುರ್ತು ಕಂಡು, ಅಪ್ಪಿಕೊಂಡು, "ಹೇ ಕುಮಾರರಾಮಾ, ಸತ್ಪುತ್ರಾ, ಶೂರಾಧಿಶೂರಾ?"ಯಂದು ಬಹು ಸಂತೋಷದಿಂದಾ ಸ್ತೋತ್ರ ಮಾಡಿದಂಥಾವನಾದನು. "ಕೊಮಾರರಾಮನಾ ಕಂಡು ಯೇಳು ತಿಂಗಳಾಯಿತು. ಬಹು ವ್ಯಸನ ಪ್ರಾಪ್ತವಾಗಿಯಿತ್ತು. ಯೀ ದಿವಸ ನನ್ನ ಪುಣ್ಯಕ್ಕೆ ಸಮಾನಯಿಲ್ಲಾ"ಯಂದು ಅನೇಕ ದಾನಿ[>ನಾ]ದಿಗಳು ಮಾಡಿ ಮುತ್ತುರತ್ನಗಳ ಕೊಮಾರರಾಮನ ಮ್ಯಾಲೆ ಸ[>ಎ]ತ್ತಿ ಹಾಕಿದನು. ಕಂಪಲಿರಾಯನು ಪ್ರಧಾನೀನ ಕಂಡು "ನೀನು ಬುದ್ಧಿವಂತಾ"ಯಂದು ಆತನ ಪಾದಕ್ಕೆ ಬಿದ್ದು, "ನೀನು ನನ್ನ ಮಗನಾ ಬದುಕಿಸಿದಿ, ಯೀ ದಿವಸ ನೇಮಿದಂಡು ಬಂದು ನನಗೆ ಅಪಜಯ ಆಹೋದು, ನಿನ್ನಿಂದಾ ಜಯ ಪ್ರಾಪ್ತವಾಯಿತು" ಯಂದು ಮಂತ್ರಿಗೆ ಬಹುಮಾನಾ ಮಾಡಿದನು. ಆವಾಗೆ ಕಂಪಲಿರಾಯನು ಕೊಮಾರರಾಮನ ಕೈ ಮೈ ಮುಂತಾದ್ದು ರಕ್ತವಾಗಿ ಯಿರುವದು ನಿರ್ಮಲ ನೀರಿನಿಂದಾ ತೊಳದು, ನೂತನ ವಸ್ತ್ರ ಅಲಂಕಾರವನ್ನು ಮಾಡಿಶಿ, ಕಂಪಲಿರಾಯನು ತನ್ನ ತೊಡೆ ಮೇಲೆ ಕೊಮಾರರಾಮನಾ ಕೂಡಿಸಿಕೊಂಡು ಮುದ್ದಾಡಿದನು.

ಯೀ ಸಮಾಚಾರ ಕೊಮಾರರಾಮನಾ ತಾಯಿ ಹರಿಯಾಳದೇವಿಗೆ ಜನರು "ಕೊಮಾರರಾಮನು ಬದುಕಿ ಬಂದನು" ಅನಲಾಗಿ, ಆ ಮಾತಿಗೆ ಹರಿಯಾಳದೇವಿ "ಯಿನ್ನು ಯಲ್ಲಿಂದಾ ಬಂದಾನು ಕೊಮಾರರಾಮಾ"ಯೊದು ಚಿಂತಿಸುತ್ತ ಯಿರುವಾಗ್ಯೆ, ಬೃತ್ಯರು ಬಂದು ಹರಿಯಾಳದೇವಿಗೆ "ಅಮ್ಮ ನಿನ್ನ ಮಗನು, ನಮ್ಮ ಸ್ವಾಮಿ ಕೊಮಾರರಾಮನು ಯೀ ದಿವಸ ಯುದ್ಧದಲ್ಲಿ ಜಯ ಪ್ರದಾನ ಮಾಡಿ ಬಂದನು" ಅನಲಾಗಿ, "ವಳ್ಳೇದ ನನ ಕಣ್ಣಿನ ಮುಂದೆ ಬಂದರೆ ನನಗೆ ಯಥಾರ್ತ ತೊರೋದು" ಯೆಂದು ಯಿರುವಾಗ್ಯೆ, ಕೊಮಾರರಾಮನು ತಂದೆ ಕಡೆಯಿಂದಾ "ಹರಿಯಾಳದೇವಿಯ ಮನಿಗೆ ಹೋಗಿ ಬರುತ್ತೇನೆ"ಯೆಂದು ಅಪ್ಪಣೆ ತೆಗೆದುಕ್ಕೊಂಡು ಕಾಲನಡೆಯಿಂದಾ ನಡೀತಾ, ಯೀ ಹರಿಯಾಳದೇವಿನಾ ಕಂಡು ಪಾದಕ್ಕೆ ಬಿದ್ದನು. ಆ ಸಮಯದಲ್ಲಿ ಹರಿಯಾಳದೇವಿ ಮಗನಾ ಕಂಡು, ಬಹು ಸಂತೋಷದಿಂದಾ ವರ್ನನೆ ಮಾಡಿ ಅಪ್ಪಿಕೊಂಡು ಆರತಿಯೆತ್ತಿದಳು. ಸಕಲವಾದ ಜನರು ಬಹು ಸಂತೋಷದಿಂದಾ ಆರತಿಯೆತ್ತಿದರು. ಅಲ್ಲಿಂದಾ ಕೊಮಾರರಾಮನು ತನ್ನ ತಂದೆ ಕಂಪಲಿರಾಯನ ಅರಮನಿಗೆ ಬಂದನು.

ಯೀ ಸಮಾಚಾರವು ಕೊಮಾರರಾಮನ ಮಲತಾಯಿ ರತ್ನಾಜಿ ದಾಸಿಯಿಂದ ಕೇಳಿ, ಆ ಸಮಯದಲ್ಲಿ ರತ್ನಾಜಿ ಕೊರಳಿಗೆ ವುರುಳು ಹಾಕಿಕೊಂಡು ಪ್ರಾಣ ಬಿಟ್ಟಳು. ಆ ಸಮಾಚಾರ ಕಂಪಲಿರಾಯಗೆ ಬೃತ್ಯು ಬಂದು ಹೇಳಿದಲ್ಲಿ, ಕಂಪಲಿರಾಯನು ಬಹುಸಂತೋಷದಿಂದ "ಪಾತಕಿ ರತ್ನಾಜಿ ಮೃತವಾದದ್ದು ನನ್ನ ಪಟ್ಟಣದ ಪೀಡೆ ಕಳಿಯಿತು. ಆ ರತ್ನಾಜಿ ಶವವನ್ನು ವೂರಿನ ಹೊರಗೆ ತೆಗೆದುಕೊಂಡು ಹೋಗಿ ಬಿಸಾಡಿರಿ"ಯಂದು ಅಪ್ಪಣೆ ಕೊಟ್ಟನು. ಅದೇ ಪ್ರಕಾರಾ ಬೃತ್ಯರು ನಡಕೊಂಡರು. ಕಂಪಲಿರಾಯನು ಪ್ರಧಾನಿಗೆ ಬಹುವಿಧದಿಂದಾ ಸ್ತೋತ್ರ ಮಾಡಿದನು. ಕೊಮಾರರಾಮನು "ಯೇನು ಕಾರಣಾ ರತ್ನಾಜಿ ಸತ್ತಳು" ನನ್ನ ನಿಮಿತ್ಯವಾಗಿ ಸತ್ತದರಿಂದಾ ನನಗೆ

ಅಪಕೀರ್ತಿ ಬಂತು" ಅನಲಾಗಿ, ಕಂಪಲಿರಾಯನು "ರತ್ನಾಜಿ ಸಾಯದೆ ಇದ್ದಲ್ಲಿ ಪಾಪಾ ಬಹಾಳವಾಗೋದು"ಯಂದು ಮಗನಾ ಸಮಾಧಾನ ಮಾಡಿದನು. ಪ್ರಧಾನಿ ಆ ರತ್ನಾಜಿ ಶವಾ ಭೂಮಿಯಲ್ಲಿ ಕುಣಿ ಅಗಿಸಿ ಹೂಳಿದನು.

ನೇಮಿಯ ದಂಡು ಹಿಂದಕ್ಕೆ ಸುರಿತ್ಯಳ ಕಡೆ ಹೋಗಿ "ಸ್ವಾಮಿ, ಸುರಿತ್ಯಳನೆ, ಕೊಮಾರರಾಮನು ನಮ್ಮ ದಂಡು ಯಾವತ್ತು ವಾತಾಹತನು ಮಾಡಿನದು" ಅನಲಾಗಿ ಸುರಿತ್ಯಾಳನು ಬಹುಕ್ರೋಧದಿಂಧ "ಕೊಮಾರರಾಮನು ತೀರಿಹೋದನು. ನೀವು ಯಿದ್ದಾನೆಯಂದು ಹೇಳುತೀರಿ, ಯಿದು ನನಗೆ ಆಶ್ಚರ್ಯವಾಗಿ ಯಿದೆ." ಅನಲಾಗಿ, ಯಿವರು ಭಿನ್ನಹಾ ಮಾಡೋದು: "ಕಂಪಲಿರಾಯನು ಕೊಮಾರಾಮನು ಕೊಲ್ಲು ಹೇಳು ಅಪ್ಪಣೆ ಕೊಡಲಾಗಿ ಆತನ ಪ್ರಧಾನಿ ಬೈಚಪ್ಪನು ನೆಲಮಾಳಿಗೆಯಲು ಕೊಮಾರರಾಮನಾ ಯಿಟ್ಟು ಕಂಪಲಿರಾಯಗೆ ಕೊಮಾರರಾಮನಾ ಕೊಂಡೆಯಂದು ಕಳ್ಳರ ತಲೆ ಕೊಯಿದು ತೋರಿದನು. ನಾವು ಹೋಗಿ ಯುದ್ಧ ಮಾಡುವ ಸಮಯದಲ್ಲು ಕೊಮಾರರಾಮನು ಬಂದು, ನಮ್ಮ ದಂಡು ವಾತಾಹತ ಮಾಡಿದನು" ಅನಲಾಗಿ, ಸುರತ್ಯಳನು ಪ್ರಧಾನಿ ಬೈಚಪ್ಪ ಸಾಮರ್ಥ್ಯ ಕೇಳಿ "ಆ ಬೈಚಪ್ಪಯಂಬೋ ಪ್ರಧಾನಿ ಸಮರ್ಥ ಆದ್ದರಿಂದಾ ನಾನಾವಿಧ ವುಪಾಯಾ ಮಾಡಿದನು. ಅಂಥಾ ಪ್ರಧಾನಿ ನಮ್ಮ ಕಡೆ ಯಿಲ್ಲದರಿಂದಾ ನೀವು ಮುರದು ಬಂದಿರಿ"ಯಂದನು. ತರುವಾಯ ನೇಮಿ ಹೋಗಿ ಸುರತ್ಯಳನಾ ಕಂಡಲ್ಲಿ ಸುರತ್ಯಾಳನು ಬಹುಕ್ರೋಧದಿಂದಾ ನೇಮಿ ಕೂಡ ಹೇಳದೆ, ಆತನ ಸಂಗಡ ಸಂಭಾಷಣೆ ಸಹಾ ಮಾಡದೇ ಯಿದ್ದನು ಮತ್ತು ಯಾಹೋ ಅವರನಾ ಕಂಡು ಸುರತ್ಯಳನು ಹೇಳುತಾನೆ: "ನೀವು ಕುಮ್ಮಟಕ್ಕೆ ಹೋಗಿ ಕುಮ್ಮಟದುರ್ಗವನ್ನು ಸಾಧಿಸಿರಿ"ಯನಲಾಗಿ ನೇಮಿ ಕಡೆ ಅವರು ಹೇಳಿದ್ದು: "ಪ್ರಥಮದಲ್ಲಿ ಲಕ್ಷ ಕುದರಿ ಹತ್ತು ಲಕ್ಷ ಪಾಯದಳಾ ಸಹಾ ಹೋಗಿ ಕೊಮಾರರಾಮನ ಮುಂದೆ ಪ್ರಯತ್ನ ನಡೆಯದಂತೆ ಬಹು ಮಂದಿ ವಾತಾಹತವಾಗಿ, ವುಳದವರು ಬಂದು ಶೇರಿದೆವು. ಕುಮಾರರಾಮನ ಮೇಲೆ ನಮ್ಮ ಕಡೆಯಿಂದಾ ಪ್ರಯತ್ನ ಸಾಗೋದಿಲ್ಲ ಮತ್ತು ವೊಂದು ಸಮಯದಲ್ಲಿ ಯುಕ್ತಿಯಿಂದಾ ಕುಮ್ಮಟದುರ್ಗವನ್ನು ಸಾಧಿಸಬೇಕು ಮತ್ತು ಯರಣ್ಣೇ[>ಎರಡನೇ] ಸ್ಥಳ ಕೊಂಕಣಿದೇಶವಾಗಲಿ, ಬಳ್ಳಾಳರಾಯನ ಮೇಲೆ ಆಗಲಿ, ಗರ್ಜರದೇಶವಾಗಲಿ ಅಲ್ಲಿಗೆ ಕಳುಹಿಸಿದಲ್ಲಿ ಜಯಪ್ರದ ಮಾಡುತ್ತೇವೆ. ಕೊಮಾರರಾಮನ ಮೇಲೆ ನಮ್ಮ ಪ್ರಯತ್ನ ಸಾಗೋದಿಲ್ಲಾ" ಅನಲಾಗಿ, ಸುರತ್ಯಳನು ನೇಮಿ ಅವರನಾ ಕುರಿತು ಹೇಳುಥಾನೆ: "ನೀಉ ನಮ್ಮ ಕಡೆಯಿಂದಾ ವೋಡಿ ಹೋಗಿ ಕಂಪಲಿರಾಯನ ಆಶ್ರಯ ಮಾಡಿಕೊಂಡು ಯಿರುವಂಥಾ ಬಾಹದರಖಾನನಾ ಹಿಡಿದು ತರಲಿಲ್ಲಾ. ಕಾರ್ಯ ವ್ಯರ್ಥ ಮಾಡಿದಿರಿ"ಯಂದು, ಸುರತ್ಯಳನ ಕಡೆಯಿರುವಂಥಾ ಮಾತಂಗಿಯಂಬೊ ಹೆಂಗಸು ಬಹು ಪರಾಕ್ರಮದಿಂದಿದ್ದರಿಂದಾ ಆಕೀನಾ ಕರಿಸಿ, "ನಿನಗೆ ಬಹುಮಾನ ಮಾಡುತೇವೆ. ಕುಮ್ಮಟಕ್ಕೆ ಕುಮ್ಮಟದುರ್ಗವನ್ನು ಸಾಧಿಸಿ ಬರ"ಹೇಳಲಾಗಿ ಆ ಮಾತಂಗಿಯಂಬ ಸ್ತ್ರೀ "ನಾನು ಕುಮ್ಮಟಕ್ಕೆ ಹೋಗಿ, ಕುಮಾರರಾಮನಾ ಹಿಡಿದು ನಿನ್ನ ಸನ್ನಿಧಾನಂಗಳಿಗೆ ತರುತೇನೆ"ಯಂದು ಶಪಥ ಮಾಡಲಾಗಿ, ಸುರತ್ಯಾಳನು ಬಹು ಸಂತೋಷದಿಂದ ಆಕೀಗೆ ಘನವಾದ ವಸ್ತ್ರಾಭರಣಗಳು ಶೂರ ಶೂರನೆನಿಸುಕೊಂಬೊ ಸರದಾರರು ನೇಮಿನಾ ಸಹಾ ೧ ಲಕ್ಷ ಕುದುರಿ, ಹತ್ತು ಲಕ್ಷ ಪಾಯದಳಾ, ಯುದ್ಧದಲ್ಲಿ ಸಾಮಾನು ಸಹಿತವಾಗಿ ಮಾತಂಗಿಯಂಬೊ ಸ್ತ್ರೀವಶಕ್ಕೆ ಕೊಟ್ಟು, ಅಲ್ಲಿಂದಾ ೩೬೦ ಗಾವದಾ ಕುಮ್ಮಟದುರ್ಗಕ್ಕೆ ಕಳಿಹಿಸಿದನು. ಮಾತಂಗಿ ಆವಾಗೆ ಸುರತ್ಯಾಳಗೆ

ಮಗಳು ಯೆನಿಸಿಕೊಂಡಳು. ದಂಡು ಕೂಡಿ ಮಜಲಿ, ದರ ಮಜಲಿ ಮಾಡಿ ಚಿಕ್ಕಲಹರಿಯಂಬೊ ಸ್ತಳ: ಬಂದು, ಅಲ್ಲಿ ತನ ಕಡೆಯಿದ್ದ ಸೈನ್ಯಕ್ಕೆ ಮುಖ್ಯಸ್ಥರಾದವರನಾ "ಹಿಂ[>ಇಂ]ದಿಗೆ ಹತ್ತನೆ ದಿನಕ್ಕೆ ಕೊಮಾರರಾಮನಾ ಹಿಡಿತರಬೇಕೆಂ"ದು ಹೇಳಿ, ಅಲ್ಲಿಂದಾ ಪ್ರಯಾಣ ಮಾಡಿ ಕುಮ್ಮಟದುರ್ಗ ಪ್ರಾಂತ್ಯಕ್ಕೆ ಬಂದಳು.

ಆ ಸಮಾಚಾರವನ್ನು ಕೊಮಾರರಾಮನು ಕೇಳಿ, ತನ್ನ ಕಡೆಯಿದ್ದ ಅಣ್ಣನಾದ ಕಾಟಣ್ಣರಾಯಾ, ಕಬ್ಬುಲಿಗರ ನಾಗಾ, ಹೆಬ್ಬುಲಿಚಿತ್ತಾ, ಅಬ್ಬಯ್ಯ, ಚಿತ್ತಯ್ಯ, ಬೈರುವಾ ಯಿವರ ಸಂಗಡಾ ನೇಮಿ ಅವರಿಗೆ ಹೇಳಿ ಕಳಿಸಿದ ವೃತ್ತಾಂತ: "ನೀವು ಪ್ರಥಮದಲ್ಲಿ ಬಂದು ವಾತಾಹತವಾದರಿ. ವ್ಯರ್ಥವಾಗಿ ಪ್ರಾಣವನ್ನು ಕಳಿಬ್ಯಾಡರಿ. ಹಿಂದಕ್ಕೆ ಹೊರಟು ಹೋದ ನಿಮ್ಮ ಪ್ರಾಣ ಉಳಿಯದು." ನೇಮಿ ಅವರ ದಂಡಿಗೆ ಸರಬರದವರನಾ ಕಳುಹಿಸಿದನು. ಯಿವರು ನೇಮಿ ಅವರ ದಂಡಿನ ಮೇಲೆ ಯುದ್ಧ ಮಾಡುತಾ ಯಿರದು[>ಇರಿದು], ಬಹುಮಂದಿನಾ ಹತವನ್ನು ಮಾಡಿ ಹೇಳತಾರೆ: "ನೀವು ಪ್ರಥಮದಲ್ಲಿ ಬಂದು ಬಹು ಜನಾ ಶೇ[>ಭೇ]ದವಾಗಿ ಹೋದಿರಿ. ನಿಮ್ಮಿಂದಾ ಕೊಮಾರರಾಮನ ಸಂಗಡಾ ಯುದ್ಧವನ್ನು ಮಾಡಲಾರಿರಿ. ಹೊರಟು ಹೋಗಿರಿ"ಯಂದು ಹೇಳಿ, ಅವರಲ್ಲಿ ಯಿರುವಂಥಾ ಮುಖ್ಯಸ್ಥರ ಕೆಲವು ಮಂದಿನಾ ಕೊಂದರು. ನೇಮಿ ಕಡೆ ಅವರು ಹೇಳೋದು: "ನಮಗೆ ನೋಡೆ[>ಒಡೆ]ಯನು ಯಿಲ್ಲದೆ ದಂಡು ನಾವು ಯಾ ಪರಿಯಿಂದಾ ಯುದ್ಧ ಮಾಡಬೇಕು. ನಮ್ಮಲ್ಲಿ ಯಿದ್ದವರು ಧೈರ್ಯಸ್ತರಲ್ಲ. ಯಿದು ಹೊರತು ಹೆಂಗಸಿನ ನಂಬಿ ಬರಬಾರದು" –ಯೀ ಪ್ರಕಾರ ಹೇಳುತಾ ಯಿದ್ದರು. ಕೊಮಾರರಾಮನು ತನ್ನ ತಂಡೆ ಕಂಪಲಿರಾಯಗೆ ಹೇಳಿ ಕಳಿಹಿಸಿದ್ದು: "ದಿನವೊಂದಕ್ಕೆ ಹತ್ತು ಸಾವಿರ ಹೊನ್ನ ಪ್ರಕಾರಾ ಮಂದಿಗೆ ಕೊಡು"ಯಂದು ಹೇಳಿ ಕಳುಹಿಸಿದನು. ಅದೇ ಪ್ರಕಾರ ಕಂಪಲಿರಾಯಗೆ ಹೇಳಿಕಳಿಹಿಸಿನದು. ಅದೇ ಪ್ರಕಾರ ಕಂಪಲಿರಾಯ ಕೊಡುತಾ ಬಂದನು.

ಕಂಪಿಲರಾಯ ಕೊಮಾರರಾಯಗೆ ಹೇಳಿ ಕಳಿಸಿದ್ದು: "ನೀನು ಯೀ ಕುಮ್ಮಟದುರ್ಗ ಬಿಟ್ಟು ಹೊದಮಲೆದುರ್ಗಕೆ ಹೋಗಿ ಯಿರು. ನಾನು ಯಿಲ್ಲಿ ಯಿದ್ದು ನೇಮಿರ ಸಂಗಡಾ ಯುದ್ಧಾ ಮಾಡುತ್ತೇನೆ. ಅದರಿಂದಾ ನೀನು ಹಸಿ ಮನಗು, ಸಮುದ್ರವೋಪಾದಿಯಲ್ಲಿ ಬಂದಂಥ ನೇಮಿ ಸೈನ್ಯಕ್ಕೆ ತಡಿಯೋದು. ಆದ[>ಗ]ದರಿಂದಾ ನಾನು ಕುಮ್ಮಟದುರ್ಗದ ಯುದ್ಧಾ ಮಾಡುತ್ತೇನೆ"ಯಂದು ಕೊಮಾರರಾಮಗೆ ಹೇಳಿ ಕಳಿಸಲಾಗಿ, ಅದಕ್ಕೆ ಕೊಮಾರರಾಮನು ವುತ್ತರಾ ತಂದಿಗೆ ಹೇಳಿ ಕಳಿಹಿಸಿದಂಥಾವನಾದನು: "ನಾನು ಬಿರುದು ಪಡದು ಬಿಡೋದು ವುಂಟೆ? ನಮ್ಮ ಬಿರುದು ವುಳಿದು ಅರಿರಾಯರ ಗಂಡಯೆನಿಸಿ, ಯೀ ಸಮಯದಲ್ಲಿ ಹಿಂದಕ್ಕೆ ತೆಗಿಬಾರದು. ಹಿಂದವಾದ ರಾಯರಗಳು ಬಿರುದುಗಳಿಗೆ ತಪ್ಪಲಿಲ್ಲ. ಯೀ ಕುಮ್ಮಟದುರ್ಗದ ಯುದ್ಧವೆ ನನ್ನ ಮದವಿ. ನನ್ನ ಬಿರುದು, ಬಿಡಲಾರೆ. ನಾನು ಜಟಿಂಗಿರಾಮೇಶ್ವರ ವರಪ್ರಸಾದದಿಂದ ಹುಟ್ಟಿದೆ. ನನ್ನ ಹೆಸರಿಗೆ, ನಿನಗೆ ಅಪಕೀರ್ತಿ ತರಲಾರೆನು. ನನ್ನ ಪ್ರಾಣ ಶರೀರದಲ್ಲಿ ಯಿರೋ ಪರಿಯಂತ್ರವು ಬಿರುದು ಬಿಡಲಾರೆ. ಬಾಹದರಖಾನನು ಪರದೇಶದಿಂದ ಬಂದು ನನಗೆ ಆಶ್ರಯ ಮಾಡಿ ಮೊರೆಹೊಕ್ಕು ಯಿದ್ದಾನೆ. ಆತನಾ ನನ್ನ ಪ್ರಾಣ ಯಿರೊ ವರಿಗೆ ಅವರ ವಶಕ್ಕೆ ಕೊಡೊದಿಲ್ಲ" ಯೀ ಪ್ರಕಾರ ಹೇಳಿ, "ತನ್ನ ಹೆಂಡ್ರು ಕಂಪಲಿರಾಯನ ಕುಟುಂಬ ಸಹಿತವಾಗಿ ಹೊಸಮಲೆದುರ್ಗಕ್ಕೆ ತರ್ಲಿ ಹೋಗಿ

ಯಿರುವದು"ಯಂದು ಹೇಳಿ ಕಳುಹಿಸಿದನು. ಹಾಂಗೆ ಕುಮಾರರಾಮನ ತಾಯಿಯಾದ ಹರಿಯಾಳದೇವಿಗೆ "ನೀನು ನಿನ್ನ ಪತಿಸಂಗಡ ಹೊಸಬಲೆದುರ್ಗಕ್ಕೆ ಹೋಗು"ಯಂದು ಹೇಳಿ ಕಳಿಸಲಾಗಿ, ಹರಿಯಾಳದೇವಿ ತನ್ನ ಕಡೆಯಿದ್ದ ಯರಡು ಹರವಿ ಹೊನ್ನಗಳು ಕೊಮಾರರಾಮಗೆ ಕೊಟ್ಟು ಕಳುಹಿಸಿದಳು. "ನಿನಗೆ ಮಂದಿ ಬೇಕಾದಲ್ಲಿ ವಿಸ್ತಾರವಾಗಿ ಯಿಟ್ಟು ಯುದ್ಧ ಮಾಡು"ಯಂದು ಹೇಳಿ, ಕಂಪಲಿರಾಯ ಹರಿಯಾಳದೇವಿ, ಬಾಹದರಖಾನ ಕುಟುಂಬ ಸಹಿತವಾಗಿ, ಯಿನ್ನು ಕೆಲವು ಸೈನ್ಯ ಸಹಿತವಾಗಿ ಹೊಸಮಲೆದುರ್ಗಕ್ಕೆ ನಡದರು.

ಕುಮ್ಮಟದುರ್ಗದಲ್ಲಿ ಹೊಕುಳ ಘಂಟೆ ಕಟ್ಟಿಯಿರುವಂತಾ ೫೦ ಕುದುರೆ ಕೊಮಾರರಾಮನ ಪರಿವಾರ, ಯಿನ್ನು ಕೆಲವು ಪಾಯದಳಾ ಮಾತ್ರ ವುಳಿದರು. ಮಿಕಾದ ಜನರನು ಹೊಸಮಲೆದುರ್ಗಕ್ಕೆ ಕಳುಹಿಸಿದನು. ಕೊಮಾರರಾಮನು ನೇಮಿಯವರ ದಂಡಿಗೆ ಯುದ್ಧ ಮಾಡೊ ಬಗ್ಗೆ ಸರ್‍ವಸಿದ್ಧವಾದನು. ಆ ಸಮಯದಲ್ಲಿ ನೇಮಿ ದಂಡಿನಿಂದಾ ಮಾತಂಗಿಯಂಬವಳು ಕೋಟೆ ಬಾಗಿಲಿಗೆ ಬಂದು "ಬಾಗೊಲ ತೆರಿ"ಯಂದಳು. ಆವಾಗ್ಯೆ ಕುಮಾರರಾಮನ ಕಡೆ ಅವರು ಚೆನ್ನಾಗಾಳೆ ವುಕ್ಕಡಗಾಳೆ ಹಿಡಿಯುತಾ ರಣಭೇರಿ ಬಾರಿಸುತಾ ಯಿದ್ದು, ಮಹತ್ತವಾದ ಜ್ಯೋತಿ ಯಿರಿಸಿ, ಯೀ ಪ್ರಕಾರ ರಾತ್ರಿ ಕಳದರು. ಸೂರ್‍ಯ ವುದಯವಾಯಿತು. ಅಲ್ಲಿಂದಾ ಕೊಮಾರರಾಮನು ಮನಿಗೆ ಬಂದು ಬೋಜನಾ ಮಾಡಿ, ತನ್ನ ಕಡೆಯಿದ್ದ ಅವರನಾ ಕರಿಹಿಸಿ, ಸಮಸ್ತರಿಗೆ ಭೋಜನಾ ಮಾಡಿಸಿ, ಅವರವರಿಗೆ ವಸ್ತ್ರ ಆಭರಣಗಳು ಕೊಟ್ಟು, ತಾನೂ ವಸ್ತ್ರ ಆಭರಣಯುಕ್ತನಾಗಿ, "ಸಂಗ್ರಾಮಶೂರರಾ ರಾಯಾ"ಯಂಬೊ ತೇಜಿನಾ ಶೃಂಗಾರಾ ಮಾಡಿದನು. ಆಶ್ವಾರೂಡನಾಗಿ ಕಾಟ್ಟಣ್ಣನ ದುರ್ಗದಲ್ಲಿ ಯಿಟ್ಟು, ತಾನು ಯುದ್ಧಕ್ಕೆ ಪ್ರದ್ಯುಕ್ತನಾಗಿ ಯಿದ್ದ ಸಮಯದಲ್ಲಿ ಕಾಟಣ್ಣನು ಮುತ್ತಿನ ಸತ್ತಿಗೆಯ ಯೆತ್ತಿಸಿ, ಹಡೆಕೆಯಾ ಬ[>ಬಿ]ರದು ಮತ್ತು ಚಿತ್ರದ ಮಕರ ತೆಕ್ಕೆಯು ಯಿದು ಸಹಿತವಾಗಿ ಕೊಮಾರರಾಮನು ನೇಮಿ ದಂಡಿನ ಮೇಲೆ ಹೊರಟನು.

ಯೀ ಕೊಮಾರರಾಮನಾ ಶತೃವಾದ ನೇಮಿದಂಡಿನಲ್ಲಿ ಯಿರುವ ಮಾತಂಗಿಯೆಂಬೋ ಸ್ತ್ರೀ ಕಂಡು "ಅರಿರಾಯಾ ಕೊಮಾರರಾಮ"ಯೆಂದು ಕೊಂಡಾಡಿ, "ನೀನು ಧ[>ಧು]ರಧೀರಾ ರಾಮನ ಸರಿ. ನೀನು ಅರಿರಾಯರನಾ ಚಲದಿಕ್ಕಿದ ಚಲದಂಕಾ" ದುರ್ಗಯಿಳು[+ದು] ಬರುವಂಥಾ ಸಂಭ್ರಮವನ್ನು ಕಂಡು, ಆವಾಗ್ಯೆ ಮಾತಂಗಿ ತನ್ನ ಕಡೆಯಿದ್ದ ಖಾನರನಾ ಕರಿಸಿ, ಸಿದ್ಧರ ಧರಕ್ಕೆ ಸೈನ್ಯವನ್ನು ಭಾಗಮಾಡಿ ದುರ್ಗದ ನಾಲ್ಕು ದಿಕ್ಕಿನಲ್ಲಿ ನಿಂತರು. ಕೊಮಾರರಾಮನ ಕಡೆ ಆವಾಗ್ಯೆ ಯಿದ್ದ ಸೈನ್ಯ ಸಾವಿರ ಡೊಳ್ಳು, ಸಾವಿರ ನಿಸಾಳು, ಸಾವಿರ ಲಗ್ಗೆವೊರೆಗಳು, ಸಾವಿರ ವೊರಳುವು ಕೊಂಬು ಹೆಗ್ಗಾಳೆಯು, ಸಾವಿರ ರವುಡೆ ನಾಗರಸರಾ ಯೀ ವಾದ್ಯದ ರಭಸಕ್ಕೆ ಮೇದಿನಿ ನಡಗಿತು. ಸಂಗ್ರಾಮಕ್ಕೆ ಸಮ್ಮುಖವಾಗಿ ಕೊಮಾರರಾಮನು ಬಂದನು. ಯೀತನ ಪರಿವಾರವನ್ನು ಕೆಲವು ಮುಖ್ಯಸ್ಥರು ಸಹಾ ಯಿದ್ದರು. ಆ ಸಮಯದಲ್ಲು ನೇಮಿ ಕಡೆ ರಾವುತರು ರಾಮನ ಸಂಗಡ ಭಾಷೆ ಕೊಟ್ಟು "ಕೋಟೆ ಬಾಗಿಲು ತೆರಿ"ಯೆಂದರು. ಆ ಸಮಯದಲ್ಲು ಹೆಬ್ಬಾಗಿಲು ಯೆಂಬೋದು ತೆರಸಿ, ನಿಬ್ಬರದಲ್ಲಿ ಬಂದವರನಾ ವಬ್ಬಬ್ಬರಾಗಿ ಯಿರಿದನು. ಅವರು ಯಡಬಲದಲ್ಲಿ ಬೊಬ್ಯಾಡಿ ವೋಡಿದರು. ಕೆಳಕೋಟೆಯಲ್ಲು ಕಟ್ಟಿನಾಯಕಾಯಂಬವನ್ನಾ ನೇಮಕಾ ಮಾಡಿ ಕಳುಹಿಸಿ, ವುಳದ ಮಂದೀನಾ ಪಿ[>ಏ]ಳುಕೋಟೆಯನೇರಿ ಅಲ್ಲಿಂದಾ ನೇಮಿಯ ದಂಡು ಕಣವಿಯಾ ಕಡೆ ಯಿರಲಾಗಿ,

ಆ ಕಣವಿಗೆ ಕೆಲವು ಮಂದೀನಾ ಕಳಿಸಿ, ನೇಮಿ ತುರಕರ ಸೈನ್ಯ ಮುಂಭಾಗದಲ್ಲು ಸಮ್ಮುಖದಲ್ಲು ಕೆಲವು ಮಂದಿ ಯಿಟ್ಟು, ತುರಕರನಾ ಮೂರು ಗಂಡಸದಿಯಲ್ಲಿ ಶಿಕ್ಕಿಸಿಕೊಂಡು, ತುರಕರನಾ ಸಂಹಾರ ಮಾಡುತ್ತಾ ಬಂದರು.

ಹೀಗೆ ಯಿರುವಾಗ್ಯೆ ಮಾತಂಗಿ ಸಾಹಸವನ್ನು ಮಾಡಿ ಕೋಟೆಗೆ ಲಗ್ಗೆ ಮಾಡಿದಳು. ಮಾತಂಗಿ ಆನೆಯನ್ನು ಯೇರಿ ತನ್ನ ಕಡೆ ಯಿದ್ದಂಥಾ ಖಾನರನಾ ಬರಹೇಳಿ ಕೈಬೀಸಿದಳು. ಆವಾಗ್ಯೆ ಕುಮ್ಮಟದುರ್ಗಕ್ಕೆ ನಾಲ್ಕು ಕಡೆಯಿಂದಾ ಲಗ್ಗೆ ಯೇರಿದರು. ಆ ಸಮಯದಲ್ಲು ಘೋರವಾದ ಯುದ್ಧವಾಯಿತು. ಮಹಾತ್ತಾದ ಪ್ರಜನ್ಯವೋಪಾದಿಯಲ್ಲಿ ಬಾಗ[>ಣ][೧]ಗಳು ಮುಂತಾದ ಆಯುಧಗಳಿಂದಾ ಯುದ್ಧ ಮಾಡಿದರು. ಆ ಸಮಯದಲ್ಲು ತುರಕರ ಲಗ್ಗೆ ಮುರದು ಹಿಂದಕ್ಕೆ ತೆಗದು ಕೊಮಾರರಾಮನ ಕಡೆ ಅವರು ತುರುಕರ ಗುಡಾರಗಳಲ್ಲಿ ಹೋಗಿ ಹತವನ್ನು ಮಾಡಿದರು. ಮುತ್ತಿಗೆಗೆ ತುರುಕತ ಕಡೆಯಿಂದಾ ಬಂದ ಲಕ್ಷ ಕುದುರೆಗಳ ವಳಗೆ ಕೆಲವು ಮಂದಿ ಹಿಂದಕ್ಕೆ ನಿಂತರು. ಆದ್ದರಿಂದಾ ತುರುಕರು ದುರ್ಗದ ಮೇಲೆ ಹಾಕಿ[+ದ] ಮುತ್ತಿಗೆ ತೆಗದು ಹಿಂದಕ್ಕೆ ಹೋದರು. ಯೀ ಯುದ್ಧದಲ್ಲಿ ಕೊಮಾರರಾಮನ ಕಡೆಯವರು ಶಿಡಿಲೋಪಾದಿಯಲ್ಲಿ ಹೊಡಿಯುತಾ ಯಿದ್ದರು. ಸರ್ವವನ್ನು ಗೆದ್ದುಕೊಂಡು ಬಾಹೊ ಹಾಂಗೆ ತುರುಕತ ದಂಡಿನ ಮೇಲೆ ಹೋಗುತಾ ಯಿದ್ದರು. ಅವರನಾ ಕಂಡು ಓಡುತಾಯಿದ್ದರು. ತುರುಕರ ದಂಡಿಗೆ ಕಿಚ್ಚು ಹಚ್ಚಿದಾಗೆ ಆಯಿತು. ಮತ್ತು ಕಣವಿಯಲ್ಲು ಕಟ್ಟಿ ಅಲ್ಲಿನ್ನು ಯಿದೇ ಪ್ರಕಾರ ಸಂಹಾರ ಮಾಡಿದರು. ತುರುಕರ ದಂಡಿಗೆ ಸುತ್ತುಮುತ್ತು ಯಿದ್ದವರನಾ ಸಂಹಾರ ಮಾಡಿದರು. ಕೊಮಾರರಾಮನ ಕಡೆಯಿದ್ದ ಅನೇಕ ಕುದುರೆ ಮುಂತಾದು ಬಹು ವುಲ್ಲಾಸವಾಗಿ ತುರುಕರನಾ ಹೊಯ್ಯುತಾ ಯಿದ್ದರು. ದಶದಶದಲ್ಲಿ ಯಿದ್ದ ಖಾನರನಾ ಕಡದರು. ತುರುಕರ ದಂಡಿನಲ್ಲಿ ಬಹು ಮಂಡಲೀಕರ ತಲೆ, ಕೊಮಾರರಾಮನು ಕೊಯ್ದನು. ತುರುಕರ ದಂಡಿನಲ್ಲಿ ಬಹು ವಾತಾಹತವಾಗಿ ಭೂತಪ್ರೇತಗಳಿಗೆ ಕೊಮಾರರಾಮನು ಆಹಾರು ತೃಪ್ತಿ ಮಾಡಿಸಿದನು. ಕೊಮಾರರಾಮನ ಬಳಿಯು ಯಿದ್ದ ಆಯುಧಗಳು ಪರಸು ೧, ಪಟ್ಟೆ ೧, ಪಿಂಡಿವಾಳ ೧, ತಲೆರವಳಿ ೧, ವಜ್ರಮುಷ್ಟಿ ೧, ಯಿದರಿಂದಾ ಬಹು ಮಂದಿಯ ಮರಣವನ್ನು ಹೊಂದಿದರು. ಪ್ರಥಮದಲ್ಲಿ ಧೂಳಿಪಟ ಮಾಡಿ ಯರಣೇ ಸಾರಿ ಅದರಕ್ಕಿಂತಾ ಅಧಿಕವಾಗಿ ಮಾಡಿದನು. ಕೊಮಾರರಾಮನ ಕಡೆ ಹೊನ್ನಾಘಂಟೆಯ ಮಂದಿ ಯಾವತ್ತು ಸಂತೋಷಯುಕ್ತವಾಗಿ ಕೊಮಾರರಾಮನ ಕಡೆ ಅವರು ತಮ್ಮ ತಮ್ಮ ಪರಾಕ್ರಮವನ್ನು ತೋರಿಸುತಾ ಯಿದ್ದರು. ಅವರವರಿಗೆ ವುಡುಗೊರೆ ಕೊಮಾರರಾಮನು ಕೊಡುತಾ ಯಿದ್ದನು. ಮತ್ತು ಕೊಮಾರರಾಮನು ಘೋರವಾದ ಯುದ್ಧವನ್ನು ಮಾಡಿ ನೇಮಿಯ ದಂಡಿನಲ್ಲಿ ರಕ್ತಪ್ರವಾಹ ಹರಿಸಿದನು.

ಮತ್ತು [>ತ್ತೂ] ನೇಮಿಯವರು ೨ ಲಕ್ಷ ಕುದುರಿಗಳು ಶೇರಿಸಿ, ನಡದು ಬಂದರು. ಅದರಲ್ಲಿ ಯಿದ್ದ ಮುಖ್ಯ ಸರದಾರು ಮಾತಂಗಿ, ಹೇಮಾದ್ರಿಖಾನ, ಹುಣದಮಿಯಖಾನ, ಸಮರದಖಾನ, ಸಾವಿರಖಾನ, ಚಾಮರಖಾನ, ಬಲಿದೇಹದಖಾನ, ಚಿಮ್ಮಾರಮಂಡಿಯಖಾನ,

---

೧+ ನ(ಮಾ)

ಯಿವರು ಬಂದಲ್ಲಿ ಮಾತಂಗಿ ಮಾತ್ರ ತಪ್ಪಿದಳು. ಕಡಿಮೆಖಾನರು ರಾವುತರು ನಾಶವಾದರು. ಯಿವರ ರಕ್ತಮಾಂಸಗಳು ಭಕ್ಷಿಸೋ ಬಗ್ಗೆ ಭೂತಗಳ ಹಿಂಡುಗಳು ಬಂದು ಅವರಿಗೆ ತೃಪ್ತಿ ಆಗುತಾ ಯಿತ್ತು. ಕಾಗಿಗಳು ಗಿರ್ದವಾಯಿಸಾ ಮುಂತಾದ ಪಕ್ಷಿಗಳು ತನ್ನ ಆಹಾರವನ್ನು ತೆಗದುಕೊಳ್ಳುಥ್ಥಾ ಯಿದ್ದವು. ಯೀ ಭೂತದೊಳು ಚಂದಚಂದದಿಂದಾ ಬೊಬ್ಬಿಡುತಾ ಬಹು ಸಂಭ್ರಮದಿಂದಾ ಬಾಹೊದು. ಶ್ಯಾಕಿನಿ ಡಾಕಿನಿ ಕುಣಿದಾಡುತಾ ಬರೋದು ಕಂಡು, ಜನರು ಭಯಭೀತಸ್ತರಾದರು. ಯೀ ಭೂತಗಳು ಆಹಾರತೃಪ್ತಿ ಆದ್ದರಿಂದಾ, ಕೊಮಾರರಾಮನಾ ಹೆಸರು ಕೊಂಡಾಡುತಾ ಯಿದ್ದರು. ಯೀ ಪ್ರಕಾರ ಕೊಮಾರರಾಮನು ಯುದ್ಧ ಮಾಡಿದನು. ಆ ಸಮಯದಲ್ಲಿ ಭಟ್ಟರು ಕೊಮಾರರಾಮನ ಕೊಂಡಾಡುತಾ ಯಿದ್ದ [>ದ್ದು], ಭಟಾಂಗನಿಗೆ ಕೊಂಡಾಡುತಾ ಯಿದ್ದರು. ಮತ್ತು ನೇಮಿ ಕಡೆ ಅವರು ಬಂದು ಬೊಬ್ಬಿಡುತಾ ತುರುಕರು ಕುಮ್ಮಟದುರ್ಗಕ್ಕೆ ನಾಲ್ಕು ದಿಕ್ಕಿನಲ್ಲಿ ಯೇರಿದರು. ಮಾತಂಗಿ ಮುಂತಾದ ಮೊತ್ತದಖಾನರು ನೇತ್ರಮುಖದಖಾನರು "ಕೊಮಾರರಾಮನ ತಲೆಕೊಯಿದು ತರಬೇಕೆಂ" ಶಪಥಾ ಮಾಡುತಾ ಲಗ್ಗೆ ಯೇರಿದರು. ಕುಮ್ಮಟದುರ್ಗವನ್ನು ಚಿತ್ರದ ಕೋಟೆ ಮುತ್ತಿನ ತೆನೆಗಳು ಸುತ್ತು ಫಿರಂಗಿತಳು ಸಹಾ ಯುದ್ಧವನ್ನು ಆಗುತಾ ಯಿರಲಾಗಿ, ಮಾತಂಗಿಯು ಕುಮಾರರಾಮನ ಸಹ ಆಯಿದು ಮಂದಿ ಮುಖ್ಯಸ್ತರ ತಲೆಕೊಯ್ಯಬೇಕೆಂದು ಲಗ್ಗೆ ಯೇರುವ ಸಮಯದಲ್ಲಿ, ದುರ್ಗದಲ್ಲಿ ಯಿರುವ ಅವರನ್ನು ಡಂಕಣಿವಂತ, ಬಿಸಿಡಲಂಬಿ, ಕವಣೆಯಿಂದಾ ಶಖ್ಯಿಯಿಲ್ಲದಂತೆ ಹೊಯಿದರು. ಅದರಿಂದಾ ತುರುಕರು ಯೀ ಪೆಟ್ಟು ತಾಳಲಾರದೇ ಲಗ್ಗೆ ಬಿಟ್ಟು ಮುರದು ಹಿಂದಕ್ಕೆ ಹೋದರು. ಅವರವರವೊಳಗೆ ಮಾತನಾಡುತಾ ಯಿದ್ದರು: "ಕುಮ್ಮಟದುರ್ಗ ಬಹುಮಂದಿನಾ ಬಲಿ ತೆಗೆದುಕೊಳ್ಳಿತು, ಯಿರು ಹೊರತು ಮುಖ್ಯಸ್ಥ ಸರದಾರು ಅನೇಕ ಮಂದಿ ಹತವಾದರು"ಯಂದು ಮಾತಂಗಿಯು ಮತ್ತು ಬಿಲಾರಖಾನನೆಂಬೋ ಆತನು "ಯಿದು ನಾನು ಸಾದಿಸುತ್ತೇನೆ" ಅನಲಾಗಿ, ಕೊಮಾರರಾಮನ ಅಣ್ಣ ಕಾಟಣ್ಣನು ಅವರಿಗೆ ಉತ್ತರಾ ಕೊಡುತಾನೆ : "ನೀವು ವ್ಯರ್ಥವಾಗಿ ಪ್ರಾಣವನ್ನು ಕಳಕೊಳ್ಳಬ್ಯಾಡರಿ, ಕೊಮಾರರಾಮನ ಮಹಿಮೆ ನಿಮಗೆ ಪ್ರತ್ಯಕ್ಷವಾಗಿ ತಿಳದು ಯಿದೆ" ಅನಲಾಗಿ, ಮಾತಂಗಿಯು ತನ್ನ ದಂಡು ಹಿಂದಕ್ಕೆ ವೊಂದು ಗಾವುದ ದಾರಿ ಮೇಲೆ ಹೋಗಿ ನಿಂತಳು. ಅಲ್ಲಿ ಮಾತಂಗಿಯು ಯೋಚನೆಯನ್ನು ಮಾಡಿ "ಯಿನ್ನು ಹತ್ತು ದಿನವಾದರೂ ನಿಂತು ಕೊಮಾರರಾಮನಾ ತಲೆ ತೆಗೆದುಕೊಂಡು ಹೋಗುತ್ತೇನೆ. ನಾನು ಸುರತ್ರಾಳ ಕಡೆಯಿಂದ ಅಪ್ಪಣೆ ತೆಗೆದುಕೊಂಡ ಬರುವಾಗ್ಯೆ ಸುರತಾಳನು ಕೊಮಾರರಾಮನಾ ತಲೆ ತಾರದೇ ಯಿದ್ದರೆ ನೀವು ನನಗೆ ಮೋರಿ ತೋರಿಸಬೇಡಿರಿಯೆಂದು ಹೇಳಿದಾನೆ. ಆದರಿಂದಾ ನಾವು ಆಯವತ್ತೂ ಮಂದಿ ಕೂಡಿ ಕೊಮಾರರಾಮನ ತಲೆ ಕೊಯ್ಯಬೇಕೆಂ"ದು ಶಿದ್ಧಾಂತ ಮಾಡಿ, ಕೊಮಾರರಾಮನು '೬ ಲಕ್ಷ ತೆಲಗರಿಗೆ ಗಂಡಾ'ಯಂದು ಹೊಗಳಿಸುತಾನೆ. ಆದ್ದರಿಂದಾ ಕೋಟೆಯಲ್ಲಿ ಯಿರುವ ಜನರನಾ ಪಿತೂರಿ ಮಾಡಿದರು.

ಆ ಸಮಯದಲ್ಲು ಮತ್ತೂ ನೇಮಿಯವರು ಕೋಟೆಗೆ ಲಗ್ಗೆ ಯಿರೋ ಬಗ್ಗೆ ಬಂದರು. ಆವಾಗ್ಯೆ ಕೊಮಾರರಾಮನು ಚಾವಡಿಯಲ್ಲಿ ನಿಂತು ಪಗಡೆ ಆಡುತಾ ಯಿಹೊದು ಕಾಟಣ್ಣನು ಕಂಡು, "ತುರುಕರು ಲಗ್ಗೆ ಯೇರುತಾರೆ. ನೀನು ಕುಳಿತಿರುವ ಸಮಯವಲ್ಲಾ ಯೇಳು"ಯೆಂದು ಹೇಳಲಾಗಿ, ಕೊಮಾರರಾಮನು ನಗಿಯುತಾ ಸೂರ್ಯಕಾಂತ[>ತಿ]ಯಂತೆ ಯಿದ್ದನು. "ನೇಮಿ

ಅವರು ಕೆಳಗೆ ಯಿರುವ ಕೋಟೆ ಲಗ್ಗೆಯೇರಿ ತೆಗೆದುಕೊಂಡು ಅಲ್ಲಿಂದಾ ಏಳುಕೋಟೆಗೆ ಬಂದರು" ಅನಲಾಗಿ, ಕೊಮಾರರಾಮನು ತನ್ನ ಸ್ತ್ರೀಯರ ಅರಮನೇಗೆ ಬಂದನು. ಸ್ತ್ರೀ ಮುತ್ತಿನ ಗದ್ದಿಗೆ ಮೇಲೆ ಕೊಮಾರರಾಮ ಯಿರುವದು ಕಂಡು "ನನಗೆ ಜೆಟಂಗಿಸ್ವಾಮಿಯಾ ಅಪ್ಪಣೆ ಆಯಿತು. ನನ್ನ ನಿನ್ನ ರುಣಾನುಬಂಧ ತೀರಿತು" ಅನಲಾಗಿ, "ವೂಟಾ ಮಾಡಿ ಹೋಗಬೇಕು" ಅನಲಾಗಿ, ಕೊಮಾರರಾಮನು "ಉಣಲಿಕ್ಕೆ ಅವಕಾಶಾಯಿಲ್ಲಾ, ನಿನ್ನ ರುಣಾನುಬಂಧಾ ತೀರಿತು" ಯೆಂದು ಅವಳ ಕೈಯಿಂದಾ ವೀಳ್ಯವನ್ನು ತೆಗದುಕೊಂಡು, ಮತ್ತು ತನ್ನ ಸ್ತ್ರೀನಾ ಕಂಡು "ನೀನು ವುತ್ತಮಳು, ಆದರೆ ನಿನ್ನ ದೇಹವನ್ನು ಮತ್ತೊಬ್ಬರಿಗೆ ತೋರಿಸಬೇಡಾ"ಯಂದು ಹೇಳಲಾಗಿ, ಆಕಿ ಅದೇ ಪ್ರಕಾರಾ "ನಿಮ್ಮ ಶರೀರದಲ್ಲಿ ಪ್ರಾಣ ಯಿರೋವರೆಗೆ ನಾನು ಪ್ರಾಣ ಯಿಡುತೇನೆ"ಯಂದಳು. ಅಲ್ಲಿಂದಾ ಕೊಮಾರರಾಮಾ ಯೇಕಾಂಗವೀರನು ಹೋರಟನು ತನ್ನ ಸಂಗಡ ಯಿರುವಂಥಾ ಅವರಿಗೆ ಬಹುಮಾನಗಳು ಕೊಟ್ಟು ಮತ್ತು ತನ್ನ ಸ್ತ್ರೀ ಬಟ್ಟಲನಲ್ಲಿ ಹಾಲು ಅನ್ನಾ ತಂದುಕೊಡಲಾಗಿ, "ನನಗೆ ವುಣಲಿಕ್ಕೆ ಪುರುಸೊತ್ತಿಲ್ಲಾ" ಅನಲಾಗಿ, ಸ್ತ್ರೀ ಬಹು ಕ್ಲೇಶಾ ಮಾಡಿದಳು. ಆ ಸಮಯದಲ್ಲಿ ಸ್ತ್ರೀನಾ ಕುರಿತು ಕುಮಾರರಾಮಾ ಹೇಳುತಾನೆ: "ದೇವರು ಯೀವರಿಗೆ ರುಣಾನುಬಂಧ ಸರಿಯಂದು ಬರದು ಯಿದ್ದಾನೆ. ಅದರಿಂದಾ ವ್ಯಸನ ಬಡುವ ಕೆಲಸವಿಲ್ಲ" ಯಂದು ಮತ್ತು ಕಾಟಣ್ಣನಾ ಕಂಡು "ನಿನ್ನ ರುಣಾನುಬಂಧವಿನ್ನು ತೀರಿತು"ಯಂದನು. ಮಂದಿಗೆ ಸಂಬಳಗಳು ಹೆಚ್ಚಾಗಿ ಕೊಟ್ಟು, ಕುಮ್ಮಟದುರ್ಗದಿಂದ ಕುಂಭ, ನಿರಸ, ಜಿನ್ನಘಾಳೇ, ತಮ್ಮಟಾ, ಡೊಳ್ಳು, ನಿಸಾಳ ಮುಂತಾದ ವಾದ್ಯಗಳಿಂದಾ ಧ್ವನಿ ತುಂಬಿತು. ನಾಲ್ಕು ದಿಕ್ಕಿನಲ್ಲಿ ಕೊಮಾರರಾಮನು ಧಾರಿವಟದಲ್ಲಿ ನಿಂತನು. ಆವಾಗ್ಯೆ ಪಾಟಕರು ಹುಲಿಮುಖದಲ್ಲಿ ಬಿದ್ದರು. ಮತ್ತು ನಲ್ಲಗು ನಾಗಾ, ಬಿಲ್ಲು ಸಿಂಘಾ, ಮಿನುಗಳಪ್ಪ, ಜಲಿಬಿಲಿ, ಬುಕ್ಕನಾಯಕಾ, ಕಲ್ಲುಕೋಟೆ ಚಿಕ್ಕನಾಕಾ, ಯಕ್ಕಟಗರು, ಅಗಸಾಲೆರ ಚಿಕ್ಕ ಯೀ ಪ್ರಕಾರ ಕೊಮಾರರಾಮನ ಪ್ರಾಣಸ್ನೇಹಿತರನಾ ತುರುಕರು ಕೊಂದರು. ಕೊಮಾರರಾಮನು ಅನೇಕ ಮಂದಿನಾ ಸಂಹಾರ ಮಾಡಿದನು. ಆ ಸಮಯದಲ್ಲಿ ಕೊಮಾರರಾಮನು ತನ್ನ ಕಡೆಯಿಂದಾ ಯಿರುವ ಹೊಲಯಾ ಬಿಲ್ಲು ಯಂಬವನು ಬಿದ್ದಾ [>ದ್ದ]ನುಯಂದು ಕೇಳಿದನು. ಹಂಗೆ ಮಾದಿಗ ಹಂಪನೆಂಬವನು ನೇಮಿ ಕಡೆ ಕುದುರೆಗಳನ್ನು ಯಿರಿದು ಹಂಪನೆಂಬೊ ಮಾದಿಗನು ಬಿದ್ದನು. ಕೊಮಾರರಾಮನು ತನ್ನ ಅಣ್ಣನಾದ ಕಾಟಣ್ಣನ ಸಂಗಡ ಮಂದಿ ಕೊಟ್ಟು "ನೀನಿನ್ನು ತುರುಕರನಾ ಸಂಹಾರ ಮಾಡು"ಯಂದು ಕಳುಹಿಸಿದನು. ತುರುಕರ ಕಡೆ ಅನೇಕ ವೀರರು ಬಿದ್ದರು. ಕೊಮಾರರಾಮನು ಯುದ್ಧಾ ಮಾಡೊ ಸಮಯದಲ್ಲಿ ಆಷಾದ[>ಡ] ಪ್ರಜನ್ಯ[>ಪ್ರಜನ್ಯ] ವುಪಾಯದಲ್ಲು ಬಾಣಗಳು ಆಯಿತು. ತುರುಕರ ದಂಡಿಗೆ ಕಿಚ್ಚು ಹಚ್ಚಿದೋಪಾಯ ಮಾಡಿದರು. ಮತ್ತು ಹೆಬ್ಬುಲಿ ಹೊಕ್ಕಿದಂತ ಹೊಕ್ಕಿ ಕಬ್ಬಲಿಗಾ ನಾಗಾನೆಂಬವನು ನೇಮಿ ಕಡೆ ಬೊಬ್ಬರಖಾನಾ ಯಿರದನು.

ನೇಮಿಯವರು, ಹುಲಿಮುಖಾಯಂಬ ಬಾಗಿಲಲ್ಲಿ ಬಂದು ಯಿರುವಂಥಾ ಖಾನರು, ಕೊಮಾರರಾಮಗೆ ಸುತ್ತಿಕೊಂಡರು. ಆ ಸಮಯದಲ್ಲಿ ಕೊಮಾರರಾಮನ ಕಡೆಯವರು ಕೊಟ್ಟಿಗಾರರು ಯಂಬವರು ಶತೃಗಳ ತಲೆಗಳು ಚಂಡುಗಳು ಆಡಿದ ಪ್ರಕಾರ ಮಾಡಿದರು. ಆ ಸ್ಥಳದಲ್ಲಿ ರಕ್ತದ ವೋಕುಳಿ ಆಯಿತು. ಹೆಣದ ರಾಸಿಗಳು ಬಿದ್ದವು. ಕೊಮಾರರಾಮನ ಮನಸ್ಸಿನಲ್ಲಿ ಮತ್ತು ಕುಮ್ಮಟದುರ್ಗವನ್ನು ಕಾಯಬೇಕೆಂದು ತನ್ನ ಕಡೆಯಿದ್ದ ಐನೂರು ಕುದುರೆಯನ್ನು ಅಲ್ಲಿ ಅಲ್ಲಿ

ಯಿಟ್ಟು, ತಾನಾ ಕುದುರೆ ಮೇಲಿಂದಾ ಕೆಳಗೆ ಯಿಳದು, ತುರುಕರ ಸೈನ್ಯ ಸಂಹಾರ ಮಾಡೋದು, ನೇಮಿ ಕಡೆ ಮಾತಂಗಿಯು ತನ್ನ ಕಡೆಯಿದ್ದ ರಣಭೇರಿ ಮುಂತಾದ ವಾದ್ಯಗಳಿಂದ ಶೂರ ಶೂರಯೆನಿಸಿಕೊಂಬೊ ಅಂಥಾ ಅವರನಾ ಸಂಗಡಾ ತೆಗದುಕ್ಕೊಂಡು ವಾದ್ಯಗಳಿಂದಾ, ಬಾಣ ಟಣತ್ಕಾರದಿಂದಾ ಧ್ವನಿ ಅಂಬರವನ್ನು ತುಂಬಿತು. ಮೇಘದ ಗರ್ಜನೊಪಾಯದಲ್ಲು ಠಣತ್ಕಾರವಾಗುತಾಯಿತ್ತು. ಮಾತಂಗಿ ಕಡೆ ಅವರು "ಯೀತನೆ ಕೊಮಾರರಾಮಾ"ಯಂದು ತೋರಿಸಿದರು. ಕೊಮಾರರಾಮನ ಕಡೆ ಯಿರುವಂಥಾ ವಾದ್ಯಗಳಿಂದ ಅಗಾಧಶಬ್ದವಾಗುತಾ ಯಿತ್ತು. ಕೊಮಾರರಾಮನು, ಮಾತಂಗಿ ತಾನು ವೀರಜಡೆ ಬಿಟ್ಟು ಯಿದ್ದಳು. ಆಕೆಯ ಜಡೆಯನ್ನು ಹಿಡಿದು ಶಳದನು. ನೇಮಿ ಅವರ, "ತಮಗೆ ಮುಖ್ಯವಾದ ಮಾತಂಗಿ ಶಿಕ್ಕಿದಳು"ಯಂದು ನೇಮಿಯವರು ಹಿಂದಕ್ಕೆ ಹೋದರು. ಕೊಮಾರರಾಮನು ಮಾತಂಗಿಯಲ್ಲಿ ಯಿರುವಂಥಾ ಮೂಗುತ್ತಿ ಕಂಡು "ಯೀಕಿ ಸ್ತ್ರೀ ಯಿದ್ದಾಳೆ. ನಾನು ಶೂರನೆನಿಸಿ ಸ್ತ್ರೀಯನ್ನು ಕೊಂದಲ್ಲಿ ಸ್ವರ್ಗಕ್ಕೆ ಹೋದಲ್ಲಿ ಮೋಕ್ಷಾರ್ಥವಾಗದು"ಯಂದು ತಿಳಿದು ಬಿಟ್ಟು ಕೊಟ್ಟನು. ಕಡಿಮೆಯಿದ್ದ ಮಂದಿಗೆ ವಾತಾಹತವನ್ನು ಮಾಡಿ ದುರ್ಗದ ಬಾಗಿಲು ಯಿಕ್ಕಿಸಿತನು. ಅಲ್ಲಿಂದಾ ಗುಗು[>ಗೂಗಿ]ಗಲ್ಲಿಗೆ ಬಂದನು. ಮತ್ತು ನೇಮಿ ಕಡೆ ಅವರು ಬಂದು ಹತ್ತಿದರು. ಯುದ್ಧವು ಆಯಿತು. ಬಹುತರ ತುರುಕರು ಕಣವಿ ಬಾಗಿಲಲ್ಲಿ ಬಿದ್ದರು. ಕೊಮಾರರಾಮನ ಕಡೆ ಅವರು ಸಂತೋಷದಿಂದ ಹಾರ್‍ಯಾಡೊದು ಕಂಡು ನಗಿಯುತಾ ಯಿದ್ದನು. ಕಾಟಣ್ಣನಾಯಕರು ಕಡುದಾಡುತಾ ಕೊಮಾರರಾಮನ ಕಡೆ ನೋಡುತಾ ಯಿದ್ದನು. ಕೊಮಾರರಾಮನು ಅಗಳತೆ ಹಾರಿ ಹೊರಟನು. ಆ ಸಮಯದಲ್ಲಿ ಕಾಟಣ್ಣನು ಕೊಮಾರರಾಮನ ಪಾದಕ್ಕೆ ಬಿದ್ದು, "ನೀನು ಹೊರಗೆ ಹೋಗಬೇಡಾ"ಯಂದು 'ಬಹುವಿಧದಿಂದಾ ಸ್ತೋತ್ರ ಮಾಡಿನದು. ಆತಗೆ ಕೊಮಾರರಾಮನು ಹೇಳುತಾನೆ: "ಯೀ ವರಿಗೆ ನಾನು ಶೂರನೆನಿಸಿ ಜೀವಕ್ಕೆ ಅಂಜಬಾರದು. ನೀನು ಹೊಸಮಲೆದುರ್ಗಕ್ಕೆ ತಂದೆ ಕಂಪಲಿರಾಯನ ಕಡೆ ಹೋಗು." ಅನಲಾಗಿ, ಕಾಟಣ್ಣನು ಉತ್ತರಾ ಹೇಳುತಾನೆ: "ನಿನ್ನಾ ಬಿಟ್ಟು ನಾನು ತಂದೆ ಬಳಿಗೆ ಹೋದರೆ ಹರಿಯಾಳದೇವಿ ಯೇನು ಹೇಳೋಳು, ನಿನ್ನಂಥಾ ತಮ್ಮನಾ ಬಿಟ್ಟು ನನ್ನ ಜೀವಾ ಬಿಟ್ಟು ನಾನು ಬದುಕಬೇಕಾ. ನಾನು ನಿನ್ನ ಸಂಗಡ ಸಾಯೊದು ಸರಿ"ಯಂದು ಹಿಂದಕ್ಕೆ ಬರಹೇಳುತಾ ಪ್ರಳಾಪ ಮಾಡುತಾ ಯಿದ್ದನು. ಕೊಮಾರರಾಮನು ಕಾಟಣ್ಣನ ಕುರಿತು ಹೇಳುತಾನೆ : "ನೀನು ಮನಿಗೆ ಹೋಗಿ ಹೆಣ್ಣುಮಕ್ಕಳನಾ ಕೊಂದು ಬಾ" ಅನಲಾಗಿ "ನಾವು ಇರುವ ಪರಿಯಂತ್ರ ಕೊಲ್ಲಬಾರದು" ಅನಲಾಗಿ, ಕೊಮಾರರಾಮನು ಮತ್ತು ಹೇಳುತಾನೆ: "ಪೂರ್ವದಲ್ಲು ರತ್ನಾಜಿ ನನ್ನಾ ಕೊಲ್ಲಬೇಕು ಯಂದು ಮಾಡಿ ಯಿದ್ದಳು. ಯೀ ದಿವಸ ನನಗೆ ದಿನ ಸರಿ"ಯಂದು ಹೇಳಲಾಗಿ ಕಾಟಣ್ಣನು "ನಾನು ಹೋಗೋದು ಯಿಲ್ಲ. ನನಗೆ ಅಪಕೀರ್ತಿ ಬಾಹೋದು. ನಾನು ನಿನ್ನ ಮುಂದೆ ಪ್ರಾಣ ಬಿಡುತೇನೆ" ಅನಲಾಗಿ, ಕೊಮಾರರಾಮನು ನೇಮಿ ಅವರ ಸಂಗಡ ಯುದ್ಧಮಡಿ ಬಹು ಘಾಯದಿಂದಾ ಮೈ ಯಾವತ್ತು ಬಾಣಗಳಿಂದಾ ಯಿರುವ ಕೊಮಾರರಾಮನಾ ಕಾಟಣ್ಣನು ಕಂಡು ಪ್ರಳಾಪಾ ಮಾಡುತಾ ಯಿರುವಾಗೆ, ಕೊಮಾರರಾಮನು ಹೇಳುತಾನೆ: "ನೀನು ಯಿಲ್ಲಿ ಯಿದ್ದಲ್ಲಿ ನೀನುನ್ನು ಸಾಯುತ್ತಿ. ಆದ್ದರಿಂದ ನೀನು ಕಂಪಲಿರಾಯನ ಕಡೆ ಹೋಗು"ಯಂದನು. ತರುವಾಯ ಕುಮರರಾಮನು ಘಾಯದಿಂದಾ ಯಿದ್ದನು.

ಕಾಟಣ್ಣನು ಹೊಸ[+ಮಲೆ][1]ದುರ್ಗಕ್ಕೆ ಬಂದು ಕಂಪಲಿರಾಯನ ಸಂಗಡ ಹೇಳಲಾಗಿ, ಕಂಪಲಿರಾಯಾ ಹರಿಯಾಳದೇವಿ ಸಹಾ ಬಹು ಪ್ರಲಾಪದಿಂದ ಭೂಮಿ ಮೇಲೆ ಬಿದ್ದರು. ಕಾಟಣ್ಣನು ತನ್ನ ಮನೀಗೆ ಬಂದು ಹೆಣ್ಣು ಮಕ್ಕಳನಾ ಕೊಂದು, ಮನಿಗೆ ಅಗ್ನಿಯನ್ನು ಹಚ್ಚಿ ಹೊರಗೆ ಬಂದನು. ಕಂಪಲಿರಾಯನು "ಕೊಮಾರರಾಮನು ಹೋದ ಬಳಿಕಾ ನನಗೇನು ಮಾಡಬೇಕು. ನಾನು ಪ್ರಾಣ ಬಿಡುತೇನೆ"ಯಂದು ಬಹು ಪ್ರಳಾಪಾ ಮಾಡುತಾ ಕುಮ್ಮಟಕ್ಕೆ ಬಂದನು. ತುರುಕರ ದಂಡು ಕುಮ್ಮಟದುರ್ಗಯೇರಿ ಜನರನು ಸಂಹಾರ ಮಾಡೋ ಸಮಯದಲ್ಲಿ ದುರ್ಗದಲ್ಲಿ ಕೊಮಾರರಾಮನಾ ಕಡೆ ದೇಮಶೆಟ್ಟಿಯಂಬವನು ಬಿದ್ದನು. ಬಹು ತುರಕರನಾ ಸಂಹಾರ ಮಾಡಿದನು. ಅಲ್ಲಿಂದಾ ತುರುಕರು ಗುಂಪುಕೂಡಿ ದುರ್ಗದಲ್ಲಿ ಹೊರಗೆ ಸಹಾ ಯಿರೋ ಅವರನಾ ಸಂಹಾರ ಮಾಡುತಾ, ಕೊಮಾರರಾಮನ ಬಳಿಯಾ ಬರಲಾಗಿ ಕೊಮಾರರಾಮನು ಯಿದ್ದು, ಬಹುಮಂದಿ ತುರುಕರನಾ ಸಂಹಾರ ಮಾಡಿ ತುರುಕರು ಕಾಟಣ್ಣನಾ ಯಿರದರು. ಕೊಮಾರರಾಮನು ಕಾಟಣ್ಣ ಬಿದ್ದು ಯಿದ್ದುದ ಕಂಡು ಮತ್ತು ಕೊಮಾರರಾಮನು ಯುದ್ಧ ಮಾಡುತಾ ಯಿರುವಾಗ್ಯೆ, ಜಟಂಗಿ ರಾಮೇಶ್ವರದೇವರು ಪ್ರಸನ್ನರಾಗಿ, ದಿವ್ಯವಿಮಾನವನ್ನು ತಂದು, ಕೊಮಾರರಾಮನು ವೈಕುಂಠಕ್ಕೇರಿದನು. ಆಗ ನೇಮಿಯವರು ಅವನ ಸುತ್ತ ಯಿರುವಂಥವರಾದರು. ತುರುಕರಿಗೆ ಸಮೀಪಕ್ಕೆ ಬಾಹೊ ಬಗ್ಗೆ ಧೈರ್ಯ ಸಾಲುದದರಿಂದ ಬಾಣಗಳ ಪ್ರಯೋಗ ಮಾಡುತಾ ಸಮೀಪಕ್ಕೆ ಬಂದು, ಕೊಮಾರರಾಮನ ಶಿರಸ್ಸು ಕೊಯಿದು, ಸುರತ್ರೈಳನ ಬಳಿಯ ದಿಲ್ಲಿಗೆ ಕಳುಹಿಸಿದರು. ಕೊಮಾರರಾಮನ ಸ್ತ್ರೀಗಳು ಅಗ್ನಿಪ್ರವೇಶವನ್ನು ಮಾಡಿದರು. ಕುಮ್ಮಟದುರ್ಗವನ್ನು ನೇಮಿಯವರು ಠಾಣ್ಯ ಹಾಕಿದರು. ಕುಮಾರರಾಮನ ತಲೆ ದಿಲ್ಲಿಗೆ ಟಪ್ಪದ ಮೇಲೆ ಹೋಗಿ ಶೇರಿತು. ಸುರತ್ರಳನು ತಾಂಬೂಲಾ ವುಗಳಿ ಕೊಮಾರರಾಮನ ಶಿರಸು ಕಂಡು ಬಹು ಪ್ರಳಾಪ ಮಾಡಿ, "ಯಿಂಥಾ ಶೂರನಾ ನೇಮಿ ಅವರು ಕೊಂದರು. ನಾನು ಕೈಹಿಂದಾ ತರಹೇಳಿದರೆ ಯೇನು ಕಾರಣ ಕೊಂದರು? ನನಗೆ ಗಂಡಯೆನಿಸಿ ಹೊಗಳುತ್ತಾ ಯಿದ್ದನು"ಯಂದು ಕೊಮಾರರಾಮನಾ ಬಹುವಿಧದಿಂದಾ ಆತನ ಪರಾಕ್ರಮ ನುಡಿಯುತಾ ಯಿದ್ದು, ಕೊಮಾರರಾಮನ ತಲೆ ದಿಲ್ಲಿ ಪಟ್ಟಣದಲ್ಲು ವೊಂದು ಸುರಪನ್ನೆ ಗಿಡಕ್ಕೆ ಕಟ್ಟಿದನು. ಪಟ್ಟಣದ ಜನರ ಅದನ್ನು ಕಂಡು ಬಹು ಪಶ್ಚಾತಾಪ ಮಾಡುತಾ ಯಿದ್ದರು. ಕೊಮಾರರಾಮನ ತಲೆ ದಿಲ್ಲಿ ಪಟ್ಟಣದಲ್ಲು ರಾತ್ರಿ ಕಾಲದಲ್ಲು ಅಘೋರವಾಗಿ ಶಬ್ದವನ್ನು ಮಾಡಲಾಗಿ, ಆ ಶಬ್ದದಿಂದಾ ಬಹುಮಂದಿ ಮೃತವನ್ನು ಹೊಂದಿದರು. ಆದ ಕಾರಣ ಸುರತ್ರಳನು ಕೊಮಾರರಾಮನ ತಲೆ ಕುಮ್ಮಟದುರ್ಗಕ್ಕೆ ಕೊಮಾರರಾಮನ ಭಟ್ಟೆ ಕೈಯಲ್ಲಿ ಕಳುಹಿಸಿದನು. ಅಲ್ಲಿಂದಾ ಕೊಮಾರರಾಮನ ಭಟ್ಟರು ಗೋವಿಂದಯ್ಯ, ಗೋಪಾಲಯ್ಯ, ರೂಪದೇವಯ್ಯ ಯಿವರು ಆ ತಲೆ ಕುಮ್ಮಟದುರ್ಗಕ್ಕೆ ತಂದು ಪೂಜೆಯನ್ನು ಮಾಡುತಾ ಯಿದ್ದರು.

ನೇಮಿಯವರ ದಂಡು ಜಯಪ್ರದಮಾಡಿ ದಿಲ್ಲಿಗೆ ಹೋದರು. ಕಂಪಲಿರಾಯಗೆ ಬಹುದಿನದ ಮೇಲೆ ಕೊಮಾರರಾಮನಯಂಬೊ ಪುತ್ರ ಹುಟ್ಟಿದ[>ದ್ದ]. ಮಗ ಯುದ್ಧದಲ್ಲಿ ಹೋದ ಬಳಿಕಾ ಸಂತಾನಯಿಲ್ಲದೇ ಹೋಯಿತು. ಯಿದು ಹೊರತು ಯಿದು ಕಂಪಲಿರಾಯಗೆ ಕೊಮಾರರಾಮ

---

[1]+ ತ(ಮಾ)

ಹುಟ್ಟಿದ ತತ್ಪೂರ್ವದಲ್ಲಿ ಕಾಟಣ್ಣಯಂಬನಾ ಸಾಕು ಮಾಡಿಕೊಂಡಿದ್ದನು. ಆ ಕಾಟಣ್ಣನು ಕೊಮಾರರಾಮ ಹೋದ ಬಳಿಕಾ ತನ್ನ ಪ್ರಾಣತ್ಯಾಗ ಮಾಡಿಕೊಂಡನು. ಯೀ ಕೊಮಾರರಾಮನು ಹದಿನಾರು ವರುಷದ ಪ್ರಾಯದಲ್ಲಿ ಯುದ್ಧಸಂಗ್ರಾಮದಲ್ಲಿ ಸ್ವರ್ಗಸ್ಥನಾದನು. ಯೀತಗೆ ಸಂತಾನಯಿಲ್ಲವು. ಯಿವರಿಗೆ ಕಂಪಲಿರಾಯನ ಸಂತತಿ ನಿಂತು ಹೋಯಿತು. ಯೀ ಭಟ್ಟರಿಗೆ ಕುಮ್ಮಟದಲ್ಲಿ ವೊಂದು ಕೊಮಾರರಾಮನ ಹೆಸರಿಂದಾ ಸುವರ್ಣ ಶಿರಸು ಕಂಪಲಿರಾಯನು ಮಾಡಿಸಿ, ಭಟ್ಟರ ವಶಕ್ಕೆ ಕೊಟ್ಟು, ಚ[>ಭ]ಟ್ಟರಹಳ್ಳಿಯಂಬೊ ಗ್ರಾಮದಲ್ಲಿ ಯಿಟ್ಟುಕೊಂಡು ಪೂಜೆ ಮಾಡುತ್ತಾ ಯಿದ್ದರು. ಕೆಲವು ದಿವಸದ ಮೇಲೆ ರಾಜಿಕ ದೈವಿಕದಿಂದಾ ಆ ಸುವರ್ಣ ಶಿರಸ್ಸು ಹೋಯಿತು. ತದಾರಭ್ಯ ಭಟ್ಟಿಯಾಗ್ರಾಮ ಸರ್ವಮಾನ್ಯವಾಗಿ ನಡಿಯುತ್ತಾ ಬರಲಾಗಿ, ಕುಂಪಣಿ ಅಮಲಿನಲ್ಲಿ ಅರ್ಧ ಸರಕಾರಿಗೆ ಅರ್ಧ ಭಟ್ಟರಿಗೆ ನಡೆಯುತ್ತಾ ಯಿದೆ.

ಯೀ ಪ್ರಕಾರ ಕೈಫಿಯತು ಬರೆಸಿದವರ ಭಟ್ಟರ ಹೆಸರು ಕಾಟಪ್ಪ ವೊಬ್ಬ, ಹೊಸಪುರಪ್ಪ ವೊಬ್ಬ, ನರಸಪ್ಪ ೧, ರಾಮಯ್ಯ ೧.

ಬರೆದ ತಾರೀಖು ಅಗಟೊಬರು ೧೮೦೯ ಸಂವತ್ಸರ ಬ ದಸ್ತೂರ ನಾರಾಯಣರಾವು ಮುತ್ಸದ್ದಿ, ಮುತ್ತೈನು ಮೇಸ್ತರ್ ವಾರ್ದು ಸಾಹೇಬ್, ಸರವಿಯ್ ಆಶಿಫಾಂ[>ಷ್ಟಂ]ಟು ಯಿಲಾಖೆ ಮೇಜರ್ ಕಾಲನ್ ಮೆಕ್ಕಿಂಜಿ ಸಾಹೇಬರು.

❖❖

೧೦೭
ತಾಲೂಕು ಕಂಪಲಿ ಕೈಫಿಯತ್ತು

ಮೆಕೆಂಝಿ ಸಂಪುಟ : ೧೪೬

ಶ್ರೀ ವಿರೂಪಾಕ್ಷದೇವರ ಪೂರ್ವಭಾಗದಲ್ಲಿ ವಿರೂಪಾಕ್ಷಕ್ಕೆ ನಾಲ್ಕು ದೂರದಾರಿ[>ಹರದಾರಿ] ಮೇಲೆ, ತುಂಗಭದ್ರಾ ತೀರದಲ್ಲಿ ಇರುವ ಕಂಪ್ಲಿಗ್ರಾಮದ ಕೈಫಿಯತ್ತು ವಿವರ:

ಪೂರ್ವ ತ್ರೇತಾಯುಗದಲ್ಲಿ ತುಂಗಭದ್ರಾತೀರದಲ್ಲಿ ಕಪಿಲಋಷಿಗಳು ತಪಸ್ಸು ಮಾಡಿಕೊಂಡು ಯಿದ್ದರು. ಕಪಿಲಕ್ಷೇತ್ರವೆಂದು ನಾಮಧೇಯ ಯಿತ್ತು. ಕಲಿಯುಗದಲ್ಲಿ ಯಿಲ್ಲಿ ಒಂದು ಸಣ್ಣ ಗ್ರಾಮವಾಗಿ ಯಿರಲಾಗಿ ದಿನೆ ದಿನೆ ವೃದ್ಧಿಯನ್ನು ಹೊಂದಿ ಯಿರಲಾಗಿ, ತ್ರೈಲೋಕ್ಯ ಮಲ್ಲಾರಿರಾಯನು ತಾನು ಯೀ ಸ್ಥಳದಲ್ಲಿ ನಿಂತು ದೇವಾಲಯ ಮುಂತಾದ್ದು ಕಟ್ಟಿಸಿ, ಇಲ್ಲಿ ಕೆಲವು ದಿನ ರಾಜ್ಯಭಾರ ಮಾಡಿಕೊಂಡು, ಕೆಲವು ಹಳೆಕನ್ನಡ ಶಾಸನವನ್ನು ಮಾಡಿಶಿ ಯಿದ್ದನು. ಯಿದಕ್ಕೆ ದಾಖಲುಯೇನೆಂದರೆ : ಆದವಾನಿ ಹವೇಲಿ ತಾ॥ ಚಿಕ್ಕತುಂಬಳದಲ್ಲಿ ಹಳೆಕನ್ನಡ ಶಾಸನದಲ್ಲಿ "ಕಂಪಲಿಯ ನೆಲೆವರಿಯನೊಳ್ ಸುಖಸಂಪದ ವಿನೋದದಿಂ ರಾಜ್ಯಂಗೈಯ್ಯುತ್ತಾ ಯಿದೆ[>ರೆ]" ಯೆಂದು ಬರದು ಯಿದೆ. ಅದರಿಂದ ಮಲ್ಲಾರಿರಾಯರ ದಿನದಲ್ಲಿ ಯಿದು ವಂದು ರಾಜದಾನಿಯೆಂದು ಮಾಡಿ ಕೆಲವು ದಿನ ಆಳಿದರು.

ಶಕ ಹಾಕಬೇಕಾದರೆ ತುಂಬಳದ ಶಾಸನದ ನಕಲು ಹಜೂರಿಗೆ ರವಾನೆ ಮಾಡಿ ಯಿದ್ದಿತಾದ ಕಾರಣ, ಶಾಸನವನ್ನು ಬರದು ಯಿಲ್ಲ, ಯಿದು ಹೊರ್ತು ಯೀ ಮಲ್ಲಾರಿರಾಯನ ದಿನದಲ್ಲಿ ನಿರ್ಮಾಣವಾದ ದೇವಾಲಯಗಳು, ಹಲಬಂದಾದರು ಗುಡಿ ಘಣಿ ಕಟುಸಹವಾಗಿ ಕಾಣುವದಿಲ್ಲ.ಆ ಪ್ರಾಚೀನಶಾಸನದಲ್ಲಿ ಹಳಪೇಟೆಯಲ್ಲು ಪೂರ್ವದಲ್ಲಿ ಶಂಭುದೇವನ ಗುಡಿ ಬಳಿಯ ಹಾಳಾಗಿ ಯಿದ್ದ ಸ್ಥಳದಲ್ಲು ಯಿರುವ ಹಳೆಕನ್ನಡ ಶಾಸನ ವಡದು, ಹಾಲಿ ಸದರಿ ಬರದ ಹಳೆಪೇಟೆಯಲ್ಲು ಸೂಗರಪ್ಪನ ಭಾವಿ ಬಳಿಯ ವಂದು ವಡಕಿನಲ್ಲಿ ಯಿರುವ ಶಾಸನಕಲ್ಲು :

ಸ್ವಸ್ತ . . . . ಸಮಧಿ . . . .
. . . . .ಮಹಶಕ್ಯ
ಮಲ್ಲವಾನನ್ವಯ . . . .
. . . . (ಮಲ್ಲನೃಪ) ಮಲ್ಲಪ ಕುಲತಿಲಕಂ) . . . .
. . . .
. . . . ಕಾಂಚೀಪುರವರೇಶ್ವರಂ . . . .
. . . . ಮಲ್ಲ ಸಾಳುಸ್ವಪಲ್ಲ . . . . . .
. . . . ಜಲ ಕುಲತಿಲಕಂ
. . . .

ಯೀ ಕಲ್ಲು ಹಿಂಭಾಗದಲ್ಲಿ ಯಿರುವವರ ಕಂಪಲಿಯ ಮುಂದದಿ ಯೀ ಪ್ರಕಾರಕೆ ಅಕ್ಷರಗಳು ಮಾತ್ರ ಯಿದೆ. ಯಿದರ ಭಾವದಿಂದಲು ಮಲ್ಲರಾಯರು ಆಳಿಕೆ ಅದು ಸಿದ್ಧಾಂತ, ಅನುಮಾನ ಯಿಲ್ಲಾ. ಗ್ರಾಮದವರಿಗೆ ಯೀ ಶಾಸನ ಓದಲಿಕ್ಕೆ ಬರೋದು ಯಿಲ್ಲಾ. ಯೀ ಶಾಸನ ಅದೆ ಅಂಬುದು ಸಹ ತಿಳಿಯಲಿಲ್ಲಾ. ನಾನು ಹುಡುಕೊಳುತ್ತಾ ಕಲ್ಲುಗಳು ಶೋಧಿಸುತ್ತಾ ಬರಲಗಿ ದೃಷ್ಟಿಗೆ ಬಿದ್ದು, ಅದರ ನಕಲು ಬರಕೊಂಡು ಇದೆನು. ಆದುದರಿಂದ ಬರದು ಯಿದೆ. ಗ್ರಾಮದವರನ ಕೇಳಿದ್ರೆ ಯೀ ಮಲ್ಲರಾಯನ ಆಳಿಕೆಯಿದ್ದದ್ದು ನಮಗೆ ಠಾವಿಕೆಯಿಲ್ಲಾಯೆಂದು ಹೇಳಿದರು.

ಆ ತರ್ವಾಯ ಯೀ ಸ್ತಳಕ್ಕೆ ಪಶ್ಚಿಮ ತುಂಗಭದ್ರ ಆಚೆ ದಡದಲ್ಲಿ ದೇವಹಿತ ಸಮೀಪ ದೇವಗಿರಿ ಯಿಲ್ಲಿಗೆ ಯರಡು ಹರದಾರಿ ಯಿರಲಾಗಿ, ಆ ಸ್ತಳದಲ್ಲಿ ದೇವಗಿರಿಯಂಬೊ ಅಲ್ಲಿ[>ಗ್ರಾಮದಲ್ಲಿ] ರಾಮದೇವರಾಯ ಅರಸು ರಾಜ್ಯಭಾರಾ ಮಾಡಿಕೊಂಡು ಯಿರಲಾಗಿ, ಮಲ್ಲಪಂಥಿದೇಶ ರಾಯದುರ್ಗಕ್ಕೆ ಉತ್ತರ ನಾಲ್ಕು ಹರದಾರಿ ಯಿರುವ ಮಲ್ಲಪಂಥಿದೇಶ. ಯಿದಕ್ಕೆ ಅರ್ಥಮತಿ ಅಂದರೆ ಅರಣ್ಯಪಂಥಿ ಅಂದರೆ ಸಾಲು ಆಗಿ ಯಿರುವಂಥಾ ಯೆಂದು ಗ್ರಾಮಗಳಲ್ಲಿ ಬ್ಯಾಡರು ದಾಯಾದಿಗಳು ಯಿರಲಾಗಿ, ಅದರಲ್ಲು ಮುಖ್ಯಸ್ತನಾಗಿ ಯಿರುವ ಸಿಂಗನಾಯಕನ ಕುರಿತು ಕಡ್ಮಿ ದಾಯಾದಿಗಳು ಗ್ರಾಮಗಳು ಹೆಚ್ಚು ಕಡ್ಮಿಯಂದು ಪಾಲು ಹಂಚಿಕೊಡೊಯೆಂದು ಕೇಳಲಾಗಿ, ಯೀತನು ಗ್ರಾಮಗಳು ಹಂಚಿಕೊಟ್ಟು, ತಾನು ಸ್ವಥಾ ಹೆಂಡತಿ ಸಹ ಅಲ್ಪ ಸಾಹಸ ಯಿರಬಾರದೆಂದು ತನ್ನ ಗ್ರಾಮಕ್ಕೆ ವಾಯವ್ಯದಿಕ್ಕಿಗೆ ತುಂಗಭದ್ರಾನದಿ ದಡದಲ್ಲಿ ಯಿರುವಂಥ ದೇವಗಿರಿಯಲ್ಲಿ ಯಿರುವ ರಾಮದೇವರಾಯನ್ನು ಕಂಡು, ಅಲ್ಲಿ ತನ್ನ ಆದ್ಯಂತ್ರವೂ ವೋತ್ರ ಹೇಳಿಕೊಂಡದರಿಂದ ಬಹಳ ಸಂತೋಷ ಬಟ್ಟು, ಕಂದಾಯಕ್ಕೆ ಗ ೫೦೦ವರಹ ಸಂಬಳ ನಿಗದಿ

ಮಾಡಿಕೊಂಡು ಯಿದ್ದರು. ತರುವಾಯ ಯಿವನ ದಾಯಾದಿಗಳು ಯಿವನು ಸುಖದಲ್ಲಿ ಯಿರುವದು ಕೇಳಿ, ಅವರ್ರು ಯಾವತ್ತು ಜನರು ಯಿಲ್ಲಿಗೆ ಬಂದು ಅರಸೂ[+ಗ]ಳ ಬಳಿಯ ಚಾಕರಿ ನಿಂತರು.

ಅರ್ರುಸಗಳು ಅವರವರಿಗೆ ಸಲ್ಲೋ ಮರ್ಯಾದಿಮಾಡಿ, ಚಾಕರ್ರಿ ಯಿಟ್ಟುಕೊಂಡು ಯಿರಲಾಗಿ, ವಂದಾನೊಂದು ದಿನವು ರಾಮದೇವರಾಯರ್ರು ಬ್ಯಾಟೆ ಹೋಗಲಾಗಿ ಸಿಂಗನಾಯ್ಕ ಯಿವರ ಸಮೂಹ ಸಹಿತ ಯಿನ್ನು ಕೆಲವು ಸಮೂಹ ಸಹಿತವಾಗಿ ಮಲ್ಲಪಂಥಿದೇಶದ ಪರಿಯಂತ್ರಕ್ಕೂ ಬ್ಯಾಟೆ ಹೋಗಲಾಗಿ, ಸರ್ವಕ್ರೂರಮೃಗಗಳನ್ನು ಸಂಹಾರಮಾಡಿಕೊಂಡು ಬರುವ ವ್ಯಾಳ್ಯೆದಲ್ಲಿ ಹೇಮಮಯವಾದ ವುಡವು ಕಂಡು, ಅವ[>ದ]ರ ಬೆನ್ನು ಹತ್ತಿ ಸಮಸ್ತರು ಬರಲಾಗಿ, ಅದರ ಹಿಂದೆ ವೊಡಲಾರದೆ ಸಮಸ್ತ ಜನರೂ ನಿಂತರ್ರು. ಅದರಲ್ಲಿ ಸಿಂಗನಾಯಕನು ಆತನ . . . . ಜನ ಯಿಬ್ಬರ್ರು ಬೆನ್ನು ಹತ್ತಿ ವೊಡಿ ಬರುತ್ತಾ ಯಿರಲಾಗಿ, ಆ ವುಡವು ವಂದು ಹುತ್ತು ಹೊಕ್ಕಿತು. ಸಿಂಗನಾಯಕ ತನ್ನ ಸಂಗಡ ಬಂದವರ್ರು ಸಹಿತರಾಗಿ ಆ ಹುತ್ತು ಶೋಧಿಸುವುದರೊಳಗೆ ಆ ಹುತ್ತಿನಲ್ಲಿ ವಂದು ಕೊಪ್ಪರಿಗಿ ದ್ರವ್ಯ ಯಿತ್ತು. ಆ ದ್ರವ್ಯವನ್ನು ಕಂಡು ಜನರಿಗೆ ತಿಳಿಯಗೊಡದೆ ಮುಚ್ಚಿ, ವುಡವು ಸಿಗಲಿಲ್ಲವೆಂದು ಜನರ ಮುಂದೆ ಹೇಳಿದನು. ಅಷ್ಟರದಲ್ಲಿ ಅರಸು ವೊಂದಾನುವೊಂದು ದಿವಸ ಸಂತೋಷದಲ್ಲಿ ಕುಳಿತ ವ್ಯಾಳ್ಯಾದಲ್ಲಿ ಅರಸಿನವರನ ಕೇಳಿಕೊಂಡದ್ದು "ನನಗೆ ವಂದು ಗ್ರಾಮ ಕಟ್ಟಲಿಕ್ಕೆ ಅಪ್ಪಣೆ ಕೊಡಬೇಕಂ"ದು ಕೇಳಲಾಗಿ ಅರಸುಗಳು ಸಂತೋಷಬಟ್ಟು, ಅದೇ ಪ್ರಕಾರ ಗ್ರಾಮಕಟ್ಟಲಿಕ್ಕೆ ಅಪ್ಪಣೆ ಕೊಟ್ಟದರಿಂದ ಸಿಂಗನಾಯಕನು ತನ್ನ ಸಮೂಹ ಸಹಿತ ಆ ಕೊಪ್ಪರಿಗಿ ಯಿದ್ದ ಸ್ಥಳದಲ್ಲಿ ವಂದು ಗ್ರಾಮ ಹಾನಿರೆಯಂಬೊದು ಕಟ್ಟಿ, ಆ ಕೊಪ್ಪರ್ರಿಗೆ ವಳಗೆ ಮಾಡಿಕೊಂಡು ತನ್ನ ಖಾಸಾ ಅರಮನೆ ಕಟ್ಟಿಕೊಂಡು ಯಿರ್ರು ಯಿರಲಾಗಿ ಮತ್ತು ವಂದು ದಿವಸ ರಾಮ[+ದೇವ]ರಾಯರು ಬ್ಯಾಟೆ ನಿಮಿತ್ಯ ಆ ಪ್ರಾಂತಕ್ಕೆ ಹೋಗಲಷ್ಟಕ್ಕೆ ಅಲ್ಲಿ ವಂದು ಘನ ವ್ಯಾಘ್ರ ಯಿತ್ತು. ಬಹು ಮಂದಿನ ಸಂಹಾರ ಮಾಡ್ತಾಯಿತ್ತು. ಅದರ ಸಂಹಾರ ಮಾಡೊದ್ರು ಆರಿಂದ ಆಗದ ಕಾರಣ ಅಲ್ಲಿ ವಾಸಾಮಾಡಿಕೊಂಡು ಯಿತ್ತು. ಅರಸಗುಳು ಬ್ಯಾಟೆ ಬಂದ ಸಮಾಚಾರ ಕೇಳಿ ಸಿಂಗನಾಯಕನು ಬಂದು ಅರಸುಗಳನ್ನು ಕಂಡು, ಯೀ ವ್ಯಾಘ್ರಾ ಹೊಡಿಲಿಕ್ಕೆ ಅಪ್ಪಣೆ ಕೇಳಲಾಗಿ ಅರಸುಗಳು ಆಡಿದ್ದು, "ಬಹುಕಾಲ ನಮ್ಮ ಅನ್ನವುಂಡವರಿಂದ ಆಗಲಿಲ್ಲ. ನೀನು ಬ್ಯಾಡಾ" ಅಂತ ಬಹು ಪ್ರಕಾರಕ್ಕೆ ಹೇಳಿದರ್ರು ಕೇಳದಲೇ ತನ್ನ ಪೌರುಷದಿಂದ ವ್ಯಾಘ್ರವನ್ನು ಸಂಹಾರ ಮಾಡೋಣದರಿಂದ ಯಿ[>ಮು]ಮ್ಮಡಿ ಸಿಂಗನಾಯಕ ಯೆಂದು ಕಿತಾಬು ಕೊಟ್ಟು ಬಹುಮಾನ ಮಾಡಿದರು.

ರಾಮದೇವರಾಯರು ಯಿತ್ತಲಾಗಿ ತನ್ನ ಸ್ಥಳಕ್ಕೆ ಬಂದು ಸುಖದಲ್ಲು ರಾಜ್ಯಭಾರಾ ಮಾಡುತ್ತ ಯಿರಲಾಗಿ, ಸುಲತಾನನೆಂಬೊ ಪಾದಷಾಃ ವುತ್ತರದೇಶದಲ್ಲಿ ಯಾವತ್ತೂ ರಾಜ್ಯಭಾರವನ್ನು ಮಾಡಿಕೊಂಡು ಬಹಳ ಸಂತೋಷದಿಂದ 'ತನಗೆ ಸಮವಾದ ಪ್ರಭುಗಳು ದಾರ್ರುಯಿಲ್ಲಾ'ಯೆಂದು ತನ್ನ ಅಷ್ಟಪ್ರಧಾನಿಗಳು ಕುರಿತು ಪ್ರಶ್ನೆ ಮಾಡಲಾಗಿ, ಅಕ್ಕೆ ಯೇಳು ಮಂದಿ ಪ್ರಧಾನರ್ರು "ನಿಮಗೆ ಸಮವಾದ ಪ್ರಭುಗಳು ದಾರ್ರು ಕಾಣೋದಿಲ್ಲ"ಯೆಂದು ಹೇಳಿದರ್ರು. ಅದರಲ್ಲಿ ಮುಖ್ಯವಾದ ಪ್ರಧಾನಿ ಆಡಿದ್ದು "ದಕ್ಷಿಣದೇಶದಲ್ಲಿ ತುಂಗಭದ್ರಾತೀರದಲ್ಲಿ ದೇವಗಿರಿಯಂಬೊ ಸ್ಥಳದಲ್ಲಿ ರಾಮದೇವರಾಯ ಪ್ರಭು ಬಹು ಸಮರ್ಥನಾಗಿ ಯಿದ್ದಾನು. ನಿಮಗಿಂತ ಅಧಿಕ ಬಲವಂತನು"ಯೆಂದು

ಹೇಳಲಾಗಿ, ಆ ಮಾತು ಕೇಳಿ ಸುಲತಾನನು ತನ್ನ ಯಾವತ್ತು ಸೈನ್ಯ ಸಮೇತನಾಗಿ ಅಷ್ಟಪ್ರಧಾನರ ಕೂಡಿಕೊಂಡು ಮೊಹಿಮುಮಾಡಿ, ದಕ್ಷಿಣದೇಶ ರಾಮ[+ದೇವ]ರಾಯರ ಮೇಲೆ ಫವುಜು ಬಂದಿ ಮಾಡಿಕೊಂಡು ಬಂದು, ದೇವಗಿರಿಗೆ ಮುತ್ತಿಗೆ ಹಾಕಿ ದುರ್ಗವಂನ್ನು ತೆಗೆದುಕೊಂಡು, ಅರಸನ್ನಗೂಡ ದೊಡ್ಡ ಸರದಾರನ ಸಹ ಕೈದಸ್ತು ಮಾಡಿಕೊಂಡು ತಮ್ಮ ದೇಶಕ್ಕೆ ಹೋದರ್ರು. ಆ ಲಢಾಯಿ ಆಗೀ ವ್ಯಾಳ್ಯಕ್ಕೆ ಮುಂಮಡಿ ಸಿಂಗನಾಯಕ ತನ್ನ ಸಮೂಹ ಸಹಿತನಾಗಿ ಮಲ್ಲಪಂಥಿದೇಶ . . . . ಹೋದನು. ಅಲ್ಲಿ ರಾಯದುರ್ಗದೇಶಕ್ಕೆ ಮಲ್ಲದೇವರಾ[+ಯ]ರ್ರು ಪ್ರಭುತ್ವ ಮಾಡುತ್ತ ಯಿರಲಾಗಿ, ಯೀ ಮುಮ್ಮಡಿ ಸಿಂಗನಾಯಕ ಮಲ್ಲದೇವರಾಯರ ಬಳಿಗೆ ಹೋಗಿ, ಅಲ್ಲಿ ಭೇಟಿ ತಕೊಂಡನು. ಮಲ್ಲದೇವರಾಯ ಮುಮ್ಮಡಿ ಸಿಂಗನಾಯಕನ್ನ ಕಂಡು ಬಹಳ ಸಂತೋಷಪಟ್ಟು, ತನ್ನ ಆಳಿಕೆ ರಾಜ್ಯದಲ್ಲಿ ಯಿಪ್ಪತ್ತು ಗ್ರಾಮಗಳು ಮಾಡಿಕೊಟ್ಟರ್ರು. ಯೀ ಪ್ರಕಾರ ಕೆಲವು ಕಾಲ ಯಿರಲಾಗಿ ಮಲ್ಲದೇವರಾಯರ್ರೂ ಮೃತಹೊಂದಿದನು. ಮಲ್ಲದೇವರಾಯನ ಸ್ವಾದರಳಿಯ ಮಲ್ಲನೆಂಬಾತಗೆ ಪಟ್ಟಾಭಿಷೇಕವನ್ನು ಮಾಡಿದರು. ಯೀ ಸಮಾಚಾರ ಮುಮ್ಮಡಿ ಸಿಂಗನಾಯಕನು ಕೇಳಿ "ಮಲ್ಲನೆಂಬಾತಗೆ ಪಟ್ಟಕಟ್ಟಲಿಕ್ಕೆ ಕಾರಣವೇನು?"ಯೆಂದು ಮುಮ್ಮಡಿ ಸಿಂಗನಾಯಕ ಹೋಗಿ, ಆ ಮಲ್ಲನ ಸಂಹಾರ ಮಾಡಿ ತಾನೇ ಪಟ್ಟಾಭಿಷಕ್ತನಾಗಿ ಪ್ರಭುತ್ವಮಾಡಿದನು.

ಯೀ ಪ್ರಕಾರ ರಾಜ್ಯಭಾರಾ ಹೊತ್ತು ಯಿರಲಾಗಿ, ವಂದು ದಿವಸ 'ಪ್ರಧಾನಿಯಿಲ್ಲದ ಪ್ರಭುತ್ವ ಯಿರಬಾರದೆಂ'ದು ರಾಯದುರ್ಗದ ಸೆಟ್ಟಿ ಮಗನ್ನ ತಂದು, ಬೈಚಪಯಂಬಾತನ ತನ್ನ ಕೆಳಗೆ ಪ್ರಧಾನಿ ಮಾಡಿಕೊಂಡು ಯಿದ್ದನು. ಕೆಲವು ದಿವಸ ಯಿರಲಾಗಿ 'ಪುತ್ರ ಸಂತಾನಯಿಲ್ಲಾ'ಯೆಂದು ಮನೋವ್ಯಾಕುಲದಿಂದ ಯಿರಲಾಗಿ ತುಂಗಭದ್ರತೀರಕ್ಕೆ ಬ್ಯಾಟೆ ಮಾರ್ಗವಾಗಿ ಬಂದು, ಬ್ಯಾಟಿ ಆಡಿಕೊಳ್ಳುತ್ತ ಬರಲಿಕ್ಕೆ. ಕಂಪಲಿಗೆ ದಕ್ಷಿಣದಿಕ್ಕಿನಲ್ಲಿ ಸೋಮೇಶ್ವರಯಂಬೋ ದೇವಾಲಯವು ಯಿರಲಾಗಿ, ಆ ದೇವಾಲಯಕ್ಕೆ ಮುಮ್ಮಡಿ ಸಿಂಗನಾಯಕ ಹೋಗಿ ದೇವತಾದರುಶನ ಮಾಡಿಕೊಂಡು ಪುತ್ರ ಸಂತಾನವಾಗಬೇಕೆಂದು ಪ್ರಾರ್ಥನೆ ಮಾಡಿಕೊಂಡದರಿಂದ, ಅದೇ ಪ್ರಕಾರಕ್ಕೆ ಪುತ್ರಸಂತಾನವಾದದರಿಂದ, ಆ ಮುಮ್ಮಡಿ ಸಿಂಗನಾಯಕ ಬಹಳ ಸಂತುಷ್ಟನಾಗಿ ದೇವತಾನುಗ್ರಹದಿಂದ ಪುತ್ರಸಂತಾನವಾಯಿತ್ತುಯಂದೆ ತಿಳದು, ಪುತ್ರಂಗೆ ಕಂಪಲಿರಾಯನೆಂದು ನಾಮಧೇಯ ಯಿಟ್ಟು ಕೋಟೆ ಕಟ್ಟಿಸಿದನು. ಯೀ ಕಂಪಲಿರಾಯ ಕನಕಗಿರಿ ಗುಜ್ಜಲವರ ಹೆಣ್ಣು ಹರಿಯಾಲದೇವಿನ ಮದಿವಿ ಮಾಡಿದರ್ರು. ಯಿನ್ನು ನಾಲ್ಕು ಮಂದಿ ಹೆಣ್ಣು ಮದಿವಿ ಮಾಡಿದರು. ಪಟ್ಟದ ಹೆಂಡತಿ ಹರಿಯಾಲದೇವಿಗೆ ಪುತ್ರಸಂತಾನವಾಗಲಿಲ್ಲ. ನಾಲ್ಕು ಮಂದಿ ಹೆಂಡರಲ್ಲಿ ಆಯಿದು ಮಂದಿ ಪುತ್ರಸಂತಾನವಾಯಿತ್ತು. ಯಿದರಲ್ಲಿ ಕಾಟಣ್ಣನೆಂಬೊವನ್ನ ಹರಿಯಾಲದೇವಿಗೆ ಸಾಕು ಕೊಟ್ಟರ್ರು. ಆಕೆ 'ಸಾಕಿದ ಮಗನಿಂದ ಪ್ರಯೋಜನವೇನು? ನನಗೆ ಪುತ್ರಸಂತಾನವಿಯಿತ್ತು. ಭ[>ಜ]ಟಂಗಿ ರಾಮೇಶ್ವರನಲ್ಲಿ ಹೋಗಿ ಪ್ರಾರ್ಥನೆ ಮಾಡಿದರಿಂದ ಆಕಿಗೆ ಪುತ್ರಸಂತಾನವಾಗಬೇಕೆಂದು ಭ[>ಜ]ಟಂಗಿ ರಾಮೇಶ್ವರನ ಅನುಗ್ರಹದಿಂದ ಆದಕಾರಣ ಕೊಮಾರರಾಮನೆಂದು ನಾಮಧೇಯ ಯಿಟ್ಟರು. ಮುಮ್ಮಡಿ ಸಿಂಗನಾಯಕ ಮೃತ್ಯು ಹೊಂದಿದನು. ಕಂಪಲಿರಾಯರ್ರು ರಾಯದುರ್ಗದಿಂದ ಬ್ಯಾಟೆ ಮಾರ್ಗವಾಗಿ ಬರಲಾಗಿ ಸೊಂಡೂರು ಸುತ್ತ ಗುಡ್ಡದಲ್ಲಿ ಹೊಸಮಲೆದುರ್ಗ ಕಟ್ಟಿದರ್ರು. ಅಲ್ಲಿಂದ ತುಂಗಭದ್ರಾ ದಾಟಿ ಮೊಗಲಾಯಿ ಶೀಮೆ ಯಂಮ್ಮಿಗುಡ್ಡಕ್ಕೆ ಹರದಾರಿ. ಯೀ ಸ್ತಳಕ್ಕೆ ಅಯಿದು ಹರದಾರ್ರಿ ಗುಮ್ಮಟ ಯಂಬೋದು ಗಡಾ ಕಟ್ಟಿಸಿ, ಯೀ ದೇಶ ರಾಜಧಾನಿ ಮಾಡಿಕೊಂಡು

ಯಿದ್ದನು. ಆ ತರುವಾಯ ಕೊಮಾರರಾಮನು ಮಹಾಪ್ರಸಿದ್ಧಿಗೆ ಬಂದು ಗಡಾ ಕಟ್ಟಿಸಿ, ಯೀ ದೇಶ ರಾಜಧಾನಿ ಮಾಡಿಕೊಂಡು ಯಿದ್ದನು. ಆ ತರುವಾಯ ಕೊಮಾರರಾಮನು ಮಹಾಪ್ರಸಿದ್ಧಿಗೆ ಬಂದು ರಾಜ್ಯಭಾರಾ ಮಾಡಿಕೊಂಡು ಯಿರಲಾಗಿ ವೋರಂಗಲ್ಲ ಪ್ರತಾಪರುದ್ರನೆಂಬೊ ಅರಸು ಪ್ರಭುತ್ವಮಾಡಿಕೊಳ್ಳುತ್ತ ಯಿರಲಾಗಿ, ಯೀ ಸಮಾಚಾರ ಕೇಳಿ ಕೊಮಾರರಾಮನು ತನ್ನ ಸೈನ್ಯ ಸಮೇತನಾಗಿ ಅಲ್ಲಿಗೆ ಹೋಗಿ, ಆತನ್ನ ಜಯಪ್ರದಮಾಡಿಕೊಂಡು, ಅಲ್ಲಿಂದ ಬಹುಮಾನ ತೆಗೆದುಕೊಂಡು, ಅಲ್ಲಿ ವಂದು 'ಯಿ[>ಎ]ಪ್ಪತ್ತರಾಯನ ಬೊಲ್ಲಾ'ಯಂಬೊ ಅಶ್ವವನ್ನು ತೆಗೆದುಕೊಂಡು ಬಂದು, ಸಮರ್ಥನಾಗಿ ಸಕಲಬಿರುದಾವಳಿಗಳು ಸಂಗಡ ಯಿರುತಿರಲಾಗಿ, ಯೀ ಸಮಾಚಾರ ವುತ್ತರದೇಶದಲ್ಲಿ ನೇಮಿಯರರ್‍ರು ಕೇಳಿ, ತಮ್ಮ ಸೈನ್ಯ ಯಾವತ್ತು ಕೂಡಿಕೊಂಡು ಬಂದ್ದು, ಕುಮ್ಮಟದಲ್ಲಿ ಯಿದ್ದ ಕೊಮಾರರಾಮನ ಸಂಗಡ ಲಡಾಯಿ ಮಾಡಿ ಜೈಸಿ, ಕೊಮಾರರಾಮನ ತಲೆ ಕೊಯಿದು ತಕೊಂಡು ಹೋದರ್‍ರು. ಆದದರಿಂದ ಕೊಮಾರರಾಮನ ಕಂಮಟವೆಂದು ವಾಡಿಕೆ ಆಯಿತ್ತು. ಕೆಲವು ದಿವಸಕ್ಕೆ ಕಂಪಲಿರಾಯರ್‍ರು ಮೃತ ಹೊಂದಿದರು. ಆಮ್ಯಾಲೆ ರಾಜ್ಯಕ್ಕೆ ಪ್ರಭು ನೇಮಕವಿಲ್ಲದೆ ಆರಾಜಕವಾಯಿತ್ತು.

*ಯೀ ಕುಮ್ಮಟಕ್ಕೆ ದಕ್ಷಿಣ ಘಟ್ಟದ ಕೆಳಗೆ ಹೊನ್ನಾವರದಲ್ಲಿ ಇರುವ ಮಾಧವಭಟ್ಟರು ಯಂಬೊ ಬ್ರಾಹ್ಮಣನು ದರಿದ್ರಪೀಡಿತದಿಂದ ಬಹಾಳ ಶ್ರಮ ಪಡ್ತುಯಿರಲಾಗಿ, ಆತನ ಪತ್ನಿ ಆಡಿದ್ದು "ಸಕಲ ವಿದ್ಯಂಗಳು ಬಲ್ಲರ್‍ರಿ, ನಾವು ದರಿದ್ರತನ ಅನುಭವಿಸಲಿಕ್ಕೆ ಕಾರಣವೇನು?" ಯಂದು ಕೇಳಲಾಗಿ, ಆ ಮಾಧವಭಟ್ಟರು "ಯಿದಕ್ಕೆ ವಂದು ದೇವಿ ಕುರಿತು ಪ್ರಾರ್ಥನೆ ಮಾಡೊ ಪರಿಯಂತ್ರ ನಮ್ಮ ದಾರಿದ್ರ ವಿಚ್ಛಿನ್ನ ಆಗೋದಿಲ್ಲ"ವೆಂದು ತನ್ನ ಪತ್ನಿ ಮುಂದೆ ಹೇಳಲಾಗಿ, ಆಕೆ ಆಡಿದ್ದು "ದೇವತೆಯನ್ನು ಕುರಿತು ತಪಸ್ಸನ್ನು ಸಾಂಗಮಾಡಿ ದರ್‍ರಿದ್ರ ವಿಚಿನ್ನವಾಗೊ ರೀತಿ ಮಾಡೊದ್ದು"ಯೆಂದು ಹೇಳಲಾಗಿ, ನಾನು ಹೋದ ಬಳಿಕ ನೀನು ಹ್ಯಾಗೆ ಸಂಸಾರ ತೀರಿಸಿಕೊಂಡು ಹೋಗುವಿಯಂದು ಕೇಳಲಾಗಿ, "ನೀವು ಯಿದ್ದು ಕಷ್ಟಬಡೋದಕ್ಕಿಂತ ನೀವು ಹೋದ ಮ್ಯಾಲೆ ಕಷ್ಟಬಡುವದು ಲೇಸು"ಯೆಂದು ಹೇಳಲಾಗಿ, ಆ ಮಾತಿಗೆ ಒಳಂಬಟ್ಟು ಶ್ರೀಶೈಲಕ್ಕೆ ಬಂದು, ಅಲ್ಲಿ ಅಭಿಮಾನದೇವತೆ [ಭ್ರ+]ಮರಾಂಬಿಕೆಯಂಬೊ ಶಕ್ತಿಗುಡಿಯಲ್ಲಿ ವಂದು ಸಂವತ್ಸರ ಅನುಷ್ಠಾನಾ ಮಾಡುತ್ತ ಯಿರಲಾಗಿ, ಆ ದೇವತಿ ಪ್ರಸನ್ನವಾಗಿ ಹೇಳಿದ್ದು "ನಿನಗೆ ಯೀ ಜಲ್ಮದಲ್ಲಿ ಧನಲಭ್ಯಯಿಲ್ಲಾ"ವೆಂದು ಹೇಳಲಾಗಿ, "ನಾನು ಯೆಷ್ಟು ತಪಸ್ಸು ಮಾಡಿದ್ದು ವ್ಯರ್ಥವಾಯಿತ್ತು"ವೆಂದು ಯೀ ಮಹಾಮಂಥ್ರಗಳು ಅವಧ[>ಅಭದ್ರ]ವೆಂದು ತಇಳದ್ದು, ದೇವತ್ತಿ[>ತೆ] ಮ್ಯಾಲೆ ಕೋಪವನ್ನು ಮಾಡಿ, ಬೆತ್ತಿ[>ತ್ತ] ವಟ್ಟಿ ಆಮಂತ್ರಗಳನ್ನು ದಹಿಸಿ ಬಿಡಲಾಗಿ, ಆ ಮಂತ್ರ ಅಭಿಮಾನದೇವತ್ತಿ ಸೀರ್‍ರಿಯನ್ನು ಸ್ವಲ್ಪ ದಹಿಸಲಾಗಿ, ಆ ದುರ್ಗಿ ಬಂದು "ನೀನು ಯೇನು ಶ್ರಮಬಟ್ಟ ಕಾಲಕ್ಕೂ ಯೀ ಜಲ್ಮದಲ್ಲಿ ದ್ರವ್ಯಲಭ್ಯ ಆಗೋದುಯಿಲ್ಲಾ"ವೆಂದು ಹೇಳಲಾಗಿ, ಅಲ್ಲಿಂದಾ ಪೊಂಪಾ ಸರೋವರಕ್ಕೆ ಬಂದು, ಆ ಸರೋವರದ ಪಶ್ಚಿಮಭಾಗದಲ್ಲಿ ಯಿರುವ ಕಮಲಾದೇವಿಯಂಬೊ ದುರ್ಗಿಗುಡಿ ಕಂಡು, ಯೀ ಸರೋವರವನ್ನು

---

* ಇಲ್ಲಿಂದ ಮುಂದಿನ ಭಾಗ 'ಕಮಲಾಪುರದ ಕೈಫಿಯತ್ತು' ದಾಖಲೆಯ ಭಾಗವನ್ನು ಹೋಲುತ್ತದೆ. (ಸಂ)

ಕಂಡು ನಮ್ಮ ತಪಸಿಗೆ ಚೆನ್ನಾಗಿ ಯಿದೆಯೆಂದು ಆ ಕಮಲಾದೇವಿ ಗುಡಿಯಲ್ಲಿ ತಪಸ್ಸು ಮಾಡುತ್ತ ಯಿರಲಾಗಿ, ಪೂರ್ವಪ್ರಕಾರಕ್ಕೆ ಸ್ವಪ್ನವಾಗಲಾಗಿ ಮನಸ್ಸಿಗೆ ವ್ಯಾಕುಲದಿಂದ ಸಂನ್ಯಾಸ ಆಶ್ರಮವನ್ನು ಧರಿಸಿದರರ್ರು.

ಶಖ . . . . ಆಶ್ರಮವನ್ನು ಧರಿಸೋಣ, ದೇವಿ ಪ್ರತ್ಯಕ್ಷವಾಗಿ "ಯೇನು ಬೇ + + ಯಿದ್ದಿ"ಯೆಂದು ಕೇಳಲಾಗಿ "ನಾನು ಯೇನೂ ವಲ್ಲೆ" ನೆಂದು ಹೇಳಿ + + + + ಲಕ್ಕು ಅಮೃತ ಹೋಮ + + + + ತಪ್ಪದು"ಯೆಂದು ದ್ರವ್ಯ ಮೂಲಕದಿಂದ ಸುವರ್ನಸೃಷ್ಟಿ ಆಯಿತ್ತು. ಅಲ್ಲಿಂದ ಪಂಪಾಕ್ಷೇತ್ರಕ್ಕೆ ಬಂದು ಹೇಮಕೂಟದ ಮೇಲೆ ಪ್ರಸಂನ್ನ ವಿರೂಪಾಕ್ಷದೇವರ ಗುಡಿಯಲ್ಲಿ ವಾಸಾಮಾಡಿ ಅಲ್ಲಿ ವಿಪ್ಪ + + + + ಭಾಷ್ಯ + + ಯನ್ನು ನಿರ್ಮಾಣಮಾಡಿ, ಅದು ಅಪಧಸುವಧ ತಿಳಿಯಬೇಕೆಂದು ಕಾಶಿಯಲ್ಲಿ ಪ್ರಯಾಣವನ್ನು ಮಾಡಿದರ್ರು. ಶಖ ಕಾಶಿಗೆ ಹೋಗೊ ಮಾರ್ಗದಲ್ಲಿ "ವೇದವ್ಯಾಸ ರೂಪ + + + ಕಾಣುವದು ಹ್ಯಾಗೆ ಆದೀತು?" ಯಂದು ಮನಸಿನಲ್ಲಿ ಚಿಂತಿಮಾಡುತ್ತ ಗೊಂಡಾರಣ್ಯ ಮಾರ್ಗವನ್ನು ಕುರಿತು ಹೋಗುತ್ತ ಯಿರಲಾಗಿ, ವಬ್ಬ ಪುರುಷನು ವಬ್ಬರ್‍ರಿಗೂ ಕಾಣಿಸಿಕೊಳ್ಳದೇ ಹಾಗೇ ಆ ಮಾರ್ಗದಲ್ಲಿ ಬಂದವರಗಳಿಗಲ್ಲ "ಅಕಾಮಾ ವೈಶೂನ್ನಕತಾ।" ಯೆಂದ್ದು ಪ್ರಶ್ನೆಯನ್ನು ಮಾಡುತ್ತ ಯಿರಲಾಗಿ, ದಾರ್‍ರು ಆ ಪ್ರಶ್ನಿಗೆ ಪ್ರತಿ ಉತ್ತರ ಕೊಡದ ಯಿದ್ದ ಕಾರನ, ಬಹುಮಂದಿ ಆ ಶಬ್ದವಂನ್ನು ಕೇಳಿ ಯೀತನಯಿಂದ ಲಯವಾಗ್ತ ಯಿದರ್‍ರೂ.

"ಯೀ ಪ್ರಶ್ನೆಯಂನ್ನು ಯೇನು ಕಾರಣ ಕೇಳಿತ್ತ ಯಿದ್ದಿ"ಯೆಂದರ್‍ರೆ ಪೂರ್ವದಲ್ಲಿ ತ್ರೇತಾಯುಗದಲ್ಲಿ ರಾಮಾವತಾರದಲ್ಲಿ ಕಾಲಪುರುಷ ತಾನಾಹಿದ ಕಾರಣ, ಯೀ ಶೃಂಗೇರಿಭಟ್ಟಗೆ ಪಿಶಾಚಿ ಜನ್ಮ ಪ್ರಾಪ್ತಿ ಆಗಲಾಗಿ, ಆ ಶೃಂಗೇರಿಭಟ್ಟನು "ನನಗೆ ಯೀ ದೋಷವನ್ನು ಯೆಂದಿಗೆ ನಿವರ್ತಿ ಆದೀತೊ"ಯೆಂದು ಶ್ರೀರಾಮದೇವರನ ಕೇಳಲಾಗಿ, ಶೃಂಗೇರಿಭಟ್ಟಗೆ "ಕಲಿಯುಗದಲ್ಲಿ ಕಾಸಿಗೆ ಹೋಗೋ ಮಾರ್ಗದಲ್ಲಿ ಸದರ್‍ರಿ ಅರಣ್ಯದಲ್ಲಿ ಯೀ ನಾಲ್ಕು ಅಕ್ಷರವನ್ನು ಕೇಳುತ ಯಿರು"ವೆಂದು ಆಜ್ಞೆ ಕೊಡಲಾಗಿ, "ಯಿದಕ್ಕೆ ದಾರ್‍ರು ನಿನಗೆ ಪ್ರತಿ ವುತ್ರ ಕೊಡುತ್ತಾರೊ ಅವರಿಂದ ಯೀ ದೋಷ ನಿವರ್ತಿ ಆದೀತು"ವೆಂದು ಹೇಳಲಾಗಿ, ಅದೇ ಮರ್ಯಾದಿಯಿಂದಲೇ ಕೇಳುತ್ತಾ ಯಿದ್ದನು.

ಆ ಮಾರ್ಗ ಹಿಡಿದು ವಿದ್ಯಾರಣ್ಯರ್‍ರು ಹೋಗ್ತಾ ಯಿರಲಾಗಿ, ಯಥಾ ಪ್ರಕಾರಕ್ಕೆ ಸದರ್‍ರಿ ನಾಲ್ಕು ಅಕ್ಷರವನ್ನು ವಿದ್ಯಾರಣ್ಯರನ ಕೇಳಲಾಗಿ + + + ಯೆಂದು ಆಡಲಾಗಿ, ಯಿವರಿಗೆ ನಿದರ್ಶನವಾಗಿ ಕಾಣಿಸಿಕೊಂಡು ಸಾಷ್ಟಾಂಗನಮಸ್ಕಾರವನ್ನು ಮಾಡಲಾಗಿ, "ನೀನು ದಾರ್‍ರು?" ಯೆಂದು ಕೇಳಿದವರ್‍ರು ಆದರ್‍ರೂ, ಪೂರ್ವದ ವೃತ್ತಾಂತವನ್ನು ಹೇಳಲಾಗಿ "ತಾನು ವ್ಯಾಸರ ದರುಶನಾರ್ಥವಾಗಿ ಹೋಗುತ್ತ ಯಿಧೆನೆ. ನನಗೆ ವ್ಯಾಸರ ದರುಶನ ಹ್ಯಾಗೆ ಆದೀತು?"ಯೆಂದು ಕೇಳಲಾಗಿ, ಆ ಶೃಂಗೇರಿಭಟ್ಟನು ವ್ಯಾಸರ ಮರಿಯಾದಿ ಯಿರೊವ ಮರ್ಯಾದಿಯನ್ನು ತಿಳಿಸಿಕೊಟ್ಟು, "ನನಗೆ ಯೇನು ಮಾರ್ಗ?"ಯೆಂದು ಕೇಳಿ ಕೊಳಲಾಗಿ, "ನಾನು ವ್ಯಾಸರ ದರುಶನ ತೆಗೆದುಕೊಂಡು ಪುನಃ ಬರುವಾಗ ನಿನ್ನ ತೆಗೆದುಕೊಂಡು ಹೋಗಿ, ನಿನ್ನ ಮನೋಸಂಕಲ್ಪವನ್ನು ಆಗೊ ಹಾಗೆ ಮಾಡ್ತು ಯಿದ್ದೇವೆಂ"ದು ಹೇಳಿ, ವಚನ ಕೊಟ್ಟು ವಾರಣಾಸಿಗೆ ಹೋಗಿ, ವ್ಯಾಸರ ದರುಶನವನ್ನು ತೆಗೆದುಕೊಂಡು, ತಾವು ಮಾಡಿದಂಥಾ ಗ್ರಂಥವನ್ನು ಕೃತಗೊಳಿಸುವದ ಮಾಡಿಕೊಂಡು, ಯಿದೇ ಮಾರ್ಗಸ್ತನಾಗಿ ಬಾಹೊ ವ್ಯಾಳ್ಯೆದಲ್ಲಿ ಶ್ರೀಂಗೇರಿಭಟ್ಟನ ಕರಕೊಂಡು ಹೇಮಕೂಟಕ್ಕೆ ಬಂದು,

ಹೇಮಕೂಟ ದಕ್ಷಿಣಭಾಗ ಸಮೀಪದಲ್ಲಿ ಮಲ್ಲಿಕಾರ್ಜುನದೇವರ ಗುಡಿಯಲ್ಲಿ ಜೀರ್ಣೋದ್ಧಾರ ಮಾಡಿ, ಅದರ ಸಮೀಪದಲ್ಲಿ ಚವುಡೇಶ್ವರ ಗುಡಿ ಜೀರ್ಣೋದ್ಧಾರವನ್ನು ಮಾಡಿ, ಮುದಿವೀರಭದ್ರದೇವರನು ಪ್ರತಿಷ್ಟೆ ಮಾಡಿ ಗುಡಿ ಕಟ್ಟಿಸಿ, ಗುಡಿವಳಗೆ ತ್ರಿಕೋಣಯಂತ್ರವನ್ನು ನಿರ್ಮಾಣವನ್ನು ಮಾಡಿ ಯಿದ್ದಾರು. ಅದೆ ಶಿಲೆಗೆ ಯೀಗ ಜನರು "ಮೂರು ಮೋತಿಗಲ್ಲು ಮೂವತ್ತಾರು ಲಿಂಗ"ವೆಂದು ಹೇಳುತ್ತ ಯಿದ್ದಾರೆ. ಹಾಗೆ ಅಲ್ಲಿ ಸಹಸ್ರ ಮಂಟಪ ಕಟ್ಟಿಸಿ ಯಿದ್ದಾರೆ. ಯೀ ಶ್ರಂಗೇರಿಭಟ್ಟನ "ಮುದಿವೀರಭದ್ರದೇವರ ಗುಡಿ ಮುಂದೆ ಪೂರ್ವಕ್ಕೆ ಸಮೀಪದಲ್ಲಿ ಅಶ್ವತ ವೃಕ್ಷದೊಳಗೆ ವಾಸಮಾಡಿಕೊಂಡು ಯಿರು"ವೆಂದು ಹೇಳಿ ಅನ್ನದಾನಾ ಮೂಲಕದಿಂದ ಆ ಬ್ರಾಹ್ಮಣ ರಾಕ್ಷಸನಾದ ಶ್ರೀಂಗೇರಿಭಟ್ಟನ ಜನ್ಮ ನಿವರ್ತಿ ಮಾಡಿ, ದೇವತ್ವವ ಸೃಷ್ಟಿಸಿ ಬಿಟ್ಟರು. ತದನಂತರ ಆ ದ್ರವ್ಯವಂನ್ನು ಸಾರ್ಥಕವಾಗಿಸೊ ಉದ್ದೇಶ್ಯದಿಂದ ವಂದು ಪಟ್ಟಣ ನಿರ್ಮಾಣಮಾಡಬೇಕೆಂದು ಮನಸ್ಸಿನಲ್ಲಿ ಹುಟ್ಟಿ, ವಿದ್ಯಾನಗರವಂನ್ನು ನಿರ್ಮಾಣ ಮಾಡಿದ ಶಖ ೧೨೫೮ ಧಾತು ಸಂವತ್ಸರದ ವೈಶಾಖ ಶುದ್ಧ ೭ ಭಾನುವಾರ ಆಶ್ಲೇಷಾ ನಕ್ಷತ್ರದಲ್ಲಿ ನಿರ್ಮಾಣ ಮಾಡಿದರು. ಆ ಪಟ್ನದಲ್ಲಿ ಯಿವರ್ರು ಸ್ವಥಾ ರಾಜ್ಯಭಾರ ಮಾಡಿದ್ದು-

೨೬. ವಿದ್ಯಾರಣ್ಯರು ಆಳಿದ್ದು ಶಖ ೧೨೮೪ ಪರಿಯಂತ್ರವು.

೬೦, ಯೀ ವಿದ್ಯಾರಣ್ಯರು ದೇಹ ಬಿಡುವ ಕಾಲಕ್ಕೆ ಬುಕ್ಕರಾಯನೆಂಬೊವ ಗೊಲ್ಲನು ಯಿವನು ಯಿವರು ತಪಸ್ಸು ಮಾಡೋ ಕಾಲಕ್ಕೆ ಹಾಲು ತಂದು ಕೊಟ್ಟು ಯಿದ್ದದರಿಂದ, ಅವರ್ರು ಅವನ ಮೇಲೆ ಅನುಗ್ರಹ ಮಾಡಿ ರಾಜ್ಯಪಟ್ಟಾಭಿಷೇಕವನ್ನು ಮಾಡಿದರ್ರು. ಅವರು ಆಳಿದ್ದು-

೧೮. ಈತನ ಮಗ ಹರಿಹರ್ರರಾಯರ್ರು ಆಳಿಕೆ ವರುಷಗಳು.

೯. ಯೀತನ ಮಗ ಪ್ರಹುಢದೇವರಾಯರ ಆಳಿಕೆ –

೧೪. ಯೀತನ ಮಗ ರಾಮಚಂದ್ರದೇವರಾಯರ ಆಳಿಕೆ –

೧೩. ಯೀತನ ಮಗ ವಿರೂಪಾಕ್ಷದೇವರಾಯ ಶಕ ೧೩೮೫ ಸ್ವಭಾನು ಸಂ॥ರದ ಪಟ್ಟಾಭಿಷೇಕವಾಯಿತ್ತು. ಇವನ ಆಳಿಕೆಯಲ್ಲು ಕಪಿಲರುಷಿಗಳ ಆಶ್ರಮ ನೋಡಿ, ಯಿದು ದೊಡ್ಡ ಸ್ಥಳ, ಯಿಲ್ಲಿ ಕೋಟೆ ನಿರ್ಮಾಣಮಾಡಬೇಕೆಂದು ನಿಶ್ಚೈಶಿ, ಸ್ವಲ್ಪ ಗ್ರಾಮ ಯಿದ್ದದು ಕಿಲ್ಲೆ ಕೋಟೆಯ ಕಟ್ಟಿಸಿ ಯಿದಕ್ಕೆ ಹೆಸರ್ರು ಕಪಿಲಗ್ರಾಮವೆಂದು ಯಿಟ್ಟರು. ಪೂರ್ವಪ್ರಕಾರ ಕರೀತಾ ಯಿದ್ದಾರೆ. ಯೀ ಗ್ರಾಮಕ್ಕೆ ಪಶ್ಚಿಮದಲ್ಲಿ ತುಂಗಭದ್ರಾತೀರದಲ್ಲಿ ವಿರೂಪಾಕ್ಷದೇವರ ಗುಡಿ ಪ್ರತಿಷ್ಟೆ ಮಾಡಿ, ಯಿವರು ರಾಜ್ಯ ಆಳಿದ ವರುಷಾ[+೧೩].

೧೩. ಯೀತನ ಮಗ ನರಸಿಂಹ್ವದೇವರಾಯರ ಆಳಿಕೆ.

೨೦. ವೀರ ನರಸಿಂಹದೇವರಾಯರ ಆಳಿಕೆ.

೧೬. ಕೃಷ್ಣರಾಯರ ಆಳಿಕೆ ಶಖ ೧೪೩೧ ಲಾಗಾಯಿತು ಶಕ[೧+]೪೪೭ನೆ ಪರಿಯಂತ್ರ ವರುಷಗಳು-

೩. ಅಚ್ಚುತರಾಯರ ಆಳಿಕೆ ವರುಷಂಗಳು.

೩೬. ಅಳಿಯ ರಾಮರಾಯರ ಆಳಿಕೆ ೧೪೫೦ನೇ ಲಾಗಾಯಿತು ೧೪೮೬ ವರುಷಂಗಳು. ಯಿವರ ಆಳಿಕೆಯಲ್ಲು ಸದಾಶಿವರಾಯರ್‍ರಿಗೆ ಪಟ್ಟಕಟ್ಟಿ ತಾವು ರಾಜ್ಯಭಾರಾ ಮಾಡುತ್ತಾ ಯಿದ್ದರು. ಆ ಸಮಯದಲ್ಲು ಕಂಪಲಿ ಪಶ್ಚಿಮದಿಕ್ಕಿನಲ್ಲಿ ತುಂಗಭದ್ರಾತೀರದಲ್ಲಿ ವಿರೂಪಾಕ್ಷದೇವಸ್ತಾನ ಜೀರ್ಣೋದ್ಧಾರಾ ಮಾಡಿದ್ದು ಶಖ ೧೪೭೪ನೆ ಪರಿಧಾವಿ ಸಂವತ್ಸರದ ವೈಶಾಖ ಶುದ್ಧ ೧ಯಲ್ಲು, ಆದವಾನಿ ಸೀಮೆ ಮಹನಾಡು ಸುಂಕದ ಬಹದರಸನ ಮಕ್ಕಳು ಕರಿಚೇಡು ಯಜಮಾನ ಸುಂಕರು + + ಆಧವಾನಿ ಸೀಮೆಯಲ್ಲಿ ಭೂಸ್ವಾಸ್ತಿ ವರ್ತನೆಗಳು ಮಾಡಿಸಿ ಕೊಟ್ಟು, ಗುಡಿಯಲ್ಲು ಕರೆಕಲ್ಲು ಮ್ಯೇಲೆ ಕನ್ನಡ + + + ಶಾಸನ ಬರದು ಯಿದೆ. ಯೀ ಅಳಿಯ ರಾಮರಾಯನು ಪಾದಷಾಹಾ ಸಂಗಡ ಕೃಷ್ಣಾ ತೀರದಲ್ಲಿ ರಕ್ಕಸ ತಂಗಡಿಯಂಬೊ ಗ್ರಾಮದ ಬಳಿಯಲ್ಲಿ ಘೋರವಾದಂಥಾ ಯುದ್ಧವನ್ನು ಮಾಡಿ, ಪಾದಷಾನವರು ರಾಮರಾಜನ ತಲೆ ಕೊಯಿದ್ದು ಝುಂಡಾಕೆ ಕಟ್ಟಿ, ಅಲ್ಲಿಂದ ಪಾದಷಾನವರು ಬಂದು ವಿಜಯನಗರ ಪಟ್ನ ಶರೆ ಸೂರಿ ಮಾಡಿಕೊಂಡು, ಬೊಕ್ಕಸ ಮೊದಲಾದ ಲುಟಾಯ್ಸಿಕೊಂಡು, ಯೀ ದೇಶವನ್ನು ಯಾವತ್ತು ನಿಪಾತ್ತು ಮಾಡಿ ಹೊರಟು ಹೋಗೊ ಸಮಯದಲ್ಲಿ ಸದಾಶಿವರಾಯರ್‍ರಿಗೆ ಅಲ್ಪಸ್ವಲ್ಪ ತಾಲ್ಕು ಕೊಟ್ಟು ಹೋದರ್‍ರು.

೪. ಸದಾಶಿವರಾಯರ ಆಳಿಕೆ ನಾಲ್ಕು ವರುಷ

೩. ತಿರುಮಲರಾಯರ ಆಳಿಕೆ ಮೂರು ವರುಷ

೨೬[>೧೬]. ಶ್ರೀರಂಗರಾಯ ಹದಿನರು ವರುಷ ಆಳಿಕೆ

೨೮. ವೆಂಕಟಮೂರ್ತಿ[>ಪತಿ]ರಾಯರ್‍ರು ಆಳಿಕೆ ಯಿಪ್ಪತ್ತೆಂಟು ವರುಷ

೧೭ ರಾಮರಾಯರು ಹದಿನೇಳು ವರುಷ ಆಳಿಕೆ

ವೆಂಕಟಮೂರ್ತಿ[>ಪತಿ]ರಾಯರ ಆಳಿಕೆ ಶಖ ೧೫೫೩ರ ಲಾಗಾಯತು ೧೫೬೬ನೇ ತಾರಣ ಸಂ॥ಕ್ಕೆ. ಯಿವರ ಮನ್ಮಂತರದಲ್ಲಿ ಪ್ಯಾಠೆ ನಿರ್ಮಾಣವಾದ್ದು, ಪೂರ್ವಕ್ಕೆ ಆಳೆಹಳ್ಳಿ ವಿರುಪಾಪುರ ಸಣ್ಣಗ್ರಾಮಗಳು ಯಿದ್ದವು. ಅದಕ್ಕೆ ಕೌಲು ಕೊಟ್ಟು ಪ್ಯಾಠೆ ಕಟ್ಟಿಸಿದ್ದು, ಕೋಟೆ ಆಗ್ನೆದಿಕ್ಕಿನಲ್ಲಿ ಪ್ಯಾಠೆ ಕಟ್ಟಿದ್ದು.

೧. ಮೊದಲು ಪ್ಯಾಟೆ, ಬಿಳೆಮಗ[>ಗ್ಗ] ಹಡಪದವರ್‍ರುದ್ದು, ಪೂರ್ವಕ್ಕೆ ಯಿತ್ತು

೧ ದೇವಾಂಗದವರ್‍ರು ಹಳೆಪ್ಯಾಠೆ

ಚಂನಬಸಯ್ಯಗೆ ಅರಸುಗಳು ಕೌಲು ನಿರೂಪ್ಯವ ಕೊಟ್ಟದ್ದು: ಭಾವ ಸಂ॥ರದ ಚೈತ್ರ ಬ ೭ಯಲ್ಲು ಶ್ರೀಮದ್ರಾಜಾಧಿರಾಜರಾಜಪರಮೇಶ್ವರ ಶ್ರೀವೀರಪ್ರತಾಪ ಶ್ರೀ ವೀರವೆಂಕಟಪತಿರಾಯದೇವ ಮಹಾರಾಯರ್‍ಯೆನವರ್‍ರು ನೆವೊರ ಚಂನಬಸವಗೆ ಮನ್ನಿಸಿದ ಕೌಲು ನಿರೂಪಾ : ಯೀ ರೀತಿಯಲ್ಲಿ ಕಂಪಲಿ ಹಳೆಪ್ಯಾಠೆಲಿ ವುಖಿರತೆ ಪರಿಯಂತ್ರ ನಿಂನ್ನ ಮನೆ ಮೇರೆಲಿ ಮನಿಗಳು ಕಟ್ಟಿಸಿ ಮಗ್ಗಗಳು ಹಾಕಸಬೇಕು. ನೀವು ಕಟ್ಟಿಸು ಪ್ಯಾಠಿಗೆ ಆಯಿದು ವರುಷ ಕೌಲು ಕೊಟ್ಟು ಯಿಧ್ಯೆ. ನಿನಗೆ ಮಿರಾಸಿಕೆ ಹತ್ತಕ್ಕೆ ಯರಡು ಮಗ್ಗ ಮಾನ್ಯ. ನಿಂಮ್ಮಾ ಮನೆ ಮಗ್ಗ ಮಾನ್ಯ. ದಿವಟಿ+ಸೂರೆ ಪೊನಕ್ಕಿ ಮಗ್ಗ ಪ್ಯಾಠೆ ೧ಕ್ಕೆ ಯರಡು, ಯೀ ಪ್ರಕಾರ ಮನ್ನಿಸಿ ಯಿಧೆವೆ. ನೀವು ಮನಿಗಳು ಕಟ್ಟೊ ಜಾಗಾದಲ್ಲಿ

ಅರವರ್‍ರ ಕಬ್ಬಲಿಗರು ಕಾಟಕರು ಮುಂತಾದವರ ಮನೆಗಳು ಕಟ್ಟಿಸಿ ಯಿದ್ದರು[>ರೂ] ಹುಲ್ಲುಮನೆ ಬಿಚ್ಚವೇಕು. ಮಾಳಿಗೆ ಮನೆಗಳಿಗೆ ಕ್ರಯಕೊಟ್ಟು ಕಳುಹಿಸಬೇಕು. ಯೀ ಪ್ರಕಾರಕ್ಕೆ ಮನೆಗಳು ಕಟ್ಟಿಸಿ, ಮಗ್ಗಗಳು ಹಾಕಿಸಿ, ನಿಮ್ಮಗೆ ನಾವು ಕೊಟ್ಟ ಮರಾಸಿಕ್ಕೆ[>ಮಿರಾಸಿಕೆ] ವೂಟ ಮಾಡಿಕೊಂಡು ನಿಮ್ಮ ವೂರ ವುದ್ದಾರ ಪಾರಂಪರ್ಯವಾಗಿ ಸುಖದಲ್ಲಿ ಯಿರೋದು ಯೆಂದು ಮನ್ನಿಸಿದ ನಿರೂಪ. ನಿಮಗೆ ವರ್ತನೆಗೆ ಮಗ್ಗಗಳು ಹೊನ್ನಾನದಿ ಆದಪ್ಪ ಅಪ್ಪಣೆ ಕೊಟ್ಟು ಯಿದ್ದೇವೆ. ದಿನಸುವರಿ ಹೊಂದಿದ್ದು ನಿಮ್ಮ ವಳಗೆ ಯಿರಬೇಕು.

೧. ದೇವಾಂಗದ ಬಸವಗೌಡನ ಪ್ಯಾಠೆ:

ಯೀ ಪ್ರಕಾರ ಯಿರುತ್ತ ಯಿರಲಾಗಿ ಗುಂಡದ ವೀರಪ್ಪದೇವರು ಕನಕಗಿರಿ ರಾಜ್ಯನದಲ್ಲಿಯಿಂದ ಬಂದು ಹಂಪ್ಪೆ [ಬ+]ಜಾರಿಗೆ ಬಂದು ಯಿರಲಾಗಿ, ಧೊರ್‍ರಿಗಳು ಆನೆಯೊಂದಿಗೆ ಕರ್‍ಸಿ, ಬಾಹಳ ಮಾನ ಪಾನ ಮಾಡಿ ವುಡುಗರೆ ಕೊಟ್ಟು "ನೀವು ನಮ್ಮ ಸಂಸ್ಥನದಲ್ಲಿ ಪ್ಯಾಠೆ ಕಟ್ಟಿಸಿ, ಸಂತೆ ಮಾಡಿ, ದೊಡ್ಡ ಪ್ಯಾಠೆ ಮಾಡಿರಿ" ಯಂದು ಅಪ್ಪಣೆ ಕೊಡಲಾಗಿ, ಅದರಂತೆ ಯಿವರು ಕಂಪಲಿಗೆ ಬಂದು ಯಿಲ್ಲಿ ಮೊದಲು ದೇವಾಂಗದವರು ಹಳೆಪ್ಯಾಠೆ, ನೆವೊರ್‍ರಪ್ಯಾಠೆ, ಕಸಬೆಪ್ಯಾಠೆ ಹುಟ್ಟಿಯಿತ್ತು. ಆ ಮ್ಯಾಲೆ ಯಿವರ್‍ರ ನಾಲ್ಕು ಕಡೆ ರಾಜ್ಯಕೆ ಕಾಗದವರು-ಗಳು ಬರದು, ಭಾಗದ ಮಾರ್ಗದವರಿಗೆ ಯೇಳು ವರುಷ ಕೌಲು ಕೊಟ್ಟು, ದೇಶದಲ್ಲು ಯಿದ್ದಾ ವರ್ತಕರನ ಕರ್‍ಸಿ, ಬಸ್ತಿ ಮಾಡ್ಸಿ, ಪ್ಯಾಠೆಗಳು ಮಾಡಿದರು.

೧ ಕುಂಪಣಿಯವರು ಯಿಂಗಿಯವರ ಪ್ಯಾಠಿ

೧ ಕುರಹಣಿ ಮೊಂಡ ಹಾರಣ್ಣನ ಪ್ಯಾಠಿ

೧ ದೇವಾಂಗದ ಭಾಗಾನವರ ಪ್ಯಾಠಿ

೧ ಅರವರ ಚಿನ್ನಯ್ಯನ ಪ್ಯಾಠಿ

೧ ಬಿಳೆಮಗ್ಗದ ಜಾನೆಕಲ್ಲುವರ ಪ್ಯಾಠಿ

೧ ದೇವಾಂಗದ ಅಗಳಿ ಚಿನ್ನವನ ಪ್ಯಾಠಿ

೧ ಕುರುಬದ ನೀಲಗಾರ ಪ್ಯಾಠಿ

೧ ದೇವಾಂಗದ ಅಗಳಿ ಲಿಂಗಪ್ಪನ ಪ್ಯಾಠಿ

೧ ದೇವಾಂಗದ ಅಗಳಿ ಹಾರಣ್ಣನ ಪ್ಯಾಠಿ

೩ ಗುಂಡದವರ ಪ್ಯಾಠಿ

೧. ಬಾಜಾದವರ ಪ್ಯಾಠಿ

೧. ಗುರುಶಾಂತವನ ಪ್ಯಾಠಿ

೧. ಪಾರ್ವತವ್ವನ ಪ್ಯಾಠಿ

೧. ಗಂಗಾಧರ ಪ್ಯಾಠಿ

೧ ವುಡಿಗದಾಸಿ ಪ್ಯಾಠಿ

ಯೀ ಪ್ರಕಾರಕ್ಕೆ ಪ್ಯಾಠೆಗಳು ಕವುಲು ಮಡಿಸಿ, ಪ್ಯಾಠೆ ವಾಳೆಗಳು ಮಾಡಿ, ಗುಂಡದ ವೀರಪ್ಪದೇವಗಿಎ ಪ್ಯಾಠೆ ಶೆಟ್ಟಿತನ ಕೊಟ್ಟು, ಗೌಡರನ ಅವರ ಕೆಳಗೆ ನಡಕೊಂಬೊ ಹಾಗೆ ಮಾಡಿ, ಯಿವರಿಗೆ ಯಿನಾಮು ಕೊಟ್ಟ ವಿವರವು:

ಗುಂಡದ ವೀರಪ್ಪದೇವರಿಗೆ:	ದೇವಾಂಗದವರಿಗೆ :
ಗದ್ದೆಮಠಕ್ಕೆ	ಹಳೆಪ್ಯಾಠೆ ಚಂನ್ನಬಸವಗೆ
ಖಂ।೧	ಗದ್ದೆ ॥ ೧ಕ್ಕೆ
ಖಂ।೩ ಹಿರೆತನಕೆ	
೮೦, ೧೫ ತೋಟ	ತೋಟ ೧ಕ್ಕೆ
	ಬಾಗಾದಿ ವಡೆವಗೆ ಗದ್ದೆ ೧ಕೆ
ತುಸುಮ ಚಿಂತಾಲು ಸಹ	ತೋಟ ೧ಕೆ
ಸುಂಕದ ಮೇಲೆ ವರ್ತನೆ ತಿಂಗಳು	ಅಗಳಿ ಚನ್ನಪ್ಪಗೆ ಗದ್ದೆ ಲಾ. ೧ಕೆ
೧ಕೆ ಗ ೨೮೦ ಪ್ರಕಾರಕೆ	ತೋಟ ೧.ಕೆ
ಅರಳೆ ಹುಟ್ಟಿದಂಗುಳಿ	ದೇವಾಂಗದ ಮಠಕ್ಕೆ ಗದೆ ಲಾ. ೧ಕೆ
ಶಖ ೧೬೭೮ ಪರಿಯಂತ್ರ	ತೋಟ ೧ಕೆ
ನಡಿತ್ತು । ಯಿತ್ತಲಾಗಿ	ಯಿವರ್ರಿಗೆ . . . . ನಡಿತು
ಯೀ ಪ್ರಕಾರ ನಡಿತು.	ಕುಂಪಣಿ ಅಮಲಿಗೆ ಯಿವರು ಊರಲ್ಲಿ ಹಾಜರು
ಯಿಲ್ಲದ ಕಾರಣ ಜಪ್ತಿ ಆಯಿತು.	

ಶ್ರೀರಂಗರಾಯರ ಆಳಿಕೆ ಶಖ ೧೫೬೬ನೆ ತಾರಣ ಸಂ. ಲಾಗಾಯಿತು ಶಕ ೧೫೪ಳನೇ ಸಾಧಾರಣ ಸಂ।ವರಿಗೆ. ಯಿವರ ಆಳಿಕೆಯಲ್ಲಿ ಯೀ ರಾಜಾ ಯಾವತ್ತು ಮೊಗಲಾಯವರ್ರು ತೆಗೆದುಕೊಂಡರು. ಯಿವರ್ರು ಸಂಸ್ಥಾನ ಬಿಟ್ಟು ಚೆಂದ್ರಗಿರಿದುರ್ಗಕ್ಕೆ ಹೋಗಿ ಯಿರಲಾಗಿ ಮತ್ತು ಮೊದಲರು ಚಂದ್ರಗಿರಿದುರ್ಗದಯಿಂದ ಕರ್ರ್ಸಿ ಯಿವರ್ರಿಗೆ ನೇಮಕಮಾಡಿ ಕೊಟ್ಟದ್ದು:

೧ ಗಂಗಾವತಿ ಪರಗಣೆ

೧ ಬಾಣರಾವಿ ಪರಗಣೆ

೧ ತೆಕ್ಕಲುಕೋಟೆ ಪರಗಣೆ

೧ ಹೊಸೂರ್ರು ಪರಗಣೆ

೧ ಕುರುಗೋಡು ಪರಗಣೆಯಲ್ಲಿ ಕೆಲವು ಗ್ರಾಮ

ಯೀ ಪ್ರಕಾರಕ್ಕೆ ನೇಮಕಾ ಮಾಡಿಕೊಟ್ಟು ಯಿದ್ದರು.

ಯೀತನ ಮಗ ವೆಂಕಟಪತಿರಾಯರ ಆಳಿಕೆ ಶಖ ೧೫೫೪ ಲಾಗಾಯತು ಶಕ ೧೬೧೪ನೇ ವರಿಗೆ ಯಿವರ ಮನ್ಮಂತರಕ್ಕೆ[>ಮನ್ವಂತರಕ್ಕೆ]ನಡದ್ದು ಯಿದೆ. ಪುರದ ಕಡೆಯಿಂದಲು ಶಾಮಜಾಖಾನನು ಆದವಾನಿಲ ನಿಂತು, ಅಲ್ಲಿಂದ ಬಂದು ಕೊಂಡು ಯಿರೋದರ ವಳಗೆ, ಮಸೂರಖಾನನು ದೇಶಾಯಿಕೆ, ದೇಶಕುಲಕರ್ಣಿಕೆ, ಗೌಡಕಿ ಸ್ವಾಸ್ತಿಗಳು ಮಾಡಿ ಕೊಟ್ಟನು. ಯೀ ಪ್ರಕಾರಕೆ ಅವರು ರಾಜ್ಯ ಆಳಿ, ಆಮೇಲೆ ಅರ‍್ರುಸಗಳಿಗೆ ಠಾಣ್ಯ ಬಿಟ್ಟು ವರುಷಾ ಖಂಡಿಣಿ ತಕ್ಕೊಂಡು ಯಿದ್ದರು.

ಯೀತನ ತಮ್ಮ ಚಿನ್ನಪರಾಜಯ್ಯ ಯಿತನ . . . . ಸಿರುವೆಂಗಯ್ಯನಾ ಆಳಿಕೆ.

೧೭. ಯೀತನ ಮಗ ಶೂರ[>ಹಿರೆ]ದಾಸಿರಾಯರು ಶಕ ೧೬೨೫ ಸ್ವಭಾನು ಸಂ। ಲಾಗಾ॥ಶಕ ೧೬೪೨ ಶಾರ್ವರಿ ಸಂ। ವರಿಗೆ, ಯಿವರ ಮನ್ಮಂತ್ರದಲ್ಲಿ [>ಮನ್ವಂತರದಲ್ಲಿ] ನಡದ –

೧ ಹೊಸೂರು ಪರಗಣೆ ಹಾರವನಹಳ್ಳಿಯವರು ತಕ್ಕೊಂಡರು

೧ ಬಾಣರಾವಿ ತಾಲ್ಕು ಚಿತ್ರದುರ್ಗದವರು ತಕ್ಕೊಂಡರು

೧ ಕುರಗೋಡು ತಾಲ್ಕು ಪೈಕೆ ಕೆಲವು ಗ್ರಾಮ ತಕ್ಕೊಂಡರು

೧ ತೆಕ್ಕಲುಕೋಟೆ ತಾ॥ ಪೈಕಿ ಕೆಲವು ಗ್ರಾಮ ತಕೊಂಡರು

೧ ಗಂಗಾವತಿ ಪರಗಣೆ ಪೈಕಿ ಕನಕಗಿರಿ ಯಿತರ[>ಯವರು] ಕೆಲವು ಗ್ರಾಮ ತಕ್ಕೊಂಡರು

ಯೀ ಪ್ರಕಾರಕ್ಕೆ ಹೋಗಲಾಗಿ ಬಾಕಿ ವುಳದು ರಾಜ್ಯಭಾರ ಮಾಡಿಕೊಂಡು ಯಿದ್ದರು.

ಯಿವರ ಅಮಲು ವಳಗೆ ಅವಾಂತ್ರವಾದ ಹಿಂದುರಾಯ ಬಂದು, ಪೇಟೆ ಯಾವತ್ತು ಬಡದು ಸುಲಕೊಂಡು, ಯಿಲ್ಲಿ ಕೆಲವರ ಬಳಿಲಿ ಯಿದ್ದ ಕಾಗದ ಪತ್ರಗಳು ಸಮಗ್ರ ಲೂಟಿ ಮಾಡಿಕೊಂಡು ಹೋದರು.

೧೩. ಯೀತನ ತಮ್ಮ ಚಿಕ್ಕದಾಸರಾಯರ ಆಳಿಕೆ ಶಕ ೧೬೪೨ ಲಾ. ಶಕ ೧೬೫೫ ಪ್ರಮಾದಿ ಸಂ॥ ಪರಿಯಂತ್ರ ವರುಷಗಳು ೧೩॥.

ಯೀತನ ಮಗ ಬಡೆ ರಾಮರಾಯರು ಆಳಿದು ಶಕ ೧೬೫೫ ಲಾ। ವರುಷಗಳು. ಯೀತನ ಆಳಿಕೆ ವಳಗೆ ಪಂಚಮಾಲನೆಯಿಂದ ಫತೆ . . . . ೦ಗ ಬಂದು ಪೇಟೆ ಬಡದ. ಯೀತಗೆ ಸಂತಾನ ಯಿಲ್ಲದ ಕಾರಣ ವೀರ ವೆಂಕಟಪತಿರಾಯರು ಪಾಲನೆ ಶಕ ೧೬೭೨ ವರುಷ ಲಾಗಾಯತವಾಗಿ ವರುಷ ಯೀತನ ಅಮಲು ವಳಿಗೆ ಚಿತ್ರದುರ್ಗ ಮದಿಕೆರೆನಾಯಕ ಬಂದು, ಕೋಟೆ ಯಾವತ್ತು ಸೂರೆ ಲೂಟಿ ಮಾಡಿಕೊಂಡು ಹೊಗ . . . . ಕುತ್ತು ವಂದಾವರ್ತಿ ಶಿವಾಜಿಯವರು ಬಂದು ಪ್ಯಾಠೆ ಹೊಡದು ಸುಲಕೊಂಡು ಹೋದರು. ಈ ಪ್ರಕಾರ ನಡಿಯಿತು.

೩೧. ಯೀತನ ಮಗ ತಿರುಮಲರಾಯರ ಆಳಿಕೆಯ ಶಕ ೧೬೭೮ ಧಾತು ಸಂ॥ಲಾ ಪರಾಭವ ಸಂ॥ ಪರಿಯಂತ್ರಕು ಯಿವರ ಮನ್ನಂತ್ರ ನಡದ ಅಮಲು.

೧. ಹೇವಳಂಬಿ ಸಂ॥ರದಲ್ಲಿ ಆರೇರ ಕಡೆಯಿಂದ ಸಂಜೀವಶಾಸ್ತ್ರೀ ಬಂದು ಪೇಟೆ ಬಡದು ಲೂಟಿ ಮಾಡಿದನು.

೧ ವಿಳಂಬಿನಾಮ ಸಂ॥ದಲ್ಲಿ ಧಂಸಾ ಬಂದು ಕೋಟೆ ಪ್ಯೇಟೆ ಬಡದು, ಮನಿಗಳು ಸುಟ್ಟು, ಸಮಗ್ರ ಲೂಟಿ ಮಾಡಿಕೊಂಡು ಹೋದನು. ಯೀ ಪ್ರಕಾರ ನಡಿಯುತ್ತಾ ಬಂತು.

ಪರಾಭವ ಸಂ॥ರ ಆಷಾಢ ಮಾಸದಲು ಟೀಪುಸಾಹೇಬರು ಆದವಾನಿ ತೆಗೆದುಕೊಂಡು ಬಂದು, ವೂರ ಮುಂದೆ ಯಿಳಕೊಂಡು, ಗುಂಡ[>ಕುಂದ]ರ್ಪ, ತೋರಣಕೋಟೆ, ಗಲ್ಲಮಾಡಿ ತೆಗೆದುಕೊಂಡು, ಸಮಗ್ರ ಕೋಟೆ ಪ್ಯಾಠೆ ಲೂಟಿ ಮಾಡಿಕೊಂಡು, ಠಾಣ್ಯ ಹಾಕಿ ಬಬರಜಂಗಗೆ ಕೊಟ್ಟು, ಸುಲತಾನನ ದಂಡು ಸವಣೂರ ಕಡಿಗೆ ಹೋಯಿತು. ಮತ್ತು ತಿಮ್ಮಪ್ಪಯ್ಯ ಬಂದು ಭಾದ್ರಪದ ಮಾಸದಾಗೆ ಆನೆಗೊಂದಿಯಿಂದ ಬಂದು ಠಾಣ್ಯ ಹಾಕಿದನು. + + + + ದಾಗೆ ಮತ್ತು ಸು[+ಲ]ತಾನ ಬಹಾದರನು ದಂಡ ತಕ್ಕೊಂಡು ಬಂದು, ಆನೆಗೊಂಡಿ ಯೀ ಗ್ರಾಮ ಯಾವತ್ತನ್ನು ಠಾಣ್ಯಹಾಕಿ ಬಬರಜಂಗಗೆ ಜಹಗೀರ ಕೊಟ್ಟನು. ಅರಸು ಉತ್ತರದೇಶಕ್ಕೆ ಹೊರಟುಹೋದನು.

ಪರಾಭವ ಸಂ॥ದ ಮಾಘಮಾಸ ಆರಭ್ಯ ಸಾಧಾರಣ ಸಂ॥ರ ಪರಿಯಂತ್ರ ಟೀಪುವಿನ ಕಡಿಯಿಂದ ಜಹಗೀರುದಾರ ಬಬರಜಂಗನು ಠಾಣ್ಯ ಮಾಡಿಕೊಂಡು ಯಿದ್ದನು.

ವಿರೋಧಿಕೃತ ಸಂ॥ದಲ್ಲಿ ಮತ್ತು ತಿಮ್ಮಪ್ಪಯ್ಯ ವುತ್ತರದೇಶದಿಂದ ಬಂದು, ಠಾಣ್ಯ ಹಾಕಿ ಪರಿಧಾವಿ ಸಂ॥ದ ಪರಿಯಂತ್ರಕ್ಕು ಆಳಿದನು.

ಪ್ರಮಾದೀಚ ಸಂ॥ದಲ್ಲು ಬಬರಜಂಗ ಪುರಹಾಖಾನ ತಮರದಿಖಾನನ ಫವುಜು ತೆಗದುಕೊಂಡು ಬಂದು, ನಾಗಲಾಹಳ್ಳಿ ಬಳಿಯಲು ಲಡಾಯಿ ಮಾಡಲಾಗಿ, ಅರ್ಸಗಳ ಫವುಜು ಮುಣಗಿತ್ತು. ಅರ್ಸು ಉತ್ತರದೇಶಕ್ಕೆ ಮತ್ತೆ ಹೋದನು. ಬಬರಜಂಗ ಜಹಗೀರ ಮಾಡಿಕೊಂಡು ಪ್ರಮಾದೀಚ ಸಂ॥ ಲಾಗಾಯತು ರಾಕ್ಷಸಿ ಸಂ॥ರ ಪರಿಯಂತ್ರ ಅಮಲು ನಡಿಯುತ್ತಾ ನಳನಾಮ ಸಂ॥ರಕ್ಕೆ ಬೆಂತೂರಿ ಅಮಲು.

ಪಿಂಗಳ ಸಂ॥ರ ಕಲ್ಯಾಣಿ ಮೋದಿನಸಾ, ಯಿರಜಬಲ್ಲಿಸಾ ಯಿಬ್ಬರು ಅಸಿಫಗಿರಿ ಮಾಡಿಕೊಂಡು ಮೊಳಕಾಲುಮೂರವು ತುಕಡಿ ಕೆಳಗೆ ನಡದು, ಕಾಳಯುಕ್ತಿ ಸಂ॥ರದ ಶ್ರಾವಣ ಮಾಸದ ಪರಿಯಂ॥ ಕಾಳಯುಕ್ತಿ ಸಂ॥ರದ ಭಾದ್ರಪದ ಮಾಸದಾಗೆ ಕುಂಪಣಿ ಕಡೆ ಬಾ[>ಪೂ]ರ್ಣಯ್ಯನ ಕಡಿಯಿಂದ ಬಬರರಾಯ ರೋತಿ ಭಿಮರಾಯರು ಠಾಣ್ಯ ಹಾಕಿ, ಕಾಳಯುಕ್ತಿ ಸಂ॥ ಅಖ್ಯೆರು ಪರಿಯಂತ್ರವು ಯಿದ್ದರು.

ಶಿದ್ಧಾರ್ಥಿ ಸಂ॥ರಕ್ಕೆ ಮೊದಲಾ ಕಡೆಯಿಂದ ವಾರಗಂಲ್ಲದಲ್ಲಿ ಠಾಣ್ಯ ರಉದ್ರಿ ಸಂ॥ರದ ಕಾರ್ತೀಕ ಮಾಸ ಪರಿಯಂತ್ರವು.

೧೮೧೭ ಸಂ।ರ ಮಾರ್ಗಶಿರ ಮಾಸದಲು ಕುಂಪಣಿ ಅಮಲು ಕರ್ನಲ ಮನ್ರೋಲಸಾಹೇಬರು ಬಂದು ಅಮಲು ಮಾಡಿದರು. ತದಾರಭ್ಯ ಶುಕ್ಲ ಶಂ।ರದ ಮಾಘ ಬ॥೭ ಪರಿಯಂತ್ರವು ನಡಿಯುತ್ತಾ ಯಿದ್ದತ್ತೇ. ಯೀ ಗ್ರಾಮಕ್ಕೆ ಹೋಲ ಮ್ಯಾರಿ ಚಕ್ಕುಬಂದಿ:

೧ ಯಿಂದ್ರದಿಕ್ಕಿಗೆ ನಲೋಡಿ ಹೊಲಮ್ಯಾರೊ ಯರೆದಳವಾರ ಮಾನ್ಯಕ್ಕೆ ಭೂಮಿ ಹೊಂದಿದೆ.

೨ ಅಗ್ನಿದಿಕ್ಕಿಗೆ ದೇವಸಮುದ್ರದ ಸೂ[>ಹೊಲ]ಲಮ್ಯಾರೆ ಮುದರಡಿವರ ಸಾ[>ಹೊಲ]ಲದ ಮ್ಯಾರಿಗೆ.

೩ ಯಮದಿಕ್ಕಿಗೆ ತರಿಜಮೀನು ಮುದ್ದಾಪುರ . . . .ಮಾಸ್ತಿಗುಡಿ ಮ್ಯೆರೆ.

೪ ನೈರುತ್ಯದಿಕ್ಕಿಗೆ ಮುದ್ದಾಪುರದ ಸು[>ಹೊಲ]ಲಭ ಜೆರಮಾಡಿ ಮೇರೆ.

೫ ವರುಣದಿಕ್ಕಿಗೆ ತೊರೆಗದೆ ರಾಮಸಾಗರದ ಮುಜರೆ[>ಹೊಲ]ಗ್ರಾಮ ರಾಜೀಪುರದ ಸುಲಬು ಕಹಲದೆ.

೬ ವಾಯವ್ಯದಿಕ್ಕಿಗೆ ತುಂಗಭದ್ರಾನದಿ ಮಧ್ಯಾನ್ಹದಿ ದ್ಯಾಮಮ್ಮನ ಮಡುವಿನ ಪರಿಯಂತ್ರ.

೭ ಕುಬೇರದಿಕ್ಕಿಗೆ ಬೆಳಗೋದು[>ಡು] ಮ್ಯೆರೆ ಕೊಟೂರಪ್ಪನ ಕರೆಕಲ್ಲು ಗದೆ ಹೊಂದಿ.

೮ ಯಿಶಾನ್ಯದಿಕ್ಕಿಗೆ ಅರಳೆಹಳಿ ಸಾಣಾಪುರದ ತೊ[>ಹೊಲ]ಲಬು ಕುಂಬಾರರ ಹೊಲ ಹೊಂದಿ,

ಯೀ ಗ್ರಾಮಕ್ಕೆ ಅಷ್ಟದಿಕ್ಕುಗಳು:

೧ ಯಿಂದ್ರದಿಕ್ಕಿಗೆ ವೊರ್ವಾಯಿ ಮೂರು ಹರದಾರಿ, ಆಚೆ ಕುರುಗೋಡು ಮೂರು ಹರದಾರಿ, ಯಿಲ್ಲಿಗೆ ಕುರುಗೋಡು ಆರು ಹರದಾರಿ (ತಾ। ಬಳ್ಳಾರಿ).

೨ ಅಗ್ನಿದಿಕ್ಕಿಗೆ . . . . ಂಜಿ ನಾಲ್ಕು ಹರದಾರಿ, ಕಂಪಲಿ ತಾ।

೩ ಯಮದಿಕ್ಕಿಗೆ ಸೊಂಡೂರು ಹತ್ತು ಹರದಾರಿ, ಆರೇರ ತಾಲೂಕು

೪ ನೈರುತ್ಯದಿಕ್ಕಿಗೆ ಕಾಮಲಾಪುರ ನಾಲ್ಕು ಹರದಾರಿ, ಕಂಪಲಿ ತಾಲೂಕು

೫ ವರುಣದಿಕ್ಕಿಗೆ ವಿರೂಪಾಕ್ಷ ಹರದಾರಿ ನಾಲ್ಕು, ತಾ। ಕಂಪಲಿ

೬ ವಾಯವ್ಯದಿಕ್ಕಿಗೆ ಸ[>ನ]ದಿ ಆಚೆ ಗಂಗಾವತಿ ಮೂರು ಹರದಾರಿ, ತಾಲೂಕು ಮೊಗಲಾಯಿ, ವರುಣ ವಾಯವ್ಯ ದಿಕ್ಕಿನ ಮಧ್ಯದಲ್ಲಿ ಆನೆಗೊಂದಿ ತಾಲೂಕು ನಾಲ್ಕು ಹರದಾರಿ.

೭ ಕುಬೇರದಿಕ್ಕಿಗೆ ಅಯೋಧ್ಯ, ಮೊಗಲಾಯಿ ತಾಲೂಕು, ಅಯೋಧ್ಯ ಹರದಾರಿ

೮ ಯೀಶಾನ್ಯದಿಕ್ಕಿಗೆ ಯಿಟಗೆ, ತಾಲೂಕು ಕಂಪಲಿ, ಹರದಾರಿ. ಯಿನಾಮತಿಗ್ರಾಮ

ದೇವಾಲಯಗಳು:

೧ ಶ್ರೀ ವಿರುಪಾಕ್ಷದೇವರ ಗುಡಿ ಕಿಲ್ಲೆ ಕೋಟೆ ಪಶ್ಚಿಮ ಸಮೀಪದಲ್ಲಿ ತುಂಗಭದ್ರಾ ತೀರದಲ್ಲಿ ಶಕ ೧೩೮೭ನೆಯಲ್ಲಿ ಶ್ರೀಮದ್ರಾಜಾಧಿರಾಜ ವಿರೂಪಾಕ್ಷದೇವರಾಯರ ಪ್ರತಿಷ್ಠೆ, ಗರ್ಭಗುಡಿ ಮಾತ್ರ ಯಿತ್ತು. ಶಕ ೧೪೭೮ನೆಯಲ್ಲಿ ಸದಾಶಿವರಾಯರ ಆಳಿಕೆಯಲ್ಲಿ ಜೀರ್ಣೋದ್ಧಾರ ಮಾಡಿ,

ಮುಂದಿನ ಗುಡಿ ಪಾರ್ವತಿದೇವಿ ಗುಡಿ ಸಹ ಕಟ್ಟಿಸಿದ್ದು. ಅದವಾನಿ ಸೀಮೆ ಮಹಾನಾಡು ಸುಂಕದ ಬಹಾದರಸನ ಮಕ್ಕಳು ಕಂ[>ರಿ]ಚೇಡು ಯಜಮಾನ ಸಂಕರಸನು ಗುಡಿ ಕಟ್ಸಿ, ಆದವಾನಿ ಸೀಮೆಯಲ್ಲಿ ಭೂಸ್ವಾಸ್ತಿ ವರ್ತನೆಗಳು ನೇಮಕಾ ಮಾಡಿ, ಗುಡಿಯಲ್ಲಿ ಕರೆಕಲ್ಲ ಮ್ಯಾಲೆ ಕನಡ ಅಕ್ಷರದ ಶಾಸನ ಬರದದೆ. ಯೀ ದೇವತಾಸೇವೆ ನಡೆತಕ್ಕ ವಿವರವು: ೧ ನಿತ್ಯಸೇವೆದ್ಯಾಕೆ ಅಕ್ಕಿ ಪಕಾನೆ ಮಾ ೧॥೦ ಪ್ರಕಾರ ದಿನ ೧ಕ್ಕೆ ನಂದಾದೀವಿಗೆ ತರಿ ಭೂಮಿದು ಫಸಲ ಕುಳಪ ೧ ಪೂಜಾರಿಗೆ ದು . . . . ೫ ವಿಲ್ಲ. ಆಮ್ಯಾಲೆ ಶ್ರಾವಣಮಾಸದ ಅಭಿಷೇಕ. ನವರಾತ್ರಿ ಸೇವೆ, ಕಾರ್ತಿಕ ಸೇವೆ, ದೀಪಾರಾಧನೆ, ಶಿವರಾತ್ರಿ ಯೀ ಪ್ರಕಾರ ಸೇವೆ ನಡಿತಿತ್ತು. ರಥೋತ್ಸವ ಮಾಘ ಶು॥೧೫ ಸಂಸ್ಥಾನಿಕರು ಅಪ್ಪಣೆ ಪ್ರಕಾರ ಮಾಡುವರು. ಪಯದ ಪರಿಯಂತ್ರ ವೆಚ್ಚಾಮಾಡಿ ರಥಾ ಮಾಡಿಸುತ್ತಾ ಯಿದ್ದರು. ಮಧ್ಯದಲ್ಲಿ ಹೇವಳಂಬಿ ಸಂ।ದಲ್ಲು ಸಂಸ್ಥಾನ ದಂಡು ಬಂದು ರಥಾ ಸುಟ್ಟ ಕಾರಣ ರಥೋತ್ಸವ ನಿಂತಿತು. ಸದರಿ ಪ್ರಕಾರ ಸೇವೆ ನಡಿಯುತ್ತ ಬಂತು. ಹಾಲ[>ಲಿ]ಕುಂಪಣಿ ಅಮಲಿಗೆ ಸಕಲವು ಜಪ್ತಿ ಮಾಡಿ ತಸ್ತೀಕು ಮಾಡಿದ್ದು . . . . ಹಾಲ[>ಲಿ] ಕ್ರೋಧನ ಸಂ।ದಲ್ಲಿ ಹತ್ತು ಮಂದಿ ದೈವದವರು ರೈತರು ಕೂಡಿ, ತಮ್ಮ ಶಕ್ತ್ಯಾನುಸಾರ ಧರ್ಮ ಸಹಾಯಮಾಡಿ, ತೇರು ಕಟ್ಟಿ, ದೈವದವರೇ ವುಳಿಸುತ್ತ ಯಿದ್ದಾರೆ.

ವೆಂಕಟರಮಣದೇವರ ಗುಡಿ ವಿರೂಪಾಕ್ಷದೇವರ ಗುಡಿ . . . . ದಲ್ಲಿ ಗುಡಿ ಪ್ರತಿಷ್ಠೆ. ಯಿದಕೆ ಯಿನಾಮ ನಂದಾದೀವಿಗೆ ನಿತ್ಯನೈವೇದ್ಯಕೆ ಸಹವಾಗಿ ಪ ೩ ಗ . . . . ಸಿಲ್ಸಿಲಾಲ್ಯಾವಾಗಿ ಹಾಲ[>ಲಿ] ಕುಂಪಣಿ ಅಮಲಿಗೆ ನಡಿಯುತ್ತದೆ.

ಕೋಟೆಮಧ್ಯದಲ್ಲಿ ರಾಮಚಂದ್ರದೇವರ ಗುಡಿ. ಶ್ರೀರಂಗರಾಯರ ಆಳಿಕೆ ಶಕ ೧೫೭೫ ಸರ್ವಜಿತು ಸಂ।ದಲ್ಲಿ ನಿರ್ಮಾಣ. ಯಿದಕೆ ಯಿನಾಮು । ನಿತ್ಯನೈವೇದ್ಯ ದೀಪಾರಾಧನೆ ಸಹವಾಗಿ ತರಿಭೂಮಿ ಖಂ।೦ ಗದ್ದೆ, ಸಿಲಸಿಲಾ[>ಖಿಲಖಿಲ] ಲಾಗಾಯತುವಾಗಿ ಹಾಲ[>ಲಿ] ಕುಂಪಣಿ ಅಮಲಿಗೆ ನಡಿಯುತ್ತದೆ.

೧ ಕೋಟೆ ವಳಗೆ ಮೂರು ಅಗಸಿ, ಸುತ್ತಲ ಮುಖ್ಯಪ್ರಾಣದೇವರ ಗುಡಿ. ಗ್ರಾಮನಿರ್ಮಾಣಕಾಲಕ್ಕೆ ಯಿದಕೆ ಮುಗುಳು ಯಿನಾಮು ಯಿತ್ತು. ಕುಂಪಣಿ ಅಮಲಿಗೆ ತಸ್ತೀಕುಮಾಡಿ ಯಿದ್ದಿತು.

ವೀರಭದ್ರದೇವರ ಗುಡಿ ಒಕ್ಕಲುತನದವರೆ ಪ್ರತಿಷ್ಠೆ ಮಾಡ್ಸಿದು. ಶಕ ೧೬೨೦ನೆಯಲ್ಲು ಯಿದಕ್ಕೆ ಯಿನಾಮು ಲಾ।೧. ಸಿಲಸಿಲಾ[>ಖಿಲಖಿಲ] ಲಾಗಾಯತು ಹಾಲ[>ಲಿ] ಕುಂಪಣಿ ಅಮಲಿಗೆ ನಡಿಯುತ್ತ ಯಿದ್ದಿತೆ.

ಶಂಕರದೇವರ ಗುಡಿ ಕೋಟೆವಳಗೆ ಪೂರ್ವಕ್ಕೆ, ಬೆಲಿಗರು, ಕಟ್ಟಿಸಿದ್ದು, ಯಿದಕ್ಕೆ ಯಿನಾಮು ತಸ್ತೀಕು ಯಿಲ್ಲಾ. ಭಕ್ತರೇ ಸೇವೆ ಮಾಡುತ್ತಾರೆ.

ಶಿವ್ಯೆದೇವರಗುಡಿ ಹಂಡನವರು (ಪೂರ್ವಕ್ಕೆ) ಕಟ್ಟಿಸಿದರು. ಯಿನಾಮತಿ ಅರಸುಗಳ ಅಮಲಿಗೆ ಜಪ್ತಿ ಆಯಿತು.

ಸೋಮೇಶ್ವರಗುಡಿ, ಪೂರ್ವಕ್ಕೆ. ಆದಿಕಾಲದ್ದು, ಪ್ಯಾಠಿಗೆ ಆಗ್ನೆ ದಿಕ್ಕಿನಲ್ಲು ಯಿದ್ದೀತೆ. ಯಿದಕ್ಕೆ ಯಿನಾಮ ೫೫ . . . . ೪೦ ಮಾಡಿಕೊಂಡು ಭಾ[>ಪೂ]ಜಾರಿಗಳು ಅರ್ಸಿನವರು ಅಮಲು. ಯೀ ರಥೋತ್ಸವ ಅವರೇ ಮಾಡಿಸುತ್ತ ಯಿದ್ದರು. ವೈಶಾಖ ಶು ೭ ಹಾಲ[ಲಿ] ಕುಂಪಣಿ ಅಮಲಿಗೆ ಜಪ್ತಾಗದಿ ಆಗಿ ತಸ್ತೀಕು ಮಾಡಿ ಯಿದ್ದಾರೆ.

ಪೇಠೆ ವಳಗೆ ದೇವಾಲಯಗಳು ಗುಡಿ:

ಪೇಠೆ ಬಾಜಾರದಲ್ಲಿ ಬಸವಣ್ಣದೇವರ ಗುಡಿ. ದೈವದವರು ಪೇಟೆ ನಿರ್ಮಾಣ ಮಾಡೋ ಕಾಲಕ್ಕೆ ಕಟ್ಟಿಸಿ, ಯಿದಕ್ಕೆ ದೀಪಾರಾಧನೆಗೆ ಮಸುಮು ಹೇರು ೧ಕೆ ದುಡ್ಡಿನ ಪ್ರಕಾರ ನಡಿಯುತ್ತ ಯಿತ್ತು. ಹಾಲ[>ಲಿ] ಕುಂಪಣಿ ಅಮಲು ಜಪ್ತಿ.

೧ ವಡ್ಡಿನವರು ಕಟ್ಟಿದು ಬಸವಣ್ಣದೇವರ ಗುಡಿ, ಪೇಟೆ ಕಟ್ಟೋ ಕಾಲಕ್ಕೆ ಕಟ್ಟಿದ್ದು.

೧ ನೀಲಕಂಠದೇವರ ಗುಡಿ ಬಿಳೆ ಮಗ್ಗದವರು ಕಟ್ಟಿದು, ರಾ[>ಬಾ]ಜರದ್ದಾಗೆ ಕಲ್ಲುಗುಡಿ.

೧ ಪಾಂಡುರಂಗದೇವರ ಗುಡಿ ಹೇವಿಳಂಬಿ ಸಂ|ಲ್ಲು ಚಿನಿವಾರು ಕಟ್ಟಿದ್ದು. ಯಿದಕೆ ಯಿನಾಮು ಪಾ ೩. ಮೂಗಳು ಗದ್ದೆ, ಯಿದ್ದದ್ದು ಜಪ್ತಿ ಮಾಡಿ ಹಾಲ[>ಲಿ] ಕುಂಪಣಿ ಅಮಲು ವಳಗೆ ತಸ್ತೀಕಾಗಿ ಯಿರುತ್ತದೆ.

೧ ವಾರಕಾರರು ಹನುಮಂತದೇವರ ಗುಡಿ ಬಾಜರದಲ್ಲಿ ಕಟ್ಟಿದ್ದು, ನೂರು ವರುಷದ ಮುಂದೆ ಯೀ ದೇವರ ಸೇವೆ ಅವರೆ ಮಾಡುತ್ತಾರೆ.

೧ ಪದ್ಮಾಯವರು ಕಟ್ಟಿಶಿದ್ದು ನಡುವಿನ ಅಗಸೆ ವಳಗೆ ಹನುಮಂತದೇವರ ಗುಡಿ. ಅವರೇ ಸೇವೆ ಮಾಡಿಸುತ್ತ ಯಿದ್ದಾರೆ.

೧ ಅರಮು ಕಟ್ಸಿದು ನರಶಿಂಹಾದೇವರ ಗುಡಿ.

೧ ದೇವಾಂಗದವರು ಕಟ್ಟಿಸಿದ ಗುಡಿಗಳು

ರಾಮಲಿಂಗದೇವರ ಗುಡಿಗಳು

೧. ಹಳೆಪೇಟೆ ಕಲ್ಲುಗುಡಿ, ಪೂರ್ವಪೇಟೆ ಹೋ ಕಾಲಕೆ.

೧. ಚೆಕ್ಕಪ್ಪನ ಭಾವಿ

ಕಾಲುವೆಗಳು ಹುಟ್ಟಿಯಿರೊ ವಿವರ :

೧ ಟಾಕಿಕಾಲುವೆ ಹುಟ್ಟಿದ್ದು: ತುಂಗಭದ್ರಾ ನದಿಯಲ್ಲಿ ಮೊಗಲಾಯಿ ಪದಘಾತಕ್ಕೆ ದಕ್ಷಿಣ ದೇವಘೂತ, ಯಿಲ್ಲಿ ಯರಡು ಹರದಾರಿ ದೇವಘೂತ ಯೀ ವೂರು ಯೆರಾದಿ ಸಣ್ಣ ಹರದಾರಿ ನಮ್ಮ ಯಿ . . . . ದಿಗೆ ದಕ್ಷಿಣಕ್ಕೆ ಮೇಲು ಭಾಗದಲು ಮೊಗಲಾಯಿ ದಾ ಚಕ್ಕ ಮತಗಲ್ಲು ಯೀರಾದಿ ಜುಡಿಗಲು ಯಾರಾದಿ ಮೇಲಣ ನೀರು ಯಿನ್ನು ಬೆಗಲಿಲಿ ವಂದು ಸರಲಿನಿಂದ ಬರುವ ನೀರು ಸಹ ಯೀ ಕಾಲುವೆಗೆ ಬರುತ್ತದೆ. ಯೀ ಕಾಲುವೆ ಕಟ್ಟಿದಾತ ರಾಮಸಾಗರದ ಮಜಾರ. ರಾಜಾಪುರದ ಗುಡುದೂರು ಹೊಲಬಿನಲ್ಲಿ ಮುಪ್ಪಿಢಣಾಯಕ ನಿರ್ಮಾಣ ಮಾಡಿದು. ರಾಜಾಪುರ, ಗುಡದೂರು, ರಾಮಸಾಗರ

ಯೀ ಮೂರು ಗ್ರಾಮದ ಹೊಲಬಿನಲ್ಲಿ ಹಾದು ನಮ್ಮ ಮಾಗಾಣಿಗೆ ಬರುತ್ತದೆ. ನಮ್ಮ ನಮ್ಮ ಮಾಗಾಣೆ ಬಾರಾಹಾರ ರು. ಹೊತು ಆದ ನೀರು ನಮ್ಮ ತೇನೆ ಹೊಲಬುತಾ ಪೂ ಬೆಳಗೋಡು ಮಾಗಣೆಗೆ ಹೋಗುತದೆ. ಯೀ ಪ್ರಕಾರ ಯಿದ್ದಿತ್ತೆ. ಯೀ ಕಾಲುವೆ ವರುಷ ಸರಕಾರದವರು ಹಣಾಮಟು ಸವರಿಶಿ ಯೀ ಮುಕುಟುರಿ . . . . ಗ ಬಲರವಯಿ ಯೀ ಪರಾಮರ್ಕಿ ಮಾಡ್ಸಿ ಮಾಗಾಣೆಗೆ ನೀರು ಹರಸುತ್ತ ಯಿದ್ದಾರೆ.

೧ ಚಿಕ್ಕ ಕಾಲಿವೆ ಹುಟ್ಟಿದ್ದು: ಕಂಪಲಿ ಕಾಲುವೆ ವಳಗಣ ನೀರು ಭಾರಯ್ಯನಮಠ ಬಳಿಲಿ ಅಲಿಗಿನಿಂದ ಹೆಚ್ಚು ನೀರು ಬರುವಂಥಾವು. ಯಿನ್ನು ಬಾವಿ ನೀರು ಸಹಾ ಯಿದಕ್ಕೆ ಕಾಲವಿಗೆ ಬರುತ್ತಾ ಯಿದ್ದಾವೆ. ಯೀ ನೀರು ನಮ್ಮ ಮೂಗುಶಿಗೆ ಹರದು ಮುಂದಕ್ಕೆ ಬೆಳಗೋಡು ಮಾಗಣಿಗೆ ಹರಿಯುತವೆ. ಯೀ ಕಾಲವೆ ತಗಸ ಬೇಕಾದ್ರೆ ಸರಕಾರದವರು ಬೆಳಗೋಡ ದರವೆ . . . . ಬೆಳಗೋಡ ಲಿಂಗ ಚಾಲಕಿ ಕಾಲವೆ ಮೇಲೆ ಯಿದ್ದು ಜೋಪಾನ ಮಾಡಿ ನೀರು ಹರಿಸುತ್ತ ಯಿದ್ದಾರೆ.

೧ ಹಿಂಗ್ರಕಾಲವೆ ಹುಟ್ಟಿದ್ದು: ರಾಮಸಾಗರದ ಕಾಲುವೆಯಿಂದಲು ಯಿದ ಆಣೆಕಟ್ಟು, ಮೊಗಲಾಯಿ ತಾಲೂಕು ಹಾಕಿ ಜಂತುಗಲ್ಲು ಕಾಲವೆ ಆಣೆಕಟ್ಟಿಗೆ ಪೂರ್ವಕ್ಕೆ ಹುಟ್ಟಿ ಯಿದ್ದಿತು.

೧ . . . . ಗಾಣಿ ಮುದ್ದಾಪುರದ ಮಾಗಾಣ ಹರದ . . . . ಅಂ . . . . ಬು . . . . ತ . . . . ಸ್ತೆಮ್ಮಾನ ಗುಡಿಲಿಂದ ನಮ್ಮ ಮಾಗಾಣಿಗೆ ಸಣ್ಣ ಮಡಿಗಳಲ್ಲಿ ನೀರು ಹರದು ಅಲ್ಲಿಂದ ಸೋಮಪ್ಪನ ಕೆರಿಗೆ . . . . ನೀರು ಬಂದು ಬೀಳುತದೆ. ಆ ಕೆರಿಗೆ ತೂಬಿನಲ್ಲಿ ಕೆಲವು ಮಾಗಣಿ ಆಗುತ್ತಾ ಯಿದ್ದಿತ್ತೆ.

ಕೆಡೊಕಾಲುವೆ ಹುಟ್ಟಿಯಿರೋದು ರಾಮಸಾಗರದ ಮಾಗಣೆ, ಮುದ್ದಾಪುರದ ಮಾಗಣೆ ಹರದಕೊಂಡು ನೀರು ಅಲ್ಲಿ ಕಾಲುವೆ ಹುಟ್ಟಿದ್ದು. ಮುದ್ದಾಪುರದ ಯಿಂದ ರಾಮಸಾಗರಕ್ಕೆ ಹೋಗುವ ಮಾರ್ಗದಲ್ಲಿ ಹುಟ್ಟಿ ಅಲ್ಲಿಂದ ನಮ್ಮ ಮಾಗಣೆಗೆ ನೀರು ಬರುತ್ತದೆ.

ಯೀ ಪೇಟೆಯಲ್ಲಿ ಹುಟ್ಟುವಳಿ:

೫ ಆಯನೂರೆ ಶೀಮೆ ಸಂಗಡ ಆಗೋವು:

೧ ಗದೆ ಮಾಡಿ ರುಂಮಾಲ ತರಕಾರ ಪಾಡಿ . . . . ನಾಲ್ಕು ವರಹ ಪರಿಯಂತ್ರ ಆಗುತದೆ.

೧ ಗಂಡಸರ ವೊ[>ಉ]ಟ್ಟು ಕೊಂಬೂದು ಮಡಿ ಯರಡು ವೆ . . . . ಮೊದಲು ಮಾಡಿ, ಆರು ವರಹ ಪರಿಯಂತ್ರತ.

೧ ಹೆಣ್ಣು ಮಕ್ಕಳು ವುಟ್ಟುಕೊಂಬುದು ಮಡಿ ಅಯಿದು ವರಹಾ ಮೊದಲು ಮಾಡಿ. ಹನ್ನೆರಡು ವರಹ ಪರಿಯಂತ್ರ.

೧ ಯರಡ . . . . ಡಿ ಕುಲಿ[>ಪ್ಪ]ಸದ ಚಾಪು . . . . ೧೨ ಕ್ರಯ ಮೂರು ವರಹಾ ಮೊದಲು ಮಾಡಿಕೊಂಡು, ವಂಬತ್ತು ವರಹಾದ ಪರಿಯಂತ್ರತ

ದಿನ ೫

೧೫ ನೂಲಿನ ಸಂಗಡ ಆಗೋದು, ಕರೆಗಿನಗಳು:

೧ ಹುಟ್ಟಿತದ ಕರೆ ಶೀರೆ ವಂದಕ್ಕೆ ನಾಲ್ಕು ಹಣ . . . . ಹೊಚ್ಚು ಶೀರೆ ಹತ್ತು ವರಹಾದ ಪರಿಯ . . . .

೧ ಹಾಚದ ಮಪಳಿ . . . .

ಮೊದಲು ಮಾಡಿಕೊಂಡು ಅದು ವರಹ ಪರಿಯಂತ್ರ

೧ ಕತ್ತಳೆ ಹೂವ್ವಿನ ಹಚ್ಚಡ ನಾಲ್ಕು ವರಹ ಮೊದಲು ಆಗಿ, ಹದಿನಾಲ್ಕು ವರಹಾದ ಪರಿಯಂತ್ರಕು.

೧ ಕವಳೆ ಗುಡಿನ ಶೀರೆ ಮೂರು ವರಹಾ ಮೊದಲಾಗಿ, ಹದಿನಾರು ವರಹಾದ ಪರಿಯಂತ್ರ.

೧ ಕುಪ್ಪಸದ ಚಾವಿ[>ಪು] ೧ಕ್ಕೆ. ಕುಪಸ ೧೨ಕೆ ಸೊಂ . . . . ಮೊದಲು ಮಾಡಿಕೊಂಡು, ನಾಲ್ಕು ವರಹಾದ ಪರಿಯಂತ್ರಕೆ.

೧ ಕವಳೆ ಹೂವ್ವಿನ ಕುಪ್ಪಸ ಚಾಮ[>ಪು] ೧ಕೆ ಕುಪ್ಪಸ ೧೨ ಮೂರು ಹೊನ್ನು ಮೊದಲು ಮಾಡಿಕೊಂಡು, ಆರು ವರಹಾದ ಪರಿಯಂತ್ರಕೆ.

೬

೩ ಕೆಂಪು ದಿನಸುಪಾರಿ ನೂಲು ಜಿರಂಜಿವದಕಾಗಿ:

೧ ಶೀರೆಗಳು, ಶೀರೆ ೧ಕೆ ಪ್ರತಾಪ ಮೊದಲು ಮಾಡಿಕೊಂಡು, ಐದು ವರಹಾದ ಪರಿಯಂತ್ರಕೆ

೧ ಅಡಿಕೆ ಬಣ್ಣದ ಹಚ್ಚಡ ಮೂರು ವರಹಾ ಮೊದಲು ಮಾಡಿ, ಆರು ವರಹಾ ಪರಿಯಂತರ.

೧ ಕೆಂಪು ಕುಪ್ಪಸದ ಚಾಪು ೧ಕೆ ಕುಪ್ಪಸ ೧೨ ಕಂ॥ ಮೊದಲು ಮಾಡಿ, ಮೂರು ವರಹಾದ ಆಖೈರು

೩

೬ ಬಿಳೆ ದಿನಸು:

೧ ಧೋತ್ರ ಜೋಡು, ನಾಲ್ಕು ಹಣ ಮೊದಲು ಮಾಡಿಕೊಂಡು, ಅಯಿದು ವರಹಾ ಆಖೈರು.

೧ ಶಲ್ಯ, ನಾಲ್ಕು ಹಣ ಮೊದಲು ಮಾಡಿ, ಯೇಳು ವರಹಾ ಆಖೈರು.

೧ ಮುಂಡಾಸ . . . . ಧಾರಣ . . . . ಮೊದಲು ಮಾಡಿ, ಯ . . . . ಆಖೈರು.

೧ ಚ . . . . ಹಚ್ಚಡ, ನಾಲ್ಕು ಹಣ ಮೊದಲು ಮಾಡಿ, ಯರಡು ವರಹಾ ಆಖೈರು

೧ ರುಮ್ಮಾಲು, ಚವಲದು ಮೊದಲು ಹಣ ಆಖೈರು ಯೀ ಪ್ರಕಾರ ಆಗುತ್ತಾ ಯಿದ್ದಾವೆ.

ಅಳತಿ, ಭಾಜರದಾಗೆ:

೧ ಪಕ್ಕಾಸೇರು ೧ಕ್ಕೆ ಯೆಂಬತ್ತು ನಾಲ್ಕು ರೂಪಾಯದ ತೂಕ.

೧ ಯಾಲಕ್ಕಿ ಮೂರು ಸೇರು ಪಾವು ಆದರೆ . . . . ಪಡಿ ಅಂದ್ರೆ ಸುಲ್ಲಿಗೆ.

೧ ಯೀ ಪಡಿವಳಗೆ ದಿನಸು ಅಳೆದು ವಮ್ಮನ. ಯಿದಕ್ಕೆ ಯರಡು ಗಿದನವಾದರೆ ವಂದು ಪಡಿ.

ಪಡಿಗೆ ನಾಲ್ಕು ಗಿದನ.

ಪಡಿಗೆ ಯೆಂಟು ಅರಗಿದನ.

ಯಿಂಥಾ ಪಡಿ ನಾಲ್ಕು ಆದ್ರೆ ವಮ್ಮನ, ಯಿದಕೆ ಮಾನು ಅಂತಾರೆ.

೧ ಯಿಂಥಾ ವಮ್ಮನ ಆರು ಆದ್ರೆ ವಂದು ವಕ್ಕಳವು,

೧ ಯಿಂಥಾ ವಕ್ಕಳವು ಯಿಪ್ಪತ್ತು ಆದ್ರೆ ವಂದು ಖಂಡುಗವು.

ಯಿಂತು ಹೇರು ವಂದಕೆ ಬವಾದ ಯೆತು[>ತ್ತು] ಹೇರಿಗೆ ವಂಬತ್ತು ಮಾನವು.

ಸುಮಾರದ ಹೊತ್ತಿಗೆ ಯಂಟು ಮಾನ,

. . . . ಣಗೆ ಹೆರೊದು ಹೆರು ೧ಕೆ ಹದಿನೈದು ಮಾನವಯ

ಸಂ . . . . ಟಾಣ್ಯಾ ವಂದಕೆ ಹ . . . . ರಡು . . . . ಮಾನ, ಕಡೆ ಹೇರು ವಂದಕೆ ಐದು ಮಾನವು.

ತೂಕದ ಪಟ:

೧ ಕಚ್ಚಾಸೇರು ೧ಕೆ ಯಿಪ್ಪತ್ತೊಂದು ರೂಪಾಯಿ ತೂಕ, ಯಿದಕ್ಕೆ ಅಳತಿ ತೂಕ ೨೪ ದುಡು.

೧ ಯಿಂಥಾ ಕಚ್ಚಾಸೇರು ಆರು ಆದರೆ ವಂದು ಪಂಚೆರು.

೧ ಯಿಂಥಾ ಪಂಚೇರು ಯರಡು ಆದ್ರೆ ವಂದು ಧಡೆ.

೧ ಯಿಂಥಾ ಧಡೆ ೪ ಆದರೆ ವಂದು ಮಣವು.

ಯಿದಕ್ಕೆ ಹೇರುಗಳು–

೧ ಯೆತ್ತು ಬಲವಾದುದಾದ್ರೆ ಒಂಬತ್ತು ಮಣವು.

೧ ಸಣ್ಣ ಯೆತ್ತಿಗೆ ಯಂಟು ಮಣವು.

೧ ಕೋಣಗೆ ಬಲವಾದು ಹದಿನೈದು ಮಣ.

೧ ಸಣ್ಣ ಕೋಣಗೆ ೧೨ ಮಣವು.

೧ . . ಕು . . . . ವೆ ಅಯಿದು ಮಣವು.

ಈ ಪ್ರಕಾರಕ್ಕೆ ಯಿದ್ದಿತು. ಯೀ ಕೈಫಿಯತು ಬರ್ಸಿದವ ಶ್ರೀ ಕೃಷ್ಣಪ್ಪಯ್ಯಗೌಡ ಶಾ॥ ವೆಂಕಟಪತಯ್ಯ ಗುಮಾಸ್ತೆ ೨ . . . . ಕವ್ಯ, ಅರವತ್ತು ವರುಷದವ.

❖❖

೧೦೮
ದರೋಜಿ ಗ್ರಾಮದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೫೧

ಕಂಪ್ಲಿ ತಾಲುಕೂನಲ್ಲಿ ಸೇರಿದ ದರೋಜಿಗ್ರಾಮದ ಕೈಫಿಯತು.

ಕಂಪ್ಲಿ ತಾಲೂಕ ಪೈಕಿ ಮಾಗಣೆ ಕಸಬೇ ದರೋಜಿಗ್ರಾಮದ ಕೈಫಿಯತು.

ಪೂರ್ವಕ್ಕೆ ತ್ರೇತಾಯುಗದಲ್ಲಿ ಶ್ರೀರಾಮದೇವರ ಕಾಲಕ್ಕ ಲಂಕಾ ಪಟ್ಟಣದಲ್ಲಿ ರಾವಣನ್ನ ಜೈಸಿ, ಪುನಃ ಶೀತಾ ಅಮ್ಮಾನವರನ ಕರಕೊಂಡು ಅಯೋಧ್ಯಾ ನಗರಕೆ ಹೋಗುವಾಗಲು, ಯೀ ಬೆಟ್ಟದ ಮೇಲೆ ರಮ್ಯವಾದ ಸ್ತಳ ನೋಡಿ, ಸ್ತಾನ ಮಾಡಿ, ಯೀಶ್ವರನ ಪೂಜೆ ಮಾಡಿಕ್ಕೊಂಡು ಹೋಗಬೇಕೆಂದು ನೀರಿನ ನಿಮಿತ್ಯವಾಗಿ ಧನುರ್ಭಾಣ ಹಾಕಿ, ನೀರಿಗೆ ಡೊಣೆ ಮಾಡಿ, ಸ್ತಾ[>ಸ್ನಾ]ನ ಮಾಡಿಕೊಂಡು ಮಳಲು ಲಿಂಗಯಿಟ್ಟು ಪೂಜೆ ಮಾಡಿದರಿಂದ ರಾಮಲಿಂಗದೇವರು ಅನಿಶಿಕೊಳ್ಳುತ್ತ ಯಿಧೆ. ಯಿದಕ್ಕೆ ಗುರುತು ಯೇನು? ಅಂದರೆ ಅಮ್ಮಾನವರು ಯೆರಕೊಂಡ ಕಾರಣ ಯೀ ಬೆಟ್ಟಕ್ಕೆ ಎತ್ತರ ಯಣ್ಣಿಗೊಂಡ. ಅರಷಣಗೊಂಡ ಯಂದು ಯರಡು ಹೊಂಡಗಳು ಯಿದ್ದಾವೆ. ಯೀ ಪ್ರಕಾರ ಯಿಲ್ಲಿ ಮಾಡಿಕೊಂಡು ಅಯೋಧ್ಯಾನಗರಕ್ಕೆ ಹೋಗಿ ಯಿದ್ದಾರೆ. ಯೀಗಲ್ಯೂ ಆ ಡೊಣೆ ರಾಮಲಿಂಗದೇವರ ಗುಡಿ ಮುಂದೆ ಜೀತಾಪಾಣಿಯಿರುತಾ ಯಿದ್ದಿತೆ. ಯಿಂದಿಗು ನೀರು ಹೋಗೋಣ ಯಿಲ್ಲ. ಯರಡು ಹೊಂಡಗಳು ಯೆಣ್ಣೆ ಅರಷಿಣದೋಪಾದಿಯಲ್ಲಿ ನೀರು ತುಂಬಿದಾಗ ಯಿರುತ್ತಾ ಯಿಧಿತೆ.

ದ್ವಾಪರದಲ್ಲಿ ರಾಮದೇವರು ಪ್ರತಿಷ್ಠೆಮಾಡಿದ ಸ್ಥಳ ನೋಡಿ, ಯಿದಕ್ಕೆ ಉತ್ರ ಭಾಗದಲ್ಲಿ ಕೆಳಗೆ ಕಣಿಮ ಬಳಿಯ ನೆಲ ಕಿಲ್ಲೆ ಕಟ್ಟಿಶಿ, ದ್ವಾರಾವತಿಗೆ ಸವನವಾದಂತಾದ್ದು ಯಂದು ಯಿದಕ್ಕೂ ದ್ವಾರಾವತಿಯೆಂದು ಶ್ರೀಕೃಷ್ಣದೇವರ ಕಾಲಕ್ಕೆ ಹೆಸರು ಯಿಟ್ಟು ಯಿದ್ದರು.

ಯೀ ಕಡೆ ಕಲಿಯುಗದಲ್ಲಿ ರಾಯದುರ್ಗದ ಮಲ್ಲದೇವರಾಯರು ರಾಜ್ಯಪ್ರತಿಪಾಲನೆ ಮಾಡುತ್ತ ಯಿರಲಾಗಿ, ವೊಂದು ದಿವಸ ಸ್ವಾರಿ ಬಂದು, ಯೀ ಸ್ಥಳ ನೋಡಿ ಯಿದ್ದು, ಪುಣ್ಯಸ್ಥಳ ದೇವತಾ ಶ್ರಿಷ್ಟಿ ಯಿದ್ದೀತೆಯಂದು ಯೀ ದ್ವಾರಾವತಿ ಮತ್ತಿಷ್ಟು ಅಧಿಕವಾಗಿ ಕಟ್ಟಿಸಿ, ರಾಮಲಿಂಗದೇವರು ಯಿದ್ದು[>ದ್ದ] ಬೆಟ್ಟದ ಮ್ಯಾಲೆ ಯೀ ದೇವರಿಗೆ ಗುಡಿ ಕಟ್ಟಿಸಿ, ಯಿದರ ಸುತ್ತಾ ದುರ್ಗ ಕಟ್ಟಿದನು. ಯಿದು ಹೊರ್ತು ತನ್ನ ಮನಿದೇವರು ಯೀ ಸ್ಥಳದಲ್ಲಿ ಯಿರಬೇಕೆಂದು ಯೋಚನೆ ಮಾಡಿ, ಯೀ ದ್ವಾರಾವತಿಗೆ ಪಶ್ಚಿಮ ಹರದಾರಿ ರಾಮಲಿಂಗದೇವರ ದುರ್ಗಕ್ಕೆ ಉತ್ರ ಯೀ ಮೇರಿಗೆ ಸ್ಥಳ ನೋಡಿ, ದೇವಲಾಪುರದ ಬೆಟ್ಟದ ಮೇಲೆ ಮಲ್ಲಿದೇವರುಯಂದು ನಿರ್ಮಾಣ ಮಾಡಿಸುತ್ತಾ, ದುರ್ಗದ ವಸದಲ್ಲಿದ್ದ, ಮಲ್ಲಿದೇವರದುರ್ಗಯಂದು ಹೆಸರು ಬಿತ್ತು. ಯೀಗ್ಯೂ ಅದೇ ಹೆಸರು ಜನ ವಾಡಿಕೆ ಯಿಧಿತೆ.

ಆ ತರ್ವಾಯ ಕಂಪ್ಲಿರಾಯನ ಮಗ ಕೊಮಾರರಾಮನು ರಾಜ್ಯಪ್ರತಿಪಾಲನೆ, ಕೊಮಾರರಾಮನ ಹೆಂಡತಿ ತಮ್ಮಾ ಮಾಡಿಕೊಳ್ಳುತ್ತಾ ಬರಲಾಗಿ, ಕೊಮಾರರಾಮನ ಭಾವ ಮೈದುನ ಬಾಲಸಂಗಮನಾಥನೆಂಬಾತನು ಯೀ ದ್ವಾರಾವತಿಯಲ್ಲಿ ನಿಂತು, ರಾಮಲಿಂಗದೇವರ ದುರ್ಗ ಮಲ್ಲದೇವರ ದುರ್ಗ ನೋಡಿ ತನ್ನದು ವೊಂದು ಹೆಸರು ಆಗಬೇಕೆಂದು ಯರಡು ದುರ್ಗದ ಮಧ್ಯದಲ್ಲಿ ದ್ವಾರಾವತಿಗೆ ಪಶ್ಚಿಮ ಗುಂಡಿನ ಆಳಿತ ಸಮೀಪದಲ್ಲಿ, ಯಣ್ಣೆಗೊಂಡ ಅರಿಶಿನಗೊಂಡ ಯಿರೊ ಸ್ತಳದಲ್ಲಿ, ಯಿದು ಪುಣ್ಯಸ್ಥಳವೆಂದು ಯೀತನು ವೊಂದು ದುರ್ಗ ಕಟ್ಟಿದನು. ಅದರಿಂದ ಬಾಲಸಂಗಮನಾಥದುರ್ಗಯಂದು ಹೆಸರು ಯಿಟ್ಟನು. ಯೀಗ್ಯೂ ಅದೇ ಪ್ರಕಾರ ಜನವಾಡಿಕೆ ಬಿದ್ದು ಯಿದ್ದೀತೆ.

ದ್ವಾರಾವತಿಗೆ ದ್ವಾರಾವತಿದುರ್ಗಯಂದು ಆಡಲಿಕ್ಕೆ ಕಾರಣವೇನು? ಅಂದರೆ ಆತನು ಕೆಳಗಿನ ದ್ವಾರಾವತಿ ನಡುಬೆಟ್ಟದ ಮೇಲಿನ ದುರ್ಗದಲೂರು ಸಹಾ ಬಲಕಾಸಿಕೊಂಡು, ಯೀ ದ್ವಾರಾವತಿಗೆ ಮೇಲೆ ದುರ್ಗಗಳು ಯಿದ್ದ ನಿಮಿತ್ಯೆ ದ್ವಾರಾವತಿದುರ್ಗ ಜನವಾಡಿಕೆ ಬಿದ್ದು ಯಿತ್ತು. ಯೀ ಸ್ಥಳದಲ್ಲಿ ಬಾಲಸಂಗಮನಾಥನು ಬಂದೊಬಸ್ತು ಮಾಡಿಕೊಂಡು ಯಿರಲಾಗಿ, ಕೊಮಾರರಾಮನು ಮುತ್ತಿನ ಚಂಡು ಆಡೊ ವೇಳೆದಲ್ಲಿ ಆ ಚಂಡು ಮಲತಾಯಿ ರತ್ನಾಜಿ ಮನೆ ವಳಗೆ ಬೀಳಲಾಗಿ, ಆಕಿ ಆ ಚಂಡು ಬಚ್ಚಿಟ್ಟುಕೊಂಡು ಯಿದ್ದಲ್ಲಿ, ಯೀ ಕೊಮಾರರಾಮನು "ಚಂಡು ಯಿಸಕೊಂಡು ಬಹೊದು"ಯಂದು ಕಾಟಣ್ಣ ಮೊದಲು ಮಾಡಿಕ್ಕೊಂಡು ಐದು ಆರು ಮಂದೀನ ಕಳುಹಿಸಿ ಕೊಟ್ಟ ಕಾಲಕ್ಕು ರತ್ನಾಜಿ ಕೊಡದೆ ಹೋದ ಕಾರಣದಿಂದ, "ನಮ್ಮಾ ತಾಯಿ ಮನೀಗೆ ನಾನು ಹೋಗೊದಕ್ಕೆ ಬಂದ ಆದೇಶವೇನು?"ಯಂದು, ಯೀ ಕೋಮಾರರಾಮನು ತಾಯಿ ರತ್ನಾಜಿ ಮನೀಗೆ ಹೋಗಿ "ಚಂಡು ಕೊಡಮ್ಮಾ"ಯೆಂದು ಕೇಳಲಾಗಿ, ಆಕಿ ಯೀತನ ರೂಪಸೌಂದರ್ಯ್ಯ ಕಂಡು "ನೀನು ನನ್ನ ಸಹವಾಸ ಮಾಡಿದರೆ ಚೆಂಡು ಕೊಟ್ಟೇನೆ ಹೊರ್ತು, ಯಿಲ್ಲವೆ ಕೊಡೊದಿಲ್ಲ"ವೆಂದು ಹೇಳಲಾಗಿ, ಯೀತನು ಹೇಳಿದ್ದು "ನಾನಂತು ಪರನಾರಿ ಸಹೋದರನೆಂದು ಬಿರುದು ವುಂಟು. ನೀನಂತು ಸ್ವಯಂ ಮಾತಾ. ಯೀ ಮಾತು ಹ್ಯಾಗೆ ಆದೀತು"ಯಂದು ಯನಲಾಗಿ, ಆಕಿ ಸಾದೃಷ್ಟಾ ಕೊಟ್ಟದ್ದು "ತಂದೆ ಹತ್ತೋ ಕುದರೆ ನೀನು ಹತ್ತೋದಿಲ್ಲವೆ ಹ್ಯಾಗೆ? ತಂದೆ ಯೇರುವಂತಾ ಪಾಲಕಿ ನೀನು ಯೇರೊದಿಲ್ಲವೆ?"ಯಂದು ದೃಷ್ಟಾಂತ ಹೇಳಲಾಗಿ, ಆ ಮಾತು ಕೇಳಿ ಯೀತನ ಮನಸ್ಸಿಗೆ ಸರಿ ಬಾರದೆ, ಯಿದು ಕೆಲಸವಲ್ಲೆಂದು ತಿಳಿದು, "ಯೀ ಮಾತು ಮಾತ್ರ ನನ್ನ ಜಲ್ಮಕ್ಕೆ ಹೊರ್ತು"ಯಂದು, ಆಕೀಗೀ ಕಾಮಾತುರ ಹೆಚ್ಚಿ, ಯೀತನ ಮೇಲೆ ಮ[>ಮೇ]ಲವಾಯದು ಆತನ್ನ ಕೈ ಹಿಡು ವಳಗೆ ಕರಕೊಂಡು ಹೋಗಿ, ಆಕಿ ಆಡಿದ್ದು "ನೀನು ಹುಟ್ಟಿದ ಹನ್ನೆರಡನೆ ದಿವಸದಲ್ಲಿ ನಿನಗೆ ಹೆಸರು ಯಿಡೊ ಸಮಯಕ್ಕೆ ನಿನ್ನ ಮೇಲೆ ಮೋಹಾ ಹುಟ್ಟಿದ್ದರಿಂದ, ಯಿಂದಿನ ಪರಿಯಂತ್ರ ಪ್ರಾಯಕೆ ದ[>ದಾ]ವಾಗೆ ಬಂದಾನುಯಂದು ಚಿಂತಿಸ್ತುಯಿದ್ದೆ. ಅದೆ ಮೇರಿಗೆ ದೇವರು ಅನುಕೂಲಿಸಿದನು ಯಂದು ಸಂತೋಷ ಮಾಡಿಕ್ಕೊಂಡು ಯಿದ್ದೀನೆ. ನೀನು ಯೀ ಮಾತು ಆಡೊದು ಯೋಗ್ಯ ಅಲ್ಲ"ವೆಂದು ರತ್ನಾಜಿ ಆಡಲಾಗಿ, ಯೀ ಮಾತಾ ಯೀತನು ಕೇಳಿ, ಮನಸ್ಸಿಗೆ ಬಾರದೆ ಜಟಕಾಯಿಸಿ ಕೈಬಿಡಿಸಿಕೊಂಡು ಹೊರಗೆ ಹೋದನು. ಯಿತನು ಹೊರಗೆ ಹೋದ ಮೇಲೆ "ಸಂಬೋಗಕ್ಕೆ ಅಂಗೀಕರಿಸಲಿಲ್ಲೈ ಜಟಕೈಸಿಕೊಂಡು ಹೊರಗೆ ಹೋದನು" ಯಂದು ರತ್ನಾಜಿ ಮನಸಿನಲ್ಲಿ ದುಗ್ಧಿ ತುಂಬಿಕೊಂಡು, ಯಿವನ್ನ ಶಿರಚ್ಛೇದನ ಮಾಡ್ಸಬೇಕೆಂದು ಯೋಚನೆ ಮಾಡಿ, ತಲೆ ಬಿಚ್ಚಿಕೊಂಡು

ಮೈ ಕೈ ಚೀರಿಕ್ಕೊಂಡು . . . . ಬಹಾಳ ವ್ಯತ್ಯಾಸವಾಗಿ ರೋದನ ಮಾಡಿಕೊಳ್ಳುತ್ತ ಮನಿವಳಗೆ ಬಿದ್ದು ಯಿದ್ದಳು.

ಅಷ್ಟರಾಗೆ ಯೀಕಿ ಗಂಡ ಕಂಪಿಲಿರಾಯನು ಸ್ವಾರಿ ಹೋಗಿ ಮನೀಗೆ ಬರಲಾಗಿ, ಬಂದ ಗಳಿಗೀಲೆ ಯೀಕೀನ ನೋಡಿ "ಹೀಗೆ ಯೇನು ಕಾರಣ ಆಗಿ ಯಿಧೀ?"ಯೆಂದು ಕೇಳಲಾಗಿ, ಆಕಿ ಮತ್ತಿಷ್ಟು ದುಕ್ಕ ಮಾಡಿಕೊಳ್ಳುತ್ತ ಗಂಡ ಕಂಪ್ಲಿರಾಯನ ಮುಂದೆ ಹೇಳಿದ್ದು: "ನಿನ್ನ ಮಗ ಕೊಮಾರರಾಮನು ಬಂದು ನನ್ನ ಸಂಬೋಗಿಸಬೇಕೆಂತ ಬಲಾತ್ಕಾರ ಮಾಡಿ ಕೈ ಹಿಡಿದು ಕರಿಯಲಾಗಿ, ನಾನಂದದ್ದು: ತಾಯಿನ ಯೀ ಪ್ರಕಾರ ಮಾಡೋದು ಧರ್ಮವಲ್ಲ. ಯಿಂತ ತುಂಟತನ ಮಾಡಬೇಡವೆಂದು ಬಾಹಳ ಬಗೇಲಿ ಹೇಳಿದರು ಕೇಳದೆ, ಯೀ ಬಗೆ ಚಂದೋಭಂಗ ಮಾಡಿ ಹೋದನು"ಯೆಂದು ಹೇಳಲಾಗಿ, ಕಂಪಿಲಿರಾಯನು ಅಂದದ್ದು : "ಆ ಕೊಮಾರರಾಮನು ಯಿಂತಾ ಅನ್ಯಾಯ ಮಾಡೋನಲ್ಲ. ಪರನಾರೀ ಸಹೋದರ"ಯಂದು ಆಡಲಾಗಿ, ಆಕೆ ತೋರಿಸಿದ್ದು ಕೋಣೆ ಮನೆ ವಳಗೆ ಬುಕ್ಕಿಟ್ಟು ಹರ್ವಿಯಿದ್ದಳು. ಕೊಮಾರರಾಮನ್ನ ವಳಗೆ ಕೈ ಹಿಡದು ಕರಕೊಂಡು ಹೋದಾಗೆ ಆತನ ಹೆಜ್ಜೆ ಬಿದ್ದು ಯಿದ್ದವು. ಆ ಗುರುತು ತೋರಿಸಿದಳು. ಕಂಪಲಿರಾಯನು ನೋಡಿ "ಮನಶಿಗೆ ನಿಶ್ಚಯವಾದೀತು"ಯಂತ ತಿಳಿದು, ಯೀಕಿ ಮೇಲೆ ಬಹಾಳ ಪ್ರೀತಿಯಿಂದ ಯಿದ್ದ ನಿಮಿತ್ಯೆ, "ಮಗನೆ ಯಿಂತಾ ತಾಯಿಗಂಡತನ ಮಾಡಿಯಿದ್ದಾನೆಂ"ದು ಬಹಾಳ ಕೋಪಿಷ್ಟನಾಗಿ ಪ್ರಧಾನಿ ಬೈಚಪ್ಪನ್ನ ಕರಿಸಿ, "ಯಿಂತಾವನ್ನ ಮೋರೆ ನೋಡಬಾರದು. ಯಿವನ್ನ ಶಿರಚ್ಛೆದನವನ್ನು ಮಾಡು"ಯೆಂದು ಪ್ರದಾನಿಗೆ ಅಪ್ಪಣೆ ಕೊಡಲಾಗಿ, ಯೀ ಪ್ರಧಾನಿ ಬೈಚಪ್ಪನು ಕೊಮಾರರಾಮನ್ನ ಕರಕೊಂಡು ಹೊರಗೆ ಹೋಗಿ, "ಯಿಂಥಾ ಮಗನ್ನ ಅನ್ಯಾಯದಲ್ಲಿ ನಾನು ಹ್ಯಾಗೆ ಕೊಲ್ಲಲಿ. ಅರಸಿನ ಅಪ್ಪಣೆ ಮೀರಲಿಕ್ಕೆ ಬಾರದು. ರತ್ನಾಜಿ ಅನ್ಯಾಯದಿಂದ ಮಾಡಿಸಿ ಯಿದ್ದಾಳೆ. ಯೀತನ್ನ ಉಳೋ ಪ್ರಯತ್ನ ಮಾಡಬೇಕು. ಅರಸಿಗೆ ಗುರುತು ತೆಗೆದುಕೊಂಡು ಹೋಗಬೇಕೆಂ"ದು ಮನಸುಖಾ ಮಾಡಿ, ಯೀ ಬಾಲಸಂಗಮನಾಥನದುರ್ಗಕ್ಕೆ ಬಂದು, ಯಿದಕ್ಕೆ ಪಶ್ಚರು, ಯಿದು ಅಯ[>ಐ]ಬು ಯಿಲ್ಲದ ಸ್ತಳವೆಂದು ತಿಳಿದು, ಯೀ ದ್ವಾರಾವತಿದುರ್ಗದಲ್ಲಿ ಯಿದ್ದ ಬಾಲಸಂಗಮನಾಥನ ಕೈಲಿ ಕೊಮಾರರಾಮನು ಯೀತ ಹತ್ತು[>ತ್ತೂ] ಕುದಿರೆ ಯಪ್ಪತುರಾಯನ ಬೊಲ್ಲಪ್ಪ[>ನ್ನ] ಸಹವಾಗಿ ಕೊಟ್ಟು, "ಯಿದು ಐಬು ತೋರದ ಹಾಗೆ ಸಂರಕ್ಷಣೆ ಮಾಡು"ಯಂದು ಹೇಳಿ, ಯೀ ಬೈಚಪ್ಪನು ಅರಸಿಗೆ ಗುರುತು ತೋರಿಸೊದಕ್ಕೆ ಮೃಗ ಬಡದು ರಕ್ತ ತೆಗೆದುಕೊಂಡು ವಯಿದು ಕೊಡಲಾಗಿ, ಆ ರತ್ನಾಜಿಗೆ ರಕ್ತ ಕೊಟ್ಟದ್ದರಿಂದ ಆಕೀಗೆ ಸಮಾಧಾನವಾಗಿ ಸಂತೋಷದಿಂದ ಯಿದ್ದಳು.

ಯೀ ಕಡೆ ಯೀ ಬಾಲಸಂಗಮನಾಥನು ಕೊಮಾರರಾಮನ್ನ ಯೀತ ಹತ್ತೊ ಯಪ್ಪತ್ತುರಾಯನ ಬೊಲ್ಲನ್ನ ಸಹಾ ಬಿ[>ಬ]ಚ್ಚಿಟ್ಟು ಜಾಗಾ ರಾಮಲಿಂಗದುರ್ಗಕ್ಕೆ ಪಶ್ಚಿಮ ಬೆಟ್ಟದ ನಡುಮಧ್ಯೆದಲ್ಲಿ ವೊಂದು ಗುಹ್ಯದ ವೊಳಗೆ ಯಿಟ್ಟು, ಅಲ್ಲಿ ವೊಂದು ಕಿಲ್ಲೆಮಾಡಿ ಬಿ[>ಬ]ಚ್ಚಿಟ್ಟದರಿಂದ ಬೊಲ್ಲನ ದುರ್ಗವೆಂದು ಹೆಸರು ಬಿತ್ತು. ಯೀಗ್ಯೂ ಜನವಾಡಿಕೆ ಬೊಲ್ಲನ ದುರ್ಗಯಂದು ಆಡುತ ಯಿದ್ದಾರೆ. ಯಿದಕ್ಕೆ ಸಾದೃಶವೇನು? ಯಂದರೆ ಬೊಲ್ಲನ ದುರ್ಗದ ಮೇಲೆ ಕುದುರೆ ಕಟ್ಟಿದ ಸ್ಥಳದಲ್ಲಿ ಆ ಹೊತ್ತಿಗೆ ಹಾಕಿದ ಬಯಲು ಹೊಲದಾಗಿನ ಹುಲ್ಲು ಬೀಜಬಿದ್ದು, ಯೀಗ್ಯೂ ಹೊಲದಾಗೆ ಬೆಳವೊ ಹುಲ್ಲು ಆ ಬೆಟ್ಟದ ಮೇಲೆ ಬೆಳವುತ್ತಾ ಯಿದ್ದೀತು.

ಯೀ ಕೊಮಾರರಾಮನು ಶಿರಶ್ಚೆದನವಾದನೆಂದು ಹೊರತರಕ್ಕೆ ವರ್ತಮಾನ ಪಾಥ ನೇಮಿಯವರು ಕೇಳಿ, ಹನ್ನೆರಡು ಲಕ್ಷ ಪೌಜು ತೆಗದುಕೊಂಡು ಬಂದು, ಕಂಪಿಲಿರಾಯನ ಸಂಗಡ ನಮ್ಮಾ ಗ್ರಾಮಕ್ಕೆ ವಾಯುವ್ಯೆ ದಿಕ್ಕಿಗೆ ತುಂಗಭದ್ರಾ ಆ ಕಡಿಗೆ ಮೊಗಲಾಯಿ ತಾಲೂಕಿನ ಕಗ್ಗಿರಿಸೀಮೆ ವಳಗೆ ಕುಮಾರರಾಮನ . . . . . . ಬಳಿಯಲ್ಲಿ ಕಂಪಿಲಿರಾಯಗು ನೇಮಿಯವರಿಗೂ ಮಹತ್ತು ಯುದ್ದವಾಗೊ ಕಾಲದಲ್ಲಿ, ನೇಮಿ ಅವರ ಸೈನ್ಯ ಭಾರಿ ಆದದರಿಂದ ಕಂಪಿಲಿರಾಯನು "ಯೀ ಸಮಯದಲ್ಲಿ ಕೊಮಾರರಾಮ ಮಗ ಯಿದ್ದರೆ ಯೀ ಸೈನ್ಯವನ್ನು ಜಯಪ್ರದಮಾಡುವ"ಯಂದು ಪ್ರಧಾನಿ ಬೈಚಪ್ಪನ ಕುರಿತು ಹೇಳಿಕೊಂಡು, ಮಹತ್ತು ಆದಂತಾ ವೆಸನವನ್ನು ಹೊಂದಲಾಗಿ, ಪ್ರಧಾನಿ ಬೈಚಪ್ಪನು "ತಾವು ಯೋಚನೆ ಮಾಡೊ ಕೆಲಸವಿಲ್ಲ. ಕೊಮಾರರಾಮನಿಗಿಂತ ಅಧಿಕವಾದಂತಾ ಸೂರನ್ನ ತಂದು, ತಮ್ಮಾ ಸೇವೆಯಲ್ಲಿ ಯಿಟ್ಟು, ಯೀ ಸೈನ್ಯವನ್ನು ಯಾವತ್ತು ಜೈಪ್ರದಾ ಮಾಡಸ್ತಾ ಯಿದ್ದೇನೆ"ಯೆಂದು ಧೈರ್ಯವನ್ನು ಹೇಳಿ, ಗುಪ್ತದಲ್ಲಿ ಬಾಲಸಂಗಮನಾಥನ ವಶದಲ್ಲಿ, ಬೊಲನ ದುರ್ಗದಲ್ಲಿ ಯಿದ್ದಂತಾ ಕುಮಾರರಾಮನ್ನ, ಯಪ್ಪತ್ತುರಾಯನ ಬೊಲ್ಲನ್ನ ಸಹಾ ತೆಗದುಕೊಂಡು ಬಂದು, ಯೀ ದಂಡಿನ ಮೇಲೆ ಲಡಾಯಕ್ಕೆ ಹಚ್ಚಿದರಿಂದ, ಬಂದ ಸೈನ್ಯ ಹಿಂದಕ್ಕೆ ಯಾವತ್ತು ವೊಡಿಸಿ. ಜಯುಪ್ರದಾ ಮಾಡಿಕೊಂಡು, ತಂದೆ ಕಂಪ್ಲಿರಾಯಗೆ ಕೊಮಾರರಾಮನು ಪಾದಕ್ಕೆ ಬಿದ್ದನು. ತನ್ನ ಪುತ್ರನ ಕಂಡು ಮಹಾಸಂತೋಷಬಟ್ಟು "ಯೀ ದಿವಸ ನನಗೆ ಸುದಿವಸವೆಂದು, ಪ್ರಧಾನಿ ಬೈಚಪ್ಪನು ಯೀ ಸಮಯದಲ್ಲಿ ನನ್ನ ಸಂಸ್ಥಾನ ಉಳಿಸಿದಿ, ಪುನಹಾ ಪುತ್ರ ಸಂತಾನ ಕೊಟ್ಟು ಹಾಗೆ ಆಯಿತು"ಯಂದು ಆ ಪ್ರಧಾನಿಗೆ "ನಿನ್ನಂತಾ ಪ್ರಧಾನಿ ಯಂದಿಗೂ ಹುಟ್ಟಲಿಕ್ಕೆ ಯಿಲ್ಲ"ವೆಂದು ಬಹಳ ಮಾನಮರ್ಯಾದಿ ಮಾಡಿ, ಹೆಂಡತಿ ರತ್ನಾಜಿನ ಅರಸು "ಯಿಂತಾ ಪಾಪಿಷ್ಟಿ ಯಿರಬಾರದು"ಯಂದು ಸಂಹಾರ ಮಾಡಿಸಿದನು. ಯಥಾ ಪ್ರಕಾರ ಅರಸುಮಗ ಕೊಮಾರರಾಮ ಪ್ರಧಾನಿ ಬೈಚಪ್ಪನು ರಾಜ್ಯದಲ್ಲಿ ಯಿದ್ದರು.

ಕೊಮಾರರಾಮನ [ಕು+]ದರೆ ಬೊಲ್ಲ, ಆ ದುರ್ಗದಮಠ[>ದಲ್ಲಿ] ಯಿದ್ದ ಕಾರಣ ಬೊಲ್ಲನ ದುರ್ಗಯೆಂದು ಹೆಸರು ಬಿದ್ದುಯಿದ್ದೀತು. ಯೀ ದ್ವಾರವತಿ ಗ್ರಾಮಕ್ಕೆ ಬೆಲಬೇಕ ಬಂದಿ ಕೆಳಗೆ ಗುಡ್ಡದ ಹೊಂದಿ ಕಣ್ಣಿ ಬಳಿ ಯಿ ಕೆರೆ ಕೊಡಿಗೆ ಉತ್ರ ಗುಂಡಿನ ಅಳತೆಗೆ ಬಾಲಸಂಗಮನಾಥನ ದುರ್ಗ. ಯಿದಕ್ಕೆ ದಕ್ಷ[>ಕ್ಷಿ]ಣ ರಾಮಲಿಂಗದೇವರ ದುರ್ಗ, ಯಿದಕ್ಕೆ ಪಶ್ಚಿಮ ಬೊಲ್ಲನ ದುರ್ಗ, ಯಿದಕ್ಕೆ ಉತ್ತರ ಭಾಗಕ್ಕೆ ಮಲ್ಲದೇವರ ದುರ್ಗ.

ಯೀ ದ್ವಾರಾವತಿದುರ್ಗಕ್ಕೆ ಕೆಳಗೆ ಪೂರ್ವದಿಕ್ಕಿಗೆ ಹರದಾರಿ ಮೇಲೆ ರಾಂಪುರ ಯಂಬೊ ಗ್ರಾಮ ನಿರ್ಮಾಣವಾಗಲಿಕ್ಕೆ ಕಾರಣವೇನು ಅಂದರೆ, ಕೊಮಾರರಾಮನು ಗುಪ್ತದಿಂದ ಬೊಲ್ಲನ ದುರ್ಗದಲ್ಲಿ ಯಿರೋ ವೇಳೆದಲ್ಲಿ, ಯೀಗ ರಾಂಪುರ ಹುಟ್ಟಿದ ಜಾಗಾದೊಳಗೆ ಕೆಲವು ಜನರು ಕುರುಬರು ಆಕಳು ಹಿಂಡು ಕುರಿಹಿಂಡು ಯಿಟ್ಟು ಹಟ್ಟಿ ಹಾಕ್ಕಿಕೊಂಡು ಯಿದ್ದು, ಕೊಮಾರರಾಮಗೆ ಹಾಲು ಮೊಸರು ಬೆಣ್ಣೆ ಪ್ರಣ[>ತೃಣ] ಕಾಷ್ಟ ಮೊದಲು ಮಾಡಿಕ್ಕೊಂಡು ಗುಪ್ತದಲ್ಲಿ ನಡಸ್ತಾ ಯಿದ್ದನು[>ರು]. ಆ ಕೊಮಾರರಾಮನು ಆ ಗುಪ್ತ ಗುಹ್ಯೆದಿಂದ ಹೊರಗೆ ಬಂದು ನೇಮಿಯವರ ಲಡಾಯಿ ಜೈಸಿ, ಸಂತೋಷದಿಂದ ಯಿರೊ ವೇಳ್ಯೆದಲ್ಲಿ, ಆ ರಾಂಪುರದ ಹಟ್ಟಿ ಕುರುಬರು ಕೇಳಿಕೊಂಡದ್ದು: "ನಿಮ್ಮ ಶೇವೆ ನಾಲು ಹಲಉ ಕಾಲ ಮಾಡಿದೆಉ. ನಮ್ಮಗೆ ಯೇನು ಬುದ್ದಿ?"ಯಂದು

ಕೇಳಿದಲ್ಲಿ ಆ ಕೊಮಾರರಾಮನು ಆ ಕುರುಬರಿಗೆ ಗ್ರಾಮಾ ಕಟ್ಟೇಂತಾ ಅಪ್ಪಣೆ ಕೊಟ್ಟದ್ದರಿಂದ, ಅವರು ಆ ಗ್ರಾಮ ಕಟ್ಟಿಸಿ, ಕೊಮಾರರಾಂಪುರ ಯಂದು ಹೆಸರು ಯಿಟ್ಟರು. ಅದಕ್ಕೆ ಸಾದೃಶ್ಯವೇನು? ಅಂದರೆ ಆ ಗ್ರಾಮದಲ್ಲಿ ಕೊಮಾರರಾಮನ ಶಿರಸು ಯಿದ್ದೀತು. ಪ್ರತಿ ಸಂವತ್ಸರ ದಾವ ದಾವ ಊರಲ್ಲಿ ಯಿದ್ದ ಕುರುಬರು ಬಂದು ಯೀ ದೇವರ ಪೂಜೆ ಮಾಡಿ, ಚಂಡಾಡಿ ಕುರಿಕೋಣಗಳ ಕಡದು ಜಾತ್ರಿ ಮಾಡಿ ಹೋಗುತ್ತಾ ಯಿದ್ದಾರೆ. ಯೀಗ ರಾಂಪುರಯಂದು ಜನವಾಡಿಕೆ ಬಿದ್ದು ಯಿದ್ದೀತೆ.

ಯೀ ಪ್ರಕಾರ ಕಂಪ್ಲಿರಾಯನ ಮಗ ಕೊಮಾರರಾಮನು ರಾಜ್ಯಸುಖದಿಂದ ಪ್ರತಿಪಾಲಿಸ್ತಾ ಯಿರಲಾಗಿ, "ಶ್ರಿಷ್ವರಾಯರ ಗಂಡ, ವಜೀರರ ಮಂ[>ಮಿಂ]ಡ"ನೆಂದು ಹೊಗಳಿಸಿ ಕೊಳ್ಳುತ್ತ ಯಿರಲಾಗಿ, ಯೀ ವರ್ತಮಾನವನ್ನು ಪಾಥೆನವರು ಕೇಳಿ ಮತ್ತು ಹನ್ನೆರಡು ಲಕ್ಷ ಪೌಜು ತೆಗೆದುಕೊಂಡು ಯೀ ದೇಶಕ್ಕೆ ಬರಲಾಗಿ, ತುಂಗಭದ್ರಿ ಆಚೀಗೆ ನಾಲ್ಕು ಹರದಾರಿ ಮೇಲೆ ಮಹತ್ತೊ ಯುದ್ಧ ಕೊಮಾರರಾಮಗು ನೇಮಿಯವರಿಗೂ ಆಗಲಾಗಿ, ಕುಮಾರರಾಮನ್ನ ನೇಮಿಯವರು ಜೈಸಿ ತಲೆ ತೆಗೆದುಕೊಂಡರು. ಆ ಕುಮಠದಲ್ಲಿ ಕೊಮಾರರಾಮನ ತಲೆ ಹೋದುದರಿಂದ ಕೊಮಾರರಾಮನ ಗುಮಠವೆಂದು ಜನವಾಡಿಕೆ ಬಿಟ್ಟು ಯಿದ್ದೀತೆ. ಆ ತರ್ವಾಯ ಕೊಮಾರರಾಮನ ಶಿರಸು ತೆಗೆದುಕೊಂಡು ಸೊಂಡೂರು ಬಳಿಯ ಬೆಟ್ಟದ ವಳಗೆ ಯಿಡಿಸಿ, ಹೊಸಮಠ[>ಲೆ]ದುರ್ಗ ಸಾಧಿಸಬೇಕೆಂದು ಯೀ ದ್ವಾರಾವತಿಮಧ್ಯಕ್ಕೆ ಮಾಡಿಕೊಂಡು, ಕುರುಗೋಡು ನಂದಿದುರ್ಗ ಆರಂಭಮಾಡಿ, ಸೊಂಡೂರ ಬಳಿಯ ಮಾರ್ತಾಂಡಗಡಾದ ಪರಿಯಂತ್ರವಾಗಿ ಉತ್ತರ ದಕ್ಷಿಣ ಬುದಗ ಭೀಮ ಪತ್ರಹಳ್ಳಿ ಅ[>ಹ]ದ್ದು ಮಾಡಿಕ್ಕೊಂಡು, ಪೂರ್ವಪಶ್ಚಿಮ ಯೀ ಮೇರೆಯಿಂದಾ ಪೌಜು ಯಿಳಿದು ಯಿರಲಾಗಿ, ಯೀ ಪೌಜಿಗೆ ವೊಡೆಯನಾದಂತಾ ನೇಮಿಯಂಬೊ ಆತನು ಯಿಲ್ಲಿ ಯಿದ್ದಂತಾ ಕುಮಾರರಾಮನ ಕಡಿಯವರನ ದ್ವಾರಾವತಿ ಹೊಸಮಲಿಯಲ್ಲಿ ಯಿದ್ದವರ ಸಂಗಡ ಯುದ್ದಮಾಡಿ, ಅವರ ಜೈಸಿ ಹೊಸಾಮಠ[>ಲೆ]ದುರ್ಗ ವಗೈರೆ ಶೀಮೆ ತೆಗೆದುಕೊಂಡು, ಪುನಹಾ ತಮ ದೇಶಕ್ಕೆ ಹೋಗೊ ವೇಳೆದಲ್ಲಿ, ಯೀ ದೇಶದಲ್ಲಿ ನಮ್ಮ ಗುರುತು ಯಿರಬೇಕೆಂದು ಯೋಚನೆ ಮಾಡಿ, ಪಾಲಕಿ ನವಿಸ ಸರದಾರನ್ನ ಪಾಥೆನವರು ಕರಿಸಿ "ನಿಮ್ಮ ನಿಮ್ಮ ಪಾಲಕಿ ಹಂಚಿಕೆ ಮೇರಿಗೆ ವೊಂದು ಸಮುದ್ರಕ್ಕೆ ಸವನಾದಂತಾ ಕೆರೆ ನಿರ್ಮಾಣ ಮಾಡಿರಿ"ಯಂದು ನೇಮಿಯವರು ಅಪ್ಪಣೆ ಕೊಡಲಾಗಿ, ಅವರು ಹಂಚಿಕೆ ಮಾಡಿಕೊಂಡ ವಿವರವು:

ಸರದಾರರು ತಮ್ಮ ತಮ್ಮಾ ಪಾಲಕಿ ಯಿಟ್ಟು 'ಬೊಂಬಿನ ಅಡ್ಡಾಗಲ, ಝುಂಡೇದ ಉದ್ದಾ' ಯೀ ಮರ್ಯಾದೇಲಿ ಕೆರಿ ನಿರ್ಮಾಣ ಮಾಡೊ ಬಗೆ ಸದರಿ ದ್ವಾರಾವತಿದುರ್ಗವನ್ನು ಪೂರ್ವದಿಶೆಗೆ ಯರಗುಡ್ಡದ ಮೇಲೆ ಮೋರ್ಜೆ ಯಿಟ್ಟು, ಯೀ ಗ್ರಾಮ ನಿಘಾತು ಮಾಡಿದದರಿಂದ, ಆ ಗ್ರಾಮಕ್ಕೆ ದಕ್ಷಿಣಕ್ಕೆ ಕೆರೆ ಕಟ್ಟಿದ ಸ್ತಳ ರಾಮಲಿಂಗದೇವರ ಬೆಟ್ಟದಿಂದ ಪೂರ್ವದಿಕ್ಕಿಗೆ ಹರದಾರಿ ಕೂಡಿ ಗುಡ್ಡಕ್ಕೆ ಮದ್ಯಕ್ಕೆ ಕೆರೆ ಕಟ್ಟಿಸಿದರು. ಹಾಕಿದ್ದ ಸ್ಥಳು ಯೀ ಪ್ರಕಾರ ನಿರ್ಮಾಣ ಮಾಡಲಾಗಿ ಯೀ ಸರದಾರರ ಪೈಕಿ ಮೂರು ಮಂದಿ ಸರದಾರರಿಗೆ ಕೆರೆ ಕಟ್ಟೊದಕ್ಕೆ ಸ್ಥಳ ಸಾಲದೆ ಹೋದ ಕಾರಣ. ಅವರು ಮೂರು ಮಂದಿ ನಮ್ಮ ನಮ್ಮಾ ಹೆಸರಿನಲ್ಲಿ ವೊಂದು ವೊಂದು ಕೆರೆ ಕಟ್ಟಬೇಕೆಂದು ಮನಸು ಮಾಡಿ, ಕಟ್ಟಿಸಿದ ತಪಸೀಲು:

ಸಿಂಗಾನೆಂಬೊ ಸರದಾರನು ಯಿ ದೊಡ್ಡ ಕೆರೀಗೆ ದಕ್ಷಿಣ ಭಾಗ ಗುಡ್ಡದ ಸರಪತ್ತೆ ಕೆರೆ ಕಟ್ಟಿದರಿಂದ 'ಸಿಂಗನ ಕೆರೆ'ಯಂದು ಜನವಾಡಿಕೆ ಬಿದ್ದುಯಿತ್ತೆ. ಯೀ ದೊಡ್ಡ ಕೆರೆಗೆ ಉತ್ತರ ಸಮೀಪದಲ್ಲಿ ಕೂಡಿ ಗುಡ್ಡದ ಹತ್ತಿಲಿ ಕೂಡಿ ತೋಳಿನ ಹೊಂದಿ ಹಗಲಾಭತ್ತಾಖಾನನೆಂಬೊ ಸರದಾರನು ವೊಂದು ಕುಂಟ[>ಟೆ] ಕಟ್ಟಿದದರಿಂದ ಯೀ ವೊತ್ತಿಗು 'ಹಗಲಾಭತ್ತನ ಕೆರೆ'ಯಂದು ಜನವಾಡಿಕೆ ಬಿದ್ದು ಯಿದ್ದೀತೆ. ಯೀ ದೊಡ್ಡ ಕೆರೇಗೆ ವಾಯುವ್ಯೆದಿಕ್ಕಿಗೆ ದೇವಲಾಪುರದ ಹೊಲಬಿನಾಗೆ ಕಂಪ್ಲಿಗೆ ಹೋಗೊ ಮಾರ್ಗದಲ್ಲಿ ಸಣ್ಣ ಬೆಟ್ಟದ ಹತ್ತಲಿ ಆ ಬೆಟ್ಟಕ್ಕೊಂದಿ ಪಶ್ಚಿಮಕ್ಕೆ ಕೆರೆಕಟ್ಟಲಾಗಿ, ಆ ಕೆರಿಗೆ 'ಖಾನ್‌ಕೆರೆ' 'ಖಾನನ ಗುಡ್ಡ'ಯಂದು ಜನವಾಡಿಕೆ ಯೀ ಹೊತ್ತಿ ಬಿದ್ದುಯಿದ್ದಿತು. ಮೂರು ಮಂದಿ ಸರದಾರ್ರು ಪ್ರತ್ಯೇಕ ಕಟ್ಟಿದದರಿಂದ ಮೂರು ಮಂದಿ ಹೆಸರು ಪ್ರಸಿದ್ದಿ ಆಯಿತು. ಯೀ ದೊಡ್ಡ ಕೆರೆಯು ಬಾಹಾಳ ಸರದಾರು ಕಟ್ಟಿದ ಕಾರಣದಿಂದ 'ದರಿಯಾ ತಲಾಉ'ಯೆಂದು ಹೆಸರು ಯಿದ್ದದಕ್ಕೆ, ತುರಕ ಮಾತಿನಯಿಂದ ಸಮುದ್ರಕ್ಕೆ ದರಿಯಾಯಂದು ಹೆಸರು. ಯೀ ಕೆರೆ ಸಮುದ್ರಕ್ಕೆ ಸಮಾನವಾದದರಿಂದ. ಸದರಿ ದ್ವಾರಾವತಿ ಮುಂಚೆಯಿದ್ದ ಗ್ರಾಮ ನಿಘಾತ್ತು ಆಗಿ ಹೋದಕಾರಣ, ಅದಕ್ಕೆ ಬದಲು ಯೀ ದರಿಯಾಕೆರೆ ಯಿಥೆ. ನವಮಧ್ಯದಲ್ಲಿ ಕೆರಿಎಡ್ರಾಮ ಯೀ ಬಳಿಯ ಗ್ರಾಮ ನಿರ್ಮಾಣಮಾಡಿ ಆ ಗ್ರಾಮಕ್ಕೂ ದರಿಯಾಯಂದು ಹೆಸರು ಯಿಟ್ಟರು. ಜನ ಪರಿಪಾಟಕದಿಂದ ದರೊದಿಯಂತ ಆಡುತ್ತಾ ಯಿದ್ದಾರೆ. ಯೀ ಪ್ರಕಾರ ಕೆರೆ, ಗ್ರಾಮ ನಿರ್ಮಾಣಮಾಡಿ ಪುನಹಾ ತಮ್ಮ ದೇಶಕ್ಕೆ ದಂಡು ತೆರಳಿಸಿ ಸ್ತಳಕ್ಕೆ ಹೋಯಿತು.

ಕೆಲವು ಕಾಲ ಪಾಭಾ ನೇಮಿಯವರು ರಾಜ್ಯವಾಳುತ್ತ ಯಿರಲಾಗಿ ಯೀ ಕಡೆ ನರಪತಿ ವಂಶದವರು ವಿಜಯನಗರದಲ್ಲಿದ್ದು ಪ್ರಬಲರಾಗಿ ಬುಕ್ಕರಾಯರು ಮೊದಲು ಮಾಡಿಕ್ಕೊಂಡು ನರಸಿಂಹ್ಮದೇವರಾಯರು ರಾಜ್ಯನಾಳುತ್ತಯಿದ್ದರು. ವೀರ ನರಸಿಂಹ್ಮದೇವರಾಯರು ನಿರ್ಮಾ[>ರ್ವಾ]ಣ ಕಾಲಕ್ಕೆ ಕೃಷ್ಣರಾಯರಿಗೆ ಪಟ್ಟಾಭಿಷೇಕವನ್ನು ಮಾಡಿದರು. ಯಿವರು ನರ್ಮದಾ ಪರಿಯಂತ್ರ ಯೇಕಚಕ್ರಾಧಿಪತಿಯಾಗಿ ಆಳುತ್ತ ಯಿರಲಾಗಿ. ಯೀ ದರೋದಿ ಕೆರೆ ಬಹುಕಾಲ ಮುಂದೆ ಕಟ್ಟಿದ್ದು, ಆ ಹೊತ್ತಿಗೆ ಬಹುಮಂದಿ ಸರದಾರ್ರು ಕಟ್ಟಿದ್ದರಿಂದ ಬಂದೊಬಸ್ತು ಕರೇದೆ ಯಿದ್ದ ಕಾರಣ, ಮಧ್ಯೆ ಕೆರೆಯಿಂದೆ ಊರು ಕಟ್ಟಿದ ಸ್ತಳದಲ್ಲಿ ವಡದು, ಆ ಗ್ರಾಮ ಹೋಗಿ ಕೆರೆ ಸಮಗ್ರಾ ಬಹಾಳ ನಾದಾರಿ ಆದದರಿಂದ, ಪುನಹಃ ಕೆರೆ ಸಮಗ್ರ ಕಡಿಸಿ, ವಡದಲ್ಲಿ ಮುರಲುಗಂಡಿ ನೆಲ ಹಾಕಿಸಿ, ಪೂರ್ವದಿಕ್ಕಿಗೆ ಕೊಡಿ[>ಕೋಳಿ] ಗುಡ[>ಗುಡ್ಡದ]ದ ಬಳಿಯ ರಾಯರ ಗಾಲ್ವಿ[>ಕಾಲುವೆ] ಹುಟ್ಟಿಸಿ, ಪಶ್ಚಿಮಕ್ಕೆ ಯೀ ದೊಡ್ಡ ಬೆಟ್ಟದ ಬಳಿಯ ಕೊ[+ೀ]ಡಿ ಹುಡಿಸಿ, ಯಿದಕ್ಕೆ ಗುರುತು ಯೇನು ಅಂದರೆ ರಾಮ[>ಯ]ಗಾಲ್ವಿ ಮೆಟ್ಟಿ ಹನುಮಂತದೇವರ ಪ್ರತಿಷ್ಟೆ ಮಾಡಿ, ಮಧ್ಯದಲ್ಲಿ ವಡಕು ಹಾಕಿಸಿದಲ್ಲಿ ನಾಗನಾಥನದೇವರು ಪ್ರತಿಷ್ಟೆ ಮಾಡಿ, ಗುಡಿ ಕಟ್ಟಿಸಿ, ಯೀ ಕಡೆ ಕೊಡಲಿ ವೀರಭದ್ರದೇವರು ನಿರ್ಮಾಣಾ ಮಾಡಿ, ಮುಂಚೆ ಯಿದ್ದ ಯರಡನೇ ಯಾವರ್ತಿ ಕೆರೆ ಹಿಂದೆ ಕಟ್ಟಿದ ಗ್ರಾಮ ಹಾಳಾಗಿ ಹೋದದರಿಂದ ಪ್ರತಿ ಜಾಗಾದ ಸ್ತಳ ಕಟ್ಟಿದ್ದು, ಪಶ್ಚಿಮದಿಕ್ಕಿಗೆ ಕೋಡಿಯಿಂದೆ ಬೆಟ್ಟದ ಹೊಂದಿಗೆ ವೀರಭದ್ರದೇವರ ಮುಂದೆ ಕೋಟೆ ಕಟ್ಟಿಸಿ ಸದರಿ ಬೆಟ್ಟದ ಮ್ಯಾಲೆ ನಾಲ್ಕು ಕಿಲ್ಲೆ ಕ್ಷಟ್ಟಿದ್ದು ಹೊರ್ತು, ರಾಮಲಿಂಗದೇವರ ದುರ್ಗದ ಮೇಲೆ ಪಶ್ಚಿಮಕ್ಕೆ ರಾಜಗಡಾಯಂ[+ದು] ದುರ್ಗ ಹುಟ್ಟಿಸಿ . . . . . ಅಯದು ಕಿಲ್ಲೆ ನೆಲಕ್ಕೆ . . . . . ಬಂದೊಬಸ್ತು ಮಾಡಿಸಿ, ಯಿದು ಪ್ರಸಿದ್ದ ಆದ ಸ್ತಳವೆ ಯಿದಕ್ಕೆ ಪೂರ್ವದಲ್ಲಿ ದ್ವಾರಾವತಿದುರ್ಗವೆಂದು ಹೆಸರು ಬಿದ್ದು ಯಿದ್ಧೀತೆ. ಯೀಗಲು

ವಿಜಯನಗರಕ್ಕೆ ಯಿದು ವೊಂದು ದ್ವಾರವಾಗಿ ಕಾಣಿಸುತ್ತಾ ಯಿದ್ದೀತೆಂದು ದ್ವಾರಾವತಿದುರ್ಗವೆಂದು ಆಡಿಕೊಳ್ಳುತ್ತ ಯಿದ್ದಾರು.

ಯೀ ದುರ್ಗಕ್ಕೆ ನಡವೊ ಪದ್ಧತಿ . . . . . ಗ್ರಾಮ ಗ್ರಾಮಕ್ಕೂ ವೊಂದು ಹೊಲ ಮುನಸಬು, ಆ ರೀತಿ ನೂರಕ್ಕೆ ಗ ೨॥ ವರ್ತನೆ ಪ್ರಕಾರ ನಡವೊ ಹಾಗೆ ಅಪ್ಪಣೆ ಕೊಟ್ಟು ನಡಸುತ್ತಾ ಬಂದರು. ಊರು ಬಂದೊಬಸ್ತು ಆಯಿತು, ಬದ್ರಮಾಡಿ ಕಾಲುವೆ ಮಾಡ್ಸಿದರು. ಮೂರು ಮಂದಿ ಪ್ರತ್ಯೇಕ ಕೆರೆ ಕಟ್ಟಿದ ಸರದಾರ್ರು ಖಾನ ಸಿಂಗು ಹಗಲಾಭತ್ತನು ವಿಜಯನಗರಕ್ಕೆ ಬಂದು ಶೇರಿದರು. ದೊಡ್ಡಕೆರೆ ನೀರು, ಖಾನಯೆಂಬೊ ಸರದಾರನು ಖಾನಕೆರಿಗೆ ನೀರು ತಂದು ಹಾಕಿಸಿದನು.

ಯೀ ಪ್ರಕಾರ ಮಾಗಾಣೆ ಕೆರೆ ಹಿಂದೆ ಬಹಳವಾಗಿ ವನಾಂತ್ರ ಆಗಿ ಹೋಯಿತು. ಕೆರೆವಳಗೆ ಸಿಂಗನಕೆರೆ ಹಿಂದೆ ರಾಯರು ಬ್ರಹ್ಮಪುರಿಯಂದು ಆ ಗ್ರಾಮವ ಕಟ್ಟಿ, ಆ ಗ್ರಾಮಕ್ಕೆ ಯೀ ಕೆರೆ ನೀರು ಸಮುದ್ರವಾಗಿ ಕಾಣಿಸಿದದರಿಂದ ಬ್ರಹ್ಮಸಮುದ್ರವೆಂದು ಹೆಸರು ಬಿದ್ದುಯಿತ್ತು. ಯೀ ಪ್ರಕಾರ ಕೃಷ್ಣರಾಯರು ಮಾಡಿಸಿ ರಾಜ್ಯಪರಿಪಾಲನೆ ಮಾಡಿಕೊಳ್ಳುತ್ತ ಯಿದ್ದರು. ಆ ಕೃಷ್ಣರಾಯರು ಪಾ[>ಪ್ರಾ]ಗ್ದೇಶಕ್ಕೆ ತೆರಳು ವ್ಯಾಳೆದಲ್ಲಿ ತಮ್ಮಾ ರಾಜ್ಯದ ವಳಗೆ ಯಿದ್ದ ಪಾಳೆಗಾರನ್ನ ಕರಿಸಿ, ಪೌಜು ಬಂದಿ ಮಾಡಿ ಯೀ ಪಾಳೆಗಾರಿಗು "ನಿಮ್ಮ ಸೈನ್ಯ ಸುದ್ದಾ ಹೊರಡ್ರಿ"ಯಂದು ಹೇಳಿ ಯೀ ಪಾಳೆಗಾರನ್ನ ಸುದ್ದಾ ಕರಕೊಂಡು ಹೋಗಿ, ಸರ್ವ ಬಿರ್ದಾವಳಿಗಳ ಸಂಪಾದಿಸಿಕೊಂಡು ಜೈಸಿ ಬಂದು, ಯೀ ಪಾಳೆಗಾರಿಗೆ ಅವರವರ ಮರ್ಯಾದಿಪೂರ್ವಕ ಮಾನಪಾನಗಳು ಮಾಡಿ, ಅಪ್ಪಣೆ ಕೊಟ್ಟು ಕಳುಹಿಸಿ ಕೊಡೊ ವೇಳ್ಯೆದಲ್ಲಿ, ಕಂಪ್ಲಿರಾಯನ ಮಗ ಕೊಮಾರರಾಯನ ವಂಶಸ್ತನಾದ ದಳವಾರ ವರಳಿ ಭು[>ಭೂ]ಮರಾಜನು ಕೃಷ್ಣರಾಯರಿಗೆ ಬಿನ್ನಹ ಮಾಡಿಕೊಂಡದ್ದು: "ಪೂರ್ವದಲ್ಲಿ ನಮ್ಮಾಗೆ ನಾಡ ದಳವಾರಿಕೆ ಕೌಲ ಸ್ವಾಸ್ತಿಗೆ ಜಹಗೀರು ಸುದ್ದಾ ನಡವುತ್ತಾ ಯಿತ್ತು. ಅದೆ ಪಾಲಿಸಿದರೆ ದಯಪಾಲಿಸಬೇಕೆಂ"ದು ಬಿನ್ನಹ ಮಾಡಿಕೊಳಲಾಗಿ, ಅದೆ ಮೇರಿಗೆ ಕೃಷ್ಣರಾಯರು ಸಂತೋಷದಿಂದ ಕೊಟ್ಟ ತಾಲೂಕದ ವಿವರಉ॥

ಕುತ್ತಾನೆ ೧	ಸೊಂಡೂರು ೧	ಜೆರೆಮತ[ಜೆರೆಮಲೆ] ೧
ಗುಡೆಕೋಟಿ ೧	ಬಾಣರಾವ ೧	ವುಜನಿ ೧

ವಡ[>ವಡ್ಡು] ದರೋದಿ ಸಹಾ ೧.

ಯೇಳು ತಾಲೂಕು ಜ: ನಾಡದಳವರಿಕೆ ಸ್ವಾಸ್ತಿ ಸುದ್ದಾ ಬರಿ ಮಾಡಿಕೊಟ್ಟು ಕಳುಹಿಸಲಾಗಿ, ಭುವ[>ಭೂಮ]ರಾಜನು ಹಲವು ಕಾಲ ರಾಜ್ಯಾ ಅನುಭವಿಸಿ ಕೊಳ್ಳುತ್ತ ಯಿರಲಾಗಿ, ಆತಗೆ ಮಕ್ಕಳು ಯಿಲ್ಲದ್ದರಿಂದ, ತನ್ನ ಮನಿದೇವರು ಜೆಟಿಂಗರಾಮನ ನೆಲೆ ಮಾಡಲಾಗಿ ಆ ದೇವರು ಸ್ವಪ್ನದಲ್ಲಿ ಬಂದು "ಅಷ್ಟ ಪುತ್ರತು ಆಗುತ್ತಾ ಯಿದ್ದಾರೆ"ಯೆಂದು ಹೇಳಿ ಹೋದರು. ಅದೆ ಮೇರಿಗೆ ಗರ್ಭೋತ್ಪತ್ತಿವಾಗಿ ಪ್ರತಿ ಸಂವತ್ಸರಕ್ಕು ವೊಬ್ಬೊಬ್ಬರಾಗಿ ಯೇಳು ಮಂದಿ ಮಕ್ಕಳು ಹುಟ್ಟಿದರು. ಅವರ ನಾಮಕರಣಗಳು ಮಾಡಿ ಹೆಸರು ಯಿಟ್ಟ ವಿವರ:

೧. ಚೊಚ್ಚಲ ಮಗ ಹಿರೆ ಬೊಮ್ಮಂತರಾಜ

೧. ಯರಡನೆ ಮಗ ಬಸಾಳನಾಯಕನು

೧. ಮೂರನೆ ಮಗ ರಾಜಪ್ಪನಾಯಕನು

೧. ನಾಲ್ಕನೆ ಮಗ ವೀರಪ್ಪನಾಯಕನು

೧. ಅಯಿದನೆ ಮಗ ಯಿಮ್ಮಡಿನಾಯಕನು

೧. ಆರನೆ ಮಗ ಹಿರೆ ಮಲ್ಕರ್ಜಿನಾಯಕನು

೧. ಯೇಳನೆ ಮಗ ಚಿನ್ನಯಿರಾಜು

ಯೀ ಪ್ರಕಾರ ಯೇಳು ಮಂದಿ ಹೆಸರು ಯಿಟ್ಟು ಸುಖದಿಂದ ಯಿರಲಾಗಿ, ಯಿರವ ತಂದೆ ಭೂಮರಾಜಗೆ ವಾರ್ದಿಕ್ಯೆ ಪ್ರಾಪ್ತಿ ಆಗಲಾಗಿ, ಆತನು "ಯೀ ಮಕ್ಕಳು ಯೇಳು ಮಂದಿ ದೇವರ ವರವಿನಿಂದಾ ಹುಟ್ಟಿದವರು. ಯಿದರ ಕೆಳಗೆ[>ಯಿವರೊಳಗೆ] ವಬ್ಬರಿಗು ಪಟ್ಟ ಕಟ್ಟಬಾರದು" ಯಂದು ತಿಳಿದು ಯೇಳು ಮಂದಿಗೆ ಯೇಳು ತಾಲೂಕು ನೇಮಕ ಮಾಡಿ, ತಾಲೂಕಿಗೆ ವಬ್ಬ ವಬ್ಬ ಹೆಸರಿನಲ್ಲಿ ಪಟ್ಟವನ್ನೂ ಮಾಡಿ, ಅವರವರ ಗ್ರಾಮಗಳ ನೇಮಕ ಮಾಡಿದ ವಿವರಲು:

೧. ಹಿರೆ ಬೊಮ್ಮಂತರಾಜಗೆ ಕುತ್ತಾನೆ ತಾಲೂಕು

೧. ಬಿಸಾಳನಾಯಕಗೆ ಸೊಂಡೂರು

೧. ರಾಜಪ್ಪನಾಯಕಗೆ ಬಾಣಾರಾವಿ

೧. ಮಲ್ಲಿಕಾರ್ಜುನನಾಯಕಗೆ ಜರಿಮಠ[>ಲೆ]

೧. ಯಿಮ್ಮಡಿನಾಯಕಗೆ ಗುಡೆಕೊಟೆ

೧. ವೀರಪ್ಪನಾಯಕಗೆ ಉಜ್ಜನಿ

೧. ಚಿನ್ನಯ್ಯ ರಾಜಗೆ ವಡ್ಡು ದರೋದಿ

ಯೀ ಪ್ರಕಾರ ತಾಲೂಕು ನಿರ್ಧಾರಮಾಡಿ, ಸುಭಮುಹೂರ್ತದಲ್ಲಿ ಅವರವರ ಶೀಮೆಗೆ ಅವರನ ಕಳುಹಿಸಿಕೊಟ್ಟು, ತಾನು ಮಧ್ಯದ ಮಗನ ಬಳಿಯ ನಿಂತನು.

ವಡ್ಡುದರೋಜಿಗೆ ಬಂದವನು ಚಿನ್ನಯಿರಾಜನು ಕೆಲವು ದಿವಸ ಯಿರಲಿಕ್ಕೆ, ಯೀತನ ಮನ್ನಂತ್ರ[>ಮನ್ವಂತರ]ದಲ್ಲಿ ಸೊಂಡೂರಲ್ಲಿ ಯಿದ್ದ ಕೆರಿಯನ್ನು ಪ್ರಶ[+೦]ಕರಾಯರು ಕಟ್ಟಿಸಿದ್ದು ಜನ ಆಡಿಕೊಳ್ಳುತ್ತ ಯಿದ್ದಾರೆ. ಆ ಕೆರೆ ನೋಡಲಾಗಿ ಪುರಾತನ ಕೆರೆಯೆಂಬೊ ಹಾಗೆ ಕಾಣಿಸ್ತಾ ಯಿಥೆ. ಸೊಮನಹಳ್ಳಿಕೆರೆ ಕೋಡಿ ಬಿದ್ದ ನೀರು ದಾರಿ ಹಳ್ಳವಾಗಿ ಹರವುತ್ತಾ ಯಿದೆ. ಆ ಹಳ್ಳವು ವೊಬಳಗಂಡಿ ನರಸಿಹ್ಮದೇವರ ಗುಡಿಗೆ ಪೂರ್ವಭಾಗದಲ್ಲಿ ಗುಡ್ಡ ವಡಕೊಂಡು ಸೊಂಡೂರಿಗೆ ಉತ್ರ ಪ್ರಶ[+೦]ಕರಾಯರ ಕೆರೆ ವಡಕೊಂಡು ನಖತೀರ್ಥಾ ಭೀಮನಗಂಡಿಗೆ ಪೂರ್ವಮಧ್ಯದಲ್ಲಿ ಹಾಗೂ ಮೆ[>ಯೆ]ತ್ತಿನಹಟ್ಟಿ ಊರು ಮುಂದೆ ಬಂದು, ದರೋದಿ ಕೆರಿಗೆ ನೀರು ಬೀಳಲಾಗಿ, ಆ ಕೆರೆ ಆಡಿದ ವರ್ತಮಾನ : "ಆರು ಕೆರೆ ನೀರು ಆಕಳೇಸನು, ಮೂರು ಕೆರೆ ನೀನು ಮುಕ್ಕೂಳೀಸನು, ಸೊಂಡೂರು ಗಂಡೀ ನಾ[>ಕಾ]ರಿ ಹಳ್ಳವ ಕಂಡು ನೀರು ತಾಳಲಾರೆನೆಂದು ಕೂಗಿ ವಡೀತು'ಯೆಂದು

ಹಿರೇರು ಹೇಳುತ್ತ ಯಿದ್ದರು. ಚಿನ್ನಯರಾಜನು ವೊಂದಾನೊಂದು ದಿವಸ ಬೇಟಿ ಆಡಿ ಕೊಳ್ಳುತ್ತ ಬರಲಾಗಿ, ಯೀ ದರೋಜಿ ಕೆರೆ ವಡದು ಹೋದದ್ದು ಕಂಡು, ಯೀ ಕೆರೆ ಮುನ್ನ ಜೇರ್ಣೋದ್ಧಾರ ಮಾಡಬೇಕೆಂದು ಕೋಡಿ[>ಳಿ]ಗುಡ್ಡಕ್ಕೆ ಪಶ್ಚಿಮ ದೇವಿಮಠದ ಹತ್ತಿಲಿ ವಡಕು ಯಿದ್ದಲ್ಲಿ ಯೀತನ ಮಗ ಬಿಸಾಳನಾಯಕಗೆ "ಯೀ ವಡಕು ಕಟ್ಟಿಸು"ಯಂದು ಹೋದನು. ಯೀ ವಡಕು ಕಟ್ಟಿಸಿದಾತ ಚಿನ್ನಯರಾಜನು. ಅದಕ್ಕೆ ವಡಿಯನಾಗಿ ಬಿಸಾಳನಾಯಕ ಕಟ್ಟಿಸಿದ ಕಾರಣ 'ಬಿಸಾಳನಾಯಕನ ವಡಕು' ಯಂದು ಆತನ ಹೆಸರು ಬಿದ್ದು ಯಿದ್ದೀತೆ.

ಆ ತರ್‍ವಾಯ ಯಿವರಿಗೆ ಕ್ರಿಷ್ಣರಾಯರು ಹಿರೆಬೊಮ್ಮಂತರಾಜಗೆ ರಾಜ್ಯಾ ಜಹಗೀರು ಪಾಲಿಸಿದಾರಭುವಾಗಿ ಸರಿ ಚ[>ಚಿ]ನ್ನಯಿರಾಜು ಬಿಸಾಳನಾಯಕ ಪರಿಯಂತ್ರವಾಗಿ ಯಿವರಿಗೆ ಸೀಮೆ ನಡುಉತ್ತಾ ಬಂತು. ಆ ನರಪತಿವಂಶಕ್ಕೆ ಅಳಿಯನಾದ ರಾಮರಾಜನು ಮುಸಲ್‌ಮಾನರಿಗೆ ವೈತ್ಯಸವಾಗಿ ರಾಜ್ಯವಾಳುತ್ತ ಯಿರಲಾಗಿ, ಯೀ ವರ್ತಮಾನ ಡಿಸಿ[>ಲ್ಲಿ] ಪಾಛನವರ ಕೇಳಿ, ದಂಡು ತೆಗೆದುಕ್ಕೊಂಡು ಬಂದು, ಅಳಿಯ ರಾಮರಾಜನ ಸಂಗಡ ಮಹಾತ್ತು ಯುದ್ಧ ಮಾಡಿ, ರಕ್ಷತಂಗಡಿಯೆಂಬೊ ಗ್ರಾಮದ ಬಳಿಯ ಶಿರಚ್ಛೆದನವನ್ನು ಮಾಡಿ, ಝುಂಡೇಕೆ ತಲಿ ಕಟ್ಟಿ, ಆಗೆ ವಿಜಯನಗರ ಹಾಳು ಮಾಡಿದಾಗ್ಗೆ, ಯಿಕ್ಕೇರಿ ನಾಗನಾಥನ ಗುಡೀಗೆ ಪಶ್ಚಿಮದಲ್ಲಿ ಮತ್ತು ವಡೀತು. ಯೀ ರಾಮರಾಜನ ತಲಿಯನ್ನು ಝುಂಡೇಕ್ಕೆ ಕಟ್ಟಿಹೋದ ತರ್‍ವಾಯ ಕೆಲವು ದಿವಸ ಆರಾಜ್ಯಕವಾಯಿತು. ಆ ತರುವಾಯ ನರಪತಿ ವಂಶಸ್ತ ಅಚ್ಚುತರಾಯರ ಮಗ ಸದಾಶಿವರಾಯರಿಗೆ ಆಯಿದು ತಾಲೂಕು ನೇಮಕ ಮಾಡಿ ಕೊಟ್ಟರು. ಯಿತಲಾಗಿ ಮರಳೆನವರ ವಂಶಸ್ತರು ವಡ್ಡಿನಿಂದ ಆಚೀಗೆ ಹೊರ್ತು ನಮ್ಮ ದರೋಜಿಗೆ ಅವರು ಬಂ. . . . ನರಪತಿ ವಂಶಸ್ತವೆ ಸದಾಶಿವರಾಯರ ಆರಂಭ ಮಾಡಿಕ್ಕೊಂಡು ತಿರುಮಲರಾಯ ಶ್ರೀರಂಗರಾಯರ ಪರಿಯಂತ್ರ ಯೇಕರಾಜ್ಯವಾಗಿ ಯಿತ್ತು. ಯೀ ಮಧ್ಯದಲ್ಲಿ ಬಿಜಾಪುರದ ಕಡೆಲಿಂದ ಶಿದ್ದಿಮಸೂದ್‌ಖಾನಯಂಬೋ ಆತಗೆ ಹಿರೆ ಶೀಮೆದ ಶುಬೆ ಕೊಟ್ಟ ಕಾಲಕ್ಕೆ ಆತನು ಆದವಾನೀಲ ನಿಂತು, ಆನೆಗೊಂದಿ ಸೀಮೆ ಸಹಾ ಸರಿ ಮಾಡಿದನು. ಆ ವೇಳೆದಲ್ಲಿ ಜಮದಾರು ಹುಟ್ಟಿದ ವಿವರ:

ನಾಡಗೌಡ, ಸರನಾಡಗೌಡ, ದೇಶಾಯಿ, ಸರದೇಶಾಯಿ, ನಾಡಕುಲಕರ್ಣಿಕಿ, ಐದು ಸ್ವಾಸ್ತಿ ಹುಟ್ಟಲಿಕ್ಕೆ ಕಾರಣವೇನು ಅಂದರೆ, ದೇಶಕ್ಕೆ ಮುಖ್ಯಸ್ತರಾದವರನ ಕರಿಸಿ "ಯೀ ದೇಶವನ್ನು ಬಂದೊಬಸ್ತು ಹ್ಯಾಗ ಆದೀತು?" ಯಂದು ಕೇಳಲಾಗಿ, "ಭಾರಿ ಜಮೀನದಾರನ್ನ ಉತ್ಪತ್ಯ ಮಾಡಿ[>ಡ]ದ ಪರಿಯಂತ್ರ ದೇಶ ಬಂದೊ ಬಸ್ತು ಆಗಲಿಕ್ಕೆ ಯಿಲ್ಲ"ವೆಂದು ತಿಳಿದು ಅವನ ದಿವಾನ ಸಿದ್ದಿ ವೆಂಕಣ್ಣಪಂತರು ಸಿದ್ದಿಮಸೂದ್‌ಖಾನಗೆ ಹೇಳಲಾಗಿ. ಮಸೋದ್‌ಖಾನನು "ಅವರವರು ಮಾಡಿದ ಮೆಹನತು ನೋಡಿ, ಜಮೆದಾರಿಕೆ ಪಾಲಿಸಲಿಕ್ಕೆ ಬಂದೀತು"ಯಂದು, ಸರ್‍ವರಿಗೂ ಅಮಲು ಕೊಟ್ಟು ಕಳುಹಿಸಿ ಕೊಡಲಾಗಿ, ಅವರವರು ಸರಕಾರದ ಕೆಲಸ ಹ್ಯಾಗಾಗಬೇಕೊ ಹಾಗ ಮಾಡಿ, ಸಿದ್ದಿಮಸೂದ್‌ಖಾನಗೆ ರಾಜ್ಯ ಬಂದೊಬಸ್ತು ಮಾಡಿ ತೋರಿಸಲಾಗಿ, ಆ ಸಿದ್ದಿ ಮಸೂದ್‌ಖಾನನು ಯೀ ಐದು ಬಾಬುಗಳ ಸ್ವಾಸ್ತಿ ಮಾಡಿಕೊಟ್ಟನು: ನಮ್ಮ ದರೋಜಿ ತಾಲೂಕಿನ ವಿವರಉ:

೧. ನಾಡಗೌಡಕೀಗೆ ಮೂಲಪುರುಷ ರಾಮಣಗೌಡ, ಉಮ್ಮಾಳಿಗೆ ಜಿ[>ಜೇ]ವಕುಗ್ರಾಮ.

೧. ಸರನಾಡಗೌಡಕಿಗೆ ರಾಯಣ್ಣಗೌಡನು, ಯಿದಕ್ಕೆ ಉಮ್ಮಾಳಿ ಹಿರೆ ಜಾಯಿಗನೂರು.

೧. ದೇಶಾಯರಿಗೆ ಮೂಲಪುರುಷ ದೇಮನಗೌಡ, ಯಿದಕ್ಕೆ ಉಮ್ಮಾಳಿಗೆ ಮಲ್ಲಾಪುರದ ಗ್ರಾಮ.
೧. ಸರದೇಶಾಯಿತಿಗೆ ಸಿದ್ದಿವೆಂಕಣ್ಣಪಂತರ ನಿಶ್ಚತು ಸೀನಪ್ಪ ನರಸಪ್ಪ, ಯಿದಕ್ಕೆ ಉಮ್ಮಾಳಿ ನಿರಿಗಿನೂರು.
೧. ನಾಡಕುಲಕರ್ಣಿಕೆ ಸ್ವಾಸ್ತಿಗೆ ಮೂಲಪುರುಷ ಅಂತರಸಯ, ಯಿದಕ್ಕೆ ಉಮ್ಮಾಳಿ ಚಿಕ್ಕಜಾಯಿಗನೂರು
೫

ಯಿ ಅಯಿದು ಸ್ವಾಸ್ತಿಗೆ ದರೋಜಿ ತಾಲ್ಲೂಕು ಹಳ್ಳಿಗಳು ಕಸಿಜ[>ಕಸಬೆ] ಸಹಾ ಗ್ರಾಮಗಳು ೨೫ಕ್ಕೆ ಗ ೧೦೦ ಗ ೨ ॥ ಪ್ರಕಾರ ವರ್ತನೆ ಗ್ರಾಮ ಮುನಾಸಬ ಅರ್ತೋ ಗ್ರಾಮಕ್ಕೆ ವೊಂದು ಹೊಲ, ಯೀ ಪ್ರಕಾರ ಸಿದ್ದಿ ಮಸೂದಖಾನನ ಕೈಳಗೆ ಹುಟ್ಟಿಯಿದ್ದಾವೆ.

ಯೀ ಮೇರಿಗೆ ಮೊಗಲಾಯಿ ಕೆಲಉ ದಿವಸ ನಡವುತ್ತ ಯಿರಲಾಗಿ ನರಪತಿ ವಂಶಸ್ತರು ಹಿರೆದಾಸರಾಯರು ಹೋಗಿ ಮಧ್ಯದಲ್ಲಿ ಸದಾಶಿವರಾಯರ ಕೆಳಗೆ ನಡಉತ್ತ ಯಿದ್ದ ಆಯಿದು ತಾಲೂಕುಗಳು ಅಪ್ಪಣೆ ಮಾಡಿಕೊಂಡು ಬಂದರು. ಆ ತರ್ವಾಯ ಯೀ ಐದು ಬಾಬು ನಡಉತಲೆ ಬಂತು. ಚಿಕ್ಕದಾಸರಾಯರ ಆರಂಭ ಮಾಡಿಕ್ಕೊಂಡು ವೀರವೆಂಕಟಪತಿರಾಯ ತಿರುಮಲರಾಯರ ಪರಿಯಂತ್ರ ಪರಾಭವ ಸಂವತ್ಸರವು ಸಹಾ ರಾಜ್ಯವಾಳಿಕೊಳ್ಳುತ್ತ ಬಂದರು. ಯಿವರ ಸ್ವಾಸ್ತಿ ಜಾರಿ ನಡೀತು.

*ಹಿರೆ ನವಾಬನು ವಡ್ಡು ಬಾಣರಾವಿ ಕುಡುತನೆ ಬಳ್ಳಾರಿ ಠಾಣ್ಯಹಾಕಿದ ಹೊರ್ತು ನಮ್ಮಾ ಶೀಮೆಗೆ ಬರಲಿಲ್ಲಾ. ತಿರುಮಲರಾಯರ ಕಡೆಯಿಂದ ಖಂಡಣೆ ತೆಗೆದುಕೊಂಡದೆ, ರಾಜ್ಯಾ ಅನುಭವ ಆಗಲಿಲ್ಲಾ. ಪರಾಭವ ಸಂವತ್ಸರ ಟೀಪುಸುಲ್ತಾನನು ಆದವಾನಿ ಠಾಣ್ಯ ಹಾಕಿ, ಆನೆಗೊಂದಿ ದೇಶಕ್ಕೆ ಬಂದು, ಯೀ ಶೀಮೆ ಬಹಾಳ ಅ[>ಹ]ಲಾಕು ಮಾಡಿ, ಆ ವರುಷ ಅರಾಜಕೆವಾಯಿತು. ಆ ಸಂವತ್ಸರ ಯೀ ಗ್ರಾಮ ಹಾಳಾಗಿ ಹೋಗಿತು. ಯೀ ದೇಶ, ಕನಕಗಿರಿದೇಶ ಸಹಾ ಠಾಣ್ಯಹಾಕಿ, ಟೀಪುಸುಲತಾನನು ಖಾಸ್ವಾರಿ ದಂಡು ಸುದ್ದಾ ಬಂದು, ದರೋಜಿ ಕೆರೆ ವಳಗೆ ಯಿಳಕೊಂಡದರಿಂದ ಆನೆಗೊಂದಿ ಸೀಮೆ ಕನಕಗಿರಿ ಸೀಮೆ ಸಹಾ ಪ್ಲವಂಗ ಸಂವತ್ಸರದ ಚೈತ್ರಮಾಸದಲ್ಲಿ ಬಬರಜಂಗಗೆ ಜಹಗೀರಿ ಕೊಟ್ಟು, ಹರಪನಹಳ್ಳಿ ಸೀಮೆಗೆ ಹೋಗೊ ವೇಳ್ಯೆದಲ್ಲಿ ಯೀ ಕೆರೆ ವಡಕು ಬಿದ್ದು, ಸೊಂಡೂರು ಹಳ್ಳ, ಬ್ರಹ್ಮಸಮುದ್ರದ ಹಳ್ಳ, ಆವಿನಮದ್ದಿ[>ಮಡುವಿ]ನಹಳ್ಳ, ಮೂರು ಹಳ್ಳ ಕೂಡಿ ವಡಿಸಿ[>ಕಿ]ನ ವಳಗೆ ಹಾದು, ಯಿಟ್ಟಿಗೆ ಮುಂದೆ ಹಾದು, ತುಂಗಭದ್ರಿಗೆ ಬೀಳುತ್ತ ಯಿರಲಾಗಿ, "ಯೀ ಕೆರೆಗಂಡಿ ನಿಲಹಾಕಿ ಕಟ್ಟಿಸು"ಯಂದು ಜಹಗೀರಿದಾರ ಬಬರಜಂಗಗೆ ಹೇಳಲಾಗಿ, "ಭಾರಿ ಕೆರೆ ನನ್ನಯಿಂದ ಕಟ್ಟೊದು ಆಗದು"ಯಂದು ಹೇಳಿಕೊಂಡದರಿಂದ ದರೋಜಿ ತಾಲೂಕು ಸೊಂಡೂರು ತೈನಾತಿ ಮಾಡಿ, ಆಮೇಲೆ [>ಆಮಿಲ] ರಾಮ[>ಯಾ]ಜಿ ಕಿಲ್ಲೆದಾರ ಪೀರ್‌ಖಾನಗೆ "ಯೀ ಕೆರಿ ಚಂದಾಗಿ ಕಟ್ಟಿಸಂ"ತಾ ಟೀಪುಸಾಹೇಬನು ಅಪ್ಪಣೆ ಕೊಟ್ಟು, ಟೀಪು ದಂಡು ಸುದ್ದಾ ಹರಪನಹಳ್ಳಿ ಕಡೀಗೆ ಹೊಯಿತು, ಅದರಂತೆ ಅಮಲ್ ರಾಮಾ[>ಯಾ]ಜೀ ಪ[>ಪೀ]ರ್‌ಖಾನ್

* –* ಇಷ್ಟು ಭಾಗ ಪು. ೧೯೫ರಲ್ಲಿ ಬಂದಿದೆ. (ಸಂ)

ಯರಡು ವರುಷ ಪ್ಲವಂಗ ಕೀಲಕ ಸಂವತ್ಸರ ಯರಡು ಸಂವತ್ಸರ ಕಾಮಗಾರಿ ಮಾಡಿದರು. ಸೌಂಮ್ಯ ಸಂವತ್ಸರಕ್ಕೆ ತಾಲೂಕು ಸೊಂಡೂರು ಬಿಡಿಸಿ ದರೋದಿ ತಾಲೂಕು ಹೊಸ್ತಾಗಿ ನೇಮಕ ಮಾಡಿ, ವಡ್ಡು ಬಾಣರಾವಿ ಯಿದರ ಕೆಳಗೆ ಶೇರಿಸಿ, ಸೌಂಮ್ಯ ಸಂವತ್ಸರಕ್ಕೆ ಯೀ ತಾಲೂಕಿಗೆ ಅಮಲ ಮಮದಸಾದ[+ಕ] ಸದರಿ[>ಕಿಲ್ಲೆ]ದಾರ ಮಾಹಕೆಬರ್ಬಾ[>ಖಾನ್]ಸುದ್ದಾ ಸೌಂಮ್ಯ ಸಂವತ್ಸರಕ್ಕೆ ಕಾಮಗಾರಿ ಮಾಡಿಸಿ, ಅರ್ದಾ ಮಾಗಣೆ ತಾಲೂಕು[>ಆಯಿತು] ಸಾಧಾರಣ ಸಂವತ್ಸರದ ಭಾದ್ರಪದ ಮಾಸದೊಳಗೆ ನರಪತಿ ತಿರುಮಲರಾಯರು ಕ್ರಿಷ್ಣಾದ ಕಡೆಯಿಂದ ಬಂದು, ಯೀ ರಾಜ್ಯವನ್ನು ಠಾಣ್ಯ ಹಾಕಿದ್ದರಿಂದ ಕೆರೆ ಕಟ್ಟೋದು ಅರ್ದಾ ಆಯಿತು. ಕಾಮಗಾರಿ ಪೂರಾ ಆಗಲಿಲ್ಲಾ. ಯಿವರ ಠಾಣ್ಯ ಬಿದ್ದಮೇಲೆ ಸಾಧಾರಣ ವಿರೋಧಿಕೃತ ಪರಿದಾವಿ ಸಂವತ್ಸರ ಆಳಿದರು.

ಪ್ರಮಾದೀಚ ಸಂವತ್ಸರ ಚೈತ್ರಮಾಸಕ್ಕೆ ಟೀಪೂನ ಕಡೆಯಿಂದ ಮರಕಮರದಿಖಾನನು ದಂಡು ಬಂದು, ಫೌಜು ಸುದ್ಧಾ ಯಿವರ ದಂಡು ಮುಣಿಗಿಸಿ ಟೀಪೂನ ಠಾಣ್ಯ ಮಾಡಿಕೊಂಡರು, ಆ ತರ್ವಾಯ ಅವರ ಠಾಣ್ಯ ಬಿದ್ದ ಮೇಲೆ ಪ್ರಮಾದೀಚ ಸಂವತ್ಸರ ಲಾಗಾಯಿತು ಕಾಳಾಯುಕ್ತಿ ಸಂವತ್ಸರದ ಆರು ಸಂವತ್ಸರದ ವರಿಗು ದರೊದಿ ತಾಲೂಕು ಅಲಾಹಿದೆ ನೇಮಕ ಮಾಡಿ, ಯಿದರ ಕೆಳಗೆ ವಡ್ಡು ಅಂತಾ ಪರಭಾರೆ[>ಪುರಾ ಹಾಕಿ] ಅಮಲು ಮಹ್ಮದಲ್ಲಿಜಂಗನು ಯೇಕಸಾ ಆರು ವರುಷ ಮಾಮಲಕಿ ಮಾಡಿಕೊಳ್ಳುತ್ತ ಬಂದನು. “ಕೆರೆಯನ್ನು ಉಳದದ್ದು ಕಟ್ಟಿಸಬೇಕೆಂ”ದು ಅಪ್ಪಣೆ ಆದಲ್ಲಿ, ಆರಂಭ ಮಾಡಿಸಿ ಯರಡು ಶಾಸನ ಫಾರಷಿ ಅಕ್ಷಾರದಲ್ಲು ‘ಮಮ್ಮಾದ ವಖೀಲು’ಯಂದು ಬರಿಸಿ ಹಾಕಿಸಿ ಯಿದ್ದಾನೆ. ಯರಡು ಕೂ[>ಕೋ]ಡಿ ಮತ್ತು ಯರಡು ಶಾಸನ ಹಾಕಿಸಿ ಯಿದ್ದಾನೆ. ಅಂದಿಗು ಕೆರೆ ಪೂರಾ ಕಟ್ಟೋಣ ಆಗಲಿಲ್ಲ. ಕಾಳಾಯುಕ್ತಿ ಸಂವತ್ಸರ ಮಾಘಮಾಸ ಕಾ॥ ಮದ್ಯೆ ಅಡವುಡಿ ಬರಲಾಗಿ ನರಪತಿ ತಿರುಮಲರಾಯರು ಶಿದ್ದಾರ್ತಿ ಸಂವತ್ಸರದ ಶ್ರಾವಣಮಾಸ ಪರಿಯಂತ್ರ ನರಪತಿ ತಿಮ್ಮಪ್ಪಯ್ಯನವರ ಠಾಣೆಯಿತ್ತು. ಶ್ರಾವಣಮಾಸ ಆರಂಭ ಮಾಡಿಕ್ಕೊಂಡು ಮಾಘಮಾಸ ಪರಿಯಂತ್ರ ಕುಂಪಣಿ ಕಡಿಯಿಂದ ಪೂರ್ಣಯ್ಯನವರ ಠಾಣ್ಯ ಆಯಿತು. ಅವರ ಕಡಿಯಿಂದ ಕಂಪ್ಲಿ ತಾಲೂಕಕ್ಕೆ ಶೇರಿಸಿ ಮಾಮಲಕಿ ವಡ್ಡಿನ ಭೀಮರಾಯ ಮಾಡಿದನು. ಶಿದ್ದಾರ್ತಿ ಸಂವತ್ಸರಕ್ಕೆ ಮಾಘಮಾಸಕ್ಕೆ ಮೊಗಲಾಯಿ ಕಡೆ ಠಾಣ್ಯ ಆಯಿತು. ಅವರ ಕಡಿಯಿಂದ ಮೀರಸಾಹೇಬ ಮಾಮಲಕಿ ಮಾಡಿದ್ದ. ರವುದ್ರಿ ಸಂವತ್ಸರದ ಮಾರ್ಗಶಿರ ಮಾಸ ಪರಿಯಂತ್ರಕ್ಕು ಯಿತ್ತು. ಆ ತರ್ವಾಯ ಕುಂಪಣಿ ಸರಕಾರದವರಿಂದ ಕರ್ನ್‌ಲ್ ಮಂಡ್ರೋಲ್ ಸಾಹೇಬರು ಬಂದು, ಯೀ ಮಾರ್ಗಶಿರ ಮಾಸದಲ್ಲಿ ಠಾಣ್ಯ ಹಾಕಿದರು. ರಉದ್ರಿ ಸಂವತ್ಸರದ ಮಾರ್ಗಶಿರ ಮಾಸಲಾಗಾಯಿತು ಸನ್ ೧೨೧೯ ಫಸಲಿ ಶುಕ್ಲ ಸಂವತ್ಸರದ ಪರಿಯಂತ್ರವಾಗಿ ಸರಕಾರ ಕುಂಪಣಿ ಅಮಲು ನಡಉತಾ ಯಿದ್ದೀತು.

ಯಾಶಿ ಗ್ರಾಮಗಳ ತಪಶೀಲು:

೧. ಕಸಬೆ ದರೋಜಿ ಅಸ್ಲಿ.

೫ ಯಿದಕ್ಕೆ ಶೇರಿದ ಮಜರಾ ಗ್ರಾಮಗಳು :

೧. ಬ್ರಹ್ಮಸಮುದ್ರ

೧. ನರಸಾಪುರ

೧. ಭಟ್ರಹಳ್ಳಿ

೧. ಹಲ್ಲಾಪುರ

೧. ರಾಮಪುರ, ರಾಮಪ್ಪ ಯಿಹೋದು. ಯಿದ್ದಕ್ಕೆ ಶೇರಿದ ಹೊನ್ನಹಳ್ಳಿ ಭೂಮಿ ಸಹಾ ಪೂರ್ವಕ್ಕೆ ಕಪರುಡೊಣೆ ದಾಖಲು ಯಿತ್ತು. ಮೊದಲು ಯೇಳುಬೆಂಚೆ ಯೀ ಭೂಮಿ ವಳಗೆ ಯಿದ್ದದ್ದು ಧ್ಯೆಮಣ್ಣಗೌಡ ದೇಶಾಯಿಕಿಗೆ ಬಂದ ಕಾರಣ ಅಲ್ಲಿ ಹುಡೆ ಕಟ್ಟಿಸಿ ಬಲಕಾಯಿಸಿದರಿಂದ ಹೊಲ ಮೆರೆ ಕುಡ್ತನಿಗೆ ಅನುಭವ ಜೊರಾವರಿಲಿ ಮಾಡುತ್ತಾ ಯಿದ್ದಾರು. ಗ್ರಾಮ ಮಾತ್ರ ಹಾಜರು ಯಿದ್ದೀತು.

೬

೧೯. ಮಉಜೆ ಗ್ರಾಮಗಳು :

೧. ಮಾದಾಪುರ

೧. ಹೊನ್ನಹಳ್ಳಿ

೧. ಮಾವಿನಹಳ್ಳಿ

೧. ಸುಂಕ್ಲಪುರ

೧. ಗೊಮಲಾಪುರ ದಾಖಲಿ
ನಾರಾಯಣಪುರು

೧. ಸುಗ್ಗನಹಳ್ಳಿ

೧. ಗೋನಾಹಾಳು

೧. ಹಂಪಾದೇವಳಹಳ್ಳಿ

೧. ಕುಣಿಹಳ್ಳಿ

೧. ಬ[>ಚಿ]ಕ್ಕಜಾಯಿನೂರು

೧. ಹಿರೆ ಜಾಮ[>ಯಿ]ಗನೂರು

೧. ಜೆವುಕು

೧. ಜಿರಿಗನೂರು

೧. ದೇವಲಾಪುರ

೧. ಮೆಟ್ರಿ

೧. ಜಿನ್ನಾಪುರ

೧. ಉಪ್ಪಾರಹಳ್ಳಿ

೧ ನಾಗಲಾಪುರ

೧೯

ಯೀ ಪ್ರಕಾರ . . . . . ಮಲುಜ ಮಜರೆ ಸಹಾ ಗ್ರಾಮ ೨೪ ಯಿಹೋ ಗ್ರಾಮಗಳ ಪೈಕಿ ಪೂರ್ವಕ್ಕೆ ಅರಸುಗಳ ಕೆಳಗೆ ದೇವರ ಉಮ್ಮಾಚ[>ಉಮ್ಮಳಿಕೆ] ದಾರಿಗೆ ನಡಉತ್ತಾ ಯಿದ್ದ ತಪಶೀಲು:

೨ ದೇವರಿಗೆ ನಡಉತ್ತಾ ಯಿದ್ದ ಗ್ರಾಮಗಳು ರಾಯರ ಕಾಲಕ್ಕೆ:

೧ ವಿರುಪಾಕ್ಷದೇವರಿಗೆ ಗೊನಾಹಾಳು

೧ ಕೋದಂಡರಾಮದೇವರಿಗೆ ಜಿರಿಗಿನೂರು ಪೂರ್ವಕ್ಕೆ ನಡೀತು. ಮಧ್ಯದಲ್ಲಿ ಸರದೇಶಾಯಿಕಿ ಸ್ವಾಸ್ತಿಗೆ ಉಮ್ಮಳಿಕೆ ಪದ್ದತಿ ಹೊರ್ತು ಅವರಿಗೆ ಅನುಭವಯಿಲ್ಲ. ದೇವರಿಗೆ ನಡೀತಾ ಬಂತು.

೨

ಚಿಂತಾಮಣಿ ಅಯನವರಿಗೆ ಮೆಟ್ರಿ ಗ್ರಾಮ

೬ ಜಿ[>ಹಿ]ರಿ ಉಮ್ಮಾಚ್ಚಿ[>ಉಮ್ಮಳಿಕೆ]ದಾರ ಬಾಬತು:

೧ ನಾಡಗೌಡ

೧ ಸರನಾಡಗೌಡ ಗೌಡಕೀಗೆ

ಯಿರ[>ಹಿರೆ] ಜಾಯಿಗನೂರು

೧ ದೇಶಾಯಿಕಿಗೆ ನೇಮಲಾಪುರ

೧ ನಾಡ ಕುಲಕರಣಿಗೆ ಬಕೆ[>ಚಿಕ್ಕ] ಜಾಯಿಗನೂರು

೧ ನಾಡ ದಳವಾರಿಗೆ ಹಂಪಾದೇವನಹಳ್ಳಿ

೧ ಭಟ್ರಹಳ್ಳಿ ಬಟ್ರಿಗೆ

೬

೧೬ ಸರಕಾರ ದಾಖಲಿಗ್ರಾಮಗಳು. ಯೇಕೂನು ಗ್ರಾಮಗಳು ೨೫ಕ್ಕೆ ಬಸ್ತಿ[>ವಸತಿ]. ಬೇಚರಾಕು ದಾಖಲೆ ವಿವರಲು:

೧ ಬೇಚಿರಾಕು ಗ್ರಾಮ:

೧ ರಾಂಪುರ. ಯೀ ಭೂಮಿ ಹೊನ್ನಹಳಿ ಭೂಮಿ ಸಹಾ ಯೇಳುಬೆಂಚಿ ಪರಿಯಂತ ಭೂಮಿಯಿದ್ದಲ್ಲಿ ಕುತ್ತಾನೆ ದ್ಯೆಮನಗೌಡನು ಅಲಿ ಹುಡೆಕಟ್ಟಿ ಯೇಳುಬೆಂಚೆ ನಿರ್ಮಾಣಮಾಡಿದರಿಂದ ಆ ಗ್ರಾಮ ಶಿದೂಜಿರಾಯಗೆ ಧೊರಿಗಳು ಉಮ್ಮಳಿ ಕೊಟ್ಟು ಯಿದ್ದಲ್ಲಿ, ಮುರಾರಿರಾಮ[>ಯ]ನ ಸಗ್ವಿತಿಮಠ ಅವರವರು ವೊಂದಾಗಿ ಕುರ[>ಡ]ತನೆ ವೊಳಗೆ ಯಿದ್ದ ಕಾರಣ, ಜೊರಾವಾರಿ ಆ ರಾಂಪುರದ ಭೂಮಿ ಕರ್ಪಡೋಣಿ ಸಹಾ ಯೇಳುಬೆಂಚಿಗೆ ಹೋದದರಿಂದ ಗ್ರಾಮ ಮಾತ್ರ ಹಾಜರಯಿದ್ಧೀತೆ, ಅಂತು ಹಾಳು [೯]

೮. ದಫಾ ಹಾಳು ಗ್ರಾಮಗಳು:

೧ ಬ್ರಹ್ಮಸಮುದ್ರ

೧ ನರಸಾಪುರ

೧ ಭದ್ರ[>ಟ್ರ]ಹಳ್ಳಿ

೧ ಹಲ್ಲಾಪುರ

೧ ನಾರಾಯಣಪುರ

೧ ದೇವಲಾಪುರ

೧ ನಾಗಲಾಪುರ

೧ ಚಿನ್ನಾಪುರ

೮

ಜಾತಾ ಬಾಕಿ ಗ್ರಾಮಗಳು ೧೬ಕೆ ಹಾಲಿ ಕುಂಪಣಿ ಅಮಲಿಗೆ ನಡಉತ್ತಾ ಯಿಹೊ ಗ್ರಾಮಗಳ ವಿವರ:

ವೊಳ್ಳೆ ಬಸ್ತಿ[>ವಸತಿ]

೯. ದರೋಜಿ ಮಾಗಣೆ ಪೈಕಿ

೧. ಕಸಬಾ ದರೋಜಿ

೧. ಮೊದಾಪುರ

೧. ಹೊನ್ನಹಳ್ಳಿ

೧. ಮಾವಿನಹಳ್ಳಿ

೧. ಗೋಮಲಾಪುರ

೧. ಸಂಕಲಾಪುರ

೭ ಸುಗ್ಗನಹಳ್ಳಿ ಪೈಕಿ

೧. ಸುಗ್ಗನ ಹಳ್ಳಿ

೧. ಗೊನಾಹಳ್ಳಿ

೧. ಚೆಲುತು[>ಕು]

೧. ಹಿರೆಜಾಯಿಗನೂರು

೧. ಹಂಪಾದೇವನಹಳ್ಳಿ

೧. ಕುಣಿಹಳ್ಳಿ

೧. ಜೇರಿಗಿನೂರು ೭ ಗ್ರಾಮ ಬಸ್ತಿ.

೧. ಮಟ್ರ

೧. ಉಪ್ಪಾರಹಳ್ಳಿ

೯ ೧೬

ಗ್ರಾಮಕ್ಕೆ ಚಕ್ಕು ಬಂದಿ ಚತುರ್ದಿಕ್ಕು:

೧. ಯಿಂದ್ರದಿಕ್ಕಿಗೆ ತಿಮ್ಮಲಾಪುರದ ಹೊಲಮ[>ಮೇ]ರೆ, ಕೊಂಡರಾಜನ ಬೆಂಚಿ, ಹಗಲುಗೊಳದ ಸವನಕು.

೧. ಅಗ್ನಿದಿಕ್ಕಿಗೆ ಕೆರೆವಳಗೆ ತೋರಣಗಲ್ಲು ಹೊಲಬಿಗೆ ಪಿಳಿಗುಂಡು.

೧. ಯಮದಿಕ್ಕಿಗೆ ಕುರೆಕುಪ್ಪೆ ಹೊಲಬಸ್ತಿ ಬಡೆಖಾನನ.

೧. ನೈರುತ್ಯದಿಕ್ಕಿಗೆ ಕುರೆಕುಂಪ ಹೊಲಮೇರಿಗೆ ಯರಡು ಗುಡದ ವಳಗೆ ಮುನೆಕಲ್ಲು ರಾಮಪ್ಪನ ವಳಗೆ ಮಾಡಿಕೊಂಡು ಆ ಕಡೆಗೆ ಗುಂಡಿನ ಅಳಿತಿಗೆ ದೊಡ್ಡ ಬೆಟ್ಟಕ್ಕೊ ವೊಟ್ಟುಗಲ್ಲು.

೧. ವರುಣದಿಕ್ಕಿಗೆ ಗುಡ್ಡದ ಹಿಂದೆ ಬೊಲ್ಲನದುರ್ಗದ ಹಿಂದೆ ವುಪ್ಪಾರಹಳ್ಳಿ ಬಾಜಾರ.

೧. ವಾಯುವ್ಯದಿಕ್ಕಿಗೆ ದೇವಲಾಪುರದ ಹೊಲಮೆ[>ಮೇ]ರೆ ಮಠ[ಟ] ದೇವರದುರ್ಗ ಮೊದಲು ಮಾಡಿ ರಂಗಳ ನಾಯಕ ಗುಂಟಿಗು.

೧. ಕುಬೇರದಿಕ್ಕಿಗೆ ಯರಗುಡ್ಡಲು.

೧. ಯೀಶಾನ್ಯದಿಕ್ಕಿಗೆ ರಾಂಪುರ ಹೊನ್ನಹಳ್ಳಿ ಹೊಲಬಾ.

ಕಪ್ರಡೆಬ್ಬೆ[>ಡೊಣೆ] ವಳಗೆಮಾಡಿ ಯೇಳುಬೆಂಚಿಯಿತ್ತು. ಭೂಮಿ ಅವರಿಗೆ ದಾಖಲಿ ಗ್ರಾಮ ಮತ್ತೆ ರಾಜರು ಬೆಚರಾಕು ಮೂರು ಕಡೆ ಗ್ರಾಮ ಕಟ್ಟಿದ ಸ್ಥಳದಲ್ಲಿ ಪೂರ್ವದ ಗುಡಿ ದೆವಸ್ಥಾನ ಯಿದ್ದಲು. ಅಮ್ಮಾನಕೆರಿ ವಳಗೆ ಯೀಶ್ವರನ ಗುಡಿ ೧, ಯಿದಕ್ಕೆ ದಕ್ಷಿಣಕ್ಕೆ ವೆಂಕಟರಮಣನ ಗುಡಿ ೧, ದ್ವಾರಾವತಿ ವಳಗೆ ಹನುಮಂತದೇವರು, ವೀರಭದ್ರದೇವರು, ಮದ್ಯದ ಗ್ರಾಮದಾಗೆ ಯರಡು ಹನುಮಂತದೇವರು. ಯಿನ್ನು ಉಳದಾದ ಗುಡಿ ಕೆರಿ ಧರಕೆ ಬಿದ್ದು ಯಿದ್ದಾವೆ. ಆ ದೇವರುಗಳು ಮಾತ್ರ ಬಯಿಲು ವಳಗೆ ಯಿದ್ದಾರೆ. ಯೀಗ ಯಿರ್ಕಿಗ್ರಾಮದ ವಳಗೆ ಯರಡು ಹನುಮಂತದೇವರು ಯೀಶ್ವರ ಬಸವಣ್ಣ ಮಾಜುದಿ ಮುಂತಾದ ದೇವಸ್ತಾನ ಹಾಜರು ಯಿದ್ದಾವೆ. ಕೆರೆ ವಡದಾಗೆ ಹಳ್ಳಗಳ ಗುರುತು ಪೂರ್ವದಲ್ಲಿ ನಾಗನಾಥನ ಗುಡಿ ಬಳಿ ಯೀ ವಡದ ವಡಕೀಗೆ ಕ್ರಿಷ್ಣರಾಯರು ಕಟ್ಟಿದ ಮಠ ಬೊಜ್ಜಪ್ಪನ ಹಳಗುಯಂದು ವಾಡಿಕೆ ಬಿದ್ದುಯಿದ್ದೀತೆ.

*ಯಿದಕ್ಕೆ ಪೂರ್ವ ದೇವಿಮಠ ಬಳಿಯ ಬಸಾಳನಾಯಕನು ಕಟ್ಟಿಸಿದ ವಡಕಿನ ಹಿಂದೆ ತಾಳಾಮ[>ಪು]ರದ ಹಳಗುಯಂದು ಆಡುತಾ ಯಿದ್ದಾರೆ. ಯೀ ನಾಗನಾಥನ ಗುಡಿಗೆ ಪಶ್ಚಿಮದ ಗಂಡಿ ಟೀಪುಸುಲತಾನನು ಕಟ್ಟಿಸಿದರೆ[>ಕಿ]ಂತ ಮುಂಚೆ ಸೊಂಡೂರುಯಿಂದ ಬಂದ

ನಾರಿಹಳ್ಳವೊಂದು, ಅಲ್ಲಿ[>ಅವ್ವಿ]ನ ಮಡ್ಡಿನ ಹಳ್ಳ ೧, ವಡ್ರಹಳ್ಳಿಯಿಂದ ಬಂದ ಬ್ರಹ್ಮಸಮುದ್ರದ ಹಳ್ಳ ೧, ಯೀ ಮೂರು ಹಳ್ಳ ಕೂಡಿ ಕೆರೆ ಗಂಡಿ ವಳಗೆ ಹಾದು ಯಿಟ್ಟಿಗೆ ಮುಂದೆಹಾದು ತುಂಗಬದ್ರಿ ಸಂಗಮ ಆಗಿಯಿತ್ತು. ಆ ಹಳ್ಳಕ್ಕೆ ವಡಕಿನ ಬಾಯ ವಳಗೆ ದರೋಜಿಗೆ ವೊಡ್ಡು ಗಟ್ಟಿ ಹಾಕಿ ಸ್ವಲ್ಪ ಮಾಗಾಣೆ ಆಗುತ್ತಾ ಯಿತ್ತು. ಟೀಪುಸಾಹೇಬನು ಗಂಡಿ ಹಾಕಿದ ಮೇಲೆ ಕೆರೆ ತುಂಬ ನೀರು ಅನ್ವಲ್[>ಅವ್ವಲ್]ದುಯ್ಯಂ ಯರಡು ತೂಬಿನ ನೀರು ಚಂದಾಗಿ ಹರದು ಮಾಗಾಣಿ ಆಗುತ್ತಾ ಯಿದ್ಧೀತು. ಶಿ[>ದು]ಯ್ಯಂ ತೂಬುವೊಂದು ನಿಲಸ್ವಲ್ಪ ಮಾಗಾಣೆ ಆಗುತ್ತಾ ಯಿಧೆ. ಕೆರೆ ಕಾಮಗಾರಿ ಪೂರಾ ಮುಗ್ಗಿದ ಕಾರಣ ನಾಲ್ಕನೇ ತೂಬಿಗೆ ನೀರು ಹತ್ತೊದುಯಿಲ್ಲ. ಪಶ್ಚಿಮದ ಕೋಡಿ ಕಡಿಗೆ ಕೆರೀಗೆ ದಕ್ಕೆ ಆದೀತುಯಂದು ವೀರಭದ್ರದೇವರ ಮುಂದೆ ಕೋಡಿ ಬಹಳ ತಗ್ಗಿಸಿದ್ದರಿಂದ ಗ್ರಾಮಗ ನಡಿವೆ ಹಾದು, ಕೆಂಜಗನಕೋಟದ[>ತೊಪಿನ] ಬಳಿ ಯೀ ಮಾಗಾಣೆ ವಳಗಿಂದ ಹಾದು, ಮುಂಚಿನ ನಾರಿಹಳ್ಳಕ್ಕೆ ಕೋಡಿ ಕೆರೆ ತುಂಬ[>ಬಿ]ದ ವ್ಯಾಳೆದಲ್ಲಿ ಹೆಚ್ಚು ನೀರು ಆ ಹಳ್ಳಕ್ಕೆ ಹೋಗುತ್ತಾ ಯಿದ್ದಾವೆ.*

೧. ಕ॥ದರೂದಿಗೆ ಮಜರೆ ಸಹಾ ಸದರಿ ಪ್ರಕಾರ ಮೂರು ತೂಬಿನ ಕಾಟದ ನೀರು ಹರದು ಮಾಗಾಣೆ ಆಗುತ್ತಾ ಯಿದ್ದೀತೆ.

೧. ಹೊನ್ನಹಳ್ಳಿಗೆ ಪೂರ್ವದ ನಾ[>ಕಾ]ರಿಹಳ್ಳಕ್ಕೆ ಜಿಯ್ಯರಕೋಡಿ ಬಳಿ ಯಿ ವಡ್ಡುಗಟ್ಟಿ ಹಾಕಿ ದುಯ್ಯಂ ತೂಬಿನ ನೀರು ಆ ವಡ್ಡಿಗೆ ಬಿಟ್ಟು, ಹೊನ್ನಹಳ್ಳಿ ಮಾದಾಪುರ ಸಂಕಲಾಪುರ ಸಹಾ ಯೀ ಕಾಲವಿಗೆ ಮಾಗಾಣೆ ಆಗುತ್ತಾ ಯಿದ್ದೀತು.

೧. ಗೋಮಲಾಪುರಕ್ಕೆ ಹಿರೆಕೋಡಿಹಳ್ಳಿ ಮಾಗಾಣೆ ವಳಗೆ ಕೆಂಜಿಗನತೋಪಿ[>ತೂಬು]ನ ಹಿಂದೆ ಪಶ್ಚಿಮ ಕೆರೆ ಬಂಡಿಗೆ ವೊಡ್ಡು ಗಟ್ಟಿ ಹಾಕಿ, ಕಾಲ್ವಿ ತೆಗೆದುಕ್ಕೊಂಡು ಹೋಗಿ, ಮಾಗಾಣೆ ಆಗುತ್ಥಾ ಯಿದ್ದೀತು.

೧. ಯೀ ಉತ್ರಕ್ಕೆ ಹೂವಿನಹಳ್ಳಿಗೆ ಕೆಂಜಿಗನತೂಪಿ[>ಬು]ನ ಬಳಿ ಯೀ ಪೂರ್ವದ ದಾ[>ನಾ]ರಿಹಳ್ಳದ ವೂಟನೀರು ಯೀ ಕೂ[>ಕೋ]ಡಿಹಳ್ಳ ಕೂಡಿದಲ್ಲಿ ವಡ್ಡುಗಟ್ಟಿ ಹಾಕಿ, ಕಾಲ್ವಿ ಮಾಡಿಕೊಂಡು ಹೂವಿನಹಳ್ಳ ಸಂಕಲಾಪುರ ಸಹಾ ಆಗುತ್ತಾ ಯಿದ್ದೀತು.

೧. ಯೀ ವುತ್ತರ ಸುಗ್ಗನಹಳ್ಳಿಗೆ ಹಳ್ಳದ ಊಟೀ ನೀರಿಗೆ ಮಜರೆ ಹರ್ಲಾಪುರದ ಭೂಮಿ ವಳಗೆ ವೊಡ್ಡು ಕಟ್ಟಿಹಾಕಿ, ಕಾಲುವೆ ತೆಗೆದುಕೊಂಡು ಹೋಗಿ ಮಾಗಾಣೆ ಮಾಡುತ್ತಾ ಯಿದ್ದಾರೆ.

೧. ಯೀ ಉತ್ರಕ್ಕೆ ಗೋನಾಹಳ್ಳಿ ಬಳಿ ಯೀ ಊಟಿ ನೀರಿಗೆ ವೊಡ್ಡುಗಟ್ಟಿ ಹಾಕಿ, ಕಾಲವೆ ತೆಗೆದುಕ್ಕೊಂಡು ಹೋಗಿ ಮಾಗಾಣೆ ಆಗುತ್ತಾ ಯಿದ್ಧೀತು.

೧. ಹಂಪಾದೇವನಹಳ್ಳಿಗೆ ಗೊನಾಹಾಳು ಭೂಮಿ ವಳಗೆ ವೊಡ್ಡುಗಟ್ಟಿ ಹಾಕಿಕ್ಕೊಂಡು ಹೋಗಿ, ಮಾಗಣೆ ಕೊಡುತ್ತಾ ಯಿದ್ದಾರೆ.

---

* ಇಷ್ಟು ಭಾಗ ಪು.೯೫-೯೬ರಲ್ಲಿ ಬಂದಿದೆ (ಸಂ).

೧. ಹಿರೆಜಾಯಿಗ[+ನೂರು] ಕೋಡಿಗೆ ಹಂಪಾದೇವನಹಳ್ಳಿ ಭೂಮಿ ವಳಗೆ ವೂಟಿ ನೀರಿಗೆ ವೊಡ್ಡುಗಟ್ಟಿ ಹಾಕಿಕ್ಕೊಂಡು, ಕಾಲ್ವೆ ತೆಗದುಕ್ಕೊಂಡು ಹೋಗಿ ಮಾಗಾಣೆ ಮಾಡುತ್ತಾರೆ.

೧. ಚಿಕ್ಕಜಾಯಿಗನೂರಿಗೆ ಹಿರೆಜಾಯಿಗನೂರು ಭೂಮಿವಳಗೆ ಊಟಿ ನೀರಿಗೆ ಕೊಟ್ಟ ಪೈರು ಮಾಗಣೆ ಮಾಡುತ್ತಾ ಯಿದ್ದಾರು.

೧. ಜೀರಿಗೆನೂರಿಗೆ ಹೊಸ್ತಾಗಿ ದರೋಜಿ ಕೆರೆ ಅವ್ವಲ್ ಖನಕಾಟದ ನೀರು ತೆಗೆದುಕ್ಕೊಂಡು ಹೋಗಿ, ಮಾಗಣೆ ಮಾಡುತ್ತಾ ಯಿದ್ದಾರು.

೧೦

ದರೋಜಿ ಸೀಮೆ ವಳಗೆ ಬೆಳದ ಧಾನ್ಯ:

೧. ಜೋಳಾ
೧. ಸಜ್ಜೆ
೧. ನವಣಿ
೧. ಯಳ್ಳು
೧. ತೊಗರಿ
೧. ಹ್ಯಸರು
೧. ಅವರೆ
೧. ಅಲಸಂದಿ
೧. ಹತ್ತಿ
೧. ಹುರಳಿ
೧. ಪುಂಡಿ

೧೧

೧. ನೀರುಜೋಳ
೧. ನವಣಿ
೧. ರಾಗಿ
೧. ಜವೆ
೧. ಕಡ್ಲೆ
೧. ಸಾಸ್ವಿ

೬

೫. ಕಾರ್ತೀಕ ಫಲಕ್ಕೆ:

೧. ಗರಗ ನೆಲ್ಲು
೧. ಶಿಪಾಯಿನೆಲ್ಲು
೧. ಕರೆ ಸಣ್ಣ ನೆಲ್ಲು
೧. ಜನ್ನದಾರಿ
೧. ಆನೆಗೊಂದಿ
೧. ಮರ ಸಣ್ಣ ನೆಲ್ಲು

೬

೪. ವೈಶಾಖ ಫಲ ೧ಕ್ಕೆ:

೧ ಶಿರಂಗಾ
೧ ಅವಸರ ರಾಗಿ
೧ ಡುಗ್ಗನೆಲ್ಲು
೧ ಮಾರಟಿಗ

೪

ಸದರಿ ಐದು ಬಾಬಿನ ನಾಡಿಗ ದ್ಯಾಣ[>ತಾಣ]ಗಳು ಹಾಜರು ಯಿಲ್ಲ.

೨ ನಾಡಗೌಡ ಸಾ॥ ರಾಯಣಗೌಡ ಮೃತವಾದ. ನಾಯಕನ ಮಗ ಸಕ್ರಿಗೌಡನು ರಾಜಾ ನಾಗನಾಥನ ಕಡೆ ಹೋಗಿ ಯಿದ್ದಾನೆ.

೧. ದೇಶಾಯಿಗಳು ನವಪ್ರವಾಗಿ ಹೋಗಿ ಯಿದ್ದಾರೆ.

೧. ಸರದೇಶಾಯಿಗಳಾದರು ಯಿಲ್ಲ. ಕೇಶವಪುರಿವಳಗೆ ಯಿದ್ದಾರೆ. ಹೆಣ್ಣುಮಕ್ಕಳು ಯಿದ್ದಾರೆ.

೧ ನಾಡ ಕು॥ ಭೀಮಪ್ಪನು ಹೈದರಾಬಾದಿಗೆ ಕುಂಪಣಿಯವರ ದಂಡಿನ ಸಂಗಡ ಹೋಗಿ ಯಿದ್ದಾರೆ.

ಯೀ ಪ್ರಕಾರಕ್ಕೆ ಕೈಫಿಯತು ಬರದು ಕೊಟ್ಟವರು ಕ॥ದರೋಜಿ ಶಾ॥ ಹುಬ್ಬಣ್ಣ ಕ್ರಿಷ್ಣಪ್ಪನು.

ಯೀ ಸ್ತಳದಾಗೆ ಜವಳಿ ಆಗೊ ವಿವರಉ:

೧ ಬಿಳೆ ಹಚ್ಚಡ ಕಂಠಿರಾಯಿ ॥ ೧ ಪಾಟೇಕು[>ಟರು] ಆಡು[>ಗು]ತ್ತ ಯಿದ್ದೀತೆ.

೧ ರುಮಾಲ [>ಎ]ರೆರಡು ಹಣ ೧ ಮೊದಲು ಮಾಡಿಕ್ಕೊಂಡು ಹಣ ಮೂರು ಪರಿಯಂತ್ರ ಆಗುತ್ತ ಯಿದ್ದೀತೆ.

೧ ವೋಸ್ತ್ರಾರ್ ೧ ॥ ಪಾಟರು ಆಗುತ ಯಿದ್ದೀತೆ.

೧ ಉರಟ ಕಂಬಳಿ ರು೧ ಆ॥ ಮಾಡಿಕೊಂಡು ರೂಪಾಯಿ ಯರಡು ಪರಿಯಂತ್ರ ಆಗುತ್ತಾ ಯಿಧೆ.

೪

ಯಿಷ್ಟ ಹೊರ್ತು ಉತ್ತಮ ಆಗೊ ಉಸ್ತ್ರಾ ಆಲೋಣಯಿಲ್ಲ.

ಕುಂಪಣಿ ಸರಕಾರಕ್ಕೆ ರಉದ್ರಿನಾಮ ಸಂವತ್ಸರಕ್ಕೆ ಪುಷ್ಯ ಬಹುಳ ೧೨ಯಲ್ಲು ದುಬಾಸಿ ವೆಂಕಟರಾಯರವರ ಅಪ್ಪಣೆ ಪ್ರಕಾರಕ್ಕೆ ಕಸಬಾ ಕಂಪ್ಲಿ ಗೌಡ ಶಾನಭೋಗರು ಬರಕೊಟ್ಟ . . . . .

*ಕಸಬಾ ಕಂಪ್ಲಿ ಗ್ರಾಮ ಕಟ್ಟಿದ್ದು ಪೂರ್ವೋತ್ತರ ಕ್ರಮವೆಂತೆಂದರೆ: ಪೂರ್ವದಲ್ಲಿ ಕಂಪ್ಲಿರಾಯನೆಂಬೊ ವೊಬ್ಬ ದೊರಿಮಗನು. ಯಿವನ ಕುಲವು ಬೇಡರ ಕುಲ, ಯೀತನು ಹೊಳ್ಳೆ ಆಚೇಲಿ ಕನಕಗಿರಿರಾಜ್ಯದ ಸೀಮೆಯೊಳು ಗುಡ್ಡದ ಸ್ಥಳದಲ್ಲು ಕುಮಟವೆಂಬೊ ಗ್ರಾಮದಲ್ಲಿ ಕಿರಾತನಾಗಿ ಯಿರಲು, ದಿನಕಾಲಗಳಲ್ಲಿಯೂ ತಾನು ತನ್ನ ಪುರುಷ ಪರಾಕ್ರಮೆಯಿಂದಲು ಆ ಸ್ಥಳಕ್ಕೆ ಪಾಳೇದ ಥೊರೆ ಮಗನೆಂದು ಅನಿಸಿಕೊಂಡು ಕೆಲಉ ಕಾಲದಲ್ಲಿ ಯಿರುತ್ತಾ ಯಿರಲು, ಅಚ್ಚುತರಾಯ, ನರಸಿಂಗರಾಯರ ಆಚೇಲಿ ರಾಯರ ಕಾಲಕ್ಕೆ ಯಿವರ ಬಳಿಗೆ ಬಂದು, ಯಿವರ ದಯ ಸಂಪಾದಿಸಿಕೊಂಡು, ತನ್ನ ಪೂರ್ವಸ್ಥಳಕ್ಕು ಮೂವರಲ್ಲಿ ಮನೆಮಾಡಿಕ್ಕೊಂಡು ಪರಾಕ್ರಮವಂತನಾಗಿ ಮಂದಿ ಕುದಿರಿ ಸನ್ನಾಹ ಮಾಡಿಕ್ಕೊಂಡು ಯಿರಲಾಗಿ, ವೊಂದಾನೊಂದು ದಿವಸದಲಿ ಕ ॥ ಸಾಳಕೆ ನದಿತೀರಕ್ಕೆ ಬಂದು ಶ್ರೀ ವಿರೂಪಾಕ್ಷದಲ್ಲಿ ಕೂರ್ಮಕ್ಷೇತ್ರದಲ್ಲಿಗೆ ಬಂದು ಬೇಟೆ ಮಾರ್ಗಸ್ತನಾಗಿ ಯಿಲ್ಲಿ ಕುಳಿತು ಕೊಂಡನು. ಯೀ ಕಂಪ್ಲಿ ಹುಟ್ಟಿದ ಸ್ಥಳ ಯಾವತ್ತು ಗಡ್ಡೆ ಬೆಳೆದು ಅರೂಪಕವಾಗಿ ಯಿತ್ತು. ಯಿಲ್ಲಿ ವಂದು ನಾಯಿ ಸಂಗಡ ಕಡದಾಡೋ . . . . . ಕಂಪ್ಲಿರಾಯನು ಯಿದು ನೋಡಿ,

---

* ಇಲ್ಲಿಂದ ಮುಂದಿನ ಭಾಗ ಕಂಪಲಿ ಗ್ರಾಮವನ್ನು ಕುರಿತು ಬರೆದುದಾಗಿದೆ (ಸಂ)

"ಯಂದಾದು ಯಿಲ್ಲಿ ವಳ್ಳೆ ಬ್ಯಾಟಿಯಿಲ್ಲ ಕಾಣಸತ್ತದೆ . . . . . ಯೀ ಸ್ಥಳ ಬಂಟೆಸ್ತಳ ಯಿದ್ದೀತು"ಯಂದು ಯೋಚಿನಿ ಮಾಡಿ, ಯೀ ಗಡ್ಡೆ ಕಡದು ವೊಂದು ಗ್ರಾಮಮಾಡಿ ನನ್ನ ಹೆಸರು ಮಾಡಬೇಕುಯಂದು ರಾಯರ ಆಜ್ಞಾ ಪ್ರಕಾರ ಯಿಲ್ಲಿ ಗ್ರಾಮ ಹುಟ್ಟಿಸಿ, ಕಂಪ್ಲಿಯಂಬೊ ಹೊಸರು ಯಿಟ್ಟನು . . . . . ಕಲಮು॥

ಯೀ ಗ್ರಾಮಕ್ಕೆ ಪೂರ್ವಕ್ಕೆ ಬಾಗಲು ಕಟ್ಟಿಸಿದ್ದು ಸ್ತಳದ ರಾಯರು ಕಟ್ಟಿಸಿದ್ದು ೧, ಕೆಲವು ಕೆಲವು ಸ್ತಳದ ನಾರಾಯಣಪ್ಪ ಕಟ್ಟಿದ್ದು ಅರ್ದಾ ವೊಂದು, ಕೆಲವು ಶಹಜಿ ಕಟ್ಟಿಸಿದ್ದು . . . . . ಬಾದ್ಯಿ ಮಾಡಿ ಕಟ್ಟಿಸಿ ಮುಗಿಸಿ ಬಿಟ್ಟನು.

ಯೀ ಗ್ರಾಮ ಹುಟ್ಟಿದ ಮೇಲೆ ಯಿದರಕಿಂತಾ ಪೂರ್ವದಲ್ಲಿ ಅಯಿದು ಗ್ರಾಮ ಸಮೀಪವಾಗಿ ಕೈಗಲ್ಲು ಅಳತಿ ಮೇಲೆ ಯಿದ್ದಲು. ಯೀ ಗ್ರಾಮಗಳು ಕೆಡಸಿ ಪ್ಯಾಟೆ ಕಟ್ಟಿಸಬೇಕೆಂದು ಅರಸುಗಳು ಮ್ಯಾಗಣ್ಯೆಯ್ಯನವರ ದೊರೆತನದಲ್ಲಿ ಯೀ ಪ್ಯಾಟಿ ಶೆಟ್ಟಿ ಮೂಲಪುರುಷ ಮುರೆನೀರಪ್ಪದೇವರು ಕಟ್ಟಿಸಿದ್ದು ವರುಷ ೧೫೦. ಐದು ಗ್ರಾಮಗಳ ಹೆಸರುಗಳು ಅರಳೆಹಳ್ಳಿವೊಂದು ವಿರುಪಾಪುರವೊಂಥು ತಿಮ್ಮಸಮುದ್ರವೊಂದು ॥೩॥ ಗ್ರಾಮವೊಂದು ಅಚ್ಚುತಪುರ ಯೀ ಪ್ರಕಾರ ಗ್ರಾಮಗಳು ಮುರದು ಯಿದ್ದೀತು.

ಯೀ ಗ್ರಾಮಕ್ಕೆ ಪಶ್ಚಿಮಕ್ಕೆ ನದಿ ತೀರದಲ್ಲಿ ಕೂರ್ಮಕ್ಷೇತ್ರದಲ್ಲಿ ದಕ್ಷಿಣಭಾಗಕ್ಕೆ ಶ್ರೀ ವಿರೂಪಾಕ್ಷಗುಡಿ ಕಟ್ಟಿಸಬೇಕೆಂದು ಅರಸುಗಳು ನರಸಿಂಗರಾಯರ ತಮ್ಮ ಸದಾಶಿವರಾಯರು ಯೀ ದೇವರ ಗುಡಿ ನಿರ್ಮಾಣಮಾಡಿ ಬಿಟ್ಟಿದ್ದು ಶಾಲಿವಾಹನ ಶಕ ೧೪೭೦ ಸಂವತ್ಸರದಲ್ಲಿ ಬರದು ಹಾಕಿ ಯಿದ್ದೀತು. ಯೀ ಗುಡಿವೊಂದೆ ಕಟ್ಟಿಯಿದ್ದಲು, ಪಾರ್ವತಿ ಗುಡಿಯಿಲ್ಲವೆಂದು ಆದವಾನಿ ಸೀಮೆ ದೈವದವರು ಮಾಡಿಕ್ಕೊಂಡ ಸ್ತಳಕ್ಕೆ ಬಂದು ಮ್ಯಾಲಿನಿ ಬಾಗಲ ಕಡೆಗೆ ನದಿತೀರಕ್ಕೆ ಯೀ ಗುಡಿಗೆ ದಿನ ೧ಕ್ಕೆ ಹೋಗುತ್ತಾ ಯಿರಲು, ಯೀ ದೇವ ಗುಡಿ ಕಟ್ಟಿದ್ದು ಶಾಸನ ನೋಡಿ ಯಿಹಕ್ಕೆ ಪಾರ್ವತಿ ಗುಡಿ ಯಿಲ್ಲವೆಂದು ಯೀ ದೈವದವರು ಕಲತು ಕಟ್ಟಿಸಿ ಯಿದ್ದಾರು – ೧.

ಶ್ರೀ ಸೋಮೇಶ್ವರನ ಗುಡಿ ಕಟ್ಟಿದ ಕ್ರಮವೆಂತೆಂದರೆ; ಪೂರ್ವದಲ್ಲಿ ಕಲ್ಯಾಣಪಟ್ನದ ಕಡೆಯಿದ್ದ ತನ್ನ ಸಿಂಧುಬಲ್ಲಾಳರಾಯನು ಗೊಲ್ಲ ಕುಲಮಂದಿ ಕೂಡಿ ಆ ಸನ್ನಾಹ ಸಹಿತ ಗ್ರಾಮಾಂತರ ಮೇಲೆ ಬರುತ್ತಾ ಯಿರಲು, ಯೀತನು ತನ್ನ ಕುಲದೇವರು ಸೋಮೇಶ್ವರನು ಬಂಡಿ ಮೇಲೆ ಹಾಕಿಕ್ಕೊಂಡು ದೇಶದ ಮೇಲೆ ರಾಜ್ಯಾ ನೋಡಿಕ್ಕೊಂಡು ಬರುವಾಗಲು ಯೀ ಸ್ಥಳಕ್ಕೆ ಬಂದು ಯಿಳಕೊಂಡು, ನಾಲ್ಕು ದಿವಸ ಯಿದ್ದು ಪುನಹ ಮುಂದಕ್ಕೆ ರಾಜ್ಯದ ಮೇಲೆ ಹೋಗಬೇಕೆಂದು ಯೀ ದೇವತಿನ ಬಂಡಿ ಮೇಲೆ ಹಾಕಿಕ್ಕೊಂಡು ಹೋಗುತ್ತಾ ಯಿರಲು, ಬಂಡಿ ಕೀಲು ಮುರದು ಬಿತ್ತು. ಮತ್ತು ಬಂಡಿ ಕೀಲು ಜೋಡಿಸಿಕೊಂಡು ಹೋಗಬೇಕೆಂದು ಮಾಡಿದಲ್ಲಿ ಮತ್ತು ಮುರೀತು. ಯಿದು ಕಂಡು ಯೀ, ಬಲ್ಲಾಳರಾಯನು 'ಯೀ ಹೊತ್ತು ನಿಂತು ನಾಳೆ ಹೋಗೋಣ'ಯಂದು ಮಾಡಿದಲ್ಲಿ ರಾತ್ರೀಲಿ ಯೀ ದೇವರು ಸ್ವಪ್ನದಲ್ಲಿ ಬಂದು "ಯಿನ್ನು ಮುಂದಕ್ಕೆ ನನ್ನ ವಯಬ್ಯೆಡ, ಬರೋಣಯಿಲ್ಲ. ಯಿದೆ ಸ್ಥಳದಲ್ಲಿ ಯಿರತೀನಿ"ಯಂದು ಹೇಳಿ, "ಗುಡಿ ಕಟ್ಟಿಸು" ಅಂತದೇವರು ಹೇಳಿದ ಪ್ರಕಾರಕ್ಕೆ ಗುಡಿ ಕಟ್ಟಿಸಿ, ಕೆರೆ ಕಟ್ಟಿಸಿ ದೇವರು ಪ್ರತಿಷ್ಠೆ ಮಾಡಿ ಬಿಟ್ಟದ್ದು.

ಕಂಪ್ಲಿ ಗ್ರಾಮಕ್ಕೆ ಮಾಗಣೆ ಹುಟ್ಟಿದ್ದು: ಮುದ್ದೆದಣಾಯಕನೆಂಬೊ ಶೂದ್ರನು. ಶ್ರೀ ಪೊಂಪಾಪತಿ ಯಿವಗೆ ವರುಉ ಆಗಿ ಹೇಳಿದ್ದು: "ಸಮಿನ್ ಪರವಾಗಿ ನಿನ್ನ ಮುಂದೆ ಹೋಗುತ್ತಾ ಯಿದ್ದೇನೆ. ಹ್ಯಾಗೆ ಹ್ಯಾಗೆ ನಾನು ಹೋಗುತ್ತಿನೊ ಹಾಗೆ ನದಿಲಿಂದಾ ಕಾಲ್ವಿ ಕಡಿಸಿ, ನೀರು ಮಾಡಿಸಿ, ಮಾಗಾಣೆ ಮಾಡಿಸಿ"ಯಂದು ದೇವರ ಅಪ್ಪಣೆ ಮೇರಿಗೆ ಮೂಡಿದ್ದು ರಾಯರ ಕಾಲಕ್ಕೆ॥

❖❖

೧೦೯
ದೇವಲಾಪುರ ಪ್ರತಿನಾಮಾ ಮಲ್ಲಿಕಾರ್ಜುನಪುರ ಕೈಫಿಯತ್ತು

ಮೆಕೆಂಝಿ ಸಂಪುಟ : ೩೬೯

ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕ ವರುಷಂಗಳು ೧೪೨೦ . . . . ಪ್ರಭವನಾಮ ಸಂವತ್ಸರದ ಕಾರ್ತಿಕ ಶುದ್ಧ ॥ ೧೫ ಯಲ್ಲು ತೀರ್ಥಹಳ್ಳಿ . . . . ಮಕ್ಕೆರಾ ॥ ಸಾಳ್ವ ನರಸಿಂಗರಾಯರ ಆಳಿಕೇಲಿ [ಗ್ರಾ+]ಮಕ್ಕೆ ಸ್ತಳಜ್ಞರು ಗೌಡರು, ಲಕ್ಕಣ್ಣಗೌಡ, ಬೊಮ್ಮ, ಬಣ ೨ ಸ್ತಳದ ಶ್ಯಾನಭೋಗ, ನಾ[>ಕಾ]ಲವೆಹಳ್ಳಿ ವುಳಿಮರಸಯ್ಯ, ಅದರಸಯ್ಯ, ಯಿಂಡಿ ಮಾದವರಸಯ್ಯ, ಬಡಿಗಿ ಗುರುವೊಜ, ತಳವಾರ ನಲ್ಲೊಲ[>ನಲ್ಲೋಬ], ಮಾನಯ್ಯ. ಮಾದಿಗರು ಪಿಡ್ಡ ಜಗುಲಿಯವರು ಯೀ ಗ್ರಾಮಕ್ಕೆ ಸ್ತಲಜ್ಞರು ಯೀ ಪ್ರಕಾರ ಅನುಭವಿಸಿ ಕೊಳ್ಳುತ್ತಾ ಯಿರಲಾಗಿ, ಕೆಲಉ ಕಾಲದ ಮೇಲೆ ತೀರ್ಥ ಹಾಳಾದ ವಿವರ: ಗ್ರಾಮಕ್ಕೆ ಮಕ್ಕರಿಕ್ಕಿ ಸಕಲವಾದವರು ಸತ್ತು ಹೋಗುತ್ತಾ ಯಿರಲಿಕ್ಕೆ ಗ್ರಾಮದ ಗೌಡ ಶಾನುಭೋಗ ಬಡಿಗಿ ತಳವಾರರು ಸಹಾ ವಿಜಯನಗರ[+ಕ್ಕೆ] ಬಿಟ್ಟು ಹೋದರು. ವಿಜಯನಗರ ಶೇರಿಕೊಂಡು ಕೆಲಉ ಕಾಲ ಹೋದ ಮೇಲೆ ಶಕ ॥ ೧೪೫೯ನೆಯ ದುರ್ಮುಖಿ ಸಂವತ್ಸರ ಅಚ್ಚುತರಾಯ ಮಲ್ಲಪ್ಪಣ್ಣನವರ ಕಾಲದಲ್ಲಿ ದೇವಲಾಪುರ ಪ್ರತಿನಾಮವಾದ ಮಲ್ಲಿಕಾರ್ಜುನಪುರವರ್ಗಉ :

ಕಾರರಾಗಿ ಕಳಯೀಡುಗಳ ಸಂಗಡ ಮು[>ಮಂ]ಗಿನಾಯಕ ಪರಿವಿನಾಯಕ ಪ್ರತಿನಾಮ ಕಣುಮ[>ಕು]ಪ್ಪೆ ಮಂಗಿನಾಯಕ ಗಂಗಲಾಪುರದಲ್ಲಿ ನಿಂತನು. ಗಂಗಲಾಪುರಕ್ಕೆ ಪ್ರತಿನಾಮ ಚಾಜರಕಲ್ಲು ಪ್ರಕಾರ ಹಟ್ಟಿಕಾರರಾಗಿ ಉಭಯತ್ರರು ಯಿರಲಿಕ್ಕೆ, ಅಚ್ಚುತರಾಯ ವಿಜಯನಗರದಿಂದ ಪೆನುಗೊಂಡೆಗೆ ಹೋಗುವಾಗಲು ಯಿದೇ ಮಾರ್ಗದಲ್ಲಿ ಒಂದು ಬೋಳು ಬಂಡೆ ಬಳಿ ಯಿಳದು ಯಿರಲಿಕ್ಕೆ, ಯೀ ಪರಿವಿನಾಯಕ ಮಂಗಿನಾಯಕನವರು ತುಪ್ಪದ ಕೊಡಗಳನ್ನೆತ್ತಿಕೊಂಡು ಬಂದು ಅಚ್ಚುತರಾಯರ ಕಾಣಿಸಿಕ್ಕೊಂಡು ಹೇಳಿಕೊಂಡ ವಿವರವು: "ಯೀ ಭೂಮಿ ಪಂಡರೆಬಿದ್ದು ಯಿದ್ದೀತೆ, ನಮಗೆ ಕೋಟೆ[>ಕೊಟ್ಟರೆ] ಊರುಗಳ ಕಟ್ಟಿಸಿ ಭೂಮಿ ಕಿರ್ದಿ ಮಾಡಿಕೊಟ್ಟೇಉ"ಯಂಬ ಹಾಗೆ ಹೇಳಿ ಭೂಮಿ ಯಿಸುಕೊಂಡು ರಾಯರ ಅಪ್ಪಣೆ ಮೇಲೆ ಬಂದು, ಹಿರೇಕೆರೆಯಿಂದೆ ತೋಪಿನ

ವಳಗೆ ಊರು ಕಟ್ಟುವಾಗೆ "ತೀರ್ಥಕ್ಕೆ ಪ್ರತಿನಾಮವಾದ ಹಿರೆಹಾಳಿಗೆ ಗ್ರಾಮಕ್ಕೆ ಗೌಡಶಾನಭೋಗರು ಯೆಲ್ಲಾ ಯಿದ್ದಾರೆ" ಯೆಂದು ವಿಚಾರಣೆ ಮಾಡಲಾಗಿ, ಲಕ್ಕನಗೌಡನು ಸ್ಥಳದ ಶಾನಭೋಗ ಕಾಲವೆಹಳ್ಳಿ ಯ[>ಯಿಂ]ಡಿ ಮಾಧವರಸಯ್ಯನ ಮಗ ತಿಪ್ಪರಸಯ್ಯನು ರಾಯರಲ್ಲಿ ಅರಮನೆ ಶ್ಯಾನುಭೋಗನಾಗಿ ಯಿದ್ದನು. 'ಯೀ ಸ್ವಾಸ್ತಿಗೆ ನಾವು ಕಾರಣಕರ್ತರು'ಯಂದು ಮಂಗಿನಾಯಕ ಪರಿವಿನಾಯಕ ಕೂಡೆ ಮಾತನಾಡಿದರು. ಆಗ್ಗೆ ಯಿದ್ದಾ ಶ್ಯಾನಭೋಗ ತಿಪ್ಪರಸಯ್ಯನು ರಾಯರಲ್ಲಿ ಶ್ಯಾನಭೋಗನಾಗಿ ಯಿದ್ದನು. ಬಡಿಗಿ ಗುರುವೊಜನು ವೈದ್ಯನಾಗಿ ಯಿದ್ದನು. . . . [ಕ+]ಮ್ಮಾರ ಣೊ[>ಸೋ]ಮಜನು ರಾಜಪ[>ನ]ಲ್ಲಿ ನಾಲು ಬಂದಿ ಆಗಿತು . . . . ಗೆ ನಾಲು ಕಟ್ಟುತಾ ಯಿದ್ದನು. ವಿಜಯನಗರ ಪೆನುಗೊಂಡೆ ಸಹಾ ೭೦೦ ೦ ಯೇಳುನೂರು ವರಹಾಕ್ಕೆ ಗುತ್ತಿಗೆದಾರನಾಗಿ ಯಿದ್ದನು. ಆಗ್ಗೆ ಯಿದ್ದವರು ನಾಲ್ವರು ಯಿದ್ದರು. 'ಯೀ ಸ್ವಾಸ್ತಿ ನಮ್ಮದು' ಯೆಂಬ ಹಾಗೆ ಗ್ರಾಮಾ ಕಟ್ಟುವಾಗ್ಯೆ ಹುಗ್ಗಿ ಹೊಯಿದು ನೆಗ್ಗಿಲು ಸವರಿ ಹಿರೆಹಾಲುಯೆಂದು ಹೆಸರು ಯಿಟ್ಟು ಊರು ಕಟ್ಟಿಕೊಂಡು ಯಿರುತ್ತಾ ಯಿದ್ದರು. ಮತ್ತು ಆಮೇಲೆ ಬಂಡೆ ವೆಂಕಟಾಪುರ ಹಿರೆ ಆಲದಮರ ಬಳಿಯ ಕಟ್ಟಿದರು. ರಾಯರು ಮದ್ಯಾಲ ಚುಕ್ಕಾವಧಾನಿಗಳಿಗೆ ಅಗ್ರಹಾರ ಕೊಟ್ಟರು. ಅವರು ಸುಖದಲ್ಲಿ ಯಿರುತ್ತಾ ಯಿದ್ದರು. ಹಿರೇಕೆರಿ ತುಂಬಿ ನೀರು ಆಗಿ ಶಯಿತ್ಯದಿಂದ ಪ್ರಜೆಗಳಿಗೆ ಜಯವಿಲ್ಲದೆ ಯಿರಲಿಕ್ಕೆ ಊರು ಕಿತ್ತು, ಕೆರೆ ಕಡೆ ಕೋಡೀಲಿ ಹಾಕಿದರು. ಅಲ್ಲಿ ಊರು ಕಟ್ಟುವಾಗ ಯಿದ್ದವರು ಭೋಜನಗಉಡನ ಗೌಡಕಿ, ಶ್ಯಾನುಭೋಗ ಕಾಲಿವೇಹಳ್ಳಿ ತಿಪ್ಪರಸಯ್ಯ, ಬಡಿಗಿ ಗುರುವೋಜ, ಕಮ್ಮಾರ ಜಡೆತಲೆ ಸೋಮಜನು. ಅಲ್ಲಿ ಮಂಗಿನಾಯಕ ಕಾಲವಾದನು.

ಆಮೇಲೆ ಕೆರೆ ನೀರಿನ ಪೂಳಿಗೆ ಹಿಮವೆಂದು ನಿಂದಿರಲಾರದೆ ಮಿಟ್ಟೆ ಮೇಲೆ ಬುರಿನಾಯಕನ ಕಾಲದಲ್ಲಿ ಊರು ಕಟ್ಟಿದರು. ಆಗ್ಗೆ ಗೌಡರು ಗಿರಿಯಪ್ಪಗೌಡ ಹನುಮಂತಗಉಡ, ಸುಸ್ತಳದ ಶ್ಯಾನುಭೋಗ ಕಾಲಿವೆಹಳ್ಳಿ ಹಿರೆ[+ವಾಬಣ್ಣ] ಚಿಕ್ಕವಾಬಣ್ಣ, ಬಡಿಗ ಚ[>ಬ]ನವೊಜ, ಕಮ್ಮಾರ ಜಡೆ[+ತಲೆ]ಸೋಮಜ, ಮಾದಿಗರ ಹೊನ್ನಿ ಜಗಲಿಯವರು ಯಿದ್ದ ಮಧ್ಯದಲ್ಲಿ ಆವಾಂತ್ರ ಬಂದ ವಿವರಉ: ರಾಮರಾಜನ ಆವಾಂತ್ರದಿಂದ ತುರುಕರು ಬಂದು ಬಳ್ಳಾರಿಲಿ ಯಿಳಿದು, ಊರಿಗೆ ಮುತ್ತಿಗೆ ಹಾಕಿ ಗ್ರಾಮ ಶೆರೆಸೂರೆ ಮಡಿದಾಗಲು ಶೆರೆ ಹೋದವರು, ಬುರಿನಾಯಕನ ಹೆಂಡತಿವೊಬ್ಬಳು, ಮಾದಿಗ ತಮಾಮು ಚಿಕ್ಕವರು ಸಹಾ ಶರೆ ಹೋದರು. ಉಳದವರು ಬಶಿ . . . ರುಯಿಬ್ಬರು ವುಳದರು. ಯೀ ಪ್ರಕಾರ ಆಗಿಹೊದರು.

ಆಮೇಲೆ ರಾಮರಾಜನ ಅವಾಂತರ ಸ್ವಾಸ್ಥ ಬಿದ್ದ ಬಳಿಕಾ, ಬುರಿನಾಯಕನವರು ಗಉಡ ಶ್ಯಾನಭೋಗರು ಪ್ರಜೆಗಳು ವೊಳಗೆ ಶರೆ ಹೋದವರು ಹೋಗಲಾಗಿ, ವುಳದವರು ವಂದು ಅರೆ ಬಂದು, ಊರು ಹಿಗ್ಗಿ ಹೊಯಿದ್ದು ಗ್ರಾಮಕ್ಕೆ ಬಂದರು. ಗ್ರಾಮಾ ಅರೂಪಕವಾಗಿ ಯಿರಲಿಕ್ಕೆ ಗೌರಡು ಸ್ಥಳದ ಶ್ಯಾನಭೋಗ ಕಾಲಿವೆಹಳ್ಳಿಯವರು ಸಮಸ್ತಪ್ರಜೆಗಳು ಪತ್ರಾಯಿಟ್ಟು ಕುಡುತೀನಿ ಸುಮ್ಮಿಶೆಟ್ಟಿಯವರಲ್ಲಿ ರೂಪಾಯಿ ತಂದು, ಊರಿಗೆ ಹಾಕಿ ಗ್ರಾಮರೂಪಕ ಮಾಡಿಕೊಂಡು ಹನುಮಂತ ಗಉಡ, ಗಿರಿಯಪ್ಪ ಗಉಡ, ಸ್ಥಳದ ಶಾನಭೋಗ ಕಾಲುವೆಹಳ್ಳಿ ಹಿರೆವಾಬಣ್ಣ, ಚಿಕ್ಕವಾಬಣ್ಣ, ಬಡಿಗಿ ಬನವೊಜ, ಕಮ್ಮಾರ ಜಡತಲೆ ಸೋಮಜ, ತಳವಾರ ನಲ್ಲಿಲ[>ನಲ್ಲೋಬ], ಚಿತ್ತಯ್ಯನವರು ಸಹಾ ಯಿರುತ್ತಾ ಯಿರಲಾಗಿ, ಬಡಿಗಿ ಬನವೊಜ ತನ್ನ ಹೆಂಡರು ಮಕ್ಕಳು ಹುಡುಕುತ್ತಾ ಹೋಗಿ

ತಮ್ಮ ಕುಲದವರಲ್ಲಿ ಯಿರಲಿಕ್ಕೆ ಹೋಗಿ ಕರಕೊಂಡು ಬಾಹಾಗಲು, ತನ್ನ ಹೆಂಡರು ಮಕ್ಕಳು ಕರಸಿಕೊಂಡು ವೀರಣ್ಣನ ಹೆಸರು ವೊಬ್ಬ ಮಗನ ಹೆಸರು ಯಿಟ್ಟು, ವಿರೋಜನೆಂದು ಕರದು ರುಣ ಹಿಂಗಿಸಿಕ್ಕೊಂಡನು. ಹೆಂಡರ ಮಕ್ಕಳ ಕರಕೊಂಡು ಬಂದನು.

ಯೀ ಪ್ರಕಾರ ಯಿರುತ್ತಾ ಯಿರಲಿಕ್ಕೆ ತಾಉ ಪತ್ರಾ ಯಿಕ್ಕಿ ಸಾಲ ತಂದ ರೊಖ್ಖವು ಸಾಲದೇ ಹೋಗಿ, ಶ್ಯಾನಭೋಗ ಚಿಕ್ಕವಾಬಣ್ಣನವರು ತಮ್ಮ ಮಾನ್ಯದ ಅಲಸಮರದ ಹೊಲನಾರ ಮಲ್ಲಣ್ಣಗೆ ವತ್ತೆ ಯಿಕ್ಕಿ ರೊಕ್ಕ ತಂದು, ಗ್ರಾಮಕ್ಕೆ ೬೦ ಅರವತ್ತು ವರಹಾ. ಅದರಿಂದಾ ಕಡೆ ಹಾಯದೆ ಗ್ರಾಮಗ್ರಾಮಗಳ ವತ್ತೆ ಯಿಕ್ಕಿ ರೊಖ್ಖ ತಂದು ಗ್ರಾಮಕ್ಕೆ ಹಾಕಿ, ಉರಳಾಪುರ[>ಓಬಳಾಪುರ] ಮದ್ಯಾಲ ಚೊಕ್ಕಾವಧಾನಿಗೆ ಅರ್ಧಾ ಪಾಲು ವತ್ತೆ, ಕಣುಕುಪ್ಪೆ ಟೆಂಕಸಾಲೆ ಪಟ್ಟಣದ ವೀರಪ್ಪಗೆ ಅರ್ಧಪಾಲು, ಸಿರಿಯಕೊಳದವರಿಗೆ ಹಂ॥೦ ಪಾಲು ಸುಂಕ, ರೆಡ್ಡಿತಿಮ್ಮಯ್ಯಗೆ ಹಿರೆಹಾಲು[>ಳು] ಹಾಗ ಪಾಲು ವತ್ತೆ, ಅಕ್ಕಸಾಲೆ ಚಿರಮೊಚಿಗೆ ಹಿರವಾಳು ವೊತ್ತೆ, ಯೀ ಪ್ರಕಾರವಾಗಿ ಯಿರಲಿಕ್ಕೆ ಧೊರೆಗಳು ಬುರಿನಾಯಕ ಶ್ಯಾನಭೋಗ ಹಿರೆವಾಬಣ್ಣ ಚಿಕ್ಕವಾಬಣ್ಣ ಅದಾವತದ ಮೇಲೆ ಚಿಕ್ಕವಾಬಣ್ಣನ ಕೊಂದರು. ಜೀವಹಿಂಶೆ ಮಾಡಿದ ಕಾರಣ ಹಿರೆವಾಬಣ್ಣ ವಿದೇಶಗತನಾಗಿ, ಉಳದವರು ಹೋದರು.

ಆಮೇಲೆ ಬುರಿನಾಯಕನವರಿಗೆ ಬ್ರಹ್ಮತ್ಯಾ ಸುತ್ತಿಕ್ಕೊಂಡು ಬಹುಪ್ರಕಾರ ಪೀಡಿಸುತ್ತಾ ಯಿರಲಾಗಿ, ತಾವು ಬ್ರಹ್ಮತ್ಯಾ ಬಿಡಿಸಿಕೊಂಡದ್ದು: ಸ್ಥಳದ ಶ್ಯಾನುಭೋಗರ ಹೆಸರು ಬಾಪಿ[>ವಾಬಿ]ನಾಯಕನೆಂಬ ಹಾಗೆ ಹೆಸರು ಬುರಿನಾಯಕನು ಯಿಟ್ಟರೆ ಬ್ರಹ್ಮತ್ತಿ ಬಿಡುಗಡೆ ಆಗಿ ಹೋಯಿತು. ಆಮೇಲೆ ಸ್ವಾಸ್ತಿಗೆ ಲೆಖ್ಖ ಬರುವದಕ್ಕೆ ದಿಕ್ಕು ಯಿಲ್ಲದೆ ಯಿರಲಿಕ್ಕೆ, ಯಿ ಬೂರಿನಾಯಕನು ಸಿರಿಯಕೊಳದ ನಂದವರೀಕ ಅಪ್ಪಾಜಿ ಮುಜುಮುದಾರಿಕಿ ಮಾಡಿಕೊಳುತ್ತಾ ಯಿರಲಿಕ್ಕೆ ಕರೆ ಕಳುಹಿಸಿ, “ಯೀ ಸ್ವಾಸ್ತಿವಾನರು ವಿದೇಶಗತವಾಗಿ ಹೋದರು”ಯೆಂಬ ಹಾಗೆ ಅಪ್ಪಾಜಿಗೆ ಹೇಳಿ, “ನೀನೇ ಯೀ ಶ್ಯಾನಬೊವಕಿ ಬರಕೊಂಢು ಯಿರು”ಯೆಂದು ಯಿಟ್ಟುಕೊಂಡನು. ಹನ್ನೆರಡು ವರುಷ ಬರದನು. ಆಮೇಲೆ ತಿರಿಗಿವದೆ ಹಟ[>ಸಿರಿಯಕೊಳ] ಅಪ್ಪಾಜಿ ಹನ್ನೆರಡು ವರುಷ ಬರದನು. ಆಮೇಲೆ ದೇಶಾಯಿ ಚೊಕ್ಕಪ್ಪ ಯೆಂಟು ವರುಷ ಬರದನು. ಆ ತರುವಾಯ ತಿರಿಗಿ ಶಿರೆಕೊಳದ ಮುಜಿಮುದಾರ ನಂದಪರೀತ[>ವರೀಕ] ಅಪ್ಪಾಜಿ ಯೆಂಟು ವರುಷ ಬರದನು. ಆ ತರುವಾಯ ಬಳ್ಳಾರಿ ಪಟ್ಟೆ ರಾಮರಸಯ್ಯ ಬಾಪು[>ವಾಬಿ]ನಾಯಕನ ಕಾದುಕ್ಕೊಂಡು ಬರದನು. ಕಣಿಕಲ್ಲು ಸೀಮೆ ಸಿದ್ದರಾಂಪುರದ ಕೊಂ . . . . ರಇ ಯೆಂಟು ವರುಷ ಬರದನು.

ಆ ತರುವಾಯ ಕಾರೆಕಲ್ಲು ಅವರು ಅಣ್ಣ ತಮ್ಮಂದರು ಅಯಿದು ಮಂದಿ ಬಂದು, ಬಾಪಿ[>ವಾಬಿ]ನಾಯಕರಿಗೆ ವೈದ್ಯಾ ಮಾಡುವದಕ್ಕೆ ಬಂದು, ಯೀ ಸ್ಥಳದ ಶ್ಯಾನಭೋಗರು ಯಿಲ್ಲದು ಕಂಡು, ಅನಾಯಕವಾಗಿ ಯಿಹೊದು ಕಂಡು, ತಾಉ ಬಾಪಿ[>ವಾಬಿ]ನಾಯಕನ್ನಾ ಕೇಳಿದ್ದು, ನಾಕರವರು ಚಿಕ್ಕಕೆರೆಯಿಂದ ತೋಪು ಹಾಕಿಸುತ್ತಾ ಯಿರಲಾಗಿ “ಯೀ ಸ್ತಳದ ಶ್ಯಾನಬೋವಕಿಯ ಕೊಡುವರು”ಯಂದು ಕೇಳಲಿಕ್ಕೆ, ಆ ದೊರೆಗಳು ವಿವರಉ: ಪೂರ್ವದಲ್ಲಿ ತಮ್ಮಾ ತಂದೆ ಬುರಿನಾಯಕ ಯೀ ಸ್ಥಳದ ಶ್ಯಾನುಭೋಗರು ಕಾಲಿವೆಹಳ್ಳಿಯವರನ್ನಾ ಜೀವಹಿಂಸೆ ಮಾಡಿದ ಕಾರಣ ಬ್ರಹ್ಮತ್ಯಾ ಸುತ್ತಿಕೊಂಡು ಯಿರಲಿಕ್ಕೆ ಅದು ನಿಮಿತ್ಯ ನನ್ನ ಹೆಸರು ಯಿಟ್ಟು ಬ್ರಹ್ಮತ್ಯಾ ಕಳಕೊಂಡರು. ‘ನಾವು ಅವರ ಸ್ವಾಸ್ತಿ ನಿಮಗೆ ಹ್ಯಾಂಗೆ ಕುಡಲಿಕ್ಕೆ ಬಂದೀತು’ ಎಂಬ ಹಾಗೆ ಆಡಲಾಗಿ ಅವರು ತಿರುಗಿ

ಹೇಳಿಕೊಂಡದ್ದು "ಯೀ ಸ್ವಾಸ್ತಿ ಅನಾಯಕವಾಗಿ ಅದೆ. ಅವರು ಬಂದರೆ ಪೂರ್ವದವರು ಸ್ವಾಸ್ತಿ ಪೂರ್ವಿತರಿಗೆ ಕೊಟ್ಟೇವೆಂ"ಬ ಹಾಗೆ ಹಿರೆಕಿರೇರು ಹೇಳಲಿಕ್ಕೆ ಬಾಪಿ[>ವಾಬಿ] ನಾಯಕರನವರು ಆಡಿದ ವಿವರಾ: "ನೀಉ ಗುರುವುಗಳು ನಿಮಗೆ ಶ್ಯಾನಭೋವಕಿ ತರವಲ್ಲಉ"ಯಂದು ಹೇಳಿದರೆ "ನಾಉ ಮುತಾಲೀಕನ ಯಿಟ್ಟು ಬರಶೇಉ"ಯೆಂಬ ಹಾಗೆ ಆಡಿದರು. "ಶಿಷ್ಯರು ದೊರೆಗಳು ಆಗಿ ಯಿದ್ದೇವೆ"ಯೆಂದು ಹೇಳಿದರೆ ಕೇಳದೆ "ನಮಗೆ ಬೇಕು"ಯಂಬ ಹಾಂಗೆ ಆಡಿದರು. ಮತ್ತು "ಸ್ವಾಸ್ತಿವಾನರು ಬಂದರೆ ಕೊಟ್ಟೇಉ, ಯೆಂದು ಸಾಕ್ಷಿ ಮಾಡಿದರೆ ನಾಉ ನಿಮಗೆ ಕೊಟ್ಟೇಉ"ಯಂಬ ಹಾಗೆ ಬಾಪಿ[>ವಾಬಿ]ನಾಯಕರು ಆಡಿದರು. "ಯೀ ಸ್ವಾಸ್ಥಿ ಕಾರೆಕಲ್ಲುವರಿಗೆ ಬಾಪಿ[>ವಾಬಿ]ನಾಯಕರು ಕೊಟ್ಟರು"ಯಂಬ ಸಮಾಚಾರ ಮದ್ಯಾಲ ಚುಕ್ಕಾವಧಾನಿಯವರು ಕೇಳಿ "ಯಾಳವೆಯಿಂದಾ ಬಂದ ಯೀ ಸ್ವಾಸ್ತಿಗೆ ಪೂರ್ವದವರು ಕಾಲಿವೆಹಳ್ಳಿಯವರದು ಯಂದು ನಿನಗೆ ಕಾರಣವಿಲ್ಲಉ ಯಂದು ಆಡಲಾಗಿ, ಅದಕ್ಕೆ ಮದ್ಯಾಲ ಯಲ್ಲಂಭಟ್ಟರು ಆಡಿದ್ದು, "ಕಾಲಿವೆಹಳ್ಳಿ ಸೂರಪ್ಪ ಸಂಕಪ್ಪನವರು ನಮಗೆ ವೊಬಳಾಪುರದ ಶ್ಯಾನಬೋವಕಿ ಅರ್ಧಪಾಲು ವತ್ತೆ ಯಿಟ್ಟು ಯಿದ್ದರು. ಯಿದಕ್ಕೆ ಪತ್ರಗಳು ಯಿದ್ದಾವೆ'ಯಂಬ ಹಾಗೆ ಬಾಪಿ[>ವಾಬಿ]ನಾಯಕನವರಿಗೆ ತೋರಿಸಿದರು. ಆ ಪತ್ರಾ ವೋದಿಕೊಂಡು "ಯಿದು ಪೂರ್ವದವರು ಯಿಟ್ಟ ಪತ್ರ ಅಹುದು"ಯಂದು ಆಡಿದನು. ಆಮೇಲೆ ಕಾರೆಕಲ್ಲವರು ಬಲವಂತದಿಂದ ಯಿರಲಿಕ್ಕೆ ಮದ್ಯಾಲ ಯಲ್ಲಂಭಟ್ಟರು ಆಡಿದ್ದು, "ನಿನಗೆ ಯೀ ಸ್ವಾಸ್ತಿ ಕಾರಣವಿಲ್ಲ, ಯೀ ಸ್ವಾಸ್ತಿ ಉಂಡರೆ ನೀನು ಜಯಿಸಲರಿಯೆ"ಯೆಂಬ ಹಾಗೆ ಶ್ರಾಪಿಸಿ ಹೋದನು. ಯಲ್ಲಂಭಟ್ಟರು ಹೋದ ಮೇಲೆ ತಿಂಗಳ ವಳಗೆ ಅಣ್ಣತಮ್ಮಂದರು ನಾಲ್ಕು ಮಂದಿ ಹತರಾಗಿ ಹೋದರು. ಉಳದವನು ಕಾರೆಕಲ್ಲು ವಾಬಣ್ಣನು ನಿಂದ್ರಲಾರದೆ ಕಾರೆಕಲ್ಲಿಗೆ ವೋಡಿ ಹೋದನು. ಯೀ ಪ್ರಕಾರ ಯಿರಲಿಕ್ಕೆ ಪೂರ್ವದವರು ಬಂದು ಯಥಾ ಪ್ರಕಾರಕ್ಕೆ ಸ್ತಲಾ ಮನೆ ಹೊಂದಿಕ್ಕೊಂಡು ಸುರಕ್ಷಿತ ಯಿದ್ದಾರೆ, ಯಂದು ಬರದ ಕೈಫಿಯತು.

❖❖

೧೧೦
ಬಳ್ಳಾರಿಯ ಕೈಫಿಯತ್ತು

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೧೧ – ೪

ಪಂಪಾಬಿಕಾನಾಥನಾದ ಶ್ರೀ ವಿರುಪಾಕ್ಷೇಶ್ವರಕ್ಷೇತ್ರಕ್ಕೆ ಪೂರ್ವಭಾಗದಲ್ಲಿ ಮೂರು ಗಾವುದ ಮೇಲೆ ಕೇವಲ ಅರಣ್ಯವಾಗಿದ್ದ ಸ್ಥಳದಲ್ಲಿ ಕೆಲವು ಪರ್ವತಗಳುಂಟು. ಈ ಪ್ರದೇಶವು ಸ್ವಾಯಂಭುವ ಮನುವಿನ ಆದಿ ಕೃತಯುಗ ಮೊದಲಾಗಿ ಈ ಕಡೆಗೆ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷ[>ಕ್ಷು]ಷ, ವೈವಸ್ವತ ಮನುವಿನ ಇಪ್ಪತ್ತೆಂಟನೆಯ ಮಹಾಯುಗದಲ್ಲಿ ಕೃತಯುಗಪರ್ಯಂತವೂ ಮನುಷ್ಯ ಸಂಚಾರವಿಲ್ಲದೆ, ವನವಾಸಿಗಳಾಗಿ ಇರುವ ಋಷಿಗಳಿಗೆ ಆಸ್ಪದವಾಗಿತ್ತು. ತ್ರೇತಾಯುಗದಲ್ಲಿ ಈ ಪ್ರದೇಶವು ಅರಣ್ಯವಾಗಿತ್ತು. ದ್ವಾಪರದಲ್ಲಿ ಹಸ್ತಿನಾಪುರದ

ರಾಜದಾನಿಯ ರತ್ನಸಿಂಹಾಸನಾಧೀಶ್ವರರಾಗಿ ರಾಜ್ಯವಾಳಿದ ಚಂದ್ರವಂಶದ ಅರಸುಗಳು ಯಯಾತಿ ಸಂತತಿಯ ದುಷ್ಯಂತ ಮಹಾರಾಯ, ಈತನ ಮಗ ಭರತ, ಈ ಸಂತತಿಯವನಾದ ಶಂತನು ಚಕ್ರವರ್ತಿ, ಈತನ ಪೌತ್ರನಾದ ಪಾಂಡುರಾಯ, ಈತನ ಸಂಬಂಧಿಯಾದ ದುರ್ಯೋಧನ ಮಹಾರಾಯ, ಆ ತರುವಾಯ ಪಾಂಡುರಾಯನ ಪುತ್ರನಾದ ಧರ್ಮರಾಯನು ಹಸ್ತಿನಪುರ ಸಿಂಹಾಸನಾಧೀಶ್ವರನಾಗಿ ರಾಜ್ಯ ಮಾಡುವ ವೇಳೆಯಲ್ಲಿ ನರ್ಮದಾನದಿಗೆ ದಕ್ಷಿಣ ದೇಶದಲ್ಲಿ ತುಂಗಭದ್ರಾ ಮಹಾನದಿಗೆ ದಕ್ಷಿಣಕ್ಕೆ ಎರಡು ಹರಿದಾರಿಯಲ್ಲಿ ಇರುವ ಕುಂತಳನಗರವೆಂಬ ಪಟ್ಟಣದಲ್ಲಿ ಇದ್ದ ಚಂದ್ರಹಾಸರಾಯನು ಈ ಸೀಮೆಯ ಪ್ರಭುತ್ವ ಮಾಡುವ ವೇಳೆಯಲ್ಲಿ ಈ ಪ್ರದೇಶವು ಅರಣ್ಯವಾಗಿತ್ತು. ಆ ತರುವಾಯ ಈ ಸ್ಥಳದ ಗುಡ್ಡದ ಮೇಲೆ ಬಳಾಸುರನೆಂಬ ಒಬ್ಬ ರಾಕ್ಷಸನು ಆಶ್ರಯ ಮಾಡಿಕೊಂಡು ಜೀವಕೋಟಿಗಳಿಗೆ ಬಹು ಉಪದ್ರವ ಮಾಡುತ್ತ ಇರಲಾಗಿ, ಸ್ವರ್ಗಲೋಕದಿಂದ ದೇವಕನ್ಯಕೆಗಳು ಇಚ್ಛಾವಿಹಾರದಲ್ಲಿ ವಿಹರಿಸುತ್ತ, ಈ ಪರ್ವತದ ಮೇಲೆ ಖೇಚರ ಮಾರ್ಗದಲ್ಲಿ ಹೋಗುತ್ತಿರಲಾಗಿ, ಈ ಪರ್ವತದಲ್ಲಿ ವಾಸಮಾಡಿಕೊಂಡಿರುವ ಬಳಾಸುರನೆಂಬ ದೈತ್ಯನು ಆ ದೇವಕನ್ಯಕೆಗಳನ್ನು ಕಂಡು ಕಾಮಾತುರನಾಗಿ ಅವರಿಗೆ ಉಪದ್ರವ ಕೊಟ್ಟದ್ದರಿಂದ, ಆ ದೇವಕನ್ನಿಕೆಗಳು ದೇವಲೋಕಕ್ಕೆ ಹೋಗಿ ದೇವೇಂದ್ರನಿಗೆ ಮೊರೆಯಿಡಲಾಗಿ, ಇಂದ್ರದೇವರು ಬಳಾಸುರನನ್ನು ವಧೆಮಾಡುವ ನಿಮಿತ್ತ ಭೂಲೋಕಕ್ಕೆ ಬಂದು, ಬಳಾಸುರನ ಸಂಗಡ ಘೋರಯುದ್ಧವನ್ನು ಮಾಡಿ, ಅವನನ್ನು ವಜ್ರಾಯುಧದಿಂದ ಸಂಹಾರ ಮಾಡಿದ್ದರಿಂದ ಈ ಗುಡ್ಡಕ್ಕೆ ಬಳ್ಳಾರಿ(ಬಳಾರಿ)ಯೆಂಬ ನಾಮವು ಪ್ರಸಿದ್ಧಿ ಹೊಂದಿತು.

ಕಲಿಯುಗದಲ್ಲಿ ಬಳ್ಳಾಳರಾಯನ ವಂಶಸ್ಥನದ ಸಿಂಧುಭಳ್ಳಾಳರಾಯನು ಇಲ್ಲಿ ರಾಜ್ಯಭಾರ ಮಾಡುತ್ತ ಇರುವ ವೇಳೆಯಲ್ಲಿ, ಚತುರಂಗ ಬಲ ಸಮೇತನಾಗಿ ಬೇಟೆಗೆ ಹೊರಟು ಅರಣ್ಯದಲ್ಲಿ ವ್ಯಾಘ್ರಮುಂತಾದ ಕ್ರೂರಮೃಗಗಳನ್ನು ಸಂಹಾರಮಾಡುತ್ತ ಈ ಪರ್ವತಪ್ರದೇಶಕ್ಕೆ ಬಂದು, ಈ ಪರ್ವತದ ಮೇಲೆ ಇರುವ ನಿರ್ಮಲೋಧಕ ಪೂರಿತವಾಗಿರುವ ದಿವ್ಯ ದೇವಖಾತಕಗಳನ್ನು ಕಂಡು, ಈ ಸ್ಥಳವು ಗ್ರಾಮ ಕಟ್ಟಿಸಲಿಕ್ಕೆ ಚೆನ್ನಾಗಿದ್ದೀತೆಂದು ತಿಳಿದು, ಅರಣ್ಯವನ್ನು ಛೇದಿಸಿ, ಈ ಪರ್ವತಕ್ಕೆ ಪೂರ್ವಭಾಗದಲ್ಲಿ ಕೆಳಗೆ ವಿಷ್ಣುದೇವಾಯಲ, ಶಿವದೇವಾಲಯ, ಜೈನಬಸ್ತಿಗಳನ್ನು ನಿರ್ಮಿಸಿ, ಇದಕ್ಕೂ ಈ ಪರ್ವತದ ಉತ್ತರ ಭಾಗಕ್ಕೆ ಸಮೀಪವಾಗಿರುವ ಬಾಲಗುಡ್ಡಕ್ಕೂ ಮಧ್ಯದಲ್ಲಿ ಭೂಮಿ ಸಮನಾಗಿದ್ದ ಸ್ಥಳದಲ್ಲಿ ಪಟ್ಟಣವನ್ನು ಕಟ್ಟಿಸಿ, ಬಳಹರಿಯೆಂಬ ನಾಮವಿಟ್ಟು ವ್ಯವಹರಿಸಿಕೊಂಡರು. ಅವರ ಆಳಿಕೆಯಾದ ತರುವಾಯ ಮಲ್ಲರಾಯರ ವಂಶಸ್ಥನಾದ ಸೋವಿದೇವ ಅರಸುಗಳು ಶಾಸನ ಹಾಕಿದ್ದರು. ಅದು ಬಹಳ ಶಿಥಿಲವಾಗಿದ್ದಿತು. ಅದರಲ್ಲಿ ಹುಡುಕಿ ನೋಡಿದರೆ ಸಾ[>ಸೋ]ವಿದೇವ ಅರಸುಗಳು ಎಂದು ಕಾಣಿಸುತ್ತದೆ. ಅದೆ ಗ್ರಾಮದಲ್ಲಿ ಇರುವ ಗುಡಿ ಪಡಿಕಟ್ಟು ನೋಡಿದಲ್ಲಿ ಮಲ್ಲರಾಯವಂಶದವರೂ ಕೆಲವು ಗುಡಿಗಳನ್ನು ಕಟ್ಟಿಸಿದ ಹಾಗೆ ಕಾಣಿಸುತ್ತದೆ. ಈ ಪರ್ವತಕ್ಕೆ ಪೂರ್ವಭಾಗದಲ್ಲಿ ಇರುವ ದೇವಾಲಯಗಳು ಯಾವುವೆಂದರೆ ಕಾಶೀವಿಶ್ವನಾಥ ದೇವಳ, ಮಲ್ಲಿಕಾರ್ಜುನ ದೇವಳ, ಗೌರೇಶ್ವರ ದೇವಳ.

ತರುವಾಯ ವಿದ್ಯಾನಗರದ ರತ್ನಸಿಂಹಾಸನಾಧೀಶ್ವರರಾದಿ ವೀರಶ್ರೀ ಬುಕ್ಕರಾಯ ಮಹಾರಾಯರವರ ಆಳಿಕೆಯು ನಡೆದು ಬಂದಿದ್ದಿತು. ಬುಕ್ಕರಾಯನ ಮಗ ಹರಿಹರರಾಯರು

ಈ ರಾಜ್ಯವನ್ನಾಳಿದರು. ಅವರ ಆಳಿಕೆ ಕೆಲವು ವರ್ಷ ನಡೆದು ಬಂದಿದ್ದಿತು. ಅವರ ಮಗ ಪ್ರೌಢದೇವರಾಯನೂ ತರುವಾಯ ಅವರ ಮಗ ಮುಮ್ಮಡಿ ಪ್ರೌಢದೇವರಾಯನೂ ಆಳಿದರು. ತರುವಾಯ ಸಾಳ್ವ ನರಸಿಂಗರಾಯರವರು ಕೆಲವು ದಿವಸ ಪ್ರಭುತ್ವಮಾಡಿ ಇದ್ದಾರೆ. ಇವರ ಕಡೆಯಿಂದ ತಿಮ್ಮಣ್ಣನಾಯಕನೆಂಬಾತನು ಈ ಬಳ್ಳಾರಿದೇಶದ ಅಧಿಕಾರ ಮಾಡಿಕೊಂಡಿರಲಾಗಿ, ಬಳ್ಳಾರಿ ಗುಡ್ಡಕ್ಕೆ ದಕ್ಷಿಣದ ನಾಗರಕೆರೆ ಕೆಳಗೆ ಶ್ರೀ ಹಂಪೆ ವಿರೂಪಾಕ್ಷದೇವರಿಗೆ ಒಕ್ಕಳದ ಮೋಪಾ ಇನಾಮತಿ ಕೊಟ್ಟು, ಶಾ. ಶಕ ೧೪೨೦ನೆಯ ಕಾಳಯುಕ್ತಿ ಸಂವತ್ಸರದ ಆಷಾಢ ಶು॥ ೧೫ ಮಂಗಳವಾರದಲ್ಲಿ ಸದರಿ ಭೂಮಿಯನ್ನು ದೇವರಿಗೆ ಕೊಟ್ಟು, ಕರಿಯ ಕಲ್ಲಿನ ಮೇಲೆ ಶಾಸನವನ್ನು ಹಾಕಿ ಇದ್ದಾರೆ.

ಈ ನರಸಿಂಗರಾಯರ ಕುಮಾರ ಅಚ್ಯುತರಾಯರು ಈ ಪರ್ವತಕ್ಕೆ ಪೂರ್ವಭಾಗದಲ್ಲಿ ಪೇಟೆಯನ್ನು ಕಟ್ಟಿಸಿ ಜಾಡರಿಗೆ ಕೌಲು ಕೊಟ್ಟು ಶಾ. ಶ. ೧೪೫೭ನೆಯ ಮನ್ಮಥ ಸಂವತ್ಸರದ ಆಷಾಢ ಬಹುಳ ೧೦ರಲ್ಲಿ ಶಿಲಾಶಾಸನ ಹಾಕಿಸಿದ್ದಾರೆ.

ಇವರ ಸಂಬಂಧಿಕಳಾದ ನಾಗರಮ್ಮನೆಂಬ ಹೆಣ್ಣು ಮಗಳು ಪರ್ವತದ ದಕ್ಷಿಣಭಾಗಕ್ಕೆ, ತತ್ಪೂರ್ವದಲ್ಲಿ ತನ್ನ ಹೆಸರಿನಲ್ಲಿ ನಾಗರಕೆರೆಯನ್ನು ಕಟ್ಟಿಸಿ, ಪರ್ವತಕ್ಕೆ ಪೂರ್ವಭಾಗದಲ್ಲಿ ಚನ್ನಕೇಶವ ಸ್ವಾಮಿಯ ಗುಡಿಯನ್ನೂ ಕಟ್ಟಿಸಿದಳು. ಅಚ್ಯುತರಾಯ ಕೃಷ್ಣರಾಯರ ಆಳಿಕೆ ಆದ ಬಳಿಕ ಕೃಷ್ಣರಾಯರ ಅಳಿಯ ರಾಮರಾಜನು ಶಾ.ಶ. ೧೪೮೬ನೆಯ ರಕ್ತಾಕ್ಷಿ ಸಂವತ್ಸರದಲ್ಲಿ ಬಿಜಾಪುರದ ಅಲಿಯದುಲು (ಅದಿಲ್)ಶಾ ಬಾದಶಹಾ, ದೌಲತಾಬಾದಿನ ನಿಜಾಮಶಹಾ ಬಾದಷಾಹಗಳ ಸಂಗಡ ಕೃಷ್ಣಾತೀರದಲ್ಲಿ ಯುದ್ಧವನ್ನೂ ಮಾಡಿ ರಾಮರಾಜನು ಸೇನಾ ಸಹಿತವಾಗಿ ಹತವಾಗಿ ಹೋದ ಬಳಿಕ, ಕರ್ಣಾಟಕ ದೇಶವನ್ನು ದಖಣಿಯರು ಆಕ್ರಮಿಸಿ ಕೊಂಡ ಬಳಿಕ, ಬಿಜಾಪುರದ ಅಲಿಯದುಲುಶಹಾ ಬಾದುಶಹರ ಕೈಕೆಳಗೆ ಈ ದಕ್ಷಿಣರಾಜ್ಯವು ನಡೆಯುತ್ತಿರಲಾಗಿ, ಬಿಜಾಪುರದ ದೇಶದಲ್ಲಿ ಕೃಷ್ಣಾನದಿಗೆ ಉತ್ತರಭಾಗದಲ್ಲಿರುವ ಮೂರ್ತಿಗಿರಿಯೆಂಬ ಗ್ರಾಮದಲ್ಲಿ ಹಂಡೆಕುರುಬ ಜಾತಿಯವರು ಗೌಡಿಕೆ ಮಾಡಿಕೊಂಡು ಇದ್ದರು. ಅವರ ಸಂತತಿಯ ಬಾಲದ ಹನುಮಪ್ಪನಾಯಕನು ಪ್ರತಿದಿನದಲ್ಲಿಯೂ ದೇವರ ಅನುಗ್ರಹದಿಂದ ಬುದ್ಧಿವಂತನೆನಿಸಿಕೊಂಡು, ಬಿಜಾಪುರದ ಪಾದುಶಾರವರ ಅನುಗ್ರಹವನ್ನು ಸಂಪಾದಿಸಿದುದರಿಂದ ಆತನಿಗೆ ಫೌಜುದಾರಿ ಮೊಕರೂರು ಮಾಡಿಕೊಟ್ಟರು. ಕೆಲವು ದಿವಸ ಆ ಕೆಲಸದಲ್ಲಿದ್ದು ಒಂದೆರಡು ಸ್ವಾಮಿಕಾರ್ಯದಲ್ಲಿ ಮೆಹನತ್ತು ಮಾಡಿದ್ದು ಕಂಡು ಬಂದು, ಪಾದುಷಾಹರವರು "ವಜೀರಪ್ಪನಹ" ಎಂಬ ಕಿತಾಬು ಕೊಟ್ಟರು.

ಆ ತರುವಾಯ ಕರ್ಣಾಟಕ ದೇಶವು ಅರಾಜಕದಿಂದ ಹಾಳಾಗಿರಲಾಗಿ, ಈ ಬಾಲದಹನುಮಪ್ಪನಾಯಕನನ್ನು ಕಳುಹಿಸಿದರೆ ರಾಜ್ಯ ಬಸ್ತಿ ಆದೀತೆಂದು ಪಾದುಷಾಹರವರು ತಿಳಿದು, ಕೆಲವು ಫೌಜು ಕೊಟ್ಟು ಈ ದಕ್ಷಿಣ ಪ್ರಾಂತಕ್ಕೆ ಕಳುಹಿಸಿದರು. ಈತನು ಅಪ್ಪಣೆ ತೆಗೆದುಕೊಂಡು ಬರುವ ವೇಳೆಯಲ್ಲಿ ಪಾದುಷಾಹರವರ ಸಂಗಡ ಬಳ್ಳಾರಿ, ತೆಕ್ಕಲುಕೋಟೆ, ಕುರುಗೋಡು – ಈ ಮೂರು ಪರಗಣೆಗಳಿಗೆ ಸರನಾಡಗೌಡಿಕೆ ಸನ್ನದು ಬರಸಿಕೊಂಡು, ಪಾದಷಹಾರವರ ಸಂಗಡ ಅಪ್ಪಣೆ ತೆಗೆದುಕೊಂಡು, ಬಾಲದ ಹನುಮಪ್ಪನಾಯಕನು ಬಂಕಾಪುರಕ್ಕೆ ಬಂದು ಕಿಲ್ಲೆ ಕಟ್ಟಿಸಿ ಆ

ರಾಜ್ಯ ಬಸ್ತಿ ಮಾಡಿ ಅಲ್ಲಿಂದ ತುಂಗಭದ್ರಾ ಮಹಾನದಿಯನ್ನು ದಾಟಿ, ಈ ಸೀಮೆಗೆ ಬಂದು, ಬಳ್ಳಾರಿಯಲ್ಲಿರುವ ಶಾನುಭಾಗ [ಬುಡ್ಡೆ ತಿಮ್ಮರಸಯ್ಯನೆಂಬಾತನು ಕಸಬಾ ಬಳ್ಳಾರಿ ಈ ತಾಲ್ಲೋಕು ಪೈಕಿ ಕೆಲವು ಹಳ್ಳಿಗಳು ಪೂರ್ವಾರಭ್ಯವಾಗಿ ತಮ್ಮ ಹಿರಿಯರು ಶಾನುಭೋಗಿಕೆ ಮಾಡಿಕೊಂಡು ಬಂದ ಪದಕಿ(?); ತಾನು ಸಹ ಈ ಎರಡು ಬಾಬೂ ಮಾಡಿಕೊಂಡು ಇರುವ] ಬುಡ್ಡೆ ತಿಮ್ಮರಸಯ್ಯನನ್ನು ಕರೆಯಿಸಿ, ಹಳ್ಳಿಗಳು ಬಸ್ತಿಮಾಡುವ ನಿಮಿತ್ತ ಈತನಿಗೆ ದೇಶಾಯಿ ಸ್ವಾಸ್ತಿನಾಡು ಕುಲಕರ್ಣಿಕೆ ಈ ಪ್ರಕಾರ ನೇಮಕ ಮಾಡಿಕೊಟ್ಟು, ಈತನಿಗೆ ವರ್ತನೆ ನೂರಕ್ಕೆ ಐದು ಹೊನ್ನು, ದೇಶಾಯಿ ಸ್ವಾಸ್ತಿಗೆ, ನಾಡಕುಲಕರ್ಣಿ ಸ್ವಾಸ್ತಿಗೆ ಐದು ಹೊನ್ನು, ಏಕೂನು ಐದು ವರಹ ಈ ಪ್ರಕಾರ ಗ್ರಾಮಗಳ ಮುನಾಸಬು ಹಕ್ಕು, ಭೂಸ್ವಾಸ್ತಿಯನ್ನೂ ಇದರ ಹೊರತು ದೇಶಾಯಿಕೆ ಸ್ವಾಸ್ತಿಗೆ ಬೊಬ್ಬುಕುಂಟೆ ಉಂಬಳಿ, ನಾಡ ಕುಲಕರ್ಣಿಕೆ ಸ್ವಾಸ್ತಿಗೆ ಚರಕುಂಟೆ ಉಂಬಳಿಯನ್ನು ಕೊಟ್ಟು ಗ್ರಾಮಗಳ ಬಸ್ತಿಮಾಡುವುದಕ್ಕೆ ಅಪ್ಪಣೆ ಕೊಟ್ಟನು. ತರುವಾಯ ಬಸವನಗೌಡನೆಂಬಾತನು ಗ್ರಾಮದ ಗೌಡಿಕೆ ಮಾಡಿಕೊಂಡಿರಲಾಗಿ, ಆತನನ್ನು ಕರೆಯಿಸಿ ಆತನಿಗೆ ಗ್ರಾಮಗೌಡಿಕೆ ಸ್ವಾಸ್ತಿ ನೇಮಕ ಮಾಡಿಕೊಟ್ಟು, ನೂರು ವರಹಕ್ಕೆ ಐದು ಹೊನ್ನಿನ ಪ್ರಕಾರ ವರ್ತನೆ ಗ್ರಾಮಗಳ ಮುನಾಸಬು ಅರಿತು, ಭೂಸ್ವಾಸ್ತಿ ಇದರ ಹೊರತು ಮುಂಡರಗಿ ಉಂಬಳಿ, ಪಾಲಕಿಗೆ ಒಂದು ಹೊಲವನ್ನು ಕೊಟ್ಟು ಗ್ರಾಮಗಳನ್ನು ಬಸ್ತಿ ಮಾಡಲಿಕ್ಕೆ ಅಪ್ಪಣೆ ಕೊಟ್ಟನು.

ಈ ಬಳ್ಳಾರಿ ಗುಡ್ಡದ ಮೇಲೆ ಇರುವ ಉದಕಪೂರಿತವಾದ ದೇವಖಾತಗಳನ್ನು ಕಂಡು ಕಿಲ್ಲೆ ಕಟ್ಟಿಸಿದರೆ ಬಹಳ ಉಪಯೋಗವಿದ್ದೀತೆಂದು ತಿಳಿದು ಗುಡ್ಡದ ಮೇಲೆ ಕಿಲ್ಲೆ ಕಟ್ಟಿಸಿ ತನ್ನ ಠಾಣ್ಯ ಹಾಕಿದನು. ಈ ಗುಡ್ಡಕ್ಕೆ ಉತ್ತರಭಾಗದಲ್ಲಿ ಸಿಂಧುಬಲ್ಲಾಳರಾಯನಿಂದ ನಿರ್ಮಿತವಾದ ಬಳ್ಳಾರಿಯೆಂಬ ಗ್ರಾಮವು ರಾಮರಾಜನ ಅವಾಂತರಕ್ಕೆ ಹಾಳಾಗಿದ್ದುದರಿಂದ ಅದನ್ನು ಬಿಟ್ಟು, ಗುಡ್ಡಕ್ಕೆ ಪೂರ್ವಭಾಗದಲ್ಲಿ ಕಿಲ್ಲೆಪೇಟೆ ಕಟ್ಟಿಸಿ ಇಲ್ಲಿ ಮೊಕ್ಕಾಮು ಮಾಡಿಕೊಂಡು ಇದ್ದ ಬಳಿಕ, ಬಾಲದ ಹನುಮಪ್ಪನಾಯಕನು ತನ್ನ ಸರನಾಡ ಗೌಡಿಕೆ ಸ್ವಾಸ್ತಿಗೆ ನೂರಕ್ಕೆ ಐದು ಹೊನ್ನು ವರ್ತನೆ ಗ್ರಾಮಗಳ ಮುನಾಸಬು ಭೂಸ್ವಾಸ್ತಿ, ಎತ್ತಿನ ಬೂದಿಹಾಳು ಎಂಬ ಗ್ರಾಮ ಉಂಬಳಿ. ಈ ಪ್ರಕಾರ ಸರನಾಡಗೌಡಿಕೆ ಸ್ವಾಸ್ತಿಗೆ ಮೊಕರೂರು ಮಾಡಿಸಿಕೊಂಡನು. ತರುವಾಯ ತೆಕ್ಕಲುಕೋಟೆ, ಕಣಿಕಲ್ಲು, ಕುಂದರ್ಪಿ, ಧರ್ಮಾವರ, ಅನಂತಪುರ, ನಂದ್ಯಾಲ, ಶಿರಿವಾಳ, ಶಿರಗುಪ್ಪೆ, ಶಿನ್ನೂರು, ನಾಗಲಾಪುರ, ಒಡ್ಡುದರೋಜಿ, ಕುರುಗೋಡು ಮುಂತಾದ ಪರಗಣೆಗಳನ್ನು ಯಾವತ್ತೂ ಠಾಣ್ಯ ಹಾಕಿಕೊಂಡು, ಕೆಲವು ಗ್ರಾಮಗಳಲ್ಲಿ ಕಿಲ್ಲೆಗಳನ್ನು ಕಟ್ಟಿಸಿ ಯಾವತ್ತೂ ರಾಜ್ಯ ಬಸ್ತಿಮಾಡಿದನು.

ಈ ಸಮಾಚಾರವು ಪಾದುಷಾಹರವರಿಗೆ ಅರಿಕೆಯಾದುದರಿಂದ ಬಾಲದ ಹನುಮಪ್ಪನಾಯಕನನ್ನು ಹುಜೂರಿಗೆ ಕರೆಕಳುಹಿಸಿ, ಬಹಳ ಬಹುಮಾನ ಮಾಡಿ ಕಳುಹಿಸಿಕೊಟ್ಟರು. ಅಲ್ಲಿಂದ ಬಂದ ಬಳಿಕ ಸದರಿ ಪರಗಣೆಗಳ ವ್ಯವಹಾರ ನೋಡಿಕೊಳ್ಳುತ್ತಿದ್ದು, ಬಿಜಾಪುರದಿಂದ ಆದವಾನಿ ಸರಕಾರ ಸುಭೆ ಮಾಡಲಿಕ್ಕೆ ಬಂದ ಸರದಾರರ ಮುಖಾಂತರ ಖಂಡನೆ ಕಟ್ಟಿಕೊಳ್ಳುತ್ತಿದ್ದನು. ಈ ಬಾಲದ ಹನುಮಪ್ಪನಾಯಕನಿಗೆ ೧, ಹಿರಿಯ ಮಗ ಅಂಕುಶರಾಯ, ೨. ದೇವಪ್ಪನಾಯಕ, ೩. ನಿಚ್ಚಮದಲಿಂಗ[>ನಿಚ್ಚಮದುವಣಿಗ] ರಾಮಪ್ಪನಾಯಕ, ೪. ಹಿರಿಯ ಮಲುಕಪ್ಪನಾಯಕ, ೫. ಚಿಕ್ಕ ಮಲುಕಪ್ಪನಾಯಕ – ಇಂತು ಐದು ಮಂದಿ ಮಕ್ಕಳು.

ಹಂಡೆ ಬಾಲದ ಹನುಮಪ್ಪನಾಯಕನು ಈ ಐದು ಮಂದಿ ಮಕ್ಕಳು ಸಹಿತವಾಗಿ ಬಿಜಾಪುರದ ಪಾದುಷಹನ ಭೇಟಿಗೆ ಹೋದ ವೇಳೆಯಲ್ಲಿ ಪಾದುಷಹನು ಸುಂದರವಾದ ಈ ಐದು ಮಂದಿ ಮಕ್ಕಳನ್ನು ನೋಡಿ ಇದರೊಳಗೆ ಒಬ್ಬ ಮಗನನ್ನು ಕೊಟ್ಟರೆ ಸುಂತಿ ಮಾಡಿ ತನ್ನ ಬಳಿಯಲ್ಲಿ ಇಟ್ಟುಕೊಳ್ಳಬೇಕೆಂದು ಮನಸ್ಸಿನಲ್ಲಿ ಮಾಡಿಕೊಂಡು, ಹಂಡೆ ಬಾಲದ ಹನುಮಪ್ಪನಾಯಕನನ್ನು ಕಂಡು "ನಿನ್ನ ಮಕ್ಕಳೊಳಗೆ ಒಬ್ಬ ಮಗನನ್ನು ನಮಗೆ ಕೊಡು" – ಎಂದು ಕೇಳಿದಲ್ಲಿ ಈತನು ಬಹಳ ಕೋಪವಾಗಿ ಪಾದುಷಹರವರಿಗೆ "ನಿಮ್ಮ ಜನಾನ ಒಳಗೆ ಒಬ್ಬ ಬೀಬಿಯನ್ನು ಕೊಟ್ಟರೆ ಇಂತಹ ಮಗನನ್ನು ಹುಟ್ಟಿಸಿಕೊಡುತ್ತೇನೆ" – ಎಂದು ಹೇಳಿ, ತನ್ನ ಠಿಕಾಣಿಗೆ ತನ್ನ ಸೈನ್ಯ ಸಹಿತ ಅದೇ ಕ್ಷಣದಲ್ಲಿ ಹೊರಟು ಬರಲು ಪಾದುಷಹನು ತನ್ನ ಕಡೆ ಫೌಜನ್ನು ಬೆನ್ನು ಹತ್ತಿ ಕಳುಹಿಸಲಾಗಿ, ಅವರ ಸಂಗಡ ಯುದ್ಧ ಮಾಡಿ ಕೃಷ್ಣಾನದಿ ಪಾರಾಗಿ ಈಚೆಯ ದಡಕ್ಕೆ ಬಂದನು. ಪಾದುಷಹಾನ ಫೌಜು ಕೃಷ್ಣಾನದಿಗೆ ಬರಲಾಗಿ ನದಿ ತುಂಬಿ ಬಂತು. ಅವರಿಗೆ ಮಾರ್ಗ ಕೂ[>ಕೊ]ಡದುದರಿಂದ ಬಿಜಾಪುರಕ್ಕೆ ಫೌಜು ತಿರುಗಿ ಹೋಯಿತು. ಹಂಡೆ ಬಾಲದಹನುಮಪ್ಪನಾಯಕನು ತನ್ನ ಐದು ಮಂದಿ ಮಕ್ಕಳು ಸಹಿತವಾಗಿ ಬಳ್ಳಾರಿಗೆ ಬಂದನು. ಈತನು ಕೆಲವು ದಿವಸ ರಾಜ್ಯವಾಳಿದ ಬಳಿಕ ಈತನ ಮಕ್ಕಳು ರಾಜ್ಯವನ್ನು ಹಿರಿಯ ಮಗ ಅಂಕುಶರಾಯನಿಗೆ ಬಂಕಾಪುರದ ಸೀಮೆ, ದೇವಪ್ಪನಾಯಕನಿಗೆ ಶಿರಿವಾಳದ ಸೀಮೆ, ನಿಚ್ಚಮದಲಿಂಗ[>ನಿಚ್ಚಮದುವಣಿಗ] ರಾಮಪ್ಪನಾಯಕನಿಗೆ ಕುಂದರ್ಪಿ ಸೀಮೆ, ಚಿಕ್ಕ ಮಲುಕಪ್ಪನಾಯಕನಿಗೆ ಅನಂತಪುರ, ಧರ್ಮಾವರ ವಗೈರೆ ಸೀಮೆ, ಹಿರಿಯ ಮಲುಕಪ್ಪನಾಯಕನಿಗೆ ಬಳ್ಳಾರಿ, ಕುರುಗೋಡು, ಕ[>ತೆ]ಕ್ಕಲಕೋಟೆ, ಶಿನ್ನೂರು, ಶಿರಗುಪ್ಪಿ, ಮೋಕೆ ವಗೈರೆ – ಈ ಪ್ರಕಾರ ಹಂಚಿಕೊಂಡರು.

ಬಳ್ಳಾರಿ, ಕುರುಗೋಡು ವಗೈರೆ ಪರಗಣೆಗಳನ್ನು ಹಿರೆ ಮಲುಕಪ್ಪನಾಯಕನು ಕೆಲವು ದಿವಸ ಆಳಿದನು. ಈತನ ಮಗ ಸಿದ್ದಪ್ಪನಾಯಕನು ಕೆಲವು ದಿವಸ ಆಳಿದನು. ಬಳಿಕ ಈತನ ಮಗ ಹಿರೆ ರಾಮಪ್ಪನಾಯಕನು ಕೆಲವು ದಿವಸ ಆಳಿದನು. ಈ ನಾಲ್ಕು ಮಂದಿಯ ಆಳಿಕೆಯೊಳಗೆ ಬಳ್ಳಾರಿ ಪರಗಣೆ ಗ್ರಾಮಗಳ ವಿವರ: (೧) ಕಸಬಾ ಬಳ್ಳಾರಿ, (೨) ಶಿರಗುಡ್ಡೆ, (೩) ಸಂಗನಕಲ್ಲು (೪) ಬಿಸಲಹಳ್ಳಿ, (೫) ಬೇವಿನಹಳ್ಳಿ, (೬) ಹದ್ದಿನಗುಂಡು, (೭) ಮಾರಿನಾಯಕನದೊಡ್ಡಿ, (೮) ಕಕ್ಕಬೇವಿನಹಳ್ಳಿ, (೯) ಚಿಕ್ಕಬಳ್ಳಾರಿ, (ಗುಡ್ಡಕ್ಕೆ ಪಶ್ಚಿಮದಲ್ಲಿ ಕೆಲವು ಮನೆಗಳು ಇದ್ದುದರಿಂದ "ಚಿಕ್ಕಬಳ್ಳಾರಿ" ಎಂದು ಹೆಸರು), (೧೦) ಶಿರಿಮಾಪುರ – ಅಂತು ೧೦; (೧) ಅಮರಾಪುರ, (೨) ಶಂಕರಖಂಡೆ, (೩) ಇಭರಾಮಪುರ, (೪) ಬೊಬ್ಬುಕುಂಟೆ, (೫) ಗೊನಹಾಳು, (೬) ಹಂದರಹಾಳು, (೭) ಚರಕುಂಟೆ, (೮) ಪಾದ್ರ ಬೂದಿಹಾಳು, (೯) ಮುಂಡರಗಿ, (೧೦) ಕೃಷ್ಣಾಪುರ, (೧೧) ಕೆರೆಹಳ್ಳಿ, (೧೨) ಚಿಕ್ಕಹಾಳು – ಅಂತು ೧೨. (೧) ಎತ್ತಿನ ಬೂದಿಹಾಳು, (೨) ಬುಡ್ಡನಾಯಕನಹಳ್ಳಿ, (೩) ಸಂಜೀವರಾಯನ ಕೋಟೆ, (೪) ಮಿಂಚೇರಿ (೫) ಹಲ್ಲಕುಂಟೆ, (೬) ಹೊನ್ನಹಳ್ಳಿ, (೭) ಚಿಕ್ಕನಾಯಕನಹಳ್ಳಿ, (೮) ಆಲದಹಳ್ಳಿ, (೯) ಬೆಳಗಲ್ಲು, (೧೦) ಮಣೂರು – ಅಂತು ೧೦. ಜುಮ್ಲಾ ಗ್ರಾಮಗಳು ೩೨.

ಈ ನಾಲ್ಕು ಮಂದಿಯು ಶಾ.ಸ. ೧೪೮೯ನೆಯ ಪ್ರಭವ ಸಂವತ್ಸರದ ಲಾಗಾಯಿತು ಶಕ ೧೫೫೪ನೆಯ ಅಂಗೀರಸ ಸಂವತ್ಸರದ ವರೆಗೆ ಅರುವತ್ತಾರು ವರ್ಷ ಆಳಿದ ತರುವಾಯ,

ಬಿಜಾಪುರದ ಪಾದುಷಾಹನವರ ಕಡೆಯಿಂದ ಬಡೇಸಾಹೇಬನೆಂದು ಸರದಾರನ ಸಂಗಡ ಫೌಜು ಬಂದು, ಬಳ್ಳಾರಿ ಸಮೀಪದಲ್ಲಿ ಇಳಿದು ಭೇಟಿ ನಿಮಿತ್ತವಾಗಿ ಹಿರಿಯ ರಾಮಪ್ಪನಾಯಕನನ್ನು ಕರೆಕಳುಹಿಸಿ, ಅವನನ್ನು ಹಿಡಿದುಕೊಂಡು ಬಿಜಾಪುರಕ್ಕೆ ಕಳುಹಿಸಿಕೊಟ್ಟು, ಬಳ್ಳಾರಿಯಲ್ಲಿ ಠಾಣ್ಯಹಾಕಿ, ಸದರೀ ಬಡೇ ಸಾಹೆಬನು ಶಕ ೧೫೫೫ನೆಯ ಶ್ರೀಮುಖ ಸಂವತ್ಸರದ ಲಾಗಾಯಿತು ಶಕ ೧೫೬೧ನೆಯ ಪ್ರಮಾದಿ ಸಂವತ್ಸರದ ವರೆಗೆ – ಏಳು ವರ್ಷ ವ್ಯವಹಾರ ಮಾಡಿದನು.

ತರುವಾಯ ಈತನ ಅಮಿಲು ತಗ್ಯೆರು ಮಾಡಿ ಕರೀಮಸಾಹೇಬನೆಂಬ ಸರದಾರರನ್ನು ಫೌಜು ಸಹ ಕಳುಹಿಸಲಾಗಿ, ಆತನು ಬಂದು ಠಾಣ್ಯ ಹಾಕಿಕೊಂಡು ಶಕ ೧೫೬೨ನೆಯ ವಿಕ್ರಮಸಂವತ್ಸರದ ಲಾಗಾಯಿತು ೧೫೬೬ನೆಯ ತಾರಣ ಸಂವತ್ಸರದ ವರೆಗೆ – ೫ ವರ್ಷ ವ್ಯವಹಾರ ಮಾಡಿದನು.

ಈತನ ತರುವಾಯ ಪಾದಷಹಾನರ ಕಡೆಯಿಂದ ಆದವಾನಿ ಸುಭೆ ಮಾಡಲಿಕ್ಕೆ ಸಿದ್ಧಿಮಸೂದ್‌ಖಾನನು ಬಂದು ಆದವಾನಿಯಲ್ಲಿದ್ದು ಬಳ್ಳಾರಿ ವ್ಯವಹಾರ ಮಾಡಿದನು. ಆ ವೇಳೆಯಲ್ಲಿ ತಿಮ್ಮಾಜಿ ಎಂಬವನಿಗೆ ಸನ್ನದು ಬರೆಯಿಸಿ ಕೊಟ್ಟು ಬಳ್ಳಾರಿ ತಾಲ್ಲೂಕು, ತೆಕ್ಕಲಕೋಟೆ, ಶಿರಗುಪ್ಪಿ, ರೂಪನಗುಡಿ, ಮೊಕ್ಕೆ, ಕುಣಿಕಲ್ಲು ಸಮ್ಮತು ವ್ಯವರಹಾಳು ಈ ಪ್ರಕಾರ ಏಳು ಪರಗಣೆ ಸರದೇಶಗತಿ ಮೊಕರೂರ್ ಮಾಡಿಸಿ ಕಳುಹಿಸಿಕೊಟ್ಟರು. ಈತನಿಗೆ ನೂರಕ್ಕೆ ಐದು ಹೊನ್ನು ವರ್ತನೆ, ಗ್ರಾಮ ಒಂದಕ್ಕೆ ಮುನಾಸಬು ನೋಡಿ ಭೂಸ್ವಾಸ್ತಿ, ಬಳ್ಳಾರಿ ಪರಗಣೆಯ ಪೈಕಿಯಲ್ಲಿ ಅಮರಾಪುರವೆಂಬ ಗ್ರಾಮ ಉಂಬಳಿ. ಈ ಪ್ರಕಾರ ಕೊಟು ಕಳುಹಿಸಿದರು. ಸಿದ್ಧಿಮಸೂದಖಾನನು ಆಳಿದ ಶಕ ೧೫೬೭ನೆಯ ಪಾರ್ಥಿವ ಸಂವತ್ಸರದ ಲಾಗಾಯಿತು. ಶಕ ೧೫೭೮ನೆಯ ದುರ್ಮುಖಿ ಸಂವತ್ಸರದ ವರೆಗೆ ಹನ್ನೆರಡು ವರ್ಷ ವ್ಯವಹಾರ ಮಾಡಿದನು. ಮಸೂದ ಸಾಹೇಬರವರ ಸಂಗಡ ಕೆಲವು ದಿವಸ ರಾಮಪ್ಪನಾಯಕನು ಮಿಲಾಕತ್ತು ಆಗಿ ಬಂದು ವ್ಯವಹಾರ ಮಾಡಿದನು. ತರುವಾಯ ರಾಮಪ್ಪನಾಯಕನನ್ನು ಪುನಃ ಬಿಜಾಪುರಕ್ಕೆ ತೆಗೆದುಕೊಂಡು ಹೋದರು. ಬಳಿಕ ಮಸೂದ ಸಾಹೇಬರವರ ಕಡೆ ಬಾಬಾಸಾಹೇಬನೆಂಬಾತನು ವ್ಯವಹಾರ ಮಾಡಿದನು.

ತರುವಾಯ ಕಂದನೂಲು ವಗೈರೆ ಮೊಗಲಾಯಿಯವರು ಶಕ ೧೫೭೯ನೆಯ ಹೇವಿಳಂಬಿ ಸಂವತ್ಸರದ ಲಾಗಾಯಿತು ಶಕ ೧೬೧೪ನೆಯ ಅಂಗೀರಸ ಸಂವತ್ಸರದ ವರೆಗೆ (ವರ್ಷ ೩೬) ವ್ಯವಹಾರ ಮಾಡಿದರು. ಇವರ ಆಳಿಕೆಯೊಳಗೆ ಹಂಡೆಯವರ ಸಂಬಂಧಿಗಳು ಕೆಲವು ದಿವಸ ಬಂದು, ಕೆಲವು ಕೆಲವು ಗ್ರಾಮಗಳನ್ನು ಸ್ವಾಧೀನ ಮಾಡಿಕೊಳ್ಳುತ್ತಿದ್ದರು. ತರುವಾಯ ಕಂದನೂಲವರ ಆಳಿಕೆ ಆದ ಮೇಲೆ ಹಂಡೆ ಹಿರೆಯ ಮಲುಕಪ್ಪನಾಯಕನ ಮಗ ಚಿಕ್ಕಮಲುಕಪ್ಪನಿಗೆ ಆನೇಗೊಂದಿ ಅರಸರು ತಮ್ಮ ತಾಲೂಕು ಪೈಕಿ ಮುದ್ದಲಾಪುರವೆಂಬ ಗ್ರಾಮ ಜಹಗೀರು ಕೊಟ್ಟಿರಲಾಗಿ ಅವನು ಆ ಗ್ರಾಮವನ್ನೂ, ಬಳ್ಳಾರಿ ಸೀಮೆಯ ಪೈಕಿ ಮಣೂರು ಎಂಬ ಗ್ರಾಮವನ್ನೂ ಒಬ್ಬರಿಗೂ ಠಾಣ್ಯಕೊಡದೆ ಬಲುಕಾಯಿಸಿಕೊಂಡು ಲೂಟಾಯಿಸಿಕೊಂಡು ಇದ್ದನು.

ಚಿಕ್ಕಮಲುಕಪ್ಪನ ಮಗ ಚಿಕ್ಕನಾಯಕ ಸಾಹೇಬ. ಇವನು ತಂದೆ ಇದ್ದ ಮೇರೆಗೆ ಮುದ್ದಲಾಪುರ, ಮಣೂರು ಈ ಎರಡು ಗ್ರಾಮಗಳನ್ನೂ ಅನುಭವಿಸಿಕೊಂಡಿದ್ದನು. ಚಿಕ್ಕನಾಯಕಸಾಹೇಬನ ಹೆಂಡದಿ ಸಂಗನಾಗರಿಯೆಂಬ ಹೆಣ್ಣುಮಗಳ ಹೊಟ್ಟೆಯಲ್ಲಿ ದ್ಯಾವಪ್ಪನಾಯಕನು ಹುಟ್ಟಿದನು. ಸಂಗನಾಗರಿಯು

ಆನೆಗೊಂದಿ ಅರಸುಗಳನ್ನು ಕೇಳಿಕೊಂಡು ಕೆಲವು ಮಂದಿಯನ್ನು ಜಮಾಯಿಸಿಕೊಂಡು ಒಂದು ಲಡಾಯಿ ಮಾಡಿ ಬಳ್ಳಾರಿ ಕಿಲ್ಲೆ ಠಾಣ್ಯ ಹಾಕಿಕೊಂಡು ದ್ಯಾವಪ್ಪನಾಯಕನಿಗೆ ಪಟ್ಟಕಟ್ಟಿದಳು. ದ್ಯಾವಪ್ಪನಾಯಕನು ಪ್ರಬಲನಾಗಿ ಕುರುಗೋಡು, ತೆಕ್ಕಲುಕೋಟೆ ಸಹ ಠಾಣ್ಯ ಹಾಕಿಕೊಂಡು ಈ ಮೂರು ಪರಗಣೆಗಳನ್ನು ಶಕ ೧೬೧೫ನೆಯ ಶ್ರೀಮುಖ ಸಂವತ್ಸರದ ಲಾಗಾಯಿತು ಶಕ ೧೬೩೦ನೆಯ ಸರ್ವಧಾರಿ ಸಂವತ್ಸರದ ವರೆಗೆ ೧೬ ವರ್ಷ ಅಳಿದನು. ಸದರಿ ದ್ಯಾವಪ್ಪನಾಯಕನ ಮಕ್ಕಳು ಹನುಮಪ್ಪನಾಯಕ, ಹಿರಿಯ ರಾಮಪ್ಪನಾಯಕ, ಚಿಕ್ಕರಾಮಪ್ಪನಾಯಕ ಈ ಮೂರು ಮಂದಿ. ಹಿರಿಯ ಹನುಮಪ್ಪನಾಯಕನು ರಾಜ್ಯವಾಳಿದುದು ಶಕ ೧೬೩೧ನೆಯ ವಿರೋಧಿ ಸಂವತ್ಸರದ ಲಾಗಾಯಿತು ಶಕ ೧೬೪೦ನೆಯ ವಿಳಂಬಿ ಸಂವತ್ಸರದ ವರೆಗೆ ಹತ್ತು ವರ್ಷ. ತರುವಾಯ ಹಿರೆರಾಮಪ್ಪನಾಯಕ ಆಳಿದ್ದು ಶಕ ೧೬೪೧ನೆಯ ವಿಕಾರಿ ಸಂವತ್ಸರದ ಲಾಗಾಯಿತು ಶಕ ೧೬೪೭ನೆಯ ವಿಶ್ವಾವಸು ಸಂವತ್ಸರದ ವರೆಗೆ ಏಳು ವರ್ಷ. ಇವನು ಬಳ್ಳಾರಿ, ಕುರುಗೋಡು, ತೆಕ್ಕಲುಕೋಟೆ ಈ ಮೂರು ಪರಗಣೆ ಮಾತ್ರ ಆಳಿದನು. ತರುವಾಯ ಈತನ ತಮ್ಮ ಚಿಕ್ಕರಾಮಪ್ಪನಾಯಕನು ಆಳಿದುದು ಶಕ ೧೬೪೮ನೆ ಪರಾಭವ ಸಂವತ್ಸರದ ಲಾಗಾಯಿತು ಶಕ ೧೬೫೨ನೆಯ ಸಾಧಾರಣ ಸಂವತ್ಸರದ ವರೆಗೆ ಐದು ವರ್ಷ. ಈತನು ಕೆಳಗಿನ ಕೋಟೆಯನ್ನು ಸಮಗ್ರ ಕಟ್ಟಿಸಿದನು.

ತರುವಾಯ ಈ ಅಣ್ಣತಮ್ಮಂದಿರು ಮೂರು ಮಂದಿಗೂ ಸಂತಾನವಿಲ್ಲದೆ ಹೋದ ಕಾರಣ, ಚಿಕ್ಕ ರಾಮಪ್ಪನಾಯಕನ ಅಂತ್ಯಕಾಲದಲಿ ಇವರ ಬಲತಾಯಿ ನೀಲಮ್ಮನೂ, ಬಾಲದ ಹನುಮಪ್ಪನಾಯಕನ ಹಿರಿಯಮಗ ಅಂಕುಶನಾಯಕ ವಂಶದ ಸಿದ್ದಪ್ಪನಾಯಕ, ಪ್ರಸನ್ನಪ್ಪನಾಯಕ ಇಬ್ಬರು ಅಣ್ಣತಮ್ಮಂದಿರೂ ಬಂಕಾಪುರದ ಸೀಮೆ ಮೊಗಲಾಯಿ ಠಾಣ್ಯವಾಗುಷ್ಟರಲ್ಲಿ, ಅಲ್ಲಿಂದ ಹೊರಟು ಬಂದು, ನಂದ್ಯಾಲ, ಸಿರಿವಾಳದ ಸೀಮೆ ಮೊಗಲಾಯಿ ಠಾಣ್ಯವಾದ ಬಳೀಕ ಸಿದ್ದಪ್ಪನಾಯಕನು ಹಂದರಹಾಳಿಗೂ, ಪ್ರಸನ್ನಪಪನು ಅನಂತಪುರಕ್ಕೂ ಹೋದರು. ಹಂದರಹಾಳಿಗೆ ಬಂದ ಸಿದ್ದಪ್ಪನಾಯಕನ ಮಗ ರಾಮಪ್ಪನಾಯಕ, ಹನುಮಪ್ಪನಾಯಕ ಈ ಇಬ್ಬರು ಮಕ್ಕಳನ್ನೂ ನೀಲಮ್ಮನು ಬಳ್ಳಾರಿಗೆ ಕರೆದುಕೊಂಡು ಬಂದು ರಾಮಪ್ಪನಾಯಕನಿಗೆ ಪಟ್ಟ ಕಟ್ಟಿಸಿದಳು. ರಾಮಪ್ಪನಾಯಕ ಚಿಕ್ಕಾತನಾದ ಕಾರಣ, ನೀಲಮ್ಮನು ಚಿಕ್ಕಾತನನ್ನು ಮುಂದಿಟ್ಟುಕೊಂಡು ವ್ಯವಹಾರ ಮಾಡುತ್ತಿರಲಾಗಿ, ಮೊಗಲಾಯಿ ಆದವಾನಿಯವರ ಫೌಜು ಬಂದು ತೆಕ್ಕಲಕೋಟೆ ಠಾಣ್ಯ ಹಾಕಿಕೊಂಡಿತು. ಬಳ್ಳಾರಿ, ಕುರುಗೋಡು ಎರಡು ಪರಗಣೆಗಳಲ್ಲಿ ಮಾತ್ರ ಇವಳು ವ್ಯವಹಾರ ಮಾಡಿದಳು. ನೀಲಮ್ಮನಿಗೂ ರಾಮಪ್ಪನಾಯಕನಿಗೂ ಮನಸ್ತಾಪವಾದ ಕಾರಣ ಇವನು ನೀಲಮ್ಮನನ್ನು ಕಡಿಸಿ ಹಾಕಿದನು. ರಾಮಪ್ಪನಾಯಕನು ಪ್ರಬಲನಾಗಿ ಗ್ರಾಮಕ್ಕೆ ಉತ್ತರಭಾಗದಲ್ಲಿ ಹೊಂಡ ೧, ಹೊಂಡಕ್ಕೆ ಪಶ್ಚಿಮದಲ್ಲಿ ಸಿಂಹಾಸನ ೧, ಹೊಂಡಕ್ಕೆ ದಕ್ಷಿಣದಲ್ಲಿ ಹೊಸದಾಗಿ ಇವುಗಳನ್ನು ಕಟ್ಟಿಸಿ ಬಳ್ಳಾರಿ ಕೋಟೆ ಬಿದ್ದ ಬಿದ್ದಲ್ಲಿ ದುರಸ್ತಾಗಿ ಕಟ್ಟಿಸಿ, ಅಗಳ್ತೆಯನ್ನು ಅಗೆಯಿಸಿದನು. ಗ್ರಾಮಕ್ಕೆ ಪಶ್ಚಿಮದಲ್ಲಿ ನಾಗರಕೆರೆಗೆ ದಕ್ಷಿಣದ ಕಲ್ಲುಕಟ್ಟಿದ ಭಾವಿಯನ್ನು ನಿರ್ಮಿತಮಾಡಿ ವ್ಯವಹಾರ ಮಾಡಿದನು. ಮಂದಿ ಕುದುರೆಗಳನ್ನು ಜಮಾಯಿಸಿಕೊಂಡು ಠಾಣ್ಯ ಹಾಕಿಕೊಂಡ ವಿವರ: ಆನೆಗೊಂದಿಯವರ ರಾಜ್ಯದ ಪೈಕಿ ಶಿರಿಗೆರೆ, ಎಮ್ಮಿಗನೂರು – ಈ ಪ್ರಕಾರ ಎರಡು ಕಿಲ್ಲೆ ಠಾಣ್ಯ ಹಾಕಿಕೊಂಡು ತೆಕ್ಕಲುಕೋಟೆಯ ಮೇಲೆ ಶರಾರತ್ತು ಮಾಡಿ ಎರಡು ಮೂರಾವೃತ್ತಿ ಹೋಗಿ ಮುತ್ತ ಕೊಳ್ಳಲಾಗಿ,

ಈತನ ತಹಾರ ಸಾಗದೆ ತೆಕ್ಕಲುಕೋಟೆಯನ್ನು ಬಿಟ್ಟು ಬಂದನು. ಈ ಪ್ರಕಾರ ಕೆಲವು ದಿವಸ ರಾಜ್ಯ ಮಾಡಿಕೊಂಡಿದ್ದು, ಒಂದಾನೊಂದು ಸಮಯದಲ್ಲಿ ಹಂಡೆ ಅನಂತಪುರದಲ್ಲಿದ್ದ ಚಿಕ್ಕಮಲುಕಪ್ಪನಾಯಕನ ಸಂತತಿಯವನಾದ ರಾಮಪ್ಪನಾಯಕನನ್ನು ಬಳ್ಳಾರಿಗೆ ಕರೆಯಿಸಿ ದಿವಾಣದ ಒಳಗೆ ಇಳಿಸಿ, ಬಹುಮಾನ ಮಾಡಿ ಉಡುಗರೆಗಳನ್ನು ಕೊಟ್ಟು, ಅವರ ಸಂಗಡ ಬಂದ ಕಾರಕೂನ, ಸರದಾರ, ನಾಯಕವಾಡಿ, ಕಾಲುಪೇದೆ, ಖಿಜಮತಗಾರರಿಗೆ ಸಹ ಅವರವರ ಯೋಗ್ಯತಾನುಸಾರ ಉಡುಗರೆಗಳನ್ನು ಕೊಟ್ಟು, ಬಂದ ಸಮಸ್ತರಿಗೂ ಸಂತೋಷ ಮಾಡಿ, "ನೀವು ನಮ್ಮ ವಂಶದವರು. ಈ ದೌಲತ್ತು ನಿಮ್ಮದೇ ಇದ್ದೀತು" ಎಂದು ಹೇಳಿ, ಈ ಹಂಡೆ ಅನಂತಪುರದಿದ ಬಂದ ರಾಮಪ್ಪನಾಯಕನಿಗೆ ಬಳ್ಳಾರಿಯಲ್ಲಿರುವ ರಾಮಪ್ಪನಾಯಕನು ಉಪಚಾರ ಹೇಳಿ ಅಸುಂಡಿಯ ಪರ್ಯಂತರ ತನ್ನ ಮಂದಿ ಕುದುರೆಗಳ ಸಂಗಡ ಹೋಗಿ ಕಳುಹಿಸಿ ಕೊಟ್ಟನು. ಅವರು ಹಂಡೆ ಅನಂತಪುರಕ್ಕೆ ಹೋದರು. ರಾಮಪ್ಪನಾಯಕನು ಬಳ್ಳಾರಿಗೆ ಬಂದನು.

ಆ ತರುವಾಯ ತಿಂಗಳು ಆದ ಬಳೀಕ ಅನಂತಪುರದಿಂದ ಕಾರಕೂನರು ಬಂದು "ನಮ್ಮ ದೊರೆಗಳು ತಮ್ಮನ್ನು ಕರೆದುಕೊಂಡು ಬರುವುದೆಂದು ಆಜ್ಞೆಕೊಟ್ಟಿದ್ದಾರೆ, ತಾವು ಬಂದು ಸರ್ವರ ಭೇಟಿ ತೆಗೆದುಕೊಂಡು ಬರಬೇಕು" ಎಂದು ಮನವಿ ಮಾಡಿಕೊಂಡದ್ದರಿಂದ, ಸದರಿ ಬಳ್ಳಾರಿಯಲ್ಲಿರುವ ರಾಮಪ್ಪನಾಯಕನು ತನ್ನ ಮಂದಿ, ಕುದುರೆ, ಬಾಣ ವಗೈರೆ ಸನ್ನಾಹ ಮಾಡಿಕೊಂಡು ಅನಂತಪುರಕ್ಕೆ ಹೋಗುವಷ್ಟಕ್ಕೆ, ಅನಂತಪುರದವರು ಈತನನ್ನು ಕರೆದುಕೊಂಡು ಹೋಗಿ ಮಂದಿ, ಕುದುರೆ ಸಹ ದಿವಾಣದಲ್ಲಿ ಇಳಿಸಿ ಬಹಳ ಉಪಚಾರ ಮಾಡಿದರು. ಈ ಪ್ರಕಾರ ನಾಲ್ಕು ದಿವಸವಿದ್ದು ಗ್ರಾಮಗದೊಳಗೆ ಇರುವ ಹೂಡೆ, ಹುಲಿಮುಖ ಮುಂತಾದವುಗಳಲ್ಲಿ, ತನ್ನ ಮಂದಿ ಠಾಣ್ಯ ಹಾಕಿ, ಅನಂತಪುರದಲ್ಲಿರುವ ರಾಮಪ್ಪನಾಯಕನು ಹಜಾಮತ್ತು ಮಾಡಿಸಿಕೊಳ್ಳುತ್ತಿರಲಾಗಿ ಬಳ್ಳಾರಿಯ ರಾಮಪ್ಪನಾಯಕನು ಇವನ ತಲೆ ಹೊಡಿಸಿ, ದಿವಾಣದೊಳಗೆ ಇದ್ದ ಸಾಮಾನು ಸಹವಾಗಿ ತೆಗೆದುಕೊಂಡು ಅಲ್ಲಿದ್ದ ಕಾರಕೂನರು, ದೊರೆಗಳ ಮಕ್ಕಳು, ದೊರೆಗಳ ಹೆಂಡಿರು ಸರ್ವರನ್ನೂ ಖೈದಿನಲ್ಲಿಟ್ಟು, ಅನಂತಪುರದಲ್ಲಿ ಕೂಡಲೆ ಠಾಣ್ಯ ಹಾಕಿಕೊಂಡು, ಕುರಗೋಡಿಗೆ ಹೋಗಿ ಮುತ್ತಿಕೊಂಡನು. ಕೊರುಗೋಡದವರು ಠಾಣ್ಯ ಕೊಡಲಿಲ್ಲ. ಅಷ್ಟರೊಳಗೆ ರಾಮಪ್ಪನಾಯಕನಿಗೆ ಶರೀರದಲ್ಲಿ ಆಯಾಸವಾಗಲು ಅನಂತಪುರದಿಂದ ಕೈದು ಮಾಡಿಟ್ಟವರನ್ನೆಲ್ಲ ಬಳ್ಳಾರಿಗೆ ತೆಗೆದುಕೊಂಡು ಬರುವ ವೇಳೆಯಲ್ಲಿ, ಅನಂತಪುರದ ಕಿಲ್ಲೆದಾರಿಯನ್ನು ಜಿಂದಾಖಾನಗೆ ಕೊಟ್ಟು ಕೆಲವು ಮಂದಿಯನ್ನು ಠಾಣ್ಯ ಹಾಕಿ ಕಿಲ್ಲೆ ಬಂದೋಬಸ್ತು ಮಾಡಿ, ಅಲ್ಲಿಂದ ಎಂಟು ಜನ ಅರಸು ಮಕ್ಕಳು, ನಾಲ್ಕು ಜನ ದೊರೆಗಳ ಹೆಂಡಿರು, ಕರೋಲಿ ರಾಮಪ್ಪ, ದೊರೆಗಳ ಅಳಿಯ ಈ ಖೈದಿ ಜನರನ್ನೂ ಎರಡು ಆನೆ, ಎರಡು ಒಂಟೆ ಪಾಲಕಿ ಸಾತು ಸಾಮಾನು ಕಲಂ ತೋಷಾಖಾನೆ ವಗೈರೆ ತಂದ ಕಲಂ, ಈ ಪ್ರಕಾರ ಸಾಮಗ್ರಿಗಳನ್ನೂ ಸಾಗಿಸಿಕೊಂಡು ಬಳ್ಳಾರಿಗೆ ಬಂದು, ಸೆರೆ ಹಿಡಿದುಕೊಂಡು ಬಂದ ಸದರಿ ೧೩ ಮಂದಿಯನ್ನೂ ಗುಡ್ಡದ ಮೇಲೆ ಬೇಡಿ ಹಾಕಿಸಿ ಪಾರಾದಲ್ಲಿಟ್ಟನು. ರಾಮಪ್ಪನಾಯಕನಿಗೆ ಶರೀರದಲ್ಲಿ ಆಯಾಸವಾಗಿ ಕರೆ ಮಯ್ಯಲ್ಲಿ ಎದ್ದು ಬಹಳ ಶ್ರಮವಾಗಿರಲಾಗಿ, ಹಂಡೆ ಅನಂತಪುರದಲ್ಲಿ ಠಾಣ್ಯ ಇರುವ ಜಿಂದಾಖಾನ ವಗೈರೆ ಠಾಣ್ಯದಾರರಿಗೆ ಹೊರಗೆ ಹೊರಡದ ಹಾಗೆ ಅನಂತಪುರದ ದೊರೆಗಳ ಸಂಬಂಧಿಕರು ಹಳ್ಳಿಗಳು, ಕಿಲ್ಲೆಗಳು ಬಂದೋಬಸ್ತು ಮಾಡಿಕೊಂಡು ಪಥ ಬಂದು ಮಾಡುವಷ್ಟಕ್ಕೆ, ಆ ಕಿಲ್ಲೆಯಲ್ಲಿ ನಿಂದಿರಲಾರದೆ ಜಿಂದಾಖಾನನು ರಾತ್ರಿಯಲ್ಲಿ ತನ್ನ ಮಂದಿ ಸಹ

ಅನಂತಪುರದ ಠಾಣ್ಯ ಬಿಟ್ಟು ಬಳ್ಳಾರಿಗೆ ಹೊರಟು ಬಂದನು. ಅನಂತಪುರದಲ್ಲಿದ್ದವರು ಠಾಣ್ಯ ಹಾಕಿಕೊಂಡರು. ಬಳ್ಳಾರಿಯಲ್ಲಿ ಗುಡ್ಡದ ಮೇಲೆ ಸೆರೆ ಹಾಕಿದ್ದ ಅನಂತಪುರದ ಅರಸು ಮಕ್ಕಳು ಎಂಟು ಮಂದಿಯಲ್ಲಿ ಹಿರಿಯ ಮಗ ಸಿದ್ದರಾಮಪ್ಪನಾಯಕನನ್ನು ಕರೋೀಲಿ ಬಸವಪ್ಪನೆಂಬಾತನು[>ನನ್ನು] ರಾತ್ರಿವೇಳೆಯಲ್ಲಿ ಪಹರಾದವರನ್ನು ಒಳ್ಳೆಯವರನ್ನು ಮಾಡಿಕೊಂಡು ಸಿದ್ದರಾಮಪ್ಪನಾಯಕನನ್ನು ಕರೆದುಕೊಂಡು ಬೇಡಿಯ ಸಂಗಡಲೆ ಗುಡ್ಡಕ್ಕೆ ಪಶ್ಚಿಮನಾಗರಕೆರೆಯ ಜಾರಿಕೆ ಬಂಡೆಯ ಮೇಲೆ ಜರುಗಿಸಿಕೊಂಡು ಕೆಳಗೆ ಬಂದು, ಹಿರೆಯಹಾಳು ತಾಲೂಕು ಪೈಕಿ ಓಬಳಾಪುರವೆಂಬ ಗ್ರಾಮವು ಆರೇರ ಠಾಣ್ಯವಿರಲಾಗಿ ಆ ಗ್ರಾಮಕ್ಕೆ ಇಬ್ಬರೂ ಬೇಡಿಯ ಸಂಗಡ ರಾತ್ರಿಯಲ್ಲಿ ಹೋಗಲಾಗಿ, ಆ ಗ್ರಾಮದವರು ಇವರನ್ನು ಗ್ರಾಮದೊಳಗೆ ಕರೆದುಕೊಂಡು ಹೋಗಿ ಬೇಡಿ ಕಡಿಸಿ. ಅಲ್ಲಿಂದ ಹಿರೇಹಾಳಿಗೆ ಕಳುಹಿಸಿದರು. ಹಿರೇಹಾಳಿನಲ್ಲಿ ಆರೇರ ಕಡೆ ಶಿವಪ್ಪನವರು ವ್ಯವಹಾರ ಮಾಡಿಕೊಂಡಿರಲಾಗಿ ಅನಂತಪುರದ ಸಿದ್ಧರಾಮಪ್ಪನಾಯಕನು, ಕರೋಲ ಬಸವಪ್ಪನು ಓಡಿ ಬಂದ ಸಮಾಚಾರ ಕೇಳಿ ಕಿಲ್ಲೆಯೊಳಗೆ ಕರೆದುಕೊಂಡು ಹೋಗಿ ಅವನನ್ನು ಪರಾಮರ್ಶೆಮಾಡಿ ಇಟ್ಟುಕೊಂಡು, ಅನಂತಪುರಕ್ಕೆ ಕಾಗದ ಬರೆದು ಕಳುಹಿಸಲಾಗಿ ಅಲ್ಲಿಂದ ಮಂದಿ ಕುದುರೆ ಬರಲು, ಸಿದ್ಧರಾಮಪ್ಪನಾಯಕನನ್ನು ತೆಗೆದುಕೊಂಡುಹೋಗಿ ಪಟ್ಟ ಕಟ್ಟಿದರು. ಸದರಿ, ಸಿದ್ಧರಾಮಪ್ಪನಾಯಕ, ಬಸಪ್ಪ ಈ ಎರಡು ಮಂದಿ ಗುಡ್ಡದ ಮೇಲಿಂದ ಓಡಿ ಹೋದ ಸಮಾಚಾರ ಕೇಳಿ ಬಳ್ಳಾರಿ ರಾಮಪ್ಪನಾಯಕನು ಉಳಿದ ಅರಸುಮಕ್ಕಳು ಏಳು ಮಂದಿಯನ್ನೂ ಹೊಡೆಯಿಸಿ ಹಾಕಿದನು. ತರುವಾಯ ಕೆಲವು ದಿವಸ ಈತನು ದೊರೆತನ ಮಾಡಿದನು.

ಈತನ ಆಳಿಕೆಯ ಶಕ. ನೀಲಮ್ಮನ ಆಳಿಕೆ ಶಕ ೧೬೫೩ನೆಯ ವಿರೋಧಿಕೃತು ಸಂವತ್ಸರದ ಲಾಗಾಯಿತು ೧೬೫೬ನೆಯ ಆನಂದ ಸಂವತ್ಸರದ ವರೆಗೆ ೪ ವರ್ಷ. ಹಂದರಹಾಳಿನಲ್ಲಿದ್ದ ರಾಮಪ್ಪನಾಯಕನ ಆಳಿಕೆ ಶಕ ೧೬೫೭ನೆಯ ರಾಕ್ಷಸ ಸಂವತ್ಸರದ ಲಾಗಾಯಿತು ಶಕ ೧೬೮೬ನೆಯ ತಾರಣ ಸಂವತ್ಸರದ ವರೆಗೆ ೩೦ ವರ್ಷ. ಇವನ ಆಳಿಕೆಯಲ್ಲಿ ಮೊಗಲರು ಬಂದು ಸರಹದ್ದು ಗ್ರಾಮಗಳಿಗೆ ಶಹ ಕೊಡಲಾಗಿ ಅವರಿಗೆ ಕೆಲವು ಖಂಡಣೆ ಮುಗಿಸಿಕೊಂಡು, ತಮ್ಮನಾದ ಹನುಮಪ್ಪನಾಯಕನನ್ನು ಓಲು (ಹೊಣೆ) ಕೊಟ್ಟನು. ಮೊಗಲರು ಹನುಮಪ್ಪನಾಯಕನನ್ನು ಓಲು ತೆಗೆದುಕೊಂಡು ಹೋಗಿ ಹಚ್ಚಹಳ್ಳಿ ಕಿಲ್ಲೆಯೊಳಗೆ ಪಹರಾದಲ್ಲಿಟ್ಟರು. ಓಲುಕೊಟ್ಟ ಹನುಮಪ್ಪನಾಯಕನನ್ನು ಬಿಡಿಸಲಿಲ್ಲ. ಆತನು ಪಾರಾದಲ್ಲಿರುತ್ತಿರಲಾಗಿ ದೇವತಾನುಗ್ರಹದಿಂದ ತುಂಗಭದ್ರಾನದಿಯು ರಾತ್ರಿ ವೇಳೆಯಲ್ಲಿ ಪೂರ್ತಿಯಾಗಿ ಪ್ರವಾಹವು ಬಂದು ಕೆಲವು ಕಿಲ್ಲೆ ಕೆಲವು ಮನೆಗಳ ಸಹಿತವಾಗಿ ಬಡಿದುಕೊಂಡು ಹೋಗುವ ಸಮಯದಲ್ಲಿ, ಕಾದಿದ್ದ ಓಲೆಯಕಾರರು ತಮ್ಮ ಬದುಕು, ಹೆಂಡಿರು, ಮಕ್ಕಳು ವಗೈರೆ ತಾವು ಸಹ ಬಚಾವು ಆಗುವ ನಿಮಿತ್ತ ಈತನ ಪರವೆ ಬಿಟ್ಟು ತಮ್ಮ ತಮ್ಮ ಮನೆಗಳ ಕಡೆಗೆ ಹೋಗಿ ಜೀವಗಳನ್ನುಳಿಸಿಕೊಂಡರು. ಕೆಲವು ಮಂದಿ ಪ್ರವಾಹದಲ್ಲಿ ಕೊಚ್ಚಿ ಹರಿದುಹೋದರು. ಅದೇ ಸಮಯದಲ್ಲಿ ಹನುಮಪ್ಪನಾಯಕನು ರಾತೋರಾತು ಕೆಂಚನಗೌಡನ ಗುಡ್ಡದ ಪಂಪಾಪತಿಗೌಡನು ಈತನನ್ನು ಕರೆದುಕೊಂಡು ಹೋಗಿ, ಬಹಾಳ ಮಾನ ಮಾಡಿ ತನ್ನ ಸ್ಥಳದಲ್ಲಿ ಕರ್ಚಿಗೆ ಕೊಟ್ಟು ಬಹಳ ದಿವಸ ಇಟ್ಟುಕೊಂಡಿದ್ದನು. ರಾಮಪ್ಪನಾಯಕನಿಗೂ ಹನುಮಪ್ಪನಾಯಕನಿಗೂ ಈ ಇಬ್ಬರು ಅಣ್ಣತಮ್ಮಂದಿರಿಗೂ ಮನಸ್ಸು ನೆಟ್ಟಗಿಲ್ಲದೆ ಇದ್ದುದರಿಂದ ಹನುಮಪ್ಪನಾಯಕನನ್ನು ಬಳ್ಳಾರಿಗೆ ಕರೆಯಿಸದೆ ರಾಮಪ್ಪನಾಯಕನು ಬಿಟ್ಟು ತಾನೊಬ್ಬನೇ ವ್ಯವಹಾರ

ಮಾಡಿದನು. ರಾಮಪ್ಪನಾಯಕನು ದೈವಾಧೀನನಾದ ಕಾರಣ ಕೆಂಚನಗೌಡನ ಗುಡ್ಡಕ್ಕೆ ಕಾರಕೂನರು ಹೋಗಿ ಹನುಮಪ್ಪನಾಯಕನನ್ನು ಕರೆದುಕೊಂಡು ಹೋಗಿ ಪಟ್ಟ ಕಟ್ಟಿದರು.

ಈತನ ಆಳಿಕೆಯೊಳಗೆ ನಿಜಾಮಲ್ಲಿಕಾನನವರ ಕಡೆ ಬಸಾಲತ್ತು ಜಂಗಬಹದರವರು ಬಂದು ಬಳ್ಳಾರಿಗೆ ಮುತ್ತಿಗೆ ಹಾಕಿ ಲಡಾಯಿ ಮಾಡಿದರು. ಅಷ್ಟರೊಳಗೆ ಸಲ್ಲಾ ಮಾಡಿಕೊಳ್ಳುವಷ್ಟಕ್ಕೆ ದಂಡು ಹೊರಟುಹೋಯಿತು. ಆ ವೇಳೆಯಲ್ಲಿ ರಾಮಪ್ಪನಾಯಕನು ಕಟ್ಟಿಸಿದ್ದ ಹೊಸಪೇಟೆಯು ಹಾಳಾಗಿ ಹೋಯಿತು. ಈ ರಾಮಪ್ಪನಾಯಕನಿಗೂ ಹನುಮಪ್ಪನಾಯಕನಿಗೂ ಆಗದುದರಿಂದ, ಅಣ್ಣನು ಕಟ್ಟಿಸಿದ ಹೊಂಡ ಬಿಚ್ಚಿಸಿ ಆ ಕಲ್ಲು ತರಿಸಿ ಕೋಟೆ ಕಟ್ಟಿಸಿ ಆತನು ಕಟ್ಟಿಸಿದ್ದ ಸಿಂಹಾಸನದ ಕಟ್ಟೆಯನ್ನು ಸಹ ಬಿಚ್ಚಿಸಿದನು. ಸಿಂಹಾಸನವು ಮಾತ್ರ ಇದ್ದಿತು. ಈ ಹನುಮಪ್ಪನಾಯಕನ ಆಳಿಕೆ ಶಕ ೧೬೮೭ನೆಯ ಪಾರ್ಥಿವ ಸಂವತ್ಸರದ ಲಾಗಾಯಿತು ಶಕ ೧೬೯೧ನೆಯ ವಿರೋಧಿ ಸಂವತ್ಸರದ ವರೆಗೆ ಸಾಲು ೫.

ತರುವಾಯ ಹನುಮಪ್ಪನಾಯಕನ ಹೆಂಡತಿ ಪದ್ಮಮ್ಮನು ತನ್ನ ಗಂಡ ಸಾಕಿದ ದೊಡ್ಡಪ್ಪನಾಯಕನಿರಲಾಗಿ ಅವನಿಗೆ ಪಟ್ಟಕಟ್ಟದೆ ತನ್ನ ಅಣ್ಣ ಚನ್ನಬಸಪ್ಪನ ಮಗ ಒಂದು ವರ್ಷದ ಕೂಸಿಗೆ ದ್ಯಾವಪ್ಪನಾಯಕನೆಂದು ಹೆಸರಿಟ್ಟು, ಗ್ರಾಮದಲ್ಲಿರುವ ಸಾಮಾಜಿಕರಿಗೂ ಠಾಣ್ಯದವರಿಗೂ ರಾಜಿಯಿಲ್ಲದಿದ್ದರೂ ಪಟ್ಟಕಟ್ಟಿಸಿದಳು. ಈಕೆಯ ತಮ್ಮನಾದ ದಳವಾಯಿ ರುದ್ರಪ್ಪ, ಚನ್ನಬಸಪ್ಪನವರು ವ್ಯವಹಾರ ಮಾಡಲಿಕ್ಕೆ ಕುಳಿತು, ಒಂದು ದಿವಸ 'ಹನುಮಪ್ಪನಾಯಕನು ಸಾಕಿದ ಮಗ ದೊಡ್ಡಪ್ಪನಾಯಕನನ್ನು ಹೊಡೆದು ಹಾಕಿದರೆ ಸಂಸ್ಥಾನವು ನಮ್ಮದೇ ಗುತ್ತದೆಂದು ಆಲೋಚನೆ ಮಾಡಿ ತನ್ನ ಕಡೆಯ ರಾವುತರನ್ನು ಜಮೆ ಮಾಡಿಕೊಂಡು, ಸಂಜೆಗೆ ಬರುತ್ತಿದ್ದಾರೆಂಬ ಸಮಾಚಾರವನ್ನು ರಾಮಪ್ಪನಾಯಕನ ಹೆಂಡತಿ ಕೇಳಿ ನಾಯಕವಾಡಿಗಳನ್ನು ಕರೆಯಿಸಿ ಅವರಿಗೆ ಈ ಸಮಾಚಾರ ಹೇಳಲಾಗಿ, ನಾಯಕವಾಡಿಗಳು ತಮ್ಮ ಮಂದಿ ಸಹವಾಗಿ ಕರೆದುಕೊಂಡು ಬಂದು ದಿವಾಣದ ಸುತ್ತ ರಾತ್ರಿಯಲ್ಲಿ ಕಾದಿರಲಾಗಿ ದೊಡ್ಡಪ್ಪನಾಯಕನು ಸರ್ವದಾ ಮಲಗುವ ಸ್ಥಳದಲ್ಲಿ ದೊಡ್ಡಪ್ಪನಾಯಕನನ್ನು ದಿವಾಣದೊಳಗೆ ಒಂದು ಕೊಟ್ಟಡಿಯೊಳಗೆ ಬಚ್ಚಿಟ್ಟು ಬೀಗ ಹಾಕಿಸಿದಳು. ರಾತ್ರ ಆರು ತಾಸು ಅದ ಬಳಿಕ ದಳವಾಯಿ ರಉದ್ರಪ್ಪ, ಚನ್ನಪ್ಪ[+ಬಸ]ನವರೂ ತನ್ನ ಕಡೆಯ ಹತ್ತು ಹನ್ನೆರಡು ಮಂದಿ ರಾವುತರೂ ಸಹಿತವಾಗಿ ಕತ್ತಿ ಕಿತ್ತುಕೊಂಡು ದಿವಾಣದೊಳಗೆ ಬಂದು, ದೊಡ್ಡಪ್ಪನಾಯಕನು ಮಲಗುವ ಮಂಚದ ಮೇಲೆ ಕಡಿಯಲಾಗಿ ಹೂವಿನ ಹಚ್ಚಡದೊಳಗೆ ಇದ್ದ ದಿಂಡು ಸಹ ಚೂರುಚೂರಾಗಿ ಹೋಯಿತು. ದೊಡ್ಡಪ್ಪನಾಯಕನನ್ನು ಕಾಣದೆ ಬರಿಯ ದಿಂಡು ಇದ್ದುದನ್ನು ಕಂಡು ಗಾಬರಿಯಾದರು. ಅಷ್ಟರೊಳಗೆ ಗುಲ್ಲು ಆಯಿತು. ಸುತ್ತಲೂ ಕಾದಿದ್ದ ನಾಯಕವಾಡಿಗಳು ಮಂದಿ ಸಹಿತವಾಗಿ ಬಂದು ಮುತ್ತಿಕೊಂಡರು. ಈ ರುದ್ರಪ್ಪ, ಚನ್ನಬಸಪ್ಪನವರು ತನ್ನ ಸಂಗಡ ಕರೆದುಕೊಂಡು ಬಂದ ಮಂದಿಯ ಸಂಗಡ ಹೊರಟು ಹೋಗುವುದಕ್ಕೆ ಮಾರ್ಗವಿಲ್ಲದೆ ಇದ್ದುದರಿಂದ ರುದ್ರಪ್ಪ, ಚನ್ನಬಸಪ್ಪ ಇಬ್ಬರೂ ಅಕ್ಕನಾದ ಹನುಮಪ್ಪನಾಯಕನ ಹೆಂಡತಿ ಪದ್ಮಮ್ಮನಿರುವ ಮಹಲಿಗೆ ನಿಚ್ಚಣಿಗೆ ಹಾಕುವಷ್ಟಕ್ಕೆ ಆ ಹೆಣ್ಣು ಮಗಳು ಕಿಟಕಿ ತೆಗೆದು ಇಬ್ಬರು ಅಣ್ಣತಮ್ಮಂದಿರನ್ನೂ ಒಳಗೆ ಕರೆದುಕೊಂಡು ಬಾಗಿಲು ಹಾಕಿಕೊಂಡಳು. ಬಾಕಿ ಕೆಳಗೆ ಉಳಿದವರನ್ನು ಹೊಡೆದು ಹಾಕಿ ರಾತ್ರಿಯಲ್ಲಿ ದಿವಾಣಕ್ಕೂ, ಹಾಗೆಯೇ ದ್ಯಾವಪ್ಪನಾಯಕನೆಂದು ಹೆಸರಿಟ್ಟ ಕೂಸಿಗೂ ಸಹಿತವಾಗಿ

ಪಾರಾಯಿಟ್ಟು ಅದೇ ರಾತ್ರಿಯಲ್ಲಿ ದೊಡ್ಡಪ್ಪನಾಯಕನನ್ನು ಕರೆತಂದು ಪಟ್ಟಕಟ್ಟಿ, ನಾಯಕವಾಡಿ, ಸಾಮಾಜಿಕ ಮೊದಲಾದವರು ಸಲ್ಲಾಂ ಮಾಡಿದರು.

ಈ ವರ್ತಮಾನವನ್ನು ಕುರುಗೋಡಿಗೆ ಹೇಳಿ ಕಳುಹಿಸಲಾಗಿ ಅಲ್ಲಿಂದ ಕೆಲವು ಮಂದಿ ನಾಯಕವಾಡಿಗಳು ಬೆಳಗಾಗುವಷ್ಟಕ್ಕೆ ಬಂದರು. ಬೆಳಗಾದ ಮೇಲೆ ದಿವಾಣಕ್ಕೆ ಏಣಿ ಹಾಕಿ, ಕಿಟಕಿಗಳನ್ನು ಮುರಿಯ ಬಡಿದು ರುದ್ರಪ್ಪ, ಚನ್ನಬಸಪ್ಪನನ್ನು ಹಿಡಿದುಕೊಂಡು, ಪಟ್ಟಕಟ್ಟಿದ ದ್ಯಾವಪ್ಪನಾಯಕನೆಂಬ ಕೂಸಿನ ಕುತ್ತಿಗೆ ಮುರಿದು, ಗ್ರಾಮದೊಳಗೆ ಮೆರೆಯಿಸಿ ರುದ್ರಪ್ಪ, ಚನ್ನಬಸಪ್ಪನನ್ನು ಕರೆದುಕೊಂಡು ಹೋಗಿ ಬಳ್ಳಾರಿ ಗುಡ್ಡಕ್ಕೆ ಉತ್ತರ, ಬಾಗಿಲ ಗುಡ್ಡಕ್ಕೆ ದಕ್ಷಿಣ – ಈ ಉಭಯ ಗುಡ್ಡದ ನಡುವೆ ಕಡಿದು ಚೂರು ಚೂರು ಮಾಡಿ ಒಂದು ಹಾಳು ಭಾವಿಯೊಳಗೆ ಹಾಕಿ ಬಂದರು. ಹೀಗೆ ಪಟ್ಟಕಟ್ಟಿದ ಮೇಲೆ ಏಳು ದಿವಸಕ್ಕೆ ಕೂಸನ್ನು ಕೊಂದರು.

ತರುವಾಯ ದೊಡ್ಡಪ್ಪನಾಯಕನು ರಾಜ್ಯ ಮಾಡಿಕೊಂಡಿರಲಾಗಿ ಕೆಲವು ದಿವಸವಾದ ತರುವಾಯ ಶ್ರೀರಂಗಪಟ್ಟಣದಿಂದ ಹಿರಿಯನವಾಬ ಬಹಾದರನವರು ದಂಡು ಸಹಿತವಾಗಿ ಬರುವ ವರ್ತಮಾನ ಕೇಳಿ, ಬಳ್ಳಾರಿಯಲ್ಲಿರುವ ದೊಡ್ಡಪ್ಪನಾಯಕನು ದೊರೆಗಳ ಹೆಂಡಿರು ಸಹಿತವಾಗಿ ಕುರುಗೋಡಿಗೆ ವಲಸೆ ಹೋದನು. ಬಳ್ಳಾರಿಯಲ್ಲಿ ಕಿಲ್ಲೇದಾರಿ ಮುನಿಯಪ್ಪ, ದೇಶಾಯಿ ತಿಮ್ಮರಾಯ, ನಾಯಕವಾಡಿ ನೀಲಯ್ಯ, ಪರಸಯ್ಯ, ಹಾವಳಯ್ಯ, ಬಾಣಕಾರ ಪೇರಲ್ಲಿ, ಬಾಣಕಾರ ಕಾಟಮರಾಜು ವಗೈರೆಯವರನ್ನು ಇಟ್ಟಿರಲಾಗಿ ಹಿರಿಯ ನವಾಬರು ಬಂದು ಹಂದರಹಾಳು ಹಳ್ಳದ ಬಳಿ ದಂಡು ಇಳಿದು, ಅದೇ ದಿವಸ "ನಾವು ಮುಂದಕ್ಕೆ ಹೋಗುತ್ತೇವೆ, ನಮಗೂ ನಿಮಗೂ ಲಡಾಯಿ ಕಾರಣವಿಲ್ಲ"ವೆಂದು ಹೇಳಿ, ಮೋಸದಿಂದ ಸಂಗಡ ಬಂದು ಶೃಂಗಾರಗೇರಿ ಪೇಟೆ ಹಿಡಿದರು. ನವಾಬ ಬಹದರವರು ತಮ್ಮ ಕಡೆಯಿಂದ ವಕೀಲಾತಿ ಬಗ್ಗೆ ಬಾರಿನ ನಾರಾಯಣರಾಯನೆಂಬವನನ್ನು ಕಳುಹಿಸಲಾಗಿ ಆತನು ಪಾಲಕಿ ಸಂಗಡ ಬಂದು ಕಿಲ್ಲೆಯ ಮುಂದೆ ನಿಂತು, ತನ್ನ ಕಡೆಯ ಜಹಸೂದರನ್ನು ಕಳುಹಿಸಿ ಕಿಲ್ಲೆಯೊಳಗೆ ಇದ್ದ ಕಿಲ್ಲೆದಾರ ಮುನಿಯಪ್ಪ, ದೇಶಾಯಿ ತಿಮ್ಮರಾಯ ವಗೈರೆ ನಾಯಕವಾಡಿಗಳಿಗೆ – "ನಮ್ಮ ನವಾಬ ಸಾಹೇಬರ ಅಪ್ಪಣೆಯಾಗಿದ್ದಿತು, ಐದು ಮಂದಿ ಜವಾನರನ್ನು ಒಂದು ನಿಶಾನಿ ಮಾತ್ರಕ್ಕೆ ಕಿಲ್ಲೆಯೊಳಗೆ ತಂದುಕೊಂಡರೆ ನಾಳೆ ಬೆಳಿಗ್ಗೆ ದಂಡು ಕೂಚು ಆಗಿ ಹೋದೀತು" ಎಂತ ಹೇಳಿ ಕಳುಹಿಸಲಾಗಿ, ಇವರು ಆ ಮಾತನ್ನು ಕೇಳಿ ಪುನಃ ಬಂದ ಜಹಾಸೂದರಿಗೆ "ನಾವಾದರೆ ಸೇವಾ ವೃತ್ತಿಯವರಾಗಿದ್ದೇವೆ. ನಮ್ಮ ದೊರೆಗಳು ಕುರುಗೋಡು ಕಿಲ್ಲೆಯೊಳಗೆ ಇದ್ದಾರೆ. ಯಾವ ಮಾತೆಂದರೂ ಅಲ್ಲಿಗೆ ಹೋಗಿ ಅವರ ಸಂಗಡಲೇ ಮಾತನಾಡಿರಿ," ಎಂದು ಹೇಳಿ ಕಳುಹಿಸಲಾಗಿ ಈ ಮಾತನ್ನು ಬಾರಿನ ನಾರಾಯಣರಾಯನು ಕೇಳಿ ಪುನಃ ತನ್ನ ಕಡೆಯ ಜಹಾಸೂದರ ಮುಂದೆ ನಾರಾಯಣರಾಯನು "ನೀವು ಕಿಲ್ಲೆಯೊಳಗೆ ಹೋಗಿ ಬುದ್ಧಿವಂತರಾದ ಕಾರಕೂನ ನಾಯಕವಾಡಿಗಳನ್ನು ನಮ್ಮ ಸಂಗಡ ಕಳುಹಿಸಿದಿರಾದರೆ, ನಮ್ಮ ದಣಿಗಳು ನಾರಾಯಣರಾಯರು ನಿಮ್ಮನ್ನು ಕರೆದುಕೊಂಡು ಹೋಗಿ ಬಹದರ ನವಾಬರ ಭೇಟಿ ಮಾಡಿಸಿ ನಿಮಗೆ ಖಂಡಣಿ ಚುಕಾಯಿಸಿ ಸಲ್ಲಾ ಮುಗಿಸಿ ಬೆಳಿಗ್ಗೆ ದಂಡು ಕೂಚು ಆಗಿ ಹೋಗವ ಹಾಗೆ ಮಾಡುತ್ತಾರೆಂದು ಈ ವರ್ತಮಾನ ಹೇಳಿ, ಬುದ್ಧಿವಂತರಾದವರನ್ನು ನಮ್ಮ ಬಳಿಗೆ ಕರೆದುಕೊಂಡು ಬರುವುದೆಂ"ದು ಅಪ್ಪಣೆ ಕೊಡಲಾಗಿ, ಜಹಸೂದರು ಪುನಃ ಕಿಲ್ಲೆಬಾಗಿಲಿಗೆ

ಬಂದು ಅಪ್ಪಣೆ ತರಿಸಿಕೊಂಡು ಒಳಗೆ ಹೋಗಿ ಅಲ್ಲಿ ಕಚ್ಚೇರಿ ಮಾಡಿಕೊಂಡು ಕುಳಿತಿದ್ದ ರಾಮರ, ಠಾಣ್ಯ ಮೊದಲಾದ ಸಾಮಂತ, ನಾಯಕವಾಡಿ, ಕಿಲ್ಲೆದಾರ, ದೇಶಾಯಿ ಮೊದಲಾದವರಿಗೆ ಈ ವರ್ತಮಾನ ಯಾವತ್ತೂ ಹೇಳಿ, "ನಿಮ್ಮ ಕಡೆಯಿಂದ ಮೊಕ್ಸರರಾದ ನಾಯಕರನ್ನೂ ಹಾಗೂ ಕಾರಕೂನರನ್ನೂ ಕರೆದುಕೊಂಡು ಬರುವುದೆಂದು ನಮ್ಮ ನಾರಾಯಣರಾಯರ ಅಪ್ಪಣೆಯಾಗಿದ್ದಿತು. ನೀವು ಬುದ್ಧಿವಂತರಾದವರನ್ನು ಕಳುಹಿಸಿಕೊಟ್ಟರೆ ನಮ್ಮ ಧಣಿಗಳು ನಿಮ್ಮ ಕಡೆಯವರನ್ನು ಕರೆದುಕೊಂಡು ಹೋಗಿ, ನವಾಬ ಸಾಹೇಬರ ಭೇಟಿ ಮಾಡಿಸಿ ಖಂಡಣಿ ಮುಗಿಸಿ ಸಲ್ಲಾ ಮಾಡಿಸಿ ಕೊಡುತ್ತಾರೆ" ಎಂದು ಹೇಳಲಗಿ, ಈ ವರ್ತಮಾನವನ್ನು ಸರ್ವರೂ ಕೇಳಿ ತಮ್ಮೊಳಗೆ ತಾವು ಮಾತನಾಡಿಕೊಂಡು ಜಹಸೂದರ ಸಂಗಡ ಸಲ್ಲಾ ಮುಗಿಸಿಕೊಂಡು ಬರಲು ಬ್ಗೆ (೧) ನರಸನಾಯಕ, (೨) ಹಾವಳಯ್ಯ, (೩) ಪೆರಲಯ್ಯ, (೪) ನಾಗಮೂರ್ತಿ, (೫) ಯಾತಲಗರ, (೬) ಧರಣನಾಯಕ ಕುರುಗೋಡು ಚನ್ನಪ್ಪ, (೭) ಕರೂರು ಬರ್ಕನಾಯಕ, (೮) ಹರಕಾರ ಹೀರೋಜಿ, (೯) ವಕೀಲಿ ರಾಮಚಂದ್ರನಾಯಕನ ಮಗ ಕಾಂತರಾಯ, ಹೀಗೆ ಏಳು ಮಂದಿ ನಾಯಕರು ಒಬ್ಬ ವಕೀಲ ಒಬ್ಬ ಹರಕಾರ ಈ ಪ್ರಕಾರ ಒಂಭತ್ತು ಮಂದಿಯನ್ನು ಕಳುಹಿಸಲು, ಇವರು ಕಿಲ್ಲೆಯ ಹೊರಗೆ ಇರುವ ಬಾರಿನ ವಕೀಲ ನಾರಾಯಣರಾಯನ ಬಳಿಗೆ ಬರುವಾಗ್ಗೆ ನಾರಾಯಣರಾಯರು ಇವರನ್ನು ಕರೆದುಕೊಂಡು ಬಹದರ ನವಾಬರ ಬಳಿಗೆ ಹೋಗಿ, ಈ ಪೂರ್ವೋತ್ತರವನ್ನು ಹೇಳಲಾಗಿ – "ಜನಗಳು ಯಾವತ್ತನ್ನೂ ಪಹರಾದಲ್ಲಿ ಇಡುವುದು" ಎಂದು ನವಾಬ ಸಾಹೇಬರ ಅಪ್ಪಣೆಯಾದುದರಿಂದ, ಸದರೀ ಕಿಲ್ಲೆಯೊಳಗಿಂದ ಕರೆತಂದ ಒಂಭತ್ತು ಮಂದಿಯನ್ನೂ ಪಹಾರದಲ್ಲಿಟ್ಟು ಅನ್ನ ನೀರಿಗೆ ಸಹ ಬಿಡದ ಹಾಗೆ ಮಾಡಿದರು.

ಒಂದು ದಿನ ದಂಡಿನೊಳಗೆ ಪಹರಾದಲ್ಲಿದ್ದ ಬಹದರ ನವಾಬರು ಕಿಲ್ಲೊಳಗೆ ಇರುವ ಜನರಿಗೆ ಈ ಬಗೆ ಜವಾಬು ಸ್ವಾಲಿಗೆ ಹಚ್ಚಿ ಒಳಗಿಂದೊಳಗೆ ಕಿಲ್ಲೆಯ ಸುತ್ತಲೂ ರಾಯದುರ್ಗದ ಕೃಷ್ಣಪ್ಪನಾಯಕನನ್ನು ಗುಡ್ಡದ ದಕ್ಷಿಣ ನಾಗರಕೆರೆಯ ಹಿಂದೆ ವಿರಕ್ತಮಠದ ಬಳಿಯ ಮೊಹರ್ಜೆ ಹಾಕಿಕೊಂಡು ಇಳಿದು, ಬಾಕಿ ಉಳಿದ ಮೂರು ದಿಕ್ಕಿಗೂ ನವಾಬ ಬಹದರವರು ತಮ್ಮ ಖಾಸಗಿ ಫೌಜು ಕಾಲುಪೇದೆ ೨,೦೦೦, ಕುದುರೆ ೨೦೦, ತೋಪು ೧೦, ಬಾರು ೫೦೦, ಕರ್ನಾಟಕ ಕಾಲುಪೇದೆ ೧,೦೦,೦೦೦, ಬಾರು ೫೦,೦೦೦, ತೋಪು ೧೦೦, ಕುದುರೆ ೪೦,೦೦೦ ಆನೆ ೧೦೦, ಒಂಟೆ ೫೦೦ – ಈ ಪ್ರಕಾರ ನಾಲ್ಕು ದಿಕ್ಕಿಗೂ ಇಟ್ಟು ಮದ್ದು ಗುಂಡು ಸರ್ವಸನ್ನಾಹ ಮಾಡಿ ನಾಲ್ಕು ದಿಕ್ಕಿಗೂ ಚೌಕಿ ಕೊಟ್ಟು ಆದಿವಸ ಸುಮ್ಮನೆ ಇದ್ದರು. ಬೆಳಗಾದ ಮೇಲೆ ಸದರಿ ಕಿಲ್ಲೆಯೊಳಗಿಂದ ಬಂದ ಏಳು ಮಂದಿ ನಾಯಕರು, ಒಬ್ಬ ವಕೀಲ, ಒಬ್ಬ ಹರಕಾರ ಒಂಭತ್ತು ಮಂದಿಯನ್ನೂ ಕರೆಯಿಸಿ, ನವಾಬ ಸಾಹೇಬರು, "ಕಿಲ್ಲೆ ಠಾಣ್ಯ ಕೊಡಿಸಿದರಂತೂ ಒಳ್ಳಿತು. ಇಲ್ಲವೇ ನಿಮ್ಮನ್ನ ತೋಪಿಗೆ ಕಟ್ಟಿ ಉಡಾಯಿಸಿ ಬಿಡುತ್ತಿದ್ದೇವೆ" ಎಂದು ಅಪ್ಪಣೆ ಕೊಟ್ಟದ್ದರಿಂದ, ಈ ಒಂಭತ್ತು ಮಂದಿಯೂ ಗಾಬರಿಯಾಗಿ ಕಿಲ್ಲೆ ಠಾಣ್ಯ ಕೊಡಿಸುತ್ತಿದ್ದೇವೆಂದು ಹೇಳುವಷ್ಟಕ್ಕೆ ಅವರ ಸಂಗಡ ಬಾರಿನ ವಕೀಲ ನಾರಾಯಣರಾಯರು ೩೦೦ ಬಾರು ಕೊಟ್ಟು ಸದರಿ ಒಂಭತ್ತು ಮಂದಿಯನ್ನೂ ಪಹಾರದಲ್ಲಿಟ್ಟುಕೊಂಡು ಊರು ಮುಂದಕ್ಕೆ ಸುಂಕದ ಕಟ್ಟೆಯ ಬಳಿಗೆ ಬಂದರು. ಕಿಲ್ಲೆಯ ಒಳಗಿನವರು ಗುಡ್ಡದ ಮೇಲಿನ ಕಿಲ್ಲೆ ಬಂದೋಬಸ್ತು ಮಾಡುವ ಬಗ್ಗೆ ಪಸಲು ವೆಂಕಟೇಶನಾಯಕ ಈತನು ಪ್ರಬಲವಾದ ನಾಯಕನು. ೩೦೦ ಮಂದಿ ಕರ್ಣಾಟಕ, ೧೫ ಮಂದಿ

ನಾಯಕರು ಹಾಗೆಯೇ ಮದ್ದು ಗುಂಡು ಸನ್ನಾಹಮಾಡಿ ಹೂಡೆ ಹೂಡಕ್ಕೆ ಹುಲಿಮೊಕಕ್ಕೆ ಸಹ ಹಂಚಿಕೆ ಮಾಡಿ ಹಾಕಿ, ದುರ್ಗ ಬಂದೋಬಸ್ತು ಮಾಡಿದರು. ಕೆಳಗಿನ ಕಿಲ್ಲೆಯಲ್ಲಿ ಕಿಲ್ಲೇದಾರ ಮುನಿಯಪ್ಪ, ಸಖಿನೇಶಿ ಗುಂಡಪ್ಪ, ದೇಶಾಯಿ ತಿಮ್ಮರಾಯ, ೭೦೦ ಮಂದಿ ಕರ್ನಾಟಕ ಜನರು, ೩೫ ಮಂದಿ ನಾಯಕರು – ಈ ಪ್ರಕಾರ ಮದ್ದು ಗುಂಡು ಸಾಹಿತ್ಯಮಾಡಿ, ಹೂಡೆ ಹೂಡಕ್ಕೆ ಹುಲಿಮೊಕಕ್ಕೆ ಸಹ ಹಂಚಿಕೆಮಾಡಿ ಹಾಕಿದರು. ಈ ಪ್ರಕಾರ ಹಂಚಿಕೆಮಾಡಿ ಹೂಡೆ ಒಂದಕ್ಕೆ ಒಂದು ಸಾವಿರ ಬಾಣದ ಪ್ರಕಾರ ಕೆಳಗಿನ ಕಿಲ್ಲೆ ಮೇಲಿನ ಕಿಲ್ಲೆ ಸಹಿತವಾಗಿ ಹೂಡೆಗಳಿಗೆ ಹಾಕಿಸಿದರು. ಬಜಾಲಿ ರೇಖವೇಗಳು ಎಣಿಕೆ ಇಲ್ಲದ ಹಾಗೆ ಕೋಟೆಯ ಸುತ್ತಲೂ ಅಲಂಗದಲ್ಲಿಟ್ಟರು. ಲಗ್ಗೆ, ದುಂಕುಕಲ್ಲು, ಗುಂಡುಗಳನ್ನು ಕೋಟೆಯ ಗೋಡೆಯ ಮೇಲಿಟ್ಟು ಹಾಗೆಯೇ 'ಸಿದ್ಧರಾಮತೋಪು' ಗುಡ್ಡದ ಮೇಲಿರಲಾಗಿ ಅದಕ್ಕೆ ಹೂವಿನ ಹಚ್ಚಡ ಮೊದಲಾದದ್ದು ಏರಿಸಿ ಪೂಜೆ ಮಾಡಿದರು. ಇನ್ನು ಕೆಲವು ಚಿಲ್ಲರೆ ತೋಪು ಗುಡ್ಡದ ಮೇಲೆ ಅಲ್ಲಲ್ಲಿ ದುರಸ್ತು ಮಾಡಿ ಗೋಲಂದಾಜನರನ್ನು ಇಟ್ಟರು. ಕೆಳಗಿನ ಕಿಲ್ಲೆಯಲ್ಲಿದ್ದ ತೋಪುರಗಳ ಹೆಸರು ನಾಗರಕೆರೆ ಹೂಡೆಕ್ಕೆ 'ಭೀಮಸೇನ' ಎಂಬ ತೋಪು. ತರುವಾಯ ದಿವಾಣದ ಹಿಂದೆ ಇರುವ ಹೂಡೆಯದೊಳಗೆ 'ರಾಮಬಾಣ'ವೆಂಬ ತೋಪು, ಮಾಳಾಪುರದ ಗುಂಡಿನ ಮೇಲೆ 'ವೀರಭದ್ರ'ನೆಂಬ ತೋಪು, ತರುವಾಯ ತೆರೆತೆರೆ ಮೂಲೆ ಹೂಡೆಯದಲ್ಲಿ ಜರಮವೆ[>ಲೆ] ಅವರ ತೋಪು, ತರುವಾಯ ಹೊನ್ನಗುಡಿ ಭಾವಿಯ ಮೇಲೆ ಇದ್ದ ಹೂಡೆಯದಲ್ಲಿ ಬಂಗಡಿತೋಪು, ಚಳ್ಳೂರಯ್ಯನ ಭಾವಿ ಮೇಲಿನ ಹೂಡೆಯಕ್ಕೆ ಪಂಚರಶಿ ತೋಪು, ರುದ್ರಪ್ಪನ ಬಾಗಲ ಬಳಿಯಣ ಹೂಡೆಯಕ್ಕೆ ಖಚ್ಚಖಾನಿ ಎಂಬ ತೋಪು, ಗುಡ್ಡದ ಅರತಟ್ಟಿನಲ್ಲಿ ಇದ್ದ ಹೂಡೆಯಕ್ಕೆ ಮೂಕ ಮೈದಾನವೆಂಬ ತೋಪು ಈ ಪ್ರಕಾರ ತೋಪುಗಳು ಇಟ್ಟು ಬಂದೋಬಸ್ತು ಮಾಡಿದರು. ಇಡತಕ್ಕ ಸ್ಥಳದಲ್ಲಿ ನಾಲ್ಕಾರು ಮಕರ ಬಿಬ್ಬಿಗಳನ್ನು ಇಟ್ಟರು. ರುದ್ರಪ್ಪನ ಅಗಸೆ, ಪೂರ್ವಬಾಗಿಲು, ಕುಂಬಾರಬಾಗಿಲು, ನಾಗರಕೆರೆ ಅಗಸೆ – ಈ ನಾಲ್ಕು ಅಗಸೆಗೆ ಗೋಡೆ ಕಟ್ಟಿಸಿ ದಿಡ್ಡಿಗಳು ಮಾಡಿ, ಅದಕ್ಕೆ ಬಾಗಿಲು ಹಾಕಿ ಕೀಲಿಗಳು ಹಾಕಿಸಿ ಬಂದೋಬಸ್ತು ಮಾಡಿಕೊಳ್ಳುತ್ತಿದ್ದರು.

ಹೀಗಿರಲಾಗಿ ನವಾಬ ಬಹದರವರ ಕಡೆಯ ವಕೀಲ ನಾರಾಯಣರಾಯನು ಸುಂಕದಕಟ್ಟೆ ಬಳಿಯಲ್ಲಿ ಮಂದಿ ಸಹ ನಿಂತು, ತಾನು ಕರೆತಂದ ಪಹರೆಯೊಳಗಿದ್ದ ವಕೀಲ ಕಾಂತರಾಯ, ನಾಯಕವಾಡಿಗಳನ್ನು "ಮಾತನಾಡಿರಿ, ನಿಮ್ಮ ಕೋಟೆಯೊಳಗೆ ಇದ್ದವರನ್ನು ಹೊರಕ್ಕೆ ಕರೆದು ಮಾತನಾಡಿರಿ" ಎಂದು ಹೇಳುವಷ್ಟಕ್ಕೆ, "ಪಹರೆಯೊಳಗೆ ಇದ್ದವರಲ್ಲಿ ನಾಲ್ಕು ಮಂದಿಗೆ ಅಪ್ಪಣೆ ಕೊಟ್ಟರೆ ನಾವು ಹೋಗಿ ನಮ್ಮವರ ಸಂಗಡ ಈ ವರ್ತಮಾನ ಹೇಳಿ ಒಡಂಬಡಿಸಿಕೊಂಡು ಬರುತ್ತೇವೆಂತ" ಹೇಳಲು, ಆ ಜನರಲ್ಲಿ ನಾಲ್ಕು ಮಂದಿಯನ್ನು ಪಹರಾದಿಂದ ಬಿಟ್ಟರು. ಅವರು ಬಾಗಿಲು ಮುಂದಕ್ಕೆ ಬರುವಷ್ಟು ಹೊತ್ತಿಗೆ ದಿಡ್ಡಿಯಿಂದ ನಾಲ್ಕು ಮಂದಿಯನ್ನೂ ಕರೆದುಕೊಂಡು ಹೋಗಿ ಈ ಸಮಾಚಾರ ಯಾವತ್ತೂ ಕೇಳಿದ ತರುವಾಯ ನಾಲ್ಕು ಮಂದಿಯನ್ನೂ ಅಲ್ಲಿಯೇ ಇಟ್ಟುಕೊಂಡು, ಹುಲಿ ಮುಖದ ಮೇಲಿನಿಂದ ಈ ನಾರಾಯಣರಾಯನಿಗೆ "ನೀವು ಉಳಿದ ೫ ಮಂದಿಯನ್ನೂ ನಮ್ಮಲ್ಲಿಗೆ ಕಳುಹಿಸಿದರೆ ನಾವು ಒಬ್ಬರಿಗೊಬ್ಬರು ಮಾತನಾಡಿಕೊಂಡು ಆಣೆ, ಪ್ರಮಾಣ, ಭರವಸೆಗಳನ್ನು ತೆಗೆದುಕೊಂಡು ಮುಂದಕ್ಕೆ ನಮಗೆ ಅನ್ನಕ್ಕೆ ಮಾರ್ಗವಾಗುವ ಹಾಗೆ ಮಾಡಿಕೊಂಡು, ನಿಮ್ಮ ಮಂದಿಯನ್ನು ಕಿಲ್ಲೆಯೊಳಗೆ ಠಾಣ್ಯ ಕರೆದುಕೊಳ್ಳುತ್ತಿದ್ದೇವೆಂ"ದು ಪ್ರಮಾಣಗಳು

ಸಹ ಕೊಡಲಾಗಿ, ವಕೀಲ ನಾರಾಯಣರಾಯನು ವಕೀಲ ಕಾಂತರಾಯನನ್ನು ಇಟ್ಟುಕೊಂಡು ಬಾಕಿ ಉಳಿದ ನಾಲ್ಕು ಮಂದಿಯನ್ನೂ ಬಿಟ್ಟನು. ಅವರು ದಿಡ್ಡಿಯೊಳಗಿಂದ ಕೋಟೆಯೊಳಕ್ಕೆ ಬಂದು ಒಳಗೆ ನಿಂತರು.

ತರುವಾಯ ವಕೀಲ ನಾರಾಯಣರಾಯನು ಸಿಟ್ಟಾಗಿ ಬಾರು ಸುದಾ ಬಾಗಲಿಗೆ ಬರುತ್ತಿರಲಾಗಿ ಕೋಟೆಯ ಮೇಲಿಂದ ಕಲ್ಲು ಗುಂಡುಗಳನ್ನು ಹಾರಿಸುವಷ್ಟಕ್ಕೆ ವಕೀಲ ನಾರಾಯಣರಾಯನು ಕಾಂತರಾಯನನ್ನು ಕರೆದುಕೊಂಡು ತನ್ನ ಬಾರು ಸುದಾ ತಿರುಗಿ ಹೋಗಿ ನಡೆದ ಸಮಾಚಾರ ಯಾವತ್ತೂ ಬಹದರ ನವಾಬಸಾಹೇಬರಿಗೆ ಹೇಳಲಾಗಿ ನವಾಬಸಾಹೇಬರವರು ಈ ವರ್ತಮಾನವನ್ನು ಕೇಳಿ ಬಹಳ ಕೋಪದಿಂದ ನಾಲಕು ಕಡೆಗೆ ಚೌಕಿ ಇದ್ದ ಮಂದಿಗೂ ತೋಪು ಹೊಡೆಯಲಿಕ್ಕೆ ಅಪ್ಪಣೆ ಕೊಡಲಾಗಿ, ಗೋಲಂದಾಜರು ಬಂದು ಅಲ್ಲಲ್ಲಿ ತೋಪುಗಳನ್ನು ಇಟ್ಟು ಅಲ್ಲಿ ನಿಂತು ಮದ್ದಿನ ಚೀಲಗಳು. ಗುಂಡುಗಳು ಒಳಗೆ ಹಾಕಿ ಕೊಳ್ಳಿಯನ್ನು ಹಚ್ಚಲಿಕ್ಕೆ ನಾಲ್ಕು ದಿಕ್ಕಿನವರೂ ಆರಂಭ ಮಾಡಿದರು. ಈ ಗುಂಡುಗಳು ಕಿಲ್ಲೆಯ ಒಳಗೂ ಮೇಲೆ ಕೋಟೆಯ ಗುಡ್ಡಕ್ಕೂ ಅಪರಿಮಿತವಾಗಿ ಹೋಗಿ ತಗಲಿದವು. ಗ್ರಾಮದೊಳಗೆ ಇರುವ ಪಾಯನಕಿಲ್ಲೆಯೊಳಗಣವರೂ ಗುಡ್ಡದ ಮೇಲಿನ ಕಿಲ್ಲೆಯೊಳಗೆ ಇರುವ ಕೆಲವರೂ ತೋಪುಗಳಿಗೆ ಮದ್ದು, ಗುಂಡು ಹಾಕಿ ಬೆಂಕಿಯಿಟ್ಟರು. ಕೆಲವರು ರೇಖಲೆ, ಬಜಾರಿ, ರಾಮಸಿಂಗಿ, ಮಕರಡಿಬ್ಬಿ, ಮೊದಲಾದದ್ದು ಬಿಟ್ಟು ಹೊರಗಿನವರ ಮತ್ತು ಅವರ ಗುಂಡಿನ ಆರ್ಭಟ, ತಮಟೆ, ಕೊಂಬು, ನಗಾರಿ, ನೌಪತ್ತು, ಅನೇಕವಾದ ವಾದ್ಯಗಳ ಬೊಬ್ಬೆ, ಆರ್ಭಟವು ಏಕವಾದುದರಿಂದ ಕೆಲವು ಸ್ತ್ರೀಯರ ಗರ್ಭ ಪತವನಾಗುವಂತಾಯಿತು. ಕಿಲ್ಲೆಯೊಳಗೆ ಇದ್ದ ನಾಯಕರಿಗೆ ಒಬ್ಬಬ್ಬರಿಗೂ ಸಾರಾವರಿ, ಜಳ್ಳಿ, ಉಡಾಸ, ಪಾವುಡಾ, ಹೊಕ್ಕಳಗಂಟೆ, ಹುಲಿಚರ್ಮ, ಮುತ್ತಿನಹಾರ, ಕಡಗ, ಸರಪಳಿ, ಕಾಲುಗಗ್ಗರಿ – ಇಂತಹ ಬಿರುದುಗಳನ್ನೂ ಇವರಿಗೆ ಒಂದೊಂದು ಸತ್ತಿಗೆಯ ಪ್ರಕಾರ ಹಾರ, ಹೀರಾವಳಿಗಳನ್ನೂ ಎಲೆ, ಅಡಿಕೆ ಮುಂತಾದುದನ್ನು ಹಿಡಿದು ಹಡಪದವರನ್ನೂ ಕೊಟ್ಟು ಜಗಳಕ್ಕೆ ವೀರಕಂಕಣ ಕಟ್ಟಿಸಿದರು. ಹೊಡೆ ಹೊಡೆಯಕ್ಕೆ ಒಬ್ಬೊಬ್ಬ ನಾಯಕ, ಅವರ ಸಂಗಡ ತಪ್ಪಟೆ, ಕೊಂಬು, ಭಟಂಗಿ ಮಾಡುವ ಒಬ್ಬ ಭಟ್ಟ ಈ ಪ್ರಕಾರ ಕೆಳಗಿನ ಕಿಲ್ಲೆಯ ಹೊಡೆಯದಲ್ಲಿ ಇದ್ದ ನಾಯಕರು ೩೫ ಮಂದಿ, ಮೇಲಿನ ಕಿಲ್ಲೆಯೊಳಗೆ ಇದ್ದ ನಾಯಕರು ೧೫ ಮಂದಿ – ಈ ಪ್ರಕಾರ ನಾಯಕರು ತಮ್ಮ ಬಿರುದುಗಳ ಸಂಗಡ ರಾತ್ರಿಯಲ್ಲಿ ಸಾಲುಸಾಲಾಗಿ ಮಹಾತಾಪುಹಚ್ಚಿ ಬೆಳಗಾಗುವ ಪರಿಯಂತ ವಾದ್ಯ ವೈಭವದ ಇರುವ ಉಡಾಸ, ಪಾವುಡಾಗಳು, ಛತ್ರಚಾಮರಗಳು ಸಂಗಡ ಪಹರೆ ತಿರುಗುವವರು, ನಿಸ್ಸಂಗರಾಗಿ ಗುಂಡುಗಳು ಹೊಡೆಯುವುದನ್ನು ಕಂಡು ಬಹದರ ನವಾಬರಿಗೆ ಬಂದು ಹೇಳಲಾಗಿ, ಒಂದು ದಿವ್ಯ ಪಟ್ಟದ ಆನೆ ಶೃಂಗಾರಮಾಡಿಸಿ ಅಂಬಾರಿಯ ಮೇಲೆ ಹತ್ತಿಕೊಂಡು ಐವತ್ತು ಸಾವಿರ ಮಂದಿ, ಐವತ್ತು ಅಂಬಾರಿ ಹಾಕಿದ ಆನೆ, ಇಪ್ಪತ್ತು ಸಾವಿರ ಕುದುರೆ, ನಗಾರಿ ನಿಶಾನಿಗಳ ಸಂಗಡ ಕಿಲ್ಲೆಯ ಗುಡ್ಡದ ಸುತ್ತಲೂ ತಿರುಗಿ, ಕಿಲ್ಲೆ ಬಹಳ ಬಲವಾಗಿ ಇರುವುದನ್ನು ಕಂಡು, ನವಾಬ ಸಾಹೇಬರು ಮೂಗಿನ ಮೇಲೆ ಬೆಟ್ಟಿಟ್ಟು ಬೆರಳು ಕಚ್ಚಿ, "ಮುತ್ತಿಗೆಗೆ ಮಂದಿ ಸಾಲದು" ಎಂದು ಪಾಳೆಯಗಾರರನ್ನು ಕರೆಯಲಿಕ್ಕೆ ಜಹಸೂದರನ್ನು ಕಳುಹಿಸಿ, ಕಿಲ್ಲೆಯ ಬಳಿಯಣ ಕೆರೆ ತುಂಬಿರಲಾಗಿ ಕೆರೆಯನ್ನು ಒಡೆಬಡಿಯಿಸಿದನು. ಕೆರೆಯೊಳಗಣ ನೀರು ಸಮಗ್ರ ಹೊರಟು ಹೋಗಿ ಜಲಚರಾದಿಗಳು ಯಾವತ್ತೂ ಬಯಲಿಗೆ ಬಿದ್ದುವು. ತರುವಾಯ ಪಾಳೆಯಗಾರರು ತಮ್ಮ ಸೈನ್ಯ ಸಮೇತವಾಗಿ

ಬಂದ ಅವರನ್ನು ಅವರ ಮಂದಿ ಸಹಿತವಾಗಿ ಅಲ್ಲಲ್ಲಿ ಮೊಹರ್ಜದಲ್ಲಿ ನವಾಬ ಸಾಹೇಬರ ಅಪ್ಪಣೆ ಪ್ರಕಾರ ಹಾಕಿದರು. ಈ ವರ್ತಮಾನವನ್ನು ಕಿಲ್ಲೊಯೊಳಗಿಹ ಕಿಲ್ಲೇದಾರ ನಾಯಕವಾಡಿಗಳು ದೊಡ್ಡಪ್ಪನಾಯಕರಿಗೆ ಕುರುಗೋಡಿಗೆ ಬರೆದು ಕಳುಹಿಸಿದರು. ನವಾಬ ಸಾಹೇಬರು ಹೇರಳವಾಗಿ ಫೌಜು, ಪಾಳೆಯಗಾರರನ್ನು ಸಹ ಕರೆಯಿಸಿದ್ದು ಚೌಕಿ ಮಾಡಿದಾರೆಂಬ ವರ್ತಮಾನವನ್ನು ಹೋದ ಕಳ್ಳ ಬಂಟರು ಹೇಳಲಾಗಿ, ಈ ವರ್ತಮಾನ ದೊಡ್ಡಪ್ಪನಾಯಕನು ಕೇಳಿ ಕುರುಗೋಡು ನಾಯಕವಾಡಿಗಳನ್ನು ಕರೆಯಿಸಿ, ಅವರಿಗೆ ಕಡಗ, ಸರಪಳಿ ಮುಂತಾದ ಹಾರಹೀರಾವಳಿಗಳನ್ನೂ ಉಡುಗೊರೆಗಳನ್ನೂ ಕೊಟ್ಟು, ಅವರ ಸಂಗಡ ಕೆಲವು ಮಂದಿ ಜಮೆ ಮಾಡಿಸಿ, "ರಾತೋರಾತು ಹೋಗಿ, ಮೊಹರ್ಜೆಯ ಮೇಲೆ ಬಿದ್ದು ತಡೆದು ಕಿಲ್ಲೆಯೊಳಗೆ ಹೋಗಿರಿ" ಎಂಬುದಾಗಿ ಕಳುಹಿಸಿ ಕೊಡಲು, ಕಾಮ[>ಮಾ]ಗೋವಿಂದ, ವಿಭೀಷಣ, ಕಾಲುದಾರಿ ಬಸಪ್ಪ, ಜೀವಾಳದ ಸತ್ಯಪ್ಪ, ಕಾಮಾ ಸಕ್ಕರಿಗ, ಜೀವಾಳದ ರಘು, ಚಿಕ್ಕ ಸತ್ಯಪ್ಪ, ಕಾಮಾಹನುಮಂತ ಈ ಮುಂತಾದ ನಾಯಕರು ಐನೂರು ಮಂದಿ ಬೆಳ್ಳಿಕಟ್ಟಿನ ತುಪಾಕಿ ಮಂದಿ ಸಹಿತವಾಗಿ ರಾತ್ರಿ ಆರು ತಾಸಿನಲ್ಲಿ ಗುಡ್ಡಕ್ಕೆ ದಕ್ಷಿಣದಿಕ್ಕಿನಲ್ಲಿ ರಾಯದುರ್ಗದ ಕೃಷ್ಣಪ್ಪನಾಯಕನನ್ನು ಮೊಹರ್ಜೆ ಹಾಕಿ ಕೊಂಡಿರಲಾಗಿ, ಮೊಹರ್ಜೆಯ ಮೇಲೆ ಬಿದ್ದು ತಡೆದು ಹನ್ನೆರಡು ಕುದುರೆ ಫತಾವು ತೆಗೆದುಕೊಂಡು ಕಿಲ್ಲೆಯೊಳಗೆ ಹೋಗಿ, ಬಂದ ಮಂದಿಯನ್ನು ಹೂಡೆ ಹೂಡೆಯಕ್ಕೆ ಹುಲಿಮುಖಕ್ಕೆ ಸಹ ಸವನಿಸಿ ಹಾಕಿದರು.

ಮರುದಿವಸ ಬೆಳಿಗ್ಗೆ ನವಾಬ ಸಾಹೇಬನು ಈ ಪೂರ್ವೋತ್ತರವನ್ನು ಕೇಳಿ ಬಹಳ ಕೋಪಗೊಂಡು, ಅಂಬಾರಿ ಮೇಲೆ ಕುಳಿತುಕೊಂಡು ಸುಡುಗಾಡುಮುಟ್ಟಿ[>ಮಟ್ಟಿ] ಬಳಿಯಲ್ಲಿ ಬಂದು ನಿಂತು ಹಲ್ಲಾ ಮಾಡಲಿಕ್ಕೆ ಸೆರಗು ಬೀಸಿದನು. ಅಷ್ಟರಲ್ಲಿ ಗೋಲಂದಾಜರು ತೋಪುಗಳನ್ನು ಹೊಡೆದು ಕೋಟೆ ಮುಂಡೇರಿ ಸಮಗ್ರ ಕೆಡವಿ ಗುಡ್ಡಕ್ಕು ಚಳ್ಳೂರಯ್ಯನ ಭಾವಿಗೂ ಸಹ ಮಧ್ಯೇ ನೆಲಸಮ ಮಾಡಿದರು. ಮುಂಡೇರಿ ಬಿದ್ದುದರಿಂದ ಕೆಳಗೆ ಅಟ್ಟಗಳ ಕಟ್ಟಿಕೊಂಡು ಕಿಲ್ಲೆಯ ಒಳಗಿದ್ದವರು ಮಣ್ಣಿನ ಮೇಲೆ ಬಿದ್ದುಕೊಂಡಿದ್ದರು. ಈ ಬಗೆ ಕೋಟೆಗೋಡೆ ಬಿದ್ದ ಸ್ಥಳಕ್ಕೆ ಸಾವು ತಾವು ಐವತ್ತು ಹೂಡಿಸಿ ಏಕಸಹ ಬತ್ತಿಗಳು ಕೊಡಿಸಿ ಮೂವತ್ತು ಸಾವರಿ ಬಾರು, ಐವತ್ತು ಸಾವಿರ ಕರ್ನಾಟಕ, ನಾಲ್ಕೈದು ಸಾವಿರ ಕಳ್ಳಿ ಹೊತ್ತ ಮಂದಿ – ಈ ಪ್ರಕಾರ ಸನ್ನಾಹ ಮಾಡಿಕೊಂಡು, ಬೊಬ್ಬೆ, ಆರ್ಭಟ, ನಗಾರಿ, ನೌಪತ್ತು, ಕಹಳೆ ಸಂಗಡ ಗುಂಡುಗಳು ಹೊಡೆದುಕೊಳ್ಳುತ್ತ ಬಂದ ದಂಡು, ಮುಗಿಲುದ್ದ ತೆರೆ ಬಂದು ಮುತ್ತಿಕೊಳ್ಳುತ್ತ ಇದ್ದಿತೆಂಬ ಪ್ರಕಾರ ಮದ್ದುಗುಂಡಿನ ಆರ್ಭಟ ಮಾಡಿಕೊಳ್ಳುತ್ತ ಅಗಳ್ತೆಯ ದಡಕ್ಕೆ ಬಂದುದನ್ನು ಕಿಲ್ಲೆಯೊಳಗಿನವರು ಕಂಡು, ತೋಪುಗಳು, ಬಜಾಲಿ, ರೇಖಲಿ, ತುಪಾಕಿ, ಬಾಣ ಮುಂತಾಗಿ ನೆಲೆಯಿಲ್ಲದೆ ಹೊಡಿದರು. ಕಿಲ್ಲೆಯೊಳಗಣ ದುಂಡುಗಿಲಿ ಜನರು ಕವಣೆಯ ಕಲ್ಲು, ಕೋಲು ಬಡಗಿ ಮುಂತಾದ್ದರಲ್ಲಿ ಹಾಕಿದರು. ಗುಡ್ಡದ ಮೇಲಿನವರು ಇದೇ ಪ್ರಕಾರ ಹಲ್ಲಾಮುರಿಯ ಹೊಡೆದರು. ಅಲ್ಲಿ ಐನೂರು ಬಾರು ಗುಡ್ಡದ ಸರಬಿನ ಒಳಗೆ ಬಿದ್ದು ನೆಲೆಯಿಲ್ಲದೆ ಹೋದರು. ಕೆಳಗಿನ ಕಿಲ್ಲೆಯ ಹಲ್ಲಾದಲ್ಲಿ ಸತ್ತಜನರನ್ನು ಎತ್ತಿಕೊಂಡು ಹೋಗುವವರಿಲ್ಲದದೆ ತೋಪಿನ ಗುಂಡಿನ ಏಟಿಗೆ ಅಗಳ್ತೆಯಲ್ಲಿ ಹೆಣದ ಮೇಲೆ ಹೆಣ ಬಿತ್ತು. ಅಪರಿಮಿತವಾದ ಬಾಣದ ರಭಸಕ್ಕೆ ಮಂದಿ ನಿಲ್ಲದೆ ಮುರಿದು ಓಡಿ ಬರುವುದನ್ನು ನವಾಬರು ಕಂಡು ಸಿಟ್ಟಿನಿಂದ ಬಡಿಗಿ ಬಡಿಗಿಯಲ್ಲಿ ಹೊಡಿಸಿ, ಪುನಃ ಹಲ್ಲಕ್ಕೆ ಕಳುಹಿಸಿದನು. ಕೋಟೆಗೆ ಬಂದು ಏಣಿ ಹಾಕಿ ಹತ್ತುವ ಸಮಯಕ್ಕೆ ಬಾಣಕಾರ ಕಾಟಮರಾಜು ಸೂಡು ಸೂಡು ಬಾಣಗಳನ್ನು ಮುರಿದು ಬೆಂಕಿ ಹಚ್ಚಿ

ಹಾಕಿದನು. ಕೆಲವು ಅಗಳ್ತೆಗೆ ಬಾಣಗಳನ್ನು ಕಟ್ಟಿ ಬೆಂಕಿ ಹಚ್ಚಿ ಹಾಕಿದನು. ಕೆಲವು ಅಗಳ್ತೆಗೆ ಬಾಣಗಳನ್ನು ಕಟ್ಟಿ ಬೆಂಕಿ ಹಚ್ಚಿ ಹಾಕಿದರು. ಈ ಬಗೆಯ ಆರ್ಭಟಕ್ಕೆ ಬಹು ಜನ ಅಗಳತೆಯ ಒಳಗೂ ಹೊರಗೂ ಸಹವಾಗಿ ಹೆಣಗಳು ಬಿದ್ದುವು.

ಉದಯ ಕಾಲಕ್ಕೆ ಲಡಾಯಿ ಆರಂಭವಾಗಿ ಒಂಭತ್ತು ಮುಹೂರ್ತದ ಪರಿಯಂತ ಏಳೆಂಟು ಹಲ್ಲಾ ಆಯಿತು. ಸಮಗ್ರ ಹಲ್ಲಾ ಮುರಿದು ಕೆಡಹಿದರು. ಹೆಣಗಳು ಎಣಿಕೆಯಿಲ್ಲದೆ ಹೋಯಿತು. ಒಳಗೂ ಬಹು ಜನ ಹತವಾಗಿ ಹೋಯಿತು. ನವಾಬ ಬಹದರವರು ಹಲ್ಲಾ ಮುರಿದು ಬಂದದ್ದು ಕಂಡು "ಇನ್ನು ಮೇಲೆ ಕಿಲ್ಲೆ ಹೋಗುವುದಿಲ್ಲ. ಹೇಳಿಕೆಯ ಮಾತು ಕೇಳಿ ಬಂದು ಮುತ್ತಿಕೊಂಡು ಬಹು ಜನರನ್ನು ಕೊಂದುಬಿಟ್ಟೆನು" ಎಂದು ತಿಳಿದು, ತನ್ನ ಡೇರೆಗೆ ತಿರುಗಿ ಹೋದನು. ಹೊರಗೆ ಮುತ್ತಿಕೊಂಡ ದಂಡಿನ ಜನರು ಹಂಡೆಯವರ ಕೌಲು ಕೇಳಿಕೊಂಡು ತಮ್ಮ ತಮ್ಮ ಹೆಣಗಳನ್ನು ತೆಗೆದುಕೊಂಡು ಹೋದರು. ದಿಕ್ಕಿಲ್ಲದ ಹೆಣಗಳನ್ನು ಹದ್ದು ಕಾಗೆಗಳು ತಿಂದುವು. ಶಾಕಿನಿ, ಡಾಕಿನೀ ತೃಪ್ತಿಯಾಯಿತು. ಮರುದಿವಸ ವನಾಬಬಹದರವರು ಕಿಲ್ಲೆಯೊಳಗಿಂದ ಪೂರ್ವದಲ್ಲಿ ಹಿಡಿತಂದ ವಕೀಲ ಕಾಂತರಾಯನನ್ನು ಕರೆಯಿಸಿ, ಕೆಲವು ಖಂಡಣಿ ಮುಗಿಸಿಕೊಂಡು ಆತನನ್ನು ಊರೊಳಗೆ ಕಳುಹಿಸಿ ತನ್ನ ದಂಡು ಸಹಿತವಾಗಿ ಮುತ್ತಿಗೆ ಬಿಟ್ಟು ಹೊರಟುಹೋದನು. ಖಂಡಣಿ ಮುಗಿದ ಹಣಕ್ಕೆ ಸಾಹುಕಾರ ಹುಂಡೇಕಾರ ಶೀನಪ್ಪನಾಯಕನ ಪರ ಹವಾಲತಿ ಕೊಟ್ಟರು. ಹುಂಡೇಕಾರ ಶೀನಪ್ಪನಾಯಕನು ಕೆಂಚನಗೌಡನ ಗುಡ್ಡದಲ್ಲಿರಲಾಗಿ ಅಲ್ಲಿಗೆ ಕುರುಗೋಡಿನಲ್ಲಿದ್ದ ದೊಡ್ಡಪ್ಪನಾಯಕನನ್ನು ವೋಲು ತೆಗೆದುಕೊಂಡು ಹೋದರು. ಅದರ ಸಂಗಡ ದೊರೆಗಳ ಹೆಂಡರು ಸಿದ್ದಮ್ಮ, ಪದ್ಮಮ್ಮ ಸಹಿತವಾಗಿ ಕೆಂಚನಗೌಡನ ಗುಡ್ಡಕ್ಕೆ ಹೋದರು. ಅಲ್ಲಿ ಕೆಲವು ದಿವಸವಿದ್ದು ದೊಡ್ಡಪ್ಪನಾಯಕನಿಗೂ ಈ ಹೆಣ್ಣುಮಕ್ಕಳಿಗೂ ಮನಸ್ಸು ಸ್ವಸ್ಥವಿಲ್ಲದುದರಿಂದ ಅಲ್ಲಿಂದ ಸಿದ್ದಮ್ಮ, ಪದ್ಮಮ್ಮ ಉಭಯರೂ ಕುರುಗೋಡಿಗೆ ಬಂದು ತಮ್ಮ ಠಾಣ್ಯಬಲಕಾಯಿಸಿಕೊಂಡು ಬಳ್ಳಾರಿಯ ಮೇಲೆ ರಾಜಾರ್ಥ ಮಾಡಿದರು. ಬಳ್ಳಾರಿಯವರು ಠಾಣ್ಯ ಕೊಡಲಿಲ್ಲ. ಸಿದ್ದಮ್ಮ, ಪದ್ಮಮ್ಮನವರು ಹಂಡೆ ಅನಂತಪುರದಿಂದ ಪ್ರಸನ್ನಪ್ಪನ ಮೊಮ್ಮಗನಾದ ರಾಮಪ್ಪನಾಯಕನೆಂಬುವವನನ್ನು ಕರೆಯಿಸಿ ಕುರುಗೋಡಿನಲ್ಲಿ ಪಟ್ಟಕಟ್ಟಿದರು. ಕುರುಗೋಡು ಬಳ್ಳಾರಿಯವರಿಗೆ ನಿತ್ಯವೂ ಷರಾರತು ಆಗುತ್ತಲೇ ಇತ್ತು. ಅಷ್ಟರೊಳಗೆ ಕುರುಗೋಡಿನೊಳಗೆ ನಾಯಕವಾಡಿಗಳು ಒಬ್ಬರಿಗೊಬ್ಬರಿಗೆ ಮನಸ್ತಾಪವುಂಟಾಗಿ ಅವರಲ್ಲಿ ಕೆಲವು ನಾಯಕರು ಬಳ್ಳಾರಿಗೆ ಬಂದು ನಾಯಕವಾಡಿಗಳ ಸಂಗಡ ಮಾತನಾಡಿ ಮಂದಿ ತೆಗೆದುಕೊಂಡು ರಾತೋರಾತು ಹೋಗಿ ಗುಡ್ಡದ ಮೇಲೆ ಹತ್ತಿ ಕಿಲ್ಲೆ ಠಾಣ್ಯ ಹಾಕಿ, ಕಿಲ್ಲೆಯ ಮೇಲೆ ಇರುವವರನ್ನು ತಲೆ ಹೊಡದು ಗುಡ್ಡದ ಮೇಲೆ ಕೊಂಬು, ತಪಟೆ ವಾದ್ಯ ಮಾಡಿ ಹಗಲುಬತ್ತಿ ಹಚ್ಚಲಾಗಿ, ಕೆಳಗಿನ ಕಿಲ್ಲೆಯೊಳಗೆ ಇದ್ದ ಸಿದ್ದಮ್ಮ ಪದ್ಮಮ್ಮ ಇವರು ಪ್ರಸನ್ನಪ್ಪನ ಮೊಮ್ಮಗನಾದ ರಾಮಪ್ಪನಾಯಕನನ್ನು ಕರೆದುಕೊಂಡು ಹಂಚಿನಹಾಳಿಗೆ ಹೊರಟುಹೋದರು.

ತರುವಾಯ ಕೆಂಚನಗೌಡನ ಗುಡ್ಡದಲ್ಲಿ ವೋಲು ಇದ್ದ ದೊಡ್ಡಪ್ಪನಾಯಕನನ್ನು ಶ್ಯಾನವಾಸಪುರದ ಬಸವನಗೌಡನೆಂಬಾತನು, ಆ ಗ್ರಾಮದಲ್ಲಿ ತೇರು ಆಗುತ್ತಿರಲಾಗಿ ಸರ್ವರೂ ಉತ್ಸವ ನೋಡುವುದಕ್ಕೆ ಹೋಗುವ ಗದ್ದಲವಾಗಿ, ಪಹರೆ ಇದ್ದ ಜನರು ಕೆಲವರು ಉತ್ಸಾಹ ನೋಡಲಿಕ್ಕೆ ಹೋದರು. ಒಂದೆರಡು ಜನ ಕಾದಿರಲಾಗಿ ಅವರಿಗೆ "ಬೇಡಿಇ[>ದ]ಷ್ಟು ಹಣ

ಕೊಡುತ್ತೇವೆ. ನಿಮಗೆ ಸಾಯುವ ಪರಿಯಂತ ಅನ್ನವಸ್ತ್ರ ನಡೆಯಿಸುತ್ತೇವೆ" ಎಂದು ಹೇಳಿ ಅವರಿಬ್ಬರನ್ನೂ ದೊಡ್ಡಪ್ಪನಾಯಕನನ್ನು ಕರೆದುಕೊಂಡು ಬಸವನಗೌಡನು ರಾತ್ರಿಯಲ್ಲಿ ಕರೂರಿಗೆ ಬಂದು ಕಿಲ್ಲೆಯೊಳಗೆ ಹೇಳಿ ಕಳುಹಿಸಲಾಗಿ, ಊರೊಳಗೆ ಇದ್ದವರು ಬಂದು ದೊಡ್ಡಪ್ಪನಾಯಕನನ್ನು ಕರೆದುಕೊಂಡು ಹೋಗಿ ಇಟ್ಟುಕೊಂಡು, ಬಳ್ಳಾರಿಗೆ ಮನುಷ್ಯರನ್ನು ಕಳುಹಿಸಲಾಗಿ, ಬಳ್ಳಾರಿಯಿಂದ ಮಂದಿ ಕುದುರೆ ಹೋಗಿ ದೊಡ್ಡಪ್ಪನಾಯಕನನ್ನು ಕರೆದುಕೊಂಡು ಬಂದರು.

ಕೆಲವು ದಿವಸ ರಾಜ್ಯ ಮಾಡಿದ ಮೇಲೆ ಆದವಾನಿಯ ಮೊಗಲಾಯಿ ಜಸಾಲತ್ತುಜಂಗು ನವಾಬ ಬಹದರವರು ತಮ್ಮ ಕಡೆಯಿಂದ ರಾಜಾ ದೇವೀಚಂದ ಬಹದರನೆಂಬಾತನನ್ನೂ ಅಮೀನಸಾಹೇಬನೆಂಬ ಸರದಾರನನ್ನು ಇವರ ಸಂಗಡ ಜಮೀಯತ್ತು ಕುದುರೆ, ಮಂದಿ, ತೋಪು, ತಾಸು, ಸಾಮಾನು ಸುದಾ, ಮೂಸಾಲಾಲಿ ಎಂಬ ಪ[>ಪಿ]ರಂಗಿ ಆತನ ಸಂಗಡ ಕೆಲವು ಪಿರಂಗಿ ಸಹವಾಗಿ ಕೊಟ್ಟು ಕಳುಹಿಸಲಾಗಿ, ಅವರು ಬಂದು ಬಳ್ಳಾರಿಗೆ ಮುತ್ತಿಗೆ ಹಾಕಿದರು. ಮೂರು ತಿಂಗಳು ಮೊಗಲಾಯಿಯವರು ಮುತ್ತಿಕೊಂಡರು. ಅವರ ಸಂಗಡ ಲಡಾಯಿಮಾಡಿ ಗ್ರಾಮದೊಳಗೆ ಅನ್ನಕ್ಕೆ ಇಲ್ಲದ ಹಾಗಾಯಿತು. ಅದೇ ಸಮಯದಲ್ಲಿ ಶ್ರೀರಂಗಪಟ್ಟಣದಿಂದ ಬಹದರ ನವಾಬನು ಟಾಕೋಟಾಕು ತನ್ನ ಜಮಿಯತು ಸಹ ಬಂದು, ಮೊಗಲಾಯಿ ದೇವಿಚಂದನ ದಂಡಿಗೆ ಮುತ್ತಿಕೊಳ್ಳಲಾಗಿ ಮೊಗಲಾಯಿ ಫೌಜು ಕಿಲ್ಲೆಗೂ ಗುಡ್ಡಕ್ಕೂ ಮುತ್ತಿಗೆ ಹಾಕಲು, ಚೌಕಿ ಪಹರಾದಲ್ಲಿದ್ದವರು ಎಲ್ಲಿಯವರು ಅಲ್ಲಿಂದಲೇ ತಮ್ಮ ಜಮೀಯತು ಸಹಿತ ಜೀವ ಬದುಕಿಸಿಕೊಂಡು ಹೋದರು. ದೇವೀಚಂದನು ಆನೆ ಹತ್ತುತ್ತಿರಲಾಗಿ ಅವನ ತಲೆಯೊಡೆದು ಬಿಟ್ಟರು. ನಗಾರಿ, ನೌಪತ್ತು, ಡೇರಾ, ಆನೆ, ಕುದುರೆ ಸಹಿತವಾಗಿ ನವಾಬ ಬಹದರವರ ಕೈದಸ್ತು ಆಯಿತು. ಅಮೀನಸಾಹೇಬನು ಬೆತ್ತಲು ಕುದುರೆ ಹತ್ತಿಕೊಂಡು ಜೀವ ಬದುಕಿಸಿಕೊಂಡು ಹೋದನು. ಮುಸಾಲಾಲಿಗೆ ದಂಡು ಹೋಗಿ ಮುತ್ತಕೊಂಡಿತು. ಇವರಿಗೂ ಅವರಿಗೂ ಬಹಳ ಲಡಾಯಿ ಆಯಿತು. ಲಡಾಯಿ ಮಾಡಿಕೊಳ್ಳುತ್ತ ಹಗರೀಗೆ ಹೋಗುವಷ್ಟಕ್ಕೆ ಅಲ್ಲಿಂದ ಮುಸಾಲಾಲಿಯನ್ನು ಬಿಟ್ಟು ನವಾಬ ಬಹದರವರ ಫೌಜು ತಿರುಗಿ ಬಂದಿತು. ಆ ಹೊತ್ತು ಸಂಜೆಯಾಯಿತು. ನವಾಬ ಬಹದರವರ ದಂಡು ಹಂದರದಾಳ ಹಳ್ಳದಲ್ಲಿ ಇಳಿದುಕೊಂಡಿತ್ತು. ಅದೇ ದಿವಸ ರಾತ್ರಿಯಲ್ಲಿ ಬಳ್ಳಾರಿ ಕಿಲ್ಲೆಯೊಳಗಿದ್ದ ದೊಡ್ಡಪ್ಪನಾಯಕನೂ, ನಾಯಕವಾಡಿಗಳೂ ಸಹಿತವಾಗಿ ನಾಗರಕೆರೆ ಅಗಳ್ತೆಯಲ್ಲಿ ಹೊರಟು ಕೆಲವು ಸಾಮಾನು ತೆಗೆದುಕೊಂಡು, ಕಿಲ್ಲೆ ಖಾಲಿಮಾಡಿ ತುಂಗಭದ್ರಯನ್ನು ದಾಟಿ ಹೋದರು.

ದೊಡ್ಡಪ್ಪನಾಯಕನು ಆಳಿದುದು ಶಕ ೧೬೯೨ನೆಯ ವಿಕೃತಿ ಸಂವತ್ಸರದ ಲಾಗಾಯಿತು ಆಖೈರು ಶಕ ೧೬೯೭ನೆಯ ಮನ್ಮಥ ಸಂವತ್ಸರದ ಕಾರ್ತಿಕಮಾಸದ ವರೆಗೆ ಆರುವರ್ಷ. ತರುವಾಯ ಬಳ್ಳಾರಿ ಕಿಲ್ಲೆಯೊಳಗಿದ್ದ ದೇಶಾಯಿ, ನಾಡಿಗರು, ಗೌಡ, ಶಾನುಭೋಗ, ದೇವಾಚಾರರವರು ಕೂಡಿ "ದೊಡ್ಡಪ್ಪನಾಯಕನಾದರೆ ತನ್ನ ಮಂದಿ ಸಹಿತವಾಗಿ ಠಾಣ್ಯ ಬಿಟ್ಟು ಹೋದನು. ನಾವು ಮಾತ್ರ ಕಿಲ್ಲೆಯೊಳಗೆ ಉಳಿದವರಾದೆವು. ನಾವೂ ಸುಮ್ಮನೆ ಊರೊಳಗೆ ಇದ್ದರಾಯಿತೇ, ನವಾಬಸಾಹೇಬರ ಮಂದಿ ಬಂದು ಮುತ್ತಿಕೊಂಡು ಮನೆಗಳು ಲೂಟಿ ಮಾಡಿಯಾರು! ನಾವು ಸಮಗ್ರ ಕೆಟ್ಟು ಹೋದೇವು!" ಎಂದು ಆಲೋಚನೆ ಮಾಡಿದ್ದು ತಿಳಿದು, ಬಾಗಿಲು ತೆರೆಯಿಸಿಕೊಂಡು ದೇವಾಚಾರ ಸಹಿತವಾಗಿ ನವಾಬಸಾಹೇಬರ ಬಳಿಗೆ ಬಂದು, ಈ ಅಭಿಪ್ರಾಯ ಯಾವತ್ತೂ

ಮನವಿ ಮಾಡಿಕೊಂಡು ಬೀಗದ ಕೈ ಮುಂದೆ ಇಡಲಾಗಿ, ನವಾಬಸಾಹೇಬರು ತಮ್ಮ ಕಡೆಯ ಹೈದರಲ್ಲಿಬೇಗ್ ಎಂಬಾತನಿಗೆ ಕಿಲ್ಲೆದಾರಿ ಕೊಟ್ಟು, ಆತನ ಸಂಗಡ ಐನೂರು ಬಾರು ಕೊಟ್ಟು ಕಳುಹಿಸಿ ಮನ್ಮಥ ಸಂವತ್ಸರದ ಆಖೈರು ವರೆಗೆ ಕಿಲ್ಲೆ ಠಾಣ್ಯ ಹಾಕಿಸಿದರು.

ತರುವಾಯ ಕುರುಗೋಡು, ತೆಕ್ಕಲುಕೋಟೆ ಸಹಿತವಾಗಿ ಬಹಾದರು ನವಾಬಸಾಹೇಬರ ಠಾಣ್ಯಆಯಿತು. ತರುವಾಯ ರಾಯದುರ್ಗದ ಸಂಸ್ಥಾನಿಕರ ಕಡೆಯ ಕೃಷ್ಣಪ್ಪನಾಯಕನಿಗೆ ಬಳ್ಳಾರಿ, ಕುರುಗೋಡು, ತೆಕ್ಕಲುಕೋಟೆ ಕೊಟ್ಟರು. ತರುವಾಯ ಹೈದರು ಬಕ್ಷಿಯೆಂಬ ಕಿಲ್ಲೆದಾರನನ್ನು ಕೊಟ್ಟು ಕಳುಹಿಸಿದರು. ಹೈದರಬಕ್ಷಿಯ ತರುವಾಯ ರಾಣೋಜಿರಾಯ, ಮನೋಜಿರಾಯರ ಕಿಲ್ಲೇದಾರಿ ಮೊಕರೂರ ಮಾಡಿ ಕಳುಹಿಸಿ ಕೊಟ್ಟರು.

ಬಳ್ಳಾರಿ ಗುಡ್ಡದ ಮೇಲಿರುವ ಕಿಲ್ಲೆಯೂ ಕೆಳಗಿರುವ ಕಿಲ್ಲೆಯೂ ಸಹ ದುರಸ್ತು ಮಾಡಿ ಕಟ್ಟಿಸಲಿಕ್ಕೆ ನವಾಬ ಬಹದೂರವರು ಅಪ್ಪಣೆ ಕೊಟ್ಟು, ಅಲ್ಲಿಂದ ಕಾಮಗಾರಿ ಬಗ್ಗೆ ಹಣ ಹೇರಿಸಿ ಕಳುಹಿಸಲಾಗಿ, ಪೂರ್ವದ ಪಾಳೆಯಗಾರ ಕಟ್ಟಿಸಿದ ಕೋಟೆ ಕೆಡಹಿಸಿ ಹೊಸದಾಗಿ ಬುನಾದಿ ಹಾಕಿ ಧರಗಳು ಅಡ್ಡಗಲ ಹಿಡಿದು ಕೋಟೆ ಬತ್ತೇರಿಗಳು ಸಹ ಠಾಣ್ಯ ಹಾಕಿದ ಲಾಗಾಯಿತು ನವಾಬಸಾಹೇಬರ ಆಖೈರು ವರೆಗೂ ಕಾಮಗಾರಿ ಆಯಿತು. ಆತನ ತರುವಾಯ ಆತನ ಮಗ ಟಿಪ್ಪೂಸುಲ್ತಾನನ ದಿವಸದಲ್ಲಿ ಕೋಟೆ, ಕೊತ್ತಲ, ಅಲಂಗ, ಅಗಳತಿ, ಬತ್ತೇರಿ ಯಾವತ್ತೂ ಕಿಲ್ಲೆ ದುರಸ್ತು ಮಾಡಿಸಿ, ಗಚ್ಚಿನ ಕಾಮಗಾರಿ ಮಾಡಿಸಿದರು.

ದೇಶಾಯಿ, ನಾಡಗೌಡ, ನಾಡು ಕುಲಕರ್ಣಿ, ಸರದೇಶಾಯಿ ಇವರಿಗೆ ನವಾಬ ಬಹದರವರ ದಿವಸದಲ್ಲಿ ಉಂಬಳಿ ಗ್ರಾಮದಲ್ಲಿ ಅರ್ಧ ಹಿಸ್ಸೆ ಕೊಡುತ್ತ ಭೂಸ್ವಾಸ್ತಿ ಇವರಿಗೆ ನಡೆಯಿಸಿದರು, ವರ್ತನೆ ನಡೆಯಿಸಲಿಲ್ಲ. ಟೀಪುಸುಲ್ತಾನನ ದಿವಸದಲ್ಲಿ ಉಂಬಳಿಗ್ರಾಮಗಳು, ವರ್ತನೆ ಇವೆರಡೂ ಜಫ್ತಿಯಾಯಿತು. ಭೂಸ್ವಾಸ್ತಿ ಹಸಿಗೆ ಮುಂತಾದ್ದು ನಡೆಯುತ್ತ ಬಂತು. ಸರನಾಡಗೌಡರ ಸ್ವಾಸ್ತಿ ದೊಡ್ಡಪ್ಪನಾಯಕನು ಸ್ಥಳ ಬಿಟ್ಟು ಹೋದ ಲಾಗಾಯಿತು ಅರಮನೆ ಜಫ್ತಿಯಾಯಿತು. ನವಾಬ ಬಹದರವರು ಆಳಿದ್ದು, ಟೀಪುಸುಲ್ತಾನನ ಆಳಿಕೆ ಸಹ ಶಕ ೧೬೭೮ನೆಯ ದುರ್ಮುಖಿ ಸಂವತ್ಸರದ ಲಾಗಾಯಿತು ಶಕ ೧೭೧೪ನೆಯ ಪರೀಧಾವಿ ಸಂವತ್ಸರದ ವರೆಗೆ ಸಾಲು ೧೭॥

ತರುವಾಯ ಮೊಗಲಾಯಿಯರವರು, ಶ್ರೀಮಂತರು, ಇಂಗ್ರೇಜ ಬಹದರನವರೂ ಸಹ ಪೂರ್ವದಲ್ಲಿ ಬೆಂಗಳೂರ ಮೇಲೆ ಮುತ್ತಿಗೆ ಹಾಕಿದ ವೇಳೆಯಲ್ಲಿ, ಕೆಲವು ರಾಜ್ಯ ಶ್ರೀಮಂತರಿಗೂ ಮೊಗಲಾಯಿಯವರಿಗೂ ಸಲ್ಲಾಮಾಗುವ ವೇಳೆಯಲ್ಲಿ ಮೊಗಲಾಯಿಯವರ ಹಂಚಿಕೆಯೊಳಗೆ ಬಳ್ಳಾರಿಯನ್ನು ಬರೆದು ಕೊಡಲಾಗಿ, ಮೊಗಲಾಯಿಯವರ ಕಡೆಯವರು ಠಾಣ್ಯ ಹಾಕಿಕೊಳ್ಳುವ ನಿಮಿತ್ತ ಬಳ್ಳಾರಿಗೆ ಬಂದು ಕಿಲ್ಲೆಯ ಹೊರಗು ಆರು ತಿಂಗಳು ಫೌಜು ಸಹಿತವಾಗಿ ಇಳಿದಿದ್ದರು. ಕಿಲ್ಲೆಯೊಳಗೆ ಇದ್ದವರು ಪುನಃ ಟೀಪೂಸುಲ್ತಾನನಿಗೆ ಬರೆದುಕೊಂಡು ಅಲ್ಲಿಂದ ಕಿಲ್ಲೆ ಠಾಣ್ಯ ಕೊಡುವುದೆಂಬ ಪ್ರಕಾರ ಹುಕುಂ ತರಿಸಿಕೊಂಡು ಕಿಲ್ಲೆಯೊಳಗಿದ್ದ ಮದ್ದು, ಗುಂಡು, ತೋಪುಗಳು, ರೇಮಿಲೆ, ಜಜಾಲಿ ಮುಂತಾದ ಸಾತು ಸಾಮಾನು ಯಾವತ್ತೂ ಹಿರೇಹಾಳು ಕಿಲ್ಲೆಗೆ ಏರಿಸಿ, ಮೊಗಲಾಯಿಯವರಿಗೆ ಠಾಣ್ಯ ಕೊಟ್ಟರು. ಮೊಗಲಾಯಿಯವರು ಆಳಿದ್ದು ಶಕ ೧೭೧೫ನೆಯ ಪ್ರಮಾದೀಚ ಸಂವತ್ಸರದ ಲಾಗಾಯಿತು ಶಕ ೧೭೩೨ನೆಯ ರೌದ್ರಿ ಸಂವತ್ಸರದ ಮಾರ್ಗಶಿರ

ಮಾಸದ ವರೆಗೆ ೧೭॥ ಸಾಲು ವ್ಯವಹಾರ ನಡೆಯಿಸಿದರು. ಆಗ ಬೀರಮಾನೆಖಾನ್, ನವಾಬಖಾನ್, ಅಮೀನಸಾಹೇಬ, ಬನಗಾನಪಲ್ಲಿ ಆಸನದಲ್ಲಿಖಾನ್, ಚಂದೂಲಾಲ್ – ಈ ಪ್ರಕಾರ ಐದು ಮಂದಿ ಅಮಲು ಮಾಡಿ ಹೋದರು.

ತರುವಾಯ ಮೊಗಲಾಯಿಯವರು ತುಂಗಭದ್ರನದಿಗೆ ದಕ್ಷಿಣದ ರಾಜ್ಯವನ್ನು ಇಂಗ್ರೇಜಿ ಬಹದರವರಿಗೆ ಬಿಟ್ಟದ್ದರಿಂದ, ಬಳ್ಳಾರಿ ಇಂಗ್ರೇಜಿ ಬಹದರವರ ಠಾಣ್ಯ ಆಯಿತು. ಠಾಣ್ಯವಾದ ತರುವಾಯ ಕಿಲ್ಲೆಯೊಳಗೆ ಬೀದಿಗಳನ್ನು ಸಮನಾಗಿ ಮಾಡುವ ನಿಮಿತ್ತ ಮನೆಗಳನ್ನು ಕೆಡವಿಸಲಾಗಿ, ರೈತರು ವಗ್ಯೆರೆ ಸಮಸ್ತರ ಮನೆಗಳಿಗೆ ಲಾಗುವಾಡ ಬರೆಯಿಸಿ ಸರಕಾರದಿಂದ ಕಿಮ್ಮತ್ತು ಸರ್ವರಿಗೂ ಕೊಡಿಸಿ, ಕಿಲ್ಲೆಗೆ ಪೂರ್ವಕ್ಕೆ ನೀಲಮ್ಮನ ತೋಟಕ್ಕೆ ಪೂರ್ವ ಬೀಳುಬಿದ್ದ ಭೂಮಿ ಇರಲಾಗಿ, ಹೊಸಪೇಟೆ ಕಟ್ಟುವುದಕ್ಕೆ ಕೌಲು ದೇವಾಚಾರದವರಿಗೆ ಬರೆಯಿಸಿ ಕೊಟ್ಟ ಹಾಗೆ, ಹಿಂದೂ ಜನ ಬ್ರಾಹ್ಮಣರು, ಮದುವೆ, ಮುಂಜಿ ಮಾಡಿ, ದೇವರಿಗೆ ನಡೆದುಕೊಳ್ಳುವ ಬಗ್ಗೆ ಹುಜೂರು ಹುಕುಂ ಪ್ರಕಾರ ಹೊಸಪೇಟೆಯೊಳಗೆ ನಿರ್ಮಾಣ ಮಾಡಿ ಇರುವ ಶ್ರೀಲಕ್ಷ್ಮೀನಾರಾಯಣಸ್ವಾಮಿ ದೇವಾಲಯವನ್ನು ಸರ್ಕಾರದ ಹಣ ಖರ್ಚು ಮಾಡಿ ಕಟ್ಟಿಸಿ, ಶ್ರೀದೇವರನ್ನು ಸೋಮಸಮುದ್ರದಿಂದ ತರಿಸಿ ಪ್ರತಿಷ್ಠೆ ಮಾಡಿಸಿ ಶ್ರೀದೇವರ ಪೂಜೆ ಮಾಡುವ ಬಗ್ಗೆ ಕಸಬಾ ಬಳ್ಳಾರಿಯಲ್ಲಿ ಕೆಲವು ಖುಷ್ಕಿ ಜಮೀನು ಕೊಟ್ಟಿದ್ದರು. ಅಸುಂಡಿಯಲ್ಲಿ ಕೆಲವು ತರೀ ಜಮೀನು ಕೊಟ್ಟು ಪೂಜೆ ಮಾಡುವ ಬಗ್ಗೆ ಪೇಟೆ ಸಣ್ಣ ವೆಂಕಪ್ಪಾಚಾರ್ಯರು, ಮಣೂರು ಶ್ರೀನಿವಾಸಾಚಾರ್ಯರು – ಇಬ್ಬರನ್ನೂ ನೇಮಕ ಮಾಡಿ ಇವರಿಗೆ ಇನಾಮತಿ ಸನ್ನದು ಬರೆಯಿಸಿಕೊಟ್ಟರು. ಬಣಜಿಗರು ಮುಂತಾದ ಲಿಂಗವಂತ ಜನರಿಗೆ ಪೇಟೆ ಬಸವೇಶ್ವರಗುಡಿ ಕಟ್ಟಿಸಿ ಆ ದೇವರಿಗೆ ಕಸಬಾ ಬಳ್ಳಾರಿ ಖುಷ್ಕಿ ಜಮೀನು ಇನಾಮು ಕೊಟ್ಟು, ಪೂಜೆ ಮಾಡುವ ಬಗ್ಗೆ ಪೂಜಾರಿಯನ್ನು ನೇಮಕ ಮಾಡಿದರು. ಮುಸಲ್ಮಾನ ಜನರಿಗೆ ಜುಮ್ಮಾ ಮಸಜೀದ ಕಟ್ಟಿಸಿ ಚಿರಾಖ ಬಗ್ಗೆ ಕಸಬಾ ಬಳ್ಳಾರಿ ಖುಷ್ಕಿ ಜಮೀನು ಪೈಕಿ ಇನಾಮು ಕೊಟ್ಟು, ನಮಾಜು ಮಾಡುವ ಬಗ್ಗೆ ನೇಮಕ ಮಾಡಿದರು. ಈ ಪ್ರಕಾರ ಸರಕಾರದಿಂದ ದೇವಳ ಕಟ್ಟಿಸಿ ಕೌಲು ಕೊಟ್ಟ ಕಾರಣ ಹೊಸಪೇಟೆಯಲ್ಲಿ ನಾನಾಕುಲ, ಸಮಸ್ತ (ಕೋಮಿ)ನವರೂ ಮನೆಗಳು, ಮಳಿಗೆ ಮುಂತಾದ್ದು ಕಟ್ಟಿಕೊಂಡರು. ಪೇಟೆ ಬಸ್ತಿ[>ವಸತಿ]ಯಾಗಿ ಸಂತೆಯಾಗುತ್ತಿದ್ದಿತು. ದೇಶಾಯಿ, ನಾಡಗೌಡ, ನಾಡ ಕುಲಕರ್ಣಿ, ಸರದೇಶಾಯಿ ಈ ನಾಲ್ಕು ಬಾಬಿನವರ ಭೂಸ್ವಾಸ್ತಿ ಪೈಕಿ ಕೆಲವು ಜಪ್ತಿಯಾಗಿ ಅಲ್ಪಸ್ವಲ್ಪ ಭೂಸ್ವಾಸ್ತಿ ನಡೆಯುತ್ತಿದ್ದಿತು.

ಹಂಡೆ ಬಾಲದ ಹನುಮಪ್ಪನಾಯಕ ಬಳ್ಳಾರಿಗೆ ಬಂದು ಸಂಸ್ಥಾನ ಮಾಡಿದ. ಶಾ.ಶ. ೧೪೮೯ ಪ್ರಭವ ಸಂವತ್ಸರದ ಲಾಗಾಯಿತು. ಶಾ.ಶ. ೧೭೩೧ನೆಯ ಶುಕ್ಲ ಸಂವತ್ಸರದ ವರೆಗೆ ಅವರು ಆಳಿದ ಗೋಷ್ವಾರೆ ಸಂವತ್ಸರಗಳು.

ಬಾಲದ ಹನುಮಪ್ಪನಾಯಕ, ಶಕ ೧೪೮೯ನೆಯ ಪ್ರಭವ ಸಂವತ್ಸರದ ಲಾಗಾಯಿತು ೧೫೫೪ನೆಯ ಅಂಗೀರಸ ಸಂವತ್ಸರದ ವರೆಗೆ ವರ್ಷ ಅರವತ್ತಾರಕ್ಕೆ ಆಳಿದವರು ಹಂಡೆ ಬಾಲದ ಹನುಮಪ್ಪನಾಯಕ, ಈತನ ಮಗ ಹಿರೆ ಮಲುಕಪ್ಪನಾಯಕ, ಈತನ ಮಗ ಸಿದ್ದಪ್ಪನಾಯಕ, ಈತನ ಮಗ ಹಿರೆರಾಮಪ್ಪನಾಯಕ – ಈ ನಾಲ್ಕು ಮಂದಿ ಆಳಿದ ವರ್ಷಗಳು ೬೬.

ಮೊಗಲಾಯಿಯವರ ಆಳಿಕೆ: ಬಡೇಸಾಹೇಬ ಶಕ ೧೫೫೫ನೆಯ ಶ್ರೀಮುಖ ಸಂವತ್ಸರದ ಲಾಗಾಯಿತು ಶಕ ೧೫೬೧ನೆಯ ಪ್ರಮಾದಿ ಸಂವತ್ಸರದ ವರಿಗೆ ವರ್ಷಂಗಳು ೭. ಕರಿಮಸಾಹೇಬ ಶಕ ೧೫೬೨ನೆಯ ವಿಕ್ರಮ ಸಂವತ್ಸರದ ಲಾಗಾಯಿತು ಶಕ ೧೫೬೬ನೆಯ ತಾರಣ ಸಂವತ್ಸರದ ವರೆಗೆ ೫ ವರ್ಷ. ಸಿದ್ಧಿ ಮಸೂದಖಾನನು ಶಕ ೧೫೬೭ನೆಯ ಪಾರ್ಥಿವ ಸಂವತ್ಸರದ ಲಾಗಾಯಿತು ಶಕ ೧೫೭೮ನೆಯ ದುರ್ಮುಖಿ ಸಂವತ್ಸರದ ವರೆಗೆ ೧೨ ವರ್ಷಂಗಳು, ಕಂದನೂಲು ವಗೈರೆಯವರ ಆಳಿಕೆ: ಶಕ ೧೫೭೯ನೆಯ ಹೇವಿಳಂಬಿ ಸಂವತ್ಸರದ ಲಾಗಾಯಿತು ಶಕ ೧೬೧೪ ಅಂಗೀರಸ ಸಂವತ್ಸರದ ವರೆಗೆ ವರ್ಷ ೩೬.

ಹಂಡೆಯವರ ಆಳಿಕೆ: ಹಿರೆ ರಾಮಪ್ಪನಾಯಕನ ಮಗ ಚಿಕ್ಕಮಲುಕಪ್ಪನಾಯಕ, ಈತನ ಮಗ ಚಿಕ್ಕನಾಯಕ ಸಾಹೇಬ ಇವರು ಇಬ್ಬರೂ, ಮೊಗಲಾಯಿಯವರು ರಾಜ್ಯ ಕಟ್ಟಿಕೊಂಡ ಕಾರಣ ರಾಜ್ಯವಾಳಲಿಲ್ಲ. ಈ ಚಿಕ್ಕನಾಯಕ ಸಾಹೇಬರ ಮಗ ದ್ಯಾವಪ್ಪನಾಯಕ-ಶಕ ೧೬೧೫ನೆಯ ಶ್ರೀಮುಖ ಸಂವತ್ಸರದ ಲಾಗಾಯಿತು ಶಕ ೧೬೩೦ನೆಯ ಸರ್ವಧಾರಿ ಸಂವತ್ಸರದ ವರೆಗೆ ೧೬ ವರ್ಷ. ಸದರೀ ದ್ಯಾವಪ್ಪನಾಯಕನ ಮಕ್ಕಳು (೧) ಹನುಮಪ್ಪನಾಯಕ, (೨) ಹಿರೆ ರಾಮಪ್ಪನಾಯಕ, (೩) ಚಿಕ್ಕರಾಯಪ್ಪನಾಯಕ – ಈ ಮೂರು ಮಂದಿ ಪೈಕಿ ಹನುಮಪ್ಪನಾಯಕನು ಶಕ ೧೬೩೧ ವಿರೋಧಿ ಸಂವತ್ಸರದ ಲಾಗಾಯಿತು ಶಕ ೧೬೪೦ನೆಯ ವಿಳಂಬಿ ಸಂವತ್ಸರದ ವರೆಗೆ ವರ್ಷ ೧೦. ಈತನ ತಮ್ಮ ಹಿರೆ ರಾಮಪ್ಪನಾಯಕ ಶಕ ೧೬೪೧ನೆಯ ವಿಕಾರ ಸಂವತ್ಸರದ ಲಾಗಾಯಿತು ೧೬೪೭ನೆಯ ವಿಶ್ವಾವಸು ಸಂವತ್ಸರದ ವರೆಗೆ ವರ್ಷ೭. ಈತನ ತಮ್ಮ ಚಿಕ್ಕರಾಮಪ್ಪನಾಯಕ ಶಕ ೧೬೪೮ನೆ ಪರಾಭವ ಸಂವತ್ಸರ ಲಾಗಾಯಿತು ಶಕ ೧೬೫೨ನೆಯ ಸಾಧಾರಣ ಸಂವತ್ಸರದ ವರೆಗೆ ವರ್ಷಗಳು ೫.

ಈ ಮೂರು ಮಂದಿಗೂ ಸಂತಾನವಿಲ್ಲದೆ ಹೋದುದರಿಂದ ಮೂಲ ಪುರುಷನಾದ ಹಂಡೆ ಹನುಮಪ್ಪನಾಯಕನ ಮಗನಾದ ಅಂಕುಶರಾಯನ ವಂಶಸ್ಥರಾದ ಸಿದ್ದಪ್ಪನಾಯಕ, ಪ್ರಸನ್ನನಾಯಕ ಎಂಬ ಇಬ್ಬರು ಅಣ್ಣತಮ್ಮಂದಿರು ಇರಲಾಗಿ ಸಿದ್ದಪ್ಪನಾಯಕನ ಮಗ ರಾಮ[+ಪ್ಪ]ನಾಯಕನನ್ನು ಹಂದರಹಳ್ಳಿಯಿಂದ ಕರೆತಂದು ಪಟ್ಟಕಟ್ಟಿದರು. ದ್ಯಾವಪ್ಪನಾಯಕನ ಚಿಕ್ಕ ಹೆಂಡತಿ ನೀಲಮ್ಮನು ಶಕ ೧೬೫೩ನೆಯ ವಿರೋಧಿಕೃತು ಸಂವತ್ಸರದ ಲಾಗಾಯಿತು ಶಕ ೧೬೫೬ನೆಯ ಆನಂದ ಸಂವತ್ಸರದ ವರೆಗೆ ವರ್ಷ ೪. ಹಂದರಹಾಳ ಸದರಿ ರಾಮಪ್ಪನಾಯಕನು ಶಕ ೧೬೫೭ನೆಯ ರಾಕ್ಷಸ ಸಂವತ್ಸರ ಲಾಗಾಯಿತು ಶಕ ೧೬೮೬ನೆಯ ತಾರಣ ಸಂವತ್ಸರದ ವರೆಗೆ ೩೦ ವರ್ಷ. ಈತನ ತಮ್ಮ ಹನುಮಪ್ಪನಾಯಕನ ಆಳಿಕೆ: ಶಕ ೧೬೮೭ನೆಯ ಪಾರ್ಥಿವ ಸಂವತ್ಸರದ ಲಾಗಾಯಿತು ಶಕ ೧೬೯೧ನೆಯ ವಿರೋಧಿ ಸಂವತ್ಸರದ ವರೆಗೆ ೫ ವರ್ಷ. ಈತನು ಪಾಲನೆ ಮಾಡಿಕೊಂಡ ಮಗ ದೊಡ್ಡಪ್ಪನಾಯಕನು ಶಕ ೧೬೯೨ ವಿಕೃತಿ ಸಂವತ್ಸರದ ಲಾಗಾಯಿತು ಶಕ ೧೬೯೭ ಮನ್ಮಥ ಸಂವತ್ಸರದ ವರೆಗೆ ೬ ವರ್ಷ.

ಬಹದರ ನವಾಬ ಈತನ ಮಗ ಟಿಪ್ಪೂಸುಲ್ತಾನ ಸಹ ಆಳಿದ್ದು : ಶಕ ೧೬೯೮ ದುರ್ಮುಖಿ ಸಂವತ್ಸರದ ಲಾಗಾಯಿತು ಶಕ ೧೭೧೪ನೆಯ ಪರೀಧಾವಿ ಸಂವತ್ಸರದ ಶ್ರಾವಣ ಮಾಸದ ವರೆಗೆ ೧೬॥ ವರ್ಷಗಳು.

ಮೊಗಲಾಯಿ ಅಮಲು : ಶಕ ೧೭೧೪ನೆಯ ಪರೀಧಾವಿ ಸಂವತ್ಸರದ ಭಾದ್ರಪದ ಮಾಸ ಲಾಗಾಯಿತು ಶಕ ೧೭೨೨ ರೌದ್ರಿ ಸಂವತ್ಸರದ ಕಾರ್ತಿಕ ಮಾಸದ ವರೆಗೆ ವರ್ಷ ೮.

ಕುಂಪಣಿ ಸರ್ಕಾರ ಇಂಗ್ರೇಜಿ ಬಹದರವರ ಅಮಲು: ಶಕ ೧೭೨೨ ರೌದ್ರಿ ಸಂವತ್ಸರದ ಮಾರ್ಗಶಿರ ಮಾಸದ ಲಾಗಾಯಿತು ಶಕ ೧೭೩೧ ಕಾರ್ತಿಕ ಮಾಸದ ವರೆಗೆ ಜಾರಿ ವರ್ಷಗಳು ೯.

ಅಂತು ಹಂಡೆ ಬಾಲದಹನುಮಪ್ಪನಾಯಕನ ಲಾಗಾಯಿತು ಕುಂಪಣಿ ಅಮಲುವರೆಗೆ – ೨೪೨॥ ವರ್ಷಗಳು.

❖❖

೧೧೧
ಶ್ರೀ ಕೊಮಾರದೇವರ ಕ್ಷೇತ್ರದ ಕೈಫಿಯತ್ತು

ಮೆಕೆಂಝಿ ಸಂಪುಟ : ೩೬೯

ಪೂರ್ವಕಾಲದಲ್ಲು ತಾರಕಾಸುರನೆಂಬ ರಾಕ್ಷಸನು ತಪಸ್ಸು ಮಾಡಿದ ಕಾರಣ ಯೀಶ್ವರನು ಪ್ರಸನ್ನವಾಗಿ, "ಯೇನು ಬೇಕು?" ಯಂದು ಕೇಳಲಾಗಿ ತಾರಕಾಸುರನು ಕೇಳಿಕೊಂಡದ್ದು: "ತ್ರಿಮೂರ್ತಿಗಳ ಕೈಯಲಿನ್ನು, ಯಿಂದ್ರಾದಿಗಳ ಕೈಲಿ ನನಗೆ ಮರಣಯಿಲ್ಲದ ಹಾಗೆ ವರವು" ಕೇಳಿಕೊಂಡ ಕಾರಣ, ಅದರಂತೆ ಈಶ್ವರನು ವರವು ಕೊಟ್ಟು ಯಿದ್ದದರಿಂದಾ, ಯೀ ತಾರಕಾಸುರನು ಅಸಮಾನ ಪರಾಕ್ರಮವಂತನಾಗಿ ದೇವತೇರಿಗೆ ರುಷಿಗಳಿಗೆ ವುಪದ್ರ ಕೊಡಲಾಗಿ, ಅವರು ಹೋಗಿ ಬ್ರಹ್ಮ ವಿಷ್ಣು ಮಹೇಶ್ವರಗೆ ಮೊರೆಯಿಡಲಾಗಿ, ಅವರು ಕೇಳಿ 'ತಾರಕಾಸುರಗೆ ಯೀಶ್ವರನು ವರಕೊಟ್ಟು ಯಿದ್ದುದರ ವಿಶೇಷದಿಂದಾ ಅದರಿಂದಾ ಸೈರಿಸಲಿಕ್ಕೆ ಅಶಕ್ಯವೆಂದು ತಿಳಿದು, ಹಿಮಂತನ ಹೆಂಡತಿಯಾದ ಮೇನಕಿ ಸಂತಾನಾರ್ಥವಾಗಿ ಗೌರೀವ್ರತ ಮಾಡಿದ್ದರಿಂದಾ, ಆಕಿ ಭಕ್ತಿತಾತ್ಪರ್ಯ್ಯ ಮೆಚ್ಚಿದಂತಾಕಿಯಾಗಿ ಪ್ರಸನ್ನಳಾಗಿ, "ನಾನು ವೊಂದು ಆಶೆದಿಂದಾ ಬಂದು, ನಿನ್ನ ಗರ್ಭದಯಿಂದ ಅವತರಿಸುತ್ತಾ ಯಿದ್ದೇನೆ"ಯೆಂದು ವರವು ಕೊಟ್ಟು ಯಿದ್ದ ಕಾರಣ, ಆ ಮೇನಕಿ ಗರ್ಭದಿಂದ ಉದ್ಭವವಾದ ಕನ್ನಿಕಿಯನಾ ಯೀಶ್ವರ ನಾವೆ ಅನ್ಯರಿಂದಾ ಪಾಣಿಗ್ರಹಣ ಮಾಡಲಿಕ್ಕೆ ಅಶಖ್ಯವಾಗಿ ಯಿದ್ದೀತುಯೆಂದು ತಿಳಿದು, ಆ ಯಿಶ್ವರನ ಅನುಗ್ರಹದಿಂದಾ ಆ ಕನ್ನಿಕೆ ಗರ್ಭವಾಸದಲ್ಲಿ ವುತ್ಪನ್ನವಾದಂತಾ ಸಮರ್ಥನು ಯೀ ತಾರಕಾಸುರನ್ನ ಸಂಹಾರ ಮಾಡಬೇಕೆಂದು ಯೋಚಿನಿ ಮಾಡಿ, ಅದರಂತೆ ಹೇಳಿ ಯಿಂದ್ರಾದಿಗಳಿಗೆ ಅಪ್ಪಣೆ ಕೊಟ್ಟವರಾದರು.

ತರ್ವಾಯ ಗೌರಿ ಕೊಟ್ಟ ವರವಿನ ಪ್ರಕಾರಕ್ಕೆ ಹಿಮವಂತಪರ್ವತನ ಹೆಂಡತಿ ಮೇನಕಿಗೆ ಗರ್ಭೋತ್ಪತ್ತಿಯಾಯಿತು. ನವಮಾಸ ಸಂಪೂರ್ನವಾದ ಬಳಿಕ ದಿವ್ಯ ತೇಜೊಪುಂಜವಾದ ಕಂಡಿ[>ನಿ]ಕಿ ವುದ್ಭವವಾದಳು.

ದಶರಾತ್ರಿಯಾದ ಬಳಿಕ ಪುಣ್ಯಾಹವಾಚನಾದಿ ಮಹೋತ್ಸವಂಗಳು ಮಾಡಿಸಿ ಬಹಳ ಪ್ರೇಮದಿಂದ ಸಂರಕ್ಷಣೆ ಮಾಡಿಕೊಳ್ಳುತ್ತ ಬಂದರು. ಆ ಕನ್ಯಕಿ ದಿನ ದಿನ ಪ್ರವರ್ಧಮಾನಳಾಗಿ ಹತ್ತು ವರುಷದ ಪ್ರಾಯಕ್ಕೆ ಬಂದಳು. ಆಗ ಯೀಶ್ವರನು ಕೈಲಾಸದಿಂದ ಭೃಂಗೀಶ್ವರನ ಸಹಿತವಾಗಿ ಬಂದು, ಹಿಮಂತಪರ್ವತದ ಪ್ರಾಂತ್ಯದಲ್ಲು ರುಷಿವೇಷಧಾರಿಯಾಗಿ ತಪಸ್ಸು ಮಾಡುತ್ತ ಯಿರಲಿಕ್ಕೆ, ಹಿಮವಂತನು ಕಂಡು ಅವರಿಗೆ ಬಹಾಳ ಭಕ್ತಿಯಿಂದಾ ಪ್ರತ್ಯಾಭಿಧಾನಾಭಿವಂದನೆಗಳು ಮಾಡಿ, ತನ್ನ ಮಗಳಾದ ಪಾರ್ವತಿಯಂಬ ಕನ್ನಿಕೆಯನು ಅವರ ಬಳಿಯ ಉಪಚಾರ ಮಾಡೋ ನಿಮಿತ್ಯವಾಗಿ ಕಳಿಸಿದನು. ಆ ಕನ್ನಿಕೆ ಮರುವೇಷಧಾರಿಯಾದ ಪರಮೇಶ್ವರನ ಬಳಿಯ ಬಹಾಳ ಭಕ್ತಿತಾತ್ಪರ್ಯದಿಂದ ಸಮಿತ್ಕುಸುಮ ಫಲಾದಿಗಳು ಸಮರ್ಪಣೆ ಮಾಡುತ್ತ ಯಿದ್ದ ವ್ಯಾಳ್ಯಾದಲ್ಲಿ, ವುಭಯತ್ರರಿಗೆ ಅನ್ಯೋನ್ನ ಅನುರಾಗವನ್ನು ಹುಟ್ಟಿ, ಸಂಯೋಗ ಆಗುವ ಹಾಗೆ ಮಾಡಿಸಬೇಕೆಂದು ಯಿಂದ್ರಾದಿಗಳು ಮನ್ಮಥನಾ ಬಹುವಿಧದಿಂದ ಪ್ರಾರ್ಥನೆ ಮಾಡಲಾಗಿ, ಆ ಮನ್ಮಥನು ಮಂದಮಲಯಾನಿಲವಸಂತಾನ ಸಹಿತವಾಗಿ ಅವನ ಪ್ರದೇಶಕ್ಕೆ ಬಂದು, ಪಾರ್ವತಿಯಂಬೊ ಕನ್ನಿಕೆ ಯೀಶ್ವರನ ಬಳಿಯ ವುಪಚಾರ ಮಾಡುತ್ತಾ ಯಿರಲಾಗಿ, ಮನ್ಮಥನು ಯೀಶ್ವರನ ಮೇಲೆ ಕುಸುಮಾಸ್ತ್ರವನ್ನು ಮೋಕ್ಷಣ ಮಾಡಿದರಿಂದಾ, ಆತಗೆ ಚಿತ್ತಚಾಂಚಲ್ಯವಾದ ಕಾರಣ ಮೌನವನ್ನು ಬಿಟ್ಟು, ಬಹಳ ಅಹಂಕಾರರಸ ಹುಟ್ಟಿ ನೇತ್ರತ್ರಯದಿಂದ ನೋಡಲಾಗಿ ಮನ್ಮಥನು ಭಸ್ಮೀಭೂತನಾಗಿ ಹೋದನು.

ಆ ತರುವಾಯ ಯೀಶ್ವರನು ತನ್ನ ಬಳಿಯ ನಿಂತು ಯಿದ್ದ ತ್ರಿಲೋಕಸುಂದರ ಮೂರ್ತಿಯಾದ ಕನ್ನಿಕೆಯನಾ ಶಾಂತರಸದಿಂದ ನೋಡುವಷ್ಟರಲ್ಲಿ, ಹಿಮವಂತನು ಬಂದು ಮಗಳನ್ನು ಕರಕೊಂಡು ಹೋಗಿ ಮೇನಕಿಗೆ ವೊಪ್ಪಿಸಿದನು. ಆ ಕನ್ನಿಕೆ ಯೀಶ್ವರನ ಮೇಲ ಬಹಳ ವ್ಯಾಮೋಹದಿಂದ ತದೇಕ ಧ್ಯಾನವಾಗಿದ್ದಳು. ಈಶ್ವರನು ಆ ಕನ್ನಿಕೆ ಮೇಲೆ ಬಹಳ ವ್ಯಾಮೋಹ ಹುಟ್ಟಿ ನೋಡಬೇಕೆಂದು ತನ್ನ ತಪಸ್ಸು ಬಿಟ್ಟು ಕೊರವಂಜಿವೇಷದಿಂದಾ ಹಿಮವಂತನ ನಗರಕ್ಕೆ ಬರಲಾಗಿ, ಪಾರ್ವತಿ ಆ ಕೊರವಂಜಿನಾ ಕರೆಕಳುಹಿಸಿ "ತನ್ನ ಮನಸ್ಸಿನಲ್ಲಿ ಯಿದ್ದ ಅಭಿಪ್ರಾಯವನ್ನು ವಾಗುತ್ತಾ ಯಿದ್ದಿತೋ ಯಿಲ್ಲವೋ?" ಯಂದು ಸಂದೇಹದಿಂದಾ ಪ್ರಸನ್ನೆಯಾಗಿ ಕೇಳಲಾಗಿ, ಆಕೆ ಹೇಳಿದ್ದು "ನಿನ್ನ ಮನಸ್ಸಿನಲ್ಲಿ ವೊಬ್ಬ ಮಹಾಪುರುಷನ್ನ ಕೋರಿಕೊಂಡು ಯಿದ್ದಿ. ಮನೋರಥ ಸಾಫಲ್ಯವಾಗುತ್ತಾ ಯಿದ್ದಿತೊ ಯಿಲ್ಲವೊ ಅಂತ ಅದಕ್ಕೆ ನೀನು ಪ್ರಶ್ನೆ ಮಾಡಿ ಯಿದ್ದೀ. ಅದಕ್ಕೆ ನೀನು ಮನಸ್ಸು ಸಂಶಯ ಮಾಡಲಿಕ್ಕೆ ಕಾರಣವಿಲ್ಲ. ನಿನ್ನ ಮನಸ್ಸಿನಲ್ಲಿ ಆತನ ಮೇಲೆ ಯೆಷ್ಟು ವ್ಯಾಮೋಹವಿದ್ದೀತೊ ತದಾನುಸಾರವಾಗಿ ಆತನು ನಿನ್ನ ಮೇಲೆ ಅಷ್ಟು ಮೋಹವು ಯಿದ್ದೀತು. ಶೀರ್ಘದಲ್ಲಿ ನಿನ್ನ ಮನೋರಥ ಸಾಫಲ್ಯವಾಗುತ್ತಾ ಯಿದೆ"ಯಂದು ಹೇಳಿ, ಆಕಿ ಮುಂದೆ ಯಿಟ್ಟಂತಾ ಕಾಣಿಕೆ ತೆಗೆದುಕೊಂಡು ಹೋದಳು. ಆಗ ಆಶ್ರಮದಲ್ಲಿ ಯಿದ್ದ ಪಾರ್ವತಿ ಪುನಹ ದರುಶನಾರ್ಥವಾಗಿ ಚಿಂತಿಸುತ್ತಾ ಇದ್ದನು[>ಳು]. ಯೀ ಪಾರ್ವತಿಯಂಬೋ ಕನ್ನಿಕೆ "ನನ್ನ ಅಭಿಪ್ರಾಯ ಜನನಿ ಜನಕರಿಗೆ ಅರ್ಜಿ ಮಾಡಿಸಿ ಯೀಶ್ವರನು ತನಗೆ ಪ್ರತ್ಯಕ್ಷವಾಗಿ ಬಾಹೊ ಹಾಗೆ ತಪಸ್ಸು ಮಾಡುತೇನೆಂ"ದು ಅಪ್ಪಣೆ ತೆಗೆದುಕೊಂಡು, ತನ್ನ ಬಳಿಯ ಮಾಡುವಂತಾ ಸ್ತ್ರೀಯರಾ ಸಂಗಾತ ಕರಕೊಂಡು, ಅರಮನೆ ವಿಹಾರಯೋಗ್ಯವಾದಂಥಾ ಶೃಂಗಾರವನಮಧ್ಯದಲ್ಲಿ ಸರೋವರ ತೀರದಲ್ಲಿ ನಿವಾಸಮಾಡಿ ಅಘೋರವಾದಂತಾ ತಪಸ್ಸುಮಾಡಿದಳು.

ಕೆಲವು ದಿವಸವಾದ ಬಳಿಕಾ ಅವಳ ಮನಸ್ಸು ಸೋಧನೆ ಮಾಡಬೇಕೆಂದು ಯೀಶ್ವರನು ಬ್ರಾಹ್ಮಣವೇಷದಲ್ಲಿ ಭೃಂಗ[>ಗಿ] ಸಮೇತವಾಗಿ ಪಾರ್ವತಿ ಬಳಿಗೆ ಬಂದು ಹೇಳಿದ್ದು "ನೀನಾದರು ಅತಿ ಸುಕಾಮಾರಿ ಶರೀರವು ಬಹು ಸುಗುಣವತಿ. ಯೀಶ್ವರನಾದರು ದಿಗಂಬರನು, ಭಿಕ್ಷಕನು, ಕಪಾಲ ಮಾಲಿಕಾಧರನು, ಭಯಂಕರವಾದ ಸರ್ಪಗಳ ಆಭರಣ ಧರಿಸಿಕೊಂಡು ಯಿರುವವನು. ಯಿಂಥವನ ವುದ್ದಿಸ್ಯವಾಗಿ ನೀನು ಯಿಷ್ಟು ಪ್ರಯಾಸಹೊಂದಿ ತಪಸ್ಸುಮಾಡಲಿಕ್ಕೆ ನಿನಗೆ ಆತನು ತಕ್ಕ ಪುರುಷನೆಂದು ಕಾಂಬೋದು ಕಾಂಬೋದುಯಿಲ್ಲವು. ನಾನಾದರೆ ಸದ್ಬ್ರಾಹ್ಮಣನು, ಜಪಾಂತಸ್ವಾಧ್ಯಾಯವನ್ನು ವೋದಿಕ್ಕೊಂಡು ಯಿದ್ದೇನೆ. ನನ್ನ ಲಗ್ನ ಮಾಡಿಕೊಂಡದಾಯಿತೆ ಯೀಶ್ವರನ ಅನುಗ್ರಹದಿಂದಾ ನಿನಗೆ ಸಮಸ್ತ ಐಶ್ವರ್ಯಗಳು ಅಷ್ಟಭೋಗಂಗಳು ಅನುಭವಿಸಲಿಕ್ಕೆ ಬಂದೀತು"ಯಂದು ಹೇಳಿದ ಮಾತಿಗೆ ಪಾರ್ವತಿಗೆ ಬಹಳ ಕೋಪಾ ಹುಟ್ಟಿ, "ಯೀ ಬ್ರಹ್ಮಚಾರಿ ಬ್ರಾಹ್ಮಣ ಯೀಶ್ವರನ್ನ ಯಿಂತಾ ಮಾತು ಹೇಳುತ್ತ ಯಿದ್ದಾನೆ. ಯೀ ತನ್ನಾ ಆಚೆ ಕಡೆ ಕಳುಹಿಸಿಕೊಡು"ಯಂದು ತನ್ನ ಬಳಿಯ ಯಿದ್ದ ಸ್ತ್ರೀಯರುಗಳಿಗೆ ಹೇಳಿದಳು. ಆ ಸ್ತ್ರೀಯ್ಯರುಗಳು ಯೀ ಬ್ರಹ್ಮಚಾರಿಯಾದ ಬ್ರಾಹ್ಮಣನ ಸುತ್ತಿಕೊಂಡು, ಮೈಮೇಲಿನ ವಸ್ತ್ರಗಳ ತೆಗೆದುಕೊಂಡು, ವುಡುದಾರವನ್ನು ಹರಿದು ಕುತ್ತಿಗೆ ಹಿಡಿದು ನೂಕಿದರು. ಆಗ ಪರಮೇಶ್ವರನು ಪಾರ್ವತಿಮಾಡಿದ ತಪಸ್ಸಿಗೆ ಮೆಚ್ಚಿದಂತವನಾಗಿ ನಿಜಸ್ವರೂಪದಿಂದಾ ನಂದಿವಾಹನರೂಢನಾಗಿ, ಪ್ರತ್ಯಕ್ಷವಾದದಕ್ಕೆ ಪಾರ್ವತಿ ಬಹಳ ಸಂತೋಷವನ್ನು ಬಿ[>ಬ]ಟ್ಟು ಯೆದ್ದು, ಸ್ತ್ರೀಯರ ಬಳಿಗೆ ಹೋಗಿ ಯದ್ದು ನಿಂತು ಯಿರಲಾಗಿ, ಯೀಶ್ವರನು ಹೇಳಿದ್ದು : "ನಿನ್ನ ಭಕ್ತಿತಾತ್ಪರ್ಯಕ್ಕೆ ಬಹಳ ಸಂತೋಷವಾಗಿ ಯಿದ್ದೇನೆ. ನಿಮ್ಮ ತಂದೆಯಾದ ಹಿಮವಂತನ ಬಳಿಗೆ ಬುದ್ಧಿವಂತರಾದವರನ್ನು ಕಳುಹಿಸಿ ನಿನ್ನ ಲಗ್ನ ಮಾಡಿಕೊಳ್ಳುತ್ತಾ ಯಿದ್ದೇನೆಂ"ದು ತಮ್ಮ ಆಶ್ರಮಕ್ಕೆ ಹೋದ ಬಳಿಕ ಯೀ ಸ್ತ್ರೀಯರುಗಳ ಸಂಗಡ ಪಾರ್ವತಿ ತನ್ನ ಅರಮನೆಗೆ ಹೋದಳು.

ತರ್ವಾಯ ನಂದೀಶ್ವರನಾ, ಭೃಂಗೀಶ್ವರನಾ, ಹಿಮವಂತನ ಬಳಿಗೆ ಕಳುಹಿಸಿ ಯಿರಲಾಗಿ, ಅವರು ಹೋಗಿ ವಿವಾಹಕ್ಕೆ ನಿಶ್ಚಯ ಮಾಡಿಕೊಂಡು ಪುನಹಾ ಯೀಶ್ವರನ ಬಳಿಯ ಬಂದು ಹೇಳಿದರು. ಅದರಂತೆ ಹಿಮವಂತನು ಬಂದು ಯೀಶ್ವರನಾ ಕರಕೊಂಡು ಹೋಗಿ, ಯಿವರಿಗೆ ತ್ರಿಲೋಕಸುಂದರಿಯಾದ ಪಾರ್ವತಿಯಂಬ ಕನ್ನಿಕೆಯನು ಕೊಟ್ಟು ವಿವಾಹವನ್ನು ಮಾಡಿದನು. ಆ ತರುವಾಯ ಹಿಮವಂತನು ಯೀಶ್ವರನ ಸಂಗಡಾ ಆ ಪಾರ್ವತಿಯ ಕೈಲಾಸಕ್ಕೆ ಕಳುಹಿದನು. ತರ್ವಾಯ ಯೀಶ್ವರನು ಪಾರ್ವತಿಯ ಸಂಗಡಾ ಸಂಯೋಗಮಾಡುವ ವ್ಯಾಳೆದಲ್ಲಿ ಬಹಳ ದಿವಸವಾದ್ದರಿಂದ ಯಿಂದ್ರ[>ದ್ರಿಯ]ಪೀಡಿತನಾಗಿ[>ಗೆ] ಅಗ್ನಿಹೋತ್ರನು ಒಂದು ಪಕ್ಷಿರೂಪವ ಧರಿಸಿ ಕೈಲಾಸದ ಮೇಲೆ ಯೀಶ್ವರನ ಅರಮನೆವೊಳಗೆ ಹೋಗಲಾಗಿ, ಆತನ್ನ ನೋಡಿ ಪಾರ್ವತಿ ಯೆದ್ದು ಹೋದಳು. ಕೆಲವು ಸಮಯದಲ್ಲಿ ಯೀಶ್ವರನ[+ಇಂದ್ರಿಯ] ದೇವನಾಳಾಯಂಬುವ ಹಶಿ ಹುಲ್ಲಿನ ಮೇಲೆ ಬಿತ್ತು. ಆ ಹುಲ್ಲು ಕರ್ಕಶವಾದ . . . . ಅದರ ಮೇಲೆ ಬಿದ್ದು ಒಂದು ಆರುಭಾಗವಾಗಿ ಸವುಜ್ಞದಿಂದಾ ಯೇಳು ಘಳಿಗೆ ಹಿಂದಿದ್ದು ಕಂಡು, ಪಾರ್ವತಿ ಬಂದು ಸ್ವಹಸ್ತದಿಂದ ಆರು ಭಾಗವಾಗಿ ಯಿದ್ದ ಚೈತನ್ಯದಿಂದ ಯಿದ್ದ ಶಿಶುಗಳನ್ನು ವೊಂದಾಗಿ ಹಿಡಿದು, ಯೀಶ್ವರನ ಬಳಿಗೆ ತೆಗೆದುಕ್ಕೊಂಡು ಬಂದು ಯಿಡಲಾಗಿ, ಆ ಗಾತ್ರ[>ತ್ರ]ವೊಂದು ಮುಖವು ಆರು ಆಗಿ, ಯೀಶ್ವರಗೆ

ನಮಸ್ಕಾರವನ್ನು ಮಾಡಿ ಯೆದ್ದು ನಿಂತು ಯಿರಲಾಗಿ, ಯೀಶ್ವರನು ಕಂಡು ಷಣ್ಮುಕನು ಯೆಂದು ನಾಮಾ ಯಿಟ್ಟನು. ಹಾಗೆ ಷಣ್ಮುಕನು ಕೈಲಾಸದಿಂದಾ ಬಂದು ಪಂಪಾಕ್ಷೇತ್ರಕ್ಕೆ ಅಗ್ನಿಭಾಗದಲ್ಲಿ ಹತ್ತು ಹರದಾರಿಯ ಮೇಲೆ ಕೆಲವು ಅರಣ್ಯವಾದ ಸ್ಥಳದ ಮಧ್ಯದಲ್ಲು ವೊಂದು ಪಾತಾಳಗೃಹದ ವಳಗೆ ಕುಳಿತು ಯಿರಲಾಗಿ, ಪಾರ್ವತಿ ಪುತ್ರಮೋಹದಿಂದಾ ಹುಡುಕುತ್ತ ಬರಲಾಗಿ, ಆ ಷಣ್ಮುಖನು ತಾಯಿನ ಕಂಡು, ಗೃಹದ ವೊಳಗಿಂದಾ ಯಿಲ್ಲಿ ನೈರುತ್ಯಭಾಗದಲ್ಲಿ ಯೇಳು ಹರದಾರಿಯಲ್ಲಿ ಯಿರುವಂತಾ ಅರಣ್ಯಪ್ರದೇಶಕ್ಕೆ ಹೋಗಿ, ಅಲ್ಲಿ ವೊಂದು ಪರ್ವತದ ಮೇಲೆ ನಿಂತರು. ಯಿಲ್ಲಿಂದಾ ಷಣ್ಮುಖಸ್ವಾಮಿ ಬಿಲದ್ವಾರದಿಂದಾ ಹೋಗಿ ಆ ಬೆಟ್ಟದ ಮೇಲೆ ಹೋಗಿ ನಿಂತ ಕಾರಣ ಆ ಬೆಟ್ಟಕ್ಕೆ ದೇವದ್ವಾರಪರ್ವತವೆಂದು ನಾಮ ಪ್ರಸಿಧ್ಧಿಯಾಗಿ ಯಿದೆ. ಅದಕ್ಕೆ ಸಾಮಾನ್ಯ ಜನರು ಅವರ ಅಜ್ಞಾನತತ್ವ[>ಅಜ್ಞಾನತ್ವ]ದಿಂದ ದೇವದಾರಿಬೆಟ್ಟವೆಂದು ಹೇಳಿಕೊಳ್ಳುತ್ತ ಯಿದ್ದಾರೆ. ಅದೇ ಜಾಗಕ್ಕೆ ಕೆಲವು ಜನರು ಪಾದಗಟ್ಟೆಯೆಂಬುವ ನಾಮವೆಂದು ಹೇಳಿಕೊಳ್ಳುತ್ತಾ ಯಿದ್ದಾರೆ.

ಅಲ್ಲಿ ನಿಂತವನಾಗಿ ಅಷ್ಟದಿಕ್ಕನ್ನು ನೋಡಿ ನಾನು ಯಿರುವದಕ್ಕೆ, ಆ ಪರ್ವತಕ್ಕೆ ದಕ್ಷಿಣ ಭಾಗದಲ್ಲು ಯರಡು ಹರದಾರಿ ಪರ್ವತದ ಮೇಲೆ ಅಗಸ್ತ್ಯ ಆಶ್ರಮಕ್ಕೆ ಪಶ್ಚಿಮಭಾಗಕ್ಕೆ ನಿಮ್ಮನ್ನು ಪಾರ್ವತಿ ಪರಮೇಶ್ವರನು ಆ ಪರ್ವತದ ಬಳಿಗೆ ಬಂದಲ್ಲಿ, ಯೀ ಸ್ಥಳದಲ್ಲಿ ಪಾರ್ವತಿಗೆ ಮೊಲಿಯ ತೊರುತ್ತಾ ಯೀ ಸಾರೋಧಾರವಾಗಿ ಕ್ಷೀರವನ್ನು ಸುರಿಯಲಾಗಿ, ಆ ಸ್ಥಳ ಶ್ವೇತವರ್ನವು ಯಿದ್ದುದರಿಂದಾ ಜನರು ವಿಭೂತಿ ಬೆಟ್ಟವೆಂದು ಪ್ರಸಿಧ್ಧಿಯಾಯಿತು.

ಯೀ ಪರಿಯನ್ನು ಕಂಡು, ಯೀ ಸ್ಥಳದಲ್ಲಿ ನಮ್ಮ ಪುತ್ರನು ಯಿದ್ದಾನೆಂದು ನಿಶ್ಚಯಿಸಿ ಹುಡುಕುತ್ತಾ ಯಿರಲಾಗಿ ಗುಪ್ತಾಗುಹ್ಯವೆಂಬೊದರಲ್ಲಿ ಕಾಣಲಾಗಿ ಗುಪ್ತಸ್ವಾಮಿಯಂಬುವ ನಾಮಯಿಟ್ಟು ತಾರಕಾಸುರನ ಸಂಹಾರ ಮಾಡೊವುದ್ದಿಶ್ಯವಾಗಿ, ಕೋಟಿ ದೇವರುಗಳು ಹಾಗೆ ಯೀಶ್ವರನು ಪಾಶುಪತಾಸ್ತ್ರ, ಪಾರ್ವತಿ ಸಂಜೀವನಾಸ್ತ್ರ, ತೆತ್ತೀಸಕೋಟಿ ದೇವತೆಗಳು ಆಯುಧಗಳು ಸರ್ವಾಯುಧಗಳ ಸಾರವನ್ನು ತೆಗೆದು ವೊಂದು ಆಯುಧ ನಿರ್ಮಿತ ಮಾಡಿ, ಹಾಗೆ ಮಯೂರವಾಹನ ಸಂಚರಿಸುವದಕ್ಕೆ ಮಾಡಿಕೊಟ್ಟು, "ತಾರಕಾಸುರನ ಸಂಹಾರ ಮಾಡು"ಯೆಂದು ಆಶೀರ್ವಚನವನ್ನು ಕೊಟ್ಟು ಅಪ್ಪಣೆ ಕೋರಲಾಗಿ, ತಾರಕಾಸುರನು ಯಿದ್ದ ಪಟ್ನಕ್ಕೆ ಹೋಗಿ ಸಂಹಾರವನ್ನು ಮಾಡಿದನು. ಮಂದಿಗಳು ದೈತ್ಯರ ಸಂಹಾರ ಮಾಡಲಾಗಿ, ಅವರ ಶ್ರೋಣಿತವನ್ನು ಹರಿಯಲಾಗಿ, ನದಿ ಪ್ರವಾಹವಾಗಿ ಹರಿಯಲಾಗಿ, ಶ್ರೋಣಿತಪುರ ಯಂಬುವ ಅವನಿದ್ದ ಪಟ್ಟಣಪ್ರದೇಶಕ್ಕೆ ನಾಮವಾಯಿತು. ಕೊಮಾರಸ್ವಾಮಿ ಯಿದ್ದಕಾರಣ ಸ್ಕಂದಪುರಾಯಂಬೊ ನಾಮವೂ ಪ್ರಬಲವಾಯಿತು.

ಆ ಕೊಮಾರಸ್ವಾಮಿಯನ್ನು ಆ ರುಷಿಗಳ ಮಧ್ಯದಲ್ಲಿ ಸಮೋಹದಿಂದ ಮಾಡಿಕೊಳ್ಳುತ್ತ ಯಿರಲಾಗಿ, ಯಿತ್ತಲಾಗಿ ವೊಬ್ಬ ನಾಗಾರ್ಜುನ ಯಂಬುವ ದೈತ್ಯನು ಹೇಮರಿಪಾಕ್ಷಿಯಿದ್ದ ಆ ಪರ್ವತಕ್ಕೆ ಬಂದು, ಬೆಟ್ಟವನ್ನು ಕರಗಿಸಲಾಗಿ ಆ ಝುಳದಿಂದಾ ಆ ರುಷಿಗಳು ಕಾವಕ್ಕೆ ಸೈರಿಸಲಾರದೆ ಕೊಮಾರಸ್ವಾಮಿಗೆ ಬಿನ್ನಹ ಮಾಡಿಕೊಳ್ಳಲಾಗಿ, ಆತನು ಅದೇನು ಅಭಾಧವೆಂದು ನಾಗಾರ್ಜುನ ಶಿರಶ್ಚೇಧನ ಮಾಡಿ ಬಿಟ್ಟನು. ಅರಪಕ್ಷ[>ಕ್ತ]ವಾದ ಕಾರಣ ಲೋಹಪ್ರಯವಾಗಿ ಕಾಣಿಸಲಾಯಿತು. ತಾತ್ಪರ್ಯ ಕೊಮಾರಿಶ್ರಾವದಿಂದಾ ಲೋಹಾರಿಯಂಬುವ ನಾಮ ವುದ್ಭವವಾಯಿತು. ತರ್‍ವಾಯವೂ ಷಡ್‌ಚಕ್ರವರ್ತಿಗಳನ್ನು ಆಳಿದರು. ಕಲಿಯುಗದಲ್ಲಿ ವಿಕ್ರಮಾದಿತ್ಯ ಶಕದಲ್ಲು . . . .

ಯೀ ಸ್ಥಳದಲ್ಲಿ ಕೊಮಾರಸ್ವಾಮಿ ಕುಳಿತು ಹೋದ ತರುವಾಯ, ಕಲಿಯುಗದಲ್ಲಿ ಕಲ್ರಿ[>ರಿ]ಕಾಲ ಚೋಳಮಹಾರಾಜರು ಯೀಶ್ವರ ಪ್ರಸಾದಾನುಗ್ರಹದಿಂದಾ ಅಸಮಾನ ಪರಾಕ್ರಮವಂತನಾಗಿ, ಮಹಾ ಐಶ್ವರ್ಯದಿಂದ ರಾಜ್ಯಪರಿಪಾಲನೆ ಮಾಡುತ್ತ ಯಿರಲಾಗಿ, ಅರಸಿನ ಮಗಳಿಗೆ ಯೌವನ ಪ್ರಾಯಕ್ಕೆ ಬಂದ ಬಳಿಕ ಆಕೀಗೆ ಬ್ರಹ್ಮರಾಕ್ಷಸನ ಘಟನೆಯಾದ್ದರಿಂದ, ಯೆಷ್ಟು ಸಮರ್ಥರಾಗಿ ಯಿದ್ದ ಮಂತ್ರದಿಂದ ಅಸಾಧ್ಯ ಆದದರಿಂದ, ನಿರ್ವಾಹವಾಗದೆ ಪ್ರಯುಕ್ತ, ಯಿದೆ[>ವೈದ್ಯ]ರಾದವರನ ಕರಿಸಿ "ಯಿದಕ್ಕೆ ಸಾಧನವೇನೆಂ"ದು ಕೇಳಲಾಗಿ, ಅವರು ಹೇಳಿದ್ದು "ದೇವರ ಶೇವೆಯಿಂದಲೇ ನಿರ್ವಾಹಕವಾಗಬೇಕೇ ಹೊರ್ತು ಮನುಷ್ಯ ಮಾತ್ರದವರ ಕೈಯಿಂದಾ ನಿರ್ವಾಹವಾಗಲಿಕ್ಕಿಲ್ಲ, ಆದ್ದರಿಂದ ವೊಂದು ದಿವಸಕ್ಕೆ ಯೀಶ್ವರ ದೇವಾಲಯವೊಂದು ಬಾವಿಯನ್ನು ಯೀ ಪ್ರಕಾರ ಕಟ್ಟಿಸಿದರೆ ಬ್ರಹ್ಮರಾಕ್ಷ ಬಿಟ್ಟುಹೋದಿತೆಂ"ದು ಹೇಳಿದ ಕಾರಣ, ಅದರಂತೆ ಮನಸ್ಸಿನಲ್ಲಿ ನಿಶ್ಚಿತ ಮಾಡಿಕೊಂಡು ದೇವಾಲಯಗಳು ಭಾವಿಗಳು ಕಟ್ಟಿಕೊಳ್ಳುತ್ತ ಯೀ ಸ್ಥಳಕ್ಕೆ ಬಂದು, ಯೀ ಸ್ಥಳದಲ್ಲು ಆ ವ್ಯಾಳೆಗೆ ಯಿದ್ದಾ ರುಷಿಗಳನ್ನು ಕಂಡು, ನಮಸ್ಕಾರವನ್ನು ಮಾಡಿ, "ಯೀ ಸ್ಥಳದ ಮಹತ್ಯಯೇನು?"ಯೆಂದು ವಿಚಾರಿಸಲಾಗಿ ಅವರ ಹೇಳಿದ್ದು : "ಈ ಸ್ಥಳದಲ್ಲು ವೊಂದು ಪಾತಾಳಗೃಹಯಿದ್ದೀತು. ಅಲ್ಲಿ ಪೂರ್ವದಲ್ಲಿ ಯೀಶ್ವರನ ಪುತ್ರನಾದ ಕೊಮಾರಸ್ವಾಮಿ ಬಂದು ಕುಳಿತನು. ಆದ್ದರಿಂದ ಯೀ ಸ್ಥಳಕ್ಕೆ ಕೊಮಾರ ಕ್ಷೇತ್ರವೆಂದು ತಪಸ್ಸು ಮಾಡಿಕೊಳ್ಳುತ್ತ ಯಿದ್ದೇವೆ"ಯೆಂದು ಹೇಳಿದರಿಂದ ಯಿವರು ಇದು ಮಹಾಕ್ಷೇತ್ರವೆಂದು ತಿಳಿದು, ನೂರಾವೊಂದು ದೇವಾಲಯಗಳ ಕಟ್ಟಿ ಆ ದೇವಾಲಯಗಳಿಗೆ ಈಶ್ವರಲಿಂಗ ಪ್ರತಿಷ್ಟೆ ಮಾಡಿಸಿ, ಹಾಗೆ ನೂರಾವೊಂದು ಭಾವಿಗಳನ್ನು ಕಟ್ಟಿಸಿ, ಆ ದೇವರುಗಳಿಗೆ ಧೂಪ, ದೀಪ, ನೈವೇದ್ಯ, ಅಮೃತಪಡಿ, ನಂದಾದೀಪಾದಿಗಳು ನಡಸುವ ಹಾಗೆ ಭೂಸ್ವಾಸ್ತಿಯನ್ನು ನಿರ್ಣಯಿಸಿ ಹಾಗೆ ಕೆಲವು ಅಗ್ರಹಾರಗಳ ಯೇರ್ಪಾಟುಮಾಡಿ, ಬ್ರಹ್ಮರಿಗೆ ಧಾರಾಪೂರ್ವಕ ಮಾಡಿಬಿಟ್ಟರು"ಯೆಂದು ಸ್ಥಳಜ್ಞರು ಹೇಳಿಕೊಳ್ಳುತ್ತಾರೆ. "ಪೂರ್ವದಲ್ಲಿ ಕೊಮಾರಸ್ವಾಮಿ ಯಿಲ್ಲಿ ಕುಳಿತಾ"ಯಂದು ರುಷಿಗಳು ಹೇಳಿದ ಕಾರಣ 'ಕುಳಿತನೋ'ಯಂಬ ಅಗ್ರಹಾರವೆಂದು ಗ್ರಾಮಕ್ಕೆ ವ್ಯವಹಾರ ನಾಮವೆಂದು ಪ್ರಸಿದ್ಧಿಯಾಯಿತು. ತರ್ವಾಯ ತ್ರಿಭುವ[+ನ] ಕುಲಶೇಖರ ಜಗದೇಕಮಲ್ಲರಾಯ ಸರವಿ ಚಕ್ರವರ್ತಿ ವೀರಬಲ್ಲಾಳರಾಯ ಮುಂತಾದ ಅರಸುಗಳು ಆಳಿದ ವಿವರವು: ಯಿದಕ್ಕೆ ಕೆಲವು ಗ್ರಾಮದಲ್ಲು ಹಳೆ ಕನ್ನಡ ಅಕ್ಷರ ಬರದ ಶಾಸನಗಳು ಯಿದೆ. ಯಿದಕ್ಕೆ ತಪಶೀಲು:

ತ್ರಿಭುವನಮಲ್ಲರಾಯರು ಕಲ್ಯಾಣಪಟ್ನದಲ್ಲಿ ಸಿಂಹಾಸನಾರೂಢನಾಗಿ ರಾಜ್ಯಭಾರವನ್ನು ಮಾಡುವ ವ್ಯಾಳೆದಲ್ಲು ಯೀ ಗ್ರಾಮ ಅವರ ಕಡಿಗೆ ನಡದು ಬಂತು. ಆಗ ಯೀ ಗ್ರಾಮದ ಮಾರ್ತಾಂಡದೇವರಿಗೆ ನೈವೇದ್ಯ ಖಂಡಸ್ಫಟಿತ ಜೀರ್ಣೋದ್ಧಾರ ಮೊದಲಾದಕ್ಕೆ ನೈಷ್ಠಿಕ ತಪೋಧನರಾ ಆಹಾರದಾನಕ್ಕೆ ಸ್ವಾಸ್ತಿಗಳು ನಿರ್ಣಯ ಮಾಡಿಕೊಟ್ಟು, ಹಳೆ ಕನ್ನಡ ಲಿಪಿಯಿಂದ ಶಾಸನ ಹಾಕಿಸಿಯಿದ್ದಾರೆ. 'ಚಾಳುಕ್ಯ ವಿಕ್ರಮವರುಷ ೪೪ನೆಯ ವಿಕಾರಿ ಸಂವತ್ಸರದ ವೈಶಾಖದಮವಾಸ್ಯೆಯಾದಿತ್ಯವಾರದಂದು ಸೂರ್ಯಗ್ರಹಂ ನಿಮಿತ್ಯದಿಂ' ಯೆಂದು ಬರದು ಯಿದೆ. ಸದರಹು ಶಾಸನ ಊರಬಾಗಲಿನ ವೊಳಗೆ ದಕ್ಷಿಣಭಾಗದಲ್ಲಿ ವೀರಭದ್ರದೇವರ ದೇವಾಲಯವಾದ ಧಾರೆ ಮಂಟಪ ಬಳಿಯು ಹಾಜರು ಯಿದೆ. ಯೀ ಮಲ್ಲರಾಯರ ಆಳಿಕೆ ಆದ ಬಳೀಕ ಯಿವರ ಮಗ ಭೂಲೋಕಮಲ್ಲನೆಂಬೊ ಆತ ಕೆಲವು ದಿವಸಾ ಯೀ ರಾಜ್ಯವು ಆಳುತ್ತಾ ಯಿರಲಿಕ್ಕೆ, ಅವರ ಕೆಳಗೆ ನಡದು ಬಂತು. ಯಿದಕ್ಕೆ

ಯಿವರ ಹೆಸರಲ್ಲಿ ಯೀ ಗ್ರಾಮವೊಳಗೆ ಮಾತ್ರ ಶಾಸನವು ಯಿಲ್ಲವು. ಸಿಂದವಾಳ ವಗೈರೆ ಕೆಲವು ಗ್ರಾಮಗಳಲ್ಲಿ ಹಳೆ ಕನ್ನಡ ಶಾಸನಗಳು ರುಜು ಯಿದೆ. ಯಿವರ ತರ್ವಾಯ ಯಿವರ ಮಗ ಪ್ರತಾಪಚಕ್ರರ್ತಿ ಜಗದೇಕಮಲ್ಲರಾಯನೆಂಬೊ ಆತನು ಕಲ್ಯಾಣ ಪಟ್ಟಣದವೊಳಗೆ ಯಿದ್ದು ರಾಜ್ಯಭಾರ ಮಾಡುವ ವ್ಯಾಳೆದಲ್ಲು, ಅವರ ಕಡೆಯಿಂದಾ ಯೀ ಚಕ್ರ[>ಕ್ಷೇತ್ರ]ವ ಪಾಲಿಸುವವರು, ಶ್ರೀಸ್ವಾಮಿಕಾರ್ತಿಕೇಯದೇವರ ವುತ್ಸವ ಯಾರಿಗೆ ಬಾಹೊ ಜನರು ವೊಳ್ಳೆ ಸತ್ರ ಹಾಕಿಸಿ, ಅದಕ್ಕೆ ಸ್ವಾಸ್ತಿನಿರ್ಣಯ ಮಾಡಿಸಿ, ಹಳೆಕನ್ನಡ ಲಿಪಿಯಿಂದ ಶಿಲಾಶಾಸನ ಹಾಕಿಸಿಯಿದ್ದಾರೆ. '೧೦ನೆಯ ವಿಭವಸಂವತ್ಸರದಲ್ಲು ಸಂಕ್ರಾಂತಿ ಸೂರ್ಯಗ್ರಹಣ ನಿಮಿತ್ಯವಾಗಿ ಶ್ರೀಸ್ವಾಮಿದೇವರ ಸನ್ನಿಧಾನದಲ್ಲಿ ಸ್ವಾಮಿಯವರಿಗೆ ಬಂದ ಕವಾಡಿ[>ಕಪ್ಪಡಿ]ಗಳ ಸತ್ರಕ್ಕೆ ಮಲ್ಲರಸ ಬಿಟ್ಟ ಕೈ[>ಕೆಯ್] ಬಳ್ಳುಂಟೆಯ ದಾರಿಯ ಬಡಗಾ'ಯಂದು ಆಚೆಗೆ ಸ್ವಾಸ್ತಿಗಳ ಬರದುಯಿದೆ. ಯಾದವ ಕುಲದಿಂದಾ ವುದ್ಭವವಾದಂತಾ ವೀರಬಲ್ಲಾಳರಾಯನೆಂಬೊ ಅರಸು ದ್ವಾರಸಮುದ್ರವೆಂಬೋ ಪಟ್ನದಲ್ಲಿ ಯಿದ್ದು ರಾಜ್ಯಭಾರಮಾಡುವ ಕಾಲದಲ್ಲಿ, ಯೀ ಗ್ರಾಮದಲ್ಲು ಕೇಳಿಶ್ವರಯಂಬೊ ದೇವತಾ . . . . ಮಾಡಿಸಿ ಹಳೆಕನ್ನಡ ಲಿಪಿಯಿಂದ ಶಾಸನ ಬರಿಸಿಯಿದ್ದಾರೆ. ಬಾಜಾರದಲ್ಲಿ ಬೋಳಬಸವನ ಗುಡಿಯ ಬಳಿಯ ಹಾಜರು ಯಿದೆ.

ಯೀ ಬರಿಸಿದವರಾಳಿಕೆಯೊಳಗೆ ಯೀ ಗ್ರಾಮದಲ್ಲಿರುವ ದೇವಸ್ಥಾನಗಳಿಗೆ ಪೂಜೆ ಪುನಸ್ಕಾರ ಅಮೃತಪಡಿ ನಂದಾದೀವಿಗೆಗಳು ನಿತ್ಯೋತ್ಸವವಾದಿ ಸಮಸ್ತ ವುತ್ಸವಗಳು ಐವತ್ತೆರಡು ವಿನಿಯೋಗಂಗಳು ಮೊದಲಾದವು ಅಷ್ಟವಿಧಿಪೂರ್ವಕದಿಂದಾ ಪೂರ್ವಪ್ರಕಾರವಾಗಿ ನಡಸುತ್ತ ಬಂತು. ಯಿದರ ಹೊರ್ತು ಆಗ ಯೀ ಗ್ರಾಮದಲ್ಲಿ ಜಯಿನಬಸ್ತಿ ಜಯಿನದೇವಾಲಯಗಳು ಜೈನದೇವರುಗಳು ಯಿದ್ದಾವೆ. ಯಿದಕ್ಕೆ ಕಾಣಬಹೊಂತಾ ರಾಜ್ಯವುಗಳು.

ಗ್ರಾಮಗಳಲ್ಲಿ ಹಾಜರು ಚಕ್ಕುಬಂದಿ ದೇವಾಲಯಗಳು ಯೆಂಟು. ಯಿದರ ಹೊರ್ತು ಕೆಲವು ಪುರಾತನ ಚಕ್ಕಬಂದಿ ದೇವಾಲಯಗಳು ಸಿಥಿಲವಾದ ಕಾರಣ, ಮಧ್ಯಕಾಲದಲ್ಲು ಗ್ರಾಮದವರು ಆ ಕಲ್ಲುಗಳು ತೆಗದು ದಾರಾಮಂಟಪಗಳು ದುರಸ್ತು ಮಾಡಿ ಯಿಹೊಂತಾವು ಹಾಜರು ಯಿದ್ದೀತು. ಆ ಮಂಟಪಗಳೊಳಗೆ ಕೆಲವು ಮಂಟಪಗಳೊಳಗೆ ಯಿರೊ ಲಿಂಗ ಪಾಣಿವಟ್ಟಿನವುಗಳೊಳಗೆ ಕೆಲವು ಮಂಟಪಗಳೊಳಗೆ ಯಿರುವ ಲಿಂಗಪ್ರಾಣಿ[>ಪಾಣಿ]ವಟ್ಟಿ ತೆಗದುಬಿಟ್ಟು, ಬರೆ ಬಸವಣ್ಣಗಳು ಯಿಟ್ಟು ಯಿದ್ದಾರೆ. ಯಿದಲ್ಲದೆ ಯೀ ಗ್ರಾಮದಲ್ಲು ಹಾಳು ಜಾಗೆಗಳೊಳಗೆ ಗ್ರಾಮದ ವೊಳಗೆ ಯೀಶ್ವರಲಿಂಗಗಳು ಬರೆ ಪಾಣಿವಟ್ಟಿಗಳು ಕೆಲವು ವೊಡದು ಯಿದೆ. ಲಿಂಗಗಳು ವೊಡದು ಯಿದೆ. ಬಸವಣ್ಣಗಳು, ಶಿಲಾವಿಗ್ರಹಗಳು, ಪುರಾತನ ಭಾವಿಗಳು ಶಿಥಿಲವಾದ ಕಾರಣ ಮಧ್ಯಕಾಲದಲಿ ಕೆಲವು ಮಂದಿ ಗ್ರಾಮದವರು ದುರಸ್ತು ಚಕ್ರ[>ಚಕ್ಕ]ಬಂದಿ ಮಾಡಿಸಿ ಯಿದ್ದಾರೆ. ಆ ಭಾವಿಗಳಿಗೆ ಕಟ್ಟಿದ ಕಲ್ಲುಗಳು ನೋಡಿದರೆ ಪುರಾತನ ದೇವಾಲಯಗಳಿಗೆ ಹಾಕಿಸಿದ ಕಲ್ಲುಗಳು ಹಾಗೆ ಕಲ್ಲು ಕಂಭಗಳು ಗಜಲಕ್ಷ್ಮಿಯನ್ನು ಕಟ್ಟಿದಂತಾ ಕಲ್ಲುಗಳು, ಸೂರ್ಯಕಾಂತ ಪದ್ಮಗಳು ಕೆತ್ತಿಸಿದ ಮುಖಮಂಟಪ ಕಲ್ಲುಗಳು, ದೇವಾಲಯಗಳಿಗೆ ನಂ[>ನಿ]ದಿಸಿದ್ದ ಪ್ರತಿಮೆಗಳು, ಕೆತ್ತಿದ ಕರೆಕಲ್ಲುಗಳು, ದ್ವಾರದಲ್ಲು ಬಾಗಿಲಿಗೆ ಬಳೀತರ ಕೆತ್ತಿಸಿದ ಕಲ್ಲುಗಳು ಯೀ ಪ್ರಕಾರ ಕಾಣಿಸುತ್ತ ಯಿದ್ದೀತು. ಯಿದರ ಹೊರ್ತು ಕೋಟೆಥರಕ್ಕೆ ಕೊತ್ತಳಿಗಳಿಗೆ, ಬತ್ತೇರಿಗಳಿಗೆ, ಹೂಡೆಗಳಿಗೆ, ವೂಲ[>ರ]ಬಾಗಲಗಳಿಗೆ ಹಾಕಿ ಕಟ್ಟಿಸಿ

ಯೀಹೊಂತಾ ಕಲ್ಲುಗಳು, ಯಿದೇ ಪ್ರಕಾರವಾಗಿ ಪುರಾತದೇವಾಲಯದ ಕಲ್ಲುಗಳು ಹಾಗೆ ಕಾಣಿಸುತ್ತಾ ಯಿದ್ದೀತು. ಯಿದಲ್ಲದೇ ಯೀ ಗ್ರಾಮದ ವೊಳಗೆ ಹೊರಗೆ ಹಾಳಾಗಿಯಿದ್ದ ಭಾವಿಗಳು ಬಹಳ ಕಾಣಿಸುತ್ತಾ ಯಿದೆ. ಯಿದಲ್ಲದೆ ಪೂರ್ವದಲ್ಲಿ ಜಯಿನಬಸ್ತಿ ಆಗಿ ಯಿರುವಂತಾ ಕಲ್ಲೂರ ಅಗಸಿ ಬಾಗಿಲ ಬಳಿಯ ವೊಂದು ಛತ್ರ[>ಚಕ್ಕ]ಬಂದಿ ದೇವಾಲಯದ ವೊಳಗೆ ಪೂರ್ವದಲ್ಲಿ ಯಿದ್ದ ಜಿನ್ನಾದೇವರನ ತೆಗದುಹಾಕಿ ಲಿಂಗ ಪ್ರತಿಷ್ಟೆ ಮಾಡಿದರು. ಅದೆ ದೇವಾಲಯಕ್ಕೆ ಪಶ್ಚಿಮಭಾಗದಲ್ಲಿ ಹೊರಗೆ ಗೋಡಿಗೆ ಜಿನ್ನದೇವರ ಪ್ರತಿಷ್ಟೆಯಿದೆ. ಆ ಕಲ್ಲೂರ ಬಾಗಲು ಹೊರಗೆ ಯಿದಿರಿಗೆ ಜಿನ್ನದೇವರು ಸಿಥಿಲವಾಗಿ ಅಗಶಿ ಬಳಿಯ ನಿಂತು ಯಿದೆ. ಭಾವಿಗೆ ವುತ್ರ ಭಾಗದಲ್ಲು ಅಗಸಿ ಹೊರಗೆ ಕಂದಕದ ನಡುವೆ ಜಿನ್ನದೇವರು ಸಿಥಿಲವಾಗಿ ನಿಂತುಯಿದೆ.

ತರ್‍ವಾಯ ನರಸಿಂಗದೇವರಾಯರು ರಾಜ್ಯಂಗೈವುತ್ತ ಯಿರಲಾಗಿ ಹಲವು ಕಾಲದ ಮೇಲೆ ಪುತ್ರಮೋಹದಿಂದಾ ಬ್ರಾಹ್ಮರನ ಕೇಳಲಾಗಿ, ಅವರು "ಯೀ ರಾಜ್ಯವನ್ನು ಪರಿಪಾಲನೆ ಮಾಡುವಂತಾ ಪುತ್ರನು ಆಗುವ ಹಾಗೆ ಜಪ, ತಪ ಅನುಷ್ಟಾನವನ್ನು ಮಾಡಿ ಪುತ್ರವುತ್ಸಾಹ[>ಪುತ್ರೋತ್ಸವ] ಆಗುವ ಮರಿಯಾದಿ ಹೇಳುತ್ತ ಯಿದ್ದೇವೆಂ"ದು ಹೇಳಿದರು. ಅದೇ ಮರಿಯಾದಿಯಲ್ಲಾ ವೊಂದು ನಕ್ಷತ್ರ ವ್ಯಾಳೆವನ್ನು ಸಾಧಿಸಿ ಹೇಳಿದರು. ಆ ಹೇಳಿದ ವ್ಯಾಳ್ಯಾದಲ್ಲು ಆ ಪಟ್ಟದ ಹೆಂಡತಿಯಾದಂತಾಕಿ ಆ ಸಮಯಕ್ಕೆ ಅನುಕೂಲಿಸಿದ ಕಾರಣ, ನಾಗಲದೇವಿಯಂಬೊ ಸ್ತ್ರೀಯಳು ಯಂಬುವ ಆಕಿಯನ್ನು[>ದಾಸಿಯು] ಅನುಕೂಲಿಸಿದಳು. ಆ ನಾಗಲದೇವಿಯ ಗರ್ಭದಲ್ಲು ಕ್ರಿಷ್ಣರಾಯಯಂಬುವ ಹೆಸರು ವುಳ್ಳಾತನು ಜನಿಸಿದನು. ಆ ನಕ್ಷತ್ರವಿರಹಿತ ಅದೇ ದಿವಸದಲ್ಲಿ ಗರ್ಭ ವುತ್ಪತ್ಯವಾಗಿ ಪಟ್ಟದರಸಿ ಗರ್ಭದಲ್ಲಿ ಅಚ್ಚುತರಾಯ ಯಂಬುವಂತಾವ ಹುಟ್ಟಿದನು. ಆಮೇಲೆ ನರಸಿಂಗದೇವರಾಯರು ಕೆಲವು ಕಾಲ ರಾಜ್ಯವಾಳುತ್ತಾ ಯಿದ್ದರು. ಆತಗೆ ಪ್ರಾಣೋತ್ಯಮಣ ಕಾಲಕ್ಕೆ ಅಚ್ಚುತರಾಯ ಯಂಬುವಾತನು ಸಮೀಪದಲ್ಲು ಯಿದ್ದನು. ಯೀ ಮಗನಾ ವ್ಯಾಮೋಹದಿಂದಾ "ಕ್ರಿಷ್ಣರಾಯ ಯಂಬುವಾತನನ್ನು ಶಿರಶ್ಚೇದನ ಮಾಡು"ಯಂದು ಸ್ತೀ ಮೂಲಕದಿಂದಾ ಹೇಳಿಸಲಾಗಿ, ತದಾನುಸಾರ ಆದೀತುಯೆಂದು ತಿಳಕೊಂಡು "ಹಾಗೆ ಆಗಲಿ"ಯಂದು ಅಪ್ಪಣೆ ಪಾಲಿಸಿದಲ್ಲಿ, ಆ ಕಿರಾತರು ಹತ್ತೆಂಟು ಅರ್ಭಕನು ತೆಗೆದುಕೊಂಡು ಹೋಗುತ್ತಾ ಯಿರಲಾಗಿ, ಅಪ್ಪಾಜಿಯಂಬವರ[>ರು] ಪ್ರಧಾನಿ ಕಂಡು "ಯಿದು ಯೇನು?"ಯಂದು ಕೇಳಲಾಗಿ, ಆ ಶಿರಶ್ಚೇದರು ಆಡಿದು "ಆ ಸದರಿ ಮ್ಯಾರಿಗೆ ಶಿಕ್ಷಾ ಆಗಬೇಕೆಂ"ದು ಹೇಳಿದರು. ಆ ಪ್ರಧಾನಿಯು ಆ ಶಿಶುವನ್ನು ಆಶ್ಚಾಯಿಸಿ[>ಆಚ್ಛಾದಿಸಿ] ಮಡಿಯಿ[>ಗಿ]ಟ್ಟು, ಅವರಿಗೂ ಅರಸಗೂ ಸಂತೋಷವಾಗುವ ವರ್ತಮಾನವನ್ನು ತಿಳಿಸುವ ಹಾಗೆ ಹೇಳಿದನು.

ಆಮೇಲೆ ನರಸಿಂಗದೇವರಾಯರು ಅಪ್ಪಾಜಿಯಂಬುವ ಪ್ರಧಾನಿಯನ್ನು ಕರಿಸಿ "ನನಗಾದರೂ ಕಾಲ ಸಮೀಪಿಸುತ್ತಯಿದೆ, ಯೀ ರಾಜ್ಯಭಾರ ಮಾಡೋದಕ್ಕೆ ಅಚ್ಚುತರಾಯ ಯಂಬುವ ಮಗನು ಯೋಗ್ಯಸ್ತನಾಗಿ ಕಾಣಿಸುವದು ಯಿಲ್ಲವು. ಯಿದಕ್ಕೆ ಮಾರ್ಗವೇನು?"ಯಂದು ಕೇಳಲಾಗಿ "ನಿಮ್ಮ ಅಪ್ಪಣೆ ಪ್ರಕಾರಕ್ಕೆ ನಡದುಕೊಳ್ಳುವಂತಹಾದ್ದು ಸರಿ, ನನ್ನಯ ಯತ್ನವೇನು ಯಿದ್ಧೀತೆ?" ಯಂದು ಬಿನ್ನಹವನ್ನು ಮಾಡಿಕೊಳ್ಳಲಾಗಿ, ಮಹಾಚಿಂತಾಕ್ರಾಂತನಾಗಿ "ಕ್ರಿಷ್ಣಾ"ಯಂದೆನಲಾಗಿ, ಆ ಮಾತಿಗೆ "ಮೃತವಾದಂತಾ ಮಗನನ್ನು ನೆನಸಲಿಕ್ಕೆ ಕಾರಣವೇನೆಂ"ದು ಕೇಳಲಾಗಿ, ನರಸಿಂಗರಾಯರು ಆಡಿದ್ದು: "ಅವನು ದೈವಾನುಪುರುಷನುಯೆಂದು ಗುರುಹಿರಿಯರು

ಆಡುತ್ತಾ ಯಿದ್ದಾರು. ಆ ಮರಿಯಾದಿ ತಿಳಿದು[>ಳಿಯದೆ] ಸ್ತ್ರೀಯ್ಯರ ವ್ಯಾಮೋಹಕ್ಕೆ ವೊಳಗಾಗಿ ಆ ಮಾತಿನಂತೆ ಆಚರಿಸುವಂತೆ ಆಯಿತು. ಸ್ತ್ರೀಬುದ್ಧಿ ಪ್ರಳಯಾಂತಕಾಯಂಬೋ ನ್ಯಾಯವನ್ನು ತಿಳಿದು ಯೀ ಪ್ರಕಾರವಾಯಿತು. ಯಿದಕ್ಕೆ ಯತ್ನವೇನು"ಯಂದು ಆ ಪ್ರಧಾನಿಯ ಕೇಳಲಾಗಿ, ಆತನು "ಇದರಂತೆ ಏನು ಮಾಡಬೇಕು?" ಯಂದು ಕೇಳಲಾಗಿ, "ರಾಜ್ಯಭಾರ ಮಾಡುವದಕ್ಕೆ ಪಟ್ಟಾಭಿಷೇಕವನ್ನು ಮಾಡಬೇಕು"ಯಂದು ವಾಂಛಲ್ಯ ಯಿರಲಾಗಿ, ಆ ಮಾತಿಗೆ ಅಪ್ಪಾಜಿಯು ಸಂತೋಷಬಟ್ಟು ಭಾಕ[>ಳ] ಭರವಸೆಯನ್ನು ತೆಗೆದುಕೊಂಡು, "ಪಟ್ಟಾಭಿಷೇಕವನ್ನು ಮಾಡುವ ಸಾಹಿತ್ಯವನ್ನು ಮಾಡಿಸು"ಯೆಂದು ಹೇಳಲಾಗಿ ಅದೇ ಪ್ರಕಾರಕ್ಕೆ ವಿದ್ಯಾನಗರದಲ್ಲಿ ಸಾಹಿತ್ಯಾ ಮಾಡಿದರು. ಆಮೇಲೆ ಶುಭಮುಹೂರ್ತದಲ್ಲಿ ಕ್ರಿಷ್ಣರಾಯ ಯಂಬುವನನ್ನು ಅಂಬಾರಿ, ಆನಿ, ನೌಬತ್ತು, ನಗಾರಿ, ಢಂಕೆ, ನಿಶಾನಿ, ಆನಿಯು ನ[>ಸ]ನ್ನಾ ಪ್ರಜೇ ಪರಿವಾರವು ಅಷ್ಟಪ್ರಧಾನಿಗಳು ಅಪ್ಪಾಜಿ ಸಹಾ ಹೋಗಿ ಕರಕೊಂಡು ಬಂದು ಪಟ್ಟಾಭಿಷೇಕವನ್ನು ಮಾಡಿದಂತಾವರಾದರು.

ಕ್ರಿಷ್ಣರಾಯನು ಮಹಾದ್ಯೆವಾನನು. ಅತ್ಯುತ್ಕೃಷ್ಟ ರಾಜಿತ ಪುರುಷನು. ಆತನು ಸರ್ವ ಬಿರುದಾದಿಗಳನ್ನು ಸಂಪಾದಿಸಬೇಕೆಂಬುವ ವಾಂಛಲ್ಯದಿಂದಾ ಪ್ರಾಗ್ದೇದೇಶಕ್ಕೆ ಹೊರಟನು. ಆ ವ್ಯಾಖ್ಯಾದಲ್ಲು ತಮ್ಮ ತಮ್ಮ ಠಾಣ್ಯದ ಮಂದಿಯನ್ನು ಕರಸಿಕೊಂಡು ಹೊರಡುವಂತವನಾದನು. ಹಲವು ರಾಜ್ಯವನ್ನು ಸಂಪಾದಿಸಿ ಹಾಗೆ ಬಿರುದುಗಳ ಸಂಪಾದಿಸಿಕೊಂಡು ಬರು ವ್ಯಾಖ್ಯಾದಲ್ಲಿ, ಗಜಪತಿ ಆಳುವ ಪಟ್ಟಣಕ್ಕೆ ಬಂದು ಮುತ್ತಿಗಿಯನ್ನು ಹಾಕಲಾಗಿ, ಆ ಪಟ್ನವು ಸ್ವಾಧೀನಕ್ಕೆ ಬಾರದೇ ಯಿರಲಾಗಿ" ಯಿದಕ್ಕೆ ಯೇನು ಯೋಚನೆ?"ಯಂದು ಅಪ್ಪಾಜಿಯ ಕೇಳಲಾಗಿ, ಆತನು ಲಗ್ಗಿಯನ್ನು ಬಿಡಬೇಕೆಂದು ಯೋಚಿಸಿ ತಮ್ಮ ಸ್ಯೆನ್ಯದೊಳಗೆ ಯಿದ್ದ ನಾಯಕರನ್ನು ಕರಿಸಿ "ಯೀ ಪಟ್ಟಣವನ್ನು ಲಗ್ಗಿಯನ್ನು ಬಿಡಬೇಕೆಂ"ದು ನಾಯಕರ ಮುಂದೆ ಹೇಳಲಾಗಿ, ಅವರು "ಹುಷಾರ"ವೆಂದು ವೀಳ್ಯೆವನ್ನು ತೆಗೆದುಕೊಂಡವರಾದರು. ಯೀ ವರ್ತಮಾನವನ್ನು ಗಜಪತಿಗಳು ಕೇಳಿದವರಾದರು. ಸ್ವಾಧೀನ ಮಾಡಿಕೊಳ್ಳಬೇಕೆಂದು ಯೋಚಿಸಿ ಕಾರಕೂನರನ್ನು ಕಳುಹಿಸಿಸಲಾಗಿ, ಆ ಕಾರಕೂನರಿಗೆ ಅಪ್ಪಾಜಿ ಹೇಳಿದ ವಿವರವು "ನಿಮ್ಮ ಅರಸಿನ ಪಟ್ಟದ ಹೆಂಡತಿ ಗರ್ಭದಲ್ಲಿ ಹುಟ್ಟಿದ ಕನ್ನಿಕೆಯೊಂದು, ನಿಮ್ಮಲ್ಲಿಹ ಬಿರುದುಗಳೊಳಗೆ ನ್ಯೆಕೊವಾದ[>ಏಕೋವಾದ] ಬಿರುದು ವೊಂದು ಕೊಡು"ಯಂದು ಕೇಳಲಾಗಿ, ಅವರು ಆ ಮಾತಿಗೆ ವಡಂಬಟ್ಟು ಅದೇ ಪ್ರಕಾರಕ್ಕೆ ಆ ಕನ್ನಿಕೇಯು ಆ ಬಿರುದನ್ನು ಕೊಟ್ಟವರಾದು[>ದರು]. ಅಲ್ಲಿಂದಾ ದಿಗ್ವಿಜಯಾ ಮಾಡಿಕೊಂಡು ಪುನಹಾ ವಿದ್ಯಾನಗರಕ್ಕೆ ಬಂದವರಾದರು. ತರ್ವಾಯ ಕೂಡಿ ಸ್ಯೆನ್ಯಕ್ಕೆ ದಾವ ದಾವ ಪ್ರಕಾರ ಮರ್ಯಾದೆ ಮಾಡಿ ಕಳಸಬೇಕು, ಅವರವರ ಮರ್ಯಾದಿ ಮಾಡಿ ಅಪ್ಪಣೆ ಕೊಡುವ ಸಮಯದಲ್ಲಿ ಯಿದೆ[>ಹಿರೆ] ಬೊಮ್ಮಂತರಾಜ ಯಂಬುವನು ಕೇಳಿಕೊಂಡದ್ದು : "ಪೂರ್ವದಾರಭ್ಯವಾಗಿ ನಮಗೆ ಕಾವಲಿ[>ಕಂಪ]ನಾಡ ದಳವಾರಿಕೆಯು ನಡಿಯುತ್ತಾ ಯಿತ್ತು. ನಮ್ಮ ಮರಿಯಾದೆ ದಯಪಾಲಿಸಬೇಕೆಂ"ದು ಕೇಳಿಕೊಂಡವನಾದನು. ಅದೇ ಮೇರೆಗೆ ಕ್ರಿಷ್ಣರಾಯರು ದಯಪಾಲಿಸಿದ ವಿವರವು:

ನಾಡ ದಳವಾರಿಕಿ ಸ್ವಾಸ್ಥಿಯು ಅದಕ್ಕೆ ಸಲ್ಲುವ ಜಾಗೀರು ಗ್ರಾಮಗಳು :

೧. ವುಜನಿ ಸೀಮೆ, ೧. ಜರಿಮಲೆ ಸೀಮೆ, ೧. ಗುಡೆಗೋಟೆ ಸೀಮೆ, ೧. ಬಾಣಾರಾವಿ ಶೀಮೆ, ೧. ಸೊಂಡೂರ ಶೀಮೆ, ೧. ವಡ್ಡಿ ಸೀಮೆ, ೧. ಕುಡತಿನೆ ಸೀಮೆ – ಯೀ ಪ್ರಕಾರದಲ್ಲಿ .

. . . ಕಾದುಕೊಂಡು ಯೀ ವಗ್ಯೆರೆ ಗ್ರಾಮಗಳು ಅನುಭವಿಸಿಕೊಂಡು ಬರುತ್ತಾ ಯಿರಲಾಗಿ, ಆ ಯಿರೆ[>ಹಿರೆ] ಬೊಮ್ಮಂತರಾಜನು ಯೀ ಗ್ರಾಮಗಳ ಸಿಥಿಲವಾದ ಕೋಟೆ ಕೊತ್ತಳೆಗಳನ್ನು ಕಟ್ಟಿಸಿ, ಪೂರ್ವ್ವದಾರಭ್ಯವಾಗಿ ದೇವಾದಾಯ ಬ್ರಹ್ಮಾದಾಯಗಳು ಸಕಲ ಭೂಸ್ವಾಸ್ಥಿಗಳು ನಡಸಿಕೊಳ್ಳುತ್ತಾ ಬಂದನು. ಸದರೀ ಮೇರಿಗೆ ಹಾಗೆ ಕೆಲವು ಕಾಲ ರಾಜ್ಯವನ್ನು ಪರಿಪಾಲನೆ ಮಾಡುತ್ತ ಯಿದ್ದನು. ತರ್ವಾಯ ಆತನ ಮಗ ಚ[>ಚಿ]ನ್ನಯ್ಯರಾಜ ಹಲವು ಕಾಲ ಆತನು ಆಳಿದನು. ಯೀ ಚೆ[>ಚಿ]ನ್ನಯ್ಯ ರಾಜನ ಮಗ ಕೊಂಡಲರಾಜನು ರಾಜ್ಯವನ್ನಾಳುತ್ತಿರಲಾಗಿ, ಹಲವು ಕಾಲದ ಮೇಲೆ ಮಕ್ಕಳು ಯಿಲ್ಲದೆ ಹಾಗೆ ಚಿಂತೆಯನ್ನು ಮಾಡುತ್ತ ಯಿರಲಾಗಿ, ವೊಂದಾನೊಂದು ದಿವಸ "ಯಿದಕ್ಕೆ ಯತ್ನವೇನೆಂ"ದು ಬ್ರಾಹ್ಮರನ್ನು ಕೇಳಲಾಗಿ, ಅವರು ಆಡಿದ್ದು "ನಿಮ್ಮ ವಂಶದಲ್ಲು ಮಕ್ಕಳು ಯಿಲ್ಲದ ಪಕ್ಷಕ್ಕೆ ನಿಮ್ಮ ಮನೆ ದೇವರು ಜಟಿಂಗಿರಾಮನ ಸೇವೆಯನ್ನು ಮಾಡಿ ಪುತ್ರನನ್ನು ಪಡದು ಯಿದ್ದಾರೆ. ಅದೇ ಮೇರಿಗೆ ನೀನು ಜಪದಿಂದ ತಪದಿಂದ ಅನ್ನದಾನಾದಿಗಳು ಮಾಡಿ ಬೇಡಿಕೊಂಬೋದು"ಯಂದು ಹೇಳಲಾಗಿ, ... ಯಂದು ತಿಳಿದು ವೊಂದು ಕಂದಾಯ ಸೇವ್ಯವನ್ನು ಮಾಡಲಾಗಿ, ಅವನ ಸೇವೆಯನ್ನು ಮೆಚ್ಚಿ ಸ್ವಪ್ನದಲ್ಲಿ ಬಂದು "ನೀ ಮಾಡಿದ ಸೇವೆಯನ್ನು ನನ್ನ ಮನಸಿಗೆ ಬಂತು. ನಿನ್ನ ಅಪೇಕ್ಷೆಯೇನು ಯಿದ್ದಿತೋ ಕೇಳಿಕೋ" ಯನಲಾಗಿ ಆ ಸ್ವಪ್ನದಲ್ಲಿ ಯೀತ ವಿಜ್ಞಾಪನೆ ಮಾಡಿಕೊಂಡದ್ದು: "ನನಗೆ ದಾವದುನ್ನು ಪೂರ್ವ್ವಯಿಲ್ಲವು, ನೀವು ಕೊಟ್ಟ ಐಶ್ವರ್ಯ ಸಕಲವು ಯಿದ್ದೀತೆ, ಪುತ್ರ ವಾಂಛಲ್ಯದಿಂದಾ ನಿಮ್ಮ ಪ್ರಾರ್ಥನೆಯನ್ನು ಮಾಡಿದೆನು"ಯನಲಾಗಿ, ಆ ಮಾತಿಗೆ "ಅಷ್ಟಪುತ್ರರನ್ನು ಕೊಡುತ್ತಾಯಿದ್ದೇನೆ"ಯಂದು ಸ್ವಪ್ನದಲ್ಲಿ ಹೇಳಿದಂತನಾದನು. ಆಮೇಲೆ ಅದೇ ಮೇರಿಗೆ ಆತನ ಉದರದಲ್ಲಿ ಯೇಳು ಮಂದಿ ಪುತ್ರರು ಹುಟ್ಟಿದ ಮೇಲೆ ಕೆಲವು ದಿವಸ ರಾಜ್ಯಮಾಡುತ್ತಾ ಯಿದ್ದನು. "ನನಗಾದರೂ ವಾರ್ದಿಕ್ಯ ಪ್ರಪ್ತವಾಯಿತು, ಯಿವರು ಏಳು ಮಂದಿ ಯೀ ದೇವತಾ ವರವಿನಿಂದಾ ಹುಟ್ಟಿದಂತವರಾದರು. ಯಿದರೊಳಗೆ ವೊಬ್ಬರಿಗೆ ಪಟ್ಟಕಟ್ಟಲಿಕ್ಕೆ ಬಾರದು"ಯಂದು ವೊಬ್ಬೊಬ್ಬರಿಗೆ ವೊಂದು ವೊಂದು ತಾಲೂಕು ಹಂಚಿಕೊಟ್ಟ ವಿವರವು :

ಯೀರೇ[>ಹಿರೆ]ಬೊಮ್ಮಿನಾಯಕಗೆ ಕೊಡುತ್ತೇನೆ[>ಕುಡತಿನಿ] ತಾಲೂಕು ೧. ಬಿಸಾಳನಾಯಕಗೆ ಸೊಂಡೂರು ತಾಲೂಕು ೧. ರಾಜಪ್ಪನಾಯಕಗೆ ಬಾಣರಾವಿ ತಾಲೂಕು ೧. ಹಿರೇಮಲ್ಲಿಕಾರ್ಜುನ ನಾಯಕಗೆ ಜರಿಮಲೆ ತಾಲೂಕು ೧. ಯೀರಪ್ಪನಾಯಕಗೆ ಗುಡೆಕೋಟೆ ತಾಲೂಕು ೧, ಯಿಮ್ಮಡಿ ನಾಯಕಗೆ ವುಜ್ಜನಿ ತಾಲೂಕು ೧, ಚಿನ್ನಪ್ಪ ನಾಯಕಗೆ ವಡ್ಡಿನ ತಾಲೂಕು ೧, ಯೀ ಪ್ರಕಾರದಲ್ಲಿ ಯೇಳು ಮಂದಿಗೂ ಯೇಳು ತಾಲೂಕು ಹಂಚಿಕೆ ಮಾಡಿ ಕೊಟ್ಟು, ಆ ವ್ಯಾಖ್ಯಾದಲ್ಲಿ ದಾನಧರ್ಮಾದಿಗಳನ್ನು ಮಾಡಿಸಿ ಸುದಿನವನ್ನು ನೋಡಿ ಅವರವರ ಗ್ರಾಮಕ್ಕೆ ಅಪ್ಪಣೆಯನ್ನು ಕೊಟ್ಟನು. ತಾನು ಮಧ್ಯದ ಮಗನ ಬಳಿಯ ನಿಂತನು.

ಯಿಲ್ಲಿಗೆ ಬಂದ ಹೊರೆಬೊಮ್ಮಂತನಾಯಕಯಂಬವನು ಕೊಡತೆನೆ[>ಕುಡತಿನಿ], ಕೊಳಗಲ್ಲು, ಜಾನೆಕುಂಟೆ, ಹರಗನಡೋಣಿ, ತಿಮ್ಮಪುರ ವಗ್ಯೆರೆ ವೊಂಬತ್ತು ಗ್ರಾಮಗಳು ಅನುಭವಿಸಿ ಕೊಳ್ಳುತ್ತಾ ಯಿದ್ದನು.

ಯೀ ವ್ಯಾಖ್ಯಾದಲ್ಲಿ ಯೀ ನರಪತಿ ವಂಶದವ ತಾನು ಕ್ರಿಷ್ಣರಾಯರ ಅಳಿಯ ರಾಮರಾಯರಾಜನು ಮುಸಲ್‌ಮಾನರಿಗೆ ದ್ವೇಷವು ಆಗುವ ಹಾಗೆ ರಾಜ್ಯವನ್ನು ಆಳುತ್ತಾ ಯಿರಲಾಗಿ,

ಅವರು ಯೀ ವರ್ತಮಾನವು ಕೇಳಿ ಸೈರಿಸಲಾರದೆ ಸೈನ್ಯಸುದ್ಧಾ ಬಂದು, ಆತನ ಶಿರಶ್ಚೇದನವನ್ನು ಮಾಡಿದ ಮೇಲೆ ಸರ್ವರಾಜ್ಯವು ಅರಾಜಿತವಾಯಿತು. ತರ್‍ವಾಯ ಮೊಗಲಾಯಿ ಮರಾಟೆಯವರು ನಿಂದರದೆ ಹೋದರು ದೇಶಗಳಾದವು. ಆ ಮೊಗಲಾಯಿ ಪಾದಶಾಹಾನವರು ರಾಜ್ಯ ಬಂದೊಬಸ್ತಿ ಮಾಡುವದಕ್ಕೆ ಕೆಲವು ದಿವಸದ ಮೇಲೆ ಶಿಧ್ಧಿಮಸೂದ್‌ಖಾನನವರಿಗೆ "ಆದವಾನಿ, ರಾಯಚೂರು, ಮುದಗಲ್ಲು, ಕಂದನೋಲು, ಹಿರೆಶೀಮೆ ವಗ್ಯೆರೆ ಮೊದಲಾಗಿ ಯಿಂತಿ ದೇಶಗಳನ್ನು ಬಸ್ತಿಯನ್ನು ಮಾಡು"ಯಂದು ಪಾದಶಹಾನವರ ಹುಕಂ ಆದದರಿಂದ, ಆತನು ಅದೇ ಮೇರಿಗೆ ದೇಶವನ್ನು ಬಸ್ತಿ ಮಾಡುವದಕ್ಕೆ ತನ್ಮೂಲಲಿ ಕುರಿತ ದೇಶದ ಗೌಡ, ಶಾನಭೋಗರನ ಕರಸಿ ದೇಶಾ ಬಸ್ತಿಮಾಡುವುದ್ದಿಶ್ಯವಾಗಿ, "ನಾಡಗೌಡ ದೇ॥ ನಾಡಕುಲಕರ್ಣಿಗಳು ಯಿಲ್ಲದೆ ದೇಶವನ್ನು ಬಸ್ತಿಯಾಗಲಿಕ್ಕೆ ಯಿಲ್ಲ"ವೆಂದು ತಿಳದು, ಅದರ ವಳಗೆ ಮುಖ್ಯ ಮುಖ್ಯಸ್ಥರಾದಂತಾವರನಾ ಕರಿಸಿ ನೇಮಕಾ ಮಾಡಿದ ವಿವರವು: ಕುಡತನೆ ನಿಮ್ಮ ದೇವನಗೌಡ ಕುಲಕರ್ಣಿಗಳ ಕರಿಸಿ, "ದೇಶ ಬಸ್ತಿ ಮಾಡು"ಯಂದು ಹೇಳಲಾಗಿ, "ನಾನು ಸ್ವಾಸ್ತಿವಂತನು, ಶಿಪಾಯಿ ಬೇರೆ ಅಲ್ಲವು, ಸ್ವಾಸ್ತಿ ಬಾಬು ಪಾಲಿಸಿದಲ್ಲಿ ಹೇಳಿದ ಸೇವ್ಯವ ಹಾಜರು ಆಗಿ ಯಿದ್ದೇನೆಂ"ದು ಅರ್ಜಿ ಮಾಡಿಕೊಳ್ಳಲಾಗಿ, ಯಿವರ ಅರ್ಜಿ ಕಾತರಕ್ಕೆ ತಂದು, ಆತನಿಗೆ ನೇಮಕಾ ಮಾಡಿದ ಗ್ರಾಮಗಳ ವಿವರವು : ಕುತ್ತಾನೆ, ಕೊಳಗಲ್ಲು, ದರೋಜಿ, ವಡ್ಡು, ಸೊಂಡೂರು, ಚೂರಮನೂರು, ಬಾಣರಾವಿ, ಯಿ[>ಹಿ]ರೆಹಾಳ ಯೀ ತಾಲೂಕುಗಳನ್ನು ಬಸ್ತಿ ಮಾಡುವ ವುದ್ದಿಶ್ಯವಾಗಿ ಮಾಮಲತಿ ಕೊಟ್ಟು ಕೊಮಾರ ಶಿರಿಪಾವು ಮಾನಪಾನಂಗಳು ಕೊಟ್ಟು ಕಳುಹಿಸಿ ಕೊಟ್ಟವರಾದರು. ಯೀ ವಗ್ಯೆರೆ ಸ್ಥಳಗಳಿಗೆ ಬಂದುಹ ಸಿದ್ಧಿಮಸೂದಖಾನಸಾಹೇಬರವರು ಹೇಳಿದ ಪ್ರಕಾರಕ್ಕೆ ಬಸ್ತಿಯನ್ನು ಮಾಡಿ, ದಣೇರ ಬಳಿಗೆ ಹೋಗಲಾಗಿ, ತಾವು ಕೊಟ್ಟ ವಾಕ್‌ದತ್ತಿ ಸರಿಯಾಗಿ ನಡಸಿ ಕೊಟ್ಟ ವಿವರವು :

ಕುಡುತನೆ ಭೂಮಿ ಚಕ್ಕುಬಂದಿ : ಯಿಂದ್ರಿದಿಕ್ಕಿನಲ್ಲಿ ಕೊಳಗಲ್ಲು ನಮ್ಮ ಮೇಲೆ[>ರೆ] ೨॥ ಹರದಾರಿ ತಳವಾರಮಟ್ಟಿ, ಅಗ್ನಿದಿಕ್ಕಿಗೆ ಬೆಳಗಲ್ಲು ಹೊಲಮೇರೆಗೆ ೨॥ ಹರದಾರಿ, ಯಮದಿಕ್ಕಿಗೆ ಬಾಣರಾವಿ ಶೀಮೆ ಪೈಕಿ ಕಮ್ಮಟ ಹೊಲಮೇರೆಗೆ ನಮ್ಮ ಮೇರೆ ೨ ಹರದಾರಿ, ನೈರುತ್ಯ ದಿಕ್ಕಿಗೆ ಯರಬಾನಹಳ್ಳಿ ಹೊಲಮೇರಿಗೆ ನಮ್ಮ ಹೊಲಮೇರಿ ಮಿಕ್ಕದಕುಂಟೆ ವೊಂದು ರಹದಾರಿಲಿ ಯಿಹುದು. . . . . "ದಾರ ಮನ್ಮಂತ್ರದಲ್ಲಿ ಹುಟ್ಟಿ ಯಿದ್ದೀತೆ?"ಯಂದು ಕೇಳಿದರೆ "ಕೊಮಾರರಾಮನ ಮನ್ಮಂತ್ರದಲ್ಲಿ ಹುಟ್ಟಿ ಯಿದ್ದಿತೆಂ"ದು ಜನರು ಹೇಳುತ್ತಾ ಯಿದ್ದಾರೆ. ಯಿನ್ನು ಕೆಲವು ಜನರು "ಕೃಷ್ಣರಾಯರವರು ಅಳಿಯನವರು ಮೆಟ್ಟ ಕಟ್ಟಿಸಿದ್ದು"ಯಂದು ಹೇಳುತ್ತಾ ಯಿದ್ದಾರೆ. ಕೋಟೆ ದೃಷ್ಟಾಂತರ[>ವ] ನೋಡಿದರಾಯಿತೆ ಪುರಾತನ ಕಟ್ಟಿದ ಕೋಟೆಯಾಗಿ ಕಾಣಿಸುತ್ತಾ ಯಿದ್ದೀತು. ವರುಣದಿಕ್ಕಿನಲ್ಲು ಹೊಲಮೇರೆ ಯಿಂಗಳಿಗೆ ಹೊಲಬ[>ಬಿ]ಗೆ ನಮ್ಮ ಹೊಲವೊಂದು ಹರದಾರಿಲಿ ಬೂದಿಗಣ್ವಿಯಿಂದಾ[>ದ]ದಾವ ಪ್ರಕಾರವದೆ ಯಂದರೆ, ಯಿದರ ಮಟ್ಟಿಯಿದ್ದೀತೆ, ಯಿದರನ ಕೈಲಿ ತೆಗದು ನೋಡಿದರೆ ಕಿಟ್ಟದೋಪಾದಿಲಿ ಬೂದಿ ಬರುತ್ತಾ ಯಿದ್ದೀತೆ.

ವಾಯವ್ಯದಿಕ್ಕಿಗೆ ಸುಗ್ಗನಹಳ್ಳಿ ನಾಕಲಾಪುರ ಕ॥ ಕುಡುತನೆ ಮುಗುದಿಯಿಂದೆ ವಿಬ್ಬಾ ಹೊಲಬು ಯಿಹೋದು ಮೂರು ಹರದಾರೀಲಿ, ಕುಬೇರದಿಕ್ಕಿಗೆ ಕುರುಗೋಡು ಹೊಲಬ[>ಬಿ]ಗೆ ನಮ್ಮ ಹೊಲವು ಯರುಡುವರೆ ಹರದಾರಿ ಲೆಕ್ಕಕ್ಕೆ ಭಾವಿ ಸರಹದ್ದು, ಯೀಶಾನ್ಯ ದಿಕ್ಕಿಗೆ ಕೊಳೂರು

ಹೊಲಬನೆ[>ಬಿಗೆ] ನಮ್ಮ ಹೊಲಬು ಮೂರುವರೆ ಹರದಾರಿಲಿ ತೊನ್ನಮೂಳೆ ಹಳ್ಳವು, ಅಷ್ಟದಿಕ್ಕು ಕುಡುತನೆ ಹೊಲಬು. ಕುರುತನೆ ಶೀಮೆ ವಳಗಿನ ಸ್ವಾಸ್ತಿ ನಾಡಗೌಡಕಿ ೧, ನಾಡಕುಲಕರ್ಣಿಕಿ ೧, ದೇಶಾಯಿಕಿ ಸರನಾಡಗೌಡಕಿ ೧, ನಾಡಗೌಡಕಿ ವುಮ್ಮಳಿಗಿ ಮಂಜಾಪುರ ೧ ಶಿಕಸ್ತು – ಯೀ ಮೂರು ಬಾಬಿನ ವುಮ್ಮಳಿ ಗ್ರಾಮಗಳು ಮೂರು ದರೋಜಿ ಶೀಮೆಯಲ್ಲು ಕೊಟ್ಟ ಜಮಾದಾರಿಕಿ ದೇಶಾಯಕಿ ೧ಕ್ಕೆ ವುಮ್ಮಳಿ ಸೋಮಲಾಪುರದ ಗ್ರಾಮ ೧, ವಡ್ಡಿನ ಶೀಮೆ ನಾಡಗೌಡಕಿ ಯಿದ್ದುದಕೆ ವುಮ್ಮಳಿ ದೇಶಾಯಿಕಿ ಬಾಬಿಗೆ ನಾಗಲಾಪುರ ೧, ನಾಡಗೌಡಕಿಗೆ ವುಮ್ಮಳಿಗ್ರಾಮ ಯಿಂಗಳಗಿ ೧, ಬಾಣರಾವಿ ಸೀಮೆ ನಾಡಗೌಡಿಕಿ ೧, ಯಿದ್ದದಕ್ಕೆ ಯಿರಬಾನಹಳ್ಳಿ ವುಮ್ಮಳಿ ಸೊಂಡೂರು, ನಾಡಗೌಡಕಿ ವುಮ್ಮಳಿ ಬಸಾಪುರ ೧, ಚೋರಮನೂರು ಸೀಮೆ ನಾಡಗೌಡಕಿ ವುಮ್ಮಳಿಗ್ರಾಮ ಅಂಕಮನಾಳು ೧, ಹಿರೆಹಾಳಿಗೆ ನಾಡಗೌಡಕಿಗೆ ವುಮ್ಮಳಿಗ್ರಾಮ ಮಡ್ಯಾಗಿನಹಳ್ಳಿ – ಯಿಂತೀ ಗ್ರಾಮಗಳ ಪೈಕಿ ಸ್ವಸ್ತಿ[>ಸ್ವಾಸ್ತಿ] ೧ಕ್ಕೆ ವರ್ತನೆ ನೂರಕ್ಕೆ ಐದು ಹೊನ್ನಿನ ಪ್ರಕಾರಕ್ಕೆ ಸ್ವಾಸ್ತಿ ಶಿಕ್ಕೆ ಯಿನಾಮು ಭೂಸ್ವಾಸ್ತಿಯಾಯಿತು. ತೇಜೋಪಾರ್ಜನೆಯನ್ನು ಸ್ವಾಸ್ಥಿ ದುಂಬಾಲಾಯಿದೆ. ದೇವಣ್ಣಗವುಡರಿಗೆ ಪಾಕಿಕೊಟ್ಟು ಖಿತಾಪು ಜೋಡು ಶಿಂಗಾರಿ ಪಾದಷಹಾವೆಂದು ಬಿರದು ಕೊಟ್ಟು ಸ್ಥಳಕ್ಕೆ ಕಳುಹಿಸಿ ಕೊಟ್ಟರು. ಯೀ ಪ್ರಕಾರ ಕೆಲವು ದಿವಸ ಅನುಭವಿಸಿಕೊಡು ಯಿರಲಾಗಿ, ಪೂರ್ವದಲ್ಲಿ ಈ ಸ್ಥಳ ಅನುಭವಿಸಿಕೊಂಡು ಯಿರೊಂತಾ ಜಾತಿಲಿ ಯಿರೇರು ಬ್ಯಾಡರ ಮರಳೆನವರ ವಂಶಸ್ತರಾದ ಬೊಮ್ಮಣ್ಣನಾಯಕನು ಕೆಲವು ಸಿಬ್ಬಂದಿ ಕಟ್ಟಿಕೊಂಡು ಬಂದು ಜಬರದಸ್ತಿಯಿಂದಾ ಯೀ ಗ್ರಾಮವನ್ನು ಠಾಣೆ ಹಾಕಿಕ್ಕೊಂಡು, ಆದವಾನೀಲ ಯಿಹೋಂತಾವರಿಗೆ ಯೀ ಗ್ರಾಮಗಳ ಕಂಡಿಣಿ ಹಣವನ್ನು ಮುಟ್ಟಿಸಿಕೊಳ್ಳುತ್ತಾ, ಯೀ ಗ್ರಾಮಗಳ ವ್ಯವಹಾರ ಮಾಡಿಕೊಳ್ಳುತ್ತಾ ಯಿದ್ದನು. ಆತನು ಕೆಲವು ದಿವಸ ಆಳಿದ ಬಳಿಕ ಆತನ ಮಗ ಚಿನ್ನಯ್ಯರಾಜನು ಹಾಗೆ ಯೀ ಗ್ರಾಮಗಳ ವ್ಯವಹಾರ ಮಾಡಿಕೊಳ್ಳುತ್ತಾ, ಯೀ ಗ್ರಾಮಗಳ ಖಂಡಣಿ ಹಣ ಆದವಾನಿಯವರಿಗೆ ಕೊಟ್ಟು ಕೊಳ್ಳುತ್ತಾ ಯಿದ್ದನು. ಅವನು ಕೆಲವು ದಿವಸ ಅನುಭವಿಸುತ್ತಾ ಯಿರಲಾಗಿ ಆತನ ಮಗ ಜಟ್ಟಿಂಗಿರಾಜನು ಆದವಾನಿ ಸುಭೇದಾರರಿಗೆ ಪೂರ್ವಪ್ರಕಾರ ಖಂಡಣಿ ಕೊಟ್ಟು ಕೊಳ್ಳುತ್ತಾ ಯೀ ಗ್ರಾಮಗಳ ವ್ಯವಹಾರ ಮಾಡಿಕೊಳ್ಳುತ್ತಾ ಯಿರಲಾಗಿ, ಆದವಾನಿಲಿ ದಾಜೂದಖಾನನವರ ಕಡೆಯಿಂದೆ ಸರಕಾರದ ಸುಭೆವು ಮಾಡುವ ಕಾಲ, ಮೋತಿಖಾನನು ಫೌಜಿನ ಸಂಗಡ ಬಂದು ಯೀ ಗ್ರಾಮಕ್ಕೆ ಮುತ್ತಿಗೆ ಹಾಕಿ, ಲಢಾಯಿ ಮಾಡಿ ಗ್ರಾಮವನ್ನು ಠಾಣ್ಯ ಹಾಕಿಕೊಂಡ ಬಳಿಕ, ಹತ್ತು ಹನ್ನೆರಡು ವರುಷ ಪರಿಯಂತ್ರ ಆದವಾನಿ ಸುಭೇದಾರ ಮೋಖಾಂತ್ರದಿಂದಾ ಮೊಗಲರ ಕೆಳಗೆ ಯೀ ತಾಲೂಕು ಅಮಲು ನಡದು ಬಂದು ಬಂತು.

ತರ್ವಾಯ ಹಿದಾತಿಮುಕ್ತಿಖಾನರು ಕೆಲವು ದಿವಸ ಆಳಿದರು. ತರುವಾಯ ಹಸಾನಮೋದಿಖಾನನವರು ಕೆಲವು ದಿವಸ ಆಳಿದರು. ಯೀ ಹಸಾನಮೋದಿಖಾನನವರು ಅಮಲುಮಾಡುತಾ ಯಿರಲಾಗಿ ಪೂರ್ವದ ಜಟಂಗಿರಾಜನು ಬಂದು ಠಾಣ್ಯ ಹಾಕಿದನು. ವಿಭವ ಸಂವತ್ಸರದ ಶ್ರಾವಣ ಶು॥೫ಲ್ಲು ಮುರಾರಿರ್ಜಿ ಹಿಂದೊರಾಮ[>ಯ] ಘೋರ್ಪಡೆ ಮಮ್ಮಲ[>ಗ] ಕರ್ವಾರಾದಾರ ಸೇನಾಪತಿಯವರ ಅಣ್ಣ ಶಾಮರಾವ್ ಭಾವ[>ವೆ]ನ ಮಗ ವೆಂಕಟರಾವ ಘೋರ್ಪಡೆಯವರು ಯೀ ಗ್ರಾಮ ಠಾಣ್ಯ ಹಾಕಿದರು. ಪೂರ್ವದಲ್ಲಿ ಯಿದ್ದ ಜಟಂಗಿರಾಜನ ಹಿಡಿದುಕೊಂಡು ಹೋಗಿ ಹಿರೆಹಾಳ ವಳಗೆ ಸೆರೆ ಹಾಕಿದರು. ಯೀ ಮುರಾರಿರಾಯನವರು

ಯರಡು ಪಟ್ಟ ಆಳಿದರು. ತರ್ವಾಯ ಮನ್ಮಥ ಸಂವತ್ಸರ ಪುಷ್ಯ ಶುದ್ಧ ೩ಲ್ಲು ಹಿರೆ ನವಾಬ ಬಹದರನವರು ಇವರು ಹತ್ತು ವರುಷ ಆಳಿದ ಬಳಿಕ, ಟೀಪುಸುಲ್ತಾನವರು ಠಾಣ್ಯ ಹಾಕಿಕೊಂಡು ಅಮಲು ಮಾಡುತ್ತಾ ಯಿರಲಾಗಿ, ಸಾಧಾರಣ ಸಂವತ್ಸರದ ಮಾರ್ಗಶಿರ ಮಾಸದಲ್ಲಿ ಸಿದ್ದುಜಿ ಹಿಂದುರಾಯನವರು ಬಂದು ಠಾಣ್ಯಹಾಕಿದ ವರುಷ ಅ . . . . ಆಳಿದರು. ಪುನಹಾ ಟೀಪುಸುಲ್ತಾನನವರು ಠಾಣ್ಯಹಾಕಿದ್ದು ಪರಿಧಾವಿಸಂವತ್ಸರದ ಜೇಷ್ಟಮಾಸದಲ್ಲು ಠಾಣ್ಯ ಹಾಕಿಕೊಂಡು ಅಮಲು ಮಾಡುತ್ತಾ ಯಿರಲಾಗಿ, ಮೊಗಲಾಯಿಯವರ ಅಮಲಾಗಿ ಅವರ ಕಡೆಯಿಂದ ರಹಿಮನಖಾನರು ಯಿಲ್ಲೆ ಬಂದು ನಮ್ಮ ಗ್ರಾಮ ಅಮಲು ಮಾಡಿದ್ದು ವರುಷವರೆ ಅಮಲು ಮಾಡಿದರು. ತರುವಾಯ ರವುದ್ರಿ ಸಂವತ್ಸರ ಮಾರ್ಗಶಿರ ಮಾಸದಲ್ಲಿ ಕುಂಪಣಿಯವರ ಅಮಲಾಗಿ ಅವರ ಕಡೆಯಿಂದಾ ಮಂಡ್ರೋಲ್ ಸಾಹೇಬರವರು ಬರಲಾಗಿ, ಅವರ ಕಡೆಯಿಂದ ವ್ಯಾಸರಾಯ[>ವೈಸ್‌ರಾಯ]ರು ಅಮಲು ಮಾಡಿಕೊಂಡು ಬಂದರು. ತದಾನುಸಾರವಾಗಿ ಕುಂಪಣಿ ಅಮಲಿನ ಕೆಳಗೆ ನಡಿಯುತ್ತಾ ಯಿದೆ.

ಕುಡುತನೆ ಗ್ರಾಮಗಳಲ್ಲಿ ಯಿರುವ ಛತ್ರಬಂದಿ ದೇವಾಲಯಗಳು, ಶಿವದೇವಾಲಯಗಳು: ಕೊಮಾರಸ್ವಾಮಿ ದೇವಾಲಯವೊಂದು, ಸಂಗಮೇಶ್ವರದೇವಾಲಯವೊಂದು, ಕಾಶೀ ವಿಶ್ವನಾಥದೇವಾಲಯವೊಂದು, ಪೂರ್ವದಲ್ಲು ಯೀಶ್ವರದೇವಾಲಯವು, ಯೀಗ್ರಾಮನೊದಿ . . . . ದೇವರ ಮಂಟಪ ಯಿದ್ದದ್ದು ದೇವರ ತೆಗದು ಯೀಶ್ವರಲಿಗ ಪ್ರತಿಷ್ಟೆ ಮಾಡಿ ಗುಡಿವೊಂದು.

ಹೊರಗೆ ಗಂಗಾಧರನ ದೇವಾಲಯವೊಂದು, ಶಂಕರನಾರಾಯಣ ದೇವಾಲಯವೊಂದು, ಗಾಣಿಗರ ಮನೆ ಬಳಿಯ ಲಿಂಗ ಈಶ್ವರದೇವಾಲಯವೊಂದು, ಹಾಲುಭಾವಿ ವಳಗೆ ಕಲ್ಲು ಮಂಟಪ ಯೀಶ್ವರದೇವಾಲಯವೊಂದು, ಯೀ ಪ್ರಕಾರ ಛತ್ರ ಮೂರನ್ನು ದುರಸ್ತು ಯಿದ್ಧೀತೆ.

ದಾರ ಮಂಟಪಗಳು:

ಹನುಮಂತರಾಯನ ಗುಡಿ ೧, ಕನಕಡಿ ಹನುಮಂತರಾಯನ ಗುಡಿವೊಂದು, ಕಲ್ಲೂರ ಹನುಮಂತರಾಯನ ಗುಡಿವೊಂದು, ಹಾಲುಭಾವಿ ಹನುಮಂತರಾಯನ ಗುಡಿವೊಂದು, ಯಮ್ಮೆಬಸವನ ಗುಡಿವೊಂದು, ನಯನಸ್ವಾಮಿಮಠದ ಗುಡಿವೊಂದು, ಮಳೆ ಮದಡ[>ಮಠ] ಲಿಂಗಬಸವನ ಗುಡಿ.

ವಿರಕ್ತಮಠದ ಗುಡಿ ದೇವಾಲಯವೊಂದು ೧

ಕರಿಬಸವಸ್ವಾಮಿಗಳದರ ದೇವಾಲಯ ೧

ವನ್ರಾದ ದೊಡ್ಡಬಸಪ್ಪನ ದೊಡ್ಡದೇವಾಲಯ ೧

ವಿಘ್ನೇಶ್ವರನ ದೇವಾಲಯ ಛತ್ರ ಬಂದಿದು ೧

ನರಸಿಂಹದೇವರ ದೇವಾಲಯವೊಂದು ೧

ಗೊನಕಟ್ಟಿ ಬಸವಪ್ಪನ ಗುಡಿದೇವಾಲಯ ೧

ಬೀರಪ್ಪನ ದೇವಾಲಯವೊಂದು ೧

ಯೀ ಪ್ರಕಾರ ದಾರಾ ಮಠ[>ಮಂಟಪ]ಗಳು ಯೆಂಟು, ಛಕ್ರ[>ತ್ರ]ಬಂದಿ ದೇವಾಲಯಗಳು ಹಾಜರು ಯಿದ್ದಾವು.

ಯೀ ಗ್ರಾಮಕ್ಕೆ ಯಿಂದ್ರದಿಕ್ಕಿಗೆ ಪೂರ್ವಭಾಗದಲ್ಲು ಅಯಿದು ಹರದಾರಿಲಿ ಬಳ್ಳಾರಿ ಯಿದ್ದೀತೆ.

ಅಗ್ನಿದಿಕ್ಕಿಗೆ ಆರು ಹರದಾರಿಲಿ ಹಿರೆಹಾಳು ಯಿದ್ದೀತೆ. ಯಮದಿಕ್ಕಿಗೆ ಮೊಳಕಾಲುಮುರಿವಿನ ಕಾಲು ಬಾಣರಾವಿ ನಾಲ್ಕು ಹರುದಾರಿ ಯಿದ್ದೀತೆ, ನೈರುತ್ಯ ದಿಕ್ಕಿಗೆ ಘೋರ್ಪಡೆನವರ ತಾಲೂಕು ಸೊಂಡೂರು ಯೇಳು ಹರದಾರಿ ಯಿದ್ದೀತೆ, ವರುಣದಿಕ್ಕಿಗೆ ಕಂಪಲಿ ತಾಲೂಕು ಪೈಕಿ ವಡ್ಡುಯಂಬುವ ಗ್ರಾಮ ನಾಲ್ಕು ಹರದಾರೀಲಿ ಯಿದ್ದೀತೆ, ವಾಯವ್ಯದಿಕ್ಕಿನಲ್ಲಿ ದರೋಜಿ ಮೂರು ಹರದಾರೀಲಿ ಯಿದ್ದೀತೆ. ಕುಬೇರ ದಿಕ್ಕಿನಲ್ಲಿ ವೊರ್ದಾ[>ರ್ವಾ]ಯಿ ಯಂಬುವ ಗ್ರಾಮ ನಾಲ್ಕು ಹರದಾರೀಲಿ ಯಿದ್ದೀತೆ. ಯೀಶ್ಯಾನ್ಯ ದಿಕ್ಕಿಗೆ ನಲ್ಲಿಕೊಳೂರು ಅಯಿದು ಹರದಾರಿ ಯಿದ್ದೀತೆ – ಯೀ ಪ್ರಕಾರ ಅಷ್ಟದಿಕ್ಕಿಗು ಗ್ರಾಮಗಳು ಯೀ ಗ್ರಾಮಕ್ಕೆ ಯಿದ್ದೀತೆ.

ಯೀ ಪ್ರಕಾರ ಬರಸಿದ ಕೈಫಿಯತು . . . .

೨. ನಾಡಗೌಡ ದ॥ ನಾಡಗೌಡ ನರಸಣ್ಣಗೌಡನು ಬಸವಣ್ಣಗೌಡನು

೨. ಕ॥ಗೌಡರು ರಾಮರೆಡ್ಡಿಗೌಡನು ಭೀಮನಗೌಡನು

೧. ದೇಶಮುಖ ಸರದೇಶಮುಖ ವೆಂಕಣ್ಣಸಂ[>ಪಂ]ತನ ಮುತಾಲಿಕ ಹಂಡೆ ಹನುಮಂತರಾಯ

೧. ದೇಶಮುಖ ಗೋವಿಂದಪ್ಪನು.

೧.

ಯಿದಕ್ಕೆ ಬರಹ ಬರದು ನಾಡ ಕೊ ॥ದೆ॥ ಭೋಗವಳಿ ಬಣದ ಗೋವಿಂದಪ್ಪನ ಮಗ ವೆಂಕಸ್ತಾ[>ಪ್ಪಾ] ಬರಹವು.

ಯೀ ಗ್ರಾಮದ ಭೂಮಿಯೊಳಗೆ ಬೆಳೆಯುವ ಧಾನ್ಯ ವಿವರವು:

೧. ಬಿಳಿಜೋಳ	೧. ಕಡ್ಲೆ	೧. ಅವರೆ
೧. ಅರಿಸಿನ	೧. ಹೆಸರು	೧. ಅಗಸಿ
೧. ಸೆಜ್ಜಿ	೧. ತೊಗರಿ	೧. ಕುಸುಬೆ
೧. ನವಣೆ	೧. ಹುರಳಿ	೧. ಅವುಡ್ಲ
೧. ರಾಗಿ	೧. ಅಲಸಂದಿ	೧. ಸೋರುಪ್ಪು

ತೋಟಗಳಲ್ಲಿ ಕಾಯಿ ಪದಾರ್ಥ ವಗೈರೆವು.

ಸಮಾಪ್ತವೂ.

❖❖

೧೧೨
ಸಂತೆಬೆನ್ನೂರು ಶೀಮೆಯಿಂದ ಕೈಫಿಯತ್ತು ಪಟ್ಟಿ

ಮೆಕೆಂಝಿ ಸಂಪುಟ : ೧೬೦

ಹರಿಹರದೇವ ಮಹಾರಾಯರು ರತ್ನಸಿಂಹಾಸನಾರೂಢರಾಗಿ ರಾಜ್ಯವನ್ನು ಆಳುತ್ತಾ ಹರಿಹರ ಮುಂತಾದ ಸ್ಥಳಗಳಲ್ಲಿ ಬಂದು ಯಿರುವ ಸಮಯದಲ್ಲಿ ಮದಕರಿಯೆಂಬ ಸ್ಥಳದಲ್ಲಿ ದಿ[>ಗಿ]ಡ ಬೆಳೆದು ಮಹತ್ತು ಆದಂತಾ ಮಲೆ ಯಿದ್ದಲ್ಲಿ. ಅಲ್ಲಿ ಮದೋನ್ನಮತ್ತವಾದಂಥಾ ಆನೆಯಿರುತ್ತಿರಲಾಗಿ ಈ ವರ್ತಮಾನವನ್ನು ರಾಯರಿಗೆ ತಿಳಿಯಲಾಗಿ, ರಾಯರು ಯೀ ಮದೋನ್ಮತ್ತವಾಗಿದ್ಯಂಥ ಆನೆಯನ್ನು ಕೈವಶ ಮಾಡಿಕೊಳ್ಳುವ ನಿಮಿತ್ಯ ಸ್ವಾರಿಮುಖವಾಗಿ ಬಂದು ಯಿದ್ದಲ್ಲಿ, ಯೀ ಆನೆಯು ಯಿವರ ವಶವಾಗದೆ ಯಿದ್ದದರಿಂದ ರಾಯರು ತಮ್ಮ ಮನಸ್ಸಿಗೆ ವ್ಯಾಕುಲ ಹಚ್ಚಿಕೊಂಡು, ಆ ದಿವಸ ಆ ಆನೆ ಯಿರುವ ಸ್ಥಳದಲ್ಲಿಯೇ ಯಿಳಿದುಕೊಂಡು ಯಿರಲಾಗಿ, ಯೀ ರಾಯರ ಸಂಗಡ ಶ್ರೀವತ್ಸಗೋತ್ರದ ಆ[+ಪ]ಸ್ತಂಭಸೂತ್ರದ ಯಜುಶ್ಯಾಖೆಯ ಯಿಂದ್ರಕಂಟಿ ಆವಳಿ ನರಸಿಂಬಟ್ಟನು ಆಶ್ರಯಿಸಿಕೊಂಡು ಯಿರಲಾಗಿ, ಯೀ ಸಮಯದಲ್ಲಿ ರಾಯರು ಯೀತನ ಕುರಿತು ಪ್ರಶ್ನೆಯನ್ನು ಮಾಡಲಾಗಿ, ನರಸಿಂಬಟ್ಟನು "ಉದಯವಾದ ಗಳಿಗೆ ೩ಕೆ ಆನೆಯು ಕೈವಶವಾಗುತ್ತದೆ" ಯಂಬದಾಗಿ ಹೇಳಿದಲ್ಲಿ, ರಾಯರು "ಈ ಪ್ರಶ್ನೆಯು ಸುಳ್ಳು ಆಗಬಾರದು"ಯಂದು ಕೇಳಿದಲ್ಲಿ, ಆತನು "ಯೀ ಪ್ರಶ್ನೆ ಬಗ್ಗೆ ದೇವತಾ ಅನುಗ್ರಹ ಉಂಟು. ತಮಗೆ ದೇವರು ಸ್ವಪ್ನದಲ್ಲಿಯೇ ಹೇಳ್ಯಾರು"ಯಂಬದಾಗಿ ಹೇಳಿದರಿಂದ ಅದೇ ಪ್ರಕಾರಕ್ಕೆ ಸ್ವಪ್ನಮುಖದಿಂದ ದೇವರು ಪ್ರಸನ್ನನಾಗಿ, "ಯೀ ಆನೆ ಯಿಂಥಾ ವ್ಯಾಳಕೆ ನಿನಗೆ ವಶವಾಗುತ್ತದೆ ಯೋಚನೆ ಮಾಡಬೇಡಾ"ಯಂದು ಅಪ್ಪಣೆ ಕೊಟ್ಟದರಿಂದ, ರಾಯರು ಜಾಗ್ರತರಾಗಿ ಶಯನವನ್ನು ಬಿಟ್ಟು ನೋಡಲು, ಯಿವರು ಯಿಳಿದು ಯಿದ್ದ ಸ್ಥಳದಲ್ಲಿ ವಂದು ಹುತ್ತವಿತ್ತು. ಆ ಹುತ್ತದಲ್ಲಿ ಪ್ರಕಾಶಮಾನವಾಗಿ ದಿವ್ಯ ಮಾಣಿಕ್ಯದೋಪಾದಿಯಲ್ಲಿ ಲಿಂಗಾಕಾರವಾಗಿ ಕಂಡದರಿಂದ ಯಿವರೇ ಪ್ರಸನ್ನಮೂರುತಿ ಯಂಬುದಾಗಿ ತಿಳಿದರು. ಅದೇ ಪ್ರಕಾರ ಯೀ ಆನೆಯು ರಾಯರ ವಶವಾದ್ದರಿಂದ ಬಹಳ ಸಂತೋಷವಂತರಾಗಿ, ಅಲ್ಲಿ ಮದಕರಿಯೆಂಬದಾಗಿ ಗ್ರಾಮಕ್ಕೆ ಹೆಸರು ಯಿಟ್ಟು, ಸ್ವಪ್ನವಾದ ಸ್ಥಳದಲ್ಲಿ ತಾವು ಗಿಡಹತ್ತಿದಂತಾದದು ಯಾವತ್ತೂ ಕಡಿಸಿ, ದೇವಸ್ಥಾನವನ್ನು ಕಟ್ಟಿಸಿದರು. ಆ ದೇವರಿಗೆ ತೋಪಿನರಂಗನೆಂದು ಹೆಸರು ಯಿಟ್ಟು, ಆ ಸ್ತಳದಲ್ಲಿ ಕೊಪ್ಪನಹಳ್ಳಿಯಂಬ ಗ್ರಾಮ ಕಟ್ಟಿಸಿ, ಯೀ ದೇವರಿಗೆ ಉತ್ತರಾ ಕೊಟ್ಟರು.

ರಾಯರು ಹರಿಹರ ಗುಹಾರಣ್ಯಕ್ಷೇತ್ರದಲ್ಲಿ ತುಲಾಪುರಷವೆ ಮುಖ್ಯವಾದ ದಾನಗಳ ಕೊಡುವ ಸಮಯದಲ್ಲಿ ಯೀ ನರಸಿಂಬಟ್ಟಗೆ ಶಕ ೧೩೧೬ನೆಯ ಯುವ ಸಂವತ್ಸರದ ವೈಶಾಖ ಶು. ೧೫ ಚಂದ್ರಗ್ರಹಣದಲ್ಲಿ ಜ್ಯೋತಿಶ್ಯಾ . . . . ಪೌರೋಹಿತ್ಯ ಶ್ಯಾನುಭೋವಿಕೆ ಬಗ್ಯೆ ಸಹಾ ನರಸಿಂಬಟ್ಟಗೆ ಶ್ಯಾಸನವನ್ನು ಬರಶಿಕೊಟ್ಟು, ಹವಳಕಟ ಬ್ರಹ್ಮನಹಳ್ಳಿ ಯರಡು ಗ್ರಾಮ ಗ್ರಾಮಾನುಗ್ರಾಮಗಳಲ್ಲಿ ಗದ್ದೆಬೆ[+ದ್ದ]ಲ್ಲು ಮುಂತಾಗಿ ಸರ್ವಮಾನ್ಯಯತ್ತವಾಗಿ ನಡದು ಬರುವಂತೆ ದಯಪಾಲಿಸಿದರು.

ಯೀ ಪ್ರಕಾರ ಯಿರುತ್ತ ಯಿದ್ದಲ್ಲಿ ರಾಯರ ಆಕಳು ಹಿಂಡುಗಳು ದೇವಗಿರಿಯಲ್ಲು ಆಡುತ್ತಾ ಯಿರಲ್ಲು, ಅದರಲ್ಲಿ ಒಂದು ಪಂಚಮೊಲೆ ಕಾಮಧೇನುಯಂಬ ಕಪಿಲೆ ಆಕಲೂ ಹೋಗಿ ಗುಡ್ಡವನ್ನು ಹತ್ತಿ ಹುತ್ತದಲ್ಲು ಹಾಲ್ಲು ಕರಿಯುತ್ತ ಯಿದ್ದಲ್ಲಿ, ಯೀ ವರ್ತಮಾನವನ್ನು ರಾಯರ್ರಿಗೆ ತಿಳಿದು "ಆ ಆಕಳ ಗೊಡವೆಗೆ ಹೋಗಬ್ಯಾಡಾ"ಯಂದು ಗೋವುಪಾಲಕರಿಗೆ ಹೇಳಿಶಿ ಬಿಟ್ಟರು.

ಹೀಗೆ ಯಿರುತ್ತ ಯಿರಲಾಗಿ ವಂದಾನೊಂದು ಕಾಲದಲ್ಲಿ ರಾಯರ ಕಡೆಯಿಂದ ಕುದುರೆಗಳು ಬ್ಯಾಟೆ ಆಡುತ್ತ ಬರುವ ವ್ಯಾಳ್ಯದಲ್ಲಿ ವಂದು ಉಡಲು ಕಣ್ಣಿಗೆ ಕಂಡದ್ದರಿಂದಾ ಆ ಉಡುವಿಗೆ ನಾಯಿಗಳ ಬಿಟ್ಟು ಬಲೆ ಹಾಕುತ್ತ ಯಿರಲಾಗಿ ಆ ಉಡವು ಯಾತಕ್ಕೂ ಸಿಗದೇ ದೊಡ್ಡ ಉಡವಾದ್ದರಿಂದ ಆ ಸ್ಥಳದಲ್ಲಿ ಒಂದು ಗುರುತುಮಾಡಿ, ಪುನಹಾ ಬೆನ್ನ ಹತ್ತಿ ಹೋಗಲು ಯೀ ಉಡವು ಮತ್ತೆ ಸಣ್ಣದಾಗಿ ಕಂಡದರಿಂದ ಆಶ್ಚರ್ಯಬಟ್ಟು ಆ ಸ್ಥಳಕ್ಕೆ ವಂದು ಗುರುತು ಮಾಡಿ, ಪುನಹಾ ಬೆನ್ನು ಹತ್ತುವದೊರಳಗೆ ಯೀ ಆಶ್ಚರ್ಯಕರವಾದಂಥಾ ಉಡಲು ಚನ್ನಾಗಿ ನಿಂತು ಯೀ ಜನರ ನೋಡೋಣವಾಯಿತು. ಆ ಸ್ಥಳಕು ವಂದು ಗುರುತು ಮಾಡಿ, ಪುನಹಾ ಬೆನ್ನು ಹತ್ತಲಾಗಿ ಯೀ ಉಡಲು ಯೀ ಜನರ ಕುರಿತು ನೀತಿಯನ್ನು ಹೇಳಲಾಗಿ ಯೀ ಸ್ತಳದಲ್ಲಿಯೂ ಗುರುತು ಮಾಡಿ, ಪುನಹಾ ಉಡವನ್ನು ಬೆನ್ನುಹತ್ತಿ ಬರಲು ಯೀ ಉಡಲು ನಿಂತುಕೊಂಡಿರಲು ಯಿಲ್ಲಿಯ ಗುರ್ತು ಮಾಡಿ, ಬೆನ್ನು ಹತ್ತಲು ಯೀ ಉಡಲು ಪೂರ್ವದಲ್ಲಿ ದೇವಗಿರಿಯಲ್ಲು ಗುಡ್ಡದ ಮೇಲೆ ಆಕಳು ಹಾಲು ಕರಿಯುತ್ತಿದ್ದ ಹುತ್ತವನ್ನು ಹೊಕ್ಕದರಿಂದ ಯೀ ಬ್ಯಾಟಿಕಾರರು ಕಂಡು ಹುತ್ತವನ್ನು ಬಗದು ನೋಡುವ ಸಮಯದಲ್ಲಿ, ಯಿವರು ಸಂಗಡ ಯಿದ್ದ ನಾಯಿಗಳು ಸಹಾ ಮೂರ್ಚಿತವಾದರು.

ಯೀ ಪ್ರಕಾರ ಯಿರುವಲ್ಲಿ ಭಗವಂತನನುಗ್ರಹದಿಂದ ಆ ಮೂರ್ಚೆಗತವಾಗಿದ್ದ ಜನರಲ್ಲಿ ವಬ್ಬಗೆ ಜಾಗ್ರತೆ ಆಗಿ ಯಚ್ಚರವಾಗಲು ಆತ ಯೆದ್ದು, ಯೀ ವಿಪರೀತವಾಗಿರುವಂತಾದು ಕಂಡು ಅಲ್ಲಿ ನಿಲ್ಲುವುದಕ್ಕೆ ಧೈರ್ಯವಿಲ್ಲದೆ ಪುನಹಾ ರಾಯರ ಸಮೀಪಕೆ ಹೋಗಿ, ಯೀ ವರ್ತಮಾನವನ್ನು ತಿಳಿಸಲಾಗಿ, ಅವರು ಸ್ವಾರಿ ಮುಖಾಂತ್ರ ಬಂದು ಯೀ ಆಶ್ಚರ್ಯವನ್ನು ಕಂಡು, ರಾಯರು "ಯೇನು ಕಾರಣ ಯೀ ಪ್ರಕಾರ ಯಿವರು ಮೂರ್ಚೆಗತರಾದರು? ನೀನು ಯಾವ ದೇವತೆ? ನಿಂತ ವೃತ್ತಾಂತನೇನು?"ಯಂದು ಆಲೋಚಿಸಲಾಗಿ, ತಿರುಗಿ ಯೀ ಮೂರ್ಚೆಗತರಾಗಿದ್ದ ಜನರಲ್ಲಿ ವಬ್ಬಗೆ ಜಾಗ್ರತಿಯಾಗಿ ಅವನು ಯದ್ದು, ರಾಯರ ಸಂಗಡ "ಭಗವಂತನನುಗ್ರಹವಾಯಿತು. ಯಿ ಸ್ತಳವು ಯಿತ್ಯಾದಿ ಸ್ತಳವಲ್ಲಾ. ಗುಹಾರಣ್ಯಕ್ಷೇತ್ರಕ್ಕೆ ಸಮವಾದಂತಾದು. ಹರಿದ್ರಾತೀರ ನಾಲು ಹರಿಹರಾತ್ಮಕರು ಯಿದ್ದೇವೆ"ಯಂಬುದಾಗಿ ಹೇಳಲು, ರಾಯರು ಪ್ರಾರ್ಥಿಸಿಕೊಂಡು ಆ ಸ್ಥಾನದಿಂದ ಯೀ ಜನರು ಯೀ ಪ್ರಕಾರ ಮಾಡಿದರು. ಮುಂದೆ ಯೀ ಜನರು ಪೂರ್ವ ಪ್ರಕಾರಕೆ ಮೂರ್ಚೆ ತಿಳಿದು ಎದ್ದರು. ಸ್ತಳಮಹತ್ತು ಉಂಟೇ ಸರಿಯಂಬದಾಗಿ ಪ್ರಾರ್ಥಿಶಿಕೊಳಲಾಗಿ, ಅದೇ ಪ್ರಕಾರಕೆ ಯಾವತ್ತು ಜನರು ನಾಯಿಗಳು ಸಹವಾಗಿ ಮೂರ್ಚೆ ತಿಳಿದು ಪೂರ್ವ ಪ್ರಕಾರವಾದರಿಂದ ರಾಯರ್ರು 'ಈ ಸ್ಥಳಲು ಮಹಾಘಟಿಕಾಸ್ಥಳ. ಆದಿಹರಿಹರಾತ್ಮಕವಾದಂತಾದು'ಯಂಬುದಾಗಿ, ಪೂರ್ವದಲ್ಲಿ ಉಡಲು ಬ್ಯಾಟಿ ಆಡುವ ಸಮಯದಲ್ಲಿ ಯಾವ ಯಾವ ಮಹತ್ತು ತೋರಿಶಿಯಿತ್ತೋ ಆ ಗುರುತಿನ ಸ್ಥಳಗಳಿಗೆ ಗ್ರಾಮಗಳನ್ನು ನಿರ್ಮಾಣ ಮಾಡಿಶಿ, ಶ್ರೀ ಹರಿಹರಾತ್ಮಕವಾಗಿ ಉಡವಿನಾಕಾರದಿಂದ ತೋರಿಶಿ ಕೊಂಡದ್ದರಿಂದ 'ಉಡಮರೂಪಿರಂಗನಾಥ'ಯಂಬುದಾಗಿ ಯೀ

ಸ್ಥಳದಲ್ಲಿ ವಂದು ಅಂಕಣ ದೇವಸ್ತಾನವನ್ನು ಕಟ್ಟಿಸಿ, ಯೀ ದೇವರಿಗೆ ಈ ಗ್ರಾಮಗಳನ್ನು ಉತ್ತರವನ್ನು ಕೊಟ್ಟರು.

೧. ದೇವಗಿರಿಯಿದ್ದ ಸ್ಥಳಕ್ಕೆ ದೇವರಹಳ್ಳಿ ಗ್ರಾಮ ಕಟ್ಟಿದರು.

೧. ಚನ್ನಾಸಿ[>ಗಿ]ಯಾ ಬ್ಯಾಟಿಕಾರರು ನಿರೀಕ್ಷಿಸಿದ ಸ್ಥಳದಲ್ಲಿ ಚನ್ನಾಪುರಯಂಬ ಗ್ರಾಮ ಕಟ್ಟಿದರು.

೧. ಯೀ ಮಹತು ಆದಂತಾ ಉಡಲು ಬ್ಯಾಟಿಕಾರರನ್ನು ನಿಂತು ನೋಡಿದ ಸ್ತಳಕ್ಕೆ ನಿಂತಾಪುರಯೆಂಬ ಗ್ರಾಮ ಕಟ್ಟಿದರು.

೧. ದೊಡ್ಡ ಉಡಾಕರವಾಗಿ ಕಂಡ ಸ್ಥಳದಲ್ಲಿ ಹಿರೆಉಡೆಯಂಬ ಗ್ರಾಮವನ್ನು ಕಟ್ಟಿದರು.

೧. ಯೀ ಬ್ಯಾಟಿಕಾರರ ಸಂಗಡ ಆಶ್ಚರ್ಯಕರವಾದ ಉಡವು ನೀತಿಯನ್ನು ಹೇಳಿದಂಥ ಸ್ಥಳಕ್ಕೆ ನೀತಿಗೆರೆ ಗ್ರಾಮ ಕಟ್ಟಿದರು.

೧. ಯೀ ಉಡಲು ದೇವಗಿರಿ ಗುಡ್ಡಕ್ಕೆ ಪ್ರವೇಶಮಡುವಾಗೆ ನಿಂತು, ರಾಮ ರಾಮಯಂದು ಧ್ವನಿ ಮಾಡಿದ ಸ್ಥಳಕ್ಕೆ ರಾಮನಹಳ್ಳಿಯಂಬ ಗ್ರಾಮ ಕಟ್ಟಿದರು.

೧. ಸಣ್ಣ ಉಡರೂಪವಾಗಿ ಕಂಡ ಸ್ಥಳದಲ್ಲಿ ಚಿಕ್ಕುಡವು ಯಂಬ ಗ್ರಾಮ ಕಟ್ಟಿದರು.

೧. ಯೀ ಉಡವು ನಮ್ಮ ವಶವಾಗದೆಂದು ಬ್ಯಾಟಿಕಾರರು ತರ್ಕಮಾಡಿದಲ್ಲಿಗೆ . . . . ತಗರೂರು ಯಂಬ ಗ್ರಾಮ ಕಟ್ಟಿದರು.

ಯೀ ಪ್ರಕಾರ ಯಿದ್ದ ಸ್ಥಳಗಳಲ್ಲಿ ಗ್ರಾಮಗಳನ್ನು ಕಟ್ಟಿಶಿ ದೇವರಿಗೆ ಉತ್ತರ ನೇಮಕವನ್ನು ಮಾಡಿದರು.

❖❖

೧೧೩
ಹತ್ತಿ ಬೆಳಗಲ್ಲು ಕೈಫಿಯತು

ಮೆಕೆಂಝಿ ಸಂಪುಟ : ೩೫೧

ಕೈಫಿಯತು ಹತ್ತಿಬೆಳಗಲ್ಲು, ತಾಲೂಕೆ ಗುಳ್ಳಂ

ಪೂರ್ವದಲು ಹತ್ತಿಬೆಳಗಲ್ಲಿಗೆ ಪ್ರಾಚೀನ ನಾಮಧೇಯ ಬೆಳಗಲ್ಲು ಯಂಬರು. ಯೀ ಬೆಳಗಲ್ಲು ಯಂಬೋ ಗ್ರಾಮ, ಯೀ ವೂರಿಗೆ ಪಶ್ಚವ [>ಪಶ್ಚಿಮ]ದಲ್ಲು ಸಮೀಪವಾಗಿ ವೂರುಗುಡ್ಡಾ ಯಂಬಾ ಪರ್ವತದ ಮ್ಯಾಲ ಕೋಟೆ ಕಟ್ಟಿ, ಮನೆ ಮುಂತಾದ್ದು ಯಿದ್ದು ದೊಡ್ಡ ಸ್ತಳವಾಗಿ ಚೋಳರಾಯರ ಮನ್ಮಂತರದಲ್ಲು ಪ್ರಸಿದ್ಧವಾದ ಸ್ತಳ. ಯೀ ವೂರಿಗೆ ದಕ್ಷಿಣಭಾಗದಲ್ಲಿ ಯರಡು

ಹರದಾರೀ ಮಲ್ಲರಾಮದುರ್ಗದ ಸಮೀಪ ಯಿಂದುವಾಲೆಯಂಬಾ ಗ್ರಾಮಯಿದ್ದಾಗ್ಯೆ, ಯೀ ವೂರು ಬೆಟ್ಟದ ಮ್ಯಾಲ ಕೋಟೆ ಊರು ಮನೆ ಮುಂತಾದ್ದು ಯಿದ್ದ ಸ್ಥಳ. ಪೂರ್‍ವದಲ್ಲು ಸೋಮೇಶ್ವರದೇವಾಲಯ ಆದ ವಿವರ: ಪಾವಕೊಂಡೆಯಂಬಾ, ದೊಡ್ಡ ಶಿರ್ಪಿವಾಕರ ಪಾವಗಡ ಯಂಬ ಸ್ತಳದಲ್ಲಿ ಗೊಲ್ಲರು ಅಣ್ಣತಮ್ಮಂದರು ಯಿಬ್ಬರು ಪಾವಕೊಂಡೆಯಲ್ಲು ದೊರೆತನವು ಮಾಡಿಕೊಂಡು ಯಿರೂವಾಗ್ಯೆ, ಅಳ[>ಣ್ಣ]ಗ ತೊನ್ನು ವುಪದ್ರ ಬಂದು, ತಮ್ಮಾಗೆ ರಾಜ್ಯ ವಪ್ಪಿಶಿಕೊಟ್ಟು ತಾನು ತೀರ್ಥಯಾತ್ರೆ ಮಾಡೊ ಬಗ್ಯೆ ವೊಬ್ಬನೆ ಕುಳ್ಳಿ ಸಂಗಮೇಶ್ವರದೇವರ ದರುಶನ ಮಾಡಿಕೊಂಡು, ಅಲ್ಲಿ ಶೇತಿ[>ವೆ] ಮಾಡುತ್ತಾ ಯಿರೊವಾಗ್ಯೆ, ದೇವರ ಅಪ್ಪಣೆ ಆದದ್ದು "ನೀನು ಸಮುದ್ರತೀರದಲ್ಲು, ಆನೆ ಸೋಮಪ್ಪಾಯಂಬೊ ಸ್ತಳದ ಪರ್‍ವತದಲ್ಲು ಯಿಥೆ. ಅಲ್ಲಿಗೆ ಹೋಗಿ ದೇವರ ದರುಶನ ಮಾಡಿದರೆ ನಿನ್ನ ರೋಗ ಪರಿಹರ ಆಗುತಾ ಯಿಥೆ"ಯೆಂದು ಅಪ್ಪಣೆ ಕೊಟ್ಟಲ್ಲಿ, ಅಪ್ಪಣೆ ಪ್ರಕಾರಕ್ಕೆ ಯೀ ಗೊಲ್ಲನು ಸಮುದ್ರತೀರದಲ್ಲಿ ಯಿರುವಂಥಾ ಪರ್‍ವತಕ್ಕೆ ಹೋಗಿ, ದೇವರನ್ನ ಕಾಣದೆ ಪ್ರಾರ್ಥನೆ ಮಾಡುತಾ ಯಿರಲಾಗಿ, ಸ್ವಪ್ನದಲ್ಲಿ ದೇವರು ಹೇಳಿದ್ದು "ನಾಳೆ ದಿವಸ ನೀನು ವಂದು ಮರದ ಮ್ಯಾಲೆ ಯಿರುವದು. ಆವಾಗ್ಯೆ ಆನೆಗಳು ತನ್ನ ಸೊಂಡದಲು ನೀರೂ ಪುಷ್ಪ ತಂದು ದೇವರಿಗೆ ಅಭಿಷೇಕಾ ಮಾಡುತ್ತಾರೆ. ಆ ಆನೆಗಳು ಹೋದ ಮ್ಯಾಲೆ ನೀನು ಆ ಸರೋವರದಲ್ಲಿ ಸ್ನಾನಮಾಡಿ ದೇವರ ದರುಶನಾ ತೆಗೆದುಕೊಂಡಲ್ಲಿ ನಿನ್ನ ರೋಗ ಪರಿಹಾರ ಆಗುತಾ ಯಿಥೆ"ಯಂದು ಅಪ್ಪಣೆ ಕೊಟ್ಟಲ್ಲಿ, ದೇವರ ಅಪ್ಪಣೆ ಮ್ಯಾರಿಗೆ ಮರುದಿನ ಆನೆಗಳು ಬಂದು ದೇವರಿಗೆ ಪೂಜೆಮಾಡಿ ಹೋದ ಬಳಿಕಾ, ಯೀ ಗೊಲ್ಲನು ಆ ಸರೋವರದಲ್ಲು ಸ್ನಾನಮಾಡಿ, ದೇವರ ದರುಶನ ಮಾಡಿದ ಬಳಿಕಾ, ತನ್ನ ರೋಗ ಪರೀಹಾರವಾಗಿ ದಿವ್ಯಶರೀರವಾಯಿತು. ಆಗ ಆ ದೇವರನ್ನಾ ಪ್ರಾರ್ಥನೆಮಾಡಿ "ಸ್ವಾಮಿ ತಾವು ನನ್ನ ಸ್ಥಳಕ್ಕೆ ಬಿಜಯ ಮಾಡಬೇಕು"ಯಂದು ಪ್ರಾರ್ಥನೆ ಮಾಡಿದಲ್ಲಿ, ಅದೇ ಪ್ರಕಾರಕ್ಕೆ "ನಿನ್ನ ಸಂಗಡಾ ಬರುತಾ ಯಿಥೆವೆ. ನೀನು ಮಾರ್ಗದಲ್ಲಿ ಜಲಪಾನ ಮುತ್ರ ಸಂಬ್ಯಾ ಮಾಡದಂತೆ ನೀನು ಯಷ್ಟು ಧೂರಾ ಹೋಗುತಾ ಯಿಧಿಯೋ ಆ ವೂರಿಗೆ ನಾವು ನಿನ್ನ ಸಂಗಡಾ ಬರುತ್ತೇವೆ"ಯೆಂದು, ತಕ್ಷಣವೆ ಸ್ವರೂಪಯಿಲ್ಲದೆ ಗುಂಡಾಗಿ ಯಿದ್ದ ದೇವರನ ತೆಗೆದುಕೊಂಡು, ತಡವಲಕುಂಟೆಯಂಬೊ ಗ್ರಾಮ ಸಮೀಪದಲ್ಲು ಕುಂಟಿ ಯಿರಲಾಗಿ, ಅಲ್ಲಿ ಯೀ ಗೊಲ್ಲ ದಾಹದ ವುಪದ್ರದಿಂದಾ ವಂದು ಬೊಗಶೆ ನೀರು ಕುಡಿಯುವಾಗ್ಯೆ ತಾನು ತಂದ ದೇವರ ಗುಂಡು ಆ ಕೊಳದಲ್ಲಿ ಬಿತ್ತು. ಯೀತನು ತೆಗೀಬೇಕೆಂದು ನೋಡಿದಲ್ಲಿ ಬರಲಿಲ್ಲಾ. ತರುವಾಯ ಬಿಡಾರಿಕೆ ಬಣಜಿಗರು ಆ ಸ್ಥಳಕ್ಕೆ ಬಂದಲ್ಲಿ, ದನಗಳಿಗೆ ಮನುಷ್ಯರಿಗೆ ಸಹ ಕಣ್ಣು ಕಾಣದೆ ಯಿದ್ದಲ್ಲಿ ವಬ್ಬ ಹೆಂಗಸಿನ ಮ್ಯಾಲೆ ಆವೇಶಾ ಬಂದು, "ನಾನು ಯೀಶ್ವರ, ಗುಂಡು ರೂಪವಾಗಿ ಕೊಳದಲ್ಲಿ ಯಿದ್ದೇನೆ. ನನ್ನ ಹೊರಗೆ ತೆಗೆದು ದೇವಾಲಯ ಕಟ್ಟಿಸಿ ಸ್ತಾಪನೆ ಮಾಡಿಸೋದು"ಯಂದು ಅಪ್ಪಣೆ ಕೊಡಲಾಗಿ, ಆ ಬಣಜಿಗರು ಅದೇ ಪ್ರಕಾರಕ್ಕೆ ದೇವರನ್ನು ತೆಗೆದು, ಕೊಳದ ದಡಿಯಲ್ಲಿ ದೇವಸ್ತಾನಾ ಕಟ್ಟಿಸಿ, "ಯೀಶ್ವರ ರೂಪವಾಗಿ ಬರುತ್ತೇನೆ"ಯಂದು ಅಪ್ಪಣೆ ಆದಲ್ಲಿ, ಗೊಲ್ಲನು ದೇವರನ ಕುರಿತು ಪ್ರಾರ್ಥನೆಮಾಡಿದಲ್ಲಿ, "ನಾನು ಮತ್ತೊಂದು ರೂಪವಾಗಿ ನಿನ್ನ ಸಂಗಡ ಗುಂಡುರೂಪವಾಗಿ ಬರುತ್ತೇನೆ"ಯಂದು ಅಪ್ಪಣೆ ಆದಲ್ಲಿ, ಗೊಲ್ಲನು ದೇವರ ಅಪ್ಪಣೆ ಪ್ರಕಾರ, ತಾನು ಮುಸಾನಹಳ್ಳಿಯಂಬ ಸ್ತಳ, ಯೀ ಹತ್ತಿಬೆಳಗಲ್ಲಿಗೆ ವುತ್ತರ ದಿಕ್ಕಿನಲ್ಲಿ ೫ ಹರದಾರೀ ಮ್ಯಾಲ್ಲಿ ಗೊಲ್ಲ ಬಂದು ನಿಂತಲ್ಲಿ, ಮುಸಾನಹಳ್ಳಿಯಂಬ ಗ್ರಾಮದಲ್ಲು ಬಿಳೀ ಗುಂಡು ರೂಪವಾಗಿ ಪ್ರತ್ಯಕ್ಷವಾದದರಿಂದಾ, ಆ ಗ್ರಾಮಸ್ತರು

ವೂರಿಗೆ ಹೊರಗೆ ದೇವಾಲಯ ಕಟ್ಟಿಸಿ, ಮುಸಾನಹಳ್ಳಿ ಸೋಮೇಶ್ವರಯಂದು ದೇವರಿಗೆ ಹೆಸರಾಯಿತು. ತಡವಲಕುಂಟೆಯಲ್ಲಿ ಯಿರುವ ದೇವರೀಗೆ ತಡವಲಕುಂಟೆ ಸೋಮೇಶ್ವರಯಂದು ಹೆಸರು.

ಯೀ ಗೊಲ್ಲನು ಮುಸಾನಹಳ್ಳಿಯಿಂದ ಯೀ ಹತ್ತಿಬೆಳಗಲ್ಲಿಗೆ ಪಶ್ಚಿಮಭಾಗದಲ್ಲು ಪರ್ವತದ ಮ್ಯಾಲೆ ಸಾಮಿಪ್ಯವಾಗಿ, ದೇವರ[>ರು] ಗುಂಡುರೂಪದಿಂದ ಬಂಡೆ ಕೆಳಗೆ ಪ್ರತ್ಯಕ್ಷವಾದ್ದರಿಂದಾ, ಯೀ ಊರೊಳಗೆ ಯಿರುವ ಜೆನರು ಕಂಡು ಚೋಳರಾಯರಿಗೆ ಅರಿಕೆ ಮಾಡಲಾಗಿ, ಚೋಳರಾಯರು ಆ ಸ್ತಳದಲ್ಲಿ ದೇವಸ್ತಾನ ಮುಂತಾದ್ದು ಕಟ್ಟಿಸಿ, ಯೀ ದೇವರೀಗೆ ದಕ್ಷಿಣಭಾಗದಲ್ಲು ಸಾಮಿಪ್ಯವಾಗಿ ಬೆಟ್ಟದ ಕೆಳಗೆ ದೇವಸ್ತಾನ ಕಟ್ಟಿಸಿ, ವಂದು ಲಿಂಗವನ್ನು ಪ್ರತಿಷ್ಟೆಮಾಡಿ, ಚಿಕ್ಕಸೋಮೇಶ್ವರಾಯಂದು ಹೆಸರಾಯಿತು. ಪರ್ವತದಲ್ಲಿ ಯಿರುವ ದೇವರಿಗೆ ಹಿರೆಸೊಮೇಶ್ವರ ಯಂದು ಹೆಸರು. ಯೀ ಗೊಲ್ಲನು ಆದವಾನಿಗೆ ಹೋಗಿ ಅಲ್ಲಿಂದಾ ಚೋಳರಾಯರ ಅಪ್ಪಣೆ ಮ್ಯಾರೀಗೆ ಅಲ್ಲಿ ಅಲ್ಲಿ ಊರು ಕೋಟೆಗಳು ಕಟ್ಟಿಸಿ, ಗ್ರಾಮಗಳು ೪೦೦ ನ[>ನಾ]ನ್ನೂರು ಕಟ್ಟಿಸಿದನು. ಕಂಪಲಿಗೆ ಹೋಗಿ ಅಲ್ಲಿ ಗುಂಡರೂಪವಾಗಿ ಯೀಶ್ವರ ಪ್ರತ್ಯಕ್ಷವಾದ್ದರಿಂದಾ ಅಲ್ಲಿ ದೇವಸ್ತಾನ ಕಟ್ಟಿಸಿ ಕಂಪಲಿ ಸೋಮೇಶ್ವರಾಯೆಂದು ಹೆಸರು ಆಯಿತು. ಯೀ ಹತ್ತಿಬೆಳಗಲ್ಲುಯಲ್ಲಿ ಯಿರುವ ದೇವರಿಗೆ ಹತ್ತಿಬೆಳಗಲ್ಲು ಸೋಮೇಶ್ವರಾ ಯಂದು ಹೆಸರು. ಯೀ ಗೊಲ್ಲಗೆ ಸೋಮೇಶ್ವರ ದ್ಯಾವರು ಪ್ರತ್ಯಕ್ಷವಾದ್ದರಿಂದ ಗೊಲ್ಲ ಸೋಮಣ್ಣಾಯಂಬ ಹೆಸರಾಯಿತು. ಯೀತನು ಗೋವುಗಳ ಯತೇಶ್ಚವಾಗಿ ಶೇರಿಸಿ, ವೂರುಗಳು ಕಟ್ಟಿಸಿದನು. ಯೀತ ರಾಜ್ಯಾಧಿಪತ್ಯ ಮಾಡಿದ್ದು ಯಿಲ್ಲಾ. ವಿರಕ್ತನಾಗಿ ಯಿದ್ದನು. ಯೀತಗೆ ಸಂತಾನವಾಗಿ ಯಿದ್ದದ್ದು ಕಾಣಿ ಬರೋದಿಲ್ಲಾ. ಯೀತನ ಮನ್ಮಂತ್ರ ಚೋಳರಾಯರ ದಿವಸದಲ್ಲಿ ಯಂದು ಜನರು ಹೇಳುತ್ತಾ ಯಿದ್ದಾರೆ. ಯೀ ವೂರಿಗೆ ಬೆಳಗಲ್ಲುಯೆಂಬಾ ಹೆಸರು ಆದದ್ದಕ್ಕೆ ಕಾರಣ, ಯೀ ವೂರು ಕೋಟೆ ಮನೆ ಮುಂತಾದ್ದು ಯಿದ್ದ ಪರ್ವತಕ್ಕೆ ವೂರುಗುಡ್ಡಾಯೆಂಬ ಹೆಸರು. ಅದಕ್ಕೆ ಕಾರಣ ಯೀ ವೂರುಗುಡ್ಡಕ್ಕೆ ಶೇರಿ ಯಿರುವ ಗುಡ್ಡಾ ಬೆಳ್ಳಗ ಯಿದ್ದರಿಂದಾ ಯೀ ವೂರಿಗೆ ಬೆಳಗಲ್ಲುಗುಡ್ಡಾಯಂದು ಹೆಸರು. ಹತ್ತಿ ಬೆಳಗಲ್ಲುಯಂದು ಹೆಸರು ಆದದಕ್ಕೆ ಕಾರಣ ಯಿಂ[>ಯೆಂ]ತೆಂದರೆ ವೊಬ್ಬ ವರ್ತಕನು ಯೀ ದೇಶದಲ್ಲಿ ಹತ್ತಿ ವರ್ತಕ ಮಾಡಿಕೊಂಡು ಯಿರಲಾಗಿ ಕೆಲವು ವರ್ತಕರ ಕಡೆಯಿಂದಾ ಲಕ್ಷಾಂತ್ರ ಹಣವನ್ನು ತೆಗೆದುಕೊಂಡು ಗುತ್ತಿದುರ್ಗದ ಮ್ಯಾಲೆಯೇರಿ, ಆ ವರ್ತಕರಿಗೆ ಯೀ ವೂರು ಬೆಳೆಕಲ್ಲು ಗುಡ್ಡಾ ತೋರಿಸಿ, "ಯೀ ಸ್ತಳದಲ್ಲು ಹತ್ತಿ ರಾಸಿ ಹಾಕಿಯಿದ್ದೇನೆ"ಯೆಂದು ಹೇಳಿ, ಅವರ ಕಡೆಯಿಂದಾ ಹಣವನ್ನು ತೆಗೆದುಕೊಂಡು, ಯೀತಗೆ ಕಡಾ ಬಾಳ ದೇಶದಲ್ಲು ಆದ್ದರಿಂದ, ಅವರಿಗೆ ಕೆಲವು ಹಣವನ್ನು ಕೊಟ್ಟು ತಾನು ಯೀ ದೇಶ ಬಿಟ್ಟು ಪರದೇಶಕ್ಕೆ ಹೊರಟು ಹೋದನು. ಯೀತಗೆ ಹತ್ತಿ ಬಗ್ಯೆ ರೊಕ್ಕ ಕೊಟ್ಟ ವರ್ತಕನು ಯೀ ಸ್ತಳಕ್ಕೆ ಬಂದು, ಯಿಲ್ಲಿ ನಮ್ಮ ಸಂಗಡ ಕರಾರು ಮಾಡಿ ರೊಕ್ಕ ತೆಗೆದುಕೊಂಡು ಬಂದ ವರ್ತಕಾ ಹತ್ತಿ ಶೇರಿಸಿಯಿಟ್ಟ ಸ್ತಳ ನೋಡಲಾಗಿ, ಹತ್ತಿ ಕಾಣದೆ ಬಿಳೆಗಲ್ಲುಯಂಬಾ ಗುಡ್ಡಕಂಡು, ವರ್ತಕನು ಪಲಾಯನ ಮಾಡಿ ಹೋದದ್ದು ಕೇಳಿ, ಹತ್ತಿಬೆಳಗಲ್ಲುಯಂಬ ಹೆಸರು ಪ್ರಶಿದ್ಧವಾಯಿತು. ಬಹು ವರ್ತಕರು ರೊಕ್ಕ ಕೊಟ್ಟು ಕೆಟ್ಟು ಹೋದದ್ದರಿಂದಾ ವರ್ತಕರು ಇಟ್ಟ ಹೆಸರು ಹತ್ತಿಬೆಳಗಲ್ಲುಯಂದು ಪ್ರಖ್ಯಾತಿಯಾಗಿ ಹೆಸರಾಯಿತು.

ಯೀ ವೂರಲ್ಲು ಯಿರುವ ಮಾಧರು[>ವ]ಸ್ವಾಮಿ ಮೂರ್ತಿ ಬಹು ಸಂದರವಾಗಿ ಯಿಧೆ. ಯೀ ದೇವರು ಯೀ ಸ್ಥಳದಲ್ಲು ಆಗಮನಕೆ ಕಾರಣ, ಪೂರ್ವದಲ್ಲು ಕಂದನೂರು ಶೀಮೆಯಲ್ಲು

ಗೋರಂಟ್ಲಾ ಆಚೆ ಸ್ಥಳದಲ್ಲಿ ಅನಾದಿಯಾಗಿ ಮಾಧವಸ್ವಾಮಿಮೂರ್ತಿ ಯಿರೋವಾಗ್ಯೆ, ಕಲಾಪನ[>ಖಲೀಫನು] ಬಂದ ಸಮಯದಲ್ಲು ದೇವರನ ಭೂಸ್ತಾಪನ ಮಾಡಿ ಯಿದ್ದಲ್ಲಿ, ಕಲಾಪನ[>ಖಲೀಫನು] ಹೋದ ಬಳಿಕ ಆ ಮೂರ್ತಿ ತೆಗೆದು ನೋಡಿದಲ್ಲು ದೇವರಿಗೆ ಬಲಗೈ ಕಡೆ ಬೆರಳು ಬಿನ್ನವಾಗಿ ಯಿತ್ತು. ಆವಾಗ್ಯೆ ಆ ಸ್ಥಳದಲ್ಲು ಮತ್ತೊಂದು ಮಾಧರ[>ವ]ಸ್ವಾಮಿಮೂರ್ತಿ ಮಾಡಿಶಿದಲ್ಲು. ದೇವರ ಅಪ್ಪಣೆ "ನನ್ನ ಬೆರಳು ಬಿನ್ನವಾದದ್ದು ಫಲಾನಿ ಸ್ತಳದಲ್ಲುಯಿದೆ. ಅದು ತೆಗದು ತಗಲಿಸಿದರೆ ಯಥಾ ಪ್ರಕಾರ ಕೂಡತ ಯಿದೆ"ಯೆಂದು ಅಪ್ಪಣೆ ಆದಲ್ಲಿ, ಆ ದೇವರನ್ನು ಆ ಸ್ಥಳದಲ್ಲೇ ಪ್ರತಿಷ್ಟೆ ಮಾಡಿನಿಂ[>ಸಿ]ದರು. ಹೊಸ್ತಾಗಿ [+ಪ್ರತಿಷ್ಟೆ] ಮಾಡಿನಿಂ[>ಸಿ]ದ ಮಾಧವಸ್ವಾಮಿಗೆ, ಯೀ ಸ್ಥಳದಲ್ಲಿ ಮೂರ್ತಯ್ಯಾ ವಸಂತಯ್ಯಾ ಯಂಬವರು ಅಂಣ ತಂಮಂದರ ಸಾತಾನಿ ಜಾತಿಯವರು ಯಿವರು ಆ ಸ್ಥಳಕ್ಕೆ ಹೋಗಿ, ಅಲ್ಲಿ, ಯಿವರ ನೆಂಟರು ಯಿದ್ದಲ್ಲಿ ಹೊಸತಾಗಿ ಮಾಡಿಶಿದ ಮಾಧವಸ್ವಾಮಿಗೆ ಪೂಜೆಯಿಲ್ಲದೆಯಿದ್ದದ್ದರಿಂದಾ ಅರಮನೆ ಕಡೆಯಿಂದಾ ಅಪ್ಪಣೆ ತೆಗೆದುಕೊಂಡ[>ಡು], ಮಾಧವಸ್ವಾಮಿನ ಆ ಸ್ತಳದಿಂದ ತೆಗೆದುಕೊಂಡು ಯೀ ಸ್ತಳಕ್ಕೆ ಬಂದು, ಹತ್ತಿಬೆಳಗಲ್ಲಲ್ಲಿ ಗುಡಿ ಕಟ್ಟಿಶಿ ಪ್ರತಿಷ್ಟೆ ಮಾಡಿಸಿದರು. ಸದರಿ ಬರದ ಗೊರಂಡ್ಲಾ[>ಟ್ಲಾ] ಗ್ರಾಮದಲ್ಲು ಯಿರುವ ಮಾಧವಸ್ವಾಮೀ ಜನಮೇಜಯನ ಪ್ರತಿಷ್ಟೆಯಂದು ಹೇಳುತಾ ಯಿದ್ದಾರೆ.

ಯಿ ವೂರಲ್ಲಿ ಪ್ಯಾಟೆಬಸವಿ ರಾಮಿಯಂಬವಳು ಧನವಂತಳಾಗಿಯಿದ್ದದರಿಂದಾ ಆಕಿ ರಾಮೇಶ್ವರಲಿಂಗ ಪ್ರತಿಷ್ಟೆಮಾಡಿ, ದೇವಾಲಯ ವಂದು ಭಾವಿ ಸಹಾ ಕಟ್ಟಿಸಿದಳು. ಯಿದಕ್ಕೆ ಹೆಸರು ರಾಮಿದೇವರು ಯಂದು ಹೆಸರು, ಪ್ರಸಿದ್ಧ ಯೀಶ್ವರಲಿಂಗ ಯಿಥೆ.

ಯೀ ವೂರು ಬೆಟ್ಟದ ಮ್ಯಾಲೆ ಕೋಟೆ ಮನೆ ಮುಂತಾದ್ದು ಕೆಲವು ಕಾಲದ ಮ್ಯಾಲೆ ಖಿಲವಾಗುತ್ತಾ ಬಂತು. ವಿಜಯನಗರದ ಅರಸರ ಕೆಳಗೆ ನಡಿಯುತಾ ಯಿರುವಾಗ್ಯೆ ಕ್ರಿಷ್ಣರಾಯ ಅಚ್ಯುತರಾಯ ಸದಾಶಿವರಾಯರ ಕಾಲದಲ್ಲು ಯೀ ವೂರಿಗೆ ಪಶ್ಚಿಮ ೦।೦ ಹರದಾರಿ ಮ್ಯಾಲೆ ಅಗ್ರಹಾರ ಕಟ್ಟಿಸಿ ಬ್ರಾಹ್ಮರಿಗೆ ಸರ್ವಮಾನ್ಯವಾಗಿ ಬಿಟ್ಟರು. ಅವರ ಕಾಲದಲ್ಲು ಶಿಲಾಶಾಸನ ಹಾಕಿದ್ದು, ಮೂರು ಶಾಸನ ಯಿಥೆ. ಅದರಲ್ಲಿ ಶಾಲಿವಾಹನ ಶ ೧೪೩೨ನೆಯ ಪ್ರಜೋತ್ಪತ್ತಿ ಸಂವತ್ಸರ ಯಂದು ಶಾಸನದಲ್ಲಿ ಯಿಥೆ. ಯರಡನೆ ಶಾಸನದಲ್ಲು ಶಾಲಿವಾಹನ ಶಕ ೧೪೮೧ನೆ ಶಿದ್ದಾರ್ತಿ ಸಂವತ್ಸರ ಯಂದು ಯಿಥೆ. ಯೀ ಯರಡು ಶಾಸನದಲ್ಲು ಶಕ ಸಂವತ್ಸರ ವರಿಗೆ ಅಕ್ಷರಗಳು ತಿಳಿಯುತಾ ಯಿಥೆ. ಕಡಿಮಿ ಅಕ್ಷರಗಳು ವೋದಲಿಕ್ಕೆ ಅಕ್ಷರಗಳು ಬರೋದಿಲ್ಲಾ. ಅಕ್ಷರಗಳು ಶಿಥಿಲವಾಗಿ ಹೋಗಿ ಯಿಥೆ. ಆದ್ದರಿಂದಾ ದಾಖಲಾ ಯಿರೋ ಬಗ್ಯೆ ಬರದು ಯಿದ್ದೇನೆ.

ಯೀ ಬೆಳಕಲ್ಲು ಗುಡ್ಡದ ಮ್ಯಾಲೆ ನಾ[>ಸಾ]ರಮ್ಮನಾಯಕಸಾನಿ ಗಂಡ ಬ್ಯಾಡನು ಜೇನುಬ್ಯಾಡರು ಶೇರಿಕೊಂಡು, ಪಾಳೆಗಾರನು ಅನಿಸಿಕೊಂಡು ಯಿದ್ದನು. ಆತನ ಹೆಸರು ತಿಳಿಯಲಿಲ್ಲಾ. ಆತನ ಹೆಂಡತಿ ಸಾರಮ್ಮನಾಯಕಸಾನಿಯಂಬವಳು ಕೆಲವು ದಿನ ಆಳಿದಳು.

ಯೀ ಬ್ಯಾಡರು ಯೀ ಸ್ಥಳಕ್ಕೆ ಪ್ರಾಬಲ್ಯೆ ಆಗಲಿಕ್ಕೆ ಕಾರಣ, ವಿಜಯನಗರ ಶೀಮೆ ತುರುಕರು ಕಟ್ಟಿದ ಸಮಯದಲ್ಲು ದೇಶ ಅನಾಯಕ ಆದ್ದರಿಂದ ಯೀ ಬ್ಯಾಡರು ಕಟ್ಟಿಕೊಂಡರು. ಯೀ ನಾ[>ಸಾ]ರಮ್ಮನ ಮಗ ತಿರುಮಲನಾಯಕ ಯಂಬವನು ಬ್ಯಾಡರನು ಶೇರಿಸಿಕೊಂಡು

ಬೆಟ್ಟದಲ್ಲು ಸದರಿ ಬಂದ ಅಗ್ರಹಾರ ಖಿಲವಾಗಿ ಬ್ಯಾಡರು ಶೇರಿದರು. ಸದರಿ ಬರದ ನಾಯಕನ ಕೆಳಗೆ ಯಿದ್ದ ಗ್ರಾಮಗಳು"

೧. ಹತ್ತಿ ಬೆಳಗಲ್ಲು	೧. ಹರ[+ದ]ಗೆರೆ	೧. ಕಾಮಿನಹಾಳ
೧. ತಿಂಮಾಪುರಾ	೧. ಕುಕ್ಕಿರಬೇಡು	೧. ಮಾಕನೂರು
೧. ರಾಮದುರ್ಗ	೧. ಮೇದಿಹಾಳು	೧. ಬೊಮ್ಮಿನಹಾಳು
೧. ಶಿಂಗರಾಪುರ [>ಶಿರಗಾಪುರ]	೧. ಶಿದ್ದರಹಾಳು	೧. ನಗರತೊ[>ಡೊ]ಣಿ
೧. ಬೆಳ್ಳಡೊಣೆ	೧. ಹಲಹರವಿ	೧. ಜಚಾರಹಳ್ಳಿ

ಅಂತು ೧೫ ಗ್ರಾಮಕ್ಕೆ ಕಾವಲಿ ತಳವಾರಿಕೆ ಮಾಡಿಕೊಂಡು ಅಧಿಕಾರ ಯಿವರೆ ಮಾಡಿಕೊಂಡು, ದಿವಾಣಕ್ಕೆ ಹಣ ಕೊಡುತಾ ಯಿದ್ದರು. ಯೀತನೆ ಪ್ರಾಬಲ್ಯನಾಗಿ ಯಿದ್ದನು. ಯೀ ತಿರುಮಲನಾಯಕಗೆ ಯಿಬ್ಬರು ತಮ್ಮಂದರು. ವೊಬ್ಬ ಸೋಮಶೇಖರನಾಯಕ, ಯರಣ್ಣೆ ಅವ ಸೋಮಪ್ಪನಾಯಕ. ಯೀ ಮೂರು ಮಂದಿ ಅಣ್ಣ ತಮ್ಮಂದರು ಹಂಚಿಕೊಡ್ಡದ್ದು ತಪಶೀಲು:

ಪ್ರಥಮ ತಿರುಮಲನಾಯಕ ರಾಮದುರ್ಗದಲ್ಲು ನಿಂತು ಅಯಿದು ಗ್ರಾಮಗಳು ಹಂಚಿಕೊಂಡದ್ದು ೧, ರಾಮದುರ್ಗ, ೧. ಮೆದೆಪಾಡು, ೧. ಬೆಮ್ಮನಪಾಡು, ೧. ಶಿರಗಾಪುರಂ, ೧. ಶಿದರಹಾಳು.

ಸೋಮಪ್ಪನಾಯಕಗೆ ೧. ನಗರತೊ[>ಡೊ]ಣಿ, ೧. ಬೆಳಡೊಣೆ, ೧. ಹಲಹರವಿ, ೧. ಜಚಾರಹಳಿ, ೧. ಬಾಪುರ[>ಮಾಕನೂರು].

ಸೋಮಶೇಖರನಾಯಕ ಯರಣ್ಣೆ[<ಯರಡನೆ] ಆತಗೆ ೧. ಹತ್ತಿಬೆಗಲ್ಲು ೧. ಹರದಗೆರೆ, ೧. ಕಾಮಿನಹಾಳು, ೧. ತಿಮ್ಮಾಪುರಾ, ೧. ಕೊಕ್ಕೊರಬೇಡು.

ಯೀ ಪ್ರಕಾರ ಹಂಚಿಕೊಂಡು ಯಿದ್ದರು. ಯಿದರಲ್ಲಿ ಮುಖ್ಯಸ್ತ ತಿರುಮಲನಾಯಕ. ಯೀ ತಿರುಮಲನಾಯಕನ ಮಗ ಸೋಮಶೇಖರನಾಯಕನು. ಯೀ ಹತ್ತಿಬೆಳಗಲ್ಲು ಸ್ತಳದಲ್ಲು ಯಿರುತ್ತಿದ್ದನು. ಯೀತನು ದಿವಾಣಕ್ಕೆ ಹಣಕೊಟ್ಟುಕೊಂಡು ಅಧಿಕಾರ ತಾನೆ ಮಾಡಿಕೊಂಡು ಕಾವಲಿ ತಳವಾರಿಕೆ ರುಸುಮ ಅನುಭವಿಸುತಾ ಯಿದ್ದರು. ಧೊರೆಗಳು ಅನಿಶಿಕುಂತಾ[>ಅನಿಸಿಕೊಂತಾ] ಯಿದ್ದರು. ಸೋಮಶೇಖರನಾಯಕನ ಮಗ ಸಾಬಿನಾಯಕ ದಿನದಲ್ಲು ಬಿಜಾಪುರದಿಂದಾ ಪಾಕ್ಷಾ[>ಪಾದಶಾ] ಕಡೆಯಿಂದಾ ಶಿದ್ದಿ ಅಂಬರಖಾನಯಂಬೊ ಸರದಾರ ದಕ್ಷಿಣದೇಶಕ್ಕೆ ಆದವಾನಿ ಸುಭೆ ಮಾಡಿಕೊಂಡು ಆದವಾನಿಗೆ ಬಂದನು. ಆತನ ಕಡೆಯಿಂದಾ ದಂಡು ಬಂದು ಯೀ ವೂರು ಗುಡ್ಡದ ಮ್ಯಾಲೆ ಯಿರುವಂಥಾ ಕೋಟೆ ಕೆಡಹಿಸಿದರು. ತರುವಾಯ ಯೀ ಸಾಬಿನಾಯಕನು ಕೆಲವು ಬ್ಯಾಡರನಾ ಕೂಡಿಶಿಕೊಂಡು ಆದವಾನಿಗೆ ಹೋಗಿ, ನೂರು ಜನರಿಗೆ ನಾಯಕತನವಾಗಿ ಚಾಕರಿ ಮಾಡುತಾ ಯಿರುವಾಗ್ಯೆ, ಯಿವರ ಗ್ರಾಮಗಳಿಗೆ ಕಾವಲಿ ನಡಿತಾ ಬಂತು. ಅಧಿಕಾರಾ ಸರಕಾರದ ಕಡೆ ಜನರು ಮಾಡುತಾ ಯಿದ್ದರು. ಯೀ ಸಾಬಿನಾಯಕನು ಆದವಾನಿಯಲ್ಲಿ ಯಿರುವಾಗ್ಯೆ ಅಲಿ ವಬ್ಬಾ ಹೆಂಗಸರ ಮ್ಯಾಲ ದ್ರಷ್ಟಿಯಿಡಲಾಗಿ ಯೀತನ ಶಿರಶ್ಚೇದನಾ ಮಾಡಿಸಿದ್ದರು. ಯಿತನ

ಕಡೆ ಜೆನರು ಹೆಣ ಹೊತ್ತು ಬೆಳಗಲ್ಲಿಗೆ ತಂದು ದಹನ ಮಾಡುವಾಗ್ಯೆ ಆತನ ಯಿಬ್ಬರು ಹೆಂಡರು ಕುಂಡದಲ್ಲಿ ಬಿದ್ದರು. ಯೀ ವೂರಿಗೆ ವುತ್ತರ ಭಾಗದಲ್ಲು ಸಾಮಿಪ್ಯವಾಗಿ ವೊಂದು ಗುಡಿಕಟ್ಟಿ ವೊಂದು ಕಲ್ಲಿನ ಮ್ಯಾಲೆ ಕುದುರೆ ಮ್ಯಾಲೆ ಸಾಬಿನಾಯಕನ ರೂಪ, ಆತನ ಹೆಂಡರು, ಆತನ ಕಡೆ ಜನರು ಅಪತ್ತಾಗಿರಿ ಹಿಡಿಯೋರು ಸಹ ಕಲ್ಲಮ್ಯಾಲೆ ರೂಪ ಕೆತ್ತಿಧಾರ.

ತರುವಾಯ ಶಿದ್ದಿಮಸೂದ್‌ಖಾನುಯಂಬೊ ಸರದಾರು ಬಿಜ್ಯಾಪುರದ ಪಾಶ್ಚಾನ್ ಕಡೆಯಿಂದ ಆದವಾನಿ ಸುಭೇಗೆ ಮೊಕರರು ಆಗಿ, ವೆಂಕಣ್ಣಪಂತಯಂಬ ಬ್ರಾಹ್ಮಣ ದಿವಾನಗಿರಿ ಮಾಡಿಕೊಂಡು ಆದವಾನಿಗೆ ಬಂದು ಸುಭೆ ಮಾಡಿಕೊಂಡು ಯಿದ್ದರು. ಆವಾಗ್ಯೆ ಬೆಟ್ಟ ಹಾಳಾಗಿ ಯಿದ್ದದರಿಂದಾ ವೂರು ಜನರು ಬೆಟ್ಟಾ ಬಿಟ್ಟು ಬೆಟ್ಟಕ್ಕೆ ಪೂರ್ವಭಾಗದಲ್ಲು ವಂದು ಗುಂಡಿನ ಯಶಿಕೆ[>ಎಸಿಕೆ] ಮ್ಯಾಲೆ ಊರು ಕಟ್ಟಿಕೊಂಡು ಯಿರುತಾ ಯಿದ್ದರು. ವೆಂಕಣ್ಣಪಂತರು ಆದವಾನ[>ನಿ] ದಿವಾನಗಿರಿ ಮಾಡುತಾ ಯಿರೊವಾಗ್ಯೆ ಯೀ ವೂರಲ್ಲಿ ಬ್ರಾಹ್ಮರಿಗೆ ವ್ರಿತ್ತಿಸ್ವಾಸ್ತಿ ಮಾಡಿಕೊಡಹಿಶಿದರು. ಸರದೇಶಾಯಿ ಯಂಬಾ ಹರಕಿ[>ಶಿ] ದಿವಸುಖಾನ್ ಮನ್ಮಂತ್ರದಲ್ಲು ವಿಜಾಪುರದ ಪಾಶ್ಚಾ ಅಪ್ಪಣೆ ವ್ಯಾರಿಗೆ ಯೀ ದೇಶಕೆ ವಾಡಿಕೊಟ್ಟರು. ದೇಶಾಯಿ ಯಂಬವರು, ಕದೀಮುರು ದೇಶಕುಲಕರ್ಣಿಯಂಬವರು ಪೂರ್‍ವದಲ್ಲು ಗೊಲ್ಲರ ಸೋಮಣ್ಣ ಮನ್ಮಂತ್ರದಲ್ಲು ಆದರು. ದೇಶಾಯಿ ದೇಶಕುಲಕರ್ಣಿರು ತರುವಾಯ ನಾಡಗುಡರು ಆದರು. ಯೀ ನಾಡಗುಡರು ಮೊಗಲಾಯಿ ದಿನದಲ್ಲು ಆದವರು. ಸರದೇಶಾಯರು ಯಂಬವರು ಸಿದ್ದೀಮಸೂದಖಾನ ದಿನದಲ್ಲು ಆದವರು. ೧೦೦ ಶಿದ್ದಿ ಅಂಬರಖಾನ, ಶಿದ್ದಿಮಸೂದಖಾನ್, ಬೇಗಂ ಸಾಹೇಬ ಯಿವರಲ್ಲಿ ಶಿದ್ದಿಅಂಬರಖಾನ, ಶಿದ್ದಿಮಸೂದಖಾನ್, ಬೇಗಂಸಾಹೇಬ ಯೀ ಮೂರು ಮಂದಿ ವಿಜ್ಯಾಪುರದ ಕಡೆ ಅವರು, ಗಾಜುಧಿಖಾನ್ ಗೋಲಕೊಂಡ ಕಡೆ ಅವರು. ಸದರಿ ನಾಲ್ವರು ಜನ ಆಳಿದ್ದು ಸನ್ ೧೦೬೫ ಪಸಲಿ ಲಾಗಾಯಿತು ಸನ್ ೧೧೬೫ವರಿಗೆ ವರುಷಂಗಳು. ಯಿವರ ಆಳಿಕೆಯಲ್ಲು ಕಾವಲಿ ಸಾಬಿನಾಯಕನ ಮಗ ಹಿರೆ ಕೊಟ್ಟ[>ಟ್ಟು]ರುನಾಯಕಾ, ಯರಣ್ಣೆವಾ[>ಎರಡನೆಯವ] ಚಿಕ್ಕಕೊಟ್ಟೂರನಾಯಕ. ಯಿವರಿಗೆ ಕಾವಲಿ ನಡಿತಾ ಯಿತ್ತು. ಯಿವರು ನೂರು ಆಳು ಕೂಡಿಸಿಕೊಂಡು ರಾಯದುರ್ಗದವರ ಕಡೆ ಅಪ್ಪಣೆ ಬರಲಾಗಿ, ಚಿತ್ರದುರ್ಗದವರ ಯುದ್ಧದಲ್ಲಿ ಹೋಗಿ ಕಾರ್‍ಯಾಮಾಡಿದಲ್ಲಿ ರಾಯದುರ್ಗದವರು ಪಲ್ಲಕಿ ಕೊಟ್ಟರು. ಆವಾಗ್ಯೆ ಹಿರೆಕೊಟ್ಟ[>ಟ್ಟೂರ]ನಾಯಕನು ಪಲ್ಲಕ್ಕಿಯೇರುತಾ ಯಿದ್ದನು. ಯೀತಗೆ ಸಂತತಿ ಯಿಲ್ಲಾ. ಚಿಕ್ಕ ಕೊಟ್ಟೂರಪ್ಪನಾಯಕ ಅವರಲ್ಲಿ ಮದ್ದಿಕೆರೆ ಸಂಸ್ಥಾನಿಕರಿಗೆ ಮೊಗಲರಿಗೆ ಯುದ್ಧ ಆಗುವಾಗ್ಯೆ ಯೀತನು ಮದ್ದಿಕೆರೆವರಿಗೆ ಕುಂಮಕುವಾಗಿ ಹೋದಲ್ಲಿ, ಯುದ್ಧದಲ್ಲಿ ಯೀ ಚಿಕ್ಕ ಕೊಟ್ಟೂರಪ್ಪನಾಯಕನು ಯೀತನ ಕಡೆ ಜನ ಸಹಾ ಯುದ್ಧದಲ್ಲಿ ತೀರಿಹೋದರು. ಯೀತನ ತಮ್ಮ ಬಸಪ್ಪನಾಯಕನ ಮಗ ಸೋಮಳನಾಯಕ ಯಂಬವನಾ ಹಿರೆಕೊಟ್ಟೂರಪ್ಪನಾಯಕನು ಸಾಕು ತಕ್ಕೊಂಡನು. ಯೀತನ ದಿನದಲ್ಲು ಕಾವಲಿ ನಡಿತಾ ಯಿತ್ತು. ತರುವಾಯ ಭಡೆಖಾನ ಬಂದು ಯೀ ಶೀಮೆ ಸುಲಿದನು.

೨೪ ಸನ್ ೧೧೬೬ನೆ ಫಸಲಿಯಲ್ಲು ಬಸಾಲತುಜಂಗು ಯಂಬವನು, ನಿಜಾಮನ್‌ಮಲುಕು ಮಗ ಬಸಾಲತುಜಂಗು ೧, ಹಿರೆ ಆತಾ ನಿಜಾಮಲ್ಲಿಖಾನ್, ಮೂರನೆ ಆತಾ ನಾಸರಜಂಗು, ನಾಲಕನೆ ಆತಾ ಮೊಗಲಾಲ್ಲಿಖಾನ್ ಯೀ ಪ್ರಾಕರಕ್ಕೆ ನಾಲ್ಕು ಮಂದಿ ಮಕ್ಕಳು. ಅಣ್ಣತಮ್ಮಂದರಿಗೆ

ಕಲಹವಾಗಿ ಬಸಾಲತುಜಂಗು ಆದವಾನಿಗೆ ಶೇರಿದನು. ಆವಾಗ್ಯೆ ಬಿಜಾಪುರದವರ ಅಮಲು ಹೋಗಿಯಿತ್ತು. ನಾಸಾರಜಂಗು ದಕ್ಷಣ ಮೊಹಿಮು ಮಾಡಿ ಅಲ್ಲಿಗೆ ಗರ್ದಿವಾಗಿ ಹೋದನು. ನಿಜಾಮಲಿಖಾನ್ ಹೈದರಾಬಾದಿನಲ್ಲಿ ನಿಂತನು. ಮೊಗಲಲ್ಲಿಖಾನ ಹೈದರಾಬಾದಲ್ಲಿ ಖೈದಿನಲ್ಲಿ ಮೃತವಾದನು. ಬಸಾಲತುಜಂಗು ಯೀ ದೇಶದಲ್ಲು ಸುಲಿಗೆ ಮಾಡಿ ಸನ್ ೧೮೯೦ ಪಸಲಿ ಪ್ಲವ ಸಂವತ್ಸರ ವರಿಗೆ ವರುಷಂಗಳು. ಯೀ ದಿನದಲ್ಲು ಕಾವಲ ಸೋಮಳನಾಯಕನು ಕಾವಲ ಮಾಡಿಕೊಂಡು ಯಿದ್ದನು. ಪೂರ್ವದಲ್ಲಿ ಶಿದ್ದೀಮಸೂದಖಾನನ ದಿನದಲ್ಲು ಹಿರೆ ಸೋಮಣ್ಣಗವುಡಾ ಯಂಬವನು ಪ್ರಬಲವಾಗಿ ಕೆಳಗೆ ಯಿರುವ ಸೋಮೇಶ್ವರನ ಗುಡಿ ಜೀರ್ಣೋದ್ಧಾರ ಮಾಡಿ ಬೆಟ್ಟದ ಮ್ಯಾಲ ಯಿರುವ ಸೋಮೇಶ್ವರಗೆ ಜನರು ಭಕ್ತಿ ಮಾಡುತ್ತಾಧಾರೆ. ಬ್ಯಾಡರು, ಕುರುಬರು ಮುಖ್ಯವಾಗಿ ನಡಕೊಳ್ಳುಥಾರೆ. ಯಿದು ಹೊರ್ತು ಕುರಿ ಮೊದಲಾದ್ದು ಆ ದೇವರ ಸಮೀಪವಾಗಿ ಯಲ್ಲರು ದೇವರಿಗೆ ಕುರಿಗಳು ಕೊಲ್ಲುತಾ ಯಿರೋದರಿಂದಾ, ಯಿವರು ಲಿಂಗವಂತರು ಆದ ಕಾರಣ ಕೆಳಗೆ ಯಿರುವ ಸೋಮೇಶ್ವರಗೆ ನಡಕುಂತಾ ಬಾಹರು. ಹಿರೆ ಸೋಮಣ್ಣ ಗವುಡಗೆ ಕಾವಲಿ ಅವರಿಗೆ ವಿರುದ್ಧವಾಗಿ ಕಾವಲಿ ಅವರನ್ನ ಸೋಮನಗವುಡನು ವೂರುಬಿಟ್ಟು ಹೊರಡಿಶಿ ಬಿಟ್ಟನು. ಆವಾಗ್ಯೆ ಯಿ ಕಾವಲಿನವರು ಮುರುದು ರುಸುಮು ನಿಂಥೊಯಿತ್ತು. ಕೆಲವು ದಿನದ ತರುವಾಯ ಕಾಲು ಮ್ಯಾಲೆ ಊರಿಗೆ ಬಂದು ಸೇರಿದರು. ಯೀ ವಿವರ ಮಸುದಖಾನ್ ವಗೈರಾ ಅವರ ದಿನದಲ್ಲಿ ನಡದದು.

೧೦। ಸನ್।೧೮೯೧ನೆ ಪಸಲಿ ಶುಭಕೃತು ಸಂವತ್ಸರದ ಲಾಗಾಯಿತು ೧೨೧೦ ಫಸಲಿ ವಿರೋಧಿ ಸಂವತ್ಸರ ವರಿಗೆ ಮೊಹಬತಜಂಗು ಯೀತನ ದಿನದಲ್ಲು ಟೀಪುಸುಲತಾನನು ಪರಾಭವ ಸಂವತ್ಸರದಲ್ಲು ಆದವಾನಿಗೆ ತೆಗೆದುಕೊಂಡು ೧೦ ತಿಂಗಳು ಅಮಲುಮಾಡಿ, ಕುತುಬುದ್ದಿನ್‌ಖಾನ ಯಂಬವನು ಆದವಾನಿ ಕಿಲ್ಲೆ ಕೆಡವಿಶಿ ಹೋಗೊವಾಗ್ಯೆ ಯೀ ಊರಿಗೆ ಬಂದು ಕೊಳ್ಳೆ ಬಡದು ಸುಟ್ಟನು. ಕಾವಲಿ ಸೋಮಳನಾಯಕನ ತಮ್ಮ ಬುಚ್ಚಪ್ಪನಾಯಕ ಯಿದ್ದನು. ಕಾವಲಿ ಮಾತ್ರ ನಡಿಯುತಾ ಬಂತು.

೨। ಸನ್ ೧೨೦೨ ಫಸಲಿ ಪರಿದಾವಿ ಸಂವತ್ಸರ ಮೊದಲು ಸನ್ ೧೨೦೩ ಪ್ರಮಾದೀಚ ಸಂವತ್ಸರದ ವರಿಗೆ ರಾಜಾ ಗಣೇಶರಾವು ಮೊಗಲರ ಕಡೆಯಿಂದ ಅಮಲುಮಾಡಿದನು. ಕಾವಲಿ ಬುಚ್ಚಪ್ಪನಾಯಕನ ಮಗ ಚಿಕ್ಕಸೋಮಳನಾಯಕ ಕಾವಲಿ ಮಡಿಕೊಂಡು ಯಿದ್ದನು. ಯಿದು ವಿಶೇಷ ಪ್ರಾಬಲ್ಯ ಯಿಲ್ಲಾ. ಯಿದಕ್ಕೆ ಕಾರಣ ಪೂರಾ ಕಾವಲ ನಡೆಯಲಿಲ್ಲಾ. ಸ್ವಲ್ಪ ನಡಿತಾಯಿತ್ತು.

೧। ಸನ್ ೧೨೦೪ ಫಸಲಿ ಆನಂದ ಸಂವತ್ಸರದಲ್ಲು ಗುಲಾಂಹುಸೇನ್‌ಖಾನ್ ಮೊಗಲರ ಕಡೆಯಿಂದಾ ಅಮಲು ಮಾಡಿದನು.

೨। ಸನ್ ೧೨೦೪ ಫಸಲಿ ರಾಕ್ಷಸ ಸಂವತ್ಸರ ಲಾಗಾಯಿತು ೧೨೦೬ ಫಸಲಿ ನಳ ಸಂವತ್ಸರ ವರಿಗೆ ಅರಬೆ ಅಮೀನಸಾಹೇಬು ಮೊಗಲರ ಕಡೆಯಿಂದಾ ಅಮುಲು ಮಾಡಿದನು.

೩। ಸನ್ ೧೨೦೭ ಫಸಲಿ ಪಿಂಗಳ ಸಂವತ್ಸರ ಲಾಗಾಯಿತು ಸನ್ ೧೨೦೯ ಫಲಸಿ ಸಿದ್ಧಾರ್ಥಿ ಸಂವತ್ಸರದ ವರಿಗೆ ಗುಲಾಂ ಅಲ್ಲಿಖಾನ್ ಮೊಗಲರ ಕಡೆಯಿಂದಾ ಅಮಲು.

೯ ಸನ್ ೧೨೧೦ ಫಸಲಿ ರೌದ್ರಿ ಸಂವತ್ಸರ ಲಾಗಾಯಿತು ಸನ್ ೧೨೧೮ ಫಸಲಿ ಶುಕ್ಲ ಸಂವತ್ಸರ ವರಿಗೆ ಕುಂಪಣಿ ಅಮಲು ನಡಿಯುತಾ ಯಿಧೆ. ಯೀ ಕುಂಪಣಿ ಅವರ ದಿನದಲ್ಲು ಕಾವಲಿ ಸೋಮಣ್ಣನಾಯಕ ಮಾಡಿಕ್ಕೊಂಡು ಯಿದ್ದ ಕಾರಣ ಕಾವಲಿ ರುಸುಂ ವಗೈರಾ ಬಂದುಮಾಡಿ, ಮಾನ್ಯ ಮಾತ್ರ ನಡಿಯುತಾ ಯಿಧೆ. ಯಿವರ ಕಡೆಯಿಂದಾ ತಳವಾರು ಊರು ಕೆಲಸಾ ಮಾಡುತಾ ಯಿದ್ದಾರೆ. ಯಿವರುನ್ನು ತಳವಾರ ಪ್ರಕಾರ ಯಿದ್ದಾರೆ. ಬೆಟ್ಟದ ಮ್ಯಾಲೆ ಯಿರುವ ಹಿರೆಸೋಮಪ್ಪನ ದೇವಸ್ತಾನಕ್ಕೆ ಶೇರಿದ ಹಾಗೆ ಪೂರ್ವಭಾಗದಲ್ಲು ವಂದ ಬಂಡೆ ಕೆಳಗೆ ಆರು ಕಲ್ಲಿನ ಪ್ರತಿಮೆಗಳು ಶಿರಸ್ಸು ಬ್ಯಾರೆ ದಂಡಾ ಬ್ಯಾರೆವಾಗಿ, ಅದಕ್ಕೆ ಜನರು ಶಿರಸ್ಸು ಪಾವಾಡೆ ಕೊಟ್ಟು[>ಟ್ಟ] ಕಳ್ಳರು ಯಂದು ಹೇಳುತ್ತಾರೆ ಯಿದಕ್ಕೆ ಕಾರಣ ಪೂರ್ವದಲ್ಲು ಆರುಮಂದಿ ಕಳ್ಳರು ಕಳ್ಳತನ ಮಾಡಿಕೊಂಡು ಯಮ್ಮೆಗಳು ತಾ ಹೋಗುವಾಗ್ಯೆ ಬದಕಿನವರು ಬೆನ್ನುಹತ್ತಿ ಬರೋದು ಕಂಡು ಯೀ ಆರುಮಂದಿ ಕಳ್ಳರು ಸೋಮೇಶ್ವರದೇವರಿಗೆ ಮೊರೆಬಿದ್ದು, "ತಾವು ಕದ್ದಂಥಾ ಯೆಮ್ಮೆಗಳು ಅವರ ಕಣ್ಣಿಗೆ ಕಾಣದಾಗೆ ಆದರೆ, ನಿಮಗೆ ನಮ್ಮ ಶಿರಸ್ಸು ಪಾವಾಡಾ ಕೊಟ್ಟೇವೆಂ"ದು ಹರಿಕೆ ಹೊತ್ತರು. ಅದೇ ಪ್ರಕಾರಾ ಬದಿಕಿನವರು ಬಂದು ನೋಡಲಾಗಿ ಯೆಮ್ಮೆಗಳು ಅವರ ಕಣ್ಣಿಗೆ ಬಿಳಲಿಲ್ಲಾ. ಆದ್ದರಿಂದಾ ಯೀ ಕಳ್ಳರು ಆರುಮಂದಿ ತನ್ನ ತನ್ನ ಶಿರಸು ಕೊಯ್ದುಕೊಂಡುರು. ಅವರು ಶಿಲಾರೂಪರಾಗಿ ಒಂದು ಗುಂಪಾಗಿ ನಿಂತರು. ಯೀ ಕಳ್ಳರು[>ರ] ತಾಯಿ ಗುಂಡು ಮ್ಯಾಲಿಂದುರುಳಿ ಶಿಲಾರೂಪವಾಗಿ ಒಂದು ಗುಂಡಾಗಿ ನಿಂತಳು. ಯೀ ಆರು ಮಂದಿ ಕಳ್ಳರು ಶಿಲಾಪ್ರತಿಮೆ ಶಿರಸು ಬ್ಯಾರೆ ದಂಡಾ ಬ್ಯಾರೆಯಾಗಿ ಯಿದ್ದಾರೆ. ದೇವರಿಗೆ ಪೂಜೆ ಮುಂತಾದ್ದು ಮಾಡೊದಕೆ ಮೊದಲು ಯೀ ಕಳ್ಳರು[>ರ] ಪ್ರತಿಮೆಗೆ ಪೂಜೆ ಮಾಡಿದ ತರುವಾಯ ದೇವರಿಗೆ ಪೂಜೆ ಮಾಡುತಾರೆ. ಯಿದು ಪೂರ್ವವಾಗಿ ಅದಾ.

ಯೀ ವೂರಲ್ಲಿ ಯಿರುವ ದೇವಸ್ತಾನದ ವಿವರ:

೧. ಹಿರೆಸೋಮಪ್ಪಯೀಶ್ವರ ಬೆಟ್ಟದ ಮ್ಯಾಲೆ ಯಿರುವಂಥಾ ದೇವಸ್ತಾನ

೧. ಕೆಳಗೆ ಚಿಕ್ಕಸೋಮೇಶ್ವರ ವೂರು ಹೊರಗ

೨. ಊರಾಗ ವೀರಭದ್ರಸ್ವಾಮಿ, ಹನುಮಂತದ್ಯಾವರು

೪. ಊರ ಹೊರಗೆ :

೨. ಅಗಸೆ ಬಾಗಲಿಗೆ ಮುಂದ ಮಾಧವಸ್ವಾಮಿ, ಹನುಮಂತ ದ್ಯಾವರು

೧. ರಾಮೇಶ್ವರ

೧. ವೋತಪ್ಪ

೧. ಸುಂಕಲಮ್ಮಾ

<u>೪. ಚಿಲ್ಲರ</u>

೧೨[>೧೩]

ಸದರಿ ಬರದ ದೇವಸ್ತಾನಕೆ ಪೂಜೆ ನಡುತಾ ಯಿಥೆ.

ಪೂರ್ವದಲು ಹಿರೆಸೋಮೇಶ್ವರದೇವರಿಗೆ ರಥೋತ್ಸವ ನಡಿಯುತಾ ಯಿತ್ತು. ಹತ್ತು ವರುಷವಾಗಿ ನಿಂತು ಹೋಯಿತು. ಸದರಿ ಬರದ ದೇವಾಲಯಕ್ಕೆ ಪೂರ್ವದಲ್ಲು ವಿಶೇಷವಾಗಿ ನಡಿಯುತಾ ಯಿತ್ತು. ಯೀಗ ಕೆಲವು ದೇವಸ್ತಾನಕ್ಕೆ ಅಭಿಷೇಕಾ ಮಾಡುತಾ ಯಿದ್ದಾರೆ.

ಯೀ ಪುರದಲ್ಲಿ ಖಾ ೧॥ ರೂಪಾಯಿ ಕಿಮತ ಆಗುತಾ ಯಿದೆ. ಖಬಿಣ ಆಗೊದಿಲ್ಲಾ. ಯೀ ವೂರಲ್ಲಿ ಆಗುವಂಥಾ ಪಯಿರು: ಜೋಳಾ ಸಜ್ಜಿ ೧, ನವಣಿ ೧, ಹೆಸರ ೧, ಅಲಸಂದಿ ೧, ಅವರೆ ೧, ಗೋದಿ ೧, ಕಡಲೆ ೧, ಹತ್ತಿ ೧, ಪುಂಡಿ ೧, ಔಂಡ್ಲಾ, ತೊಗರಿ ೧, ಹುರಳಿ, ಸ್ವಲ್ಪ ಪಲ್ಯಾಕಾಯಿ ೧, ತಂಬಾಕು ೧, ಭತ್ತಾ ಕೆರೆ ವಡದು ಹೋದದರಿಂದಾ ಆಗೋದಿಲ್ಲಾ ೧. ಯೀ ಪ್ರಕಾರಕ್ಕೆ ಬರಶಿದವರು.

	ಗವುಡರು:
೧ ಕುಲಕರ್ಣಿ ಸುಬ್ಬಣ್ಣ,	೧ ಸೊಮಣಗಲುಡ
೧ ಸಹ[>ರ] ದೇಶಾಯಿ ಯೋಗಪ್ಪ	೧ ವರಗನಗಲುಡ
೨	೨
ಕಟ್ಟು ಬಡಿ ಪ್ಯಾದೇರು:	ಕಾವಲಿ ಸೋಮಳನಾಯಕ ೧
೧ ಕಾಮವಾರ ನರಸಾ	ಸೋಮಶೇಖರನಾಯಕ ಅಣ್ಣ
	ತಮ್ಮಂದರು – ೨
೧ ಲಕುಂಡ ನಕರಪ್ಪ	
೨	

ದಸ್ತೂರಿ ನಾರಾಯಣರಾಉ ಮುತ್ಸದ್ದಿ ಯಿಲಾಕೆ ಮೇಸ್ತರ್. ವಾರ್ಡಸಾಹೇಬ ಪೈಮಾಯಿಶಿ ಸರದಾರು ಬ. ತಾರೀಖು.

❖❖

೧೧೪
ಹಿರೆಹಾಳು ಕೈಫಿಯತು

ಮೆಕೆಂಝಿ ಸಂಪುಟ : ೩೬

ಹಿರೆಹಾಳು ಕುಲಕರಣಿ ರಾಮಪ್ಪ ಬರಿಯಿಸಿದ್ದು – ಕೈಫಿಯತು ಹಿರೆಹಾಳು.

ಅಸಾಧ್ಯ ಮನ್ಮಂತರ ಲಾಗಾಯತು ಯೀ ಕ್ಷೇತ್ರದಲ್ಲು ಗ್ರಾಮಗಳು ಕಟ್ಟಿದ ವಿವರಾ: ಗ್ರಾಮಕ್ಕೆ ಪಶ್ಚಿಮಕ್ಕೆ ಊರು ಮಲುಜೆ ಸಿದ್ದಾಪುರಕ್ಕೆ ಪಶ್ಚಿಮಕ್ಕೆ ಶ್ರೀ ಗುಹಾಸಿದ್ದೇಶ್ವರ ದೇವಸ್ಥಲ. ಗುಹದ ಬಳಿಯ ಯಿರುವ ಕೃಷ್ಣಶಿಲೇಗೆ ಶಾಸನ ಸಿಥಿಲಿವಾದ್ದು, ಪೂರ್ವಕ್ಕೆ ಗ್ರಾಮಕಟ್ಟಿ ಯಿದ್ದದ್ದು, ಹಾಲ[>ಹಳೆ]ಗ್ರಾಮ ನೆಲಸಮವಾಗಿ ಭೂಮಿ ಸಾಗುವಳಿ ಆಗುತ್ತಾ ಯಿದ್ಧೀತೆ. ಗ್ರಾಮದೇವರು ಹನುಮಂತರಾಯ ಯೀಶ್ವರ ಮುಂತಾದ ಗೋಡೆಕಲ್ಲು ಅವುಕ ಸಾಕ್ಷಿ ಯಿದ್ದೀತೆ. ಆ ಗ್ರಾಮಕ್ಕೆ ಬದಲು ಮ॥ ಹಳ್ಳದ ಯೀಚೇ ಕಡೆ ಗ್ರಾಮ ಕಟ್ಟಿ ಯಿದ್ದ[>ದ್ದಾ]ರೆ. ಯೀ ಮಲುಜದ ಪೈಕಿ ಮ॥ ಮಲ್ಲಪ್ಪನ ಗುಡಿ ಬಳಿಯ ರಾಯ ಮನ್ಮಂತರದ ಮಲ್ಲೇಶನ ಗುಡಿ ಶಿಲಾಚಂದನ ಯಿಟ್ಟಂಗಿ ಸಿಥಿಲ ದೇವರ ಗುಡಿ ಮುಂದೆ ಶಾಸನವೊಂದು ಯಿದ್ದೀತೆ. ಮ॥ ಹೊಸಹಳ್ಳಿ ಗ್ರಾಮ ಪೂರ್ವ ಅಸಾಧ್ಯವಾಗಿ ಯಿದ್ದು, ಗ್ರಾಮ ಸಿಥಿಲವಾಗಿ ಯೀಚೀಗೆ ಹಳ್ಳದ ಬಳಿಯ ಗ್ರಾಮಕಟ್ಟಿ ಬಸ್ತಿ[>ವಸತಿ] ಯಿದ್ದೀತೆ. ಪೂರ್ವಸ್ಥಳದಲ್ಲಿ ಯಿದ್ದ ಗ್ರಾಮಾ ಸಿಥಿಲವಾದಕ್ಕೆ ಗೋಪಾಲಸ್ವಾಮಿ ದೇವಸ್ಥಾನ ಯಿದ್ದೀತೆ. ಯೀ ದೇವಸ್ಥಾನದಲ್ಲಿ ದೇವರು ಯಿಲ್ಲಾ. ಈ ಪ್ರತಿಷ್ಟೆ ಜನಮೇಜಯರಾಯರು ಮಾಡಿದ್ದು ಯೆಂದು ಹೇಳುತ್ತಾರೆ. ಕಲಂ.

ಹಿರೆಹಾಳ ಕೈಫಿಯತು :

ಯೀ ಗ್ರಾಮಪೂರ್ವಕ್ಕೆ ಹರಿಹರಪುರಾಯಂಬದಾಗಿ ಯಿದಕ್ಕೆ ಸಣ್ಣ ಹರದಾರಿ ಮೇಲೆ ಜಾಜರದ ಕಲ್ಲಿಗೆ ಪೂರ್ವಕ್ಕೆ ಯಿದಕ್ಕೆ ಸಾಭ್ಯಸ್ತಾ ಶಿಥಿಲವಾಗಿ ಗ್ರಾಮದ ಗುರ್ತು ನಿಲ್ಲು ಕಲ್ಲುಗಳು ಯರಡು ಯಿದ್ಧಾವೆ. ಯೀ ಗ್ರಾಮದ ಹೆಸರು ಮೈಸೂರು ತಾಲ್ಲೂಕು ಶಿರೇಕೊಳದ ಯಿಲಾಖೆ ಗ್ರಾಮಗಳ ಸಿವಾರಿ ಸು ಯೀ ಗ್ರಾಮದ ಯಲ್ಲೆ ಕಟ್ಟೇಗು ಗ್ರಾಮದ ಹೆಸರು ಸಾಕ್ಷಿ ಶಿಲಾಶಾಸನ ಮೇಲೆ ಯಿದ್ದೀತೆ. ಯೀಚೀಗೆ ಯೀ ಗ್ರಾಮದ ಹಿರೆಕೆರೆ ಹಿಂದೆ ತೀರ್ಥವೆಂಬ ಗ್ರಾಮಕಟ್ಟಿ ಕೆಲಉ ಕಾಲ ಆದ ತರ್‍ವಾಯ ಕೆರೆಯು ವಡದು ಕೆಲಉ ದಿವಸ ಭೂಮಿ ಯಾವತ್ತು ಬೀಳು ಬಿದ್ದು ಯಿರಲಾಗಿ, ಶಕ ೧೪೨೯ನೇಯಲ್ಲಿ ಕೆರೆವಳಗೆ ಗುಡಿಕೋಟೆಯವರು ಕಟ್ಟಿಸುವಾಗ್ಯೆ ಅವರೇ ಧೊರೆಗಳು, ಯಿವರ ಸಾಮೂಹಿಕವಾಗಿ ಪ್ರಕೃತ ಯಿರುವ ಗ್ರಾಮ:

ಮ॥ಜಾಜರಕಲ್ಲು ೧	ಲಿಂಗಮ್ಮನಹಳ್ಳಿ ೧
ಮಡೆನಹಳ್ಳಿ ೧	ಲಕ್ಷ್ಮೀಪುರ ೧

ಯೀ ಗ್ರಾಮದ ಶಿವಾರಿಗೆ ಹರಿಹರಪುರದ ಹೆಸರು ಬರದು ಯಿದ್ದೀತೆ.

ಮ॥ಜಾಜರಕಲ್ಲು ಗ್ರಾಮಕ್ಕೆ ಪೂರ್ವ ಬೋಳಬಂಡೆ ವೆಂಕಟಾಪುರ ರಾಯದತ್ತು ರಿ[>ಅ]ಗ್ರಹಾರ ವೆಂಕಟನಾರಾಯಣ ಚಿಕ್ಕಣ್ಣಾವಧಾನಿಗೆ ಪ್ರತಿ[>ವೃತ್ತಿ] ನಿರ್ನಯ ಮಾಡಿಕೊಟ್ಟದ್ದು.

೧೦೦ ಸಂವತ್ಸರ ಯೀಚೆಯಿಂದಾ ಸದರು ಅಗ್ರಹಾರ ಬೇಚಿರಾಖು. ಯಿದಕ್ಕೆ ಉತ್ತರ ಹಿರದಾ[>ಹಾ]ಳು ಗ್ರಾಮ ಅನಾದ್ಯ ಸ್ಥಿತಿ ಸದರಿ ಶಕ ಬಸ್ತಿ [>ವಸತಿ] ಯಿದ್ಧೀತೆ.

ಮ॥ ಅಯ್ಯನಹಳ್ಳಿ ಗ್ರಾಮ ಸದರಿ ಅಗ್ರಹಾರ ಅನುಸರಿತ ಬೇಚಿರಾಖು ಯಿದ್ಧೀತೆ.

ಯಿದಕ್ಕೆ ಪಶ್ಚಿಮ ಮ॥ ವೊಬಳಾಪುರ ಸದರಿ ಅಮಲುವಾರು ಬಸ್ತಿ[>ವಸತಿ] ಯಿದ್ಧೀತೆ. ಯೀ ಮಾಗಣಿ ಕಸಬಾ ೧ ಮ॥ ಅಂತೂ ೧೨ಕ್ಕೆ ಬಸ್ತಿ [>ವಸತಿ] ೧೦, ಬೇಚಿರಾಖು ೨.

ಯಿದರ ಅಮಲುವಾರಿ:

೧೪೭೦ ಪರಿಯಂತ್ರ ಅಚ್ಚುತರಾಯ ಕೃಷ್ಣರಾಯರು.

೧[೪]೮೬ ಪರಿಯಂತ್ರ ಅಳೆಯ ರಾಮರಾಯ ಯೀ ಶಕದಲ್ಲು ರಕ್ತಾಕ್ಷಿ ಸಂವತ್ಸರ ವೈಶಾಖ ಮಾಸದಲ್ಲು ವಿಜಾಪುರ ಅಲಿ ಆದಿಲಷಾಃನವರು ದಂಡಿನ ಸಂಗಡ ಬಂದು, ಕೃಷ್ಣಾ ಮಲಾಪಹಾರಿ ಸಂಗಮಸ್ಥಳದಲ್ಲು ಅಳೆಯ ರಾಮರಾಜನ ಮೇಲೆ ಬಹಳ ಯುದ್ಧವನ್ನು ಮಾಡಿ, ಸೈನ್ಯಸಹಿತ ರಾಮರಾಜನ್ನ ಮುಣಿಗಿಸಿ, ವಿದ್ಯಾನಗರ ಪಟ್ನಾ ಸುಲಕೊಂಡು ತಿರಿಗಿ ವಿಜಾಪುರಕ್ಕೆ ಹೋದ ಬಳಿಕಾ ರಾಜ್ಯ ಅರಾಜ್ಯಕವಾಗಿ ಸುತ್ತಮುತ್ತ ಯಿರುವ ಪಾಳ್ಯೆಗಾರ ಉಪದ್ರವು ಬಹಳವಾಗಿ ಯಿದ್ದದರಿಂದಾ, ಪ್ರಜೆಗಳು ಚಿತ್ತಚಂಚಲ ಆಗಿ ಹೋದ ಕಾರಣ ಗ್ರಾಮ ಬೇಚಿರಾಖು ಆಯಿತು.

೧೫೫೪ನೇಯ ನಂದನ ಸಂವತ್ಸರದ ಗುಡಿಯಕೋಟೆ ಸೊಂಡೂರಾ ಬಾಣರಾವಿ ದೊರೆಯವರು ಜಟಂಗಿರಾಜ ಬೊಮ್ಮಂತರಾಜರವರು ಕಟ್ಟಿದ್ದು ಹಿರೇಹಾಳಯಂದು ಹೆಸರು ಪ್ರಸಿದ್ಧಿಯಾದದಕ್ಕೆ ಗ್ರಾಮದ ವಳಬಾಗಿಲ ಬಳಿ ಯಿರುವ ಆಂಜನೇಯಸ್ವಾಮಿ ಗುಡಿ ಬಳಿಯ ಯಿರುವ ದ್ವಿಭಾಗ ಸಿಥಿಲವಾದಂತಾ ಸ್ವೇತಶಿಲದ ಮೇಲೆ ಶಾಸನ ಕನಡು ಬರದು ಯಿದ್ದೀತೆ.

೧೫೮೪ನೆಯ ಪರಿಯಂತ್ರವಾಗಿ ಅವರ ಅಣ್ಣ ತಮ್ಮಂದರು ಭೋಗಕಾಲದಲ್ಲಿ ರಾಯದುರ್ಗಕ್ಕೆ ಯರಿಬೊಮ್ಮಳನಾಯಕನವರ ಪಾಲಿಗೆ ಬಂತು. ಆ ವ್ಯಾಳ್ಯೆಕ್ಕೆ ವೊಂದು ಬುರುಜು ಯಿತ್ತು.

ರಾಯದುರ್ಗ ಯರಿಬೊಮ್ಮಳನಾಯಕನ ಹಿಂದಾ ಕುಂದರ್ಪಿಯವರು ರಾಯದಳವಾಯಿ ಕೊನೇಲಿ[>ರಿ] ನಾಯಕನವರು ತೆಗೆದುಕ್ಕೊಂಡು ಆರಭ್ಯಾ ಶಕ ೧೬೨೬ನೆಯ ಪರಿಯಂತ್ರ ಆಳಿ, ಪರಸೋಜಿ ಘೋರ್ಪಡಾ ಮಮಲತ ಕದಮದಾರ ಸೇನಾಪತಿ ಗುತ್ತಿಯವರಿಗೆ ನಾಲಬಂದಿಯಲ್ಲಿ ನಮ್ಮಾ ಗ್ರಾಮಗಳ ಜಹಗೀರು ಕೊಟ್ಟರು. ಅವರು ಆಳುತ್ತಾ ಯಿರಲಾಗಿ ಶಕ ವರುಷ ೧೬೭೪ನೇಯಲ್ಲಿ ಮತ್ತು ಹಿಂದುರಾಉರವರು [>ಹಿಂದೂರಾಮ್‌ರವರು] ಸದರಹಿ ಜಹಗೀರು ರಜಾಮಂದಿಯಿಂದ ತೆಗದುಕ್ಕೊಂಡರು.

ಶಿವಾಜಿ ಮಲ್ಲಾರ ಸಾವಕಾರವರಿಗೆ ಯೀ ಗ್ರಾಮ ಸ್ವಾಧೀನಾ ಮಾಡುವಷ್ಟಕ್ಕೆ ಘಾಮಂ[>ಖಾಯಂ] ಖಿಲ್ಲಾ ನಿರ್ಮಾಣ ಮಾಡಿಸಿ, ಮನ್ಮಥ ಸಂವತ್ಸರದ ವರಿಗೆ ೧೬೯೩ನೆ ಶಕದಲ್ಲಿ ಬಹದ್ದರ ನಬಾಬು ಬಂದು ಬಳ್ಳಾರಿ ತೆಗೆದುಕೊಂಡು, ರಾಯದುರ್ಗದ ಕ್ರಿಷ್ಣಪ್ಪನಾಯಕಗೆ

ಜಹಗೀರು ಕೊಟ್ಟರು. ಅವರಿಗೆ ಪರಾಭವ ಸಂವತ್ಸರ ಪರಿಯಂತ್ರಉ ನಡದು ಬಂತು. ಪ್ಲವಂಗ ಸಂವತ್ಸರ ಲಾಗಾಯತು ಕಾಳಾಯುಕ್ತಿ ಸಂವತ್ಸರ ವರಿಗೆ ಟೀಪುಸುಲ್ತಾನ್ ಅಮಲು ಜಾರಿ ನಡೆದು ಬಂತು. ಸಿದ್ಧಾರ್ಥಿ ಸಂವತ್ಸರದಲ್ಲಿ ಮೊಗಲಾಯಿ ಅಮಲು ನಡದು, ರಉದ್ರಿ ಸಂವತ್ಸರ ಮಾರ್ಗಶಿರ ಶು॥೧೩ಲ್ಲು ಸರಕಾರ ಕುಂಪಣಿ ಠಾಣ್ಯ ಅಮಲು ಯೀ ದಿವಸಕ್ಕೆ ಬರಕೊಟ್ಟದ್ದು ಸರಿ.

ಯೀ ಗ್ರಾಮಕ್ಕೆ ಅಷ್ಟುದಿಕ್ಕುಗಳಲ್ಲಿ ಸಿವಾರ ಕಾಟಾಯಿ ಸದ[>ಹ] ಗ್ರಾಮದ ವಿವರಾ:

೧ ಯೀ ಕ॥ ಗ್ರಾಮಕ್ಕೆ ಪೂರ್ವ ಮ॥ ಯಿದವಾಳುಂ॥ ಹರದಾರಿ ಯಿಲಾಖೆ ಬಳ್ಳಾರಿ. ಯಿದಕ್ಕೆ ಪೂರ್ವ ರಾಯದುರ್ಗ ತಾಲ್ಲೂಕ ಮಲುಕೂರ್ತಿ ವೊಂದು ಹರದಾರಿ ೧.

೧ ದಕ್ಷಿಣ ಭಾಗದಲ್ಲಿ ಯಿರುವ ಜಾಜರಿಕಲ್ಲಿಗೆ ದಕ್ಷಿಣ ಮೈಸೂರು ತಾಲೂಕು, ಕಣಕುಪ್ಪಿ ೧ ವೊಂದು ಹರದಾರಿ.

೧ ನೈರುತಿದಿಕ್ಕಿನಲ್ಲಿ ಯಿರುವ ಶಿಲೆಕೊಳ ೨ ಹರದಾರಿ.

೧ ವರುಣದಿಕ್ಕಿನಲ್ಲಿ ಯಿರುವ ಮೈಸೂರು ತಾಲೂಕು, ಮೇಲಣ ಕಣಿಮಿ ಗ್ರಾಮ ೩ ಹರದಾರಿ, ಕ ॥ಸ್ತಲಕ್ಕೆ ಲಕ್ಷ್ಮಿಪುರಕ್ಕೆ ಅಚೀಲಿ ಯಿದ್ದೀತು.

ವಾಯವ್ಯದಿಕ್ಕಿಗೆ ಕಂಪಲಿ ತಾಲ್ಲೂಕ, ಹನ್ಮೂನಹಾಳು ಯಿಲ್ಲಾಪುರ ಕ ॥ ಸ್ತಲಕ್ಕೆ ಮಲಪನ ಗುಡಿಗೆ ಪಶ್ಚಿಮ ೧॥ಹರದಾರಿ ಯಿದ್ದೀತೆ.

೧ ಕುಬೇರದಿಕ್ಕಿನಲ್ಲಿ ಬಳ್ಳಾರಿ ತಾಲೂಕು ಹಲಕುಂದಿ ಯಿರೋದು. ಕ॥ಸ್ತಲಕ್ಕೆ ಉತ್ತರದಲ್ಲು ವೊಬಳಾಪುರದ ಆಚೀಲಿ ಹರದಾರಿ ೨.

ದೇವಸ್ತಾನಗಳ ವಿವರ :

೧ ಶಿದ್ದೇಸ್ವರನ ಗುಡಿ ಶಿಲಾಸಿದ್ದಾಪುರಿ

೧ ಮಲ್ಲೇಶ್ವರ ಗುಡಿ ಮಲ್ಲಪ್ಪನ ಗುಡಿ

೧ ಗೋಪಾಲಸ್ವಾಮಿ ಗುಡಿ ಹೊಸಾಹಲ್ಲಿ

ಕಸಬಾ ಹಿರೇಹಾಳು

೧ ಪ್ಯಾಟೆ ವೆಂಕಟೇಶ್ವರಸ್ವಾಮಿ

೧

೧ ಸದಾಸಿವಸ್ವಾಮಿ

೧ ಜಿರಕಲ್ಲು ಹನುಮಂತರಾಯ

೧ ಸುಗ್ಗಮ್ಮನ ಗುಡಿ

೧ ಅಯ್ಯನಹಾಳ್ಳು ಆಂಜನೇಯ ನಿಧಿ

೨ ವೋಬಳಾಪುರ ಆಂಜನೇಯ, ಯೀಶ್ವರ,

ಕಸಬಾ ಹಿರೆಹಾಳು

೧ ಆಂಜನೇಯ ಸ್ವಾಮಿ

೧ ವೆಂಕಟೇಶ್ವರ

೧ ಸುಬ್ರಹ್ಮಣ್ಯೇಶ್ವರಾ

೧ ಕಾಳಮ್ಮಾ

೧ ಪ್ಯಾಟಿ ಆಂಜನೇಯ

೧ ಪ್ಯಾಟಿ ಬಸವಣ್ಣಾ

೧ ಅಗ್ರಹಾರ ವೆಂಕಟಾಪುರ ಆಂಜನೇಯ

ಗ್ರಾಮದ ಉತ್ತರ ಭಾಗದಲ್ಲಿ ಸುಗ್ಗಲಮ್ಮನ ಗುಡ್ಡದಲ್ಲಿ ಯಿರುವ ದೇವತಾಗವಿ.

ಯೀ ಮಾಗಣಿ ಗ್ರಾಮಗಳಲ್ಲಿ ಧಾನ್ಯವಾಗತಕ್ಕದ್ದು.

೧ ಗೋಧಿ
೧ ತೊಗರಿ
೧ ಹೆಸರು
೧ ಖಡ್ಲೆ
೧ ಅವರೆ
೧ ಯೆಳ್ಳು
೧ ಅಲಸಂದಿ
೧ ಅಉಡ್ಲಾ
೧ ಹುರಳಿ
೧ ನವಣಿ
೧ ಶೆಜ್ಜಿ
೧ ಅರಿಸಿನ ಜೋಳಾ
೧ ರಾಗಿ
೧ ಬರಗು
೧ ಶ್ಯಾಮಿ
೧ ಗುರ್‍ರೆಳ್ಳು
೧ ಕುಸುಬಿ
೧ ಮುಂಡಿ

೧ ಬದನೆಕಾಯಿ
೧ ಬೆಂಡೆಕಾಯಿ
೧ ಚಳ್ಳವರೆಕಾಯಿ
೧ ಹೀರೇಕಾಯಿ
೧ ಕುಂಬಳಕಾಯಿ
೧ ಮೆಣಸಿನಕಾಯಿ
೧ ಹಾಲಗುಂಬಳಕಾಯಿ
೧ ತುಪ್ಪ ಹೀರೇಕಾಯಿ
೧ ಹರ್‍ವಿಪಲ್ಲೆ, ರಾಜಗಿರಿ
೧ ಮೆಂತೆ, ಸಬ್ಬಕ್ಕಿ, ಕೊತು . . . . ಬಸಲಿ

❖❖

ಇತರ ಕೈಫಿಯತ್ತುಗಳು

೧೧೫
ಉಪ್ಪಲಿಗರ ಕೈಫಿಯತ್ತು

ಡಿ.ನಂಬರ್ ಸಂಪುಟ : ೨೦೦೪

ಕಿಣಿಕ . . . . ಕ . . . . . ಣದಲ್ಲಿ ಪರಮೇಶ್ವರ ದೇವರು "ಉಪ್ಪು ಅ . . . . ಆಗಬೇಕಲ್ಲ"ಯೆಂದು ತಮ್ಮ ಮನೋಜ್ಞಾನದಿಂದ ಯೋಚಿಶಿ ತಮ್ಮ ಬೆವರ ತೆಗೆದು ಇಟ್ಟದ್ದರಿಂದ ಆ ಬೆವರಿನಲ್ಲಿ ಹುಟ್ಟಿದ . . . . ಉಪ್ಪಿನ . . . . ಶ ಹುಟ್ಟಿ, "ಮುಂದೆ ಏನು ಅಪ್ಪಣೆ"ಯೆಂದು ಕೇಳಿದಲ್ಲಿ, "ಉಪ್ಪು ಮಾಡಬೇಕು"ಯೆಂದು ಸ್ವಾಮಿ ಅಪ್ಪಣೆ ಕೊಟ್ಟದ್ದರಿಂದ, ಅದಕ್ಕೆ ವಂದು ಕಾವಲಿ ಕರಕತ್ತಿಯಂ ಕೊಟ್ಟು . . . . ಯಲ್ಲ ಕೊಟ್ಟು ಮುಂ . . . . ನೆ ಮಾರ್ಗ ಮಾಡಿಕೊಟ್ಟು ಕಳುಹಿಸುವಲ್ಲಿ "ತನಗೆ ಒಂದು ಹೆಣ್ಣು ಬೇಕು"ಯಂದು ಕೇಳಿಕೊಂಡನು.

ಸ್ವಾಮಿ ಅಪ್ಪಣೆ ಕೊಟ್ಟದ್ದು: ಮಿಂಡು ತಲೆಯವಳ ಅಪ್ಪಣೆ ಕೊಟ್ಟು ಕಳುಹಿಸ್ತ(ಹಿಸುತ್ತ) ಯಿಲ್ಲಿ (ಅವಳು ಕಲ್ಲನೂರಿಗೆ) ಬಂದು ಉಪ್ಪು ಮಾಡಿದ ವಿವರ: ಚವಳ ಮಣ್ಣು ತಂದು, ಆ ಮಣ್ಣ ಮೂಗಿ(?)ನಲ್ಲಿ ರುಚಿ ನೋಡಿ, ಆ ಮಣ್ಣುಯಲ್ಲ ತಂದೂರಿ ಆ ಮೇಲೆ . . . . ಕತ್ತಿ ಕೆಳಗೆ ಮಡಕೆ ಹೂಳಿ ಆಸಾರದ ನೀರು ಮಡಕೆಗೆ ಯಿಳಿಸಿ, ಆ ನೀರು ತೆಗೆದುಕೊಂಡು ಕಾವಲಿಗೆ ಹುಯಿದು, ಸುಂಠಿ, ಹಿಪ್ಪಲಿ, ಉಪ್ಪು ಆದಂಥಾ ೩ ತೆಗೆದು ಸ್ವಾಮಿಗೆ ೫೨ ಗೇಣಾಗಿ ವಪ್ಪಿಸಿ, "ನನಗೆ ಯೀ ಮಿಂಡು (ಅಥವಾ ಖಡು) ತಲೆಯವಳು ಬೇಡ, ಕುಂಚು ತಲೆಯವಳ ಅಪ್ಪಣೆ ಕೊಡಬೇಕು" ಯೆಂದು ಕೇಳಿಕೊಂಡಲ್ಲಿ, ಸ್ವಾಮಿ ಕುಂಚು ತಲೆಯವಳ ಅಪ್ಪಣೆ ಕೊಟ್ಟು ಕಳುಹಿಸಿದಲ್ಲಿ, ಅವಳನ ಕರದುಕೊಂಡು ಬಂದು, ಯಿಲ್ಲಿ ಉಪ್ಪು ಮಾಡಿಕೊಂಡು ಯಿದ್ದದ್ದರಿಂದ 'ಉಪ್ಪಲಿಗರು' ಎಂದು ಹೆಸ್ರು ಬಂತು.

ಯಿವರ ಜಾತಿಯವರು ಪಡೆಯುವ ವಿವರ :

ಹೆಣ್ಣಿಗೆ ಮುಂ[>ಮ]ಗಳಿಗೆ . . . . ಕೊಟ್ಟು ಹೊರಟು ರಾಶಿ . . . . ಮ. ಕ. ಮಾ. ಯೆಂಟು ಹತ್ತು ಮಂದಿ ಗ್ರಹಸ್ತರು ಹೋಗಿ, ಬೆಲ್ಲ ಕಡಗ ಕೊಟ್ಟು ಅವನ ಮನೆಯಲ್ಲಿ ಊಟ ಮಾಡಿ, ... ಮನೆ . . . . . ಸಿದು ತೆಗೆದುಕೊಂಡು . . . . ಉಪ್ಪು ಮಾಡಿಕೊಂಡು . . .

. ರದು ಮೊದಲು ಶಾಸ್ತ್ರಿಯ ಕರಶಿ ಶಾಸ್ತ್ರ . . . . ಲಗ್ನ ಕಟ್ಟಿಶಿ ಹೆಣ್ಣಿನ ಮನೆಯಲ್ಲಿ ಗಂಡಿನ ಮನೆಯಲ್ಲಿ ಚಪ್ಪರ ಕಟ್ಟಿಸಿ, ಗಂಡು ಹೆಣ್ಣಿಗೆ ಕಂಕಣದರಶಿನವ ಕಟ್ಟಿ . . . .

❖❖

೧೧೬
ಉಪ್ಪಲಿ ಬಣಜಿಗರ ಕೈಫಿಯತ್ತು

ಮೆಕೆಂಝಿ ಸಂಪುಟ : ೨೮೪

ತ್ರೈತಾಯುಗದಲ್ಲಿ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ನಾಲ್ಕು ಜಾತಿ ನಿರ್ಮಾಣ ಆದಲ್ಲಿ, ವೈಶ್ಯಜಾತಿಯೋರು ಈ ವೈಶ್ಯರು ಕೈಲಾಸದಲ್ಲಿ ಯಿಶ್ವರನ ಬಳಿಯಲ್ಲಿ ಯಿದ್ದರು. "ಪ್ರಪಂಚದಲ್ಲಿ ಕ್ರಯ ವಿಕ್ರಯ ಮಾಡುವದಕ್ಕೆ ವರ್ತಕರು ಯಿಲ್ಲಾ"ಯಂದು ತಿಳಿದು, "ಆ[>ಭೂ]ಲೋಕಕ್ಕೆ ಹೋಗು" ಯಂಬುದಾಗಿ ಅಪ್ಪಣೆ ಕೊಟ್ಟಲ್ಲಿ, "ನಾವು ಭೂಲೋಕಕ್ಕೆ ನಿಮ್ಮಿಂದ ಬಿಟ್ಟು ಹೋಗಲಾರೆವು'ಯಂದು ಕೇಳಿಕೊಂಡಲ್ಲಿ, ಯಿಶ್ವರ ಹೇಳಿದ ಮತ್ತು[>ಮಾತು] : "ಯಿಶ್ವರ ನಾನು ನಗರೇಶ್ವರನಾಗಿ ಹುಟ್ಟುತ್ತಾ ಯಿದ್ದೇನೆ" ಯಂದು ಮಾತುಕೊಟ್ಟರು. ವಿಷ್ಣು "ಜನಾರ್ಧನಾಗಿ ಹುಟ್ಟುತ್ತ ಯಿದ್ದೇನೆ"ಯೆಂದು ಅಭಯ ಕೊಟ್ಟರು. ಬ್ರಹ್ಮದೇವರು "ಕುಲಪುರೋಹಿತರಾಗಿ ಹುಟ್ಟುತ್ತ ಯಿದ್ದೇನೆ" ಯೆಂದು ಅಭಯ ಕೊಟ್ಟರು.

ಅದೇ ಪ್ರಕಾರಕೆ ಅಭಯಗಳ ಕೊಟ್ಟು ಯಿವರು[>ರ] ಭೂಲೋಕಕ್ಕೆ ಕಳುಹಿಸಿ ಕೊಟ್ಟರು. ಯಿವರು ಭೂಲೋಕಕ್ಕೆ ಬಂದು ವ್ಯಾಪಾರ ಮಾಡಿಕೊಂಡು ಯಿರ್ರುವಲ್ಲಿ, ವಿಷ್ಣು ಜನಾರ್ದನ ದೊರ್‍ರೆಯಂಬವನು[>ನಾಗಿ] ಪೆನಗೊಂಡೆ ಪಟ್ಟಣಕ್ಕೆ ಸ್ವಾರಿ ಬಂದಲ್ಲಿ, ಬ್ರಾಹ್ಮಣರು ವೈಶ್ಯರನ್ನು[>ರು] ಯಾಹೊತ್ತು [>ಯಾವತ್ತೂ]ಜನರು ಅವರ ವಶಕ್ಕೆ [+ಆರತಿ] ತೆಗೆದುಕೊಂಡು ಬರ್ರುವಲ್ಲಿ, ಕೊಮಟಿಗ ಕುಸುಮಶೆಟ್ಟಿ ಮಗಳು ಆರತಿ ತೆಗೆದುಕೊಂಡು ಬಂದಳು. ಯೀ ಧೊರ್‍ರೆಯು ಯಿವಳ ಮೇಲೆ ಮೋಹಿಸಿ 'ಮದುವೆಮಾಡಿಕೊಳ್ಳಬೇಕು'ಯಂದು ಯತ್ನಮಾಡಿದಲ್ಲಿ, ಹತ್ತು ಮಂದಿ ವೈಶ್ಯರು ಕೂಡಿ "ಯೀ ಮೇಲೆ ಅಪನಿಮಿತ್ಯ ಬಂದು ಯಿಥೆಯಲ್ಲಿ"ಯಂದು ಆಲೋಚನೆ ಮಾಡಿ, ದೊರೆ ಬಳಿಗೆ ಹೋಗಿ "ಯೇನು?"ಯಂದು ಕೇಳಿದಲ್ಲಿ, ದೊರೆಗಳು "ಕೋಮಟಿಗರನ ಮಗಳು ಬೇಕು"ಯಂದು ಹೇಳಿದಲ್ಲಿ, "ನೀವು ದೊರೆಗಳು, ನಾವು ನಿಮ್ಮ ಪ್ರಜೆಗಳು, ನಿಮ್ಮ ಮಕ್ಕಳ ಕೂಟ'ಯಂಬುದಾಗಿ ಹೇಳಿದಲ್ಲಿ, ದೊರೆ ಬದಲು ಹೇಳಿದ್ದು "ಕ್ಷತ್ರಿಯ ವೈಶ್ಯ ಶೂದ್ರ ಯೀ ಮೂರು ಜಾತಿ ಹೆಣ್ಣು ನಾವು ಮದ್ವೆ ಮಾಡಿಕೊಳ್ಳುವುದು ಉಂಟು"ಯಂದು ಹೇಳಿದರಿಂದ, ಯಿವರು ಭಯಪಟ್ಟು, "ನಮ್ಮವರ ಕೇಳು ಬಗ್ಗೆ ಬಂದು ಹೇಳಿ ಕಳುಹಿಸುತ್ತೇವೆ"ಯೆಂದು ಹೇಳಿಕೊಂಡು ಮನೆಗೆ ಬಂದು, ತಮ್ಮವರ್ರು[>ರ]

---

* ಇದರ ಇನ್ನೊಂದು ಹೆಸರು 'ಕೋಮಟಿಗರ ಕೈಫಿಯತ್ತು'. (ಸಂ.)

ಹತ್ತು ಮಂದಿ ಕರ್ರಿಸಿಕೊಂಡು ಆಲೋಚನೆ ಮಾಡಿ[+ದಲ್ಲಿ] ಯಿದಕ್ಕೆ ಹೆಣ್ಣು ಮಕ್ಕಳು ಗಂಡು ಮಕ್ಕಳು ಎಲ್ಲರನ್ನು[>ರು] ಕೂಡಿ "ನೀವು ಯಾಕೆ ಯೋಚನೆ ಮಾಡುತ್ತಾ ಯಿದ್ದೀರಿ"ಯಂದು, "ನಾಳೆ ಬೆಳಿಗ್ಗೆ ಮದುವೆ ಮಾಡಿಕೊಡುತ್ತೇವೆ"ಯಂದು ಮಕ್ಕಳು ಹೇಳಿದ್ದರಿಂದ ಶೆಟ್ಟಿಗರು[>ರ] ಮಂದಿ ಮಕ್ಕಳು ಬೆಳಿಗ್ಗೆ ನಿತ್ಯದ[>ತಟ್ಟೆ] ವಳಗೆ ಹಣ್ಣುಹಂಪಲು ತೆಗೆದುಕೊಂಡು ದೊರೆ ಗ[>ಬ]ಳಿಗೆ ಹೋದರ್ರು, "ಧೊರ್ರೆ . . . . ಸ್ವಾಮಿ ನಮ್ಮ ಮೇಲೆ ದಯವಿಟ್ಟು ವಿಚಾರಿಸಿರಿ"ಯಂದು ಯಿವರು ಕೇಳಿದಲ್ಲಿ, "ನಿಮ್ಮ ಮನೆಯಲ್ಲಿ ಮಕ್ಕಳು ಯಿರೆ, ಮದುವೆ ಮಾಡಿಕೊಳ್ಳಬೇಕು"ಯಂದು ದೊರ್ರೆ ಹೇಳಿದರಿಂದಾ, "ಒಳ್ಳಿಯದು"ಯಂದು ಮಕ್ಕಳು ವಪ್ಪಿಕೊಂಡು ಧೊರ್ರೆಗೆ ಹಣ್ಣುಹಂಪಲ ಕಾಣಿಕೆ ಕೊಟ್ಟು, "ಮದುವೆಯ ಮುಹೂರ್ತ ಯಾವಾಗ ನಿಶ್ಚಯ?" ಯಂಬದಾಗಿ ಕೇಳಿದಲ್ಲಿ, "ಮಾಘ ಫಾಲ್ಗುಣದಲ್ಲಿ ಮಾಡಿಕೊಳ್ಳುತ್ತೇವೆ"ಯಂದು [+ಮಕ್ಕಳು] ಹೇಳಿಕೊಂಡದರಿಂದಾ "ಒಳ್ಳೆದು" ಎಂದು ಧೊರ್ರೆ ವಪ್ಪಿಕೊಂಡನು.

"ತನ್ನ ಮನೆ ಅಳಿತನ[>ಅವತಣ >ಔತಣ] ಮಾಡಿದಲ್ಲಿ ಊಟ ಮಾಡಬೇಕು", ಯಂದು ಧೊರ್ರೆಯು ಹೇಳಿದಲ್ಲಿ, "ಊಟ ಮಾಡಿದರೆ ಹೆಣ್ಣು ಕೊಡುವದಿಲ್ಲಾ" ಯಂಬುದಾಗಿ ಮಕ್ಕಳು ಹೇಳಿದ್ದರಿಂದಾ, ಹತ್ತು ಮಂದಿ ಸಮಸ್ತರಿಗೆ ಕೇಳಿದಲ್ಲಿ "ಯೀ ಮಾತು ಯಿಂತಾಗಿ[>ಉಂಟಾಗಿ] ಯಿರ್ರೋದು"ಯಂದು ಹೇಳಿದ್ದರಿಂದ ಯೀ ಮಾತಿಗೆ ವಡಂಬಟ್ಟು, ಮಂದಿ ಮಕ್ಕಳಿಗೂ ಉಡುಗೊರ್ರೆಯನ್ನು ಮಾಡಿ, "ಮಾಘ ಮಾಸಕೆ ಪ್ರಸ್ತಮಾಡಿಕೊಂಡುದು ಉಂಟೇ?" ಯಂಧು ಮಕ್ಕಳು[>ಳ] ನಿಶ್ಚಯವಾಗಿ ಕೇಳಿದ್ದರಿಂದಾ, ಮಕ್ಕಳು "ವಳ್ಳೆಯದು"ಯಂಧು ವಪ್ಪಿಕೊಂಡರು. ಅಲ್ಲಿಂದ ಪುರಕ್ಕೆ ದೊರ್ರೆ ಹೋದ. ತಿಂಗಳ ವರಿಗೂ ವ್ಯಾಪಾರ ಸಾಪಾರ ಮಾಡಿಕೊಂಡು ಯಿದ್ದು, ಆಮೇಲೆ "ಲಗ್ನ ಸಮೀಪಕ್ಕೆ ಬಂತು"ಯಂದು ಹತ್ತು ಮಂದಿ ಗ್ರಹಸ್ಥರನ್ನು ಕೂಡಿ, ಕುಸುಮಶೆಟ್ಟಿಯನ್ನು ಕರೆಶಿ, "ಮುಂದಕೆ ಪ್ರಸ್ತಕೆ ಅನುಕೂಲ ಮಾಡಿಕೊಡು"ಯಂದು ಕೇಳಿದಲ್ಲಿ, "ಯೇಳುನೂರು ಗೋತ್ರದವರಿಗೂ ಸಮ್ಮತವಾದರೆ ಹಾಗೆ ಪ್ರಸ್ತಕ್ಕೆ ಯತ್ನಮಾಡುವೆ'ಯಂದು ಹೇಳಿದ್ದರಿಂದ, ಯೇಳುನೂರು ಗೋತ್ರದವರು ಆಲೋಚನೆ ಮಾಡಿ "ನಮಗೆ ಸಮ್ಮತಾಯಿಲ್ಲಾ"ಯಂದು ಹೇಳಿದ್ದರಿಂದಾ, ಕುಸುಮಶೆಟ್ಟಿ "ನಾನು ನನ್ನ ಮಗಳು ಸಹಾ ಗುಂಡ ಪ್ರವೇಶ ಆಗುವುದೇ ಹೊರ್ತು ಪ್ರಸ್ತಕ್ಕೆ ಅನುಕೂಲವಿಲ್ಲ"ವೆಂದು ನಿಶ್ಚಯವಾಗಿ ಹೇಳಿದ್ದರಿಂದಾ, ಯೀ ಯೇಳ್ನೂರು ಗೋತ್ರದವರು ವಪ್ಪದೇ ಆರ್ರನೂರು ಗೋತ್ರದವರು ತಮ್ಮಷ್ಟಕ್ಕೆ ಹೋದ್ದರಿಂದ, ಮುಂದೆ ನೂರ್ರಯರಡು ಗೋತ್ರದವರು ನಿಂತು "ನೀನು ಸತ್ತಾಳಿಯ[>ಸತ್ತಳಿದ]ಲ್ಲಿ ನಾವು ಗುಂಡ ಪ್ರವೇಶವಾಗುತ್ತ ಯಿದ್ದೇವೆ" ಯಂದು ನೂರ್ರುಯರಡು ಗೋತ್ರದವರು ಹೇಳಿದ್ದರಿಂದ ತಮ್ಮ ತಮ್ಮ ಮನೆಗೆ ಹೋಗಿ, ತಮ್ಮ ಹೆಂಗಸರು ಮಕ್ಕಳು ಕೇಳಿ ಗುಂಡ ಪ್ರವೇಶಕ್ಕೆ ನಿಶ್ಚಯ ಮಾಡಿ, ಪಟ್ಟಣದಿಂದ ಹೊರಗೆ ನೂರ್ರುವೊಂದು ಹೂವ್ವಿನ ತೋಟ ಹಾಕಿಶಿ, ನೂರುವೊಂದು ಗುಂಡ ತ್ತೆಗಿಶಿ ಅಲ್ಲಿ ದೇವರ ಸಮಾರಾಧನೆ ಮಾಡಿ ದಿನಜಾ[>ಚ]ರಿಯಲ್ಲು ದಾನಧರ್ಮ ಲಕ್ಷಾಂತರ ವೆಚ್ಚಮಾಡಿ, ಯೀ ಮನೆತನದವರಿಗೆ ಕಾವಲು ಕಟ್ಲೆಗೆ ಸೇರಿದ ಬರಕುಂಟಾ ಎವರು . . . . [+ಮಕ್ಕಳಾ]ಗಿ ಬಂದು ನಿಂತರು; ಕಂಬಿ ಕಾವಡೆಯರು ಮಕ್ಕಳಾಗಿ ಬಂದು ನಿಂತರು [+ಚಿಂತಲದವರು] ಮಕ್ಕಳಾಗಿ ಬಂದು ನಿಂತರು – ಯೀ ಮೂರು ಮನೆತನದವರೂ ಇವರ ಮಕ್ಕಳಾಗಿ ಬಂದು ನಿಂತರು.

"ನನಗೆ ಕುಲಕ್ಕೆ ಪುರೋಹಿತ್ತ ಯಾರು? ಯಂದು ನಿಶ್ಚಯ ಮಾಡಬೇಕು"ಯಂದು ಹೇಳಿದ್ದರಿಂದಾ, ಯೀ ಭಾಸ್ಕರಪಂಡಿತರು[>ರ] ಕರ್ರೆಶಿ ಕೇಳಿದಲ್ಲಿ, ಯೀ ಭಾಸ್ಕರ ಪಂಡಿತರು ಹೇಳಿಕೊಂಡದ್ದು "ನೂರ್ರು ಯರಡು ಗೋತ್ರದವರಿಗೆ ಹೋರ್ತು ಆರನೂರು ಗೋತ್ರಕ್ಕೆ ಸಂಬಂಧವಿಲ್ಲ" ಎಂದು ಪತ್ರ ಬರದು ಕೊಟ್ಟದರಿಂದಾ ಆರಭ್ಯಾ . . . . ವರಿಗ್ಯೆ ಮುಹೂರ್ತ ನಿಶ್ಚಯಮಾಡಿ + + + + ಕ್ರಿ ಅ . . . . ಹೇಳಿ ಬಿಟ್ಟದ್ದರಿಂದ "ನಾವು ಯೀ[>ಯಾವ] ಗಳಿಗೆಯಲ್ಲಿ ಹೋಗಿ[>ಹೇಳಿ] ಬಿಡುತ್ತ ಯಿದ್ದೇವೆಯೆಂದು[>ಯಿದ್ದೇವೆಯೋ] ಆ ಗಳಿಗೆಯಲ್ಲಿ ಹೊರಟು ಬರ್ರುದು"ಯಂದು ದೊರ್ರೆಗೆ ಸಮಾಚಾರ ಹೇಳಿ, "ದಿನ ೧ಕೆ ಲಕ್ಷ ಬ್ರಾಹ್ಮರ ಸಂತರ್ಪಣೆ ೨೫ ದಿನ ಪರಿಯಂತ್ರ ಮಾಡಬೇಕು"ಯಂದು ದೊರ್ರೆಗೆ ಹೇಳಿಬಿಟ್ಟರು. ದೊರೆ ವಪ್ಪಿಕೊಂಡು, ಪೆನಗೊಂಡೆ ಪಟ್ಟಣದ ದೊರ್ರಿಗೆ[>ಬ್ರಾಹ್ಮಣ] ಸಂತರ್ಪಣೆ ಗೋವುದಾನ + + + + ಕುರಿತಾಗಿ ದ್ರವ್ಯ ತೆಗೆದುಕೊಂಡು ಬೇಕಾದ + + + + ಕಾವಲ ಕಟ್ಲೆಗೆ ಮಂದಿಯನ್ನು ಕೊಟ್ಟು, ಕಾವ್ಲುಯಿರುವ ಹಾಗೆ ಹೇಳಿದನು. ನೂರು ಯೆರಡು ಮನೆತನದವರು + + + + ಸೌದೆಯನ್ನು ತೆಗೆದುಕೊಂಡು ದ್ರವ್ಯ . . . . ತೆಗೆದುಕೊಂಡು ವನಾಂತ್ರದಲ್ಲಿ ತಮ್ಮ ಚಿಕ್ಕವರು . . . . ಪಟ್ಟದವರ[>ಪಟ್ಟದವರು] ಮನೆ . . . .ಕೆ ವಂದು ಜನ ಪ್ರಕಾರ ಯಿರಿಸಿ ಕಡೆ + + ಯಿನ್ನೂರ ಯರಡು ಗೋತ್ರದವರು ಹೋಗಿ ದೇವರ ಪ್ರಾರ್ಥನೆಯನ್ನು ಮಾಡಿ ಗುಂಡ ಪ್ರವೇಶಕ್ಕೆ ದೇವರಪ್ರತಿಷ್ಟೆಯನ್ನು ಮಾಡಿ, ಅಗ್ನಿ ಪ್ರತಿಷ್ಟೆ ಹದಿನೈದು ದಿನ ಪರಿಯಂತ್ರವು ಬ್ರಾಹ್ಮಣ ಅನ್ನಸಂತರ್ಪಣ ಗೋದಾನ ಷೋಡಶಾಹಾರ ದಾನವನ್ನು ಮಾಡಿ, ಮರುದಿವ್ಸ ಅಗ್ನಿ ಪ್ರವೇಶ[+ಕ್ಕೆ] ನಿಶ್ಚಯಮಾಡಿ ಬಂದು ನಿತಲ್ಲಿ, ಭಾಸ್ಕರ ಪಂಡಿತರು ಯೀ ನೂರ್ರು [>ನೂರಾ ಎರಡು] ಮನೆತನದವರು ಬಂದು ನಿಂತಲ್ಲಿ, ಯೀ ಪಟ್ಟಣದ ಜನವೆಲ್ಲ 'ನೋಡಬೇಕು' ಯಂದು ಬಂದು ನಿಂತಲ್ಲಿ, ಸಾವಕಾಶ ಕೊಡಲೇ[>ಕೊಡದೇ] ಗುಂಡ ಪ್ರವೇಶ ಮಾಡುವಾಗ ಭಾಸ್ಕರಪಂಡಿತನ ಕರೆದು ಯಿವರಿಗೆ ಮಾತು ಕೊಟ್ಟಲ್ಲಿ "ನೂರಾಯೆರಡು ಮನೆತನದವರು ಗತಿ ಗೋರಿ[>ಗೋತ್ರ] ಹೊಂದಿಶಿ ಗಯೆ ವಳಗೆ ಪಿಂಡ ಹಾಕಿಸಿ + + + + ಮಾಡುವ ಶಾಸ್ತ್ರ ನಿಮ್ಮದು"ಯಂದು ಆಕೆ ಯಿವರ ಕೈಯಲ್ಲಿ ನಂಬಿಗೆ ತೆಗೆದುಕೊಂಡಳು. "ನಮ್ಮ ನಮ್ಮವರು ಮರಳಿ [>ನಮ್ಮವಂಶದಲ್ಲಿ ರೂಪದವರು] ಹುಟ್ಟಬೇಡಾ, ನೂರ್ರಾ ಯರಡು ಗೋತ್ರದವರಿಗೆ ನಿಮ್ಮ ಪುರೋಹಿತನ ಹೊರ್ತು ಕಡಿಮೆಯವರಿಗೆ ಕೆಲಸವಿಲ್ಲ. ಕಂಚಿ ಕವಡೆ ಯಿವರಿಗೆ ವರುಷಾ ೧ಕ್ಕೆ ವಂದು ಹಣ ಪ್ರಕಾರಕೆ ಕೊಡುವದು. ಪುರೋಹಿತರಿಗೆ ಅವರ ಮನೆಯಲ್ಲಿ ಯಿದ್ದ ಆಹಾರದಲ್ಲಿ ನಾಲ್ಕು ಪಾಲಿನಲ್ಲಿ ವಂದು ಪಾಲು ಕೊಡವದು" ಬಾಹ್ಯಾ[>ಭಾಷೆ] ಪತ್ರ ಬರದು, ಯಿದು ನಿಶ್ಚಯವಾಗಿ ಕೊಟ್ಟು, "ನನ್ನ ವಂಶ ನಿರ್ವಂಶವಾಗಲಿ, ಸನ್ನ ಜಾತಿಯವರು [+ರೂ]ಪಾವತಿಯಾಗಿ ಹುಟ್ಟಿದೆ ನೂರ್ರು ಯರಡು ಗೋತ್ರಕೆ ಹೊರ್ತು ಆರುನೂರ್ರು ಗೋತ್ರಕೆ ನೀವು ಶೇರಬೇಡಿರಿ"ಯಂದು ಅಪ್ಪಣೆ ಕೊಟ್ಟು ಗುಂಡ ಪ್ರವೇಶವಾದಳು + + + + ಕ್ಷೇತ್ರ ಕೆರಿಗೆ ಹಾರಿಕೊಂಡು [>ಭಾಷಾಪತ್ರ ಕತ್ತಿಗೆ ಹಾಕಿಕೊಂಡು] ಪ್ರವೇಶವಾದಳು. [>ಪ್ರವೇಶವಾಗಲು ಯಜ್ಞೇಶ್ವರರು ಬಾಹ್ಯಾ[>ಭಾಷೆ] ಪತ್ರವನ್ನು ಭಾಸ್ಕರಪಂಡಿತಗೆ ತಂದುಕೊಟ್ಟರು. ಶುದ್ದ ನಿಂತ ಗೋರಿ[>ಗೋತ್ರ] ೧೦೨ಕೆ ವಿವರ.*

❖❖

---

* ಕೈಫಿಯತ್ತನ್ನು D. No. 2004ನೆಯ ಕೋಮಟಿಗರ ಕೈಫಿಯತ್ತಿನ ಸಹಾಯದಿಂದ ಪರಿಷ್ಕರಿಸಿಕೊಳ್ಳಲಾಗಿದೆ (ಸಂ).

೧೧೭
ಕುಂಚಿ ವಕ್ಕಲಿಗರ ಕೈಫಿಯತ್ತು[೧]

ಮೆಕೆಂಝಿ ಸಂಪುಟ : ೩೬೯

ಭಾವ ಸಂವತ್ಸರದ ನಿಜ ಭಾದ್ರಪದ ಶು॥೮ಲ್ಲು ಸೋದೆ ಸೀಮೆ ವಳಗಣ ಕುಂಚಿ ವಕ್ಕಲ ಮಕ್ಕಳು ಗೊಡಲಿ ಕಟ್ಟೆಮನೆ ತಿರುಕಪ್ಪ, ಬುದ್ಧಿವಂತ ರಂಗಪ್ಪ, ಹನುಮಣ್ಣ ಮುಂತಾದ ಜಾತಿಯವರಿಗೆ ಗುರುವಾದ ತಾತಾಚಾರ್ಯರು ಬರಶಿಕೊಟ್ಟ ಕುಂಚಿ ವಕ್ಕಲಿಗರ ಕೈಫಿಯತು.

೧ ಯೀ ಜಾತಿಯಲ್ಲು ಜನನವಾದರೆ ಸೂತಕ ಅಯಿದು ದಿನ ಪರಿಯಂತ್ರ ಯಿಹುದು. ಆಮೇಲೆ ಮನೆ ಸಾರಿಶಿ, ಹ[>ಅ]ರಿಬೆ ಹಚ್ಚಡ ಮೊದಲಾದ್ದು ವಕ್ಕೊಂಡು, ಕುಲಮರ್ಯಾದಿ ಪ್ರಕಾರಕ್ಕೆ ನಡಕೊಂಡು, ಆಮೇಲೆ ತಿಂಗಳು ಸೂತಕಾ ತಂದಿಗೆ ಮಾಡಬೇಕು. ಆಮೇಲೆ ಹೊಳೆ ಮೆಟ್ಟುವುದು ವುಟ್ಟು[>ವುಂಟು]. ತೊಟ್ಟಲಾಗೆ ಹಾಕಿ ಕುಲದವರು ಯಲ್ಲಾ ಕೂಡಿ ವೂಟಾ ಮಾಡಬೇಕು.

೨. ನಮ್ಮ ಜಾತಿ ಬೆಡಗು

೧ ಬೆಳ್ಳೆಯ್ಯುನಾರು	೧ ಜಲದಯ್ಯನೋರು
೧ ವುಡ್ಯಯನಾರು	೧ ಜಸಲಿಯ್ಯನಾರು
೧ ಯರಡು ಕೆರಿಯೋರು	೧ ಹಳುವನಾರು
೧ ಜಿನುಕಲೋರು	೧ ಗಾಣಿಯೆನಾರು
೧ ಅವಿನೋರು	೧ ಅಂಡಯ್ಯನಾರು
	೧ ಜೀರಿಗ್ಯೆರು

ಯಿನ್ನು ಬೆಡಗು ವುಂಟು. ನಮಗೆ ಗೊತ್ತುಯಿಲ್ಲಾ. ಕಲಂ।

೩ ಮತ್ತು ನಮ್ಮಾ ಜಾತಿಯಲ್ಲಿ ಬೆಡಗು ಬಿನ್ನವಾಗಿ ಹೆಣ್ಣು ತರಬೇಕು. ಹೆಣ್ಣಿಗೆ ತೆರಾ ಗ॥೪ ನಾಲ್ಕು ವರಹಾ, ವುಡಿಕೆ ಹೆಣ್ಣಿಗೆ ಗ,೩ ಮೂರು ವರಹಾ ಮತ್ತು ಸೊದರಕೆ ವಳಗೆ ಮಾಡಬೇಕಾದರೆ ಜೋಯಿಸರ ಕೇಳೋದು ಯಿಲ್ಲಾ. ಕಲಂ।

೪ ಮತ್ತು ಲಗ್ನಾಮಾಡುವದಕ್ಕೆ ಜೋಯಿಸರಲ್ಲಿಗೆ ಅಕ್ಕಿ ಮೊಂದು ಶಿದ್ದೆ, ದುಡ್ಡು ವೊಂದು ವೊಯಿದು ಕೊಟ್ಟು ಲಗ್ನಾ ಕಟ್ಟಿಸಿಕೊಂಡು ಬಂದು, ಆಮೇಲೆ ಜೋಯಿಸರು ಮುಹೂರ್ತ ತೆಗೆದು ಕೊಟ್ಟ ಪ್ರಕಾರಲಗ್ನಾ ಮಾಡಬೇಕು. ಕಲಂ।

---

೧. ಕುಂಚಿ ವಕ್ಕಲ ಜಾತಿ ರಿವಾಜು ಕೈಫಿಯತ್ತು" ಎಂಬ ಹೆಸರೂ ಈ ಕೈಫಿಯತ್ತಿಗಿದೆ (ಸಂ)

೫ ನಮ್ಮಲ್ಲಿ ಮೊದಲು ಕುಲದೇವರನ ಯಿಟ್ಟು, ಆಮೇಲೆ ಕುಲದವರಿಗೆ ವೂಟಾ ಮಾಡಿಸಬೇಕು. ನಮ್ಮಲ್ಲಿ ವುಡಿ ತುಂಬುವ ಮರ್ಯಾದಿ ಯಿಲ್ಲಾ. ಕಲಂ।

೬ ನಮ್ಮ ಜಾತಿಯಲ್ಲಿ ಮದುವಿಗೆ ಖ ೧೨ ಹನ್ನೆಡರು ಖಂಡಗ ಭತ್ತ ಕುಂಭ ೧೨.

೭ ಮೊದಲು ಲಗ್ನಾ ಮಾಡಬೇಕಾದರೆ ಮನೆಯಿಂದಾ ಬರುವಾಗ್ಯೆ ಕಂಕಣಾ ಕಟ್ಟಿಕೊಂಡು, ಹೆಣ್ಣಿನ ಮನೇಗೆ ಹೋಗಿ, ಕರೇ ಕಂಬಳಿ ಗದ್ದಿಗೆ ಹಾಕಿ, ಮೂಡಲು ಮುಖವಾಗಿ ಗಂಡು, ಪಡುವಲ ಮೊಖವಾಗಿ ಹೆಣ್ಣು ನಿಂದಿರಿಸಿ ಹಚ್ಚಡ ಹಿಡಿದ ಸೋದರ ಮಾವ ಧಾರೆಯರೆಯಬೇಕು. ಸೂರ್ಯ ವುದಯ ಕಾಲಕ್ಕೆ ಮಾಡಬೇಕು. ಆಮೇಲೆ ಹಾಲು ಅಕ್ಕಿ ಕಲಿಶಿ ಹೆಣ್ಣು ಗಂಡಿನ ಕೈಯ್ಯಾಗೆ ಹಾಕಿಶಿ ಕುಲದವರು ಹಾಲು ಹಣಿಶಿ ಕುಲದವರು ವೂಟಾ ಮಾಡಬೇಕು. ಕಲಂ।

೮ ಅವೊತ್ತೆ ಮಧ್ಯಾನ್ನಕ್ಕೆ (ಹಾಲು ಹಣಿಸಿ) ಹೊನ್ನು ಕಟ್ಟೊದು. ಅಂದರೆ ತೆರ ಹನ್ನೆರಡು, ವಿಳೇದೆಲೆ ಅಡಿಕೆ ಹನ್ನೆರಡು ಹಲ್ಲು ಖಂಬ[>ಹಾಲುಗಂಬ] ಗಿಂಡಿ ಮುಂದೆ ಯಿಟ್ಟು, ಹಚ್ಚುವ[>ಹಂಚುವ] ವಿವರ: ಜಲಧಿ ಬಪ್ಪರಾಯ ವುಂಡೆಯುತ್ತರಾಯ ೧, ಮೂಲೆ ವೀಳ್ಯೆ ೧, ಸಿವ ವಿಳ್ಯಾ ೧, ಗುರುಗಳಿಗೆ ವಿಳ್ಯ ೧, ಕಟ್ಟೆಯವನ ಮನೆಗೆ ವಿಳ್ಯ ೧, ಆಮೇಲೆ ಸಮಸ್ತ ಕುಲದವರಿಗು ಕೊಡಬೇಕು. ಕಲಂ।

೯ ನಾಗೋಲಿ ದಿನ ಹೆಣ್ಣಿನ ಮನೆಯಲ್ಲಿ ವುಂಡು, ಗಂಡಿನ ಮನೇಗೆ ಹೋಗಿ ಮನೆ ತುಂಬಿಶಿ ಕೊಟ್ಟು, ಕುಲದ ವೂಟಾ ಮಾಡಿಕ್ಕೊಂಡು ಬರಬೇಕು. ಕಲಂ।

೧೦ ಆಮೇಲೆ ಕೆಂಪುಶೀರೆ ವೊಂದು, ಕುಬಸ ೧, ಗಂಧವಾಲೆ ಜೋಡು ೧, ಬಂದಿ ವೊಂದು, ಬಳಿಗ[>ಬಳೆ] ಮಾಟದ ಕಡಗ ೧, ಅಯಿದಾಳಿ ೧ ಯೀ ಪ್ರಕಾರಾಲ್ಯೆದು ಮಾಡಿಕೊಳ್ಳಬೇಕು. ಕಲಂ।

೧೧ ವುಡಿಕೆ ಹೆಣ್ಣಿಗೆ ಶೀರೆ ೧, ಕುಬಸ ೧ ವೊಯಿದು ಕರೆ ಕಂಬಳಿ ಗದ್ದಿಗೆ ಕುಡರಿಸಿ, ಶರಗಿಗೆ ಗಂಟು ಹಾಕಿ, ಕುಲ ಮರ್ಯಾದಿಪ್ರಕಾರಕ್ಕೆ ಹೆಂಗಸರು ಹೇಳೊ ಹಾಡು ಹೇಳಿ ಕೂಡ್ರಿಶಿ ಬಿಡುತ್ತಾರೆ. ವೂಟಾ ಯಿಲ್ಲಾ. ಕಲಂ॥

೧೨ ನಮ್ಮ ಕುಲದಲ್ಲಿ ಹೆಂಗಸರನೆ ಆಗಲಿ ಗಂಡಸರನೆ ಆಗಲಿ ಪರಕುಲದಿಂದಾ ತಕ್ಕೊಂಬೋದು ಯಿಲ್ಲಾ. ಕಲಂ॥

೧೩ ನಮ್ಮ ಕುಲದಲ್ಲಿ ಒಪ್ಪು ತಪ್ಪು ಬಂದಲ್ಲಿ ನಮ್ಮ ಕುಲಾಚಾರದವರು ಯಾವತ್ತು ಕೂಡಿ ಕಟ್ಟಿಮನೆ ಗವುಡಗೆ ಮೂರು ಹಣಾ ಕೊಟ್ಟು, ಆಮೇಲೆ ಪರಿಶುದ್ಧತೆ ಮಾಡಿ, ಕುಲದವರಿಗೆಲ್ಲಾ ವೂಟಾ ಮಾಡಿಸಬೇಕು.

೧೪ ಸತ್ತರೆ ಹುಗೊದು. ಹೊಲೆ, ಮೊದಲು ಜನನ ಪ್ರಕಾರಕ್ಕೆ ಯಿರಬೇಕು. ಯಿದು ನಮ್ಮ ಕುಲ ಮರ್ಯಾದಿ ಪ್ರಕಾರ ನಡಿಯೊವಂಥಾದ್ದು. ಕಲಂ

೧೫ ಮತ್ತು ಯೀ ಜಾತಿ ಮಾಡುವ ಕಸುಬು: ತೊಪ್ಪಲ ಹಾಕಿ ಕಾಯಿಪಲ್ಯೆ ಜಿನಾಜಿನ್ಸು ಹಾಕಿ ಬೆಳಸಿ ಮಾರುತಾರೆ. ಗದ್ದೆಯನ್ನು ಮಾಡುತ್ತಾರೆ. ಯೀ ಯರಡರಿಂದಾ ಜೀವನೋಪಾಯಾ ಮಾಡುತ್ತಾರೆ.

❖❖

೧೧೮
ಕುಡಿ ಕುಂಬಾರ ಜಾತಿ ಕೈಫಿಯತ್ತು

ಮೆಕೆಂಝಿ ಸಂಪುಟ : ೧೭೪

ಸೂರ್ ಸನ್ ೧೮೧೬ ಭಾವ ಸಂ। ನಿಜ ಭಾದ್ರಪದ ಶುದ್ಧ ೧೩ ಸೊದೆ ಶೀಮೆ ವಳಗಣ ಕುಡಿಕುಂಬಾರ ಗೌಡ ಬರಮ ತಿಮ್ಮ ಮೊದಲಾದವರು[>ರ] ಕೂಡಿಕೊಂಡು ಯಿವರ ಜಾತಿ ಗುರುವಾದಂ ತಾತಾಚಾರ್ಯರು ಬರಶಿ ಕೊಟ್ಟ ಕುಡಿಕುಂಬಾರ ಜಾತಿ ಕೈಫಿಯತು.

೧ ಯೀ ಕುಡಿಕುಂಬಾರ ಜಾತಿಯಲ್ಲಿ ಜನನವಾದರೆ ಸೂತಕ ಆಯಿದು ದಿನ. ಆಮೇಲೆ ಮನೆ ಸಾರಿಶಿ, ಚೊಕ್ಕಟ ಮಾಡಿ, ಅರುವೆ ಹಚ್ಚಡ ವಕ್ಕೊಂಡು, ಕುಲದವರು ಸಹಾಕರಕೊಂಡು ವೂಟಾ ಮಾಡಿಕೊಂಡು, ಸಂಜಿಗೆ ತೊಟ್ಟಲಲ್ಲಿ ಹಾಕಬೇಕು ಕಲಂ.

೨ ಆಮೇಲೆ ಹನ್ನೊಂದನೆ ದಿನ ಹೊಳಿಪೂಜಿಗೆ ಸಂಬಂಧ ಕಾಯಿ ಹಣ್ಣು ವಿಳ್ಯೆದೆಲೆ ಅಡಿಕೆ ಮುಂತಾದು ವೈದು ಹೊಳೆಗೆ ಹೋಗಿ, ಪೂಜೆ ಮಾಡಿಕೊಂಡು ಬರಬೇಕು. ಆಮೇಲೆ ಕುಲದವರು ಸಹಾ ಕೂಡಿಕೊಂಡು ವೂಟಾ ಮಾಡಬೇಕು ಕಲಂ.

೩ ಯಿವರ ಯಾತಿ ಬೆಡಗು ತಪಶೀಲು:

೧ ಕಡವಳಿಯವರು

೧ ಅಬಿಚಿಯವರು

೧ ಕಡೊಡಿಯವರು

೧ ಹುತ್ತಿಸೂಲವರು . . . . ಯಿನ್ನು ಅನೇಕ ಬೆಡಗು ವುಂಟು. ಯಿನ್ನು ಯೀ ಜಾತಿಯಲ್ಲಿ ಬಿನ್ನ ಬೆಡಗಿನ ಮೇಲೆ ಹೆಣ್ಣು ತರಬೇಕು. ಕಲಂ.

೪ ಮತ್ತು ನಮ್ಮ ಜಾತಿಯಲ್ಲಿ ಹೆಣ್ಣಿಗೆ ತೆರ ಗ. ೩. ಮೂರು ವರಹಾ, ವುಡಿಕೆಗೆ ತೆರಾಯಿಲ್ಲಾ, ಕಲಂ. ಮತ್ತು ಹೆಣ್ಣು ತರಬೇಕಾದರ ಸೋದರಿಕೆ ವಳಗೆ ತರಬೇಕು ಕಲಂ.

೫ ಮತ್ತು ಲಗ್ನಾ ಕಟ್ಟಿಶಿ ಕೊಳ್ಳಬೇಕಾದರೆ ಅಕ್ಕಿ ಕೆ ೧. ಕಾಯಿ ೧, ಹೆಣ್ಣಿನ ಅಪ್ಪ ವಿಳ್ಯೆದೆಲೆ ಹತ್ತು, ಅಡಿಕೆ ೫ ಜೋಯಿಸರ ಬಳಿ ಹೋಗಿ ಲಗ್ನಾ ಕಟ್ಟಿಸಿಕೊಂಡು ಬರೋದು. ಕಲಂ.

೬ ಆಮೇಲೆ ವಳ್ಳೇ ದಿನ ನೋಡಿ, ಅಕ್ಕಿ ವಿಳ್ಳೆದೆಲೆ ಅಡಿಕೆ ಹಣ್ಣು ಕಾಯಿ ತಂದು ವುಡಿ ತುಂಬಿ, ಅವರ ಮನೆಯಲ್ಲಿ ವೂಟಾ ಮಾಡಿ, ವಿಳೆ ತಕ್ಕೊಂಡು ಬರಬೇಕು. ಶೀರೆ ಕುಪ್ಪಸ ನಗ ಯಿಲ್ಲಾ. ಭತ್ತ ಖಂ. ೧೨, ಕಲಂ.

೭ ಮತ್ತು ಮದವಿಗೆ ಹೋಗೋ ಮುಂದೆ ಮದುಮಗಗೆ ಬಾಶಿಂಗ ಕಟ್ಟಿ, ಹೆಣ್ಣಿಗೆ ಶೀರೆ ೨ ಯರಡು ಜೆರಿಕುಪ್ಪಸ, ೧ ವಾಲೆ ಜೋಡು, ೧ ಕಡಗದ ಜೋಡು, ೧ ಕಾಲು ಕಡಗದ

ಜೋಡು, ೧ ಬೆಂಡವಾಲೆ, ಕರಮಣಿ ಮುಂತಾದ್ದು ವೈದು ಸೋದರಮಾವ ಧಾರೆಯರೆಯಬೇಕು, ಕಲಮು. ಮರುದಿನ ವಿಳ್ಯೆ ಹಂಚುವ ಮರ್ಯಾದಿ : ಯರಡು ಯಲೆ ಯರಡು ಅಡಿಕೆ ಪ್ರಕಾರ ದೇವರು ಗುರುಗಳು ಗೌಡ ಬುದ್ಧಿವಂತ ಕುಲದವರು ಪರಕುಲ ಮುಂತಾದವರಿಗೆ ವೀಳ್ಯೆ ಹಂಚುವದು, ಕಲಂ.

೮ ನಾಕನೇ ದಿವಸ ನಾಗವಲಿ. ಹೆಣ್ಣಿನ ಮರ್ಯಾದೆಯೇನೆಂದರೆ, ಹೆಣ್ಣಿನ ಮನೆ ತುಂಬಿಸಿಕೊಂಡು ಕುಲದವರು ಯಲ್ಲಾ ಕೂಡಿ ವೂಟಾ ಮಾಡಬೇಕು. ನಮ್ಮ ಜಾತಿಯಲ್ಲಿ ಮೆರವಣಿಗೆ ಯಿಲ್ಲಾ. ಕಲಂ.

೯ ಉಡಿಕೆ ಹೆಣ್ಣಿಗೆ ಕುಲದವರು ತಕ್ಕೊಂಬುವದು ಗಂ॥ವಂದು ಹೊನ್ನು. ಯಿದರ ಹೊರ್ತು ಕುಲಕ್ಕೆ ವೂಟಾ ಮಾಡ್ಸಿ ಆಮೇಲೆ ವಂದು ಸೀರೆ ವಂದು ಕುಪ್ಪಸ ತಂದು, ಅವನ ಮನೆಯೊಳಗೆ ಮಾಡಿಕೊಟ್ಟು, ವಾಳ್ಯೆ ತಕ್ಕೊಂಡು ಬರಬೇಕು. ಕಲಂ.

೧೦ ನಮ್ಮ ಕುಲದ ವಳಗೆ ಯಾವ ಕುಲದವರು ಕೂಡೋದಿಲ್ಲಾ. ನಮ್ಮ ಕುಲದಲು ತಪ್ಪು ವೊಪ್ಪು ಮಾಡಿದರೆ ಅವನ ಸಾಮರ್ಥ್ಯ ನೋಡಿಕೊಂಡು ಗುರುಗಳಿಗೆ ಕಾಣಿ[+ಕೆ] ಕೊಟ್ಟು ಕುಲದವರಿಗೆ . . . . ಊಟಾ ಮಾಡ್ಸಬೇಕು, ಕಲಂ.

೧೧ ಕಡೆಗೆ ಆದರೆ ಮೂರು ದಿನ ಹೊರಗು ಯಿರಬೇಕು. ನಾಲ್ಕನೇ ದಿನ ಯರಕೊಂಡು ವಳಗೆ ಬರಬೇಕು, ಕಲಂ.

೧೨ ಮತ್ತು ನಮ್ಮ ಕುಲದ ವಳಗೆ ಗುರುಕಾಣಿಕೆ ಸಹಾದೆ[>ಸಾಧ್ಯ]ಯಿಂದಟ್ಟ[>ಯಿದ್ದಷ್ಟು] ಕೊಡಬೇಕು. ಗಡಿಗೆ ಮಡಿಕೆ ಯೇನು ಬೇಡಿದರೂ ಕೊಡಬೇಕು, ಕಲಂ.

೧೩ ನಮ್ಮಲ್ಲಿ ಸತ್ತರೆ ಹುಗೋದು ವುಂಟು, ಸುಡೋದು ವುಂಟು. ಸೂತಕ ದಿನ ೫. ಅಯಿದು ದಿನ ಪರ್ಯಂತರ ಯಿರಬೇಕು. ಆಮೇಲೆ ಶುದ್ಧವಾಗಬೇಕು.

೧೪ ನಮ್ಮ ಕುಲಚಾದಡಿ ಕರಿ ಬದಕ ಮಾಡಬೇಕು. ಯೀ ಪ್ರಕಾರ ಯಿವರ ಜಾತಿ ಪದ್ಧತಿಯಂತ ಸದರವ ಬರದ, ಜಾತಿಯವರ ಸನ್ನತಿ[>ಸಮ್ಮತಿ]ವಿದ್ದ ತಾತಾಚಾರ್ಯರು ಬರಕೊಟ್ಟ ಕೈಫಿಯತ್ತು. ಕಲಂ.

❖❖

೧೧೯

ಕೆಂ[>ತೆ]ಗಲೆ ವೈಷ್ಣವರ ಅಥವಾ ವೆಂಕಟಪುರದ ವೈಷ್ಣವರ ಕೈಫಿಯತ್ತು

ಮೆಕೆಂಝಿ ಸಂಪುಟ : ೩೦೪

ಶ್ರೀಮತ ರಾಮಾನುಜಾಚಾರ್ಯ ನಮಃ ಪೂರ್ವತಲೆ[>ದಲೆ] ಕೆಂ[>ತೆ]ಗಲೆ ಶ್ರೀವೈಷ್ಣವರು ಅದೇ ಪ್ರಕಾರಕ್ಕೆ ಯಿದ್ದುಕೊಂಡು ಯಿದ್ದು, ತಿರುಮಲತಾತಾಚಾರ್ಯರವರ ಸಂಪ್ರದಾಯದಲ್ಲಿ ನಿಮ್ಮ ಕರ್ನಿಕೆ[>ಕಾರಣಿಕ] . . . . ಸ್ತ್ರೀಯಂಬದಾಗಿ ಕೇಳಿದಲ್ಲಿ "ಯಿವರ್‍ರು ವಿದ್ಯಾವಂತರು ಅವರ್‍ರು ವಿದ್ಯಾವಂತರು . . . . ಆದ್ದರಿಂದ ಅವರು ಜಾತಕ ಸರಿ ಬರೂದಿಲ್ಲ"ಯಂಬದಾಗಿ ಹೇಳಿದಲ್ಲಿ, ಯಿವರು "ಸರಿ ಬರುತ್ತದೆ" ಯಂಬದಾಗಿ ಹೇಳಿದರು. ಯೀ ಅರ್ಥದಲ್ಲಿ ಯಿಕ್ಕರ್ತರಿಗೂ ವಿವಾದ ಬಂದದರಿಂದಾ ಹತ್ತು ಮಂದಿ ವಿದ್ಯಾವಂತರ ಬಳಿಗೆ ಬಿದ್ದದರಿಂದಾ "ಅವದ್ಯೆ[>ಅವರದೆ] ಯೇನು ವ್ಯವಹಾರ" ಯಂಬುದಾಗಿ ಕೇಳಿದಲ್ಲಿ, "ವಾಸು ಕೇಳಿದರಿಂದಾ ನಾಲು ಅವರ ಮನೆಯಲ್ಲಿ ಕರ್ನಿಕೆ[>ಕಾರಣಿಕ] ಕೇಳಿದಲ್ಲಿ, ಅವರು ಜಾತಕ ಸರಿ ಬರ್‍ರೂದಿಲ್ಲಾ ಯಂಬದಾಗಿ ಅವರು ಹೇಳಿದರು. ನಾಲು ಸರಿ ಬರುತ್ತಾ ಯಿದೆ ಯಂಬದಾಗಿ ನಾಲು ಹೇಳಿದೆಲು . . . . ಹೇಳಿದಲಿ, ಹತ್ತು ಮಂದಿ ಸ್ವಾಮಿಗಳು ಕೇಳಿದಲ್ಲಿ ಜಾತಕ ಸರಿ ಬರೂದಿಲ್ಲಾ ಯಂಬದಾಗಿ ಅವರ್‍ರು ಹೇಳಿದರು. ನಾಲು ಸರಿ ಬರುತ್ತಾಯಿದೆ, ಯಂಬದಾಗಿ ನಾಲು ಹೇಳಿದೆಲು. ಯೀ ಅರ್ಥಕ್ಕೆ ಹತ್ತು ಮಂದಿ ಸ್ವಾಮಿಗಳು ವಿಚಾರಿಸಲು ನಾಲು ಸರಿ ಬರುವ ಪ್ರಕಾರಕೆ ವಚನ ತಂದು ಕೊಡುತಾ ಯಿದ್ದೇವೆ ಯಂಬದಾಗಿ ಹೇಳಿದೆಲು. ಯೀ ಅರ್ಥಕ್ಕೆ ಯಿಕ್ಕರ್ತಕು ಪ್ರತಿಗ್ನೆ ವಾಲೆ ಬರದು ಕೊಟ್ಟ ಪ್ರತಿಗ್ನೆ ಯಾವ ಪ್ರಕಾರ ಯಂಬುದಾಗಿ ಕೇಳಿದಲ್ಲಿ, ಯೀ "ಜಾತಕ ಸರಿ ಬರೂ ರೀತಿಗೆ ವಚನಾ ತಂದು ಕೊಂಡದೆ[>ಯದ್ದರೆ] ನಮಗೆ ಶಿಕ್ಷಾ ಯಗ್ನೋಪವೀತ ಕಾದ[>ರ]ಣವಿಲ್ಲ ಯಂಬುದಾಗಿ ಪ್ರತಿಗ್ನೆ ವಾಲೆ ಬರದು ಕೊಟ್ಟದರಿಂದಾ

ಬಂದು ನಮ್ಮ ಸ್ಥಳದಲ್ಲಿ ಪರ ಅಧ್ವಾರದಲ್ಲು ವಿಚಾರಿಸಿ, ಜಾತಕದ ಪುಸ್ತಕದ ವಚನವನ್ನು ತಂದು ಹತ್ತು ಮಂದಿ ಅದೇ ಮಹಾಜನಂಗಳ ಮುಂದೆ ಕೊಟ್ಟಲ್ಲಿ, ಅವರು ನೋಡಿ, ಅವರವರು ಮಥನಿಸೆ ಮಥನಿಷ್ಕರಿಸೆ ಮಾಡಿ, 'ನಿಮ್ಮ ಮಾತು ಪೇಸು[>ಚು] ಬಿತ್ತು' ಯಂಬದಾಗಿ ಹತ್ತು ಮಂದಿ ಸ್ವಾಮಿಗಳು ಹೇಳಿದರಿಂದಾ, ಪ್ರತಿಗ್ನೆ ವಾಲೆ ಪ್ರಕಾರಕ್ಕೆ ನಡಕೋ ಬೇಕಾಯಿತು ಯಂಬದಾಗಿ ಅಪ್ಪಣೆ ಪಾಲಿಸ್ತರು. ಅದೇ ಪ್ರಕಾರಕ್ಕೆ ನಾವು ಶಿಕ್ಷಾ ಯಗ್ನೋಪವೀತವನ್ನು ಪರಿತ್ಯಾಗ ಮಾಡಿಕೊಂಡೊ, ಅದರ ಯೀಚೆಗೆ ಆಳ್ವಾರ ನೆಮ[>ನೇಮ]ನ ಪ್ರಾಕಾರಕ್ಕೆ ವೈಷ್ಣವರಾಗಿ ಯಿದ್ದುಕೊಂಡು ಯಿದ್ದೇವೆ. ದಿವ್ಯಪ್ರಬಂಧದಲ್ಲಿ ಮಂತ್ರ ತಂತ್ರ ದೇವತಾರ್ಚನೆ ಶುಭ ಶೋಭನ, ಅಶುಭ ನಿತ್ಯಕರ್ಮಾನುಷ್ಠಾನ ಸಹಾ ಯೀ ದಿವ್ಯಪ್ರಬಂಧದಲ್ಲಿ ಅನುಸರಿಸಿಕೊಂಡು ಬರುತ್ತಾ ಯಿದ್ದೇವೆ. ತಿರುಮಗೆ[>ಲೆ] ಆಳ್ವಾರ, ನೇಮನೆ ಪ್ರಕಾರದಲ್ಲು ವೆಂಗಟಪುರದ ವೈಷ್ಣವರೆಂಬದಾಗಿ ಯಿದ್ದುಕೊಂಡು ಯಿದ್ದೇವೆ.

❖❖

೧೨೦
ಕೊರಮರು ವಾಂಡ್ಲೆ ಕೈಫಿಯತ್ತು

ಮೆಕೆಂಝಿ ಸಂಪುಟ : ೧೭೪

ಕೈಫಿಯತು ಆಫ್ ಕೊರಮರು. ಸೂರ್ ಸನ್ ೧೮೧೬ ಯಿಸವಿ ಭಾವ ಸಂ। ನಿಜ ಭಾದ್ರಪದ ಶು॥೧೩ಲ್ಲು ಬನವಾಸಿ ಶೀಮೆಯಲ್ಲಿ ಯಿರುವ ಕೊರಮರು ಕಲ್ಲಣ್ಣಾಶೆಟ್ಟಿ, ಗಿರಿಮಲ್ಲ, ಬುದ್ಧಿವಂತ ತಿಮ್ಮಣ್ಣ ಮುಂತಾದ ಕುಲದವರು ಬರಸಿಕೊಟ್ಟ ಕುಲಮರ್ಯಾದಿ ವಿವರ:

ಯಿವರಲ್ಲಿ ನಾಲ್ಕು ಭೇದ, ಯಾವವೆಂದರೆ –

೧ ಕಕ್ಕೆ ಕೊರಮರು

೧ ವಡ್ಡ ಕೊರಮರು

೧ ಹಕ್ಕಿ ಕೊರಮರು

೧ ಕಳ್ಳ ಕೊರಮರು

ಯಿರವಲ್ಲಿ ಜನನವಾದರೆ ದಿನ ಹನ್ನೊಂದು ಹೊಲೆಯಿರಬೇಕು. ಮನೆ ಸಾರಿಸಿ ಅರಿವೆ ವಗದು ಶುದ್ಧಾಮಾಡಿ ಸಮಸ್ತ ಯಿವರ ಜಾತಿ ಕುಲದವರು ಕೂಡಿ, ದಾಸರ ಕರದು, ಮುದದಿಂದ ಯಿಡಶಿ ತೀರ್ಥ ಪ್ರಸಾದವ ತೆಗದುಕೊಂಡು, ಹೊಸ ಗಡಿಗೆ ತಂದು ಅಡಿಗೆ ಊಟಾ ಮಾಡಬೇಕು. ಸಂಜೆಗೆ ಕೂಸನು ತೊಟ್ಟಲಾಗೆ ಹಾಕಿ ಕುಲದವರು ವೂಟಾ ಮಾಡಬೇಕು . . . . ಕುಲ ಮರ್ಯಾದೆ ಪ್ರಕಾರಕ್ಕೆ ಕಲಂ.

ಯಿವರ ಜಾತಿಯ ಬೆಡಗು ವಿವರ:

೧ ಗುಬೆಲೋರು

೧ ಮನಲೋರು

ಪಿಡಿಲೋರು

೧ ಸಾತಪಡಿ

೧ ಕಬಾಡಿ

೧ ಸಣ್ಣಕ್ಕಿವರು

೧ ಮೂಗಿತಿದೋರು

೧ ಕಮಾರ ಕೊರಣ[>ಗ]ರು

೧ ಪಾಸಾದೋರು

೧ ಸಂಗೀತರಾಯರು

೧ ಅಸ್ತಮನೆಯರು

ಯಿನ್ನು ನಮ್ಮಲ್ಲಿ ಅನೇಕ ಕುಲದ ಬೆಡಗು ವುಂಟು. ಆದರೆ ನಮಗೆ ತಿಳಿಯುವದಿಲ್ಲಾ. ನಮ್ಮಲ್ಲಿ ಲಗ್ನಾ ಮಾಡಬೇಕಾದರೆ ಬೆಡಗು ಭಿನ್ನವಾಗಿ ಮಾಡಿಕೊಳ್ಳಬೇಕು. ಕಲಂ

ನಮ್ಮಲ್ಲಿ ಲಗ್ನಾ ಮಾಡಿಬೇಕೆಂದರೆ ಹೆಣ್ಣಿನ ತೆರಾ ತಕ್ಕೊಂಬೊದು ಗ. ೧೦೦ ರೂ. ವರಹಾ ಚಿನ್ನ, ೧॥ ಅರಶೇಕು। ಬೆಳ್ಳಿ, ಯೀ ರೀತಿಯಲ್ಲಿ ಕುಲಮರ್ಯಾದಿ.

ಯೀಗ್ಯೆ ನಾವು ತಕೊಳ್ಳುವದು ಗ ೧॥ ವಂದು[>ದೂ] ವರಿ ವರಹಾ. ವುಡಿಕೆಗೆ ಗ ೧೮೨॥. ನಮ್ಮಲ್ಲಿ ಜೋಯಿಸರಲ್ಲಿ ಹೋಗುವದು ಯಿಲ್ಲಾ. ಕಲಂ.

ಮತ್ತು ನಮ್ಮಲ್ಲಿ ವುಡಿ ತುಂಬುವ ಸಂಮ್ಮಂಧ ರೊಕ್ಕ ಮೂರು ಟೆಂಕೆ ಕೊಡಬೇಕು. ಸ್ತ್ರೀವಧು ತುಪ್ಪ ಬೋನ ಯಿಕ್ಕಬೇಕು. ಸಮಸ್ತ ನಮ್ಮ ಕುಲದವರು ಯಲ್ಲಾ ಕೂಡಿ ವೂಟ ಮಾಡಬೇಕು. ವೀಳ್ಯೆ ತಿನ್ನಬೇಕು, ಕಲಂ.

ನಮ್ಮಲ್ಲಿ ಲಗ್ನಕೆ ಹೋಗಬೇಕಾದರೆ . . . . ಬಾಶಿಂಗ ಕಟ್ಟಿಕೊಂಡು ಮಂಗಳಸೂತ್ರ ಕರಮಣಿನಲ್ಲಿ ಭೂಸಲು ಸೀರೆ ಯರಡು, ೨ ಕುಪ್ಪಸ, ೨ ತೆಂಗಿನಕಾಯಿ, ೪ ಅಡಿಕೆ ವೀಳ್ಯೆದ ಅಡಿಕೆ ಯೆಲ್ಲಾ ವೈದು ಸೋದರಮಾದ ಧಾರೆ ಯರೆಬೇಕು. ಮದುಮಕ್ಕಳ ಯೆದುರಿಗೆ ಸುತ್ತೆವಿ ಬಿಂದಿಗೆ ಯಿಟ್ಟು, ಅತ್ತಿ ಕೊನೆಗೆ ಕಂಕಣಾ ಕಟ್ಟಿ ಪೂಜೆ ಮಾಡಿ ಹಾಡುಗಳನ್ನು ಹಾಡಿ ಕುಲದವರು ಯಲ್ಲಾ ಕೂಡಿ ಅಕ್ಕಿ ಹಾಕಬೇಕು. ಬಂದವರಿಗೆ ವೀಳ್ಯೆ ಹಂಚಿ ಕೊಡಬೇಕು. ಸದರ ಹಾ. . . ಭತ್ತ ಖ.೧೨, ಕುಂಬ ೧೨.

ಹಣೆ ಮೇಲ ನಾಗವಲ್ಲಿ ದಿನ, ಮೂತ್ತೈದೆರ ೪ ನಾಲ್ಕು ಸುತ್ತಿಸಿ . . . . ಕೆಲತು . . . . ದಿ ತಂದು ಮದುಮ್ಮಕಳಿಗೆ ಯರದು ಕಂಕಣಾ ಬಿಚ್ಚಿ ಮನೆ ತುಂಬಿಸಿಕೊಂಡು, ಕುಲದವರು ಯಾವತ್ತು ಕೂಡಿ ವೂಟಾ ಮಾಡಿ ವೀಳ್ಯೆ ತಕ್ಕೊಂಡು, ಕೂಸು ಆಡಿಸಿ ಗುಂಡುಕಲ್ಲು ಕುಲಮರ್ಯಾದಿ.

ಆಮೇಲೆ ವುಡಿಕೆ ಸೀರೆ ೧, ಕುಪ್ಪಸ ೧ ಸಹಾ ಹೆಣ್ಣಿನ ವುಡಿತುಂಬಿ ಅವಗೆ ಕೂಡಿಕೊಟ್ಟು ಕುಲದ ವೂಟಾ ಮಾಡಿ, ವೀಳ್ಯೆ ತಿನ್ನೋದು ಕುಲಮರ್ಯಾದಿ.

ಹೆಣ್ಣು ನೆರದ ಹೊಂದ್ದೆ ಆಯಿದು ದಿನ ಹೊರಗೆ ಕುಂಡರಶಿ, ಆಮೇಲೆ ಶೀರೆ ಕುಪ್ಪಸದಿಂದ ಆರತಿ ಮಾಡಿ, ಕುಲದ ವೂಟ ಮಾಡಿ ವೀಳ್ಯೆ ತಿನ್ನಬೇಕು ಕುಲಂ.

ಮತ್ತು ನಮ್ಮ ಕುಲಕ್ಕೆ ಯಾವ ಕುಲದವರು ಕೂಡಿದರೂ ಅವರನ ತಲೆ ಬೋಳಿಸಿ, ವುಗುರು ತೆಗೆದು, ಗುಡಿಕಟ್ಟಿ ಸುಟ್ಟು ಆಮೇಲೆ ಕುಲದವರು ವೂಟಾ ಮಾಡಿ, ಗುರು ಕಾಣಿಕೆ ತೆಕ್ಕೊಂಡು ಕುಲದಲ್ಲಿ ಹಾಕಿಕೊಳ್ಳಬೇಕು. ನಮ್ಮ ಕುಲದಲ್ಲಿ ತುಪ್ಪ ಒಪ್ಪು ಯೇನಾದರೂ ಬಂದಲ್ಲಿ ಕುಲದವರು ಯೆಲ್ಲಾ ಕೂಡಿ ಅವನ ತೆಗೆದಿಟ್ಟು, ಅವನಿಂದಾ ಯೇನಾದರೂ ಗುರು ಮನೆಗೆ ಕಾಣಿಕೆ ತಕ್ಕೊಂಡು, ಕುಲದವರು ಎಲ್ಲಾ ಕೂಡಿ ಊಟ ಮಾಡಿ ವೀಳ್ಯೆ ತಕ್ಕೊಂಡು ಅವನಾ ಕೂಡಬೇಕು.

ಮತ್ತು ನಮ್ಮ ಕುಲದಲ್ಲಿ ಸತ್ತವಂಗೆ, ಮದುವೆ ಆದವರಿಗೆ ಸುಡುತ್ತಾರೆ. ಮದುವೆಯಿಲ್ಲದವರಿಗೆ ಹುಗಿಯುತ್ತಾರೆ. ಯಿದಕ್ಕೆ ಸೂತಕ ಹನ್ನೊಂದು ದಿವಸ ತನಕ ಯಿದ್ದು, ಆಮೇಲೆ ದಾಸರ ಕರದು ಕುಲದವರು ವೂಟಾ ಮಾಡಿ ಶುದ್ಧವಾಗಬೇಕು, ಕಲಂ. ಯೀ ಪ್ರಕಾರ ನಮ್ಮ ಜಾತಿ ರಿವಾಜು ಅದೆಯಂತ ನಮ್ಮ ಜಾತಿಯಿಂದ ಬರಶಿಕೊಟ್ಟ ಕುಲದ ಜಾತಿ ರಿವಾಜು.

ಸದರಹಾ ಬರದ ಕೊರಮರೊ ವಳಗೆ ಕಕ್ಕೊರಮರು ಅಂಬೋವರು, ಯಿವರು ಮೋಡಿಗಳು ಮಾಡಿಕೊಂಡು ಮಂತ್ರ ತಂತ್ರದಿಂದಾ ಮೋಡಿ ಹಾಕ್ಕೊಂಡು, ಜೀವನೋಪಾಯ ಮಾಡುತ್ತಾರೆ. ಯಿವರಿಗೆ ಮೋಡಿಕಾರರಂತ ಹೆಸರು. ಯಿವರಲ್ಲಿ ಹೆಂಗಸರು ಸಹಾ ಮಂತ್ರ ತಂತ್ರಗಳ ಕಲಿತು ಕಣಿ ಹೇಳುತಾ ಭಿಕ್ಷಾ ಬೇಡುತಾ, ಅದರಿಂದಾ ಜೀವನೋಪಾಯ ಮಾಡುತ್ತಾರೆ.

ವಡ್ಡ ಕೊರಮರು ಅಂಬೊವರು, ಯಿವರು ವಾಲಗ ಮಾಡೋದು, ಯಿವರ ಹೆಂಗಸರು ಗಂಡಸರು ಸಹಾ ಬುಟ್ಟಿ . . . . ಮಂಚ್ ಕೂಲಿ ಕಾಲುಗಳು ಮೆದೆಗಳಿಗೆ ಮೊದಲಾದವು ಮಾಡಿಕೊಂಡು ಜೀವನೋಪಾಯ ಮಾಡಿಕೊಳ್ಳುತ್ತಾ ಯಿದ್ದ ಕಲಂ.

ಹಕ್ಕಿ ಕೊರಮರು ಅಂಬೊವರು, ಅಡವಿಯಲ್ಲಿ ಯಿದ್ದು ಹಕ್ಕಿಗಳ ಹಿಡಿಕೊಂಡು ಮೃಗಗಳ ಮಾರಿಕೊಂಡು, ಅದರಿಂದಾ ಜೀವನೋಪಾಯ ಮಾಡುತ್ತಾರೆ. ಹೆಂಗಸರು ಬುಟ್ಟಿ ತಟ್ಟಿಗಳು ಮಾಡಿ, ಮಾರಿಕೊಂಡ ಯಿದಾರೆ. ಯಿವರಲ್ಲಿ ಕೆಲವರು ವೂರಲ್ಲಿ ಯಿರುತ್ತಾರೆ. ಕೆಲವರು ಅಡವಿಯಲ್ಲಿ ಯಿರುತ್ತಾರೆ.

ಕಳ್ಳಕೊರಮರು ಅಂಬವರು, ಕಳ್ಳತನ ಮಾಡುತಾ ಕನ್ನ ಹಾಕಿ ಕಳ್ಳತನವನ್ನು ಮಾಡೋದು ತರೋದು, ಹೆಂಗಸರು ಬುಟ್ಟಿಗಳು ತಟ್ಟಿಗಳು ಮಾರಿಕೊಂಡಿರುತ್ತಾರೆ. ಯಿವರು ಅಡವಿಯಲ್ಲಿ ಯಿರುತ್ತಾರೆ. ಕೆಲವರು ವೂರಲಿ ಯಿರುತ್ತಾರೆ ಯಂತಾ ಬರಶಿದ ಕೈಫಿಯತ್ತು.

❖❖

೧೨೧
ಚನ್ನಯ್ಯ ಕುಲದ ಜಾತಿ ರಿವಾಜು ಕೈಫಿಯತ್ತು*

ಮೆಕೆಂಝಿ ಸಂಪುಟ : ೧೭೫

ಸೂರ ಸನ್ ೧೮೧೫ ಯಿಸವಿ, ಭಾವ ಸಂವತ್ಸರದ ಅಧಿಕ ಭಾದ್ರಪದ ಬ॥೧೧ಲ್ಲು ಬನವಾಶಿ ಶೀಮೆ ವಳಗಣ ಚನ್ನಯ್ಯನ ಕುಲದ ಕಟ್ಟೇಮನೆ ದೊಡ್ಡ ಬಾಳನ ಮಗಾ ರಾಮ, ಬುದ್ಧಿವಂತ ಕಾಮಾಟದ ಮಧುಲಿಂಗ, ಕುಂಬಾರ ಕೆಂಚ, ಶೆಟ್ಟರ ಭರಮ ಮುಂತಾದ ಚನ್ನಯ್ಯನ ಕುಲಕ್ಕೆ ಗುರುವಾದ ತಾತಾಚಾರ್ಯರು ಬರಶಿಕೊಟ್ಟ ಚನ್ನಯ್ಯ ಜತಿ ರಿವಾಜು ಕೈಫಿಯತು:

ಇದರ ಇನ್ನೊಂದು ಹೆಸರು 'ಸೊಂಡೂರಿನ ಕೈಫಿಯತ್ತು' (ಸಂ)

೧ ಯೀ ಜಾತಿಯಲ್ಲಿ ಜನನವಾದರೆ ಗಂಡು ಹುಟ್ಟಿದರೆ ಆಯಿದು ದಿನ, ಹೆಣ್ಣು ಹುಟ್ಟಿದರೆ ಮೂರು ದಿನಾ ಹೊಲೆ. ನಾಕನೆ ದಿ ಆರನೇ ದಿನ ಮನೆ ತೊಳದು, ಅರಿವೆ ವಕ್ಕೊಂಡು, ಯರಕ್ಕೊಂಡು, ಊಟಾ ಮಾಡಿ, ಸಂಜೀತನಕಾ ಹಡದಾಕಿ ಸೂಲಗಿತ್ತಿ ಯಿಬ್ಬರು ಹಾಸುದು, ಸಂಜಿಗೆ ತೊಟ್ಟಿಲ ವಳಿಗೆ ಕೂಶಿನ್ನ ಹಾಕಿ ಆಮೇಲೆ ಊಟಾ ಮಾಡಬೇಕು. ಗಉಡ ಬುದ್ಧಿವಂತರನ ಕರದರು ಆದೀತು, ಯಿಲ್ಲದೆ ಯಿದ್ದರೂ ಚಿಂತೆಯಿಲ್ಲಾ. ಕಲಂ.

೨ ಆಮೇಲೆ ಯಿಪ್ಪತ್ತು ದಿನಾ ತಿಂಗಳು ವಳಗೆ ಹೊಳೆ ಮೆಟ್ಟುವ ಸಮ್ಮಂಧ ಹಣ್ಣು, ಕಡಲೆ, ವೀಳ್ಯೆದೆಲೆ, ಅಡಿಕೆ ಹೊಸ ಕೊಡಾ ಸಹಿತ ಕೊಂಡು ಹೋಗಿ, ನಮ್ಮ ಕುಲ ಮರಿಯಾದಿ ಪ್ರಾಕಾರಕ್ಕೆ ಪೂಜೆ ಮಾಡಿಕ್ಕೊಂಡು, ಕೊಡಾ ತುಂಬಿದ ಮೇಲೆ ಶುದ್ಧಾ ಮಾಡಿ, ಬಳಿಕ ಮಾಡಬೇಕು, ಕಲಂ.

೩ ನಮ್ಮ ಜಾತಿಯಲ್ಲಿ ಚನ್ನಯ್ಯನ ಕುಲ ವಂದೇ ಸರಿ, ನಮ್ಮ ನಮ್ಮ ಕುಲದಲ್ಲು ಹೆಣ್ಣು ಗಂಡು ತಕ್ಕೊಳ್ಳುವದು ಶರೀರ ಸಮ್ಮಂಧದ ಮೇಲೆ ಪೂರ್ವ ನೆಂಟಸತನಾ ಹತ್ತಿ ಹೊಂದಿಕೆ ಯಿದ್ದರೆ ಹೆಣ್ಣು ಗಂಡು ತಕ್ಕೊಂಬುದು ಸರಿ, ಕಲಂ.

೪. ನಮ್ಮ ಜಾತಿಯಲ್ಲು

ಗ ೩॥ ಹೆಣ್ಣಿಗೆ ತೆರಾ, ಮೂರುವರೆ ವರಹಾ

ಗ ೨ ಉಡಿಕಿಗೆ ಕನ್ನೆ ಹೆಣ್ಣಿಗೆ

ಗ ೧॥ ಹಡದಾಕಿಗೆ

೫ ನಮ್ಮ ಜಾತಿಯಲ್ಲು ಮೊದಲು ವಿಳ್ಳೆದೆಲೆ ಅಯಿದು, ಅಡಿಕೆ ಅಯಿದು, ತುಂಡಕಾಯಿ ಅಯಿದು, ಅಕ್ಕಿ ಶಿದ್ಧೆ ೧, ದುಡ್ಡು ೧, ಸಹಾ ಗವುಡ ಬುದ್ದಿವಂತ ಮುತ್ತೈದೆರು ಅಯಿದು ಮಂದಿ ಸಹಾ ಜೋಯಿಸರಲ್ಲಿ ಹೋಗಿ ಕೊಟ್ಟು, ಮದವಿಗೆ ಲಗ್ನ ನೋಡಿಶಿ ಕೊಂಡು ಬಂದು, ಹೆಣ್ಣಿನವರಿಗೆ ಹೇಳಬೇಕು. ಆಮೇಲೆ ಹನ್ನೆರಡು ದಿನದ ವಳಗೆ ಲಗ್ನಾ ಮಾಡಬೇಕು, ಕಲಂ.

ಮತ್ತು ನಮ್ಮಲ್ಲಿ ಮದುವೆ ಸಮ್ಮಂಧ ಭತ್ತ ಖ೧೨, ಕುಂಭ ೪, ಗಿಂಡಿ ೧. ಆಮೇಲೆ ಪಾರೆವಿಳ್ಳೆದ ದಿನ ಹೆನ್ನಿನ [>ಹೆಣ್ಣಿನ] ಮನಿಗೆ ಗವುಡ ಬುದ್ಧವಂತ ಕುಲದವರು ಮುತ್ತೈದೇರು ಸಮಸ್ತರು ಹೋಗಿ, ಕರೆಕಂಬಳಿ ಗದ್ದಿಗೆ ಹಾಕಿ, ನಾಕು ಮೂಲಿಗೆ ಹೊತ್ತು [>ಹತ್ತು] ಯೆಲೆ ಹಾಕಿದ ಕಟ್ಟುಗಳ ವಂದು ಮೂಲೆಗೆ ವಂದು ಕಟ್ಟು ಪ್ರಕಾರ ನಾಲ್ಕು ಮೂಲೆಗೆ ನಾಲ್ಕು ಕಟ್ಟು ಯಿಟ್ಟು, ಆರು ದುಡ್ಡು, ಅಯಿದು ಖೊಬ್ಬರಿ ಬಟ್ಟಲು, ವಂದು ಉತ್ತುತ್ತೆ, ಯರಡು ತೊಂಡೆಕಾಯಿ, ಅಯಿದು ಯಿಟ್ಟು ಉಡಿ ತುಂಬಿ, ಸಮ್ಮಂದ ಜಾತಿಯವರು ಬಿಳೆ ಶೀರೆ ೧, ಕೆಂಪು ಕುಪ್ಪಸ ೧, ಅಕ್ಕಿ ಶಿದ್ದೆ ವಂದು ಸಹಾ ಅಲ್ಲಿ ಯಿಟ್ಟು, ಗಿಂಡಿ ಪೂಜೆಮಾಡಿ ಹಣ್ಣುಕಾಯಿಯಿಲ್ಲದೇ ಪೂಜೆ ಮಾಡಿ, ಆಮೇಲೆ ಹೊಸ ಚಾಪೆ ಹಾಕಿಸಿ, ಗಂಡುಹೆಣ್ಣಿನ ಕೂಡ್ರಿಸಿ, ಬಿಳೆ ಶಾಲ ವುಡಿಶಿ, ಈ ಸಾಮಗ್ರಿಯಲ್ಲಾ ಉಡಿತುಂಬಿ, ನಿಶ್ಚಯ ಮಾಡಿ ಆಮೇಲೆ ವಿಳ್ಯೆ ಹಂಚುವ ವಿವರ:

ದೇವರು, ಗುರುಗಳು, ನಾಡಿಗ, ಶ್ಯಾನುಭೋಗ, ಮಠ, ಪ್ಯಾಟೆ ಶೆಟ್ಟರು, ಪಟ್ಟಣಶೆಟ್ಟಿ, ಊಳಿಗ ತಳವಾರ, ಮುಂತಾದ ಪರಜಾತಿಯವರು ಆದ ಬಳಿಕ, ನಮ್ಮ ಕುಲ ಗವುಡ ಬುದ್ಧಿವಂತ ಕುಲ ಸಮಸ್ಥರಿಗೂ ವಿಳ್ಯೆ ಹಂಚಬೇಕು. ವಿಳ್ಯದೆಲೆ ಕಟ್ಟು ೨ಕ್ಕೆ ವಿಳೆದೆಲೆ, ೨ ಹೊಳು ಅಡಿಕೆ, ನಾಕು ಶಿದೆ ಅನ್ನ ಮಾಡ್ಸಿ ಮರ್ಯಾದೆಗೆ ಉಟಾ ಮಾಡಿಸಬೇಕು.

೬. ಮದುವೆ ದಿನ ಹೆಣ್ಣಿನ ಮನಿಗೆ ಹೋಗಿ, ಮೊದಲ್ಲು ಪ್ರಕಾರ ಗದ್ದಿಗೆ ಹಾಕಿ, ಗಿಂಡಿಯಿಟ್ಟು ಪೂಜೆಮಾಡಿ, ವಿಳೆದೆಲೆ ಕಟ್ಟು ಯಿಟ್ಟು, ಅಡಿಕೆ ದುಡ್ಡು ಸಹಾ ಯಿಟ್ಟು, ಅಕ್ಕಿ ಐದು ಶಿದೆ, ಶೀರೆ ಕೆಂಪುಕುಪ್ಪಸ ವಂದು, ಬಿಳಿ ಕುಪ್ಪಸ ವಂದು, ಯರಡು ಕರಿಮಣಿ ತಾಳೆ ಗುಂಡ ಸಾಹಸರವಂದು, ಕಾಶಿತಾಳೆ ಸರವಂದು, ಬಿಳೆದುಂ[>ಗು]ಡು ಯರಡು ಸಹಾ ತಂದು, ಹಶೆಹಾಕಿ ಥೆರೆ[>ತೆರೆ] ಹಿಡಿದು ಲಗ್ನಾದ ಅಕ್ಕಿ ವಳಗೆ ಅಕ್ಕಿ ಕೂಡಿಸಿಕೊಂಡು, ಅವರ ತಲೆಮೇಲೆ ಹಾಕಿ ಲಗ್ನಾ ಮಾಡಬೇಕು. ಆಮೇಲೆ ವಳಗೆ ಹೋಗಿ ಅಡಿಗೆ ಮಾಡುವ ವಿವರ: ಹೆಣ್ಣಿನವರ್ರು ಅಕ್ಕಿ ಶಿದೆ ೩, ಗಂಡಿನವರು ಶಿದೆ ಅಕಿ ೪ ಹಾಕಿ ಅನ್ನಾ ಮಾಡಿ, ದೊಡ್ಡ ಯಲೆ ವಳಗೆ ಕೊಡಿ[>ಕೂಡಿ] ಮೂರು ಪಾಲ್ಲು ಮಾಡಿ, ಹೆಣ್ಣಿನವರಿಗೆ ಯರಡು ಪಾಲು, ಗಂಡಿನವರಿಗೆ ವಂದು ಪಾಲು ಕೊಟ್ಟು, ಬೇರೆ ಅಡಿಗೆ ಮಾಡಿ ಭೂಮ ಕುಲದವರು ಸಹಾ ಉಂಡು, ಮರುದಿನ ಹಂದರದ ವಿಳ್ಯೆ ಹಂಚುವದು. ಮೊದಲಿನಂತೆ ಹಂಚಬೇಕು. ಗಂಡಿನ ಮನೆಗೆ ಹೆಣ್ಣಿನ ಕರಕೊಂಡು ಹೋಗೋದು, ಕಲಂ.

ನಮ್ಮ ಜಾತಿಯಲ್ಲಿ ವುಡಿಕೆ ವಿವರ:

೭. ವುಡಿಕೆಗೆ ಬಿಳೆ ಶೀರೆ ೧. ರವಿಕೆ ೧ ತಂದು, ಹಳೆ ಚಾಪೆ ಮೇಲೆ ಕೂಡ್ರಿಸಿ, ಮುತ್ತೈದೆ ಉಡಿ ತುಂಬಿ ಮರುದಿನಾ ಯಾರು ಕಾಣದ ಹಾಗೆ ಹೋಗಬೇಕು, ಕಲಂ.

೮ ಯಿದರ ಶಿವಾಯೇ ಸೂಳೆತನಾ ಬಿಡುವ ಮರ್ಯಾದಿ ಯೇನೆಂದರೆ: ಗುತ್ತಿಗೆ ಹೋಗಿ, ಬಂಢಾರ ಹಾಕಿಶಿ, ದರಶಿನಾ ಕಟ್ಟಿಸಿಕೊಂಡು, ಕಾಣಿಕೆ ಸಾಮರ್ಥ್ಯ ಯಿದ್ದಷ್ಟು ಕೊಟ್ಟು ಬಂದರೆ ಸರಿ. ಆಮೇಲೆ ಹೆಣ್ಣುಮಾಡಬೇಕಾದರೆ ಶೀರೆ ವಂದು ೧, ಕುಪ್ಪಸ ೧, ಕಾಯಿ ಯರಡು ೨, ಭತ್ತ ಗಿದ್ದನ ಅಯಿದು, ಅವರ ಕುಲದಲ್ಲಿ ತುಂಬಿದು ಕುಡದು[>ತರುವುದು ಕುಡುವುದು]ಸಹಾ ಮರ್ಯಾದಿ ಪ್ರಕಾರ ತಂದು, ಗೌಡ ಬುದ್ಧಿವಂತರ ಬೀಗಿತ್ತಿ ಸಹಾ ಕೂಡಿ ಗುರ್ರು ಮಾಡಿಕೊಡಬೇಕು, ಕಲಮು ವಂದು.

ನಮ್ಮ ಕುಲಕ್ಕೆ ಪರಕುಲದವ ಬಂದು ಕೂಡಿದರೆ ಅವನ ಸಾಮರ್ಥ್ಯ ಯಿದ್ದಹಾಗೆ ತಕ್ಕೊಂಡು, ಗುರುಗಳಿಗೆ ಕೂಡಿಶಿ[>ಕೊಡಿಸಿ] ತೀರ್ಥ ಹಾಕಿಸಬೇಕು. ಕಲಮು ವಂದು.

೯ ತಪ್ಪು ಮಾಡಿದವರಿಗೆ ದಂಡ ಕಪ್ಪುಕಾಣಿಕೆ: ಗಂಡಿಗೆ ವಂದು ರೂಪಾಯಿ, ಹೆಣ್ಣಿಗೆ ಅರ್ಧಾ ರೂಪಾಯ ತಕ್ಕೊಂಡು ಗುರುಗಳಿಗೆ ಕೊಟ್ಟು, ಕುಲದವರು ತಿಂದು ಉಂಡು ಬಿಡಬೇಕು, ಕಲಂ.

ಸತ್ತಾ ಹೊಲೆ ಐದು ದಿನಕ್ಕೆ. ಹೊತ್ತವರು ಹೆಗಲ್ಲಾ ಯಿಳಿಸಬೇಕು. ತಿಂಗಳಿಗೆ[>ತಿಂಗಳೊಳಗೆ] ಹೊಲೆ ತೆಕ್ಕೊಬೇಕು.

❖❖

೧೨೨
ತೆಲಗು ಬಣಜಿಗರ ಜಾತಿ ರಿವಾಜು ಕೈಫಿಯತ್ತು

ಮೆಕೆಂಝಿ ಸಂಪುಟ : ೧೭೪

ಸೊಂದ್ವಾ ತಾಲೂಕೆ, ಬನವಶಿ ಮಾಗಣೆ, ತೆಲಗು ಬಣಜಿಗರ ಬೂದಿಸೆಟ್ಟಿ, ಬಸವನಕಟ್ಟಿ, ಹನುಮಗೌಡ, ಸೋಗಹನ ವೀರನಗೌಡ, ಬುದ್ಧಿವಂತ ನಾಗರದ ನಾಗಣ್ಣ, ಬನವಾಶೆ ತಳವಾರ ನಾರಾಯಣ, ಕಟ್ಟೆ ದಾಸಣ್ಣ ಮುಂತಾದವರುನ ಕೂಡಿಕೊಂಡು ಯಿವರ ಗುರುವಾದ ತಾತಾಚಾರ್ಯರು ಪ್ರಾಯಚ್ಚಿಯಿಚ್ಚಿನ [>ಪ್ರಾಯಶ್ಚಿತ್ತಿನ] ತೆಲಗು ಬಣಜಿಗರ ಜಾತಿ ರಿವಾಜು ಕೈಫಿಯತು.

೧. ಯಿವರ ಜಾತಿಯವರು ನಗರದ ಶೀಮೆ, ಸೋದೆ ಶೀಮೆ, ಬೀಳಗಿ ಶೀಮೆ ವಳಗೆ ಯಿವರ ಜಾತಿ ಅವರು ವುಂಟು. ಯಿವರ ಜಾತಿಯಲ್ಲಿ ನಡವ ಕಟ್ಟಲೆ ಕ್ರಮ ವಿವರ, ಕಲಂ.

ಯಿವರ ಜಾತಿಯಲಿ ಹಡದಾಗ್ಯೆ ಹತ್ತು ದಿನತನಕ ಮುಡಚೆಟ್ಟು ವುಂಟು. ಹನ್ನೊಂದನೆ ದಿವ್ಸ ಮನೆ ಸಾರಿಸಿ, ಲೆಖಿಡಿಕೆಗಳು ಮುಂತಾಗಿ ಮಡಿ ಮಾಡಿಕೊಂಡು, ಬ್ರಾಹ್ಮರ ಕರದು ಪುಣ್ಯಾಹಾ ವಾಚನದಿಂದ ದೇಹಾ ಶುದ್ಧಮಾಡಿಸಿ, ಆಮೇಲೆ ಮನೆಯಲ್ಲು ಅಡಿಗೆ ಮಾಡಿಕೊಂಡು, ದಾಸರ ಕರಕೊಂಡು ತಮ್ಮ ಕುಲ ಮರ್ಯಾದಿ ಪ್ರಕಾರ ಶುದ್ಧವಾಗಿ ನಡಕೊಳ್ಳುತ್ತ[>ತ್ತೇ]ವೆ. ತೊಟ್ಟಿಲು ಕಟ್ಟಿ ಹೆಸರು ಯಿಟ್ಟು ಕೊಳ್ಳುವುದು, ಆಮೇಲೆ ೨೯ ಯಿಪ್ಪತ್ತೊಂಭತ್ತನೇ ದಿವ್ಸದಲ್ಲಿ ಹಡದಾಕಿಯ ಕರಕೊಂಡು ಮುತ್ತೈದೆ ಹೆಣ್ಣುಮಕ್ಕಳು ಅಯಿದು ಜನದ ಸಂಗಡ ಹೊಳೆಗೆ ಹೋಗಿ, ಕೊಡಾ ತುಂಬಿ ತಂದು, ಆಮೇಲೆ ಕುಲದವರು ಯಲ್ಲಾ ಕೂಡಿ ವೂಟ ಮಾಡುತೇವೆ. ॥೧॥

ನಮ್ಮ ಕುಲದ ಜಾತಿ ವಳಗಣ ಬೆಡಗು ಕಡಿಮನೆ

೧ ಕಟ್ಸಾಲೋರು

೧ ವೊಸರ ಮಗೆಯವರು

೧ ವುಪ್ಪಾಲೋರು

೧ ಚಿಕ್ಕಾತಕಲೋರು

೧ ಮಿಂಡಗೊಂದಿಲಿಯರು

೧ ಸಣ್ಣಕ್ಕಿಯೋರು

೧ ದೊಡ್ಡಕ್ಕಿಯೋರು

೧ ಮುತ್ಸಾಲೋರ್

೧ ಪಗಡಾಲೋರು

೧ ಯಮ್ಮಲೋರು

೧ ಪಸಲೆಯೋರು

೧ ದೊವಡಕಿಯೊರು

೧ ಅಧಿಕಾರೊರು

೧ ಗುಮಲೋರು

---

೧೪ ಅಂತು ಬೆಡಗು

ಮೇಲೆ ಬರದ ಯೀ ಬೆಡಗಿನಲ್ಲಿ ಹೆಣ್ಣ ಬೆಡಗಿಗೆ ಆಗದು, ಬದಲು ಬೆಡಗಿನದಾದಿತ್ತು, ಕಲಂ.

ನಮ್ಮ ಜಾತಿಯಲ್ಲಿ ಬದಲು ಜಾತಿಯವರನ ಕೂಡಿಕೊಳ್ಳುವದಿಲ್ಲ. ನಮ್ಮದೆ ಯೇನಾದರೂ ಆದಲ್ಲಿ ಅದಲು ಬದಲು ಯಾಗಿ ತಪ್ಪಿ ಯಿದ್ದರೆ ಅವರನ ಕೂಡಿ ಕೊಳ್ಳುಧವೆ[>ತ್ತೇವೆ] ಹೊರ್ತು ಬದಲು ಕುಲದವರನ ಕೂಡಿಕೊಳ್ಳುವದಿಲ್ಲ, ಕಲಂ.

ನಮ್ಮಲ್ಲಿ ಹೆಣ್ಣಿಗೆ ತೆರ ತಕ್ಕೊಂಬುದು ಗ॥ಲ ಯಂಟು ವರಹಾ. ಮದುವೆ ಪ್ರಯೋಜನ ಮೊದಲು ಜೋಯಿಸರಲ್ಲಿ ಹೋಗಿ . . . . ಸಹಾ ಕೂಡಿಕೊಂಡು . . . . ಮನೆಗೆ ಹೋಗಿ ವಸ್ತು ವಡವೆ . . . . ನರ್ಪಿಶಿ ಪಟ್ಟಿಗಂಟ ಮೂರು ನಗ, ಶೀರೆ ವಂದು, ಕುಪ್ಪಸ ವಂದು, ಹೆಣ್ಣಿಗೆ ವುಡಿ ತುಂಬಿಯಿಟ್ಟು ವುಡಿ ತುಂಬಿ ನಿಶ್ಚಯಾ ಮಾಡಿ, ಕುಲದವರು ಸಹಾ ತುಪ್ಪ ಸಕ್ಕರೆ ಬೋನಾವುಂಡು, ವಂದೆಲೆ ವಂದ್ದಡಿಕೆ ಹಚ್ಚಿಕೊಂಡು ಮನೆಗೆ ಬರಬೇಕು, ಕಲಂ

ಆಮೇಲೆ ಸಮರ್ದಾ ಆದಾಗ್ಯೆ ಜೋಯಿಸರ ಮನೇಗೆ ಹೋಗಿ ಲಗ್ನಾ ಕಟ್ಟಿಶಿಕೊಂಡು ಬಂದು ಲಗ್ನಾ ಮಾಡಿಕೊಳ್ಳಬೇಕು.

೧ ಚಪ್ರಕೆ: ಖಂ ಬ ೧೨*

೧ ಕುಂಭ ೧೨ . . . . ವೂಟವೆ ಮಾಡಿ, ... ದ ದಿವ್ಸವೂ ಯಿಂ . . . . ಯ್ರ್ಸ ಮಾಡಿ, ಕುಲದವರು ವೂಟಾ ಮಾಡಿಕೊಂಡು ಮರುದಿನ . . . . ಯರಕೊಂಡು ಭಾಶಿಂಗ ಕಟ್ಟಿಕೊಂಡು, ಲಗ್ನಕ್ಕೆ ಹೆಣ್ಣಿನ ಮನೆಗೆ ಹೋಗಿ, ಸುರಿಗೆ ವುಟ್ಟು ಜೋಯಿಸರುಗಳಿಗೆ ವಾರಾ ಹಾಕಿ, ಸೋದರಮಾವ ಸೋದರತ್ತೆ ಧಾರೆ ಯರೆಬೇಕು. ಹಾಲು ತುಪ್ಪದಲ್ಲು ಕಾಲುತೊಳೆದು ಅಂತರಪಟ ಹಿಡದು ಧಾರೆಯರೆಯಬೇಕು, ಕಲಮು.

ಮರುದಿವಸ ಗಿಂಡ್ಡಿ ತಕ್ಕೊಂಡು ತನ್ನ ಮನೆಗೆ ಹೋಗಬೇಕು, ಕಲಮು.

ಮೂರನೇ ದಿವಸ ಹೆಣ್ಣಿನ ಮನೆಗೆ ಹೋಗಿ, ಗದ್ದಿಗೆ ಹಾಕಿ, ಗುರುಗಳ ಸಹಾ ಹಾಡಿ ಹಾಡಿ, ಯಲೆ ಮಾಡಿ, ಅಡಿಕೆ ಯಿಟ್ಟು . . . . ವುಣ್ಣುತಾ . . . . ಪೂಜೆ ಮಾಡಿ, ವಿಳೆ . . . .

---

* ಖಂ=ಖಂಡುಗ, ಬ=ಬತ್ತ

ದೇವರು, ೧ ಗುರುಗಳು, ಅರಸು, ೧ ಪ್ರಧಾನಿ, ೧ ಕಟ್ಟೆಮನೆ, ೧ ಬುದ್ಧಿವಂತರು ಮುಂತಾದ ಸಮಸ್ತರಿಗೂ ವಿಳ್ಯೆ ಹಂಚ್ಚಿ ದೈವದ ವೂಟಾ ಮಾಡಿಸಿಕೊಂಡು, ಮೆರವಣಿಗೆ ಹೊರಡೊ ಹೊತ್ತಿಗೆ ಕಳಸ ಕನ್ನಡಿ ಆರತಿ ಬಟ್ಟಲು ಮುತ್ತೆದೆ ಸಹಾ ಹೋಗಿ, ಮೆರವಣಿಗೆಮಾಡಿ ಮತ್ತು ಗ್ರಾಮದ ದೇವರಿಗೆ ಹಣ್ಣು ಕಾಯಿ ಕೊಟ್ಟು, ಗೃಹಪ್ರವೇಶ ಮಾಡಿಕೊಳ್ಳಬೇಕು. ನಾಲ್ಕನೇ ದಿವಸ ನಾಗೋಲೆ ಶಾಸ್ತ್ರ ಕುಲಮರ್ಯಾದಿಯಂತೆ ಮಾಡುತಾದೆ, ಕಲಮು.

ನಮ್ಮಲ್ಲಿ ತೆರಾ ಗ ಳ

. . . . ಗೆ ಯೆ ಯಿಲ್ಲಾ.

. . . . ಹಣ್ಣು ಕಾಯಿ ಕುಲ . . . . ಹಂಚ್ಚುವದು.

ಮತ್ತು ನಮ್ಮ ಕುಲದಲ್ಲಿ ವಪ್ಪು ತಪ್ಪು ಆದಲ್ಲಿ ಅವರವರ ಸಾಮರ್ಥ್ಯ ಯಿದ್ದ ಹಾಗೆ ತೆಕ್ಕೊಂಡು, ಅರ್ಧ ಗುರುಮನೆಗೆ ಕೊಟ್ಟು, ವುಳದ್ದು ಹತ್ತು ಜನಾಕೆ ವೂಟಾ ಮಾಡ್ಸಿ, ಆಮೇಲೆ ಕುಲದ ವಳಗೆ ತಕ್ಕೊಳ್ಳಬೇಕು, ಕಲಂ.

ಹಚ್ಚೆವಚ್ಚೆಗಳಲ್ಲಿ ಶ್ರೀನಾಮಧಾರಿಗಳಾದಂಥವರು ಆ ಸಂಪ್ರದಾಯದಲ್ಲಿ ಮಾಡಿಕೊಳ್ಳುತ್ತಾರೆ. ಅದು ಅಲ್ಲದವರು ತಮ್ಮ ಜಾತಿ ಮರ್ಯಾದೆಯಲ್ಲಿ ಮಾಡಿಕೊಳ್ಳುತ್ತಾರೆ.

❖❖

೧೨೩
ಪದ್ಮಸಾಲೇರ ಕೈಫಿಯತ್ತು

ಮೆಕೆಂಝಿ ಸಂಪುಟ : ೩೬೯

ಭಾವಸಂವತ್ಸರದ ಅಧಿಕ ಭಾದ್ರಪದ ಬ॥೭ಲ್ಲಿ ಸೊಂದಾ ತಾಲೂಕು ಪೈಕಿ ಬನವಶಿ ಪದ್ಮಸಾಲೇರು ಜಾತಿ ಗೌಡ ಭಾಶಿ ವೆಂಕಪ್ಪ, ಬುದ್ಧಿವಂತ ವುಪ್ಪಾರಗೇರಿ ದೊಡ್ಡತಮ್ಮಪ್ಪ, ವುಪ್ಪಾರಗೇರಿ ಲಿಂಗಪ್ಪ, ಯಲಿಗಾರ ಶಿವಪ್ಪ, ಕಂತ್ರಾಚಿ ಯಲ್ಲಪ್ಪ, ಬುರಡಿ ತಿಮ್ಮ, ಅಗಡಿ ತಿಮ್ಮಣ್ಣ, ಮರಿತಮ್ಮಣ್ಣ, ಬಾಲಕನ[>ಬಾರಕೇರ]ಲಿಂಗಣ್ಣಾ, ವುಪ್ಪಾರಗೇರಿ ಗೋವಿಂದಣ್ಣ ಮೊದಲಾದವರಿಗೆ ಗುರುವಾದ ತಾತಾಚಾರಿಯವರು ಬರಶಿಕೊಟ್ಟ ಪದ್ಮಸಾಲೇರ ಕೈಫಿಯತು.

ಯಿವರ ಜಾತಿಯಲ್ಲು ಮದಿವಿ ಮುಂಜಿ ಹವ್ಯ ವಗೈರೆ ಯೇನು ಆಗುವಂಥಾದ್ದು ತಪಶೀಲು ಬರಕೊಟ್ಟ ವಿವರಾ: ಯಿವರ ಜಾತಿಯಲ್ಲು ಹೆಣ್ಣಿನ ತೆರ ಗ ಳ॥ ನಾಲ್ಕುವರೆ ವರಹಾ, ವುಡಿತುಂಬಿ ನಿಶ್ಚಯ ಮಾಡಿ ವಿಳೆಯಿಕ್ಕುವ ಬಗ್ಯೆ ಬಿಳೆದು ಬಣ್ಣ ಖಣ ೨, ಕಾಯಿ ಹಣ್ಣು ವೀಳ್ಯಾ ಸಕ್ರೆ ವಸ್ತಾ ವಡವೆ ಯಿಡಬೇಕು. ಆಮೇಲೆ ವೂಟಾ ಮಾಡಿ ಬರಬೇಕು, ಕಲಂ.

ನಮ್ಮ ಜಾತಿಯಲ್ಲಿ ನಡಿಯೋ ಲಗ್ನದ ಪಣಿಕಟ್ಟಿನ ವಿವರ: ಲಗ್ನ ನಾಲ್ಕು ದಿವಸ ಯಿರಲಿಕ್ಕೆ ಗಂಡು ಹೆಣ್ಣಿಗೆ ತಮ್ಮ ತಮ್ಮ ಮನೇಯಲ್ಲು ಅರಿಶಿಣಾ ಹಚ್ಚಿ ಸುರಿಗೆ ಸುತ್ತಿ ಹನ್ನೆರಡು ಕಂಭ ಹನ್ನೆರಡು ಕುಂಭದಿಂದ ದೇವಕಾರ್ಯ ಮಾಡಿಕ್ಕೊಂಡು, ಮರುದಿವಸ ಲಗ್ನಕಾಲಕ್ಕೆ ವಧುವಿನ ಮನೇಗೆ ಹೋಗಿ, ಯಥಾವತು ವಿಧಿಯಿದ್ದಾ ಜೋಯಿಸರು ಅಂತರಪತ್ಥಾ ಹಿಡಿಸಿ, ಲಗ್ನಾ ಮಾಡಿಸುಥಾರೆ, ಕಲಂ.

ಲಗ್ನವಾದ ದಿವಸದಾರಭ್ಯಾ ಪ್ರಾರಂಭದಿವಸ ಭೂಮವೊಂದು, ದೈವಕ್ಕೆ ಸುರಗಿ ವೂಟ ೧ ವೊಂದು ಕೊಡಬೇಕು. ಆ ಬೆಳಿಗ್ಯೆ ಯಾವತ್ತು ನಮ್ಮ ಕುಲದವರು ಯಲ್ಲಾರು ಕೂಡಿ ಮದುಮಗ ಮದಲಗಿತ್ತಿ ಹಂದರದಲ್ಲಿ ಕುಡಿರಿಶಿ, ಬಾಶಿಂಗಾ ಕಟ್ಟಿ, ನಮ್ಮ ಕುಲದೇವರು ಆದ ಮಲ್ಲಿಕಾರ್ಜುದೇವರ ಹೆಸರಲ್ಲು ಗಿಂಡಿಯಿಟ್ಟು ಪೂಜೆಮಾಡಿ, ಹೆಣ್ಣಿನವರಿಂದಾ ವೊಂದುವರೆ ಟೆಂಕ, ಗಂಡಿನವರಿಂದ ಟೆಂಕವೊಂದುವರೆ ವುಭಯಂ ಟೆಂಕ ಮೂರಕ್ಕೆ, ವೊಂದುವರೆ ಟೆಂಕಗೆ ಕಡ್ಲೆ ಮೊಂಡಕ್ಕಿ ಜಿನಸು ತಂದು, ಹದಿನೈದು ಯೆಲೆ, ಆ ಹದಿನೈದು ಅಡಿಕೆ ಯರಡು ಕಡೆಯಿಂದಲು ಕುಲದವರ ಮನೇಗೆ ವೊಂದ ವಿಳ್ಯಾ ಪ್ರಕಾರ ಸಮಸ್ತ ಕುಲದವರಿಗು ಕೊಡಬೇಕು. ಬಾಕಿ ರೊಖ್ಖ ಟಂಕ ೧॥ ವೊಂದುವರೆ ಟಂಕ ಗುರುಗಳಿಗೆ ಸಲುತ್ತದೆ. ಯಿದರಲ್ಲಿ ಗೌಡರಿಗೆ ವಿಳ್ಯಾ ಯರಡು ಸಲ್ಲುತ್ತದೆ. ಬಾಕಿ ವುಳದ್ದು ದರೋಬಸ್ತು ಜನರಿಗೆ ದರವೊಂದು ಪ್ರಕಾರ ಕೊಟ್ಟು ಬಾಕಿ ವುಳಿದರೆ, ಯೀ ವಿಳ್ಯಾ ಗೌಡಗೆ ಸಲ್ಲುವ ಮಾಮೂಲೆ ಸರಿ. ಯಾವತ್ತು ದೈವವು ಲಗ್ನದ ಮನೆಯಲ್ಲು ವೂಟಾ ಮಾಡಿ ಹೋಗಬೇಕು, ಕಲಂ.

ಆ ಮರುದಿವಸದಾರಭ್ಯ ಯರಡು ದಿವಸ ಯರಡು ಕಡಿಗ್ಯು ನಮ್ಮ ಕುಲದವರಿಗೆಲ್ಲಾ ವೂಟ ವುಪಚಾರ ಆಗುತ್ತದೆ, ಕಲಂ.

ಆ ಮರುದಿವಸ ವೂರ ಮೆರವಣಿಗೆ ಗ್ರಹಪ್ರವೆಶ ಮಾಡಿ, ಗಂಡನ ಮನೆ ಸುರಗಿ ವೂಟ ಕುಲದವರಿಗೆಲ್ಲಾ ಮಾಡಿಸಬೇಕು.

ಆ ಮರುದಿವಸ ನಾಗವಲ್ಲಿಮಾಡಿ, ಸ್ನಾನಮಾಡಿ ಹೆಣ್ಣು ಗಂಡನು ಕುಂಡ್ರಿಸಿ ಕಂಕಣ ವಿಸರ್ಜನೆ ಮಾಡಿ, ಆಮೇಲೆ ಮಂಟಪ ವಿಸರ್ಜನೆ ಮಾಡಬೇಕು, ಕಲಂ.

ಅಂತು ನಮ್ಮ ಕುಲದಲ್ಲಿ ಮದವಿ ಸಂಪ್ರದಾಯ ಯಿದೆ ಹೊರ್ತು ಬದಲು ಯಿಲ್ಲಾ. ಯಿದರ ಹೊರ್ತು ವುಳಗಡಮೆ ಹವ್ಯ ಕವ್ಯ ದೀಕ್ಷೆಗಳಲ್ಲಿ ಕಿರುನಾಮಧಾರಿಗಳು ತಮ್ಮ ಸಂಪ್ರದಾಯದಲ್ಲಿ ಮಾಡಿಕೊಳ್ಳುತ್ತಾರೆ. ಕಡಿಮೆ ಯಾವತ್ತು ಬ್ರಹ್ಮರನ ಕರದು ತಮ್ಮಲ್ಲಿ ಆಗುವ ಮೇರಿಗೆ ಮಾಡಿಕೊಳ್ಳುತ್ತಾರೆ, ಕಲಂ.

ಯಿದರ ಹೊರ್ತು ದಾಸರನ ಕರತಂದು ಅವರಿಗೆ ಗೋಪಾಳಾ ತುಂಬಿ, ವಿಳ್ಯಾ ಕೊಡುವದು ಸಂಪ್ರದಾಯ, ಕಲಂ.

ಮತ್ತು ನಮ್ಮ ಕುಲದ ಆಚಾರ ವ್ಯವಹಾರ ಯೇನು ಯಿದ್ದಾಗ್ಯೂ ವಿಚಾರಕ್ಕೆ ಸೊಂಡೂರಲ್ಲಿ ಯಿರುವ ತಾತಾಚಾರ್ಯರು ಅಧಿಕಾರಿಗಳು.

ಯಿದರ ಹೊರ್ತು ನಮ್ಮ ಕುಲದಲ್ಲಿ ಶಾಲೆ ವುಡಿಸುವ ಸಂಪ್ರದಾಯ ಯೆನೇಂದರೆ, ಪೂರ್ವದ ಗಂಡನ ಪದಾರ್ಥ ಯಾವತ್ತು ಅವರ ಮನೇಯವರಿಗೆ ಕೊಟ್ಟು, ಯೀಗ ಆಗುವ ಗಂಡನ ಸಂಗಡಾ ಅರ್ಧಾ ತೆರಾ ತೆಕ್ಕೊಂಡು ಜಾತಿಯವರಿಗೆ ವಿಳ್ಯಾ ಕೊಟ್ಟು, ವೂಟಾಮಾಡಿಸಿ ವುಡಿಕಿ ಮಾಡಿಕೊಳ್ಳಬೇಕು, ಕಲಂ.

ಯೀ ಜಾತಿ ಬೆಡಗಿನ ವಿವರ:

೧ ಮಾಡಿಪಲ್ಲಿಯವರು

೧ (ಯಲಿಗಾರ ಗೋತ್ರ) ಚಂದ್ರಿಕೆಯವರು ಯಂತ ಹೆಸರು.

೧ ಕಾರಿಲ್ಲಿಯವರು

೧ ಗಂಟಿನವರು

೧ ಮುತ್ತಲವರೂ

೧ ಚರಕನೋರು

೧ ಕೊಡಗಲ್ಲವರೂ

೧ ಸುರಾನವರು

ಜುಮಲಾ ಯೆಂಟು ಬೆಡಗು ವಿವರ.

❖❖

೧೨೪
ಬಂಜಾರಿ ಕೈಫಿಯತ್ತು

ಮೆಕೆಂಝಿ ಸಂಪುಟ : ೧೬೧

ಕೈಫಿಯತು, ತರಿಕೆರೆ ಶೀಮೆ ವಳಗೆ ಯಿರುವ ಬಂಜಾರಿ ಕೈಫಿಯತು. ಕ್ರೋಧನ ಸಂಭಾದ್ರಪದ ಬ ೧೧ಲ್ಲು ಬರಶಿದು, ತಾಂಡೆದೆ ಭಗವಾನ ರಾಮ ವಗ್ಯೆರೆ.

ಪೂರ್ವದಲ್ಲಿ ಯೀ ಬಂಜಾರಿಯವರು ದಿಲ್ಲಿ ಆಚಿಗೆ ಜೊತಾಪುರಾ ಯಂಬ ಗ್ರಾಮದಲ್ಲಿ ಸ್ತಳವಂದಿಗರಾಗಿ ಬೇಪಾರ ಮಾಡಿಕೊಂಡು ಯಿರುತ್ತಾ ಯಿದ್ದರು. ಯಿವರ ಕುಲಾ ಹಿಂದೂ ಜನರಲ್ಲಿ ದಾಕಲು ಆಗಿ, ರಜಪೂತರಲ್ಲಿ ಭೇದವಾಗಿ ಹೆಣ್ಣು ಗಂಡು ಕೊಡುವದು ತೆಗೆದುಕೊಳ್ಳುವದು. ಕುಲಾ ೩ಕೆ ವಿವರ: ೧ ಪವಾರ, ಚೆಹ್ವಾಣ, ೧ ರಾಟೋರ್ರು[>ರಾಠೋಡ].

ಯಿದರ ಮೂರು ಜಾತಿಯ ಶಿವಾಯಿ ಬಂಜಾರಿರಲ್ಲಿ ಮತ್ತೊಂದು ಜಾತಿಯಲ್ಲಿ[>ಯಿಲ್ಲ]. ಯಿವರ ದೇವರು ವೆಂಕಟರಮಣ, ಭವಾನಿ – ಯಿವೆರಡು ದೇವರು ಮುಖ್ಯವಾಗಿ ನಡೆದುಕೊಳ್ಳುತ್ತಾರೆ. ಯಿವರು ಜೊತಾಪುರಯೆಂಬ ಗ್ರಾಮದಿಂದಾ ಹೊರಟು ಬರಬೇಕಾದರೆ ಯಿವರು ಮುತ್ತಾನವರ ಮುತ್ತಾತನ ಕಾಲದಲ್ಲಿ "ದಿಲ್ಲಿ ಪಾದಶಾಹಾ ಆಸಪ್‌ಜಾಹಾರ ಕಡೆ ಫೌವಜು ಹೈದರಾಬಾದಿಗೆ ಬರುವಲ್ಲಿದಾಗ ಸಂಗಡಾ ರಸ[>ರಾಸು]ದು ಗೋಣಿಗಳು ಹೋಗಬೇಕು" ಯೆಂಬುದಾಗಿ

ಪಾದಶಹಾರವರು ನಮ್ಮ ಹಿರಿಯರಿಗೆ ಕರಶಿ "ದಂಡಿಗೆ ಅಕಿ ಜೋಳಾ ಹುರಳಿ ಕಡಲೆ ಮುಂತಾಗಿ ಧಾನ್ಯದ ಜಿನ್ಸು ತೆಗೆದುಕೊಂಡು ಹೋಗಿ ಆ ಮಶಾಸು ಬೇಪಾರ ಮಾಡಿಕೊಂಡು ಯಿರುವದು, ನೀವು . . . . ವಾ ರಸ[>ರಾಸು]ದಿನ ಗೋಣಿಗಳಿಗೆ ಸುಂಕಾ ಕೆಲಸ ಇಲ್ಲಾವು ಅವರ ನಿಮಗೆ ಸಿಕ್ಕಿದ ಜಿನ್ಸ ನಿಮಗೆ ಮಾಡಿಸುತಾ ಯಿದೆ" ಯೆಂಬುದಾಗಿ ಆಶ್ವಾಸನ ಕೊಟ್ಟು ಕಾಯ್ದಿದರಿಂದಾ ನಮ್ಮ ಹಿರೆಯವರು ಆವ ಜಿನಸ/ಗಂಡು ಬಂದು ದಂಡಿಗೆ ಬೇಕಾದ ರಸದು ದರಸದ[>ದವಸದ] ಗೋಣಿಗಳು ತಂದುಕೊಂಡು, ಆ ವ್ಯಾಪಾರಗಳಾ ಮಾಡಿಕೊಂಡು ಹೈದರಾಬಾದಿಗೆ ಬಂದು ಯಿದ್ದು, ಹೈದರನ ದಿನದಲ್ಲು ತಾನೆ ಶಾಹಾನ ಹೊಡದು ಕಿಲ್ಲೆ ಠಾಣೆ ಹಾಕಿಕೊಂಡು, ಪುನಹಾ ಫವುಜು ದಿಲ್ಲಿಗೆ ಹೋಯಿತು. ನಮ್ಮ ಹಿರಿಯರು ಹೋಗದೆ ತನ್ನ ಸಂಗಡಾ ಯಿದ್ದ ಸ್ವಜಾತಿ ಜನರಿಂದಾ ಯಾವತ್ತೂರು ಹೈದರಾಬಾದು ಶೀಮೆವಳಗೆ ಯಿದ್ದುಕೊಂಡು ಯಿದ್ದರು.

ಕೆಲವು ಕಾಲದ ಮೇಲ್ಲೆ ನವಾಬ ಹೈದರ ಅಲ್ಲಿಖಾನ ಬಾಹದರವರ್ರು ಪ್ರಭಳವಾಗಿ ಬಂಜಾರಿಗೆ ಯಾವತ್ತು ಕವುಲು ಬರಶಿ ಕಳುಹಿಸಿದಲ್ಲಿ, ಕೆಲವರು ಬಂದು ದಂಡಿನಲ್ಲಿ ಬೇಕಾದ ರಸ[>ರಾಸು] ದಿನಸುಗಳು ವುಪಾ[>ಉಪ್ಪು]ಯಿತರ ದಿನಸಗುಳ ತೆಗೆದುಕೊಂಡು ಬಂದು, ಅಮಶಾನು ವ್ಯಾಪಾರಗಳು ಮಾಡಿಕೊಂಡು ಯಿದ್ದ್ರು, ನವಾಬ ಸಾಹೇಬರವರು ನಮ್ಮವರು ತರುವ ದಾವಸದ ಗೋಣಿವಳಗೆ ಸುಂಕಾ ಯಿಲ್ಲದ ಹಾಗೆ ಮಾಪು ಬರಶಿಯಿತು. . . . ಬರಶಿಕೊಂಡುದು. ಆತನಲ್ಲಿನ ಮೇಲೆ ಕೆಲವು ಜಾತಿಯವರು ಬಂದು ಅವರಾಸು ಬೇಪಾರಗಳ ಮಾಡಿಕೊಂಡು ಯಿರಲಾಗಿ, ನವಾಬ ಸಾಹೇಬರು ಕಾಲವಾದ ಮೇಲೆ ಯಿವರ ಮಗ ಟೀಪುಸುಲತಾನ ಪಾದಶಹಾರವರು ಪ್ರಬಲವಾಗಿ "ಫೌಜಿನ ಸಂಗಡಾ ಬಂಜಾರಿಯವರ್ರು ಸಾಲದು, ನಿಮ್ಮ ಜನರು ಯಲ್ಲಿ ಯಲ್ಲಿ ಯಿದಾಗ್ಯು ಕರ್ರುಸವದು" ಯೆಂಬದಾಗಿ ಅಪ್ಪಣೆ ಕೊಟ್ಟದರಿಂದಾ, ನಮ್ಮ ಜಾತಿಯವರು ನಮ್ಮ ಹೆಸರಿನಿಂದಾ ಕಾಗದಗಳು ಬರಶಿ ಕಳುಹಿಸಿ ಕೊಟ್ಟದ್ದರಿಂದ ಬಂದವರು ಭಗವಾನರಾಮ, ಜಯರಾಮ, ಮೂರ್ರು ತಾಂಡೆದವರು, ಯಿನ್ನು ಕೆಲವರು ಯಿರುತಾರ. ನಮ್ಮ ನಮ್ಮ ಯೆತುಗಳು, ಹೆಂಗಸರು, ಮಕ್ಕಳು ಸಹಾ ಬಂದೆವು. ದಾವ ಹುಟದು ಹೈದರಾಬಾದು ಸ್ಥಳ ಯೀ ಶೀಮೆಗೆ ಬಂದು ವರುಷಾ ೨೦ ಆಯಿತು. ಯಿದುವರೆಗೂ ಪ್ರಾಕು ಬರಕೊಟ್ಟ ತಾಂಬ್ರ ಶಾಸನಹ[>ದ] ಮೇರಿಗೆ ಕವುಲು ನಡ್ಸುತಾ ಯಿದ್ದಾರೆ. ನಾವು ತರುವ ಗೋಣಿಗಳಿಗೆ ಸುಂಕಾ ಕೊಡುವದು ಯಿಲ್ಲಾ. ನಮ್ಮ ಮನಸ್ಸು ಬಂದ ಸ್ತಳಕೆ . . . . ಸಹಾ ತಂದು ಮಾರಿಕೊಳುತಾ ಯಿದ್ದೇವೆ.

ನಮ್ಮ ಜಾತಿಲಿ ನಡಿಯುವಂಥ ವುಡಿಕೆ ವಿವರ:

ಮದುವೆ ಆಗಬೇಕಾದರೆ ಬ್ರಾಹ್ಮರ ಕಡೆಯಿಂದಾ ವಳ್ಳೆ ದಿವಸಾ ನೋಡಿ, ಹೆಣ್ಣುಗಂಡಿನ ಬಲಾಬಲ ನೋಡಿಶಿ, ಮೂಹೂರ್ತ ಕಟ್ಟಿಸಿ, ಬ್ರಾಹ್ಮರಿಗೆ ದಕ್ಷಿಣೆ ಕೊಟ್ಟು ಹೋಗಿ, ಹೆಣ್ಣಿನ ಮದುವೆ ಮಾಡಬೇಕಾದರ್ರೆ ಯೀ ಹೆಣ್ಣಿನ ತಂದೆ ತಾಯಿ ಆದಂತವರು ಹತ್ತು ರೂಪಾತಿ ಮೊದಲು ಮಾಡಿಕೊಂಡು ಆರು ರೂಪಾಯಿ ಪರಿಯಂತ್ರ ಕಂಟಿಸರಾ, ಕಾಲಿಗೆ ಮೂರ್ರುಗಳು ಮಾಡಿಶಿಕೊಡುತ್ತಾರೆ. ಯಿಲ್ಲದವರು ಆದರೇ ಯೇನು ಕೊಡುವುದಿಲ್ಲ. ಯೀ ಹೆಣ್ಣು ಅತ್ತಿ ಮನೆಗೆ ಹೋಗುವಾಗ ಯಂಥಾ ಬಡವಳು ಆದರ್ರೂ ವಂದು ಯೆತ್ತು ಕೊಡಬೇಕು. ಗಂಡಿಗೆ ಮುಂಡಾಸ ಹಚ್ಚಡ ಕೊಡಬೇಕು. ಯಿದರ ಶಿವಾಯಿ ಮತ್ತೆ ಯೇನೂ ಕೊಡುವದು ಯಿಲ್ಲ. ಗಂಡಿನವರು ಕೊಡುವದು ಹೆಣ್ಣಿಗೆ ತ್ತೊಳಬಂದು,

ಕುಪ್ಪಸಾ, ಚಿನ್ನದ ಬಳೆಗಳು ಮುಂತಾದು ಕೊಟ್ಟು ಮದುವೆ ಮಾಡಿ ಕೊಳ್ಳುತ್ತಾರೆ. ಅತ್ತೆಮನೆಗೆ ವುಡಗರಿ ಸದರಿ ಬರದ ಮೇರಿಗೆ ಕೊಡುತ್ತಾರೆ.

ಯಿವರು ತಿಂಬುವ ಆಹಾರಾ ಯೇನು ಯೆಂದರೆ : ಅನ್ನಾ, ರಾಗಿಮುದ್ದೆ, ರೊಟ್ಟಿ ಮುಂತಾದು ಹೆಂಗಸರ್ರು ತಿನ್ನುತ್ತಾರೆ. ಗಂಡಸರು ಹೆಂಡಾ ಮಾವಸಾ ಯಿತ್ಯಾದಿ. ಹೆಂಗಸರು ತ್ಯೆಜಿಸುವರು (ತಿನ್ನುವದು ಯಿಲ್ಲಾ). ಗಂಡಸರು ತಿನ್ನುವದು ಸದರೀ ಬರದ ಮೇರಿಗೆ ಅನ್ನ ಮುಂತಾಗಿ ಸಾರಾಯಿ ಹೆಂಡ, ಕುರಿ, ಕೋಳಿ, ಜಿಂಕೆ, ಸಾರಂಗ, ಕಾಡಹಂದಿ ಮುಂತಾದು ತಿನ್ನುತ್ತಾರೆ. ವುರ್ರು ಹದಿ ದನಲಿನ [>ಊರಹಂದಿ ದನವಿನ] ಮಾವಸಾ ತಿನ್ನುವದು ಯಿಲ್ಲಾ. ಹೆಂಗಸರು ಯಮ್ಮಿ ಕೋಣಾ ಮಾಂಸಗಳ ಸಾರಾಯಿ ತೆಗದು ಕೇಳುವದು ಯಿಲ್ಲಾ. ಯೆಂದರೆ[>ಯಾಕೆಂದರೆ] ಗಂಡಸರ್ರು ಕಡೆಯಿಂದಾ ಮಾವಸಾದಿಗಳು ಆಹಾರಾ ಬಿಟ್ಟು ತಮ್ಮ ದೇವರಿಗೆ ನೇಮಾ ನಡ್ಸುವದಕ್ಕೆ ಆಗದ ಕಾರಣದಿಂದಾ ಯಿವರು ಮಾವಸಾದಿಗಳು ತೆಗೆದುಕೊಳುತ್ತಾ ಯಿದಾರೆ. ಹೆಂಗಸರು ನೇಮಾ ನಡ್ಸುತಾರಾದ ಕಾರಣ ಯೀ ಆಹಾರಗಳು ಹೆಂಗಸರು ಬಿಟ್ಟು ಯಿದ್ದಾರೆ.

ಹೆಂಗಸರಿಗೆ ಮದುವೆ ಗಂಡಾ ಸತ್ತು ಹೊದ್ರೆ ಕುಟಿಗೆ[>ಕೂಡಿಕೆ] ಮಂದಿ ಮತ್ತೆಬ[>ಮತ್ತೊಬ್ಬ] ಗಂಡಗೆ ಕುಡಿಶಿ[>ಕೂಡಿಸಿ] ಕೊಡುವದು ವುಂಟು. ಯೀ ಜನರಲ್ಲಿ ಹಾದರಾ ಮಾಡುವದೂ ಉಂಟು. ಕಾಣದೆ ಯಿದ್ದದಕ್ಕೆ ಚಿಂತೆಯಿಲ್ಲಾ ಕಂಡು ಪ್ರಕಟವಾದರೆ ಸದರಿ ಬರ್‍ದ ಮೇರಿಗೆ ಜಾತಿವಳಗೆ ಮಾಡದೆ[>ಡಿದ್ದ]ವುಂಟಾದರೆ ಆ ಹೆಣ್ಣು ಅವನಿಗೆ ಕೂಡಿಶಿ ಕೊಡುತಾರೆ. ಸದರಿ ಬರದ ಮುರ್‍ರುಜಾತಿ ಶಿವಾಯಿ ಮತ್ತೊಂದು ಜಾತಿವಳಗೆ ಹಾದರಾ ಮಾಡಿದರ್‍ರೆ ಜಾತಿಯಿಂದಾ ಹೊರಗೆ ಹಾಕುತಾ ಯಿದ್ದಾರೆ.

ಹೆಂಗಸರ ವುಡಿಗೆ ವಿವರಾ: ಪರಕರಾ ೧, ಹಿಂದುಮುಂದಾಗಿ ಕುಪ್ಪಸಾ ತೊಡುತ್ತಾರೆ. ಮೃಗ[>ಗಜ]ದಂತದ ಬಳೆ ಹಾಕುತಾರೆ. ಕಾಲಿಕೆ ಕಂಚಿನದು ಆದರೂ ಸರಿ ಯಿಲ್ಲವೆ ಹಿತ್ತಾಳೆದು ಆದರೂ ಸರಿ ವಂಕಿ ಹಾಗೆ ಯಿರುವ ಕಾಲುಂಗರ ಹಾಕುತಾರೆ. ತಲಿಗೆ ಬೆಳ್ಳಿ ಹಿತ್ತಾಳೆ ಮುರ್‍ರುಗಳು ಹಾಕುವದು. ಜಡಿಗೆ ಯರಡು ಕಡೆ ಕಪಾಳದಲ್ಲಿ ಯಿರುವ ಕೂದಲುಗಳಿಗೆ ಗೊಂಡೆಗಳು ಹಾಕುತಾರೆ. ಅದಕ್ಕೆ ಬೆಳ್ಳಿ ಮುರ್‍ರುವು ಹಾಕುತಾರೆ. ಹೆಂಗಸರ್ರು ಬಾಣಂತೆರು ಆದರ್ರು ಸಾರಾಯಿ ಕೊಡಿಸುವದು ಯಿಲ್ಲಾ. ಅಂಗಡಿ ಖಾರಾಗಳು ಕೊಟು ಹದಿನೈದು ಯಿಪ್ಪತ್ತು ದಿವಸಾ ಆರತೆ[>ಆರೈಕೆ] ಮಾಡುತ್ತಾರೆ. ಗಂಡಸರು ವುರಿ[>ಡಿ]ಗೆ ಮುಂಡಾಸ ಚೆಲ್ಲಣಾ, ದುಪ್ಪಟಿ, ಹಚ್ಚಡಾ, ನಡಕಟ್ಟು, ವಟ್ಟುಚಲ್ಲಾ ಯೀ ಮೇರಿಗೆ ಯಿರುತ್ತಾ ಯಿದೆ. ಮದುವೆ ವಳಗೆ ಬಜಂತ್ರಿ ಯಿಲ್ಲಾ.

ತಮ್ಮ ತಮ್ಮ ಜಾತಿ ವಳಗೆ ಬಾರಿಸುವ ವಾದೆದ ವಿವರಾ: ಸಿತಾರ ೧, ಕಾಳಾ[>ಕಾಳೆ] ೧, ಖಣೆಹಲಿಗಿ ಯೀ ಮೂರು ವಾದ್ಯಾ ಬಾರಿಸುತ್ತಾ ಯಿದ್ದಾರೆ.

ವರುಷಕೆ ವಂದು ಧಪಾತಿ ತಮ್ಮ ಕುಲಸ್ವಾಮಿ ವೆಂಕಟರಮಣಗೆ ಭವಾನಿ ಅಮ್ಮಾಗೆ ಮಾಡುವ ವಿವರ: ಸ್ವಜಾತಿ ಜನರು ಯಾವತ್ತು ಕೂಡಿ ವಂದು ದಿವಸಾ ನೇಮಕಾ ಮಾಡಿಕೊಂಡು, ಆ ದಿವಸ ಹೆಂಗಸರ್ರೂ ಗಂಡಸರ್ರೂ ಸಹವಾಗಿ ಶುಚಿರ್ಭೂತರಾಗಿ ನೀರ್ರು ಯರಕೊಂಡು ಯಿದ್ದ

ಬಟ್ಟೆ ಬರೆ ಯಾವತ್ತು ವಗದು ವಣಗಿಸಿ, ಕೂಡಿದ ಜನರಲ್ಲಿ ಹಿರ್ರೆನಾದವನು ದೇವರಿಗೆ ಮೂರ್ತಿ ವಿಗ್ರಹ ಯಿಲ್ಲದೆ, ನಿರಾಕಾರದಿಂದ ನೈವೈದ್ಯವನ್ನು ಮಾಡಿ ಯಾವತ್ತು ಹೆಣ್ಣುಗಂಡು ಸಹಾ ವೂಟಾ ಮಾಡುತ್ತ ಯಿದಾರೆ. ಯೀ ಜನರಲ್ಲಿ ಕುಲದೇವರು ಮೂರ್ತಿಗಳು ಯಿಟ್ಟುಕೊಂಡು ಪೂಜೆ ಮಾಡುವದು ಯಿಲ್ಲಾ. ವಿದ್ಯಾ ಕಲಿಯುವದು ಯಿಲ್ಲಾ. ಯಿವರ ವಾಸಾ ಯಾವತ್ತು ಅಡವಿಯ ವಳಗೆ ಹೊರತು ಊರಲ್ಲಿ ಸೇರ್ರುವದು ಯಿಲ್ಲಾ. ಯಾವತ್ತು ತಂದು ವ್ಯಾಪಾರಾ ಮಾಡುವ ಜಿನಸಿನ ವಿವರಾ:

೧ ಅಕ್ಕಿ
೧ ಜೋಳಾ
೧ ರಾಗಿ
೧ ಹುರುಳಿ
೧ ಕಡಲ್ಲಿ
೧ ವುದ್ದು
೧ ಹೆಸರು
೧ ತೊಗರ್ರಿ ಬೇಳೆ
೧ ಅವರ್ರೆ
೧ ಅವರ್ರಿ ಬೇಳೆ
೧ ಉಪ್ಪು ತರುವದು
೧ ಪೂರ್ವಕೆ ಚೆನ್ನಪ್ಪಟ್ಟಣ ಮುಂತಾಗಿ
೧ ಪಶ್ಚಿಮಕೆ ಮಾನವಿ

ಯೀ ಪ್ರಕರ ಜಿನಸುಗಳನು ತಂದು ವ್ಯಾಪಾರಗಳು ಮಾಡಿಕೊಂಡು ಯಿರ್ರುವದು ಹೊರತು, ಬೇಸಾಯ ಮಾಡಿಕೊಂಡು ಕಾಲ್ಲಾ ಮಾಡುವದು ಯಿಲ್ಲಾ. ಟೀಪುಸುಲತಾನರ್ರು ಕಾಲವಾದ ಮೇಲೆ ಜನಲಹಾರಸನ [>ಜನರಲ್ ಹಾರ್ಸ] ಸಂಗಡ, ರಸ[>ರಾಸು]ದಿನಗಾಣಿಗಳು ತೆಗೆದುಕೊಂಡು ಆಮದಾನಗರದ ಪರಿಯಂತ್ರವಾಗಿ ಹೋಗಿ, ಯಿದೆನ್ನು ಆ ಗಾಣಿಗಳು ಖರ್ಚು ಆದ ಮೇಲೆ ಪುಣೇದ ಪ್ರಾಂತ್ಯಕೆ ಬಂದು, ಸದರಿ ಬರದ ಮೇರಿಗಿ ಜಿನ್ನುಗಳನ್ನು ತುಂಬಿಕೊಂಡು ಹೋಗಿ, ದಂಡಿಗೆ ರಸದು ಮುಟ್ಟಿಸಿದ್ದರಿಂದ ದಂಡಿನ ಸಂಗಡಾ ಯಿದ್ದುಕೊಂಡು, ಜರ್ನೆಲ[>ಜನರಲ್] ಹಾರ್‌ಸ್ ಬಾಹದರವರು ಬಂದರಕೆ ಹಾಸಿ ಹೋಗುವದು . . . . ನುದಿನಲ್ಲಿ . . . . ಮೇವು ಯಿಲ್ಲದೆ ದನಕರ ಯಾವಾತ್ತು ಆ ಸತ್ತು ಹೋದದರಿಂದ ಹಿಂದಕೆ ಹೊರಟು ಬಂದು, ಯೀ ಶೀಮೆಯಲ್ಲಿ ಯಿದ್ದುಕೊಂಡು ಯಿದ್ದೇವೆ.

ಯೀ ಶೀಮೆಯಲ್ಲಿ ಯಿರ್ರು ತಾಂಡೆದವರ ಹೆಸರು. ತರಿಕೆರೆ ಶೀಮೆವಳಗೆ ಯಿರುವ ತಾಂಡೇದ ವಿವರಾ:

೧. ಕಾಳು ತಾಂಡೆ
೧ ಧಾರು ತಾಂಡೆ
೧. ರಾಮು
೧ ಭಗವಾನು

ಈ ನಾಲ್ಕು ತಾಂಡೆಯವರು ಯೀ ಶೀಮೆಯವಳಗೆ ಯಿದ್ದುಕೊಂಡು ವ್ಯಾಪಾರಗಳು ಯಿಲ್ಲದೆ ಕಟ್ಟಿಗೆ ಮಾಡಿಕೊಂಡು ಕಾಲಕ್ಷೇಪ ಮಾಡುತಾ ಯಿದ್ದರು. ಹೆಂಗಸರು ತಿನ್ನುವ ಆಹಾರಗಳ ವಿವರ:

೧ ಅಕ್ಕಿಬಾನಾ
೧ ರಾಗಿಮುದ್ದೆ

೧ ರೊಟ್ಟಿ ಇತ್ಯಾದಿ ದಿನವು[>ದವಸ]

೧ ಕಾಯಿಪಲ್ಯದ ಜಿನಸುಗಳು ಯಾವತ್ತು ತಿನ್ನುತ್ತಾರೆ. ಯೀ ಮೇರಿಗೆ ಸೇವನೆ ಮಾಡಿಕೊಂಡು ಯಿರುತ್ತಾರೆ. ಯಿದೆ ಹೊರತು ಯಿವರು ಬಿಟ್ಟು ಯಿರುವ ಜಿನಶಿನ ವಿವರ:

೧ ಹೆಂಡಾ ಸಾರಾಯಿ

೧ ಮಾವಸಾದಿ ಆಹಾರಗಳು

೧ ಯಲ್ಲೆ ಅಡಿಕೆ

೧ ಹಣಿಗೆ ಕುಂಕುಮವಾಗಲಿ ಗಂಧವಾಗಲಿ ಹಚ್ಚುವದು ಯಿಲ್ಲಾ. ಹಲ್ಲುಪುಡಿ ಹಚ್ಚುವದು ಯಿಲ್ಲಾ.

ಯೀ ಪ್ರಕಾರ ಬಿಟ್ಟು ತಮ್ಮ ತಮ್ಮ ಕುಲದೇವರಗಳು ಮಾಡಬೇಕದರೆ ಹೆಂಗಸರ್‍ರೆ ಮಾಡುತ್ತಾರೆ. ಗಂಡಸರು ಮಾಡುವುದು ಯಿಲ್ಲಾ. ಗಂಡಸರಿಗೆ ಬೇಕಾದ ಮಾವಸಾದಿಗಳು ಹೆಂಗಸರು ಮಾಡಿ ಹಾಕುವರು . . . .

ಗಂಡಸರು ತಿನ್ನುವ ಆಹಾರದ ವಿವರ:

೧ ಅಕ್ಕಿ ಬಾನ್ನಾ

೧ ರಾಗಿ ಮುದ್ದೆ

೧ ರೊಟ್ಟಿ

ಯಿತ್ಯಾದಿ ದಿನವು[>ದವಸ]ಧಾನ್ಯ

೧ ಮಾವಸಾದಿಗಳು ಸದರಿ ಬರದ ಮೇರಿಗೆ

೧ ಹೆಂಡಾ

ಯೀ ಮೇರಿಗೆ ಆಹಾರಗಳು ತೆಗೆದುಕೊಳ್ಳುತ್ತಾರೆ. ತಮ್ಮ ದೇವರ್‍ರು ಮಾಡುವ ದಿವಸದಲ್ಲಿ ಅಡಿಗೆ ಯಾವತ್ತು ಹೆಂಗಸರ್‍ರೆ ಮಾಡುತ್ತಾರೆ. ಮಾವಸಾದಿಗಳು ಸಾರಾಯಿ ಹೆಂಡಾ ಹೊರತು ಅನ್ನ ಕಾಯಿಪಲ್ಯೆ ಮುಂತಾದ್ದು ಮಾಡುತ್ತಾರೆ. ವಿಗ್ರಹಯಿಲ್ಲದೆ ನೈವೇದ್ಯಗಳು ಹೆಂಗಸರು ಮಾಡುತ್ತಾರೆ. ಗಂಡಸರ್‍ರೂ ಮಾಡುತ್ತಾರೆ. ಆ ತರುವಾಯ ಯಾವತ್ತೂ ಜನರು ಕೂಡಿ ವೂಟಾ ಮಾಡುತ್ತಾರೆ.

ಹೆಂಗಸರು[+ಸೀರೆ] ಮುಟ್ಟುವದು [>ಉಡುವುದು] ಯಿಲ್ಲಾ. ಕೊಬುದು ವುಡೋವದು, ಮುಸಕ್ಕಿಗೆ[>ಮುಸುಕಿಗೆ]ಹೊದ್ದುವದು ಬಳೆ ಬಟ್ಟೆ ಆಗಲಿ, ಚಾಟಿ ಬಟ್ಟೆ ಆಗಲಿ ಯಿರುತ್ತಾ ಯಿದೆ. ಸೆರಗು ಯಿಡುವದು ಯಿಲ್ಲಾ. ಗೊಂಡೆಗಳ ಹಾಕುವದು ಯಿವರಲ್ಲಿ ಸಂಪ್ರದಾಯವಿರುವದರಿಂದ ಹಾಕುತಾ ಯಿದ್ದಾರೆ. ಯೀ ಪ್ರಕಾರ ನಮ್ಮ ಸ್ವಜಾತಿ ಧರ್ಮದಲ್ಲಿ ಯಿದ್ದುಕೊಂಡು ವ್ಯಾಪಾರಗಳ ಮಾಡಿಕೊಂಡು ಯಿರುವದಕೆ ಪ್ರಾಕು ನಮ್ಮ ನಮ್ಮ ಹಿರ್‍ರಿಯರ ಹೆಸರಿನಲ್ಲಿ ದೊಡ್ಡ ನವಾಬರು ಬರಕೊಟ್ಟ ಕವುಲು ತಾಂಬ್ರದ ಹಲಿಗೆಯನ್ನು[>ಯು] ನಮ್ಮ ಜಾತಿಯಲ್ಲಿ ಮುಖಂಡ ಭಂಗಿಯಂಬ ನವಳಿಯಲ್ಲು [>ವನ ಬಳಿಯಲ್ಲು] ಹೈದರಾಬಾದ ವಳಗೆ ಅದೆ. ಯೀಚಿಗೆ ಕುಂಪಣಿ ಮುಂತಾದವರು

ಬರಶಿಕೊಟ್ಟ ಸನ್ನದಗಳು ವಿವರ ಯೇನು ಯಂದರೆ : ಯಿವರು ತರುವಂತಾ ಜಿನಶಿಗೆ ಕೆಲವು ಜಿನಶಿಗೆ ಸ್ತಳ ಸುಂಕಾ ತೆಗದುಕೊಳುವ ಹಾಗೂ ಕೆಲವು ಜಿನಶಿಗೆ ತೆಗದುಕೊಳ್ಳದ ಹಾಗೂ ಬರಶಿಕೊಟ್ಟ ಸನ್ನದಗಳು :

೧ ಆರಕೂ[>ಕಾ]ಟ ನವಾಬ ಮಹಾಮದಲ್ಲಿಖಾನನ ಮಗ ವುಮುದತುಲನ್ಸುಮರಾ ಯಿವರು ಬರಶಿಕೊಟ್ಟ ಪಾರಶಿ ಸನದು, ದೊಡ್ಡದಾಗಿ ಶಾಯಿ ಮೊಹರ್‍ರ್‍ರ ದಸ್ತಕ ನಾವು ತಲಖಿಯೆನ್ನು[>ಯೇನು] ಯೆಂದರೆ, "ಬಯಸಿವೆದಗುಣನ್ನೆ ಹಾಯ ನಿರಾವಬಿದಾರಾನಿವ ಜಾಹಗೀರದಾರಾನಿವಪಾಳ ಗಾರಾನೊನಾಗಿ ಹೊರು ಮುಗ್ರಲಿ ಜಾನ್" ಮುಂತಾದವರ ಹೆಸರಿನಲ್ಲಿ ಯಿವರು ತಮ್ಮ ವತ್ತಾರಸಿ ದಿನ ಗೋಣಿಗಳು ಯಿಂಗರೇಜರ ದಂಡಿಗೆ ತೆಗೆದುಕೊಂಡು ಹೋಗುವಲ್ಲಿ, ಆಟಕಾವು ಮಾಡದೆ ಸುಂಕಾ ಮುಂತಾಗಿ ಕೇಳದೆ, ಸಕ್ರಿ ರಾಸು ಬಿಡುವದು" ಯಂದು ಬರಶಿಕೊಟ್ಟ ಸನ್ನದು.

೧ ಕೆಪಟನ್ ಅಲಿಸಾಹೇಬರವರ್‍ರ ಬರಶಿಕೊಟ್ಟ ಹಿ . . . . ದಲಿ ಸನ್ನದು, ಶಾಯಿ ಮೊಹರು ಯಿರ್‍ರುವ ದಸ್ತಕ ನ[>ನಾ]ಮ ತಲಬು ಸದರಿ ಬರದ ಮೇರಿಗೆ ಆಯಿ . . . . ಯು ಹುದ್ದೆ ದೇವರ್‍ರ ತಾಲ್ಲೂಕದಾರರ ಹೆಸರಿನಿಂದ ಬರಶಿಕೊಟ್ಟ ವಿವರ್‍ರ: ಖಿಮೊಜಿ ಹುಜರ್‍ರ, ಹುಕುಂ ಕಲ್ಲಂಲಚಿ ರಾಮಚವುಧರಿ ತಾಲ್ಲುಗೆ ನಂದಾಳಾಯ ಕರಾಟಗಿಡಾ ಬಂಜಾರೆ ೨೦೦೦ ಯರಡುಸಾವಿರ ಗಾಣಿರಾನು ಕುಂಪಣಿ ಸೀಮೆಯಿಂದಾ ರಪದು ಅಕ್ಕಿ ವಗ್ಯೆರೆ ಭುಸಾ ಜಿನಸ ಭರತಿ ಮಾಡಿ ಮಾರ್‍ರುವದಕೆ ಯಿಂಗ್ರಜಿ ಬಾಹದರವರ ದಂಡಿಗೆ ತೆಗೆದುಕೊಂಡು ಬರುವಲ್ಲಿ, ನಿಮ್ಮ ನಿಮ್ಮ ಸರಹದಿನಲ್ಲಿ ಸುಂಕಾ ಮುಂತಾದ ಬಗೆ ಆಟಕಾಯಿಸದೆ, ಸಕ್ರಿ ರಾಸು ಬಿಡುವದು. ಯಿವರ್‍ರ ಯಿರುತಾ ನಾವು ಪಟಿಕಂಬಳೆ ಖಾದಿಯ ಜಿನ್ಸು ಖರೀದಿ ಮಾಡಿಕೊಂಡು ಹೋದರ್‍ರೆ ಸುಂಕಾ ಕೇಳ ಕೆಲಸವಿಲ್ಲಾ. ಮೂರು ವರಹಿತಾರ ಕಡೆಯಿಂದಾ ಸ್ತಾನ ಭರ್ತಿ ಸುಂಕಾ ತೆಗೆದುಕೊಳ್ಳುವದು; ಅಡವಿಯಲ್ಲಿ ಹುಲ್ಲು ಕಟ್ಟಿಗೆ ಭಾವಿ ನೀರು ಆಯುಧಗಳ ಬಗ್ಗೆ ಯಾರ್‍ರ ಆಟ ಕಾಯಿಸ ಕೆಲಸ ವಿಲ್ಲಾಯೆಂದು ಬರಕೊಟ್ಟ ಹಿಂದಲಿ ದಸ್ತಕಾ ಕಾಶಾ ಜನವರಿ ಸಂ। ೧೨೦೮ ಫಸಲಿ ಕಾಳಯುಕ್ತಿ.

೧ ಸದರಿ ಬರದ ಮೇರಿಗೆ ಮೇಜರ ಕಮೆಂಡಿಂಗ ಗವುಡಿಯಂಬ ಸರದಾರನ್ನು ಬರಶಿಕೊಟ್ಟ ತೆಲಗು ಸನ್ನದು ಸಂ। ೧೭೯೩ ಸಂವತ್ಸರದಲ್ಲು, ಕೆಂಪು ಅರಗಿನ ಮೊಹಾರ್‍ರ.

೧ ಸದರಿ ಬರಶಿಕೊಟ್ಟ ಫಾರಶಿ ಸನ್ನದು, ಶಾಯಿ ಮೊಹಾರ್‍ರ ಯಿದೆ, ೧೭೯೧ ಯಿಸವಿ.

೪

ಯೀ ಮೇರಿಗೆ ನಾಲಕು ಸನ್ನದುಗಳು ಅವರ ಬಳಿಯಲ್ಲು ಯಿದೆ. ಯಿದೆ ಶಿವಾಯೀ ಸನ್ನದು ಪತ್ರಗಳು ಯಿನ್ನು ಯಿಲ್ಲಾ. ಯಂಬದಾಗಿ ಹೇಳಿ ಯಿದಾರ್‍ರೆ.

❖❖

೧೨೫
ಬನವಳ್ಳಿ ಬಣಜಿಗರು ಬರಶಿಕೊಟ್ಟ ಕೈಫಿಯತ್ತು

ಮೆಕೆಂಝಿ ಸಂಪುಟ : ೩೩೨

ಪೂರ್ವದಲ್ಲು ಆ ಪೇಟೆ ಆದ ಸ್ತಳದ ವಿವರ: ಪೂರ್ವದಲ್ಲಿ ಕೆಳದಿ ಸಂಸ್ತಾನೀಕರು ವೆಂಕಟಪ್ಪನಾಯಕರು ಕೆಲವು ದಿವ್ಸ ಆಳುಕಾ[>ತಾ]ಯಿದ್ದಲ್ಲಿ, ಆನೆಗೊಂದಿ ಸಂಸ್ತಾನೀಕರ ವಂಶದವರೂ ಸೋದೆ ಸಂಸ್ತಾನಕ್ಕೆ ಸದಾಶಿವರಾಜರೂ ಆಧಿಪತ್ಯರಾಗಿ ಸಂಸ್ಥಾನವ ನೋಡಿ ಆಳುತ್ತಾ ಯಿದ್ದಾಗ್ಯೆ, ೩೦೦ ಮುನ್ನೂರು ವರುಷಕೆ ಮೊದಲು ಸದಾಶಿವರಾಜರ ರಾಜ್ಯಭಾರ ಮಾಡುತ್ತಾ ಯಿದ್ದ ಸಮಯದಲ್ಲು ಯೀ ಬಣಜಿಗರು ವಿಜ್ಯಾಪುರ ಶೀಮೆ ಅವರು ಕೆಲವು ಜನ, ಶ್ರವಣರ ಶೀಮೆ ಅವರು ಕೆಲವು ಜನ, ಆ ದೇಶದಲ್ಲು ಕ್ಷಾಮ ಬಿದ್ದ ಕಾರಣ ಯೀ ಶೀಮೆಗೆ ಬಂದು ಯಾವತ್ತು ಬಂದ ಬಣಜಿಗರು ಶಾಸೆ ಕಂಪಣದಲ್ಲು ಕೆಲವು ಜನ ಗೂಡಾರವನ್ನು ಹಾಕಿಕೊಂಡು ಯಿದ್ದರು. ಕೆಲವು ಜನ ಬನವಸೆ ಸಾಲು ಕೊಂಪಿನಲ್ಲಿ ಬಿಡಾರ ಹಾಕಿಕೊಂಡು ಯಿದ್ದರು. ಅಷ್ಟರೊಳಗೆ ದೇವರಿಗೆ ರಥೋತ್ಸವ ದಿನ ಯಂಬದಾಗಿ ದರುಶನಾ ಮಾಡೊ ಬಗ್ಯೆ ಸೋದೆಯಿಂದಾ ಬನವಶಿಗೆ ಬಾಹೋ ಮಾರ್ಗದಲ್ಲು, ಯೀ ಬಣಜಿಗರೂ ಮಾರ್ಗದಲ್ಲು ಬಿಡಾರ ಹಾಕಿಕೊಂಡು ಯಿದ್ದದು ಕಂಡು, "ಯಿವರು ಯಾವ ದೇಶದವರ್ರೂ?"ಯಂದು ವಿಚಾರಿಸಿದಲ್ಲು ಆಗ ತಂಮ ಕಡೆಯಿಂದಾ ನಾಡಿಗರ್ರು ಅಗ್ರಹಾರದ ಬ್ರಾಹ್ಮರೂ ಸಹಿತವಾಗಿ ಕಳುಹಿ೨[>ಸಿ]ಕೊಟ್ಟು, ಯಿವರ ಪೂರ್ವೊತ್ತರ ಯಾವತ್ತು ಧೊರಿಗೆ ಅರಿಕೆ ಮಾಡಲಾಗಿ, "ಅವರಿಗೆ ಕೌಲು ಕೊಟ್ಟಿದ್ದೇವೆ, ಯೀ ಸ್ತಳದಲ್ಲು ಮನೆ ಕಟ್ಟಿಕೊಂಡು ಯಿರುವದು" ಯಂಬದಾಗಿ ಅಗ್ರಹಾರದ ಯಿ ಸ್ತಳವನ್ನು ಕೊಡಿಸಿದರು. ಪೂರ್ವದಲ್ಲು ಯೀ ಸ್ತಳದಲ್ಲು ಬಣಜಿಗರು ಯಿಲ್ಲ. ಅಂಗಡಿ ಸಹ ವಿಸ್ತಾರವಾಗಿ ಯಿಲ್ಲದೆ ಯಿತ್ತು. ಯೀ ಬಣಜಿಗರು ಬಂದು ಸೇರಿದ ತರೂವಾಯ ಪೇಟೆ ಬಸ್ತಿ ಆಯಿತು. ಯೀ ಪ್ರಕಾರಕ್ಕೆ ಯಿರುವಾಗ್ಯೆ ಯಿಮ್ಮಡಿ ಸದಾಶಿವರಾಯರ ಅಧಿಕಾರ ಯಿಥು ಕೌಲಿನ ಪ್ರಕಾರಕ್ಕೆ ನಡಸುತ್ತಾ ಬಂದರು. ಯಿವರ ಮಗ ಬಸವಲಿಂಗರಾಜರನ್ನು ಯಿದೆ ಪ್ರಕಾರಕ್ಕೆ ನಡಸುತ್ತಾ ಬಂದರು. ಯಿವರ ಕಾಲದಲ್ಲು ಬಹದರ ಕಡೆ ಫರದುಲ್‌ನವಾಬುಯಂಬ ಸರದಾರು ಬಂದು ಯುದ್ಧವನ್ನು ಆಗಿ ಬಹದರ ಅವರ ಠಾಣ್ಯ ಆಯಿತು. ಆವಾಗ ಯಿವರು ಲುಟಾಯಿಸಿದರು. ಯಿಲಿಂದಾ ಬಹದರ ಕಡೆ ದಂಡು ಸೊದೆ ಹೋಗಿ ಸೊದೆ ಕೋಟೆಯನ್ನು ಯುದ್ಧದ ಯಿಂದಾ ತೆಗೆದುಕೊಂಡು, ಆವಾಗ್ಯೆ ಅರಸುಗಳು ಘಟ್ಟದ ಕೆಳಗೆ ಖಾನವಾಡಿಯಂಬ ದೇವಸ್ತಾನದಲ್ಲು ಯಿದ್ದು, ಯೀ ಸ್ತಳ ಯಿವರಿಂದಾ ಫರಂಗೇರು ತೆಗೆದುಕೊಂಡರು. ಆ ಸ್ತಳದಲು ಫರಂಗೇರ ಆಸರಾ ಮಾಡಿಕೊಂಡು ಯಿದ್ದರು. ಕಡಮೆ ಶೀಮೆ ಯಾವತ್ತುನ್ನೂ ಬಹಾದರ ಅವರ ಸ್ವಾಧೀನವಾಯಿತು. ಫರದುಲ್ಲಾಖಾನನು ಯೀ ವೂರಲ್ಯೆ ಯಿಧಾರೆ. ಅರಸಗಳ ಕಡೆ ಅವರು ಕೆಲವು ದಿವ್ಸವನ್ನು ಯುದ್ಧಾ ಮಾಡಿದರು. ಅವರ ಕೈಯಲ್ಲು ಸಾಗಲಿಲಲ್ಲಾ. ಟೀಪುನ ದಿವ್ಸದಲ್ಲು ಆರೊ[>ರೆ]ರ ಪರಾಶರಾಮು ಭಾವು ಕಡೆ ದಂಡು ಬಂದು ಸೋದೆ ಕೋಟೆಯನ್ನು ತೆಗೆದುಕೊಂಡು, ಶೀಮೆ ಕೆಲವು ದಿವ್ಸ ಆಳತ್ತಾ ಯಿದ್ದರು. ತರುವಾಯ ಟೀಪು ಕಡೆ

ಆಯಿತು. ಟೀಪೂನ ದಿವ್ಸದಲ್ಲು ಆರೇರು ಬಂದು ಯೀ ಶೀಮೆ ಯಾವತು ಕೊಳ್ಳೆಬಡದರು. ಕಡಗೆ ಯಥಾ ಪ್ರಕಾರಕ್ಕೆ ಟೀಪು ಅಧಿಕಾರವಾಯಿತು. ಆವಾಗ್ಯೆ ಯೀವೂರಲ್ಲಿ ಅಸಫ್ ಯಿರೊವಾಗ್ಯೆ ಯಲಚಿನಾಯಕಯಂಬವನು ಸುಕ್ಷಿ ಪ್ರಾಂತದಲ್ಲು ಯಿರೊ ಅವನು ಕಳ್ಳನು ವೆ[>ಐ]ನೂರು ಜನ ಕಟ್ಟಿಕೊಂಡು ನಾಕು ಕಡೆ ವೂರಂಗಳು ಕೊಳ್ಳೆಬಡಿಶಿ, ಯೀ ವೂರಿಗೆ ಹಗಲು ಹೊತ್ತು ಬಂದು ವೂರಿಗೆ ಬಂದು ಸೇರಿದನು. ತರುವಾಯ ಟೀಪು ಕಡೆ ದಂಡು ಬಂದು ಯುದ್ಧವನ್ನು ಮಾಡಿ ಆ ಕಳ್ಳರನ್ನ ತಲೆ ಕೊಯಿದು ಯಥಾ ಪ್ರಕಾರಕ್ಕೆ ಠಾಣೆ ಹಾಕಿದರ್ರು. ತರ್ರುವಾಯ ಯಿಂಗರೀಜ ಬಂದು ಶ್ರೀರಂಗಪಟ್ಣ ತ್ತೆಗದುಕೊಂಡು ಯೀ ಶೀಮೆ ಯಾವತ್ತು ಕಟ್ಟಿಕೊಂಬಾ ಸಮಯದಲ್ಲು ದೊಡಾಚೀ ಕಡೆ ಅವರ್ರು ಕೆಲವು ದಿನ ಯಿದ್ದರ್ರು. ತರುವಾಯ ಆರೇರೂ ಬಂದು ಕಟ್ಟಿಕೊಂಡು ಸ್ವಾಧೀನವಾಯಿತು. ವಂದು ಯರಡು ತಿಂಗಳದಲು ಯಿಂಗರೀಜರ ಸ್ವಾಧೀನವಾಯಿತ್ತು.

ಯೀ ವೂರಲ್ಲಿ ತೂಕಾ ಮಾಡುವದು, ಅಳತೆ ಮಾಡುವ ವಿವರ:

ನ[>ಸ]ವರನ ದುಡು ೨೪ಕ್ಕೆ ವಂದು ಕಚ್ಚಾ ಶೇರು. ಆರು ಕಚ್ಚಾ ಸೇರಿಗೆ ವಂದು ಪಂಚೇರು. ಪಂಚೇರು ೨ಕ್ಕೆ ಧಡಿಯಾ. ಧಢಿಯಾ ನಾಲ್ಕಕ್ಕೆ ವಂದು ಮಣ. ಮಣಕ್ಕೆ ೪೮ ಕಚ್ಚಾ ನಾಲ್ವತ್ತೆಂಟು ಶೇರು ಆದರೆ ವಂದು ಮಣಾ, ಮಣ ಯಂಟಕ್ಕೆ ವಂದು ಯತ್ತಿನ ಹೇರು. ನಿಜ ೧ಕ್ಕೆ ೨೨ ಮಣ. ಯಿದು ಕಿರೇಮಣ ಅಂಗಡಿಯಲ್ಲಿ ನಡಿಯೋ ಅಂಥಾದು. ಗ್ರಾಮದಲ್ಲಿ ನಡಿಯೋದು ಅಡಿಕೆ ಪೋಕಳಿ.

೬೦ ಕಚ್ಚಾ ಸೇರಿಗೆ ವಂದು ಮಣ. ಯಿಂಥಾ ಯಿಪ್ಪತ್ತೆರಡು ಮಣಕ್ಕೆ ವಂದು ನಿಜ. ಯಿದು ಖಂಡಿ ಅಂಥಾರೆ.

ಮೆಣಸು ಹಿರೆ ಮೇ[>ಮ]ಣ ೧ಕ್ಕೆ ಕಚ್ಚಾ ಸೇರು ೮೦ ಸೇರು. ಯಾಲಕ್ಕಿ ಮಣ ೧ಕ್ಕೆ ಕಚ್ಚಾಸೇರು ೪೮. ಅಳಿಯೋದು ಕಚ್ಚಾ ೧॥ ಸೇರಿಗೆ ವಂದು ಶಿದ್ದಿ. ಶಿದ್ದಿ ೨ಕೆ ಪಕ್ಕಾ ಸೇರು ೧. ಶಿದ್ದಿ ೮ಕ್ಕೆ ವಂದು ಗಿದ್ದನಾ. ಗಿದ್ದನಾ ೨೦ಕ್ಕೆ ವಂದು ಸಣ್ಣ ಖಂಡಗ. ಖಂಡಗ ೨೦ಕ್ಕೆ ವಂದು ಹಿರೆ ಖಂಡಗ, ಯಿದಕ್ಕೆ ಹೇರು ೧೦. ಹೇರು ೧ಕ್ಕೆ ಹಿರೆದು ಖಂಡು ೧ ॥೨. ಯಿದೆ ಪ್ರಕಾರದಲ್ಲು ನಡಕೆ ಪೇಟೆ ಗ್ರಾಮದಲ್ಲು ಸಹ ನಡಿಯುತ್ತಾ ಯಿಥೆ.

ಯಿ ಸ್ಥಳದ ಶೀಮೆಯಲ್ಲು ಹುಟೊ ಜಿನಸು:

ಅಡಿಕೆ ೧, ಮೆಣಸು ೧, ಯಾಲಕ್ಕಿ ೧, ಭತ್ತ ೧, ರಾಗಿ ೧, ಬೆಲ್ಲ ೧, ಹುಣಸೆಹಣ್ಣು ೧, ಮೆಣಸಿನಕಾಯಿ ೧, ತೆಂಗಿನಕಾಯಿ ೧, ಬಾಳೆ ೧, ಯೆಳ್ಳು ಖುರಾಗಾನಿ ೧, ಅವಂಳ್ಲಧಾ ೧, ಹುರಳಿ ೧, ವುದ್ದು ೧, ಹೆಸರು ೧, ಅರಿಶಿನ ಶೊಂಠಿ.

ಯೀ ಶೀಮೆಯಿಂದಾ ಹೊರಗಿನ ಶೀಮಿಗೆ ಹೋಗುವ ಜಿನಸು: ಅಡಕೆ ಯಾಲಕ್ಕಿ ಮೇಣಸು ವುತ್ತರ ಪೂರ್ವ ಯರಡು ಕಡೆ ಸಾಗುತದ.

ವುತ್ತರ ದೇಶದಿಂದಾ ಬಾಹೊದು :

ಬೈಲ ಶೀಮೆಯಿಂದಾ ಬರೊ ಜಿನಸು: ಜವಳಿ ತಂಬಾಕು ಗೊಧಿ ಕಡಲೆ ಅವರೆ ಸಾಸಿವೆ ಮೆಂತ್ಯ ಯೆಳ್ಳು ಕೊತ್ತುಂಬರಿ ಶುಂಠಿ ಸಕ್ರೆ ಜೀರಿಗೆ ವುಳ್ಳಿಗಡ್ಡೆ ಬೆಳ್ಳೂಳಿ ತೆಂಗು ಸಾಮೆ ನವಣೆ ಜೋಳ. ಪೂರ್ವದಿಂದಾ ಲವಂಗ ಜಾಜಿಕಾಯಿ ಪತ್ರೆ ಜವಳಿ ರೇಶಿಮೆ ಖನಾತು ಅಫಿಮು ಕಾಚು ಮುಂತಾದ್ದು ಬರುತ್ತಾ ಯಿಥೆ.

ಪಶ್ಚಿಮ ಹದಿನ ಬಾಹೊ ಜಾಜಿಕಾಯಿ, ಖರ್ಜೂರ, ಸೆಂಗಾ, ಗಂಧಕಾ, ಹರಿದಾಳ, ಯಿಂಗು ಮತ್ತು ದೀಪದ್ರಾಕ್ಷಿ ಬರುತ್ತಾಯಿದೆ.

❖❖

೧೨೬
ಮಣ್ಣುವಡ್ಡಿ ಜಾತಿ ಕೈಫಿಯತ್ತು

ಮೆಕೆಂಝಿ ಸಂಪುಟ : ೧೭೮

ಮಣ್ಣುವಡ್ಡ ಜಾತಿ ರಿವಾಜು ಕೈಫಿಯತು. ಸೂರ್ ಸನ್ ೧೮೧೫ಯ ವಿಭವ ಸಂವತ್ಸರ ಅನಿತ[>ಅಧಿಕ] ಭಾದ್ರಪದ ಬ ೧೩೮ು ಬನವಶಿ ಶೀಮೆ ವಳಗಣ ಮಣ್ಣುವಡ್ಡಜಾತಿಯವರು, ಗೌಡ ಬುದ್ಧಿವಂತ ಮೊದಲಾದವರು ಸಹ ಯಿವರು ಕೂಡಿಕೊಂಡು ಯಿವರ ಗುರುವಾದ ತಾತಾಚಾರ್ಯರು ಬರಶಿಕೊಟ್ಟ ಕೈಫಿಯತುನಾಮೆ.

ಯೀ ಮಣ್ಣುವಡ್ಡುಜಾತಿಯಲ್ಲಿ ಜನನವಾದರೆ ಹೊಲೆ ಅಯಿದು ದಿನ ತನಕಯಿದ್ದು, ಆಮೇಲೆ ಮನೆ ಸಾರಿಸಿ ಚೆಕ್ಕಟವಾಗಿ ಮಾಡಿ, ಅರುವೆ ಮೊದಲಾದು ವಕ್ಕೊಂಡು, ತೊಟ್ಟಿಲ ವಳಗ ಜನನವಾದ ಕೂಸಿನ ಹಾಕಿಕೊಂಡು, ಕುಲದವರು ಸಹಾ ಕೂಡಿಕೊಂಡು ಊಟ ಮಾಡಬೇಕು, ಕಲಂ.

ಆಮೇಲೆ ತಿಂಗಳಿಗೆ ಹೊಳೆ ಮೆಟ್ಟುವ ಶಾಸ್ತ್ರಕ್ಕೆ ವಂದು ಹಣ್ಣು, ವಂದು ಯಲೆ, ವಂದು ಅಡಿಕೆ ತಕ್ಕೊಂಡು ಹೊಳಿಗೆ ಹೋಗಿ, ಹೊಳೆ ವಳಗೆ ಹಾಕಿ, ಹೊಳೆ ವೂಟಾ ಮಾಡಿ, ಅಲ್ಲಿಂದಾ ಮನೆಗೆ ಬಂದಿರುವದು, ಕಲಂ.

ಮತ್ತು ಯಿವರ ಜಾತಿ ಬೆಡಗು ವಿವರ:

೧ ಯಂಪ್ಪುಲೋರು
೧ ಬುರಸಲೋರು
೧ ಕೊರದಲೋರು
೧ ಬಂತಂಗಲೋರು
೧ ಸಂಲಂಗದೊರು
೧ ಆಲಾಕುಂಬಾರು

ಯಿನ್ನು ನಮಗ ಅನೇಕ ಬೆಡಗುವುಂಟು. ಅದು ನಮಗೆ ಗೊತ್ತು ಯಿಲ್ಲಾ. ಮತ್ತು ಹೆಣ್ಣುಗಂಡು ತರಬೇಕದರೆ ಬೆಡಗು ಬಿನ್ನವಾಗಿರಬೇಕು. ಮತ್ತು ನಮ್ಮ ಜಾತಿಯಲ್ಲು ಪರಕುಲವು ಕೂಡೋದಿಲ್ಲ. ಮತ್ತು ನಮ್ಮ ಜಾತಿಯಲ್ಲಿ ಹೆಣ್ಣಿಗೆ ತೆರ ಗ. ೨. ಯರಡು ವರಹಾ, ವುಡಿಕೆ ಹೆಣ್ಣಿಗೆ ಗ ೧॥ ವಂದುವರಿ ವರಹ, ಯೀ ಪ್ರಕಾರ ನಮ್ಮ ಜಾತಿ ಪದ್ಧತಿ. ನಮ್ಮ ಜೋಯಿಸರಲ್ಲಿ ಹೋಗೋದು ಯಿಲ್ಲಾ. ನೋಡಿಶಿಕೊಮಬೊ ಸಂಪ್ರದಾಯವೂ ಯಿಲ್ಲಾ. ಮತ್ತು ನಮ್ಮ ಜಾತಿಯ ಮದುವೆಯಲ್ಲಿ ವಿಳ್ಯೆದ ಪ್ರಸ್ತಕ್ಕೆ ಗಂಡಿನ ಮನೆಯವರು ಹೋಗದದಂತಿ[>ಹೋಗುವುದಕ್ಕೆ] ರೊಕ್ಕಾ ಕೊಡಬೇಕು. ಆಮೇಲೆ ಕುಲದವರು ಯಲ್ಲಾ ಕೂಡಿ ವೂಟಾ ಮಾಡಬೇಕು. ಶುಕ್ರವಾರದ ದಿನ ವಿಳ್ಯೆ ಕೊಡುವುದು.

ಆಮೇಲೆ ಮದುವೆ ಆದಿತ್ಯವಾರ ಮಾಡಬೇಕು. ಮತ್ತು ನಮ್ಮ ಜಾತಿಯಲ್ಲಿ "ಕುಂಬಳೆ ಬಲದಯ್ಯಗೆ ಬಾಷಿಂಗ ತರಲಿಕ್ಕೆ ಹೋದವ ಬರಲಿಲ್ಲಾ" ಅಂತ ನಮ್ಮ ಜಾತಿಯಲ್ಲಿ ಹೇಳೋ ಸಂಪ್ರದಾಯವಿಲ್ಲ, ಕಲಂ. ಪಾಹೋದು[>ಹೇಳೋದು] ಯಿಲ್ಲಾ.

ಮತ್ತು ಮದುವೆಗೆ ಬಿಳೆ ಶೀರೆ ೧, ಮೂಗುತಿ ೧, ವಾಲೆ ಜೋಡು ೧, ವಂದು ಕರೆಮಣಿ ಸರ, ವಂದು ಕಂಕಣ, ಅರುಶನದು ಅಟ್ಟ [>ಬಟ್ಟ] ವುಡಿ ತುಂಬಿ, ಅಕ್ಕಿ ಶಿದ್ದೆ, ವುತ್ತತ್ತಿ ೪, ಅಡಿಕೆ ೫, ಅಯಿದು ಯಲೆ, ವಿಳ್ಯದೆಲೆ ೫ ಹಾಕಿ ವುಡಿ ತುಂಬಿಸಿ, ಲಗ್ನಾ ಗೋಧೂಳಿಗೆ ಮಾಡಿ, ಮುತ್ತೈದೆರು ಅಯಿದು ಮಂದಿ ಕೂಡಿ ಕೆಸರ್ರಿ[>ಕೇಸರಿ]ಯಿಟ್ಟು, ಶೀರೆ ವುಡಿಸುತ್ತಿನ . . . . ಯಂ ೧ . . . . ರು ಅಯಿದು ಗುಡಿ ನೊಂತು ಕೊಡಬೇಕು. ವೂಟಕ್ಕೆ ಗಂಡಿಗೆ ವಂದು ಧರಣ, ಹೆಣ್ಣಿಗೆ ವಂದು ಜಾಲಿ. ವೂಟದ ಸಂಮ್ಮಂಧ ವಿಳ್ಯೆದ ಯಲೆ ತರಿಶಿ ಕೊಟ್ಟು ಹೆಣ್ಣಿನ ಮನೆಗೆ ಹೋಗಿಸಬೇಕು. ಆಗ್ಯೆ ಮುಂಡಾಸ ೧ ವಂದು, ಶಲ್ಯ ೧ ತರಿಶಿ ಕೊಡಬೇಕು, ಕಲಂ. ಮತ್ತು ವುಡಿಕೆಗೆ ಯೀ ಲಗ್ನದಂತೆ ಸರಿವಸತೆ ಯಿಲ್ಲಾ, ಕಲಂ.

ಯಿದರ ಹೊರ್ತು ನಮ್ಮ ಕುಲದಲು ತಪ್ಪು ವಪ್ಪು ಯೇನಾದರೂ ಬಂದಲ್ಲಿ ಅವನ ಸಾಮರ್ಥ್ಯ ಯಿದ್ದಷ್ಟು ತಕ್ಕೊಂಡು, ಗುರುಗಳಿಗೆ ಅರ್ಧಕೊಟ್ಟು ವುಳದುದು ತಮ್ಮ ಕುಲದವರೆಲ್ಲ ಕೂಡಿ ಊಟ ಮಾಡಬೇಕು, ಕಲಂ.

ಸದರಹೀ ಬರದ ಯೀ ಜಾತಿ ಮಣ್ಣುವಡ್ಡರು ಕಸುಬು : ಗೋಡೆ ಹಾಕೋದು, ಮಣ್ಣು ತರೋದು, ಹೆಂಗಸರು ಗಂಡಸರು ಸಹಾ ಕೂಡಿ ಗೋಡೆ ಹಾಕೋದು, ಕಟ್ಟೆ[+ಗೆ] ಹೊರೆಗಳ ತರೋದು, ಯಿವರು ಮಣ್ಣು ತರೋದು, ಭಾವಿ ಗುಂಟೆ ಕೆರೆ ಕಾಲುವೇ ಮೊದಲಾದು ಅಗೋ[>ಅಗೆ]ವರು ಆದ್ದರಿಂದಾ ಯಿವರಿಗೆ ಮಣ್ಣುವಡ್ಡು ಜಾತಿಯಂತಾ ಹೆಸರು.

❖❖

೧೨೭
ಮರಾಠೆ ವಾಂಡ್ಲೆ ಕೈಫಿಯತ್ತು

ಮೆಕೆಂಝಿ ಸಂಪುಟ : ೧೭೪

ಶ್ರೀಮನ್ನಾರಾಯಣ ನಾಭಿಕಮಲೋದ್ಭವೋ ಬ್ರಹ್ಮಣಃ ಬ್ರಹ್ಮಣಃ ಬ್ರಹ್ಮಣಃ ಪುತ್ರಃ ಮರೀಚಿಃ ಮರೀಚಿಃ ಕಶ್ಯಪಃ ಕಶ್ಯಪಾಃ ತ್ಸೂರ್ಯ ಸೂರ್ಯಾತ್ ಕ್ಷಾತ್ರಧರ್ಮ ಪ್ರವರ್ತಮಾವಯಿವಸ್ವತ ಮನುರಯಮೆವ ಸಪ್ತಮಃ। ತಸ್ಯದಾಯಾದಾಃ ಅನೇಕ ಶಃ। ಜಾತಾಃ ತತ್ ಗ್ರಂಥ ಬಾ ಹೊಲ್ಲೆಭಯಾತೆ ಹಾಂ ಚಾರಿತ್ರಾಣಿನ ಲಿಖಿತಂ॥ ತೆತು ಷಟ್ಪಂಚಾಶತ್ ದೇಶ ಪ್ರತಿಪಾಲಕಾಃ। ತೇಹಂ ಪುತ್ರಾಃ ಅನೇಕಶಃ ಯೇವಂ ಪ್ರವರ್ತಮಾನೇನ ಸಪ್ತವಿಂಶತಿ ಮಹಾಯಾಗಾಃ ಗಾತಾಃ। ಅಷ್ಟಾವಿಂಶತಿ ಮೆ ಮಹಾಯುಗೆ ಕೃತತ್ರೆತ ದ್ವಾಪರಾಃ ಗತಾಃ ಪ್ರವತ್ರಮಾನೆವಾ ಯಿದಿಷ್ಟಿರೆ ಶಕೆ ಕಲಿಯುಗಾದಿ ಪ್ರಮಾದೀಚ ಸಂವತ್ಸರದಾರಭ್ಯ। ಪರೀಕ್ಷಿತರಾಜ್ಯ ಪ್ರತಿಪಾಲಕಃ। ತಸ್ಸೆವಂಶಜಾಃ॥೧೧೧೫॥ ಅಸ್ಯ ಪ್ರಮಾಣಂ। ಆರಭ್ಯ ಭವತಾ ಜನ್ಮ ಯಾವನ್ನಂದಾಭಿಷೆಚನಂ। ಯೇತ ದರುಷ ಸವ ಸಂತು ಶತಂ ಪಂಚೋತ್ತರು ದಶಾ॥ಯೇವಂ ಪ್ರಮಾಣೇನ॥ ತತ್ಪರಂ ಅಯಂ ನಂದ್ವಃ। ಮಃ ನಂದ್ದಿನಃ। ಸಕಾಶಾತ್ ಶೂದ್ರೀದರ್ಭಾತ್ಸಮುಚ್ಚವಃ ಅಸ್ಯ ಭಾಗವತಿ ದ್ವಾದಶೆನ್ಮಂದೆ, ಪ್ರಥಮೊದ್ಯಾಯ ಲಿಖಿತಾನಿ ಪದ್ಯಾನಿ ॥ ಮಹಾನಂದಿ ಸುತೊರಾಜಿನ್‌ಶ್ಯೂದ್ರಿ ಗರ್ಭೋದ್ಭವೊ ಬಲೀ ಮಹೋ ಪಾತ ಪತಿಃ ಕಶ್ಚಿನ ನಂದ್ದಃ ಕ್ಷಾತ್ರ ವಿನಾಶಕೃತ್। ತತೋ ನೃಪಾಬ್ಯಾಷ್ಯಂತಿ ಶೂದ್ರಪ್ರಾಯಾಹುಧಾರ್ಮಿಕಾಃ । ಸಯೇಕಚ್ಛತ್ರ ಪೃಥ್ವಿಂ ಮನುಲಂಪೊತ ಶಾಸನಃ। ಶಾಶಿಷ್ಯತಿ ಮಹಾ ಪಾತ್ಕೊ ದ್ವಿತೀಯ ಯಿವ ಭಾಸ್ಕರಃ ಇತಿ। ಅನೇನ ಪ್ರಮಾಣಿನ ರಾಜಕರ್ತಾ ಅಯಂ ಅಭೂತ್ ಆಯಮೇವನಂದಃ। ಸಮಸ್ತ ಕ್ಷುತ್ರಕುಲಮುತ್ಸಾದಕಃ। ನಂದಾಂತಂ ಕ್ಷತ್ರಿಯಕುಲಮಿತಿ। ದೌರಾಣಿಕ್‌ರಾಥಾ। ತದಾ ಕ್ಷತ್ರಿಯಾ ಸರ್ವ್ವೆಸ್ವಧರ್ಮಂವಿಹಾಯ ಧರ್ಮಾಂತರು ಪ್ರಾಪ್ತವಂತಃ॥ ವರ್ಣಾಂತರಮಪಿಚ॥ ಸಂಪ್ರಾಪ್ತ್ಯ। ತತ್ತದೇಶೀಯ್ಯ ಶುಃದ್ರ ತ್ರಾಯಾಃ ಸಂತಃ। ತನ್ಮದ್ಯೆ ಮಿಳಿತಾಃ। ಅಭೋವನ್ ಮಹಾರಾಷ್ಟ್ರದೇಶಯೆ ಸ್ಥಿತಾಃ। ತೆ ಪಿ ತದ್ವದೇವ। ಚೆದವಿತೆಹಂತು ಪೂರ್ವ ಸ್ವಕುಲ ಅಭಿಧಾವರ್ತಂತೆ। ತಾಃ। ಅಗ್ರಲೇಖ ಯಿಹ್ಯಮಃ। ಯೆತೇಹಂ ವಿವಾಹಾದಿ ಕೃತ್ಸೆ ಗೋತ್ರ ಪ್ರವರ ನಿರ್ಣಯಸ್ತು ಪ್ರವರ ಖಡೆಯತ್ಸೂಚಿತಂ। ತದತ್ರ ಸೂಚಯಿಹ್ಯ ಮಃ॥ ಪರೊಪಾತ ಪ್ರವರೊ ರಾಜ್ಞಾಮಿತಿ। ಅಧಯದಿ ಸಾರ್ಷ್ಟಂಪ್ರವೃಣೀರನ್ ಮಾನ ವೈಲಪಾರೂಡವಶೀತಿ।

ಯೀ ಪ್ರಕಾರದಲ್ಲಿ ನಿರ್ಣೀತರಾದಂತಾ ಮರಾಠೆಯವರು ತಮ್ಮ ತಮ್ಮಲ್ಲಿ ಪ್ರವರ್ತಕ ಮಾಡೊಂವಥಾದ್ದಕ್ಕೆ ವಿವರ : ಕುಳವಾಡಿ ಜಾತಿ ೧, ನಿಜಾಮಪಾಯಿ ಜಾತಿ ೧.

ಯೀ ಸಂತತಿ ಜಾತಿಯವರಿಗೆ ಆರೇರುಯಂತ ಕರ್ಣಾಟಕದೇಶದಲ್ಲಿ ಹೇಳುತ್ತಾರೆ. ಮಹಾರಾಷ್ಟ್ರದೇಶದಲ್ಲಿ ಮರಾಠೆರುಯಂತ ಹೇಳುತ್ತಾರೆ. ಯೀ ಯೀ ಜಾತಿಗಳು ಆ ಸಂಕೇತದಲ್ಲಿ ತಮ್ಮ ತಮ್ಮ ವುಪನಾಮಗಳು ನೋಡಿಕೊಂಡು ಹೆಣ್ಣು ಗಂಡು ಕೊಟ್ಟು ಪ್ರವರ್ತಕ ಮಾಡುತಿದ್ದಾರೆ. ಯಿವರ ವುಪನಾಮಗಳ ಹೆಸರು:

ಸಿಂದೇ	ಸಾಲಖಿ, ಷಡವಳ, ರಾಠೋಡ, ರಾ[>ಗಾ]ಯಕಬಾಡ, ಹೊಳೆಮೊರೆ, ಮೂವಳೆ, ಮಹಾಗಹಾಳ,
ಸಿಂಧು	ಸೂರ್ಯವಂಶಿ ಎಂದು.

೧ ದ್ರೆವಲೆ, ೧ ದ್ರೌಡಿಯೆ, ೧ ಬಾಗುಳೆ, ೧ ಚವಾಣ, ೧ ಚಾವಡಿಯ್ಯ, ೧ ರಣ ಶಿಂಧಳ.

೧ ಗರುಡ, ೧ ಸೂಲ್ಸೆ, ೧ ಸಾವಂತ್ತ, ೧ ರವಿ, ೧ ಘೊಳೆ, ೧ ಕಾಶಿ, ಬಿರಾರಿ(ಣಿ), ೧ ಚೊಡೊರೆ, ೧ ವಿಷಯವೊಡೆ, ೧ ದೇಔಈರೆ, ೧ ಗೌಳಿ, ೧ ಗವಾಯಿ, ವಾಗೆಚೊನುಕೆ, ೧ ಜಗಥಾಪ, ೧ ಗಾಣಿಗೆರ, ೧ ಮುರಕಟಿ, ೧ ಮೊರೇ, ೧ ಮಂಡವಾಡ, ೧ ಚಿತ್ತಾದೊರಿಚಿ, ೧ ಘೊರಪಡೆ, ೧ ಘೊಡಖಂಡ, ೧ ಟುಕೆ, ೧ ಡೊಗೆ, ೧ ಮಾಳ, ೧ ಮವಾಡ, ೧ ಮೆವಾಂಕ, ೧ ಸೂರ್ಯವಂಶಜಟಾ, ೧ ಕುಮಾರ್, ೧ ಧೊನಳೆ, ೧ ರಣದೀವು, ೧ ದೇವೇರ್, ೧ ಕಾಂಕವೆ, ೧ ಚಾಂದಕೆ, ೧ ಪೊವಾರ, ೧ ಜಾಧವ್, ೧ ಯಾವಾಣಿ, ೧ ಚೊರೇತೆ, ೧ ಶೆಲಾಕಿ, ೧ ಶಂಖಪಾಳೆ, ೧ ಕ್ಷತ್ರೀಮಗರ, ೧ ಬಾಳಾ, ಹ್ಯಾರಣಿ, ಮಾಳಧರ, ೧ ಬ್ರಹ್ಮಾಚಾ, ೧ ಝಾಟಿ, ೧ ಗೌಡ, ೧ ಮಾಳಿವಾ, ೧ ಗಾಂಧಾ.

ಯಿವರು ಯಿರುವ ಸ್ಥಳ:

೧ ಮಾಳವಾಡ, ೧ ಗಾಂಧಾರ, ೧ ದ್ರಾವಡಾ, ೧ ಕಳಿಂಗ, ೧ ಕಾಂಬೋಜ, ೧ ಕುಂತಳಖಂಡ, ೧ ಹಿಮಾಚಲ, ೧ ಪಾಕಾರಿಚ, ೧ ಅಂಗ, ೧ ವಂಗ, ೧ ಕ್ರಿಷ್ಣಾ, ೧ ಭೋಟ, ೧ ಮಾಳವಿ, ೧ ಮಲೆಬಾರ, ೧ ಮಹಾರಾಷ್ಟ್ರ, ೧ ತೆಲಂಗ, ೧ ಗೌಡ, ೧ ಗಂಗಾತಟ, ೧ ಕರ್ನಾಟಕ.

ಸದರಹಾ ಬರದ ಮರಾಠರು ಹೇಳಿಕೊಳ್ಳುವದು ಯೇನೆಂರೆ, ಸೂರ್ಯವಂಶದವರು ಯಂತ ಹೇಳುತ್ತಾರೆ.

ಯಿವರ ಜಾತಿಗಳಲ್ಲಿ ನಡಕೊಳ್ಳುವ ದೇವರುಗಳ ಹೆಸರು :

೧ ಖಂಡೆರಾಯ

೧ ಮೈಲಾರಲಿಂಗ

೧ ಕೇದಾರಲಿಂಗ

೧ ಯಲ್ಲಮ್ಮ

೧ ತುಳಜಾಭವಾನಿ

೧ ಪರಶುರಾಮಾ

೧ ಕಾಳಿ

೧ ಸೋಮಲಿಂಗ

೧ ವಿಠೋಬಾ

ಯೀ ಯಾವತ್ತು ದೇವರುಗಳಲ್ಲಿ ನಡೆದುಕೊಳ್ಳುತ್ತಾರೆ.

ಯಿವರಲ್ಲಿ ಯರಡು ಭೇದ ಯೇನೆಂದರೆ, ಮೇಲುಸಾಲೆ ಕಳು[>ಕೆಳ]ಸಾಲೆರು ಅಂತ ಯರಡು ವಿಧ. ಮೇಲು ಸಾಲೇರಿಗೆ ನಿಜಾಮುಷಾಯಿ ಯಂತ ಹೆಸರು. ಕೆಳಸಾನೇ[>ಲೇ]ರಿಗೆ ಕುಳವಾಡೆ ಆರೇರು ಯಂತ ಹೆಸರು. ಯಿವರಲ್ಲಿ ಕೆಲವರು ಗೋಸಾಯಿಗಳು ಜೋಗೇಡು[>ರು] ಆಗುತ್ತಾರೆ.

ಯಿದರ ಹೊರ್ತು ಯೀ ನಿಷಾ[>ಜಾ]ಮುಷಾಯಿ ಆರೇರು ಕೀಳುಸಾಲೆ ಕುಳವಾಡೆ ಆರೇರ ಸಂಗಡ ಬಳಿಕಿಗಳು ಯಿಲ್ಲ. ಯೀ ನಿಜಾಮುಷಾಯಿ ಕುಳುವಾಡೆರು ವಬ್ಬರಿಗೊಬ್ಬರು ವೂಟಾ ಮಾಡೊದೆ ಹೊರ್ತು ಹೊಂದುವ ಗಂಡು ಕುಡೋದು ಯಿಲ್ಲಾ. ಯೀ ಪಶ್ಚಿಮದೇಶದಲ್ಲಿ ಕೊಡೊದು ಯಿಲ್ಲಾ. ಉಳಿದ ಕೆಲವು ದೇಶಗಳಲ್ಲಿ ಆಗುತ್ತದೆ.

❖❖

೧೨೮
ಮೇದಾರ ಕೈಫಿಯತ್ತು

ಮೆಕೆಂಝಿ ಸಂಪುಟ : ೩೬೯

ಭಾವ ಸಂವತ್ಸರದ ನಿಜ ಭಾದ್ರಪದ ಶುದ್ಧ ೨ಲ್ಲು ಸೋಂದಾ ಶೀಮೆ ವಳಗಣ ಮೇದಾರ ಜಾತಿ ಗೌಡ ವೀರಬಸ್ಯಾಲಿಂಗ ಮೊದಲಾದವರು ಬರಶಿಕೊಟ್ಟ ಜಾತಿ ರಿವಾಜ ಕೈಫಿಯತು:

ನಮ್ಮ ಜಾತಿಯಲ್ಲಿ ಹಡೆದರೆ ಹೊಲೆ ಅಯಿದು ದಿನಕ್ಕೆ ಹೋಗುತ್ತದೆ. ಆಮೇಲೆ ಶುದ್ಧವಾಗಿ ಅರಿಬಿ ಹಚ್ಚಡ ಮೊದಲಾದ್ದು ವೊಗದಕ್ಕೊಂಡು, ಮನೆ ಸಾರಿಸಿ, ಕೂಸಿನ ತೊಟ್ಟಿಲು ವೊಳಗೆ ಹಾಕಿ, ಕುಲದವರು ಯಲ್ಲಾ ಕೂಡಿ ವೂಟಾ ಮಾಡಬೇಕು, ಕಲಂ.

ಆಮೇಲೆ ಯಿಪ್ಪತ್ತು ದಿನಕ್ಕೆ ಹೊಳೆ ಮೆಟ್ಟುವದು. ಹ್ಯಾಗೆಂದರೆ, ಹಳೆ ಕಡಲೆ, ಬಾಳೆಹಣ್ಣು, ಯಲೆ ಅಡಿಕೆ, ತಕ್ಕೊಂಡು ಮುತ್ತೈದೇರು ಸಹಾ ಹೋಗಿ ಪೂಜೆಮಾಡಿ, ಕೊಡಾ ತುಂಬಿಕೊಂಡು ಬರಬೇಕು, ಕಲಂ.

ನಮ್ಮ ಜಾತಿ ಬೆಡಗು ವಿವರ

೧ ಯೆಳಸರು	೧ ಕರಣಾಟಕರು
೧ ಹುಲಿವಾಳದವರು	೧ ಗೊದ ಕುಲದವರು
	೪ ಅಂತು ಬೆಡಗು ನಾಲ್ಕು

ಯೀ ನಾಲ್ಕು ಬೆಡಗು ಭಿನ್ನದಲ್ಲಿ ಲಗ್ನಾ ಮಾಡಿಕೊಳ್ಳಬೇಕು. ನಮ್ಮ ಕುಲದಲ್ಲಿ ಬದಲು ಕುಲ ಕೊಡುವದಿಲ್ಲಾ, ಕಲಂ.

ಮತ್ತು ನಮ್ಮಲ್ಲಿ ಮದುವಿಗೆ ಹೆಣ್ಣಿಗೆ ತೆರ ಗ ೨॥. ವುಡಿಕೆಗೆ ಹೆಣ್ಣಿಗೆ ಗ॥೧. ಜೋಯಿಸರ ಮನೇಗೆ ಹೋಗಿ ಲಗ್ನಾ ಕಟ್ಟಿಶಿಕೊಡಬೇಕಾದರೆ ಅಕ್ಕಿವೊಂದು ಶಿದ್ದೆ, ತೊಂಡೆಕಾಯಿ ೫ ಯಿವು ತಕ್ಕೊಂಡು ಹೋಗಿ ಲಗ್ನಾ ಕಟ್ಟಿಕೊಂಡು ಬರಬೇಕು, ಕಲಂ.

ಆಮೇಲೆ ಮೂರನೆ ದಿನಕ್ಕೆ ಲಗ್ನಾ ಮಾಡಬೇಕು. ವುಡಿ ತುಂಬುವ ಸಂ॥ ಬಿಳೆ ಸೀರೆ ಕುಬುಸವೊಂದು, ಕಡಗದ ಜೋಡವೊಂದು, ವೊಂದು ಹೊಸಾ ಚಾಪೆ ಹಾಸಿ, ಕನ್ನಡಿ ಯಿಟ್ಟು ಪೂಜೆ ಮಾಡಿ, ವುಡಿ ತುಂಬಿ ವಿಳ್ಯೆ ಹಂಚಬೇಕು. ದೇವರು, ಗುರುಗಳು, ಗೌಡ ಬುದ್ಧಿವಂತರು ಕುಲದವರು ಮುಂತಾದವರಿಗೆ ವಿಳ್ಯೆ ಹಂಚಿ ಕೊಡಬೇಕು, ಕಲಂ.

ಚಪ್ರಕ್ಕೆ ಭತ್ತ ಖ ೧೨, ಕುಂಭ ೫.

ಲಗ್ನಾ ಮಾಡೊದು : ಸೋದರಮಾವ ಧಾರೆಯರೆಯಬೇಕು. ಮಂಗಳಸೂತ್ರ ಬಾಸಿಂಗ ಮುಂತಾದ್ದು ಸಹಾ ತಂದು ಕುಲದವರು ಕೂಡಿ ಧಾರೆಯರೆಯಬೇಕು. ಮತ್ತು ಜೋಯಿಸರಿಗೆ ಕೊಡೊದು ಗಂಡಿನೋರು ಹತ್ತಣೆ, ಹೆಣ್ಣಿನೋರು ಹತ್ತಣೆ. ಪೊವಟ್ಟು ಕುಲದೇವರಿಗೆ ಮೂರು ಟೆಂಕೆ ಕೊಡಬೇಕು. ಆಮೇಲೆ ನಾಲ್ಕನೆ ದಿವಸಕ್ಕೆ ನಾಗೊಲೆ ಶಾಸ್ತ್ರಾಮಾಡಿ, ಕುಲದವರು ಎಲ್ಲಾ ಕೂಡಿ ವೂಟಾ ಮಾಡಿ, ಗಂಡಿನ ಮನೆಗೆ ಕರಕೊಂಡು ಹೋಗಿ, ಮನೆ ತುಂಬಿಶಿ ವೀಳ್ಯೆ ತಕ್ಕೊಂಡು ಬರಬೇಕು, ಕಲಂ.

ಸೀರೆ ವುಡುಸೋದು, ತವರ ಮನೆ ಬದುಕು ಅವರಿಗೆ ಯಿಲ್ಲಾ.

❖❖

೧೨೯
ಮೇಲುಸಾಖರೆ ಜಾತಿ ರಿವಾಜು ಕೈಫಿಯತ್ತು

ಮೆಕೆಂಝಿ ಸಂಪುಟ: ೩೬೯

ಭಾವ ಸಂವತ್ಸರದ ನಿಜ ಭಾದ್ರಪದ ಶು ೧೦ಲ್ಲು ಬನವಾಸಿ ಸೋದೆ ಶೀಮೆ ವಳಗಣ ಮೇಲುಸಾಖರೆ ಜಾತಿಯವರು ಗವುಡ, ಬುಳ್ಳಂಹೊರ ಮದುಲಿಂಗಣ್ಣ, ವುಪ್ಪಾರ ಮಧುಲಿಂಗ, ಮರಿಯ ಕರೆಮಲ್ಲ, ಗುತ್ಯಾ ಹಚ್ಚನಾಯಕ, ಸೊರಬದ ಯಲ್ಲ ಮುಂತಾದ ಕುಲಸಮಸ್ತರು ಬರಶಿಕೊಟ್ಟ ಜಾತಿ ರಿವಾಜು ಕೈಫಿಯತು:

೧. ನಮ್ಮ ಜಾತಿಯಲ್ಲು ಜನನವಾದರೆ ಹೊಲೆ ಹತ್ತು ದಿವಸ ಯಿರಬೇಕು. ಆಮೇಲೆ ಹನ್ನೆರಡನೆ ದಿವಸ ಮನೆ ಸಾರಿಸಿಕೊಂಡು, ಅರುವೆ ಹಚ್ಚಡಾ ಯಾವತ್ತು ವಕ್ಕೊಂಡು, ಕುಲಮರ್ಯಾದಿ ಪ್ರಕಾರಕ್ಕೆ ಶುದ್ಧವಾಗುತ್ತೇವೆ, ಕಲಂ.

೨. ಆಮೇಲೆ ಯಿಪ್ಪತ್ತನೆ ದಿವಸಕ್ಕೆ ಹೊಳೆ ಮೆಟ್ಟುವದು, ಹ್ಯಾಗೆಂದರೆ : ಕಾಯಿ ಹಣ್ಣು ವಿಳ್ಯೆ ತಕ್ಕೊಂಡು ಹೋಗಿ ಹೊಳೆ ಪೂಜೆಮಾಡಿ, ಕೊಡಾ ತುಂಬಿಕೊಂಡು ಬರಬೇಕು, ಕಲಂ.

೩. ನಮ್ಮ ಜಾತಿ ಬೆಡಗು ವಿವರ: ೧. ಶಲ್ಯಲೋರು, ೧ ಹಲುನ್ಯೋರು, ೧ ತುರುಬೊನಾರು, ೧ ರಾಯದುರ್ಗದೋರು, ೧ ಜಡ್ಯನೋರು, ಜುಮಲಾ, ೫. ಯಿನ್ನು ಬೆಡಗು ವುಂಡು, ನಮ್ಮ ಜಾತಿಯಲ್ಲು. ಆದರೆ ನಮಗೆ ಗೊತ್ತುಯಿಲ್ಲಾ.

೪. ಮತ್ತು ನಮ್ಮ ಜಾತಿಯಲ್ಲು ಹೆಣ್ಣು ಗಂಡು ತರೋದು ಬೆಡಗು ಭಿನ್ನವಾಗಿ ತರಬೇಕು, ಕಲಂ.

೫. ಮತ್ತು ನಮ್ಮ ಮೇಲು ಸಖ್ರೆ ಜಾತಿಯಲ್ಲು ಆಗುವ ರೀತಿ ರಿವಾಜು: ಹೆಣ್ಣು ತಂದರೆ ಲಗ್ನದ ಬಗ್ಯೆ ತೆರಾ ಯಂಟು ವರಹಾ ಕೊಡಬೇಕು.

೬. ಲಗ್ನಾ ಮಾಡುವಲ್ಲಿ ಮುತ್ತೈದೇರು ಗಂಡಿನ ಮನೆಯಲ್ಲಿ ಅಯಿದು ಜನ, ಹೆಣ್ಣಿನ ಮನೆಯಲ್ಲಿ ಅಯಿದು ಜನಾ, ವುಭಯ ಹತ್ತು ಮಂದೀನ ಯಿಟ್ಟುಕೊಂಡು ಲಗ್ನಾಮಾಡಬೇಕು. ಆಮೇಲೆ ತಿಳಿ[>ತಳಿ] ಹಿಡಿದು ಮೆರವಣಿಗೆ ಮಾಡೋದು ವುಂಟು. ಯಿದರ ಶಿವಾಯಿ ಕಳಶ ಕನ್ನಡಿ ಬಟ್ಟಲು ಗಂಡಿನ ಮನೆಯಲ್ಲಿ ೧, ಹೆಣ್ಣಿನ ಮನೇಯಲ್ಲಿ ವೊಂದು, ಕಲಂ.

೧ ಹಾಲಗಂಬದ ಮುತ್ತೈದೇರು:

೧ ಗಂಡಿನ ಮನೆಯಲ್ಲಿ

೧ ಹೆಣ್ಣಿನ ಮನೆಯಲ್ಲಿ

೨

೭. ಧಾರೆ ಆದ ಬಳಿಕ ವಿಳ್ಯೆ ತಿದ್ದೊ ಬಗ್ಗೆ ಮುತ್ತೈದೆ ೧, ಯಿದರ ಹೊರ್ತು ಗುರುಗದ್ದಿಗೆ ಯಿಡತಕ್ಕದ್ದು. ಕಾಯಿ ಯರಡು, ಹಣ್ಣು ಅಯಿದು, ಯಲೆ ೪, ಅಡಿಕೆ ೧, ಕಾಲು ಟೆಂಕಿ ರೊಕ್ಕ ತೆಗದು ಯಿಟ್ಟ ಬಳಿಕ, ದೇವರಿಗೆ ಗುರುಗಳಿಗೆ ವಿಳ್ಯಾ ತೆಗದು ಯಿಟ್ಟು, ಆ ಬಳಿಕಾ ಸಮಸ್ತರಿಗೂ ವಿಳ್ಯೆ ಸಲುತ್ತದೆ.

೮. ಸದರ ಯೀ ಲಗ್ನಾ ಮಾಡಿಸುವ ಬಗ್ಯೆ ಧಾರೆ ಜೋಯಿಸರಲ್ಲಿ ಲಗ್ನಾ ಕಟ್ಟಿಸಬೇಕು. ಆ ಬಳಿಕ ಲಗ್ನದ ದಿವಸ ಧಾರೆ. ರಾಮಜೋಯಿಸರ ಸಮತು ಬ್ರಾಹ್ಮರನ ಸಹಾ ಕರಕೊಂಡು ಬಂದು ಲಗ್ನಾ ಮಾಡಿಸಬೇಕು.

೯. ಟೆಂಕೆ ೩ ಧಾರೆ ಬಗ್ಯೆ. ಜೊಯಿಸರಿಗೆ ಕೊಡೊ ಟೆಂಕೆ ೧॥, ಹೆಣ್ಣಿನ ಮನೆಯಲ್ಲಿ ಟೆಂಕೆ ೧।, ಗಂಡಿನ ಮನೆಯಿಂದಾ ಲಾ ೧॥. ಅಕ್ಕಿ ವುಭಯತರಿಂದಾ.

೨ ಕಾಯಿ : ೧ ಹೆಣ್ಣಿನ ಮನೇದು, ೧ ಗಂಡಿನ ಮನೇದು ನೈವೇದ್ದಯಾದ್ದು.

೧೦. ಬಾಳೆಹಣ್ಣು ೦। ವಿಳ್ಯೆ ಅಡಿಕೆ ಸಹಾ ೧ ಟೆ, ೮೬ ಗಣೇಶ್ವರ ಪೂಜೆ ಬಗ್ಯೆ. ೮೬ ಗಿಂಡಿ ಪೂಜೆ ಬಗ್ಯೆ. ಟೆ ೧ ಚರಕ ಪೂಜೆ ಬಗ್ಯೆ. ೮೬ ಪಾದಪೂಜೆ ಬಗ್ಯೆ. ೮೬ ಮಂಗಳಸೂತ್ರ ಕಟ್ಟುವ ಬಗ್ಗೆ. ಜುಮಲಾ ೩॥೨ ಟೆಂಕ.

ಯಿದರ ಶಿವಾಯೆ ದೇವರ ದಕ್ಷಿಣೆ ೮೩ ಮಧುಕೇಶ್ವರ ದೇವರಿಗೆ, ೮೩ ಅಮ್ಮಾನವರಿಗೆ, ೮೩ ಗಣಪತಿಗೆ ೮೩ ನರಸಿಂಹದೇವರಿಗೆ, ಟಂ। ಬ್ರಾಹ್ಮಣ ದಕ್ಷಿಣೆ ಬಗ್ಯೆ.

ಯಿರುಳುಗೆಟ್ಟರೆ, ಸದರಹಿ ಅನುಜಾತಿಯಲ್ಲಿ ವುಂಡರೆ, ಯಾವ ಪ್ರಕಾರ ಶಿಕ್ಷೆಯೊ ನಮ್ಮ ಜಾತಿಯಲ್ಲಿ ಆ ಪ್ರಕಾರ ಶಿಕ್ಷೆ ಆಗಬೇಕು.

೧೧. ಯಿದರ ಶಿವಾಯ ಪರಜಾತಿಯಲ್ಲಿ ಅನುಗೆಟ್ಟು ವುಂಡು ತಿಂದು ಮಾಡಿದರೆ, ಹಜಾಮನ ಕರಶಿ ತಲೆ ಬೋಳಿಸಬೇಕು. ಉಗುರು ತೆಗದು, ನಾಲಿಗೆ ಹಾರಿಸಿ, ಗುಡಸಲು ಕಟ್ಟಿ ಅದರೊಳಗೆ ಹೊಗಿಶಿ ಬೆಂಕಿ ಹಚ್ಚಿದ ಬಳಿಕಾ, ಅವ ಹೊಳೆ ವಳಗೆ ಹೋಗಿ ಬೀಳಬೇಕು. ಆಮೇಲೆ ದೇವರ ತೀರ್ಥ ವೊಯಿದು ಹಾಕಬೇಕು, ಕಲಂ.

ಆಮೇಲೆ ಕುಲಸ್ಥರ ಜನಕ್ಕೆ ಯಾವತ್ತು ನಮಸ್ಕಾರ ಮಾಡಬೇಕು. ಆಮೇಲೆ ಕುಲದವರಿಗೆ ಯಾವತ್ತು ವುಟಾ ವುಣಸಬೇಕು, ಕಲಂ.

೧೨. ಮತ್ತು ಕುಲದಲ್ಲಿ ತಪ್ಪು ಒಪ್ಪು ಬಂದಲ್ಲಿ ದಂಡಾ ತಕ್ಕೊಂಡರೆ, ಅದರಲ್ಲಿ ಗುರುಮನಿಗೆ ಅರ್ಧಕೊಟ್ಟು, ವುಳಿದ ಅರ್ಧ ಕುಲದವರು ಯಾವತ್ತು ಕೂಡಿ ವೂಟಾ ಮಾಡಬೇಕು.

೧೩. ಯೀ ಪ್ರಕಾರ ನಮ್ಮ ಜಾತಿ ರಿವಾಜು ಅದೆಯಂತ ಬರಶಿಕೊಟ್ಟ ಕೈಫಿಯತು.

❖❖

೧೩೦
ರಾಜವಂಶಾವಳಿ ಕೈಫಿಯತ್ತು-೧*

ಮೆಕೆಂಝಿ ಸಂಪುಟ : ೧೭೪

ಕೈಫಿಯತುನಾಯ, ರಾಜವಂಶಾವಳಿ ಯೇನೆಂದರ, ಯಿಂಡಿಯಾ ಸೂರ್ ಸಂನ್ ೧೮೧೩ ಲಾಗಾಯಿತು ಗುಮಾಸ್ತೆ ಕೃಷ್ಣರಾವ ದರಿಯಾಪ್ತಿ ಸನ್ ೧೮೧೪ ವರಿಗ ಕಥೆಗಳು ಸಹಾ ಯಿದ್ದ ಅರಸಗಳ ವಿವರ;

ಮೊರ್ವಿರು[>ಮೌರ್ಯರು] ಜನ ೯ಕ್ಕೆ:

೧. ಚಂದ್ರಗುಪ್ತ ೧ ವಾರಿಧಾರ ೧ ಅಶೋಕವರ್ಧನ

೧ ಸುಯಶರಾಯ ೧ ಸಂದಿರಾಯ ೧ ಶಾಲಿಶೋಕರಾಯ

---

* ರಾಜವಂಶಾವಳಿ, ರಾಜವಂಶಾವಳಿ ಕೈಫಿಯತ್ತು ಎರಡೂ ಹೆಸರುಗಳನ್ನು ಹಸ್ತಪ್ರತಿಗಳಲ್ಲಿ ಬಳಸಿರುವುದರಿಂದ ನಾವು ಎರಡನೆಯದನ್ನೇ ಇಲ್ಲಿ ಇಟ್ಟುಕೊಂಡಿದ್ದೇವೆ (ಸಂ)

೧ ಸೋಮಶರ್ಮರಾಯ ೧ ಶತಧನ್ವರಾಯ ೧ ಭೃಹದ್ರಥರಾಯ

೩ + ೩ + ೩ = ೯

ಕದಂಬವಂಶದ ಅರಸುಗಳು. ಯೀ ಕದಂಬರು ಬ . . . . ಷ್ಟು ವರುಷ ಆಳಿದರು ಯಂತಾ ಲೆಖ್ಖವುಂಟು: ತ್ರಿನೇತ್ರಕದಂಬ, ಯೀತನು ಕದಂಬ ವಂಶಕ್ಕೆ ಮೂಲ ಪುರುಷ. ಯೀತನು ಯೀಶ್ವರಧರನಾನಿ[>ರಣಿ] ಸಂಭೂತ, ಯೀತನ ಕಥೆ ಪ್ರತ್ಯೇಕ ವಿಸ್ತಾರವಾಗಿ ಅದೆ. ಯೀತಾ ರಾಜ್ಯಭಾರ ಮಾಡಿದ್ದು ಪರಿಗೆ ವರ್ಷ ೫ಳಕ್ಕೆ.

ಯೀತನ ಮಗ ಮಧುಲಿಂಗ . . . . ವರಿಗೆ ರಾಜ್ಯ ಮಾಡಿದ ವರುಷ. ಯೀತಗೆ ಮಕ್ಕಳು ಜನ ೨ಕ್ಕೆ ೧ ಮಲ್ಲಿನಾಥ, ೧ ಚಂಡವರ್ಮ್ಮ.

೧ ಯೀ ಚಂಡವರ್ಮ ಅರುಸತನ ಆಗಿ ರಾಜ್ಯಭಾರ ಮಾಡಿದ. ಯೀತಗೆ ಯಿಬ್ಬರು ಮಕ್ಕಳು. ೧. ಚಂಡವರ್ಮ, ಪುರಂದರವರ್ಮ.

ಯೀ ಚಂದವರ್ಮ ಅರಸುತನ ಆಗಿ ರಾಜ್ಯಭಾರ ಮಾಡಿದಾ. ಯೀತನ ತಮ್ಮ ಪುರಂದರವರ್ಮ ರಾಜ್ಯಭಾರ ಮಾಡಿದಾ. ಯೀತನು ಅಪುತ್ರಕನಾಗಿ ದೇವಗತಿಯನ್ನು ಮಾಡಿದ.

೧ ಮೇಲೆ ಬರದ ಚಂಡವರ್ಮನ ಮಗ ಮಯೂರವರ್ಮನಿಗೆ ಪಟ್ಟಾಗಿ ರಾಜ್ಯಭಾರ ಮಾಡಿದಾ।

೧ ಯೀತನ ಮಗ ತ್ರಿನೇತ್ರಕದಂಬಗೆ ಪಟ್ಟವಾಗಿ ರಾಜ್ಯಭಾರ ಮಾಡಿದಾ

೧ ಯೀತನ ಮಗ ಪುರಂದರರಾಯ

೧ ಯೀತನ ಮಗ ಜಾಂಜಿರಾಯ

೧ ಯೀತನ ಮಗ ವಿಠಲರಾಯ

೧ ಯೀತನ ಮಗ ಭಟ್ಟಾಂಗದೇವ

೧ ಯೀತನ ಮಗ ರಾಮದೇವ

೧ ಯೀತನ ಮಗ ಚಂದವರ್ಮ

೧ ಯೀತನ ಮಗ ಮಯೂರವರ್ಮ

೧ ಯೀತನ ಮಗ ಕದಂಬ

ಯೀ ಕದಂಬರಾಯನ ಕಾಲದಲ್ಲು ಬರ್ಬರದೇವರಾಯ ಯೆಂಬವ ಯೆಳಿವೆ[>ಏಳು] ಕೊಂಕಣದ ಅರಸು, ಆತನು ಬಂದು ಯೀ ರಾಜ್ಯದಲ್ಲು ಕೆಲವು ರಾಜ್ಯಾ ಸ್ವಾಧೀನಾ ಮಾಡಿಕೊಂಡು, ಅವರಿಂದಾ ಕರಭಾರವನ್ನು ತೆಗೆದುಕೊಂಡು ಅವರನೇ ಯಿಟ್ಟು, ತನ್ನ ಆಜ್ಞಾವರ್ತಿಗಳು ಮಾಡಿದಾ. ಅವರ ಪರಂಪರ ೨೧ಕ್ಕೆ ಬರ್ಬರರು ಜನ ೨೧ಕ್ಕೆ ವಿವರಾ. ಯೀ ಬರ್ಬರ ವಂಶದವರು ಯಷ್ಟು ವರುಷ ಆಳಿದರು ಮುಂತಾದ ಲೆಖ್ಖಗಳುಂಟು.

೧ ಬರ್ಬರರಾಯ ೧ ಶ್ರೀಕಂಠರಾಯ

೧ ನೀಲಕಂಠರಾಯ ೧ ಖಂಡೆರಾಯ

೧ ಅಮೃತರಾಯ ೧ ವಿರೂಪಾಕ್ಷರಾಯ

೧ ಬರ್ಬರರಾಯ ೧ ಮಲ್ಲಾ

೧ ಬೀಮರಾಯ ೧ ಕುಂಭರಾಯ

೧ ಪ್ರಭುರಾಯ ೧ ರಾಮರಾಯ

೯ ಈ ವಂಶದಲ್ಲಿ ಸಾಮಾನ್ಯವಾಗಿ ರಾಜ್ಯವಾಳಿದರು.

―――
೨೧

ಯೀ ಬರ್ಬರ ವಂಶದ ೨೧ನೇ ಪ್ರತಾಪವೀರ ಶಿವರಾಯನನ್ನು ಕದಂಬವಂಶದ ವೀರಕಾಮದೇವರಾಯನು ಮುರಿದು ಲನೇ ಸಿಂಹಾಸನಕ್ಕೆ ತಾನೆ ಅಧಿಪತಿಯಾದನು. ಆಮೇಲೆ ಯಿವರ ವಂಶ ಶೋಧಿಸಿ ಬರಿಯುವದಕ್ಕೆ ಆರಂಭಿಶಿ ಅದೆ.

ಯೀ ವಂಶದ ಕಡೆಯವನ ಕಾಲಕ್ಕೆ ಬಲ್ಲಾಳನ ವಶವಾತ್ತು. ಆ ಬಲ್ಲಾಳರ ವಿವರಾ ಕೆಳಗೆ ಬರದು ಅದೆ. ಮಾಳದೇಶದ ದೋರಸಮುದ್ರ ಬೇಲೂರು ಸಮಸ್ಥಾನ ಮಾಡಿಕೊಂಡು ಆಳಿದ ಬಲ್ಲಾಳರೂ, ಯಿವರ ಆಳಿಕೆಗೂ ವರುಷ ಲೆಖ್ಖಾಗಳುಂಟು.

೧ ಹೊಯಿಸಳ ಬಲ್ಲಾಳ ವಿನಯಾದಿತ್ಯ

೧ ಯರಿಯಂತ, ೧ ಯೀತನ ಮಗ ವಿಷ್ಣುವರ್ಧನಾ . . . . ೧. ಯೀತನ ಮಗ ವಿಜಯನಾರಶಿಂಹಪ್ಪ.

೧ ಯೀತನ ಮಗ ವೀರಬಲ್ಲಾಳದೇವ

೧ ಯೀತನ ಮಗ ನಾರಶಿಂಹಪ್ಪದೇವ

೧ ಯೀತನ ಮಗ ಸೋಮೇಶ್ವರದೇವ

೧ ಯಿವನ ಮಗ ಬಲ್ಲಾಳದೇವ

ಯೀ ಬಲ್ಲಾಳನ ಮುರಿದು ಹರಿಹರರಾಯರು ವಿದ್ಯಾನಗರದಲ್ಲಿ ರಾಜ್ಯಾ ಆಳಿದರು. ಆ ಜನಾ ಹರಿಹರರಾಯ ಮೊದಲು ಮಾಡಿಕೊಂಡು ಸದಾಶಿವರಾಯರ ವರಿಗೆ ಜನ ೨೩. ಯೀ ವಿವರವೂ ಕಚೇರಿಯಲು ಬರದು ಯಿದ್ದರಿಂದಾ ಯೀಗ ಬರೆಯಲಿಲ್ಲ.

ಆಮೇಲೆ ಯೀ ಸೋದೆ ಸಂಸ್ಥಾನದವರು ಮೇಲೆ ಬರದ ಆನೆಗುಂದಿರಾಯರ ಕಡೆಯಿಂದ . . . . ಸಂಬಾಯಿತರು ಯಿದ್ದಲ್ಲಿ ಯಿವರಿಗೆ ಅಮರಮಾಗಣಿಯು ಸಿಗೋಪ್ಪದ[>ರ]ಲ್ಲಿ ಆ ಸಂಸ್ಥಾನವು ಸ್ವಲ್ಪ ದುರ್ಬಲವಾಗಿ ಬಂದ ಬಂದ ಹಾಂಗೆ, ಯಿವರು ಯಿಲ್ಲಿ ಸ್ವತಂತ್ರರಾಗಿ ದೊರೆಗಳು ಆದರು. ಅದಕ್ಕೆ ವಿವರ:

೧ ಅರಸುತನಕ್ಕೆ ಸ್ವತಂತ್ರನಾದಾತ ಅರಸಪ್ಪನಾಯಕ. ಯೀ ಅರಸಪ್ಪನಾಯಕರಿಗೆ ಮಕ್ಕಳು

೧. ೧ ರಾಮಚಂದ್ರನಾಯಕರು

೧ ಯಿಮ್ಮಡಿ ಅರಸಪ್ಪನಾಯಕರು

೨. ಯಿಮ್ಮಡಿ ಅರಸಪ್ಪನಾಯಕರ ಮಕ್ಕಳು

೧. ರಘುನಾಥರಾಜ   ೧. ಅಂಬಾಜಿ   ೧. ಬೈರವಾ[>ವರ]ಸರು

೩. ರಘುನಾಥರಾಜನ ಮಕ್ಕಳು:

೧. ಮಧುಲಿಂಗರಾಜರು. ಯಿವರು ಲಿಂಗವಂತರು ಆದವರು

೪. ಯೀ ಮಧುಲಿಂಗರಾಜನ ಮಕ್ಕಳು

೧ ರಾಮಚಂದ್ರನಾಯ್ಕರು   ೧ ಮುಂಬಸಪ್ಪನಾಯ್ಕರು

೧ ವಜ್ರರಾಜರು   ೧ ಮಧುಲಿಂಗರಾಜರು

೪

೫. ಯೀ ಮಧುಲಿಂಗರಾಜರ ಮಕ್ಕಳು

೧ ಸದಾಶಿವರಾಯರು, ಶಾಂತಲ್ಲರಾಜರು

೬. ಯೀ ಸದಾಶಿವರಾಯರ ಮಕ್ಕಳು

೧ ಬಸಲಿಂಗರಾಜರು

೭. ಯೀ ಬಸಲಿಂಗರಾಜರ ಮಕ್ಕಳು

ಯಿಮ್ಮಡಿ ಸದಾಶಿವರಾಜರು, ಅವರು ಘೋ[>ಪೋ]ಡಕೆ ಹೋದರು.

೮. ಯೀ ಯಿಮ್ಮಡಿ ಸದಾಶಿವರಾಜರ ಮಕ್ಕಳು:

೧ ಯೀಗ ಯಿರುವ ಸವಾಯಿ ಬ್ಸಲಿಂಗರಾಜರು.

ಯಿವರ ವಿವರಾ: ಯೀಗ ಯಿರುವ ಸೋದೆ ತಾಲೂಕಿನ ಬಳಿಯಲ್ಲಿ ಹೂ. ಕರಿಯುಪ್ತೆ ಮಾಡದೆ ಕಲ್ಯವಾಗಿ ದೊರಿಯೋದಿಲ್ಲಾ. ಯೀ ಅರಸು ಯೀ ಸ್ತಳಕ್ಕೆ ಬಂದಾರಭ್ಯದಲ್ಲು ಕೆಲವರು ಮೈಸೂರು ಆ ಪ್ರಾಂತಿಗೆ ಹೋಗಿಹರು. ಆಮೇಲೆ ಅಲ್ಲಿಂದಾ ಬಂದರು. ಯಿವರ ಮನೆಯಲ್ಲಿ ಕಟ್ಟಮಾ ಬಿದ್ದದರಿಂದಾ ಅದರ ದರಿಯಾಪ್ತಿ ಮಾಡುತಾ ನಾಲ್ಕೆಂಟು ದಿವಸ ಯಿದ್ದರು. ಆಮೇಲೆ ಹೋದೆ ಹೋಗಿಯಿದ್ದಾರೆ. ಅದರಿಂದಾ ಯೀ ವರಿಗೂ ಅವರು ಬರಲಿಲ್ಲಾ. ಅವರು ಬಂದಲ್ಲದೆ ಯಿಲ್ಲಿ ಮತ್ತೆ ಯಾರಿಂದಲೂ ಅದರ ಪರಿಹಾರಾ ಆಗಲಿಕೆ ಯಿಲ್ಲಾ. ಆದರಿಂದಾ ನಮಗೆ ಯೀ ಶಾಸನ ಮುಖಾಂತ್ರದಿಂದಾ ದೊರಿದಷ್ಟು ಬರದು ಅದೆ, ಯೀ ವಿವರಾ ತಿಳಿದಿರುವದು.

❖❖

೧೩೧
ರಾಜವಂಶಾವಳಿ ಕೈಫಿಯತ್ತು – ೨*

ಮೆಕೆಂಝಿ ಸಂಪುಟ : ೧೭೪

ಕೈಫಿಯತು ನಾಮೆ. ವಟ್ಟು ಅರಸುಗಳ ವಂಶಾವಳಿಯೇನೆಂದರೆ, ಯಿಂಡಿಯಾ ಸನ್ ೧೮೧೩ಲ್ಲು ಗುಮಾಸ್ತ ಕೃಷ್ಣರಾಯ ದರಿಯಾಪ್ತಿ ಸಂನ್ ವರೆಗೆ ಕಥೆಗಳು ಸಹಾ ಯಿದ್ದಾ ಅರಸುಗಳ ವಿವರ:

೧೯. ಚೋಳವಂಶದ ಅರಸುಗಳ ವಿವರಾ:

೧ ಕಾಶಿಯಲ್ಲಿ ಪ್ರಭಾಕರ ಚೋಳನು ರಾಜ್ಯವಾಳುತ್ತಿದಾ

೧ ಚಂದಾಲೂರಲಿ ವೈಷ್ಣವಚೋಳ

೧ ಯಿವನ ಮಗ ಕರಿಕಾಲಚೋಳ

೧ ಚೋಳಮಂಡಲದಲ್ಲಿ ಕರಮವೆಂಬ ಪುರದಲ್ಲಿ ಧರ್ಮೇಂದ್ರಚೋಳ

೧. ಚೋಳಮಂಡಲದ ಧರ್ಮವನ್ನಿ ಪಟ್ಟಣದ ಸತ್ಯೇಂದ್ರಚೋಳ. ಯಿವನ ಮಗ ಮಂತ್ರವಿಷ್ಣು

೧ . . . . ಪಟ್ಟಣದ ರಾಜೇಂದ್ರಚೋಳ

೧ ಚೋಳದೇಶದ ಚಂದಾಲುವೆಂಬ ಪಟ್ಟಣಾದ . . . .

೧ ಸ್ವಸ್ತಿರವೆಂಬ ಪುರದಲ್ಲಿ ಮನುಜೇಂದ್ರಚೋಳ

೧ ಚೋಳಮಂಡಲ ವಧಾರೇಶ್ವರ ಪಟ್ಟಣದಲ್ಲಿ ವೀರಚೋಳ

೧ ವ್ಯಾಘ್ರಪಾದಪುರದಲ್ಲಿ ವುತುಂಗಚೋಳ

೧ ಚೋಳಮಂಡಲದ ಮಲಾಯವೆಂಬ ಪುರದರಸು ಮನೋಚೋಳಭೂಪಾಲ

೧ ಯಿವನ ಮಗ ನಿಚ್ಚಲರಾಯ

೧ ಬರ್ಬರದೇಶದ ಕನೊತ್ತುತೂರಲ್ಲಿ ನಿರಯಚೋಳ

೧ ಯೆಲೆನಾಡಚೋಳ

೧ ಕಂಚಿಯಲ್ಲಿ ವಿಷ್ಣುಚೋಳ

೧ ಚೋಳದೇಶದ ಕರಮವೆಂಬ ಪಟ್ಟಣದಲ್ಲಿ ಪಗಲಚೋಳರಾಯ

---

* ಇದಕ್ಕೆ ರಾಜವಂಶಾವಳಿ, ರಾಜವಂಶಾವಳಿ ಕೈಫಿಯತ್ತು ಎರಡೂ ಹೆಸರುಗಳನ್ನು ಹಸ್ತಪ್ರತಿಗಳಲ್ಲಿ ಬಳಸಿರುವುದರಿಂದ ನಾವು ಎರಡನೆಯದನ್ನೇ ಇಲ್ಲಿ ಇಟ್ಟುಕೊಂಡಿದ್ದೇವೆ. (ಸಂ)

೧ ಚೋಳದೇಶದ ಕರಮವೆಂಬ ಪಟ್ಟಣದ ರಾಜೇಂದ್ರಚೋಳ

೧ ತಿರುವಾರೂರಲ್ಲಿ ಕರಿಕಾಲಚೋಳ

೧ ಹೊನ್ನಂಬಲಿಯಂಬ ಪಟ್ಟಣದಲ್ಲಿ ಭಾಸ್ಕರಯಂಬ ವಿಪ್ರನ ಮಗಳು ಭಿಸಾಕ್ಷಿಯಂಬವಳಿಗೆ ಮುಕ್ಕನ್ನಾಚೋಳ ಹುಟ್ಟಿದಾ. ಯಿವನಿಗೆ ಕಾಳಶೆಟ್ಟಿ ರಣ (ವೀರಾ?) ಮುಂತಾದ ಹೆಸರು

---

೧೯ ಅಂತು ಅರಸುಗಳು

ಬಲ್ಲಾಳ ಅರಸುಗಳ ವಿವರಾ:

೧ ಮಾಳವದೇಶದ ವೀರಬಲ್ಲಾಳ

೧ ದೋರಸಮುದ್ರದ ನೃಸಿಂಹಬಲ್ಲಾಳ

೧ ಚೋಳದೇಶದ ತಿರುನೂರಾವಲಿಯಂಬ ಪುರದಲ್ಲಿ ಶಿಂಧುಬಲ್ಲಾಳ

೧ ಮೈಲಾಪುರವೆ ಪಟ್ಟಣದ ಅರಸು ನೃಸಿಂಹಬಲ್ಲಾಳ ಕ್ಷತ್ರಿಯಾ

ಯಿವರ ಮಂತ್ರಿ ನರಸಪೂರನುಯೆಂಬವನ

೪

ಆಂಧ್ರದೇಶದ ಅರಸುಗಳ ವಿವರ:

೧ ಆಂದ್ರದೇಶದ ಮೋಪೂರೆಂಬ ಪಟ್ಟಣದಲ್ಲಿ ಸಂಗಮರಾಜ ಕ್ಷತ್ರಿಯ

೧ ಯೀತನ ಮಗ ಭೈರವರಾಜ

೧ ವೊರಂಗಲ್ಲೆಂಬ ಪಟ್ಟಣದಲ್ಲಿ ಪ್ರತಾಪರುದ್ರ

೩

ಕಾಂದಾರದೇಶದ ಅರಸು:

೧ ಕಾಂದಾರವೆಂಬ ಪಟ್ಟಣದಲ್ಲಿ ನಂದಚಕ್ರವರ್ತಿ, ಘೂರ್ಜರದೇಶದ ಅರಸು

೧ ಮಂಗಳಾಪುರಿಯಂಬ ಪಟ್ಟಣದಲ್ಲಿ ಕೊಮಾರಪಾಲಘೂರ್ಜರನೆಂಬ ಅರಸು, ಯೀತಗೆ ಉದ್ಭಟದೇವನೆಂಬ ಮಗನು ಹುಟ್ಟಿದಾ. ಅರಸಂಜಿಯಂಬ ಪಟ್ಟಣದಲ್ಲಿ

೧ ಭಾಗ್ಯನಿಧಿಯಂಬ ಅರಸು ಬುದ್ಧಿಶರೀರಯೆಂಬ ಮಂತ್ರಿ ಪಾ . . . . ಷ್ರದೇಶದಲ್ಲಿ

೧ ಕೋಹಾಲದೇವನೆಂಬ ಅರ್ರು

ಕುಂತಳದೇಶದ ಅರಸು :

ಭಾರತಿ ಪಿ . . . . ವೆಂಬ ಪಟ್ಟಣದಲ್ಲಿ ಪ್ರವರಸೇನಾ ಮಳಯಾದೇಶದ ಅರಸು:

೧ ಮಳಯಾವತಿಯಂಬ ಪಟ್ಟಣದಲ್ಲಿ ದೇವರಾಜ

೧ ಯೀತನ ಮಗ ಮಲಯರಾಜ (?)

೨

ಕುಂತಳದೇಶದ ಅರಸು :

ವಿದ್ಯಾನಗರ ಪಟ್ಟಣದಲ್ಲಿ ಪ್ರಭುಡರಾಯ, ಬಲಕಿ ಪಟ್ಟಣದಲ್ಲಿ

೧ ಪತ್ತಿರಾಜ

೧ ಯೀತನ ತಮ್ಮ ಮುಂಜ ಬಂಗಾಳ ಮುಂತಾದ ರಾಜ್ಯವಾಳುತ್ತಿರುವಾಗ

೧ ಯೀತನ ಮಗ ಭೋಜರಾಜ ಯಿವನ ಕಾಂದಾರವೆಂಬ ಪಟ್ಟಣಕ್ಕೆ ಅಧಿಪತಿ ಆದಾ. ಯೀ ಪಟ್ಟಣಕ್ಕೆ ದಾರಾಪುರವೆಂಬ ಹೆಸರು.

೩

ವುತ್ತರದೇಶದಲ್ಲಿ ಯಿದ್ದ ಅರಸುಗಳು:

೧ ಬಂಗಾಳವೆಂಬ ಪಟ್ಟಣದಲ್ಲಿ ಮುಂಜ ಕವಿರಾಜ. ಯಿವನ ಮಗ ಭೋಜ. ಯಿವನು ಕ್ಷತ್ರಿಯಾ, ಯಿವನ ಮಂತ್ರಿ ಗುಮೋನಿಧಿಯಂಬವನು

೧ ಮಂಗಳಾಪುರಿಯಂಬ ಪಟ್ಟಣದಲ್ಲಿ ಪಲ್ಲವರಾಜ

೧ ಲಿಂಗಜಾಪುರದಲಿ ಮಯಭೂಪಾಲ, ಯಿವನ ಮಗ ವಿಟಶ್ವೇತ.

೩

ಚೋಳಮಂಡಲದ ಅರಸುಗಳು:

೧ ಮುದಗೊಂಡಿಯೆಂಬ ಪುರದಲ್ಲು ಸುಖದೇವನೆಂಬ ರಾಜ

೧ ಯಿವನ ಮಗ ಕನಚನ್ನ ಪಿರಿಯಾಳ

೧ ಚೋಳಮಂಡಲ ಧಾರೇಶ್ವರ ಪಟ್ಟಣದಲ್ಲಿ ಮೊನೆಧರನೆಂಬ ಕ್ಷತ್ರಿಯಾ

೩

ಕಮಲಾವತಿಪುರದ ಅರಸು, ಯೀಗ್ಯೆ ಕಮಲಾಪುರವೆಂಬ ಹೆಸರು:

೧ ಮೇದಿನಿರಾಜ, ಯಿವನ ಮಂತ್ರಿ ಮಾಧವಾಂಕ.

ಲಾಳದೇಶದಲ್ಲಿ ಯಿದ್ದ ಅರಸುಗಳು:

೧ ಜೀವಿತೇಶ್ವರರಾಯ ಯಂಬುವನು ಮಂತ್ರಿ, ಜೀವನಮಂತ್ರಿ

ಮಧುರೆಯ ಪಟ್ಟಣದಲ್ಲಿ ಯಿರುವ ಅರಸುಗಳು:

೧ ಸುಂದರಪಾಂಡ್ಯ

೧ ವೀರಪಾಂಡ್ಯ

೧ ಮಧುರಾಪುರದ ಮಧ್ಯದೇಶದ ಚಂಡವಿಕ್ರಮಪಾಂಡ್ಯ. ಯಿವನ

೧ ಮಂತ್ರಿ ಚೊಕ್ಕನೈನಾಮ[>ರು]

೧ ಯಿವನ ಮಗ ನವರಂಗರಾಜ. ಯಿವಗೆ ಅಶ್ವಪತಿಯಂಬ ಹೆಸರು

ಕೇರಳದೇಶದ ಅರಸುಗಳು:

೧ ಮಹೋರಧಿಪುರವನಾಳುವ ಚೇರಮರಾಯ

೧ ಕುಡಗಲೂರೊ[>ರು] ಪಟ್ಟಣದಲ್ಲಿ ಚೆದಮರಾಯ

೨ ಯಿವರ ಮಗ ಜಂಬುರಾಜ

ಹೊಂಗಾಡಿಪುರದ ಅರಸುಗಳು:

೧ ಭೀಷ್ಮರಥನು

೧ ಯಿವನ ತಮ್ಮ ಮಣಿರಥ

೨

ತಿರವಾಲ್ಲೂರಲ್ಲಿ ೧ ನಂದಿಯ[>ಯೆ]ನ್ನು ಅರಸು. ಯಿವನ ಮಂತ್ರಿ ತುಂಬರ.

ವುಜನಿ ಯಂಬ ಪಟ್ಟಣದಲ್ಲಿ. ಯೀ ಪಟ್ಟಣಕ್ಕೆ ಯೀಗ ಜಯಂತಿಪುರಾಯಂತ ಹೆಸರು.

೧ ವಿಕ್ರಮಾದಿತ್ಯ

೧ ಚಂದ್ರಗುಪ್ತರಾಯನ ಮಗಳ ಮಗ ವಿಕ್ರಮಾದಿತ್ಯ.

ಯೀಕೆ ಗಂಡ ಗೋವಿಂದಬಲ್ಲಾಳನೆಂಬ ಬ್ರಾಹ್ಮಣನು

೧ ಭರ್ತ್ತಲಹರಿ

೩

ರತ್ನಾವತಿಯಂಬ ಪಟ್ಟಣದಲ್ಲಿ ೧ ಪರ್ವಬದ್ರರಾಯ

ಸುಂದರಪುರದ ಅರಸು : ೧ ವಿಕ್ರಮಸೇನ

ವೊ[>ಪೊ]ಟ್ಟೆಲಕೆರೆಯಲ್ಲಿ ಯಿದ್ದ ಅರಸು : ದೇಶಿಂಗರಾಯ, ಯಿವನು ಜೈನಾ.

ವಂಗದೇಶದಲ್ಲಿ ಯಿದ್ದ ಅರಸುಗಳು : ೧ ಭುಜಬಲರಾಯ

ವಿದರ್ಭದೇಶದ ಕುಂಡಲಿಪುರದಲ್ಲಿ ಯಿದ್ದ ಅರಸು : ೧ ಚಿತ್ರಭಾನುರಾಜ

ಪ್ರತಿಷ್ಟದೇಶದಲ್ಲಿ ಯಿದ್ದ ಅರಸುಗಳು:

೧ ವಿದ್ಯೂಮರಾಜ

೧ ಯಿವನ ಮಗ ಶಿದ್ರೂಂಮ್ನ

೧ ದಿಲ್ಲಿ ಅರಸು : ೧ ಹಂಮ್ಮಿರನಾಥ

೧ ಮರಿಕಾಪುರದಲ್ಲಿ ಯಿದ್ದ ಅರಸು : ೧ ಪಾರಿಯಾತ್ರಿಕರಾಜ

೧ ಮಗಧದೇಶದ ಅರಸು : ೧ ಜಯಮುನಿಪುರದಲ್ಲಿ ವಿಜಯಭೂಪಾಲ.

ಮದನಾವತಿಪುರದಲ್ಲಿ ಯಿದ್ದ ಅರಸು : ೧ ಧರ್ಮರಾಜ

ಸತ್ಯರಾಜಪಟ್ಟಣದಲ್ಲಿ ಯಿದ್ಧ ಅರಸು :

೧ ದೀರ್ಘಬಾಹು ರಾಜ

ಆನಂದಪುರದಲ್ಲಿ ಯಿದ್ದ ಅರಸು : ೧ ಅತಿಬಲರಾಜ

ಜಂಬೂನಗರದಲ್ಲಿ ಯಿದ್ದ ಅರಸು : ೧ ನಂದರಾಜ

ಕೌಂಡಿಲ್ಯಪುರದಲ್ಲಿ ಯಿದ್ದ ಅರಸು : ೧ ಬಾಹುಬಲರಾಜಾ

ಕರಲೂ[>ವೂ]ರೆಂಬ ಪಟ್ಟಣದಲ್ಲಿ ಯಿದ್ದ ಅರಸುಗಳು : ೧ ನಿರಹಂಕಾರ ಅರಸು. ೧ ಯಿವನ ಮಗ ಅಲ್ಲಮಹಾಪ್ರಭೊ

ವುಡತಡಿ ಪಟ್ಟಣಕ್ಕೆ ಮೊದಲು ಯಿರುವ ಹೆಸರು. ಯೀಗೆ ವುಡಗುಣಿಯಂತ ಹೆಸರು ಅದೆ. ಯೀ ಪಟ್ಟಣದಲ್ಲಿ ಅರಸು : ೧ ಕೌಶಿಕರಾಯ, ಯಿವನ ಮಂತ್ರಿ ವಸಂತ (ವಸಂತ)

ಮಧುರೆಪಟ್ಟಣದಲ್ಲಿ ಯಿದ್ದ ಅರಸು:

೧ ಭಾನ[>ಕೂನ]ಪಾಂಡ್ಯ ಅರಸು. ಯಿವನು ಜಾತಿಯಲಿ ಜೈನಾ. ಯಿವಗೆ ಸೌಂದರಪಾಂಡ್ಯ ಯಂತಾ ಹೆಸರು. ಯೀತಗೆ ಕರಲ[>ವೂ]ರಪಟ್ಟಣದ ಅರಸು ರಾಜೇಂದ್ರಚೋಳನಾ ಮಗಳನು ಕೊಟ್ಟು ಅದೆ.

ಪೊತನಾದೇಶದ ಅರಸು : ೧ ವೀರವಿಕ್ರಮಾ

ಮಲ್ಲಿಪಟ್ಟಣಾದಲ್ಲಿ ಯಿದ್ದ ಅರಸು : ೧ ರಾಮರಾಜ

ಶಶಿವಾಳಪುರದಲ್ಲಿ ಯಿದ್ದ ಅರಸು:

೧ ಜಯಶೇಖರಾಯಾ

೧ ಯೀತನ ಮಗ ಜಸೆಗಂಪು ವಿಕ್ರಮಾ

೨

ಯೀ ಬರದಂಥಾ ಅರಸಗುಳ ಕಥೆಯು ಪ್ರತ್ಯೇಕವಾಗಿ ಅದೆ. ಅದರ ವಳಗಿನ ವುಪಾದ್ಘಾತ ಪ್ರಕ್ರಿಯಾ ಬರದು ಅದೆ. ಇನ್ನೂ ಕಥೆಗಳು ಶೋಧಿಸಿದಲ್ಲಿ ಅರಸುಗಳು ಇನ್ನೂ ಕೆಲವು ಮಂದಿ ದೊರಿತಾರೆ. ಇವರಿಗೆ ಶಿಲಗೆಲಾ ಶಕೆ ಸಂವತ್ಸರಗಳು ವಿಚಾರಿಸಿದಲ್ಲಿ ಕಲ್ಯಾಣಪುರದಲ್ಲಿ ಯಿದ್ದ ಬಿಜ್ಜಳರಾಯನ ಕಾಲಕ್ಕೆ ಯಿಪ್ಪತ್ತು ಮೂವತ್ತು ವರುಷದ ಸುಮಾರು ಹಿಂದೆ ಮುಂದಿನವರು, ಕೆಲವರು ಪೂರ್ವಿಕರು. ಇದಕೆ ಶೆಕ ಸಂವತ್ಸರಾ ಯಾವತ್ತು ದಾಖಲೆ ಹಾಕಿ ಬರೀ ಬೇಕಾದರೆ ಬಹಾಳ ಗ್ರಂಥದ, ಸದ್ಯ ಅಗತ್ಯಕ್ಕವು ಅಲ್ಲ. ತಮ್ಮ ಮನಸಿನಲಿ, ಸರಕಾರದ ಸಂಬಳಾ ತಿಂದು ಬೇರಾಮು ಕುಳಿತರೆ ಯಂತಾ ಕಂಡು, ಪ್ರತಿ ಕಾಗದಲ್ಲು ಬರ[>ರಿ]ತಿರಿ. ಅದರಿಂದಾ ಈಗ ನಾವು ಶೋಧಿಸುವ ಕಥೆಯಲ್ಲಿ ಅರಿವಾಶಿ ಕಥೆಯಲ್ಲು ಬಂದಷ್ಟು ಅರಸುಗಳನಾ ಬರದು ಅದೆ.

❖❖

೧೩೨
ವುಂಡೆ ಗಂಗಡಿಕಾರ ವಕ್ಕಲಿಗರ ಕೈಫಿಯತ್ತು

ಮೆಕೆಂಝಿ ಸಂಪುಟ : ೧೭೪

ಸೂರ್ ಸನ್ ೧೮೧೬, ಭಾವ ಸಂ ನಿಜ ಭಾದ್ರಪದ ಶು. ೧೫ಲ್ಲು ಸೋದೆ ಶೀಮೆಯಲ್ಲಿ ಯಿರುವ ಗಂಗಡಿಕಾರ ವಕ್ಕಲ ಮಕ್ಕಳ ಜಾತಿವರ್ಗದ ವೆಂಡ ವೆಂಕಟಪ್ಪನಾಯಕ, ತಿಮ್ಮಯ್ಯಗೌಡ, ನಂಜಗವುಡ, ಕುಪ್ಪಣಗವುಡ ಮುಂತಾದ ಜಾತಿಯವರಿಗೆ ಗುರುವಾಗಿ ಯಿರುವ ತಾತಾಚಾರ್ಯರು ಬರಶಿಕೊಟ್ಟ ಗಂಗಡಿಕಾರ ವಕ್ಕಲಿಗರ ಕೈಫಿಯತು.

ಯೀ ಗಂಗಡಿಕಾರ ವಕ್ಕಲಜಾತಿಯಲ್ಲಿ ಜನನವಾದ ಹೊಲೆ ಆಯಿದು ದಿನ ಪರ್ಯಂತರ ಯಿದ್ದು, ಆಮೇಲೆ ೬ನೇ ದಿವ್ಸ ಮನೆ ಸಾರಿಸಿ ಅರುವೆ ವಗದು ಯರಕೊಂಡು ಶುದ್ಧವಾಗುವದು. ಆಮೇಲೆ ೧೧ನೆ ದಿವ್ಸ ದಾಸರ ಕರದು, ತೀರ್ಥ ಪ್ರಸಾದಗಳಿಂದಾ ಶುದ್ಧಮಾಡಿ, ನಾಮಕರಣದ ಶಾಸ್ತ್ರ ಮಾಡಿ, ಕುಲದವರು ವೂಟಾ ಮಾಡಿ, ರಾತ್ರಿಯಲ್ಲು ತೊಟ್ಟಲೊಳಗೆ ಹಾಕಬೇಕು, ಕಲಂ.

ಯೀ ನಮ್ಮ ಜಾತಿ ಬೆಡಗು ಯಾವತ್ತು ವಿವರಾ: ನಾಮಾ ಹಚ್ಚುವವರು ೧. ವಿಭೂತಿ ಹಚ್ಚುವವರು. ನಾಮಾ ಹಚ್ಚುವವರು ವೆಂಕಟರಮಣದೇವರಿಗೆ ನಡೆದುಕೊಳ್ಳುವರು. [+ವಿಭೂತಿ ಹಚ್ಚುವವರು] ಚಿಂಚಗಿರಿ ಚಾ[>ಭೈ]ರವದೇವರಿಗೆ ನಡದುಕೊಳ್ಳುವರು, ಕ.

ವಿಭೂತಿ ಹಚ್ಚುವವರಲ್ಲಿ ಹೆಣ್ಣು ತರುತ್ತಾರೆ. ನಾಮಾ ಹಚ್ಚುವವರು ವಿಭೂತಿ ಹಚ್ಚುವವರಲ್ಲಿ ಹೆಣ್ಣು ತರಬೇಕು, ಕಲಂ.

ಯಿವರಲ್ಲಿ ಸೋದರಿಕೆ ವಳಗೆ ಹೆಣ್ಣು ತರಬೇಕು. ಹೆಣ್ಣಿಗೆ ತೆರಾ ಕಂಠರಾಯಿ ಗ॥ ಹನ್ನೆರಡು ವರಹಾ, ವುಡಿಕೆ ತೆರಾ ಗ॥ ಆರು ವರಹಾ. ಯೀ ಜಾತಿಯಲ್ಲಿ ಲಗ್ನಾ ಕಟ್ಟಿಶಿಕೊಳ್ಳಬೇಕಾದರೆ

ಜೋಯಿಸರಿಗೆ ಅಕ್ಕಿ ಪಡಿ ಸಾಮಾನು ನಾಲುಕು ದುಡ್ಡು, ಕಾಯಿ ೧ನ್ನು ತೆಕ್ಕೊಂಡು ಹೋಗಿ ಜೋಯಿಸರಿಗೆ ಕೊಟ್ಟು ಲಗ್ನಾ ಕಟ್ಟಿಶಿಕೊಳ್ಳಬೇಕು.

ಮತ್ತು ಯೀ ಜಾತಿಯಲ್ಲಿ ಮದುವಿಗೆ ನಿಶ್ಚಯಾ ಮಾಡಬೇಕಾದರೆ ಮೊದಲು ಕುಲದವರಿಗೆ ಮಾಡಿಕೊಂಬಂಥಾದು ಭತ್ತ ಖ. ೧೨, ಕುಂಭ ೧೨.

ಮದುವಿಗೆ ನಿಶ್ಚಯ ಮಾಡಬೇಕಾದರೆ ಶೀರೆ ೧ ಕುಪ್ಪಸ ೧ ನಗಾಯಿಟ್ಟು ವುಡಿತುಂಬಿ, ಕುಲದವರು ವೂಟಾ ಮಾಡಬೇಕಾದರೆ ವಿಳ್ಯ ತಿದ್ದಬೇಕು, ಕಲಂ.

ಮತ್ತು ಲಗ್ನಕೆ ಹೋಗಬೇಕದರೆ ಮೊದಲು ದೇವರ ವೂಟಾಮಾಡಿ, ಆಮೇಲೆ ಬಾಸಿಂಗ ಕಟ್ಟಿ, ... ಈ ಹೆಣ್ಣಿಗೆ ಚಿನ್ನ, ಬೆಳ್ಳಿ, ಶೀರೆ, ಕುಪ್ಪಸ, ಕರಮಣಿ ಮಂಗಳಸೂತ್ರ, ಅಕ್ಕಿ, ಅಡಿಕೆ, ಯಲೆ ಮುಂತಾದ ಸಾಹಿತ್ಯ ವೈದು ಸೋದರಮಾವನ ಕೈಯಾಗೆ ಧಾರೆ ಯರಸಬೇಕು, ಕಲಂ.

ಮರುದಿವಸ ಕಳಶದ ಪೂಜೆ ಮಾಡಬೇಕು. ಜೋಡು ಕಳಶಗಳ ಯಿಟ್ಟು, ಪೂಜೆಗೆ ಕಾಯಿ ಹೆಣ್ಣಿನಿಂದ ವಬ್ಬರು ಗಂಡಿನಿಂದ ವಬ್ಬರು ಕೂಡಿಕೊಂಡು ಹೋಗಿ, ದೇವರು ಗುರುಗಳು ಗೌಡ ಬುದ್ಧಿವಂತ ಕುಲಸಮಸ್ತರ ಕೈಲಿನಿಂ ಅವರ ಪರಜಾತಿಯವರನ ಸಹಾ ನಗ ಕೊಡುತ್ತಾ (ಕರಕೊಂಡು?) ಳ ಹಾಡಿ ?ದು ಕಳಶಕನ್ನಡಿ ಸಾಹಿತ್ಯವೆಲ್ಲಾ ತೆಗಿಸಿಕೊಂಡು ಮೇರು ಮೆರವಣಿಗೆ ಮಾಡಿ, ದೇವರ ಗುಡಿಗೆ ಹೋಗಿ, ಹಣ್ಣುಕಾಯಿ ವಡಶಿ, ಧೂಪ ದೀಪ ನೈವೇದ್ಯಗಳು ಮಾಡ್ಸಿ, ಅಲ್ಲಿಂದ ಮನೆಗೆ ಬಂದು, ಕುಲಸಮಸ್ತರನ ಕೂಡಿಕೊಂಡು ವೂಟಾ ಮಾಡಬೇಕು, ಕಲಂ.

ಆಮೇಲೆ ನಾಲ್ಕನೇ ದಿವಸ . . . . ವಲ್ಲಿಗೆ, ಸುರಿಗೆ ಯರಕೊಂಡು, ಕಂಕಣಾ ಬಿಚ್ಚಿ, ಕುಲದ ವೂಟಾ ಮಾಡಿ, ವಿಳ್ಯ ತಕ್ಕೊಂಡು, ಮನೆ ತುಂಬಿಸಿಕೊಡಬೇಕು.

ವುಡಿಕೆಗೆ ಶೀರೆವುಡಿಶಿ, ವುಡಿತುಂಬಿ, ಕುಲದ ವೂಟಾಮಾಡಿ, ವಿಳ್ಯೆತಿದ್ದಿ, ಅವಗೆ ಹೆಣ್ಣಿನ ಕೂಡಿಕೊಡಬೇಕು. ಕಲಂ. ಮತ್ತು ನಮ್ಮ ಕುಲದಲ್ಲಿ ಪರಕುಲ ಕೂಡುವದಿಲ್ಲ ಕಲಂ.

ನಮ್ಮ ಕುಲದಲ್ಲಿ ಪ್ರಥಮ ಮುಟ್ಟು ಆದ ನಾಲ್ಕು ದಿನ ಹೊರಗೆ ಯಿಟ್ಟು . . . . ನೇ ದಿನ ದೈಷ್ಣವೈಯನ ಕರಕೊಂಡು ಬಂದು, ಆತಗೆ ಅಕ್ಕಿ ಬ್ಯಾಳೆ ಪಡಿಕೊಟ್ಟು, ಆತನಿಂದಾ ಅರ್ದ[>ತೀರ್ಥ] ಪ್ರಸಾದಾ ಹಾಕಿಶಿ, ಶುದ್ಧ ಮಾಡಿ ಕುಲದ ವೂಟಾ ಮಾಡಬೇಕು, ಕಲಂ.

ನಮ್ಮ ಕುಲದಲ್ಲಿ ತಪ್ಪು ವಪ್ಪು ಮಾಡಿದರೆ ಅವನ ಸಾಮರ್ಥ್ಯವಿದ್ದಷ್ಟು ತಕ್ಕೊಂಡು ದೇವಸ್ತಾನಕ್ಕೆ ಹೋಗಿ ತೀರ್ಥಪ್ರಸಾದಾ ಹಾಕಿಶಿ ಸುದ್ಧಾ ಮಾಡ್ಸಬೇಕು, ಕಲಂ. ಮದುವೆ ವಳಗೆ ಸಮರ್ಥ ಯಿದ್ದಷ್ಟು ಕರಸಿ[>ತರಸಿ] ಗುರುಮಠಕ್ಕೆ ಕೊಡಬೇಕು.

ಸತ್ತರೆ ಹುಗಿಯುವದು ಉಂಟು, ಸುಡುವದೂ ವುಂಟು. ಸೂತಕ ೧೧ ಹನ್ನೊಂದು ದಿನ ಯಿದ್ದು, ವೈಷ್ಣವಯ್ಯನ ಕರದು ಆತನಿಂದ ತೀರ್ಥಪ್ರಸಾದ ತಕ್ಕೊಂಡು, ಅದರಿಂದಾ ಶುದ್ಧವಾಗಿ, ಕಾಣಿಕೆ ಅಕ್ಕಿ ಪಡಿ ಸಾಹಿತ್ಯ ಕೊಟ್ಟು, ಆಮೇಲೆ ಕುಲದವರು ಯಲ್ಲಾ ಕೂಡಿ ವೂಟಾಮಾಡಬೇಕು, ಕಲಂ.

ಯೀ ರೀತಿಯಲ್ಲಿ ಯಿವರ ಜಾತಿ ರಿವಾಜು ಅದೆ ಅಂತ ತಾತಾಚಾರ್ಯರು ಬರಸಿ ಕೊಟ್ಟ ಕೈಫಿಯತು.

❖❖

೧೩೩
ಹಳೆ ಪೈಕದ ಜಾತಿ ರಿವಾಜ ಕೈಫಿಯತ್ತು

ಮೆಕೆಂಝಿ ಸಂಪುಟ : ೩೬೯

---

೧ ಭಾವ ಸಂವತ್ಸರದಲ್ಲು ಸೋದೆ ಶೀಮೆ ಸಮಸ್ತ ಹಳೆಪೈಕದ ಕುಲದವರು ಕಟ್ಟೆಮನೆ ಗವುಡ, ಮರಗುಂಡಿ ಹನುಮನಾಯಕ, ಬೆಡಸಗಾವೆ ಬಿಳೆನಾಯಕ, ಹುಲೆಕಲ್ಲ ಲಿಂಗನಾಯಕ, ಶಾಂತಪುರದ ಗವುಡ ಲಿಂಗನಾಯಕ, ಹೆರೂರಶೀಮೆ ಬದ್ರನಾಯಕ, ನಿಲುಕುಂದ ಕರೆನಾಯಕನ ಮಗ ತಿಮ್ಮ, ಬಾಳೂರ ಭರಮನಾಯಕ, ಕರೂರು ಶೀಮೆ ಕಾನುಗೋಡು ಮರಯೆನಾಯಕ, ಶಿರಶಿ ಶೀಮೆ ಬಸಿಯನಾಯಕ, ಯಲ್ಲಾಪುರದ ಶೀಮೆ ಸವಣಗಿರೆ ತಿಪ್ಪನಾಯಕ ಮುಂತಾದವರು ಸಹಾ ಬರಶಿಕೊಟ್ಟ ಹಳೆಪೈಕದ ಜಾತಿ ರಿವಾಜು ಕೈಫಿಯತು ಯೇನೆಂದರೆ:

ನಮ್ಮ ಕುಲದಲ್ಲಿ ಜನನವಾದರೆ ಆರು ದಿವಸ ಹೊಲೆಯಿರಬೇಕು. ಯೇಳನೆ ದಿವಸದಲ್ಲು ಆಲು ಹಬ್ಬಿ ಯಂತ ಕೂಶಿನ ತೊಟ್ಟಿಲಲ್ಲಿ ಹಾಕುತ್ತಲೆ ಸೂತಕ ಹೋಯಿತು. ಆಮೇಲೆ ತಿಂಗಳು ತುಂಬೋದು ಯರಕೊಂಡು ಕಾಯಿ ಹಣ್ಣು ವಿಳ್ಳೆದೆಲೆ ತಕ್ಕೊಂಡು ಹೊಳೆಗೆ ಹೋಗಿ ಪೂಜೆ ಮಾಡಿ, ಹಣ್ಣು ಕಾಯಿ ವಡದು, ಹೊಳೆ ಮೆಟ್ಟುವದು, ಕಲಂ.

೨ ಯೀ ಜಾತಿಯಲ್ಲಿ ಭೇದ:

೧ ಹಳೆ ದೀವರು ಜಾತಿ

೧ ಹೊಸ ದೀವರು ಜಾತಿ

೨

೩ ಮತ್ತು ಹಳೆ ದೀವರ ಹೆಣ್ಣು ಹೊಸ ದೀವರಿಗೆ ಆದೀತು, ಹೊಸ ದೀವರ ಹೆಣ್ಣು ಹಳೆ ದೀವರಿಗೆ ಆದೀತು, ಹಳೇ ದೀವರ ಹೆಣ್ಣು ಹಳೆ ದೀವರಿಗೆ ಆಗದು, ಹೊಸ ದೀವರ ಹೆಣ್ಣು ಹೊಸ ದೀವರಿಗೆ ಆಗದು, ಕಲಂ.

೪ ಮತ್ತು ನಮ್ಮಾ ಜಾತಿ ಬೆಡಗಿನ ವಿವರ.

❖❖

೧೩೪
ಮಣಿಪುರದ ಕೈಫಿಯತ್ತು

ಡಿ. ನಂಬರ್ ಸಂಪುಟ : ೧೮೭೮

ದ್ವಪರಾಂತ್ಯದಲ್ಲಿ ಹಸ್ತಿನಾವತಿಯೆಂಬ ಪಟ್ಟಣದಲ್ಲಿ ಪಾಂಡುಸತಿಯು ದೊರೆತನ ಮಾಡುವಲ್ಲಿ ಅವನಿಗೆ ಐದು ಮಂದಿ ಪಂಚಪಾಂಡವರು ಹುಟ್ಟಿದರು. ಅವರ ಹೆಸರು ಧರ್ಮರಾಯ, ಭೀಮ ಅರ್ಜುನ ನಕುಲ ಸಹದೇವರು ಹುಟ್ಟಿ ಐದು ಮಂದಿ ಮೈತ್ರಿಯಿಂದ ತಮ್ಮ ದಾಯಾದ್ಯ (ರಾದ) ಕೌರವರ ಜೈಸಿ ತಾವು ಧರೀತ್ರಿಯಂ ಇಂತು ಸುಖದಿಂಧ [ಇರುತ್ತಿರ್ದರು] (ಆಳುತ್ತಿರ್ದರು) ಅರ್ಜುನಗೆ ಸ್ವಸ್ತಿ x x x x x x x

❖❖

ನಾಮಸೂಚಿ

ನಾಮಸೂಚಿ


ಅ, ಅ = ಅಜಿಲ ಅರಸು; ಅಧಿ = ಅಧಿಕಾರಿ; ಅ. ಹೆ. = ಅಡ್ಡಹೆಸರು; ಆ.ಅ = ಆದಿಲಶಾಹಿ ಅರಸು; ಇಂ.ಅ. = ಇಂಗ್ಲೀಷ ಅಧಿಕಾರಿ; ಋ = ಋಷಿ; ಕಾ.ಅ = ಕಾದಲಿ ಅರಸು; ಕ.ಚಾ.ಅ = ಕಲ್ಯಾಣ ಚಾಲುಕ್ಯ ಅರಸು; ಕದಂ.ಅ = ಕದಂಬ ಅರಸು; ಕಲ.ಅ = ಕಲಚುರಿ ಅರಸು; ಕೆ = ಕೆರೆ; ಕೆ.ರಾ = ಕೆಳದಿ ರಾಜ್ಯ; ಕೆ.ಸಂ. = ಕೆಳದಿ ಸಂಸ್ಥಾನ; ಕ್ಷೇ = ಕ್ಷೇತ್ರ; ಕೈ = ಕೈಫಿಯತ್ತು; ಕೊ.ಅ = ಕೊಡವ ಅರಸು; ಕೋ = ಕೋಟೆ; ಗ್ರಂ = ಗ್ರಂಥ; ಗ್ರಾ = ಗ್ರಾಮ; ಗು = ಗುಡಿ; ಘ = ಘಟ್ಟ; ಚೋ.ಅ = ಚೋಳ ಅರಸು; ಚೌ.ಅ = ಚೌಟ ಅರಸು; ಜಾ = ಜಾತಿ; ಜೈ.ಅ = ಜೈನ ಅರಸು; ಜೈ.ಗು = ಜೈನ ಗುರು; ಜೈ.ದೇ = ಜೈನ ದೇವತೆ; ಜೈ.ಸಂ = ಜೈನ ಸಂಘ; ತೀ = ತೀರ್ಥ; ತೀರ್ಥಂ = ತೀರ್ಥಂಕರ; ತು.ಅ = ತುಳು ಅರಸು; ತೋ = ತೋಪು; ತೌ.ಅ = ತೌಳವ ಅರಸು; ದೇ = ದೇವತೆ; ಧಾ.ವ್ಯ = ಧಾರ್ಮಿಕ ವ್ಯಕ್ತಿ; ನ = ನದಿ; ಪ = ಪರ್ವತ; ಪ್ರ = ಪ್ರದೇಶ; ಪೌ.ವಂ = ಪೌರಾಣಿಕ ವಂಶ; ಪೌ.ವ್ಯ = ಪೌರಾಣಿಕ ವ್ಯಕ್ತಿ; ಬ್ರಾ.ಜಾ = ಬ್ರಾಹ್ಮಣ ಜಾತಿ; ಬ್ರಾ.ವ್ಯ = ಬ್ರಾಹ್ಮಣ ವ್ಯಕ್ತಿ; ಬಿ = ಬಿರುದು; ಭಾ = ಭಾಷೆ; ಭೈ.ಅ = ಭೈರಸ ಅರಸರು; ಭೈ. ಒ = ಭೈರಸ ಒಡೆಯರು; ಮೈ.ಅ = ಮೈಸೂರು ಅರಸು; ಮೌ.ಅ. = ಮೌರ್ಯ ಅರಸು; ಯಾ.ಅ. = ಯಾದವ ಅರಸು; ರಾ.ವಂ = ರಾಜವಂಶ; ರಾ.ವ್ಯ = ರಾಜಕೀಯ ವ್ಯಕ್ತಿ; ಲೋ = ಲೋಕ; ವಿ.ಅ. = ವಿಜಯನಗರ ಅರಸು; ವಿ = ವಿಭಾಗ; ವ್ಯ = ವ್ಯಕ್ತಿ; ಸಂವ = ಸಂವತ್ಸರ; ಸಂ = ಸಂಸ್ಥಾನ; ಸ್ಥ = ಸ್ಥಳ; ಸ್ವಾ.ಅ. = ಸ್ವಾದಿ ಅರಸು; ಸಿಂ.ಅ. = ಸಿಂಧ ಅರಸು; ಸೊಂ. ಅ. = ಸೊಂದಾ ಅರಸು; ಹಂ.ಅ = ಹಂಡೆ ಅರಸು; ಹು.ಅ = ಹುಮ್ಮಚ ಅರಸು; ಹೊ.ಅ = ಹೊಯ್ಸಳ ಅರಸು; ಹೊ.ರಾ.ವಂ = ಹೊಯ್ಸಳ ರಾಜ ವಂಶ.

ನಾಮಸೂಚಿ

ಸ್ವರಗಳು

(ಹೆಸರಿನ ಮುಂದಿನ ಸಂಖ್ಯೆಗಳು ಪುಟಸಂಖ್ಯೆಯನ್ನು ಸೂಚಿಸುತ್ತವೆ)

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ

ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359